ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್, ಪಂಡಿತ ನೆಹರೂ ಮತ್ತು ಶ್ರೀ ವಿ ಪಿ ಮೆನನ್ನರು ನಿನ್ನೆ ಡೆಹರಾಡೂನಿನಲ್ಲಿ ಸರ್ದಾರ್ ಪಟೇಲರನ್ನು ಭೇಟಿ ಮಾಡಿ ದೆಹಲಿಗೆ ಹಿಂತಿರುಗಿದರು. ಸರ್ ಬಲದೇವಸಿಂಗರೂ ಮತ್ತು ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ಯರೂ ಭೇಟಿಯ ಕಾಲದಲ್ಲಿ ಹಾಜರಿದ್ದರು. ಅವರುಗಳು ಸರ್ದಾರ್ ಪಟೇಲರೊಡನೆ ಹೈದರಾಬಾದಿನ ವಿಷಯವಾಗಿ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ. ನಿಜಾಮರ ರಾಜಕೀಯ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟನ್ನರು ದೆಹಲಿಯ ಪ್ರಭುತ್ವ ಭವನದಲ್ಲಿ ಬಿಡಾರ ಮಾಡಿರುವರು. ಹೈದರಾಬಾದ್ ಪ್ರಧಾನಿ ಮೀರ್ ಲಾಯಕಾಲಿಯವರೂ ಈ ದಿನ ದೆಹಲಿಗೆ ಆಗಮಿಸುವರೆಂದು ನಿರೀಕ್ಷೆಯಿದೆ.

ವಿದೇಶೀಯರಿಂದ ದಲಾಯಿ ಲಾಮಾರವರ ಕೊಲೆಯೇ ?

ಟಿಬೆಟ್ಟಿನ ಪ್ರಧಾನ ಬೌದ್ಧ ಗುರುಗಳಾದ ದಲಾಯಿ ಲಾಮಾರವರ ಜಾತಕ ೧೯೪... ಒಬ್ಬ ವಿದೇಶೀಯನಿಂದ ಅವರು ಕೊಲ್ಲಲ್ಪಡುವ ಸಂಭವವಿದೆಯೆಂದು ತಿಳಿದಿರುವುದರಿಂದ ೧೯೪೯ನೇ ಇಸವಿಯ ಅಂತ್ಯದವರೆಗೆ ಯಾವ ವಿದೇಶೀಯರಿಗೂ ಟಿಬೆಟ್ ದೇಶದ ಪ್ರವೇಶಕ್ಕೆ ಅವಕಾಶ ಕೊಡಲಾಗುವುದಿಲ್ಲವೆಂದು ವರದಿಯಾಗಿದೆ.

ಜಸ್ಟಿಸ್ ರೇಂಯವರ ನಿಧನ

ಮೈಸೂರು ಸಂಸ್ಥಾನದ ಮಾಜಿ ಶ್ರೇಷ್ಠ ನ್ಯಾಯಾಧೀಶರಾದ ಸರ್ ಡಾರ್ಲಿ ರೇಲಿಯವರು ೮... ನೇ ವಯಸ್ಸಿನಲ್ಲಿ ಕೇಪ್ ಟೌನಿನಲ್ಲಿ ಕಳೆದ ಶನಿವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಸೀಮೆ ಎಣ್ಣೆ ಪತ್ತೋಟಿ ಆಜ್ಞೆ

... ಸಂಸ್ಥಾನದಲ್ಲಿ ಸೀಮೆ ಎಣ್ಣೆ ಮೇಲಿನ ಹತೋಟಿ ಆಜ್ಞೆಯನ್ನು ತೆಗೆದಾಕ್ಕೆ, ಅದು ಜನಗಳಿಗೆ ನ್ಯಾಯವಾದ ಬೆಲೆಗೆ ಸಿಕ್ಕದಿಲ್ಲವಾದುದರಿಂದ, ಪುನಃ ಅದರ ಮೇಲೆ ಹತೋಟಿಯನ್ನು ಹಾಕಲಾಗಿದೆಯೆಂದು ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ. ಆಹಾರ ಡೈರೆಕ್ಟರನ್ನು ಅದರ ಹತೋಟಿ ಕಂಟ್ರೋಲರಾಗಿ ನೇಮಿಸಲಾಗಿದೆ. ಜನಗಳಿಗೆ ನ್ಯಾಯವಾದ ಬೆಲೆಯಲ್ಲಿ ಸಾಕಷ್ಟು ಸೀಮೆ ಎಣ್ಣೆ ಸರಬರಾಜು ಆಗುವಂತೆ ಅವರು ಏರ್ಪಡಿಸುವರು.

ರಜಾಕರರಿಂದ ಮತ್ತೊಂದು ರೈಲಿನ ಲೂಟಿ

ಹೈದರಾಬಾದಿನಿಂದ ಬೆಜವಾಡಕ್ಕೆ ಹೊರಟ ಒಂದು ರೈಲನ್ನು ರಜಾಕಾರರು ಮತ್ತೆ ಮೊನ್ನೆ ನಿಜಾಂ ಪ್ರದೇಶದಲ್ಲಿ ತಡೆದು ೧೪೦ ಪ್ರಯಾಣ ಮಾಡುತ್ತಿದ್ದ ಅನೇಕ ಮಂದಿ ಮುಸ್ಲಿಮೇತರರನ್ನು ಚಿತ್ರಹಿಂಸೆಗೆ ಗುರಿ ಪಡಿಸಿದರೆಂದೂ ಒಬ್ಬನನ್ನು ಗುಂಡಿನಿಂದ ಹೊಡೆದು ಸಾಯಿಸಿದರೆಂದೂ ಹೇಳಲಾಗಿದೆ.

ಬ್ರಿಟಿಷ್ ದೊರೆಗಳ ಅಳಿಯನೇ ಅಂಗರಕ್ಷಕರು

ಬ್ರಿಟಿಷ್ ರಾಜಕುಮಾರಿ ಎಲಿಜಬೆತ್ ರವರ ಪತಿ ಡ್ಯೂಕ್ ಎಡಿನ್ ಬರೋ ರವರನ್ನು ಜಾರ್ಜ್ ದೊರೆಗಳ ಆಪ್ತ ಅಂಗರಕ್ಷಕರನ್ನಾಗಿ ನೇಮಿಸಲಾಗಿದೆ.

ಲಾಹೋರಿನಲ್ಲಿ ಗೂಢಚಾರರ ಬೇಟೆ

ಪಶ್ಚಿಮ ಪಂಜಾಬಿನ ನಗರಗಳಲ್ಲಿ ಗೂಢಚಾರರ ಗುಂಪಿನಲ್ಲಿರುವ ಸೋಲು ... ವು ಹರಡುತ್ತಿದೆ. ಸ್ವಲ್ಪ ಸಂದೇಹಾಸ್ಪದವಾಗಿ ಕಂಡು ಬಂದ ಮನುಷ್ಯನನ್ನು ... ಗೂಢಚಾರನೆಂದು ಕರೆದು ಅತ ಹಿಂದೆ ... ಗಾಗಿ ಪೋಲೀಸ್ ... ಹೊಯ್ಯಲಾಗುತ್ತಿದೆ. ಗಡ್ಡವನ್ನು ಬೆಳೆಸಿದವರನ್ನೆಲ್ಲಾ ಸಂದೇಹದಿಂದ ನೋಡಲಾಗುತ್ತಿದೆ. ಈ ರೀತಿ ಕ್ರೈಸ್ತ ಸಾಧುವೊಬ್ಬನನ್ನು ಸಿಖ್ಖನೆಂದು ಭಾವಿಸಿ ಜನರು ... ಅತನನ್ನು ಕೊಂದು ಹಾಕಿದರೆಂದು ವರದಿಯಾಗಿದೆ.

ಮ್ಯಾಕೇಟ್ ದೊರೆಯ ಮದುವೆ

ರುಮೇನಿಯಾದ ಮಾಜಿ ದೊರೆ ಮೈಕೇಲರವರು ... ನ ರಾಜಕುಮಾರಿಯನ್ನು ಮದುವೆಯಾದರು. ಈ ... ಮದುವೆಗೆ ರ... ವಿರೋಧವಿದ್ದರೂ ... ಪ್ರಜೆಗಳ ಅನುಮತಿ ... ಗಿದ ೧೦ ದಿನಗಳೊಳಗೆ ಅವರಿಬ್ಬರೂ ... ಆಕೆಯನ್ನು ಮದುವೆಯಾದರೆಂದು ತಿಳಿದು ಬಂದಿದೆ. ರುಮೇನಿಯದ ಚರ್ಚಿನ ಪೋಪರವರೂ ಸಹ ಈ ವಿವಾಹಕ್ಕೆ ಒಡಂಬಟ್ಟಿರಲಿಲ್ಲವೆಂದು ಹೇಳಲಾಗಿದೆ.

ಚಿನ್ನದ ಗಣಿ ಕೆಲಸಗಾರರ ಮುಷ್ಕರ ಮುಕ್ತಾಯ

ಕಮ್ಯೂನಿಸ್ಟ್ ನಾಯಕರ ನಿಕಟಕ್ಕಾಗಿ ... ಕಳೆದ ... ನೇ ತಾರೀಖಿನಿಂದ ಮುಷ್ಕರ ಹೂಡಿದ್ದ ಚಿನ್ನದ ಗಣಿ ಕೆಲಸಗಾರರು ಮೊನ್ನೆಯಿಂದ ಕೆಲಸಕ್ಕೆ ಹಿಂತಿರುಗಿರುವರು.

ಹೈದ್ರಾಬಾದಿನೊಳಕ್ಕೆ ಭಾರತ ಸೇನೆ ನುಗ್ಗಿದೆ

ಸಂಯುಕ್ತ ಪ್ರಾಂತ್ಯ ಮತ್ತು ಹೈದರಾಬಾದ್ ಗಡಿ ಪ್ರದೇಶದಲ್ಲಿ ಆಗಿಂದಾಗ ಆಗುವ ಹಲ್ಲೆಯೊಂದರ ಮೇಲೆ ದಾಳಿ ನಡೆಸಲು ಯತ್ನಿಸಿದ ರಜಾಕರರನ್ನು ಕಳೆದ ಶುಕ್ರವಾರ ಭಾರತ ಸೈನ್ಯ ಹಿಮ್ಮೆಟ್ಟಿಸಿಕೊಂಡು, ನಿಜಾಂ ಸಂಸ್ಥಾನದೊಳಗೆ ಪ್ರಥಮ ಬಾರಿ ನುಗ್ಗಿದರೆಂದು ವರದಿಯಾಗಿದೆ.

ರಜಾಕರರನ್ನ ಸದೆಬಡಿಯಲು ಹೈದರಾಬಾದ್ ಸಂಸ್ಥಾನದೊಳಗೆ ಭಾರತ ಸೈನ್ಯ ಮತ್ತು ಪೋಲೀಸರು ಪ್ರವೇಶಿಸಬಹುದೆಂದು ಭಾರತ ಸರ್ಕಾರವು ಸೂಚಿಸಿರುವುದನ್ನು ನಿಜಾಂ ಸರ್ಕಾರದವರು ಪ್ರತಿಭಟಿಸಿದ್ದಾರೆ.

ಸಂಯುಕ್ತ ಪ್ರಾಂತ್ಯ ಮತ್ತು ಬಿರಾರ್ ಹೈದರಾಬಾದ್ ಗಡಿಗೆ ... ಜಿಲ್ಲಾಧಿಕಾರಿಗಳು ... ಪಡೆ ... ಆಜ್ಞೆಯಾಗಿದೆ.

ಪೆಟ್ರೋಲಿನ ... ದಿಂದ ಹೈದರಾಬಾದಿನ ಎಲ್ಲ ... ಸಂಚಾರವನ್ನೂ ನಿಲ್ಲಿಸಲಾಗಿದೆ.

... ಗಡಿ ಪ್ರದೇಶದಲ್ಲಿ ... ಪಲಾಯನ ... ನಿಜಾಂ ಸೈನ್ಯದ ... ಗಿದೆ.

ದಕ್ಷಿಣ ಭಾರತದಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನ

... ಮುಂದಿನ ... ಕಾಂಗ್ರೆಸ್ ... ದಕ್ಷಿಣ ಭಾರತದಲ್ಲಿ ನಡೆಸಬೇಕೆಂದು ... ತಿಂಗಳು ... ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಈ ವಿಷಯವು ನಿರ್ಧಾರವಾಗಬಹುದೆಂದೂ ... ದೆ.

ಅಕ್ರಮ ಪೆಟ್ರೋಲ್ ದಾಸ್ತಾನಿಗಾಗಿ ಮೊಕದ್ದಮೆ

ಬೆಂಗಳೂರು ೧೩

ಎಕ್ಸ್ ಚೇಂಜ್ ... ಚಂದ್ರಪ್ಪ ... ಮತ್ತು ... ಕಟ್ಟಡದಲ್ಲಿ ... ಪೆಟ್ರೋಲನ್ನು ಅಕ್ರಮವಾಗಿಟ್ಟುಕೊಂಡಿದ್ದರೆಂದು ನಗರದ ನ್ಯಾಯಾಧೀಶರ ಮುಂದೆ ಪೋಲೀಸರವರು ಮೊಕದ್ದಮೆ ಹೂಡಿದರು. ... ಮಾಡಿ ... ವಿಧಿಸಲಾಗಿದೆ.

ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿಕೊಂಡರು

ಮೈಸೂರು ೧೩

... ಆಗರದ ಬೀದಿಯಲ್ಲಿ ಈ ದಿನ ... ಪಾರ್ವತಮ್ಮ ... ಸೀಮೆ ಎಣ್ಣೆಯನ್ನು ಮೈಗೆ ಸುರಿದುಕೊಂಡು ... ಬೆಂಕಿ ಹಚ್ಚಿಕೊಂಡಳೆಂದೂ ... ಆಕೆ ... ಆಸ್ಪತ್ರೆಗೆ ... ಸೇರಿಸಲಾಗಿದೆ ... ಕೃಷ್ಣ ... ಆ... ತಿಳಿಸಲಾಗಿದೆ ... ನಡೆಸಲಾಗುತ್ತಿದೆ.

ವಿವಾಹ ಮಹೋತ್ಸವಗಳು

ಸೋಸಲೆಯ ಜನಿವಾನುದಾರರಾದ ಶ್ರೀ ಆರ್ ಪಟ್ಟಾಭಿರಾಮಾಚಾರ್ಯರು ತಮ್ಮ ಪುತ್ರರಾದ ಶ್ರೀ ಎಸ್ ಟಿ ಅನಂತ ಪದ್ಮನಾಭಾಚಾರ್ಯರವರ ಪುತ್ರಿ ಚಿ॥ ಸೌ॥ ಸರೋಜಾಬಾಯಿಯನ್ನು ಸೋಸಲೆ ಮಠದ ಶ್ರೀ ಪಾದಂಗಳವರ ಪೂರ್ವಾಶ್ರಮದ ಪುತ್ರ ಶ್ರೀ ಟಿ ಎ ಜಯತೀರ್ಥಾಚಾರ್ಯರಿಗೆ ಕೊಟ್ಟು ವಿವಾಹವನ್ನು ಸೋಸಲೆಯಲ್ಲಿ ನಿನ್ನೆ ನೆರವೇರಿಸಿದರು. ಅವರು ತಮ್ಮ ಮೊಮ್ಮಗ ಚಿ॥ ಎಸ್ ಎ ವರದರವ ಗರ್ತಿಯ ಉಪನಯನವನ್ನೂ ಸಹ ಜರುಗಿಸಿದರು.

ಅರಮನೆ ಡಾ॥ ಮೊಸ್ತ್ರೇಸರ್ ಶ್ರೀ ಎಂ ಗಂಗಾಧರ ಶಾಸ್ತ್ರಿಗಳ ಪುತ್ರಿ ಚಿ॥ ಸೌ॥ ಶಾರದಾಂಬ ಮತ್ತು ಶ್ರೀ ಎನ್ ನಂಜುಂಡ ಶಾಸ್ತ್ರಿಗಳ ಪುತ್ರ ಶ್ರೀ ಪಿ ಎನ್ ಅನಂತರಾಮುರವರಿಗೂ,

ಬೆಂಗಳೂರ ವಕೀಲರಾದ ಶ್ರೀ ಎ ಸಿ ಬ್ರಹ್ಮನವರ ಸಹೋದರ ಶ್ರೀ ಎ ಸಿ ಮಾದೇಗೌಡರ ಮತ್ತು ಗಾಣಗೆರೆ ಪಟೇಲ್ ಶ್ರೀ ತಮ್ಮಣ್ಣನವರ ಪುತ್ರಿ ಚಿ॥ ಸೌ॥ ಸರೋಜಾರವರಿಗೂ ವಿವಾಹ ಮಹೋತ್ಸವಗಳು ನಿನ್ನೆ ಜರುಗಿದುವು

ಹಿಂದೂಗಳ ಬಂದೂಕುಗಳ ವಶ

ಪಾಕಿಸ್ತಾನ ರಾಷ್ಟ್ರೀಯ ಸ್ವಯಂಸೇವಕರುಗಳಿಗೆ ಶಸ್ತ್ರಗಳನ್ನು ಸರಬರಾಜು ಮಾಡಲು ಹಿಂದೂಗಳ ಬಂದೂಕುಗಳನ್ನು ಹಿಂದೂಗಳಿಂದ ವಶಪಡಿಸಿಕೊಳ್ಳಲಾಗಿದೆಯೆಂದು ಪಶ್ಚಿಮ ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ಅಲ್ಲಿನ ಪ್ರಧಾನಿಯವರು ತಿಳಿಸಿರುತ್ತಾರೆ. ಪ್ರಾಂತ್ಯದಲ್ಲಿ ೫ ಲಕ್ಷ ಜನರ ಪಡೆಯನ್ನು ಪಹರೆಗೆ ತರಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದೂ ತಿಳಿಸಲಾಗಿದೆ

ಮೈಸೂರು

ಜೀವಣ್ಣರಾಯನ ಕಟ್ಟೆಯಲ್ಲಿ

—: ಪ್ರಾರಂಭ ದಿನ :—

16-6-48 ನೇ

ಬುಧವಾರ ರಾತ್ರಿ ೯-೩೦ ಕ್ಕೆ

ಬೊಂಬಾಯಿ

ಜಿ. ಎ. ಸರ್ಕಸ್

ಚೀನಾ, ಫಿಲಿಪ್ಪೈನ್, ಮಲಯ, ಭಾರತೀಯ ದೇಶಗಳಿಂದ ಆರಿಸಲ್ಪಟ್ಟ ೧೦೦ ಆಟಗಾರರಿಂದಲೂ, ೧೪ ಕುದುರೆ, ೩ ಆನೆ, ೨ ಒಂಟೆ, ೧೨ ಹುಲಿ, ಸಿಂಹಗಳ ಪ್ರದರ್ಶನಗಳಿಂದಲೂ, ೧೭ ಚೀನಾ, ಮಲಯಾ ಭಾರತೀಯ ಲೇಡಿ ಜಿಮ್ನಾಸ್ಟ್‌ಗಳಿಂದಲೂ ಪ್ರಖ್ಯಾತಿ ಹೊಂದಿದ ೧೯೨೦ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಪೂರ್ವ-ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ಲಕ್ಷಾಂತರ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ತಪ್ಪದೆ ನೋಡಿರಿ

ಪಾಕಿಸ್ತಾನದಲ್ಲಿ ಉರ್ದು ಪ್ರಥಮ ಭಾಷೆ

ಪಾಕಿಸ್ತಾನದ ಪ್ರೈಮರಿ ಸೆಂಕಂಡರಿ ವಿದ್ಯಾಶಾಲೆಗಳಲ್ಲಿ ಇನ್ನು ಮುಂದೆ ಉರ್ದುವನ್ನು ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂದು ಅಲ್ಲಿನ ವಿದ್ಯಾ ಇಲಾಖೆಯವರು ತೀರ್ಮಾನಿಸಿದ್ದಾರೆ. ಮುಸ್ಲಿಂ ವಿದ್ಯಾರ್ಥಿಗಳಿಗೆ ಮತ ಬೋಧನೆಯ ತರಗತಿಗಳನ್ನು ಕಡ್ಡಾಯ ಮಾಡಿ ಹಿಂದೂಗಳಿಗೆ ಐಚ್ಛಿಕವನ್ನಾಗಿ ಮಾಡಿದ್ದಾರೆ. ಇದರಿಂದ ಪೂರ್ವ ಬಂಗಾಳದ ೧೦೦ಕ್ಕೆ ಮೇಲ್ಪಟ್ಟ ಹಿಂದೂ ವಿದ್ಯಾಶಾಲೆಗಳು ಮುಸ್ಲಿಂ ವಿದ್ಯಾರ್ಥಿಗಳಿಗಾಗಿ ಮತಬೋಧನೆಯ ತರಗತಿಗಳನ್ನು ಕಡ್ಡಾಯವಾಗಿ ತೆರೆಯಬೇಕಾಗಿದೆ

ರಾಯಭಾರಿಗಳ ಕುಸ್ತಿ ಸವಾಲು

ಒಟ್ಟಾವಾದ ಕಾನ್ಸಲ್ ಜನರಲ್ಲರಾದ ಜೂಲಿಯೋ ರಿಕಾರ್ಡ್ ಎಂಬುವರು ಅರ್ಜಂಟೈನದ ರಾಯಭಾರಿ ಡಾ॥ ಜಾರ್ ಕ್ಯಾರ್ಲೋರವರನ್ನು ತನ್ನೊಡನೆ ಕುಸ್ತಿಗೆ ಕರೆದಿದ್ದಾರೆ. ಅರ್ಜಂಟೈನದ ರಾಯಭಾರಿಯೂ ಮತ್ತು ಅವರ ಪತ್ನಿಯೂ ತಮ್ಮನ್ನು ಸಮಾರಂಭವೊಂದರಲ್ಲಿ ಅವಮಾನಗೊಳಿಸಿದರೆಂಬುದೇ ಇದಕ್ಕೆ ಕಾರಣವೆಂದೂ ಈ ಕುಸ್ತಿಯಲ್ಲಿ ಯಾವ ಆಯುಧವನ್ನು ಬೇಕಾದರೂ ಡಾ॥ ಕ್ಯಾರ್ಲೋರವರು ಉಪಯೋಗಿಸಬಹುದೆಂದೂ ರಿಕಾರ್ಡೊರವರು ತಿಳಿಸಿದ್ದಾರೆ

Edited printed and published by A. K. Nagarajan at the Sadhvi Press D. Subbaiah Road Mysore

ಜಲಂ ಧರ ಮೈಲಿ ಬೆಂಕಿಯ ಜ್ವಾಲೆ

ಆಸ್ಟೇರಿಯೋ ಎಂಬಲ್ಲಿನ ಕಾಡು ಪ್ರದೇಶದಲ್ಲಿ ಇದ್ದಕ್ಕಿದ್ದಂತೆ ಕಾಡುಕಿಚ್ಚುಂಟಾಗಿ ಸುಮಾರು ಜಲಂಧರ ಮೈಲಿ ಪ್ರದೇಶವು ಬೆಂಕಿಯಿಂದ ಆವರಿಸಲ್ಪಟ್ಟಿದೆಯೆಂದು ವರದಿಯಾಗಿದೆ. ಬೆಂಕಿಯನ್ನು ಆರಿಸುವ ಯಂತ್ರಗಳು ವಿಫಲವಾಗಿ ಜನರು ಪ್ರಾಣಭಯದಿಂದ ಓಡಬೇಕಾಯಿತೆಂದೂ ಮತ್ತು ಮೆಕ್ಸಿಕೋವಿನ ಹತ್ತಿರದ ಕಾಡು ಪ್ರದೇಶಗಳಲ್ಲಿಯೂ ಸಹ ಅಲ್ಲಲ್ಲಿ ಕಾಡ್ಗಿಚ್ಚುಂಟಾಗಿದೆಯೆಂದೂ ತಿಳಿದುಬಂದಿದೆ.

ಸಿ. ಪಿ. ಯವರ ಪ್ರತಿಮೆಗೆ ಸ್ಥಾನ ಪಲ್ಲಟ

ತಿರುವಾಂಕೂರಿನ ಮಾಜಿ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರ ಪ್ರತಿಮೆಯು ಇತ್ತೀಚೆಗೆ ಭಗ್ನಮಾಡಲ್ಪಟ್ಟಿತಷ್ಟೆ. ತಂಪನೂರಿನ ಪೌರಸಭೆಯವರು ಅದನ್ನು ಈಗ ಅಲ್ಲಿಂದ ತೆಗೆದು ಛತ್ರದ ಕೋಣೆಯೊಂದರಲ್ಲಿಟ್ಟಿದ್ದಾರೆ.

ಅಪೆರಾ ಟಾಕೀಸ್

12—6—48 ರಿಂದ

ಅಮೋಘ ೩ ನೇ ವಾರ

ಅಭಿಮನು

(ತಮಿಳು)

ಪಾತ್ರ:— ಯು. ಆರ್ ಜೀವರತ್ನಂ ಎಸ್. ಎಂ. ಕುಮರೇಶಂ, ಪುಳಿಮೂಟೆ ಎಂ. ಆರ್. ಸಂತಾನಲಕ್ಷ್ಮಿ

WANTED AGENTS

Truthful READY MADE CLOTHES

WITH LIBERAL TERMS

Chamarajanagar, Krishnarajanagar, Periyapatna, Gundlupet.

Apply:—
SWASTIC TRADING COMPANY,
8 Dasaprakash Buildings, MYSORE.

BANGALORE RACES 1948

ಜೂನ್ ೧೯, ೨೬, ೨೭, ೩೦, ಜುಲೈ ೩ ರಲ್ಲೂ

ಬುಕ್ ಮೇಕರ್ — ಟೋಟಲೈಜೇಟರ್,

ರೂ ೨, ಸ್ಪ್ರೆಡ್ ಮತ್ತು ರೂ ೫, ಟ್ರಿಬಲ್ ಈವೆಂಟ್

ಒಂದನೇ ಟೋಟ್ ರೂ ೧೦, ಎರಡನೇ ಟೋಟ್ ರೂ ೫,

ಪ್ರವೇಶ:—	ಒಂದನೇ ತರಗತಿ	—	ಪುರುಷರು	— ರೂ ೬,	ದಿವಕ್ಕೆ
	,, ,,	—	ಸ್ತ್ರೀಯರು	— ರೂ ೪,	,,
ಎರಡನೇ	,,	—	ಪುರುಷರು) ಅಥವ) ಸ್ತ್ರೀಯರು)	ರೂ ೨,	,,

ಶುಭ]

ಶ್ರೀ

ಎಸ್. ಆರ್. ಕೆ. ಬ್ರಾಂಡ್

ಮೆಡಿಕೇಟೆಡ್ ಮತ್ತು ಪರ್‌ಫ್ಯೂಮ್‌ಡ್ ಸ್ಪೆಷಲ್ ಸೀಗೆಪುಡಿ ಪುಡಿಯನ್ನೇ ಉಪಯೋಗಿಸಿರಿ ಹೆಚ್ಚು ಬಾಳಿಕೆ ಬರುತ್ತದೆ. 1 ವೀಸೆ, ಅರ್ಧ ವೀಸೆ ಕಾಲು ವೀಸೆ, $\frac{1}{8}$ ವೀಸೆ 1/16 ವೀಸೆ ಮತ್ತು ೫ ತೊಲ ಸ್ಯಾಂಪಲ್ ಪ್ಯಾಕೆಟ್ (0-1-0) ಗಳಲ್ಲಿ ಎಲ್ಲೆಲ್ಲಿಯೂ ದೊರೆಯುತ್ತದೆ

ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್ ಮೈಸೂರು

ಕಡ್ಡಾಯದ ಸೈನ್ಯ ಶಿಕ್ಷಣ

ಇಂದೂರು ಸಂಸ್ಥಾನದ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಕಡ್ಡಾಯ ಸೈನ್ಯ ಶಿಕ್ಷಣವನ್ನು ಕೊಡಲು ಅಲ್ಲಿನ ಸರ್ಕಾರದವರು ೩ ಲಕ್ಷ ರೂ ಗಳನ್ನು ಮಂಜೂರು ಮಾಡಿರುತ್ತಾರೆ. ಉಪಾಧ್ಯಾಯರುಗಳಿಗೆ ಈಗಾಗಲೇ ಶಿಕ್ಷಣ ಕೊಡಲಾಗುತ್ತಿದೆ.

UNIVERSITY OF MYSORE

Office of the University of Mysore Mysore,

Dated 7th June 1948

No G4 Colleges 47-48

NOTIFICATION

It is hereby notified for information of the public that Intermediate Colleges will be opened at the following District Head-quarters with effect from 24th June 1948

KOLAR
CHITALDRUG
CHIKMAGALUR

Only Junior Intermediate Classes will be started

Students intending to join these colleges may apply to the respective Superintendents soon after the publication of the results of the S S L C Examination 1948

By Order,
D. S. GORDON
REGISTRAR.

ನೋಟೀಸ್

ಗಂಧದೆಣ್ಣೆ ಕಾರ್ಖಾನೆ ಮೈಸೂರು
೨೮—೫—

ಮೈಸೂರು ಶ್ರೀಗಂಧದ ಎಣ್ಣೆ ಕಾರ್ಖಾನೆಯ ಬಾಯಿಲರುಗಳಲ್ಲಿ ಬೀಳುವ ಬೂದಿ, ಚೂರುಗಳನ್ನೂ, ಬೂದಿಯನ್ನೂ ತೆಗೆದುಕೊಳ್ಳುವ ಹಕ್ಕನ್ನು ೧೯೪೮ ನೇ ಜುಲೈ ೧ ನೇ ತಾರೀಖಿನಿಂದ ಒಂದು ವರ್ಷಕ್ಕೆ ಕೊಡಲಾಗುವುದು. ಇಷ್ಟವುಳ್ಳವರು ಅದಕ್ಕೆ ಒಪ್ಪಿ ಕೊಡುವ ಮೊಬಲಗನ್ನು ನಮೂದಿಸಿ ಸೀಲಾದ ಕವರಿನಲ್ಲಿ ಜೂನ್ ೧೯ ನೇ ತಾರೀಖಿನ ಮಧ್ಯಾಹ್ನ ೪ ಘಂಟೆ ಒಳಗಾಗಿ ೫೦ ರೂಪಾಯಿ ಠೇವಣಿಯೊಡನೆ ದರಖಾಸ್ತು ಮಾಡಬಹುದು

ಮಂಜೂರಾದ ದರಖಾಸ್ತುದಾರರು ಕಾರ್ಖಾನೆಯವರು ನಿಗದಿಸಿರುವ ಷರತ್ತುಗಳಿಗೆ ಒಳಪಟ್ಟು ಒಂದು ಕರಾರನ್ನು ಬರೆದುಕೊಡತಕ್ಕದ್ದು ಮತ್ತು ಮೊಬಲಗನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಲು ಸಿದ್ಧರಾಗಿರತಕ್ಕದ್ದು.

ಮಂಜೂರಾಗದ ದರಖಾಸ್ತಿನ ಠೇವಣಿ ಮೊಬಲಗನ್ನು ವಾಪಸು ಕೊಡಲಾಗುವುದು.

ಬಿ ಪಿ ರಾಮಕೃಷ್ಣ
ಜನರಲ್ ಮ್ಯಾನೇಜರ್

ಫೋ: ನಂ 793 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಮಂಗಳವಾರ ೧೫-೬-೪೮ [ಸಂಖ್ಯೆ ೨೦೪

ರಷ್ಯಾ ದೇಶದ ಕಡೆಗೆ ಬರ್ಮಾ ವಾಲುತ್ತಿದೆ

ಸಮುದ್ರದಿಂದ ತೇಲಿ ಬಂದ ಪೆಟ್ಟಿಗೆಯಲ್ಲಿ ಬಾಂಬು

ದಕ್ಷಿಣ ಕನ್ನಡದ ಕಾಸರಗೋಡಿನ ಸಮುದ್ರ ತೀರದಲ್ಲಿ ಅಲೆಯಿಂದ ಹೊಡೆದುಕೊಂಡು ದಡಕ್ಕೆ ಬಂದ ಒಂದು ಪೆಟ್ಟಿಗೆಯನ್ನು ಅಲ್ಲಿನ ಕಮ್ಮಾರನೊಬ್ಬನು ಕೀಗೆಲು ಪ್ರಯತ್ನ ಪಟ್ಟಾಗ, ಅದರೊಳಗೆ [illegible] ಬಾಂಬುಗಳು ತುಂಬಲ್ಪಟ್ಟದ್ದು ಅ[illegible] ಘೋರ ಸಿಡಿತವುಂಟಾಗಿ ಕಮ್ಮಾರನು ಮೃತಪಟ್ಟನೆಂದೂ, ಇತರ ಇಬ್ಬರಿಗೆ [illegible]ಗಳಾಗಿವೆಯೆಂದೂ ವರದಿಯಾಗಿದೆ

ರಜಾಕರರು ಹೆಂಗಸರನ್ನು ಭರ್ಜಿಯಿಂದ ತಿವಿದು ಕೊಂದರು

ಸಂಯುಕ್ತ ಪ್ರಾಂತದ ಗಡಿ ಪ್ರದೇಶದ [illegible]ಗೆ ಸೇರಿದ [illegible] ಎಂಬ [illegible] ಮೇಲೆ ರಜಾಕರರು ೩ ದಿನಗಳ [illegible] ನಡೆಸಿ, ಹಿಂದೂ ಜನಗಳ ಮನೆಗಳನ್ನು ಲೂಟಿ ಮಾಡಿ, ಸ್ತ್ರೀಯರ ಮಾನಭಂಗ ಮಾಡಿ, ೪೦ ಸಾವಿರ ರೂ.ಗಳ [illegible]ಗಳನ್ನು ಅಪಹರಿಸಿಕೊಂಡು ಹೋದ[illegible] ಅನೇಕ ಜನರನ್ನು ಭರ್ಜಿಯಿಂದ [illegible] ಹಿಂಸಿಸಿದರೆಂದೂ ಅದರಿಂದ ೩ ಜನ ಹೆಂಗಸರು ಸತ್ತರೆಂದೂ, ೨೦ ಜನಗಳಿಗೆ ತೀವ್ರ ಗಾಯಗಳಾಗಿವೆಯೆಂದೂ ವರದಿ[illegible] ದಾಂಗ್ರಾ ಎಂಬ ಹಳ್ಳಿಯನ್ನು [illegible]ಗೆ ಹಾಕಿ, ಅನೇಕ ಜನಗಳನ್ನು [illegible] ಮಾಡಿದರೆಂದೂ ಹೇಳಲಾಗಿದೆ.

ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳು

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಶ್ರೀ ಎಸ್ ನಿಜಲಿಂಗಪ್ಪನವರನ್ನೂ, ತಮಿಳು ನಾಡು ಕಾಂಗ್ರೆಸ್ [illegible] ಅಧ್ಯಕ್ಷರಾಗಿ ಶ್ರೀ ಕೆ ಕಾಮರಾಜ ನಾಡಾರವರನ್ನೂ, ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಪ್ರೊ|| [illegible] ರಂಗಾರವರನ್ನೂ ಪುನಃ ಚುನಾಯಿಸಲಾಗಿದೆ.

ವರ್ಣ ಜನಾಂಗದ ಸುಂದರಿಯರಿಗೂ ಆಸ್ಟ್ರೇಲಿಯಾದಲ್ಲಿ ಸ್ಥಾನವಿಲ್ಲ

ವರ್ಣ ಜನಾಂಗದವರು ಆಸ್ಟ್ರೇಲಿಯಾ[illegible] ನೆಲೆಸಕೂಡದೆಂಬ ನೀತಿಗೆ ಅನುಸಾರ[illegible] ಯೂರೋಪಿ ಜನಾಂಗಕ್ಕೆ ಸೇರಿದ [illegible] ಆಸ್ಟ್ರೇಲಿಯಾಕ್ಕೆ [illegible]ಕೂಡದೆಂದ, ಅಲ್ಲಿನ ಸರ್ಕಾರದವರು [illegible] ಮಾಡಿದ್ದಾರೆ ನ್ಯೂಜೀಲೆಂಡಿನಲ್ಲಿ ಈ ಜನಾಂಗದವರಿಗೂ ಅಲ್ಲಿನ ಬಿಳಿ[illegible]ಗೂ ಯಾವ ವರ್ಣ ಭೇದವೂ ಇಲ್ಲ [illegible]ಹಾರ್ದದಿಂದ ಇರುವರು. ಈ ನಿ[illegible] ಆಜ್ಞೆಯಿಂದ ಎರಡು ಡೊಮಿನಿಯನ್[illegible]ಗೂ ಮನಸ್ತಾಪ ಉಂಟಾಗಬಹುದು [illegible] ಹೇಳಲಾಗಿದೆ

ನಗರದ ಬಳಿ ಪ್ರವಾಹದ ಹಾವಳಿ

[illegible]ನಗರದ ಜೇಲಂ ನದಿ ಪ್ರವಾಹವು [illegible] ದಿನಗಳಿಂದ ವಿಪರೀತ ಹೆ[illegible] ಅಡಿಗಳು) ಶ್ರೀನಗರಕ್ಕೆ ಪೂ[illegible]ಭಾಗದ ಅನೇಕ ಪ್ರದೇಶಗಳು ನೀರಿ[illegible]ಳುಗಿವೆ ಮನೆ ಮತ್ತು ಬೆಳೆ[illegible] ನಷ್ಟ ಸಂಭವಿಸಿದೆ ಸರ್ಕಾರಿ [illegible]ಗಳು ರಾತ್ರಿ ಹಗಲಿರುಳೂ ದುಡಿದು ಬರ[illegible] ಕ್ರಮಗಳನ್ನು ಕೈಗೊಳ್ಳುತ್ತಿರುವರು

ಟಿ. ಎಸ್. ಸುಬ್ಬಣ್ಣನವರ ದಸ್ತಗಿರಿ ಬಗ್ಗೆ ಪ್ರತಿಭಟನೆ

ಮೈಸೂರು ೧೫

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಮೊನ್ನೆ ಶ್ರೀ ದೌಲತ್‌ರಾಯರ ಅಧ್ಯಕ್ಷತೆಯಲ್ಲಿ ನಡೆದು, ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ ಎಸ್ ಸುಬ್ಬಣ್ಣನವರನ್ನು ಸರ್ಕಾರದವರು ದಸ್ತಗಿರಿ ಮಾಡಿರುವುದನ್ನು ಖಂಡಿಸಿ, ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು.

ಕರಾಚಿಯಲ್ಲಿ ಪ್ರತಿಬಂಧಕಾಜ್ಞೆ

ಕರಾಚಿಯನ್ನು ಸಿಂಧ್ ಪ್ರಾಂತ್ಯದಿಂದ ಪ್ರತ್ಯೇಕಿಸಬೇಕೆಂದು ಪಾಕಿಸ್ತಾನದ ರಾಜ್ಯಾಂಗ ಸಭೆಯು ಮಾಡಿರುವ ನಿರ್ಣಯದ ಬಗ್ಗೆ ಸಿಂಧ್ ಮುಸ್ಲಿಂ ಲೀಗಿನವರು ಅ[illegible] ನವನ್ನು ವ್ಯಕ್ತಪಡಿಸಿರುವರು ಈ ಸಂಬಂಧವಾಗಿ ಕರಾಚಿ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯೊಂದನ್ನು ಜಾರಿ ಮಾಡಿ ಅಲ್ಲಿ ಸಾರ್ವಜನಿಕರು ಒಂದು ವಾರ ಕಾಲ ಆಯುಧಗಳನ್ನು ಹಿಡಿದು ತಿರುಗಾಡಕೂಡದೆಂದೂ ೫ ಮಂದಿಗೆ ಮೇಲ್ಪಟ್ಟು ಗುಂಪು ಕೂಡಬಾರದೆಂದೂ, ಸಭೆ ಮೆರವಣಿಗೆಗಳನ್ನು ನಡೆಸಕೂಡದೆಂದೂ ತಿಳಿಸಿದ್ದಾರೆ

ಸಿ.ಬಿ.ಜಡ್. ಮತ್ತು ಸಿ.ಬಿ.ಜಿ. ವಿದ್ಯಾರ್ಥಿಗಳ ಕೊರತೆ

ಮೈಸೂರು ಸರ್ಕಾರಿ ಇಂಟರ್‌ಮೀಡಿಯೇಟ್ ಕಾಲೇಜು ಈ ವರ್ಷದಿಂದ ಮೊದಲನೆ ದರ್ಜೆಯ ಸೈನ್ಸ್ ಕಾಲೇಜ್ ಆಗಲಿದೆ ಅದರಲ್ಲಿ ಪಿ ಸಿ ಎಂ ವಿದ್ಯಾರ್ಥಿಗಳಿಂದ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುವುದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ ರಾಜಧಾನಿಯಲ್ಲಿ ಅನೇಕ ಮಂದಿ ಸಿ ಬಿ ಜಡ್ ಮತ್ತು ಸಿ ಬಿ ಜಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇರುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಮೇಲ್ಕಂಡ ಕಾಲೇಜಿನಲ್ಲಿ ವ್ಯಾಸಂಗಕ್ಕೆ ಅವಕಾಶವಿಲ್ಲದೆ ಬಹಳ ತೊಂದರೆಯಾಗಿದೆ ವಿಶ್ವವಿದ್ಯಾನಿಲಯದವರು ಈ ಅಂಶವನ್ನು ಪರಿಶೀಲಿಸಿ ಈ ಕೊರತೆಯನ್ನು ನಿವಾರಿಸಬೇಕೆಂದು ಪ್ರಾರ್ಥಿಸಿ ವಿದ್ಯಾರ್ಥಿಯೊಬ್ಬರು [illegible] ಬರೆದಿದ್ದಾರೆ

ಬಿ. ಕೆ. ಗರುಡಾಚಾರ್ಯರ ಬಗ್ಗೆ ಪೌರಸಭೆಯ ಸಂತಾಪ

ಮೈಸೂರು ೧೪

ಮೈಸೂರು ಪೌರಸಭೆಯ ಅಧಿವೇಶನವು ನಿನ್ನೆ ಸಂಜೆ ನಡೆದು ರಾವ್ ಬಹದ್ದೂರ್ ಲೋಕಸೇವಾನಿರತ ಬಿ. ಕೆ ಗರುಡಾಚಾರ್ಯರವರ ನಿಧನದ ಬಗ್ಗೆ ಸಂತಾಪ ಸೂಚಕ [illegible]ವನ್ನು ಮಾಡಿ ಅವರ [illegible] ಸಭೆಯನ್ನು ಮುಂದೆ ಹಾಕಲಾಯಿತು. ಅಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು [illegible]ವನ್ನು ಮಂಡಿಸಿದರು. ಶ್ರೀಗಳಾದ ಬಿ [illegible]ಸ್ವಾಮಿ ಮತ್ತು ಎ ವೆಂಕಟೇಶಯ್ಯನವರುಗಳು ಮಾತನಾಡಿ ದಿವಂಗತರ ಗುಣಕಥನ ಮಾಡಿದರು ಸದಸ್ಯರೆಲ್ಲರೂ ಎದ್ದು ನಿಂತು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು

ಗೋಡ್ಸೆಗೆ ಪತ್ರಿಕೆ ಬೇಕಂತೆ

[illegible] ಕೊಲೆ ಮೊಕದ್ದಮೆಯಲ್ಲಿ [illegible] ನಾಥೂರಾಂ ವಿನಾಯಕ ಗೋಡ್ಸೆಯ ಪರವಾಗಿ [illegible] ಶ್ರೀ ವಿ ವಿ ಓಕ್‌ರವರು [illegible] ಒಪ್ಪಿರುವರು [illegible] ಹಲಿಗೆ ಹೋಗಿದ್ದಾರೆ

ಸಾಗುವಳಿ ಪಕ್ಷೋಪ್ಪಿ ಆಜ್ಞೆ

ಬೆಂಗಳೂರು ೧೫

ಸರ್ಕಾರದವರ [illegible] ಆಜ್ಞೆಯೊಂದನ್ನು ಹೊರಡಿಸಿ, [illegible], ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ, [illegible], [illegible] ಮತ್ತು [illegible] ಹಳ್ಳಿಗಳಲ್ಲಿ ಮುಂದಿನ ತಿಂಗಳು ೧ನೇ ತಾ ರಿಂದ ಜಾರಿಗೆ ಬರತಕ್ಕದ್ದೆಂದು ತಿಳಿಸಿದ್ದಾರೆ. ಈ ಆಜ್ಞೆಯ ಪ್ರಕಾರ, ಡೆಪ್ಯುಟಿ ಕಮೀಷನರ್ ಅಧಿಕಾರಿಗಳ ಅನುಮತಿ ಇಲ್ಲದೆ, ಯಾರೂ ಮೇಲ್ಕಂಡ ಪ್ರದೇಶಗಳಿಂದ ಹೊರಕ್ಕೆ [illegible] ಸಾಗಿಸಕೂಡದು ಅವರ ಇದು [illegible] ಕಡಿಮೆ [illegible] ವ್ಯವಸಾಯ ಮತ್ತು ಮನೆಗಳ ಉಪಯೋಗಕ್ಕಾಗಿ [illegible] ಸಾಗುವಳಿಯನ್ನು ಸಾಗಿಸಬಹುದು ಇದಕ್ಕೆ [illegible] ಪೆಟ್ಟಿಗೆ ಇಟ್ಟುಕೊಂಡಿರುವವರು ಆಜ್ಞೆಯು ಜಾರಿಗೆ ಬಂದ ೧೦ ದಿವಸದೊಳಗೆ ಡೆಪ್ಯುಟಿ ಕಮೀಷನರ್ ಅಧಿಕಾರಿಗಳಿಗೆ [illegible]ವನ್ನು ತಿಳಿಸಬೇಕು ಈ ಪ್ರದೇಶದಲ್ಲಿ [illegible] ಜಿಲ್ಲಾ ಕಮೀಷನರ್ ಅಧಿಕಾರಿಗಳ ಅನುಮತಿ ಇಲ್ಲದೆ [illegible] ಸಾಗಿಸಕೂಡದು.

ರಷ್ಯಾ ಬರ್ಮಾ ಸಂಬಂಧ ಬೆಳೆಯುತ್ತಿದೆ

[illegible] ರಷ್ಯದ ಸಂಗಡ ಆರ್ಥಿಕ ಮತ್ತು ರಾಜಕೀಯ ಸಂಬಂಧವನ್ನು ಬೆಳೆಸಲು ಬರ್ಮಾವು ತಕ್ಕ ಕಾರ್ಯಕ್ರಮ ಕೈಗೊಳ್ಳುವುದೆಂದು ಅವರ ಪ್ರಧಾನಿ ಥಾಕಿನ್ ನುರವರು ತಿಳಿಸಿರುತ್ತಾರೆ ಬರ್ಮಾ ದೇಶವು ಬ್ರಿಟನ್ ಮತ್ತು ಅಮೆರಿಕಗಳ ಪ್ರಭಾವದ ಕ್ಷೇತ್ರಗಳಿಂದ ಹೊರಬರಲು [illegible] ಬರ್ಮಾ ನಾಯಕರುಗಳು ರಷ್ಯದ ತತ್ವಗಳನ್ನು [illegible] ಅನುಸರಿಸುತ್ತಾರೆಂದೂ ಅವರು ಹೇಳಿದ್ದಾರೆ [illegible] ಜವಾಬ್ದಾರಿಯನ್ನು [illegible] ಮಾಡಲಾಗುವುದೆಂದೂ ಅವರು ತಿಳಿಸಿರುತ್ತಾರೆ

ನಾಲ್ಕು ಮಕ್ಕಳನ್ನು ಹೆತ್ತ ತಾಯಿ

ಇಂಗ್ಲೆಂಡಿನ ೨೪ ವರ್ಷದ ಮಾರ್ಗರೆಟ್ ಎಲಿಜಬೆತ ಎ [illegible] ಒಂದೇ ಕಾಲದಲ್ಲಿ ನಾಲ್ಕು ಹೆಣ್ಣು ಮಕ್ಕಳನ್ನು ಹಡೆದಳೆ. ಡಾ. [illegible] ಮಕ್ಕಳೆಲ್ಲವೂ ಕ್ಷೇಮವಾಗಿದ್ದಾರೆ. [illegible] ಆಸ್ಪತ್ರೆಯಲ್ಲಿ [illegible] ಚಿಕಿತ್ಸೆ ಮಾಡಿದ ನಂತರ [illegible] ಮಕ್ಕಳನ್ನು [illegible] ಅಂದರೆ [illegible] ತೇರರಡಿಗಳಲ್ಲಿತ್ತ [illegible]

[illegible] ಯೋಗಿಯ ಬಿಡುಗಡೆ

[illegible] ವಯಸ್ಸಿನವನೆಂದು ಹೇಳಲಾಗಿರುವ [illegible] ನಂಬೂದ್ರಿ ಎಂಬ ಯೋಗಿಯನ್ನು [illegible] ದಿಂದಲೂ [illegible] ಆ ತನನ್ನು [illegible] ಮಹಾರಾಜಾ ಆಸ್ಪತ್ರೆಗೆ ಸೇರಿಸಿ [illegible] ಗಂಟೆಗಳ ಕಾಲ [illegible] ಕೆಲವು ದಿನಗಳಿಂದಲೂ [illegible] ಆತನ [illegible] ವೈದ್ಯರುಗಳು [illegible]

ಅಮೆರಿಕದ [illegible] ೩೪ ವರ್ಷದ [illegible] ಕನ್ನಡನ್ನು [illegible] ೬ ಕೊಠಡಿಗಳುಳ್ಳ ಮನೆಯನ್ನು ಕೊಡುವುದಾಗಿ [illegible] ಪ್ರಚಾರ ಮಾಡಿದ [illegible] ತಾನು ಮದುವೆ [illegible] ಕನ್ನ[illegible] ಇಷ್ಟವಿಲ್ಲದೆ. ಈ [illegible] ಹೇಳಲಾಗಿದೆ

ಮುಸ್ಲಿಂ ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿಗಳಿಲ್ಲ

ಸ್ವ. ಸಂ. ಪ್ರೋ.] ಬೆಂಗಳೂರು ೧೫

ಮುಸ್ಲಿಂ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಎಲ್ಲ ಬಗೆಯ [illegible] ರಿಯಾಯಿತಿಗಳನ್ನು ರದ್ದು ಮಾಡಿದೆ. ಸರ್ಕಾರದವರು ನಿರ್ಧರಿಸಿರುತ್ತಾರೆಂದು [illegible] ಮುಸ್ಲಿಂ ವಿದ್ಯಾರ್ಥಿಗಳಿಗೆ ಸೌಲಭ್ಯಗಳ ವಿಚಾರವೂ [illegible] ಪರ್ಯಾಲೋಚನೆಯಲ್ಲಿರುತ್ತದೆ

[illegible] ಶ್ರೀ [illegible] ಯ್ಯನವರಿಗೆ [illegible] ಉಪಯೋಗಿ [illegible] ೧ ತಿಂಗಳು [illegible] ಅಲ್ಲಿ [illegible] ಕೊಟ್ಟಿದ್ದಾರೆ.

ಸಮತಾವಾದಿ ನಾಯಕರುಗಳನ್ನು ಬಿಡುಗಡೆ ಮಾಡಬೇಕು

ಮೈಸೂರು ವಿದ್ಯುಚ್ಛಕ್ತಿ ಕೆಲಸಗಾರರ ಮುಷ್ಕರವು ಕೊನೆಗೊಂಡಿದ್ದರೂ, ಆ ಸಮಯದಲ್ಲಿ ದಸ್ತಗಿರಿಯಾದ ಸಮತಾವಾದಿ ಪಕ್ಷದ ನಾಯಕರುಗಳನ್ನು ಬಿಡುಗಡೆ ಮಾಡದಿರುವುದು ಖಂಡನೀಯ. ಕಾರ್ಮಿಕರ ಮತ್ತು ರೈತರ ಪ್ರಗತಿಗಾಗಿ ದುಡಿಯುತ್ತಿರುವ ಈ ನಾಯಕರುಗಳನ್ನು ಕೂಡಲೇ ಸರ್ಕಾರದವರು ಬಿಡುಗಡೆ ಮಾಡಬೇಕು ಎಂದು ಸಮತಾವಾದಿ ಪಕ್ಷದ ಶ್ರೀ ಕೆ. ಶ್ರೀನಿವಾಸಯ್ಯನವರು ಪ್ರಾರ್ಥಿಸಿರುತ್ತಾರೆ.

ಬೆಲ್ಜಿಯಂನಲ್ಲಿ ಚಿಟ್ಟೆಗಳ ಹಾವಳಿ

ಬೆಲ್ಜಿಯಂ ತೀರ ಪ್ರದೇಶದಲ್ಲಿ ಕೋಟ್ಯಂತರ ಚಿಟ್ಟೆಗಳು ಸಮುದ್ರದಿಂದ ಬಂದು ದೇಶದ ಆಲೂಗೆಡ್ಡೆ ಬೆಳೆಯನ್ನು ನಾಶಪಡಿಸುತ್ತಿವೆ. ಇದನ್ನು ತಪ್ಪಿಸಲು ೫೦೦ ಪ್ರದೇಶಗಳಲ್ಲಿ ಪೆಟ್ರೋಲನ್ನು ಸುರಿದು ಬೆಂಕಿ ಹಚ್ಚಲಾಗುತ್ತಿದೆ. ಪೋಲೀಸರೂ ಶಾಲಾ ಮಕ್ಕಳೂ ಮತ್ತು ಇತರರೂ ಈ ನಾಶ ಕಾರ್ಯಕ್ರಮದಲ್ಲಿ ನೆರವಾಗಿದ್ದಾರೆ.

"ಸಂಯುಕ್ತ ಭಾರತ" ವಿಶೇಷ ಸಂಚಿಕೆ

ಬೆಂಗಳೂರಿನಲ್ಲಿ ಹೊರಡುತ್ತಿರುವ ಸಂಯುಕ್ತ ಭಾರತ ದಿನ ಪತ್ರಿಕೆಯ ಗಾಂಧೀ ಸ್ಮಾರಕ ವಿಶೇಷ ಸಂಚಿಕೆಯು ನಮ್ಮ ಕೈ ಸೇರಿದೆ. ಇದರಲ್ಲಿ ಮಹಾತ್ಮಾ ಗಾಂಧಿಯವರ ಜೀವನ ಮತ್ತು ಬೋಧನೆಗಳೂ ಸಾಧನೆಗಳೂ ವಿವರಿಸಲ್ಪಟ್ಟಿವೆ. ಈ ಸಂಚಿಕೆಯ ಬೆಲೆ ೮ ಆಣೆ ಮಾತ್ರ. ಇದನ್ನು ಕನ್ನಡಿಗರೆಲ್ಲರೂ ಓದಿ ಪ್ರಯೋಜನವನ್ನು ಹೊಂದಲೆಂದು ನಾವು ಹಾರೈಸುತ್ತೇವೆ.

ಮೈಸೂರು

ಜೀವಣ್ಣರಾಯನ ಕಟ್ಟೆಯಲ್ಲಿ

—: ಪ್ರಾರಂಭ ದಿನ :—

16-6-48 ನೇ

ಬುಧವಾರ ರಾತ್ರಿ ೯-೩೦ ಕ್ಕೆ

ಬೊಂಬಾಯಿ ಜಿ. ಎ. ಸರ್ಕಸ್

ಚೀನಾ, ಫಿಲಿಪ್ಪೈನ್, ಮಲಯ, ಭಾರತೀಯ ದೇಶಗಳಿಂದ ಆರಿಸಲ್ಪಟ್ಟ ೧೧೦ ಆಟಗಾರರಿಂದಲೂ, ೧೮ ಕುದುರೆ, ೩ ಆನೆ, ೨ ಒಂಟೆ, ೧೨ ಹುಲಿ, ಸಿಂಹಗಳ ಪ್ರದರ್ಶನಗಳಿಂದಲೂ, ೧೬ ಚೀನಾ, ಮಲಯಾ, ಭಾರತೀಯ ಹೆಂಗಸರ ಡ್ಯಾನ್ಸುಗಳಿಂದಲೂ ಪ್ರಖ್ಯಾತಿ ಹೊಂದಿದ ೧೯೧೧ನೇ ಇಸವಿಯಲ್ಲಿ ಸ್ಥಾಪಿತವಾಗಿ ಪೂರ್ವ-ಪಶ್ಚಿಮ ದೇಶಗಳಲ್ಲಿ ಸಂಚರಿಸಿ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರವಾದ

ಬೊಂಬಾಯಿ ಜಿ. ಎ. ಸರ್ಕಸ್

ತಪ್ಪದೆ ನೋಡಿರಿ

ಪದವೀಧರರಿಗೆ ಕಡ್ಡಾಯದ ಜವಾನು ಕೆಲಸ

ಸಂಯುಕ್ತ ಪ್ರಾಂತ್ಯದ ೫೦೦ ಜನ ಪದವೀಧರರು ಅಲ್‌ಮೋರಾ ಕಾಡಿನಲ್ಲಿ ರೈತರಂತೆ ಉಳುವುದು, ಮರಗಳನ್ನು ಕಡಿಯುವುದು, ಕಲ್ಲು ಒಡೆಯುವುದು ಮತ್ತು ರಸ್ತೆಗಳನ್ನು ನಿರ್ಮಿಸುವುದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಿರುವರು. ಅಲ್ಲಿನ ಸರ್ಕಾರದವರು ಒಂದು ಸಮಾಜ ಸೇವಾ ಶಿಕ್ಷಣ ಕೇಂದ್ರವನ್ನು ಏರ್ಪಡಿಸಿ ಈ ಯೋಜನೆಯು ಫಲಕಾರಿಯಾದರೆ ಅದನ್ನು ಎಲ್ಲ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿ ಕೊಡಲು ನಿರ್ಧರಿಸಿದ್ದಾರೆ.

ಜಮೀನುದಾರಿ ಪದ್ಧತಿ ರದ್ದಿಗೆ ೧೩೮ ಕೋಟಿ ರೂ. ಖರ್ಚು

ಸಂಯುಕ್ತ ಪ್ರಾಂತ್ಯದಲ್ಲಿ ಜಮೀನುದಾರಿ ಪದ್ಧತಿಯನ್ನು ರದ್ದು ಮಾಡಲು ಸರ್ಕಾರಕ್ಕೆ ೧೩೮ ಕೋಟಿ ರೂ ಖರ್ಚಾಗುವುದೆಂದೂ, ಅದರ ಪೈಕಿ ೧೩೬ ಕೋಟಿ ರೂಗಳನ್ನು ಜಮೀನುದಾರರಿಗೆ ಪರಿಹಾರ ದ್ರವ್ಯವಾಗಿ ಕೊಡಲಾಗುವುದೆಂದೂ ಹೇಳಲಾಗಿದೆ.

ಗಿರಿಜಾ ಕಲ್ಯಾಣ

ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಇದೇ ೧೬ ರಿಂದ ೨೧ ನೇ ತಾ ವರೆವಿಗೆ ಗಿರಿಜಾ ಕಲ್ಯಾಣ ಮಹೋತ್ಸವವು ನಡೆಯುವುದು.

Edited printed and published by A. R. Nagarajan at the Sadhvi Press D. Subbaiah Road Mysore

ಕಾಶ್ಮೀರ್ ಅಜಾದ್ ಸರ್ಕಾರದ ನಿರ್ಮೂಲ

ಕಾಶ್ಮೀರದ ಅಜಾದ್ ಸರ್ಕಾರವು ಕುಸಿದು ಬಿದ್ದು ಅದರ ನಾಯಕನಾದ ಸರ್ದಾರ್ ಇಬ್ರಾಹಿಮನು ತಲೆತಪ್ಪಿಸಿಕೊಂಡಿದ್ದಾನೆಂದೂ ಮತ್ತು ಅದರ ಮಂತ್ರಿಗಳನ್ನು ವಜಾ ಮಾಡಿರುವನೆಂದೂ ವರದಿಯಾಗಿದೆ. ಅಲ್ಲಿನ ಮುಸ್ಲಿಂ ಸಮ್ಮೇಳನದ ಅಧ್ಯಕ್ಷರಾದ ಚೌಧ್ರಿ ಗುಲಾಂ ಅಬ್ಬಾಸ್‌ರವರು ಆ ಸರ್ಕಾರವನ್ನು ಪುನಃ ರಚಿಸಲು ಯತ್ನಿಸಿದ ಪ್ರಯತ್ನವೆಲ್ಲಾ ವಿಫಲವಾಗಿ, ಈಗ ಅವರು ಪಾಕಿಸ್ತಾನದ ನೆರವನ್ನು ಕೋರಿದ್ದಾರೆ. ಕಾಶ್ಮೀರ್ ರಣಕ್ಷೇತ್ರದಲ್ಲಿ ಧಾಳಿಕಾರರ ಪಾತ್ರವನ್ನು ಪಾಕಿಸ್ತಾನ ಸೈನಿಕರು ವಹಿಸಿಕೊಂಡಿದ್ದಾರೆಂದೂ ಹೇಳಲಾಗಿದೆ.

ರಾಜಕಮಲ್,

ಮೈಸೂರು

ತಾ|| 11-6-48 ರಿಂದ

ಪ್ರಾರಂಭ

ಮ್ಯಾಟನಿ ೨-೩೦ ಕ್ಕೆ ೧ ನೇ ಆಟ ೬-೩೦

೨ ನೇ ಆಟ ೯-೩೦ ಕ್ಕೆ

ವಾಹಿನಿಯವರ

ಭಕ್ತ ಪೋತನ

(ತೆಲುಗು)

ಭೂಮಿಕೆ - ನಾಗಯ್ಯ, ಗೌರಿನಾಥ ಶಾಸ್ತ್ರಿ ಮಾಲತಿ, ಸೂರ್ಯಕುಮಾರಿ

ಮುಂತಾದವರು

ಕಲ್ಕತ್ತಾದಲ್ಲಿ ಬ್ರಿಟಿಷರ ಪ್ರತಿಮೆಗಳಿಗೆ-ಉಚ್ಚಾಟನೆ

ಕಲ್ಕತ್ತದಲ್ಲಿರುವ ಬ್ರಿಟಿಷರ ಎಲ್ಲ ಪ್ರತಿಮೆಗಳನ್ನೂ ತೆಗೆದುಹಾಕಲು ಪಶ್ಚಿಮ ಬಂಗಾಳ ಸರ್ಕಾರದವರು, ಕೇಂದ್ರ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸುತ್ತಿರುವರೆಂದು ಹೇಳಲಾಗಿದೆ. ಹ್ಲಾಸ ರಾಣಕ್ಷೇತ್ರದಲ್ಲಿ ಸ್ಥಾಪಿಸಿರುವ ಕ್ಲೈವನ ಪ್ರತಿಮೆಯನ್ನು ತೆಗೆದು ಹಾಕಿ ಅಲ್ಲಿ ರಾಷ್ಟ್ರೀಯ ಹುತಾತ್ಮರ ಸ್ಮಾರಕವನ್ನು ನಿರ್ಮಿಸಬೇಕೆಂದೂ ಆಲೋಚಿಸಲಾಗಿದೆ.

UNIVERSITY OF MYSORE

Office of the University of Mysore, Mysore, Dated 7th June 1948

No Ex 8 82 47-48

NOTIFICATION

It is hereby notified for the information of the public that in the Intermediate College, Mysore, Maharani's Intermediate College, Mysore and in the Intermediate College, Tumkur provision will be made from the academic year commencing from 3rd June 1948 for instruction in Mathematics, Physics and Chemistry up to the B.Sc. Pass Standard. Students desirous of joining the Colleges may apply to the Head of the Institution concerned soon after the results of the Public Examination of MAY 1948 are declared.

By Order,

D. S. GORDON

Registrar

ರೇಷನಿಂಗ್ ಆಫೀಸರವರ ಕಛೇರಿ, ಮೈಸೂರು ಸಿಟಿ, ತಾ|| ೧೧-೬-೧೯೪೮

ನೋಟಿಫಿಕೇಷನ್

ನಂ R1-121-47.8

ತಾ|| 11.6.1948

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಮಿಲ್ ಮಾಲೀಕರುಗಳ, ವರ್ತಕರುಗಳ ಲೈಸೆನ್ಸ್ ರಿನ್ಯೂ ಮಾಡುವ ಬಗ್ಗೆ ವರ್ತಕರು ಮತ್ತು ಭತ್ತದ ಕಾರ್ಡು ಹೊಂದಿರುವವರಿಂದ ಕಟ್ಟಬೇಕಾಗಿರುವ ಹೆಚ್ಚಿಗೆ ಭತ್ತದ ಸ್ಟಾಕಿನ ಬಗ್ಗೆ ಡಿಕ್ಲರೇಷನ್ ಕೊಡಬೇಕೆಂದು ತಿಳಿಸಿದ್ದ ೧೯೪೮ ನೇ ಮೇ ಮಾಹೆ ತಾರೀಖು ಮೇಲ್ಕಂಡ ಕಛೇರಿಯ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಅದನ್ನನುಸರಿಸಿ, ಆ ರೀತಿ ಡಿಕ್ಲರೇಷನ್ ಕೊಡಲು ಕಾಲಾವಧಿಯನ್ನು ಇದೇ ೧೯೪೮ ಜೂನ್ ೨೫ ನೇ ತಾರೀಖಿನವರೆಗೆ ವಿಸ್ತರಿಸಲಾಗಿದೆಯೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಎಂ. ವೆಂಕಟೇಶ್ವರಲು,

ಇನ್‌ಛಾರ್ಜ್ ರೇಷನಿಂಗ್ ಆಫೀಸರ್

ಮೈಸೂರು ಸಿಟಿ

ಅಮೋಘ ಪ್ರಾರಂಭ

ಜೂನ್ 18 ನೆಯ ಶುಕ್ರವಾರದಿಂದ

ಶ್ರೀ ಗಾಯತ್ರಿ ಟಾಕೀಸ್

ಚಾಮರಾಜ ರೋಡು, ಮೈಸೂರು

(ಆಧುನಿಕ ಸೌಲಭ್ಯಗಳಿಂದ ಕೂಡಿದ ಚಿತ್ರ ಮಂದಿರ)



ಪ್ರತಿ ದಿನ 3 ಆಟಗಳು; 3-30, 6-30 ಮತ್ತು 9-30

ಸಿಂದ್‌ಬಾದ್ ದಿ ಸೈಲರ್

(SINBAD THE SAILOR)

[ವರ್ಣರಂಜಿತ ಚಿತ್ರ]

ಸೂಚನೆ:-೧೮ನೇ ಶುಕ್ರವಾರ ಪಬ್ಲಿಕ್ ಷೋ ರಾತ್ರಿ, ೧೧೦ ಘಂಟೆಗೆ

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಬುಧವಾರ ೧೬-೬-೪೮ [ಸಂಚಿಕೆ ೩೦೫

ಭಾರತ ಹಳ್ಳಿಗಳ ಮೇಲೆ ಹೈದ್ರಾಬಾದ್ ದಿಗ್ಬಂಧನ

ಜಿನ್ನಾರವರ ವರ್ತನ ಬಗ್ಗೆ ಬಿಜಾಪುರ ಮುಸ್ಲಿಮರ ಖಂಡನೆ

ಹೈದರಾಬಾದಿನ ಬಗ್ಗೆ ಭಾರತವು ಕೈ ಹಾಕಲು ಅದಕ್ಕೆ ಅಧಿಕಾರವೇ ಇಲ್ಲವೆಂದು ಮಿ॥ ಜಿನ್ನಾರವರು ಹೇಳಿರುವುದನ್ನು ಬಿಜಾಪುರದ ಮುಸ್ಲಿಮರು ಖಂಡಿಸಿರುತ್ತಾರೆ. ಈ ವಿಚಾರದಲ್ಲಿ ಮಿ॥ ಜಿನ್ನಾರವರಿಗೆ ಯಾವ ಅಧಿಕಾರವೂ ಇಲ್ಲವೆಂದೂ, ಭಾರತದ ಮುಸ್ಲಿಮರ ಪರವಾಗಿ ಮಾತನಾಡಲು ಭಾರತದ ಪ್ರಜೆಗೆ ಮಾತ್ರ ಹಕ್ಕಿದೆಯೆಂದೂ ಅವರು ತಿಳಿಸಿರುತ್ತಾರೆ. ಖಾಸಿಂ ರಜ್ವಿಯ ವರ್ತನೆಯನ್ನೂ ಸಹ ಖಂಡಿಸಿ, ಭಾರತ ಮತ್ತು ಹೈದರಾಬಾದಗಳಿಗೆ ಶಾಂತಿಯುತ ಒಪ್ಪಂದವಾಗಲು ರಜ್ವಿಯು ಅಡ್ಡಿಯುಂಟು ಮಾಡುತ್ತಿದ್ದಾನೆಂದೂ, ಮತ್ತು ರಜಾಕರರ ಸಂಸ್ಥೆಯನ್ನು ರದ್ದುಗೊಳಿಸಬೇಕೆಂದು ಅವರು ತಿಳಿಸಿರುತ್ತಾರೆ.

ಟ್ರಾಫಿಕ್ ಬೋರ್ಡು

ಮೈಸೂರು ಟ್ರಾಫಿಕ್ ಬೋರ್ಡನ್ನು ಇದೇ ೨ ನೇ ತಾ॥ ನಿಂದ ಎರಡು ವರ್ಷಗಳ ಕಾಲಕ್ಕೆ ಈ ಕೆಳಗೆ ಕಂಡಂತೆ ಪುನರ್ರಚಿಸಲಾಗಿದೆ—

ಗೃಹಸಚಿವರು (ಅಧ್ಯಕ್ಷರು), ರೆವಿನ್ಯೂ ಕಮೀಷನರು, ಜನರಲ್ ಸೆಕ್ರೆಟರಿಗಳು, ರಸ್ತೆ ಮತ್ತು ಕಟ್ಟಡಗಳ ಚೀಫ್ ಇಂಜನಿಯರ್, ಪೊಲೀಸ್ ಮುಖ್ಯಾಧಿಕಾರಿಗಳು, ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಡೈರೆಕ್ಟರು, ರೈಲ್ವೆಯ ಜನರಲ್ ಮ್ಯಾನೇಜರು (ಕಾರ್ಯದರ್ಶಿಗಳು), ಶ್ರೀಗಳಾದ ಬಿ ನಾರಾಯಣಸ್ವಾಮಿ, ಎಸ್ ಕರಿಯಪ್ಪ, ಟಿ ಎ ನರಸಿಂಗಪ್ಪ ಮತ್ತು ಹೆಚ್ ಎಸ್ ರುದ್ರಪ್ಪ

ಭಾರತ ಹಳ್ಳಿಗಳ ಮೇಲೆ ಹೈದರಾಬಾದಿನ ಆರ್ಥಿಕ ಪ್ರತಿಬಂಧಕ

ಕೃಷ್ಣಾ ಜಿಲ್ಲೆಗೆ ಸೇರಿದ ಮುಣಗಾಲ ಮತ್ತು ಲಿಂಗಗಿರಿ ಎಂಬ ಹಳ್ಳಿಗಳ ಮೇಲೆ ನಿನ್ನೆಯಿಂದ ಆರ್ಥಿಕ ದಿಗ್ಬಂಧನವನ್ನು ಹೈದರಾಬಾದ್ ಸರ್ಕಾರದವರು ಹಾಕಿರುತ್ತಾರೆಂದು ಹೇಳಲಾಗಿದೆ. ಇದರಿಂದ ಅಲ್ಲಿನ ಜನಗಳಿಗೆ ಮುಖ್ಯವಾಗಿ ಬೇಕಾದ ಗುಡ ಬಟ್ಟೆ, ಸಕ್ಕರೆ, ಸೀಮೆ ಎಣ್ಣೆ ಮತ್ತು ಪೆಟ್ರೋಲು ಇವುಗಳ ಸರಬರಾಜಿಗೆ ಅಡ್ಡಿಯಾಗಿರುವುದು. ಈ ಪ್ರದೇಶಕ್ಕೆ ಹೋಗಲು ನಿಜಾಮರ ಸರಹದ್ದಿನಿಂದಲೇ ಹೋಗಬೇಕಾಗಿತ್ತು, ಇದಕ್ಕೆ ನಿಜಾಂ ಸರ್ಕಾರದವರು ಅವಕಾಶ ಕೊಡದೆ ಕೊಟ್ಟಿದ್ದರು.

ಈ ದಿನದೊಳಗಾಗಿ ಭಾರತ-ಹೈದರಾಬಾದ್ ಸಮಸ್ಯೆ ಬಗ್ಗೆ ನಿರ್ಧಾರ

ಭಾರತ ಸರ್ಕಾರದವರು ಹೈದರಾಬಾದಿಗೆ ಕೊಟ್ಟಿರುವ ಅಂತ್ಯದ ಷರತ್ತುಗಳ ಬಗ್ಗೆ ಈ ದಿನದೊಳಗಾಗಿ ನಿಜಾಮರು ನಿರ್ಧಾರಕ್ಕೆ ಬರಲಿರುವರೆಂದು ಹೇಳಲಾಗಿದೆ. ರಕ್ಷಣೆ, ವಿದೇಶಾಂಗ, ಸಂಚಾರ ಶಾಖೆಗಳು ಭಾರತಕ್ಕೆ ಒಪ್ಪಿಸತಕ್ಕದ್ದು, ನಿಜಾಮರ ಸೇನೆಯನ್ನು ೧೯೩೮ ನೇ ವರ್ಷದ ಸ್ಥಿತಿಗೆ ಇಳಿಸುವುದು, ರಜಾಕಾರರ ಸ್ವಯಂಸೇವಕ ವಿಸರ್ಜನೆ ಮಾಡುವುದು, ಅಂತಃಕಲಹ ವಿಶೇಷ ಪರಿಸ್ಥಿತಿ ಒದಗಿದರೆ ಹೈದರಾಬಾದಿನಲ್ಲಿ ಭಾರತ ಸೇನೆಯನ್ನು ಇಡಲು ಅವಕಾಶ ಕೊಡುವುದು, ಕೋಮುವಾರು ಪ್ರಾತಿನಿಧ್ಯದ ರೀತ್ಯ ತಾತ್ಕಾಲಿಕ ಮಂತ್ರಿಮಂಡಲವನ್ನು ಪುನರ್ರಚಿಸುವ ಅಧಿಕಾರ ನಿಜಾಮರಿಗೆ ಇರತಕ್ಕದ್ದು, ಇನ್ನು ಒಂದು ವರ್ಷದಲ್ಲಿ ರಾಜ್ಯಾಂಗ ಸಭೆಯೊಂದನ್ನು ಸ್ಥಾಪಿಸುವುದು. ಇವೇ ಭಾರತ ಸರ್ಕಾರದ ಕೊನೆಯ ಷರತ್ತುಗಳೆಂದು ಹೇಳಲಾಗಿದೆ.

● ಇಷ್ಟು ಷರತ್ತುಗಳ ರಚನೆ [illegible] ಮಂಗಳೂರು ಗಫಾರ್ ಖಾನರನ್ನು [illegible] ಪಂಜಾಬಿಗೆ ಸಾಗಿಸಲಾಗಿದೆ

ಕೃಷ್ಣ ವಿಲಾಸ ಹೋಟೇಲ್ ಕೆಲಸಗಾರರ ಮುಷ್ಕರ

ರಾಜಧಾನಿಯ ಮೆಜೆಸ್ಟಿಕ್ ಹೋಟೇಲಿನಲ್ಲಿ ಕಳೆದ ೩ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದ ಕೆ ವಿ [illegible] ಕಾರಣವಿಲ್ಲದೆ ತೆಗೆದು ಹಾಕಿರುವುದನ್ನು [illegible] ಅಲ್ಲಿನ ಕೆಲಸಗಾರರು ಈ ಬೆಳಗ್ಗೆಯಿಂದ ಮುಷ್ಕರ ಹೂಡಿದ್ದಾರೆಂದು ಹೋಟೇಲ್ ಕೆಲಸಗಾರರ ಸಂಘದ ಕಾರ್ಯದರ್ಶಿಗಳು ತಿಳಿಸಿದ್ದಾರೆ

ಪ್ರತಿ ದಿನ ಮೂರು ಆಟಗಳು

17-6-48 ನೇ ಗುರುವಾರದಿಂದ

ಮಂದಾರವತಿ

(ತಮಿಳು)

ಪಾತ್ರ:-ಟಿ ಆರ್ ರಾಜಕುಮಾರಿ, ಎಸ್ ಡಿ ಸುಬ್ಬಯ್ಯ, ಕಾಳಿ ಎನ್ ರತ್ನಂ ಮುಂತಾದವರು

ಇದರ ಜೊತೆಯಲ್ಲಿ ಕಾಶ್ಮೀರ್ ಕಿ ಕಹಾನಿ ಎಂಬ ಹಿಂದೀ ಟಾಕಿಕಲ್ ಚಿತ್ರವನ್ನೂ ಪ್ರದರ್ಶಿಸಲಾಗುವುದು.

ಒಲಿಂಪಿಯಾ ಟಾಕೀಸ್

ರೇಷ್ಮೆ ಕೆಲಸಗಾರರ ಮುಷ್ಕರವೇ ?

ಮೈಸೂರು ೧೬

ಸರ್ಕಾರಿ ರೇಷ್ಮೆ ನೇಯ್ಗೆ ಕಾರ್ಖಾನೆಯ ಕೆಲಸಗಾರರ ಸಂಘದ ಸಭೆಯು ಕಳೆದ ಭಾನುವಾರ ಶ್ರೀ ಕೆ ಆರ್ ಪ್ರಸಾದರವರ ಅಧ್ಯಕ್ಷತೆಯಲ್ಲಿ ಜರುಗಿದು, ಅವರ ಬೇಡಿಕೆಗಳನ್ನು ಮುಂದಿನ ತಿಂಗಳು ೧೫ ನೇ ತಾ॥ ನೊಳಗಾಗಿ ಸರ್ಕಾರದವರು ಈಡೇರಿಸದಿದ್ದಲ್ಲಿ, ಜುಲೈ ೧೯ ನೇ ತಾ॥ ನಿಂದ ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಯಿತು

ಕೇಶವಣ್ಣನವರ ವಿದ್ಯಾರ್ಥಿ ನಿಲಯ

ರಾಜಧಾನಿಯ ವಿಠ್ಠಲರಾವ್ ಕೇಶವಣ್ಣನವರ ಉಚಿತ ವಿದ್ಯಾರ್ಥಿ ನಿಲಯಕ್ಕೆ ಸೇರಲು ಅಪೇಕ್ಷಿಸುವ ಬ್ರಾಹ್ಮಣ ವಿದ್ಯಾರ್ಥಿಗಳು ಮುಂದಿನ ತಿಂಗಳು ೫ ನೇ ತಾ॥ ನೊಳಗಾಗಿ ಅರ್ಜಿಗಳನ್ನು ಹಾಕಿ ಕೊಳ್ಳಬೇಕೆಂದು ತಿಳಿಸಲಾಗಿದೆ

ಉದಾರ ಸಹಾಯ

ಮೈಸೂರು ನಗರದ ರಿಂಹರ್ಸಿಂಗ್ ಅಧಿಕಾರಿಗಳಾದ ಶ್ರೀ ಎಂ ಶ್ರೀನಿವಾಸಲು ನಾಯ್ಡುರವರು ತಮ್ಮ ಮಗಳ ವಿವಾಹ ಮಹೋತ್ಸವದ ಸಂಬಂಧದಲ್ಲಿ ರಾಜಧಾನಿಯ ಹಲವು ಸಂಸ್ಥೆಗಳಿಗೆ ೭೦ ರೂ ಗಳನ್ನು ಕೊಟ್ಟಿರುವರು

ಸರಸ್ವತೀಪುರಕ್ಕೆ ಪೋಸ್ಟಾಫೀಸು

ರಾಜಧಾನಿಯ ಸರಸ್ವತಿ ಪುರದಲ್ಲಿ ನಿನ್ನೆಯಿಂದ ಒಂದು ಅಂಚೆ ಕಛೇರಿಯನ್ನು ತೆರೆಯಲಾಗಿದೆ. ಮಹಾಜನಗಳೆಲ್ಲರೂ ಅದನ್ನು ಉಪಯೋಗಿಸಿಕೊಳ್ಳಬೇಕೆಂದು ಕೋರಲಾಗಿದೆ

ಸೌಂದರ್ಯಕ್ಕಾಗಿ ಗ್ರಾಮದಿಂದ ಯುವತಿಯ ಗಡೀಪಾರು

ಸಂಯುಕ್ತ ಪ್ರಾಂತ್ಯದ ಭಾಟಾ ಎಂಬ ಹಳ್ಳಿಯೊಂದರಲ್ಲಿರುವ ಸುಂದರಿ ಎಂಬ ಯುವತಿಯ ರೂಪ ಲಾವಣ್ಯವು ಅಲ್ಲಿನ ಶಾಂತಿಗೆ ಭಂಗಕರವಾಗಿದೆಂದು ಆಕೆಯನ್ನು ಹಳ್ಳಿಯಿಂದ ಗಡೀಪಾರು ಮಾಡುವಂತೆ ಅಲ್ಲಿನ ಹಿರಿಯರು ನಿರ್ಧರಿಸಿದ್ದಾರೆ. ಆಕೆಯ ಪ್ರೇಮಕ್ಕಾಗಿ ಅನೇಕ ಬಾರಿ ಯುವಕರಲ್ಲಿ ಜಗಳ ನಡೆದುದರಿಂದ ಮೇಲ್ಕಂಡ ನಿರ್ಧಾರಕ್ಕೆ ಬರಬೇಕಾಯಿತೆಂದು ಹೇಳಲಾಗಿದೆ

ವಿವಾಹ ಮಹೋತ್ಸವಗಳು

ಮೈಸೂರು ಪೌರಸಭೆಯ ಸದಸ್ಯರಾದ ಶ್ರೀ ಟಿ ವೆಂಕಟರಮಣಯ್ಯನವರು ತಮ್ಮ ಸಹೋದರ ಶ್ರೀ ಟಿ ಪುಟ್ಟಸ್ವಾಮಿಯವರಿಗೆ ಮದ್ದೂರು ಪುರಸಭೆಯ ಉಪಾಧ್ಯಕ್ಷರಾದ ಶ್ರೀ ಎ ಟಿ ತಮ್ಮಣ್ಣಗೌಡರ ಪುತ್ರಿ ಚಿ॥ ಸೌ॥ [illegible]ನನ್ನು ತಂದು ಕೊಂಡು ವಿವಾಹ ಮಹೋತ್ಸವವನ್ನು ಕಳೆದ ಭಾನುವಾರ ಮದ್ದೂರು ತಾ॥ ದೇಶಹಳ್ಳಿಯಲ್ಲಿ ನೆರವೇರಿಸಿದರು. ಈ ಸಂಬಂಧದಲ್ಲಿ ಅವರು ನಿನ್ನೆ ದಿನ ತಮ್ಮ ಗೃಹದಲ್ಲಿ ಆರತಕ್ಷತೆಯನ್ನು ಏರ್ಪಡಿಸಿ, ನಗರದ ಪ್ರಮುಖರನ್ನು ಆತ್ಮೀಯವಾಗಿ ಸತ್ಕರಿಸಿದರು

ರಾಜಧಾನಿಯ ಶ್ರೀ ಸತ್ಯನಾರಾಯಣ ಬಿಸ್ಕತ್ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಎಂ ವಿ. ಸತ್ಯನಾರಾಯಣರಾಯರು ತಮ್ಮ ಪುತ್ರಿ ಚಿ॥ ಸೌ॥ ಲಕ್ಷ್ಮೀದೇವಮ್ಮನನ್ನು ಶ್ರೀ ಎಂ ವೆಂಕಟೇಶಯ್ಯನವರ ಪುತ್ರ ಶ್ರೀ ಎಂ ವಿ [illegible]ರವರಿಗೆ ಕೊಟ್ಟು, ಈ ದಿನ ವಿವಾಹವನ್ನು ರಾಜಧಾನಿಯಲ್ಲಿ ನೆರವೇರಿಸಿದರು

ಮಹಾತ್ಮರ ನಿಧನದ ಬಗ್ಗೆ ಸಂತಾಪ

ನ್ಯಾಯವಿಧಾಯಕ ಸಭೆಯಲ್ಲಿ ಸಂತಾಪ

(ಸ್ವಂ ಸಂ. ವ್ರದಿಂದ) ಬೆಂಗಳೂರು ೧೬

ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಈ ದಿನ ಮಧ್ಯಾಹ್ನ ೧೨ ಗಂಟೆಗೆ ರಾಜಕಾರ್ಯಪ್ರವೀಣ ಹೆಚ್ ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ನೂತನ ಸದಸ್ಯರುಗಳು ಪ್ರಮಾಣ ವಚನ ಸ್ವೀಕರಿಸಿದ ನಂತರ, ಶ್ರೀ ಕೆ [illegible]ರವರು ಮಹಾತ್ಮರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಂಡಿಸಿದರು. ಜನಾಬ್ ಅಬ್ದುಲ್ ರಹೀಮಾನರವರು ಇದನ್ನು ಸಮರ್ಥಿಸಿದರು. ಶ್ರೀಗಳಾದ ಎಸ್ ಎನ್ ವೆಂಕಟರಾಯರು, ದೇಶಮುಖ ಶ್ರೀನಿವಾಸ ಅಯ್ಯಂಗಾರ್ಯರು, [illegible]ದವರು ಮಾತನಾಡಿ, ಮಹಾತ್ಮರ ಗುಣ ಕಥನವನ್ನು ಮಾಡಿ [illegible] ಸಂತಾಪ ಸೂಚಿಸಿದರು. ನಿರ್ಣಯವು [illegible] ಅಂಗೀಕೃತವಾಯಿತು. [illegible] ಗೌರವಾರ್ಥವಾಗಿ ಸಭೆಯನ್ನು [illegible] ಮುಂದೆ ಹಾಕಲಾಯಿತು.

[illegible] ಅವರು ಇದೇ ೧೯ ನೇ ತಾ॥ [illegible]

[illegible] ನಿಧಿಗೆ ಪ್ರಧಾನಿ ಶ್ರೀ ಕೆ ಸಿ ರೆಡ್ಡಿ [illegible] ತಮ್ಮ ಪತ್ನಿ ದಿವಂಗತ [illegible] ೨೭೦ ರೂಗಳನ್ನು ಕೊಟ್ಟಿದ್ದಾರೆ.

ಶ್ರೀಗಳಾದ ಎಸ್ ವಿಜಲಿಂಗಪ್ಪ [illegible] ಅವರನ್ನು [illegible] ಭಾರತ ಕಾಂಗ್ರೆಸ್ ಸಮಿತಿಗೆ ಸದಸ್ಯರಾಗಿ ಚುನಾಯಿತರಾಗಿದ್ದಾರೆ

[illegible] ಶ್ರೀ ಕೆ ಟಿ ಭಾಷ್ಯಂ [illegible] ಪ್ರೋಗ್ರೆಸ್ಸಿವ್ [illegible]—ವಿದ್ಯಾರ್ಥಿ—ಶ್ರೀ ಕೆ ಸಿ ರೆಡ್ಡಿ [illegible], ಶ್ರೀ [illegible] ನಾರಾಯಣಸ್ವಾಮಿ, ಬಂದೀಖಾನೆ—ಜನಾಬ್ ಮಹಮ್ಮದ್ ಷರೀಫ್, ನ್ಯಾಯಾಂಗ—[illegible]ರವರು

ಮದರಾಸ್ ಸಚಿವರ ನಿಧನ

ಮದರಾಸಿನ ಪಾನನಿರೋಧ ಮತ್ತು ಸಂಚಾರ ವ್ಯವಸ್ಥೆಯ ಸಚಿವರಾದ ಶ್ರೀ ಡೇನಿಯಲ್ ಥಾಮಸ್ ರವರು ತಮ್ಮ ೬೮ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

೫ ಸಾವಿರ ಅಡಿ ಎತ್ತರದಿಂದ ಹಾರಿದ ಮನುಷ್ಯ

ಅವರ ರಡೆ [illegible] ಬೆಳ್ಳಿಗೆಲ್ಲಿ ೨೬ ವರ್ಷದ [illegible] ಆಕಾಶದಲ್ಲಿ ತಮ್ಮ [illegible] ಪ್ರದರ್ಶನ [illegible] ವಿಮಾನದಿಂದ ಹಾರಿ [illegible] ಪ್ಯಾರಾಚೂಟಿನ ಸಹಾಯವಿಲ್ಲದೆ [illegible] ಹಾರಿದನೆಂದೂ, [illegible] ನಿನ ತಂತಿಗೆ ಸಿಕ್ಕಿಬಿದ್ದು [illegible] ಅಲ್ಲೇ [illegible] ಆತನಿಗೆ [illegible] ಸಾಯಲಿಲ್ಲವೆಂದೂ [illegible]

● [illegible] ಎಂಬ [illegible] ಚಿನ್ನದ [illegible] ಅವನ್ನು [illegible] ನಿಜವಾದ [illegible]

ಬೊಂಬಾಯಿಯಲ್ಲಿ ಪ್ರಚಂಡ ಬಿರುಗಾಳಿ

ಬೊಂಬಾಯಿನಲ್ಲಿ ಮೊನ್ನೆ ದಿನ ೬೦ ಮೈಲಿ ವೇಗವುಳ್ಳ ಪ್ರಚಂಡ ಬಿರುಗಾಳಿ ಎದ್ದು, ಭಾರಿ ಮಳೆ ಬಂದಿತೆಂದು ವರದಿಯಾಗಿದೆ ಇದರಿಂದ ಅನೇಕ ಮರಗಳೂ ಬಿದ್ದವು ಮತ್ತು ರೈಲ್ವೆ ಸಿಗ್ನಲ್ಲಿನ ತಂತಿಗಳು ಕತ್ತರಿಸಿ ಹೋದವು ಎರಡು ಮನೆಗಳು ಕುಸಿದು ಬಿದ್ದುವು ಸಮುದ್ರದಲ್ಲಿ ಒಂದು ದೋಣಿಯು ಮುಗಿಚಿಕೊಂಡಿತು

ಮೂರು ಕಾಲಿನ ಮಗು

ಆಸ್ಟ್ರೇಲಿಯಾದಲ್ಲಿ ಮೂರು ಕಾಲುಗಳುಳ್ಳ ಮಗುವೊಂದು ಜನನವಾಗಿದೆ ಸಾಮಾನ್ಯವಾಗಿರಲು ಆ ಮಗುವಿನ ಮೂರನೇ ಕಾಲನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದು ಹಾಕಲಾಗಿದೆ ಈಗ ಅದು ಸೌಖ್ಯವಾಗಿದೆಯೆಂದು ವರದಿಯಾಗಿದೆ

ಸೆನೆಟ್ ಸಭಾ ಚುನಾವಣೆ

ಪುನಃರಚಿತವಾಗಲಿರುವ ಮೈಸೂರು ವಿಶ್ವವಿದ್ಯಾಲಯದ ಸೆನೇಟ್ ಸಭೆಗೆ ರಾಜಧಾನಿಯ ಪುರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು ಉಮೇದುವಾರರಾಗಿ ನಿಂತಿರುತ್ತಾರೆ ರಿಜಿಸ್ಟರ್ಡ್ ಗ್ರಾಜುಯೇಟುಗಳೆಲ್ಲರೂ ಅವರಿಗೆ ಓಟು ಕೊಟ್ಟು ಸಹಾಯ ಮಾಡಬೇಕೆಂದು ಕೋರಲಾಗಿದೆ.

ಮೈಸೂರು

ಜೀವಣ್ಣರಾಯನ ಕಟ್ಟೆಯಲ್ಲಿ

—: ಪ್ರಾರಂಭ ದಿನ :—

16-6-48 ನೇ

ಬುಧವಾರ ರಾತ್ರಿ ೯-೩೦ ಕ್ಕೆ

ಬೊಂಬಾಯಿ

ಜಿ. ಎ. ಸರ್ಕಸ್

ಚೀನಾ, ಫಿಲಿಪೈನ್, ಮಲಯಾ, ಭಾರತೀಯ ದೇಶಗಳಿಂದ ಆರಿಸಲ್ಪಟ್ಟ ೧೧೧ ಆಟಗಾರರಿಂದಲೂ, ೧೮ ಕುದುರೆ, ೩ ಆನೆ, ೨ ಒಂಟೆ, ೧೨ ಹುಲಿ, ಸಿಂಹಗಳ ಪ್ರದರ್ಶನಗಳಿಂದಲೂ, ೧೬ ಚೀನಾ, ಮಲಯಾ, ಭಾರತೀಯ ರಮಣಿಯರ ಡ್ಯಾನ್ಸುಗಳಿಂದಲೂ ಪ್ರಖ್ಯಾತಿ ಹೊಂದಿದ ೧೯೦೧ನೇ ಇಸವಿಯಲ್ಲಿ ಸ್ಥಾಪಿತವಾಗಿ ಪೂರ್ವ-ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ತಪ್ಪದೆ ನೋಡಿರಿ

ಉಪನಯನ

ಮೈಸೂರು ನಿವೃತ್ತ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಶ್ರೀಯುತ ಎಂ. ವೆಂಕಟಕೃಷ್ಣಯ್ಯನವರು ತಮ್ಮ ಅಣ್ಣನವರಾದ ಶ್ರೀ ರಾಮಸ್ವಾಮಯ್ಯನವರ ಕುಮಾರ ಚಿ|| ಶ್ರೀಕಂಠನಿಗೆ ಬ್ರಹ್ಮೋಪದೇಶವನ್ನು ಈ ದಿನ ನೆರವೇರಿಸಿದರು

"ಕನ್ನಡ ರಂಗಭೂಮಿಯ ಶತಮಾನೋತ್ಸವ"

ಇದರ ಅಂಗವಾಗಿ

ವಸ್ತುಕಲಾ ಪ್ರದರ್ಶನ

[Exhibition]

ಏರ್ಪಡಿಸಲಾಗಿದೆ.

ಆಳುವ ಮೈಸೂರು ಶ್ರೀಮನ್ಮಹಾರಾಜರವರು ಉತ್ಸವದ

ಆರಂಭೋತ್ಸವವನ್ನು ನೆರವೇರಿಸುವುದಾಗಿ ಅಪ್ಪಣೆ ದಯಪಾಲಿಸಿದ್ದಾರೆ.

ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ ತಾ|| ೨೬-೬-೪೮ ರಿಂದ ಒಂದು ವಾರದ ಪರ್ಯಂತ ವ್ಯಾಪಾರ, ವಾಣಿಜ್ಯ, ಉದ್ಯೋಗ, ಕುಶಲಕಲೆ ಮೊದಲಾದವುಗಳ ಪ್ರಚಂಡ ಪ್ರಚಾರಕ್ಕೆ ಇದೇ ಸಮಯ

ಉತ್ಸವದಲ್ಲಿ ಏರ್ಪಡಿಸಿರುವ ಸಂಗೀತ, ನಾಟ್ಯ, ನಾಟಕ, ಹರಿಕಥೆ, ಯಕ್ಷಗಾನ, ಚಿತ್ರ ಪ್ರದರ್ಶನ ಮೊದಲಾದ ವಿಧವಿಧ ವಿನೋದ ವಿಲಾಸಗಳು ತಂಡ ತಂಡವಾಗಿ ಜನರನ್ನು ಆಕರ್ಷಿಸುತ್ತವೆ ಅಂತಹ ಸುಸಂಧಿ ಪ್ರದರ್ಶಕರಿಗೆ ಬೇರೆ ದೊರೆಯಲಾರದು

ಈಗಾಗಲೇ ನಮಗೆ ಬರೆದು ಸ್ಥಳವನ್ನು ಕಾಯ್ದಿರಿಸಿಕೊಳ್ಳಿರಿ

೧) ರಿಯಾಯಿತಿಗಳು : ಮಳಿಗೆಗಳಿಗೆ (ಸ್ಟಾಲ್ಸ್) ಬಾಡಿಗೆಯನ್ನು ಮನ್ನಾ ಮಾಡಿದೆ

೨) ಪ್ರದರ್ಶನಕ್ಕೆ ತರತಕ್ಕ ವಸ್ತುಗಳನ್ನು ಪ್ರದರ್ಶಕರು ಹಿಂದಕ್ಕೆ ತೆಗೆದುಕೊಂಡು ಹೋಗುವಾಗ ಮತ್ತೆ ರೈಲ್ವೆ ವೆಚ್ಚವನ್ನು ಕೊಡಬೇಕಾಗಿಲ್ಲವೆಂದು ಮೈಸೂರು ಸ್ಟೇಟ್ ರೈಲ್ವೆಯವರು ರಿಯಾಯಿತಿ ಕೊಟ್ಟಿದ್ದಾರೆ

ಈ ಸಂದರ್ಭದಲ್ಲಿ ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಗ್ರಂಥ ಪ್ರಕಟವಾಗಲಿದೆ!

ಕನ್ನಡದ ಹಾಗೂ ವಿಶ್ವದ ರಂಗಭೂಮಿಯ ವಿಷಯಕವಾದ ವಿದ್ವತ್ಪೂರ್ಣ ಲೇಖನಗಳನ್ನೊಳಗೊಂಡ ತ್ರಿವರ್ಣರಂಜಿತ ಕಲಾಮಯ ಸಂಚಿಕೆ!!

ಕ್ರೌನ್ 1/4 ಆಕಾರ ೩೫೦ ಪುಟಗಳು. ನಿಮ್ಮ ಜಾಹಿರಾತಿಗಾಗಿ ಸಂಚಿಕೆಯಲ್ಲಿ ಸ್ಥಳವನ್ನು ಕಾದಿರಿಸಿಕೊಳ್ಳಿ. —: ವಿವರಗಳಿಗಾಗಿ ಬರೆಯಿರಿ :—

ಎಂ. ಸಿ. ಮಹದೇವಸ್ವಾಮಿ,

ಪ್ರಧಾನ ವ್ಯವಸ್ಥಾಪಕ,

ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಿತಿ ಕಛೇರಿ,

ವಸ್ತುಪ್ರದರ್ಶನಾಲಯ, ಮೈಸೂರು

ನಾಗರಿಕ ನಡವಳಿಕೆಗೆ

ಅಚ್ಚುಮೆಚ್ಚಾದ

ಜವಳಿ

ಮೈಸೂರು ಸಿಲ್ಕ್

ಬಹು ಕಾಲ

ಬಾಳಿಕೆ ಬರುತ್ತದೆ

ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮೈಸೂರು

ಅಪೂರ್ವ ಸಂಗೀತ ಕಛೇರಿ

ಶ್ರೀ ಸರಸ್ವತಿ ಸಂಗೀತ ಸಮಾಜದ

ಆಶ್ರಯದಲ್ಲಿ

ಸಮಾಜದ ಕಟ್ಟಡದ ನಿಧಿ

ಸಹಾಯಾರ್ಥವಾಗಿ

ಮೈಸೂರು ಟೌನ್ ಹಾಲಿನಲ್ಲಿ

4-7-1948

ಭಾನುವಾರ ಸಂಜೆ ೫-೩೦ ಗಂಟೆಗೆ

ಮಧುರ ಗೀತವಾಣಿ ಶ್ರೀಮತಿ

ಎನ್. ಸಿ. ವಸಂತಕೋಕಿಲಂ

ಮತ್ತು ಪಾರ್ಟಿಯವರಿಂದ

ಮುಂಚಿತವಾಗಿ ಟಿಕೆಟ್ ...

ಪ್ರವೇಶ

ರೂ. 15, 10, 5, 3, ಮತ್ತು 2

ಮೊದಲನೇ ಮೂರು ತರಗತಿಗಳಿಗೆ

ರಿಜರ್ವೇಷನ್ ಫೀ ಪ್ರತಿ ಸೀಟಿಗೂ ...

UNIVERSITY OF MYSORE

Office of the University of Mysore, Mysore

Dated 7th June 194[8]

No A 4 894-46 47

NOTIFICATION

It is hereby notified that a Law College will be opened at Bangalore from the academic year 1948-4[9]. The College will be located in the building called "Pu[r]na Prasad" situated [on] the Race Course Road. The Course is a post-graduate course of two years' duration and candidates who have passed a degree examination of this University or of any other University recognised by this University are eligible for admission to the College. Only the first year course will be started in June 1948. Applications for admission [to] the College may be sent [to] the Registrar, University [of] Mysore, Mysore, soon after the results of the University Examinations of [M]ay 1948 are published.

By Order,

D. S GORDO[N]

REGISTRAR

Edited printed and pub[lished] by A R Nagarajao, at the S[adhvi] Press D Subbaiah Road Mysore

ಪ್ರಭುದೇವಾ ಟಾಕೀಸ್ :: **18-6-48 ನೇ ಶುಕ್ರವಾರದಿಂದ**

ಜೆಮಿನಿಯವರ ಪ್ರತಿ ದಿನ ೩ ಆಟಗಳು

★ **ಜ್ಞಾನಸುಂದರಿ** ★

(ತಮಿಳು)

ಪಾತ್ರ:— ಎಂ. ಕೆ. ರಾಧಾ, ಕಣ್ಣಾಂಬ, ಸುಶೀಲಾ, ಬಿ. ಆರ್. ರಾಮಚಂದ್ರ, ಎಲ್ ನಾರಾಯಣರಾವ್

ಫೋ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೧೭-೬-೪೮ [ಸಂಚಿಕೆ ೩೦೬]

ಹೈದರಾಬಾದಿಗೆ ಪೋರ್ಚುಗಲ್ ಸಹಾಯ

ಮುದ್ರಣಾಲಯದ ನೌಕರರ ಕುಂದುಕೊರತೆಗಳು

ಮೈಸೂರು ೧೬

[illegible] ಮುದ್ರಣಾಲಯದ ನೈಸೂ [illegible] ನೌಕರರ ಸಂಘದ ಅಧ್ಯಕ್ಷರಾ [illegible] ಶ್ರೀ ಕೆ ವಿ ಲೋಗನಾಥರವರು, ಮೈ [illegible] ಆರೋಗ್ಯ ಸಚಿವರಾದ ಜನಾಬ್ [illegible] ಮಹಮೂದ್ ಷರೀಫ್ ರವರನ್ನು ಭೇ [illegible] ಮಾಡಿ, ನೌಕರರ ಕಡಾ ಓವರ್ ಟೈಂ [illegible], ಬೋನಸ್, ಮನೆ ಬಾಡಿಗೆ ಇವೇ [illegible] ಬಂಧದ ವಿಷಯಗಳನ್ನು ಅವರೊಡನೆ [illegible] ಸಿದರು. ನೌಕರರ ಕುಂದುಕೊರತೆ [illegible] ಬಗೆಹರಿಸುವುದಾಗಿಯೂ, ಬಾಕಿ [illegible] ಗಳನ್ನು ಈ ತಿಂಗಳೊಳಗಾಗಿ ಕೊ [illegible] ವುದಾಗಿಯೂ ಸಚಿವರು ಭರವಸೆ ಇ [illegible] ಎಂದು ತಿಳಿದುಬಂದಿದೆ.

ಪ್ರದೋಷ ಸಂಗೀತ

[illegible] ಬಿಡಾರಂ ಕೃಷ್ಣಪ್ಪನವರ [illegible] ಶ್ರೀ ಆಂಜನೇಯ ಮಂದಿರದಲ್ಲಿ ನಾಳೆ [illegible] ಸಂಜೆ ೬ ಗಂಟೆಗೆ ಪ್ರದೋಷ ಪ್ರ [illegible] ವಿದ್ವಾನ್ ಜೆ. ಜಿ. ದೊರೆಸ್ವಾ [illegible] ವರ ಹಾಡುಗಾರಿಕೆ, ವಿದ್ವಾನ್ [illegible] ಪಿಟೀಲು, ವಿದ್ವಾನ್ [illegible] ರಂಗನಾಥರವರ ಮೃದಂಗವೂ [illegible] ವೆ.

ಲಷ್ಕರ್ ಕಾಂಗ್ರೆಸ್ ಸಮಿತಿ ಕಛೇರಿ

ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಾಲಯವು ದೊಡ್ಡಪೇಟೆ ತುಂಗಾ [illegible] ಕಟ್ಟಡ ಛತ್ರದಲ್ಲಿ ನಾಳೆಯಿಂದ ಪ್ರ [illegible] ವಾರ ಸಂಜೆ ೫ ರಿಂದ ೬ ಗಂಟೆ ವ [illegible] ತೆರೆದಿರುತ್ತದೆಯೆಂದು ಅದರ ಅಧ್ಯ [illegible] ತಿಳಿಸಿರುತ್ತಾರೆ.

ಕನ್ನಡ ಸಾಹಿತ್ಯ ತರಗತಿಗಳು

[illegible] ರಾಜಧಾನಿಯ ಮಹಿಳಾ ಸದನದಲ್ಲಿ [illegible] ಸೋಮವಾರ ಕನ್ನಡ ಸಾಹಿತ್ಯ ತರಗ [illegible] ಆರಂಭೋತ್ಸವವು ನಡೆಯಿತು. ಶ್ರೀ [illegible] ರಾಜಲಕ್ಷ್ಮಿಯವರಿಂದ ಸು [illegible] ವೀಣಾ ವಾದನವಾದ ಮೇಲೆ [illegible] ಸಾಹಿತ್ಯ ಪರಿಷತ್ತಿನ ಕಾರ್ಯದ [illegible] ಶ್ರೀ ಎಲ್ ಎಸ್ ಶೇಷಗಿರಿರಾ [illegible] ಆರಂಭೋತ್ಸವವನ್ನು ನಡೆಸಿ, ಕನ್ನ [illegible] ಸಾಹಿತ್ಯದ ಹಿರಿಮೆ ಮತ್ತು ಸ್ತ್ರೀಯರು [illegible] ಕನ್ನಡ ಸಾಹಿತ್ಯ ವ್ಯಾಸಂಗದ ಅವಶ್ಯಕ [illegible] ಕುರಿತು ಭಾಷಣ ಮಾಡಿದರು.

ಜಕೋಸ್ಲವೇಕಿಯಾದಲ್ಲಿ ೨೦೦ ಅಧಿಕಾರಿಗಳ ವಜಾ

ಜಕೋಸ್ಲವೇಕಿಯಾದಲ್ಲಿ ಕಮ್ಯೂನಿ [illegible] ಪಕ್ಷಕ್ಕೆ ವಿರೋಧ ಭಾವನೆಯುಳ್ಳ [illegible] ಜನ ಸರ್ಕಾರಿ ಅಧಿಕಾರಿಗಳಿಗೆ [illegible] ರಜಾ ಕೊಟ್ಟು ಮನೆಗೆ ಕಳು [illegible] ಯೆಂದೂ, ಈಗಾಗಲೇ ಅನೇಕ [illegible] ಅಧಿಕಾರಿಗಳನ್ನು ಕೆಲಸದಿಂದ ವಜಾ [illegible], ಅವರ ಸ್ವತ್ತುಗಳನ್ನು ಮುಟ್ಟು [illegible] ಪಡಿಸಲಾಗಿದೆಯೆಂದೂ ಹೇಳಲಾ [illegible]

[illegible]ಮರಿಗೆ ಗೋವಾದಿಂದ ಶಸ್ತ್ರಾಸ್ತ್ರಗಳ ಸರಬರಾಜು

ಹೈದರಾಬಾದ್ ಮತ್ತು ಭಾರತಗಳ ಸ [illegible] ಉದ್ರಿಕ್ತವಾದರೆ ಪೋರ್ಚುಗಲ್ [illegible] ನಿಜಾಮರಿಗೆ ಸರ್ವ ಸಹಾಯ ನೀ [illegible] ಭರವಸೆ ಇತ್ತಿದೆಯೆಂದೂ, ಈ [illegible] ಗೋವಾದಿಂದ ಶಸ್ತ್ರಾಸ್ತ್ರಗಳ ಸರ [illegible] ಗುತ್ತಿದೆಯೆಂದೂ ವರದಿಯಾಗಿದೆ.

ಹೈದರಾಬಾದಿನ ಬಗ್ಗೆ ಈದಿನ ಭಾರತ ಸರ್ಕಾರದ ನಿರ್ಧಾರ

ಹೈದರಾಬಾದಿನ ಬಗ್ಗೆ ನಿಜಾಮರ ನಿಯೋಗದವರು ತೆಗೆದುಕೊಂಡು ಬಂದಿದ್ದ ಒಪ್ಪಂದದ ಕರಡು ಪ್ರತಿಗೆ ನಿಜಾಮರು ಕೊಟ್ಟಿರುವ ಉತ್ತರವನ್ನು ಭಾರತ ಮಂತ್ರಿ ಮಂಡಲವು ಈ ದಿವಸ ಮಧ್ಯಾಹ್ನ ೩ ಗಂಟೆಗೆ ಪರಿಶೀಲಿಸಲಿದೆ ಅನಂತರ ಸಂಡಿಕ ನೆಹರೂರವರು ಇದರ ಫಲಿತಾಂಶವನ್ನು ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸುವರು. ಭಾರತದ ನೂತನ ಸಲಹೆಗಳು ನಿಜಾಮರಿಗೆ ತೃಪ್ತಿಕರವಾಗಿಲ್ಲವೆಂದೂ, ಅವುಗಳನ್ನು ಬದಲಾಯಿಸಬೇಕೆಂದು ನಿಜಾಮರು ಒತ್ತಾಯ ಪಡಿಸುವರೆಂದೂ ಹೇಳಲಾಗಿದೆ ವಿದೇಶಗಳಲ್ಲಿ ಹೈದರಾಬಾದ್ ಪ್ರಾತಿನಿಧ್ಯ, ರಾಜ್ಯಾಂಗ ಸಭೆಯ ರಚನಾ ವಿಧಾನ ಮತ್ತು ಜನಾಭಿಪ್ರಾಯ ಸಂಗ್ರಹಣೆ ಈ ವಿಷಯಗಳಲ್ಲಿ ತೊಡಕು ಉಂಟಾಗಿದೆಯೆಂದು ಗೊತ್ತಾಗಿದೆ. ಸಂಧಾನವು ಮುರಿದು ಬಿದ್ದ ಪಕ್ಷದಲ್ಲಿ ಕಾಸಿಂ ರಜ್ವಿಯವರ ಪಕ್ಷದವರು ಆನಂದ ಪರವಶರಾಗಿದ್ದಾರೆ. ಭಾರತದ ಹೊಸ ಸಲಹೆಗಳನ್ನು ನಿರಾಕರಿಸಿ ನಿಜಾಮರು ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ಪತ್ರ ಬರೆದಿರುವರೆಂದೂ ಹೇಳಲಾಗಿದೆ. ಸಂಧಾನವು ಮುರಿದು ಬಿದ್ದುದರ ಬಗ್ಗೆ ಪರಿಶೀಲನೆ ನಡೆಸಲು ಭಾರತದ ವಿಧಾನ ಅಧಿಕಾರಿಗಳ ಇಷ್ಟರಲ್ಲೇ ದೆಹಲಿಯಲ್ಲಿ ಸಭೆ ಸೇರಲಿರುವರೆಂದು ಗೊತ್ತಾಗಿದೆ.

ಬೊಂಬಾಯಿ- ಹೈದ್ರಾಬಾದ ಗಡಿಯಲ್ಲಿ ನಿಜಾಮರ ಸೇನೆ

ಬೊಂಬಾಯಿ ಹೈದರಾಬಾದ್ ಗಡಿ ಪ್ರದೇಶದಲ್ಲಿ ನಿಜಾಮರ ಸೈನ್ಯವನ್ನು ಹೆಚ್ಚಿಗೆ ಶೇಖರಿಸಲಾಗಿದೆಯೆಂದೂ, ಅಲ್ಲಿ ಬ್ರಿಟಿಷ ಪಿಶನ [illegible] ಪ್ರಾಶನವು ಕಂಡುಬರುತ್ತಿದೆಯೆಂದೂ, ಒಂದೂರಿನ ಆಭರಣಗಳು ಕಳವು ಆಗಿ [illegible] ವರದಿಯಾಗಿದೆ.

೨೦ ನೇ ತಾ॥ ವಿಶ್ವವಿದ್ಯಾಲಯದ ಪರೀಕ್ಷೆ ಫಲಿತಾಂಶ

ಮೈಸೂರು ೧೬

ಮೈಸೂರು ವಿಶ್ವವಿದ್ಯಾಲಯದ ಪರೀಕ್ಷೆಗಳ ಫಲಿತಾಂಶವು ಇದೇ ೨೦ ನೇ ತಾ॥ ಹೊರಬೀಳುವುದೆಂದು ತಿಳಿದುಬಂದಿದೆ.

ರೀಷ್ಮೆ [illegible] ಬೆಂಗಳೂರಿಗೆ

ಮೈಸೂರಿನಲ್ಲಿರುವ ರೇಷ್ಮೆ ಶಾಖೆಯ ಸೂಪರಿಂಟೆಂಡೆಂಟರವರ ಪ್ರಧಾನ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಲು [illegible] ಸರ್ಕಾರದವರು ಆಜ್ಞೆ [illegible] ಇದ್ದಾರೆ.

ಹೆಂಗಸನ್ನು ಬೆತ್ತಲೆಯಾಗಿ ನಿಲ್ಲಿಸಿ ಕೊಲೆ ಮಾಡಿದರು

ಬೊಂಬಾಯಿ ಪ್ರಾಂತ್ಯದ ಖಾಂದೇಶ್ ಗಡಿ ಪ್ರದೇಶದಲ್ಲಿ ರಜಾಕಾರರ ದಾವಳಿಯು ಹೆಚ್ಚಾಗುತ್ತಿದೆಯೆಂದು ಹೇಳಲಾಗಿದೆ. ಅಲ್ಲಿ ಪ್ರಯಾಣಿಕರನ್ನು ರೈಲು ಗಾಡಿಗಳಿಂದ ಹೊರಕ್ಕೆ ಎಳೆದು ಬೆತ್ತಲೆಯಾಗಿ ನಿಲ್ಲಿಸಿ ಅವರ ಸ್ವತ್ತುಗಳನ್ನು ಅಪಹರಿಸಿಕೊಂಡು ಹೋದರಂತೆ. [illegible] ಒಬ್ಬ ಹೆಂಗಸನ್ನು ಬೆತ್ತಲೆ ನಿಲ್ಲಿಸಿ [illegible] ಮಾಡಿ ಅವಳನ್ನು [illegible] ಗುಂಡಿನಿಂದ ಹೊಡೆದು ಸಾಯಿಸಿದರೆಂದು ವರದಿಯಾಗಿದೆ.

ಗಡಿನಾಡಿನ ಗಾಂಧಿಗೆ ೩ ವರ್ಷ ಶಿಕ್ಷೆ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು [illegible] ಗಡಿಯಲ್ಲಿ ಗೊಂದಲ ಎಬ್ಬಿಸುವ ಉದ್ದೇಶದಿಂದ ಇಪಿ ಫಕೀರರ ಮನೆ [illegible] ನಡೆಸಲು ಹೋಗುತ್ತಿದ್ದರೆಂದು ಮೊನ್ನೆ ದಿನ ದಸ್ತಗಿರಿ ಮಾಡಲಾಗಿತ್ತಷ್ಟೆ. ಅವರನ್ನು ವಿಚಾರಣೆಗೆ ಗುರಿಪಡಿಸಿ ಅವರಿಗೆ ೩ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಅವರ ಜೊತೆಗೆ ಅವರ ಮಗನನ್ನೂ [illegible] ಕೆಂಪು ಷರಟಿನವರನ್ನೂ ದಸ್ತಗಿರಿ ಮಾಡಲಾಗಿದೆ.

ಮಹಾತ್ಮರ ಕೊಲೆ ಆಪಾದಿತರಿಗೆ ಕ್ಷಮೆ

[illegible] ನೇ ಬೊಂಬಾಯಿ ನ ಸರ್ವ [illegible] ಕಸ್ತೂರಬಾ [illegible] ಅಂತ್ಯ [illegible] ಭಾರತ ಸಂಸ್ಥಾನದ ಆಜ್ಞೆಯಾಗಿದೆ. ಈ ಶಾಸನ [illegible] ಪ್ರಕಾರ ಆಪಾದಿತರ ವಿಚಾರಣೆ ಮಾಡುವ [illegible] ವಿಶೇಷ ನ್ಯಾಯಾಧೀಶರು ಅಪಾದಿತರು ಘಟನೆಗಳ ಬಗ್ಗೆ ತನಗೆ ತಿಳಿದ ವಿಷಯಗಳನ್ನು ಪೂರ್ಣವಾಗಿಯೂ, ಸತ್ಯವಾಕ್ಯವಾಗಿಯೂ ತಿಳಿಸಿದಲ್ಲಿ ಅವನಿಗೆ ಕ್ಷಮೆ ನೀಡಬಹುದಾಗಿದೆ. ಈ ಶಾಸನದ ಪ್ರಕಾರ ವಿಚಾರಣೆ ನಡೆಯಲಿರುವ ಮಹಾತ್ಮ ಗಾಂಧಿಯವರ ಕೊಲೆ ಮೊಕದ್ದಮೆಯಲ್ಲಿ ಅಪಾದಿತನಾಗಿರುವ ಶ್ರೀ ದಿಗಂಬರ ರಾಮಚಂದ್ರ ಬಾಡ್ಗೆಯವರನ್ನು ಅ [illegible] ಕ್ಷಮೆ ನೀಡಲಾಗಿದೆಯೆಂದು ವರದಿಯಾಗಿದೆ.

ದಿವಾನರು ಬೊಂಬಾಯಿಗೆ

ಸ್ವಂ ಸು ಪೋ॥] ಬೆಂಗಳೂರು ೧೬

ಈ ರಾತ್ರಿ ದಿವಾನರು ಬೊಂಬಾಯಿಗೆ ತೆರಳಿ ೧೦ ದಿನಗಳ ನಂತರ [illegible] ಬರುವರೆಂದು ತಿಳಿದುಬಂದಿದೆ.

ದಬ್ಬಾಳಿಕೆ ನಡೆಸಿದವರ ಮೇಲೆ ಕಾರ್ಯಕ್ರಮ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಪೋ॥] ಬೆಂಗಳೂರು ೧೬

ಅನೇಕ ವರ್ಷಗಳ ಬಳಿಕ ಶಾಸನ ಸಭೆಯ ಸದಸ್ಯರುಗಳ [illegible] ನಿಧನರಾಗಿರುವ ಜನಾಬ್ ಮಹಮದ್ [illegible] ಶ್ರೀ ಬಿ ಕೆ ಗರುಡಾಚಾರ್ಯರ ಸೇವೆಯನ್ನು ಕೊಂಡಾಡಿ, ಸಂತಾಪವನ್ನು ಸೂಚಿಸಲು ಶ್ರೀ ಕೆ ಸಿ ರೆಡ್ಡಿಯವರು ತಂದ ನಿರ್ಣಯಗಳನ್ನು ಈ ದಿನ ಶಾಸನ ಸಭೆಯಲ್ಲಿ ಎಲ್ಲರೂ ಎದ್ದು ನಿಂತು ಅಂಗೀಕರಿಸಿದರು.

ಕಳೆದ ಸತ್ಯಾಗ್ರಹದಲ್ಲಿ ನಡೆದ ಘಟನೆಗಳ ಬಗ್ಗೆ ಶ್ರೀ ಆಳ್ವಪ್ಪಗೌಡರ ಪ್ರಶ್ನೆಗೆ ಉತ್ತರವಾಗಿ ಗೃಹ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು, ಸರ್ಕಾರಿ ಚಳುವಳಿಯಲ್ಲಿ ೬೭ ಜನರು ಮಡಿದಿದ್ದಾರೆಂದೂ, ೩೪ ಜನರು ಅಂಗವಿಹೀನರಾಗಿರುವರೆಂದೂ ಅವರ [illegible] ಬಗ್ಗೆ ಪರಿಹಾರವನ್ನು ಕೊಡಲಾಗಿದೆಯೆಂದೂ ತಿಳಿಸಿದರು.

ಅತ್ಯಾಚಾರ ನಡೆಸಿದರೆಂದು ರುಜುವಾತಾದ ಹಲವು ನೌಕರರ ಮೇಲೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದೂ, ಅದರಿ [illegible] ಹೇಳುವುದು ಹಿತಕರವಲ್ಲವೆಂದೂ ತಿಳಿಸಿದರು.

ಈ ಬಗ್ಗೆ ಅನೇಕ ಉಪ ಪ್ರಶ್ನೆಗಳು ಬಂದವು [illegible] ನೇ [illegible] ಯಿಂದೀಚೆಗೆ [illegible] ಪರಿಹಾರ [illegible] ಇದೆಯೆಂದೂ ಸ [illegible] ಪಟ್ಟಿಯವರು [illegible] ವಿಚಾರಣೆ [illegible] ಅನಂತರ [illegible] ಕಾಶನ [illegible] ಕೊಟ್ಟಿ [illegible] ಗೃಹಗಳನ್ನು ಬಿಟ್ಟು [illegible] ಗಳನ್ನು [illegible] ಬಂದಿದೆಯೆಂದು ಹೇಳಲು [illegible]

ಗೋವೂರು [illegible] ನದಿಗೆ ೧॥ ಕೋಟಿ [illegible] ಒಂದು ಅಣೆಕಟ್ಟನ್ನು ಕಟ್ಟುವ ಆಲೋಚನೆಯಿದೆಯೆಂದು ಶ್ರೀ ಹೆಚ್ ಸಿದ್ದಯ್ಯನವರು [illegible] ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಇದರಿಂದ [illegible] ಸಾವಿರ ಎಕರೆ [illegible] ಸಾಗುವಳಿಗೆ ಬರುವುದೆಂದೂ ಅ [illegible] ತಿಳಿಸಿದರು.

ಇನ್ನು ೩ ವರ್ಷಗಳಲ್ಲಿ ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದಿರುವುದಾಗಿ ಶ್ರೀ [illegible] ರವರ ಪ್ರಶ್ನೆಗೆ ಉತ್ತರಕೊಡಲಾಯಿತು.

ಸಮತಾವಾದಿ ನಾಯಕರ ಬಿಡುಗಡೆ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ ಸು ಪೋ॥] ಬೆಂಗಳೂರು ೧೬

ಸಂಸ್ಥಾನದಲ್ಲಿ ಇತ್ತೀಚೆಗೆ ಸರ್ಕಾರದವರು ಸಮತಾವಾದಿ ಪಕ್ಷದವರನ್ನು ದಸ್ತಗಿರಿ ಮಾಡಿರುವುದರ ಬಗ್ಗೆ ಪ್ರಶ್ನೆಗಳ [illegible] ಶ್ರೀ ಹೆಚ್. [illegible] ನಿಲುವಳಿ ನಿರ್ಣಯವನ್ನು ನ್ಯಾಯವಿಧಾಯಕ ಸಭೆಯಲ್ಲಿ ಇಂದು ತಂದಿದ್ದರು. ಅಧ್ಯಕ್ಷರು [illegible] ಸಭೆಯ [illegible] ಈ ಸಂದರ್ಭದಲ್ಲಿ [illegible] ಶ್ರೀ ಟಿ ಮರಿಯಪ್ಪನವರು [illegible] ಎಸ್ ಸು [illegible] ಆಜ್ಞೆಯಾಗಿದೆ [illegible]

ರಿಜಿಸ್ಟ್ರಿಂಗ್ ಅಧಿಕಾರಿಯವರ ಕಛೇರಿ,
ಮೈಸೂರು ಸಿಟಿ, ತಾ|| ೧೧-೬-೧೯೪೮

ನೋಟಿಫಿಕೇಷನ್

ನಂ R1-121-47.8
ತಾ|| 11-6-1948

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಮಿಲ್ ಮಾಲೀಕರುಗಳು, ವರ್ತಕರುಗಳು, ಲೈಸೆನ್ಸ್ಡ್ ರಿಜಿಸ್ಟರ್ಡ್ ವರ್ತಕರುಗಳು ಮತ್ತು ... ಸಂಬಂಧಪಟ್ಟ ... ಇನ್ನು ಮುಂದೆ ... ನೇ ತಾರೀಖು ಮೊದಲ್ಗೊಂಡು ಈ ಕಛೇರಿಯಿಂದ ... ಮಾಡಿಕೊಳ್ಳಬೇಕು ...

ಎಂ. ವೆಂಕಟೇಶ್ವರಲು,
ಇನ್‌ಚಾರ್ಜ್ ರಿಜಿಸ್ಟ್ರಿಂಗ್ ಅಧಿಕಾರಿ,
ಮೈಸೂರು ಸಿಟಿ

UNIVERSITY OF MYSORE

Office of the University of Mysore, Mysore,
Dated 7th June 1948
No G4 Colleges 47-48

NOTIFICATION

It is hereby notified for information of the public that Intermediate Colleges will be opened at the following District Head-quarters with effect from 24th June 1948

KOLAR
CHITALDRUG
CHIKMAGALUR

Only Junior Intermediate Classes will be started

Students intending to join these colleges may apply to the respective Superintendents soon after the publication of the results of the S S L C Examination of 1948

By Order,
D. S. GORDON,
REGISTRAR.

Edited printed and published by A. R. Nagarajan at the Sadhvi Press D. Subbaiah Road Mysore

ಶ್ರೀ
ಗಣೇಶ ಟಾಕೀಸ್
ಜ್ಞಾನ ★ ★ ಸುಂದರಿ
(ತಮಿಳ್)
18-6-48 ರಿಂದ
ಮೂರನೇ ವಾರ
ಮುಖ್ಯ ಪಾತ್ರ:—
ಟಿ. ಆರ್. ಮಹಾಲಿಂಗಂ,
ಎಂ. ವಿ. ರಾಜಮ್ಮ

ಶ್ರೀ
ಎಸ್. ಆರ್. ಕೆ. ಬ್ರಾಂಡ್
ಮೆಡಿಕೇಟೆಡ್ ಮತ್ತು ಪರ್ಫ್ಯೂಮ್ಡ್
ಸ್ಪೆಷಲ್ ಸೀಗೆಕಾಯಿ ಪುಡಿಯನ್ನೇ ಉಪಯೋಗಿಸಿ ಕೂದಲು ಚೆನ್ನಾಗಿ ಬೆಳೆಯುತ್ತದೆ.
1 ವೀಸೆ, ಅರ್ಧ ವೀಸೆ, ಕಾಲು ವೀಸೆ, 1/16 ವೀಸೆ ಮತ್ತು 3 ಕಾಸಿನ ಪ್ಯಾಕೆಟ್ (0-1-0) ಗಳಲ್ಲಿ ಎಲ್ಲೆಲ್ಲಿಯೂ ದೊರೆಯುತ್ತದೆ
ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್
ಮೈಸೂರು

ನಾಳೆಯಿಂದ ಆರಂಭ
ಶ್ರೀ ಗಾಯತ್ರಿ ಟಾಕೀಸ್
ಚಾಮರಾಜ ರೋಡು, ಮೈಸೂರು
(ಆಧುನಿಕ ಸೌಲಭ್ಯಗಳಿಂದ ಕೂಡಿದ ಚಿತ್ರ ಮಂದಿರ)



ಪ್ರತಿ ದಿನ 3 ಆಟಗಳು; 3-30, 6-30 ಮತ್ತು 9-30
ಸಿಂದ್‌ಬಾದ್ ದಿ ಸೈಲರ್
(SINBAD THE SAILOR)
[ವರ್ಣರಂಜಿತ ಚಿತ್ರ]
ಸೂಚನೆ:-೧೮ನೇ ಶುಕ್ರವಾರ ಪಬ್ಲಿಕ್ ಷೋ ರಾತ್ರಿ ೧೦ ಘಂಟೆಗೆ

ರಾಜಕಮಲ
ಮೈಸೂರು
ತಾ|| 18-6-48
ಎರಡನೇ ವಾರ
ಭಕ್ತ ಪೋತ...
(ತೆಲುಗು)
ಮಾಲತಿ, ...

Morning Shows
From 18—6—48
for 4 days
Charles Dickens'
NICHOLAS NICKLEBY
With— Cedric Hardwicke and a tell-star Cast

ಪ್ರತಿ ದಿನ ಮೂರು ಆಟ
17-6-48 ನೇ ಗುರುವಾರ
ಮಂದಾರವ...
(ತಮಿಳು)
ಪಾತ್ರ:- ಟಿ. ಆರ್. ರಾಜಕುಮಾರಿ ...
ಒಲಿಂಪಿಯಾ ಟಾಕೀಸ್

ಅಪೆರಾ ಟಾಕೀಸ್
12—6—48 ರಿಂದ
ಅಭಿಮನ್ಯು
(ತಮಿಳು)
Morning shows from 1...
DANCING MASTER
With- Laurel & Hardy

ಬೆಳಗಿನ ಆಟ
18-6-48 ರಿಂದ
ನಾಲ್ಕು ದಿನಗಳು ಮಾತ್ರ
ಬಂಧನ್
ಪಾತ್ರ:-
ಲೀಲಾ ಚಿಟ್ನಿಸ್, ಅಶೋಕ್ ...
ಪ್ರಭಾತ್ ಪಿಕ್ಚರ್ ...

ಪ್ರಭುದೇವಾ ಟಾಕೀಸ್
ಮ್ಯಾಟಿನಿ 3, 1ನೇ ಆಟ 6-30, 2 ನೇ ಆಟ 10
18-6-48 ನೇ ಶುಕ್ರವಾರದಿಂದ
ಜೆಮಿನಿಯವರ
ಪ್ರತಿ ದಿನ 3 ಆಟಗಳು
★ ಜ್ಞಾನ ಸುಂದರಿ ★
(ತಮಿಳು)
ಪಾತ್ರ:— ಎಂ. ಕೆ. ರಾಧಾ, ಕಣ್ಣಾಂಬ, ಸುಶೀಲಾ, ಟಿ. ಆರ್. ರಾಮಚಂದ್ರನ್, ಎಲ್ ನಾರಾಯಣರಾವ್

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೧೮-೬-೪೮ [ಸಂಚಿಕೆ ೩೦೭

ಹೈದರಾಬಾದಿನೊಡನೆ ಪುನಃ ಸಂಧಾನವಿಲ್ಲ

ನಿಜಾಮರೇ ಮುಂದೆ ಬಂದರೆ ಅವಕಾಶ ಕೊಡಲಾಗುವುದು

ಹೈದರಾಬಾದಿನ ಮೇಲೆ ಆರ್ಥಿಕ ದಿಗ್ಬಂಧನ

ಪತ್ರಿಕಾ ಸಮ್ಮೇಳನದಲ್ಲಿ ಪಂಡಿತ ನೆಹರೂರವರ ಹೇಳಿಕೆ

ಹೈದರಾಬಾದಿನ ಪ್ರಕರಣ

ಮಾತುಕತೆಗಳ ಕಾಲ ಮುಗಿಯಿತು

ಪಂಡಿತ ನೆಹರೂರವರು ನಿನ್ನೆ ಪತ್ರಿಕಾ ಸಮ್ಮೇಳನವೊಂದನ್ನು ಕರೆಸಿ ಹೈದರಾಬಾದಿನ ವಿಷಯವಾಗಿ ಈ ಕೆಳಗೆ ಕಂಡಂತೆ ವಿವರಗಳನ್ನು ಇತ್ತರು:—

ಹೈದರಾಬಾದಿಗೂ ಭಾರತ ಸರ್ಕಾರಕ್ಕೂ ನಡೆಯುವಾದ ಅಖೈರು ಒಪ್ಪಂದದ ಕರಡು ಪ್ರತಿಯನ್ನು ಸಿದ್ಧಗೊಳಿಸುವಾಗ ಅಂತಿಮ ನಿರ್ಧಾರಕ್ಕೆ ಬರಲು ಹೈದರಾಬಾದಿನ ನಿಯೋಗದವರು ದೆಹಲಿಗೆ ಬರಬೇಕೆಂದು ಹೇಳಲಾಗಿತ್ತು. ಹಾಗೆಯೇ ಅವರು ಬರುವುದಾಗಿಯೂ ತಿಳಿಸಿದರು. ಆದರೆ ಒಪ್ಪಂದದ ಕರಡು ಪ್ರತಿಯು ಸಿದ್ಧವಾದ ಮೇಲೆ ನಿಯೋಗದವರು ನೈಜಾಮರ ಅನುಮತಿಯನ್ನು ಕೇಳಬೇಕೆಂದು ಹೇಳಿದರು. ಇದು ಭಾರತ ಸರ್ಕಾರಕ್ಕೆ ಅತ್ಯಂತ ಆಶ್ಚರ್ಯವನ್ನುಂಟುಮಾಡಿತು. ನಿಯೋಗದವರು ಹೈದರಾಬಾದಿಗೆ ಹೋದ ಮೇಲೆ ಈ ಷರತ್ತುಗಳು ನೈಜಾಮರಿಗೆ ಒಪ್ಪಿಗೆಯಾಗಿಲ್ಲವೆಂದೂ, ಅವುಗಳನ್ನು ಬದಲಾಯಿಸಬೇಕೆಂದೂ ಅವರು ಉತ್ತರವಿತ್ತರು.

ಇನ್ನು ಮುಂದೆ ಸಂಧಾನವಿಲ್ಲ

ಭಾರತ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸಿ ನಿರ್ದಿಷ್ಟವಾದ ನಿರ್ಧಾರವನ್ನು ಕೈಗೊಂಡಿದ್ದಾರೆ. ಹೈದರಾಬಾದಿನೊಡನೆ ಅವರು ಇನ್ನು ಯಾವ ಸಂಧಾನವನ್ನೂ ನಡೆಸುವುದಿಲ್ಲ. ಸಂಧಾನದ ಮಾತುಕತೆಗಳು ಮುಗಿದಂತೆಯೇ ಅವರು ಭಾವಿಸುವರು. ಆದರೆ ಕರಡು ಒಪ್ಪಂದದ ಆಧಾರದ ಮೇಲೆ ನೈಜಾಮರೇ ಪುನಃ ಮಾತುಕತೆಗಳನ್ನು ಆರಂಭಿಸಲು ಅಪೇಕ್ಷಿಸಿದರೆ ಭಾರತ ಸರ್ಕಾರವು ಅದಕ್ಕೆ ಅವಕಾಶ ಕೊಡುವುದು.

ನಿಜಾಮರಿಗೆ ಮೂರೇ ಮಾರ್ಗ

ಹೈದರಾಬಾದಿಗೆ ಇಂದಿನ ಪರಿಸ್ಥಿತಿಯಲ್ಲಿ ಇರುವುದು ಮೂರೇ ಮಾರ್ಗ—೧) ಭಾರತ ಡೊಮಿನಿಯನ್ನಿನಲ್ಲಿ ಸೇರಿ ಇತರ ಸಂಸ್ಥಾನಗಳೊಡನೆ ಎಲ್ಲ ಕಷ್ಟ ಸುಖಗಳನ್ನೂ ಸಮಾನವಾಗಿ ಅನುಭವಿಸುವುದು. ೨) ಭಾರತ ಸರ್ಕಾರದ ಪರಮಾಧಿಕಾರವನ್ನು (ಪ್ಯಾರಮೌಂಟ್ಸಿ) ಒಪ್ಪಿಕೊಳ್ಳುವುದು. ೩) ಭಾರತ ಸರ್ಕಾರದೊಡನೆ ಘರ್ಷಣೆಗೆ ಸಿದ್ಧವಾಗುವುದು. ಇವುಗಳ ಪೈಕಿ ಪರಮಾಧಿಕಾರದ ತತ್ವವು ಬ್ರಿಟಿಷರ ಅವಶೇಷವಾದುದರಿಂದ ಅದನ್ನು ಭಾರತ ಸರ್ಕಾರವೇ ಬಯಸುವುದಿಲ್ಲ. ಡೊಮಿನಿಯನ್ನಿನೊಡನೆ ಯಾವ ಸಂಸ್ಥಾನವು ಸೇರುವುದಕ್ಕೂ ಭಾರತ ಸರ್ಕಾರವು ಬಲಾತ್ಕಾರವನ್ನು ಮಾಡುವುದಿಲ್ಲ. ಅಲ್ಲಿನ ರಾಜರುಗಳೇ ಪ್ರಜಾಭಿಪ್ರಾಯಕ್ಕೆ ಅನುಗುಣವಾಗಿ ವರ್ತಿಸಬೇಕು. ಇದು ಬಿಟ್ಟರೆ ಉಳಿಯುವುದು ಘರ್ಷಣೆಯು ಮಾತ್ರ.

ಭಾರತ ಸರ್ಕಾರದ ಶಾಂತಿ ಪ್ರಯತ್ನ

ಹೈದರಾಬಾದಿನಲ್ಲಿ ರಜಾಕರರೇ ಮುಂತಾದ ಖಾಸಗೀ ಪುಂಡರ ತಂಡದವರು ಸರ್ಕಾರವನ್ನು ಮೂಲೆಗೆ ಒತ್ತರಿಸಿ ತಮ್ಮ ಬಲದಿಂದ ಅಲ್ಲಿನ ಹಿಂದೂ ಜನರಿಗೆ ಹಿಂಸೆಗಳನ್ನು ಕೊಡುತ್ತಿದ್ದಾರೆ, ಇದಲ್ಲದೆ ದೆಹಲಿಯ ಮೇಲೂ ದಂಡಯಾತ್ರೆಯನ್ನು ನಡೆಸುವುದಾಗಿ ಹೇಳಿದ್ದಾರೆ. ನೆರೆಯ ಪ್ರಾಂತ್ಯಗಳಿಗೆ ನುಗ್ಗಿ ದಾಳಿಗಳನ್ನು ಎಸಗಿದ್ದಾರೆ. ಅಲ್ಲದೆ ಹೈದರಾಬಾದಿನಲ್ಲಿರುವ ಹಿಂದೂಗಳನ್ನೆಲ್ಲಾ ನಾಶ ಮಾಡುವುದಾಗಿಯೂ ಬೆದರಿಸಿದ್ದಾರೆ. ಭಾರತ ಸರ್ಕಾರದವರು ಹೈದರಾಬಾದಿನ ಮೇಲೆ ಮಿಲಿಟರಿ ಕಾರ್ಯಾಚರಣೆಯನ್ನು ಕೈಗೊಳ್ಳಲು ಇಷ್ಟು ಕಾರಣವೇ ಸಾಕಾಗಿದ್ದಿತು. ಆದರೂ ಅವರು ಅತ್ಯಂತ ತಾಳ್ಮೆಯಿಂದಲೂ ವಿಶಾಲ ಭಾವನೆಯಿಂದಲೂ ವರ್ತಿಸುತ್ತಿರುವರು.

ಹೈದರಾಬಾದಿನ ಪ್ರಜೆಗಳನ್ನು ಹಿಂದೂ ಅಥವ ಮುಸ್ಲಿಂ ಎಂಬ ಭೇದದ ದೃಷ್ಟಿಯಿಂದ ಭಾರತ ಸರ್ಕಾರದವರು ನೋಡುವುದಿಲ್ಲ. ಅವರೆಲ್ಲರೂ ಭಾರತೀಯರೆಂದೇ ಪರಿಗಣಿಸುವರು. ಈ ಕಾರಣದಿಂದ ಹೈದರಾಬಾದಿನಲ್ಲಿ ಅನವಶ್ಯಕವಾದ ಮತ್ತು ಅಸಂಭಾವ್ಯವಾದ ಅನರ್ಥಗಳನ್ನು ಭಾರತ ಸರ್ಕಾರವು ತಪ್ಪಿಸಲು ಸರ್ವ ಪ್ರಯತ್ನಗಳನ್ನೂ ಮಾಡುವುದು.

ಹೈದರಾಬಾದಿನ ಮೇಲೆ ದಿಗ್ಬಂಧನ

ನಿಜಾಮರು ತಮ್ಮ ಸಂಸ್ಥಾನದ ಹಿತದೃಷ್ಟಿಯಿಂದಲೂ, ದೂರಾಲೋಚನೆಯಿಂದಲೂ ಮುಂದಿನ ಮಾರ್ಗವನ್ನು ಅನುಸರಿಸುವುದು ಒಳ್ಳೆಯದು. ಭಾರತ ಸರ್ಕಾರವು ಸೂಚಿಸಿದ ಕರಡು ಒಪ್ಪಂದದ ಷರತ್ತುಗಳಲ್ಲಿ ಎಳ್ಳಷ್ಟೂ ಕಡಿಮೆ ಮಾಡುವುದಿಲ್ಲವೆಂದು ನಿಜಾಮರು ಅರಿಯುವುದು ಉಚಿತ. ಇನ್ನು ಮುಂದೆ ಹೈದರಾಬಾದಿನ ಬಗ್ಗೆ ಬಿಗಿಯಾದ ವರ್ತನೆಯನ್ನು ಅನುಸರಿಸಲಾಗುವುದು. ಆ ಸಂಸ್ಥಾನದೊಡನೆ ಮಾಡಿಕೊಂಡಿರುವ ತಾತ್ಕಾಲಿಕ ಒಪ್ಪಂದವನ್ನು ಬರುವ ನವೆಂಬರ್‌ವರೆಗೂ ಪಾಲಿಸಲಾಗುವುದು. ಈ ಮಧ್ಯೆ ಅದರ ಮೇಲೆ ಆರ್ಥಿಕ ದಿಗ್ಬಂಧನವನ್ನು ಬಲಪಡಿಸಿ ಅಲ್ಲಿಗೆ ಸಾಮಗ್ರಿಗಳು ಹೋಗದಂತೆ ತಡೆಗಟ್ಟಲಾಗುವುದು. ಅಲ್ಲದೆ ರಜಾಕರರೇ ಮುಂತಾದ ಪುಂಡರು ಭಾರತದ ಪ್ರಾಂತ್ಯಗಳಲ್ಲಿ ದಾಳಿ ಮಾಡಿದರೆ ಅವರನ್ನು ಸಂಸ್ಥಾನದೊಳಗೂ ಬೆನ್ನಟ್ಟಿಕೊಂಡು ಹೋಗಿ ಮಟ್ಟ ಹಾಕುವಂತೆ ಆಜ್ಞೆ ಮಾಡಲಾಗಿರುವುದು ಮತ್ತು ಹೈದರಾಬಾದಿನ ಗಡಿಯ ಸುತ್ತಲೂ ಸೇನಾ ದಳಗಳನ್ನು ಬಲಪಡಿಸಲಾಗುವುದು.

ಹಿಂದೂಗಳು ಸಂಸ್ಥಾನವನ್ನು ಬಿಡಬಾರದು

ಹೈದರಾಬಾದಿನಲ್ಲಿರುವ ಹಿಂದೂಗಳೂ ಮತ್ತು ಇತರ ಪ್ರಜೆಗಳೂ ಯಾವ ಬಗೆಯ ಕಳವಳಕ್ಕೂ ಒಳಪಡಬೇಕಾಗಿಲ್ಲ. ಅವರು ಸಂಸ್ಥಾನವನ್ನು ಬಿಟ್ಟು ಹೊರಗೆ ಬರಬಾರದು. ಅಲ್ಲಿಯೇ ಇದ್ದು ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಬೇಕು. ಹೈದರಾಬಾದಿನ ಹೊರಗೆ ಇರುವವರೆಲ್ಲರೂ ಸಹ ಶಾಂತಿಯಿಂದಲೂ, ಧೈರ್ಯದಿಂದಲೂ ಇದ್ದು ಭಾರತ ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಾಚರಣೆಗಳಲ್ಲಿ ಸಂಪೂರ್ಣವಾಗಿ ನೆರವು ನೀಡಬೇಕು.

ಕರಡು ಒಪ್ಪಂದದ ಷರತ್ತುಗಳು

ಸಂಧಾನದ ಮುಕ್ತಾಯದ ಸಮಯದಲ್ಲಿ ಭಾರತ ಸರ್ಕಾರದ ಪ್ರತಿನಿಧಿಗಳೂ ಹೈದರಾಬಾದ್ ನಿಯೋಗದವರೂ ಪರಸ್ಪರ ಸಮಾಲೋಚನೆಯಿಂದ ಸಿದ್ಧಗೊಳಿಸಿದ್ದ ಒಪ್ಪಂದದ ಕರಡು ಷರತ್ತುಗಳು ಈ ರೀತಿ ಇವೆ:—

೧. ದೇಶ ರಕ್ಷಣೆ, ಮಾರ್ಗಾನುಕೂಲ ಮತ್ತು ವಿದೇಶಾಂಗ ನೀತಿಗಳ ಬಗ್ಗೆ ಭಾರತ ಸರ್ಕಾರದವರು ಮಾಡಲಿರುವ ಶಾಸನಗಳನ್ನೇ ಹೈದರಾಬಾದ್ ಸರ್ಕಾರದವರೂ ಜಾರಿಗೆ ತರಬೇಕು. ಒಂದು ವೇಳೆ ಅಲ್ಲಿನ ಸರ್ಕಾರದವರು ಹಾಗೆ ಮಾಡದಿದ್ದರೆ ನೈಜಾಮರು ತಮಗಿರುವ ವಿಶೇಷಾಧಿಕಾರದ ಮೂಲಕ ಆ ಶಾಸನಗಳನ್ನು ಘೋಷಿಸಬೇಕು.

೨. ಹೈದರಾಬಾದು ಭಾರತ ಡೊಮಿನಿಯನ್ನಿಗೆ ಸೇರುವ ಬಗ್ಗೆ ನಿಷ್ಪಕ್ಷಪಾತವಾದ ಸಮಿತಿಯವರ ಮೇಲ್ವಿಚಾರಣೆಯಲ್ಲಿ ಜನಾಭಿಪ್ರಾಯವನ್ನು ತೆಗೆದುಕೊಳ್ಳಬೇಕು.

೩. ಸಂಸ್ಥಾನದ ನೂತನ ರಾಜ್ಯಾಂಗವನ್ನು ರಚಿಸಲು ನೈಜಾಮರು ಬರುವ ವರ್ಷದ ಆದಿಯಲ್ಲಿ ರಾಜ್ಯಾಂಗ ಸಭೆಯೊಂದನ್ನು ಸ್ಥಾಪಿಸಬೇಕು.

೪. ಜವಾಬ್ದಾರಿ ಸರ್ಕಾರವೇ ತಮ್ಮ ಗುರಿಯೆಂದು ನಿಜಾಮರು ಸಾರಬೇಕು.

೫. ಈ ಮಧ್ಯೆ ಬಹುಮತಾಭಿಪ್ರಾಯವುಳ್ಳ ಸಂಗದವ ನಾಯಕರುಗಳನ್ನು ಕರೆಸಿ ಅವರ ಮೂಲಕ ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಬೇಕು.

೬. ರಜಾಕರರೇ ಮುಂತಾದ ಖಾಸಗೀ ಸೇನಾದಳಗಳನ್ನು ಕೂಡಲೇ ರದ್ದು ಮಾಡಿ ಅವರುಗಳ ಕಾರ್ಯಾಚರಣೆಗಳನ್ನು ತಡೆಗಟ್ಟಬೇಕು.

೭. ೨೦ ಸಾವಿರಕ್ಕೆ ಮೀರದಂತೆ ಹೈದರಾಬಾದಿನಲ್ಲಿ ಸೈನ್ಯವನ್ನು ಇಟ್ಟುಕೊಳ್ಳಬಹುದು. ನಿಜಾಮರ ಸ್ವಂತಕ್ಕಾಗಿ ೮ ಸಾವಿರಕ್ಕೆ ಮೀರದಂತೆ ಅಂಗರಕ್ಷಕ ಸೈನ್ಯವನ್ನು ಇಟ್ಟುಕೊಳ್ಳಬಹುದು. ಇವುಗಳಿಗೆ ಬೇಕಾದ ಅಸ್ತ್ರಶಸ್ತ್ರ ಮತ್ತು ಇತರ ಸಾಮಗ್ರಿಗಳ ಸರಬರಾಜಿಗೆ ಭಾರತ ಸರ್ಕಾರದವರು ಏರ್ಪಾಡು ಮಾಡಬೇಕು.

೮. ಭಾರತ ಸರ್ಕಾರದವರು ಹೈದರಾಬಾದಿನೊಳಗೆ ತಮ್ಮ ಸ್ವಂತ ವೆಚ್ಚದಿಂದ ಅವಶ್ಯಕವಿರುವಷ್ಟು ಮಾತ್ರ ಸೈನ್ಯವನ್ನು ಇಡಬಹುದು.

೯. ಯಾವ ಪರದೇಶದೊಡನೆಯೂ ಹೈದರಾಬಾದ್ ರಾಜಕೀಯ ಸಂಬಂಧವನ್ನು ಇಟ್ಟುಕೊಳ್ಳಲಾಗದು. ಅವರು ವ್ಯಾಪಾರ ಮತ್ತು ವ್ಯವಹಾರಗಳಿಗೆ ಪ್ರತಿನಿಧಿಗಳನ್ನು ಇಡಬಹುದು. ಆದರೆ ಅವುಗಳೂ ಸಹ ಭಾರತ ಸರ್ಕಾರದ ಮೂಲಕವೇ ವ್ಯವಹಾರಗಳನ್ನು ನಡೆಸಬೇಕು.

೧೦. ವಿಮಾನ, ಅಂಚೆ, ರೈಲು ಮುಂತಾದ ಎಲ್ಲ ವಾಹನ ಸಂಚಾರಗಳ ಬಗ್ಗೆ ಹೈದರಾಬಾದು ಮಾಡುವ ಎಲ್ಲ ವ್ಯವಸ್ಥೆಗಳ ಮೇಲೂ ಭಾರತ ಸರ್ಕಾರಕ್ಕೆ ಹತೋಟಿ ಇರತಕ್ಕದ್ದು.

ಮೇಲ್ಕಂಡ ಷರತ್ತುಗಳನ್ನು ಭಾರತ ಸರ್ಕಾರದವರು ಅನುಮೋದಿಸಿದ್ದಲ್ಲದೆ ಪಂಡಿತ ನೆಹರೂರವರಿಂದ ನೈಜಾಮರಿಗೆ ಭರವಸೆಯ ಪತ್ರದ ಕರಡು ಪ್ರತಿಯೊಂದನ್ನೂ ಸಹ ಸಿದ್ಧಗೊಳಿಸಲಾಗಿತ್ತು.

ನೈಜಾಮರ ಫರ್ಮಾನಿನ ಕರಡು ಪ್ರತಿ

ಮೇಲ್ಕಂಡ ಷರತ್ತುಗಳನ್ನು ನೈಜಾಮರು ಅಂಗೀಕರಿಸಿ ಹೊರಡಿಸಬೇಕಾದ ಫರ್ಮಾನಿನ ಕರಡು ಪ್ರತಿಯೂ ಸಹ ಉಭಯ ಪಂಗಡದವರಿಂದ ಸಿದ್ಧಗೊಳಿಸಲ್ಪಟ್ಟಿತ್ತು. ಹೈದರಾಬಾದಿನಲ್ಲಿ ಈಗ ಉಂಟಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಲು, ನೈಜಾಮರು ಮೇಲ್ಕಂಡ ಷರತ್ತುಗಳಿಗೊಪ್ಪಿ ಭಾರತ ಸರ್ಕಾರದೊಡನೆ ಸಹಕರಿಸುವುದಾಗಿ ಅದರಲ್ಲಿ ನಮೂದಿಸಲಾಗಿತ್ತು.

ಗಾಂಧೀ ತತ್ವದ ಮೇಲೆ ಆಡಳಿತ

ಶಾಸನ ಸಭೆಯಲ್ಲಿ ರಾಜಕಾರ್ಯನಿರ್ವಾಹಕ ಸಚಿವರ ಭಾಷಣ

ಸ್ವಂ. ಸು. ಫೋನ್] ಬೆಂಗಳೂರು ೧೮

ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಸಂಸ್ಥಾನದ ಬಜೆಟ್ಟನ್ನು ನಿನ್ನೆ ಶಾಸನ ಸಭೆಯಲ್ಲಿ ಮಂಡಿಸಿ, ದೀರ್ಘವಾದ ಭಾಷಣವನ್ನು ಮಾಡಿದರು. ಮೊಟ್ಟಮೊದಲನೆಯ ಬಾರಿ 'ಪ್ರಜೆಗಳ ಬಜೆಟ್ಟ'ನ್ನು ಮಂಡಿಸಲಾಗಿದೆ. ಮಹಾತ್ಮ ಗಾಂಧೀಜಿಯವರ ತತ್ವದ ಮೇಲೆ ಸರ್ಕಾರದ ಆಡಳಿತವನ್ನು ಅವಲಂಬಿಸಲಾಗಿದೆ. ಈಗಿನ ವಿಷಮ ಪರಿಸ್ಥಿತಿಯನ್ನು ಎದುರಿಸಲು ಪೋಲೀಸ್ ಮತ್ತು ಮಿಲಿಟರಿ ಬಲಗಳನ್ನು ಹೆಚ್ಚಿಸಬೇಕು. ಸಂಸ್ಥಾನದಲ್ಲಿ ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ೩೦ ಲಕ್ಷ ರೂಪಾಯಿಗಳ ೩ ವರ್ಷಗಳ ಯೋಜನೆಯನ್ನು ತಯಾರಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಅನಂತರ ಬಜೆಟ್ಟಿನ ಮೇಲೆ ಚರ್ಚೆ ಪ್ರಾರಂಭವಾಯಿತು. ಶ್ರೀ ಟಿ. ಮಾದಯ್ಯನವರು ಮಾತನಾಡಿ, ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಗಮನ ಕೊಡಬೇಕೆಂದೂ, ಅಧಿಕಾರಿಗಳು ಮಂತ್ರಿಗಳಿಗಿಂತಲೂ ಹೆಚ್ಚಿನ ಮೋಧಾವಿ ... ತಿಳಿದಿರುವ ... ಜಂಭವನ್ನು ಬಿಟ್ಟು, ಸೇವಾ ಭಾವನೆಯಿಂದಿರಬೇಕೆಂದೂ ತಿಳಿಸಿದರು. ಶ್ರೀ ಗಳಾದ ಎಸ್. ಚೆನ್ನಪ್ಪ, ಅಬ್ದುಲ್ ರಹಿಮಾನ್, ಮಾರಿಯ ಮುಂತಾದವರು ಮಾತನಾಡಿದರು.

ಹೈದ್ರಾಬಾದಿನ ನೀತಿಗೆ ಮೈಸೂರು ಮುಸ್ಲಿಮರ ಸಹಕಾರವಿಲ್ಲ

ಮಹಮದ್ ಇಮಾಂರವರ ಭಾಷಣ

ಸ್ವಂ. ಸು. ಫೋನ್] ಬೆಂಗಳೂರು ೧೮

ಈ ದಿನ ಶಾಸನ ಸಭೆಯಲ್ಲಿ ಮಾಜಿ ಮಂತ್ರಿಗಳಾದ ಜನಾಬ್ ಮಹಮದ್ ಇಮಾಂರವರು ಬಜೆಟ್ಟಿನ ಮೇಲೆ ಭಾಷಣ ಮಾಡುತ್ತಾ ಹೈದರಾಬಾದ್ ಪ್ರಶ್ನೆಯನ್ನು ಪ್ರಸ್ತಾಪಿಸಿದರು. ನೈಜಾಮರು ಭಾರತ ಸರ್ಕಾರದೊಡನೆ ಸಹಕರಿಸಿ ವರ್ತಿಸಬೇಕೆಂದು ಸೂಚಿಸಿದರು. ಮೈಸೂರಿನ ಮುಸಲ್ಮಾನರು ಭಾರತ ಡೊಮಿನಿಯನ್ನಿಗೂ ಮತ್ತು ಮೈಸೂರು ರಾಜಮನೆತನಕ್ಕೂ ಸಂಪೂರ್ಣವಾದ ನಿಷ್ಠೆಯುಳ್ಳವರಾಗಿರುವರೆಂದೂ, ಒಂದು ವೇಳೆ ವಿವಾದವೂ ಘರ್ಷಣೆಯುಂಟಾದರೆ ಮೈಸೂರಿನ ಮುಸಲ್ಮಾನರನ್ನು ಅದಕ್ಕೆ ಗಂಟು ಹಾಕಬಾರದೆಂದೂ ಹೇಳಿದರು.

ಶಸ್ತ್ರ ಚಿಕಿತ್ಸೆ ಕಾಲದಲ್ಲಿ ಹೊಟ್ಟೆಯಲ್ಲೇ ಉಳಿದ ಚಿಮಟ

ಕಳೆದ ಹತ್ತು ವರ್ಷಗಳ ಹಿಂದೆ ನೇಪಲ್ಸಿನ ಲೂಸಿಯಾ ಎಂಬಾಕೆಯು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಕಾಲದಲ್ಲಿ ಆಕೆಯ ಹೊಟ್ಟೆಯಲ್ಲಿ ಉಳಿದುಹೋಗಿದ್ದ ಚಿಮಟ ವೊಂದನ್ನು ಇತ್ತೀಚೆಗೆ ಪುನಃ ಶಸ್ತ್ರ ಚಿಕಿತ್ಸೆ ಮಾಡಿ ತೆಗೆಯಲಾಯಿತೆಂದು ತಿಳಿದು ಬಂದಿದೆ

ಬೆಳಗಿನ ಆಟಗಳು

18-6 48 ರಿಂದ
ನಾಲ್ಕು ದಿನಗಳು ಮಾತ್ರ
ಬಾಂಬೆ ಟಾಕೀಸಿನವರ

- ಬಂಧನ್ -

— ಪಾತ್ರ: —
ಲೀಲಾ ಚಿಟ್ನೀಸ್, ಅಶೋಕ ಕುಮಾರ್

ಪ್ರಭಾ ಪಿಕ್ಚರ್ ಹೌಸ್

ಪ್ರತಿ ದಿನ ಮೂರು ಆಟಗಳು

17 6-48 ನೇ ಗುರುವಾರದಿಂದ

ಮಂದಾರವತಿ

(ತಮಿಳು)
ಪಾತ್ರ:-ಟಿ ಆರ್ ರಾಜಕುಮಾರಿ, ಎಸ್ ಡಿ ಸುಬ್ಬಯ್ಯ, ಕಾಳಿ ಎನ್ ರತ್ನಂ ಮತ್ತಿತರರು
ಇದರ ಜೊತೆಯಲ್ಲಿ ಶಾಸ್ತ್ರೀಯ ಕ-ಕಥಾ ಎಂಬ ಹಿಂದೀ ಟಾಪಿಕಲ್ ಚಿತ್ರವನ್ನೂ ಪ್ರದರ್ಶಿಸಲಾಗುವುದು.

ಒಲಿಂಪಿಯಾ ಟಾಕೀಸ್

ಹುಚ್ಚು ಗುಳ್ಳೆನರಿಗಳಿಂದ ಪುರನಿವಾಸಿಗಳಿಗೆ ಘಾಯ

ಹುಚ್ಚು ಹಿಡಿದ ಗುಳ್ಳೆನರಿಗಳು ಕಟಕ್ಕಿನ ಪುರನಿವಾಸಿಗಳನ್ನು ಕಚ್ಚಿ ಗಾಯ ಮಾಡುತ್ತಿವೆಯೆಂದೂ, ಇದರಿಂದ ಕಳೆದ ಕೇವಲ ಎಂದಿನಗಳಲ್ಲಿ ಒಂದು ನೂರು ಜನರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆಂದೂ ಹೇಳಲಾಗಿದೆ

ಬಂಗ್ಲೆ ಮತ್ತು ಸೈಟುಗಳು ಮಾರಾಟಕ್ಕಿವೆ

ವಾಣೀವಿಲಾಸ ಮೊಹಲ್ಲಾದಲ್ಲಿ ನಲ್ಲಿ, ದೀಪ, ಕಾಂಪೌಂಡ ಮತ್ತು ಗ್ಯಾರೇಜು ಉಳ್ಳ ಪೂರ್ತಿ ತಾರಸಿ ಉಳ್ಳ ಕಟ್ಟಡಗಳು ಬಿಕರಿಗೆ ಇವೆ ಮತ್ತು ಡಿಟೊ ಮೊಹಲ್ಲಾದಲ್ಲಿ ಅತ್ಯಾರೋಗ್ಯಕರವಾದ ಸ್ಥಳದಲ್ಲಿ ಮೂರು ಬಂಗ್ಲೆ ಸೈಟುಗಳು ಮತ್ತು ಎರಡು ಕಾಟೇಜು ಸೈಟುಗಳೂ ಸಹ ಕ್ರಯಕ್ಕಿವೆ ವಿವರಗಳನ್ನು ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ

ಜೆ. ಸುಬ್ಬರಾವ್,
ಅಟ್ ದಿವಾನ್ಸ್ ರಸ್ತೆ,
ಮೈಸೂರು

WANTED

Applications for the posts of Lecturers in Physics and Chemistry are invited The minimum qualification is a second class in B Sc (HONS.) in the respective subject Salary will be fixed according to qualification and experience

Apply to -

**The Hon Secretary,
Saradavilas College,
Mysore**

UNIVERSITY OF MYSORE

Office of the University of Mysore, Mysore,
Dated 7th June 1948.

No Ex 8 82 47-48

NOTIFICATION

It is hereby notified for the information of the public that in the Intermediate College, Mysore, Maharani's Intermediate College, Mysore and in the Intermediate College, Tumkur, provision will be made from the academic year commencing from 24 th June 1948 for instruction in Mathematics, Physics and Chemistry up to the B Sc Pass Standard Students desirous of joining these Colleges may apply to the Head of the Institution concerned soon after the results of the Public Examinations of MAY 1948 are declared

By Order,
D. S GORDON
REGISTRAR

ಶ್ರೀ ಪ್ಯಾರೆಯ ಶ್ರೀ ಎಸ್... ಅವರ ಪುತ್ರಿ ಚಿ॥ ಸೌ॥ ... ಯನ್ನು ಸಂಯುಕ್ತ ಭಾರತ ... ರಾಜಧಾನಿಯ ಏಜೆಂಟರಾದ ಶ್ರೀ ... ಸೀತಾರಾಮಯ್ಯನವರಿಗೆ ... ಮೊನ್ನೆ ದಿನ ವಿವಾಹ ಮಹೋತ್ಸವ ... ಗಳು

ಅಪೆರಾ ಟಾಕೀಸ್

12—6—48 ರಿಂದ
ಅನೇಕ ... ನೇ ವಾರ

ಅಭಿಮನ್ಯು

(ತಮಿಳು)

Morning shows from 18-6
DANCING MASTER
With Laurel & Hardy

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ರಿಜಿಸ್ಟರ್ ಆದ ಕಂಪನಿ]

ಪ್ರಧಾನ ಕಛೇರಿ -ಕರೂರು (S I Ry)
ಶಾಖೆಗಳ -ದಿಂಡಿಗಲ್, ಉಡುಮಲ್ ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.)
ಬೆಂಗಳೂರು ಸಿಟಿ
ಉಪಶಾಖೆ -ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್:-ಇಲವಾಲ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,	4

ಮಾಹೆಯಾನಾ ಒಂದು ರೂಪಾಯಿ ನಂತೆ ಪಾವತಿ ಮಾಡತಕ್ಕದಾದ— ೧೨ ತಿಂಗಳು, ೨೪ ತಿಂಗಳು ವಾಯಿದಾ—ರೆಕರಿಂಗ್ ಡಿಪಾಜಿಟ್ ಮತ್ತು ೪೮ ತಿಂಗಳು ವಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ವಿ ಕೆ ನಟರಾಜನ್,
ಏಜೆಂಟ್ ಮೈಸೂರು,

ಇಂದಿನಿಂದ ಆನೇಕ ಪ್ರಾರಂಭ

ಶ್ರೀ ಗಾಯತ್ರಿ ಟಾಕೀಸ್

ಚಾಮರಾಜ ರೋಡು, ಮೈಸೂರು
(ಅದ್ಭುತ ಸೌಲಭ್ಯಗಳಿಂದ ಕೂಡಿದ ಚಿತ್ರ ಮಂದಿರ)



ಪ್ರತಿ ದಿನ 3 ಆಟಗಳು, 3-00, 6 30 ಮತ್ತು 9-30

ಸಿಂದ್‌ಬಾದ್ ದಿ ಸೈಲ

(SINBAD THE SAILOR)

[ವರ್ಣರಂಜಿತ ಚಿತ್ರ]

ಸೂಚನೆ -೧೮ನೇ ಶುಕ್ರವಾರ ಪಬ್ಲಿಕ್ ಶೋ ರಾತ್ರಿ ೧೦ ಘ

.... ಪ್ರಭಾ ....

18 6-48 ರಿಂದ ಯಶಸ್ವಿಯಾದ 5 ನೇ ವಾರ

ಸಾವಿರಾರು ಜನರು ನೋಡಿ ಆನಂದಿಸಿ ಪುನಃ ಪುನಃ ನೋಡಲು ಬಯಸುತ್ತಿರುವ

ಸಂತೋಷಿಯವರ

ಖಿಡ್ಕಿ

(ಹಿಂದಿ)

ಪಾತ್ರ:—ರೆಹನಾ, ವಿ. ಹೆಚ್ ದೇಸಾಯಿ, ಮುಮತಾಜಾಲಿ

Edited printed and published by A R Nagarajan at the Sadhvi Press D Subbaiah Road Mysore

ಫೋನ್ ನಂ. 702 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೧೯-೬-೪೮ [ಸಂಚಿಕೆ ೪೦೮

ಭಾರತದ ಆಕ್ರಮಣಕ್ಕೆ ಐದು ಲಕ್ಷ ರಜಾಕಾರರು

...ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ

ಮೈಸೂರು ೧೯

...ಎಸ್ ಎಲ್ ಸಿ ಪರೀಕ್ಷಾ ಫಲಿ...ಗಳು ವಿಶ್ವವಿದ್ಯಾನಿಲಯ ಪರೀಕ್ಷಾ ...ಂಡಗಳೊಡನೆ ಇದೇ ೨೧ ನೇ ತಾ ಸೋಮವಾರ ಬೆಳಿಗ್ಗೆ ೮-೩೦ ಗಂ ವಿಶ್ವವಿದ್ಯಾನಿಲಯ ಕಛೇರಿಯಲ್ಲಿ ...ಲಾಗುವುದು.

ಹರಿಕಥೆ

...ಟ್ಟಯ್ಯ ರಸ್ತೆಯಲ್ಲಿರುವ ಶ್ರೀ ಬ್ರ...ರದ ಔಷಧಾಲಯದ ಮುಂಭಾಗದ ...ದಿನ ರಾತ್ರಿ ೮-೩೦ ಗಂಟೆಗೆ ಶ್ರೀ ...ದಾಸರಿಂದ ಶ್ರೀ ಕೃಷ್ಣ ಗಾರುಡಿ ...ಹರಿಕಥೆಯು ನಡೆಯುವುದು

...ಶ್ವತ್ಥನಾರಾಯಣಸ್ವಾಮಿ ಪ್ರತಿಷ್ಠೆ

...ರ್ಥಾನಿಯ ಶಿವರಾಂಪೇಟೆ ಶ್ರೀ ...ಂಡೇಶ್ವರೀ ಭವನದ ಮುಂಭಾಗದ ಅಶ್ವತ್ಥ ಮರವು ಒಣಗಿ ಹೋಗಿ ...ಂದ ಅದನ್ನು ತೆಗೆದು ಹಾಕಿ ಅ...ದಲ್ಲಿ ಅಶ್ವತ್ಥನಾರಾಯಣ ಸ್ವಾಮಿ...ನ್ನು ಪ್ರತಿಷ್ಠೆ ಮಾಡಿಸಿ ಮಹಾಜ... ಪೂಜೆ ಮತ್ತು ಪ್ರದಕ್ಷಿಣೆಗಳಿಗೆ ಅನುಕೂಲಮಾಡಿಸಲಾಗುವುದೆಂ... ಸ್ಥಳವನ್ನು ಯಾವ ವಿಧದಲ್ಲೂ ...ಪಯೋಗ ಪಡಿಸಿಕೊಳ್ಳುವುದಿಲ್ಲ ... ಈ ಮಹಾಕಾರ್ಯಕ್ಕೆ ಶಿವರಾಂಪೇ...ಸಿಗಳು ಸಹಕರಿಸಬೇಕೆಂದೂ ಪ್ರ...ದಸ್ಯರಾದ ಶ್ರೀ ಚೌಡಯ್ಯನವರು ...ತ್ತಾರೆ

...ಗಳ ಸಂಚಾರ ಕಾಲದ ...ಟೇಬಲ್ ಹಾಕಬೇಕು

...ಸೂರು ನಗರದ ಬಸ್ ಸರ್ವೀಸ್ ...ದಲ್ಲಿ ಬಸ್ಸುಗಳು ಹೊರಡುವ ಕಾ... ನಮೂದಿಸಿಲ್ಲದಿರುವುದರಿಂದ ಪ್ರ...ರಿಗೆ ತುಂಬಾ ತೊಂದರೆಯಾಗು... ...ಅವರುಗಳು ಅಲ್ಲಿ ವೃಥಾ ಕಾದಿರ...ವುದು ಅದುದರಿಂದ ಬಸ್ಸುಗಳ ...ದ ಕಾಲವನ್ನು ತೋರಿಸುವ ...ನ್ನು ಹಾಕಬೇಕೆಂದು ಜಿಲ್ಲಾ ...ನ ಸದಸ್ಯರಾದ ಶ್ರೀ ಪಿ. ವೆಂಕಟ...ಯ್ಯನವರು ಪ್ರಾರ್ಥಿಸುತ್ತಾರೆ

...ಡೆಕ್ಕನ್ ಹೆರಾಲ್ಡ್

...ಸಿದ್ಧ ಪತ್ರಿಕೋದ್ಯಮಿಗಳಾದ ಶ್ರೀ ...ನ್ ಜೋಸೆಫ್ ರವರ ಸಂಪಾದಕ... ಬೆಂಗಳೂರಿನಿಂದ ಮೊನ್ನೆಯಿಂದ ...ರುವ ಡೆಕ್ಕನ್ ಹೆರಾಲ್ಡ್ ಎಂಬ ...ನ ಪತ್ರಿಕೆಯು ನಮ್ಮ ಕೈಗೆ ಸೇರಿ...ದನ್ನು ಇತರ ದಕ್ಷಿಣ ಭಾರತದ ...ಗೆ ಸರಿಸಮಾನವಾಗಿ ನಡೆಸಲು ...ಶ್ರೀ ಮಹನೀಯರುಗಳು ...ದ್ದಾರೆ. ಅವರ ಆಕಾಂಕ್ಷೆಗೆ ಅನು...ಗಿ ಈ ಪತ್ರಿಕೆಯು ಬೆಳೆದು ದೇಶ...ದ ಅಭ್ಯುದಯವನ್ನು ಸಾಧಿಸ...ವು ಹಾರೈಸುತ್ತೇವೆ.

ಮೌಂಟ್ಬ್ಯಾಟನ್ನರು ಬ್ರಿಟನ್ನಿಗೆ

...ವಿ ರಾಜಕೀಯ ಸಲಹೆಗಾರರಾ... ವಾಲ್ಟರ್ ಮಾಂಕ್ಟನ್ನರು ನೆನ್ನೆ ...ಗೆ ಪ್ರಯಾಣ ಮಾಡಿದರು. ಅವ...ರು ಹೈದರಾಬಾದಿಗೆ ಬರುವುದಿಲ್ಲ...ಳಲಾಗಿದೆ

ರಾಷ್ಟ್ರಧ್ವಜವನ್ನು ಪ್ರದರ್ಶಿಸುವ ಕ್ರಮ

ಭಾರತದ ರಾಷ್ಟ್ರಧ್ವಜವನ್ನು ಯಾರಿಂದ ಯಾವ ಸಂದರ್ಭದಲ್ಲಿ ಯಾವ ರೀತಿ ಉಪಯೋಗಿಸಬಹುದೆಂಬುದರ ಬಗ್ಗೆ ಕೇಂದ್ರ ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿರುತ್ತಾರೆ. ಸರ್ಕಾರಿ ಭವನಗಳ, ಹೈಕೋರ್ಟುಗಳು, ಜಿಲ್ಲಾ ಕೋರ್ಟು, ಪ್ರಾಂತ ಸಭೆಗಳು, ವಿದೇಶಾಂಗದ ರಾಯಭಾರಿಗಳ ಪ್ರತಿನಿಧಿಗಳ ಮುಖ್ಯ ಕಛೇರಿ ಭವನಗಳು, ರಾಜರುಗಳು ಮತ್ತು ರಾಜಪ್ರಮುಖರುಗಳು ಇವರುಗಳ ಭವನಗಳ ಮೇಲೆ ರಾಷ್ಟ್ರಧ್ವಜವನ್ನು ಯಾವಾಗಲೂ ಹಾರಿಸಬಹುದು. ಸಚಿವರುಗಳು, ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳ ಅಧ್ಯಕ್ಷರುಗಳು, ಚೀಫ್ ಕಮೀಷನರ ಗಳು, ವಿದೇಶಾಂಗದಲ್ಲಿರುವ ಪ್ರತಿನಿಧಿಗಳು, ರಾಜರುಗಳು ಮತ್ತು ರಾಜಪ್ರಮುಖರುಗಳು ಮಾತ್ರ ತಮ್ಮ ಮೋಟಾರು ಕಾರುಗಳ ಮೇಲೆ ಧ್ವಜವನ್ನು ಹಾರಿಸಬಹುದು. ವಿಶೇಷ ಸಂದರ್ಭಗಳಲ್ಲಿ ಅಂದರೆ ಸ್ವಾತಂತ್ರ್ಯ ದಿನಾಚರಣೆ, ರಾಷ್ಟ್ರೀಯ ವಾರ, ಜನವರಿ ೩೦ ಮತ್ತು ಗಾಂಧೀಜಿಯವರ ಜನ್ಮ ದಿನಗಳಲ್ಲಿ ಮಾತ್ರ ಖಾಸಗೀ ಜನಗಳು ಧ್ವಜವನ್ನು ಎಲ್ಲಿ ಬೇಕಾದರೂ ಪ್ರದರ್ಶಿಸಬಹುದು. ಈ ಸೂಚನೆಗಳನ್ನು ಪರಿಪಾಲಿಸಿ ಜನಗಳು ಸರ್ಕಾರದೊಂದಿಗೆ ಸಹಕರಿಸಿ ರಾಷ್ಟ್ರಧ್ವಜದ ಗೌರವಕ್ಕೆ ಕುಂದು ಬರದಂತೆ ನೋಡಿಕೊಳ್ಳಬೇಕೆಂದು. ಕೇಳಲಾಗಿದೆ. ಜಾಹೀರಾತುಗಳಲ್ಲಿ ರಾಷ್ಟ್ರಧ್ವಜವನ್ನು ಉಪಯೋಗಿಸಕೂಡದೆಂದೂ ಎಚ್ಚರಿಕೆ ಕೊಡಲಾಗಿದೆ

ಶೀರಣ್ಯನ ವಿದ್ಯಾರ್ಥಿ ನಿಲಯ

ಚಾಮುಂಡಿಪುರದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯವು ಮುಂದಿನ ತಿಂಗಳ ೧ ನೇ ತಾರೀಖಿನಿಂದ ತೆರೆಯಲ್ಪಡುವುದು. ಇದಕ್ಕೆ ಸೇರಬಯಸುವ ಹೈಸ್ಕೂಲು ವಿದ್ಯಾರ್ಥಿಗಳು ಇದೇ ೨೫ ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಕಳುಹಿಸಬೇಕೆಂದು ತಿಳಿಸಲಾಗಿದೆ

ಚಾಮುಂಡೇಶ್ವರಿ ಟಾಕೀಸ್

17—6—48 ರಿಂದ

೧೯ ನೇ ವಾರ

ಚಂದ್ರಲೇಖ

(ತಮಿಳು)

— ಭೂಮಿಕೆ —

ಎಂ. ಕೆ. ರಾಧಾ, ಟಿ. ಆರ್. ರಾಜಕುಮಾರಿ,

○ ರಂಜನ್ ○

ಭಾರತದ ಮೇಲೆ ದಂಡಯಾತ್ರೆಗೆ ನಿಜಾಮರ ಸಿದ್ಧತೆ

ರಜಾಕಾರರ ೫ ಲಕ್ಷ ಮಂದಿ ಸೈನ್ಯ

ಹೈದರಾಬಾದ್ ಮತ್ತು ಭಾರತದ ಸಂಧಾನಗಳು ಮುರಿದು ಬಿದ್ದುದರ ಬಗ್ಗೆ ಹೈದರಾಬಾದ್ ಪ್ರಧಾನಿ ಮೀರ್ ಲಾಯಕ್ ಅಲಿಯವರು ನೆನ್ನೆ ಒಂದು ಹೇಳಿಕೆಯನ್ನು ಕೊಟ್ಟು- ಹೈದರಾಬಾದಿನ ಭವಿಷ್ಯದ ಬಗ್ಗೆ ಉಂಟಾಗಬಹುದಾದ ಯಾವ ಪರಿಸ್ಥಿತಿಯನ್ನಾದರೂ ಎದುರಿಸಲು ಅಲ್ಲಿನ ನಾಗರಿಕರು, ಪೋಲೀಸ್ ಮತ್ತು ಮಿಲಿಟರಿಯವರು ಸುಸಂಘಟಿತರಾಗಬೇಕೆಂದೂ, ಹೈದರಾಬಾದು ಬಲಿಷ್ಠ ರಾಷ್ಟ್ರವಲ್ಲವಾದರೂ ಅದರ ಮೇಲೆ ನಡೆಸಬಹುದಾದ ಧಾಳಿಯನ್ನು ಸರ್ವ ವಿಧದಲ್ಲಿಯೂ ಎದುರಿಸಬೇಕಾಗಿದೆಯೆಂದೂ ನುಡಿದರು.

ರಜಾಕಾರರ ನಾಯಕರಾದ ಖಾಸಿಂ ರಜ್ವಿಯವರು ಒಂದು ಹೇಳಿಕೆಯನ್ನು ಕೊಟ್ಟು - ಹೈದರಾಬಾದಿನಲ್ಲಿ ರಜಾಕಾರರ ಸೇನೆಯನ್ನು ರದ್ದುಗೊಳಿಸಬೇಕೆಂದು ಭಾರತ ಸರ್ಕಾರವು ಕೇಳುವುದು ಸರಿಯಲ್ಲವೆಂದೂ, ಸುಸಜ್ಜಿತರಾದ ಐದು ಲಕ್ಷ ಮಂದಿ ರಜಾಕಾರರ ಸೇನಾ ಪಡೆಯನ್ನು ಭಾರತದ ಮೇಲಿನ ದಂಡಯಾತ್ರೆಗಾಗಿ ಸಜ್ಜುಗೊಳಿಸಲಾಗುವುದೆಂದೂ ಪ್ರಕಟಿಸಿರುತ್ತಾರೆ.

ಗಾಯತ್ರಿ ಚಿತ್ರಮಂದಿರ

ಮೈಸೂರು ೧೯

ರಾಜಧಾನಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಗಾಯತ್ರೀ ಚಲನ ಚಿತ್ರಮಂದಿರದ ಆರಂಭೋತ್ಸವವನ್ನು ನೆನ್ನೆ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ನೆರವೇರಿಸಿದರು. ಸಮಾರಂಭಕ್ಕೆ ನಗರದ ಅನೇಕ ಗಣ್ಯ ಮಹನೀಯರುಗಳು ಬಂದಿದ್ದರು. ವಂದಿತ ಮಾಲೀಕರಾದ ಶ್ರೀ ಟಿ. ಚಿ. ವಾಸುದೇವಯ್ಯನವರು ಸಚಿವರಿಗೆ ಒಂದು ಸನ್ಮಾನ ಪತ್ರಿಕೆಯನ್ನು ಅರ್ಪಿಸಿದರು. ಸಚಿವರು ಭಾಷಣ ಮಾಡಿ ಚಲನ ಚಿತ್ರ ಕೈಗಾರಿಕೆಯು ಇನ್ನೂ ಅಭಿವೃದ್ಧಿ ಹೊಂದಬೇಕೆಂದೂ, ಇದರ ಸಂಗಡ ಜನತೆಯ ಮನೋರಂಜನೆ ನೈತಿಕ ಜ್ಞಾನಾಭಿವೃದ್ಧಿಗೆ ಉತ್ತಮ ಚಿತ್ರಗಳ ತಯಾರಾಗಬೇಕೆಂದೂ ತಿಳಿಸಿದರು. ಆಧುನಿಕ ಸೌಕರ್ಯಗಳಿಂದ ಕೂಡಿರುವ ಈ ಭವ್ಯ ಭವನವನ್ನು ನಿರ್ಮಿಸಿದ್ದುದಕ್ಕಾಗಿ ಶ್ರೀ ಟಿ. ವಾಸುದೇವಯ್ಯನವರನ್ನು ಸಚಿವರು ಅಭಿನಂದಿಸಿದರು. ...ಮಂದಿರದಲ್ಲಿ ... ಚಿತ್ರ ಪ್ರದರ್ಶನವು ನಡೆಯಿತು. ಶ್ರೀ ಟಿ. ವಾಸುದೇವಯ್ಯನವರು ಆಹ್ವಾನಿತರೆಲ್ಲರನ್ನೂ ಫಲಪುಷ್ಪಗಳಿಂದ ಸತ್ಕರಿಸಿದರು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕಡ್ಡಾಯದ ಸೈನ್ಯ ಶಿಕ್ಷಣ

ಶಾಸನ ಸಭೆಯಲ್ಲಿ ವಿದ್ಯಾ ಸಚಿವರ ಹೇಳಿಕೆ

(ಸ್ವಂ.ವು.ಫೋ.) ಬೆಂಗಳೂರು ೧೯

ಸಂಸ್ಥಾನದ ನಾನಾ ಹೈಸ್ಕೂಲುಗಳ ೩೦೦ ಜನ ವಿದ್ಯಾರ್ಥಿಗಳಿಗೂ ಮತ್ತು ಕಾಲೇಜಿನ ೪೫೦ ಮಂದಿ ವಿದ್ಯಾರ್ಥಿಗಳಿಗೂ ಕಡ್ಡಾಯದ ಸೈನ್ಯ ಶಿಕ್ಷಣವನ್ನು ಈ ವರ್ಷದಿಂದಲೇ ಕೊಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದು ವಿದ್ಯಾ ಸಚಿವರಾದ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಈ ದಿನ ಶಾಸನ ಸಭೆಯಲ್ಲಿ ಶ್ರೀ ಹೆಚ್. ಎಸ್. ರುದ್ರಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಈ ಶಿಕ್ಷಣದ ಬಗ್ಗೆ ತಕ್ಕ ಸೌಲಭ್ಯಗಳನ್ನು ಕೊಡಬೇಕೆಂದು ಭಾರತ ಸರ್ಕಾರವನ್ನು ಕೇಳಲಾಗಿದೆಯೆಂದೂ ಒಂದು ವರ್ಷಕಾಲ ಶಿಕ್ಷಣವನ್ನು ಕೊಡಲಾಗುವುದೆಂದೂ ಅವರು ತಿಳಿಸಿದರು.

ಬೆಂಗಳೂರು-ಮೈಸೂರು ರೈಲ್ವೆ ಮಾರ್ಗದಲ್ಲಿರುವ ಲೋಕ ಪಾವನಿ ನದಿಯ ಸೇತುವೆಯು ಮುಂದಿನ ತಿಂಗಳ ಅಂತ್ಯದೊಳಗಾಗಿ ಮುಗಿಯುವುದೆಂದು ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಅನಂತರ ಬಜೆಟ್ಟಿನ ಮೇಲೆ ಭಾಷಣಗಳಾದುವು. ಶ್ರೀ ಎಲ್. ಎಸ್. ವೆಂಕಾಜಿರಾಯರು ಮಾತನಾಡಿ ಸರ್ಕಾರದವರು ರಿಜರ್ವ್ ಫಂಡಿನಿಂದ ಹಣವನ್ನು ತೆಗೆದು ಉಪಯೋಗಿಸುವುದು ಸರಿಯಲ್ಲವೆಂದೂ ೧೦ ಕೋಟಿ ರೂ. ಸಾಲವನ್ನು ಪಡೆದು ಕೈಗಾರಿಕಾ ಮತ್ತು ಇತರ ಬಾಬುಗಳ ಉನ್ನತಿಗಾಗಿ ಉಪಯೋಗಿಸಬೇಕೆಂದು ತಿಳಿಸಿದರು.

ನೆನ್ನೆ ದಿನ ಶ್ರೀ ಕೆ. ಪಟೇಲರಾವ್ ಶ್ರೀನಿವಾಸಯ್ಯಂಗಾರ್ಯರು ಬಜೆಟ್ಟಿನ ಮೇಲೆ ಮಾತನಾಡುತ್ತ- ಹಣಕಾಸಿನ ಸ್ಥಿತಿಯಲ್ಲಿ ಸ್ವಲ್ಪ ದುರ್ಬಲತೆಯಿದ್ದರೂ ಅನುಪಯುಕ್ತಗಳಿಗೆ ಹಣ ಕಡಿಮೆಯಾಗುವಂತೆ ಬಜೆಟ್ಟನ್ನು ತಯಾರಿಸಬೇಕೆಂದೂ ತಿಳಿಸಿದರು.

ಈ ಮಧ್ಯೆ ಜನಾಬ್ ಸಯ್ಯದ್ ಅಬ್ದುಲ್ ರಹಮಾನ್ ರವರು ಎದ್ದು ಸಚಿವರುಗಳು ಫೈಲುಗಳನ್ನು ನೋಡುತ್ತಿದ್ದಾರೆಂದೂ, ಸಭೆಯು ಕಲಾಪಗಳು ನಡೆಯುತ್ತಿರುವಾಗ ಹಾಗೆ ಮಾಡಬಹುದೇ-ಎಂದು ಕೇಳಿದರು. ಅಗತ್ಯವಿರುವುದನ್ನು ಮಾತ್ರ ನೋಡಬಹುದೆಂದು ತಿಳಿಸಿ, ಆ ಬಗ್ಗೆ ಮುಂದೆ ರೂಲಿಂಗ್ ಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

೧೧,೫೦೦ ಗ್ಯಾಲನ್ ಪೆಟ್ರೋಲು ಕೂಪನ್ನುಗಳ ನ್ಯಾಯ

(ಸ್ವಂ.ವು.ಫೋ.) ಬೆಂಗಳೂರು ೧೯

ಕಳೆದ ೧೩ ನೇ ತಾರೀಖು-ಇಲ್ಲಿನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ೧೧,೫೦೦ ಗ್ಯಾಲನ್ ಪೆಟ್ರೋಲ್ ಕೂಪನ್ನುಗಳು ಕಳುವಾಯಿತೆಂದು ಪೋಲೀಸರಿಗೆ ದೂರು ಬಂದಿದೆ. ಈ ಸಂದರ್ಭದಲ್ಲಿ ಒಬ್ಬ ಗುಮಾಸ್ತರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ

ದೆಹಲಿಗೆ ನಿಜಾಮರ ರಹಸ್ಯ ಭೇಟಿಯೋ ?

ನಿಜಾಮರು ಮೊನ್ನೆ ದಿನ ರಹಸ್ಯವಾಗಿ ದೆಹಲಿಗೆ ವಿಮಾನದಲ್ಲಿ ಹೋಗಿ ಪಂಡಿತ ನೆಹರೂರವರನ್ನು ಭೇಟಿ ಮಾಡಿದರೆಂದು ವದಂತಿಯಾಗಿದೆ. ರಜಾಕಾರರ ಹಾವಳಿಯಿಂದ ತಮ್ಮನ್ನು ಪಾರುಮಾಡಬೇಕೆಂದು ಅವರು ನೆಹರೂರವರನ್ನು ಪ್ರಾರ್ಥಿಸಿದರೆಂದೂ, ನೆಹರೂರವರು ಅವರಿಗೆ ರಕ್ಷಣೆಯ ಭರವಸೆ ನೀಡಿರುವರೆಂದೂ ಹೇಳಲಾಗಿದೆ. ನಿಜಾಮರು ತಮ್ಮ ಸಿಂಹಾಸನವನ್ನು ಉಳಿಸಿಕೊಳ್ಳುವುದಕ್ಕೆ ನೆಹರೂರವರ ಸಹಾಯ ಪಡೆಯಲು ಅಪೇಕ್ಷಿಸಿದರೆಂದೂ ಹೇಳಲಾಗಿದೆ

॥ ಶ್ರೀ ॥

ಗಾಯತ್ರಿ ಟಾಕೀಸ್

[ಚಾಮುಂಡಿ ರೋಡ್]

ತಾ॥ ೧೮-೬-೪೮ ರಿಂದ

ಒಂದು ವಾರ ಮಾತ್ರ

ಪ್ರತಿ ದಿನ ೩ ಆಟಗಳು

ಸಿಂದ್ ಬಾದ್ ದಿ ಸೈಲರ್

(SINBAD THE SAILOR)

ವರ್ಣ ರಂಜಿತ ಚಿತ್ರ

ರೇಷನಿಂಗ್ ಅಧಿಕಾರಿಯವರ ಕಛೇರಿ,

ಮೈಸೂರ್ ಸಿಟಿ, ತಾ॥ ೧೧-೬-೧೯೪೮

ನೋಟಿಫಿಕೇಷನ್

ನಂ R1-121-47.8

ತಾ॥ 11-6-1948

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಮಿಲಿಟರಿ ನೌಕರರುಗಳ, ... ಭತ್ತದ ... ... ಕೊಡಬೇಕಾಗಿ ... ... ಕಛೇರಿಯಿಂದ ... ... ಜೂನ್ ೩೦ ನೇ ತಾರೀಖಿನವರೆಗೆ ... ... ತಿಳಿಸಲಾಗಿದೆ.

ಎಂ. ವೆಂಕಟೇಶ್ವರಲು,

ಇಛಾರ್ಜ್ ರೇಷನಿಂಗ್ ಅಧಿಕಾರಿ,

ಮೈಸೂರು ಸಿಟಿ

ರಾಜಕಮಲ್,

ಮೈಸೂರು.

ತಾ॥ **18-6-48** ರಿಂದ

ಎರಡನೇ ವಾರ

ಮ್ಯಾಟಿನಿ ೩-೧೫ ಕ್ಕೆ ೧ ನೇ ಆಟ ೬-೩೦ ೨ ನೇ ಆಟ ೯-೪೫ ಕ್ಕೆ

ವಾಹಿನಿಯ ವರ

ಭಕ್ತ ಪೋತನ

(ತೆಲುಗು)

ಭೂಮಿಕೆ:-ನಾಗಯ್ಯ, ಗೌರಿನಾಥ ಶಾಸ್ತ್ರಿ ಮಾಲತಿ, ಸೂರ್ಯಕುಮಾರಿ ಮುಂತಾದವರು

Morning Shows

From 18-6-48

for 4 days

Charles Dickens'

NICHOLAS NICKLEBY

With - Cedric Hardwicke and a ten-star Cast

Edited printed and published by A. R. Nagarajan at the Sadhvi Press D. Subbaiah Road Mysore

ಕನ್ನಡ ರಂಗಭೂಮಿಯ

ಶತಮಾನೋತ್ಸವ

ಸ್ಮಾರಕ ಗ್ರಂಥ

ಕ್ರೌನ್ ೩ ಆಕಾರ; ೩೫೦ ಪುಟಗಳು

ಪ್ರಖ್ಯಾತ ಸಾಹಿತಿಗಳ, ಕಲಾಕೋವಿದರ ಅತ್ಯುತ್ತಮ ಲೇಖನ, ವರ್ಣರಂಜಿತ ಚಿತ್ರಗಳಿಂದ ಕೂಡಿ, ಅಚ್ಚು ಬಿಳಿ ಕಾಗದದಲ್ಲಿ ಅಚ್ಚಾಗಿರುವ ಅಮೂಲ್ಯ ಗ್ರಂಥ

ಅವುಗಳ ಜೊತೆಯಲ್ಲಿ ನಿಮ್ಮ ಸಾಹಿತ್ಯದ ಕಡೆಗೆ ಆದರ ... ... ಕೊಟ್ಟು ವ್ಯಾಪಾರವನ್ನು ವೃದ್ಧಿಗೊಳಿಸಿಕೊಳ್ಳಿ.

ವಿವರಗಳಿಗೆ:

ಶಾಂತಿ ಏಜೆನ್ಸೀಸ್,

ಸ ... ಪ್ರಚಾರಕರು, ಮತ್ತು ಪ್ರತಿನಿಧಿಗಳು,

ದಿವಾನ್ ರಸ್ತೆ, ಮೈಸೂರು

ಉಚಿತ ಬಹುಮಾನ!

ತಾರೀಖು ೧೭-೬-೪೮ ರ ಬೆಳಗ್ಗೆ ಸುಮಾರು ೧೧ ಘಂಟೆಯಲ್ಲಿ ... ... ಎಂದು ... ... ರೀತಿಯಲ್ಲಿರುವ ... ... ಸ್ನಾನ ಮಾಡಿಕೊಟ್ಟವರಿಗಾಗಲೀ ಅಥವಾ ... ... ಹೇಳಿದವರಿಗಾಗಲಿ ಉಚಿತ ಬಹುಮಾನ ಕೊಡಲಾಗುತ್ತೆ.

ಕೆ. ತಮ್ಮಣ್ಣ ಗೌಡ,

ಎಕ್ಸೈಜ್ ಕಂಟ್ರಾಕ್ಟರ್,

ಆಯುರ್ವೇದಿಕ್ ಆಸ್ಪತ್ರೆ ಪಕ್ಕ, ಮೈಸೂರು.

Mysore City Municipality

NOTICE

Sealed Tenders will be received up to 4 P. M on 21--6--48 by the Municipal Engineer for constructing model House for sweepers at Jalapuri and DoddaHolageri Each tender must be accompanied with a challan for having remitted Rs. 55/- in Municipal Treasury or by cheque as earnest money. For Full particulars please see the office notice board

V. K. Mukundan,

Municipal Engineer

SHARADAVILAS COLLEGE, MYSORE

The College re-opens on 24-6-1948, Applications for seats in the Junior Intermediate Class with S S L C marks cards and transfer certificates and registration fee of Rs. 1 which will not be refunded on any account are received by the office till 26-6-48. Students of all communities are admitted.

PRINCIPAL.

UNIVERSITY OF MYSORE

No. A1/47-48. Office of the University of My[sore]

MYSORE,

Dated 16th June 1948.

NOTIFICATION.

In connection with the starting of the Intermediate Colleges from 24-6-1948, applica[tions] are invited for Lecturers' posts from Mysorean [men] and women candidates possessing minimum qu[alifi]cations for entry into University Service. [The] appointments will be made pending advertisemen[t of] the posts and selection of candidates according to rules of recruitment. The minimum pay is Rs. [...] per mensem. Candidates desirous of applying for posts may submit their applications in the follow[ing] form so as to reach the Registrar, Universit[y of] Mysore, Mysore, on or before 24th June 1948. [The] cover may be superscribed "Application for App[oint]ment,-Lecturer in ... ..."

The minimum qualifications prescribed for te[ach]ing posts in the University are :—

B.A. or B.Sc. First Class ; OR

B.A. (Hons), or B.Sc. (Hons) Second Class; M.A. or M.Sc.

FORM OF APPLICATION.

1. Name in full.
2. Qualifications :
   (Here enter degree, class, year of pas[sing], Register No. and the University [from] which the degree was taken.)
3. Subject taken for the degree.
4. Whether Mysorean by birth or domicile.
5. Department of Teaching in which the po[st is] sought; namely, English, Kannada, et[c.]
6. Postal address, to which further comm[uni]cations are to be sent.
8. Age and Date of birth.

D. S. GORDO[N]

Registrar,

University of My[sore]

ಮೈಸೂರು ಸ್ಟೇಟ್ ರೈಲ್ವೆ

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಛೇರಿ, ಮೈಸೂರು.

ನೋಟಿಫಿಕೇಷನ್

ನಂ ... ೧೬-೪೮

ಮೈಸೂರು ಸಿಟಿ ರೈಲ್ವೆ ನಿಲ್ದಾಣದ ಆವರಣದಲ್ಲಿ ಬೇಕಬಹುದಾದ ... ದಾರ್ಥಗಳನ್ನು ತೆಗೆದು ಹಾಕಿ ಸ್ವಚ್ಛವಾಗಿರಿಸಲು, "ಮೈಸೂರು ರೈಲ್ವೆ ನಿ[ಲ್ದಾಣದ] ಸ್ಯಾನಿಟರಿ ಕಂಟ್ರಾಕ್ಟಿನ ಟೆಂಡರು" ಎಂದು ಅದರ ಮೇಲೆ ನಮೂದಾಗಿರುವ ಟೆಂಡರುಗಳನ್ನು ೧೯೪೮ ನೇ ಜೂನ್ ಮಾಹೆ ೨೮ ನೇ ತಾ॥ ಶನಿವಾ[ರ] ಮಧ್ಯಾಹ್ನ ೩ ಗಂಟೆಯವರೆಗೆ ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಸೂಪರಿಂಟೆಂಡೆಂಟರವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಕಂಟ್ರಾಕ್ಟ[ರು]ದು ತಮ್ಮ ಕಂಟ್ರಾಕ್ಟು ಅವಧಿಯಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಆವರಣ... ... ಪ್ಲಾಟ್‌ಫಾರಂಗಳಲ್ಲಿಯೂ ... ... ರೈಲ್ವೆ ಕ್ವಾರ್ಟರುಗಳಲ್ಲಿಯೂ ಮತ್ತು ಮುಂದೆ ಪ್ರಕಟಿಸಬಹುದಾದ ... ... ಬೇಕಾಗಿರುವ ಕಚಡಾಗಳನ್ನು ಪ್ರತಿ ದಿನವೂ ಬೆಳಗ್ಗೆ ಮತ್ತು ಸಂ[ಜೆ] ... ... ಒಪ್ಪಿಕೊಳ್ಳಬೇಕು. ಈ ಕೆಲಸಕ್ಕಾಗಿ ಕಂಟ್ರಾಕ್ಟದಾರರು ತಮ್ಮ ವೆಚ್ಚದಲ್ಲಿ ಎರಡೆತ್ತಿನ ಗಾಡಿಯನ್ನು ಇಟ್ಟುಕೊಳ್ಳಬೇಕು.

ಪ್ರತಿ ಟೆಂಡರಿನೊಡನೆಯೂ ಮೈಸೂರಿನಲ್ಲಿರುವ ಚೀಫ್ ಅಕೌಂಟ[ೆಂಟ್‌ರವರ] ... ರೂ. ಠೇವಣಿ ಹಣವನ್ನು ಪಾವತಿ ಮಾಡಿ ಅದರ ರಶೀತಿಯನ್ನು ಲಗತ್ತಿಸ[ಬೇಕು].

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರು ಟೆಂಡರುಗಳನ್ನು ಸ್ವೀಕರಿ[ಸು]ವುದಕ್ಕಾಗಲಿ ತಿರಸ್ಕರಿಸುವುದಕ್ಕಾಗಲಿ ಅಥವಾ ಹೊಸದಾಗಿ ಟೆಂಡರುಗಳನ್ನು ಕರೆಯು[ವುದ]ಕ್ಕಾಗಲಿ ಹಕ್ಕುಳ್ಳವರಾಗಿರುತ್ತಾರೆ. ಟೆಂಡರು ಅಂಗೀಕೃತವಾದ ಕೂಡಲೇ ಟೆಂಡ[ರುದಾ]ರರು ಸ್ಟಾಂಪ್ ಅಗ್ರಿಮೆಂಟನ್ನು ಬರೆದು ಕೊಡಬೇಕು. ೧೯೪೮ ನೇ ಜುಲೈ ... ತಾರೀಖಿನಿಂದ ಒಂದು ವರ್ಷಕಾಲ ಕಂಟ್ರಾಕ್ಟು ಜಾರಿಯಲ್ಲಿರುವುದು.

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಛೇರಿ, ಮೈಸೂರು, ೧೧ನೇ ಜೂನ್ ...

ಓ. ಆರ್. ಕೃಷ್ಣಸ್ವಾಮಿ,

ಆಕ್ಟಿಂಗ್ ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟ್

ಫೋ॥ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೨೦-೬-೪೮ [ಸಂಚಿಕೆ ೪೮

ಹೈದ್ರಾಬಾದಿನಲ್ಲಿ ಪ್ರೊ॥ ಭನ್ಸಾಲಿ ಸತ್ಯಾಗ್ರಹ

ಗಡಿನಾಡು ಗಾಂಧಿಯವರ ದಸ್ತಗಿರಿ ಬಗ್ಗೆ ಖಂಡನೆ

ಖಾನ್ ಅಬ್ದುಲ್ ಗಫಾರ್ ಖಾನರನ್ನು ...ನಾಡು ಸರ್ಕಾರದವರು ದಸ್ತಗಿರಿ ಮಾ...ಕ್ಷೆಗೆ ಒಳಪಡಿಸಿರುವುದನ್ನು ಖಿಲ-...ಸ್ತಾನ್ ಪ್ರಜಾಪಕ್ಷದ ಕಾರ್ಯದರ್ಶಿಗ...ದ ಜನಾಬ್ ಜಿ ಎಂ ಸಯುದ್‌ರವರು ...ಸಿ, ಗಡಿನಾಡು ಗಾಂಧಿಯವರು ಪಾ...ಸ್ತಾನದ ಮೇಲೆ ಪಿತೂರಿ ನಡೆಸುತ್ತಿದ್ದ...ದು ಸುಳ್ಳೆಂದೂ, ಅವರು ಪಾಕೀಸ್ತಾ...ವಿಧೇಯರಾಗಿದ್ದಾರೆಂದೂ ತಿಳಿಸಿರು...ರೆ

ಸೈಯ್ಯದ್‌ರವರ ದಸ್ತಗಿರಿ

ಡಾ॥ ಜಿ ಎಂ ಸೈಯುದ್‌ರವರನ್ನು ನಿನ್ನೆ ...ಗಿರಿ ಮಾಡಿ ೩ ತಿಂಗಳ ಕಾಲ ಬಂಧನ...ಡಲಾಗಿದೆ

...ಯ ಸಾಲವನ್ನು ತೀರಿಸಲು ವೇಶ್ಯಾ ವೃತ್ತಿಗೆ ಇಳಿಯ ಬೇಕಾಯಿತು

ಬೊಂಬಾಯಿನ ಉಜಮಲಾಲ್ ಕೇಶ...ಲಾಲ್ ಪರೀಕ್ ಎಂಬುವನು ತಾರಾಬಾ...ಎಂಬಾಕೆಯ ಗಂಡನಿಗೆ ಸಾಲ ಕೊಟ್ಟ...ನೆಂದೂ, ಆತನು ಅದನ್ನು ತೀರಿಸದೆ ...ಹೋದುದರಿಂದ ಆಕೆಯನ್ನು ...ನಲ್ ನಿಂದ ಬೊಂಬಾಯಿಗೆ ಕರೆದುಕೊಂ...ಬಂದು, ಆಕೆಯು ವೇಶ್ಯಾ ವೃತ್ತಿ ನಡೆ...ಅವರ ಹಣದಿಂದ ಸಾಲವನ್ನು ತೀರಿಸು...ಕೆ ಬಲಾತ್ಕರಿಸಿದನೆಂದೂ ಆತನನ್ನು ...ಲೀಸರು ದಸ್ತಗಿರಿ ಮಾಡಿ, ಮೊಕದ್ದ...ಹೂಡಿದ್ದಾರೆ. ಈ ಕೃತ್ಯವು ಅತಿ ...ನಕರವಾದುದೆಂದು ತಿಳಿಸಿ ಅವನನ್ನು ...ಮೀನಿನ ಮೇಲೆ ಬಿಡಲು ನ್ಯಾಯಾಧೀ...ನಿರಾಕರಿಸಿದ್ದಾರೆ

...ರಾರು ಪತ್ನಿಯರನ್ನು ಪಡೆಯಲು ಅಧಿಕಾರವುಳ್ಳವನು

...ಮರೂ ಎಂಬ ಜನಾಂಗದ ನಾಯ...ಗೆ ಈಗ ನೂರಾರು ಪತ್ನಿಯರಿರುವರೆಂ...ಹೇಳಲಾಗಿದೆ. ಆತನು ಸ್ವಾಂತ...ಘೋಷಣೆಯಾದುದರಿಂದ, ತನ್ನ ಜನಾಂಗದ ...ಗೆ ಹುಟ್ಟುವ ಮೊದಲನೆ ಹೆಣ್ಣು ಮಕ್ಕ...ಳನ್ನು ತನ್ನ ಹೆಂಡತಿಯರನ್ನಾಗಿ ಮಾ...ಡಿಕೊಳ್ಳಲು ಆತನಿಗೆ ಅಧಿಕಾರವಿದೆಯೆಂ...ದು ಹೇಳಲಾಗಿದೆ. ಆತನಿಗೆ ಅವರು ಬೇ...ಡವಾದರೆ, ತನ್ನ ಮಕ್ಕಳಿಗೋ ಅಥವಾ ಸೇ...ವಕರಿಗೋ ಅವರನ್ನು ಕೊಡಬಹುದೆಂದೂ ...ತಿಳಿಯಲಾಗಿದೆ. ತನ್ನ ಹಿಂದಿನ ಅನೇಕ ...ವರ್ಷಗಳಲ್ಲಿ ೧೧೦ ಜನ ಪತ್ನಿಯರ ...೪೪ ಜನರು ಅವನ ಹೆಂಡತಿಯರಾ...ದ್ದಾರೆ

ಅಮೆರಿಕದಲ್ಲಿ ಭಾರತ ಪ್ರತಿನಿಧಿ

ಟೋಕಿಯೋದಲ್ಲಿ ಭಾರತದ ಲಿಯೋ...ನ್ ಅಧಿಕಾರಿಯಾಗಿರುವ ಶ್ರೀ ಜನರಲ್ ...ಮಯ್ಯರನ್ನು ಅಮೇರಿಕದಲ್ಲಿ ಭಾರತ ...ಪ್ರತಿನಿಧಿಯಾಗಿ ನೇಮಿಸಲಾಗಿದೆ.

ಮಹಾಭಾರತ

...ರಾಜಧಾನಿಯ ರಮಾವಿಲಾಸ ರಸ್ತೆಯ ...ನ ಅಹೋಬಲ ಮಠದಲ್ಲಿ ನಾಳೆಯಿಂ...ದ ವಿ॥ ಹೆಚ್. ಟಿ. ಶಾಮಣ್ಣನವರಿಂದ ...ನ ಮಹಾಭಾರತವು ಹರಿಕಥಾ ರೂಪ...ದಲ್ಲಿ ನಡೆಯುವುದು

ರಾಜಗೋಪಾಲಾಚಾರಿಯವರು ದೆಹಲಿಗೆ

ಈ ದಿನ ಮಧ್ಯಾಹ್ನ ನಾಲ್ಕು ಘಂಟೆಗೆ ಶ್ರೀ ಸಿ. ರಾಜಗೋಪಾಲಾಚಾರಿಯವರು ದೆಹಲಿಗೆ ವಿಮಾನದಲ್ಲಿ ಆಗಮಿಸುವರು. ಪಾಲಂ ವಿಮಾನ ನಿಲ್ದಾಣದಲ್ಲಿ ಅವರನ್ನು ಭಾರತದ ಪ್ರಧಾನಿ ಪಂಡಿತ ನೆಹರೂ ಗೌ॥ ಜನರಲ್ಲರ ಪ್ರತಿನಿಧಿಗಳು, ಇತರ ಮಂತ್ರಿಗಳು ಮತ್ತು ಸರ್ಕಾರಿ ಉನ್ನತ ಅಧಿಕಾರಿಗಳು ಸ್ವಾಗತಿಸುವರು.

ಅನಂತರ ಶ್ರೀ ರಾಜಗೋಪಾಲಾಚಾರಿಯವರು ಪ್ರಭುತ್ವ ಭವನಕ್ಕೆ ತೆರಳುವರು. ಅಲ್ಲಿ ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್ನರು ಅವರಿಗೆ ಸುಸ್ವಾಗತವನ್ನೀಯುವರು.

ನಾಳೆ ಬೆಳಗ್ಗೆ ೧೦ ೩೦ ಗಂಟೆಗೆ ಶ್ರೀ ಸಿ. ಆರ್ ರವರು ಗೌರ್ನರ್ ಜನರಲ್ ಪದವಿಯನ್ನು ಪ್ರಮಾಣ ಪೂರ್ವಕವಾಗಿ ಸ್ವೀಕರಿಸುವರು. ಈ ಸಮಾರಂಭದ ಕಾರ್ಯಕ್ರಮಗಳನ್ನು ನಾಳೆ ಬೆಳಗ್ಗೆ ೧೦-೧೫ ರಿಂದ ೧೧ ಗಂಟೆಯ ವರೆಗೆ ಅಖಿಲ ಭಾರತ ರೇಡಿಯೋವಿನ ಎಲ್ಲಾ ಕೇಂದ್ರಗಳಿಂದ ಬಿತ್ತರ ಮಾಡಲಾಗುವುದು.

ವಿಶ್ವವಿದ್ಯಾಲಯ ಪುನರ್ರಚಿಸಲು ಸಿ. ವಿ. ರಾಮನ್‌ರವರಿಗೆ ಆಹ್ವಾನ

ರಂಗೂನ್ ವಿಶ್ವವಿದ್ಯಾಲಯದ ವೈಜ್ಞಾನಿಕ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಿ, ಅಭಿವೃದ್ಧಿಪಡಿಸುವ ವಿಚಾರವನ್ನು ಪರಿಶೀಲಿಸಲು ಸರ್ ಸಿ ವಿ ರಾಮನ್‌ರವರನ್ನು ಆಹ್ವಾನಿಸಲಾಗಿದೆ

ಭಾರತ ಮುಸ್ಲಿಮರಿಂದ ನಿಜಾಮರ ನೀತಿಯ ಖಂಡನೆ

ಭಾರತದ ಹಲವು ಪ್ರಮುಖ ಮುಸ್ಲಿಂ ನಾಯಕರುಗಳು ಹೇಳಿಕೆಯೊಂದನ್ನಿತ್ತು ಹೈದರಾಬಾದಿನ ನಿಜಾಮರು ಭಾರತ ಸರಕಾರದ ಸಹಕಾರ ಹಸ್ತವನ್ನು ಕಳೆದುಕೊಂಡಿರುವುದರಿಂದ ಅವರ ಭವಿಷ್ಯವು ಅಪಾಯಕರವಾಗಿದೆಯೆಂದು ತಿಳಿಸಿದ್ದಾರೆ. ಕೆಲವು ದಿವಸಗಳ ಹಿಂದೆ ಮೇಲ್ಕಂಡ ನಾಯಕರುಗಳಿಗೆ ನಿಜಾಮರು ಭೇಟಿಯನ್ನು ನಿರಾಕರಿಸಿದುದೂ, ಹೈದರಾಬಾದಿನಲ್ಲಿ ರಜಾಕರರ ಹಾವಳಿಯು ಹೆಚ್ಚುತ್ತಿರುವುದೂ ಅಲ್ಲಿ ನಿರಂತರ ಕಾಡಳಿತವು ತಾಂಡವಾಡುತ್ತಿರುವುದನ್ನು ಸೂಚಿಸುತ್ತವೆ-ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮಂತ್ರಿಗಳ ಗೌರವಾರ್ಥವಾಗಿ ಪ್ರದರ್ಶನಗಳು ಕೂಡದು

ಸರ್ಕಾರದ ಪತ್ರಿಕಾ ಪ್ರಕಟಣೆ

ಸ್ವಂ. ಸು. ಫೋ॥] ಬೆಂಗಳೂರು ೨೦

ಸರ್ಕಾರದವರು ನಿನ್ನೆ ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಇನ್ನು ಮುಂದೆ ಸಾರ್ವಜನಿಕರು ಸಚಿವರುಗಳ ಗೌರವಾರ್ಥವಾಗಿ ಪ್ರದರ್ಶನಗಳನ್ನು ನಡೆಸುವುದು, ಸತ್ಕಾರಕೂಟಗಳನ್ನೇರ್ಪಡಿಸುವುದು, ಬಿನ್ನವತ್ತಳೆ ಮತ್ತು ಹಾರ ತುರಾಯಿಗಳನ್ನು ಅರ್ಪಿಸುವುದು ಮುಂತಾದ ಕಾರ್ಯಕ್ರಮಗಳಿಂದ ಸರ್ಕಾರಿ ಕೆಲಸಗಳಿಗೆ ಬಾಧಕವಾಗುವ ಸಂಭವವಿರುವುದೆಂದು ತಿಳಿಸಿ ಅವುಗಳನ್ನು ನಿಷೇಧಿಸಿದ್ದಾರೆ

* ಸಮಾಜವಾದಿ ನಾಯಕರಾದ ಶ್ರೀಗಳು ಪ್ರಾಣೇಶರಾವ್, ಕರ್ನಾಡ್ ಮತ್ತು ಟಿ. ಎಸ್. ಸುಬ್ಬಣ್ಣನವರುಗಳನ್ನು ನಿನ್ನೆ ದಿನ ಬಿಡುಗಡೆ ಮಾಡಲಾಯಿತು.

+ ೧೯೪೨ನೇ ಇಸವಿಯ ಸತ್ಯಾಗ್ರಹ ಸಮಯದಲ್ಲಿ ವಜಾ ಮಾಡಲ್ಪಟ್ಟಿದ್ದ ಸರ್ಕಾರಿ ಮುದ್ರಣಾಲಯದ ಮೈಸೂರು ಶಾಖೆಯಲ್ಲಿ ಮರ್ಕ್ಯೂರ್ ಆಗಿದ್ದ ಶ್ರೀ ಚನ್ನಯ್ಯನವರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ನಿನ್ನೆ ಸರ್ಕಾರಿ ಆಜ್ಞೆಯಾಗಿದೆ

* ಈಗ್ಗೆ ಕೆಲವು ದಿವಸಗಳ ಹಿಂದೆ ಕಳುವಾಗಿದ್ದ ಪೆಟ್ರೋಲ್ ಕೂಪನ್ನುಗಳ ಪೈಕಿ ೫೦೦೦ ಯೂನಿಟ್ಟಿನ ಕೂಪನ್ನುಗಳು ಪತ್ತೆಯಾಗಿರುವುದಾಗಿ ಗೊತ್ತಾಗಿದೆ.

ಮಹಾಭಾರತದಲ್ಲಿ ಬ್ರಿಟಿಷ್‌ಪ್ರಭುತ್ವದ ಜ್ಞಾಪಕಾರ್ಥವಾಗಿ ಲಾರ್ಡ್ ಮೌಂಟ್ ಬ್ಯಾಟನ್ನರು ಚಿನ್ನದ ಮುಲಾಮು ಹಾಕಿದ ೧೦ ಬೆಳ್ಳಿ ತಟ್ಟೆಗಳನ್ನು ಭಾರತ ಸರ್ಕಾರಕ್ಕೆ ಅರ್ಪಿಸಲಿರುವರೆಂದು ಗೊತ್ತಾಗಿದೆ.

CLOSING DATE
IS FAST APPROACHING
Do not Lose your Luck
A Rupee is nothing when it
BRINGS
Rs 34,000
National High School
Building & Working Fund
Lottery, (SHIMOGA)
(Approved by the Govt of Mysore)
RUPEE A TICKET
Buy More & More Tickets
and help Education
Details:-
SHANTI AGENCIES.
Dewan's Road, Mysore

ಶಾಸನ ಸಭಾಧಿವೇಶನ

ಬಜೆಟ್ ಮೇಲಿನ ಚರ್ಚೆ

ಸ್ವಂ. ಸು. ಫೋ॥] ಬೆಂಗಳೂರು ೨೦

ನಿನ್ನೆಯ ದಿನ ಶಾಸನ ಸಭೆಯಲ್ಲಿ ಬಜೆಟ್ಟಿನ ಮೇಲಿನ ಚರ್ಚೆಯು ಸಂಜೆ ೬-೧೫ ಗಂಟೆಯವರೆಗೂ ನಡೆಯಿತು. ಸರ್ಕಾರದ ಪರವಾಗಿ ಸಂಬಂಧಪಟ್ಟ ಅಧಿಕಾರಿಗಳು ಚರ್ಚೆಗೆ ಉತ್ತರವಿತ್ತರು.

ಬೆಳ್ಳಾರದ ಚಿನ್ನದ ಗಣಿಯಿಂದ ಸಂಸ್ಥಾನಕ್ಕೆ ಉಂಟಾಗುವ ಪ್ರಯೋಜನ ಮತ್ತು ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳನ್ನು ವಿವರಿಸಿ ಅದರಿಂದ ಸಂಸ್ಥಾನಕ್ಕೆ ನಷ್ಟವುಂಟಾಗುವುದಿಲ್ಲವೆಂದು ತಿಳಿಸಲಾಯಿತು. ಪೋಲೀಸ್ ಮತ್ತು ರೈಲ್ವೆ ಶಾಖೆಗಳ ಬಗ್ಗೆ ಬಂದ ಆಕ್ಷೇಪಣೆಗಳಿಗೆ ಶ್ರೀ ಟಿ. ಮರಿಯಪ್ಪನವರು ಉತ್ತರ ಕೊಟ್ಟು ಪೋಲೀಸರ ಬಗ್ಗೆ ಸಾರ್ವಜನಿಕರು ನಂಬಿಕೆ ಮತ್ತು ವಿಶ್ವಾಸಗಳಿಂದ ಕೂಡಿರಬೇಕೆಂದು ಸೂಚಿಸಿದರು. ರೈಲ್ವೆ ವ್ಯವಸ್ಥೆಯನ್ನು ಉತ್ತಮಪಡಿಸಲು ಒಂದು ಯೋಜನೆಯನ್ನು ತಯಾರಿಸಲಾಗಿದೆಯೆಂದೂ, ಇಂಜನ್ನುಗಳ ಅಭಾವದಿಂದ ಸ್ವಲ್ಪ ತೊಂದರೆಯಾಗಿದೆಯೆಂದೂ ಅವರು ತಿಳಿಸಿದರು.

ಮೈಸೂರು ಸಂಸ್ಥಾನಕ್ಕೆ ತನ್ನದೇ ಆದ ವಿಮಾನ ಸರ್ವಿಸನ್ನು ತೆರೆಯಲು ಲೈಸೆನ್ಸನ್ನು ಕೇಳಿ ಯಾವುದಾದರೂ ಒಂದು ಲೈನನ್ನು ಕೊಡಬೇಕೆಂದು ಭಾರತ ಸರ್ಕಾರವನ್ನು ಪ್ರಾರ್ಥಿಸಲಾಗಿದೆಯೆಂದೂ ತಿಳಿಸಲಾಯಿತು.

ಹಣಕಾಸಿನ ಸಚಿವರಾದ ಶ್ರೀ ದಾಸಪ್ಪನವರು ಮಾತನಾಡಿ ಈ ವರ್ಷದ ಇಳಿತಾಯದ ಬಜೆಟ್ಟಿಗಾಗಿ ರಿಜರ್ವ್ ಫಂಡಿನಿಂದ ಮೊಬಲಗನ್ನು ತೆಗೆದುಕೊಂಡಿರುವ ವಿಚಾರದಲ್ಲಿ ಸಮಾಧಾನ ಹೇಳಿದರು. ಈ ಬಗ್ಗೆ ಆಕ್ಷೇಪಣೆಗೆ ಕಾರಣವಿಲ್ಲವೆಂದೂ, ಇದು ಎಲ್ಲಾ ಕಡೆಯೂ ರೂಢಿಯಲ್ಲಿರುವ ಅಂಶವಾಗಿದೆಯೆಂದೂ ತಿಳಿಸಿದರು.

ಬಿಸಿಲಿನಿಂದ ೧೦೦ ಜನರ ಮರಣ

ಕಾಶಿ ಜಿಲ್ಲೆಯಲ್ಲಿ ಕಳೆದ ವಾರ ಬಿಸಿಲಿನ ಕಾವು ವಿಪರೀತವಾಗಿ, ಅದರಿಂದ ೧೦೦ ಜನರು ಮರಣ ಹೊಂದಿದರೆಂದು ವರದಿಯಾಗಿದೆ

ಭನ್ಸಾಲಿಯವರು ನಿಜಾಂ ಗಡಿ ದಾಟಿದರು

ಹೈದರಾಬಾದಿನ ತೆಲಿಂಗಣಾ ಜಿಲ್ಲೆಯಲ್ಲಿ ಸ್ತ್ರೀಯರ ಮಾನಾಪಹರಣವಾಗುತ್ತಿರುವುದನ್ನು ನಿಜಾಂ ಸರ್ಕಾರವು ತಡೆಗಟ್ಟದಿದ್ದಲ್ಲಿ ತಾವು ಸಂಸ್ಥಾನವನ್ನು ಪ್ರವೇಶಿಸಿ ಅಲ್ಲಿ ಸತ್ಯಾಗ್ರಹ ಹೂಡುವುದಾಗಿ ಪ್ರೊ॥ ಭನ್ಸಾಲಿಯವರು ಸೂಚಿಸಿ ಎಚ್ಚರಿಕೆ ಕೊಟ್ಟಿದ್ದರು. ನಿಜಾಂ ಸರ್ಕಾರವು ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲವಾದುದರಿಂದ ಶ್ರೀ ಭನ್ಸಾಲಿಯವರು ಮೊನ್ನೆ ದಿನ ಹೈದರಾಬಾದ್ ಗಡಿಯನ್ನು ಪ್ರವೇಶಿಸಿ ಭೀಮಾವರಂ ಎಂಬ ಗ್ರಾಮವನ್ನು ತಲುಪಿದರು. ಪ್ರೊ॥ ಭನ್ಸಾಲಿಯವರೊಡನೆ ಇತರ ೧೪ ಮಂದಿ ಶಿಷ್ಯರು ಅವರು ಹೂಡಲಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಹೊರಟಿರುವರು.

ಸಾರ್ವಜನಿಕ ವಿದ್ಯಾರ್ಥಿ ನಿಲಯ

ರಾಜಧಾನಿಯಲ್ಲಿನ ಮೇಲ್ಕಂಡ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿಗಳಾದ ಶ್ರೀಗಳು ಬಿ ಕೆಂಪೇಗೌಡ ಮತ್ತು ಎಸ್ ಎಂ ಕೆಂಡಗಣ್ಣಸ್ವಾಮಿಗಳು ವಿದ್ಯಾ ಸಚಿವರಾದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರನ್ನು ಮೊನ್ನೆ ಭೇಟಿ ಮಾಡಿ ನಿಲಯದ ಗ್ರಾಂಟಿನ ಬಗ್ಗೆ ಮಾತುಕತೆ ನಡೆಸಿದರೆಂದೂ, ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಸಚಿವರು ಭರವಸೆ ಕೊಟ್ಟಿದ್ದಲ್ಲದೆ ... ಸಹಾಯವನ್ನು ನೀಡುವುದಾಗಿ ... ತಿಳಿಸಿದರೆಂದು ಹೇಳಲಾಗಿದೆ

ವಾರ ಭವಿಷ್ಯ

ತಾ|| ೨೦-೬-೪೮ರಿಂದ ೨೬-೬-೪೮ರ ವರೆಗೆ

ಮೇಷ— ಹಣಕಾಸಿನ ಬಿಕ್ಕಟ್ಟು [illegible] ಧಾರ್ಮಿಕ ಕಾರ್ಯಗಳಿಗಾಗಿ ವೆಚ್ಚ ಸಂಭವಿಸುವುದು, ಅಷ್ಟೇಷ್ಟರಿಂದ ಮನ್ನಣೆ ದೊರೆಯುವುದು, ತಾ|| ೨೧, ೨೩ ಧನಾಗಮ, ಮಿತ್ರ ಭೇಟಿ

ವೃಷಭ— ಈ ವಾರ ನೀವು ಅನೇಕ ಕಷ್ಟಗಳನ್ನು ಎದುರಿಸಬೇಕಾಗುವುದು, ಪ್ರವಾಸದಿಂದ [illegible] ಸರಕಾರಿ ವ್ಯವಹಾರಗಳಲ್ಲಿ ಅಧಿಕಾರಿಗಳಿಂದ ತಿರಸ್ಕಾರ, ತಾ|| ೨೨, ೨೪ ದಂಡು ವೆಚ್ಚ, ದ ವಾರ್ತೆ.

ಮಿಥುನ— ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಚಿಂತೆಯಿಂದ ನರಳಬೇಕಾಗುವುದು, ಆರ್ಥಿಕ [illegible] ತಾ|| ೨೧, ೨೪ [illegible] ವಾರ್ತೆ, ಸ್ವಲ್ಪ ಶಾಂತಿ

ಕಟಕ— ಲಾಟರಿ ಸಟ್ಟಾಗಳಿಂದ ಅಪೂರ್ವ ಲಾಭ, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು, ಬಂಧುಬಳಗದವರ ಆದರಾತಿಥ್ಯವು ಹೆಚ್ಚುವುದು, ತಾ|| ೨೩, ೨೫ ಶುಭ ಮಿತ್ರ ದರ್ಶನ

ಸಿಂಹ— ಯತ್ನಿಸಿದ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು, ಪ್ರವಾಸದಿಂದ ತೊಂದರೆ ಸಂಭವಿಸಬಹುದು, ವೃಥಾ ನೆರೆಹೊರೆಯವರ ನಿಂದೆಗೊಳಗಾಗುವಿರಿ, ತಾ|| ೨೨, ೨೫ ಸ್ವಲ್ಪ ಶಾಂತಿ, ವೃಥಾ ವಾದ

ಕನ್ಯಾ— ಆರೋಗ್ಯ ಚೆನ್ನಾಗಿಲ್ಲ, ಯತ್ನಿಸಿದ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು, ಆರ್ಥಿಕ ಮುಗ್ಗಟ್ಟು ಹೆಚ್ಚುವುದು, ಮನೆಯಲ್ಲಿ ಮಕ್ಕಳಿಗೆ ಅನಾರೋಗ್ಯವುಂಟಾಗಿ ವೈದ್ಯರಿಗೆ ವೃಥಾ ಹಣ ತೆರಬೇಕಾಗುವುದು ತಾ|| ೨೧, ೨೩ ದುಷ್ಟ ವಾರ್ತೆ, ನಷ್ಟ

ತುಲಾ— ಧನಾದಾಯ ಚೆನ್ನಾಗಿದೆ, ಆರೋಗ್ಯ ಉತ್ತಮ, ಮನೆಯಲ್ಲಿ ಶುಭ ಕಾರ್ಯಗಳು ಜರುಗುವುವು, ವ್ಯಾಪಾರಗಾರರಿಗೆ ಈ ವಾರ ಯಶಸ್ವಿಯಾಗಿದೆ, ತಾ|| ೨೨, ೨೪ ಶತ್ರು ನಾಶ, ಸಂತೋಷ ಸಮಾಚಾರ.

ವೃಶ್ಚಿಕ— ವ್ಯಾಪಾರಗಾರರಿಗೆ ಈ ವಾರ ನಿರೀಕ್ಷೆಗಿಂತ ಅಧಿಕವಾಗಿ ಲಾಭ ಸಂಭವಿಸುವುದು, ಮಾನಸಿಕ ವ್ಯಥೆಗಳಿಲ್ಲ. [illegible] ಯವಾಗುವುವು, ಆರೋಗ್ಯ ಚೆನ್ನಾಗಿದೆ, ತಾ|| ೨೪, ೨೫ ಅಧಿಕ ಲಾಭ ಶುಭ ವಾರ್ತೆ

ಧನು— ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಈ ವಾರ ಯುಕ್ತಕರವಾಗಿದೆ, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯಭೇರಿ ಹೊಡೆಯುವಿರಿ, ವೆಚ್ಚಕ್ಕೆ ಎರಡರಷ್ಟು ಆದಾಯವಿರುವುದು, ತಾ|| ೨೫, ೨೬ ಸುಖ ದರ್ಶನ, ಸುಖ ಭೋಜನ

ಮಕರ— ಮನೆಯಲ್ಲಿ ಸಂಶಯ ವಾತಾವರಣವು ಹೆಚ್ಚುವುದು, ಆರ್ಥಿಕ ಮುಗ್ಗಟ್ಟು ಹೆಚ್ಚಿ ಬಗೆಹರಿಸಲಾರದ ಸಮಸ್ಯೆಯಾಗುವುದು, ವೃಥಾ ಜನ ನಿಂದೆಗೆ ಒಳಗಾಗುವಿರಿ, ತಾ|| ೨೨, ೨೫ ಕಲಹ, ದೇಹ [illegible]

ಕುಂಭ— ಮಿತ್ರರೇ ಗೋಮುಖ [illegible] ಷ್ಟಗಳಂತೆ ವರ್ತಿಸುವರು ಯತ್ನಿಸಿದ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು, [illegible] ಗಳ ಕಿರುಕುಳ ಹೆಚ್ಚುವುದು, ಆರೋಗ್ಯ [illegible] ದ ನಷ್ಟ ಭಯವಿದೆ, ತಾ|| ೨೪, ೨೫ ಅನಾರೋಗ್ಯ, ಋಣ ಬಾಧೆ.

ಮೀನ— ಈ ವಾರ ನಿಮಗೆ ಸಾಧು [illegible] ದರ್ಶನವಾಗುವುದು, ಅಷ್ಟೇಷ್ಟರಿಂದ ಅಪೂರ್ವವಾದ ಮನ್ನಣೆ ದೊರೆಯುವುದು, ವ್ಯಾಪಾರಗಾರರಿಗೆ ಈ ವಾರ ಲಾಭದಾಯಕವಾಗಿದೆ ತಾ|| ೨೩, ೨೬ ಧನಾಗಮ, ಸತ್ಸಹವಾಸ

ಪ್ರಭುದೇವಾ ಟಾಕೀಸಿನಲ್ಲಿ

AT PRABHUDEV TALKIES

(ತಮಿಳು)

18-6-48 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು ಮ್ಯಾಟಿನಿ 3 1 ನೇ ಆಟ 6-30, 2 ನೇ ಆಟ 10

ಪಾತ್ರ — ಎಂ. ಕೆ. ರಾಧಾ, ಕನ್ನಾಂಬ, ಸುಶೀಲಾ, ಟಿ. ಆರ್. ರಾಮಚಂದ್ರ, ಎನ್. ನಾರಾಯಣರಾವ

WANTED

Applications for the posts of Lecturers in Physics and Chemistry are invited. The minimum qualification is a second class in B A, (HON.) in the respective subject. Salary will be fixed according to qualification and experience.

Apply to:-

The Hon Secretary,
Saradavilas College,
Mysore

SHARADAVILAS COLLEGE, MYSORE

The College re-opens on 24 6 1948. Applications for seats in the Junior Intermediate Class with S S L C marks cards and transfer certificates and registration fee of Re 1 which will not be refunded on any account are received by the office till 26-6 48. Students of all communities are admitted.

PRINCIPAL.

ನೋಟೀಸ್

ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ:- ತಾರೀಕು ೧೭-೧-೪೭ ರಿಂದ ೧೭-೬-೪೮ ರ ವರೆಗೆ ಬಿ. ಟಿ. ಚೆನ್ನಯ್ಯ ಅಂಡ್ ಕೋ., [illegible] ನಾರಾಯಣ [illegible] ಟ್ಟರು ನಾವಿಬ್ಬರೂ ಜೊತೆ ಸೇರಿ ಮೈಸೂರು ಶಿವರಾಂಪೇಟೆ ಮುಕ್ಕಾಜಿ ಛತ್ರ [illegible] ರುವ ಶಾರದಾ ಖಾದಿ ಸ್ಟೋರ್ಸ್ [illegible] ದಲ್ಲಿ ಜವಳಿ ಅಂಗಡಿಯನ್ನು ನಡೆಸಿ [illegible] ದು ಬಂದು ಮೇಲ್ಕಂಡ ತಾ|| ೧೭-೬-೪೮ ರಲ್ಲಿ ಬಿ. ಟಿ. ಚೆನ್ನಯ್ಯ ಅಂಡ್ ಕೋ., [illegible] ರಾದ ನಾವು ಶಾರದಾ ಖಾದಿ ಸ್ಟೋರ್ಸಿನಿಂದ ನಮಗೆ ಇದ್ದ ಸಂಬಂಧವನ್ನು ಬಿಟ್ಟಿದ್ದೇವೆ ಮೇಲ್ಕಂಡ ಶಾರದಾ ಖಾದಿ ಸ್ಟೋರ್ಸಿನಲ್ಲಿ [illegible] ಲೇವಾದೇವಿಗಳು, ವ್ಯವಹಾರಗಳಿಗೆ ನಾವು ಜವಾಬ್ದಾರರಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ

ಬಿ. ಟಿ. ಚೆನ್ನಯ್ಯ ಅಂಡ್ ಕೋ.
ಶಿವರಾಂಪೇಟೆ, ಮೈಸೂರು

ರಾಜಕಮಲ್,

ಮೈಸೂರು

ತಾ|| **18-6-48** ರಿಂದ

ಎರಡನೇ ವಾರ

ಮ್ಯಾಟಿನಿ [illegible] ೧ ನೇ ಆಟ [illegible] ೨ ನೇ ಆಟ [illegible]

ವಾಹಿನಿಯವರ

ಭಕ್ತ ಪೋತನ

(ತೆಲುಗು)

ಭಾಗವತ - ನಾಗಯ್ಯ, ಗೌರಿನಾಥ ಶಾಸ್ತ್ರಿ ಮಾಲತಿ, ಸೂರ್ಯಕುಮಾರಿ ಮುಂತಾದವರು

Morning Shows
From 18 6—48
for 4 days
Charles Dickens'

NICHOLAS NICKLEBY

With— Cedric Hardwicke and a ten star Cast

ಪ್ರತಿ ದಿನ ೩ ಆಟಗಳು

20—6—48 ನೇ ಭಾನುವಾರದಿಂದ

4 ದಿನಗಳು ಮಾತ್ರ

ರಿಪಬ್ಲಿಕ್‌ರವರ

ಟೈಗರ್ ವುಮನ್

[15 ಭಾಗಗಳ ಪೂರ್ಣ ಸೀರಿಯಲ್]

ಒಲಿಂಪಿಯಾ ಟಾಕೀಸ್

ಶ್ರೀ ಗಣೇಶಾ ಟಾಕೀಸ್

೧೮-೬-೪೮ ರಿಂದ ೩ ನೇ ವಾರ

ಸಿಟಿಜನ್‌ರವರ

ಜ್ಞಾನ ಸುಂದರಿ

[ತಮಿಳು]

— ಮುಖ್ಯ ಪಾತ್ರ:—

ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ [illegible] ಇವರೊಡನೆ [illegible] ಅಧಿಕಾರದ [illegible] ರೀಲನ್ನು [illegible] ರಿಂದ [illegible] ದು ವಾರ ಕಾಲ ಪ್ರದರ್ಶಿಸಲಾಗುವುದು

Edited printed and published by A. R. Nagaraj at the Sadhvi Press D. Subbaiah Road Mysore.

ಪೋ॥ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೨೧-೬-೪೮ [ಸಂಚಿಕೆ ೩೧೧

ರಾಜಾಜಿ ಇಂದು ಅಧಿಕಾರ ಸ್ವೀಕರಿಸಿದರು

ಟ್ರೇಡ್ ಯೂನಿಯನ್ ಕಾಂಗ್ರೆಸ್

ಮೈಸೂರು ೨೧

ರಾಜಧಾನಿಯ ಕಾಂಗ್ರೆಸ್ ಕಛೇರಿಯ ಲ್ಲಿ ಅಂಗಡಿ ಕೆಲಸಗಾರರು, ಕೃಷ್ಣರಾಜೇಂದ್ರ ಮಿಲ್ಸ್, ಸಿಲ್ಕ್ ಫ್ಯಾಕ್ಟರಿ, ಕಾರ್ಗ್ ಮತ್ತು ಪ್ಲೈವುಡ್ ಕಾರ್ಖಾನೆ, ವಾಣಿವಿಲಾಸ ವಾಟರ್ ವರ್ಕ್ಸ್, ಪವರ್ ಲೂಮ್ಸ್, ಮುನಿಸಿಪಲ್ ಕಟ್ಟಡಗಳು, ಹೊಟೇಲು, ಫರೋ ಅಲಾಯ್ಸ್, ಸರ್ಕಾರಿ ಛಾಪಖಾನೆ, ಗಂಧದೆಣ್ಣೆ ಕಾರ್ಖಾನೆ, ಮತ್ತು ರೇಷ್ಮೆ ಕಾರ್ಖಾನೆ ಇವೇ ಮೊದಲಾದ ಸಂಘಗಳ ಪ್ರತಿನಿಧಿಗಳ ಸಭೆಯೊಂದು ನಿನ್ನೆ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ಜರುಗಿ ಅಖಿಲ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಶಾಖೆಯೊಂದನ್ನು ಮೈಸೂರಿನಲ್ಲಿ ತೆರೆಯಬೇಕೆಂದು ನಿರ್ಧರಿಸಿತು. ಎಲ್ಲ ಕೆಲಸಗಾರರ ಸಂಘಗಳೂ ಈ ಸಂಸ್ಥೆಯ ಸದಸ್ಯರಾಗಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಕಾರ್ಯಕಾರೀ ಸಮಿತಿಯ ಅಧಿಕಾರ ವರ್ಗಕ್ಕೆ ಈ ರೀತಿ ಚುನಾವಣೆ ನಡೆಯಿತು. ಶ್ರೀಗಳಾದ ಕೆ ಪುಟ್ಟಸ್ವಾಮಿ-ಅಧ್ಯಕ್ಷರು, ಎಂ ಎಸ್ ಗುಂಡೂರಾವ್, ಎಚ್ ವಿ ಅನಂತರಾಮಯ್ಯ, ಮತ್ತು ಎಂ ವೀರಯ್ಯ-ಉಪಾಧ್ಯಕ್ಷರುಗಳು, ಹೆಚ್ ಕೆ ಕುಮಾರಸ್ವಾಮಿ ಪ್ರಧಾನ ಕಾರ್ಯದರ್ಶಿಗಳು, ಕೆ ಆರ್ ಪ್ರಸಾದ್ ಮತ್ತು ಎಲ್ ರಾಮಯ್ಯ-ಕಾರ್ಯದರ್ಶಿಗಳು, ಪಿ ಗೋಪಾಲ ಕೃಷ್ಣಶೆಟ್ಟಿ-ಖಜಾಂಚಿಗಳು, ಪ್ರತಿಯೊಂದು ಕಾರ್ಮಿಕ ಸಂಘಗಳೂ ಒಬ್ಬೊಬ್ಬ ಪ್ರತಿನಿಧಿಯನ್ನು ಕಾರ್ಯಕಾರೀ ಸಮಿತಿಗೆ ಆರಿಸಿ ಕಳುಹಿಸಬೇಕೆಂದು ಪ್ರಾರ್ಥಿಸಲಾಯಿತು. ರಾಜಾಜಿಯವರು ಭಾರತದ ಪ್ರಥಮ ಭಾರತೀಯ ಗೌ॥ ಜ॥ ಆಗಿ ಅಧಿಕಾರ ಸ್ವೀಕರಿಸುವುದಕ್ಕಾಗಿ ಅವರನ್ನು ಅಭಿನಂದಿಸುವ ನಿರ್ಣಯ ಮಾಡಲಾಯಿತು.

ರಾಜಾಜಿಯವರಿಗೆ ಅಭಿನಂದನೆ

ರಾಜಧಾನಿಯ ಮಾದರಿ ಶಾಲೆಯವರು ಇಂದು ಬೆಳಗ್ಗೆ ಪ್ರಾರ್ಥನಾ ಸಮಾರಂಭದಲ್ಲಿ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಗೌರ್ನರ್ ಜನರಲ್ಲರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಅಭಿನಂದನೆಯನ್ನು ಸಲ್ಲಿಸಿದರು.

ಧನ ಸಹಾಯ

ರಾಜಧಾನಿಯ ಇಟ್ಟಿಗೆಗೂಡಿನ ಶ್ರೀ ಎಂ ಬಿ ಸಿದ್ಧಪ್ಪನವರು ತಮ್ಮ ತಮ್ಮ ಶ್ರೀ ಎಂ ಬಿ ಮುರಿಯಪ್ಪನವರ ವಿವಾಹ ಮಹೋತ್ಸವ ಸಂದರ್ಭದಲ್ಲಿ ಅಲ್ಲಿನ ಯುವಕ ಸಂಘಕ್ಕೆ ೧೦ ರೂ ಗಳನ್ನು ಕೊಟ್ಟಿರುತ್ತಾರೆ.

ರಾಜಾಜಿಯವರಿಗೆ ಅಭಿನಂದನೆ

ಶಾಸನ ಸಭೆಯಲ್ಲಿ ನಿರ್ಣಯ

(ಸ್ವಂ ಸು. ಫೋ॥) ಬೆಂಗಳೂರು ೨೧

ಇಂದು ಗೌರ್ನರ್ ಜನರಲ್ ಪದವಿಯನ್ನು ಸ್ವೀಕರಿಸಿದ ಶ್ರೀ ಸಿ ರಾಜಗೋಪಾಲಾಚಾರ್ಯರವರನ್ನು ಅಭಿನಂದಿಸುವ ನಿರ್ಣಯವು ಈ ದಿನ ನ್ಯಾಯವಿಧಾಯಕ ಸಭೆಯಲ್ಲಿ ಅಂಗೀಕಾರವಾಯಿತು. ಜನಾಬ್ ಸಯದ್ ಅಬ್ದುಲ್ ರಹೀಮ್ ರವರು ನಿರ್ಣಯವನ್ನು ಮಂಡಿಸಿದರು. ಶ್ರೀ ಕೆ ಸಿ ರೆಡ್ಡಿಯವರು ಅದನ್ನು ಸಮರ್ಥಿಸಿದರು. ಶ್ರೀಗಳಾದ ಪದ್ಮನಾಭ, ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರು, ಎಂ ಸಿ ಲಿಂಗೇಗೌಡರು, ಶ್ರೀಮತಿ ಲಕ್ಷ್ಮಮ್ಮ ಮೊದಲಾದವರು ಭಾಷಣ ಮಾಡಿ, ರಾಜಾಜಿಯವರನ್ನು ಅಭಿನಂದಿಸಿದರು.

ಸಿ. ಆರ್. ರವರಿಂದ ಅಧಿಕಾರ ಸ್ವೀಕಾರ

ದೆಹಲಿಯಲ್ಲಿ ವೈಭವಪೂರಿತ ಸಮಾರಂಭ

ಪ್ರಥಮ ಭಾರತೀಯ ಗೌರ್ನರ್ ಜನರಲ್ ಶ್ರೀ॥ ಸಿ ರಾಜಗೋಪಾಲಾಚಾರಿಯವರು ಈ ದಿನ ಬೆಳಗ್ಗೆ ೧೦-೩೦ ಗಂಟೆಗೆ ಸರಿಯಾಗಿ ದೆಹಲಿಯ ಪ್ರಧಾನ ನ್ಯಾಯಾಧೀಶರ ಮುಂದೆ ಪ್ರಮಾಣ ವಚನವನ್ನು ತೆಗೆದುಕೊಂಡು ಗೌರ್ನರ್ ಜನರ



ಲ್ ಪದವಿಯ ಅಧಿಕಾರ ಸ್ವೀಕಾರ ಮಾಡಿದರು. ಅನಂತರ ಅವರು ಯೂನಿಯನ್ ಧ್ವಜಾರೋಹಣ ನಡೆಸಿದರು. ಈ ಸಂದರ್ಭದಲ್ಲಿ ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಅನಂತರ ಪ್ರಭುತ್ವ ಭವನದಲ್ಲಿ ನೂತನ ಗವರ್ನರ್ ಜನರಲ್ಲರು ದರ್ಬಾರ್ ನಡೆಸಿದರು.

ಈ ದಿನ ಬೆಳಗ್ಗೆ ೭-೩೦ ಗಂಟೆಗೆ ಲಾರ್ಡ್ ಮತ್ತು ಲೇಡಿ ಮೌಂಟ್ ಬ್ಯಾಟನ್ನರು ಪುತ್ರೀಸಮೇತರಾಗಿ ಪ್ರಭುತ್ವ ಭವನದಿಂದ ಮೆರವಣಿಗೆಯಲ್ಲಿ ಭವನದ ಹೆಬ್ಬಾಗಿಲಿನವರೆಗೆ ಬಂದರು. ಅನಂತರ ಅವರು ಮೋಟಾರಿನಲ್ಲಿ ಪಾಲಂ ವಿಮಾನ ನಿಲ್ದಾಣಕ್ಕೆ ತೆರಳಿದರು. ಅಲ್ಲಿ ರಾಯಲ್ ವಿಮಾನದಳದವರು ಅವರಿಗೆ ಗೌರವವನ್ನು ಸಲ್ಲಿಸಿದರು. ಶ್ರೀ ಸಿ ರಾಜಗೋಪಾಲಾಚಾರಿಯವರೂ, ಪಂಡಿತ ನೆಹರೂರವರೂ, ಇತರ ಅಧಿಕಾರಿಗಳೂ ವಿಮಾನ ನಿಲ್ದಾಣದಲ್ಲಿ ಅವರನ್ನು ಬೀಳ್ಕೊಟ್ಟರು.

ಮೌಂಟ್ ಬ್ಯಾಟನ್ನರ ಬೀಳ್ಕೊಡುವ ಸಮಾರಂಭ

ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರು ನಿನ್ನೆ ರಾತ್ರಿ ರೇಡಿಯೋ ಮೂಲಕ ಬೀಳ್ಕೊಡುವ ಭಾಷಣ ಮಾಡಿ ತಾವು ಅಧಿಕಾರ ವಹಿಸಿಕೊಳ್ಳುವುದಕ್ಕೆ ಮುಂಚೆ ಸ್ವಲ್ಪ ಮನಸ್ಸಿನಲ್ಲಿ ಶಂಕೆಯಿತ್ತೆಂದೂ, ಆದರೆ ತಮಗೆ ಭಾರತದ ಪ್ರಜೆಗಳು ನೀಡಿದ ಸ್ನೇಹ ಸೌಹಾರ್ದ ಸಹಕಾರಗಳಿಂದ ಆ ಶಂಕೆಯು ದೂರವಾಯಿತೆಂದೂ ತಿಳಿಸಿದರು. ಭಾರತವನ್ನು ಬಿಡಲು ತಮ್ಮ ಮನಸ್ಸು ಒಡಂಬಡುವುದಿಲ್ಲವೆಂದೂ, ತಾವು ಎಲ್ಲಿದ್ದರೂ ಇಲ್ಲಿನ ಸವಿ ನೆನಪುಗಳು ತಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವವೆಂದೂ ಹೇಳಿದರು. ಭಾರತದ ರಾಜ್ಯಾಂಗವು ಮಾನವ ಸ್ವಾತಂತ್ರ್ಯದ ಸಂಕೇತವಾಗಿದೆಯೆಂದೂ ಅವರು ನುಡಿದರು.

ನಿನ್ನೆ ಸಂಜೆ ದೆಹಲಿಯ ಪುರಭವನದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಈ ಸಮಾರಂಭದಲ್ಲಿ ಸುಮಾರು ೫೦ ಸಾವಿರ ಜನರು ನೆರೆದಿದ್ದರು. ಈ ಸಂದರ್ಭದಲ್ಲಿ ಬೆಳ್ಳಿಯ ಒಂದು ಪ್ರತಿಮೆಯನ್ನು ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ಅರ್ಪಿಸಲಾಯಿತು.

ನಿನ್ನೆ ಸಂಜೆ ಗಾಂಧೀ ಗ್ರಾಮದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಮೌಂಟ್ ಬ್ಯಾಟನ್ನರು ಕೊಂಚ ಕಾಲ ಹಿಂದಿಯಲ್ಲಿ ಭಾಷಣ ಮಾಡಿ ಬಿನ್ನವತ್ತಳೆಗೆ ಉತ್ತರ ಕೊಟ್ಟರು.

ನಿನ್ನೆ ಸಂಜೆ ಪ್ರಭುತ್ವ ಭವನದಲ್ಲಿ ನೂತನ ಗವರ್ನರರನ್ನು ಸ್ವಾಗತಿಸುವಾಗ ಪೂರ್ವ ವೇಷ್ಟಿ ಮೌಂಟ್ ಬ್ಯಾಟನ್ನರು ರಾಜಾಜಿಯವರ ಕೈಕುಲುಕಿ ಹಸ್ತ ಲಾಘವವಿತ್ತರು. ಈ ದೃಶ್ಯಗಳೆಲ್ಲವನ್ನೂ ಫೋಟೋ ತೆಗೆದುಕೊಳ್ಳಲಾಯಿತು.

ಬ್ರಿಟನ್ ಮತ್ತು ಭಾರತಗಳ ಸ್ನೇಹ ಸೌಹಾರ್ದದ ಕುರುಹಾಗಿ ಲಾರ್ಡ್ ಮೌಂಟ್ ಬ್ಯಾಟನ್ನರು ಬ್ರಿಟನ್ನಿನ ದೊರೆಗಳ ಪರವಾಗಿ ಭಾರತದ ಸರ್ಕಾರಕ್ಕೆ ಅರ್ಪಿಸಿದ ೧೦ ಚಿನ್ನದ ಪಾತ್ರೆಗಳು ೧೦೦೦ ಪೌಂಡುಗಳಷ್ಟು ಬೆಲೆಯಿರುವುವೆಂದು ಹೇಳಲಾಗಿದೆ. ಇದಕ್ಕೆ ಪ್ರತಿಯಾಗಿ ಪಂಡಿತ ನೆಹರೂರವರು ಅವರಿಗೆ ಒಂದು ಬೆಳ್ಳಿ ತಟ್ಟೆಯನ್ನು ಅರ್ಪಿಸಿದರೆಂದೂ, ಅದರಲ್ಲಿ ಕೇಂದ್ರ ಸರ್ಕಾರದ ಸಚಿವರುಗಳ ಮತ್ತು ಹಲವು ಉನ್ನತಾಧಿಕಾರಿಗಳ ಹೆಸರುಗಳನ್ನು ಕೆತ್ತಲಾಗಿದೆಯೆಂದೂ ವರದಿಯಾಗಿದೆ.

ಮಂತ್ರಿಮಂಡಲದಲ್ಲಿ ಬದಲಾವಣೆ ಅನವಶ್ಯಕ

ಸ್ವಂ ಸು ಫೋ॥] ಬೆಂಗಳೂರು ೨೧

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯು ಮೊನ್ನೆ ಮತ್ತು ನಿನ್ನೆ ನಡೆದು ದಿವಾನರ ಹುದ್ದೆಯನ್ನು ರದ್ದುಮಾಡುವುದು, ಮಂತ್ರಿಮಂಡಲದ ಕಾರ್ಯಚರಣೆ ಮತ್ತು ವಿವಿಧ ಸಮಿತಿಗಳ ಚುನಾವಣೆಗಳನ್ನು ದೀರ್ಘವಾಗಿ ಪರಿಶೀಲಿಸಿತು. ಈಗಿನ ಮಂತ್ರಿಮಂಡಲದಲ್ಲಿ ಯಾವ ಬದಲಾವಣೆಯೂ ಆಗಬೇಕಾಗಿಲ್ಲವೆಂದು ತೀರ್ಮಾನಿಸಲಾಯಿತೆಂದೂ ತಿಳಿದುಬಂದಿದೆ.

ಪೆಟ್ರೋಲ್ ಕೂಪನ್ನುಗಳ ಕಳವು ಪ್ರಕರಣ

ಈಗ್ಗೆ ಕೆಲವು ದಿನಗಳ ಹಿಂದೆ ನಡೆದ ಪೆಟ್ರೋಲ್ ಕೂಪನ್ನುಗಳ ಕಳುವಿನ ಸಂಬಂಧದಲ್ಲಿ ದಸ್ತಗಿರಿಯಾಗಿದ್ದ ಶ್ರೀಗಳು ನಂಜುಂಡಯ್ಯರ್ ಮತ್ತು ನಾರಾಯಣ ಎಂಬುವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಕಛೇರಿಯ ನಾಲ್ಕು ಮಂದಿ ಜವಾನರನ್ನೂ ಮತ್ತು ಕೂಪನ್ನುಗಳನ್ನು ಕೊಂಡ ಕೊಂಡ ಇಬ್ಬರನ್ನೂ ಈ ಸಂದರ್ಭದಲ್ಲಿ ದಸ್ತಗಿರಿ ಮಾಡಲಾಗಿದೆ. ಈ ಒಳಸಂಚಿನಲ್ಲಿ ಅವರು ಪೆಟ್ರೋಲ್ ರೇಷನಿಂಗ್ ಅಧಿಕಾರಿಗಳ ರುಜುವಿನ ಮತ್ತು ಪೆಟ್ರೋಲ್ ರೇಷನಿಂಗ್ ಅಥಾರಿಟಿ ಎಂಬ ರಬ್ಬರ್ ಸ್ಟಾಂಪುಗಳನ್ನೂ ತಯಾರಿಸಿದ್ದರೆಂದೂ, ಸ್ವಲ್ಪ ತಿದ್ದಿ ಮಾಡಿದ್ದರೆ ಕೂಪನ್ನುಗಳನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸಿ ಬಿಡುತ್ತಿದ್ದರೆಂದೂ ವರದಿಯಾಗಿದೆ.

ಹೈದರಾಬಾದಿನಲ್ಲಿ ಅಂಗಡಿಗಳು ಸೀಲಾದುವು

ಹೈದರಾಬಾದ ಸಂಸ್ಥಾನದಲ್ಲಿ ನಿನ್ನೆ ಪೋಲೀಸರು ಹಲವು ಮುಖ್ಯ ಅಂಗಡಿಗಳನ್ನು ವಶಪಡಿಸಿಕೊಂಡು ಸೀಲ್ ಮಾಡಿದರೆಂದು ವರದಿಯಾಗಿದೆ. ಇತ್ತೀಚಿನ ಪರಿಸ್ಥಿತಿಯಿಂದ ಸಂಸ್ಥಾನದಲ್ಲಿ ಅಗತ್ಯವಾದ ಪದಾರ್ಥಗಳ ಬೆಲೆಯು ವಿಪರೀತ ಹೆಚ್ಚಿದುದರ ಪರಿಣಾಮವಾಗಿ ಈ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಯಿತೆಂದು ಅಲ್ಲಿನ ಸರ್ಕಾರಿ ಪ್ರಕಟಣೆ ತಿಳಿಸಿದೆ.

ಕಲ್ಕತ್ತಾ ವಿದ್ಯಾರ್ಥಿಗಳ ಗಲಭೆ

ಪಾದರಕ್ಷೆಗಳ ಪ್ರಯೋಗ

ಕಲ್ಕತ್ತಾ ವಿಶ್ವವಿದ್ಯಾಲಯದ ಮೆಡಿಕಲ್ ಪರೀಕ್ಷೆಯನ್ನು ಮುಂದೆ ಹಾಕದಿರುವುದನ್ನು ಪ್ರತಿಭಟಿಸಿ, ಅಲ್ಲಿನ ಕೆಲವು ವಿದ್ಯಾರ್ಥಿಗಳು ಕಳೆದ ೯ ದಿನಗಳಿಂದಲೂ ಉಪವಾಸ ಮುಷ್ಕರವನ್ನು ಹೂಡಿದ್ದರು. ಈ ಸಂಬಂಧದಲ್ಲಿ ಮೊನ್ನೆ ಕೆಲವು ವಿದ್ಯಾರ್ಥಿಗಳು ವೈಸ್ ಛಾನ್ಸಲರ ಆಫೀಸಿನಲ್ಲಿ ನಡೆಯುತ್ತಿದ್ದ ಸಿಂಡಿಕೇಟ್ ಸಭೆಯ ಮುಂದೆ ಪ್ರದರ್ಶನ ನಡೆಸಿ, ಪಾದರಕ್ಷೆಗಳನ್ನು ಎಸೆದರೆಂದೂ ವರದಿಯಾಗಿದೆ. ಪೋಲೀಸರು ಲಾಠಿ ಪ್ರಯೋಗ ಮಾಡಿ, ಗುಂಪನ್ನು ಚದುರಿಸಿದರು. ಅನೇಕ ವಿದ್ಯಾರ್ಥಿಗಳಿಗೆ ಗಾಯಗಳಾಗಿವೆ. ೧೦೦ ಜನ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಲಾಗಿದೆ. ಈ ಪ್ರಕರಣದಿಂದ ವಿಶ್ವವಿದ್ಯಾಲಯದ ಎಲ್ಲಾ ಇಲಾಖೆಗಳನ್ನೂ ಮುಚ್ಚಲು ಸ್ನಾತಕರುಗಳು ಆಜ್ಞೆ ಮಾಡಿದ್ದಾರೆ.

ವಿವಾಹ ಮಹೋತ್ಸವ

ರಾಜಧಾನಿ ವರ್ತಕರಾದ ಶ್ರೀ ಡಿ ವೆಂಕಟಯ್ಯನವರು ತಮ್ಮ ಸಹೋದರರಾದ ಶ್ರೀ ಡಿ ವೆಂಕಟರಾಮಯ್ಯನವರ ಪುತ್ರಿ ಚಿ॥ ಸೌ॥ ಚಂದ್ರಮ್ಮನನ್ನು ಶ್ರೀ ಪಾಪಯ್ಯನವರ ಪುತ್ರ ಶ್ರೀ ವೆಂಕಟಾಚಲಯ್ಯನವರಿಗೆ ಕೊಟ್ಟು ವಿವಾಹವನ್ನು ಕಳೆದ ಶುಕ್ರವಾರ ನೆರವೇರಿಸಿದರು.

ಉದಾರ ದಾನ

ಯುಕೆಂದುಗುರು 'ಎಜ್ಯುಕೇಷನ್' ಫಂಡಿಗೆ ರಾಜಧಾನಿಯ ರಾಜಸೇವಾ ಪ್ರಸಕ್ತ ಎ ಸುಬ್ರಹ್ಮಣ್ಯ ಅಯ್ಯಂಗಾರವರು ೧ ಸಾವಿರ ರೂ ಉದಾರ ಸಹಾಯವನ್ನು ಮಾಡಿ, ಅದರ ಪ್ರಥಮ ಪ್ರೋತ್ಸಾಹಕರಾಗಿರುತ್ತಾರೆ ವೆಲ್ಲಿಂಡನ್ ನಿಧಿಗೆ ಸರ್ಕಾರದವರು ಕೊಡುತ್ತಿದ್ದ ೫೦೦ ರೂ. ವಾರ್ಷಿಕ ಚಂದವನ್ನು ಮತ್ತೆ ಎರಡು ವರ್ಷಗಳ ಕಾಲ ಮುಂದು - ವರಿಸುತ್ತಾರೆ

ಶ್ರೀ ಗಣೇಶಾ ಟಾಕೀಸ್

೧೮-೬-೪೮ ರಿಂದ ೩ ನೇ ವಾರ

ಸಿಟಾಡೆಲ್ ರವರ

ಜ್ಞಾನ ಸುಂದರಿ

[ತಮಿಳು]

- ಮುಖ್ಯ ಪಾತ್ರ

ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ

ಇದರೊಡನೆ ೧೯೪೮ ನೆಯ ಇಸವಿ ಎ ಐ ಸಿ ಸಿ ಅಧಿವೇಶನದ ದೃಶ್ಯಗಳ ನ್ಯೂಸ್ ರೀಲನ್ನು ಸಹ ೨೦-೬-೪೮ ರಿಂದ ಒಂದು ವಾರ ಕಾಲ ಪ್ರದರ್ಶಿಸಲಾಗುವುದು

Edited printed and published by A. R. Nagarajan at the Sadhvi Press D Subbaiah Road Mysore

§ ಭಾರತದಿಂದ ಇಂಗ್ಲೆಂಡ್, ಸಿಲೋನ್, ಬರ್ಮ, ಆಸ್ಟ್ರೇಲಿಯ ಮತ್ತು ಚೀನಾಗಳಿಗೆ ವೈಮಾನಿಕ ಸಂಚಾರ ಸೌಲಭ್ಯಗಳನ್ನೇರ್ಪಡಿಸುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ ಈ ವ್ಯವಸ್ಥೆಯು ಇಷ್ಟರಲ್ಲೇ ಕಾರ್ಯಗತವಾಗುವ ನಿರೀಕ್ಷಣೆಯಿದೆ.

ಅಪ್ಪಟ

ಹಸುವಿನ ಹಾಲು

ದೊರೆಯುತ್ತೆ

ಮಕ್ಕಳಿರುವ ಮನೆಗಳಿಗೆ

ರಿಯಾಯಿತಿ ಇದೆ

ಮಾದಣ್ಣ ಅಂಡ್ ಸನ್ಸ್,

೧೨೪೮, ನಾರಾಯಣಶಾಸ್ತ್ರಿ ರಸ್ತೆ,

ದೇವರಾಜ ಮೊಹಲ್ಲಾ, ಮೈಸೂರು.

ಪ್ರತಿ ದಿನ ೩ ಆಟಗಳು

20—6—48 ನೇ ಭಾನುವಾರದಿಂದ

4 ದಿನಗಳು ಮಾತ್ರ,

ರಿಪಬ್ಲಿಕ್‌ರವರ

ಟೈಗರ್ ವುಮನ್

[15 ಭಾಗಗಳ ಪೂರ್ಣ ಸೀರಿಯಲ್]

ಒಲಿಂಪಿಯಾ ಟಾಕೀಸ್

• ರಾಜ್ಯದಲ್ಲಿ ಸುಮಾರು ೬೩೦ ಸಂಘದ ಸರ್ಕಾರೀ ನೌಕರರು ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆಂದು ವರದಿಯಾಗಿದೆ.

WANTED

Assistant Masters for the Municipal High School, SERINGAPATAM

1) Science Graduates with P C M, C-B Z or E B Z as optionals on Rs 60 in 40-4-60 plus D A

2) Arts Graduates with History and English as optionals on Rs 60 in 40-4-60 plus D A

3) one Y M C A trained Drill Instructor on Rs 20 plus D A

Revised scales of Govt rates likely in the near future

Last date for receiving applications 24-6-48

Apply immediately in the C R B forms to.

N. KRISHNA MURTHY, B A L L-B

Secretary,

Municipal High School,

Seringapatam.

UNIVERSITY OF MYSORE

Office of the University of Mysore,

Mysore, dated the 18th June

NOTIFICATION

No Ex. 1-1067/47-48

Applications for admission University Institutions will received by the Heads of Institutions concerned up to 1st J 1948.

Applications must be accompanied by the leaving certific and other certificates as well a certified statement of ma obtained at the qualifying e mination passed, showing year or years in which it passed Copies of marks ca certified by Gazetted Offi may be attached by stude who wish to apply for admis to more than one Coll Candidate coming from a U versity other than the My University must produce a m lation certificate in addition the above certificates Form application may be had fr the Heads of Institutions c cerned. Every application admission to a College should accompanied by a fee of rupee and this fee will no refunded in any case.

Names of selected candid for admission will be notified the Notice Board of the insti tion one week after the receip applications. A selected can date not joining the Institut within a week of the Notifica will forfeit his admission.

By order,

D. S. GORDON

Regist

UNIVERSITY OF MYSORE.

No A1/47-48 Office of the University of Mysore,

MYSORE,

Dated 16th June 1948.

NOTIFICATION.

In connection with the starting of the New Intermediate Colleges from 24-6-1948, applications are invited for Lecturers' posts from Mysorean men and women candidates possessing minimum qualifications for entry into University Service. The appointments will be made pending advertisement of the posts and selection of candidates according to the rules of recruitment. The minimum pay is Rs. 100/- per mensem. Candidates desirous of applying for the posts may submit their applications in the following form so as to reach the Registrar, University of Mysore, Mysore, on or before 24th June 1948. The cover may be superscribed "Application for Appointment,-Lecturer in . . "

The minimum qualifications prescribed for teaching posts in the University are :—

B.A. or B.Sc. First Class ; OR

B.A. (Hons), or B.Sc. (Hons) Second Class ; OR

M.A. or M.Sc.

FORM OF APPLICATION.

1. Name in full.
2. Qualifications :
   (Here enter degree, class, year of passing, Register No. and the University from which the degree was taken)
3. Subject taken for the degree.
4. Whether Mysorean by birth or domicile.
5. Department of Teaching in which the post is sought ; namely, English, Kannada, etc.
6. Postal address, to which further communications are to be sent.
8. Age and Date of birth.

D S. GORDON,

Registrar,

University of Mysore.

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೩ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ:-ಕರೂರು (S I Ry)

ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.) ಬೆಂಗಳೂರು ಸಿಟಿ

ಉಪಶಾಖೆ:-ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್:-ಇರ್ವಿನ್ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	"	"	4
24	"	"	4½

ಮಾಮೂಲಾ ಒಂದು ರೂಪಾಯಿನಿಂದ ಪ್ರಾರಂಭ ಮಾಡಬಹುದಾದ— ೧೨ ತಿಂಗಳು, ೨೪ ತಿಂಗಳು ಮಾಯಾದಾ— ರಿಕರಿಂಗ್ ಡಿಪಾಜಿಟ್ ಮತ್ತು ೪೮ ತಿಂಗಳ ಮಾಯಾದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ, - ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ಪಿ ಕೆ ನಟರಾಜನ್,

ಏಜೆಂಟ್ ಮೈಸೂರು

ಎಸ್. ಆರ್. ಕೆ. ಬ್ರಾಂಡ್

ಮೆಡಿಕೇಟೆಡ್ ಮತ್ತು ಪರ್ಫ್ಯೂಮ್ಡ್ ಸ್ಪೆಷಲ್ ಸೀಗೇಕಾಯಿ ಪುಡಿಯನ್ನೇ ಉಪಯೋಗಿಸಿ ತಲೆ ಬಾಚಿ ಬ... 1 ವೀಸೆ, ಅರ್ಧ ವೀಸೆ, ಕಾಲು ವೀಸೆ, 1/6 ವೀಸೆ ಮತ್ತು 3 ತೊಲ ಪ್ಯಾಕೆಟ್ (0-1-0) ಗಳಲ್ಲಿ ಎಲ್ಲೆಲ್ಲಿಯೂ ದೊರೆಯುತ್ತದೆ

ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್

ಮೈಸೂರು

ಫೋ: ನಂ. 792 ॥ ವಂದೇ ಮಾತರಂ ॥ ಬಿಡಿಪ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೬] ಮಂಗಳವಾರ ೨೨-೬-೪೮ [ಸಂಚಿಕೆ ೪೧೨

ಪ್ರಚಂಡ ಪ್ರವಾಹದಿಂದ ಸಾವಿರ ಚೀಣರ ಮರಣ

ಷಾಪ್ ಅಸಿಸ್ಟೆಂಟ್ ಕಾನೂನನ್ನು ಜಾರಿಗೆ ತರಬೇಕು

ಮೈಸೂರು ೨೨

ಸಂಸ್ಥಾನದಲ್ಲಿ ಈ ತಿಂಗಳಿನಿಂದ ಷಾಪ್ ಅಸಿಸ್ಟೆಂಟ್ ಕಾನೂನ ಜಾರಿಗೆ ಬಂದಿದ್ದರೂ ಅಂಗಡಿಯ ಮಾಲೀಕರುಗಳು ಅದನ್ನು ಉಲ್ಲಂಘಿಸಿ, ಕೆಲಸಗಾರರಿಗೆ ವಾರಕ್ಕೆ ಒಂದು ದಿನ ರಜಾ ಕೊಡದೆ, ೮ ಗಂಟೆಗಳ ಕಾಲದ ಕೆಲಸವನ್ನು ಕಾರ್ಯ ರೂಪಕ್ಕೆ ತಂದಿಲ್ಲವೆಂದೂ, ಆದುದರಿಂದ ಮುಂದಿನ ಭಾನುವಾರದೊಳಗಾಗಿ ಅಂಗಡಿ ಮಾಲೀಕರು ಕೆಲಸಗಾರರಿಗೆ ಮೇಲ್ಕಂಡ ಸೌಲಭ್ಯಗಳನ್ನು ಕಲ್ಪಿಸಕೊಡದಿದ್ದಲ್ಲಿ, ಕಾನೂನಿಗೆ ಅನುಸಾರವಾಗಿ ಕೆಲಸಗಾರರೇ ಅವುಗಳನ್ನು ಒದಗಿಸಿಕೊಳ್ಳಬೇಕಾಗುವುದೆಂದೂ ರಾಜಧಾನಿಯ ಅಂಗಡಿ ಕೆಲಸಗಾರರ ಸಂಘವು ತೀರ್ಮಾನಿಸಿರುವುದರಿಂದ, ಅದಕ್ಕೆ ಪರ್ಯಾಯಗಳು ಅವಕಾಶಕೊಡದೆ ಕೆಲಸಗಾರರ ಕುಂದುಕೊರತೆಗಳನ್ನು ನಿವಾರಿಸಬೇಕೆಂದೂ ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ

ವಿಶ್ವಸಂಸ್ಥೆಯ ಮುಂದೆ ಹೈದರಾಬಾದ್ ಪ್ರಶ್ನೆ

ಹೈದರಾಬಾದ್ ಸಮಸ್ಯೆಯನ್ನು ವಿಶ್ವಸಂಸ್ಥೆಯ ಮುಂದೆ ಇಡಲು ಪಾಕೀಸ್ತಾನವು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಂಸ್ಥಾನಗಳ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಡಾ|| ಮೆಂಅರ್-ಉ-ಅರಾಂರವರು ತಿಳಿಸಿರುತ್ತಾರೆ.

ಬೆಂಕಿಯಿಂದ ೧೦ ಸಾವಿರ ಜನರು ನಿರಾಶ್ರಿತರಾದರು

ಬ್ರಿಟಿಷ್ ವೆಸ್ಟ್ ಇಂಡೀಸಿನ ರಾಜಧಾನಿಯಾದ ಸೇಂಟ್ ಲೂಸಿಯಾ ಎಂಬಲ್ಲಿ ನೆನ್ನೆ ರಾತ್ರಿ ಭಾರಿ ಬೆಂಕಿ ಎದ್ದು, ಸಾವಿರಾರು ಮನೆಗಳು ಸುಟ್ಟು ಹೋಗಿ, ೧೦ ಸಾವಿರ ಜನರು ನಿರಾಶ್ರಿತರಾಗಿದ್ದಾರೆಂದು ವರದಿಯಾಗಿದೆ. ದರ್ಜಿಯವನೊಬ್ಬನ ಅಂಗಡಿಗೆ ಬೆಂಕಿ ಬಿದ್ದು ಪಟ್ಟಣದ ಇತರ ಭಾಗಗಳಿಗೂ ಹರಡಿ ಅಪಾರ ನಷ್ಟ ಉಂಟಾಗಿದೆಯೆಂದೂ ಹೇಳಲಾಗಿದೆ

ಸಮತಾವಾದಿ ನಾಯಕರನ್ನು ಬಿಡುಗಡೆ ಮಾಡಬೇಕು

ಮೈಸೂರು ವಿದ್ಯುಚ್ಛಕ್ತಿ ಕೆಲಸಗಾರರ ಮುಷ್ಕರದ ಸಂದರ್ಭದಲ್ಲಿ ದಸ್ತಗಿರಿಯಾಗಿ ಇನ್ನೂ ಬಿಡುಗಡೆಯಾದ ಶ್ರೀಗಳು ಟಿ. ಎಸ್ ಸುಬ್ಬಣ್ಣ, ಕೆ ಕಣ್ಣ ಮುತ್ತುಶೆ. ರಂಪ್ರಸೇನಜಿತ್‌ರವರುಗಳು ಒಂದು ಹೇಳಿಕೆಯನ್ನಿತ್ತು, ತಮ್ಮನ್ನು ಮಾತ್ರ ಬಿಟ್ಟು, ಉಳಿದ ಶ್ರೀಗಳು ಬಿ ಶ್ರೀಕಂಠಪ್ಪ, ರೇವಣ್ಣ, ಕೆ ವಿಶ್ವನಾಥ್‌ರವರುಗಳನ್ನು ಬಿಡುಗಡೆ ಮಾಡದಿರುವುದು ಖಂಡನೀಯವಾದುದೆಂದು ತಿಳಿಸಿರುತ್ತಾರೆ ಕಮ್ಯೂನಿಸ್ಟರಿಗೂ ತಮಗೂ ಯಾವ ಸಂಬಂಧವೂ ಇಲ್ಲವೆಂದು ತಿಳಿಸಿದ್ದರೂ, ರೈಲ್ವೆ ವರ್ಕ್‌ಶಾಪಿನ ನೌಕರರುಗಳು ಭಾಸ್ಕರ್ ಮತ್ತು ತಿರುನೆಂಗಡಂರವರುಗಳನ್ನು ಇಲ್ಲಿಯವರೆವಿಗೂ ಬಂಧನದಲ್ಲಿಡಲಾಗಿದೆ ಇವರೆಲ್ಲರುಗಳನ್ನೂ ಕೂಡಲೇ ಬಿಡುಗಡೆ ಮಾಡಬೇಕೆಂದು ಅವರು ಹೇಳಿದ್ದಾರೆ

ಹೈದರಾಬಾದ್ ವಕೀಲರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ಸಮಾವೇಶಗೊಂಡು, ನಿಜಾಮರು ಬಹುಮತಾಭಿಪ್ರಾಯವನ್ನು ಬಿಡಬೇಕೆಂದು ನಿರಂಕುಶಾಡಳಿತವನ್ನು ಬಿಡಬೇಕೆಂದು ಸೂಚಿಸುವ ನಿರ್ಣಯವನ್ನು ಮಾಡಿತು

ಲಾರ್ಡ್ ಮೌಂಟ್‌ಬ್ಯಾಟನ್ನರ ಅಂತ್ಯ ಕೋರಿಕೆಗೂ ನಿಜಾಮರ ನಕಾರ

ಕಳೆದ ಶುಕ್ರವಾರ ಲಾರ್ಡ್ ಮೌಂಟ್ ಬ್ಯಾಟನ್ನರು ನಿಜಾಮರಿಗೆ ಒಂದು ತಂತಿಯನ್ನು ಕಳುಹಿಸಿ ಕಳೆದ ಹದಿನೇಳನೇ ತಾರೀಖು ಹೈದರಾಬಾದ್ ಭಾರತಗಳ ಬಗ್ಗೆ ತಯಾರಿಸಲಾದ ಕರಡು ಕರಾರಿನ ಪ್ರಕಾರ ಭಾರತದೊಡನೆ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿದ್ದರೆಂದು ವರದಿಯಾಗಿದೆ ಅದರಿಂದ ಹೈದರಾಬಾದಿನ ಘನತೆಗೆ ಯಾವ ಕುಂದೂ ಉಂಟಾಗುವುದಿಲ್ಲವೆಂದೂ ಹೈದರಾಬಾದ್-ಭಾರತ ಸಖ್ಯಕ್ಕೆ ಅದು ಅಸ್ತಿಭಾರವಾಗಿದೆಯೆಂದೂ ಲಾರ್ಡ್ ಮೌಂಟ್‌ಬ್ಯಾಟನ್ನರು ತಿಳಿಸಿ ಇದಕ್ಕೆ ೪೮ ಗಂಟೆಗಳೊಳಗಾಗಿ ತಮಗೆ ಜವಾಬು ಕೊಡಬೇಕೆಂದೂ ಪ್ರಾರ್ಥಿಸಿದ್ದರು ಇದಕ್ಕೆ ಉತ್ತರವಾಗಿ ನಿಜಾಮರು ತಮ್ಮ ಮಂತ್ರಿಮಂಡಲದವರ ಸಲಹೆಗಳನ್ನು ತಿರಸ್ಕರಿಸಲು ಯಾವ ಕಾರಣವೂ ಇಲ್ಲವೆಂದು ತಿಳಿಸಿ ಗವರ್ನರ್ ಜನರಲ್ಲರ ಕಡೆಯ ಪ್ರಾರ್ಥನೆಯನ್ನೂ ನಿರಾಕರಿಸಿದರೆಂದು ಹೇಳಲಾಗಿದೆ.

ಹೈದರಾಬಾದಿನಿಂದ ಚಿನ್ನ ಬೆಳ್ಳಿಯನ್ನು ಸಾಗಿಸಕೂಡದು

ನೈಜಾಂ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಸಂಸ್ಥಾನದಿಂದ ಚಿನ್ನ ಮತ್ತು ಬೆಳ್ಳಿಯನ್ನು ಯಾರೂ ಹೊರಕ್ಕೆ ಸಾಗಿಸಕೂಡದೆಂದು ತಿಳಿಸಿದ್ದಾರೆ. ಹೊರದೇಶದ ನಾಣ್ಯಗಳನ್ನು ಇಲ್ಲಿ ಚಲಾವಣೆಯ ನಿಷೇಧಿಸಲಾಗಿದೆಯೆಂದು, ಕಳೆದ ಡಿಸೆಂಬರಿನಲ್ಲಿ ಜಾರಿ ಮಾಡಲಾದ ಆಜ್ಞೆಯು ಇದೇ ಜುಲೈ ತಿಂಗಳಿಂದ ಮತ್ತೆ ಆರು ತಿಂಗಳು ಜಾರಿಯಲ್ಲಿರುವಂತೆ ಪ್ರಕಟಣೆ ಹೊರಡಿಸಲಾಗಿದೆ

ಸೇವಾದಳ ಪ್ರದರ್ಶನ

ಗುಂಡ್ಲುಪೇಟೆ ೧೭

ನಿನ್ನೆ ಸಂಜೆ ಶ್ರೀ ಜಿ ಎಸ್ ನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಸೇವಾ ದಳ ಪ್ರದರ್ಶನವೂ ಮತ್ತು ಬಹಿರಂಗ ಸಭೆಯೂ ನಡೆದವು, ಶ್ರೀ ಉಮಾಲೆ ಚೆನ್ನಬಸವಯ್ಯನವರು ಭಾಷಣ ಮಾಡಿ, ಸ್ವಾತಂತ್ರ್ಯ ರಕ್ಷಣೆಗೆ ಸೇವಾದಳದ ಅಗತ್ಯವೇನೆಂಬುದನ್ನು ವಿವರಿಸಿದರು. ಶ್ರೀ ಹೆಚ್ ಎಸ್ ನಂಜುಂಡಯ್ಯನವರು ಮೈಸೂರು ಸೈನ್ಯದ ವಿಷಯವಾಗಿಯೂ, ಶ್ರೀ ರಾಮಸ್ವಾಮಿಯವರು ೮ ಎ ಎ ವಿಷಯದಲ್ಲೂ ಭಾಷಣ ಮಾಡಿದರು.

ಚಂಡಮಾರುತದಿಂದ ೧ ಸಾವಿರ ಜನರ ಮರಣ

ಚೀಣಾದ ಪೂರ್ವ ತೀರ ಪ್ರದೇಶದಲ್ಲಿ ಪ್ರಚಂಡ ಬಿರುಗಾಳಿ ಎದ್ದು ಪ್ರವಾಹದಿಂದ ಫೂಚಾ ಎಂಬ ನಗರವು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಹೋಯಿತೆಂದೂ ಸಾವಿರ ಜನರು ಸತ್ತರೆಂದೂ ಕೋಟ್ಯಾಂತರ ಡಾಲರುಗಳಷ್ಟು ನಷ್ಟ ಸಂಭವಿಸಿದೆಯೆಂದೂ ವರದಿಯಾಗಿದೆ

ಚೀಣಾದಲ್ಲಿ ಪ್ರಚಂಡ ಮಳೆ ಸಂಭವಿಸಿ ಮಿನ್ ನದಿಯಲ್ಲಿ ಅತ್ಯಂತ ದೊಡ್ಡ ಪ್ರವಾಹ ಎದ್ದು, ಅದರಿಂದ ಎರಡು ದಡಗಳು ಒಡೆದ ಫೂಚೌನಗರದ ೧೦ ಸಾವಿರ ಮನೆಗಳು ಮುಳುಗಿಹೋಗಿ ೨ ಲಕ್ಷ ಜನರು ನಿರಾಶ್ರಿತರಾಗಿದ್ದಾರೆ ನೀರಿನಲ್ಲಿ ಮುಳುಗಿಹೋದ ಸಾವಿರ ಜನರ ಪೈಕಿ, ೨೦೦ ಜನರ ದೇಹವು ಪತ್ತೆಯಾಗಿದೆ

ಭೀಮಾವರದಲ್ಲಿ ಭನ್ಸಾಲಿಯವರ ಸತ್ಯಾಗ್ರಹ

ಹೈದರಾಬಾದಿನಲ್ಲಿ ಸತ್ಯಾಗ್ರಹ ಪ್ರಚಾರಕ್ಕಾಗಿ ಹೊರಟಿರುವ ಪ್ರೊ|| ಭನ್ಸಾಲಿಯವರು ಭೀಮಾವರದಲ್ಲಿ ಗ್ರಾಮದ ಪಟೇಲರ ಕೈದಿನಲ್ಲಿ ನಿರತರಾಗಿರುವರೆಂದು ಗೊತ್ತಾಗಿದೆ. ತಮ್ಮ ಅಹಿಂಸಾತ್ಮಕ ಚಳುವಳಿಯಲ್ಲಿ ತಾವು ಸ್ವಲ್ಪವೂ ಹಿಂಜರಿಯದೆ ಹೈದರಾಬಾದಿನ ಮಹಿಳೆಯರ ಮಾನರಕ್ಷಣೆಯಲ್ಲಿ ತೊಡಗುವುದಾಗಿ ಅವರು ಒಂದು ಪತ್ರದಲ್ಲಿ ನುಡಿದರು. ಪ್ರೊ|| ಭನ್ಸಾಲಿಯವರು ಭೀಮಾವರದ ಒಂದು ರಸ್ತೆಯನ್ನು ಗುಡಿಸುತ್ತಿದ್ದಾಗ ಒಬ್ಬ ಮುದುಕಿಯು ಬಂದು ಅವರಿಗೆ ನಮಸ್ಕರಿಸಿ 'ಇದೇ ರೀತಿ ನಿಜಾಮರೂ ಮತ್ತು ಅವರ ಹಿಂಬಾಲಕರೂ ತೊಲಗಿ ಹೋಗಲೆಂದು ನಾನೂ ಬಯಸುತ್ತೇನೆ' ಎಂಬುದಾಗಿ ನುಡಿದಳು

ಮಿಲಿಟರಿ ಕಾವಲಿನೊಡನೆ ಬಸ್ ಸಂಚಾರ

ಹೈದರಾಬಾದ್ ಮತ್ತು ಕೃಷ್ಣಾ ಜಿಲ್ಲೆಗಳ ನಡುವೆ ಇಗ್ಗೆ ಕೆಲವು ದಿವಸಗಳ ಹಿಂದೆ ದರೋಡೆ ಕೋರರು ಒಂದು ಅಂಚೆ ಬಸ್ಸನ್ನು ಲೂಟಿಮಾಡಿದುದರ ಪರಿಣಾಮವಾಗಿ ಆ ಪ್ರದೇಶದ ಬಸ್ ಸರ್ವೀಸುಗಳೆಲ್ಲವನ್ನೂ ನಿಲ್ಲಿಸಲಾಗಿತ್ತು ಮೊನ್ನೆಯಿಂದ ಮಿಲಿಟರಿ ಕಾವಲಿನೊಡನೆ ಬಸ್ ಸಂಚಾರವನ್ನು ಮತ್ತೆ ಆರಂಭಿಸಲಾಗಿದೆಯೆಂದು ವರದಿಯಾಗಿದೆ

ಇಬ್ಬರು ಕಮ್ಯೂನಿಸ್ಟರ ದಸ್ತಗಿರಿ

ಅಠಾರಾ ಕಛೇರಿ ಮುಂದೆ ಪ್ರದರ್ಶನ

ಸ್ವಂ.ಸು.ಪ್ರೋ] ಬೆಂಗಳೂರು ೨೨

ಕಮ್ಯೂನಿಸ್ಟ್ ನಾಯಕರು ಮತ್ತು ಚರ್ಮ ಹದ ಮಾಡುವ ಕೆಲಸಗಾರರ ಸಂಘದ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಆದ ಮರಿಚಾಸ್ ಮತ್ತು ಡೇನಿಯಲ್ ಎಂಬವರುಗಳನ್ನೂ ನಗರದ ಪೋಲೀಸರು ನಿನ್ನೆ ರಾತ್ರಿ ದಸ್ತಗಿರಿ ಮಾಡಿದರು. ಈ ಸಂಬಂಧದಲ್ಲಿ ದಂಡಿನ ಹತ್ತಿರವಿರುವ ಜೀವನಹಳ್ಳಿ ಚರ್ಮ ಹದಮಾಡುವ ೩೦೦ ಜನ ಕೆಲಸಗಾರರು ಈ ದಿನ ಮಧ್ಯಾಹ್ನ ಅಠಾರಾ ಕಛೇರಿ ಮುಂದೆ ಬಂದು ಪ್ರದರ್ಶನ ನಡೆಸಿದರು. ಪೋಲೀಸರು ಅವರುಗಳನ್ನು ತಡೆದರು ಪರಿಸ್ಥಿತಿ ಶಾಂತವಾಗಿದೆ.

ಭೂಕಂದಾಯ ಪದ್ಧತಿ ಪರಾಮರ್ಶೆ

ಭೂಕಂದಾಯ ಪದ್ಧತಿಯನ್ನು ಮಾರ್ಪಾಡು ಮಾಡಬೇಕೆಂದು ಈ ದಿನ ಶಾಸನ ಸಭೆಯಲ್ಲಿ ಜನಾಬ್ ಅಬ್ದುಲ್ ರಹಿಮಾನರವರು ರೆವಿನ್ಯೂ ಡಾಟಿನ ಮೇಲೆ ಒಂದು ಠರಾವಿನ ನಿರ್ಣಯವನ್ನು ಮಂಡಿಸಿದರು. ಅನೇಕ ಸದಸ್ಯರು ಅದನ್ನು ಸಮರ್ಥಿಸಿದರು. ಶ್ರೀ ಹೆಚ್ ಸಿದ್ದಯ್ಯನವರು ಉತ್ತರ ಕೊಟ್ಟು, ಈಗಾಗಲೇ ಆ ವಿಷಯವನ್ನು ಸರ್ಕಾರದವರು ಒಪ್ಪಿಕೊಂಡು, ಅದರ ಬಗ್ಗೆ ಒಂದು ಸಮಿತಿಯನ್ನು ರಚಿಸಲು ಆಲೋಚಿಸುತ್ತಿದ್ದಾರೆಂದು ತಿಳಿಸಿದರು, ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಹೈದರಾಬಾದ್ ನೇತಾರರ ಪ್ರಯಾಣಕ್ಕೆ ಅಡಚಣೆ

ನಿಜಾಂ ಪೋಲೀಸರ ಕೃತ್ಯ

ರಾಜಾ ಬನ್ಸಿಲಾಲ್ ಎಂಬ ಪ್ರಮುಖ ಪರ್ಯಟಕರೊಬ್ಬರು ಕಳೆದ ಶನಿವಾರ ಪತ್ನೀಸಮೇತರಾಗಿ ಹೈದರಾಬಾದಿನಿಂದ ಪೂನಾಗೆ ಪ್ರಯಾಣ ಹೊರಟಿದ್ದರು. ನಿಜಾಂ ಪೋಲೀಸರು ಅವರನ್ನು ರೈಲು ಹತ್ತಲು ಬಿಡದೆ ತಡೆದರು ಅಲ್ಲಿನ ಸುಂಕದ ಅಧಿಕಾರಿಗಳು ಅವರ ಬಳಿಯಲ್ಲಿದ್ದ ಸಾಮಾನುಗಳನ್ನು ಶೋಧಿಸಿ ಕೆಲವು ಚಿನ್ನದ ಆಭರಣಗಳನ್ನು ತೆಗೆದುಕೊಂಡು ಹೋಗಲು ಆಕ್ಷೇಪಿಸಿದರು. ಶ್ರೀ ಬನ್ಸಿಲಾಲ್‌ರವರು ಆ ಭೂಷಣಗಳನ್ನು ಅಲ್ಲೇ ಬಿಟ್ಟು ಹೋಗುವುದಾಗಿ ತಿಳಿಸಿದರೂ ಅವರಿಗೆ ಪ್ರಯಾಣ ಮಾಡಲು ಅವಕಾಶ ಕೊಡದೆ ಅಲ್ಲಿನ ಸ್ಟೇಷನ್ ಮಾಸ್ಟರರಿಗೆ ಅವರನ್ನು ತಡೆಯಲು ಸೂಚನೆ ಕೊಟ್ಟರು ಸ್ಟೇಷನ್ ಮಾಸ್ಟರರು ಅದಕ್ಕೆ ನಿರಾಕರಿಸಲು ಎಂಟು ಮಂದಿ ಪೋಲೀಸರು ಬಂದು ದಂಪತಿಗಳಿಬ್ಬರನ್ನೂ ಸುತ್ತುಗಟ್ಟಿ ಅವರ ಪ್ರಯಾಣಕ್ಕೆ ಅಡ್ಡಿಪಡಿಸಿದರು.

ಗಾಂಧಿ ಸ್ಮಾರಕ ಸ್ಟಾಂಪುಗಳು

ಭಾರತ ಸ್ವಾತಂತ್ರ್ಯ ದಿನಾಚರಣೆಯಾದ ಆಗಸ್ಟ್ ೧೫ ನೇ ತಾ|| ನ ದಿನ ಗಾಂಧೀ ಸ್ಮಾರಕ ಸ್ಟಾಂಪುಗಳನ್ನು ಹೊರಡಿಸಲಾಗುವುದೆಂದೂ, ಸುಮಾರು ೩ ಕೋಟಿಯಷ್ಟು ಸ್ಟಾಂಪುಗಳು ೮ ಕಾಲಕ್ಕೆ ಸಿದ್ಧವಾಗುವುವೆಂದೂ ಹೇಳಲಾಗಿದೆ.

ವೀಣಾ ವಾದನ

ಮೈಸೂರು ೨೨

ಡಿ ಸುಬ್ಬಯ್ಯ ನವರ ಛತ್ರದಲ್ಲಿರುವ ಸಾಧ್ವೀ ಕಛೇರಿ ಮಹಡಿಯ ಮೇಲೆ ಈ ದಿನ ರಾತ್ರಿ ೯ ಗಂಟೆಗೆ ವೀಣಾ ವಿದ್ವಾನ್ ಶ್ರೀ ಎಸ್. ಕೃಷ್ಣಪ್ಪನವರ, ಬಿ ಎಸ್ ಸಿ, ಎಲ್ ಎಲ್ ಬಿ. ಇವರಿಂದ ವೀಣಾ ವಾದನವು ನಡೆಯುವುದು.

... ed printed and published by A. R. ...nagarajan at the Sadhvi Press D. Subbaiah Road Mysore.

ಅನೇಕ ಅಕ್ಕಿ ಮೂಟೆಗಳು ಹಾಳಾಗುತ್ತಿವೆ

ಚಿತ್ರದುರ್ಗ ಜಿಲ್ಲಾ ಹೋಲ್‌ಸೇಲ್ ಸಹಕಾರ ಸಂಘದಲ್ಲಿ ೬೫ ಸಾವಿರ ಅಕ್ಕಿ ಮೂಟೆಗಳು ದಾಸ್ತಾನು ಇದ್ದು, ಅನೇಕ ಮೂಟೆಗಳು ಹಾಳಾಗುತ್ತಿವೆಯೆಂದು ಅಲ್ಲಿನ ಪ್ರತಿನಿಧಿಗಳಾದ ಶ್ರೀ ಗ. ರುದ್ರಪ್ಪ ನಾಯ್ಡು ರವರು ಚಿತ್ರದುರ್ಗ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿಗೆ ದಾಸ್ತಾನು ಇರುವುದರಿಂದ ಜನಗಳಿಗೆ ೫ ರ ಸ್ಥಳದಲ್ಲಿ ೮ ಔನ್ಸ್ ಅಕ್ಕಿಯನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನವು ಬೆಂಗಳೂರಿನಲ್ಲಿ ಮುಂದಿನ ತಿಂಗಳು ೬, ೭ ಮತ್ತು ೮ ನೇ ತಾ|| ಗಳಲ್ಲಿ ... ಭವನದಲ್ಲಿ ನಡೆಯುವುದು. ಈ ಸಂಬಂಧದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ರವೀಂದ್ರ ವರ್ಮರವರು ಬೆಂಗಳೂರಿಗೆ ಮೊನ್ನೆ ದಿನ ಆಗಮಿಸಿದರು. ಸಮ್ಮೇಳನದ ಕಛೇರಿಯನ್ನು ಅರಳೇಪೇಟೆಯಲ್ಲಿರುವ ಕಾಂಗ್ರೆಸ್ ಭವನಕ್ಕೆ ವರ್ಗಾಯಿಸಲಾಗಿದೆ.

ಅಪ್ಪಟ

ಹಸುವಿನ ಹಾಲು

ದೊರೆಯುತ್ತೆ

ಮಕ್ಕಳಿರುವ ಮನೆಗಳಿಗೆ

ರಿಯಾಯಿತಿ ಇದೆ

ಮಾಯಣ್ಣ ಅಂಡ್ ಸನ್ಸ್,

೧೩೪೮, ನಾರಾಯಣಶಾಸ್ತ್ರಿ ರಸ್ತೆ,

ದೇವರಾಜ ಮೊಹಲ್ಲಾ, ಮೈಸೂರು

|| ಶ್ರೀ ||

ಗಾಯತ್ರಿ ಟಾಕೀಸ್

[ಚಾಮರಾಜ ರೋಡ್]

ತಾ|| ೧೮-೬-೪೮ ರಿಂದ

ಒಂದು ವಾರ ಮಾತ್ರ

ಪ್ರತಿ ದಿನ ೩ ಆಟಗಳು

ಜಿಂದ್‌ಬಾದ್ - ದಿ ಸ್ಟೈಲರ್

ವರ್ಣ ರಂಜಿತ ಚಿತ್ರ

ರಾಜಕಮಲ್,

ಮೈಸೂರು

ತಾ|| 18-6-48 ರಿಂದ

ಎರಡನೇ ವಾರ

೧ ನೇ ಆಟ ೬-೩೦

೨ ನೇ ಆಟ ೯-೪೫ ಕ್ಕೆ

ವಾಹಿನಿಯವರ

ಭಕ್ತ ಪೋತನ

(ತೆಲುಗು)

ಭೂಮಿಕೆ:- ನಾಗಯ್ಯ, ಗೌರಿನಾಥ ಶಾಸ್ತ್ರಿ

ಮಾಲತಿ, ಸೂರ್ಯಕುಮಾರಿ

ಮುಂತಾದವರು

---

‡ ಮದರಾಸಿನ ಗವರ್ನರ್ ಸರ್ ಆರ್ಚಿಬಾಲ್ಡ್ ನೈರವರು ಕೆಲಸದಿಂದ ನಿವೃತ್ತರಾದ ನಂತರ ಭಾರತದಲ್ಲಿ ಬ್ರಿಟಿಷ್ ಹೈಕಮಿಷನರಾಗಿ ನೇಮಿಸಲ್ಪಡುವ ಸಂಭವವಿದೆ.

● ಶ್ರೀ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಇದೇ ೨೮ ನೇ ತಾ|| ಸೋಮವಾರದಿಂದ ಮುಂದಿನ ತಿಂಗಳು ೫ ನೇ ತಾ|| ವರೆಗೆ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವವು ನಡೆಯುವುದು.

ಮೈಸೂರು ಸ್ಟೇಟ್ ರೈಲ್ವೆ

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಛೇರಿ, ಮೈಸೂರು.

ನೋಟಿಫಿಕೇಷನ್

ನಂ. ೩ ೧೯೪೮

ಮೈಸೂರು ಸಿಟಿ ರೈಲ್ವೆ ನಿಲ್ದಾಣದ ಆವರಣದಲ್ಲಿ ಬೇಕಾಗಬಹುದಾದ ಕಛೇರಿ ಪದಾರ್ಥಗಳನ್ನು ತೆಗೆದು ಹಾಕಿ ಸ್ವಚ್ಛವಾಗಿರಿಸಲು, "ಮೈಸೂರು ರೈಲ್ವೆ ನಿಲ್ದಾಣದ ಸ್ಯಾನಿಟರಿ ಕಂಟ್ರಾಕ್ಟಿನ ಟೆಂಡರು" ಎಂದು ಅದರ ಮೇಲೆ ನಮೂದಾಗಿ ಮೊಹರಾಗಿರುವ ಟೆಂಡರುಗಳನ್ನು ೧೯೪೮ ನೇ ಜೂನ್ ಮಾಹೆ ೨೬ ನೇ ತಾ|| ಶನಿವಾರ ಮಧ್ಯಾಹ್ನ ೩ ಗಂಟೆಯವರೆಗೆ ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆ ಜಿಲ್ಲಾ ಸೂಪರಿಂಟೆಂಡೆಂಟರವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಕಂಟ್ರಾಕ್ಟುದಾರರು ತಮ್ಮ ಕಂಟ್ರಾಕ್ಟು ಅವಧಿಯಲ್ಲಿ ಮೈಸೂರು ರೈಲ್ವೆ ನಿಲ್ದಾಣದ ಆವರಣದಲ್ಲಿಯೂ ಡಾಕ್ ಸೈಡಿಂಗುಗಳಲ್ಲಿಯೂ ಪೊಲೀಸ್ ಲೈನುಗಳಲ್ಲಿಯೂ ನಿಲ್ದಾಣದ ಆವರಣದಲ್ಲಿರುವ ರೈಲ್ವೆ ಕ್ವಾರ್ಟರುಗಳಲ್ಲಿಯೂ ಮತ್ತು ಮುಂದೆ ಪ್ರಕಟಿಸಬಹುದಾದ ಪ್ರದೇಶಗಳಲ್ಲಿಯೂ ಸಹ ಬೇಕಾದ ಕಸವನ್ನು ಪ್ರತಿ ದಿನವೂ ಬೆಳಿಗ್ಗೆ ಮತ್ತು ಸಂಜೆ ತೆಗೆದುಹಾಕಲು ಒಪ್ಪಿಕೊಳ್ಳಬೇಕು. ಈ ಕೆಲಸಕ್ಕಾಗಿ ಕಂಟ್ರಾಕ್ಟುದಾರರು ತಮ್ಮ ಸ್ವಂತ ವೆಚ್ಚದಲ್ಲಿ ಎರಡೆತ್ತಿನ ಗಾಡಿಯನ್ನು ಇಟ್ಟುಕೊಳ್ಳಬೇಕು.

ಪ್ರತಿ ಟೆಂಡರಿನೊಡನೆಯೂ ಮೈಸೂರಿನಲ್ಲಿರುವ ಚೀಫ್ ಆಡಿಟರವರಲ್ಲಿ ೨೫ ರೂ. ಠೇವಣಿ ಹಣವನ್ನು ಪಾವತಿ ಮಾಡಿ ಅದರ ರಶೀತಿಯನ್ನು ಲಗತ್ತಿಸಿರಬೇಕು.

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರು ಟೆಂಡರುಗಳನ್ನು ಸ್ವೀಕರಿಸುವುದಕ್ಕಾಗಲಿ ತಿರಸ್ಕರಿಸುವುದಕ್ಕಾಗಲಿ ಅಥವಾ ಹೊರದಾಗಿ ಟೆಂಡರುಗಳನ್ನು ಕರೆಯುವುದಕ್ಕಾಗಲಿ ಹಕ್ಕುಳ್ಳವರಾಗಿರುತ್ತಾರೆ. ಟೆಂಡರು ಅಂಗೀಕೃತವಾದ ಕೂಡಲೇ ಟೆಂಡರುದಾರರು ಸ್ಟಾಂಪ್ ಅಗ್ರಿಮೆಂಟನ್ನು ಬರೆದುಕೊಡಬೇಕು. ೧೯೪೮ ನೇ ಜುಲೈ ೧ ನೇ ತಾರೀಖಿನಿಂದ ಒಂದು ವರ್ಷಕಾಲ ಕಂಟ್ರಾಕ್ಟು ಜಾರಿಯಲ್ಲಿರುವುದು.

ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಛೇರಿ, ಮೈಸೂರು, ೧೧ ನೇ ಜೂನ್ ೧೯೪೮

ಪಿ. ಆರ್. ಕೃಷ್ಣಸ್ವಾಮಿ,

ಆಕ್ಟಿಂಗ್ ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರು

HAVE YOU PURCHASED A RUPEE TICKET ?

IF NOT PURCHASE TO-DAY !

Your Rupee will Fetch You

Rs 34,000

It is not Magic : But

National High School Building Fund Lottery

(SHIMOGA)

You help to Build Education by selling Tickets !

Approach for Details } **SHANTI AGENCIES,** Dewan's Road, Mysore.

BANGALORE RACES 1948

ಜೂನ್ ೨೬, ೩೦, ಜುಲೈ ೩ ರಲ್ಲಿ

ಬುಕ್ ಮೇಕರ್ಸ್ — ಟೋಟಲೈಜೇಟರ್,

ರೂ ೨, ಸ್ಪ್ರೆಡ್ ಮತ್ತು ರೂ ೫, ಟ್ರಿಬಲ್ ಇವೆಂಟ್

ಒಂದನೇ ಟೋಟ್ ರೂ ೧೦, ಎರಡನೇ ಟೋಟ್ ರೂ ೫,

ಪ್ರವೇಶ:— ಒಂದನೇ	ತರಗತಿ	— ಪುರುಷರು	— ರೂ ೬, ದಿವಕ್ಕೆ
,,	,,	— ಸ್ತ್ರೀಯರು	— ರೂ ೪, ,,
ಎರಡನೇ	,,	— ಪುರುಷರು) ಅಥವ) ಸ್ತ್ರೀಯರು)	ರೂ ೨, ,,

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ

ಪ್ರೀತಿಗೆ ಪಾತ್ರವಾದ

ಬೊಂಬಾಯಿ ಜಿ. ಎ. ಸರ್ಕಸ್

ದಿನ 2 ಆಟಗಳು:- ಸಂಜೆ 6-30 ರಾತ್ರಿ 9-30 ೧೦೧ ಆಟಗಾರರು — ೮೫ ಮೃಗಗಳು

೧೩ ನವ ಹುಡುಗಿಯರ ಡ್ಯಾನ್ಸ್

ಟಿಕೇಟಿನ ದರಗಳು, (ಟ್ಯಾಕ್ಸ್ ಸಮೇತ) 2-8-0, 1-8-0, 0-10-0, 0-6-0

ಮೊದಲನೇ ಎರಡು ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ರಿಜರ್ವೇಷನ್ ಫೀ ಇಲ್ಲ

[ಎಂ. ಸುಬ್ಬರಾಮಯ್ಯ ಅಂಡ್ ಕೊ.]

ಅಪೂರ್ವ ಸಂಗೀತ ಕ...

ಶ್ರೀ ಸರಸ್ವತಿ ಸಂಗೀತ ಸಮ...

ಆಶ್ರಯದಲ್ಲಿ

ಕರ್ನಾಟಕ ಚಿತ್ರಕಲಾ ... ಸಹಾಯಾರ್ಥವಾಗಿ

ಮೈಸೂರು ಟೌನ್ ಹಾ...

4-7-1948

ಶನಿವಾರ ಸಂಜೆ ೫-೩೦ ...

ಮಧುರ ಗಾಯಕರಾದ ಶ್ರೀ...

ಎಸ್. ಸಿ. ವಸಂತಕೋ...

ಮತ್ತು ಪಾರ್ಟಿಯವರಿಂದ

ಮುಂಗಡವಾಗಿ ಟಿಕೆಟ್ ...

ಪ್ರವೇಶ

ರೂ. 15, 10, 5, 3, ...

ಮೊದಲನೇ ಮೂರು ತರಗತಿ...

ರಿಜರ್ವೇಷನ್ ಫೀ ಪ್ರತಿ ಸೀಟಿಗೂ...

ಟಿಕೆಟ್ ದೊರೆಯುವ ಸ್ಥಳಗಳು

೧ ಶ್ರೀ ವಿ. ಎನ್. ರಾಮಚಂದ್ರ...

'ವಸಂತ ವಿಹಾರ', ... ಮೈಸೂರು

೨ ಡಾ|| ಎ. ಎಲ್. ಚಂದ್ರಶೇಖರ... ಮೆಡಿಕಲ್ ಕಾಲೇಜು, ಮೈಸೂರು

೩ ಶ್ರೀ ಬಿ. ಗೋಪಾಲರಾವ್, ... ಅಂಡ್ ಕಂ. ಹಳೇ ... ರಸ್ತೆ, ಮೈಸೂರು.

೪ ಸಂಗೀತ ಭೂಷಣ ಶ್ರೀ ಎಂ... ಸಿಂಹಾಚಾರ್, ಗಾನಕಲಾ ಮಂದಿ... ಚಿಕ್ಕಗಡಿಯಾರ, ಮೈಸೂರು.

ಪ್ರಭಾ ಪಿಕ್ಚರ್ ಪ್ಯಾಲೇ...

25—6—48 ರಿಂದ

...

ಅರೇಬಿಯನ್ ನೈ...

[ಹಿಂದಿ]

—: ಪಾತ್ರ :—

● ಶಶಿಕಲಾ ಬಾಲಾ, ಪ್ರಮಿಳ...

○ ... ○

ಕಮಲಾದಾಸ್ ಗುಪ್ತರವರ ಸಂಗೀತ

ಶ್ರೀ ಗಣೇಶಾ ಟಾಕೀ...

೧೮-೬-೪೮ ರಿಂದ ೩ ನೇ ...

ಸಿಟಾಡೆಲ್‌ರವರ

ಜ್ಞಾನ ಸುಂದ...

[ತಮಿಳು]

—: ಮುಖ್ಯ ಪಾತ್ರ :—

ಟಿ. ಆರ್. ಮಹಾಲಿಂಗಂ, ಎಂ. ವಿ. ...

ಇವರೊಡನೆ ೧೯೪೮ ರ ... ಪಿ. ಸಿ. ... ಅಧಿಕೇಶವರ ... ರಿಂದ ... ದು ವಾರ ಕಾಲ ಪ್ರದರ್ಶಿಸಲಾಗು...

ನೋಟೀಸು

ಮಹಾಜನಗಳಿಗೆ ತಿಳಿಸುವುದೇನ...

ನಮ್ಮಲ್ಲಿ ಕೆಲಸದಲ್ಲಿದ್ದ ... ರಾಮಯ್ಯ ಎಂಬುವರು ೨೭-೫-೪೮ ರಿಂ... ಲ್ಲಿ ಕೆಲಸ ಬಿಟ್ಟಿರುತ್ತಾರೆ. ಅದ... ರು ನಮ್ಮ ಪರವಾಗಿ ಯಾವ ವ್ಯವಹಾ... ಮಾಡಲು ಹಕ್ಕಿರುವುದಿಲ್ಲ. ಹಾಗೇ... ಯಾರಾದರೂ ಆ ರೀತಿ ವ್ಯವಹಾರ ಮಾ... ಅದಕ್ಕೆ ನಾವು ಯಾವ ವಿಧದಲ್ಲೂ ಜ... ರಲ್ಲ.

ಇ. ಪಿ. ಪಾಲಂಗ...,

ಆಟೋಮೊಬೈಲ್ ಇಂಜಿ...

ಶಂಬೂಚೆಟ್ಟಿ ರಸ್ತೆ, ಮೈ...

...ಸ್ಥಾನದಲ್ಲಿ ೧೫೪೯ ಜನ ಭಿಕ್ಷುಕರು

ಶಾಸನ ಸಭೆಯಲ್ಲಿ ಹೇಳಿಕೆ

...ಫೋ] ಬೆಂಗಳೂರು ೨೩
...ಸ್ಥಾನದಲ್ಲಿ ಭಿಕ್ಷುಕರ ಪರಿಹಾರ ಸಹಾ...ಗ್ಯ ಶಿಕ್ಷಿ ... ನ್ಯಾಯವಿಧಾಯಕ ಸಭೆ... ಪ್ರಶ್ನೋತ್ತರ ಕಾಲದಲ್ಲಿ ದೀರ್ಘ ಚ... ನಡೆಯಿತು. ಒಟ್ಟು ೧೫೪೯ ಭಿ...ಕರು ಸಂಸ್ಥಾನದಲ್ಲಿರುವರೆಂದೂ, ಅವ...ರಿ, ಬೆಂಗಳೂರು ನಗರದಲ್ಲಿ ವ್ಯಸನ...ರು. ೩೫೪೯, ಹೊರಗಿನವರು ೨೨೦೦; ...ರು ನಗರದಲ್ಲಿ ಇಲ್ಲಿಯವರು ೧೬೧೦ ...ಗಿನವರು ೧೧೯೦, ಇತರ ಕಡೆ ೬೮೪೯ ...ದ್ದಾರೆಂದೂ ಶ್ರೀ ಡಿ ಹೆಚ್ ಚಂದ್ರ...ಯ್ಯನವರು ಶ್ರೀ ಕಡಿದಾಳು ಮಂ...ನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದ... ಅವರಲ್ಲಿ ಶೇಖಡ ೬೩ ೩ ರಷ್ಟು ದೃ...ರೆಂದೂ ತಿಳಿಸಲಾಯಿತು. ಬೆಂ...ನ ಸಮಾಪದಲ್ಲಿರುವ ಭಿಕ್ಷುಕರ ಪ...ಸೇರಿಸಿರುವ ಭಿಕ್ಷುಕರಿಗೆಲ್ಲಾ ಉಪ...ಕ್ತವಾದ ಕೆಲಸಗಳನ್ನು ಕಲ್ಪಿಸಲಾ...ದೆ, ವ್ಯವಸಾಯಕ್ಕಾಗಿ ಭೂಮಿಗಳ...ಕೊಡಲಾಗುವುದು, ಇದಕ್ಕಾಗಿ ಇಲ್ಲಿ...ರೆಗೆ ಒಟ್ಟು ರೂ ೧,೧೦,೫೦೦ ಖ...ಗಿದೆ ಬೆಂಗಳೂರು ನಗರದಲ್ಲಿರುವ ...ಗಿನ ೨೨೦೦ ಜನ ಭಿಕ್ಷುಕರ ಪೈಕಿ, ...ಜನರನ್ನು ಸಂಸ್ಥಾನದಿಂದ ಹೊರಕ್ಕೆ ...ಕಲಾಗಿದೆ ಇನ್ನೂ ಕೆಲವರಿಗೂ ...ರಿಕೆ ಕೊಡಲಾಗಿದೆ ಭಿಕ್ಷೆ ಮಾಡ...ದೆಂಬ ಕಾನೂನನ್ನು ಮೈಸೂರು ನಗ...ಕ್ಕೆ ಜಾರಿಗೆ ತರಲಾಗುವುದು-ಎಂದು ...ಚಂದ್ರಶೇಖರಯ್ಯನವರು ಉಪ ಪ್ರ...ಗೆ ಉತ್ತರವಾಗಿ ತಿಳಿಸಿದರು

...ಜಾಬಿನಿಂದ ೫೫೧ ನಿರಾಶ್ರಿತರು ಸಂ...ಕ್ಕೆ ಬಂದಿರುವರೆಂದೂ, ಅವರ ಪೈಕಿ ...ಮಂದಿ ಗಂಡಸರು, ೧೨೮ ಮಂದಿ ...ಸರು ಮತ್ತು ೧೧೮ ಮಕ್ಕಳೆಂದೂ, ...ಲ್ಲಿ ೩೮ ಜನರಿಗೆ ಉದ್ಯೋಗಗಳನ್ನು ...ಲಾಗಿದೆಯೆಂದೂ, ಒಟ್ಟು ಸಂಗ್ರಹ ...೬೫೦ ರೂ ಗಳಲ್ಲಿ ೯೯೪ ರೂ ಗಳ ...ರ್ಚು ಮಾಡಲಾಗಿದೆಯೆಂದೂ ಶ್ರೀ ...ರಿಯಪ್ಪನವರು ಒಂದು ಪ್ರಶ್ನೆಗೆ ಉ...ಗಿ ತಿಳಿಸಿದರು

...ದರಾಬಾದಿನಿಂದ ಚಿನ್ನ, ...ಳ್ಳಿ ರಫ್ತಿಗೆ ನಿಷೇಧ

...ಂ ಸಂಸ್ಥಾನದಿಂದ ಹೊರಕ್ಕೆ ಚಿನ್ನ ...ಬೆಳ್ಳಿಯನ್ನು ಸಾಗಿಸಕೂಡದೆಂದು ...ಬಾದ್ ಸರ್ಕಾರದವರು ಒಂದು ಆ...ನ್ನು ಹೊರಡಿಸಿರುತ್ತಾರೆ ಈ ಸಂ...ಲ್ಲಿ ಯಾರನ್ನೂ ಬೇಕಾದರೂ ಶೋ... ಪೋಲೀಸರಿಗೆ ವಿಶೇಷ ಅಧಿಕಾರ ...ಗಿದೆ

...ದರಾಬಾದ್ ನಾಣ್ಯಗಳ ಹೊರತು ...ವ ದೇಶಗಳ ನಾಣ್ಯಗಳನ್ನೂ ಉಪ...ಬಾರದೆಂದು ನಿಜಾಂ ಸರ್ಕಾರದವ...ತ್ತಿ ಆರು ತಿಂಗಳ ಕಾಲ ಆಜ್ಞೆ ಹಾ...ರೆ

...ರತದ ಸ್ಕೌಟ್ ಸಂಸ್ಥೆಗಳ ಒಕ್ಕೂಟ

...ಶದಲ್ಲಿರುವ ಬೇಡನ್‌ಪವಲ್, ಹಿಂ... ಮತ್ತು ಕ್ಯಾಥೋಲಿಕ್ ಫೆಡರೇ...ಷನ್‌ಗಳೆಲ್ಲವನ್ನೂ ಒಂದಾಗಿ ಸೇರಿಸಿ ...ನ ಆಗಸ್ಟ್ ಬಿಂ ... ತಿಂಗಳಿನಿಂದ ... 'ಸ್ಕೌಟ್' ಎಂದು ಕರೆಯಬೇ...ನಿರ್ಧಾರವಾಗಿದೆ.

ಫೋ। ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಬುಧವಾರ ೨೩-೬-೪೮ [ಸಂಚಿಕೆ ೩೧೩

ಪಾಕೀಸ್ತಾನದಿಂದ ಹೈದ್ರಾಬಾದಿಗೆ ಅಸ್ತ್ರಗಳು

೨೦೦ ಮಂದಿ ಕಳ್ಳ ವ್ಯಾಪಾರಿಗಳು ಪೋಲೀಸರ ಮೇಲೆ ಬಿದ್ದರು

೨೫ ಪಲ್ಲ ಭತ್ತದ ಪತ್ತೆ

ಸ್ವಂ.ಮ] ಚಾಮರಾಜನಗರ ೨೨
ಈ ತಾಲ್ಲೂಕಿನ ಚಂದಕವಾಡಿ ಗ್ರಾಮಕ್ಕೆ ಸೇರಿದ ನಲ್ಲೂರಿನ ಸುಮಾರು ೨೦೦ ಮಂದಿ ಮುಸಲ್ಮಾನರು ಭರ್ಜಿ, ದೊಣ್ಣೆಗಳಿಂದ ಸಿದ್ಧರಾಗಿ ನಿನ್ನೆ ರಾತ್ರಿ ೨೫ ಪಲ್ಲ ಭತ್ತವನ್ನು ಗಡಿಯಿಂದ ಆಚೆಗೆ ಸಾಗಿಸಲು ಹವಣಿಸುತ್ತಿದ್ದರು ಈ ಅಂಶವು ಚಾಮರಾಜನಗರದ ಪೋಲೀಸರಿಗೆ ತಿಳಿದು ೫ ಮಂದಿ ಕಾನ್ಸ್‌ಟೇಬಲ್ಲುಗಳು ಸ್ಥಳಕ್ಕೆ ಹೋಗಿ ೩ ಜನರನ್ನು ದಸ್ತಗಿರಿ ಮಾಡಿದರು ಉಳಿದವರುಗಳು ಆಯುಧ ಪ್ರಯೋಗಿಸಿ ಪೋಲೀಸಿನವರ ಮೇಲೆ ಬೀಳಲು ಆತ್ಮರಕ್ಷಣೆಗಾಗಿ ಅವರು ಮೇಲಕ್ಕೆ ಗುಂಡು ಹಾರಿಸಿದರು. ಅನಂತರ ಅಕ್ರಮಕಾರರು ಹೊತ್ತಿದ್ದ ಭತ್ತದ ಹೊರೆಯನ್ನು ಬಿಸಾಡಿ ಓಡಿ ಹೋದರು. ಪೋಲೀಸಿನವರು ಮಹನೀಯರಿಂದ ೫ ಮಂದಿಯನ್ನು ದಸ್ತಗಿರಿ ಮಾಡಿ ಅವರನ್ನೂ ಮತ್ತು ಭತ್ತವನ್ನೂ ಚಾಮರಾಜನಗರಕ್ಕೆ ಸಾಗಿಸಿಕೊಂಡು ಬಂದರು

ಈ ಊರಿನಲ್ಲಿ ಕಳ್ಳಸಂತೆ ವ್ಯಾಪಾರ ಹೆಚ್ಚಾಗಿದೆ ಅಲ್ಲಲ್ಲೇ ಗೂಂಡಾ ವರ್ತನೆಗಳೂ ನಡೆಯುತ್ತಿವೆ, ಡಿಪೋಗಳಲ್ಲಿ ಅಕ್ಕಿಯು ಸಿಕ್ಕುವುದೇ ದುರ್ಲಭವಾಗಿ ರೂ.ಗೆ ೬ ಪಾವಿನಂತೆ ಕಾಳಸಂತೆಯಲ್ಲಿ ಕೊಳ್ಳಲು ಶಕ್ತಿಯಿಲ್ಲದ ಬಡ ನೌಕರರ ಗೋಳಂತೂ ಹೇಳತೀರದು ಈ ಅಂಶಗಳ ಬಗ್ಗೆ ಅಧಿಕಾರಿಗಳ ಗಮನ ಅಗತ್ಯವಾಗಿದೆ

ಮೌಲಾನಾ ಅಜಾದರಿಗೆ ಮಾನ ಪತ್ರ

ಬೆಂಗಳೂರು ೨೩
ಮುಂದಿನ ತಿಂಗಳು ೬ ನೇ ತಾ॥ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಲು ಇಲ್ಲಿಗೆ ಆಗಮಿಸಲಿರುವ ಕೇಂದ್ರ ಸರ್ಕಾರದ ವಿದ್ಯಾ ಸಚಿವರಾದ ಮೌಲಾನಾ ಅಬ್ದುಲ್ ಕಲಾಂ ಆಜಾದರಿಗೆ ಒಂದು ಮಾನಪತ್ರವನ್ನು ಅರ್ಪಿಸಬೇಕೆಂದು ಮೊನ್ನೆ ದಿನ ನಡೆದ ಪೌರಸಭೆಯಲ್ಲಿ ತೀರ್ಮಾನವಾಯಿತು ಇದಕ್ಕಾಗಿ ೧೦೦೦ ರೂ ಮಂಜೂರು ಮಾಡಲಾಯಿತು

ಗ್ರಾಮ ಪಂಚಾಯಿತಿಗಳನ್ನು ಅಭಿವೃದ್ಧಿಪಡಿಸಲು ಸಮಿತಿ

ಶಾಸನ ಸಭೆಯಲ್ಲಿ ಠರಾವು ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೨೩
ನಿನ್ನೆ ಶಾಸನ ಸಭೆಯಲ್ಲಿ ರೆವಿನ್ಯೂ ಬಾಬಿನ ಮೇಲೆ ಹಲವು ಠರಾವು ನಿರ್ಣಯಗಳು ಮಂಡಿಸಲ್ಪಟ್ಟವು. ಗ್ರಾಮ ಪಂಚಾಯಿತಿಗಳ ಆಡಳಿತವನ್ನು ಉತ್ತಮಪಡಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಶ್ರೀ ಟಿ ಮಾದಯ್ಯಗೌಡರ ಠರಾವು ನಿರ್ಣಯವನ್ನು ತಂದರು ಶ್ರೀ ಟಿ ಮರಿಯಪ್ಪನವರು ಉತ್ತರ ಕೊಟ್ಟು ಈ ಬಗ್ಗೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುವರೆಂದೂ, ಸಮಿತಿಯು ಅನವಶ್ಯಕವೆಂದೂ ತಿಳಿಸಿದರು ಆದರ ಮೇಲೆ ಅದನ್ನು ವಾಪಸು ತೆಗೆದುಕೊಳ್ಳಲಾಯಿತು

ಗ್ರಾಮಾಂತರಗಳಲ್ಲಿ ಮರಗಳನ್ನು ನೆಡುವುದನ್ನು ಪ್ರೋತ್ಸಾಹಿಸಲು ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಒಂದು ದಿನ ಮರ ನೆಡುವ ದಿನವೆಂದು ಘೋಷಿಸಬೇಕೆಂಬ ಮತ್ತೊಂದು ಠರಾವು ನಿರ್ಣಯಕ್ಕೆ ಶ್ರೀ ಟಿ. ಮರಿಯಪ್ಪನವರು ಉತ್ತರ ಕೊಟ್ಟು ಗ್ರಾಮಾಂತರ ಜನಗಳು ಮರಗಳನ್ನು ನೆಡುವುದನ್ನೇ ಬಿಟ್ಟಿರುವುದು ಶೋಚನೀಯವೆಂದೂ ಅದಕ್ಕೆ ಸರ್ಕಾರದವರು ಸರ್ವ ಸಹಾಯ ನೀಡುವರೆಂದೂ, ಜುಲೈ ೨೬ ನೇ ತಾರೀಖು ಗ್ರಾಮಾಂತರಗಳಲ್ಲಿ ಮರ ನೆಡುವ ಕಾರ್ಯವು ತೆಗೆದುಕೊಳ್ಳಲಾಗುವುದರಿಂದ ಎಲ್ಲರೂ ಸಹಕರಿಸಬೇಕೆಂದೂ ತಿಳಿಸಿದರು

... ತೋಟಗಳನ್ನು ಬೆಳೆಸಲು ಸರ್ಕಾರದವರು ಹೆಚ್ಚು ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಜನಾಬ್ ಸಯ್ಯದ್ ಅಬ್ದುಲ್ ರಹಿಮಾನರವರು ಠರಾವು ಪ್ರಯೋಗವನ್ನು ಮಂಡಿಸಿದರು. ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿರುವರೆಂದೂ ಮೈಸೂರು-ಬೆಂಗಳೂರು ರಸ್ತೆಯಲ್ಲಿ ೪೦ ಸಾವಿರ ಎಕರೆಗಳನ್ನು ಇದಕ್ಕಾಗಿ ರಿಜರ್ವ್ ಮಾಡಲಾಗಿದೆಯೆಂದೂ, ಕಾಡುಗಳನ್ನು ಬೆಳೆಸುವ ವಿಚಾರದಲ್ಲಿ ಸಂಶೋಧನೆ ನಡೆಸಲು ಒಂದು ಸಂಸ್ಥೆಯನ್ನು ತೆರೆಯಲಾಗಿದೆಯೆಂದೂ ಶ್ರೀ ಹೆಚ್ ಸಿ. ದಾಸಪ್ಪನವರು ಉತ್ತರ ಕೊಟ್ಟರು, ಎಲ್ಲ ಠರಾವು ನಿರ್ಣಯಗಳೂ ವಾಪಸು ತೆಗೆದುಕೊಳ್ಳಲ್ಪಟ್ಟವು ಅನಂತರ ಎಲ್ಲ ಬಾಬುಗಳ ಗ್ರಾಂಟುಗಳಿಗೂ ಮಂಜೂರಾತಿಯನ್ನು ಕೊಡಲಾಯಿತು.

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್

ಮೊದಲೇ ಸೂಚಿಸಿದ್ದಂತೆ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನವು

ಹೈದರಾಬಾದಿಗೆ ಕರಾಚಿಯಿಂದ ಶಸ್ತ್ರಗಳು

ಕಳೆದ ಕೆಲವು ವಾರಗಳಿಂದ ಹೈದರಾಬಾದಿಗೆ ವಿಮಾನದ ಮೂಲಕ ಶಸ್ತ್ರಾಸ್ತ್ರಗಳನ್ನು ಕರಾಚಿಯಿಂದ ಸರಬರಾಜು ಮಾಡಲಾಗುತ್ತಿದೆಯೆಂದು ವರದಿಯಾಗಿದೆ ಈ ಸ್ಥಳಕ್ಕೆ ಶಸ್ತ್ರಗಳನ್ನು ಗುಪ್ತ ರೀತಿಯಲ್ಲಿ ಹೇಗೆ ಪಾಕೀಸ್ತಾನವು ಸರಬರಾಜು ಮಾಡುತ್ತಿದೆಯೋ ಅದೇ ರೀತಿಯಲ್ಲೇ ಹೈದ್ರಾಬಾದಿಗೂ ಬಂದೂಕಗಳು, ಮದ್ದು ಗುಂಡು ಮತ್ತು ಇತರ ಯುದ್ಧ ಸಲಕರಣೆಗಳನ್ನು ಕಳುಹಿಸಲಾಗುತ್ತಿದೆ.

● ದೆಹಲಿಯಲ್ಲಿ ನಿನ್ನೆ ಪ್ರಾರಂಭವಾದ ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ, ಅಪರಾಧಿಗಳು ತಮ್ಮ ಮೇಲೆ ಹೊರಿಸಿರುವ ಆರೋಪಣೆಗಳನ್ನು ನಿರಾಕರಿಸಿ, ತಾವು ನಿರಪರಾಧಿಗಳೆಂದು ಹೇಳಿಕೆ ಕೊಟ್ಟಿರುತ್ತಾರೆ.

ಸಾವಿರ ರೂ.ಗಿಂತ ಹೆಚ್ಚಿಗೆ ಸಂಬಳ ಕೂಡದು

ಶಾಸನಸಭೆಯಲ್ಲಿ ಠರಾವು ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೨೩
ಸರ್ಕಾರಿ ಅಧಿಕಾರಿಗಳಿಗೆ ಸಾವಿರ ರೂ.ಗಿಂತ ಹೆಚ್ಚಿಗೆ ಸಂಬಳವನ್ನು ಕೊಡಕೂಡದೆಂದು ಶ್ರೀ ಕೆ ಆರ್ ಶ್ರೀನಿವಾಸರವರು ಈ ದಿನ ಶಾಸನ ಸಭೆಯಲ್ಲಿ ಸಾಮಾನ್ಯ ಆಡಳಿತ ಬಾಬಿನ ಮೇಲೆ ಒಂದು ಠರಾವು ನಿರ್ಣಯವನ್ನು ಮಂಡಿಸಿದರು. ಶ್ರೀಗಳಾದ ಗುರುವಪ್ಪ, ... ಮೊದಲಾದವರು ಅದನ್ನು ಸಮರ್ಥಿಸಿದರು. ಶ್ರೀಗಳಾದ ನೇ... ಮುನಾಬರಾವ್, ವೀರಪ್ಪ ಮುಂತಾದವರು ವಿರೋಧಿಸಿದರು. ಶ್ರೀ ... ಶೆಟ್ಟಿಯವರು ಉತ್ತರ ಕೊಟ್ಟು ಆವಶ್ಯಕತೆಯನ್ನು ಸರ್ಕಾರವು ಅಂಗೀಕರಿಸುವುದಾದರೂ ಈಗ ಸರ್ಕಾರದ ಅಧಿಕಾರಿಗಳು ... ಕಡಿಮೆ ಮಾಡಲಾಗುವುದೆಂದೂ ತಿಳಿಸಿದರು. ಅದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಪಠ್ಯಪುಸ್ತಕ ಸಮಿತಿಗೆ ಶ್ರೀಗಳಾದ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್, ಲಿಂಗೇಗೌಡ, ವೀರಪ್ಪ ಮತ್ತು ಎಂ ಎ. ಆಲಂ...ಗಳು ಚುನಾಯಿತರಾಗಿದ್ದಾರೆಂದು ಅಧ್ಯಕ್ಷರು ತಿಳಿಸಿದರು

ಜುಲೈ ೬, ೭ ಮತ್ತು ೮ ನೇ ತಾರೀಖುಗಳಲ್ಲಿ ಟೌನ್‌ಹಾಲಿಗೆ ಬದಲಾಗಿ ಲಾಲ್‌ಬಾಗಿನ ಗ್ಲಾಸ್ ಹೌಸಿನಲ್ಲಿ ಜರುಗುವುದು ● ದಕ್ಕಾಗಿ ೨೦೦ ಮಂದಿ ಸ್ವಯಂಸೇವಕರು ಬೇಕಾಗಿದ್ದಾರೆ ಸ್ವಯಂ ಸೇವಕರಾಗಿ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಕೂಡಲೇ ತಮ್ಮ ಹೆಸರುಗಳನ್ನು ಆರಳೇಪೇಟೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ತಿಳಿಸಬೇಕಾಗಿ ಕೋರಲಾಗಿದೆ.

ಮುಳಬಾಗಿಲು ರೈತರಿಗೆ ೫ ಸಾವಿರ ರೂ.

... ಮುಳಬಾಗಿಲು ತಾಲ್ಲೂಕಿನ ೬೩ ಕೆರೆಗಳ ಅಚ್ಚುಕಟ್ಟು ಜಮೀನುಗಳಿಗೆ ... ಸಾಲಿನಲ್ಲಿ ಸರಿಯಾಗಿ ಮಳೆಯಾಗದೆ ಫಸಲು ನಷ್ಟವಾಗಿರುವುದರಿಂದ ಆ ತಾಲ್ಲೂಕಿನ ಸರ್ಕಾರಿ ಜಮೀನ ಕಂದಾಯದಲ್ಲಿ ... ರೂ ಗಳನ್ನು ರಿಮಿಷನ್ ... .

... ವರ ನಿಧನ

... ಕಿರಿಯ ... ಪ್ಪನವರು ತಮ್ಮ ... ೬೬ ... ಬೆಂಗಳೂರಿನಲ್ಲಿ ... ಅವರಿಗೆ ... ಪುತ್ರರೂ ಇದ್ದಾರೆ

ಹೊಸ ತೆರಿಗೆಗಳ ವಿಚಾರ ಮುಂದಕ್ಕೆ ಹೋಯಿತು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೨೨

ಪೌರಸಭೆಯ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಲು, ಕೆಲವು ತೆರಿಗೆಗಳನ್ನು ಹಾಕಬೇಕೆಂದು ಸೂಚಿಸಿರುವುದನ್ನು ಪರಿಶೀಲಿಸಲು ನಿನ್ನೆ ಪುರಸಭೆಯ ವಿಶೇಷ ಅಧಿವೇಶನವು ನಡೆಯಿತು.

ಶ್ರೀಗಳಾದ ಶಂಕರಯ್ಯ, ಕೃಷ್ಣಮೂರ್ತಿ, ಗೋಪಾಲಕೃಷ್ಣ ಶೆಟ್ಟಿ, ಲಿಂಗಣ್ಣ, ಎ ವೆಂಕಟೇಶಯ್ಯ, ಡಾ|| ಸೂರ್ಯನಾರಾಯಣರಾವ್, ರೆ ಸಿದ್ದಯ್ಯ ಮೊದಲಾದವರು ಮಾತನಾಡಿ, ಪುರಸಭೆಗಳ ಆಡಳಿತದಲ್ಲಿ ಅನೇಕ ಲೋಪದೋಷಗಳಿವೆಯೆಂದೂ ದಕ್ಷತೆಯಿಂದ ಕೆಲಸ ನಡೆಯುತ್ತಿಲ್ಲವೆಂದೂ ತಿಳಿಸಿದರು. ಜನಗಳ ಕುಂದುಕೊರತೆಗಳನ್ನು ನಿವಾರಿಸದೆ ಹೆಚ್ಚು ತೆರಿಗೆಗಳನ್ನು ಹಾಕುವುದರಿಂದ ಉಪಯೋಗವಿಲ್ಲವೆಂದೂ ಅವರು ಹೇಳಿದರು. ಬಡ್ಜೆಟ ಪರಿಶೀಲನಾ ಸಭೆಯಲ್ಲಿ ನೂತನ ತೆರಿಗೆಗಳ ಪರಿಶೀಲನೆಯನ್ನು ತೆಗೆದುಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

ಈಗಾಗಲೇ ಪುರನಿವಾಸಿಗಳ ಮೇಲೆ ವಿಶೇಷವಾದ ತೆರಿಗೆಯ ಹೊರೆಯು ಬಿದ್ದಿರುವುದರಿಂದ ಇನ್ನೂ ಹೆಚ್ಚಿನ ಭಾರವನ್ನು ಹಾಕಬಾರದೆಂದು ಹಲವರು ಸೂಚಿಸಿದರು. ಪೌರಸಭೆಯು ಹುಟ್ಟುವಳಿಯಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚಾಗಿ ಸಂಬಳ, ಕಟ್ಟೆ ಭತ್ಯ ಮುಂತಾದುವುಗಳಿಗೆ ವಿನಿಯೋಗವಾಗುವುದರಿಂದ ಜನೋಪಕಾರದ ಕಾರ್ಯಗಳಿಗೆ ಹಣವೇ ಇಲ್ಲದಂತಾಗಿದೆಯೆಂದು ಇನ್ನು ಕೆಲವರು ಸೂಚಿಸುವಂತೆ ಮೇಲೆ ತೆರಿಗೆಯ ಹೊರೆಯು ಬೀಳದಂತೆ ಮಾಡಿ ಅನುಕೂಲಸ್ಥರಿಂದ ಅದನ್ನು ವಸೂಲು ಮಾಡಬೇಕೆಂದೂ ತಿಳಿಸಿದರು.

ಕಮಿಷನರು ಒಂದು ಹೇಳಿಕೆಯನ್ನಿತ್ತು ಪೌರಸಭೆಯಲ್ಲಿ ವರ್ಷೇ ವರ್ಷೇ ಯಾವ ರೀತಿ ಹೆಚ್ಚಿನ ವರಮಾನವು ಬರುತ್ತಿದೆಯೆಂಬುದನ್ನೂ ಖರ್ಚುವು ಹೆಚ್ಚುತ್ತಿದೆಯೆಂಬುದನ್ನೂ ವಿವರಿಸಿದರು.

ಹರಾಜು ಇಸ್ತಿಹಾರ್

ಮೈಸೂರು ಸರ್ಕಾರದ ಬಿಲ್ಡಿಂಗ್ಸ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ರವರ ಆಫೀಸಿಗೆ ಸೇರಿದ ಹಳೆಯ ಸಾಮಾನುಗಳನ್ನು (ಮರ, ಕಬ್ಬಿಣ, ಕೊಳಾಯಿ ಮತ್ತು ಎಲೆಕ್ಟ್ರಿಕ್ ಸಾಮಾನು) ಇದೇ ಆಫೀಸ್ ಕಾಂಪೌಂಡಿನಲ್ಲಿ ೨೮-೬-೪೮ ರ ಮಧ್ಯಾಹ್ನ ೩ ಘಂಟೆಯಿಂದ ೫ ಘಂಟೆಯವರೆಗೆ ಬಹಿರಂಗ ಹರಾಜು ಮಾಡಲಾಗುವುದು. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಹರಾಜು ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟು ಹರಾಜಿನಲ್ಲಿ ಸವಾಲ್ ಮಾಡಬಹುದು.

ಹರಾಜಿನ ಸಾಮಾನುಗಳ ವಿವರವನ್ನು ಇದೇ ಆಫೀಸಿನಲ್ಲಿ ನೋಡಲು ಆಫೀಸ್ ಕಾಲದ ವೇಳೆಯಲ್ಲಿ ಅವಕಾಶವಿರುತ್ತೆ.

ಟಿ. ಮುಚ್ಚವೀರಯ್ಯ,
ಎಕ್ಸಿಕ್ಯೂಟಿವ್ ಇಂಜನಿಯರ್,
ಬಿಲ್ಡಿಂಗ್ಸ್ ಡಿವಿಜನ್, PWD
ಮೈಸೂರು.

ಹೋಟೇಲು ಮುಂದೆ ಗಲಭೆ ನಡೆಸಿದುದಕ್ಕೆ ಜುಲ್ಮಾನೆ

ಮೈಸೂರು ೨೨

ಮೈಸೂರು ಹೋಟೇಲು ಕೆಲಸಗಾರರ ಸಂಘದ ಶ್ರೀಗಳು ಕೆ ಸುಬ್ಬರಾವ್ ಮತ್ತು ರಾಮಚಂದ್ರರಾವ್ ರವರುಗಳು ಕಳೆದ ೧೬ನೇ ತಾ|| ರೈಲ್ವೆ ನಿಲ್ದಾಣದ ಹೋಟೇಲಿನಲ್ಲಿ ನಡೆದ ಮುಷ್ಕರದ ಸಂಬಂಧದಲ್ಲಿ ಗಲಾಟೆ ಮಾಡಿದರೆಂದು ಅವರ ಮೇಲೆ ಪೋಲೀಸರು ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು. ಅವರುಗಳಿಗೆ ತಲಾ ೪ ರೂ ಜುಲ್ಮಾನೆಯನ್ನು ವಿಧಿಸಲಾಗಿದೆ.

ಪ್ರೆಸ್ ಬದಲಾವಣೆ

ದಿವಂಗತ ವೆಂಕಟಪ್ಪಯ್ಯನವರಿಂದ ಸ್ಥಾಪಿಸಲ್ಪಟ್ಟ ಶ್ರೀ ನರಹರಿ ಪ್ರೆಸ್ಸನ್ನು ರಾಮರಾಜಾ ಅಗ್ರಹಾರದಿಂದ ತ್ಯಾಗರಾಜ ರಸ್ತೆ, ನಂ. ೧೩೮, ಧನ್ವಂತರಿ ಆಯುರ್ವೇದ ಔಷಧಾಲಯದ ಎದುರು ಮಳಿಗೆಗೆ ಬದಲಾಯಿಸಲಾಗಿದೆಯೆಂದು ತಿಳಿಸಲಾಗಿದೆ.

ಧನ ಸಹಾಯ

ಬೆಜವಾಡದ ರಾವ್ ಸಾಹೇಬ್ ಡಿ ಗೋವಿಂದರಾಜುಲುರವರು ತಮ್ಮ ಪುತ್ರ ಶ್ರೀ ರಾಜಾರಾಂ ಮತ್ತು ಚಿ|| ಸೌ|| ಶಕುಂತಲರವರ ವಿವಾಹ ಸಂಬಂಧದಲ್ಲಿ ರಾಜಧಾನಿಯ ಬಲಿಜಾ ಸಂಘಕ್ಕೆ ೧೦೦ ರೂ. ಗಳನ್ನು ಕೊಟ್ಟಿರುತ್ತಾರೆ.

UNIVERSITY OF MYSORE.

Office of the University of Mysore,

Mysore, dated the 18th June 48.

NOTIFICATION

No Ex. 1-1067/47-48

Applications for admission to University Institutions will be received by the Heads of Institutions concerned up to 1st July 1948.

Applications must be accompanied by the leaving certificate and other certificates as well as a certified statement of marks obtained at the qualifying examination passed, showing the year or years in which it was passed. Copies of marks cards certified by Gazetted Officers may be attached by students who wish to apply for admission to more than one College.

Candidate coming from a University other than the Mysore University must produce a migration certificate in addition to the above certificates. Forms of application may be had from the Heads of Institutions concerned. Every application for admission to a College should be accompanied by a fee of one rupee and this fee will not be refunded in any case.

Names of selected candidates for admission will be notified on the Notice Board of the institution one week after the receipt of applications. A selected candidate not joining the Institution within a week of the Notification will forfeit his admission.

By order,
D. S. GORDON,
Registrar.

Edited printed and published by A. Nagarajan at the Sadhvi Press D Subbaiah Road Mysore

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪ್ರೂವರ್

ಗಾಂಧೀಜಿಯವರ ಕೊಲೆ ಮೊಕದ್ದಮೆಯು ನಿನ್ನೆ ದೆಹಲಿಯ ಕೆಂಪು ಕೋಟೆಯಲ್ಲಿ ಪ್ರಾರಂಭವಾಯಿತು. ಆಪಾದಿತರುಗಳ ಪೈಕಿ, ೩ ಜನರು ಪತ್ತೆ ಇಲ್ಲವೆಂದೂ, ದಿಗಂಬರ ಬ್ಯಾಡ್ಗೆ ಎಂಬುವನಿಗೆ ಕ್ಷಮೆತೋರಿಸಿ ಅಪ್ರೂವರಾಗಿ ತೆಗೆದುಕೊಳ್ಳಲಾಗಿದೆಯೆಂದೂ ಕೋರ್ಟಿನಲ್ಲಿ ತಿಳಿಸಲಾಯಿತು. ಮಿಕ್ಕವರುಗಳ ಮೇಲೆ ನ್ಯಾಯಾಧೀಶರು ಆಪಾದನೆಗಳನ್ನು ಹೊರಿಸಿದರು.

ನಿಜಾಂ ಗೂಢಚಾರನ ದಸ್ತಗಿರಿ

[illegible]ಪುರದಲ್ಲಿ ನಿಜಾಮರ ಗೂಢಚಾರನಾಗಿ ಕೆಲಸಮಾಡುತ್ತಿದ್ದನೆಂದು ಅಲ್ಲಿನ ಮುಸ್ಲಿಂ ಪೋಲೀಸ್ ಹೆಡ್ ಕಾನ್ಸ್ಟೇಬಲ್ ನೊಬ್ಬನನ್ನು ದಸ್ತಗಿರಿ ಮಾಡಲಾಗಿದೆ.

ವಿದ್ಯಾರ್ಥಿ ನಿಲಯಕ್ಕೆ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಮಾನ್ಯ ಸಚಿವರುಗಳು ಕೆಳಗೆ ಕಂಡಂತೆ ಧನ ಸಹಾಯ ಮಾಡಿರುತ್ತಾರೆ. ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ೨೫ ರೂ ಶ್ರೀಗಳಾದ ಕೆ ಸಿ ರೆಡ್ಡಿ, ಮಹಮದ್ ಷರೀಫ್ ಪಿ ಸುಬ್ಬರಾಮಶೆಟ್ಟಿ, ಟಿ ಮರಿಯಪ್ಪನವರು ತಲಾ ೧೦ ರೂ ಶ್ರೀ ಚನ್ನಿಗರಾಮಯ್ಯನವರು ೫ ರೂ ಶ್ರೀ ಹೆಚ್ ಸಿ ದಾಸಪ್ಪನವರು ತಿಂಗಳಿಗೆ ೫ ರೂ.

ಅಪ್ಪಟ
ಹಸುವಿನ ಹಾಲು
ದೊರೆಯುತ್ತೆ
ಮಕ್ಕಳಿರುವ ಮನೆಗಳಿಗೆ
ರಿಯಾಯಿತಿ ಇದೆ
ಮಾಯಣ್ಣ ಅಂಡ್ ಸನ್ಸ್,
೧೨೪೮, ನಾರಾಯಣಶಾಸ್ತ್ರಿ ರಸ್ತೆ,
ದೇವರಾಜ ಮೊಹಲ್ಲಾ, ಮೈಸೂರು

||ಶ್ರೀ||
ಗಾಯತ್ರಿ ಟಾಕೀಸ್
[ಚಾಮರಾಜ ರೋಡ್]
ತಾ|| ೧೮-೬-೪೮ ರಿಂದ
ನಾಳೆ ಕಡೇ ದಿನ
ಪ್ರತಿ ದಿನ ೩ ಆಟಗಳು
ಸಿಂದ್ ಬಾದ್ -
- ದಿ ಸೈಲರ್
ವರ್ಣರಂಜಿತ ಚಿತ್ರ

ನೋಟೀಸು

ಮಹಾಜನಗಳಿಗೆ ತಿಳಿಸುವುದೇನೆಂದರೆ - ನಮ್ಮಲ್ಲಿ ಕೆಲಸದಲ್ಲಿದ್ದ ಶ್ರೀ ಸಿ ಎಸ್. ರಾಮರ್ ಎಂಬುವರು ೨೦-೬-೪೮ ರಿಂದ ನಮ್ಮಲ್ಲಿ ಕೆಲಸ ಬಿಟ್ಟಿರುತ್ತಾರೆ. ಆದ್ದರಿಂದ ಅವರು ನಮ್ಮ ಪರವಾಗಿ ಯಾವ ವ್ಯವಹಾರವನ್ನೂ ಮಾಡಲು ಹಕ್ಕಿರುವುದಿಲ್ಲ. ಹಾಗೇನಾದರೂ, ಯಾರಾದರೂ ಆ ರೀತಿ ವ್ಯವಹಾರ ಮಾಡಿದಲ್ಲಿ ಅದಕ್ಕೆ ನಾವು ಯಾವ ವಿಧದಲ್ಲೂ ಜವಾಬ್ದಾರರಲ್ಲ.

ಇ. ಪಿ. ಪಾಲಂಜೀ,
ಆಟೋಮೊಬೈಲ್ ಇಂಜನಿಯರ್,
ಸಂಬೂಚೆಟ್ಟಿ ರಸ್ತೆ, ಮೈಸೂರು.

ಸಿಗರೇಟು ಹತ್ತಿಸಲು ಹಳೇ ನೋಟುಗಳು

ಪಶ್ಚಿಮ ಜರ್ಮನಿಯ ಕ್ಷೇತ್ರದಲ್ಲಿ ನೂತನ ನೋಟುಗಳ ಚಲಾವಣೆಯನ್ನು ಜಾರಿಗೆ ತರಲು ರಹಸ್ಯವಾಗಿ ಆ ಗಡಿ ಪ್ರದೇಶವನ್ನೆಲ್ಲಾ ಭದ್ರಪಡಿಸಿ ಹೊರಕ್ಕೆ ಹಳೇ ನೋಟುಗಳು ಹೋಗದಂತೆ ಕಾರ್ಯಕ್ರಮ ತೆಗೆದುಕೊಂಡಿರುತ್ತದೆ. ಹಳೇ ನೋಟುಗಳನ್ನು ವಿನಿಯೋಗಪಡಿಸಲು ಇದೇ ೧೯ ನೇ ತಾ|| ಕೊನೆಯ ದಿನವಾದ್ದರಿಂದ, ಸಾವಿರಾರು ಜರ್ಮನರು ಅದನ್ನು ಕೊಟ್ಟು ಸಾಮಗ್ರಿಗಳನ್ನು ತೆಗೆದುಕೊಳ್ಳಲು ತವಕಪಡುತ್ತಿದ್ದರು. ಅಮೆರಿಕ ಆಕ್ರಮಿತ ಜರ್ಮನಿಯ ರಾಜಧಾನಿಯಾದ ಫ್ರಾಂಕ್ ಫೋರ್ಟಿನಲ್ಲಿ ಅನೇಕರು ಹಳೇ ನೋಟುಗಳಿಂದ ಯಾವ ಪ್ರಯೋಜನವೂ ಇಲ್ಲದುದನ್ನು ಕಂಡು ಅವುಗಳಿಂದ ಸಿಗರೇಟುಗಳನ್ನು ಹತ್ತಿಸಿ ಕೊಳ್ಳುತ್ತಿದ್ದಾರೆಂದು ವರದಿಯಾಗಿದೆ.

ಕುಂಚಿಟಿಗರ ಸಂಘ ಹಾಸ್ಟಲ್

ಮೇಲ್ಕಂಡ ವಿದ್ಯಾರ್ಥಿ ನಿಲಯವು ತಾ|| ೧೭-೬-೪೮ ರ ಲಾಗಾಯ್ತು ನಡೆಯಲು ಏರ್ಪಡಿಸಿದೆ. ನಿಲಯಕ್ಕೆ ಸೇರಲು ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ತಾ|| ೨೮-೬-೪೮ ರ ಒಳಗಾಗಿ ತಲಪುವಂತೆ ಸೆಕ್ರೆಟರಿಯವರ ಹೆಸರಿಗೆ ಅಪ್ಲಿಕೇಷನ್ ಕಳುಹಿಸತಕ್ಕದ್ದು. ಕಾಲಕ್ಕೆ ಸರಿಯಾಗಿ ಬರದೇ ಇರುವ ಅಪ್ಲಿಕೇಷನುಗಳನ್ನು ಅಂಗೀಕರಿಸುವುದಿಲ್ಲ.

ಪ್ರಭಾ ಪಿಕ್ಚರ್ ಹೌಸ್
25—6—48ರಿಂದ
ಅಮೋಘ ಪ್ರಾರಂಭ
ಪಿ ಆರ್ ಪ್ರೊಡಕ್ಷನ್ಸ್ ರವರ
ಅರೇಬಿಯನ್ ನೈಟ್ಸ್
[ಹಿಂದಿ]

—: ಪಾತ್ರ :—
● ಶನನ್ ಬಾಲಾ, ನವಾಬ್ ●
○ ಇತರರು ○
ಕಮಲದಾಸ್ ಗುಪ್ತರವರ ಸುಮಧುರ
—— ಸಂಗೀತ ——
ಪ್ರತಿ ದಿನ ಮೂರು ಆಟಗಳು
24-6-48 ನೇ ಗುರುವಾರದಿಂದ
ಸೆಂಟ್ರಲ್ ಸ್ಟುಡಿಯೋಸ್ ರವರ
★ ಮಿಟಿ ★
[ಹಿಂದಿ]
ಪಾತ್ರ,— ಖುರ್ಷಿದ್, ಸಾದಿಕ್ ಅಲಿ
ಒಲಂಪಿಯಾ ಟಾಕೀಸ್

ಪೋ। ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಗುರುವಾರ ೨೪-೬-೪೮ [ಸಂಚಿಕೆ ೩೧೪

ಜನಾನಾ ರಜಕಾರರು; ಬೇಗಂ ರಜ್ವಿ ನಾಯಕತ್ವ

...ವಳಿ ಅಂಗಡಿಗೆ ಮೋಟಾರು ನುಗ್ಗಿ ಇಬ್ಬರ ಮರಣ

ಮೈಸೂರು ೨೪

...ನ್ನೆ ಸಂಜೆ ೫-೧೫ಕ್ಕೆ ಗಂಟೆ ಸಮಯದ ...ಶ್ರೀ ಬಿ ತಿಮ್ಮಯ್ಯನವರ ಮೋಟಾರು ...(ನಂ MYZ 7542) ಹೊಸ್ತ ಗಡಿ ...ರದ ಕಡೆಯಿಂದ ಅತಿವೇಗದಿಂದ ರಸ್ತೆಯು ...ಗವಾಗಿ ಹೋಗುತ್ತಿತ್ತು. ಅಲ್ಲಿ ಶ್ರೀ ...ತಯ್ಯನವರ ಬಳೆ ಅಂಗಡಿ ಎದುರು ...ಯಿಂದ ಗಾಡಿ ಹಾಯುತ್ತಿದ್ದ ಒಬ್ಬ ಹುಡುಗ ...ಸೈಕಲ್ ಮೇಲೆ ಬರುತ್ತಿದ್ದನು ...ಟಾರು ಮತ್ತು ಸೈಕಲ್‌ಗಳಿಗೆ ...ಯಾಗಿ ಆ ರಭಸಕ್ಕೆ ಸಿಲುಕಿ ಮೋಟಾ ...ಟಾರ್ ಮೇಲೆ ಹಾರಿ ಉಳಿದ ... ...ನಿಗೆ ಗಾಯವಾಗಿ ಮೋಟಾರು ಅವನ ...ತಪ್ಪಿ ಮುಂದೆ ಶ್ರೀ ಎ ಟಿ ನರಸಿಂಹ ...ಯ್ಯನವರ ಅಂಗಡಿ ಒಳಗೆ ನುಗ್ಗಿತು. ಅಲ್ಲಿ ...ವ್ಯಾಪಾರಕ್ಕೆ ಬಂದಿದ್ದ ಇಬ್ಬರು ಹೆಂಗಸರು ...ಅಂಗಡಿಯಿಂದ ಹೊರಗೆ ಬಂದರು ಒಬ್ಬ ...ಗಸಿನ ಮೇಲೂ ಮತ್ತು ಶ್ರೀ ನರಸಿಂ ...ಹ್ಮಯ್ಯನವರ ಅಳಿಯಂದಿರಾದ ಶ್ರೀ ನಾಗ ...ನವರ ಮೇಲೂ ಮೋಟಾರು ಹರಿದು ...ಸ್ಥಳದಲ್ಲೇ ಮೃತಪಟ್ಟರು. ಹೆಂಗಸರ ಬಳಿ ...ದ್ದ ಒಂದು ಮಗುವಿಗೂ ಮತ್ತು ಸೈಕಲ್ ...ನಿಗೂ ಸ್ವಲ್ಪ ಗಾಯಗಳಾಗಿವೆ. ಪೋಲೀಸ ...ತನಿಖೆ ನಡೆಯುತ್ತಿದೆ

ಚಾಮರಾಜೇಂದ್ರ ಟೆಕ್ನಾಲಜಿಕಲ್ ಬಾಲಾ ... ಸಂಘ

...ರಾಜಧಾನಿಯ ಶ್ರೀ ಚಾಮರಾಜೇಂದ್ರ ...ಟೆಕ್ನಿಕಲ್ ಶಾಲೆಯ ... ಸಂಘ ...ನಿನ್ನೆ ಶ್ರೀ ಕೆ ... ಸ್ವಾಮಿಯವರ ...ಧ್ಯಕ್ಷತೆಯಲ್ಲಿ ನಡೆದು, ಒಂದು ಸಂಘದ ... ಅವರು ಶ್ರೀ ಬಿ ...ವರ್ಷಕ್ಕೆ ಕಾರ್ಯದರ್ಶಿಯಾಗಿಯೂ ...ನಂಜುಂಡಯ್ಯನವರನ್ನು ಉಪಾಧ್ಯಕ್ಷ ...ಗಿಯೂ ಶ್ರೀ ಕೆ. ಎಸ್ ವಿಶ್ವೇಶ್ವರ ...ಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ ...ವೆಂಕಟಯ್ಯನವರನ್ನು ... ...ಗಿಯೂ ಆರಿಸಲಾಯಿತು.

ಟಿಕೆಟ್ ಇಲ್ಲದ ಪ್ರಯಾಣಿಕರ ಪತ್ತೆ

ಮೈಸೂರು-ಬೆಂಗಳೂರು ರೈಲಿನಲ್ಲಿ ... ...೧೮ನೇ ತಾ॥ ಟಿಕೇಟು ಇಲ್ಲದೆ ಪ್ರ ...ಯಾಣ ಮಾಡುತ್ತಿದ್ದ ೫೪ ಜನರನ್ನು ...ರೈಲ್ವೆ ... ...ಮಂಗಳವಾರ ... ದಿನ ...ಸ್ಟೇಷನ್‌ನಲ್ಲಿ ೫೪ ಜನರನ್ನು ರೈಲ್ವೆ ಟಿ ...ಕೆಟ್ ಎಕ್ಸಾಮಿನರುಗಳು ಪತ್ತೆ ಮಾಡಿದರು

ವಜ್ರದಿಂದ ತಯಾರಾದ ರತ್ನದ ಧೂಪಟಿ

ವಜ್ರ ಮತ್ತು ಇತರ ಅಮೂಲ್ಯ ರತ್ನ ...ಗಳನ್ನು ಹಾಕಿ ಒಂದು ಚಿನ್ನದ ಧೂಪಟಿಯೊಂ ...ದನ್ನು ರಷ್ಯದಲ್ಲಿ ತಯಾರಿಸಲಾಗಿದೆಯೆಂ ...ದೂ ಅದನ್ನು ಲೆನಿನ್‌ಗ್ರಾಡ್ ಆರ್ಟಿಸನ್‌ನಲ್ಲಿ ...ದರ್ಶನಕ್ಕೆ ಇಡಲಾಗಿದೆಯೆಂದೂ ವರದಿ ...ಯಾಗಿದೆ. ಅದಕ್ಕೆ ೧೬೦೦ ವಿದ್ಯುಚ್ಛಕ್ತಿ ದೀ ...ಪಗಳನ್ನು ಹಾಕಲಾಗಿದೆ. ರಷ್ಯದ ಪ್ರತಿ ...ಒಂದು ಪಟ್ಟಣವನ್ನೂ ವಜ್ರಗಳಿಂದ ...ತೋರಿಸಲಾಗಿದೆ

ಬಿಸಿಲಿನ ತಾಪದಿಂದ ವರನ ಮರಣ

ಉತ್ತರ ಪ್ರದೇಶದ ... ಮದುವೆಗೋ ...ಹೋಗಿದ್ದ ಒಂದು ತಂಡದ ...ಪೈಕಿ ಅಲ್ಲಿನ ಬಿಸಿಲಿನ ತಾಪವನ್ನು ತಡೆ ...ಯಲಾರದೆ ವರನು ಮೃತಪಟ್ಟನೆಂದೂ, ಎ ...ಲ್ಲ ಹಾಗೆಯೇ ಹಿಂದಿರುಗಬೇಕಾಯಿ ...ತೆಂದೂ ಹೇಳಲಾಗಿದೆ.

ಹೈದರಾಬಾದ್— ಭಾರತ ಒಪ್ಪಂದಕ್ಕೆ ಬ್ರಿಟನ್ನಿನ ಮಧ್ಯಸ್ಥಿಕೆಯಿಲ್ಲ

ಹೈದರಾಬಾದ್ ಮತ್ತು ಭಾರತಗಳಿಗೆ ಒಪ್ಪಂದವನ್ನು ಉಂಟುಮಾಡಲು ಬ್ರಿಟನ್ನು ಮಧ್ಯಸ್ಥಿಕೆ ವಹಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಮಿ॥ ಚರ್ಚಿಲ್‌ರವರು ಸೂಚಿಸಿದರು ಬ್ರಿ॥ ವಿದೇಶಾಂಗ ಮಂತ್ರಿ ಮಿ॥ ಬೆವಿನ್‌ರವರು ಉತ್ತರವಿತ್ತು ಈ ವಿಷಯದಲ್ಲಿ ಬ್ರಿಟನ್ನು ಪ್ರವೇಶಿಸುವುದಿಲ್ಲವೆಂದು ತಿಳಿಸಿದರು

ಜರ್ಮನಿಯಲ್ಲಿ ಪುರುಷರ ಅಭಾವ

ಜರ್ಮನಿಯಲ್ಲಿ ಗಂಡಸರ ಅಭಾವವು ಹೆಚ್ಚಿರುವುದರಿಂದ ಅಲ್ಲಿನ ೬೦ ಲಕ್ಷ ಜನ ತರುಣಿಯರು ವಿವಾಹವಿಲ್ಲದೆ ಕನ್ಯಾವಸ್ಥೆಯಲ್ಲಿರಬೇಕಾದ ಸಂದರ್ಭವೊದಗಿದೆಯೆಂದೂ, ಇಲ್ಲದಿದ್ದರೆ ಅವರೆಲ್ಲರೂ ಇರುವ ವಿವಾಹಿತ ಪುರುಷರನ್ನೇ ಹಂಚಿಕೊಂಡು ಬಾಳಬೇಕಾಗಿದೆಯೆಂದೂ ತಿಳಿದುಬಂದಿದೆ

ಜ್ವಾಲಾಮುಖಿಯಿಂದ ವಿದ್ಯುಚ್ಛಕ್ತಿ

ಸುಪ್ರಸಿದ್ಧ ವಿಸೂವಿಯಸ್ ಜ್ವಾಲಾಮುಖಿಯನ್ನು ವಿದ್ಯುಚ್ಛಕ್ತಿ ತಯಾರಿಕೆಗಾಗಿ ಉಪಯೋಗಿಸಲು ಅಮೇರಿಕವು ೬೦೦ ಲಕ್ಷ ಡಾಲರುಗಳನ್ನು ಖರ್ಚು ಮಾಡುವುದೆಂದೂ ಇದರಿಂದ ೬೫ ಸಾವಿರ ಕಿಲೋವಾಟ್‌ನಷ್ಟು ವಿದ್ಯುಚ್ಛಕ್ತಿ ತಯಾರಾಗುವುದೆಂದೂ ಹೇಳಲಾಗಿದೆ

ರಜಾಕರರಿಗೆ ಸಹಾಯಕರಾದ ಪುರಸಭಾ ಸದಸ್ಯರ ದಸ್ತಗಿರಿ

ಕರ್ನೂಲಿನ ಪೌರಸಭೆಯ ಇಬ್ಬರು ಸದಸ್ಯರುಗಳೂ ಒಬ್ಬರು ಬೆಂಚ್ ಮ್ಯಾಜಿಸ್ಟ್ರೇಟರೂ ಮತ್ತು ನಾಲ್ಕು ಜನ ಮುಸ್ಲಿಮರೂ ರಜಾಕರರಿಗೆ ಸಹಾಯಕರಾಗಿದ್ದರೆಂದು ಅವರುಗಳನ್ನು ಪೋಲೀಸರು ಮೊನ್ನೆ ದಿನ ದಸ್ತಗಿರಿ ಮಾಡಿದರು

ಎಣ್ಣೆ ಮಾರಾಟದ ಮೇಲೆ ನಿಜಾಮರ ನಿಷೇಧ

ಹೈದರಾಬಾದಿನಲ್ಲಿರುವ ಬರ್ಮಾ ಷೆಲ್ ಸ್ಟ್ಯಾಂಡರ್ಡ್ ವ್ಯಾಕ್ಯೂಂ ಮತ್ತು ಕಾಲ್‌ಟೆಕ್ಸ್ ಕಂಪೆನಿಗಳ ಮ್ಯಾನೇಜರುಗಳ ಮೇಲೆ ನಿಜಾಂ ಸರ್ಕಾರದವರು ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿ ಮಿಷನ್ ಎಣ್ಣೆಯನ್ನು ಯಾರಿಗೂ ವಿಕ್ರಯ ಮಾಡಕೂಡದೆಂದು ತಿಳಿಸಿರುತ್ತಾರೆ

ಗ್ರೀಸಿನ ಗೋರಿಲ್ಲಾಗಳ ಮೇಲೆ ಧಾಳಿ

ಪಶ್ಚಿಮ ಮೆಸಿಡೋನಿಯಾದಲ್ಲಿರುವ ಗೋರಿಲ್ಲಾ ಪಡೆಗಳ ಮುಖ್ಯ ಠಾಣ್ಯವಾದ ಗ್ರಾಮೋಸ್‌ಮೇಲೆ ಗ್ರೀಕ್ ಸರ್ಕಾರದ ಸೈನಿಕರು ಭಾರಿ ಧಾಳಿಯನ್ನು ಆರಂಭಿಸಿದ್ದಾರೆ ಗೋರಿಲ್ಲಾ ಪಡೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಲು ೬ ಡಿವಿಜನ್ ಸೈನ್ಯವನ್ನು ಧಾಳಿಗಾಗಿ ಕಳುಹಿಸಲಾಗಿದೆ

ಇನ್ನು ಮುಂದೆ ಭಾರತ ಚಕ್ರವರ್ತಿ ಎಂಬ ಬಿರುದಿಲ್ಲ

ಬ್ರಿಟಿಷ್ ದೊರೆಗಳು ಇನ್ನು ಮುಂದೆ ಭಾರತ ಚಕ್ರವರ್ತಿ ಎಂಬ ಬಿರುದನ್ನು ತ್ಯಜಿಸುವ ವಿಷಯವು ಲಂಡನ್ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ ಇದರ ಫಲವಾಗಿ ಇಂಗ್ಲೀಷ ನಾಣ್ಯಗಳು, ದಸ್ತಾವೇಜುಗಳು, ಪದಕಗಳು ಮತ್ತು ಸ್ಟಾಂಪುಗಳಿಂದ ಈ ಬಿರುದನ್ನು ತೆಗೆದು ಹಾಕಲಾಗುವುದೆಂದು ತಿಳಿದುಬಂದಿದೆ

ಹಳ್ಳದಲ್ಲಿ ನಿಲ್ಲಿಸಿ ಗುಂಡಿನಿಂದ ಹೊಡೆದರು

ರಜಾಕಾರರು ಛಳ್ಳಲ್ಲಪಾಡು ಎಂಬ ಗ್ರಾಮದ ಮೇಲೆ ಧಾಳಿ ನಡೆಸಿ ಅಲ್ಲಿನ ಮುಖ್ಯ ವಯಸ್ಕರಾದ ನೂರು ಮಂದಿಯನ್ನು ಮನೆಸ್ಸು ಬಂಧಿಸಿ ಹೊಡೆದು ಅವರಲ್ಲಿದ್ದುದನ್ನೆಲ್ಲಾ ಅಪಹರಿಸಿಕೊಂಡು ಬೇರೊಂದ ಗ್ರಾಮಕ್ಕೆ ಕರೆದುಕೊಂಡು ಹೋದರು ಅಲ್ಲಿ ಅವರುಗಳ ಕೈಲಿ ನೂರು ಹಳ್ಳಗಳನ್ನು ತೋಡಿಸಿ ಪ್ರತಿಯೊಂದರಲ್ಲೂ ಒಬ್ಬೊಬ್ಬನನ್ನು ನಿಲ್ಲಿಸಿ ಅವರನ್ನು ಗುಂಡು ಹೊಡೆದು ಸಾಯಿಸಿದರೆಂದು ವರದಿಯಾಗಿದೆ.

ಸಿಂಹದ ಬೋನಿನೊಳಗೆ ಸಾಧು

ಜೋಧಪುರದ ಮೃಗಾಲಯದಲ್ಲಿ ಸಾಧುವೊಬ್ಬನು ಸಿಂಹದ ಬೋನಿನೊಳಕ್ಕೆ ಹೋಗಿ, ಅಲ್ಲಿ ಕುಳಿತುಕೊಂಡು ತಪಸ್ಸು ಮಾಡುತ್ತಿದ್ದನೆಂದೂ, ಹೊರಗಿದ್ದ ಸಿಂಹವು ಅದನ್ನು ಕಂಡು ಆತನ ಮೇಲೆ ಹಾರಿತೆಂದೂ ಆದರೆ ಮೇಲೆ ಬೀಳುವುದರ ಬದಲು, ಮಧ್ಯದಲ್ಲೇ ಸಿಂಹವು ಸುಮ್ಮನೆ ನಾಯಿಯಂತೆ ತನ್ನ ಬಾಲವನ್ನು ಆಡಿಸುತ್ತಾ ನಿಂತಿತೆಂದೂ ವರದಿಯಾಗಿದೆ ನಂತರ ಸಾಧುವನ್ನು ಜೋಧಪುರಕ್ಕೆ ಕರೆದು ಪೋಲೀಸರ ವಶಕ್ಕೆ ಕೊಡಲಾಯಿತು.

ಬೇಗಂ ರಜ್ವಿ ನಾಯಕತ್ವದಲ್ಲಿ ಮಹಿಳಾ ರಜಕಾರರು

ಹೈದರಾಬಾದಿನಲ್ಲಿ ಇತ್ತೀಚೆಗೆ ಜನಾನಾ ರಜಕಾರರ ದಳವು ಸ್ಥಾಪಿತವಾಗಿದೆ. ಖಾಸಿಂ ರಜ್ವಿಯ ಹೆಂಡತಿ ಬೇಗಂ ಖಾಸಿಂ ರಜ್ವಿಯ ನಾಯಕತ್ವದಲ್ಲಿ ಒಂದು ಉಪಸಮಿತಿಯನ್ನು ಸ್ಥಾಪಿಸಲಾಗಿದೆ ಮಹಿಳಾ ರಜಕಾರರನ್ನು ಸೇರಿಸಿ ಸಂಸ್ಥಾನದಲ್ಲೆಲ್ಲಾ ಚಳುವಳಿಯನ್ನು ನಡೆಸಲು ತೀರ್ಮಾನಿಸಲಾಗಿದೆ.

ರಜಕಾರರ ಮಿತಿ ಮೀರಿದ ವರ್ತನೆ

ರಜಾಕಾರರು ವಿಜಯವಾಡ ರೈಲ್ವೆ ಸ್ಟೇಷನ್ನಿನಲ್ಲಿ ಹಲವು ಮಾರ್ವಾಡಿ ಪ್ರಯಾಣಿಕರನ್ನು ರೈಲಿನಿಂದಿಳಿಸಿ ಅವರ ಬಳಿ ಇದ್ದ ಸುಮಾರು ೫ ಲಕ್ಷ ರೂ ಬೆಲೆ ಬಾಳುವ ಪದಾರ್ಥಗಳನ್ನು ಕೊಳ್ಳೆ ಹೊಡೆದರೆಂದೂ, ಇನ್ನೊಂದು ಕಡೆ ಹೆಂಗಸರು ಮಕ್ಕಳೆಂಬ ತಾರತಮ್ಯವಿಲ್ಲದೆ ಪ್ರಯಾಣಿಕರನ್ನು ಹಿಡಿದೆಳೆದು ಸುಮಾರು ೩ ಲಕ್ಷ ರೂ ಬೆಲೆ ಬಾಳುವ ಆಭರಣಗಳನ್ನು ಅಪಹರಿಸಿದರೆಂದೂ ವರದಿಯಾಗಿದೆ

ಕಡಲೇಕಾಯಿ ಎಣ್ಣೆಯಿಂದ ಬಸ್ಸುಗಳ ಸಂಚಾರ

ಹೈದರಾಬಾದಿನ ಬಸ್ಸುಗಳನ್ನು ಪೆಟ್ರೋಲ್ ಬದಲು ಕಡಲೇಕಾಯಿ ಎಣ್ಣೆಯಿಂದ ನಡೆಸಲಾಗುವುದೆಂದು ಹೇಳಲಾಗಿದೆ ನಿಜಾಂ ಸರ್ಕಾರದ ಸಂಶೋಧನಾಲಯದಲ್ಲಿ ಈ ಬಗ್ಗೆ ಪ್ರಯೋಗ ನಡೆಸಿ ಕಡಲೇಕಾಯಿ ಎಣ್ಣೆಗೆ ಸ್ವಲ್ಪ ಪೆಟ್ರೋಲನ್ನು ಬೆರೆಸಿ ಹಾಕುವುದರಿಂದ ಬಸ್ಸುಗಳನ್ನು ಓಡಿಸಬಹುದೆಂದು ತಿಳಿಸಲಾಗಿದೆ ಇದೇ ೨೫ನೇ ತಾ॥ ನಿಂದ ಕೆಲವು ಬಸ್ಸುಗಳನ್ನು ಈ ಎಣ್ಣೆಯಿಂದ ನಡೆಸಲಾಗುವುದೆಂದೂ ಆದರೆ ಈ ದೇಶದ ಎಣ್ಣೆಯ ಬೆಲೆಯು ವಿಪರೀತವಾಗಿರುವುದರಿಂದ ಎಲ್ಲ ಬಸ್ಸುಗಳನ್ನೂ ಇದರಿಂದ ಓಡಿಸಲು ಸಾಧ್ಯವಿಲ್ಲವೆಂದೂ ಹೇಳಲಾಗಿದೆ

● ಮಧ್ಯಪ್ರಾಂತ್ಯದ ಸರ್ಕಾರದವರು ಒಂದು ಆಜ್ಞೆ ಹೊರಡಿಸಿ ಹೈದರಾಬಾದ್ ಗಡಿಯ ಬಳಿ ಚಾಂದಾ ಜಿಲ್ಲೆಯಲ್ಲಿ ಬಲಾತ್ಕಾರವಾಗಿ ಮತಾಂತರ ಗೊಳಿಸುವುದನ್ನು ನಿಷೇಧಿಸಿದ್ದಾರೆ ಅಂತಹ ಅಪರಾಧಕ್ಕೆ ೬ ವರ್ಷ ಕಠಿಣಶಿಕ್ಷೆವಿಧಿಸಲಾಗುವುದೆಂದೂ ಸೂಚಿಸಲಾಗಿದೆ

ಸೆನೆಟ್ ಸಭೆಗೆ ಚುನಾವಣೆ

ಮೈಸೂರು ೨೪

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಗೆ ನಡೆದ ಚುನಾವಣೆಯು ಎಣಿಕೆಯು ನಿನ್ನೆ ನಡೆಯಿತು ಶ್ರೀಗಳಾದ ಎ ಶ್ರೀನಿವಾಸಮೂರ್ತಿ, ಎಂ ಟಿ ಎಲ್ ಶಾಸ್ತ್ರಿ, ಟಿ ಎಸ್ ಆರ್ ಗೋಪಾಲಯ್ಯಂಗಾರ್, ಕೆ ಗುಬ್ಬಯ್ಯ, ಡಾ॥ ಎಸ್ ನಾರಾಯಣಶಾಸ್ತ್ರಿ ಮತ್ತು ಎ ವೆಂಕಟೇಶಯ್ಯನವರುಗಳು ಚುನಾಯಿತರಾಗಿದ್ದಾರೆ.

ನೌಕರರ ಉಡುಪಿನ ನಿರ್ಬಂಧ ಹೋಯಿತು

ಸ್ವಂ. ಪ್ರ. ಪೋ॥) ಬೆಂಗಳೂರು ೨೪

ನಾನ್ ಗೆಜೆಟೆಡ್ ನೌಕರರ ಕೋರಿಕೆಯನ್ನು ಮನ್ನಿಸಿ ಸರ್ಕಾರದವರು ಉಡುಪಿನ ನಿರ್ಬಂಧವನ್ನು ತೆಗೆದುಹಾಕಿ ಶುಭ್ರವಾದ ಬಟ್ಟೆಗಳನ್ನು ಹಾಕಿಕೊಂಡು ಕೆಲಸಕ್ಕೆ ಬರಬಹುದೆಂದು ಸೂಚಿಸಿ ಆಜ್ಞೆ ಹೊರಡಿಸಿದ್ದಾರೆ

ಹೇಬಿಯಸ್ ಕಾರ್ಪಸ್ ಅರ್ಜಿಗೆ ಪುರಸ್ಕಾರ

ಹೈಕೋರ್ಟಿನಲ್ಲಿ ಬಂಧಿತರ ಬಿಡುಗಡೆಗೆ ಆಜ್ಞೆ

(ಸ್ವಂ ಸ. ವರದಿ) ಬೆಂಗಳೂರು ೨೪

ಶ್ರೀಗಳಾದ ಶ್ರೀರಾಮುಲು, ಭಕ್ತ್ಯರ್, ತಿರುವೆಂಗಡಂ, ಸಿ ಬಿ ವೆಂಕಟಯ್ಯ, ಎಂ ಎಸ್ ರಾಮರಾವ್, ಕೆ ಎಸ್ ವಾಸನ್, ಡಿ ಆರ್ ಕೃಷ್ಣಮೂರ್ತಿ ಇವರುಗಳ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟಿನಲ್ಲಿ ಶ್ರೇಷ್ಠ ನ್ಯಾಯಾಧೀಶರೂ, ಶ್ರೀ ... ರ್ ಪುಟ್ಟಸ್ವಾಮಿ ... ಸಿನವರೂ ಈ ದಿನ ಪುರಸ್ಕರಿಸಿ ಅವರನ್ನು ಬಂಧನದಿಂದ ಬಿಡುಗಡೆ ಮಾಡ ... ಆಜ್ಞೆ ಮಾಡಿದ್ದಾರೆ

... ಭಟ್ಕಲ್ ಸಂಬಂಧವಾಗಿ ಭಾರತ ಸರ್ಕಾರದವರು ನೇಮಿಸಿರುವ ಸಮಿತಿಯವರು ಜುಲೈ ೧೦ ರಿಂದ ೧೫ ನೇ ತಾರೀಖಿನವರೆಗೆ ಬೆಂಗಳೂರಿನಲ್ಲಿ ಸೇರಿ ... ಪರಿಶೀಲನೆಯನ್ನು ನಡೆಸುವರು

ಅಪ್ಪಟ

ಹಸುವಿನ ಹಾಲು

ದೊರೆಯುತ್ತೆ

ಮಕ್ಕಳಿರುವ ಮನೆಗಳಿಗೆ

ರಿಯಾಯಿತಿ ಇದೆ

ನಾರಾಯಣ್ಣ ಅಂಡ್ ಸನ್ಸ್,

೧೨೪೮, ನಾರಾಯಣಶಾಸ್ತ್ರಿ ರಸ್ತೆ,

ದೇವರಾಜ ಮೊಹಲ್ಲಾ, ಮೈಸೂರು.

ಪುನಃ ಭಾರತದೊಡನೆ ನಿಜಾಮರ ಸಂಧಾನವೇ ?

ದೆಹಲಿಯಲ್ಲಿರುವ ಹೈದರಾಬಾದ್ ಏಜೆಂಟ್ ಜನರಲ್ಲರಾದ ನವಾಬ್ ಯಾರ್ ಜಂಗ್‌ರವರು ... ಬ್ಯಾಟ್, ರಾಜಾಜಿ ಮತ್ತು ಪಂಡಿತ ನೆಹರೂಗಳನ್ನು ಕಂಡು ಮಾತು ಕತೆಗಳನ್ನು ನಡೆಸಿದರೆಂದೂ ಅವರು ನಿಜಾಮರೊಂದಿಗೆ ಸಮಾಲೋಚನೆ ನಡೆಸಲು ಹೈದರಾಬಾದಿಗೆ ಪ್ರಯಾಣ ಬೆಳೆಸಿದರೆಂದೂ ಹೇಳಲಾಗಿದೆ. ವಿದೇಶಾಂಗ ವ್ಯವಹಾರ ಸಂಬಂಧದಲ್ಲಿ ನಿಜಾಮರಿಗೆ ಸಂಪೂರ್ಣ ಅಧಿಕಾರ ಕೊಡುವ ... ದಲ್ಲಿ ಸೇರಿಸಲು ಹೈದರಾಬಾದ್ ಸರ್ಕಾರದವರು ಭಾರತ ಸರ್ಕಾರದವರನ್ನು ಕೇಳಿದ್ದಾರೆಂದೂ ಈ ವಿಚಾರವನ್ನು ಈಗಾಗಲೇ ಪರಿಶೀಲಿಸಲಾಗಿದೆಯೆಂದೂ ಸಂಧಾನದ ಕರಡು ಪ್ರತಿಗೆ ನಿಜಾಮರು ರುಜು ಹಾಕಿದ ವೇಳೆ ಆ ವಿಚಾರವನ್ನು ಚರ್ಚಿಸಬಹುದೆಂದು ಭಾರತ ಸರ್ಕಾರದವರು ತಿಳಿಸಿದ್ದಾರೆಂದೂ ವರದಿಯಾಗಿದೆ

ಪ್ರತಿ ದಿನ ಮೂರು ಆಟಗಳು.

24-6-48 ನೇ ಗುರುವಾರದಿಂದ

ಸೆಂಟ್ರಲ್ ಸ್ಟುಡಿಯೋಸ್‌ರವರ

★ ಮಿಟಿ ★

[ಹಿಂದಿ]

ಪಾತ್ರ, - ಕುರ್ಷಿದ್, ಸಾದಿಕ್ ಆಲಿ

ಒಲಂಪಿಯಾ ಟಾಕೀಸ್

ಮೈಸೂರು ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸಿನಿಂದ

ಹರಾಜು ತಾರೀಖು ೫ ನೇ ಜುಲೈ ೧೯೪೮

ಆದರಿಂದ ಸರ್ವ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ತಾಲ್ಲೂಕು ... ಮೈಸೂರು ಗ್ರಾಮಕ್ಕೆ ಸೇರಿದ ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ ಬೆಳೆದ ... ಹುಲ್ಲನ್ನು ೧೯೪೮-೪೯ ನೆಯ ಸಾಲಿಗೆ ... ೧೯೪೮ ನೆಯ ಇಸವಿ ಜುಲೈ ೫ ನೆಯ ತಾರೀಖು ಸೋಮವಾರ ಬೆಳಗ್ಗೆ ... ಗಂಟೆಗೆ ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸರವರ ಕೆರೆ ಅಂಗಳದ ಬಳಿ ಹರಾಜು ಮಾಡಲಾಗುವುದು. ಇಷ್ಟವುಳ್ಳವರು ... ಹಾಜರಾಗಿ ... ಮಾಡಬಹುದು

ಹರಾಜು ಖೈದಾದ ಕೂಡಲೆ ಅಪ್ಪಟ ಬಿಡ್ಡಾದಾಗಿನ ಬಿಡ್ಡು ಮೊಬಲಗು ಪೈಕಿ ನಾಲ್ಕನೆಯ ಒಂದು ಭಾಗವನ್ನು ಮತ್ತು ಪೂರ್ತಿ ಬಿಡ್ಡು ಮೊಬಲಗಿನ ಮೇಲೆ ಆಗುವ ಲೋಕಲ್ ಫೈಲ್ಸ್ ಎಜುಕೇಷನ್ ಸೆಸ್ಸುಗಳನ್ನು ಪೂರ್ಣವಾಗಿಯೂ ಜಮಾ ಮಾಡಬೇಕು ಮತ್ತು ಉಳಿಕೆ ಮೊಬಲಗನ್ನು ಹರಾಜು ತಾರೀಖು ಲಾಗಾಯ್ತು ಹದಿನೈದು ದಿವಸಗಳ ಒಳಗಾಗಿ ಜಮಾ ಮಾಡಬೇಕು

... ಖೈದಾದ ಕೂಡಲೆ ರೇಗಣಿಯನ್ನು ಹಾಜರ್ಪಡಿಸಲು ತಪ್ಪಿದರೆ ಆಗಲಿ ಅಥವಾ ಉಳಿಕೆ ಮೊಬಲಗು ಹರಾಜು ತಾರೀಖು ಲಾಗಾಯ್ತು ಹದಿನೈದು ದಿವಸಗಳ ಒಳಗಾಗಿ ಜಮಾ ಮಾಡಿಸಲು ತಪ್ಪಿದರೆ ಆಗಲಿ, ದುಬಾರಾ ಹರಾಜು ಮಾಡಿಸಿ, ಲುಕ್ಸಾನು ಉಂಟಾದಲ್ಲಿ ಅಂಥಾ ಲುಕ್ಸಾನನ್ನು ಅನ್ವಲು ಬಿಡ್ಡುದಾರನಿಂದ ಕಂದಾಯದ ಬಾಕಿ ರೀತಿಯ ವಸೂಲ್ ಮಾಡಲಾಗುತ್ತೆ. ಜಾಸ್ತಿ ಹುಟ್ಟುವಳಿಯಾದಲ್ಲಿ ಅನ್ವಲ ಬಿಡ್ಡುದಾರನಿಗೆ ಸದರಿ ಶಕ್ತಿ ಹಕ್ಕು ಇರುವುದಿಲ್ಲ.

ಬಿ ಪಿ ರಾಮಕೃಷ್ಣನ್,
ಜನರಲ್ ಮ್ಯಾನೇಜರ್



ಒಳ್ಳೆಯ ವೆಲ್ಲಂಗಾಯಿ ತಯಾರಿಕೆಗಳಲ್ಲಿ ಅನುಮಾನವಾದದ್ದು ... ಮಾಡುತ್ತದೆ ಸಂತೋಷಗೊಳಿಸುವ ... ಶಕ್ತಿ ಇರುವುದು. ಯಾವುದರ ... ಸ್ಪೆಷಲ್ ಸೀಗೆ ಪುಡಿ. ಭಾರತದೇಶದಲ್ಲಿ ... ವೆನಿಸಿ ಈಗಾಗಲೇ ಅನೇಕ ಮೆಟ್ಟಿಗೆ ... ನಡೆಸಿದೆ.

ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್
ಮೈಸೂರು.

॥ ಶ್ರೀ ॥

ಗಾಯತ್ರಿ ಟಾಕೀಸ್

ತಾ॥ ೨೫-೬-೪೮ ರಿಂದ

4 ದಿನಗಳು ಮಾತ್ರ

M. G. M.'s

Holiday In Mexico

(ಹಾಲಿಡೇ ಇನ್ ಮೆಕ್ಸಿಕೋ)

ವರ್ಣ ರಂಜಿತ ಚಿತ್ರ

Next Change :--M. G. M.'s
UNDER CURRENT

Edited printed and published by A. R. Nagarajan at the Sadhvi Press D Subbaiah Road Mysore

ರಾಜಕಮಲ್

ಮೈಸೂರು

ತಾ 25 ...

ಪ್ರತಿ ದಿನ ...

ಅಮ ...

ರಾ ...

—:ಭೂಮಿಕೆ:—

ನಸ್ತೀವನ್, [ಜೂನಿಯರ್] ... ಕಪೂರ್, ...

Morning Shows From 25-6-48 for 4 d...

The Overland...

With:— DAPHNE CAMP...
CHIPPS RAFFERTY,
HELEN GRIEVE.

.... ಪ್ರಭಾ ಪಿಕ್ಚರ್ ಹೌಸ್ ....

25-6-48 ರಿಂದ : : ಅಮೋಘ ಪ್ರಾರ...

ಪಿ. ಆರ್ ಪ್ರೊಡಕ್ಷನ್ಸ್‌ರವರ

★ ಅರೇಬಿಯನ್ ನೈಟ್ಸ್

[ಹಿಂದಿ]

ಪಾತ್ರ:— * ಕನನ್ ಬಾಲಾ * ನವಾಬ್.

ಕಮಲಾ ದಾಸ್ ಗುಪ್ತರವರ ಸುಮಧುರ ಸಂಗೀತ

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ ಎ. ಸರ್ಕಸ್

ದಿನ 2 ಆಟಗಳು ಸಂಜೆ 6 30 ರಾತ್ರಿ 9 30 ೧೨೦ ಆಟಗಾರರು— ೮೫ ಮೃ...

... ನವೀನ ... ಡ್ಯಾನ್ಸ್

ಟಿಕೆಟಿನ ದರಗಳು, ... 2 8-0, 1-8-0, 0-10-0, 0...

ಮೊದಲನೇ ಎರಡು ದರಗಳಲ್ಲಿ ಸೀಟು ರಿಜರ್ವ್ ಮಾಡಿಸಲು ರಿಜರ್ವೇಷನ್ ...

ಎಂ. ಸುಬ್ಬರಾಮಯ್ಯ ಅಂಡ್ ಕೋ |

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೬] ಶುಕ್ರವಾರ ೨೫-೬-೪೮ [ಸಂಚಿಕೆ ೩೧೫

ಹೈದ್ರಾಬಾದ್ ಸೈನ್ಯದಲ್ಲಿ ರಜಾಕಾರರ ಐಕ್ಯವೇ ?

ಲಾಯರುಗಳು ಟೋಪಿ ಧರಿಸಲು ಅವಕಾಶ ಕೊಡಬೇಕು

ಶಾಸನ ಸಭೆಯಲ್ಲಿ ಠರಾವು ನಿರ್ಣಯ

ಸ್ವಂ ಸು ಫೋ] ಬೆಂಗಳೂರು ೨೫

ನ್ಯಾಯಾಸ್ಥಾನಗಳಲ್ಲಿ ವಕೀಲರುಗಳೂ ಅಧಿಕಾರಿ ವರ್ಗದವರೂ ರುಮಾಲಿಗೆಬದಲು ಟೋಪಿಗಳನ್ನು ಧರಿಸಲು ಅವಕಾಶ ಕಲ್ಪಿಸಬೇಕೆಂಬುದಾಗಿ ನಿನ್ನೆ ದಿನ ಶಾಸನ ಸಭೆಯಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಕೋರ್ಟುಗಳ ಅಡಳಿತದ ಗ್ರಾಂಟಿನ ಬಗ್ಗೆ ಕಡಿತ ನಿರ್ಣಯವನ್ನು ಸೂಚಿಸಿದರು ರುಮಾಲನ್ನು ಹಾಕುವುದು ಹಳೆಯ ಸಂಪ್ರದಾಯದ ಪದ್ಧತಿ ಈಗಿನ ಕಾಲಕ್ಕೆ ಇದು ಸಮಂಜಸವಾಗಿರುವುದಿಲ್ಲ ಆದ್ದರಿಂದ ಇತರ ಪ್ರಾಂತ್ಯಗಳಲ್ಲಿ ಇರುವಂತೆ ಇಲ್ಲಿಯೂ ಟೋಪಿಯನ್ನು ಹಾಕಿಕೊಂಡು ಬರಲು ಅವಕಾಶ ಕೊಡಬೇಕು-ಎಂದುಅವರು ಹೇಳಿದರು. ಶ್ರೀಮತಿ ಎಂ ಆರ್ ಲಕ್ಷಮ್ಮ, ಲಕ್ಷ್ಮಮ್ಮ, ಸಾಹುಕಾರ್ ಮತ್ತು ಶ್ರೀಗಳಾದ ಹೆಂಜಾರಪ್ಪ, ಚನ್ನಪ್ಪ ಮುಂತಾದವರು ಅನುಮೋದಿಸಿದರು

ಶ್ರೀ ಎಂ ಸಿ ಲಿಂಗೇಗೌಡರು ಅದನ್ನು ವಿರೋಧಿಸಿ ರುಮಾಲು ಮೈಸೂರು ದೇಶದ ಒಂದು ವೈಶಿಷ್ಟ್ಯವೆಂದೂ ಅದರಿಂದ ಮನುಷ್ಯನಿಗೆ ಭೂಷಣ ಪ್ರಾಯವಾದ ಸ್ವರೂಪವು ಬರುವುದೆಂದೂ, ಬಹಳ ಕಾಲದಿಂದಲೂ ಬಂದಿರುವ ಈ ಸತ್ಸಂಪ್ರದಾಯವನ್ನು ತೆಗೆಯಬಾರದೆಂದೂ ಹೇಳಿದರು ಯಾವುದೇ ಬಗೆಯ ಉಡುಪನ್ನು ಧರಿಸಿದರೂ ಎಲ್ಲರಿಗೂ ಅದು ಒಂದೇ ಮಾದರಿಯಾಗಿರಬೇಕೆಂದು ಜನಾಬ್ ಓ ಎಸ್ ಎ ಷರೀಫರು ಹೇಳಿದರು.

ಸಚಿವರಾದ ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು ಸರ್ಕಾರಿ ನೌಕರರಿಗೆ ಉಡುಪಿಗಾಗಿ ಹೆಚ್ಚು ಹಣವು ವೆಚ್ಚವಾಗದಿರಲು ಇತ್ತೀಚೆಗೆ ಒಂದು ಆಜ್ಞೆಯನ್ನು ಹೊರಡಿಸಲಾಗಿದೆಯೆಂದೂ ಈ ನಿರ್ಣಯದ ತತ್ವದ ಪರಿಶೀಲನೆಗಾಗಿ ಹೈಕೋರ್ಟಿಗೆ ಕಳಿಸಲಾಗುವುದೆಂದೂ ಹೇಳಿದರು. ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು

ಕಾಪಿಸ್ಟರುಗಳ ಕುಂದುಕೊರತೆಗಳು

ಕಾಪಿಸ್ಟುಗಳು ಮತ್ತು ಎಕ್ಸಾಮಿನರುಗಳ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಶ್ರೀ ಮಾದಯ್ಯಗೌಡರು ಇನ್ನೊಂದು ಕತ್ತರಿಯೋಗವನ್ನು ತಂದರು ಗೃಹ ಸಚಿವರು ಇದಕ್ಕೆ ಸಹಾನುಭೂತಿಯನ್ನು ಸೂಚಿಸಿ ಈ ವಿಷಯದಲ್ಲಿ ಸಲಹೆಗಳನ್ನು ಕೊಡಲು ಹೈಕೋರ್ಟಿಗೆ ಕಳುಹಿಸಲಾಗುವುದೆಂದು ಹೇಳಿದರು ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಪೋಲೀಸಿನವರಿಗೆ ಶಿಕ್ಷಣ

ಪೋಲೀಸಿನವರ ದಕ್ಷತೆಯನ್ನೂ ಸೇವಾ ಭಾವನೆಯನ್ನೂ ಹೆಚ್ಚಿಸುವ ಬಗ್ಗೆ ಶ್ರೀ ವೆಂಕಟಾಚಲಯ್ಯರು ಒಂದು ಕತ್ತರಿ ಪ್ರಯೋಗವನ್ನು ತಂದಿದ್ದರು ಪೋಲೀಸಿನವರ ವರ್ತನೆಯನ್ನು ಅನೇಕರು ಟೀಕಿಸಿದರು. ಸಚಿವರಾದ ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು ಬದಲಾಯಿಸಿರುವ ಪರಿಸ್ಥಿತಿಗನುಗುಣವಾಗಿ ಅವರು ನಡೆದುಕೊಳ್ಳಲು ಅಗತ್ಯವಾದ ತರಬೇತನ್ನು ಕೊಡಲಾಗುವುದೆಂದು ಹೇಳಿದ ಮೇಲೆ ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು

ನ್ಯಾಯಾಂಗದಲ್ಲಿ ಆಡಳಿತಾಂಗದವರು ಪ್ರವೇಶಿಸುತ್ತಿರುವ ವಿಚಾರವಾಗಿ ಶ್ರೀ ಎಂ ಸಿ ಲಿಂಗೇಗೌಡರು ಮತ್ತೊಂದು ಪ್ರಯೋಗವನ್ನು ತಂದರು ಇದು ಕೇವಲ ಸಿದ್ಧಾಂತವಾದ ಅಂಶವೆಂದು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಹೇಳಿ ಈ ಎರಡು ಶಾಖೆಗಳನ್ನೂ ಪ್ರತ್ಯೇಕಗೊಳಿಸುವ ವಿಚಾರವು ಪರಿಶೀಲನೆಯಲ್ಲಿದೆಯೆಂದು ತಿಳಿಸಿದರು ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು.

ಕನ್ನಡದಲ್ಲಿ ಕೋರ್ಟು ವ್ಯವಹಾರ

ಕೋರ್ಟುಗಳಲ್ಲಿ ಸಾಕ್ಷಿ ವಿಚಾರಣೆ ಮುಂತಾದ ವ್ಯವಹಾರಗಳನ್ನು ಕನ್ನಡದಲ್ಲಿಯೇ ಬರೆದುಕೊಳ್ಳಬೇಕೆಂಬ ಬಗ್ಗೆ ಶ್ರೀ ಟಿ ಮಾದಯ್ಯಗೌಡರು ಒಂದು ಕಡಿತ ನಿರ್ಣಯವನ್ನು ತಂದರು. ಕನ್ನಡ ದೇಶದಲ್ಲಿ ಆಂಗ್ಲ ಭಾಷೆಯನ್ನು ಬಳಸುವುದರಿಂದ ಇಲ್ಲದ ತೊಡಕುಗಳಿಗೆ ಕಾರಣವಾಗಿದೆಯೆಂದು ಅವರು ಹೇಳಿದರು ಸ್ಥಿತಿಗತಿಗಳು ಒಂದು ಸ್ಥಿಮಿತಕ್ಕೆ ಬರುವವರೆಗೆ ಇನ್ನು ಸ್ವಲ್ಪ ಕಾಲ ಕಾಯಬೇಕೆಂದು ಜನಾಬ್ ಅಬ್ದುಲ್ ರಹಮಾನರು ಹೇಳಿದರು ನ್ಯಾಯಾಧೀಶರುಗಳು ಆಂಗ್ಲ ಭಾಷೆಯಲ್ಲಿಯೇ ಅಭ್ಯಾಸ ಹೊಂದಿರುವುದರಿಂದ ಅವರಿಗೆ ತೊಂದರೆಯಾಗುವುದೆಂದೂ, ಇನ್ನೂ ಕೆಲವು ಕಾಲ ಕಾಯಬಹುದೆಂದೂ ಶ್ರೀ ಸಿ ಸುಬ್ರಹ್ಮಣ್ಯ ಅಯ್ಯಂಗಾರರು ನುಡಿದರು ಈ ತತ್ವವನ್ನು ಒಪ್ಪಿಕೊಳ್ಳುವುದಾಗಿ ಸಚಿವರಾದ ಶ್ರೀ ಟಿ ಮರಿಯಪ್ಪನವರು ಹೇಳಿ ಹೈಕೋರ್ಟಿನವರ ಅಭಿಪ್ರಾಯಕ್ಕೆ ಇದನ್ನು ಕಳುಹಿಸಲಾಗುವುದೆಂದು ತಿಳಿಸಿದರು ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು

ಹೊರಗಿನ ದೇಶಗಳಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆಯಲು ಮೆಡಿಕಲ್ ವಿದ್ಯಾರ್ಥಿಗಳಿಗೆ ಸೌಲಭ್ಯವನ್ನು ಕಲ್ಪಿಸುವ ವಿಚಾರದಲ್ಲಿ ಜನಾಬ್ ಅಬ್ದುಲ್ ರಹಮಾನರು ಒಂದು ಕಡಿತ ನಿರ್ಣಯವನ್ನು ತಂದರು ಕಳೆದ ವರ್ಷ ೨೮ ಜನ ವಿದ್ಯಾರ್ಥಿಗಳನ್ನು ಕಳುಹಿಸಲಾಗಿತ್ತೆಂದೂ, ಇನ್ನು ಮುಂದೆಯೂ ಸೂಕ್ತವಾದ ಏರ್ಪಾಡುಗಳನ್ನು ಮಾಡಲಾಗುವುದೆಂದೂ ಸಚಿವರಾದ ಜನಾಬ್ ಮಹಮದ್ ಷರೀಫರವರು ಹೇಳಿದ ಮೇಲೆ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಅನಂತರ ಸಭೆಯು ಈ ಕೆಳಗೆ ಕಂಡ ಗ್ರಾಂಟುಗಳನ್ನು ಮಂಜೂರು ಮಾಡಿತು —ಲಾ ಕಾಲೇಜು ರೂ ೧೯,೨೯ ೦೦೦ ಬಂದೀಖಾನೆ ೬,೮೭,೦೦೦, ಪೋಲೀಸು ೯,೮೪,೦೦೦, ಮೆಡಿಕಲ್ ೭೫,೩೧ ೦೦೦ ಸಾರ್ವಜನಿಕ ಆರೋಗ್ಯ ೨೪,೪೦,೦೦೦, ನೀರಾವರಿ ೬೨,೪೫,೦೦೦, ಸಿವಿಲ್ ಕಾಮಗಾರಿ ೨೯,೩೩,೦೦೦, ಮಾರ್ಗನಿರ್ಮಾಣ ೫೮,೯೪,೦೦೦, ಆರ್ಥಿಕ ಸರ್ವೇಕ್ಷಣ ೮೨,೦೦೦.

ಸಿ. ಪಿ. ಸಿ. ಕೆಲಸಗಾರರ ಮುಷ್ಕರವೇ ?

ಮೈಸೂರು ೨೫

ಮೋಟಾರು ಕೆಲಸಗಾರರ ಸಂಘದ ಸಭೆಯು ನಿನ್ನೆ ನಡೆದು ಸಿ ಪಿ ಸಿ ಮೋಟಾರ್ ಸಂಸ್ಥೆಯ ಕೆಲಸಗಾರರಾದ ಶ್ರೀ॥ ಎಂ ಎ ಶಾಮಣ್ಣನವರನ್ನು ವಜಾ ಮಾಡಿರುವ ಬಗ್ಗೆ ಜುಲೈ ೨೫ ನೇ ತಾರೀಕಿನಿಂದ ಸದರಿ ಕಂಪೆನಿಯ ಕೆಲಸಗಾರರು ಮುಷ್ಕರವನ್ನು ಹೂಡುವ ವಿಚಾರದಲ್ಲಿ ಲೇಬರ್ ಕಮಿಷನರವರ ಅಭಿಮತವನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಲಾಯಿತು ಬಸ್ಸುಗಳ ರಾಷ್ಟ್ರೀಕರಣಕ್ಕೆ ಸರ್ಕಾರದವರು ಒಪ್ಪಿದ್ದರೂ ಇನ್ನೂ ಉದಾಸೀನವಾಗಿರುವುದಕ್ಕಾಗಿ ವ್ಯಸನವನ್ನು ಸೂಚಿಸಿ ಕೂಡಲೇ ಮೈಸೂರು ಬೆಂಗಳೂರುಗಳಲ್ಲಿ ರಾಷ್ಟ್ರೀಕರಣ ಮಾಡಬೇಕೆಂದೂ ಸಹ ಕೋರಲಾಯಿತು

ಸತ್ಯನಾರಾಯಣ ಪೂಜೆ

ರಾಜಧಾನಿಯ ಚಾಮುಂಡಿ ಬಡಾವಣೆಯ ಶ್ರೀ ರಾಜರಾಜೇಶ್ವರಿ ಸನ್ನಿಧಾನದಲ್ಲಿ ಕಳೆದ ಸೋಮವಾರದಿಂದ ನಡೆಯುತ್ತಿರುವ ಸತ್ಯನಾರಾಯಣ ವ್ರತಮಹೋತ್ಸವದ ಗ್ರಹಾರಾಧನೆಯು ಮಂಗಳವಾರದ ವರೆಗೂ ನಾಳೆ ನಡೆಯುವುದೆಂದೂ ಭಕ್ತರೆಲ್ಲರೂ ಉತ್ಸವದಲ್ಲಿ ಸಹಕರಿಸಬೇಕೆಂದೂ ಕೋರಲಾಗಿದೆ

ಬೊಂಬಾಯಿ ಜಿ. ಎ. ಸರ್ಕಸ್

ಕೆಲವು ದಿನಗಳಿಂದ ರಾಜಧಾನಿಯ ಜೀವಣ್ಣರಾಯನ ಕೆರೆಯಲ್ಲಿ ಬೊಂಬಾಯಿ ಸರ್ಕಸ್ ಸಂಸ್ಥೆಯವರು ಪ್ರದರ್ಶನವನ್ನು ನಡೆಸುತ್ತಿರುವರು ಸುಮಾರು ೪೮ ವರ್ಷಗಳ ಹಿಂದೆ ಸ್ಥಾಪಿತವಾದ ಸದರಿ ಕಂಪೆನಿಯವರು ಪೂರ್ವ ಪಾಶ್ಚಾತ್ಯ ದೇಶಗಳಲ್ಲಿ ಖ್ಯಾತಿ ಗಳಿಸಿದ್ದಾರೆ ಅಲ್ಲಿನ ಸ್ತ್ರೀಯೊಬ್ಬಳು ಆನೆಯಿಂದ ತುಳಿಸಿಕೊಳ್ಳುವುದು, ಮೊಳೆಗಳನ್ನು ಹೊಡೆದ ಹಲಗೆಯ ಮೇಲೆ ಮಲಗಿಕೊಂಡು ಕುದುರೆಯಿಂದ ತುಳಿಸಿಕೊಳ್ಳುವುದು, ವಿಮಾನುಗಳನ್ನು ಜೀವಸಹಿತ ನುಂಗಿ ಮತ್ತೆ ತೆಗೆಯುವುದು ಮತ್ತು ಅಂತರಾಳದಲ್ಲಿ ಹಾರಾಡುವುದು-ಈ ದೃಶ್ಯಗಳು ರೋಮಾಂಚಕವಾಗಿವೆ

Edited printed and published by [illegible] Nagarajan at the Sadhvi Press [illegible] Subbaiah Road Mysore.

ತಾಯಿನಾಡು-ಡೈಲಿ ನ್ಯೂಸ್ ಪತ್ರಿಕೆಗಳಮೇಲೆ ಮೊಕದ್ದಮೆ

ಕೋರ್ಟಿಗೆ ಅಪಮಾನ ಮಾಡಿದ ಆಪಾದನೆ

ಸ್ವಂ ಸ. ಫೋ] ಬೆಂಗಳೂರು ೨೫

ಬಿ ಎಂ ಗೋಪಾಲರಾಯರ ಕೇಸಾದೇವಿ ವಿಚಾರಣೆಯು ರಹಸ್ಯವಾಗಿ ನಡೆಯದೆ ಬಹಿರಂಗವಾಗಿ ನಡೆಯಬೇಕೆಂದು ಮುಂಚಾಗಿ ಶ್ರೀ ಎಲ್ ಎಸ್ ರಾಜುರವರು ಕೊಟ್ಟ ಹೇಳಿಕೆಯನ್ನು ಪ್ರಕಟಿಸಿ ಅದರ ಮೇಲೆ ಅಗ್ರ ಲೇಖನ ಬರೆದಿರುವುದಕ್ಕಾಗಿ ಕೋರ್ಟಿನ ಅಪಮಾನ ಕಾರಣಕ್ಕಾಗಿ ಏಕೆ ಮೊಕದ್ದಮೆ ತೆಗೆದುಕೊಳ್ಳಕೂಡದೆಂದು ತಾಯಿನಾಡು ಮತ್ತು ಡೈಲಿನ್ಯೂಸ್ ಪತ್ರಿಕೆಗಳ ಸಂಪಾದಕರುಗಳಾದ ಶ್ರೀಗಳು ಟಿ ಟಿ ಶ್ರೀನಿವಾಸ ಮತ್ತು ಪಿ ಆರ್ ರಾಮಯ್ಯನವರುಗಳಿಗೆ ನೋಟೀಸನ್ನು ಕೊಡಲಾಗಿದೆ

ಗಾಂಧಿಜಿ ಕೊಲೆ ಮೊಕದ್ದಮೆ

ಮಹಾತ್ಮರ ಕೊಲೆ ಮೊಕದ್ದಮೆ ಸಂಬಂಧದಲ್ಲಿ ನಿನ್ನೆ ದಿನ ನ್ಯಾಯಾಧೀಶರೂ, ನಾಲ್ಕು ಮಂದಿ ಅಪಾದಿತರೂ ಮತ್ತು ವಕೀಲರುಗಳೂ ಬಿರ್ಲಾ ಭವನದಲ್ಲಿ ಗುಂಡು ಹಾರಿಸಿದ ಸ್ಥಳಕ್ಕೆ ಭೇಟಿ ಇತ್ತಿದ್ದರು.

ರಜಾಕಾರ- [illegible] ಸರ್ಕಾರಿ [illegible] ಐಕ್ಯ

[illegible] ವಿಶೇಷ ಶಾಸನದ [illegible] ಹೈದರಾಬಾದಿನ ರಜಾಕಾರ [illegible] ಸರ್ಕಾರಿ ಸೈನ್ಯದಲ್ಲಿ [illegible] ರುವರೆಂದು ಅಧಿಕೃತವಾಗಿ [illegible] ಗಿದೆ. ಇನ್ನು [illegible] ಹೈದರಾಬಾದ್ ಮತ್ತು ಭಾರತಗಳಿಗೆ [illegible] ಸಂಧಾನ ಆರಂಭವಾಗಲಿದೆಯೆಂದು ಗೊತ್ತಾಗಿದೆ.

ಹೈದರಾಬಾದ ಕಾಂಗ್ರೆಸ್ ಸಂಸ್ಥೆಯನ್ನು ಬಹಿಷ್ಕರಿಸಿ ಅದರ ಸದಸ್ಯರನ್ನೂ ಮತ್ತು ಅದರೊಡನೆ ಸಹಾನುಭೂತಿಯುಳ್ಳವರನ್ನೂ ದಸ್ತಗಿರಿ ಮಾಡಲು ಸರ್ಕಾರವು ತೀರ್ಮಾನಿಸಿರುವುದೆಂದು ಗೊತ್ತಾಗಿದೆ

ಭಾರತ ಸರ್ಕಾರದಿಂದ ಮೈಸೂರಿಗೆ ೪ ಕೋಟಿ ರೂ. ಸಾಲ

ಆರ್ಥಿಕದ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಭಾರತ ಸರ್ಕಾರವು ಮೈಸೂರು ಸರ್ಕಾರಕ್ಕೆ ಶೇಕಡ ೩. ೮ ಬಡ್ಡಿಯಂತೆ ೪ ಕೋಟಿ ರೂ ಸಾಲವನ್ನು ಕೊಡಲಿದೆಯೆಂದು ತಿಳಿದುಬಂದಿದೆ.

ಗೋಪುರದ ಕಲಶಗಳಿಂದ ಚಿನ್ನದ ಕಳುವು

ದಕ್ಷಿಣ ಆರ್ಕಾಟಿನ ತಿರುಪಾಪುಲಿಯೂರ್ ಎ ಬಳಿ ದೇವಸ್ಥಾನದ ಗೋಪುರದ ಕಲಶಗಳಿಂದ ಚಿನ್ನ ಕಳುವಾಗಿದ್ದ ಸಂದರ್ಭದಲ್ಲಿ ಹಲವು ಜನರನ್ನು ದಸ್ತಗಿರಿ ಮಾಡಲಾಗಿದೆ. [illegible] ಹರಕೆಯಲ್ಲಿ ಅದ್ದಿದ ಬಟ್ಟೆಗ [illegible] ಕಲಶಗಳ ಮೇಲೆ ಬಿಟ್ಟ ಅನಂತ [illegible] ಅಂಟಿಕೊಂಡಿದ್ದ ಚಿನ್ನದ [illegible] ರಸಾಯನಿಕ ರೀತಿಯ [illegible] ಯಿಂದ ತೆಗೆಯುತ್ತಿದ್ದ [illegible] ಚಿನ್ನದ [illegible] ಉಪಯೋಗಿಸಿದ ಬಟ್ಟೆಗಳನ್ನು [illegible] ಮುದ್ರಾಸಿಗೆ ಕಳುಹಿ [illegible] ರೂ ಬೆಲೆ ಬಾ [illegible] ತ್ತೆಂದು ಗೊತ್ತಾ [illegible] ನಲ್ಲಿ ಈ ವಿಧದ [illegible] ನಡೆದ

ಪ್ರಭುಗಳಿಂದ ಸೈನ್ಯ ಪರೀಕ್ಷೆ

ಬೆಂಗಳೂರು: ೨೫

ಶ್ರೀಮನ್ಮಹಾರಾಜರವರು ಬರುವ ಬುಧವಾರ ಬೆಳಿಗ್ಗೆ ೮ ಗಂಟೆಗೆ ಬೆಂಗಳೂರು ಅರಮನೆಯ ಪೋಲೋ ಮೈದಾನದಲ್ಲಿ ನಡೆಯುವ ಮಿಲಿಟರಿ ಕವಾಯತನ್ನು ವೀಕ್ಷಿಸುವರು. ಸಾರ್ವಜನಿಕರಿಗೂ ಈ ಸಂದರ್ಭದಲ್ಲಿ ಪ್ರವೇಶವುಂಟೆಂದೂ ನಿಯಮಿತ ಕಾಲಕ್ಕೆ (೭೫ ನಿಮಿಷಗಳ ಮುಂಚೆ) ಅವರು ಬರಬೇಕೆಂದೂ ತಿಳಿಸಲಾಗಿದೆ

ಮನೆಗೇ ಬೆಂಕಿ ಇಟ್ಟ ಗಂಡ

ಮಗುವಿನ ಪೋಷಣೆ ಮತ್ತು ಜವಾಬ್ದಾರಿ ವಿಷಯದಲ್ಲಿ ಗಂಡ ಹೆಂಡತಿಗೆ ಮನಸ್ತಾಪವುಂಟಾಗಿ, ಗಂಡನು ತನ್ನ ಮನೆಯನ್ನೇ ಬೆಂಕಿಗೆ ಆಹುತಿಮಾಡಿದ ಪ್ರಸಂಗವು ವರದಿಯಾಗಿದೆ. ... ದನ್ನು ನಿಲ್ಲಿಸಿ ಸಮಾಧಾನಮಾಡಬೇಕೆಂದು ಹೆಂಡತಿಗೆ ಎರಡು ಬಾರಿ ಹೇಳಿದರೂ ಆಕೆಯು ತನಗೆ ನಿದ್ರೆಯೆಂದು ಹೇಳಿ ಆತನೇ ಸಮಾಧಾನಮಾಡಬೇಕೆಂದ ಮನೆಗೆ ಬೆಂಕಿಬಿದ್ದರೂ ತನಗೆ ಎಚ್ಚರವಿಲ್ಲವೆಂದೂ ಆಕೆಯು ತಿಳಿಸಿದಳು. ಅದೇ ರೀತಿ ಆಗಲೆಂದು ಹೇಳಿ, ಆತನು ಮನೆಗೆ ಬೆಂಕಿ ಇಟ್ಟನು

ಶ್ರೀ ಗಣೇಶಾ ಟಾಕೀಸ್

೨೫-೬-೪೮ ರಿಂದ ೪ನೇ ವಾರ

ಸಿಟಾಡೆಲ್‌ರವರ

ಜ್ಞಾನ ಸುಂದರಿ

[ತಮಿಳು]

ಮುಖ್ಯ ಪಾತ್ರ:—

ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ

ಇದರೊಡನೆ ೧೯೪೮ ನೆಯ ಇಸವಿ ಎ. ಐ. ಸಿ. ಸಿ. ಅಧಿವೇಶನದ ದೃಶ್ಯಗಳ ನ್ಯೂಸ್ ರೀಲನ್ನೂ ಸಹ ಇಂದು ಮತ್ತು ನಾಳೆ ಪ್ರದರ್ಶಿಸಲಾಗುವುದು

ಹರಾಜು ಇಷ್ತಿಹಾರ್

ಮೈಸೂರು ಸರ್ಕಾರದ ಬಿಲ್ಡಿಂಗ್ಸ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್‌ರವರ ಆಫೀಸಿಗೆ ಸೇರಿದ ಹಳೆಯ ಸಾಮಾನುಗಳನ್ನು (ಮರ, ಕಬ್ಬಿಣ, ಕೊಳಾಯಿ ಮತ್ತು ಎಲೆಕ್ಟ್ರಿಕ್ ಸಾಮಾನುಗಳು) ಇದೇ ಆಫೀಸ್ ಕಾಂಪೌಂಡಿನಲ್ಲಿ ೨೮-೬-೪೮ ರ ಮಧ್ಯಾಹ್ನ ೩ ಘಂಟೆಯಿಂದ ೬ ಘಂಟೆಯವರೆಗೆ ಲಾಟವಾರಾಗಿ ಬಹಿರಂಗ ಹರಾಜು ಮಾಡಲಾಗುತ್ತದೆ. ಕೊಂಡುಕೊಳ್ಳಲು ಅಪೇಕ್ಷೆಯುಳ್ಳವರು ಐವತ್ತು ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟು ಹರಾಜಿನಲ್ಲಿ ಸವಾಲ್ ಮಾಡಬಹುದು

ಹರಾಜಾಗುವ ಸಾಮಾನುಗಳ ವಿವರವನ್ನು ಇದೇ ಆಫೀಸಿನಲ್ಲಿ ನೋಡಲು ಆಫೀಸ್ ಕಾಲದ ವೇಳೆಯಲ್ಲಿ ಅವಕಾಶವಿರುತ್ತೆ

ಟಿ. ಹುಚ್ಚವೀರಯ್ಯ,
ಎಕ್ಸಿಕ್ಯೂಟಿವ್ ಇಂಜನಿಯರ್,
ಬಿಲ್ಡಿಂಗ್ಸ್ ಡಿವಿಜನ್, PW ...
ಬೆಂಗಳೂರು

ರೈಲು ವ್ಯಾಗನ್ನಿಗೆ ಬೆಂಕಿ

ಮೊನ್ನೆ ದಿನ ಬೆಳಿಗ್ಗೆ ಮದರಾಸಿನಿಂದ ರಾಯಚೂರಿಗೆ ಹೊರಟ ಒಂದು ರೈಲುಗಾಡಿಯಲ್ಲಿ ತೂಕ ಮಾಡುವ ಯಂತ್ರಗಳು ಮತ್ತು ವಿದ್ಯುಚ್ಛಕ್ತಿ ಸಾಮಾನುಗಳನ್ನು ತುಂಬಿದ್ದ ಒಂದು ವ್ಯಾಗನ್ನಿಗೆ ಆಕಸ್ಮಾತ್ ಬೆಂಕಿ ಬಿದ್ದು ಅದು ಸುಟ್ಟು ಹೋಯಿತು

ಹಾಲಿನಿಂದ ೫೦೦ ಕೋಟಿ ಡಾಲರುಗಳ ವರಮಾನ

ಹಾಲು, ಬೆಣ್ಣೆ ಮುಂತಾದವುಗಳ ವ್ಯಾಪಾರದಿಂದ ಕಳೆದ ವರ್ಷದಲ್ಲಿ ಅಮೆರಿಕ ಸರ್ಕಾರಕ್ಕೆ ೫೦೦ ಕೋಟಿ ಡಾಲರುಗಳ ವರಮಾನ ಬಂದಿತೆಂದು ವರದಿಯಾಗಿದೆ.

UNIVERSITY OF MYSORE.

Office of the University of Mysore,

Mysore, dated the 18th June 48

NOTIFICATION

No Ex 1 1067 47-48

Applications for admission to University Institutions will be received by the Heads of Institutions concerned up to 1st July 1948

Applications must be accompanied by the leaving certificate and other certificates as well as a certified statement of marks obtained at the qualifying examination passed showing the year or years in which it was passed Copies of marks cards certified by Gazetted Officers may be attached by students who wish to apply for admission to more than one College

Candidate coming from a University other than the Mysore University must produce a migration certificate in addition to the above certificates Forms of application may be had from the Heads of Institutions concerned Every application for admission to a College should be accompanied by a fee of one rupee and this fee will not be refunded in any case

Names of selected candidates for admission will be notified on the Notice Board of the institution one week after the receipt of applications A selected candidate not joining the Institution within a week of the Notification will forfeit his admission

By order,

D S GORDON,
Registrar

ಮನೆ ಕ್ರಯಕ್ಕಿದೆ

ಚಲುವಾಂಬಾ ಅಗ್ರಹಾರದ ಬಂಡೀಕೇರಿಯಲ್ಲಿ ೨೭೫ ನೇ ನಂಬರು ಮನೆಯು ಕ್ರಯಕ್ಕಿರುತ್ತೆ. ಮನೆಯು ನಗರದ ಮಧ್ಯಭಾಗದಲ್ಲಿದ್ದು ಕೋರ್ಟು, ಶಾಲಾ, ಕಾಲೇಜು ಮೊದಲಾದ ಕಡೆಗಳಿಗೆ ಸಮೀಪವಾಗಿರುತ್ತೆ. ಮುಂಭಾಗದಲ್ಲಿ ಮೂರು ಮಳಿಗೆಗಳಿವೆ. ಒಳ ಭಾಗದಲ್ಲಿ ಎರಡು ಸಂಸಾರಗಳಿಗೆ ಅನುಕೂಲವಾದ ಮನೆಗಳಿವೆ. ನಲ್ಲಿ ಮತ್ತು ಫ್ಲಷ್ ಕಕ್ಕಸ್ಸುಗಳಿಂದ ಕೂಡಿದೆ. ಅಪೇಕ್ಷಿತರು ಅದೇ ಮನೆಯಲ್ಲಿ ಬಂದು ವಿಚಾರಿಸಿರಿ

॥ ಶ್ರೀ ॥

ಗಾಯತ್ರಿ ಟಾಕೀಸ

ತಾ॥ ೨೫-೬-೪೮ ರಿಂದ

4 ದಿನಗಳು ಮಾತ್ರ

M. G. M.'s

Holiday In Mexico

(ಹಾಲಿಡೇ ಇನ್ ಮೆಕ್ಸಿಕೊ)

ವರ್ಣ ರಂಜಿತ ಚಿತ್ರ

Next Change :—M G M

UNDER CURREN

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೨ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ:-ಕರೂರು (S I Ry)

ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.) ಬೆಂಗಳೂರು ಸಿಟಿ

ಉಪಶಾಖೆ -ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್:-ಇಲವಾಲ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿ ನಂತೆ ಪಾವತಿ ಮಾಡಬಹುದಾದ—೧೨ ತಿಂಗಳು, ೨೪ ತಿಂಗಳು ಪಾಯದಾ—ರಿಕರಿಂಗ್ ಡಿಪಾಜಿಟ್ ಮತ್ತು ೪೬ ತಿಂಗಳು ಪಾಯದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ವಿ ಕೆ ನಟರಾಜನ್,
ಏಜೆಂಟ್, ಮೈಸೂರು

ಪ್ರಭುದೇವಾ ಟಾಕೀಸಿನಲ್ಲಿ

AT PRABHUDEVA TALKIES

ಜೆ ಮಿ ನಿ

ಜ್ಞಾನ ಸುಂದರಿ

(ತಮಿಳು)

25-6-48 ರಿಂದ : : ಅಮೋಘ 2 ನೇ ವಾರ

ಪ್ರತಿ ದಿನ 3 ಆಟಗಳು— ಮ್ಯಾಟಿನಿ 3, 1 ನೇ ಆಟ 6-30, 2 ನೇ ಆಟ 1...

ಪಾತ್ರ:—ಎಂ.ಕೆ. ರಾಧಾ, ಕಣ್ಣಾಂಬ, ಸುಶೀಲಾ, ಟಿ.ಆರ್. ರಾಮಚಂದ್ರ, ಎಲ್. ನಾರಾಯಣರಾವ್

.... ಪ್ರಭಾ ಪಿಕ್ಚರ್ ಹೌಸ್ ....

25 -6 - 48 ರಿಂದ ಯಶಸ್ವಿಯಾದ 6 ನೇ ವಾರ

★ ಖಿಡ್ಕಿ ಖಿಡ್ಕಿ ★

(ಹಿಂದಿ)

ಪಾತ್ರ:—ರೆಹನ, ಮುಮ್ತಾಜಾಲಿ ಮತ್ತು ವಿ. ಹೆಚ್. ದೇಸಾಯಿ

—: ಮುಂದಿನ ಬದಲಾವಣೆ :—

★ ಅರೇಬಿಯನ್ ನೈಟ್ಸ್ ★

(ಹಿಂದಿ)

ಪಾತ್ರ:—ಕಣ್ಣನ್ ದೇವಿ

ಫೋನ್ ನಂ. 792 || ವಂದೇಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶನಿವಾರ ೨೬-೬-೪೮ [ಸಂಚಿಕೆ ೪೧೬

೧೯೪೯ ನೇ ಜನವರಿಗೆ ಮೈಸೂರು ಚುನಾವಣೆ

ಸರ್ಕಾರಿ ರೇಷ್ಮೆ ಕೆಲಸಗಾರರ ಮುಷ್ಕರ ?

ಮೈಸೂರು ೨೬.

ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆಯ ಕೆಲಸಗಾರರು ತಮಗೆ ತಮ್ಮ ಸರ್ವಿಸಿಗನುಗುಣವಾಗಿ ವೇತನವನ್ನು ಹೆಚ್ಚಿಸಬೇಕೆಂದೂ, ವಾರ್ ಬೋನಸ್, ಇಂಕ್ರಿಮೆಂಟ್ ಬೋನಸ್ ಮತ್ತು ಪ್ರಾಫಿಟ್ ಬೋನಸ್‌ಗಳನ್ನು ಕೊಡಬೇಕೆಂದೂ, ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ಜುಲೈ ೧೯ ರಿಂದ ಮುಷ್ಕರ ಹೂಡುವುದಾಗಿಯೂ ತಿಳಿಸಿದ್ದಾರೆ.

ಟಾಂಗಾ ಗಾಡಿಯವನಿಗೆ ಜುಲ್ಮಾನೆ

ತನ್ನ ಟಾಂಗಾವನ್ನು ಲೈಸೆನ್ಸಿಲ್ಲದವನೊಬ್ಬನಿಗೆ ಬಾಡಿಗೆಗೆ ಹೊಡೆಯಲು ಕೊಟ್ಟಿದ್ದಕ್ಕಾಗಿ ಒಂಟಿಕೊಪ್ಪಲಿನ ನಂಜಯ್ಯನೆಂಬುವನಿಗೆ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರು ೨೦ ರೂ. ಜುಲ್ಮಾನೆ ವಿಧಿಸಿದರು.

ಶ್ರೀವೈಷ್ಣವ ವಿದ್ಯಾರ್ಥಿ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಡೆಸಿದ ತರಗತಿಗಳಲ್ಲಿ ಪಬ್ಲಿಕ್ ಪರೀಕ್ಷೆಗಳಿಗೆ ತಯಾರು ಮಾಡಲ್ಪಟ್ಟ ವಿದ್ಯಾರ್ಥಿಗಳ ಪೈಕಿ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ನೂರಕ್ಕೆ ೫೦ ಜನರೂ ಮತ್ತು ಎಸ್. ಎಸ್. ಎಲ್. ಸಿ ಗೆ ಕುಳಿತಿದ್ದ ೧೧೦ ವಿದ್ಯಾರ್ಥಿಗಳ ಪೈಕಿ ೧೦೨ ಜನರೂ ತೇರ್ಗಡೆ ಹೊಂದಿರುವರೆಂದು ತಿಳಿದುಬಂದಿದೆ. ಎಸ್. ಎಸ್. ಎಲ್. ಸಿ ಪರೀಕ್ಷೆಯ ೨ ಮತ್ತು ೩ ನೇ ಸ್ಥಾನಗಳೂ ಸಹ ಈ ಸಂಘದ ವಿದ್ಯಾರ್ಥಿಗಳಿಗೆ ಲಭಿಸಿದೆ. ೩೦ ಜನರು ಮೊದಲನೇ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಹೋಟೇಲ್ ಕೆಲಸಗಾರರ ಕ್ಷಮಾಪಣೆ

ಕೃಷ್ಣ ಸ್ಟೀಷನ್ ಹೋಟೆಲಿನಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ ಕೆ. ಎ. ರಾಮರಾಯರನ್ನು ಕೆಲಸದಿಂದ ತೆಗೆದುಹಾಕಿದುದಕ್ಕಾಗಿ ಮುಷ್ಕರ ಹೂಡಿದುದು ತಪ್ಪೆಂದು ಒಪ್ಪಿಕೊಂಡು ಅಲ್ಲಿನ ಕೆಲಸಗಾರರು ಕ್ಷಮೆ ಬೇಡಿದ್ದಾರೆಂದು ತಿಳಿದುಬಂದಿದೆ.

ಶಸ್ತ್ರಾಸ್ತ್ರಗಳೊಡನೆ ಪಾಕೀಸ್ತಾನಕ್ಕೆ ನಾಜರರ ಪರಾರಿ

ದೆಹಲಿ ಜಿಲ್ಲೆಯ ಕೋರ್ಟಿನಲ್ಲಿ ನಾಜರ್ ಆಗಿದ್ದ ಎಸ್. ಎಂ. ಅನ್ಸಾರಿ ಎಂಬುವರು, ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಗಲಭೆಯ ಕಾಲದಲ್ಲಿ ತಮ್ಮ ಅಧೀನದಲ್ಲಿದ್ದ ಆಯುಧ ಶಾಲೆಯಿಂದ ೪,೦೦೦೦೦ ರೂ. ಬಾಳುವ ಬಂದೂಕ ಮುಂತಾದ ಶಸ್ತ್ರಾಸ್ತ್ರಗಳನ್ನೂ ಹಣಕಾಸು ಮತ್ತು ಬೆಲೆ ಬಾಳುವ ಪದಾರ್ಥಗಳನ್ನೂ ಅಪಹರಿಸಿಕೊಂಡು ಪಾಕೀಸ್ತಾನಕ್ಕೆ ಪಲಾಯನ ಮಾಡಿದರೆಂದು ತಿಳಿದುಬಂದಿದೆ. ಈಗ ಅವರ ಆಸ್ತಿಪಾಸ್ತಿಗಳನ್ನು ಸರ್ಕಾರದವರು ಜಪ್ತು ಮಾಡಲಿರುವರು.

ನಿಜಾಮರಿಗೆ ಟೋರಿಗಳ ನೆರವು

ಪ್ರಾ|| ಮಾಜಿ ಪ್ರಧಾನಿ ಮಿ|| ಚರ್ಚಿಲರು ಭಾರತ ಸರ್ಕಾರದ ಒಪ್ಪಂದದ ಷರತ್ತುಗಳನ್ನು ಒಪ್ಪಬೇಡಿರೆಂದೂ, ಟೋರಿಗಳು ಅಧಿಕಾರಕ್ಕೆ ಬರುವವರೆಗೆ ಯಾವ ಒಪ್ಪಂದಕ್ಕೂ ಒಪ್ಪಬಾರದೆಂದೂ, ಸ್ವಲ್ಪವೂ ತಗ್ಗಬಾರದೆಂದೂ ನಿಜಾಮರಿಗೆ ಸೂಚಿಸಿರುವುದಾಗಿ ವರದಿಯಾಗಿದೆ. ನಿಜಾಮರು ಟೋರಿಪಕ್ಷದವರಿಗೆ ಅಪಾರಪ್ರೇಮವನ್ನಿಟ್ಟಿರುವುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ಮಿ|| ಚರ್ಚಿಲರು ಈ ಉದ್ಯಮದಲ್ಲಿ ತೊಡಗಿರುವರೆಂದು ಹೇಳಲಾಗಿದೆ

ಬಟ್ಟೆ ಅಂಗಡಿಗಳಿಗೆ ಭಾನುವಾರ ಪೂರ್ತಿ ರಜ

ಮೈಸೂರು ೨೬.

ಮೈಸೂರು ಬಟ್ಟೆ ವ್ಯಾಪಾರಿಗಳ ಸಂಘದ ವಿಶೇಷ ಸಭೆಯು ಮೊನ್ನೆ ದಿನ ಜರುಗಿ ಇದುವರೆಗೆ ಪ್ರತಿ ಭಾನುವಾರ ಅರ್ಧ ದಿವಸ ಅಂಗಡಿ ಮುಚ್ಚುತ್ತಿದ್ದುದರ ಬದಲು ಇನ್ನು ಮುಂದೆ ಪ್ರತಿಭಾನುವಾರವೂ ಪೂರ್ತಿ ಮುಚ್ಚಬೇಕೆಂದೂ ಅಂಗಡಿ ಕೆಲಸಗಾರರುಗಳಿಂದ ಪ್ರತಿ ದಿವ ಬೆಳಿಗ್ಗೆ ೯ ರಿಂದ ೧೨ ರವರೆಗೂ ಮತ್ತು ಮಧ್ಯಾಹ್ನ ೩ ರಿಂದ ೭ ರವರೆಗೂ ಮಾತ್ರ ಕೆಲಸ ತೆಗೆದುಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು

ಹರಿಕಥೆ

ಶಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ|| ಬ್ರಹ್ಮಾನಂದ ಔಷಧಾಲಯದ ಮುಂದೆ ಈ ದಿವ ರಾತ್ರಿ ೯ ಗಂಟೆಗೆ ವಿ|| ವೆಂಕಟ ಸುಬ್ಬದಾಸರಿಂದ ದಾನಶೂರ ಕರ್ಣ ಎಂಬ ಹರಿಕಥೆಯು ನಡೆಯುತ್ತದೆ

ಅರಗು ಮತ್ತು ಬಣ್ಣದ ಕಾರ್ಖಾನೆ ಕೆಲಸಗಾರರ ಸಂಘ

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯ ಕೆಲಸಗಾರರ ಸಂಘವು ಕಳೆದ ಏಳೆಂಟು ತಿಂಗಳಿನಲ್ಲಿ ಸ್ಥಾಪಿತವಾಗಿ ಅದರ ರಿಜಿಸ್ಟ್ರೇಷನ್‌ಗಾಗಿ ಅರ್ಜಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ೬ ತಿಂಗಳ ಮೇಲಾದರೂ ಸಹ ಇನ್ನೂ ಸಂಘವನ್ನು ರಿಜಿಸ್ಟರ್ ಮಾಡಿಕೊಟ್ಟಿಲ್ಲವೆಂದೂ, ಇದರಿಂದ ಕೆಲಸಗಾರರು ತಮ್ಮ ಕೇಳಿಕೆ ಮುಂತಾದ ವಿಷಯಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೊಂದರೆಯಾಗಿದೆಯೆಂದೂ, ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಕೂಡಲೇ ಗಮನಿಸಿ ಸಂಘವನ್ನು ರಿಜಿಸ್ಟರ್ ಮಾಡಿಕೊಡುವುದರ ಮೂಲಕ ಕೂಲಿಗಾರರ ಹಿತರಕ್ಷಣೆ ಮಾಡಬೇಕೆಂದೂ, ಮೇಲ್ಕಂಡ ಸಂಘದ ಕಾರ್ಯದರ್ಶಿಗಳಾದ ಶ್ರೀ ತಿಮ್ಮಯ್ಯನವರು ಕೋರಿರುತ್ತಾರೆ.

ದೇವದಾಸ್ ಎಂದು ಹೇಳಿಕೊಂಡ ಮುಸ್ಲಿಂ ಗೂಢಚಾರ

ದಿಲೇರ್ ಖಾನ್ ಎಂಬ ನಿಜಾಂ ಸರ್ಕಾರದ ಮುಸ್ಲಿಂ ಗೂಢಚಾರನೊಬ್ಬನು ಜಬ್ಬಲ್‌ಪುರದ ಜಾಟವ ಗಾಡಿಯೊಬ್ಬನ ಮನೆಯಲ್ಲಿ ದೇವದಾಸ್ ಎಂಬ ಹೆಸರಿಟ್ಟುಕೊಂಡು ಅಲ್ಲಿನ ಹರಿಜನರೆಲ್ಲರೂ ಸ್ವಧರ್ಮಬಾಹಿರರಾಗುವಂತೆ ಪ್ರೇರೇಪಿಸುತ್ತಿದ್ದನೆಂದು ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟಿದ್ದಾನೆ.

ನೆಹರೂ ಭಾವಚಿತ್ರ ಅನಾವರಣ

ಮೈಸೂರು ೨೬.

ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು ನಿನ್ನೆ ಹಿಂದೀ ಛಾತ್ರ ಸಂಘದ ಆಶ್ರಯದಲ್ಲಿ ಪಂ|| ನೆಹರೂರವರ ಭಾವಚಿತ್ರ ಅನಾವರಣವನ್ನು ಮಾಡಿದರು. ಆಗರ್ಭ ಶ್ರೀಮಂತರಾಗಿದ್ದರೂ ದೇಶಕ್ಕಾಗಿ ಅಪಾರ ಸೇವೆ ಮಾಡುವ ಜವಾಹರರ ಆದರ್ಶವನ್ನು ಎಲ್ಲರೂ ಅನುಸರಿಸಬೇಕೆಂದು ಅವರು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಡಾ|| ಆನಂದಾಬಾಯಿಯವರೂ ಶ್ರೀ ಕೆ. ವಿ ಶ್ರೀನಿವಾಸಮೂರ್ತಿಯವರೂ ಸಹ ಭಾಷಣ ಮಾಡಿದರು. ಬಳಿಕ ಮಾನಪತ್ರ ವಿನಿಯೋಗ, ಸಂಗೀತ ಮತ್ತು ರಾಷ್ಟ್ರಗೀತೆಗಳ ನಂತರ ಸಭೆ ಮುಗಿಯಿತು

ರಾಮೇಶ್ವರ ಯಾತ್ರೆ

ಬದರೀನಾಥ, ದ್ವಾರಕಾಪುರಿ, ಜಗನ್ನಾಥ ಕ್ಷೇತ್ರಗಳಿಗೆಲ್ಲ ಹಗಲಿಯಲ್ಲಿಯೇ ಹೋಗಿ ರಾಮೇಶ್ವರದ ಅಭಿಮುಖವಾಗಿ ರಾಜಧಾನಿಗೆ ಬಂದಿರುವ ಕಂಠೀರವಪುರ ಕ್ಷೇತ್ರದ ಪರಿವ್ರಾಜಕ ಶ್ರೀಮತಿ ಜಗದಾಬಾಯಿ ವೆಂಕಟಾಚಲಂ ಮತ್ತು ಅವರ ೨೫೦ ಜನ ಅನುಯಾಯಿಗಳಿಗೆ ಜೀವಣ್ಣರಾಯನ ಕೆರೆ ಮೈದಾನದಲ್ಲಿ ಆಸನ ವಸನಗಳ ಸಹಾಯಕ್ಕಾಗಿ ಶ್ರೀ ಎ. ಸಟ್ಟಾಚಾರ್ಯರು ೧೫೧ ರೂ. ಶ್ರೀ ಎಂ ಎಲ್ ಶ್ರೀನಿವಾಸರಾಯರು ೧೦೧ ರೂ ಕೊಟ್ಟಿರುತ್ತಾರೆ. ಇತರ ಮಹನೀಯರೂ ಸಹಾಯ ಮಾಡಬೇಕೆಂದು ಕೋರಲಾಗಿದೆ

ವಿದ್ಯಾರ್ಥಿಗಳ ಸಭೆ

ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿಗೆ ಅವಶ್ಯಕವಾದ ನೆರವು ನೀಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕಾಗಿ ವಿದ್ಯಾರ್ಥಿ ಕಾಂಗ್ರೆಸ್ ಅಶ್ರಯದಲ್ಲಿ ನಾಳೆ ಸಂಜೆ ೪-೩೦ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಾರ್ಯಾಲಯದಲ್ಲಿ ವಿದ್ಯಾರ್ಥಿಗಳ ಸಭೆ ನಡೆಯುವುದು

ಲಕ್ನೋ ಮಸೀತಿಯಲ್ಲಿ ಶಸ್ತ್ರಾಸ್ತ್ರಗಳು

ಲಕ್ನೋವಿನ ಚಾಂದಾನಿ ಎಂಬ ಪ್ರದೇಶದ ಮಸೀದಿಯೊಂದರಲ್ಲಿ ಆಸ್ಫೋಟನೆಯುಂಟಾದಾಗ ಅಲ್ಲಿನ ಪೋಲೀಸಿನವರು ಸ್ಥಳಕ್ಕೆ ಹೋಗಿ ತಪಾಸಣೆ ಮಾಡಿದಾಗ ಬಹಳವಾಗಿ ಶಸ್ತ್ರಾಸ್ತ್ರಗಳನ್ನೂ, ಮದ್ದು ಗುಂಡುಗಳನ್ನೂ ಅಲ್ಲಿ ಕೂಡಿಟ್ಟಿದ್ದುದು ಪತ್ತೆಯಾಯಿತೆಂದು ತಿಳಿದುಬಂದಿದೆ.

ಬರುವ ಸೆಪ್ಟೆಂಬರ್-ಅಕ್ಟೋಬರಿನಲ್ಲಿ ಹೊಸ ರಾಜ್ಯಾಂಗ

೧೯೪೯ ನೇ ಜನವರಿಯಲ್ಲಿ ಹೊಸ ಚುನಾವಣೆ

ಶಾಸನ ಸಭೆಯಲ್ಲಿ ಪ್ರಧಾನ ಮಂತ್ರಿಗಳ ಸೂಚನೆ

ಸ್ವಂ. ಸು ಫೋ] ಬೆಂಗಳೂರು ೨೬.

ಮೈಸೂರಿನ ರಾಜ್ಯಾಂಗ ಸಭೆಯ ಕಾರ್ಯಕಲಾಪಗಳ ವಿಷಯವಾಗಿ ಶ್ರೀ ಕೆ. ಬಿ. ಕೃಷ್ಣಗೌಡರು (ಹಾಸನ) ಕೇಂದ್ರ ಪ್ರಶ್ನೆಯ ಸಂಬಂಧವಲ್ಲಿ ಈ ದಿನ ಶಾಸನ ಸಭೆಯಲ್ಲಿ ಉಪ ಪ್ರಶ್ನೆಗಳ ಸುರಿಮಳೆಯೂ ಆಯಿತು. ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ರೀತಿ ಉತ್ತರವಿತ್ತರು

೧೯೪೮ನೇ ಸೆಪ್ಟೆಂಬರ್ ಅಥವಾ ಅಕ್ಟೋಬರ್ ಹೊತ್ತಿಗೆ ರಾಜ್ಯಾಂಗ ಸಭೆಯು ತನ್ನ ವರದಿಯನ್ನು ಒಪ್ಪಿಸಬಹುದೆಂಬ ನಿರೀಕ್ಷಣೆಯಿದೆ. ೧೯೪೯ ನೇ ಜನವರಿಯಲ್ಲಿ ಹೊಸ ರಾಜ್ಯಾಂಗದ ಪ್ರಕಾರ ಚುನಾವಣೆಯು ನಡೆಯುವುದೆಂಬ ಆಶಯವಿದೆ. ಭಾರತ ಡೊಮಿನಿಯನ್ ರಾಜ್ಯಾಂಗವು ಸಿದ್ಧವಾಗಲು ನಾವು ಕಾಯಬೇಕಾಗಿಲ್ಲ. ಪೂರ್ವಭಾವಿಯಾಗಿ ವಯಸ್ಕರ ಓಟುಗಳ ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಸುಮಾರು ೩೦ ಅಥವಾ ೩೫ ಲಕ್ಷ ಜನ ಓಟರುಗಳಾಗಬಹುದು. ರಾಜ್ಯಾಂಗ ಸಭೆಯು ತನ್ನ ವರದಿಯನ್ನು ಸಿದ್ಧಪಡಿಸಿದ ಕೂಡಲೆಯೇ ಆ ಪಟ್ಟಿಯನ್ನು ಪ್ರಕಟಿಸಬೇಕಾಗುವುದು. ಅದರ ಪ್ರಚುರಕ್ಕೆ ಎರಡು ತಿಂಗಳ ಕಾಲ ಬೇಕಾಗುವುದು. ಇದೇ ಮೂರು ತಿಂಗಳ ಮಧ್ಯಭಾಗದಲ್ಲಿ ರಾಜ್ಯಾಂಗವು ಸಿದ್ಧವಾಗುವುದೆಂದು ನ್ಯಾಯಾಂಗ ಸಮಿತಿಯವರು ಮೂರು ತಿಂಗಳಲ್ಲಿ ಆಗಬಹುದೆಂದು ಪ್ರಧಾನಿಗಳು ಹೇಳಿದರೆಂಬುದು ಸರಿಯಲ್ಲ. ಈ ಬಗೆಯ ಆಶೋತ್ತರವನ್ನು ಮಾತ್ರ ಅವರು ಹೊಂದಿದ್ದರು. ಹೊಸ ಶಾಸನ ಸಭೆಗಳ ರಚನೆಯಾಗುವವರೆಗೆ ಈಗಿನ ಸಭೆಗಳನ್ನು ಮುಂದುವರಿಸುವ ವಿಚಾರವು ಅಸ್ಪಷ್ಟವಾಗಿಲ್ಲ. ಈಗಿನ ಸಭೆಗಳನ್ನು ಮಧ್ಯದಲ್ಲಿಯೇ ರದ್ದುಪಡಿಸುವ ಉದ್ದೇಶವೂ ಇಲ್ಲ

ಎಲ್ ಎಸ್ ರಾಜುರವರಿಗೂ ನೋಟೀಸು

ತಾಯಿನಾಡು ಮತ್ತು ಡೈಲಿ ನ್ಯೂಸ್ ಪತ್ರಿಕೆಗಳ ಸಂಪಾದಕರುಗಳಿಗೆ ಕೊಟ್ಟಿರುವಂತೆಯೇ ವಕೀಲರಾದ ಶ್ರೀ ಎಲ್ ಎಸ್ ರಾಜುರವರಿಗೂ ಸಹ ಕೋರ್ಟಿಗೆ ಅವಮಾನ ಮಾಡಿದ ಬಗ್ಗೆ ನೋಟೀಸನ್ನು ಕೊಡಲಾಗಿದೆ. ಜುಲೈ ೩ ನೇ ತಾರೀಖು ವಿಚಾರಣೆ ನಡೆಯಲಿದೆ

ಗೃಹ ಸಮಿತಿ

ನ್ಯಾಯವಿಧಾಯಕ ಸಭೆಯ ಗೃಹ ಸಮಿತಿಗೆ ಶ್ರೀಗಳಾದ ಪಟ್ಟೇಗೌಡ, ಕೆ. ಲಕ್ಷ್ಮಣ್ಣ, ಥಿಯೋಬಾಲ್ಡ್, ರಾಮಯ್ಯನವರುಗಳು ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ. ಕ್ರೀತ್ಯ ಕಾರ್ಯದರ್ಶಿಗಳನ್ನಾಗಿ ಶ್ರೀ ಎಂ ಜೆ ಪದ್ಮನಾಭರವರನ್ನು ಸರ್ಕಾರದವರು ನೇಮಿಸಿದ್ದಾರೆ.

ಬೆಂಗಳೂರಿನಲ್ಲಿ ಪ್ರವಾಸ ವರ್ಶಕ ಯಂತ್ರ

ಸುಪ್ರಸಿದ್ಧ ವಿಜ್ಞಾನ ಸಂಶೋಧಕರಾದ ಸರ್. ಸಿ. ವಿ. ರಾಮನ್‌ರವರು ಬೆಂಗಳೂರಿನ [illegible] ವಿಜ್ಞಾನ ಮಂದಿರದಲ್ಲಿ ಸಭೆ [illegible] ಗ್ರಹಗಳನ್ನೂ ನಕ್ಷತ್ರಗಳನ್ನೂ [illegible] ಸಾಧಕವಾದ ಭಾರಿ [illegible] ದೂರದರ್ಶಕ ಯಂ[illegible] ವರೆಂದು ತಿಳಿದು

ಪ್ರಭುಗಳಿಂದ ಸ್ಟೇಟ್

ಶ್ರೀಮಾನ್ ಧರ್ಮ

ಕಸ್ತೂರಿ ... ...ಕ್ತರನ್ನೂ ಗಿಯೂ ಡಾ. ಸಿ. ಚಲುವಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. ಆಯುರ್ವೇದ ಮತ್ತು ಯುನಾನಿ ವೈದ್ಯರಿಗೂ, ಸಂಸ್ಥೆಗಳಿಗೂ ಸರ್ಕಾರದಿಂದ ಸರಿಯಾದ ಪ್ರೋತ್ಸಾಹ ದೊರೆಯುತ್ತಿಲ್ಲವಾದುದರಿಂದ ಪಾಶ್ಚಾತ್ಯ ವೈದ್ಯ ಪದ್ಧತಿಯ ಸಂಸ್ಥೆಗಳಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಅವರಿಗೂ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವು ಸಭೆಯಲ್ಲಿ ಅಂಗೀಕೃತವಾಯಿತು

● ಸ್ತ್ರೀಯರು ಸರ್ಕಾರಿ ಉಪಾಹಾರಗೃಹಗಳಲ್ಲಿ ಆಹಾರವನ್ನು ಪಡೆಯಲು ಈಗ ಇರುವ ನಿರ್ಬಂಧವನ್ನು ತೆಗೆದುಹಾಕಿ ಭಾರತ ಸರ್ಕಾರದವರು ಸದ್ಯದಲ್ಲಿಯೇ ಆಜ್ಞೆ ಹೊರಡಿಸಲಿರುವರೆಂದು ತಿಳಿದು ಬಂದಿದೆ

Municipal Offices,
Mysore City,
Dated 24th June 1948

NOTICE

M5 P R. 9-47-48

Sealed tenders will be received upto 4 p m, on Friday the 2nd July 1948 for printing and supplying of Council proceedings, forms challans etc, required by this Municipality during the year 1948-49. Each tenderer should deposit a sum of Rs 100 in the Municipal Treasury as earnest money and enclose the Treasury challan with the tender. Other particulars may be had in the Municipal Office during office hours

(Sd) N. S. [N]ARANNAYYA,
Municipal Commissioner.

EDUCATIONAL

The NATIONAL INSTITUTE of Engineering, MYSORE

NOTIFICATION

The time for receiving applications for admission to the Diploma Course in Civil Engineering is hereby extended up to 5th July 1948.

S. RAMASWAMY,
Principal

25th June 48.

Edited printed and published by A. R. Nagarajan at the Sadhvi Press D. Subbaiah Road Mysore

ವಿಮಾನದಲ್ಲಿ ಮಹಿಳೆಯಿಂದ ಪ್ರಪಂಚ ಪರ್ಯಟನ

ಕೇಂಬ್ರಿಡ್ಜಿನ ಮಿಸ್ ಮಾರ್ಜೋರಿ ಟ್ವೈಟ್ ಎಂಬಾಕೆಗೆ ವಿಮಾನ ನಡೆಸಿಕೊಂಡು ಪ್ರಪಂಚವನ್ನೆಲ್ಲಾ ಸುತ್ತಿ ಬರಲು ರಹದಾರಿ ದೊರೆತಿದೆಯೆಂದೂ ಯುದ್ಧಾನಂತರ ವಿಮಾನ ನಡೆಸಲು ಮಹಿಳೆಯರಿಗೆ ಅವಕಾಶ ಸಿಕ್ಕಿರುವುದು ಇದೇ ಮೊದಲೆಂದೂ ಹೇಳಲಾಗಿದೆ

○ ಕೈಲಾಸ ಪರ್ವತದಲ್ಲಿರುವ ಪವಿತ್ರವಾದ ಮಾನಸ ಸರೋವರದಲ್ಲಿ ಸಂಚಯನ ಮಾಡಲು ಗಾಂಧೀಜಿಯವರ ಅಸ್ಥಿಯನ್ನು ತೆಗೆದುಕೊಂಡು ಅವರ ಅನುಯಾಯಿಗಳಲ್ಲಿ ಕೆಲವರು ಅಲ್ಮೋರ ಪರ್ವತದ ಮೂಲಕ ಪ್ರಯಾಣ ಬೆಳೆಸಿರುವರು.

ಸಿಕಂದರಾಬಾದ್ ಕುದುರೆ ಜೂಜು ರದ್ದು

ಜುಲೈ ೧೯ ರಿಂದ ಸಿಕಂದರಾಬಾದಿನಲ್ಲಿ ೮ ದಿವಸ ನಡೆಯಬೇಕಾಗಿದ್ದ ಕುದುರೆ ಜೂಜನ್ನು ರದ್ದು ಮಾಡಲಾಗಿದೆ ಈ ಕಾರಣದಿಂದ ಬೆಂಗಳೂರಿನಲ್ಲಿ ಜೂಜನ್ನು ಐದು ದಿವಸ ಹೆಚ್ಚು ಮಾಡಲಾಗಿದೆ.

ಮೋಟಾರು ಲಾರಿಯು ನದಿಗೆ ಬಿತ್ತು

ನೇಪಾಳದಲ್ಲಿರುವ ಮೇಲಕ್ ಗನಿ ಎಂಬಲ್ಲಿ ಬೆಟ್ಟದ ಮೇಲೆ ೩೯ ಮಂದಿ ಯಾತ್ರಿಕರನ್ನು ಕೊಂಡೊಯ್ಯುತ್ತಿದ್ದ ಮೋಟಾರು ಲಾರಿಯೊಂದು ಜಾರಿ ಕೆಳಗೆ ನದಿಯ ಪಾತ್ರದೊಳಕ್ಕೆ ಬಿದ್ದಿತೆಂದು ವರದಿಯಾಗಿದೆ.

ಮನೆಯಲ್ಲಿ ಮೃಗಾಲಯ

ಒಂದು ಚಿಕ್ಕನ್ನೂ ೫ ಮರಿಗಳನ್ನೂ ಮನೆಯಲ್ಲಿ ಇಟ್ಟುಕೊಂಡಿದ್ದುದರಿಂದ ಇಂಗ್ಲೆಂಡಿನ ಶ್ರೀಮಂತರೊಬ್ಬರ ಪುತ್ರಿ ಆಲಿಸ್ ಮಾರಿಸ್ ಎಂಬಾಕೆಯು ಹತ್ತು ಪೌಂಡು ಜುಲ್ಮಾನೆಯನ್ನು ಕೊಡಬೇಕಾಗಿ ಬಂದಿತು ತನ್ನ ಮನೆಯಲ್ಲಿ ೨೦ ಹಕ್ಕಿಗಳು, ೧೭ ಬೆಕ್ಕುಗಳು, ೮ ನಾಯಿಗಳು, ೧೩ ಹಂದಿಗಳನ್ನು ಇಟ್ಟುಕೊಂಡು ಇಲಿ ಮತ್ತು ನೊಣಗಳ ಹಾವಳಿಗೆ ಅವಕಾಶವಿತ್ತುದಕ್ಕಾಗಿ ಆಕೆಯ ಮೇಲೆ ಮೊಕದ್ದಮೆಯಾಗಿತ್ತು.

ಬಡತನದಿಂದ ಮಕ್ಕಳ ಪರಭಾರೆ

ಲೇಕ್ ಷೈರ್‌ಪ್ರಾಂತ್ಯದ ಪಿಲಿಯರ್ ದಂಪತಿಗಳು ಎಷ್ಟು ಹುಡುಕಿದರೂ ಕೆಲಸ ಸಿಗದಿದ್ದುದರಿಂದ ತಮ್ಮ ಎಳು ... ಮಕ್ಕಳನ್ನು ಇತರರಿಗೆ ಹಂಚಿ ಕೊಟ್ಟಿರುವುದಾಗಿ ವರದಿಯಾಗಿದೆ ... ರಿಗೆ ಕೆಲಸವನ್ನು ಹುಡುಕಿಕೊಂಡು ... ಹೋಗಿ ತಮ್ಮಲ್ಲಿದ್ದ ಹಣವೆಲ್ಲಾ ವೆಚ್ಚವಾದುದರಿಂದ ತಮ್ಮ ಮಕ್ಕಳನ್ನು ಪೋಷಿಸುವವರು ಬೇಕೆಂದು ಪತ್ರಿಕೆಗಳಲ್ಲಿ ... ರು ಮಾಡಿದರು. ೯ ತಿಂಗಳಿನಿಂದ ... ವರ್ಷ ವಯಸ್ಸಿನವರಿಗಿರುವ ಮಕ್ಕಳನ್ನು ... ರೀತಿ ಅವರು ಇತರರಿಗೆ ಒಪ್ಪಿಸಿದರೆಂದು ತಿಳಿದುಬಂದಿದೆ.

ಹೋಟೆಲ್ ಕೆಲಸಗಾರರ ಸಂಘ

ಇಚೆಗೆ ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಶಾಖೆಗೆ ಮೇಲ್ಕಂಡ ಸಂಘವು ಸೇರಿದೆಯೆಂದು ಕೆಲವು ಪತ್ರಿಕೆಗಳ ಮೂಲಕ ಪ್ರಚಾರ ಪಡಿಸಿರುವ ವಿಷಯವು ಸುಳ್ಳೆಂದೂ ಸೋಷಿಯಲಿಸ್ಟ್ ಪಾರ್ಟಿ ಆಶ್ರಯದಲ್ಲಿ ಸ್ಥಾಪಿತವಾಗಿರುವ ಜಿಲ್ಲಾ ಲೇಬರ್ ಕಾಂಗ್ರೆಸ್ಸಿಗೆ ಅದು ಸೇರಿರುವುದಾಗಿಯೂ ಹೋಟೇಲ್ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ರಾಮಶೆಟ್ಟಿಯವರು ತಿಳಿಸಿರುತ್ತಾರೆ

ರಾ ಜ ಕ ಮ ಲ್,
ಮೈಸೂರು

ತಾ|| ೨೫—೬—೪೮ರಿಂದ
ಪ್ರತಿ ದಿನ ಮೂರು ಆಟಗಳು

ಅಮರ್ ರಾಜ್
[ಹಿಂದಿ]

—: ಭೂಮಿಕೆ :—
ನಸ್ಸೀಮ್, [ಜೂನಿಯರ್] ತ್ರಿಲೋಕ್ ಕಪೂರ್, ಪ್ರಕಾಶ್, ರಿಹಾನಾ

Morning Shows
From 25-6-48 for 4 days

The Overlanders

With:— DAPHNE CAMPBELL, CHIPPS RAFFERTY, HELEN GRIEVE

|| ಶ್ರೀ ||

ಗಾಯತ್ರಿ ಟಾಕೀಸ್

ತಾ|| ೨೫-೬-೪೮ ರಿಂದ
4 ದಿನಗಳು ಮಾತ್ರ
M. G. M.'s

Holiday In Mexico
(ಹಾಲಿಡೇ ಇನ್ ಮೆಕ್ಸಿಕೋ)
ವರ್ಣ ರಂಜಿತ ಚಿತ್ರ

Next Change :—M G M's
UNDER CURRENT

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ
ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ದಿನ 2 ಆಟಗಳು: ಸಂಜೆ 6-30 ರಾತ್ರಿ 9-30 ೧೦೦ ಆಟಗಾರರು— ೮೫ ಮೃಗಗ[ಳು]
೧೬ ನವ ತರುಣಿಯರ ಡ್ಯಾನ್ಸ್
ಟಿಕೇಟಿನ ದರಗಳು, (ಟ್ಯಾಕ್ಸ್ ಸಮೇತ) 2-8-0, 1-8-0, 0-10-0, 0-6-0
ಮೊದಲನೇ ಎರಡು ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ರಿಜರ್ವೇಷನ್ ಫೀ ...
(ಎಂ. ಸುಬ್ಬರಾಮಯ್ಯ ಅಂಡ್ ಕೊ.)

BANGALORE RACES 1948

ಜೂನ್ ೨೬, ೩೦, ಜುಲೈ ೩ ರಲ್ಲೂ
ಬುಕ್ ಮೇಕರ್ಸ್ — ಟೋಟಲೈಜೇಟರ್ಸ್,
ರೂ ೨, ಪ್ಲೇಸ್ ಮತ್ತು ರೂ ೫, ಟ್ರಿಬಲ್ ಇವೆಂಟ್
ಒಂದನೇ ಟೋಟ್ ರೂ ೧೦, ಎರಡನೇ ಟೋಟ್ ರೂ ೫,

ಪ್ರವೇಶ: — ಒಂದನೇ	ತರಗತಿ	— ಪುರುಷರು	— ರೂ ೬,	ದಿವಸಕ್ಕೆ
,,	,,	— ಸ್ತ್ರೀಯರು	— ರೂ ೪,	,,
ಎರಡನೇ	,,	— ಪುರುಷರು) ಅಥವ) ಸ್ತ್ರೀಯರು)	ರೂ ೨,	,,

ಶುಭ]

.... ಪ್ರ ಭಾ ಪಿ ಕ ರ್ ಹೌ ಸ್ ....
ಚಿ

25-6-48 ರಿಂದ ಯಶಸ್ವಿಯಾದ 6 ನೇ ವಾರ

★ ಖಿಡ್‌ಕಿ ಖಿಡ್‌ಕಿ ★
(ಹಿಂದಿ)

ಪಾತ್ರ:—ರೆಹನ, ಮುಮ್ತಾಜಾಲಿ ಮತ್ತು ವಿ. ಹೆಚ್. ದೇಸಾಯಿ

—: ಮುಂದಿನ ಬದಲಾವಣೆ :—

★ ಅ ರೇ ಬಿ ಯ ನ್ ನೈ ಟ್ಸ್ ★
(ಹಿಂದಿ)

ಪಾತ್ರ:—ಕನ್ನನ್ ದೇವಿ

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೨] ಭಾನುವಾರ ೨೭-೬-೪೮ [ಸಂಚಿಕೆ ೪೯

ಹೈದ್ರಾಬಾದಿನ ಮೇಲೆ ಮದರಾಸಿನ ದಿಗ್ಬಂಧನ

ಪ್ರಭುಗಳಿಂದ ನಗರ ಪರಿಶೀಲನೆ

ಪೌರವಾಸಿಗಳಿಂದ ಉತ್ಸಾಹಪೂರಿತವಾದ ಸ್ವಾಗತ

ಮೈಸೂರು ೨೭.

ಶ್ರೀಮನ್ಮಹಾರಾಜರವರು ಈ ದಿನ ಬೆ ಳಗ್ಗೆ ರಾಜಧಾನಿಯ ಹಲವು ಪ್ರದೇಶಗಳ ಭೇಟಿಯಿತ್ತು ಪರಿಶೀಲನೆ ನಡೆಸಿದರು. ನಜರ್‌ಬಾದು, ರಾಮಾನುಜ ರಸ್ತೆಯ ಮುನಿಸಿಪಲ್ ಮಾದರಿ ಕಟ್ಟಡಗಳು, ಸೂ ಯಜ್ ಘಾರಂ, ಚಾಮರಾಜ ಮೊಹಲ್ಲಾ ಚೆಲುವಾಂಬ ಆಸ್ಪತ್ರೆ, ಧನ್ವಂತರಿ ರಸ್ತೆ, ಕು ರುಬರು ಮತ್ತು ಕಿಷ್ಟಿಪರ ಶಾಲೆ, ಸಾಡೆ ನ್ ಕ್ರೆಸೆಂಟ್ ರಸ್ತೆ, ಮಹ್ಲಾಜ ಛತ್ರ, ಲಕ್ಷ್ಮೀಪುರಂ, ಕುಕ್ಕರ ಹಳ್ಳಿ, ಜ ಯ ರಾ ಮತ್ತು ಅದಿಚುಂಚನ ಕಾಲೊನಿ-ಯಂತಾದ ಪ್ರದೇಶಗಳಲ್ಲಿ ಹಸುರುವಾಣಿ ಗಳನ್ನು ಹಾಕಿ ಅಲಂಕರಿಸಲಾಗಿತ್ತು. ಪ್ರತಿ ಮೊಹಲ್ಲಾದಲ್ಲೂ ಪುರಸಭಾ ಸದ ಸ್ಯರುಗಳೂ, ಪ್ರಮುಖ ಮಹನೀಯರುಗ ಳು ಪ್ರಭುಗಳಿಗೆ ಹಾರ ತುರಾಯಿಗಳನ್ನ ಇತ್ತು ತಮ್ಮ ರಾಜ ಭಕ್ತಿಯನ್ನು ಸೂಚಿಸಿ ದರು.

ಪ್ರಭುದೇವಾ ಟಾಕೀಸ್ ಮಾಲೀಕರಾ ನಂಜುಂಡಪ್ಪ ಅಂಡ್ ಸನ್ಸ್‌ರವರು ಶ್ರೀ ಮನ್ಮಹಾರಾಜರವರು ಟಾಕೀಸಿನ ಬಳಿ ಬಂದಿದ್ದಾಗ್ಯೆ ಹಾರ ತುರಾಯಿಗಳನ್ನ ತ್ತಿದರು

ಪ್ರಭುಗಳೊಡನೆ ಪಟ್ಟಣಾಸಿನ ಕಚೇರಿಯ ಶ್ರೀ ಹೆಚ್. ಸಿ ದಾಸಪ್ಪನವರೂ ಸಹ ಬಯಪಾಡಿಸಿದ್ದರು. ದಾರಿಯುದ್ದಕ್ಕೂ ನ ಗರದಲ್ಲಿ ಪೌರಸಭೆಯವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನೂ, ಮುಂದೆ ಮಾ ಡಬೇಕಾಗಿರುವ ಕೆಲಸಗಳನ್ನೂ ಪೌರಸಭಾ ಧ್ಯಕ್ಷರಾದ ಶ್ರೀ ಪಿ. ಸೀತಾರಾಮಯ್ಯನವ ರು ಮತ್ತು ಕಮಿಷನರಾದ ಶ್ರೀ ಎಸ್. ಸಿ. ಹಿರಣ್ಣಯ್ಯನವರೂ ಪ್ರಭುಗಳಿಗೆ ವಿ ವರಿಸಿದರು. ಪ್ರತಿಯೊಂದು ಮೊಹಲ್ಲಾದ ನಾ ಯಕರೂ ಪ್ರಜೆಗಳೂ ಶ್ರೀಮನ್ಮಹಾರಾಜರವ ರನ್ನು ಕಂಡು ತಮ್ಮ ಕುಂದುಕೊರತೆಗಳ ನ್ನು ಅರಿಕೆ ಮಾಡಿಕೊಂಡರು

ಕುಕ್ಕರಹಳ್ಳಿ ಗ್ರಾಮಕ್ಕೆ ಭೇಟಿಯಿತ್ತಾಗ ಅಲ್ಲಿ ಕಟ್ಟಿರುವ ಸುಲಭ ಬೆಲೆಯ ಮಾದರಿ ಮನೆಗಳನ್ನೂ, ರಸ್ತೆ, ಚರಂಡಿ ಮುಂತಾ ದವುಗಳ ಅಚ್ಚುಕಟ್ಟನ್ನೂ ನೋಡಿ ಶ್ರೀಮ ನ್ಮಹಾರಾಜರು ಸಂತೋಷಪಟ್ಟರು

ಆಕಾಶವಾಣಿ ಸಂಸ್ಥೆಗೆ ಭೇಟಿಯಿತ್ತು ಅ ಲ್ಲಿನ ವಿವಿಧ ಶಾಖೆಗಳ ಕಾರ್ಯಕಲಾಪಗಳನ್ನು ಪ್ರಭುಗಳು ವಿವರವಾಗಿ ಪರಾಂಬರಿಸಿದರು. ಚೆಲುವಾಂಬ ಆಸ್ಪತ್ರೆಯ ಬಳಿ ಯಾ ತ್ರಾರ್ಥಿಗಳಿಗಾಗಿ ಬಂದಿರುವ ಮಂಡಲಾಪುರದ ಜನ ಮಂಡಲಿಯವರೂ ಮತ್ತು ಜ ಎ ಕೆರ್ನ್ ಸಂಸ್ಥೆಯವರೂ ಪ್ರಭುಗಳಿಗೆ ಮ ರ್ಯಾದೆಯನ್ನು ಮಾಡಿದರು. ನರ್ಸಿಂಗ್ ಸ್ಕೂಲ್ ಇ, ಊದುಕೆ, ಒಂಟೆ ಮುಂತಾದುವುಗಳೂ ಮೆರವಣಿಗೆಯಲ್ಲಿ ಭಾಗವಹಿಸಿದ್ದುವು. ಜಲಪುರಿಯ ಆದಿಚುಂಚನರ ಸತ್ಕಾರವನ್ನು ಸ್ವೀಕರಿ ಅಲ್ಲಿನ ನಿವಾಸಿಗಳ ಅವಶ್ಯಕತೆಗಳಲ್ಲಿ ಪ್ರ ಭುಗಳು ವಿಶೇಷ ಆಸಕ್ತಿಯನ್ನು ತೋರಿಸಿದರು ಲಷ್ಕರ್ ಮೊಹಲ್ಲಾ ಬಳಿ ಪ್ರಭುಗಳಿಗೆ ಪುರಸಭಾ ಉಪಾಧ್ಯಕ್ಷರಾದ ಶ್ರೀ ಇ ಪಿ ನಂ ಜಪ್ಪನವರು ಹಾರವನ್ನು ಹಾಕಿ ಅಲ್ಲಿನ ಕುಂ ದುಕೊರತೆಗಳನ್ನು ಅರಿಕೆ ಮಾಡಿದರು ಇ ದಲ್ಲದೆ ಎಲ್ಲಾ ಮೊಹಲ್ಲೆಗಳಲ್ಲಿಯೂ ಆಯಾ ಪುರಸಭಾ ಸದಸ್ಯರುಗಳೂ, ಪ್ರಮುಖ ನಂ ಗಳವರೂ ಪುಷ್ಪಮಾಲೆಗಳನ್ನು ಹಾಕಿದರು.

ಪೌರಸಭಾ ಕಮಿಷನರ್

ಸ್ವ. ಸು. ವರದಿಗಾರ] ಬೆಂಗಳೂರು ೨೭.

ಮೈಸೂರು ಜಿಲ್ಲಾಧಿಕಾರಿಗಳಾಗಿರುವ ಜನಾಬ್ ಎ ಆರ್ ಸಫ್ದರ್ ಹುಸೇನರವರ ನ್ನು ಮೈಸೂರು ಪೌರಸಭೆಯ ಕಮಿಷನರ ನ್ನಾಗಿಯೂ ಶ್ರೀಮನ್ಮಹಾರಾಜರವರ ಅಸಿ ಸ್ಟೆಂಟ್ ಸೆಕ್ರೆಟರಿಯವರಾಗಿರುವ ಶ್ರೀ ಆರ್. ಜೆ ರೇಗೋರವರನ್ನು ಮೈಸೂರು ಜಿಲ್ಲಾಧಿಕಾರಿಗಳನ್ನಾಗಿಯೂ ವರ್ಗ ಮಾ ಡಲಾಗುವುದೆಂದು ಅಧಿಕಾರಿ ವಲಯಗಳಲ್ಲಿ ಹೇಳಲಾಗುತ್ತಿದೆ.

ಲಾ ಕಾಲೇಜ್ ಪ್ರಿನ್ಸಿಪಾಲ್

ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ರಾದ ಶ್ರೀ ಎಸ್ ವೆಂಕಟರಂಗಯ್ಯಂಗಾರ್ರ ವರನ್ನು ನೂತನವಾಗಿ ಸ್ಥಾಪಿಸುವ ಲಾ ಕಾ ಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಬಹು ದೆಂದೂ ಸಹ ಹೇಳಲಾಗಿದೆ

ಪತ್ನಿಯ ಅಪಹರಣಕ್ಕಾಗಿ ಆಮರಣಾಂತ ಉಪವಾಸ

ಘರ್‌ವಾಲ್ ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರಾದ ಶ್ರೀ ದಯಾಶಂಕರ್ ಭಟ್ಟರ ಪತ್ನಿಯವರನ್ನು ಯಾರೋ ಧಾಳಿಕಾರರು ಅಪಹರಿಸಿಕೊಂಡು ಹೋದುದರಿಂದ ಶ್ರೀ ಭಟ್ಟರು ಆಮರಣಾಂತ ಉಪವಾಸ ಕೈ ಗೊಂಡಿರುವರೆಂದು ವರದಿಯಾಗಿದೆ

ಆದಿಕರ್ನಾಟಕಪುರದ ನಿವಾಸಿಗಳು ವಿ ಶೇಷ ಮೊಹನತ್ತಿನಿಂದ ಅನೇಕ ಸ್ಥಳಗಳಲ್ಲಿ ಗುಂಟಿಕಗಳನ್ನು ನಿರ್ಮಿಸಿದ್ದರು. ನಗರದ ರಸ್ತೆಗಳನ್ನು ಇದಕ್ಕಾಗಿ ಅಚ್ಚುಕಟ್ಟು ಮಾ ಡಿ ಇಡಲಾಗಿತ್ತು. ಪೌರಸಭೆ ಮತ್ತು ಪೊ ಲೀಸ್ ಶಾಖೆಯ ನೌಕರರುಗಳು ಬಹಳ ಶ್ರದ್ಧೆಯಿಂದ ಕೆಲಸ ಮಾಡಿ ಎಲ್ಲ ಏರ್ಪಾ ಡುಗಳನ್ನೂ ಸವಿಸ್ತಾರವಾಗಿ ಮಾಡಿದ್ದರು. ಬೆಳಿಗ್ಗೆ ೧೧-೩೦ ಗಂಟೆಗೆ ಪರಿಶೀಲನಾ ಕಾ ರ್ಯಕ್ರಮವು ಮುಕ್ತಾಯವಾಗಿ ಶ್ರೀಮನ್ಮ ಹಾರಾಜರವರು ಅರಮನೆಗೆ ತೆರಳಿದರು.

ಪ್ರಭುಗಳು ಈ ರೀತಿ ಪಟ್ಟಣದ ನಾನಾ ಭಾಗಗಳಲ್ಲಿ ಪರಿಶೀಲನೆಯನ್ನು ಕೈಗೊಂಡು ಪ್ರಜೆಗಳೊಡನೆ ನಿಕಟ ಸಂಪರ್ಕವನ್ನಿಟ್ಟು ಕೊಂಡ ಈ ಪ್ರಸಂಗವು ನಗರದ ಇತಿಹಾಸ ದಲ್ಲೇ ಹೊಸದು. ಇದರಿಂದ ಪುರನಿವಾಸಿ ಗಳ ಮೇಲೂ ಆಡಳಿತ ವರ್ಗದವರ ಮೇ ಲೂ ಉತ್ತಮವಾದ ಪರಿಣಾಮವುಂಟಾಗು ವುದರಲ್ಲಿ ಸಂದೇಹವಿಲ್ಲ. ಸಧ್ಯದಲ್ಲಿಯೇ ಅವರು ಈ ಊರಿನ ಸಣ್ಣಪುಟ್ಟ ಪ್ರದೇಶಗ ಳಿಗೂ ಭೇಟಿಯಿತ್ತು ಅನ್ನು ಹೆಚ್ಚಿನ ಪರಿ ಶೀಲನೆಯನ್ನು ಕೈಗೊಳ್ಳಲಿರುವರೆಂದು ತಿ ಳಿದುಬಂದಿದೆ.

ವಾರಂಗಲ್ಲಿನಲ್ಲಿ ಪ್ರತಿ ಸರ್ಕಾರ

ಹೈದರಾಬಾದಿನ ವಾರಂಗಲ್ಲಿನಲ್ಲಿ ರೈತರು ಗಳು ಅಲ್ಲಿ ಸ್ವಂತ ಸರ್ಕಾರವನ್ನು ಸ್ಥಾಪಿಸಿ ಕೊಂಡು ತಮ್ಮದೇ ಆದ ಧ್ವಜವನ್ನು ಹಾ ರಿಸಿ ಸರ್ಕಾರಕ್ಕೆ ಕಂದಾಯವನ್ನು ಕೊಡದೆ ಕರನಿರಾಕರಣ ಚಳುವಳಿಯನ್ನು ಹೂಡಿ ದ್ದಾರೆ

ಜನರಲ್ ಚಕ್ರವರ್ತಿಯವರು ಭಾರತೀಯರು

ಟೋಕಿಯೋದಲ್ಲಿರುವ ಭಾರತೀಯ ಪ ತ್ರಿಕಾಕಾರರೊಬ್ಬರು ಜಪಾನಿನ ಚಕ್ರವರ್ತಿ ಹಿರೋಹಿಟೋರವರು ಭಾರತೀಯರೆಂದ ಹೇಳಿದ್ದಾರೆ ಭಾರತೀಯರಿಗೆ ಇರುವಂತೆ ಅವರ ಕಿವಿಗಳು ಕಣ್ಣುಗಳನೇರಕ್ಕೆ ಕೆಳ ಭಾಗದಲ್ಲಿರುವುದು ಅವರ ಹೇಳಿಕೆಗೆ ಸಾ ಕಷ್ಟು ಆಧಾರವಾಗಿದೆಯೆಂದು ಗೊತ್ತಾಗಿದೆ ಜಪಾನ್ ಚಕ್ರವರ್ತಿಯ ಪೂರ್ವಿಕರು ಭಾರ ತದ ದಕ್ಷಿಣದ ಮಾರ್ಗವಾಗಿ ಹೋಗಿ ಟೋಕಿಯೋದಲ್ಲಿ ನೆಲೆಸಿದರೆಂದೂ ವೇ ಲ್ಸಿಂದ ಪತ್ರಿಕಾಕರ್ತರ ಸಂಶೋಧನೆಯಿಂ ದ ಗೊತ್ತಾಗುವುದು

ಪಾಕಿಸ್ಥಾನದಲ್ಲಿ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಗ್ರಾಂಟಿಲ್ಲ

ಪಶ್ಚಿಮ ಪಂಜಾಬಿನ ಸರ್ಕಾರವು ಅಲ್ಲಿನ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಕೊಡುತ್ತಿದ್ದ ಗ್ರಾಂಟುಗಳನ್ನು ಇನ್ನು ಮುಂದೆ ನಿಲ್ಲಿಸು ವಂತೆಯೂ ಆ ಹಣವನ್ನು ಪೋರಿನಿಂದ ಬರುವ ನಿರಾಶ್ರಿತರೂ, ಬಡವರೂ ಆದ ವಿ ದ್ಯಾರ್ಥಿಗಳಿಗೆ ವೇತನ ಕೊಡಲೂ ನಿರ್ಧ ರಿಸಿದೆ

೧ ಹೈದರಾಬಾದಿನ ನಲದುರ್ಗ ಗ್ರಾಮ ದ ಮೇಲೆ ರಜಾಕಾರರು ಧಾಳಿ ನಡೆಸಿ ಗುಂ ಡು ಹಾರಿಸಿದುದರ ಪರಿಣಾಮವಾಗಿ ಹಲವ ರು ಮಡಿದು ಅನೇಕ ಮನೆಗಳು ಭಸ್ಮೀ ಭೂತವಾದುವೆಂದು ವರದಿಯಾಗಿದೆ.

ಯಳಂದೂರಿನಲ್ಲಿ ಹೈಸ್ಕೂಲ್ ಆರಂಭ

ಇದೇ ಜುಲೈ ತಿಂಗಳು ಮೊದಲ ನೇ ವಾರದಿಂದ ಯಳಂದೂರಿನಲ್ಲಿ ಹೈಸ್ಕೂಲ ನ್ನು ಆರಂಭಿಸಲು ಸರ್ಕಾರದ ಆಜ್ಞೆಯಾ ಗಿದೆ. ಆನೇಕಲ್ ಮುನಿಸಿಪಲ್ ಹೈಸ್ಕೂ ಲಿನ ಹೆಡ್ಮಾಸ್ತರಾದ ಶ್ರೀ ಸಿ ಎಂ ಗರುಡಾ ಚಾರ್ಯರನ್ನು ಯಳಂದೂರು ಹೈಸ್ಕೂಲಿ ನ ಹೆಡ್ಮಾಸ್ತರನ್ನಾಗಿ ನೇಮಿಸಲಾಗಿದೆ. ನೆಲ್ಲಿಂದ ಸ್ಕೂಲಿಗೆ ಎಲ್ಲ ವಿಧವಾದ ಪ್ರೋತ್ಸಾಹವೂ ದೊರೆಯುವುದೆಂದು ಆ ಶಿಸಲಾಗಿದೆ

ಹೈದರಾಬಾದಿನ ಮೇಲೆ ಆರ್ಥಿಕ ದಿಗ್ಬಂಧನ

ಭಾರತಸರ್ಕಾರದವರು, ಹೈದರಾಬಾದಿನ ಮೇ ಲೆ ಆರ್ಥಿಕ ದಿಗ್ಬಂಧನವನ್ನು ಹಚ್ಚಿಸುವಂತೆ ನಿ ರ್ಧಾರ ಮಾಡಿರುವುದಕ್ಕೆ ಅನುಸಾರವಾಗಿ ಮದ ರಾಸ್ ಸರ್ಕಾರದವರು ತಮ್ಮ ಪೋಲೀಸ್ ನೌಕ ರರುಗಳಿಗೆ ಕಟ್ಟಾಜ್ಞೆಯನ್ನು ಮಾಡಿ ಹೈದರಾ ಬಾದಿನೊಳಕ್ಕೆ ಹೋಗುವ ಮತ್ತು ಅಲ್ಲಿಂದ ಹೊರಕ್ಕೆ ಬರುವ ಎಲ್ಲಾ ವಾಹನ ಮುಂತಾದ ಸಂಚಾರ ಸಾಧನಗಳ ಮೇಲೆ ತೀವ್ರವಾದ ಎ ಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳುವಂತೆ ಸೂ ಚಿಸಿರುತ್ತಾರೆ.

ಮಧ್ಯ ಪ್ರಾಂತ್ಯದಲ್ಲಿ ವಿದೇಶೀ ಯರ ಕಾನೂನು ಜಾರಿ

ಮಧ್ಯ ಪ್ರಾಂತ್ಯದ ಸರ್ಕಾರದವರು ಹೈ ದರಾಬಾದ್ ಗಡಿಯಲ್ಲಿರುವ ತಮ್ಮ ೪ ಜಿ ಲ್ಲೆಗಳಲ್ಲಿ ೧೯೪೬ ನೇ ಇಸವಿಯ ವಿದೇಶೀ ಯರ ಕಾನೂನನ್ನು ಜಾರಿ ಮಾಡಿದ್ದಾರೆ ಆ ಪ್ರದೇಶದಿಂದ ಹಲವರು ಹೈದರಾಬಾದಿ ಗೆ ಹೋಗಿ ಅಲ್ಲಿ ರಜಾಕಾರರು ಮತ್ತು ನಿ ಜಾಂ ಪೋಲೀಸರೊಡನೆ ಸೇರಿಕೊಂಡು ಭಾರತ ಗಡಿ ಪ್ರದೇಶಗಳ ಮೇಲೆ ನಡೆಸಬ ಹುದಾದ ಧಾಳಿಯನ್ನು ತಡೆಗಟ್ಟುವ ಉ ದ್ದೇಶದಿಂದ ಈ ಶಾಸನವನ್ನು ಜಾರಿ ಮಾ ಡಲಾಯಿತೆಂದು ಹೇಳಲಾಗಿದೆ.

ವಿಶ್ವಕರ್ಮ ವಿದ್ಯಾರ್ಥಿ ನಿಲಯ

ಪ್ರೆಂಚ್‌ರಾಕ್ಸ್ ೨೫

ವಿಶ್ವಕರ್ಮ [illegible] ಈ ಊರಿಗೆ ಬ [illegible] ಸತ್ತ [illegible] ಪ್ರಾ [illegible] ನೌಕರ್ಯಕ್ಕಾಗಿ ಬೇಸ್ತಿಗೆ [illegible] ನಿಲಯದವರು ಉ ಚಿತ ವಸತಿಯ [illegible] ವಿದ್ಯಾರ್ಥಿಗಳು ಈ ಅವಕಾಶವನ್ನು ಉ ಪಯೋಗಿಸಿಕೊಳ್ಳ [illegible] ನಿಲಯದ ಮೇಲ್ವಿಚಾರಕ [illegible] ಶ್ರೀ ಎಂ ಸುಬ್ಬಾ ಚಾರ್ಯರು [illegible]

ಬಿಡುಗಡೆಯಾದ ಕಮ್ಯೂನಿಸ್ಟರ ದಸ್ತಗಿರಿ

ಮೈಸೂರು ೨೭.

ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪ ಸ್ ಅರ್ಜಿಯ ಮೇರೆಗೆ ಬಿಡುಗಡೆ ಹೊಂದಿ ದ್ದ ಕಮ್ಯೂನಿಸ್ಟರ ಪೈಕಿ ಒಬ್ಬರಾದ ಶ್ರೀ ಎಂ. ಎಸ್ ರಾಮರಾಯರು ಈ ದಿನ ಶಿವ ಮೊಗ್ಗದಿಂದ ರಾಜಧಾನಿಗೆ ಬಂದಾಗ ಅವರ ನ್ನು ರೈಲ್ವೆ ನಿಲ್ದಾಣದಲ್ಲಿ ಮತ್ತೆ ಬಂಧಿಸ ಲಾಗಿದೆ.

ಪ್ರಕೃತಿ ಚಿಕಿತ್ಸಾ ಸಮಿತಿ

ವೆಲ್ಲಿಂದ ಸಮಿತಿಯ ವಾರ್ಷಿಕ ಸಭೆ ಯು ಜುಲೈ ೪ ಶನಿವಾರ ಕೃಷ್ಣರಾಜಪುರದ ಲ್ಲಿರುವ ೨೧ ನೇ ನಂಬರ್ ಮನೆಯಲ್ಲಿ ನೆ ಡೆಯುತ್ತದೆ.

ಸಂಗೀತ ಮತ್ತು ನೃತ್ಯ

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿ ರುವ ಶಾಲೆಯಲ್ಲಿ [illegible] ದೇವಸ್ಥಾನದ ಮುಂ ದೆ ಈ ದಿನ ಸಂಜೆ ೭ ಗಂಟೆಗೆ [illegible] ಕಲಲ್ [illegible] ನಾಥ [illegible] ಹಾಡುಗಾ ರಿಕೆಯೂ ಮತ್ತು [illegible] ರಾವ್‌ರವರ ಯು [illegible] ದ ನರ್ತನವೂ ನಡೆಸಲ್ಪಡುವ [illegible] ವು

[illegible] ಶಾಖಾ ಸಚಿವ [illegible] ಲ್ ಥಾಮಸ್ [illegible] ವರವರು [illegible] ದಿನ ಬಸವನ [illegible] ಸ್ವೀಕರಿಸಿದರು.

ವಾರ ಭವಿಷ್ಯ

ತಾ|| ೨೭-೬-೪೮ರಿಂದ ೩-೭-೪೮ರ ವರೆಗೆ

ಮೇಷ— ಹಣಕಾಸಿನ ಪರಿಸ್ಥಿತಿಯು ಉತ್ತಮಗೊಳ್ಳುವುದು, ಆರೋಗ್ಯ ಚೆನ್ನಾಗಿದೆ, ಅಪ್ತೇಷ್ಟರಿಂದ ಸನ್ಮಾನಿತರಾಗುವಿರಿ. ಲಾಟರಿ ಪಟ್ಟಿಗಳಿಂದ ಅಪೂರ್ವ ಲಾಭ, ತಾ|| ೨೮, ೨೯ ಸಂತೋಷ, ಲಾಭ

ವೃಷಭ— ನೆರೆಹೊರೆಯವರವ್ಯಥಾಪವಾದಕ್ಕೊಳಗಾಗುವಿರಿ, ಶತ್ರುಗಳಿಂದ ತೊಂದರೆ ಹೆಚ್ಚುವುದು. ಆರೋಗ್ಯ ಸಾಧಾರಣ, ಮನೆಯಲ್ಲಿ ಸ್ಪರ್ಧಾ ಕಲಹ ತಾ|| ೨೯, ೩ ಅಪವಾದ, ಸ್ವಲ್ಪ ಸಮಾಧಾನ

ಮಿಥುನ— ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಭೇರಿ ಹೊಡೆಯುವಿರಿ, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವವು ಬಂಧು ವರ್ಗದವರಿಂದ ಸನ್ಮಾನ, ತಾ|| ೨೮, ೩೦ ಮಿತ್ರ ದರ್ಶನ, ಔತಣ

ಕಟಕ— ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳಿಂದ ಮನ್ನಣೆ, ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಅಪೂರ್ವ ಯಶಸ್ಸು ಲಭಿಸುವುದು, ಮನೆಯಲ್ಲಿ ಶುಭ ಕಾರ್ಯಗಳು ಜರುಗುವುವು, ತಾ|| ೩೦, ೨ ಶುಭ ವಾರ್ತೆ, ಸುಖ ಭೋಜನ.

ಸಿಂಹ— ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು, ಶುಭ ಕಾರ್ಯಗಳಿಗಾಗಿ ಪ್ರವಾಸ, ವ್ಯಾಪಾರಗಾರರಿಗೆ ಅಧಿಕ ಲಾಭ ಧರ್ಮ ಕಾರ್ಯಗಳಿಗಾಗಿ ವೆಚ್ಚ, ತಾ|| ೨೮, ೨೯ ಸುಖ ಪ್ರವಾಸ, ಆನಂದ

ಕನ್ಯಾ— ಆರೋಗ್ಯ ಕೆಡುವ ಸಂಭವವಿದೆ, ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತೊಂದರೆ, ಯೋಚಿಸಿದ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನ, ತಾ|| ೧, ೩ ವ್ಯಥಾಪವಾದ, ಚೋರ ಭಯ

ತುಲಾ— ಆದಾಯಕ್ಕೂ ವೆಚ್ಚಕ್ಕೂ ಸರಿ ಹೋಗುವುದು, ಆರೋಗ್ಯ ಚೆನ್ನಾಗಿದೆ, ಲಾಟರಿ ಪಟ್ಟಿಗಳಿಂದ ನಷ್ಟ ಉಂಟಾಗುವುದು, ತಾ|| ೨೮, ೧ ಮಹತ್ವದ ಪತ್ರಾಗಮನ, ಮಿತ್ರ ದರ್ಶನ

ವೃಶ್ಚಿಕ— ಆರೋಗ್ಯ ಧನಾದಾಯಗಳೆರಡೂ ಚೆನ್ನಾಗಿವೆ, ಧರ್ಮ ಕಾರ್ಯಗಳಿಗಾಗಿ ವೆಚ್ಚ, ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರುವುವು, ತಾ|| ೨೯, ೨ ಶುಭ ಸಮಾಚಾರ ಸಂತೋಷ ಕೂಟ

ಧನು— ಧನಾದಾಯ ಚೆನ್ನಾಗಿದೆ ಆರೋಗ್ಯ ಉತ್ತಮ, ಕೈಗೊಂಡ ಕಾರ್ಯಗಳಲ್ಲಿ ಮಿತ್ರರಿಂದ ನೆರವು, ಮನೆಯಲ್ಲಿ ಸಂತೋಷ ವಾತಾವರಣ ತಾ|| ೧, ೩ ಲಾಭ, ಔತಣ.

ಮಕರ— ಮನೆಯಲ್ಲಿ ಮಕ್ಕಳು ಮರಿಗಳಿಗೆ ಅನಾರೋಗ್ಯವುಂಟಾಗಿ ವೈದ್ಯರಿಗೆ ವೃಥಾ ಹಣ ತೆರಬೇಕಾಗುವುದು, ಮನಸ್ಸಿನ ಶಾಂತಿ ಹೆಚ್ಚುವುದು, ತಾ|| ೨೮, ೨೯ ನಷ್ಟ, ವಾಹನ ಭಯ

ಕುಂಭ— ಮನೆಯಲ್ಲಿ ಸಂಶಯ ವಾತಾವರಣವು ಹೆಚ್ಚಿ ನಿಮ್ಮನ್ನು ನೀವೇ ಸಂಬದಂತಾಗುವಿರಿ, ಪ್ರವಾಸದಿಂದ ಹಾನಿ ಸಂಭವ, ಆಪ್ತೇಷ್ಟರಿಂದ ತಿರಸ್ಕಾರ ತಾ|| ೧, ೩ ಅಗ್ನಿ ಭಯ, ಸ್ವಲ್ಪ ಸಮಾಧಾನ

ಮೀನ— ಆರ್ಥಿಕ ಸ್ಥಿತಿಯು ಬಗೆಹರಿಸಲಾರದ ಸಮಸ್ಯೆಯಾಗುವುದು, ನಿರೀಕ್ಷಿಸಿದ್ದ ಹಣವೂ ಬಾರದೆ ಕೈ ಕಟ್ಟಿದಂತಾಗುವುದು ವ್ಯಾಪಾರಗಾರರಿಗೆ ನಷ್ಟ, ಆರೋಗ್ಯ ಸಾಧಾರಣ ತಾ|| ೨೮, ೨ ಅಶುಭ ವಾರ್ತೆ, ಅಸಮಾಧಾನ

Edited printed and published by A. R. Nagarajan at the Sadhvi Press D Subbaiah Road Mysore

ಹೋಟೇಲ್ ಕೆಲಸಗಾರರ ಸಂಘ

ಚಾಮರಾಜನಗರ ೨೪

ಇಲ್ಲಿನ ಹೋಟೆಲ್ ಕೆಲಸಗಾರರ ಸಭೆಯು ಮೊನ್ನೆ ದಿನ ಮೈಸೂರಿನ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಸಂಘವೊಂದನ್ನು ಸ್ಥಾಪಿಸಲಾಯಿತು. ಶ್ರೀಗಳಾದ ಸಿ ಗೋಪಾಲರಾಯರು ಅಧ್ಯಕ್ಷರಾಗಿಯೂ, ರಾಮಚಂದ್ರಭಟ್ಟರು ಉಪಾಧ್ಯಕ್ಷರಾಗಿಯೂ, ಪಿ ವಿ ಹಂದಾಸ್ ಮತ್ತು ಹೆಚ್ ಎಸ್ ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿಯೂ ಮತ್ತು ಪಿ ಕೇಶವಯ್ಯನವರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟರು

ಸೂಟ್ ಕೇಸಿನಲ್ಲಿ ೧೦೦೦ ತೋಟಾಗಳು

ಕಳೆದ ಬುಧವಾರ ಕೋಲ್ಕತ್ತಾ ರೈಲ್ವೆ ನಿಲ್ದಾಣದಲ್ಲಿ ಕೆಲವು ಸೂಟ್‌ಕೇಸುಗಳನ್ನು ಸಂಶಯದ ಮೇಲೆ ಅಲ್ಲಿನ ಪೋಲೀಸಿನವರು ಶೋಧಿಸಿದಾಗ ಆ ಪೆಟ್ಟಿಗೆಗಳಲ್ಲಿ ಬಂದೂಕಿಗೆ ಉಪಯೋಗಿಸಬಹುದಾದ ೧೦೦೦ ತೋಟಾಗಳು ಸಿಕ್ಕಿದುವೆಂದು ವರದಿಯಾಗಿದೆ

ಗ್ರಾಮಸ್ಥರ ಪ್ರಯತ್ನದಿಂದ ಕೆರೆ ನಿರ್ಮಾಣ

ಕಾರ್ಕಳದ ಪೂನ್ ತೋಟಂ ಎಂಬಲ್ಲಿಯ ಜನರು ಒಟ್ಟು ಗೂಡಿ ೪ ಎಕರೆ ವಿಸ್ತೀರ್ಣವುಳ್ಳ ಒಂದು ಕೆರೆಯನ್ನು ತೋಡಿದ್ದಾರೆಂದು ತಿಳಿದುಬಂದಿದೆ.

ಅಪೇರಾ ಟಾಕೀಸ್

25—6—48 ರಿಂದ

ಅಮೋಘವಾದ ೫ ನೇ ವಾರ

ಅಭಿಮನ್ಯು

(ತಮಿಳು)

—:ಪಾತ್ರ:—

ಯು. ಆರ್. ಜೀವರತ್ನಂ, ಎಸ್. ಎಂ. ಕುಮರೇಶ, ಪುಳಿಮೂಟಿ

ರಾಜಕಮಲ್, ಮೈಸೂರು

ತಾ|| ೨೫—೬—೪೮ರಿಂದ

ಪ್ರತಿ ದಿನ ಮೂರು ಆಟಗಳು

ಅಮರ್ ರಾಜ್

[ಹಿಂದಿ]

—:ಭೂಮಿಕೆ:—

ನಸ್ರೀಮ್, [ಜೂನಿಯರ್] ತ್ರಿಲೋಕ್ ಕಪೂರ್, ಪ್ರಕಾಶ್, ರೆಹನಾ

Morning Shows

From 25-6-48 for 4 days

The Overlander[s]

With:— DAPHNE CAMPBELL, CHIPPS RAFFERTY, HELEN GRIEVE

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೩ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ:- ಕರೂರು (S I Ry)

ಶಾಖೆಗಳ :- ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.) ಬೆಂಗಳೂರು ಸಿಟಿ

ಉಪಶಾಖೆ:- ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್:- ಇರ್ವಿನ್ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿನಂತೆ ಪಾವತಿ ಮಾಡಬಹುದಾದ— ೧೨ ತಿಂಗಳು, ೨೪ ತಿಂಗಳು ಮಾಯಿದಾ—ರೆಕರಿಂಗ್ ಡಿಪಾಜಿಟ್ ಮತ್ತು ೬೦ ತಿಂಗಳು ಮಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ವಿ ಕೆ ನಟರಾಜನ್,
ಏಜೆಂಟ್, ಮೈಸೂರು

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

KANAN DEVAN TEA

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯ ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.

—:ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—

ಸಿ. ಬಿ. ಜನರಲ್ ಸ್ಟೋರ್ಸ್,
ಹಳೇ ನಾಯ್ಡು ರಸ್ತೆ, ಮೈಸೂರು ಟ

ಗಾಯತ್ರಿ ಟಾಕೀಸ್

|| ಶ್ರೀ ||

ತಾ|| ೨೫-೬-೪೮ ರಿಂದ

4 ದಿನಗಳು ಮಾತ್ರ

M. G. M.'s

Holiday In Mexico

(ಹಾಲಿಡೇ ಇನ್ ಮೆಕ್ಸಿಕೋ)

ವರ್ಣ ರಂಜಿತ ಚಿತ್ರ

Next Change :—M. G. M.'s

UNDER CURRENT

ಶ್ರೀ ಗಣೇಶಾ ಟಾಕೀಸ್

30 6-48 ರಿಂದ

ಪ್ರತಿ ದಿನ ಮೂರು ಆಟಗಳು

ಮ್ಯಾಟಿನಿ 3, ಸಂಜೆ 6-30, ರಾತ್ರಿ 10 ಕ್ಕೆ

ಪ್ರಭಾವತಿ

(ತಮಿಳು)

—:ಭೂಮಿಕೆ:—

ಹೊನ್ನಪ್ಪ ಭಾಗವತರ್,

ಟಿ. ಆರ್. ರಾಜಕುಮಾರಿ,

ಕೃಷ್ಣನ್ ಮತ್ತು ಮಧುರಂ

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ದಿನ 2 ಆಟಗಳು: ಸಂಜೆ 6-30 ರಾತ್ರಿ 9-30 ೧೦೧ ಆಟಗಾರರು— ೮೫ ಮೃಗಗಳು

೧೬ ನವ ತರುಣಿಯರ ಡ್ಯಾನ್ಸ್

ಟಿಕೇಟಿನ ದರಗಳು, (ಟ್ಯಾಕ್ಸ್ ಸಮೇತ) 2-8-0, 1-8-0, 0-10-0, 0 6-0

ಮೊದಲನೇ ಎರಡು ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ರಿಜರ್ವೇಷನ್ ಫೀ ಇಲ್ಲ

[ಎಂ. ಸುಬ್ಬರಾಮಯ್ಯ ಅಂಡ್ ಕೊ.]

A Tutorial Class for the benefit of failed Intermediate Students sitting for September Examination will be opened in the Saradavilas College, Mysore from 1—7—48 Classes will be held in the mornings Subjects taught will be English, Second Language and P C M Other particulars may be got from the office

Hon. Secretary.

ಫೋನ್ ನಂ 792 ‖ ವಂದೇಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಸೋಮವಾರ ೨೮-೬-೪೮ [ಸಂಚಿಕೆ ೩೧೮

ಹೈದರಾಬಾದಿನ ಬಗ್ಗೆ ಒಪ್ಪಂದದ ಸೂಚನೆ

ಗೋಡ್ಸೆಗೆ ಮರಣ ದಂಡನೆ ಬೇಡ

ಗಾಂಧೀಜಿ ಆಶ್ರಮದಲ್ಲಿ ಇರುವಂತೆ ಬೌದ್ಧ ಸನ್ಯಾಸಿಯ ಸೂಚನೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಆಪಾದಿತನಾಗಿರುವ ನಾಥೂರಾಂ ಗೋಡ್ಸೆ ಯು ತಪ್ಪಿತಸ್ತನೆಂದು ತೀರ್ಮಾನವಾದರೆ, ಆತನಿಗೆ ಮರಣ ದಂಡನೆ ವಿಧಿಸಕೂಡದೆಂದು ಸಿಲೋನಿನ ರಾಹುಲ ಎಂಬ ಬೌದ್ಧ ಸನ್ಯಾಸಿಯೊಬ್ಬರು ಪಂಡಿತ ನೆಹರೂರವರಲ್ಲಿ ಪ್ರಾರ್ಥನೆ ಮಾಡಿಕೊಂಡಿರುತ್ತಾರೆ. ಗಾಂಧೀಜಿಯವರ ಅಹಿಂಸಾ ತತ್ವವನ್ನು ಪರಿಪಾಲಿಸಿ, ಆತನನ್ನು ಮಹಾತ್ಮರ ಆಶ್ರಮದಲ್ಲಿಟ್ಟು, ಗಾಂಧೀಜಿಯವರು ಬದುಕಿದ್ದರೆ ಯಾವ ರೀತಿ ಆತನನ್ನು ನೋಡಿಕೊಳ್ಳುತ್ತಿದ್ದರೋ ಅದೇ ರೀತಿ ಮಾಡಿದಲ್ಲಿ ಆತನಿಗೆ ಮರಣ ದಂಡನೆಗಿಂತಲೂ ಹೆಚ್ಚಿನ ಶಿಕ್ಷೆ ಲಭಿಸಿದಂತಾಗುವುದೆಂದು ಅವರು ತಿಳಿಸಿರುತ್ತಾರೆ.

ಒಂದು ಮೂಟೆ ಅಕ್ಕಿಗೆ ೭೫ ರೂ.

ಮದನಪಲ್ಲಿಯಲ್ಲಿ ಅಕ್ಕಿಯ ಬೆಲೆಯು ವಿಪರೀತವಾಗಿ ಏರಿ ಅಕ್ಕಿ ಮೂಟೆ ಒಂದಕ್ಕೆ ೭೫ ರೂ ಗಳಂತೆ ಮಾರಲಾಗುತ್ತಿದೆಯೆಂದು ಹೇಳಲಾಗಿದೆ.

ನಿರಾಶ್ರಿತರು ಭಿಕ್ಷೆ ಬೇಡಕೂಡದು

ನಿರಾಶ್ರಿತರಿಗೆ ತಕ್ಕ ಸಹಾಯ ಮತ್ತು ಸೌಲಭ್ಯಗಳನ್ನೊದಗಿಸಿಕೊಟ್ಟಿದ್ದರೂ, ಅವರುಗಳು ಬೆಂಗಳೂರು ಮತ್ತು ಇತರ ಕಡೆಗಳಲ್ಲಿ ಮನೆ ಮನೆಗೂ ಹೋಗಿ ಭಿಕ್ಷೆ ಬೇಡುತ್ತಿರುವುದು ನಿರಾಶ್ರಿತರ ಕಮೀಷನರ ಗಮನಕ್ಕೆ ಬಂದಿದೆಯೆಂದೂ, ಅಂತಹವರಿಗೆ ಸಾರ್ವಜನಿಕರು ಸಹಾಯ ಮಾಡದೆ, ಅವರುಗಳನ್ನು ಕಮೀಷನರ ಆಫೀಸಿಗೆ ಕಳುಹಬೇಕೆಂದೂ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ.

ತ್ರಿವರ್ಣ ಧ್ವಜಕ್ಕಾಗಿ ಮುದುಕಿಯ ಹೋರಾಟ

ವಿಜಯವಾಡಕ್ಕೆ ೭೫ ಮೈಲಿ ದೂರದಲ್ಲಿರುವ ಜಾನಲಘಡ ಎಂಬ ಹಳ್ಳಿಯಮೇಲೆ ಕಳೆದ ಬುಧವಾರ ಸುಮಾರು ೨೦೦ ಮಂದಿ ಶಸ್ತ್ರ ಸಜ್ಜಿತ ರಜಾಕಾರರು ನಿಜಾಂ ಪೋಲೀಸರೊಡಗೂಡಿ ಧಾಳಿ ನಡೆಸಿದರೆಂದು ವರದಿಯಾಗಿದೆ. ಅವರು ಓಡಿಹೋಗುತ್ತಿದ್ದ ಹಳ್ಳಿಗರನ್ನು ಅಟ್ಟಿಸಿಕೊಂಡು ಹೋಗಿ ಅವರಮೇಲೆ ಗುಂಡುಹಾರಿಸಿದರೆಂದೂ, ಅಸ್ತ್ರಶಸ್ತ್ರಗಳನ್ನೆಲ್ಲಾ ಲೂಟಿ ಮಾಡಿದರೆಂದೂ ಗೊತ್ತಾಗಿದೆ. ವರಂಗಲ್ ಜಿಲ್ಲೆಯ ಬಿಲನಾ ಎಂಬ ಹಳ್ಳಿಯಮೇಲೆ ರಜಾಕಾರರು ಮುತ್ತಿಗೆ ನಡೆಸಿದಾಗ ಅಲ್ಲಿ ಪಟೇಲರ ಮನೆಯಲ್ಲಿದ್ದ ಭಾರತ ಧ್ವಜವನ್ನು ಕಿತ್ತುಕೊಂಡು ಸುಡಲು ಪ್ರಯತ್ನಿಸಿದರೆಂದೂ ಆತನ ವೃದ್ಧ ಪತ್ನಿಯು ಮನೆಯಲ್ಲಿದ್ದ ಮಜಲ್ ಗನ್ನಿನ ಪ್ರಯೋಗದಿಂದ ಅವರನ್ನು ಧೈರ್ಯವಾಗಿ ಎದುರಿಸಿ ಅಕ್ಕಿನ ಕಿಸಾನ್ ದಳದವರು ಬಂದು ತನಗೆ ಸಹಾಯ ನೀಡುವ ವರೆಗೂ ಧ್ವಜವನ್ನು ಕಾಪಾಡಿದಳೆಂದೂ ವರದಿಯಾಗಿದೆ.

ಹರಿಕಥೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮುಂದೆ ಈ ರಾತ್ರಿ 9 ಗಂಟೆಗೆ ಶ್ರೀ ನಾರಾಯಣದಾಸರವರಿಂದ 'ಶ್ರೀನಿವಾಸಕಲ್ಯಾಣ' ಎಂಬ ಹರಿಕಥೆಯು ನಡೆಯುತ್ತದೆ

ಹೈದ್ರಾಬಾದಿಗೆ ಕರಾಚಿಯಿಂದ ಶಸ್ತ್ರಾಸ್ತ್ರಗಳ ಸರಬರಾಜಿಲ್ಲ

ಹೈದರಾಬಾದಿಗೆ ಕರಾಚಿಯಿಂದ ರಾತ್ರಿ ಕಾಲದಲ್ಲಿ ವಿಮಾನಗಳ ಮೂಲಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದುದರ ಬಗ್ಗೆ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಪ್ರತಿಭಟನೆ ಸೂಚಿಸಿ ಭಾರತದ ವಿಮಾನ ನಿಲ್ದಾಣದಲ್ಲಿ ಇಳಿಯದೆ ವಿಮಾನಗಳು ಕರಾಚಿಯಿಂದ ಹೈದರಾಬಾದಿಗೆ ಸಂಚರಿಸುವುದು ಅಂತರರಾಷ್ಟ್ರೀಯ ವೈಮಾನಿಕ ಕಾಯಿದೆಗೆ ವಿರುದ್ಧವೆಂದು ತಿಳಿಸಿದುದರ ಮೇಲೆ ಅಂತಹ ಸಂಚಾರವನ್ನು ಪಾಕಿಸ್ತಾನ ಸರ್ಕಾರದವರು ನಿಲ್ಲಿಸಿರುತ್ತಾರೆಂದು ತಿಳಿದುಬಂದಿದೆ. ಬ್ರಿಟನ್ ಮತ್ತು ಇತರ ವಿದೇಶಾಂಗಗಳಿಗೂ ಇಂತಹ ಪ್ರತಿಭಟನಾ ಸೂಚನೆಗಳನ್ನು ಭಾರತ ಸರ್ಕಾರವು ತಿಳಿಸಿದೆಯೆಂದೂ ಹೇಳಲಾಗಿದೆ

ರೈಲ್ವೆ ಇಂಜಿನ್ನಿಗೆ ಕೋರ್ಟಿನ ಅಟ್ಯಾಚ್‌ಮೆಂಟ್

ಬಿ. ಬಿ ಸಿ ಐ ರೈಲ್ವೆಯಿಂದ ಹಣ ಬರಬೇಕಾಗಿದ್ದವನೊಬ್ಬನು ರೈಲ್ವೆ ಇಂಜಿನನ್ನು ಸ್ವಾಧೀನಪಡಿಸಿಕೊಳ್ಳಲು ಅಟ್ಯಾಚ್‌ಮೆಂಟ್ ವಾರಂಟನ್ನು ಕೋರ್ಟಿನಿಂದ ಪಡೆದನೆಂದು ವರದಿಯಾಗಿದೆ. ಅಜ್ಮೀರ್ ರೈಲ್ವೆ ನಿಲ್ದಾಣದಲ್ಲಿ ದೆಹಲಿ—ಅಹಮದಾಬಾದು ರೈಲು ಬಂದಾಗ, ಆ ಇಂಜನ್ನನ್ನು ತನಗೆ ಸ್ವಾಧೀನಪಡಿಸಬೇಕೆಂದು ತಿಳಿಸಿ, ರೈಲು ಹೊರಡಲು ಅವಕಾಶ ಕೊಡಲಿಲ್ಲವೆಂದೂ, ಆಗ ರೈಲ್ವೆ ಅಧಿಕಾರಿಯೊಬ್ಬರು ಈ ಸಮಸ್ಯೆಯನ್ನು ಬಗೆಹರಿಸಲು, ಇಂಜಿನನ್ನು ಹತ್ತಿರ ರೈಲ್ವೆ ನಿಲ್ದಾಣದಿಂದ ತೆಗೆದುಕೊಂಡು ಹೋಗಬೇಕೆಂದು ಆತನಿಗೆ ತಿಳಿಸಿದನೆಂದೂ, ಅದನ್ನು ಹೊರಕ್ಕೆ ತೆಗೆದುಕೊಂಡು ಹೋಗಲು ಯಾವ ಮಾರ್ಗವೂ ತೋರದೆ, ಆತನು ಹೊರಟು ಹೋದನೆಂದೂ ಹೇಳಲಾಗಿದೆ

ಚಿನ್ನದಗಣಿ ಕಾರ್ಮಿಕ ನಾಯಕರ ದಸ್ತಗಿರಿ

ಸ್ವ.ಸು.ಪೋ(ಗ) ಬೆಂಗಳೂರು ೨೮

ಬಹಳ ದಿವಸಗಳಿಂದಲೂ ಪೋಲೀಸರ ಕೈಗೆ ಸಿಕ್ಕದೆ ಇದ್ದ ಚಿನ್ನದ ಗಣಿ ಕೆಲಸಗಾರರ ನಾಯಕರಾದ ಶ್ರೀ ಗೋವಿಂದನ್‌ರವರನ್ನು ಮೊನ್ನೆ ದಿನ ಅಲ್ಲಿ ಪೋಲೀಸರು ದಸ್ತಗಿರಿ ಮಾಡಿದರು.

ವಿದ್ಯುಚ್ಛಕ್ತಿ ಇಲಾಖೆಯ ನಾನ್ ಗೆಜೆಟೆಡ್ ನೌಕರರುಗಳು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುವ ವಿದ್ಯುಚ್ಛಕ್ತಿಗೆ ಹಣ ಕೊಡಬೇಕಾಗಿಲ್ಲವೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಪುನಃ ಹೈದರಾಬಾದ್-ಭಾರತ ಸಂಧಾನವೇ ?

ಭಾರತ ಮತ್ತು ಹೈದರಾಬಾದು ಸಂಧಾನ ಮಾತುಕತೆಗಳು ಸಧ್ಯದಲ್ಲೇ ಮತ್ತೆ ಪ್ರಾರಂಭವಾಗಿ ಇತ್ಯರ್ಥವಾಗ ಬಹುದೆಂದು ದೆಹಲಿಯಲ್ಲಿ ನಿಜಾಮರ ಏಜೆಂಟ್ ಜನರಲ್ಲಾದ ನವಾಬ್ ಜಾಯಿನ್ ಯಾರ್ ಜಂಗ್‌ರವರು ತಿಳಿಸಿರುತ್ತಾರೆ. ಹೈದರಾಬಾದ್ ಸಮಸ್ಯೆ ಬಗ್ಗೆ ಭದ್ರತಾ ಸಮಿತಿಯು ಕಾಶ್ಮೀರದ ವಿಚಾರಣಾ ಸಮಿತಿಯ ಸಹಾಯವನ್ನು ಹೈದರಾಬಾದು ಬೇಡುವುದಿಲ್ಲವೆಂದೂ, ಅದರ ಜನಾಭಿಪ್ರಾಯ ಗಣನೆಗೆ ಅದರ ಸಹಕಾರವನ್ನು ಪಡೆಯಲು ಭಾರತದ ಒಪ್ಪಿಗೆಯನ್ನು ಕೇಳಲಾಗಿದೆಯೆಂದೂ ಮತ್ತು ಭಾರತದ ಆರ್ಥಿಕ ದಿಗ್ಬಂಧನದಿಂದ ಸಂಸ್ಥಾನದ ಪರಿಸ್ಥಿತಿಯು ಹದಗೆಟ್ಟಿದೆಯೆಂದೂ ಅವರು ಹೇಳಿದ್ದಾರೆ

ತಾವು ಯಾವ ಹೊಸ ಸಲಹೆಗಳನ್ನು ತಂದಿರುವುದಿಲ್ಲವೆಂದೂ, ಹಿಂದೆ ಮಾಡಲಾಗಿದ್ದ ಸಲಹೆಗಳನ್ನು ಉಭಯ ಪಕ್ಷದವರು ಪರಿಷ್ಕರಿಸುವುದರಿಂದ ಸಣ್ಣಪುಟ್ಟ ಬದಲಾವಣೆಗಳೊಡನೆ ಸಮರ್ಪಕ ಪರಸ್ಪರ ಒಪ್ಪಿಗೆಯೂ ದೊರೆತ ಸಂಧಾನವು ಫಲಕಾರಿಯಾಗಬಹುದೆಂದು ತಾವು ನಂಬಿರುವುದಾಗಿಯೂ ಅವರು ಹೇಳಿದ್ದಾರೆ. ಭಾರತ ಡೊಮಿನಿಯನ್ನಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಿದ ಮೇಲೆ ಉಳಿದ ದನ್ನು ಮಾತ್ರ ಹೊರದೇಶಗಳಿಗೆ ಹೈದರಾಬಾದು ಕಳುಹಿಸುವುದೆಂದೂ, ಭಾರತದ ರಿಜರ್ವ್ ಬ್ಯಾಂಕಿನ ಮೂಲಕ ವ್ಯವಹಾರ ನಡೆಸುವುದೆಂದೂ, ತನ್ನ ಸ್ವಂತ ಬ್ಯಾಂಕನ್ನು ಸ್ಥಾಪಿಸುವುದಿಲ್ಲವೆಂದೂ ಅವರು ತಿಳಿಸಿರುತ್ತಾರೆ. ಈ ಬಗ್ಗೆ ಇದೇ ಕಡೆಯಲ್ಲೇ ಪಂಡಿತ ನೆಹರೂ ಮತ್ತು ಗೌರ್ನರ್ ಜನರಲ್ ರಾಜಾಜಿಯವರೊಡನೆ ಮಾತುಕತೆ ನಡೆಸುವುದಾಗಿ ಅವರು ಹೇಳಿದ್ದಾರೆ

ಗಿರಿಜಾ ಕಲ್ಯಾಣ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣದ ಪ್ರಯುಕ್ತ, ೨೯ ನೇ ತಾ|| ಮಂಗಳವಾರ ವರಪೂಜೆ ೩೦ ನೇ ತಾ|| ಬುಧವಾರ ಮಾಂಗಲ್ಯಧಾರಣ ಮಹೋತ್ಸವವೂ ೧-೭-೪೮ ಸಂಜೆ ಪಲ್ಲಕ್ಕಿ ಉತ್ಸವ, ರಾತ್ರಿ ಶಯನೋತ್ಸವ ಮತ್ತು ೨-೭-೪೮ ರಂದ ಮುಂದಿನ ದಿನ ತೆಪ್ಪೋತ್ಸವವೂ ನಡೆಯುತ್ತವೆ.

ಹೈದ್ರಾಬಾದ್ ಬಗ್ಗೆ ಮೌಂಟ್ ಬ್ಯಾಟನ್‌ರ ಸಂಧಾನವೇ ?

ಭಾರತದ ಮಾಜಿ ಗೌರ್ನರ್ ಜನರಲ್ಲರಾದ ಲಾರ್ಡ್ ಮೌಂಟ್‌ಬ್ಯಾಟನ್ನರು ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರನ್ನು ಕಂಡು, ಹೈದರಾಬಾದು ಪರಿಸ್ಥಿತಿ ಬಗ್ಗೆ ಮಾತುಕತೆ ನಡೆಸಿದರೆಂದೂ, ಈ ಸಂಬಂಧದಲ್ಲಿ ಅನಧಿಕೃತವಾಗಿ ಸಂಧಾನ ನಡೆಸಲು ಅವರು ಸಿದ್ಧರಾಗಿರುವರೆಂದೂ ತಿಳಿದುಬಂದಿದೆ.

ಆಹಾರದ ಅಭಾವಕ್ಕಾಗಿ ಸಚಿವರ ಉಪವಾಸ

ಅಸ್ಸಾಮಿನಲ್ಲಿ ಅಕ್ಕಿಯು ಸಿಕ್ಕದೆ ಜನಗಳು ತುಂಬಾ ಕಷ್ಟ ಪಡುತ್ತಿದ್ದಾರೆ. ಈ ಬಗ್ಗೆ ಸಹಾನುಭೂತಿಯನ್ನು ತೋರಿಸಲು ಅಲ್ಲಿ ಆಹಾರ ಸಚಿವರಾದ ಶ್ರೀ ಓಮಿಯೋ ಕುಮಾರದಾಸ್ ಕಳೆದ ಎರಡು ದಿನಗಳಿಂದಲೂ ಉಪವಾಸ ವ್ರತವನ್ನು ಕೈಗೊಂಡಿದ್ದಾರೆ.

ಮೂರು ಜಿಲ್ಲೆಗಳಲ್ಲಿ ಸಂಪೂರ್ಣ ಪಾನ ನಿರೋಧ

ಬೆಂಗಳೂರು ೨೮

ಕೋಲಾರ, ತುಮಕೂರು, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮುಂದಿನ ತಿಂಗಳಿನಿಂದ ಸಂಪೂರ್ಣ ಪಾನನಿರೋಧವು ಜಾರಿಗೆ ಬರುವುದು. ಈ ಕಾರ್ಯವು ಫಲಕಾರಿಯಾಗಲು ... ಪ್ರದೇಶಗಳಲ್ಲಿ ... ದಿನವಾದ ... ಹರಿಕಥೆ, ಭಜನೆ, ಸಿನಿಮಾ ಮತ್ತು ಇತರ ಪ್ರದರ್ಶನಗಳನ್ನು ಏರ್ಪಡಿಸಲು ... ಜಿಲ್ಲಾ ಕೇಂದ್ರಗಳಿಗೂ ... ಮತ್ತು ತಾಲ್ಲೂಕುಗಳಿಗೆ ... ಗಳನ್ನು ಮಂಜೂರು ಮಾಡಲಾಗಿದೆ. ... ನಾಯಕರುಗಳು ಮತ್ತು ... ಪಡೆದು ಈ ಕಾರ್ಯಕ್ರಮ ... ಯಶಸ್ವಿಯಾಗುವಂತೆ ಜಿಲ್ಲಾಧಿಕಾರಿಗಳು ಮಾಡಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ.

ಭೂಕಂದಾಯದಪರಿಶೀಲನಾ ಸಮಿತಿಯ ನೇಮಕ

ಸ್ವ. ಸು. ಪೋ(ಗ) ಬೆಂಗಳೂರು ೨೮

ಸಂಸ್ಥಾನದ ಭೂಕಂದಾಯದ ಬಗ್ಗೆ ಪರಿಶೀಲನೆ ನಡೆಸಲು ೨೮ ಜನ ಸದಸ್ಯರೊಳಗೊಂಡ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ. ಅದಕ್ಕೆ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಅಧ್ಯಕ್ಷರು ಮತ್ತು ರೆವಿನ್ಯೂ ಅಸಿಸ್ಟೆಂಟ್ ಸೆಕ್ರೆಟರಿಗಳಾದ ಶ್ರೀ ಕೆ. ಬಾಲಸುಬ್ರಹ್ಮಣ್ಯಂರವರು ಕಾರ್ಯದರ್ಶಿಗಳು.

ಶ್ರೀಮನ್ಮಹಾರಾಜರವರು, ಶ್ರೀಮನ್ಮಹಾರಾಣಿಯವರ ಮತ್ತು ಶ್ರೀಮದ್ಯುವರಾಣಿಯವರೊಡನೆ ಈ ದಿನ ಮಧ್ಯಾಹ್ನ ... ಗಂಟೆಗೆ ಆಗಮಿಸಿದರು. ... ಯಲ್ಲಿ ಅವರನ್ನು ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ... ರೆಡ್ಡಿಯವರು ಸ್ವಾಗತಿಸಿದರು

ತಾಯಿಯ ಮೇಲೆ ಮಗುವಿನ ದಾವಾ

ಆರ್‌ಮಂಡ್ ವಿಲಿಡೆಂಟ್ ಎಂಬ ೯ ವರ್ಷದ ಅಮೆರಿಕದ ಹುಡುಗನು ತನ್ನ ತಾಯಿಯ ಮೇಲೆ ೧೦ ಸಾವಿರ ಪೌಂಡ್ ಪರಿಹಾರಕ್ಕಾಗಿ ದಾವಾ ಹೂಡಿದೆ. ತಾಯಿಯು ಕಾರನ್ನು ನಡೆಸುತ್ತಿದ್ದಾಗ, ಅದನ್ನು ದುಕ್ಷ್ರಿಂದ ಕಾರಿಗೆ ಡಿಕ್ಕಿ ಹೊಡೆಸಿದುದರಿಂದ ಮಗುವಿಗೆ ಗಾಯಗಳಾದವೆಂದೂ, ಆದರಿಂದಲೇ ಮೊಕದ್ದಮೆ ಹೂಡಲಾಗಿದೆಯೆಂದೂ ಹೇಳಲಾಗಿದೆ. ತಂದೆ ತಾಯಿಗಳ ಮೇಲೆ ಮಕ್ಕಳು ದಾವಾ ಹೂಡಲು ಅವಕಾಶವಿಲ್ಲವೆಂದೂ, ಇಂತಹ ಮೊಕದ್ದಮೆಗಳಿಂದ ಮನೆಗಳಲ್ಲಿ ಜಗಳ ಬರುವುದೆಂದೂ ನ್ಯಾಯಾಧೀಶರು ತಿಳಿಸಿರುತ್ತಾರೆ.

A Tutorial Class for the benefit of failed Intermediate Students sitting for September Examination will be opened in the Baradavilas College, Mysore, from 1-7-48. Classes will be held in the mornings. Subjects taught will be English, Second Languages and P C M. Other particulars may be got from the office.

Hon. Secretary.

ಮೈಸೂರು ಸಿಟಿ ರೇಷನಿಂಗ್

ನಂ R 6-81/47-48

೧೯೪೮ ನೇ ಇಸವಿ ಜೂನ್ ಮಾಹೆ ೩೦ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ದರ್ಜಿಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಯಂ. ಶ್ರೀನಿವಾಸಲು ನಾಯ್ಡು
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಮೈಸೂರು
೨೩-೬-೪೮

ಅಪೇರಾ ಟಾಕೀಸ್

25—6—48 ರಿಂದ

ಅಮೋಘ 5 ನೇ ವಾರ

ಅಭಿಮನ್ಯು

(ತಮಿಳು)

—: ಪಾತ್ರ :—

ಯು. ಆರ್. ಜೀವರತ್ನಂ, ಎಸ್. ಎಂ. ಕುಮಾರೇಶನ್, ಪುಳಿಮೂಟೆ

ಇದರ ಜೊತೆಯಲ್ಲಿ ಪಂಡಿತ ಜವಹರಲಾಲ್ ನೆಹರೂರವರು ಸಂಯುಕ್ತ ರಾಷ್ಟ್ರ ಆರ್ಥಿಕ ಸಮ್ಮೇಳನದ ಸಂಬಂಧದಲ್ಲಿ ಉದಕ ಮಂಡಲಕ್ಕೆ ಭೇಟಿ ಕೊಟ್ಟಿರುವ ಸಮಾರಂಭದ ಚಿತ್ರವೂ ಸಹ ಪ್ರದರ್ಶಿಸಲ್ಪಡುತ್ತದೆ.

ಇಂಗ್ಲೆಂಡಿನ ಪೋಲೀಸ್ ಶಾಖೆಯಲ್ಲಿ ೧೩,೦೦೦ ಖಾಲಿ ಸ್ಥಾನಗಳು

ಇಂಗ್ಲೆಂಡಿನ ಪೋಲೀಸ್ ಇಲಾಖೆಯಲ್ಲಿ ೧೩,೦೦೦ ಸ್ಥಾನಗಳು ಖಾಲಿ ಇವೆ. ಒಬ್ಬರೂ ಕೆಲಸಕ್ಕೆ ಸೇರುತ್ತಿಲ್ಲವೆಂದು ಹೇಳಲಾಗಿದೆ. ನೌಕರರನ್ನು ಹೊಂದಿಸಲು ಸರ್ಕಾರದವರು ಪಟ್ಟ ಪ್ರಯತ್ನಗಳೆಲ್ಲಾ ನಿಷ್ಫಲವಾದುವೆಂದೂ, ಪೋಲೀಸಿನವರಿಗೆ ವಸತಿ ಮತ್ತು ಇತರ ಸೌಕರ್ಯಗಳನ್ನು ಹೆಚ್ಚಿಸಿದರೆ ಮಾತ್ರ ಈ ಪರಿಸ್ಥಿತಿಯು ಬಗೆಹರಿಯಬಹುದೆಂದೂ ನಂಬಲಾಗಿದೆ.

ಯುವತಿಯನ್ನು ಜೀವಸಹಿತ ಹೂಳಲಾಯಿತು

ಬನಾರಸ್ಪುರದ ಯುವತಿಯೊಬ್ಬಳ ದುರ್ನಡತೆಯನ್ನು ಸಹಿಸಲಾರದೆ, ಪೋಷಕರು ಆಕೆಯನ್ನು ನೇಣು ಹಾಕಿ, ಜೀವವಿರುವಾಗಲೇ ಹೂತರೆಂದು ವರದಿಯಾಗಿದೆ. ಈ ಸಂಬಂಧದಲ್ಲಿ ಪೋಲೀಸರು ನಾಲ್ಕು ಮಂದಿಯನ್ನು ದಸ್ತಗಿರಿ ಮಾಡಿದ್ದಾರೆ.

—

ಕಿಶೋರ ವಾಣಿ

ಡಾ॥ ದೊಡ್ಡೇರಿ ವೆಂಕಟಗಿರಿರಾಯರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಹೊರಡುತ್ತಿರುವ ಮೇಲ್ಕಂಡ ಕನ್ನಡ ಮಾಸ ಪತ್ರಿಕೆಯು ನಮ್ಮ ಕೈ ಸೇರಿದೆ. ಇದರಲ್ಲಿ ಶಿಶುಗಳಿಗೆ ಉಪಯುಕ್ತವಾದ ಅನೇಕ ಲೇಖನಗಳೂ, ಚಿತ್ರಗಳೂ ಇವೆ. ಇದರ ಬೆಲೆ ಕೇವಲ ೪ ಆಣೆ ಮಾತ್ರ. ಶ್ರೀ ಎನ್ ಎಸ್ ಶಾಸ್ತ್ರಿಯವರು ರಾಜಧಾನಿಗೆ ಈ ಪತ್ರಿಕೆಯ ಸೋಲ್ ಏಜೆಂಟರು. ಕಿಶೋರವಾಣಿಯು ತನ್ನ ನಾಡಿನ ಕಂದರ ಅಭ್ಯುದಯಕ್ಕೆ ಚಿರಕಾಲ ದುಡಿಯಲೆಂದು ಹಾರೈಸುತ್ತೇವೆ.

॥ ಶ್ರೀ ॥

ಗಾಯತ್ರಿ ಟಾಕೀಸ್

ತಾ॥ ೨೯-೬-೪೮ ರಿಂದ

3 ದಿನಗಳು ಮಾತ್ರ

M. G. M.'s

ಅಂಡರ್ ಕರೆಂಟ್

Under Current

The Most Terrific Climax you have Ever Seen

Starring:—ROBERT TAYLOR, KATHARINE HEPBURN

Next Change 20 th's

CENTINNAL SUMMER

(Technicolour)

ಗೋವಧೆ ನಿಷೇಧ

ಗೋವಧೆಯನ್ನು ನಿಷೇಧಿಸಲಾಗಿದೆಯೆಂದು ರಾಜಾಸ್ಥಾನ ಯೂನಿಯನ್ನಿನ ಸರ್ಕಾರದ ಆಜ್ಞೆಯಾಗಿದೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಿಂದ, ಮೈಸೂರು ೨೪-೬-೪೮

ಟೆಂಡರ್ ನೋಟಿಫಿಕೇಷನ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

೧ ಇದೇ ಮೈಸೂರು ಡಿಸ್ಟ್ರಿಕ್ಟ್ ಚಾಮರಾಜನಗರ ತಾಲ್ಲೂಕು ಸಂತೆ ಮರಹಳ್ಳಿ ಸಂತೆ ಮೈದಾನದಲ್ಲಿರುವ ೨೦ ಮಳಿಗೆಗಳನ್ನು ೧೯೪೮-೪೯ ನೇ ಸಾಲಿಗೆ ಬಾಡಿಗೆಗೆ ಪಡೆಯುವ ಹಕ್ಕನ್ನು ಟೆಂಡರು ಮೂಲಕ ವಿಲೇವಾರಿ ಮಾಡಲಾಗುತ್ತೆ.

೨ ಇದನ್ನು ಪಡೆಯಲು ಇಷ್ಟವುಳ್ಳವರು ಈ ಬಗ್ಗೆ ಟೆಂಡರನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿಗೆ ಇದೇ ಜುಲೈ ಮಾಹೆ ೫-೭-೪೮ ನೇ ತಾರೀಖು ಮಧ್ಯಾಹ್ನ ೪ ಘಂಟೆಯೊಳಗೆ ತಲಪುವಂತೆ ಕಳುಹಿಸತಕ್ಕದ್ದು.

೩ ಸದರಿ ಟೆಂಡರಿನೊಂದಿಗೆ ೫೦ ರೂಪಾಯಿಗಳನ್ನು ಸರ್ಕಾರಿ ಖಜಾನೆಯಲ್ಲಿ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಮಾಡಿದ ಬಗ್ಗೆ ಚಲನ್ ಸಹ ಹಾಜರುಪಡಿಸತಕ್ಕದ್ದು.

೪ ಚಲನ್ ಸಮೇತ ಬಾರದೇ ಇರುವ ಟೆಂಡರುಗಳನ್ನು ಅಂಗೀಕರಿಸಲಾಗುವುದಿಲ್ಲ.

೫ ಟೆಂಡರ್ ಹಾಕುವವರು ಅರ್ಜಿಯಲ್ಲಿ ತಮಗೆ ಬೇಕಾದ ಮಳಿಗೆ ನಂಬರನ್ನು ಸೂಚಿಸಿ ಟೆಂಡರು ಮೊಬಲಗನ್ನು ತಿಂಗಳು ೧ ಕ್ಕೆ ಲೆಕ್ಕ ಹಾಕಿ ನಮೂದಿಸತಕ್ಕದ್ದು.

೬ ಅಂಗೀಕೃತವಾದ ಟೆಂಡರುದಾರರು ಕನಿಷ್ಠ ಪಕ್ಷ ನಾಲ್ಕು ತಿಂಗಳ ಬಾಕ್ತನ್ನು ಮುಂಗಡವಾಗಿ ಕಟ್ಟತಕ್ಕದ್ದು. ಈ ಮೊಬಲಗು ಸಾಲಿನ ಕೊನೆಯ ನಾಲ್ಕು ತಿಂಗಳ ಬಾಕ್ತುಗಳಿಗೆ ಜಮಾ ತೆಗೆದುಕೊಳ್ಳಲಾಗುತ್ತೆ. ಪ್ರತಿ ಮಾಹೆಯ ೧೦ ನೇ ತಾರೀಖಿನೊಳಗೆ ಬಾಡಿಗೆದಾರರು ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಮಾಡಿ ಚಲನ್ನನ್ನು ಆಫೀಸಿಗೆ ಕಳುಹಿಸತಕ್ಕದ್ದು. ತಪ್ಪಿದಲ್ಲಿ ಡಿಪಾಜಿಟ್ಟಿನ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಅವರ ಹಕ್ಕನ್ನು ವಜಾ ಮಾಡಲಾಗುವುದು.

೭ ಯಾವುದಾದರೂ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ವಿಷಯದಲ್ಲಿ ಅಧ್ಯಕ್ಷರಿಗೆ ಪೂರ್ಣಾಧಿಕಾರ ವಿರುತ್ತದೆ.

೮ ಹೆಚ್ಚಿಗೆ ವಿವರಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತಿಳಿಯುವುದು.

ಹೆಚ್. ಎಂ. ಚನ್ನಬಸಪ್ಪ,
ಪ್ರೆಸಿಡೆಂಟ್



ಒಳ್ಳೆಯ ಮೇಲ್ತರಗತಿಯ ತಯಾರಿಕೆ. ಗುಣದಲ್ಲಿ ಅಸಮಾನವಾದುದು. ಚೆನ್ನಾಗಿ ಶುಚಿ ಮಾಡುತ್ತದೆ. ಸಂತೋಷಗೊಳಿಸುವ ಸುವಾಸನಾ ಶಕ್ತಿ ಇರುವುದು ಯಾವುದೆಂದರೆ, ಎಸ್ ಆರ್ ಕೆ ಬ್ರಾಂಡ್ ಸ್ಪೆಷಲ್ ಸೀಗೇ ಪುಡಿ. ಪರೀಕ್ಷಿಸಿ. ಇದರ ಅದ್ವಿತೀಯತೆಯನ್ನು ಈಗಾಗಲೇ ಅನೇಕರು ಮೆಚ್ಚಿಗೆಯನ್ನು ಪಡೆದಿರುವುದು

ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್
ಮೈಸೂರು

ನಿಮ್ಮ ಒಂದು ರೂಪಾಯಿ

ಬೆಲೆ

ಹದಿನಾರಾಣೆಯಲ್ಲ!

ಆದರೆ

ರೂ. 34,000

ರಾಷ್ಟ್ರೀಯ ಪ್ರೌಢಶಾಲಾ ಕಟ್ಟಡ [illegible]
ಆಡಳಿತ ನಿಧಿ ಸಂಗ್ರಹ ಲಾಟರಿ
ಇರುವ ಅದೃಷ್ಟವನ್ನು ಕಳೆದುಕೊಳ್ಳುವ
ಕೆಲವರ ಸ್ವಭಾವ. ಆದರೆ ನೀವು
ನಿಮ್ಮ ಅದೃಷ್ಟವನ್ನು ಕಳೆದುಕೊಳ್ಳ[illegible]

ಕನಸು ನನಸಾಗುವುದು

— ಟಿಕೆಟು ಒಂದಕ್ಕೆ —

ಒಂದೇ ರೂಪಾಯಿ

ನಮ್ಮ ಮಾರಾಟಗಾರರು:—

ಮೈಸೂರು:—
H V ಗೋಪಾಲರಾವ್, ೧೨೬೧, ಕೃಷ್ಣಮೂರ್ತಿಪುರಂ
ಡಿ ಎನ್ ಆಚಾರ್ಯ, ಲ್ಯಾನ್ಸ್‌ಡೌನ್ ಬಿಲ್ಡಿಂಗ್
ಗೋಬಿ ಅಂಡ್ ಸನ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್
ಬಿ ಆರ್ ಸೀತಾರಾಮಯ್ಯ, ೧೨೩೭, ಕೃಷ್ಣಮೂರ್ತಿಪುರಂ
ಎಂ ಕೆ ಗೋಪಾಲರಾವ್, ಜವಳಿ ಅಂಗಡಿ, ಶಿವರಾಂಪೇಟೆ
ಕೆ. ರಾಜೈಯ್ಯಂಗಾರ್, ರೈಲ್ವೆ ಪೇಪರ್ ಸ್ಟಾಲ್

ನಂಜನಗೂಡು:—
ಹೆಚ್ ಕೆ ಎನ್ ಹನಸೋಗೆ, ಲೈಫ್ ಇನ್‌ಷೂರೆನ್ಸ್ ಏಜೆಂಟ್

ಶ್ರೀರಂಗಪಟ್ಟಣ:—
ಸಂಪತ್ಕುಮಾರ್, ನ್ಯೂಸ್ ಏಜೆಂಟ್,

ಎಡತೊರೆ:—
ಪುಟ್ಟಬಸಪ್ಪ, ಅಕ್ಕಿ ಗಿರಣಿ ಮಾಲೀಕರು

ಹುಣಸೂರು:—
ಡಿ ಎನ್ ಆರ್ ಐಯ್ಯಂಗಾರ್, ಮಾರ್ಕೆಟ್ ಫಾರ್ಮಸಿ

ಸಾಲಿಗ್ರಾಮ:—
ಎ ಟಿ ಬ್ರಹ್ಮದೇವಯ್ಯ, ನ್ಯೂಸ್ ಏಜೆಂಟ್,

ಚಾಮರಾಜನಗರ:—
ಬಿ ಎನ್ ದೊರೆಸ್ವಾಮಯ್ಯಂಗಾರ್, ಶ್ರೀನಿವಾಸ ಸ್ಟೋರ್ಸ್

ಹೆಗ್ಗಡದೇವನಕೋಟೆ:—
ನಾಗಪ್ಪ, ಸಿ ಟಿ ಸಿ ಮೋಟಾರ್ ಸರ್ವೀಸ್

ಅರಕಲಗೂಡು:—
ಎ ರಾಮಸ್ವಾಮಯ್ಯ, ಇನ್‌ಷೂರೆನ್ಸ್ ಏಜೆಂಟ್

ಬನ್ನೂರು:—
ಶ್ರೀ ರಾಮ ಸ್ಟೋರ್ಸ್, ದೊಡ್ಡ ಅಂಗಡಿ ಬೀದಿ,

ಮತ್ತಿತರ ಸ್ಥಳಗಳಲ್ಲೂ ಮಾರಾಟಗಾರರು ಬೇಕಾಗಿದ್ದಾರೆ

ವಿವರಗಳಿಗೆ:-
(ಮೈಸೂರು ಜಿಲ್ಲೆಯ ಸೋಲ್ ಏಜೆಂಟರು)

ಶಾಂತಿ ಏಜೆನ್ಸೀಸ್,
ವ್ಯಾಪಾರಿಗಳು, ಪ್ರಕಾಶಕರು ಮತ್ತು ಪ್ರತಿನಿಧಿಗಳು,
ದಿವಾನ್ಸ್ ರಸ್ತೆ, ಮೈಸೂರು

Edited printed and published by A. R. Nagarajan at the Sadhvi Press, D. Subbaiah Road Mysore

ಫೋನ್ ನಂ. 792 || ವಂದೇಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೩] ಮಂಗಳವಾರ ೨೯-೬-೪೮ [ಸಂಚಿಕೆ ೩೧೯

ಜಪಾನ್ ಭೂಕಂಪದಲ್ಲಿ ೩೦,೦೦೦ ಸಾವುನೋವು

ಪೌರಸಭೆಯ ಆಯವ್ಯಯ

ವಿಶೇಷ ಅಧಿವೇಶನದಲ್ಲಿ ವಿಮರ್ಶೆ

ಮೈಸೂರು ೨೮

ರಾಜಧಾನಿಯ ಪೌರಸಭೆಯ ಹೊಸ ವರ್ಷದ ಆಯವ್ಯಯದ ಅಂದಾಜು ಪಟ್ಟಿಯನ್ನು ಪರಿಶೀಲಿಸಲು ನಿನ್ನೆ ಸಭೆಯ ವಿಶೇಷ ಅಧಿವೇಶನವು ಶ್ರೀ ಟಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಅಧ್ಯಕ್ಷರು ಆಯವ್ಯಯದ ಪಟ್ಟಿಯನ್ನು ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಕಮೀಷನರಾದ ಶ್ರೀ ಎನ್ ಹಿರಣ್ಣಯ್ಯನವರು ಪೌರಸಭೆಯ ಹಣಕಾಸಿನ ಸ್ಥಿತಿಗತಿಗಳನ್ನು ವಿವರಿಸಿ ಕ್ರಮವಾಗಿ ನಗರವು ವಿಸ್ತರಿಸಿದಂತೆ ಇದರ ಆಯವ್ಯಯಗಳು ಹೆಚ್ಚಿರುವುದನ್ನು ತಿಳಿಸಿದರು. ಕೆಲವು ಅನಿವಾರ್ಯವಾದ ಕಾರಣಗಳಿಂದ ಪೌರಸಭೆಗೆ ಹೆಚ್ಚಿನ ವೆಚ್ಚಗಳು ತಗಲಿ ವಿಶೇಷವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲವೆಂದು ಹೇಳಿದರು. ಆದರೂ ಇರುವ ಉತ್ಪತ್ತಿಯಲ್ಲೇ ಆದಷ್ಟು ಸೌಕರ್ಯಗಳನ್ನು ಮಾಡಿಕೊಡಲು ಪ್ರಯತ್ನಿಸುವುದಾಗಿ ತಿಳಿಸಿದರು.

ಶ್ರೀ ಬಿ ನಾರಾಯಣಸ್ವಾಮಿಯವರು ಮಾತನಾಡಿ, ಆಯವ್ಯಯ ಪಟ್ಟಿಯು ಆಶಾದಾಯಕವಾಗಿಲ್ಲದಿದ್ದರೂ ನಿರಾಶೆ ಪಡುವುದಿಲ್ಲವೆಂದು ಹೇಳಿದರು. ಪೌರಸಭೆಯು ವರಮಾನದಲ್ಲಿ ಸುಮಾರು ಮೂರರ ಒಂದು ಭಾಗದಷ್ಟು, ಎಂದರೆ, ೭ ಲಕ್ಷ ರೂಪಾಯಿವರೆಗೆ ನೌಕರರ ವೇತನ, ಭತ್ಯ ಮುಂತಾದವುಗಳಿಗಾಗಿಯೇ ವೆಚ್ಚವಾಗುವುದರಿಂದ ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಿಲ್ಲವೆಂದು ತಿಳಿಸಿದರು. ಆದರೂ ಪ್ರಜೆಗಳ ಸೌಕರ್ಯಕ್ಕೆ ಬೇಕಾದ ಕೆಲವು ಏರ್ಪಾಡುಗಳನ್ನು ಮಾಡಬೇಕೆಂದು ಒತ್ತಾಯವಾಗಿ ತಿಳಿಸಿದರು.

ಶ್ರೀ ಎಫ್ ಸಿ ದೇವರಾಜೇ ಅರಸಿನವರು ನಗರದಲ್ಲಿ ದೀಪವೊಂದನ್ನು ಬಿಟ್ಟರೆ ಉಳಿದ ಯಾವ ಭಾಗದಲ್ಲೂ ತೃಪ್ತಿಕರವಾದ ಸೌಲಭ್ಯಗಳನ್ನು ಒದಗಿಸಿಲ್ಲವೆಂದು ಹೇಳಿದರು. ಬಡಜನರ ವಸತಿಗಾಗಿ ಗೃಹ ನಿರ್ಮಾಣ ಕಾರ್ಯಕ್ಕೆ ಮುಖ್ಯ ಗಮನಕೊಡಬೇಕೆಂದು ಅವರು ಸೂಚಿಸಿದರು.

ಹಾಗೆಯೇ ಅಧ್ಯಕ್ಷರುಗಳಂತೆಯೇ ಖಾಸ ಕಮೀಷನರನ್ನೂ ಸರ್ಕಾರದವರು ನೇಮಿಸಲು ಅವಕಾಶಕೊಡಬೇಕೆಂದು ಶ್ರೀ ಇ ನಂಜಪ್ಪನವರು ಸೂಚಿಸಿದರು.

ಸೂಯೇಜ್ ಫಾರಂನ್ನು ಉತ್ತಮಗೊಳಿಸಿ ಅದು ಲಾಭದಾಯಕವಾಗುವಂತೆ ಮಾಡಬೇಕೆಂದು ಶ್ರೀ ವಿ ಎನ್ ದಾಸಪ್ಪನವರು ಹೇಳಿದರು ಮತ್ತು ಗೃಹ ನಿರ್ಮಾಣದ ಯೋಜನೆಯನ್ನು ಕೂಡಲೇ ಕೈಗೊಳ್ಳಬೇಕೆಂದೂ ಸೂಚಿಸಿದರು.

ಬಡಿಕರ್ಣಾಟಕ ಪುರಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕೆಂದು ಶ್ರೀ ಕೆ ಸಿ ರೆಡ್ಡಿಯನವರು ಹೇಳಿದರು.

ಹಾಗೆಯೇ ಅಧ್ಯಕ್ಷರು ಬಂದ ಮೇಲೆ ಸಲಹೆಯಂತೆ ತಯಾರಿಸಲ್ಪಟ್ಟಿರುವ ವ್ಯಯದ ಪಟ್ಟಿಗೆ ಶ್ರೀ ಎ ಕೃಷ್ಣಮೂರ್ತಿಯವರು ಸ್ವಾಗತವನ್ನು ನೀಡಿದರು.

ಕಳೆದ ವರ್ಷ ಮಾಡದೆ ಉಳಿದಿರುವ ಕೆಲಸಗಳನ್ನು ಈ ವರ್ಷವಾದರೂ ಪೂರೈಸಬೇಕೆಂದೂ, ಕನ್ನಡ ಭಾಷೆಯಲ್ಲೇ ವ್ಯವಹಾರಗಳೆಲ್ಲವೂ ನಡೆಯಬೇಕೆಂದೂ, ಕಾರ್ಮಿಕರಿಗಾಗಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕೆಂದೂ, ಶ್ರೀ ಕೆ ಪುಟ್ಟಸ್ವಾಮಿಯವರು ಹೇಳಿದರು.

ನೀರು ಸಂಬರಾಜಿನ ಪಕೋಟೆಯನ್ನು ವ್ಯವಸ್ಥೆಪಡಿಸಬೇಕೆಂದೂ, ಸೂಯೇಜ್ ಫಾರಮ್ಮನ್ನು ಅಭಿವೃದ್ಧಿ ಪಡಿಸಬೇಕೆಂದೂ ಶ್ರೀ ಎಸ್ ಲಿಂಗಣ್ಣನವರು ಹೇಳಿದರು.

ಸಂತೇಪೇಟೆ ಮತ್ತು ಶಿವರಾಮಪೇಟೆ ರಸ್ತೆಗಳ ಹೀನಸ್ಥಿತಿಯನ್ನೂ, ಸಾರ್ವಜನಿಕ ಮೂತ್ರಗಳಲ್ಲಿಯೂ, ನಲ್ಲಿಗಳಲ್ಲಿಯೂ ನೀರು ವ್ಯರ್ಥವಾಗಿ ಹರಿದು ಬಡಜನರಿಗೆ ಉಂಟಾಗಿರುವ ಕುಡಿಯುವ ನೀರಿನ ಅಭಾವವನ್ನೂ ಶ್ರೀ ಚೌಡಯ್ಯನವರು ವರ್ಣಿಸಿದರು.

ಟಾಂಗಾ ಗಾಡಿಗಳ ಹೀನ ಸ್ಥಿತಿಯನ್ನು ಶ್ರೀ ಕೆ ಎಸ್ ಸತ್ಯನಾರಾಯಣರಾಯರು ವರ್ಣಿಸಿ ಅವುಗಳನ್ನು ಉತ್ತಮಪಡಿಸಬೇಕೆಂದು ಹೇಳಿದರು.

ನೌಕರ ವರ್ಗದಲ್ಲಿ ಲಂಚ ರುಷುವತ್ತುಗಳು ತಲೆ ಹಾಕಿಕೊಂಡು ದಕ್ಷತೆಗೆ ಲೋಪವನ್ನು ತಂದಿವೆಯೆಂದ ಶ್ರೀ ಎ. ತಿಂತಿಣಿಯವರು ಅಭಿಪ್ರಾಯಪಟ್ಟರು. ಪೌರಸಭೆಗೆ ಕಮೀಷನರ ಬದಲು ಚೀಫ್ ಆಫೀಸರೊಬ್ಬರು ಇದ್ದರೆ ಸಾಕೆಂದು ಅವರು ಹೇಳಿದರು.

ಸ್ಯಾನಿಟರಿ ಸೆಸ್ ತೆಗೆದುಕೊಳ್ಳುವುದನ್ನು ಸಾರ್ಥಕಪಡಿಸಲು ಪ್ರತಿ ಮನೆಗಳ ಕಕ್ಕಸ್ಸುಗಳನ್ನೂ ಸರಿಯಾಗಿ ಶುದ್ಧಿ ಮಾಡಲು ಏರ್ಪಾಡು ಮಾಡಬೇಕೆಂದೂ ಮುಖ್ಯ ನಗರದ ಬಸ್ಸು ಸರ್ವೀಸನ್ನು ಪೌರಸಭೆಯವರೇ ನಡೆಸಲು ಏರ್ಪಡಿಸಬೇಕೆಂದೂ ಶ್ರೀ ಟಿ ಗರಂ ರಂಗಯ್ಯನವರು ಸೂಚಿಸಿದರು.

ಹಾಗೆಯೇ ವೈದ್ಯರುಗಳ ಸಹಾಯವನ್ನು ತೆಗೆದುಕೊಂಡು ನಗರದ ಆರೋಗ್ಯವನ್ನೂ ನೈರ್ಮಲ್ಯವನ್ನೂ ಕಾಪಾಡಬೇಕೆಂದು ಡಾ॥ ಸೂರ್ಯನಾರಾಯಣರಾಯರು ಹೇಳಿದರು.

ನಾಡಿ ಸರಬರಾಜಿನ ತನ್ಯವಸ್ಥೆಯನ್ನು ಕ್ರಮಪಡಿಸಬೇಕೆಂದೂ ನಗರದ ಸೌಂದರ್ಯವನ್ನು ಸಂರಕ್ಷಿಸಬೇಕೆಂದೂ ಶ್ರೀ ಪಿ ಎನ್ ಸೂರ್ಯನಾರಾಯಣರಾಯರು ಸೂಚಿಸಿದರು.

ಪೌರಸಭೆಯ ಅಡಳಿತಾಧಿಕಾರವು ಎಲ್ಲ ರೀತಿ ಸಭೆಯಲ್ಲೇ ನಿಜವಾಗಿಯೂ ಇರುವ ಮಂತ್ರಿ ಮಂಡಲದಲ್ಲಿ ಮಾರ್ಪಾಡು ಮಾಡಬೇಕೆಂದೂ ಪೌರಸಭೆಯ ಬ್ಯಾಂಕಿನ ... ಪೌರಸಭೆಯ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ಶ್ರೀ ಟಿ ಗೋಪಾಲಕೃಷ್ಣಪ್ಪನವರು ಹೇಳಿದರು.

ಮುಸ್ಲಿಂ ವಿದ್ಯಾರ್ಥಿಗಳಿಗೆ ಫೀಜು ರಿಯಾಯಿತಿ ರದ್ದು

ಸ್ವಂ.ಸು.ಫೋನ್] ಬೆಂಗಳೂರು ೨೮

ಶಾಲಾ ಮತ್ತು ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಅರ್ಧ ಫೀಜು ರಿಯಾಯಿತಿಯನ್ನು ರದ್ದು ಮಾಡಲಾಗಿದೆಯೆಂದು ಈ ದಿನ ಸರ್ಕಾರದ ಆಜ್ಞೆ ಹೊರಬಿದ್ದಿದೆ.

ಲಾ ಕಾಲೇಜಿನ ಪ್ರಿನ್ಸಿಪಾಲರು

ತಾತ್ಕಾಲಿಕವಾಗಿ ಸ್ಥಾಪಿತವಾಗಿರುವ ಲಾ ಕಾಲೇಜಿಗೆ ಇಲ್ಲಿನ ವಕೀಲರಾದ ಶ್ರೀ ಎಂ ನಾರಾಯಣರಾಯರನ್ನು ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ.

ಜಿನ್ನಾರವರ ಬಳಿಗೆ ಹೈದರಾಬಾದ್ ನಿಯೋಗ

ಪಾಕಿಸ್ತಾನದ ಗವರ್ನರ್ ಜನರಲ್ ಮಿ॥ ಜಿನ್ನಾರವರ ಬಳಿಗೆ ಇಷ್ಟರಲ್ಲೇ ಹೈದರಾಬಾದಿನ ನಿಯೋಗವು ದ. ಹೋಗಿ ಹೈದರಾಬಾದ್ ಪ್ರಜೆಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಮಾಡಿರುವ ಹೋರಾಟದಲ್ಲಿ ಪಾಕಿಸ್ತಾನದ ನೈತಿಕ ಬೆಂಬಲ ನೀಡಬೇಕೆಂದು ಪ್ರಾರ್ಥಿಸಲಿರುವರೆಂದ ಗೊತ್ತಾಗಿದೆ.

ಪ್ರಭುಗಳೊಡನೆ ಭೇಟಿ

ಸ್ವಂ ಸು ಫೋ.] ಬೆಂಗಳೂರು ೨೮

ಪ್ರಧಾನ ನ್ಯಾಯಾಧೀಶರಾದ ಶ್ರೀ ಜಿ. ಪರಮಶಿವಯ್ಯ, ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎನ್ ಬಾಲಕೃಷ್ಣಯ್ಯ, ಚೀಫ್ ಇಂಜನಿಯರ್ ಶ್ರೀ ಎಂ ಎನ್ ಲಕ್ಷ್ಮಣರಾವ್, ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಟಿ ವಿ ಸುಬ್ರಹ್ಮಣ್ಯ ಮತ್ತು ಗಾಂಧಿ ವರಾಧಿಕಾರಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್ ಎಲ್ ನರಸಿಂಹಯ್ಯನವರುಗಳಿಗೆ ನಿನ್ನೆ ದಿನ ಪ್ರಭುಗಳ ಭೇಟಿಯನ್ನು ದಯ ಪಾಲಿಸಿದ್ದರು.

ಕಮೀಷನರವರು ಚರ್ಚೆಗೆ ಉತ್ತರವಿತ್ತು ಮೈಸೂರು ಪೌರಸಭೆಯು ಇತರ ಅನೇಕ ಸಭೆಗಳಿಗಿಂತಲೂ ಉತ್ತಮವಾಗಿ ಕೆಲಸ ಮಾಡುತ್ತಿರುವುದೆಂದೂ ಕೆಳವರ್ಗದ ನೌಕರರಿಗೆ ಸ್ವಲ್ಪ ಸಂಬಳಕ್ಕೆ ದಕ್ಷತೆಯ ಅಭ್ಯಾಸವು ಸಾಲದು ... ಇದಕ್ಕೆ ಸರಿಯಾದ ನೌಕರರುಗಳು ಇಲ್ಲದಿರುವುದೇ ಕಾರಣವೆಂದೂ ಹೇಳಿದರು. ನೌಕರರಲ್ಲಿ ಇರುವುದಾಗ ಲಂಚ ರುಷುವತ್ತಿನ ದುರಭ್ಯಾಸಗಳಿಗೆ ಸಾರ್ವಜನಿಕರ ... ಭಾಗಿ ... ಆದನ್ನು ... ಪರ್ಯಾಲೋಚಿಸಬೇಕೆಂದು ...

ಭೂಕಂಪದ ಪರಿಶೀಲನಾ ಸಮಿತಿ

ಸ್ವಂ.ಸು ಫೋನ್] ಬೆಂಗಳೂರು ೨೮

ಶ್ರೀಗಳಾದ ಬಲೀಲಯಲ್ಲಾ ಹೆಚ್ ಎಂ. ಚನ್ನಬಸಪ್ಪ, ನಂಜನಗೂಡು ಎಸ್ ನಾರಾಯಣರಾವ್, ಎ ಜಿ ಬಂದೀಗೌಡ, ಹೆಚ್ ಕೆ ವೀರಣ್ಣಗೌಡ, ಹೆಚ್ ಗುರುವಾರೆಡ್ಡಿ, ಎಸ್ ಕೆ ವೆಂಕಟರಂಗಯ್ಯಂಗಾರ್, ಟಿ ತಿಮ್ಮರಾಯಪ್ಪ, ಕೆ ಪಟ್ಟಾಭಿರಾಮನ್, ಅಪ್ಪ ಲ್ ಅಡ್ಡಿ, ಬಿ ಎಲ್ ನಾರಾಯಣಸ್ವಾಮಿ, ವಿ ವೆಂಕಟಪ್ಪ, ಡಿ ಎಸ್ ಮಲ್ಲಪ್ಪ, ಮಾಲ್ಯ ಗೋವಿಂದ ರೆಡ್ಡಿ, ಓ ವೀರಬಸಪ್ಪ, ಕೆ. ಟಿ ಪಟೇಲ್, ಬಾಗಮನೆ ದೇವೇಗೌಡ, ಹೆಚ್ ಎಸ್ ರುದ್ರಪ್ಪ, ಚನ್ನಯ್ಯ ವಡೆಯರ್, ಜಿ ಶಿವಣ್ಣಗೌಡ, ಸಿ ಟಿ ಹನುಮಂತಯ್ಯ, ತೀರ್ಥಹಳ್ಳಿ ರಾಮಶರ್ಮ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಎಸ್ ಎಂ ಸಿದ್ದಯ್ಯ, ಮಾಲಿ ಮರಿಯಪ್ಪ, ಎ ಸಿ ವಲ್ಲೀಗೌಡ, ಇವರುಗಳನ್ನು ಭೂಕಂದಾಯದ ಪರಿಶೀಲನಾ ಸಮಿತಿಯ ಸದಸ್ಯರನ್ನಾಗಿ ಸರ್ಕಾರದವರು ನೇಮಿಸಿದ್ದಾರೆ. ಅಧಿಕಾರ ವರ್ಗದ ಪೈಕಿ ರೆವಿನ್ಯೂ ಕಮೀಷನರವರು ... ಧ್ಯಕ್ಷರಾಗಿರುತ್ತಾರೆ.

ಈಗ ಜಾರಿಯಲ್ಲಿರುವ ಭೂಕಂದಾಯದ ಪದ್ಧತಿಯ ... ಪರಿಶೀಲಿಸಿ ಸೂಕ್ತವಾದ ... ಸೂಚಿಸಲು ಸಮಿತಿ ... ಕಂದಾಯ ... ಯುಕ್ತವಾದ ಪ್ರಮಾಣ ... ಗಿಂತ ಕಡಿಮೆ ... ಪರಿಹಾರ, ವ್ಯವಸಾಯ ... ಮತ್ತು ಜಲ ... ಅವುಗಳಿಗಾಗಿ ಕೊಡಬೇಕಾದ ... ಮತ್ತು ಹಿಡುವಳಿದಾರರಿಗೆ ಸಂಬಂಧಪಟ್ಟ ನಿಯಮಗಳು ಇವೇ ಮುಂತಾದ ವಿಷಯಗಳನ್ನು ಪರಿಶೀಲಿಸಿ ಸೂಕ್ತವಾದ ಶಿಫಾರಸುಗಳನ್ನು ಮಾಡಬೇಕೆಂದು ಸಮಿತಿಯನ್ನು ಕೋರಲಾಗಿದೆ.

ಸರ್ಕಾರಿ ಮಸೂದೆಗಳಿಗೆ ಒಪ್ಪಿಗೆ

ಹೆಂಡಕಡ್ಡಿ, ಹೊಗೇಸೊಪ್ಪು, ವನಸ್ಪತಿ, ಅಡಿಕೆ, ಕಾಫಿ, ಟೀ ಮತ್ತು ಕೇಂದ್ರ ಎಕ್ಸೈಜ್ ಮತ್ತು ಉಪ್ಪಿನತೆರಿಗೆಯಡಿಯಲ್ಲಿ ಬರುವ ವಸ್ತುಗಳ ಬಗ್ಗೆ ಬಂದಿದ್ದ ಸರ್ಕಾರಿ ಮಸೂದೆಗಳು ನಿನ್ನೆ ಶಾಸನ ಸಭೆಯಲ್ಲಿ ಅಂಗೀಕರಿಸಲ್ಪಟ್ಟವು.

ಬೆಂಗಳೂರಿನ ಇಂಪೀರಿಯಲ್ ಟೊಬ್ಯಾಕೋ ಸಂಸ್ಥೆಯಿಂದ ಕೇಂದ್ರ ಸರ್ಕಾರಕ್ಕೆ ಹೋಗುವ ತೆರಿಗೆಯ ಭಾಗವು ಸಂಸ್ಥಾನಕ್ಕೆ ಬರುವಂತೆ ಒತ್ತಾಯಪಡಿಸಬೇಕೆಂದು ಹಲವು ಸದಸ್ಯರು ಹೇಳಿದರು. ಕಾಫಿ ಮತ್ತು ಹೊಗೇಸೊಪ್ಪಿನ ತೆರಿಗೆಗಳ ಬಗ್ಗೆ ಬಂದ ಸಣ್ಣ ತಿದ್ದುಪಡಿಗಳು ಅಂಗೀಕರಿಸಲ್ಪಟ್ಟವು.

ಜಪಾನಿನಲ್ಲಿ ಭಾರಿ ಭೂಕಂಪ

೩೦ ಸಾವಿರ ಜನರಿಗೆ ಸಾವು ನೋವು

ಜಪಾನಿನಲ್ಲಿ ನಿನ್ನೆ ಸಂಭವಿಸಿದ ಭಾರಿ ಭೂಕಂಪದಿಂದ ... ಸಂಪೂರ್ಣವಾಗಿ ... ೩೦ ಸಾವಿರ ಮಂದಿಗೆ ... ಉಂಟಾಗಿದೆ ... ಭೂಕಂಪದ ... ಬಿರುಗಾಳಿಯು ... ಅಪಘಾತ ... ಉಂಟಾಗಿದೆ.

ಬಡ ವಿದ್ಯಾರ್ಥಿಗಳ ಭೋಜನಕ್ಕೆ ಸಹಾಯ

ಮೈಸೂರು ೨೯

ರಾಜಧಾನಿಯಲ್ಲಿ ನೂರಾರು ಬಡ ವಿದ್ಯಾರ್ಥಿಗಳಿಗೆ ಮಹಾಜನಗಳ ಸಹಾಯದಿಂದ ಸುಮಾರು ೩-೪ ವರ್ಷಗಳಿಂದಲೂ ಉಚಿತ ಭೋಜನವನ್ನು ಪೌರಸಭೆಯವರು ಏರ್ಪಡಿಸಿದ್ದರು. ಈ ವರ್ಷವೂ ಇದೇ ರೀತಿ ಏರ್ಪಡಿಸಲು ಮಹಾಜನಗಳು ಉದಾರವಾಗಿ ಸಹಾಯಮಾಡಬೇಕೆಂದು ಸಮಿತಿಯ ಪರವಾಗಿ ಪೌರಸಭಾಧ್ಯಕ್ಷರಾದ ಶ್ರೀ ಚೌಡಯ್ಯನವರು ಪ್ರಾರ್ಥಿಸಿರುತ್ತಾರೆ

ಮಹಾಜನ ಹೈಸ್ಕೂಲು

ರಾಜಧಾನಿಯ ವಾಣೀವಿಲಾಸಪುರದಲ್ಲಿರುವ ಮಹಾಜನ ಹೈಸ್ಕೂಲಿನಲ್ಲಿ ಈ ವರ್ಷದಿಂದ ಶಾಲಾ ಶಿಕ್ಷಣದ ಜೊತೆಗೆ ಸಂಜೆ ವೇಳೆಯಲ್ಲಿ ಹೊಲೆಯುವುದು, ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್ ವೈರಿಂಗ್ ಮತ್ತು ಫಿಟ್ಟಿಂಗ್ ಬಗ್ಗೆ ಶಿಕ್ಷಣವನ್ನು ಕೊಡಲಾಗುವುದು. ಶಾಲೆಯ ವಿದ್ಯಾರ್ಥಿಗಳಿಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಲಾಗುವುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಬಾಪೂಜಿ ಸ್ಮರಣಾ ದಿನ

ರಾಜಧಾನಿಯ ಮಹಿಳಾ ಮಂಡಳಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಜಯನಗರದ ವನಿತಾ ಸದನದಲ್ಲಿ ಬಾಪೂಜಿ ಸ್ಮರಣಾ ದಿನವು ನಡೆಯುವುದು. ಶ್ರೀಮತಿ ಕಾವೇರಮ್ಮನವರು ಭಾಷಣ ಮಾಡುವರು. ಶ್ರೀ ಸಂಸ್ಕೃತಿ ಗಾಂಧಿಯವರಿಂದ ಭಜನೆ ನಡೆಯುವುದು

ಶಬ್ದಕ್ಕಿಂತಲೂ ವೇಗವಾದ ವಿಮಾನಗಳು

ಶಬ್ದಕ್ಕಿಂತಲೂ ವೇಗವಾಗಿ ಸಂಚರಿಸಬಲ್ಲ ವಿಮಾನಗಳನ್ನು ಅಮೆರಿಕದಲ್ಲಿ ತಯಾರಿಸಲಾಗುತ್ತಿದೆ. ಈ ವಿಮಾನಗಳ ಮೂಲಕ ಬಾಂಬುಗಳು ಮತ್ತು ಮೆಷಿನ್ ಗನ್ನುಗಳನ್ನು ರವಾನಿಸಲಾಗುವುದೆಂದೂ, ಇಂತಹ ೩೭೫ ವಿಮಾನಗಳನ್ನು ಕೂಡಲೇ ತಯಾರಿಸಲು ಆಜ್ಞೆಯಾಗಿದೆಯೆಂದೂ ಹೇಳಲಾಗಿದೆ

ನೇತಾಜೀ ಸಹಪಾಠಿಯ ಆಗಮನ

ಸುಭಾಷ್ ಚಂದ್ರಬೋಸರ ಸಹಪಾಠಿಗಳೂ ಮತ್ತು ಆಜಾದ್ ಹಿಂದ್ ಸರ್ಕಾರದ ಸಚಿವರೂ ಆಗಿದ್ದ ಶ್ರೀ ಎ. ಸಿ. ಎನ್. ನಂಬಿಯಾರ್ ರವರು ಮೊನ್ನೆ ದಿನ ಜಿನೀವಾದಿಂದ ಬೊಂಬಾಯಿಗೆ ಆಗಮಿಸಿದರು. ಅವರು ದಿಹಲಿಗೆ ಹೋಗಿ ಪಂಡಿತ ನೆಹರೂ ಮತ್ತು ಇತರ ಕಾಂಗ್ರೆಸ್ ನಾಯಕರುಗಳನ್ನು ಭೇಟಿ ಮಾಡಲಿರುವರು.

ರಾಜಕಮಲ್,
ಮೈಸೂರು

ತಾ|| ೨೫—೬—೪೮ರಿಂದ
ಪ್ರತಿ ದಿನ ಮೂರು ಆಟಗಳು

ಅಮರ್ ರಾಜ್
[ಹಿಂದಿ]
—ಭೂಮಿಕೆ —
ನಸ್ರೀನ್, [ಜೂನಿಯರ್] ತ್ರಿಲೋಕ್ ಕಪೂರ್, ಪ್ರಕಾಶ್, ರೇಣುಕಾ

ನೆಹರೂ ಸರ್ಕಾರದ ಮೇಲೆ ಚರ್ಚಿಲರ ಟೀಕೆ

ಭಾರತದ ಚಕ್ರವರ್ತಿ ಎಂಬ ಬಿರುದನ್ನು ಬ್ರಿಟಿಷ್ ದೊರೆಗಳು ತ್ಯಜಿಸಬೇಕಾಗಿ ಬಂದುದರ ಬಗ್ಗೆ ಬ್ರಿಟಿಷ್ ಮಾಜಿ ಪ್ರಧಾನಿ ಮಿ|| ಚರ್ಚಿಲರು ಪರಿತಾಪವನ್ನು ವ್ಯಕ್ತಪಡಿಸಿ ನೆಹರೂ ಸರ್ಕಾರದ ಆಡಳಿತವನ್ನು ಕಟುತರವಾಗಿ ಟೀಕಿಸಿದ್ದಾರೆ. ಕಾಶ್ಮೀರದಲ್ಲಿ ಮುಕ್ಕಾಲು ಭಾಗ ಜನರು ಮುಸ್ಲಿಮರಾಗಿದ್ದರೂ ಆ ಸರ್ಕಾರದ ಮೇಲೆ ನೆಹರೂರವರ ಹಿಂದೂ ಸರ್ಕಾರವು ದಂಡಯಾತ್ರೆ ನಡೆಸಿದೆಯೆಂದೂ ಅದೇ ರೀತಿ ಹೈದರಾಬಾದಿನ ಮೇಲೂ ಬಿದ್ದು ನಿಜಾಂ ಸರ್ಕಾರವನ್ನು ಪದಚ್ಯುತಿ ಮಾಡುವುದೆಂದೂ ಅವರು ಹೇಳಿದ್ದಾರೆ.

ಹರಿಜನರಿಗೆ ೧೦ ವರ್ಷಕಾಲ ಫೀಜು ಇಲ್ಲ

ಮದರಾಸ್ ಪ್ರಾಂತ್ಯದ ಹೈಸ್ಕೂಲುಗಳಲ್ಲಿ ವ್ಯಾಸಂಗಮಾಡುವ ಹರಿಜನ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ೧೦ ವರ್ಷಗಳ ಕಾಲ ಫೀಜನ್ನು ಸರ್ಕಾರದವರು ಮನ್ನಾ ಮಾಡಿದ್ದಾರೆ

ಮುಳುಗದ ದೋಣಿ

ನೀರಿನಲ್ಲಿ ಮುಳುಗದ ದೋಣಿಯೊಂದನ್ನು ಬ್ರಿಟನ್ನಿನಲ್ಲಿ ತಯಾರಿಸಲಾಗಿದೆ. ದೋಣಿಯು ೩೨ ಅಡಿ ಉದ್ದವಿದ್ದು ನಾಲ್ಕು ಜನರು ಕುಳಿತುಕೊಳ್ಳಬಹುದು. ಯಾವ ಕಾಲದಲ್ಲಿ ಬೇಕಾದರೂ ಸಮುದ್ರದಲ್ಲಿ ಅದು ಸಂಚರಿಸಲು ಅನುಕೂಲವಾಗುವಂತೆ ಮಾಡಲಾಗಿದೆ

ಹೆನ್ರಿ ಫೋರ್ಡ್‌ರವರ ೫೦ ಕೋಟಿ ಡಾಲರುಗಳ ಸ್ವತ್ತು

ಅಮೆರಿಕದ ಮೋಟಾರು ಮಾಲೀಕರೂ ಕೋಟ್ಯಾಧೀಶರೂ ಆಗಿದ್ದ ಮಿ|| ಹೆನ್ರಿ ಫೋರ್ಡ್‌ರವರು ವ್ಯಕ್ತಿಶಃ ೫೦ ಕೋಟಿ ಡಾಲರುಗಳಷ್ಟು ಸ್ವತ್ತುಗಳನ್ನು ಬಿಟ್ಟು ಹೋಗಿರುವರೆಂದು ಹೇಳಲಾಗಿದೆ. ಅವುಗಳ ಪೈಕಿ ೨೬೫ ಲಕ್ಷ ಡಾಲರುಗಳು ಬ್ಯಾಂಕಿನಲ್ಲಿ ಇವೆ

೫ ವರ್ಷಗಳೊಳಗೆ ತಮಿಳಿನಲ್ಲಿ ಆಡಳಿತ

ಇನ್ನು ೫ ವರ್ಷದೊಳಗಾಗಿ ಮದರಾಸ್ ಪ್ರಾಂತ್ಯದ ಆಡಳಿತವನ್ನು ತಮಿಳು ಭಾಷೆಯಲ್ಲಿ ನಡೆಸಲಾಗುವುದೆಂದು ಅಲ್ಲಿನ ವಿದ್ಯಾ ಸಚಿವರು ತಿಳಿಸಿರುತ್ತಾರೆ.

ಗಾಂಧೀಜಿಯವರ ಜ್ಯೇಷ್ಠ ಪುತ್ರನ ನಿಧನ

ಮಹಾತ್ಮ ಗಾಂಧೀಜಿಯವರ ಜ್ಯೇಷ್ಠ ಪುತ್ರ ಶ್ರೀ ಹೀರಾಲಾಲ್ ಗಾಂಧೀಯವರು ಕಳೆದ ೧೯ ನೇ ತಾ|| ಬೊಂಬಾಯಿನ ಕ್ಷಯರೋಗದ ಆಸ್ಪತ್ರೆಯಲ್ಲಿ ನಿಧನರಾದರೆಂದು ವರದಿಯಾಗಿದೆ

೨೨೦ ಅಡಿ ಗಾಂಧೀ ಪ್ರತಿಮೆ

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಚನ್ನಪಟ್ಟಣದ ಹತ್ತಿರವಿರುವ ಒಂದು ಗುಡ್ಡದ ಮೇಲೆ ೨೨೦ ಅಡಿ ಎತ್ತರದ ಮಹಾತ್ಮರ ಪ್ರತಿಮೆಯೊಂದನ್ನು ಸ್ಥಾಪಿಸಲು ಆಲೋಚನೆಗಳು ನಡೆಯುತ್ತಿವೆಯೆಂದು ಹೇಳಲಾಗಿದೆ. ಸಿಮೆಂಟಿನಿಂದ ತಯಾರಿಸಬಹುದಾದ ೨೨೦ ಅಡಿ ಎತ್ತರದ ಪ್ರತಿಮೆಯ ಯೋಜನೆಯನ್ನು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ತಯಾರಿಸಿದ್ದಾರೆ.

ಮದುವೆ ಹೆಣ್ಣು ಬಿಕರಿಗಿದೆ

೩೨ ವರ್ಷದ ಇಂಗ್ಲಿಷ್ ಯುವತಿಯೊಬ್ಬಳು ೧೫೦೦ ಪೌಂಡು ಕೊಡಬಲ್ಲ ಯಾವ ಬ್ರಹ್ಮಚಾರಿಗಾದರೂ ಹೆಂಡತಿಯಾಗಲು ಸಿದ್ಧಳಾಗಿರುವಳೆಂಬ ಜಾಹಿರಾತು ಲಂಡನ್ನಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಆಕೆಯು ವಾರಕ್ಕೆ ೩-೫-೦ ಪೌಂಡುಗಳನ್ನು ಸಂಪಾದಿಸುತ್ತಿದ್ದರೂ ಹಣವನ್ನು ಉಳಿಸಲು ಸಾಧ್ಯವಿಲ್ಲದುದರಿಂದಲೂ ಮತ್ತು ಏಕಾಂಗಿಯಾಗಿ ಇದ್ದು ಬೇಸರವಾಗಿದೆಯೆಂದೂ ಆದುದರಿಂದ ತನಗೆ ಯೋಗ್ಯ ಮತ್ತು ಗೌರವ ಮನುಷ್ಯನೊಬ್ಬನು ಬೇಕೆಂದೂ ತಿಳಿಸುತ್ತಾಳೆ

ವಿಮಾನದಲ್ಲಿ ಸಿನಿಮಾ

ಮೈಸೂರಿನ ಸಾಬುವು ಪಾತ್ರ ವಹಿಸಿರುವ "ಮ್ಯಾನ್ ಈಟರ್ ಆಫ್ ಕುಮಾಂ" ಎಂಬ ಅಮೆರಿಕದ ಚಿತ್ರವನ್ನು ಪ್ಯಾನ್ ಅಮೆರಿಕ ಸಂಸ್ಥೆಗೆ ಸೇರಿದ ವಿಮಾನದಲ್ಲಿ ಮುಂದಿನ ಗುರುವಾರ ಪ್ರದರ್ಶಿಸಲಾಗುವುದೆಂದು ಹೇಳಲಾಗಿದೆ

|| ಶ್ರೀ ||
ಗಾಯತ್ರಿ ಟಾಕೀಸ್
ತಾ|| ೨೯-೬-೪೮ ರಿಂದ
3 ದಿನಗಳು ಮಾತ್ರ
M G. M.'s
ಅಂಡರ್ ಕರೆಂಟ್
Under Current
The Most Terrific Climax
you have Ever Sean
Starring:--ROBERT TAYLOR,
KATHARINE HEPBURN
Next Chango 20 th's
CENTENNIAL SUMMER
(Technicolour)

Edited printed and published by A. R. Nagarajan at the Sadhvi Press D Subbaiah Road Mysore

ವಿಶ್ವವಿದ್ಯಾಲಯಕ್ಕೆ ದಿವಾನರ ಕಾಣಿಕೆ

ಸ್ವಂ. ವ. ಪ್ರೇ] ಬೆಂಗಳೂರು ೨

ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರವರ ಷಷ್ಟಿಪೂರ್ತಿ ಸಮಾರಂಭದ ಸಂದರ್ಭದಲ್ಲಿ ಸಂಸ್ಥಾನದ ಹಲವು ಪ್ರಮುಖರು ಅವರಿಗೆ ಗೌರವಾರ್ಥವಾಗಿ ಅರ್ಪಿಸಿದ್ದ ಚಿನ್ನದ ಕರಂಡದ ಬೆಲೆಯ ಮೊಬಲಗನ್ನು ಅವರು ವಿಶ್ವವಿದ್ಯಾಲಯಕ್ಕೆ ಕೊಟ್ಟು ಅದರ ಮೇಲಿನ ಬಡ್ಡಿಯಿಂದ ಬರುವ ಹಣದಿಂದ ಒಂದು ಪಾರಿತೋಷಕವನ್ನು ಏರ್ಪಡಿಸುವಂತೆ ಕೋರಿರುವುದು ತಿಳಿದುಬಂದಿದೆ.

ಡೆಪ್ಯುಟಿ ಕಮೀಷನರುಗಳ ವರ್ಗ

ಮೊದಲೇ ತಿಳಿಸಿದ್ದಂತೆ ಮೈಸೂರು ಜಿಲ್ಲಾಧಿಕಾರಿಗಳಾದ ಜನಾಬ್ ಮೀರ್ ಸ...ರ್ ಹುಸೇನರವರನ್ನು ಮೈಸೂರು ಪೌರಸಭೆಯ ಕಮೀಷನರನ್ನಾಗಿಯೂ, ಶ್ರೀ ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿಗಳಾದ ಶ್ರೀ ಆರ್ ಜೆ ರಂಗೋವರವರನ್ನು ಮೈಸೂರು ಜಿಲ್ಲಾಧಿಕಾರಿಗಳನ್ನಾಗಿಯೂ, ಎ. ಸಫಿ ದಾರಾಷಾರವರನ್ನು ಆಹಾರ ಮತ್ತು ಸಿವಿಲ್ ಸಪ್ಲೈ ಸೆಕ್ರೆಟರಿಗಳನ್ನಾಗಿಯೂ, ಮಿ|| ಎ ಎಸ್ ಖಲೀಲ್‌ರವರನ್ನು ಬೆಂಗಳೂರು ಮುನಿಸಿಪಲ್ ಕಮೀಷನರನ್ನಾಗಿಯೂ ಮತ್ತು ರಜದ ಮೇಲಿರುವ ಹುಜೂರು ಸೆಕ್ರೆಟರಿ ಶ್ರೀ ಟಿ ರಾಮಯ್ಯನವರನ್ನು ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್ ಆಕ್ಟಿಂಗ್ ಕಮೀಷನರನ್ನಾಗಿಯೂ ವರ್ಗಾಯಿಸಲಾಗಿದೆ.

ಅಪೇರಾ ಟಾಕೀಸ್
25-6-48 ರಿಂದ
ಅಮೋಘ 5 ನೇ ವಾರ
ಅಭಿಮನ್ಯು
(ತಮಿಳು)
—:ಪಾತ್ರ:—
ಯು. ಆರ್. ಜೀವರತ್ನಂ, ಎಸ್. ಎಂ. ಕುಮರೇಶನ್, ಪುಳಿಮೂಟೆ
ಇದರ ಜೊತೆಯಲ್ಲಿ ಪಂಡಿತ ಜವಹರಲಾಲ್ ನೆಹರೂರವರು ಸಂಯುಕ್ತ ರಾಷ್ಟ್ರ ಆರ್ಥಿಕ ಸಮ್ಮೇಳನದ ಸಂಬಂಧದಲ್ಲಿ ಉ... ಕ ಮಂಡಲಕ್ಕೆ ಭೇಟಿ ಕೊಟ್ಟಿರುವ ಸಮಾರಂಭದ ಚಿತ್ರವೂ ಸಹ ಪ್ರದರ್ಶಿಸಲ್ಪಡುತ್ತಿದೆ

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ರವರ
ಯೂನಿವರ್ಸಲ್ ಪೇಯಿನ್ ಬಾಮ್
ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಬೆಲೆ ೦-೧೨-೦
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ)
—ದೇಹಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು
ಪಂಚಾಮೃತ— ಮಲೇರಿಯಾ ಗಳಿಗೆ ಸಿದ್ಧ ಸಂಜೀವನ.
ಮಹಾಕೇತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಬ್ರೇನ್ ಟಾನಿಕ್ ಬೆಲೆ ೨-೦-
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

.... ಪ್ರಭಾ ಪಿಕ್ಚರ್ ಹೌಸ್ ....
ಮುಂದಿನ ಬದಲಾವಣೆ ಪಿ. ಆರ್ ಪ್ರೊಡಕ್ಷನ್ಸ್‌ರವರ
★ ಅರೇಬಿಯನ್ ನೈಟ್ಸ್ ★
(ಹಿಂದಿ)
ಪಾತ್ರ:— * ಕನನ್ ಬಾಲಾ * ನವಾಬ್
ಕಮಲ ದಾಸ್ ಗುಪ್ತರವರ ಸುಮಧುರ ಸಂಗೀತ

ಫೋನ್ ನಂ. 792 || ವಂದೇಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೩೦-೬-೪೮ [ಸಂಚಿಕೆ ೩೨೦

ಬ್ರಿಟಿಷ್ ಪತ್ರಿಕೆಗಳಲ್ಲಿ ೩ನೇ ಯುದ್ಧದ ಸೂಚನೆ

ಪೌರಸಭೆಯ ಆಯವ್ಯಯ

ವಿಶೇಷ ಅಧಿವೇಶನದಲ್ಲಿ ಮಂಜೂರಾತಿ

ಮೈಸೂರು ೩೦

ರಾಜಧಾನಿಯ ಪೌರಸಭೆಯ ಬರುವ ವರ್ಷದ ಆಯವ್ಯಯ ಪಟ್ಟಿಯನ್ನು ನಿನ್ನೆ ದಿನ ವಿಶೇಷ ಸಭೆಯಲ್ಲಿ ಪರಿಶೀಲಿಸಿ, ಈ ಕೆಳಗೆ ಕಂಡಂತೆ ಅಂಗೀಕರಿಸಲಾಯಿತು:—

ಆದಾಯ

ಕಂದಾಯ ಮತ್ತು ತೆರಿಗೆ ರೂ ೧೨,೧೯,೮೮೪

ವಿಶೇಷ ತೆರಿಗೆಗಳು ರೂ. ೧,೧೧,೦೦೦

ಪುರಸಭಾ ಆಸ್ತಿಗಳಿಂದ ೨೮೦೬೪೫

ಗ್ರಾಂಟ್ ಮತ್ತು ಸಹಾಯ ದ್ರವ್ಯ ರೂ ೬೦೦೦

ಇತರೆ ಬಾಬುಗಳು ರೂ ೦೯೪೦

ಜಮಾ ರೂ. ೧೬,೨೯,೯೨೯

ಸಾರ್ವಜನಿಕ ಸಾಲಾ ೧೮,೮೮೦೦೦

ಆರಂಭದ ಶಿಲ್ಕು ೩೮೮೫೯

ಜುಮ್ಲಾ ರೂ ೩೯೦೬೫೨೬

ವ್ಯಯ

ಸಾಮಾನ್ಯ ಆಡಳಿತ ರೂ ೧೭೦೧೬೭೪

ಸಾರ್ವಜನಿಕ ರಕ್ಷಣೆ ರೂ ೫೨೧೨೬

ಪಬ್ಲಿಕ್ ವರ್ಕ್ಸ್ ರೂ ೫,೨೯,೧೯೧

ಆರೋಗ್ಯ ಮತ್ತು ಅನುಕೂಲ ರೂ. ೯,೬೯,೦೯೨

ವಿದ್ಯಾಭ್ಯಾಸ ರೂ ೧೬೬೦

ಗ್ರಾಂಟ್ ವಗೈರೆ ರೂ ೫೦೦೦೦

ಇತರೆ ರೂ ೩೮೯೨೫

ಜುಮ್ಲಾ ರೂ ೧೮,೧೪,೬೫೭

ಸಾರ್ವಜನಿಕ ಸಾಲಾ ೧೮೭೫೯೭೭

ಅಖೈರು ಶಿಲ್ಕು ೨೧೫೯೦೨

ಜುಮ್ಲಾ ರೂ ೩೯೦೬೫೨೬

ಮೈಸೂರು ಹಿಂದೀ ಪ್ರಚಾರ ಸಭೆಗೆ ೬೦೦ ರೂ, ಉಚಿತ ಭೋಜನ ಸಮಿತಿಗೆ ೬೭೫ ರೂ ಶ್ರೀ ಟಿ ಕೃಷ್ಣಮಾಚಾರ್ಯರ ಯೋಗಾಸನ ಪುಸ್ತಕಕ್ಕೆ ೫೦ ರೂ ಗ್ರಾಂಟು ಗಳನ್ನು ಮಂಜೂರು ಮಾಡಲಾಯಿತು

ಅನಂತರ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು:—

ವಾಹನ ತೆರಿಗೆಗಳ ಬಗ್ಗೆ ಸರ್ಕಾರದವರು ಪರಿಹಾರ ದ್ರವ್ಯವನ್ನು ಕಳೆದ ಮೂರು ವರ್ಷಗಳ ಪರಿಮಾಣದ ಮೇರೆ ಏರಿಸಬೇಕೆಂದು ಪ್ರಾರ್ಥಿಸುವುದು; ಸೂಪರಿಂಟೆಂಡೆಂಟ್ ವರ್ಕ್‌ಷಾಪಿನ ಆಡಳಿತವನ್ನು ನೋಡಿಕೊಳ್ಳಲು ಮೆಕ್ಯಾನಿಕಲ್ ಇಂಜನಿಯರೊಬ್ಬರನ್ನು ನೇಮಿಸುವುದು; ನಗರದಲ್ಲಿ ಮಾರಾಟವಾದ ಪೆಟ್ರೋಲು ಮತ್ತು ಜೂಜುಗಳಿಂದ ಬರುವ ತೆರಿಗೆಗಳಲ್ಲಿ ಒಂದು ಭಾಗವನ್ನು ಪುರಸಭೆಗೆ ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು; ಪುರಸಭೆಯ ವೊಹದ್ದಿನೊಳಗಿಂದ ಬರುವ ಜುಲ್ಮಾನೆ ಹಣವನ್ನೆಲ್ಲಾ ಪುರಸಭೆಗೇ ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು; ವಾಣೀವಿಲಾಸ ಸ್ಕೀಂನ ಕೇಂದ್ರಕ್ಕೆ ಪುರಸಭೆಯವರು ಕೊಡುತ್ತಿರುವ ಮೂರನೇ ಒಂದು ಭಾಗ ಹಣವನ್ನು ಅರ್ಧಕ್ಕೆ ಇಳಿಸುವಂತೆ ಸರ್ಕಾರದವರನ್ನು ಕೋರುವುದು, ಮನೆಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕುವುದರಿಂದ ವಿದ್ಯುಚ್ಛಕ್ತಿ ಇಲಾಖೆಗೆ ಬರುವ ಆದಾಯದಲ್ಲಿ ಅರ್ಧ ಭಾಗವನ್ನು ಪುರಸಭೆಗೆ ಕೊಡುವಂತೆಯೂ ಮತ್ತು ವಾಣೀವಿಲಾಸ ಸ್ಕೀಂನ ಕೇಂದ್ರಕ್ಕೆ ಹಾಕುತ್ತಿರುವ ವಿದ್ಯುಚ್ಛಕ್ತಿ ದರವನ್ನೂ ಮತ್ತು ...ಗಳ ದೀಪದ ಮೇಲಿನ ರಾಯಲ್ಟಿಯನ್ನು ಕಡಿಮೆ ಮಾಡುವಂತೆಯೂ ಸರ್ಕಾರದವರನ್ನು ಪ್ರಾರ್ಥಿಸುವುದು; ಹಾಲಿನ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸುವುದು, ಆಹಾರ ಇಲಾಖೆಗೆ ಸೇರಿದ ೬ ಲಾರಿಗಳನ್ನು ಕೊಂಡುಕೊಳ್ಳುವುದು; ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಸಮ್ಮೇಳನವೊಂದನ್ನು ಸರ್ಕಾರದವರು ಕರೆದು ಅವುಗಳ ಕೆಲಸ ಕಾರ್ಯಗಳನ್ನು ಹೆಚ್ಚು ಸಮರ್ಪಕವಾಗಿ ನಡೆಸುವಂತೆ ಏರ್ಪಡಿಸುವುದು; ಪೌರಸಭೆಯ ಆಡಳಿತಕ್ಕೆ ಸೇರಿರುವ ಆಸ್ಪತ್ರೆಗಳ ಮೇಲ್ವಿಚಾರಣೆಗಾಗಿ ಒಂದು ಉಪ ಸಮಿತಿಯನ್ನು ನೇಮಿಸುವುದು

ಆಯುರ್ವೇದ, ಯುನಾನಿ ಪರೀಕ್ಷಾ ಫಲಿತಾಂಶಗಳು

ಮೈಸೂರು ೩೦

೧೯೪೮ ನೇ ಜೂನ್ ತಿಂಗಳಿನಲ್ಲಿ ನಡೆದ ಆಯುರ್ವೇದ ಮತ್ತು ಯುನಾನಿ ಪರೀಕ್ಷೆಗಳ ಫಲಿತಾಂಶಗಳು ಈ ರೀತಿ ಇವೆ:—

ಆಯುರ್ವೇದ ಶಾಖೆ:—

೧ ನೇ ವರ್ಷ ಎಲ್ ಎ ಎಂ ಎಸ್ ೨,೪

೨ ,, ೫, ೬

೩ ,, ೭, ೮, ೯, ೧೫, ೧೬.

೪ ,, ೧೮, ೧೯, ೨೦, ೨೨, ೨೪.

ಯುನಾನಿ ಶಾಖೆ:—

೧ ನೇ ವರ್ಷ ಎಲ್ ಯು ಎಂ ಎಸ್. ೨೬

೨ ,, ೨೬

೩ ,, ೨೯, ೩೦, ೩೧

೪ ,, ೩೨, ೩೩, ೩೪

ಹರಿಕಥೆ

ರಾಜಧಾನಿಯ, ಚಾಮರಾಜಪುರಂನಲ್ಲಿರುವ ಬಜ್ಜಣ್ಣನವರ ಬೀದಿಯ ಶ್ರೀ ವಿಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಈ ದಿನದಿಂದ ಪ್ರತಿ ಸಂಜೆ ೬ ಗಂಟೆಗೆ ಶ್ರೀ ಟಿ ಕೆ ವೇಣುಗೋಪಾಲದಾಸರಿಂದ ಶ್ರೀಮದ್ರಾಮಾಯಣ ಎಂಬ ಹರಿಕಥೆಯು ನಡೆಯುವುದು

ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯ

ರಾಜಧಾನಿಯ ಪೌರಸಭೆಯವರ ನಡೆಸುತ್ತಿರುವ ಉಚಿತ ಭೋಜನ ವ್ಯವಸ್ಥೆಗೆ ಅರ್ಹತೆಯುಳ್ಳ ಬಡ ವಿದ್ಯಾರ್ಥಿಗಳು ಜುಲೈ ೧ ನೇ ತಾರೀಖಿನ ...ಯಿತು ೧೫ ನೇ ತಾ|| ನೊಳಗೆ ಹೆಡ್ಮಾಸ್ತರುಗಳ ಮತ್ತು ... ಶಿಫಾರ್ಸಿನೊಡನೆ ಅರ್ಜಿಯನ್ನು ಕಳುಹಿಸಿಕೊಡಬೇಕೆಂದು ಸಮಿತಿಯ ಪರವಾಗಿ ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಕೋರಿರುತ್ತಾರೆ

ಶಾಸನ ಸಭೆಯಿಂದ ಸೆನೆಟ್ಟಿಗೆ

ಸ್ವಂ. ಸು. ಪ್ರೋ] ಬೆಂಗಳೂರು ೩೦

ಶ್ರೀಗಳಾದ ಕುಪ್ಪಸ್ವಾಮಿ ನಾಯುಡು, ಬಿ ಪಸುಮಯ್ಯ, ಟಿ. ಮಾದಯ್ಯಗೌಡ, ಶ್ರೀಮತಿ ಎಂ. ಆರ್ ಲಕ್ಷಮ್ಮ ಇವರುಗಳು ಶಾಸನ ಸಭೆಯಿಂದ ಸೆನೆಟ್ಟಿಗೆ ಚುನಾಯಿತರಾಗಿದ್ದಾರೆ

೫ ನೇ ತಾ|| ಸೋಮವಾರವೂ ಸಭೆ ನಡೆಯುವುದು

ದಿವಾನರಿಗೆ ೬೦೦೦ ರೂ. ಸಂಬಳ ಕೊಡುವ ಬಗ್ಗೆ ಬಂದ ಪ್ರಶ್ನೆಗೆ ಶ್ರೀ ಹೆಚ್. ಸಿ. ದಾಸಪ್ಪನವರು ಉತ್ತರವಿತ್ತು, ಅದು ಈಗಿನ ಸರ್ಕಾರ ಬರುವುದಕ್ಕೆ ಮುಂಚೆ ಆಗಿದ್ದ ಏರ್ಪಾಡೆಂದು ಹೇಳಿದರು

ಕಬ್ಬಿನ ತೆರಿಗೆ ಮಸೂದೆಯು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

§ ಶ್ರೀಮನ್ಮಹಾರಾಜರವರು ಈ ಬೆಳಿಗ್ಗೆ ಸೈನಿಕರ ಪ್ರದರ್ಶನವನ್ನು ಪರಿಶೀಲಿಸಿದರು. ಮತ್ತು ಶ್ರೀ ತಿರುವೇಂಗಡ ಮೊದಲಿಯಾರರು ಕಟ್ಟಿಸಿರುವ ಹೆರಿಗೆ ಆಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸಿದರು.

ಭೂಕಂಪದಿಂದ ೭೦ ಸಾವಿರ ಜನರ ಮರಣ

ಜಪಾನಿನಲ್ಲಿ ಮೊನ್ನೆ ರಾತ್ರಿ ಸಂಭವಿಸಿದ ಭೀಕರ ಭೂಕಂಪದಿಂದ ೭೦ ಸಾವಿರ ಜನರು ಸತ್ತರೆಂದೂ, ೧೦ ಸಾವಿರ ಮನೆಗಳು ನಾಶವಾಗಿ ೧ ಲಕ್ಷ ಜನರು ನಿರ್ಗತಿಕರಾಗಿರುವರೆಂದೂ ವರದಿಯಾಗಿದೆ. ಪಶ್ಚಿಮ ತೀರದಲ್ಲಿರುವ ಪುಕಯ ಎಂಬ ನಗರಕ್ಕೆ ಭೂಕಂಪವಾಗಿ ನಗರದ ಮನೆಗಳು ಕುಸಿದು ಬಿದ್ದು ಬೆಂಕಿ ಹತ್ತಿ ಆ ನಗರವೆಲ್ಲಾ ಹಾಳಾಯಿತು. ರೈಲ್ವೆ ನಿಲ್ದಾಣವು ನಾಶವಾಗಿ ಕಂಬಗಳು ಉರುಳಿದುವು. ನಗರದ ಸಮೀಪದಲ್ಲಿರುವ ಅನೇಕ ಹಳ್ಳಿಗಳೂ ನಾಶವಾಗಿ ಭೂರಾದ ಜನರು ಮರಣ ಹೊಂದಿದರು. ಇನ್ನೂ ೭ ನಗರಗಳು ಬೆಂಕಿಗೆ ಆಹುತಿಯಾಗಿ ಉರಿಯುತ್ತಿವೆ

ಜಿಲ್ಲಾ ಕಾಂಗ್ರೆಸ್ ಸಮಿತಿ

ಜುಲೈ ೪ ನೇ ತಾ|| ಭಾನುವಾರ ಸಂಜೆ ೬ ಗಂಟೆಗೆ ಮೈಸೂರು ಜಿಲ್ಲಾ ಸಮಿತಿಯ ಸಭೆಯು ಮೈಸೂರು ದೇವರಾಜಾ ಮಾರ್ಕೆಟ್ ನ ಬಳಿ ನೆಲಸಿರುವ ಕಾಂಗ್ರೆಸ್ ಮುನಿಸಿಪಲ್ ಪಾರ್ಟಿ ಕಚೇರಿಯಲ್ಲಿ ಸೇರುವುದು

ಕೀರ್ತನ ಕಾಲಕ್ಷೇಪ

ವಿ ಸುಬ್ಬಯ್ಯರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮಹಡಿಯಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಹೆಚ್ ಎನ್ ಶಿವಲಿಂಗಸ್ವಾಮಿ ಹಿರೇಮಠರವರಿಂದ "ಮಹಾತ್ಮರ ಉಪದೇಶ ಅಥವ ಸ್ವರಾಜ್ಯ ಸಂಪಾದನ" ಎಂಬ ಕೀರ್ತನ ಕಾಲಕ್ಷೇಪವು ನಡೆಯುವುದು

ಪದವೀಧರರಾಗಲು ಸಾಮಾಜಿಕ ಸೇವೆ ಅಗತ್ಯ

ಸೆನೆಟ್ ಸಭೆಯ ನಿರ್ಣಯ,

ಮೈಸೂರು ೩೦

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟಿನ ಮುಂದುವರೆದ ಸಭೆಯು ಈ ದಿನ ನಡೆಯಿತು. ಪದವಿಗಳನ್ನು ಪಡೆಯುವುದಕ್ಕೆ ಮುಂಚೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಮಾಜಿಕ ಮತ್ತು ಪೌರಸೇವೆಯನ್ನು ಸ್ವಲ್ಪ ಕಾಲ ಸಲ್ಲಿಸುವ ಬಗ್ಗೆ ಒತ್ತಾಯಪಡಿಸಬೇಕೆಂದು ಶ್ರೀ ಪಿ. ಸೀತಾರಾಮಯ್ಯನವರು ತಂದ ... ಮಂಜೂರಾಯಿತು. ವಿಶ್ವವಿದ್ಯಾಲಯದ ಪರೀಕ್ಷೆಗಳು, ವಿದ್ಯಾಭ್ಯಾಸಕ್ರಮ, ಶಿಕ್ಷಣ ವಿಧಾನ, ಸಂಶೋಧನಾಕ್ರಮ ಮುಂತಾದುವುಗಳನ್ನು ಪರಿಶೀಲಿಸಿ ಆವಶ್ಯಕವಾದ ಸಲಹೆಗಳನ್ನು ಕೊಡುವುದಕ್ಕಾಗಿ ಶ್ರೀ ಎಂ. ಪಿ ಎಲ್. ಶಾಸ್ತ್ರಿಗಳೂ, ಶಾಸನದಲ್ಲಿ ಬದಲಾವಣೆ, ಪಾಠಕ್ರಮ, ಉಪಾಧ್ಯಾಯರುಗಳ ಅರ್ಹತೆ ಮುಂತಾದುವುಗಳನ್ನು ಪರಿಶೀಲಿಸಿ ಸಲಹೆ ನೀಡಲು ಶ್ರೀ ಟಿ ಎಸ್. ರಾಜಗೋಪಾಲ್‌ರವರೂ ತಂದ ನಿರ್ಣಯಗಳು ಅಂಗೀಕೃತವಾದುವು. ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುವ ಬಗ್ಗೆ ಶ್ರೀ ಎಸ್. ಶ್ರೀನಿವಾಸಮೂರ್ತಿಯವರು ತಂದ ನಿರ್ಣಯಕ್ಕೆ ಬಹಳ ವಿರೋಧವು ಬಂದುದರಿಂದ ಅವರು ಅದನ್ನು ವಾಪಸು ತೆಗೆದುಕೊಂಡರು.

ಪತ್ರಿಕೋದ್ಯೋಗದ ಶಿಕ್ಷಣವನ್ನು ಕೊಡಬೇಕೆಂದ ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ತಂದ ನಿರ್ಣಯವೂ ಅಂಗೀಕರಿಸಲ್ಪಟ್ಟಿತು

ಗಾಂಧಿ ಸ್ಮಾರಕ ನಿಧಿ ಕಾರ್ಯದಲ್ಲಿ ಒಂದು ವರ್ಷವಾದರೂ ತೊಡಗದೇ ಇರುವ ವಿದ್ಯಾರ್ಥಿಗಳಿಗೆ ಪದವಿಗಳನ್ನು ಕೊಡಬಾರದು ಅಥವಾ ... ಶ್ರೀ ಬಿ ವಿ ... ತಂದ ನಿರ್ಣಯಕ್ಕೆ ಬಹಳ ವಿರೋಧವು ... ಅವರು ಅದನ್ನು ಹಿಂದಕ್ಕೆ ತೆಗೆದುಕೊಂಡರು.

ಮೂರನೇ ಯುದ್ಧ ಸನ್ನಿಹಿತವಾಗಿದೆ

ಪಶ್ಚಿಮ ಜರ್ಮನಿಯಿಂದ ಅಮೆರಿಕ ಮತ್ತು ಬ್ರಿಟನನ್ನು ಓಡಿಸುವ ಬಗ್ಗೆ ರಷ್ಯಾ ಪ್ರಯತ್ನಿಸುವ ಕಾರ್ಯಕ್ರಮದಿಂದ ಸದ್ಯದಲ್ಲಿಯೇ ಮೂರನೇ ಯುದ್ಧವು ಸಂಭವಿಸಬಹುದೆಂದು, ಬ್ರಿಟನ್ನಿನ ಪತ್ರಿಕೆಗಳು ಅಭಿಪ್ರಾಯಪಟ್ಟಿವೆ. ಬರ್ಲಿನ್ನಿನಿಂದ ಬ್ರಿಟನ್ ಅಮೆರಿಕಾಗಳನ್ನು ಓಡಿಸಿದರೆ, ಕೂಡಲೇ ಅಥವ ಅತಿ ಶೀಘ್ರದಲ್ಲಿಯೇ ಯುದ್ಧ ನಡೆಯುವುದು ಸಿದ್ಧ. ರಷ್ಯನರಿಗೆ ಯುದ್ಧ ಬೇಕಾಗಿಲ್ಲದಿರಬಹುದು. ಆದರೆ ಹಿಟ್ಲರನಂತೆ ಯುದ್ಧದ ಬೆದರಿಕೆ ಹಾಕಿ ಅವರು ಮುಂದುಗರೆಯಬಹುದು. ಆದರೂ ಕೂಡ ಬ್ರಿಟನ್ ಮತ್ತು ಅಮೆರಿಕಾಗಳು ಬರ್ಲಿನನ್ನು ದೃಢ ಸಂಕಲ್ಪದಿಂದ ಬಿಡಬಾರದೆಂದು ಬ್ರಿಟಿಷ್ ಪತ್ರಿಕೆಗಳು ಸಲಹೆ ಮಾಡಿವೆ

ತಾತಾ ಶಾಲೆಗೆ ಪ್ರಭುಗಳ ಭೇಟಿ

ಬೆಂಗಳೂರು ೩೦

ನಿನ್ನೆ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ತಾತಾ ವಿಜ್ಞಾನ ಶಾಲೆಗೆ ಭೇಟಿ ಕೊಟ್ಟು, ೧½ ಗಂಟೆಗಳ ಕಾಲ ಅಲ್ಲಿನ ನಾನಾ ಶಾಖೆಯ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಬಯೋ-ಕೆಮಿಸ್ಟ್ರಿ ಇಲಾಖೆಯಲ್ಲಿ ಡಾ|| ಸಂಜೀವರಾಯರು ತಾವು ಅಕ್ಕಿ ಮತ್ತು ಬೇಳೆಯ ಮೇಲೆ ನಡೆಸುತ್ತಿರುವ ಸಂಶೋಧನೆ ... ಪ್ರಭುಗಳಿಗೆ ವಿವರಿಸಿದರು. ಡಾ|| ... ಅಯ್ಯಂಗಾರರವರು ಕಡಲೆ ... ಎಣ್ಣೆ ... ವನಸ್ಪತಿ ಮೇಲೆ ನಡೆಸುತ್ತಿರುವ ಸಂಶೋಧನೆಯನ್ನು ತಹ ... ಪ್ರದರ್ಶಿಸಿದರು.

ಪೌರಸಭೆಯಲ್ಲಿ ಸಿಮೆಂಟ್ ಕಳುವು

ಶಾಸನ ಸಭೆಯಲ್ಲಿ ಚರ್ಚೆ

ಬೆಂಗಳೂರು ೨೦

ಬೆಂಗಳೂರು ಪೌರಸಭೆಯಲ್ಲಿ ೧೫೦೦ ಮೂಟೆ ಸಿಮೆಂಟ್ ಕಾಣದಿರುವ ವಿಷಯವಾಗಿ ನಿನ್ನೆ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳ ಮಳೆ ಸುರಿಯಿತು. ೧೯೪೭ ನೇ ಆಗಸ್ಟ್ ತಿಂಗಳಲ್ಲಿ ೧೫೫೦ ಮೂಟೆ ಸಿಮೆಂಟ್ ಪತ್ತೆ ಇಲ್ಲದಿದ್ದುದು ೧೯೪೮ ನೇ ಫೆಬ್ರವರಿ ತಿಂಗಳಲ್ಲಿ ಗೊತ್ತಾಯಿತೆಂದೂ ಇದರಿಂದ ಪೌರಸಭೆಗೆ ೬೦೦೦ ರೂ ನಷ್ಟವುಂಟಾಯಿತೆಂದೂ, ಈ ಬಗ್ಗೆ ಸೂಕ್ತ ವಿಚಾರಣೆ ನಡೆಯುತ್ತಿದೆಯೆಂದೂ ಶ್ರೀ ಹೆಚ್. ಸಿ. ದಾಸಪ್ಪನವರು, ಶ್ರೀ ಡಿ ಎಸ್ ಮಲ್ಲಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಅಷ್ಟರ ಪೈಕಿ ೬೦೦೦ ರೂ ನಷ್ಟ ಸಿಮೆಂಟು ಪತ್ತೆ ಆಗಿದೆಯೆಂದೂ, ಉಪಪ್ರಶ್ನೆಗೆ ಉತ್ತರಕೊಡಲಾಯಿತು.

ಅನಂತರ ವರಮಾನ ತೆರಿಗೆ ತಿದ್ದುಪಡಿ ಮಸೂದೆಯ ಮೇಲೆ ದೀರ್ಘ ಚರ್ಚೆ ನಡೆದು ಅಂಗೀಕೃತವಾಯಿತು. ಸಂಸ್ಥಾನದ ಬಡ್ಜೆಟ್ಟಿನಲ್ಲಿ ಕೋಟಾ ಬಂದಿರುವುದರಿಂದ ೬ ಸಾವಿರ ರೂ ಮೇಲ್ಪಟ್ಟ ವರಮಾನದ ಮೇಲೆ ಶೇಕಡ ೧೦ ರಷ್ಟು ಹೆಚ್ಚಿನ ತೆರಿಗೆಯನ್ನು ಹಾಕಲು ಈ ತಿದ್ದುಪಡಿ ಮಸೂದೆಯನ್ನು ತರಲಾಗಿದೆಯೆಂದು ಶ್ರೀ ಹೆಚ್ ಸಿ ದಾಸಪ್ಪನವರು ತಿಳಿಸಿದರು. ಶ್ರೀ ವೆಂಕಟರಾಮಯ್ಯನವರು ಇದನ್ನು ವಿರೋಧಿಸಿ ಇದರಿಂದ ಕೈಗಾರಿಕಾ ಅಭಿವೃದ್ಧಿಗೆ ಅಡಚಣೆಯುಂಟಾಗಿ ಬಂಡವಾಳಗಾರರಿಗೆ ಕಷ್ಟವುಂಟಾಗುವುದೆಂದೂ ಇದರಿಂದ ಕೈಗಾರಿಕೆಗಳಿಗೆ ಯಾವ ಪರಿಹಾರವನ್ನೂ ಕೊಟ್ಟಂತಾಗುವುದಿಲ್ಲವೆಂದೂ, ಅವರು ತಿಳಿಸಿದರು.

ಮಸೂದೆಯು ಸಭೆಯಿಂದ ಅಂಗೀಕರಿಸಲ್ಪಟ್ಟಿತು.

ಮನರಂಜನೆಯ ಮೇಲಿನ ತೆರಿಗೆ ಮಸೂದೆಯನ್ನು ಶ್ರೀ ಹೆಚ್ ಸಿ ದಾಸಪ್ಪನವರು ಮಂಡಿಸಿದರು. ಇದನ್ನು ಒಂದು ಉಪಸಮಿತಿಯ ಪರಿಶೀಲನೆಗೆ ಒಪ್ಪಿಸಬೇಕೆಂದು ಶ್ರೀ ಓ ವೀರಬಸಪ್ಪನವರು ಸೂಚಿಸಿದರು. ಸಚಿವರು ಅದಕ್ಕೆ ಒಪ್ಪಿಸಿದರು. ಶ್ರೀಗಳಾದ ಹೆಚ್. ಸಿ. ದಾಸಪ್ಪ, ಎಸ್ ಎಲ್ ಮನ್ನಾಜಿರಾವ್, ಡಿ ಎಸ್ ಮಲ್ಲಪ್ಪ, ಮಹಮದ್ ಇಮಾಂ, ಕೆ ಎಂ ಕೃಷ್ಣಪ್ಪಗೌಡ, ಹೆಚ್ ಎಸ್ ರುದ್ರಪ್ಪ, ಕಡಿದಾಳು ಮಂಜಪ್ಪ, ಎಲ್ ಎಸ್ ವೆಂಕಾಜಿರಾವ್, ಕೆ ಶ್ರೀನಿವಾಸನ್ ಎಂ ಆರ್ ಲಕ್ಷ್ಮಮ್ಮ ಇವರುಗಳಿಂದೊಡಗೂಡಿದ ಉಪಸಮಿತಿಯೊಂದು ಜುಲೈ ೨ ನೇ ತಾರೀಕಿನೊಳಗೆ ಈ ಮಸೂದೆಯ ವಿವರಗಳ ಒಕ್ಕೆ ಸಲಹೆಗಳನ್ನು ಕೊಡತಕ್ಕದೆಂದು ತೀರ್ಮಾನವಾಯಿತು.

೦ ಸಂಸ್ಥಾನದಲ್ಲಿ ಸಕ್ಕರೆ ಸರಬರಾಜು ಪರಿಸ್ಥಿತಿ ಉತ್ತಮಗೊಂಡಿರುವುದರಿಂದ ಚಾಕಲೇಟು, ಪೆಪ್ಪರ್‌ಮೆಂಟ್ ವಗೈರಾದುವುಗಳನ್ನು ಹೊರಕ್ಕೆ ರಫ್ತು ಮಾಡಬಹುದೆಂದು ಸರ್ಕಾರದವರು ತಿಳಿಸುತ್ತಾರೆ.

ಸಂತಾನ ಸಿಂಧೂರ

ಬಹುಪೈ ಸಂಬಂಧದ ಹೊಟ್ಟೆನೋವಿನ ದೆಸೆಯಿಂದ ಮಕ್ಕಳಾಗದೇ ಇರತಕ್ಕವರಿಗೆ ಗ್ಯಾರಂಟೀ ಔಷಧ ತಿಂಗಳು ಪಥ್ಯ ಸರ್ಪ. ತಾಂಬಿತು ಗಿಂದಿನ ಕ್ವಾಟ್ಲಿಗುಗಳೆಲ್ಲಾ ರದ್ದು. ಹೋಯಿತು ಈ ಸೂಚನೆ ಕ್ರಿಂಟಾಗಿದೆ ಬರೆದರೆ ಬಿಟ್ಟಿ ರವಾನೆ

ಎ ರಾಮಸ್ವಾಮಿ ಅಯ್ಯಂಗ್,
ಅಂಬಳೆ, ಯಳಂದೂರು.

ಅಸ್ಸಾಂ ಸಚಿವರ ಉಪವಾಸ ಮುಕ್ತಾಯ

ಅಸ್ಸಾಮಿನ ಆಹಾರ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಕಳೆದ ೧೪೪ ಗಂಟೆಗಳ ಕಾಲದಿಂದ ಉಪವಾಸವನ್ನು ಕೈಗೊಂಡಿದ್ದ ಅಲ್ಲಿನ ಆಹಾರ ಸಚಿವರಾದ ಶ್ರೀ ಒಮಿಯೋ ಕುಮಾರ್ ದಾಸ್‌ರವರು ನೆನ್ನೆ ರಾತ್ರಿ ಉಪವಾಸವನ್ನು ಮುಕ್ತಾಯಗೊಳಿಸಿದರು.

Dalavoy High School, Mysore

Tutorial Section

Tutorial classes for the benefit of E P S and failed S S L C students will be held in the mornings. Applications will be received up to 10th July 1948

B. V. Nanjundiah,
Headmaster

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೆಯಿರ್ ಬಾಮ್
ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ, ಶೀಸೆ ೦-೧೨-೦
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು
ಪಂಚಾಮೃತ – ಮಬ್ಬೇರಿಂಗ್ ಗೆಡ್ಡೆಗಳಿಗೆ ಸಿದ್ಧ ಸಂಜೀವನ.
ಮಹಾಕೇತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಬ್ರೇನ್ ಟಾನಿಕ್ ಶೀಸೆ ೨-೦-೦
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಕನ್ನಡ ರಂಗಭೂಮಿಯ ಶತಮಾನೋತ್ಸವ

ಮೈಸೂರು

ಕನ್ನಡ ರಂಗಭೂಮಿಯ ಶತಮಾನೋತ್ಸವ ಮತ್ತು ಶ್ರೀ ಗುಬ್ಬಿ ನಾಟಕ [illegible] ಯ ವಜ್ರೋತ್ಸವವೂ ದಸರಾ ಮಹೋತ್ಸವ ಕಾಲದಲ್ಲಿ ಮುಂದಿನ ತಿಂಗಳು [illegible] ನೇ ತಾ|| ನಡೆಯುವುದು. ಈ [illegible] ಕ್ಕೆ ಕನ್ನಡಿಗರೆಲ್ಲರೂ ಸಹಕರಿಸಬೇಕು. ಸಂದರ್ಭದಲ್ಲಿ ಏರ್ಪಡಿಸಿರುವ ನಾ[illegible] ಯಕ್ಷಗಾನ, ಬೈಲಾಟ, ನೃತ್ಯ, ಸ[illegible] ಕಲೆ ಮೊದಲಾದವುಗಳಲ್ಲಿ ಪಾಲ್ಗೊಳ್ಳುವವರು ಮುಂದಿನ ತಿಂಗಳು ೧೦ ತಾ|| ನೊಳಗಾಗಿ ಸಮಿತಿಯು ಕಳುಹಿಸಬೇಕು. ಮತ್ತು ಕರ್ನಾಟಕದ [illegible] ಭಿಮಾನಿಗಳು ತಮ್ಮ ಪ್ರದೇಶದಲ್ಲಿ ಕಲಾಪ್ರದರ್ಶನವನ್ನೂ ಕರೆತಂದು ಪ್ರ[illegible] ನಗಳನ್ನು ಏರ್ಪಡಿಸಬೇಕೆಂದು [illegible] ಪ್ರಧಾನ ವ್ಯವಸ್ಥಾಪಕರಾದ ಶ್ರೀ [illegible] ಮ ಹ ದೇವಸ್ವಾಮಿಯವರು ವ[illegible] ಮಾಡಿರುತ್ತಾರೆ.

ಬಿದರೆಯಲ್ಲಿ ನಿಜಾಮರ ಸೈನ್ಯ ಸಿದ್ಧತೆ

ಹೈದರಾಬಾದಿಗೆ ೬೫ ಮೈಲಿ ದೂರದ ಬಿದರೆಯಲ್ಲಿ ನಿಜಾಮರು ಹೆಚ್ಚಿನ ಸೈನ್ಯವನ್ನು ಶೇಖರಿಸಿ, ಯುದ್ಧ ನಡೆಸುವುದಕ್ಕೆ ಸಿದ್ಧತೆ ಮಾಡುತ್ತಿರುವರೆಂದು [illegible] ರಾಬಾದ್ ಕಾಂಗ್ರೆಸ್ಸಿನ ಜಂಟಿ ಕಾರ್ಯದರ್ಶಿಗಳಾದ ಶ್ರೀ ಕೆ ಜೋಷಿಯವರು ತಿಳಿಸುತ್ತಾರೆ. ಸಂಸ್ಥಾನದಲ್ಲಿ ೨|| ಲಕ್ಷ ಜನ ರಾಜಾಕರ ಸೈನಿಕರಿರುವರೆಂದೂ, ಅವರಿಗೆ ನಿಜಾಮರು ೧|| ಕೋಟಿ ರೂ ಗಳನ್ನು ಖರ್ಚು ಮಾಡುತ್ತಿರುವರೆಂದೂ ಅವರು ಹೇಳುತ್ತಾರೆ.

ಪ್ರತಿ ದಿನ ಮೂರು ಆಟಗಳು

1-7-48 ನೇ ಗುರುವಾರದಿಂದ
ಗಗ್ಗಯ್ಯ, ಕಾಂಚನಮಾಲಾ
ಪಾತ್ರ ವಹಿಸಿರುವ

ಮಹಿರಾವಣ

(ತೆಲುಗು)
ಒಲಂಪಿಯಾ ಟಾಕೀಸು

ಶ್ರೀ ಗಣೇಶಾ ಟಾಕೀಸ್

2-7-48 ರಿಂದ
ಪ್ರತಿ ದಿನ ಮೂರು ಆಟಗಳು
ಮ್ಯಾಟಿನಿ 3, ಸಂಜೆ 6-30, ರಾತ್ರಿ 10

ಪ್ರಭಾವತಿ

(ತಮಿಳು)
—:ಭೂಮಿಕೆ:—
ಹೊನ್ನಪ್ಪ ಭಾಗವತರ್,
ಟಿ. ಆರ್. ರಾಜಕುಮಾರಿ,
ಕೃಷ್ಣ ಮತ್ತು ಮಧುರಂ

Tutorial Section

D Banumiah's High School, Mysore

Classes for the failed S S L C and E P S students will start working from the 1st July 1948. Candidates must apply to the undersigned

B Seshagiri Rao,
D Banumiah's High School
29-6-48 Mysore

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,
[ಬ್ರಿಟಿಷ್ ಇಂಡಿಯಾದಲ್ಲಿ ೧೯೩೩ ರಲ್ಲಿ ಸ್ಥಾಪಿತವಾದದ್ದು]
ಪ್ರಧಾನ ಆಫೀಸು:-ಕರೂರು (S I Ry)
ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N A.)
ಬೆಂಗಳೂರು ಸಿಟಿ
ಉಪಶಾಖೆ-ನಾಗಲ್ ನಗರ (ದಿಂಡಿಗಲ್)
ಮೈಸೂರು ಬ್ರಾಂಚ್:-ಇರ್ವಿನ್ ರೋಡ್
ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿಯಿಂದ ಪ್ರಾರಂಭ ಮಾಡಬಹುದಾದ - ೧೨ ತಿಂಗಳು, ೨೪ ತಿಂಗಳ ವಾಯಿದಾ —ರಿಕರಿಂಗ್ ಡಿಪಾಜಿಟ್ ಮತ್ತು ೬೦ ತಿಂಗಳು ವಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು
ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ
ವಿ ಕೆ ನಟರಾಜನ್,
ಏಜೆಂಟ್, ಮೈಸೂರು

|| ಶ್ರೀ ||

ಗಾಯತ್ರಿ ಟಾಕೀಸ್

ತಾ|| ೨೮-೬-೪೮ ರಿಂದ
೩ ದಿನಗಳು ಮಾತ್ರ
M G M's

ಅಂಡರ್ ಕರೆಂಟ್
Under Current

The Most Terrific Climax you have Ever Seen
Starring ROBERT TAYLOR, KATHARINE HEPBURN

Next Change 29 th's
CENTENNIAL SUMMER
(Technicolour)

Edited printed and published by A. R. Nagarajan at the Sadhvi Press D. Subbaiah Road Mysore

ರಿಜಿ ನಂ. 792 || ವಂದೇಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬ | ಗುರುವಾರ ೧-೭-೪೮ | ಸಂಚಿಕೆ ೩೨೧

ಬೆಂಗಳೂರಿನಲ್ಲಿ ಪಾರ್ಲಿಮೆಂಟ್ ನಗರ

ವಿದ್ಯಾರ್ಥಿಗಳಿಗೆ ಗಾಂಧೀ ತತ್ವದ ಬೋಧನೆ

ಸೆನೆಟ್ ಸಭೆಯಲ್ಲಿ ನಿರ್ಧಾರ

ಮೈಸೂರು ೧

ನಿನ್ನೆ ನಡೆದ ಸೆನೆಟ್ಟಿನ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಗಾಂಧೀಜಿಯ ತತ್ವವನ್ನು ಬೋಧಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಶ್ರೀ ಎನ್ ಶ್ರೀನಿವಾಸಮೂರ್ತಿಯವರು ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು. ಶ್ರೀಗಳಾದ ಎಂ ಟಿ ಎಲ್ ಶಾಸ್ತ್ರಿ, ಟಿ ಎಸ್ ರಾಜಗೋಪಾಲಯ್ಯಂಗಾರ್, ವಿಜಯದೇವ, ವೆಂಕಟೇಶಯ್ಯ, ಮಿರ್ ಇಸ್ ಬಲ್ ಖಾನ್ ಮತ್ತು ಡಾ|| ಎಂ ವಿ ಗೋಪಾಲಸ್ವಾಮಿ ಮುಂತಾದವರು ಅದನ್ನು ಸಮರ್ಥಿಸಿದರು ಗಾಂಧೀಜಿಯವರ ತತ್ವವನ್ನು ಬೋಧಕವು ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಗೂ ಬೋಧಿಸಬೇಕೆಂದು ಡಾ|| ಗೋಪಾಲಸ್ವಾಮಿಯವರು ಹೇಳಿದರು

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಕಡ್ಡಾಯದ ಸ್ವಸ್ಥ ಶಿಕ್ಷಣವನ್ನು ಕೊಡಬೇಕೆಂಬ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರ ನಿರ್ಣಯವೂ ಅಂಗೀಕೃತವಾಯಿತು. ಶ್ರೀಗಳಾದ ಟಿ ಸೀತಾರಾಮಯ್ಯ, ಟಿ ಹನುಮಯ್ಯ, ಕೆಂಪೇಗೌಡ ಮತ್ತು ಮಿರ್ ಇಸ್ ಬಲ್ ಹುಸೇನರವರುಗಳು ಮೊದಲಾದ ಇಂತಹ ಶಿಕ್ಷಣವು ವಿದ್ಯಾರ್ಥಿಗಳಿಗೆ ಅತ್ಯಗತ್ಯವೆಂದೂ, ಅದರಿಂದ ಆತ್ಮಗೌರವವು ಹೆಚ್ಚುವುದೆಂದೂ ತಿಳಿಸಿದರು.

ಪ್ರತಿಯೊಂದು ಮೊದಲನೇ ತರಗತಿಯ ಕಾಲೇಜಿನಲ್ಲೂ ಈಜುವ ಕೊಳವನ್ನು ಏರ್ಪಡಿಸಬೇಕೆಂಬ ಶ್ರೀ ಲಕ್ಷ್ಮೀದೇವಿ ರಾಮಣ್ಣನವರ ನಿರ್ಣಯವೂ, ಸೆನೆಟ್ ಸಭೆಗೆ ರಿಜಿಸ್ಟರ್ ಪದವೀಧರರ ಸದಸ್ಯರ ಸಂಖ್ಯೆಯನ್ನು ೬ ರಿಂದ ೧೨ ಕ್ಕೆ ಹೆಚ್ಚಿಸಬೇಕೆಂಬ ಶ್ರೀ ವಿ ಲಿಂಗಪ್ಪಯ್ಯನವರ ನಿರ್ಣಯವೂ ಅಂಗೀಕರಿಸಲ್ಪಟ್ಟಿತು.

ಹಿಂದೀ ಶಿಕ್ಷಣ ತರಗತಿ

ರಾಜಧಾನಿಯ ಹಳ್ಳದಕೇರಿಯಲ್ಲಿರುವ ಶ್ರೀ ಸರಸ್ವತಿ ಶಿಶುವಿಹಾರ ಮತ್ತು ಕಾರ್ಮಿಕ ಸೇವಾ ಸಮಾಜದ ಆಶ್ರಯದಲ್ಲಿ ನಾಳೆಯಿಂದ ಹಿಂದೀ ತರಗತಿಗಳನ್ನು ಏರ್ಪಡಿಸಲಾಗಿದೆ.ಎಲ್ಲಾ ಹಿಂದೀ ಪ್ರೇಮಿಗಳೆಲ್ಲರೂ ಇದರಲ್ಲಿ ಸಹಕರಿಸಬೇಕೆಂದೂ ಕೋರಲಾಗಿದೆ

ಹರಿಕಥೆ

ನಾಳೆ ರಾತ್ರಿ ೯ ಗಂಟೆಗೆ ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಧರ್ಮರತ್ನಾಕರ ಶ್ರೀ|| ಕೆ. ನಂದೀಬಸಪ್ಪನವರ ಸಮ್ಮುಖದಲ್ಲಿ ಶ್ರೀ ಸೋ. ಮಿ ಲೆ ೯ ಶ್ರೀನಿವಾಸರಾಯರಿಂದ ಶ್ರೀ ರಾಮಾಂಜನೇಯ ಎಂಬ ಹರಿಕಥೆ ನಡೆಯಲ್ಪಡುತ್ತದೆ

ಮಾರ್ಷಲ್ ಟಿಟೋರವರ ಬಂಧನ ಅಥವ ಕೊಲೆ

ಯುಗೋಸ್ಲವೇಕಿಯಾದ ಪ್ರಧಾನಿ ಮಾರ್ಷಲ್ ಟಿಟೋರವರನ್ನು ೯ ರಾಷ್ಟ್ರಗಳ ಕಮ್ಯೂನಿಸ್ಟ್ ಸಂಸ್ಥೆಯವರು ಬಹಿಷ್ಕರಿಸಿರುವುದು ತೀರ್ಮಾನಿಸಿದವೇಲೆ ಅವರನ್ನು ಬಂಧಿಸಿ ಜೈಲಿನಲ್ಲಿ ಇಡಲಾಗಿದೆ ಅಥವ ಗುಂಡಿಟ್ಟು ಕೊಲೆ ಮಾಡಲಾಯಿತೆಂದು ಅಮೇರಿಕದ ಪ್ರಮುಖ ರಾಯಭಾರಿಗಳು ಅಭಿಪ್ರಾಯಪಟ್ಟಿರುತ್ತಾರೆ

ಪಾರ್ಲಿಮೆಂಟ್ ನಗರದ ನಿರ್ಮಾಣ

ಸ್ವಂ.ಸು.ಪ್ರೋ] ಬೆಂಗಳೂರು ೧

ಈಗಿನ ಸೆಕ್ರೆಟೇರಿಯೆಟ್ ಭವನದ ಹಿಂದಿರುವ ವಿಶಾಲವಾದ ನಿವೇಶನದಲ್ಲಿ ೨೭ ಲಕ್ಷ ರೂ. ಖರ್ಚಿನಿಂದ ಒಂದು ಪಾರ್ಲಿಮೆಂಟ್ ನಗರವನ್ನು ಕಟ್ಟಲು ಸರ್ಕಾರದವರು ಆಲೋಚನೆ ಮಾಡುತ್ತಿರುವರೆಂದು ತಿಳಿದುಬಂದಿದೆ. ಅಲ್ಲಿ ಶಾಸನಸಭೆಯ ಭವನ, ಸಚಿವರುಗಳು, ಅವರ ಗಳ ಕಾರ್ಯದರ್ಶಿಗಳು ಮತ್ತು ಶಾಸನಸಭೆಯ ಅಧ್ಯಕ್ಷರು ಇವರುಗಳಿಗೆ ವಸತಿ ಗೃಹಗಳನ್ನು ಕಟ್ಟಲಾಗುವುದೆಂದು ಹೇಳಲಾಗಿದೆ.

* ಸಧ್ಯದಲ್ಲೇ ಪೂನಾದಿಂದ ದಕ್ಷಿಣ ಕಮ್ಯಾಂಡ್ ಸೈನ್ಯ ಶಾಖೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಗುವುದೆಂದು ತಿಳಿದುಬಂದಿದೆ.

ದೆಹಲಿಗೆ ಗೃಹಸಚಿವರು

ದೆಹಲಿಯಲ್ಲಿ ಇದೇ ೧೨ ನೇ ತಾ|| ನಡೆಯಲಿರುವ ಪ್ರಾಂತ ಮತ್ತು ಸಂಸ್ಥಾನಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ೧೧ ನೇ ತಾರೀಕು ಪ್ರಯಾಣ ಮಾಡುವರು.

‡ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಲು ಬೆಂಗಳೂರಿಗೆ ಬರಲು ಸಾಧ್ಯವಿಲ್ಲವೆಂದು ಡಾ|| ರಾಜೇಂದ್ರ ಪ್ರಸಾದ್, ಮೌಲಾನಾ ಅಬ್ದುಲ್ ಕಲಾಂ ಆಜಾದ್ ಮತ್ತು ಶ್ರೀ ಬಿ ಜಿ ಖೇರ್ ರವರುಗಳುಗಳು ತಿಳಿಸಿದ್ದಾರೆಂದು ಗೊತ್ತಾಗಿದೆ

ಸಯಾಮಿನ ಮಾಜಿ ಪ್ರಧಾನಿಯವರ ದಸ್ತಗಿರಿಗೆ ವಾರೆಂಟು

ಸಯಾಮಿನ ದೊರೆ ಸತ್ತ ನಂತರದ ಕೊಲೆಯ ಸಂಬಂಧದಲ್ಲಿ ಅಲ್ಲಿನ ಮಾಜಿ ಪ್ರಧಾನಿ ಪ್ರಿಡಿ ಪನೋಮ್ಯಾಂಗ್‌ರವರನ್ನು ದಸ್ತಗಿರಿ ಮಾಡಲು ಸರ್ಕಾರದ ಆಜ್ಞೆಯಾಗಿದೆ

ದಾಸೋಹ ಮಠದ ಆರಂಭೋತ್ಸವ

ಯಳಂದೂರು ತಾಲ್ಲೂಕು ಶಿವಕ ಹಳ್ಳಿಯಲ್ಲಿ ಈ ದಿನ ೭-೩೦ ಗಂಟೆಗೆ ವೀರಶೈವ ದಾಸೋಹಮಠದ ಗೃಹಪ್ರವೇಶ ಮಹೋತ್ಸವವು ಮತ್ತು ೧೧-೩೦ ಗಂಟೆಗೆ ವಟುಗಳಿಗೆ ಶಿವದೀಕ್ಷಾ ಸಂಸ್ಕಾರ ಮಹೋತ್ಸವವು ಶ್ರೀ ಗೌರೀಶಂಕರ ಸ್ವಾಮಿಗಳು, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮತ್ತು ಶಿವಕುಮಾರಸ್ವಾಮಿಗಳು ಇವರುಗಳ ನೇತೃತ್ವದಲ್ಲಿ ನಡೆದವು

ಕೆ.ಹೆಂಜಾರಪ್ಪನವರು ದಕ್ಷತೆ ತನಿಖೆಯ ಅಧಿಕಾರಿಗಳು

ಸ್ವಂ ಸು.ಪ್ರೊ] ಬೆಂಗಳೂರು ೧

ನ್ಯಾಯವಿಧಾಯಕ ಸಭೆಯ ಸದಸ್ಯರೂ ತುಮಕೂರು ಕಾಂಗ್ರೆಸ್ ಪ್ರಮುಖರೂ ಆದ ಶ್ರೀ ಕೆ ಹೆಂಜಾರಪ್ಪನವರನ್ನು ಸಂಸ್ಥಾನದ ದಕ್ಷತೆ ತನಿಖೆ ಇಲಾಖೆಯ ಮುಖ್ಯಾಧಿಕಾರಿಗಳಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಪ್ರಭುಗಳವರ ಪ್ರವಾಸ

ಶ್ರೀಮನ್ಮಹಾರಾಜರವರು ಈ ದಿನ ಬೆಳಿಗ್ಗೆ ನೆಲಮಂಗಲಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ಹರಿಜನಕೇರಿಗೆ ಭೇಟಿ ಇತ್ತು ಅಲ್ಲಿಂದ ಬೆಳಗುಂಬಾ ಮಾಗಡಿ ತಿಪ್ಪಗೊಂಡನಹಳ್ಳಿಗೆ ಭೇಟಿ ಕೊಟ್ಟರು. ಸಂಜೆ ೫.೩೦ ಗಂಟೆಗೆ ಬೆಂಗಳೂರು ಬಳಿ ಭಿಕ್ಷುಕರ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸುವರು

ಶಾಸನ ಸಭೆ

ನ್ಯಾಯ ವಿಧಾಯಕ ಸಭೆಯಿಂದ ಚೀಫ್ ಕೋರ್ಟಿಗೆ ವಿವ ರ್ತನಾ ಸವಿ ತಿಗೆ ಶ್ರೀ ಹೆಚ್ ಎಸ್ ರುದ್ರಪ್ಪನವರು ಚುನಾಯಿತರಾಗಿದ್ದಾರೆ ಈ ದಿನ ಶಾಸನ ಸಭೆಯಲ್ಲಿ ಪೆಟ್ರೋಲಿನ ಅಭಾವದ ವಿಷಯದಲ್ಲಿ ಅನೇಕ ಪ್ರಶ್ನೆಗಳು ಬಂದವು. ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು, ಸಂಸ್ಥಾನಕ್ಕೆ ಈಗ ಕೊಟ್ಟಿರುವ ೨ ಲಕ್ಷ ಗ್ಯಾಲನ್ ಜೊತೆಗೆ ಇನ್ನೂ ೧೧ ಲಕ್ಷ ಗ್ಯಾಲನ್ ಪೆಟ್ರೋಲ್ ಕೊಡಬೇಕೆಂದು ಭಾರತ ಸರ್ಕಾರವನ್ನು ಕೇಳಲಾಗಿದೆಯೆಂದು ತಿಳಿಸಿದರು

ಪಾನನಿರೋಧ ಮತ್ತು ಕಟ್ಟಿನ ತೆರಿಗೆ ಮಸೂದೆಗಳು ನಿನ್ನೆ ದಿನ ಶಾಸನ ಸಭೆಯಲ್ಲಿ ಅಂಗೀಕೃತವಾಯಿತು

ಜಪಾನಿನಲ್ಲಿ ೧೨ ಬಾರಿ ಭೂಕಂಪ

ಜಪಾನಿನ ವಾಯವ್ಯ ತೀರ ಪ್ರದೇಶದಲ್ಲಿ ಪುನಃ ೧೨ ಬಾರಿ ಭೂಕಂಪವಾಯಿತೆಂದು ವರದಿಯಾಗಿದೆ. ಕಳೆದ ಭಾನುವಾರದ ಭೂಕಂಪದಿಂದ ೮೫ ಸಾವಿರ ಜನ ಸಂಖ್ಯೆಯ ಫುಕಿ ಮತ್ತು ಇತರ ೬ ನಗರಗಳು ಸಂಪೂರ್ಣವಾಗಿ ನಾಶವಾದವು. ಮಧ್ಯ ಜಪಾನು ದ್ವೀಪದಲ್ಲಿ ನಾಲ್ಕು ಬಾರಿ ಭೂಕಂಪವಾಗಿ ೭ ಪಟ್ಟಣಗಳು ಬೆಂಕಿಗೆ ಆಹುತಿಯಾದವು ಫುಕಿ ನಗರದಲ್ಲಿ ೨೮೬೦ ಜನರು ಸತ್ತರೆಂದೂ, ೭೧೧೩ ಮಂದಿಗೆ ಗಾಯಗಳಾದುವೆಂದೂ, ೩೦೪೫೦ ಮನೆಗಳು ನಾಶವಾದುವೆಂದೂ ಅಧಿಕೃತವಾಗಿ ತಿಳಿದು ಬಂದಿದೆ.

ಹೈದರಾಬಾದಿನಲ್ಲಿ ವಿಮಾನ ಧಾಳಿ ಮುಂಜಾಗ್ರತೆ

ಭಾರತ ಸರ್ಕಾರದವರು ಹೈದರಾಬಾದಿನ ಮೇಲೆ ಆರ್ಥಿಕ ದಿಗ್ಬಂಧನ ಹಾಕುತ್ತಿರುವ ವಿಚಾರದಲ್ಲಿ ನಿಜಾಮರ ಪ್ರಕಟಣಾ ಶಾಖೆಯ ಕಾರ್ಯದರ್ಶಿಗಳ ಒಂದು ಪ್ರಕಟಣೆಯನ್ನು ಹೊರಗೆಡಹಿ ಇದರಿಂದ ಸಂಸ್ಥಾನದ ಮೇಲೆ ಭಾರತವು ಯುದ್ಧ ಘೋಷಿಸಿದಂತಾಗಿದೆಯೆಂದೂ, ಆದುದರಿಂದ ಸಂಸ್ಥಾನದಲ್ಲಿ ವಿಮಾನ ಧಾಳಿ ಮುಂಜಾಗ್ರತಾ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದೂ, ಧಾಳಿಯಾದರೆ ಎರಡು ಪಕ್ಷಗಳಿಗೂ ಹಾನಿಯೆಂದೂ ತಿಳಿಸುತ್ತಾರೆ

ಚರ್ಚಿಲರು ಭಾರತಕ್ಕೆ ಕಂಟಕಪ್ರಾಯರು

ಸ. ಪಟೇಲರ ಘರ್ಜನೆ

ಬ್ರಿಟನ್ನಿನ ಮಾಜಿ ಪ್ರಧಾನಿ ಮಿ|| ಚರ್ಚಿಲರು ನೆಹರೂ ಸರ್ಕಾರದ ಮೇಲೆ ಮಾಡಿದ ಟೀಕೆಗೆ ಸರ್ದಾರ್ ಪಟೇಲರು ಉತ್ತರವಿತ್ತು ಪ್ರಾರಂಭದ ಕಾಲದಿಂದ ಬೆಳೆದು ಬಂದಿರುವ ಸಾಮ್ರಾಜ್ಯ ಶಾಹಿ ಮನೋಧರ್ಮವನ್ನು ಬಿಟ್ಟು ಕೊರೆಯುವಿದ್ದರೆ ಮುಂದೆ ಕೃಪಾಪಾತ್ರವಾಗುವುದೆಂದು ತಿಳಿಸಿರುತ್ತಾರೆ ... ಮಿ|| ಚರ್ಚಿಲರು ಇಟ್ಟಿಸಿ... ಧ್ವಜ ಗಳಿಸಿ... ಇದರಿಂದ ಅವರ ದ್ವೇಷ ... ಪ್ರಸ್ತುತದಲ್ಲಿದೆಯೆಂದೂ, ... ಕ್ಕೆ ಕೆಡಕುಂಟು ... ಉದ್ದೇಶ್ಯವಾಗಿದೆಯೆಂದೂ, ... ಬ್ರಿಟಿಷ್ ಸರ್ಕಾರ ... ಮತ್ತು ... ಹೇಳಿದ್ದಾರೆ.

ಬ್ರಿಟನ್ ... ಮನೋಧರ್ಮವನ್ನು ... ಪ್ರಜಾಸತ್ತಾತ್ಮಕ ರಾಜ್ಯವಾದರೆ ... ಸಂಸ್ಥೆಯ ಕಾಂಗ್ರೆಸ್ಸಿನಲ್ಲಿ ... ಭಾರತೀಯ ... ಬಾಂಧವ್ಯವನ್ನು ... ಅವರಿಗೇ ಪ್ರಮಾದವಾಗುವುದು ಖಂಡಿತವೆಂದು ಸ|| ಪಟೇಲರು ಎಚ್ಚರಿಕೆ ಕೊಟ್ಟಿರುತ್ತಾರೆ.

ಕಾಂಗ್ರೆಸ್ ಸದಸ್ಯತನದ ಪುಸ್ತಕಗಳು

ಮೈಸೂರು ನಗರ ಕಾಂಗ್ರೆಸ್ ಸಮಿತಿಯಿಂದ ಸದಸ್ಯತನದ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಇನ್ನೂ ಹಿಂದಕ್ಕೆ ಕಳುಹಿಸದೆ ಇರುವವರು ದಯವಿಟ್ಟು ನಾಳೆ ಸಂಜೆ ೫ ಗಂಟೆಯೊಳಗಾಗಿ ಪುಸ್ತಕಗಳನ್ನು, ಹಣವನ್ನೂ ಕಾಂಗ್ರೆಸ್ ಕಚೇರಿಗೆ ವಾಪಸು ತಲುಪಿಸಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಕೋರುತ್ತಾರೆ ಹಾಗೆ ತಲುಪಿಸದೆ ಇದ್ದಲ್ಲಿ ಸದರಿ ಪುಸ್ತಕದಲ್ಲಿರುವವರ ಹೆಸರನ್ನು ಅಧಿಕೃತ ಸದಸ್ಯರ ಪಟ್ಟಿಗೆ ಸೇರಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.

ಕಂಗಿರಿ ಪುರಸಭಾ ಸಭೆ

ಮೈಸೂರು ... ಗಡಿ ಕೊಲೆಗಾರ ... ನಡೆದ ಭಾನುವಾರ ... ಅಧ್ಯಕ್ಷತೆಯಲ್ಲಿ ... ಶ್ರೀ|| ಮೋಟಾರಿನ ... ಸಂಘದ ಸದಸ್ಯರು ... ಮರಣಕ್ಕೆ ಸಂತಾಪ ... ಯಿತು

ವಿವಾಹ ಮಹೋತ್ಸವಗಳು

ಮೈಸೂರು ಪುರಸಭೆಯ ಶಿವಾನಂದ ಶ್ರೀ ಎಸ್. ಎಸ್. ಹಿರಣ್ಣಯ್ಯನವರು ತಮ್ಮ ಪುತ್ರಿ ಚಿ॥ ಸೌ॥ ಶಾರದಮ್ಮನನ್ನು ಷಿವೃತ್ತ ಅಮಲ್ದಾರ್ ಶ್ರೀ ಬಿ. ಕೆ ಸುಬ್ಬರಾಯರ ಪುತ್ರ ಶ್ರೀ ಬಿ ಎಸ್ ಶ್ರೀಧರ ಸರಾಯರಿಗೆ ಕೊಟ್ಟು ವಿವಾಹವನ್ನು ಈ ದಿನ ನೆರವೇರಿಸಿದರು.

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ರಾಜು ಎಲ್ ರಾಮಚಂದ್ರರಾಯರು ತಮ್ಮ ಪುತ್ರಿ ಚಿ॥ಸೌ॥ ಚಂದ್ರಭಾಗಾರವರನ್ನು ಕಡೂರಿನ ಶ್ರೀ ಕೆ ನರಸಿಂಗರಾಯರ ಸಹೋದರ ಶ್ರೀ ಕೆ ದುರ್ಗೋಜಿರಾಯರಿಗೆ ಕೊಟ್ಟು ವಿವಾಹವನ್ನು ನಿನ್ನೆ ನಡೆಸಿದರು

ಪೌರಸಭಾ ಸದಸ್ಯರಾದ ಶ್ರೀ ಜಿ ಆರ್ ರಂಗಸ್ವಾಮಯ್ಯನವರು ತಮ್ಮ ಪುತ್ರಿ ಚಿ॥ ಸೌ॥ ಲೀಲಮ್ಮನನ್ನು ಶ್ರೀ ಡಿ ನುಡುಯ್ಯನವರ ಪುತ್ರ ಶ್ರೀ ಎನ್ ವರ್ದ್ಧರ್ನನ ವರಿಗೆ ಕೊಟ್ಟು ವಿವಾಹವನ್ನು ಈ ದಿನ ನೆರವೇರಿಸಿದರು

ಶಾರದಾ ವಿಲಾಸ ಹೈಸ್ಕೂಲ್

ರಾಜಧಾನಿಯ ಶಾರದಾವಿಲಾಸ ಹೈಸ್ಕೂಲಿನ ಈ ವರ್ಷದ ಸ್ಕೂಲು ಫೈನಲ್ ಪರೀಕ್ಷೆಯ ಫಲಿತಾಂಶಗಳ ವಿವರ:- ಪರೀಕ್ಷೆಗೆ ಕುಳಿತಿದ್ದವರು ೧೯೦, ಇ ಸ್ ಎಸ್. ೧೩೮, (ಇ ಸಿ ಎಸ್ ೧೫೬): ಮೊದಲನೇ ತರಗತಿಯಲ್ಲಿ ೪೦ ಜನ ತೇರ್ಗಡೆಯಾಗಿರುವರು

ರಾ ಜ ಕ ಮ ಲ್,

ಮೈಸೂರು

ತಾ॥ ೨—೭—೪೮ರಿಂದ

ಎರಡನೇ ವಾರ

ಪ್ರತಿ ದಿನ ಮೂರು ಆಟಗಳು

ಅಮರ್ ರಾಜ್

[ಹಿಂದಿ]

—:ಭೂಮಿಕೆ:—

ನಸ್ಸೀಮ್, [ಜೂನಿಯರ್] ತ್ರಿಲೋಕ್ ಕಪೂರ್, ಪ್ರಕಾಶ್, ರೆಹನಾ

ಬೆಳಗಿನ ಪ್ರದರ್ಶನ

೨—೭—೪೮ ರಿಂದ

೪ ದಿನಗಳು ಮಾತ್ರ

ಬಾಂಬೇ ಟಾಕೀಸಿನವರ

ಪುನರ್ ಮಿಲನ್

[ಹಿಂದಿ]

ಪಾತ್ರ.—ಕಿಶೋರ್ ಸಾಹು, ಸ್ನೇಹಪ್ರಭಾ

ಲೋಕಸೇವಾ ಸಂಘದ ಆರಂಭೋತ್ಸವ

ರಾಜಧಾನಿಯ ಚಲಪುರಿಯಲ್ಲಿ ನಾಳೆ ೧ ನ ಲೋಕಸೇವಾ ಸಂಘದ ಆರಂಭೋತ್ಸವವನ್ನು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ನೆರವೇರಿಸುವರು ಪೌರಸಭಾಧ್ಯಕ್ಷರಾದ ಶ್ರೀ ಟಿ ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸುವರು

ಅಶೋಕಾ ರೋಡ್,

ಹಳ್ಳದಕೇರಿಗೂ ದೊಡ್ಡಪೇಟೆಗೂ ಮಧ್ಯೆ

೩ ಸೈಟುಗಳು

—: ಹ ರಾ ಜು :—

4-7-48 ನೇ ಭಾನುವಾರ ೧೦ ಘಂಟೆಗೆ ವಿವರಗಳಿಗೆ ನೋಟೀಸ್ ನೋಡಿ

ಸಿಟಿ ಆಕ್ಷನಿಯರಿಂಗ್ ಕೋ

ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

Sri Kanyakaparameswari Co operative Society Ltd, Mysore

WANTED

Two accountants with S S L C (E C & P S) as minimum qulification on Rs 40 P M and dearness allowance Rs 15 Preference will be given to those with technical qualification and who have previous experience Cash security Rs 200 and 2 years' service agreement essential

Apply to the undersigned with copies of testmonials on or before 10-7-48

(Sd) P N. Nagaraja Setty,
Hon Secretary.

॥ ಶ್ರೀ ॥

ಗಾಯತ್ರಿ ಟಾಕೀಸ್

ತಾ॥ ೨-೭-೪೮ ರಿಂದ

4 ದಿನಗಳು ಮಾತ್ರ

20th Century's

Centennial - - Summer

ಸೆಂಟೆನಿಯಲ್ ಸಮ್ಮರ್

(ವರ್ಣರಂಜಿತ ಚಿತ್ರ)

Next Change —20 th's

BOB, SON OF BATTLE

Starring Wonder dog, Bob

(Technicolour)

MORNING SHOWS

From 2-7-48 for 4 days

Paramounts'

Incindiary - - Blonde

(In Technicolour)

AT PRABHA PICTURE HOUSE

ಶ್ರೀ ಗಣೇಶಾ ಟಾಕೀಸ್

—

2-7-48 ರಿಂದ

ಪ್ರತಿ ದಿನ ಮೂರು ಆಟಗಳು

ಮ್ಯಾಟಿನಿ 3, ಸಂಜೆ 6-30, ರಾತ್ರಿ 10 ಕ್ಕೆ

ಪ್ರಭಾವತಿ

(ತಮಿಳು)

—:ಭೂಮಿಕೆ:—

ಹೊನ್ನಪ್ಪ ಭಾಗವತರ್,
ಟಿ. ಆರ್. ರಾಜಕುಮಾರಿ,
ಕೃಷ್ಣನ್ ಮತ್ತು ಮಧುರಂ

ಒಳ್ಳೆಯ ವಾಸನೆಯುಳ್ಳ ತಲೆಗೆ ಗುಣದಲ್ಲಿ ಅಸಮಾನವಾದ ದು ಚೆನ್ನಾಗಿ ತುಪ್ಪ ಮಾಡುತ್ತದೆ ಸಂಶೋಧನೆಗೊಳಿಸು ವ ಸುವಾಸನಾಶಕ್ತಿ ಇರುವುದು ಯಾವು ದೆಂದರೆ ಎಸ್ ಆರ್ ಕೆ ಬ್ರಾಂಡ್ ಸ್ಪೆಷಲ್ ಸೀಗೇ ಪುಡಿ. ಪರಿಶುದ್ಧತೆಯಲ್ಲಿ ಅದ್ವಿತೀಯವೆನಿಸಿ ಈಗಾಗಲೇ ಅನೇಕ ದ ವೆಚ್ಚಗಳನ್ನು ಪಡೆದಿರುವುದು

ಶ್ರೀ ರಾಮಕೃಷ್ಣ ಸೋಪ್‌ನಟ್ ವರ್ಕ್ಸ್ ಮೈಸೂರು

ಅಪೂರ್ವ ಸಂಗೀತ ಕಚೇರಿ

ಶ್ರೀ ಸರಸ್ವತಿ ಸಂಗೀತ ಸಭಾ ಆಶ್ರಯದಲ್ಲಿ

ಸಹಾಯದ ಸಹಾಯನಿಧಿ ಸಹಾಯಾರ್ಥವಾಗಿ

ಮೈಸೂರು ಟೌನ್ ಹಾಲ್

3-7-1948

ಶನಿವಾರ ಸಂಜೆ ೫-೩೦ ರಿಂದ ೯-೩೦ ರವರೆಗೆ

ಮಧುರ ಗೀತವಾಣಿ ಶ್ರೀಮ

ಎಸ್. ಸಿ. ವಸಂತಕೋಕಿ

ಹಾಡುಗಾರಿಕೆ

ಶ್ರೀ ಚೌಡಯ್ಯ ಅನಂತರಾಮ

ಪಿಟೀಲು

ಶ್ರೀ ಕಲ್ಪಾತಿ ರಾಮನಾಥ

ಮೃದಂಗ

ಶ್ರೀ ತಂಜಾವೂರು ವೈದ್ಯನಾ

ಘಟಂ

ಮೊಂಬರಲ್ಲದವರಿಗೆ ಟಿಕೆಟ್

ಪ್ರವೇಶ

ರೂ. 15, 10, 5, 3, ಮತ್ತು

ಮೊದಲನೇ ಮೂರು ತರಗತಿ

ಬಿಜರ್ ಶ್ರೀ ... ಸೀಟುಗಳ ಟಿಕೆಟ್ ದೊರೆಯುವ ಸ್ಥಳಗಳು

೧ ಶ್ರೀ ವಿ ಎಲ್ ರಾಮಚಂದ್ರ 'ವಸಂತ ವಿಹಾರ', ಚಾಮುಂಡಿ ಮೈಸೂರು

೨ ಡಾ॥ ಎ. ಎಲ್ ಶಾಸ್ತ್ರಿ ಮೆಡಿಕಲ್ ಕಾಲೇಜು, ಮೈಸೂರು

೩ ಸಂಗೀತ ಭೂಷಣ ಶ್ರೀ ಎಂ ಸಿಂಹಾಚಾರ್, ಗಾಯಕಲಾ ಮಂದಿರ, ಕೃಷ್ಣರಾಜ, ಮೈಸೂರು

೪ ಶ್ರೀ ಮೈಸೂರು ಬ್ಯಾಂಡ್ ... ಹಾಲ್ಲಿರುವ ... ಬ್ಯಾಂಡ್ ಕಾಂಪ್ಲೆಕ್ಸ್ ... ಗಳನ್ನು ನೋಡಿ ರಿಸರ್ವ ಮಾಡುಕೊ ಬಹುದು

ಪ್ರತಿ ದಿನ ಮೂರು ಆಟ

1-7-48 ನೇ ಗುರುವಾರದಿಂದ

ಗಗ್ಗಯ್ಯ, ಕಾಂಚನಮಾಲ

ಪಾತ್ರವಹಿಸಿರುವ

ಮಹಿರಾವಣ

(ತೆಲುಗು)

ಒಲಂಪಿಯಾ ಟಾಕೀಸ್

Edited printed and published A. K. Nagaraja at the Sadhvi P. D. Subbaiah Road Mysore

---

ಪ್ರಭುದೇವಾ ಟಾಕೀಸಿನಲ್ಲಿ

ಅಮೋಘವಾದ : : 3 ನೇ ವಾರ

ಜೆ ಮಿ ನಿ—

★ ಜ್ಞಾ ನ ಸುಂ ದ ರಿ ★

(ತಮಿಳು)

ಪ್ರತಿ ದಿನ ೩ ಆಟಗಳು:- ಮ್ಯಾಟಿನಿ ೩-೧೫, ೧ ನೇ ಆಟ ೬-೪೦, ೨ ನೇ ಆಟ ೧೦

ಪಾತ್ರ:— † ಎಂ. ಕೆ. ರಾಧಾ, † ಕನ್ನಾಂಬಾ, † ಸುಶೀಲಾ, † ಟಿ. ಆರ್. ರಾಮಚಂದ್ರನ್

‡ ಎಲ್. ನಾರಾಯಣರಾವ್, ‡

ಕೋ॥ ನಂ. 792 ॥ ವಂದೇಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೨-೭-೪೮ [ಸಂಚಿಕೆ ೩೨೨

ನೂರು ಕೋಟಿ ರೂ. ನ ನೈಜಾಂ ಬಾಂಡಿಗೆ ಧಕ್ಕೆ

...ಸ್ತ್ರಾಸ್ತ್ರಗಳ ರವಾನೆಗೆ ನಿಷೇಧ

...ಂ ಸು ಫೋ॥] ಬೆಂಗಳೂರು ೨

...ಸಂಸ್ಥಾನದಿಂದ ಹೊರಕ್ಕೆ ಶಸ್ತ್ರಾಸ್ತ್ರಗಳ ...ು ಮತ್ತು ಆಸ್ಫೋಟಕ ವಸ್ತುಗಳನ್ನೂ ...ೂ ಜಿಲ್ಲಾಧಿಕಾರಿಗಳ ಪರವಾನಿ ಇಲ್ಲದೆ ...ಕೂ ಸಾಗಿಸಕೂಡದೆಂದು ಸರ್ಕಾರದ ... ಆಜ್ಞೆಯನ್ನು ಹೊರಡಿಸಿರುತ್ತಾರೆ.

ಪುಸ್ತಕಕ್ಕೆ ಮುಟ್ಟುಗೋಲು

...ಕಲಸಗಾರರ ಏಕಮತ್ಯವನ್ನು ಮುರಿ...ಲು ಮಂತ್ರಿಗಳ ಪಿತೂರಿ-ಎಂಬ ಹೆಸರ...ದ ಪ್ರಕಟವಾಗಿರುವ ತಮಿಳು ಪುಸ್ತಕ...ನ್ನು ಮುಟ್ಟುಗೋಲು ಹಾಕುವಂತೆ ಸ...ರದ ಆಜ್ಞೆಯಾಗಿದೆ.

...ಕಂಠಪ್ಪನವರ ಬಿಡುಗಡೆ ಬಗ್ಗೆ ಭರವಸೆ

...ಬಂಧನದಲ್ಲಿರುವ ಅಖಿಲ ಕರ್ನಾಟಕ ...ದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ... ಬಿ ಶ್ರೀಕಂಠಪ್ಪನವರನ್ನು ಬಿಡುಗಡೆ ...ಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ಸಿನ ...ಗಳಾದ ಜಿ ಪಿ ಕೃಷ್ಣರಾವ್ ಮತ್ತು ಪಿ ...ವೆಂಕಟೇಶ್ವರರವರುಗಳು ಗೃಹ ಸಚಿವರ ...ು ಮೊನ್ನೆ ಕಂಡು ಒತ್ತಾಯ ಮಾಡಿದ ...ದರೂ, ಇನ್ನು ೩ ೪ ದಿವಸಗಳಲ್ಲಿ ಅವರ ...ು ಬಿಡುಗಡೆ ಮಾಡುವುದಾಗಿ ಸಚಿವರು ...ರವಸೆ ಇತ್ತರೆಂದೂ ತಿಳಿದುಬಂದಿದೆ.

ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಬೆಂಗಳೂರಿನಲ್ಲಿ ಇದೇ ೬, ೭ ಮತ್ತು ...ನೇ ತಾ॥ ನಡೆಯಲಿರುವ ಅಖಿಲ ಭಾರ... ವಿದ್ಯಾರ್ಥಿ ಕಾಂಗ್ರೆಸ್ಸು ಸಮ್ಮೇಳನದಲ್ಲಿ ...ರತ ಸರ್ಕಾರದ ಸಚಿವರಾದ ಅಬ್ದುಲ್ ...ಆಜಾದ್ ಕಿದ್ವಾಯಿ, ಆಚಾರ್ಯ ಕೃ...ಲಾನಿ ಮತ್ತು ರಾಮ ಮನೋಹರ್ ಲೋ...ಯರವರುಗಳು ಭಾಗವಹಿಸುವರು ಸರ್ವ...ನೆಲ್ಲ ಇರುವ ಪ್ರತಿನಿಧಿಗಳು ತಮ್ಮ ಹೆಸ... ಮತ್ತು ಬರುವ ತಾರೀಖನ್ನು ಕೂಡ... ತಿಳಿಸಬೇಕೆಂದು ಪ್ರಕಟಣಾ ಕಾರ್ಯ...ರ್ಯದರ್ಶಿಗಳು ತಿಳಿಸಿರುತ್ತಾರೆ

...ೈದರಾಬಾದ್ ಸೆಕ್ಯೂರಿಟಿಗಳ ಮೇಲೆ ಪ್ರತಿಬಂಧಕ

...ಭಾರತ ಸರ್ಕಾರದಲ್ಲಿರುವ ಹೈದರಾಬಾ...ದ ೧೦೦ಕೋಟಿಯೂ ಬೆಲೆಯ ಸೆಕ್ಯೂರಿಟಿ...ಗಳನ್ನು ನಿಜಾಮರು ಉಪಯೋಗಿಸದಂತೆ ...ತಿಬಂಧಕಾಜ್ಞೆ ಹಾಕಿ ಒಂದು ವಿಶೇಷ ...ೂರು ಶಾಸನವನ್ನು ಗವರ್ನರ್ ಜನರ... ಶ್ರೀ ಸಿ ರಾಜಗೋಪಾಲಾಚಾರಿಯವ... ನಿನ್ನೆ ಹೊರಡಿಸಿರುತ್ತಾರೆ. ಸ್ಟ್ಯಾಂಡ್... ...ಲ್ ಒಪ್ಪಂದಕ್ಕೆ ವಿರೋಧವಾಗಿ ಹೈದ...ಬಾದು ೨೦ ಕೋಟಿ ರೂ. ಬೆಲೆ ಬಾಳು... ಸೆಕ್ಯೂರಿಟಿಗಳನ್ನು ಪಾಕೀಸ್ತಾನಕ್ಕೆ ವ...ರ್ಗಾಯಿಸಿರುವುದರಿಂದಲೂ ಮತ್ತು ಸೆಕ್ಯೂ...ಟಿಗಳ ಸಹಾಯದಿಂದ ಶಸ್ತ್ರಾಸ್ತ್ರಗಳನ್ನು ...ಕ್ರಮವಾಗಿ ಪರದೇಶಗಳಿಂದ ಕೊಳ್ಳುತ್ತಿ...ರುವುದರಿಂದಲೂ ಆ ೧೦೦ ಸೆಕ್ಯೂರಿಟಿಗಳ ...ಮೇಲೆ ಪ್ರತಿಬಂಧಕ ಹಾಕಲಾಗಿದೆಯೆಂದು ...ಳಿಸಲಾಗಿದೆ.

ನಿಜಾಂ ಸೈನ್ಯಕ್ಕೆ ಹೊರಗಿ...ನವರನ್ನು ಸೇರಿಸುವ ಪ್ರಯತ್ನ

ಸಿಕಂದರಾಬಾದಿನಿಂದ ಬೆಂಗಳೂರಿಗೆ ಪ್ರ...ಯಾಣ ಮಾಡುತ್ತಿದ್ದ ೪ ಜನ ಮುಸ್ಲಿಮ...ರನ್ನು ಕನೋಲ್ ರೈಲ್ವೆ ನಿಲ್ದಾಣದಲ್ಲಿ ದ...ಸ್ತಗಿರಿ ಮಾಡಲಾಯಿತೆಂದೂ, ಅವರುಗಳು ...ನಿಜಾಮರ ಸೈನ್ಯಕ್ಕೆ ಹೊರಗಿನವರನ್ನು ಸೇ...ರಿಸಿಕೊಳ್ಳುವ ಏಜೆಂಟರೆಂದೂ ಹೇಳಲಾ...ಗಿದೆ

ಬಡ ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯ

ಮೈಸೂರು ೨

ಕಳೆದ ಸಾಲಿನಲ್ಲಿ ಪೌರಸಭೆಯಿಂದ ರಾಜಧಾನಿಯ ಹೈಸ್ಕೂಲು ಮತ್ತು ಕಾಲೇಜು ತರಗತಿಗಳಲ್ಲಿ ಓದುವ ಬಡವಿದ್ಯಾರ್ಥಿಗಳಿಗೆ ಒದಗಿಸಿ ಕೊಡುತ್ತಿದ್ದ ಉಚಿತ ಭೋಜನ ಸೌಲಭ್ಯವನ್ನು ಈ ವರ್ಷವೂ ಮುಂದುವರಿಸಬೇಕೆಂದು ನಿಶ್ಚಯಿಸಿರುವುದರಿಂದ ಬಡ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಪೌರಸಭೆಯ ನೋಟೀಸ್ ಬೋರ್ಡಿನಲ್ಲಿ ನಮೂದಿಸಿರುವ ಫಾರಂನಂತೆ ಭರ್ತಿಮಾಡಿ ಇದೇ ೧೫ ನೇ ತಾ॥ ಒಳಗಾಗಿ ಅಧ್ಯಕ್ಷರಿಗೆ ತಲುಪಿಸಬೇಕೆಂದು ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ

ಗಾಯಿತ್ರಿ ರೇಡಿಯೋ ಸಂಸ್ಥೆ

ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿ ಶ್ರೀ ಗಾಯಿತ್ರೀ ರೇಡಿಯೋ ಕಾರ್ಪೋರೇಷನ್ ಎಂಬ ಆ ಗಡಿಯನ್ನು ಶ್ರೀ ಎಸ್ ದೇವರಾಜೇ ಅರಸಿನವರು ನಿನ್ನೆಯಿಂದ ತೆರೆದಿರುತ್ತಾರೆ

ಸ್ಥಾನ ಬದ್ಧರ ಕುಟುಂಬದವರಿಗೆ ಪರಿಹಾರ ಸಾಲದು

ಮೈಸೂರು ಸಾರ್ವಜನಿಕ ರಕ್ಷಣಾ ಶಾಸನ ರೀತ್ಯಾ ಬಂಧಿತರಾಗಿರುವವರ ಕುಟುಂಬದವರಿಗೆ ಪರಿಹಾರ ದ್ರವ್ಯವನ್ನು ಸರ್ಕಾರದವರು ಕೊಡುತ್ತಿರುವ ಬಗ್ಗೆ ಬಂಧನದಲ್ಲಿರುವ ಶ್ರೀ ಎಂ ಎಸ್ ರಾಮರಾಯರ ಪತ್ನಿ ಶ್ರೀಮತಿ ಗೌರಮ್ಮನವರು ಒಂದು ಹೇಳಿಕೆಯನ್ನಿತ್ತು ಈಗ ಕೊಡುತ್ತಿರುವ ೩೦ ರೂ.ಗಳು ಅತಿ ಕಡಿಮೆಯೆಂದೂ, ಅದನ್ನು ೬೦ ರೂ.ಗಳಿಗೆ ಹೆಚ್ಚಿಸಬೇಕೆಂದೂ ತಿಳಿಸಿರುತ್ತಾರೆ. ಬಂಧಿತರಿಗೆ ಸುಲಭವಾಗಿ ಪೆರೋಲ್ ಸಿಕ್ಕುವಂತೆ ಏರ್ಪಡಿಸಬೇಕೆಂದೂ ಮತ್ತು ಶಿವಮೊಗ್ಗ ಜೈಲಿನಲ್ಲಿರುವ ಅವರುಗಳನ್ನು ಭೇಟಿ ಮಾಡಲು ಅವರ ಬಂಧುಗಳಿಗೆ ಕಷ್ಟವಾಗುವುದರಿಂದ ಎಲ್ಲರನ್ನೂ ಬೆಂಗಳೂರಿನ ಸೆಂಟ್ರಲ್ ಜೈಲಿಗೇ ವರ್ಗಾಯಿಸಬೇಕೆಂದೂ ಅವರು ಕೋರಿರುತ್ತಾರೆ.

ರಾತ್ರಿ ೧ ಗಂಟೆ ಮೇಲೆ ಸಿನಿಮಾ ಇರಕೂಡದು

ಮಂಗಳೂರಿನ ಸಿನಿಮಾ ಮಂದಿರಗಳು ರಾತ್ರಿ ೧ ಗಂಟೆಯ ಮೇಲೆ ತೆರೆದಿರಕೂಡದೆಂದು ಅಲ್ಲಿನ ಪೋಲೀಸ್ ಕಮೀಷನರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ

ಕೋಮುವಾರು ರಾಜಕೀಯ ಸಂಸ್ಥೆಗಳಿಗೆ ಪ್ರತಿಬಂಧಕ

ಶಾಸನ ಸಭೆಯಲ್ಲಿ ನಿರ್ಣಯ

ಸ್ವಂ ಸು.ಫೋ॥] ಬೆಂಗಳೂರು ೨

ನ್ಯಾಯವಿಧಾಯಕ ಸಭೆಯಲ್ಲಿ ನಿನ್ನೆ ದಿನ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಮಂಡಿಸಿದ ಸಗೋತ್ರ ವಿವಾಹ ಮಸೂದೆಯ ಮೇಲೆ ಧೀರ್ಘ ಚರ್ಚೆ ನಡೆದು ಅದು ಅಂಗೀಕೃತವಾಯಿತು. ಶ್ರೀ ಎಸ್ ಕೃಷ್ಣಸ್ವಾಮಿರಾಯರು ಮಾತ್ರ ಅದನ್ನು ವಿರೋಧಿಸಿದರು

ಜಿಲ್ಲಾ ಬೋರ್ಡು ಚುನಾವಣೆ ತಕರಾರು ಸಂಬಂಧದಲ್ಲಿ ಜಿಲ್ಲಾಧಿಕಾರಿಗಳ ಬದಲು ಹೈಕೋರ್ಟಿಗೆ ಅಪೀಲು ಹಾಕಿಕೊಳ್ಳುವ ಅವಕಾಶವನ್ನು ಕಲ್ಪಿಸುವ ಜಿಲ್ಲಾ ಬೋರ್ಡುಗಳ ತಿದ್ದುಪಡಿ ಮಸೂದೆಯೂ ಅಂಗೀಕರಿಸಲ್ಪಟ್ಟಿತು

ಸಂಸ್ಥಾನದಲ್ಲಿ ಕೋಮುವಾರು ರಾಜಕೀಯ ಸಂಸ್ಥೆಗಳಿರಕೂಡದೆಂದೂ, ಅವುಗಳನ್ನು ರದ್ದುಮಾಡಲು ಸರ್ಕಾರವು ಶಾಸನವನ್ನು ಜಾರಿಗೆ ತರಬೇಕೆಂದೂ ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್ಯರು ಒಂದು ನಿರ್ಣಯವನ್ನು ಮಂಡಿಸಿದರು

ಜನಾಬ್ ಸಯ್ಯದ್ ಅಬ್ದುಲ್ ರಹಿಮಾನ್ ಮಹಮದ್ ಅಲೀಂ ಮೊದಲಾದ ಮುಸ್ಲಿಂ ಸದಸ್ಯರು ಅದನ್ನು ವಿರೋಧಿಸಿ ಇದರಿಂದ ಅಲ್ಪ ಸಂಖ್ಯಾತರ ಹಿತಕ್ಕೆ ಧಕ್ಕೆ ಬರುವುದೆಂದು ತಿಳಿಸಿದರು

ಗೋಲ್ಕೊಂಡ ಕೋಟೆಯಲ್ಲಿ ನಿಜಾಮರ ಶಸ್ತ್ರ ಸಂಗ್ರಹ

ಹೈದರಾಬಾದಿಗೆ ಹೊರಗಿನಿಂದ ಶಸ್ತ್ರಾಸ್ತ್ರಗಳು ವಿಮಾನದಲ್ಲಿ ಸರಬರಾಜಾಗುತ್ತಿಲ್ಲವೆಂದು ಅಲ್ಲಿನ ಸರ್ಕಾರದವರು ತಿಳಿಸಿದ್ದರೂ, ಬದರಿಯಲ್ಲಿರುವ ಹಾಕಿಮ್‌ಪೇಟೆ ವಿಮಾನ ನಿಲ್ದಾಣಕ್ಕೆ ಕಳೆದ ತಿಂಗಳು ೩ ರಿಂದ ೧೪ ನೇ ತಾ॥ ವರೆಗೆ ಅಸ್ತ್ರಗಳನ್ನು ತುಂಬಿದ ೬ ವಿಮಾನಗಳು ಸಿಂಧ್‌ನಿಂದ ಬಂದವೆಂದೂ, ಶಸ್ತ್ರಗಳನ್ನು ಲಾರಿಗಳ ಮೂಲಕ ಗೋಲ್ಕೊಂಡ ಕೋಟೆಗೆ ರವಾನಿಸಲಾಯಿತೆಂದೂ ಹೇಳಲಾಗಿದೆ

ಎ ಕ್ಲಾಸಿನವರಿಗೆ ಗೋಧಿ ಖೋತಾ

ಇದೇ ೧ ನೇ ತಾರೀಖಿನಿಂದ ಎ ತರಗತಿಯವರಿಗೆ ಗೋಧಿಯನ್ನು ವಿತರಿಸುವ ದ ಎರಡು ಔನ್ಸಿಗೆ ಕಡಿಮೆ ಮಾಡಲಾಗಿದೆಯೆಂದು ಸರ್ಕಾರದ ಆಜ್ಞೆಯಾಗಿದೆ

ವೃದ್ಧರಾದ ಮತ್ತು ಅಂಗವಿಕಲರಾದ ಭಿಕ್ಷುಕರಿಗೆ ಸಹಾನುಭೂತಿ ಇಲ್ಲ

ಭಿಕ್ಷುಕರ ವಸತಿ ಆರಂಭೋತ್ಸವದಲ್ಲಿ ಪ್ರಭುಗಳ ಭಾಷಣ

ಬೆಂಗಳೂರು ೨

ಬೆಂಗಳೂರು-ಮಾಗಡಿ ರಸ್ತೆಯಲ್ಲಿರುವ ಭಿಕ್ಷುಕರ ಕೇಂದ್ರದ ಆರಂಭೋತ್ಸವವನ್ನು ನಿನ್ನೆ ಸಂಜೆ ಶ್ರೀಮನ್ಮಹಾರಾಜರವರು ನೆರವೇರಿಸಿದರು ದೃಢಕಾಯರಾದ ಜನರು ಭಿಕ್ಷುಕರು ಕೆಲಸ ಮಾಡದೆ ಭಿಕ್ಷೆ ಬೇಡುವುದೇ ಲಾಭಕರವೆಂದು ತಿಳಿದಿದ್ದಾರೆ ಅಂತಹವರಿಗೆ ಯಾವ ಸಹಾನುಭೂತಿಯನ್ನೂ ತೋರಿಸಲಾಗದು, ಅವರನ್ನು ಕಠಿಣ ನಿಯಮಗಳಿಗೆ ಗುರಿಪಡಿಸಬೇಕು-ಎಂದು ಅವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದರು

ಶ್ರೀಮನ್ಮಹಾರಾಜರವರು ನಿನ್ನೆ ಧಿಕ್ಷ ಮಾಗಡಿಗೆ ಭೇಟಿ ಕೊಟ್ಟು ಅಲ್ಲಿ ಆಸ್ಪತ್ರೆಯ ಕಟ್ಟಡದ ಶಂಕು ಸ್ಥಾಪನೆಯನ್ನು ನೆರವೇರಿಸಿದರು.

ಬೆಳಗುಂಬದ ಗ್ರಾಮ ಸೇವಾಶ್ರಮಕ್ಕೆ ಪ್ರಭುಗಳು ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿ ಅದರ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು

ಸಂಸ್ಥಾನಗಳ ಪಾರ್ಲಿಮೆಂಟರಿ ಚಟುವಟಿಕೆಗಳ ಮೇಲೆ ಹತೋಟಿ

ಸಂಸ್ಥಾನಗಳ ಕಾಂಗ್ರೆಸ್ ಪಾರ್ಲಿಮೆಂಟರಿ ...ಗಳ ಮೇಲೆ ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಹತೋಟಿಯಿರಬೇಕೆಂದೂ, ಅವುಗಳ ಕೆಲಸ ಕಾರ್ಯಗಳನ್ನು ಪರಿಶೀಲಿಸಲು ಒಂದು ಪ್ರತ್ಯೇಕ ಉಪಸಮಿತಿಯನ್ನು ರಚಿಸಬೇಕೆಂದೂ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನಿರ್ಧರಿಸಿರುತ್ತಾರೆ

ಕಾಂಗ್ರೆಸ್ಸಾ ಅಧಿವೇಶನ ಜಯಪುರದಲ್ಲಿ

ಮುಂದಿನ ಕಾಂಗ್ರೆಸ್ ಮಹಾ ಅಧಿವೇಶನವನ್ನು ಡಿಸೆಂಬರ್ ತಿಂಗಳಿನ ಮೊದಲನೆಯ ವಾರದಲ್ಲಿ ಜಯಪುರದಲ್ಲಿ ನಡೆಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿರ್ಧರಿಸಿದೆ.

ಹೈದರಾಬಾದ್ ಷರತ್ತುಗಳ ರದ್ದು ?

ಹೈದರಾಬಾದ್ ಮತ್ತು ಭಾರತದ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರದವರು ಇತ್ತ ಎಲ್ಲ ಒಪ್ಪಂದದ ಷರತ್ತುಗಳನ್ನೂ ಹಿಂದಕ್ಕೆ ತೆಗೆದು ಕೊಳ್ಳುವರೆಂದು ತಿಳಿದುಬಂದಿದೆ.

ಆಕಾಶವಾಣಿ ಆಡಳಿತ ಸಮಿತಿ

ಪುನರ್ರಚಿತವಾದ ಮೈಸೂರು ಆಡಳಿತ ಸಮಿತಿಗೆ ಡಾ॥ ಎಂ ವಿ ಗೋಪಾಲಸ್ವಾಮಿಯವರನ್ನು ಅಧ್ಯಕ್ಷರನ್ನಾಗಿಯೂ, ಮೈಸೂರು ಡಿ...ಸ್ಟ್ರಿಕ್ಟ್ , ಜಿಲ್ಲಾಧಿಕಾರಿಗಳು, ಶ್ರೀ ... ಬಿ ಬಂದೀಗೌಡ, ಕೆ. ಪಿ... , ಎಂ ಎಸ್ ನಂಜಪ್ಪ, ಎಸ್. ... ಸರ್ಕಾರದ ಅಫೀಸರ್ ... ಸದಸ್ಯರನ್ನಾಗಿಯೂ ನೇ...

ಬ್ರಹ್ಮಚಾರಿಗಳ ಸಂಘ

ಐರ್ಲೆಂಡಿನಲ್ಲಿ ರೋಸ್ ಕಾಮನ್ನಿನ ಬ್ರಹ್ಮಚಾರಿಗಳೆಲ್ಲರೂ ಒಂದಾಗಿ ಸೇರಿ ಒಂದು ಸಂಘವನ್ನು ಸ್ಥಾಪಿಸುತ್ತಾರೆಂದೂ ಅವರನ್ನು ಮದುವೆಯಾಗುವ ಹೆಣ್ಣಿಗೆ ಕಡೆಯವರಿಂದ ಬೇಕಾದ ಬಳುವಳಿಯ ದರವನ್ನು ನಿಗದಿ ಮಾಡಿರುವರೆಂದೂ ವರದಿಯಾಗಿದೆ. ೧೦ ಎಕರೆ ಜಮೀನು ಇರುವ ವರನಿಗೆ ೪೦೦ ಡಾಲರು ಮತ್ತು ೧೫ ರಿಂದ ೨೫ ಎಕರೆ ಜಮೀನುಳ್ಳವರಿಗೆ ೮೦೦ ಡಾಲರು ಬಳುವಳಿ ಕೊಡಬೇಕೆಂದು ನಿರ್ಧರಿಸಿದ್ದಾರೆ.

ಬೈಬಲ್ ಪುಸ್ತಕವಿಲ್ಲದೆ ವಿಚಾರಣೆ ನಿಂತುಹೋಯಿತು

ದೆಹಲಿಯಲ್ಲಿ ನಡೆಯುತ್ತಿರುವ ಮಹಾತ್ಮಾ ಕೊಲೆ ಮೊಕದ್ದಮೆಯಲ್ಲಿ ಮೊನ್ನೆ ದಿನ ಕ್ರೈಸ್ತ ಸಾಕ್ಷಿದಾರರೊಬ್ಬರ ವಿಚಾರಣೆ ಪ್ರಾರಂಭವಾದಾಗ ಅವರು ಪ್ರಮಾಣ ವಚನವನ್ನು ತೆಗೆದುಕೊಳ್ಳಲು ಅಗತ್ಯವಾದ ಬೈಬಲ್ ಪುಸ್ತಕವು ಕೋರ್ಟಿನಲ್ಲಿ ಇಲ್ಲದುದರಿಂದ ವಿಚಾರಣೆಯನ್ನು ಸ್ವಲ್ಪ ಕಾಲ ನಿಲ್ಲಿಸಬೇಕಾಯಿತೆಂದು ಹೇಳಲಾಗಿದೆ. ನಾಥೂರಾಂ ಗೋಡ್ಸೆಯು ತನ್ನನ್ನು ಇಟ್ಟಿರುವ ಜೈಲಿನಲ್ಲಿ ಬೈಬಲ್ ಇದೆಯೆಂದೂ, ಅದನ್ನು ತರಬಹುದೆಂದೂ ಹೇಳಿದನು. ಅದರ ಮೇಲೆ ಮಧ್ಯಾಹ್ನ ಸಾಕ್ಷಿಯ ವಿಚಾರಣೆ ನಡೆಸಬಹುದೆಂದು ನ್ಯಾಯಾಧೀಶರು ಹೇಳಿದರು.

ಹೆಂಡತಿ ಮಕ್ಕಳೊಂದಿಗೆ ಉಪಾಧ್ಯಾಯರ ಸತ್ಯಾಗ್ರಹ

ಕೋಲಾರದ ಹೈಸ್ಕೂಲಿನ ಮಾಜಿ ಉಪಾಧ್ಯಾಯರಾದ ಶ್ರೀ... ಅವರು ತಮಗೆ ಪೂರ್ತಿ ಸಂಬಳವನ್ನು ಕೊಟ್ಟಿಲ್ಲವೆಂದ ತಮ್ಮ ಹೆಂಡತಿ ಮಕ್ಕಳ ಸಮೇತ ಕಳೆದ ೨೮ ನೇ ತಾ॥ ನಿಂದ ಕಛೇರಿಯ ಮುಂದೆ ಸತ್ಯಾಗ್ರಹವನ್ನು ಕೈಗೊಂಡಿದ್ದಾರೆಂದು ವರದಿಯಾಗಿದೆ.

ವಿವಾಹ ಮಹೋತ್ಸವಗಳು

ನಿವೃತ್ತ ಡೆಪ್ಯೂಟಿ ಕಂಟ್ರೋಲರಾದ ಶ್ರೀ ಎಸ್. ರಾಘವಾಚಾರ್ಯರವರ ಪುತ್ರ ಚಿ॥ ಸೌ॥ ... ಯನ್ನು ಸೋಸಲೆಯ ಶ್ರೀ ಚಕ್ರವರ್ತಿ ಶ್ರೀನಿವಾಸಾಚಾರ್ಯರ ಪುತ್ರ ಶ್ರೀ ... ಸ್ವಾಮಿಯವರಿಗೆ.

ಸಬ್‌ಕೋರ್ಟಿನ ನಿವೃತ್ತ ರಿಜಿಸ್ಟ್ರಾರ್ ಶ್ರೀ ಎಂ. ಎಸ್. ಕೃಷ್ಣರಾಯರ ಪುತ್ರಿ ಚಿ॥ ಸೌ॥ ಸತ್ಯಾಬಾಯಿಯನ್ನು ನಿವೃತ್ತ ಸ್ಯಾನಿಟರಿ ಇನ್ಸ್‌ಪೆಕ್ಟರ್ ಶ್ರೀ ಗೋವಿಂದರಾವ್ ಪದಕಿಯವರ ಪುತ್ರ ಶ್ರೀ ಟಿ. ರಾಮಚಂದ್ರರಾಯರಿಗೂ,

ಆಕಾಶವಾಣಿಯ ಪ್ರೋಗ್ರಾಂ ಅಸಿಸ್ಟೆಂಟರಾದ ವಿದ್ವಾನ್ ಎ. ಲಿಂಗಪ್ಪನವರ ಪುತ್ರಿ ಚಿ॥ ಸೌ॥ ಚನ್ನಮ್ಮನನ್ನು ಶ್ರೀ ಎಚ್. ನಾಗಣ್ಣನವರ ಸಹೋದರ ಶ್ರೀ ಟಿ. ಎಸ್. ಬಸವರಾಜರವರಿಗೂ,

ನಿವೃತ್ತ ಅಮಲ್ದಾರ್ ಶ್ರೀ ಕಾಳರಾಯರ ಕೃಷ್ಣಮೂರ್ತಿ ರವರ ಮಕ್ಕಳು ಶ್ರೀ ಟಿ. ಕೆ. ಶಾಮರಾಯರ ಪುತ್ರಿ ಚಿ॥ ಸೌ॥ ಸ್ವರ್ಣಮ್ಮನನ್ನು ಭಾವಾನಿ ಧರ್ಮದ ಶ್ರೀ ಶ್ರೀನಿವಾಸ ಶಾಸ್ತ್ರಿಗಳವರ ಪುತ್ರ ಶ್ರೀ ಬಿ. ಶಿವ ಲಯ್ಯರವರಿಗೂ ಕೊಟ್ಟು ವಿವಾಹ ಮಹೋತ್ಸವಗಳು ನಿನ್ನೆ ಜರುಗಿದವು.

ನಾಗಪುರ ವಿಶ್ವವಿದ್ಯಾಲಯದ ಮೇಲೆ ದಾವಾ

ರಾವ್‌ಬಹದ್ದೂರ್ ಡಿ. ಲಕ್ಷ್ಮೀನಾರಾಯಣ್ ಎಂಬ ಶ್ರೀಮಂತರು ನಾಗಪುರದ ವಿಶ್ವವಿದ್ಯಾಲಯಕ್ಕೆ ದಾನಮಾಡಿದ್ದ ೬೦ ಲಕ್ಷ ರೂ ಪೈಕಿ ಅರ್ಧ ಭಾಗವು ತಮಗೆ ಬರಬೇಕೆಂದು ಸಾಗರ್ ವಿಶ್ವವಿದ್ಯಾಲಯದವರು ದಾವಾ ಹೂಡಿರುವರೆಂದು ಹೇಳಲಾಗಿದೆ. ಮಧ್ಯಪ್ರಾಂತ್ಯ ಮತ್ತು ಬೀರಾರುಗಳನ್ನು ಈಗ ಪ್ರತ್ಯೇಕವಾಗಿ ವಿಭಾಗಿಸಿರುವುದರಿಂದ ಎರಡನ್ನೂ ನೋಡಲು ಒಂದೇ ಆಗಿದ್ದ ನಾಗಪುರ ವಿದ್ಯಾಲಯದಿಂದ ತಮಗೆ ಅರ್ಧ ಭಾಗ ಹಣ ಬರಬೇಕೆಂದು ಅವರು ವಾದಿಸಿದ್ದಾರೆ.

ಮಹಿಳಾ ಆರೋಗ್ಯಾಧಿಕಾರಿ

ಮದರಾಸ್ ಸರ್ಕಾರದವರು ಪ್ರಥಮ ಬಾರಿ ಕು॥ ಆರ್. ವರ್ಗೀಸ್ ಎಂಬ ಮಹಿಳೆಯನ್ನು ಆರೋಗ್ಯಾಧಿಕಾರಿಗಳಾಗಿ ನೇಮಿಸಿ, ವಿಲ್ಲೂರು ಪೌರಸಭೆಗೆ ವರ್ಗಾಯಿಸಿದ್ದಾರೆ.

ಧನ ಸಹಾಯ

ಮೈಸೂರು ಹಿಂದೀ ಪ್ರಚಾರ ಸಭೆಯ ತುಳಸೀ ಪುಸ್ತಕಾಲಯಕ್ಕೆ ಜಯರಾ ಮುಂಡಲಿಯವರು ೩೦ ರೂ. ಗಳನ್ನು ದಾನ ಮಾಡಿರುತ್ತಾರೆ.

Edited printed and published by
A. R. Nagarajan at the Sadhvi Press
D. Subbaiah Road Mysore

ಪ್ರಭಾ ಪಿಕ್ಚರ್ ಹೌಸ್

ಖಿಡ್‌ಕಿ ಖಿಡ್‌ಕಿ

2-7-48 ರಿಂದ ಯಶಸ್ವಿಯಾದ 7 ನೇ ವಾರ

ಪಾತ್ರ:- ರೆಹನ, ಮನ್ಮೋಹನ ಕೃಷ್ಣ ಮತ್ತು ವಿ. ಹೆಚ್. ದೇಸಾಯ್

ಮುಂದಿನ ಬದಲಾವಣೆ : : ಪಿ. ಆರ್ ಪ್ರೊಡಕ್ಷನ್ಸ್‌ರವರ

ಅರೇಬಿಯನ್ ನೈಟ್ಸ್

(ಹಿಂದಿ)

ಸರಸ್ವತಿ ಸಂಗೀತ ಸಮಾಜ

(ರಿ) ಮೈಸೂರು

3-7-1948

ಬರ್ಲಿನ್ ನಗರದ ಮೇಲೆ ರಷ್ಯವು ಹಾಕಿರುವ ಅಡಚಣೆಗಳಿಂದ ಅಲ್ಲಿಗೆ ಆಹಾರ ಪದಾರ್ಥಗಳನ್ನು ವಿಮಾನಗಳ ಮೂಲಕ ಬ್ರಿಟನ್ನು ಕಳುಹಿಸುತ್ತಿದೆಯೆಂದೂ, ಇದಕ್ಕಾಗಿ ದಿನಕ್ಕೆ ೬ ಸಾವಿರ ಪೌಂಡುಗಳು ಖರ್ಚಾಗುತ್ತಿದೆಯೆಂದೂ ಹೇಳಲಾಗಿದೆ.

ನಗರ ಕಾಂಗ್ರೆಸ್ ವಾರ್ಡ್ ಸಮಿತಿಗಳ ಚುನಾವಣಾ ಪಟ್ಟಿ

ಮೈಸೂರು ೬

ಮೈಸೂರು ನಗರ ಕಾಂಗ್ರೆಸ್ ವಾರ್ಡ್ ಸಮಿತಿಗಳ ಕಾರ್ಯ ನಿರ್ವಾಹಕ ಮಂಡಲಿಯ ಚುನಾವಣಾ ವೇಳಾ ಪಟ್ಟಿಯನ್ನು ಚುನಾವಣಾಧಿಕಾರಿಗಳಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ಪ್ರಕಟಿಸುತ್ತಾರೆ 'ಇದೇ ೧೦ ನೇ ತಾ॥ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಸದಸ್ಯರ ಹೆಸರುಗಳನ್ನು ಸೇರಿಸಲು ಅರ್ಜಿ ಹಾಕುವ ದಿನ, ೧೧ ನೇ ತಾ॥ ಅರ್ಜಿಗಳ ಪರಿಶೀಲನೆ, ೧೩ ನೇ ತಾ॥ ಸದಸ್ಯರ ಕೊನೆಯ ಪಟ್ಟಿ. ೧೭ ನೇ ತಾ॥ ವಾರ್ಡ್ ಕಾಂಗ್ರೆಸ್ ಕಾರ್ಯ ನಿರ್ವಾಹಕ ಸಮಿತಿಯ ಚುನಾವಣೆಗೆ ಉಮೇದುವಾರರ ಅರ್ಜಿ ಸ್ವೀಕಾರ ೧೭ ನೇ ತಾ॥ ಅರ್ಜಿಗಳ ಪರಿಶೀಲನೆ, ೨೨ ನೇ ತಾ॥ ಚುನಾವಣೆ ಮತ್ತು ಫಲಿತಾಂಶಗಳ ಪ್ರಕಟಣೆ.

ಕಾಶ್ಮೀರದ ಪರಿಸ್ಥಿತಿ

ಕಾಶ್ಮೀರದ ರಜೋರಿ ಪ್ರದೇಶದಲ್ಲಿ ಭಾರತ ಸೈನಿಕರು ಧಾಳಿಕಾರರನ್ನು ಹಿಮ್ಮೆಟ್ಟಿಸುತ್ತಿದ್ದಾರೆ. ಆ ಗ ದೇಶದಲ್ಲಿ ಧಾಳಿಕಾರರು ಸುಮಾರು ೧೫೦ ಸೆಲ್ಲುಗಳನ್ನು ಸುರಿಸಿದರೆಂದು ವರದಿಯಾಗಿದೆ. ಶತ್ರುಗಳು ಉಪಯೋಗಿಸುತ್ತಿದ್ದ ಅನೇಕ ಟ್ರಕ್ಕುಗಳನ್ನು ನಾಶಪಡಿಸಲಾಯಿತು ೧೦೦ ಕ್ಕು ಂದಿ ಧಾಳಿಕಾರರನ್ನು ಸೆರೆ ಹಿಡಿಯಲಾಯಿತು; ೩೪ ಮಂದಿ ಹತರಾದರು

ಜಮ್ಮು-ಕಾಶ್ಮೀರದ ಜಕೋಟಿ ಕ್ಷೇತ್ರದಲ್ಲಿ ಪಾಕೀಸ್ತಾನದ ಸೈನಿಕರು ೨೫ ಪೌಂಡು ಗನ್ನುಗಳನ್ನು ಪ್ರಥಮ ಬಾರಿ ಉಪಯೋಗಿಸುತ್ತಿದ್ದಾರೆಂದು ಹೇಳಲಾಗಿದೆ.

೬೦ ಸಾವಿರ ರೂ. ವಸ್ತುಗಳ ಕಳುವು

ಬೆಂಗಳೂರು ವಿಶ್ವೇಶ್ವರಪುರದ ಸಜ್ಜನರಾಯ ದೇವಾಲಯದ ಬಳಿ ಒಬ್ಬರು ಸಿರಾಸ್ತೆದಾರರಿಗೆ ಸೇರಿದ ಮನೆಯೊಂದರಲ್ಲಿ ಮೊನ್ನೆ ರಾತ್ರಿ ಕಿಟಕಿಯನ್ನು ಮುರಿದು ಕಳ್ಳರು ೬೦-೭೦ ಸಾವಿರ ರೂ ಬೆಲೆಬಾಳುವ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿರುವರೆಂದು ವರದಿಯಾಗಿದೆ

... ಪುರಸಭೆಯ ಅಡಳಿತ ಸಭೆಯ ... ೧೯೪೮-೪೯ ನೇ ಸಾಲಿಗೆ ಶ್ರೀ ವಿ ಎಸ್ ಚಂದಾವರ್ಕರ ... ಚುನಾಯಿತ ... ಸರ್ ಸಿ ... ರಾ॥ ಆರ್ ಎಸ್ ... ನೇಮಿಸ ... ನಿರ್ಣಯಿಸ ...

ಭೂಕಂಪದಿಂದ ಮಗ್ಗಗಳ ನಾಶ

ಜಪಾನಿನಲ್ಲಿ ಇತ್ತೀಚೆಗೆ ಸಂಭವಿಸಿದ ಭಾರಿ ಭೂಕಂಪದಿಂದ ಅಲ್ಲಿನ ಮಗ್ಗಗಳು ... ನಾಶವಾದುವೆಂದು ಹೇಳಲಾಗಿದೆ

ಸಾರಥಿಯಿಲ್ಲದ ರೈಲಿನ ಅಪಘಾತ

೧೦ ಲಕ್ಷ ರೂ. ನಷ್ಟ

ಡ್ರೈವರಿಲ್ಲದ ರೈಲು ಗಾಡಿಯೊಂದು ಲೋದ್ಧ ನಿಲ್ದಾಣದಲ್ಲಿ ಅಪಘಾತಕ್ಕೆ ಒಳಗಾಗಿ ಅಲ್ಲಿನ ಸಾಲಿಮಾರ್ ಹಾರಿಕ ಕಟ್ಟಡ ... ನಷ್ಟವುಂಟಾಗಿದೆಯೆಂದು ವರದಿಯಾಗಿದೆ. ಮೊನ್ನೆ ದಿನ ೨೫ ವ್ಯಾಗನ್ನುಗಳು ಮತ್ತು ಒಂದು ಪೆಟ್ರೋಲು ಟ್ಯಾಂಕಿನ ಸಮೇತ ಧನಬಾದ್ ನಿಲ್ದಾಣದಿಂದ ಹೊರಟ ರೈಲಿನ ಎಂಜಿನ್ನಿಗೆ ಬ್ರೇಕುಗಳು ಸರಿಯಾಗಿರದೆ ಅದನ್ನು ನಿಲ್ಲಿಸಲು ಅಸಾಧ್ಯವಾಗಿ ಡ್ರೈವರನೂ ಮತ್ತು ಇತರ ಕೆಲಸಗಾರರೂ ಅದರಿಂದ ಹಾರಿ ಅಪಘಾತದಿಂದ ತಪ್ಪಿಸಿಕೊಂಡರೆಂದೂ, ಅನಂತರ ಆ ರೈಲು ಲೋದ್ಧ ನಿಲ್ದಾಣದ ಸೈಡಿಂಗಿಗೆ ನುಗ್ಗಿ ಹೊಡೆಯಿತೆಂದೂ, ಅದರಿಂದ ಪೆಟ್ರೋಲಿಗೆ ಬೆಂಕಿ ಹತ್ತಿಕೊಂಡು ಅನಾಹುತವಾಯಿತೆಂದೂ ಹೇಳಲಾಗಿದೆ ಈ ಅಪಘಾತದಿಂದ ೧೦ ಲಕ್ಷ ರೂ ಗಳಷ್ಟು ನಷ್ಟ ಸಂಭವಿಸಿದೆಯೆಂದು ತಿಳಿದುಬಂದಿದೆ

... ಲಾರ್ಡ್ ... ಬಲಾತ್ಕಾರದಿಂದ ... ಗಲಭೆಗಳು ನಡೆದ ... ಅವರೇ ಜವಾಬ್ದಾರರು ... ಸಕಿನ ಸಚಿ ... ಮುಸಮುದ ... ಅವರ ...

ಗೋವಧೆ ನಿಷೇಧಿಸುವ ಮಸೂದೆ

ಶಾಸನ ಸಭೆಯಲ್ಲಿ ಅಂಗೀಕಾರ

ಸ್ವಂ ವಾ ಪ್ರೋ] ಬೆಂಗಳೂರು ೬

ಕಳೆದ ೨ ದಿನಗಳಿಂದಲೂ ನಡೆಯುತ್ತಿದ್ದ ನ್ಯಾಯವಿಧಾಯಕ ಸಭೆಯ ಅಧಿವೇಶನವು ನಿನ್ನೆ ಸಂಜೆ ೮ ಗಂಟೆಗೆ ಮುಕ್ತಾಯಗೊಂಡಿತು.

ಕೆಲವು ನಗರಗಳಲ್ಲಿರುವ ರೇಷನಿಂಗ್ ಪದ್ಧತಿಯು ಈ ವರ್ಷದ ಅಂತ್ಯದವರೆವಿಗೂ ಜಾರಿಯಲ್ಲಿರುವುದು. ಅನಂತರ ಅದನ್ನು ... ಮಾಡಲಾಗುವುದೆಂದೂ ಶ್ರೀ ಕೆ ಸಿ ರೆಡ್ಡಿಯವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಸಂಸ್ಥಾನದಲ್ಲಿ ಒಟ್ಟು ಬೆಲೆಯು ... ವಾಗಿ ... ರವು ... ದಗಳನ್ನು ಒಂದಿದೆಯೆಂದೂ ... ಸೂಕ್ತ ... ೨೧ನೇ ತಾ|| ಒಂದು ಸಮ್ಮೇಳನವನ್ನು ಕರೆದಿರುವರೆಂದೂ, ಅದರಲ್ಲಿ ಮೈಸೂರು ಸರ್ಕಾರದವರು ಭಾಗವಹಿಸುವರೆಂದೂ ಶ್ರೀ ಕೆ ಸಿ ರೆಡ್ಡಿಯವರು ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಶಿವಮೊಗ್ಗದಲ್ಲಿ ಒಂದು ವ್ಯವಸಾಯ ಕಾಲೇಜನ್ನು ಸ್ಥಾಪಿಸಬೇಕೆಂದು ಅಲ್ಲಿನ ಜನಗಳಿಂದ ಅನೇಕ ಅರ್ಜಿಗಳು ಬಂದಿವೆಯೆಂದೂ, ಆ ಬಗ್ಗೆ ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿರುವರೆಂದೂ ಶ್ರೀ ಕಡಿದಾಳ್ ಮಂಜಪ್ಪನವರ ಪ್ರಶ್ನೆಗೆ ಶ್ರೀ ಕೆ ಟಿ ಸಿದ್ದಯ್ಯನವರು ಉತ್ತರ ಕೊಟ್ಟರು. ಈಗ ಹಾಲಿ ಇರುವ ವ್ಯವಸಾಯ ಕಾಲೇಜನ್ನೇ ಶಿವಮೊಗ್ಗದಲ್ಲಿ ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಲಾಗುತ್ತಿದೆಯೆಂದು ಉಪಪ್ರಶ್ನೆಯೊಂದಕ್ಕೆ ತಿಳಿಸಲಾಯಿತು.

ಕಳೆದ ವರ್ಷ ಪುನರ್ವಿಮರ್ಶನ ಸಂಬಳ ಸಮಿತಿಯವರು ಮಾಡಿರುವ ಸಲಹೆಗಳನ್ನು ಸರ್ಕಾರದವರು ಜಾರಿಗೆ ತಂದಿರುವುದರಿಂದ ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಅನ್ಯಾಯವಾಗಿಲ್ಲವೇ ಎಂಬ ಶ್ರೀ ಕೆ ಆರ್ ಶ್ರೀನಿವಾಸರವರ ಪ್ರಶ್ನೆಗೆ ಆ ರೀತಿ ಆಗಿಲ್ಲವೆಂದು ಸರ್ಕಾರದ ಉತ್ತರ ಬಂದಿತು.

ಸಂಸ್ಥಾನದಲ್ಲಿ ಗೋವಧೆಯನ್ನು ನಿಷೇಧಿಸುವ ಮಸೂದೆಯೊಂದನ್ನು ಶ್ರೀ ಕೆ ಟಿ ಸಿದ್ದಯ್ಯನವರು ಮಂಡಿಸಿದರು. ಜನಾಬ್ ... ಇವರುಗಳು ಅದನ್ನು ವಿರೋಧಿಸಿ, ಸರ್ಕಾರದ ಕಡೆಯಿಂದ ಇಂತಹ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದೂ, ಈ ಬಗ್ಗೆ ವಿಶೇಷ ಪ್ರಚಾರ ನಡೆಸಬೇಕೆಂದೂ, ... ಬಂ ...

ಸಂಸ್ಥಾನಕ್ಕೆ ರಾಜಾಜಿಯವರ ಭೇಟಿ

ಭಾರತ ಗವರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಚಾರ್ಯರು ಮುಂದಿನ ತಿಂಗಳು ಮೂರನೇ ವಾರದಲ್ಲಿ ಮೈಸೂರಿಗೆ ಭೇಟಿ ಕೊಡುವರೆಂದೂ, ಆ ಸಮಯದಲ್ಲಿ ಬೆಂಗಳೂರು ಮತ್ತು ಮೈಸೂರುಗಳಿಗೂ ಭೇಟಿ ಕೊಡಬಹುದೆಂದೂ ಹೇಳಲಾಗಿದೆ.

ವಿದ್ಯಾರ್ಥಿಗೆ ಬಹುಮಾನ

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ದಳವಾಯಿ ಹೈಸ್ಕೂಲಿಗೆ ಮೊದಲನೇ ಸ್ಥಾನವನ್ನು ಪಡೆದ ಎ ಆರ್ ಗುಂಡಪ್ಪನವರಿಗೆ ರಾಜಧಾನಿಯ ಯೋಗಾನರಸಿಂಹ ಮೋಟಾರ್ ಸರ್ವಿಸ್ ಮಾಲೀಕರಾದ ಶ್ರೀ ಕೆ ನಾರಾಯಣರಾಯರು ೨೦ ರೂ ಮತ್ತು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಸಿ ನಂಜುಂಡಯ್ಯನವರು ೧೦ ರೂ ಗಳನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

...ದು ಸವಿತಿಯೊ ದನ ... ನೇಮಿಸಬೇಕೆಂದು ... ಆದರೂ ಎಲ್ಲದೆ ಈ ಬಗ್ಗೆ ಭಾರತ ಸರ್ಕಾರದವರು ಅನುಸರಿಸುತ್ತಿರುವ ನೀತಿಯೇನೆಂಬುದನ್ನು ಇವರು ನೋಡಬೇಕೆಂದೂ ಅವರು ಸೂಚಿಸಿದರು. ಜನಾಬ್ ಓ ಎಸ್ ಎ ಷರೀಫ್ ಮತ್ತು ಮಿ|| ಥಿಯೋಬಾಲ್ಡ್ ರವರುಗಳು ಅದನ್ನು ವಿರೋಧಿಸಿದರು. ಮಸೂದೆಯು ಬಹುಮತದಿಂದ ಅಂಗೀಕಾರವಾಯಿತು.

ಲಂಚ ರುಷುವತ್ತು ವಿರೋಧ ಮಸೂದೆ, ತಿಳಿ ... ಮತ್ತು ದಾಸ್ತಾನು ವಿರೋಧ ಮಸೂದೆಗಳು ಅಂಗೀಕೃತವಾದುವು. ಮೈಸೂರು ನೌಕರರವಿಮೆ ಮಸೂದೆ, ಕನಿಷ್ಠ ವೇತನ ಮಸೂದೆಗಳ ಸೆಲೆಕ್ಟ್ ಸಮಿತಿಗೆ ಹಾಕಲ್ಪಟ್ಟವು.

ಶ್ರೀ ಗಾಯತ್ರಿ ಟಾಕೀಸ್

ತಾ|| 6-7-48 ರಿಂದ

೩ ದಿನಗಳು ಮಾತ್ರ

20 th 's

Invisible wall

(ಇನ್‌ವಿಸಿಬಲ್ ವಾಲ್)

Latest First-run Picture

Next Change — Warner s Wild, Wicked, Thundering Drama CHEYENNE

Edited printed and published by ... Nagaraja at the Sadhvi Press D Subbaiah Road Mysore

ಬೊಂಬಾಯಿನಲ್ಲಿ ಶಾಂತ ಪರಿಸ್ಥಿತಿ

ಕಳೆದ ಮೂರು ದಿನಗಳಿಂದ ಬೊಂಬಾಯಿನಲ್ಲಿ ನಡೆದ ಕೋಮುವಾರು ಗಲಭೆ ಸಂಬಂಧದಲ್ಲಿ ೪೭ ಜನಗಳನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಈಗ ಪರಿಸ್ಥಿತಿಯು ಶಾಂತಯುತವಾಗಿದೆ.

ಸಿನಿಮಾ ಕೆಲಸಗಾರರ ಮುಷ್ಕರ

ಮದರಾಸಿನ ಸಿನಿಮಾ ಚಿತ್ರಗಳ ತಯಾರಿಕಾ ಕೇಂದ್ರಗಳ ಒಟ್ಟು ೭೦೦ ಜನ ಕೆಲಸಗಾರರು ತಮಗೆ ಹೆಚ್ಚಿಗೆ ಸಂಬಳ ಕೊಡಬೇಕೆಂದು ನಿನ್ನೆಯಿಂದ ಮುಷ್ಕರ ಹೂಡಿದ್ದಾರೆ. ಲೇಬರ್ ಕಮೀಷನರ್ ಕಛೇರಿ ಮತ್ತು ಸಿನಿಮಾ ಕೇಂದ್ರಗಳ ಮುಂದೆಯೂ ಕೆಲವರು ಉಪವಾಸ ಮಾಡುತ್ತಿದ್ದಾರೆ.

ಗಡಿನಾಡು ಗಾಂಧಿಯವರ ಪುತ್ರರ ದಸ್ತಗಿರಿ

ಗಡಿನಾಡು ಪ್ರಾಂತ್ಯದ ಮಾಜಿ ಪ್ರಧಾನಿ ಡಾ|| ಖಾನ್ ಸಾಹೇಬರ ಪುತ್ರರಾದ ಖಾನ್ ಒಬೆದುಲ್ಲಾ ಖಾನ್ ಮತ್ತು ಗಡಿನಾಡು ಗಾಂಧಿಯವರ ಪುತ್ರ ಖಾನ್ ಅಬ್ದುಲ್ ಘನಿಖಾನ್ ರವರುಗಳನ್ನು ಪೇಷಾವರಿನಲ್ಲಿ ದಸ್ತಗಿರಿ ಮಾಡಲಾಗಿದೆ.

ಪಾಕೀಸ್ತಾನಕ್ಕೆ ಅಮೇರಿಕದಿಂದ ೧ ಕೋಟಿ ಡಾಲರುಗಳ ಸಾಲ

ಒಂದು ಕೋಟಿ ಡಾಲರುಗಳ ಸಾಲವನ್ನು ಅಮೇರಿಕವು ಪಾಕೀಸ್ತಾನಕ್ಕೆ ಕೊಟ್ಟಿದೆಯೆಂದೂ, ಇದರಿಂದ ವೈದ್ಯ ಸಾಮಗ್ರಿಗಳು ಮತ್ತು ಕೈಗಾರಿಕಾ ಮತ್ತು ವ್ಯವಸಾಯ ಯಂತ್ರಗಳನ್ನೂ ಪಾಕೀಸ್ತಾನವುಕೊಂಡುಕೊಳ್ಳುವುದೆಂದೂ ತಿಳಿದು ಬಂದಿದೆ.

ವಿದ್ಯಾಪೀಠದ ಜಾತ್ರೆ

ನಂಜನಗೂಡು ೬

ನಂಜನಗೂಡಿನ ... ಇರುವ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುವ ಜಾತ್ರೆಯ ಆರಂಭೋತ್ಸವವನ್ನು ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಇದೇ ೧೭ ನೇ ತಾ|| ಸಂಜೆ ೬ ಗಂಟೆಗೆ ನೆರವೇರಿಸುವರು. ಈ ಸಂಬಂಧದಲ್ಲಿ ಕಲಾವಸ್ತು ಪ್ರದರ್ಶನ, ಹಳ್ಳಿಗರ ಆಟದ ಸ್ಪರ್ಧೆ, ನಾಟಕ, ಭಾಷಣ ಮುಂತಾದುವುಗಳನ್ನು ಏರ್ಪಡಿಸಲಾಗಿದೆ. ಜಾತ್ರೆಯು ಎರಡು ದಿನಗಳು ನಡೆಯುವುದು.

ನಂಜನಗೂಡು ಟವುನ್ ಮುನಿಸಿಪಾಲಿಟಿ

ಪ್ರಸಿದ್ಧಪತ್ರಿಕೆ

ಗಳಲ ನೇ ... ಜುಲೈ ಮಾಹೆ ... ಪ್ರತಿ ಗುರುವಾರದ ದಿವಸ ನಂಜನಗೂಡು ಟವುನ್ ಜೇಗಿ ... ಸಂತೆ ನಡೆಸಲು ಏರ್ಪಡಿಸಲ್ಪಟ್ಟಿರುತ್ತೆ. ಸಂತೆ ಕೂಡುವ ಸ್ಥಳದಲ್ಲಿ ನೀರು ಮತ್ತು ನೆರಳಿನ ಸೌಕರ್ಯವು ... ಸಾರ್ವಜನಿಕರು ಈ ಸಂತೆಯನ್ನು ಉಪಯೋಗಿಸಿಕೊಳ್ಳುತ್ತಾರೆಂದು ನಂಬಿದೆ.

(ಸಹಿ) ಬಿ. ಎಸ್. ಎಸ್. ಆರಾಧ್ಯ,

ಪ್ರೆಸಿಡೆಂಟ್

ವಿದ್ಯಾರ್ಥಿಗಳು ಘೋಷ... ಗಳನ್ನು ಬಿಡಬೇಕು

ವಿದ್ಯಾರ್ಥಿ ಸಮ್ಮೇಳನದಲ್ಲಿ ಡಾ|| ಲೋಹಿಯರವರ ಹಿತೋಕ್ತಿ

ಸ್ವಂ ವಾ. ಪ್ರೋ] ಬೆಂಗ...

ಅಖಿಲ ಭಾರತ ವಿದ್ಯಾರ್ಥಿ ... ಸಮ್ಮೇಳನವು ನಿನ್ನೆ ... ಲ್ಲಿ ಪ್ರಾರಂಭವಾಯಿತು. ಒಟ್ಟು ... ಜನ ಪ್ರತಿನಿಧಿಗಳು ಆಗಮಿಸಿದ್ದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷ... ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಶ್ರೀ ಟಿ ಸಿದ್ದಲಿಂಗ... ದು ಸ್ವಾಗತ ಭಾಷಣಮಾಡಿ, ವಿ... ಳು ಶಿಸ್ತಿನಿಂದ ವರ್ತಿಸಬೇಕೆಂದ... ದರು.

ಅಖಿಲ ಭಾರತ ಸಮಾಜವಾದಿ ನಾಯಕರಾದ ಡಾ|| ರಾಮ್ ಮನೋಹರ ಲೋಹಿಯರವರು ಆರಂಭ ... ಡಿದರು. ಘೋಷಣೆ ಮಾಡು... ಹೋಯಿತೆಂದೂ, ವಿದ್ಯಾರ್ಥಿಗಳು ... ನಾರ್ಜನೆಗೆ ಹೆಚ್ಚು ಗಮನ ಕೊಟ್ಟು ... ಷ್ಟ ಸೇವೆಯನ್ನು ತಮ್ಮ ಗುರಿ... ಕೊಳ್ಳಬೇಕೆಂದೂ ಅವರು ತಿಳಿ... ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಯ... ಮಾಡಿ, ಸಮಗ್ರ ಕಾಲೇಜುಗಳ... ಯ ಸಂಯುಕ್ತ ಫೆಡರೇಷನ್ ಸ... ಸ್ಥಾಪಿಬೇಕೆಂದು ಅವರು ಸಲ... ದರು. ವಿದ್ಯಾರ್ಥಿಗಳು ರಚನಾ... ರ್ಯಗಳಲ್ಲಿ ತೊಡಗಬೇಕೆಂದೂ, ... ತ್ತ ಸಣ್ಣ ಕೈಗಾರಿಕೆಗಳ ಪ್ರ... ಟ್ಟು ಸಂಶೋಧನೆ ನಡೆಸಬೇಕೆಂ... ಲೋಹಿಯಾರವರು ತಿಳಿಸಿದರು. ... ಬ್ಬರೂ ಗಾಂಧಿ ತತ್ವವನ್ನು ಅನು... ಬೇಕೆಂದೂ ಅವರು ಹೇಳಿದರು.

ದಸರಾ ವಸ್ತು ಪ್ರದ...

ಬರುವ ನವರಾತ್ರಿಯಲ್ಲಿ ... ರ್ಶನವನ್ನು ನಡೆಸಲು ಸ... ಅನುಮತಿ ಕೊಟ್ಟಿರುತ್ತಾರೆ. ... ಮುಬ್ಲಾಂ ... ರನ್ನು ... ನೇಮಿಸಲಾಗಿದೆ.

ಶ್ರೀ ದುರ್ಗಾದೇವಿ ಅಮ್ಮನವ...

ರಾಜಧಾನಿಯ ... ಶ್ರೀ ದುರ್ಗಾದೇವಿ ಅಮ್ಮನವ... ನದಲ್ಲಿ ಪ್ರತಿ ಆದಿ ಶುಕ್ರವಾ... ೬–೩೦ ಗಂಟೆಗೆ ಕೀರ್ತನೆ ನಡೆ... ಡಿಸಿದೆ. ಪ್ರಾರ್ಥನಾ ಸಭಾ ಸದ... ಜಿ ಆರ್ ರಂಗಸ್ವಾಮಯ್ಯನ... ನೆ ವಹಿಸುವರು. ಭಕ್ತಾದಿ... ದೇವರ ಅನುಗ್ರಹಕ್ಕೆ ಪಾತ್ರ... ದು ಕೋರಲಾಗಿದೆ

ಪ್ರತಿ ದಿನ ಮೂರು ...

8 7-48 ನೇ ... ಸೆಂಟ್ರಲ್ ಸ್ಟುಡಿಯೋಸ್‌ರವರ ...

ಗುಲೇಬಕಾ...

(ಹಿಂದಿ)

—:ತಾರ:—

ಪಿರೋಜ್ ದ...

ಒಲಿಂಪಿಯಾ ...

ಶೀಘ್ರದಲ್ಲಿಯೇ ಬರುತ್ತದೆ ! !

ಮೈಸೂರು ವುಡ್‌ಲ್ಯಾಂಡ್ಸ್‌ನಲ್ಲಿ

ಭಕ್ತ ತುಲಸೀದಾಸ್

(ತಮಿಳ)

ತಾರಾಗಣ — ಟಿ ಆರ್ ರಾಜಯ್ಯಂಗಾರ್, ಉದಯಶಂಕರ್ ಡ್ಯಾನ್ಸಿಂಗ್ ಗ್ರೂಪಿನ ಲಕ್ಷ್ಮಿ ಶಂಕರ್ ಮತ್ತು ಸಿ ಟಿ ... ಮುಂತಾದವರು.

ಪ್ರೊಡಿಯೋಸ: ಬೊಂಬಾಯಿ ಟಾಕೀಸ್ ಲಿಮಿಟೆಡ್, ಬೊಂಬಾಯಿ.

ರೇ॥ ನಂ 702 ॥ ವಂದೇಮಾತರಂ ॥ ಇಂದಿನ ಪತ್ರಿಕೆ ೨ ಕಾಸು

ಸಂಪುಟ ೬] ಗುರುವಾರ ೮-೭-೪೮ [ಸಂಚಿಕೆ ೩೨೭

ಹೈದರಾಬಾದಿನಲ್ಲಿ ೪೦ ಬಾಂಬರ್ ವಿಮಾನ

ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನ

[ಸು ಪ್ರ॥] ಬೆಂಗಳೂರು ೮

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನವು ನಿನ್ನೆ ದಿನ ಶ್ರೀ ರವೀಂದ್ರ [illegible]ರವರ ಅಧ್ಯಕ್ಷತೆಯಲ್ಲಿ ಮುಂದುಗರಿ[illegible] ವಿಶೇಷ ಆಹ್ವಾನದ ಮೇಲೆ ಸಭೆಗೆ ಸಚಿವರುಗಳಾದ ಶ್ರೀಗಳು [illegible] ರೆಡ್ಡಿ, ಎಚ್ ಸಿದ್ದಯ್ಯ, ಎಚ್ ಸಿ ದಾ[illegible] ಡಿ ಎಚ್ ಚಂದ್ರಶೇಖರಯ್ಯನವರು [illegible] ಆಗಮಿಸಿದ್ದರು.

[illegible] ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸಂ[illegible]ನಗಳು ಹೂಡಿದ ಚಳುವಳಿಯಲ್ಲಿ ವಿ[illegible]ರ್ಥಿಗಳು ನೀವು ಸಾಧಿಸಿದುದನ್ನೂ ಮ[illegible] ಅವರ ತ್ಯಾಗ ಧೈರ್ಯಸ್ಥೈರ್ಯಗಳ[illegible] ಪ್ರಶಂಸಿಸುವ ಮತ್ತು ಕಾಲೋಚಿತ [illegible] ಅನೇಕ ಸಂಸ್ಥಾನಗಳು ಭಾರತ [illegible]ಒಕ್ಕೂಟಕ್ಕೆ ಸೇರಿರುವುದನ್ನೂ ಪ್ರಶಂ[illegible]ಸುವ ನಿರ್ಣಯವನ್ನು ಶ್ರೀ ಪದ್ಮನಾಭ [illegible]ರವರು ಮಂಡಿಸಿದರು. ಅದು ಸ[illegible]ನುಮತದಿಂದ ಅಂಗೀಕೃತವಾಯಿತು.

ಈ ಸಂದರ್ಭದಲ್ಲಿ ಶ್ರೀ ಕೆ ಸಿ ರೆಡ್ಡಿಯ[illegible] ಭಾಷಣ ಮಾಡಿ ಇನ್ನು ಮುಂದೆ ವಿ[illegible]ರ್ಥಿ ಕಾಂಗ್ರೆಸ್ ಸಂಸ್ಥೆಯನ್ನು ರದ್ದು[illegible] ಅಖಿಲ ಭಾರತ ಕಾಲೇಜುಗಳ [illegible] ಸಂಯುಕ್ತ ಫೆಡರೇಷನ್ ಸಂಸ್ಥೆ[illegible] ಸ್ಥಾಪಿಸಬೇಕೆಂದು ಶ್ರೀ ರಾಮ[illegible]ನೋಹರ ಲೋಹಿಯಾರವರು ಮಾಡಿರು[illegible] ಸಲಹೆಯನ್ನು ಪುಷ್ಟೀಕರಿಸಿ ವಿದ್ಯಾರ್ಥಿ[illegible]ಗೆ ಹಿತೋಕ್ತಿಯನ್ನು ನುಡಿದರು.

ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನದ [illegible]ಸಂಬಂಧದಲ್ಲಿ ಈ ದಿನ ಮಧ್ಯಾಹ್ನ ಬೆಂಗ[illegible]ಳೂರಿನ ವಿದ್ಯಾ ಸಂಸ್ಥೆಗಳಿಗೆ ರಜಾ ಕೊಡ[illegible]ಲಾಗಿದೆ.

[illegible]ಯರ್ ಜೆ ಬಿ ಕೃಪಲಾನಿಯವರು [illegible] ದಿನ ಪುಣೆ ಸಮೀಪದಿಂದ ವಿಮಾನ[illegible] ಬೆಂಗಳೂರಿಗೆ ಆಗಮಿಸಿದರು. ವಿ[illegible]ಮಾನ ನಿಲ್ದಾಣದಲ್ಲಿ ಅವರನ್ನು ಸಂಸ್ಥಾನ[illegible] ಸಚಿವರುಗಳು ಸ್ವಾಗತಿಸಿದರು. ಶ್ರೀ [illegible]ಯವರು ಸರ್ಕಾರದ ಅತಿಥಿಗಳಾ[illegible]ರೆ.

ಸಲ್ದಾನ್ಹಾರವರ ನಿವೃತ್ತಿ

[illegible]ರದ ಅಭಿವೃದ್ಧಿ ಶಾಖಾ ಕಾರ್ಯ[illegible] [illegible] ಚಾರಲ್ಸ್ ಸಲ್ದಾನ್ಹಾರವರು [illegible] ಸೆಪ್ಟೆಂಬರ್ ೧೫ ನೇ ತಾರೀಕಿನಿಂದ [illegible]ರದಿಂದ ನಿವೃತ್ತರಾಗಲಿರುವರು.

[illegible]ವಿದ್ಯಾರ್ಥಿಗಳಮೇಲೆ ಗುಂಡು ಹಾರಿಸಲಾಯಿತು.

[illegible]ದ ಪೈಪಿಂಗ್‌ನಲ್ಲಿರುವ ಮಂಚೂ[illegible]ದ ೭ ಸಾವಿರ ನಿರಾಶ್ರಿತ ವಿದ್ಯಾರ್ಥಿ[illegible]ಗಳನ್ನು ಬೇಸಿಗೆ ಶಿಕ್ಷಣ ಶಿಬಿರಗಳ[illegible] ಸೇರಿಸಕೂಡದೆಂದು ಪ್ರತಿಭಟನೆ ನಡೆ[illegible]ದೂ ಅಲ್ಲಿನ ಸೈನಿಕರು ಅವರುಗಳ[illegible] ಗುಂಡು ಹಾರಿಸಿದರೆಂದೂ, ಮೂ[illegible] ವಿದ್ಯಾರ್ಥಿಗಳು ಸತ್ತರೆಂದೂ [illegible]ಸಲಾಗಿದೆ.

[illegible]ಗಳವಾರಗಳಲ್ಲಿ ಮದ್ಯದ ಮಾರಾಟ ಕೂಡದು

[illegible] ಜಾಬಿನಲ್ಲಿ ಇನ್ನು ಮುಂದೆ [illegible]ಮಂಗಳವಾರಗಳಲ್ಲೂ ಮತ್ತು ಸ್ವಾತಂ[illegible]ದಿನಾಚರಣೆಯಂದೂ ಮದ್ಯದ ಮಾ[illegible] [illegible] ಪ್ರತಿಬಂಧಿಸಿ ಸರ್ಕಾರಿ ಆಜ್ಞೆ [illegible]ಬಿದ್ದಿದೆ

ಕಾಶ್ಮೀರದಲ್ಲಿ ಪಾಕಿಸ್ತಾನದ ಕುಚೇಷ್ಟೆ

ನಿರ್ಮೂಲ ಮಾಡಲು ನೆಹರೂರವರ ದೃಢ ಸಂಕಲ್ಪ

ಪರ್ಗಾ ಕೋಟ್ ಮತ್ತು ಜಮ್ಮು ರಸ್ತೆಯಲ್ಲಿರುವ ಪರ್ಗಾ ಕೋಟೆ ಸೇತುವೆಯ ಪ್ರಾರಂಭೋತ್ಸವವನ್ನು ನಿನ್ನೆ ಪಂಡಿತ ನೆಹರೂರವರು ನೆರವೇರಿಸಿದರು. ಸರದಾರ್ ಬಲದೇವ ಸಿಂಗ್, ಮೇಜರ್ ಜನರಲ್ ಕಲವಂತ ಸಿಂಗ್, ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ [illegible]ಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಪಂಡಿತ ನೆಹರೂರವರು ಕಾಶ್ಮೀರದಲ್ಲಿ ಪಾಕಿಸ್ತಾನದವರು ನಡೆಸುತ್ತಿರುವ ಕುಚೇಷ್ಟೆಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲು ಭಾರತ ಸರ್ಕಾರವು ಪಣತೊಟ್ಟಿರುವುದು ಎಂದು ನುಡಿದರು.

ಅನಂತರ ಪಂಡಿತ ನೆಹರೂರವರು ಭಾಗೀದಾರಿರುವ [illegible]ಜೋರಿ, ಪೂಂಚ್ ಮುಂತಾದ ಪ್ರದೇಶಗಳ ಮೇಲೆ ವಿಮಾನದಲ್ಲಿ ಹಾರಾಡಿ ಶ್ರೀನಗರಕ್ಕೆ ೩ ದಿನ [illegible] ಈ ದಿನ ಅವರು ದೆಹಲಿಗೆ ಆಗಮಿಸುವ ನಿರೀಕ್ಷೆಯಿದೆ

ಶಾಂತಿಯ ಅವಧಿ ಹೆಚ್ಚಿಸಲು ವಿಶ್ವಸಂಸ್ಥೆಯ ಪ್ರಾರ್ಥನೆ

ಪ್ಯಾಲೆಸ್ಟೈನಿನ ಶಾಂತಿ ಸ್ಥಾಪನೆಯ ಅವಧಿಯನ್ನು ನಾಳೆಯಿಂದ ಮತ್ತೆ ನಾಲ್ಕು ವಾರಗಳ ಕಾಲ ಹೆಚ್ಚಿಸಬೇಕೆಂದು ವಿಶ್ವಸಂಸ್ಥೆಯವರು ಅರಬ್ ಮತ್ತು ಯೆಹೂದ್ಯರನ್ನು ಪ್ರಾರ್ಥಿಸಿರುವುದಾಗಿ ಗೊತ್ತಾಗಿದೆ. ಶಾಂತಿ ಸ್ಥಾಪನೆಯ ಧ್ಯೇಯಕ್ಕಾಗಿರಾದ [illegible] ಬರ್ನಡೊಟ್ಟರು ಕೈರೋನಿನಲ್ಲಿ ಅರಬ್ಬರೊಡನೆ ಮಾತುಕತೆ ನಡೆಸಿಕೊಂಡು ಟೆಲ್ ಅವೀವಿಗೆ ಹೊರಟಿರುವರೆಂದು ಹೇಳಲಾಗಿದೆ.

ಇದನ್ನು ಯೆಹೂದ್ಯರು ಒಪ್ಪಬಹುದೆಂದೂ, ಅರಬ್ಬರು ನಿರಾಕರಿಸಬಹುದೆಂದೂ ಹೇಳಲಾಗಿದೆ

ಅಂಚೆ ತೊಂದರೆ

[illegible]-ಸೂಲಿಬೆಲೆ [illegible]

ಇತ್ತೀಚಿಗೆ ಟಪಾಲು ಯಲಹಂಕದ ಕಡೆಯಿಂದ ಬೆಳಿಗ್ಗೆ ೯ ಗಂಟೆಗೂ, ಕೋಲಾರದ ಕಡೆಯಿಂದ ಮಧ್ಯಾಹ್ನ ೩-೩೦ ಗಂಟೆಗೂ ಬರುತ್ತಿತ್ತು. ಇತ್ತೀಚೆಗೆ ಪೆಟ್ರೋಲ್ ಅಭಾವದಿಂದ ಮೋಟಾರ್ ಬಸ್ಸು ಎರಡು ದಿನಗಳಿಗೆ ಒಂದಾವರ್ತಿ ಬರುತ್ತಿರುವುದರಿಂದ ಜನಗಳಿಗೆ ಟಪಾಲುಗಳು ಸರಿಯಾಗಿ ಬಂದು ತಲುಪದೆ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಪರಿಶೀಲಿಸಿ, ತೊಂದರೆಯನ್ನು ನಿವಾರಿಸ[illegible] [illegible] ನಂಬಲಾಗಿದೆ

ಪಾಕಿಸ್ತಾನಕ್ಕೂ ಹೈದ್ರಾಬಾದಿಗೂ ಗುಪ್ತ ವ್ಯವಹಾರ

ದೆಹಲಿಯಿಂದ ಹೈದರಾಬಾದಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ಬ್ರಿಟಿಷ ರೊಬ್ಬರನ್ನು ಸಿಂಗಪೂರದ ವಿಮಾನ ನಿಲ್ದಾಣದಲ್ಲಿ ನಿನ್ನೆ ಶೋಧಿಸಿದಾಗ, ಅವರ ಹತ್ತಿರ ರಹಸ್ಯ ಪತ್ರವೊಂದು ಪತ್ತೆ ಆಯಿತೆಂದೂ ಅವರು ಬ್ರಿಟಿಷ್ ವಾಣಿಜ್ಯ ಸಂಸ್ಥೆಯ ಪ್ರತಿನಿಧಿಯಾಗಿದ್ದು, ಹೈದರಾಬಾದಿನೊಡನೆ ಸಂಪರ್ಕವನ್ನಿಟ್ಟುಕೊಂಡಿದ್ದರೆಂದು [illegible] ತ್ರದಿಂದ ತಿಳಿಯಬಂದಿತು. ಒನ್ನೊಬ್ಬ ಪಾಕಿಸ್ತಾನ ಸೈನ್ಯಾಧಿಕಾರಿಯನ್ನು ಅದೇ ವಿಮಾನದಲ್ಲಿ ಶೋಧಿಸಿದಾಗ, ಅವರ ಹತ್ತಿರವೂ ಗುಪ್ತ ಪತ್ರ ಪತ್ತೆಯಾಯಿತೆಂದೂ ವರದಿಯಾಗಿದೆ. ಇದರಿಂದ ನಿಜಾಮರಿಗೂ ಪಾಕಿಸ್ತಾನಕ್ಕೂ ರಹಸ್ಯ ಸಂಬಂಧ ನಡೆಯುತ್ತಿದೆಯೆಂಬುದು ದೃಢ ಪಟ್ಟಿದೆಯೆಂದು ಹೇಳಲಾಗಿದೆ

ಅಂಚೆ ಕಛೇರಿಗಳಲ್ಲಿ ಹೈದರಾಬಾದ್ ನಾಣ್ಯಕ್ಕೆ ನಿಷೇಧ

ಹೈದರಾಬಾದು ಸುತ್ತ ಸಿಕಂದರಾಬಾದುಗಳಲ್ಲಿರುವ ಭಾರತ ಯೂನಿಯನ್ ಅಂಚೆ ಕಛೇರಿಗಳು ನಿಜಾಮರ ನಾಣ್ಯಗಳನ್ನು ನಿರಾಕರಿಸಿವೆ. ಇನ್ನು ಮುಂದೆ ಯೂನಿಯನ್ ನಾಣ್ಯಗಳನ್ನು ಕೊಟ್ಟರೆ ಮಾತ್ರ ಕಾಗದ, ಕವರುಗಳನ್ನು ಕೊಡಲಾಗುವುದೆಂದು ತಿಳಿಸಲಾಗಿದೆ

ಹೈದರಾಬಾದಿನ ಸ್ಟೇಟ್ ಬ್ಯಾಂಕಿಗೂ ಭಾರತದ ಇಂಪೀರಿಯಲ್ ಬ್ಯಾಂಕಿಗೂ ಇದ್ದ [illegible] ವ್ಯವಸ್ಥೆಯನ್ನು ರದ್ದುಗೊಳಿಸಲಾಗಿದೆಯೆಂದು ಇಂಪೀರಿಯಲ್ ಬ್ಯಾಂಕಿನವರು ತಿಳಿಸುತ್ತಾರೆ

ನ್ಯಾಷನಲ್ ಇಂಜನಿಯರಿಂಗ್ ಶಾಲೆ

ಮೈಸೂರು ೮

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಶಾಲೆಯಿಂದ ಸರ್ಕಾರಿ ಡಿಪ್ಲೊಮಾ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳ ಫಲಿತಾಂಶಗಳು ಈ ರೀತಿ ಇವೆ:-ಮೊದಲನೇ ವರ್ಷ [illegible] ವಿದ್ಯಾರ್ಥಿಗಳ ಪೈಕಿ ೬೭ (೩ ಮೊದಲನೇ ತರಗತಿ) ಎರಡನೇ ವರ್ಷ [illegible] ವಿದ್ಯಾರ್ಥಿಗಳ ಪೈಕಿ ಎಲ್ಲರೂ ತೇರ್ಗಡೆಯಾಗಿದ್ದಾರೆ

ಈ ಶಾಲೆಗೆ ಸ್ವಂತ ಕಟ್ಟಡ ವ[illegible] ಕಾರ್ಖಾನೆಗಳನ್ನು ಒದಗಿಸಿಕೊಳ್ಳಲು ಸಾರ್ವಜನಿಕರ ಸಹಾಯ ಸಹಕಾರಗಳು ಅಗತ್ಯವಾಗಿ ಬೇಕಾಗಿವೆ

ಯೂರೋಪಿನಿಂದ ನಿಜಾಮರಿಗೆ ೪೦ ಯುದ್ಧ ವಿಮಾನಗಳು

ಹೈದರಾಬಾದಿನಮೇಲೆ ಭಾರತವು [illegible] ದಿಗ್ಬಂಧನ ಹಾಕುವುದಕ್ಕಿಂತ ಬಹಳ ಕಾಲದ ಮುಂಚೆಯೇ ನಿಜಾಮರು ಬೆಲ್ಜಿಯಂ ಮತ್ತು ಜೆಕೊಸ್ಲವೇಕಿಯಾದಿಂದ ೪೦ ಬಾಂಬರು ವಿಮಾನಗಳನ್ನು ಕೊಂಡು ಸಂಸ್ಥಾನಕ್ಕೆ ತರಿಸಿಕೊಂಡಿದ್ದಾರೆಂದೂ, ಅವುಗಳನ್ನು ನಡೆಸಲು ಪರದೇಶದ ವೈಮಾನಿಕರನ್ನು ನೇಮಿಸಿಕೊಳ್ಳಲಾಗಿದೆಯೆಂದೂ ಹೇಳಲಾಗಿದೆ

ಹೈದ್ರಾಬಾದಿಗೆ ರವಾನೆ ಆಗುತ್ತಿದ್ದ ಮಾಲುಗಳ ಪತ್ತೆ

ಹೈದರಾಬಾದಿನ ಮೇಲೆ ಭಾರತ ಸರ್ಕಾರದ ದಿಗ್ಬಂಧನವಿರುವುದರಿಂದ, ಕಳ್ಳತನದಲ್ಲಿ ಸಂಸ್ಥಾನಕ್ಕೆ ತುಂಗಭದ್ರ ನದಿಯ ಮೂಲಕ ೨೫ ಮೂಟೆ ಸಾಮಾನನ್ನು ಸಾಗಿಸುತ್ತಿದ್ದುದನ್ನು ಕರ್ನೂಲ್ ಪೋಲೀಸರು ಪತ್ತೆ ಹಚ್ಚಿ ಮಾಲನ್ನು ವಶಪಡಿಸಿಕೊಂಡು, ೬ ಜನರನ್ನು ದಸ್ತಗಿರಿ ಮಾಡಿದ್ದಾರೆ. ಇದೇ ಸಮಯದಲ್ಲಿ ಸಂಸ್ಥಾನಕ್ಕೆ ಸಾಗಿಸಲು ಸಿದ್ಧವಾಗಿದ್ದ ೧೦ ಸಾವಿರ ರೂ ಬೆಲೆ ಬಾಳುವ ಮೋಟಾರು ಎಣ್ಣೆ, ಬೆಲ್ಲ ಕೊಬ್ಬರಿ ಮುಂತಾದ ಸಾಮಗ್ರಿಗಳನ್ನೂ ಪೋಲೀಸರು [illegible]ವಶಪಡಿಸಿಕೊಂಡು, ೫ ಜನರ[illegible] ದಸ್ತಗಿರಿ ಮಾಡಿರುತ್ತಾರೆ.

ಹೈದರಾಬಾದಿನಲ್ಲಿ ಭಾರತದ [illegible] ಕಛೇರಿಗಳ ಬಂದು

[illegible] ಸಿಕಂದರಾಬಾ[illegible]ದುಗಳಲ್ಲಿರುವ [illegible] ಡೊಮಿನಿಯನ್ ಅಂ[illegible]ಚೆ ಕಛೇರಿಗಳು [illegible] ವ್ಯವಹಾರಗಳನ್ನು [illegible] ಅಡಚಣೆ ಬಂದಿದ್ದ[illegible] ಮಾಡಬಹುದೆಂ[illegible] ನೌಕರರು ಅಲ್ಲಿ [illegible] ಅಭಾವದಲ್ಲಿ ಅವರು [illegible]ದಿಂದ [illegible] ದೆಂಬೂ, ಅಂಥವರಿಗೆ [illegible] ಗಳನ್ನು ವಿ[illegible] ಹೈದರಾಬಾದಿನ [illegible] ಜನರಲ್ಲರು ಪ್ರಕಟಣೆ ಹೊರಡಿಸಿದ್ದಾರೆ.

ಮೈಸೂರು ಸಂಸ್ಥಾನದಿಂದ ಹೈದ್ರಾಬಾದಿಗೆ ಶಸ್ತ್ರಾಸ್ತ್ರಗಳು

ಇತ್ತೆಹಾದ್ ಸಂಸ್ಥೆಯ ಗುಪ್ತಚಾರರು ವಿಶೇಷ ಬೆಲೆಯನ್ನು ಕೊಟ್ಟು ಮೈಸೂರು ಸಂಸ್ಥಾನದಲ್ಲಿ ಶಸ್ತ್ರಾಸ್ತ್ರಗಳನ್ನು ಕೊಂಡು ಅದನ್ನು ಮಲೆನಾಡು ಪ್ರದೇಶಗಳ ಮೂಲಕ ಹೈದರಾಬಾದಿಗೆ ಸಾಗಿಸುತ್ತಿರುವರೆಂದು ಹೇಳಲಾಗಿದೆ. ಇದನ್ನು ತಡೆಗಟ್ಟಲು ಮೈಸೂರು ಸರ್ಕಾರದವರು ಎಲ್ಲ ಕಾರ್ಯಕ್ರಮಗಳನ್ನು ಕೈಗೊಂಡು ಗಡಿ ಪ್ರದೇಶಗಳಲ್ಲಿ ಬಲವಾದ [illegible] ಕಾವಲನ್ನು [illegible]ಟ್ಟಿರುವರೆಂದು ವರದಿಯಾಗಿದೆ

ಪೋಲೀಸರ ಹಿಂಸೆಯಿಂದ ಖೈದಿಯ ಮರಣ

ಪಾಟಿಯಾಲಾ ಸಂಸ್ಥಾನದ ಪೋಲೀಸರ [illegible] ಖೈದಿಯು ಮರ[illegible] ಬಗ್ಗೆ ಪ್ರತಿಭಟನೆ [illegible] ನಗರದ [illegible] ಸಂಪೂರ್ಣ ಹರ[illegible], ೩ ಸಾವಿರ [illegible] ಶವವನ್ನು [illegible] ಪ್ರದರ್ಶನ ನಡೆಸಿದರೆಂ[illegible] ಪೋಲೀಸರು ಲಾಠಿ [illegible] ಗುಂಪನ್ನು ಚದುರಿ[illegible]ದರು.

ಸಂಸ್ಥಾನಗಳ ಬಗ್ಗೆ ಭಾರತದ ಶ್ವೇತ ಪತ್ರ

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶೀಯ ಸಂಸ್ಥಾನಗಳನ್ನು ಯೂನಿಯನ್ನಿಗೆ ಸೇರಿಸಿಕೊಳ್ಳಲು ಸಂಸ್ಥಾನಗಳ ಶಾಖೆಯವರು ನಡೆಸಿದ ವಿವಿಧ ಪ್ರಯತ್ನಗಳ ಬಗ್ಗೆ ಭಾರತ ಸರ್ಕಾರದವರು ಒಂದು ಶ್ವೇತ ಪತ್ರವನ್ನು ಪ್ರಕಟಿಸಿರುತ್ತಾರೆ. ಅದರಲ್ಲಿ ನಾಲ್ಕು ಭಾಗಗಳಿವೆ ಮೊದಲನೆಯ ಎರಡು ಭಾಗಗಳಲ್ಲಿ ಸಂಸ್ಥಾನಗಳ ರಾಜಕೀಯ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ ಮೂರನೇ ಭಾಗದಲ್ಲಿ ಭಾರತ ಯೂನಿಯನ್ನಿಗೆ ಸಂಸ್ಥಾನಗಳು ಸೇರಲು ಒದಗಿದ ಸನ್ನಿವೇಶಗಳನ್ನು ಕೊಡಲಾಗಿದೆ ನಾಲ್ಕನೆ ಭಾಗದಲ್ಲಿ ಸಂಸ್ಥಾನಗಳ ವಿಲೀನ, ಅಲ್ಲಿ ನಡೆದ ಒಳಾಡಳಿತದ ಬದಲಾವಣೆಗಳನ್ನು ವಿವರಿಸಿ ಗಿದೆ ಕಾಶ್ಮೀರ, ಜುನಾಗಡ ಮತ್ತು ಹೈದರಾಬಾದುಗಳ ವಿಷಯಗಳನ್ನು ಈ ಶ್ವೇತ ಪತ್ರದಲ್ಲಿ ಕೊಟ್ಟಿಲ್ಲ

ಭಾರತದಲ್ಲಿ ಆಚರಣೆಯಲ್ಲಿರುವ ಪ್ರಜಾಪ್ರಭುತ್ವ ಪದ್ಧತಿಗನುಗುಣವಾಗಿ ಸಂಸ್ಥಾನಗಳಲ್ಲಿಯ ರಾಜರುಗಳು ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂಬುದೇ ಭಾರತ ಸರ್ಕಾರದ ನೀತಿಯಾಗಿದೆ ಸಂಸ್ಥಾನಗಳ ಬಗ್ಗೆ ಕೇಂದ್ರ ಸರ್ಕಾರದವರು ಮೂರು ವಿಧಾನಗಳನ್ನು ಅನುಸರಿಸಿದ್ದಾರೆ— ೧) ಆಧುನಿಕ ರೀತಿಯ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸಲು ಸಾಧ್ಯವಿಲ್ಲದ ಸಣ್ಣ ಸಂಸ್ಥಾನಗಳನ್ನು ನೆರೆಯ ಪ್ರಾಂತ್ಯಗಳೊಡನೆ ಐಕ್ಯ ಮಾಡಲಾಗಿದೆ ೨) ಕೆಲವು ಸಂಸ್ಥಾನಗಳ ಆಡಳಿತವನ್ನು ನೇರವಾಗಿ ಕೇಂದ್ರ ಸರ್ಕಾರವೇ ವಹಿಸಿಕೊಂಡಿದೆ ಈ ವಿಧಾನವಾಗಿ ಸೌರಾಷ್ಟ್ರ ವ ಕ್ಷೆತ್ರ, ಪಂಜಾಬ, ರಾಜಸ್ಥಾನ, ಮಧ್ಯ ಭಾರತ, ವಿಂಟಿಯಾಲ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳು ಸ್ಥಾಪಿತವಾಗಿವೆ ೩) ದೊಡ್ಡ ಸಂಸ್ಥಾನಗಳು ಪ್ರಾದೇಶಿಕ ದೃಷ್ಟಿಯಿಂದ ಪ್ರತ್ಯೇಕ ಆಡಳಿತ ಭಾಗಗಳೆಂದು ಪರಿಗಣಿಸಿ ಅವುಗಳ ಏಕೀಕರಣ ಮಾಡಿಲ್ಲ.

ಈ ಸಂಬಂಧವಲ್ಲಿ ಸಂಸ್ಥಾನಗಳ ಸಮಸ್ಯೆಯನ್ನು ಬಗೆಹರಿಸಲು ರಾಜರುಗಳು ತೋರಿಸಿದ ಕಾಲ ಜ್ಞಾನ, ದೇಶ ಪ್ರೇಮ ಮತ್ತು ಪ್ರಜಾ ವಾತ್ಸಲ್ಯಗಳ ಬಗ್ಗೆ ಭಾರತ ಸರ್ಕಾರವು ಮೆಚ್ಚಿಗೆಯನ್ನು ವ್ಯಕ್ತ ಪಡಿಸಿದೆ.

ಶ್ರೀ ಗಣೇಶಾ ಟಾಕೀಸ್

9-7-48 ರಿಂದ

ಅಪೋಪು 2 ನೇ ವಾರ

ಪ್ರಭಾವತಿ

(ತಮಿಳು)

—:ಭೂಮಿಕೆ:—

ಹೊನ್ನಪ್ಪ ಭಾಗವತರ್,

ಟಿ. ಆರ್. ರಾಜಕುಮಾರಿ,

ಕೃಷ್ಣ ಮತ್ತು ಮಧುರಂ

ಚಲನಚಿತ್ರ ಪ್ರದರ್ಶನ

ದೇವನೂರು. ೬

ನಂಜನಗೂಡು ತಾಲ್ಲೂಕು ದೇವನೂರು ಯುವಜನ ಸಂಘದ ಆಶ್ರಯದಲ್ಲಿ ಕಳೆದ ಶುಕ್ರವಾರ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ಚಲನ ಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು. ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಪಿ ಜಿ. ಮುತ್ತಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಈ ಗ್ರಾಮದ ಮಿ ಡ ಲ್ ಸ್ಕೂಲಿನಿಂದ ಎಲ್ ಎಸ್ ಪರೀಕ್ಷೆಗೆ ಕುಳಿತ್ತಿದ್ದ ೨೫ ವಿದ್ಯಾರ್ಥಿಗಳ ಪೈಕಿ ೨೦ ಮಂದಿ ತೇರ್ಗಡೆಯಾಗಿ, ೫ ಜನರು ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಬೆಳಗಿನ ಆಟಗಳು

9 7—48ನೆಯ ಶುಕ್ರವಾರದಿಂದ

4 ದಿನಗಳು ಮಾತ್ರ

ಕ್ರಿಮಿನಲ್

ಪಾತ್ರ:—ಹಂಸಾವಾಡ್‌ಕರ್, ಚಂದ್ರರಾವ್, ಭಗವಾನ್, ಮುತ್ತ ತರರು

ಒಲಂಪಿಯಾ ಟಾಕೀಸ್

APPLY FOR LODGING

S. Lakshmikanta, B A,

1027, MYSORE LODGE

Chmarajapuram

Edited printed and published by A. R. Nagarajan at the Sadhvi Press D Subbaiah Road Mysore.

ಇಟಲಿಯ ಪ್ರಣಯಿಗಳ ದುರಂತ

ರೋಮಿನ ಮದ್ಯ ವ್ಯಾಪಾರಿಯೊಬ್ಬನು ಕಳೆದ ತಿಂಗಳು ೯ ನೇ ತಾರೀಕು, ತಾನು ಪ್ರೀತಿಸಿದ್ದ ಗ್ರೇಸಿಯ ಎಂಬಾಕೆಯನ್ನು ಏಳು ಅಂತಸ್ತಿನ ಮನೆಯ ಮೇಲ್ಮಹಡಿಯ ಕೊಠಡಿಯಲ್ಲಿ ಕೊಲೆ ಮಾಡಿ ತಾನೂ ಅಲ್ಲಿಂದ ಕೆಳಕ್ಕೆ ಧುಮುಕಿ ಪ್ರಾಣ ಬಿಟ್ಟ ಸಂಗತಿಯು ವರದಿಯಾಗಿದೆ. ಗ್ರೇಸಿಯು ಆತನನ್ನು ವಂಚಿಸಲು ಪ್ರಯತ್ನಿಸಿದುದರಿಂದ ಈ ಘಟನೆಯು ನಡೆಯಿತೆಂದು ಹೇಳಲಾಗಿದೆ

ಮನೆ ಕ್ರಯಕ್ಕೆ

ಡಿ ಸುಬ್ಬಯ್ಯ ರೋಡ್ ೩೦೬ ನೇ ಮನೆ ಕಾಲೇಜು, ಸ್ಕೂಲು ವಗೈರೆಗಳಿಗೆ ಮಧ್ಯ ಸ್ಥಾನವಾಗಿಯೂ, ಸರಾಗವಾಗಿ ಶೀಘ್ರ ಸರಬರಾಯಿ ಆಗುವ ನಲ್ಲಿಗಳು ಮತ್ತು ದೀಪಗಳೂ ಇರುತ್ತೆ ಯಾವ ವಿಧವಾದ ತಕರಾರೂ ಇರುವುದಿಲ್ಲ ವಿವರಗಳನ್ನು ಮೇಲ್ಕಂಡ ಮನೆಯಲ್ಲಿ ಮಾಲೀಕರಿಂದ ತಿಳಿಯಬಹುದು.

ಬೆಳಗಿನ ಆಟಗಳು

9-7-48 ನೇ ಶುಕ್ರವಾರದಿಂದ

4 ದಿನಗಳು ಮಾತ್ರ

ನ್ಯಾಷನಲ್ ಸ್ಟುಡಿಯೋಸ್‌ರವರ

★ ಗರೀಬ್ ★

—:ಪಾತ್ರ:—

ಸುರೇಂದ್ರ, ರೋಸ್ ಮುತ್ತರರು

ಪ್ರಭಾ ಪಿಕ್ಚರ್ ಹೌಸ್

ಉಪನ್ಯಾಸ

ಆಷಾಢ ಶುಕ್ರವಾರದ ಪ್ರಯು... ಧಾಥಿಯ ಮುಂದಿ ಮೊಹಲ್ಲಾ ಶ್ರೀ... ಕ್ಕರಿ ಅಮ್ಮನವರ ದೇವಸ್ಥಾನದ... ಏರ್ಪಡಿಸಿರುವ ಅಲಂಕಾರೋತ್ಸವ... ರ್ಭದಲ್ಲಿ ಶ್ರೀರಾಮಕೃಷ್ಣಾಶ್ರಮದ... ಸೋಮನಾಥಾನಂದಜಿಯವರು '... ಮಾತಾ ' ರವರ ವಿಚಾರವಾಗಿ ... ಮಾಡುವರು.

ಪ್ರತಿ ದಿನ ಮೂರು ಆಟ...

8-7-48 ನೇ ಗುರುವಾರ...

ಸೆಂಟ್ರಲ್ ಸ್ಟುಡಿಯೋಸ್‌ರವರ

ಗುಲೇಬಕಾವ...

(ಹಿಂದಿ)

—:ಪಾತ್ರ:—

ಫಿರೋಜ್ ದಸ್ತೂರ್...

ಒಲಿಂಪಿಯಾ ಟಾಕೀ...

ಶ್ರೀ ಗಾಯತ್ರಿ ಟಾ...

9—7—48 ರಿಂದ

4 ದಿನಗಳು ಮಾತ್ರ

Warner's Thunderi...

Thrilling Drama

CHEYENN...

(ಷಾ ಯಾ ನೆ)

—: ಪಾತ್ರ :—

ಡ್ಯಾನಿಸ್ ಮಾರ್ಗನ್ ● ಜಾ...

—: Next Change :

Warner's most Roma...

Drama

DECEPTIO...

—: Starring :—

Bette Davis ; Claude ...

RAJKAMAL

MYSORE

FROM 9-7-48

Daily 3 sho...

Michigan Ki...

(In cine colour)

—: with :—

John Hall

Victor Mc Lagle...

Rita Johnson

A drama replete ...

Thrills, Suspense

& Laughter.

—: Morning Shows

From 9—7—48 for ...

You are in-

- the Army ...

—: with :—

JIMMY DURANTE

PHIL SILVERS

JANE WYMAN

ನಿಮ್ಮ ಸೊಗಸಿನ ಸ್ನಾನಕ್ಕೆ

ಪರಿಮಳಯುಕ್ತವೂ

ಪರಿಶುದ್ಧವೂ ಆದ

ಎಸ್. ಆರ್. ಕೆ.

ಬ್ರಾಂಡ್

ಸ್ಪೆಷಲ್ ಸೀಗೇಕಾಯಿ ಪುಡಿ

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೨ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ:-ಕರೂರು (S I Ry)

ಶಾಖೆಗಳು:-ದಿಂಡಿಗಲ್, ಉಡುಮಲ್ ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.)

ಬೆಂಗಳೂರು ಸಿಟಿ

ಉಪಶಾಖೆ:-ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್:-ಇರ್ವಿನ್ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿ ನಂತೆ ಸಾಪ್ತ ಮಾಡಬಹುದಾದ— ೧೨ ತಿಂಗಳು, ೨೪ ತಿಂಗಳು ಮಾಯಿ ದಾ—ರೆಕರಿಂಗ್ ಡಿಪಾಜಿಟ್ ಮತ್ತು ೬೦ ತಿಂಗಳು ಮಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ ಎಲ್ಲಾ ವಿಧವಾದ ಬ್ಯಾಂಕಿಂಗ್ ವಹಿವಾಟುಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ವಿ ಕೆ. ನಟರಾಜನ್,

ಏಜೆಂಟ್, ಮೈಸೂರು

ಫೋನ್ ನಂ. 792 ॥ ವಂದೇಮಾತರಂ ॥ ಇಂದಿನ ಪತ್ರಿಕೆ 3 ಕಾಸು

ವಿಶ್ವಕರ್ನಾಟಕ

ಸಂಪುಟ ೬] ಶುಕ್ರವಾರ ೯-೭-೪೮ [ಸಂಚಿಕೆ ೩೨೪

ಪ್ಯಾಲಸ್ಟೀನಿನಲ್ಲಿ ಮತ್ತೆ ಯುದ್ಧದ ಕಾರ್ಮೋಡ

ಆಡಳಿತದಲ್ಲಿ ಆಡಂಬರ ವೈಶಿಷ್ಟ್ಯ ಹೆಚ್ಚಾಗಿದೆ

ವಿದ್ಯಾರ್ಥಿ ಸಮ್ಮೇಳನದಲ್ಲಿ ಆ॥ ಕೃಪಲಾನಿ ಯವರ ಭಾಷಣ

ಸ್ವಂ. ಸು. ಫೋ॥] ಬೆಂಗಳೂರು ೯ ...ವಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ...ಳನದ ಆಶ್ರಯದಲ್ಲಿ ನಿನ್ನೆ ಸಂಜೆ ಲಾ ...ಗಿನಲ್ಲಿ ಆಚಾರ್ಯ ಕೃಪಲಾನಿಯವರು ...ಣ ಮಾಡಿದರು. ನೂರಾರು ೬. ಸಾ ...ಜನರೂ ಮತ್ತು ಎಲ್ಲ ಸಚಿವರುಗಳು ...ಬಂದಿದ್ದರು ಆ॥ ಕೃಪಲಾನಿಯವ ...ಭಾರತವು ಸ್ವಾತಂತ್ರ್ಯವನ್ನು ಗಳಿಸಿದ್ದ ...ನಿಜವಾದ ಸ್ವರಾಜ್ಯವು ಲಭಿಸಿಲ್ಲವೆಂ ...ಳಿಸಿದರು. ಕಾಂಗ್ರೆಸ್ಸಿನವರು ರಾಜ ...ಕ್ಕೆ ಹೆಚ್ಚು ಗಮನಕೊಟ್ಟು, ಸಾ ...ಕ ಮತ್ತು ನೈತಿಕ ಪ್ರಗತಿಯನ್ನು ...ದ ವುದು ತುಂಬಾ ವಿಷಾದಕರವೆಂದು ...ಹೇಳಿದರು ಈಗ ಭಾರತದಲ್ಲಿ ಅಧಿ ...ಲಾಲಸೆ ಹೆಚ್ಚಿ ಆಡಂಬರ ಮತ್ತು ಆ... ವೈಶಿಷ್ಟ್ಯಗಳಿಗೆ ಹೆಚ್ಚು ಗಮನ ಕೊ...ಡುತ್ತಿದೆಯೆಂದೂ; ರಚನಾತ್ಮಕ ಕಾ... ಹಿಂದಕ್ಕೆ ಬಿದ್ದಿದೆಯೆಂದೂ ತಿಳಿಸಿ ...ಲ್ಲಿ ಈಗ ಮುಖ್ಯವಾಗಿ ಸಾಮಾಜಿಕ ... ನೈತಿಕ ಸುಧಾರಣೆಯಾಗಬೇಕೆಂ ...ದು ಹೇಳಿದರು ವಿದ್ಯಾರ್ಥಿಗಳು ...ಕೀಯವನ್ನು ಬಿಟ್ಟು ವಿದ್ಯಾ ವ್ಯಾಸಂ ...ತ್ತು ರಚನಾತ್ಮಕ ಕಾರ್ಯಗಳಲ್ಲಿ ತೊಡ ...ಬೇಕೆಂದೂ ತಿಳಿಸಿದರು.

ಪುರಸಭೆಯ ಸತ್ಕಾರಕೂಟ

...ನ್ನೆ ಸಂಜೆ ಪೌರಸಭೆಯವರು ಆಚಾ... ಕೃಪಲಾನಿ ಮತ್ತು ಶ್ರೀಮತಿ ಸುಚೇತ ...ಲಾನಿ, ಡಾ॥ ರಾಮ ಮನೋಹರ ...ಲೋಹಿಯಾ, ಶ್ರೀ ರವೀಂದ್ರ ವರ್ಮರವರು ...ಗೌರವಾರ್ಥವಾಗಿ ಒಂದು ಸತ್ಕಾರ ...ವನ್ನು ಏರ್ಪಡಿಸಿದ್ದರು ಫಲಹಾರದ ...ನಂತರ ಪೌರಶ್ರೇಷ್ಠರಾದ ಶ್ರೀ ಕ್ಯಾಪ್ಟನ್ ...ಅಯ್ಯಂಗಾರ್ಯರು ಸ್ವಾಗತ ಭಾಷಣ ...ದರು ಆ॥ ಕೃಪಲಾನಿಯವರು ಭಾ... ಮಾಡಿ ಸಂಸ್ಥಾನದ ಎಲ್ಲ ಕೈಗಾರಿಕೆ ...ಇತರ ಅವಶ್ಯಕ ಸರ್ವೀಸುಗಳ ರಾ... ಷ್ಟ್ರೀಕರಣವಾಗಬೇಕೆಂದು ಸೂಚಿಸಿದರು. ...ಕ ವಿದ್ಯಾಭ್ಯಾಸದ ಜವಾಬ್ದಾರಿಯ... ರಸಭೆಯವರೇ ವಹಿಸಿಕೊಳ್ಳಬೇ... ಡಾ॥ ಲೋಹಿಯಾರವರು ತಿಳಿಸಿ...

ಶ್ರೀನಿವಾಸರವರಿಗೆ ಚಿನ್ನದ ಗಣಿ ಡೈರೆಕ್ಟರ ಹುದ್ದೆ

...ರು ಮತ್ತು ಗ್ವಾಲಿಯರ್ ಸಂ... ನ ಮಾಜಿ ಸಚಿವರಾದ ಶ್ರೀ ಎಂ. ...ನಿವಾಸರವರು ಚಿನ್ನದ ಗಣಿ ಕಂ... ಒಬ್ಬ ಡೈರೆಕ್ಟರಾಗಿರಲು ಒಪ್ಪಿರುವ ...ದಿ ಬಂದಿದೆ ಈ ಕಂಪೆನಿಯ ... ಈಗ ಲಂಡನ್ನಿನಲ್ಲಿದೆ ಶ್ರೀ ...ವಾಸರವರನ್ನು ಡೈರೆಕ್ಟರಾಗಿ ನೇಮಿ... ಈ ಮುಖ್ಯ ಕೈಗಾರಿಕೆಯನ್ನು ...ರ ಆಡಳಿತಕ್ಕೆ ತೆಗೆದುಕೊಳ್ಳಲು ...ವಿಟ್ಟರೆಂದು ಹೇಳಲಾಗಿದೆ

...ಗಳೂರಿನಲ್ಲಿರುವ ಹುಚ್ಚರ ಆಸ್ಪ... ...ಪೋಸ್ಟ್ ಗ್ರಾಜುಯೇಟ್ ವಿ... ...ಗೆ ಶಿಕ್ಷಣ ಕೊಡುವ ಮತ್ತು ಪ... ...ನಡೆಸಲು ಅವಶ್ಯವಾದ ಸಂಸ್ಥೆ... ಭಾರತ ಸರ್ಕಾರದವರು ಹಣಗಳ... ...ಗ್ರಾಂಟನ್ನು ಮಂಜೂರು ...ರೆಂದು ತಿಳಿದುಬಂದಿದೆ.

ನಿಜಾಮರಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದವರ ದಸ್ತಗಿರಿ

ಹೈದರಾಬಾದಿಗೆ ಬೊಂಬಾಯಿನಿಂದ ಶಸ್ತ್ರಾಸ್ತ್ರಗಳನ್ನು ಅಕ್ರಮವಾಗಿ ಸರಬರಾಜು ಮಾಡುತ್ತಿದ್ದರೆಂದು ಇಬ್ಬರು ಮುಸ್ಲಿಮರನ್ನು ಬೊಂಬಾಯಿನಲ್ಲಿ ಪೊಲೀಸರು ಮೊನ್ನೆ ದಸ್ತಗಿರಿ ಮಾಡಿದ್ದಾರೆ

ನಿಜಾಂ ರೈಲ್ವೇ ಗಾರ್ಡಿನ ಬಂಧನ

ರಾಜಾ ಮಹಮದ್ ಖಾನ್ ಎಂಬ ನಿಜಾಂ ಸ್ಟೇಟ್ ರೈಲ್ವೆ ಗಾರ್ಡೊಬ್ಬನು ಕಳ್ಳತನದಲ್ಲಿ ಮದ್ರಾಸಿನಿಂದ ಹೈದರಾಬಾದಿಗೆ ಅಕ್ಕಿಯನ್ನು ಸಾಗಿಸುತ್ತಿದ್ದುದು ಪತ್ತೆಯಾಗಿ ಅತನನ್ನು ವಾಡಿ ರೈಲ್ವೆ ನಿಲ್ದಾಣದಲ್ಲಿ ದಸ್ತಗಿರಿ ಮಾಡಲಾಗಿದೆ

ಹೈದರಾಬಾದಿಗೆ ಯಂತ್ರಗಳ ಕಳ್ಳ ರವಾನೆ ಪತ್ತೆ

ಹೈದರಾಬಾದಿಗೆ ವಿದ್ಯುಚ್ಛಕ್ತಿ ಸಾಮಾನುಗಳು ಮತ್ತು ಯಂತ್ರಗಳನ್ನು ಕಳ್ಳತನದಲ್ಲಿ ಸಾಗಿಸುತ್ತಿದ್ದ ಮಹಮದ್ ಯೂಸುಫ್ ಎಂಬ ಮದರಾಸಿನ ವರ್ತಕನೊಬ್ಬನನ್ನು ನಿನ್ನೆ ದಸ್ತಗಿರಿ ಮಾಡಲಾಯಿತು. ಅವನ ಮನೆಯನ್ನು ಶೋಧಿಸಲಾಗಿ ಈ ವ್ಯಾಪಾರಕ್ಕೆ ಸಂಬಂಧಪಟ್ಟ ಹಲವು ಕಾಗದ ಪತ್ರಗಳು ದೊರೆತುವೆಂದು ಗೊತ್ತಾಗಿದೆ. ಅತನಿಗೆ ಸಹಾಯ ಕನಾಗಿದ್ದ ಕೋದಂಡರಾಮ ಶೆಟ್ಟಿ ಎಂಬಾತನನ್ನು ದಸ್ತಗಿರಿ ಮಾಡಲಾಗಿದೆ

ಮಧ್ಯ ಭಾರತ ಯೂನಿಯನ್ ಅರಸರ ಸಿಬ್ಬಂದಿ ವೆಚ್ಚ

ಮಧ್ಯ ಭಾರತದ ೨೦ ಸಂಸ್ಥಾನಗಳ ಅರಸರು ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯೊಡನೆ ಸಮಾಲೋಚನೆ ನಡೆಸಿ ತಮ್ಮ ಖರ್ಚಿಗಾಗಿ ಎಷ್ಟು ಮೊಬಲಗನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದವರು ಸೂಚಿಸುತ್ತಾರೋ ಅಷ್ಟನ್ನು ತೆಗೆದುಕೊಳ್ಳಲು ಒಪ್ಪಿರುವರೆಂದು ಗೊತ್ತಾಗಿದೆ

ಸಂಗೀತ ಪರೀಕ್ಷೆ ಫಲಿತಾಂಶ

ನಂಜನಗೂಡು. ಎಸ್ ಎಸ್ ಮೂರ್ತಿಗಳ ಶಿಷ್ಯ ಮಂಡಲಿಯಿಂದ ಈ ವರ್ಷ ಸಂಗೀತ ಪರೀಕ್ಷೆಗೆ ಕುಳಿತಿದ್ದ ೫ ಮಂದಿ ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ ಅವರ ಪೈಕಿ ಒಬ್ಬರು ಮೊದಲನೆಯ ತರಗತಿಯಲ್ಲಿ ತೇರ್ಗಡೆ ಯಾಗಿದ್ದಾರೆ.

ಬೊಂಬಾಯಿನಲ್ಲಿ ಮತ್ತೆ ಇರಿತದ ಪ್ರಸಂಗ

ನಿನ್ನೆ ಬೆಳಗ್ಗೆ ಬೊಂಬಾಯಿನ ನಾಗಪಾದ ಪ್ರದೇಶದಲ್ಲಿ ಮತ್ತೆ ಒಂದು ಇರಿತದ ಪ್ರಸಂಗ ನಡೆಯಿತೆಂದೂ, ಈ ಸಂಬಂಧದಲ್ಲಿ ೧೧ ಮಂದಿಯನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ ಮೊನ್ನೆ ಸಂಜೆ ಪರೇಲ್ ಮತ್ತು ಕೋಟೆ ಪ್ರಾಂತ್ಯ ಭಾಗಗಳಲ್ಲಿ ಹಲವು ಚೂರಿ ಇರಿತಗಳಾದುವೆಂದೂ, ಇದರ ಪರಿಣಾಮವಾಗಿ ನಗರದ ಒಂದು ಭಾಗಕ್ಕೆ ರಾತ್ರಿ ೭-೩೦ ರಿಂದ ಬೆಳಗ್ಗೆ ೬ ರವರೆಗೆ ೭ ದಿನಗಳ ಕಾಲ ಕರ್ಫ್ಯೂ ಜಾರಿ ಮಾಡಲಾಗಿದೆಯೆಂದೂ ವರದಿಯಾಗಿದೆ

ಕೊಚ್ಚಿ ಅರಸರ ನಿಧನ

ಈಗ ಕೆಲವು ದಿನಗಳಿಂದ ಕಾಹಿಲೆ ಬಿದ್ದಿದ್ದ ಕೊಚ್ಚಿ ಸಂಸ್ಥಾನಾಧೀಶರಾದ ಶ್ರೀ ಕೇರಳ ವರ್ಮರವರು ನಿನ್ನೆ ಮಧ್ಯಾಹ್ನ ನಿಧನರಾದರು ಅವರ ಗೌರವಾರ್ಥವಾಗಿ ಮೈಸೂರು, ಸರ್ಕಾರದವರು ಎಲ್ಲ ಶಾಲಾ ಕಾಲೇಜುಗಳಿಗೂ ಮತ್ತು ಕಛೇರಿ, ಕೋರ್ಟುಗಳಿಗೂ ಈ ದಿನ ರಜಾ ಕೊಟ್ಟಿದ್ದಾರೆ

ಸರ್ ಮಿರ್ಜಾರವರಿಗೆ ಕೇಂದ್ರ ಸರ್ಕಾರದ ಹುದ್ದೆ

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾರವರನ್ನು ಭಾರತ ಸರ್ಕಾರದವರು ಒ.ನ. ವಿದೇಶೀ ಮುಖ್ಯ ರಾಷ್ಟ್ರಕ್ಕೆ ರಾಯಭಾರಿಯನ್ನಾಗಿ ನೇಮಿಸಲಿರುವರೆಂದು ಗೊತ್ತಾಗಿದೆ

ಭಾರತದಲ್ಲಿ ಮೈಸೂರು ಗಾಬುಲಿನ ಚಿತ್ರ ತಯಾರಿಕೆ

ಕಳೆದ ೧೦ ವರ್ಷಗಳಿಂದಲೂ ವಿದೇಶೀ ಚಲನಚಿತ್ರಗಳಲ್ಲಿ ಪಾತ್ರವಹಿಸಿ ಪ್ರಖ್ಯಾತಿಗಳಿಸಿದ ಮೈಸೂರು ಸಾಬು ಸ್ವದೇಶಕ್ಕೆ ಅಮೆರಿಕದಿಂದ ಹಿಂತಿರುಗುವನೆಂದು ಹೇಳಲಾಗಿದೆ ಭಾರತದಲ್ಲಿ "ಟರ್ನ್ ಆಫ್ ದಿ ಎಲಿಫೆಂಟ್ ಬಾಯ್" ಎಂಬ ಚಿತ್ರವನ್ನು ಆತನು ತಯಾರಿಸಲಿರುವನೆಂದು ತಿಳಿದುಬಂದಿದೆ. ——

ಕುರುಬರ ವಿದ್ಯಾರ್ಥಿ ನಿಲಯ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಮೇಲ್ಕಂಡ ವಿದ್ಯಾರ್ಥಿನಿಲಯಕ್ಕೆ ಸೇರಲಿಚ್ಛಿಸುವ ಎಲ್ಲ ಕೋಮಿನ ವಿದ್ಯಾರ್ಥಿಗಳೂ ಇದೇ ೧೫ ನೇ ತಾ॥ ಒಳಗಾಗಿ ಅರ್ಜಿಗಳನ್ನು ಮ್ಯಾನೇಜರಿಗೆ ಕಳುಹಿಸಬೇಕೆಂದು ಕೋರಲಾಗಿದೆ

ಕಂಟೆಂಪ್ಟ್ ಅಫ್ ಕೋರ್ಟ್ ಮೊಕದ್ದಮೆ

ಕೋರ್ಟಿನಲ್ಲಿ ಬಿಸಿ ವಾಗ್ವಾದ

ಸ್ವಂ. ಸು. ಫೋ॥] ಬೆಂಗಳೂರು ೯

ನಿನ್ನೆ ದಿನ ಶ್ರೀಗಳಾದ ಎಲ್ ಎಸ್ ರಾಜು, ಪಿ ಆರ್ ರಾಮಯ್ಯ ಮತ್ತು ಪಿ ಬಿ. ಶ್ರೀನಿವಾಸರವರುಗಳ ಮೇಲಿನ ಕಂಟೆಂಪ್ಟ್ ಅಫ್ ಕೋರ್ಟ್ ಮೊಕದ್ದಮೆಯು ವಿಚಾರಣೆಗೆ ಬಂದಾಗ, ನ್ಯಾಯಾಧೀಶರಾದ ಶ್ರೀ ಮೇದಪ್ಪನವರಿಗೂ ಮತ್ತು ಆಪಾದಿತರಿಗೂ ಕೆಲವು ಮಾತುಗಳು ನಡೆದು, ಬಿಸಿ ವಾತಾವರಣವುಂಟಾಯಿತು ಅಪಾದನೆಗೆ ಗುರಿಯಾಗಿರುವ ಲೇಖನಗಳನ್ನು ಕುರಿತು ಅವನ್ನು 'ಬ್ಲ್ಯಾಕ್ ಮೇಲಿಂಗ್ ಮತ್ತು ಇಂಟಿಮಿಡೇಟಿಂಗ್' ಎಂದು ತಿಳಿಸಿದಾಗ, ಶ್ರೀಗಳು ಪಿ ಆರ್. ರಾಮಯ್ಯ ಮತ್ತು ಪಿ ಬಿ ಶ್ರೀನಿವಾಸರವರುಗಳು ನ್ಯಾಯಾಧೀಶರನ್ನು ಕುರಿತು, ಈ ಲೇಖನಗಳ ಬಗ್ಗೆ ನ್ಯಾಯಾಧೀಶರು ಈಗಾಗಲೇ ಒಂದು ತೀರ್ಮಾನಕ್ಕೆ ಬಂದಿದ್ದಲ್ಲಿ ತಾವು ಇನ್ನು ಮುಂದೆ ಈ ಮೊಕದ್ದಮೆಯಲ್ಲಿ ಭಾಗವಹಿಸ ಬೇಕಿಲ್ಲವೆಂದೂ, ಅವಶ್ಯಕವಾದರೆ ಶಿಕ್ಷೆಯನ್ನು ಅನುಭವಿಸುವುದಾಗಿಯೂ ತಿಳಿಸಿದರು. ನ್ಯಾಯಾಧೀಶರು ಆಡಿದ ಮಾತುಗಳು ತಮ್ಮ ಕಕ್ಷಿಗಾರರಿಗೆ ತುಂಬಾ ಮನ ನೋಯಿಸಿವೆಯೆಂದು ಶ್ರೀ ರಾಮಯ್ಯನವರು ಹೇಳಿದಾಗ, ಶ್ರೀ ಮೇದಪ್ಪನವರು "Yes. It is nothing but that. It is cowardly If the cap fits let them wear it" ಎಂದರು. ಆಗ ಶ್ರೀ ರಾಜುರವರು "They will never wear it" ಎಂದರು ಅದಕ್ಕೆ ನ್ಯಾಯಾಧೀಶರು "If they do not wear it they will be made to wear" ಎಂದರು

ಪ್ಯಾಲಸ್ಟೀನ್ ಶಾಂತಿ ಭಂಗ

ಪ್ಯಾಲಸ್ಟೀನಿನ ಶಾಂತಿ ಪಾಲನೆ ಅವಧಿಯು ಇನ್ನು ಕೆಲವು ಗಂಟೆಗಳ ಕಾಲ ಇರುವುದಾದರೂ ಅಲ್ಲಿ ಈಗಾಗಲೇ ಯುದ್ಧದ ಆರಂಭದ ಸೂಚನೆಗಳು ಕಂಡುಬರುತ್ತಿವೆ. ಯೆಹೂದ್ಯರ ನಾಲ್ಕು ವಾರಗಳ ಕಾಲ ಶಾಂತಿಯ ಅವಧಿಯನ್ನು ಮತ್ತೆ ಮುಂದುವರಿಸಲು ಸನ್ನದ್ಧರಿದ್ದರೂ ಅರಬ್ಬರು ಅದನ್ನು ವಿರೋಧಿಸುವ ಸೂಚನೆಗಳು ಕಂಡುಬರುತ್ತಿವೆ ಯೆಹೂದ್ಯರ ವಿರುದ್ಧವೂ ದಕ್ಷಿಣದಲ್ಲಿ ವಿಮಾನ ನಿಲ್ದಾಣದಲ್ಲಿ ಅರಬ್ಬರು ಗುಂಡು ಹೊಡೆದರು. ಕೈರೋದಿಂದ ಮೈಸೂರು ಸಿಟಿಜನ ಮತ್ತು ಒಬ್ಬ ಶ್ರೀ ಪ್ರಯಾಣಿಕರಿದ್ದ ವಿಮಾನ ವಾಪಸು ವರದಿಯಾಗಿದೆ ದಕ್ಷಿಣ ಪ್ಯಾಲಸ್ಟೀನಿನಲ್ಲಿ ತೀವ್ರ ಘರ್ಷಣೆಗಳು ನಡೆಯುತ್ತಿವೆ ವಿಶ್ವಸಂಸ್ಥೆಯ ಶಾಂತಿ ಮಧ್ಯಸ್ಥಿಕೆಗಾರರನ್ನೂ ಮತ್ತು ಶಾಂತಿ ಸಮಿತಿ ಸದಸ್ಯರನ್ನೂ ವಾಪಸು ಕರೆಸಿಕೊಳ್ಳಲು ಅವಶ್ಯವಾದ ಹಡಗುಗಳೂ ಸಜ್ಜಾಗಿವೆಯೆಂದೂ ಹೇಳಲಾಗಿದೆ

ಅಸ್ಸಾಂ ಪ್ರಾಂತ್ಯ ಕಾಂಗ್ರೆಸ್ ಸಮಿತಿ

ಮೈಸೂರು ಜಿಲ್ಲೆಯ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರ ಸ್ಥಾನದ ಚುನಾವಣೆಯ ಪಟ್ಟಿಯು ಈಗಾಗಲೇ ಪ್ರಕಟವಾಗಿದೆ ಆ ಬಗ್ಗೆ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸರ್ಕಾರಿ ಕಾರ್ಯದರ್ಶಿ ಮೂಲಕ ನಾಳೆ ಸಂಜೆ ೫ ರ ಒಳಗಾಗಿ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ತಿಳಿಸಬೇಕಾಗಿ ಕೋರಲಾಗಿದೆ

ಹೈದರಾಬಾದಿನಲ್ಲಿ ಹಿಂದೂ ಮುಸ್ಲಿಂ ಮೈತ್ರಿಗಾಗಿ ಉಪವಾಸ

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದವನ್ನು ಏರ್ಪಡಿಸಲು ಮಹಬೂಬ್ ನಗರದ ಶ್ರೀ ವೆಂಕಟರಾಯರು ಮೊನ್ನೆಯಿಂದ ಉಪವಾಸ ವ್ರತವನ್ನು ಕೈಗೊಂಡಿದ್ದಾರೆ. ಮೂರ್ ದಿನಗಳ ವರೆಗೆ ನಡೆದ ಅವರ ಉಪವಾಸ ವನ್ನು ಪೊಲೀಸರು ತಡೆದುದರಿಂದ ಪುನಃ ಉಪವಾಸವನ್ನು ಕೈಗೊಂಡಿದ್ದಾರೆ

ಎಲ್. ಎಸ್. ಪರೀಕ್ಷೆ ಫಲಿತಾಂಶ

ಚಾಮರಾಜನಗರ ೬

ಈ ಊರಿನ ಮಾಧ್ಯಮಿಕ ಶಾಲೆಯಿಂದ ಕುಳಿತಿದ್ದ ೧೧೭ ವಿದ್ಯಾರ್ಥಿಗಳ ಪೈಕಿ ೧೦೬ ಮಂದಿ ಉತ್ತೀರ್ಣರಾಗಿದ್ದಾರೆ. ಅದರಲ್ಲಿ ೪೭ ವಿದ್ಯಾರ್ಥಿಗಳು ಮೊದಲನೇ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಇಲ್ಲಿನ ಹೈಸ್ಕೂಲಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಸ್ಥಳವಿಲ್ಲವೆಂದು ತಿಳಿಸಿರುವುದರಿಂದ, ಆ ವಿದ್ಯಾರ್ಥಿಗಳಿಗೆ ತುಂಬಾ ಕಷ್ಟವಾಗಿರುತ್ತದೆ. ಬೇಗನೆ ಸರಕಾರವು ಏರ್ಪಾಡಿಸಿ ಅವರುಗಳಿಗೆ ಸಹಾಯ ಮಾಡಬೇಕೆಂದು ಕೋರಲಾಗಿದೆ

ಮಹಿಳಾ ಬಸ್ ಕಂಡಕ್ಟರುಗಳು

ಮದರಾಸ್ ನಗರದಲ್ಲಿ ಸರ್ಕಾರದವರು ಏರ್ಪಡಿಸಿರುವ ಎಕ್ಸ್‌ಪ್ರೆಸ್ ಬಸ್ ಸರ್ವೀಸಿಗೆ ಮಹಿಳಾ ಕಂಡಕ್ಟರುಗಳನ್ನು ನೇಮಿಸಲಾಗುವುದೆಂದು ಹೇಳಲಾಗಿದೆ. ಈ ಹುದ್ದೆಗಳಲ್ಲಿ ಸೇರಲು ಇಚ್ಛಿಸುವ ಮಹಿಳೆಯರು ... ಕಂಡಕ್ಟರುಗಳ ಕೆಲಸಗಳನ್ನು ಕಲಿಯಬೇಕಾಗಿ ಬರುವುದೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆಂದು ಹೇಳಲಾಗಿದೆ

ಗಡಿ ಆಚೆಗೆ ಸಾಗುತ್ತಿದ್ದ ರಾಗಿ ಪತ್ತೆ

ಚಾಮರಾಜನಗರ ೬

ಇಲ್ಲಿಂದ ಮದರಾಸ್ ಗಡಿಗೆ ಕಳ್ಳತನದಲ್ಲಿ ಸಾಗುತ್ತಿದ್ದ ೫೦ ಪಲ್ಲ ರಾಗಿಯನ್ನು ಪೊಲೀಸ್ ದಫೇದಾರ್ ಶ್ರೀ ರಾಮಯ್ಯ ಮತ್ತು ಇಬ್ಬರು ಕಾನ್ಸ್‌ಟೇಬಲುಗಳು ಪತ್ತೆ ರಾತ್ರಿ ಪತ್ತೆ ಮಾಡಿ, ೮ ಜನರನ್ನು ವಶಗಿರಿ ಮಾಡಿರುತ್ತಾರೆ.

ನಿಮ್ಮ ಮೈ ಬೆಳಗುವಂತೆ ಹೊಳೆಯಬೇಕೆ? ಹಾಗು ಚಾಮರಾಜ ಮುಖಕಾಂತಿಗಳಿಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಕೈಸ್ತ ಕೈಪತಾಣರನ್ನು ನೇರಿಸಲು ಪಾಕೀಸ್ತಾನದ ಪ್ರಯತ್ನ

ಕಾಶ್ಮೀರದಲ್ಲಿ ಯುದ್ಧ ನಡೆಸಲು ಪಠಾಣರನ್ನು ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳಲು ಪಾಕಿಸ್ತಾನವು ಕಳೆದೆರಡು ಮೂರು ವಾರಗಳಿಂದ ಪ್ರಯತ್ನಿಸುತ್ತಿದೆಯೆಂದು ಕಾಶ್ಮೀರದ ಫ್ರಂಟ್ ಕ್ಷೇತ್ರದಲ್ಲಿ ಸೆರೆಸಿಕ್ಕಿದ ಒಬ್ಬ ಪಠಾಣ ಸೈನಿಕನು ತಿಳಿಸಿರುತ್ತಾನೆ

ವಸಂತ ವಸ್ತು ಪ್ರದರ್ಶನ ಸಮಿತಿ

ಇದೇ ಅಕ್ಟೋಬರಿನಲ್ಲಿ ರಾಜಧಾನಿಯಲ್ಲಿ ನಡೆಯಲಿರುವ ವಸಂತ ವಸ್ತುಪ್ರದರ್ಶನಕ್ಕೆ ಸರ್ಕಾರದವರು ೨೮ ಜನ ಸದಸ್ಯರುಳ್ಳ ಒಂದು ಸಮಿತಿಯನ್ನು ರಚಿಸಿದ್ದಾರೆ. ಅದಕ್ಕೆ ವಿದ್ಯಾ ಸಚಿವರಾದ ಶ್ರೀ ಹೆಚ್. ಚಂದ್ರಶೇಖರಯ್ಯನವರು ಅಧ್ಯಕ್ಷರು, ಶ್ರೀ ಜಿ. ಬಿ. ಮಲ್ಲರಾಧ್ಯರು ಉಪಾಧ್ಯಕ್ಷರು ಮತ್ತು ಶ್ರೀ ಅಣ್ಣಾ ನೆಲದ ರಿಯಾರವರು ಕಾರ್ಯದರ್ಶಿಗಳು.

ಅಪೆರಾ ಟಾಕೀಸ್

9—7—48 ರಿಂದ ಅಮೋಘ 7 ನೇ ವಾರ

ಅಭಿಮನ್ಯು

(ತಮಿಳು)

—: ಪಾತ್ರ :—

ಯು. ಆರ್. ಜೀವರತ್ನಂ, ಎಸ್. ... ಪುಟ್ಟುಸ್ವಾಮಿ

ಕೀರ್ತಿ ಪಡೆದಿರುವ ... ಚಿತ್ರವನ್ನು ಪ್ರದರ್ಶಿಸಲ್ಪಡುತ್ತಿದೆ.

Morning Shows From 9·7·48

YOUNG WIDOW

Edited printed and published by A. R. Nagarajan at the Sadhvi ... D. Subbaiah Road Mysore.

ಶ್ರೀ ಗಾಯತ್ರೀ ಟಾಕೀಸ್

9—7—48 ರಿಂದ 4 ದಿನಗಳು ಮಾತ್ರ

Warner's Thundering Thrilling Drama

CHEYENNE

(ಷಾಯಾನೆ)

— ಪಾತ್ರ :—

ಡೆನ್ನಿಸ್ ಮಾರ್ಗನ್ ● ಜಾನ್ ವೇಮನ್

—: Next Change :—

Warner's most Romantic Drama

DECEPTION

—: Starring —

Bette Davis ; Claude Raine

ಪ್ರಭುದೇವ ಟಾಕೀಸ್

AT PRABHUDEV TALKIES

(ತಮಿಳು)

9-7-48 ನೇ ಶುಕ್ರವಾರದಿಂದ

ಅಮೋಘವಾದ 4 ನೇ ವಾರ

ಶನಿವಾರ ಮತ್ತು ಭಾನುವಾರಗಳಲ್ಲಿ 3 ಆಟಗಳು

ಮ್ಯಾಟಿನಿ 3-15, 1 ನೇ ಆಟ 6-30, 2 ನೇ ಆಟ ರಾತ್ರಿ 10 ...

ಸೋಮವಾರದಿಂದ ಮ್ಯಾಟಿನಿ ಇಲ್ಲ

BANGALORE RACES 1948

EXTRA MEETING

ಬೆಂಗಳೂರು ರೇಸಸ್ ಎಕ್ಸ್ಟ್ರಾ ಮೀಟಿಂಗ್ ಗಳಿಲ

ಜುಲೈ 10, 14, 17, 21, 24 ಮತ್ತು 29 ರಲ್ಲಿ

ಒಂದನೇ ಟೋಟ್ ರೂ ೧೦, : : ಎರಡನೇ ಟೋಟ್, ರೂ ೫

ರೂ ೩ ಸ್ಪ್ಲಿಟ್, ರೂ ೫ ಟ್ರಿಬಲ್ ಈವೆಂಟ್

ಒಂದನೇ ತರಗತಿ — ಪುರುಷರು ಸೀಸನ್ ಟಿಕೇಟ್ ರೂ ೩೦ — ದಿನಕ್ಕೆ, ರೂ ೬

ಸ್ತ್ರೀಯರು ,, ರೂ ೧೫ — ,, ರೂ ೪

ಎರಡನೇ ,, ಪುರುಷರು ಅಥವ ಸ್ತ್ರೀಯರು — ,, ರೂ ೩

ಶುಲ್ಕ]

ಪ್ರಭಾ ಪಿಕ್ಚರ್ ಹೌಸ್

9-7-48 ರಿಂದ 8 ನೇ ವಾರ

ಖಿಡ್‌ಕಿ ಖಿಡ್‌ಕಿ

(ಹಿಂದಿ)

ರೆಹನ ● ದೇಸಾಯಿ ● ಮನ್ಮೋಹನ್ ಕೃಷ್ಣ

ಫೋ ನಂ. 792 || ವಂದೇಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೧೦-೭-೪೮ [ಸಂಚಿಕೆ ೩೨೯

ವಜೀರಿಸ್ತಾನದ ಮೇಲೆ ಪಾಕೀಸ್ತಾನದ ಬಾಂಬು

...ಪಿ ಫಕೀರರ ಪಡೆಗೂ ...ಕಿಸ್ತಾನ್ ಪಡೆಗೂ ಘರ್ಷಣೆ

...ನಾಡು ಗಾಂಧಿಯುಪಕರನ್ನೂ ಮತ್ತು ...ದ ಒಂದು ಸಾವಿರ ಮಂದಿ ಕೆಂಪು ...ವರನ್ನೂ ದಸ್ತಗಿರಿ ಮಾಡಿರುವುದರ ...ರಾಧಾನಗೆಂದು ಈಪಿಫಕೀರರು ವಜೀರಿಸ್ತಾನದ ಜನರನ್ನು ದಂಗೆಏಳಲು ...ತ್ತಿರುವರೆಂದು ಹೇಳಲಾಗಿದೆ ...ದ ವೇಲಿನ ಯುದ್ಧದಲ್ಲಿ ಪಾಕಿ ...ಸೈನಿಕರಿಗೆ ನೆರವು ನೀಡಲು ಈಪಿ ... ನಿರಾಕರಿಸಿದರೆಂದೂ ಗೊತ್ತಾಗಿ ...ತ್ತರ ವಜೀರಿಸ್ತಾನದ ಗಡಿ ಪ್ರ ...ದ ಪಾಕೀಸ್ತಾನ್ ಸರ್ಕಾರದವರು ಬ ...ದ ಲಿಟಿರಿ ಕಾವಲನ್ನು ಹಾಕಿರುವ ... ಈಪಿ ಫಕೀರರ ಸೈನ್ಯಗಳಿಗೂ ಪಾ ... ಸೈನ್ಯಗಳಿಗೂ ಸಣ್ಣ ಪುಟ್ಟ ಘರ್ಷ ... ನಡೆದುವೆಂದೂ, ಪಾಕೀಸ್ತಾನದ ...ನ್‌ಳು ಬಾಂಬುಗಳನ್ನು ಹಾಕಿ ಗು ...ನ ಜನರಿಗೆ ಸಾವು ನೋವು ಉಂ ...ಾಡಿದವೆಂದೂ ವರದಿಯಾಗಿದೆ

...ರಾಬಾದ್ ಪೋಲೀಸ್ ಠಾಣೆ ...ಲ್ಲಿ ಭಾರಿ ಆಸ್ಫೋಟನೆ

...ನ್ನೆ ರಾತ್ರಿ ಹೈದರಾಬಾದಿನ ಆಬೀ ...ಸ್ತಿರುವ ಪೋಲೀಸ್ ಠಾಣೆಯಲ್ಲಿ ಬಾಂಬು ಅಸ್ಫೋಟನೆಯಾಗಿ ಕಟ್ಟಡ ...ಬೆಯು ಹಾರಿ ಹೋಯಿತೆಂದೂ, ...ಇಬ್ಬರು ಖೈದಿಗಳಿಗೆ ತೀವ್ರ ಗಾಯ ...ವೆಂದೂ, ಅಕ್ಕಪಕ್ಕದ ಅಂಗಡಿಗಳ ...ಗಾಜುಗಳೆಲ್ಲವೂ ಚೂರು ಚೂರಾ ...ದೂ ವರದಿಯಾಗಿದೆ ಆ ಸ್ಥಳದಿಂ ...ಹೋಗುತ್ತಿದ್ದ ೧೨ ಜನರನ್ನು ದಸ್ತ ...ಮಾಡಲಾಗಿದೆ

...ಲ್ ಅವೀವ್ ಮೇಲೆ ವಿಮಾನ ಧಾಳಿ

...ಲಸ್ತೀನಿನಲ್ಲಿ ಕಳೆದ ೪ ವಾರಗಳಿಂದ ...ಂತಿ ನೆಲಸಿದ್ದು ನಿನ್ನೆ ಪುನಃ ಕದನ ...ಧವಾಯಿತೆಂದು ಹೇಳಲಾಗಿದೆ. ದಕ್ಷಿ ...ಲಸ್ತೀನಿನಲ್ಲಿ ಈಜಿಪ್ಟಿನ ಸೈನಿಕರು ...ದ್ದ್ ಮೇಲೆ ಧಾಳಿ ನಡೆಸಿದರೆಂದೂ ...ವೀವ್ ಮೇಲೆ ಅಪರಿಚಿತ ವಿಮಾನ ...ಗಾರಾಡಿ ಬಾಂಬುಗಳನ್ನು ಹಾಕಿ ...ರದಿಯಾಗಿದೆ

...ರಿಕದ ವಿಮಾನಗಳಿಗೆ ರಷ್ಯದ ಎಚ್ಚರಿಕೆ

...ನ್ ನಗರದ ಮೇಲೆ ರಷ್ಯವು ಹಲ ...ಂಧಗಳನ್ನು ಹಾಕಿರುವುದರಿಂದ ಬ್ರಿ ...ಷ್ ಅಮೆರಿಕಗಳು ಅಲ್ಲಿಗೆ ಆಹಾರ ...ಪಕರಣಾದುಗ್ರಿಗಳನ್ನು ರಾತ್ರಿಕಾಲದ ...ನಗಳಮೂಲಕರವಾನಿಸುತ್ತಿರುಯ ...ಪ ವಿಮಾನಗಳಿಗೆ ರಕ್ಷಣೆ ಕೊಡ ...ವಿಲ್ಲನೆಂದು ರಷ್ಯವು ಅಮೆರಿಕಕ್ಕೆ ... ಇತ್ತಿದೆಯೆಂದು ಹೇಳಲಾಗಿದೆ.

...ಂದ್ರ ಸರ್ಕಾರಕ್ಕೂ ...ಸೂರಿಗೂ ಪ್ರತ್ಯೇಕ ...ಲಿಫೋನ್ ವ್ಯವಸ್ಥೆ

... ಸರ್ಕಾರದೊಂದಿಗೆ ನೇರವಾದ ಸಂ ...ಪ್ಪಿಕೊಳ್ಳಲು ಮತ್ತು ಗುಪ್ತವಾದ ...ಗಳನ್ನು ನಡೆಸಲು ಪ್ರತ್ಯೇಕ ಟೆಲಿ ...ವಸ್ಥೆಗಳನ್ನು ಏರ್ಪಡಿಸಬೇಕೆಂದು ಕೇಂ ...ರದವರು ಸಲಹೆ ಮಾಡಿದ್ದಾರೆಂದೂ ...ಮೈಸೂರು ಸರ್ಕಾರದವರು ಒಪ್ಪಿರು ... ತಿಳಿದುಬಂದಿದೆ

ನಿಜಾಮರಿಗೆ ಬ್ರಿಟನ್ನಿನಿಂದ ಶಸ್ತ್ರಾಸ್ತ್ರಗಳ ಸರಬರಾಜಿಲ್ಲ

ಹೈದರಾಬಾದ್ ಸಂಸ್ಥಾನಕ್ಕೆ ಬ್ರಿಟನ್ನಿನಿಂದ ಗುಪ್ತವಾಗಿ ಶಸ್ತ್ರಾಸ್ತ್ರಗಳು ರವಾನೆಯಾಗುತ್ತಿದೆಯೆಂದು ಭಾರತ ಸರ್ಕಾರವು ಬ್ರಿಟನ್ನಿಗೆ ಆಕ್ಷೇಪಣೆ ಪತ್ರ ಬರೆದಿರುವ ವಿಚಾರವಾಗಿ ಮೊನ್ನೆ ಪಾರ್ಲಿಮೆಂಟ್ ಸಭೆಯಲ್ಲಿ ಕಾಮನ್‌ವೆಲ್ತ್ ಮಂತ್ರಿಗಳಾದ ಮಿ|| ಫಿಲಿಪ್ ನೋಯಲ್ ಬೇಕರ್ ರವರು ಒಂದು ಹೇಳಿಕೆಯನ್ನಿತ್ತು ಬ್ರಿಟನ್ನಿನಿಂದ ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ರವಾನಿಸಲು ಬ್ರಿಟಿಷ್ ಸರ್ಕಾರವು ಒಪ್ಪುವುದಿಲ್ಲವೆಂದೂ, ಅವರು ಅದಕ್ಕೆ ಅವಕಾಶ ಕೊಡುವುದಿಲ್ಲವೆಂದೂ ಮತ್ತು ಅಂತರ ರಾಷ್ಟ್ರೀಯ ವಿಮಾನ ನಿಬಂಧನೆಗಳಿಗೆ ಅದು ತೀವ್ರ ವಿರುದ್ಧವೆಂದೂ ತಿಳಿಸಿರುತ್ತಾರೆ.

ರೈಲಿಗೂ ಆನೆಗಳಿಗೂ ಡಿಕ್ಕಿ

ಕಳೆದ ಮಂಗಳವಾರ ರಾತ್ರಿ ಲಕ್ನೋ-ಬರೇಲಿ ರೈಲು, ಮಾಲಾ ನಿಲ್ದಾಣದ ಹತ್ತಿರ ಹೋಗುತ್ತಿದ್ದಾಗ ರೈಲು ಕಂಬಿಗಳಮೇಲೆ ಸರ್ಕಾರಕ್ಕೆ ಸೇರಿದ ಮೂರು ಆನೆಗಳು ನಿಂತಿದ್ದುವೆಂದೂ, ರೈಲಿನ ಶಬ್ದವನ್ನು ಕೇಳಿ ಒಂದು ಆನೆಯು ಹೊರಟುಹೋಯಿತೆಂದೂ, ಆದರೆ ಮಿಕ್ಕವು ಅಲ್ಲೇ ನಿಂತುಕೊಂಡಿದ್ದುದರಿಂದ ಇಂಜನ್ನು ಅವುಗಳಿಗೆ ಡಿಕ್ಕಿ ಹೊಡೆಯಿತೆಂದೂ ಆನೆಗಳಿಗೆ ತುಂಬಾ ಗಾಯಗಳಾಗಿ ಅವುಗಳು ಬದುಕುವುದು ಕಷ್ಟವೆಂದೂ ಹೇಳಲಾಗಿದೆ

ಸನ್ಯಾಸಾಶ್ರಮ ಸ್ವೀಕಾರ

ಬಾಗರಕಟ್ಟೆ ಶ್ರೀ ಶ್ರೀ ಪ್ರದ್ಯುಮ್ನ ತೀರ್ಥ ಶ್ರೀ ಪಾದಂಗಳವರು ತಮ್ಮ ಶಿಷ್ಯರಾದ ಶ್ರೀ ರಘುನಾಥಾಚಾರ್ಯರಿಗೆ ಕಳೆದ ಗುರುವಾರ ಶಾಸ್ತ್ರೋಕ್ತವಾಗಿ ತುರಿಯಾಶ್ರಮವನ್ನು ಕೊಟ್ಟು, ಶ್ರೀ ಶ್ರೀನಾಥ್ ಪ್ರಜ್ಞಾಧಿರಾಜ ತೀರ್ಥ ಶ್ರೀ ಪಾದಂಗಳವರೆಂದು ನಾಮಕರಣ ಮಾಡಿದರು. ——

ಸಂಗೀತ ಪರೀಕ್ಷೆ ಫಲಿತಾಂಶ

ರಾಜಧಾನಿಯ ಸಂಗೀತ ವಿದ್ವಾಂಸರುಗಳಾದ ಶ್ರೀ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ಕಳೆದ ವರ್ಷದ ಸಂಗೀತ ಮತ್ತು ವಿಡ್ಲ್ ಸ್ಕೂಲ್ ಪರೀಕ್ಷೆಗಳಿಗೆ ಕುಳಿತಿದ್ದ ಎಲ್ಲ ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುತ್ತಾರೆ ಬಾಯಿ ಹಾಡುಗಾರಿಕೆ ಮತ್ತು ಸೀನಿಯರ್ ಗ್ರೇಡಿನ ಪರೀಕ್ಷೆಗಳಲ್ಲೂ ಎಲ್ಲರೂ ಶೇಗ್ರೇಡಿಯಾಗಿರುತ್ತಾರೆ

ಅರಮನೆಯಲ್ಲಿ ಭಜನೆ ಕೂಟ

ಮೈಸೂರು ೧೦

ಈ ದಿನ ಸಂಜೆ ೫ ಗಂಟೆಯಿಂದ ೭-೩೦ ರವರೆವಿಗೆ ಅರಮನೆಯಲ್ಲಿ ಭಜನೆಯನ್ನು ನಡೆಸಲು ಪಂಡರಾಪುರದ ದಿಂಡಿ ಭಜನೆ ಕೂಟದವರು ಸಂಜೆ ೪ ಗಂಟೆಗೆ ಸಯ್ಯಾಜಿರಾವ್ ರಸ್ತೆಯ ಮೂಲಕ ಅರಮನೆಗೆ ತೆರಳುವರು.

ಮೇಲ್ಕಂಡ ಕೂಟದ ಸಹಾಯಾರ್ಥವಾಗಿ ಈಚೆಗೆ ಕೆಳಗೆ ಕಂಡಂತೆ ಧನ ಸಹಾಯ ದೊರೆತಿರುತ್ತದೆ:—ಶ್ರೀಗಳಾದ ಕೆ ವಿ ಮುನಿಸ್ವಾಮಿ ಶೆಟ್ಟರು ರೂ ೧೫೧, ಸಿ ಪೇಂ ಮಾಳ್ ಚೆಟ್ಟರು ೧೦೧, ಮುಕಾರಿಪ್ಪ ಮಂಡಲಿ ೧೫೧, ಮಂಡಿ ಮುಕಾರಿಪ್ಪ ಮಂಡಲಿ ೧೫೧, ಸೋಮವಂಶ ಆರ್ಯ ಕ್ಷತ್ರಿಯ ಸಮಾಜ ೧೫೧, ಕಂದಸ್ವಾಮಿ ಪಿಳ್ಳೆ ೧೫೧, ಅಂಜನಪ್ಪ ೧೫೧, ರಾಜಶೇಖರಯ್ಯ ೧೦೧ ಸುಬ್ಬರಾಯರು ೧೦೧, ವಿ ಡಿ ರಾಮಾರಾಂ ೧೬೧, ಆರ್ ಪುಟ್ಟಣ್ಣ ೧೦೧, ಮಸ್ತಾನಿ ಬ್ಯಾಂಕರುಗಳ ಸಂಘ ೧೨೪ ... ಹಂಚಿದೆ

ಡಿ ಸುಬ್ಬಯ್ಯ ರೋಡಿನಲ್ಲಿ ... ಬ್ರಹ್ಮಾನಂದ ಸ್ವಾಮಿಗಳ ... ಮುಂದೆ ಈ ದಿನ ರಾತ್ರಿ ಶ್ರೀ ನಾ ... ದಾಸರಿಂದ ಸಖ್ಯುಬಾಯಿ ... ಯು ನಡೆಯುತ್ತದೆ

ಚೀಣಾದ ೮೦ ಸಾವಿರ ಕಮ್ಯೂನಿಸ್ಟ್ ಸೈನಿಕರ ಮರಣ

ಚೀಣಾದ ರಾಜಧಾನಿಯಾದ ನ್ಯಾಂಕಿಂಗ್ ಮೇಲೆ ಮುತ್ತಿಗೆ ಹಾಕಲು ಹೊರಟಿದ್ದ ಕಮ್ಯೂನಿಸ್ಟ್ ಸೈನಿಕರನ್ನು ಸರ್ಕಾರದ ಸೈನ್ಯವು ಹೋನಾನ್ ಕ್ಷೇತ್ರದಲ್ಲಿ ತಡೆದು ಹಿಂದಕ್ಕೆ ಓಡಿಸಿತೆಂದೂ, ಈ ಕದನದಲ್ಲಿ ೮೦ ಸಾವಿರ ಕಮ್ಯೂನಿಸ್ಟ್ ಸೈನಿಕರು ಮಡಿದರೆಂದೂ ವರದಿಯಾಗಿದೆ

ಆಚಾರ್ಯ ಕೃಪಲಾನಿಯವರ ಭಾಷಣ

ಮೈಸೂರು ೧೦

ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಆಚಾರ್ಯ ಕೃಪಲಾನಿಯವರೂ ಮತ್ತು ಶ್ರೀಮತಿ ಸುಚೇತ ಕೃಪಲಾನಿಯವರೂ ೧೨ ನೇ ತಾ|| ಸೋಮವಾರ ಸಂಜೆ ೬-೩೦ ಗಂಟೆಗೆ ಮೈಸೂರು ನಗರ ಕಾಂಗ್ರೆಸ್ಸಿನ ಆಶ್ರಯದಲ್ಲಿ ರಂಗಾಚಾರ್ಲು ಸ್ಮಾರಕ ಪುರಭವನದಲ್ಲಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವುಂಟು.

ಎಸ್. ಚನ್ನಯ್ಯ,

...ಮೈಸೂರು ನಗರ ಕಾಂ|| ಸಮಿತಿ

ಬರ್ಲಿನ್ ದಿಗ್ಬಂಧನದ ಬಗ್ಗೆ ತ್ರಿರಾಷ್ಟ್ರಗಳ ಪ್ರತಿಭಟನೆ

ರಷ್ಯವು ಬರ್ಲಿನ್ನಿನಲ್ಲಿ ವಿಧಿಸಿರುವ ದಿಗ್ಬಂಧನವು ... ಉತ್ಕಟ ಪರಿಸ್ಥಿತಿ... ಆರೋಪಿಸಿ ಬ್ರಿಟ... ಅಮೆರಿಕ ರಾಷ್ಟ್ರಗಳು ... ಪ್ರತಿಭಟನಾ ಪತ್ರಗಳ ... ಅಧಿಕಾರದ ... ರಷ್ಯದಂತೆ ... ವುದೆಂದೂ, ಈ ... ಬಚನೆಗಳಿಂದ ಅ ... ತನೆ ಮಾಡಿಕೊಂ ... ಬಿದಂತಾಗುವುದೆಂ ದೂ ... ಆರೋಪಿಸಿದೆ ಅಲ್ಲದೆ ಬರ್ಲಿ... ಸೌಹಾರ್ದಯುತ ಸಮಾಲೋಚನೆಯಿಂದ ಪರಿಹರಿಸಬಹುದೆಂದೂ, ಅದಕ್ಕೆ ಪೂರ್ವ ಭಾವಿಯಾಗಿ ಈಗವಿಧಿಸಿರುವದಿಗ್ಬಂಧನವನ್ನು ತೆಗೆಯಬೇಕೆಂದೂ ಸೂಚನೆ ಕೊಡಲಾಗಿದೆ ಫ್ರಾನ್ಸ್ ... ಅಮೆರಿಕಗಳೂ ತಮ್ಮ ಪತ್ರದಲ್ಲಿ ಇದೇ ರೀತಿ ಪ್ರತಿಭಟಿಸಿವೆ

ಸೀಜ್ ಫೈರ್ ಆಜ್ಞೆಯನ್ನು ಮುಂದುವರಿಸಲು ಮನವಿ

... ಕದನವಿರಾಮಕ್ಕಾಗಿ ... ನಡೆಸುತ್ತಿದ್ದ ... ಈ ದಿನ ಸ್ವದೇ ... ಜೇರುಸಲೇಂ ... ಯಾವ ಪಕ್ಷದವರು ... ಆಜ್ಞೆಯನ್ನು ... ಕಾಲ ಅನುಸರಿಸಬೇಕೆಂ ... ದೆಂದೂ ಗೊತ್ತಾ ...

... ಅಪರಿಚಿತ ...

... ಅಪರಿಚಿತ ವಿಮಾನ ... ಹಳ್ಳಿಗಳ ಮೇಲೆ ... ಹೈದರಾಬಾ ... ವರದಿಯಾಗಿ ... ಪೋಲೀಸರು ... ದೂರು ಕೊ ... ಹೇಳಲಾಗಿದೆ.

ಪಂಚೋಲಿ ದೇಶ

ಪೂರ್ವ ಪಂಜಾಬು ಪ್ರಾಂತ್ಯವನ್ನು ಪಂಚೋಲಿ ದೇಶವೆಂದು ಕರೆಯಬೇಕೆಂದು ಅಲ್ಲಿನ ಜನರು ಸಲಹೆ ಮಾಡಿದ್ದಾರೆ

ವಿವಾಹ ಮಹೋತ್ಸವಗಳು

ಅರಮನೆ ಪುರೋಹಿತರಾದ ಶ್ರೀ ಸಂಜುಂಡಶಾಸ್ತ್ರಿಗಳು ತಮ್ಮ ಪುತ್ರಿ ಚಿ|| ಸೌ|| ಸುಂದರಮ್ಮನನ್ನು ಟಿ ನರಸೀಪುರದ ಪ್ರಸಿದ್ಧ ... ಶ್ರೀ ಎಸ್ ನಾಗರಾಜರವರಿಗೆ (ಶ್ರೀ ಯದುಗಿರಿ ಗೋಪಾಲ ಶಾಸ್ತ್ರಿಗಳ ಮೊಮ್ಮಕ್ಕಳು) ಕೊಟ್ಟು ವಿವಾಹ ಮಹೋತ್ಸವವನ್ನು ... ಬಾಲಕೃಷ್ಣನ ... ವನ್ನೂ ಮೊನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ಶ್ರೀ ... ಶ್ರೀನಿವಾಸ ದೇಶಿ ... ಸಹೋದರ ಶ್ರೀ ... ರವರ ಪುತ್ರಿ ... ತಂದುಕೊಂಡು ... ನೆರವೇರಿದವಲ್ಲಿ

ಸಂಗೀತ ಪರೀಕ್ಷೆ ವಿದ್ಯಾರ್ಥಿಗಳಿಗೆ ಅನ್ಯಾಯ

ಸಂಸ್ಥಾನದಲ್ಲಿ ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಸರ್ಕಾರದವರು ಹೇಳುತ್ತಿದ್ದರೂ ಈ ವರ್ಷದ ಸಂಗೀತ ಪರೀಕ್ಷೆಯಲ್ಲಿ ೪೯೮ ವಿದ್ಯಾರ್ಥಿಗಳ ಪೈಕಿ ೧೬೦ ಮಂದಿ ತೇರ್ಗಡೆಯಾಗಿಲ್ಲ ೫೦ ಅಂಕಗಳನ್ನು ಪಡೆದವರು ಮಾತ್ರ ಮೂರನೇ ಕ್ಲಾಸಿನಲ್ಲಿ ತೇರ್ಗಡೆಯಾಗುವರೆಂದು ಸರ್ಕಾರದವರು ನಿಯಮ ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗುತ್ತಿದೆ. ಈ ಸಾಲಿನ ಇತರ ಪರೀಕ್ಷೆಗಳಿಗೆ ಸರ್ಕಾರದವರು ರಿಯಾಯಿತಿ ತೋರಿಸಿರುವಂತೆಯೇ ಸಂಗೀತ ಪರೀಕ್ಷೆ ಫಲಿತಾಂಶಗಳನ್ನೂ ಪುನರ್ವಿಮರ್ಶಿಸಿ ೨೫ ಅಥವ ೩೦ ಅಂಕಗಳು ಬಂದಿರುವವರಿಗೆಲ್ಲಾ ತೇರ್ಗಡೆ ಕೊಡಬೇಕೆಂದು ವಿದ್ಯಾರ್ಥಿಯೊಬ್ಬರು ಪ್ರಾರ್ಥಿಸಿ ಪತ್ರ ಬರೆದಿರುತ್ತಾರೆ

ಶಾಸನಸಭೆಯ ಸದಸ್ಯರುಗಳಿಗೆ ಸರ್ಕಾರಿ ಕಂಟ್ರಾಕ್ಟುಗಳಿಲ್ಲ

ಶಾಸನ ಸಭೆಯ ಸದಸ್ಯರುಗಳು ಸರ್ಕಾರದ ಯಾವ ಕಂಟ್ರಾಕ್ಟುಗಳನ್ನೂ ಸ್ವೀಕರಿಸಲು ಅನುಮತಿ ಕೊಡುವುದಿಲ್ಲವೆಂದು ಮದರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ

ಪಾಕೀಸ್ತಾನದ ಜವಾನರ ಪ್ರತಿಭಟನೆ

ಪಾಕೀಸ್ತಾನ ಸರ್ಕಾರದ ಸಂಬಳಸಾರಿಗೆ ಪರಿಶೀಲನಾ ಸಮಿತಿಯವರು ಮಾಡಿರುವ ಸಲಹೆಗಳ ಬಗ್ಗೆ ಪ್ರತಿಭಟನೆ ಸೂಚಿಸಲು ಅಲ್ಲಿನ ಸೆಕ್ರೆಟೇರಿಯಟ್ಟಿನ ಜವಾನರೆಲ್ಲರೂ ನಿನ್ನೆಯಿಂದ ಹಸಿವಿನ ಬಿಲ್ಲೆಗಳನ್ನು ಧರಿಸಿದ್ದಾರೆಂದು ವರದಿಯಾಗಿದೆ.

ಹಿಂದೂ ಹೆಂಗಸಿನ ಮಾಂಗಲ್ಯ ಅಪಹರಣ

ಹೈದರಾಬಾದ್ ಗಡಿಯೊಳಗಿರುವ ಮಡಾಲ್ಸಿ ಗ್ರಾಮದ ಮೇಲೆ ರಜಾಕರರು ಧಾಳಿ ಮಾಡಿ ೬ ಜನ ಹಿಂದೂಗಳ ಮನೆಗಳನ್ನು ಸಂಪೂರ್ಣವಾಗಿ ಸುಟ್ಟು ಅವರ ಸ್ವತ್ತುಗಳನ್ನು ಲೂಟಿ ಮಾಡಿದ್ದಾರೆಂದೂ, ಅಲ್ಲಿನ ಒಬ್ಬ ಹಿಂದೂ ಮಹಿಳೆಯ ಮಾಂಗಲ್ಯವನ್ನು ಕಸಿದುಕೊಂಡರೆಂದೂ ವರದಿಯಾಗಿದೆ.

ಅಪ್ಸರಾ ಟಾಕೀಸ್

9—7--48 ರಿಂದ

ಅಮೋಘ 7 ನೇ ವಾರ

ಅಭಿಮನ್ಯು

(ತಮಿಳು)

—: ಪಾತ್ರ :—

ಯು. ಆರ್. ಜೀವರತ್ನಂ, ಎಸ್. ಎಂ. ಕುಮರೇಶನ್, ಪುಳಿಮೂಟಿ

ಕೆಲವು ವರ್ಣರಂಜಿತ ರೀಲುಗಳನ್ನೂ ಸಹ ಹೊಸದಾಗಿ ಸೇರಿಸಲಾಗಿದೆ.

ಇದರ ಜೊತೆಯಲ್ಲಿ ಪಂಡಿತಜವಹರಲಾಲ್ ನೆಹರೂರವರು ಸಂಯುಕ್ತರಾಷ್ಟ್ರ ಆರ್ಥಿಕ ಸಮ್ಮೇಳನದ ಸಂಬಂಧದಲ್ಲಿ ಉದಕಮಂಡಲಕ್ಕೆ ಭೇಟಿ ಕೊಟ್ಟಿರುವ ಸಮಾರಂಭದ ಚಿತ್ರವೂ ಸಹ ಪ್ರದರ್ಶಿಸಲ್ಪಡುತ್ತೆ.

Morning Shows
From 9-7 48

YOUNG WIDOW

ಶ್ರೀ ದೇವಿ ಭಾಗವತ ಮಹಾ ಪುರಾಣ

ಕರ್ಣಾಟಕ ಶಂಕರ ವಿಜಯ ಮುಂತಾದ ಅನೇಕ ಗ್ರಂಥಗಳನ್ನು ಪ್ರಕಟಿಸಿರುವ ಸಾಲಿಗ್ರಾಮದ ಪೌರಾಣಿಕ ಶ್ರೀ ಶ್ರೀಕಂಠ ಶಾಸ್ತ್ರಿಗಳು ಕನ್ನಡ ಭಾಮಿನೀ ಷಟ್ಪದಿಯಲ್ಲಿ ದೇವಿ ತ್ರಿಪುರ ಸುಂದರೀ ಅಂಕಿತದಲ್ಲಿ ವಿರಚಿಸುತ್ತಿದ್ದ ಶ್ರೀ ದೇವೀ ಭಾಗವತ ಮಹಾ ಪುರಾಣವನ್ನು ಬರೆದು ಮುಗಿಸಿರುತ್ತಾರೆ. ೧೪೦೫೦ ಪದ್ಯಗಳನ್ನೊಳಗೊಂಡ ಈ ಗ್ರಂಥದ ಶಾಂತಿಗಾಗಿ ಗ್ರಂಥಕರ್ತರು ದೇವಿಯಾಗವನ್ನು ಆಚರಿಸಿ ನಂತರ ಗ್ರಂಥವನ್ನು ಮುದ್ರಿಸುವರೆಂದು ತಿಳಿದುಬಂದಿದೆ

ಧನ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ನ್ಯಾಯವಿಧಾಯಕ ಸಭೆಯ ಸದಸ್ಯರುಗಳಾದ ಶ್ರೀಗಳು:ಎಲ್. ಎಸ್. ವೆಂಕಟರಾಯರು ೫೦ ರೂ ಹೆಚ್. ಎಸ್. ರುದ್ರಪ್ಪ, ಎಂ ಮಾದಯ್ಯ, ಕೆ. ಹಂಪಾರಪ್ಪ, ಎಂ. ಪುಟ್ಟೇಗೌಡ, ತಲಾ ೧೦ ರೂ ಶ್ರೀಗಳಾದ ರಾಮಯ್ಯ, ಕಡಿದಾಳ್ ಮಂಜಪ್ಪ, ಎಸ್ ವೀರಬಸಪ್ಪ. ತಲಾ ೫ ರೂ ಮತ್ತು ಶ್ರೀ ಅಕ್ಕಪ್ಪ, ೨ ರೂ ಧನ ಸಹಾಯ ಮಾಡಿದ್ದಾರೆ

ಶ್ರೀ ಗಾಯತ್ರೀ ಟಾಕೀಸ್

9—7—48 ರಿಂದ 4 ದಿನಗಳು ಮಾತ್ರ

Warner's Thundering Thrilling Drama

CHEYENNE

(ಷಾಯಾನೆ)

—: ಪಾತ್ರ :—

ಡ್ಯಾನಿಸ್ ಮೋರ್ಗನ್ ● ಜೇನ್ ವೇಮನ್

—: Next Change :—

Warner's most Romantic Drama

DECEPTION

—: Starring :—

Bette Davis ; Claude Raine

ಮಲೆಯಾದಲ್ಲಿ ಕಮ್ಯೂನಿಸ್ಟರ ಒಳಸಂಚು

ಮಲೆಯಾ ಸರ್ಕಾರದ ಅಧಿಕಾರವನ್ನು ವಶಪಡಿಸಿಕೊಳ್ಳಲು ಕಮ್ಯೂನಿಸ್ಟರು ಒಳಸಂಚು ನಡೆಸಿದುದರಿಂದಲೇ ಅಲ್ಲಿ ಗಲಭೆಯಾಗಿ ಕ್ರಾಂತಿಗಾರರು ಅನೇಕರನ್ನು ಕೊಲೆ ಮಾಡಿರುವರೆಂದು ಪಾರ್ಲಿಮೆಂಟ್ ಸಭೆಯಲ್ಲಿ ಬ್ರಿಟಿಷ್ ಸರ್ಕಾರದವರು ತಿಳಿಸಿರುತ್ತಾರೆ ಇದನ್ನು ನಿರ್ಮೂಲಮಾಡಲು ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಂಡಿದ್ದಾರೆಂದೂ, ಇಲ್ಲಿಯವರೆವಿಗೆ ೧೦೦೦ ಜನ ಕ್ರಾಂತಿಕಾರರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ.

RAJKAMAL

MYSORE

FROM 9-7-48

Daily 3 shows

Michigan Kid

(In cine colour)

—: with :—

John Hall

Victor Mc Laglen

Rita Johnson

A drama replete with Thrills, Suspence & Laughter.

—: Morning Shows :—

From 9—7—48 for 4 Days

You are in- - the Army Now

—: with :—

JIMMY DURANTE

PHIL SILVERS

JANE WYMAN

Edited printed and published by A. K. Nagarajan at the Sadhvi Press D. Subbaiah Road Mysore

ಫ್ರೆಂಚ್ ಸರ್ಕಾರಕ್ಕೆ ಸೋ[…]

ಫ್ರಾನ್ಸಿನ ಶಾಸನ ಸಭೆಯಲ್ಲಿ ಸೈನ್ಯ[…] ಕೆಗೆ ಹಣ ಮಂಜೂರು ಮಾಡುವ […] ಯವಾಗಿ ಸರ್ಕಾರಕ್ಕೆ ಮೊನ್ನೆದಿನ ಸೋ[…] ಉಂಟಾಯಿತೆಂದು ವರದಿಯಾ[…] ಕೇಳಿದ ೨೦ ಕೋಟಿ ಹಣವನ್ನು ಕ[…] ಮಾಡುವ ಸಮಾಜವಾದಿ ಪಕ್ಷದವರ […] ಪಡಿಯು ೨೯೬-೧೮೪ ಓಟುಗಳಿಂದ […] ಗೀಕೃತವಾಗಿ ಸರ್ಕಾರದ ನಿರ್ಣಯ[…] ದ್ದು ಹೋಯಿತು.

WANTED

A business associate w[…] a capital 2 to 5 thousa[…] for a running shop […] Mysore

Please Communicate […] "X" C/o "Sadh[…]

ಮೈಸೂರು ಕೋ-ಆಪರೇಟಿ[…]

ಸೊಸೈಟಿ ಲಿಮಿಟೆಡ್, ಮೈಸೂರು

ನಮ್ಮಲ್ಲಿ ಬಿಳಿ ಬಟ್ಟೆಗಳು, ಉಲ್ಲ[…] ಟ್ಟೆಗಳು, ವಾಯಿಲ್ ಮತ್ತು ಚೀಟಿ[…] ಗಳು. ವಾಯಿಲ್ ಮತ್ತು ಪೂನಾ […] ಗಳು, ಛತ್ರಿಗಳು, ಹೊಸ ನಮೂನೆ […] ವೇರ್ ಗಳು, ಸೊಗಸಾದ ಪಂಚೆಗಳು, […] ಬೀಜ, ಸಕ್ಕರೆ, ಅಡಕೆ, ತುಪ್ಪ, […] ಇತ್ಯಾದಿ ಸಾಮಾನುಗಳು ಅಲ್ಲದೆ ದ[…] ಸ್ಟೆಜನ ಗ್ಲಾಸ್ (6'×7' ಅಡಿಗ[…] ಇತ್ಯಾದಿ ಸಹ ಮಾರಾಟಕ್ಕೆ ಸಿದ್ಧವಾ[…]

(ಸಹಿ) ಜಿ. ವಿ. ದೇಶಿಕಾಚಾ[…]

ಆನರರಿ ಸೆಕ್ರೆಟ[…]

ಮೈಸೂರು ಸಿಟಿ ರೇಷ[…]

ಅಧೀಕಾರವರ ಕಛೇ[…]

ತಾರೀಖು ೨೯—೬—೧[…]

ಪ್ರಕಟಣೆ

GCD 789/47-48

ಈ ಕೆಳಕಂಡ ಗೋಡೌನ್‌ಗಳಲ್ಲಿ[…] ಸುಮಾರು ಒಟ್ಟು ೪೦,೦೦೦ ತಿಳು[…] ಮತ್ತು ಅನುಪಯುಕ್ತವಾದ ಖಾಲಿ[…] ಚೀಲಗಳನ್ನು ಈ ಕೆಳಗೆ ನಮೂ[…] ರುವ ಗೋಡೌನ್‌ಗಳಲ್ಲಿ ಬಹಿರಂಗ[…] ಹರಾಜು ಮಾಡಲ್ಪಡುವುದು. ಈ […] ಬಗ್ಗೆ ವಿವರಗಳನ್ನು ಕೆಲಸದ ದಿ[…] ಆಫೀಸಿನಲ್ಲಿ ತಿಳಿಯಬಹುದು.

೧) ತಾ|| ೧೯-೭-೪೮ ಬೆಳಿಗ್ಗೆ […] ಲಕ್ಷ್ಕರ್ ಸಬ್ ಗೋಡೌನ್,

೨) ತಾ|| ೧೯-೭-೪೮ ಮಧ್ಯಾಹ್ನ […] ಟಿಗೆ ಮಂಡಿ ಸಬ್ ಗೋಡೌನ್,

೩) ತಾ|| ೨೦-೭-೪೮ ಬೆಳಿಗ್ಗೆ […] ಚಾಮರಾಜ ಸಬ್ ಗೋಡೌನ್,

೪) ತಾ|| ೨೦-೭-೪೮ ಮಧ್ಯಾಹ್ನ […] ಟಿಗೆ ಸಿ ಟಿ ಸಿ ಹಾಲ್

(ಸಹಿ) ಎಂ. ಶ್ರೀನಿವಾಸಲುನಾ[…]

ರೇಷನಿಂಗ್ ಆಫೀ[…]

ಮೈಸೂರು ಸಿ[…]

ಮುಂದಿನ ಬದಲಾವಣೆ

ಮೈಸೂರು ವುಡ್‌ಲ್ಯಾಂಡ್ಸ್‌ನಲ್ಲಿ

ಭಕ್ತ ತುಲಸೀದಾಸ್

(ತಮಿಳು)

ತಾರಾಗಣ:—ಬಿ. ಎಸ್. ರಾಜಯ್ಯಂಗಾರ್, ಉದಯಶಂಕರ್ ಡ್ಯಾನ್ಸಿಂಗ್ ಗ್ರೂಪಿನ ಲಕ್ಷ್ಮೀಶಂಕರ್ ಮತ್ತು ಸಿ. ಬಿ. ಪಂತುಲು ಮುಂತಾದವರು.

ಸ್ಟುಡಿಯೋ:—ಬೊಂಬಾಯಿ ಟಾಕೀಸ್ ಲಿಮಿಟೆಡ್, ಬೊಂಬಾಯಿ.

3-7-48 ನೇ ಶನಿವಾರದಿಂದ ಪ್ರೋಗ್ರಾಂ ಬದಲಾಯಿಸಿದೆ.

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ದಿನ 2 ಆಟಗಳು:.ಸಂಜೆ 6-30 ರಾತ್ರಿ 9-30 ೧೦೧ ಆಟಗಾರರು... ೮೫ ಮೃಗಗಳು

೧೬ ನವ ತರುಣಿಯರ ಡ್ಯಾನ್ಸ್

ಟಿಕೇಟಿನ ದರಗಳು, (ಟ್ಯಾಕ್ಸ್ ಸಮೇತ) 2-8-0, 1-8-0, 0-10-0, 0-6-0

ಮೊದಲನೇ ಎರಡು ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ರಿಜರ್ವೇಷನ್ ಫೀ ಇಲ್ಲ

ಎಂ. ಸುಬ್ಬರಾಮಯ್ಯ ಅಂಡ್ ಕೊ.)

ಫೋ ನಂ. 792 WEEKLY EDITION ಇಂದಿನ ಪತ್ರಿಕೆ ೮ ಕಾಸು

ಸಂಪುಟ ೧೨] ಭಾನುವಾರ ೧೧-೭-೪೮ [ಸಂಚಿಕೆ ೫೧

ಪ್ರೊ|| ಭನ್ಸಾಲಿಯವರ ಉಪವಾಸದ ಆರಂಭ

...ದ್ಯಾರ್ಥಿಗಳ ಬಹಿರಂಗ ಸಭೆ

...ಕೃಪಲಾನಿ ಮತ್ತು ರವೀಂದ್ರ ವರ್ಮರ ಭಾಷಣ

ಮೈಸೂರು ೧೧

...ನಾಳೆ ಮಧ್ಯಾಹ್ನ ೧-೩೦ ಗಂಟೆಗೆ ಅಖಿ... ಭಾರತ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ... ...ದ ಶ್ರೀ ರವೀಂದ್ರವರ್ಮರು ಸೆಂಟ್ ಫಿ... ...ಮಿನಾ ಕಾಲೇಜಿನ ಒಳಾಂಗಣದಲ್ಲೂ ...ಗಂಟೆಗೆ ಆಚಾರ್ಯ ಕೃ ಪ ಲಾ ನಿ ಮತ್ತು ...ಮತಿ ಸುಚೇತಾ ಕೃಪಲಾನಿಯವರು ...ರ ಕಾಂಗ್ರೆಸ್ ಕಛೇರಿಯಲ್ಲೂ ವಿದ್ಯಾ... ...ಗಳನ್ನುದ್ದೇಶಿಸಿ ಭಾಷಣ ಮಾಡುವ... ವಿದ್ಯಾರ್ಥಿಗಳೆಲ್ಲರೂ ಭಾಗವಹಿಸ... ...ಂದು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯ... ...ಗಳು ಪ್ರಾರ್ಥಿಸಿರುತ್ತಾರೆ

ಜಿಲ್ಲಾ ಬೋರ್ಡುಗಳ ಸಮ್ಮೇಳನ

...ಮೈಸೂರು ಸಂಸ್ಥಾನದ ಜಿಲ್ಲಾ ಬೋ... ...ಗಳ ಅಧ್ಯಕ್ಷರು, ಉಪಾಧ್ಯಕ್ಷರು ಮ... ...ಸದಸ್ಯರುಗಳ ಸಮ್ಮೇಳನವು ಬರುವ ...ವಾರ ಚಿತ್ರದುರ್ಗದಲ್ಲಿ ಜರುಗುವುದು. ...ೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ ...ಚನ್ನಿಗರಾಮಯ್ಯನವರು ಇದರ ಆ... ...ಭೋತ್ಸವವನ್ನು ನೆರವೇರಿಸುವರು.

ಸರ್ಕಾರದಿಂದ ಮಂಜೂರು ಮಾಡಲ್ಪ... ...ುವ ಸಣ್ಣ ಪುಟ್ಟ ಕೈಗಾರಿಕೆಗಳ ಆರಂ... ...ೋತ್ಸವವನ್ನು ಹಣ ಕಾಸಿನ ಸಚಿವರಾದ ...ಹೆಚ್ ಸಿ ದಾಸಪ್ಪನವರು ಅದೇ ದಿನ ...ಧ್ಯಾಹ್ನ ೨-೩೦ ಗಂಟೆಗೆ ನೆರವೇರಿಸು... ...ರು

...೧೧೧೦ ಜನ ಹೆಂಡತಿಯರು

ಇಂಗ್ಲೆಂಡಿನ ಗುಡ್ಡಗಾಡಿನಲ್ಲಿರುವ ಮು... ...ಂಡನೊಬ್ಬನಿಗೆ ೧೧೧೧೦ ಜನ ಹೆಂಡತಿ... ...ರುವರೆಂದು ತಿಳಿದುಬಂದಿದೆ. ಪತ್ನಿ... ...ರ ಸಂಖ್ಯೆಯನ್ನು ಕಡಿಮೆ ಮಾಡಿಕೊ... ...ಬೇಕೆಂದು ಅತನಿಗೆ ಉಪದೇಶಿಸಲು ಅ... ...ಿ ಮಹಿಳೆಯರನ್ನು ಕಳುಹಿಸುವ ಸೂಚನೆ... ...ರಕ್ಷಣಾ ಸಮಿತಿಯು ಮುಂದೆ ಬಂದಿ... ...ತ್ತು ಗುಡ್ಡಗಾಡಿನ ಪ್ರಜೆಗಳು ತಮ್ಮ... ...ಮದಲನೆಯ ಹೆಣ್ಣು ಮಕ್ಕಳನ್ನು ತನಗೆ ...ದುವೆ ಮಾಡಬೇಕೆಂದು ಆತನು ಆಜ್ಞಾ... ...ಪಿಸಿದ್ದಾನೆಂದು ತಿಳಿದುಬಂದಿದೆ

ಶಾಲಾ ವಿದ್ಯಾರ್ಥಿಗಳಿಗೆ ...ಂದೀ ಕವಾಯತ್ ಶಿಕ್ಷಣ

...ಸಂಸ್ಥಾನದ ಮಿಡಲ್ ಮತ್ತು ಹೈಸ್ಕೂ... ...ಗಳಲ್ಲಿ ಹಿಂದೀ ಕವಾಯತ್ತನ್ನು ಕಲಿಸ... ...ಬೇಕೆಂದು ಅನೇಕರು ಅಭಿಪ್ರಾಯ... ...ಸಿರುವುದರಿಂದ, ಅಲ್ಲಿ ಶಿಕ್ಷಣ ಕೊಡಲು ...ಬೇಕಾದ ಶಿಕ್ಷಕರನ್ನು ಕಳುಹಿಸಲಾಗು... ...ವೆಂದೂ, ಅವರುಗಳ ಸಹಾಯವನ್ನು ಅ... ...ಕ್ಷಿಸುವ ಶಾಲೆಯವರು ಬೆಂಗಳೂರು ಅ... ...ಪೇಟೆಯಲ್ಲಿರುವ ಕಾಂಗ್ರೆಸ್ ಸೇವಾದಳ ...ಧ್ರ ಕಾರ್ಯಾಲಯದೊಡನೆ ವ್ಯವಹಾರ ...ಸಬಹುದೆಂದೂ ಕಾರ್ಯದರ್ಶಿಗಳು ತಿಳಿಸಿ... ...ದ್ದಾರೆ

...ಾಂಧೀ ಸ್ಮಾರಕ ಹೈಸ್ಕೂಲು

...ಕೋಲಾರ ಜಿಲ್ಲಾ ಬೋರ್ಡಿನವರು ಮ... ...ತ್ಮಾ ಗಾಂಧೀಜಿಯವರ ಸ್ಮಾರಕಾರ್ಥ ...ಗಿ ಶ್ರೀನಿವಾಸಪುರದಲ್ಲಿ ಹೈಸ್ಕೂಲೊಂ... ...ನ್ನು ಸ್ಥಾಪಿಸಿದ್ದಾರೆ ಶಾಲೆಯ ಆರಂ... ...ೋತ್ಸವವನ್ನು ಕಳೆದ ಸೋ ಮ ವಾ ರ ...ಾಧಿಕಾರಿಗಳಾದ ಮಿ| ಜಾರ್ಜ್ ಮ್ಯಾ... ...ವರು ನೆರವೇರಿಸಿದರು.

ಆಚಾರ್ಯ ಕೃಪಲಾನಿಯವರ ಆಗಮನ

ಮೈಸೂರು ೧೧

ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಪತ್ನೀ ಸಮೇತರಾಗಿ ನಿನ್ನೆ ರಾಜಧಾನಿಗೆ ಬಂದು ರಾತ್ರಿ ಕೃಷ್ಣರಾಜಸಾಗರದ ಬೃಂದಾವನದಲ್ಲಿ ಬಿಡಾರ ಮಾಡಿದ್ದರು. ಅವರು ನಿನ್ನೆ ಮಧ್ಯಾಹ್ನ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರು. ಈ ದಿನ ಅವರು ಶ್ರವಣ ಬೆಳಗೊಳ, ಬೇಲೂರು, ಹಳೇಬೀಡುಗಳಿಗೆ ಭೇಟಿಯಿತ್ತು ರಾತ್ರಿ ಬೃಂದಾವನಕ್ಕೆ ಹಿಂದಿರುಗುವರು ನಾಳೆ ರಾಜಧಾನಿಯ ಹಲವು ಪ್ರಮುಖ ಸ್ಥಳಗಳಿಗೆ ಭೇಟಿ ಕೊಡುವರು

ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಆಚಾರ್ಯ ಕೃಪಲಾನಿಯವರು ಭಾಷಣ ಮಾಡುವರು

ಬಿತ್ತನೆ ಕಾಲದಲ್ಲಿ ಬೀಡಿ ಕೈಗಾರಿಕೆ ಕೂಡದು

ವ್ಯವಸಾಯಕ್ಕೆ ಬೇಕಾಗುವ ರೈತರನ್ನು ಒದಗಿಸುವ ಉದ್ದೇಶದಿಂದ ಮಧ್ಯಪ್ರಾಂತ್ಯ ಮತ್ತು ಬೀರಾರ್ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ ಇನ್ನು ಮುಂದೆ ವ್ಯವಸಾಯ ಕಾಲದಲ್ಲಿ ಬೀಡಿ ಕೈಗಾರಿಕೆಯನ್ನು ನಡೆಸಕೂಡದೆಂದೂ, ವ್ಯವಸಾಯಗಾರರನ್ನು ಬೀಡಿ ಕೈಗಾರಿಕೆಗೆ ಸೇರಿಸಿಕೊಳ್ಳಬಾರದೆಂದೂ ತಿಳಿಸಿರುತ್ತಾರೆ

ಭನ್ಸಾಲಿಯವರ ಉಪವಾಸ

ಹೈದರಾಬಾದಿನೊಳಕ್ಕೆ ಬರಲು ಅಲ್ಲಿನ ಸರ್ಕಾರದವರು ಅನುಮತಿ ಕೊಡದಿದ್ದ ಪ್ರಯುಕ್ತ ಪ್ರೊಫೆಸರ್ ಭನ್ಸಾಲಿಯವರು ವಿಜಯವಾಡದಲ್ಲಿ ಅಮರಣಾಂತ ಉಪವಾಸವನ್ನು ಕೈಗೊಂಡಿರುವುದಾಗಿ ತಿಳಿದುಬಂದಿದೆ.

ಹೈದರಾಬಾದಿನ ಹಳ್ಳಿಗರು ಗ್ರಾಮ ಸ್ವೈರ್ಯವನ್ನು ಕಾಪಾಡಿಕೊಳ್ಳುವ ರೀತಿಯನ್ನು ತೋರಿಸಿಕೊಡುವ ಸಲುವಾಗಿ ತಮ್ಮೊಡನೆ ಎರಡು ಪೊರಕೆಗಳನ್ನು ತೆಗೆದುಕೊಂಡು ವಿಜಯವಾಡದಿಂದ ಬಲ್ಲಾರ್ಷಾದವರೆಗೂ ಕಾಲ್ನಡಿಗೆಯಲ್ಲೇ ಹೋಗುವ ಮತ್ತು ರಜಾಕಾರರಿಂದ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಪರಿಶೀಲನೆ ನಡೆಸಿ ಅವುಗಳ ಪಟ್ಟಿಯನ್ನು ಬಡಿಸಲು ಪ್ರಯತ್ನಿಸುವ ಕಾರ್ಯಕ್ರಮಗಳನ್ನು ಶ್ರೀ ಭನ್ಸಾಲಿಯವರು ಹಾಕಿಕೊಂಡಿದ್ದರೆಂದೂ ತಿಳಿದುಬಂದಿದೆ

ಲಾ ಕಾಲೇಜು ಪ್ರೊಫೆಸರುಗಳು

ಸ್ವಂ ಸು ಪ್ರೋ] ಬೆಂಗಳೂರು ೧೧

ಶ್ರೀಗಳಾದ ಎಂ ಎ ಗೋಪಾಲಸ್ವಾಮಿ ಐಯ್ಯಂಗಾರ್, ಅನಂತರಾಮಯ್ಯ, ಶಿವಶಂಕರ್, ಮೀರ್ ಅಕ್ಬರ್ ಹುಸೇನ್, ಟಿ ಗೋಪಾಲಕೃಷ್ಣ ಶೆಟ್ಟಿ ಮತ್ತು ಟಿ ಕೃಷ್ಣಪ್ಪನವರುಗಳನ್ನು ಲಾ ಕಾಲೇಜಿನ ಗೌರವ ಪ್ರೊಫೆಸರುಗಳಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ದಕ್ಷತೆಯ ತನಿಖೆ ಡೈರೆಕ್ಟರ್

ಮೊದಲೇ ವರದಿ ಮಾಡಿದ್ದಂತೆ ಶ್ರೀ ಕೆ ಹೆಂಚಾರಿಕಪ್ಪನವರನ್ನು ದಕ್ಷತೆ ತನಿಖೆಯ ಡೈರೆಕ್ಟರಾಗಿ ಸರ್ಕಾರದವರು ನೇಮಿಸಿದ್ದಾರೆ ಇವರಿಗೆ ಮಾಹೆಯಾನ ಸಂಬಳ ೧೨೦೦ ರೂ.

ಟೆಲಿಫೋನ್ ಕಾರ್ಖಾನೆ

ಎರಡೂವರೆ ಕೋಟಿ ರೂ ವೆಚ್ಚದಿಂದ ಬೆಂಗಳೂರಿನಲ್ಲಿ ಟೆಲಿಫೋನ್ ಕಾರ್ಖಾನೆಯನ್ನು ಬರುವ ಅಕ್ಟೋಬರಿನಿಂದ ತೆರೆಯಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ. ಹತ್ತುಸಾವಿರ ಜನರಿಗೆ ಇದರಿಂದ ಉದ್ಯೋಗ ದೊರೆಯುವುದು.

ಮುಸ್ಲಿಂ ವೇಷದಲ್ಲಿ ಶೈವ ಗುರುಗಳ ಪರಿಶೀಲನೆ

ರಾಯಚೂರಿನ ವೀರಶೈವ ಮಠದ ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳವರು ಮುಸಲ್ಮಾನ ವೇಷದಿಂದ ಹೈದರಾಬಾದಿನ ಬಿದರೆ ಜಿಲ್ಲೆಯಲ್ಲಿ ಪ್ರವಾಸ ನಡೆಸಿ ಅಲ್ಲಿನ ಹಿಂದೂಗಳ ಪರಿಸ್ಥಿತಿಯನ್ನು ಪರಿಶೀಲಿಸಿ ಬಿದರೆ ಜಿಲ್ಲೆಯು ಒಂದು ಸ್ಮಶಾನದಂತಿದೆಯೆಂದೂ ಎಲ್ಲೆಲ್ಲೂ ಶವಗಳೂ, ಭಸ್ಮೀಭೂತವಾದ ಕಟ್ಟಡಗಳೂ ಕಂಡುಬಂದು ರಜಾಕಾರರ ದೌರ್ಜನ್ಯವನ್ನು ಸೂಚಿಸುತ್ತಿವೆಯೆಂದೂ ತಿಳಿಸಿದ್ದಾರೆ. ಸುಮಾರು ೨೦೦ ಹಳ್ಳಿಗಳು ನಾಶಮಾಡಲ್ಪಟ್ಟು ಕೋಟ್ಯಂತರ ರೂಗಳ ನಷ್ಟ ಸಂಭವಿಸಿದೆಯೆಂದೂ ಬಲಾತ್ಕಾರದಿಂದ ಮತಾಂತರಗೊಳಿಸುವುದೂ ಮತ್ತು ಸ್ತ್ರೀಯರ ಮಾನಾಪಹರಣಗಳೂ ಲೆಕ್ಕವಿಲ್ಲದೆ ನಡೆಯುತ್ತಿವೆಯೆಂದೂ ಅವರು ತಿಳಿಸಿ ಭಾರತ ಸರ್ಕಾರದವರು ಈ ಬಗ್ಗೆ ಕೂಡಲೆ ತೀವ್ರ ಕಾರ್ಯಕ್ರಮ ತೆಗೆದುಕೊಂಡು ರಜಾಕಾರರನ್ನು ಮಟ್ಟ ಹಾಕಬೇಕೆಂದು ಮನವಿ ಮಾಡಿಕೊಂಡಿದ್ದಾರೆ

ಹೈದರಾಬಾದ್ ಮುಖಂಡರ ಅಮರಣಾಂತ ಉಪವಾಸ

ಹೈದರಾಬಾದಿನಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳು ಉದಯವಾಗುವಂತೆ ಮಾಡಲು ಅಲ್ಲಿನ ಕಾಂಗ್ರೆಸ್ ಸೇವಕರಾದ ಶ್ರೀ ಆರ್ ವಿ ಪಟೇಲರಾಯರು ಅಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ ಮಹಾತ್ಮರ ಅಸ್ಥಿಗಳನ್ನಿಟ್ಟಿದ್ದ ಮಣಿಸೇ ಮಠವೊಂದರ ಅಡಿಯಲ್ಲಿ ಅವರು ಈ ವ್ರತವನ್ನು ಆಚರಿಸುತ್ತಿದ್ದಾರೆ.

ಹೈದರಾಬಾದು ಗಡಿ ಜನರಿಗೆ ಬಂದೂಕಗಳು

ರಜಾಕರರ ರಾಕ್ಷಸೀ ಕೃತ್ಯಗಳನ್ನು ತಡೆಗಟ್ಟುವುದಕ್ಕಾಗಿ ಹೈದರಾಬಾದು ಗಡಿಯಲ್ಲಿರುವ ಮದರಾಸ್ ಪ್ರಾಂತದ ಜನರಿಗೆ ಬಂದೂಕ ಮುಂತಾದ ಶಸ್ತ್ರಾಸ್ತ್ರಗಳನ್ನು ಸರ್ಕಾರದವರು ಕೊಟ್ಟಿರುವರೆಂದು ತಿಳಿದುಬಂದಿದೆ

ಪ್ಯಾಲೆಸ್ಟೀನ್ ಕದನದ ಬಿರುಸು

ಯಹೂದ್ಯರಿಗೂ ಅರಬ್ಬರಿಗೂ ಪ್ಯಾಲೆಸ್ಟೀನಿನಲ್ಲಿ ಅತ್ಯಂತ ಘೋರವಾದ ಕದನವು ನಡೆಯುತ್ತಿದೆ ಈಜಿಪ್ಟಿನವರು ಯಹೂದ್ಯರು ಹತರಾಗಿದ್ದಾರೆ, ಪಶ್ಚಿಮ ಗೆಲಿಲಿಯಲ್ಲಿ ಯಹೂದಿಗಳು ಮುನ್ನುಗ್ಗುತ್ತಿದ್ದಾರೆ ಹಲವು ಯೆಹೂದಿ ವಿಮಾನ ನಿಲ್ದಾಣಗಳನ್ನು ಈಜಿಪ್ಟ್ ಸೈನ್ಯಗಳು ಹಿಡಿದಿವೆ.

ಪಾಕಿಸ್ತಾನದ ಮುಸ್ಲಿಮರಿಗೆ ಪರ್ಮಿಟ್ ಚೀಟಿ

ಹಿಂದೂಸ್ಥಾನಕ್ಕೆ ಬರಲು ಅಪೇಕ್ಷಿಸುವ ಪಾಕಿಸ್ತಾನದ ಮುಸ್ಲಿಮರಿಗೆ ರಹದಾರಿ ನೀಡಲು ಭಾರತ ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ಗೊತ್ತಾಗಿದೆ. ಸ್ವಂತ ಕೆಲಸದ ಮೇಲೆ ಹಂಗಾಮಿಯಾಗಿ ಬರುವವರಿಗೆ ಮಾತ್ರ ಈ ರಹದಾರಿಗಳನ್ನು ಕೊಡಲಾಗುವುದು. ಇಲ್ಲೇ ಬಂದು ನೆಲೆಸುವವರಿಗೆ ಇಲ್ಲ

ಅಮೆರಿಕದ ಸೈನ್ಯಕ್ಕೆ ಅಣು ಬಾಂಬುಗಳು

ಅಂತರರಾಷ್ಟ್ರೀಯ ಪರಿಸ್ಥಿತಿಯು ಹದಗೆಟ್ಟಿರುವುದರಿಂದ ಅಮೆರಿಕ ಸರ್ಕಾರದವರಲ್ಲಿರುವ ೬೦೦ ಅಣುಬಾಂಬುಗಳನ್ನು ಅಲ್ಲಿನ ಸೈನ್ಯ ಇಲಾಖೆಗೆ ವರ್ಗಾಯಿಸಬೇಕೆಂದು ಅಧ್ಯಕ್ಷ ಟ್ರೂಮನ್‌ರವರಲ್ಲಿ ಸೈನ್ಯಾಧಿಕಾರಿಗಳು ಮನವಿ ಮಾಡಿದ್ದಾರೆಂದೂ ಹೇಳಲಾಗಿದೆ

ಸ್ಟರ್ಲಿಂಗ್ ವಿನಿಮಯದ ಪರಿಣಾಮವಾಗಿ ಯಾವ ವಿಮಾನಗಳೂ ಹೈದರಾಬಾದಿಗೆ ಹೋಗಲು ಅಡಚಣೆಯುಂಟಾಗಿರುವುದರಿಂದ ಔಷಧಿ ಸಾಮಗ್ರಿಗಳನ್ನಾದರೂ ವಿಮಾನಗಳಲ್ಲಿ ಕಳುಹಿಸಲು ಅವಕಾಶ ಕೊಡಬೇಕೆಂದು ಪಾಕಿಸ್ತಾನದ ಸರ್ಕಾರದವರು ಕೇಳಿರುತ್ತಾರೆ.

ಆಕಾಶವಾಣಿ ಡೈರೆಕ್ಟರ್

ಮೈಸೂರು ೧೧

ಪೌರಸಭಾ ಸದಸ್ಯರೂ, ವಕೀಲರೂ ಆದ ಶ್ರೀ ಟಿ. ನಾರಾಯಣಸ್ವಾಮಿಯವರನ್ನು ಆಕಾಶವಾಣಿಯ ... ಡೈರೆಕ್ಟರನ್ನಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ

ರಾಜರಾಜೇಶ್ವರಿ ಪೂಜೆ

... ವಾರ... ... ಬೆಳಿಗ್ಗೆ ... ಶ್ರೀ ರಾಜರಾಜೇಶ್ವರೀ ... ... ಮುಂದೆ ಅಲ್ಲಿನ ... ... ನೆರ ವೇ ... ... ತ್ತವೆಂದು ತಿಳಿದುಬಂದಿದೆ

ವಾರ ಭವಿಷ್ಯ

ತಾ॥ ೧೧-೭-೪೮ ರಿಂದ ೧೭-೭-೪೮ವರೆಗೆ

ಮೇಷ— ನಿಮ್ಮ ಇಷ್ಟಾರ್ಥಗಳೆಲ್ಲಾ ಸಿದ್ಧಿಸುವುವು, ಧನಾದಾಯ ಚೆನ್ನಾಗಿದೆ, ಧರ್ಮ ಕಾರ್ಯಗಳಿಗಾಗಿ ವೆಚ್ಚ ಸಂಭವಿಸುವುದು, ಆರೋಗ್ಯ ಉತ್ತಮ, ತಾ॥ ೧೩, ೧೫ ಧನ ಲಾಭ, ಮಿತ್ರ ದರ್ಶನ

ವೃಷಭ— ಪ್ರವಾಸಕ್ಕೆ ಈ ವಾರ ಉತ್ತಮವಾಗಿದೆ, ಕೆಲವು ಕಛೇರಿ ವ್ಯವಹಾರಗಳಲ್ಲಿ ಕಷ್ಟಗಳಿಗೆ ಸೋಲ ಬರುವುದು ವಾರಾಂತ್ಯದಲ್ಲಿ ಸ್ವಲ್ಪ ದೇಹಾಲಸ್ಯ, ತಾ॥ ೧೩, ೧೪ ಸ ಕೋಪ, ಸುಖ ಭೋಜನ

ಮಿಥುನ— ನೆರೆಹೊರೆಯವರ ವ್ಯಥಾ ವಾದಕ್ಕೊಳಗಾಗುವಿರಿ, ಮನೆಯಲ್ಲಿ ಸಂಶಯ ವಾತಾವರಣವುಂಟಾಗಿ ನಿರುತ್ಸಾಹ ನೀವೇ ಪಡುವಿರಿ ತಾ॥ ೧೩, ೧೪ ಜನ ನಿಂದೆ ಚೋರ ಭಯ

ಕಟಕ— ಆರೋಗ್ಯ ಸಾಧಾರಣ, ಮಾನಸಿಕ ಕ್ಲೇಶಗಳು ವೃದ್ಧಿಗೊಳ್ಳುವುವು, ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯವೊದಗುವುದು, ತಾ॥ ೧೪, ೧೫ ಅಸಮಾಧಾನ, ಸ್ವಲ್ಪ ಶಾಂತಿ

ಸಿಂಹ— ಬಂಧು ಸಮ್ಮಿಗಳಿಂದ ಈ ವಾರ ನಿಮಗೆ ಅಪೂರ್ವ ಲಾಭ ದೊರೆಯುವುದು, ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಯಶಸ್ಸು ದೊರೆಯುತ್ತದೆ, ತಾ॥ ೧೫, ೧೭ ಸಖ ದರ್ಶನ, ಸುಖ ಭೋಜನ

ಕನ್ಯಾ— ಅನೇಕ ಅಪಮಾನಕರ ಘಟನೆಗಳು ಸಂಭವಿಸುವುವು, ಮಕ್ಕಳು ಮನೆಯ ಆರೋಗ್ಯಕ್ಕೆ ಧಕ್ಕೆಯುಂಟಾಗುವುದು, ತಾ॥ ೧೩, ೧೭ ಅನಿಷ್ಟ ವಾರ್ತೆ, ನಷ್ಟ.

ತುಲಾ— ಪ್ರವಾಸದಿಂದ ಹಾನಿ ಸಂಭವ ಮಿತ್ರರಿಂದ ವಂಚಿತರಾಗುವಿರಿ ಬರಬೇಕಾದ ಹಣವೂ ಬಾರದೆ ಕೈ ಕಟ್ಟಿದಂತಾಗುವುದು, ತಾ॥ ೧೪, ೧೭ ಚೋರ ಭಯ, ಜನ ನಿಂದೆ.

ವೃಶ್ಚಿಕ— ಆರೋಗ್ಯ ಮತ್ತು ಧನಾದಾಯಗಳೆರಡೂ ಉತ್ತಮವಾಗಿವೆ, ಬಂಧು ವರ್ಗದವರಿಂದ ಸನ್ಮಾನಿತರಾಗುವಿರಿ, ಅನೇಕ ಸಾಧು ಸಂತರ ದರ್ಶನವಾಗುವುದು, ತಾ॥ ೧೪, ೧೭ ಶುಭ ಸಮಾಚಾರ, ಮಿತ್ರ ದರ್ಶನ

ಧನು— ಆರೋಗ್ಯ ಚೆನ್ನಾಗಿದೆ, ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳಿಂದ ಪ್ರಶಸ್ತಿ ದೊರೆಯುವುದು, ಧರ್ಮ ಕಾರ್ಯಗಳಿಗಾಗಿ ವೆಚ್ಚ ಸಂಭವಿಸುವುದು ತಾ॥ ೧೫, ೧೭ ಧನ ಲಾಭ, ಸಂತೋಷ

ಮಕರ— ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಕ್ಲೇಶಗಳು ಹೆಚ್ಚುವುವು, ಮಕ್ಕಳು ಮನೆಗಳಿಗೆ ಅನಾರೋಗ್ಯವುಂಟಾಗಿ ವೈದ್ಯರಿಗೆ ಹಣ ತೆರಬೇಕಾಗುವುದು, ತಾ॥ ೧೩, ೧೭ ಅಸಮಾಧಾನ, ಕ್ಲೇಶ

ಕುಂಭ— ಪ್ರವಾಸದಿಂದ ಹಾನಿ ಸಂಭವಿಸುವುದು, ಮಿತ್ರರ ಅಪಹಾಸ್ಯಕ್ಕೊಳಗಾಗುವಿರಿ, ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಈ ವಾರ ನಿರುತ್ಸಾಹದಾಯಕವಾಗಿರುವುದು, ತಾ॥ ೧೩, ೧೫ ಬಂಧು ವೆಚ್ಚ, ಚೋರ ಭಯ

ಮೀನ— ಆರೋಗ್ಯ ಸಾಧಾರಣವಾಗಿದೆ ಆದಾಯಕ್ಕೆ ಎರಡರಷ್ಟು ಖರ್ಚು ಒದಗುವುದು, ನೌಕರಿ ದಫ್ತರಗಳಲ್ಲಿ ಅಪಮಾನಕರ ಘಟನೆಗಳು ಸಂಭವಿಸುವುವು, ತಾ॥ ೧೫, ೧೭, ಅಸಮಾಧಾನ, ಬಂಧು ವೆಚ್ಚ

ಸಂತಾಪ ಸೂಚಕ ಸಭೆ

ಮೈಸೂರು ಮಾದರಿ ಶಾಲೆಯ ಉಪಾಧ್ಯಾಯರುಗಳು ಮತ್ತು ವಿದ್ಯಾರ್ಥಿಗಳು ಸಭೆ ಸೇರಿ ಮೊನ್ನೆ ಕೊಚ್ಚಿ ಮಹಾರಾಜರವರ ನಿಧನದಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿದರು ದಿವಂಗತರ ಗೌರವಾರ್ಥವಾಗಿ ಶಾಲೆಯನ್ನು ಮುಚ್ಚಲಾಗಿತ್ತು

ಎಲ್ ಎಸ್ ವಿದ್ಯಾರ್ಥಿಗಳ ತೊಂದರೆ

ಕಳೆದ ೩ ನೇ ತಾ॥ ಎಲ್ ಎಸ್ ಪರೀಕ್ಷೆಯ ಫಲಿತಾಂಶಗಳು ಪ್ರಕಟವಾಗಿದ್ದರೂ ಹಾಸನ ವಿದ್ಯಾರ್ಥಿಗಳ ಫಲಿತಾಂಶಗಳನ್ನು ಆಯಾ ರೇಂಜ ಕಛೇರಿಗಳಿಗೆ ಇನ್ನೂ ಕಳುಹಿಸದೆ ಇರುವುದರಿಂದ, ಅನೇಕರಿಗೆ ಫಲಿತಾಂಶ ತಿಳಿಯದೆ, ಮುಂದಿನ ವ್ಯಾಸಂಗಕ್ಕೆ ತುಂಬಾ ಕಷ್ಟವಾಗಿರುತ್ತದೆ ವಿದ್ಯಾ ಇಲಾಖೆಯವರು ಕೂಡಲೇ ಇದನ್ನು ಸರಿಪಡಿಸಬೇಕೆಂದು ಒಬ್ಬ ವಿದ್ಯಾರ್ಥಿಯ ಪ್ರಾರ್ಥಿಸಿ ಪತ್ರ ಬರೆದಿರುತ್ತಾರೆ

RAJKAMAL

MYSORE

From 12—7—48

For 5 Days only

Daily 3 shows

Cobra Woman

(In Technicolour)

: With :—

Maria Montez, John Hall, Mysore Babu.

Also showing from 10—7—48 for 4 days only

Royal Wedding

(In Technicolour)

—: Morning Shows :—

From 9 7—48 for 3 Days

You are in - the Army Now

— with —

JIMMY DURANTE

PHIL SILVERS

JANE WYMAN

ಶ್ರೀ ಗಾಯತ್ರೀ ಟಾಕೀಸ್

9—7—48 ರಿಂದ 4 ದಿನಗಳು ಮಾತ್ರ

Warner's Thundering Thrilling Drama

CHEYENNE

(ಷಾ ಯಾನೆ)

— ತಾರೆ :—

ಡೆನ್ನಿಸ್ ಮಾರ್ಗನ್ ● ಜಾನ್ ವೇಮನ್

—: Next Change :—

Warner's most Romantic Drama

DECEPTION

— Starring —

Bette Davis ; Claude Raine

WANTED

A business associate with a capital 2 to 5 thousands for a running shop in Mysore

Please Communicate to:

"X" C/o "Sadhvi"

ಅಪೂರ್ವ ಸುಸಮಯ

ಸೈಕಲ್ ವೀಲು ಟ್ರೂಯಿಂಗ್ ಮಿಷನ್‌ಗಳು ದೊರೆಯುತ್ತವೆ.

M.G.S. & Brothers

ಸೈಕಲ್ ಷಾಪ್

2534, ನಾಡ್ಯಾಚಾರ್ ರೋಡು

K R. ಮೊಹಲ್ಲಾ, ಮೈಸೂರು

Edited printed and published by A R Nagarajan at the Sadhvi Press D Subbaiah Road Mysore

ಜಯಪುರದ ಅರಮನೆಯಲ್ಲಿ ಕಾಂಗ್ರೆಸ್ ಅಧಿವೇಶನ

ಜಯಪುರದ ಅರಸರ ರಾಜಬೀದಿ ಅರಮನೆಯು ಸಮೀಪದಲ್ಲಿರುವ ಶಿವೇಕ್ಷನ್ನು ಅಲ್ಲಿ ನಡೆಯಲಿರುವ ಅಖಿಲ ಭಾ ಕಾಂಗ್ರೆಸ್ ಅಧಿವೇಶನಕ್ಕಾಗಿ ಕೊಡಲು ಎಂದು ತಿಳಿದುಬಂದಿದೆ

ವಸ್ತು ಪ್ರದರ್ಶಕರಿಗೂ, ವ್ಯಾಪಾರಸ್ಥರಿಗೂ ಸುಸಮಯ

ಕನ್ನಡ ರಂಗಭೂಮಿಯ ಶತಮಾನೋತ್ಸವ

ರಂಗ ಮಂಟಪ

ವಸ್ತು ಕಲಾ ಪ್ರದರ್ಶನ

ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ

ತಾ॥ 26-7-48 ರಿಂದ

ಒಂದು ವಾರ ಪೂರ್ತಾ

ಪ್ರದರ್ಶಕರಿಗೆ ಸ್ಟಾಲುಗಳನ್ನು ಮುಫತ್ತಾಗಿ ಕೊಡಲಾಗುವುದು

ಮೈಸೂರು, ಎಂ ಎಸ್ ಎಂ ಮ ಎಸ್ ಐ ಆರ್ ಕೈಲೈಯವರು ಈ ಪ್ರದರ್ಶನಕ್ಕೆ ಕರುವ ಸಾಮಾನುಗಳಿಗೆ ರಿಯಾಯಿತಿ ಕೊಟ್ಟಿದ್ದಾರೆ. ಕೂಡಲೇ ಸ್ಟಾಲುಗಳ ಹೆಚ್ಚಿನ ವಿವರಗಳಿಗೂ ಬರೆಯಿರಿ

ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಿತಿ

ಮೈಸೂರು.

ಮುಂದಿನ ಬದಲಾವಣೆ

ವುಡ್‌ಲ್ಯಾಂಡ್ಸ್

ಭಕ್ತ ತುಲಸೀದಾಸ್

(ತಮಿಳು)

— ತಾರಾಗಣ —

ಪಿ ಯು ಚಿ. ಎಸ್. ರಾಜಯ್ಯಂಗಾರ್, ಲಕ್ಷ್ಮೀಶಂಕರ್ ಮುಂತಾದವರು.

ಕ್ರಿಯೇಟರ್: — ಬೊಂಬಾಯಿ ಟಾಕೀಸ್ ಲಿಮಿಟೆಡ್, ಬೊಂಬಾಯಿ.

ಸಂಚಿಕೆ-ಸ್ಥಿತಿ ಎಂ ಚಂದ್ರಯ್ಯ, ಮೈಸೂರು

3-7-48 ನೇ ಶನಿವಾರದಿಂದ ಪ್ರೋಗ್ರಾಂ ಬದಲಾಯಿಸಿದೆ,

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

ಪೂರ್ವ-ಪಾಶ್ಚಾತ್ಯ ದೇಶಗಳ ಲಕ್ಷೋಪಲಕ್ಷ ಜನಗಳ ಪ್ರೀತಿಗೆ ಪಾತ್ರರಾದ

ಬೊಂಬಾಯಿ ಜಿ. ಎ. ಸರ್ಕಸ್

ದಿನ 2 ಆಟಗಳು ಸಂಜೆ 6-30 ರಾತ್ರಿ 9-30 ೧೦೦ ಆಟಗಾರರು — ೬೫ ಮೃಗಗಳು

೧೭ ನವ ತರುಣಿಯರ ಡ್ಯಾನ್ಸ್

ಟಿಕೇಟಿನ ದರಗಳು, (ಟ್ಯಾಕ್ಸ್ ಸಮೇತ) 2-8-0, 1-8 0, 0-10 0, 0 6 0

ಮೊದಲನೇ ಎರಡು ತರಗತಿಗಳಲ್ಲಿ ಸೀಟ್ ರಿಜರ್ವ್ ಮಾಡಿಸಲು ರಿಜರ್ವೇಷನ್ ಫೀ ಇಲ್ಲ

ಎಂ. ಸುಬ್ರಾಮಯ್ಯ ಅಂಡ್ ಕೊ

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯೂ ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ

—: ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು —

ಸಿ. ಬಿ. ಜನರಲ್ ಸ್ಟೋರ್ಸ್,

ಯೆಲ್‌ವಾಲ್ ಗಲ್ಲಿ, ಮೈಸೂರು

ಫೋ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೩] ಸೋಮವಾರ ೧೨-೭-೪೮ [ಸಂಚಿಕೆ ೩೩೧

ಭಾರತ ವಿಮಾನಗಳಿಗೆ ನಿಜಾಮರ ಎಚ್ಚರಿಕೆ

ಬೊಂಬಾಯಿನಲ್ಲಿ ನಿಜಾಂ ಗೂಢಚಾರರ ಚಟುವಟಿಕೆ

ಅರಮನೆ ಗ್ಯಾರೇಜು, ಮೈಸೂರು

ಹೈದರಾಬಾದಿಗೆ ನೆರವಾಗಿದ್ದ ಮ್ಯಾಜಿಸ್ಟ್ರೇಟರುಗಳ ಬಂಧನ

ನೂರುದ್ದೀನ್ ಯೂಸುಫ಼ುಲ್ಲಾ ಬಂದೂಕ್ವಾಲಾ ಮತ್ತು ಮುಹಮ್ಮದ್ ಫ಼ಾಯಿಜ಼ ಮುನ್ಶಿ ಎಂಬ ಬೊಂಬಾಯಿನ ಗೌರವ ಮ್ಯಾಜಿಸ್ಟ್ರೇಟರುಗಳೂ, ಇನ್ನೂ ಕೆಲವರೂ ಹೈದರಾಬಾದಿಗೆ ನಿಷಿದ್ಧವಾದ ಪದಾರ್ಥಗಳನ್ನು ಸಾಗಿಸುತ್ತಿದ್ದುದಕ್ಕಾಗಿ ಪೋಲೀಸರು ಅವರನ್ನು ಬಂಧಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

ಬರುವ ಆಗಸ್ಟ್ ೧೫ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯನ್ನು ಯೋಗ್ಯವಾದ ರೀತಿಯಲ್ಲಿ ನೆರವೇರಿಸಿ ಭಾರತೀಯರೆಲ್ಲರೂ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಕೋರಿದ್ದಾರೆ

ಪ್ಯಾಲಸ್ಟೀನಿನಲ್ಲಿ ಶಾಂತಿ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಪ್ಯಾಲಸ್ಟೀನಿನ ಕದನವನ್ನು ನಿಲ್ಲಿಸಬೇಕೆಂದು ... ಉಭಯ ಪಕ್ಷಗಳಿಗೂ ಕೊಟ್ಟ ಕಟ್ಟಳೆಯ ಸೂಚನೆಯನ್ನು ಎರಡು ರಾಷ್ಟ್ರಗಳೂ ಅಂಗೀಕರಿಸಿ ಕದನವನ್ನು ನಿಲ್ಲಿಸಿವೆ

ಕುರುಡು ವಿದ್ಯಾರ್ಥಿನಿ ಲಾ ಗ್ರ್ಯಾಜುಯೇಟ್

... ಶಾಲೆಯಲ್ಲಿ ಓದುತ್ತಿರುವ ೨೪ ವರ್ಷ ವಯಸ್ಸಿನ ... ಹಾರ್ಡಿಮನ್ ಎಂಬ ... ಯುವತಿಯು ವಿಶೇಷ ಪ್ರಶಸ್ತಿಯೊಂದಿಗೆ ಲಾ ಪರೀಕ್ಷೆಯಲ್ಲಿ ಪಾಸಾಗಿದ್ದಾಳೆ ಕುರುಡರಿಗೆ ಓದಲು ಬರುವ ಬ್ರೈಲ್ ಎಂಬ ಶಿಕ್ಷಣ ಪದ್ಧತಿಯಿಂದಲೇ ಮೂರು ವರ್ಷ ಕಾಲ ಆಕೆಯು ವ್ಯಾಸಂಗ ಮಾಡಿದಳು.

ಬಡವರ ಬಳಗದ ವಾರ್ಷಿಕೋತ್ಸವ

ಬೆಂಗಳೂರು ಕಬ್ಬನ್‌ಪೇಟೆಯಲ್ಲಿರುವ ಬಡವರ ಬಳಗದ ಸಾಲ್ವನೆಯ ವಾರ್ಷಿಕೋತ್ಸವವು ಕಳೆದ ಭಾನುವಾರ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾಷಣ ಮತ್ತು ಸಂಗೀತಗಳಾದ ನಂತರ ಸಂಘದ ವರದಿಯನ್ನು ಅದರ ಅಧ್ಯಕ್ಷರಾದ ಶ್ರೀ ಜಿ ಎಸ್ ದೇವದಾಸರವರು ಓದಿದರು. ಅಧ್ಯಕ್ಷರು ಭಾಷಣ ಮಾಡಿ, ಬಡವರ ಮಕ್ಕಳಿಗಾಗಿ ದುಡಿಯುತ್ತಿರುವ ಸಂಘದವರನ್ನು ಅಭಿನಂದಿಸಿದರು

ಭಾಗವತ ಕಥಾ ಶ್ರವಣ

ವಾಣೀವಿಲಾಸ ರಸ್ತೆಯಲ್ಲಿರುವ ಶ್ರೀ ಎಂ ಕಂಚೀವರಂಜೇ ಅರಸಿನವರ ಮನೆಯಲ್ಲಿ ಶ್ರೀ ವೇಣು ಗೋಪಾಲ ದಾಸರವರು ಹಲವು ದಿವಸಗಳಿಂದಲೂ ಹರಿಕಥಾ ಪ್ರಸಂಗವನ್ನು ನಡೆಸುತ್ತಿದ್ದು ಕೆಲವು ಅನಾನುಕೂಲತೆಗಳಿಂದ ಸ್ಥಗಿತವಾಗಿದ್ದ ... ಮೇಲೆ ಕಳೆದ ೧೩ ನೇ ತಾರೀಕಿನಿಂದ ಭಾಗವತ ಕಥೆಯನ್ನು ಎತ್ತಿಸಿರುವುದರಿಂದ ಮಹಾಜನರು ಬಹಳ ಸಂತೋಷದಿಂದ ಅವನ್ನು ಮುಂದುವರಿಸಲಾಗುತ್ತಿದೆ ಈ ಸಂದರ್ಭದಲ್ಲಿ ... ಶ್ರೀ ದಾಸರವರಿಗೆ ಶ್ರೋತೃ ... ಸಲ್ಲಿಸಿರುವ ದ್ರವ್ಯ ... ನಿಂತುಹೋಗಿರುವುದರಿಂದ ... ದಾಸರು ಬೇಡು ... ರೆಂದು ಶ್ರೀ ಎಂ ... ರವರು ಕೋರಿರು...

UNIVERSITY OF MYSORE

No. G4- 47-48

Office of the University of Mysore; Mysore 26th July 1948.

NOTIFICATION

It is hereby notified that the three First Grade Colleges to be started at Mysore & Tumkur with effect from the academic year 1948-49 will be provisionally named as follows:-

Present name	New Name
1 Intermediate College, Mysore	1 First Grade College, Mysore
2 Maharani's Intermediate College, Mysore	2 Maharani's College for Women, Mysore
3 Intermediate College, Tumkur.	3 First Grade College, Tumkur.

By order,
D. S. GORDON, Registrar.

ಪ್ರಭಾ ಪಿಕ್ಚರ್ ಹೌಸ್

16—7—48 ರಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

★ ಅರೇಬಿಯನ್ ನೈಟ್ಸ್ ★

(ಹಿಂದಿ)

★ ಕನ್ನನ್ ದೇವಿ ★ ನವಾಬ್

Office of the Deputy Commissioner,
Food Supplies, Mysore District,
Dated, Mysore the 5th July 1948.

No. Cs 8-3238/16-47

NOTIFICATION

It is hereby notified for the information of the public that the auctioning of over a lakh of unserviceable and damaged gunny bags available at the Government Central Depot, Mysore fixed for 16th June 1948 has been postponed to Monday 26th July, 1948 at 10 A M under the same terms and conditions notified in this office Notification No CS 8 3238-46 dated 31st May 1948 and published on page 504, Part VI of the Gazette dated 10th June 1948.

Clause 'C' of the conditions specified is noted below for information

" Clause C - The removal of the auctioned stocks in all cases other than the class noted in clause (b) will be permitted at the conclusion of the sale in case the entire bid amount is paid on the spot or within 3 days of the auctioning at the discretion of the officer conducting the sale and subject to the provisions noted in clause (a) above "

(Sd) MIR SAFDAR HUSSAIN,
Deputy Commissioner,
Mysore District

ಬೊಂಬಾಯಿ
ಜಿ. ಎ. ಸರ್ಕಸ್
ಮೈಸೂರು ಜಿವಣ್ಣರಾಯನ ಕಟ್ಟೆಯಲ್ಲಿ
೩ ಆಟಗಳು:-ಶುಕ್ರವಾರ, ಶನಿವಾರ
ಭಾ ಸ್ತು ವಾ ರ
೩-೩೦, ೬ ೩೦, ಮತ್ತು ೯-೩೦ ಕ್ಕೆ
ಮಿಕ್ಕ ದಿನಗಳಲ್ಲಿ ೨ ಆ ಟ ಗ ಳು
ಸಾಕ್ರು ೬-೩೦, ಮತ್ತು ೯-೩೦ ಕ್ಕೆ
— ದರಗಳು ಜನಾನುಕೂಲವಾಗಿ —
[ಎಂ. ಸುಬ್ಬರಾಮಯ್ಯ ಅಂಡ್ ಕೋ]

ಶ್ರೀ ಗಾಯತ್ರೀ ಟಾಕೀಸ್
16-7-48 ರಿಂದ 1 ವಾರ ಮಾತ್ರ
(ದಿನವಹಿ 3 ಆಟಗಳು)
R K O ರವರ
ಹೊಸ ಟಾರ್ಜಾನ್ ಚಿತ್ರ
(ಟಾರ್ಜಾನ್ ಅಂಡ್ ದಿ ಅಮೆಜಾನ್ಸ್)
Tarzan and
The Amazons
ಮುಖ್ಯ ಪಾತ್ರ:- ಜಾನಿ ವೆಯ್ಸ್‌ಮುಲ್ಲರ್
ಬ್ರೆಂಡಾ ಜಾಯ್ಸ್ ಮತ್ತು ಚೀಟಾ

Edited printed and published by A. S. Nagarajan at the Sadhvi Press D Subbaiah Road Mysore

ರಾ ಜ ಕ ಮ ಲ್
ಮೈಸೂರು
17-7-48 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಪನಿಹಾರಿ
(ಹಿಂದಿ)
—: ತಾರಾಗಣ: —
ಶಾಂತಾ ಆಪ್ಟೆ, ಸುರೇಂದ್ರ, ಯಾಕೂಬ್ ಮುಂತಾದವರು

Morning Shows
From 16-7-48 for 4 days
Divorce of Lady
(In Technicolor)
With:- Merle Oberon
Laurence Oliver

ಖರೀದಿಗಿದೆ
ರಬ್ಬರ್ ಟೈರಿನ ಒಂಟೆತ್ತಿನ ಗಾಡಿ ... ದು ಮಾರಾಟಕ್ಕಿದೆ ವಿಚಾರಿಸಿರಿ: —
ಎಂ. ಎ. ಚಾರಿ ಅಂಡ್ ಕೋ
೪೪೭ ಮೈಸೂರು ರಸ್ತೆ, ಮೈಸೂರು

UNIVERSITY OF MYSORE

No Ex3 1086-47 48
Encl

Office of University Of Mysore
Mysore dated the 8th July

NOTIFICATION

Subject:-UNIVERSITY EXAMINATIONS OF SEPTEMBER 19

It is hereby notified that candidates intending appear for the following Examinations to be held September 1948 should submit their applications in the prescribed form **on or before 24th July 1948 through the Heads of Colleges from which they appear last**

(i) Intermediate in Arts (v) B Sc, Degree
(ii) Intermediate in Science (vi) B.A (Hons) Prelimin
(iii) Intermediate in Commerce (vii) B. Sc, (Hons) P
(iv) B A, Degree (viii) B Com- [ilmin
(ix) Engineering

Forms of application for admission to the Ex ination may be hed on application from the Heads Colleges concerned

BY ORDER,
D. S. GORDON, REGISTRA

ಹೊಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶ ಬೆಳೆದ ಪ್ರಖ್ಯಾತವಾದ
KANAN DEVAN TEA
ಕಣ್ಣನ್ ದೇವನ್ ಟಿ
ಸುವಾಸನೆಯಿಂದ ಕೂಡಿದ ಉತ್ಕೃಷ್ಟವಾದುದಲ್ಲದೆ ಮತ್ತು ರುಚಿಕರವಾಗಿಯೂ ಇದೆ.
—: ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—
ಸಿ. ಬಿ. ಜನರಲ್ ಸ್ಟೋರ್ಸ್,
ಲ್ಯಾನ್ಸ್‌ಡೌನ್ ರಸ್ತೆ, ಮೈಸೂರು

16-7-48 ರಿಂದ — ವುಡ್‌ಲ್ಯಾಂಡ್ಸ್‌ನಲ್ಲಿ — ಪ್ರತಿ ದಿನ ಮೂರು ಆಟಗಳು
★ ಭಕ್ತ ತುಲಸೀದಾಸ್ ★
[ತಮಿಳು]
ತಾರಾಗಣ:- ಸಂಗೀತ ವಿದ್ವಾನ್ ಬಿ. ಎಸ್. ರಾಜಯ್ಯಂಗಾರ್ ಮತ್ತು ಲಕ್ಷ್ಮೀಶಂಕರ್ ಮುಂತಾದವರು

ಪೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೦-೭-೪೮ [ಸಂಚಿಕೆ ೧

ಮುಸ್ಲಿಂ ರಾಷ್ಟ್ರಗಳಿಗೆ ನಿಜಾಮರು ಕಲೀಫರೇ

ನಿಜಾಮರು ಇಸ್ಲಾಂ ರಾಷ್ಟ್ರಗಳ ಕಲೀಫರು

ನಿಜಾಮರನ್ನು ಎಲ್ಲ ಇಸ್ಲಾಂ ರಾಷ್ಟ್ರಗಳ ಕಲೀಫರಾಗಿ ನೇಮಿಸಲು ಹಂಚಿಕೆ ನಡೆಯುತ್ತಿದೆಯೆಂದೂ, ಅದಕ್ಕಾಗಿ ನಿಜಾಮರು ಮತ್ತು ಪಾಕಿಸ್ತಾನದವರು ಪ್ಯಾಲಸ್ಟೀನ್ ಕದನದಲ್ಲಿ ಅರಬ್ಬರಿಗೆ ದ್ರವ್ಯ ಸಹಾಯ ಮಾಡುತ್ತಿರುವರೆಂದೂ ವರದಿಯಾಗಿದೆ. ಕಲೀಫರಾಗಲು ನಿಜಾಮರು ತಮ್ಮ ಒಂದು ಕೋಟಿ ಪೌಂಡು ಐಶ್ವರ್ಯವನ್ನು ವೆಚ್ಚ ಮಾಡಲು ಸಿದ್ಧರಿರುವರೆಂದೂ ಹೇಳಲಾಗಿದೆ. ಈ ಯೋಜನೆ ಪ್ರಕಾರ ನಿಜಾಮರು ತಮ್ಮ ರಾಜ್ಯವನ್ನು ತ್ಯಜಿಸಿ, ಆಸ್ತಿಗಳೊಡನೆ ಕರಾಚಿಗೆ ತೆರಳುವರೆಂದೂ ಹೇಳಲಾಗಿದೆ.

ಕೋತಿಯ ಆಮರಣಾಂತ ಉಪವಾಸ

ಅಹಮದಾಬಾದಿನಲ್ಲಿ ಕೋತಿಯೊಂದು ಒಂದು ಮನೆಯ ಛಾವಣಿಯಿಂದ ಮತ್ತೊಂದಕ್ಕೆ ಹಾರುತ್ತಿದ್ದಾಗ ತನ್ನ ಮರಿಯನ್ನು ಕಳೆದುಕೊಂಡು, ಅದನ್ನು ಎಷ್ಟು ಹುಡುಕಿದರೂ ಸಿಕ್ಕಲಿಲ್ಲವಾದುದರಿಂದ, ೭ ದಿನಗಳು ಉಪವಾಸ ಮಾಡಿ, ಕಳೆದ ಶುಕ್ರವಾರ ಮೃತಿಹೊಂದಿತೆಂದು ಹೇಳಲಾಗಿದೆ. ಕೋತಿಯು ಉಪವಾಸ ಮಾಡುವುದನ್ನು ನೋಡಲು ಸಾವಿರಾರು ಜನರು ಪ್ರತಿನಿತ್ಯವೂ ಬರುತ್ತಿದ್ದರೆಂದೂ, ಮರಿಯನ್ನು ಪತ್ತೆ ಮಾಡಿಕೊಟ್ಟವರಿಗೆ ಬಹುಮಾನ ಕೊಡಲಾಗುವುದಾಗಿ ಒಬ್ಬರು ತಿಳಿಸಿದರೂ, ಅದು ಸಿಕ್ಕಲಿಲ್ಲವೆಂದೂ ವರದಿಯಾಗಿದೆ.

○ ಹೈದರಾಬಾದಿಗೆ ಭಾರತ ನಾಣ್ಯಗಳು ಹೋಗಕೂಡದೆಂದು ನಿಷೇಧಿಸಿರುವುದರಿಂದ, ಅಲ್ಲಿ ಭಾರತದ ಖೋಟಾ ನಾಣ್ಯಗಳನ್ನು ನಿಜಾಂ ಸರ್ಕಾರದ ಏಜೆಂಟರುಗಳು ತಯಾರಿಸುತ್ತಿದ್ದಾರೆಂದು ಹೇಳಲಾಗಿದೆ.

ಫುಟ್‌ಬಾಲ್ ಸಂಘ

ಮೈಸೂರು ಸಂಸ್ಥಾನದ ಫುಟ್‌ಬಾಲ್ ಸಂಘದ ಮೈಸೂರು ಶಾಖೆಯ ಸಭೆಯು ಮೊನ್ನೆ ದಿನ ನಡೆದು ಕಾರ್ಯಕಾರೀ ಸಮಿತಿಗೆ ಈ ಕೆಳಗೆ ಕಂಡವರನ್ನು ಚುನಾಯಿಸಲಾಯಿತು:—ಉಪಾಧ್ಯಕ್ಷರು-ಶ್ರೀ ಹೆಚ್. ಕೃಷ್ಣರಾಯರು, ಛೇರ್‌ಮನ್-ಶ್ರೀ ಬಿ ಟಿ ಶ್ರೀನಿವಾಸ ಅಯ್ಯಂಗಾರ್ಯರು, ಕಾರ್ಯದರ್ಶಿ ಮತ್ತು ಖಜಾಂಚಿ-ಶ್ರೀ ಬಿ. ಶ್ರೀನಿವಾಸ ಅಯ್ಯಂಗಾರ್ಯರು. ಸದಸ್ಯರು-ಶ್ರೀಗಳು ಬಿ. ಎಲ್ ರಾಮಸ್ವಾಮಿ, ಎಂ ಗೋಪಾಲರಾಜೇ ಅರಸ್, ಎಂ ಆರ್ ದೊಡ್ಡಯ್ಯ, ನೂರ್ ಹುಸೇನ್, ಟಿ ಸಿ ಗೌಡ, ಎಂ ಆರ್ ರಾಮಸ್ವಾಮಿ ಮತ್ತು ಮಹಮ್ಮದ್ ಇಬ್ರಾಹಿಂ.

ಪ್ರಸಿದ್ಧ ಪತ್ರಿಕೆ

ಹರಿನಿವಾಸ

ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಹೋಟೇಲ್

ಚಾಮರಾಜನಗರ.

ಮೇಲ್ಕಂಡ ಹೋಟೇಲಿನ ಮಾಲೀಕತ್ವವು ನನಗೂ ಮತ್ತು ಶ್ರೀ ಹೊನ್ನಪ್ಪರು ಸುಬ್ಬಪ್ಪನವರಿಗೂ ಇದ್ದು ತಾ|| ೧೪-೭-೪೮ ನೇ ರಿಲೀಸ್ ಬಾಂಡ್ ಪ್ರಕಾರ ಸದರಿ ಹೋಟೇಲಿನ ಮಾಲೀಕತ್ವವು ನನಗೆ ಸೇರಿದೆ. ಮೇಲ್ಕಂಡ ತಾರೀಖಿನಿಂದ ಇದಕ್ಕೆ ಸಂಬಂಧಪಟ್ಟ ಎಲ್ಲಾ ವ್ಯವಹಾರಕ್ಕೂ ನಾನೇ ಬಾಧ್ಯನಾಗಿರುತ್ತೇನೆ. ಮಹನೀಯರೆಲ್ಲರೂ ಮುಂದೆಯೂ ಸಹಕರಿಸಬೇಕಾಗಿ ವಿನಂತಿ.

ಚಾಮರಾಜನಗರ, ಕೆ. ಮಾಧವರಾವ್,

೧೮-೭-೧೯೪೮. ಪ್ರೊಪ್ರೈಟರ್.

ಹಿಂದೂಗಳನ್ನು ಕೊಲೆ ಮಾಡಲು ರಜಾಕರರಿಗೆ ಆಜ್ಞೆ

ಬಿದರಿನಲ್ಲಿರುವ ಹಿಂದೂಗಳ ಮನೆಗಳನ್ನು ಲೂಟಿ ಮಾಡಿ ಅವರುಗಳನ್ನು ಕೊಲೆ ಮಾಡಬೇಕೆಂದು ಹೈದರಾಬಾದಿನ ಖಾಸಿಂ ರಜ್ವಿಯು ತಮ್ಮನ್ನು ಕಳುಹಿಸಿರುವುದಾಗಿ ಬೀದರಿಗೆ ಸೇರಿದ ರಾಜಗಾಮಿಯಲ್ಲಿ ಕೈಸೆರೆಯಾಗಿರುವ ರಜಾಕರರು ತಿಳಿಸಿದ್ದಾರೆ. ಖಾಸಿಂ ರಜ್ವಿಯನ್ನು ನಿಂದಿಸಿ, ತಮಗೆ ಕ್ಷಮೆ ತೋರಿಸಬೇಕೆಂದು ಅವರು ಕೇಳಿಕೊಂಡಿದ್ದಾರೆ

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಸಹಾಯ

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ೨೨ ಮಂದಿ ವಿದ್ಯಾರ್ಥಿಗಳು ಇದ್ದಾರೆ. ಅವರುಗಳ ಊಟ ಮತ್ತು ವಸತಿ ಸೌಕರ್ಯಗಳನ್ನು ಸಾರ್ವಜನಿಕರ ಸಹಾಯದಿಂದ ಏರ್ಪಡಿಸಲಾಗಿದೆ. ಇದಕ್ಕೆ ಚಾಮರಾಜನಗರದ ವರ್ತಕ ಮಂಡಲಿಯವರು ೨೦೦ ರೂ ಗಳ ಪಾತ್ರೆಗಳು, ದೇವನೂರು ಗ್ರಾಮಸ್ಥರು ಅಡಿಗೆಯ ಸಾಮಾನುಗಳು ಮತ್ತು ರಾಜಧಾನಿಯ ಮತ್ತು ಬಿಳಿಗಿರಿ ಹೋಬಳಿಗಳ ಜನರು ಧನಧಾನ್ಯಗಳ ಸಹಾಯ ಮಾಡಿರುತ್ತಾರೆ. ನಿಲಯಕ್ಕೆ ಸ್ವಂತ ಕಟ್ಟಡವಿಲ್ಲದೆ ತುಂಬಾ ಕಷ್ಟವಾಗಿದೆ. ಇದಕ್ಕೆ ಸಾರ್ವಜನಿಕರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ವ್ಯವಸ್ಥಾಪಕರಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಪ್ರಾರ್ಥಿಸಿರುತ್ತಾರೆ

ಹರಿಕಥಾ ಸಂಭಾವನೆ

ವೇ|| ವೇಣುಗೋಪಾಲ ದಾಸರವರು ತಮ್ಮಲ್ಲಿ ಹರಿಕಥಾ ಪ್ರಸಂಗವನ್ನು ನಡೆಸುತ್ತಿದ್ದ ಸ್ವಂತ ಸ್ವಕೃತ್ಯದ ಅನಿವಾರ್ಯದಿಂದ ೧೩-೭-೪೮ ನೇ ತಾರೀಖಿನಲ್ಲಿ ಭಾಗವತ ಕಥೆಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ನಿಲ್ಲಿಸಿಬಿಟ್ಟರೆಂದೂ, ಗ್ರಂಥವು ಪೂರೈಸಿ ಮಂಗಳ ಮಾಡಲು ಮತ್ತೊಬ್ಬ ವೇದಮೂರ್ತಿಗಳವರಿಂದ ಮುಂದಿನ ಪ್ರವಚನ ನಡೆಯುತ್ತಿದೆಯೆಂದೂ, ಈ ಸಂದರ್ಭದಲ್ಲಿ ಶ್ರೀ ದಾಸರವರಿಗೆ ಶ್ರೋತೃವೃಂದದವರು ಸಹಾಯ ಮಾಡಿರತಕ್ಕ ಸಂಭಾವನಾ ದ್ರವ್ಯವನ್ನು ಈಗ ನಡೆಯುತ್ತಿರುವ ಭಾಗವತ ಪ್ರವಚನ ಕಾಲದಲ್ಲಿಯಾದರೂ ಸ್ವೀಕರಿಸಬೇಕಾಗಿ ಶ್ರೀ ಸಂಜೀವರಾಜೇ ಅರಸಿನವರು ಕೋರಿದ್ದಾರೆ.

ಮಂಗಳದಾಸ್ ಪಕ್ವಾಸಾರವರು ಮದ್ರಾಸ್ ಗವರ್ನರು

ಮದರಾಸಿನ ಗವರ್ನರಾದ ಸರ್ ಆರ್ಚಿಬಾಲ್ಡ್ ನೈಯವರು ಮುಂದಿನ ಸೆಪ್ಟೆಂಬರ್ ತಿಂಗಳಿನಿಂದ ನಿವೃತ್ತರಾಗಿ ಭಾರತದಲ್ಲಿ ಬ್ರಿಟನ್ನಿನ ರಾಯಭಾರಿಗಳಾಗಿ ನೇಮಕವಾಗಿರುವುದರಿಂದ ಈಗ ಮಧ್ಯಪ್ರಾಂತ್ಯದ ಗವರ್ನರಾದ ಶ್ರೀ ಮಂಗಳದಾಸ್ ಪಕ್ವಾಸಾರವರನ್ನು ಮದರಾಸ್ ಗವರ್ನರನ್ನಾಗಿಯೂ, ಸಂಸ್ಥಾನಗಳ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ವಿ. ಪಿ. ಮೆನನ್ನರವರನ್ನು ಮಧ್ಯಪ್ರಾಂತ್ಯದ ಗವರ್ನರನ್ನಾಗಿಯೂ ನೇಮಿಸಲಾಗುವುದೆಂದು ಗೊತ್ತಾಗಿದೆ.

೮೦ ವರ್ಷಗಳ ಕಾಲ ಜೈಲು ವಾಸ

ಫ್ಲಾರೆನ್ಸಿನ ೯೧ ವರ್ಷದ ಸಿಸಿಟ್ಟಿ ಪ್ರೋರ್ ಎಂಬಾತನು ತನ್ನ ಜೀವನವನ್ನೆಲ್ಲಾ ಜೈಲಿನಲ್ಲೇ ಕಳೆದು ಈಗ ಮೃತಿಹೊಂದಿದನು. ಕಳುವು ವಗೈರೆ ಇತರ ಕೃತ್ಯಗಳಿಗಾಗಿ ಆತನು ೮೦ವರ್ಷಗಳು ಜೈಲಿನಲ್ಲಿ ಶಿಕ್ಷೆ ಅನುಭವಿಸಿದನೆಂದೂ, ಆತನು ಸಾಯುವುದಕ್ಕೆ ಮುಂಚೆ ಕೇವಲ ೧೮೭ ದಿನಗಳ ಕಾಲ ಮಾತ್ರ ಜೈಲಿನಿಂದ ಹೊರಗಡೆ ಇದ್ದನೆಂದೂ ಹೇಳಲಾಗಿದೆ

ನಗರ ಕಾಂಗ್ರೆಸ್ ಚುನಾವಣೆ

ಮೈಸೂರು ನಗರ ಕಾಂಗ್ರೆಸ್ [illegible] ಚುನಾವಣೆಯ ಸಂಬಂಧದಲ್ಲಿ ಅನೇಕರ ಅರ್ಜಿಗಳಲ್ಲಿ ತಾಲ್ಲೂಕು ಎನ್ನುವ ಸ್ಥಳದಲ್ಲಿ ಮೈಸೂರು ಎಂದು ಬರೆದಿದೆಯೆಂದು ಮತ್ತು [illegible] ಧಾರಿಗಳಿಲ್ಲವೆಂದು [illegible] ಚುನಾವಣಾಧಿಕಾರಿಗಳು ಅವುಗಳನ್ನು ತಿರಸ್ಕರಿಸಿದ್ದಾರೆಂದೂ, ಇದೇ ರೀತಿ ತಮ್ಮ ಮತ್ತು ಶ್ರೀ ಸವಕಿ ಕೃಷ್ಣಮೂರ್ತಿ ಮತ್ತು ಶ್ರೀಮತಿ ಕಾಮೇಶ್ವರಪ್ಪನವರ ಗಳ ಅರ್ಜಿಗಳನ್ನು ತಿರಸ್ಕರಿಸಲಾಗಿದೆಯೆಂದೂ [illegible] ವರು ಕೊಟ್ಟು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ಜಿ ಆರ್ ರುದ್ರಪ್ಪನವರು ಒಂದು ಪತ್ರ ಬರೆದಿರುತ್ತಾರೆ

ಆರ್ ಎಸ್ ಎಸ್ ನವರ ದಸ್ತಗಿರಿ

ಬೆಂಗಳೂರಿನ ರಾಜಾಸಿಂಗನ ಪೇಟೆಯಲ್ಲಿ ಮೊನ್ನೆ ರಾತ್ರಿ ಆರ್ ಎಸ್ ಎಸ್ ಸಂಸ್ಥೆಯವರು ಭಜನೆ ನಡೆಸುತ್ತಿದ್ದಾಗ, ಅವರ ಪೈಕಿ ೧೪ ಜನರನ್ನು ಪೋಲೀಸರು ದಸ್ತಗಿರಿ ಮಾಡಿ, ಅವರಲ್ಲಿದ್ದ ಗುರುಜಿ ಭಾವಚಿತ್ರವನ್ನು ವಶಪಡಿಸಿಕೊಂಡರೆಂದು ತಿಳಿದು ಬಂದಿದೆ.

ಸ್ವಪಕ್ಷದ ಪಾರ್ಟಿಯವರಲ್ಲಿ

[illegible]

[illegible] ಹಿಂದೂ ವೇಷವನ್ನು ಧರಿಸಿ ಸ್ವಪಕ್ಷದ ಪಾರ್ಟಿಯವರೊಂದಿಗೆ ಪ್ರವಾಸ ಮಾಡುತ್ತಿದ್ದುದನ್ನು ರಾಯಚೂರಿನಲ್ಲಿ ಪತ್ತೆ ಮಾಡಲಾಗಿದೆ. ರಜಾಕರರು ಗುಪ್ತ ಕಾರ್ಯಾಚರಣೆಯಲ್ಲಿ ತೊಡಗಿದ್ದು ಸೈನ್ಯ ಶಾಖೆಗೆ ವಿಷಯಗಳನ್ನು ಸೇಖರಿಸಿ ಹೈದರಾಬಾದಿಗೆ ಕಳುಹಿಸುತ್ತಿದ್ದರೆಂದೂ, ಮತ್ತು ಹೈದರಾಬಾದ್ ಮತ್ತು ಭಾರತಕ್ಕೆ ಯುದ್ಧವಾದರೆ ಪಾಕಿಸ್ತಾನವು ಭಾರತದ ಮೇಲೆ ದಂಡಯಾತ್ರೆ ನಡೆಸುವುದೆಂದು ಪ್ರಚಾರ ಮಾಡುತ್ತಿದ್ದರೆಂದೂ ಹೇಳಲಾಗಿದೆ.

ಹಸ್ತ ಲಾಘವದಿಂದ ಅನಾರೋಗ್ಯ

ಹಸ್ತಲಾಘವವು ಅನಾರೋಗ್ಯಕರವೆಂದು ಅಮೇರಿಕದ ಅಧ್ಯಕ್ಷ ಟ್ರೂಮನ್ನರವರಿಗೆ ಅವರ ವೈದ್ಯರುಗಳು ತಿಳಿಸಿ, ಅದನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿರುತ್ತಾರೆ. [illegible] ಅಧ್ಯಕ್ಷರು ತಮ್ಮ ಭವನದಲ್ಲಿ ೧೨೦೦ ಜನ [illegible] ಹಸ್ತಲಾಘವನ್ನು ಕೊಟ್ಟುದರಿಂದ ಬಲಗೈ ಒಂದು ಗಂಟೆ [illegible] ಕೊಳ್ಳಬೇಕಾಯಿತೆಂದು [illegible] ಗಿದೆ

[illegible] ಮೊಕದ್ದಮೆಯಲ್ಲಿ [illegible] ವಿವಾದ

[illegible] ನ ಪ್ರಶ್ನೆಗಳು

[illegible] ಬೆಂಗಳೂರು ೨೦

[illegible] ಮೊಕದ್ದಮೆ [illegible] ಮುಂದುವರೆಯಿತು. [illegible] ಶ್ರೀ ಮಿರ್ಲೆ [illegible] ವಾದಮಾಡಿ ಕಂಟೆಂ[illegible] ವಿಚಾರಣೆ ಮಾಡಲು [illegible] ವಿಚಾರಣಾ [illegible] ಶಾಸನ [illegible] ಮತ್ತು ಆ ಸ[illegible] ಮೊಕದ್ದಮೆಯನ್ನು [illegible] ಗಳ ಅವರು ತಿಳಿಸಿದರು

[illegible] ಶಾಸನದ ಮೇರೆಗೆ ವಿಚಾರ[illegible] ಮೊಕದ್ದಮೆಯನ್ನು ವಿಚಾರಿಸಲು [illegible] ಅಧಿಕಾರವನ್ನು ಕೊಡಲಾಗಿದೆ [illegible] ಅಡ್ವೊಕೇಟ್ ಜನರಲ್ಲರಾದ ಶ್ರೀಯುತ [illegible] ವಾದಿಸಿದರು.

[illegible] ಶ್ರೀ ಜಿ ಪರಮಶಿವಯ್ಯ [illegible] ಶ್ರೀ ಆರ್ ವೆಂಕಟರಾಮಯ್ಯನ[illegible] ಅಡ್ವೊಕೇಟ್ ಜನರಲ್ಲರವರಿಗೆ ಪ್ರಶ್ನೆಗಳ[illegible] ಸರ್ಕಾರದ ನೀತಿಯು ಈ ವಿಷಯದ[illegible] ವನ್ನು ಸ್ಪಷ್ಟವಾಗಿ ತಿಳಿಸುವಂತೆ [illegible] ಮತ್ತು ಸರ್ಕಾರವನ್ನು ಬಿಟ್ಟ[illegible] ಸೂಚಿಸಿದರು.

ಶ್ರೀ [illegible] ಉತ್ತರವಿತ್ತು [illegible] ಗುಣದೋಷಗಳನ್ನು ಈಗ ಚ[illegible] ನ್ನು ಮಾತ್ರ [illegible] ವಿರೋಧಿಸುತ್ತಿರು[illegible] ವುದಾಗಿಯೂ [illegible]

[illegible] ಆಜಾದನೆಯ[illegible] ಕಳುಹಿಸಬೇಕಾ[illegible] ಬೇಕಾದರು, ಮ[illegible] ಶಾಸನದಂತೆ ಅ[illegible] ವಹಿಸುವುದೂ ಸ[illegible] ದರು.

[illegible] ಮುಂದುವರಿ[illegible]

[illegible]

[illegible] ಪತ್ರಿಕೆಯು ಮನೆ ಮಾರ್ಕೆಟ್ [illegible] ನಾಳೆ ಪತ್ರಿಕೆಗೆ ರಜಾ [illegible]

—ವ್ಯವಸ್ಥಾಪಕ

ರೋ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೨೦-೭-೪೮ [ಸಂಚಿಕೆ ೧

ಮುಸ್ಲಿಂ ರಾಷ್ಟ್ರಗಳಿಗೆ ನಿಜಾಮರು ಕಲೀಫರೇ

ನಿಜಾಮರು ಇಸ್ಲಾಂ ರಾಷ್ಟ್ರಗಳ ಕಲೀಫರು

ನಿಜಾಮರನ್ನು ಎಲ್ಲ ಇಸ್ಲಾಂ ರಾಷ್ಟ್ರಗಳ ಕಲೀಫರಾಗಿ ನೇಮಿಸಲು ಹಂಚಿಕೆ ನಡೆಯುತ್ತಿದೆಯೆಂದೂ, ಅದಕ್ಕಾಗಿ ನಿಜಾಮರು ಮತ್ತು ಪಾಕಿಸ್ತಾನದವರು ಪ್ಯಾಲಸ್ಟೀನ್ ಕದನದಲ್ಲಿ ಅರಬ್ಬರಿಗೆ ದ್ರವ್ಯ ಸಹಾಯ ಮಾಡುತ್ತಿರುವರೆಂದೂ ವರದಿಯಾಗಿದೆ. ಕಲೀಫರಾಗಲು ನಿಜಾಮರು ತಮ್ಮ ಒಂದು ಕೋಟಿ ಪೌಂಡು ಐಶ್ವರ್ಯವನ್ನು ವೆಚ್ಚ ಮಾಡಲು ಸಿದ್ಧರಿರುವರೆಂದೂ ಹೇಳಲಾಗಿದೆ. ಈ ಯೋಜನೆ ಪ್ರಕಾರ ನಿಜಾಮರು ತಮ್ಮ ರಾಜ್ಯವನ್ನು ತ್ಯಜಿಸಿ, ಆಸ್ತಿಗಳೊಡನೆ ಅಲ್ಲಿಗೆ ತೆರಳುವರೆಂದೂ ಹೇಳಲಾಗಿದೆ.

ಕೋತಿಯ ಆಮರಣಾಂತ ಉಪವಾಸ

ಅಹಮದಾಬಾದಿನಲ್ಲಿ ಕೋತಿಯೊಂದು ಒಂದು ಮನೆಯ ಛಾವಣಿಯಿಂದ ಮತ್ತೊಂದಕ್ಕೆ ಹಾರುತ್ತಿದ್ದಾಗ ತನ್ನ ಮರಿಯನ್ನು ಕಳೆದುಕೊಂಡು, ಅದನ್ನು ಎಷ್ಟು ಹುಡುಕಿದರೂ ಸಿಕ್ಕಲಿಲ್ಲವಾದುದರಿಂದ, ೭ ದಿನಗಳು ಉಪವಾಸ ಮಾಡಿ, ಕಳೆದ ಶುಕ್ರವಾರ ಮೃತಿಹೊಂದಿತೆಂದು ಹೇಳಲಾಗಿದೆ. ಕೋತಿಯು ಉಪವಾಸ ಮಾಡುವುದನ್ನು ನೋಡಲು ಸಾವಿರಾರು ಜನರು ಪ್ರತಿನಿತ್ಯವೂ ಬರುತ್ತಿದ್ದರೆಂದೂ, ಮರಿಯನ್ನು ಪತ್ತೆ ಮಾಡಿಕೊಟ್ಟವರಿಗೆ ಬಹುಮಾನ ಕೊಡಲಾಗುವುದಾಗಿ ಒಬ್ಬರು ತಿಳಿಸಿದರೂ, ಅದು ಸಿಕ್ಕಲಿಲ್ಲವೆಂದೂ ವರದಿಯಾಗಿದೆ.

○ ಹೈದರಾಬಾದಿಗೆ ಭಾರತ ನಾಣ್ಯಗಳು ಹೋಗಕೂಡದೆಂದು ನಿಷೇಧಿಸಿರುವುದರಿಂದ, ಅಲ್ಲಿ ಭಾರತದ ನೋಟು ನಾಣ್ಯಗಳನ್ನು ನಿಜಾಂ ಸರ್ಕಾರದ ಏಜೆಂಟರುಗಳು ಶೇಖರಿಸುತ್ತಿದ್ದಾರೆಂದು ಹೇಳಲಾಗಿದೆ.

ಫುಟ್ ಬಾಲ್ ಸಂಘ

ಮೈಸೂರು ಸಂಸ್ಥಾನದ ಫುಟ್ ಬಾಲ್ ಸಂಘದ ಮೈಸೂರು ಶಾಖೆಯ ಸಭೆಯು ಮೊನ್ನೆ ದಿನ ನಡೆದು ಕಾರ್ಯಕಾರೀ ಸಮಿತಿಗೆ ಈ ಕೆಳಗೆ ಕಂಡವರನ್ನು ಚುನಾಯಿಸಲಾಯಿತು:—ಉಪಾಧ್ಯಕ್ಷರು-ಶ್ರೀ ಹೆಚ್. ಕೃಷ್ಣರಾಯರು, ಛೇರ್ ಮನ್-ಶ್ರೀ ಬಿ ಟಿ ಶ್ರೀನಿವಾಸ ಅಯ್ಯಂಗಾರ್ಯರು, ಕಾರ್ಯದರ್ಶಿ ಮತ್ತು ಖಜಾಂಚಿ ಶ್ರೀ ಬಿ. ಶ್ರೀನಿವಾಸ ಅಯ್ಯಂಗಾರ್ಯರು. ಸದಸ್ಯರು-ಶ್ರೀಗಳು ಬಿ. ಎಲ್ ರಾಮಸ್ವಾಮಿ, ಎಂ ಗೋಪಾಲರಾಜೇ ಅರಸ್, ಎಂ ಆರ್ ದೊಡ್ಡಯ್ಯ, ನೂರ್ ಹುಸೇನ್, ಟಿ ಸಿ ಗೌಡ, ಎಂ ಆರ್ ರಾಮಸ್ವಾಮಿ ಮತ್ತು ಮಹಮದ್ ಇಬ್ರಾಹಿಂ.

ಪ್ರಸಿದ್ಧ ಪತ್ರಿಕೆ

ಹರಿನಿವಾಸ

ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಹೋಟೇಲ್

ಚಾಮರಾಜನಗರ.

ಮೇಲ್ಕಂಡ ಹೋಟೇಲಿನ ಮಾಲೀಕತ್ವವು ನನಗೂ ಮತ್ತು ಶ್ರೀ ಹೊನ್ನೂರು ಸುಬ್ಬಪ್ಪನವರಿಗೂ ಇದ್ದು ತಾ॥ ೧೪-೭-೪೮ ನೇ ರಿಲೀಸ್ ಬಾಂಡ್ ಪ್ರಕಾರ ಸದರಿ ಹೋಟೇಲಿನ ಮಾಲೀಕತ್ವವು ನನಗೆ ಸೇರಿದೆ. ಮೇಲ್ಕಂಡ ತಾರೀಖಿನಿಂದ ಇದಕ್ಕೆ ಸಂಬಂಧಪಟ್ಟ ಎಲ್ಲಾ ವ್ಯವಹಾರಕ್ಕೂ ನಾನೇ ಬಾಧ್ಯನಾಗಿರುತ್ತೇನೆ ಮಹನೀಯರೆಲ್ಲರೂ ಮುಂದೆಯೂ ಸಹಕರಿಸಬೇಕಾಗಿ ವಿನಂತಿ.

ಚಾಮರಾಜನಗರ, ಕೆ. ಮಾಧವರಾವ್,
೧೪-೭-೧೯೪೮. ಪ್ರೊಪ್ರೈಟರ್.

ಹಿಂದೂಗಳನ್ನು ಕೊಲೆ ಮಾಡಲು ರಜಾಕರರಿಗೆ ಆಜ್ಞೆ

ಬಿದರಿನಲ್ಲಿರುವ ಹಿಂದೂಗಳ ಮನೆಗಳನ್ನು ಲೂಟಿ ಮಾಡಿ ಅವರನ್ನು ಕೊಲೆ ಮಾಡಬೇಕೆಂದು ಹೈದರಾಬಾದಿನ ಖಾಸಿಂ ರಜ್ವಿಯು ತಮ್ಮನ್ನು ಕಳುಹಿಸಿರುವುದಾಗಿ ಬೀದರಿಗೆ ಸೇರಿದ ರಾಜಗಾಮಿಯಲ್ಲಿ ಕೈಸೆರೆಯಾಗಿರುವ ರಜಾಕರರು ತಿಳಿಸಿದ್ದಾರೆ. ಖಾಸಿಂ ರಜ್ವಿಯನ್ನು ನಿಂದಿಸಿ, ತಮಗೆ ಕ್ಷಮೆ ತೋರಿಸಬೇಕೆಂದು ಅವರು ಕೇಳಿಕೊಂಡಿದ್ದಾರೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಟ್ಟಡಕ್ಕೆ ಸಹಾಯ

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ೨೨ ಮಂದಿ ವಿದ್ಯಾರ್ಥಿಗಳು ಇದ್ದಾರೆ ಅವರುಗಳ ಊಟ ಮತ್ತು ವಸತಿ ಸೌಕರ್ಯಗಳನ್ನು ಸಾರ್ವಜನಿಕರ ಸಹಾಯದಿಂದ ಏರ್ಪಡಿಸಲಾಗಿದೆ. ಇದಕ್ಕೆ ಚಾಮರಾಜನಗರದ ವರ್ತಕ ಮಂಡಲಿಯವರು ೨೦೦ ರೂ ಗಳ ಸಾಮಗ್ರಿಗಳು, ದೇವನೂರು ಗ್ರಾಮಸ್ಥರು ಅಡಿಗೆಯ ಸಾಮಾನುಗಳು ಮತ್ತು ರಾಜಧಾನಿಯ ಮತ್ತು ಬಲಗಿರಿ ಹೋಬಳಿಗಳ ಜನರು ಧನಧಾನ್ಯಗಳ ಸಹಾಯ ಮಾಡಿರುತ್ತಾರೆ. ನಿಲಯಕ್ಕೆ ಸ್ವಂತ ಕಟ್ಟಡವಿಲ್ಲದೆ ತುಂಬಾ ಕಷ್ಟವಾಗಿದೆ ಇದಕ್ಕೆ ಸಾರ್ವಜನಿಕರು ಉದಾರವಾಗಿ ಧನ ಸಹಾಯ ಮಾಡಬೇಕೆಂದ ವ್ಯವಸ್ಥಾಪಕರಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಪ್ರಾರ್ಥಿಸಿರುತ್ತಾರೆ.

ಹರಿಕಥಾ ಸಂಭಾವನೆ

ವೇ॥ ವೇಣುಗೋಪಾಲ ದಾಸರವರು ತಮ್ಮಲ್ಲಿ ಹರಿಕಥಾ ಪ್ರಸಂಗವನ್ನು ನಡೆಸುತ್ತಿದ್ದ ಸ್ಥಳದ ಗೃಹಕೃತ್ಯದ ಅನಿವಾರ್ಯದಿಂದ ೧೩-೭-೪೮ ನೇ ತಾರೀಖಿನಲ್ಲಿ ಭಾಗವತ ಕಥೆಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ನಿಲ್ಲಿಸಿಬಿಟ್ಟರೆಂದೂ, ಗ್ರಂಥವು ಪೂರೈಸಿ ಮಂಗಳ ಮಾಡಲು ಮತ್ತೊಬ್ಬ ವೇದ ಪುರೋಹಿತರವರಿಂದ ಮುಂದಿನ ಪ್ರವಚನ ನಡೆಯುತ್ತಿದೆಯೆಂದೂ, ಈ ಸಂದರ್ಭದಲ್ಲಿ ಶ್ರೀ ದಾಸರವರಿಗೆ ಶ್ರೋತೃ ವೃಂದದವರು ಸಹಾಯ ಮಾಡಿರತಕ್ಕ ಸಂಭಾವನಾ ದ್ರವ್ಯವನ್ನು ಈಗ ನಡೆಯುತ್ತಿರುವ ಭಾಗವತ ಪ್ರವಚನ ಕಾಲದಲ್ಲಿಯಾದರೂ ಸ್ವೀಕರಿಸಬೇಕಾಗಿ ಶ್ರೀ ಸಂಜೀವರಾವ್ ಅರಸಿನವರು ಕೋರಿದ್ದಾರೆ.

ಮಂಗಳದಾಸ್ ಪಕ್ವಾಸಾರವರು ಮದ್ರಾಸ್ ಗವರ್ನರು

ಮದರಾಸಿನ ಗವರ್ನರಾದ ಸರ್ ಆರ್ಚಿಬಾಲ್ಡ್ ನೈರವರು ಮುಂದಿನ ಸೆಪ್ಟೆಂಬರ್ ತಿಂಗಳಿನಿಂದ ನಿವೃತ್ತರಾಗಿ ಭಾರತದಲ್ಲಿ ಬ್ರಿಟನ್ನಿನ ರಾಯಭಾರಿಗಳಾಗಿ ನೇಮಕವಾಗಿರುವುದರಿಂದ ಈಗ ಮಧ್ಯ ಪ್ರಾಂತ್ಯದ ಗವರ್ನರಾದ ಶ್ರೀ ಮಂಗಳದಾಸ್ ಪಕ್ವಾಸಾರವರನ್ನು ಮದರಾಸ್ ಗವರ್ನರನ್ನಾಗಿಯೂ, ಸಂಸ್ಥಾನಗಳ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ವಿ ಪಿ. ಮೆನನ್ನರವರನ್ನು ಮಧ್ಯಪ್ರಾಂತ್ಯದ ಗವರ್ನರನ್ನಾಗಿಯೂ ನೇಮಿಸಲಾಗುವುದೆಂದ ಗೊತ್ತಾಗಿದೆ.

೮೦ ವರ್ಷಗಳ ಕಾಲ ಜೈಲುವಾಸ

ಫ್ಲಾರಿಡ್ಸಿನ ೯೧ ವರ್ಷದ ಸಿಸಿಲ್ಲಿ ಫ್ಲೋರ್ ಎಂಬಾತನ ತನ್ನ ಜೀವನವನ್ನೆಲ್ಲಾ ಜೈಲಿನಲ್ಲೇ ಕಳೆದ. ಈಗ ಮೃತಿ ಹೊಂದಿರುವನು ಕಳವು ಮತ್ತು ಇತರ ಕೃತ್ಯಗಳಿಗಾಗಿ ಆತನು ೮೦ ವರ್ಷಗಳು ಜೈಲಿನಲ್ಲಿ ಶಿಕ್ಷೆ ಅನುಭವಿಸಿದನೆಂದೂ, ಆತನು ಸಾಯುವುದಕ್ಕೆ ಮುಂಚೆ ಕೇವಲ ೧೮೭ ದಿನಗಳ ಕಾಲ ಮಾತ್ರ ಜೈಲಿನಿಂದ ಹೊರಗಡೆ ಇದ್ದನೆಂದೂ ಹೇಳಲಾಗಿದೆ.

ನಗರ ಕಾಂಗ್ರೆಸ್ ಚುನಾವಣೆ

ಮೈಸೂರು ನಗರ ಕಾಂಗ್ರೆಸ್ ಮೊಹಲ್ಲಾ ಚುನಾವಣೆಯ ಸಂಬಂಧದಲ್ಲಿ ಅನೇಕರ ದೂರುಗಳಲ್ಲಿ ಕಾಲ್ಪನಿಕ ಎನ್ನುವ ಸ್ಥಳವು ಮೈಸೂರು ಎಂದು ಬರೆದಿದೆಯೆಂದೂ [illegible] ಸತತ [illegible] ಭಾರಿಗಳಲ್ಲವೆ [illegible] ಚುನಾವಣಾಧಿಕಾರಿಗಳು ಅವುಗಳನ್ನ ತಿರಸ್ಕರಿಸಿದ್ದಾರೆಂದೂ, ಇದೇ ರೀತಿ ತಮ್ಮ ಮತ್ತು ಶ್ರೀ ಸದರಿ ಕೃಷ್ಣಮೂರ್ತಿ ಮತ್ತು ಶ್ರೀಮತಿ ಕಾಮೇಶ್ವರಮ್ಮನವರ ಗಳ ಅರ್ಜಿಗಳನ್ನು ತಿರಸ್ಕರಿಸಲಾಗಿದೆಯೆಂದೂ ದೂರು ಕೊಟ್ಟು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ಜಿ ಆರ್ ರುದ್ರಪ್ಪನವರು ಒಂದು ಪತ್ರ ಬರೆದಿರುತ್ತಾರೆ.

ಆರ್ ಎಸ್ ಎಸ್ ನವರ ದಸ್ತಗಿರಿ

ಬೆಂಗಳೂರಿನ ರಾಜಾಸಿಂಗನ ಪೇಟೆಯಲ್ಲಿ ಮೊನ್ನೆ ರಾತ್ರಿ ಆರ್ ಎಸ್ ಎಸ್ ಸಂಸ್ಥೆಯವರು ಭಜನೆ ನಡೆಸುತ್ತಿದ್ದಾಗ, ಅವರ ಪೈಕಿ ೧೮ ಜನರನ್ನು ಪೋಲೀಸರು ದಸ್ತಗಿರಿ ಮಾಡಿ, ಅವರಲ್ಲಿದ್ದ ಗುರೂಜಿ ಭಾವಚಿತ್ರವನ್ನು ವಶಪಡಿಸಿಕೊಂಡರೆಂದು ತಿಳಿದು ಬಂದಿದೆ.

ಸ್ವಪಕ್ಷ ಪಾರ್ಟಿಯವರಲ್ಲಿ ರಜಾಕರರು

[illegible] ಜನ ರಜಾಕರರು ಹಿಂದೂ ವೇಷವನ್ನು ಧರಿಸಿ ಸ್ವಪಕ್ಷದ ಪಾರ್ಟಿಯವರೊಂದಿಗೆ ಪ್ರವಾಸ ಮಾಡುತ್ತಿದ್ದುದನ್ನು ರಾಯಪುರದಲ್ಲಿ ಪತ್ತೆ ಮಾಡಲಾಗಿದೆ. ರಜಾಕರರು ಗುಪ್ತ ಕಾರ್ಯಾಚರಣೆಯಲ್ಲಿ ತೊಡಗಿದ್ದು ಸೈನ್ಯ [illegible] ವಿಷಯಗಳನ್ನು ಶೇಖರಿಸಿ ಹೈದರಾಬಾದಿಗೆ ಕಳುಹಿಸುತ್ತಿದ್ದರೆಂದೂ, ಮತ್ತು ಹೈದರಾಬಾದ್ ಮತ್ತು ಭಾರತಕ್ಕೆ ಯುದ್ಧವಾದರೆ ಪಾಕಿಸ್ತಾನವು ಭಾರತದ ಮೇಲೆ ದಂಡಯಾತ್ರೆ ನಡೆಸುವುದೆಂದು ಪ್ರಚಾರ ಮಾಡುತ್ತಿದ್ದರೆಂದೂ ಹೇಳಲಾಗಿದೆ.

ಹಸ್ತಲಾಘವದಿಂದ ಅನಾರೋಗ್ಯ

ಹಸ್ತಲಾಘವವು ಅನಾರೋಗ್ಯಕರವೆಂದು ಅಮೆರಿಕದ ಅಧ್ಯಕ್ಷ ಟ್ರೂಮನ್ನರವರಿಗೆ ಅವರ ವೈದ್ಯರುಗಳು ತಿಳಿಸಿ, ಅದನ್ನು ನಿಲ್ಲಿಸಬೇಕೆಂದು ಸಲಹೆ ಮಾಡಿರುತ್ತಾರೆ. ಇತ್ತೀಚೆಗೆ ಅಧ್ಯಕ್ಷರು ತಮ್ಮ ಭವನದಲ್ಲಿ ೧೨೦೦ ಜನ ಅತಿಥಿಗಳಿಗೆ ಹಸ್ತಲಾಘವವನ್ನು ಕೊಟ್ಟುದರಿಂದ ಬಳಲಿ ಒಂದು ಗಂಟೆ [illegible] ಕಳೆಯಬೇಕಾಯಿತೆಂದು [illegible].

[illegible] ಮೊಕದ್ದಮೆಯಲ್ಲಿ [illegible] ವಿವಾದ

[illegible] ಪ್ರಶ್ನೆಗಳು

[illegible] ಬೆಂಗಳೂರು ೨೦

[illegible] ಮೊಕದ್ದಮೆ [illegible] ಮುಂದುವರಿಯಿತು. [illegible] ಶ್ರೀ ವಿರ್ಲೆ [illegible] ವಾದಮಾಡಿ ಕಂಟಿಂ[illegible] ವಿಚಾರಣೆ ಮಾಡಲು [illegible] ವಿಚಾರಣಾ [illegible] ಶಾಸನ [illegible] ಮತ್ತು ಈ [illegible] ಮೊಕದ್ದಮೆಯನ್ನು ವಿಚಾರಿಸಲು [illegible] ಸಹ ಅವರು ತಿಳಿಸಿದರು.

[illegible] ಮೇರೆಗೆ ವಿಚಾರಣೆ [illegible] ನೇಮಿಸಿರುವುದಾಗಿಯೂ [illegible] ಮೊಕದ್ದಮೆಯನ್ನು ವಿಚಾರಿಸಲು ಅದಕ್ಕೆ [illegible] ಅಧಿಕಾರವನ್ನು ಕೊಡಲಾಗಿದೆ [illegible] ಜನರಲ್ಲರಾದ ಶ್ರೀಯುತ [illegible] ವಾದಿಸಿದರು.

[illegible] ಶ್ರೀ [illegible] ಪರಮಶಿವಯ್ಯನವರೂ ಮತ್ತು ಶ್ರೀ ಆರ್ ವೆಂಕಟರಾಮಯ್ಯನವರೂ ಅಡ್ವೊಕೇಟ್ [illegible] ಪ್ರಶ್ನೆಗಳನ್ನು [illegible] ಸರ್ಕಾರದ [illegible] ಈ ವಿಷಯದ [illegible] ಸ್ಪಷ್ಟವಾಗಿ ತಿಳಿಸುವಂತೆ ಕೇಳಿದರು. ಮತ್ತು ಸರ್ಕಾರವನ್ನು ಪಕ್ಷಕ್ಕೆ [illegible] ಸೂಚಿಸಿದರು.

ಶ್ರೀ [illegible] ಉತ್ತರವಿತ್ತು [illegible] ಈಗ [illegible] ಮಾತ್ರ [illegible] ವಿರೋಧಿಸುತ್ತಿರು [illegible]

ಸರ್ಕಾರದವರು [illegible] ಆಪಾದನೆಯನ್ನು [illegible] ಕಳುಹಿಸಬೇಕಾ[illegible] ಹೇಳಿದರು, ಮ[illegible] ಶಾಸನದಂತೆ ಅ[illegible] ನಡೆಸುವುದೂ ಸ[illegible]

[illegible] ಮುಂದುವರಿಯಿತು—

[illegible] ನೆ

[illegible] ಪತ್ರಿಕೆಗೆ [illegible]

—ವ್ಯವಸ್ಥಾಪಕ

ಧನ್ಯವಾದ

"ಸಾಧ್ವಿ"ಯು ದಿನ ಪತ್ರಿಕೆಯಾಗಿ ಹೊರಟು ಆರು ವರ್ಷಗಳು ತುಂಬಿದುವು. ಇಂದಿನಿಂದ ಏಳನೇ ವರ್ಷದಲ್ಲಿ ಪದಾರ್ಪಣ ಮಾಡಲಾಗುತ್ತಿದೆ. ಹನ್ನೆರಡು ವರ್ಷಗಳ ಹಿಂದೆ ವಾರ ಪತ್ರಿಕೆಯಾಗಿ ಹೊರಟು ಮೂರೂವರೆ ವರ್ಷಗಳ ನಂತರ ಅಂದಿನ ಶಾಸನ ಬಾಣಕ್ಕೆ ತುತ್ತಾಗಿ ಮತ್ತೆ ಒಂದು ವರ್ಷದ ಮೇಲೆ ಪುನರ್ಜನ್ಮವೆತ್ತಿ ೧೯೪೨ರಲ್ಲಿ ದಿನ ಪತ್ರಿಕೆಯಾಗಿ "ಸಾಧ್ವಿ"ಯು ತನ್ನ ಸೇವೆಯನ್ನು ಸಲ್ಲಿಸುತ್ತಿದೆ.

ವಸ್ತುತಃ 'ಸಾಧ್ವಿ'ಯ ಜನ್ಮವೆತ್ತಿ ಕೇವಲ ಹನ್ನೆರಡು ವರ್ಷಗಳು ಮಾತ್ರವೇ ಆಗಿಲ್ಲ. ವೃದ್ಧ ಪಿತಾಮಹರೂ, ಮೈಸೂರು ಸಾರ್ವಜನಿಕ ಜೀವನದಪದರ್ಶಪ್ರಾಯರೂ ಅನೇಕ ವೃತ್ತ ಪತ್ರಿಕೆಗಳ ಜನ್ಮದಾತರೂ ಆದ ಪೂಜ್ಯ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಅರ್ಧ ಶತಮಾನದ ಹಿಂದೆ ನೆಟ್ಟ ಸಸಿ ಇದು. ಅವರ ಪುಣ್ಯ ಸ್ಮರಣೆಗಾಗಿ ಅವರ ಶಿಷ್ಯ ಕೋಟಿಯಲ್ಲಿ ಒಂದು ಅಣುಮಾತ್ರನಾಗಿರುವ ಇಂದಿನ ಸಂಚಾಲಕರಿಂದ ಅದ ಈಗ ನಡೆಸಲ್ಪಡುತ್ತಿದೆ. ತಾತಯ್ಯನವರು ಮೈಸೂರು ಸಂಸ್ಥಾನಕ್ಕೂ ಕನ್ನಡ ನಾಡಿಗೂ ಸಲ್ಲಿಸಿದ ಅಪಾರವಾದ ಸೇವೆಗೆ ಇದೊಂದು ಅತ್ಯಲ್ಪವಾದ ಕಾಣಿಕೆ.

ಪ್ರಜಾಪ್ರಭುತ್ವವು ನೆಲೆಗೊಳ್ಳುತ್ತಿರುವ ಈ ಸಮಯದಲ್ಲಿ ಪತ್ರಿಕೆಗಳ ಪಾತ್ರವು ಅತ್ಯಂತ ಗುರುತರವಾದುದು. ಈ ಕರ್ತವ್ಯ ನಿರ್ವಹಣೆಯಲ್ಲಿ ನಮಗೆ ನೆರವಾಗುತ್ತಿರುವ ಸಮಸ್ತರಿಗೂ ನಮ್ಮ ಅನಂತ ಧನ್ಯವಾದಗಳು. ಭಗವಂತನು ಸಕಲರಿಗೂ ಸಮಸ್ತ ಸನ್ಮಂಗಳಗಳನ್ನೂ ದಯಪಾಲಿಸಿ ನೂತನವಾಗಿ ಸ್ಥಾಪಿತವಾಗಿರುವ ಪ್ರಜಾಪ್ರಭುತ್ವವು ಸಂಪೂರ್ಣವಾಗಿ ಯಶಸ್ಸನ್ನು ಪಡೆದು ತನ್ಮೂಲಕ ವಿಶ್ವ ಶಾಂತಿ ಸ್ಥಾಪನೆಗೆ ಸಾಧಕವಾಗಲೆಂದು ನಾವು ಅನನ್ಯ ಭಕ್ತಿಯಿಂದ ಬೇಡುತ್ತೇವೆ.

ತಿಳಿವಳಿಕೆ

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನೆಂದರೆ -

ಎ. ರಂಗಪ್ಪ ಅಂಡ್ ಸನ್ಸ್ ಎಂದಿದ್ದ ನಮ್ಮ ಅಂಗಡಿಯ ಅಡ್ರೆಸ್ಸನ್ನು ಇಲ್ಲಿಂದ ಮುಂದೆ "ಆರ್. ವೆಂಕಟಪ್ಪ ಜನರಲ್ ಮರ್ಚೆಂಟ್" ಎಂಬ ದಾಗಿ ಬದಲಾಯಿಸಿರುತ್ತೆ. ಈ ದಿನಾಂಕ ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

ಆರ್. ವೆಂಕಟಪ್ಪ
ಶ್ರೀರಂಗಪಟ್ಟಣ

ಶ್ರೀ ಗಾಯತ್ರೀ ಟಾಕೀಸ್

16-7-48 ರಿಂದ 1 ವಾರ ಮಾತ್ರ
(ದಿನವಹಿ 3 ಆಟಗಳು)

R K O ರವರ
ಹೊಸ ಟಾರ್ಜಾನ್ ಚಿತ್ರ
(ಟಾರ್ಜಾನ್ ಅಂಡ್ ದಿ ಅಮೆಜಾನ್ಸ್)

Tarzan and The Amazons

ಮುಖ್ಯ ಪಾತ್ರ. ಜಾನಿ ವೇಸ್ಮುಲ್ಲರ್ ಬ್ರೆಂಡಾ ಜಾಯ್ಸ್ ಮತ್ತು ಚೀಟಾ

ಬೆಳಗಿನ ಆಟಗಳು

22-7 48 ನೇ ಗುರುವಾರದಿಂದ
6 ದಿನಗಳು ಮಾತ್ರ

ಸ್ಪೈ ಸ್ಮಾಷರ್
ಸ್ಪೈ ಸ್ಮಾಷರ್

ಪಾತ್ರ — ಕೇನೆ ರಿಚ ಮಂಡ್
ಪ್ರಭಾ ಪಿಕ್ಚರ್ ಹೌಸ್

Edited printed and published by A R Nagarajan at the Sadhvi Press D Subbaiah Road Mysore

---

ರಾಜಕಮಲ್,

ಮೈಸೂರು
17-7-48 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ ೩ ಆಟಗಳು

ಪನಿಹಾರಿ

(ಹಿಂದಿ)
—: ತಾರಾಗಣ —
ಶಾಂತಾ ಆಪ್ಟೆ, ಸುರೇಂದ್ರ, ಯಾಕೂಬ್ ಮುಂತಾದವರು

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜವಾಜಿ ರಾಯನ ಕಟ್ಟೆಯಲ್ಲಿ
೩ ಆಟಗಳು.-ಶುಕ್ರವಾರ, ಶನಿವಾರ ಭಾನುವಾರ
೩-೩೦, ೬-೩೦, ಮತ್ತು ೯-೩೦ ಕ್ಕೆ
ಮಿಕ್ಕ ದಿನಗಳಲ್ಲಿ ೨ ಆಟಗಳು
ಮಾತ್ರ ೬-೩೦, ಮತ್ತು ೯-೩೦ ಕ್ಕೆ
— ದರಗಳು ಹಾಂಡ್‌ಬಿಲ್‌ನಂತೆ —
[ಎಂ. ಸುಬ್ಬರಾಮಯ್ಯ ಅಂಡ್ ಕೋ]

BANGALORE RACES 1948
EXT RA MEETING

ಬೆಂಗಳೂರು ರೇಸಸ್ ಎಕ್ಸ್ಟ್ರಾ ಮೀಟಿಂಗ್ ೧೯೪೮
ಜುಲೈ 17, 21, 24 ಮತ್ತು 29 ರಲ್ಲಿ

ಒಂದನೇ ಟೋಟ್ ರೂ ೧೦, : ಎರಡನೇ ಟೋಟ್, ರೂ ೫
ರೂ ೨ ಸ್ಕ್ರೀನ್, ರೂ ೫ ಟ್ರಿಬಲ್ ಈವೆಂಟ್
ಒಂದನೇ ತರಗತಿ — ಪುರುಷರು ಸೀಸನ್ ಟಿಕೇಟ್ ರೂ ೩೦ — ದಿನಕ್ಕೆ, ರೂ ೬
ಸ್ತ್ರೀಯರು ,, ರೂ ೧೫— ,, ರೂ ೪
ಎರಡನೇ ,, ಪುರುಷರು ಅಥವ ಸ್ತ್ರೀಯರು — ,, ರೂ ೨
ಶುಭ]

ಪ್ರಭಾ ಪಿಕ್ಚರ್ ಹೌಸ್

ರ
16—7—48 ರಿಂದ ಅಮೋಘ ಪ್ರಾರಂಭ
ದಿನವಹಿ 3 ಆಟಗಳು

* ಅರೇಬಿಯನ್ ನೈಟ್ಸ್ *

(ಹಿಂದಿ)
* ಕನ್ನನ್ ದೇವಿ * ನವಾಬ್

ಮೈಸೂರು ದಸರಾ ವಸ್ತು ಪ್ರದರ್ಶನ 1948

೧೯೪೮ ನೆಯ ಅಕ್ಟೋಬರ್ ೩ ರಿಂದ ೧೯೪೮ ನೆಯ ಅಕ್ಟೋಬರ್ ೧೭ನೆಯ ತಾರೀಖಿನ ವರೆಗೆ (ಎರಡು ದಿನಗಳೂ ಸೇರಿ)

೧೯೪೮ ನೆ ಇಸವಿಯ ದಸರಾ ವಸ್ತು ಪ್ರದರ್ಶನಕ್ಕೆ ಸಂಬಂಧಿಸಿದ ಪ್ರಾಸ್ಪೆಕ್ಟಸ್ ಅಲ್ಪ ಬದಲಾವಣೆಗಳೊಡನೆ ೧೯೪೭ನೆ ಇಸವಿಯ ಪ್ರಾಸ್ಪೆಕ್ಟಸ್ಸಿನಂತೆಯೇ ಇರುತ್ತದೆ. ಇದರ ವಿವರಣೆಗಳನ್ನು ಮೈಸೂರು ದಸರಾ ವಸ್ತು ಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳಿಂದ ಪಡೆಯಬಹುದು.

ಸ್ಟಾಲುಗಳನ್ನು ರಿಸರ್ವ್ ಮಾಡಿಸಿಕೊಳ್ಳಲು ಬರುವ ಅರ್ಜಿಗಳನ್ನು ಸ್ವೀಕರಿಸುವ ಕಡೆಯ ತಾರೀಖು ೧೯೪೮ ನೆಯ ಸೆಪ್ಟಂಬರ್ ೧.

೧೯೪೮ ನೇ ಇಸವಿಯ ದಸರಾ ಎಕ್ಸಿಬಿಷನ್ ಕೈಪಿಡಿ ಮತ್ತು ಗೈಡಿನಲ್ಲಿ ಪ್ರಕಟಿಸಲು ಬರಬಹುದಾದ ಜಾಹಿರಾತು ವಿಷಯಗಳನ್ನೂ ಪಡಿಯಚ್ಚುಗಳನ್ನೂ ಸ್ವೀಕರಿಸಲು ಕಡೆಯ ತಾರೀಖು ೧೯೪೮ ನೆಯ ಆಗಸ್ಟ್ ೩೦.

ಕೈಪಿಡಿಗೆ ಜಾಹಿರಾತುಗಳನ್ನು ಸಂಗ್ರಹಿಸಲು ಏಜೆಂಟರುಗಳನ್ನು ನಿಯಮಿಸಿಲ್ಲವಾದುದರಿಂದ ಜಾಹಿರಾತುದಾರರು ಜಾಹಿರಾತಿನ ಪ್ರತಿಯನ್ನೂ ಪಡಿಯಚ್ಚುಗಳಿದ್ದಲ್ಲಿ ಅವುಗಳನ್ನೂ ಜಾಹಿರಾತಿನ ಪೂರ್ತಿ ಹಣದೊಡನೆ ಮೈಸೂರಿನಲ್ಲಿರುವ ದಸರಾ ವಸ್ತು ಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳಿಗೆ ಮೇಲೆ ನಮೂದಿಸಿರುವ ಕಡೆಯ ತಾರೀಖಿನೊಳಗಾಗಿ, ತಾವೇ ನೇರವಾಗಿ ಕಳುಹಿಸಬೇಕೆಂದು ಪ್ರಾರ್ಥಿಸಲಾಗಿದೆ. ಕೈಪಿಡಿಯು ಪ್ರಕಟವಾಗದಿದ್ದ ಪಕ್ಷದಲ್ಲಿ ಮುಂಗಡವಾಗಿ ಕೊಟ್ಟಿರುವ ಹಣವನ್ನು ಯಾವ ವಿಧವಾದ ಜವಾಬ್ದಾರಿಯನ್ನೂ ವಹಿಸದೆ ವಾಪಸು ಮಾಡಲಾಗುವುದು.

ಪೂರ್ಣ ವಿವರಗಳಿಗೆ— **ಕಾರ್ಯದರ್ಶಿ,**
ಮೈಸೂರು ದಸರಾ ವಸ್ತು ಪ್ರದರ್ಶನ ಸಮಿತಿ,
ಮೈಸೂರು, ಇವರಿಗೆ ಬರೆಯಿರಿ

16-7-48 ರಿಂದ — ವುಡ್‌ಲ್ಯಾಂಡ್ಸ್‌ನಲ್ಲಿ — ಪ್ರತಿ ದಿನ ಮೂರು ಆಟಗಳು

* ಭಕ್ತ ತುಲಸೀದಾಸ್ *

[ತಮಿಳು]
ತಾರಾಗಣ:-ಆಸ್ಥಾನ ವಿದ್ವಾನ್ ಬಿ. ಎಸ್. ರಾಜಯ್ಯಂಗಾರ್ ಮತ್ತು ಲಕ್ಷ್ಮೀಶಂಕರ್ ಮುಂತಾದವರು

ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೨೨-೭-೪೮ [ಸಂಚಿಕೆ ೨

ಶ್ರೀರಂಗಪಟ್ಟಣದ ಬಳಿ ಬಸ್ಸು ಕಂದಕಕ್ಕೆ ಬಿತ್ತು

ಸಾಧ್ವಿ ಪತ್ರಿಕೆ

ಆರನೆಯ ವಾರ್ಷಿಕೋತ್ಸವ

ಮೈಸೂರು ೨೧

ಮೊದಲೇ ಪ್ರಕಟಿಸಿದ್ದಂತೆ ಸಾಧ್ವಿ ಪತ್ರಿಕೆಯ ಆರನೇ ವಾರ್ಷಿಕೋತ್ಸವವು ನೆನ್ನೆ ಸಂಜೆ ಆರು ಘಂಟೆಗೆ ರಾಜ್ಯಾಂಗ ಸಭಾಧ್ಯಕ್ಷರೂ ಮತ್ತು ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಆದ ಶ್ರೀ|| ಟಿ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ನೂರಾರು ಜನ ಮಹಿಳೆಯರೂ ಮಹನೀಯರೂ ದಯಮಾಡಿಸಿದ್ದರು. ಸಾಹಿತ್ಯ ವಿದ್ವಾನ್ ಶ್ರೀ|| ಎಚ್ ರಾಮಾನುಜಾಚಾರ್ಯರಿಂದಲೂ ಮತ್ತು ಶ್ರೀ ಎಚ್.ಆರ್ ಸೀತಾರಾಮ ಶಾಸ್ತ್ರಿಗಳಿಂದಲೂ ಸಂಸ್ಕೃತ ಮತ್ತು ಕನ್ನಡಗಳಲ್ಲಿ ಮಂಗಳಾಚರಣೆಯೊಡನೆ ಸಮಾರಂಭವು ಉಪಕ್ರಮವಾಯಿತು. ಶ್ರೀಮತಿ ರಾಜಮ್ಮ ಕಲ್ಲೋಳಿಮಠರವರಿಂದ ಭಾರತ ಪಠಣ ಮತ್ತು ಬೆಂಗಳೂರಿನ ಶ್ರೀಮತಿ ಲಕ್ಷ್ಮಮ್ಮನವರಿಂದ ದೇವರನಾಮ ಗಾಯನವು. ಅನಂತರ ಪತ್ರಿಕಾ ಮಾಲೀಕರಾದ ಶ್ರೀ|| ಅಗರಂ ರಂಗಯ್ಯನವರು ಅಧ್ಯಕ್ಷರನ್ನೂ ಮತ್ತು ಸಭಿಕರನ್ನೂ ಸ್ವಾಗತಿಸಿ ಭಾಷಣಮಾಡಿ ಕೀರ್ತಿಶೇಷರಾದ ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮರಣಾರ್ಥವಾಗಿ ತಾವು ಸಾಧ್ವಿ ಪತ್ರಿಕೆಯ ಸಂಪಾದಕತ್ವ ವಹಿಸಿ ನಡೆಸುತ್ತಿರುವುದಾಗಿ ಹೇಳಿದರು.

ಅನಂತರ ಶ್ರೀ ಟಿ. ಸುಬ್ರಹ್ಮಣ್ಯಂರವರು ಭಾಷಣಮಾಡಿ ಪತ್ರಿಕೋದ್ಯಮದ ಜವಾಬ್ದಾರಿ ಮತ್ತು ಘನತೆಗಳನ್ನು ವಿವರಿಸಿದರು. ಈಗತಾನೆ ಸ್ಥಾಪಿಸಲ್ಪಟ್ಟಿರುವ ಪ್ರಜಾ ಸರ್ಕಾರಕ್ಕೆ ಪತ್ರಿಕೆಗಳು ಸರ್ವ ವಿಧದಲ್ಲೂ ನೆರವು ನೀಡಬೇಕೆಂದೂ ಮತ್ತು ಅವುಗಳು ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕೆಂದೂ ಕೋರಿದರು. ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ಮೈಸೂರು ದೇಶಕ್ಕೆ ಸಲ್ಲಿಸುತ್ತಿದ್ದ ಸೇವೆಯನ್ನು ಕೊಂಡಾಡಿದರು. ದೇಶದಲ್ಲಿ ತೋರುವ ಭಿನ್ನತೆಯು ತೊಲಗಬೇಕೆಂದೂ ಸ್ತ್ರೀಯರು ಪತಿವ್ರತಾ ಶಿರೋಮಣಿಯರಾಗಿ ಆದಿ ಶಕ್ತಿ ಸ್ವರೂಪಿಣಿಯರಾಗಿರಬೇಕೆಂದೂ ತಿಳಿಸಿದರು. ಗೋಪಾಲರಾಯರ ವಿಚಾರಣಾ ಸಮಿತಿಯ ವಿಷಯವಾಗಿ ಮಾತನಾಡುತ್ತಾ ಅವರೊಡನೆ ವ್ಯವಹಾರದಲ್ಲಿ ನಷ್ಟ ಹೊಂದಿದ ಅನೇಕ ಬಡವರಿಗೆ ಸಹಾಯವಾಗುವಂತೆ ಮಾಡುವುದೇ ಸಮಿತಿಯ ಉದ್ದೇಶವೆಂದು ಹೇಳಿದರು.

ಬೆಂಗಳೂರಿನ ಶ್ರೀಮತಿ ವೀಣಾ ಶಂಗಮ್ಮನವರ ಪುತ್ರಿ ಶ್ರೀಮತಿ ಸರೋಜಾಬಾಯಿಯವರ ಹಾಡುಗಾರಿಕೆಯು ಆಸ್ಥಾನ ವಿದ್ವಾನ್ ಎಸ್ ವೆಂಕಟರಮಣಯ್ಯನವರ ಪಿಟೀಲು ಮತ್ತು ವಿದ್ವಾನ್ ಎಂ ಎಸ್ ರಾಮಯ್ಯನವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು.

ವಂದನಾರ್ಪಣೆ ಮತ್ತು ಪುಷ್ಪ ತಾಂಬೂಲ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ಸಮಾರಂಭಕ್ಕೆ ಯಶಸ್ಸನ್ನು ಕೋರಿ ಕೆಳಗೆ ಕಂಡ ಮಹನೀಯರುಗಳು ಶುಭ ಸಂದೇಶಗಳನ್ನು ಕಳುಹಿಸಿದ್ದರು:—

ರಾಜ ಸೇವಾಸಕ್ತ ವೈ ಕೆ ರಾಮಚಂದ್ರ ರಾವ್, ದಿವಾನ್ ಬಹದ್ದೂರ್ ರಾಜ ಕಾರ್ಯ ಪ್ರಸಕ್ತ ಕೆ ರಾಮಸ್ವಾಮಿ, ಸಂಸ್ಥಾನದ ಪ್ರಧಾನ ಮಂತ್ರಿ ಶ್ರೀ ಚಂಗಲರಾಯ ರೆಡ್ಡಿ, ಅರ್ಥ ಸಚಿವ ಶ್ರೀ ಎಚ್ ಸಿ ದಾಸಪ್ಪ, ಹುಣಸೂರು ಕಾರ್ಯದರ್ಶಿ ಶ್ರೀ ಎಚ್ ನಿರಂಜನರಾಜ ಅರಸ್, ಶ್ರೀಮನ್ಮಹಾರಾಜರವರ ಖಾಸ ಕಾರ್ಯದರ್ಶಿ ಶ್ರೀ ಕೆ ನರಸಿಂಹಯ್ಯಂಗಾರ್, ಗಾಯತ್ರಿ ರೇಡಿಯೊ ಸಂಸ್ಥೆಯ ಶ್ರೀ ಎಸ್ ದೇವರಾಜ ಅರಸ್, ಜಿಲ್ಲಾಧಿಕಾರಿಗಳಾದ ಜನಾಬ್ ಮೀರ್ ಸಫ್ದರ್ ಹುಸೇನ್, ವಿಶ್ವ ವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀ ವಿ ಸ ಬ್ರಹ್ಮಣ್ಯ ಅಯ್ಯಂ, ಬೆಂಗಳೂರು ಶ.ಭ ಅಸ್ವರ್ ಟ್ರಿಬ್ಯೂನ್ ವೆಂಕಟ ಸರ್ವಿಸ್ಸಿನ ಶ್ರೀ ಎಂ ಸುಬ್ಬಶಾಸ್ತ್ರಿ ಮತ್ತು ವಿಜಯ ಪತ್ರಿಕೆ ಸಂಪಾದಕರಾದ ಶ್ರೀ ಎ ರಾಮಣ್ಣ.

ಈ ಸಂದರ್ಭದಲ್ಲಿ ಶ್ರೀ ಅಗರಂ ರಂಗಯ್ಯನವರು ನಿನ್ನೆ ಸಂಜೆ ಅನೇಕ ಗಣ್ಯ ಮಹನೀಯರನ್ನು ಆಹ್ವಾನಿಸಿ ಉಪಾಹಾರದಿಂದ ಸತ್ಕರಿಸಿದರು. ಆಹ್ವಾನಿತರ ಪರವಾಗಿ ಪೌರಸಭಾಧ್ಯಕ್ಷರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಭಾಷಣ ಮಾಡಿ ಶ್ರೀ ಅಗರಂ ರಂಗಯ್ಯನವರನ್ನು ಅಭಿನಂದಿಸಿದರು. ಶ್ರೀ ಶ್ರೀಶೈಲರವರು 'ವಂದೇ ಮಾತರಂ' ಗೀತೆಯನ್ನು ಹಾಡಿದ ನಂತರ ಉಪಾಹಾರದೊಡನೆ ಸಮಾರಂಭವು ಮುಕ್ತಾಯಗೊಂಡಿತು.

ಮೋಟಾರು ಬಸ್ಸು ಕಂದಕಕ್ಕೆ ಬಿತ್ತು

ಇಬ್ಬರ ಮರಣ; ಐದು ಮಂದಿಗೆ ಗಾಯ

ಶ್ರೀರಂಗಪಟ್ಟಣ ೨೧

ನಿನ್ನೆ ಸಂಜೆ ಇಲ್ಲಿನ ವೆಲ್ಲೆಸ್ಲಿ ಸೇತುವೆಯ ಬಳಿ ಶ್ರೀ ರಂಗನಾಥ ಮೋಟಾರು ಸರ್ವಿಸ್ಸಿನ ಪ್ರಯಾಣಿಕರ ಬಸ್ಸು ಬರುತ್ತಿದ್ದಾಗ ಅದರ ಸ್ಟಿಯರಿಂಗ್ ರಾಡು ಕೈ ತಪ್ಪಿದ್ದರಿಂದ ಅದು ಸಮೀಪದಲ್ಲಿರುವ ೩೦ ಅಡಿ ಆಳದ ಕಂದಕಕ್ಕೆ ಮಗುಚಿಕೊಂಡು ಪುಡಿ ಪುಡಿಯಾಯಿತು. ಕಂದಕದಲ್ಲಿ ಸುಮಾರು ೫ ಅಡಿ ಎತ್ತರ ನೀರು ಹರಿಯುತ್ತಿತ್ತು. ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀಗಳು ಬಸವಯ್ಯ ಮತ್ತು ಶ್ರೀನಿವಾಸ ಎಂಬಿಬ್ಬರು ಸ್ಥಳದಲ್ಲಿಯೇ ಮೃತಿ ಹೊಂದಿದರೆಂದೂ, ಐದು ಮಂದಿಗೆ ಗಾಯಗಳಾಗಿವೆಯೆಂದೂ ತಿಳಿದುಬಂದಿದೆ. ಕೂಡಲೇ ಪೋಲೀಸಿನವರು ಸ್ಥಳಕ್ಕೆ ಬಂದು ಶವಗಳನ್ನೂ ಮತ್ತು ಗಾಯಗೊಂಡವರನ್ನೂ ಆಸ್ಪತ್ರೆಗೆ ಸಾಗಿಸಿದರು. ಮುಂದಿನ ತನಿಖೆ ಕ್ರಮ ನಡೆಯುತ್ತಿದೆ.

ಸಾಧ್ವೀ

ದಿನ ಪತ್ರಿಕೆಯ ಆರನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ವಾನ್ ಹೆಚ್. ಆರ್. ಸೀತಾರಾಮಶಾಸ್ತ್ರಿಗಳು ಹರಿಸಿದ ಪದ್ಯಕುಂಚರತ್ನಮಾಲಾ

[ಭಾಮಿನೀ ಷಟ್ಪದಿ]

ಸುಗುಣಿ ವೃದ್ಧ ಪಿತಾಮಹರು ಕಾ
ವಗಣಿತಾಮೋದದಲಿ ಪೋಷಿಸಿ
ಮಗಳೆನೆ ಸಾಧ್ವಿಯನು ತಮ್ಮ
ಸದೇಶದಿಂ ಕಳಿಸಿ ||
ಆಗಲಿ ಪೋಗಲ್ಕವರ ಶಿಷ್ಯರು
ಸುಗುಣಿ ಎ ರಂಗಯ್ಯ ಸಲಹುವ
ರೊಗುವಿ ಗೆಲು ನೇಹದಲಿ ಗುರುಕುಲ
ಯೆಂದು ಭಾವಿಸುತೆ ||೧||
ವೀರ ಪುತ್ರರ ಶಾಂತಿ ಸಮರದೆ
ಬಾರಿಕೆ ಸ್ವಾತಂತ್ರ್ಯ ಬಂದಿರ
ಲಾರನೆಯ ವರ್ಷದಲಿ ನಗುತಡಿಯ
ಡುತಲೀ ಸಾಧ್ವೀ ||
ತೋರಿ ಮಳು ಸ ಪಥವನು ರಾಷ್ಟ್ರದ
ಭೂರಿ ದೇವಿಗೆ ಮೋಹ ಕನ್ನಡ
ಧಾರಿಣಿಯ ಪೊಳ್ಪಾಟ ಸೋರ್ಗಭಾವ
ಸಮತೆಗಳ ||೨||
ಅಂದು ಸತ್ಯಾಗ್ರಹದ ಸಮರದೆ
ಮುಂದೆ ಶಾಂತಿಸ್ಥಿತಿಯನೆಂದೇ
ಹಿಂದೆಗೆಯೆ ನೊಂದೆಂತು ಛಲದಿ ನಡೆದ
ಕಡಕೂರ ||
ಇಂದಿನುತ್ತಮಶಕ್ತಿ ಪೀರರ್
ಬಂದ ಸುಬ್ರಹ್ಮಣ್ಯ ಶರ್ಮರ
ನಿಂದಿಹರು ರಾಜ್ಯಾಂಗ ರಚನಾ ಸಭೆಯ
ಅಧ್ಯಕ್ಷ ||೩||
ಸತ್ಯ ಧರ್ಮದ ನೆಲೆಯ ತಿಳಿಸುತೆ
ಸತತ ಮತದ ಸನವ ನಲಿವುತೆ
ಸತ್ಯಕಾಗಿಯೆ ತನ್ನ ಜನ್ಮವ ಮೀಸಲಾ
ಗಿಡುತೆ ||
ಹೆತ್ತ ವೃದ್ಧ ಪಿತಾಮಹನ ಸ
ತ್ಪೋತ್ಸವೋತ್ಸಮನೆನಿಸಿ ಬಳಿಂ
ಬುಕ್ತಿಯಾಶಿಸಿವೀಗೆ ಸುಬ್ರಹ್ಮಣ್ಯರ
ನುಡಿನಡೆ ||೪||
ನಲವು ಮೈಸೂರರಸರಿಗೆ ಹರ
ನೊಲಿದು ರಾಷ್ಟ್ರ ಪ್ರಜೆಗೆ ಧರ್ಮದ
ಬಲವು ಭಾರತ ಪತ್ರಿಕೋದ್ಯಮಿವರ್ಗ
ಕೆಂದೆಂದು ||
ಗಳಿಸಿದೀ ಸ್ವಾತಂತ್ರ್ಯ ಸಂತತ
ನೆಲಸಿ ವಿಶ್ವದೊಳಗ್ರ ಪೀಠದಿ
ನಲಿದು ಭಾರತ ಮಾತೆ ಬೆಳಗಲಿ ಶಾಂತಿ
ನೆಲೆಸಿರಲಿ ||೫||

ಕೀರ್ತನಕಲಾನಿಧಿ, ವಿದ್ವಾನ್

ಹೆಚ್. ಆರ್. ಗಮಕಿ

ಗೋಪಾಲರಾವ್ ವಿಚಾರಣಾ ಸಮಿತಿಗೆ ನೋಟೀಸು

ಕಂಟೆಂಪ್ಟ್ ಮೊಕದ್ದಮೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದು ಹಾಕಲಾಗಿದೆ

ಸ್ವಂ ಸು ಫೋ] ಬೆಂಗಳೂರು ೨೧

ಕಂಟೆಂಪ್ಟ್ ಮೊಕದ್ದಮೆಯಲ್ಲಿ ಅಡ್ವೊಕೇಟ್ ಜನರಲ್ಲರಾದ ಶ್ರೀ ಜಿ ಆರ್ ಯತಿರಾಜುಲುರವರು ತಾವು ಜಾಮೀನು ಅರ್ಜಿ ವಿಷಯದಲ್ಲಿ ವಾದಿಸಲು ಸರ್ಕಾರದಿಂದ ನೇಮಿಸಲ್ಪಟ್ಟಿರುವುದಾಗಿಯೂ, ಕಂಟೆಂಪ್ಟ್ ಮೊಕದ್ದಮೆಯ ರಿವಿಷನ್ ವಿಚಾರದಲ್ಲಿ ವಕಾಲತ್ತು ವಹಿಸಿಲ್ಲವೆಂದೂ ತಿಳಿಸಿದ ಮೇಲೆ ರಿವಿಷನ್ ಅರ್ಜಿಯ ವಿಚಾರವು ಇತ್ಯರ್ಥವಾದಲ್ಲದೆ ಜಾಮೀನಿನ ಪ್ರಶ್ನೆಯನ್ನು ತೀರ್ಮಾನಿಸಲು ಅವಕಾಶವಿಲ್ಲದಿರುವುದರಿಂದ ಅಡ್ವೊಕೇಟ್ ಜನರಲ್ಲರ ಸಮ್ಮತಿಯಿಂದ ಶ್ರೇಷ್ಠ ನ್ಯಾಯಾಧೀಶರು ಜಾಮೀನ ಅರ್ಜಿಯ ತೀರ್ಮಾನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೆ ಹಾಕಿದರು.

ಕಂಟೆಂಪ್ಟ್ ರಿವಿಷನ್ ಅರ್ಜಿಯ ಮೇಲಿನ ವಾದ ವಿವಾದದ ಬಗ್ಗೆ ಗೋಪಾಲರಾವ್ ವಿಚಾರಣಾ ಸಮಿತಿಗೆ ನೋಟೀಸು ಕೊಡುವಂತೆಯೂ ಸಹ ತಿಳಿಸಿದರು. ಸಮಿತಿಯ ಪರವಾಗಿ ಬೇರೊಬ್ಬ ಅಡ್ವೊಕೇಟರನ್ನು ನೇಮಿಸಬಹುದೆಂದು ನಿರೀಕ್ಷಿಸಲಾಗಿದೆ.

§ ಕನ್ನಡ ರಂಗಭೂಮಿಯ ಶತಮಾನೋತ್ಸವದ ಉತ್ಸವವನ್ನು ಶ್ರೀಮನ್ಮಹಾರಾಜರವರು ... ನೇ ತಾರೀಖು ... ನೆರವೇರಿಸುವುದರಿಂದ ... ಎಲ್ಲಾ ... ಸಂಸ್ಥೆಗಳಿಗೂ ... ಕಳುಹಿಸಲಾಗಿದೆ.

... ಹೆಡ್ ಮಾಸ್ಟರ್ ಶ್ರೀ ಎ ಆರ್ ವೆಂಕಟಸುಬ್ಬಾಶಾಸ್ತ್ರಿಗಳವರು ಮೈಸೂರು ಸಂಸ್ಕೃತ ಪಾಠಶಾಲೆಯ ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ.

Latest News

ವಿಶೇಷ ಎ. ಎಂ. ಸಿ. ಸಿ. ಅಧಿವೇಶನ

ಎ. ಜಿ ರಾಮಚಂದ್ರರಾಯರ ರಾಜೀನಾಮೆ

ಸ್ವಂ ಸು ಫೋ] ಬೆಂಗಳೂರು ೨೧

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಒಂದು ಹೇಳಿಕೆಯಿತ್ತು, ಕಳೆದ ... ತಿಂಗಳಿಂದಲೂ ಇದ್ದ ಸಂಸ್ಥಾನದ ರಾಜಕೀಯ ಬಿಕ್ಕಟ್ಟಿನ ಸ್ಥಿತಿಯು ಈಗ ಉಳಿದಿಲ್ಲ ... ಪ್ರಯತ್ನಗಳೆಲ್ಲವೂ ವ್ಯರ್ಥವಾದವೆಂದೂ ಮೈಸೂರು ಕಾಂಗ್ರೆಸ್ ಜನರಲ್ ಸೆಕ್ರೆಟರಿ ಶ್ರೀ ಎ ಜಿ ರಾಮಚಂದ್ರರಾಯರು ರಾಜೀನಾಮೆಯನ್ನು ಸಲ್ಲಿಸಿದ್ದಾರೆಂದೂ, ... ವಿಷಯಗಳನ್ನೂ ಪರಿಶೀಲಿಸಲು ಈ ... ಮತ್ತು ಮುಂದಿನ ೧ ನೇ ತಾರೀಖುಗಳಲ್ಲಿ ... ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ಕರೆದಿರುವುದಾಗಿಯೂ ತಿಳಿಸಿದ್ದಾರೆ.

ಅಪೆರಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

ತಾ|| 23—7—48 ರಿಂದ

ಕಿಸ್ಮತ್ ವಾಲಿ

[ಹಿಂದಿ]

§ ನಾದಿಯ § ... § ಸಯಾನಿ

"Morning" Shows From 23-7-48

Dairy of a Chambermaid

— with —

Paulette Goddard, Burgess Meredith

ರಾಜಧಾನಿಯಲ್ಲಿ ಲಾ ಕಾಲೇಜು

ಮೈಸೂರು ೨೨

ಶಾರದಾ ವಿಲಾಸ ವಿದ್ಯಾ ಸಂಸ್ಥೆಯ ಕಾರ್ಯಕಾರೀ ಸಮಿತಿಯವರು ಮೈಸೂರು ಸಿಟಿಯಲ್ಲಿ ಒಂದು ಖಾಸಗೀ ಲಾ ಕಾಲೇಜನ್ನು ಈ ವರ್ಷದಿಂದ ಸ್ಥಾಪಿಸಲು ವಿಶ್ವವಿದ್ಯಾನಿಲಯದ ಒಪ್ಪಿಗೆ ಬೇಡಿರುತ್ತಾರೆಂದೂ ಆ ವಿಚಾರವು ಈ ತಿಂಗಳು ೨೪ ನೇ ತಾ|| ನಡೆಯುವ ವಿಶ್ವವಿದ್ಯಾನಿಲಯದ ಕೌನ್ಸಿಲ್ ಸಭೆಯಲ್ಲಿ ಚರ್ಚೆಯಾಗುವುದೆಂದೂ ತಿಳಿದುಬಂದಿದೆ

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಶಾಲೆಯ ಗುಡಿ ಬೀದಿಯಲ್ಲಿರುವ ಶ್ರೀರಾಮಲಿಂಗೇಶ್ವರ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಸಾಯಂಕಾಲ ೬ ಘಂಟೆಗೆ ವ|| ಗುಂಡೂರಾಯರವರಿಂದ 'ದ್ರೌಪದಿ ಪ್ರತಿಜ್ಞ'ವೆಂಬ ಹರಿಕಥೆಯೂ ಮತ್ತು ಅಮ್ಮನವರಿಗೆ ರಾಜರಾಜೇಶ್ವರಿ ಅಲಂಕಾರವೂ ಸಹ ನಡೆಯುತ್ತವೆ.

ಹೋಟೆಲ್ ಕೆಲಸಗಾರರ ಮುಖಂಡರ ದಸ್ತಗಿರಿ ಬಗ್ಗೆ ಖಂಡನೆ

ಮೈಸೂರು ೨೦

ಮೈಸೂರು ನಗರದ ಹೋಟೇಲ್ ಕೆಲಸಗಾರರ ಸಂಘದ ಸಭೆಯು ಮೊನ್ನೆ ದಿನ ಶ್ರೀ ಹೆಚ್ ಎ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಷಾಪ್ ಅಸಿಸ್ಟೆಂಟ್ ಕಾನೂನು ಜಾರಿಗೆ ಬಂದಿದ್ದರೂ ಕೆಲವು ಮಾಲೀಕರುಗಳು ಅದನ್ನು ಉಲ್ಲಂಘಿಸುತ್ತಿರುವುದನ್ನೂ ಮತ್ತು ಹೋಟೆಲ್ ಕೆಲಸಗಾರರ ಮುಖಂಡರಾದ ಶ್ರೀಗಳಾದ ಹೆಚ್. ಡಿ ರಾಜ್ ಮತ್ತು ಕೆ ಎ ಎಸ್ ಮೂರ್ತಿಗಳನ್ನು ಸರ್ಕಾರದವರು ದಸ್ತಗಿರಿ ಮಾಡಿರುವುದನ್ನೂ ಖಂಡಿಸುವ ನಿರ್ಣಯ ಮಾಡಲಾಯಿತು

ತಿಳಿವಳಿಕೆ

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನೆಂದರೆ:-

ವಿ ರಂಗಪ್ಪ ಅಂಡ್ ಸನ್ಸ್ ಎಂದಿದ್ದ ನಮ್ಮ ಅಂಗಡಿಯ ಅಡ್ರೆಸ್ಸನ್ನು ಇಲ್ಲಿಂದ ಮುಂದೆ "ಆರ್. ವೆಂಕಣ್ಣ ಜನರಲ್ ಮರ್ಚೆಂಟ್" ಎಂಬುದಾಗಿ ಬದಲಾಯಿಸಿದ್ದೇನೆ. ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ

ಆರ್ ವೆಂಕಣ್ಣ
ಶ್ರೀರಂಗಪಟ್ಟಣ

ಬರ್ಮಾ ಮಾಜಿ ಗೌರ್ನರು ನಿರುದ್ಯೋಗಿಗಳು

ಬರ್ಮಾದ ಮಾಜಿ ಗೌರ್ನರೂ ಮತ್ತು ಪ್ರಿವಿ ಕೌನ್ಸಿಲರೂ ಆದ ಸರ್ ರೆಜಿನಾಲ್ಡ್ ಸ್ಮಿತ್‌ರವರು ನಿರುದ್ಯೋಗಿಗಳಾಗಿ, ತಮ್ಮ ಹೆಸರನ್ನು ಪೀಟರ್ಸ್ ಫೀಲ್ಡಿನ ಉದ್ಯೋಗ [illegible] ಶಾಸ್ತ್ರಿಗೆ ಕೊಟ್ಟಿದ್ದಾರೆಂದು ಹೇಳಲಾಗಿದೆ ಅವರು ವ್ಯವಸಾಯ ಶಾಖೆಯಲ್ಲಿ ಅನೇಕ ಗೌರವ ಹುದ್ದೆಗಳನ್ನು ವಹಿಸುತ್ತಿದ್ದಾರೆ

ರಾಜಕಮಲ್,

ಮೈಸೂರು

17-7-48 ರಿಂದ

ಅನೋಖ್ ಪ್ರಾರಂಭ

ಪ್ರತಿ ದಿನ ೩ ಆಟಗಳು

ಪನಿಹಾರಿ

(ಹಿಂದಿ)

—: ತಾರಾಗಣ: —

ಶಾಂತಾ ಆಪ್ಟೆ, ಸುರೇಂದ್ರ, ಯಾಕೂಬ್ ಮುಂತಾದವರು

ಜೋಂ ಗಾರ್ಡುಗಳ ಪ್ರದರ್ಶನ

ಚಾಮರಾಜನಗರದಲ್ಲಿ ಹೋಂ ಗಾರ್ಡುಗಳ ಪ್ರದರ್ಶನವು ಕಳೆದ ಬುಧವಾರ ಅ|| ಪೋಲೀಸ್ ಸೂಪರಿಂಟೆಂಡೆಂಟರವರ ನೇತೃತ್ವದಲ್ಲಿ ನಡೆಯಿತು

ಬಹಿರಂಗ ಹರಾಜು

೧೯೪೮ ನೆಯ ಮಾಡಲ್ ಫ್ರೇಜರ್ ಮ್ಯಾನ್‌ಹಟನ್, ಕೇಸರ್, ಸ್ಟೂಡಿಬೇಕರ್ ಲ್ಯಾಂಡ್ ಕ್ರೂಯಿಜರ್, ಓಲ್ಡ್ಸ್ ಮೊಬೈಲ್, ಮುತಾದ ಮೋಟಾರು ಕಾರುಗಳು, ಕೆಲವು ಬಸ್ಸುಗಳು ಮತ್ತು ಒಂದು ರೋಡ್ ರೋಲರೂ ಸಹ ೧೯೪೮ ನೆಯ ಜುಲೈ ೨೮ ಮತ್ತು ೨೯ ನೆಯ ತಾರೀಕುಗಳಲ್ಲಿ ಪ್ರತಿದಿನ ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧ ಗಂಟೆವರೆಗೆ ಮೈಸೂರಿನಲ್ಲಿರುವ ಅರಮನೆ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಇತರ ವಿವರಗಳಿಗೆ ೧೯೪೮ ನೆಯ ಜುಲೈ ೧೭ ಮತ್ತು ೨೪ ನೆಯ ತಾರೀಕುಗಳಲ್ಲಿ ಹಿಂದು, ಮದ್ರಾಸ್‌ಮೆಯಿಲ್, ಡೇಲಿಪೋಸ್ಟ್, ತಾಯಿನಾಡು, ಆಲೋಕಲಂ, ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹಿರಾತುಗಳನ್ನು ದಯವಿಟ್ಟು ನೋಡಿ

ಸೂಪರಿಂಟೆಂಡೆಂಟ್,
ಅರಮನೆ ಗ್ಯಾರೇಜು, ಮೈಸೂರು

ಶ್ರೀ ಗಾಯತ್ರೀ ಟಾಕೀಸ್

22-7-48 ರಿಂದ 2 ದಿನಗಳು ಮಾತ್ರ

(ದಿನವಹಿ 3 ಆಟಗಳು)

M G M 's

Madame Curie

—:Starring:—

Walter Pingeon
Grear Garson

ಶ್ರೀ ಗಣೇಶ ಟಾಕೀಸ್

23-7-48 ರಿಂದ ಪ್ರತಿ ದಿನ 3 ಆಟಗಳು

- ವಿಚಿತ್ರ ವನಿತ -

(ತಮಿಳು)

ಪಾತ್ರ ವರ್ಗ.—ಬಿ ಎಸ್. ಸರೋಜ, ಪೆರಿಯನಾಯಕಿ ಮತ್ತು ರಾಮಸ್ವಾಮಿ

ಮುಂದಿನ ಬದಲಾವಣೆ — ರಣಜಿತ್‌ರವರ

'ಧನ ಭಗತ್' (ಹಿಂದಿ)

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜಿವಣ್ಣರಾಯನ ಕಟ್ಟೆಯಲ್ಲಿ

೩ ಆಟಗಳು:-ಶುಕ್ರವಾರ, ಶನಿವಾರ ಭಾನುವಾರ

೩-೩೦, ೬ ೩೦, ಮತ್ತು ೯-೩೦ ಕ್ಕೆ

ಮಿಕ್ಕ ದಿನಗಳಲ್ಲಿ ೨ ಆಟಗಳು ಮಾತ್ರ ೬-೩೦, ಮತ್ತು ೯-೩೦ ಕ್ಕೆ

— ದರಗಳು ಮಾಮೂಲಿನಂತೆ —

[ಎಂ ಸುಬ್ಬರಾಮಯ್ಯ ಅಂಡ್ ಕೋ]

Edited printed and published by A. R. Nagarajan at the Sadhvi Press D Subbaiah Road Mysore

---

ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್ [ಲಿಮಿಟೆಡ್] ಮೈಸೂರು

ನಾಲ್ಕು ಜನ ಗುಮಾಸ್ತರು ಬೇಕಾಗಿದ್ದಾರೆ

ಮಾಹೆಯಾನಾ ಕನಿಷ್ಠ ತಲಾ ರೂ. ೨೫/ಮತ್ತು ತುಟ್ಟಿಭತ್ಯ ೧೩ ರೂ. ಉಮೇದುವಾರರು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಾದರೂ ತೇರ್ಗಡೆಯಾಗಿರಬೇಕು. ಹೆಚ್ಚು ವಿವರಗಳನ್ನು ಸ್ಟೋರಿನ ಕಛೇರಿಯಿಂದ ತಿಳಿಯಬಹುದು. ಅರ್ಜಿಗಳು ೩೧-೭-೪೮ ರ ವರೆಗೆ ಸ್ಟೋರಿನ ಗೌರವ ಕಾರ್ಯದರ್ಶಿಗಳಿಗೆ ತಲುಪಬೇಕು

(ಸಹಿ) ವಿ. ಎಸ್. ಸುಬ್ಬರಾವ್
ಪ್ರೆಸಿಡೆಂಟ್

BANGALORE RACES 1948
EXTRA MEETING

ಬೆಂಗಳೂರು ರೇಸಸ್ ಎಕ್ಸ್ಟ್ರಾ ಮೀಟಿಂಗ್ ೧೯೪೮

ಜುಲೈ 24 ಮತ್ತು 29 ರಲ್ಲಿ

ಒಂದನೇ ಟೋಟ್ ರೂ ೧೧ :: ಎರಡನೇ ಟೋಟ್, ರೂ ೫

ರೂ ೨ ಸ್ಸೀಪ್, ರೂ ೫ ಟ್ರಿಬಲ್ ಇವೆಂಟ್

ಒಂದನೇ ತರಗತಿ — ಪುರುಷರು ಸೀಸನ್ ಟಿಕೇಟು ರೂ ೩೦ — ದಿನಕ್ಕೆ ರೂ ೬

ಸ್ತ್ರೀಯ ,, ರೂ ೧೫— ,, ರೂ ೪

ಎರಡನೇ ,, ಪುರುಷರು ಮತ್ತು ಸ್ತ್ರೀಯರು — ,, ರೂ ೨

ಶುಭ]

ಪ್ರಭುದೇವಾ ಟಾಕೀಸಿನಲ್ಲಿ

23-7-48 ನೇ ಶುಕ್ರವಾರದಿಂದ :: ಪ್ರತಿ ದಿನ 3 ಆಟಗಳು

ರಾಯಲ್ ಟಾಕೀಸಿನವರ ★ **ಸಾವಿತ್ರಿ** ★ (ತಮಿಳು)

ನಟವರ್ಗ.—ಶಾಂತ ಆಪ್ಟೆ, ಕೋಕಿಲಗಾನಂ ಎಂ.ಎಸ್. ಸುಬ್ಬಲಕ್ಷ್ಮಿ, ವೈ. ವಿ. ರಾವ್, ಕೆ. ಸಾರಂಗಪಾಣಿ, ಜಿ. ಎ ಚಲ್ಲಪ್ಪ, ಟಿ ಎಸ್. ಕೃಷ್ಣವೇಣಿ ಮುಂತಾದವರು

ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೩-೭-೪೮ [ಸಂಚಿಕೆ ೩

ಹೈದ್ರಾಬಾದ್ ಪ್ರವೇಶದ ಬಗ್ಗೆ ಪಾಕಿಸ್ತಾನ್ ತನಿಖೆ

ಸಾಧ್ವೀ ಶುಭಾಶಂಸನಂ

ಶ್ರೀಮಾನ್ ಶ್ರೀ ರಘುವಂಶನಾಯಕಸ್ಯ
ಚಸ್ನೀಶಾಖ್ಯಸಾಧ್ವ್ಯಾ ಕೃತ್ಯಕಃ ।
ಧೀರೋದಾತ್ತಗುಣೈರ್ನಿಗೃಹ್ಯ ಕೃಶುಜನಾ
ನ್ಸಂಸೇವ್ಯಸಾಧೂನ್ಸಹ ।
ಧರ್ಮಂ ಸ್ಥಾಪಿತವಾನ್ಪುರಾಽದ್ಯ ಕಲಿಕ
ಸ್ಸಾಧ್ವ್ಯಾ ಸುಪ್ರಸ್ತಾಧ್ಯಯಾ ।
ಶ್ರೀಜಗ್ಗಯ್ಯಗೃಹೇಷ್ವರ್ತತೋ ವಿಜಯ
ತಾಮೇತತ್ಸದಸ್ಯೈ ಶ್ರೀಯಸೇ ||೧||
ಸಾಧ್ವ್ಯಾಕೃಸ್ಪಷ್ಟ ಮಹೋತ್ಸವೋ ವಿಜ
ಯತೇ ಸ್ವಾರಾಜ್ಯ ಭಾಗ್ಯೋಲಸ ।
ನ್ನತ್ಯ ಪ್ರೇಮರಸಾದ್ರ್ಯರಾಜ ಜನತಾ
ಬಾನ್ನವ್ಯ ಕಾಲೋದಿತಃ ।
ವಿಖ್ಯಾನಂದಿತು ಸಾಗತಸ್ಸದ ಸಿ ಸುತ್ರ
ಸ್ಸೃತ್ಯ ಶರ್ಮಾಸುಧೀಃ ।
ಕಾಂ ಗ್ರೆ ಸ್ ಚಾಲನ ನಾಯಕೋಯ
ಮಧುಸಾ ರಾಜ್ಯಾಙ್ಗ ನಿರ್ಮಾಪಕಃ ||೨||
ಶ್ಯಸ್ತ್ರೈದಾರ್ಯ ದಯಾದಿ ಸದ್ಗುಣ
ಶತೀಪೂರ್ಣಾಯಮಾನಸ್ತ್ವಯಾಂ ।
ಶ್ರೀಮಾನ್ ಜನ್ಮಶುದ್ಧಿ ದಾನಪಿನಯೇ
ಲೋಕೋಪಕಾರೇರತಃ ।
ತ್ರಿಂಶದ್ವರ್ಷತ ಏಷ ರಾಜ್ಯ ರಚನಾ ಸ್ವಾ
ತಂತ್ರ್ಯ ಕಾಮಾತತೋ ।
ನಿರ್ಬನ್ಧೈಃ ಪರಿಪೀಡಿತೋಽಪಿ ನಿಜಹಾ
ಸ್ವಾಂಗೀಕೃತಂ ನಿಸ್ಪೃಹಃ ||೩||
ಧ್ಯೇಯೋವಸ್ತುನಿ ಸರ್ವದಾಪಿ ನಿರತಸ್ತ
ತ್ಸಾಧ್ವಮುಪಾಸ್ಯನರಃ ।
ಶುದ್ಧೋ ಲೌಕಿಕ ವೈದಿಕಾಖ್ಯ ಮಪಿ
ಬಾಂಶಮಾರ್ಗಸ್ಯ ಭಕ್ತಿಪರಾ ।
ಗಙ್ಗಾಯಾ ಮಪಿ ಸಜ್ಜನಷ್ಟಿತನುತೇ
ಶ್ರೇಯಸ್ಸದಾಪರ್ಜಕಃ ।
ತ್ಯಾಗೀ ಸದ್ಗುಣವಾನುದಾರಚರಿತಃ ಶ್ರಾ
ವ್ಯಃ ಪುನಾನೀಶ್ವರಃ ||೪||
ಏತನ್ನೇತೃತಯಾದ್ಯ ಕಲಿಕಾಸಾಮಾಜ
ಕೃಥಾಗ್ರ್ಯಮಿರ್ಶ್ಯೈಃ ।
ಸಾಧ್ವೀ ಸ್ವಾಧಿಗತ್ಯಸ್ತ್ವಸ್ಮತ್ಸ ವಿದಧ್ಯೈ
ವರ್ಧಿಷ್ಣು ತಾಂಬಿಭ್ರತೀ ।
ದೇಶೇಸ್ಮಿನ್ಸನಕಾನ್ಸುಖ ಪ್ರಣಯ ಸಂ
ವೃದ್ಧಾ ಸದಾ ಜಾಗ್ರತೀ ||೫||
ರಾಜ್ಯಶ್ರೀರಿವ ನೂತನಾ ಜನಪದಮುದೇ
ಜೀಯಾತ್ಸದಾಸ್ಮಿನ್ಪುರೇ ||೬||
ಏತನ್ಮಹೋದಯನಿಧಾನ ಮಭೂತ್ಸ
ವೃದ್ಧ ಸ್ವಾರಾಜ್ಯ ಮನ್ನ ದಧಿಗತ್ಯ
ದಿವಂಗತೋಯಃ ।
ಶಾಸ್ತ್ರಿ ಸ್ವ ಶೀ ತಿ ಖ ಧ ವೇ ಕಸದಾ
ತೀಷಾತ್ಮಾ ।
ಸ್ಮೃತ್ಯಸ್ಸವೇಂಕಟಪದಾಂಚಿತ ಕೃಷ್ಣ
ನಾಮಾ ||೭||
ಜಯತು ಜಯತು ಸಾಧ್ವೀ ಪತ್ರಿಕೈ
ಷಾಜಗತ್ಯಾಂ ।
ಜಯತು ಜಗತು ಸುಬ್ರಹ್ಮಣ್ಯ ಶರ್ಮಾ
ಧಿನೇತಾ ।
ಜಯತುಜಯತು ರಾಜಸ್ವತಂತ್ರತಾನ್ವೋ
ಸ್ವಪ್ರೈಶ್ರೀ ।
ಜಯತು ಜಯತು ಸಾಧ್ವೀ ಮುದ್ಗ
ಲಾಶಂಸಿತಾಸ್ತ್ರೀ ||೮||
ಇತಿ ಮ ಹಿ ಶೂ ರ ಪುರೀಣಾಜನ್ಮಾತೀ
ಸ್ಮೃಮಹಿತ ಪಾಠಶಾಲಾಯಾಃ ।
ಸಾಹಿತ್ಯಾಧ್ಯಾಪಕ ರಾಮಾನುಜಸೂರಿ
ರೀಶ ಆಶಾಸ್ತೆ ||೯||

ಜೆಚ್. ರಾಮಾನುಜಾಚಾರ್ಯ.
ಸಾಹಿತ್ಯ ವಿದ್ವಾನ್

ವಿದ್ಯಾರ್ಥಿ ಜೀವನದ ಆದರ್ಶ

ಮೈಸೂರು ೨೨

ತಾ|| ೨೦-೭-೪೮ ನೇ ಮಂಗಳವಾರ ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿ ಸಂಘದ ಆರಂಭೋತ್ಸವವನ್ನು ಧಾರವಾಡದ ಶ್ರೀ ಮೃತ್ಯುಂಜಯ ಸ್ವಾಮಿಗಳು ನೆರವೇರಿಸಿದರು ಶ್ರೀ ಗೌರೀ ಶಂಕರ ಮಹಾಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು ಸಂಘದ ಅಧ್ಯಕ್ಷರಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಅಧ್ಯಕ್ಷರನ್ನೂ, ಅತಿಥಿಗಳನ್ನೂ ಸ್ವಾಗತಿಸುತ್ತಾ ವಿದ್ಯಾರ್ಥಿಗಳು ಸಾಂಘಿಕ ಜೀವನವನ್ನು ಕಲಿತು ನಾಡು ಮತ್ತು ನುಡಿಗೆ ಸತ್ಸೇವೆ ಮಾಡ ವಂತಹ ಈ ಸುಸಮಯವನ್ನು ಸದುಪಯೋಗಪಡಿಸಿಕೊಂಡು ಜೀವನ ಸಾಫಲ್ಯ ಹೊಂದಬೇಕೆಂದ. ಉಪದೇಶವಿತ್ತರು ಶ್ರೀಗಳವರು ವಿದ್ಯಾರ್ಥಿ ಸಂಘದ ಪುಸ್ತಕ ಭಂಡಾರಕ್ಕೆ ೧೦೧ ರೂ ಗಳನ್ನೂ ದಯಪಾಲಿಸಿದರು ಅಧ್ಯಕ್ಷರು ಭಾಷಣ ಮಾಡುತ್ತಾ ಸಕಲ ಜೀವರಾಶಿಗೂ ಲೇಸನ್ನೇ ಬಯಸುವಂತಹ ಮೃದು ಮನಸ್ಸು, ವಿಶ್ವ ಭಾವನೆಗಳ ವಿದ್ಯಾರ್ಥಿಗಳಲ್ಲಿ ನೆಲೆಸಲೆಂದು ಅನೇಕ ಹಿತೋಕ್ತಿಗಳನ್ನಾಡಿ ಆಶೀರ್ವದಿಸಿದರು

* ಹಿರೀಸಾವೆಯ ಮಿಡಲ್ ಸ್ಕೂಲಿನಿಂದ ಈ ಸಲದ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದ ೨೧ ವಿದ್ಯಾರ್ಥಿಗಳ ಪೈಕಿ ೧೯ ಜನರು ತೇರ್ಗಡೆ ಹೊಂದಿರುವರೆಂದೂ ಅವರ ಪೈಕಿ ೬ ಮಂದಿ ಪ್ರಥಮ ದರ್ಜೆಯನ್ನು ಪಡೆದಿರುವರೆಂದೂ ತಿಳಿದುಬಂದಿದೆ.

ಯಳಂದೂರು ತಾ|| ಕಾಂಗ್ರೆಸ್ ಕಮಿಟಿ

ಇದೇ ೨೫ ನೇ ತಾ|| ಭಾನ ವಾರ ಮಧ್ಯಾಹ್ನ ೩ ಗ ಟೆಗೆ ಸರಿಯಾಗಿ ಯಳಂದೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಪುನರ್ರಚನೆಗಾಗಿ ಶ್ರೀ ಕಿ ಎ ಗೋವಿಂದಯ್ಯನವರ ಗ್ರೀನೇಜನಲ್ಲಿ ಪ್ರಾಥಮಿಕ ಸದಸ್ಯರ ಸಭೆಯು ಸೇರುವುದು ತಾಲ್ಲೂಕಿನ ಎಲ್ಲ ಕಾಂಗ್ರೆಸ್ ಸದಸ್ಯರೂ ಬರಬೇಕಾಗಿ ಕೋರಲಾಗಿದೆ.

ಹೈದ್ರಾಬಾದ್‌ಮೇಲೆ ವಿಮಾನ ಹಾರಿಸಿದವನ ತನಿಖೆ

ಭಾರತ ಸರ್ಕಾರದ ನಿಷೇಧವನ್ನು ಉಲ್ಲಂಘಿಸಿ ಕರಾಚಿಯಿಂದ ಹೈದರಾಬಾದಿಗೆ ಕಳೆದ ಸೋಮವಾರ ರಾತ್ರಿ ವಿಮಾನವನ್ನು ಹಾರಿಸಿಕೊಂಡು ಹೋಗಿ ವಾಪಸು ಬಂದ ಆಸ್ಟ್ರೇಲಿಯದ ಸಿಡ್ನಿ ಕಾಟನ್ನನು ತನ್ನ ವರ್ತನೆಗೆ ಸಮಾಧಾನ ಕೊಡಬೇಕೆಂದು ಪಾಕಿಸ್ತಾನದ ಸರ್ಕಾರವು ಕೇಳುತ್ತದೆ ಅವನ ವಿಮಾನ ರಹದಾರಿಯನ್ನು ಅದು ರದ್ದು ಮಾಡಬಹುದೆಂದೂ ಹೇಳಲಾಗಿದೆ.

ಪೌರಸಭಾಧ್ಯಕ್ಷರಿಗೆ ಪತ್ರಿಕೋದ್ಯೋಗಿಗಳ ಸತ್ಕಾರ

ಮೈಸೂರು ೨೩

ನಗರಾಭಿವೃದ್ಧಿ ಸಮಿತಿ ಮತ್ತು ಪೌರಸಭೆಯ ಪ್ರಥಮ ಚುನಾಯಿತ ಅಧ್ಯಕ್ಷರಾದ ಶ್ರೀ ಟಿ ಸೀತಾರಾಮಯ್ಯನವರನ್ನೂ ಮತ್ತು ಇಂಜನಿಯರ್ ಶ್ರೀ ಕೆ ಜಿ ಕಾಟ್ವೆಯವರನ್ನೂ ಪತ್ರಿಕೋದ್ಯೋಗಿಗಳು ಈ ದಿನ ತಮ್ಮ ಸಂಘಕ್ಕೆ ಬರಮಾಡಿಕೊಂಡು ಸತ್ಕರಿಸಿದರು ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಅತಿಥಿಗಳನ್ನು ಸ್ವಾಗತಿಸಿ ಅವರ ಗ ಬಾರಕ್ಕೆ ಮಾಡಿ ಸಂಘದ ಕಟ್ಟಡಕ್ಕಾಗಿ ಅವರುಗಳ ಸಹಾಯ ಮತ್ತು ಸಹಕಾರಗಳನ್ನು ಕೋರಿದರು ಶ್ರೀಗಳಾದ ಅಗರಂ ರಂಗಯ್ಯ ಮತ್ತು ಟಿ ಕೃಷ್ಣರಾಯ ರು ಅದನ್ನು ಪುಷ್ಟೀಕರಿಸಿ ಮಾತನಾಡಿದರು ಶ್ರೀ ಟಿ ಸೀತಾರಾಮಯ್ಯನವರು ತಮ್ಮ ಕೃತಜ್ಞತೆಯನ್ನು ಸೂಚಿಸಿ ಸಂಘಕ್ಕೆ ಶಕ್ತ್ಯಾನುಸಾರ ಸಕಲ ಸಹಾಯಗಳನ್ನೂ ನೀಡುವುದಾಗಿ ತಿಳಿಸಿದರು ಮತ್ತು ನಗರದ ಅಭಿವೃದ್ಧಿಯಲ್ಲಿ ಪೌರಸಭೆಯೊಡನೆ ಸಹಕರಿಸಬೇಕೆಂದು ಕೋರಿದರು ಕಾರ್ಯದರ್ಶಿಗಳಾದ ಶ್ರೀ ಜಿ ಎಲ್ ಸ್ವಾಮಿಯವರಿಂದ ವಂದನಾರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು

ಇಟ್ಟಿಗೆಗೂಡು ಯುವಕ ಸಂಘ

ನಾಳೆದ್ದು ಸಂಜೆ ೭ ಗಂಟೆಗೆ ಮೇಲ್ಕಂಡ ಸಂಘದ ೩ ನೇ ವಾರ್ಷಿಕೋತ್ಸವವು ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ಡಿ ಎಸ್ ನಾಯ್ಡುರವರ ವ್ಯಾಯಾಮ ಶಾಲೆಯ ಆವರಣದಲ್ಲಿ ನಡೆಯುವುದು

ಅಪೆರಾ ಟಾಕೀಸ್

ಪ್ರತಿ ದಿನ ಮೂರು ಆಟಗಳು
ತಾ|| 23—7—48 ರಿಂದ

ಕಿಸ್ಮತ್ ವಾಲಿ
[ಹಿಂದಿ]

ನಾಯಕ ... ಸಯಾಜಿ ... ರಾಜಬಾಲ

Morning Shows From 23-7-48

Dairy of a Chambermaid
— with: —
Paulette Goddard,
Burgess Meredith

ಎ. ಐ. ಸಿ. ಸಿ. ಚುನಾವಣೆ

ಮೈಸೂರು ೨೩

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಸದಸ್ಯರ ಚುನಾವಣೆಯ ವೇಳಾಪಟ್ಟಿಯು ಈ ರೀತಿಯಾದೆಯೆಂದು ಚುನಾವಣಾಧಿಕಾರಿ ಶ್ರೀ ಟಿ ನರಸಿಂಹಯ್ಯಂಗಾರ್ಯರು ತಿಳಿಸಿರುತ್ತಾರೆ

ಉಮೇದುವಾರಿಕೆ ಅರ್ಜಿಗಳನ್ನು ಇದೇ ೨೫ ನೇ ತಾ|| ಸಂಜೆ ೮ ಗಂಟೆವರೆಗೆ ಸಲ್ಲಿಸಬಹುದು ಅಂದೇ ರಾತ್ರಿ ೯ ಗಂಟೆಗೆ ಅರ್ಜಿದಾರರ ಪಟ್ಟಿಯನ್ನು ತಯಾರಿಸಲಾಗುವುದು. ಅರ್ಜಿಗಳ ಮೇಲಿನ ಆಕ್ಷೇಪಣೆಗಳನ್ನು ೨೬ ನೇ ತಾ|| ಬೆಳಗ್ಗೆ ೧೨ರವರೆಗೆ ಸ್ವೀಕರಿಸಲಾಗುವುದು ಆ ದಿನ ಸಂಜೆ-೩ರವರೆಗೆ ಅರ್ಜಿಗಳನ್ನು ವಾಪಸು ತೆಗೆದುಕೊಳ್ಳಬಹುದು ಅ ಮೇಲೆ ೩-೦ ಗಂಟೆಗೆ ಉಮೇದುವಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ೨೯ ನೇ ತಾ|| ಚುನಾವಣೆಯು ನಡೆಯುವ ಕಾಲವನ್ನು ಮುಂದೆ ತಿಳಿಸಲಾಗುವುದು ಮತ್ತು ಅದೇ ದಿನ ಸಂಜೆ ೮ ಗಂಟೆಗೆ ಎಣಿಕೆ ನಡೆದು ರಾತ್ರಿ ೯ಕ್ಕೆ ಚುನಾಯಿತ ಸದಸ್ಯರ ಪಟ್ಟಿಯನ್ನು ಪ್ರಕಟಿಸಲಾಗುವುದು ಉಮೇದು ವಾರಿಕಾ ಅರ್ಜಿಗಳ ಪ್ರತಿಗಳನ್ನು ಚುನಾವಣಾಧಿಕಾರಿಗಳ ಕಛೇರಿಯಿಂದ ಪಡೆದು ಪ್ರತಿಗಳನ್ನು ಎರಡೂ ... ನೇರವಾಗಿ ಚುನಾವಣಾಧಿಕಾರಿಗಳಿಗೆ ... [illegible]

ವಯಸ್ಕರ ಶಿಕ್ಷಣ ಸಮಿತಿ

ಮೈಸೂರು ... ವಯಸ್ಕರ ಶಿಕ್ಷಣ ಸಮಿತಿ ... ವೈಸ್‌ರಾಯ್ ರಸ್ತೆ ... ನೇ ನಂಬರು ಮನೆಯಿಂದ ... ಕ್ಲೈನ್ಸ್ ಸ್ಕ್ವೇರ್ ... ನೇ ನಂಬರು ಮನೆಗೆ ವರ್ಗಾಯಿಸಿದೆ [illegible]

ಮೈಸೂರು ದೇವಾಲಯಗಳಿಗೂ ಹರಿಜನ ಪ್ರವೇಶ

ಮದರಾಸಿನ ಹರಿಜನ ದೇವಾಲಯ ಪ್ರವೇಶದ ಶಾಸನವನ್ನು ಆದರ್ಶವಾಗಿ ಮಾಡಿಕೊಂಡು ಮೈಸೂರಿನ ದೇವಾಲಯಗಳಲ್ಲಿ ಯೂ ಹರಿಜನರಿಗೆ ಪ್ರವೇಶದ ಅವಕಾಶವನ್ನು ಕಲ್ಪಿಸಲಾಗುವುದೆಂದು ಅಲ್ಲಿನ ಹರಿಜನ ... ಮಂತ್ರಿ ಶ್ರೀ ಗೋಪಾಲರೆಡ್ಡಿಯವರು ... ಶಾಸನ ಸಭೆಯಲ್ಲಿ ನಿನ್ನೆ ತಿಳಿಸಿದರು

ಕಳ್ಳತನದ ಅಪಾದನೆ ಮೇಲೆ ಪೋಲೀಸರಿಗೆ ಶಿಕ್ಷೆ

ಮೈಸೂರು ೨೩

... ಪೋಲೀಸ್ ಕಾನ್ಸ್‌ಟೇಬಲ್ ... ಮತ್ತು ಹೆಡ್ ಕಾನ್ಸ್‌ಟೇಬಲ್ ... ಎಂಬುವವರು ೧೦ ... ಕಳ್ಳತನ ಮಾಡಿದ್ದರೆಂದು ನಗರ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಮೊನ್ನೆ ದಿವಸ ಅವರಿಬ್ಬರಿಗೂ ತಲಾ ೩ ತಿಂಗಳು ಕಠಿಣ ಸಜಾ ಶಿಕ್ಷೆ ವಿಧಿಸಲಾಯಿತು.

ವರ್ಧಂತಿ ಕಾರ್ಯಕ್ರಮ

ಶ್ರೀಮನ್ಮಹಾರಾಜರವರ ವರ್ಧಂತಿ ಸಂದರ್ಭವಾಗಿ ... ಕಾರ್ಯಕ್ರಮಗಳು ... ಇದೇ ೨೭ ನೇ ತಾ|| ... ಬೆಳಗ್ಗೆ ೯-೪೫ ಗಂಟೆಗೆ ... ದರ್ಬಾರು ೨೮ ನೇ ... ಮತ್ತು ೨೯ ನೇ ತಾ|| ... ಸಂಜೆ ೭ ಗಂಟೆಗೆ ಕಲ್ಯಾಣ ಮಂಟಪದಲ್ಲಿ ... ಮೊದಲೇ ... ಮೆರವಣಿಗೆ ನಡೆಯುವುದು.

ಕಾಂಗ್ರೆಸ್ ಸಮಿತಿಯ ಸ್ಥಾಪನೆ

ಅಗರ ಮಾಂಬಳ್ಳಿ, ೨೦

ಕಳೆದ ಶುಕ್ರವಾರ ಯಳಂದೂರು ತಾಲ್ಲೂಕು ಕಾಂಗ್ರೆಸ್ ಚುನಾವಣಾಧಿಕಾರಿಗಳಾದ ಶ್ರೀ ಡಿ ಸೂರ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ಅಗರ-ಮಾಂಬಳ್ಳಿ ಕಾಂಗ್ರೆಸ್ ಸಮಿತಿಯು ಸ್ಥಾಪಿಸಲ್ಪಟ್ಟಿತು. ಅದಕ್ಕೆ ಶ್ರೀ ಎ ವಿ ರಾಮಚಂದ್ರಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ ನಾಸುಂದರ ಮೂರ್ತಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಮಾದಶೆಟ್ಟರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಜನರಂ ಸೂರ್ಯನಾರಾಯಣ ಪಂಡಿತ್, ಪಿ ಆರ್ ಬಸವಣ್ಣ, ಎ ಸುಂದರಪ್ಪ ಎಂ ನಾಗರಾಜು, ಎಚ್ ವಿ ಸುಬ್ಬಶಾಸ್ತ್ರಿ, ಸಿ ಎಚ್ ಬಸವಯ್ಯ ಮತ್ತು ಎಸ್ ಸುಬ್ರಹ್ಮಣ್ಯಂರವರು ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಚುನಾಯಿತರಾದರು. ಮಾಂಬಳ್ಳಿಯಲ್ಲಿರುವ ನೆಹರು ಸಂಘವನ್ನು ಈ ಸಮಿತಿಯಲ್ಲಿ ಐಕ್ಯ ಮಾಡಬೇಕೆಂದೂ ತೀರ್ಮಾನಿಸಲಾಯಿತು..

ಸೈಕಲ್ಲು ಬದಲಾಗಿದೆ

ಸುಬ್ಬರಾಯನ ಕೆರೆಯ ಮೇಲಿನ ನೂತನ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಮುಂದೆ ಈಗ ೫-೬ ದಿನಗಳ ಕೆಳಗೆ No I ೭೭೬೩೬ ನೆಯ ನಂಬರಿನ ರ್‍ಯಾಲಿ ಸೈಕಲ್ಲು ಬದಲಾಗಿದೆ. ಆ ಸೈಕಲ್ಲು ಯಾರಿಗಾದರೂ ಸಿಕ್ಕಿದ್ದರೆ ದಯವಿಟ್ಟು ಶ್ರೀ ಪಂಪಾಪತಿ ಪವರ್ ಪ್ರೆಸ್ ಡಿ ಸುಬ್ಬಯ್ಯರೋಡು ಇವರಲ್ಲಿ ತಂದು ಕೊಟ್ಟು ತಮ್ಮ ಸೈಕಲ್ಲನ್ನು ಪಡೆಯಬೇಕಾಗಿ ಕೋರಿದೆ

ಕೆ ಶ್ರೀನಿವಾಸಾಚಾರ್

'ಹಿಂದೂಸ್ಥಾನ್' ಇಂಗ್ಲಿಷ್ ದಿನ ಪತ್ರಿಕೆ

ಜನವಾಣಿ ಮತ್ತು ಪ್ರಜಾಮತ ಪತ್ರಿಕೆಗಳ ಮಾಲೀಕರಾದ ಶ್ರೀಮಾನ್ ಬಿ ಎಂ. ಶ್ರೀನಿವಾಸಯ್ಯನವರು 'ಹಿಂದೂಸ್ಥಾನ್' ಎಂಬ ಇಂಗ್ಲೀಷ್ ದಿನ ಪತ್ರಿಕೆಯನ್ನು ಇಷ್ಟರಲ್ಲೇ ಹೊರಡಿಸುವವರಾಗಿದ್ದಾರೆ. ಶ್ರೀಮಾನ್ ಎಂ ಎಸ್ ಗುರುಪಾದಸ್ವಾಮಿಯವರು ಇದಕ್ಕೆ ಸಂಪಾದಕರಾಗಿ ನೇಮಿಸಲ್ಪಟ್ಟಿದ್ದಾರೆ. ಶ್ರೀಯುತರು ರಾಜಕೀಯ ಶಾಸ್ತ್ರದಲ್ಲಿ ಪರಿಣತರೂ ಮತ್ತು ಉತ್ತಮ ಗ್ರಂಥಕರ್ತರೂ ಆಗಿದ್ದಾರೆ

ಶ್ರೀ ಗಾಯತ್ರೀ ಟಾಕೀಸ್
ಕಡೇ ದಿನ
ಮೇಡಂ ಕ್ಯೂರಿ

24-7-48 ರಿಂದ 3 ದಿವಸಗಳು ಮಾತ್ರ
ದಿನ ಮೂರು ಆಟಗಳು
MGM ರವರ ಯಾಸ್ಕದಿಂದ ಕೂಡಿದ
ವರ್ಣರಂಜಿತ ಚಿತ್ರ
ಈಸಿ ಟು ವೆಡ್
(EASY TO WED)
ಪಾತ್ರ:- ವೇನ್‌ಜಾನ್ಸನ್ ಮತ್ತು ಈಸ್ತರ್ ವಿಲಿಯಂಸ್

ತಿಳಿವಳಿಕೆ

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನೆಂದರೆ:-

ವಿ ರಂಗಪ್ಪ ಅಂಡ್ ಸನ್ಸ್ ಎಂದಿದ್ದ ನಮ್ಮ ಅಂಗಡಿಯ ಅಡ್ರೆಸ್ಸನ್ನು ಇಲ್ಲಿಂದ ಮುಂದೆ "ಆರ್ ವೆಂಕಣ್ಣ ಜನರಲ್ ಮರ್ಚೆಂಟ್" ಎಂಬುದಾಗಿ ಬದಲಾಯಿಸಿರುತ್ತೆ. ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ

ಆರ್ ವೆಂಕಣ್ಣ
ಶ್ರೀರಂಗಪಟ್ಟಣ

ಹಿಂದೂ ಲಾ ತಿದ್ದುಪಡಿಗೆ ಮಠಾಧಿಪತಿಗಳ ಪ್ರತಿಭಟನೆ

ತೀರ್ಥಹಳ್ಳಿ ೨೦

ದ್ವಾರಕಿಯ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯರವರು ತಮ್ಮ ಮಠದಲ್ಲಿ ಗುರುಪೂರ್ಣಿಮಾ ಮತ್ತು ವ್ಯಾಸಪೂಜೆಯನ್ನು ಈ ದಿನ ವೈಭವದಿಂದ ಆಚರಿಸಿದರು. ಹಿಂದೂ ಲಾ ತಿದ್ದುಪಡಿಯಿಂದ ಪುರಾತನವಾದ ಆಚಾರ ವ್ಯವಹಾರಗಳಿಗೂ, ಸಂಸ್ಕೃತಿಗೂ ಧಕ್ಕೆ ತಗಲುವುದರಿಂದ ಅದನ್ನು ಜಾರಿಗೆ ತರದಂತೆ ಭಾರತ ಸರ್ಕಾರಕ್ಕೂ ಶಾಸನ ಸಭಾ ಸದಸ್ಯರಿಗೂ ತಂತಿ ಸಮಾಚಾರವನ್ನು ಕಳುಹಿಸಿದರು. ಸನಾತನಿ ಹಿಂದುಗಳೆಲ್ಲರೂ ಒಗ್ಗಟ್ಟಿನಿಂದ ಕೂಡಿ ತಮ್ಮ ಪುರಾತನ ಧರ್ಮವನ್ನೂ ಮತ್ತು ಆಜನ್ಮ ಸಿದ್ಧ ಹಕ್ಕುಗಳನ್ನೂ ಸಂರಕ್ಷಿಸಿಕೊಳ್ಳಬೇಕೆಂದೂ ಒತ್ತಾಯಪಡಿಸಿದರು

ಬೊಂಬಾಯಿ
ಜಿ. ಎ. ಸರ್ಕಸ್
ಮೈಸೂರು ಜಿವಣ್ಣರಾಯನ
ಕಟ್ಟೆಯಲ್ಲಿ
೩ ಆಟಗಳು:-ಶುಕ್ರವಾರ, ಶನಿವಾರ
ಭಾನುವಾರ
೩-೩೦, ೬-೩೦, ಮತ್ತು ೯-೩೦ ಕ್ಕೆ
ಮಿಕ್ಕ ದಿನಗಳಲ್ಲಿ ೨ ಆಟಗಳು
ಮಾತ್ರ ೬-೩೦, ಮತ್ತು ೯-೩೦ ಕ್ಕೆ
— ದರಗಳು ಮಾಮೂಲಿನಂತೆ —
[ಎಂ ಸುಬ್ಬರಾಮಯ್ಯ ಅಂಡ್ ಕೋ]

ರಾಜಕಮಲ್,
ಮೈಸೂರು
24-7-48 ರಿಂದ
ಅಮೋಘ ೨ ನೇ ವಾರ
ಪ್ರತಿ ದಿನ 3 ಆಟಗಳು
ಪನಿಹಾರಿ
(ಹಿಂದಿ)
—: ತಾರಾಗಣ: —
ಶಾಂತಾ ಆಪ್ಟೆ, ಸುರೇಂದ್ರ, ಯಾಕೂಬ್
ಮುಂತಾದವರು

Morning Shows
From 23—7—48
For 4 days
SCARLET
STREET
—: With: —
EDWARD G. ROBINSON
JOAN BENNETTE

Edited printed and published by A. R. Nagarajan at the Sadhvi Press D. Subbaiah Road Mysore.

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,
[ಬ್ರಿಟಿಷ್ ಇಂಡಿಯಾದಲ್ಲಿ ೧೯೩೨ ರಲ್ಲಿ ಸ್ಥಾಪಿತವಾದದ್ದು]
ಪ್ರಧಾನ ಕಛೇರಿ:-ಕರೂರು (S I Ry)
ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು,
ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.)
ಬೆಂಗಳೂರು ಸಿಟಿ
ಉಪಶಾಖೆ-ನಾಗಲ್ ನಗರ (ದಿಂಡಿಗಲ್)
ಮೈಸೂರು ಬ್ರಾಂಚ್:-ಇಲವಾಲ ರೋಡ್
ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿ ನಂತೆ ಪಾವತಿ ಮಾಡತಕ್ಕಂಥಾದ— ೧೨ ತಿಂಗಳು, ೨೪ ತಿಂಗಳು ಮಾಯಿದಾ—ರಿಕರಿಂಗ್ ಡಿಪಾಜಿಟ್ ಮತ್ತು ೪೭ ತಿಂಗಳು ಮಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ವಹಿವಾಟುಗಳನ್ನೂ ನಡೆಸಲಾಗುವುದು
ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ
ವಿ ಕೆ ನಟರಾಜನ್,

ಪ್ರಭುದೇವಾ ಟಾಕೀಸಿನಲ್ಲಿ
23-7-48ನೇ ಶುಕ್ರವಾರದಿಂದ
ಪ್ರತಿ ದಿನ 3 ಆಟಗಳು
ರಾಯಲ್ ಟಾಕೀಸಿನವರ
★ ಸಾವಿತ್ರಿ ★ (ತಮಿಳು)
ನಟವರ್ಗ:— ಶಾಂತ ಆಪ್ಟೆ, ಕೋಕಿಲಗಾನಂ ಎಂ.ಎಸ್. ಸುಬ್ಬಲಕ್ಷ್ಮಿ, ವೈ. ವಿ. ರಾವ್
ಕೆ. ಸಾರಂಗಪಾಣಿ, ಜಿ. ಎ ಚಲ್ಲಪ್ಪ, ಟಿ ಎಸ್. ಕೃಷ್ಣವೇಣಿ ಮುಂತಾದವರು

ಪ್ರಭಾ ಪಿಕ್ಚರ್ ಹೌಸ್
16—7—48 ರಿಂದ ಅಮೋಘ 2ನೇ ವಾರ
ದಿನವಹಿ 3 ಆಟಗಳು
-ಅರೇಬಿಯನ್ ನೈಟ್ಸ್-
(ಹಿಂದಿ)
• ಕರ್ನ್ನ ದೇವಿ • ನವಾಬ್

16-7-48 ರಿಂದ — ವುಡ್‌ಲ್ಯಾಂಡ್ಸ್‌ನಲ್ಲಿ — ಪ್ರತಿ ದಿನ ಮೂರು ಆಟಗಳು
★ ಭಕ್ತ ತುಲಸೀದಾಸ್ ★
[ತಮಿಳು]
ತಾರಾಗಣ:-ಆಸ್ಥಾನ ವಿದ್ವಾನ್ ಬಿ. ಎಸ್. ರಾಜಯ್ಯಂಗಾರ್ ಮತ್ತು ಲಕ್ಷ್ಮೀಶಂಕರ ಮುಂತಾದವರು

ಫೋ. ನಂ. ೭೮೭ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಶನಿವಾರ ೨೪-೭-೪೮ [ಸಂಚಿಕೆ ೪

ವಿಶ್ವಸಂಸ್ಥೆ ಕಛೇರಿಯ ಮೇಲೆ ಬಾಂಬು ಸಿಡಿತ

ರಂಗಭೂಮಿಯ ಶತಮಾನೋತ್ಸವ

ಮೈಸೂರು ೨೪

ನಾಳಿದ್ದು ಬೆಳಿಗ್ಗೆ ೧೦ ಗಂಟೆಗೆ ಶ್ರೀಮು ಹಾರಾಜರವರು ವಸ್ತುಪ್ರದರ್ಶನಾಲಯ ದಲ್ಲಿ ಕನ್ನಡರಂಗಭೂಮಿಯ ಶತಮಾನೋ ತ್ಸವ ಮತ್ತು ಗುಬ್ಬಿ ಕಂಪೆನಿಯ ಷಷ್ಠ್ಯಬ್ದ ಪೂರ್ತಿ ಮಹೋತ್ಸವವನ್ನು ನೆರವೇರಿಸು ವರು

ಅದೇ ದಿವ ಬೆಳಿಗ್ಗೆ ೧೧ ಗಂಟೆಗೆ ಪ್ರಧಾ ನಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ರಂ ಗಮಂಟಪದ ವಸ್ತುಕಲಾ ಪ್ರದರ್ಶನ ಆ ರಂಭೋತ್ಸವವನ್ನು ನೆರವೇರಿಸುವರು ೨೭ ನೇ ತಾ॥ ಮಧ್ಯಾಹ್ನ ೪ ಗಂಟೆಗೆ ಬೊಂಬಾ ಯಿ ಪ್ರಧಾನಿ ಶ್ರೀ ಬಿ ಜಿ ಖೇರರು ಸಮಾ ರಂಭದ ಅಧ್ಯಕ್ಷತೆ ವಹಿಸುವರು

ಕೊಡಗು ಟಿಂಬರ್ ಮತ್ತು ಪ್ಲೈವುಡ್ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಸಾಮಾನ್ಯ ಸಭೆ ಯು ಕೃಷ್ಣರಾಜೇಂದ್ರ ಮಿಲ್ ಕೆಲಸಗಾರ ಸಂಘದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ [illegible] ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುವುದರಿಂದ ಸದಸ್ಯರೆಲ್ಲರೂ ಬರಬೇ ಕೆಂದು ಕೋರಲಾಗಿದೆ.

ಬಿ. ಜಿ. ಖೇರ್‌ರವರ ಆಗಮನ

ಬೊಂಬಾಯಿನ ಪ್ರಧಾನಿ ಶ್ರೀ ಬಿ ಜಿ. ಖೇರ್‌ರವರು ಬರುವ ೨೭ ನೇ ತಾರೀಕು ಮಧ್ಯಾಹ್ನ ರಾಜಧಾನಿಗೆ ಆಗಮಿಸುವರೆಂ [illegible] ನೇ ತಾರೀಕಿನ ವರೆಗೆ ಇಲ್ಲಿರುವ ರೆಂದೂ ತಿಳಿದುಬಂದಿದೆ

ಸಂಗೀತ

ನಾಳೆ ಸಂಜೆ ೭ ಗಂಟೆಗೆ ಸುಬ್ಬರಾಯನ ಕೆರೆ ಏರಿಯ ಮೇಲಿರುವ ಶ್ರೀ ರಾಘವೇಂ ದ್ರಸ್ವಾಮಿಯವರ ದೇವಸ್ಥಾನದಲ್ಲಿ ವಿ॥ ಪ ದ್ಮನಾಭರಾಯರಿಂದ ಸಂಗೀತವು ನಡೆಯು ವುದೆ.

ರಾಜಪುತ್ರ ಸುಧಾರಕ ಸಮಿತಿ

ಮೈಸೂರು ನಗರದಲ್ಲಿರುವ ಕುನ್ವರ್ [illegible] ನಾರಾಯಣ ಸಿಂಹಜಿಯವರು ತಮ್ಮ ತಾತಾಪಿತೃಗಳ ಹೆಸರಿನಲ್ಲಿ ಪ್ರೈಮರಿ ಮ ತ್ತು ಮಿಡಲ್ ಸ್ಕೂಲುಗಳಲ್ಲಿ ಓದುವ ಒ ಬ್ಬ ರಾಜಪುತ್ರ ವಿದ್ಯಾರ್ಥಿಗೂ ವಿದ್ಯಾರ್ಥಿನಿ ಗೂ ಮಾಹೆಯಾನ ತಲಾ ೫ ರೂ ಗಳಂತೆ ಒಂದು ವರ್ಷ ಕಾಲ ವೇತನವನ್ನು ಕೊ ಡಲು ಒಪ್ಪಿರುತ್ತಾರೆ ಅಪೇಕ್ಷಿಸುವವರು [illegible] ರೊಳಗಾಗಿ ಸಮಿತಿಗೆ ಅರ್ಜಿ ಹಾಕಿಕೊಳ್ಳಬಹುದು

ಹೈದರಾಬಾದ್ ಮಂತ್ರಿಗಳ ರಾಜೀನಾಮೆ

ರಜಾಕರರೂ ಪೊಲೀಸಿನವರೂ ಮಾಡು ತ್ತಿರುವ ಅತ್ಯಾಚಾರಗಳನ್ನೂ ನೋಡಿ ಸಹಿ ಸಲಾರದೆ ಹೈದರಾಬಾದ್ ವಾಣಿಜ್ಯ ಸಚಿ ವರಾದ ಶ್ರೀ ಜೆ. ವಿ ಜೋಶಿಯವರೂ ಮತ್ತು ಮಲ್ಲಿಕಾರ್ಜುನಪ್ಪನವರೂ ರಾಜೀ ನಾಮೆ ಇತ್ತಿರುವರು. ಔರಂಗಾಬಾದ್ ಜಿಲ್ಲೆಯಲ್ಲಿ ಶ್ರೀ ಜೋಶಿಯವರು ಪ್ರವಾಸ ಮಾಡಿ ಕಣ್ಣಾರೆ ಕಂಡ ಅಂಶಗಳ ಬಗ್ಗೆ ಅ ಸಂತೃಪ್ತಿ ಹೊಂದಿದ್ದಾರೆ. ಬಹಿರಂಗ ಸಭೆಗ ಳಲ್ಲಿಯೂ ಅದನ್ನು ಪ್ರಕಟಿಸಿದ್ದಾರೆ ಇದ ರಿಂದಾಗಿ ಅಲ್ಲಿನ ಮುಸ್ಲಿಂ ಮಂತ್ರಿಗಳಿಗೆ ಅವ ರಮೇಲೆ ಅಸಮಾಧಾನವುಂಟಾಗಿರುತ್ತದೆ ರಜಾಕರ ಹಾವಳಿಯಿಂದ ಅನೇಕ ಗ್ರಾಮಗ ಳು ಭಸ್ಮವಾಗಿರುವ ವಿಚಾರವು ಜೋಶಿಯ ವರಿಗೆ ಸಿಡಿಲು ಬಡಿದಂತಾಗಿದೆ. ಬೇರೆ ಮಂತ್ರಿಗಳನ್ನು ನೇಮಿಸಿಕೊಳ್ಳಲು ನಿಜಾ ಮರು ಏರ್ಪಡಿಸುತ್ತಿರುವರೆಂದು ಹೇಳಲಾ ಗಿದೆ

ಕಮ್ಯೂನಿಸ್ಟ್ ಖೈದಿಗಳ ಉಪವಾಸ ಮುಷ್ಕರ

ಶಿವಮೊಗ್ಗ ಮತ್ತು ಕೋಲಾರದ ಜೈ ಲುಗಳಲ್ಲಿರುವ ಸುಮಾರು ನಲವತ್ತು ಜ ನ ಕಮ್ಯೂನಿಸ್ಟ್ ಡಿಟೆನ್ಯೂ ಖೈದಿಗಳು ಮೊನ್ನೆಯಿಂದ ಉಪವಾಸ ಮುಷ್ಕರವನ್ನು ಕೈಗೊಂಡಿರುವುದಾಗಿ ತಿಳಿದುಬಂದಿದೆ ಅ ವರ ಬೇಡಿಕೆಗಳನ್ನು ಸರ್ಕಾರದವರು ಈ ಡೇರಿಸದಿದ್ದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಅವರು ಸರ್ಕಾರದ ಮುಂ ದೆ ಇಟ್ಟಿರುವ ಕೋರಿಕೆಗಳಿವು:—೧ ತಮ್ಮ ನ್ನು ವಿಚಾರಣೆಗೆ ಗುರಿಪಡಿಸಬೇಕು ಅಥ ವ ಬಿಡುಗಡೆ ಮಾಡಬೇಕು. ೨ ತಮ್ಮ ಸಂ ಸಾರದವರಿಗೆ ಈಗಿನ ಕಾಲಕ್ಕೆ ತಕ್ಕಂತೆ ಪರಿ ಹಾರ ದ್ರವ್ಯವನ್ನು ಕೊಡಬೇಕು ೩ ಜೈಲಿ ನಲ್ಲಿ ಸರಿಯಾದ ಆಹಾರ, ಬಟ್ಟೆ, ಕ್ರೀಡಾ ಸೌಲಭ್ಯಗಳನ್ನು ಕಲ್ಪಿಸಬೇಕು ೪ ಧಾರಾ ಳವಾಗಿ ಪತ್ರೋಲನ್ನು ಕೊಡಬೇಕು, ೫ ಅ ವರನ್ನು ಕೋಣೆಗಳಲ್ಲಿ ಕೂಡಿ ಬೀಗ ಹಾ ಕಲಾಗದು ೬ ಎಲ್ಲರನ್ನೂ ಒಂದೇ ಕಡೆ ಇ ಡಬೇಕು ೭ ಅವರನ್ನು ಭೇಟಿಮಾಡಲು ಬರುವ ಬಂಧುಗಳಿಗೆ ಪ್ರಯಾಣ ಭತ್ಯ ಕೊಡಬೇಕು.

ಈ ಉದ್ದೇಶಕ್ಕಾಗಿ ಅವರು ಇದುವರೆಗೆ ಮೂರಾವರ್ತಿ ಉಪವಾಸ ಮಾಡಿರುವರೆಂ ದು ಹೇಳಲಾಗಿದೆ. ಕೆಲವು ಸಣ್ಣಪುಟ್ಟ ಸೌ ಲಭ್ಯಗಳನ್ನು ಮಾತ್ರ ಕೊಡುವುದಾಗಿ ಸ ರ್ಕಾರದವರು ತಿಳಿಸಿದ್ದಾರೆಂದೂ ಇದು ಸ ಮರ್ಪಕವಿಲ್ಲನೆಂದೂ ಉಪವಾಸವನ್ನು ಆ ರಂಭಿಸಲಾಗಿದೆಯೆಂದು ಹೇಳಲಾಗಿದೆ

ಲೇಡಿ ಮೌಂಟ್‌ಬ್ಯಾಟನ್ನರು ಮತ್ತೆ ಭಾರತಕ್ಕೆ ಬರುವರೆ?

ಭಾರತದಿಂದ ಬ್ರಿಟನ್ನಿಗೆ ಹಿಂದಿರುಗಿದ ಮೌಂಟ್‌ಬ್ಯಾಟನ್ ದಂಪತಿಗಳು ಅಲ್ಲಿ ಬಹ ಳ ಮಟ್ಟಿಗೆ ಪ್ರಚಾರ ನಡೆಸಿ ಅಲ್ಲಿನ ಜನರ ಲ್ಲಿ ಭಾರತದ ಬಗ್ಗೆ ಒಳ್ಳೆಯ ಮನೋಭಾ ವನೆಯನ್ನುಂಟು ಮಾಡಿದ್ದಾರೆ. ಲಾರ್ಡ್ ಮೌಂಟ್‌ಬ್ಯಾಟನ್ನರು ಮಾಲ್ಟಾದ ನೌಕಾ ಶಾಖೆಯಲ್ಲಿ ತಮ್ಮ ಹೊಸ ಹುದ್ದೆಯ ನ್ನು ಕೈಗೊಂಡ ನಂತರ ಲೇಡಿ ಮೌಂಟ್ ಬ್ಯಾಟನ್ನರು ಮತ್ತೆ ಭಾರತಕ್ಕೆ ಹಿಂದಿರುಗಿ ನಿರಾಶ್ರಿತರ ಪುನರ್ವ್ಯವಸ್ಥೆ ಕಾರ್ಯದಲ್ಲಿ ತೊಡಗುವರೆಂದೂ, ಪಂಡಿತ ನೆಹರೂರವ ರು ಬರುವ ಸೆಪ್ಟೆಂಬರ್ ತಿಂಗಳಲ್ಲಿ ಲಂಡ ನ್ನಿಗೆ ಭೇಟಿ ಕೊಟ್ಟ ನಂತರ ಆ ಬಗ್ಗೆ ಲೇ ಡಿ ಮೌಂಟ್‌ಬ್ಯಾಟನ್ನರು ಒಂದು ನಿರ್ಧಾ ರಕ್ಕೆ ಬರಲಿರುವರೆಂದೂ ವರದಿಯಾಗಿದೆ.

ನೌಕರಿಯಲ್ಲಿ ಸೀನಿಯಾರಿಟಿ ಮತ್ತು ಯೋಗ್ಯತೆಗೇ ಬೆಲೆ

ನಾನ್ ಗೆಜೆಟೆಡ್ ನೌಕರರ ಸಮ್ಮೇಳನದಲ್ಲಿ ದಿವಾನರ ಭಾಷಣ

ಸ್ವಂ ಸು. ಪ್ರೋ] ಬೆಂಗಳೂರು ೨೪

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸ ಮ್ಮೇಳನದ ಆರಂಭೋತ್ಸವವನ್ನು ಈ ದಿ ನ ನೆರವೇರಿಸಿದರು ನೌಕರರು ತಮ್ಮ ಕ ರ್ತವ್ಯದ ಘನತೆಯನ್ನೂ ಮತ್ತು ಗಾಂಭೀ ರ್ಯವನ್ನೂ ಅರಿತು ಸೇವೆ ಸಲ್ಲಿಸಬೇಕೆಂದು ಹೇಳಿದರು. ಅವರ ಕುಂದುಕೊರತೆಗಳನ್ನು ಸರ್ಕಾರದವರು ನಿವಾರಿಸುವುದಾಗಿ ಭರವಸೆ ಯಿತ್ತರು ಸಂಬಳ ಮತ್ತು ವೇತನಗಳ ಬಗ್ಗೆ ಆಲೋಚನೆಗಳು ಆಗುವುದು ಸಾ ಮಾನ್ಯವಾಗ ಪುದರಿಂದ ಆಯಾ ಇಲಾಖೆಗ ಳ ಮಟ್ಟಿಗಾದರೂ ಒಂದೊಂದಾಗಿ ಜಾರಿಗ ತರಲಾಗುವುದೆಂದು ಸೂಚಿಸಿದರು

ನೌಕರಿಯಲ್ಲಿ ಯೋಗ್ಯತೆ ಮತ್ತು ಸೀನಿ ಯಾರಿಟಿಗಳಿಗೆ ಪ್ರಾಮುಖ್ಯತೆಯಿರಬೇಕೆಂ ದು ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಶ್ರೀ ಎಸ್ ಜಿ ನರಸಿಂಹಯ್ಯನವರ ಮಾ ಡಿದ ಸಲಹೆಯನ್ನು ದಿವಾನರು ಅನುಮೋ ದಿಸಿದರು ಆದರೂ ಇತಿಹಾಸದಲ್ಲಿ ಅಕ್ಬರ್, ಔರಂಗಜೇಬ್, ಮೊದಲಾದವರ ಕಾಲದಲ್ಲಿ ಯೂ ಸಹ ಅನುಭವ [illegible], ತಿಳಿವಳಿಕೆ ಯನ್ನು ಹಲವರಿಗೆ ಉಂಟುಮಾಡಿಕೊಡು ವುದಕ್ಕಾಗಿ ಪ್ರಾದೇಶಿಕರುಗಳನ್ನು ನೇಮ ಕ ಮಾಡುವ ಪದ್ಧತಿಯು ಇದ್ದಿತೆಂದ ತಿಳಿ ಸಿದರು ಒಂದು ವೇಳೆ ಯಾರಿಗಾದರೂ ಅನ್ಯಾಯವಾಗಿರುವುದೆಂದ ಕಂಡುಬಂದರೆ ಎಷ್ಟೇ ದಿನಗಳಾಗಿದ್ದರೂ ಅದನ್ನು ಸರಿ ಪಡಿಸಬೇಕೆಂದು ಸೂಚಿಸಿದರು

ಕ್ಷಿ ಆಪೆ ರಿಕಕ್ಕೆ ಹೋಗಿ ಬಂದಿರುವ ಶ್ರೀ ಸ್ಯಾಮ್ಯುಯಲ್ ಧನರಾಜ್‌ರವರನ್ನು ಟ್ರಾಫಿಕ್ ವ್ಯವಸಾಯದ ಇಂಜನೀಯರಾ ಗಿ ನೇಮಿಸಲಾಗುವುದು

ವಿಶ್ವ ಸಂಸ್ಥೆಯ ಕಟ್ಟಡದ ಮೇಲೆ ಆಸ್ಫೋಟನೆ

ಲೇಕ್ ಸಕ್ಸೆಸ್ಸಿನಲ್ಲಿ ವಿಶ್ವ ಸಂಸ್ಥೆಯ ಕೇಂ ದ್ರ ಕಛೇರಿಯ ಕಟ್ಟಡದ ಮೇಲೆ ಮೊನ್ನೆ ದಿನ ಅಪರಿಚಿತ ವಿಮಾನವೊಂದು ಪ್ರ್ಯಾರಾ ಚೂಟಿನಲ್ಲಿ ಒಂದು ಕರಿಯ ಪದಾರ್ಥವ ನ್ನು ಸುತ್ತಿ ಕೆಳಕ್ಕೆ ಹಾಕಿತೆಂದೂ, ಅದು ಬಲವಾಗಿ ಸಿಡಿಯಿತೆಂದೂ ವರದಿಯಾಗಿದೆ ಕಟ್ಟಡಕ್ಕೆ ಯಾವ ಅಪಾಯವೂ ಸಂಭವಿಸ ಲ್ಲ, ವೈಮಾನಿಕನ ಪತ್ತೆಯಿಲ್ಲ.

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ

ಮೈಸೂರು ೨೪

ನಿನ್ನೆ ಸಂಜೆ ರಂಗಾಚಾರ್ಲು ಸ್ಮಾರಕ ಪುರಭವನದಲ್ಲಿ ಮುಮ್ಮಡಿ ಕೃಷ್ಣರಾಜ ಒ ಡೆಯರವರ ಜಯಂತ್ಯುತ್ಸವವು ವೈಭವದಿಂ ದ ಆಚರಿಸಲ್ಪಟ್ಟಿತು ವಿದ್ಯಾ ಸಚಿವರಾ ದ ಶ್ರೀ ಡಿ ಎಚ್ ಚಂದ್ರಶೇಖರಯ್ಯನವ ರು ಅಧ್ಯಕ್ಷತೆ ವಹಿಸಿದ್ದರು

ಮಂಗಳಾಚರಣೆಯೊಡನೆ ಸಮಾರಂಭ ವು ಪ್ರಾರಂಭವಾಯಿತು ಜಯಂತಿ ಆ ಚರಣಾ ಸಮಿತಿಯ ಅಧ್ಯಕ್ಷರಾದ ರಾಜಸೇ ವಾಸಕ್ತ ರಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವ ರು ಸ್ವಾಗತ ಭಾಷಣ ಮಾಡಿದರು. ಸಂ ಸ್ಥಾನದ ಮುಖ್ಯ ಮಂತ್ರಿಗಳೂ ಮತ್ತು ಇ ತರ ಹಲವು ಮಹನೀಯರೂ ಕಳುಹಿಸಿದ್ದ ಸಂದೇಶಗಳನ್ನು ಓದಲಾಯಿತು ಸಂಗೀ ತವಾದ ನಂತರ ಸಭಾಧ್ಯಕ್ಷರಾದ ಶ್ರೀ ಚಂ ದ್ರಶೇಖರಯ್ಯನವರು ಭಾಷಣ ಮಾಡಿ ಈ ರೀತಿ ತಿಳಿಸಿದರು

‘ಕೀರ್ತಿಶೇಷರಾದ ಮುಮ್ಮಡಿ ಕೃ ಷ್ಣರಾಜ ಒಡೆಯರು ಆದರ್ಶ ಪುರುಷರು ಮೈಸೂರು ರಾಜಮನೆತನದಲ್ಲಿ ಅವರಿಗೆ ಉ ಚ್ಚ ಸ್ಥಾನವು ದೊರೆತಿರುತ್ತದೆ ಅವರ [illegible] ಜೀವನದ ಧ್ಯೇಯಗಳು ಅತ್ಯು ನ್ನತವಾದವುಗಳು [illegible] ಅವು ಚಿರಸ್ಮರ ಣೀಯವಾದವು [illegible] ಜಯಂತಿಯು [illegible] ಎಲ್ಲೆಡೆಗಳ ಲ್ಲೂ ನಡೆ[illegible]’

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗ ಳೊಡನೆ [illegible] ಮುಕ್ತಾಯವಾ ಯಿತು

ಜಾಡಮಾಲಿಗಳಿಗೆ ಕ್ಷೌರ ಮಾಡುವುದಿಲ್ಲ

ಚಿಕ್ಕಮಗಳೂರು ೨೩

ಇಲ್ಲಿನ ಒಂದು ಸೆಲೂನಿನಲ್ಲಿ ಜಾಡಮಾ ಲಿಯೊಬ್ಬನಿಗೆ ಕ್ಷೌರ ಮಾಡುವುದಿಲ್ಲವೆಂದು ಹೇಳಿದಾಗ ಅನೇಕ ಜಾಡಮಾಲಿಗಳು ಗುಂ ಪು ಕಟ್ಟಿಕೊಂಡ [illegible] ಹೋಗಿ ಅದು ಸಾರ್ವಜನಿಕ [illegible] ದುಡ್ಡು ತೆಗೆದುಕೊಂಡು ಜಾಡಮಾಲಿಗಳು ಅಪೇ ಕ್ಷಿಸಿದಂತೆ [illegible] ಮಾಡಬೇಕೆಂದು ಒತ್ತಾ ಯಪಡಿಸಿದರೆಂದೂ, ಅನಂತರ ಸೆಲೂನಿನ ಮಾಲೀಕನು ಪೊಲೀಸರ ಸಹಾಯವನ್ನು ತೆಗೆದುಕೊಂಡು [illegible] ಚದುರಿ ಸಿದನೆಂದೂ ತಿಳಿದುಬಂದಿದೆ ಜಾಡಮಾ ಲಿಗಳಿಗೆ ಕ್ಷೌರ ಮಾಡುವಂತೆ ಒತ್ತಾಯ [illegible] ಭರವಸೆಯು ಬರುವ ವರೆಗೆ ಊರಿನ ಎಲ್ಲಾ ಸೆಲೂನುಗಳನ್ನೂ ಮುಚ್ಚಲಾಗಿದೆ ಅತ್ತಲಾಗಿ ಜಾಡಮಾ ಲಿಗಳು ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಲು ಸಾಮಾಜಿಕ ಅನರ್ಹತೆಗಳ ನಿವಾರಣಾ ಶಾ ಸನದ ಪ್ರಕಾರ ಮ್ಯಾಜಿಸ್ಟ್ರೇಟ್ ಕೋರ್ಟಿನ ಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ

ಕ್ಷಿ ಮಹಾತ್ಮಾಜಿಯವರ ಕೊಲೆಯ ಮೊ ಕದ್ದಮೆ ವಿಚಾರಣೆಯ [illegible] ಸಂಬಂಧದಲ್ಲಿ ಪ್ರತಿ ದಿನ ೩,೦೦೦ ರೂಗಳಷ್ಟು [illegible] ವೆಚ್ಚ ವಾಗುತ್ತಿದೆಯೆಂದ ಹೇಳಲಾಗಿದೆ

ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆ

ಸ್ವಂ [illegible] ಬೆಂಗಳೂರು ೨೪

ಎಸ್ [illegible] ಪರೀಕ್ಷೆಯಲ್ಲಿ ಡೀ [illegible] ವಿದ್ಯಾರ್ಥಿಗಳ ಸೌಕ [illegible] ಸೆಪ್ಟೆಂಬರ್ ಮಾಹೆಯ [illegible] ನ್ನು ನಡೆಸು ವುದು [illegible]ಂದಿದೆ

ಚುನಾವಣೆಗಳು ಕ್ರಮಬದ್ಧವಾಗಿಲ್ಲ

ಗುಂಡ್ಲುಪೇಟೆ ೨೦

ಇಲ್ಲಿ ನಡೆಯಬೇಕಾದ ಕಾಂಗ್ರೆಸ್ಸಿನ ಚುನಾವಣೆಗಳು ಕ್ರಮಬದ್ಧವಾಗಿ ನಡೆದಿಲ್ಲ. ಚುನಾವಣಾ ವೇಳಾ ಪಟ್ಟಿಯನ್ನೇ ಪ್ರಚುರಿಸಿಲ್ಲ. ಅಲ್ಲದೆ ಇನ್ನೂ ಹಲವು ಲೋಪದೋಷಗಳಿರುವುದರಿಂದ ಪುನರ್ಚುನಾವಣೆ ನಡೆಸಬೇಕೆಂದು ಚುನಾವಣಾ ಕಮಿಷನರವರಿಗೆ ತಂತಿ ಮತ್ತು ಪತ್ರ ಮುಖೇನವೂ, ಜಿಲ್ಲಾ ಚುನಾವಣಾಧಿಕಾರಿಗಳಿಗೆ ಪತ್ರ ಮುಖೇನವೂ ಇಲ್ಲಿನ ಕಾಂಗ್ರೆಸ್ಸಿಗರಾದ ಶ್ರೀಗಳು ಎಚ್. ಎಸ್. ರಾಮಣ್ಣ, ಜಿ. ಎಲ್. ಚಿಕ್ಕಸಿದ್ದಪ್ಪ ಮತ್ತು ವೈ. ಜಿ. ಶ್ರೀಕಂಠಾಚಾರ್ಯರುಗಳು ಪ್ರಾರ್ಥಿಸಿಕೊಂಡಿರುವರು.

ಶುಭ ಪ್ರಯಾಣ

ಮೈಸೂರು ಪ್ರಕೃತಿ ಚಿಕಿತ್ಸಾ ಸಮಿತಿಯ ಅಧ್ಯಕ್ಷರಾದ ಶ್ರೀ ಎಲ್. ರಾಮೇಶ್ವರ ಶರ್ಮರವರು ಬೊಂಬಾಯಿ ಪ್ರಕೃತಿ ಚಿಕಿತ್ಸಾಲಯದ ಮುಖ್ಯಾಧಿಕಾರಿಯಾಗಿ ನೇಮಿಸಲ್ಪಟ್ಟಿರುವುದರಿಂದ ಮೊನ್ನೆ ಶಾರದಾ ವಿಲಾಸ ಕಾಲೇಜು ವಿದ್ಯಾರ್ಥಿಗಳು ಅವರ ಗೌರವಾರ್ಥವಾಗಿ ಬೀಳ್ಕೊಡುವ ಸಮಾರಂಭವನ್ನು ನಡೆಸಿದರು.

ಅಕ್ರಮ ರವಾನೆ ಪತ್ತೆ

ಆಗರ-ಮಾಂಬಳ್ಳಿ ೨೩

ಯಳಂದೂರಿನಿಂದ ಕಳ್ಳತನದಲ್ಲಿ ಕೊಳ್ಳೇಗಾಲದ ಕಡೆಗೆ ಸಾಗಿಸುತ್ತಿದ್ದ ಸುಮಾರು ೨೦ ಪಲ್ಲದಷ್ಟು ಪುರಿಯನ್ನು ತಾ|| ೨೦-೭-೪೮ ರ ಬೆಳಗಿನ ಜಾವ ಸ್ಥಳೀಯ ಆಹಾರ ಶಾಖೆಯ ಪೋಲೀಸರು ಹಿಡಿದು ತಂದು ಮುಂದಿನ ಕ್ರಮ ಜರುಗಿಸುತ್ತಲಿರುವರು.

ಹೌಸಿಂಗ್ ಸೊಸೈಟಿ

ರಾಜಧಾನಿಯ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಬರುವ ೨೮ ನೆಯ ತಾ|| ಬುಧವಾರ ಬೆಳಗ್ಗೆ ೮-೩೦ ಗಂಟೆಗೆ ಪಟೇಲರಾದ ಶ್ರೀ ಹೆಚ್. ಸಿದ್ದಯ್ಯನವರು ಮಹಾತ್ಮಾ ಗಾಂಧಿಯವರ ಮತ್ತು ಶ್ರೀ ಹೆಚ್. ಸಿ. ದಾಸಪ್ಪನವರು, ಶ್ರೀಮನ್ಮಹಾರಾಜರವರ ಭಾವಚಿತ್ರಗಳನ್ನು ಅನಾವರಣ ಮಾಡುವರು. ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ.

ಉಪನ್ಯಾಸ

ವಾಣಿವಿಲಾಸ ಮೊಹಲ್ಲದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥನಂದರು 'ಕರ್ಮ ರಹಸ್ಯ' ಎಂಬ ವಿಷಯವನ್ನು ಕುರಿತು ನಾಳೆ ಸಂಜೆ ೬ ಗಂಟೆಗೆ ಉಪನ್ಯಾಸ ಮಾಡುವರು.

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ

ಮೈಸೂರು ೨೪

ಮೈಸೂರು ನಗರದ ೭ ವಾರ್ಡುಗಳಿಂದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ಈ ಕೆಳಗೆ ಕಂಡಂತೆ ಸದಸ್ಯರನ್ನು ಚುನಾಯಿಸಬೇಕಾಗಿದೆ. ವೇಳಾಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದೆಂದು ಚುನಾವಣಾಧಿಕಾರಿಗಳಾದ ಶ್ರೀ ಟಿ. ನರಸಿಂಹ ಅಯ್ಯಂಗಾರ್ಯರು ತಿಳಿಸಿರುತ್ತಾರೆ:— ನಜರ್‌ಬಾದ್ ಮೊಹಲ್ಲಾ ಒಂದು ಸ್ಥಾನ, ಪಲ್ಲೆ ಒಂದು ಸ್ಥಾನ, ಕೃಷ್ಣರಾಜ ಎರಡು, ಚಾಮರಾಜ ಎರಡು, ದೇವರಾಜ ನಾಲ್ಕು, ಮಂಡಿ ಮೂರು, ಲಷ್ಕರ್ ನಾಲ್ಕು ಸ್ಥಾನಗಳು.

ಬಹಿರಂಗ ಹರಾಜು

೧೯೪೮ ನೆಯ ಮಾಡಲ್ ಫ್ರೇಸರ್ ಮ್ಯಾನ್‌ಹಟನ್, ಕೇಸರ್, ಸ್ಟೂಡಿಬೇಕರ್ ಲ್ಯಾಂಡ್ ಕ್ರೂಯಿಜರ್, ಓಲ್ಡ್ಸ್ ಮೊಬೈಲ್, ಮುಂತಾದ ಮೋಟಾರು ಕಾರುಗಳು, ಕೆಲವು ಬಸ್ಸುಗಳು ಮತ್ತು ಒಂದು ರೋಡ್ ರೋಲರೂ ಸಹ ೧೯೪೮ ನೆಯ ಜುಲೈ ೨೮ ಮತ್ತು ೨೯ ನೆಯ ತಾರೀಕುಗಳಲ್ಲಿ ಪ್ರತಿದಿನ ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧ ಗಂಟೆವರೆಗೆ ಮೈಸೂರಿನಲ್ಲಿರುವ ಅರಮನೆ ಗ್ಯಾರೇಜಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಇತರ ವಿವರಗಳಿಗೆ ೧೯೪೮ ನೆಯ ಜುಲೈ ೧೭ ಮತ್ತು ೨೪ ನೆಯ ತಾರೀಕುಗಳಲ್ಲಿ ಹಿಂದು, ಮದ್ರಾಸ್‌ಮೆಯಿಲ್, ಡೇಲಿಪೋಸ್ಟ್, ತಾಯಿನಾಡು, ಅಲ್‌ಕಲಂ, ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹಿರಾತುಗಳನ್ನು ದಯವಿಟ್ಟು ನೋಡಿ

ಸೂಪರಿಂಟೆಂಡೆಂಟ್,
ಅರಮನೆ ಗ್ಯಾರೇಜು, ಮೈಸೂರು

City Municipal Offices; Dated Mysore City 21st July 1948

NOTIFICATION

No. R 8. Gl 809/47

The public are hereby informed that sealed tenders will be received in the office of the Municipal Commissioner, Mysore City Municipality up to 4 P. M. on 6th August 1948 for the right of occupying the pannels of the cement Advertisement Board put up by the Municipality in Jeevannarayanakere (in front of Railway offices). Further information may be had in the City Municipal office during office hours

(Sd) T. RAMA RAO,
For Municipal Commissioner.

ಅಪೆರಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
ತಾ|| 24—7—48 ರಿಂದ
ಕಿಸ್ಮತ್ ವಾಲಿ
[ಹಿಂದಿ]
§ ನಾದಿಯ § ಜಾನ್ ಕಾವಾಸ್ § ಸಯಾನಿ § ರಾಣಿ ಬಾಲ

MorningShows From 23-7-48
Dairy of a Chambermaid
—:with:—
Paulette Goddard, Burgess Meredith

ರಾಜಕಮಲ್,
ಮೈಸೂರು
24-7-48 ರಿಂದ
ಅಮೋಘ ೨ ನೇ ವಾರ
ಪ್ರತಿ ದಿನ 3 ಆಟಗಳು
ಪನಿಹಾರಿ
(ಹಿಂದಿ)
—:ತಾರಾಗಣ:—
ಶಾಂತಾ ಆಪ್ಟೆ, ಸುರೇಂದ್ರ, ಯಾಕೂಬ್, ಮುಂತಾದವರು

Morning Shows
From 23 - 7 - 48
For 4 days
SCARLET STREET
—With—
EDWARD G. ROBINSON
JOAN BENNETTE

ಶ್ರೀ ಗಾಯತ್ರೀ ಟಾಕೀಸ್
24-7-48 ರಿಂದ 3 ದಿನಗಳು ಮಾತ್ರ
ದಿನ ಮೂರು ಆಟಗಳು
MGM ರವರ ಹಾಸ್ಯದಿಂದ ಕೂಡಿದ
ವರ್ಣರಂಜಿತ ಚಿತ್ರ
ಈಸಿ ಟು ವೆಡ್
(EASY TO WED)
ಪಾತ್ರ:- ವೇನ್‌ಜಾನ್ಸನ್ ಮತ್ತು ಎಸ್ತರ್ ವಿಲಿಯಂಸ್

ಬೊಂಬಾಯಿ
ಜಿ. ಎ. ಸರ್ಕಸ್
ಮೈಸೂರು ಜಿಮ್ಖಾನಾಯನ
ಕಟ್ಟೆಯಲ್ಲಿ
೩ ಆಟಗಳು:- ಶುಕ್ರವಾರ, ಶನಿವಾರ
ಭಾನುವಾರ
೩-೩೦, ೬-೩೦, ಮತ್ತು ೯-೩೦ ಕ್ಕೆ
ಮಿಕ್ಕ ದಿನಗಳಲ್ಲಿ ೨ ಆಟಗಳು
ಮಾತ್ರ ೬-೩೦, ಮತ್ತು ೯-೩೦ ಕ್ಕೆ
— ದರಗಳು ಮಾಮೂಲಿನಂತೆ —
[ಎಂ. ಸುಬ್ರಹ್ಮಣ್ಯ ಅಂಡ್ ಕೋ]

Edited printed and published by A. R. Nagarajan at the Sadhvi Press D. Subbaiah Road Mysore.

ಪ್ರಭಾ ಪಿಕ್ಚರ್ ಹೌಸ್
23—7—48 ರಿಂದ ಅಮೋಘ 2ನೇ ವಾರ
ದಿನವಹಿ 3 ಆಟಗಳು
-ಅರೇಬಿಯನ್ ನೈಟ್ಸ್-
(ಹಿಂದಿ)
★ ಕರ್ನ್ನ ದೇವಿ ★ ನವಾಬ್

ನಿಮ್ಮ ಮೈ ಮೊಡವುಗಳಿಂದ
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ರಾಜಧಾನಿಯ ಈಡಿಗಾ ಬಡಾವಣೆಯಲ್ಲಿ ಸೈಟ್ಸ್

ರೈಸ್‌ಮಿಲ್ ಕಟ್ಟುವವರಿಗೂ, ಕಾರ್ಖಾನೆ ನಡೆಸಬೇಕೆಂದಿರುವವರಿಗೂ, ಕಮ್ಮಿ ದರಕೆ ಬಂಗ್ಲೆ, ಮನೆ ಕಟ್ಟಬೇಕೆಂದಿರುವವರಿಗೂ ಸುಸಮಯ. ಸೈಟುಗಳು ಒಳ್ಳೆ ಜಾಗದಲ್ಲಿವೆ. ಇಷ್ಟವುಳ್ಳವರು ಒಟ್ಟಿಗೆ ಬೇಕಾದರೂ ಕೊಳ್ಳಬಹುದು. ಹೆಚ್ಚಿನ ವಿವರಗಳು ನನ್ನಲ್ಲಿವೆ.

ಬಿ. ಎಸ್. ಸುಬ್ಬರಾವ್
ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು

ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೬-೭-೪೮ [ಸಂಚಿಕೆ ೫

ಕನ್ನಡರಂಗಭೂಮಿಯ ಶತಮಾನೋತ್ಸವ

ಕನ್ನಡ ರಂಗಭೂಮಿಯ ಶತಮಾನೋತ್ಸವ

ಗುಬ್ಬಿ ಕಂಪೆನಿಯ ವಜ್ರೋತ್ಸವ

ಶ್ರೀಮನ್ಮಹಾರಾಜರವರಿಂದ ಪ್ರಾರಂಭ

ಮೈಸೂರು ೨೬

ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ವಸ್ತು ಪ್ರದರ್ಶನಾಲಯದಲ್ಲಿ ಕನ್ನಡ ರಂಗಭೂಮಿಯ ಶತಮಾನೋತ್ಸವ ಮತ್ತು ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ನಾಟಕ ಮಂಡಲಿಯ ವಜ್ರೋತ್ಸವಗಳ ಆರಂಭೋತ್ಸವವನ್ನು ನೆರವೇರಿಸಿದರು. ಸ್ಥಳ ಪರಿಸ್ಥಿತಿಗಳಿಂದ ಪೂರಾ ಜನ ಆಹ್ವಾನಿತರಾದ ಪೂರ್ಣ ಮಹಿಳೆಯರೂ, ವಿದ್ಯಾರ್ಥಿಗಳೂ, ಸಾಹಿತಿಗಳೂ ತಿಳಿದವರೂ ಬಂದಿದ್ದರು.

ಬಾಲಕಿಯರಿಂದ ಸ್ವಾಗತ ಗೀತೆಗಳಾದ ಮೇಲೆ ಕಾರ್ಯದರ್ಶಿಗಳಾದ ಶ್ರೀ ಎಂ. ಸಿ ಮಹದೇವ ಸ್ವಾಮಿಯವರಿಂದ ಪ್ರಾರ್ಥನೆಯು ನಡೆಯಿತು. ನಾಟಕ ಕಲೆಗೆ ವಿಶೇಷವಾಗಿ ಸೇವೆ ಸಲ್ಲಿಸಿರುವ ಮಹನೀಯರು ಮತ್ತು ಮಹಿಳೆಯರನ್ನು ಪ್ರಭುಗಳಿಗೆ ಪರಿಚಯ ಮಾಡಿಕೊಡಲಾಯಿತು.

ಸ್ವಾಗತಾಧ್ಯಕ್ಷರಾದ ರಾಜಸೇವಾ ಪ್ರಸಕ್ತ ಶ್ರೀ ಟಂಬಳೆ ಸುಬ್ರಹ್ಮಣ್ಯ ಅಯ್ಯರ್ರವರು ಸಮಿತಿಯ ಪರವಾಗಿಯೂ, ವಿನೋದ ರತ್ನಾಕರ ಜಿ ಹೆಚ್. ವೀರಣ್ಣನವರು ಗುಬ್ಬಿ ಕಂಪೆನಿಯ ಪರವಾಗಿಯೂ ಬೆಳ್ಳಿ ವಸ್ತುಗಳನ್ನೊಳಗೊಂಡ ರಜತ ಕರಂಡಗಳಲ್ಲಿ ಪ್ರಭುಗಳಿಗೆ ಅರ್ಪಿಸಿದರು.

ಅನಂತರ ಶ್ರೀಮನ್ಮಹಾರಾಜರವರು ಭಾಷಣ ಮಾಡಿ ಈ ಕೆಳಗೆ ಕಂಡಂತೆ ಅಪ್ಪಣೆ ಕೊಡಿಸಿದರು:—

ಕವಿಗಳೂ ಮತ್ತು ನಾಟಕ ಕರ್ತರೂ, ಮಾನವ ವರ್ಗದ ಹಿತಬೋಧಕರಲ್ಲಿ ಅತ್ಯಂತ ಶ್ರೇಷ್ಠರಾದವರ ಗುಂಪಿಗೆ ಸೇರಿದವರಾಗಿದ್ದಾರೆ. ಜನಗಳ ಭಾವನೆಗಳಲ್ಲಿಯೂ, ಜೀವನ ವಿಮರ್ಶೆಯ ವಿಷಯದಲ್ಲಿಯೂ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿಯೂ ಮಹತ್ತರವಾದ ಬದಲಾವಣೆಗಳು ನಡೆದ ಕಾಲಗಳೇ, ಕಾವ್ಯಗಳ ಉತ್ಕರ್ಷದ ಸುವರ್ಣ ಯುಗಗಳಾಗಿರುವಂತೆ ಅನೇಕ ದೇಶಗಳಲ್ಲಿ ಕಂಡುಬಂದಿದೆ.

ಅಂಥ ಕಾಲಗಳಲ್ಲಿ, ನಾಟಕಗಳು ಮತ್ತಷ್ಟು ಪರಿಣಾಮಕಾರಿಯಾಗಿರುತ್ತವೆ; ಏಕೆಂದರೆ, ಉತ್ತಮವಾದ ಸುಧಾರಣೆಗಳು ನಡೆಯುವ ರೀತಿಯಲ್ಲಿ ಜನಜೀವನವನ್ನು ಹೊಂದಿಸುವ ಹಾಗೆ ಸೂಕ್ತವಾದ ನೂತನ ಮಾರ್ಗಗಳನ್ನು ಬೋಧಿಸುವುದೂ, ಮತ್ತು ಸಂತೋಷವನ್ನುಂಟುಮಾಡುವ ವ್ಯಾಜದಿಂದಲೇ ಹಾಗೆ ಮಾಡುವುದೂ, ನಾಟಕ ಪ್ರದರ್ಶನದಿಂದ ಸಾಧ್ಯವಾಗುತ್ತದೆ. ಕನ್ನಡ ರಂಗಭೂಮಿಯೂ ಇತರ ರಂಗಭೂಮಿಗಳಂತೆಯೇ ಅಭಿವೃದ್ಧಿ ಹೊಂದಿದೆ; ಪ್ರಾಚೀನ ಕಾಲದ ಪ್ರಾಕೃತ ಸ್ಥಿತಿಯಿಂದ ಕ್ರಮಕ್ರಮವಾಗಿ ಅದು ಪರಿಷ್ಕರಣ ಹೊಂದಿದೆ; ಅಲ್ಲದೆ, ನಾಜೂಕಾದ ಮತ್ತು ಸೊಗಸಾದ ರಂಗ ಪರಿಕರಗಳಿಂದ ತುಂಬಿ, ಶ್ರೇಷ್ಠವಾದ ಅಭಿನಯ ಕೌಶಲ್ಯದಿಂದ ಶೋಭಿಸುವ ಮಟ್ಟಕ್ಕೆ ಏರಿದೆ ಸಾರ್ವಜನಿಕ ಜೀವನದ ಮೇಲೆ ಅದರ ಪ್ರಭಾವವು ಹೆಚ್ಚುತ್ತಲೇ ಬರುತ್ತಿದೆ. ಮತಸಂಬಂಧವಾದ ತತ್ವಗಳನ್ನು, ಮನೋಹರವಾದ ಕಪಿ ವಾಣಿಯಲ್ಲಿ ನಾಟಕ ರೂಪವಾಗಿ ರಂಗಭೂಮಿಯ ಮೇಲೆ ಪ್ರದರ್ಶನ ಮಾಡಿದಾಗ, ಅವುಗಳಿಂದ ಆಗುವ ಪರಿಣಾಮವು, ಕೇವಲ ಬೋಧನೆಯಿಂದ ಆಗುವುದಕ್ಕಿಂತಲೂ ಹೆಚ್ಚಿನದೆಂದು, ಒಬ್ಬ ಪಾಶ್ಚಾತ್ಯ ಲೇಖಕನು ಹೇಳಿದ್ದಾನೆ

ಸೂಕ್ತವಾದ ಮಾರ್ಗಗಳಲ್ಲಿ ಸಮಾಜ ಸುಧಾರಣೆಗಳು ನಡೆಯುವುದು ಅವಶ್ಯಕವೆಂಬುದನ್ನು ತೋರಿಸುವ ಸಮಾಜಿಕ ನಾಟಕಗಳಿಂದಲೂ ಪೌರಾಣಿಕ ನಾಟಕಗಳಿಂದ ಆಗುವಷ್ಟೇ ಪರಿಣಾಮವುಂಟಾಗುತ್ತದೆ. ಗುಬ್ಬಿ ನಾಟಕ ಮಂಡಲಿಯು ಬಹಳ ದೀರ್ಘ ಕಾಲದಿಂದಲೂ ಕಲಾಸೇವೆ ಮಾಡುತ್ತಾ ಪ್ರಖ್ಯಾತಿ ಹೊಂದಿದೆ. ನಾಟಕ ರತ್ನ ಶ್ರೀ ಜಿ ಹೆಚ್ ವೀರಣ್ಣನವರು, ನಾಟಕ ಕಲೆಯ ಘನತೆಯನ್ನು ಹೆಚ್ಚಿಸಿ ಅದ ಕಳಕಳಿಸುವಂತೆ ಮಾಡುವ ಮೂಲಕ ನಾಟಕ ಕಲೆಗೆ ಸಲ್ಲಿಸಿರುವ ಸೇವೆಯನ್ನು ಎಷ್ಟು ಶ್ಲಾಘಿಸಿದರೂ ಸಾಲದು.

ಕರ್ನಾಟಕ ಸಂಗೀತ ಕೇಂದ್ರವಾಗಿರುವ ಮೈಸೂರು ನಗರದಲ್ಲಿ ರಂಗಭೂಮಿಯ ಸಂಬಂಧವಾಗಿ ಶಿಕ್ಷಣ ಕೊಡುವ ಲಲಿತ ಕಲಾ ಶಾಲೆಯನ್ನು ಏರ್ಪಡಿಸಬೇಕೆಂಬ ನಿಮ್ಮ ಅಭಿಲಾಷೆಯೂ ನೆರವೇರಲೆಂದು ನಾವು ಹಾರೈಸುತ್ತೇವೆ ಕನ್ನಡ ರಂಗಭೂಮಿಯು, ದಿನ ದಿನವೂ ವೃದ್ಧಿಹೊಂದಿ, ಕನ್ನಡ ನಾಟಕ ಪ್ರದರ್ಶನಗಳ ಮೂಲಕ ಒಟ್ಟು ಕನ್ನಡ ನಾಡಿನಲ್ಲಿಯೂ ಮತ್ತು ಇತರ ಪ್ರದೇಶಗಳಲ್ಲಿಯೂ ಜನಗಳ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟು ಮಾಡಲೆಂದೂ ಮತ್ತು ಕನ್ನಡ ರಂಗಭೂಮಿಯ ಮುನ್ನಡೆಗಾಗಿ ಶ್ರಮಿಸುತ್ತಿರುವವರ ಸಮಸ್ತ ಪ್ರಯತ್ನಗಳೂ ಸಫಲವಾಗಿ ನೆರವೇರುತ್ತಿರಲೆಂದೂ, ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ

ರಾಷ್ಟ್ರದ ರಕ್ಷಣೆಗೆ ಯುವಕರು ಸಿದ್ಧರಾಗಬೇಕು

ಮುಖ್ಯ ಮಂತ್ರಿಗಳ ಭಾಷಣ

ಮೈಸೂರು ೨೬

ಇಟ್ಟಿಗೆಗೂಡು ಯುವಜನ ಸಂಘದ ವಾರ್ಷಿಕೋತ್ಸವವು ನಿನ್ನೆ ಸಂಜೆ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಎಲ್. ಎ. ವಿಜಯ ರಂಗಂರವರು ಸ್ವಾಗತ ಭಾಷಣ ಮಾಡಿ ಸಂಘ ಕಾರ್ಯಾಚರಣೆಗಳನ್ನು ವಿವರಿಸಿದರು. ಶ್ರೀ ಕೆ ಸಿ ರೆಡ್ಡಿಯವರು ಸ್ಪರ್ಧೆ ಮತ್ತು ಇತರ ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿನಿಯೋಗಿಸಿ ಯುವಕರೆಲ್ಲರೂ ರಾಷ್ಟ್ರದ ರಕ್ಷಣೆಗಾಗಿ ಸಿದ್ಧರಾಗಿರಬೇಕೆಂದೂ, ಅವರೆಲ್ಲರೂ ಸೈನ್ಯ ಶಿಕ್ಷಣವನ್ನು ಪಡೆಯಬೇಕೆಂದೂ ತಿಳಿಸಿದರು ಈಗಿನ ಪರಿಸ್ಥಿತಿಯು ಬಹಳ ಮಟ್ಟಿಗೆ ಚಿಂತಾಸ್ಥಿತಿಯಲ್ಲಿದೆಯೆಂದೂ, ಅದಕ್ಕೆ ಅನೇಕ ಕಾರಣಗಳಿವೆಯೆಂದೂ, ಅವುಗಳೆಲ್ಲವನ್ನೂ ಎದುರಿಸಲು ಮಹಾಜನಗಳು ಸರ್ಕಾರದೊಂದಿಗೆ ಸಹಕರಿಸಬೇಕೆಂದೂ ಶ್ರೀ ರೆಡ್ಡಿಯವರು ಕೋರಿದರು

ಬಿ ಜಿ. ಖೇರ್‌ರವರ ಆಕಾಶವಾಣಿ ಭಾಷಣ

ಬೊಂಬಾಯಿನ ಪ್ರಧಾನಿ ಶ್ರೀ ಬಿ ಜಿ. ಖೇರ್‌ರವರು ನಾಳೆ ರಾತ್ರಿ ೮-೧೫ ಗಂಟೆಗೆ ಕನ್ನಡ ನಾಟಕಗಳ ನೋಟ-ಪರ್ಷ ಎಂಬ ವಿಷಯವಾಗಿ ಇಂಗ್ಲೀಷಿನಲ್ಲಿ ಆಕಾಶವಾಣಿಯಿಂದ ಭಾಷಣ ಮಾಡುತ್ತಾರೆ

ಶ್ರೀಮತಿ ಕಾಮೇಶ್ವರಮ್ಮನವರ ಉಪವಾಸ ಸತ್ಯಾಗ್ರಹವೇ ?

ಮೈಸೂರು ೨೬

ಶ್ರೀಮತಿ ಕಾಮೇಶ್ವರಮ್ಮನವರು ಸತತ ಖಾದಿ ಧಾರಿಗಳಲ್ಲವೆಂದು, ಅವರು ಪ್ರತಿನಿಧಿಗಳಾಗಲು ಕಾಂಗ್ರೆಸ್ಸಿಗೆ ಸಲ್ಲಿಸಿದ ಅರ್ಜಿಯನ್ನು ನಗರ ಕಾಂಗ್ರೆಸ್ ಚುನಾವಣಾಧಿಕಾರಿಗಳಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ತಿರಸ್ಕರಿಸಿರುವ ವಿಷಯದಲ್ಲಿ, ಶ್ರೀಮತಿಯವರು ಚುನಾವಣಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆದ, ಅವರು ಮಾಡಿರುವ ಆಪಾದನೆಯು ನಿಜವಲ್ಲವೆಂದೂ ತಾವು ೧೯೨೧ ರಲ್ಲೇ ಗಾಂಧೀಜಿಯವರ ಸಮ್ಮುಖದಲ್ಲಿ ಖಾದಿ ಧರಿಸಲು ವಚನ ತೆಗೆದುಕೊಂಡಿರುವರೆಂದೂ, ಆಪಾದನೆಯನ್ನು ಚುನಾವಣಾಧಿಕಾರಿಗಳು ವಾಪಸು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ತಾವು ಸತ್ಯಾಗ್ರಹವನ್ನು ಹೂಡುವುದಾಗಿಯೂ ತಿಳಿಸಿರುತ್ತಾರೆ ಇದರಿಂದ ತಮ್ಮ ಆತ್ಮ ಗೌರವಕ್ಕೆ ಚ್ಯುತಿಯುಂಟಾಗಿ ಜೀವನದಲ್ಲೇ ಬೇಸರ ಉಂಟಾಗಿದೆಯೆಂದೂ, ಆದುದರಿಂದ ವೆಲ್ಯಂದ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆಯೆಂದೂ ತಿಳಿಸುತ್ತಾರೆ

ನಾಟಕ ಪ್ರದರ್ಶನ

ಕರ್ನಾಟಕ ರಂಗಭೂಮಿಯ ಶತಮಾನೋತ್ಸವ ಸಮಾರಂಭದ ಸಂಬಂಧದಲ್ಲಿ, ಈ ದಿನ ಸಂಜೆ ೭ ಗಂಟೆಗೆ ವಸ್ತು ಪ್ರದರ್ಶನಾಲಯದಲ್ಲಿ ಇಂಟರ್ ಕಾಲೇಜಿನ ಪ್ರಾಸಂಗ್ಸ್ ಕಲಾ ಮಂಡಲಿಯವರು 'ರಾಗಣ್ಣನ ರಥ' ಎಂಬ ನಾಟಕವನ್ನು ಆಡುವರು

ಪೀರ್ ಬೀಡಿ ಕೆಲಸಗಾರರ ತೊಂದರೆ

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ಪೀರ್ ಬೀಡಿ ಫ್ಯಾಕ್ಟರಿಯವರು ಅಲ್ಲಿನ ಕೆಲಸಗಾರರಿಗೆ ಕಳೆದ ೧೯ನೇ ತಾ|| ನೋಟೀಸುಕೊಟ್ಟು ಅನೇಕರನ್ನು ಕೆಲಸದಿಂದ ಬರ್ತರಫ಼ು ಮಾಡಿದ್ದಾರೆಂದೂ ಇದರಿಂದ ೫೦೦ ಮಂದಿ ಬೀಡಿ ಕೆಲಸಗಾರರು ನಿರುದ್ಯೋಗಿಗಳಾಗಿದ್ದಾರೆಂದೂ ತಿಳಿದುಬಂದಿದೆ ಕೇವಲ ೩ ದಿನಗಳ ಅವಧಿಯಲ್ಲಿ ಈ ರೀತಿ ಮಾಡಿ ನಮ್ಮಂತಹ ಕೆಲಸಗಾರರಿಗೆ ಅನ್ಯಾಯ ಮಾಡಿದೆಯೆಂದೂ ಈ ವಿಷಯವನ್ನು ಕೂಡಲೇ ಪರಿಶೀಲಿಸಬೇಕೆಂದೂ ಕೆಲಸಗಾರರು ಲೇಬರ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಗಳಿಗೆ ಪತ್ರ ಮೂಲಕ ಮನವಿ ಮಾಡಿಕೊಂಡಿದ್ದಾರೆಂದು ಹೇಳಲಾಗಿದೆ.

ವಸ್ತುಕಲಾ ಪ್ರದರ್ಶನ

ಮೈಸೂರು ೨೬

ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ದಿನ ಬೆಳಗ್ಗೆ ೧೧ ಗಂಟೆಗೆ ವಸ್ತು ಪ್ರದರ್ಶನಾಲಯದಲ್ಲಿ ರಂಗಮಂಟಪದ ವಸ್ತುಕಲಾ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು. ಇಂತಹ ಪ್ರದರ್ಶನಗಳಿಂದ ಈ ಕಲೆಯ ಉನ್ನತಿಗೆ ವಿಶೇಷ ಸಹಾಯವಾಗುವುದೆಂದು ಹೇಳಿದರು. ಇದುವರೆಗೆ ದೊರೆತ ಸಹಾಯಕ್ಕಿಂತಲೂ ಸ್ವಾತಂತ್ರ್ಯ ಯುಗದಲ್ಲಿ ನಾಟಕ ಕಲೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವು ದೊರೆಯುವುದೆಂದು ಆಶಿಸಿದರು

ಸಮಿತಿಯ ಪರವಾಗಿ ಶ್ರೀ ಟಿ ಸೀತಾರಾಮಯ್ಯನವರು ಪ್ರಧಾನಿಯವರನ್ನು ಸ್ವಾಗತಿಸಿದರು.

ಆಕಾಶವಾಣಿ ವಿಶೇಷ ಪ್ರಸಾರ

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವದ ಸಂಬಂಧದಲ್ಲಿ ನಾಳೆ ಆಕಾಶವಾಣಿಯಲ್ಲಿ ಕೆಳಗೆ ಕಂಡ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುವುದು:—

ಬೆಳಗ್ಗೆ ೭-೧೦ ಶ್ರೀಮನ್ಮಹಾರಾಜರವರಿಗೆ ಅಭಿನಂದನೆಗಳು, ೭-೩೦ ಮಹಾಪ್ರಭುಗಳ ಪ್ರಶಂಸನಾ ಗೀತೆಗಳು, ಶ್ರೀ ಎಂ ಎಸ್ ಚಂದ್ರಶೇಖರಯ್ಯನವರಿಂದ; ೮ ೧೫ 'ಗುಣ ಗಂಭೀರ' ಎಂಬ ವಿಶೇಷನಾಟಕ; ಶ್ರೀ ಅಶ್ವತ್ಥನಾರಾಯಣರಾಯರಿಂದ; ಸಂಜೆ ೬ ೫೦, ಹೆಂಗಸರಿಗಾಗಿ ವಿಶೇಷ ಕಾರ್ಯಕ್ರಮ, ೮ ಮೈಸೂರು ರಾಜಮನೆತನ-ಸರ್ದಾರ್ ಕೆ ಬಸವರಾಜೇ ಅರಸಿನವರಿಂದ ಭಾಷಣ

○ ವಿಶ್ವಸಂಸ್ಥೆಯ ಸಮಿತಿಯವರು ಕಾಶ್ಮೀರದ ಬಗ್ಗೆ ವಿಚಾರಣೆ ನಡೆಸುವುದಕ್ಕೆ ... ಈಗ ಅಲ್ಲಿ ನಡೆಯುತ್ತಿರುವ ಕದನವನ್ನು ನಿಲ್ಲಿಸಬೇಕೆಂದು ... ಸೂಚಿಸಿ ... ಕಾರರು ಕಮ್ಯುನಿಸ್ಟ್ ... ಹಿಂದಕ್ಕೆ ಹೋಗುವವರೆಗೆ ... ನಿಲ್ಲಿಸಲು ಸಾಧ್ಯವಿಲ್ಲವೆಂದು ಭಾರತ ಸರ್ಕಾರದವರು ಅರಿಕೆ ಮಾಡಿರುತ್ತಾರೆ

ಸರ್ ಮಿರ್ಜಾರವರಿಗೆ ನಿಜಾಮರ ಪತ್ರವೆ ?

ಸ್ವಂ. ವ. ಸಾ] ಬೆಂಗಳೂರು ೨೬

ಹೈದರಾಬಾದಿನ ನೈಜಾಮರು ಸರ್, ಮಿರ್ಜಾ ಇಸ್ಮಾಯಿಲರಿಗೆ ಹಲವು ಪತ್ರಗಳನ್ನು ಬರೆದಿರುವರೆಂದೂ ಅವುಗಳ ಆಧಾರದ ಮೇಲೆ ಭಾರತ ಸರ್ಕಾರದೊಡನೆ ಸಂಧಾನ ನಡೆಸಲು ಸರ್ ಮಿರ್ಜಾರವರು ಸಾಕ್ಷಿ ... ರೆಂದೂ ತಿಳಿದುಬಂದಿದೆ.

CHAMUNDESWARI
TALKIES

Special Morning Shows
For Birthday Season
From 27—7—48
" CARNIVAL "
(A Two Cities Film)
Featuring the famous
stage star
SALLY GRAY
MICHAEL WILDING
Supported by best cast
Fa n to .. the A-class
en ... nment

... M ... ng Show
To Each His Own

ರಜತ ಮಹೋತ್ಸವ

ಮೈಸೂರು ೨೫

ಮೈಸೂರು ಅರನೆ ನೆ ಸೆಂಟ್ರಲ್ ಕೋ-ಆಪರೇಟೀವ್ ಸೊಸೈಟಿಯ.ವರ ರಜತ ಮಹೋತ್ಸವವು ನಿನ್ನೆ ಬೀಗ್ಯೆ ಜಗನ್ಮೋಹನ ಭವನದಲ್ಲಿ ಜರುಗಿತು ಹುಜೂರ್ ಸೆಕ್ರೆಟರಿಗಳಾದ ಶ್ರೀ ಹೆಚ್ ನಿರಂಜನರಾಜೇ ಅರಸಿನವರು ಅಧ್ಯಕ್ಷತೆಯನ್ನು ವಹಿಸಿದ್ದರು

ಸ್ವಾಗತ ಗೀತೆಯೊಡನೆ ಸಮಾರಂಭವು ಪ್ರಾರಂಭವಾಯಿತು ಕಾರ್ಯದರ್ಶಿಗಳಾದ ಶ್ರೀ ದೇಶಿಕಾಚಾರ್ಯರು ಸಂಘದ ವರದಿಯನ್ನು ಓದಿದರು. ಅನಂತರ ಅಧ್ಯಕ್ಷರು ಭಾಷಣ ಮಾಡಿ ಮೇಲ್ಕಂಡ ಸಂಘದ ಕೆಲಸ ಕಾರ್ಯಗಳನ್ನು ಪ್ರಶಂಸಿಸಿ ಅದರ ಬ್ಯಾಂಕಿಂಗ್ ವ್ಯವಹಾರಗಳೊಡನೆ ಸ್ಟೋರ್ಸ್ ಒಂದನ್ನು ತೆರೆಯಬೇಕೆಂದು ಹೇಳಿದರು

ವಂದನಾರ್ಪಣೆಯಾದ ನಂತರ ತಾಂಬೂಲ ವಿನಿಯೋಗ ಮತ್ತು ಫೋಟೋಗಳು ನಡೆದ. ಸಭೆಯು ಮುಕ್ತಾಯವಾಯಿತು.

ಕಾಂಗ್ರೆಸ್ ಚುನಾವಣೆಗಳು

ಮೈಸೂರು ನಗರ ಮತ್ತು ಇತರ ಸ್ಥಳಗಳಿಂದ ಬೆಂಗಳೂರಿನ ಕಾಂಗ್ರೆಸ್ ಪ್ರಧಾನ ಕಛೇರಿಗೆ ಚುನಾವಣೆಯ ಸಂಬಂಧವಾಗಿ ಆಕ್ಷೇಪಿಸಿ ಕೆಲವರು ವಿಳಾಸವಿಲ್ಲದ ಕಾಗದಗಳನ್ನು ಕಳುಹಿಸುತ್ತಿದ್ದಾರೆಂದೂ, ಆ ರೀತಿ ಆಕ್ಷೇಪಣೆಗಳನ್ನುಳ್ಳವರು ಮೊದಲು ಸ್ಥಳೀಯ ಚುನಾವಣಾಧಿಕಾರಿಗೆ ತಿಳಿಸಿ ಅವರ ತೀರ್ಪಿನ ನಂತರ ಚುನಾವಣಾ ಕಮಿಷನರುಗಳಿಗೆ ಅಪೀಲು ಹಾಕಿಕೊಳ್ಳಬೇಕೆಂದೂ ಮೈಸೂರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಶ್ರೀ ಗಣೇಶ ಟಾಕೀಸ್

25-7-48 ರಿಂದ ಪ್ರತಿ ದಿನ 3 ಆಟಗಳು

5 ದಿನಗಳು ಮಾತ್ರ

ಬಾಂಬೆ ಸಿನಿಟೋನ್‌ರವರ

ಲಾಲ್ ಹವೇಲಿ

(ಹಿಂದಿ)

ಪ್ರಧಾನ ಭೂಮಿಕೆ:— ಸುರೇಂದ್ರ, ನೂರ್‌ಜಹಾನ್, ಯಾಕೂಬ್, ಉಲ್ಲಾಸ್

(ಹೊಸ ಪ್ರಿಂಟ್)

ಮುಂದಿನ ಬದಲಾವಣೆ — ರಣಜಿತ್‌ರವರ

' ಧನ ಭಗತ್ ' (ಹಿಂದಿ)

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜಿವಣ್ಣರಾಯನ ಕಟ್ಟೆಯಲ್ಲಿ

೩ ಆಟಗಳು:-ಶುಕ್ರವಾರ, ಶನಿವಾರ ಭಾನುವಾರ.

೩-೩೦, ೬ ೩೦, ಮತ್ತು ೯-೩೦ಕ್ಕೆ

ಮಿಕ್ಕ ದಿನಗಳಲ್ಲಿ ೨ ಆಟಗಳು

ಸಾಯಂ ೬ ೩೦, ಮತ್ತು ೯ ೩೦ ಕ್ಕೆ

- ದರಗಳು ಮಾಮೂಲಿನಂತೆ —

[ಎ. ಸುಬ್ರಹ್ಮಣ್ಯಂ ಅಂಡ್ ಕೋ]

Edited printed and published by A. S. Natarajan at the Sadhvi Press, D. .. Road Mysore

ಎ.ಎಂ.ಸಿ.ಸಿ. ಚುನಾವಣೆ

ನಂಜನಗೂಡು ೨೪

ಈ ದಿನ ಈ ತಾಲ್ಲೂಕಿನಿಂದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ಚುನಾವಣೆ ನಡೆದು ಶ್ರೀಗಳಾದ ಪಿ ಮಹದೇವಯ್ಯ, ಎಲ್ ರಾಚಯ್ಯ, ಶಿವನಂಜಪ್ಪ, ಬಿ ಎಂ ಪುಟ್ಟಸ್ವಾಮಯ್ಯ ಮತ್ತು ವೀರಭದ್ರಪ್ಪನವರುಗಳು ಬಹುಮತದಿಂದ ಚುನಾಯಿತರಾದರು. ಶ್ರೀಗಳಾದ ಹೆಜ್ಜಿಗೆ ಲಿಂಗಣ್ಣ, ಹೆಜ್ಜಿಗೆ ಮಾದಪ್ಪ ಮತ್ತು ನೇರಳೆ ಮಾದಯ್ಯನವರು ಪರಾಜಿತರಾದರು

ಶ್ರೀ ಗಾಯತ್ರೀ ಟಾಕೀಸ್

27-7-48 ರಿಂದ 3 ದಿನಗಳು ಮಾತ್ರ

MGM ರವರ

ಓಮಹ ಟ್ರೈಯಲ್

(THE OMAHA TRAIL)

Next Change:—
Adventures of Robinhood

ಉಪಾಧ್ಯಾಯರ ಸಂಘ

ಚಾಮರಾಜನಗರ ೨೦

ಚಾಮರಾಜನಗರದ ತಾ|| ಹರದನಹಳ್ಳಿ ರೇಂಜ್ ಉಪಾಧ್ಯಾಯ ಸಂಘದ ಸಭೆಗೆ ಒನೇ ತಾರೀಕು ತಾಲ್ಲೂಕಿನ ನೂತನ ಅಮಲ್ದಾರ್ ಶ್ರೀ ಮುರಗೇಂದ್ರಸ್ವಾಮಿಯವರು ಅಧ್ಯಕ್ಷತೆ ವಹಿಸಿ, ತಮ್ಮ ಭಾಷಣದಲ್ಲಿ, ಉಪಾಧ್ಯಾಯರಿಗೆ ಆಹಾರ ಅಭಾವದಿಂದ ಉಂಟಾಗಿರುವ ಕೊರತೆಯನ್ನು ನೀಗಿಸಲು ಶಕ್ಯವಾದ ಎಲ್ಲ ಸಹಾಯವನ್ನೂ ನೀಡುವುದಾಗಿ ತಿಳಿಸಿ, ವಿದ್ಯಾ ಶಿಕ್ಷಣ ವೃತ್ತಿಯು ಪ್ರಜೋತ್ಪತ್ತಿಯ ದೃಷ್ಟಿಯಿಂದ ಪವಿತ್ರವಾದ ಉದ್ಯೋಗವೆಂದೂ, ಅವರು ಸಂಬಳವನ್ನೇ ಮುಖ್ಯ ಗುರಿಯಾಗಿಡದೆ ದೇಶೋದ್ಧಾರಕ್ಕಾಗಿ ದುಡಿದು ಇಂದಿನ ಕೀಳು ಜನಾಂಗದ ಕೃತಜ್ಞತೆಗೆ ಪಾತ್ರರಾಗಬೇಕೆಂದೂ ಹಾರೈಸಿದರು.

ಸಿನಿಮಾಗಳಲ್ಲಿ ಧೂಮ ಪಾನ ಕೂಡದು

ಸಾರ್ವಜನಿಕ ಆರೋಗ್ಯ ಮತ್ತು ಒಳ್ಳೇ ನಡತೆಗಳ ದೃಷ್ಟಿಯಿಂದ ಸಿನಿಮಾ ಮಂದಿರಗಳಲ್ಲಿ ಹೊಗೆ ಬತ್ತಿಗಳನ್ನು ಯಾರೂ ಸೇದಕೂಡದೆಂದು ಬೊಂಬಾಯಿ ಪೋಲೀಸ್ ಕಮಿಷನರು ಆಜ್ಞೆ ಹೊರಡಿಸಿದ್ದಾರೆ. ತಪ್ಪಿದವರಿಗೆ ಶಿಕ್ಷೆ ವಿಧಿಸಲಾಗುವುದು.

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೩ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ.-ಕರೂರು (S I Ry)

ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.) ಬೆಂಗಳೂರು ಸಿಟಿ

ಉಪಶಾಖೆ: ನಾಗಲ್ ನಗರ (ಡಿಂಡಿಗಲ್)

ಮೈಸೂರು ಬ್ರ್ಯಾಂಚ್:-ಇರ್ವಿನ್ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿನಂತೆ ಪಾವತಿ ಮಾಡಬಹುದಾದ— ೧೨ ತಿಂಗಳು, ೨೪ ತಿಂಗಳು ವಾಯಿದಾ—ರೆಕರಿಂಗ್ ಡಿಪಾಜಿಟ್ ಮತ್ತು ೪೭ ತಿಂಗಳು ವಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ ಎಲ್ಲಾ ವಿಧವಾದ ಬ್ಯಾಂಕಿಂಗ್ ವಹಿವಾಟುಗಳನ್ನೂ ನಡೆಸಲಾಗುವುದು

ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ

ವಿ ಕೆ. ನಟರಾಜನ್,
ಏಜೆಂಟ್, ಮೈಸೂರು.

BANGALORE RACES 1948
EAXTRA MEETING

ಬೆಂಗಳೂರು ರೇಸಸ್ ಎಕ್ಸ್‌ಟ್ರಾ ಮೀಟಿಂಗ್ ೧೯೪೮

ಕೊನೆಯ ದಿನ—ಜುಲೈ 28 ಬುಧವಾರ

ಒಂದನೇ ಟೋಟ್ ರೂ ೧೦, :: ಎರಡನೇ ಟೋಟ್, ರೂ ೫

ರೂ ೨ ಸ್ಟೇಕ್, ರೂ ೫ ಟ್ರಿಬಲ್ ಈವೆಂಟ್

ಒಂದನೇ ತರಗತಿ — ಪುರುಷರು ಸೀಸನ್ ಟಿಕೆಟ್ ರೂ ೩೦— ದಿವಸಕ್ಕೆ, ರೂ ೭

ಸ್ತ್ರೀಯರು ,, ರೂ ೧೫— ,, ರೂ ೪

ಎರಡನೇ ,, ಪುರುಷರು ಅಥವ ಸ್ತ್ರೀಯರು — ,, ರೂ ೨

ಕುಳ]

.... ಪ್ರಭಾ ....

23—7—48 ರಿಂದ

2 ನೇ ವಾರ

ಪ್ರತಿ ದಿನ ಮೂರು ಆಟಗಳು

ಅರೇಬಿಯನ್ ನೈಟ್ಸ್

• ಕನ್ನನ್ ದೇವಿ • ನವಾಬ್

ರಾ ಜ ಕ ಮ ಲ್,

ಮೈಸೂರು

27-7-48 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸಿನವರ

★ ಬಸಂತ್ ★

(ಹಿಂದಿ)

—:ತಾರಾಗಣ:—

ಉಲ್ಲಾಸ್, ಮುಮ್ತಾಜ್ ಶಾಂತಿ, ಮುಮ್ತಾಜ್ ಆಲಿ, ಸುರೇಶ್ ಮುಂತಾದವರು

ಆಹ್ವಾನ ಪತ್ರಿಕೆ

ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಮೆಂಬರುಗಳಲ್ಲಿ ವಿಜ್ಞಾಪನೆ

ತಾರೀಖು ೨೮-೭-೪೮ ನೇ ಬುಧವಾರ ಪ್ರಾತಃಕಾಲ ೮|| ಘಂಟೆಗೆ ಸರಿಯಾಗಿ ಸಂಘದ ಕಾರ್ಯಾಲಯದಲ್ಲಿ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಚ್ ಸಿದ್ದಯ್ಯನವರೂ ಮತ್ತು ನಮ್ಮನ್ನು ಆಳುವ ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮಾನ್ಯ ಅರ್ಥ ಸಚಿವರಾದ ಶ್ರೀ ಎಚ್ ಸಿ ದಾಸಪ್ಪನವರೂ ನೆರವೇರಿಸಲು ದಯವಿಟ್ಟು ಒಪ್ಪಿರುತ್ತಾರೆ

ಈ ಸಮಾರಂಭಕ್ಕೆ ನಮ್ಮ ಸಂಘದ ಪ್ರತಿ ಸದಸ್ಯರಿಗೂ ಪ್ರತ್ಯೇಕವಾಗಿ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲು ಕಾಲಾವಕಾಶವಿಲ್ಲದ ಪ್ರಯುಕ್ತ, ಸದಸ್ಯರೆಲ್ಲರೂ ಸಾಭಿಮಾನಿಸಿ, ಈ ಪ್ರಕಟನೆಯನ್ನೇ ಆಹ್ವಾನವನ್ನಾಗಿ ದಯವಿಟ್ಟು ಅಂಗೀಕರಿಸಿ, ಈ ಸಮಾರಂಭಕ್ಕೆ ಮೆಂಬರುಗಳೆಲ್ಲರೂ ತಪ್ಪದೆ ದಯವಿಟ್ಟು ದಯಮಾಡಿಸಬೇಕಾಗಿ ಪ್ರಾರ್ಥಿಸುವ,

ಸಂಘದ ಕಾರ್ಯನಿರ್ವಾಹಕ ಸಮಿತಿಯವರ ಪರವಾಗಿ

ಬಿ. ವಿ ಕೃಷ್ಣಮೂರ್ತಿ,
ಗೌರವ ಕಾರ್ಯದರ್ಶಿ

ಫೋ. ನಂ. 192 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸ್ವಾಧಿ

ಸಂಪುಟ ೭] ಮಂಗಳವಾರ ೨೭-೭-೪೮ [ಸಂಚಿಕೆ ೬

ಜಹಗೀರುದಾರರಿಂದ ೧೦ ಜನ ಸೈನಿಕರ ಕೊಲೆ

ಪ್ರಭುಗಳಿಗೆ ಜಯವಾಗಲಿ !

ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ೩೦ನೇ ವರ್ಷ ವರ್ಧಂತಿಯ ಶುಭ ಸನ್ನಿವೇಶದಲ್ಲಿ ಅವರಿಗೆ ನಾವು ನಮ್ಮ ಹೃತ್ಪೂರ್ವಕವಾದ ಶುಭಾಶಯಗಳನ್ನು ಅರ್ಪಿಸುತ್ತೇವೆ. ಭಗವಂತನು ಅವರಿಗೆ ದೀರ್ಘಾಯುರಾರೋಗ್ಯಾದಿಗಳನ್ನೂ, ಸಮಸ್ತ ಸನ್ಮಂಗಳಗಳನ್ನೂ ಕರುಣಿಸಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವಂತೆ ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇವೆ.

ನಗರ ಕಾಂಗ್ರೆಸ್ ಸಮಿತಿಗೆ ಬಿ. ಜಿ. ಖೇರ್‌ರವರ ಭೇಟಿ

ಮೈಸೂರು ೨೭

ಮುಂಬಾಯಿ ಪ್ರಧಾನಿ ಶ್ರೀ ಬಿ. ಜಿ. ಖೇರ್‌ರವರು ನಾಳೆ ಸಂಜೆ ೫ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ನಗರ ಕಾಂಗ್ರೆಸ್ ಕಾರ್ಯಕರ್ತರುಗಳನ್ನು ಉದ್ದೇಶಿಸಿ ಭಾಷಣ ಮಾಡುವರು. ನಗರದ ಕಾಂಗ್ರೆಸ್ ಕೆಲಸಗಾರರೆಲ್ಲರೂ ದಯಮಾಡಿ ಬರಬೇಕೆಂದು ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಟಿ. ನರಸಿಂಹ ಅಯ್ಯಂಗಾರ್ಯರು ಕೋರಿರುತ್ತಾರೆ.

ಎ. ಎಂ. ಸಿ. ಸಿ. ಚುನಾವಣೆ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ನಗರದ ಎಲ್ಲ ತಾಲ್ಲೂಕುಗಳಿಂದಲೂ ಚುನಾವಣೆಯು ಇದೇ ೨೯ ನೇ ತಾರೀಖು ಗುರುವಾರ ಮಧ್ಯಾಹ್ನ ೩ ರಿಂದ ರಾತ್ರಿ ೮ ಗಂಟೆಯವರೆವಿಗೂ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದು ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ.

ಕಮ್ಯೂನಿಸ್ಟರ ಉಪವಾಸ ಮುಕ್ತಾಯ

ಬೆಂಗಳೂರು-ಮೈಸೂರು ಜೈಲುಗಳಲ್ಲಿರುವ ಕಮ್ಯೂನಿಸ್ಟ್ ಖೈದಿಗಳು ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿರುವರೆಂದು ತಿಳಿದುಬಂದಿದೆ.

ಕಂಚುಗಾರ ವಿದ್ಯಾರ್ಥಿ ನಿಲಯ

ರಾಜಧಾನಿಯ ಹೊಂಬಾಳೆ ರಂಗಯ್ಯನವರ ಕಂಚುಗಾರ ವಿದ್ಯಾರ್ಥಿ ನಿಲಯದಲ್ಲಿ ಬ್ರಾಹ್ಮಣ, ಒಕ್ಕಲಿಗ, ಕುರುಬ, ಮುಸ್ಲಿಂ, ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಪಂಗಡದ ಒಟ್ಟು ಕಾಲೇಜು ಓದುವ ವಿದ್ಯಾರ್ಥಿಗೆ ಉಚಿತ ಭೋಜನ ಸೌಕರ್ಯವನ್ನು ಏರ್ಪಡಿಸಲಾಗುವುದೆಂದೂ, ನಿಲಯಕ್ಕೆ ಸೇರಲಿಚ್ಛಿಸುವ ಮೇಲ್ಕಂಡ ಪಂಗಡಗಳ ವಿದ್ಯಾರ್ಥಿಗಳು ಆಗಸ್ಟ್ ೧ ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಕಳುಹಿಸಬೇಕೆಂದೂ ತಿಳಿಸಲಾಗಿದೆ.

ಬಿ. ಜಿ. ಖೇರರ ಭಾಷಣ

ಲೋಕಸೇವಾ ಸಂಘದ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ಮುಂಬಾಯಿಯ ಪ್ರಧಾನಿ ಶ್ರೀ ಬಿ. ಜಿ. ಖೇರರು ರಾಜಧಾನಿಯ ಹಲಭಾವಿ ಮೈದಾನದಲ್ಲಿ ಭಾಷಣ ಮಾಡುವರು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಶ್ರೇಯಃ ಪ್ರಾರ್ಥನೆ

ಶ್ರೀ॥ ಕೆ ಪರಮೇಶ್ವರ ಭಟ್ಟರಿಂದ

ಜಯವಾಗಲಿ ಮೈಸೂರ್‌ಸ್ವಾಮಿ ಜಯ ಚಾಮರಾಜನಿಗೆ!
ಹಯ, ಗಜ, ರಥಗಳನೇರುತ ಬರುವ
ದಯಾಪರ ಪೂರ್ಣನಿಗೆ ॥೧॥
ಯದುವಂಶದ ದೀಪಗಳೆನ್ನುತ ಕಾಯುತ
ಯದುಕುಲರತ್ನವಿಗೆ!
ಜನುಮದಲಿ ಕೊಟ್ಟಿಹ ರಾಜ್ಯದ ಹಕ್ಕನು
ಬಿಡುವುದಿರದವನಿಗೆ ॥೨॥
ಭಾವಬಂಧಂಬರ ಪಡೆದವನ ಪಿಡಿದಿಹ
ಕರವು ದಯಾ ಮಾರುತಿಗೆ!
ಮೈಸೂರ್ ಸ್ವಾಮಿಗೆ ಕೀರ್ತಿಯ ಕೊಡುವ
ಮಮತೆಯ ಕಣ್ಮಣಿಗೆ ॥೩॥
ಕನ್ನಡ ನಾಡನು ಕೂಡಿಸಿ ನಲಿಯುವ
ಮನ್ನೆಯ ರಾಜೇಶ್ವರಗೆ!
ಹೊನ್ನಿನ ಹೊಸ ವರ್ಧಂತ್ಯುತ್ಸವದಿ ಮೆರೆವ
ಕನ್ನಡ ರಾಜಕುಮಾರಿಗೆ ॥೪॥
ಕನ್ನಡ ಜನತೆಗೆ ಅರಿವನು ಅರಿದುದ
ಹೊನ್ನಿನ ಕವಿತೆಯನು!
ಚೆನ್ನ ಮಹಿಮೆಲಿ ನೀಡುತಲಿರುವ
ಚೆನ್ನ ಮಹಿಮನಿಗೆ ॥೫॥

ವಿಶ್ವ ಸಂಸ್ಥೆಗೆ ಹೈದರಾಬಾದಿನ ಪ್ರಶ್ನೆ

ಹೈದರಾಬಾದಿನ ಪ್ರಶ್ನೆಯನ್ನು ಮುಂದಿನ ಸೆಪ್ಟೆಂಬರಿನಲ್ಲಿ ಪ್ಯಾರಿಸ್ಸಿನಲ್ಲಿ ನಡೆಯುವ ವಿಶ್ವಸಂಸ್ಥೆಯ ಮುಂದೆ ತರುವಂತೆ ಮಾಡಲು ನಿಜಾಮರು ಪ್ರಯತ್ನವನ್ನು ಮಾಡುತ್ತಿರುವರು. ಈಸ್ಟ್ ಇಂಡಿಯಾ ಕಂಪೆನಿಯ ಕಾಲದ ಪತ್ರಗಳ ಪ್ರತಿಗಳನ್ನು ಮುಂತಾದುವುಗಳೊಡನೆ ಹೈದರಾಬಾದ್ ಸರ್ಕಾರದ ವಿದೇಶಾಂಗ ಕಾರ್ಯದರ್ಶಿ ಜಹೀರ್ ಅಹಮದ್‌ರವರನ್ನು ಇದಕ್ಕಾಗಿ ಅವರು ಲಂಡನ್ನಿಗೆ ಕಳುಹಿಸಿರುವರೆಂದು ತಿಳಿದುಬಂದಿದೆ. ಮಧ್ಯಪ್ರಾಚ್ಯದ ಮುಸ್ಲಿಂ ರಾಷ್ಟ್ರವೊಂದರ ಮೂಲಕ ಈ ಪ್ರಶ್ನೆಯನ್ನು ಎತ್ತಿಸುವ ಪ್ರಯತ್ನವೂ ಸಾಗುತ್ತಿದೆ.

ಗಾಂಧಿ ಕೊಲೆ ಮೊಕದ್ದಮೆ ಜಡ್ಜರಿಗೆ ಬೆದರಿಕೆ ಪತ್ರ

ದೆಹಲಿಯಲ್ಲಿ ನಡೆಯುತ್ತಿರುವ ಮಹಾತ್ಮರ ಕೊಲೆ ಮೊಕದ್ದಮೆಯ ವಿಚಾರಣೆ ನಡೆಸುವ ವಿಶೇಷ ನ್ಯಾಯಾಧೀಶರಾದ ಶ್ರೀ ಆತ್ಮಚರಣ್‌ರವರಿಗೆ ಪ್ರಾಣಹಾನಿ ಮಾಡುವ ಬೆದರಿಕೆಯ ಪತ್ರಗಳು ಬಂದಿವೆಯೆಂದು ಕೋರ್ಟಿನಲ್ಲಿ ಅವರೇ ತಿಳಿಸಿರುತ್ತಾರೆ. ಅಂಥ ಪತ್ರಗಳು ಮುಖ್ಯ ಪ್ರಾಸಿಕ್ಯೂಟರ್ ಕೌನ್ಸಿಲರಾದ ಶ್ರೀ ದಫ್ತರಿ ಮತ್ತು ಆಪಾದಿತರ ವಕೀಲರಾದ ಶ್ರೀ ಬ್ಯಾನರ್ಜಿಯವರಿಗೂ ಬಂದಿವೆಯೆಂದು ತಿಳಿಸಲಾಗಿದೆ. ಈ ಕಾರಣದಿಂದ ಕೋರ್ಟಿಗೆ ಒಳ ಬರುವ ವಕೀಲರನ್ನು ಮತ್ತು ಇತರರನ್ನು ಪೋಲೀಸರು ಶೋಧಿಸಿ ಒಳಗೆ ಬಿಡುತ್ತಿದ್ದಾರೆ.

೧೦ ಜನ ಸೈನಿಕರ ಮೇಲೆ ಜಹಗೀರದಾರ ಗುಂಡಿನೇಟು

ಮಧ್ಯಭಾರತ ಯೂನಿಯನ್ನಿನ ಒಂದು ಪ್ರದೇಶದ ಜಹಗೀರುದಾರರಾದ ಠಾಕೂರ್ ದುರ್ಗಾಸಿಂಗ್‌ರವರು ತಮ್ಮ ಊರಿಗೆ ಬಂದ ಸೈನಿಕರ ಮೇಲೆ ತಮ್ಮ ಪ್ರತಿಭಟನೆಯನ್ನು ತೋರಿಸುವರು. ಸೂಚಿಸಿದುದರಿಂದ ಆ ಜಹಗೀರನ್ನು ಬಲಾತ್ಕಾರವಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಯೂನಿಯನ್ನಿನವರು ನಿರ್ಧರಿಸಿ ಮಿಲಿಟರಿ ದಳವನ್ನು ಅಲ್ಲಿಗೆ ಕಳುಹಿಸಿದಾಗ ಅವರ ಮೇಲೆ ಠಾಕೂರ್‌ರವರು ಗುಂಡು ಹಾರಿಸಿ ೧೦ ಜನರನ್ನು ಕೊಂದು ಹಾಕಿದರೆಂದು ವರದಿಯಾಗಿದೆ. ಅನಂತರ ತಮ್ಮ ಕೋಟೆಯ ಮೇಲೆ ಫಿರಂಗಿಗಳನ್ನು ಏರಿಸಿ ಆಕ್ರಮಣಕಾರರನ್ನು ಎದುರಿಸುವುದಾಗಿ ಹೇಳುತ್ತಿರುವರೆಂದೂ ತಿಳಿದುಬಂದಿದೆ.

ಬ್ರಿಟಿಷ್ ದೊರೆಗಳಿಗೆ ನಿಜಾಮರ ಮೊರೆ

ಭಾರತ ಮತ್ತು ಹೈದರಾಬಾದಿನ ಸಮಸ್ಯೆಯನ್ನು ಬಗೆಹರಿಸಲು ಬ್ರಿಟಿಷ್ ದೊರೆಗಳು ತಮ್ಮ ಸಹಾಯ ಮಾಡಬೇಕೆಂದು ನಿಜಾಮರು ಅವರಿಗೆ ಬರೆದ ಒಂದು ಪತ್ರವು ಈಗ ಸಿಕ್ಕಿದೆ. ನಿಜಾಮರ ರಾಜಕೀಯ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್‌ಟನ್‌ರವರ ಆಪ್ತ ಕಾರ್ಯದರ್ಶಿ ಮಿ. ಬಾರ್ಮೆಂಟ್‌ರವರು ಹೈದರಾಬಾದಿನಿಂದ ಲಂಡನ್ನಿಗೆ ವಾಪಸು ತೆರಳಲು ದೆಹಲಿಗೆ ಬಂದಾಗ, ಅವರನ್ನು ಸಂಕಷ ಅಧಿಕಾರಿಗಳು ಶೋಧಿಸಲು ಆ ಪತ್ರವೂ ಮತ್ತು ವಿಶ್ವಸಂಸ್ಥೆಗೆ ಹೈದ

ಅರಮನೆಯಲ್ಲಿ ದರ್ಬಾರು

ಶ್ರೀಮನ್ಮಹಾರಾಜರವರ ವರ್ಧಂತಿ ಸಮಾರಂಭ

ಮೈಸೂರು ೨೭

ಈ ದಿನ ಬೆಳಗ್ಗೆ ೯-೪೫ಕ್ಕೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ದರ್ಬಾರು ವೈಭವದಿಂದ ನಡೆಯಿತು. ಮೊದಲು ಪ್ರಭುಗಳು ತಮ್ಮ ಗುರುಗಳಾದ ಶ್ರೀ ಪರಕಾಲ ಸ್ವಾಮಿಗಳವರ ಪಾದ ಪೂಜೆಯನ್ನು ಯಥಾವಿಧಿಯಾಗಿ ನೆರವೇರಿಸಿದ ನಂತರ ದರ್ಬಾರು ಪ್ರಾರಂಭವಾಯಿತು. ಘೋಷಣೆಯಾದ ೩೦ ಕುಶಾಲ ತೋಪುಗಳು ಅರಮನೆ ಬತೇರಿಯಿಂದ ಹಾರಿಸಲ್ಪಟ್ಟವು.

ದಿವಾನರೂ, ಮಂತ್ರಿಗಳೂ, ಅಧಿಕಾರಿಗಳೂ, ಆಸ್ಥಾನ ವಿದ್ವಾಂಸರೂ, ಜನ ವೈದಿಕ ಲೌಕಿಕ ಮುಖಂಡರುಗಳೂ ಸಭೆಯಲ್ಲಿ ಕುಳಿತಿದ್ದರು. ದೇವಸ್ಥಾನಗಳಿಂದಲೂ, ಮಠಗಳಿಂದಲೂ ಬಂದಿದ್ದ ಸಿಲ್ಕುಗಳನ್ನೂ, ಫಲ ಮಂತ್ರಾಕ್ಷತೆಗಳನ್ನೂ ಪ್ರಭುಗಳಿಗೆ ಸಲ್ಲಿಸಲಾಯಿತು. ವೇದಮೂರ್ತಿಗಳು ಫಲ ಮಂತ್ರಾಕ್ಷತೆಗಳನ್ನು ಅರ್ಪಿಸಿ ಆಶೀರ್ವಾದ ಮಾಡಿದರು. ಪ್ರಭುಗಳಿಗೆ ಬಂದಿದ್ದ ನಜರನ್ನು ಸ್ವೀಕರಿಸಿ ಪ್ರಭುಗಳು ನಜರುಗಳನ್ನು ಮಾಡಿದರು.

ದೇಶದ ನಾನಾ ಭಾಗಗಳ ಮೊಳಗಿ ವಿದ್ವಾಂಸರು ಮತ್ತು ಕಲಾವಿದರು ಸೇನಾದಳಗಳು ಭಕ್ತಿಪೂರ್ವಕವಾದ ಗೌರವವನ್ನು ಸಲ್ಲಿಸಿದರು. ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನವರ ಸ್ವಾಮ್ಯವಾದ ಗಾಯನವು ನಡೆಯಿತು. ಅನಂತರ ನೆಯ ಅವರು ದರ್ಬಾರಿನಲ್ಲಿ ನೆರೆದಿದ್ದ ಜನರ ಸಂತೋಷ ಪ್ರಭುಗಳ ದರ್ಶನವನ್ನು ಪಡೆದು ಹರ್ಷಪ್ರಕಟಿಸಿದರು. ಜನರಿಗೆ ಅಧಿಕಾರಿಗಳಿಗೂ ಪುಷ್ಪ ತಾಂಬೂಲ ವಿನಿಯೋಗವಾದ ಮೇಲೆ ೧೧-೩೦ ಗಂಟೆಗೆ ದರ್ಬಾರು ಸಮಾರಂಭವು ಮುಕ್ತಾಯವಾಯಿತು.

ವೃಕ್ಷ ಸ್ಥಾಪನಾ ಕಾರ್ಯಕ್ರಮ

ಮೊದಲೇ ಸರ್ಕಾರದವರಿಂದ ಸೂಚಿಸಲಾದಂತೆ ಈ ದಿನ ಸಂಸ್ಥಾನದ ಅನೇಕ ಕಡೆಗಳಲ್ಲಿ ಫಲಪುಷ್ಪಗಳನ್ನು ಬಿಡುವ ಸಸಿಗಳನ್ನು ನೆಡುವ ಕಾರ್ಯಕ್ರಮವು ಕೈಗೊಳ್ಳಲ್ಪಟ್ಟಿತು. ಕುಕ್ಕರಹಳ್ಳಿ ಗ್ರಾಮದಲ್ಲಿ ವಿಶೇಷ ಸಮಾರಂಭವು ನಡೆಯಿತು. ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಸಚಿವರಾದ ಶ್ರೀಗಳು ಎಚ್. ಸಿ. ದಾಸಪ್ಪ, ಟಿ. ಮರಿಯಪ್ಪ ಮುಂತಾದವರು ಉಪಸ್ಥಿತರಿದ್ದರು. ರಾಮ ಮಂದಿರದಲ್ಲಿ ಪೂಜೆ ಮತ್ತು ಭಜನೆಗಳು ನಡೆದುವು. ಸಮಾರಂಭದ ವಿಧಿಯಂತೆ ಪೂಜಾದಿಗಳನ್ನು ನೆರವೇರಿಸಿ ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಒಂದು ಸಣ್ಣ ಗಿಡವನ್ನು ನೆಟ್ಟರು. ಇತರರೆಲ್ಲರೂ ಅದಕ್ಕೆ ನೀರನ್ನು ಎರೆದರು. ಹೀಗೆ ಆ ಗ್ರಾಮದಲ್ಲಿಯೂ ಸುಮಾರು ೩ ಸಾವಿರ ಗಿಡಗಳನ್ನು ನೆಡಲಾಗಿದೆ.

ಬಂದಿದ್ದ ಅತಿಥಿಗಳನ್ನು ಪಾಠಶಾಲಾ ಕ್ಷೇತ್ರದ ಶ್ರೀ ಪಿ. ಸೀತಾರಾಮಯ್ಯನವರು ಸ್ವಾಗತಿಸಿದರು. ಶ್ರೀ ಕೆ. ಸಿ. ರೆಡ್ಡಿಯವರು ಭಾಷಣ ಮಾಡಿ ಗಿಡಗಳನ್ನು ಬೆಳೆಸುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ವಂದೇಮಾತರಂ ಗೀತೆಯ ನಂತರ ಜಯಘೋಷದೊಡನೆ ಸಮಾರಂಭವು ಮುಕ್ತಾಯವಾಯಿತು.

ರಾಬಾದಿನ ಸಮಸ್ಯೆಯನ್ನು ತರಬೇಕೆಂದು ಮಾಂಕ್‌ಟನ್‌ರವರಿಗೆ ನಿಜಾಮರು ಸೂಚಿಸಿ ಬರೆದ ಮತ್ತೊಂದು ಪತ್ರವೂ ಸಿಕ್ಕಿದುವೆಂದು ಹೇಳಲಾಗಿದೆ. ಈ ಕಾಗದಗಳೊಡನೆ ಮಿ. ಬಾರ್ಮೆಂಟ್‌ರವರನ್ನು ಕಳೆದ ಶನಿವಾರ ಲಂಡನ್ನಿಗೆ ಪ್ರಯಾಣ ಬೆಳೆಸಿದರು.

ನೆಹರೂರವರು ಪ್ರೊಲೀಸಿನವನ ಪಾತ್ರ ವಹಿಸಿದ್ದು

ಮೊನ್ನೆ ಪಂಡಿತ ನೆಹರೂರವರು ಮದರಾಸ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅವರಿಗೆ ಸೆಲ್ಯೂಟ್ ಗೌರವ ಸಲ್ಲಿಸಲು ಸೈನ್ಯ ಮತ್ತು ಪೊಲೀಸಿನವರು ಸಾಲಾಗಿ ನಿಂತಿದ್ದಾಗ ಅವರ ಗುಂಪಿನೊಳಗೆ ಒಬ್ಬ ತರುಣನು ಉತ್ಸಾಹದಿಂದ ನುಗ್ಗಿ ಬರಲು ನೆಹರೂರವರು ಅವನನ್ನು ಅನಾಮತ್ತಾಗಿ ತಬ್ಬಿ ಹೊರಕ್ಕೆ ಕಳಿಹಿಸಿದರ ಇದರಿಂದ ಜನಗುಂಪಿನ ನೂಕಾಟ ಒಳ್ಳೆಯ ಪರಿಣಾಮ ಪುಂಟಾಗಿ ಎಲ್ಲರೂ ಶಾಂತಿ ಮತ್ತು ಶಿಸ್ತಿನಿಂದ ತಮ್ಮ ತಮ್ಮ ಸ್ಥಳಗಳಲ್ಲಿಯೇ ನಿಂತರು

ಚೀನಾದಲ್ಲಿ ವಿಪರೀತ ಬೆಲೆ

ನಾಣ್ಯದ ಬೆಲೆಯು ಇಳಿದಾದ ಕ್ಷೆ ವಿಪರೀತವಾಗಿ ಚೀನಾದ ಜೀವನವು ಅಲ್ಲೋಲ ಕಲ್ಲೋಲವಾಗಿರುತ್ತದೆ ಒಂದು ರೂಪಾಯಿಗೆ ಹದಿನೈದು ಲಕ್ಷ ಚೀನಾ ಡಾಲರುಗಳಾವೆ ಆ ದೇಶದ ಆಯ ವ್ಯಯದಲ್ಲಿ ಈ ಸಾರಿ ೫೦ ಕೋಟಿ ಡಾಲರುಗಳ ನಷ್ಟವು ಕಂಡು ಬಂದಿದೆ. ಇನ್ನು ಎರಡು ತಿಂಗಳೊಳಗಾಗಿ ಆ ಪಡಶಾಹಿನ ಉಬ್ಬರ ಇಳಿತವನ್ನು ತಡೆಗಟ್ಟುವ ವ್ಯವಸ್ಥೆಯನ್ನು ಮಾಡದಿದ್ದರೆ ಇಂದಿನ ಮಂತ್ರಿಮಂಡಲವನ್ನು ವಜಾ ಮಾಡುವುದಾಗಿ ಚೀನಾ ಶಾಸನ ಸಭೆಯು ಎಚ್ಚರಿಕೆ ಇತ್ತಿರುತ್ತದೆ.

ವಿದ್ಯುದ್ದೀಪಗಳನ್ನು ಉರಿಸುವುದು ಪಾಪವಂತೆ

ವಿದ್ಯುದ್ದೀಪಗಳನ್ನುರಿಸುವುದು ಪಾಪಕರವೆಂದು ತಿಳಿದ ಅಮೇರಿಕದ ಪೆನ್ಸಿಲ್ವೇನಿಯಾ ಜಿಲ್ಲೆಯ ಅಮಿಷ್ ಚರ್ಚಿನ ಪಾದ್ರಿಗಳು ಆ ಪ್ರದೇಶದಲ್ಲಿ ಎಣ್ಣೆಯ ದೀಪಗಳ ಬದಲು ವಿದ್ಯುದ್ದೀಪಗಳನ್ನು ಹಾಕುತ್ತಿರುವುದರಿಂದ ತಮ್ಮ ಶಿಷ್ಯರ ೩೦ ಸಂಸಾರಗಳೊಡನೆ ಅಲ್ಲಿಂದ ಬೇರೆ ಸ್ಥಳಕ್ಕೆ ಹೊರಟಿದ್ದಾರೆಂದು ತಿಳಿದುಬಂದಿದೆ

ಬೆತ್ತಲೆ ಸಂಘದವರಿಗೆ ಸೊಳ್ಳೆಯ ಕಾಟ

ಪ್ರಖ್ಯಾತವಾದ ಕ್ರೋಟ್ ದ್ವೀಪದಲ್ಲಿ ಇರುವೆ ಮತ್ತು ಸೊಳ್ಳೆಗಳ ಕಾಟವು ವಿಪರೀತವಾಗಿರುವುದರಿಂದ ಅಲ್ಲಿ ವಾಸಿಸುತ್ತಿರುವ ಅಮೇರಿಕ ಮತ್ತು ಬ್ರಿಟಿಷ್ ದಿಗಂಬರ ಸಂಘದವರಲ್ಲಿ ನೇಕರು ೬೦ ಮಂದಿ ಆ ದ್ವೀಪವನ್ನು ತ್ಯಜಿಸಲು ನಿಶ್ಚಯಿಸಿದ್ದಾರೆಂದು ಹೇಳಲಾಗಿದೆ ಅಲ್ಲದೆ ತಮ್ಮ ಮೈಗೆಲ್ಲಾ ಡೀಸಲ್ ಎಣ್ಣೆಯನ್ನು ಸವರಿಕೊಂಡು ಆ ಪ್ರಾಣಿಗಳ ಹಾವಳಿಯನ್ನು ತಪ್ಪಿಸಿಕೊಳ್ಳುತ್ತಿರುವರೆಂದು ಹೇಳಲಾಗಿದೆ

ಶ್ರೀ ಗಾಯತ್ರೀ ಟಾಕೀಸ್

ಈಸೀ ಟು ವೆಡ್

ಕಡೇ ದಿನ

28-7-48 ರಿಂದ 2 ದಿನಗಳು ಮಾತ್ರ

MGM ರವರ

ಓಮಹ ಟ್ರೈಯಲ್

(THE OMAHA TRAIL)

Next Change —

Adventures of Robinhood

ಕಾಂಗ್ರೆಸ್ ಸಮಿತಿಯ ಚುನಾವಣೆ

ಕೊಳ್ಳೇಗಾಲ ೨೩

ಇಲ್ಲಿನ ಕಾಂಗ್ರೆಸ್ ಸಮಿತಿಯ ಚುನಾವಣೆಯು ಕೊಯಮುತ್ತೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ವ್ಯವಸ್ಥಾಪಕರಾದ ಶ್ರೀ ಪಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ೧೭ ನೇ ತಾ|| ನಡೆದು, ಶ್ರೀ ಎಸ್ ಪ್ರಭುದಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎ ಶಿವಲಿಂಗಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎಸ್ ವೇಲಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಕೆ ಎಂ ಸಂಬಯ್ಯನವರನ್ನು ಉಪಕಾರ್ಯದರ್ಶಿಯಾಗಿಯೂ, ಶ್ರೀ ಬಿ ಜಿ ರಾಮಕೃಷ್ಣಶೆಟ್ಟರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು

ರಾಜಘಾಟಿನಲ್ಲಿ ಮಹಾತ್ಮರ ಸ್ಮಾರಕ ಪಾರ್ಕು

ಮಹಾತ್ಮರ ಅಂತ್ಯ ಸಂಸ್ಕಾರವನ್ನು ನಡೆಸಿದ ದೆಹಲಿಯ ರಾಜಘಾಟಿನಲ್ಲಿ ಗಾಂಧಿಜಿಯವರ ಸ್ಮಾರಕವಾಗಿ ೫ ಲಕ್ಷ ರೂಗಳ ವೆಚ್ಚದಿಂದ ಒಂದು ಪಾರ್ಕನ್ನು ನಿರ್ಮಿಸಬೇಕೆಂದು ನಿರ್ಧರಿಸಲಾಗಿದೆ

ಸಿಂಗಪುರದಲ್ಲಿ ಚೀನಾ ಯುವತಿಯರ ಮಾರಾಟ

ಚೀನಾದಲ್ಲಿ ಆಹಾರ ಕ್ಷಾಮವುಂಟಾಗಿರುವುದರಿಂದ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳುಗಳನ್ನು ಮಾರುತ್ತಿರುವರೆಂದೂ, ಅವರನ್ನು ತಲಾ ೬ ಡಾಲರುಗಳಂತೆ ಕೊಂಡು, ೧ ಸಾವಿರ ಡಾಲರುಗಳಂತೆ ಸಿಂಗಪುರದಲ್ಲಿ ಮಾರಲಾಗುತ್ತಿದೆಯೆಂದೂ, ಆ ಯುವತಿಯರನ್ನು ವೇಶ್ಯಾ ವೃತ್ತಿಗಾಗಿ ಉಪಯೋಗಿಸಲಾಗುತ್ತಿದೆಯೆಂದೂ ಹೇಳಲಾಗಿದೆ

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜಿಮಖಾನಾಯನ ಕಟ್ಟೆಯಲ್ಲಿ

೩ ಆಟಗಳು:-ಶುಕ್ರವಾರ, ಶನಿವಾರ ಭಾನುವಾರ

೩ ೩೦, ೬ ೩೦, ಮತ್ತು ೯-೩೦ ಕ್ಕೆ

ಮಿಕ್ಕ ದಿನಗಳಲ್ಲಿ ೨ ಆಟಗಳು

ಮಾತ್ರ ೬-೩೦, ಮತ್ತು ೯-೩೦ ಕ್ಕೆ

— ದರಗಳು ಮಾಮೂಲಿನಂತೆ —

[ಎಂ ಸುಬ್ಬರಾಮಯ್ಯ ಅಂಡ್ ಕೋ]

ರಾಜಕಮಲ್,

ಮೈಸೂರು

27-7-48 ರಿಂದ

ಅನೋಖಾ ಪ್ರಾರಂಭ

ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸಿನವರ

★ ಬಸಂತ್ ★

(ಹಿಂದಿ)

— ತಾರಾಗಣ.

ಉಲ್ಲಾಸ್, ಮಮ್ತಾಜ್ ಶಾಂತಿ, ಮುಮ್ತಾಜ್ ಅಲಿ, ಸುರೇಶ್ ಮುಂತಾದವರು

ಪಂಡಿತ ನೆಹರೂರವರಿಗೆ ದಂತದ ಪೂಜಿ ಸಮರ್ಪಣೆ

ಕಾರೈಕುಡಿಯಲ್ಲಿ ಪಂಡಿತ ನೆಹರೂರವರು ಎಲೆಕ್ಟ್ರೋ-ಕೆಮಿಕಲ್ ಸಂಶೋಧನಾಲಯದ ಅಸ್ತಿಭಾರ ಮಹೋತ್ಸವವನ್ನು ಮೊನ್ನೆ ದಿನ ನಡೆಸಿದ ಸಂದರ್ಭದಲ್ಲಿ ಸಂಸ್ಥೆಯ ದಾತರಾದ ಡಾ|| ಅಳಗಪ್ಪ ಚೆಟ್ಟಿಯಾರ್‌ರವರು ಪಂಡಿತ ನೆಹರೂರವರಿಗೆ ಸುಂದರವಾದ ಒಂದು ದಂತದ ಪೂಜಿಯನ್ನು ಅರ್ಪಿಸಿದರು. ಅದರ ಮೇಲೆ ಮಹಾತ್ಮರು, ಪಂಡಿತ ನೆಹರು, ರಾಜಾಜಿ ಮತ್ತು ಸುಭಾಷ್ ಚಂದ್ರ ಬೋಸರುಗಳ ಚಿತ್ರಗಳನ್ನೂ; ಬುದ್ಧ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಶ್ರೀ ಕೃಷ್ಣ ಇವರುಗಳ ಪ್ರತಿಬಿಂಬಗಳನ್ನೂ ಕೆತ್ತಲಾಗಿದೆ ಪೂಜಿಯ ಮುಚ್ಚಳದ ಮೇಲೆ ಅಶೋಕ ಚಕ್ರವನ್ನೊಳಗೊಂಡ ಭಾರತದ ಭೂಪಟವೊಂದನ್ನು ಚಿತ್ರಿಸಿ ಅದರಲ್ಲಿ ೧೯೪೭ ನೆಯ ಆಗಸ್ಟ್ ೧೫ ಎಂದು ಬರೆಯಲಾಗಿದೆ ನಾಲ್ಕು ದಂತದ ಆನೆಗಳ ಮೇಲೆ ಈ ಪೂಜಿಯನ್ನು ಜೋಡಿಸಿ, ಅದರೊಳಗೆ ವಿದ್ಯುದ್ದೀಪವನ್ನಿಟ್ಟು ನೋಡಲಾಗಿ ಚಿತ್ರಗಳು ಎದ್ದು ಕಾಣುವಂತೆ ಮಾಡಲಾಗಿದೆ ಪೂಜಿಯ ಒಂದು ಭಾಗದಲ್ಲಿ ಉಪನಿಷತ್ತಿನ ವಾಕ್ಯವನ್ನು ಬರೆಯಲಾಗಿದೆ

ಭಾರತ ಸೈನಿಕರ ಮೇಲೆ ರಜಾಕಾರರ ಧಾಳಿ

ಷೋಲಾಪುರದಿಂದ ಹೈದರಾಬಾದಿನ ಮಾರ್ಗವಾಗಿ ಬಾರ್ಸಿಗೆ ಹೋಗುತ್ತಿದ್ದ ಭಾರತೀಯ ಸೈನಿಕರ ಮೇಲೆ ರಜಾಕಾರರು ಮತ್ತು ಪಠಾಣರು ಧಾಳಿ ನಡೆಸಿದರೆಂದು ಭಾರತ ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ ಭಾರತೀಯ ಸೈನಿಕರಿಗೆ ಸ್ವಲ್ಪ ಗಾಯಗಳಾಗಿರುವುದಲ್ಲದೆ ಶತ್ರುಗಳನ್ನು ತೀವ್ರವಾಗಿ ಎದುರಿಸಿ ೨೫ ಮಂದಿಯನ್ನು ಕೊಲ್ಲಲಾಯಿತೆಂದೂ, ಅವರಲ್ಲಿದ್ದ ಅನೇಕ ಬಂದೂಕಗಳನ್ನೂ, ಮದ್ದು ಗುಂಡುಗಳನ್ನೂ ವಶಪಡಿಸಿಕೊಳ್ಳಲಾಯಿತೆಂದೂ ಆ ಪ್ರಕಟನೆಯಲ್ಲಿ ನಮೂದಿಸಲಾಗಿದೆ

ಎಸ್. ಎನ್. ಪಂಡಿತ್

ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್

ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ,

ಕ್ರಯ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ)

—ದೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.

ಪಂಚಾಮೃತ— ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ.

ಮಹಾಕೇತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಕ್ರಯ ೨ ೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

ರಂಗಾಚಾರ್ಲು ಬಿಲ್ಡಿಂಗ್, ಮೈಸೂರು.

Edited printed and published by A. R. Nagarajan at the Sadhvi Press [illegible] Road Mysore

ನೆಹರೂರವರಿಗೆ ಹಾರಗಳು ಬಲು ಭಾರವಂತೆ !

ಪಂಡಿತ ನೆಹರೂರವರು ಮೊನ್ನೆ ಮದರಾಸಿನಲ್ಲಿ ಬಂದಿಳಿದಾಗ ಅನೇಕರು ಅವರಿಗೆ ಹಾರಗಳನ್ನು ಅರ್ಪಿಸಲು ಬಂದರು ಆ ಹೂಗಳನ್ನು ಸ್ವೀಕರಿಸುತ್ತಾ ನೆಹರೂರವರು ಹೀಗೆ ಹೇಳಿದರು—ನನ್ನನ್ನು ಸುಮ್ಮನೆ ಬಿಟ್ಟು ಬಿಡಿ; ಹೂವುಗಳ ಭಾರವು ಈಗಾಗಲೇ ನನ್ನನ್ನು ಕುಗ್ಗಿಸಿದೆ.

ಬೊಂಬಾಯಿಗೆ ಮೈಸೂರು ಆಟಗಾರರ ಪ್ರಯಾಣ

ಮೈಸೂರಿನ ಸುಪ್ರಸಿದ್ಧ ಟೇಬಲ್ ಟೆನ್ನಿಸ್ ಆಟಗಾರರಾದ ಶ್ರೀ ಎಂ ಎಸ್. ವಿಟ್ಠಲ್ ರವರು ಬೊಂಬಾಯಿ ಪ್ರಾಂತೀಯ ಟೇಬಲ್ ಟೆನ್ನಿಸ್ ಪಂದ್ಯದಲ್ಲಿ ಭಾಗವಹಿಸಲು ಮೊನ್ನೆ ದಿನ ಬೊಂಬಾಯಿಗೆ ಪ್ರಯಾಣ ಮಾಡಿದರು

.... ಪ್ರಭಾ ....

23—7—48 ರಿಂದ

2 ನೇ ವಾರ

ಪ್ರತಿ ದಿನ ಮೂರು ಆಟಗಳು

ಅರೇಬಿಯನ್ ನೈಟ್ಸ್

★ ಕನ್ನನ್ ದೇವಿ ★ ನವಾಬ್

ಆಹ್ವಾನ ಪತ್ರಿಕೆ

ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಯ ಮೆಂಬರುಗಳಲ್ಲಿ ವಿಜ್ಞಾಪನೆ

ತಾರೀಖು ೨೮-೭-೪೮ ನೇ ಬುಧವಾರ ಪ್ರಾತಃಕಾಲ ೮|| ಘಂಟೆಗೆ ಸರಿಯಾಗಿ ಸಂಘದ ಕಾರ್ಯಾಲಯದಲ್ಲಿ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಚ್ ಸಿದ್ದಯ್ಯನವರೂ ಮತ್ತು ನಮ್ಮನ್ನು ಆಳುವ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮಾನ್ಯ ಆರ್ಥಿಕ ಸಚಿವರಾದ ಶ್ರೀ ಎಚ್ ಸಿ ದಾಸಪ್ಪನವರೂ ನೆರವೇರಿಸಲು ದಯವಿಟ್ಟು ಒಪ್ಪಿರುತ್ತಾರೆ

ಈ ಸಮಾರಂಭಕ್ಕೆ ನಮ್ಮ ಸಂಘದ ಪ್ರತಿ ಸದಸ್ಯರಿಗೂ ಪ್ರತ್ಯೇಕವಾಗಿ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲು ಕಾಲಾವಕಾಶವಿಲ್ಲದ ಪ್ರಯುಕ್ತ, ಸದಸ್ಯರೆಲ್ಲರೂ ಸಾಭಿಮಾನದಿಂದ, ಈ ಪ್ರಕಟನೆಯನ್ನೇ ಆಹ್ವಾನವಾಗಿ ದಯವಿಟ್ಟು ಅಂಗೀಕರಿಸಿ, ಈ ಸಮಾರಂಭಕ್ಕೆ ಮೆಂಬರುಗಳೆಲ್ಲರೂ ತಪ್ಪದೆ ದಯವಿಟ್ಟು ದಯಮಾಡಿಸಬೇಕಾಗಿ ಪ್ರಾರ್ಥಿಸುವ,

ಸಂಘದ ಕಾರ್ಯನಿರ್ವಾಹಕ ಸಮಿತಿಯವರ ಪರವಾಗಿ

ಬಿ. ವಿ ಕೃಷ್ಣಮೂರ್ತಿ,

ಗೌರವ ಕಾರ್ಯದರ್ಶಿ

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೨೮-೭-೪೮ [ಸಂಚಿಕೆ ೭

೧೫-೮-೪೮ಕ್ಕೆ ನಿಜಾಮರ ಸ್ವಾತಂತ್ರ್ಯ ಘೋಷಣೆ

ಭಾರತ ಸಂಸ್ಕೃತಿಯ ಉನ್ನತ ಆದರ್ಶ

ಪುರಸಭೆಯ ಸತ್ಕಾರದಲ್ಲಿ ಶ್ರೀ ಬಿ ಜಿ ಖೇರರ ಭಾಷಣ

ಮೈಸೂರು ೨೮

ಬೊಂಬಾಯಿನ ಮುಖ್ಯ ಮಂತ್ರಿ ಶ್ರೀ ಬಿ ಜಿ. ಖೇರ್‌ರವರನ್ನು ಈ ದಿನ ಪೌರಸಭೆಯವರು ಆಹ್ವಾನಿಸಿ, ಸತ್ಕರಿಸಿದರು. ಈ ಸಮಾರಂಭಕ್ಕೆ ದಿವಾನರೂ, ಸಚಿವರುಗಳೂ, ಶ್ರೇಷ್ಠ ನ್ಯಾಯಾಧೀಶರೂ ಮತ್ತು ಇತರ ಗಣ್ಯ ಮಹನೀಯರುಗಳೂ ಮಹಿಳೆಯರೂ ದಯಮಾಡಿಸಿದ್ದರು.

ಫಲಾಹಾರದ ನಂತರ ಪೌರಸಭಾಧ್ಯಕ್ಷರಾಗ ಶ್ರೀ ಬಾಲಹಳ್ಳಿ ಸೀತಾರಾಮಯ್ಯನವರು ಸ್ವಾಗತ ಭಾಷಣ ಮಾಡಿ, ಪೌರಸಭೆಯವರು ಮಾಡುತ್ತಿರುವ ಕಾರ್ಯಕ್ರಮಗಳನ್ನು ವಿವರಿಸಿದರು

ಶ್ರೀ ಖೇರ್‌ರವರು ಭಾಷಣ ಮಾಡಿ, ತಾವು ಕಳೆದ ೧೦ ವರ್ಷಗಳ ಹಿಂದೆ ಮೈಸೂರು ನಗರಕ್ಕೆ ಭೇಟಿ ಇತ್ತಿದ್ದರೆಂದು ತಿಳಿಸಿ, ಈಗ ನಗರವು ಹೆಚ್ಚು ಸುಂದರವಾಗಿ ಆಕರ್ಷಣೀಯವಾಗಿದೆಯೆಂದು ಹೇಳಿದರು ಸಂಸ್ಥಾನದಲ್ಲಿ ಪ್ರಜಾ ಸರ್ಕಾರವು ಏರ್ಪಟ್ಟಿರುವುದಕ್ಕೆ ಅವರು ಸಂತೋಷವನ್ನು ವ್ಯಕ್ತಪಡಿಸಿ, ನೂತನ ಮಂತ್ರಿಮಂಡಲವು ಕೆಲವು ತಪ್ಪುಗಳನ್ನು ಮಾಡಬಹುದೆಂದೂ, ಆದರೂ ಅವರು ತಮ್ಮವರೇ ಆದುದರಿಂದ ಅದನ್ನು ದೊಡ್ಡದು ಮಾಡಬೇಕಾಗಿಲ್ಲವೆಂದು ತಿಳಿಸಿದರು, ಭರತ ಖಂಡಕ್ಕೆ ಸ್ವಾತಂತ್ರ್ಯವು ಬಂದಿರುವುದರಿಂದ ಈ ಮಹಾ ಸನ್ನಿವೇಶದ ಸಂತೋಷವನ್ನು ನಾವೆಲ್ಲರೂ ಸದುಪಯೋಗಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಭಾರತ ಸಂಸ್ಕೃತಿಯ ವಿಷಯವಾಗಿ ಮಾತನಾಡುತ್ತಾ ಸಹಸ್ರಾರು ವರ್ಷಗಳಿಂದಲೂ ಈ ಪವಿತ್ರ ಭೂಮಿಯಲ್ಲಿ ಅನೇಕ ಜನಾಂಗಗಳಿಗೆ ಸ್ವಾಗತ ದೊರೆತು ಎಲ್ಲರನ್ನೂ ಸೋದರರಂತೆ ಭಾವಿಸಲಾಗಿದೆಯೆಂದೂ, ಎಲ್ಲ ಜನಾಂಗಗಳಲ್ಲಿರುವ ಒಳ್ಳೆಯ ಗುಣಗಳನ್ನೂ ಭಾರತೀಯರು ತಮ್ಮ ಆಚರಣೆಯಲ್ಲಿ ಉಪಯೋಗಿಸಿಕೊಂಡಿರುವರೆಂದೂ ಹೇಳಿದರು ಎರಡು ಮಹಾ ಯುದ್ಧಗಳ ವಿಪತ್ತಿನಿಂದ ಪಾರಾಗಿ ಮತ್ತೊಂದು ಯುದ್ಧದ ಭೀತಿಗೆ ಸಿಲುಕಿರುವ ಜಗತ್ತಿಗೆ ಶಾಂತಿಯನ್ನು ನೀಡುವ ಸೌಭಾಗ್ಯವು ಭರತ ಖಂಡಕ್ಕೆ ಮಾತ್ರ ಸಲ್ಲುವುದೆಂದು ಹೇಳಿದರು. ಆಧ್ಯಾತ್ಮಿಕ ಜೀವನದ ಉನ್ನತ ಆದರ್ಶಗಳನ್ನು ಅನುಸರಿಸುವ ಜೊತೆಗೆ ದಿನಚರಿಯ ಆವಶ್ಯಕತೆಗಳಿಗೆ ಬೇಕಾದ ಆಧುನಿಕ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗಿದೆ ಎಂಬುದಾಗಿಯೂ ಹೇಳಿದರು

ನಮ್ಮ ದೇಶದಲ್ಲಿರುವ ನೈಸರ್ಗಿಕ ಸಂಪತ್ತಿನ ಜೊತೆಗೆ ವ್ಯವಸ್ಥಾಪನಾ ಕ್ರಮವು ಬಹಳ ಆಗತ್ಯವೆಂದೂ, ಇದನ್ನು ಭಾರತೀಯರು ಸರಿಯಾಗಿ ಅನುಷ್ಠಾನ ಮಾಡಿದರೆ ನಮ್ಮ ದೇಶವು ಇತರ ರಾಷ್ಟ್ರಗಳಿಗೆ ಮಿಗಿಲಾದ ಸ್ಥಾನವನ್ನು ಪಡೆಯುವುದೆಂದೂ ಅವರು ತಿಳಿಸಿದರು

ಮಂತ್ರಿಗಳಾದ ಶ್ರೀ ಪಾಮಡಿ ಸುಬ್ಬರಾಮ ಶೆಟ್ಟಿಯವರು ಧನ್ಯವಾದಗಳನ್ನು ಸಲ್ಲಿಸಿದರು. ರಾಷ್ಟ್ರಗೀತೆಯಾದನಂತರ, ಜಯಕಾರದೊಡನೆ ಸಮಾರಂಭವು ಮುಕ್ತಾಯವಾಯಿತು.

ಬೆಂಗಳೂರು ಕಾರ್ಪೋರೇಷನ್

ಬೆಂಗಳೂರು ನಗರ ಮತ್ತು ದಂಡಿನ ಪೌರ ಸಭೆಗಳನ್ನು ಒಂದಾಗಿ ಸೇರಿಸಿ ಅವುಗಳನ್ನು ಕಾರ್ಪೋರೇಷನ್ನಾಗಿ ಮಾರ್ಪಾಡು ಮಾಡಲು ಒಂದು ಮಸೂದೆಯನ್ನು ಮುಂದಿನ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯ ಮುಂದೆ ಸರ್ಕಾರದವರು ಮಂಡಿಸಲಿರುವರೆಂದು ತಿಳಿದುಬಂದಿದೆ.

ಕಬ್ಬನ್ ಪಾರ್ಕಿಗೆ ಚಾಮರಾಜೇಂದ್ರ ಒಡೆಯರ ಹೆಸರು

ಬೆಂಗಳೂರಿನ ಕಬ್ಬನ್ ಪಾರ್ಕನ್ನು ಚಾಮರಾಜೇಂದ್ರ ಪಾರ್ಕೆಂದು ಕರೆಯಬೇಕೆಂಬ ಅಲ್ಲಿನ ಪೌರಸಭೆಯವರ ನಿರ್ಧಾರವನ್ನು ಸರ್ಕಾರದವರು ಅಂಗೀಕರಿಸಿದ್ದಾರೆ.

ಭಾವಚಿತ್ರಗಳ ಅನಾವರಣ

ಮೈಸೂರು ೨೭

ರಾಜಧಾನಿಯ ಗೃಹ ನಿರ್ಮಾಣದ ಪರಸ್ಪರ ಸಹಾಯ ಸಂಘದಲ್ಲಿ ಈ ದಿನ ಬೆಳಿಗ್ಗೆ ಮಂತ್ರಿಗಳಾದ ಶ್ರೀ ಹೆಚ್ ಸಿದ್ದಯ್ಯನವರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನೂ, ಶ್ರೀ ಹೆಚ್ ಸಿ ದಾಸಪ್ಪನವರು ಶ್ರೀಮನ್ಮಹಾರಾಜರವರ ಭಾವಚಿತ್ರವನ್ನೂ ಅನಾವರಣ ಮಾಡಿದರು ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಎ ಲಿಂಗಪ್ಪಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು [illegible] ಕಾರ್ಯದರ್ಶಿಗಳಾದ ಶ್ರೀ ಬಿ ವಿ ಕೃಷ್ಣಮೂರ್ತಿ [illegible] ವರದಿಯನ್ನು ಓದಿ ಸಂಘಕ್ಕೆ [illegible]ರಿಂದ ಆಗಬೇಕಾದ ಸಹಾಯಗಳನ್ನು [illegible]ಸಿದರು.

ಶ್ರೀ ಪಿ ಸೀತಾರಾಮಯ್ಯನವರ ಸಹಕಾರ ಸಂಘಗಳ ಆದರ್ಶದ ಮೇಲೆ ಮಾತನಾಡಿ ಅವುಗಳಿಂದ ಸಮಾಜಕ್ಕೆ ಸರ್ವತೋಮುಖವಾದ ಸಹಾಯವಾಗಬೇಕೆಂದು ಸಲಹೆ ಇತ್ತರು.

ಶ್ರೀಗಳಾದ ಹೆಚ್ ಸಿದ್ದಯ್ಯ ಮತ್ತು ಹೆಚ್ ಸಿ ದಾಸಪ್ಪನವರುಗಳು ಮಾತನಾಡಿ ಮಹಾತ್ಮ ಗಾಂಧಿಯವರ ಮತ್ತು ಶ್ರೀಮನ್ಮಹಾರಾಜರವರ ಗುಣಾತಿಶಯಗಳನ್ನು ವಿವರಿಸಿದರು. ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರು ಮಾತನಾಡಿ ಮಹಾಜನರು ಇಂದಿನ ಪರಿಸ್ಥಿತಿಯಲ್ಲಿ ಧೈರ್ಯದಿಂದ ವರ್ತಿಸಿ ಸರ್ಕಾರದವರೊಡನೆ ಸಹಕರಿಸಬೇಕೆಂದು ಕೋರಿದರು

ಶ್ರೀ ಆ ಪಿ ನಂಜಪ್ಪನವರಿಂದ ಧನ್ಯವಾದಗಳಾದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀ ಡಿ ಬಿ ಕೃಷ್ಣಪ್ಪನವರು ಮಹಾತ್ಮರ ಮೇಲ್ಗಡೆ ತೈಲಚಿತ್ರವನ್ನು ಸಂಘಕ್ಕೆ ದಾನ ಮಾಡಿದರು.

ಆಗಸ್ಟ್ ೧೫ ನೇ ತಾ|| ನಿಂದ ಹೈದ್ರಾಬಾದ್ ಸ್ವತಂತ್ರ ರಾಜ್ಯ

ಹೈದರಾಬಾದು ಸ್ವತಂತ್ರ ರಾಜ್ಯವೆಂದು ನಿಜಾಮರು ಬರುವ ಆಗಸ್ಟ್ ೧೫ನೇ ತಾ|| ಘೋಷಿಸುವರೆಂದು ಒಂದು ವರದಿಯು ತಿಳಿಸುತ್ತದೆ.

ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರು

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಗೆ ಕಾಶಿ ವಿದ್ಯಾಲಯದ ಶ್ರೀ ನರೇಂದ್ರ ಗೋಯಲ್‌ರವರನ್ನು ಅಧ್ಯಕ್ಷರನ್ನಾಗಿ ಬೆಂಗಳೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಚುನಾಯಿಸಲಾಗಿದೆ.

ಮೈಸೂರಿಗೆ ಖೇರರ ಸಂದೇಶ

ಮೈಸೂರು ೨೮

ಶ್ರೀ ಬಿ ಜಿ ಖೇರ್‌ರವರು ನಿನ್ನೆ ರಾತ್ರಿ ಕೃಷ್ಣರಾಜ ಸಾಗರದ ಬೃಂದಾವನಕ್ಕೆ ಭೇಟಿಯಿತ್ತು ಅಲ್ಲಿನ ವಿದ್ಯುದ್ದೀಪಾಲಂಕಾರಗಳ ಸೊಬಗನ್ನು ನೋಡಿ ಆನಂದಪಟ್ಟರು. ಈ ದಿನ ಬೆಳಿಗ್ಗೆ ಅವರು ಬೆಂಗಳೂರಿಗೆ ತೆರಳಿದರು. ಅಲ್ಲಿಂದ ಅವರು ತಿರುವಣ್ಣಾಮಲೆಗೆ ಹೋಗಿ ಶ್ರೀ ರಮಣ ಮಹರ್ಷಿಗಳ ದರ್ಶನವನ್ನು ಪಡೆದು ಬೆಂಗಳೂರಿಗೆ ಬಂದು ಅನಂತರ ಬೊಂಬಾಯಿಗೆ ತೆರಳುವರು.

[illegible] ಪ್ರಯಾಣ ಬೆಳೆಸುವುದಕ್ಕೆ ಮೊದಲು ಸಂದೇಶವನ್ನು ಕೇಳಿದಾಗ ಮೈಸೂರಿನ ಆದರಾತಿಥ್ಯಗಳಿಗೆ ಕೃತಜ್ಞತೆಗಳನ್ನು ಸೂಚಿಸಿದರು. ಪ್ರಜಾ ಪ್ರಭುತ್ವವು ಬಂದ ಮೇಲೆ ಮೈಸೂರು ಹೆಚ್ಚು ಸುಂದರವಾಗಿಯೂ, ಪ್ರಗತಿಪರವಾಗಿಯೂ ಶಾಂತವಾಗಿಯೂ ಇರುವುದೆಂದು ಹೇಳಿದರು ಇಡೀ ಮಾನವ ಕೋಟಿಯ ಐಕ್ಯತೆಗಾಗಿ ಭರತ ಖಂಡದೊಡನೆ ಮೈಸೂರು ಸಹಕರಿಸಲೆಂದು ಹಾರೈಸಿದರು.

ಜಲಪುರಿಯಲ್ಲಿ ಖೇರರು

ನಿನ್ನೆ ರಾತ್ರಿ ಶ್ರೀ ಬಿ ಜಿ ಖೇರರು ಜಲಪುರಿಯ ಅದಿವಾಸಿಗಳ ಪ್ರದೇಶಕ್ಕೆ ಭೇಟಿಯಿತ್ತರು ಶ್ರೀಮತಿ ಸರಸ್ವತಿ ಗಾಂಧಿಯವರ ಗೀತೆಯಾದ ನಂತರ ಪೌರಸಭಾಧ್ಯಕ್ಷರಾದ ಶ್ರೀ ಬಿ ಸೀತಾರಾಮಯ್ಯನವರು ಸಭೆಯವರಿಗೆ ಶ್ರೀ ಖೇರರ ಪರಿಚಯವನ್ನು ಮಾಡಿಕೊಟ್ಟರು ಶ್ರೀ ಖೇರರು ಭಾಷಣ ಮಾಡಿ ಸರ್ಕಾರವು ಹರಿಜನರಿಗೆ [illegible] ಸೌಲಭ್ಯಗಳನ್ನು ವಿವರಿಸಿದರು ಮಧ್ಯಪಾನವೇ ಮುಂತಾದ ದುರಭ್ಯಾಸಗಳನ್ನು ಅವರು ತ್ಯಜಿಸಿ ಶುಚಿರ್ಭೂತರಾಗಿರಬೇಕೆಂದೂ, ಸಮಾಜದ ಇತರ ಜನರೊಡನೆ ಅನ್ಯೋನ್ಯವಾಗಿ ಬೆರೆಯಬೇಕೆಂದೂ ತಿಳಿಸಿದರು

ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಖೇರರಿಗೆ ಧನ್ಯವಾದಗಳನ್ನು ಸಮರ್ಪಿಸಿದ ಮೇಲೆ ಜಯಕಾರಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಹೈದರಾಬಾದಿನ ವಿಧ್ವಂಸನಕ್ಕೆ ಕಾಂಗ್ರೆಸ್ ಸ್ವಯಂಸೇವಕದಳ

ಭಾರತ ಸರ್ಕಾರದವರ ಹೈದರಾಬಾದಿನ ಮೇಲೆ ಪೊಲೀಸ್ ಕ್ರಮ ಅಥವಾ ಕರ ವಿಧ್ವಂಸನ ಕಾರ್ಯ ಸಕ್ರಿಯವಾಗಿ ನಡೆಯುವಂತೆ ಸಹಾಯ ಮಾಡಲು ಕಾಂಗ್ರೆಸ್ ಸ್ವಯಂಸೇವಕ ದಳಗಳನ್ನು ಸ್ಥಾಪಿಸಬೇಕೆಂದು ಮದರಾಸಿನಲ್ಲಿ ಮೊನ್ನೆ ನಡೆದ ತೃತೀಯ ಕಾಂಗ್ರೆಸ್ ನಾಯಕರುಗಳ ಸಭೆಯಲ್ಲಿ ತೀರ್ಮಾನವಾಗಿದೆ

ಶಂಕರರಾವ್ ದೇವ್‌ರವರು ರಾಜಧಾನಿಗೆ

ಮೈಸೂರು ೨೭

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ನಾಳೆ ಬೆಳಿಗ್ಗೆ ಬಂದು ಬೆಂಗಳೂರಿಗೆ ತೆರಳಿ ಅಲ್ಲಿಂದ ರಾಜಧಾನಿಗೆ ಆಗಮಿಸುವರು.

ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟು ರದ್ದು

ಆಗಸ್ಟ್ ೨ ನೇ ತಾರೀಖಿನಿಂದ ಮೈಸೂರಿನ ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ರ ಕೋರ್ಟನ್ನು ರದ್ದು ಮಾಡಲು ಸರ್ಕಾರದ ಆಜ್ಞೆಯಾಗಿದೆ

ಹೆಸರಘಟ್ಟದಲ್ಲಿ ನೌಕಾ ಶಾಲೆ

ಬೆಂಗಳೂರಿನ ಹತ್ತಿರವಿರುವ ಹೆಸರಘಟ್ಟದಲ್ಲಿ ಭಾರತ ಸರ್ಕಾರದವರು ಒಂದು ನೌಕಾ ಶಿಕ್ಷಣ ಶಾಲೆಯನ್ನು ಸ್ಥಾಪಿಸುವರೆಂದು ತಿಳಿದು ಬಂದಿದೆ ಇದಕ್ಕಾಗಿ ಅಲ್ಲಿರುವ ಭಾರಿ ಕೆರೆಯನ್ನು ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಸ್ವೀಕಾರ

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ವಾಣೀವಿಲಾಸ ಶಕ್ತಿ ಮಲ್ಲೇಶ್ವರ ಗಾಯತ್ರಿ ರೇಡಿಯೋ ಕಾರ್ಪೊರೇಷನ್ ಸಂಸ್ಥೆಯವರು ಕಳುಹಿಸಿರುವ ಸಿಹಿತಿಂಡಿಯನ್ನು ಆದರದಿಂದ ಸ್ವೀಕರಿಸಿದ್ದೇವೆ

ರಜಾಕರರಿಗೆ ನಿಜಾಂ ಸರ್ಕಾರದಿಂದ ಶಸ್ತ್ರಾಸ್ತ್ರ

ಭಾರತ ಮತ್ತು ಹೈದರಾಬಾದು ಗಡಿ ಪ್ರದೇಶಗಳಲ್ಲಿ [illegible] ರಜಾಕರರಿಗೆ ನಿಜಾಮರ ಸೈನ್ಯ ಶಿಬಿರದಿಂದ ಶಸ್ತ್ರಾಸ್ತ್ರಗಳನ್ನು [illegible] ಕೊಡಲಾಗಿದೆಯೆಂದೂ ಪ್ರತಿಯೊಂದು [illegible] ತಂಡಕ್ಕೂ ೧೦ ಸ್ಟೆನ್‌ಗನ್ನುಗಳು ಮತ್ತು ೧೦ ಸಾವಿರ ಸುತ್ತು ಗುಂಡುಗಳು ಮತ್ತು ಇತರ ಶಸ್ತ್ರಗಳನ್ನು ಕೊಡಲಾಗಿದೆಯೆಂದೂ [illegible] ಮುಕ್ತ ಸೈನ್ಯ [illegible] ಮೇಲೆ [illegible]ಗಳಿಗೆ [illegible] ಕೊಡಲಾಗಿದೆಯೆಂದೂ ಹೇಳಲಾಗಿದೆ.

ರಜಾಕರರ ನಾಯಕತ್ವಕ್ಕೆ ಬ್ರಿಟಿಷರವರೊಬ್ಬರಿಗೆ ಆಹ್ವಾನ

ರಜಾಕರರ ಮುಖ್ಯ ಸೈನ್ಯಾಧಿಕಾರಿಯಾಗಿರಲು ಬ್ರಿಟಿಷ್ ಪ್ರಜೆಯೊಬ್ಬನಿಗೆ ಆಹ್ವಾನವನ್ನು ಕಳುಹಿಸಿದ ಪತ್ರವೊಂದನ್ನು ಹೈದರಾಬಾದಿನಿಂದ ಲಂಡನ್ನಿಗೆ ತೆರಳಿದ ನಿಜಾಂ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್‌ಟನ್‌ರವರ ಕಾರ್ಯದರ್ಶಿಗಳಾದ ಮಿ॥ ಬೂಸಾಂಟರವರು ತೆಗೆದುಕೊಂಡು ಹೋದರೆಂದು ಹೇಳಲಾಗಿದೆ.

ಎ.ಎಂ.ಸಿ.ಸಿ. ಗುಪ್ತಸಭೆ

(ನಮ್ಮ ವರದಿಗಾರರಿಂದ) ಬೆಂಗಳೂರು ೨೮

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವು ಆದೇಶ೨ ಮತ್ತು ಆಗಸ್ಟ್ ೧ನೇ ತಾ|| ಗಳು ಸಜ್ಜನರಾವ್ ಛತ್ರದಲ್ಲಿ ನಡೆಯುವುದು ಸಭೆಯು ಗುಪ್ತವಾಗಿ ನಡೆಯುವುದೆಂದು ತಿಳಿದು ಬಂದಿದೆ.

ಬೆಂಗಳೂರಿಗೆ ಪಂಡಿತ ಅಹಮದ್ ಕಿದ್ವಾಯಿರವರ ಭೇಟಿ

ಬೆಂಗಳೂರು [illegible] ಕೃಷ್ಣರಾಜಪುರದಲ್ಲಿ [illegible] ನಿಲಯದ [illegible] ನೀಡುವ [illegible] ಕೇಂದ್ರ ಸರ್ಕಾರದ ಸಚಿವರಾದ ಅಹಮದ್ ರಫಿ ಅಹಮದ್ ಕಿದ್ವಾಯಿರವರು ನೆರವೇರಿಸ ಲಿರುವರೆಂದು [illegible]

ಭಾರತ ಕಾಂಗ್ರೆಸ್ಸಿನೊಡನೆ ಮೈಸೂರು ಕಾಂಗ್ರೆಸ್ಸಿನ ಐಕ್ಯ

ಮೈಸೂರು ಕಾಂಗ್ರೆಸ್ಸನ್ನು ಅಖಿಲ ಭಾರತ ಕಾಂಗ್ರೆಸ್ಸಿನೊಡನೆ ಐಕ್ಯ ಮಾಡಬೇಕೆಂಬ ನಿರ್ಣಯವನ್ನು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯವರು ಒಪ್ಪಿಕೊಂಡಿದ್ದಾರೆ.

ವಿದ್ಯಾ ಸಂಸ್ಥೆಗಳಲ್ಲಿ ಕಲಾ ಶಿಕ್ಷಣವನ್ನೂ ಕೊಡಬೇಕು

ಶ್ರೀ ಬಿ ಜಿ ಖೇರರ ಭಾಷಣ

ಮೈಸೂರು ೨೮

ಕನ್ನಡ ರಂಗಭೂಮಿಯು ಶತಮಾನೋತ್ಸವದ ಅಂಗವಾಗಿ ನಾನಾ ಉತ್ಸವಗಳ ಆರಂಭೋತ್ಸವ ಮತ್ತು ನಾಟಕರತ್ನ ಜಿ ಎಚ್ ವೀರಣ್ಣನವರಿಗೆ ಸನ್ಮಾನ ಸಮಾರಂಭಗಳು ನಿನ್ನೆ ದಿನ ಬೊಂಬಾಯಿನ ಮುಖ್ಯ ಮಂತ್ರಿ ಶ್ರೀ ಬಿ ಜಿ ಖೇರ್‌ರವರ ಅಧ್ಯಕ್ಷತೆಯಲ್ಲಿ ನಡೆದುವು. ಈ ಸಮಾರಂಭಕ್ಕೆ ದಿವಾನರು ಮಂತ್ರಿಗಳು ಖಾಸಗಿ ಕಾರ್ಯದರ್ಶಿಯವರು ಮತ್ತು ಮಹಿಳೆಯರು ದಯಮಾಡಿಸಿದ್ದರು. ಪ್ರಾರಂಭದಲ್ಲಿ ಸುಪ್ರಸಿದ್ಧ ಕನ್ನಡ ಸಿನಿಮಾ ತಾರೆ ಶ್ರೀಮತಿ ಜಯಮ್ಮನವರು ಸುಶ್ರಾವ್ಯವಾಗಿ ಗಾನ ಮಾಡಿದರು. ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಸ್ವಾಗತ ಭಾಷಣ ಮಾಡಿದರು. ಈ ಸಮಾರಂಭಕ್ಕೆ ಶ್ರೀಗಳಾದ ರಾಜಾಜಿ, ಡಾಲ್ಮಿಯ, ಬಿ ಎನ್ ರಾವ್ ಮುಂತಾದ ಅನೇಕ ಮಹನೀಯರುಗಳು ಶುಭ ಸಂದೇಶವನ್ನು ಕಳುಹಿಸಿದ್ದರು.

ಶ್ರೀ ಸಿ ಕೆ ವೆಂಕಟರಾಮಯ್ಯನವರು ಮಾತನಾಡಿ ಶ್ರೀ ವೀರಣ್ಣನವರು ಹೆಸರಾದ ಯಾವ ಆಂಗ್ಲ ನಟರಿಗೂ ಕಡಿಮೆ ಇಲ್ಲವೆಂದೂ, ತಾವು ದೊಡ್ಡ ಸಂಸ್ಥೆಯ ಮಾಲೀಕರಾದರೂ ಸಹ ಕೇವಲ ಸಣ್ಣ ಪಾತ್ರಗಳನ್ನು ವಹಿಸಿ ಸರಳತೆಯನ್ನು ತೋರಿಸಿರುವರೆಂದೂ ಹೇಳಿದರು. ಶ್ರೀ ವೀರಣ್ಣನವರು ಪೂರ್ಣ ಕಲಾಭಿಮಾನಿಗಳೂ ಹಾಗೆಯೆ ಒಳ್ಳೆಯ ದಾನಿಗಳೂ ಆಗಿರುವರೆಂದು ಶ್ರೀಯುತರು ಹೇಳಿದರು.

ನಂತರ ಶ್ರೀ ಬಿ ಜಿ ಖೇರ್‌ರವರು ಶ್ರೀ ವೀರಣ್ಣನವರಿಗೆ ಚಿನ್ನದ ಹಾರವನ್ನು ಸಮಿತಿಯ ಪರವಾಗಿ ಅರ್ಪಿಸಿದರು. ಶ್ರೀ ಜಿ. ಎಚ್ ವೀರಣ್ಣನವರು ತಮ್ಮ ಸಂಸ್ಥೆಯ ಅಭಿವೃದ್ಧಿಗೆ ಶ್ರೀ ಕೃಷ್ಣನವರು ಹಾಕಿದ ಅಡಿಪಾಯವೇ ಕಾರಣವೆಂದು ಹೇಳಿ ಆವಮನೆಯವರು ಮತ್ತು ಮಹಾಜನರು ತಮಗೆ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ಎಲ್ಲರನ್ನೂ ವಂದಿಸಿದರು.

ನಂತರ ಶ್ರೀ ಬಿ ಜಿ ಖೇರ್‌ರವರು ಕನ್ನಡದಲ್ಲಿ ಮಾತನಾಡಿ ಈ ಸಮಾರಂಭದಲ್ಲಿ ತಾವು ಭಾಗವಹಿಸಿರುವುದು ತಮ್ಮ ಪುಣ್ಯವೆಂದು ಹೇಳಿದರು. ಕರ್ನಾಟಕವು ಸಾಂಸ್ಕೃತಿಕ ವಿಷಯಗಳಲ್ಲಿ ಪ್ರಗತಿ ಮಾರ್ಗವನ್ನು ಹಿಡಿದಿರುವುದೆಂದೂ, ಹದಿನೇಳನೇ ಶತಮಾನದಲ್ಲೇ ಕನ್ನಡ ನಾಡಿನಲ್ಲಿ ನಾಟಕಗಳು, ಯಕ್ಷಗಾನ ಮತ್ತು ಬಯಲಾಟಗಳು ನಡೆಯುತ್ತಿದ್ದುವೆಂದೂ ನುಡಿದರು. ಕಾಲವು ಬದಲಾಯಿಸಿದಂತೆಲ್ಲಾ ನಾಟಕಗಳಲ್ಲೂ ಸುಧಾರಣೆಯು ಬಂದಿತೆಂದು ಹೇಳಿ ಕನ್ನಡ ರಂಗಭೂಮಿಯಲ್ಲಿ ವರದಾಚಾರ್ಯ, ಬೀರ್ ಬಳ್ಳಾರಿ ರಾಘವಾಚಾರ್ಯರು ಮತ್ತು ವೀರಣ್ಣನವರುಗಳ ಕಲಾ ಪ್ರತಿಭೆಯನ್ನು ಪ್ರಶಂಸಿಸಿದರು. ರಂಗಭೂಮಿಯಲ್ಲಿ ಜನರ ಜೀವನವನ್ನು ಪ್ರತಿಬಿಂಬಿಸುವಂಥಹ ನಾಟಕಗಳು ಅವಶ್ಯಕವೆಂದರು.

ವಾಕ್ಚಿತ್ರಗಳು ಬೆಳೆದಂತೆಲ್ಲಾ ನಾಟಕಗಳು ಹಿಂದೆ ಬೀಳಲು ಕಾರಣವಿಲ್ಲವೆಂದೂ, ಶಾಲಾ ಕಾಲೇಜುಗಳಲ್ಲಿ ಕಲಾಶಿಕ್ಷಣವನ್ನೂ ಸಹ ಕೊಡಬೇಕೆಂದು ಶ್ರೀ ಖೇರರು ನುಡಿದರು. ಈ ಉತ್ಸವದ ನೆನಪಿಗಾಗಿ ಕರ್ನಾಟಕಕ್ಕೆ ಒಂದು ಕಲಾ ಪೀಠ ಮತ್ತು ಕಲಾ ಶಾಲೆ ಸ್ಥಾಪನೆಯಾಗಲೆಂದರು. ಜನರ ಮನಸ್ಸಿನಲ್ಲಿ ಹೊಸ ಸ್ಫೂರ್ತಿಯನ್ನುಂಟು ಮಾಡಬೇಕಾದರೆ ಭಾಷಣಗಳಿಗಿಂತಲೂ ನಾಟಕ ರೂಪದಲ್ಲಿ ತೋರಿಸಿದರೆ ಒಳ್ಳೆಯ ಪರಿಣಾಮವಾಗುವುದೆಂದು ಹೇಳಿದರು. ಶ್ರೀಮತಿ ಕೃಷ್ಣಾ ಕೃಷ್ಣಲಾನಿಯವರಿಂದ ವಂದೇಮಾತರಂ ಗೀತೆಯಾದ ನಂತರ ಸಮಾರಂಭವು ಮುಕ್ತಾಯವಾಯಿತು.

ಹೈದರಾಬಾದಿಗೆ ಪಾಕೀಸ್ತಾನದಿಂದ ಶಸ್ತ್ರಾಸ್ತ್ರ

ಪಾಕೀಸ್ತಾನದಿಂದ ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಾಸ್ತ್ರಗಳ ಸರಬರಾಜು ವ್ಯವಸ್ಥೆಯನ್ನು ಬ್ರಿಟಿಷ್ ವೈಮಾನಿಕ ಪಡೆಯ ಮಾಜಿ ಕೆಲಸಗಾರರಾದ ಮಿ॥ ಕಿನೆಟ್‌ರವರು ಮಾಡುತ್ತಿರುವರೆಂದು ತಿಳಿದುಬಂದಿದೆ. ಇತ್ತೀಚೆಗೆ ಪಾಕೀಸ್ತಾನದಿಂದ ಹೈದರಾಬಾದಿಗೆ ಅನುಮತಿ ಇಲ್ಲದೆ ಹೋದ ಸಿಡ್ನಿ ಕಾಟ್ಟನ್‌ರವರು ಕಿನೆಟ್‌ರವರ ಮುಖ್ಯ ವೈಮಾನಿಕರೆಂದೂ, ಶಸ್ತ್ರಾಸ್ತ್ರಗಳ ಸರಬರಾಜಿನ ಬಗ್ಗೆ ಅನೇಕ ಸೈನಿಕರನ್ನು ಅವರು ನೇಮಿಸಿಕೊಂಡಿದ್ದಾರೆಂದೂ ಹೇಳಲಾಗಿದೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯ

ನೀಲಕಂಠ ವಿದ್ಯಾರ್ಥಿ ನಿಲಯವು ೧೯೦೪ನೇ ಮೈಸೂರು ಸೊಸೈಟಿ ರಿಜಿಸ್ಟ್ರೇಷನ್ ಶಾಸನದ ೩ನೇ ಪ್ರಕಾರ ಸರ್ಕಾರದಿಂದ ರಿಜಿಸ್ಟರ್ ಮಾಡಲ್ಪಟ್ಟಿರುತ್ತದೆ.

ಉಚಿತ ವಾಚನಾಲಯ

ಮೈಸೂರು ಹಳ್ಳದಕೇರಿಯ ತೀರ್ಥಂಕರ ರಸ್ತೆಯಲ್ಲಿ ಸ್ಥಾಪಿಸಿರುವ ಯುವಕರ ಸಂಘದ ಆಶ್ರಯದಲ್ಲಿ ತಾ॥ ೧೮ ೪೮ರ ಆಗಾಯತ್ತು ಉಚಿತ ವಾಚನಾಲಯವನ್ನು ನಡೆಸುತ್ತಿ ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ವಾರ್ಷಿಕೋತ್ಸವ

ಮೈಸೂರು ೨೮

ರಾಜಧಾನಿಯ ವಿಶ್ವಕರ್ಮ ವಿದ್ಯಾರ್ಥಿ ನಿಲಯದ ತೃತೀಯ ವಾರ್ಷಿಕೋತ್ಸವವು ನೆನ್ನೆ ಸಂಜೆ ಶಾಸ್ತ್ರಕಲಾ ಸೇವಾಸಕ್ತ ಶ್ರೀ ಟಿ. ಚಲುವಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಎನ್ ಬಿ ಚಂದ್ರಶೇಖರಾಚಾರ್ಯರೂ ಮತ್ತು ಸಿ ರಾಮಾಚಾರ್ಯರೂ ಭಾಷಣಗಳನ್ನು ಮಾಡಿದರು. ಮಿ॥ ಸಂಬಂಧಮೂರ್ತಿ ಭಾಗವತರ ಸಂಗೀತವೂ ಅನಂತರ ಮಿ॥ ಪುಟ್ಟಸ್ವಾಮಾಚಾರ್ಯರ ವೇಣುಗಾನವೂ ಸೊಗಸಾದ ಪಕ್ಕವಾದ್ಯಗಳೊಡನೆ ನಡೆದುವು.

ಅನಂತರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಶ್ರೀ॥ ಪುಟ್ಟಸ್ವಾಮಾಚಾರ್ ಮತ್ತು ಮಿಡ್ಲ್ ಸ್ಕೂಲ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಶ್ರೀ॥ ಸಿ ಕಂಠಾಚಾರ್ಯ ಎಂಬ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಬೆಳ್ಳಿ ಬಟ್ಟಲುಗಳನ್ನು ಬಹುಮಾನವಾಗಿ ಕೊಟ್ಟರು. ಅಧ್ಯಕ್ಷರು ಮಾತನಾಡಿ ಸಂಘದ ಅಭಿವೃದ್ಧಿಗಾಗಿ ಮೂಲಧನವನ್ನು ಕೂಡಿಸಬೇಕೆಂದೂ ಇದಕ್ಕಾಗಿ ಬರುವ ತಿಂಗಳು ೮ನೇ ತಾರೀಖು ಸಭೆ ಸೇರಿಸಬೇಕೆಂದು ಸೂಚಿಸಿದರು. ವಂದನಾರ್ಪಣೆ ಮತ್ತು ಪ್ರಭುಗಳ ಶ್ರೇಯಃ ಪ್ರಾರ್ಥನೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮಹಾತ್ಮ ಗಾಂಧಿ ಸ್ಮಾರಕ ಶಾಂತಿ ದಿನಾಚ[illegible]

ಮೈಸೂರು ೩ ಸುಬ್ಬಯ್ಯ ರಸ್ತೆಯ[illegible]ರುವ ಶ್ರೀ ಬ್ರಹ್ಮಾನಂದಸ್ವಾಮಿಗಳ [illegible] ಧಾಲಯದ ದ ೨೦ನೇ ೨೯ ೬-೪೮ನೇ ಗು[illegible]ವಾರ ಸಂಜೆ ೪ ಘಂಟೆಗೆ "ಮಹಾತ್ಮ ಗಾಂಧಿ ಸ್ಮಾರಕ ಸಾಮ್ಯಾಸಿದ್ಧಾಂತ ದಿ[illegible]ಚರಣೆ" ಯು ನಡೆಯುತ್ತದೆ. ಗೃಹಸ[illegible]ರಾದ ಶ್ರೀ ಟಿ ಮರಿಯಪ್ಪನವರು ಅಧ್ಯಕ್ಷತೆ ವಹಿಸಲು ಒಪ್ಪಿರುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಆಧುನಿಕ ಮೂರನೇ ತರಗತಿ ಗಾಡಿ

ಬೆಂಗಳೂರು ವಿಮಾನ ಕಾರ್ಖಾನೆಯವರು ತಯಾರಿಸಿರುವ ಪ್ರಥಮ ಮಾದರಿಯ ಮೂರನೇ ತರಗತಿ ರೈಲ್ವೆ ಗಾಡಿಯನ್ನು ಮೊನ್ನೆ ಪ್ರದರ್ಶನಕ್ಕೆ ಇಡಲಾಗಿತ್ತು. ಈ ಗಾಡಿಯು ಬಹಳ ಹಗುರವಾಗಿದ್ದು ಪ್ರಯಾಣಿಕರಿಗೆ ಹೆಚ್ಚು ಸೌಲಭ್ಯಗಳುಳ್ಳದಾಗಿದೆ. ನ[illegible] ಆಧುನಿಕ ಕಕ್ಕಸ್ಸು, ವಿದ್ಯುತ್ ಬೀಸಣಿಗೆ ಮತ್ತು ಕನ್ನಡಿ ಮುಂತಾದುವುಗಳನ್ನು ಇಡಲಾಗಿದೆ. ಕೂಡುವುದಕ್ಕೂ ಮತ್ತು ಮಲಗುವುದಕ್ಕೂ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಗಾಯತ್ರೀ ಟಾಕೀಸ್

29-7-48 ರಿಂದ 2 ದಿವಸಗಳು ಮಾತ್ರ

MGM ರವರ

ಓಮಹ ಟ್ರೈಯಲ್

(THE OMAHA TRAIL)

Next Change:—

Adventures of Robinhood

ಬೊಂಬಾಯಿ

ಜಿ. ಎ. ಸರ್ಕಸ್

ಮೈಸೂರು ಜಿಮ್ಖಾನಾ ರಾಯರ ಕಟ್ಟೆಯಲ್ಲಿ

೩ ಆಟಗಳು:-ಶುಕ್ರವಾರ, ಶನಿವಾರ ಭಾನುವಾರ.

೩-೩೦, ೬ ೩೦, ಮತ್ತು ೯-೩೦ ಕ್ಕೆ

ಮಿಕ್ಕ ದಿವಸಗಳಲ್ಲಿ ೨ ಆಟಗಳು

ಮಾತ್ರ ೬-೩೦, ಮತ್ತು ೯-೩೦ ಕ್ಕೆ

— ದರಗಳು ಮಾಮೂಲಿನಂತೆ —

[ಎಂ ಸುಬ್ಬರಾಮಯ್ಯ ಅಂಡ್ ಕೋ]

Edited printed and published by A. R. Nagarajan at the Sadhvi Press. D Subbaiah Road Mysore

ಶ್ರೀ ಗಣೇಶಾ ಟಾಕೀಸ್

28—7—48 ರಿಂದ

3 ದಿನಗಳು ಮಾತ್ರ

ಪ್ರತಿ ದಿನ ಮೂರು ಆಟಗಳು

ಲಾರೆಲ್ ಮತ್ತು ಹಾರ್ಡಿ

ಪಾತ್ರವಹಿಸಿರುವ

ದಿ ಬೊಹಿಮಿಯನ್ ಗರ್ಲ್

ಮುಂದಿನ ಬದಲಾವಣೆ—ರಂಜಿತ್‌ರವರ

★ ಧನ ಭಗತ್ ★ [ಹಿಂದಿ]

ಬೆಳಗಿನ ಆಟಗಳು

30-7-48 ನೇ ಶುಕ್ರವಾರದಿಂದ

ನ್ಯಾಷನಲ್ ಸ್ಟುಡಿಯೋಸ್‌ರವರ

★ ಸಿಸ್ಟರ್ ★

-:ಪಾತ್ರ:-

ಸೇಖ್ ಮುಖ್ತಾರ್, ಪಲಿಪ ಜಯವಂತ್, ಹರೀಶ್ ಮುಂತಾದವರು

ಒಲಂಪಿಯಾ ಟಾಕೀಸ್

Morning Shows at

PRABHA PICTURE HOUSE

From 30—7—48

for 4 days only

M G M's Melo-drama

GASLIGHT

—:Starring:—

CHARLES BOYER & INGRID BERGMAN

ಸಿಟಿ ಕೋ-ಆಪರೇಟಿವ್ ಬ್ಯಾಂಕ್, ಲಿ.

ಕರ್ಜನ್ ಪಾರ್ಕ್ ರಸ್ತೆ, ಮೈಸೂರು

ಹರಾಜು ಪ್ರಕಟಣೆ

ಬ್ಯಾಂಕಿನ ಸಾಲಕ್ಕೆ ಈಡಾಗಿರುವ ಕೆಳಗೆ ನಮೂದಿಸಲ್ಪಟ್ಟಿರುವ ಚಿನ್ನದ ನ[illegible]ಗಳನ್ನು ತಾ॥ ೧೮-೮-೪೮ರ ನೇ ಭಾ[illegible]ವಾರ ಬೆಳಗ್ಗೆ ೯ ಘಂಟೆಗೆ ಬ್ಯಾಂಕಿನ ಆ[illegible]ಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾ[illegible]ಗುತ್ತೆ. ಸರ್ವರಿಗೂ ಬಿಡ್ಡು ಮಾಡ[illegible] ಅವಕಾಶವಿರುತ್ತೆ. ಆಸ್ಪರು ಬಿಡ್ಡು ದಾ[illegible]ರು ಹರಾಜು ಮೊಬಲಗನ್ನು ಪೂರಾ [illegible]ದಾಯ ಮಾಡಿ ಹರಾಜು ಪಾಸಾದ ಅ[illegible]ನಂತರ ನಗಗಳನ್ನು ಸುಪರ್ದು ಪಡೆಯ[illegible]ಕ್ಕದ್ದು. ಇತರ ವಿಷಯಗಳನ್ನು ಬ್ಯಾಂ[illegible]ನ ಲೇವಾದೇವಿ ಕಾಲದಲ್ಲಿ ಬ್ಯಾಂಕು ಆ[illegible]ಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು. ನಗದಿ ಸ್ವತ್ತಿನ ಹಕ್ಕುಬಾಧ್ಯತೆ ವಿಷಯದ[illegible] ಬ್ಯಾಂಕಿನವರು ಜವಾಬ್ದಾರರಲ್ಲ.

—:ನಗಗಳ ವಿವರ:—

A/c No G L- 1940

೧ ಚಿನ್ನದ ಸಾಲ್ಯಾ ಜೋಡಿ ಬಳೆಗಳು [illegible] ಹಾಲಿ ಉಪಯೋಗಿಸ ಸ್ಥಿತಿಯಲ್ಲಿ [illegible]ವುದಿಲ್ಲ; ತೂಕ ೯-೬-೩.

A/c No 1941

೨ ಚಿನ್ನದ ಎರಡು ಕಟ್ಟಿಗಳು ತೂ[illegible] ೮-೧೦-೦

ಬಿ. ವಿ. ನಂಜುಂಡಯ[illegible]

ಗೌ॥ ಕಾರ್ಯದರ್ಶಿ.

ಪ್ರತಿ ದಿನ ೩ ಆಟಗಳು

29—7—48 ನೇ ಗುರುವಾರದಿಂದ

ಫುರ್‌ಫುರ್-ಕಿ-ಕಹಾನಿ-

—:ಪಾತ್ರ:—

ರೇಖಾ ಚಿಟ್ನಿಸ್, ಪರಿಂಜ ಹಲ್ಲಿ, ಮಾಯಾ ಬ್ಯಾನರ್ಜೀ ಮುಂತಾದವರು

ಒಲಂಪಿಯಾ ಟಾಕೀಸ್

ಸಂಪುಟ ೭] ಗುರುವಾರ ೨೯-೭-೪೮ [ಸಂಚಿಕೆ ೮

- ಹೈದರಾಬಾದಿಗೆ - ನೀಗ್ರೋ ಸೈನ್ಯದ ಬೆಂಬಲ

ವರ್ಧಂತಿ ಬಿರುದುಗಳು

ಮೈಸೂರು ೨೯

ನಿನ್ನೆ ರಾತ್ರಿ ಅರಮನೆ ಕಲ್ಯಾಣ ಮಂಟಪದಲ್ಲಿ ನಡೆದ ವಿಶೇಷ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಕೆಳಗೆ ಕಂಡ ಮಹನೀಯರುಗಳಿಗೆ ಬಿರುದುಗಳನ್ನು ದಯಪಾಲಿಸಿರುತ್ತಾರೆ:—

ರಾಜಮಂತ್ರ ಚಿಂತಾಮಣಿ

ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್

ಧರ್ಮ ಪ್ರಕಾಶ

ಶ್ರೀಗಳಾದ ವಿ ಎಸ್ ತಿರುವೇಂಗಡಸ್ವಾಮಿ ಮೊದಲಿಯಾರ್, ದಾವಣಗೆರೆಯ ಮುರುಗಪ್ಪ ಚಿಗಟೇರಿ, ಬೆಂಗಳೂರಿನ ಎಸ್ ನಿಜಲಿಂಗಪ್ಪನವರು.

ಧರ್ಮ ಪ್ರವರ್ತ

ಹೊಸದುರ್ಗದ ಶ್ರೀ ಭೂಪಾಳಂ ನಂಜುಂಡಯ್ಯನವರು, ಆನಂದಾಪುರದ ಎ ರಾ ಕೃಷ್ಣಯ್ಯಂಗಾರ್, ಗುಬ್ಬಿಯ ಶ್ರೀ ಜಿ. ಚನ್ನಂಜಪ್ಪನವರು

ರಾಜ ಸೇವಾ ಸಕ್ತ

ಶ್ರೀ ಡಿ ಸಿ ಸುಬ್ಬರಾಯಪ್ಪನವರು. ಬೆಂಗಳೂರು

ಲೋಕ ಸೇವಾ ನಿರತ

ಮೈಸೂರಿನ ಶ್ರೀ ವಿ ನಾರಾಯಣರಾಯರು, ತುಮಕೂರಿನ ಶ್ರೀ ಜಿ ಎಂ ಸಿದ್ದವೀರಣ್ಣನವರು, ಬೆಂಗಳೂರಿನ ಶ್ರೀ ಡಿ ಕೃಷ್ಣಯ್ಯ ಶೆಟ್ಟಿಯವರು

ಧರ್ಮ ಪರಾಯಣೆ

ಮೈಸೂರಿನ ಶ್ರೀಮತಿ ದೇವಿ ಸಾಕಮ್ಮ

ಪಂಡಿತ ರತ್ನಂ

ಆಸ್ಥಾನ ಮಹಾ ವಿದ್ವಾಂಸರುಗಳಾದ ಕಾಶಿನಾಥ ಶಾಸ್ತ್ರಿಗಳು, ಡಿ ವಾಸುದೇವಾಚಾರ್ಯರು, ದಾಳಿ ನರಸಿಂಹ ಭಟ್ಟರು, ಎಂ. ಎಸ್ ವೆಂಕಟೇಶ ಶಾಸ್ತ್ರಿಗಳು, ಟಿ ಆರ್ ಪ ಸುಬ್ರಹ್ಮಣ್ಯ ಶಾಸ್ತ್ರಿಗಳು

ಜ್ಯೋತಿಷ ರತ್ನಂ

ಆ|| ಮಾ|| ವಿ|| ಟಿ ವಿ. ನರಸಿಂಹಾಚಾರ್ಯರು

ಸಂಗೀತ ಶಾಸ್ತ್ರ ವಿಶಾರದ

ಆಸ್ಥಾನ ಕಿನ್ನರಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯರು

ಹೊಟೇಲ್ ಕೆಲಸಗಾರರ ಸಂಘ

ಮೈಸೂರು ನಗರದ ಹೊಟೇಲ್ ಕೆಲಸಗಾರರ ಸಂಘದ ಸಭೆಯು ಮೊನ್ನೆ ಶ್ರೀ ... ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘವು ಹಿಂದ ಮಜ್ದೂರ ಸಂಘಯಿತಿಗೆ ಸೇರಬೇಕೆಂದೂ, ದಸ್ತಗಿರಿಯಾಗಿರುವ ರೈಲ್ವೆ ಕೆಲಸಗಾರರ ಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ನಿರ್ಣಯವನ್ನು ಮಾಡಲಾಯಿತು ಷಾಪ್ ಅಸಿಸ್ಟೆಂಟ್ ಕಾನೂನನ್ನು ಇಲ್ಲಿ ಹೋಟೇಲರೂ ಜಾರಿಗೆ ತರಬೇಕೆಂದೂ ಅದಕ್ಕೆ ಸಂಬಂಧಪಟ್ಟಂತೆ ಇನ್ಸ್ಪೆಕ್ಟರುಗಳನ್ನು ಸರ್ಕಾರದವರು ಕೂಡಲೇ ನೇಮಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯಗಳು ಅಂಗೀಕೃತವಾದುವು

೬೦೦ ಹಿಂದೂ ಸಂಸಾರಗಳ ಮತಾಂತರ

ಹೈದರಾಬಾದಿನ ನಲಗೊಂಡ ಜಿಲ್ಲೆಯ ೬೦೦ ಹಿಂದೂ ಸಂಸಾರದವರನ್ನ ರಜಾಕರು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿರುವರೆಂದು ವರದಿಯಾಗಿದೆ

ಎ.ಎಂ.ಸಿ.ಸಿ. ಚುನಾವಣೆ ಮುಂದೆ ಹೋಯಿತು

ಮೈಸೂರು ೨೯

ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ಈ ದಿನ ರಾಜಧಾನಿಗೆ ಭೇಟಿ ಕೊಟ್ಟು ಕಾಂಗ್ರೆಸ್ ಕರ್ತರುಗಳೊಡನೆ ಸಮಾಲೋಚನೆ ನಡೆಸುವುದರಿಂದ ಈ ದಿನ ಮಧ್ಯಾಹ್ನ ನಡೆಯಬೇಕಾಗಿದ್ದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಚುನಾವಣೆಯನ್ನ ಮುಂದೆ ಹಾಕಲಾಗಿದೆಯೆಂದ ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ.

ಟಿಂಬರ್ ಮತ್ತು ಪ್ಲೈವುಡ್ ಸಂಸ್ಥೆ ಕೆಲಸಗಾರರ ಬೇಡಿಕೆ

ರಾಜಧಾನಿಯ ಕರ್ಗಿ ಟಿಂಬರು ಮತ್ತು ಪ್ಲೈವುಡ್ ಕಾರ್ಖಾನೆಯ ಕೆಲಸಗಾರರ ಸಂಘದ ಸಭೆಯು ಕಳೆದ ಭಾನುವಾರ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಜಿ ಆರ್ ರಂಗಸ್ವಾಮಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ನಾರಾಯಣರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಬಿ ಲಿಂಗಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ ಮತ್ತು ಶ್ರೀ ವ ಲ್ಲಭಯ್ಯನವರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು ಕಂಪೆನಿಯವರು ಕಾರ್ಮಿಕರಿಗೆ ೩ ತಿಂಗಳು ಬೋನಸ್ಸು ಮತ್ತು ೧೫ ರೂ ತುಟ್ಟಿಭತ್ಯಗಳನ್ನು ಕೊಡಬೇಕೆಂದೂ ಪ್ರಾರ್ಥಿಸಲಾಯಿತು.

ಫ್ರೆಂಚ್ ಆಕ್ರಮಿತ ಜರ್ಮನಿಯಲ್ಲಿ ಆಸ್ಫೋಟನೆ

ಸಾವಿರಾರು ಮಂದಿಯ ಮರಣ

ಫ್ರೆಂಚ್ ಆಕ್ರಮಿತ ಜರ್ಮನಿಯ ಲುಡ್ವಿಗ್ ಷಾಫ ಊರಿನಲ್ಲಿ ರಸಾಯನಿಕ ಕಾರ್ಖಾನೆಯೊಂದರಲ್ಲಿ ನಿನ್ನೆ ದಿನ ಭಾರಿ ಆಸ್ಫೋಟನೆಯೊಂದು ನಡೆಯಿತು ಇದರ ಪರಿಣಾಮವಾಗಿ ಸಾವಿರಾರು ಮಂದಿ ಮಡಿದರೆಂದೂ, ೧೨೫ ಯಂತ್ರಗಳೂ ೫೦೦ ಮನೆಗಳೂ ಸುಟ್ಟು ಭಸ್ಮವಾದುವೆಂದೂ ವರದಿಯಾಗಿದೆ. ಆ ಪ್ರದೇಶದಲ್ಲಿ ಹಲವಾರು ಮೈಲಿಗಳವರೆಗೂ ವಾಯುವ ಂಡಲವು ವಿಷಪೂರಿತವಾಗಿ ಜನರು ಅಲ್ಲಿಗೆ ಹೋಗುವುದೇ ಅಪಾಯಕರವಾಗಿದೆ ಆಸ್ಫೋಟನೆಯಾದ ರಭಸಕ್ಕೆ ಭೂಮಿ ಅಲ್ಲಾಡಿತೆಂದೂ ಹೇಳಲಾಗಿದೆ ಇದರಿಂದ ಉಂಟಾಗಿರುವ ನಷ್ಟವು ಇನ್ನೂ ಗೊತ್ತಾಗಿಲ್ಲ.

ರಾಜಾಜಿಯವರಿಗೆ ಪೌರಸಭೆಯ ಮಾನಪತ್ರ

ಮೈಸೂರು ೨೯

ಭಾರತದ ಗವರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮುಂದಿನ ತಿಂಗಳು ರಾಜಧಾನಿಗೆ ಭೇಟಿ ಕೊಟ್ಟಾಗ ಅವರಿಗೆ ಮಾನಪತ್ರವನ್ನು ಅರ್ಪಿಸಬೇಕೆಂದು ನಿನ್ನೆ ಸಂಜೆ ನಡೆದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ನಿರ್ಧರಿಸಲಾಯಿತು ಇದಕ್ಕಾಗಿ ೩ ಸಾವಿರ ರೂ ಗಳನ್ನು ಮಂಜೂರು ಮಾಡಲಾಯಿತು ಈ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಧ್ಯಕ್ಷರು, ಉಪಾಧ್ಯಕ್ಷರು, ಶ್ರೀಗಳಾದ ಬಿ ನಾರಾಯಣಸ್ವಾಮಿ, ಟಿ ವೆಂಕಟರಮಣಯ್ಯ ಮತ್ತು ಥಿಯೋಬಾಲ್ಡ್‌ರವರುಗಳನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಲಾಯಿತು ನಗರದ ಅಲಂಕಾರ ಮತ್ತು ಇತರ ವ್ಯವಸ್ಥೆಗಳಿಗಾಗಿ ಪೌರಸಭೆಗೆ ೩೦ ಸಾವಿರ ರೂ ಗಳನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಲಾಯಿತು

ಹೈದರಾಬಾದಿನಲ್ಲಿ ಭಾರತ ಸೈನ್ಯ

ಸೋಲಾಪುರದಿಂದ ಬಾರ್ಸಿ ಎಂಬಲ್ಲಿಗೆ ಹೋಗುವ ಮಧ್ಯ ಮಾರ್ಗದಲ್ಲಿರುವ ಹೈದರಾಬಾದಿಗೆ ಸೇರಿದ ನಾನೆಜ್ ಎಂಬಲ್ಲಿ ಕಳೆದ ಶನಿವಾರ ಭಾರತದ ಸೈನ್ಯದ ಮೇಲೆ ರಜಾಕರ ಸೈನಿಕರು ನಡೆಸಿದ ಧಾಳಿಯಿಂದ ಈಗ ಅಲ್ಲಿ ಭಾರತ ಸೈನ್ಯವನ್ನು ಕಾವಲಿಡಲಾಗಿದೆ ಇದಕ್ಕೆ ನಿಜಾಂ ಸರ್ಕಾರದವರು ಪ್ರತಿಭಟನೆಯನ್ನು ಸೂಚಿಸಿದ್ದಾರೆ ಆ ಪ್ರದೇಶಕ್ಕೆ ಸೈನ್ಯವನ್ನು ಕಳುಹಿಸಬೇಕೆಂದು ನಿರ್ಧಾರ ಮಾಡಿದುದನ್ನು ನಿಜಾಂ ಸರ್ಕಾರದವರು ರದ್ದು ಮಾಡಿರುತ್ತಾರೆ.

ಹೈದ್ರಾಬಾದಿನ ಬಗ್ಗೆ ನೆಹರು-ನಿಜಾಂ ಸಮಾಲೋಚನೆ

ಹೈದರಾಬಾದಿನ ಬಗ್ಗೆ ಪ್ರಧಾನಿ ಪಂಡಿತ ನೆಹರೂರವರೊಡನೆ ಸಮಾಲೋಚನೆ ನಡೆಸುವ ಸಲುವಾಗಿ ಸರ್ ವಿ ಟಿ ಕೃಷ್ಣಮಾಚಾರ್ಯರು ನಿನ್ನೆ ಮದ್ರಾಸಿನಿಂದ ದೆಹಲಿಗೆ ಪ್ರಯಾಣ ಮಾಡಿದರು

ಹೈದರಾಬಾದಿನ ಬಿಕ್ಕಟ್ಟನ್ನು ಬಗೆಹರಿಸಲು ಇದು ಕೊನೆಯ ಪ್ರಯತ್ನ ವಾಗುವುದಾಗಿ ಸರ್ ವಿ ಟಿ ಯವರು ನೆನ್ನೆ ದಿನ ಮದರಾಸಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ.

ರಜಾಕರಿಗೆ ಗೋವಾದ ನೀಗ್ರೋ ಸೈನಿಕರ ಸಹಾಯ

ಗೋವಾದಿಂದ ಹೈದರಾಬಾದಿಗೆ ವಿಮಾನಗಳ ಮೂಲಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಲಾಗುತ್ತಿದೆಯೆಂದು ಅಖಿಲ ಕಾಂಗ್ರೆಸ್ ನಾಯಕರುಗಳು ತಿಳಿಸಿರುತ್ತಾರೆ. ಪಾಕಿಸ್ತಾನದ ಏಜೆಂಟರುಗಳು ಹೈದರಾಬಾದಿಗೆ ಸಹಾಯ ಮಾಡಲು ಅನುಕೂಲವಾಗುವಂತೆ ಮಾರ್ಮ ಗೋವಾ ಬಂದರಿನಲ್ಲಿ ಹೆಚ್ಚು ಸೌಲಭ್ಯಗಳನ್ನು ಪೋರ್ಚುಗೀಸ್ ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೆಂದೂ, ಇಷ್ಟರಲ್ಲೇ ಗೋವಾದಲ್ಲಿರುವ ನೀಗ್ರೋ ಸೈನಿಕರು ರಜಾಕರಿಗೆ ಸಹಾಯ ಮಾಡಲು ಅಲ್ಲಿಗೆ ಹೋಗಲಿರುವರೆಂದೂ ಹೇಳಲಾಗಿದೆ

ಮಾಲ್ವಾ ಜಹಗೀರುದಾರರಿಗೆ ೪೮ ಗಂಟೆಗಳ ಎಚ್ಚರಿಕೆ

ಮಾಲ್ವಾ ಸರ್ಕಾರದ ಅಧಿಕಾರವನ್ನು ಒಪ್ಪದೆ ಅದನ್ನು ಎದುರಿಸಲು ಸಿದ್ಧತೆ ನಡೆಸಿ ೧೫೦ ಜನ ಸೈನಿಕರನ್ನು ಕೂಡಿಹಾಕಿದ ಠಾಕೂರ್ ಸಿಂಗ್‌ರವರು ೪೮ ಗಂಟೆಗಳವೊಳಗಾಗಿ ತಮ್ಮ ಜಹಗೀರನ್ನು ಒಪ್ಪಿಸಬೇಕೆಂದು ಮಾಲ್ವಾ ಸರ್ಕಾರದವರು ಠಾಕೂರ್ ಸಾಹೇಬರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ ಒಂದು ಸೈನ್ಯ ಪಡೆಯನ್ನು ಸಹ ಜಾಗೀರ್‌ವಾಡ ಕೋಟೆಯ ಹತ್ತಿರ ಮಧ್ಯ ಭಾರತ ಸರ್ಕಾರದವರು ಇಟ್ಟಿದ್ದಾರೆ.

ಹೈದರಾಬಾದಿಗೆ ಹೋಗುತ್ತಿದ್ದ ಶಸ್ತ್ರಾಸ್ತ್ರಗಳ ಪತ್ತೆ

ಪೂನಾದಿಂದ ಹೈದರಾಬಾದಿಗೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ೬೦೦ ಮದ್ದು ಗುಂಡುಗಳೂ, ನೂರಾರು ಚಾಕು ಕತ್ತಿಗಳು, ಪಿಸ್ತೂಲುಗಳು, ರೇಡಿಯೋ ಉಪಕರಣಗಳು, ನೂರಾರು ಮಣ ಕೃತಕ ರೇಷ್ಮೆ ಮತ್ತು ಇತರ ಸಾಮಾನುಗಳನ್ನು ಪೂನಾದಲ್ಲಿ ರೈಲ್ವೆ ಪೋಲೀಸಿನವರು ಪತ್ತೆ ಹಚ್ಚಿದ್ದಾರೆ ಯಂತ್ರಗಳನ್ನು ತುಂಬಿ ಹೈದರಾಬಾದಿನಲ್ಲಿರುವ ಯೂರೋಪಿಯನ್ನರ ಹೆಸರಿಗೆ ಕಳುಹಿಸಿದ್ದ ೧೨ ಟ್ರಂಕುಗಳನ್ನೂ ವಶಪಡಿಸಿಕೊಳ್ಳಲಾಗಿದೆ

ವರ್ಧಂತಿ ಉತ್ಸವ

ಚಾಮರಾಜನಗರದ ತಾಲ್ಲೂಕು ಕೆರೆಹಳ್ಳಿ ಗ್ರಾಮದ ಬಾಲಕರ ಪಾಠಶಾಲೆಯಲ್ಲಿ ಮೊನ್ನೆ ದಿನ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವು ಅತಿ ವೈಭವದಿಂದ ನಡೆಯಿತು. ಶಾಲೆಯ ಹೆಡ್‌ಮಾಸ್ಟರಾದ ಶ್ರೀ ವರದಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಿ ವಿ ಸ ರಾಯರು ಭಾಷಣ ಮಾಡಿದರು ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು.

ಅಭಿನಂದನಾ ಸಭೆ

ನೂತನ ಬಿರುದಾಂಕಿತರಾದ ಧರ್ಮಪ್ರಕಾಶ ಎಸ್ ನಿಜಲಿಂಗಪ್ಪ ಮತ್ತು ರಾಜಸೇವಾಸಕ್ತ ಡಿ ಸಿ ಸುಬ್ಬರಾಯಪ್ಪನವರ ಗೌರವಾರ್ಥವಾಗಿ ನಾಳೆ ಸಂಜೆ ೬ ಗಂಟೆಗೆ ಮಾಂಡವೆಲ್ಲಾ ... ನವರ ಛತ್ರದಲ್ಲಿ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

ಆಕಾಶವಾಣಿಯಲ್ಲಿ ಅಲ್ಲಾಡಿಯವರ ಸಂಗೀತ

ಈ ದಿನ ರಾತ್ರಿ ೮ ಘಂಟೆಯಿಂದ ೧೦ ಗಂಟೆಯ ವರೆವಿಗೆ ಆಕಾಶವಾಣಿಯಲ್ಲಿ ಆಸ್ಥಾನ ವಿದ್ವಾನ್ ಗಂ ... ಅಲ್ಲಾಡಿ ರಾಮನ ಅಯ್ಯಂಗಾರರ ಸಂಗೀತವು ನಡೆಯುವುದು

ಕಾಂಗ್ರೆಸ್ ಸೇವಾದಳ-ಹಿಂದೀ ಕವಾಯತು

ಮೈಸೂರು ಕೇ ದ ಸೇವಾದಳ ಸಮಿತಿಯ ವರಿಂದ ಪ್ರಕಟವಾಗಿರುವ ಹೇಳಿಕೆಯಂತೆ ಪುಸ್ತಕವು ಸದ್ಯ ಹಸಗತವಾಗಿದೆ. ಸೇವಾದಳದ ಕಾರ್ಯ ಸೇವಕ ಪಡೆಗಳ ಆಗ ಎಲ್ಲೆಲ್ಲೂ ಆಚರಿಸಲ್ಪಡುತ್ತಿರುವಾಗ ಈ ಬಗ್ಗೆ ಸುವವರಿಗೆ ಅನುಕೂಲವಾಗುವಂತೆ ಶ್ರೀ ಸ ವಾಸುದೇವರಾವ್ ರವರು ಕನ್ನಡದಲ್ಲಿ ಈ ಪುಸ್ತಕವನ್ನು ಬರೆದಿರುವುದ ಅಭಿನಂದನೀಯವಾದುದು ಅಖಿಲ ಭಾರತ ಕಾಂಗ್ರೆಸ್ ಸೇವಾದಳದ ಚಾಲಕರಾದ ಡಾ! ಹರ್ಡೀಕರ್ ರವರು ಇದಕ್ಕೆ ಮುನ್ನುಡಿಯನ್ನು ಬರೆದಿರುತಾರೆ. ಬೆಲೆ ೮ ಆಣೆ.

ಗಾಂಧಿ ಸ್ಮಾರಕ ಶಾಂತಿ ದಿನಾಚರಣೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಲ್ಲಿ ಈ ದಿನ ಸಂಜೆ ೮ ಗಂಟೆಗೆ ಮಹಾತ್ಮ ಗಾಂಧೀ ಸ್ಮಾರಕ ಮಾಸಿಕ ಶಾಂತಿ ದಿನಾಚರಣೆಯು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ನಾಟಕ

ಕನ್ನಡ ರಂಗಭೂಮಿ ಯ ಶತಮಾನೋತ್ಸವದ ಅಂಗವಾಗಿ ನಾಳೆ ಸಂಜೆ ರಾಜಧಾನಿಯ ಪಪ್ರಭಾ ಕಲಾ ಸಂಸ್ಥೆಯವರು 'ವಿಜಯನಗರ' ಎಂಬ ನಾಟಕವನ್ನು ಪ್ರದರ್ಶನಾಲಯದಲ್ಲಿ ಆಡುವರು.

ಪ್ರತಿ ದಿನ ೩ ಆಟಗಳು
29—7—48 ನೇ ಗುರುವಾರದಿಂದ
ಘರ್‌ಘರ್-ಕಿ-ಕಹಾನಿ-
—:ಪಾತ್ರ:—
ಲೀಲಾ ಚಿಟ್ನಿಸ್, ನಯಂಪಲ್ಲಿ, ಮಾಯಾ ಬ್ಯಾನರ್ಜಿ ಮೊದಲಾದವರು
ಒಲಂಪಿಯಾ ಟಾಕೀಸ್

ನಿಮ್ಮ ಮೈ ಮೋಹಕವಾದುದ್ದನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸ್ನಾನ ಪದಾರ್ಥವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಒದಗಿಸಿಕೊಡಬಲ್ಲದು.
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ರೈಲ್ವೆ ಕೆಲಸಗಾರರ ದಸ್ತಗಿರಿ ಬಗ್ಗೆ ಪ್ರತಿಭಟನೆ

ಮೈಸೂರಿನ ಸಮಾಜವಾದಿ ಪಕ್ಷದ ಕಾರ್ಯಕರ್ತರುಗಳ ಸಭೆಯು ಮೊನ್ನೆ ಶ್ರೀ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆದು, ರೈಲ್ವೆ ಕೆಲಸಗಾರರ ನಾಯಕರುಗಳನ್ನು ದಸ್ತಗಿರಿ ಮಾಡಿರುವುದನ್ನು ಖಂಡಿಸಿ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ಮತ್ತು ಹಿಂದೆ ಬೀಡಿ ಕಾರ್ಖಾನೆಯಲ್ಲಿ ಒದಗಿರುವ ಬಿಕ್ಕಟ್ಟನ್ನು ಸರ್ಕಾರದವರು ನಿವಾರಿಸಬೇಕೆಂದು ಪ್ರಾರ್ಥಿಸುವ ನಿರ್ಣಯಗಳು ಸ್ವೀಕೃತವಾದವು.

ಮೈಸೂರು ಸಿಟಿ ರೇಷನಿಂಗ್

ನಂ R 6 51 48

ರೇಷನ್ ಕಾರ್ಡು ಹೊಲ್ಡರುಗಳ ಗಮನಕ್ಕೆ ರವಿವಾರ ಸಿಟಿಯ ಎಲ್ಲಾ ರೇಷನ್ ಡಿಪೋ, ಮೊಹಲ್ಲಾ ಸಬ್ ಗೋಡೌನ್ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿನ ದಿನ ನಿತ್ಯ ಕೆಲಸ ನಡೆಯುವುದು. ಆ ದಿನ ಆ ದಿವಸ ಡಿಪೋಗಳ ಮುಚ್ಚಲ್ಪಡುತ್ತವೆ.

(ಸಹಿ)

ಎಂ. ಶ್ರೀನಿವಾಸಲುನಾಯ್ಡು

ಮೈಸೂರು ರೇಷನಿಂಗ್ ಆಫೀಸರ್

೨೮-೭-೪೮

ಬೊಂಬಾಯಿ
ಜಿ. ಎ. ಸರ್ಕಸ್
ಮೈಸೂರು ಜಿಮಖಾನ ಬಯಲಿನ ಚಪ್ಪರದಲ್ಲಿ
೩ ಆಟಗಳು-ಶುಕ್ರವಾರ, ಶನಿವಾರ ಭಾನುವಾರ
೩-೩೦, ೬ ೩೦, ಮತ್ತು ೯-೩೦ ಕ್ಕೆ
ಮಿಕ್ಕ ದಿನಗಳಲ್ಲಿ ೨ ಆಟಗಳು
ರಾತ್ರಿ ೬-೩೦, ಮತ್ತು ೯-೩೦ ಕ್ಕೆ
— ದರಗಳು ಮಾಮೂಲಿನಂತೆ —
[ಎಂ. ಸುಬ್ಬರಾಯನ್ ಅಂಡ್ ಕೋ]

Edited printed and published by A. R. Nagarajan at the Sadhvi Press D. Subbaiah Road Mysore

ರೈಲ್ವೆ ಪ್ರಕಾಶರಿಗೆ ತಂತಿ

ರೈಲ್ವೆ ಕೆಲಸಗಾರರ ನಾಯಕರುಗಳ ಬಿಡುಗಡೆ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಜೈಪ್ರಕಾಶರವರಿಗೆ ಕರ್ನಾಟಕ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಸ್ ನಾಗಭೂಷಣರವರು ಒಂದು ತಂತಿಯನ್ನು ಕಳುಹಿಸಿರುತ್ತಾರೆ.

ಶ್ರೀ ಗಾಯತ್ರೀ ಟಾಕೀಸ್
ತಾ॥ 30-7 48 ರಿಂದ ಪ್ರತಿ ದಿನ ೩ ಆಟಗಳು
Warner's ರವರ ಅಪೋಷ್ಠ ವರ್ಣರಂಜಿತ ಚಿತ್ರ
ಅಡ್ವೆಂಚರ್ಸ್ ಆಫ್ ರಾಬಿನ್‌ಹುಡ್
- ಮುಖ್ಯ ಪಾತ್ರ -
ಎರಾಲ್ ಫ್ಲಿನ್, ಆಲಿವಿಯ ಡಿಹಾವಿಲೆಂಡ್ ಮತ್ತು ಕ್ಲಾಡ್ ರೆಯಿನ್ಸ್

ರಾ ಜ ಕ ಮ ಲ್,
ಮೈಸೂರು
27-7-48 ರಿಂದ
ಅಪೋಷ್ಠ ಪ್ರಾರಂಭ
ಪ್ರತಿ ದಿನ ೩ ಆಟಗಳು
ಬಾಂಬೆ ಟಾಕೀಸಿನವರ
ಬಸಂತ್
(ಹಿಂದಿ)
—:ತಾರಾಗಣ.—
ಉಲ್ಹಾಸ್, ಮುಮ್ತಾಜ್ ಶಾಂತಿ, ಮುಮ್ತಾಜ್ ಅಲಿ, ಸುರೇಶ್ ಮುಂತಾದವರು

Morning Shows
From 30--7-48
For 4 days
White Cargo
—.With:—
Hedy Lamarr.
Walter Pidgeon

ಗಿಡಗಳನ್ನು ನೆಡುವ ಸಮಾರಂಭ

ಗ್ರಾಮಾಂತರಗಳಲ್ಲಿ ವೃಕ್ಷಗಳನ್ನು ನೆಡುವ ಸರ್ಕಾರದ ಯೋಜನೆಯ ಪ್ರಕಾರ ಮೊನ್ನೆ ಬೆಳಿಗ್ಗೆ ಪ್ರಜಾಪ್ರತಿನಿಧಿ ಸಭೆ ಸದಸ್ಯರೂ ಮತ್ತು ಪತ್ರಿಕೋದ್ಯೋಗಿಗಳೂ ಆದ ಶ್ರೀ ಎ. ಶ್ರೀನಿವಾಸಮೂರ್ತಿಯವರು ಕಳಸ್ತವಾಡಿ ಮತ್ತು ಸಿದ್ದಲಿಂಗಪುರಗಳಲ್ಲಿ ಗಿಡಗಳನ್ನು ನೆಟ್ಟರು.

ಹರಿಕಥೆ

ರಾಜಧಾನಿಯ ಅಶೋಕ ರಸ್ತೆಯಲ್ಲಿರುವ ಗೀತಾ ಪ್ರಚಾರಿಣೀ ಸಭೆಯಲ್ಲಿ ನಿನ್ನೆಯಿಂದ ೩೦ ದಿನಗಳು ಪ್ರತಿ ದಿನ ಸಂಜೆ ೬-೩೦ ಗಂಟೆಗೆ ಬ್ರ॥ ಕಾಲಘಾಟ್ ಕೀರ್ತನ ಪಟು ಕೆ ಎಸ್ ಗಣಪತಿಭಾಗವತರು ಸಂಪೂರ್ಣ ರಾಮಾಯಣ ಎಂಬ ಹರಿಕಥೆಯನ್ನು ತಮಿಳಿನಲ್ಲಿ ನಡೆಸುವರು.

ಕಾಳಪ್ಪನ ಗುಡಿ ಬೀದಿಯಲ್ಲಿರುವ ಶ್ರೀರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಸಂಬಂಧ ಮೂರ್ತಿ ಭಾಗವತರಿಂದ ಸೀತಾ ಕಲ್ಯಾಣ ಎಂಬ ಹರಿಕಥೆಯು ನಡೆಯುವುದು.

ಘನವಾದ ಸಂಗೀತ ಕಛೇರಿ
ಬಿಡಾರಂ ಕೃಷ್ಣಪ್ಪನವರ
ಪ್ರಸನ್ನ ಸೀತಾರಾಮ ಮಂದಿರ, ಮೈಸೂರು
31-7-48 ನೇ ಶನಿವಾರ
ಸಾಯಂಕಾಲ 6 ಘಂಟೆಗೆ
ಗಾಯಕ ಶಿಖಾಮಣಿ, ಅರೈಕುಡಿ
ರಾಮಾನುಜಯ್ಯಂಗಾರ್
ಹಾಡುಗಾರಿಕೆ
ವಿ॥ ಟಿ. ಗುರುರಾಜಪ್ಪನವರ
ಪಿಟೀಲು,
ವಿ॥ ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗವೂ ನಡೆಯುವುವು
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ
ಪ್ರವೇಶ

ಗಂಡಸರಿಗೆ	—	1- 8- 0
ಹೆಂಗಸರಿಗೆ	—	1- 0- 0
ಹುಡುಗರಿಗೆ	—	0- 8- 0

ಕಲಾ ಪ್ರದರ್ಶನ
ಕನ್ನಡ ರಂಗಭೂಮಿಯ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿರುವ
ಕಲಾ ಪ್ರದರ್ಶನವು
ದಸರಾ ವಸ್ತು ಪ್ರದರ್ಶನಾಲಯದಲ್ಲಿ
ತಾ॥ 2-8-48 ನೇ
ಸೋಮವಾರದವರೆವಿಗೂ ನಡೆಯಲಿರುವುದರಿಂದ ಪ್ರತಿ ದಿನವೂ ಕಾರ್ಯಕ್ರಮಗಳನ್ನು ಬದಲಾವಣೆಮಾಡಿ ಸಂಗೀತ ಭರತ ನಾಟ್ಯ, ಸಗ್ಗಿಯ ಕುಣಿತ ಬೊಂಬೆಯ ಆಟ ಇವೇ ಮೊದಲಾದ ಮನರಂಜನೆ ಪ್ರದರ್ಶನಗಳೂ ಮತ್ತು ಇತರ ವಿನೋದಾವಳಿಗಳೂ ನಡೆಯುತ್ತವೆ.
—:ಪ್ರದರ್ಶನದ ಕಾಲ.—
ಬೆಳಿಗ್ಗೆ 8-30 ರಿಂದ 12
ಮಧ್ಯಾಹ್ನ 3 ರಿಂದ ರಾತ್ರಿ 9
ಪ್ರವೇಶ ಧನ 2 ಆಣೆ
ಸಾರ್ವಜನಿಕರು ಪ್ರೋತ್ಸಾಹಿಸಬೇಕಾಗಿ ವಿನಂತಿ
ಎ. ಕೃಷ್ಣಮೂರ್ತಿರಾವ್
ಕನ್ವೀನರ್, ಪ್ರದರ್ಶನ ಸಮಿತಿ.

ನೀವು ಅನೇಕ ಬೆಂಗಾಲ್ ಸಿಲ್ಕ್ ಸೀರೆಗಳನ್ನು ನೋಡಿದ್ದೀರಿ. ಬಾಬುಸಾ ರವರ ಕಂಪೆನಿಯಲ್ಲಿರುವುದನ್ನು ನೋಡಿ ಎಂಥೆಂಥಾ ಒಳ್ಳೊಳ್ಳೆ ನಮೂನೆಗಳಿವೆ. ಅಂಬುದು ನಿಮ್ಮ ಮನಸ್ಸಿಗೇ ಖಾತ್ರಿಯಾಗುತ್ತದೆ ಬೆಂಗಾಲ್ ಸಿಲ್ಕ್ ಸೀರೆಗೆ ಹೆಸರುವಾಸಿಯಾದ ಅಂಗಡಿ ಎಂದರೆ ಬಾಬುಸಾ ಕಂಪೆನಿ, ಒಲ್ಡ್ ಮೈಸೂರು ಬ್ಯಾಂಕ್ ರೋಡ್ ಮೈಸೂರು.



ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೩೦-೭-೪೮ [ಸಂಚಿಕೆ ೯

ಭಾರತ ಸೈನ್ಯಕ್ಕೂ ರಜಾಕರರಿಗೂ ಘರ್ಷಣೆ

ತಾಲ್ಲೂಕು ಕಾಂಗ್ರೆಸ್ ಸಮಿತಿ

ಯಳಂದೂರು ೨೯

ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಭೆಯು ಶ್ರೀ ವೈ ಎಸ್ ಸೋಮಾರಾಧ್ಯರವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು, ಕೆಳಗೆ ಕಂಡಂತೆ ಸಮಿತಿಯನ್ನು ಪುನರ್ರಚಿಸಲಾಯಿತು—ಅಧ್ಯಕ್ಷರು-ಶ್ರೀ ಸಿ ನಂಜಪ್ಪನವರು, ಉಪಾಧ್ಯಕ್ಷರು-ಶ್ರೀ ಹರಿಕಪೋಲ್ತಮರಾಯರು, ಕಾರ್ಯದರ್ಶಿಗಳು-ಶ್ರೀಗಳು ಸಿ ಎಂ ಗೋವಿಂದಯ್ಯ ಮತ್ತು ಡಿ ಸೂರ್ಯನಾರಾಯಣರವರುಗಳು, ಸದಸ್ಯರು ಶ್ರೀಗಳು ವೈ ಎಸ್ ಸೋಮಾರಾಧ್ಯ, ಎಂ ಎ ಮಾದಪ್ಪ, ಬಿ ನಾಗರಾಜು, ಬಿ ರಾಜಶೇಖರಯ್ಯ, ಎಂ ಎ ಸೂರ್ಯನಾರಾಯಣ, ದೊಡ್ಡಯ್ಯ ನಾಯಕ, ಎಂ ನಾರಾಯಣರಾಯರು, ಮಾದನಾಯಕ, ಎ ಸೂರ್ಯನಾರಾಯಣ ಪಂಡಿತ್, ಎ ವಿ ರಾಮಚಂದ್ರಯ್ಯ ಮತ್ತು ಕೆಂಪೇಗೌಡ

ಎ ಐ ಸಿ ಸಿ ಸಭೆಗೆ ಶ್ರೀ ಅಗರಂ ಸೂರ್ಯನಾರಾಯಣ ಪಂಡಿತ್ ಮತ್ತು ಡಿ ಸೂರ್ಯನಾರಾಯಣರವರುಗಳು ಚುನಾಯಿತರಾಗಿದ್ದಾರೆ

ಹರಿಕಥೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಶ್ರೀ ಎ ಸಂಬಂಧಮೂರ್ತಿ ಭಾಗವತರಿಂದ ಕೃಷ್ಣ ರಾಮ ಎಂಬ ಕೀರ್ತನೆಯು ನಡೆಯುವುದು

ಬೀಡಿ ಕೆಲಸಗಾರರ ಮುಷ್ಕರ ಮುಕ್ತಾಯ

ರಾಜಧಾನಿಯ ಟಿಪ್ ಬೀಡಿ ಕಾರ್ಖಾನೆಯ ಕೆಲಸಗಾರರ ಮುಷ್ಕರವು ನಿನ್ನೆ ದಿನ ಮುಕ್ತಾಯಗೊಂಡಿತು. ಅ|| ಲೇಬರ್ ಕಮೀಷನರಾದ ಶ್ರೀ ಮಹಲಿಂಗಣ್ಣನವರ ಮಧ್ಯಸ್ಥಿಕೆಯಿಂದ ಕೆಲಸಗಾರರಿಗೂ ಮಾಲೀಕರಿಗೂ ಒಪ್ಪಂದವಾಗಿ ೨೨೦ ಜನ ಕೆಲಸಗಾರರು ಹಿಂತಿರುಗಿದರು

ಪೂರ್ಣಯ್ಯನವರ ಸ್ಮಾರಕ ವಿದ್ಯಾನಿಧಿ

ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕ ಯಳಂದೂರು ವಿದ್ಯಾನಿಧಿಯ ವಾರ್ಷಿಕ ಅಧಿವೇಶನವು ಮುಂದಿನ ಸೆಪ್ಟೆಂಬರ್ ೧೨ ನೇ ತಾ|| ಯಳಂದೂರು ಜಹಗೀರು ಸರ್ಕಾರ ಮಿಡಲ್ ಸ್ಕೂಲಿನಲ್ಲಿ ನಡೆಯುವುದು.

ಜಿಲ್ಲೆಗೊಂದು ಪ್ರದರ್ಶನ ಶಾಲೆ

ಸಂಸ್ಥಾನದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ವಸ್ತು ಪ್ರದರ್ಶನ ಶಾಲೆಗಳನ್ನು ಸ್ಥಾಪಿಸುವ ಯೋಜನೆಯು ವಿದ್ಯಾ ಶಾಖೆಯ ಪರಿಶೀಲನೆಯಲ್ಲಿದೆಯೆಂದು ತಿಳಿದುಬಂದಿದೆ. ಈ ಪ್ರದರ್ಶನ ಶಾಲೆಗಳಲ್ಲಿ ಆಯಾ ಜಿಲ್ಲೆಗಳ ಸಂಬಂಧ ಪಟ್ಟ ಐತಿಹಾಸಿಕ, ಅರ್ಥಿಕ, ವಾಸ್ತು ಶಿಲ್ಪ, ವ್ಯವಸಾಯ ಮುಂತಾದವುಗಳಿಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶಿಸಲಾಗುವುದೆಂದು ಹೇಳಲಾಗಿದೆ

ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ

ಮೈಸೂರು, ಬೆಂಗಳೂರು, ತುಮಕೂರು, ಹಾಸನ, ಕೋಲಾರ, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಇದೇ ಆಗಸ್ಟ್ ೧ನೇ ತಾ|| ಯಿಂದ ಬಲವಂತ ಪ್ರಾಥಮಿಕ ವಿದ್ಯಾಭ್ಯಾಸ ಪದ್ಧತಿಯು ಜಾರಿಗೆ ಬರತಕ್ಕದ್ದೆಂದು ಸರ್ಕಾರದ ಆಜ್ಞೆಯಾಗಿದೆ

ಗಾಂಧಿ ಸ್ಮಾರಕ ನಿಧಿಗೆ ಸಹಾಯ ಮಾಡಿ

ಶಂಕರರಾವ್ ದೇವ್‌ರವರ ಮನವಿ

ಮೈಸೂರು ೨೯

ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವ್‌ರವರು ಶ್ರೀ ಕಮಲನಯನ ಬಜಾಜ್, ರವರೊಡನೆ ನಿನ್ನೆ ಮಧ್ಯಾಹ್ನ ಇಲ್ಲಿಗೆ ಆಗಮಿಸಿದರು. ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರುಗಳೊಡನೆ ಮೈಸೂರು ಕಾಂಗ್ರೆಸ್ಸನ್ನ ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಐಕ್ಯವಾಗುವ ವಿಚಾರವಾಗಿ ೨ ಗಂಟೆಗಳ ಕಾಲ ಮಾತುಕತೆ ನಡೆಸಿದರು. ಗಾಂಧೀ ಸ್ಮಾರಕ ನಿಧಿಗೆ ಸರ್ವರೂ ಉದಾರವಾಗಿ ಸಹಾಯಮಾಡಬೇಕೆಂದು ಮನವಿ ಮಾಡಿದರು

ದ್ವೀಪವು ಮುಳುಗುತ್ತಿದೆ

ಬಿಸ್ಕೆಕೊಲ್ಲಿಯಲ್ಲಿರುವ ಪೆಸೆಟ್ ಎಂಬ ಸಣ್ಣ ದ್ವೀಪವು ಕ್ರಮೇಣ ನೀರಿನಲ್ಲಿ ಮುಳುಗುತ್ತಿದೆಯೆಂದೂ, ಅದನ್ನು ತಡೆಯಲು ಸ್ಪೇನ್ ಮತ್ತು ಫ್ರಾನ್ಸಿನ ಅಧಿಕಾರಿಗಳು ಆಲೋಚನೆ ನಡೆಸುತ್ತಿರುವರೆಂದೂ ಹೇಳಲಾಗಿದೆ

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೈದರಾಬಾದ್ ಪ್ರಶ್ನೆ

ಈ ದಿನ ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ಹೈದರಾಬಾದಿನ ಬಗ್ಗೆ ಚರ್ಚೆ ನಡೆಯುವುದೆಂದು ಹೇಳಲಾಗಿದೆ

ವರ್ಧಂತ್ಯುತ್ಸವಗಳು

ರಾಜಧಾನಿಯ ಶ್ರೀ ಜಗದಾಂಬಾ ಶಿಶುವಿಹಾರದಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂಬಂಧವಾಗಿ ಈ ದಿನ ಮಕ್ಕಳಿಗೆ ಸಿಹಿ ತಿಂಡಿಗಳನ್ನು ಹಂಚಲಾಯಿತು

ಚಾಮರಾಜನಗರದ ತಾಲ್ಲೂಕು ಬೋರ್ಡ ನವರಿಂದಲೂ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಕಳೆದ ಮಂಗಳವಾರ ಅಲ್ಲಿನ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಶ್ರೀ ಎಂ ಸಿ ಸುಬ್ಬಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಭುಗಳೊಡನೆ ಮಂತ್ರಿಗಳ ಭೇಟಿ

ಮೈಸೂರು ೨೯

ಈ ದಿನ ಜನಪ್ರಿಯ ಸಚಿವರುಗಳು ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರೆಂದು ತಿಳಿದುಬಂದಿದೆ

ರಜಾಕರರಿಗೂ ಭಾರತ ಸೈನಿಕರಿಗೂ ಘರ್ಷಣೆ

ಭಾರತದ ಗಡಿಯಲ್ಲಿರುವ ಸೇವಗ್ರಾಮ ಹತ್ತಿರ ಮೇಲೆ ರಜಾಕರರು ನೊನ್ನೆ ಧಾಳಿ ನಡೆಸಿದರೆಂದೂ, ಭಾರತದ ಸೈನಿಕರು ಹೈದರಾಬಾದಿನ ಗಡಿಯೊಳಕ್ಕೆ ೨ ಮೈಲಿ ನುಗ್ಗಿ ರಜಾಕರರನ್ನು ಹಿಮ್ಮೆಟ್ಟಿಸಿ ೩೫ ಜನರನ್ನು ಸೆರೆ ಹಿಡಿದರೆಂದೂ ಹೇಳಲಾಗಿದೆ.

ಭಾರತದ ಹಳ್ಳಿಯ ಮೇಲೆ ರಜಾಕರರ ಮುತ್ತಿಗೆ

ಅಕ್ಕಲಕೋಟೆ ತಾಲ್ಲೂಕಿನ ಹದಲಿ ಗ್ರಾಮದ ಮೇಲೆ ೩ ಸಾವಿರ ರಜಾಕರರು ಮೊನ್ನೆ ದಿನ ಮುತ್ತಿಗೆ ಹಾಕಿ ಅಲ್ಲಿನ ಮುಖ್ಯಾಲಯಗಳನ್ನು ಜನರನ್ನು ಗುಂಡಿಟ್ಟು ಹೊಡೆದು ಕೊಲೆ ಮಾಡಿದರೆಂದು ಹೇಳಲಾಗಿದೆ. ಇವರ ದೌರ್ಜನ್ಯವನ್ನು ಅಡಗಿಸಲು ಪೋಲೀಸರಿಂದ ಭಾರತ ಸೈನ್ಯವನ್ನು ಕಳುಹಿಸಲಾಗಿದೆ.

ಮೈಸೂರಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಕೇಂದ್ರ ಕಛೇರಿ

ವಿಶ್ವ ಆರೋಗ್ಯ ಸಂಸ್ಥೆಯು ಪ್ರಾದೇಶಿಕ ಕೇಂದ್ರವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗುವುದೆಂದು ಕೇಂದ್ರ ಸರ್ಕಾರದ ಸಚಿವರಾದ ರಾಜಕುಮಾರಿ ಅಮೃತ ಕೌರರು ತಿಳಿಸಿರುತ್ತಾರೆ

೧೧೦ ರಾಗಿ ಮೂಟೆ ಪತ್ತೆ

ಚಾಮರಾಜನಗರ ೨೯

ಚಾಮರಾಜನಗರದ ತಾಲ್ಲೂಕು ಮರಹಳ್ಳಿ ಸಂತೆಯಲ್ಲಿ ೧೦ನೇ ತಾ|| ನೇರಿಂಬೆ ಮಾರುತ್ತಿದ್ದ ೧೧೦ ಮೂಟೆ ರಾಗಿಯನ್ನು ಹೆಲ್ತ್ ಅಸಿಸ್ಟೆಂಟರೂ ಪೊಲೀಸ್ ಇನ್ಸ್‌ಪೆಕ್ಟರೂ ಕಳೆದ ೨೩ ನೇ ತಾ|| ಪತ್ತೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ಇಲ್ಲಿನ ಡಿಪೋದಲ್ಲಿ ಅದನ್ನು ನಿಗದಿ ಬೆಲೆಗೆ ಮಾರಲಾಗುತ್ತಿದೆ.

ಅಧಿಕ ಲಾಭದ ಪತ್ತೆ

ಅವೆನ್ಯೂ ರಸ್ತೆಯಲ್ಲಿರುವ ಲಕ್ಷ್ಮೀ ಸಾಬೂನು ಕಂಪನಿಯವರು ಅಧಿಕ ಲಾಭಕ್ಕಾಗಿ ಬಚ್ಚಿಟ್ಟಿದ್ದ ಸಾಮಾನುಗಳನ್ನು ಮಾರುತ್ತಿದ್ದುದನ್ನು ಈ ದಿನ ಲಂಚ ನಿರೋಧ ಶಾಖೆಯವರು ಮತ್ತು ಪೋಲೀಸರು ಪತ್ತೆ ಹಚ್ಚಿ ಅಂಗಡಿಯ ಮಾಲೀಕರನ್ನು ಬಂಧಿಸಿ ಮುಂದಿನ ತನಿಖೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ. ಆಪಾದಿತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅಂಗಡಿಯಲ್ಲಿದ್ದ ಕಬ್ಬಿಣದ ಸಾಮಾನುಗಳನ್ನು ವಶಪಡಿಸಿಕೊಳ್ಳಲಾಗಿದೆ

ರಾಜಾಜಿಯವರಿಗೆ ಪುರಸಭೆಯ ಬಿನ್ನವತ್ತಳೆ

೨೦೦೦ ರೂ. ಮುಂಜೂರು

ಸ್ವಂ ವ. ಫೋ] ಬೆಂಗಳೂರು ೨೦

ಬರುವ ತಿಂಗಳು ಇಲ್ಲಿಗೆ ಆಗಮಿಸಲಿರುವ ಭಾರತದ ಗವರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಪೌರಸಭೆಯವರು ಒಂದು ಬಿನ್ನವತ್ತಳೆಯನ್ನು ಅರ್ಪಿಸಲು ನಿರ್ಧರಿಸಿ ಅದಕ್ಕಾಗಿ ೨೦೦೦ ರೂ. ಮಂಜೂರು ಮಾಡಿರುತ್ತಾರೆ. ಇದಕ್ಕಾಗಿ ಒಂದು ಉಪ ಸಮಿತಿಯನ್ನು ರಚಿಸಲಾಗಿದೆ.

§ ಅಖಿಲ ಭಾರತ ಕಾಂಗ್ರೆಸ್ಸಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವರವರು ಮತ್ತು ಶ್ರೀ ಕಮಲನಯನ ಬಜಾಜ್‌ರವರು ಈ ದಿನ ಮೈಸೂರಿನಿಂದ ಇಲ್ಲಿಗೆ ಆಗಮಿಸಿದರು. ಅವರುಗಳು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರೊಡನೆಯೂ ಮತ್ತು ಕಾಂಗ್ರೆಸ್ ಶಾಸಕರೊಡನೆಯೂ ಮಾತುಕತೆ ನಡೆಸಿದರು. ಅತಿಥಿಗಳ ಗೌರವಾರ್ಥವಾಗಿ ಪೌರಸಭೆಯವರು ಇಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು.

§ ಕೇಂದ್ರ ಸರ್ಕಾರದ ವ್ಯವಸಾಯ ಶಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಜೋಸೆಫ್ ಎಂಬುವರು ಈ ದಿನ ಇಲ್ಲಿಗೆ ಆಗಮಿಸಿದರು. ಇಂಡಿಯನ್ ಸೈನ್ಸ್ ಇನ್ಸ್ಟಿಟ್ಯೂಟಿನಲ್ಲಿ ಸಂಶೋಧನಾಲಯದ ಕಟ್ಟಡಕ್ಕೆ ಶಿಲಾನ್ಯಾಸವನ್ನು ಅವರು ಇಲ್ಲಿಗೆ ಆಗಮಿಸುವರೆಂದು ಹೇಳಲಾಗಿದೆ

ಮೆಡಿಕಲ್ ಕೌನ್ಸಿಲ್ಲಿನ ಪುನರ್ರಚನೆ

ಸರ್ಕಾರದವರು ಮೆಡಿಕಲ್ ಕೌನ್ಸಿಲ್ಲನ್ನು ೨ ವರ್ಷಗಳ ಮಟ್ಟಿಗೆ ಪುನರ್ರಚಿಸಿ ಸೀನಿಯರ್ ಸರ್ಜನನ್ನು ಅಧ್ಯಕ್ಷರನ್ನಾಗಿಯೂ, ಮತ್ತು ಡಾ|| ಆರ್ ನಾಗೇಂದ್ರ, ಡಾ|| ಪಿ ಕೃಷ್ಣರಾವ್, ಶ್ರೀ ಎಂ ಎಸ್ ರಾಮರಾವ್, ಮಿ|| ಎಸ್ ಎಸ್ ಪರೋನ, ಡಾ|| ಬಿ ಕೆ ನಾರಾಯಣರಾವ್, ಶ್ರೀ ಎಂ ಎ ಮಹದೇವ ಮತ್ತು ಮಿಸ್ ಡಿಪ್ಪ್ಯ ಬಿ ರೀಜಿಸ್ಟ್ರೇಶನ್‌ಗಳನ್ನು ಸದಸ್ಯರುಗಳನ್ನಾಗಿಯೂ ನೇಮಿಸಿದ್ದಾರೆ.

* ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಇನ್ನು ಮುಂದೆ ಕಾಗದ ಪತ್ರಗಳನ್ನು ಬರೆಯುವಾಗ ಭಾರತೀಯರೆಲ್ಲರಿಗೂ, ಗಂಡಸರಿಗೆ ಶ್ರೀಯುತ ಎಂದೂ, ಹೆಂಗಸರಿಗೆ ಶ್ರೀಮತಿ ಎಂದೂ, ವಿದೇಶೀಯರಲ್ಲಿ ಗಂಡಸರಿಗೆ ಮಿಸ್ಟರ್ ಎಂದೂ ಮತ್ತು ಹೆಂಗಸರಿಗೆ ಮಿಸೆಸ್ ಎಂದೂ ಗುರ್ತು ಮುಸಲ್ಮಾನರಲ್ಲಿ ಗಂಡಸರಿಗೆ ಜನಾಬ್ ಮತ್ತು ಹೆಂಗಸರಿಗೆ ಬೇಗಂ ಎಂದೂ ವಿಳಾಸದೊಡನೆ ಬರೆಯಬೇಕೆಂದು ಸೂಚಿಸಿದ್ದಾರೆ

ರಾಜಾಜಿ ಇಂಜನಿಯರಿಂಗ್ ಕಾಲೇಜು

ಬೆಂಗಳೂರು ಪೌರಸಭೆಯ ಆಶ್ರಯದಲ್ಲಿ ಇಂಜನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕೆಂದೂ, ಅದಕ್ಕಾಗಿ ೫ ಲಕ್ಷ ರೂ ವೆಚ್ಚ ಮಾಡಬೇಕೆಂದೂ ನಿನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ನಿರ್ಧರಿಸಲಾಯಿತು

ನೆಹರೂ-ಪಟೇಲ್-ನಿಜಾಮ್ ಸಮಾಲೋಚನೆ

ಹೈದರಾಬಾದಿನ ಬಿಕ್ಕಟ್ಟನ್ನು ಬಗೆಹರಿಸಲು ದೆಹಲಿಗೆ ಹೋಗಿರುವ ಸರ್ ಮಿರ್ಜಾರವರು ನಿನ್ನೆ ದಿನ ಪಂಡಿತ ನೆಹರೂ ಮತ್ತು ಸ|| ಪಟೇಲರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ

ಸಾರ್ವಜನಿಕ ಸೇವಾ ಪದಕಗಳು

ಮೈಸೂರು ೩೦

ನಿನ್ನೆ ೭೨ನೇ ಜನ್ಮದಿನ ಸಂಬಂಧದಲ್ಲಿ ನಡೆದ ವಿಶೇಷ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಕೆಳಗೆ ಕಂಡ ಮಹನೀಯರುಗಳಿಗೆ ಸಾರ್ವಜನಿಕ ಸೇವಾ ಪದಕಗಳನ್ನು ದಯ ಪಾಲಿಸಿರುತ್ತಾರೆ—

ಶ್ರೀಗಳಾದ ಆ. ಗಂಗಶೆಟ್ಟಿ ನಂಜುಂಡಪ್ಪ, ಪಿ ಎರಿ ಮ ನೆ ನಂಜುಂಡಶಾಸ್ತ್ರಿ, ಎಸ್ ಸಂಪಂಗಿರಾಮಯ್ಯ, ಮಂಗಟ ದೊಂಡೂಸಾ, ಬಿ ಚೂಡೆಗೌಡ, ಕೆ ಸಂಪದ್ಗಿರಿರಾವ್, ವೈ ಇ ಯಂಗ್, ಶ್ರೀಮತಿ ಭಗತ್, ಟಿ. ನಿವಾರಣಪ್ಪ, ಶ್ರೀಮತಿ ಆರ್ ರಕ್ಷಮ್ಮ, ಎಂ ಪ ನಿವೆಂಕಟಪ್ಪ, ಹೆಗ್ಗೆ ತಿಪ್ಪೆ ರುದ್ರಪ್ಪ, ಎಸ್ ಹನುಮಂತಪ್ಪ, ಕೆ ಪಿ ರಾಮಯ್ಯ, ಚಲುವಯ್ಯ, ಎಂ ವ ಟ್ಟಯ್ಯ, ಕೆ ಎಸ್ ಅಶ್ವತರಾವ್, ಸಿ ಜಿ ವೆಂಕಟೇಶಯ್ಯ, ಅಬ್ದುಲ್ ಲತೀಫ್, ಬಿ ಜಿ ರಾಜಗೋಪಾಲ ಮೊದಲಿಯಾರ್, ವಿ ಸೆಸ್ ಕ್ಲಾರ್ನ್ಸ್ ಟಾಂಲಿನ್ಸ ವೆಂಕಟರಾಮಯ್ಯಸೆಟ್ಟಿ, ಮುಲಕಲ್ ಸಿನಂಬನ ಶೆಟ್ಟಿ, ಹ ಲೀಕೆರೆ ಶಾಂತಪ್ಪ, ಹೊನ್ನಗಿರಿಗೌಡ, ಕಾಸಲ ಶ್ರೀನಿವಾಸಶೆಟ್ಟಿ, ಮುರುಳ ಸಿದ್ದಪ್ಪ, ಕೆ ಶ್ರೀಕಂಠಯ್ಯ, ನ ರಿವಾಸ್, ಕೋಲ್ಲಪ್ಪ, ಶ್ರೀಮತಿ ಬಿ ಭೀಮಕ್ಕ, ಪುರುಷಪ್ಪ, ಜಿ ವಿ ಮಹಮದ್ ನಜೀರ್, ಟಿ ಎಸ್ ಸುಬ್ಬರಾವ್, ಜಿ ಕೆ ಮಡ್ಡೀಗೌಡ, ಜಿ ಎ ಸಾಹೆಬ್ ಜಾನ್, ದಳವಾಯ್ ಬಸಲಿಂಗಪ್ಪ, ಹೆಚ್ ನ ಸಿಂಹಯ್ಯ, ಗೆಡ್ಡೆ ವೀರಣ್ಣ, ಶ್ರೀಮತಿ ಗಂಗಮ್ಮ, ಶ್ರೀಮತಿ ಗೌರಮ್ಮ, ಆಟದ ಪೆನ್ನಯ್ಯ, ಮತ್ತು ಕಲ್ಲಹಳ್ಳಿ ಕೆಂಗಲಪ್ಪ

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜಿಮಖಾನಾಯಿಯನ ಕಟ್ಟೆಯಲ್ಲಿ

೩ ಆಟಗಳು:—ಶುಕ್ರವಾರ, ಶನಿವಾರ ಭಾನುವಾರ

೩-೩೦, ೬-೩೦, ಮತ್ತು ೯-೩೦ ಕ್ಕೆ

ಮಿಕ್ಕ ದಿನ ಗಳಲ್ಲಿ ೨ ಆಟಗಳು

ಮಾತ್ರ ೬-೩೦, ಮತ್ತು ೯-೩೦ ಕ್ಕೆ

— ದರಗಳು ಮಾಮೂಲಿನಂತೆ —

[ಸಿ. ಸ ಬ್ಬರಾಮಯ್ಯ ಅಂಡ್ ಕೋ]

ಸರೋಜಿನಿ ನಾಯ್ಡುರವರ ಚಿನ್ನದ ಸರ ಕಳುವು

ಸಂಯುಕ್ತ ಪ್ರಾಂತ್ಯದ ಗೌರ್ನರಾದ ಶ್ರೀಮತಿ ಸರೋಜಿನಿನಾಯ್ಡುರವರು ಪೌರಸಭೆಯು ಮಾನ ಪತ್ರವನ್ನು ಸ್ವೀಕರಿಸಲು ಮ್ಯುನಿಸಿಪಲ್ ಶಾಸನ ಸಭೆಯ ಭವನಕ್ಕೆ ಕಳೆದ ಸೋಮವಾರ ಹೋದಾಗ, ತಮ್ಮ ಚಿನ್ನದ ಸರವನ್ನು ಕಳೆದುಕೊಂಡರೆಂದು ವರದಿಯಾಗಿದೆ ಸರದಲ್ಲಿ ವಜ್ರದ ಪದಕವಿದ್ದು, ಅದರ ಮೇಲೆ ಗಣೇಶನ ಚಿತ್ರವನ್ನು ಕೆತ್ತಲಾಗಿತ್ತೆಂದೂ, ಅದು ಅವರ ಬಹಳ ಪ್ರಿಯವಾದ ವಸ್ತುವಾಗಿತ್ತೆಂದೂ ಹೇಳಲಾಗಿದೆ

ಶ್ರೀಗಳಾದ ಕೆ ಶ್ರೀಕಂಠಯ್ಯ ಮತ್ತು ಪಂದಾನ್‌ರವರುಗಳಿಗೆ ಸ್ಕೌಟ್ ಪದಕಗಳನ್ನು ಮಹಾಪ್ರಭುಗಳು ದಯಪಾಲಿಸಿರುತ್ತಾರೆ

ಶ್ರೀ ಗಣೇಶಾ ಟಾಕೀಸ್

31 7—48 ರಿಂದ

ಪ್ರತಿ ದಿನ 3 ಆಟಗಳು

ಚ ಜ ಚಿ ತ್ರ ದ ವ ರ

★ ಧನಭಗತ್ ★

(ಹಿಂದಿ)

ಮೈಸೂರಿನಲ್ಲಿ ಇದೇ ಪ್ರಥಮ ಪ್ರದರ್ಶನ

ಕಮಲಾ ಚಟರ್ಜಿ,

ಕಮಾಲ್ ಜಮೀನ್ದಾರ್

ಮುಂದಿನ ಬದಲಾವಣೆ

ರಣಜಿತ್‌ರವರ

ಫೂಲ್ ವಾರಿ

ಖುರ್ಷಿದ್ ಮತ್ತು ಮೋತಿಲಾಲ್

ಶ್ರೀ ಗಾಯತ್ರೀ ಟಾಕೀಸ್

ತಾ॥ 30-7-48 ರಿಂದ ಪ್ರತಿ ದಿನ ೩ ಆಟಗಳು

Warner's ರವರ ಅಮೋಘ ವರ್ಣರಂಜಿತ ಚಿತ್ರ

ಅಡ್ವೆಂಚರ್ಸ್ ಆಫ್ ರಾಬಿನ್‌ಹುಡ್

-:ಮುಖ್ಯ ಪಾತ್ರ:-

ಎರಾಲ್ ಫ್ಲೈನ್, ಅಲಿವಿಯ ಡಿಹಾವಿಲೆಂಡ್ ಮತ್ತು ಕ್ಲಾಡ್ ರೆಯಿನ್ಸ್

Edited printed and published by A. R. Nagarajan at the Sadhvi Press D. Subbaiah Road Mysore

ವರ್ಧಂತಿ ಉತ್ಸವ

ಮೈಸೂರು ತಾಲ್ಲೂಕು ಹಿನಕಲ್ಲಿನ ಬಾಲಕರ ಪಾಠಶಾಲೆಯಲ್ಲಿ ಕಳೆದ ೨೭ ನೇ ತಾ॥ ಶ್ರೀ ಡಿ ಜಯದೇವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು ನೆರವೇರಿತು ಮಕ್ಕಳಿಗೆ ಸಿಹಿ ತಿಂಡಿಗಳನ್ನು ಹಂಚಿದ ಮೇಲೆ ಪ್ರಭುಗಳ ಶ್ರೇಯ ಪ್ರಾರ್ಥನೆ ಮಾಡಲಾಯಿತು.

ಸೀಮೆ ಎಣ್ಣೆ ಅಭಾವ

ಟಿ ನರಸೀಪುರದ ತಾಲ್ಲೂಕು ಕಲಕಾಡು ಹೋಬಳಿಯ ಗ್ರಾಮ ಗಳಲ್ಲಿ ಸೀಮೆ ಎಣ್ಣೆ ಇಲ್ಲದೆ ಜನಗಳು ತುಂಬಾ ಕಷ್ಟಪಡುತ್ತಿದ್ದಾರೆ. ಇದನ್ನು ಕೂಡಲೇ ಒದಗಿಸಬೇಕೆಂದು ಅಲ್ಲಿನ ನಿವಾಸಿಗಳೊಬ್ಬರು ಪ್ರಾರ್ಥಿಸಿರುತ್ತಾರೆ

ಅಪೇರಾ ಟಾಕೀಸ್

31 7—48 ರಿಂದ

ಪ್ರತಿದಿನ ೩ ಆಟಗಳು

ವಿದ್ಯಾಪತಿ

ಪಾತ್ರ — (ತಮಿಳು)

ಟಿ ಆರ್ ರಾಮಚಂದ್ರನ್, ಎಂ ಆರ್ ಸ್ವಾಮಿನಾಥನ್, ಟಿ ಪ್ರೇಮಾವತಿ ನಂಬಿಯಾರ್, ಭಾಗ್ಯಂ

Morning Shows
From 29-7-48
DOLL FACE

ಘನವಾದ ಸಂಗೀತ ಕಛೇರಿ

ಬಿಡಾರಂ ಕೃಷ್ಣಪ್ಪನವರ

ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

31-7-48 ನೇ ಶನಿವಾರ

ಸಾಯಂಕಾಲ 6 ಘಂಟೆಗೆ

ಗಾಯಕ ಶಿಖಾಮಣಿ, ಆಸ್ಥಾನ ವಿದ್ವಾನ್

ರಾಮಾನುಜಯ್ಯಂಗಾರ್

ಹಾಡುಗಾರಿಕೆ,

ವಿ॥ ಟಿ. ಗುರುರಾಜಪ್ಪನವರ

ಪಿಟೀಲು,

ವಿ॥ ಟಿ. ಎಂ. ಪುಟ್ಟಸ್ವಾಮಯ್ಯ

ನವರ ಮೃದಂಗವೂ ನಡೆಯುವುವು

ಬೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ

ಪ್ರವೇಶ

ಗಂಡಸರಿಗೆ	—	1-8-0
ಹೆಂಗಸರಿಗೆ	—	1-0-0
ಹುಡುಗರಿಗೆ	—	0-8-0

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ಮುನಿಸಿಪಲ್ ನಂಬರು ಮನೆ ನಂ ೬೫

ಕೃಷ್ಣಂರಾಜಮೊಹಲ್ಲದಲ್ಲಿರುವ ಮುನಿಸಿಪಲ್ ನಂಬರು ಮನೆ ನಂ. ೩೪

"ಸಾಧ್ವಿ" ಕಛೇರಿಯಲ್ಲಿ ವಿಚಾರಿಸಿರಿ

.... ಪ್ರಭಾ ....

30—7—48 ರಿಂದ

3 ನೇ ವಾರ

ಅರೇಬಿಯನ್ ನೈಟ್ಸ್

★ ಕನ್ನನ್ ದೇವಿ ★ ನವಾಬ್

ಕಲಾ ಪ್ರದರ್ಶನ

ಕನ್ನಡ ರಂಗಭೂಮಿಯು ಕಲಾಮಹೋತ್ಸವದ ಅಂಗವಾಗಿ ಏರ್ಪಡಿಸಿರುವ

ಕಲಾ ಪ್ರದರ್ಶನವು

ದಸರಾ ವಸ್ತು ಪ್ರದರ್ಶನಾಲಯದಲ್ಲಿ

ತಾ॥ 2-8-48 ನೇ

ಸೋಮವಾರದವರೆವಿಗೂ ನಡೆಯಲು ಏರ್ಪಾಡಾಗಿರುತ್ತದೆ. ಪ್ರತಿ ದಿನವೂ ಕಾರ್ಯಕ್ರಮಗಳನ್ನು ಬದಲಾವಣೆಮಾಡಿ ಸಂಗೀತ, ಭರತ ನಾಟ್ಯ, ಸುಗ್ಗಿಯ ಕುಣಿತ ಬೊಂಬೆಯ ಆಟ ಇವೇ ಮೊದಲಾದ ಮನರಂಜಕ ಪ್ರದರ್ಶನಗಳೂ ಮತ್ತು ಇತರ ವಿನೋದಾವಳಿಗಳೂ ನಡೆಯಲಿರುತ್ತವೆ.

—:ಪ್ರದರ್ಶನದ ಕಾಲ:—

ಬೆಳಗ್ಗೆ 8-30 ರಿಂದ 12

ಮಧ್ಯಾಹ್ನ 3 ರಿಂದ ರಾತ್ರಿ 9

ಪ್ರವೇಶ ಧನ 2 ಆಣೆ

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಎ. ಕೃಷ್ಣಮೂರ್ತಿರಾವ್

ಕನ್ವೀನರ್

ಪ್ರಭುದೇವಾ ಟಾಕೀಸಿನಲ್ಲಿ

30-7-48 ರಿಂದ : : ಅಮೋಘವಾದ 2 ನೇ ವಾರ

ಪ್ರತಿ ದಿನ 3 ಆಟಗಳು

ರಾಯಲ್ ಟಾಕೀಸಿನವರ

★ ಸಾವಿತ್ರಿ ಸಾವಿತ್ರಿ ★

(ತಮಿಳು)

ನಟ ವರ್ಗ:—ಶಾಂತ ಆಪ್ಟೆ, ಕೋಕಿಲ ಗಾನಂ ಎಂ. ಎಸ್. ಸುಬ್ಬಲಕ್ಷ್ಮಿ, ವೈ. ವಿ ರಾವ್, ಕೆ. ಸಾರಂಗಪಾಣಿ

ಜಿ. ಎ. ಚಲ್ಲಪ್ಪ, ಕೃಷ್ಣವೇಣಿ ಮುಂತಾದವರು

ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೩೧-೭-೪೮ [ಸಂಚಿಕೆ ೧೦

೪೦೦ ಬಟ್ಟೆ ಗಿರಣಿಗಳ ಮಾಲು ಸರ್ಕಾರದ ವಶ

ಬಿರುದಾಂಕಿತರಿಗೆ ಸನ್ಮಾನ

ಮೈಸೂರು ೩೦

ಈ ವರ್ಷದ ಬಿರುದಾಂಕಿತರಾದ ರಾಜಸೇವಾಸಕ್ತ ಡಿ ಸಿ ಸುಬ್ಬರಾಯಪ್ಪ, ಧರ್ಮಪ್ರಕಾಶ ಎಂ ದಾಸಪ್ಪ ಮತ್ತು ಸಾರ್ವಜನಿಕ ಸೇವಾ ಪದಕ ಪಡೆದ ಶ್ರೀ ಕೆ ಆರ್ ತೋಟಯ್ಯನವರುಗಳ ಗೌರವಾರ್ಥವಾಗಿ ನಿನ್ನೆ ಸಂಜೆ ರಾಜಧಾನಿಯ ದೇವಾಂಗ ಸಂಘದವರು ಕಾಡಯ್ಯನವರ ಛತ್ರದಲ್ಲಿ ಸನ್ಮಾನ ಸಭೆಯನ್ನು ಏರ್ಪಡಿಸಿದ್ದರು ಸಭೆಯ ಸಚಿವರಾದ ಶ್ರೀ ಶಾಮಿಡಿ ಸುಬ್ಬರಾಮ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆ ಮತ್ತು ಅಭಿನಂದನಾ ಪದ್ಯವಾಚನ ಪಠನವಾದ ನಂತರ ಸಂಘದ ಪರವಾಗಿ ಶ್ರೀ ಎಂ ಶಂಕರಯ್ಯನವರು ಬಿನ್ನವತ್ತಳೆಯನ್ನು ಅರ್ಪಿಸಿ ಮತ್ತು ಅತಿಥಿಗಳನ್ನು ಅಭಿನಂದಿಸಿದರು. ಶ್ರೀಗಳಾದ ಬಿ ಸೀತಾರಾಮಯ್ಯ, ಬಿ ನಾರಾಯಣಸ್ವಾಮಿ ಮತ್ತು ಸಿ ಬಿ ಮಲ್ಲಪ್ಪನವರುಗಳು ಭಾಷಣ ಮಾಡಿ ಅವರುಗಳನ್ನು ಅಭಿನಂದಿಸಿದರು ಸಚಿವರು ಭಾಷಣ ಮಾಡಿ ಬಿರುದಾಂಕಿತರ ಸೇವೆಯನ್ನು ಕೊಂಡಾಡಿದರು ಅತಿಥಿಗಳು ಭಾಷಣ ಮಾಡಿ ತಮ್ಮನ್ನು ಗೌರವಿಸಿದುದಕ್ಕೆ ಸಂಘದವರನ್ನು ವಂದಿಸಿದರು

ಹರಿಕಥೆ

ಏಕಾದಶೀ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ಚಾಮರಾಜಪುರಂನಲ್ಲಿರುವ ಅಡ್ವೋಕೇಟ್ ಕೆ ಪುಟ್ಟರಾಯರ ಬಂಗಲೆಯಲ್ಲಿ ವೇ|| ಟಿ ಕೆ ವೇಣುಗೋಪಾಲ ದಾಸರವರಿಂದ ಭಕ್ತ ಸುಧಾಮ ಎಂಬ ಹರಿಕಥೆಯು ನಡೆಯಲು ಏರ್ಪಡಿಸಿದೆ ೧೯ರಿಗೂ ಆಹ್ವಾನವುಂಟು

ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪ್ರತಿ ದಿನ ಸಂಜೆ ೬|| ಗಂಟೆಗೆ ಶ್ರೀಮತಿ ರಮಾಮಣಿಬಾಯಿ ಪರೋಪಕಾರಿಯವರಿಂದ ದೇವರನಾಮಗಳು ಮತ್ತು ಶ್ರೀ ರಾಯರ ಸ್ತೋತ್ರಗಳು ಸಂಗೀತ ರೂಪದಲ್ಲಿ ನಡೆಯುವುವು

ಇದೇ ಶ್ರಾವಣ ಶುದ್ಧ ಪಾಡ್ಯದಿಂದ ದಶಮಿಯವರೆಗೆ ಪ್ರತಿ ದಿನ ಸಂಜೆ ೬|| ಗಂಟೆಗೆ ಶ್ರೀ ವೇಣುಗೋಪಾಲ ದಾಸರವರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯು ನಡೆಯುವುದು

ಬ್ಯಾಸ್ಕೆಟ್ ಬಾಲ್ ಸಂಘ

ಈ ದಿನ ನಡೆಯಬೇಕಾಗಿದ್ದ ಮೈಸೂರು ಜಿಲ್ಲಾ ಬ್ಯಾಸ್ಕೆಟ್ ಬಾಲ್ ಸಂಘದ ಕಾರ್ಯ ಸಭೆಯು ನಾಳೆ ಸಂಜೆ ೬ ಗಂಟೆಗೆ ಡಿ ಬನುಮಯ್ಯನವರ ಶಾಲೆಯಲ್ಲಿ ನಡೆಯುತ್ತದೆಯೆಂದೂ ಸಕಲ ಕ್ಲಬ್ಬುಗಳೂ ಮತ್ತು ಶಾಲೆಗಳೂ ಸಹಕರಿಸಬೇಕೆಂದೂ ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ

ತೇರ್ಗಡೆಯಾಗದ ವಿದ್ಯಾರ್ಥಿಗಳ ಬಲಾತ್ಕಾರದ ಪ್ರವೇಶ

ಭಾರತದಲ್ಲಿ ಫ್ರೆಂಚರಿಗೆ ಸೇರಿದ ಮಾಹೆಯ ನಾಲ್ಕು ಜನ ವಿದ್ಯಾರ್ಥಿಗಳು ಈ ವರ್ಷದ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದರಿಂದಲೂ ಮತ್ತು ಶಾಲೆಯ ಶಿಸ್ತನ್ನು ಪಾಲಿಸದಿದ್ದುದರಿಂದಲೂ ಅವರುಗಳನ್ನು ಅದೇ ತರಗತಿಗೆ ಪುನಃ ಸೇರಿಸಲಿಲ್ಲವೆಂದು ಅವರು ಬಲಾತ್ಕಾರವಾಗಿ ಅಲ್ಲಿಗೆ ಬಂದು ಕುಳಿತುಕೊಂಡರೆಂದೂ, ನಂತರ ಪೊಲೀಸರು ಬಂದು ಅವರನ್ನು ಹೊರಕ್ಕೆ ಕಳುಹಿಸಿದರೆಂದೂ ಹೇಳಲಾಗಿದೆ ಇದನ್ನು ಪ್ರತಿಭಟಿಸಲು ಅಲ್ಲಿನ ಎಲ್ಲಾ ಶಾಲೆಗಳ ವಿದ್ಯಾರ್ಥಿಗಳೂ ಮುಷ್ಕರ ಹೂಡಿದ್ದಾರೆ

೪೦೦ ಗಿರಣಿಗಳ ಬಟ್ಟೆ ಸರ್ಕಾರದ ವಶ

ಬಟ್ಟೆಗಳ ಬೆಲೆಯ ಮೇಲೆ ಹತೋಟಿಯನ್ನಿಡಲು, ಭಾರತ ಸರ್ಕಾರದವರು ಭಾರತ ಖಂಡದ ವಿವಿಧ ಭಾಗಗಳಲ್ಲಿರುವ ೪೦೦ ಗಿರಣಿಗಳಲ್ಲಿರುವ ಬಟ್ಟೆಗಳನ್ನೆಲ್ಲಾ ವಶಪಡಿಸಿಕೊಳ್ಳಲು ಆಜ್ಞೆ ಮಾಡಿದ್ದಾರೆ ಟ್ಯಾರಿಫ್ ಬೋರ್ಡಿನವರು ಬಟ್ಟೆಗಳ ಬೆಲೆಯನ್ನು ನಿಗದಿ ಮಾಡುವ ತನಕ, ಸರ್ಕಾರದವರೇ ಬೆಲೆಯನ್ನು ನಿರ್ಧರಿಸುವರು ಬಟ್ಟೆಗಳನ್ನು ಅಂಗಡಿಗಳ ಮತ್ತು ಸಹಕಾರ ಸಂಘಗಳ ಮೂಲಕ ಮಾರಲಾಗುತ್ತದೆ

ಬೊಂಬಾಯಿ ಮುಸ್ಲಿಂ ಲೀಗಿಗೆ ನಿಷೇಧ

ಬೊಂಬಾಯಿ ಮುಸ್ಲಿಂ ಲೀಗಿನ ಕಾರ್ಯಕರ್ತರು ನಿಜಾಂ ಸರ್ಕಾರದವರಿಗೆ ಸಹಾಯ ಮಾಡುತ್ತಿರುವರೆಂಬ ಆಪಾದನೆಯ ಮೇಲೆ ಬೊಂಬಾಯಿ ಪ್ರಾಂತ್ಯದ ಎಲ್ಲ ಮುಸ್ಲಿಂ ಲೀಗಿನ ಸಂಸ್ಥೆಗಳನ್ನೂ ಸರ್ಕಾರದವರು ನಿಷೇಧಿಸುವರೆಂದು ತಿಳಿದುಬಂದಿದೆ ಈ ಸಂಬಂಧದಲ್ಲಿ ಅನೇಕ ಐಕ್ಯವಾದಿ ಮತ್ತು ಪ್ರಮುಖ ಮುಸ್ಲಿಮರನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ

ಹೈದರಾಬಾದಿನಲ್ಲಿ ಭನ್ಸಾಲಿ

ಪ್ರೊ|| ಭನ್ಸಾಲಿಯವರು ಹೈದರಾಬಾದಿನ ಮಥೀರ ಗ್ರಾಮಕ್ಕೆ ಕಳೆದ ೨೭ ನೇ ತಾರೀಕು ಭೇಟಿ ಕೊಟ್ಟರು ಅವರ ದರ್ಶನಕ್ಕಾಗಿ ಸಾವಿರಾರು ಜನರು ಹೋಗುತ್ತಿರುವರು ಜನಗಳು ಹೇಡಿಗಳಂತೆ ಓಡಿಹೋಗದೆ ತಮ್ಮ ಸ್ಥಳದಲ್ಲೇ ಇದ್ದು ಪರಿಸ್ಥಿತಿಯ ಸಮಾನ ಸ್ಥಿತಿ ಮಾಡಬೇಕೆಂದು ಅವರು ಜನರಿಗೆ ಉಪದೇಶ ಮಾಡುತ್ತಿದ್ದಾರೆ

'ಪ್ರತಿಭಾ' ಮಾಸ ಪತ್ರಿಕೆ

ಪ್ರಸಿದ್ಧ ಸಾಹಿತಿಗಳೂ, ನಾಟಕಕಾರರೂ ಮತ್ತು ಪತ್ರಿಕೋದ್ಯೋಗಿಗಳೂ ಆದ ಶ್ರೀ ಬಿ ಪುಟ್ಟಸ್ವಾಮಯ್ಯನವರಿಂದ ಬೆಂಗಳೂರಿನಲ್ಲಿ ಪ್ರಕಟವಾಗುವ 'ಪ್ರತಿಭಾ' ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಈ ಸಂಚಿಕೆಯಲ್ಲಿ ರಾಜಕೀಯ, ಕಲೆ, ಸಾಹಿತ್ಯಗಳಿಗೆ ಸಂಬಂಧಪಟ್ಟ ಹಲವು ಉತ್ತಮವಾದ ಲೇಖನಗಳು ಪ್ರಕಟವಾಗಿವೆ ವ್ಯಂಗ್ಯ ಚಿತ್ರಗಳ ಪ್ರಕಟನೆಯು ಒಂದು ವಿಶೇಷ ಅಂಶವಾಗಿದೆ. ಜನ ಸಾಮಾನ್ಯರಲ್ಲಿ ಸಾಮಾಜಿಕ ಮತ್ತು ರಾಜಕೀಯ ಜಾಗೃತಿಯನ್ನು ಪ್ರಚೋದಿಸಲು ಪ್ರಕಟವಾಗಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂದು ಹಾರೈಸುತ್ತೇವೆ

ಎ.ಎಂ.ಸಿ.ಸಿ. ಸಭೆ

ಸ್ವ. ಸು ಪ್ರೋ] ಬೆಂಗಳೂರು ೩೦

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವು ಸಜ್ಜನರಾವ್ ಛತ್ರದಲ್ಲಿ ಈ ದಿನ ಬೆಳಗ್ಗೆ ೯ ೩೦ ಗಂಟೆಗೆ ಶ್ರೀ ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಸುಮಾರು ೧೫೫ ಜನ ಸದಸ್ಯರು ಹಾಜರಿದ್ದರು. ಕಾರ್ಯಕಾರೀ ಮಂಡಲಿಯ ಸದಸ್ಯರೂ ಮತ್ತು ಸಚಿವರುಗಳೂ ಬಂದಿದ್ದರು ಅಧಿವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಶ್ರೀ ಟಿ. ಸಿದ್ಧಲಿಂಗಯ್ಯನವರು ಭಾರತದ ಧ್ವಜವನ್ನೂ ಮತ್ತು ಶ್ರೀ ಕ್ಯಾಪ್ಟನ್ ರಾಜ ಅಯ್ಯಂಗಾರ್ಯರು ಮೈಸೂರು ಧ್ವಜವನ್ನೂ ಹಾರಿಸಿದರು. ಸಭೆಯ ಕಾರ್ಯಕಲಾಪಗಳು ಗುಪ್ತವಾಗಿ ೧೧ ೩೦ ಗಂಟೆಯವರೆವಿಗೂ ನಡೆದು, ಮಧ್ಯಾಹ್ನ ೪ ಗಂಟೆಗೆ ಮುಂದುವರೆಸಲ್ಪಟ್ಟಿತು

ವಿಶ್ವವಿದ್ಯಾನಿಲಯದ ಅ|| ರಿಜಿಸ್ಟ್ರಾರ್

ಶಿವಮೊಗ್ಗ ಜಿಲ್ಲೆಯ ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಟಿ ಸಿಂದಲಿಂಗದೇವರು ಅವರನ್ನು ವಿಶ್ವವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ನೇಮಿಸಲಾಗಿದೆ.

ಕೆಮಿಸ್ಟ್ರಿ ಪ್ರೊಫೆಸರಾದ ಡಾ|| ಬಿ ಎಲ್ ಮಂಜುನಾಥ್‌ರವರನ್ನು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ

ಮುಗ್ಗದವರಿಗೆ ರಿಯಾಯಿತಿ

ಸಂಸ್ಥಾನದಲ್ಲಿರುವ ಕೈ ಮುಗ್ಗದವರಿಗೆ ಉತ್ತೇಜನ ಕೊಡಲು ಅವರು ತಯಾರಿಸುವ ಬಟ್ಟೆಗಳ ಮೇಲೆ ಪ್ರಾಂತ್ಯಗಳು ತೆರಿಗೆಯನ್ನು ಆಗಸ್ಟ್ ನೇ ಜುಲೈ ನೇ ತಾ|| ವರೆವಿಗೆ ವಿಧಿಸಬೇಕಾಗಿಲ್ಲವೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಸಿಂಧ್ ಪತ್ರಿಕಾ ಸಂಪಾದಕರ ನಿಧನ

ಕರಾಚಿಯ ಸಿಂಧ್ ಅಬ್ಸರ್ವರ್ ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀ ಕೆ ಪೋತನ್‌ರವರು ಬೊಂಬಾಯಿನಲ್ಲಿ ಮೊನ್ನೆ ನಿಧನರಾದರೆಂದು ತಿಳಿದುಬಂದಿದೆ. ಕಳೆದ ನಾಲ್ಕು ದಿನಗಳಿಂದಲೂ ಅವರ ಪತ್ತೆಯೇ ಇಲ್ಲವೆಂದೂ, ಘಾಟ್ಕೊಪರ್ ರಸ್ತೆಯಲ್ಲಿ ಅವರು ಪ್ರಜ್ಞೆ ತಪ್ಪಿ ಬಿದ್ದಿರುವುದನ್ನು ಪೊಲೀಸಿನವನೊಬ್ಬನು ಕಂಡು ಅವರನ್ನು ಆಸ್ಪತ್ರೆಗೆ ಸಾಗಿಸಿದನೆಂದೂ, ಅವರು ಅಲ್ಲಿ ಮರಣ ಹೊಂದಿದರೆಂದೂ ಹೇಳಲಾಗಿದೆ

ಹೈದರಾಬಾದು ಸ್ವತಂತ್ರವೆಂದು ಚರ್ಚಿಲರ ಹೇಳಿಕೆ

ಭಾರತ ಸರ್ಕಾರವು ಹೈದರಾಬಾದಿನ ಮೇಲೆ ಹಾಕಿರುವ ಆರ್ಥಿಕ ದಿಗ್ಬಂಧನದ ಬಗ್ಗೆ ಬ್ರಿಟನ್ನಿನ ಮಾಜಿ ಪ್ರಧಾನಿ ಮಿ|| ಚರ್ಚಿಲರು ಕಟುತರವಾದ ಟೀಕೆಯನ್ನು ಕಾಮನ್ಸ್ ಸಭೆಯಲ್ಲಿ ನಿನ್ನೆ ಮಾಡಿದ್ದಾರೆ. ಬರ್ಲಿನ್ನಿನಲ್ಲಿ ರಷ್ಯಾ ಯಾವ ನೀತಿಯನ್ನು ಅನುಸರಿಸುತ್ತಿದೆಯೋ ಅದೇ ರೀತಿ ಭಾರತ ಹೈದರಾಬಾದಿನ ಬಗ್ಗೆ ಅನುಸರಿಸುತ್ತಿದೆಯೆಂದೂ, ಸ್ವತಂತ್ರ ಮತ್ತು ಪ್ರತ್ಯೇಕವಾಗಿರುವ ಹೈದರಾಬಾದ್ ಸಂಸ್ಥಾನವು ವಿಶ್ವಸಂಸ್ಥೆಗೆ ಸೇರಲು ಅರ್ಹತೆ ಪಡೆದಿದೆಯೆಂದೂ, ಭಾರತ ಮತ್ತು ಹೈದರಾಬಾದ್ ಪ್ರಶ್ನೆಯನ್ನು ಭದ್ರತಾ ಸಮಿತಿ ಚರ್ಚಿಸಬೇಕೆಂದೂ ಅವರು ತಿಳಿಸಿರುತ್ತಾರೆ

ಬಲ ಪ್ರಯೋಗದಿಂದ ಬರ್ಲಿನ್ ಸಮಸ್ಯೆ ಪರಿಹಾರ

ಬರ್ಲಿನ್ ನಗರದ ಮೇಲೆ ರಷ್ಯಾವು ಹಾಕಿರುವ ದಿಗ್ಬಂಧನದಿಂದ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ಬಲವನ್ನು ಉಪಯೋಗಿಸಬೇಕಾಗಬಹುದೆಂದು ಬ್ರಿಟನ್ನಿನ ವಿದೇಶಾಂಗ ಮಂತ್ರಿ ಮಿ|| ಬೆವಿನ್‌ರವರು ಕಾಮನ್ಸ್ ಸಭೆಯಲ್ಲಿ ಭಾಷಣ ಮಾಡುತ್ತಾ ರಷ್ಯಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ. ಇದಕ್ಕಾಗಿ ಅಗತ್ಯವಾದ ಕಾರ್ಯಕ್ರಮಗಳನ್ನೆಲ್ಲಾ ಕೈಗೊಳ್ಳುವುದಾಗಿಯೂ, ೨೦ ಸಾವಿರ ಸೈನಿಕರನ್ನು ವಾಪಸು ಕರೆಸುತ್ತಿರುವುದನ್ನು ನಿಲ್ಲಿಸುವುದಾಗಿಯೂ ಅವರು ತಿಳಿಸಿರುತ್ತಾರೆ.

ಮುದುಕನಿಗೆ ಮದುವೆಯಾದ ಯುವತಿಯ ಪರಾರಿ

ಬೆಂಗಳೂರಿನ ೭೦ ವರ್ಷದ ಮುದುಕನೊಬ್ಬನು ೩ ಸಾವಿರ ರೂ ಕೊಟ್ಟು ಒಬ್ಬ ಯುವತಿಯನ್ನು ಕೊಂಡು ಆಕೆಯನ್ನು ಮದುವೆಯಾದೆನೆಂದು, ಎಲ್ಲ ವೈಭವದಿಂದ ತನ್ನ ಮನೆಗೆ ಹೆಂಡತಿಯನ್ನು ಕರೆದುಕೊಂಡು ಬಂದನಂತರ ಆಕೆಯು ಶಿವಮೊಗ್ಗಕ್ಕೆ ಹೋಗುವಾಗ ಪ್ರಯಾಣದ ದಿನ ಮಾಯವಾದಳೆಂದೂ, ಇಲ್ಲಿಯವರೆಗೂ ಪತ್ತೆ ಆಗಿಲ್ಲವೆಂದೂ ಹೇಳಲಾಗಿದೆ

೮೦ ವರ್ಷದ ವಿದ್ಯಾರ್ಥಿನಿ

೮೦ ವರ್ಷದ ಮುದುಕಿಯೊಬ್ಬಳು ವ್ಯಾಸಂಗಕ್ಕಾಗಿ ಫ್ರಾನ್ಸಿನ ವಿಶ್ವವಿದ್ಯಾಲಯಕ್ಕೆ ಸೇರಲು ಪ್ರಯತ್ನಿಸುತ್ತಿರುವಳೆಂದು ವರದಿಯಾಗಿದೆ. ವಿಶ್ವವಿದ್ಯಾಲಯಕ್ಕೆ ಸೇರಬೇಕಾದರೆ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂದು, ಆಕೆಯು ೯ ಬಾರಿ ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೂ ಈ ವರ್ಷವೂ ಪರೀಕ್ಷೆಗೆ ಕುಳಿತಿರುವಳೆಂದು ಹೇಳಲಾಗಿದೆ

ತಮಾಷಾ ವಾರ್ಷಿಕ ಸಂಚಿಕೆ

ದಾವಣಗೆರೆಯಲ್ಲಿ ಪ್ರಕಟವಾಗುತ್ತಿರುವ ತಮಾಷಾ ವಾರಪತ್ರಿಕೆಯ ೭ ನೇ ವಾರ್ಷಿಕ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಸಿನಿಮಾ ಮತ್ತು ನಾಟಕ ಕಲೆಗೆ ಸಂಬಂಧಪಟ್ಟ ಹಲವು ಉಪಯುಕ್ತ ಪ್ರಬಂಧಗಳೂ ಕಥೆಗಳೂ, ವ್ಯಂಗ್ಯ ಚಿತ್ರಗಳೂ ಈ ಸಂಚಿಕೆಯನ್ನು ಅಲಂಕರಿಸಿವೆ ಸಂಚಿಕೆಯು ಎಲ್ಲ ದಿನ ಚಿತ್ತಾಕರ್ಷಕವಾಗಿಯೂ, ಮುದ್ರಣ ಸೊಗಸಾಗಿಯೂ ಇರುತ್ತದೆ ಇದರ ಬೆಲೆ ೮ ಆಣೆ

ಸಂಜೆ ೬ ಗಂಟೆಗೆ ಮಲ್ಲೇಶ್ವರದ ... ಶ್ರೀ ... ಅಧ್ಯಕ್ಷತೆಯಲ್ಲಿ ಮಹಾ ಸಭೆಯ ... ಸಮಾರಂಭವು ವೈಭವದಿಂದ ಜರುಗಿತು.

ಬರೋಡಾ ರಾಜರಿಂದ ಗಾಂಧಿ ನಿಧಿಗೆ ೧೦ ಲಕ್ಷ ರೂ.

ಗಾಂಧೀ ಸ್ಮಾರಕ ನಿಧಿಗೆ ಬರೋಡಾ ಮಹಾರಾಜರ ೧೦ ಲಕ್ಷ ರೂ ಗಳನ್ನೂ, ನೇಪಾಳದ ಶ್ರೀ ೫ ಮಹಾರಾಜಾಧಿರಾಜ ಮತ್ತು ಅವರ ಮನೆತನದವರ ೫೦ ಸಾವಿರ ರೂ ಗಳನ್ನೂ ಕೊಟ್ಟಿರುತ್ತಾರೆ

ಸಿಂಹದ ಬೋನಿನಲ್ಲಿ ಮದುವೆ

ಫ್ರಾನ್ಸಿನ ೧೮ ವರ್ಷದ ಸಿಂಹಗಳನ್ನು ಆಡಿಸುವ ಜನಿಟ ಬೊಲನ್ಯೆ ಎಂಬುವಳು ರೊಲೆಂಡ್ ಬೆ.. ಎಂಬುವನನ್ನು ಮದುವೆಯಾದಾಗ ವಿವಾಹಮಹೋತ್ಸವಕ್ಕೆ ಹುಲಿಗಳು, ಆನೆಗಳು, ಮತ್ತು ಇತರ ಮೃಗಗಳು ಬಂದಿದ್ದವೆಂದು ಹೇಳಲಾಗಿದೆ. ಚರ್ಚಿನಲ್ಲಿ ಮದುವೆಯಾದ ನಂತರ, ಸಿಂಹದಬೋನಿನಲ್ಲಿ ಪುನಃ ಅವರ ಮದುವೆಯ ಸಮಾರಂಭವು ನಡೆಯಿತೆಂದು ವರದಿಯಾಗಿದೆ.

ತಕರಾರು ಅರ್ಜಿ ವಾಪಸು

ಗುಂಡ್ಲುಪೇಟೆ ಕಾಂಗ್ರೆಸ್ ಚುನಾವಣೆಯು ಕ್ರಮ ಬದ್ಧವಾಗಿಲ್ಲವೆಂದು ದಾಖಲಿದ್ದ ತಕರಾರು ಅರ್ಜಿಯನ್ನು ವಾಪಸು ತೆಗೆದು ಕೊಂಡಿರುವುದಾಗಿ ಜಿಲ್ಲೆಯ ಶ್ರೀ ವೈ. ಜಿ. ಶ್ರೀ ... ನವರು ತಿಳಿಸಿರುತ್ತಾರೆ

೨ ವರ್ಷದ ಮಗುವಿನ ಈಜುವ ಪ್ರದರ್ಶನ

— —

ಕಾಶಿಗುಲ್ಲಿ ೨ ವರ್ಷದ ರುದ್ರನಾರಾಯಣ ವರ್ಮ ಎಂಬ ಮಗುವು ಗಂಗಾನದಿಯು ೩೦೦ ಗಜ ದೂರ ಈಜಿ ಆಶ್ಚರ್ಯವನ್ನುಂಟು ಮಾಡಿದೆ. ಒಂದು ವರ್ಷದ ವಗು ವಿಗೆ ಈಜುವುದನ್ನು ಕಲಿಸಲಾರಂಭಿಸಿದೆಂದು ಆದರ ತಂದೆಯವರು ತಿಳಿಸಿರುತ್ತಾರೆ

ಆಪೇರಾ ಟಾಕೀಸ್

೩೧—೭—೪೮ ರಿಂದ

ಪ್ರತಿದಿನ ಮೂರು ಆಟಗಳು

ವಿದ್ಯಾಪತಿ

ಪಾತ್ರ... ಶ್ರೀ (ತಮಿಳು)

ಟಿ.ಆರ್. ರಾಮಚಂದ್ರನ್, ಎಂ ಆರ್. ಸ್ವಾಮಿನಾಥನ್, ಟಿ. ಪ್ರೇಮಾವತಿ ನಂಬಿಯಾರ್ ಭಾಗ್ಯಂ

Morning Shows
From 29-7-48
DOLL FACE

೬ವರ್ಷದ ಅದ್ಭುತ ಮೇಧಾವಿ

ಬಿಹಾರು ನ್ಯಾಯ ವಿಧಾಯಕ ಸಭೆಯ ಜವಾನನಾದ ಗುಲಾಂ ರಸೂಲ್ ಎಂಬುವನ ಅಫ್‌ಟಾಬ್ ರಸೂಲ್ ಎಂಬ ೬ ವರ್ಷದ ಮಗುವು ಅದ್ಭುತ ಮೇಧಾವಿಯಾಗಿರುವನೆಂದೂ, ಮಗುವು ಭಾರತದ ಚರಿತ್ರೆಯ ಹಲವು ಮುಖ್ಯ ಘಟನೆಗಳನ್ನು ಪ್ರಪಂಚದ ನಾಯಕರುಗಳ ಹೆಸರುಗಳನ್ನು ಮತ್ತು ಇತ್ತೀಚಿನ ರಾಜಕೀಯ ವಿಷಯಗಳನ್ನು ಹೇಳುತ್ತಿರುವನೆಂದೂ ವರದಿಯಾಗಿದೆ. ಆತನ ಅದ್ಭುತ ಶಕ್ತಿಯನ್ನು ಮೆಚ್ಚಿ ಬಿಹಾರಿನ ಪ್ರಧಾನಿ ಶ್ರೀ ಕೃಷ್ಣಸಿಹ್ನರವರು ೧೦೦ ರೂ ಬಹುಮಾನವನ್ನು ಕೊಟ್ಟಿರುತ್ತಾರೆ

ಕಲಾ ಪ್ರದರ್ಶನ

ಕನ್ನಡ ರಂಗಭೂಮಿಯ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿರುವ

ಕಲಾ ಪ್ರದರ್ಶನವು

ದಸರಾ ವಸ್ತು ಪ್ರದರ್ಶನಾಲಯದಲ್ಲಿ

ತಾ|| **2-8-48** ನೇ

ಸೋಮವಾರದವರೆವಿಗೂ ನಡೆಯಲೇಕಾಗಿರುತ್ತದೆ. ಪ್ರತಿ ದಿನವೂ ರಾತ್ರಿ ಕಾರ್ಯಕ್ರಮಗಳನ್ನು ಬದಲಾವಣೆಮಾಡಿ ಸಂಗೀತ, ಭರತ ನಾಟ್ಯ, ಸುಗ್ಗಿಯ ಕುಣಿತ ಬೊಂಬೆಯ ಆಟ ಇವೇ ಮೊದಲಾದ ಮನರಂಜಕ ಪ್ರದರ್ಶನಗಳೂ ಮತ್ತು ಇತರ ವಿನೋದಾವಳಿಗಳೂ ನಡೆಯಲಿರುತ್ತವೆ

— ಪ್ರದರ್ಶನದ ಕಾಲ —
ಬೆಳಿಗ್ಗೆ ... ದ 12
ಮಧ್ಯಾಹ್ನ ... ದ ರಾತ್ರಿ 9
ಪ್ರವೇಶ ಧನ 2 ಆಣೆ
... ಪ್ರೋತ್ಸಾಹಿಸಬೇಕಾಗಿ

ವಿನಂತಿ

ಎ. ಕೃಷ್ಣಮೂರ್ತಿರಾವ್
ಕಾರ್ಯದರ್ಶಿ

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜಿವಣ್ಣರಾಯನ ಕಟ್ಟೆಯಲ್ಲಿ

೩ ಆಟಗಳು.-ಶುಕ್ರವಾರ, ಶನಿವಾರ ಭಾನುವಾರ

೩-೩೦, ೬-೩೦, ಮತ್ತು ೯-೩೦ಕ್ಕೆ

ಮಿಕ್ಕ ದಿನಗಳಲ್ಲಿ ೨ ಆಟಗಳು

ಮಾತ್ರ ೬-೩೦, ಮತ್ತು ೯-೩೦ಕ್ಕೆ

— ದರಗಳು ಮಾಮೂಲಿನಂತೆ —

[ಎಂ ಸುಬ್ಬರಾಯುಡು ಅಂಡ್ ಕೋ]

ರಾಜಕಮಲ್,

ಮೈಸೂರು

27-7-48 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸಿನವರ

★ ಬಸಂತ್ ★

(ಹಿಂದಿ)

—:ತಾರಾಗಣ.—

ಉಲ್ಲಾಸ್, ಮಮ್ತಾಜ್ ಶಾಂತಿ, ಮಮ್ತಾಜ್ ಅಲಿ, ಸುರೇಶ್ ಮುಂತಾದವರು

Morning Shows
From 30-7 48
For 4 days

White Cargo

—With—

Hedy Lamerr,
Walter Pidgeon

Edited printed and published by A. ... Nagarajan at the Sadhvi Press D. Subbaiah Road Mysore

ಶ್ರೀ ಗಣೇಶಾ ಟಾಕೀಸ್, ಮೈಸೂರು

೩೧—೭—೪೮ ರಿಂದ ಪ್ರತಿ ದಿನ ೩ ಆಟಗಳು

ರಣಜಿತ್‌ರವರ

ಧನ ಭಗತ್

ಮೈಸೂರಿನಲ್ಲಿ ಇದೇ ಪ್ರಥಮ ಪ್ರದರ್ಶನ.

ಪಾತ್ರ—ಕಮಲಾ ಚಟರ್ಜಿ, ಕಮಾಲ್ ಜಮೀನ್‌ದಾರ್ (ಹಿಂದಿ)

ಮುಂದಿನ ಬದಲಾವಣೆ ರಣಜಿತ್‌ರವರ **ಫೂಲ್‌ವಾರಿ** ಕುರ್ಷಿದ್, ಮೋತಿಲಾಲ್

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೩ ರಲ್ಲಿ ಸ್ಥಾಪಿತವಾದದ್ದು]

ಪ್ರಧಾನ ಕಛೇರಿ. ಕರೂರು (S. I. Ry)

ಶಾಖೆಗಳು-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.) ಬೆಂಗಳೂರು ಸಿಟಿ

ಉಪಶಾಖೆ ನಾಗಲ್ ನಗರ (ದಿಂಡಿಗಲ್)

ಮೈಸೂರು ಬ್ರಾಂಚ್-ಇರ್ವಿನ್ ರೋಡ್

... ಕೆಳಕಂಡ ... ದರದ ಮೇಲೆ ಫಿಕ್ಸೆಡ್ ಡಿಪಾಜಿಟುಗಳನ್ನು ಸ್ವೀಕರಿಸಲಾಗುತ್ತೆ

6	ತಿಂಗಳಿಗೆ	ಶೇಕಡಾ	3/4
12	,,	,,	1
24	,,	,,	1 1/4

... ಒಂದು ... ಮಾಡಬಹುದಾದ— ... ಕ್ಕೆ ... ರೆಕರಿಂಗ್ ಡಿಪಾಜಿಟು ಮತ್ತು ... ತಿಂಗಳು ... ಪ್ರಾವಿಡೆಂಟ್ ಡಿಪಾಜಿಟು ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲಾಗುವುದು

ಇಚ್ಛೆಯ ವಿವರಗಳಿಗೆ ಬರೆದು ತಿಳಿಯಿರಿ

ವಿ. ಕೆ. ನಟರಾಜನ್,
ಏಜೆಂಟ್, ಮೈಸೂರು.

SRI GAYATHRI TALKIES

Proudly Announce the Glorious Romance of all time

From 30-7-48

Daily 3 Shows

Adventures of

ROBIN - - HOOD

ಅಡ್ವೆಂಚರ್ಸ್ ಆಫ್ ರಾಬಿನ್ ಹುಡ್

(ವರ್ಣ ರಂಜಿತ ಚಿತ್ರ)

ಫೋ ನಂ 792 WEEKLY EDITION ಬಿಡಿ ಪತ್ರಿಕೆ 6 ಕಾಸು

ಸಂಪುಟ ೧೩] ಭಾನುವಾರ ೧-೮-೪೮ [ಸಂಚಿಕೆ ೩

ಸರ್ ಮಿರ್ಜಾ ಸಂಧಾನ ನಿಜಾಮರ ಕುತಂತ್ರ

ಮೈಸೂರು ಕಾಂಗ್ರೆಸ್ ನಾಯಕರುಗಳಲ್ಲಿ ಒಪ್ಪಂದ

ಎ ಜಿ ರಾಮಚಂದ್ರರಾಯರ ರಾಜೀನಾಮೆ ವಾಪಸು

ಎ. ಎಂ. ಸಿ. ಸಿ ಅಧಿವೇಶನದ ಮುಕ್ತಾಯ

[ಸ್ವಂ ಸು ಫೋ] ಬೆಂಗಳೂರು ೧

ನಿನ್ನೆ ಸಂಜೆ ೬ ಗಂಟೆಗೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಅಧಿವೇಶನವು ಪುನಃ ಸೇರಿ ಕಾಂಗ್ರೆಸ್ ಕಾರ್ಯ ನಿರ್ವಾಹಕ ಸಮಿತಿಯವರಿಂದ ರಚಿಸಲ್ಪಟ್ಟ ನಿರ್ಣಯವನ್ನು ಅಂಗೀಕರಿಸಿ ನಿನ್ನೆ ರಾತ್ರಿ ೮-೩೦ ಗಂಟೆಗೆ ಮುಕ್ತಾಯವಾಯಿತು ಈ ದಿನ ಅಧಿವೇಶನದ ಕಾರ್ಯಕ್ರಮವೇನೂ ಇರುವುದಿಲ್ಲ

ನಿನ್ನೆ ಮಧ್ಯಾಹ್ನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಸಭೆ ಸೇರಿ ಎಲ್ಲರಿಗೂ ಒಪ್ಪಿಗೆಯಾಗಬಹುದಾದ ಈ ಕೆಳಗಿನ ನಿರ್ಣಯವನ್ನು ಸಿದ್ಧಗೊಳಿಸಿದರು ಅದನ್ನು ಬಹಿರಂಗ ಅಧಿವೇಶನದಲ್ಲಿ ಶ್ರೀ ಟಿ ಸುಬ್ರಹ್ಮಣ್ಯಂರವರು ಕಾರ್ಯಕಾರಿ ಸಮಿತಿಯ ಪರವಾಗಿ ಮಂಡಿಸಿದರು. ಶ್ರೀ ವಿ ವೆಂಕಟಪ್ಪನವರು ಅನುಮೋದಿಸಿದರು ನಿರ್ಣಯವನ್ನು ೩ ಜನರ ವಿನಾ ಉಳಿದವರೆಲ್ಲರೂ ಅಂಗೀಕರಿಸಿದರು ನಿರ್ಣಯವು ಈ ರೀತಿ ಇದೆ:—

ಭರತ ಖಂಡದಲ್ಲಿಯೂ, ಮುಖ್ಯವಾಗಿ ಮೈಸೂರಿನಲ್ಲಿಯೂ ಇತ್ತೀಚೆಗೆ ಉದ್ಭವಿಸಿರುವ ಪರಿಸ್ಥಿತಿಯನ್ನು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಆಮೂಲಾಗ್ರವಾಗಿ ಪರಿಶೀಲಿಸಿರುತ್ತದೆ. ಈ ಉತ್ಕಟ ಸನ್ನಿವೇಶದಲ್ಲಿ ಉಂಟಾಗಿರುವ ಕಷ್ಟಗಳನ್ನು ಮನಗಂಡಿರುತ್ತದೆ ಆಹಾರ, ಬಟ್ಟೆ ಮುಂತಾದುವುಗಳ ಅಭಾವವನ್ನೂ ಅವುಗಳ ಹಂಚಾಟದ ಸಂಬಂಧದಲ್ಲಿ ಹುಟ್ಟಿಕೊಂಡಿರುವ ಲಂಚ ರುಶುವತ್ತು, ಕಾಳ ಸಂತೆ ಮುಂತಾದ ವರ್ತನೆಗಳನ್ನೂ ಸಹ ಗಮನಿಸಿರುತ್ತದೆ ಸಾರ್ವಜನಿಕ ಜೀವನದಲ್ಲಿಯೂ ಸರ್ಕಾರದ ಆಡಳಿತದಲ್ಲಿಯೂ ಕೋಮುವಾರು ಭಿನ್ನತೆಯು ಪ್ರಾಬಲ್ಯ ಹೊಂದುವುದನ್ನು ಅರಿತಿರುತ್ತದೆ. ಹೈದರಾಬಾದಿನ ವಿದ್ಯಮಾನಗಳು ವಿಷಮಿಸುತ್ತಿರುವುದನ್ನು ವೀಕ್ಷಿಸಿರುತ್ತದೆ. ಭಾರತ ಸರ್ಕಾರದವರಿಗೆ ಉಂಟಾಗಿರುವ ತೊಡಕುಗಳಿಗೆ ಮೈಸೂರು ಸಂಸ್ಥಾನವೂ ಒದಗಿರುವುದು ವೇದ್ಯವಾಗಿರುತ್ತದೆ ಈ ಎಲ್ಲ ಅಂಶಗಳ ಬಗ್ಗೆ ಇದುವರೆಗೆ ಉಂಟಾಗಿರುವ ಅನುಭವ ಮತ್ತು ತಿಳುವಳಿಕೆಗಳಿಂದ ಈ ಕೂಡಲೇ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಕೈಗೊಳ್ಳುವುದು ಆವಶ್ಯಕವಾಗಿರುತ್ತದೆ

ಸಂಸ್ಥಾನದಲ್ಲಿ ದಿವಾನರ ಸ್ಥಾನವನ್ನು ರದ್ದು ಮಾಡಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಆವಶ್ಯಕವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ

ಸರ್ಕಾರದ ಉದ್ಯೋಗಗಳಿಗೆ ನೇಮಕ, ಲಂಚ ರುಶುವತ್ತುಗಳ ನಿರೋಧ, ರಾಜ್ಯದಲ್ಲಿ ಕೋಮುವಾರು ಭಾವನೆಯ ನಿರೋಧ, ಹೆಚ್ಚು ಆಹಾರ ಸಾಮಗ್ರಿಗಳ ಉತ್ಪಾದನೆ, ಜೀವನದ ಮಟ್ಟವನ್ನು ಏರಿಸುವಿಕೆ, ಆಡಳಿತ ವೆಚ್ಚದಲ್ಲಿ ಮಿತವ್ಯಯ ಇವೇ ಮುಂತಾದ ಪ್ರಾಮುಖ್ಯ ವಿಷಯಗಳ ಬಗ್ಗೆ ನಿರ್ದಿಷ್ಟವಾದ ರೀತಿ ನೀತಿಗಳನ್ನು ಗೊತ್ತು ಮಾಡಿ ಸರ್ಕಾರದವರ ಪರಿಶೀಲನೆಗೆ ಕಳುಹಿಸಿಕೊಡಬೇಕೆಂದು ಈ ಸಭೆಯು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೆ ಸೂಚಿಸುತ್ತದೆ

ಹೈದರಾಬಾದಿನಲ್ಲಿ ದಿನೇ ದಿನೇ ವಿಷಮಿಸುತ್ತಿರುವ ಪರಿಸ್ಥಿತಿಯ ದೃಷ್ಟಿ ಅದರಿಂದ ನಮ್ಮ ಸಂಸ್ಥಾನದ ಮೇಲೆ ಆಗಬಹುದಾದ ಪ್ರತಿಕ್ರಿಯೆಯನ್ನೂ ಪರಿಶೀಲಿಸಿ ಕಾರ್ಯಕಾರಿ ಸಮಿತಿಯವರು ಈ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಈ ಸಭೆಯು ಒತ್ತಾಯ ಪಡಿಸುತ್ತದೆ. ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಎಲ್ಲ ಕಾರ್ಯಕ್ರಮಗಳಿಗೂ ಬೆಂಬಲ ನೀಡುತ್ತದೆ ಸಂಸ್ಥಾನಕ್ಕೂ ಸರ್ಕಾರಕ್ಕೂ ಅವಿಧೇಯತೆಯನ್ನು ತೋರಿಸುವವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಬೇಕೆಂದು ಈ ಸಭೆಯ ಅಭಿಪ್ರಾಯ ಪಡುತ್ತದೆ"

ನಿರ್ಣಯದ ವಿವರಣೆ

ಶ್ರೀ ಟಿ ಸುಬ್ರಹ್ಮಣ್ಯಂರವರು ನಿರ್ಣಯವನ್ನು ಮಂಡಿಸುತ್ತಾ ಇತ್ತೀಚೆಗೆ ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ವಿದ್ಯಮಾನಗಳನ್ನು ವಿವರಿಸಿದರು ದಿವಾನರ ಸ್ಥಾನವನ್ನು ರದ್ದು ಮಾಡುವ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ತಿಳಿಸಿ ಈ ಬಗ್ಗೆ ಶ್ರೀಮನ್ಮಹಾರಾಜರವರೊಡನೆಯೂ, ದಿವಾನರೊಡನೆಯೂ ಸಮಾಲೋಚನೆ ನಡೆಸಲಾಗಿದೆಯೆಂದೂ, ಕಳೆದ ಜೂನ್ ತಿಂಗಳ ಅಂತ್ಯದೊಳಗೆ ದಿವಾನಗಿರಿಯು ರದ್ದಾಗಬೇಕೆಂಬ ಉದ್ದೇಶವು ಮೊದಲು ಇದ್ದಿತಾದರೂ ಇನ್ನು ಕೇವಲ ಎರಡು ಮೂರು ತಿಂಗಳಲ್ಲಿ ದಿವಾನರು ಹೊರಟು ಹೋಗುವರೆಂದೂ ತಿಳಿಸಿದರು ಅಷ್ಟರಲ್ಲಿ ಯಾವ ಅನಾಹುತವೂ ಆಗುವುದಿಲ್ಲವೆಂದೂ, ಅವರ ಸ್ಥಾನವನ್ನು ಖಂಡಿತವಾಗಿಯೂ ರದ್ದು ಮಾಡಲಾಗುವುದೆಂದೂ ಅವರ ಹೇಳಿದರು ಲಂಚ ರುಶುವತ್ತುಗಳ ವಿಚಾರವಾಗಿ ಮಾತನಾಡಿ ಕೇವಲ ಸರ್ಕಾರದವರ ಮೇಲೆ ಆಕ್ಷೇಪಣೆ ಮಾಡುವುದು ಬಿಟ್ಟು ಈ ದುಷ್ಪದ್ಧತಿಯನ್ನು ತಪ್ಪಿಸಲು ಸಾರ್ವಜನಿಕರೂ ಸಹಕರಿಸಬೇಕೆಂದು ಕೋರಿದರು. ಕೋಮುವಾರು ಭೂತವು ಮುಖ್ಯವಾಗಿ ಸರ್ಕಾರಿ ನೌಕರಿಗಳ ವಿಷಯವಾಗಿ ಉದ್ಭವಿಸಿರುವುದೆಂಬೂ, ಅದನ್ನು ಬಗೆಹರಿಸಲು ಕಾರ್ಯಕಾರಿ ಮಂಡಲಿಯು ಶ್ರಮಿಸುತ್ತಿದೆಯೆಂದೂ ತಿಳಿಸಿದರು. ಹೈದರಾಬಾದ್ ಪರಿಸ್ಥಿತಿಯನ್ನು ಎದುರಿಸಲು ಸಕಲ ಸಿದ್ಧತೆಗಳನ್ನೂ ಮಾಡಲಾಗಿದೆ ಭರವಸೆಯಿತ್ತರು.

ಶ್ರೀ ವಿ ವೆಂಕಟಪ್ಪನವರು ನಿರ್ಣಯವನ್ನು ಅನುಮೋದಿಸಿ ಮಂತ್ರಿಮಂಡಲದ ವ್ಯವಹಾರಗಳಲ್ಲಿ ದಿವಾನರು ಮಧ್ಯೆ ಪ್ರವೇಶಿಸಿದ ಸಂದರ್ಭವು ಒಂದೂ ಸಹ ಇಲ್ಲವೆಂದು ಹೇಳಿ ಖಂಡಿತವಾಗಿಯೂ ದಿವಾನರ ಸ್ಥಾನವು ರದ್ದಾಗುವುದೆಂದ ತಿಳಿಸಿದರು

ರಾಜೀನಾಮೆ ವಾಪಸು

ಅಧ್ಯಕ್ಷರಾದ ಶ್ರೀ ಟಿ ಸಿದ್ಧಲಿಂಗಯ್ಯನವರು ಭಾಷಣ ಮಾಡಿ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಲಿಲ್ಲವೆಂದೂ, ಯಾವುದೋ ಕೆಲವು ವಿಷಯಗಳಲ್ಲಿ ಉದ್ಭವಿಸಿದ ಅಭಿಪ್ರಾಯ ಭೇದಗಳನ್ನು ಈಗ ಎಲ್ಲರೂ ಪರಸ್ಪರ ಸಮಾಲೋಚನೆಯಿಂದ ಸರಿಯಾಗಿ ಅರಿತುಕೊಂಡಿರುವುದಾಗಿಯೂ ತಿಳಿಸಿದರು

ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಸಲ್ಲಿಸಿದ್ದ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳುವುದಾಗಿ ತಿಳಿಸಿದರು

ವೇದಿಕೆಯ ಮೇಲೆ ಕಾಂಗ್ರೆಸ್ ಮಂತ್ರಿಗಳೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳೂ ಮಂಡಿಸಿದ್ದರು.

ಅಧಿವೇಶನದಲ್ಲಿ ಬೆಳಗ್ಗೆ ಅಧ್ಯಕ್ಷರು ಸೂಚಿಸಿದ ಅಭಿಪ್ರಾಯಗಳಿಗೂ ರಾತ್ರಿ ತಿಳಿಸಿದ ಅಂಶಗಳಿಗೂ ವ್ಯತ್ಯಾಸವಿರುವುದೆಂಬ ದರ ಬಗ್ಗೆ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಟೀಕಿಸಿದರು ಕಾಂಗ್ರೆಸ್ ನಾಯಕರುಗಳಲ್ಲಿ ಇರಬಹುದಾದ ಭಿನ್ನಾಭಿಪ್ರಾಯಗಳನ್ನು ಅವರುಗಳೇ ಸರಿಪಡಿಸಿಕೊಳ್ಳದೆ ಸಭೆಯನ್ನು ಕರೆದುದು ವ್ಯರ್ಥ ಕಾಲಕ್ಷೇಪವೆಂದು ಶ್ರೀ ಬಿ ಪಿ ಹಾಲಪ್ಪನವರ ಅಭಿಪ್ರಾಯಪಟ್ಟರು

ಒಟ್ಟಿನಲ್ಲಿ ಅಧಿವೇಶನವು ಸಮಾಧಾನಕರವಾದ ರೀತಿಯಲ್ಲಿ ಮುಕ್ತಾಯವಾದುದಕ್ಕಾಗಿ ಎಲ್ಲರೂ ಸಂತೋಷಪಟ್ಟರು.

ಮಹಿಳಾ ಸದನ

ಕಳೆದ ೨೬ ಮತ್ತು ೨೭ ನೇ ತಾರೀಕುಗಳಲ್ಲಿ ಮೇಲ್ಕಂಡ ಸದನದ ಸಕಲ ಸದಸ್ಯರ ಸಭೆ ನಡೆದು ಬರುವ ವರ್ಷಕ್ಕೆ ಶ್ರೀಮತಿ ಟಿ ಎಸ್ ತಂಗಮ್ಮನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಮತಿ ಆರ್ ರಾಜಲಕ್ಷ್ಮಿಯವರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀಮತಿ ಎಂ ಡಿ ರಂಗಮ್ಮನವರನ್ನು ಕಾರ್ಯದರ್ಶಿನಿಯನ್ನಾಗಿಯೂ, ಶ್ರೀಮತಿ ಕೆ ಅಣ್ಣಮ್ಮನವರನ್ನು ಜತೆ ಕಾರ್ಯದರ್ಶಿನಿ ಮತ್ತು ಕೋಶಾಧ್ಯಕ್ಷರನ್ನಾಗಿಯೂ ಚುನಾಯಿಸಲಾಯಿತು.

ರಾಜಾ ಗೋಪೀಚಂದ್

ಮೈಸೂರು ೧

ಗುಬ್ಬಿ ಕಂಪೆನಿಯವರು ತಮ್ಮ ಸಂಸ್ಥೆಯ ರಜತೋತ್ಸವದ ಸಂಬಂಧವಾಗಿ ನಿನ್ನೆ ಪೌರಸಭಾಧ್ಯಕ್ಷರಾದ ಶ್ರೀ ಕಾಳಪ್ಪ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್ ಆವರಣದಲ್ಲಿರುವ ತಮ್ಮ ಥಿಯೇಟರ್ ನಾಟಕ ಶಾಲೆಯಲ್ಲಿ ರಾಜಾ ಗೋಪೀಚಂದ್ ಎಂಬ ತಮ್ಮ ನೂತನ ನಾಟಕವನ್ನು ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನು ಸಂತೋಷಪಡಿಸಿದರು ಶ್ರೀ ಪಿ ಸೀತಾರಾಮಯ್ಯನವರು ಶ್ರೀ ಗುಬ್ಬಿ ವೀರಣ್ಣನವರನ್ನೂ, ನಾಟಕ ಸಂಸ್ಥೆಯವರನ್ನೂ ಅಭಿನಂದಿಸಿ ಅವರ ಉದ್ಯಮಕ್ಕೆ ಯಶಸ್ಸನ್ನು ಹಾರೈಸಿದರು ನಾಟಕ ರಕ್ಷ ... ವೀರಣ್ಣನವರು ಮಾತನಾಡಿ ಬಡ ವಿದ್ಯಾರ್ಥಿಗಳ ಭೋಜನ ಸೌಕರ್ಯಕ್ಕಾಗಿ ಒಂದು ನಾಟಕವನ್ನು ಆಡಿ ಕೊಡುವುದಾಗಿ ತಿಳಿಸಿದರು. ಕಾರ್ಯದರ್ಶಿಯವರಾದ ಶ್ರೀ ಎಂ ಸಿ ಮಹದೇವಸ್ವಾಮಿಯವರು ವಂದನಾರ್ಪಣೆ ವಾದಗಳನ್ನರ್ಪಿಸಿದರು

ಪ್ರಜಾಪ್ರತಿನಿಧಿ ಸಭೆ

ಅಕ್ಟೋಬರ್ ೯ ನೇ ತಾರೀಕು ಶನಿವಾರದಿಂದ ಪ್ರಜಾಪ್ರತಿನಿಧಿ ಸಭೆಯು ಮೈಸೂರಿನಲ್ಲಿ ನಡೆಯುವುದು

ವಿದ್ವತ್ಸಭೆ

ಶ್ರೀಮನ್ಮಹಾರಾಜರವರ ಗುರುಗಳಾದ ಶ್ರೀ ಅಭಿನವ ... ಪರಕಾಲ ಸ್ವಾಮಿಗಳವರ ಶ್ರೀ ... ಸನ್ನಿಧಾನದಲ್ಲಿ ... ೧೩ ಮಂಗಳವಾರ ... ೩-೮-೪೮ ರ ವರೆಗಾಯಿತು ... ಶುದ್ಧ ೧೩ ಮಂಗಳವಾರ ... ಶ್ರೀ ಮಠದಲ್ಲಿ ಚಾತುರ್ಮಾಸ್ಯ ಸಂಕಲ್ಪ ಕಟ್ಟಿ ... ಸಂವತ್ಸರದ ಶ್ರೀ ಹಯಗ್ರೀವ ಜಯಂತಿ ... ವೇದ ಶಾಸ್ತ್ರಗಳ ವಿದ್ವತ್ಸಭೆಯು ಜರುಗುವುದು. ಈ ಸಂದರ್ಭದಲ್ಲಿ ... ಮೆರಿಗೆ ವಿದ್ವಾಂಸರುಗಳ ... ಬರುವ ... ಇಲ್ಲವಂತೆ ಇರಬೇಕಾಗಿ ಸೂಚಿಸಲಾಗಿದೆ

ಬಹುಮಾನಿತರಿಗೆ ಸತ್ಕಾರ

ಶ್ರೀಮನ್ಮಹಾರಾಜರವರಿಂದ ಧರ್ಮಪ್ರಕಾಶ ... ಬಿರುದನ್ನು ಪಡೆದಿರುವ ಶ್ರೀ ಮಂಗಲ್ಪ ಚಾಕಟೀರಿಯವರನ್ನು ಮೈಸೂರು ಮಾರ್ಕೆಟ್ ನ ವರ್ತಕರು ನಿನ್ನೆ ದಿನ ಬರಮಾಡಿಕೊಂಡು ಸನ್ಮಾನಿಸಿದರು. ನಗರದ ಅನೇಕ ಪ್ರಮುಖರು ಇದರಲ್ಲಿ ಭಾಗವಹಿಸಿದ್ದರು.

ಮಿರ್ಜಾ ಸಾಹೇಬರ ಸಂಧಾನ ನಿಜಾಮರ ಕುತಂತ್ರವೇ ಸರಿ

ಭಾರತ ಸರ್ಕಾರದೊಡನೆ ಸಂಧಾನ ನಡೆಸಲು ಸರ್ ಮಿರ್ಜಾ ಇಸ್ಮಾಯಿಲ್ ರವರನ್ನು ಹೈದರಾಬಾದ್ ಪ್ರಭುತ್ವದಿಂದ ಮಾತುಕತೆಗಳ ಮತ್ತೆ ಮುಂದುವರಿಯುವುದೆಂದು ... ಬಂದಿರುವ ವರ್ತಮಾನಗಳಲ್ಲಿ ಹೇಳಲಾಗಿದೆ ... ಜಗತ್ತಿನ ಕಣ್ಣಿಗೆ ... ತಮ್ಮ ... ಹೇಳುವುದಕ್ಕೂ, ... ಮಾಡಿಕೊಳ್ಳುವುದು ... ಹೂಡಿರುವ ಕುತಂತ್ರವೇ ... ಭಾವಿಸಲಾಗಿದೆ.

ವಾರ ಭವಿಷ್ಯ

ತಾ|| ೧-೮-೪೮ ರಿಂದ ೭-೮-೪೮ರವರೆಗೆ

ಮೇಷ—ಪ್ರವಾಸದಿಂದ ಅಧಿಕ ಲಾಭವುಂಟಾಗುವುದು, ಸಾಧು ಸಂತರ ದರ್ಶನ ಲಭಿಸುವುದು, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಭೇರಿ, ತಾ|| ೩, ೪ ಧನ ಲಾಭ, ಶುಭ ವಾರ್ತೆ.

ವೃಷಭ—ಆರೋಗ್ಯ ಚೆನ್ನಾಗಿದೆ, ಧನಾದಾಯ ಸಾಧಾರಣ, ವಿದ್ಯಾರ್ಥಿ ಮತ್ತು ಲೇಖಕ ವರ್ಗಕ್ಕೆ ಈ ವಾರ ಶುಭದಾಯಕವಾಗಿದೆ ವಾದಾಂಶ್ಯದಲ್ಲಿ ಅಪೇಕ್ಷಿತವಾಗಿ ವಿಜೋದಗುವುದು ತಾ|| ೩, ೬ ಸಂತೋಷ, ದುಂದು ವೆಚ್ಚ

ಮಿಥುನ—ಪ್ರವಾಸದಿಂದ ಹಾನಿ ಸಂಭವಿಸಬಹುದು, ಯೋಚಿಸಿದ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು, ಮನೆಯಲ್ಲಿ ಮಕ್ಕಳು ಮಂಗಳ ಆರೋಗ್ಯ ಕೆಡುವುದು, ತಾ|| ೩, ೫, ಅಸಮಾಧಾನ, ಋಣ ಬಾಧೆ.

ಕಟಕ—ನೌಕರಿ ದರ್ಜೆಗಳಲ್ಲಿ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾಗುವಿರಿ. ದಾನಧರ್ಮಗಳಿಗಾಗಿ ಖರ್ಚಾಗುವುದು, ಆಪ್ತ ಮಿತ್ರರ ಭೇಟಿಯಾಗುವುದು ತಾ|| ೩, ೫ ಟಿಕಣ, ಮಿತ್ರ ದರ್ಶನ

ಸಿಂಹ—ಕೈಗೊಂಡ ಕಾರ್ಯಗಳು ಅಧಿಕ ಯತ್ನವಿಲ್ಲದೆ ಸಿದ್ಧಿಸುವುವು, ಧನಾದಾಯ ಉತ್ತಮವಾಗಿದೆ, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಸಂಪೂರ್ಣ ಜಯ, ತಾ|| ೩, ೪ ಸಂತೋಷ ವಾರ್ತೆ, ಸುಖ ಭೋಜನ

ಕನ್ಯಾ—ಈ ವಾರ ನಿಮ್ಮ ಆರೋಗ್ಯಕ್ಕೆ ಧಕ್ಕೆಯುಂಟಾಗಬಹುದು, ಮಾನಸಿಕ ತೊಂದರೆಗಳು ಹೆಚ್ಚುವುವು, ನೆರೆಹೊರೆಯವರ ತಿರಸ್ಕಾರಕ್ಕೊಳಗಾಗುವಿರಿ, ತಾ|| ೩, ೪ ಚಿಂತೆ, ನಷ್ಟ

ತುಲಾ—ಈ ವಾರ ಅನೇಕ ದುರ್ಘಟನೆಗಳು ಸಂಭವಿಸುವುವು, ಮನೆಯಲ್ಲಿ ಸಂಶಯ ವಾತಾವರಣವುಂಟಾಗಿ ನಿಮ್ಮನ್ನು ನೀವೇ ನಂಬದಂತಾಗುವಿರಿ, ತಾ|| ೧, ೩ ವಾಹನ ಭಯ, ಜನ ನಿಂದೆ.

ವೃಶ್ಚಿಕ—ಆರೋಗ್ಯ ಧನಾದಾಯಗಳೆರಡೂ ಉತ್ತಮವಾಗಿವೆ, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು, ತಾ|| ೩, ೬ ಸುಖ ಪ್ರವಾಸ, ಅಪೂರ್ವ ಲಾಭ

ಧನು—ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಕ್ಲೇಶಗಳಿಂದ ಬಳಲಬೇಕಾಗುವುದು ಬರಬೇಕಾದ ಹಣವೂ ಬಾರದೆ ಕೈ ಕಟ್ಟಿದಂತಾಗುವುದು, ತಾ|| ೪, ೬ ಅಪಮಾನ, ಚಿಂತೆ

ಮಕರ—ಈ ವಾರ ನಿಮಗೆ ಪ್ರವಾಸದಿಂದ ಅಪೂರ್ವ ಲಾಭವುಂಟಾಗುವುದು, ದಾನಧರ್ಮಗಳಿಗಾಗಿ ವೆಚ್ಚ ಸಂಭವಿಸುವುದು, ಆರೋಗ್ಯ ಚೆನ್ನಾಗಿದೆ ತಾ|| ೫, ೬ ಧನಾಗಮನ, ಶುಭ ವಾರ್ತೆ

ಕುಂಭ—ಆರೋಗ್ಯ ಚೆನ್ನಾಗಿಲ್ಲ, ಆರ್ಥಿಕ ಸ್ಥಿತಿಯು ಬಗೆಹರಿಸಲಾರದ ಸಮಸ್ಯೆಯಾಗುವುದು, ಆಪ್ತೇಷ್ಟರಿಂದ ಅಪಮಾನಿತರಾಗುವಿರಿ, ತಾ|| ೩, ೫ ಭಯ, ಚಿಂತೆ

ಮೀನ—ಯೋಚಿಸಿದ ಕಾರ್ಯಗಳೆಲ್ಲ ಸಿದ್ಧಿಸುವುವು, ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು, ತಾ|| ೩, ೫ ಲಾಭ, ಶುಭ ವಾರ್ತೆ

ಬಾಲ ದೀಕ್ಷೆಗೆ ನಿಷೇಧ

ಕೊಲ್ಹಾಪುರ, ಬಿಕನೀರ್ ಮುಂತಾದ ಪ್ರದೇಶಗಳಲ್ಲಿ ಸಣ್ಣ ವಯಸ್ಸಿನ ಹುಡುಗರು ಮತ್ತು ಹುಡುಗಿಯರನ್ನು ಸನ್ಯಾಸಿಗಳಾಗಿ ಮಾಡುವ ಬಾಲ ದೀಕ್ಷೆ ಎಂಬ ಶಾಸ್ತ್ರಹೀನ ಪದ್ಧತಿಯನ್ನು ರದ್ದು ಮಾಡಬೇಕೆಂದು ಕೇಂದ್ರ ಶಾಸನ ಸಭೆಯಲ್ಲಿ ಕೆಲವರು ಮಸೂದೆಯೊಂದನ್ನು ಮಂಡಿಸಲಿದ್ದಾರೆಂದು ಗೊತ್ತಾಗಿದೆ

ಪ್ರದೋಷ ಸಂಗೀತ

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ದೊಡ್ಡ ರಾಮ ದೇವಾಲಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಪ್ರದೋಷದ ಪ್ರಯುಕ್ತ ವಿ|| ಟಿ ಪುಟ್ಟಸ್ವಾಮಯ್ಯನವರ ಸಂಗೀತ ಕಛೇರಿಯು ನಡೆಯುವುದು.

SRI GAYATHRI TALKIES

Proudly Announce the Glorious Romance of all time

From 30-7-48

Daily 3 Shows

Adventures of ROBIN-HOOD

ಅಡ್ವೆಂಚರ್ಸ್ ಆಫ್ ರಾಬಿನ್ ಹುಡ್

(ವರ್ಣ ರಂಜಿತ ಚಿತ್ರ)

ಬೊಂಬಾಯಿ ಜಿ. ಎ. ಸರ್ಕಸ್

ಮೈಸೂರು ಜೀವಣ್ಣರಾಯನ ಕಟ್ಟೆಯಲ್ಲಿ

೩ ಆಟಗಳು:-ಶುಕ್ರವಾರ, ಶನಿವಾರ ಭಾನುವಾರ

೩-೩೦, ೬-೩೦, ಮತ್ತು ೯-೩೦ ಕ್ಕೆ

ಮಿಕ್ಕ ದಿನಗಳಲ್ಲಿ ೨ ಆಟಗಳು

ಮಾತ್ರ ೬-೩೦, ಮತ್ತು ೯-೩೦ ಕ್ಕೆ

ದರಗಳು ಮಾಮೂಲಿನಂತೆ —

[ಎಂ. ಸುಬ್ರಮಣ್ಯ ಅಂಡ್ ಕೋ]

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್

ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ, ಕ್ರಯ ೦-೧೨-೦

ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ— ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವಿನಿ.

ಮಹಾಕೇಶಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಕ್ರಯ ೩-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

Edited printed and published by A. R. Nagarajan at the Sadhvi Press D Subbaiah Road Mysore.

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರಂ

[ನೂರಡಿ ರಸ್ತೆ, ಲಕ್ಷ್ಮೀಪತಿ ಲಾಯ, ಮೈಸೂರು]

ಕೋಮು ಭಾವನೆ, ಸ್ತ್ರೀ ಪುರುಷ ಭೇದ, ವಯೋಭೇದ, ಬಡಸಿರಿತನಗಳ ಭೇದ, ಇವುಗಳಿಲ್ಲದಂತೆ ಜನ ಸಾಮಾನ್ಯರಲ್ಲಿ ಅತ್ಯಲ್ಪ ಕಾಲದಲ್ಲೇ ಶ್ರೇಷ್ಠತರವಾದ ಶಾಸ್ತ್ರೀಯ ಮತ್ತು ಸಾಂಪ್ರದಾಯಿಕ ಕರ್ನಾಟಕ ಸಂಗೀತದ (ಹಾಡುಗಾರಿಕೆ ಮತ್ತು ವಾದ್ಯಗಳು ಎಲ್ಲಾ ಗ್ರೇಡುಗಳಲ್ಲಿಯೂ) ಶಿಕ್ಷಣವನ್ನು ಅತಿ ಸುಲಭವಾದ ಬೆಲೆಯಲ್ಲಿ ಅವರವರಿಗೆ ಅನುಕೂಲವಾದ ಕಾಲದಲ್ಲೇ ಒದಗಿಸಿ ಕೊಡುತ್ತಿರುವ ಮೇಲ್ಕಂಡ ಸಂಸ್ಥೆಯು ಮಹಾಜನಗಳ ಉದಾರ ಪ್ರೋತ್ಸಾಹದಿಂದ ತನ್ನ ಜನಸೇವೆಯ ನಾಲ್ಕನೆಯ ವರ್ಷದಲ್ಲಿ ಕಾಲಿಟ್ಟಿದೆ

ಮಹಾಜನಗಳು ಇತೋಪ್ಯತಿಶಯವಾಗಿ ಪ್ರೋತ್ಸಾಹ ನೀಡಿ, ಈ ಸಂಸ್ಥೆಯನ್ನು ಇಡೀ ದಕ್ಷಿಣ ಹಿಂದೂಸ್ಥಾನದಲ್ಲೇ ಆದರ್ಶ ಸಂಗೀತ ವಿದ್ಯಾ ಮಂದಿರವನ್ನಾಗಿಸಬೇಕೆಂದು ಪ್ರಾರ್ಥಿಸುವ,

ಮೈಸೂರು ಸಹೋದರರು,

ಸ್ಥಾಪಕರು ಮತ್ತು ಕಾರ್ಯದರ್ಶಿಗಳು

ಕಾಲ:—ಬೆಳಗ್ಗೆ 6 ರಿಂದ ಸಂಜೆ 8ರ ವರೆಗೆ

ಶುಲ್ಕ:—ಹಾಡುಗಾರಿಕೆಗೆ ಮಾಹೆಯಾನ ಮೂರೇ ರೂಪಾಯಿ

ಕಲಾ ಪ್ರದರ್ಶನ

ಕನ್ನಡ ರಂಗಭೂಮಿಯ ಶತಮಾನೋತ್ಸವದ ಅಂಗವಾಗಿ ಏರ್ಪಡಿಸಿರುವ

ಕಲಾ ಪ್ರದರ್ಶನವು

ದಸರಾ ವಸ್ತು ಪ್ರದರ್ಶನಾಲಯದಲ್ಲಿ

ತಾ|| 2-8-48 ನೇ

ಸೋಮವಾರದವರೆವಿಗೂ ನಡೆಯಲೇ ಬೇಕಾಗಿರುತ್ತದೆ. ಪ್ರತಿ ದಿನವೂ ಕಾರ್ಯಕ್ರಮಗಳನ್ನು ಬದಲಾವಣೆಮಾಡಿ ಸಂಗೀತ, ಭರತ ನಾಟ್ಯ, ಸುಗ್ಗಿಯ ಕುಣಿತ [illegible] ಯ ಆಟ ಇನ್ನೇ ಮೊದಲಾದ ಮನರಂಜಕ ಪ್ರದರ್ಶನಗಳೂ ಮತ್ತು ಇತರ ವಿನೋದಾವಳಿಗಳೂ ನಡೆಯುತ್ತಿರುತ್ತವೆ.

—:ಪ್ರದರ್ಶನದ ಕಾಲ:—

ಬೆಳಗ್ಗೆ 8-30 ರಿಂದ 12

ಮಧ್ಯಾಹ್ನ 3 ರಿಂದ ರಾತ್ರಿ 9

ಪ್ರವೇಶ ಧನ 2 ಆಣೆ

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಎ. ಕೃಷ್ಣಮೂರ್ತಿರಾವ್, ಕನ್ವೀನರ್.

ರಾಜಕಮಲ್,

ಮೈಸೂರು

24-7-78 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸಿನವರ

ಬಸಂತ್

(ಹಿಂದಿ)

—:ತಾರಾಗಣ:—

ಉಲ್ಲಾಸ್, ಮುಮ್ತಾಜ್ ಶಾಂತಿ, ಮುಮ್ತಾಜ್ ಅಲಿ, ಸುರೇಶ್ ಮುಂತಾದವರು

Morning Shows

From 30-7-48

For 4 days

White Cargo

—:With:—

Hedy Lamarr, Walter Pidgeon

ಅಪೇರಾ ಟಾಕೀಸ್

31—7—48 ರಿಂದ

ಪ್ರತಿ ದಿನ ಮೂರು ಆಟಗಳು

ವಿದ್ಯಾಪತಿ

ಪಾತ್ರ:— ಶ್ರೀ (ತಮಿಳು)

ಟಿ.ಆರ್ ರಾಮಚಂದ್ರನ್, ಎಂ.ಆರ್. ಸ್ವಾಮಿನಾಥನ್, ಟಿ. ಪ್ರೇಮಾವತಿ ನಂದಿಯಾರ ಭಾಗ್ಯಂ

ಹೋಟೆಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

KANAN DEVAN TEA

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯೂ ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.

—:ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—

ಸಿ. ಬಿ. ಜನರಲ್ ಸ್ಟೋರ್ಸ್,

ಯರ್ವಿನ್ ರಸ್ತೆ, ಮೈಸೂರು

ಫೋ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೨-೮-೪೮ [ಸಂಚಿಕೆ ೧೨

ನಿಜಾಮರನ್ನೊಪ್ಪಿಸಲು ಅವರ ಮಗನ ಪ್ರಯತ್ನ

ರೆವಿನ್ಯೂ ಆಫೀಸರ ನೇಮಕ

ಪೌರಸಭೆಯಲ್ಲಿ ಚರ್ಚೆ

ಮೈಸೂರು ೩

ರಾಜಧಾನಿಯ ಪೌರಸಭೆಯವರು ತಾವೇ ತಮ್ಮ ರೆವಿನ್ಯೂ ಆಫೀಸರನ್ನು ಚುನಾಯಿಸಿಕೊಳ್ಳುವ ಅಧಿಕಾರವು ಅನೇಕ ವರ್ಷಗಳಿಂದ ಜಾರಿಗೆ ಬಂದಿದ್ದರೂ ಈಗ ಖಾಲಿಯಾಗಿದ್ದ ಆ ಸ್ಥಳಕ್ಕೆ ಈ ಸಭೆಯವರನ್ನು ಕೇಳದೆಯೇ ಒಬ್ಬ ಅಧಿಕಾರಿಗಳನ್ನು ಸರ್ಕಾರದವರು ನೇಮಿಸಿದ ವಿಷಯವಾಗಿ ಮೊನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ಚರ್ಚೆ ನಡೆಯಿತು. ಹಿಂದೆ ಇದ್ದ ಅಧಿಕಾರಿಗಳಿಗೆ ವರ್ಗವಾಗಿ ಬೇರೊಬ್ಬರು ಬಹಳ ದಿನಗಳಿಂದಲೂ ಬರದಿಲ್ಲದೆ ಕೆಲಸಕ್ಕೆ ತೊಂದರೆಯಾಗಿದ್ದುದರಿಂದ ಸರ್ಕಾರದವರು ಈಗ ಬಂದಿರುವ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿರುವುದಾಗಿ ಅಧ್ಯಕ್ಷರಾದ ಶ್ರೀ ಪಾಳ್ಯ ಸೀತಾರಾಮಯ್ಯನವರು ತಿಳಿಸಿದರು. ಆದರೂ ಸಹ ಈ ಸಭೆಯ ಹಕ್ಕನ್ನು ಬಿಟ್ಟುಕೊಡಲು ತಾವು ಒಪ್ಪುವುದಿಲ್ಲವೆಂದು ಸದಸ್ಯರು ತಿಳಿಸಿದರು.

ಈಗ ಆಗಿರುವ ಏರ್ಪಾಡನ್ನು ಒಪ್ಪಿಕೊಂಡು ಪೌರಸಭೆಯವರು ಒಬ್ಬ ಅಧಿಕಾರಿಯನ್ನು ಚುನಾಯಿಸಲು ಅನುಕೂಲಿಸುವಂತೆ ಸರ್ಕಾರದವರು ಹಲವರು ಹೆಸರುಗಳನ್ನು ಕಳುಹಿಸಿಕೊಡುವಂತೆ ಪ್ರಾರ್ಥಿಸುವ ತೀರ್ಮಾನವನ್ನು ಮಾಡಲಾಯಿತು.

ಗೋವಾ ನಾಯಕರ ಉಪವಾಸ ಪರಿಸ್ಥಿತಿ

ಗೋವಾ ಜೈಲಿನಲ್ಲಿ ಆಮರಣಾಂತ ಉಪವಾಸ ಮಾಡುತ್ತಿರುವ ಶ್ರೀ ರಘುವೀರ್ ಕಾಮತ್‌ರವರ ಸ್ಥಿತಿಯು ತುಂಬಾ ಚಿಂತಾಜನಕವಾಗಿದೆಯೆಂದೂ, ಅವರು ಬದುಕಲಾರರೆಂದೂ ಹೇಳಲಾಗಿದೆ. ನಾಯಕ್ ಮತ್ತು ತಿನಾರಿ ಎಂಬುವರೂ ಸಹ ಉಪವಾಸ ಮಾಡುತ್ತಿದ್ದಾರೆ.

ಡಯೂ ದ್ವೀಪದಲ್ಲಿ ಪಾಕೀಸ್ತಾನದ ಗೂಢಚಾರರು

ಪಾಕೀಸ್ತಾನ ಏಜೆಂಟರುಗಳೂ ಮತ್ತು ಜುನಘಡದ ಮುಸ್ಲಿಂ ಲೀಗಿನ ಮಾಜಿ ನಾಯಕರುಗಳೂ ಈಗ ಪೋರ್ಚುಗೀಸರ ಡಯೂ ದ್ವೀಪದಲ್ಲಿ ಭಾರತಕ್ಕೆ ವಿರೋಧ ಪ್ರಚಾರ ಕಾರ್ಯವನ್ನು ನಡೆಸುತ್ತಿರುವುದನ್ನು ಪತ್ತೆಹಚ್ಚಲು ಜುನಗಢದ ಮುಖ್ಯಮಂತ್ರಿ ಶ್ರೀ ಸಾಮಲದಾಸ್ ಗಾಂಧಿಯವರು ಬರೋಡಾ ಪ್ರಧಾನಿ ಡಾ|| ಜೀವರಾಜ್ ಮೆಹತಾರವರಲ್ಲಿ ಸಮಾಲೋಚನೆ ನಡೆಸಿದರೆಂದು ಹೇಳಲಾಗಿದೆ.

ಸರ್ಪ ಕಡಿದ ಆಡಿನ ಮಾಂಸ ತಿಂದು ಐವರ ಮರಣ

ಬೆಳಗೂರಿನ ಬಳಿ ಹಾವಿನಿಂದ ಕಡಿಸಲ್ಪಟ್ಟು ಸತ್ತುಹೋಗಿದ್ದ ಆಡಿನ ಮಾಂಸವನ್ನು ತಿಂದ ೫ ಜನರು ಮರಣ ಹೊಂದಿ ೧೦ ಜನರ ಸ್ಥಿತಿ ಕಳವಳಕರವಾಗಿದೆಯೆಂದು ತಿಳಿದುಬಂದಿದೆ.

ರಜಾಕರನಿಗೂ ಪೋಲೀಸರಿಗೂ ಕೈ ಕೈ ಕದನ

ಹೈದರಾಬಾದ್ ಸಂಸ್ಥಾನದ ಬೀದರ್ ಎಂಬ ಪ್ರಾಂತದಿಂದ ಭಾರತದ ದುಮ್ಮಗಾರ್ ಪ್ರದೇಶಕ್ಕೆ ಅಬ್ದುಲ್ ಖಾನ್ ಎಂಬ ರಜಾಕರನು ಬಂದಾಗ ಅವನಿಗೂ ಇಬ್ಬರು ಪೋಲೀಸರಿಗೂ ಕೈ ಕೈ ಕದನವಾಗಿ ಅವನಲ್ಲಿದ್ದ ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತೆಂದೂ, ಆಮೇಲೆ ಅವನು ಪರಾರಿಯಾದನೆಂದೂ ಹೇಳಲಾಗಿದೆ.

ನಿಜಾಮರ ಮನೋಭಾವದಲ್ಲಿ ಬದಲಾವಣೆಯೇ?

ಹೈದರಾಬಾದು ರಾಜಕುಮಾರರ ಪ್ರಯತ್ನ

ಭಾರತ ಸರ್ಕಾರದ ಬಗ್ಗೆ ನಿಜಾಮರ ಮನೋಭಾವವನ್ನು ಬದಲಾವಣೆ ಮಾಡಲು ಅವರ ಮಕ್ಕಳಾದ ಬೆರಾರಿನ ರಾಜಕುಮಾರರು ಮಾಡಿದ ಪ್ರಯತ್ನಗಳು ಫಲಕಾರಿಯಾಗಿರುವುವೆಂದೂ, ರಾಜಕುಮಾರರು ಸ್ವತಂತ್ರರಾಗಿದ್ದಾರೆ ಅವರು ಕೂಡಲೇ ದೆಹಲಿಗೆ ಹೋಗಿ ಒಪ್ಪಂದಕ್ಕೆ ರುಜು ಹಾಕುತ್ತಿದ್ದರೆಂದೂ ವರದಿಯಾಗಿದೆ. ಸರ್ ಮಿರ್ಜಾರವರ ಪ್ರಯತ್ನಗಳು ಫಲಕಾರಿಯಾದ ಪಕ್ಷದಲ್ಲಿ ಅವರನ್ನು ಹೈದರಾಬಾದಿನ ಪ್ರಧಾನಿಯಾಗಿ ನಿಜಾಮರು ನೇಮಿಸುವರೆಂದೂ, ಇದನ್ನು ಭಾರತ ಸರ್ಕಾರವು ಒಪ್ಪುವುದೆಂದೂ ಹೇಳಲಾಗಿದೆ.

ಡಾ|| ಖಾನ್ ಸಾಹೇಬರ ಬಂಧನ

ಗಡಿನಾಡಿನ ಮಾಜಿ ಪ್ರಧಾನಿ ಡಾ|| ಖಾನ್ ಸಾಹೇಬರನ್ನು ಅದರ ಸರ್ಕಾರದವರು ಅವರ ಗ್ರಾಮದಿಂದ ಕೊಂಡೊಯ್ದು ಹಜಾರಾ ಜಿಲ್ಲೆಯ ಒಂದು ಕಡೆ ಗುಪ್ತವಾಗಿ ಬಂಧಿಸಿಟ್ಟಿರುವರೆಂದು ತಿಳಿದುಬಂದಿದೆ.

ಹೊಸ ಹೋಟಲುಗಳಿಗೆ ನಿರ್ಬಂಧ

ಬೆಂಗಳೂರು ೩

ಹೋಟಲುಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತ ಬಂದು ಪುರನಿವಾಸಿಗಳಿಗೆ ಸಾಕಾದಷ್ಟು ಆಹಾರ ಪದಾರ್ಥಗಳು ದೊರೆಯದೆ ತೊಂದರೆಯುಂಟಾಗುತ್ತಿದ್ದುದರಿಂದ ಹೊಸ ಹೋಟಲುಗಳಿಗೆ ಸರ್ಕಾರದವರು ಸಾಮಾನ್ಯವಾಗಿ ಅನುಮತಿ ಕೊಡದೇ ಇರುವ ನೀತಿಯನ್ನು ಅನುಸರಿಸುತ್ತಿದ್ದಾಗಲೇ ಕೆಲವು ಮಾಲೀಕರುಗಳು ಸ್ಥಳೀಯ ಅಧಿಕಾರಿಗಳ ಆಶ್ರಯದಿಂದ ರೇಷನ್ ಪದಾರ್ಥಗಳನ್ನು ಉಪಯೋಗಿಸುವುದಿಲ್ಲವೆಂಬ ನೆಲದ ಮೇಲೆ ಹೋಟಲುಗಳಿಗೆ ಲೈಸೆನ್ಸ್ ಪಡೆದು ಕ್ರಮೇಣ ಎಲ್ಲಾ ಬಗೆಯ ಆಹಾರ ಪದಾರ್ಥಗಳನ್ನೂ ಉಪಯೋಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿರುವುದರಿಂದ ಇನ್ನು ಮುಂದೆ ಆಹಾರ ಇಲಾಖೆಯ ಡೈರೆಕ್ಟರವರೊಡನೆ ಸಮಾಲೋಚನೆ ನಡೆಸದೆ ಯಾವ ಪೌರಸಭೆಯೂ ಹೊಸ ಹೋಟಲುಗಳಿಗೆ ಲೈಸೆನ್ಸ್ ಕೊಡಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಹೆಸರು ಬದಲಾವಣೆ

ಇನ್ನು ಮುಂದೆ ಸ್ಯಾನಿಟರಿ ಇನ್ಸ್‌ಪೆಕ್ಟರುಗಳನ್ನು ಹೆಲ್ತ್ ಇನ್ಸ್‌ಪೆಕ್ಟರುಗಳೆಂದು ಕರೆಯಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಚರ್ಚಿಲರು ಭಾರತದ ಮೊದಲನೇ ಶತ್ರು

ಬ್ರಿಟಿಷ್ ಪ್ರಧಾನಿಗಳ ಹೇಳಿಕೆ

ಬ್ರಿಟಿಷ್ ಕಾಮನ್ಸ್ ಸಭೆಯಲ್ಲಿ ಕಳೆದ ಶುಕ್ರವಾರ ಹೈದರಾಬಾದಿನ ವಿಷಯವು ಪ್ರಸ್ತಾಪಕ್ಕೆ ಬಂದಾಗ ಪ್ರಧಾನಿ ಅಟ್ಲಿಯವರಿಗೂ ಚರ್ಚಿಲರಿಗೂ ಬಿರುಸಾದ ವಾಗ್ಯುದ್ಧವು ನಡೆಯಿತು. ಹೈದರಾಬಾದಿನ ನೀತಿಯನ್ನು ಚರ್ಚಿಲರು ಪುರಸ್ಕರಿಸಿ ಭಾರತ ಸರ್ಕಾರವು ಅದರ ಮೇಲೆ ಹಾಕಿರುವ ದಿಗ್ಬಂಧನವನ್ನು ಚರ್ಚಿಲರು ಕಟುತರವಾಗಿ ಟೀಕಿಸಿ ಪಂಡಿತ ನೆಹರೂರವರನ್ನು ಹಿಟ್ಲರನಿಗೆ ಹೋಲಿಸಿದರು. ಬ್ರಿಟಿಷ್ ಸರ್ಕಾರವು ಈ ಬಿಕ್ಕಟ್ಟನ್ನು ಬಗೆಹರಿಸಲು ವಿಶ್ವಸಂಸ್ಥೆಗೆ ಈ ಪ್ರಶ್ನೆಯನ್ನು ಕಳುಹಿಸಬೇಕೆಂದೂ ಅವರು ತಿಳಿಸಿದರು. ಹಿಂದೂಗಳು ಮಾಡುವುದೆಲ್ಲಾ ತಪ್ಪು ಎಂಬ ಭಾವನೆ ಚರ್ಚಿಲರಲ್ಲಿ ಬಂದುಬಿಟ್ಟಿದೆಯೆಂದೂ, ಚರ್ಚಿಲರು ಭಾರತದ ಮೊದಲನೇ ಶತ್ರುಗಳೆಂದೂ ಮಿ|| ಅಟ್ಲಿಯವರು ಹೇಳಿದರು. ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಚರ್ಚಿಲರು ಒತ್ತಾಯಪಡಿಸಿದಾಗ ಸಭೆಯಲ್ಲಿ ಗೊಂದಲವೆದ್ದಿತು. ಆದರೂ ಪ್ರಧಾನಿಯವರು ಅದನ್ನು ವಾಪಸು ತೆಗೆದುಕೊಳ್ಳಲಿಲ್ಲ. ಚರ್ಚಿಲರು ರಾಜರುಗಳ ಪರವಾಗಿ ಅಥವ ಜನಗಳ ಪರವಾಗಿ ವಾದಿಸುತ್ತಿರುವರೇ ಎಂದು ಪ್ರಧಾನಿಯವರು ಕೇಳಿದ ಪ್ರಶ್ನೆಗೆ ಜನಗಳ ಪರವೆಂದು ಚರ್ಚಿಲರು ತಿಳಿಸಿದರು. ಇಷ್ಟು ಸಾವಕಾಶವಾಗಿಯಾದರೂ ಅವರಿಗೆ ಜ್ಞಾನೋದಯವಾಯಿತಲ್ಲ ಎಂದು ಪ್ರಧಾನಿಯವರು ತಿಳಿಸಿದರು. ಮತ್ತು ಇನ್ನೊಂದು ಡೊಮಿನಿಯನ್ನಿನ ವಿಷಯದಲ್ಲಿ ಬ್ರಿಟನ್ನು ಕೈಹಾಕುವುದು ಉಚಿತವಲ್ಲವೆಂದು ಅವರು ಕೊನೆಯದಾಗಿ ಹೇಳಿದರು.

ಸ್ವಾತಂತ್ರ್ಯ ದಿನಾಚರಣೆಯಲ್ಲಿ ದೀಪೋತ್ಸವವಿಲ್ಲ

ಈ ತಿಂಗಳು ೧೫ ನೇ ತಾರೀಕು ಭಾನುವಾರ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸುವ ಬಗ್ಗೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪತ್ರಿಕೆಯನ್ನು ಹೊರಡಿಸಿದ್ದಾರೆ. ಬೆಳಗ್ಗೆ ಧ್ವಜಾರೋಹಣವೂ ಸಂಜೆ ಸಭೆಗಳೂ ನಡೆಯಬೇಕು. ಸಮಾರಂಭವು ಸರಳ ರೀತಿಯಲ್ಲಿರಬೇಕು. ಗಾಂಧೀಜಿಯವರ ನಿಧನದ ವರ್ಷವಾದ ಪ್ರಯುಕ್ತ ದೀಪೋತ್ಸವವನ್ನು ಮಾಡಲಾಗದು. ಭಾನುವಾರದ ದಿನ ಈ ಉತ್ಸವವು ಬೀಳುವುದರಿಂದ ಇದಕ್ಕಾಗಿ ಸೋಮವಾರ ಪ್ರತ್ಯೇಕವಾಗಿ ರಜಾ ಕೊಡಬೇಕಾಗಿಲ್ಲವೆಂದು ಅವರು ತಿಳಿಸಿರುವರು.

ಕಂಟೆಂಪ್ಟ್ ಮೊಕದ್ದಮೆ

ಗೋಪಾಲರಾವ್ ಸಮಿತಿಯ ರಿಕಾರ್ಡುಗಳನ್ನು ಹಾಜರುಪಡಿಸಲು ಆಜ್ಞೆ

ಸ್ವಂ.ಸು.ಪ್ರೋ|| ಬೆಂಗಳೂರು ೨

ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆಯನ್ನು ವಿಚಾರಣೆ ಮಾಡುವುದಕ್ಕೆ ಗೋಪಾಲರಾವ್ ಸಮಿತಿಯವರಿಗೆ ಅಧಿಕಾರವಿಲ್ಲವೆಂಬ ರಿಪಿಟ್ ಅರ್ಜಿಯು ಈ ದಿನ ಶ್ರೇಷ್ಠ ನ್ಯಾಯಾಧೀಶರು ಮತ್ತು ಶ್ರೀ ಆರ್ ವೆಂಕಟರಾಮಯ್ಯನವರ ಮುಂದೆ ಬಂದಿತು. ಹೈಕೋರ್ಟಿನವರು ಸಮಿತಿಗೆ ಕೊಟ್ಟಿರುವುದು ಸಮನ್ಸ್ ಅಲ್ಲವೆಂದೂ, ಅದು ನೋಟೀಸು ಎಂದೂ ಅಡ್ವೊಕೇಟ್ ಜನರಲ್ಲರು ವಾದ ಮಾಡಿದರು.

ತಾವು ಗೋಪಾಲರಾವ್ ಸಮಿತಿಯ ಪರವಾಗಿ ವಾದಿಸುತ್ತಿಲ್ಲವೆಂದೂ, ಸರ್ಕಾರದ ಪರವಾಗಿ ಮಾತ್ರ ವಾದಿಸುತ್ತಿರುವುದಾಗಿಯೂ ಅಡ್ವೊಕೇಟ್ ಜನರಲ್ಲರು ಈ ದಿನವೂ ಹೇಳಿದರು. ಅದರ ಮೇಲೆ ಹೈಕೋರ್ಟಿನ ನಿಯಮದ ಪ್ರಕಾರ ಕಂಟೆಂಪ್ಟ್ ಮೊಕದ್ದಮೆಗಳಲ್ಲಿ ಅಡ್ವೊಕೇಟ್ ಜನರಲ್ಲರೇ ವಾದಿಸಬೇಕಾಗಿರುವುದರಿಂದ ಅವರೇ ಗೋಪಾಲರಾವ್ ಸಮಿತಿಯ ಪರವಾಗಿಯೂ ವಾದಿಸಬೇಕೆಂದು ಶ್ರೇಷ್ಠ ನ್ಯಾಯಾಧೀಶರು ತಿಳಿಸಿದರು. ಮೊಕದ್ದಮೆಯನ್ನು ಈ ದೇ ೫ ನೇ ತಾ|| ಮುಂದೆ ಹಾಕಿ, ಗೋಪಾಲರಾವ್ ಸಮಿತಿಯ ರಿಕಾರ್ಡುಗಳನ್ನು ಕೋರ್ಟಿನ ಮುಂದೆ ಇಡಬೇಕೆಂದು ನ್ಯಾಯಾಧೀಶರು ಆಜ್ಞೆ ಮಾಡಿದರು.

ಅಪಾದಿತರುಗಳಿಗೆ ಕೊಟ್ಟಿರುವ ನೋಟೀಸನ್ನು ವಜಾ ಮಾಡಬೇಕೆಂಬ ಅರ್ಜಿಯ ವಿಚಾರಣೆಯು ನಾಳೆ ನಡೆಯುವುದು.

ಜೋಧಪುರದಲ್ಲಿ ಕೋಮುವಾರು ಶಾಲೆಗಳ ವಜಾ

ಜೋಧ್‌ಪುರದಲ್ಲಿರುವ ಎಲ್ಲಾ ಕೋಮುವಾರು ಶಾಲೆಗಳನ್ನು ಈ ವರ್ಷದಿಂದ ವಜಾ ಮಾಡಲು ಅದರ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಲೋಕಪಾವನಿ ಹೊಸ ಸೇತುವೆ ಕಂಭ ಕುಸಿಯಿತು

ಟ್ರಾನ್ಸ್‌ಶಿಪ್‌ಮೆಂಟ್ ಮುಖಾಂತರ ರೈಲು ಸಂಚಾರಗಳ ವ್ಯವಸ್ಥೆ

ಮೈಸೂರು ೩

ಬೆಂಗಳೂರು-ಮೈಸೂರು ಮಾರ್ಗದಲ್ಲಿ ಲೋಕಪಾವನಿ ನದಿಯ ಹಂಗಾಮಿ ರೈಲ್ವೆ ಸೇತುವೆಗೆ ಆಧಾರವಾಗಿದ್ದ ಮರದ ಕಂಬಗಳು ಒಂದು ಕಡೆ ನಿನ್ನೆ ರಾತ್ರಿ ಪ್ರವಾಹದ ವೇಗದಿಂದ ಕುಸಿದು ಬಿದ್ದವೆಂದೂ, ಆದರಿಂದ ನೇರವಾಗಿ ರೈಲುಗಳು ಓಡಾಡಲು ಅವಕಾಶವಿಲ್ಲದಂತಾಗಿದೆಯೆಂದೂ ಹೇಳಲಾಗಿದೆ. ನಿನ್ನೆ ರಾತ್ರಿ ಮತ್ತು ಈ ದಿನ ಬೆಳಿಗ್ಗೆ ರೈಲುಗಳ ಪ್ರಯಾಣಿಕರು ಮತ್ತು ಸಾಮಾನುಗಳನ್ನು ಟ್ರಾನ್ಸ್‌ಶಿಪ್ ಮಾಡಲಾಯಿತು. ಈ ದಿನ ಬೆಳಿಗ್ಗೆ ೭ ಗಂಟೆಗೆ ಬರಬೇಕಾಗಿದ್ದ ರೈಲು ಮಧ್ಯಾಹ್ನ ೧ ಗಂಟೆಗೂ, ಮೇಲು ಗಾಡಿಯು ೬-೩೦ ಗಂಟೆಗೂ ಬಂದವು. ಈ ರಾತ್ರಿ ೧೧ ಗಂಟೆಗೆ ಹೊರಡುವ ಗಾಡಿಯು ಸಂಜೆ ೫-೪೦ ಗಂಟೆಗೇ ಹೊರಡುವುದು. ಸಂಜೆಯ ಷಟಲ್ ಟ್ರೈನು ಈ ದಿನ ಹೊರಡುವುದಿಲ್ಲ. ನಾಳೆ ಬೆಳಿಗ್ಗೆ ೭-೧೫ ಗಂಟೆಗೆ ಹೊರಡಬೇಕಾದ ಎಕ್ಸ್‌ಪ್ರೆಸ್ ಗಾಡಿಯು ೬-೩೦ ಕ್ಕೆ ಹೊರಡುವುದು.

ರಾಜಧಾನಿಯಲ್ಲಿ ೨೫ ಅಂಗುಲ ಮಳೆ

ನಿನ್ನೆ ರಾತ್ರಿ ರಾಜಧಾನಿಯಲ್ಲಿ ೨೫ ಅಂಗುಲಗಳ ಮಳೆ ಆಯಿತು.

ಪೂರ್ವ ಬಂಗಾಳದಲ್ಲಿ ರಾಷ್ಟ್ರಗೀತೆಗೆ ಪ್ರತಿಬಂಧಕ

ಆಸ್ಸಾಮಿನ ಸಿಲ್ಹೆಟ್ ಎಂಬಲ್ಲಿನ ಸ್ಕೂಲೊಂದರಲ್ಲಿ [illegible] ವಂದೇಮಾತರಂ ಎಂಬ ಗೀತೆಯನ್ನು ಹಾಡಿದ ಬಗ್ಗೆ ಅಲ್ಲಿನ ಮುಸ್ಲಿಂ ಲೀಗಿನ ಮತ್ತು ವಿದ್ಯಾರ್ಥಿಗಳ ಸಂಘದವರು ಪ್ರತಿಭಟಿಸಿರುವುದರಿಂದ, ಅದನ್ನು ಹಾಡಕೂಡದೆಂದು ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ.

ಪಾಕಿಸ್ತಾನ-ಭಾರತಗಳ ಹುಚ್ಚರ ವಿನಿಮಯ

[illegible] ಹುಚ್ಚಾಸ್ಪತ್ರೆಯಲ್ಲಿದ್ದ [illegible] ಮುಸ್ಲಿಂ ಹುಚ್ಚರನ್ನು ಸದ್ಯದಲ್ಲೇ ಲಾಹೋರಿಗೆ ಕಳುಹಿಸಲು, ಹಾಗೂ ಅಲ್ಲಿಂದ ಅಷ್ಟೇ ಸಂಖ್ಯೆಯ ಹಿಂದೂ ಹುಚ್ಚರನ್ನು ಭಾರತಕ್ಕೆ ಕರೆಸಲು ತೀರ್ಮಾನ ನಡೆದಿದೆಯೆಂದು ಹೇಳಲಾಗಿದೆ.

ಬಂಗನಪಲ್ಲಿ, ಸಾಂಡೂರುಗಳು ಮದರಾಸಿಗೆ

ಬಂಗನಪಲ್ಲಿ ಮತ್ತು ಸಾಂಡೂರು ಸಂಸ್ಥಾನಗಳನ್ನು ಮದರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಲಾಗಿದೆ.

ಒಲಂಪಿಕ್ ಸ್ಪರ್ಧೆಯಲ್ಲಿ ಅಪಶಕುನ

ಲಂಡನಿನಲ್ಲಿ ನಡೆಯುತ್ತಿರುವ ವಿಶ್ವದ ಒಲಿಂಪಿಕ್ ಕ್ರೀಡಾ ಸ್ಪರ್ಧೆಯ ಪ್ರಾರಂಭದ ದಿನ, ಗ್ರೀಸಿನಿಂದ ತೆಗೆದುಕೊಂಡು ಬಂದಿದ್ದ ಉರಿಯುವ ಪಂಜು, ನಾಲ್ಕು ಬಾರಿ ಆರಿಹೋಯಿತೆಂದೂ, ಇದು ಒಂದು ಅಪಶಕುನವೆಂದೂ ಭಾವಿಸಲಾಗಿದೆ.

೩ ನೇ ತರಗತಿ ಪ್ರಯಾಣಿಕರ ಸೌಕರ್ಯಕ್ಕಾಗಿ ಗೈಡುಗಳು

೩ ನೇ ತರಗತಿ ರೈಲ್ವೆ ಪ್ರಯಾಣಿಕರಿಗೆ ಸಹಾಯ ಮಾಡಲು ಎಂ ಎಸ್ ಎಂ, ಎಸ್ ಐ ಆರ್ ಮತ್ತು ಇತರ ರೈಲ್ವೆಗಳ ಮುಖ್ಯ ನಿಲ್ದಾಣಗಳಲ್ಲಿ ಗೈಡುಗಳನ್ನು ನೇಮಿಸಲಾಗುವುದೆಂದು ತಿಳಿದು ಬಂದಿದೆ.

Edited printed and published by A. R. Nagarajan at the Sadhvi Press D Subbaiah Road Mysore

ಭಾರತದ ಸಚಿವರ ಮಗನಿಗೆ ಜೈಲು ವಾಸ

ಭಾರತ ಸರ್ಕಾರದ ರೈಲ್ವೆ ಸಚಿವರಾದ ಡಾ। ಮಥಾಯ್‌ರವರ ಪುತ್ರ ರವಿ ಚಾರ್ಲ್ಸ್ ಮಥಾಯ್‌ರವರು ಅಲಹಾಬಾದಿನಲ್ಲಿ ಮೋಟಾರು ಗಾಡಿಯನ್ನು ಅತಿ ವೇಗವಾಗಿ ನಡೆಸಿ ರಾಜಾರಾಮ್ ಮೋಹನ್ ಎಂಬ ವಿದ್ಯಾರ್ಥಿಯ ಮೇಲೆ ಬಿಟ್ಟು ಆತನು ಮೃತಿಹೊಂದಿದನೆಂಬ ಆಪಾದನೆಯ ಮೇಲೆ ಅವರಿಗೆ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

೩೮೫ ವರ್ಷದ ಮನುಷ್ಯ

೩೮೫ ವರ್ಷದವನೆಂದು ಹೇಳುವ ಶಂಕರ ನಂಬೂದಿರಿ ಎಂಬ ಸಿದ್ಧಯೋಗಿಯು ಈಗ ಕೊಲ್ಲಂಗೋಡ ಹಿರಿಯ ರಾಣಿಯವರ ಅರಮನೆಯಲ್ಲಿ ಅವರ ಅತಿಥಿಗಳಾಗಿ ಇರುವನೆಂದೂ, ಆತನ ದರ್ಶನ ಪಡೆಯಲು ಸಾವಿರಾರು ಜನಗಳು ಅಲ್ಲಿಗೆ ಹೋಗುತ್ತಿರುವರೆಂದೂ ಹೇಳಲಾಗಿದೆ. ಆತನು ತನ್ನ ೩೩ನೆಯ ವಯಸ್ಸಿನಿಂದ ವ್ರತನಿಯಾಗಿದೆ [illegible]

ಹಿಂದೂ ಕೋಟ್ಯಾಧೀಶನು ರೈಲ್ವೆ ಕೂಲಿಯಾಗಿರುವನು

ಭಾರತದ ವಿಭಾಗದಿಂದ ಹಿಂದೂ ಕೋಟ್ಯಾಧೀಶರೊಬ್ಬರು ಈಗ ರೈಲ್ವೆ ನಿಲ್ದಾಣದಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿರುವರೆಂದು ಹೇಳಲಾಗಿದೆ. ಪಂಜಾಬಿನ ಗುಜರಾನವಾಲಾ ಜಿಲ್ಲೆಯಲ್ಲಿ ಅವರ ದೊಡ್ಡ ವ್ಯಾಪಾರ ಸಂಸ್ಥೆಯು ಮಾಲೀಕರಾಗಿದ್ದು, ಭಾರತ ವಿಭಜನೆಯ ಕಾಲದಲ್ಲಿ ನಡೆದ ಗಲಭೆಯಲ್ಲಿ ಅವರು ತಮ್ಮ ಸ್ವತ್ತುಗಳನ್ನೆಲ್ಲ ಕಳೆದುಕೊಂಡರೆಂದು ಹೇಳಲಾಗಿದೆ.

ಸಂಗೀತ ವಿದ್ಯಾಮಂದಿರಕ್ಕೆ ಅಯ್ಯಂಗಾರ್ಯರ ಭೇಟಿ

ರಾಜಧಾನಿಯ ಸಂಗೀತ ವಿದ್ವಾಂಸರುಗಳಾದ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ ಮೊನ್ನೆ ದಿನ ಸಂಗೀತ ರತ್ನಾಕರ ಅರಿಯಕುಡಿ ರಾಮಾನುಜ ಅಯ್ಯಂಗಾರ್ಯರು ಭೇಟಿ ಕೊಟ್ಟು, ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಮೈಸೂರು ಸಹೋದರರು ಅವರನ್ನು ಸ್ವಾಗತಿಸಿ ಸತ್ಕರಿಸಿದರು.

ಮದುವೆಯ ಖರ್ಚಿನ ಬಗ್ಗೆ ಪಾಕೀಸ್ತಾನದಲ್ಲಿ ಕಾನೂನು

ಪಾಕಿಸ್ತಾನದಲ್ಲಿ ಮದುವೆ ಖರ್ಚನ್ನು ನಿಗದಿ ಮಾಡಲು ಅಲ್ಲಿನ ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ಸದ್ಯದಲ್ಲೇ ಸರ್ಕಾರದವರು ಮಂಡಿಸಲಿರುವರೆಂದು ಹೇಳಲಾಗಿದೆ. ಇದನ್ನು ಶಾಸನ ರೂಪಕ್ಕೆ ತರಲು [illegible] ಒಂದು ಸಮಿತಿಯನ್ನು ನೇಮಿಸಲಾಗುವುದು. ಮದುವೆಯ ಖರ್ಚು, ಒಡವೆ ಮತ್ತು ಅತಿಥಿಗಳ ಸಂಖ್ಯೆ ಇವುಗಳನ್ನು ನಿಗದಿ ಮಾಡಲು ಮೇಲ್ಕಂಡ ಸಮಿತಿಗೆ ಅಧಿಕಾರ ಕೊಡಲಾಗುವುದು. ಈ ಕಾನೂನನ್ನು ಉಲ್ಲಂಘಿಸಿದವರಿಗೆ [illegible] ಶಿಕ್ಷೆ ಅಥವ [illegible] ದಂಡ ವಿಧಿಸಲಾಗುವುದು.

ಭತ್ತ ಕುಟ್ಟಲು ಅನುಮತಿ

[illegible] ಭತ್ತ ಮತ್ತು ಅಕ್ಕಿ ಮಾರಾಟಗಳ ಮೇಲೆ ಕಂಟ್ರೋಲ್ ಇಟ್ಟಿದ್ದರೂ, ಆಹಾರ ಇಲಾಖೆಯ ಡೈರೆಕ್ಟರ ಅನುಮತಿ ಇಲ್ಲದೆ ಭತ್ತವನ್ನು ಮಿಲ್ಲುಗಳಲ್ಲಿ ಕುಟ್ಟಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಸದ್ವಿದ್ಯಾ ಪಾಠಶಾಲಾ

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ಮೊನ್ನೆ ದಿನ ಮೇಲ್ಕಂಡ ಶಾಲೆಯಲ್ಲಿ ಮಕ್ಕಳಿಗೆ ಸಿಹಿ ತಿಂಡಿಗಳನ್ನು ಧರ್ಮ ಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಹಂಚಲಾಯಿತು.

SRI GAYATHRI TALKIES
From 30-7-48
Daily 3 Shows
ಅಡ್ವೆಂಚರ್ಸ್ ಆಫ್ ರಾಬಿನ್ ಹುಡ್
(ವರ್ಣ ರಂಜಿತ ಚಿತ್ರ)

ಹೈದರಾಬಾದಿನಲ್ಲಿ ಬಲಿದಾನ ಪಡೆ

ಹಿಂದೂಗಳನ್ನು ಮತಾಂತರ ಮಾಡಲು ಮತ್ತು ನಿಜಾಮರ ಗಡಿ ಪ್ರದೇಶಗಳನ್ನು ರಕ್ಷಿಸಲು, ಹೈದರಾಬಾದಿನಲ್ಲಿ ಸಿದ್ದೀಕ್ ದೀನದಾರ್ ಸಂಸ್ಥೆಯು ೫ ಬಲಿ ದಾನ ಪಡೆಗಳನ್ನು ಸ್ಥಾಪಿಸಿದೆಯೆಂದೂ ಅವಕ್ಕೆ ಪೊಲೀಸರು ಸಹಾಯಕರಾಗಿರುವರೆಂದೂ ಹೇಳಲಾಗಿದೆ. ಇವುಗಳನ್ನು ರಾಯಚೂರು ಗುಲ್ಬರ್ಗ ಮೊದಲಾದ ಪ್ರದೇಶಗಳಲ್ಲಿ ಇಡಲಾಗಿದೆ. ಮಹಮದ್ ಅಲ್ಲಿ ಕುರೇಷಿ ಎಂಬುವವನು ಇದರ ಮುಖ್ಯ ಸೈನ್ಯಾಧಿಕಾರಿಗಳಾಗಿ ನೇಮಿಸಲಾಗಿದೆ. ನಿಜಾಮರು ಮುಸ್ಲಿಂ ಜನಾಂಗದ ಖಲೀಫರೆಂದು ಅವರು ಸಾರುತ್ತಿರುವರು.

೨೪ ಸಾವಿರ ವಿದ್ಯಾರ್ಥಿಗಳ ಮುಷ್ಕರ

ಶಾಲಾ ಫೀಜುಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು, ಅಹಮದಾಬಾದಿನ ೨೪ ಸಾವಿರ ವಿದ್ಯಾರ್ಥಿಗಳು ಕಳೆದ ಶುಕ್ರವಾರ ಮುಷ್ಕರ ಹೂಡಿದ್ದರು. ಫೀಜನ್ನು ಇಳಿಸಬೇಕೆಂದು ಹೆಡ್‌ಮಾಸ್ಟರುಗಳ ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

ಹಿಂದೂಗಳ ಮನೆಗಳಲ್ಲಿ ಮುಸ್ಲಿಮರಿಗೆ ಒತ್ತಾಯದ ವಸತಿ

ಕರಾಚಿಯಲ್ಲಿರುವ ಹಿಂದೂಗಳ ಮನೆಗಳಲ್ಲಿ ಮುಸ್ಲಿಂ ನಿರಾಶ್ರಿತರಿಗೆ ಸ್ಥಳ ವಸತಿಯನ್ನು ಕೊಡಬೇಕೆಂದು ಅಲ್ಲಿನ ಬಾಡಿಗೆ ಹತೋಟಿ ಅಧಿಕಾರಿಗಳು ಆಜ್ಞೆ ಮಾಡಿರುವರೆಂದು ಹೇಳಲಾಗಿದೆ.

ಬೆಳಗಿನ ಆಟಗಳು
ರವಿವಾರ ಹಬ್ಬದ ಪ್ರಯುಕ್ತ
4-8-48 ರಿಂದ ಪ್ರತಿ ದಿನ ಬೆಳಿಗ್ಗೆ ೧೦ ಕ್ಕೆ
ರಿಪಬ್ಲಿಕ್ ಪಿಕ್ಚರ್ಸ್‌ರವರ
ಜಂಗಲ್ ಗರ್ಲ್
(15 ಭಾಗಗಳ ಪೂರ್ತಾ ಸೀರಿಯಲ್)
ಒಲಿಂಪಿಯಾ ಟಾಕೀಸ್

:: ಪ್ರಭಾ ::
6—8—48 ರಿಂದ :: ಪ್ರತಿ ದಿನ 3 ಆಟಗಳು
ವಾಡಿಯಾ ಟಾಕೀಸ್‌ರವರ ಸಾಹಸ ಚಿತ್ರ
ಪಂಜಾಬ್ ಮೇಲ್ ಬೂರ್
[ಹಿಂದಿ]
ಮುಖ್ಯ ಪಾತ್ರದಲ್ಲಿ ★ ಶ್ಯಾಮ್ ★ ಇಂದು
(ರಂಜಿತ ಸ್ಟಂಟ್ ಚಿತ್ರದ [illegible] ನೋಡಿ)

ಬೆಂಗಾಲ್ ಸಿಲ್ಕ್ ಸೀರೆಗಳ ವೈಖರಿಯನ್ನು
ನೋಡಬೇಕಾದರೆ ಬಾಬುಸಾಬ್ ಕಂಪೆನಿಗೆ ಹೋಗಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೩-೮-೪೮ [ಸಂಚಿಕೆ ೧೩

— ಧರ್ಮ ರತ್ನಾಕರ — ಪೆರುಮಾಳ್ ಶೆಟ್ರ ಕೊಲೆ

ಧರ್ಮ ರತ್ನಾಕರ ಸಿ. ಪೆರುಮಾಳ್ ಚೆಟ್ಟರ ಕೊಲೆ

ನಂಜನಗೂಡು ಬಳಿ ನಡೆದ ಘಟನೆ

ಮೈಸೂರು ೩

ರಾಜಧಾನಿಯ ಬಸ್ ಮತ್ತು ಗಿರಣಿಗಳ ಮಾಲೀಕರೂ, ಪ್ರಸಿದ್ಧ ವರ್ತಕರೂ ಆದ ಧರ್ಮ ರತ್ನಾಕರ ಸಿ ಪೆರುಮಾಳ್ ಚೆಟ್ಟರನ್ನು ಈ ದಿನ ಬೆಳಗ್ಗೆ ನಂಜನಗೂಡಿನ ಬಳಿ ಯಾರೋ ದುರಾತ್ಮರು ಕೊಲೆ ಮಾಡಿದರೆಂಬ ವಾರ್ತೆಯನ್ನು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ

ಈ ದಿನ ಬೆಳಗ್ಗೆ ಶ್ರೀ ಶೆಟ್ಟರು ನಂಜನಗೂಡು ಬಳಿ ಇರುವ ತಮ್ಮ ಕಟಿಲಾ ಟೆಕ್ಸ್‌ಟೈಲ್ ಕಾರ್ಖಾನೆಯನ್ನು ಪರಿಶೀಲಿಸಲು ಹೋಗಿದ್ದರೆಂದೂ, ಅವರು ಅಲ್ಲಿ ಸ್ಥಳವನ್ನು ಪರೀಕ್ಷಿಸುತ್ತಿದ್ದಾಗ ಯಾರೋ ಹಿಂಭಾಗದಿಂದ ಬಂದು ಪಿಚ್ಚನಿಂದ ಮೂರು ಬಾರಿ ಹೊಡೆದರೆಂದೂ, ಅದರಿಂದ ಶೆಟ್ಟರು ಕೆಳಕ್ಕೆ ಬಿದ್ದು ತಕ್ಷಣ ಮೃತಿ ಹೊಂದಿದರೆಂದೂ ತಿಳಿದುಬಂದಿದೆ.

ಕೊಲೆ ಮಾಡಿದವರೆಟ್ಟರು ತಾವಾಗಿಯೇ ಪೋಲೀಸ್ ಠಾಣೆಗೆ ಹೋಗಿ ಪೋಲೀಸರ ವಶವಾದರೆಂದು ತಿಳಿದುಬಂದಿದೆ

ದಿವಂಗತರು ಕೇವಲ ರಿಕ್ತ ಸ್ಥಿತಿಯಲ್ಲಿದ್ದು ಸ್ವಂತ ಪ್ರಯತ್ನದಿಂದಲೂ, ಅದ್ಭುತವಾದ ಸಂಘಟನಾ ಶಕ್ತಿಯಿಂದಲೂ ದೊಡ್ಡ ಬಸ್ಸ ಸರ್ವೀಸನ್ನು ಸ್ಥಾಪಿಸಿ ಹೆಸರುವಾಸಿಯಾಗಿದ್ದರು ಅನಂತರ ಸಿಟಿ ಬಸ್ ಅಕ್ಕಿ ಗಿರಣಿ ಚೌಬಿನ ವ್ಯಾಪಾರ, ಪೆಟ್ರೋಲ್ ಮತ್ತು ಸೀಮೆ ಎಣ್ಣೆ ವ್ಯಾಪಾರ ಇವುಗಳ ಮೂಲಕ ವಿಶೇಷ ಧನವನ್ನು ಗಳಿಸಿದರು

ರಾಜಧಾನಿಯಲ್ಲಿ ವೃತ್ತಿ ಶಿಕ್ಷಣಾಲಯ, ಶಾರದಾವಿಲಾಸ್ ಹೈಸ್ಕೂಲು, ಹೆಂಗಿ ಆಸ್ಪತ್ರಿ, ನಂಜನಗೂಡಿನಲ್ಲಿ ಟೌನ್ ಹಾಲ್ ಮತ್ತು ಶಿಶುವಿಹಾರಗಳು ಇವೇ ಮುಂತಾದ ಧರ್ಮ ಸಂಸ್ಥೆಗಳಿಗೆ ಲಕ್ಷಾಂತರ ರೂ ಧರ್ಮ ಸಹಾಯವನ್ನು ಮಾಡಿ ಶ್ರೀಮನ್ಮಹಾರಾಜರವರಿಂದ ಧರ್ಮ ರತ್ನಾಕರ ಎಂಬ ಬಿರುದನ್ನು ಪಡೆದಿದ್ದರು.

ಶ್ರೀ ಶೆಟ್ಟರಿಗೆ ಕೇವಲ ೫೪ ವರ್ಷ ವಯಸ್ಸಾಗಿತ್ತು. ಅವರಿಗೆ ೫ ಜನ ಗಂಡು ಮಕ್ಕಳೂ, ೪ ಜನ ಹೆಣ್ಣು ಮಕ್ಕಳೂ ಚಿಕ್ಕ ವಯಸ್ಸಿನ ಪತ್ನಿಯೂ ಇರುವರು ಸುಮಾರು ೮೦ ವಯಸ್ಸಿನ ಅವರ ತಂದೆಯವರಾದ ಶ್ರೀ ಚಲುವರಾಯ ಶೆಟ್ಟರುಮವರು ನಂಜನಗೂಡಿನಲ್ಲಿ ಇರುವರು ಶ್ರೀ ಪೆರುಮಾಳ್ ಚೆಟ್ಟರು ಕೆಲವು ಕಾಲ ರಾಜಧಾನಿಯ ಪೌರಸಭೆಯ ಸದಸ್ಯರಾಗಿದ್ದು ಸೇವೆ ಸಲ್ಲಿಸಿದ್ದರು.

ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನಿಯಲೆಂದು ಬೇಡಿ, ಅವರ ಬಂಧು ಮಿತ್ರರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ

ಮೃತರ ಗೌರವಾರ್ಥವಾಗಿ ಶಾರದಾವಿಲಾಸ ಶಾಲಾ ಮತ್ತು ಕಾಲೇಜುಗಳಿಗೆ ಈ ದಿನ ಮತ್ತು ನಾಳೆ ರಜಾ ಕೊಡಲಾಗಿದೆ

ನಗರದ ಬಸ್ಸು ಮತ್ತು ಇತರ ಸಿ ಪಿ ಸಿ ಬಸ್ಸು ಸರ್ವೀಸುಗಳನ್ನೆಲ್ಲವನ್ನು ಈ ದಿನ ಮುಚ್ಚಲಾಗಿತ್ತು. ಮೃತ ದೇಹವನ್ನು ನೋಡಲು ರಾಜಧಾನಿಯಿಂದ ನೂರಾರು ಬಂಧು ಮಿತ್ರರು ಕಾರು ಬಸ್ಸುಗಳಲ್ಲಿ ಅಲ್ಲಿಗೆ ಹೋಗುತ್ತಿದ್ದಾರೆ ಜಿಲ್ಲಾಧಿಕಾರಿಗಳು ಡಿ ಎಸ್ ಪಿ ಯವರು ಮತ್ತು ಇತರ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸುತ್ತಿದ್ದಾರೆ ಮೃತರ ದೇಹವನ್ನು ಇಲ್ಲಿಗೆ ಈ ದಿನ ರಾತ್ರಿ ತರಲಾಗುವುದ

ಲೋಕಪಾವನಿ ಸೇತುವೆ

ಸರ್ಕಾರದ ಪ್ರಕಟಣೆ

ಸ್ವಂ. ವಾ. ಫೋ] ಬೆಂಗಳೂರು ೩

ನಿನ್ನೆ ದಿನ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಈರೀತಿ ತಿಳಿಸಿರುತ್ತಾರೆ:—

ಫ್ರೆಂಚ್ ರಾಕ್ಸ್ ಮತ್ತು ಬೀಡರಹಳ್ಳಿಗೆ ಮಧ್ಯ ಇರುವ ಲೋಕಪಾವನಿ ನದಿಯ ಹಂಗಾಮಿ ರೈಲ್ವೆ ಸೇತುವೆಯು ಮೊನ್ನೆ ರಾತ್ರಿ ಕುಸಿದು ಬಿತ್ತು ವಿಶೇಷವಾದ ಮಳೆ ಬಂದು ನದಿಯಲ್ಲಿ ಪ್ರವಾಹ ಉಂಟಾದದರಿಂದ ಸೇತುವೆಗೆ ಆಧಾರವಾಗಿದ್ದ ಕಂಭಗಳು ಕಳಚಿ ಬಿದ್ದವು ಇದರ ಪರಿಣಾಮವಾಗಿ ಪ್ರಯಾಣಿಕರನ್ನೂ ಮತ್ತು ಸಾಮಾನುಗಳನ್ನೂ ಟ್ರಾನ್ಸ್‌ಶಿಫ್‌ಮೆಂಟ್ ಮೂಲಕ ರವಾನಿಸಲು ಏರ್ಪಾಡು ಮಾಡಲಾಗಿದೆ ಗೂಡ್ಸುಗಳನ್ನು ಅರಸೀಕೆರೆ ಮಾರ್ಗವಾಗಿ ಕಳುಹಿಸಲಾಗುವುದು ಸೇತುವೆಯ ಮೇಲೆ ಪ್ರಯಾಣಿಕರು ಸಂಚಾರ ಮಾಡಲು ತಕ್ಕ ಏರ್ಪಾಡು ಮಾಡಿದೆ ಇನ್ನು ೪-೫ ದಿನಗಳಲ್ಲಿ ಸೇತುವೆಯನ್ನು ದುರಸ್ತು ಮಾಡುವ ನಿರೀಕ್ಷಣೆ ಇರುತ್ತದೆ ಪ್ರಯಾಣಿಕರಿಗೆ ಉಂಟಾಗಿರುವ ತೊಂದರೆಗಾಗಿ ಸರ್ಕಾರದವರು ವಿಷಾದಿಸುತ್ತಾರೆ

ಹೊಸದಾಗಿ ಕಟ್ಟುತ್ತಿರುವ ಸೇತುವೆಯ ಕೆಲಸವು ಈ ತಿಂಗಳ ಅಂತ್ಯದೊಳಗೆ ಮುಗಿಯುವುದೆಂದು ಗೊತ್ತಾಗಿದೆ.

ಬರ್ಲಿನ್ ಬಿಕ್ಕಟ್ಟು ಬಗೆಹರಿಯುವ ಸೂಚನೆ

ಬರ್ಲಿನ್ನಿನ ಬಿಕ್ಕಟ್ಟನ್ನು ಬಗೆಹರಿಸುವ ಸಲುವಾಗಿ ರಷ್ಯದಲ್ಲಿ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸಿನ ರಾಯಭಾರಿಗಳು ಮಾರ್ಷಲ್ ಸ್ಟಾಲಿನ್ ಮತ್ತು ಮೊಲೊಟೊವ್‌ರವರುಗಳನ್ನು ಭೇಟಿ ಮಾಡಿದ್ದರಿಂದ, ಇದರಿಂದ ಅಲ್ಲಿನ ಬಿಕ್ಕಟ್ಟು ಬಗೆಹರಿಯುವ ಆಶಾದಾಯಕ ಸೂಚನೆ ಕಂಡು ಬಂದಿದೆಯೆಂದೂ ವರದಿಯಾಗಿದೆ

ಸ್ಕೌಟು ಕೌನ್ಸಿಲ್

ಮೈಸೂರು ನಗರದ ಸ್ಕೌಟ್ ಕೌನ್ಸಿಲಿನ ಸಭೆಯು ನಿನ್ನೆ ಬೆಳಗ್ಗೆ ನಡೆದು, ಶ್ರೀ ಪಿ ಸೀತಾರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು

ನಿಜಾಮರೇ ದೆಹಲಿಗೆ ಹೋಗಬೇಕು

ಭಾರತ ಸರ್ಕಾರವು ಹೈದರಾಬಾದಿನ ವಿಚಾರವನ್ನು ರಾಜಮಧ್ಯಸ್ಥಿಕೆಗಾರರ ಮೂಲಕವೂ ಪ್ರಸ್ತಾಪಿಸುವುದಿಲ್ಲವೆಂತಲೂ, ಹೈದರಾಬಾದ್ ಸರ್ಕಾರವು ಸಂಧಾನ ಮಾಡಿಕೊಳ್ಳಲು ಇಷ್ಟಪಡುವುದಾಗಿದ್ದರೆ, ನಿಜಾಮರೇ ದೆಹಲಿಗೆ ಬರಬೇಕೆಂದೂ ದೆಹಲಿಯ ಅಧಿಕಾರ ವೃಂದದಲ್ಲಿ ಅಭಿಪ್ರಾಯ ಪಡಲಾಗಿದೆ. ಇದರಿಂದ ಹೈದರಾಬಾದಿನ ಪರವಾಗಿ ದೆಹಲಿಗೆ ಹೋಗಿರುವ ಸರ್ ವಾಲ್ಟರ್ ಮಾಂಕ್‌ಟನ್ನರ ಸಂಧಾನ ಪ್ರಯತ್ನಗಳು ಈಡೇರುವುದಿಲ್ಲವೆಂದು ಹೇಳಲಾಗಿದೆ

ಭಾರತದಲ್ಲಿ ಲೂಯಿ ಫಿಷರ್‌ರವರು

ಅಮೆರಿಕದ ಸುಪ್ರಸಿದ್ಧ ಸಾಹಿತಿ ಮತ್ತು ಪತ್ರಿಕೋದ್ಯೋಗಿಗಳಾದ ಮಿ|| ಲೂಯಿ ಫಿಷರ್‌ರವರು ಭಾರತದಲ್ಲಿ ಮೂರು ತಿಂಗಳು ಪ್ರವಾಸ ಮಾಡಲು ಬೊಂಬಾಯಿಗೆ ಬಂದಿದ್ದಾರೆ ಅವರು ಮಹಾತ್ಮರ ಜೀವನ ಚರಿತ್ರೆಯನ್ನು ಬರೆಯಲು ವಿಷಯ ಸಂಗ್ರಹಕ್ಕಾಗಿ ಈ ಪ್ರವಾಸ ಕೈಗೊಂಡಿರುವರೆಂದು ಹೇಳಲಾಗಿದೆ

ರಾಜಸ್ಥಾನದಲ್ಲಿ ಪಂಚಾಯಿತಿ ರಾಜ್ಯ

ಹೊಸದಾಗಿ ಸ್ಥಾಪಿತವಾಗಿರುವ ರಾಜಸ್ಥಾನ ಪ್ರಾಂತ್ಯದಲ್ಲಿ ನ್ಯಾಯಾಂಗವನ್ನೂ, ಆಡಳಿತಾಂಗವನ್ನೂ ಪ್ರತ್ಯೇಕಿಸಲು ಏರ್ಪಾಡುಗಳಾಗುತ್ತಿವೆ ಅಲ್ಲದೆ ೫ ಸಾವಿರದವರೆಗೆ ಪ್ರಜಾ ಸಂಖ್ಯೆ ಇರುವ ಗ್ರಾಮಗಳಲ್ಲಿ ಪಂಚಾಯಿತಿಗಳನ್ನು ಸ್ಥಾಪಿಸಿ ಅವುಗಳಿಗೆ ಸಿವಿಲ ಮತ್ತು ಜುಡಿಷಲ್ ಅಧಿಕಾರವನ್ನು ಕೊಡಲಾಗುವುದೆಂದು ತಿಳಿದು ಬಂದಿದೆ

ನೂತನ ಜಿಲ್ಲಾಧಿಕಾರಿಗಳು

ಮೈಸೂರು ೩

ಶ್ರೀ ಜಾರ್ಜ್ ಮ್ಯಾಥ್ಯೂರವರು ನಿನ್ನೆ ದಿನ ಜಿಲ್ಲಾಧಿಕಾರಿಗಳ ಅಧಿಕಾರವನ್ನು ವಹಿಸಿಕೊಂಡರು ಜನಾಬ್ ಸಫ್‌ದರ್ ಹುಸೇನರವರು ಪುರಸಭಾ ಕಮೀಷನರ ಹುದ್ದೆಯನ್ನು ಸ್ವೀಕರಿಸಿದರು

ಉದಾರ ದಾನ

ಸಾಹಿತ್ಯರತ್ನಂ ವಿದ್ವಾನ್ಮಣಿ ಚೆಟ್ಟಿ ಹಲಸೂರು ವೆಂಕಟರಾಮ ಶಾಸ್ತ್ರಿಗಳು ಮೈಸೂರು ಶ್ರೀಶಂಕರ ಜಯಂತೀ ಮಹೋತ್ಸವ ಸಭೆಯ ಮೂಲಧನಕ್ಕಾಗಿ ೫ ನೂ ಸಾವಿರ ರೂಪಾಯಿಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ

ಹೈದರಾಬಾದ್ ದಿನಾಚರಣೆ

ಕಾಂಗ್ರೆಸ್ ಕಾರ್ಯದರ್ಶಿಗಳ ಹುಕುಂ

ಸ್ವಂ. ಸು. ಫೋ] ಬೆಂಗಳೂರು ೩

ದಕ್ಷಿಣ ಭಾರತದ ಕಾಂಗ್ರೆಸ್ ಮುಖಂಡರುಗಳು ಕಳೆದ ೩೦ ನೇ ತಾ|| ಮದರಾಸಿನಲ್ಲಿ ಸಭೆ ಸೇರಿ ನಿರ್ಧರಿಸಿದ ಪ್ರಕಾರ ಈ ತಿಂಗಳು ೮ ನೇ ತಾ|| ಭಾನುವಾರ ಸಂಸ್ಥಾನದಲ್ಲೆಲ್ಲಾ ಹೈದರಾಬಾದ್ ದಿನಾಚರಣೆಯನ್ನು ನೆರವೇರಿಸಬೇಕೆಂದು ಮೈಸೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎ. ಜಿ ರಾಮಚಂದ್ರರಾಯರು ಹುಕುಂ ಒಂದನ್ನು ಹೊರಡಿಸಿರುತ್ತಾರೆ. ಹೈದರಾಬಾದಿನಲ್ಲಿ ನಡೆಯುತ್ತಿರುವ ಅತ್ಯಾಚಾರಗಳನ್ನು ಖಂಡಿಸಿ ನಿಜಾಂ ಸಾಹಿಯ ಹೆಗಲ ಸಂಪಾದಕರನ್ನು ಪ್ರತಿಭಟಿಸಿ ಪ್ರಜಾಸ್ವಾತಂತ್ರ್ಯ ಸಾಧನೆಗಾಗಿ ಅಲ್ಲಿನ ಜನರು ನಡೆಸುತ್ತಿರುವ ಹೋರಾಟಕ್ಕೆ ಸಕಲರೂ ಬೆಂಬಲವನ್ನು ನೀಡಬೇಕೆಂದು ಕೋರಿದ್ದಾರೆ ಹೈದರಾಬಾದಿನಲ್ಲಿ ಪ್ರಜಾ ಸರ್ಕಾರವನ್ನು ಸ್ಥಾಪಿಸುವುದಲ್ಲದೆ ಆ ಸಂಸ್ಥಾನವು ಭಾರತ ಯೂನಿಯನ್ನಿನಲ್ಲಿ ಸೇರುವಂತೆ ಮಾಡುವ ಪ್ರಯತ್ನದಲ್ಲಿ ಸಕಲರೂ ಭಾಗಿಗಳಾಗಬೇಕೆಂದು ಕೋರಿದ್ದಾರೆ ಮತ್ತು ಅಲ್ಲಿನ ಹೋರಾಟಕ್ಕೆ ಉದಾರವಾಗಿ ದ್ರವ್ಯಸಹಾಯ ಮಾಡಬೇಕೆಂದೂ ಬೇಡಿದ್ದಾರೆ.

೮ ನೇ ತಾ|| ಬೆಳಗ್ಗೆ ೬ ಗಂಟೆಗೆ ಪ್ರಭಾತ್ ಫೇರಿ ನಡೆಸಿ ೯ ರಿಂದ ೧೨ ಗಂಟೆವರೆವಿಗೂ ಮತ್ತು ಮಧ್ಯಾಹ್ನ ೨ ರಿಂದ ೫ ಗಂಟೆ ವರೆವಿಗೂ ನಿಧಿ ಸಂಗ್ರಹ ಸಂಜೆ ೬ ಗಂಟೆಗೆ ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಸೂಚಿಸಲಾಗಿದೆ

○ ಅಡ್ವೊಕೇಟ್ ಜನರಲ್ಲರು ರಾಜೀನಾಮೆ ಕೊಟ್ಟದ್ದರ ಸಂಬಂಧವಾಗಿ ಕಾಂಗ್ರೆಸ್ಸಿನವರು ಪರಿಶೀಲಿಸುವುದಾಗಿ ಹೇಳಿದ್ದ ಮನೋಚಿತ್ರವನ್ನು ಇನ್ನೂ ಸ್ವೀಕರಿಸಿಲ್ಲವಾದುದರಿಂದ ಆ ಬಗ್ಗೆ ಮುಂದೆ ನಡೆಯಬೇಕಾದ ವಿಚಾರಣೆಯು ನಡೆಯುತ್ತಿಲ್ಲ

○ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿ ಲಿಂಗಯ್ಯನವರು ಈ ತಿಂಗಳು ೯ ನೇ ತಾ|| ದೆಹಲಿಗೆ ತೆರಳುವರು ಹೈದರಾಬಾದ್ ದಿನಾಚರಣೆಯ ಸಂಬಂಧವಾಗಿ ಮಾಡಬೇಕಾದ ಏರ್ಪಾಡುಗಳ ಬಗ್ಗೆ ಸಮಾಲೋಚನೆ ನಡೆಸಲು ಅವರಿಗೆ ಅವಕಾಶ ದೊರೆಯುತ್ತದೆ

Latest News

ನವೆಂಬರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆ

ಸ್ವಂ. ವಾ. ಫೋ] ಬೆಂಗಳೂರು ೩

ಕಳೆದ ಸ್ಕೂಲು ಫೈನಲ್ ಪರೀಕ್ಷೆಯಲ್ಲಿಯೂ ೬ ದಿನ ವರ್ಷಗಳ ಪರೀಕ್ಷೆಗಳಲ್ಲಿಯೂ ತೇರ್ಗಡೆಯಾಗದೆ ಇರುವ ವಿದ್ಯಾರ್ಥಿಗಳಿಗಾಗಿ ಬರುವ ನವೆಂಬರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯನ್ನು ನಡೆಸುವುದಾಗಿಯೂ, ಈ ತಿಂಗಳು ೩೧ ನೇ ತಾರೀಖಿನೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕೆಂದೂ ಸೂಚಿಸಿ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸುತ್ತಾರೆ. ಇನ್ನು ಮುಂದೆ ವರ್ಷಗಳಲ್ಲಿ ಇದೇ ರೀತಿ ಸೆಪ್ಟೆಂಬರ್ ತಿಂಗಳಿನಲ್ಲಿ ಪರೀಕ್ಷೆ ನಡೆಯುವುದು.

☩ ಅಖಿಲ ಭಾರತ ರೈಲ್ವೆ ಫೆಡರೇಷನ್ ಕಾರ್ಯದರ್ಶಿ ಮಿ|| ಜಿ. ಎಸ್. ಗುರುಸ್ವಾಮಿ ಇಲ್ಲಿಗೆ ಬಂದು ಮಂತ್ರಿಗಳಾದ ಶ್ರೀ ಟಿ ಸುಬ್ರಹ್ಮಣ್ಯನವರೊಡನೆ ಮಾತುಕತೆ ನಡೆಸುತ್ತಿದ್ದಾರೆ

ಪೂರ್ವ ಬಂಗಾಳದಲ್ಲಿ ಬಾಸುನಾಮಕ್ಕೆ ಪ್ರತಿಬಂಧಕ

ಕುಷ್ಟಿಯಾ ಎಂಬಲ್ಲಿನ ಹಿಂದೂ ವಿದ್ಯಾರ್ಥಿಗಳಲ್ಲಿ (ಪೂರ್ವ ಬಂಗಾಳ) ವಂದೇಮಾತರಂ ಎಂಬ ಗೀತೆಯನ್ನು ಹಾಡುವ ಬಗ್ಗೆ ಅಲ್ಲಿನ ಮುಸ್ಲಿಂ ಲೀಗಿನ ಮತ್ತು ವಿದ್ಯಾರ್ಥಿಗಳ ಸಂಘದವರು ಪ್ರತಿಭಟಿಸಿರುವುದರಿಂದ, ಅದನ್ನು ಹಾಡಕೂಡದೆಂದು ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುತ್ತಾರೆ

ಪಾಕಿಸ್ತಾನ-ಭಾರತಗಳ ಮುಚ್ಚರ ಪಸಮುಕ.

ಲಾಹೋರಿನ ಹಿಂದೂ ಪತ್ರಿಕೆಗಳ ಮೇಲೆ ಪಾಕಿಸ್ತಾನದ ಮುಸ್ಲಿಂ ಪತ್ರಿಕೆಗಳ ಸಂಘದ ಲಾಹೋರಿಗೆ ಕಳುಹಿಸಲ್ಪಟ್ಟ ... ಹಿಂದೂ ಪತ್ರಿಕೆಗಳನ್ನು ಭಾರತಕ್ಕೆ ಕರೆಸಲು ತಕ್ಕ ಏರ್ಪಾಡು ನಡೆದಿದೆಯೆಂದು ಹೇಳಲಾಗಿದೆ

ಬಂಗಾಳದಲ್ಲಿ ಸಾಂಬಾರು ಪದಾರ್ಥಗಳು ಮುದಲಾಸಿಗೆ

ಬಂಗಾಳದಲ್ಲಿ ... ಸಾಂಬಾರ ಪದಾರ್ಥಗಳನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಲಾಗಿದೆ.

ಒಲಿಂಪಿಕ್ ಸ್ಪರ್ಧೆಯಲ್ಲಿ ಅಪಶಕುನ

ಲಂಡನಿನಲ್ಲಿ ನಡೆಯುತ್ತಿರುವ ವಿಶ್ವದ ಒಲಿಂಪಿಕ್ ಕ್ರೀಡಾ ಸ್ಪರ್ಧೆ ಪ್ರಾರಂಭದ ದಿನ, ಗ್ರೀಸಿನಿಂದ ತೆಗೆದುಕೊಂಡು ಬಂದಿದ್ದ ಉರಿಯುವ ಪಂಜ, ನಾಲ್ಕು ಬಾರಿ ಆರಿ ಹೋಯಿತೆಂದೂ, ಇದು ಒಂದು ಅಪಶಕುನವೆಂದೂ ಭಾವಿಸಲಾಗಿದೆ

೩ ನೇ ತರಗತಿ ಪ್ರಯಾಣಿಕರ ಸೌಕರ್ಯಕ್ಕಾಗಿ ಗ್ರೈಡುಗಳು

೩ ನೇ ತರಗತಿ ರೈಲ್ವೆ ಪ್ರಯಾಣಿಕರಿಗೆ ಸಹಾಯ ಮಾಡಲು ಎಂ. ಎಸ್. ಎಂ., ಎಸ್. ಐ. ಆರ್. ಮತ್ತು ಇತರ ರೈಲ್ವೆಗಳ ಮುಖ್ಯ ನಿಲ್ದಾಣಗಳಲ್ಲಿ ಗ್ರೈಡುಗಳನ್ನು ನೇಮಿಸಲಾಗುವುದೆಂದು ತಿಳಿದು ಬಂದಿದೆ

Edited printed and published by A. R. Nagarajan at the Sadhvi Press D. Subbaiah Road Mysore

ಭಾರತದ ಸಚಿವರ ಮಗನಿಗೆ ಜೈಲು ವಾಸ

ಭಾರತ ಸರ್ಕಾರದ ರೈಲ್ವೆ ಸಚಿವರಾದ ಡಾ|| ಮಥಾಯ್‌ರವರ ಪುತ್ರ ರವಿ ಚಾರ್ಲ್ಸ್ ಮಥಾಯ್‌ರವರು ಅಲಹಾಬಾದಿನಲ್ಲಿ ಮೋಟಾರು ಗಾಡಿಯನ್ನು ಅತಿ ವೇಗವಾಗಿ ನಡೆಸಿ ರಾಜನಾಥ್ ಮೋಹನ್ ಎಂಬ ವಿದ್ಯಾರ್ಥಿಯ ಮೇಲೆ ಬಿಟ್ಟು ಅವನ ಮೃತಿಗೆ ಕಾರಣನಾದನೆಂಬ ಆಪಾದನೆಯ ಮೇಲೆ ಅವರಿಗೆ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ

೭೮೫ ವರ್ಷದ ಮನುಷ್ಯ

೭೮೫ ವರ್ಷದವನೆಂದು ಹೇಳಲಾದ ... ನಂಬೂದಿರಿ ಎಂಬ ಸಿದ್ಧಯೋಗಿ, ಈ ಕೊಲ್ಲಂಗೋಡ ಹರಿಯ ರಾಣಿಯವರ ಅರಮನೆಯಲ್ಲಿ ಅವರ ಅತಿಥಿಗಳಾಗಿ ಇರುವನೆಂದೂ, ಆತನ ದರ್ಶನ ಪಡೆಯಲು ಸಾವಿರಾರು ಜನಗಳು ಅಲ್ಲಿಗೆ ಹೋಗುತ್ತಿರುವರೆಂದೂ ಹೇಳಲಾಗಿದೆ ಆತನ ಹೆಸರು ... ವನೆಂದು ವರದಿಯಾಗಿದೆ

ಹಿಂದೂ ಕೋಟ್ಯಾಧೀಶನು ರೈಲ್ವೆ ಕೂಲಿಯಾಗಿರುವನು

ಭಾರತದ ಇಬ್ಭಾಗದಿಂದ ಹಿಂದೂ ಕೋಟ್ಯಾಧೀಶರೊಬ್ಬರು ಈಗ ರೈಲ್ವೆ ನಿಲ್ದಾಣದಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿರುವರೆಂದು ಹೇಳಲಾಗಿದೆ ಪಂಜಾಬಿನ ಗುಜರಾನವಾಲಾ ಜಿಲ್ಲೆಯಲ್ಲಿ ಅವರ ದೊಡ್ಡ ವ್ಯಾಪಾರ ಸಂಸ್ಥೆಯು ಮಾಲೀಕರಾಗಿದ್ದು, ಭಾರತ ವಿಭಜನೆಯ ಕಾಲದಲ್ಲಿ ನಡೆದ ಗಲಭೆಯಲ್ಲಿ ಅವರು ತಮ್ಮ ಸ್ವತ್ತುಗಳನ್ನೆಲ್ಲಾ ಕಳೆದುಕೊಂಡರೆಂದು ಹೇಳಲಾಗಿದೆ

ಸಂಗೀತ ವಿದ್ಯಾಸುಂದರಿಗೆ ಅಯ್ಯಕುಡಿಯವರ ಭೇಟಿ

ರಾಜಧಾನಿಯ ಸಂಗೀತ ವಿದ್ವಾಂಸರುಗಳಾದ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ ನೊನ್ನೆ ದಿನ ಸಂಗೀತ ರತ್ನಾಕರ ಅರ್ಯಕುಡಿ ರಾಮಾನುಜ ಅಯ್ಯಂಗಾರ್ಯರು ಭೇಟಿ ಕೊಟ್ಟು, ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು ಮೈಸೂರು ಸಹೋದರರು ಅವರನ್ನು ಸ್ವಾಗತಿಸಿ ಸತ್ಕರಿಸಿದರು

ಮದುವೆಯ ಖರ್ಚಿನ ಬಗ್ಗೆ ಪಾಕೀಸ್ತಾನದಲ್ಲಿ ಕಾನೂನು

ಪಾಕಿಸ್ತಾನದಲ್ಲಿ ಮದುವೆ ಖರ್ಚನ್ನು ನಿಗ್ರಹ ಮಾಡಲು ಅಲ್ಲಿನ ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ಸಭ್ಯದಲ್ಲೇ ಸರ್ಕಾರದವರು ... ತೀರ್ಮಾನಿಸಲಾಗಿದೆ ಇದನ್ನು ಕಾನೂನಾಗಿ ಮಾಡಲು ... ಒಂದು ... ಮದುವೆಯ ಖರ್ಚು, ಒಡವೆ ಮತ್ತು ಅತಿಥಿಗಳ ಸಂಖ್ಯೆ ಇವುಗಳನ್ನು ನಿಗದಿ ಮಾಡಲಾಗುತ್ತದೆ. ... ಈ ಕಾನೂನನ್ನು ಉಲ್ಲಂಘಿಸಿದವರಿಗೆ ... ಶಿಕ್ಷೆ ಅಥವಾ ... ದಂಡ ವಿಧಿಸಲಾಗುವುದು

ಭಕ್ತ ಕುಚೇಲ... ಅನುಮಾನ

... ಭಕ್ತರನ್ನು ... ಹೋಟೆಲುಗಳಲ್ಲಿ ... ಭಕ್ತರನ್ನು ... ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಸದ್ವಿದ್ಯಾ ಪಾಠಶಾಲಾ

ಶ್ರೀ ... ನೊನ್ನೆ ದಿನ ಮೈಸೂರಿನ ಸದ್ವಿದ್ಯಾ ಶಾಲೆಯಲ್ಲಿ ಮಕ್ಕಳಿಗೆ ಸಿಹಿ ತಿಂಡಿಗಳನ್ನು ಧರ್ಮಪ್ರವರ್ತ ಎ. ಎಸ್. ರಂಗಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಹಂಚಲಾಯಿತು.

ಹೈದರಾಬಾದಿನಲ್ಲಿ ಬಲಿದಾನ ಪಡೆ

ಹಿಂದೂಗಳನ್ನು ಮತಾಂತರ ಮಾಡುವುದು ಮತ್ತು ನಿಜಾಮರ ಗಡಿ ಪ್ರದೇಶಗಳನ್ನು ರಕ್ಷಿಸಲು, ಹೈದರಾಬಾದಿನಲ್ಲಿ ಸಿದ್ದಿಕ್ ದೀನದಾರ್ ಸಂಸ್ಥೆಯು ೫ ಬಲಿ ದಾನ ಪಡೆಗಳನ್ನು ಸ್ಥಾಪಿಸಿದೆಯೆಂದೂ ಅವಕ್ಕೆ ಪೋಲೀಸರು ಸಹಾಯ ಕೊಡಲಾಗಿದೆಯೆಂದೂ ಹೇಳಲಾಗಿದೆ. ಇವುಗಳನ್ನು ರಾಯಚೂರು ಗುಲ್ಬರ್ಗ ಮೊದಲಾದ ಪ್ರದೇಶಗಳಲ್ಲಿ ಇಡಲಾಗಿದೆ ಮಹಮದ್ ಅಲ್ಲಿ ಕುರೇಷಿ ಎಂಬುವವರು ಅದರ ಮುಖ್ಯ ಸೈನ್ಯಾಧಿಕಾರಿಗಳಾಗಿ ನೇಮಿಸಲಾಗಿದೆ ನಿಜಾಮರು ಮುಸ್ಲಿಂ ... ಅವರು ಸಾರುತ್ತಿರುವರು

೨೪ ಸಾವಿರ ವಿದ್ಯಾರ್ಥಿಗಳ ಮುಷ್ಕರ

ಶಾಲಾ ಫೀಜುಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಅಹಮದಾಬಾದಿನ ೨೪ ಸಾವಿರ ವಿದ್ಯಾರ್ಥಿಗಳು ಕಳೆದ ಶುಕ್ರವಾರ ಮುಷ್ಕರ ಹೂಡಿದ್ದರು ಫೀಜನ್ನು ಲಘುಗೊಳಿಸ ಬೇಕೆಂದು ... ಉಪಾಧ್ಯಾಯರುಗಳ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ

ಹಿಂದೂಗಳ ಮನೆಗಳಲ್ಲಿ ಮುಸ್ಲಿಮರಿಗೆ ಒತ್ತಾಯದ ವಸತಿ

ಕರಾಚಿಯಲ್ಲಿರುವ ಹಿಂದೂಗಳ ಮನೆಗಳಲ್ಲಿ ಮುಸ್ಲಿಂ ನಿರಾಶ್ರಿತರಿಗೆ ಸ್ಥಳ ವಸತಿಯನ್ನು ಕೊಡಬೇಕೆಂದು ಅಲ್ಲಿನ ಬಾಡಿಗೆ ಪಹರೆ ಅಧಿಕಾರಿಗಳು ಆಜ್ಞೆ ಮಾಡಿರುವರೆಂದು ಹೇಳಲಾಗಿದೆ.

SRI GAYATHRI TALKIES
From 30-7-48
Daily 3 Shows
ಅಡ್ವೆಂಚರ್ಸ್ ಆಫ್ ರಾಬಿನ್ ಹುಡ್
(ವರ್ಣ ರಂಜಿತ ಚಿತ್ರ)

ಬೆಳಗಿನ ಆಟಗಳು
ರುದ್ರ ಹಬ್ಬದ ಪ್ರಯುಕ್ತ
4-8-48 ರಿಂದ ಪ್ರತಿ ದಿನ ಬೆಳಗ್ಗೆ ೧೦ ಕ್ಕೆ
ರಿಪಬ್ಲಿಕ್ ಪಿಕ್ಚರ್ಸ್‌ರವರ
ಜಂಗಲ್ ಗರ್ಲ್
(15 ಭಾಗಗಳ ಫೈಟಿಂಗ್ ಸೀರಿಯಲ್)
ಒಲಿಂಪಿಯಾ ಟಾಕೀಸ್

:: ಪ್ರಭಾ ::
6—8—48 ರಿಂದ :: ಪ್ರತಿ ದಿನ 3 ಆಟಗಳು
ಬಾಂಬೆ ಟಾಕೀಸ್‌ರವರ ಸಹಾಸ ಚಿತ್ರ
ಮಜ್‌ಬೂರ್
[ಹಿಂದಿ]
★ ಮುನಾವರ್ ಸುಲ್ತಾನ ★ ಶ್ಯಾಮ್ ★ ಇಂದು
(ಲಾಂಗ್ ಕಾಟ್ರಿಪಿನೆ ಹೊಸದಾಗಿ ... ಮಾಡಲಾಗಿದೆ)



★ ಬೆಂಗಾಲ್ ಸಿಲ್ಕ್ ಸೀರೆಗಳ ವೈಖರಿಯನ್ನು
ನೋಡಬೇಕಾದರೆ ಬಾಹುಸಾರ್ ಕಂಪೆನಿಗೆ ಹೋಗಿ. ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೩-೮-೪೮ [ಸಂಚಿಕೆ ೧೩

— ಧರ್ಮ ರತ್ನಾಕರ — ಪೆರುಮಾಳ್ ಶೆಟ್ರ ಕೊಲೆ

ಧರ್ಮ ರತ್ನಾಕರ ಸಿ. ಪೆರುಮಾಳ್ ಚೆಟ್ಟರ ಕೊಲೆ

ನಂಜನಗೂಡು ಬಳಿ ನಡೆದ ಘಟನೆ

ಮೈಸೂರು ೩

ರಾಜಧಾನಿಯ ಬಸ್ ಮತ್ತು ಗಿರಣಿಗಳ ಮಾಲೀಕರೂ, ಪ್ರಸಿದ್ಧ ವರ್ತಕರೂ ಆದ ಧರ್ಮ ರತ್ನಾಕರ ಸಿ ಪೆರುಮಾಳ್ ಚೆಟ್ಟರನ್ನು ಈ ದಿನ ಬೆಳಗ್ಗೆ ನಂಜನಗೂಡಿನ ಬಳಿ ಯಾರೋ ದುಂಡಾಕ್ತರು ಕೊಲೆ ಮಾಡಿದರೆಂಬ ವಾರ್ತೆಯನ್ನು ತಿಳಿಸಲು ಅತ್ಯಂತ ವಿಷಾದಿಸುತ್ತೇನೆ

ಈ ದಿನ ಬೆಳಗ್ಗೆ ಶ್ರೀ ಶೆಟ್ಟರು ನಂಜನಗೂಡ. ಬಳಿ ಇರುವ ತಮ್ಮ ಕಟಿಲಾ ಟೆಕ್ಸ್‌ಟೈಲ್ ಕಾರ್ಖಾನೆಯನ್ನು ಪರಿಶೀಲಿಸಲು ಹೋಗಿದ್ದರೆಂದೂ, ಅವರು ಅಲ್ಲಿ ಸ್ಥಳವನ್ನು ಪರೀಕ್ಷಿಸುತ್ತಿದ್ದಾಗ ಯಾರೋ ಹಿಂಭಾಗದಿಂದ ಬಂದು ಮಚ್ಚಿನಿಂದ ೫.೬ರ ಬಾರಿ ಹೊಡೆದರೆಂದೂ, ಆದರಿಂದ ಶೆಟ್ಟರು ಕೆಳಕ್ಕೆ ಬಿದ್ದು ತಕ್ಷಣ ಮೃತಿ ಹೊಂದಿದರೆಂದೂ ತಿಳಿದುಬಂದಿದೆ

ಕೊಲೆ ಮಾಡಿದವರೆಲ್ಲರು ತಾವಾಗಿಯೇ ಪೊಲೀಸ್ ಠಾಣೆಗೆ ಹೋಗಿ ಪೊಲೀಸರ ವಶವಾದರೆಂದು ತಿಳಿದುಬಂದಿದೆ

ದಿವಂಗತರು ಕೇವಲ ರಿಕ್ತ ಸ್ಥಿತಿಯಲ್ಲಿದ್ದು ಸ್ವಂತ ಪ್ರಯತ್ನದಿಂದಲೂ, ಅದ್ಭುತವಾದ ಸಂಘಟನಾ ಶಕ್ತಿಯಿಂದಲೂ ದೊಡ್ಡ ಬಸ್ಸು ಸರ್ವೀಸನ್ನು ಸ್ಥಾಪಿಸಿ ಹೆಸರುವಾಸಿಯಾಗಿದ್ದರು ಅನಂತರ ಸಿಟಿ ಬಸ್ ಅಕ್ಕಿ ಗಿರಣಿ ಚೌಬಿನೆ ವ್ಯಾಪಾರ, ಪೆಟ್ರೋಲ್ ಮತ್ತು ಸೀಮೆ ಎಣ್ಣೆ ವ್ಯಾಪಾರ ಇವುಗಳ ಮೂಲಕ ವಿಶೇಷ ಧನವಂತರಾಗಿದ್ದರು

ರಾಜಧಾನಿಯಲ್ಲಿ ವೃತ್ತಿ ಶಿಕ್ಷಣಾಲಯ, ಶಾರದಾವಿಲಾಸ್ ಹೈಸ್ಕೂಲ್, ಹೆರಿಗೆ ಆಸ್ಪತ್ರೆ, ನಂಜನಗೂಡಿನಲ್ಲಿ ಟೌನ್ ಹಾಲ್ ಮತ್ತು ಶಿಶುವಿಹಾರಗಳು ಇವೇ ಮುಂತಾದ ಧರ್ಮ ಸಂಸ್ಥೆಗಳಿಗೆ ಲಕ್ಷಾಂತರ ರೂ ಧರ್ಮ ಸಹಾಯವನ್ನು ಮಾಡಿ ಶ್ರೀಮನ್ಮಹಾರಾಜರವರಿಂದ ಧರ್ಮ ರತ್ನಾಕರ ಎಂಬ ಬಿರುದನ್ನು ಪಡೆದಿದ್ದರು.

ಶ್ರೀ ಶೆಟ್ಟರಿಗೆ ಕೇವಲ ೫೪ ವರ್ಷ ವಯಸ್ಸಾಗಿತ್ತು. ಅವರಿಗೆ ೫ ಜನ ಗಂಡು ಮಕ್ಕಳೂ, ೪ ಜನ ಹೆಣ್ಣು ಮಕ್ಕಳೂ ಚಿಕ್ಕ ವಯಸ್ಸಿನ ಪತ್ನಿಯೂ ಇರುವರು ಸುಮಾರು ೮೦ ವಯಸ್ಸಿನ ಅವರ ತಂದೆಯವರಾದ ಶ್ರೀ ಚಲುವರಾಯ ಶೆಟ್ಟಿಯವರು ನಂಜನಗೂಡಿನಲ್ಲಿ ಇರುವರು ಶ್ರೀ ಪೆರುಮಾಳ್ ಚೆಟ್ಟರು ಕೆಲವು ಕಾಲ ರಾಜಧಾನಿಯ ಪೌರಸಭೆಯ ಸದಸ್ಯರಾಗಿದ್ದು ಸೇವೆ ಸಲ್ಲಿಸಿದ್ದರು.

ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನಿಯಲೆಂದು ಬೇಡಿ, ಅವರ ಬಂಧು ಮಿತ್ರರಿಗೆ ನಮ್ಮ ಹೃತ್ಪೂರ್ವಕವಾದ ಸಮವೇದನವನ್ನು ಸಲ್ಲಿಸುತ್ತೇವೆ

ಮೃತರ ಗೌರವಾರ್ಥವಾಗಿ ಶಾರದಾವಿಲಾಸ ಶಾಲಾ ಮತ್ತು ಕಾಲೇಜುಗಳಿಗೆ ಈ ದಿನ ಮತ್ತು ನಾಳೆ ರಜಾ ಕೊಡಲಾಗಿದೆ

ನಗರದ ಬಸ್ಸು ಮತ್ತು ಇತರ ಸಿ ಪಿ ಸಿ ಬಸ್ಸು ಸರ್ವೀಸುಗಳನ್ನೆಲ್ಲವನ್ನು ಈ ದಿನ ಮುಚ್ಚಲಾಗಿತ್ತು ಮೃತ ದೇಹವನ್ನು ನೋಡಲು ರಾಜಧಾನಿಯಿಂದ ನೂರಾರು ಬಂಧು ಮಿತ್ರರು ಸದರಿ ಬಸ್ಸುಗಳಲ್ಲಿ ಅಲ್ಲಿಗೆ ಹೋಗುತ್ತಿದ್ದಾರೆ ಜಿಲ್ಲಾಧಿಕಾರಿಗಳು ಎಸ್ ಪಿ ಯವರು ಮತ್ತು ಇತರ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸುತ್ತಿದ್ದಾರೆ ಮೃತರ ದೇಹವನ್ನು ಇಲ್ಲಿಗೆ ಈ ದಿನ ರಾತ್ರಿ ತರಲಾಗುವುದು

ಲೋಕಪಾವನಿ ಸೇತುವೆ

ಸರ್ಕಾರದ ಪ್ರಕಟನೆ

ಸ್ವಂ. ಸು. ಫೋ] ಬೆಂಗಳೂರು ೩

ನಿನ್ನೆ ದಿನ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಈರೀತಿ ತಿಳಿಸಿರುತ್ತಾರೆ.—

ಫ್ರೆಂಚ್‌ರಾಕ್ಸ್ ಮತ್ತು ಬೀಡರಹಳ್ಳಿಗೆ ಮಧ್ಯ ಇರುವ ಲೋಕಪಾವನಿ ನದಿಯ ಹಂಗಾಮಿ ರೈಲ್ವೆ ಸೇತುವೆಯು ಮೊನ್ನೆ ರಾತ್ರಿ ಕುಸಿದು ಬಿತ್ತು ವಿಶೇಷವಾದ ಮಳೆ ಬಂದು ನದಿಯಲ್ಲಿ ಪ್ರವಾಹ ಉಂಟಾದದರಿಂದ ಸೇತುವೆಗೆ ಆಧಾರವಾದ ಕಂಭಗಳು ಕಳಚಿ ಬಿದ್ದವು ಇದರ ಪರಿಣಾಮವಾಗಿ ಪ್ರಯಾಣಿಕರನ್ನೂ ಮತ್ತು ಸಾಮಾನುಗಳನ್ನೂ ಟ್ರಾನ್ಸ್‌ಷಿಪ್‌ಮೆಂಟ್ ಮೂಲಕ ರವಾನಿಸಲು ಏರ್ಪಾಡು ಮಾಡಲಾಗಿದೆ ಗೂಡ್ಸ್‌ಗಳನ್ನು ಅರಸೀಕೆರೆ ಮಾರ್ಗವಾಗಿ ಕಳುಹಿಸಲಾಗುವುದು ಸೇತುವೆಯ ಮೇಲೆ ಪ್ರಯಾಣಿಕರು ಸಂಚಾರ ಮಾಡಲು ತಕ್ಕ ಏರ್ಪಾಡು ಮಾಡಿದೆ ಇನ್ನು ೪-೫ ದಿನಗಳಲ್ಲಿ ಸೇತುವೆಯನ್ನು ದುರಸ್ತು ಮಾಡುವ ನಿರೀಕ್ಷಣೆ ಇರುತ್ತದೆ ಪ್ರಯಾಣಿಕರಿಗೆ ಉಂಟಾಗಿರುವ ತೊಂದರೆಗಾಗಿ ಸರ್ಕಾರದವರು ವಿಷಾದಿಸುತ್ತಾರೆ

ಹೊಸದಾಗಿ ಕಟ್ಟುತ್ತಿರುವ ಸೇತುವೆಯ ಕೆಲಸವು ಈ ತಿಂಗಳ ಅಂತ್ಯದೊಳಗೆ ಮುಗಿಯುವುದೆಂದು ಗೊತ್ತಾಗಿದೆ

ಬರ್ಲಿನ್ ಬಿಕ್ಕಟ್ಟು ಬಗೆಹರಿಯುವ ಸೂಚನೆ

ಬರ್ಲಿನ್ನಿನ ಬಿಕ್ಕಟ್ಟನ್ನು ಬಗೆಹರಿಸುವ ಸಲುವಾಗಿ ರಷ್ಯದಲ್ಲಿ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸಿನ ರಾಯಭಾರಿಗಳು ಮಾರ್ಷಲ್ ಸ್ಟಾಲಿನ್ ಮತ್ತು ಮೊಲಟೋಫ್‌ರವರುಗಳನ್ನು ಭೇಟಿ ಮಾಡಿದ್ದರಿಂದೂ, ಆದರಿಂದ ಅಲ್ಲಿನ ಬಿಕ್ಕಟ್ಟು ಬಗೆಹರಿಯುವ ಆಶಾದಾಯಕ ಸೂಚನೆ ಕಂಡು ಬಂದಿದೆಯೆಂದೂ ವರದಿಯಾಗಿದೆ

ಸ್ಕೌಟು ಕೌನ್ಸಿಲ್

ಮೈಸೂರು ನಗರದ ಸ್ಕೌಟ್ ಕೌನ್ಸಿಲಿನ ಸಭೆಯು ನಿನ್ನೆ ಬೆಳಗ್ಗೆ ನಡೆದು, ಶ್ರೀ ಪಿ ಸೀತಾರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು

ನಿಜಾಮರೇ ದೆಹಲಿಗೆ ಹೋಗಬೇಕು

ಭಾರತ ಸರ್ಕಾರವು ಹೈದರಾಬಾದಿನ ವಿಚಾರವನ್ನು ಯಾವ ಮಧ್ಯಸ್ಥಗಾರರ ಮೂಲಕವೂ ಪ್ರಸ್ತಾಪಿಸುವುದಿಲ್ಲವೆಂದೂ, ಹೈದರಾಬಾದ್ ಸರ್ಕಾರವು ಸಂಧಾನ ಮಾಡಿಕೊಳ್ಳಲು ಇಷ್ಟಪಟ್ಟದ್ದಾಗಿದ್ದರೆ, ನಿಜಾಮರೇ ದೆಹಲಿಗೆ ಬರಬೇಕೆಂದೂ ದೆಹಲಿಯ ಅಧಿಕಾರ ವೃಂದದಲ್ಲಿ ಅಭಿಪ್ರಾಯ ಪಡಲಾಗಿದೆ. ಇದರಿಂದ ಹೈದರಾಬಾದಿನ ಪರವಾಗಿ ದೆಹಲಿಗೆ ಹೋಗಿರುವ ಸರ್ ಮಿರ್ಜಾರವರ ಸಂಧಾನ ಪ್ರಯತ್ನಗಳು ಈಡೇರುವುದಿಲ್ಲವೆಂದು ಹೇಳಲಾಗಿದೆ

ಭಾರತದಲ್ಲಿ ಲೂಯಿ ಫಿಷರ್‌ರವರು

ಅಮೆರಿಕದ ಸುಪ್ರಸಿದ್ಧ ಸಾಹಿತಿ ಮತ್ತು ಪತ್ರಿಕೋದ್ಯೋಗಿಗಳಾದ ಮಿ॥ ಲೂಯಿ ಫಿಷರ್‌ರವರು ಭಾರತದಲ್ಲಿ ಮೂರು ತಿಂಗಳು ಪ್ರವಾಸ ಮಾಡಲು ಬೊಂಬಾಯಿಗೆ ಬಂದಿದ್ದಾರೆ ಅವರು ಮಹಾತ್ಮರ ಜೀವನ ಚರಿತ್ರೆಯನ್ನು ಬರೆಯಲು ವಿಷಯ ಸಂಗ್ರಹಕ್ಕಾಗಿ ಈ ಪ್ರವಾಸ ಕೈಗೊಂಡಿರುವರೆಂದು ಹೇಳಲಾಗಿದೆ

ರಾಜಸ್ಥಾನದಲ್ಲಿ ಪಂಚಾಯಿತಿ ರಾಜ್ಯ

ಹೊಸದಾಗಿ ಸ್ಥಾಪಿತವಾಗಿರುವ ರಾಜಸ್ಥಾನ ಪ್ರಾಂತ್ಯದಲ್ಲಿ ನ್ಯಾಯಾಂಗವನ್ನೂ, ಆಡಳಿತಾಂಗವನ್ನೂ ಪ್ರತ್ಯೇಕಿಸಲು ಏರ್ಪಾಡುಗಳಾಗುತ್ತಿವೆ ಅಲ್ಲದೆ ೫ ಸಾವಿರದವರೆಗೆ ಪ್ರಜಾ ಸಂಖ್ಯೆ ಇರುವ ಗ್ರಾಮಗಳಲ್ಲಿ ಪಂಚಾಯಿತಿಗಳನ್ನು ಸ್ಥಾಪಿಸಿ ಅವುಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನು ಕೊಡಲಾಗುವುದೆಂದು ತಿಳಿದುಬಂದಿದೆ

ನೂತನ ಜಿಲ್ಲಾಧಿಕಾರಿಗಳು

ಮೈಸೂರು ೩

ಶ್ರೀ ಜಾರ್ಜ್ ಮ್ಯಾಥ್ಯೂರವರು ನಿನ್ನೆ ದಿನ ಜಿಲ್ಲಾಧಿಕಾರಿಗಳ ಅಧಿಕಾರವನ್ನು ವಹಿಸಿಕೊಂಡರು ಜನಾಬ್ ಸಫ್‌ದರ್ ಹುಸೇನರವರು ಪುರಸಭಾ ಕಮಿಷನರ ಹುದ್ದೆಯನ್ನು ಸ್ವೀಕರಿಸಿದರು

ಉದಾರ ದಾನ

ಸಾಹುಕಾರ್ ಲಕ್ಷ್ಮಿದೇವಮ್ಮಣ್ಣಿ ಚೆಟ್ಟಿ ಹಲಸೂರು ವೆಂಕಟರಾಮ ಶಾಸ್ತ್ರಿಗಳು ಮೈಸೂರು ಶ್ರೀಕಂಠ ಜಯಂತೀ ಮಹೋತ್ಸವ ಸಭೆಯ ಮೂಲಕ ಧರ್ಮಕ್ಕಾಗಿ ೨ ಬಿ. ಸಾವಿರ ರೂಪಾಯಿಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ

ಹೈದರಾಬಾದ್ ದಿನಾಚರಣೆ

ಕಾಂಗ್ರೆಸ್ ಕಾರ್ಯದರ್ಶಿಗಳ ಮನವಿ

ಸ್ವಂ. ಸು. ಫೋ] ಬೆಂಗಳೂರು ೩

ದಕ್ಷಿಣ ಭಾರತದ ಕಾಂಗ್ರೆಸ್ ಮುಖಂಡರುಗಳು ಕಳೆದ ೨೬ ನೇ ತಾ॥ ಮದರಾಸಿನಲ್ಲಿ ಸಭೆ ಸೇರಿ ನಿರ್ಧರಿಸಿದ ಪ್ರಕಾರ ಈ ತಿಂಗಳ ೮ ನೇ ತಾ॥ ಭಾನುವಾರ ಸಂಸ್ಥಾನದಲ್ಲೆಲ್ಲಾ ಹೈದರಾಬಾದ್ ದಿನಾಚರಣೆಯನ್ನು ನೆರವೇರಿಸಬೇಕೆಂದು ಮೈಸೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎ. ಜಿ ರಾಮಚಂದ್ರರಾಯರು ಮನವಿಯೊಂದನ್ನು ಹೊರಡಿಸಿರುತ್ತಾರೆ. ಹೈದರಾಬಾದಿನಲ್ಲಿ ನಡೆಯುತ್ತಿರುವ ಅತ್ಯಾಚಾರಗಳನ್ನು ಖಂಡಿಸಿ ನಿಜಾಂ ಸಾಹೆಯ ವಿರೋಧವನ್ನು ಕುಂಠಿತರನ್ನು ಪ್ರತಿಭಟಿಸಿ ಪ್ರಜಾ ಸ್ವಾತಂತ್ರ್ಯ ಸಾಧನೆಗಾಗಿ ಅಲ್ಲಿನ ಜನರು ನಡೆಸುತ್ತಿರುವ ಹೋರಾಟಕ್ಕೆ ಸಕಲರೂ ನೆರವು ನೀಡಬೇಕೆಂದು ಕೋರಿದ್ದಾರೆ ಹೈದರಾಬಾದಿನಲ್ಲಿ ಪ್ರಜಾ ಸರ್ಕಾರವನ್ನು ಸ್ಥಾಪಿಸುವುದಲ್ಲದೆ ಆ ಸಂಸ್ಥಾನವು ಭಾರತ ಯೂನಿಯನ್ನಿನಲ್ಲಿ ಸೇರುವಂತೆ ಮಾಡುವ ಪ್ರಯತ್ನದಲ್ಲಿ ಸಕಲರೂ ಭಾಗಿಗಳಾಗಬೇಕೆಂದು ಕೋರಿದ್ದಾರೆ ಮತ್ತು ಅಲ್ಲಿನ ಹೋರಾಟಕ್ಕೆ ಉದಾರವಾಗಿ ದ್ರವ್ಯಸಹಾಯ ಮಾಡಬೇಕೆಂದೂ ಬೇಡಿದ್ದಾರೆ.

೮ ನೇ ತಾ॥ ಬೆಳಗ್ಗೆ ೭ ಗಂಟೆಗೆ ಪ್ರಭಾತ್ ಫೇರಿ ನಡೆಸಿ ೯ ರಿಂದ ೧೨ ಗಂಟೆವರೆವಿಗೂ ಮತ್ತು ಮಧ್ಯಾಹ್ನ ೩ ರಿಂದ ೫ ಗಂಟೆ ವರೆವಿಗೂ ನಿಧಿ ಸಂಗ್ರಹ ಸಂಜೆ ೬ ಗಂಟೆಗೆ ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಸೂಚಿಸಲಾಗಿದೆ

○ ಅಡ್ವೊಕೇಟ್ ಜನರಲ್ಲರು ಕಾಂಗ್ರೆಸ್ ಮೊಕದ್ದಮೆಯ ಸಂಬಂಧವಾಗಿ ನಾಳೆ ಕಡಿಮೆ ಪುದಾಗಿ ಹೇಳಿದ್ದ ಮನೋಹರನ್ನು ಇನ್ನೂ ಒಪ್ಪಿಸಿಲ್ಲವಾದ್ದರಿಂದ ಈ ದಿನ ಸದರಿ ಮೊಕದ್ದಮೆಯ ವಿಚಾರಣೆಯು ನಡೆಯಲಿಲ್ಲ

○ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ರೆಡ್ಡಿ ಲಿಂಗಯ್ಯನವರು ಈ ತಿಂಗಳು ೯ ನೇ ತಾ॥ ದೆಹಲಿಗೆ ತೆರಳುವರು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಮಾಡಬೇಕಾದ ಏರ್ಪಾಡುಗಳ ಬಗ್ಗೆ ಸಮಾಲೋಚನೆ ನಡೆ ಅವರಿಗೆ ಅಹ್ವಾನ ಬಂದಿರುತ್ತದೆ

Latest News

ನವೆಂಬರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆ

ಸ್ವಂ. ಸು. ಫೋ] ಬೆಂಗಳೂರು ೩

ಕಳೆದ ಸ್ಕೂಲು ಫೈನಲ್ ಪರೀಕ್ಷೆಯಲ್ಲಿಯೂ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿಯೂ ತೇರ್ಗಡೆಯಾಗದೆ ಇರುವ ವಿದ್ಯಾರ್ಥಿಗಳಿಗಾಗಿ ಈ ವರ್ಷ ನವೆಂಬರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯನ್ನು ನಡೆಸುವುದಾಗಿಯೂ, ಈ ತಿಂಗಳು ೩೧ ನೇ ತಾರೀಖಿನೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕೆಂದೂ ಮೈಸೂರು ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ ಇನ್ನು ಮುಂದೆ ವರ್ಷಗಳಲ್ಲಿ ಇದೇ ರೀತಿ ಸೆಪ್ಟೆಂಬರ್ ತಿಂಗಳಿನಲ್ಲಿ ಪರೀಕ್ಷೆ ನಡೆಯುವುದು

ಅಖಿಲ ಭಾರತ ರೈಲ್ವೆ ಫೆಡರೇಷನ್ ಅಧ್ಯಕ್ಷರಾದ ಜಯಪ್ರಕಾಶ್ ನಾರಾಯಣ್‌ರವರು ಇಲ್ಲಿಗೆ ಬಂದು ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರೊಡನೆ ಮಾತುಕತೆ ನಡೆಸುತ್ತಿದ್ದಾರೆ

ಸಮಾಜೋದ್ಧಾರ ಕಾರ್ಯದಲ್ಲಿ ನಾಟಕದ ಪಾತ್ರ

ದಿವಾನರ ಭಾಷಣ

ಮೈಸೂರು ೨

ಗುಬ್ಬಿ ಕಂಪೆನಿಯ ಪಟ್ಟೋತ್ಸವ ಮತ್ತು ರಂಗಭೂಮಿಯ ಶತಮಾನೋತ್ಸವದ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದವರಿಗೆ ಬಹುಮಾನವನ್ನು ನಿನ್ನೆ ಹಂಚಲಾಯಿತು. ದಿವಾನರಾದ ಸರ್ ಎಂ. ಎನ್. ಮೂಡಲಿಯಾರರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಬಿ. ದೇವೆ ಪ್ರಸ್ತಾವನೆ ... ನಡೆಯಿತು. ಅನಂತರ ವಿದ್ಯಾರ್ಥಿ ವಿಭಾಗದ ಶತಮಾನೋತ್ಸವದ ... ನನ್ನು ... ಅವಲೋಕನ ಮಾಡಿದರು.

ಶ್ರೀ ತಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಸಮ್ಮೇಳನದ ವರದಿಯನ್ನು ಓದಿದರು. ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ನೃತ್ಯ, ನಾಟಕ ಮುಂತಾದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದವರಿಗೆ ಬಹುಮಾನವನ್ನು ದಿವಾನರು ಹಂಚಿದರು.

ಸರ್ ಅರ್ಕಾಟ್‌ರವರು ಭಾಷಣಮಾಡಿ ರಂಗಭೂಮಿಯ ಶತಮಾನೋತ್ಸವ ಮತ್ತು ಗುಬ್ಬಿ ಕಂಪೆನಿಯ ಪಟ್ಟೋತ್ಸವದಲ್ಲಿ ಭಾಗವಹಿಸುವಂತೆ ಆಹ್ವಾನಿಸಿದ್ದರಿಂದ ನಾಟಕವು ಕೇವಲ ವಿದ್ಯಾ ಪ್ರದರ್ಶನ ಮತ್ತು ಸಂತೋಷದಿಂದ ಕಾಲಕಳೆಯುವುದರ ಜೊತೆಗೆ ಜನಜೀವನೋದ್ಧಾರದ ಮಾರ್ಗವನ್ನು ತೋರಿಸುವಂತಾಗಿರಬೇಕೆಂದು ತಿಳಿಸಿದರು.

ಪೌರಾಣಿಕ ನಾಟಕಗಳ ಜೊತೆಗೆ ಸಾಮಾಜಿಕ ನಾಟಕಗಳು ಬಹಳವಾಗಿ ಬೆಳೆಯಬೇಕು. ಸಮಾಜದ ಉದ್ಧಾರಕ್ಕಾಗಿ ... ನೂನತೆಗಳನ್ನು ... ಮಾಜಿಕ ನಾಟಕಗಳನ್ನು ರಂಗಭೂಮಿಯ ಮೇಲೆ ಅಭಿನಯಿಸುವುದರಿಂದ ಹೆಚ್ಚು ಪರಿಣಾಮ ಉಂಟಾಗುವುದೆಂದು ತಿಳಿಸಿದರು. ... ಭವಿಷ್ಯದಲ್ಲಿ ... ಕರ್ನಾಟಕದಲ್ಲಿ ನಾಟಕ ಮತ್ತು ಕಲೆಯ ಏಳಿಗೆಗೆ ... ಪ್ರೋತ್ಸಾಹ ಕೊಡುವುದರ ಜೊತೆಗೆ ... ಅವಶ್ಯಕವೆಂದು ಹೇಳಿದರು. ... ನಾಟಕ ಮತ್ತು ಕಲೆಗೆ ಮೈಸೂರಿನಂತೆ ಎಲ್ಲೂ ಪ್ರೋತ್ಸಾಹವು ದೊರೆಕಿಲ್ಲವೆಂದೂ ಕರ್ನಾಟಕದ ಸಂಗೀತಕ್ಕೆ ... ಗೌರವ ... ಇಲ್ಲವೆಂದೂ ... ರು. ಶ್ರೀ ಮಹದೇವಸ್ವಾಮಿಯವರು ವಂದನಾರ್ಪಣೆ ಮಾಡಿದಮೇಲೆ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ನಿಜಾಮರಿಗೆ ಚರ್ಚಿಲರ ಬೆಂಬಲ

ಅರಬ್ಬರ ಸಹಾಯ ಪಡೆಯಲು ಟೋರಿ ಪಕ್ಷದ ಸನ್ನಾಹ

ನಿಜಾಮರಿಗೆ ಬೆಂಬಲ ನೀಡಲು ಬ್ರಿಟನ್ನಿನ ಟೋರಿ ಪಕ್ಷದವರು ಸನ್ನಾಹ ನಡೆಸುತ್ತಿರುವರೆಂದೂ, ಈ ಸಂಬಂಧದಲ್ಲಿ ಚರ್ಚಿಲರು ಹೈದರಾಬಾದಿನ ಬಗ್ಗೆ ಸ್ವತಂತ್ರ ಸಹಾಯವನ್ನು ನೀಡುವುದಾಗಿ ತಂತಿ ಕಳುಹಿಸಿರುವರೆಂದೂ ವರದಿಯಾಗಿದೆ. ಹೈದರಾಬಾದಿನ ಪ್ರಶ್ನೆಯನ್ನು ವಿಶ್ವ ಸಂಸ್ಥೆಯ ಸಭೆಗೆ ... ಲಂಡನ್ನಿನಲ್ಲಿರುವ ಅರಬ್ಬರ ... ಯ ... ಗಳ ... ವನ್ನು ಪಡೆಯಲು ಟೋರಿ ಪಕ್ಷದವರು ಯುಕ್ತಿ ಮಾಡುತ್ತಿರುವರೆಂದೂ ಹೇಳಲಾಗಿದೆ. ಆದರೆ ಭಾರತದ ... ವಿಷಯದಲ್ಲಿ ಕೈ ಹಾಕಲು ಅರಬ್ ರಾಷ್ಟ್ರಗಳು ಸಿದ್ಧವಾಗಿಲ್ಲವೆಂದೂ, ಅವುಗಳು ಭಾರತದ ಸಂಗಡ ಸ್ನೇಹದಿಂದಿರಬೇಕೆಂಬ ಅಭಿಲಾಷೆಯಿಂದಿವೆ ಎಂದೂ ಹೇಳಲಾಗಿದೆ ಭದ್ರತಾ ಸಮಿತಿಯ ಮುಂದೆ ಹೈದರಾಬಾದಿನ ಪ್ರಶ್ನೆಯನ್ನು ತರಲು ಯಾವ ಅರಬ್ ರಾಷ್ಟ್ರಗಳೂ ಇಲ್ಲಿಯವರೆವಿಗೆ ಕಾರ್ಯಕ್ರಮ ಕೈಗೊಂಡಿಲ್ಲವೆಂದೂ, ಅದರೂ ಪಾಕೀಸ್ಥಾನವು ಪ್ರಯತ್ನಗಳನ್ನು ನಡೆಸುತ್ತಿದೆಯೆಂದೂ ವರದಿಯಾಗಿದೆ

—

ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಚುನಾವಣೆ ಮುಂದೆ ಹೋಯಿತು

ಇದೇ ೭ ನೇ ತಾ॥ ನಡೆಯಬೇಕಾಗಿದ್ದ ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಕಾರ್ಯಕಾರೀ ಸಮಿತಿ ಸದಸ್ಯರುಗಳ ಚುನಾವಣೆಯನ್ನು ಮುಂದೆ ಹಾಕಲಾಗಿದೆಯೆಂದೂ, ಚುನಾವಣಾ ತಾರೀಖನ್ನು ಮುಂದೆ ತಿಳಿಸಲಾಗುವುದೆಂದೂ ಚುನಾವಣಾ ಸಮಿತಿಯ ರಾವ ಶ್ರೀ ಕೆ ಆರ್ ಮಾಧವರಾಯರು ತಿಳಿಸಿದ್ದಾರೆ.

ವರ್ಧಂತ್ಯುತ್ಸವ

ಕೃಷ್ಣರಾಜನಗರ ತಾಲ್ಲೂಕು ಹಂಪಾಪುರದ ಮಾಧ್ಯಮಿಕ ಶಾಲೆಯಲ್ಲಿ ಕಳೆದ ೨೬ ನೇ ತಾ॥ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಶ್ರೀ ಬೊಮ್ಮರಸಯ್ಯನವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯಿತು. ಶಾಲೆಯ ಬಾಲಕ ಬಾಲಕಿಯರಿಂದ ಭರತ ನಾಟ್ಯ, ವಿನೋದ ಪ್ರದರ್ಶನಗಳು ನಡೆದ ಮೇಲೆ ಶ್ರೀ ಕೃಷ್ಣಯ್ಯ ಮತ್ತು ಶ್ರೀಗಳಾದ ಬಿ ಎಲ್ ಸತ್ಯನಾರಾಯಣ ಮತ್ತು ತಮ್ಮಯ್ಯನವರುಗಳ ಭಾಷಣ ಮಾಡಿದರು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

Edited printed and published by A. K. Nagaraja at the Sadhvi Press D. Subbaiah Road Mysore

ಹೈದರಾಬಾದಿಗೆ ಇನ್ನೂ ಶಸ್ತ್ರಾಸ್ತ್ರಗಳ ಸರಬರಾಜು

ಕರಾಚಿಯಿಂದ ಹೈದರಾಬಾದಿಗೆ ಕಳ್ಳತನದಲ್ಲಿ ಶಸ್ತ್ರಾಸ್ತ್ರಗಳನ್ನು ಸಾಗಿಸುವ ಕಾರ್ಯವು ಇನ್ನೂ ನಡೆಯುತ್ತಲಿದೆಯೆಂದು ವರದಿಯಾಗಿದೆ. ಮೊನ್ನೆ ಕರಾಚಿ ಬಳಿ ಮುರಿದು ಬಿದ್ದ ಲಂಕಾಸ್ಟರ್ ವಿಮಾನವು ಸಹ ಇದೇ ಉದ್ಯಮದಲ್ಲಿ ತೊಡಗಿತ್ತೆಂದು ಗೊತ್ತಾಗಿದೆ. ಅದರಲ್ಲಿ ಮದ್ದು ಗುಂಡುಗಳನ್ನೂ, ಬಂದೂಕಗಳನ್ನೂ ತುಂಬಲಾಗಿದ್ದಿತು ಕೆಲವು ದಿನಗಳ ಹಿಂದೆ ಭಾರತ ಸರ್ಕಾರದ ಆಜ್ಞೆಯನ್ನು ತಿರಸ್ಕರಿಸಿ ಹೈದರಾಬಾದಿಗೆ ಹೋಗಿ ಬಂದ ಪೆನ್ರಿ ಜಾಟಿನ್ನನು ... ವಿಮಾನ ಸಂಸ್ಥೆಯ ಡೈರೆಕ್ಟರುಗಳ ಪೈಕಿ ಒಬ್ಬನೆಂದು ಹೇಳಲಾಗಿದೆ. ಜಾಟಿನ್ನನ ರಹದಾರಿಯನ್ನು ರದ್ದುಮಾಡಿದ್ದರೂ ಸಹ ಅವನ ಚಟುವಟಿಕೆಯು ಮಾತ್ರ ಕಡಿಮೆಯಾದಂತೆ ಕಾಣ ಬರುವುದಿಲ್ಲ. ಲಂಡನ್ನಿಗೆ ಹೋಗಿ ಅವನು ಈಗ ಪುನಃ ಕರಾಚಿಗೆ ಬಂದಿದ್ದಾನೆ

ಜಹಗೀರುಗಳು ಸರ್ಕಾರದ ವಶ

ಮಧ್ಯ ಭಾರತದ ಯೂನಿಯನ್ನಿನಲ್ಲಿರುವ ಜಹಗೀರುಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ. ಕಳೆದ ಆಗಸ್ಟ್ ತಿಂಗಳಿನ ಹಿಂದೆ ಬಿಟ್ಟಿ ಪುರಸ್ಕಾರವಾಗಿ ಜಹಗೀರುದಾರರು ಪಡೆದುಕೊಂಡ ಭೂಮಿಗಳನ್ನೆಲ್ಲಾ ರೈತರುಗಳಿಗೆ ವಾಪಸು ಕೊಡುವಂತೆ ಸರ್ಕಾರದವರು ಇಷ್ಟರಲ್ಲಿಯೇ ಒಂದು ಆಜ್ಞೆಯನ್ನು ಹೊರಡಿಸಲಿರುವರೆಂದೂ ಹೇಳಲಾಗಿದೆ

—

ಹೋಟೆಲ್ ಕೆಲಸಗಾರರ ಸಂಘ

ಮೈಸೂರು ನಗರ ಹೋಟೆಲ್ ಕೆಲಸಗಾರರ ಸಂಘದ ಸಭೆಯು ಮೊನ್ನೆ ಶ್ರೀ ಕೆ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಕೆ ಸುಬ್ಬರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ವಾಸುದೇವರವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಸ್ ರಾಮಸೆಟ್ಟಿಯವರನ್ನು ಜಂಟಿ ಕಾರ್ಯದರ್ಶಿಯನ್ನಾಗಿಯೂ ಮತ್ತು ಶ್ರೀ ಎಸ್ ರಾಮರಾವ್ ರವರನ್ನು ಖಜಾಂಚಿಯನ್ನಾಗಿಯೂ ಆರಿಸಲಾಯಿತು

§ ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ನಾಳೆ ಸಾಯಂಕಾಲ ... ಗೆ ಶ್ರೀಮತಿ ಲಕ್ಷ್ಮಮ್ಮನವರಿಂದ ಶಬರ ಶಂಕರ ವಿಲಾಸವೆಂಬ ಹರಿಕಥೆಯೂ ಮತ್ತು ಅನ್ನಸಂತರ್ಪಣೆಯೂ ಏರ್ಪಾಡಾಗಿದೆ

ಗೋಡ್ಸೆಯ ಚಿಕ್ಕಗಳ ಪತ್ತೆ

ನಾಗಪುರದ ಭಾವೆ ಎಂಬುವರು ೧೬೦ ರೂ ಮತ್ತು ಶರ್ಮ ಎಂಬುವರು ೭೧೦ ರೂ ಗಳನ್ನು ನಾಥೂರಾಂ ಗೋಡ್ಸೆಗೆ ಇತ್ತ ... ದು ಚೆಕ್ಕುಗಳನ್ನು ಸಂಯುಕ್ತ ಪ್ರಾಂತ್ಯದ ... ಎಂಬಲ್ಲಿ ಮುರಿಗೆಲಸದವನು ... ಸರ್ಕಾರದ ವಶಕ್ಕೆ ಕೊಟ್ಟಿರುತ್ತಾನೆ

ಬೆಳಗಿನ ಆಟಗಳು

ರಂಜಾನ್ ಹಬ್ಬದ ಪ್ರಯುಕ್ತ

4-8-48 ರಿಂದ ಪ್ರತಿ ದಿನ ಬೆಳಿಗ್ಗೆ ೧೦ ...

ರಿಪಬ್ಲಿಕ್ ಪಿಕ್ಚರ್ಸ್‌ರವರ

ಜಂಗಲ್ ಗರ್ಲ್

(15 ಭಾಗಗಳ ಪೂರ್ತಾ ಸೀರಿಯಲ್)

ಒಲಿಂಪಿಯಾ ಟಾಕೀಸ್

8-8-48 ಭಾನುವಾರ

ಬೆಳಿಗ್ಗೆ

ಹರಾಜು

ಸಿನಿಮಾಗೆ ಕೂಡ್ಲೆ ದ... ಬೇಕಾದ ... ವಸ್ತುಗಳನ್ನು ಹರಾಜ್ ... ಕೊಳ್ಳಿ. ... ಭೋಗ್ಯದ ... ಕೊಡಿಸಲಾಗುತ್ತೆ. ವಿವರಗಳು ಮ್ಯಾಲಿವೆ.

ಸಿಟಿ ಆಕ್ಷನೀರಿಂಗ್ ಕೋ

ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

ಶ್ರೀಗಣೇಶಾ ಟಾಕೀಸ್

2—8—48 ರಿಂದ

5 ದಿನಗಳು ಮಾತ್ರ

ಪ್ರತಿ ದಿನ ಮೂರು ಆಟಗಳು

ರಣಜಿತ್ ರವರ

ಪರದೇಸಿ

—: ಪಾತ್ರ :—

ಮೋತಿಲಾಲ್, ಸ್ನೇಹ ಪ್ರಭ

ಕುರ್ಷಿದ್

7-8-48 ರಿಂದ — ರಣಜಿತ್ ರವರ

ಫೂಲ್‌ವಾರಿ

ರಾ ಜ ಕ ಮ ಲ್

ಮೈಸೂರು

3—8—48 ರಿಂದ

ಅಪೋಪು ಪ್ರಾರಂಭ

ಪ್ರತಿ ದಿನ 3 ಆಟಗಳು

★ ಪನ್ನಾ

(ಹಿಂದಿ)

—: ತಾರಾಗಣ :—

ಜಯರಾಜ್, ಗೀತಾ ನಿಜಾಮಿ

ಶ್ರೀ ಗಾಯತ್ರೀ ಟಾಕೀಸ್

30 -7 -48 ರಿಂದ

ಒಂದು ವಾರ ಮಾತ್ರ

ಪ್ರತಿ ದಿನ ಮೂರು ಆಟಗಳು

ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

(ವರ್ಣರಂಜಿತ ಚಿತ್ರ)

:: ಪ್ರ ಭಾ ::

6—8—48 ರಿಂದ :: ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸ್‌ರವರ ಸಹಾಸ ಚಿತ್ರ

ಮಜ್ಬೂರ್

[ಹಿಂದಿ]

⁎ ಮುನವರ್ ಸುಲ್ತಾನ್ ⁎ ಶ್ಯಾಮ್ ⁎ ಇಂದು

(ಡಾಕ್ಯುಮೆಂಟರಿ ಮತ್ತು ವಿಜಯಾಯಿ ತಿಗಳನ್ನು ಪ್ರದರ್ಶನ ಮಾಡುತ್ತೇವೆ)

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೪-೮-೪೮ [ಸಂಚಿಕೆ ೧೫

ಜೆರೂಸಲೆಮ್ಮಿನಲ್ಲಿ ಎಹೂದ್ಯ ಸೈನಿಕ ಸರ್ಕಾರ

ಪೆರುಮಾಳ್‌ಚೆಟ್ಟರ ಕೊಲೆ

ಈ ದಿನ ಸಂಜೆ ಅಂತ್ಯ ಸಂಸ್ಕಾರ

ಮೈಸೂರು ೪

ಧರ್ಮರತ್ನಾಕರ ಸಿ ಪೆರುಮಾಳ್ ಚೆಟ್ಟಿಯವರ ಕೊಲೆ ಸಂಬಂಧದಲ್ಲಿ ಪೋಲೀಸರಿಗೆ ಶರಣಾಗತನಾದವನು ಹುಣಸೂರಿನ ಹುಂಡಿಯ ಉಪ್ಪಲಿಗರ ಜಾತಿಯ ೩೦ ವರ್ಷದ ನಿಂಗ ಮತ್ತು ಕೋಳಿ ಕರಿಯ ಎಂದೂ ಅವನ ಹತ್ತಿರ ೨ ಅಡಿ ಉದ್ದವುಳ್ಳ ಹರಿತವಾದ ಮಚ್ಚು ಇತ್ತೆಂದೂ ತಿಳಿದುಬಂದಿದೆ ಪೋಲೀಸು ನಿನ್ನೆ ಮಧ್ಯಾಹ್ನ ಮಹಜರು ಕ್ರಮವನ್ನು ನಡೆಸಿದ ಮೇಲೆ ಶವವನ್ನು ಸಂಬಂಧಿಕರಿಗೆ ಕೊಡಲಾಯಿತು ಸಂಜೆ ೭ ಗಂಟೆ ಹೊತ್ತಿಗೆ ಶವವನ್ನು ಇಲ್ಲಿಗೆ ತರಲಾಯಿತು ನಿನ್ನೆ ರಾತ್ರಿಯಿಂದ ಈ ದಿನ ಮಧ್ಯಾಹ್ನದವರೆವಿಗೆ ಸಾವಿರಾರು ಜನರು ಶ್ರೀ ಚೆಟ್ಟರವರ ಬಂಗಲೆಗೆ ಹೋಗಿ ಅವರ ಅಂತ್ಯ ದರ್ಶನ ಮಾಡಿ ಅವರ ಬಂಧುಮಿತ್ರರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು ಈ ದಿನ ಮಧ್ಯಾಹ್ನ ೨ ಗಂಟೆಗೆ ದಿವಂಗತರ ಕಳೇಬರದ ಅಂತ್ಯ ಯಾತ್ರೆಯು ಸಕಲ ಪರಿವಾರಗಳ ಸಮೇತ ಹೊರಟಿತು. ಸಂಜೆ ೪ ಗಂಟೆ ಹೊತ್ತಿಗೆ ಅವರ ಸಂಸ್ಕಾರವು ಜರುಗಿತು. ಇದರಲ್ಲಿ ಸಾವಿರಾರು ಜನ ಬಂಧುಗಳೂ, ಮಿತ್ರರೂ, ಮುಖ್ಯ ಪುರಪ್ರಮುಖರೂ, ಹಿತೈಷಿಗಳೂ ಭಾಗವಹಿಸಿದ್ದರು

ಇದೇ ಸಂಬಂಧದಲ್ಲಿ ಮತ್ತೆ ೬ ಜನರನ್ನು ದಸ್ತಗಿರಿ ಮಾಡಲಾಗಿದೆಯೆಂದು ಗೊತ್ತಾಗಿದೆ ಕಬಿಲಾ ಟೆಕ್ಸ್‌ಟೈಲ್ ಕಾರ್ಖಾನೆಗೆ ಸಂಬಂಧಪಟ್ಟ ಅವಿನಾಸಿಗಳ ಬಗ್ಗೆ ಹಿಂದೆ ವ್ಯಾಜ್ಯವಿತ್ತೆಂದೂ, ಅದರ ಕೈಕರಗಳಿಗೆ ಇನ್ನೂ ಹಣ ಬರಬೇಕಾಗಿತ್ತೆಂದೂ, ಮತ್ತು ಇತರ ಅವಿನಾಸಿಗಳಿಗೆ ಸರಿಯಾದ ಬಿಸ್ತಿಯನ್ನು ಮಾಡಿಕೊಟ್ಟಿರಲಿಲ್ಲವೆಂದೂ ಹೇಳಲಾಗಿದೆ

ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ಹಾಕಿಸುತ್ತಿರುವಾಗಲೇ ಅವುಗಳನ್ನು ರಾತ್ರಿ ವೇಳೆ ಯಾರೋ ಮುಚ್ಚಿಸಿಬಿಡುತ್ತಿದ್ದರೆಂದೂ ಹೇಳಲಾಗಿದೆ

ಸಂತಾಪ ಸೂಚನೆಗಳು

ಧರ್ಮರತ್ನಾಕರ ಶ್ರೀ ಸಿ ಪೆರುಮಾಳ್ ಚೆಟ್ಟರ ಅಕಾಲ ಮರಣಕ್ಕಾಗಿ ತಮ್ಮ ಅನುತಾಪವನ್ನು ಸೂಚಿಸಲು ಹೊಸ ಬಡಾವಣೆ ...ಪೇಟೆಯ ಎಲ್ಲ ಸೌಬೀನೆ ವ್ಯಾಪಾರಗಾರರೂ ಈ ದಿನ ತಮ್ಮ ಅಂಗಡಿಗಳನ್ನು ಮುಚ್ಚಿದ್ದಾರೆ.

ಹೊಂಬಾಳೆ ರಂಗಯ್ಯನವರ ... ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಚೆಟ್ಟರ ನಿಧನದ ಬಗ್ಗೆ ನಿನ್ನೆ ಸಂಜೆ ಸಂತಾಪ ಸೂಚಕ ಸಭೆ ನಡೆಯಿತು

ಶಾರದಾ ವಿಲಾಸ ವಿದ್ಯಾ ಸಂಸ್ಥೆಯ ಎಲ್ಲಾ ಶಾಲೆಗಳನ್ನೂ ಮೃತರ ಗೌರವಾರ್ಥವಾಗಿ ಈ ದಿನ ಮುಚ್ಚಲಾಗಿತ್ತು.

ದಿವಂಗತ ಶ್ರೀ ಚೆಟ್ಟರ ಗೌರವಾರ್ಥವಾಗಿ ರಾಜಧಾನಿಯ ಸರ್ವಿಸ್ ಬಸ್ಸುಗಳು ಮತ್ತು ಸಿಟಿ ಬಸ್ಸುಗಳ ಓಡಾಟವನ್ನು ನಿಲ್ಲಿಸಲಾಗಿತ್ತು

ದಿವಂಗತರ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸಲು ರಾಜಧಾನಿಯ ಸಂತೇಪೇಟೆಯ ವರ್ತಕರು ನಾಳೆ ದಿನ ಅಂಗಡಿಗಳನ್ನು ಮುಚ್ಚಲು ನಿರ್ಧರಿಸಿದ್ದಾರೆ

ಬಟ್ಟೆ ಬೆಲೆ ಹತೋಟಿ ಬಗ್ಗೆ ಸಮಾಲೋಚನೆ

ಸ್ವಂ ಸು.ವೋ] ಬೆಂಗಳೂರು ೪

ಬಟ್ಟೆ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಭಾರತ ಸರ್ಕಾರದವರು ಕೈಗೊಂಡಿರುವ ಯೋಜನೆಯನ್ನು ಸಂಸ್ಥಾನದಲ್ಲೂ ಕಾರ್ಯರೂಪಕ್ಕೆ ತರುವ ವಿಚಾರದಲ್ಲಿ ಸಲಹೆಗಳನ್ನು ಪಡೆಯಲು ಅಡಿಷನಲ್ ಕೈಗಾರಿಕಾ ಡೈರೆಕ್ಟರಾದ ಶ್ರೀ ಮಲ್ಲಾರಾಧ್ಯರು ಈ ದಿನ ಗಿರಣಿ ಮಾಲೀಕರು ಮತ್ತು ಬಟ್ಟೆ ವರ್ತಕರುಗಳನ್ನು ಕರೆಸಿ ಸಮಾಲೋಚನೆ ನಡೆಸಿದರು. ಹೆಚ್ಚು ಲಾಭದ ಆಸೆಯಿಂದ ಬಟ್ಟೆಗಳ ಬೆಲೆಗಳನ್ನು ವಿಪರೀತವಾಗಿ ಏರಿಸುವುದರಿಂದ ಭಾರತ ಸರ್ಕಾರದವರು ಬೆಲೆ ನಿಗದಿ ಮಾಡಬೇಕಾಯಿತೆಂದೂ, ಈಗಲೂ ವರ್ತಕರುಗಳು ಸಹಕರಿಸದಿದ್ದ ಪಕ್ಷದಲ್ಲಿ ಹಿಂದೆ ಇದ್ದ ಹತೋಟಿ ಕ್ರಮವನ್ನೇ ಜಾರಿಗೆ ತರಬೇಕಾಗುವುದೆಂದೂ ಶ್ರೀ ಮಲ್ಲಾರಾಧ್ಯರು ಎಚ್ಚರಿಕೆ ಕೊಟ್ಟು ಸರ್ಕಾರದವರ ಯೋಜನೆಯನ್ನು ವಿವರಿಸಿದರು ಸಂಸ್ಥಾನದಲ್ಲಿ ಬಟ್ಟೆ ಮಾರಾಟ ಮಾಡಲು ೨ ಸಾವಿರ ವರ್ತಕರುಗಳನ್ನು ಮಾತ್ರ ನೇಮಿಸಲಾಗುವುದೆಂದೂ, ಶಹರದಲ್ಲಿ ತಿಂಗಳಿಗೆ ೫ ಸಾವಿರ ರೂ ಮತ್ತು ಟೌನುಗಳಲ್ಲಿ ೧ ಸಾವಿರ ರೂ ಗಳ ಮಾಲನ್ನು ಕೊಡಲಾಗುವುದೆಂದೂ ತಿಳಿಸಿದರು ಸಂಸ್ಥಾನಕ್ಕೆ ಹೆಚ್ಚು ಕೋಟಾವನ್ನು ಕೊಡುವಂತೆ ಭಾರತ ಸರ್ಕಾರದವರನ್ನು ಒತ್ತಾಯಪಡಿಸಬೇಕೆಂದು ವರ್ತಕರು ತಿಳಿಸಿದರು.

ಹೈದರಾಬಾದಿನ ಬಗ್ಗೆ ಸರೋಜಿನಿ ನಾಯುಡುರವರ ಆಸಕ್ತಿ

ಹೈದರಾಬಾದಿನ ಬಿಕ್ಕಟ್ಟನ್ನು ಬಗೆಹರಿಸಲು ಸಂಯುಕ್ತ ಪ್ರಾಂತ್ಯದ ಗೌರ್ನರಾದ ಶ್ರೀಮತಿ ಸರೋಜಿನಿ ನಾಯುಡುರವರು ಹೆಚ್ಚು ಆಸಕ್ತಿ ಹೊಂದಿರುವರೆಂದೂ ಇತ್ತೀಚೆಗೆ ಅವರು ದೆಹಲಿಗೆ ಭೇಟಿ ಕೊಟ್ಟು ಮಾತುಕತೆ ನಡೆಸಿದರೆಂದೂ ವರದಿಯಾಗಿದೆ

ಗೋಧಿ ಮತ್ತು ಬಾರ್ಲಿಯನ್ನು ಬೆಳೆಯಕೂಡದು

ಮೈಸೂರು, ಮದರಾಸ್ ಮತ್ತು ತಿರುವಾಂಕೂರು ಸಂಸ್ಥಾನಗಳ ಗುಡ್ಡ ಮತ್ತು ಮೈದಾನ ಪ್ರದೇಶಗಳಲ್ಲಿ ಇನ್ನು ೩ ವರ್ಷ ಕಾಲ ಏಪ್ರಿಲ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಗೋಧಿ ಮತ್ತು ಬಾರ್ಲಿಯನ್ನು ಬೆಳೆಯಕೂಡದೆಂದು ಭಾರತ ಸರ್ಕಾರದವರ ಆಜ್ಞೆ ಮಾಡಿದ್ದಾರೆ ಸಂಯುಕ್ತ ಪ್ರಾಂತ್ಯ ಮತ್ತು ಮಧ್ಯ ಭಾರತದಲ್ಲಿ ಗೋಧಿ ಬೆಳೆಗೆ ಕಪ್ಪು ರೋಗ ಹರಡದಂತೆ ಮಾಡುವುದೇ ಈ ಕಾರ್ಯಕ್ರಮಕ್ಕೆ ಕಾರಣವೆಂದು ಹೇಳಲಾಗಿದೆ

ಕೆ. ಸಿ ರೆಡ್ಡಿಯವರ ಸರ್ಕಾರ ರದ್ದಾಗಬೇಕು

(ಶ್ರೀ ಕೃಷ್ಣರಾಜಪುರದಲ್ಲಿ ಶಂಕರ ಬಂಗೀಗೌಡರ ಹೇಳಿಕೆ)

ಪ್ರಜಾಪ್ರತಿನಿಧಿ ಸಭೆಯ ವಿರೋಧ ಪಕ್ಷದ ಸದಸ್ಯರಾದ ಶ್ರೀ ಎಂ ಶಂಕರ ಬಂಗೀಗೌಡರು ಶ್ರೀಕೃಷ್ಣರಾಜಪುರದಲ್ಲಿ ಒಂದು ವಿಜ್ಞಾಪನಾ ಪತ್ರವನ್ನು ಸಲ್ಲಿಸಿ, "ಕಾಂಗ್ರೆಸ್ ಅಧ್ಯಕ್ಷರೇ ಕಾಂಗ್ರೆಸ್ ಮಂತ್ರಿಮಂಡಲದ ಪ್ರಭುತ್ವದಲ್ಲಿ ದಕ್ಷತೆ ಇಲ್ಲವೆಂದು ತೀರ್ಮಾನಿಸಿ, ಎ ಎಂ ಸಿ ಸಿ ಸಭೆ ಕರೆದು ಕಾಂಗ್ರೆಸ್ಸಿನವರೇ ಮೇಲೆ ಹೇಳುವ ರೀತಿ ನಿರ್ಣಯ ಮಾಡಿರುವುದರಿಂದಲೂ, ೧೯೪೮ ನೇ ಜುಲೈ ಒಂದಕ್ಕೆ ಹೊಸ ಮಂತ್ರಿಮಂಡಲವನ್ನು ರಚಿಸುತ್ತೇವೆಂದು ಒಪ್ಪಿ, ಕರಾರಿಗೆ ತಪ್ಪುವುದರಿಂದಲೂ, ಶ್ರೀ ಕೆ ಸಿ ರೆಡ್ಡಿಯವರ ಮಂತ್ರಿಮಂಡಲವನ್ನು ರದ್ದು ಮಾಡಿ, ಕೂಡಲೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಜವಾಬ್ದಾರಿಯುತವಾದ ಹೊಸ ಮಂತ್ರಿಮಂಡಲವನ್ನು ರಚಿಸಬೇಕು" ಎಂದು ಬೇಡಿದ್ದಾರೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಕೆ ಚೆಂಗಲರಾಯರೆಡ್ಡಿಯವರು ಕರಾರಿಗೆ ತಪ್ಪಿದುದರಿಂದ ಅವರು ಏರ್ಪಡಿಸಿದ್ದ ಮಂತ್ರಿಮಂಡಲವನ್ನು ರದ್ದು ಮಾಡಿ, ಒಂದು ವರ್ಷ ಅವಧಿಯುಳ್ಳ ಪ್ರಜಾಪ್ರತಿನಿಧಿ ಸಭೆಯಲ್ಲಿ ಜವಾಬ್ದಾರಿಯುತವಾದ ಮಂತ್ರಿಮಂಡಲವನ್ನು ರಚಿಸಬೇಕೆಂದು ಕಳೆದ ಜೂನ್ ತಿಂಗಳಲ್ಲೇ ಮಹಾಪ್ರಭುಗಳಲ್ಲಿ ತಾವು ಒಂದು ವಿಜ್ಞಾಪನಾ ಪತ್ರವನ್ನು ಕಳುಹಿಸಿದ್ದೆಂದೂ ಅವರು ತಿಳಿಸಿದ್ದಾರೆ.

ಜಾರಿಯಾಗಿರುವ ಕಾಂಗ್ರೆಸ್ ಮಂತ್ರಿಮಂಡಲದವರು ಪ್ರಜಾ ಸರ್ಕಾರವೆಂಬ ಹೆಸರನ್ನು ಉಪಯೋಗಿಸುತ್ತಾರೆ. ಪ್ರಜಾ ಸರ್ಕಾರವೆಂದರೆ ಜವಾಬ್ದಾರಿ ಸರ್ಕಾರವೆಂದು ಅರ್ಥವಾಗುತ್ತೆ. ಇಂಗ್ಲೆಂಡ್ ದೇಶದ ಮಂತ್ರಿಗಳು ಜವಾಬ್ದಾರಿ ಸರ್ಕಾರವೆಂದು ಹೇಳುತ್ತಾರೆಯೇ ಹೊರತು ಪ್ರಜಾ ಸರ್ಕಾರವೆಂದು ಹೇಳುವುದಿಲ್ಲ. ಮೈಸೂರು ಕಾಂಗ್ರೆಸ್ ಮಂತ್ರಿಮಂಡಲದವರು ಹೀಗೆಯೇ ಹೇಳುತ್ತಾ ಬಂದರೆ ಮುಂದೆ ದೇಶಕ್ಕೆ ಅಪಾಯವಾಗುವುದೆಂದು ಶ್ರೀ ಗೌಡರು ವಿಜ್ಞಾಪನಾ ಪತ್ರದಲ್ಲಿ ತಿಳಿಸಿದ್ದಾರೆ.

ಜರೂಸಲೆಮ್ಮಿನಲ್ಲಿ ಮಿಲಿಟರಿ ಸರ್ಕಾರ

ಜೆರೂಸಲೆಮ್ಮಿನಲ್ಲಿ ಯಹೂದ್ಯ ಮಿಲಿಟರಿ ಸರ್ಕಾರವೊಂದನ್ನು ರಚಿಸಬೇಕೆಂದು ಇಸ್ರೇಲ್ ಸರ್ಕಾರವು ಆಜ್ಞೆ ಮಾಡಿತು. ಜೆರೂಸಲೆಂ ನಗರವು ಅಂತರ ರಾಷ್ಟ್ರೀಯ ಆಡಳಿತದಲ್ಲಿರಬೇಕೆಂಬುದನ್ನು ಯಹೂದ್ಯರು ತಿರಸ್ಕರಿಸಿ ಮೇಲ್ಕಂಡ ಆಜ್ಞೆಯನ್ನು ಮಾಡಿರುವರೆಂದು ವರದಿಯಾಗಿದೆ.

ಗೋಪಾಲರಾವ್ ಸಮಿತಿಗೆ ಇತ್ತ ನೋಟೀಸು ವಾಪಸು

ಕಂಟೋನ್ಮೆಂಟ್ ಪೋಲೀಸ್ ಕೇಸಿನ ಸಂಬಂಧದಲ್ಲಿ ಪ್ರೈ ಕೋರ್ಟಿನವರು ಗೋಪಾಲರಾಯರ ಸಮಿತಿಗೆ ಇತ್ತಿದ್ದ ನೋಟೀಸನ್ನು, ಸಮಿತಿಯ ಕಾರ್ಯಕಲಾಪಗಳು ಮುಗಿದು ಹೋದುದರಿಂದ, ಹೈಕೋರ್ಟಿನ ಅಧಿಕಾರ ವ್ಯಾಪ್ತಿ ಅದರ ಮೇಲೆ ಇಲ್ಲದೇ ಇರುವುದರಿಂದ ... ಹೈಕೋರ್ಟಿನ ... ಪೂರ್ಣ ... ದ ... ನೋಟೀಸನ್ನು ಹಿಂತೆಗೆದುಕೊಂಡಿರುವರೆಂದು ತಿಳಿಸಿದ್ದಾರೆ

ಸಿದ್ಧಗೊಳಿಸಿದ ಮನೆಗಳ ರಚನೆ

ದೇಶದಲ್ಲಿ ಮನೆಗಳ ಅಭಾವವು ವಿಪರೀತವಾಗಿರುವುದರಿಂದ 'ಪ್ರಿಫ್ಯಾಬ್ರಿಕೇಟೆಡ್' (ಸಿದ್ಧಗೊಳಿಸಿದ) ಮನೆಗಳನ್ನು ಕಟ್ಟಲಾಗುವುದೆಂದೂ, ಈ ಬಗ್ಗೆ ಒಂದು ಪ್ರತ್ಯೇಕ ಮನೆಗಳ ಸರಬರಾಜು ಇಲಾಖೆಯನ್ನು ರಚಿಸಲಾಗುವುದೆಂದೂ, ಕೇಂದ್ರ ಸರ್ಕಾರದವರು ಮೊನ್ನೆ ದೆಹಲಿಯಲ್ಲಿ ಆರೋಗ್ಯ ಮಂತ್ರಿಗಳ ಸಮ್ಮೇಳನದ ಆರಂಭೋತ್ಸವದಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಮದ್ದು ಗುಂಡು ಅಂಗಡಿಗಳ ತನಿಖೆ

ಬೆಂಗಳೂರು ನಗರದ ಪೋಲೀಸ್ ಸೂಪರಿಂಟೆಂಡೆಂಟರವರು ಮೊನ್ನೆ ಮತ್ತು ನಿನ್ನೆ ದಿನ ನಗರದ ಎಲ್ಲಾ ಮದ್ದು ಗುಂಡಿನ ಅಂಗಡಿಗಳಿಗೆ ಭೇಟಿ ಕೊಟ್ಟು ಅವುಗಳಲ್ಲಿದ್ದ ದಾಸ್ತಾನುಗಳನ್ನು ಪರೀಕ್ಷಿಸಿದರು ತಮ್ಮ ಅನುಮತಿ ಇಲ್ಲದೆ ಇನ್ನು ಮುಂದೆ ಯಾರಿಗೂ ಮದ್ದು ಗುಂಡುಗಳನ್ನು ಕೊಡಕೂಡದೆಂದು ಅವರು ತಿಳಿಸಿದ್ದಾರೆ

ಡಾ|| ಖಾನ್ ಸಾಹೇಬರಿಗೆ ೩ ತಿಂಗಳು ಶಿಕ್ಷೆ

ಗಡಿನಾಡಿನ ಮಾಜಿ ಪ್ರಧಾನಿ ಡಾ|| ಖಾನ್ ಸಾಹೇಬರು ತಮ್ಮ ಮೇಲೆ ವಿಧಿಸಿದ್ದ ನಿರ್ಬಂಧದ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಅವರಿಗೆ ಪೆಷಾವರಿನ ನ್ಯಾಯಾಧೀಶರು ೩ ತಿಂಗಳು ಶಿಕ್ಷೆಯನ್ನು ವಿಧಿಸಿದ್ದಾರೆ.

ಯಕ್ಷಗಾನ ಭಾಗವತರ ನಿಧನ

ರಾಜಧಾನಿಯ ಸಜ್ಜನರೊಬ್ಬರೂ ಹಿರಿಯರಾದ ರಾಜರಥವಾದಿ ... ಸೇರಿದ ಯಕ್ಷಗಾನ ಭಾಗವತರಾದ ಶ್ರೀ ಸಿದ್ದಯ್ಯನವರ ತಮ್ಮ ೭೫ನೇ ವಯಸ್ಸಿನಲ್ಲಿ ಮೊನ್ನೆ ದಿನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಕಳೆದ ೬೦ ವರ್ಷಗಳಿಂದಲೂ ಕನ್ನಡ ರಂಗಭೂಮಿಯ ಸೇವೆ ಮಾಡಿ ಜನರ ಮೆಚ್ಚುಗೆಯನ್ನು ಪಡೆದ್ದರು.

ಸಂಗೀತ ವಿದ್ವಾಂಸರಿಗೆ ಸನ್ಮಾನ

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ ಸಂಗೀತ ಶಾಸ್ತ್ರ ವಿಶಾರದ ಎಂಬ ಬಿರುದನ್ನು ಪಡೆದ ಆಸ್ಥಾನ ಕೀರ್ತಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯರನ್ನು ಆಸ್ಥಾನ ಸಂಗೀತ ವಿದ್ವಾನ್ ಗಾನವಿಶಾರದ ಬಿ. ದೇವೇಂದ್ರಪ್ಪನವರು ತಮ್ಮ ಮನೆಗೆ ಮೊನ್ನೆ ಸಂಜೆ ೪ ಗಂಟೆಗೆ ಬರಮಾಡಿಕೊಂಡು ಸತ್ಕರಿಸಿದರು.

ಶ್ರೀ ಬಿ.ಕೆ. ಪದ್ಮನಾಭ ರಾವ್ ಸಯ್ಯಾಜಿರಾವ್ ರಸ್ತೆಯಲ್ಲಿ ತಾವು ನಡೆಸುತ್ತಿರುವ ಸಂಗೀತ ಪಾಠಶಾಲೆಯಲ್ಲಿ ಮೊನ್ನೆ ಸಂಜೆ ೬ ಗಂಟೆಗೆ ಅವರ ಗೌರವಾರ್ಥವಾಗಿ ಸಭೆಯನ್ನು ಏರ್ಪಡಿಸಿದ್ದರು. ಅನೇಕ ವಿದ್ವಾಂಸರೂ ಗಣ್ಯ ಮಹನೀಯರೂ ದಯಮಾಡಿಸಿದ್ದರು. ಉಪಾಹಾರಾನಂತರ ವಿ|| ಟಿ. ಗರಳಪುರಿ ರಾಜಪ್ಪನವರ ಪಿಟೀಲು ವಾದನ ಪ್ರವೀಣ ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ನಡೆಯಿತು. ಅನಂತರ ಸಂಗೀತ ಶಾಸ್ತ್ರ ವಿಶಾರದ ವಾಸುದೇವಾಚಾರ್ಯರು ಮತ್ತು ಗಾನ ಶಿರೋಮಣಿ ಟೈಗರ್ ವರದಾಚಾರ್ಯ ಮೊದಲಾದವರು ಸನ್ಮಾನಿತರನ್ನು ಅಭಿನಂದಿಸಿದರು. ವಿ|| ಹುಲಗೂರು ಕೃಷ್ಣಾಚಾರ್ಯರು ಸಂಗೀತ ಶಾಸ್ತ್ರ ಮಹತ್ವದ ವಿಷಯವಾಗಿ ಭಾಷಣ ಮಾಡಿ ತಮ್ಮನ್ನು ಗೌರವಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ಇಂಗ್ಲೀಷರ ಹೆಸರನ್ನು ತೊಡೆಯಲು ಅಂಬಾಲದ ನಿರ್ಧಾರ

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚಿಲ್ ಭಾರತದ ಬಗ್ಗೆ ಅವಹೇಳನ ಮಾಡಿರುವುದನ್ನು ಪ್ರತಿಭಟಿಸಲು, ಅಂಬಾಲಾ ಪುರಸಭೆಯವರು ಇತರ ಸಾರ್ವಜನಿಕ ಪ್ರದೇಶಗಳಲ್ಲಿ ರಸ್ತೆಗಳಿಗೆ ಇಂಗ್ಲೀಷ್ ಜನರ ಹೆಸರನ್ನು ತೆಗೆದು ಹಾಕಬೇಕೆಂದು, ಅವುಗಳ ಬದಲು ಭಾರತೀಯ ವೀರರ ಹೆಸರನ್ನು ಇಡಬೇಕೆಂದು ನಿರ್ಧಾರ ಮಾಡಿದ್ದಾರೆ.

ಭಾರತದ ಭಾಷೆಗಳಲ್ಲಿ ತಂತಿ ಸಮಾಚಾರ

ಭಾರತದ ಹಲವು ಪ್ರಾಂತೀಯ ಭಾಷೆಗಳಲ್ಲಿ ತಂತಿ ಸಮಾಚಾರಗಳನ್ನು ಕಳುಹಿಸಲು ಅನುಕೂಲವಾಗ ತಂತಿ ಒಂದು ಪ್ರತ್ಯೇಕ ಲಿಪಿಯನ್ನು ಕಂಡು ಹಿಡಿಯಲಾಗಿದೆಯೆಂದೂ, ಇದರಿಂದ ತಂತಿ ಸಮಾಚಾರಗಳನ್ನು ಎಲ್ಲ ಭಾಷೆಗಳಲ್ಲೂ ಅತಿ ಜಾಗ್ರತೆಯಾಗಿ ಕಳುಹಿಸಬಹುದೆಂದೂ ಹೇಳಲಾಗಿದೆ.

ತಣ್ಣೀರು ಇಲ್ಲದ ಪಟ್ಟಣ

ಕ್ವೀನ್ಸ್‌ಲೇಂಡಿನ ಸೇಂಟ್ ಜಾರ್ಜ್ ಎಂಬ ಪಟ್ಟಣದಲ್ಲಿ ತಣ್ಣೀರೇ ಇಲ್ಲವೆಂದೂ, ಅಲ್ಲಿನ ೪೦೦ ಜನ ನಿವಾಸಿಗಳಿಗೆ ಬಿಸಿನೀರಿನ ಬುಗ್ಗೆಯೊಂದರಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದೂ, ಈಗ ನದಿಯ ಹತ್ತಿರವಿರುವ ಕೊಳವೆಗಳ ಮೂಲಕ ತಣ್ಣೀರನ್ನು ಸರಬರಾಜು ಮಾಡಲು ಏರ್ಪಾಡಾಗಿದೆಯೆಂದೂ ವರದಿಯಾಗಿದೆ.

Edited printed and published by ... Nagarajan at the Sadhvi Press ... Road Mysore

ನಾಲ್ಕು ಜನರಿಗೆ ಮರಣ ದಂಡನೆ

ಕಲ್ಲಿಕೋಟೆಯ ರಾಮಸಿಂಹನ್, ಅವರ ಸಹೋದರ ನರಸಿಂಹನ್ ನಂಬೂದಿರಿ, ಅವನ ಪತ್ನಿ ಕಮಲದ್ದು ಮತ್ತು ರಾಜ ಅಯ್ಯರ್ ಎಂಬುವವರನ್ನು ಕಳೆದ ಆಗಸ್ಟ್ ತಿಂಗಳಿನಲ್ಲಿ ಕೊಲೆ ಮಾಡಿದರೆಂಬ ಅಪಾದನೆಯ ಮೇಲೆ ಪರ್ವರ್ ಮಹಮದ್, ಕುಲ್ಲಿಯ ಮಹಮದ್, ಪರಂಟೆ ಟ್ಟಿ ಆಯು ಮತ್ತು ಆಯಮ ಎಂಬುವರುಗಳಿಗೆ ಮರಣದಂಡನೆಯನ್ನು ವಿಧಿಸಲಾಗಿದೆ. ರಾಮಸಿಂಹನವರು ಮತ್ತು ಅವರ ಮನೆತನದವರು ಮೊದಲು ಮುಸಲ್ಮಾನರಾಗಿದ್ದು ಹಿಂದೂ ಮತಕ್ಕೆ ಸೇರಿದುದನ್ನು ಸಹಿಸಲಾರದೆ, ಆ ಪಾತಕಿಗಳು ಅವರುಗಳನ್ನು ಕೊಲೆ ಮಾಡಿದರೆಂದು ಹೇಳಲಾಗಿತ್ತು.

ಹೈದರಾಬಾದು ಪ್ರತ್ಯೇಕ ಡೊಮಿನಿಯನ್ ಆಗಬೇಕಂತೆ

ಹೈದರಾಬಾದನ್ನು ಪ್ರತ್ಯೇಕ ಡೊಮಿನಿಯನ್ನಾಗಿ ಪರಿಗಣಿಸಿ ಬ್ರಿಟನ್ನು ಮಿಲಿಟರಿ ಸಹಾಯ ಮಾಡಬೇಕೆಂದು ನಿಜಾಮರು ಬ್ರಿಟಿಷ್ ದೊರೆಗಳಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆಂದು ವರದಿಯಾಗಿದೆ.

ಜೈರಾಂದಾಸ್ ದೌಲತ್‌ರಾಮ್ ಮದರಾಸ್ ಗೌರ್ನರು

ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರನ್ನು ಮದರಾಸಿನ ಗವರ್ನರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಬಸ್ ಮಾಲೀಕರಿಗೆ ೩ ಸಾವಿರ ರೂ. ದಂಡ

ನೆಲ್ಲೂರಿನಿಂದ ಸೀತಾಪುರಕ್ಕೆ ಹೋಗುವ ಪ್ರಯಾಣಿಕರುಳ್ಳ ಬಸ್ಸೊಂದು ಕಳೆದ ಮಾರ್ಚಿ ತಿಂಗಳಿನಲ್ಲಿ ಬೆಂಕಿ ಅಪಘಾತಕ್ಕೆ ಒಳಗಾಗಿ ೩ ಜನಗಳು ಸತ್ತುಹೋದುದರಿಂದ, ಅದರ ಮಾಲೀಕರಾದ ಜನಾಬ್ ಮಹಬೂಬ್ ಖಾನರ ಮೇಲೆ ಪೋಲೀಸರು ಮೊಕದ್ದಮೆ ಹೂಡಿದ್ದರು. ಸತ್ತುಹೋದವರ ಕುಟುಂಬದವರಿಗೆ ಪರಿಹಾರವಾಗಿ ೩ ಸಾವಿರ ರೂ ಕೊಡಬೇಕೆಂದು ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ.

ಇನ್ನು ೪-೬ ತಿಂಗಳಿನಲ್ಲಿ ಹೈದರಾಬಾದಿನ ಸಮಸ್ಯೆ ಪರಿಹಾರ

ಹೈದರಾಬಾದಿನ ಸಮಸ್ಯೆಯು ಇನ್ನು ೪ ಅಥವ ೬ ತಿಂಗಳುಗಳಲ್ಲಿ ಇತ್ಯರ್ಥವಾಗುವುದೆಂದೂ, ಹೈದರಾಬಾದಿನಲ್ಲಿ ಹಿಂದೂಗಳು ತಮ್ಮ ಸ್ಥಳಗಳಲ್ಲೇ ಇರಬೇಕೆಂದೂ ಬೊಂಬಾಯಿ ಗೃಹ ಸಚಿವರಾದ ಶ್ರೀ ಮೊರಾರ್ಜಿ ದೇಸಾಯಿಯವರು ತಿಳಿಸಿರುತ್ತಾರೆ.

ಶ್ರೀಮನ್ಮಹಾರಾಜರವರಿಂದ ಆರೋಗ್ಯಕೇಂದ್ರದ ಪ್ರಾರಂಭ

ಮೈಸೂರು ೪

ಕೃಷ್ಣರಾಜನಗರದಲ್ಲಿ ಸರ್ಕಾರದವರು ಸ್ಥಾಪಿಸಲಿರುವ ಆರೋಗ್ಯ ಕೇಂದ್ರದ ಪ್ರಾರಂಭೋತ್ಸವವನ್ನು ಇದೇ ೧೨ ನೇ ತಾ|| ಶ್ರೀಮನ್ಮಹಾರಾಜರವರು ನೆರವೇರಿಸುವರು.

ವರ್ಧಂತ್ಯುತ್ಸವ

ರಾಜಧಾನಿಯ ಶಾರದಾವಿಲಾಸ ಹೈಸ್ಕೂಲಿನಲ್ಲಿ ಕಳೆದ ೨೮ನೇ ತಾ|| ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಶ್ರೀ ಬಿ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಧ್ವಜವಂದನೆ ಮತ್ತು ಭಾಷಣಗಳಾದನಂತರ ಎಲ್ಲರಿಗೂ ಸಿಹಿ ತಿಂಡಿಯನ್ನು ಹಂಚಲಾಯಿತು.

ಹೈದ್ರಾಬಾದಿಗೆ ಭಾರತದಿಂದ ಕಾಲರಾ ಔಷಧಿ

ಹೈದರಾಬಾದು ಮತ್ತು ಸಿಕಂದರಾಬಾದುಗಳಲ್ಲಿ ಕಾಲರಾ ಉಪದ್ರವವನ್ನು ತಡೆಯಲು ಒಂದು ಲಕ್ಷ ಕಾಲರಾ ವ್ಯಾಕ್ಸಿನ್ ಔಷಧಿಯನ್ನು ಭಾರತ ಸರ್ಕಾರವು ಕಳುಹಿಸಿದೆ.

ಒಲಂಪಿಕ್ ಕ್ರೀಡಾ ಸ್ಪರ್ಧೆ

ವಿಶ್ವದ ೧೪ನೇ ಒಲಂಪಿಕ್ ಕ್ರೀಡಾ ಸ್ಪರ್ಧೆಯು ಕಳೆದ ೨೯ನೇ ತಾ|| ಲಂಡನ್ನಿನ ಹತ್ತಿರ ನಿರ್ಮಿಸಿರುವ ಒಲಂಪಿಕ್ ಗ್ರಾಮದಲ್ಲಿ ಬ್ರಿಟಿಷ್ ದೊರೆಗಳಿಂದ ಪ್ರಾರಂಭವಾಯಿತು. ಸಮಾರಂಭಕ್ಕೆ ೮೦ ಸಾವಿರ ಜನರು ಕಿಕ್ಕಿರಿದು ತುಂಬಿದ್ದರು. ೬೦ ರಾಷ್ಟ್ರಗಳ ಒಟ್ಟು ೬ ಸಾವಿರ ಆಟಗಾರರು ತಮ್ಮ ತಮ್ಮ ದೇಶಗಳ ಧ್ವಜದೊಂದಿಗೆ ಭಾರಿ ಪೆರೇಡು ನಡೆಸಿದರು. ರಷ್ಯ, ಬಲ್ಗೇರಿಯಾ ಮತ್ತು ರುಮೇನಿಯಾ ರಾಷ್ಟ್ರಗಳು ಇದರಲ್ಲಿ ಭಾಗವಹಿಸಲಿಲ್ಲ. ಮತ್ತು ಜರ್ಮನಿ ಮತ್ತು ಜಪಾನುಗಳನ್ನು ಇದಕ್ಕೆ ಸೇರಿಸಲಿಲ್ಲ.

ಹಾಕಿಯ ಸ್ಪರ್ಧೆಯಲ್ಲಿ ಭಾರತವು ಆಸ್ಟ್ರಿಯವನ್ನು ೮ ಗೋಲುಗಳಿಂದ ಸೋಲಿಸಿತು. ಫುಟ್‌ಬಾಲಿನಲ್ಲಿ ಫ್ರಾನ್ಸು ಭಾರತವನ್ನು ೨-೧ ಗೋಲಿನಿಂದ ಸೋಲಿಸಿತು. ಕುಸ್ತಿಯಲ್ಲಿ ಭಾರತದ ಜಾಧವ್‌ರವರು ಅಮೆರಿಕದ ಜರ್ಗಾರವರನ್ನು ಸೋಲಿಸಿದರು.

ಶ್ರೀ ಗಾಯತ್ರೀ ಟಾಕೀಸ್

30 7-48 ರಿಂದ
ಒಂದು ವಾರ ಮಾತ್ರ
ಪ್ರತಿದಿನ ಮೂರು ಆಟಗಳು
ಅಡ್ವೆಂಚರ್ಸ್ ಆಫ್
ರಾಬಿನ್ ಹುಡ್
(ವರ್ಣರಂಜಿತ ಚಿತ್ರ)

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,

[ಬ್ರಿಟಿಷ್ ಇಂಡಿಯಾದಲ್ಲಿ ೧೯೩೨ ರಲ್ಲಿ ಸ್ಥಾಪಿತವಾದದ್ದು]
ಪ್ರಧಾನ ಕಛೇರಿ:- ಕರೂರು (S I Ry)
ಶಾಖೆಗಳು:- ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.)
ಬೆಂಗಳೂರು ಸಿಟಿ
ಉಪಶಾಖೆ -ನಾಗಲ್ ನಗರ (ದಿಂಡಿಗಲ್)
ಮೈಸೂರು ಬ್ರಾಂಚ್:- ಇಲವಾಲ ರೋಡ್

ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟ್‌ಗಳನ್ನು ಸ್ವೀಕರಿಸಲಾಗುತ್ತೆ.

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಸೆಯಾನಾ ಒಂದು ರೂಪಾಯಿ ನಂತೆ ಹಣ ಕಟ್ಟಬಹುದಾದ— ೧೨ ತಿಂಗಳು, ೨೪ ತಿಂಗಳು ವಾಯಿದಾ — ರೆಕರಿಂಗ್ ಡಿಪಾಜಿಟ್ ಮತ್ತು ೪೨ ತಿಂಗಳು ವಾಯಿದಾ ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ. ಎಲ್ಲಾ ವಿಧವಾದ ಬ್ಯಾಂಕಿಂಗ್ ವ್ಯವಹಾರಗಳನ್ನೂ ನಡೆಸಲಾಗುವುದು.
ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ
ವಿ. ಕೆ. ನಟರಾಜನ್,
ಏಜೆಂಟ್, ಮೈಸೂರು

:: ಪ್ರಭಾ ::

6—8—48 ರಿಂದ :: ಪ್ರತಿ ದಿನ 3 ಆಟಗಳು
ಬಾಂಬೆ ಟಾಕೀಸ್‌ರವರ ಸಹಾಸ ಚಿತ್ರ
★ ಮಜ್‌ಬೂರ್ ★
[ಹಿಂದಿ]
• ಮುನವರ್ ಸುಲ್ತಾನ್ • ಶ್ಯಾಮ್ • ಇಂದು
(ಕಾಂಪ್ಲಿಮೆಂಟರಿ ಮತ್ತು ರಿಯಾಯಿತಿಗಳನ್ನು ಮನ್ನಾ ಮಾಡಿದೆ)

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್
ತಲೆ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮ ಬಾಣ, ಶೀಸೆ ೦-೧೨-೦
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ:—)
- ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.
ಪಂಚಾಮೃತ— ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ.
ಮಹಾಕೇಶಕೀ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಬ್ರೀನ್ ಟಾನಿಕ್ ಶೀಸೆ ೨-೦-೦
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಫೋನ್ ೦ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೫-೮-೪೮ [ಸಂಚಿಕೆ ೧೬

ಗೋಪಾಲ್ರಾವ್ ಸಮಿತಿ ಬಗ್ಗೆ ವಿಶೇಷ ಶಾಸನ

ವಿದ್ಯುಚ್ಛಕ್ತಿ ಹೊಡೆತದಿಂದ ಬಾಲಕಿಯ ಮರಣ

ಮೈಸೂರು ೫

ಮಹಾರಾಣಿ ಹೈಸ್ಕೂಲಿನ ಬಳಿ ಈ ದಿನ ಬೆಳಿಗ್ಗೆ ವಿದ್ಯುಚ್ಛಕ್ತಿ ಕಂಭದಲ್ಲಿ ಕರೆಂಟು ಲೀಕಾಗುತ್ತಿತ್ತೆಂದೂ, ಅದನ್ನು ೧೧ ವರ್ಷದ ಬಾಲಕಿಯೊಬ್ಬಳು ಆಕಸ್ಮಾತ್ ಮುಟ್ಟಿದುದರಿಂದ ಆಕೆಯು ತಕ್ಷಣ ಮೃತಿ ಹೊಂದಿದಳೆಂದೂ ವರದಿಯಾಗಿದೆ. ಪೊಲೀಸರು ಬಂದು ಮಹಜರು ಕ್ರಮ ನಡೆಸಿದರು.

ಈ ಪ್ರದೇಶಗಳಲ್ಲಿ ಕಂಭಗಳಲ್ಲಿ ಕರೆಂಟು ಲೀಕು ಆಗುವುದೆಂದು ಇತ್ತೀಚೆಗೆ ಅನೇಕ ಬಾರಿ ದೂರುಗಳು ಬಂದಿವೆ. ಸುಬ್ಬರಾಯನ ಕೆರೆ ಎದುರು ಭಾಗದಲ್ಲಿರುವ ಜಗದಂಬ ಶಿಕ್ಷಣಾಲಯದ ಹತ್ತಿರವೂ ಈ ದಿನ ಇದೇ ರೀತಿ ಒಬ್ಬನಿಗೆ ಷಾಕ್ ಹೊಡೆಯಿತು. ಅಲ್ಲಿಂದ ಸ್ವಲ್ಪ ದೂರ ಮುಂದೆ ಪ್ರೋಗ್ರೆಸ್ ಬುಕ್ ಸ್ಟಾಲ್ ಬಳಿ ನಿನ್ನೆ ಒಂದು ಹಸುವಿಗೆ ಹೊಡೆಯಿತು. ಕಳೆದ ತಿಂಗಳಲ್ಲಿ ಕಾಲೇಜು ರಸ್ತೆಯಲ್ಲಿ ಒಂದು ಹಸುವಿಗೆ ಷಾಕ್ ಹೊಡೆದು ಅಲ್ಲಿಯೇ ಮೃತಿ ಹೊಂದಿತು. ಅನೇಕ ಕಡೆಗಳಲ್ಲಿ ಕಂಭಗಳ ಮೇಲಿನ ತಂತಿಗಳು ಉರಿಯುತ್ತಿರುವ ಪ್ರದರ್ಶನಗಳೂ ವರದಿಯಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಕೂಡಲೇ ಸರಿಪಡಿಸುವರೆಂದು ನಂಬಲಾಗಿದೆ.

ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಔಷಧಾಲಯದ ಮುಂಭಾಗದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಹೆಚ್. ಎಲ್. ಶಿವಲಿಂಗಸ್ವಾಮಿ ಹಿರೇಮಠರವರಿಂದ ಹೇಮರೆಡ್ಡಿ ಮಲ್ಲಮ್ಮ ಎಂಬ ಹರಿಕಥೆಯು ನಡೆಯುವುದು.

ಸಂತಾಪ ಸೂಚಕ ಸಭೆ

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದವರು ನಿನ್ನೆ ಸಭೆ ಸೇರಿ ಧರ್ಮರತ್ನಾಕರ ಸಿ. ಪೆರುಮಾಳ್ ಚೆಟ್ಟಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಿದರು.

ಒಲಿಂಪಿಕ್ ಆಟದಲ್ಲಿ ಮೈಸೂರು ವಿದ್ಯಾರ್ಥಿಗೆ ಗಾಯ

ಲಂಡನ್ನಿನಲ್ಲಿ ನಡೆಯುತ್ತಿರುವ ಒಲಿಂಪಿಕ್ ಕ್ರೀಡಾ ಸ್ಪರ್ಧೆಯಲ್ಲಿ ಮೊನ್ನೆ ದಿನ ಬೆಂಗಳೂರು ಸೆಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಯಾದ ಹೆನ್ರಿ ರೆಬೆಲ್ಲೊರವರು ಹಾಪ್ ಸ್ಟೆಪ್ ಜಂಪಿನ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾಗ ಅವರ ಒಲಗಾಲು ಕೆಡಿಗೆ ಗಾಯವಾಯಿತೆಂದೂ, ಇದರಿಂದ ಅವರಿಗೆ ದೊರೆಯಲಿದ್ದ ರಜತ ಪದಕವು ತಪ್ಪಿಹೋಯಿತೆಂದೂ ಹೇಳಲಾಗಿದೆ.

ನಿಜಾಮರಿಗೆ ಮೈಸೂರಿನಿಂದ ವಿಮಾನ ಮಾರಾಟವಾಗಿಲ್ಲ

ಮೈಸೂರು ಸರ್ಕಾರಕ್ಕೆ ಸೇರಿದ ವಿಮಾನವೊಂದನ್ನು ನಿಜಾಮರಿಗೆ ಮಾರಲಾಯಿತೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಅಧಿಕಾರ ವೃಂದದಿಂದ ತಿಳಿದುಬಂದಿದೆ.

ಪ್ಯಾಲಸ್ಟೈನಿಗೆ ನಿಜಾಮರಿಂದ ೧೦ ಲಕ್ಷ ರೂ. ಸಹಾಯ

ಪ್ಯಾಲಸ್ಟೈನಿನಲ್ಲಿ ಕದನ ನಡೆಸುತ್ತಿರುವ ಅರಬ್ಬರಿಗೆ ೧೦ ಲಕ್ಷ ರೂ. ಗಳನ್ನು ಕೊಡಬೇಕೆಂದು ಹೈದರಾಬಾದಿನ ಮಂತ್ರಿಮಂಡಲದವರು ನಿರ್ಧರಿಸಿದ್ದಾರೆಂದು ಹೇಳಲಾಗಿದೆ.

ಲಂಡನ್ನಿನಲ್ಲಿ ಹೈದರಾಬಾದ್ ದಿನಾಚರಣೆ

ಲಂಡನ್ನಿನ ಹೈಡ್ ಪಾರ್ಕಿನಲ್ಲಿ ಪಾಕೀಸ್ತಾನ ಮತ್ತು ಹೈದರಾಬಾದಿನ ವಿದ್ಯಾರ್ಥಿಗಳು ಕಳೆದ ೩೦ ನೇ ತಾ|| ಹೈದರಾಬಾದ್ ದಿನಾಚರಣೆಯನ್ನು ಪಾಕೀಸ್ತಾನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಜನಾಬ್ ಮುಸ್ತಫಾರವರ ಅಧ್ಯಕ್ಷತೆಯಲ್ಲಿ ನಡೆಸಿದರು. ಭಾರತದ ಮೇಲಿನ ಅಪಪ್ರಚಾರ ಭಾಷಣಗಳು ಆದುವು. ರಸ್ತೆಯಲ್ಲಿ ಹೋಗುತ್ತಿರುವವರಿಗೆಲ್ಲಾ ಹಸ್ತಪತ್ರಿಕೆಗಳನ್ನು ಹಂಚಲಾಗುತ್ತಿತ್ತು.

ಹೈದರಾಬಾದಿನ ಪ್ರಚಾರ ಕಾರ್ಯಕ್ಕೆ ಬ್ರಿಟನ್ನಿನ ಪತ್ರಿಕೆಗಳಲ್ಲಿ ಬೆಂಬಲ ದೊರೆಯುತ್ತಿದೆಯೆಂದು ಹೇಳಲಾಗಿದೆ. ಬ್ರಿಟನ್ನಿನ ಮಂತ್ರಿಮಂಡಲದವರು ಹೈದರಾಬಾದಿನ ಸಮಸ್ಯೆ ಬಗ್ಗೆ ಕೈಹಾಕಬೇಕೆಂದು ಹೈದರಾಬಾದಿನ ಪ್ರಚಾರಕರು ಇಷ್ಟರಲ್ಲೇ ವೈಟ್ ಹಾಲ್ ಭವನಕ್ಕೆ ಮೆರವಣಿಗೆಯಲ್ಲಿ ಹೋಗಲಿರುವರೆಂದು ವರದಿಯಾಗಿದೆ.

ಆಗಸ್ಟ್ ೧೪ ನೇ ತಾ|| ಪಾಕಿಸ್ತಾನ ಸ್ವಾತಂತ್ರ್ಯ ದಿನಾಚರಣೆ

ಪಾಕಿಸ್ತಾನವು ಸ್ವತಂತ್ರವಾದ ಜ್ಞಾಪಕಾರ್ಥವಾಗಿ ಪ್ರತಿ ವರ್ಷವೂ ಆಗಸ್ಟ್ ೧೪ ನೇ ತಾ|| ರಾಷ್ಟ್ರದ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಅಲ್ಲಿನ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

Latest News

ಕಂಟೆಂಪ್ಟ್ ಮೊಕದ್ದಮೆ ವಿಚಾರಣೆಗೆ ನಾಲ್ಕು ಜನ ನ್ಯಾಯಾಧೀಶರ ಬೆಂಚು

ಸ್ವಂ ಸು ಫೋ] ಬೆಂಗಳೂರು ೫

ಗೋಪಾಲರಾವ್ ಸಮಿತಿಗೆ ಸಂಪೂರ್ಣಾಧಿಕಾರವನ್ನು ಕೊಡುವ ವಿಶೇಷ ಶಾಸನದಿಂದ ಹೈಕೋರ್ಟಿನ ಸ್ಥಾಪನೆ ಮತ್ತು ಅದರ ಅಧಿಕಾರ ವ್ಯಾಪ್ತಿಯ ಅಂಗರಚನೆಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳು ಉದ್ಭವಿಸಿರುವುದರಿಂದ ಅದನ್ನು ನಾಲ್ಕು ಜನ ನ್ಯಾಯಾಧೀಶರನ್ನೊಳಗೊಂಡ ಬೆಂಚು ಪರಿಶೀಲಿಸಬೇಕೆಂದು ಹೇಳಿ ಕಂಟೆಂಪ್ಟ್ ಮೊಕದ್ದಮೆಯನ್ನು ಈ ದಿನ ಶ್ರೇಷ್ಠ ನ್ಯಾಯಾಧೀಶರು ಇದೇ ೧೨ ನೇ ತಾರೀಖಿಗೆ ಮುಂದೆ ಹಾಕಿದರು.

ನಿಜಾಮರು ಭಾರತಕ್ಕೆ ಸೇರಲು ಬ್ರಿಟಿಷ್ ಪ್ರಧಾನಿ ಸಲಹೆ

ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರಿಗೆ ನಿಜಾಮರು ಒಂದು ಪತ್ರವನ್ನು ಬರೆದು, ಹೈದರಾಬಾದನ್ನು ಸ್ವತಂತ್ರ ಡೊಮಿನಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದರೆಂದೂ, ಅದಕ್ಕೆ ಮಿ|| ಅಟ್ಲಿಯವರು ಉತ್ತರವಿತ್ತು, ಈ ವಿಚಾರದಲ್ಲಿ ತಾವು ಕೈ ಹಾಕಲು ಸಾಧ್ಯವಿಲ್ಲವೆಂದೂ, ನಿಜಾಮರು ಭಾರತದ ಡೊಮಿನಿಯನ್ನಿಗೆ ಸೇರಿ, ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದೂ ಸಲಹೆ ಮಾಡಿದ್ದರೆಂದೂ ವರದಿಯಾಗಿದೆ.

ಕೊಲೆ ಅಪಾದನೆ ಮೇಲೆ ಜಹಗೀರುದಾರರ ದಸ್ತಗಿರಿ

ಮಾಲ್ವಾ ಯೂನಿಯನ್ನಿಗೆ ಸೇರಿದ ಧಾರ್ ವಾಡಾ ಜಹಗೀರುದಾರರು ಯೂನಿಯನ್ ಸರ್ಕಾರಕ್ಕೆ ವಶವಾಗಿದ್ದಾರೆ. ಮತ್ತು ಅವರನ್ನು ಕೊಲೆ ಮತ್ತು ಇತರ ಅಪಾದನೆಗಳ ಬಗ್ಗೆ ದಸ್ತಗಿರಿ ಮಾಡಲಾಗಿದೆ. ಅವರ ೨೩ ಜನ ಅನುಯಾಯಿಗಳನ್ನೂ ಸಹ ಬಂಧಿಸಲಾಗಿದೆ. ಮಾಲ್ವಾ ಸರ್ಕಾರದ ಅಧಿಕಾರವನ್ನು ನಿರಾಕರಿಸಿ, ಸ್ವತಂತ್ರರೆಂದು ಘೋಷಿಸಿ, ಧಾರ್ ವಾಡಾ ಜಹಗೀರನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡಿದ್ದರು. ಮಾಲ್ವಾ ಸರ್ಕಾರದ ಉಪ ಪ್ರಧಾನಿ ಶ್ರೀ ವಿಶ್ವನಾಥ ಜೋಶಿಯವರು ಜಹಗೀರುದಾರರ ಹೃದಯ ಪರಿವರ್ತನೆಗಾಗಿ ಕಳೆದ ಶನಿವಾರದಿಂದ ೪೮ ಗಂಟೆಗಳ ಕಾಲ ಉಪವಾಸವನ್ನು ಕೈಗೊಂಡಿದ್ದರು.

ಸ್ವೀಡನ್ನಿನಲ್ಲಿ ಹಿಟ್ಲರನ ಅನುಯಾಯಿ

ಹಿಟ್ಲರನ ಅನುಯಾಯಿಯಾದ ಮಾರ್ಟಿನ್ ಬೋರ್ಮನ್ನರವರು ಸ್ಟಾಕ್ ಹೋಮಿನಲ್ಲಿ ತಂಗಿಕೊಂಡಿರುವರೆಂದು ಅವರನ್ನು ಪತ್ತೆಮಾಡಲು ಬ್ರಿಟನ್ನಿನ ಪೋಲೀಸರು ತರದೂದು ಮಾಡುತ್ತಿರುವರೆಂದು ವರದಿಯಾಗಿದೆ.

ನಿಜಾಮರು ಸಂಧಾನಕ್ಕೆ ಒಪ್ಪುವ ಸೂಚನೆ

ಭಾರತ ಸರ್ಕಾರದೊಡನೆ ನಿಜಾಮರು ಸಂಧಾನ ಮಾಡಿಕೊಳ್ಳುವ ಸೂಚನೆಯು ಕಂಡುಬಂದಿದೆಯೆಂದು ದೆಹಲಿಯ ರಾಜಕೀಯ ಆವರಣಗಳಲ್ಲಿ ಹೇಳಲಾಗಿದೆ. ದೆಹಲಿಯಲ್ಲಿರುವ ನಿಜಾಮರ ಏಜೆಂಟ್ ಜನರಲ್ಲರಾದ ನವಾಬ್ ಯಾರ್ ಜಂಗ್ ಮತ್ತು

ಗೋಪಾಲರಾವ್ ಸಮಿತಿಗೆ ಸಂಪೂರ್ಣಾಧಿಕಾರ

ವಿಶೇಷ ಶಾಸನ ಜಾರಿ

ಸರ್ಕಾರದ ಪರವಾಗಿ ಮುದಲಿಯಾರ್ ಅಡ್ವೋಕೇಟ್ ಜನರಲ್ಲರ ವಕಾಲತ್ತು

ಸ್ವಂ ಸು ಫೋ] ಬೆಂಗಳೂರು ೫

ಕಂಟೆಂಪ್ಟ್ ಮೊಕದ್ದಮೆ ಸಂಬಂಧದಲ್ಲಿ ಹೈಕೋರ್ಟಿನವರು ಗೋಪಾಲರಾವ್ ಸಮಿತಿಯ ಅಧಿಕಾರದ ಬಗ್ಗೆ ಸಂಶಯವನ್ನು ಸೂಚಿಸಿ ಅದರ ಲೋಪದೋಷಗಳನ್ನು ಎತ್ತಿ ತೋರಿಸಿರುವುದರಿಂದ ಅವುಗಳನ್ನು ಸರಿಪಡಿಸಲು ಗೋಪಾಲರಾವ್ ಸಮಿತಿಯ ವಿಶೇಷಾಧಿಕಾರದ ೩ ನೇ ತಿದ್ದುಪಡಿಯ ಅಸಲದ ಶಾಸನವನ್ನು ಈ ದಿನ ಸರ್ಕಾರದವರು ಜಾರಿ ಮಾಡಿರುತ್ತಾರೆ. ಇದಕ್ಕೆ ಶ್ರೀ ಮನ್ಮಹಾರಾಜರವರ ಒಪ್ಪಿಗೆಯು ಸಹ ದೊರೆತಿರುತ್ತದೆ. ಇದರ ಪ್ರಕಾರ ಸಮಿತಿಯ ತೀರ್ಮಾನಗಳೇ ಅಂತಿಮವೆಂದೂ, ಅದರ ಮೇಲೆ ಹೈಕೋರ್ಟಿಗೆ ಯಾವ ಅಧಿಕಾರವೂ ಇಲ್ಲವೆಂದೂ ವಿಧಿಸಲಾಗಿದೆ. ಈ ಶಾಸನಕ್ಕೆ ಆದಿಯಿಂದ ವ್ಯಾಪ್ತಿಯು (Retrospective effect) ಇರುವುದಾಗಿಯೂ ಸಹ ಸೂಚಿಸಲಾಗಿದೆ.

ಈ ದಿನ ಹೈಕೋರ್ಟಿನಲ್ಲಿ ಮದರಾಸಿನ ಅಡ್ವೋಕೇಟ್ ಜನರಲ್ಲರಾದ ಶ್ರೀ ರಾಜಾ ಅಯ್ಯಂಗಾರರವರು ಸರ್ಕಾರದ ಪರವಾಗಿ ವಾದವನ್ನು ಪ್ರಾರಂಭಿಸಿ ಜಾರಿ ಮಾಡಿರುವ ವಿಶೇಷ ಶಾಸನವನ್ನು ವಿವರಿಸಿ ಹೈಕೋರ್ಟಿಗೆ ಸಮಿತಿಯ ಮೇಲೆ ಯಾವ ಅಧಿಕಾರವೂ ಇಲ್ಲವೆಂದು ತಿಳಿಸಿದರು. ಹೈಕೋರ್ಟಿನ ಅಧಿಕಾರವನ್ನು ಮೊಟಕು ಮಾಡುವುದಕ್ಕಲ್ಲದೆ ಸಮಿತಿಗೆ ವಿಶೇಷ ಅಧಿಕಾರವನ್ನು ಕೊಡಲು ಮಾತ್ರ ಈ ಶಾಸನವನ್ನು ಜಾರಿ ಮಾಡಲಾಗಿದೆಯೆಂದು ತಿಳಿಸಿದರು.

ಮೈಸೂರು ಅಡ್ವೋಕೇಟ್ ಜನರಲ್ಲರಿಗೆ ಹಿಂದೆ ಹಾಕಿದ ಪ್ರಶ್ನೆಗಳನ್ನೇ ಈ ದಿನವೂ ಸಹ ಶ್ರೇಷ್ಠ ನ್ಯಾಯಾಧೀಶರು ಹಾಕಿದರು. ಈ ವಿಚಾರವಾಗಿ ಮುಂದೆ ವಾದಿಸುವುದಾಗಿ ಅಡ್ವೋಕೇಟ್ ಜನರಲ್ಲರು ಉತ್ತರವಿತ್ತರು.

ಶ್ರೀ ವಿ. ಪೀ. ಲಕ್ಷ್ಮೀನಾರಾಯಣಪ್ಪನವರು ನಂತರ ವಿಶೇಷ ಶಾಸನವನ್ನು ಟೀಕೆ ಮಾಡಿ ವಾದಿಸಿದರು.

ಮೈಸೂರ ಅಡ್ವೋಕೇಟ್ ಜನರಲ್ಲರು ಮದರಾಸ್ ಅಡ್ವೋಕೇಟ್ ಜನರಲ್ಲರಿಗೆ ಸಹಾಯಕರಾಗಿದ್ದರು.

ಲಾಯಕ್ ಅಲಿ ಯವರು ದೆಹಲಿಯಿಂದ ವಾಪಸು ಬಂದು, ನಿಜಾಮರನ್ನು ಭೇಟಿ ಮಾಡಿ ಸಂಸ್ಥಾನದಲ್ಲಿ ಈಗಿನ ಸರ್ಕಾರವನ್ನು ಬದಲಾಯಿಸಿ ಪ್ರಜಾ ಸರ್ಕಾರವನ್ನು ಸ್ಥಾಪಿಸದ ಹೊರತು ಭಾರತ ಸರ್ಕಾರವನ್ನು ಪುನಃ ಸಂಧಾನಕ್ಕೆ ಕರೆಯಲು ಸರ್ಕಾರದವರಿಗೆ ಸಾಧ್ಯವಿಲ್ಲವಾಗಿದೆಯೆಂದು ಅವರಿಗೆ ತಿಳಿಸಿದರೆಂದೂ ಹೇಳಲಾಗಿದೆ. ಬ್ರಿಟಿಷ್ ಪ್ರಧಾನಿಯವರು ಭಾರತಕ್ಕೆ ನಿಜಾಮರು ಸೇರಬೇಕೆಂದು ಸಲಹೆ ಇತ್ತಿರುವುದನ್ನೂ ಮತ್ತು ಬ್ರಿಟಿಷ್ ಕಾಮನ್ಸ್ ಸಭೆಯಲ್ಲಿ ಭಾರತದ ಮೇಲೆ ಹೈದರಾಬಾದ್ ಯುದ್ಧ ಘೋಷಿಸಿದರೆ ಬ್ರಿಟಿಷ್ ಪ್ರಜೆಗಳ ಮೇಲೆ ಯುದ್ಧ ಸಾರಿದಂತಾಗುವುದೆಂದು ಅವರು ತಿಳಿಸಿದ್ದರೆಂದು ಹೇಳಲಾಗಿದೆ. ಇದರಿಂದ ನಿಜಾಮರು ಭಾರತದೊಡನೆ ಒಪ್ಪಂದ ಮಾಡಿಕೊಳ್ಳಬಹುದೆಂದು ಭಾವಿಸಲಾಗಿದೆ. ಸರ್ ವಿ ಕಾರರವರು ಹೈದರಾಬಾದಿಗೆ ಬರಬೇಕೆಂದು ನಿಜಾಮರು ತಿಳಿಸಿದ್ದರೆಂದೂ, ಅವರು ಈ ದಿನ ಅಲ್ಲಿಗೆ ಬರಲಿರುವರೆಂದು ತಿಳಿದುಬಂದಿದೆ.

ಅಮೋಘವಾದ ನಾಟಕ ಪ್ರದರ್ಶನ

ಕೊಳ್ಳೇಗಾಲದ ವರ್ತಮಾನ

ವೈ [illegible]

ಕೊಳ್ಳೇಗಾಲದ ಇವ್ ನಾರ್ಕೆಟ್ ಜಿ. ಪಿ. ಮಲ್ಲಪ್ಪನವರ ನೇತೃತ್ವದಲ್ಲಿ [illegible] ಪ್ರಾಂತಿಕ ನಾಟಕ [illegible] ಶ್ರೀ ಪಿ. [illegible] ಭಕ್ತಿ [illegible] ನಾಟಕವನ್ನು ಅಭಿನಯಿಸಿ [illegible] ಅವರ [illegible] ಅಧ್ಯಕ್ಷತೆಯಲ್ಲಿ ಇದೇ ನಾಟಕ [illegible] ಶ್ರೀ ಬಿ. [illegible] ಶ್ರೀ [illegible] ಎಂ. ಸಂಗಣ್ಣನವರು ಅಧ್ಯಕ್ಷರಾಗಿದ್ದರು [illegible]

ಶ್ರೀ ಕೆ. [illegible] ನಾರ್ಕೆಟ್ ಜಿ. ಪಿ. ಮಲ್ಲಪ್ಪನವ [illegible] ನಾಟಕ [illegible] ವಿದ್ವಾನ್ ಶ್ರೀ ನಾಗಲಿಂಗ [illegible] ಅಭಿನಂದಿಸಿದ

ನಾಟಕದ ಪಾತ್ರಧಾರಿಗಳೆಲ್ಲರೂ ೧೨ ವರ್ಷಕ್ಕೆ ಒಳಗಿರುವ ಬಾಲಕ ಬಾಲಕಿಯರು ಇವರೆಲ್ಲರೂ ಇವ್ ನಾರ್ಕೆಟ್ ಮಲ್ಲಪ್ಪನವರ ನಾಟಕ ಶಾಲೆಗೆ ಸೇರಿದವರು. ಅವರುಗಳ ಪಾತ್ರವನ್ನು ಕಂಡು ಪ್ರೇಕ್ಷಕರು ನಿಜವಾಗಿ [illegible] 'ಬಸ್ಸ್ ನೋಟ್' ಎಂಬ ಧ್ವನಿಯನ್ನು ಕೇಳಿ ಬಹಳ ದಿನಗಳಾಗಿದ್ದವು. ಈ ನಾಟಕದಲ್ಲಿ ಹೆಜ್ಜೆ ಹೆಜ್ಜೆಗೂ ಇದು ಕೇಳಿ ಬರುತ್ತಿತ್ತು. ಮಕ್ಕಳು ತಮ್ಮ ವಯಸ್ಸಿಗೆ ಮೀರಿದ ಸಾಮರ್ಥ್ಯವನ್ನು ತೋರಿದ್ದವು [illegible] ಬಾಲನಟನಟಿಯರಲ್ಲಿ [illegible] ಗಂಭೀರವಾಗಿಯೂ, [illegible] ಪ್ರೇಕ್ಷಕರಿಗೆ [illegible] ಮಾಡುತ್ತಿದ್ದವು.

[illegible] ಮೊದಲುಗೊಂಡ [illegible] ತಮ್ಮ ತಮ್ಮ ಪಾತ್ರವನ್ನು [illegible] ಪ್ರದರ್ಶಿಸುತ್ತಿದ್ದರು [illegible] ಅಮೋಘವಾಗಿದ್ದಿತು. ಭಕ್ತಿಯಿಂದ ಕೂಡಿದ [illegible] ಅತ್ಯಂತ [illegible] ತಲ್ಲೀನರಾಗಿದ್ದ ಭಾವವನ್ನು [illegible] ತೋರಿಸುವಂತಿತ್ತು. ಈ ಬಾಲಕಿಯ [illegible] ಅತ್ಯಂತ ಮನೋಹರವಾಗಿದ್ದು, ಕೌಶಲ್ಯದಿಂದ ಕೂಡಿದ್ದಾಗಿದ್ದಿತು.

[illegible] ಸಿವಾಸಿಗಳು ಇಂತಹ [illegible] ನಾಟಕವನ್ನು ನೋಡಿ ಬಹಳ ದಿನಗಳಾಗಿರಬೇಕು. ಮಹಾಜನರ ಅಪೇಕ್ಷೆಯ [illegible] ಇವರು ನಾಳೆ ಮತ್ತೆ ಇದೇ ನಾಟಕವನ್ನು ಪ್ರದರ್ಶಿಸಲಿರುವರು. ಇಂತಹ [illegible] ದಲ್ಲಿ ಅಭಿನಯ ಕಲಿಸುವ ನಾಟಕದವರನ್ನು ಪುರನಿವಾಸಿಗಳು ತಪ್ಪದೇ ನೋಡಿ ಅವರಿಗೆ ಪ್ರೋತ್ಸಾಹಿಸುವುದಲ್ಲದೆ ಈ ಕಲೆಗೆ ಉತ್ತೇಜನವನ್ನೂ ಕೊಡಲೆಂದು ಆಶಿಸುತ್ತೇವೆ.

● ಭಾರತದ ಮಕ್ಕಳ ಆರೋಗ್ಯದ ಸಲುವಾಗಿ ವಿಶ್ವದ ಆರೋಗ್ಯ ಸಂಸ್ಥೆಯವರು ೭½ ಲಕ್ಷ ಡಾಲರುಗಳನ್ನು ಕೊಟ್ಟಿರುವರೆಂದು ಕೇಂದ್ರ ಸರ್ಕಾರದ ಸಚಿವರಾದ ರಾಜಕುಮಾರಿ ಅಮೃತ್‌ಕೌರ್ ರವರು ತಿಳಿಸಿರುತ್ತಾರೆ.

ಶ್ರೀ ಗಾಯತ್ರೀ ಟಾಕೀಸ್

6 8 48 ರಿಂದ

ಯಶಸ್ವಿಯಾದ 2 ನೇ ವಾರ

ಅಡ್ವೆಂಚೆರ್ಸ್ ಆಫ್

ರಾಬಿನ್ ಹುಡ್

(ವರ್ಣರಂಜಿತ ಚಿತ್ರ)

4 ದಿನಗಳು ಮಾತ್ರ

ಕಡೇ ದಿನ

ಭಾನುವಾರ ೮-೮-೪೮

— ಕಡೇ ದಿನ —

ಬೊಂಬಾಯಿ

ಜಿ. ಎ. ಸರ್ಕಸ್

ಕಡೇ ನಾಲ್ಕು ದಿನಗಳ ಪ್ರದರ್ಶನ

ಪೂರ್ಣ ಬದಲಾವಣೆ

ಶನಿವಾರ ಭಾನುವಾರ ೩ ಆಟಗಳು

ನಿತ್ಯ ದಿನಗಳಲ್ಲಿ ೨ ಆಟಗಳು

[ಎ. ವಿ. [illegible] ರೋಡ್ ಕೋರ್ಟ್]

RAJKAMAL

From 7—8—48

Song of -

- Scheherazade

(In Technicolour)

—:With:—

Yvonne Decorlo, Briau Donlevy

[illegible] ದಿನ ಮತ್ತು ನಾಳೆ ಮಾತ್ರ

- ಪನ್ನಾ -

MORNING SHOWS

From 6—8—48

For 4 Days

Up in -

- Mabel's Room

—:WITH:—

DENNIS O'KEEFF, MARJORI REYNOLD

Edited printed and published by A. R. Nagarajan at the Sadhvi Press D. Subbaiah Road Mysore.

:: ಪ್ರಭಾ ::

6-8-48 ರಿಂದ :: ಪ್ರತಿ ದಿನ 3 ಆಟಗಳು

[illegible] ಚಿತ್ರ

ಮಿಸ್ಟರ್ ಬೂರ್

[illegible]

[illegible]

ಪ್ರಭುದೇವಾ ಟಾಕೀಸಿನಲ್ಲಿ

6-8-48 ರಿಂದ :: ಅಮೋಘವಾದ 3 ನೇ ವಾರ

ಪ್ರತಿ ದಿನ 2 ಆಟಗಳು

ರಾಯಲ್ ಟಾಕೀಸಿನವರ

ಸಾವಿತ್ರಿ ಸಾವಿತ್ರಿ

(ತಮಿಳು)

ನಟನಟಿಯರು:—ಶಾಂತ ಆಪ್ಟೆ, ಕೋಕಿಲ ಗಾನಂ ಎಂ. ಎಸ್. ಸುಬ್ಬುಲಕ್ಷ್ಮಿ, ವೈ. ವಿ. ರಾವ್, ಕೆ. ಸಾರಂಗಪಾಣಿ ಜಿ. ಎ. ಚೆಲ್ಲಪ್ಪ, ಕೃಷ್ಣವೇಣಿ ಮುಂತಾದವರು

ಪ್ರತಿ ಶುಕ್ರವಾರ ನ್ಯೂಸ್ ರೀಲ್ ಮತ್ತು ಸಾರ್ಟೂನುಗಳ ಬದಲಾವಣೆ.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೬-೮-೪೮ [ಸಂಚಿಕೆ ೧೭

ಹೈದ್ರಾಬಾದ್ ಪ್ರಧಾನಿ, ಸೇನಾನಿ ರಾಜೀನಾಮೆ

ಹೈದರಾಬಾದಿನ ಪರಿಸ್ಥಿತಿ ವಿಷಮಿಸಿದೆ

ರಜಾಕರರನ್ನು ತಡೆಗಟ್ಟಲು ನಿಜಾಮರು ಅಸಮರ್ಥರಾಗಿದ್ದಾರೆ

ಕಳೆದ ೪೮ ಗಂಟೆಗಳ ಕಾಲದಿಂದ ಹೈದರಾಬಾದಿನ ಪರಿಸ್ಥಿತಿಯು ಬಹಳ ಬಿಗುಡಾಯಿಸಿಕೊಂಡಿದೆಯೆಂದೂ, ನಿಜಾಮರು ತಮ್ಮ ಆಡಳಿತಾಧಿಕಾರದಲ್ಲಿ ಶಕ್ತಿಹೀನರಾಗಿರುವರೆಂದೂ ಮತ್ತು ರಜಾಕರರ ದಾಂಧಲೆಯು ಇತ್ತೀಚೆಗೆ ಬಹಳ ಹೆಚ್ಚಾಗಿದೆಯೆಂದೂ ವರದಿಯಾಗಿದೆ. ರಜಾಕರರ ಸೈನ್ಯಸಂಖ್ಯೆಯು ಅತ್ಯಧಿಕವಾಗಿ ಸರ್ಕಾರಿ ಸೈನ್ಯ ಕಡಿಮೆಯಾಗಿರುವುದರಿಂದ ರಜಾಕರರಿಗೆ ಯಾರೂ ಎದುರಿಲ್ಲದಂತಾಗಿದೆ ಮತ್ತು ಅವರನ್ನು ಅಡಗಿಸಲು ನಿಜಾಮರ ಸರ್ಕಾರಕ್ಕೆ ಶಕ್ತಿ ಇಲ್ಲವಾಗಿದೆ

ಹೊಸ ಒಪ್ಪಂದದ ಷರತ್ತುಗಳಿಗೆ ನಿಜಾಮರ ಸಮ್ಮತಿ

ಕಳೆದ ಜೂನ್ ತಿಂಗಳಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರು ಸಿದ್ಧಮಾಡಿದ್ದ ಒಪ್ಪಂದದ ಮೇಲೆ ಪುನಃ ಸಂಧಾನ ನಡೆಸಲು ಅವಕಾಶ ಕೊಡಬೇಕೆಂದು ನಿಜಾಮರು ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೂ ಮತ್ತು ಸರ್ದಾರ್ ಪಟೇಲರಿಗೂ ಪತ್ರ ಬರೆದಿದ್ದರೆಂದೂ ಅದಕ್ಕೆ ಪಟೇಲರು ಉತ್ತರ ಕೊಟ್ಟು, ಜೂನ್ ತಿಂಗಳಿನ ಒಪ್ಪಂದವು ಮೌಂಟ್ ಬ್ಯಾಟನ್ನರೊಡನೆಯೇ ಹೋಯಿತು ಎಂದೂ, ಭಾರತವು ಆ ಷರತ್ತುಗಳ ಪ್ರಕಾರ ಮಾತ್ರ ಸಂಧಾನ ನಡೆಸಲು ಸಿದ್ಧವಾಗಿಲ್ಲವೆಂದೂ ತಿಳಿಸಿದ್ದರೆಂದೂ ಹೇಳಲಾಗಿದೆ. ನಿಜಾಮರು ಭಾರತ ಡೊಮಿನಿಯನ್ನಿಗೆ ಸೇರಿ ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸಿ, ರಜಾಕರರನ್ನು ನಿರ್ಮೂಲನ ಮಾಡಬೇಕೆಂದು ಶ್ರೀ ರಾಜಾಜಿಯವರು ನಿಜಾಮರಿಗೆ ಉತ್ತರ ಕೊಟ್ಟಿರುವರೆಂದೂ ಗೊತ್ತಾಗಿದೆ.

ನೆಹರೂ ಪಟೇಲರ ಚಿತ್ರಗಳಿಗೆ ಅಪಮಾನ

ಸಿಕಂದರಾಬಾದಿನ ಅಂಗಡಿಗಳಲ್ಲಿದ್ದ ನೆಹರೂ ಮತ್ತು ಪಟೇಲರ ಭಾವಚಿತ್ರಗಳನ್ನು ರಜಾಕರು ಪೋಲೀಸರು ಕಿತ್ತು ಹಾಕಿದರೆಂದು ವರದಿಯಾಗಿದೆ

ಹೈದ್ರಾಬಾದ್-ಭಾರತ ಸಮಸ್ಯೆ ಬಗೆಹರಿಯುವ ಸಂಭವ

ಹೈದರಾಬಾದಿನ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಸರ್ ಮಿರ್ಜಾ ಇಸ್ಮಾಯಿಲರು ಪ್ರಯತ್ನವನ್ನು ಮಾಡುತ್ತಿದ್ದಾರೆ. ದೆಹಲಿಗೆ ನಿಜಾಮರ ನಿಯೋಗ ಸಂಸ್ಥಾನದ ಮಂತ್ರಿಮಂಡಲದ ಸದಸ್ಯ ಶ್ರೀ ವಿ. ಪಿ. ಮೆನನ್ನರವರೊಡನೆ, ಸರ್ ಮಿರ್ಜಾ ಮತ್ತು ನಿಜಾಮರ ಏಜೆಂಟ್ ಜನರಲ್ಲರು ನಡೆಸಿದ ಮಾತುಕತೆಯ ಅನಂತರ ಕಳೆದ ವಾರ ನಡೆಸಿದ ಸಂಧಾನ ಜೂನ್ ತಿಂಗಳಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರು ಸಿದ್ಧಮಾಡಿದ್ದ ಒಪ್ಪಂದಕ್ಕೆ ಅನುಸಾರವಾಗಿ ನಿಜಾಮರು ಒಪ್ಪುವ ಸಂಭವವಿದೆಯೆಂದೂ ದೆಹಲಿಯ ಅಧಿಕಾರ ವಲಯಗಳಲ್ಲಿ ಹೇಳಲಾಗುತ್ತಿದೆ. ರಜಾಕರರ ನಿರ್ಮೂಲನ ಮಾಡಲು ಭಾರತ ಸೈನ್ಯದ ಸಹಾಯವನ್ನು ನಿಜಾಮರು ಪಡೆಯಬಹುದೆಂದು ಹೇಳಲಾಗಿದೆ

ನಗರ ಪೌರಸಭೆಗಳ ಸಮ್ಮೇಳನ

[ಸ್ವಂ. ವ. ಪ್ರೋ] ಬೆಂಗಳೂರು ೬

ಸರ್ಕಾರದವರು ಸಧ್ಯದಲ್ಲೇ ನಗರ ಪೌರಸಭೆಗಳ ಸಮ್ಮೇಳನವೊಂದನ್ನು ಕರೆಯಲಿದ್ದಾರೆಂದು ತಿಳಿದುಬಂದಿದೆ

ಮಾರಾಟದ ತೆರಿಗೆ ಜಾರಿಗೆ ಬಂದಿಲ್ಲ

ಸಂಸ್ಥಾನದಲ್ಲಿ ಮಾರಾಟದ ತೆರಿಗೆಯು ಕಾನೂನು ಜಾರಿಗೆ ಬಂದಿಲ್ಲವಾದರೂ ವರ್ತಕರುಗಳು ಈಗಾಗಲೇ ತೆರಿಗೆಯನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆಂದೂ, ಆ ರೀತಿ ವಸೂಲು ಮಾಡಕೂಡದೆಂದೂ ತಿಳಿಸಿ ಸರ್ಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿರುತ್ತಾರೆ

ಭದ್ರಾವತಿ ಕೆಲಸಗಾರರಿಗೆ ೩ ತಿಂಗಳ ಬೋನಸ್ಸು

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಕೆಲಸಗಾರರಿಗೆ ೧೯೪೭-೪೮ನೇ ವರ್ಷಕ್ಕೆ ೩ ತಿಂಗಳ ಬೋನಸ್ಸನ್ನು ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ

§ ಆಗಸ್ಟ್ ೧೫ ನೇ ತಾ|| ಆಚರಿಸಲಿರುವ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಮಕ್ಕಳಿಗೆ ಸಿಹಿ ಹಂಚುವ ಪ್ರೋತ್ಸಾಹಕ್ಕಾಗಿ ನಗರ ಕಾಂಗ್ರೆಸ್ ಸಮಿತಿಗೆ ೧ ಸಾವಿರ ರೂ. ಕೊಟ್ಟಿರುತ್ತಾರೆ

ಹೈದರಾಬಾದಿನಿಂದ ಬ್ರಿಟಿಷ್ ಅಧಿಕಾರಿಗಳ ವಾಪಸು

ಭಾರತಕ್ಕೂ ಹೈದರಾಬಾದಿಗೂ ಘರ್ಷಣೆಯಾಗುವ ಸಂಭವವಿರುವುದರಿಂದ ನಿಜಾಂ ಸೈನ್ಯದಲ್ಲಿರುವ ಬ್ರಿಟಿಷ್ ಅಧಿಕಾರಿಗಳೆಲ್ಲರೂ ಸಂಸ್ಥಾನವನ್ನು ಬಿಟ್ಟು ಬರಬೇಕೆಂದು ಬ್ರಿಟಿಷ್ ಸರ್ಕಾರದವರ ಸೂಚನೆ ಇತ್ತಿದ್ದಾರೆಂದು ವರದಿಯಾಗಿದೆ.

ಪಾಕೀಸ್ತಾನದಲ್ಲಿ ಭಾರತದ ೫ ಕೋಟಿ ರೂ. ಪದಾರ್ಥಗಳಿಗೆ ನಿರ್ಬಂಧ

ಭಾರತಕ್ಕೂ ಮತ್ತು ಪಾಕಿಸ್ತಾನಕ್ಕೂ ಆದ ಒಪ್ಪಂದದಂತೆ ಪಾಕಿಸ್ತಾನವು ವರ್ತಿಸುತ್ತಿಲ್ಲವೆಂದು ವರದಿಯಾಗಿದೆ. ಭಾರತಕ್ಕೆ ಹೊರಗಿನಿಂದ ಕರಾಚಿಯ ಮೂಲಕ ಸರಬರಾಜಾದ ೫ ಕೋಟಿ ರೂ. ಗಳ ಯಂತ್ರ ಸಾಮಗ್ರಿಗಳು ಮತ್ತು ಇತರ ವಸ್ತುಗಳನ್ನು ಕಳೆದ ಡಿಸೆಂಬರ್ ತಿಂಗಳಿನಿಂದಲೂ ಪಾಕಿಸ್ತಾನವು ನಿರ್ಬಂಧಿಸಿಟ್ಟಿದೆಯೆಂದೂ ಅಸ್ಸಾಂ ಮತ್ತು ಉತ್ತರ ಬಂಗಾಳದಿಂದ ಗೋಣಿ ಚೀಲಗಳನ್ನು ರವಾನಿಸಲು ಅಡಚಣೆ ಉಂಟಾಗುತ್ತಿದೆಯೆಂದೂ ಹೇಳಲಾಗಿದೆ

ಹೈದರಾಬಾದ್ ಪ್ರಧಾನಿ ಮತ್ತು ದಂಡನಾಯಕರ ರಾಜಿನಾಮೆ

ಹೈದರಾಬಾದಿನ ಪ್ರಧಾನಿ ಲಯಾಕ್ ಅಲಿ ಮತ್ತು ಮುಖ್ಯ ಸೈನ್ಯಾಧಿಕಾರಿ ಜ|| ಎಡ್ರೂಸ್‌ರವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ಕೊಟ್ಟಿರುವರೆಂದು ತಿಳಿದುಬಂದಿದೆ. ಹೈದರಾಬಾದಿನ ಸಮಸ್ಯೆಯನ್ನು ಬಗೆಹರಿಸಲು ಸರ್ ಮಿರ್ಜಾರವರನ್ನು ನಿಜಾಮರು ಆಹ್ವಾನಿಸಿರುವುದು ಸಂಸ್ಥಾನಕ್ಕೆ ಅಪಮಾನ ಮಾಡಿದಂತಾಗಿರುವುದರಿಂದ ಅದನ್ನು ಪ್ರತಿಭಟಿಸಲು ಅವರುಗಳು ರಾಜೀನಾಮೆ ಇತ್ತಿರಬಹುದೆಂದು ಹೇಳಲಾಗಿದೆ

ಜಾಸ್ತಿ ಬಲ ಬಿಡಾರವಿರುವ ಭಾರತ ಸೈನ್ಯವನ್ನು ಎದುರಿಸುವಂತೆ ಸೈನಾಪತಿ ಜ|| ಎಡ್ರೂಸ್‌ರವರಿಗೆ ಆಜ್ಞೆ ಇತ್ತರೆಂದೂ ಅದು ಅಸಾಧ್ಯವಾದ ಕಾರ್ಯವೆಂದು ಭಾವಿಸಿ ಅವರು ರಾಜೀನಾಮೆ ಇತ್ತರೆಂದೂ ಮತ್ತೊಂದು ವರದಿ ತಿಳಿಸುತ್ತದೆ

ಹೈದರಾಬಾದಿನಲ್ಲಿ ಯುದ್ಧದ ಸಜ್ಜು

ಭಾರತ ಸೈನ್ಯವನ್ನು ಎದುರಿಸಲು ನಿಜಾಮರು ಸಕಲ ಸಿದ್ಧತೆಗಳನ್ನು ಮಾಡುತ್ತಿರುವರೆಂದು ವರದಿಯಾಗಿದೆ. ವಿಶೇಷ ಮತ್ತು ಪೋಲೀಸ್ ಪಡೆಗಳನ್ನು ಹೆಚ್ಚಿಸಲಾಗುತ್ತಿದೆಯೆಂದೂ, ಸಂಸ್ಥಾನದ ಗಡಿಗಳಲ್ಲೆಲ್ಲಾ ಸೈನ್ಯವನ್ನಿಟ್ಟು ಅವುಗಳಿಗೆ ಬ್ರೆನ್‌ಗನ್ ಮತ್ತು ಇತರ ಆಧುನಿಕ ಸಲಕರಣೆಗಳನ್ನು ಕೊಡಲಾಗಿದೆಯೆಂದೂ ಹೇಳಲಾಗಿದೆ

ಪತ್ರಿಕೋದ್ಯೋಗಿ ಸಂಘ

ಮೈಸೂರು ೬

ಈ ದಿನ ಬೆಳಿಗ್ಗೆ ಮೈಸೂರು ಪತ್ರಿಕೋದ್ಯೋಗಿ ಸಂಘದ ಸಭೆಯು ನಡೆದು ಆಗಸ್ಟ್ ೧೫ ನೇ ತಾ|| ಸ್ವಾತಂತ್ರ್ಯ ದಿನ ಆಚರಣೆಯನ್ನು ಸಂಘದವರು ಆಚರಿಸಬೇಕೆಂದೂ ವರ್ಷಕ್ಕೆ ಪ್ರತಿವರ್ಷವೂ ಸಂಘದ ಆಶ್ರಯದಲ್ಲಿ ಪತ್ರಿಕಾ ಸ್ವಾತಂತ್ರ್ಯಗಳನ್ನು ಪ್ರತಿಪಾದಿಸುವ ವಿಷಯವಾಗಿ ಭಾಷಣವನ್ನು ಏರ್ಪಡಿಸಬೇಕೆಂದೂ ನಿರ್ಧರಿಸಲಾಯಿತು.

ವಾರ್ಷಿಕ

ನಂಜನಗೂಡು ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಿನ್ನೆ ರಾತ್ರಿ 9 ಘಂಟೆಗೆ ಶ್ರೀ ಮಾನ್ ಶ್ರೀ ಶ್ರೀನಿವಾಸರಾವ್‌ರವರಿಂದ ಭದ್ರಾಚಲ ರಾಮದಾಸ ಎಂಬ ಹರಿಕಥೆ ನಡೆಯಿತು.

ವಿದ್ಯುಚ್ಛಕ್ತಿಯಿಂದ ಮರಣಗಳು

ಪೌರಸಭೆಯಲ್ಲಿ ಕಳವಳದ ಸೂಚನೆ

ಮೈಸೂರು ೬

ನಗರದ ವಿದ್ಯುಚ್ಛಕ್ತಿ ಕಂಬಗಳಿಂದ ಕರೆಂಟ್ ಲೀಕಾಗಿ ಅನಾಹುತಗಳು ಸಂಭವಿಸುತ್ತಿರುವುದಲ್ಲದೆ ನಿನ್ನೆ ಒಬ್ಬ ಬಾಲಕಿಯು ಮರಣಕ್ಕೆ ತುತ್ತಾದ ಬಗ್ಗೆ ಈ ದಿನ ಪೌರಸಭೆಯಲ್ಲಿ ವಿಶೇಷವಾದ ಕಳವಳವನ್ನು ಸೂಚಿಸಿ ಸದಸ್ಯರು ಮಾತನಾಡಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಪತ್ರವನ್ನು ಬರೆದು ಪುರನಿವಾಸಿಗಳಿಗೂ, ಪಶುಪ್ರಾಣಿಗಳಿಗೂ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಕೋರಲಾಯಿತು. ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಅಧ್ಯಕ್ಷರು ಭರವಸೆ ಇತ್ತರು

ಅನಂತರ ಪ್ರಶ್ನೋತ್ತರಗಳು ಜರುಗಿದವು. ಆರೋಗ್ಯಶಾಖೆಯಲ್ಲಿ ಮುಂಗಡವಾಗಿ ತೆಗೆದುಕೊಂಡ ಅನಾನತ್ತಿನಲ್ಲಿ ಸರಿಪಡಿಸಲಾಗುವ ವಿಚಾರದಲ್ಲೇ ಎಷ್ಟು ಸಮರ್ಥನಾಯಿತು ಇದೆಯೆಂದು ಪಾಸಿದ್ದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವಿತ್ತು, ಈ ಬಗ್ಗೆ ಕೂಲಂಕಷವಾದ ಪರೀಕ್ಷೆ ನಡೆಸಿ ವರದಿ ಮಾಡುವಂತೆ ಕಮಿಷನರನ್ನು ಕೋರಲಾಗುವುದೆಂದು ತಿಳಿಸಿದರು.

ನಗರದ ಎಲ್ಲೆಯೊಳಗೆ ಹಸು ಸೇರಿರುವ ಹಸುವು ಗ್ರಾಮಗಳನ್ನು ಇನ್ನು ಮುಂದೆಯೂ ಇಟ್ಟುಕೊಳ್ಳುವ ಅವಕಾಶವನ್ನು ಪರಿಶೀಲಿಸಲು ಒಂದು ಉಪಸಮಿತಿಯ ನೇಮಕ; ಅಂತಿಗಳನ್ನು ದುರಸ್ತು ಮಾಡುವುದು; ವಾಣಿವಿಲಾಸ ಮೊಹಲ್ಲೆಯ ಭೂದೇವಿ ಥಾರವ್ಯವನ್ನು ರದ್ದು ಮಾಡಿ ಅಲ್ಲಿ ಮನೆಕಟ್ಟಿಸಲು ಅನುಮತಿ ಕೊಡುವುದು; ಸೂಚಿ ಮೊಹಲ್ಲೆಗೆ ಒಂದು ಹೈಸ್ಕೂಲು ಮತ್ತು ಬಾಲಗಯರ ಮಿಡಲ್ ಸ್ಕೂಲನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು; ನಗರದಲ್ಲಿ ರಿಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸುವುದು; ನಗರದ ಆಸ್ಪತ್ರೆಗೆ ಬರುವ ರೋಗಿಗಳ ಉಪಯೋಗಕ್ಕಾಗಿ ತ್ವರಿತ ಆಸ್ಪತ್ರೆ ಬಳಿ ಪ ನೆಗಳನ್ನು ಕಟ್ಟಿಸಿಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು; ದನಗಳು ಮತ್ತು ಬಾರಿಗಳಿಂದ ಕೆರೆಗಳಲ್ಲಿ ಉಂಟಾಗುತ್ತಿರುವ ತೊಂದರೆಯನ್ನು ಮತ್ತು ಜಲಮಲ ವಿಸರ್ಜನೆಯಿಂದ ಉಂಟಾಗುವ ಹಾನಿಯನ್ನೂ ತಪ್ಪಿಸಲು ಪೋಲೀಸು ಅಧಿಕಾರಿಗಳಿಗೆ ತಕ್ಕ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುವುದು-ಇವೇ ಮುಂತಾದ ನಿರ್ಣಯಗಳು ಅಂಗೀಕೃತವಾದುವು.

ಪ್ರಮುಖರೊಡನೆ ಭೇಟಿ

ಮೈಸೂರು ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀ ಡಿ. ಸುಬ್ರಮಣ್ಯರವರು ನಿನ್ನೆ ಬೆಳಗ್ಗೆ ಶ್ರೀ ಮುತ್ತಣ್ಣನವರನ್ನು ಭೇಟಿ ಮಾಡಿ ಮಾತನಾಡಿದರು.

ಸ್ಟಾಲಿನ್ನರೊಡನೆ ಪುನಃ ಭೇಟಿಯೇ ?

ಬರ್ಲಿನ್ ನಗರದ ಬಿಕ್ಕಟ್ಟನ್ನು ಬಗೆಹರಿಸುವ ಬಗ್ಗೆ ಸ್ಟಾಲಿನ್‌ರವರೊಡನೆ ಪಶ್ಚಿಮ ರಾಷ್ಟ್ರಗಳ ರಾಯಭಾರಿಗಳಿಗೆ ಪುನಃ ಭೇಟಿ ನಡೆಯುವ ಸಂಭವವಿದೆಯೆಂದು ಹೇಳಲಾಗಿದೆ. ಭೇಟಿ ನಡೆಯುವ ಸ್ಥಳ ಮತ್ತು ಕಾಲವನ್ನು ರಹಸ್ಯವಾಗಿಡಲು ಸರ್ವಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಸಿ. ಪೆರುಮಾಳ್ ಚೆಟ್ಟರವರ ನಿಧನದ ಬಗ್ಗೆ ಸಂತಾಪ

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೬

ನೆನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ಧರ್ಮಾತ್ಮರಾದ ಸಿ. ಪೆರುಮಾಳ್ ಚೆಟ್ಟಿಯವರ ಅಕಾಲ ಮರಣಕ್ಕಾಗಿ ಸಂತಾಪ ಸೂಚಕ ನಿರ್ಣಯವು ಅಂಗೀಕೃತವಾಗಿ ಅವರ ಗೌರವಾರ್ಥವಾಗಿ ಸಭೆಯನ್ನು ಮುಂದಕ್ಕೆ ಹಾಕಲಾಯಿತು

ಶ್ರೀಗಳಾದ ಬಿ ನಂಜರಾಜ ಅರಸ್, ಎ ವೆಂಕಟೇಶಯ್ಯ, ಎಫ್ ಸಿ ದೇವರಾಜೇ ಅರಸ್, ಇ ಪಿ ನಂಜಪ್ಪ, ಅಗರಂ ರಂಗಯ್ಯ ಸಿ. ಗೋಪಾಲಕೃಷ್ಣಶೆಟ್ಟಿ, ಶಂಕರಯ್ಯ ಮತ್ತು ಕವೀಶ್ವರರಾದ ಜನಾಬ್ ಸ್ವರ್ದರ್ ಹುಸೇನರು, ಅಧ್ಯಕ್ಷರು ಇಂತಹ ಅನಾಥ ರಕ್ಷಕರಾದ ಧನಿಕರಾದವರನ್ನು ಮಾಡಿ ... ಸಲ್ಲಿಸಿದ ಸೇವೆಯನ್ನು ಸ್ಮರಿಸಿ ... ಸ್ವರ್ಗೀಯ ಪೆರುಮಾಳ್ ಚೆಟ್ಟಿಯವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿ ಅವರ ಬಂಧುವರ್ಗದವರಿಗೆ ಹೃತ್ಪೂರ್ವಕವಾದ ಸಹಾನುಭೂತಿಯನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ವಯಸ್ಕರ ಚಲನಚಿತ್ರ ಪ್ರದರ್ಶನ

... ಹಳ್ಳಿಗಳ ಕಡೆಗಳಲ್ಲಿ ... ವಯಸ್ಕರ ... ವ್ಯಾಸಂಗ ... ಶ್ರೀ ... ಗ್ರಾಮಗಳ ಸ್ಥಿತಿಗತಿ ... ಜಿಲ್ಲೆ ... ತೀರ್ಮಾನಿಸಿದೆ

ಉಚಿತ ವಾಚನಾಲಯ

ರಾಜಧಾನಿಯ ... ಸಂಘದ ... ವಾಚನಾಲಯವನ್ನು ತೆರೆ... ಇದರಲ್ಲಿ ... ಬೇಕೆಂದೂ ... ತಿಳಿಸಿದ್ದಾರೆ

ಚೀಣಾ ಕಮ್ಯೂನಿಸ್ಟರಿಂದ ೧೪ ಲಕ್ಷ ಚದರ ಮೈಲಿಯ ಆಕ್ರಮಣ

ಚೀಣಾದಲ್ಲಿ ಕಳೆದ ೩ ವರ್ಷಗಳಿಂದ ಲೂ ನಡೆಯುತ್ತಿರುವ ಯುದ್ಧದಲ್ಲಿ ೨೬,೪೧,೦೦೦ ಸರ್ಕಾರಿ ಸೈನಿಕರು ಮರಣ ಹೊಂದಿರುವರೆಂದೂ, ೧೪ ಲಕ್ಷ ಚದರ ಮೈಲಿ ಪ್ರದೇಶಗಳನ್ನು ಕಮ್ಯೂನಿಸ್ಟ್ ಸೈನ್ಯವು ಆಕ್ರಮಿಸಿರುವುದೆಂದೂ ಹೇಳಲಾಗಿದೆ ಕಮ್ಯೂನಿಸ್ಟ್ ಸೈನ್ಯವು ... ಲಕ್ಷವನ್ನು ... ಇದೆ

ಗಾಂಧಿ ಸೇವಾಸಂಘ

ರಾಜಧಾನಿಯ ಗಾಂಧಿ ಸೇವಾಸಂಘದ ಆಶ್ರಯದಲ್ಲಿ ಕಳೆದ 1946ನೇ ವರ್ಷದ ಗಾಂಧಿ ಜಯಂತಿ ... ಸೂತ್ರಯಜ್ಞದಲ್ಲಿ ಬದಲಾಗಿ ... ಗಳನ್ನು ... ಉಚಿತವಾಗಿ ... ವರೆಲ್ಲರೂ ... ಬಟ್ಟೆಗಳನ್ನು ಪಡೆಯ ... ಗಳು ತಿಳಿಸಿದ್ದಾರೆ

ನೂಲುವ ಕೇಂದ್ರಗಳ ಪ್ರಾರಂಭ

ರಾಜಧಾನಿಯ ಲೋಕಸೇವಾಸಂಘದ ಆಶ್ರಯದಲ್ಲಿ ನೂಲುವ ಕೇಂದ್ರಗಳನ್ನು ಪ್ರಾರಂಭಿಸಲು ನಿರ್ಧರಿಸಿದ್ದಾರೆ ಹರಿಜನ ಕೇರಿಗಳಲ್ಲಿ ನಡೆಸಲಿರುವ ಈ ಕೇಂದ್ರಗಳಿಗೆ ಮಹಾಜನಗಳು ಚರಕಗಳನ್ನು ದಾನವಾಗಿ ಕೊಡಬೇಕೆಂದೂ ಹತ್ತಿಗಳನ್ನು ಜೀವನ ಪುಸ್ತಕಾಲಯ, ಖಾದಿ ಪರಸ್ಪರ ಸಹಾಯ ಸಂಘ ಅಥವಾ ಸಾಹಿತ್ಯ ಕಛೇರಿಗಳಲ್ಲಿ ಕೊಡಬಹುದೆಂದೂ ಅದರ ಕಾರ್ಯದರ್ಶಿಗಳು ತಿಳಿಸಿದ್ದಾರೆ

ರಂಜಾನ್ ಹಬ್ಬದ ಪ್ರಯುಕ್ತ

ಪ್ರತಿ ದಿನ ಮೂರು ಆಟಗಳು

ಇದೇ 6-8-48ನೇ ಶುಕ್ರವಾರದಿಂದ

ಸಿಲ್ವರ್ ಫಿಲಂಸ್ ರವರ

ದೇವರ್

ಪಾತ್ರ: 'ಶಾಕಿರಾ', ಕಮಲ್, ಜೋಷಿ, ಖುರ್ಷಿದ್ (ಜೂನಿಯರ್) ಮುಂತಾದವರು

... ಭರದಿಂದ ನಡೆಯುತ್ತಿದೆ—

ಕಲ್ಕತ್ತ ... ವಾರ	ನಾಗಪುರ ೧೪ನೇ ವಾರ
ಪೂನಾ ... ,, ,,	ಜಬ್ಬಲ್ಪುರ ೧೩ ,, ,,
ಬರೋಡ ೧೫ ,, ,,	ಇಂದೂರ್ ೧೨ ,, ,,

ಈಗ ಮೈಸೂರು ಒಲಿಂಪಿಯಾ ಟಾಕೀಸಿನಲ್ಲಿ

:: ಪ್ರಭಾ ::

6—8—48 ರಿಂದ

ಪ್ರತಿ ದಿನ 3 ಆಟಗಳು

... ಟಾಕೀಸಿನವರ ... ಚಿತ್ರ

ಮಜ್‌ಬೂರ್

[ಹಿಂದಿ]

★ ಮುನವರ್ ಸುಲ್ತಾನ್

★ ಶ್ಯಾಮ್ ★ ಇಂದು

(ರಾಂಪ್ರ ... ಟಿಕೆಟ್ ... ರಿಯಾಯಿತಿ ... ಗಳನ್ನು ... ಮಾಡಿರುತ್ತದೆ)

ಶ್ರೀ ಗಣೇಶಾ ಟಾಕೀಸ್

ರಂಜಾನ್ ಸ್ಪೆಷಲ್

7-8-48ನೇ ಶನಿವಾರದಿಂದ: ಪ್ರತಿ ದಿನ ೩ ಆಟಗಳು

ರಣಜಿತ್ ರವರ

ಫೂಲ್ವಾರಿ

ಪಾತ್ರ:- ಮೋತಿಲಾಲ್ ... ಖುರ್ಷಿದ್ (ಹಿಂದಿ)

ಮೈಸೂರಿನಲ್ಲಿ ಇದೇ ಪ್ರಥಮ ಪ್ರದರ್ಶನ

ವಾಹಿನಿಯವರ ' ... ಸೀಮ ' ಬರುತ್ತದೆ.

ಶ್ರೀ ... ಟಾಕೀಸ್

... 48 ರಿಂದ

... 2 ನೇ ವಾರ

ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

(ಇಂಗ್ಲೀಷ್ ಚಿತ್ರ)

Edited printed and published by A. R. Nagarajan at the Sadhvi Press D. Subbaiah Road Mysore

೬೮೫ ವರ್ಷದ ಮನುಷ್ಯ ಮೃಗ ಪಕ್ಷಿಗಳೊಡನೆ ಸಂಭಾಷಣೆ

೬೮೫ ವರ್ಷದವನೆಂದು ಹೇಳಲಾಗಿರುವ ಶ್ರೀಧರ ನಂಬೂದ್ರಿ ಎಂಬ ಸಿದ್ಧಿಯೋಗಿಗೆ ಮೃಗಪಕ್ಷಿ ಮತ್ತು ಕ್ರಿಮಿ ಕೀಟಗಳ ಸಂಭಾಷಣೆಯು ಗೊತ್ತಾಗುವುದೆಂದೂ ಅವುಗಳೊಡನೆ ತಾನು ಮಾತನಾಡಬಲ್ಲನೆಂದೂ ಆತನು ತಿಳಿಸಿರುತ್ತಾನೆ ತನಗೆ ಪರಕಾಯ ಪ್ರವೇಶ ಶಕ್ತಿ ಇರುವುದರಿಂದಲೇ ಇಷ್ಟು ದೀರ್ಘಕಾಲ ಬದುಕಲು ಸಾಧ್ಯವಾಗಿದೆಯೆಂದೂ ಪ್ರಸ್ತುತ ತನ್ನ ಈಗಿನ ದೇಹಕ್ಕೆ ೧೪ನೇ ವಾಸಸ್ಥಾನವಾಗಿದೆಯೆಂದೂ ಮೊದಲು ತಾನ ಒಬ್ಬ ವೈದ್ಯನ ದೇಹದಲ್ಲಿದ್ದು ಬಳಿಕ ಹೀಗೆ ನಾನಾ ದೇಹಗಳಲ್ಲಿ ತನ್ನ ಆತ್ಮ ಇದ್ದ ಒಟ್ಟು ಕಾಲವನ್ನು ಪರಿಗಣಿಸಿದರೆ ತನಗೆ ೬೮೫ ವರ್ಷಗಳಾಗುವುದೆಂದೂ ಆತನು ತಿಳಿಸಿರುತ್ತಾನೆ

ಎ.ಎಂ.ಸಿ.ಸಿ. ಚುನಾವಣೆ

ಚನ್ನರಾಯಪಟ್ಟಣ ೬

ಚನ್ನರಾಯಪಟ್ಟಣ ತಾಲ್ಲೂಕಿನಿಂದ ಮೈಸೂರು ಕಾಂಗ್ರೆಸ್ ಸಮಿತಿಗೆ ಶ್ರೀ ಸಂಜೀವಶೆಟ್ಟಿ, ನಲ್ಲೂರು ಸಂಜೀವಯ್ಯ ಬಿ ಎಸ್ ಬೋರಯ್ಯ ಮತ್ತು ಎಂ ನರಸಿಂಹೇಗೌಡರು ಗಳು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿತರಾಗಿದ್ದಾರೆ

ಸಂತಾಪ ಸೂಚಕಸಭೆ

ಮೈಸೂರು ಜಿಲ್ಲಾ ... ಯಿಂದ ಸಂಘದ ಸಭೆಯು ಶ್ರೀ ಜಿ ಜೋಯಿಸರವರ ಅಧ್ಯಕ್ಷತೆಯಲ್ಲಿ ... ದಿನ ನಡೆದು, ... ಧನಿಕರಾದ ... ಅಕಾಲ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ... ಲಾಯಿತು

ಅಪೇರಾ ಟಾಕೀಸ್

7 8 48 ರಿಂದ

ಪ್ರತಿ ದಿನ ... ಆಟಗಳು

ಮ ... ಸ್

(ಹಿಂದಿ)

— ... —

ಸುರೇಂದ್ರ, ಮೆಹತಾಬ್, ... ಮುಂತಾದವರು

MORNING SHOWS From 6-8-48

Return of Fighting Hero

4 ದಿನಗಳು ಮಾತ್ರ

... ದಿನ

ಭಾನುವಾರ ... ರಿಂದ

— ... —

ಬೊಂಬಾಯಿ

ಜಿ. ಎ. ಸರ್ಕಸ್

ಕಡೇ ನಾಲ್ಕು ದಿನಗಳ ಪ್ರದರ್ಶನ

ಪೂರ್ಣ ಬದಲಾವಣೆ

ಶನಿವಾರ ಭಾನುವಾರ ೩ ಆಟಗಳು

ಮಿಕ್ಕ ದಿನಗಳಲ್ಲಿ ೨ ಆಟಗಳು

[ಎಂ. ಸುಬ್ಬರಾಯಯ್ಯ ಅಂಡ್ ಕೋ

ರೋ।ಕಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೭-೮-೪೮ [ಸಂಚಿಕೆ ೧೮

ಹೈದರಾಬಾದ್ ನಗರಕ್ಕೆ ಭಾರತಸೈನ್ಯನುಗ್ಗುವುದು

ರಕ್ಷಿತ ಪ್ರದೇಶಗಳು

[ಸ್ವ. ಸು. ಪ್ರೋ.] ಬೆಂಗಳೂರು ೭

ಸರ್ಕಾರದವರು ವಿಶೇಷ ಪ್ರಕಟಣೆಯೊಂದನ್ನು ಹೊರಡಿಸಿ ಹಲವು ಮುಖ್ಯವಾದ ವಿದ್ಯುಚ್ಛಕ್ತಿ ಕೇಂದ್ರಗಳು ಮತ್ತು ಪ್ರಜೆಗಳು ಸೇರುವೆಡೆಗಳೇ ಮುಂತಾದ ೩೩ ಸ್ಥಳಗಳನ್ನು ರಕ್ಷಿತ ಪ್ರದೇಶಗಳೆಂದು ಸಾರಿರುತ್ತಾರೆ. ಆ ಪ್ರದೇಶಗಳಿಗೆ ಅನುಮತಿ ಇಲ್ಲದೆ ಯಾರೂ ಪ್ರವೇಶಿಸಬಾರದೆಂದು ತಿಳಿಸಲಾಗಿದೆ.

○ ಮೈಸೂರಿನ ಮಂತ್ರಿಗಳಾದ ಶ್ರೀ ಹಿಂಗಳೆ ವೆಂಕಟರಾಮಯ್ಯನವರು ಬೆಂಗಳೂರಿಗೆ ಹಿಂತಿರುಗಿದ್ದಾರೆ.

ಹೈದರಾಬಾದಿನ ಬಗ್ಗೆ ಮೌಂಟ್‌ಬ್ಯಾಟನ್ನರ ಎಚ್ಚರಿಕೆ

ನಿಜಾಮರಿಗೆ ಬ್ರಿಟಿಷ್ ಸರ್ಕಾರವು ಬೆಂಬಲ ನೀಡುವುದಾದರೆ ಮತ್ತು ಅದರ ಒಳಸಂಚಿನಲ್ಲಿ ಕೈ ಹಾಕುವುದಾದರೆ ಭಾರತವು ಬ್ರಿಟಿಷ್ ಕಾಮನ್ ವೆಲ್ತಿನಲ್ಲಿ ಇರುವುದು ಅಸಂಭವವೆಂದು ಲಾರ್ಡ್ ಮೌಂಟ್ ಬ್ಯಾಟನ್ನರು ಬ್ರಿಟಿಷ್ ಪ್ರಧಾನಿ ಅಟ್ಲಿಯವರಿಗೆ ಎಚ್ಚರಿಕೆ ಕೊಟ್ಟಿರುವರೆಂದು ವರದಿಯಾಗಿದೆ.

ರಜಾಕರರಿಂದ ರೈಲ್ವೆ ಸ್ಟೇಷನ್‌ಮಾಸ್ಟರ ಕೊಲೆ

ಬೊಂಬಾಯಿ ಮತ್ತು ಮದರಾಸ್ ಮಾರ್ಗದಲ್ಲಿರುವ ಆ ... ಸ್ಟೇಷನ್ ಮಾಸ್ಟರನ್ನು ರಜಾಕರರು ಕೊಲೆಮಾಡಿರುವರೆಂದು ಹೇಳಲಾಗಿದೆ. ಬೊಂಬಾಯಿ ಮದರಾಸ್ ಎಕ್ಸ್‌ಪ್ರೆಸ್ ರೈಲನ್ನು ಆ ... ನಿಲ್ದಾಣದಲ್ಲಿ ನಿಲ್ಲಿಸಲು ಸಶಸ್ತ್ರ ರಜಾಕಾರರು ಸ್ಟೇಷನ್‌ಮಾಸ್ಟರನ್ನು ಒತ್ತಾಯಪಡಿಸಿದರೆಂದೂ ಅವರು ನಿರಾಕರಿಸುತ್ತಾ ಕೆಂಪು ದೀಪವನ್ನು ಹಿಡಿದುಕೊಂಡು ನಿಂತದ್ದು ತನ್ನ ಕರ್ತವ್ಯವೆಂದು ಹೇಳಿ ರೈಲನ್ನು ನಿಲ್ಲಿಸಲಿಲ್ಲವೆಂದೂ ವರದಿಯಾಗಿದೆ.

ಹೈದರಾಬಾದಿಗೆ ನೀಗ್ರೋಗಳ ಬೆಂಬಲ

ಲಂಡನ್ನಿನ ಕೈಡ್ ಪಾರ್ಕಿನಲ್ಲಿ ಸೇರಿದ ಭಾರತ ... ದ ಹೈದರಾಬಾದ್ ದಿನಾಚರಣೆಯ ಸಭೆಯಲ್ಲಿ ಕೆಲವು ನೀಗ್ರೋಗಳು ಹೈದರಾಬಾದಿನ ಮೇಲೆ ಭಾರತವು ಹಾಕಿರುವ ದಿಗ್ಬಂಧನವನ್ನು ಪ್ರತಿಭಟಿಸಿ ಭಾಷಣ ಮಾಡಿದರೆಂದು ವರದಿಯಾಗಿದೆ.

ಹೈದರಾಬಾದ್ ನಗರಕ್ಕೆ ಭಾರತ ಸೈನ್ಯ

ರಜಾಕರರ ಹಾವಳಿ ಮತ್ತು ದರೋಡೆಯು ಹೆಚ್ಚಿಗೆ ಇದ್ದ ಹೈದರಾಬಾದ್ ನಗರಕ್ಕೆ ಸೇರಿರುವುದು ಭಾರತ ಸರ್ಕಾರಕ್ಕೆ ತುಂಬ ಆತಂಕವನ್ನು ಉಂಟುಮಾಡಿದೆಯೆಂದೂ, ಅದನ್ನು ಅಡಗಿಸಲು ಭಾರತ ಸರ್ಕಾರದವರು ನಿಜಾಮರ ಪ್ರಾರ್ಥನೆ ಮತ್ತು ಅನುಮತಿಯಿಂದಲಾಗಲೀ ಅಥವಾ ಅದು ಇಲ್ಲದೆಯೇ ಆಗಲೀ ಅಲ್ಲಿಗೆ ಸೈನ್ಯವನ್ನು ಕಳುಹಿಸಲಿರುವರೆಂದು ವರದಿಯಾಗಿದೆ.

ರಜಾಕರರ ಇತ್ತೀಚಿನ ಹಿಂಸಾಕೃತ್ಯದ ಪರಿಣಾಮದ ಹಿನ್ನೆಲೆ ಕುರಿತು ... ಉಂಟಾಗಿದೆಯೆಂದೂ, ಈಗಾಗಲೇ ಅನೇಕ ಮುಸ್ಲಿಮರನ್ನು ರಜಾಕರರು ಕೊಲೆಮಾಡಿದ್ದಾರೆಂದೂ ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

ಮೈಸೂರು ಕಾಂಗ್ರೆಸ್ಸಿನ ಜಂಟಿ ಕಾರ್ಯದರ್ಶಿಗಳಾದ ಶ್ರೀ ಕೆ ಆರ್ ಮಾಧವರಾಯರು ಒಂದು ಪ್ರಕಟಣೆಯನ್ನು ಹೊರಡಿಸಿ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಗಳನ್ನು ವಿವರಿಸಿರುವರು. ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಮೈಸೂರು ಸರ್ಕಾರದವರೂ ಕಾರ್ಯಕ್ರಮವನ್ನು ಏರ್ಪಾಡು ಮಾಡುವರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸಮಿತಿ ಮತ್ತು ಕಾಂಗ್ರೆಸ್ಸಿನವರು ಸರ್ಕಾರದ ಅಧಿಕಾರಿಗಳೊಡನೆ ಸಹಕರಿಸಿ ದಿನಾಚರಣೆಯನ್ನು ಯಶಸ್ವಿಗೊಳಿಸಬೇಕು. ಮುಖ್ಯವಾಗಿ ಸ್ವತಂತ್ರ ಭಾರತ ನಿರ್ಮಾಪಕರಾದ ಪೂಜ್ಯ ಮಹಾತ್ಮರ ಸ್ಮಾರಕಕ್ಕಾಗಿ ಏರ್ಪಡಿಸಿರುವ ನಿಧಿ ಸಂಗ್ರಹವನ್ನು ಪ್ರತಿಯೊಂದು ಕಾಂಗ್ರೆಸ್ ಸಮಿತಿಯೂ ಮತ್ತು ಕಾಂಗ್ರೆಸ್ಸಿಗರೂ ಮಾಡಬೇಕಾಗಿರುತ್ತದೆ ಎಂದು ಅವರು ತಿಳಿಸಿರುತ್ತಾರೆ.

ಕಾಲೆಟ್ಟಿನ ರಾಜಕುಮಾರರ ವಿಚಾರಣೆ

ಪಾಕೀಸ್ತಾನದ ಮೇಲೆ ಯುದ್ಧ ಹೂಡಿದರೆಂಬ ಆಪಾದನೆಯ ಮೇಲೆ ಕಾಲೆಟ್ಟಿನ ನವಾಬರ ಸಹೋದರರಾದ ಕರೀಂ ಖಾನರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ. ಕ್ವೆಟ್ಟಾ ಜೈಲಿನಲ್ಲಿ ಗೋಪ್ಯವಾಗಿ ವಿಚಾರಣೆ ನಡೆಯುತ್ತಿದೆ.

ಕಾಶ್ಮೀರ ಕದನದಲ್ಲಿ ಪಾಕಿಸ್ತಾನದ ಅರ್ಧ ಸೈನ್ಯ

ಕಾಶ್ಮೀರದ ಕದನದಲ್ಲಿ ಪಾಕಿಸ್ತಾನದ ಅರ್ಧಭಾಗದ ಸೈನ್ಯವು ಭಾಗವಹಿಸಿದೆಯೆಂದೂ, ಯೂರೋಪಿನಿಂದ ಅಗಾಧವಾಗಿ ಶಸ್ತ್ರಗಳ ಸರಬರಾಜು ಆಗುತ್ತಿದೆಯೆಂದೂ ಕಾಶ್ಮೀರದ ಸೈನ್ಯಾಧಿಕಾರಿಗಳು ತಿಳಿಸಿರುತ್ತಾರೆ. ಪಾಕಿಸ್ತಾನ ಸೈನ್ಯವು ಆಧುನಿಕ ಶಸ್ತ್ರಗಳನ್ನು ಕದನದಲ್ಲಿ ಉಪಯೋಗಿಸುತ್ತಿದೆಯೆಂದೂ ಅವರು ಹೇಳಿರುತ್ತಾರೆ.

ಪಾಕೀಸ್ತಾನದಲ್ಲಿ ರಾಮಕೃಷ್ಣಾಶ್ರಮದ ಬಂದು

ಕರಾಚಿಯಲ್ಲಿದ್ದ ರಾಮಕೃಷ್ಣಾಶ್ರಮದ ಶಾಖೆಯನ್ನು ಮುಚ್ಚಿ, ಅದರ ಭವನವನ್ನು ಮಾರಲಾಗಿದೆಯೆಂದೂ, ಅಲ್ಲಿದ್ದ ಸ್ವಾಮಿ ರಂಗನಾಥಾನಂದರವರು ಬೊಂಬಾಯಿಗೆ ಹಿಂತಿರುಗಿದರೆಂದೂ ವರದಿಯಾಗಿದೆ.

ಸರ್ಕಾರದವರಿಂದಲೇ ಬಟ್ಟೆ ಸಂಗ್ರಹ

ಸ್ವ. ಸು. ಪ್ರೋ.] ಬೆಂಗಳೂರು, ೭

ಭಾರತ ಸರ್ಕಾರದಿಂದ ಬಟ್ಟೆಯನ್ನು ಪಡೆಯಲು ಅಡಿಷನಲ್ ಕೈಗಾರಿಕಾ ಡೈರೆಕ್ಟರಾದ ಜೆ.ಬಿ ಮಲ್ಲಾರಾಧ್ಯರು ನಾಳೆ ಬೊಂಬಾಯಿಗೆ ತೆರಳುವರು. ಇನ್ನು ಮುಂದೆ ಸರ್ಕಾರದವರೇ ಬಟ್ಟೆ ಸಂಗ್ರಹ ವ್ಯವಸ್ಥೆಯನ್ನು ಮಾಡಿ, ಸಹಕಾರ ಸಂಘಗಳು ಮತ್ತು ಕೆಲವು ಅಂಗಡಿಗಳ ಮೂಲಕ ಅವುಗಳನ್ನು ಮಾರಾಟ ಮಾಡುವರೆಂದೂ ತಿಳಿದು ಬಂದಿದೆ.

* ಬೆಂಗಳೂರು ಪೌರಸಭಾಧ್ಯಕ್ಷರಾದ ಶ್ರೀ ಶ್ಯಾಮರಾಜ ಅಯ್ಯಂಗಾರ್ಯರು ದೆಹಲಿಯಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಸಮ್ಮೇಳನದಲ್ಲಿ ಭಾಗವಹಿಸಲು ನಿನ್ನೆ ದಿನ ಅಲ್ಲಿಗೆ ಪ್ರಯಾಣ ಬೆಳೆಸಿದರು.

ಹೈದರಾಬಾದ್ ಗ್ರಾಮಗಳು ಭಾರತ ಸೈನ್ಯದ ವಶ

ಹೈದರಾಬಾದಿನ ಗಡಿ ಎಂಬಲ್ಲಿಂದ ಆಚೆ ೧೦ ಎಂಟು ಗ್ರಾಮಕ್ಕೆ ಭಾರತ ಯೂನಿಯನ್ನಿನ ಪ್ರಜೆಗಳು ಬೊಂಬಾಯಿ ಕೆ ಏಕರ ಕ್ಷಣೆಯೊಡನೆ ಹೋಗುತ್ತಿದ್ದಾಗ ರಜಾಕರು ಅವರ ಮೇಲೆ ಗುಂಡು ಹಾರಿಸಿದುದರಿಂದ ಭಾರತ ಸೈನಿಕರು ಅವರನ್ನು ಪ್ರತಿಭಟಿಸಿ ಹಿಂದಕ್ಕೆ ಅಟ್ಟಿ ಆ ಗ್ರಾಮಗಳನ್ನೆಲ್ಲ ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ.

ನಿಜಾಮರ ಏಜೆಂಟ್ ಜನರಲ್ಲರ ವಜಾ

ದೆಹಲಿಯಲ್ಲಿ ನಿಜಾಮರ ಏಜೆಂಟ್ ಜನರಲ್ಲರಾದ ನವಾಬ್ ಯಾರ್ ಜಂಗ್‌ರವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆಯೆಂದೂ, ಅವರ ಸ್ಥಾನದಲ್ಲಿ ಹೈದರಾಬಾದಿನ ಶ್ರೇಷ್ಠ ಕಾರ್ಯದರ್ಶಿಗಳಾದ ಜನಾಬ ಎಂ ಎ ಎಚ್ ಅಬ್ಬಯವರನ್ನು ನೇಮಿಸಲಾಗಿದೆಯೆಂದೂ ಅಲ್ಲಿನ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

ಕ್ರಾಂತಿ ದಿನಾಚರಣೆ

ರಾಜಧಾನಿಯ ದೇಶೀಯ ವಿದ್ಯಾಶಾಲಾ ಮೈದಾನದಲ್ಲಿ ಇದೇ 9ನೇ ತಾ॥ ಬೆಳಗ್ಗೆ 6ಗಂಟೆಗೆ ರಾಷ್ಟ್ರಸೇವಾದಳದವರು ಕ್ರಾಂತಿ ದಿನಾಚರಣೆಯನ್ನು ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸುವರು.

ಕೃಷ್ಣರಾಜನಗರದಲ್ಲಿ ಆರೋಗ್ಯ ಕೇಂದ್ರ

ಮೈಸೂರು, ೭

ಕೃಷ್ಣರಾಜನಗರದ ತಾಲ್ಲೂಕಿನ ೧೫೭ ಹಳ್ಳಿಗಳಲ್ಲಿ ಮಲೇರಿಯಾ ನಿವಾರಣೆ ಮತ್ತು ಆರ್ಥಿಕ ಪುನರುಜ್ಜೀವನಕ್ಕಾಗಿ ಅಲ್ಲಿ ಒಂದು ಆರೋಗ್ಯಕೇಂದ್ರವನ್ನು ೧,೧೧,೦೪೩ ರೂ ಖರ್ಚಿನಿಂದ ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ. ಕೃಷ್ಣರಾಜಪೇಟೆ ತಾಲ್ಲೂಕಿನ ೭ ಗ್ರಾಮಗಳನ್ನು ಸಹ ಇದರಲ್ಲಿ ಸೇರಿಸಲಾಗುವುದು. ಹಂಪಾಪುರ, ಎ ಲೆರ್, ಹನಸೋಗೆ, ತಿಪ್ಪೂರು, ಸಾಲಿಗ್ರಾಮ, ಡೆಪ್ಪಾಳು ಮತ್ತು ಕೃಷ್ಣರಾಜನಗರಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈಗ ಅಲ್ಲಿರುವ ಆಸ್ಪತ್ರೆಗಳೂ ಇದರಲ್ಲಿ ಸೇರುವುವು.

ಹೈದರಾಬಾದಿನಲ್ಲಿ ಎ. ಆರ್. ಪಿ

ಹೈದರಾಬಾದಿನಲ್ಲಿ ವಿಮಾನ ಧಾಳಿ ರಕ್ಷಣಾ ವ್ಯವಸ್ಥೆಗೆ ಸ್ವಯಂ ಸೇವಕರು ಬೇಕಾಗಿದ್ದಾರೆಂದೂ ಅವರುಗಳಿಗೆ ತಕ್ಕ ಶಿಕ್ಷಣವನ್ನು ಕೊಡಲಾಗುವುದೆಂದೂ ಅಲ್ಲಿನ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ. ಪ್ರತಿಯೊಂದು ಮೊಹಲ್ಲೆಗೂ ೩೫ ವಾರ್ಡನರುಗಳನ್ನು ನೇಮಿಸಲಾಗುವುದೆಂದೂ ಮತ್ತು ೪ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆಯೆಂದೂ ತಿಳಿಸಲಾಗಿದೆ.

ನಿಜಾಮರನ್ನು ಪದಚ್ಯುತಿ ಮಾಡಿದರೂ ತಪ್ಪಿಲ್ಲ

ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯ ಅಭಿಪ್ರಾಯ

ಹೈದರಾಬಾದಿನಲ್ಲಿ ಈಗ ನಡೆಸುತ್ತಿರುವ ದಾಂಧಲೆ ಬ್ರಿಟಿಷರ ಕಾಲದಲ್ಲಿ ನಡೆದಿದ್ದರೆ ಆಗ ಅವರು ನಿಜಾಮರನ್ನು ಪದಚ್ಯುತಿ ಮಾಡಿ, ಆ ಸ್ಥಾನವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುತ್ತಿದ್ದರು. ಈಗ ಅದೇ ರೀತಿ ಭಾರತ ಸರ್ಕಾರವು ನಿಜಾಮರನ್ನು ರಾಜಭ್ರಷ್ಟರನ್ನಾಗಿ ಮಾಡಿದರೆಯಾದರೂ ಆಕ್ಷೇಪಣೆ ಮಾಡುವ ಹಾಗಿಲ್ಲ ಎಂದು ಲಂಡನ್ನಿನ ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯ ಅಭಿಪ್ರಾಯಪಟ್ಟಿದೆ.

ಗಾಂಧಿ ನಿಧಿಗೆ ಬಿರ್ಲಾ ಸಂಸ್ಥೆಯಿಂದ ೧೫ ಲಕ್ಷ ರೂ

ಮಹಾತ್ಮರ ಸ್ಮಾರಕ ನಿಧಿಗೆ ಕಲ್ಕತ್ತದ ಬಿರ್ಲಾ ಸಂಸ್ಥೆಯವರು ೧೫ ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ.

ಹೈದರಾಬಾದಿನ ೮೩ ಗ್ರಾಮಗಳ ಸ್ವಾತಂತ್ರ್ಯ

ಔರಂಗಾಬಾದ್ ಜಿಲ್ಲೆಯ ೮೩ ಗ್ರಾಮಗಳು ಸ್ವಾತಂತ್ರ್ಯವನ್ನು ಘೋಷಿಸಿ ಅಲ್ಲಿ ಪಂಚಾಯತಿ ಸರ್ಕಾರವನ್ನು ರಚಿಸಲಾಗಿದೆ.

ಹೈದರಾಬಾದಿನಿಂದ ಬ್ರಿಟಿಷರ ರವಾನೆ

ಅವಶ್ಯಕತೆ ಒದಗಿದರೆ ಹೈದರಾಬಾದಿನ ಲ್ಲಿರುವ ಹಲ ಕೆಲವು ಬ್ರಿಟಿಷ್ ಪ್ರಜೆಗಳನ್ನು ಅಲ್ಲಿಂದ ಸುರಕ್ಷಿತವಾಗಿ ಹೊರಕ್ಕೆ ಸಾಗಿಸುವ ವ್ಯವಸ್ಥೆಯನ್ನು ಮಾಡಲು ದೆಹಲಿಯಲ್ಲಿರುವ ಬ್ರಿಟಿಷ್ ಹೈಕಮೀಷನರು ಪ್ರತಿನಿಧಿಯೊಬ್ಬರನ್ನು ಕಳುಹಿಸಿ ಕೊಟ್ಟಿರುವರೆಂದು ಹೇಳಲಾಗಿದೆ.

ಹೈದರಾಬಾದ್ ದಿನಾಚರಣೆ

ನಾಳೆಸಂಜೆ ಬಹಿರಂಗ ಸಭೆ

ಮೈಸೂರು ೭

ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಹೈದರಾಬಾದ್ ದಿನಾಚರಣೆ ಸಂಬಂಧವಾಗಿ ಬಹಿರಂಗ ಸಭೆಯು ನಡೆಯುವುದೆಂದೂ ಹೈದರಾಬಾದಿನಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳುವಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಮಹಾಜನಗಳೆಲ್ಲರೂ ಸಭೆಗೆ ದಯಮಾಡಿಸಬೇಕೆಂದೂ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ ನರಸಿಂಹಯ್ಯಂಗಾರ್ಯರು ಕೋರಿರುತ್ತಾರೆ.

ವರ್ಧಂತ್ಯುತ್ಸವ

ರಾಜಧಾನಿಯಲ್ಲಿರುವ ಮಹಿಳಾಸದನದಲ್ಲಿ ಮೊನ್ನೆ ದಿನ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಶ್ರೀಮತಿ ವಿಶಾಲಾಕ್ಷಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಸುಬ್ಬಲಕ್ಷ್ಮಿಯವರಿಂದ ಪ್ರಾರ್ಥನೆ, ಶ್ರೀಮತಿ ಅಲುಮೇಲು, ಜಾನಕಿ ಮತ್ತು ಇವೇ ಮೊದಲಾದವರುಗಳಿಂದ ವೀಣಾ ವಾದನಗಳಾದ ನಂತರ, ಶ್ರೀಮತಿ ಎಂ. ಎಸ್. ಲಕ್ಷ್ಮಮ್ಮ ಮತ್ತು ಶ್ರೀ ವೆಂಕಟಸುಬ್ಬರಾಯರು ಭಾಷಣ ಮಾಡಿದರು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಉಪನ್ಯಾಸ

ವಾಣಿವಿಲಾಸ ಮೊಹಲ್ಲಾ ೪ನೇ ರಸ್ತೆ ಶ್ರೀರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಘಂಟೆಗೆ ಶ್ರೀ ಸೋಮನಾಥಾನಂದರವರು ಪುನರ್ ಜನ್ಮ ವಿಚಾರದ ಬಗ್ಗೆ ಭಾಷಣ ಮಾಡುವರು.

೬ ಕಾಲು ಮತ್ತು ೨ ತಲೆಯ ಎಮ್ಮೆ ಕರು

ಕಲಾಲಿಯ ಎಮ್ಮೆಯೊಂದು ಎರಡು ತಲೆ ಎರಡು ಮುಖ ೨ ಬಾಲ ೪ ಕಣ್ಣುಗಳು ಮತ್ತು ಆರು ಕಾಲುಗಳಿರುವ ಒಂದು ಕರು ಹಾಕಿತೆಂದೂ ಅದು ಜನ್ಮವೆತ್ತಿದ ಕೂಡಲೇ ಮರಣ ಹೊಂದಿತೆಂದೂ ಹೇಳಲಾಗಿದೆ.

ಸಂತಾಪ ಸೂಚಕ ಸಭೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ಶ್ರೀ ಸಿ. ಹೆಚ್. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು, ಧರ್ಮದರ್ಶಿಗಳಾದ ಸಿ. ಪೆರುಮಾಳ್ ಚೆಟ್ಟಿಯವರ ಅಕಾಲ ಮರಣಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಲಾಯಿತು.

ಶ್ರೀ ಗಾಯತ್ರೀ ಟಾಕೀಸ್

6-8-48 ರಿಂದ

ಯಶಸ್ವಿಯಾದ 2 ನೇ ವಾರ

ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

(ವರ್ಣರಂಜಿತ ಚಿತ್ರ)

ನಾಳೆ ಹರಾಜು

ಮೇಜು, ಡ್ರೆಸಿಂಗ್ ಟೇಬಲ್, ಬಟ್ಟೆಮೇಜು, ಕುರ್ಚಿ, ಹಳೇ ಸೋಫಾ, ಚಿಲ್ಲರೆಸಾಮಾನು.

ಸಿಟಿ ಆಕ್ಷನ್ ಸಿಂಗ್ ಕೋ,

ಮೈಸೂರು

ಉದಾರ ಧನ ಸಹಾಯ

ರಾಜಧಾನಿಯ ಕ್ಷತ್ರಿಯ ಸೋಷಿಯಲ್ ಸಂಘದ ಕಟ್ಟಡಕ್ಕೆ ಕೆಳಗೆ ಕಂಡವರು ಉದಾರವಾಗಿ ಧನ ಸಹಾಯ ಮಾಡಿರುತ್ತಾರೆಂದು ಅದರ ಅಧ್ಯಕ್ಷರಾದ ಶ್ರೀ ಯು. ಎಲ್. ರಾಮಚಂದ್ರರಾಯರು ತಿಳಿಸಿರುತ್ತಾರೆ—ಬೊಂಬಾಯಿ ಜವಳಿ ವರ್ತಕರಾದ ಶ್ರೀ ಶಂಕರೋಜಿರಾವ್ ಲಕ್ಷ್ಮಣರಾವ್ ಬ್ರದರ್ಸ್ 2500ರೂ, ಶ್ರೀಗಳಾದ ಎಸ್. ವಿ. ರಾಘವಚಾರಿ, ಶಾಮರಾವ್ ಮೇದರ್ಕರ್, ನಜರಿ ವೆಂಕಟರಾವ್ ಮತ್ತು ಹರಿರಾವ್ ಕ್ಷೀರಸಾಗರ್ ತಲಾ ೧೦೦ರೂ; ಶ್ರೀ ಘಾನಕ ಖಂಡೋಜಿರಾವ್ ೫೧ರೂ.

RAJKAMAL TALKIES

From 7—8—48

Daily 3 Shows

Song of - Scheherazade

(In Technicolour)

—:With:—

Yvonne Decorlo, Brian Donlevy

MORNING SHOWS

From 6—8—48

For 4 Days

Up in - Mabel's Room

—:With:—

Dennis O'Keefe, Marjori Reynold

ಹೈದರಾಬಾದಿಗೆ ಮುಸ್ಲಿಂ ರೈಲ್ವೆ ನೌಕರರ ಸಹಾಯ

ಪೂನಾ ಹತ್ತಿರವಿರುವ ಕರ್ಕಿ ರೈಲ್ವೆ ನಿಲ್ದಾಣದ ಮುಸ್ಲಿಂ ಗೂಡ್ಸ್ ನೌಕರರೊಬ್ಬನು ಜಬ್ಬಲ್‌ಪುರಕ್ಕೆ ಬುಕ್ ಮಾಡಿದ್ದ ೪ ಮುಲಟರಿ ಟ್ರಂಕುಗಳನ್ನೂ ಆಗೋಂಡ ವಾಗನ್ನುಗಳನ್ನು ಹೈದರಾಬಾದ್ ಸಂಸ್ಥಾನದ ವಾಡಿ ನಿಲ್ದಾಣಕ್ಕೆ ಕಳುಹಿಸಿದನೆಂದು ಅವನನ್ನು ದಸ್ತಗಿರಿ ಮಾಡಲಾಗಿದೆ.

ಅಪೇರಾ ಟಾಕೀಸ್

7—8—48 ರಿಂದ

ಪ್ರತಿ ದಿನ ಮೂರು ಆಟಗಳು

ವಿಶ್ವಾಸ್

(ಹಿಂದಿ)

—:ಪಾತ್ರ:—

ಸುರೇಂದ್ರ, ಮಹತಾಬ್, ದೀಕ್ಷಿತ್ ...

MORNING SHOWS

From 6-8-48

Return of Fighting Hero

---

2 ದಿನಗಳು ಮಾತ್ರ

ಭಾನುವಾರ ೮-೮-೪೮

— ಕಡೇ ದಿನ —

ಬೊಂಬಾಯಿ ಜಿ. ಎ. ಸರ್ಕಸ್

ಕಡೇ ನಾಲ್ಕು ದಿನಗಳ ಪ್ರದರ್ಶನ

ಪೂರ್ಣ ಬದಲಾವಣೆ

ಶನಿವಾರ ಭಾನುವಾರ ೩ ಆಟಗಳು

ಮಿಕ್ಕ ದಿನಗಳಲ್ಲಿ ೨ ಆಟಗಳು

[ಎಂ. ಸುಬ್ಬರಾಯರ್ಯ್ ಅಂಡ್ ಕೋ]

Edited printed and published by A. R. Nagarajan at the Sadhvi Press D. Subbaiah Road Mysore.

ವೆಟರಿನರಿ ವತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆ, ಬೆಂಗಳೂರು

ನೋಟಿಫಿಕೇಷನ್

ನಂ. A 1-91/15-46

ತಾರೀಖು 31st July 1948

ರೈತ ವರ್ತಕರುಗಳನ್ನು ಸಾಕುವವರು ಮತ್ತು ಜನರ ಉಪಯೋಗಕ್ಕಾಗಿ ಶ್ರೀಮನ್ಮಹಾರಾಜರವರ ಘನ ಸರ್ಕಾರದವರು ಬೆಂಗಳೂರು ಮತ್ತು ಮೈಸೂರು ನಗರಗಳ ಪಶುವೈದ್ಯಶಾಲೆಗಳಲ್ಲಿ ನವೀನರೀತಿಯಲ್ಲಿ, ಅಂದರೆ ಇಂಜಕ್ಷನ್ ಮೂಲಕವೇ ದನಗಳನ್ನು ಫಲಕ್ಕೆ ತರುವ ಕೇಂದ್ರಗಳನ್ನು (Artificial Insemination Centres) ಸ್ಥಾಪಿಸಿರುತ್ತಾರೆ.

ಇದಕ್ಕಾಗಿ ಈ ಇಲಾಖೆಯವರು ಅತ್ಯುತ್ತಮ ಜಾತಿಯ ಬೆಲೆಯುಳ್ಳ ... ಹೋರಿಗಳನ್ನೂ, ಮುರ್ರಾ ಕೋಣಗಳನ್ನೂ ಸಾಕಿ ಇವುಗಳ ಮೂಲಕ ಸಾರ್ವಜನಿಕರಿಗೆ ಈ ಕೆಳಗೆ ನಮೂದಿಸಿರುವ ಸೌಕರ್ಯಗಳನ್ನು ಕಲ್ಪಿಸಿರುತ್ತಾರೆ.

1) ಒಳ್ಳೆ ಜಾತಿಯ ಹಾಗು ಬಹಳ ಉಪಯುಕ್ತವೂ ಆದ ಲಕ್ಷಣವಾದ ಕರುಗಳು ಹುಟ್ಟುತ್ತವೆ.

2) ಇದರಲ್ಲಿ ಹೋರಿಯು ಸೌಕರ್ಯ ಸಿಕ್ಕುವುದೂ ... ಅವಶ್ಯಕತೆ ಇಲ್ಲ.

3) ಈಗಿನಂತೆ ಹೋರಿಯಿಂದಲೇ ಆಗುವ ಫಲೋತ್ಪತ್ತಿಗಿಂತ ಈ ನವೀನ ರೀತಿಯು ಬಹಳಷ್ಟು ಉತ್ತಮವಾದದ್ದೇ ಅಲ್ಲದೆ ಇದರಿಂದ ಹಸುಗಳಿಗಾಗಲೀ ಎಮ್ಮೆಗಳಿಗಾಗಲೀ ಯಾವ ವಿಧವಾದ ಅಪಾಯವೂ ಇಲ್ಲ.

4) ಹಸುವನ್ನು ಅಥವ ಎಮ್ಮೆಯನ್ನು ಬೆದೆಗೆ ಬಂದ 12-24 ಘಂಟೆಯೊಳಗೆ ಆಸ್ಪತ್ರೆಗೆ ಹಿಡಿದುಕೊಂಡು ಹೋದರೆ ಖಾತ್ರಿಯಾಗಿ ಫಲೋತ್ಪತ್ತಿ ಮಾಡಲಾಗುತ್ತೆ.

5) ಇದಕ್ಕಾಗಿ ಇಲಾಖೆಯವರಿಗಾಗಲೀ ಡಾಕ್ಟರುಗಳಿಗಾಗಲೀ ಯಾವ ಫೀಜನ್ನೂ ಕೊಡಬೇಕಾಗಿಲ್ಲ.

6) ರೈತರೂ ದನಗಳುಳ್ಳವರೂ ಇವರ ಉಪಯೋಗವನ್ನೂ ಸೌಲಭ್ಯವನ್ನೂ ಪಡೆಯಬೇಕೆಂದು ಕೋರಿದೆ.

ಪಿ. ಎಂ. ನಾರಾಯಣಸ್ವಾಮಿ ನಾಯ್ಡು,

ಸೂಪರಿಂಟೆಂಡೆಂಟರು

ರಂಜಾನ್ ಹಬ್ಬದ ಪ್ರಯುಕ್ತ

ಪ್ರತಿ ದಿನ ಮೂರು ಆಟಗಳು

ಇದೇ 6-8-48ನೇ ಶುಕ್ರವಾರದಿಂದ

ಸಿಲ್ವರ್ ಫಿಲಂಸ್ ರವರ

ದೇವರ್

ಪಾತ್ರ:-ಯಾಕೂಬ್, ಕುಮಾರ್, ಜೋತಿ, ಖುರ್ಷೀದ್ (ಜೂನಿಯರ್) ಮುಂತಾದವರು

—: ಈ ಕೆಳಗೆ ಕಂಡ ನಗರಗಳಲ್ಲಿ ಭರದಿಂದ ನಡೆಯುತ್ತಿದೆ :—

ಕಲ್ಕತ್ತ ೨೬ನೇ ವಾರ	ನಾಗಪುರ ೧೮ನೇ ವಾರ
ಪೂನಾ ೨೫ ,, ,,	ಜಬ್ಬಲ್ಪುರ ೧೩ ,, ,,
ಬರೋಡ ೨೫ ,, ,,	ಇಂದೂರ್ ೧೨ ,, ,,

ಈಗ ಮೈಸೂರು ಒಲಂಪಿಯಾ ಟಾಕೀಸಿನಲ್ಲಿ

:: ಪ್ರಭಾ ::

6—8—48 ರಿಂದ : ಪ್ರತಿ ದಿನ 3 ಆಟಗಳು

ಬಾಂಬೆ ಟಾಕೀಸಿನವರ ಸಾಹಸ ಚಿತ್ರ

ಮಜ್‌ಬೂರ್

[ಹಿಂದಿ]

• ಮುನವರ್ ಸುಲ್ತಾನ • ಶ್ಯಾಮ್ • ಇಂದು

(ಕಾಂಪ್ಲಿಮೆಂಟರಿ ಮತ್ತು ರಿಯಾಯಿತಿಗಳನ್ನು ವಜಾ ಮಾಡಿರುತ್ತೆ.)

ರಿ. ನಂ. 792 / WEEKLY EDITION ಬಿಡಿ ಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೮-೮-೪೮ [ಸಂಚಿಕೆ ೪

ಲಾಯಕಾಲಿಯವರ ರಾಜೀನಾಮೆ ವಾಪಸು

ಅಕ್ಕ ಮಹಾದೇವಿ ನಾಟಕ

ಮೈಸೂರು ೮

ಕೊಳ್ಳೇಗಾಲದ ಅಕ್ಕ ಮಹಾದೇವಿ ಕೃಪಾ ಪೋಷಿತ ನಾಟಕ ಸಂಘದವರು ಶಿವನ ಸಂಜೆ ಟೌನ್ ಹಾಲಿನಲ್ಲಿ ಜಿಲ್ಲಾಧಿಕಾರಿಗಳಾದ ಮಿ॥ ಜಾರ್ಜ್ ನವರ ಅಧ್ಯಕ್ಷತೆಯಲ್ಲಿ ಪುಣ್ಯ ಅಕ್ಕ ಮಹಾದೇವಿ ಎಂಬ ನಾಟಕವನ್ನು ಅತ್ಯಂತ ಮನೋಹರವಾಗಿ ಅಭಿನಯಿಸಿದರು. ನಾಟಕ ಶಾಲೆಯು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ನಿ ತ್ಯ ದಿವಸ ಬಂದ ಹಣವನ್ನು ಶಿಟಿ ವರ್ಗದ ಸಂಘದ ಬಾಲಕ ಬಾಲಕಿಯರಿಗೆ ವಿನಿಯೋಗಿಸಲಾಯಿತು. ಜಿಲ್ಲಾಧಿಕಾರಿಗಳು ಸಂಗೀತ ಶಾಸ್ತ್ರ ಕಲೆ ಕೆ ವಾಸುದೇವಾಚಾರ್ಯರು ಮುಖ್ಯ ಅತಿಥಿಯ, ೧೨ನೆ ಮತ್ತು ಸಂಘಾಪತಿಗಳನ್ನು ಪ್ರಶಂಸಿಸಿ ಅವರ ಶ್ರೇಯಸ್ಸನ್ನು ಕೋರಿದರು.

ಅತೀತ ಮಹಿಳೆಯರ ಕೋರಿಕೆ ಮೇರೆಗೆ ಈ ದಿವಸವೂ ರಾತ್ರಿ ೧೦ ಗಂಟೆಗೆ ನೋಟಕರ ಕೆಮೀಷನರಾದ ಜನಾಬ್ ಮಿ॥ ಸಲೀಂ ಸೇರಿರವರ ಅಧ್ಯಕ್ಷತೆಯಲ್ಲಿ ನಾಟಕವನ್ನು ಅಭಿನಯಿಸಲಾಗುತ್ತದೆ. ಪ.ಮಾ. ಅವರು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಹೋಟೆಲು ಕೆಲಸಗಾರರ ಸಂಘ

ಮೈಸೂರು ನಗರದ ಹೋಟೆಲ್ ಕೆಲಸಗಾರರ ಸಂಘದ ಸಭೆಯು ಶನಿವಾರ ಶ್ರೀ ಕೆ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗಸ್ಟ್ ೧೫ನೇ ತಾ॥ ಮೈಸೂರಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕೆಂದೂ ಮತ್ತು ಇದಕ್ಕಾಗಿ ಆ ದಿನ ನಗರದ ಎಲ್ಲಾ ಹೋಟೆಲುಗಳಿಗೂ ರಜಾ ಕೊಡುವಂತೆ ಅಧಿಕಾರಿಗಳನ್ನೂ ಮತ್ತು ಹೋಟೆಲು ಮಾಲೀಕರನ್ನೂ ಕೋರುವ ನಿರ್ಣಯಗಳು ಅಂಗೀಕೃತವಾದುವು.

ಚಿರದಾಂಕಿತರಾದ ಶ್ರೀ ಡಿ. ಎಸ್. ಕೃಷ್ಣಯ್ಯಶೆಟ್ಟರು

ಶ್ರೀ ಮನ್ಮಹಾರಾಜರವರ ವರ್ಧಂತ್ಯುತ್ಸವ ಸಂದರ್ಭದಲ್ಲಿ ಬೆಂಗಳೂರಿನ ಸುಪ್ರಸಿದ್ಧ ಗ್ರಾಮಫೋನ್ ವ್ಯಾಪಾರಿಗಳಾದ ಶ್ರೀ ಡಿ. ಎಸ್. ಕೃಷ್ಣಯ್ಯಶೆಟ್ಟಿ ಯವರು ಲೋಕ ಸೇವಾನಿರತ ಎಂಬ ಬಿರುದನ್ನು ಪಡೆದಿರುವುದು ಕೇವಲ ಅಭ್ಯ ವಯಸ್ಸಿನಲ್ಲಿಯೇ ಶ್ರೀ ಶೆಟ್ಟರು ಈ ಪ್ರಶಸ್ತಿಯನ್ನು ಹೊಂದಿರುವರು. ೨೦ ವರ್ಷಗಳ ಹಿಂದೆ ಬಂದಿದ್ದ ಕ್ಷಾಮ ಕಾಲದಲ್ಲಿ ಇವರ ವಂಶದವರು ಬಹಳ ಉಪಕಾರವನ್ನು ಮಾಡಿ ಕೀರ್ತಿಗಳಿಸಿದ್ದರು.

ಶ್ರೀ॥ ಶೆಟ್ಟರು ಡಿ॥ ನೋಂ ತೀರಿಕಿದ್ದ ರಿಂದ ಕೆಲವು ಕಾಲ ಮತ್ತು ಶ್ರೀ ಕೊಂಡಲ ಸ್ವಾತಂತ್ರ್ಯಕ್ಕೆ ಪ್ರತಿಯೊಬ್ಬರೂ ಕೇವಲ ಬಾಲ್ಯವಯಸ್ಸಿನಿಂದಲೇ ಇವರು ಜನಸೇವೆ ಕಡೆಗೆ ಹೆಚ್ಚು ಗಮನ ಕೊಡುತ್ತಾ ಬಂದಿದ್ದಾರೆ. ಇವರು ರೆಡ್ ಕ್ರಾಸ್, ಸಂ ಸ್ಥೆ, ಸೆಂಟ್ ಜಾನ್ ಆಂಬ್ಯುಲೆನ್ಸ್, ಸಮ್ಮಿಶ್ರದವರ ಸೇವೆ, ವಿದ್ಯಾಶಾಲೆ, ಹೋಂ ಗಾರ್ಡ್ಸ್, ವೈದ್ಯ ಶಿಬಿರಗಳ ಮುಂತಾದ ಕಾರ್ಯಕ್ಷೇತ್ರಗಳಲ್ಲಿ ಮುಖ್ಯ ಪಾತ್ರಗಳನ್ನು ವಹಿಸಿ ಸೇವೆ ಸಲ್ಲಿಸುತ್ತಾರೆ ಮೈಸೂರು ಮತ್ತು ವಿದ್ಯಾರ್ಥಿ ಶಾಲೆಗಳನ್ನು ಬೆಂಗಳೂರಿನ ಅವಿನ್ಯಾ ಆಸ್ಪತ್ರೆಯಲ್ಲಿ ಇಟ್ಟಿಸಲು ಸು ಮಾರು ೭೦ ಸಾವಿರ ರೂಗಳನ್ನು ದಾನ ಮಾಡಿದ್ದಾರೆ ಬೆಂಗಳೂರು ನಗರದ ರೆಡ್ ಕ್ರಾಸ್ ಸಂಸ್ಥೆಯ ಹಾಲಿನ ಕೇಂದ್ರವು ಇವರ ನೇತೃತ್ವದಲ್ಲಿ ನಡೆಯುತ್ತಿದೆ

ಲಾಹೋರಿನ ಮಸೀದಿ ಬಳಿ ಘರ್ಷಣೆ

ಲಾಹೋರಿನ ಮಸೀದಿಯೊಂದರಲ್ಲಿ ಮೊನ್ನೆ ಸಂಜೆ ಪ್ರಾರ್ಥನೆಯನ್ನು ಮುಗಿಸಿಕೊಂಡು ಹೊರಗೆ ಬರುತ್ತಿದ್ದಾಗ ಎರಡು ಪಂಗಡಗಳವರಿಗೆ ತೀವ್ರ ಘರ್ಷಣೆಯಾಗಿ ೨೩ ಮಂದಿ ಮಡಿದು ಮತ್ತೆ ೩೩ ಮಂದಿಗೆ ಗಾಯಗಳಾಗಿವೆಯೆಂದು ವರದಿಯಾಗಿದೆ

ಇಂಡೋನೇಷಿಯಾದಲ್ಲಿ ಹೆಚ್ಚಿನ ಬಿಕ್ಕಟ್ಟು

ಇಂಡೋನೇಷಿಯಾದ ಶಾಂತಿ ನಿಯಮಗಳನ್ನು ಅಲ್ಲಿನ ರಿಪಬ್ಲಿಕನರು ಉಲ್ಲಂಘಿಸಿದರೆ ಬಲವಾದ ಮಿಲಿಟರಿ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದೆಂದು ಡಚ್ ಸರ್ಕಾರದವರು ರಿಪಬ್ಲಿಕನ್ ಸರ್ಕಾರದವರಿಗೆ ಎಚ್ಚರಿಕೆಯಿತ್ತಿರುವುದಾಗಿ ವರದಿಯಾಗಿದೆ. ಆದರೆ ಅಲ್ಲಿನ ಶಾಂತಿ ನಿಯಮಗಳನ್ನು ಡಚ್ಚರೇ ಉಲ್ಲಂಘಿಸುವರೆಂದು ರಿಪಬ್ಲಿಕನ್ನರು ಆರೋಪಿಸುವುದಾಗಿಯೂ ಹೇಳಲಾಗಿದೆ. ಇಂಡೋನೇಷಿಯಾದ ಸಮಸ್ಯೆಯು ಪರಿಸ್ಥಿತಿಯನ್ನು ಕೆಡಿಸುವ ಸೂಚನೆಗಳಿವೆ

ಕುದುರೆ ಜೂಜಿನಲ್ಲಿ ಬೆಟ್ಟಿಂಗ್ ಕೂಡದು

ಕುದುರೆ ಜೂಜುಗಳಾಗುವ ಕಾಲದಲ್ಲಿ ಬೆಟ್ಟಿಂಗ್ ನಡೆಸಕೂಡದೆಂಬ ಮಸೂದೆಯು ಪ.ಬಂಗಾಳ ಶಾಸನ ಸಮಿತಿಯಲ್ಲಿ ಅಂಗೀಕೃತವಾಗಿದೆ. ಬರುವ ಶಾಸನ ಸಭೆಯ ಅಧಿವೇಶನದಲ್ಲಿ ಇದನ್ನು ಶಾಸನವನ್ನಾಗಿ ಮಾಡಲಾಗುವುದೆಂದು ತಿಳಿದು ಬಂದಿದೆ.

೨೦೦ ದಿವಸದಿಂದ ಪ್ರಜ್ಞೆ ಇಲ್ಲ

ಗಳಿಸನೇ ಫೆಬ್ರವರಿಯಲ್ಲಿ ಕರುಳಿಗೆ ಬಾಣ ಚುಚ್ಚಿ ಬಿದ್ದು ಜ್ಞಾನ ತಪ್ಪಿ ಆಸ್ಪತ್ರೆಗೆ ಸೇರಿದ ಅಮೇರಿಕದ ಇಂಜನಿಯರೊಬ್ಬರು ಇನ್ನೂ ಅದೇ ಸ್ಥಿತಿಯಲ್ಲಿಯೇ ಇರುವರೆಂದು ಹೇಳಲಾಗಿದೆ. ಅವರ ಆರೋಗ್ಯಕ್ಕೆ ಸ್ವಲ್ಪವೂ ವ್ಯತ್ಯಾಸವುಂಟಾಗಿರುವುದಿಲ್ಲ.

ಬ್ರಹ್ಮಚಾರಿಗಳ ತೆರಿಗೆ

ಪೂರ್ವ ಪಂಜಾಬಿನಲ್ಲಿ ವರ್ಷಕ್ಕೆ ಮೀರಿದ ಪ್ರತಿಯೊಬ್ಬ ಬ್ರಹ್ಮಚಾರಿಯೂ ತನ್ನ ವರಮಾನದಲ್ಲಿ ನೂರರಲ್ಲಿ ಒಂದು ಭಾಗವನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂಬ ಸಲಹೆಯನ್ನು ಅಲ್ಲಿನ ಖಜಾನೆ ಉಳಿತಾಯ ಸಮಿತಿಯ ಸದಸ್ಯರೊಬ್ಬರು ಮುಂದಿಟ್ಟಿದ್ದಾರೆ

ಸೂಚನೆ

ಗರುಡ ಪಂಚಮಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಅಧಿಕ ಬೆಲೆಯಿಂದ ಜಪಾನ್ ಚಕ್ರವರ್ತಿಗೂ ತಾಪತ್ರಯ

ಪದಾರ್ಥಗಳ ಬೆಲೆಯು ಮಿತಿ ಮೀರಿ ಹೆಚ್ಚುತ್ತಿರುವುದರಿಂದ ಜಪಾನ್ ಚಕ್ರವರ್ತಿಗಳಿಗೆ ಈಗ ಕೊಡಲಾಗುತ್ತಿರುವ ರಾಜಧನವು ಸಾಲದೆ ವರಮಾನಕ್ಕಿಂತ ವೆಚ್ಚವು ಹೆಚ್ಚಿದೆ. ದ ಹೇಳಲಾಗಿದೆ ೧೬ ವರ್ಷದ ರಾಜಕುಮಾರ ಅಕಿ ಹಿಟೋ ಅವರ ವಿದ್ಯಾಭ್ಯಾಸಕ್ಕೂ ಸಹ ಹಣ ಸಾಲದಾಗಿದೆಯೆಂದು ತಿಳಿದು ಬಂದಿದೆ

ಹಂದಿಗಳ ಖಾನೇಷುಮಾರಿ

ಅಮೇರಿಕದ ಒಂದು ಗ್ರಾಮದಲ್ಲಿ ಹಂದಿಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದಾಗಿಯೂ ಗ್ರಾಮನಿವಾಸಿಗಳೆಲ್ಲರೂ ಸಹಕರಿಸಬೇಕೆಂದೂ ಕೋರಿ ಪ್ರಕಟಣೆಯನ್ನು ಹೊರಡಿಸಲಾಗಿದೆ

ಲಾಹೋರ್-ಪೇಷಾವರ್ ನಡುವೆ ವಿದ್ಯುಚ್ಛಕ್ತಿ ರೈಲ್ವೆ

ಪಾಕಿಸ್ತಾನದಲ್ಲಿ ಉಂಟಾಗಿರುವ ಕಲ್ಲಿದ್ದಲಿನ ಅಭಾವವನ್ನು ತಪ್ಪಿಸಲು ಅಲ್ಲಿನ ಸರ್ಕಾರದವರು ಲಾಹೋರಿನಿಂದ ಪೇಷಾವರಿನ ವರೆಗೆ ವಿದ್ಯುಚ್ಛಕ್ತಿ ರೈಲ್ವೆ ವ್ಯವಸ್ಥೆ ಮಾಡಲು ಪರ್ಯಾಲೋಚಿಸುತ್ತಿರುವರೆಂದು ಗೊತ್ತಾಗಿದೆ

ಅಂಚೆ ಜವಾನರಿಂದ ರುಮಾಲಿಗೆ ಬಹಿಷ್ಕಾರ

ತಮಗೆ ಉಡುಪುಗಳನ್ನೂ ರುಮಾಲುಗಳನ್ನೂ ಇಲಾಖೆಯವರು ಕೊಡಲು ನಿರಾಕರಿಸಿದುದಕ್ಕಾಗಿ ಮುಸ್ಸೋರಿ ಟಪಾಲ್ ಕಛೇರಿ ಅಂಚೆಯವರು ಇತರ ನೌಕರರೂ ತಲೆಗೆ ರುಮಾಲುಗಳನ್ನೇ ಹಾಕಿಕೊಳ್ಳದೆ ಕೆಲಸದ ವೇಳೆ ಹಾಜರಾಗುತ್ತಿರುವರೆಂದು ಹೇಳಲಾಗಿದೆ.

ಗುರುಜಿಯವರ ಬಿಡುಗಡೆ

ಆರ್. ಎಸ್. ಎಸ್. ಸಂಸ್ಥೆಯ ಮುಖ್ಯ ವ್ಯವಸ್ಥಾಪಕರಾದ ಶ್ರೀ ಎಂ. ಎಸ್. ಗೋಲ್ವಾಲ್ಕರ್ ರವರನ್ನು ಕಳೆದ ೬ ತಿಂಗಳಿನಿಂದ ಬಂಧಿಸಲಾಗಿತ್ತಷ್ಟೆ. ಅವರನ್ನು ಮೊನ್ನೆ ದಿನ ನಾಗಪುರದ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತೆಂದು ವರದಿಯಾಗಿದೆ

ಮಹಾತ್ಮರ ಹೆಸರನ್ನು ಉಪಯೋಗಿಸಲು ನಿರ್ಬಂಧ

ಮಹಾತ್ಮಾ ಗಾಂಧಿಯವರ ಹೆಸರನ್ನು ಸಿಕ್ಕಿದ ಕಡೆ ಉಪಯೋಗಿಸಲಾಗಿದೆ. ಬಿಹಾರ್ ಸರ್ಕಾರದವರು ಸೂಚನೆಯಿತ್ತಿದ್ದಾರೆ. ಮುಸಲ್ಮಾನ ಪ್ರವಾಸಿ ಹೋಟಾಲಿಗೂ, ಸಾರ್ವಜನಿಕರಿಗೂ ಮಹಾತ್ಮರ ಹೆಸರನ್ನು ಇಡುವುದಾಗಿ ಅಲ್ಲಿನ ಪೌರಸಭೆಯವರು ಮಾಡಿದ್ದ ನಿರ್ಧಾರವನ್ನು ಅವರ ನಿರಾಕರಿಸಿದ್ದಾರೆ. ಮಹಾತ್ಮರು ಹಾಕಿಕೊಟ್ಟಿರುವ ಆದರ್ಶಗಳನ್ನು ಆಚರಿಸುವ ಸಂಸ್ಥೆಗಳಿಗೆ ಮಾತ್ರ ಅವರ ಹೆಸರನ್ನಿಡಬೇಕೆಂದು ತಿಳಿಸಲಾಗಿದೆ

ಮದ್ಯ ಪಾನಕ್ಕೆ ಬದಲು ಬಾಳೆ ಹಣ್ಣಿನ ರಸ

ನ್ಯೂಯಾರ್ಕ್ ನಗರದಲ್ಲಿ ಹೊಸ ಪಾನೀಯವೊಂದನ್ನು ಕಂಡು ಹಿಡಿಯಲಾಗಿದೆ ಬಾಳೆ ಹಣ್ಣಿನಿಂದ ಭಟ್ಟಿ ಇಳಿಸಿ ತೆಗೆಯುವ ಈ ರಸವು ಇತರ ಮಾದಕ ಪದಾರ್ಥಗಳಿಗಿಂತಲೂ ಹೆಚ್ಚು ಜನಾನುರಾಗವನ್ನು ಪಡೆದಿರುತ್ತದೆ. ಇದನ್ನು ಸೇವಿಸುವವರು ಮಧ್ಯಪಾನವನ್ನು ತ್ಯಜಿಸುತ್ತಿರುವರು

ಭಾರತದಲ್ಲಿ ಕೃತಕ ಮಳೆ

ಕೇಂದ್ರ ಸರ್ಕಾರ ವ್ಯವಸಾಯ ಸಚಿವಾಲಯದವರ ಸಮ್ಮತಿಯ ಮೇರೆಗೆ ನಡೆದ ಸಭೆಯಲ್ಲಿ ನೂತನ ವ್ಯವಸಾಯ ಸಂಶೋಧನೆಗಳ ಪರಿಶೀಲನೆ ಮಾಡಿ ಕೃತಕ ಮಳೆಯನ್ನು ಬರಿಸಲು ಶಾಸ್ತ್ರೀಯ ರೀತಿಯಲ್ಲಿ ಸಂಶೋಧನೆ ನಡೆಸುವ ಯೋಜನೆಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಗಿದೆ

ಈ ವಿಷಯದಲ್ಲಿ ವ್ಯವಸಾಯ ಶಾಸ್ತ್ರಜ್ಞರಿಂದ ಸಲಹೆಗಳನ್ನು ಪಡೆಯಲಾಗುವುದು. ಈ ಪ್ರಯೋಗಕ್ಕೆ ಬೇಕಾದ ಸಾಧನಗಳನ್ನು ಕೇಂದ್ರ ಸರ್ಕಾರವು ಒದಗಿಸುವುದು. ಇದಕ್ಕೆ ಬೇಕಾದ ನ್ಯೂಯಾರ್ಕಿನಲ್ಲಿ ಪ್ರಯೋಗ ನಡೆಸಿದ ಅಮೆರಿಕದ ತಜ್ಞರು ತಿಳಿಯಬಂದಿದೆ

ವಿಶೇಷ ಶಾಸನದ ವಿಮರ್ಶೆ

ಕಾಂಗ್ರೆಸ್ಸ್ ನೊಂದಿಗೆ ಸಂಬಂಧದಲ್ಲಿ ಸರ್ಕಾರದವರು ಹೊರಡಿಸಿರುವ ಜವಾಬ್ದಾರಿ ಸರ್ಕಾರದ ಬಗ್ಗೆ ಚರ್ಚೆ ನಡೆಸಲು ಚಿಕ್ಕದಾದ ಸರ್ವಪಕ್ಷ ಸಭೆ ವಿಶೇಷ ಸಭೆಯನ್ನು ಕರೆಯಬೇಕೆಂದು ಮಹಾಸಭೆ ಸಂಸ್ಥೆಯ ೧೧ ಮಂದಿ ಸದಸ್ಯರು ಸಹಿ ಮಾಡಿ ಒಂದು ಪತ್ರವನ್ನು ಸಂಸ್ಥೆಯ ಅಧ್ಯಕ್ಷರಿಗೆ ಕಳುಹಿಸಿದ್ದಾರೆ. ಇನ್ನೂ ತಿಂಗಳು ೧೪ ನೇ ತಾರೀಖು ವಿಶೇಷ ಸಭೆಯನ್ನು ಅಧ್ಯಕ್ಷರು ಕರೆದಿದ್ದಾರೆ

ಲಾಯಕ್ ಅಲಿಯವರೇ ಮತ್ತೆ ಹೈದ್ರಾಬಾದ್ ಪ್ರಧಾನಿ

ಜುಲೈ ತಿಂಗಳಲ್ಲಿ ಭಾರತದೊಡನೆ ಸ್ವದೇಶಿ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದ ಬಳಿಕ ವಿಶ್ವಾಸ ಒಪ್ಪಿಗೆ ಕೊಡಬೇಕೆಂದು ನಿಜಾಮರ ಪ್ರಧಾನಿ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದರು. [illegible] ಪ್ರಧಾನಿ ಮೀರ್ ಲಾಯಕ್ ಅಲಿಯವರು ರಾಜೀನಾಮೆ ವಾಪಸು ತೆಗೆದುಕೊಂಡಿರುವ [illegible] ನಿಜಾಮರು [illegible] ಪ್ರಧಾನಿ [illegible] ವಾಪಸು [illegible] ಹೇಳಿರುವರು [illegible]

ವಾರ ಭವಿಷ್ಯ

ತಾ|| ೮-೮-೪೮ ರಿಂದ ೧೪-೮-೪೮ರ ವರೆಗೆ

ಮೇಷ—ಮಾನಸಿಕ ಅಶಾಂತಿ ಹೆಚ್ಚುವುದು, ಮನೆಯಲ್ಲಿ ಮಕ್ಕಳು ಮುಂತಾದವರ ಆರೋಗ್ಯ ಕೆಡುವ ಸಂಭವವಿದೆ, ವ್ಯಾಪಾರದಲ್ಲಿ ಮಿತ್ರರಿಂದ ಸ್ವಲ್ಪ ಸಹಾಯ ಲಭಿಸುವುದು, ತಾ|| ೧೦, ೧೩, ನಷ್ಟ, ಸ್ವಲ್ಪ ಅಶಾಂತಿ

ವೃಷಭ—ಈ ವಾರ ಸೇವೆ ಎಲ್ಲರಿಂದಲೂ ಗೌರವಾನ್ವಿತರಾಗುವಿರಿ, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಲಭಿಸುವುದು, ಪ್ರವಾಸದಿಂದ ಲಾಭವುಂಟಾಗುವುದು ತಾ|| ೧೩, ೧೪ ಶುಭ ಪ್ರವಾಸ, ಮಿತ್ರ ದರ್ಶನ.

ಮಿಥುನ—ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತಿರಸ್ಕಾರವುಂಟಾಗುವುದು, ಕೈಗೊಂಡ ಕಾರ್ಯಗಳು ಅರ್ಧದಲ್ಲಿಯೇ ನಿಲ್ಲುವುವು, ಆರೋಗ್ಯ ಚೆನ್ನಾಗಿಲ್ಲ, ತಾ|| ೧೨, ೧೩ ದುಷ್ಟ ವಾರ್ತೆ, ನಷ್ಟ.

ಕಟಕ—ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯಭೇರಿ ಹೊಡೆಯುವಿರಿ, ಬಹು ದಿನಗಳಿಂದ ಬಾಕಿ ಎಲ್ಲವೂ ವಸೂಲಾಗುವುದು, ಆರೋಗ್ಯ ಉತ್ತಮವಾಗಿದೆ, ತಾ|| ೯, ೧೨ ಲಾಭ, ಸಂತೋಷ ವಾರ್ತೆ

ಸಿಂಹ—ವ್ಯಾಪಾರಗಾರರಿಗೆ ಈ ವಾರ ಲಾಭದಾಯಕವಾಗಿದೆ ಧನಾದಾಯ ಚೆನ್ನಾಗಿದೆ ಕೈಗೊಂಡ ಕಾರ್ಯಗಳು ಅಧಿಕ ಯತ್ನವಿಲ್ಲದೆ ಸಿದ್ಧಿಸುವುವು, ಪ್ರವಾಸದಿಂದ ಧನ ಲಾಭ ತಾ|| ೧೦, ೧೩ ಶುಭ ವಾರ್ತೆ, ಮಿತ್ರ ದರ್ಶನ.

ಕನ್ಯಾ—ಯೋಚಿಸಿದ ಎಲ್ಲ ಕಾರ್ಯಗಳೂ ಕೈಗೂಡುವುವು, ಲಾಟರಿ ಪಟ್ಟಾಗಳಿಂದ ಅಧಿಕ ಲಾಭ ದೊರೆಯುವುದು, ವಾರಾಂತ್ಯದಲ್ಲಿ ಅನಾರೋಗ್ಯ ಸಂಭವ ತಾ|| ೯, ೧೩ ಲಾಭ, ಸ್ವಲ್ಪ ಅಶಾಂತಿ

ತುಲಾ—ಆರ್ಥಿಕ ಮುಗ್ಗಟ್ಟು ಹೆಚ್ಚುವುದು, ಮಿತ್ರೇಷ್ಟರ ತಿರಸ್ಕಾರಕ್ಕೊಳಗಾಗುವಿರಿ, ಬರಬೇಕಾದ ಹಣವೂ ಬಾರದೆ ಕೈ ಕಟ್ಟಿದಂತಾಗುವುದು, ತಾ|| ೧೦, ೧೨ ಅಶಿಷ್ಟ ವಾರ್ತೆ, ಚೋರ ಭಯ

ವೃಶ್ಚಿಕ—ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಈ ವಾರ ಅತ್ಯಂತ ಯಶಸ್ಕರವಾಗಿದೆ, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು, ತಾ|| ೧೧, ೧೩ ಶುಭ ಪ್ರವಾಸ, ಔತಣ

ಧನು—ಲಾಟರಿ ಪಟ್ಟಾಗಳಲ್ಲಿ ನಷ್ಟ ಸಂಭವಿಸಬಹುದು, ಮನೆಯಲ್ಲಿ ಕಲಹ ವಾತಾವರಣವುಂಟಾಗುವುದು, ಆರೋಗ್ಯ ಚೆನ್ನಾಗಿಲ್ಲ, ತಾ|| ೧೨, ೧೩ ಚಿಂತೆ, ವೃಥಾ ಅಪವಾದ

ಮಕರ—ಆರೋಗ್ಯ ಧನಾದಾಯಗಳೆರಡೂ ಚೆನ್ನಾಗಿವೆ, ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ಸನ್ಮಾನಿತರಾಗುವಿರಿ, ತಾ|| ೧೨, ೧೪ ಶುಭ ಸಮಾಚಾರ, ಶತ್ರುನಾಶ

ಕುಂಭ—ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅಪಮಾನಿತರಾಗುವಿರಿ, ಪ್ರವಾಸದಿಂದ ಹಾನಿ ಸಂಭವಿಸುವುದು. ಆರೋಗ್ಯ ಚೆನ್ನಾಗಿಲ್ಲ, ತಾ|| ೧೧, ೧೩ ಚಿಂತೆ, ಭಯ

ಮೀನ—ಈ ವಾರ ನಿಮಗೆ ಅನೇಕ ಸಾಧುಸಂತರ ದರ್ಶನ ಲಭಿಸುವುದು, ಆರ್ಥಿಕ ಮುಗ್ಗಟ್ಟು ಬಗೆಹರಿಯುವುದು, ವಾರಾಂತ್ಯದಲ್ಲಿ ಸ್ವಲ್ಪ ನಷ್ಟ, ತಾ|| ೧೦, ೧೩ ಸಂತೋಷ ವಾರ್ತೆ, ಸ್ವಲ್ಪ ಅಶಾಂತಿ

Edited printed and published by A. R. Nagarajan at the Sadhvi Press D. Subbaiah Road Mysore

ನರಕಕ್ಕೆ ಹೋಗಲು ಬಯಸಿದ ಅಪರಾಧಿ

ಮತಿಮೀರಿ ಹೆಂಡ ಕುಡಿಯುತ್ತಿದ್ದ ಒಬ್ಬ ಅಪರಾಧಿಗೆ ಶಿಕ್ಷೆ ಕೊಡುವಾಗ ಕೆನಡಾ ದೇಶದ ಮ್ಯಾಜಿಸ್ಟ್ರೇಟರು ಒಬ್ಬರು ಆತನನ್ನು ಕುರಿತು ಮದ್ಯ ಪಾನವನ್ನು ತ್ಯಜಿಸಿ ಸ್ವರ್ಗಲೋಕದ ವಾಸವನ್ನು ಬಯಸುವೆಯಾ? ಅಥವಾ ಯಥೇಚ್ಛವಾಗಿ ಮದ್ಯದ ಸರಬರಾಜುಳ್ಳ ಬೇರೆ ಸ್ಥಳಕ್ಕೆ ಹೋಗುವೆಯಾ? ಎಂದು ಕೇಳಿದಾಗ ನರಕವೇ ಇರಲೆಂದು ಅಪರಾಧಿಯು ಉತ್ತರವಿತ್ತನೆಂದು ವರದಿಯಾಗಿದೆ ನ್ಯಾಯಾಧೀಶರು ಆತನಿಗೆ ೧೫ ಡಾಲರು ಜುಲ್ಮಾನೆಯನ್ನು ವಿಧಿಸಿದರು

ಸೌದೆಗಾಗಿ ನೋಟುಗಳ ದಹನ

೫೦ ಲಕ್ಷ ಡಾಲರುಗಳ ನೋಟುಗಳನ್ನು ಚಾಲ್ತಿಗೆ ತರಲಿಸುವುದರಿಂದ ಹಳ್ಳ ಹರಿದು ನೋಟುಗಳನ್ನೆಲ್ಲಾ ನಾಶ ಮಾಡಬೇಕೆಂದು ಚೀಣಾದ ಹಾಂಕಾಂಗ್ ಪ್ರಾಂತ್ಯದ ಮುಖ್ಯ ಪಟ್ಟಣವಾದ ಸೀನಾನ್ ನಗರದ ಬ್ಯಾಂಕುಗಳಿಗೆ ಆಜ್ಞೆಯು ಬಂದುದರಿಂದ ೩೬೦ ಕೋಟಿ ಡಾಲರುಗಳ ಹಳ್ಳ ಹಳ್ಳ ನೋಟುಗಳನ್ನು ಸೌದೆಯಂತೆ ಉಪಯೋಗಿಸಲು ಬ್ಯಾಂಕಿನವರು ನಿರ್ಧರಿಸಿ ಅವುಗಳನ್ನೆಲ್ಲಾ ಅದೇ ರೀತಿ ಸುಟ್ಟು ಹಾಕಿದರೆಂದು ವರದಿಯಾಗಿದೆ ಚೀಣಾ ಡಾಲರಿನ ಬೆಲೆಯು ವಿಪರೀತವಾಗಿ ಇಳಿದು ಹೋಗಿರುವುದರ ಪರಿಣಾಮಗಳಲ್ಲಿ ಇದೂ ಒಂದು

ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರಭುಗಳು ಭಾಗವಹಿಸುವರು

ಬೆಂಗಳೂರಿನಲ್ಲಿ ಇದೇ ೧೫ ನೇ ತಾರೀಖಿಯಂದು ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಏರ್ಪಡಿಸಿರುವ ಮಿಲಿಟರಿ ಕವಾಯತಿನಲ್ಲಿ ಶ್ರೀಮನ್ಮಹಾರಾಜರವರು ಸೆಲ್ಯೂಟ್ ಸ್ವೀಕರಿಸುವರೆಂದು ತಿಳಿದು ಬಂದಿದೆ

2 ದಿನಗಳು ಮಾತ್ರ
ಭಾನುವಾರ ೮-೮-೪೮
— ಕಡೇ ದಿನ —
ಬೊಂಬಾಯಿ
ಜಿ. ಎ. ಸರ್ಕಸ್
ಕಡೇ ನಾಲ್ಕು ದಿನಗಳ ಪ್ರದರ್ಶನ
ಪೂರ್ಣ ಬದಲಾವಣೆ
ಶನಿವಾರ ಭಾನುವಾರ ೩ ಆಟಗಳು
ಮಿಕ್ಕ ದಿನಗಳಲ್ಲಿ ೨ ಆಟಗಳು
[ಎಂ. ಪಿ. ಬ್ರದರ್ಸ್ ಅಂಡ್ ಕೋ]

ಶ್ರೀ ಗಾಯತ್ರೀ ಟಾಕೀಸ್
9 8 48 ಕಡೇ ದಿನ
ಅಡ್ವೆಂಚರ್ಸ್ ಆಫ್
ರಾಬಿನ್‌ಹುಡ್
10—8—48 ರಿಂದ
3 ದಿನಗಳು ಮಾತ್ರ
Warner's ರವರ
ರೋಮಾಂಚಕರ ಸಾಹಸ ಚಿತ್ರ
ವ್ಯೆಲ್ಡ್ ಬಿಲ್ ಹಿಕಾಕ್ ರೈಡ್ಸ್

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ
ಕಣ್ಣನ್ ದೇವನ್ ಟೀ
ಸುವಾಸನೆಯಿಂದ ಕೂಡಿಯೂ ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.
—:ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—
ಸಿ. ಬಿ. ಜನರಲ್ ಸ್ಟೋರ್ಸ್,
ಯೆಲ್ವಾಲ್ ರಸ್ತೆ, ಮೈಸೂರು

ದಿ ಹಿಂದೂ ಬ್ಯಾಂಕ್ ಕರೂರ್, ಲಿಮಿಟೆಡ್,
[ಬ್ರಿಟಿಷ್ ಇಂಡಿಯಾದಲ್ಲಿ ೧೯೩೨ರಲ್ಲಿ ಸ್ಥಾಪಿತವಾದದ್ದು]
ಪ್ರಧಾನ ಕಛೇರಿ:-ಕರೂರು (S I Ry)
ಶಾಖೆಗಳು:-ದಿಂಡಿಗಲ್, ಉಡುಮಲ್‌ಪೇಟೆ, ಈರೋಡು, ಮೈಸೂರು, ತಿರುಚನಾಪಳ್ಳಿ, ಮಂಡ್ಯ, ದೇವಕೋಟೆ, ತಿರುಪತ್ತೂರು (N. A.)
ಬೆಂಗಳೂರು ಸಿಟಿ
ಉಪಶಾಖೆ:-ನಾಗಲ್ ನಗರ (ದಿಂಡಿಗಲ್)
ಮೈಸೂರು ಬ್ರ್ಯಾಂಚ್:-ಇರ್ವಿನ್ ರೋಡ್
ಈ ಕೆಳಗೆ ಕಂಡ ಬಡ್ಡಿ ದರದ ಮೇಲೆ ಫಿಕ್ಸೆಡ್ ಡಿಪಾಜಿಟುಗಳನ್ನು ಸ್ವೀಕರಿಸಲಾಗುತ್ತೆ.

6	ತಿಂಗಳಿಗೆ	ಶೇಕಡಾ	3½
12	,,	,,	4
24	,,	,,	4½

ಮಾಹೆಯಾನಾ ಒಂದು ರೂಪಾಯಿ ನಂತೆ ಕಟ್ಟಿ ಪಡೆಯಬಹುದಾದ— ೧೨ ತಿಂಗಳು, ೨೪ ತಿಂಗಳು ಮಾಹೆವಾರು ರಿಕರಿಂಗ್ ಡಿಪಾಜಿಟ್ ಮತ್ತು ೪೮ ತಿಂಗಳು ಮಾಹೆವಾರು ಪ್ರಾವಿಡೆಂಟ್ ಡಿಪಾಜಿಟ್ ಸಹ ಸ್ವೀಕರಿಸಲಾಗುತ್ತೆ ಎಲ್ಲಾ ವಿಧವಾದ ಬ್ಯಾಂಕಿಂಗ್ ನಡವಳಿಕೆಗಳನ್ನೂ ನಡೆಸಲಾಗುವುದು
ಹೆಚ್ಚಿನ ವಿವರಗಳಿಗೆ ಬರೆದು ತಿಳಿಯಿರಿ
ವಿ ಕೆ ನಟರಾಜನ್,
ಏಜೆಂಟ್, ಮೈಸೂರು

RAJKAMAL TALKIES
From 7—8—48
Daily 3 Shows
Song of -
- Scheherazade
(In Technicolour)
—:With:—
Yvonne Decarlo, Brian Donlevy
MORNING SHOWS
From 6—8—48
For 4 Days
Up in -
- Mabel's Room
—:With:—
Dennis O'Keefe, Marjorie Reynold

ಸಂಗೀತದ ವಿಶೇಷ ಕಾರ್ಯಕ್ರಮ
ಬಿಡಾರಂ ಕೃಷ್ಣಪ್ಪನವರ
ರಾಮಮಂದಿರಂ, ಮೈಸೂರು
10-8-48 ನೇ ಮಂಗಳವಾರ,
ಸಾಯಂಕಾಲ 6-30 ಘಂಟೆಗೆ
ಟೈಗರ್ ವರದಾಚಾರ್ಯರ ಶಿಷ್ಯರಾದ
ಸಂಗೀತ ಶಿರೋಮಣಿ
ಎಂ. ಡಿ. ರಾಮನಾಥಯ್ಯ
ಬಿ. ಎ.
ಯವರ ಹಾಡುಗಾರಿಕೆ
ವಿ|| ಎ. ವಿ. ಕೃಷ್ಣಮಾಚಾರ್
ಪಿಟೀಲು
ವಿ|| ಪಿ. ವಿ. ರಂಗನಾಥರ
ಮೃದಂಗವೂ ಉಂಟು
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ
ಗಂಡಸರಿಗೆ 1 ರೂ, ಹೆಂಗಸರಿಗೆ 8 ಆಣೆ
ಹುಡುಗರಿಗೆ 4 ಆಣೆ

ಅಪೇರಾ ಟಾಕೀಸ್
7—8—48 ರಿಂದ
ಪ್ರತಿ ದಿನ ೩ ಆಟಗಳು
ಪಿ ಶಾ ಸ್
—:ಪಾತ್ರ:—
ಸುರೇಂದ್ರ, ಮೆಹತಾಬ್, ಬೇಬಿ ಮುಮ್ತಾಜ್
MORNING SHOWS
From 6-8-48
Return of
Fighting Has

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೧೦-೮-೪೮ [ಸಂಚಿಕೆ ೧೯

ಬರೋಡಾ ರಾಜರು ಸಿಂಹಾಸನ ಬಿಡಬೇಕು

ಹೈದರಾಬಾದಿನಲ್ಲಿ ರಕ್ತ ಪಾತವಾಗುವುದು

ಸುಭಾಷ್ ಬೋಸರು ಹಿಂದಿರುಗುವರು
ಪಾಶೇರಿ ಜೋತಿಷ್ಯರ ಭವಿಷ್ಯ

ಹೈದರಾಬಾದಿನ ಸಮಸ್ಯೆಯು ಶಾಂತಿಯುತವಾಗಿ ಬಗೆಹರಿಯದೆ, ಅಲ್ಲಿ ಕ್ರಾಂತಿ [illegible] ರಕ್ತಪಾತವಾಗುವುದೆಂದೂ ಬರುವ [illegible]ಬರ್ ೧೦ ನೇ ತಾ|| ನಿಜಾಮರು [illegible] ಒಪ್ಪಂದಕ್ಕೆ ಬಂದು, ಸಂಸ್ಥಾನವು [illegible]ಕ್ಕೆ ಸೇರುವುದೆಂದೂ ಪಾಶೇರಿಯ [illegible]ಸಿದ್ಧ ಜೋತಿಷ್ಯರಾದ ಪಂಡಿತ ಶಂಕ[illegible] ಹೊಸಕೆರೆಯವರು ಭವಿಷ್ಯ [illegible]ದ್ದಾರೆ.

[illegible] ಪ್ರದೇಶಗಳಲ್ಲಿ ಯುದ್ಧವೂ, ಕಲ್ಕತ್ತ ಮತ್ತು ಬಂಗಾಳದಲ್ಲಿ ಗಲಭೆ ಮತ್ತು [illegible]ಪಾತವೂ ಮತ್ತು ಬೊಂಬಾಯಿ ಪ[illegible]ದಲ್ಲಿ ಅಶಾಂತಿಯೂ ಸಂಭವಿಸುವುದೆಂದೂ, ಸ|| ಪಟೇಲರು ತಮ್ಮ [illegible]ಗಳಲ್ಲಿ ಅಯಶಸ್ವಿಗಳಾಗುವರೆಂದೂ [illegible] ನೆಹರೂರವರು ತಮ್ಮ ದೇಶ[illegible]ದ ಬಗ್ಗೆ ಹೆಚ್ಚು ಗಮನ ಕೊಡಬೇಕು ಮತ್ತು ಶ್ರೀ ಸುಭಾಷ್ ಚಂದ್ರ [illegible]ರು ಭಾರತಕ್ಕೆ ಹಿಂತಿರುಗಲಿರುವರೆಂ[illegible]ವರು ತಿಳಿಸುತ್ತಾರೆ.

[illegible]ರಾಬಾದ್ ಸಂಧಾನದಬಗ್ಗೆ [illegible] ಮಿರ್ಜಾರವರ ವಿಷಾದ

[illegible]ಜಾಮರು ಭಾರತದೊಡನೆ ಒಪ್ಪಂದ ಮಾಡಿಕೊಳ್ಳಲು ಅಭಿಲಾಷೆಯುಳ್ಳವರಾಗಿ[illegible], ರಜಾಕಾರರ ಪ್ರತಿನಿಧಿಗಳ ಪ್ರಭಾವ[illegible] ಸಂಧಾನ ಪ್ರಯತ್ನಗಳು ವ್ಯರ್ಥವಾ[illegible]ದು ಸರ್ ಮಿರ್ಜಾರವರು ಹೇಳಿರುತ್ತಾ[illegible] [illegible]ಂಡ್‌ಸ್ಟಿಲ್ ಒಪ್ಪಂದದಪ್ರಕಾರ ಸಂಸ್ಥಾ[illegible] ದೇಶಾಂಗ ಆಡಳಿತ, ರಕ್ಷಣೆ ಮತ್ತು [illegible]ಗಳನ್ನು ಭಾರತಕ್ಕೆ ಒಪ್ಪಿಸಿ ಬಿಟ್ಟಿ[illegible] ಹೈದರಾಬಾದು ಸ್ವತಂತ್ರವೆಂದು [illegible]ವುದು ಕೇವಲ ಅರ್ಥವಿಲ್ಲದ ಮಾ[illegible] ಒಳಾಡಳಿತ ನೋಡಿಕೊಳ್ಳುವುದೊಂ[illegible] ಹೈದರಾಬಾದ್ ಸರ್ಕಾರದ ಮುಖ್ಯ[illegible]. ಈ ವಿಷಯದಲ್ಲಿ ಭಾರತ ಸರ್ಕಾ[illegible]ಂದಿಗೂ ಕೈ ಹಾಕ ವುದಿಲ್ಲ. ಆದು[illegible] ನಿಜಾಮರು ಯಾವ ಯೋಚನೆ[illegible] ಇಲ್ಲದೆ ಒಪ್ಪಂದಕ್ಕೆ ರುಜು ಹಾಕಬ[illegible] ಅತ್ಯವಶ್ಯಕವಾಗಿದೆ. ಸಮಸ್ಯೆಯು [illegible]ಂತ ರೀತಿಯಲ್ಲಿ ಬಗೆಹರಿಸಲು ಎಲ್ಲ [illegible]ರ್ವ ಪ್ರಯತ್ನ ಮಾಡಬೇಕೆಂ[illegible]ವರು ಅಭಿಪ್ರಾಯಪಟ್ಟಿದ್ದಾರೆ.

[illegible] ಸಂಧಾನ ಪ್ರಯತ್ನಗಳು ಹೈದ[illegible]ದಿನ ಕೆಲವು ವ್ಯಕ್ತಿಗಳಿಂದ ವಿಫಲ[illegible]ವೆಂದೂ ಪ. ನೆಹ್ರೂ, ಮೌಂಟ್‌ಬ್ಯಾಟನ್ ಮಾ[illegible]ಲ್ಲಿ ಸಂಧಾನ ನಡೆಸುವುದು ವ್ಯರ್ಥ. [illegible] ಸ|| ಪಟೇಲರು ತಮಗೆ ಪ್ರಾಂಜ[illegible] ಕೊಟ್ಟಿದ್ದರೂ ಅಕ್ಷರಶಃ ನಿ[illegible] ಸರ್ ಮಿರ್ಜಾರವರು ತಿಳಿ[illegible]ರೆ.

ರಜಾಕಾರರು ರೈಲು ಗಾಡಿಯನ್ನು ಸುಟ್ಟರು

[illegible]ಯವಾಡದಿಂದ ಹೈದರಾಬಾದಿಗೆ [illegible] ರೈಲನ್ನು ಗಂಗಸಿ ಮತ್ತು ಎ[illegible] [illegible] ಪತ್ತಿತ ೨೪ ಜನ ಸಶಸ್ತ್ರ ರಜಾಕಾ[illegible] [illegible]ದ ಶನಿವಾರ ನಿಲ್ಲಿಸಿ, ಪ್ರಯಾಣಿಕ[illegible] [illegible] ಹೊರಕ್ಕೆ ತಳ್ಳಿ ಅಂಚೆ ಮತ್ತು [illegible] ತಾಗತಿಯ ಗಾಡಿಗಳನ್ನು ಸುಟ್ಟ[illegible] ಪ್ರಯಾಣಿಕರನ್ನೆಲ್ಲ ಭಾರತ [illegible] ಓಡಿಸಿದರೆಂದು ವರದಿ ಬಂದಿದೆ.

ವಕೀಲರ ಸಂಘದಲ್ಲಿ ವಿಶೇಷ ಶಾಸನದ ಪರಿಶೀಲನೆ

ಸ್ವಂ ಸು ವ್ರೋ] ಬೆಂಗಳೂರು ೧೦
ಹೈಕೋರ್ಟಿನ ಅಧಿಕಾರ ವ್ಯಾಪ್ತಿಯ ಬಗ್ಗೆ ಹೊರಡಿಸಲಾಗಿರುವ ಅವಸರದ ಶಾಸನವನ್ನು ನಿನ್ನೆ ದಿನ ಬೆಂಗಳೂರು ವಕೀಲರ ಸಂಘದ ವಿಶೇಷ ಸಭೆಯಲ್ಲಿ ಪರಿಶೀಲಿಸಿದರು. ಈ ಶಾಸನದಲ್ಲಿ ಕಾನೂನು ಮತ್ತು ಪ್ರಜಾ ಸ್ವಾತಂತ್ರ್ಯದ ಮೂಲಭೂತ ಪ್ರಶ್ನೆಗಳು ಸೇರಿರುವುದರಿಂದ ನಾಲ್ಕು ಜನ ನ್ಯಾಯಾಧೀಶರ ಬೆಂಚಿನ ಮುಂದೆ ನಾಳಿದ್ದು ಈ ವಿಷಯವು ಬರುವಾಗ ಈ ಸಂಘದ ಪ್ರತಿನಿಧಿಗಳೂ ಸಹ ಅದರಲ್ಲಿ ವಾದಿಸಲು ಅವಕಾಶ ಕೊಡಬೇಕೆಂದು ಹೈಕೋರ್ಟಿನವರನ್ನು ಪ್ರಾರ್ಥಿಸಬೇಕೆಂದು ನಿರ್ಣಯಿಸಲಾಯಿತು.

ಚುನಾವಣೆ ರದ್ದು

ಬೆಂಗಳೂರು ನಗರದ ನಾಲ್ಕನೇ ವಾರ್ಡಿನ ಗ್ರೀಕ್ ಚುನಾವಣೆಯು ಕ್ರಮವಾಗಿ ನಡೆದಿಲ್ಲವೆಂದೂ, ಅದನ್ನು ರದ್ದು ಮಾಡಿ ಬೇರೆ ಚುನಾವಣೆ ನಡೆಸಬೇಕೆಂದೂ ಚುನಾವಣಾ ಕಮಿಷನರಾದ ಶ್ರೀ ಕೆ ಆರ್. ಮಾಧವರಾಯರು ತೀರ್ಮಾನಿಸಿದ್ದಾರೆ.

ಹಲವು ಸದಸ್ಯರುಗಳು ಮಾದೀ ಧಾರಿಗಳಲ್ಲವೆಂಬ ಕಾರಣದ ಮೇಲೆ ಅವರ ಹೆಸರುಗಳನ್ನು ಉಮೇದವಾರರ ಪಟ್ಟಿಯಿಂದ ತೆಗೆದು ಹಾಕಿರುವುದನ್ನೂ ಸಹ ರದ್ದುಗೊಳಿಸಿ ಅವರುಗಳ ಹೆಸರನ್ನೂ ಸೇರಿಸಿಕೊಂಡು ಪುನಃ ಚುನಾವಣೆ ನಡೆಸಬೇಕೆಂದು ಕೋರಿರುತ್ತಾರೆ.

○ ಪಚ್ಚಯಪ್ಪ ಕಾಲೇಜು ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಲು ದಿವಾನರು ಮದರಾಸಿಗೆ ತೆರಳಿದ್ದಾರೆ ನಾಳೆ ವಾಪಸ್ ಬರುವರು

† ಗೌರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರು ರಾಜಭವನಕ್ಕೆ ಭೇಟಿಯಿತ್ತಾಗ ಇಲ್ಲಿನ ವಸ್ತುಪ್ರದರ್ಶನಾಲಯದಲ್ಲಿ ಗೃಹ ಕೈಗಾರಿಕೆಗಳ ಪ್ರದರ್ಶನವೊಂದನ್ನು ನಡೆಸಲು ಸರ್ಕಾರದವರು ಏರ್ಪಡಿಸಿರುತ್ತಾರೆ.

§ ಭಾರತದ ಗೌರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರು ಇದೇ ೧೯ ನೇ ತಾ|| ಮೈಸೂರಿನಿಂದ ಬೆಂಗಳೂರಿಗೆ ತೆರಳುವಾಗ ಕೆಂಗೇರಿಯ ಪಂಚನಾಥ್ ಕಾರ್ಯಕರ್ತರ ಕೂಟದಲ್ಲಿ ಭಾಷಣ ಮಾಡುವರು.

ಹೈದರಾಬಾದಿನಲ್ಲಿ ರಜ್ವಿಯ ಪ್ರತಿ ಸರ್ಕಾರ

ಸರ್ ಮಿರ್ಜಾರವರ ಸಲಹೆಗಳನ್ನು ನಿಜಾಮರು ಒಪ್ಪುವುದಾದರೆ ಸಂಸ್ಥಾನದಲ್ಲಿ ಪ್ರತಿ ಸರ್ಕಾರವನ್ನು ಸ್ಥಾಪಿಸುವುದಾಗಿ ಖಾಸಿಂ ರಜ್ವಿಯು ನೈಜಾಮರನ್ನು ಬೆದರಿಸಿದ್ದಾನೆಂದೂ, ಬಿದರಿಯಲ್ಲಿ ರಜ್ವಿ ಸರ್ಕಾರವನ್ನು ರಚಿಸಲು ಎಲ್ಲ ಸಿದ್ಧತೆಗಳೂ ನಡೆದಿವೆಯೆಂದೂ ವರದಿಯಾಗಿದೆ

ಲಂಡನ್ನಿಗೆ ಎಸ್. ವಿ. ಕೃಷ್ಣಮೂರ್ತಿರಾಯರ ಭೇಟಿ

ಭಾರತ ರಾಜ್ಯಾಂಗ ಸಭೆಯ ಮೈಸೂರು ಪ್ರತಿನಿಧಿಯಾದ ಶ್ರೀ ಎಸ್. ವಿ ಕೃಷ್ಣಮೂರ್ತಿರಾಯರು ಬ್ರಿಟನ್ನಿನ ಪಾರ್ಲಿಮೆಂಟಿನ ಕಾರ್ಯಕ್ರಮವನ್ನು ತಿಳಿಯಲು ಭಾರತ ಪಾರ್ಲಿಮೆಂಟಿನ ನಿಯೋಗದ ಸದಸ್ಯರಾಗಿ ಲಂಡನ್ನಿಗೆ ಮುಂದಿನ ತಿಂಗಳು ೨೫ ನೇ ತಾ|| ಪ್ರಯಾಣ ಮಾಡುವರೆಂದೂ ನಂತರ ಯೂರೋಪಿನ ವಿವಿಧ ಭಾಗಗಳಲ್ಲಿ ಪ್ರವಾಸಮಾಡುವರೆಂದೂ ತಿಳಿದುಬಂದಿದೆ.

ಹೊಸ ಸಿನಿಮಾ ಕಟ್ಟಡಗಳಿಗೆ ಅನುಮತಿ ಇಲ್ಲ

ಭಾರತದಲ್ಲಿ ಮನೆಕಟ್ಟುವ ಸಾಮಗ್ರಿಗಳ ಅಭಾವವು ವಿಪರೀತವಾಗಿರುವುದರಿಂದ ಇನ್ನು ಮುಂದೆ ಸಿನಿಮಾ ಮಂದಿರಗಳನ್ನು ಕಟ್ಟಕೂಡದೆಂದು ಆಜ್ಞೆ ಮಾಡಲಾಗಿದೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಪಂಡಿತ ನೆಹರೂರವರು ತಿಳಿಸಿರುತ್ತಾರೆ. ದೊಡ್ಡ ದೊಡ್ಡ ವಾಸದ ಮನೆಗಳನ್ನು ಸರ್ಕಾರದ ಅನುಮತಿ ಇಲ್ಲದೆ ಕಟ್ಟಕೂಡದೆಂದೂ ಸಹ ಪ್ರಾಂತೀಯ ಸರ್ಕಾರಗಳಿಗೆ ಸೂಚನೆ ಕೊಡಲಾಗಿದೆಯೆಂದೂ ಅವರು ಹೇಳಿರುತ್ತಾರೆ.

ಹೈದರಾಬಾದ್ ದಿನಾಚರಣೆ

ಮೈಸೂರು ೧೦
ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಹೈದರಾಬಾದ್ ದಿನಾಚರಣೆಯ ಸಂಬಂಧವಾಗಿ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆಯು ನಡೆಯಿತು. ಶ್ರೀಗಳಾದ ಸುಬ್ಬರಾವ್ ಉಪಾಧ್ಯ, ಟಿ ರಾಮು, ಬಿ ನಾರಾಯಣಸ್ವಾಮಿ, ಇ. ಟಿ ನಂಜಪ್ಪ ಮತ್ತು ಟಿ ನರಸಿಂಹ ಅಯ್ಯಂಗಾರ್ಯರವರುಗಳು ಭಾಷಣಮಾಡಿದರು. ಹೈದರಾಬಾದಿನಲ್ಲಿ ನಡೆಯುತ್ತಿರುವ ರಜಾಕಾರ ದೌರ್ಜನ್ಯವನ್ನು ಖಂಡಿಸಿ, ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಹೋರಾಡುತ್ತಿರುವ ಅಲ್ಲಿನ ಜನರಿಗೆ ಯಶಸ್ಸನ್ನು ಕೋರಿ, ಅವರಿಗೆ ಎಲ್ಲ ಬೆಂಬಲವನ್ನು ನೀಡುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಬರೋಡಾ ರಾಜರು ಸಿಂಹಾಸನ ತ್ಯಜಿಸಬೇಕು

ಅಲ್ಲಿನ ಶಾಸನಸಭೆಯಲ್ಲಿ ನಿರ್ಣಯ
ಬರೋಡಾ ಸಂಸ್ಥಾನಾಧೀಶರ ಅಲ್ಪತೆಯಿಂದ ದೇಶದಲ್ಲಿ ಶಾಂತಿ ಮತ್ತು ರಕ್ಷಣೆಗೆ ಧಕ್ಕೆ ಬರು ವುದರಿಂದ ಅವರನ್ನು ಸಿಂಹಾಸನ ಭ್ರಷ್ಟರನ್ನಾಗಿ ಮಾಡಿ ಅವರ ಜ್ಯೇಷ್ಠಪುತ್ರನ ಪಟ್ಟಕ್ಕೆ ಬರುವವರೆಗೆ ಆಡಳಿತ [illegible] ಸರ್ಕಾರವು ವಹಿಸಬೇಕೆಂದು ಅಲ್ಲಿನ ಧಾರಾ ಸಭೆಯು ನಿರ್ಣಯ ಮಾಡಿದೆ. ಈ ರಾಜರು ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಬಗ್ಗೆ ಇತ್ತ ಭರವಸೆಗಳನ್ನು ಈಡೇರಿಸಿಲ್ಲವೆಂದೂ, ಕೇವಲ ಕಳೆದ ೬ ವಾರಗಳಲ್ಲಿ ಸಂಸ್ಥಾನದ ಬೊಕ್ಕಸದಿಂದ ೩ ಕೋಟಿ ರೂಗಳನ್ನು ತೆಗೆದು ವೆಚ್ಚ ಮಾಡಿರುವರೆಂದು ಅವರ ಮೇಲೆ ಅಪಾದನೆ ಹೊರಿಸಲಾಗಿದೆ

ನಿಜಾಮರ ೬೧ ಹಳ್ಳಿಗಳು ಸ್ವತಂತ್ರವಾದುವು

ಷೋಲಾಪುರ ಜಿಲ್ಲೆಯು ಗಡಿಪ್ರದೇಶದಲ್ಲಿರುವ ನೈಜಾಮರ ೬೧ ಹಳ್ಳಿಗಳು ಸ್ವತಂತ್ರವಾಗಿರುವುದಾಗಿ ಘೋಷಿಸಿರುವುವೆಂದು ವರದಿಯಾಗಿದೆ. ಈಗ ಎಂಬಲ್ಲಿ ಆ ಹಳ್ಳಿಗಳ ನಿವಾಸಿಗಳು ಶ್ರೀ ಪೂರ್‌ಚಂದ್‌ಗಾಂಧಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾರತದ ಧ್ವಜವನ್ನು ಹಾರಿಸಿದರೆಂದು ಹೇಳಲಾಗಿದೆ.

ಭಾರತದಿಂದ ಪರಾರಿಯಾಗಲು ಮುಸ್ಲಿಂ ರಾಜರುಗಳ ಸಂಚಿಕೆ

[illegible] ಸೇರಿದ ೬ ಜ[illegible] [illegible]ಗಳು ಈ ದೇಶವನ್ನು ಬಿಟ್ಟು [illegible]ಗೆ ಪರಾರಿಯಾಗಲು ಸಂಚು [illegible]ರೆಂದೂ, ಅಲ್ಲಿಂದ ಪತ್ರಗಳನ್ನು [illegible] ಪತ್ರಿಕೆ ಮುದ್ರಿಸಿದ್ದಾರೆಂದೂ, ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ [illegible] ನಡೆದ ಪರ್ಷಿಯನ್ [illegible]ರೆಂದೂ ತಿಳಿದುಬಂದಿದೆ.

ನಿಜಾಮರಿಗೆ ತಮ್ಮ ಅರಮನೆಯಲ್ಲಿಯೇ ಬಂಧನ

ಭಾರತ ಸರ್ಕಾರದೊಂದಿಗೆ ಹೈದರಾಬಾದು ಒಪ್ಪಂದಕ್ಕೆ ಬರಬೇಕೆಂದು ಒತ್ತಾಯ ಮಾಡುವ ಪತ್ರವೊಂದನ್ನು ಬ್ರಿಟನ್ನಿನ ಪ್ರಧಾನ ಮಂತ್ರಿ ಅಟ್ಲಿಯವರು ನೈಜಾಮರಿಗೆ ಬರೆದಿರುವರೆಂದೂ ಆದರೆ ನಿಜಾಮರು ತಮ್ಮ ಅರಮನೆಯಲ್ಲಿಯೇ ಬಂಧಿಸಲ್ಪಟ್ಟು, ರಜಾಕಾರರ ಪಹರೆಯನ್ನು ಇಡಲಾಗಿದೆಯೆಂದೂ, ಆದುದರಿಂದ ಅವರಿಗೆ ಆ ಪತ್ರವು ಸಿಕ್ಕಿಲ್ಲದಿರಬಹುದೆಂದೂ, ಲಂಡನ್ನಿನ ಪತ್ರಿಕೆಯೊಂದು ವರದಿಮಾಡಿದೆ.

ರಾಜಕುಮಾರಿ ಅಮೃತ್ ಕೌರ್‌ರವರ ಆಗಮನ

ಮೈಸೂರು ೧೦
ಭಾರತ ಸರ್ಕಾರದ ಆರೋಗ್ಯ ಮಂತ್ರಿಗಳಾದ ರಾಜಕುಮಾರಿ ಅಮೃತ್ ಕೌರ್‌ರವರು ಬೆಂಗಳೂರಿಗೆ ಇದೇ ೧೩ನೇ ತಾ|| ಆಗಮಿಸಿ, ರಾಜಧಾನಿಗೆ ೧೩ ನೇ ತಾ|| ಬರುವರೆಂದು ತಿಳಿದು ಬಂದಿದೆ.

ನ್ಯಾಯಾಧೀಶರುಗಳ ವರ್ಗಾವರ್ಗಿ

ಮೈಸೂರು [illegible] ನ್ಯಾಯಾಧೀಶ[illegible] [illegible] ಗೋಪಾಲಾಚಾರಿ ಅರಸಿ[illegible] [illegible] ನ್ಯಾಯಾಧೀಶರನ್ನಾಗಿ [illegible] ಶ್ರೀ ಎ ವಿಶ್ವ[illegible] [illegible] ನ್ಯಾಯಾಧೀಶ[illegible] [illegible]ಲಾಗಿದೆ.

ಲೋಕಪಾವನಿ ರೈಲ್ವೆ ಸೇತುವೆ ಸರಿಹೋಯಿತು

ಮೈಸೂರು ೧೦

ಪ.೪೮ರ ಡಿಸೆಯಿಂದ ಕೆಲವು ದಿನಗಳ ಹಿಂದೆ ಕುಸಿದು ಬಿದ್ದ ಲೋಕಪಾವನಿ ರೈಲ್ವೆ ಸೇತುವೆಯನ್ನು ಈಗ ದುರಸ್ತಿ ಮಾಡಲಾಗಿದೆ. ನಿನ್ನೆಯಿಂದ ರೈಲ್ವೆ ಸಂಚಾರವನ್ನು ಮೊದಲಿನಂತೆಯೇ ಏರ್ಪಡಿಸಲಾಗಿದೆ.

ಸಂತಾಪ ಸೂಚಕ ಸಭೆ

ರಾಜಧಾನಿಯ ರೈಸ್ ಮಿಲ್ ಮಾಲೀಕರುಗಳ ಸಂಘದವರು ಕಳೆದ ಶನಿವಾರ ಸಭೆ ನಡೆಸಿ, ಖಜಾಂಚಿ ... ಚೆಟ್ಟಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯ ಮಾಡಿ, ಆ ದಿನ ಮಿಲ್ಲುಗಳನ್ನೆಲ್ಲಾ ಮುಚ್ಚಿದರು.

ದಳವಾಯಿ ಹೈಸ್ಕೂಲು

ನಿನ್ನೆಯಿಂದ ಹೈಸ್ಕೂಲಿನ ಅಧ್ಯಾಪಕರ ... ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಮಹಾರಾಜಾ ಕಾಲೇಜಿನ ತತ್ವಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಎಂ. ಯಾಮುನಾಚಾರ್ಯರು 'ಸ್ವತಂತ್ರ ಭಾರತದಲ್ಲಿ ವಿದ್ಯಾಭ್ಯಾಸದ ಪುನರ್ರಚನೆ' ಎಂಬ ವಿಷಯವಾಗಿ ಅಮೋಘವಾದ ಭಾಷಣವನ್ನು ಮಾಡಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ವಿ. ನಂಜುಂಡಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ವರ್ಧಂತ್ಯುತ್ಸವ

... ಚಾಮರಾಜಪುರದ ಪ್ರಾಥಮಿಕ ... ಕಳೆದ ಶನಿವಾರ ಶ್ರೀ ... ವರ್ಧಂತ್ಯುತ್ಸವವನ್ನು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ... ವಲ್ಲಭಾಜೀ ... ನಂಜಪ್ಪನವರು, ಎಲ್. ... ರಾಜಯ್ಯನವರು ಮತ್ತು ಹೆಚ್. ಎಸ್. ಶ್ರೀಕಂಠಯ್ಯನವರುಗಳು ಭಾಷಣ ಮಾಡಿದರು. ... ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಪ್ರಾಥಮಿಕ ಶಾಲಾ ಆರಂಭೋತ್ಸವ

ಅಗರ ೭

ಯಳಂದೂರು ತಾಲ್ಲೂಕಿನ ... ಗ್ರಾಮದ ನೂತನ ಪ್ರಾಥಮಿಕ ಶಾಲೆಯ ಆರಂಭೋತ್ಸವವನ್ನು ನಿನ್ನೆ ತಾಲ್ಲೂಕು ... ಶ್ರೀ ... ಸಿದ್ದೇಗೌಡರು ನೆರವೇರಿಸಿದರು. ಶ್ರೀ ... ಅವರ ಪ್ರಾರ್ಥನೆಯಾದ ನಂತರ, ಶ್ರೀ ಆರ್. ಬಸವಣ್ಣನವರು ಸ್ವಾಗತ ಭಾಷಣ ಮಾಡಿ, ತಮ್ಮ ತಂದೆಯವರಾದ ದಿ|| ... ಹೆಸರಿನಲ್ಲಿ ಶಾಲೆಯ ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿದರು. ಶ್ರೀ ... ದೊಡ್ಡೇಗೌಡ, ... ಮುಂತಾದವರುಗಳು ಭಾಷಣ ಮಾಡಿದರು. ಅಧ್ಯಕ್ಷರು ಭಾಷಣ ಮಾಡಿ, ದೇಶದಲ್ಲಿ ವಿದ್ಯಾಭ್ಯಾಸವು ಹೆಚ್ಚಬೇಕೆಂದೂ, ಜನರೆಲ್ಲರೂ ಒಗ್ಗಟ್ಟಾಗಿರಬೇಕೆಂದೂ ತಿಳಿಸಿದರು. ಶ್ರೀ ... ಅವರಿಂದ ವಂದನಾರ್ಪಣೆಯಾದ ನಂತರ, ಸಮಾರಂಭವು ಮುಕ್ತಾಯವಾಯಿತು.

ಭನ್ಸಾಲಿಯವರ ಆಮರಣಾಂತ ಉಪವಾಸ

ಹೈದರಾಬಾದಿನ ರಜಾಕರರು ನಡೆಸುತ್ತಿರುವ ಅಮಾನುಷ ಕೃತ್ಯಗಳ ಬಗ್ಗೆ ಪ್ರತಿಭಟನೆ ತೋರಿಸಲು ಪ್ರೊ|| ಭನ್ಸಾಲಿಯವರು ನೆನ್ನೆಯಿಂದ ಆಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ.

ಕಾಶ್ಮೀರಕ್ಕೆ ಪಾಕಿಸ್ತಾನದಿಂದ ಸೈನ್ಯ ಮತ್ತು ಶಸ್ತ್ರಗಳು

ಕಾಶ್ಮೀರ ರಣರಂಗಕ್ಕೆ ರಾವಲ್ಪಿಂಡಿಯಿಂದ ... ವಿಶೇಷ ರೈಲುಗಳಲ್ಲಿ ಯುದ್ಧ ಸಾಮಗ್ರಿಗಳನ್ನೂ ಮತ್ತು ಸೈನಿಕರನ್ನೂ ಪಾಕಿಸ್ತಾನ ಕಳುಹಿಸಿದೆಯೆಂದು ವರದಿಯಾಗಿದೆ.

ಶ್ರೀ ಗಾಯತ್ರೀ ಟಾಕೀಸ್

10-8-48 ರಿಂದ

3 ದಿನಗಳು ಮಾತ್ರ

Warner's ರವರ

ರೋಮಾಂಚಕರ ಸಾಹಸ ಚಿತ್ರ

ವೈಲ್ಡ್ ಬಿಲ್ - ಹಿಕಾಕ್ ರೈಡ್ಸ್

ಹೈದರಾಬಾದನ್ನು ೪-೫ ದಿನಗಳಲ್ಲಿ ಹಿಸುಕಿಹಾಕಬಹುದು

ನಾವು ಇಷ್ಟಪಟ್ಟರೆ ಹೈದರಾಬಾದ್ ಸಂಸ್ಥಾನವನ್ನು ೪ ಅಥವಾ ೫ ದಿನಗಳಲ್ಲಿ ಹಿಸುಕಿಹಾಕಿ ನಿರ್ಮೂಲ ಮಾಡಬಹುದು—ಎಂದು ಬೊಂಬಾಯಿಯ ಪ್ರಧಾನಿ ಶ್ರೀ ಬಿ. ಜಿ. ಖೇರ್‌ರವರು ತಮ್ಮ ಗಡಿ ಪ್ರವಾಸಗಳಲ್ಲಿ ತಿಳಿಸಿರುತ್ತಾರೆ. ಗಡಿ ಪ್ರದೇಶದ ಪ್ರತಿಯೊಂದು ಹಳ್ಳಿಯಲ್ಲೂ ಸೈನ್ಯವನ್ನು ಇಡಬೇಕೆಂಬ ಜನಗಳ ಕೋರಿಕೆ ಬಗ್ಗೆ ಪ್ರಧಾನಿಯವರು ಉತ್ತರಕೊಟ್ಟು, ೬೦೦ ಮೈಲಿಗಳ ಗಡಿ ಪ್ರದೇಶವನ್ನು ಭಾರತ ಸರ್ಕಾರದವರು ಕಾಯುದೇಕಾಗಿರುವುದೂ, ಪ್ರತಿಯೊಂದು ಹಳ್ಳಿಯಲ್ಲೂ ಸೈನ್ಯವಿರುವ ಅಗತ್ಯವಿಲ್ಲವೆಂದೂ, ಕೇವಲ ಸ್ವಲ್ಪ ಕಾಲದಲ್ಲೇ ಸೈನ್ಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸಲ್ಪಡಬಹುದೆಂದೂ ಅವರು ತಿಳಿಸಿರುತ್ತಾರೆ.

ಭಾರತ ಸ್ವಾತಂತ್ರ್ಯ ದಿನಾಚರಣೆ

15-8-1948

ಎಲ್ಲಾ ಸೈಜಿನ

ರಾಷ್ಟ್ರ ಧ್ವಜಗಳು

ಬಿಕರಿಗೆ ಸಿದ್ಧವಾಗಿವೆ

ಖದ್ದರ್ ಪರಸ್ಪರ ಸಹಾಯ ಸಂಘ,

ಮೈಸೂರು.

ಭಾರತ ಕಾಂಗ್ರೆಸ್ಸಿನಲ್ಲಿ ಮೈಸೂರು ಕಾಂಗ್ರೆಸ್ಸಿನ ಐಕ್ಯ

ಬೆಂಗಳೂರು ೧೦

ಇನ್ನು ಮುಂದೆ ಮೈಸೂರು ಕಾಂಗ್ರೆಸ್ಸು ಅಖಿಲ ಭಾರತ ಕಾಂಗ್ರೆಸ್ಸಿನೊಡನೆ ಐಕ್ಯವಾಗಿ, ಪ್ರತ್ಯೇಕ ಮೈಸೂರು ಪ್ರಾಂತೀಯ ಕಾಂಗ್ರೆಸ್ ಆಗಿ ಮಾತ್ರ ಇರಬೇಕೆಂದು ನೆನ್ನೆ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯಲ್ಲಿ ನಿರ್ಧರಿಸಲಾಯಿತು.

UNIVERSITY OF MYSORE

Office of the University of Mysore, Mysore, Dated 4th August 1948

NOTIFICATION

The following University Examinations will commence from **Monday** the 18th October 1948. The detailed Time-tables will be published in the Gazette in due course

i) Intermediate in Arts
ii) Intermediate in Science
iii) Intermediate in Commerce
iv) B. A.,
v) B. Sc.,
vi) B. A. Hons Preliminar
vii) B. Sc. Hons Preliminar
viii) B. Com
ix) Engineering
x) L. M. P.

By Order
D. S. GORDON
Registrar.

REGULAR SHOWS at RAJKAMAL TALKIES

From 10-8-48
For 4 Days only
Daily 3 Shows

Arabian Nights
(In Technicolour)
ಅರೇಬಿಯನ್ ನೈಟ್ಸ್
(ಇಂಗ್ಲಿಷ್)
With:—Maria Montez
Mysore Sabu

From 17-8-48
SLAVE GIRL
(In Technicolour)

ನೀವು ಅನೇಕ ಬೆಂಗಾಲ್ ಸಿಲ್ಕ್ ಸೀರೆಗಳನ್ನು ನೋಡಿದ್ದೀರಿ. ಬಾಪುಸಾ ಕಂಪೆನಿಯಲ್ಲಿರುವುದನ್ನೂ ನೋಡಿ. ಎಂಥೆಂಥಾ ಒಳ್ಳೊಳ್ಳೆ ನಮೂನೆಗಳಿವೆ ಎಂಬುದು ನಿಮ್ಮ ಮನಸ್ಸಿಗೇನೇ ಖಾತ್ರಿಯಾಗುತ್ತದೆ. ಬೆಂಗಾಲ್ ಸಿಲ್ಕ್ ಸೀರೆಗಳಿಗೆ ಹೆಸರುವಾಸಿಯಾದ ಅಂಗಡಿ ಎಂದರೆ ಬಾಪುಸಾಂ, ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ವೆಟರಿನರಿ ಮತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆ, ಬೆಂಗಳೂರು

ನೋಟಿಫಿಕೇಷನ್

ನಂ. A 1-91/15-46

ತಾರೀಖು 31st July 1948

ರೈತರ ಮತ್ತು ದನಗಳನ್ನು ಸಾಕುವ ಸಮಸ್ತ ಜನರ ಉಪಯೋಗಕ್ಕಾಗಿ ನಮ್ಮ ಶ್ರೀ ಮನ್ಮಹಾರಾಜರವರ ಸರ್ಕಾರದವರು ಬೆಂಗಳೂರು ಮತ್ತು ಮೈಸೂರು ನಗರಗಳ ಪಶುವೈದ್ಯಶಾಲೆಗಳಲ್ಲಿ ನವೀನರೀತಿಯಲ್ಲಿ, ಅಂದರೆ ಇಂಜಕ್ಷನ್ ಮೂಲಕವೇ ದನಗಳನ್ನು ಫಲಕ್ಕೆ ತರಿಸುವ ಕೇಂದ್ರಗಳನ್ನು (Artificial Insemination Centres) ಸ್ಥಾಪಿಸಿರುತ್ತಾರೆ.

ಇದಕ್ಕಾಗಿ ಈ ಇಲಾಖೆಯವರು ಅತ್ಯುತ್ತಮ ಜಾತಿಯ ಬೆಲೆಬಾಳ್ವ ಸಿಂಧಿ ಮತ್ತು ಹಳ್ಳಿಕಾರು ಹೋರಿಗಳನ್ನೂ, ಮುರ್ರಾ ಕೋಣಗಳನ್ನೂ ಸಾಕಿ ಇವುಗಳ ಮೂಲಕ ಸಾರ್ವಜನಿಕರಿಗೆ ಈ ಕೆಳಗೆ ನಮೂದಿಸಿರುವ ಸೌಕರ್ಯಗಳನ್ನು ಕಲ್ಪಿಸಿದ್ದಾರೆ.

1) ಒಳ್ಳೆ ಜಾತಿಯ ಮತ್ತು ಬಹಳ ಉಪಯುಕ್ತವೂ ಆದ ಲಕ್ಷಣವಾದ ಕರುಗಳು ಹುಟ್ಟುತ್ತವೆ.
2) ಇದರಿಂದ ಹೋರಿಯ ರೋಗ ಸೋಂಕುವುದೂ ಇಲ್ಲದ್ದೂ ಅದನಂಬಿಕೆ ಇಲ್ಲ.
3) ಈಗಿನಂತೆ ಹೋರಿಯ ಬಳಿಗೇ ಅಗುವ ಫಲೋತ್ಪಾದನೆಗಿಂತ ಈ ನವೀನ ರೀತಿಯು ಬಹಳ ಮಟ್ಟಿಗೆ ಉತ್ತಮವಾದದ್ದೇ ಅಲ್ಲದೆ ಇದರಿಂದ ಹಸುಗಳಿಗಾಗಲೀ ಅವುಗಳಿಂದ ಉತ್ಪತ್ತಿಯಾದ ಕರುಗಳಿಗಾಗಲೀ ಯಾವ ವಿಧವಾದ ಅಪಾಯವೂ ಇಲ್ಲ.
4) ಹಸುವನ್ನು ಅಥವ ಎಮ್ಮೆಯನ್ನು ಬೆದೆಗೆ ಬಂದ 12-24 ಗಂಟೆಗಳೊಳಗೆ ಆಸ್ಪತ್ರೆಗೆ ಹೊಡೆದು ಕೊಂಡು ಹೋದರೆ ಖಾತ್ರಿಯಾಗಿ ಫಲೋತ್ಪಾದನೆ ಮಾಡಲಾಗುತ್ತೆ.
5) ಇದಕ್ಕಾಗಿ ಇಲಾಖೆಗಾಗಲೀ ಡಾಕ್ಟರಿಗಾಗಲೀ ಯಾವ ಫೀಜನ್ನೂ ಕೊಡಬೇಕಾಗಿಲ್ಲ.
6) ರೈತರೂ ದನಗಳುಳ್ಳವರೂ ಇದರ ಉಪಯೋಗವನ್ನೂ ಸೌಲಭ್ಯವನ್ನೂ ಪಡೆಯಬೇಕೆಂದು ಕೋರಿದೆ.

ಪಿ. ಎಂ. ನಾರಾಯಣಸ್ವಾಮಿ ನಾಯ್ಡು,
ಸೂಪರಿಂಟೆಂಡೆಂಟರು

Edited printed and published by A. R. Nagarajan at the Sadhvi Press D. Subbaiah Road Mysore

ಫೋನ್ ೭೯೨ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೧೧-೮-೪೮ [ಸಂಚಿಕೆ ೨೦

ಮತ್ತೊಬ್ಬ ಹೈದ್ರಾಬಾದ್ ಸಚಿವರ ರಾಜೀನಾಮೆ

ಶ್ರೀಮನ್ಮಹಾರಾಜರವರ ಪ್ರವಾಸ

ಮೈಸೂರು ೧೧

ಶ್ರೀಮನ್ಮಹಾರಾಜರವರು ಇದೇ ೧೪ ಮತ್ತು ೧೫ ನೇ ತಾ|| ಗಳಲ್ಲಿ ಮಂಡ್ಯ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳ ಪ್ರವಾಸ ಮಾಡುವರು.

೧೪ ನೇ ತಾ|| ಬೆಳಗ್ಗೆ ಅವರು ಕೃಷ್ಣರಾಜಪೇಟೆಗೆ ಭೇಟಿ ಕೊಟ್ಟು, ಅಲ್ಲಿನ ಮುನಿಸಿಪಲ್ ಹೈಸ್ಕೂಲಿನ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿ, ೧೧-೪೫ ಗಂಟೆಗೆ ನಾಗಮಂಗಲಕ್ಕೆ ತೆರಳಿ ಅಲ್ಲಿ ಸರ್ಕಾರಿ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ನೆರವೇರಿಸುವರು. ಅಲ್ಲಿಂದ ಮಾಕೋನಹಳ್ಳಿಗೆ ಪ್ರಯಾಣ ಬೆಳೆಸಿ, ಸಂಜೆ ಕುಣಿಗಲ್ಲಿನ ಸ್ಟಡ್ ಫಾರಂನನ್ನು ಪರೀಕ್ಷಿಸಿ, ಸಂಜೆ ಬೆಂಗಳೂರಿಗೆ ಆಗಮಿಸುವರು. ೧೫ನೇ ತಾ|| ಬೆಳಗ್ಗೆ ಬೆಂಗಳೂರು ರೇಸ್ ಕೋರ್ಸಿನಲ್ಲಿ ಭಾರತ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಏರ್ಪಡಿಸಿರುವ ಸೈನಿಕರ ಪೆರೇಡಿನಲ್ಲಿ ಸೆಲ್ಯೂಟನ್ನು ಸ್ವೀಕರಿಸುವರು. ೧೧ ಗಂಟೆಗೆ ಮದ್ದೂರಿಗೆ ಹೊರಟು ಅಲ್ಲಿ ಆಸ್ಪತ್ರೆ ಮತ್ತು ಮುನಿಸಿಪಲ್ ಹೈಸ್ಕೂಲು ಕಟ್ಟಡಗಳ ಶಂಕುಸ್ಥಾಪನೆಯನ್ನು ನೆರವೇರಿಸಿ ಮಂಡ್ಯಕ್ಕೆ ಆಗಮಿಸುವರು. ಮಧ್ಯಾಹ್ನ ೩ ಗಂಟೆಗೆ ಹೊಸೂರು ಸಕ್ಕರೆ ಕಂಪೆನಿಯ ಫಾರಂ ಕೆಲಸಗಾರರ ಕಾಲೋನಿಯ ಶಂಕುಸ್ಥಾಪನೆ ಮಾಡಿ, ಸಂಜೆ ಮೈಸೂರಿಗೆ ಹಿಂದಿರುಗುವರು.

ಮಹಾತ್ಮರ ಭಾವಚಿತ್ರ

ರಾಜಧಾನಿಯ ಚಿತ್ರ ಕಲಾ ಕೋವಿದರಾದ ಶ್ರೀ ಎಸ್. ಎ. ಸ್ವಾಮಿಯವರು ಚಿತ್ರಿಸಿರುವ ಮಹಾತ್ಮ ಗಾಂಧಿಯವರ ಸುಂದರವಾದ ಚಿತ್ರಪಟವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ. ಇದರಲ್ಲಿ ಮಹಾತ್ಮರ ಹಸ್ತಾಕ್ಷರವೂ ಸಹ ಇದೆ.

ಹೈದರಾಬಾದಿನಿಂದ ೪೦೦ ಬ್ರಿಟಿಷ್ ಜನರ ವಾಪಸು

ಹೈದರಾಬಾದಿನಲ್ಲಿರುವ ೪೦೦ ಬ್ರಿಟಿಷ್ ಜನರನ್ನು ವಾಪಸು ಕರೆಸಲು ಭಾರತದ ಬ್ರಿಟಿಷ್ ಹೈಕಮಿಷನರು ಈಗಾಗಲೇ ಏರ್ಪಾಡು ಮಾಡಿರುವರೆಂದೂ ಅವರುಗಳೆಲ್ಲಾ ವಿಮಾನದ ಮೂಲಕ ಹಿಂದಕ್ಕೆ ಕಳುಹಿಸಿಕೊಡಲಾಗುವುದೆಂದೂ ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆಯ ದಿನ ಖೈದಿಗಳ ಬಿಡುಗಡೆ

ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಜ್ಞಾಪಕಾರ್ಥವಾಗಿ ೪ ಸಾವಿರ ಜನ ಖೈದಿಗಳನ್ನು ಬಿಡುಗಡೆ ಮಾಡಲು ಮದರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ.

ಹೈದರಾಬಾದಿನ ಸೈನ್ಯದ ಸಜ್ಜು

ಹೈದರಾಬಾದಿನ ಸೈನ್ಯವನ್ನು ಇತ್ತೀಚೆಗೆ ಬಹಳವಾಗಿ ಹೆಚ್ಚಿಸಲಾಗಿದೆಯೆಂದೂ ಈಗ ಅಲ್ಲಿ ೮೦ ಸಾವಿರ ಸೈನಿಕರುವರೆಂದೂ ಟ್ಯಾಂಕ್‌ಗಳು ಮತ್ತು ಇತರ ಯುದ್ಧ ಶಸ್ತ್ರಗಳು ವಿಮಾನಗಳ ಮೂಲಕ ಹೊರಗಿನಿಂದ ಸರಬರಾಜಾಗುತ್ತಿವೆಯೆಂದೂ ಒಂದು ಪತ್ರಿಕೆಯು ವರದಿಮಾಡಿದೆ. ಸೈನ್ಯಶಿಕ್ಷಣಕ್ಕಾಗಿ ಬ್ರಿಟಿಷ್ ಮತ್ತು ಯೂರೋಪಿನ ಸೈನ್ಯಾಧಿಕಾರಿಗಳನ್ನು ನೇಮಿಸಲಾಗಿದೆಯೆಂದೂ ಸಂಸ್ಥಾನದಲ್ಲಿ ರಕ್ಷಣಾ ವ್ಯವಸ್ಥೆ ಮಾಡಲಾಗಿದೆಯೆಂದೂ ಹೇಳಲಾಗಿದೆ.

ಹೈದರಾಬಾದಿನ ಮತ್ತೊಬ್ಬ ಮಂತ್ರಿಗಳ ರಾಜೀನಾಮೆ

ಇತರ ಮಂತ್ರಿಗಳ ವರ್ತನೆಗೆ ಪ್ರತಿಭಟನೆ

ಲಿಂಗಾಯಿತ ವರ್ಗದಿಂದ ಶಾಸನ ಸಭೆಗೆ ಚುನಾಯಿತರಾಗಿ ಹೈದರಾಬಾದಿನ ಮಂತ್ರಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನಪ್ಪನವರೂ ಸಹ ರಾಜೀನಾಮೆ ಇತ್ತಿದ್ದಾರೆ. ಆ ಸಂಸ್ಥಾನದಲ್ಲಿ ರಜಾಕರು ನಡೆಸುತ್ತಿರುವ ಹಾವಳಿಗಳನ್ನು ಚರ್ಚಿಸಲು ಮಂತ್ರಿಮಂಡಲದಲ್ಲಿ ನಮ್ಮ ಪ್ರತಿನಿಧಿಗಳಿಗೆ ಅವಕಾಶ ಕೊಡುತ್ತಿಲ್ಲವೆಂದು ಅವರು ಹೇಳಿರುವರು.

ಇದಕ್ಕೆ ಮುಂಚೆ ಹೈದರಾಬಾದಿನ ಲಿಂಗಾಯಿತ ಸ್ಥಾಯಿ ಸಮಿತಿಯು ಸಭೆ ಸೇರಿ ಚುನಾಯಿಸಲ್ಪಟ್ಟ ಶಾಸನ ಸಭೆಯಲ್ಲಿರುವ ೭ ಮಂದಿ ಲಿಂಗಾಯಿತ ಸದಸ್ಯರೂ ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿದ್ದಿತು. ಅದರಂತೆ ಅವರೆಲ್ಲರೂ ರಾಜೀನಾಮೆ ಕೊಟ್ಟಿರುವರು.

ಷೇಖ್ ಅಬ್ದುಲ್ಲಾರವರನ್ನು ದಸ್ತಗಿರಿ ಮಾಡಲು ಪಾಕಿಸ್ಥಾನದ ಹಂಚಿಕೆ

ಕಾಶ್ಮೀರದ ಮೇಲೆ ಧಾಳಿಕಾರರು ಆಕ್ರಮಣ ಪ್ರಾರಂಭಿಸುವುದಕ್ಕೆ ಮುಂಚೆ ಪಾಕಿಸ್ಥಾನದ ಅಧಿಕಾರಿಗಳು ಅಲ್ಲಿನ ಪ್ರಧಾನಿ ಷೇಖ್ ಅಬ್ದುಲ್ಲಾರವರನ್ನು ಲಾಹೋರಿಗೆ ಬರುವಂತೆ ಆಹ್ವಾನಿಸಿ, ಅಲ್ಲಿ ಅವರನ್ನು ದಸ್ತಗಿರಿ ಮಾಡಿ, ಕರಾಚಿಗೆ ಕರೆದೊಯ್ದು, ಕಾಶ್ಮೀರದ ಜನಗಳ ಧಾಳಿಕಾರರಿಗೆ ಸ್ವಾಗತ ನೀಡಿ ಪಾಕಿಸ್ಥಾನವನ್ನು ಸೇರುವಂತೆ ಒಬ್ಬಾತ್ಮರದ ಪ್ರಕಟಣೆಯನ್ನು ಅವರ ಬಾಯಿನಿಂದ ಹೊರಡಿಸುವುದಕ್ಕೆ ಹಂಚಿಕೆ ಮಾಡಿದ್ದರೆಂದು ಷೇಖ್ ಅಬ್ದುಲ್ಲರವರೇ ಈಗ ತಿಳಿಸಿರುತ್ತಾರೆ.

ಮುಸ್ಲಿಂ ಯುವತಿಯನ್ನು ವಿವಾಹವಾಗಲು ಸಚಿವರ ರಾಜೀನಾಮೆ

ಸಂಯುಕ್ತ ಪ್ರಾಂತ್ಯದ ಹಣಕಾಸಿನ ಸಚಿವರಾಗಿದ್ದ ಶ್ರೀ ಕೃಷ್ಣದತ್ತ ಪಲಿವಾಲ್‌ರವರು ಮುಸ್ಲಿಂ ಯುವತಿಯೊಬ್ಬಳನ್ನು ಮದುವೆಯಾಗಬೇಕೆಂದು ನಿರ್ಧರಿಸಿ, ಆದಕಾರಣ ಪ್ರಧಾನಿ ಪಂತರ ವಿನಂತಿಯ ಮೇರೆಗೆ ತಮ್ಮ ಸಚಿವ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ. ಈಗ ತಮ್ಮ ಪ್ರೇಯಸಿಯನ್ನು ಆಗಸ್ಟ್ ೧೫ನೇ ತಾರೀಖು ವಿವಾಹವಾಗಲು ಪಲಿವಾಲ್‌ರವರು ನಿಶ್ಚಯಿಸಿದ್ದಾರೆ.

ಹೈಕೋರ್ಟಿನಲ್ಲಿ ವೆಂಕಟರಾಮಶಾಸ್ತ್ರಿಗಳವಾದ

ಸ್ವಂ ಸು ಫೋ] ಬೆಂಗಳೂರು ೧೧

ಸರ್ಕಾರದವರು ಹೊರಡಿಸಿರುವ ಜವಾಬ್ದಾರಿ ಶಾಸನದ ಬಗ್ಗೆ ನಾಳೆ ಹೈಕೋರ್ಟಿನಲ್ಲಿ ನಡೆಯಲಿರುವ ವಿಚಾರಣೆಯಲ್ಲಿ ಮದರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ಟಿ. ಆರ್. ವೆಂಕಟರಾಮಶಾಸ್ತ್ರಿಗಳು ಬೆಂಗಳೂರು ವಕೀಲರ ಸಂಘದ ಪರವಾಗಿ ವಾದ ಮಾಡುವರೆಂದು ತಿಳಿದು ಬಂದಿದೆ. ಬೆಂಗಳೂರು ವಕೀಲರ ಸಂಘದ ಪರವಾಗಿ ಒಂದು ವಿಜ್ಞಾಪನೆಯನ್ನು ಹೈಕೋರ್ಟಿನವರಿಗೆ ಅವರು ಕೊಟ್ಟಿದ್ದಾರೆ.

ರಾಜಕುಮಾರಿ ಅಮೃತ್ ಕೌರ್

ಭಾರತ ಸರ್ಕಾರದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತ್ ಕೌರ್‌ರವರು ನಾಳೆ ಬೆಳಗ್ಗೆ ೧೧-೩೦ ಗಂಟೆಗೆ ಮದರಾಸಿನಿಂದ ಇಲ್ಲಿಗೆ ಆಗಮಿಸಿ, ಸಚಿವ ಜನಾಬ್ ಮಹಮದ್ ರ್ ಸರೀಫ್‌ರವರೊಂದಿಗೆ ಮೈಸೂರಿಗೆ ಮಧ್ಯಾಹ್ನ ಪ್ರಯಾಣ ಮಾಡುವರು.

ಅಂಗೀಕೃತವಲ್ಲದ ಖಾದಿ ಮಾರಾಟಕ್ಕೆ ನಿಷೇಧ

ಸಂಸ್ಥಾನದಲ್ಲಿ ಅಂಗೀಕೃತವಲ್ಲದ ಖಾದಿ ಮಾರಾಟವನ್ನು ನಿಷೇಧಿಸಿ, ಸರ್ಕಾರದ ಖಾದಿ ಕೇಂದ್ರವು ಅಖಿಲ ಭಾರತ ಚರಕ ಸಂಘದವರಿಂದ ಒಪ್ಪಿಸಲ್ಪಟ್ಟ ಖಾದಿ ಮಾತ್ರ ಮಾರಾಟ ವ್ಯವಹಾರ ನಡೆಸಬೇಕೆಂದು ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಿರುವರೆಂದು ತಿಳಿದುಬಂದಿದೆ. ಈ ಸಂಬಂಧದಲ್ಲಿ ಅಖಿಲ ಭಾರತ ಚರಕಾ ಸಂಘದ ಕಾರ್ಯದರ್ಶಿಗಳು ಕಾಗದಗಳ ಕೊನೆಯಲ್ಲಿ ಬೆಂಗಳೂರಿಗೆ ಬರಲಿರುವರೆಂದೂ ಗೊತ್ತಾಗಿದೆ.

ಶಾಸನ ಸಭೆಯಲ್ಲಿಯೇ ಸದಸ್ಯರ ಮರಣ

ಕೆಲ ಕಾಲಕ್ಕೆ ಹಿಂದೆ ಶಾಸನಸಭೆಯ ಸದಸ್ಯರಾದ ಶ್ರೀ ಜಿ. ನೀಲಕಂಠ ಮಹಾಶಯರು ಸಭೆಯ ಮಧ್ಯಾಹ್ನದ ಸಭೆಯಲ್ಲಿ ತಮ್ಮ ವಾದವನ್ನು ಮಂಡಿಸುತ್ತಿರುವಾಗ ಕೊನೆಗೆ ಕುಸಿದು ಬಿದ್ದು ಮೃತಪಟ್ಟರೆಂದು ವರದಿ ಬಂದಿದೆ.

ರಷ್ಯಾ ಕಂಟಕ ತೋರುತ್ತಿದ್ದಾರೆ

ಬರ್ಲಿನ್ನಿನ ಪಶ್ಚಿಮ ವಿಭಾಗದಲ್ಲಿ ರಷ್ಯನರು ಕಂದರಗಳನ್ನು ತೋಡಿ ಅಡಚಣೆಗಳನ್ನು ಸೃಷ್ಟಿಸುತ್ತಿರುವರೆಂದು ವರದಿಯಾಗಿದೆ.

ಭಾರತಕ್ಕೆ ಹೈದರಾಬಾದ್ ಸೇರಬೇಕು: ಮೈಸೂರು ಮುಸ್ಲಿಮರ ಬೆಂಬಲ

ಸ್ವಂ ಸು ಫೋ] ಬೆಂಗಳೂರು ೧೧

ಮೈಸೂರು ಸಂಸ್ಥಾನದ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯ ಸಭೆಯು ಸಚಿವ ಜನಾಬ್ ಮಹಮದ್ ಶರೀಫ್‌ರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಸಭೆಯು ರಾಜಕೀಯವನ್ನು ತ್ಯಜಿಸುವ ಮತ್ತು ಅದರ ಹೆಸರನ್ನು ಬದಲಾಯಿಸುವ ವಿಷಯವನ್ನು ಚರ್ಚಿಸಲು ಮುಂದಿನ ತಿಂಗಳು ೫ ಮತ್ತು ೬ನೇ ತಾ|| ಬೆಂಗಳೂರಿನಲ್ಲಿ ಲೀಗಿನ ಸರ್ವಸದಸ್ಯ ಸಭೆಯು ನಡೆಯಬೇಕೆಂದು ತೀರ್ಮಾನಿಸಿದೆ.

ಹೈದರಾಬಾದ್ ಮತ್ತು ಕಾಶ್ಮೀರಗಳ ಬಗ್ಗೆ ಭಾರತ ಸರ್ಕಾರವು ಅನುಸರಿಸುತ್ತಿರುವ ನೀತಿಗೆ ಪೂರ್ಣ ಬೆಂಬಲ ನೀಡುವ, ಭಾರತ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೈಸೂರು ಮುಸ್ಲಿಮರೆಲ್ಲರೂ ಭಾಗವಹಿಸಿ, ಮಹಾತ್ಮರ ಸ್ಮಾರಕ ನಿಧಿಗೆ ಉದಾರವಾಗಿ ಸಹಾಯ ನೀಡಬೇಕೆಂದು ಕೋರುವ ನಿರ್ಣಯಗಳು ಅಂಗೀಕೃತವಾದುವು.

ಭಾರತದ ಪ್ರಗತಿಗೆ ಹೈದರಾಬಾದು ಕಂಟಕವಾಗಿದೆ

ಸರ್ದಾರ್ ಪಟೇಲರ ಹೇಳಿಕೆ

ರಜಾಕರು ಗಡಿ ಸುತ್ತ ಭಾರತ ಪ್ರದೇಶಗಳ ಮೇಲೆ ಧಾಳಿ ನಡೆಸಿ ಜನರನ್ನು ಕೊಲೆ ಮಾಡಿದರೆ ... ೧೧೭ ಮಂದಿಗೆ ... ರೆಂದೂ, ೪೧ ಜನ ... ಕ್ಕೆ ... ಯಿತೆಂದು ... ಸಭೆಯಲ್ಲಿ ಹೈದರಾಬಾದಿನ ಬಗ್ಗೆ ಬಂದ ಪ್ರಶ್ನೆಗೆ ಉತ್ತರ ಕೊಡುತ್ತಾ ಸರ್ದಾರ್ ಪಟೇಲರು ತಿಳಿಸಿದರು.

ಹೈದರಾಬಾದ ನಿಜಾಮರು ... ಬಂದ ... ಸ್ವತಂತ್ರರಾಗಿದ್ದ ... ಭಾರತದ ಪ್ರಗತಿಗೆ ಕಂಟಕವಾಗುತ್ತಿರುವುದು ಆ ಸಂಸ್ಥಾನವು ಭಾರತಕ್ಕೆ ಸೇರಿ, ಅಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಆಗಬೇಕು. ಹೈದರಾಬಾದ ಸಮಸ್ಯೆಗೆ ಇದೊಂದೇ ಪರಿಹಾರ ಮಾರ್ಗವೆಂದು ಸ|| ಪಟೇಲರು ಹೇಳಿದ್ದಾರೆ. ಹೈದರಾಬಾದಿನ ಸ್ಥಿತಿ ... ದಿನೇದಿನೇ ಭಾರತ ಸರ್ಕಾರಕ್ಕೆ ... ಉಂಟುಮಾಡುತ್ತಿದೆಯೆಂದೂ, ಆದರೆ ... ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಸರ್ಕಾರವು ಸಿದ್ಧವಾಗಿರುವುದೆಂದೂ ಅವರು ತಿಳಿಸಿದ್ದಾರೆ.

ನ್ಯಾಯಮೂರ್ತಿ ... ದವರು ... ಹೈದರಾಬಾದಿನ ಬಗ್ಗೆ ... ಸ್ಥಾನದ ಮಾತುಕತೆಗಳನ್ನು ... ದಲ್ಲಿ ವಿವರಿಸಿ, ಮೊದಲಿನಿಂದಲೂ ನೈಜಾಮರು ಯಾವ ರೀತಿ ... ಪರ್ಯಾಲೋಚಿಸುತ್ತಿರುವ ರೀತಿಯನ್ನು ತಿಳಿಸಲಾಗಿದೆ.

ವಿಧಾನಸಭೆಯಲ್ಲಿ ಅಮೃತ್ ಕೌರರ ಭಾಷಣ

ಮೈಸೂರು ೧೧

ಭಾರತ ಸರ್ಕಾರದ ಆರೋಗ್ಯ ಸಚಿವರಾದ ... ಅಮೃತ್ ಕೌರ್‌ರವರು ಇದೇ ... ತಾ|| ಪ್ರವಾಸ ಸಂಜೆ ... ಭೇಟಿ ... ಸಭೆಗೆ ದಯವಿಟ್ಟು ... ಭಾಷಣ ಮಾಡುವರೆಂದು ... ತಿಳಿದು ಬಂದಿದೆ.

ಮಹಾತ್ಮರ ಸ್ಮಾರಕ ಅಂಚೆ ಸ್ಟ್ಯಾಂಪುಗಳ ಮಾರಾಟ

[illegible]

ಚೆತ್ತಲೆ ಸಂಘದವರ ಸಮ್ಮೇಳನ

[illegible]

ಯೆಹೂದ್ಯರ ಸಲಹೆಗೆ ಅರಬ್ಬರ ನಿರಾಕರಣೆ

[illegible]

ದೇವಸ್ಥಾನದ ದುರಸ್ತಿಗೆ ಸಹಾಯ ಬೇಕು

[illegible]

ಜರ್ಮನಿಯಲ್ಲಿ ಸಿಗರೇಟುಗಳೇ ನಾಣ್ಯವಾಗಿದೆ

[illegible]

ಹಂಗೇರಿ ಅಧ್ಯಕ್ಷರ ಬಂಧನ

[illegible]

ಕಳ್ಳತನಗಳು ಹೆಚ್ಚಾಗುತ್ತಿವೆ

ಚಾಮರಾಜನಗರ —

[illegible]

ಅಮೇರಿಕದೊಡನೆ ಸೇರಲು ಸ್ಕಾಟ್ಲೆಂಡಿನ ಅಪೇಕ್ಷೆ

[illegible]

ವಿಮಾಲು ತೆರೆಯುವ ಕಾಲ

[illegible]

ಇಂಜನಿಯರಿಂಗ್ ವಿದ್ಯಾರ್ಥಿಗಳ ಸಂಘ

[illegible]

ಸುವರ್ಣ ಪದಕ ಬಹುಮಾನ

ಚಾಮರಾಜನಗರ

[illegible]

Edited printed and published by A. R. Nagarajan at the Sadhvi Pr... D. Subbaiah Road Mysore

ಬೆಳಗಿನ ಆಟಗಳು

13—8—48 ರಿಂದ
1 ದಿನಗಳು ಮಾತ್ರ

ತಮಾಷಾ

ಪ್ರಭಾ ಪಿಕ್ಚರ್ ಹೌಸ್

ಮಾರಾಟಕ್ಕಿದೆ

[illegible]

ಸ್ವಾತಂತ್ರ್ಯ ದಿನಾಚರಣೆಗಾಗಿ

ಗಾಂಧಿಜಿ ಅವರ ಸುಂದರ ವರ್ಣ ಚಿತ್ರ

(ಅಳತೆ 9"x12")

ಬೆಲೆ ಕೇವಲ ನಾಲ್ಕಾಣೆ

ಚೇತನ ಪುಸ್ತಕಾಲಯ, ಮೈಸೂರು

ಶ್ರೀ ವಿಜಯ ಫ್ಲೋರ್ &

ನಂ 251+252, ದಿವಾನ್ಸ್ ರೋಡ್, ಮೈಸೂರು.

[illegible]

UNIVERSITY OF MYSORE
NOTIFICATION

Dated 2nd August 1948

No. A3 894/47-48 Applications are invited from duly qualified Women candidates for the post of Principal, Maharani's College for Women, Bangalore. The salary attached to the post is Rs 400-25-700. The post is permanent. The selected candidate will be started on the minimum salary of Rs 400/- or on a higher salary according to qualifications and will be on probation for two years. The minimum academic qualification required is a good Honours or Masters Degree. Preference will be given to candidates who have experience in teaching and administration and who have done original work.

2. The post is pensionable. It is subject to the rules of the Mysore Service Regulations as regards salary, leave, pension, etc., and subject also to the rules of the University as regards discipline. The person selected will be required to join duty immediately after the receipt of orders of appointment.

3. Applications should contain the following information:—

Age, caste or community, qualifications (including examinations passed and name of University, date of passing and class) present position, salary and previous service, if any, as well as works published and other particulars, if any.

Copies of testimonials (which will not be returned) should accompany the application. Six sets of the application and of testimonials are required. Applicants already in service must forward their applications through their official superiors.

4. If required, candidates should be prepared to be interviewed at their own expense.

5. Applications should be addressed to the Registrar, University of Mysore, Mysore and sent so as to reach him ON OR BEFORE 10TH SEPTEMBER 1948.

D. S. Gordon,
Registrar,
University of Mysore,
Mysore

ಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೧೨-೮-೪೮ [ಸಂಚಿಕೆ ೨೧

ನಿಜಾಮರ ಪುತ್ರರೂ ರಾಜೀನಾಮೆ ಇತ್ತರು

ಪತ್ರಿಕೋದ್ಯೋಗಿ ಸಂಘಕ್ಕೆ ಅಮೆರಿಕಾ ಅಧಿಕಾರಿಗಳ ಭೇಟಿ

ಮೈಸೂರು ೧೨

ಮದರಾಸಿನಲ್ಲಿ ಅಮೆರಿಕದ ವೈಸ್ ಕಾನ್ಸಲರೂ ಮತ್ತು ವಾರ್ತಾ ಇಲಾಖಾಧಿಕಾರಿಗಳೂ ಆಗಿರುವ ಮಿ|| ಸ್ಟಾನ್ಲಿ ಡಾರ್ಟ್‌ರೆಂಡ್‌ಶನರನ್ನು ನಗರದ ಪತ್ರಿಕೋದ್ಯೋಗಿ ಸಂಘದವರು ನಿನ್ನೆ ಆಹ್ವಾನಿಸಿ ಸತ್ಕರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಸ್ವಾಗತ ಬಯಸಿದರು. ಮಿ|| ಸ್ಟಾನ್ಲಿಯವರು ಭಾಷಣಮಾಡಿ ಭಾರತವು ಸ್ವತಂತ್ರ ದೇಶವಾಗಿ ಪ್ರಗತಿ ಹೊಂದುತ್ತಿರುವುದಕ್ಕಾಗಿ ಅಮೆರಿಕದ ಜನರೆಲ್ಲರೂ ಅಭಿನಂದಿಸುತ್ತಾರೆಂದು ತಿಳಿಸಿದರು. ಈ ಎರಡು ದೇಶಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ ಮತ್ತು ವ್ಯಾಪಾರ ಅಭಿವೃದ್ಧಿ ಬಗ್ಗೆ ಸೌಲಭ್ಯಗಳನ್ನು ಕಲ್ಪಿಸಲು ಭಾರತದಲ್ಲಿ ಅಮೇರಿಕದ ಪ್ರತಿನಿಧಿಗಳನ್ನು ನೇಮಿಸಲಾಗಿದೆಯೆಂದು ಹೇಳಿದರು. ಅಮೆರಿಕಾ ಸರ್ಕಾರದ ಪರವಾಗಿ ಬೊಂಬಾಯಿನಲ್ಲಿ ಸ್ಥಾಪಿತವಾಗಿರುವ ವಾರ್ತಾ ಇಲಾಖೆಯ ಉದ್ದೇಶಗಳನ್ನು ಅವರು ವಿವರಿಸಿದರು. ಅದರ ಪ್ರಯೋಜನವನ್ನು ಇಲ್ಲಿನ ಪತ್ರಿಕೋದ್ಯೋಗಿಗಳು ಪಡೆಯಬೇಕೆಂದು ಕೋರಿದರು

ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆಯು ನಾಳೆ ಸಂಜೆ ೬ ಗಂಟೆಗೆ ಮೊಹಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದು ಅದರ ಅಧ್ಯಕ್ಷರು ತಿಳಿಸಿರುತ್ತಾರೆ

ಹೈದರಾಬಾದ್ ಗಡಿಯಲ್ಲಿ ಗೃಹ ಸಚಿವರ ಪ್ರವಾಸ

ಹೈದರಾಬಾದ್ ಮತ್ತು ಮೈಸೂರು ಗಡಿ ಪ್ರದೇಶದಲ್ಲಿಟ್ಟಿರುವ ಮೈಸೂರು ಸೈನ್ಯವನ್ನು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ತಮ್ಮ ಚಿತ್ರದುರ್ಗ ಜಿಲ್ಲೆಯ ಪ್ರವಾಸದಲ್ಲಿ ಪರಿಶೀಲಿಸಿ, ನಿನ್ನೆ ಬೆಂಗಳೂರಿಗೆ ಹಿಂತಿರುಗಿದರು. ಅವರು ಚಳ್ಳಕೆರೆ, ರಾಮಪುರ ಮತ್ತು ಇತ್ಯಾದಿಗಳಿಗೆ ಭೇಟಿ ಕೊಟ್ಟು ಮೈಸೂರು ಸೈನಿಕರ ಚಟುವಟಿಕೆಯನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

ನೈಜಾಮರ ಕುಮಾರರ ರಾಜೀನಾಮೆ

ಬೇರಾರಿನ ರಾಜಕುಮಾರರೆಂದೂ ಹೈದರಾಬಾದಿನ ಪ್ರಧಾನ ದಂಡನಾಯಕರೆಂದೂ ಬಿರುದಾಂಕಿತರಾಗಿರುವ ನೈಜಾಮರ ಕುಮಾರರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತಿರುವರೆಂದು ತಿಳಿದು ಬಂದಿದೆ. ವಿವರಗಳು ಇನ್ನೂ ಗೊತ್ತಾಗಿರುವುದಿಲ್ಲ

ಸಂತಾಪಸೂಚನೆ

ನಂಜನಗೂಡು ೧೨

ಇಲ್ಲಿನ ಪೌರಸಭೆಯ ವಿಶೇಷ ಅಧಿವೇಶನವು ಶ್ರೀ ಬಿ ಎಸ್ ಎಸ್ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಸೇರಿ, ಈ ಊರಿನ ನಿವಾಸಿಗಳಾಗಿದ್ದ, ಕೆಲವು ಕಾಲ ಪೌರಸಭೆಯ ಸದಸ್ಯರಾಗಿದ್ದ ಧರ್ಮರತ್ನಾಕರ ಸಿ ವೆಂಕಟರಾಮ್ ಚೆಟ್ಟಿಯವರ ಅಕಾಲ ಮರಣಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಲಾಯಿತು

ಬರುವ ಜೂನ್ ತಿಂಗಳವರೆಗೂ ಇದೇ ಮಂತ್ರಿಮಂಡಲ

ಟಿ ಸುಬ್ರಹ್ಮಣ್ಯಂರವರ ಹೇಳಿಕೆ

ಬೆಂಗಳೂರು ೧೨

'ಸಂಸ್ಥಾನದ ಪ್ರಜೆಗಳಿಗೆ ಮೈಸೂರಿನ ಪ್ರಜೆತನ ಮತ್ತು ಭಾರತದ ಯೂನಿಯನ್ನಿನ ಪ್ರಜೆತನವಿರಬೇಕೆಂಬ ಸಲಹೆಯನ್ನು ಮೈಸೂರು ರಾಜ್ಯಾಂಗ ಸಭೆಯು ಪರಿಶೀಲಿಸುತ್ತಿದೆ. ಈ ಸಲಹೆಯನ್ನು ಭಾರತ ಸರ್ಕಾರವು ಇನ್ನೂ ಒಪ್ಪಿಲ್ಲ. ಇದನ್ನು ಮೈಸೂರು ಒತ್ತಾಯಪಡಿಸುತ್ತಿದೆ. ಇದರಿಂದಲೇ ರಾಜ್ಯಾಂಗ ರಚನೆಯು ಸ್ವಲ್ಪ ತಡವಾಗುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಮಂತ್ರಿಮಂಡಲವು ೧೯೪೯ ನೇ ಜೂನ್ ತಿಂಗಳ ಅಂತ್ಯದವರೆಗೂ ಅಧಿಕಾರದಲ್ಲಿರಬೇಕಾಗುವುದು.' —ಎಂದು ಮೈಸೂರು ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯಂರವರು ಬೆಂಗಳೂರು ದಂಡಿನ ಸೆಂಟ್ ಜೋಸೆಫ್ ಕಾಲೇಜು ಸಂಘದ ಪ್ರಾರಂಭ ಭಾಷಣ ಮಾಡುತ್ತ ತಿಳಿಸುತ್ತಾರೆ. ಮೈಸೂರು ರಾಜ್ಯಾಂಗದ ರಚನೆಯನ್ನು ಮೈಸೂರು ಮಂತ್ರಿಮಂಡಲವು ಉದ್ದೇಶಪೂರ್ವಕವಾಗಿ ತಾಮಸ ಮಾಡುತ್ತಿದೆ ಎಂಬ ಭಾವನೆಯು ತಪ್ಪೆಂದೂ, ಭಾರತದ ರಾಜ್ಯಾಂಗವು ರಚಿತವಾಗುತ್ತಲೇ ಮೈಸೂರು ರಾಜ್ಯಾಂಗವು ಸಿದ್ಧವಾಗುವುದೆಂದೂ ಅವರು ಹೇಳಿದ್ದಾರೆ

ಬಿಡುಗಡೆಗಾಗಿ ಖೈದಿಗಳ ಮುಷ್ಕರ

ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ತಮ್ಮನ್ನು ಬಿಡುಗಡೆ ಮಾಡಬೇಕೆಂದು ನಾಗಪುರ ಜೈಲಿನಲ್ಲಿರುವ ೩೫೦ ಜನ ಖೈದಿಗಳು ಕಳೆದ ೧೨ ದಿವಸಗಳಿಂದಲೂ ಮುಷ್ಕರ ಹೂಡಿದ್ದಾರೆ

ಕರ್ನೂಲನ್ನು ಪ್ರತ್ಯೇಕಿಸಲು ನಿಜಾಮರ ಹಂಚಿಕೆ

ಕರ್ನೂಲ್ ಮತ್ತು ದ್ರೋಣಾಚಲದ ರೈಲ್ವೆ ಮಾರ್ಗಗಳನ್ನು ಕತ್ತರಿಸಿ, ಅವುಗಳಿಗೆ ಭಾರತದ ಇತರ ಪ್ರದೇಶಗಳಿಂದ ವ್ಯವಹಾರಗಳಿಲ್ಲದ ಹಾಗೆ ಮಾಡಲು ನೈಜಾಂ ರೈಲ್ವೆಯವರು ಯೋಚನೆ ಮಾಡಿದ್ದಾರೆಂದೂ, ಈ ಹಂಚಿಕೆ ಪ್ರಕಾರ, ಕರ್ನೂಲ್-ದ್ರೋಣಾಚಲದ ರೈಲ್ವೆ ಮಾರ್ಗದಲ್ಲಿರುವ ಮೂರ ನಿಲ್ದಾಣಗಳಿಗೆ ಹೈದರಾಬಾದಿನಿಂದ ಟೆಲಿಫೋನ್ ಸೌಕರ್ಯವನ್ನು ಕತ್ತರಿಸಲಾಗಿದೆಯೆಂದೂ ವರದಿಯಾಗಿದೆ

ಅವಸರದ ಶಾಸನವು ವಾಪಸಾಗಬೇಕು

ಶಿವಮೊಗ್ಗಾ ವಕೀಲರ ಸಂಘದವರ ಪ್ರಾರ್ಥನೆ

ಮೈಸೂರು ಸರ್ಕಾರದವರು ಇತ್ತೀಚಿಗೆ ಹೊರಡಿಸಿರುವ ಅವಸರದ ಶಾಸನವು ಸಂಸ್ಥಾನದ ಅತ್ಯುನ್ನತ ನ್ಯಾಯಪೀಠವಾದ ಹೈಕೋರ್ಟಿನ ಅಧಿಕಾರಕ್ಕೆ ಚ್ಯುತಿ ಒದಗುವ ರೀತಿಯಲ್ಲಿರುವುದರಿಂದ ಸರ್ಕಾರವು ತನಗಿರುವ ಶಾಸನಾಧಿಕಾರವನ್ನು ಅನುಚಿತವಾಗಿ ಪ್ರಯೋಗಿಸಿದೆಯೆಂದೂ, 'ಹೇಬಿಯಸ್ ಕಾರ್ಪಸ್' ಅರ್ಜಿಯನ್ನು ವಿಚಾರಿಸಲು ಹೈಕೋರ್ಟಿಗಿದ್ದ ಅಧಿಕಾರವನ್ನು ಈ ಶಾಸನವು ಕಿತ್ತುಕೊಂಡಿರುವುದರಿಂದ ನಾಗರಿಕರ ಮೂಲಭೂತ ಹಕ್ಕಿಗೆ ಧಕ್ಕೆ ಬಂದು ಸಂಸ್ಥಾನದಲ್ಲಿ ಕಾನೂನು ಬದ್ಧ ಆಡಳಿತ ನಡೆಯಲು ಏಕಮಾತ್ರ ರಕ್ಷಣೆಯು ಹೋದಂತಾಗಿರುವುದರಿಂದ, ಈ ಶಾಸನವನ್ನು ಕೂಡಲೇ ಶ್ರೀಮನ್ಮಹಾರಾಜರವರು ವಾಪಸು ತೆಗೆದುಕೊಳ್ಳಬೇಕೆಂದೂ ಪ್ರಾರ್ಥಿಸುವ ನಿರ್ಣಯವನ್ನು ಶಿವಮೊಗ್ಗೆಯ ವಕೀಲರ ಸಂಘದವರು ಅಂಗೀಕರಿಸಿದ್ದಾರೆ

ರುಮೇನಿಯಾ ಮೇಲೆ ರಷ್ಯದ ಕಣ್ಣು

ರುಮೇನಿಯಾವನ್ನು ರಷ್ಯದೊಳಗೆ ಈ ತಿಂಗಳೊಳಗಾಗಿ ಸೇರಿಸಿಕೊಳ್ಳಲು ರಷ್ಯನರು ಎಲ್ಲ ಸಿದ್ಧತೆಗಳನ್ನು ಮಾಡಿರುವರೆಂದು ಟರ್ಕಿಯ ರೇಡಿಯೋ ವರದಿ ಮಾಡಿದೆ. ಇದೇ ತಿಂಗಳು ೨೩ ನೇ ತಾ|| ರಷ್ಯನರ ನೇತೃತ್ವದಲ್ಲಿ ನಡೆಯಲಿರುವ ಚುನಾವಣೆಯಲ್ಲಿ, ರುಮೇನಿಯಾವನ್ನು ರಷ್ಯದಲ್ಲಿ ಐಕ್ಯ ಮಾಡಿಕೊಳ್ಳುವುದನ್ನು ಬಹಿರಂಗಪಡಿಸಲಾಗುವುದೆಂದು ಹೇಳಲಾಗಿದೆ

ಕಂದ-ವರ್ಣರಂಜಿತ ಮಕ್ಕಳ ಪುಸ್ತಕ

ರಾಜಧಾನಿಯ ವನಿತಾ ಸದನದ ಶಿಶು ಸಾಹಿತ್ಯ ಸಂಘದವರು ಪ್ರಕಟಿಸಿರುವ ವರ್ಣರಂಜಿತ ಮಕ್ಕಳ ಪುಸ್ತಕವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಮಕ್ಕಳಿಗೆ ಸುಲಭವಾಗಿ ತಿಳಿಯುವ ಕಥೆ ಚಿತ್ರಗಳನ್ನೊಳಗೊಂಡು ನರ್ಸರಿ, ಪ್ರೈಮರಿ ಮತ್ತು ಮಿಡಲ್ ಸ್ಕೂಲ ತರಗತಿಗಳ ಮಕ್ಕಳಿಗೆ ಉಪಯೋಗವಾದ ಕತೆಗಳು, ಪದ್ಯ ಪಾಠ ಇತ್ಯಾದಿಗಳನ್ನು ಇದರಲ್ಲಿ ಪ್ರಕಟಿಸಲಾಗಿದೆ. ಇಂತಹ ಪ್ರಕಟಣೆಯು ಮೈಸೂರಿನಲ್ಲಿ ಇದೇ ಮೊದಲನೆಯದು. ಈ ಉದ್ಯಮವು ಯಶಸ್ವಿಯಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ. ಬೆಲೆ ೮ ಆಣೆ

ವಿಧ್ಯಾರಂಭ ಮಹೋತ್ಸವ

ಮೈಸೂರು ೧೨

[illegible] ಶ್ರೀ ವರಲಕ್ಷ್ಮಿ ಸಂಗೀತ [illegible] ಮಂದಿರದಲ್ಲಿ ನಿನ್ನೆ ಶ್ರೀಮನ್ಮಹಾರಾಜರವರ ೩೦ ನೇ ವರ್ಷದ ವರ್ಧಂತ್ಯುತ್ಸವವು ವೈಭವದಿಂದ [illegible] ಶ್ರೀ [illegible] ರಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ನಂತರ ಮೈಸೂರು ಸಹೋದರರಿಂದಲೂ ಅವರ ಶಿಷ್ಯವರ್ಗದಿಂದಲೂ ಸಂಗೀತವು ನಡೆಯಿತು. ಮಂದಿರದ ವ್ಯವಸ್ಥಾಪಕರಾದ ಶ್ರೀ ಚಂದ್ರಶೇಖರ [illegible] ಸ್ವಾಗತವನ್ನು ಬಯಸಿ ಮಂದಿರದ ಪ್ರಗತಿಯ ಅಭಿವೃದ್ಧಿ ವಿಷಯವನ್ನು ವಿವರಿಸಿದರು. ಶ್ರೀ ಗಾನ್‌ಬಹದ್ದೂರ್ ಎಂ ರಾಮಸ್ವಾಮಿ ಮತ್ತು ಶ್ರೀ ಟಿ ಸೀತಾರಾಮಯ್ಯನವರು ಭಾಷಣಮಾಡಿ ಶ್ರೀಮನ್ಮಹಾರಾಜರವರ ಗುಣಕಥನವನ್ನು ಮಾಡಿದರು. ಅಧ್ಯಕ್ಷರ ಭಾಷಣದ ನಂತರ ಎಲ್ಲರೂ ಎದ್ದುನಿಂತು ಪ್ರಭುಗಳಿಗೆ ಶ್ರೇಯಸ್ಸನ್ನು ಕೋರುವ ನಿರ್ಣಯವನ್ನು ಅಂಗೀಕರಿಸಿದರು. ಮಂಗಳಾರತಿ, ರಾಷ್ಟ್ರಗೀತ, ಪ್ರಸಾದ ವಿನಿಯೋಗಗಳಾದ ಮೇಲೆ ಉತ್ಸವವು [illegible] ಸಮಾರಂಭ ಮುಕ್ತಾಯವಾಯಿತು

ನಿಜಾಮರ [illegible] ಹಳ್ಳಿಗಳಲ್ಲಿ [illegible] ಸರ್ಕಾರ

[illegible] ಜಿಲ್ಲೆಗೆ ಸೇರಿದ [illegible] ಸಮೀಪ [illegible] ಗಾರ್ಡೇ [illegible] ಸರ್ಕಾರವ [illegible] ರಸೆ ಸಂಸ್ಥೆಯು [illegible] ಮತ್ತು ರಕ್ಷಣೆ [illegible] ಈ ಹಳ್ಳಿಗ [illegible] ಜನರ [illegible] ಜನರನ್ನು ಈ ಸ್ವ [illegible] ೫೦ ಜನರಿಂದಾ [illegible] ಜೋರ [illegible] ಹಳ್ಳಿಗಳು ಈಗ ಸ್ವತಂತ್ರವಾಗಿವೆ

ಹೈಕೋರ್ಟಿನಲ್ಲಿ ಕಂಟೆಂಪ್ಟ್ ಸಂಬಂಧದ ವಿಚಾರಣೆ

ಸ್ವಂ ವ. ಫೋ] ಬೆಂಗಳೂರು ೧೨

ಸರ್ಕಾರದವರು ಹೊರಡಿಸಿರುವ ಅವಸರದ ಶಾಸನವನ್ನು ಪರಿಶೀಲಿಸುವ ಬಗ್ಗೆ ಈ ದಿನ ಹೈಕೋರ್ಟಿನ [illegible] ನ್ಯಾಯಾಧೀಶರುಗಳ ಮುಂದೆ ವಾದ ವಿವಾದಗಳು ಪ್ರಾರಂಭವಾದುವು. ಕೋರ್ಟಿನ ಒಳಗೆ ಜನರು ಕಿಕ್ಕಿರಿದು ತುಂಬಿದ್ದರು. ಬೆಂಗಳೂರು ವಕೀಲರ ಸಂಘದ ಪರವಾಗಿ ಮದರಾಸಿನ ಶ್ರೀ ಟಿ ಆರ್ ವೆಂಕಟರಾಮ ಶಾಸ್ತ್ರಿಗಳು ಹಾಜರಿದ್ದರು

ಮದರಾಸ್ ಸರ್ಕಾರದ ಅಡ್ವೊಕೇಟ್ ಜನರಲ್ಲರಾದ ಶ್ರೀ ಎಸ್ [illegible] ಅಯ್ಯಂಗಾರರವರು ಮೊದಲು ವಾದವನ್ನು ಪ್ರಾರಂಭಿಸಿ, ತಾವು ಸರ್ಕಾರದ ಪರವಾಗಿ [illegible] ಎಂಬುದಾಗಿ ತಿಳಿಸಿ, ಸರ್ಕಾರದವರು ಹೊರಡಿಸಿರುವ ಅವಸರದ ಶಾಸನವನ್ನು [illegible] ಮೈಸೂರು [illegible] ಮತ್ತು ಅದರ ಅಧಿಕಾರವನ್ನು [illegible]

[illegible]

ಪಾಂಡುಟಿಕ್ಸಡಿ

ಪಾಶ್ವ ಮೊದಲ್ಲಾದಲ್ಲಿ ಬಂದ ಮನ್ನ, ಟಾನಿಕ್, ಗ್ಲಿಸರಿನ್, ಔಷಧ ಹಾಗು ಉಪ್ಪುವ ಹಡಿ ಮನೆ ಕರಿಯಾದ ಬೆಲೆ ಒಂದಕ್ಕೆ ಕೊಡಲಾಗುತ್ತದೆ. ಇನ್ನ ಉಳಿದ ವ್ಯವಹಾರ ನಡೆಯುತ್ತದೆ.

ಜಿ. ರಾಮಸ್ವಾಮಯ್ಯ

ಚಿಟ್ಟದ ಪುರ, ಪೆಂಟಾಪಟ್ಟೆ ಬಳ್ಳಾರಿ.

ಶ್ರೀ ವಿಜಯ ಫ್ಲೋರ್ &

ಪ್ಲೇಟ್ ರೀ ಗ್ರೂಂಡಿಂಗ್ ವರ್ಕ್ಸ್

ನಂ 251+252, ದಿವಾನ್ಸ್ ರೋಡ್, ಮೈಸೂರು

(ಗುಂಡ್ಲುಪೇಟೆ ಮು ಆರ್. ಎಸ್ ಪಂಡಿತರ ವೈದ್ಯ ಶಾಲೆಯ ಎದುರು ಭಾಗ)

ಹೊಸದಾಗಿ ಸ್ಥಾಪಿಸಿರುವ ನಮ್ಮ ಮಿಲ್ಲಿನಲ್ಲಿ ಅಕ್ಕಿ, ರಾಗಿ, ಗೋಧಿ, ಜೋಳ ವಗೈರೆಗಳನ್ನು ಮಹಾಜನರ ಮನಸ್ಸಿಗೆ ಹಾಗೆ ಹಿಟ್ಟು ಮಾಡಿಕೊಡಲಾಗುತ್ತದೆ ಮತ್ತು ಫ್ಲೋರ್ ಮಿಲ್ ಪ್ಲೇಟುಗಳನ್ನು ಹೆಚ್ಚು ಕಾಲ ಬಾಳಿಕೆ ಬರುವ ಹಾಗೆ ರೀ-ಗ್ರೂವ್ ಮಾಡಲಾಗುತ್ತದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

Office of the Municipal Engineer City Municipal Council, Mysore

Dated 29-7-1948

NOTIFICATION

Sealed tenders will be received up to 4 p m on 17th Aug 48 by the Municipal Engineer for Constructing Municipal Canteen in the Compound of the Municipal Offices

Each tender must be accompanied with a challan for having remitted Rs 520 in Municipal Treasury as earnest money For full particulars please see the detailed notification on the Notice Board

V K Mukundan,
Municipal Engineer,
Mysore

॥ ಶ್ರೀ ॥

ಗಣೇಶಾ ಟಾಕೀಸ್

13-8-48 ರಿಂದ
ಪ್ರತಿ ದಿನ 3 ಆಟಗಳು
ವಾಹಿನಿಯವರ

ಸ್ವರ್ಗಸೀಮ

[ತೆಲುಗು]

—: ತಾರಾಗಣ: —

* ಜಯಮ್ಮ * ನಾಗಯ್ಯ
* ಭಾನುಮತಿ *

—: ಬರಲಿದೆ :—
ಹರಿದಾಸ್, ವಸಂತಸೇನಾ

ಸ್ವಾತಂತ್ರ್ಯ ದಿನಾಚರಣೆಗಾಗಿ

15-8-1948

ಎಲ್ಲಾ ಸೈಜಿನ
ರಾಷ್ಟ್ರ ಧ್ವಜಗಳು
ಬಿಕರಿಗೆ ಸಿದ್ಧವಾಗಿವೆ
ಖದ್ದರ್ ಪರಿಷ್ಕರ ಸಹಾಯ ಸಂಘ,
ಮೈಸೂರು.
ಭಾರತ ಸ್ವಾತಂತ್ರ್ಯ ದಿನಾಚರಣೆ

Edited printed and published by A. R. Nagarajan at the Sadhvi Press D Subbaiah Road Mysore.

REGULAR SHOWS at
RAJKAMAL TALKIES

From 10—8—48
For 4 Days only
Daily 3 Shows

Arabian Nights

(In Technicolour)
ಅರೇಬಿಯನ್ ನೈಟ್ಸ್
(ಇಂಗ್ಲಿಷ್)
With:—Maria Montez
Mysore Sabu

MORNING SHOWS
From 13—8—48
For 4 days

London Town

(In Technicolour)
—:With:—
Sidfield, Greta, Gynt, Petula Clark

From 14—8—48
SLAVE GIRL
(In Technicolour).

CHAMUNDESWARI TALKIES

Morning Shows at 10 30
From August 13th to 16th
M.G.M.'S

The Thin Man Goes Home

The 5th and the best of Thin-Man series
Featuring the screen's favourite
William Powell & Myrna Loy
Fail not to see this Fast-moving Thriller

SHANTI AGENCIES

Publishers, Advertisers and Representatives,
Dewan's Road, Mysore.

Now You Know How We Are Progressing!
Progress Shows Popularity

We Represent:-

Allied Engineering Industries
Bangalore — Steel Products

Reata Duplicator Company, Bangalore
For Rotary Duplicator (Hand-feeding and Automatic feeding, Type-writers and their parts, Steel Cash boxes, Iron Safes Etc.

Ganesh Chemicals, Mysore
Mohan Industries, Mysore

Monopolised Merchants of Coorg and Mysore Markets
You Get More and More Money,
Appoint us as your Representatives.

ಶ್ರೀ ಗಾಯತ್ರೀ ಟಾಕೀಸ್

13—8—48 ರಿಂದ
4 ದಿನಗಳು ಮಾತ್ರ
R. K. O. ರವರ

ದಿ ಫ್ಯೂಜಿಟೀವ್

(The Fugitive)
ಹೆನ್ರಿ ಫಾಂಡಾ ಮತ್ತು ಡೊಲೊರೆಸ್ ಡೆಲ್ ರಿಯೊ

ಬೆಳಗಿನ ಆಟಗಳು

13—8—48 ರಿಂದ
4 ದಿನಗಳು ಮಾತ್ರ

- ತಮಾಷಾ

—: ತಾರಾ :—
ಜಯರಾಜ್, ಗೋಪ, ಸದಾರ್
ಪ್ರಭಾ ಪಿಕ್ಚರ್ ಹೌಸ್

ಪ್ರಭುದೇವಾ ಟಾಕೀಸಿನಲ್ಲಿ

13-8-48 ರಿಂದ : ಅಮೋಘವಾದ **4** ನೇ ವಾರ
ಪ್ರತಿ ದಿನ 3 ಆಟಗಳು
ರಾಯಲ್ ಟಾಕೀಸಿನವರ

★ ಸಾವಿತ್ರಿ ಸಾವಿತ್ರಿ ★

(ತಮಿಳು)

ನಟ ವರ್ಗ:—ಶಾಂತ ಆಪ್ಟೆ, ಕೋಕಿಲ ಗಾನಂ ಎಂ. ಎಸ್. ಸುಬ್ಬಲಕ್ಷ್ಮಿ, ವೈ. ವಿ ರಾವ್, ಕೆ. ಸಾರಂಗಪಾಣಿ
ಜಿ. ಎ. ಚಲ್ಲಪ್ಪ, ಕೃಷ್ಣವೇಣಿ ಮುಂತಾದವರು
ಪ್ರತಿ ಶುಕ್ರವಾರ ನ್ಯೂಸ್ ರೀಲ್ ಮತ್ತು ಪಾಟೋಗ್ರಾಫನ ಬದಲಾವಣೆ.

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೧೩-೮-೪೮ [ಸಂಚಿಕೆ ೨೨

ನೈಜಾಮರು ಪಾಕಿಸ್ತಾನ ಚಕ್ರವರ್ತಿಯಾಗುವರೇ

ಭಾರತದ ಸ್ವಾತಂತ್ರ್ಯ ದಿನಾಚರಣೆ

ದೆಹಲಿ ಕೆಂಪು ಕೋಟೆ ಮೇಲೆ

ಪಂ॥ ನೆಹರೂರವರಿಂದ ಧ್ವಜಾರೋಹಣ

ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಪ್ರಧಾನಿ ಪಂಡಿತ ನೆಹರೂರವರು ೧೫ ನೇ ತಾ॥ ಬೆಳಗ್ಗೆ ೮ ಗಂಟೆಗೆ ದೆಹಲಿಯ ಕೆಂಪುಕೋಟೆಯ ಮೇಲೆ ಭಾರತದ ಧ್ವಜವನ್ನು ಹಾರಿಸುವರು ಈ ಸಮಾರಂಭದಲ್ಲಿ ಭಾರತದ ಎಲ್ಲ ಸೈನ್ಯಗಳೂ ಭಾಗವಹಿಸುವುವು ಕೆಂಪುಕೋಟೆಗೆ ಪ್ರಧಾನಿಯವರು ಆಗಮಿಸಿದಾಗ ಅವರನ್ನು ಭಾರತದ ರಕ್ಷಣಾ ಸಚಿವರಾದ ಸರ್ದಾರ್ ಬಲದೇವ್ ಸಿಂಗ್‌ರವರು ಸ್ವಾಗತಿಸುವರು ರಾಷ್ಟ್ರ ಧ್ವಜಾರೋಹಣಕ್ಕೆ ಮುಂಚೆ, ಸೈನ್ಯಗಳ ಪೆರೇಡಿನಲ್ಲಿ ನೆಹರೂರವರು ಸೆಲ್ಯೂಟನ್ನು ಸ್ವೀಕರಿಸುವರು.

ರೇಡಿಯೋ ಪ್ರಸಾರ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಅಖಿಲ ಭಾರತ ರೇಡಿಯೋ ಕೇಂದ್ರಗಳು ಕೆಳಗೆ ಕಂಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಿರುವರು ೧೪ನೇ ತಾ॥ ರಾತ್ರಿ ೮-೩೦ ಗಂಟೆಗೆ ಭಾರತದ ಗೌರ್ನರ್ ಜನರಲ್ಲರ ಸಂದೇಶ ೧೫ ನೇ ತಾ॥ ಬೆಳಗ್ಗೆ ೮-೩೦ ಗಂಟೆಗೆ ರಾಷ್ಟ್ರ ಧ್ವಜಾರೋಹಣ ಸಮಾರಂಭ ಮತ್ತು ಪಂಡಿತ ನೆಹರೂರವರ ಭಾಷಣ ರಾತ್ರಿ ೮-೩೦ ಗಂಟೆಗೆ ಪಂಡಿತ ನೆಹರೂರವರ ಇಂಗ್ಲಿಷ್ ಮತ್ತು ಹಿಂದೂಸ್ಥಾನಿ ಭಾಷಣ ಮತ್ತು ಸರ್ದಾರ್ ಪಟೇಲರ ಹಿಂದೂಸ್ಥಾನಿ ಭಾಷಣ.

ಪಾಕಿಸ್ತಾನ, ಹೈದ್ರಾಬಾದ್ ರೇಡಿಯೋಗಳಿಗೆ ನಿಷೇಧ

ಪಾಕಿಸ್ತಾನ ಮತ್ತು ಹೈದರಾಬಾದು ರೇಡಿಯೋಗಳನ್ನು ಜನರು ಕೇಳಕೂಡದೆಂದು ಒರೀಸಾ ನಗರದ ನ್ಯಾಯಾಧೀಶರು ೧೧ನೇ ಆಗಸ್ಟ್ ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ ಈ ಆಜ್ಞೆಯು ನಗರ ಮತ್ತು ದಂಡಿನ ಪ್ರದೇಶಗಳಲ್ಲಿ ೩ ತಿಂಗಳು ಕಾಲ ಜಾರಿಯಲ್ಲಿರುವುದೆಂದು ತಿಳಿಸಿರುತ್ತಾರೆ

ನೈಜಾಮರು ಪಾಕಿಸ್ತಾನದ ಚಕ್ರವರ್ತಿಗಳೇ?

ಭಾರತ ಮತ್ತು ಹೈದರಾಬಾದ್ ಸ್ನೇಹ ಒಪ್ಪಂದವು ಮುಗಿದ ಕೂಡಲೇ ಹೈದರಾಬಾದು ಪಾಕಿಸ್ತಾನಕ್ಕೆ ಸೇರುವುದೆಂದೂ, ಜಿನ್ನಾರವರ ನಂತರ ನೈಜಾಮರೇ ಪಾಕಿಸ್ತಾನದ ಚಕ್ರವರ್ತಿಗಳಾಗುವರೆಂದೂ ಲಾಹೋರಿನ ಇಸ್ಲಾಂ ಪತ್ರಿಕೆಗಳಲ್ಲಿ ಬೇಳಲಾಗುತ್ತಿದೆಯೆಂದು ವರದಿಯಾಗಿದೆ.

ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ

ಚಾಮರಾಜನಗರ ೧೨

ಇಲ್ಲಿನ ಶ್ರೀ ಜಯ ಚಾಮರಾಜೇಶ್ವರ ದೇವಸ್ಥಾನದ ದೇವಸ್ಥಾನ ಕಮಿಟಿಯವರು ಇಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಕರ್ನಾಟಕ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಛತ್ರದಲ್ಲಿ ವಾಸಮಾಡಲು ವಸತಿ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ ಇದಕ್ಕೆ ಪ್ರತಿಭೋಜನವಾಗಿ ಕಳೆದ ಸೋಮವಾರ ನಿಯಮ ಮಾಡಿಕೊಂಡಿರುವ ಕರ್ನಾಟಕ ಬ್ರಾಹ್ಮಣ ಮಹಾ ಸಭೆಯವರು ಸಂಚಿಕೆ ನೀಡಿ, ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಟ್ಟದ್ದಕ್ಕೆ ಸರ್ಕಾರದವರನ್ನು ವಂದಿಸುವ ನಿರ್ಣಯವನ್ನು ಅಂಗೀಕರಿಸಿದರು.

ಹೈದರಾಬಾದ್ ಸಚಿವರ ರಾಜೀನಾಮೆಗೆ ಕಾರಣ

ಹೈದರಾಬಾದಿನ ಮಂತ್ರಿಗಳಾಗಿದ್ದು ರಾಜೀನಾಮೆ ಇತ್ತ ಶ್ರೀ ಮಲ್ಲಿಕಾರ್ಜುನಪ್ಪನವರು ಒಂದು ಹೇಳಿಕೆಯನ್ನಿತ್ತು, ಇತ್ತೀಚಿನ ದಿನ ಮಂತ್ರಿಗಳೊಡನೆ ಕೆಲಸ ಮಾಡಲು ತಮಗೆ ಅಸಾಧ್ಯವಾಯಿತೆಂದೂ ಅವರಲ್ಲಿ ಕೋಮುವಾರು ಭಾವನೆ ಹೆಚ್ಚಿ, ಇನ್ನಿತರರ ಅಭಿಪ್ರಾಯಕ್ಕೆ ಅವರು ಮನ್ನಣೆ ಕೊಡುತ್ತಿಲ್ಲವೆಂದೂ ತಿಳಿಸಿರುತ್ತಾರೆ. ಕೆಲವು ದೌರ್ಜನ್ಯಗಳು ನಡೆದಿವೆಯೆಂದು ದೃಢಪಟ್ಟರೂ ಆ ಮಂತ್ರಿಗಳು ನುಜುಕ್ತರಲ್ಲಿಲ್ಲ ಜನಗಳ ಮೇಲೆ ರಜಾಕರು ನಡೆಸುತ್ತಿರುವ ದೌರ್ಜನ್ಯದ ಬಗ್ಗೆ ಸ್ಥಳೀಯ ಅಧಿಕಾರಿಗಳು ನಿಷ್ಪಕ್ಷಪಾತ ಹೇಳಿದರೆ ತಮ್ಮನ್ನು ಕೆಲಸದಿಂದ ತೆಗೆದು ಹಾಕುವರೆಂಬ ಭಯದಿಂದ ವರದಿ ಮಾಡುತ್ತಿಲ್ಲ ರಾಜ್ಯಾಂಗ ರಚನೆ ವಿಷಯ, ಸೈನ್ಯ ಮತ್ತು ಪೋಲೀಸಿನಲ್ಲಿ ಹಿಂದೂಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ದೇಶದಲ್ಲಿ ಶಾಂತಿ ನೆಲೆಸುವ ಬಗ್ಗೆ ತಾವು ಪಟ್ಟ ಪ್ರಯತ್ನಗಳೆಲ್ಲಾ ವಿಫಲವಾದವು ಹಿಂದೂಗಳ ಹಕ್ಕುಬಾಧ್ಯತೆಗಳನ್ನು ರಕ್ಷಿಸುವ ಯಾವ ಕಾರ್ಯಗಳನ್ನೂ ಮುಸ್ಲಿಂ ಮಂತ್ರಿಗಳು ವಿರೋಧಿಸುತ್ತಿದ್ದರು ಈಗಿನ ಪಂಕ್ತಿಯಲ್ಲಿ ಹೈದರಾಬಾದಿನಲ್ಲಿ ಯಾವ ರೀತಿಯ ಸುಧಾರಣೆಗೂ ದಾರಿಗೆ ಬರುವ ಹಾಗಿಲ್ಲ-ಎಂದು ಅವರು ಹೇಳಿದ್ದಾರೆ

ಹೈದರಾಬಾದಿನಲ್ಲಿ ಹಿಂದೂ ಸೈನಿಕರಿಗೆ ಕಿರುಕುಳ

ನಿಜಾಮರ ಸೈನ್ಯದಲ್ಲಿರುವ ಹಿಂದೂ ಸೈನಿಕರಿಗೆ ಕಿರುಕುಳವನ್ನು ಕೊಡಲಾಗುತ್ತಿದೆಯೆಂದು ಅಲ್ಲಿಂದ ತಪ್ಪಿಸಿಕೊಂಡ ಒಂದು ಹಿಂದೂ ಸಿಪಾಯಿಯೊಬ್ಬನು ತಿಳಿಸಿರುತ್ತಾನೆ ಹೈದರಾಬಾದ್ ಗಡಿಗೆ ಸಮೀಪದಲ್ಲಿರುವ ಪಲ್ಲಾಪುರಂ ಹಳ್ಳಿಯಲ್ಲಿರುವ ಸೈನ್ಯದ ಕೇಂದ್ರಕ್ಕೆ ಕಳೆದ ಜುಲೈ ೨೬ ನೇ ತಾ॥ ರಾತ್ರಿ ಹೈದರಾಬಾದು ಸೈನ್ಯದಿಂದ ಪರಾರಿಯಾದ ಸೈನಿಕನೊಬ್ಬನು ಬಂದನೆಂದೂ, ಆತನನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಲಾಗಿ, ಹಿಂದೂಗಳ ಮೇಲೆ ಅಮಾನುಷ ಕೃತ್ಯಗಳನ್ನು ನಡೆಸಬೇಕೆಂದು ಅಧಿಕಾರಿಗಳು ಹಿಂದೂ ಸಿಪಾಯಿಗಳಿಗೆ ಆಜ್ಞೆ ಮಾಡಿದರೆಂದೂ, ತಾವು ಅದನ್ನು ನಿರಾಕರಿಸಿದವರಿಂದ ತಮಗೆ ಕಿರುಕುಳವನ್ನು ಕೊಡಲಾರಂಭಿಸಿದರೆಂದೂ, ಅದನ್ನು ಸಹಿಸಲಾರದೆ ಅಲ್ಲಿಂದ ತಪ್ಪಿಸಿಕೊಂಡು ಬಂದನೆಂದೂ ಆತನು ತಿಳಿಸಿದ್ದಾನೆ.

ರೆವಿನ್ಯೂ ಸಚಿವರ ಪ್ರವಾಸ

ಮೈಸೂರು ೧೨

ರೆವಿನ್ಯೂ ಮತ್ತು ಮುಜರಾಯಿ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರು ನಾಳಿದ್ದು ರಾತ್ರಿ ರಾಜಧಾನಿಗೆ ಬರುವರು ೧೬ನೇ ತಾ॥ ಬೆಳಗ್ಗೆ ೭-೩೦ ಗಂಟೆಗೆ ಹೊರಟು ಇನ್ಸ್ಪೆಕ್ಷನ್ ಬಳಿ ಎಣ್ಣೆ ಹೊಳೆಗೆ ಜಿಲ್ಲಾ ಬೋರ್ಡಿನವರು ಕಟ್ಟಿಸುವ ಸೇತುವೆಯ ನಿರ್ಮಾಣವನ್ನು ಪರಿಶೀಲಿಸಿ ೧೧ ಗಂಟೆಗೆ ಟಿ ನರಸೀಪುರಕ್ಕೆ ತೆರಳಿ ೧೨ ಗಂಟೆಗೆ ಅ ಕಂದಾಯ ವನ್ನು ತಲುಪಿ ಮಧ್ಯಾಹ್ನದ ವರೆಗೆ ಹೋಗಿ ಮೂಗೂರು ಕೆರೆಯನ್ನು ಪರಿಶೀಲಿಸುವರು ಮಧ್ಯಾಹ್ನ ೩ ಗಂಟೆಗೆ ಸಂತೆ ಮರಹಳ್ಳಿಯ ಪರಿಶೀಲನೆ, ಅನಂತರ ಕ ದೇವ, ಉಮ್ಮತ್ತೂರು, ಆಲೂರು, ಚಾಮರಾಜನಗರಗಳಿಗೆ ಭೇಟಿ ಇತ್ತು ಮೈಸೂರಿಗೆ ಹಿಂದಿರುಗುವರು. ೧೭ನೇ ತಾ॥ ಬೆಳಗ್ಗೆ ಚಾಮುಂಡಿ ಹೊಂಗ್ರಾಮದ ನಿವೇಶನವನ್ನು ಪರಿಶೀಲಿಸಿ, ಕೃಷ್ಣರಾಜನಗರಕ್ಕೆ ಭೇಟಿಕೊಡುವರು ಬೆಳಗ್ಗೆ ೧೦ ಗಂಟೆಗೆ ಹೊಸೂರಿನ ಜಿಲ್ಲಾ ಬೋರ್ಡು ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸುವರು ಅನಂತರ ಕೆಸ್ತೂರು ಗ್ರಾಮದ ಆಸ್ಪತ್ರೆಯ ಶಂಕುಸ್ಥಾಪನೆ, ಅತ್ತಿಗೋಡು ಪ್ರಾಥಮಿಕ ಶಾಲಾ ಕಟ್ಟಡ ಸ್ಥಾಪನೆ, ಚಟ್ಟೆ ಪುರ ರಾಮನಾಥಪುರಗಳ ರಸ್ತೆಗಳ ಪರಿಶೀಲನೆ ನಡೆಸಿ ರಾಜಧಾನಿಗೆ ಹಿಂದಿರುಗುವರು.

ಕಾವೇರಿ ನದಿಯಲ್ಲಿ ಪ್ರವಾಹ

ಕಾವೇರಿ ನದಿಯಲ್ಲಿ ಪ್ರವಾಹ ಬಂದಿರುವುದೆಂದೂ ಈ ದಿನ ಮಧ್ಯಾಹ್ನ ೩ ಗಂಟೆ ಹೊತ್ತಿಗೆ ಇನ್ನೂ ಪ್ರವಾಹವು ಹೆಚ್ಚುವುದೆಂದೂ ನದಿಯ ದಡದಲ್ಲಿರುವ ಗ್ರಾಮಗಳ ಜನರಿಗೆ ಎಚ್ಚರಿಕೆ ಕೊಡಲಾಗಿದೆಯೆಂದೂ ಎಂಜಿನಿಯರುಗಳು ತಿಳಿಸಿದ್ದಾರೆ

ಕನ್ನಂಬಾಡಿ ಕಟ್ಟೆಯಲ್ಲಿ ಈ ವರ್ಷ ೧೧ ಗಂಟೆಗೆ ಹೊತ್ತಿಗೆ ೧೨೪ ೩೦ ಇಂಚು ನೀರು ಇತ್ತೆಂದೂ ವರದಿಯಾಗಿದೆ

ಗಡಿನಾಡಿನಲ್ಲಿ ಗುಂಡಿನೇಟು

ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ ಚಾರಿಸದ್ದಿನ ವ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಕಾರಣ ಅಲ್ಲಿನ ಸರ್ಕಾರದವರು ಹಲವು ಕೆಂಪು ಷರಟಿನವರನ್ನು ದಸ್ತಗಿರಿ ಮಾಡಿದುದರಿಂದ ಗಲಭೆ ಉಂಟಾಯಿತು ಪೋಲೀಸಿನವರು ಗುಂಡು ಹಾರಿಸಿದಾಗ ೧೨ ಜನರು ಮೃತರಾದರೆಂದು ತಿಳಿದುಬಂದಿದೆ

ನಿಜಾಮರ ಮತ್ತೊಬ್ಬ ಕುಮಾರರ ರಾಜೀನಾಮೆ

ಹೈದರಾಬಾದ್ ಅಭಿವೃದ್ಧಿ ಶಾಖೆಯ ಅಧ್ಯಕ್ಷರಾಗಿ ನೈಜಾಮರ ಎರಡನೇ ಕುಮಾರರಾದ ಅಜಾಂ ಜಾಹಿ ಪಾದರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರೆಂದು ತಿಳಿದು ಬಂದಿದೆ.

ದೆಹಲಿಯನ್ನು ಪಾಕಿಸ್ತಾನಕ್ಕೆ ಸೇರಿಸಲು ಪಿತೂರಿ

ದೆಹಲಿ, ಅಜ್ಮೀರ್, ಮಧ್ಯ ಪ್ರಾಂತ್ಯ, ಬಿಹಾರ್, ಬಿರಾರ್ ಮತ್ತು ಬೊಂಬಾಯಿ ನಗರಗಳನ್ನು ಪಾಕೀಸ್ತಾನಕ್ಕೆ ಸೇರಿಸಲು ಭಾರತದಲ್ಲಿ ಸ್ಥಾಪಿತವಾಗಿರುವ ಇಂಡೋ ಪಾಕಿಸ್ತಾನ ಇಸ್ಲಾಂ ಲೀಗಿನವರು ಗುಪ್ತ ಕಾರ್ಯಾಚರಣೆಯನ್ನು ಕೈಗೊಂಡಿರುವರೆಂದೂ, ಈ ಬಗ್ಗೆ ಪಾಕೀಸ್ತಾನಕ್ಕೆ ಪ್ರತಿಭಟನೆಯನ್ನು ಸೂಚಿಸಲಾಗಿದೆಯೆಂದೂ ಕೇಂದ್ರ ಶಾಸನ ಸಭೆಯಲ್ಲಿ ಪಂಡಿತ ನೆಹರೂರವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿರುತ್ತಾರೆ ಆ ಸಂಸ್ಥೆಯ ಮೇಲೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದೂ ಅವರು ಹೇಳಿರುತ್ತಾರೆ

ಹೈಕೋರ್ಟಿನಲ್ಲಿ ಬಿಸಿಬಿಸಿ ವಾತಾವರಣ

ಮದರಾಸ್ ಅಡ್ವೋಕೇಟ್ ಜನರಲ್ಲರ ನಿರ್ಗಮನ ಮತ್ತು ವಿವಾದ

ಸ್ಪೆಷಲ್ ಪೋಸ್ಟ್] ಬೆಂಗಳೂರು ೧೩

ಕಂಪೆನಿಯೊಂದರ ಸಂಬಂಧದ ವಿಚಾರಣೆಯು ಈ ದಿನ ಹೈಕೋರ್ಟಿನಲ್ಲಿ ನಡೆಯಿತು. ಮದರಾಸ್ ಅಡ್ವೋಕೇಟ್ ಜನರಲ್ಲರಾದ ಶ್ರೀ ಎನ್ ರಾಜಾ ಅಯ್ಯಂಗಾರರು ವಾದವನ್ನು ಮುಂದುವರಿಸಿ, ಹೈಕೋರ್ಟಿನ ಮೇಲೆ ಮೈಸೂರು ಶಾಸನ ಸಭೆಗಳಿಗೆ ಸಂಪೂರ್ಣ ಅಧಿಕಾರವಿದೆಯೆಂದೂ, ಆ ಪ್ರಶ್ನೆಯನ್ನು ಪ್ರಸ್ತಾಪಿಸಬೇಕೆಂದು ತಮಗೆ ಸರ್ಕಾರದವರಿಂದ ಸೂಚನೆ ಬಂದಿದೆಯೆಂದೂ ತಿಳಿಸಿದರು

ಶ್ರೀಮನ್ನ್ಯಾಯಾಧೀಶರು ಪ್ರಶ್ನೆಯನ್ನು ಚರ್ಚಿಸಿ, ಶಾಸನ ಸಭೆಯಿಂದ ಹೈಕೋರ್ಟಿನ ಅಧಿಕಾರಕ್ಕೆ ಚ್ಯುತಿ ಉಂಟಾಗಿದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕೆಂದು ಕೇಳಿದರು ಅದಕ್ಕೆ ಶ್ರೀ ರಾಜಾ ಅಯ್ಯಂಗಾರರು ಉತ್ತರ ಕೊಟ್ಟು ತಾವು ಸ್ಥಿತಿಯಿಂದ ವಿಚಾರ ಮಾಡಿ ಕೊಳ್ಳುವುದಾಗಿ ತಿಳಿಸಿದರು ಪ್ರಶ್ನೆಯನ್ನು ನ್ಯಾಯಾಧೀಶರು ಎತ್ತಿದ ನಂತರ ಮುಂದುವರಿಯಲು ತಾವು ಸಿದ್ಧರಿಲ್ಲವೆಂದು ಹೇಳಿ ವಾದಿಸುವುದು ವ್ಯರ್ಥ ಕಾಲಹರಣವಾದಂತಾಗುವುದೆಂದೂ ಹೇಳಿ ನ್ಯಾಯಸ್ಥಾನವನ್ನು ಬಿಟ್ಟು ಹೊರಟರು ಅವರು ಹೈಕೋರ್ಟಿನಲ್ಲಿ ಸ್ವಲ್ಪ ಕ್ಷೋಭೆ ಉಂಟಾಯಿತು.

ಅನಂತರ ಮದರಾಸಿನ ಮಾಜಿ ಅಡ್ವೋಕೇಟ್ ಜನರಲ್ಲರಾದ ಶ್ರೀ ಟಿ ಆರ್ ವೆಂಕಟರಾಮಶಾಸ್ತ್ರಿಯವರೂ ಹೊರಗೆ ಹೋಗಿದ್ದರು

ಈ ವಿಷಯ ಶ್ರೀ ರಾಜಾ ಅಯ್ಯಂಗಾರರು ವಿಶೇಷ ವಿಮಾನದಲ್ಲಿ ಬಂದ ಶ್ರೀ ವು ... ನ್ಯಾಯವಾದಿಗಳಾಗಿ ... ಅವರನ್ನು ... ಕಳುಹಿಸಿದರು.

ರಾಜಕುಮಾರಿ ಅಮೃತ್ ಕೌರ್‌ರವರ ಆಗಮನ

ಮೈಸೂರು ೧೩

ಭಾರತ ಸರ್ಕಾರದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತ್ ಕೌರ್‌ರವರು ಸಚಿವರುಗಳಾದ ಬಾಬು ಜಗಜೀವನ್‌ರಾಮ್ ಮತ್ತು ಶ್ರೀ ಹೆಚ್. ಸಿ. ದಾಸಪ್ಪನವರೊಡನೆ ರಾಜಧಾನಿಗೆ ನಿನ್ನೆ ರಾತ್ರಿ ೮ ಗಂಟೆಗೆ ಆಗಮಿಸಿದರು. ಮಾರ್ಗದಲ್ಲಿ ಅವರು ಕ್ಲೋಸ್‌ಪೇಟೆಯ ಆರೋಗ್ಯ ಕೇಂದ್ರಕ್ಕೂ ಮತ್ತು ಮಂಡ್ಯದ ಸಕ್ಕರೆ ಕಾರ್ಖಾನೆಗೂ ಭೇಟಿ ಕೊಟ್ಟರು.

ಈ ದಿನ ಬೆಳಿಗ್ಗೆ ರಾಜಕುಮಾರಿಯವರು ಕ್ಷಯರೋಗ ಆಸ್ಪತ್ರೆ, ಜಲ ಮಾರ್ಗ, ಕೃಷ್ಣರಾಜೇಂದ್ರ ಮತ್ತು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳು, ಮೆಡಿಕಲ್ ಕಾಲೇಜ, ಗರ್ಭಿಣಿ ಮತ್ತು ಶಿಶು ಸಂರಕ್ಷಣೆ ಕೇಂದ್ರಕ್ಕೆ ಭೇಟಿ ಕೊಟ್ಟಿದ್ದರು. ಮಧ್ಯಾಹ್ನ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ, ನಾಳೆ ಬೆಳಿಗ್ಗೆ ಉದಕಮಂಡಲಕ್ಕೆ ಪ್ರಯಾಣ ಬೆಳೆಸುವರು.

ಸಂತಾಪ ಸೂಚಕ

ಕನ್ನಡ ರಂಗಭೂಮಿಯ ಕಲಾಸೋಪಾನ ... ಮತ್ತು ಗುಬ್ಬಿ ಕಂಪೆನಿಯ ಪ್ರೋಪ್ರೈಟರ ಉಪಾಧ್ಯಕ್ಷರಾಗಿದ್ದ ಧರ್ಮರಾಜ ಕರಿಸಿ ಪೆರುಮಾಳ್ ಚೆಟ್ಟಿಯವರ ಅಕಾಲ ಮರಣಕ್ಕಾಗಿ ಸಂತಾಪವನ್ನು ಸೂಚಿಸಿ, ಅವರ ... ಸಹಕಾರಕ್ಕಾಗಿ ಅವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿ ಸಮಿತಿಯ ವ್ಯವಸ್ಥಾಪಕರಾದ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಪತ್ರವೊಂದನ್ನು ಬರೆದಿರುತ್ತಾರೆ.

ಶ್ರೀ ಗಾಯತ್ರೀ ಟಾಕೀಸ್

13—8—48 ರಿಂದ
4 ದಿನಗಳು ಮಾತ್ರ
R. K. O. ರವರ

ದಿ ಫ್ಯೂಜಿಟೀವ್
(The Fugitive)

ಪಾತ್ರ:—ಹೆನ್ರಿ ಫಾಂಡ್ ಮತ್ತು ಡೋಲೋರೆಸ್ ಡೆಲ್‌ರಿಯೊ

ಬೆಳಗಿನ ಆಟಗಳು

13—8—48 ರಿಂದ
1 ದಿನಗಳು ಮಾತ್ರ

ತಮಾಷಾ -

—:ಪಾತ್ರ:—
ಊರ್ಮಿಳಾ, ಗೋಪ, ಸರ್ದಾರ್ ಅಕ್ತರ್

ಪ್ರಭಾ ಪಿಕ್ಚರ್ ಹೌಸ್

ಸ್ವಾತಂತ್ರ್ಯ ದಿನಾಚರಣೆಗಾಗಿ

ನವ್ಯ ಸ್ವಾದ ಕಥೆ ಪುಸ್ತಕಗಳನ್ನು ಸುಲಭ ಬೆಲೆಗೆ ಕೊಡುತ್ತೇವೆ. ವಿವರಗಳಿಗೆ:—

ನ್ಯಾಷನಲ್ ಟ್ರೇಡಿಂಗ್ ಕಂಪೆನಿ
... ರೋಡ್, ಮೈಸೂರು

ಸಂಸ್ಥಾನದ ಸರಕಾರದ ಪತ್ರಗಳಲ್ಲಿ ಜಾತಿ ಮತಗಳ ಹೆಸರು ಹೋಗಬೇಕು

ಸರ್ಕಾರದ ವ್ಯವಹಾರಗಳಲ್ಲಿ ಜಾತಿ ಮತಗಳ ಹೆಸರುಗಳನ್ನು ತೆಗೆದುಹಾಕಬೇಕೆಂದು ಶ್ರೀ ಆರ್. ಆರ್. ದಿವಾಕರರು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ್ದ ನಿರ್ಣಯದ ಮೇಲೆ ಮೊನ್ನೆ ದಿನ ದೀರ್ಘ ಚರ್ಚೆ ನಡೆಯಿತು. ಈ ಕೂಡಲೇ ಬದಲಾವಣೆಯನ್ನು ಮಾಡಲು ಕಷ್ಟವೆಂದೂ, ಈ ವಿಷಯವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲು ಸರ್ಕಾರವು ಸಿದ್ಧವಿದೆಯೆಂದೂ ಸರ್ಕಾರದ ಪರವಾಗಿ ಭರವಸೆ ಕೊಟ್ಟುದರಿಂದ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

—

ಶಾಲಾ ಶಂಕುಸ್ಥಾಪನೆ

ಟಿ. ನರಸೀಪುರದ ವಿದ್ಯೋದಯ ಗ್ರಾಮೀಣ ಪ್ರೌಢಶಾಲಾ ಶಂಕುಸ್ಥಾಪನ ಮಹೋತ್ಸವವನ್ನು ಇದೇ ೧೬ನೇ ತಾ|| ಬೆಳಿಗ್ಗೆ ರೆವಿನ್ಯೂ ಸಚಿವರಾದ ಶ್ರೀ ಹೆಚ್. ಸಿದ್ಧಯ್ಯನವರು ನೆರವೇರಿಸುವರು.

ಸತ್ಕಾರ ಕೂಟ

ಶ್ರೀ ಮನ್ಮಹಾರಾಜರವರ ಅಸಿಸ್ಟೆಂಟ್ ಸೆಕ್ರಟರಿಯಾಗಿದ್ದು ಈಗ ನಿವೃತ್ತರಾದ ಶ್ರೀ ಪಿ. ಜಿ. ಸಚ್ಚಿದಾನಂದ ಶಿಳ್ಳೆಯವರನ್ನು ಬೀಳ್ಕೊಡಲು ಅರಮನೆ ಅಧಿಕಾರಿಗಳು ನಿನ್ನೆ ಚಾಮುಂಡಿ ಪಮುಖಾದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಸಂಬಂಧಮೂರ್ತಿಯವರಿಂದ ಧ್ರುವ ಚರಿತ್ರೆ ಎಂಬ ಹರಿಕಥೆಯು ನಡೆಯುತ್ತದೆ.

ಶ್ರೀ ವಿಜಯ ಫ್ಲೋರ್ & ಫ್ಲೇಟ್ ರೀ ಗ್ರೂವಿಂಗ್ ವರ್ಕ್ಸ್

ನಂ 251+252, ದಿವಾನ್ಸ್ ರೋಡ್, ಮೈಸೂರು.
(ಗುಂಡ್ಲುಪೇಟೆ ಮಾ|| ಆರ್. ಎಸ್. ಪಂಡಿತರ ರಾಮಗೋಪಾಲಯ್ಯರ ಛತ್ರದ ಎದುರುಭಾಗ)

ಹೊಸದಾಗಿ ಸ್ಥಾಪಿಸಿರುವ ನಮ್ಮ ಮಿಲ್ಲಿನಲ್ಲಿ ಅಕ್ಕಿ, ರಾಗಿ, ಗೋಧಿ, ಜೋಳ ವಗೈರೆಗಳನ್ನು ಮಹಾಜನರ ಮನಸ್ಸಿಗೊಪ್ಪುವ ಹಾಗೆ ಹಿಟ್ಟು ಮಾಡಿಕೊಡಲಾಗುತ್ತದೆ. ಮತ್ತು ಫ್ಲೋರ್ ಮಿಲ್ ಪ್ಲೇಟುಗಳನ್ನು ಹೆಚ್ಚು ಕಾಲ ಬಾಳಿಕೆ ಬರುವ ಹಾಗೆ ರೀ-ಗ್ರೂವ್ ಮಾಡಲಾಗುತ್ತದೆ.
ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

Edited printed and published by A. R. Nagarajan at the Sadhvi Press D. Subbaiah Road Mysore.

ಶ್ರೀಮನ್ಮಹಾರಾಜರವರ ಪ್ರವಾಸ ರದ್ದು

ಶ್ರೀಮನ್ಮಹಾರಾಜರವರಿಗೆ ಸ್ವಲ್ಪ ಅಸ್ವಸ್ಥತೆಯುಂಟಾಗಿರುವುದರಿಂದ ಅವರು ನಾಳೆಯಿಂದ ಮಂಡ್ಯ, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕೈಗೊಳ್ಳಲಿದ್ದ ಪ್ರವಾಸವನ್ನು ರದ್ದುಮಾಡಿದ್ದಾರೆ. ೧೫ನೇ ತಾ|| ನಡೆಯಲಿರುವ ಭಾರತದ ಸ್ವಾತಂತ್ರ್ಯ ದಿನಾಚರಣೆಯ ಪೆರೇಡಿನಲ್ಲಿ ಮಾತ್ರ ಭಾಗವಹಿಸುವರು.

ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಮಹಿಳೆಯರ ಸಭೆ

ಇದೇ ೧೫ನೇ ತಾ|| ಸಂಜೆ ೪-೩೦ ಗಂಟೆಗೆ ಮಹಾರಾಣಿಯವರ ಕಾಲೇಜಿನಲ್ಲಿ ಭಾರತ ಸ್ವಾತಂತ್ರ್ಯದಿನಾಚರಣೆಯ ಸಂಬಂಧದಲ್ಲಿ ಮಹಿಳೆಯರ ಸಭೆಯು ನಡೆಯುವುದೆಂದೂ, ರಾಜಧಾನಿಯ ಮಹಿಳೆಯರೆಲ್ಲ ರೂಪದಲ್ಲಿ ಭಾಗವಹಿಸಬೇಕೆಂದು ಶ್ರೀಮತಿ ರಾಮೇಶ್ವರಮ್ಮನವರು ಪ್ರಾರ್ಥಿಸಿರುತ್ತಾರೆ.

ಆರಾಧನೆ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಶ್ರೀ ಗುರುಗಳ ಆರಾಧನಾ ಮಹೋತ್ಸವವು ಇದೇ ೨೦, ೨೧ ಮತ್ತು ೨೨ನೇ ತಾರೀಖುಗಳಲ್ಲಿ ಜರುಗುವುದು. ಪ್ರತಿದಿನ ಬೆಳಿಗ್ಗೆ ಅಭಿಷೇಕ, ಅರ್ಚನೆ ಮತ್ತು ಸಂಜೆ ೫ ಗಂಟೆಗೆ ಹರಿಕಥೆ ಮತ್ತು ಉಪನ್ಯಾಸಗಳು ನಡೆಯುವುವು.

ಉದಾರ ದಾನ

ಮೈಸೂರು ಜಿಲ್ಲಾ ಬೋರ್ಡಿನವರು ಹೊಸೂರು ಗ್ರಾಮದಲ್ಲಿ ಕಟ್ಟಿಸಲಿರುವ ಆಸ್ಪತ್ರೆಗೆ ಶ್ರೀ ತಿಮ್ಮಶೆಟ್ಟರು ೫ ಸಾವಿರ ರೂಪಾಯಿಗಳನ್ನೂ, ಕಿತ್ತೂರಿನ ಆಸ್ಪತ್ರೆಗೆ ಶ್ರೀ ಚಿನ್ನೇಗೌಡರು ೬ ಸಾವಿರ ರೂ.ನ್ನು ಅತ್ತಿಗೋಡು ಪಾಠಶಾಲಾ ಕಟ್ಟಡಕ್ಕೆ ಶ್ರೀ ರಾಜಪ್ಪನವರು ೨ ಸಾವಿರ ರೂ.ನ್ನೂ ಉದಾರವಾಗಿ ಕೊಟ್ಟಿರುವರು.

ಅಪೇರಾ ಟಾಕೀಸ್

14—8—48 ರಿಂದ
ಪ್ರತಿ ದಿನ ಎರಡು ಆಟಗಳು

ಪರಂಜ್ಯೋತಿ
ಅಥವಾ
ಸಿರಿಯಾಳ ಚರಿತ್ರೆ
(ತಮಿಳ)

ಪಾತ್ರ:—ಪಿ. ಎ. ಪೆರಿಯ ನಾಯಕಿ, ಟಿ. ಪಿ. ರಾಜಲಕ್ಷ್ಮಿ, ಕೃಷ್ಣನ್, ಮಧುರಂ

Morning Shows
From 13—8—48
Smoky
(Techniclor)

ಕುದುರೆ ಜೂಜಿನಿಂದ ಸರ್ಕಾರಕ್ಕೆ ೧೧|| ಲಕ್ಷ ರೂ. ಆದಾಯ

ಈ ವರ್ಷ ನಡೆದ ಕುದುರೆ ಜೂಜಿನಿಂದ ಮೈಸೂರು ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ೧೧|| ಲಕ್ಷ ರೂ. ಆದಾಯ ಬಂದಿದೆಯೆಂದು ಹೇಳಲಾಗಿದೆ.

ಮಾರಾಟಕ್ಕಿದೆ

ವಾಣೀವಿಲಾಸ ಮೊಹಲ್ಲಾದಲ್ಲಿ ಅಂಗಳ, ಕಾಂಪೌಂಡ್, ಗ್ಯಾರೇಜು, ಔಟ್‌ಹೌಸ್ ಉಳ್ಳ ಮಹಡಿ ಮನೆ ಸರಿಯಾದ ಬೆಲೆ ... ಕೊಡಲಾಗುತ್ತೆ. ... ಉಳ್ಳವರು ವ್ಯವಹಾರ ನಡೆಸಬಹುದು.

ಆರ್. ಜಿ. ರಾಮಸ್ವಾಮಯ್ಯ
ಚಿಟ್ಟಿದ ಪುರ, ಪೆರಿಯಾಪಟ್ಣ ...

|| ಶ್ರೀ ||
ಗಣೇಶಾ ಟಾಕೀಸ್

13-8-48 ರಿಂದ
ಪ್ರತಿ ದಿನ 3 ಆಟಗಳು
ವಾಹಿನಿಯವರ

ಸ್ವರ್ಗಸೀಮ
[ತೆಲುಗು]

—:ತಾರಾಗಣ:—
* ಜಯಮ್ಮ * ನಾಗಯ್ಯ
* ಭಾನುಮತಿ *

ಇದರೊಂದಿಗೆ ಲಾರ್ಡ್ ಮೌಂಟ್‌ಬ್ಯಾಟನ್ನರವರು ಭಾರತದಿಂದ ಹೊರಡುವುದು ಮತ್ತು ಶ್ರೀ ರಾಜಾಜಿಯವರು ಗೌವರ್ನರ್ ಜನರಲ್ಲರ ಅಧಿಕಾರದ ಪ್ರಮಾಣವಚನ ಸ್ವೀಕಾರ ಇವುಗಳ 'ಪರಿವರ್ತನ' ಎಂಬ ಒಂದು ರೀಲನ್ನು ಸಹ ಪ್ರದರ್ಶಿಸಲಾಗುವುದು.

ನಿಮ್ಮ ಮೈ ಮೊಗದ ಬಣ್ಣ ಕಳೆಯ ಬೇಕೆ? ನೀವು ಲಾವಣ್ಯ ಮನೋಹರಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

:: ಪ್ರಭಾ ::

13—8—48 ರಿಂದ : ಅಮೋಘ 2 ನೇ ವಾರ
ಬಾಂಬೆ ಟಾಕೀಸಿನವರ ಸಾಹಸ ಚಿತ್ರ

* ಮಜ್‌ಬೂರ್ *
[ಹಿಂದಿ]

" ಮುನವರ್ ಸುಲ್ತಾನ " ಶ್ಯಾಮ್ " " ಇಂದು " ಸೋಹನ್‌ಲಾಲ್ "

ಪೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೧೪-೮-೪೮ [ಸಂಚಿಕೆ ೨೩

ಭವನಗರದ ರಾಜರು ಮದರಾಸ್ ಗೌರ್ನರು

ಮೈಸೂರು ನಗರ ಕಾಂಗ್ರೆಸ್ ಸಮಿತಿ

ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

೧೫-೮-೧೯೪೮ ಭಾನುವಾರ ಪ್ರಾತಃಕಾಲ [illegible] ಗಂಟೆಗೆ ಎಲ್ಲಾ ಮೊಹಲ್ಲಾಗಳಲ್ಲೂ [illegible] ಕಚೇರಿ ೯ ಗಂಟೆಗೆ ಧ್ವಜಾರೋಹಣ [illegible] ಹಾಲ್ ಮೈದಾನದಲ್ಲಿ ವಿದ್ಯಾರ್ಥಿಗ[ಳು] ಎಲ್ಲಾ ಸಾರ್ವಜನಿಕ ಸಂಸ್ಥೆಗಳೂ ಕ[ಚೇ]ರಿಯನ್ನು ಮುಗಿಸಿಕೊಂಡು ಧ್ವ[ಜಾ]ರೋಹಣಕ್ಕೆ ಬರಬೇಕೆಂದು ಪ್ರಾರ್ಥನೆ [illegible] ಗಂಟೆಯಿಂದ ಮಹಾತ್ಮ ಗಾಂಧೀ ಸ್ಕ್ವಾ[ರ್‌]ಗೆ (ಮಹಾತ್ಮ ಗಾಂಧಿ ಸ್ಕ್ವಾ[ರ್‌] [illegible], ಮೈಸೂರು ನಗರ ಇವರಿಂದ) [ಸಾ]ಯಂಕಾಲ ೫-೩೦ ಗಂಟೆಗೆ ಮೆರವಣಿಗೆ [ಕಾಂ]ಗ್ರೆಸ್ ಕಚೇರಿಯಿಂದ ಹೊರಡುವುದು [ವಿದ್ಯಾ]ರ್ಥಿಗಳೂ ಸಾರ್ವಜನಿಕ ಸಂಸ್ಥೆಗಳು [ಎ]ಲ್ಲಾ ದಯಮಾಡಿ ಭಾಗವಹಿಸಬೇಕೆಂ[ದು ಪ್ರಾರ್ಥ]ನೆ. ಸಾಯಂಕಾಲ ೬-೩೦ ಗಂ[ಟೆಗೆ ಬ]ಹಿರಂಗ ಸಭೆ ಟೌನ್‌ಹಾಲ್ ಮೈ[ದಾನದ]ಲ್ಲಿ ಸೂಚನೆ:— ಸಾರ್ವಜನಿಕರು [illegible] ಮನೆ ಮತ್ತು ವ್ಯಾಪಾರಸ್ಥಳಗಳಮೇ[ಲೆ ರಾ]ಷ್ಟ್ರಧ್ವಜಗಳನ್ನು ಹಾರಿಸಬೇಕು ಸಾ[ರ್ವಜ]ನಿಕ ಸಂಸ್ಥೆಗಳು ನಗರ ಸಮಿತಿಯ [ಕಾರ್ಯ]ಕ್ರಮವನ್ನು ಅನುಸರಿಸಿ ತಮ್ಮ ಕಾ[ರ್ಯ]ಕ್ರಮವನ್ನು ಹಾಕಿಕೊಳ್ಳುವದಲ್ಲದೆ [ಕಾ]ರ್ಯಕ್ರಮಗಳಿಗೆ ತಮ್ಮ ಸಂಪೂರ್ಣ [ಸಹಕಾ]ರ ಕೊಡಬೇಕೆಂದು ಪ್ರಾರ್ಥನೆ

ಟಿ. ನರಸಿಂಹಯ್ಯಂಗಾರ್,
ಕಾರ್ಯದರ್ಶಿ

[ರಾಷ್ಟ್ರ]ನಾಯಕರ ಭಾವಚಿತ್ರದ ಅನಾವರಣ [illegible] ಜಧಾನಿಯ ಧಾವಸಾರಶ್ರೀಯು ವಿ[illegible] ಸಂಘದಲ್ಲಿ ಸ್ವಾತಂತ್ರ್ಯ ದಿನಾಚ[ರಣೆಯ] ಸಂಬಂಧವಾಗಿ ನಾಳೆ ಬೆಳಗ್ಗೆ ೧೦ [ಗಂಟೆ]ಗೆ ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀ[illegible] ಯ್ಯನವರು ಗಾಂಧೀಜಿ, ಪಟೇ[ಲ್]ರೂ, ಮತ್ತು ಸುಭಾಷ್ ಚಂದ್ರಬೋ[ಸ್] [ಇವ]ರುಗಳ ಭಾವಚಿತ್ರಗಳನ್ನು ಅನಾವರ[ಣ ಮಾ]ಡುವರು ಶ್ರೀ ಯು ಎಲ್ [illegible] ದ್ರಯ್ಯನವರು ಅಧ್ಯಕ್ಷತೆ ವಹಿಸುವರು [illegible]ನ್ನೇಗೌಡನ ಕೊಪ್ಪಲಿನ ವಿದ್ಯಾರ್ಥಿ [illegible] ಸಂಘದವರು ಸ್ವಾತಂತ್ರ್ಯದಿನಾಚ[ರಣೆಯ] ಸಂಬಂಧವಾಗಿ ನಾಳೆ ಬೆಳಗ್ಗೆ ೮ [ಗಂಟೆ]ಗೆ ಧ್ವಜಾರೋಹಣ, ೯ ಗಂಟೆಗೆ [illegible] ಣಿಗೆ ಮತ್ತು ೧೦ ಗಂಟೆಗೆ ಸಿಹಿ [illegible] ಹಂಚುವುದನ್ನು ಏರ್ಪಡಿಸಿದ್ದಾರೆ [illegible] ಜನ ಬೌದ್ಧ ವಿದ್ಯಾರ್ಥಿಸಂಘದ [illegible] ದಲ್ಲಿ ನಾಳೆ ಬೆಳಗ್ಗೆ ೮-೩೦ ಗಂಟೆಗೆ

ವೈದ್ಯಶಾಲೆಯಲ್ಲಿ ಶ್ರೀ ಎಸ್ ರಂಗ[ಸ್ವಾಮಿ] ಯ್ಯನವರಿಂದ ಧ್ವಜಾರೋಹಣ ಮತ್ತು [illegible] ಎಂ ಚೆನ್ನಬಸಪ್ಪನವರಿಂದ ಧ್ವ[ಜ] ಧ್ವಜಾರೋಹಣ ಸಮಾರಂಭವಿದೆ. [illegible] ದರ ಶಾಲೆಯವರು ನಾಳೆ ಸಂಜೆ [illegible] ಗಂಟೆಗೆ ಶ್ರೀ ಪಿ ಸೀತಾರಾಮಯ್ಯ [ನವರ] ಅಧ್ಯಕ್ಷತೆಯಲ್ಲಿ ದಿನಾಚರಣೆ ನಡೆಸು[ವರು] ಶ್ರೀ ಪಿ ಗೋಪಾಲ ಕೃಷ್ಣ ಶೆಟ್ಟರು [illegible] ಮಾಡುವರು

[ನಾ]ಳೆ ಬೆಳಗ್ಗೆ ೭ ಗಂಟೆಗೆ ಸಾರ್ವಜನಿ[ಕ ವಿದ್ಯಾ]ರ್ಥಿ ನಿಲಯದಲ್ಲಿ ಶ್ರೀ ಪಾಲಹಳ್ಳಿ [illegible] ರಾಮಯ್ಯನವರು ಧ್ವಜಾರೋಹಣ [ಮಾಡು]ವರು

[ನಾಳೆ] ಸಂಜೆ ೫ ಗಂಟೆಗೆ ನಂಜನಗೂಡಿ[ನ] [illegible] ಸಂಘದಲ್ಲಿ ಸ್ವಾತಂತ್ರ್ಯ [ದಿನೋತ್ಸ]ವವು ಶ್ರೀ ಯೋಗಾ ನರಸಿಂಹ[ಯ್ಯನವರ] ಅಧ್ಯಕ್ಷತೆಯಲ್ಲಿ ಜರುಗುವುದು ಶ್ರೀ [illegible] ರಾಮಾನುಜಾಚಾರ್ಯರು ಸಂಘದ [illegible] ಭಾಷಣವನ್ನು ಮಾಡಲಿರುವರು

ರಾಷ್ಟ್ರ ಸೇವೆಯಲ್ಲಿ ಮಹಿಳೆಯರ ಪಾತ್ರ

ರಾಜಕುಮಾರಿ ಅಮೃತ ಕೌರ್‌ರವರ ಭಾಷಣ

ಮೈಸೂರು ೧೪

ಭಾರತ ಸರ್ಕಾರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ರಾಜಕುಮಾರಿ ಅಮೃತ ಕೌರ್‌ರವರು ನಿನ್ನೆ ಮಹಾರಾಣಿ ಕಾಲೇಜಿನಲ್ಲಿ ಮಹಿಳೆಯರನ್ನು ಕುರಿತು ಭಾಷಣ ಮಾಡಿದರು.

ದೇಶದ ಸ್ವಾತಂತ್ರ್ಯವನ್ನು ಗಳಿಸಲು ರಾಷ್ಟ್ರ ವಿಭಜನೆಗೆ ನಾವು ಒಪ್ಪಿಕೊಂಡಾಗ ಇತ್ತೀಚೆಗೆ ನಡೆದಂತಹ ದುರ್ಘಟನೆಗಳು ಸಂಭವಿಸುವುವೆಂದು ಯಾರೂ ತಿಳಿದಿರಲಿಲ್ಲವೆಂದು ರಾಜಕುಮಾರಿಯವರು ಹೇಳಿದರು. ಇನ್ನು ಮೇಲಾದರೂ ಶಾಂತಿ ಸೌಹಾರ್ದಗಳು ನೆಲೆಸುವುವೆಂದ ನಂಬಲಾಗಿತ್ತು. ಆದರೆ ಖೂನಿ, ದರೋಡೆ, ದೊಂಬಿ, ಮಹಿಳೆಯರ ಅಪಹರಣ ಇನ್ನೇ ಮುಂತಾದ ನೀಚ ಕಾರ್ಯಗಳು ಮೇರೆ ಮೀರಿ ನಡೆದಿವೆ. ದಕ್ಷಿಣ ಭಾರತದಲ್ಲಿ ಈ ಬಗೆಯ ಕೃತ್ಯಗಳು ನಡೆದಿಲ್ಲವೆಂದು ಕೇಳಿ ಸಂತೋಷವಾಗಿದೆ

ಸ್ವಾತಂತ್ರ್ಯ ಸಾಧನೆಯಲ್ಲಿ ಮಹಿಳೆಯರ ಪಾತ್ರವು ಅದ್ವಿತೀಯವಾದುದು. ನಮ್ಮ ಮಹಿಳೆಯರು ಎಂತಹ ಜವಾಬ್ದಾರಿಯನ್ನಾದರೂ ನಿರ್ವಹಿಸಬಲ್ಲರೆಂಬ ದಕ್ಕೆ ಇತ್ತೀಚಿನ ನಿದರ್ಶನಗಳಿವೆ. ಆದರೂ ಅವರ ಆರ್ಥಿಕ ಮತ್ತು ಆರೋಗ್ಯ ಸ್ಥಿತಿಯು ಅತ್ಯಂತ ಅತೃಪ್ತಿಕರವಾಗಿರುತ್ತವೆ. ಸ್ತ್ರೀಯರು ಹಸುಗೂಸುಗಳೆನಿಸಿಯೂ, ಉಪಾಧ್ಯಾಯಿನಿಯರಾಗಿಯೂ ಹೆಚ್ಚು ಹೆಚ್ಚಾಗಿ ಸೇವೆ ಸಲ್ಲಿಸಿ ದೀನ ಜನರ ಸೇವೆ ಮಾಡಬೇಕು. ಭಂಗಿಯ ಕೆಲಸವು ಬಹಳ ಪವಿತ್ರವಾದುದೆಂದ ಗಾಂಧೀಜಿಯವರು ಹೇಳಿರುವರು. ನರ್ಸುಗಳಾಗಿ ಕೆಲಸ ಮಾಡುವುದು ಗೌರವಹೀನವಾದುದೆಂದು ಯಾರೂ ಭಾವಿಸಬಾರದು. ಭಾರತದ ಭವಿಷ್ಯವು ಮಹಿಳೆಯರನ್ನೇ ಅವಲಂಬಿಸಿರುತ್ತದೆ. ಕೋಮುವಾರು ಭಾವನೆಯನ್ನು ತೊಡೆದೋಡಿಸಿ ಸಕಲ ಭಾರತೀಯರ ಐಕಮತ್ಯವನ್ನು ಸಾಧಿಸಲು ಮಹಿಳೆಯರೇ ಸಮರ್ಥರು. ನಮ್ಮ ದೇಶದಲ್ಲಿ ಅತ್ಯಂತ ಹಿಂದೆ ಬಿದ್ದಿರುವ ಗ್ರಾಮಗಳನ್ನು ಉದ್ಧರಿಸುವುದು ನಮ್ಮೆಲ್ಲರ ಪವಿತ್ರ ಕರ್ತವ್ಯ-ಎಂದು ಶ್ರೀಮತಿಯವರು ನುಡಿದರು.

ಶ್ರೀಮತಿ ಸುಂದರಿ ಕೃಷ್ಣಸ್ವಾಮಿಯವರು ಧನ್ಯವಾದವನ್ನು ಅರ್ಪಿಸಿದರು. ಶ್ರೀ

ಭಾವನಗರದ ರಾಜರು ಮದ್ರಾಸ್ ಗೌರ್ನರ್

ಮುಂದಿನ ತಿಂಗಳು ನಿವೃತ್ತರಾಗಲಿರುವ ಮದ್ರಾಸ್ ಗೌರ್ನರ್ ಸರ್. ಆರ್ಚಿಬಾಲ್ಡ್ ನೈರವರ ಸ್ಥಾನದಲ್ಲಿ ಭಾವನಗರದ ಮಹಾರಾಜರನ್ನು ನೇಮಿಸಲಾಗಿದೆಯೆಂದು ತಿಳಿದುಬಂದಿದೆ. ಇವರು ಸೌರಾಷ್ಟ್ರ ಯೂನಿಯನ್ನಿನ ರಾಜಪ್ರಮುಖರು.

ಹುತಾತ್ಮರ ಜ್ಞಾಪಕಾರ್ಥ ೨ ನಿಮಿಷ ಮೌನ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಹುತಾತ್ಮರ ಜ್ಞಾಪಕಾರ್ಥವಾಗಿ ಇದೇ ೧೫ ನೇ ತಾ|| ಮಧ್ಯಾಹ್ನ ೧೨ ಗಂಟೆಗೆ ೨ ನಿಮಿಷಗಳ ಕಾಲ ಎಲ್ಲರೂ ಮೌನವನ್ನು ಆಚರಿಸಬೇಕೆಂದು ಮುಂಬಾಯಿ ಸರ್ಕಾರದವರು ಪ್ರಕಟಣೆ ಹೊರಡಿಸಿದ್ದಾರೆ.

ಮಲಯಾ ಕ್ರಾಂತಿ ಕಾರರನ್ನು ಎದುರಿಸಲು ನಾಯಿಗಳು

ಮಲಯಾ ದ್ವೀಪದಲ್ಲಿ ಹಾವಳಿ ಮಾಡುತ್ತಿರುವ ಕ್ರಾಂತಿಕಾರರನ್ನು ಪತ್ತೆಹಚ್ಚಲು ಲಂಡನ್ನಿನ ಯುದ್ಧಕಾಲದಲ್ಲಿ ಉಪಯೋಗಿಸುವ ನಾಯಿಗಳನ್ನು ವಿಮಾನಗಳಲ್ಲಿ ತೆಗೆದುಕೊಂಡು ಹೋಗಲಾಗುತ್ತಿದೆಯೆಂದು ತಿಳಿದುಬಂದಿದೆ. ಈ ನಾಯಿಗಳಿಗೆ ಅರಣ್ಯದಲ್ಲಿ ಅವಿತುಕೊಂಡಿರುವ ಕ್ರಾಂತಿಕಾರರನ್ನು ಪತ್ತೆಹಚ್ಚಲು ತರಪೇತು ಕೊಡಲಾಗಿದೆ.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ೧೦ ರಂದು ಸಂಜೆ ಶ್ರೀ ಕೆ [illegible] ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ದಿ|| ಶ್ರೀ|| ವೆಂಕಟಸ್ವಾಮಿ ಶೆಟ್ಟಿ [illegible] ಗೌರವಾರ್ಥವಾಗಿ ಇದೇ ೧೬ನೇ ತಾ|| ಎಲ್ಲಾ ಬಸ್ಸುಗಳ ಓಡಾಟವನ್ನು ನಿಲ್ಲಿಸಿ ಕೆಲಸಗಾರರಿಗೆ ರಜಾ ಕೊಡಬೇಕೆಂದು ಮೋಟಾರು ಮಾಲೀಕರುಗಳನ್ನು ಕೋರುವ ಮತ್ತು ಸಂಘದ ಸದಸ್ಯರೆಲ್ಲರೂ [illegible] ಸ್ವಾಮಿನಿಯಲ್ಲಿ ನಡೆಯಲಿರುವ ಶ್ರೀ ಶೆಟ್ಟರ ಅಂತ್ಯ ವಿಧಿಯಲ್ಲಿ ಭಾಗವಹಿಸುವ [illegible] ಗಳನ್ನು ಮಾಡಲಾಯಿತು

ಮುಂದಿನ [illegible] ಶ್ರೀಮನ್ನಾರಾಯಣರವರ ರಾಜಕೀಯ [illegible] ಸ್ವಾಗತವನ್ನು [illegible] ಶ್ರೀಮತಿ ಸರಸ್ವತಿ ಗಾಂಧಿಯವರ ದ [illegible] ನಡೆಯಿತು

[illegible] ೧೨೦೦ ಬೇಲು ಬಟ್ಟೆ

ಸ್ವಂತ ವರದಿ] ಬೆಂಗಳೂರು ೧೪

ಭಾರತ ಸರ್ಕಾರದವರು ಮೈಸೂರಿಗೆ ೧೨೦೦ ಬೇಲು ಬಟ್ಟೆಯನ್ನು ಕೊಟ್ಟಿರುತ್ತಾರೆ. ಇದನ್ನು ಗೊತ್ತುಮಾಡಲು ಹೋಗಿದ್ದ ಅ|| ಡೈರೆಕ್ಟರಿಂದ ಶ್ರೀ ಮಲ್ಲಾರಾಧ್ಯರವರು ಹಿಂದಿರುಗಿರುವರು

ಬೆಂಗಳೂರು-ದೆಹಲಿ ವಿಮಾನ

ಬೆಂಗಳೂರಿನಿಂದ ದೆಹಲಿಗೆ ವಿಮಾನ ಸಂಚಾರವನ್ನು ಏರ್ಪಡಿಸಲು ಮೈಸೂರು ಸರ್ಕಾರವು ಭಾರತಸರ್ಕಾರದವರು ಎಲ್ಲಾ ಸಹಾಯವನ್ನು ನೀಡುವುದಾಗಿ ಭರವಸೆ ಕೊಟ್ಟಿರುವರೆಂದೂ ಸಧ್ಯದಲ್ಲೆ ಅದನ್ನು ಪ್ರಾರಂಭಿಸಲಾಗುವುದೆಂದೂ ತಿಳಿದು ಬಂದಿದೆ.

ನೆಲಗಡಲೆಕಾಯಿನ ಫಸಲು ಈ ವರ್ಷ ಹೆಚ್ಚಾಗಿರುವುದರಿಂದ ಮುಂದಿನ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೂ ಅದನ್ನು ಹೊರಕ್ಕೆ ಸಾಗಿಸಬಹುದೆಂದು ಸರ್ಕಾರದ ಪ್ರಕಟನೆ ತಿಳಿಸುತ್ತದೆ.

ರಂಗೂನನ್ನು ಮುತ್ತಲು ಮಾಜಿ ಸೈನಿಕರ ಯತ್ನ

ರಂಗೂನಿಗೆ ೧೨ ಮೈಲಿ ದೂರದಲ್ಲಿ ಇರುತ್ತಾಗಿದ್ದ ೩೫೦ ಜನ ಬರ್ಮಾದ ಸೈನಿಕರು ಸೈನ್ಯವನ್ನು ತೊರೆದ ೧೦ನೇ ತಾ|| ಸ್ಟೆನ್ ಗನ್, ಪಿಸ್ತೂಲ್ ಮದ್ದುಗುಂಡುಗಳ ಸಹಿತ [illegible] ಹೊರಟರೆಂದೂ, ಅವರುಗಳ ಮೇಲೆ [illegible] ವಿಮಾನಪಡೆಯವರು ಬಾಂಬು [illegible] ಮಾತ್ರವಲ್ಲದೆ ಬಾ[illegible] ಸೈನಿಕರೂ ಸೈನ್ಯವನ್ನು [illegible] ಮುತ್ತಿಗೆ ಹಾಕಲು [illegible] ವಿಫಲಗೊಳಿಸ[illegible] ಓಡಿಸಲಾಯಿತೆಂದೂ [illegible] ಪ್ರಕಟಣೆ ತಿಳಿಸುತ್ತದೆ [illegible] ಸ್ವಾತಂತ್ರ್ಯದಿನೋತ್ಸವ [illegible] [illegible] ತಿಳಿಸಿದೆ

ಕಂಟೋನ್ಮೆಂಟ್ ಮೊಕದ್ದಮೆ

ಸ್ವಂತ ವರದಿ] ಬೆಂಗಳೂರು ೧೪

ನಿನ್ನೆ ಹೈಕೋರ್ಟಿನಲ್ಲಿ ಕಂಟೋನ್ಮೆಂಟ್ ಸಂಬಂಧದ ಮೊಕದ್ದಮೆಯ ವಿಚಾರಣೆಯು [illegible] ನಡೆದು ಸೋಮವಾರಕ್ಕೆ ಮುಂದೂಡಲಾಯಿತು. [illegible] ಜನ ಪರವಾದ ಶ್ರೀ ಎಸ್. [illegible] ತಮ್ಮ ವಾದವನ್ನು [illegible] ಪ್ರಸ್ತಾಪಿಸಿದಮೇಲೆ [illegible] ಶ್ರೀ [illegible] ಯವರು ತಿಳಿಸಿದರು.

ಶ್ರೀ [illegible] ಅಯ್ಯಂಗಾರರು ಅವರ [illegible] ವಾದವನ್ನು ಮುಂದುವರಿಸ[illegible] ಸೆಕ್ಷನ್ ಪ್ರಕಾರ ಇರುವ ಸಿವಿಲ್ ಅಧಿಕಾರವನ್ನು [illegible] ಶ್ರೀ [illegible] ಸ್ಯಾಯಾಧೀಶರಾದ ಶ್ರೀ ವೆಂಕಟರಾಮಯ್ಯನವರು ಒಂದು ಪ್ರಶ್ನೆಯನ್ನು ಹಾಕಿ [illegible] ಅಧಿಕಾರ [illegible] ಯೊಂದರಲ್ಲಿ [illegible] ಅಧಿಕಾರ [illegible] ಇನ್ನೂ ಕೋರ್ಟ [illegible] ಇಲ್ಲವೇ? ಎಂದು [illegible] ಅಧಿಕಾರವನ್ನು [illegible] ನವರು [illegible] ಎಂದು

ಕಮ್ಯೂನಿಸ್ಟರ ಗಡೀಪಾರು

ಮೈಸೂರು ೧೪

ಮೈಸೂರು ನಗರದ ಕಮ್ಯೂನಿಸ್ಟ್ ಪಕ್ಷದ ಸೇರಿದ [illegible] ಮಹಮದ್ ಹುಸೇನ್ ಮತ್ತು ಅಬ್ದುಲ್ಲ ರವರನ್ನು ಪೊಲೀಸರು ಬಂಧಿಸಿ ಸಂಸ್ಥಾನದಿಂದ ಹೊರಕ್ಕೆ ಕರೆದುಕೊಂಡು ಹೋಗಿ ಬಿಟ್ಟಿರುವರು

ಉಪನ್ಯಾಸ

ವಾಣಿ ವಿಲಾಸ ಮೊಹಲ್ಲದಲ್ಲಿರುವ ಶ್ರೀ ರಾಮ ಕೃಷ್ಣಾಶ್ರಮದಲ್ಲಿ ಸ್ವಾಮಿ ಸೋಮನಾಥಾನಂದಜಿಯವರು ನಾಳೆ ಸಂಜೆ ೬ ಗಂಟೆಗೆ 'ಸಾಧಕ' ಎಂಬ ವಿಷಯದಲ್ಲಿ ಉಪನ್ಯಾಸ ಮಾಡುವರು

ಮಕ್ಕಳಿಗೆ ಸಿಹಿ ತಿಂಡಿ

ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ನಗರದ ಮಕ್ಕಳಿಗೆ ಸಿಹಿತಿಂಡಿ ಹಂಚಲು ಪೌರಸಭೆಯು ರೂ. ೧೫೦೦ ರೂ [illegible] ಮಂಜೂರು ಮಾಡಿದ್ದಾರೆ

ನದಿಯಲ್ಲಿ ೨ ಮಕ್ಕಳು ಕೊಚ್ಚಿಹೋದರು

ಮಹಾರಾಷ್ಟ್ರದ [illegible] ನದಿಯೊಂದರಲ್ಲಿ ೧೨ ವರ್ಷದ ಹುಡುಗ ಮತ್ತು ೨ ವರ್ಷದ ಹುಡುಗಿಯನ್ನು ಕೊಚ್ಚಿಕೊಂಡು [illegible] ನದಿಯಲ್ಲಿ ಇದ್ದಕ್ಕಿದ್ದ ಹಾಗೆ ಪ್ರವಾಹವು ಬಂದು ಅವರುಗಳು ಕೊಚ್ಚಿ ಹೋದರೆಂದು ತಿಳಿದು ಬಂದಿದೆ

ಬರೋಡಾದಲ್ಲಿ ಬಿಕ್ಕಟ್ಟು

ಬರೋಡಾದಲ್ಲಿ ಪ್ರಜಾಪ್ರತಿನಿಧಿ [illegible] ಭಾರತ ಸರ್ಕಾರವು [illegible] ಸಂಸ್ಥಾನದಲ್ಲಿ [illegible] ಪರಿಸ್ಥಿತಿಯನ್ನು [illegible] ದೆಹಲಿಗೆ ಹೋಗಿ ಸರ್ದಾರ್ ಪಟೇಲರೊಂದಿಗೆ ಸಮಾಲೋಚನೆ ನಡೆಸುವರೆಂದು ಹೇಳಲಾಗಿದೆ

ಶ್ರೀ

ಗಣೇಶಾ ಟಾಕೀಸ್

13-8-48 ರಿಂದ

ಪ್ರತಿ ದಿನ 3 ಆಟಗಳು

ವಾಹಿನಿಯವರ

ಸ್ವರ್ಗಸೀಮ

[ತೆಲುಗು]

—:ಪಾತ್ರಗಳು:—

ಜಯಮ್ಮ • ನಾಗಯ್ಯ • ಭಾನುಮತಿ •

ಇದರೊಂದಿಗೆ ಆರ್ಟ್ ಸ್ಟುಡಿಯೊ [illegible] ಭಾರತಕ್ಕೆ ಕೊಡುವುದು ಮತ್ತು ಶ್ರೀ ರಾಜಾಜಿಯವರು ಗೌವರ್ನರ್ ಜನರಲ್ಲಾಗಿ ಅಧಿಕಾರ ಪ್ರಮಾಣವಚನ ಸ್ವೀಕಾರ ಇವುಗಳ 'ಪರಿವರ್ತನೆ' ಎಂಬ ಒಂದು ರೀಲನ್ನು ಸಹ ಪ್ರದರ್ಶಿಸಲಾಗುವುದು

Edited printed and published by A. R. Nagarajan at the Sadhvi Press D. Subbaiah Road, Mysore

ಗೋವಧೆಯು ಇನ್ನೂ ನಿಂತಿಲ್ಲ

ಸಂಸ್ಥಾನದಲ್ಲಿ ಗೋವಧೆ ಮತ್ತು ಪ್ರಾಣಿಬಲಿ ನಿರೋಧ ಕಾನೂನುಗಳು ಜಾರಿಗೆ ಬಂದಿದ್ದರೂ ಇನ್ನೂ ಅನೇಕ ಸ್ಥಳಗಳಲ್ಲಿ ಗೋವಧೆಯು ನಡೆಯುತ್ತಿರುವುದೆಂದೂ, ಅದನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ಸೂಚನೆಯನ್ನು ಸರ್ಕಾರದವರು ಕೊಡಬೇಕೆಂದೂ ಅಖಿಲ ಭಾರತ ಗೋರಕ್ಷಣಾ ಮಂಡಲಿಯ ದಕ್ಷಿಣ ಭಾರತ ಶಾಖಾ ವ್ಯವಸ್ಥಾಪಕರಾದ ಡಾ|| ಬಿ ಎಸ್. ನಾರಾಯಣ್‌ರವರು ಪ್ರಾರ್ಥಿಸಿರುತ್ತಾರೆ.

ಕಲ್ಕತ್ತೆ ಜೈಲಿನಲ್ಲಿ ನರಭಕ್ಷಕರು

ಕಲ್ಕತ್ತಾದಲ್ಲಿ ನರಭಕ್ಷಕರನ್ನು ದಸ್ತಗಿರಿ ಮಾಡಲಾಗಿದೆಯೆಂಬ ವಾರ್ತೆಯನ್ನು ಕೇಳಿ ಸಾವಿರಾರು ಜನರು ಅವರನ್ನು ನೋಡಲು ಅಲ್ಲಿನ ಜೈಲಿನ ಬಳಿಗೆ ಹೋದರೆಂದೂ ಆದರೆ ಜೈಲಿನಲ್ಲಿ ಅಂತಹವರಾರೂ ಇಲ್ಲವೆಂದೂ, ಒಬ್ಬಿಬ್ಬರು ಹುಡುಗರನ್ನು ಅಪಹರಿಸಿದ ಅಪಾದನೆಮೇಲೆ ಕೆಲವರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಅಧಿಕಾರಿಗಳು ತಿಳಿಸಿದಮೇಲೆ ಜನರು ವಾಪಸು ಹೋದರೆಂದು ವರದಿಯಾಗಿದೆ

ಸ್ವಾತಂತ್ರ್ಯ ದಿನಾಚರಣೆಗಾಗಿ

ನಮ್ಮಲ್ಲಿರುವ ಕಥೆ ಪುಸ್ತಕಗಳನ್ನು ಸುಲಭ ಬೆಲೆಗೆ ಕೊಡುತ್ತೇವೆ ವಿವರಗಳಿಗೆ:—

ಮೂರ್ತಿ ಟ್ರೇಡಿಂಗ್ ಕಂಪೆನಿ

ಡಿ. ಸುಬ್ಬಯ್ಯ ರೋಡ್, ಮೈಸೂರು

ಎಸ್. ಎಂ. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್

ತಲೆ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ, ಬೆಲೆ ೦-೧೨-೦

ಪದ್ಮ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ. —)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ— ಮಲೇರಿಯಾ ಗಿಡ್ಡೆಗಳಿಗೆ ಸಿದ್ಧ ಸಂಜೀವಿನಿ

ಮಹಾಕೇಶರ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಬೆಲೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

೪೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ

ರಾಜಕುಮಾರಿ ಅಮೃತ್‌ಕೌರ್‌ರವರು

ಮೈಸೂರು ೧೪

ಭಾರತ ಸರ್ಕಾರದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತ್‌ಕೌರ್‌ರವರು ನಿನ್ನೆ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು ಆಸ್ಪತ್ರೆಯಲ್ಲಿ ಸ್ಥಳ ಸಂಕೋಚವಾಗಿದೆಯೆಂದೂ ಸಾಕಾದಷ್ಟು ಸೌಕರ್ಯಗಳಿಲ್ಲವೆಂದೂ ರಾಜಕುಮಾರಿಯವರು ಅಭಿಪ್ರಾಯಪಟ್ಟರೆಂದು ತಿಳಿದಿದೆ. ಭಾರತದಲ್ಲಿ ದಾದಿಗಳಿಗೆ ಕೊಡುತ್ತಿರುವ ೧೨೫ ರೂ ಸಂಬಳವನ್ನು ಇಲ್ಲಿನ ದಾದಿಯರುಗಳಿಗೆ ಕೊಡುತ್ತಿಲ್ಲ. ಇದು ಸಂಬಳ ಕಡಿಮೆಯೆಂದೂ ಅವರು ತಿಳಿಸಿದರೆಂದು ಗೊತ್ತಾಗಿದೆ. ಡಾ|| ಟಿ. [illegible] ನಾಗೇಂದ್ರರವರು ನಿರ್ಮಿಸಿರುವ ಸಂಚರಿಸುವ ಮೆಡಿಕಲ್ ವ್ಯಾನನ್ನು ಸಚಿವರು ನೋಡಿ ಅಂತಹ ಒಂದು ವ್ಯಾನನ್ನು ತಮಗೆ ಕಳುಹಿಸಬೇಕೆಂದು ಹೇಳಿದರೆಂದೂ ತಿಳಿದುಬಂದಿದೆ

ರಾಜಕುಮಾರಿಯವರು ದಿವಾನರು ಮತ್ತು ಸಚಿವರುಗಳೊಡನೆ ಚಾಮುಂಡಿ ಬೆಟ್ಟಕ್ಕೆ ಭೇಟಿ ಇತ್ತು ಅಲ್ಲಿ ಆರೋಗ್ಯ ಕೇಂದ್ರದ ಕಛೇರಿಯನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಿದರು

ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ

ಪ್ರಾತಃಕಾಲ ವಿವಿಧ ಮೊಹಲ್ಲಾಗಳಲ್ಲಿ ಪ್ರಭಾತಭೇರಿ ಅನಂತರ ಟೌನ್‌ಹಾಲ್ ಮೈದಾನಕ್ಕೆ ಮೆರವಣಿಗೆ ಮತ್ತು ಅಲ್ಲಿ ನಡೆಯುವ ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸುವುದು ವಿದ್ಯಾರ್ಥಿ ಗಾಂಧೀಜಿಸ್ಮಾರಕ ನಿಧಿ ಶೇಖರಣೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗವಹಿಸ ಬೇಕೆಂದು ಕೋರಲಾಗಿದೆ

ಶ್ರೀ ವಿಜಯ ಫ್ಲೋರ್ &

ಫ್ಲೇಟ್ ರೀ ಗ್ರೂವಿಂಗ್ ವರ್ಕ್ಸ್

ನಂ. 251+252, ದಿವಾನ್ಸ್ ರೋಡ್, ಮೈಸೂರು.

(ಗುಂಡ್ಲುಪೇಟೆ ಮಾ ಆರ್. ಎಸ್. ಪಂಡಿತರ ರಾಮಗೋಪಾಲ ವೈದ್ಯಶಾಲೆಯ ಎದುರುಭಾಗ)

ಹೊಸದಾಗಿ ಸ್ಥಾಪಿಸಿರುವ ನಮ್ಮ ಮಿಲ್ಲಿನಲ್ಲಿ ಅಕ್ಕಿ, ರಾಗಿ, ಗೋಧಿ, ಜೋಳ ವಗೈರೆಗಳನ್ನು ಮಹಾಜನರ ಮನಸ್ಸಿಗೆ ಬರುವ ಹಾಗೆ ಹಿಟ್ಟು ಮಾಡಿಕೊಡಲಾಗುತ್ತದೆ ಮತ್ತು ಫ್ಲೋರ್ ಮಿಲ್ ಫ್ಲೇಟುಗಳನ್ನು ಹೆಚ್ಚು ಕಾಲ ಬಾಳಿಕೆ ಬರುವ ಹಾಗೆ ರೀ-ಗ್ರೂವ್ ಮಾಡಲಾಗುತ್ತದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಮೈಸೂರಿನವರಿಗೆ ಅಮೆರಿಕದಲ್ಲಿ ಭಾರಿ ಹುದ್ದೆ

ಭಾರತ ಸರ್ಕಾರದ ಹಣ ಕಾಸಿನ ಇಲಾಖೆಯಲ್ಲಿ ಅಧಿಕಾರಿಗಳಾಗಿರುವ, ಮೈಸೂರಿನ ಶ್ರೀ ಎ. ಎಲ್ ಸುಬ್ರಹ್ಮಣ್ಯಂರವರನ್ನು ಇಂಟರ್‌ನ್ಯಾಶನಲ್ ಬ್ಯಾಂಕಿನಲ್ಲಿ ಭಾರತ ಸರ್ಕಾರದ ಪರ [illegible] ಕಛೇರಿಯ ರಿಜಿಸ್ಟ್ರಾರಾಗಿ ನೇಮಿಸಲಾಗಿದೆ. ಶ್ರೀ ಸುಬ್ರಹ್ಮಣ್ಯರವರು ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯ ನಿವೃತ್ತ ಪ್ರಿನ್ಸಿಪಾಲರಾದ ಡಾ|| ಎ. ನರಸಿಂಹಯ್ಯನವರ ಪುತ್ರರು

REGULAR SHOWS

at

RAJKAMAL TALKIES

From 14—8—48

Daily 3 Shows

SLAVE GIRL

(In Technicolour)

MORNING SHOWS

From 13—8—48

For 4 days

London Town

(In Technicolour)

—:With:—

Sidfield, Greta Gynt, Petula Clark

Tri-Colour Enamel

National Flag Badges

in Silver with Gold gilt

For sale

RS 3-0-0 ONLY

Khaddar Co-operative Society Ltd., MYSORE

ಹಸು ಕಳೆದು ಹೋಗಿದೆ

ಕೆಂಪು ಬಣ್ಣ, ಕುಂಬಿದ ಕಿವಿ, ಗಿಡ್ಡ [illegible] ಕಳೆದು ಹೋಗಿದೆ ಇದರ ಪತ್ತೆ [illegible] ತಿಳಿಸಿದವರಿಗೆ ಸೂಕ್ತ ಬಹುಮಾನ ಕೊಡಲ್ಪಡುತ್ತೆ.

ನಜೀರ್ ಸಾಹೇಬ

ನಂ 606 [illegible] ಭತ್ತದ ಹಿಂಭಾಗ

ದೇವರಾಜ ಮೊಹಲ್ಲಾ

ಮೈಸೂರು.

ಅಪೇರಾ ಟಾಕೀಸ್

14—8—48 ರಿಂದ

ಪ್ರತಿ ದಿನ ಮೂರು ಆಟಗಳು

ಪರಂಜ್ಯೋತಿ

ಅಥವಾ

ಸಿರಿಯಾಳ ಚರಿತ್ರೆ

(ತಮಿಳು)

ಪಾತ್ರ—ಪಿ. ಎ ಪೆರಿಯನಾಯಕಿ, ಟಿ ಪಿ. ರಾಜಲಕ್ಷ್ಮಿ, ಕೃಷ್ಣನ್, ಮಧುರಂ

Morning Shows

From 13—8—48

Smoky

(Techniclor)

:: ಪ್ರಭಾ ::

13—8—48 ರಿಂದ : ಅಮೋಘ 2 ನೇ ವಾರ

ಬಾಂಬೆ ಟಾಕೀಸಿನವರ ಸಾಹಸ ಚಿತ್ರ

★ ಮಜ್‌ಬೂರ್ ★

[ಹಿಂದಿ]

* ಮುನವರ್ ಸುಲ್ತಾನ * ಶ್ಯಾಮ್ * ಇಂದು * ಸೋಹರ್‌ಲಾಲ್

ಸಂಪುಟ ೭] ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆ, ಭಾನುವಾರ ೧೫—೮—೧೯೪೮ [ಸಂಚಿಕೆ ೨೪

ಭಾರತದ ಸ್ವಾತಂತ್ರ್ಯಸಾಧನೆಯ ಪ್ರಥಮ ವಾರ್ಷಿಕೋತ್ಸವ

ಪರದಾಸ್ಯ ವಿಮೋಚನೆಗಾಗಿ ಬಲಿದಾನಮಾಡಿದ ವೀರರ ಪುಣ್ಯಸ್ಮರಣೆ

ರಾಷ್ಟ್ರದ ಪುನರ್ನಿರ್ಮಾಣಕ್ಕಾಗಿ ಬದ್ಧಕಂಕಣರಾಗಲು ದೃಢ ಪ್ರತಿಜ್ಞೆ

ಸ್ವಾತಂತ್ರ್ಯೋದಯ

ಭರತಖಂಡದ ಇತಿಹಾಸದಲ್ಲಿ ಇದು ಸ್ಮರಣೀಯವಾದ ದಿನ. ಕಳೆದ ವರ್ಷ ಇದೇ ದಿನದಲ್ಲಿ ಭಾರತೀಯರು ತಮ್ಮ ದೇಶದ ಸಂಪೂರ್ಣ ಆಡಳಿತವನ್ನು ತಮ್ಮ ಕೈಗೇ ತೆಗೆದುಕೊಂಡರು. ಮೊದಲೇ ವಾಗ್ದಾನಮಾಡಿದ್ದಂತೆ ಬ್ರಿಟಿಷರು ತಮ್ಮ ಅಧಿಕಾರಸೂತ್ರಗಳನ್ನು ಹಿಂದಕ್ಕೆ ತೆಗೆದುಕೊಂಡು ಅಧಿಕಾರಯುತವಾಗಿ ಭಾರತವನ್ನು ಬಿಟ್ಟು ಹೊರಟರು. ಒಂದು ವರ್ಷದ ಹಿಂದೆ ಮಹಾತ್ಮರು 'ಬ್ರಿಟಿಷರೇ, ಬಿಟ್ಟು ಹೊರಡಿ' ಎಂಬುದಾಗಿ ಘೋಷಿಸಿದ ನುಡಿಯು ಈಡೇರಿತು.

ಬ್ರಿಟಿಷರು ಭಾರತವನ್ನು ಬಿಟ್ಟರು

ಪ್ರಪಂಚದ ಚರಿತ್ರೆಯಲ್ಲಿಯೂ ಸಹ ಈ ಬಗೆಯ ಪರಿವರ್ತನೆಯು ಅಪೂರ್ವವಾದುದು. ಎರಡು ಶತಮಾನಗಳ ಕಾಲದಿಂದ ಭರತಖಂಡವನ್ನು ತಮ್ಮ ಸುಲಿಗೆಯ ಕ್ಷೇತ್ರವನ್ನಾಗಿ ಮಾಡಿಕೊಂಡು ಸರ್ವವಿಧದಲ್ಲಿಯೂ ಸೂತ್ರದ ಗೊಂಬೆಯಂತೆ ಆಡಿಸುತ್ತಿದ್ದ ರಾಜ್ಯವನ್ನು ಬ್ರಿಟಿಷರು ಏಕಾಏಕಿ ಹೀಗೆ ಬಿಟ್ಟುಹೋಗಿರುವುದೂ ಸಹ ಐತಿಹಾಸಿಕ ವಿಷಯವೇ. ಆ ಅಂತರರಾಷ್ಟ್ರೀಯ ವಿದ್ಯಮಾನಗಳ ಒತ್ತಡವೂ ಇದಕ್ಕೆ ಬಹಳಮಟ್ಟಿನ ಕಾರಣವಾಗಿರಬಹುದು. ಆದರೆ ಮುಖ್ಯಾಲು ಸಮಾನಕಾಲ ಭಾರತದ ವೀರಪುತ್ರರೂ ಪುತ್ರಿಯರೂ ಮಾಡಿದ ಅಮೋಘವಾದ ತ್ಯಾಗ ಮತ್ತು ಸಾಹಸಗಳ ಫಲವೇ ಈ ಸ್ವಾತಂತ್ರ್ಯಸಿದ್ಧಿಯು.

ಭಾರತ ಮಾತಾ

ಭಾರತ ಭಾಗ್ಯದ ಭವ್ಯ ದ್ಯೋತಕ ರಾಷ್ಟ್ರಧ್ವಜ



ಈ ಧ್ವಜದ ಆಶ್ರಯದಲ್ಲಿ
ಸಕಲ ಭಾರತೀಯರಿಗೂ
ಸಮಸ್ತ ಸನ್ಮಂಗಳಗಳೂ
ಉಂಟಾಗಲಿ!

ರಾಷ್ಟ್ರಗೀತೆ

ವಂದೇ ಮಾತರಂ

ವಂದೇ ಮಾತರಂ!
ಸುಜಲಾಂ, ಸುಫಲಾಂ,
ಮಲಯಜ ಶೀತಲಾಂ ॥
ಸಸ್ಯ ಶ್ಯಾಮಲಾಂ ಮಾತರಂ
ವಂದೇ ಮಾತರಂ ॥

ಶುಭ್ರಜ್ಯೋತ್ಸ್ನಾ ಪುಲಕಿತ
ಯಾಮಿನೀಂ!
ಫುಲ್ಲ ಕುಸುಮಿತ ದ್ರುಮದಲ
ಶೋಭಿನೀಂ!
ಸುಹಾಸಿನೀಂ, ಸುಮಧುರ ಭಾಷಿಣೀಂ
ಸುಖದಾಂ, ವರದಾಂ, ಮಾತರಂ
ವಂದೇ ಮಾತರಂ!

ಗಾಂಧೀ ಸ್ಮಾರಕ ನಿಧಿ

ಸ್ವಾತಂತ್ರ್ಯ ದಿನದ ಕಾಣಿಕೆ!

ನಾಡಿನ ಬಂಧವಿಮೋಚನೆಗೂ, ರಾಷ್ಟ್ರೀಯ ಪುನರುಜ್ಜೀವನಕ್ಕೂ, ವಿಶ್ವ ಕಲ್ಯಾಣ ಸಾಧನೆಗೂ ಕಾರಣಕರ್ತರಾದ ಪೂಜ್ಯ ಬಾಪೂಜಿಯವರ ಸವಿನೆನಪಿಗಾಗಿ ನಿಮ್ಮ ಕಾಣಿಕೆಯನ್ನು ಸಲ್ಲಿಸಿರುವಿರಾ?

ಇಲ್ಲವಾದರೆ

ಸ್ವಾತಂತ್ರ್ಯ ದಿನಾಚರಣೆಯ

ಈ ಪವಿತ್ರ ದಿನದಲ್ಲಿ ತಮ್ಮ ಉದಾರ ಸಹಾಯವನ್ನು ತಪ್ಪದೆ ನೀಡಿ!

ಮಹಾತ್ಮರ ಸ್ಮರಣೆ

ಇಂತಹ ಶುಭ ಸನ್ನಿವೇಶದ ಸಾಧನೆಗೆ ಕಾರಣಕರ್ತರಾದ ಸಕಲ ಜ್ಞಾತ ಅಜ್ಞಾತ ದೇಶಬಾಂಧವರನ್ನು ಕೃತಜ್ಞತೆಯಿಂದ ಸ್ಮರಿಸಿ ಅವರ ಸೇವೆಗಾಗಿ ಭಕ್ತಿಪೂರ್ವಕವಾದ ಶ್ರದ್ಧಾಂಜಲಿಯನ್ನು ಸಲ್ಲಿಸುವುದು ಈ ಪವಿತ್ರದಿನದಲ್ಲಿ ಸಕಲ ಭಾರತೀಯರ ಆದ್ಯ ಕರ್ತವ್ಯ. ಅವರ ತ್ಯಾಗ ಮತ್ತು ಬಲಿದಾನಗಳ ಆದರ್ಶವು ಎಲ್ಲರನ್ನೂ ಸ್ಫೂರ್ತಿಗೊಳಿಸಿ ಮುಂದಿನ ರಾಷ್ಟ್ರರಚನೆಯ ಕಾರ್ಯದಲ್ಲಿ ಒಂದುಗೂಡಿಸಿ ದೇಶಮಾತೆಯ ಸೇವೆಯಲ್ಲಿ ಕೃತಕೃತ್ಯರಾಗುವಂತೆ ಪ್ರೇರೇಪಿಸಲೆಂದು ಹಾರೈಸೋಣ.

ಮಹಾತ್ಮರಿಗೆ ಕೃತಜ್ಞತೆ

ಸ್ವಾತಂತ್ರ್ಯಸಾಧನೆಯ ಆಂದೋಳನದ ಅಗ್ರಮಂತ್ರಿತ್ವದ ದಿವಂಗತರಾದ ಪೂಜ್ಯ ಮಹಾತ್ಮ ಗಾಂಧೀಜಿಯವರಿಗೇ ಸಲ್ಲತಕ್ಕದ್ದು. ತಮ್ಮ ಇಡೀ ಜೀವಮಾನವನ್ನೆಲ್ಲಾ ದೇಶಮಾತೆಯ ಸೇವೆಗಾಗಿಯೇ ಮುಡಿಪಾಗಿಟ್ಟು ಅಹೋರಾತ್ರಿಯೂ ಅದಕ್ಕಾಗಿ ದುಡಿಯುತ್ತ, ಭಾರತೀಯರನ್ನು ಕೇವಲ ಪರಕೀಯರ ಮುಷ್ಟಿಯಿಂದ ಆತ್ಮಗೌರವಯುತರಾದ ಮಾನವ ಶ್ರೇಷ್ಠರ ಅಂತಸ್ತಿಗೆ ತಂದ ಹಿರಿಮೆಯು ಅವರದು. ಕೇವಲ ಭರತಖಂಡದ ಉದ್ಧಾರವನ್ನೇ ಅಲ್ಲದೆ ಸಕಲ ಮಾನವವರ್ಗದ ಕಲ್ಯಾಣಸಾಧನೆಯ ಮಾರ್ಗವನ್ನು ಅವರು ಹಾಕಿಕೊಟ್ಟಿರುವರು. ತಮ್ಮ ಜೀವಿತ ಕಾಲದಲ್ಲಿಯೇ ಸ್ವಾತಂತ್ರ್ಯದ ಬೆಳಕನ್ನು ಕಂಡರೂ ಅದರ ಉಪಭೋಗಕ್ಕೆ ಮಾತ್ರ ಸ್ವಲ್ಪವೂ ಲಕ್ಷ್ಯಕೊಡದೆ ಆಜೀವಪರ್ಯಂತವೂ ಜನತಾಸೇವೆಯಲ್ಲಿಯೇ ನಿರತರಾಗಿದ್ದ ನಿಸ್ಸೀಮ ತ್ಯಾಗ

(ಮೂರನೇ ಪುಟ ನೋಡಿ.)

ರಾಷ್ಟ್ರಮುದ್ರೆ



ಭಾರತ ಸ್ವಾತಂತ್ರ್ಯದ ಪ್ರಮುಖ ಘಟ್ಟಗಳು

1830 ರಿಂದ 1947ನೇ ಆಗಸ್ಟ್ 15ನೇ ತಾ|| ವರೆಗೆ

1830— ಭಾರತ ಸ್ವಾತಂತ್ರ್ಯದ ಪ್ರಥಮ ಮೆಟ್ಟಿಲು ಭಾರತೀಯರಲ್ಲಿ ಪ್ರಥಮಬಾರಿ ಶ್ರೀ ರಾಜಾರಾಂ ಮೋಹನ್ ರಾಯ್‌ರವರು ಇಂಗ್ಲೆಂಡಿಗೆ ಭೇಟಿ ಇತ್ತು ಭಾರತದ ಮತ್ತು ಪತ್ರಿಕೆಗಳ ಸ್ವಾತಂತ್ರ್ಯದ ಬಗ್ಗೆ ಹೋರಾಡಿದರು

1857—ಸ್ವಾತಂತ್ರ್ಯದ ಪ್ರಥಮ ಕದನ ದೇಶದ ಅನೇಕ ಕಡೆಗಳಲ್ಲಿ ಭಾರತೀಯ ಸೈನಿಕರ ದಂಗೆ, ಝಾನ್ಸಿ ರಾಣಿಯವರ ನಾಯಕತ್ವದಲ್ಲಿ ಹೋರಾಟ

1885—ದೇಶದಲ್ಲಿ ಆರ್ಥಿಕ ಮತ್ತು ರಾಜಕೀಯ ಹೋರಾಟ ಪ್ರಾರಂಭವಾಗಿ ಬೊಂಬಾಯಿನಲ್ಲಿ ಶ್ರೀ ಡಬ್ಲ್ಯು ಸಿ ಬ್ಯಾನರ್ಜಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಸಂಸ್ಥೆಯ ಜನನ

1892— 1889ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಭೇಟಿ ಇತ್ತ ಮಿ|| ಚಾರ್ಲಸ್ ಬ್ರಾಡ್‌ಲಾರವರಿಂದ ರಾಜಕೀಯ ಸುಧಾರಣೆ ಮತ್ತು ನ್ಯಾಯವಿಧಾಯಕ ಸಭೆಗಳ ಬಗ್ಗೆ ಮಸೂದೆಯ ತಯಾರಿಕೆ ಬ್ರಿಟಿಷ್ ಸರ್ಕಾರದಿಂದ ಭಾರತದ ಕೌನ್ಸಿಲ್ ಕಾನೂನಿನ ಜಾರಿ

19 ೦—ಲಾರ್ಡ್ ಕರ್ಜನರವರ ಬಂಗಾಳ ವಿಭಜನೆಯಿಂದ ಕಾಂಗ್ರೆಸ್ಸಿಗೆ ಹೆಚ್ಚಿನ ಬೆಂಬಲ ದೊರೆತು, ಸ್ವದೇಶಿ ಚಳುವಳಿ ಪ್ರಾರಂಭವಾಗಿ, ಪರದೇಶದ ವಸ್ತುಗಳ ಬಹಿಷ್ಕಾರದ ಆರಂಭ

1907—ಲೋಕಮಾನ್ಯ ಬಿ ಜಿ ತಿಲಕ್‌ರವರ ನಾಯಕತ್ವದಲ್ಲಿ ಕಾಂಗ್ರೆಸ್ಸಿನ ಪ್ರಗತಿ.

1909—ರಾಷ್ಟ್ರೀಯ ಚಳುವಳಿಯ ಫಲದಿಂದ ಸರ್ಕಾರದಲ್ಲಿ ಹೆಚ್ಚಾಗಿ ಭಾರತೀಯರನ್ನು ಸೇರಿಸಲು ಮತ್ತು ಕೋಮುವಾರ ಪ್ರಾತಿನಿಧ್ಯ ಕೊಡಲು ಮಾರ್ಲಿ-ಮಿಂಟೋ ಸುಧಾರಣೆಗಳು

1916—ಸುಧಾರಣೆಗಳ ಬಗ್ಗೆ ಅತೃಪ್ತಿಯುಂಟಾಗಿ, ರಾಷ್ಟ್ರೀಯ ಚಳುವಳಿಯು ಪುನಃ ಪ್ರಾರಂಭವಾಗಿ ಡಾ|| ಅನಿಬೆಸೆಂಟರವರ ಹೋಂ ರೂಲ್ ಲೀಗಿನ ಸ್ಥಾಪನೆ

1918—ಜನರ ಅತೃಪ್ತಿಯನ್ನು ನಿವಾರಿಸಲು ಮಾಂಟೆಗು-ಚೆಮ್ಸ್‌ಫರ್ಡ್ ಸುಧಾರಣೆ

1919— ಜಲಿಯನ್‌ವಾಲಾಬಾಗ್ ಕೊಲೆ. ಜನರ ಮೇಲೆ ಗುಂಡಿನೇಟು, ನೂರಾರು ಜನರ ಸಾವು ದೇಶದಲ್ಲಿ ಅಶಾಂತಿ-ರವ್‌ಲೆಟ್ ಕಾನೂನಿನ ಜಾರಿ, ಮಹಾತ್ಮಾ ಗಾಂಧಿಯವರ ದಸ್ತಗಿರಿ

1920—ಗಾಂಧೀಜಿಯವರ ನಾಯಕತ್ವದಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಬದಲಾವಣೆ ಮತ್ತು ಅಸಹಕಾರ ಚಳುವಳಿಯ ಪ್ರಾರಂಭ

1923—ಸಿ ಆರ್ ದಾಸ್, ಮೋತಿಲಾಲ್ ನೆಹರೂ ಮತ್ತು ಎನ್ ಸಿ ಕೇಳಕರ್‌ರವರುಗಳ ನಾಯಕತ್ವದಲ್ಲಿ ಸ್ವರಾಜ್ಯ ಪಕ್ಷದ ಸ್ಥಾಪನೆ

1924—ಪ್ರಥಮಬಾರಿ ಶಾಸನ ಸಭೆಯಲ್ಲಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ಸು ಮತ್ತು ಪ್ರಾಂತೀಯಗಳಲ್ಲಿ ಜವಾಬ್ದಾರಿ ಸರ್ಕಾರಬೇಕೆಂಬ ನಿರ್ಣಯ.

1927—ಭಾರತದ ರಾಜಕೀಯ ಆವರಣದಲ್ಲಿ ಬಿಕ್ಕಟ್ಟು ಮದರಾಸಿನಲ್ಲಿ ಡಾ|| ಬೆಸೆಂಟ್‌ರವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ದೇಶದ ಗುರಿ ಎಂಬ ನಿರ್ಣಯದ ಅಂಗೀಕಾರ

1929—ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವುದೇ ಬ್ರಿಟಿಷ್ ಸರ್ಕಾರದ ನೀತಿಯೆಂದು ಲಾರ್ಡ್ ಇರ್ವಿನ್‌ರವರ ಘೋಷಣೆ ಮತ್ತು ಲಂಡನ್ನಿನಲ್ಲಿ ದುಂಡು ಮೇಜದ ಸಮ್ಮೇಳನ ನಡೆಸಲಾಗುವುದೆಂದು ಬ್ರಿಟಿಷ್ ಸರ್ಕಾರದ ಹೇಳಿಕೆ

1930—ರಾಜಕೀಯ ಪ್ರಗತಿ ಮತ್ತು ಸುಧಾರಣೆಗಳಬಗ್ಗೆ ವರದಿಮಾಡಲು ಸೈಮನ್ ಕಮೀಷನ್ನಿನ ಆಗಮನ ಮತ್ತು ಅದಕ್ಕೆ ಬಹಿಷ್ಕಾರ

1930—ಮಹಾತ್ಮಾ ಗಾಂಧೀಜಿಯವರಿಂದ ಅಹಿಂಸಾ ಸತ್ಯಾಗ್ರಹ ಚಳುವಳಿಯ ಪ್ರಾರಂಭ ಮತ್ತು ದಂಡಿ ಯಾತ್ರೆ

1931—ಲಂಡನ್ನಿನಲ್ಲಿ ದುಂಡುಮೇಜಿನ ಸಮ್ಮೇಳನ ಮಹಾತ್ಮರ ಬಿಡುಗಡೆ ಮತ್ತು ಸಮ್ಮೇಳನದಲ್ಲಿ ಅವರು ಭಾಗವಹಿಸುವುದು ಮತ್ತು ವಿಫಲರಾಗಿ ಹಿಂದಿರುಗುವುದು

1932—ಇಂಗ್ಲೆಂಡಿನಿಂದ ಹಿಂತಿರುಗಿದ ಕೂಡಲೇ ಮಹಾತ್ಮರ ದಸ್ತಗಿರಿ. ಕಾಂಗ್ರೆಸ್ಸಿನಮೇಲೆ ಬಹಿಷ್ಕಾರ. ಕಾಂಗ್ರೆಸ್ಸನ್ನು ನಿರ್ಮೂಲ ಮಾಡಲು ಲಾರ್ಡ್ ವೆಲ್ಲಿಂಗ್‌ಡನ್‌ರವರ ಪ್ರಯತ್ನ

1932—ನಿಮ್ನ ತರಗತಿಯವರ ಚುನಾವಣೆ ಮತ್ತು ಪೂನಾ ಒಪ್ಪಂದ.

1935—ಸುಧಾರಣೆಗಳಬಗ್ಗೆ ಪಾರ್ಲಿಮೆಂಟರಿ ಸಮಿತಿಯವರ ವರದಿ ಮತ್ತು 1935ನೇ ಸುಧಾರಣಾ ಶಾಸನ

1937—ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ ಜಯ ಮತ್ತು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿನ ಸರ್ಕಾರ

1938—ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಜಿನ್ನಾರವರಲ್ಲಿ ಗಾಂಧೀಜಿಯವರ ನಿಷ್ಫಲವಾದ ಮಾತುಕತೆ,

1939—ಎರಡನೇ ಯುದ್ಧದ ಘೋಷಣೆ ಅದಕ್ಕೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ಅಸಹಕಾರ ಮತ್ತು ಪ್ರಾಂತ್ಯಗಳಲ್ಲಿದ್ದ ಕಾಂಗ್ರೆಸ್ ಸರ್ಕಾರಗಳ ರಾಜೀನಾಮೆ

1940—ಲಾಹೋರಿನಲ್ಲಿ ನಡೆದ ಮುಸ್ಲಿಂ ಲೀಗಿನ ಅಧಿವೇಶನದಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ದೇಶ ಬೇಕೆಂದು ಜಿನ್ನಾರವರ ಘೋಷಣೆ

ಗಾಂಧೀಜಿಯವರ ವೈಯಕ್ತಿಕ ಅಸಹಕಾರ ಚಳುವಳಿ ಆರಂಭ ವಿನೋಬಾ ಭಾವೆಯವರ ದಸ್ತಗಿರಿ.

1941—ಬಿಕ್ಕಟ್ಟನ್ನು ಬಗೆ ಹರಿಸಲು ಸರ್ ತೇಜ್‌ಬಹದ್ದೂರ್ ಸಪ್ರೂರವರ ನಾಯಕತ್ವದಲ್ಲಿ ಯಾವ ಪಕ್ಷಕ್ಕೂ ಸೇರದ ನಾಯಕರುಗಳ ಸಭೆ

1942—ಎಲ್ಲ ಪಕ್ಷಗಳ ಒಪ್ಪಂದಕ್ಕಾಗಿ ಸರ್ ಸ್ಟಾಫರ್ಡ್ ಕ್ರಿಪ್ಸರವರ ಮಾತುಕತೆಗಳ ವಿಫಲ ಮೌಲಾನಾ ಆಜಾದ್‌ರವರ ನಾಯಕತ್ವದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಬ್ರಿಟಿಷರು ಭಾರತದಿಂದ ಹಿಂದಿರುಗಬೇಕೆಂಬ ನಿರ್ಣಯ. ಬ್ರಿಟಿಷರು ಭಾರತವನ್ನು ಬಿಡಬೇಕು (ಕ್ವಿಟ್ ಇಂಡಿಯ) ಎಂಬ ಗಾಂಧಿಯವರ ಘೋಷಣೆ. ಅವರ ಮತ್ತು ಇತರ ನಾಯಕರುಗಳ ದಸ್ತಗಿರಿ. ದೇಶದ ಎಲ್ಲಾ ಭಾಗಗಳಲ್ಲೂ ಗಲಭೆ

1945—ಜೂನ್ ತಿಂಗಳಿನಲ್ಲಿ ಕಾಂಗ್ರೆಸ್ ನಾಯಕರುಗಳ ಬಿಡುಗಡೆ. ವೈಸ್‌ರಾಯ್ ಲಾರ್ಡ್ ವೇವಲ್ಲರವರಿಂದ ಸಿಮ್ಲಾದಲ್ಲಿ ರಾಜಕೀಯ ಪಕ್ಷಗಳ ನಾಯಕರುಗಳ ಸಮ್ಮೇಳನ 15 ದಿನಗಳ ಸಮಾಲೋಚನೆ ನಂತರ ಮಾತುಕತೆಗಳ ಭಂಗ. ಕೇಂದ್ರ ಶಾಸನಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪೂರ್ಣ ವಿಜಯ ಸುಭಾಷ್ ಚಂದ್ರ ಬೋಸರ ಸೈನಿಕರ ವಿಚಾರಣೆ

1946—ಬ್ರಿಟನ್ನಿನ ಪಾರ್ಲಿಮೆಂಟ್ ನಿಯೋಗದ ಆಗಮನ ಬ್ರಿಟಿಷ್ ಮಂತ್ರಿಮಂಡಲದ ನಿಯೋಗ.

ನೂತನ ರಾಜ್ಯಾಂಗವನ್ನು ಬರೆಯಲು ತರಲು ವೈಸ್ರಾಯರ ಕೌನ್ಸಿಲ್ ಸದಸ್ಯರುಗಳ ರಾಜೀನಾಮೆ ತಾತ್ಕಾಲಿಕ ಸರ್ಕಾರ ಸ್ಥಾಪಿಸಲು ಪಂಡಿತ ನೆಹರೂರವರಿಗೆ ವೈಸ್ರಾಯರಿಂದ ಆಹ್ವಾನ ಮತ್ತು ಪ್ರಥಮ ರಾಷ್ಟ್ರೀಯ ಸರ್ಕಾರದ ಸ್ಥಾಪನೆ

(3ನೇ ಪುಟ ನೋಡಿ)

ಭಾರತದ ಪ್ರಥಮ ಪ್ರಧಾನಿ

ಪಂಡಿತ ಜವಹರಲಾಲ ನೆಹರೂ

ಗಾಂಧೀಜಿಯವರ ಮಾರ್ಗವು ಪ್ರಪಂಚಕ್ಕೇ ಮಾದರಿ

ವಿಶ್ವದ ವಿದ್ಯಾರ್ಥಿಪ್ರಪಂಚಕ್ಕೆ ನೆಹರೂರವರ ಸಂದೇಶ

ಭಾರತ ಪ್ರಧಾನಿ ಪಂಡಿತ್ ನೆಹರೂರವರು ಲಂಡನ್ನಿನಲ್ಲಿರುವ ಭಾರತೀಯ ಮತ್ತು ಇತರ ವಿದ್ಯಾರ್ಥಿಗಳಿಗೆ ಸಂದೇಶವೊಂದನ್ನು ಕಳುಹಿಸಿ ಈ ರೀತಿ ತಿಳಿಸಿದ್ದಾರೆ :—

ನಾವೆಲ್ಲರೂ ಯಾವ ದೇಶದಲ್ಲೇ ಇರಲಿ ಈಗಿನ ಕಷ್ಟಪರಿಸ್ಥಿತಿಯನ್ನು ಎದುರಿಸಿ ನೂತನವಾದ ವಿಶ್ವದ ಸ್ಥಾಪನೆಯ ಜವಾಬ್ದಾರಿಯು ಹಿರಿಯರಿಗಿಂತ ಭಾವೀ ಪ್ರಜೆಗಳಾದ ಈಗಿನ ವಿದ್ಯಾರ್ಥಿಗಳಮೇಲೆಯೇ ಹೆಚ್ಚಾಗಿರುತ್ತದೆ ಆ ರೀತಿಯ ಶಾಂತಿಮಯ ವಿಶ್ವದ ಸ್ಥಾಪನೆಯು ಕೋಮುವಾರು ದ್ವೇಷ, ವರ್ಣವಿಭೇದ ಮತ್ತು ಹಿಂಸಾಕೃತ್ಯಗಳನ್ನು ತ್ಯಜಿಸಿದ ಹೊರತು ಸಾಧ್ಯವಾಗುವುದಿಲ್ಲ

ಪೂಜ್ಯ ಬಾಪೂಜಿಯವರು ರಾಜಕೀಯದಲ್ಲಿ ಅನುಸರಿಸಿದ ಮಾರ್ಗದಿಂದಲೇ ಅಂತಹ ನೂತನ ಪ್ರಪಂಚವನ್ನು ಕಾಣಬಹುದು

ಬೆಂಗಾಲ್ ಸಿಲ್ಕ್ ಸೀರೆಗಳ ವೈಖರಿಯನ್ನು

ನೋಡಬೇಕಾದರೆ ಬಾಹುಬಾರ್ ಕಂಪೆನಿಗೆ ಹೋಗಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

ಭಾರತ ಸ್ವಾತಂತ್ರ್ಯ ದಿನೋತ್ಸವ

ಇಂದೆಮ್ಮ ಭಾರತವು ಪರತಂತ್ರತೆಯ
ದಾಟ ಸಂಭ್ರಮದೆ ನೆರೆಮೆರೆವ
ಪುಣ್ಯ ದಿವಸ ।
ಇಂದಲೇ ದೇಶಮಾತೆಯ ವೀರ ಸುತರೆಲ್ಲ
ಗಳಿಸಿಹಾ ಸ್ವಾತಂತ್ರ್ಯ ಸವಿಪ ದಿವಸ।
ಇಂದಲೇ ಸತ್ಯಧರ್ಮಾಹಿಂಸೆಗಳ ಪೆರ್ಮೆ
ಯನು ಭಾರತವು ತೋರಿ
ನಲಿವ ದಿವಸ ।
ಇಂದಲೇ ಶುಭ ದಿವಸ ವತಿಶಯೋ
ಲ್ಲಾಸ ಸುಖಶಾಂತಿ ಸೌಹಾರ್ದಗಳ
ಚಿದ್ವಿಲಾಸ ।
ಭೂಸೂರ ನಲ್ಮೆಸರು ದೆಸೆದೆಸೆಯಲಿ ।
ಹಾಸಿಸಲಿ ಭಾರತವು ಕರಮೆಸೆಯಲಿ ।
ದೇಶದಲ ಸತ್ಯ ಧರ್ಮಗಳೊಪ್ಪಲಿ ।
ಶ್ರೀ ಶಕ್ತಿ ಚಾಮುಂಡಿ ಸಲೆ ಸಲಹಲಿ ॥

ಆಸ್ಥಾನ ಮಹಾವಿದ್ವಾನ್,
ನಂಜನಗೂಡು ಶ್ರೀಕಂಠಶಾಸ್ತ್ರೀ.

ಭಾರತ ಸ್ವಾತಂತ್ರ್ಯದ ಪ್ರಮುಖ ಘಟ್ಟಗಳು

(2ನೇ ಪುಟದಿಂದ ಮುಂದುವರಿದುದು)

ಆಗಸ್ಟ್ 16 ನೇ ತಾ॥ ಮುಸ್ಲಿಂ ಲೀಗಿನವರ ಅಸಹಕಾರ ಚಳುವಳಿಯ ದಿನಾಚರಣೆ ಮತ್ತು ಅದರಿಂದ ಕಲ್ಕತ್ತದಲ್ಲಿ ಭಾರಿ ಕೋಮುವಾರು ದೊಂಬಿ ವೈಸ್ರಾಯರು ಪಂಡಿತ ನೆಹರೂ, ಜಿನ್ನಾ ಮತ್ತು ಇತರ ನಾಯಕರುಗಳು ಲಂಡನ್ನಿಗೆ ಪ್ರಯಾಣ ಮತ್ತು ಬ್ರಿಟಿಷ್ ಮಂತ್ರಿ ಮಂಡಲದವರೊಂದಿಗೆ ಆತುರದ ಮಾತುಕತೆ

ಡಿಸೆಂಬರ್ 9ನೇ ತಾ॥—ಭಾರತದ ನವಿ ರಾಜ್ಯಾಂಗ ರಚನೆಬಗ್ಗೆ ದೆಹಲಿಯಲ್ಲಿ ಡಾ॥ ರಾಜೇಂದ್ರ ಪ್ರಸಾದರವರ ಅಧ್ಯಕ್ಷತೆಯಲ್ಲಿ ರಾಜ್ಯಾಂಗ ಸಭೆ.

1947—ಲಾರ್ಡ್ ಮೌಂಟ್ ಬ್ಯಾಟನ್ನರ ವೈಸ್ರಾಯ್ ಪದವಿಯ ಸ್ವೀಕಾರ ಜೂನ್ 2ನೇ ತಾ॥ ಲಾರ್ಡ್ ಮೌಂಟ್ ಬ್ಯಾಟನ್ನರು ಮತ್ತು ಇತರ ನಾಯಕರುಗಳ ಸಮ್ಮೇಳನ ಮತ್ತು ಭಾರತವನ್ನು ವಿಭಾಗಿಸುವ ಬ್ರಿಟಿಷ್ ಸರ್ಕಾರದ ಯೋಜನೆಯ ಘೋಷಣೆ ಜೂನ್ 3ನೇ ತಾ॥ ಭಾರತ ಮತ್ತು ಪಾಕಿಸ್ತಾನ ದೇಶಗಳ ವಿಭಜನೆ ಬಗ್ಗೆ ಪಂಡಿತ ನೆಹರೂ ಮತ್ತು ಜಿನ್ನಾರವರ ರೇಡಿಯೋ ಭಾಷಣ

ಆಗಸ್ಟ್ 15ನೇ ತಾ॥—ಸ್ವತಂತ್ರ ಭಾರತದ ಜನನ ಮತ್ತು ನೆಹರೂರವರ ನಾಯಕತ್ವದಲ್ಲಿ ರಾಷ್ಟ್ರೀಯ ಸರ್ಕಾರದ ಸ್ಥಾಪನೆ ಮತ್ತು ಭಾರತದ ಪ್ರಥಮ ಗೌರ್ನರ್ ಜನರಲ್ಲರಾಗಿ ಲಾರ್ಡ್ ಮೌಂಟ್ ಬ್ಯಾಟನ್ನರ ಅಧಿಕಾರ ಸ್ವೀಕಾರ

Tri-colour Enamel
NATIONAL
FLAG BADGES
IN SILVER WITH GOLD GILT
FOR SALE RS. 3-0-0 ONLY
Khaddar Co-operative
Society, Ltd.
MYSORE

ಬೆಂಗಳೂರಿನಲ್ಲಿ ಸಮಾರಂಭ

ಶ್ರೀಮನ್ಮಹಾರಾಜರವರು ಈದಿನ ಬೆಳಿಗ್ಗೆ ಬೆಂಗಳೂರಿನ ರೇಸ್ ಕೋರ್ಸಿನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ಪೆರೇಡಿನಲ್ಲಿ ಭಾಗವಹಿಸಿ ಸೈನಿಕರ ಸೆಲ್ಯೂಟನ್ನು ಸ್ವೀಕರಿಸಿದರು. ಸಚಿವರುಗಳೂ, ಸಹಸ್ರಾರು ಜನಗಳೂ ಇದರಲ್ಲಿ ಭಾಗಿಗಳಾಗಿದ್ದರು.

ಸ್ವಾತಂತ್ರ್ಯೋದಯ

(ಒಂದನೇ ಪುಟದಿಂದ ಮುಂದುವರಿದುದು)

ಮೂರ್ತಿ ಅವರು ಇಂತಹ ಮಹಾ ಮಹಿಮರ ಪುಣ್ಯಸ್ಮರಣೆಯನ್ನು ಇಂದು ನಾವೆಲ್ಲರೂ ಮಾಡಿ ಅವರ ಆತ್ಮಕ್ಕೆ ಶಾಶ್ವತ ಶಾಂತಿಯನ್ನು ಕೋರೋಣ

ಅಧಿಕಾರ ಸ್ವೀಕಾರ

ಕಳೆದ ವರ್ಷ ಈದಿನ ಬೆಳಗಿನಜಾವಕ್ಕೆ ಮುಂಚೆ ನಿಶಿರಾತ್ರಿಯಲ್ಲಿ ನಮ್ಮ ಮಹಾ ನಾಯಕರುಗಳು ದೆಹಲಿಯಲ್ಲಿ ನೆರೆದು ಈ ದೇಶದ ಸಮಸ್ತ ಹೊಣೆಗಾರಿಕೆಯನ್ನು ಹೊತ್ತುಕೊಂಡ ಸವಿ ನೆನಪು ನಮ್ಮೆಲ್ಲರಿಗೂ ರೋಮಾಂಚನವನ್ನುಂಟುಮಾಡುವುದು ರಕ್ತರಹಿತ ಕ್ರಾಂತಿರೂಪದಲ್ಲಿ ಯಾವ ಘರ್ಷಣೆಯೂ ಇಲ್ಲದೆ ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯಶಾಹಿಯನ್ನು ದೇಶದಿಂದ ಸ್ನೇಹಪೂರ್ವಕವಾಗಿ ಬೀಳ್ಕೊಟ್ಟು ಆತ್ಮನಿರ್ಣಯದ ತತ್ವದ ಆಧಾರದಮೇಲೆ ನಮ್ಮ ಪ್ರತಿನಿಧಿಗಳು ಆಡಳಿತ ಸೂತ್ರಗಳನ್ನು ವಹಿಸಿಕೊಂಡರು. ಈ ಸಮಾರಂಭವು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲದೆ ಜಗತ್ತಿನ ರಾಷ್ಟ್ರಗಳಲ್ಲೆಲ್ಲಾ ವೈಭವದಿಂದ ಆಚರಿಸಲ್ಪಟ್ಟಿತು ಪ್ರಪಂಚದ ಸಕಲ ದೇಶಗಳೂ ಭಾರತೀಯರಿಗೆ ಅಭಿನಂದನೆಯ ಸಂದೇಶಗಳನ್ನು ಕಳುಹಿಸಿದುವು

ವಿರೋಧ ಶಕ್ತಿಗಳು

ಸ್ವಾತಂತ್ರ್ಯಸಾಧನೆಯ ತರುಣದಲ್ಲಿಯೇ ನಮ್ಮ ದೇಶಕ್ಕೆ ಅಗಾಧವಾದ ಸಮಸ್ಯೆಗಳು ಉದ್ಭವಿಸಿದುವು ದೇಶದ ವಿಭಜನೆಯಿಂದ ಪಾಕಿಸ್ತಾನವು ಇದುವರೆಗೆ ಅನುಸರಿಸುತ್ತ ಬಂದಿರುವ ವಿರೋಧ ವರ್ತನೆಯು ಅವುಗಳಲ್ಲಿ ಮುಖ್ಯವಾದುದು ಈ ಸಮಸ್ಯೆಯು ಇನ್ನೂ ಇತ್ಯರ್ಥವಾಗದೆ ವಿಶ್ವಜನಾಂಗಸಂಸ್ಥೆಯ ಗಮನವನ್ನು ಸೆಳೆಯುವಷ್ಟು ಪ್ರಮಾದಕರವಾಗಿ ಪರಿಣಮಿಸಿರುತ್ತದೆ ಇದರ ಪ್ರತಿಕ್ರಿಯೆಯಿಂದ ಉದ್ಭವಿಸಿದ ಪರಿಸ್ಥಿತಿಯೇ ಪೂಜ್ಯ ಬಾಪೂಜಿಯವರ ದುರ್ಮರಣಕ್ಕೂ ಕಾರಣವಾಯಿತು

ಇತ್ತಲಾಗಿ ಹೈದರಾಬಾದಿನ ಸಮಸ್ಯೆಯೂ ಸಹ ಪಾಕೀಸ್ಥಾನದಷ್ಟೇ ವಿಷಮಕರವಾಗಿ ಕಾಣುತಿದೆ ಇವನ್ನು ಭಾರತ ಸರ್ಕಾರದವರು ಬಹಳ ಶೀಘ್ರವಾಗಿ ಎದುರಿಸುತ್ತಿರುವರು ಒಟ್ಟಿನಲ್ಲಿ ಸ್ವಾತಂತ್ರ್ಯ ಸಾಧನೆಯ ವರ್ಷದಲ್ಲಿ ರಾಷ್ಟ್ರನಾಯಕರಿಗೂ, ದೇಶಬಾಂಧವರಿಗೂ ರಾಷ್ಟ್ರನಿರ್ಮಾಣಕಾರ್ಯದಲ್ಲಿ ತೊಡಗಲು ಸಾಕಾದಷ್ಟು ವ್ಯವಧಾನವು ದೊರೆತಿರುವುದಿಲ್ಲ ನಿರಾಶ್ರಿತರ ಸಮಸ್ಯೆಯು ಅವರ ಮುಖ್ಯ ಗಮನವನ್ನೆಲ್ಲಾ ಸೆಳೆದಿರುತ್ತದೆ ಆದರೂ ಅವರು ದಿಟ್ಟತನದಿಂದಲೂ, ನೈಪುಣ್ಯದಿಂದಲೂ ಸಕಲ ಸಮಸ್ಯೆಗಳನ್ನೂ ಎದುರಿಸುತ್ತಿರುವರು ಅವರ ಕಾರ್ಯದಲ್ಲಿ ಸಂಪೂರ್ಣ ಸಹಕಾರವನ್ನು ನೀಡುವುದು ನಮ್ಮೆಲ್ಲರ ಕರ್ತವ್ಯ

ಮುಂದಿನ ಕರ್ತವ್ಯ

ನಮ್ಮ ನಾಡಿಗೆ ದೊರೆತಿರುವ ಸ್ವಾತಂತ್ರ್ಯವು ನಮ್ಮ ಜನಾಂಗದ ಸರ್ವತೋಮುಖವಾದ ಸುಖಶಾಂತಿಗಳ ಸಾಧನೆಗೆ ಮಾತ್ರವೆ ಅಲ್ಲದೆ ಜಗತ್ತಿನ ಕಲ್ಯಾಣಕ್ಕೂ ಸಹಾಯಕವಾಗಲೆಂದು ಭಗವಂತನಲ್ಲಿ ಪ್ರಾರ್ಥಿಸಿ ಸ್ವಾತಂತ್ರ್ಯ ದಿನಾಚರಣೆಯ ಈ ಪ್ರಥಮ ವಾರ್ಷಿಕೋತ್ಸವದಲ್ಲಿ ನಾವೆಲ್ಲರೂ ತೊಡಗೋಣ

ಮಹಾತ್ಮರ ಪ್ರಾರ್ಥನೆ

ರಘುಪತಿರಾಘವ ರಾಜಾರಾಂ ।
ಪತಿತ ಪಾವನ ಸೀತಾರಾಂ ॥
ಈಶ್ವರ ಅಲ್ಲಾ ತೇರೇ ನಾಂ ।
ಸಬ್ ಕೋ ಸನ್ಮತಿ ದೇ ಭಗವಾನ್ ॥

EVENING SHOWS
AT
Rajkamal Talkies
From 14—8—48
DAILY 3 SHOWS

★ "SLAVE—GIRL" ★
(TECHNICOLOR)
ಗುಲಾಮ ಹುಡುಗಿ

Starring—
★ Yvonne De Carlo
★ George Brent
A CARAVAN OF
Technicolor Thrills
TOLD WITH LUSTY LAUGHTER

MORNING SHOWS
From 13—8—48
FOR 4 DAYS
LONDON TOWN
(In Technicolor)
— With —
Sidfield, Greta, Gynt,
Petula Clark

ಶ್ರೀ ಕೃಷ್ಣಾ ಫ್ಲೋರ್ ಅಂಡ್ ಪ್ಲೇಟ್ಸ್
ರೀ-ಗ್ರೂವಿಂಗ್ ವರ್ಕ್ಸ್
1266, ಕೆ ಆರ್ ಆಸ್ಪತ್ರೆ ರಸ್ತೆ, ಮೈಸೂರು.

ಶ್ರೀ ವಿಜಯ ಫ್ಲೋರ್ ಅಂಡ್ ಪ್ಲೇಟ್ಸ್
ರೀ-ಗ್ರೂವಿಂಗ್ ವರ್ಕ್ಸ್
251-252, ದಿವಾನ್ಸ್ ರಸ್ತೆ ಮೈಸೂರು.

ನಮ್ಮ ಭಾರತ ದೇಶವು ತನ್ನ ದಾಸ್ಯಶೃಂಖಲೆಗಳಿಂದ ವಿಮುಕ್ತವಾದ ವಾರ್ಷಿಕೋತ್ಸವದ ಈ ಶುಭ ಸನ್ನಿವೇಶದಲ್ಲಿ ಭಾರತದ ಮಹಾನಾಯಕರುಗಳಿಗೂ, ನನ್ನ ಬಂಧುಭಗಿನಿಯರಿಗೂ, ಪೋಷಕವರ್ಗ ಮತ್ತು ಹಿತಮಿತ್ರರಾದಿಯಾಗಿ ಸಕಲರಿಗೂ ಸಂಪತ್ತುಗಳನ್ನೂ ಮತ್ತು ದೀರ್ಘಾಯುರಾರೋಗ್ಯವನ್ನೂ ಕೊಟ್ಟು ಕಾಪಾಡಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ

ಎಂ. ಹೆಚ್. ತಿಮ್ಮಪ್ಪ,
ಪ್ರೊಪ್ರೈಟರ್.

ಹೊಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ
ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ
ಕಣ್ಣನ್ ದೇವನ್ ಟೀ
ಸುವಾಸನೆಯಿಂದ ಕೂಡಿಯೂ ಚೈತನ್ಯದಾಯಕವಾಗಿಯೂ
ಮತ್ತು ರುಚಿಕರವಾಗಿಯೂ ಇದೆ
ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು
ಸಿ. ಬಿ. ಜನರಲ್ ಸ್ಟೋರ್ಸ್,
ಯಲ್‌ವಾಲ್ ರಸ್ತೆ . . ಮೈಸೂರು

ವಾರ ಭವಿಷ್ಯ

ತಾ॥ 15—8—48 ರಿಂದ
ತಾ॥ 21—8—48 ರ ವರೆಗೆ

ಮೇಷ :— ಈ ವಾರ ನಿಮ್ಮ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದು ಬರಬೇಕಾದ ಬಾಕಿಯು ವಸೂಲಾಗುವುದು ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ಸನ್ಮಾನಕ್ಕೆ ಪಾತ್ರರಾಗುವಿರಿ ಆರೋಗ್ಯ ಚೆನ್ನಾಗಿದೆ ವಾರಾಂತ್ಯದಲ್ಲಿ ಸ್ವಲ್ಪ ನಷ್ಟ ಸಂಭವಿಸುವುದು

ತಾ॥ 17 20 ಶುಭವಾರ್ತೆ, ಕೊಂಚ ಚಿಂತೆ

ವೃಷಭ :—ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯಭೇರಿ ಹೊಡೆಯುವಿರಿ ಲಾಟರಿ, ಸಟ್ಟಾಗಳಿಂದ ಅಪೂರ್ವ ಲಾಭ ಲಭಿಸುವುದು. ಬಂಧುಬಳಗದವರಿಂದ ಸನ್ಮಾನಿತರಾಗುವಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು

ತಾ॥ 18, 20 ಸಂತೋಷ ಸಮಾಚಾರ, ಚಿತ್ರದರ್ಶನ

ಮಿಥುನ :—ಈ ವಾರ ನೀವು ಮುಟ್ಟಿದ್ದೆಲ್ಲ ಹೊನ್ನಾಗುವುದು. ಕೈಕೊಂಡ ಕಾರ್ಯಗಳೆಲ್ಲವೂ ಸುಲಲಿತವಾಗಿ ನೆರವೇರುವುವು. ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಯಶಸ್ಸು ಲಭಿಸುವುದು. ವಾರಾಂತ್ಯದಲ್ಲಿ ಸ್ವಲ್ಪ ಅನಾರೋಗ್ಯವುಂಟಾಗುವುದು.

ತಾ॥ 17, 20 ಲಾಭ, ಮಂಗಳ ವಾರ್ತೆ

ಕಟಕ :—ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಕ್ಲೇಶಗಳು ಹೆಚ್ಚಿ ಜೀವನದಲ್ಲಿ ಬೇಸರವುಂಟಾಗುವುದು ಯತ್ನಿಸಿದ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನ ಸಂಭವಿಸುವುದು

ತಾ॥ 16, 18 ಚಿಂತೆ, ಭಯ.

ಸಿಂಹ :—ಆರೋಗ್ಯ ಧನಾದಾಯಗಳೆರಡೂ ಚೆನ್ನಾಗಿವೆ. ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಲಭಿಸುವುದು ಲಾಟರಿ, ಸಟ್ಟಾಗಳಿಂದ ಅಪೂರ್ವ ಲಾಭ.

ಕನ್ಯಾ :—ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ತಿರಸ್ಕಾರಕ್ಕೊಳಗಾಗುವಿರಿ ಬರಬೇಕಾದ ಹಣವೂ ಬಾರದೆ ಕೈಕಟ್ಟಿದಂತಾಗುವುದು ಮನೆಯಲ್ಲಿ ಸಂಶಯ ವಾತಾವರಣವು ಹೆಚ್ಚಿ ನಿಮ್ಮನ್ನು ನೀವೇ ನಂಬದಂತಾಗುವಿರಿ.

ತಾ॥ 17, 19 ಅನಿಷ್ಟವಾರ್ತೆ, ನಷ್ಟ.

ತುಲಾ:—ಆರ್ಥಿಕಸ್ಥಿತಿಯು ಹೋದ ವಾರಕ್ಕಿಂತ ಉತ್ತಮಗೊಳ್ಳುವುದು. ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾಗುವಿರಿ. ಮಂಗಳ ಕಾರ್ಯಗಳಿಗಾಗಿ ಪ್ರವಾಸಮಾಡಬೇಕಾಗುವುದು.

ತಾ॥ 18, 19 ಸುಖ ಪ್ರವಾಸ, ಸಂತೋಷ ಕೂಟ.

ವೃಶ್ಚಿಕ :—ಈ ವಾರ ನೀವು ಕೈಗೊಂಡ ಕಾರ್ಯಗಳೆಲ್ಲವೂ ಅಧಿಕ ಯತ್ನವಿಲ್ಲದೆ ಸಿದ್ಧಿಸುವುವು. ಲಾಟರಿ, ಸಟ್ಟಾಗಳಿಂದ ಅಪೂರ್ವಲಾಭವುಂಟಾಗುವುದು. ಪ್ರವಾಸದಿಂದ ಮಂಗಳಕಾರ್ಯಗಳು ನಿಶ್ಚಿತವಾಗುವುವು.

ತಾ॥ 16, 19 ಇಷ್ಟಸಿದ್ಧಿ, ಶತ್ರುನಾಶ

ಧನು :—ಲಾಟರಿ, ಸಟ್ಟಾಗಳಿಂದ ಹಾನಿಯುಂಟಾಗುವುದು ಕೈಗೊಂಡ ಕಾರ್ಯಗಳೆಲ್ಲವೂ ಅರ್ಧದಲ್ಲಿಯೇ ನಿಲ್ಲುವುವು. ಮಿತ್ರರು ಗೋಮುಖವ್ಯಾಘ್ರಗಳಂತೆ ವರ್ತಿಸುವರು. ಮನೆಯಲ್ಲಿ ಮಕ್ಕಳುಮರಿಗಳಿಗೆ ಅನಾರೋಗ್ಯವುಂಟಾಗುವುದು.

ತಾ॥ 16, 18 ವೃಥಾಪವಾದ, ವಾಹನಭಯ.

ಮಕರ :—ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಪರಾಜಿತರಾಗುವಿರಿ ಆರ್ಥಿಕ ಸ್ಥಿತಿಯು ಬಗೆಹರಿಸಲಾರದ ಸಮಸ್ಯೆಯಾಗುವುದು ನೆರೆಹೊರೆಯವರಲ್ಲಿ ವೃಥಾ ಮನಸ್ತಾಪವುಂಟಾಗುವುದು ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯವೊದಗುವುದು

ತಾ॥ 17, 20 ಕ್ಲೇಶ, ಸ್ವಲ್ಪ ಶಾಂತಿ

ಕುಂಭ:—ಮನೆಯಲ್ಲಿ ಮಕ್ಕಳುಮರಿಗಳಿಗೆ ಅನಾರೋಗ್ಯವುಂಟಾಗಿ ವೈದ್ಯರಿಗೆ ವೃಥಾ ಹಣ ತೆರಬೇಕಾಗುವುದು. ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತಿರಸ್ಕಾರವುಂಟಾಗುವುದು. ವ್ಯಾಪಾರಗಾರರಿಗೆ ಈ ವಾರ ಅಧಿಕ ನಷ್ಟ ಸಂಭವಿಸುವುದು.

ತಾ॥ 18, 21 ಮನಸ್ತಾಪ, ಋಣಬಾಧೆ.

ಮೀನ :—ಈ ವಾರ ನಿಮಗೆ ಅನೇಕ ಸಾಧುಸಂತರ ದರ್ಶನ ಲಭಿಸುವುದು. ವಿದ್ಯಾರ್ಥಿ ಮತ್ತು ಲೇಖಕ ವೃಂದಕ್ಕೆ ಅಪೂರ್ವ ಯಶಸ್ಸು ದೊರೆಯುವುದು. ಕೈಗೊಂಡ ಕಾರ್ಯಗಳೆಲ್ಲವೂ ಸಿದ್ಧಿಸುವುವು ಲಾಟರಿ, ಸಟ್ಟಾಗಳಿಂದ ಅಧಿಕ ಲಾಭವುಂಟಾಗುವುವು

ತಾ॥ 19, 21 ಶುಭವಾರ್ತೆ, ಮನೋರಂಜನೆ.

ಭಾರತ ರಾಷ್ಟ್ರನಿರ್ಮಾಪಕ

ಪೂಜ್ಯ ಬಾಪೂಜಿ

ಭಾರತದ ಪ್ರಥಮ ಗೌರ್ನರ್ ಜನರಲ್

ರಾಜಾಜಿ

ಖೈದಿಗಳ ಶಿಕ್ಷೆಯಲ್ಲಿ ರಿಯಾಯಿತಿ

ಸ್ವಾತಂತ್ರ್ಯೋತ್ಸವದ ಪ್ರಥಮ ವಾರ್ಷಿಕ ಸಮಾರಂಭದ ಸಂತೋಷಾರ್ಥವಾಗಿ ಬೊಂಬಾಯಿ ಪ್ರಾಂತ್ಯದ ಎಲ್ಲಾ ಖೈದಿಗಳಿಗೂ ಒಂದು ತಿಂಗಳ ಶಿಕ್ಷೆಯನ್ನು ಕಡಿಮೆ ಮಾಡಿ ಅಲ್ಲಿನ ಸರ್ಕಾರದ ಆಜ್ಞೆ ಹೊರಬಿದ್ದಿದೆ.

MYSORE CITY MUNICIPALITY

NOTICE

Sealed quotations will be received up to 4 p.m. on 24-8-1948 by the Municipal Engineer for collection of Road Materials for the year 1948-49. Each quotation must be accompanied with a challan for having remitted Rs. 200 - in the Municipal Treasury (in cases of other than registered contractors) as earnest money.

For full particulars please see the notification on the office Notice Board.

V. K. Mukundan,
Municipal Engineer

Good, wholesome and Rich dishes are still available

IF YOU ONLY VISIT THE RIGHT RESTAURANT

SRI CHAMUNDESWARI BHAVAN RESTAURANT

AND

SRI KRISHNA BHAVAN RESTAURANT

MYSORE

Caterers by
APPOINTMENT TO H. H. THE MAHARAJA OF MYSORE

PURE GHEE GUARANTEED & HIGH QUALITY PREPARATIONS



Can always be had at OUR SWEET-MEAT SHOPS Renowned for their excellence and noted for observing

ALL SANITARY PRINCIPLES

Visit to our **C. B. STORES** *is earnestly solicited.*

Military Secretary's Office — GOVERNOR-GENERAL'S CAMP (MYSORE) India
23rd April 1948.

Messrs N Munshilal and P. V. Rama Iyer,
Proprietors, Sree Chamundeswari Bhavan,
Yelwal Road, MYSORE

Dear Sirs,

I am directed by His Excellency the Governor-General of India and the Countess Mountbatten of Burma to express to you their sincere thanks for the delightful presents of sweets and savouries which have been received at Lalitha Mahal to day

Their Excellencies are particularly grateful for this delightful present and are very much impressed by the high quality of all the goods which you have so kindly sent to them.

Yours faithfully,
(Sd.) M. J GILLIAT,
(M. J. Gilliat) Major,
Deputy Military Secretary to the Governor-General
(True Copy)

ಅಪೆರಾ ಟಾಕೀಸ್

14—8—48 ರಿಂದ

ಪ್ರತಿ ದಿನ ಮೂರು ಆಟಗಳು

ಪರಂಜ್ಯೋತಿ

— ಅಥವಾ —

(ಸಿರಿಯಾಳ ಚರಿತ್ರೆ)

(ತಮಿಳು)

—: ಪಾತ್ರ :—

ವಿ. ಎ. ಚೆಲ್ಲಪ್ಪ

ಟಿ. ಪಿ. ರಾಜಲಕ್ಷ್ಮಿ

ಕೃಷ್ಣನ್, ಮಧುರಂ.

Edited, printed and published by A.R Nagarajan at the Sadhvi Press, D Subbiah Road, Mysore

—1948

ನರಲ್

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೧೬-೮-೪೮ [ಸಂಚಿಕೆ ೨೪

- ಶ್ರೀರಂಗಪಟ್ಟಣದ - ಅರ್ಚಕರ ವಜಾ

ಭಾರತ ಸ್ವಾತಂತ್ರ್ಯ ದಿನಾಚರಣೆ

ಬಹಿರಂಗ ಸಭೆಯಲ್ಲಿ ಗೊಂದಲ ಮತ್ತು ಕಲ್ಲುಗಳ ಏಟು

ಮೈಸೂರು ೧೬

…ನ್ನೆ ಸಂಜೆ ಟೌನ್‌ಹಾಲ್ ಮೈದಾನದ …ಗರ ಕಾಂಗ್ರೆಸ್ ಸಮಿತಿಯು ಅಧ್ಯಕ್ಷ …ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷ …ಯಲ್ಲಿ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ …ರಂಗ ಸಭೆಯು ನಡೆಯಿತು. ಸುಮಾರು …ಎರಡು ಸಾವಿರ ಜನರು ಸಭೆಗೆ ಬಂದಿ…ರು. ಪ್ರಾರಂಭದಲ್ಲಿ ಲಾವಣಿ ಮತ್ತು ಗಾಂ…ಧೀಯವರ ಮೇಲೆ ರಚಿಸಿದ್ದ ಕವನಗಳ …ಹಾಡಿಸಲಾಯಿತು. ಶ್ರೀ ಬಿ. ನಾರಾಯಣ…ಸ್ವಾಮಿಯವರು ಭಾಷಣ … ಮಹಾತ್ಮರ ಸ್ಮಾರಕ ನಿಧಿಗೆ ಉದಾ… ಸಹಾಯ ಮಾಡಬೇಕೆಂದು ಕೋ… ಶ್ರೀ ಎಸ್. ಚನ್ನಯ್ಯನವರು ಭಾ… …ಮಾಡಿ ದೇಶದ ಸ್ವಾತಂತ್ರ್ಯಕ್ಕಾಗಿ … ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು …ಸಿದರು. ಈಗಿನ ಪ್ರಜಾ ಸರ್ಕಾರಕ್ಕೆ … ನೀಡಬೇಕೆಂದೂ, ಗಾಂಧೀ ನಿಧಿ…ಧಾರವಾಗಿ ಸಹಾಯ ಮಾಡಬೇಕೆಂ… …ಳಿದರು. ಸರ್ಕಾರದ ನೌಕರರು …ತಮ್ಮ ಸಂಬಳದ ಮೂರನೇ ಒಂದು …ವನ್ನು ಈ ನಿಧಿಗೆ ಕೊಡುವಾಗಿ ಇಡ…ದೂ, ಈ ಬಗ್ಗೆ ಸದ್ಯದಲ್ಲೇ ಸರ್ಕಾರೀ …ಯು ಹೊರಬೀಳುವುದೆಂದೂ ಸಹ …ರು ತಿಳಿಸಿದರು.

…ಪಾಲಹಳ್ಳಿ ಸೀತಾರಾಮಯ್ಯನವ…ಭಾಷಣ ಮಾಡಲು ಆರಂಭಿಸಿದಾಗ …ಲ್ಲಿ ಕೆಲವರು ಅಕ್ಕಿ, ರಾಗಿ, ಮತ್ತು …ವುಗಳು ಕಾಳ ಸಂತೆಯಲ್ಲಿ ಮಾರಾ…ಗುತ್ತಿರುವುದು ಮತ್ತು ಆಹಾರ ಧಾ…ಗಳ ವಿಪರೀತ ಬೆಲೆಯೇರಿರುವುದು …ತಮ್ಮ ಅಸಮಾಧಾನವನ್ನು ವ್ಯಕ್ತ…ಗೊಂದಲವೆಬ್ಬಿಸಿದರು.

…ಎಂ ಎ. ಜೋಯಿಸರು ಭಾಷಣ …ಜನರು ತಪ್ಪುಗಳನ್ನು ನಿವೇದಿಸಿಕೊ… …ರ್ವರಿಗೂ ಹಕ್ಕಿದೆಯೆಂದೂ ಆದ …ರಂಗ ಸಭೆಯಲ್ಲಿ ಗಲಭೆ ಮಾಡು… …ದ ಯಾವ ಪ್ರಯೋಜನವೂ ಇಲ್ಲ …ತಿಳಿಸಿ ಸರ್ವರೂ ಮಹಾತ್ಮ ಗಾಂ…ಧಿಯವರು ತೋರಿಕೊಟ್ಟ ಸತ್ಯ, ಅ…ಹಿಂಸೆ ಮತ್ತು ಶಾಂತಿಯುತವಾದ ಮಾ…ರ್ಗದಲ್ಲಿ ಹೋಗಬೇಕೆಂದೂ ತಿಳಿಸಿದರು.

…ಎಸ್. ರಂಗರಾಮಯ್ಯನವರ… …ಮಾಡಲು ಎದ್ದಾಗ ಸಭೆಯಲ್ಲಿ… …ದ ಹೆಚ್ಚಾಗಿ ವೇದಿಕೆಯ ಮೇಲೆ …ಕಲ್ಲುಗಳು ಸಹ ಬಿದ್ದವು. ಅನಂತರ …ದ ಪುಟ್ಟಸ್ವಾಮಿ, ಅಬ್ದುಲ್ ರಹ…ಮತ್ತು ರಾಜೂರವರು ಭಾಷಣ …ದರು. ವಂದೇಮಾತರಂ ಗೀತೆಯೊ…ದಿಗೆ ಸಭೆಯು ಮುಕ್ತಾಯವಾಯಿತು.

…ರದಲ್ಲಿ ಕದನ ನಿಲ್ಲಿಸಲು ಸೂಚನೆ

…ರದಲ್ಲಿ ಜನಾಭಿಪ್ರಾಯ ತೆಗೆದು…ಕೊಳ್ಳುವ ಮುಂಚೆ ಅಲ್ಲಿ ಉಭಯ …ರು ಕದನ ನಿಲ್ಲಿಸಬೇಕೆಂದು ಭ…ದ್ರತಾ ಸಮಿತಿಯ ಕಮಿಷನ್ನಿನವರು ಭಾ…ರತ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ …ಸೂಚಿಸಬೇಕೆಂದು ಸಲಹೆ ಮಾಡಿ… … ಇದನ್ನು ಭಾರತ ಸರ್ಕಾರ …ಒಪ್ಪುತ್ತದಿಲ್ಲವೆಂದು ದೆಹಲಿಯ ಅ…ಭಿಪ್ರಾಯ ಪಡಲಾಗಿದೆ.

ರಂಗನಾಥ ದೇವಾಲಯದ ಅರ್ಚಕರ ವಜಾ

ಸ್ವಂತ ಫೋನ್] ಬೆಂಗಳೂರು ೧೬

ಶ್ರೀರಂಗಪಟ್ಟಣದ ಶ್ರೀ ರಂಗನಾಥ ಸ್ವಾಮಿ ದೇವಾಲಯದ ಬಾಗಿಲನ್ನು ಮುಚ್ಚಿದ ಸಂಬಂಧವಾಗಿ ಸರ್ಕಾರದವರು ಈ ರೀತಿ ಪ್ರಕಟನೆಯೊಂದನ್ನು ಹೊರಡಿಸಿದ್ದಾರೆ:—

ಕಳೆದ ಏಪ್ರಿಲ್ ೨೩ನೆಯ ತಾ|| ಭಾರತದ ಮಾಜಿ ಗೌರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರು ಶ್ರೀರಂಗಪಟ್ಟಣಕ್ಕೆ ಸಮೀಪದಲ್ಲಿ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿಕೊಟ್ಟ ನಂತರ ಅಲ್ಲಿನ ಕೆಲವು ಅರ್ಚಕರು ಗರ್ಭ ಗುಡಿಯ ದ್ವಾರವನ್ನು ಅನಧಿಕೃತವಾಗಿ ಮುಚ್ಚಿದ ಬಗ್ಗೆ ವಿವರವಾಗಿ ಪರಿಶೀಲನೆ ನಡೆಸಲಾಯಿತು. ಅರ್ಚಕರ ಈ ರೀತಿಯ ವರ್ತನೆಯು ಅತಿಕ್ರಮವಾದುದು. ಆದ್ದರಿಂದ ಅವರನ್ನು ಕೆಲಸದಿಂದ ವಜಾ ಮಾಡಲು ಆಜ್ಞೆ ಮಾಡಲಾಗಿದೆ. ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರಿಂದ ಸಂಸ್ಥಾನದ ಇತರ ದೇವಸ್ಥಾನಗಳ ಕೆಲಸಗಾರರಿಗೂ ಸಹ ಸರ್ಕಾರದ ನಿಯಮ ಮತ್ತು ಶಿಸ್ತುಗಳನ್ನು ಪಾಲಿಸಲು ಎಚ್ಚರಿಕೆಯಾಗುವುದೆಂದು ನಂಬಲಾಗಿದೆ.

ಲಂಡನ್ನಿನಲ್ಲಿ ಭಾರತ ಸ್ವಾತಂತ್ರ್ಯ ದಿನಾಚರಣೆ

ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯನ್ನು ಲಂಡನ್, ಅಮೇರಿಕ, ಫ್ರಾನ್ಸ್, ಬರ್ಮಾ, ಸಿಲೋನ್ ಮತ್ತು ಇತರ ದೇಶಗಳಲ್ಲಿ ಅತಿವೈಭವದಿಂದ ಆಚರಿಸಲಾಯಿತು. ಲಂಡನ್ನಿನ ಸಮಾರಂಭದ ಸಭೆಯಲ್ಲಿ ಬ್ರಿಟನ್ನಿನ ಪ್ರಧಾನಿ ಅಟ್ಲಿ, ಸರ್ ಸ್ಟಾಫರ್ಡ್ ಕ್ರಿಪ್ಸ್, ಲಾರ್ಡ್ ಮೌಂಟ್ ಬ್ಯಾಟನ್, ಭಾರತದ ರಾಯಭಾರಿ ಶ್ರೀ ಮೆನನ್ ಅವರುಗಳು ಭಾಷಣ ಮಾಡಿದರು.

ಅಮೆರಿಕದ ಅಧ್ಯಕ್ಷ ಟ್ರೂಮನ್, ಚೀಣದ ಚಿಯಾಂಗ್-ಕೈ ಷೇಕ್, ಬ್ರಿಟನ್ನಿನ ಪ್ರಧಾನಿ ಅಟ್ಲಿ, ಲಾರ್ಡ್ ಮೌಂಟ್ ಬ್ಯಾಟನ್, ಇಂಡೋನೇಷಿಯದ ಪ್ರಧಾನಿ ಮತ್ತು ಇತರ ದೇಶಗಳ ನಾಯಕರುಗಳು ಭಾರತಕ್ಕೆ ಸಂದೇಶವನ್ನು ಕಳುಹಿಸಿರುತ್ತಾರೆ.

ಹೈದರಾಬಾದಿನಲ್ಲಿ ಭಾರತದ ಏಜೆಂಟ್ ಜನರಲ್ಲರಾದ ಶ್ರೀ ಕೆ ಎಂ ಮುನಷಿಯವರು ಭಾರತ ಸರ್ಕಾರಕ್ಕೆ ಹೈದರಾಬಾದಿನ ಜನತೆಯ ಒಂದು ಸಂದೇಶವನ್ನು ಕಳುಹಿಸಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಹೈದರಾಬಾದಿನ ಪ್ರಜೆಗಳು ಸಂತೋಷವಾಗಿ ಭಾಗವಹಿಸ ಬಯಸುವರೆಂದೂ, ಹೈದರಾಬಾದಿನ… …ವ ಕೈಲಿ ಭಾರತದ ಪ್ರಗತಿಯೊ ಅದರ ಅಭ್ಯುದಯವೇ ಭಾರತದ ಅಭ್ಯುದಯವೆಂದೂ ತಿಳಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೬

ರಾಜಧಾನಿಯ ವಿವಿಧ ಸಂಸ್ಥೆಗಳು ನಿನ್ನೆ ದಿನ ಭಾರತದ ಪ್ರಥಮ ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವದಿಂದ ಆಚರಿಸಿದವು. ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ಮತ್ತು ಮಾದರಿ ಶಾಲೆಯವರು ಪೌರಸಭಾಧ್ಯಕ್ಷರಾದ ಶ್ರೀ ಟಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ, ಇಟ್ಟಿಗೆಗೂಡು ಯುವಕರ ಸಂಘದವರು ಶ್ರೀ …ಗನ್ ರಂಗಯ್ಯನವರ ಅಧ್ಯಕ್ಷತೆಯಲ್ಲಿ, …ಕವಾಡಿ ಹೈಸ್ಕೂಲಿನವರು ಶ್ರೀ ಸಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ; ಇಟ್ಟಿಗೆಗೂಡು ಕರ್ನಾಟಕ ಸಮಾಜದವರು ಶ್ರೀ ಪಿ.ಶಿ. ನಂದನನವರ ಅಧ್ಯಕ್ಷತೆಯಲ್ಲಿ, ಹೆಂಬಾರೆ ರಂಗಯ್ಯನವರ ಕಂಟೋನರ ವಿದ್ಯಾರ್ಥಿ ನಿಲಯದವರು ಶ್ರೀ ಬಿ ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ಆಚರಿಸಿದರು. ಮುಸ್ಲಿಂ ಜನ ಫ್ರಾಥಮಿಕ ಶಾಲೆ, ಟಿಪ್ಪು ಮೇಗದ ಮತ್ತು ಯವನಾನಿ ಕಾಲೇಜು, ಹಿಂದೀ ಪ್ರಚಾರ ಸಭೆ, ಕರ್ನಾಟಕ ದೇಶ ಸೇವಾ ಸಂಘ, ವಿಜಯನಗರ, ಭಾವಸಾರ ಕ್ಷತ್ರಿಯ ವಿದ್ಯಾರ್ಥಿಸಂಘ, ಶ್ರೀ ಬ್ರಹ್ಮಾನಂದ ಉಪಶಾಲಾ, ನ್ಯಾಷನಲ್ ಇಂಜನಿಯರಿಂಗ್ ಶಾಲೆ, ತೀರ್ಥ ಕಾಲೋನಿ ಇವೇ ಮುಂತಾದ ಸಂಸ್ಥೆಗಳೂ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದವು.

ಮೈಸೂರು ನಗರದ ಪತ್ರಿಕೋದ್ಯಮಿಗಳ ಸಂಘದವರು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು. ಬೆಳಿಗ್ಗೆ ಧ್ವಜಾರೋಹಣವೂ, ರಾತ್ರಿ ಭೋಜನ ಕೂಟವೂ ನಡೆಯಿತು.

ಹೆಚ್ಚಿನ ಟಿಕೆಟ್ ಛಾರ್ಜ್ ತೆಗೆದು ಕೊಳ್ಳುತ್ತಿದ್ದಾರೆ

…ಗರ ೧೦

ಇಲ್ಲಿಂದ ಮೈಸೂರಿಗೆ ಹೋಗುವ ಪರಮೇಶ್ವರ ಮೋಟಾರ್ ಸರ್ವೀಸಿನವರು ಪ್ರಯಾಣಿಕರಿಂದ ಛಾರ್ಜನ್ನು ಸರ್ಕಾರದವರು ನಿರ್ಣಯಿಸಿರುವುದಕ್ಕಿಂತಲೂ ಹೆಚ್ಚಾಗಿ ತೆಗೆದುಕೊಳ್ಳುತ್ತಿರುವರೆಂದೂ ಅವರು ತೆಗೆದುಕೊಳ್ಳುತ್ತಿರುವ ಬೆಲೆಬಾಳಿಗೆ ತಕ್ಕಂತೆ ಟಿಕೆಟ್ ಕೊಡುವುದಿಲ್ಲವೆಂದೂ ಪ್ರಯಾಣಿಕರು ಹೇಳುತ್ತಾರೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಬೇಕಾಗಿದೆ.

ಶ್ರೀಮನ್ಮಹಾರಾಜರವರಿಗೆ ಮೇಜರ್-ಜನರಲ್ ಪದವಿ

ಮೈಸೂರು ೧೬

ಶ್ರೀಮನ್ಮಹಾರಾಜರವರನ್ನು ಭಾರತದ ಆನರರಿ ಮೇಜರ್ ಜನರಲ್ಲರಾಗಿ ಆಗಸ್ಟ್ ೧೫ನೇ ತಾ|| ನೇಮಿಸಲಾಗಿದೆಯೆಂದು ಭಾರತ ಸರ್ಕಾರದ ಪ್ರಕಟನೆಯು ತಿಳಿಸುತ್ತದೆ.

ಗೌರ್ನರ್ ಜನರಲ್ಲರ ಪ್ರವಾಸದ ಕಾರ್ಯಕ್ರಮ

ಸ್ವಂ.ಸು ಫೋ] ಬೆಂಗಳೂರು ೧೬

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರ ಮೈಸೂರು ಮತ್ತು ಬೆಂಗಳೂರು ನಗರದ ಕಾರ್ಯಕ್ರಮಗಳು ಈ ರೀತಿ ಇವೆಯೆಂದು ಸರ್ಕಾರದ ಪ್ರಕಟನೆ ತಿಳಿಸಿರುತ್ತದೆ:—

೧೮ನೇ ತಾ|| ಮಧ್ಯಾಹ್ನ ೪-೩೦ ಗಂಟೆಗೆ ರಾಜಧಾನಿಗೆ ಆಗಮನ ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರವರಿಂದ ಸ್ವಾಗತ ಮತ್ತು ಅವರೊಂದಿಗೆ ಲಲಿತ ಮಹಲ್ ಅರಮನೆಗೆ ಪ್ರಯಾಣ ೫-೩೦ ಗಂಟೆಗೆ ಪ್ರಭುಗಳ ಸತ್ಕಾರ ಕೂಟ ೬-೩೦ ಗಂಟೆಗೆ ಶ್ರೀಮನ್ಮಹಾರಾಜರವರೊಂದಿಗೆ ಬೃಂದಾವನಕ್ಕೆ ಭೇಟಿ. ೧೯ನೇ ತಾ|| ಬೆಳಿಗ್ಗೆ ೮-೩೦ ಗಂಟೆಗೆ ಶ್ರೀಮನ್ಮಹಾರಾಜರವರೊಂದಿಗೆ ನೂರವಣೆಗೆ … ಚಾಮುಂಡಿಬೆಟ್ಟದಲ್ಲಿ ಪ್ರಾರ್ಥನೆಯ ಸಿದ್ಧತೆ … ಮತ್ತು ಪ್ರದರ್ಶನಾಲಯಕ್ಕೆ ಭೇಟಿ ೧೦ ೧೫ ಜಗನ್ ಮೋಹನ ಬಂಗಲೆಯಲ್ಲಿ ಮಹಿಳೆಯರ ಸಭೆಗೆ ಭೇಟಿ ೧೦ ೪೫ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಿಗೆ ಉಪದೇಶ ೧೧-೩೦ ಕುಕ್ಕರಹಳ್ಳಿ ಹರಿಜನ ಕಾಲೋನಿಗೆ ಭೇಟಿ ೧೨ ರಿಂದ ೧ ಸಾರ್ವಜನಿಕರಿಗೆ ಭೇಟಿ ೩-೩೦ ಬೆಂಗಳೂರಿಗೆ ಪ್ರಯಾಣ ೬ ೩೦ಕ್ಕೆ ಬೆಂಗಳೂರಿಗೆ ಆಗಮನ ಮಾರ್ಗದಲ್ಲಿ ಕೆಂಗೇರಿ ಮತ್ತು ಗೋಪಾಲಪುರದ ಹರಿಜನ ಕೇಂದ್ರಕ್ಕೆ ಭೇಟಿ.

ಕಾಂಪೆನ್ಸೇಷನ್ ಮೊಕದ್ದಮೆ

ಸ್ವಂ. ಸು. ಫೋ] ಬೆಂಗಳೂರು ೧೬

ಈ ದಿನ ಹೈಕೋರ್ಟಿನಲ್ಲಿ ಮದರಾಸ್ ಅಡ್ವೋಕೇಟ್ ಜನರಲ್ಲರಾದ ಶ್ರೀ ಎಸ್. ರಾಜಾ ಅಯ್ಯಂಗಾರರವರು ತಮ್ಮ ವಾದವನ್ನು ಮುಂದುವರಿಸಿದರು. ನೂತನ ಆಡಳಿತದ ಶಾಸನದ ಪ್ರಕಾರ ಹೈಕೋರ್ಟಿಗೆ ಹೇಬಿಯಸ್ ಕಾರ್ಪಸ್ ಅಧಿಕಾರವೂ ಇಲ್ಲವೆಂದೂ ಅವರು ತಿಳಿಸಿದರು.

ಮಧ್ಯಾಹ್ನ ೩ ಗಂಟೆಗೆ ಬೆಂಗಳೂರು ವರ್ತಕರ ಸಂಘದ ಪರವಾಗಿ ಮದರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳು ವಾದವನ್ನು ಪ್ರಾರಂಭಿಸಿದರು.

ಗೌ|| ಜನರಲ್ಲರಿಗೆ ಕಾಂಗ್ರೆಸ್ ಸೇವಾದಳದ ಗೌರವ

ಸಂಸ್ಥಾನದ ಸೇವಾದಳದ ಶಿಕ್ಷಕರೂ ಮತ್ತು ತರಪೇತಾದ ೬೦೦ ಮಂದಿ ಸ್ವಯಂ ಸೇವಕರುಗಳೂ ಇದೇ ೨೦ನೇ ತಾ|| ಬೆಳಿಗ್ಗೆ ಬೆಂಗಳೂರು ರೆಸಿಡೆನ್ಸಿ ಬಂಗಲೆಯಲ್ಲಿ ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಗೌರವವನ್ನು ಸಲ್ಲಿಸುವರು. ಈ ಸಮಾರಂಭದಲ್ಲಿ ಭಾಗವಹಿಸಲಿಚ್ಛಿಸುವವರು ಖಾದೀ ಟೋಪಿ, ಬಿಳಿಯ ಷರಟು, ಕರಿ ಅಥವಾ ಖಾಕಿ … ಸಮೇತ ಇದೇ ೧೮ನೇ ತಾ|| … ಕಾಂಗ್ರೆಸ್ ಕೇಂದ್ರ ಕಛೇರಿಗೆ ಬರಬೇಕೆಂದು … ಸ್ವಾಗತಿಸಿ ತಿಳಿಸುತ್ತಾರೆ.

○ … ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ …ರೋಡಾ ಮಹಾರಾಜರವರು ನಿನ್ನೆ … ಕಟಿಗೆಗಳಿಗೆ ಒಂದು ಸಂದೇಶವನ್ನು … ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ … ಸರ್ಕಾರವನ್ನು ಸ್ಥಾಪಿಸುವುದಾಗಿ … ಕೊಟ್ಟ ಭರವಸೆಯನ್ನು ಕೂಡಲೆ … ಜಾರಿಗೆ ತರುವುದಾಗಿ ಘೋಷಿಸಿರುತ್ತಾರೆ.

ಧ್ವಜಾರೋಹಣ ಮತ್ತು ಮೆರವಣಿಗೆ

ಮೈಸೂರು ೧೬

ಸ್ವಾತಂತ್ರ್ಯೋತ್ಸವದ ಅಂಗವಾಗಿ ನಿನ್ನೆ ಬೆಳಗ್ಗೆ ಟೌನ್ ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯನವರು ಭಾರತ ಧ್ವಜವನ್ನೂ, ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಇ ಟಿ ನಂಜಪ್ಪನವರು ಮೈಸೂರು ಧ್ವಜವನ್ನೂ ಹಾರಿಸಿದರು. ಈ ಸಮಾರಂಭಕ್ಕೆ ಬಹಳ ಮಂದಿ ಮಹನೀಯರೂ, ಮಹಿಳೆಯರೂ, ಸರ್ಕಾರಿ ಅಧಿಕಾರಿಗಳೂ ದಯಮಾಡಿಸಿದ್ದರು. ಸೈನ್ಯ, ಪೋಲೀಸ್, ಸ್ಕೌಟ್ ದಳ ಮತ್ತು ಅಗ್ನಿ ದಳದವರು ಗಾರ್ಡ್ ಆಫ್ ಆನರ್‌ನ್ನು ಸಲ್ಲಿಸಿದರು. ಜಿಲ್ಲಾಧಿಕಾರಿಗಳಾದ ಬಾಬರ್ ಮ್ಯಾಥ್ಯೂರವರು ಸೆಲ್ಯೂಟನ್ನು ಸ್ವೀಕರಿಸಿದರು. ವಂದೇಮಾತರಂ ಗೀತೆಯೊಂದಿಗೆ ಸಮಾರಂಭವು ಸಮಾಪ್ತವಾಯಿತು.

ಮಧ್ಯಾಹ್ನ ೪-೩೦ ಗಂಟೆಗೆ ಕಾಂಗ್ರೆಸ್ ಕಛೇರಿಯಿಂದ ಸುಂದರವಾಗಿ ಅಲಂಕರಿಸಿದ ರಥದಲ್ಲಿ ಭಾರತ ಮಾತೆಯ ಚಿತ್ರದೊಡನೆ ಭಾರಿ ಮೆರವಣಿಗೆಯು ಸಯ್ಯಾಜಿರಾವ್ ರಸ್ತೆ, ಏವರ್ ಅಕ್ಕಿ, ಅಶೋಕಾ ರಸ್ತೆಗಳ ಮೂಲಕ ಟೌನ್ ಹಾಲ್ ಮೈದಾನಕ್ಕೆ ಬಂದಿತು. ಮೆರವಣಿಗೆಯಲ್ಲಿ ವಿವಿಧ ಸಂಸ್ಥೆಗಳೂ, ಸಾವಿರಾರು ಜನಗಳೂ ಭಾಗವಹಿಸಿದ್ದರು

ಶ್ರೀ ಹಯವದನ ಜಯಂತಿ

ರಾಜಧಾನಿಯ ಸಂಸ್ಕೃತ ಪಾಠಶಾಲೆಯ ಹಯವದನ ಸೇವಾ ಸಂಘದವರು ನಾಳೆ ಮತ್ತು ನಾಳಿದ್ದು ಶ್ರೀ ಹಯವದನ ಜಯಂತಿ ಉತ್ಸವವನ್ನು ಏರ್ಪಡಿಸಿರುವರು. ಈ ಸಂಬಂಧದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಶ್ರೀ ಎಂ ಆರ್ ವೆಂಕಟ ಸುಬ್ಬಶಾಸ್ತ್ರಿಯವರಿಂದ ಉಪನ್ಯಾಸವೂ, ನಾಳಿದ್ದು ಮಧ್ಯಾಹ್ನ ೪ ಗಂಟೆಗೆ ಸಭೆಯೂ ನಡೆಯುವುವು

ಶ್ರೀ ರಾಘವೇಂದ್ರ ಗುರುಗಳ ಆರಾಧನೆ

ಟಿ. ನರಸೀಪುರ ತಾ|| ಮೂಗೂರಿನ ಶ್ರೀ ರಾಘವೇಂದ್ರ ಗುರುಗಳ ಭಕ್ತ ಮಂಡಲಿಯವರು ಇದೇ ೨೦, ೨೧ ಮತ್ತು ೨೨ನೇ ತಾ|| ಗಳಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನಾ ಮಹೋತ್ಸವವನ್ನು ನೆರವೇರಿಸುವರು

ಜಗತ್ತಿನ ಅಭ್ಯುದಯಕ್ಕೆ ಭಾರತದ ಕಾಣಿಕೆ

ಸರ್ದಾರ್ ಪಟೇಲರ ಸಂದೇಶ

ಇಂದಿನ ಪ್ರಪಂಚದಲ್ಲಿ ಪ್ರತ್ಯೇಕತಾ ಭಾವನೆಯು ಅಧಿಕಾರ ಲಾಲಸೆಯು ಹೇಗೆಯೋ ಅಪ್ರಯೋಜಕವಾದುದು. ಸಂಕುಚಿತ ರಾಷ್ಟ್ರೀಯ ಮನೋಭಾವನೆಯಿಂದ ವಿಶಾಲವಾದ ಆದರ್ಶ ಜೀವನದ ಕಡೆಗೆ ಜಗತ್ತು ವೇಗವಾಗಿ ಸಾಗುತ್ತಿದೆ. ವಿಶ್ವದ ಪ್ರಜೆಗಳಾಗಿ ನಾವೂ ಸಹ ಪ್ರಪಂಚದ ಹೊಸ ಹೊಸ ವಿದ್ಯಮಾನಗಳಿಗನುಗುಣವಾಗಿ ಮುನ್ನಡೆಯುತ್ತ ನಮ್ಮ ದೇಶಕ್ಕೂ ಪ್ರಪಂಚಕ್ಕೂ ಸೇವೆಯನ್ನು ಸಲ್ಲಿಸಬೇಕು. ವಿಶ್ವ ವಿಚಾರಗಳ ವಿಮರ್ಶೆಯಿಂದ ಪ್ರಪಂಚ ವ್ಯವಹಾರಗಳಲ್ಲಿ ನಮಗೆ ನೈಪುಣ್ಯವುಂಟಾಗುವುದು ಮಾತ್ರವಲ್ಲದೆ ನಮ್ಮ ದೇಶದ ಮತ್ತು ಇಡೀ ಪ್ರಪಂಚದ ಐಕ್ಯತೆಯ ಅಭ್ಯುದಯಕ್ಕೂ ನಮ್ಮ ಕಾಣಿಕೆಯನ್ನು ಸಲ್ಲಿಸಲು ಅನುಕೂಲವಾಗುತ್ತದೆ-ಎಂಬುದಾಗಿ ಸರ್ದಾರ್ ವಲ್ಲಭಾಯ್ ಪಟೇಲರು ತಮ್ಮ ಸಂದೇಶವೊಂದರಲ್ಲಿ ತಿಳಿಯಪಡಿಸುತ್ತಾರೆ

ಮನೆ ಮಾರಾಟಕ್ಕಿದೆ

ಮನೆ ಮತ್ತು ಅಂಗಡಿಕಟ್ಟಲು ಸೈಟು ಸಹ ಬಿಕರಿಗೆ ಸಿದ್ಧವಾಗಿರುತ್ತೆ. ಬಜಾರು ರೋಡು ಜವಳಿ ಅಂಗಡಿಗಳ ಮಧ್ಯದಲ್ಲಿರುತ್ತೆ ಮೈಸೂರು ದೊಡ್ಡಪೇಟೆ ಅಶೋಕ ರೋಡ್ 153, 154, 155; ನೇ ನಂಬರ್ ಕಲ್ಕತ್ತಾ ಸ್ಟೋರ್ ಮಂಗಳೂರು ಹೆಂಚಿನ ಸಹಿತ ಮನೆ ಖರೀದಿಗಿರುತ್ತೆ. ಮನೆ ಮುಂಭಾಗದಲ್ಲಿ ಅಂಗಡಿಕಟ್ಟಲು ಖಾಲಿ ನಿವೇಶನ ಸಹ ಇರುತ್ತೆ ಪೂರ್ಣವನೆಯಲ್ಲಿ ಲೈಟು, ನಲ್ಲಿ, ಬಾವಿ ಸಹಿತವಾದ ದರ ಖರೀದಿ 50,000 ರೂಗಳು ಪೂರ್ತಿ ಖರ್ಚನ್ನು ಕೊಳ್ಳುವವರೇ ವಹಿಸಿಕೊಳ್ಳಬೇಕು ಬ್ಯಾಡಿಗೆ ಸಹ ಕೊಡಲ್ಪಡುತ್ತೆ. ಹೆಚ್ಚಿನ ವಿಚಾರಗಳನ್ನು ಕೆಳಗಿನ ವಿಳಾಸದಾರರಲ್ಲಿ ತಿಳಿಯಬಹುದು

ಮಂತ್ರಿಮಾರ್ ಸಂಪತ್ಕುಮಾರಾಚಾರ್,
೧೫೫, ಅಶೋಕರೋಡ್
ಮೈಸೂರು.

Edited printed and published by A. R. Nagarajan at the Sadhvi Press D. Subbaiah Road Mysore.

ಕಾಶ್ಮೀರ ಮುಸ್ಲಿಂ ಸಮ್ಮೇಳನದ ಸದಸ್ಯರ ರಾಜೀನಾಮೆ

ಪಾಕಿಸ್ತಾನದಿಂದ ಪ್ರೇರಿಪಿತರಾದ ಧಾಳಿಕಾರರು ಕಾಶ್ಮೀರದಲ್ಲಿ ನಡೆಸುತ್ತಿರುವ ಅಮಾನುಷ ಕೃತ್ಯಗಳು ಇಸ್ಲಾಂ ತತ್ವಕ್ಕೆ ವಿರೋಧವೆಂದೂ, ಅಂತಹ ದೇಶದ್ರೋಹಿಗಳೊಡನೆ ತಾವು ಭಾಗಿಗಳಾಗುವುದಿಲ್ಲವೆಂದೂ ತಿಳಿಸಿ, ಕಾಶ್ಮೀರದ ಮುಸ್ಲಿಂ ಸಮ್ಮೇಳನದ ಸದಸ್ಯರಾದ ಮೌಲ್ವಿ ಅಬ್ದುಲ್ಲಾ ಷಾರವರು ರಾಜೀನಾಮೆ ಕೊಟ್ಟಿರುತ್ತಾರೆ. ತಾವು ಷೇಕ್ ಅಬ್ದುಲ್ಲಾರವರ ರಾಷ್ಟ್ರೀಯ ಸಮ್ಮೇಳನಕ್ಕೆ ಸೇರುವುದಾಗಿ ಅವರು ತಿಳಿಸಿರುತ್ತಾರೆ.

ವಿಬುಧಸಾಚಾರ್ಯರ ಆರಾಧನೆ

ಸಂಸ್ಕೃತ ಮಹಾಪಾಠಶಾಲೆಯಲ್ಲಿ ಇದೇ ೧೮ನೇ ತಾ|| ಶ್ರೀ ವಿಬುಧಸಾಚಾರ್ಯರ ೨೪ನೇ ವಾರ್ಷಿಕ ಜಯಂತ್ಯುತ್ಸವನಡೆಯುವುದು. ಬೆಳಗ್ಗೆ ೭ ಗಂಟೆಗೆ ಪ್ರಾರ್ಥನೆ ಮತ್ತು ಸಂಜೆ ೫-೩೦ ಗಂಟೆಗೆ ಸಭೆ ನಡೆಯುವುದು

ಅಪೇರಾ ಟಾಕೀಸ್

14—8—48 ರಿಂದ
ಪ್ರತಿ ದಿನ ಮೂರು ಆಟಗಳು

ಪರಂಜ್ಯೋತಿ

ಅಥವಾ
ಸಿರಿಯಾಳ ಚರಿತ್ರೆ
(ತಮಿಳು)
ಪಾತ್ರ:- ಪಿ. ಎ ಚಲ್ಲಪ್ಪ, ಟಿ. ಪಿ. ರಾಜಲಕ್ಷ್ಮಿ, ಕೃಷ್ಣನ್, ಮಧುರಂ

—:Next Change:—
From 21—8—48
(Evening Shows)

OUT LAW
(ಔಟ್ ಲಾ)

!!ಶ್ರೀ!!

ಗಾಯತ್ರೀ ಟಾಕೀಸ್

16—8—48 ರಿಂದ 4 ದಿನಗಳು ಮಾತ್ರ
R.K.O. ರವರ

ಬ್ಯಾಡ್ ಮನ್ಸ್ ಟೆರಿಟರಿ

ಸರ್ಕಾರಿ ನೌಕರರುಗಳ[ಿಗೆ] ಉಚಿತ ರೈಲ್ವೆ ಸಂಚಾ[ರ]

ಒಂದು ವರ್ಷ ಕೆಲಸ ಮಾ... ಕೇಂದ್ರ ಸರ್ಕಾರದ ನೌಕರರುಗಳಿಗೆ ... ಕ್ಕೆ ಒಂದು ಬಾರಿ ಉಚಿತವಾಗಿ ರೈ... ಸಂಸಾರ ಸಮೇತರಾಗಿ ಸಂಚಾರ ... ಲು ಸೌಕರ್ಯವನ್ನು ಕೊಡಲಾಗ... ದು ತಿಳಿದುಬಂದಿದೆ.

ಶ್ರೀ ವಿಜಯ ಫ್ಲೋರ್

ಪ್ಲೇಟ್ ರೀ-ಗ್ರೂವಿಂಗ್ ವರ್ಕ್ಸ್

ನಂ. 251+252, ದಿವಾನ್ಸ್ ರೋ...
ಮೈಸೂರು.
(ಗುಂಡ್ಲುಪೇಟೆ ಮಾ|| ಆರ್. ಎಸ್. ... ರಾಮಗೋಪಾಲವೈದ್ಯಶಾಲೆಯ ಎದುರ...)

ಹೊಸದಾಗಿ ಸ್ಥಾಪಿಸಿರುವ ನಮ್ಮ ... ಲ್ಲಿ ಅಕ್ಕಿ, ರಾಗಿ, ಗೋಧಿ, ಜೋಳ ವ... ನ್ನು ಮಹಾಜನರ ಮನಸ್ಸಂತೃಪ್ತಿ ಹಾಗೆ ಮಾಡಿಕೊಡಲಾಗುತ್ತದೆ. ಮತ್ತು ... ಮಿಲ್ ಪ್ಲೇಟುಗಳನ್ನು ಹೆಚ್ಚು ಕಾಲ ... ಬರುವ ಹಾಗೆ ರೀ-ಗ್ರೂವ್ ಮಾಡಲಾ... ಮಹಾಜನರು ಪ್ರೋತ್ಸಾಹಿಸಬೇಕಾಗಿ ...

ಎಸ್. ಎಂ. ಪಂಡಿತ್ ಅಂಡ್ ಸನ್ಸ್ ರ...

ಯೂನಿವರ್ಸಲ್ ಪೇಯಿನ್ ಬಾ...
ತಲೆ ನೋವು, ಕೀಲು ನೋವು ...
ಸಕಲ ಬಾಧೆಗಳಿಗೂ ರಾಮ...
ಶೀಸೆ ...
ಮಹಾ ಸುಗಂಧರಾಜ ತೈಲ:—
" ಚಂದನಾದಿ ತೈಲ:—
" ಭೃಂಗಾಮಲಕ ತೈಲ:—
—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು.
ಪಂಚಾಮೃತ— ಮಲೇರಿಯಾ... ಗಳಿಗೆ ಸಿದ್ಧ ಸಂಜೀವನ.
ಮಹಾಕೇಶರೀ ತೈಲ —... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ ...
ಬ್ರೇನ್ ಟಾನಿಕ್ ಶೀಸೆ ...
ಮೈಸೂರು ಆಯುರ್ವೇದಿಕ್ ...
೯೦ ಬ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈ...

ಪ್ರಭುದೇವಾ ಟಾಕೀಸಿನಲ್ಲಿ

ರಾಯಲ್ ಟಾಕೀಸಿನವರ

★ ಸಾವಿತ್ರಿ ★

(ತಮಿಳು)
ನಟವರ್ಗ:—ಶಾಂತ ಆಪ್ಟೆ, ಎಂ. ಎಸ್. ಸುಬ್ಬಲಕ್ಷ್ಮಿ, ವೈ. ವಿ ರಾವ್, ಕೆ. ಸಾರಂಗಪಾಣಿ, ಜಿ. ಎ. ಚಲ್ಲಪ್ಪ, ಕೃಷ್ಣವೇಣಿ ಮುಂತಾದವರು
ಇನ್ನು ನಾಲ್ಕು ದಿವಸಗಳು ಮಾತ್ರ

20—8—48 ನೇ ಶುಕ್ರವಾರದಿಂದ

★ ಸಂತ್ ಸಕ್ಕೂಬಾಯಿ

(ತಮಿಳು)
ಪ್ರತಿ ದಿನ ಮೂರು ಆಟಗಳು
ಭೂಮಿಕೆ:—ಕೆ. ಅಶ್ವತ್ಥಮ್ಮ, ಕೆ. ಸಾರಂಗಪಾಣಿ, ಸಿ. ಬನ್ನಿಬಾಯಿ ಮುಂತಾದವರು

ಬಹಿರಂಗ ಸಭೆ

ಮೈಸೂರು ೧೭

...ನ ಸಂಜೆ ೬-೩೦ ಗಂಟೆಗೆ ಟೌನ್ ...ಮೈದಾನದಲ್ಲಿ ಇಂದಿನ ಆಹಾರ ...ದ ನ್ಯಾಯಬೆಲೆ ಅಂಗಡಿಗಳು [illegible] ಬಹಿರಂಗ ... ನಡೆಯುವುದೆಂದು ನಗರ ಕಾಂ... ಕಾರ್ಯದರ್ಶಿಗಳಾದ ...ನರಸಿಂಹ ಅಯ್ಯಂಗಾರ್ಯರು ತಿಳಿಸಿ...

...ಕ ಸಿನಿಮಾ ಚಿತ್ರ ಪ್ರದರ್ಶನ

...ಹಾನಿಯ ಮಾಡರಿ ಶಾಲಾ ನಿಧಿ ...ಳೆ ಬೆಳಿಗ್ಗೆ ೧೦ ಗಂಟೆಗೆ ಜಿಲ್ಲಾ ... ಅಧ್ಯಕ್ಷರಾದ ಶ್ರೀ ಹೆಚ್. ಎಂ. ...ಪ್ಪನವರ ಅಧ್ಯಕ್ಷತೆಯಲ್ಲಿ ಉಡ್... ...ನಲ್ಲಿ "ಚಿತ್ರಲೇಖಾ" ಎಂಬ ...ಚಿತ್ರವು ಪ್ರದರ್ಶಿಸಲ್ಪಡುವುದೆಂ... ...ಜನಗಳು ಸಹಾಯ ಮಾಡಬೇ... ...ದ ಕಾರ್ಯದರ್ಶಿಗಳು ಪ್ರಾರ್ಥಿ...

...ಹಯಗ್ರೀವ ಜಯಂತಿ

...ಾನಿಯ ಶ್ರೀ ಪರಕಾಲ ಮಠದ ...ದಾನ್ತ ದೇಶಿಕ ವಿಹಾರ ಸಭೆ ...ದಲ್ಲಿ ನಾಳೆ ಮಧ್ಯಾಹ್ನ ೩ ಗಂಟೆ ...ೀವ ಜಯಂತ್ಯುತ್ಸವವು ನಡೆ... ... ಈ ಸಂಬಂಧವಾಗಿ ಇದೇ ೧೯ ...ನೇ ತಾ॥ ವರವಿಗೆ ಪ್ರತಿದಿನವೂ ...೩೦ ಗಂಟೆಗೆ ಉಪನ್ಯಾಸಗಳು ...

ಮಹಿಳಾ ಮಂಡಲಿ

... ಜನರಲ್ಲಿರ ಗೌರವಾರ್ಥವಾಗಿ ...ಲ ಬಾರಿಯ ಬೆಳಿಗ್ಗೆ ೮॥ ಗಂಟೆಗೆ ...ನ ಬಂಗಲೆಯಲ್ಲಿ ಏರ್ಪಡಿಸಿರುವ ...ಮಹಾಸಭೆಗೆ ಹೋಗಬಯಸುವ ...ರು ರಂತವನ್ನು ಸಂಸ್ಥೆಯ ಪಕ ...ಗಳನ್ನು ಪಡೆದು ಬರತಕ್ಕದೆಂದು ...ಾಮೇಶ್ವರಮ್ಮನವರು ಕೋರಿರು... ...ಮಹಿಳಾ ಮಂಡಲಿಯ ಸದಸ್ಯರಲ್ಲಿ ...ಪ್ಪ ನಾಳೆ ಬೆಳಿಗ್ಗೆ ೮ರಿಂದ ರಾತ್ರಿ ...ವರೆಗೂ ಲಕ್ಷ್ಮೀಪುರದಲ್ಲಿರುವ ಮ... ... ಕಾರ್ಯಾಲಯಕ್ಕೆ ಬಂದು ಸಂತ ...ಕಿಪ್ ಕಾರ್ಡುಗಳನ್ನು ಪಡೆಯ... ...ದು ಎಂದು ಶ್ರೀಮತಿ ಎಜ. ವೈ... ...ನವರು ಕೋರುತ್ತಾರೆ.

...ರ್ಕಾರದ ಹಣಕಾಸಿನ ...ವರ ರಾಜೀನಾಮೆ

...ರ್ಕಾರದ ಹಣ ಕಾಸಿನ ಸಚಿ... ...ಆರ್. ಕೆ. ಷಣ್ಮುಗಂ ಚೆಟ್ಟಿ ...ಜೀನಾಮೆ ಇತ್ತಿರ ವರೆಂದೂ, ...ಧಾನಿಯ ವರು ಅಂಗೀ ಕರಿ... ...ದವಿಯಾಗಿದೆ ಆದಾಯ ಕರ ... ಕಾರ್ಯ ಕಲಾಪಗಳ ವಿ... ...ಸಭೆಯಲ್ಲಿ ಬಂದ ಟೀಕೆಗಳೇ ...ನಾಮೆಗೆ ಕಾರಣವೆಂದು ಹೇ...

...ಗಿನ ಆಟಗಳು

...48ನೇ ಗುರುವಾರದಿಂದ ... ದಿನಗಳು ಮಾತ್ರ ...ಪ್ರಭಾತ್‌ರವರ

ಆದ್ಮಿ ★

(...lis for Living)

ಪಾತ್ರ:—

...ಷ್ಟೀಕರ್, ಶಾಹು ಮೋದಕ್ ...೦ ಶೇ ೦ಂಟ ಮತ್ತಿತರರು

...ಲ್ಲಿಯಾ ಟಾಕೀಸ್

ಸಂಪುಟ ೭] ಮಂಗಳವಾರ ೧೭-೮-೪೮ [ಸಂಚಿಕೆ ೨೩

ಷಣ್ಮುಗಂ ಚೆಟ್ಟಿಯವರು ರಾಜೀನಾಮೆ ಇತ್ತರು

ಮಹಾತ್ಮರ ಸ್ಮಾರಕ ನಿಧಿಗೆ ಮೈಸೂರು ಕಾಣಿಕೆ

ಮೈಸೂರು ೧೭

ಭಾರತದ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಮೊನ್ನೆ ದಿನ ಮಹಾತ್ಮ ಸ್ಮಾರಕ ನಿಧಿಗೆ ಸಾರ್ವಜನಿಕರಿಂದ [illegible] ರೂ. ಗಳ [illegible] ತ್ತಾಗಿದೆ

ಮೈಸೂರು ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ

ಶ್ರೀ ರಾಘವೇಂದ್ರ ಗುರು ಸಾರ್ವಭೌಮರವರ ಆರಾಧನಾ ಮಹೋತ್ಸವ



ಕಾಮಧೇನು ಕಲ್ಪವೃಕ್ಷದಂತೆ ಭಕ್ತರ ಇಷ್ಟಾರ್ಥವನ್ನು ಸಲ್ಲಿಸುತ್ತಿರುವ ಶ್ರೀ ರಾಘವೇಂದ್ರ ಗುರುಗಳವರ ಆರಾಧನಾ ಮಹೋತ್ಸವವು ಶ್ರೀ ಶ್ರೀಯವರ ಆಜ್ಞೆಯಂತೆ ಇದೇ ೨೦, ೨೧, ೨೨ ನೇ ತಾರೀಖುಗಳಲ್ಲಿ ನಡೆಯುತ್ತದೆ. ಈ ಉತ್ಸವಕ್ಕೆ ಶ್ರೀ ಗುರುರಾಜರ ಭಕ್ತ ಮಹಾಶಯರುಗಳೆಲ್ಲಾ ಈ ಮೂಲಕ ಆಹ್ವಾನ ಮಾಡಲಾಗಿದೆ. ಈ ದಿವಸಗಳಲ್ಲಿ ಅಭಿಷೇಕಾದಿ ಮಹಾಪೂಜೆಗಳು ನಡೆಯುತ್ತವೆ. ಎಲ್ಲರೂ ಸಕಾಲಕ್ಕೆ ದಯಮಾಡಿಸಿ ಶ್ರೀ ಗುರುಗಳ ದರ್ಶನ ಮಾಡಿ ಫಲ ಮಂತ್ರಾಕ್ಷತಾದಿಗಳನ್ನು ಸ್ವೀಕರಿಸಿ ಗುರುಗಳವರ ಅನುಗ್ರಹಕ್ಕೆ ಪಾತ್ರರಾಗಬೇಕು. ಈ ಮಹೋತ್ಸವಕ್ಕೆ ಧನ ಧಾನ್ಯಾದಿಗಳ ರೂಪದಲ್ಲಿ ಸೇವಾ ಸಲ್ಲಿಸಬೇಕೆಂಬ ಭಕ್ತರು ಶ್ರೀ ಮಠದ ಮೂಲಕ [illegible] ರಶೀತಿಯನ್ನು ಪಡೆಯಬೇಕು. ಇವಕ್ಕಾಗಿ ಶ್ರೀ [illegible] ಸರಸಿಂಹ ಮೂರ್ತ್ಯಾಚಾರ್ಯರವರು ... ಚಾರ್ಯರನ್ನೂ [illegible]

ಶ್ರೀಮಠದ ವ್ಯವಸ್ಥಾಪಕರು

[illegible]

ಪ್ರೈಡರ್ಮಿಸ್ ಬಂಕ್‌ಸ್ಥಾಪನೆ

ಮುಖಾಮುಖಿ ಸಭೆಯಿಂದ

[illegible] ೧೭

[illegible] ... ಶ್ರೀ ಸಿದ್ದಲಿಂಗಯ್ಯನವರು ... [illegible]

ಶ್ರೀ ಸಿದ್ದಲಿಂಗಯ್ಯನವರ ಭಾಷಣ ... [illegible] ... ವನ್ನು ಮಾಡಿದರು.

[illegible]

ಕೃಷಿ ಕೆಲಸಗಾರರ ... ಬೇಡಿಕೆ

[illegible]

[illegible] ಮೊಕದ್ದಮೆ

[illegible] ಬೆಂಗಳೂರು ೧೭

[illegible] ಮುಂದೆ ... ಅಡ್ವೊಕೇಟ್ ಜನರಲ್ಲಾದ ಶ್ರೀ ಎಸ್. ... ವಾದವನ್ನು ... ಗಂಟೆಗೆ ಮುಕ್ತಾಯಗೊಳಿಸಿದರು. ... ವಿಷಯದಲ್ಲಿ ... ಅಧಿಕಾರವೂ ಇಲ್ಲ ... ಹೇಬಿಯಸ್ ಕಾರ್ಪಸ್ ... ನೂತನ ಆಜ್ಞೆ ... ಹಾಕಿದೆಯೆಂದೂ, ... ಸಂಪೂರ್ಣ ಅಧಿಕಾರವಿದೆ ... ತಿಳಿಸಿದರು. ... ಹೇಬಿಯಸ್ ... ಉದ್ದೇಶ್ಯ ... ಅವರು ಹೇಳಿದರು. ... ಅಧಿಕಾರವನ್ನು ಹೈಕೋರ್ಟ ... ಹೈಕೋರ್ಟಿನ ... [illegible] ... ಸಂಪೂರ್ಣ ... [illegible]

... ಶ್ರೀ ... ರಾಘವೇಂದ್ರ, ಸತ್ಯಮೂರ್ತಿ, ... ವಿಶ್ವೇಶ್ವರಯ್ಯ, ... ಹನುಮಂತರಾಯ ... ಅಧಿಕಾರಿಗಳಿಗೆ ... [illegible]

ಮೈಸೂರು ಸರ್ಕಾರದ ಶಾಲೆಗಳಲ್ಲಿ ವಂದೇಮಾತರಂ

[illegible] ... ವಂದೇ ಮಾತರಂ ... [illegible] ... ಆಜ್ಞೆ ಮಾಡಿದ್ದಾರೆ.

[illegible] ಗಾಂಧಿಯವರ ಮಕ್ಕಳ [illegible]

[illegible]

ಉಪಾಕರ್ಮ

ಮೈಸೂರು ೧೭

ಡಿ. ಸಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಇದೇ ೧೯ ನೇ ತಾ॥ ಬೆಳಿಗ್ಗೆ ೭ ಗಂಟೆಗೆ ಸರಿಯಾಗಿ ಋ.ಜು.ಸ. ಉಪಾಕರ್ಮವು ವೇ॥ ಬ್ರ॥ ಶಲ್ಯಾಡು ಸೀತಾರಾಮಶಾಸ್ತ್ರಿಗಳವರಿಂದ ನಡೆಸಲ್ಪಡುತ್ತದೆ

ಸಬ್ಬರಾಯನ ಕೆರೆ ಬಳಿ ಇರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಇದೇ ೧೯ ನೇ ತಾ॥ ಬೆಳಿಗ್ಗೆ ೧೧ ಗಂಟೆಗೆ ಯಜುರುಪಾಕರ್ಮವು ಶ್ರೀ ವೈಷ್ಣವ ಉದಯ ಸಭೆಯವರಿಂದ ನಡೆಯುವುದು.

ಸುಬ್ಬರಾಯನ ಕೆರೆ ಬಳಿ ಇರುವ ರಾಘವೇಂದ್ರ ಸ್ವಾಮಿಗಳವರ ಶ್ರೀಮಠದಲ್ಲಿ ೧೮ ನೇ ತಾ॥ ಪ್ರಾತಃ ೯ ಘಂಟೆಗೂ ೧೯ ನೇ ತಾ॥ ಪ್ರಾತಃ ೭ ಘಂಟೆಗೂ ಸಹ ಉಪಾಕರ್ಮಗಳು ನಡೆಯುತ್ತವೆ. ಬ್ರಾಹ್ಮಣರು ಸಕಾಲಕ್ಕೆ ಬರಲು ಈ ಮೂಲಕ ಆಹ್ವಾನ ಮಾಡಲಾಗಿದೆ

ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪದ್ಧತಿಯ ವೇದಿ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಕೆಳಗಿನಂತೆ ಕ್ರಮದಲ್ಲಿ ಉಪಾಕರ್ಮಗಳು ನಡೆಯುವುವು ೧೮ ನೇ ತಾ॥ ಬೆಳಿಗ್ಗೆ ೮-೩೦ ಗಂಟೆಗೆ ಸ್ಮಾರ್ತರು ಮತ್ತು ವೈಷ್ಣವರಿಗೆ ಋಗುಪಾಕರ್ಮ ೧೯ನೇ ತಾ॥ ಬೆಳಿಗ್ಗೆ ೮-೩೦ ಗಂಟೆಗೆ ಸ್ಮಾರ್ತರು, ಸಂಕೇತಿಗಳು, ಬೋಧಾಯನರು, ವೈಷ್ಣವರು, ಮತ್ತು ತೈತ್ತರೀಯಶಾಖೆಯವರಿಗೆ, ೧೧ ಘಂಟೆಗೆ ಶ್ರೀ ವೈಷ್ಣವರಿಗೂ, ಮಾರನೆಯ ದಿನ ೨೦ನೇ ತಾ॥ ಗಾಯತ್ರೀಜಪ ನಡೆಯುವುವು

ಉದಾರ ದಾನ

ಭಾರತದ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ, ಆಸ್ಪತ್ರೆಯ ಮಂದಿ ರೋಗಿಗಳಿಗೆ ಶ್ರೀ ಎನ್ ಎಸ್ ಉದಾರ ಸ್ವಭಾವದವರು ಶ್ರೀ ಎಸ್ ... ದಿನಾಚರಣೆಯ ... ಹಣ್ಣುಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ

ನಿಮ್ಮ ಮೈ ಮೇಲಿನ ಬಣ್ಣ ತಿಳಿಯಾಗಬೇಕೆ ? ನೀವು ಲಾವಣ್ಯವಂತರಾಗಬೇಕೆ ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ವನಿತಾಸದನದಲ್ಲಿ ಶ್ರೀಮತಿ ಆರ್ ರಾಜಲಕ್ಷ್ಮಿಯವರ ಅಧ್ಯಕ್ಷತೆಯಲ್ಲಿ ಸಮಾರಂಭವು ನಡೆಯಿತು ಬೆಳಿಗ್ಗೆ ಪ್ರಭಾತ್ ಫೇರಿ ಮತ್ತು ಸಂಜೆಯ ಕಾರ್ಯಕ್ರಮ ಮತ್ತು ಸಮಯೋಚಿತ ಪ್ರದರ್ಶನಗಳು ನಡೆದವು ನಂತರ ಶ್ರೀ ಎಂ ಎಸ್. ವೆಂಕಟಸುಬ್ಬರಾಯರು ಭಾಷಣ ಮಾಡಿದರು.

ಶಾರದಾವಿಲಾಸ ಹೈಸ್ಕೂಲಿನ ... ಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು ಭಾರತ ಧ್ವಜವನ್ನೂ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಮೈಸೂರು ಧ್ವಜವನ್ನೂ ಹಾರಿಸಿದರು. ಭಾಷಣ ಮಾಡಿ ಸಿಹಿ ತಿಂಡಿ ಹಂಚಿಯಾದೊಡನೆ ಸಮಾರಂಭವು ಮುಕ್ತಾಯವಾಯಿತು.

ಸದ್ವಿದ್ಯಾ ಪಾಠಶಾಲೆಯ ... ಪ್ರವರ್ತಕ ಎ. ಎಸ್. ರಂಗಸ್ವಾಮಿ ... ಅಯ್ಯಂಗಾರ್ರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಆಚರಿಸಿದರು

ಮಕ್ಕಳ ಕೂಟದಲ್ಲಿ ಬೆಳಿಗ್ಗೆ ಪ್ರಭಾತ ಫೇರಿ, ಭಜನೆ, ಸಂಧ್ಯಾಕಾಲ ನೂಲ ವುದು ಮತ್ತು ಸಭೆ ನಡೆದವು

ಚನ್ನೇಗೌಡನ ಕೊಪ್ಪಲಿನ ... ಯುವಕರ ಸಂಘದವರು ಅಲ್ಲಿನ ... ಸ್ಥಾನದಲ್ಲಿ ಸಮಾರಂಭವನ್ನು ವೈಭವದಿಂದ ಆಚರಿಸಿದರು ಶ್ರೀ ಬಸವಯ್ಯನವರು ಭಾರತ ಧ್ವಜವನ್ನೂ, ಶ್ರೀ ನರಸೇಗೌಡರು ಮೈಸೂರು ಧ್ವಜವನ್ನೂ ಹಾರಿ ...

CHANGE OF OFFICE

of

The International Building Society Ltd, Situated in 1171, Sayaji Rao Road Mysore to 1476, Krishnamurthypuram, Prince of Wales Road, Mysore

ಆಫೀಸು ಬದಲಾವಣೆ

ಸಯ್ಯಾಜಿರಾವ್ ರಸ್ತೆ 1171ನೇ ಮನೆಯಲ್ಲಿರುವ ದಿ ಇಂಟರ್‌ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್ ನ ಬ್ರಾಂಚ್ ಆಫೀಸನ್ನು ಚಾಮುಂಡಿ ಮೊಹಲ್ಲಾ, ಕೃಷ್ಣಮೂರ್ತಿಪುರಂ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯಲ್ಲಿರುವ 1476 ನೇ ಮನೆಗೆ ಬದಲಾಯಿಸಲಾಗಿದೆ. ಬದಲಾವಣೆ ಗಮನಿಸಬೇಕಾಗಿ ಕೋರಿಕೆ

ಆಪೇರಾ ಟಾಕೀಸ್

14-8-48 ರಿಂದ

ಪ್ರತಿ ದಿನ ೩ ಆಟ

ಪರಂಜ್ಯೋತಿ

ಅಥವಾ

ಸಿರಿಯಾಳ ಚರಿತ್ರೆ

(ತಮಿಳ್)

ಪಾತ್ರ:- ಎ. ಜಿಲ್ಲಮ್ಮ, ಟಿ ಪಿ ರಾಜಲಕ್ಷ್ಮಿ, ಕೃಷ್ಣನ್, ಮಧುರಂ

—Next Change From 21-8-48 (Evening Shows)

OUT LAW

(ಔಟ್ ಲಾ)

ಪುಷ್ಪ ಸಮರ್ಪಣೆ

ಶ್ರೀ ... ಕಥಾಂಬ ಧಿ ಚಂದ್ರ ಮ॥ ವೇ॥ ಗೋಪಾಲದಾಸರು ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀನಿವಾಸ ಕಲ್ಯಾಣವೆಂಬ ಹರಿಕಥಾ ಸಪ್ತಾಹ ನಡೆಸಿ ಶ್ರೋತೃವೃಂದದಿಂದ ಪ್ರಾಪ್ತವಾದ ದ್ರವ್ಯವನ್ನು ಶ್ರೀ ಗುರುರಾಜರ ಆರಾಧನಾ ಮಹೋತ್ಸವಕ್ಕೆ ಸೇವಾರೂಪವಾಗಿ ಸಮರ್ಪಿಸಿರುತ್ತಾರೆ

... ಜಿನಂತರ ವೆ ರವಣೆಗೆ ಮತ್ತು ಸಭೆ ನಡೆದವು ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ ಎಸ್ ನಾರಾಯಣ ಶಾಸ್ತ್ರಿಯವರು ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು

ಕಬೀರ್ ರಸ್ತೆಯಲ್ಲಿರುವ ಕಬೀರ್ ಯುವಕ ಸಂಘದವರು ಪೌರಸಭಾ ಸದಸ್ಯರಾದ ಶ್ರೀ ... ರಂಗಸ್ವಾಮಣ್ಣನವರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಆಚರಿಸಿದರು ಶ್ರೀಗಳಾದ ಡಬ್ಲ್ಯು ಎಲ್ ರಾಮಚಂದ್ರರಾಯರು ಮತ್ತು ಸುಬ್ಬರಾವ್ ಉಪಾಧ್ಯರವರುಗಳು ಭಾಷಣಮಾಡಿದರು. ಬೆಳಗೊಳದ ಕೆವಿ ಕಲ್ಪ್ ಶಾಖಾ ಸಂಘದವರು ಡಾ॥ಕೆ.ಎಲ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ದಿನಾಚರಣೆಯನ್ನು ನಡೆಸಿದರು ಶ್ರೀ ರಾಜಾಜಿ ... ಪಂಡಿತ ನೆಹರೂ ಮತ್ತು ಸುಭಾಸ್ ಚಂದ್ರ ಬೋಸ್ ರವರುಗಳ ಭಾವಚಿತ್ರಗಳ ಅನಾವರಣವೂ ಜರುಗಿತು.

Evening Shows

at

RAJKAMAL TALKIES

From 14-8-48

Daily 3 Shows

SLAVE GIRL

(In Technicolour)

(ಗುಲಾಮ ಹುಡುಗಿ)

—:Starring.—

Yvonne D C Carlo,

George Brent

A Caravan of Technicolor Thrills told with Lusty Laughter

ಮನೆ ಮಾರಾಟಕ್ಕಿದೆ

ಮನೆ ಮತ್ತು ಅಂಗಡಿಕಟ್ಟಲು ಸೈಟು ಸಹ ಬಿಕರಿಗೆ ಸಿದ್ಧವಾಗಿದೆ ... ರೋಡು ಜವಳಿ ಅಂಗಡಿಗಳ ... ರಸ್ತೆ ... ರೋಡ 151, 151, 1... ಸಂಖ್ಯೆ ... ಮಾರ್ಕೆಟ್ ... ಮನೆ ... ಮಂಡಿ ... ಸೈಟ್ ... ೧೦,೦೦೦ ... ವಿಚಾರಿಸತಕ್ಕದ್ದು ...

... ಗೌಡ ... ವೈಸೂರು

ಸತ್ಕಾರ ಕೂಟ

ರಾಜಧಾನಿಯ ವಿರಕ್ತಾಶ್ರಯರ ... ವಿದ್ಯಾರ್ಥಿ ನಿಲಯದವರು ಆದರ್ಶ ... ಳಾದ ಲೋಕಸೇವಾನಿರತ ಎ ನಾರಾಯಣರಾಯರ ಗೌರವಾರ್ಥವಾಗಿ ಮೊನ್ನೆ ಒಂದು ಸತ್ಕಾರ ಕೂಟವನ್ನ ಏರ್ಪಡಿಸಿ ... ಶ್ರೀನಿವಾಸ ... ರಾಜರವರ ... ಕಾರ್ಯದರ್ಶಿಗಳಾದ ಶ್ರೀ ಡಿ. ಎಸ್ ನಾಗರಾಜರವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಟಿ ಎಸ್ ಕೃಷ್ಣಮೂರ್ತಿ, ಬಿ ರಂಗರಾಯರು ಮತ್ತು ಕೆ ಎಸ್ ಶೇಷಗಿರಿಯವರುಗಳು ಭಾಷಣ ಮಾಡಿ ಅತಿಥಿಯ ಗುಣಕಥನಮಾಡಿ ಬಿರುದಾಂಕಿತರಾದ್ದಕ್ಕೆ ಅವರನ್ನು ಅಭಿನಂದಿಸಿದರು. ಶ್ರೀ ನಾರಾಯಣರಾಯರು ವಂದನೆಯ ... ಅರ್ಪಿಸಿದರು

ಜಮಖಾನೆಗಳು ಕಳೆದು ಹೋಗಿವೆ

೧೬-೮-೪೮ ರಲ್ಲಿ ಮೈಸೂರಿನ ದಸರಾ ನಗರದ ಮಾರ್ಗವಾಗಿ ಚಾಮರಾಜ ... ಕೈ ಮೋಟಾರ ... ದಲ್ಲಿ ಹೋಗುತ್ತಿದ್ದ ... ಇಟ್ಟಿದ್ದ ೧೦ ಬಣ್ಣದ ... ಜಮಖಾನಗಳು ... ಕೆಳಕ್ಕೆ ಬಿದ್ದು ಹೋಗಿರುತ್ತವೆ ... ಮಕ್ಕಳು, ... ಗಳು ... ಸಿಕ್ಕಿದ್ದ ... ಶ್ರೀ ... ಲಿಂಗಯ್ಯ ... ಪಾರಿತೋಷಕ ... ಪೋಲೀಸ್ ಸ್ಟೇಷನ್ನುಗಳಿಗೆ ... ತಾನಿ ಏನಾದ ... ಗೆ ತಂದು ಒಪ್ಪಿಸಿದರೆ ... ಬಹುಮಾನವನ್ನು ಕೊಡಲಾಗುತ್ತದೆ

... ಚಿಲ್ಲಾ ಬೋರ್ಡ ... ಸಾಗರವಾಡಿ

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವ

ಯೂನಿವರ್ಸಲ್ ಹಯರ್ ಬಾಮ್

ತಲೆ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ... ೦-೧೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾಮಲಕ ತೈಲ:—)

—ದೇಹಕ್ಕೆ ತಂಪನ್ನು ಉತ್ತಮ ಅಭ್ಯಂಗ ತೈಲಗಳು

ಪಂಚಾಮೃತ — ಮುಲಾಮುಗಳಿಗೆ ಸಿದ್ಧ ಸಂಜೀವಿನಿ,

ಮಹಾಕೇಶಕಾ ತೈಲ — ತಲೆ ... ಕೊಳ್ಳುವುದಕ್ಕೂ ಅಭ್ಯಂಗವನ್ನು ಯೋಗಿಸಬಹುದಾದ ಉತ್ತಮ.

ಫ್ರೀ ಟೈನಿಕ್ ... ತೀರ್ಥ ...

ಮೈಸೂರು ಆಯುರ್ವೇದಿಕ್ ಫಾರ್ಮಸಿ ... ಮೈಸೂರು

Edited printed and published by A K Nagarajan at the Sadhvi P... D. Subbaiah Road Mysore.

ಕೋಟಿಶಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೧೮-೮-೪೮ [ಸಂಚಿಕೆ ೨೭

ಭಾ॥ ಗೌರ್ನರ್ ಜನರಲ್ ರಾಜಾಜಿಗೆ ಸುಸ್ವಾಗತ

ಬಹಿರಂಗ ಸಭೆ

ಮೈಸೂರು ೧೮

ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಇಂದಿನ ಆಹಾರ ಪರಿಸ್ಥಿತಿ ಪರಿಶೀಲಿಸಲು ಶ್ರೀ ಎಸ್. ಚಿ ... ನವರ ಅಧ್ಯಕ್ಷತೆಯಲ್ಲಿ ಬಹಿರಂಗ ... ನಡೆಯುವುದು ರಾಜ್ಯಾಂಗ ಸಭೆ ... ಸ್ಥರಾದ ಶ್ರೀ ಟಿ. ಸುಬ್ರಹ್ಮಣ್ಯಂರ ... ಷಣ ಮಾಡುವರು.

... ಜಿಗೆ ಕಾಂಗ್ರೆಸ್ ಸಮಿತಿಯ ಸ್ವಾಗತ

... ಕಾಂಗ್ರೆಸ್ಸಿನ ಸವಿ ... ಪರವಾಗಿ ... ಬೆಳಗ್ಗೆ ಗೌ॥ ಜನರಲ್ಲರಿಗೆ ಹಾರಗಳನ್ನರ್ಪಿಸಲು ತೀರ್ಮಾನಿಸಿರುವ ... ಕಾಂಗ್ರೆಸ್ ಕಾರ್ಯಕರ್ತರೆಲ್ಲ ... ಬೆಳಗ್ಗೆ ೯ ಗಂಟೆಯೊಳಗಾಗಿ ... ಕಛೇರಿಯಲ್ಲಿ ಹಾಜರಿರಬೇಕೆಂ ... ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ... ತನ್ನಯ್ಯನವರು ಕೋರಿರುತ್ತಾರೆ.

ತಾಲ್ಲೂಕು ಖಜಾನೆಗೆ ರಜಾ

... ರು ಕಛೇರಿ ಕಟ್ಟಡದಲ್ಲಿ ಕೆಲವು ... ವ ರಿಪೇರಿಗಳಾಗಬೇಕಾಗಿರುವು ... ಇದೇ ೨೦ನೇ ತಾ॥ ಮೈಸೂರು ... ಖಜಾನೆಯಲ್ಲಿ ಸಾರ್ವಜನಿಕ ... ಗಳನ್ನು ಬಂದು ಮಾಡಲಾಗಿದೆ

ಆರಾಧನಾ ಮಹೋತ್ಸವ

... ಮೂರ್ತಿಪುರದಲ್ಲಿ ಹೊಸದಾಗಿ ... ತವಾಗಿರುವ ಶ್ರೀ ರಾಘವೇಂದ್ರ ... ಬೃಂದಾವನದಲ್ಲಿ ಇದೇ ೨೦, ... ನೇ ತಾ॥ ಆರಾಧನೆ ನಡೆಯು ... ನೇ ತಾ॥ ಸಂಜೆ ೫॥ ಇಂದ ... ಹರಿಕಥೆ, ಭಜನೆ ಉತ್ಸವಾದಿ ... ನಡೆಯುವುವು ಅಂದಿನ ಬೆಳಗ್ಗೆ ರಥೋ ... ಡೋಲೋತ್ಸವವೂ ಬೆಳೆಯುವ ... ಭಾನ್ನ ರೂಪದಲ್ಲಿ ಮಹಾಜನರು ಸ ... ಕೋರಲಾಗಿದೆ

... ಭಾನಿಯ ಚಾಮುಂಡಿ ಬಡಾವಣೆ ... ಬ್ಯಾಂಕಿನ ನಂ ೧೧೬ನೇ ಸು ... ಶ್ರೀ ರಾಜರಾಜೇಶ್ವರೀ ಸನ್ನಿಧಿ ... ಇದೇ ೨೦, ೨೧, ೨೨ ನೇ ತಾ॥ ... ಪ್ರಸ್ವಾಮಿಗಳ ಆರಾಧನೆಯ ... ೫॥ ಬೆಳಗ್ಗೆ ಯಜುರುಪಾಕರ್ಮ ... ನೆಯುವುವು

ಅಖಿಲಕರ್ನಾಟಕ ಪುರದಲ್ಲಿ

... ರು ದೇಶದ ಅಖಿ ಕರ್ನಾಟಕ ... ಧಿ ಸಂಘದ ಆಶ್ರಯದಲ್ಲಿ ಮೈಸೂರು ... ರ್ನಾಟಕಪುರದ ವೈಭವದಲ್ಲಿ ಸ್ವಾ ... ದಿನವನ್ನು ಆಚರಿಸಲಾಯಿತು. ... ಜನರು ನೆರೆದಿದ್ದರು. ಧ್ವಜಾ ... ಣವಾದನಂತರ ಎಸ್. ಎಂ. ಸಿದ್ಧ ... ಸಿದ್ಧಯ್ಯ, ಬಿ. ಎಲ್. ಮರಿ ... ಮುಂತಾದವರು ಭಾಷಣ ಮಾ ... ಸಭೆಯ ಲ್ಲಿದ್ದವರೆಲ್ಲಾ ತಮ್ಮ ಕೈಲಾದ ... ನೀವೆ ಸಲ್ಲಿಸುವುದಾಗಿ ಪ್ರಮಾಣ ... ವನ್ನು ಸ್ವೀಕರಿಸಿದರು ರಾಷ್ಟ್ರ ಗೀತೆ ... ನಿ ಸಭೆಯು ಮುಕ್ತಾಯವಾಯಿತು ... ತಾನಿಯ ಹಳ್ಳದಕೇರಿ ಯುವಕರ ... ಶ್ರೀ ನಾಮಮೊದಲಿಯಾರ್‌ರವರ ... ಯಲ್ಲಿ ಸಮಾರಂಭವೂ ಮತ್ತು ... ಶ್ರ ಛಾಯಾಚಿತ್ರ ಅನಾವರಣೋತ್ಸ ... ನಡೆಯುವು

ಸೂಚನೆ

... ಭ ಉಪಾಕರ್ಮದ ಪ್ರಯುಕ್ತ ... ಸಿದ್ಧ ಪತ್ರಿಕೆಗೆ ರಜಾ ಕೊಡಲಾ ...

—ವ್ಯವಸ್ಥಾಪಕ

ಪ್ರೈಮರಿ ಉಪಾಧ್ಯಾಯರ ವೇತನ

ಸ್ವಂ ಸು ಫೋ॥] ಬೆಂಗಳೂರು ೧೮

ಟ್ರೈನಿಂಗ್ ಪಡೆಯದೆ ಅಥವಾ ಸ್ವಲ್ಪ ಟ್ರೈನಿಂಗ್ ಪಡೆದಿರುವ ಮತ್ತು ೧೯೪೮ನೇ ಜೂನ್ ತಿಂಗಳಿಗೆ ೪೫ ವರ್ಷ ತುಂಬಿದ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಟ್ರೈನಿಂಗ್ ಪರೀಕ್ಷೆಯಾಗಿರುವ ಉಪಾಧ್ಯಾಯರುಗಳಿಗೆ ಕೊಡುವಂತೆಯೇ ರೂ ೩೦-೧॥-೪೫-೨-೫೫ ರ ಗ್ರೇಡನ್ನು ಕೊಡಲು ಸರ್ಕಾರದವರು ನಿರ್ಧರಿಸಿದ್ದಾರೆ

... ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೨೯ ನೇ ತಾ॥ ಭಾನುವಾರ ಮಂಡ್ಯದ ಇಂಟರ್‌ಮಿಡಿಯೇಟ್ ಕಾಲೇಜಿನ ಪ್ರಾರಂಭೋತ್ಸವವನ್ನು ನೆರವೇರಿಸುವರು

ನಿಜಾಮರ ಕೋಟೆಗಳ ಮೇಲೆ ಫಿರಂಗಿಗಳು

ಬುರ್‌ಹಾನ್‌ಪುರದ ... ನಲ್‌ದುರ್ಗ್ ಕೋಟೆಯಲ್ಲಿ ನಿಜಾಮರ ಸೈನ್ಯವನ್ನು ಸಜ್ಜುಗೊಳಿಸಲಾಗಿದೆಯೆಂದೂ, ಕೋಟೆಯ ಮೇಲೆ ಭಾರಿ ಫಿರಂಗಿಗಳನ್ನು ಇಡಲಾಗಿದೆಯೆಂದೂ ವರದಿಯಾಗಿದೆ ಗೋಲ್‌ಕೊಂಡ, ಗುಲ್ಬರ್ಗಾ, ಭೊನ..., ಮತ್ತು ಇತರ ಕೋಟೆಗಳನ್ನೂ ಭದ್ರಪಡಿಸಿ ಅವುಗಳ ಮೇಲೂ ಫಿರಂಗಿ ಮತ್ತು ಮೆಷೀನ್ ಗನ್ನುಗಳನ್ನು ಇಡಲಾಗಿದೆಯೆಂದೂ, ರಜಾಕರರು ಬಿದರಿಯನ್ನು ತಮ್ಮ ಸೈನ್ಯದ ಕೇಂದ್ರವನ್ನಾಗಿ ಮಾಡಿಕೊಂಡಿರುವರೆಂದೂ ಹೇಳಲಾಗಿದೆ

ಕಾಶ್ಮೀರದ ಧಾಳಿಕಾರರಿಗೆ ಹೊರಗಿನಿಂದ ಶಸ್ತ್ರಾಸ್ತ್ರಗಳು

ಕಾಶ್ಮೀರದಲ್ಲಿ ಕದನ ನಡೆಸುತ್ತಿರುವ ಧಾಳಿಕಾರರಿಗೆ ಆಧುನಿಕ ಶಸ್ತ್ರಗಳು ಪರದೇಶಗಳಿಂದ ಪಾಕಿಸ್ಥಾನದ ಮೂಲಕ ಸರಬರಾಜಾಗುತ್ತಿದೆಯೆಂದೂ, ಇತ್ತೀಚೆಗೆ ಹೆಚ್ಚು ಹೆಚ್ಚು ಶಸ್ತ್ರಗಳನ್ನು ರಣರಂಗದ ಎಲ್ಲ ಕ್ಷೇತ್ರಗಳಿಗೂ ಕಳುಹಿಸಲಾಗುತ್ತಿದೆಯೆಂದೂ ವರದಿಯಾಗಿದೆ

ನಿಜಾಮರ ಸ್ಮಾರಕದ ನಾಶ

ಹೈದರಾಬಾದಿನ ಪಾಲಸ್ ಕೇಡಾ ಎಂಬ ಹಳ್ಳಿಯ ಮೇಲೆ ರಜಾಕಾರರು ಧಾಳಿ ನಡೆಸಿದ್ದನ್ನು ಅಲ್ಲಿನ ರೈತರು ಎದುರಿಸಿ, ಅವರನ್ನು ಓಡಿಸಿದರೆಂದೂ, ಅಲ್ಲಿ ನಿಜಾಮರ ರಜತಮಹೋತ್ಸವ ಜ್ಞಾಪಕಾರ್ಥವಾಗಿ ನಿರ್ಮಿಸಿದ್ದ ಸ್ಮಾರಕವನ್ನು ಜನಗಳು ನಾಶಮಾಡಿದರೆಂದೂ ವರದಿಯಾಗಿದೆ

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ

ಸ್ವತಂತ್ರ ಭಾರತದ ಪ್ರಥಮ ಗೌರ್ನರ್ ಜನರಲ್

ನೆಹರೂ ಮತ್ತು ಪಟೇಲ್ ಕೊಲೆಗೆ ಪ್ರಯತ್ನಿಸಿದ್ದವರ ದಸ್ತಗಿರಿ

ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲರನ್ನು ಕೊಲೆ ಮಾಡಲು ದೆಹಲಿಗೆ ಪ್ರಯಾಣ ಮಾಡುತ್ತಿದ್ದ ೩ ಜನರನ್ನು ಬೊಂಬಾಯಿಗೆ ೩೦ ಮೈಲಿ ಇರುವ ಕಾಶಿ ... ಯಲ್ಲಿ ದಸ್ತಗಿರಿಮಾಡಿ ಅವರುಗಳಲ್ಲಿದ್ದ ಬಂದೂಕು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಯಿತು.

ಸ್ವಾತಂತ್ರ್ಯ ದಿನಾಚರಣೆ

ಅಗರ ಮಾಂಬಳ್ಳಿ ೧೮

ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ನಿನ್ನೆ ದಿನ ವೈಭವದಿಂದ ನೆರವೇರಿಸಲಾಯಿತು ಬೆಳಗ್ಗೆ ಪ್ರಭಾತ್ ಫೇರಿ ಮತ್ತು ಮೆರವಣಿಗೆಗಳು ಜರುಗಿದುವು ಅಪರಾಹ್ನ ಮೈದಾನದಲ್ಲಿ ಶ್ರೀ ನಾರಾಯಣ... ... ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ಶ್ರೀಗಳಾದ ತಿಮ್ಮಸ್ವಾಮಿ, ಮಂಟಯ್ಯ, ನಾರಾಯಣರಾವ್, ಡಾಕ್ಟರ್ ... ಮುಂತಾದವರು ಭಾಷಣ ಮಾಡಿದರು

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲೂ ಸಮಾರಂಭವನ್ನು ನೆರವೇರಿಸಲಾಯಿತು. ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಸಾಧು ... ನಾರಾಯಣ ಪಂಡಿತರ ... ಮಾತ್ಮಾ ... ಛಾಯಾಚಿತ್ರವನ್ನು ಅನಾವರಣ ಮಾಡಿದರು.

ಕಂಟ್ರೋಲ್ಸ್ ಬಗ್ಗೆ ಸಮಿತಿಗೆ ಅಧಿಕಾರವಿಲ್ಲ

ಹೈಕೋರ್ಟಿನಲ್ಲಿ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳ ವಾದ

ಸ್ವಂ ಸು. ಫೋ॥] ಬೆಂಗಳೂರು ೧೮

ನಿನ್ನೆ ಹೈಕೋರ್ಟಿನಲ್ಲಿ ಮದರಾಸಿನ ಸುಪ್ರಸಿದ್ಧ ವಕೀಲರಾದ ಶ್ರೀ ಟಿ. ಆರ್. ವೆಂಕಟರಾಮಾ ಶಾಸ್ತ್ರಿಗಳು ವಕೀಲರ ಸಂಘದ ಪರವಾಗಿ ಆವಸರದ ಶಾಸನದ ಮೇಲೆ ವಾದ ಮಾಡಿದರು. ಮೈಸೂರಿನ ರಾಜ್ಯಾಂಗ ಸಭೆಯನ್ನು ನಿರ್ಮಿಸುವಾಗ ಸಭೆಯು ... ನಿರ್ಮಿಸುವ ಸಂದರ್ಭದಲ್ಲಿ ... ರಾಜಕರಿಂದ ಹೊರಡಿಸಿರುವ ಘೋಷಣೆಯಲ್ಲಿ ಹೈಕೋರ್ಟನ್ನು ಅದರ ವ್ಯಾಪ್ತಿಯಿಂದ ಪ್ರತ್ಯೇಕಿಸಿ, ತನ್ನ ಹಕ್ಕುಗಳನ್ನು ಕಾದಿರಿಸಿಕೊಂಡಿರುತ್ತಾರೆ ಅವರ ಹಕ್ಕನ್ನು ಮೊಟಕುಮಾಡಬೇಕಾದರೆ ಶ್ರೀಮನ್ಮಹಾರಾಜರವರಿಂದ ಘೋಷಣೆ ಹೊರಡಿಸಿದರೆ ಮಾತ್ರ ಸಾಧ್ಯವಾಗುವುದು ಮೈಸೂರು ಸರ್ಕಾರದವರು ಅದರ ೩ನೇ ಸೆಕ್ಷನ್ ಪ್ರಯೋಗಿಸಬೇಕಾದರೆ ಉತ್ಕಟ ಪರಿಸ್ಥಿತಿಗಳಲ್ಲಿ ಮಾತ್ರ ಪ್ರಯೋಗಿಸಬಹುದು ಅದರ ಅವಶ್ಯಕತೆ ಅಥವ ಸರ್ಕಾರವನ್ನೇ ಬುಡಮೇಲು ಮಾಡುವ ಪರಿಸ್ಥಿತಿಯುಂಟಾದರೆ ಅದನ್ನು ತಡೆಗಟ್ಟಲು ಶಾಸನವನ್ನು ಜಾರಿಗೆ ತರಬಹುದು ಆದರೆ ಅಂತಹ ಉತ್ಕಟ ಪ್ರಸಂಗವೇನೂ ಬಂದಿಲ್ಲ ಕಂಟ್ರೋಲ್ಸ್ ಅಸಮಾಧಾನವನ್ನು ವಿಚಾರಣೆಮಾಡಲು ಸಮಿತಿಗೆ ಅಧಿಕಾರವಿಲ್ಲ ಸಮಿತಿ ಕೋರ್ಟಿನ ಹಾಗೆ ಕೆಲಸ ಮಾಡುತ್ತಿಲ್ಲ ಆದುದರಿಂದ ಕಂಟ್ರೋಲ್ಸ್ ಪ್ರಶ್ನೆಯೇ ಬರುವುದಿಲ್ಲ ಎಂದು ಅವರು ತಿಳಿಸಿದರು

ಶ್ರೀ ವೆಂಕಟರಾಮಾ ಶಾಸ್ತ್ರಿಗಳ ವಾದ ಮುಗಿದಮೇಲೆ ಶ್ರೀ ವಿಲ್ಸ್ ಅಕ್ಕಿಯಣ್ಣನವರು ವಾದ ಮಾಡಿ, ಅವಸರದ ಶಾಸನವು ಸದುದ್ದೇಶಪೂರ್ವಕವೆಂದು ತಿಳಿಸಿದರು

ವಿಚಾರಣೆಯನ್ನು ಇದೇ ೨೬ನೇ ತಾ॥ಗೆ ಮುಂದೆ ಹಾಕಲಾಯಿತು.

ಮುನ್ಷಿಯವರು ಕೇಂದ್ರ ಸರ್ಕಾರದ ಗೃಹ ಸಚಿವರೆ ?

ಹೈದರಾಬಾದಿನಲ್ಲಿ ಭಾರತದ ಏಜೆಂಟ್ ಆದ ... ರಲ್ಲಿರುವ ಶ್ರೀ ಕೆ. ಎಂ. ಮುನ್ಷಿಯವರನ್ನು ಭಾರತ ಸರ್ಕಾರದ ಗೃಹ ಸಚಿವರನ್ನಾಗಿಯೂ, ಬೊಂಬಾಯಿನ ಶ್ರೀ ಎಸ್. ಕೆ. ಪಾಟೀಲರವರನ್ನು ... ಇಲಾಖಾ ಮಂತ್ರಿಗಳನ್ನಾಗಿ ನೇಮಿಸಿ ಸರ್ದಾರರು ಉಪ ಪ್ರಧಾನಿಯಾಗಿ ಮಾತ್ರ ಇರುವರೆಂದೂ ಹೇಳಲಾಗಿದೆ ಕೇಂದ್ರ ಸರ್ಕಾರದ ಮಂತ್ರಿಮಂಡಲವನ್ನು ವಿಸ್ತರಿಸಿ ಶ್ರೀ ಗಳಾದ ಆರ್. ಆರ್. ದಿವಾಕರ್, ಕೆ. ಸಂತಾನಂ ಮತ್ತು ಅನಂತಶಯನಂ ಅಯ್ಯಂಗಾರ್ ಇವರುಗಳನ್ನು ಸಚಿವರಾಗಿ ನೇಮಿಸಲಾಗದ ಎಂದು ವರದಿಯಾಗಿದೆ.

ಬಿಳಿಕೆರೆಯಲ್ಲಿ

ಈ ಊರಿನಲ್ಲಿ ಬೆಳಗ್ಗೆ ಪ್ರಭಾತ ಫೇರಿಯಾದ ಮೇಲೆ ಮಿಡ್ಲ್‌ಸ್ಕೂಲು ಆವರಣದಲ್ಲಿ ಶ್ರೀ ಹೆಚ್. ಎನ್. ಬಸವೇಗೌಡರು ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಅಧ್ಯಕ್ಷರೂ ಶ್ರೀ ದೊರೆಯ್ಯನವರೂ ಧ್ವಜಾರೋಹಣ ಮಾಡಿದರು ಮಹಾತ್ಮರ ನಿಧನಕ್ಕಾಗಿ ಎರಡು ನಿಮಿಷ ಮೌನವನ್ನಾಚರಿಸಿದ ಮೇಲೆ ಉಪಾಧ್ಯಾಯರು ಮತ್ತು ಇತರ ಪ್ರಮುಖರಿಂದ ಭಾಷಣಗಳಾದುವು. ಸಂಜೆ ಮೆರವಣಿಗೆ, ಭಾಷಣ, ಭಜನೆಗಳು ನಡೆದು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ರಾಜಪ್ರಮುಖರ ಸಂಚಾರದ ಮಾರ್ಗಗಳು

ರಾಜಧಾನಿಯಲ್ಲಿ ಕಾರ್ಯಕ್ರಮ

ಮೈಸೂರು ೧೮

ಮೊದಲೇ ಪ್ರಕಟವಾಗಿರುವ ಕಾರ್ಯಕ್ರಮದಂತೆ ಭಾರತದ ಗವರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ದಿನ ಸಂಜೆ ೪-೩೦ ಗಂಟೆಗೆ ವಿಮಾನದಲ್ಲಿ ಬರಲಿದ್ದಾರೆ. ಅವರ ಸಂಚಾರದ ಮಾರ್ಗಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಈ ಕೆಳಗೆ ಕೊಡಲಾಗಿದೆ:—

ಈ ದಿನ ಸಂಜೆ ೪-೩೦ ಗಂಟೆಗೆ ವಿಮಾನ ನಿಲ್ದಾಣದಲ್ಲಿ ಆಗಮನ. ಅಲ್ಲಿ ಶ್ರೀ ಮನ್ಮಹಾರಾಜರವರಿಂದ ಸ್ವಾಗತ. ಪ್ರಮುಖ ಪಂಚಾಯಿತಿ ಮತ್ತು ಸೈನಿಕರ ಪರಿಶೀಲನೆ.

ಅನಂತರ ಲಲಿತ ಮಹಲ್ಲಿಗೆ ತೆರಳುವುದು. ಈ ಪ್ರಯಾಣದ ಮಾರ್ಗವಾಗಿ ದೊಡ್ಡಕೆರೆ ಏರಿಯ ಮೂಲಕ ಹಾರ್ಡಿಂಜ್ ಸರ್ಕಲ್ಲಿಗೆ ಬಂದು, ಮಿರ್ಜಾ ರಸ್ತೆ, ನಾರ್ತ್ ರಸ್ತೆ, ಲೋಕರಂಜನ ಮಹಲ್ ರಸ್ತೆ, ಕಾರಂಜಿ ಕೆರೆ ರಸ್ತೆ ಮತ್ತು ನರಸಿಂಹರಾಜ ಬೂಲಿವಾರ್ಡ್ ಮಾರ್ಗವಾಗಿ. ಈ ಸಂಬಂಧದಲ್ಲಿ ಸಂಜೆ ನಾಲ್ಕರಿಂದ ಐದು ಗಂಟೆವರೆಗೆ ಮೇಲ್ಕಂಡ ರಸ್ತೆಗಳಲ್ಲಿ ಸಂಚಾರವನ್ನು ನಿಲ್ಲಿಸಲಾಗುತ್ತದೆ.

ಲಲಿತ ಮಹಲ್ಲಿನಿಂದ ಹೊರಟು ನರಸಿಂಹರಾಜ ಬೂಲಿವಾರ್ಡ್, ಮಿರ್ಜಾ ರಸ್ತೆ, ಹಾರ್ಡಿಂಜ್ ಸರ್ಕಲ್, ಸ್ವಾತಂತ್ರ್ಯ ಚೌಕ, ಹೊಸ ಸ್ವಾತಂತ್ರ್ಯ ಚೌಕ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಮತ್ತು ಪ್ರಿನ್ಸೆಸ್ ರಸ್ತೆಯ ಮೂಲಕ ಕೃಷ್ಣರಾಜ ಸಾಗರಕ್ಕೆ ಮತ್ತು ಅದೇ ರಸ್ತೆಯಲ್ಲಿ ಲಲಿತ ಮಹಲ್ಲಿಗೆ ವಾಪಸು. ಇದಕ್ಕಾಗಿ ಸಂಜೆ ೫-೩೦ ಗಂಟೆಯಿಂದ ರಾತ್ರಿ ೮-೩೦ ಗಂಟೆಯ ವರೆಗೆ ಮೇಲ್ಕಂಡ ರಸ್ತೆಗಳಲ್ಲಿ ಸಂಚಾರಗಳನ್ನು ಪ್ರತಿಬಂಧಿಸಲಾಗಿದೆ.

ನಾಳೆ ಬೆಳಿಗ್ಗೆ ೮-೩೦ ಗಂಟೆಗೆ ಗೌರ್ನರ್ ಜನರಲ್ಲರವರು ಶ್ರೀ ಮನ್ಮಹಾರಾಜರವರೊಡನೆ ಸಕಲ ಮರ್ಯಾದೆಗಳೊಂದೊಡಗೂಡಿ ಮಿರ್ಜಾ ರಸ್ತೆ, ಹಾರ್ಡಿಂಜ್ ಸರ್ಕಲ್, ದೊಡ್ಡಕೆರೆ ರಸ್ತೆ, ಚಾಮರಾಜ ರಸ್ತೆ, ಸಯ್ಯಾಜಿರಾವ್ ರಸ್ತೆಗಳ ಮೂಲಕ ಸ್ವಾತಂತ್ರ್ಯ ಚೌಕಕ್ಕೆ ಬಂದು ಗಡಿಯಾರದ ಚೌಕವನ್ನು ದಾಟಿ ಟೌನ್‌ಹಾಲನ್ನು ಪ್ರವೇಶಿಸುವರು.

ಪೌರ ಬಿನ್ನವತ್ತಳೆಯನ್ನು ಸ್ವೀಕರಿಸಿದ ನಂತರ ಹೊಸ ಸ್ವಾತಂತ್ರ್ಯ ಚೌಕ, ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ವಸ್ತು ಪ್ರದರ್ಶನಾಲಯಕ್ಕೆ ಭೇಟಿ ಕೊಡುವರು. ಅನಂತರ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಅರಮನೆ ಬ್ರಹ್ಮಪುರಿ ದ್ವಾರದ ಪಶ್ಚಿಮಕ್ಕೆ ತಿರುಗಿ ಜಗನ್ಮೋಹನ ಭವನಕ್ಕೆ ಬಂದು ಮಹಿಳೆಯರ ಸಭೆಯಲ್ಲಿ ಸನ್ಮಾನವನ್ನು ಸ್ವೀಕರಿಸುವರು.

ಅಲ್ಲಿಂದ ಪುನಃ ಬ್ರಹ್ಮಪುರಿ ದ್ವಾರದ ಚೌಕದ ಮೂಲಕ ರಮಾವಿಲಾಸ ರಸ್ತೆಯಲ್ಲಿ ತಿರುಗಿ ಮಹಾರಾಜಾ ಕಾಲೇಜಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡುವರು. ಅಲ್ಲಿಂದ ಕುಕ್ಕರ ಹಳ್ಳಿ ಗ್ರಾಮವನ್ನು ಪರಿಶೀಲಿಸುವರು. ಮೇಲ್ಕಂಡ ರಸ್ತೆಯಲ್ಲಿಯೇ ಹಿಂದಿರುಗಿ ಸ್ವಾತಂತ್ರ್ಯ ಚೌಕ, ಹಾರ್ಡಿಂಜ್ ಸರ್ಕಲ್ ಮುಂತಾದವುಗಳ ಮಾರ್ಗವಾಗಿ ಲಲಿತ ಮಹಲ್ಲಿಗೆ ತಲುಪುವರು.

ಇದಕ್ಕಾಗಿ ನಾಳೆ ಬೆಳಿಗ್ಗೆ ೮ ರಿಂದ ೧೨ ಗಂಟೆವರೆಗೆ ಮೇಲ್ಕಂಡ ರಸ್ತೆಗಳ ಸಂಚಾರವನ್ನು ನಿರೋಧಿಸಲಾಗಿದೆ.

ಬೆಳಗಿನ ಆಟಗಳು

20-8 48 ನೇ ಶುಕ್ರವಾರದಿಂದ
4 ದಿನಗಳು ಮಾತ್ರ
ರಿಪಬ್ಲಿಕ್‌ರವರ
ಪೆರಿಲ್ಸ್ ಆಫ್ - ನಯೋಕ
(15 ಭಾಗಗಳ ಪೂರ್ತಿ ಸೀರಿಯಲ್)
ಪ್ರಭಾ ಪಿಕ್ಚರ್ ಹೌಸ್

Edited printed and published by A. R. Nagarajan at the Sadhvi Press D Subbaiah Road Mysore.

ಸ್ವಾತಂತ್ರ್ಯ ದಿನಾಚರಣೆ

ರಾವಂದೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ಹೆಚ್ಚಿಗೆ ಲಿಂಗಣ್ಣನವರು ಭಾರತ ಧ್ವಜವನ್ನೂ ಶ್ರೀ ಜಿ ಆರ್ ರುದ್ರಪ್ಪನವರು ಮೈಸೂರು ಧ್ವಜವನ್ನೂ ಹಾರಿಸಿದರು. ಸಂಜೆ ಬಹಿರಂಗ ಸಭೆ ನಡೆಯಿತು.

ಕಳೆದ ೧೫ ನೇ ತಾ|| ಶ್ರೀ ಚಂದ್ರನಾರಾಯಣ ಸೇವಾಸಂಘದವರು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು. ಬೆಳಗ್ಗೆ ಧ್ವಜಾರೋಹಣವೂ ಸಂಜೆ ಭಜನೆಯೂ ನಡೆದುವು.

ನಾಳೆ ಮಧ್ಯಾಹ್ನ ೩-೩೦ ಗಂಟೆಗೆ ಲಲಿತ ಮಹಲ್ಲಿನಿಂದ ಹೊರಟು ವಸಂತ ಮಹಲ್, ಸರ್ಕಾರಿ ಭವನಗಳ ಮುಂದಿನ ಸೆಂಟ್ ಫಿಲೋಮಿನಾ ಕಾಲೇಜು ರಸ್ತೆಯ ಮಾರ್ಗವಾಗಿ ಬೆಂಗಳೂರಿಗೆ ತೆರಳುವರು. ಇದಕ್ಕಾಗಿ ನಾಳೆ ಮಧ್ಯಾಹ್ನ ೨-೩೦ ರಿಂದ ೩-೩೦ ರ ವರೆಗೆ ಮೇಲ್ಕಂಡ ರಸ್ತೆಗಳ ಸಂಚಾರವನ್ನು ಪ್ರತಿಬಂಧಿಸಲಾಗಿದೆ.

ನಾಳೆ ಬೆಳಗ್ಗೆ ಪೌರಸಭೆಯವರು ಗೌರ್ನರ್ ಜನರಲ್ಲರಿಗೆ ಮಾನ ಪತ್ರವನ್ನು ಸಮರ್ಪಿಸಲು ಏರ್ಪಡಿಸಿರುವ ಸಮಾರಂಭಕ್ಕೆ ಆಹ್ವಾನಿತರಾಗಿರುವ ಎಲ್ಲ ಮಹನೀಯರೂ, ಮಹಿಳೆಯರೂ ಬೆಳಗ್ಗೆ ೮ ಗಂಟೆಯೊಳಗಾಗಿ ಟೌನ್‌ಹಾಲಿಗೆ ದಯಮಾಡಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆ ಇತ್ತಿದ್ದಾರೆ. ಪುರನಿವಾಸಿಗಳೂ, ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಗೌರ್ನರ್ ಜನರಲ್ಲರವರ ಮೆರವಣಿಗೆ ಬರತಕ್ಕ ರಸ್ತೆಗಳಲ್ಲಿ ತಮಗೆ ನಿಗದಿಯಾದ ಸ್ಥಳಗಳಲ್ಲಿ ಬೆಳಗ್ಗೆ ೮ ಗಂಟೆಗೆ ಮುಂಚಿತವಾಗಿಯೇ ದಯಮಾಡಿಸಬಹುದೆಂದೂ ಸಹ ತಿಳಿಸಲಾಗಿದೆ. ಅನಂತರ ವಾಹನಗಳ ಸಂಚಾರಕ್ಕೆ ಪ್ರತಿಬಂಧಕವನ್ನು ಹಾಕಲಾಗುವುದು.

ಪಾಕಿಸ್ತಾನಕ್ಕೆ ಸೇರಲು ಇ ಫಕೀರರ ನಿರಾಕರಣೆ

ಇಪಿ ಫಕೀರರು ಪಾಕಿಸ್ತಾನಕ್ಕೆ ಸೇ ನಿರಾಕರಿಸಿದರೆಂದು ಹೇಳಲಾಗಿದೆ ಸ್ತ್ರ ಮುಸ್ಲಿಂ ವಿದ್ಯಾರ್ಥಿಗಳು ಇತ್ತೀ ಇಪಿ ಫಕೀರ್‌ನ್ನು ಕಂಡು, ಬ್ರಿಟಿಷರ ಗೆ ಇಲ್ಲಿಯವರೆವಿಗೂ ಕಾದಾಡಿ, ಮು ಸಂಸ್ಥಾನವನ್ನು ಸ್ಥಾಪಿಸಿದ ಮೇಲೆ, ರು ಅದಕ್ಕೆ ಬೆಂಬಲ ನೀಡಬೇಕೆಂದು ಳಿಕೊಂಡರೆಂದೂ, ಅದಕ್ಕೆ ಪಾಕಿಸ್ತಾನಿಗಳು ಗಡ್ಡಗಾಡಿನ ಜನರ ಮೇ ಬಾಂಬುಗಳನ್ನು ಹಾಕಿ, ಕೆಂಪು ನಾಯಕರನ್ನು ದಸ್ತಗಿರಿ ಮಾಡಿದುದ ಪ್ರತಿಭಟಿಸಿ, ಪಾಕಿಸ್ತಾನವು ಬ್ರಿಟಿಷರ ವಾಡದಲ್ಲಿದೆಯೆಂದೂ ತಾವು ಅಂತಹ ಜ್ಯಕ್ಕೆ ಸೇರುವುದಿಲ್ಲವೆಂದೂ ತಿಳಿಸಿದರೆ ವರದಿಯಾಗಿದೆ.

ಭಾರತದ ಸ್ವಾತಂತ್ರ್ಯ ದಿನಾಚರ ಜ್ಞಾಪಕಾರ್ಥವಾಗಿ ಬ್ರೆಜಿಲಿನ ರಾಜ ಯಾದ ರಿಯೋಡಿಜನೀರೋದಲ್ಲಿ ಗೆ ಲಿಯೋ ವರ್ಗಾಸ್ ಚೌಕಕ್ಕೆ ಮ ಗಾಂಧಿ ಚೌಕವೆಂದು ನಾಮಕರಣ ಡಲಾಗಿದೆ.

Evening Shows
at
RAJKAMAL TALKIE
Mysore

From 18—8 - 48
Daily 3 Shows
Pirates of - Montere
(In Technicolour)
—:Starring:—
Maria Montez
Rod Cameron
It is an universal Thrilling Picture

Morning Shows
From 20—8—48
For 4 Days only
Kid Millions
—:Featuring:—
EDDIE CANTOR

ಆಫೀಸು ಬದಲಾವಣೆ

ಸಯ್ಯಾಜಿರಾವ್ ರಸ್ತೆ ೧೪೭೮ ನೇ ಮನೆಯಲ್ಲಿರುವ 'ದಿ ಇಂಟರ್‌ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್' ಬ್ರಾಂಚ್ ಆಫೀಸನ್ನು ಚಾಮರಾಜ ಮೊಹಲ್ಲಾ, ಕೃಷ್ಣಮೂರ್ತಿಪುರಂ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯಲ್ಲಿರುವ ೧೪೭೭ನೇ ಮನೆಗೆ ಬದಲಾಯಿಸಲಾಗುವುದು ಬದಲಾವಣೆ ಗಮನಿಸಬೇಕಾಗಿ ಕೋರಿಕೆ.

ಪ್ರಭುದೇವಾ ಟಾಕೀಸಿನಲ್ಲಿ
ರಾಯಲ್ ಟಾಕೀಸಿನವರ

ಸಾವಿತ್ರಿ
(ತಮಿಳು)
ನಟವರ್ಗ:— ಶಾಂತ ಆಪ್ಟೆ, ಎಂ. ಎಸ್. ಸುಬ್ಬುಲಕ್ಷ್ಮಿ, ವೈ. ವಿ. ರಾವ್, ಕೆ. ಸಾರಂಗಪಾಣಿ, ಜಿ. ಎ. ಚೆಲ್ಲಪ್ಪ, ಕೃಷ್ಣವೇಣಿ ಮುಂತಾದವರು
ಇನ್ನು ಎರಡು ದಿವಸಗಳು ಮಾತ್ರ

20-8-48 ರಿಂದ ೨ ವಾರಗಳು ಮಾತ್ರ
ಸಂತ್ ಸಕ್ಕೂಬಾಯಿ
(ತಮಿಳು)
ಪ್ರತಿ ದಿನ ಮೂರು ಆಟಗಳು
ಭೂಮಿಕೆ:— ಕೆ. ಅಶ್ವತ್ಥಮ್ಮ, ಕೆ. ಸಾರಂಗಪಾಣಿ, ಸಿ. ಬನ್ನಿಬಾಯಿ ಮುಂತಾದವರು

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೨೦-೮-೪೮ [ಸಂಚಿಕೆ ೨೯

ವಿಶ್ವ ಭದ್ರತಾ ಸಮಿತಿಗೆ ಹೈದರಾಬಾದ್ ಪ್ರಶ್ನೆ

ಪ್ರಜೆಗಳಲ್ಲಿ ರಾಜನಿಷ್ಠೆ ಅಚಲವಾಗಿರಬೇಕು

...ರಸಭಾ ಸನ್ಮಾನದಲ್ಲಿ ಶ್ರೀ ರಾಜಾಜಿಯವರ ಹಿತೋಕ್ತಿ

ಮೈಸೂರು ೨೦

ಮೈಸೂರು ಪುರಸಭೆಯವರು ನಿನ್ನೆ ...ಗ್ಗೆ ಟೌನ್‌ಹಾಲಿನಲ್ಲಿ ಗೌರ್ನರ್ ಜನರ ...ಗೆ ಮಾನಪತ್ರವನ್ನು ಅರ್ಪಿಸಿದರು ಶ್ರೀ ...ಜಾಜಿಯವರು ಶ್ರೀಮನ್ಮಹಾರಾಜರೊ ...ನೆ ನಾಲ್ಕು ಕುದುರೆಗಳ ಸಾರೋಟಿನಲ್ಲಿ ...ಶ ಮಹಲ್ ಭವನದಿಂದ ಟೌನ್‌ಹಾಲಿ ...ಮೆರವಣಿಗೆಯಲ್ಲಿ ೯-೧೫ ಗಂಟೆಗೆ ಆಗ ...ಿದರು. ದಾರಿಯುದ್ದಕ್ಕೂ ಅಸಂಖ್ಯಾತ ...ನರು ಕಿಕ್ಕಿರಿದು, ರಾಜಾಜಿಯವರಿಗೆ ಸ್ವಾ ...ತವನ್ನು ನೀಡಿ "ರಾಜಾಜಿ-ಕಿ-ಜೈ" ಎಂ ... ನುಡಿದರು.

ಟೌನ್‌ಹಾಲ್ ಆವರಣಕ್ಕೆ ದಯಮಾಡಿ ...ದಕೂಡಲೇ ಅವರನ್ನು ಪುರಸಭಾಧ್ಯಕ್ಷ ... ಮತ್ತು ಸದಸ್ಯರುಗಳೂ ಸ್ವಾಗತಿಸಿದ ... ಶ್ರೀಮನ್ಮಹಾರಾಜರವರ ಪದಾತಿಗಳು ...ಡ್ ಆಫ್ ಆನರ್ ಸಲ್ಲಿಸಿದರು ಮತ್ತು ...ಆವ ಸೇನೆಯ ಬ್ಯಾಂಡಿನವರು ಜನಗಣಮ ...ಗೀತೆಯನ್ನು ಬಾರಿಸಿದರು.

ಈ ಸಮಾರಂಭಕ್ಕೆ ದಿವಾನರೂ, ಮು... ಮಂತ್ರಿಗಳೂ, ಕಾಂಗ್ರೆಸ್ ಅಧ್ಯಕ್ಷರೂ ...ನೇಕ ಗಣ್ಯ ಮಹನೀಯರುಗಳೂ ದಯ ...ಮಾಡಿಸಿದ್ದರು ಶ್ರೀ ರಾಮಕೃಷ್ಣ ಭಟ್ಟರು ...ಮತ್ತು ಶ್ರೀಮತಿ ರಾಜಮ್ಮ ಕಲ್ಲೋಳಿ ...ರವರುಗಳಿಂದ ಸ್ವಾಗತ ಪದ್ಯಗಳು ...ಾಡಲ್ಪಟ್ಟ ತರುವಾಯ ಪುರಸಭಾಧ್ಯಕ್ಷರಾದ ...ಿ. ಸೀತಾರಾಮಯ್ಯನವರು ಕನ್ನಡ ...ಲ್ಲಿ ಬಿನ್ನವತ್ತಳೆಯನ್ನು ಓದಿ, ಸುಂದರ ...ದ ಬೆಳ್ಳಿಯ ಕರಂಡದಲ್ಲಿ ಅದನ್ನು ಅ... ...ಿಸಿ ಸ್ವಾಗತವನ್ನು ನೀಡಿದರು.

ರಾಜಾಜಿಯವರು ಇಂಗ್ಲೀಷಿನಲ್ಲಿ ಭಾಷ... ಮಾಡಿ ಭಾರತದಲ್ಲೆಲ್ಲಾ ಮೈಸೂರು ...ಗರ 'ಅತ್ಯಂತ' ರಮಣೀಯವಾದುದೆಂ ... ತಿಳಿಸಿದರು. ತಾವು ದೇಶಕ್ಕೇನಾದರೂ ...ವೆ ಸಲ್ಲಿಸಿದ್ದ ಪಕ್ಷದಲ್ಲಿ ಅದಕ್ಕೆ ಮೈಸೂರು ...ಸಂಸ್ಥಾನದಲ್ಲಿ ತಾವು ಪಡೆದ ವಿದ್ಯಾಭ್ಯಾಸ... ಕಾರಣವೆಂದು ಅವರು ಹೇಳಿದರು. ದೇಶದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿ...ಸಲ್ಪಟ್ಟಿದೆ ಮಹಾರಾಜರಿಂದ ಅಧಿಕಾರ ಪ... ...ಯುವುದೇನೋ ಸುಲಭ; ಅದರ ಅದ... ...ನ್ನು ಉಳಿಸಿಕೊಳ್ಳುವುದು ಕಷ್ಟ ಹೊಸ ಸ... ...ರ್ಕಾರಕ್ಕೆ ದೊಡ್ಡ ಜವಾಬ್ದಾರಿ ಸಹಿಸಲ್ಪ... ...ದೆ. ಈ ಜವಾಬ್ದಾರಿಯನ್ನು ನಿರ್ವಹಿ... ...ಬೇಕಾದರೆ ಅವರು ಕಷ್ಟಪಟ್ಟು ಕೆಲಸ ...ಮಾಡಬೇಕು ದೇಶಾಭಿಮಾನ ಮಾತ್ರ ಇ... ...ರೆ ಸಾಲದು. ಅದಕ್ಕೆ ಹೊಸ ಕ್ರಿಯಾತ್ಮ... ...ಕವಾದ ರೂಪವು ಬರಬೇಕು. ಶ್ರೀಮನ್ಮ... ...ಹಾರಾಜರವರ ವಿಶ್ವಾಸ, ದಯೆ ಮತ್ತು... ...ಗಳು ನನ್ನನ್ನು ಮುಗ್ಧಗೊಳಿಸಿವೆ ನಾನು ...ದೆ, ಶ್ರೀಮನ್ಮಹಾರಾಜರವರು ಮಗ... ...ವರೆಂದು ಭಾವಿಸಿದ್ದೇನೆ.

ಸರ್ಕಾರವು ಪ್ರಜೆಗಳಿಗೆ ವಹಿಸಲ್ಪಟ್ಟಿದೆ ...ರೆ ಪ್ರಜೆಗಳಲ್ಲಿ ರಾಜನಿಷ್ಠೆಯು ಅಚಲ ...ವಾಗಿದಿದ್ದಲ್ಲಿ ಏನನ್ನೂ ಸಾಧಿಸಲಾಗುವು... ...ದಿಲ್ಲ ಎಂದು ರಾಜಾಜಿಯವರು ತಿಳಿಸಿದರು.

ವಸ್ತುಪ್ರದರ್ಶನಾಲಯಕ್ಕೆ ಭೇಟಿ

ಅಲ್ಲಿಂದ ಗೌರ್ನರ್ ಜನರಲ್ಲರು ವಸ್ತು ...ಪ್ರದರ್ಶನಾಲಯಕ್ಕೆ ಭೇಟಿ ಇತ್ತು ಸರ್ಕಾ... ...ರದವರು ಏರ್ಪಡಿಸಿರುವ ಗ್ರಾಮ ಕೈಗಾರಿ... ...ಕೆಗಳ ಪ್ರದರ್ಶನವನ್ನು ಪರಿಶೀಲಿಸಿದರು

ರಾಜಾಜಿಯವರಿಗೆ ಅಭೂತಪೂರ್ವ ಸ್ವಾಗತ

ದಂಡು ಮತ್ತು ನಗರ ಪುರಸಭೆಗಳ ಮಾನಪತ್ರ

ಸ್ವಂ. ವ. ಫೋನ್] ಬೆಂಗಳೂರು ೨೦

ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಈ ದಿನ ಬೆಳಗ್ಗೆ ೮ ಗಂಟೆಗೆ ದಿವಾನರು ಮತ್ತು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರುಗಳೊಡನೆ ರೆಸಿಡೆನ್ಸಿ ಭವನದಿಂದ ದಂಡಿನ ಮೇಯೋ ಹಾಲಿಗೆ ಮೆರವಣಿಗೆಯಲ್ಲಿ ತೆರಳಿದರು. ದಾರಿಯುದ್ದಕ್ಕೂ ಅಸಂಖ್ಯಾತ ಜನರು ನೆರೆದಿದ್ದು, ರಾಜಾಜಿಯವರಿಗೆ ಸ್ವಾಗತವನ್ನು ಬಯಸಿದರು.

ಮೇಯೋ ಹಾಲಿನಲ್ಲಿ ರಾಜಾಜಿಯವರಿಗೆ ದಂಡಿನ ಪುರಸಭೆಯ ಉಪಾಧ್ಯಕ್ಷರಾದ ಶ್ರೀ ದೀನದಯಾಳು ನಾಯಡುರವರು ಮಾನಪತ್ರವನ್ನು ಓದಿ, ಗಂಧದ ಕರಂಡದಲ್ಲಿ ಅರ್ಪಿಸಿದರು. ಶ್ರೀ ರಾಜಗೋಪಾಲಚಾರಿಯವರು ಅದಕ್ಕೆ ಉತ್ತರ ಕೊಟ್ಟು, ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಅದನ್ನು ಜನರು ಸರಿಯಾಗಿ ಅರಿತಿಲ್ಲವೆಂದೂ, ಮಹಾತ್ಮರ ತತ್ವಗಳನ್ನು ಪರಿಪಾಲಿಸುತ್ತಿಲ್ಲವೆಂದೂ ತಿಳಿಸಿದರು. ಪರಿಯೊಟ್ಟು ಭಾರತೀಯನೂ ಪ ... ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಅವರು ಹೇಳಿದರು.

ಅಲ್ಲಿಂದ ರಾಜಾಜಿಯವರು ಲಾಲ್‌ಬಾಗಿಗೆ ತೆರಳಿ ಅಲ್ಲಿ ನಗರ ಪುರಸಭೆಯ ಮಾನಪತ್ರವನ್ನು ಸ್ವೀಕರಿಸಿದರು. ಪುರಸಭಾಧ್ಯಕ್ಷರಾದ ಶ್ರೀ ರಾಮ ... ಅಯ್ಯಂಗಾರ್ಯರು ಗಂಧದ ಕರಂಡದಲ್ಲಿ ಮಾನಪತ್ರವನ್ನು ಅರ್ಪಿಸಿದರು. ಲಾಲ್‌ಬಾಗಿನ ಹೊರಗಡೆ ಜನ ಸಂದಣಿಯು ಅಸಾಧ್ಯವಾಗಿದ್ದು ಸ್ವಲ್ಪಗೊಂದಲ ನಡೆಯಿತು. ರಾಜಾಜಿಯವರು ಭಾಷಣ ಮಾಡಿ, ಪ್ರತಿಯೊಬ್ಬರೂ ಶಿಸ್ತನ್ನು ಪರಿಪಾಲಿಸಬೇಕೆಂದೂ, ಈ ರೀತಿ ಜನಗಳು ತಮ್ಮವರೇ ಆದ ಗೌರ್ನರ್ ಜನರಲ್ಲರು ಬಂದಾಗ ಗಲಭೆ ಮಾಡುತ್ತಿರುವುದು ತರವಲ್ಲ. ಕೋಚನೀಯವೆಂದೂ ತಿಳಿಸಿದರು. ಸ್ವತಂತ್ರ ಭಾರತದಲ್ಲಿ ಪುರಸಭೆಗಳು ಇನ್ನೂ ಹೆಚ್ಚಿನ ಸೇವೆ ಮಾಡಲು ಅವಕಾಶವಿದೆಯೆಂದೂ ತಿಳಿಸಿದರು.

ಅನಂತರ ರಾಜಾಜಿಯವರು ಬಸವನಗುಡಿಯ ಬಡಾವಣೆಯ. ಆರಂಭೋತ್ಸವವನ್ನೂ ಮತ್ತು ಹಿಂದೀ ಪ್ರಚಾರ ಸಮಿತಿಯ ಭವನದ ಶಂಕುಸ್ಥಾಪನೆಯನ್ನೂ ನೆರವೇರಿಸಿದರು. ದಕ್ಷಿಣ ಭಾರತದ ಜನರು ಹಿಂದೀ ಭಾಷೆಯನ್ನು ಅವಶ್ಯಕವಾಗಿ ಕಲಿಯಬೇ... ...ಕೆಂದೂ, ಈಗಿನ ಮಕ್ಕಳು ಮುಂದೆ ದೇಶ ಸೇವೆ ಮಾಡಬೇಕಾದರೆ ಅವರಿಗೆ ಹಿಂದೀ ಭಾಷೆಯನ್ನು ಕಲಿಸಬೇಕೆಂದೂ ತಿಳಿಸಿದರು. ಇದರಿಂದ ಮಾತೃಭಾಷೆಗೆ ಧಕ್ಕೆ ಬರುವುದಿಲ್ಲವೆಂದೂ, ಇಂಗ್ಲೀಷ್ ಭಾಷೆಯೂ ಬೇಕಾದಷ್ಟು ಉಪಯೋಗವೆಂದೂ ... ...ದರು.

ವಸ್ತುಪ್ರದರ್ಶನಕ್ಕೆ ಪ್ರಭುಗಳ ಭೇಟಿ

ಮೈಸೂರು ೨೦

ಈ ದಿನ ಬೆಳಗ್ಗೆ ಶ್ರೀ ಮನ್ಮಹಾರಾಜರವರು ವಸ್ತುಪ್ರದರ್ಶನಾಲಯಕ್ಕೆ ಭೇಟಿಯಿತ್ತು ಅಲ್ಲಿ ಸರ್ಕಾರದವರು ಏರ್ಪಡಿಸಿರುವ ಸಣ್ಣ ಕೈಗಾರಿಕೆಗಳ ಪ್ರದರ್ಶನವನ್ನು ಪರಿಶೀಲಿಸಿದರು. ಪ್ರತಿಯೊಂದು ಸ್ಟಾಲಿನಲ್ಲಿಯೂ ನಡೆಯುತ್ತಿರುವ ಕೆಲಸಗಳನ್ನು ಬಹಳ ಆಸಕ್ತಿಯಿಂದ ಪರಿಶೀಲಿಸಿಕೊಂಡು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು.

ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಿತಿಯವರು ಏರ್ಪಡಿಸಿರುವ ಶಾಮಿಯಾನಕ್ಕೂ ಸಹ ಅವರು ಭೇಟಿ ಇತ್ತು ಅಲ್ಲಿ ಇಟ್ಟಿರುವ ನಾಟ್ಯಕಲಾ ಚಿತ್ರಪಟಗಳನ್ನು ಸಹ ಪರಿಶೀಲಿಸಿದರು. ಅನಂತರ ಲಲಿತ ಕಲಾ ವಿಭಾಗವನ್ನೂ ಪ್ರಭುಗಳು ಪರಿಶೀಲಿಸಿದರು. ಯುವರಾಜ ಶ್ರೀ ಮನ್ಮಹಾರಾಜರವರು ಕುಮಾರ ಸಮೇತರಾಗಿ ಪ್ರದರ್ಶನಾಲಯಕ್ಕೆ ಭೇಟಿ ಇತ್ತು ಎಲ್ಲವನ್ನೂ ಪರಿಶೀಲಿಸಿದರು.

ಪ್ರದರ್ಶನವು ಈ ದಿನ ಮತ್ತು ನಾಳೆಯೂ ನಡೆಯುವುದು. ಸಾರ್ವಜನಿಕರಿಗೆ ಟಿಕೆಟ್ ಮೂಲಕ ಪ್ರವೇಶ.

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಮುಷ್ಕರ

ಕೃಷ್ಣರಾಜೇಂದ್ರ ಗಿರಣಿಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಶ್ರೀ ಆರ್ ಎಸ್ ಶಂಕರಲಿಂಗರವರನ್ನು ಅಧಿಕಾರವರ್ಗದವರು ಹಠಾತ್ತಾಗಿ ಕೆಲಸದಿಂದ ತೆಗೆದುಹಾಕಿರುವುದನ್ನು ಖಂಡಿಸಲು, ಮೊನ್ನೆ ದಿನ ಅಲ್ಲಿನ ಕೆಲಸಗಾರರು ಒಂದು ಗಂಟೆ ಕಾಲ ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದ್ದರು.

ಭದ್ರತಾ ಸಮಿತಿಯ ಮುಂದೆ ಹೈದರಾಬಾದಿನ ಸಮಸ್ಯೆ

ಹೈದರಾಬಾದು ಮತ್ತು ಭಾರತದ ಪರಿಸ್ಥಿತಿಯು ಹದಗೆಟ್ಟು, ಶಾಂತಿಗೆ ಭಂಗ ಬಂದಿರುವುದರಿಂದ ಈ ಸಮಸ್ಯೆಯನ್ನು ವಿಶ್ವ ಭದ್ರತಾ ಸಮಿತಿಯ ಮುಂದೆ ಇಡಲಾಗುವುದೆಂದು ನಿಜಾಂ ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ. ಈ ವಿಷಯವನ್ನು ಭಾರತದ ಪ್ರಧಾನ ಮಂತ್ರಿ ನೆಹರೂರವರಿಗೂ ತಿಳಿಸಲಾಗಿದೆ.

ಇನ್ನು ಮುಂದೆ ಯಾವ ಮುಷ್ಕರಗಳನ್ನೂ ಹೂಡಕೂಡದು

ವಿದ್ಯಾರ್ಥಿಗಳಿಗೆ ರಾಜಾಜಿಯವರ ಹಿತೋಪದೇಶ

ಮೈಸೂರು ೨೦

ಓರಿಯಂಟಲ್ ಪುಸ್ತಕ ಭಂಡಾರಕ್ಕೆ ರಾಜಾಜಿಯವರು ತೆರಳಿ, ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಡಿ. ಎಂ ಸಿದ್ದಯ್ಯನವರು ರಾಜಾಜಿಗೆ ಸ್ವಾಗತವನ್ನು ನೀಡಿದರು ಪ್ರೊ|| ಕೆ ವಿ ಪುಟ್ಟಪ್ಪನವರು ಸ್ವಾತಂತ್ರ್ಯದ ಬಗೆಗಿನ ಒಂದು ಕವಿತೆಯನ್ನು ಓದಿದರು.

ರಾಜಾಜಿಯವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:--

ಗಾಡಿಗೆ ಕಟ್ಟಿರುವ ಎತ್ತುಗಳ ಕಣ್ಣುಗಳು ಹಿಂದಕ್ಕೂ ಮುಂದಕ್ಕೂ ನೋಡುತ್ತಿರುತ್ತವೆ-ಒಂದು ಕಣ್ಣು ಸಾರಥಿಯು ಚಾವಟಿಯ ಕಡೆ, ಮತ್ತೊಂದು ತನ್ನ ಮುಂದಿನ ಮಾರ್ಗದ ಕಡೆ. ಹಾಗೆಯೇ ಪ್ರಜಾಪ್ರಭುತ್ವ ಸರ್ಕಾರ-ಒಂದು ಕಡೆ ಪತ್ರಿಕೆ ಮತ್ತು ಪ್ರಜಾಭಿಪ್ರಾಯ, ಮತ್ತೊಂದು ಕಡೆ ಆಡಳಿತ ನಿರ್ವಹಣೆ- ಇದು ಬಹು ಕಷ್ಟಕರವಾದ ಕೆಲಸ. ಯಾರೂ ಮಂತ್ರಿಯಾಗಲು ಆಸೆಪಡಬೇಡಿ. ಆದ್ದರಿಂದಲೂ ಸ್ವತಂತ್ರ ಪತ್ರಿಕೋದ್ಯೋಗಿಯಾಗಿರುವುದು ಮೇಲು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಗುರುತರವಾದುದು.

ವಿದ್ಯಾರ್ಥಿಗಳು ಇನ್ನು ಮುಂದೆ ಯಾವುದೇ ಬಗೆಯ ಮುಷ್ಕರವನ್ನಾಗಲೀ ಮಾಡಕೂಡದು. ... ಎಷ್ಟೇ ಇದ್ದರೂ ವಿದ್ಯಾರ್ಥಿಗಳು ಮಾತ್ರ ಅನ್ನತ್ಯಾಗವನ್ನು ಮಾಡಕೂಡದು. ... ದಿವಸಗಳ ಉಪವಾಸದನಂತರ ... ಯಾರಾದರೂ ಪ್ರಮುಖರು ಉಪವಾಸವನ್ನು ನಿಲ್ಲಿಸುವಂತೆ ... ಅನಂತರ ಅದನ್ನು ನಿಲ್ಲಿಸುವಂತಹ ಪ್ರಸಂಗಗಳು ಬರಬೇಕಾರದು.

ರಾಜತ್ವವು ಒಂದು ಚಿಹ್ನೆ ಮಾತ್ರ ಅದನ್ನು ಗೌರವಿಸುವುದರಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಪ್ರತೀಕವಾಗಿ ... ರಾಷ್ಟ್ರದ ಸ್ವಾತಂತ್ರ್ಯ ಮತ್ತು ... ಅಭ್ಯುದಯದ ಚಿಹ್ನೆಯೇ ರಾಜತ್ವ ಅದನ್ನು ಗೌರವಿಸುವುದು ದೇಶವನ್ನೇ ಗೌರವಿಸಿದಂತೆ ಅದೇರೀತಿ ನೀವು ಮಹಾರಾಜರವರನ್ನು ನಿಮ್ಮ ಸ್ವಾತಂತ್ರ್ಯದ ಸಂಕೇತ ... ಭಾವಿಸಬೇಕು. ನಿಮ್ಮಲ್ಲಿ ರಾಜಭಕ್ತಿ ಬೆಳೆಯಲಿ ರಾಜರನ್ನು ತಂದೆಯಂತೆಯೂ, ವಿದ್ಯಾಲಯವನ್ನು ತಾಯಿಯಂತೆಯೂ ಭಾವಿಸಿ. ನಿಮಗೆ ಸಮಸ್ತ ಮಂಗಳಗಳು ದೊರೆಯಲೆಂದು ಆಶೀರ್ವಾದ ಮಾಡುತ್ತೇನೆ".

ರಾಜಾಜಿಯವರು ಅಲ್ಲಿಂದ ಕುಕ್ಕರಹಳ್ಳಿಗೆ ಭೇಟಿಕೊಟ್ಟರು. ಅಲ್ಲಿಂದ ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು ಸ್ವಾಗತನೀಡಿ ತವರ ಗೋಡೆಗಳಿಂದ ಕಟ್ಟಿರುವ ರಾಮಮಂದಿರವನ್ನು ತೋರಿಸಿದರು.

ಸಾರ್ವಜನಿಕರಿಗೆ ಭೇಟಿ

ಗೌರ್ನರ್ ಜನರಲ್ಲರು ಈ ಕೆಳಗೆ ಕಂಡವರಿಗೆ ನಿನ್ನೆ ಮಧ್ಯಾಹ್ನ ಭೇಟಿ ಇತ್ತರು— ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಟಿ. ಸುಬ್ರಹ್ಮಣ್ಯಂ, ಹೆಚ್ ಬಿ ಗುಂಡಪ್ಪಗೌಡ, ಎಸ್ ಚನ್ನಯ್ಯ, ಪಿ ಸೀತಾರಾಮಯ್ಯ, ಹೆಚ್ ಎಂ ಚನ್ನಯ್ಯ, ಎಂ ಎಸ್ ನಂಜುಂಡೇ... ... ಎಸ್ ... ಎಸ್ ... ನರಸಿಂ... ... ಮತ್ತು ...

... ರಾಜಾಜಿ ... ಪ್ರಯಾಣ ...

ಗೌರ್ನರ್ ಜನರಲ್ಲರ ಆಗಮನ

ವಿಮಾನ ನಿಲ್ದಾಣದಲ್ಲಿ ಅಭೂತಪೂರ್ವ ಸ್ವಾಗತ

ಮೈಸೂರು ೨೦

ಭಾರತದ ಪ್ರಥಮ ಭಾರತೀಯ ಗೌರ್ನರ್ ಜನರಲ್ಲರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಮೊನ್ನೆ ಸಂಜೆ ೫-೧೦ ಗಂಟೆಗೆ ವಿಮಾನದಲ್ಲಿ ರಾಜಧಾನಿಗೆ ಆಗಮಿಸಿದರು. ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರವರು ಸ್ವಾಗತಿಸಿದರು. ಅನಂತರ ಅಲ್ಲಿ ನೆರೆದಿದ್ದ ದಿವಾನರೂ ಪ್ರಧಾನಿ ಶ್ರೀ ಕೆ ಸಿ ರೆಡ್ಡಿ, ಇತರ ಮಂತ್ರಿಗಳೂ, ಕಾಂಗ್ರೆಸ್ ಅಧ್ಯಕ್ಷರೂ, ಶಾಸನ ಸಭಾಧ್ಯಕ್ಷರೂ, ಪೌರಸಭಾಧ್ಯಕ್ಷರೂ ಜಿಲ್ಲಾ ಬೋರ್ಡ್ ಅಧ್ಯಕ್ಷರೂ ಮತ್ತು ಇತರ ಉನ್ನತಾಧಿಕಾರಿಗಳನ್ನು ರಾಜಾಜಿಯವರಿಗೆ ಪರಿಚಯ ಮಾಡಿಕೊಟ್ಟರು. ಶ್ರೀಮನ್ಮಹಾರಾಜರವರ ಸ್ವಂತ ಪದಾತಿ ದಳದ ಗಾರ್ಡ್ ಆಫ್ ಆನರ್ ಸ್ವೀಕರಿಸಿದನಂತರ ಗೌರ್ನರ್ ಜನರಲ್ಲರು ಶ್ರೀಮನ್ಮಹಾರಾಜರವರೊಡನೆ ಲಲಿತ ಮಹಲ್ ಅರಮನೆಗೆ ದಯಮಾಡಿಸಿದರು. ಮಾರ್ಗದಲ್ಲಿ ಸಾವಿರಾರು ಜನಗಳು ರಸ್ತೆಯ ಅಕ್ಕಪಕ್ಕದಲ್ಲಿ ನಿಂತು ರಾಜಾಜಿಯವರ ಸಂದರ್ಶನ ಪಡೆದರು. ಟೋಲ್ ಗೇಟಿನ ಹತ್ತಿರ ಪುರಸಭೆಯ ಪರವಾಗಿ ಶ್ರೀಗಳಾದ ಬಿ. ನಾರಾಯಣಸ್ವಾಮಿ ಮತ್ತು ಎಸ್ ಲಿ ಗಣ್ಣನವರು ರಾಜಾಜಿಯವರಿಗೂ, ಶ್ರೀಮನ್ಮಹಾರಾಜರವರಿಗೂ ಹೂವಿನ ಹಾರಗಳನ್ನು ಅರ್ಪಿಸಿದರು

ಸಂಜೆ ೬ ಗಂಟೆಗೆ ರಾಜಾಜಿಯವರ ಗೌರವಾರ್ಥವಾಗಿ ಶ್ರೀಮನ್ಮಹಾರಾಜರವರು ಚಾಮುಂಡಿ ಉದ್ಯಾನದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ದಿವಾನರೂ ಮಂತ್ರಿಗಳೂ ಕಾಂಗ್ರೆಸ್ ಅಧ್ಯಕ್ಷರೂ ಶಾಸನ ಸಭಾಧ್ಯಕ್ಷರೂ ಉನ್ನತಾಧಿಕಾರಿಗಳೂ, ನಗರದ ಪ್ರಮುಖ ಮಹನೀಯರೂ ಮತ್ತು ಮಹಿಳೆಯರು ಆಗಮಿಸಿದ್ದರು

ಸಂಜೆ ೬-೪೫ ಗಂಟೆಗೆ ಶ್ರೀ ರಾಜಾಜಿಯವರು ಪ್ರಭೃತಿಗಳೊಡನೆ ಬೃಂದಾವನಕ್ಕೆ ಭೇಟಿಯಿತ್ತು ರಾತ್ರಿ ೮-೩೦ ಗಂಟೆಗೆ ಹಿಂತಿರುಗಿದರು. ಬೃಂದಾವನದ ಸೊಬಗನ್ನು ಕಂಡು ಅದು ಗಂಧರ್ವ ಲೋಕವೆಂದು ರಾಜಾಜಿಯವರು ಹೇಳಿದರು.

ಬಸ್ಸಿನ ಅಪಘಾತದಿಂದ ಇಬ್ಬರು ಸ್ವಯಂ ಸೇವಕರ ಮರಣ

ಸ್ವಂ ಸು ವರದಿಗಾರ] ಬೆಂಗಳೂರು ೨೦

ಕಾಂಗ್ರೆಸ್ ಸೇವಾದಳದ ಸ್ವಯಂಸೇವಕರನ್ನೊಳಗೊಂಡ ಬಸ್ಸು ಒಂದನ್ನು ತುಮಕೂರಿನ ಕಡೆಯಿಂದ ನಿನ್ನೆ ಸಂಜೆ ಬರುತ್ತಿದ್ದಾಗ, ಗವಿಪುರದಲ್ಲಿ ಅಕಸ್ಮಾತ್ ಮರಕ್ಕೆ ಡಿಕ್ಕಿ ಹೊಡೆದು, ಇಬ್ಬರು ಸ್ವಯಂಸೇವಕರು ಮರಣ ಹೊಂದಿದರೆಂದೂ, ೮ ಜನಗಳಿಗೆ ತೀವ್ರ ಗಾಯಗಳಾದುವೆಂದೂ ವರದಿಯಾಗಿದೆ.

ಬಿ. ಜಿ ಆರ್. ನಾಯ್ಡುರವರ ನಿಧನ

ಮೈಸೂರು ರೈಲ್ವೆಯ ಬೆಂಗಳೂರು ಜಿಲ್ಲಾ ಟ್ರಾಫಿಕ್ ಸೂ|| ರಾದ ಶ್ರೀ ಬಿ ಜಿ ಆರ್. ನಾಯ್ಡುರವರು ನಿನ್ನೆ ಮಧ್ಯಾಹ್ನ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದಯ ವ್ಯಾಧಿಯಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೪೫ ವರ್ಷ ವಯಸ್ಸಾಗಿತ್ತು.

ಕೇಸರಿ ದಿನ ಪತ್ರಿಕೆ

ಕಾರ್ಯನಿರತ ಸಂಪಾದಕ ವರ್ಗಕ್ಕೆ ಸೇರಿದ ಶ್ರೀ ಆರ್. ಎಸ್ ನಾರಾಯಣರವರು ಕಳೆದ ವರ್ಷ ವಾರಪತ್ರಿಕೆಯಾಗಿ ಹೊರಡಿಸಿದ "ಕೇಸರಿ" ಯನ್ನು ಮೊನ್ನೆಯಿಂದ ದಿನಪತ್ರಿಕೆಯಾಗಿ ನಡೆಸುತ್ತಾ ಇದ್ದಾರೆ. ಜಗತ್ತಿನ ಕಲ್ಯಾಣಕ್ಕೆ ಗಾಂಧೀಜಿಯವರ ತತ್ವಗಳೇ ಮುಖ್ಯ ಸಾಧನವೆಂದು ಅವರು ಪ್ರತಿಪಾದಿಸಿದ್ದಾರೆ. ನಿತ್ಯಯಕ್ಕೆ ಕೇವಲ ಎರಡುಪುಟದಿಂದ ಹೊರಬೀಳುತ್ತಿದೆ. ಬೆಲೆ ಕಾಲಾಣೆಮಾತ್ರ ಅಂತು, ನುರಿತ ಸೇವಕರಾದ ಶ್ರೀ ನಾರಾಯಣರವರ ನೇತೃತ್ವದಲ್ಲಿ ಈ ಪತ್ರಿಕೆಯು ಅತಿಶಯವಾದ ಯಾವಾದ ಯಶಸ್ಸನ್ನು ಗಳಿಸಿ ಚಿರ ಕಾಲ ಬಾಳಲೆಂದು ಹಾರೈಸುತ್ತೇವೆ.

ಈ ದಿನ ಸಾರ್ವಜನಿಕ ರಜಾ

ಭಾರತ ಗೌರ್ನರ್ ಜನರಲ್ಲರಾದ ಶ್ರೀ ರಾಜಗೋಪಾಲಾಚಾರಿಯವರ ಭೇಟಿಯ ಗೌರವಾರ್ಥವಾಗಿ ಈ ದಿನ ಸಂಸ್ಥಾನದಲ್ಲಿ ರಜಾ ದಿನವೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

OPERA TALKIES
Daily 3 Shows
From 21—8—48
THE OUTLAW
—:With:—
Jane Russell

Morning Shows
From 20—8—48
This is the Army
(In Technicolor)

20—8—48ನೇ ಶುಕ್ರವಾರದಿಂದ
ಯಶಸ್ವಿಯಾದ 3 ನೇ ವಾರ
ಸಿಲ್ವರ್ ಫಿಲಂಸ್‌ರವರ
★ ದೇವರ್
ಪಾತ್ರ:—ಯಾಕೂಬ್, ಕುಮಾರ್, ಮಾಯಾದೇವಿ ಮತ್ತಿತರರು
ಒಲಂಪಿಯಾ ಟಾಕೀಸ್

:: ಪ್ರ ಭಾ ::
20—8—48 ರಿಂದ :: ಅನೋಘ 3 ನೆ ವಾರ
ದಿನವೂ ಎರಡು ಆಟಗಳು
ಬಾಂಬೆ ಟಾಕೀಸಿನವರ ಸಾಹಸ ಚಿತ್ರ
★ ಮಜ್‌ಬೂರ್ ★
[ಹಿಂದಿ]
* ಮುನವರ್ ಸುಲ್ತಾನ್ * ಶ್ಯಾಮ್ * ಇಂದು * ಸೋಹನ್‌ಲಾಲ್

CHAMUNDESWARI TALKIES
Morning Shows at 10-30 a m
From 20th to 23rd August
UNIVERSAL's
The Time of Their Lives
Featuring the favourite Comedy team
Budd Abbott & Lou Costello
They bring you New Comedy Thrills that are screamingly Funny

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಆಟಗಳು
ತಾ|| 20-8-48 ರಿಂದ :: ತಾ|| 2-9-48 ರ ವರೆಗೆ
ಪ್ಯಾರಮೌಂಟ್ಸ್‌ರವರ ಅನೋಘ ಚಿತ್ರಗಳು
ತಾ|| 20-8-48 ರಿಂದ 3 ದಿನಗಳು ಮಾತ್ರ
"PERILS OF PAULINE"
ಪೆರಿಲ್ಸ್ ಆಫ್ ಪಾಲಿನ್
(ವರ್ಣರಂಜಿತ ಚಿತ್ರ)
ತಾ|| 23-8-48 ರಿಂದ 2 ದಿನಗಳು ಮಾತ್ರ
GOLDEN EAR-RINGS
ಗೋಲ್ಡನ್ ಇಯರ್ ರಿಂಗ್ಸ್
ತಾ|| 25-8-48 ರಿಂದ 2 ದಿನಗಳು ಮಾತ್ರ
DESERT FURY
ಡೆಸರ್ಟ್ ಫ್ಯೂರಿ (ವರ್ಣರಂಜಿತ ಚಿತ್ರ)
ತಾ|| 27-8-48 ರಿಂದ 1 ವಾರ ಮಾತ್ರ
Cecil B De Mille ರವರ ಅನೋಘ ವರ್ಣರಂಜಿತ ಚಿತ್ರ
UNCONQUERED
ಅನ್‌ಕಾನ್‌ಕರ್ಡ್

ಶ್ರೀ ...ಜೇಶ್ ಟಾಕೀಸ್
20-8-48 ರಿಂದ
ಎರಡನೇ ವಾರ
ಪ್ರತಿ ದಿನ 2 ಆಟಗಳು
ವಾಹಿನಿಯವರ
ಸ್ವರ್ಗಸೀಮ
[ತೆಲುಗು]
—:ತಾರಾಗಣ:—
* ಜಯಮ್ಮ * ನಾಗಯ್ಯ
* ಭಾನುಮತಿ *

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು

ಈ ಬ್ಯಾಂಕಿನ ಜನರಲ್ ಬಾಡಿ ಮೀಟಿಂಗು ಇದೇ ಮಾಹೆ ೨೨ ನೇ ತಾರೀಖು ಭಾನುವಾರ ಮಧ್ಯಾಹ್ನ ೩-೩೦ ಗಂಟೆಗೆ ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುವುದು. ಸದಸ್ಯರುಗಳೆಲ್ಲರೂ ದಯಮಾಡಿ ಬರಬೇಕಾಗಿ ಕೋರಲಾಗಿದೆ

ಬಿ. ವಿ. ನಂಜುಂಡಯ್ಯ
ಮೈಸೂರು ಗೌ|| ಕಾರ್ಯದರ್ಶಿ
೨೦-೮-೪೮

ಮೈಸೂರು ಚಾಮರಾಜ ಮೊಹಲ್ಲಾ ಚೆ... ಗೇರಿಯಲ್ಲಿರುವ ಡೋರು ನಂ ೫೨೬ ನೆ... ಮನೆ ವ್ಯಾಜ್ಯದ ಪ್ರೈಸಲಾತಿ

ಮೈಸೂರು ಒಂದನೇ ಮುನ್ಸೀಫರ ಕೋರ್ಟಿನಲ್ಲಿ

O. S. No 450 of 47—48

ವಾದಿ:—ಚಿಲ್ಲರೆ ಅಂಗಡಿ ಚನ್ನಯ್ಯ

Vs

ಪ್ರತಿ ವಾದಿಗಳು:— ೧) ಚನ್ನಯ್ಯ-ವ... ನರ್ ಬೈ ಗಾರ್ಡಿಯನ್ ೨ ನೇ ಪ್ರತಿವಾದಿ ೨) ಮೈಸೂರು ಪ್ಯಾಲೇಸು ಎಸ್ಟೇಟ್ ಶಾಖಾ ದಫೇದಾರ್ ಚನ್ನಯ್ಯ, ೩) ಮೈಸೂರು ಪ್ಯಾಲೇಸ್ ಆಸ್ಪತ್ರೆಯಲ್ಲಿ ಕೆಲಸದಲ್ಲಿರುವ ರಾಮಮ್ಮ, ೪) ಹೊನ್ನಮ್ಮ, ... ಸಿದ್ದಯ್ಯ. ೬) ಪುಟ್ಟನಂಜ, ೭) ನಂ... ಮ್ಮ ಫೈಸಲ್ ತಾರೀಖು ೩-೮-೧೯೪೮

ಮೇಲ್ಕಂಡ ನಂಬರ್ ಕೇಸಿನಲ್ಲಿ ದಾವೆ ಷೆಡ್ಯೂಲ್ ಸ್ವತ್ತು ವಾದಿಯ ಸ್ವಯಾರ್ಜಿತದಿಂದ ಗಳಿಸಿದ ಆಸ್ತಿಯಾಗಿ ವಾದಿಯು ಸಂಪೂರ್ಣ ಹಕ್ಕುಬಾಧ್ಯತೆಗಳಿಗೆ ಒಳಪಟ್ಟಿರುತ್ತೆ. ವಾದಿಯೇ ಸಂಪೂರ್ಣ ಮಾಲೀಕನಾಗಿರುತ್ತಾನೆಂದು ಕೋರ್ಟಿನವರು ಡಿಕ್ಲೇರ್ ಮಾಡಬೇಕೆಂದೂ, ಡಿಕ್ರೀ ಸ್ವತ್ತಿನಲ್ಲಿ ಪ್ರತಿವಾದಿಗಳಾರೂ ಪ್ರವೇಶ ಮಾಡಕೂಡದೆಂಬ ಒಗ್ಗೆ ಶಾಶ್ವತವಾದ ಇಂಜಕ್ಷನ್ ಪರಿಹಾರವನ್ನು ಕೊಡಿಸಿಕೊಡಬೇಕೆಂದೂ ಮತ್ತು ಕೋರ್ಟ್ ಖರ್ಚು ಪರಿಹಾರಗಳನ್ನು ಪ್ರತಿವಾದಿಗಳಿಂದ ವಾದಿಯು ಹೊಂದುವಂತೆಯೂ ಸಹಾ ವಾ... ಯು ಪ್ರತಿವಾದಿಗಳ ಮೇಲೆ ದಾವಾ ದಾಖಲ್ಮಾಡಿದ್ದರಲ್ಲಿ ದಾವಾ ಪ್ರಕಾರ ವಾದಿವಾಗಿ ೩-೮-೧೯೪೮ ರಲ್ಲಿ ಡಿಕ್ರಿ ಆಗಿರುತ್ತೆ.

Edited printed and published by A. N. Nagaraju at the Sadhvi Press ... Subbaiah Road Mysore

ಶೋ।ಕಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೨೧-೮-೪೮ [ಸಂಚಿಕೆ ೩೦

ನಿಜಾಮರ ಸಹಾಯಕ್ಕೆ ಈಜಿಪ್ಟ್ ಬಾಂಬರು

ಮುಷ್ಕರ ಹೂಡುವವರು ದ್ರೋಹಿಗಳು

ವಿದ್ಯಾರ್ಥಿಗಳ ಸಭೆಯಲ್ಲಿ ರಾಜಾಜಿಯವರ ಭಾಷಣ

ಸ್ವಂ. ಸು. ಫೋ।] ಬೆಂಗಳೂರು ೨೧

ನಿನ್ನೆ ಮಧ್ಯಾಹ್ನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಕುರಿತು ಗೌರ್ನರ್ ಜನರಲ್ ರಾಜಾಜಿಯವರು ಈ ರೀತಿಯಾಗಿ ಭಾಷಣ ಮಾಡಿದರು :—

ಇನ್ನು ಮುಂದೆ ಯಾವ ಮುಷ್ಕರಗಳಿಗೂ ಅವಕಾಶವಿಲ್ಲ. ಮುಷ್ಕರ ಹೂಡುವವರು ದ್ರೋಹಿಗಳೇ ಸರಿ. ಶ್ರೇಣಿಯಿಂದಲೂ ವಿಚಾರ್ಯವಿನಯದಿಂದಲೂ ಕಾರ್ಯಸಾಧನೆ ಮಾಡಬೇಕು. ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಗಳಿಸಬೇಕು. ಹೀಗೆ ಮಾಡುವುದರಿಂದಲೇ ಭಾರತಮಾತೆಗೆ ಸೇವೆ ಸಲ್ಲಿಸಿದಂತಾಗುವುದು. ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನವನ್ನು ಪಡೆದು ದೇಶಕ್ಕೆ ಗೌರವ ತರಲೆಂದು ಹಾರೈಸೋಣ.

ನಿನ್ನೆ ಸಂಜೆ ಬೆಂಗಳೂರು ಅರಮನೆಯಲ್ಲಿ ದಿವಾನರು ರಾಜಾಜಿಯವರ ಗೌರವಾರ್ಥವಾಗಿ ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಸುಮಾರು ೬೦೦ ಜನ ಅತಿಥಿಗಳು ಭಾಗವಹಿಸಿದ್ದರು.

ಅವರು ಹಿಂದೂಸ್ಥಾನ್ ವಿಮಾನ ಕಾರ್ಖಾನೆಗೂ ಭೇಟಿಕೊಟ್ಟು ಸುಮಾರು ೧॥ ಗಂಟೆ ಕಾಲ ಅಲ್ಲಿನ ಕಾರ್ಯಕಲಾಪಗಳನ್ನು ಪರಿಶೀಲಿಸಿದರು.

ಜಯನಗರದ ಬಡಾವಣೆಯ ಆರಂಭೋತ್ಸವವನ್ನು ನೆರವೇರಿಸುತ್ತಾ ಈ ನಗರವು ಬಡತನದ ನಿವಾರಣೆಗೂ ದೀನಜನರ ಸೇವೆಗೂ ಮಾದರಿಯಾಗಲೆಂದು ರಾಜಾಜಿಯವರು ಹಾರೈಸಿದರು.

ಲಾಲ್‌ಬಾಗಿನಲ್ಲಿ ಜನರ ಕೋಲಾಹಲವನ್ನು ನೋಡಿ ಅವರು ತಮ್ಮಂಥಹ ಒಬ್ಬ ಸಣ್ಣ ವ್ಯಕ್ತಿಯನ್ನು ನೋಡಲು ಜನರು ಹೀಗೆ ಏಕೆ ಗಲಭೆ ಮಾಡಬೇಕೋ ತಿಳಿಯದೆಂದೂ ಗಾಂಧೀಜಿಯವರು ಹೇಳಿಕೊಟ್ಟಿರುವಂತೆ ವಿಶಾಲವಾಗಿರುವ ಭಾರತಮಾತೆಯನ್ನು ಕಾಣಲು ಎಲ್ಲರೂ ಕಲಿಯಬೇಕೆಂದೂ ಹೇಳಿದರು. ಕೇವಲ ಸ್ವಾತಂತ್ರ್ಯವನ್ನು ಸಂಪಾದಿಸಿದ್ದೇ ಸಾಲದೆಂದೂ ಅದನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂದೂ ರಾಜಾಜಿಯವರು ತಿಳಿಸಿದರು. ಭರತಖಂಡವನ್ನು ಆಳುವುದಕ್ಕಿಂತಲೂ ಸುಲಭವಾದ ಕಾರ್ಯವು ಬೇರೊಂದಿಲ್ಲ. ಏಕೆಂದರೆ ಪ್ರಾಚೀನ ಕಾಲದಿಂದಲೂ ನಾವು ರಾಜಭಕ್ತಿ, ದೇಶಭಕ್ತಿ ಮತ್ತು ಶಿಸ್ತು ಸಮ್ಯಮಗಳಲ್ಲೇ ಬೆಳೆದು ಬಂದಿದ್ದೇವೆ—ಎಂದು ಸಹ ಅವರು ತಿಳಿಸಿದರು.

ಈ ದಿನ ಬೆಳಗ್ಗೆ ರಾಜಾಜಿಯವರು ಕೆಳಗೆ ಕಂಡವರಿಗೆ ಭೇಟಿಯನ್ನು ದಯಪಾಲಿಸಿದ್ದರು:— ಸರ್ ಮಿರ್ಜಾ ಇಸ್ಮಾಯಿಲ್, ರಾಜಸೇವಾ ಪ್ರಸಕ್ತ ಎ. ಆರ್. ವಾಡಿಯಾ, ಕರ್ಣಾಟಕ ಏಕೀಕರಣ ಸಮಿತಿಯ ಪರವಾಗಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳ, ಶ್ರೀಗಳಾದ ಜಿ. ರಾಮಚಂದ್ರಂ ಐ.ಸಿ.ಎಸ್., ಟಿ. ಟಿ. ಶರ್ಮ, ಹೆಚ್. ಆರ್. ಗುರುವಾರೆಡ್ಡಿ, ಓ. ವೀರಬಸಪ್ಪ, ಆರ್. ವೆಂಕಟರಾಯರು, ಎಂ. ಲಕ್ಷ್ಮೀನರಸು, ನರಸಿಂಹಾಚಾರ್ಯರು ಮತ್ತು ಶ್ರೀಮತಿ ಚನ್ನಮ್ಮ ನಂಜಪ್ಪನವರು.

ವಸ್ತುಪ್ರದರ್ಶನ

ದಸರಾ ವಸ್ತು ಪ್ರದರ್ಶನಾಲಯದಲ್ಲಿ ಏರ್ಪಡಿಸಿರುವ ಕೈಗಾರಿಕೆ ಮತ್ತು ಕುಶಲ ಕಲೆಗಳ ವಿಶೇಷ ಪ್ರದರ್ಶನವು ನಾಳೆಯವರೆಗೂ ನಡೆಯುತ್ತದೆ.

ಮಹಿಳೆಯರ ಸ್ಥಾನ ಮನೆಯಲ್ಲಿ

ಗೌರ್ನರ್ ಜನರಲ್ಲರ ಹಿತೋಪದೇಶ

ಸಂ. ಸು. ಫೋ।] ಬೆಂಗಳೂರು ೨೧

ಬೆಂಗಳೂರಿನ ಮಹಿಳೆಯರ ಪರವಾಗಿ ನಿನ್ನೆ ಮಧ್ಯಾಹ್ನ ಲಾಲ್ ಬಾಗಿನಲ್ಲಿ ರಾಜಾಜಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಶ್ರೀಮತಿ ಕಮಲಮ್ಮ ದಾಸಪ್ಪನವರು ಬಿನ್ನವತ್ತಳೆಯನ್ನು ಓದಿ ವಜ್ರ ವೈಡೂರ್ಯ ಮತ್ತು ಮುತ್ತಿನಿಂದ ಖಚಿತವಾದ ಅಶೋಕ ಚಕ್ರವೊಂದನ್ನು ಗೌರ್ನರ್ ಜನರಲ್ಲರಿಗೆ ಅರ್ಪಿಸಿದರು. ರಾಜಾಜಿಯವರು ಈ ರೀತಿ ಭಾಷಣ ಮಾಡಿದರು :—

ಮಹಿಳೆಯರ ನಿಜವಾದ ಸ್ಥಾನ ಮನೆಯಲ್ಲಿ. ಮುಂದಿನ ಪ್ರಜೆಗಳಾಗುವ ಮಕ್ಕಳನ್ನು ಸಾಕಿ ಸಲಹಿ ರಾಷ್ಟ್ರದ ಅಸ್ತಿಭಾರ ಹಾಕಲು ಅವರೇ ಕಾರಣಕರ್ತರು. ಗಂಡಸರು ಸ್ವಾಭಾವಿಕವಾಗಿ ಜಗಳಗಂಟರು. ಹೆಂಗಸರು ತಮ್ಮ ಗಂಡಂದಿರ ವಿಷಯದಲ್ಲಿ ದಯೆಯಿಂದ ವರ್ತಿಸಬೇಕು. ಗಂಡಸರ ಬದಲು ಹೆಂಗಸರೇ ಆಡಳಿತ ಸೂತ್ರವನ್ನು ವಹಿಸಿದರೆ ಇಂದಿನ ಅನೇಕ ವ್ಯಾಜ್ಯ ವ್ಯವಹಾರಗಳು ಪರಿಹಾರವಾಗುವುವು. ರಾಷ್ಟ್ರದ ಆರೋಗ್ಯವು ಮಹಿಳೆಯರಿಂದಲೇ [illegible]. ನಾನು ಪುನಃ ಜನ್ಮವೆತ್ತುವುದಾದರೆ ಹೆಂಗಸಾಗಿ ಹುಟ್ಟಿ ಉತ್ತಮವಾದ ಮಕ್ಕಳನ್ನು ಹೆತ್ತು ಸಾಕಿ ಸಲಹಲು ಬಯಸುತ್ತೇನೆ. ನನ್ನ ಗೌರ್ನರ್ ಜನರಲ್‌ಗಿರಿಯು ಯಶಸ್ವಿಯಾಗುವಂತೆ ಮಹಿಳೆಯರೆಲ್ಲರೂ ಆಶೀರ್ವದಿಸಬೇಕೆಂದು ಬೇಡುತ್ತೇನೆ.

ಹೈದರಾಬಾದ್ ಪ್ರಶ್ನೆಗೆ ಸಿರಿಯಾದ ಬೆಂಬಲ

ವಿಶ್ವ ಭದ್ರತಾ ಸಮಿತಿಯ ಮುಂದೆ ಹೈದರಾಬಾದಿನ ಪ್ರಶ್ನೆಯನ್ನು ನಿಜಾಮರ ಪರವಾಗಿ ಸಿರಿಯಾ ರಾಷ್ಟ್ರವು ತರುವುದೆಂದೂ, ಈ ಬಗ್ಗೆ ಮುಸ್ಲಿಂ ರಾಷ್ಟ್ರಗಳ ಬೆಂಬಲ ಮತ್ತು ಒಪ್ಪಿಗೆಯನ್ನು ನಿಜಾಮರು ಪಡೆದಿರುವರೆಂದೂ ಹೇಳಲಾಗಿದೆ.

ಪ್ರಚಾರೋಪನ್ಯಾಸ

ಶಿವಮೊಗ್ಗದ ಕರ್ಣಾಟಕ ಸಂಘದ ಆಶ್ರಯದಲ್ಲಿ ಪತ್ರಿಕೆಗಳು ಮತ್ತು ಸಾರ್ವಜನಿಕ ಅಭಿಪ್ರಾಯ ಎಂಬ ವಿಷಯದ ಮೇಲೆ ಕಾಯಿನಾಡು ಪ್ರತಿನಿಧಿಗಳೂ, ಸೆನೆಟ್ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳ ಸದಸ್ಯರೂ ಆದ ಶ್ರೀ ಎಸ್. ಶ್ರೀನಿವಾಸಮೂರ್ತಿಯವರು ನಾಳಿದ್ದು ಸಂಜೆ ೬ ಗಂಟೆಗೆ ಉಪನ್ಯಾಸ ಮಾಡುವರು.

ಗೌರ್ನರ್ ಜನರಲ್‌ರೊಡನೆ ಭೇಟಿ

ಸಂ. ಸು. ಫೋ।] ಬೆಂಗಳೂರು ೨೧

ಶ್ರೀಗಳಾದ ಕೆ. ಶಾಮರಾಜ ಅಯ್ಯಂಗಾರ್, ಧರ್ಮಪ್ರಕಾಶ್ ಎಸ್. ಎಸ್. ವೆಂಕಟರಾವ್, ಜಿ. ಎಸ್. ದೇಪದಾಸ್, ಹೆಚ್. ಸಿ. ದಾಸಪ್ಪ, ಗೌರ್ಮೆಂಟ್ ಮೊಹರ್ರಿ ಶ್ರೀಮತಿ ಲಕ್ಷ್ಮೀ ಕೃಷ್ಣಪ್ಪ, ಎಂ. ಸಿ. ಲಿಂಗೇಗೌಡ, ಜನಾಬ್ ಎಸ್. ಎ. ಎಂ. ರಜ್ವಿ, ಸೈಯದ್ ಅಬ್ದುಲ್ ರಹಿಮಾನ್, ಎ. ಜಿ. ಖಲೀಲ್ ಮತ್ತು ಅಬ್ದುಲ್ ಗಫಾರ್ ಖಾನ್ ಅವರುಗಳು ಗೌರ್ನರ್ ಜನರಲ್ ಶ್ರೀ ರಾಜಾಜಿಯವರನ್ನು ನಿನ್ನೆ ಭೇಟಿಯನ್ನು ಕೊಟ್ಟಿದ್ದರು.

ಭದ್ರತಾ ಸಮಿತಿಗೆ ಹೋಗಲು ನಿಜಾಮರಿಗೆ ಅಧಿಕಾರವಿಲ್ಲ

ಹೈದರಾಬಾದಿನ ಸಮಸ್ಯೆಯು ಕೇವಲ ಭಾರತದ ಒಳಾಡಳಿತಕ್ಕೆ ಸಂಬಂಧಪಟ್ಟಿರುವುದರಿಂದಲೂ ಮತ್ತು ಸ್ಟಾಂಡ್‌ಸ್ಟಿಲ್ ಒಪ್ಪಂದದ ಪ್ರಕಾರ, ಹೈದರಾಬಾದಿಗೆ ಯಾವ ಅಂತರರಾಷ್ಟ್ರೀಯ ಅಂತಸ್ತೂ ಇಲ್ಲವಾದುದರಿಂದಲೂ ಅಲ್ಲಿನ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ತರಲು ಹೈದರಾಬಾದಿಗೆ ಯಾವ ಅಧಿಕಾರವೂ ಇಲ್ಲವೆಂದೂ ಮತ್ತು ಅದು ಅಕ್ರಮವೆಂದೂ ದೆಹಲಿಯ ಅಧಿಕೃತ ವರ್ತುಲದಲ್ಲಿ ಹೇಳಲಾಗಿದೆ.

ಹೈದರಾಬಾದಿಗೆ ಈಜಿಪ್ಟಿನ ಬಾಂಬರುಗಳು

ಭಾರತದ ಮಧ್ಯಸ್ಥಿಕೆಯನ್ನು ಎದುರಿಸಲು ಹೈದರಾಬಾದಿಗೆ ಎರಡು ಬಾಂಬರು ಪಡೆಗಳನ್ನು ಕೊಡುವುದಾಗಿ ಈಜಿಪ್ಟಿನ ಸರ್ಕಾರವು ತಿಳಿಸಿದೆಯೆಂದೂ, ಅವನ್ನು ನಿಜಾಮರು ಅಂಗೀಕರಿಸಿಲ್ಲವೆಂದೂ ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ.

ದೋಣಿಯೊಳಕ್ಕೆ ಹಾವು ನುಗ್ಗಿ ೨೩ ಜನರ ಮರಣ

ತಿರುಚನಾಪಳ್ಳಿಯ ಬಳಿ ಪಟ್ಟವಳ್ಳಿ ಹತ್ತಿರ ಕಾವೇರಿ ನದಿಯಲ್ಲಿ ಕಳೆದ ೧೬ ನೇ ತಾ॥ ೩೪ ಜನರು ದೋಣಿಯಲ್ಲಿ ದಾಟುತ್ತಿದ್ದಾಗ, ಪ್ರವಾಹದಿಂದ ಸರ್ಪವೊಂದು ದೋಣಿಯೊಳಕ್ಕೆ ಬಂದಿತೆಂದೂ, ಅದರಿಂದ ಜನರು ಗಾಬರಿಗೊಂಡು ಒಂದು ಕಡೆಗೆ ಸರಿದಾಗ, ದೋಣಿಯು [illegible] ನೀರೊಳಗೆ ಮುಳುಗಿತೆಂದೂ, ಇದರಿಂದ ೨೩ ಜನ ಮುಳುಗಿ ಹೋಗಿ ಉಳಿದವರು ಈಜಿ ದಡಕ್ಕೆ ಬಂದರೆಂದೂ ವರದಿಯಾಗಿದೆ.

ರಾಷ್ಟ್ರದ ಸೇವೆಗಾಗಿ ವೈಜ್ಞಾನಿಕರು ದುಡಿಯಬೇಕು

ಟಾಟಾ ಶಾಲೆಯ ವಿದ್ಯಾರ್ಥಿಗಳಿಗೆ ರಾಜಾಜಿಯ ಸಲಹೆ

ಸ್ವಂ. ಸು. ಫೋ।] ಬೆಂಗಳೂರು ೨೧

ಗೌರ್ನರ್ ಜನರಲ್ ಶ್ರೀ ರಾಜಗೋಪಾಲಾಚಾರಿಯವರು ಈ ದಿನ ಬೆಳಗ್ಗೆ ಟಾಟಾ ವಿಜ್ಞಾನ ಶಾಲೆಗೆ ಭೇಟಿ ಕೊಟ್ಟು, ಸುಮಾರು ೧॥ ಗಂಟೆ ಕಾಲ ಅಲ್ಲಿನ ಕೆಲವು ಕಾರ್ಯಾಗಾರಗಳನ್ನು ಪರಿಶೀಲಿಸಿದರು. ಅಲ್ಲಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ೧೫ ನಿಮಿಷಗಳ ಕಾಲ ಭಾಷಣ ಮಾಡಿದರು. ರಾಷ್ಟ್ರದ ಪ್ರಗತಿಗೆ ವಿಜ್ಞಾನವು ಅತ್ಯಗತ್ಯ. ವೈಜ್ಞಾನಿಕರು ತಮ್ಮ ಸಂಶೋಧನೆಯನ್ನು ದೇಶದ ಸೇವೆಗಾಗಿ ಉಪಯೋಗಿಸಬೇಕು. ೨೪ ಗಂಟೆಗಳ ಕಾಲವೂ ಸಂಶೋಧನೆಯಲ್ಲಿಯೇ ಕಾಲ ಕಳೆಯುವುದರಿಂದ ಉಪಯೋಗವಿಲ್ಲ. ಅದಕ್ಕೂ ಮಿತಿ ಇರಬೇಕು. ದೇಶದ ಉನ್ನತಿಗೆ ಯಾವುದು ಉಪಯೋಗವೋ ಅದಕ್ಕೆ ಹೆಚ್ಚು ಗಮನ ಕೊಡಬೇಕು—ಎಂದು ರಾಜಾಜಿಯವರು ತಿಳಿಸಿದರು.

ಅಲ್ಲಿಂದ ರಾಜಾಜಿಯವರು ನ್ಯಾಷನಲ್ ಹೈಸ್ಕೂಲು ಮತ್ತು ಸ್ಕೌಟ್ ಸಂಸ್ಥೆಯ ಕೇಂದ್ರಕ್ಕೆ ಭೇಟಿ ಕೊಟ್ಟರು. ಅನಂತರ ಕರ್ಣಾಟಕ ಸಾಹಿತ್ಯ ಮಂದಿರದಲ್ಲಿ ಮಹಾತ್ಮ ಗಾಂಧೀಜಿಯವರ ಭಾವಚಿತ್ರವನ್ನು ಅವರು ಅನಾವರಣ ಮಾಡಿದರು. ಅಧ್ಯಕ್ಷರಾದ ಶ್ರೀ ಟಿ. ಟಿ. ಶರ್ಮರವರು ಸ್ವಾಗತವನ್ನು ನೀಡಿದರು.

ರಾಜಾಜಿಯವರು ಭಾಷಣದಲ್ಲಿ, ಕೇವಲ ಮಹಾತ್ಮರ ಚಿತ್ರಗಳನ್ನು ಗೋಡೆಗೆ ತೂಗುಹಾಕುವುದರಿಂದ ಪ್ರಯೋಜನವಿಲ್ಲವೆಂದೂ, ಅವರ ಗುಣಗಳನ್ನು ಜನರು ಅನುಸರಿಸಬೇಕು, ಮಹಾತ್ಮರ ತತ್ವಗಳನ್ನು ಪಾಲಿಸುವ [illegible], ನೇತಾಜಿ, [illegible] ಎಂದೂ ತಿಳಿಸಿದರು. ಕನ್ನಡ ಭಾಷೆಯ ವಿಷಯವನ್ನು ಪ್ರಸ್ತಾಪಿಸುತ್ತಾ ಅದರ ಬೆಳವಣಿಗೆಯನ್ನು [illegible] ಬಡಬೇಕೆಂದೂ, ಅದನ್ನು ದೇವರು ನೋಡಿಕೊಳ್ಳುವನೆಂದೂ ಹೇಳಿದರು.

ಮಧ್ಯಾಹ್ನ ೩-೪೫ ಗಂಟೆಗೆ ಗೌರ್ನರ್ ಜನರಲ್ಲರು ದೆಹಲಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

ಬರೋಡಾ ಬಿಕ್ಕಟ್ಟು ಬಗೆಹರಿಯುವುದು

ಬರೋಡಾ ಬಿಕ್ಕಟ್ಟು ಈ ವಾರದ ಅಂತ್ಯದೊಳಗಾಗಿ ಬಗೆ ಹರಿಯಬಹುದೆಂದು ಹೇಳಲಾಗಿದೆ. ಅಲ್ಲಿನ ಮಹಾರಾಜರವರು ದೆಹಲಿಯಲ್ಲಿ ಸರ್ದಾರ್ ಪಟೇಲರನ್ನು ಕಂಡು ಮಾತುಕತೆ ನಡೆಸಿದನಂತರ ಬರೋಡಕ್ಕೆ ತೆರಳಿ ಅಲ್ಲಿ ಸಂಪೂರ್ಣವಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಬಗ್ಗೆ ಘೋಷಣೆ ಹೊರಡಿಸುವರೆಂದೂ, ಮತ್ತು ತಾತ್ಕಾಲಿಕ ಪ್ರಜಾ ಸರ್ಕಾರವನ್ನು ನಿರ್ಮಿಸಲಿರುವರೆಂದೂ ಹೇಳಲಾಗಿದೆ.

ಅಖಿಲಕರ್ಣಾಟಕದ ಸಮ್ಮೇಳನ

ರಾಜಧಾನಿಯ ಇಟ್ಟಿಗೆಗೂಡು ಮೈದಾನದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ಅಖಿಲ ಕರ್ಣಾಟಕ [illegible] ಸಮ್ಮೇಳನವು ಶ್ರೀ [illegible] ಅಧ್ಯಕ್ಷತೆಯಲ್ಲಿ ನಡೆಯುವುದು.

ನಿಧನ

ಆರ್. ಸಿ. ಶ್ರೀ ಮಾಗಡಿ ರಾಮಚಂದ್ರಪ್ಪ [illegible] ನಿನ್ನೆ ದಿನ ಸಂಜೆ ೭ ಗಂಟೆಗೆ ತಮ್ಮ [illegible] ಕಾಯಿಲೆಯಿಂದ [illegible] ಎಂದು ತಿಳಿಸಿದೆ. [illegible] ಜನ ಗಂಡು ಮಕ್ಕಳು [illegible]

ಸಂತಾಪ ಸೂಚಕ ಸಭೆ

ಮೈಸೂರು ಆಯುರ್ವೇದ ವೈದ್ಯ ಸಂಘದ ಅಧ್ಯಕ್ಷರೂ ಮುಖ್ಯ ಬೆಂಗಳೂರಿನ ಸುಪ್ರಸಿದ್ಧ ವೈದ್ಯರೂ ಆಗಿದ್ದ ಆ|| ವಿ|| ಬಿ. ಎ. ಕೃಷ್ಣಶಾಸ್ತ್ರಿಗಳ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲು ನಾಳೆ ಸಂಜೆ ೬-೩೦ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಆ|| ಮಹಾ ವಿದ್ವಾನ್ ಶ್ರೀ ವೈ. ಚಂದ್ರಶೇಖರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು

ಡೈರೆಕ್ಟರುಗಳ ಚುನಾವಣೆ

22—8—1948

ಸ್ಥಳ — ಬನುಮಯ್ಯನವರ ಹೈಸ್ಕೂಲು

ಮಧ್ಯಾಹ್ನ 3 ರಿಂದ 7 ರ ವರೆಗೆ

23

ಜಿ.ಆರ್.ಶಾಮರಾವ್

ಬಾರ್ ಅಸೋಸಿಯೇಷನ್, ಮೈಸೂರು.

ಇವರಿಗೆ ನಿಮ್ಮ ಧನವಾದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಹರಿಕಥೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ಗಣಪತಿ ದೇವಸ್ಥಾನದಲ್ಲಿ ನಾಳೆಯಿಂದ ಪ್ರತಿದಿನ ಸಂಜೆ ೬-೩೦ ಗಂಟೆಗೆ ವಿದ್ವಾನ್ ಹೆಚ್. ಟಿ ಶಾಮಣ್ಣನವರಿಂದ ಮಹಾಭಾರತ ಹರಿಕಥಾ ಶ್ರವಣವು ನಡೆಯುವುದು

ಈ ಸುಬ್ಬರಾಯನಕೆರೆಯಲ್ಲಿರುವ ಶ್ರೀ ಬ್ರಹ್ಮಾನಂದ ಔಷಧಾಲಯದ ಮುಂಭಾಗದಲ್ಲಿ ಈ ಸಂಜೆ ೭ ಗಂಟೆಗೆ ಮುಳುಬಾಗಿಲು ಶ್ರೀ ನಾರಾಯಣ ದಾಸರವರಿಂದ ತ್ಯಾಗಾಗ್ರಣಿ ಕರ್ಣ ಎಂಬ ಹರಿಕಥೆಯು ನಡೆಯುವುದು

ನೇತಾಜಿ ಸಂಘ

ರಾಜಧಾನಿಯ ನೇತಾಜಿ ಸಂಘದ ಸಾಮಾನ್ಯ ಸದಸ್ಯರುಗಳ ಸಭೆಯು ನಾಳೆ ಬೆಳಗ್ಗೆ ೧೦ ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ನಡೆಯುವುದು. ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

Edited printed and published by A. R. Nagarajan at the Sadhvi Press D Subbaiah Road Mysore

---

ರೈಲ್ವೆ ವರ್ಕ್‌ಷಾಪ್ ಕೆಲಸಗಾರರ ಬೇಡಿಕೆ

ಮೈಸೂರು ರೈಲ್ವೆ ವರ್ಕ್‌ಷಾಪಿನ ಕೆಲಸಗಾರರ ಸಭೆಯು ನಿನ್ನೆ ನಡೆದು ಶ್ರೀ ಬಿ. ಜಿ ಆರ್ ನಾಯ್ಡುರವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಗೌರ್ನರ್ ಜನರಲ್ಲರ ಗೌರವಾರ್ಥವಾಗಿ ಸಂಬಳ ಸಹಿತ ರಜಾ ಕೊಟ್ಟದ್ದಕೂ ಸಹ ಕವಗಿ ಮಾತ್ರ ಕೊಡದಿದ್ದುದರಿಂದ ಸೂಕ್ತವಾದ ಬೋನಸ್ಸನ್ನು ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು.

OPERA TALKIES

Daily 3 Shows

From 21—8—48

THE OUTLAW

— With:—

Jane Russell

Morning Shows

From 20—8—48

This is the Army

(In Technicolor)

CHAMUNDESWARI TALKIES

From Saturday the 21st August 1948

Daily 3 Shows

COLUMBIA'S

The Return of Monte Cris[to]

-:Featuring.-

Louis Hayward, Barbara Britton, George Macread[y] and others

None of you can afford [to] miss this picture.!

Evening Shows at

RAJKAMAL TALKI[ES]

Mysore

From 18—8—48

Daily 3 Shows

Pirates of Monter[ey]

(In Technicolour)

—:Starring:—

Maria Montez

Rod Cameron

It is an universal Thrilling Picture

Morning Shows

From 20—8—48

For 4 Days only

Kid Millions

—:Featuring:—

EDDIE CANTOR

20—8—48ನೇ

ಶುಕ್ರವಾರದಿಂದ

ಯಶಸ್ವಿಯಾದ 3 ನೇ ವಾರ

ಸಿಲ್ವರ್ ಫಿಲಂಸ್‌ರವರ

* ದೇವರ್ *

ಪಾತ್ರ—ಯಾಕೂಬ್, ಕುಮಾರ್, ಮಾಯಾದೇವಿ ಮುತ್ತಾದವರು

ಒಲಂಪಿಯಾ ಟಾಕೀಸ್

First Grade College Union

MYSORE

Kindly Elect--

H C VISWANATHAN

(Ex-Member, Managing Committee)

AS

The President of your Union

for the year 1948-49

Mysore City Municipality

(Works Department)

NOTIFICATION

Sealed tenders will be received upto 4 P M. on 28/8/48 by the Municipal Engineer for paving the Doddaballapur slabs in Devaraja market in front of 3rd Eastern gate. Each tender must be accompanied with a challan for having remitted Rs 118/= in the Municipal Treasury as an earnest money For full particulars please see the Office Notice Board

V. K. Mukundan,

Municipal Engineer

:: ಪ್ರಭಾ ::

20—8—48 ರಿಂದ :: ಅಮೋಘ 3 ನೆ ವಾರ

ದಿನವೂ ಎರಡು ಆಟಗಳು

ಬಾಂಬೆ ಟಾಕೀಸಿನವರ ಸಾಹಸ ಚಿತ್ರ

* ಮಜ್‌ಬೂರ್ *

[ಹಿಂದಿ]

* ಮುನವರ್ ಸುಲ್ತಾನ * ಶ್ಯಾಮ್ * ಇಂದು * ಸೋಹರ್‌ಲಾಲ್

CHAMUNDESWARI TALKIES

Morning Shows at 10-30 a m

From 20th to 23rd August

UNIVERSAL'S

The Time of Their Lives

Featuring the favourite Comedy team

Budd Abbott & Lou Costello

They bring you New Comedy Thrills that are screamingly Funny

ಶ್ರೀ ಗಾಯತ್ರಿ ಟಾಕೀಸ್

ಪ್ರತಿ ದಿನ ಮೂರು ಆಟಗಳು

ತಾ|| 20-8-48 ರಿಂದ :: ತಾ|| 2-9-48 ರ ವರೆಗೆ

ಪ್ಯಾರಮೌಂಟ್ಸ್‌ರವರ ಅಮೋಘ ಚಿತ್ರಗಳು

ತಾ|| 20-8-48 ರಿಂದ 3 ದಿನಗಳು ಮಾತ್ರ

"PERILS OF PAULINE"

ಪೆರಿಲ್ಸ್ ಆಫ್ ಪೌಲೀನ್

(ವರ್ಣರಂಜಿತ ಚಿತ್ರ)

ತಾ|| 23-8-48 ರಿಂದ 2 ದಿನಗಳು ಮಾತ್ರ

GOLDEN EAR-RINGS

ಗೋಲ್ಡನ್ ಇಯರ್ ರಿಂಗ್ಸ್

ತಾ|| 25-8-48 ರಿಂದ 2 ದಿನಗಳು ಮಾತ್ರ

DESERT FURY

ಡೆಸರ್ಟ್ ಫ್ಯೂರಿ (ವರ್ಣರಂಜಿತ ಚಿತ್ರ)

ತಾ|| 27-8-48 ರಿಂದ 1 ವಾರ ಮಾತ್ರ

Cecil B De Mills ರವರ ಅಮೋಘ ವರ್ಣರಂಜಿತ ಚಿತ್ರ

UNCONQUERED

ಅನ್‌ಕಾನ್‌ಕರ್ಡ್

ನಿಮ್ಮ ಮೈ ಮೊಕವಿಲ್ಲಿನ ಕ ಹೋಗಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಬೆಂಗಳೂರು

ಸಂಪುಟ ೧೩] ಭಾನುವಾರ ೨೨-೮-೪೮ [ಸಂಚಿಕೆ ೪

ಹೈದರಾಬಾದಿಗೆ ಇಟಲಿ ಬಂದೂಕಗಳು

ಟೆಲಿಫೋನ್ ಕಾರ್ಖಾನೆ

(ಸ್ವಂ ಸು ಪ್ರೋ) ಬೆಂಗಳೂರು ೨೨

ಕೃಷ್ಣರಾಜಪುರದಲ್ಲಿ ಭಾರತ ಸರ್ಕಾರದ ನರು ಸ್ಥಾಪಿಸಲಿರುವ ಟೆಲಿಫೋನ್ ಕಾರ್ಖಾನೆಯು ಇನ್ನು ನಾಲ್ಕು ತಿಂಗಳೊಳಗೆ ಕೆಲಸವನ್ನು ಆರಂಭಿಸಲಿದೆ. ಸಧ್ಯಕ್ಕೆ ಇಂಗ್ಲೆಂಡಿನಿಂದ ಹಲವು ಪದಾರ್ಥಗಳನ್ನು ತರಿಸಿ ಟೆಲಿಫೋನುಗಳನ್ನು ತಯಾರಿಸಲಾಗುವುದು. ಇನ್ನು ಮೂರು ವರ್ಷದೊಳಗೆ ಎಲ್ಲ ಸಾಮಗ್ರಿಗಳನ್ನೂ ಇಲ್ಲಿಯೇ ತಯಾರಿಸಲಾಗುವುದು. ಮೊದಲನೇ ಐದು ವರ್ಷಗಳಲ್ಲಿ ಆರು ಕೋಟಿ, ಅನಂತರ ಪ್ರತಿ ವರ್ಷವೂ ಎರಡೂವರೆ ಕೋಟಿ ರೂಪಾಯಿನ ಟೆಲಿಫೋನುಗಳನ್ನು ತಯಾರಿಸಲಾಗುವುದು.

ಭಾಷ್ಯಂರವರ ಆಗಮನ

ಅಮೇರಿಕಕ್ಕೆ ತೆರಳಿದ್ದ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ಮಧ್ಯಾಹ್ನ ೩-೪೦ಕ್ಕೆ ವಿಮಾನದಲ್ಲಿ ಹಿಂದಿರುಗಿದರು.

ಈಗಿನ ದುರ್ಘಟನೆಗಳು ಬರಲಿರುವ ಸುದಿನಗಳ ಚಿಹ್ನೆ

ಅರವಿಂದ ಘೋಷರ ಸಂದೇಶ

ಕಳೆದ ೧೫ ನೇ ತಾ|| ಶ್ರೀ ಅರವಿಂದ ಘೋಷರವರು ತಮ್ಮ ೭೬ ನೆಯ ವರ್ಧಂತ್ಯುತ್ಸವ ಹಾಗೂ ಭಾರತದ ಸ್ವಾತಂತ್ರ್ಯೋತ್ಸವಗಳ ಸಂದರ್ಭದಲ್ಲಿ ಪ್ರಜೆಗಳಿಗೆ ಈ ರೀತಿ ಸಂದೇಶವನ್ನು ನೀಡಿರುತ್ತಾರೆ.—

ಈಗಿನ ಕಷ್ಟ ಪರಿಸ್ಥಿತಿಯಿಂದ ಜನಗಳು ಗಾಬರಿಗೊಳ್ಳದೆ ಮುಂದೆ ಬರಲಿರುವ ನೂತನ ಪ್ರಪಂಚದ ನಿರ್ಮಾಣಕ್ಕೆ ಈ ರೀತಿ ಅನಾಹುತಗಳು ಸಂಭವಿಸುತ್ತಿವೆಯೆಂದು ತಿಳಿಯಬೇಕು. ಸಂಯೋಗದಯುಕ್ಕೆ ಮುಂಚೆ ಗಾಢಾಂಧಕಾರವು ಕವಿದಿರುವುದು ಹೇಗೆ ಸ್ವಾಭಾವಿಕವೋ ಆ ರೀತಿ ಉತ್ತಮವಾದ ವಿಶ್ವದ ಸ್ಥಾಪನೆಗೆ ಮುಂಚೆ ಈ ಅನಾಹುತ ಪ್ರಸಂಗಗಳು ಸಂಭವಿಸುತ್ತಿವೆ. ಆದ್ದರಿಂದ ಆಗಿಹೋದ ದುಷ್ಕೃತ್ಯಗಳಿಗಾಗಿ ಪರಿತಾಪ ಪಡೆದ ಧೈರ್ಯದಿಂದ ಎದುರಿಸಿ ನೂತನವಾಗಿ ಸ್ಥಾಪಿತವಾಗಲಿರುವ ಪ್ರಪಂಚಕ್ಕನುಗುಣವಾಗಿ ನಡೆದುಕೊಳ್ಳಲು ತಮ್ಮಲ್ಲಿಯೇ ಆತ್ಮ ವಿಶ್ವಾಸವನ್ನುಂಟುಮಾಡಿಕೊಳ್ಳಲು ಯತ್ನಿಸಬೇಕು.

ಆ ದಿನ ಪುದುಚೇರಿಯಲ್ಲಿ ೨೮೦೦ ಕ್ಕಿಂತಲೂ ಹೆಚ್ಚು ಜನಗಳಿಗೆ ಶ್ರೀ|| ಘೋಷರು ದರ್ಶನವಿತ್ತರು.

ಸ್ವಾಗತ ಸಮಾರಂಭ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಜಿ. ಜನಾರ್ಧನ ನಾಯ್ಡುರವರು ತಮ್ಮ ಸೋದರಳಿಯ ಚಿ|| ವಿಜಯರಂಗನಾಯ್ಡುರವರಿಗೆ ಚಿ|| ಸೌ|| ಜಿ.ಎಸ್.ಲಕ್ಷ್ಮೀ ದೇವಿಯವರನ್ನು ತಂದ ವಿವಾಹವನ್ನು ನೆರವೇರಿಸಿದ ಸಂಬಂಧದಲ್ಲಿ ಮೊನ್ನೆ ಲಕ್ಷ್ಮೀಪುರದ ರಂಗವಿಲಾಸದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಅನೇಕ ಜನ ಮಹನೀಯರೂ ಮಹಿಳೆಯರೂ, ದಯಮಾಡಿಸಿದ್ದರು. ನಂಜನಗೂಡಿನ ಶ್ರೀಮತಿ ನಾಗರತ್ನಮ್ಮನವರ ಸುಶ್ರಾವ್ಯವಾದ ಸಂಗೀತವು ನಡೆಯಿತು. ಪೌರಸಭಾಧ್ಯಕ್ಷರಾದ ಶ್ರೀ ಸೀತಾರಾಮಯ್ಯನವರು ಅತಿಥಿಗಳ ಪರವಾಗಿ ವಧೂವರರನ್ನು ಆಶೀರ್ವದಿಸಿ, ಶ್ರೀ ಮತಿ ನಾಗರತ್ನಮ್ಮನವರಿಗೆ ಬೆಳ್ಳಿಯ ಟ್ರೇ ಮತ್ತು ಊದುಗೋಳೆಯನ್ನು ಶ್ರೀ ನರಸಿಂಹನಾಯ್ಡುರವರ ಪರವಾಗಿ ಒಪ್ಪಿಸಿ ಸನ್ಮಾನ ಮಾಡಿದರು.

"ಇನ್ನೂ ಸರ್ಕಾರಕ್ಕೆ ತೊಂದರೆ ಕೊಡುತ್ತಿರುವಿರಾ"

ಅಗರಂ ರಂಗಯ್ಯನವರಿಗೆ ರಾಜಾಜಿಯವರ ಪ್ರಶ್ನೆ

ಮೈಸೂರು ೨೨

ಚಾಮುಂಡಿ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ಗೌರ್ನರ್ ಜನರಲ್ ರಾಜಾಜಿಯವರ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ದಿವಾನ್ ಹಾಗೂ ಪ್ರಧಾನಮಂತ್ರಿ ಕೆ ಸಿ ರೆಡ್ಡಿಯವರೂ ಅವರಿಗೆ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಅವುಗಳ ಪೈಕಿ ಅನೇಕರನ್ನು ತಾವು ಬಲ್ಲೆನೆಂದು ರಾಜಾಜಿಯವರು ಹೇಳಿದರು.

ಶ್ರೀ ಅಗರಂ ರಂಗಯ್ಯನವರು ಕುಳಿತಿದ್ದ ಸ್ಥಳಕ್ಕೆ ಬಂದಾಗ ಶ್ರೀ|| ರೆಡ್ಡಿಯವರು "ಇವರೇ ಅಗರಂ ರಂಗಯ್ಯನವರು, ಸಾಧ್ವಿ ಪತ್ರಿಕೆಯ ಸಂಪಾದಕರು" ಎಂದು ಹೇಳಿದರು.

ರಾಜಾಜಿ—ಬಹಳ ವರ್ಷಗಳಿಂದಲೂ ಗೊತ್ತಿದೆ (ಶ್ರೀ ರಂಗಯ್ಯನವರನ್ನು ಕುರಿತು ರೆಡ್ಡಿಯವರ ಕಡೆ ತೋರಿಸಿ) "ಇನ್ನೂ ಇವರಿಗೆ ತೊಂದರೆ ಕೊಡುತ್ತಿರುವಿರಾ?"

ಉತ್ತರ—ಅದಕ್ಕೆ ಉತ್ತರವನ್ನು ಅವರೇ ಹೇಳಬೇಕು.

ಶ್ರೀ ರೆಡ್ಡಿ—ಅಂಥದ್ದೇನೂ ಇಲ್ಲ; ಈಗ ನಾವೆಲ್ಲರೂ ಒಂದೇ.

ಶ್ರೀ ರಂ—ಈಗ ನಾವೆಲ್ಲರೂ ಒಂದೇ.

ಮಕ್ಕಳ ನಾಟಕ ಪ್ರದರ್ಶನ

ಮೊನ್ನೆ ದಿನ ಮೈಸೂರು ಚಿಲ್ಡ್ರನ್ಸ್ ಯೂನಿಯನ್ನಿನ ಮಕ್ಕಳು, ಸ್ವಾತಂತ್ರ್ಯೋತ್ಸವದ ಅಂಗವಾಗಿ ಅರಮನೆ ಅಸಿಸ್ಟೆಂಟ್ ಮು. ಶ್ರೀ ಕೆ ಟಿ ಆರ್ ಬ್ಯಾನ್‌ಯವರ ಅಧ್ಯಕ್ಷತೆಯಲ್ಲಿ ವಿದ್ಯಾರಣ್ಯ ಎಂಬ ನಾಟಕವನ್ನು ಆಡಿದರು. ಇದೇ ನಾಟಕವನ್ನು, ಕನ್ನಡ ರಂಗಭೂಮಿಯ ರಜತಮಹೋತ್ಸವದ ಸಂದರ್ಭದಲ್ಲಿ ಟೌನ್‌ಹಾಲಿನಲ್ಲಿ ಪ್ರದರ್ಶಿಸಿದಾಗ ಮಂಡಲಿಯವರಿಗೆ ಒಂದು ನಟರಾಜ ಮೂರ್ತಿಯ ವಿಗ್ರಹವನ್ನೂ ಮತ್ತು ಒಂದು ಪ್ರಶಸ್ತಿಪತ್ರವನ್ನೂ ಕೊಟ್ಟಿದ್ದರು.

ಉಪನ್ಯಾಸ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ಇಂದಿನ ಸಾಯಂಕಾಲ ೭ ಘಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಂಪಿಗೆಹಳ್ಳಿ ವಿದ್ವಾನ್ ವೆ|| ಕೆ ರಾಮಚಂದ್ರರಾಯರವರು ಅಧ್ಯಕ್ಷತೆಯಲ್ಲಿ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ.

ರಂಗೂನನ್ನು ಹಿಡಿಯಲು ಧಾಳಿಕಾರರ ಪ್ರಯತ್ನ

ಬರ್ಮಾದ ಅನೇಕ ಭಾಗಗಳಲ್ಲಿ ದೊಂಬಿಕಾರರ ಹಾವಳಿಯು ಪ್ರಬಲವಾಗಿರುತ್ತದೆ. ರಂಗೂನ್ ಪಟ್ಟಣವನ್ನು ಆಕ್ರಮಿಸಲು ಧಾಳಿಕಾರರು ಪ್ರಯತ್ನಿಸುತ್ತಿರುವರು. ಬರ್ಮಾ ದೇಶದಲ್ಲೆಲ್ಲಾ ಉತ್ಕಟ ಪರಿಸ್ಥಿತಿಯುಂಟಾಗಿರುವುದರಿಂದ ಪಾರ್ಲಿಮೆಂಟ್ ಶಾಸನವನ್ನು ಬೇಗನೆ ಕರೆಯಲಾಗಿದೆ. ಕಮ್ಯೂನಿಸ್ಟರಿಂದ ಆಕ್ರಮಿಸಲ್ಪಟ್ಟಿರುವ ಪ್ರದೇಶಗಳ ಮೇಲೆ ವಿಮಾನದ ಮೂಲಕ ಬಾಂಬುಗಳನ್ನು ಹಾಕುವುದಾಗಿ ಸರ್ಕಾರದವರು ಎಚ್ಚರಿಸಿದ್ದಾರೆ. ಪಾಕಿಸ್ತಾನ ದೇಶವು ಬರ್ಮಾಗೆ ತನ್ನ ಸೈನ್ಯಗಳನ್ನು ಕಳುಹಿಸಲಿದೆ. ಭಾರತದ ಸೇನೆಯ ಸಹಾಯವನ್ನು ಸಹ ಕೋರಲಾಗುವುದೆಂದು ಹೇಳಲಾಗಿದೆ.

ಕೊಚ್ಚಿ ಮಹಾರಾಜರ ಪಟ್ಟಾಭಿಷೇಕ

ನೆನ್ನೆ ದಿನ ಎರ್ನಾಕುಲದಲ್ಲಿ ಕೊಚ್ಚಿಯ ನೂತನ ರಾಜರಾದ ಶ್ರೀ ರಾಮವರ್ಮರವರ ಪಟ್ಟಾಭಿಷೇಕ ಮಹೋತ್ಸವವು ವೈಭವದಿಂದ ಜರುಗಿತು. ಅವರು ಪಟ್ಟಕ್ಕೆ ಬಂದ ಈ ಸಮಯದಲ್ಲಿ ರಾಜರು ಘೋಷಣೆಯೊಂದನ್ನು ಮಾಡಿ ತಮ್ಮ ಹಿರಿಯ ರಾಜರಂತೆ ತಾವೂ ಸಹ ಪ್ರಜೆಗಳ ಶ್ರೇಯಸ್ಸಿಗಾಗಿ ದುಡಿಯುವುದಾಗಿ ಹೇಳಿದರು. ಸಂಸ್ಕೃತ ವಿದ್ಯೆಯ ಪ್ರೋತ್ಸಾಹಕ್ಕಾಗಿ ಒಂದು ಲಕ್ಷ ರೂ ಗಳನ್ನು ದಾನಮಾಡಿದರು.

ಗೌರ್ನರ್ ಜನರಲ್ಲರಾದ ರಾಜಾಜಿಯವರು ಈ ಸಮಾರಂಭದಲ್ಲಿ ಭಾಗವಹಿಸಿ ರಾಜರಿಗೆ ತಮ್ಮ ಅಭಿನಂದನೆಯನ್ನು ಅರ್ಪಿಸಿದರು.

ಮೈಸೂರು ಜಿಲ್ಲಾ ಹಾಕಿ ಸಂಘ

ಮೈಸೂರು ಜಿಲ್ಲಾ ಹಾಕಿ ಸಂಘದ ಸಭೆಯು ಮೊನ್ನೆ ದಿನ ಪೌರಸಭಾಧ್ಯಕ್ಷರಾದ ಶ್ರೀ ಪಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಡಾ|| ಅಪ್ಪಚ್ಚುರವರು ಸ್ವಾಗತವನ್ನು ಬಯಸಿದರು. ಕಾರ್ಯದರ್ಶಿಗಳಾದ ಶ್ರೀ ... ಬಂದಿರುವ ಪತ್ರಗಳನ್ನು ಓದಿ, ... ನಡೆದ ... ವರದಿಯನ್ನು ... [illegible]

ಹೈದರಾಬಾದಿಗೆ ಇಟಲಿಯ ಬಂದೂಕಗಳು

ರಾತ್ರಿ ಕಾಲದಲ್ಲಿ ಉತ್ತಮವಾದ ಸ್ಫೋಟಕಗಳನ್ನು ಇಟಲಿಯಿಂದ ಹೈದರಾಬಾದಿಗೆ ವಿಮಾನದ ಮೂಲಕ ಸಾಗಿಸಲಾಗುತ್ತಿದೆಯೆಂದು ಲಂಡನ್ನಿನ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯ ಹೈದರಾಬಾದ್ ವಾರ್ತೆಯು ತಿಳಿಸುತ್ತದೆ. ಹೈದರಾಬಾದ್ ನೈಜಾಮರು ರಾತ್ರಿ ಕಾಲದಲ್ಲಿ ಚಿನ್ನದ ನಾಣ್ಯಗಳನ್ನೂ, ವಿಮಾನಗಳ ಮೂಲಕ ಇಟಲಿಗೆ ಕಳುಹಿಸುತ್ತಿರುವರೆಂದೂ, ಇದಕ್ಕೆ ಪ್ರತಿಯಾಗಿ ಸಾವಿರ ಬಂದೂಕಗಳನ್ನು ಇಟಲಿಯಿಂದ ಅವರಿಗೆ ಸರಬರಾಜು ಮಾಡಲಾಗುವುದೆಂದು ಹೇಳಲಾಗಿದೆ.

ಬೊಂಬಾಯಿ ಗಡಿಯಲ್ಲಿ ನಿಜಾಮರ ಸೈನ್ಯ ಸಂಗ್ರಹ

ಬಾರ್ಸಿ ಲೈಟ್ ಮಾರ್ಗದಲ್ಲಿ ಹೈದರಾಬಾದಿಗೆ ಸೇರಿದ ಕೇಂದ್ರಿ ಎಂಬಲ್ಲಿ ಹೈದರಾಬಾದು ಸೈನ್ಯಗಳು ಠಾಣ್ಯವನ್ನು ಹೂಡಿರುವುದಾಗಿ ತಿಳಿದುಬಂದಿದೆ. ಕೇಂದ್ರಿ ಲೈಟ್ ನಿಲ್ದಾಣವನ್ನು ಭಾರತದ ಸೈನ್ಯಗಳು ಆಕ್ರಮಿಸಿಕೊಂಡಿವೆ.

● ಹೈದರಾಬಾದಿನ ವಿದ್ಯಮಾನಗಳು ಬಿಕ್ಕಟ್ಟಿಗೆ ಬರುತ್ತಿರುವುದರಿಂದ ಯಾವ ಗಳಿಗೆಯಲ್ಲಿ ಬೇಕಾದರೂ ಘರ್ಷಣೆಯು ಆರಂಭವಾಗಬಹುದೆಂದು ಭಾವಿಸಿ ಮದರಾಸ್ ಸರ್ಕಾರದವರು ವಿಜಯವಾಡದಲ್ಲಿ ವಿಮಾನ ಧಾಳಿ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಜ್ಞೆಮಾಡಿದ್ದಾರೆ.

ಸಚಿವರ ಭೇಟಿ

ಚಾಮರಾಜನಗರ

ರೆವಿನ್ಯೂ ಸಚಿವರಾದ ಶ್ರೀ ಕೆ. ಸಿದ್ದಯ್ಯನವರು ಈ ಊರಿಗೆ ಭೇಟಿಯಿತ್ತು, ದ್ವಿ ... ಊರಿನ ಭಾಗದ ಬಂಗಲೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಕ್ರಿಶ್ಚನ್ ... ಜಿಲ್ಲಾ ಬೋರ್ಡು ಅಧ್ಯಕ್ಷರಿಂದ ಶ್ರೀ ಎಚ್. ಎಂ. ಚನ್ನಬಸಪ್ಪನವರು ... ಅಧಿಕಾರಿಗಳನ್ನೂ ಸ್ವಾಗತಿಸಿದರು. ... ಸಚಿವರು ಕಷ್ಟಸುಖಗಳನ್ನು ವಿಚಾರಿಸಿ ಈ ತಾಲ್ಲೋಕಿಗೆ ಈ ರೀತಿ ... ಇದೇ ಪ್ರಥಮ ... ತಿಳಿಸಿದರು. ಶ್ರೀ ... ಊಪ್ಪನವರು ... ತಾಲ್ಲೋಕಿನ ಪ್ರಜೆಗಳ ಪರವಾಗಿ ಬಿನ್ನವತ್ತಳೆಯನ್ನರ್ಪಿಸಿ, ತಾಲ್ಲೋಕಿನ ಎಲ್ಲಾ ... ಮತ್ತು ... ಮಾಡಿ ... ಹಳ್ಳಿಗಳಿಗೂ ... ರಸ್ತೆಗಳನ್ನು ಏರ್ಪಡಿಸಿ ... ದ್ದುಪಡಿ ... ಮತ್ತು ಯಳಂದೂರಿನ ಬಳಿ ... ಕೆರೆಗೆ ... ಕಟ್ಟೆಯ ದುರಸ್ತಿಯನ್ನು ಸರಿಪಡಿಸಿಕೊಡಬೇಕೆಂದೂ ... ಶ್ರೀಗಳಾದ ಮುಟ್ಟಯ್ಯ, ನರಸಿಂಗರಾವ, ಮುಗ್ಗಿಟ್ಟಿ ಪುಟ್ಟರಂಗಪ್ಪ ... ರವರು ತಾಲ್ಲೋಕಿನ ಅವಶ್ಯಕತೆಗಳನ್ನು ವಿವರಿಸಿ ತಿಳಿಸಿದರು.

ನಂತರ ಸಚಿವರು ಉತ್ತರ ಕೊಡುತ್ತಾ ... ಈ ಕಾಲದಲ್ಲಿ ... ಜನರಿಗೆ ಸರ್ಕಾರದವರು ವ್ಯವಸಾಯಕ್ಕೆ ಎಲ್ಲಾ ಅನುಕೂಲ ... ಕಲ್ಪಿಸಿ ಕೊಡುವುದಾಗಿ ... ಹಳ್ಳಿಗಳ ... ಸರಿಪಡಿಸಲು ... ಶ್ರೀ ... ಸೂರ್ಯ ... [illegible]

ವಾರ ಭವಿಷ್ಯ

ತಾ|| ೨೨-೮-೪೮ ರಿಂದ ೨೮-೮-೪೮ರವರೆಗೆ

ಮೇಷ — ಅಧಿಕಾರ ಸ್ಥಿತಿಯು ಕಳೆದ ವಾರಕ್ಕಿಂತ ಉತ್ತಮಗೊಳ್ಳುವುದು, ಆರೋಗ್ಯ ಸ್ಥಿತಿ ಅಷ್ಟು ಚೆನ್ನಾಗಿರಲಿಕ್ಕಿಲ್ಲ, ಮಾನಸಿಕ ಚಿಂತೆಗಳು ವೃದ್ಧಿಗೊಳ್ಳುತ್ತವೆ ತಾ|| ೨೪, ೨೫ ಧನಾಗಮನ, ಅನಾರೋಗ್ಯ

ವೃಷಭ — ವ್ಯಾಪಾರಗಾರರಿಗೆ ಈ ವಾರ ಪ್ರಗತಿದಾಯಕವಾಗಿರುತ್ತದೆ, ನೌಕರಿ ವ್ಯವಹಾರಗಳಲ್ಲಿ ಯಶಸ್ಸು ದೊರೆಯುವುದು, ಆರೋಗ್ಯ ಧನಾದಾಯಗಳು ಉತ್ತಮ, ತಾ|| ೨೬, ೨೫ ಧನ ಲಾಭ, ಸ್ವಲ್ಪ ಚಿಂತೆ

ಮಿಥುನ — ಖರ್ಚಿಗೆಂದರಷ್ಟು ಧನಾದಾಯವಾಗುವುದು, ಬಂಧು ಬಳಗದವರಿಂದ ಸನ್ಮಾನಿತರಾಗುವಿರಿ, ವಾರಾಂತ್ಯದಲ್ಲಿ ಸ್ವಲ್ಪ ದೇಹಾಲಸ್ಯವುಂಟಾಗಬಹುದು, ತಾ|| ೨೪, ೨೭ ಸಂತೋಷ ಸಮಾಚಾರ, ದುಂದು ವೆಚ್ಚ

ಕಟಕ — ಈ ವಾರ ನಿಮಗೆ ಧರ್ಮ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿಯುಂಟಾಗುವುದು, ಅನೇಕ ಸಾಧು ಸಂತರ ದರ್ಶನ, ಲಾಭವುಂಟಾಗುವುದು, ಆರೋಗ್ಯ ಚೆನ್ನಾಗಿದೆ, ತಾ|| ೨೬, ೨೭ ಮಿತ್ರ ದರ್ಶನ, ಸುಖ ಭೋಜನ

ಸಿಂಹ — ದಾಟಂ ಸಿಟ್ಟಿನಿಂದ ಹಾನಿಯುಂಟಾಗುವುದು, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಶತ್ರುಗಳ ಕೈ ಮೇಲಾಗುವುದು, ವಾರಾಂತ್ಯದಲ್ಲಿ ಮಿತ್ರರ ನೆರವು ಸ್ವಲ್ಪ ದೊರೆಯುವುದು, ತಾ|| ೨೫, ೨೭ ವಾಹನ ಭಯ, ಕ್ಲೇಶ

ಕನ್ಯಾ — ದೇಹ ಸ್ಥಿತಿ ಉತ್ತಮವಾಗಿದ್ದರೂ ಮಾನಸಿಕ ಚಿಂತೆಗಳಿಂದ ಬಳಲಬೇಕಾಗುವುದು, ನೆರೆಹೊರೆಯವರ ವಿರೋಧ ಹೊಂದಬೇಕಾಗುವುದು, ಧನಾದಾಯ ಸಾಧಾರಣವಾಗಿದೆ, ತಾ|| ೨೪, ೨೭ ಚೋರ ಭಯ, ಸ್ವಲ್ಪ ಶಾಂತಿ

ತುಲಾ — ಧನಾದಾಯ ಸಾಧಾರಣವಾಗಿದೆ, ಬಂಧು ಬಳಗದವರ ಆದರ ಹೆಚ್ಚುವುದು, ಪ್ರವಾಸದಿಂದ ಮುಂಗಿನ ಕಾರ್ಯಗಳು ನಿಶ್ಚಿತವಾಗುವುವು, ದೇಹಾರೋಗ್ಯ ಚೆನ್ನಾಗಿದೆ, ತಾ|| ೨೫, ೨೭ ಸುಖ ಪ್ರಯಾಣ, ಮಿತ್ರ ಭೇಟಿ

ವೃಶ್ಚಿಕ — ಪ್ರವಾಸದಿಂದ ಅನಾರೋಗ್ಯವುಂಟಾಗುವ ಸಂಭವವಿದೆ, ಯೋಚಿಸಿದ ಕಾರ್ಯಗಳಲ್ಲಿ ವಿಫಲರಾಗಿ ಮಿತ್ರರ ಅಪಹಾಸ್ಯಕ್ಕೀಡಾಗುವಿರಿ, ಧನಾದಾಯ ಸಾಧಾರಣವಾಗಿದೆ, ತಾ|| ೨೪, ೨೫ ವ್ಯಥಾ ಪವಾದ, ಜನ ನಿಂದ

ಸ್ವತಂತ್ರವಾದ ಹಳ್ಳಿಗಳನ್ನು ವಾಪಸು ಪಡೆಯಲು ನಿಜಾಮರ ಯತ್ನ

ಉಸ್ಮಾನಾಬಾದಿಗೆ ಸೇರಿದ್ದ ೬೨ ಹಳ್ಳಿಗಳು ಸ್ವತಂತ್ರವಾಗಿರುವುವಷ್ಟೆ. ಅವುಗಳನ್ನು ತಮ್ಮ ಅಧಿಕಾರಕ್ಕೆ ವಾಪಸು ಪಡೆಯಲು ನಿಜಾಮರು ಸೈನ್ಯವನ್ನು ಅಲ್ಲಿಗೆ ಕಳುಹಿಸುತ್ತಿದ್ದಾರೆಂದು ಹೇಳಲಾಗಿದೆ. ಹೈದರಾಬಾದಿನ ಪೋಲೀಸರು ಮತ್ತು ರಜಾಕರರು ಇತ್ತೀಚಿಗೆ ಅವುಗಳ ಮೇಲೆ ನಡೆಸಿದ ಧಾಳಿಯನ್ನು ಜನಗಳು ಎದುರಿಸಿದರೆಂದೂ ವರದಿಯಾಗಿದೆ.

ಧನು — ಆರೋಗ್ಯ ಉತ್ತಮವಾಗಿದ್ದರೂ ಮಾನಸಿಕ ಕ್ಲೇಶಗಳು ಹೆಚ್ಚುವುವು, ಆರೋಗ್ಯ ಕೆಡುವ ಸಂಭವವಿದೆ, ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯ ತಾ|| ೨೬, ೨೮ ಚಿಂತೆ, ನಷ್ಟ.

ಮಕರ — ಅಧಿಕ ಮುಂಗೋಪ ಹೆಚ್ಚುವುದು, ಕೈಗೊಂಡ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು, ದಾಟ ಶತ್ರುಗಳಿಂದ ವಿಪರೀತ ನಷ್ಟ ಸಂಭವಿಸುವುದು ತಾ|| ೨೬, ೨೪ ದ್ರವ್ಯ ಹಾನಿ, ದಂಡ ವೆಚ್ಚ

ಕುಂಭ — ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾಗುವಿರಿ ಮುಂಗಿನ ಕಾರ್ಯಗಳಿಗಾಗಿ ಪ್ರಯಾಣವೊದಗುವುದು, ಆರೋಗ್ಯ ಉತ್ತಮವಾಗಿದೆ, ತಾ|| ೨೪, ೨೭ ಲಾಭ, ಶತ್ರುನಾಶ

ಮೀನ — ನಿಮ್ಮ ಸಂಶಯ ಪ್ರಕೃತಿಯು ಈ ವಾರ ಹೆಚ್ಚುವುದು, ಮನೆಯಲ್ಲಿ ಕಲಹ. ಮಾನಾಪಮಾನವುಂಟಾಗುವುದು, ವಾರಾಂತ್ಯದಲ್ಲಿ ಮಿತ್ರರಿಂದ ಸ್ವಲ್ಪ ನೆರವು ದೊರೆಯುವುದು. ತಾ|| ೨೬, ೨೮ ನಷ್ಟ, ಸ್ವಲ್ಪ ಶಾಂತಿ

ನಿಜಾಂ ಸೈನ್ಯಕ್ಕೆ ೧೦ ಸಾವಿರ ಮುಸ್ಲಿಂ ನಿರಾಶ್ರಿತರು

ಹೈದರಾಬಾದಿಗೆ ಸಮೀಪದಲ್ಲಿರುವ ಪ್ರಾಂತ್ಯ ಮತ್ತು ಸಂಸ್ಥಾನಗಳಿಂದ ೮ ಲಕ್ಷ ಜನ ಮುಸ್ಲಿಮರು ಹೈದರಾಬಾದಿಗೆ ಹೋಗಿರುವರೆಂದೂ, ಅವರೆಲ್ಲರನ್ನೂ ನಿರಾಶ್ರಿತರೆಂದು ನಿಜಾಂ ಸರ್ಕಾರದವರು ಪರಿಗಣಿಸಿದ್ದಾರೆಂದೂ, ಅವರ ಪೈಕಿ ೧೦,೪೦೦ ನಿರಾಶ್ರಿತರು ನಿಜಾಮರ ಸೈನ್ಯ ಮತ್ತು ಪೋಲೀಸ್ ಶಾಖೆಗೆ ಸೇರಿರುವರೆಂದೂ ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ

ಸ್ವಾತಂತ್ರ್ಯೋತ್ಸವ

ಕೆರೆಹಳ್ಳಿ ೧೫

ಚಾಮರಾಜನಗರದ ತಾ|| ಕೆರೆ ಹಳ್ಳಿಯ ಲಿಪ್ತ ದಾಕ್ಷೀಮುಖಿತರಾದ ಶ್ರೀ ... ರಾಯರ ಅಧ್ಯಕ್ಷತೆಯಲ್ಲಿ ಉತ್ಸವವು ಆಚರಿಸಲ್ಪಟ್ಟಿತು ಪ್ರಾಥಮಿಕ ಶಾಲೆಯಲ್ಲಿ ಇದಕ್ಕಾಗಿ ಜನರು ಕಿಕ್ಕಿರಿದು ತುಂಬಿದ್ದರು ಧ್ವಜಾರೋಹಣ, ರಾಷ್ಟ್ರ ಗೀತೆ, ಅಧ್ಯಕ್ಷರ ಭಾಷಣ, ವಿದ್ಯಾರ್ಥಿಗಳ ವಿವಿಧ ವಿನೋದಾವಳಿ, ಸಿಹಿ ತಿಂಡಿ ಹಂಚಿಕೆಯಾದ ನಂತರ ಶ್ರೀಯುತ ಪ್ರಾರ್ಥನೆಯೊಡನೆ ಕಾರ್ಯಕ್ರಮಗಳು ಮುಗಿದುವು

ನಂಜನಗೂಡು ತಾಲ್ಲೂಕು ದೇವನೂರು ಯುವಜನ ಸಂಘದವರು ಶ್ರೀ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಈ ಸಮಾರಂಭವನ್ನು ಆಚರಿಸಿದರು. ಶ್ರೀ ಡಿ ಎಂ ಸಿದ್ದಯ್ಯನವರು ನೆಹರೂರವರ ಭಾವಚಿತ್ರವನ್ನು ಅನಾವರಣ ಮಾಡಿದರು

ಬೆಂಗಳೂರಿನ ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆಯ ವರ, ಲೋಕ ಸೇವಾನಿರತ ಡಿ ಎಸ್ ಕೃಷ್ಣಯ್ಯಶೆಟ್ಟರವರ ನೇತೃತ್ವದಲ್ಲಿ ಯುನೈಟೆಡ್ ಮತ್ತು ಭಾರತಿ ಶಾಲೆಗಳಲ್ಲಿ ಸುಮಾರು ೧ ಸಾವಿರ ಬಾಲಕ ಬಾಲಕಿಯರಿಗೆ ಸಿಹಿ ತಿಂಡಿಯನ್ನು ಹಂಚಿದರು.

ಗಾಂಧೀ ನಾಮಾವಳಿ

ಪಂಡಿತ ಕೆ ಪಟ್ಟಾಭಿರಾಮಯ್ಯನವರಿಂದ ರಚಿತವಾದ ೧೦೮ ಪದ್ಯಗಳ "ಗಾಂಧೀ ನಾಮಾವಳಿ" ಎಂಬ ಗ್ರಂಥವನ್ನು ಸ್ವತಂತ್ರದಿನಾಚರಣೆಯ ಸಂದರ್ಭದಲ್ಲಿ ಶ್ರೀ ಕೆ ವಿ ರಾಮಶೆಟ್ಟಿ ಮತ್ತು ... ಸನ್ನಿಯವರು ಪ್ರಕಟಿಸಿರುವರು ಇದರ ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ

OPERA TALKIES
Daily 3 Shows
From 21—8—48
THE OUTLAW
—:With:—
Jane Russell

Morning Shows
From 20—8—48
This is the Army
(In Technicolor)

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಆಟಗಳು
ತಾ|| 23-8 48 ರಿಂದ 2 ದಿನಗಳು ಮಾತ್ರ
GOLDEN EAR-RINGS
ಗೋಲ್ಡನ್ ಇಯರ್ ರಿಂಗ್ಸ್

ತಾ|| 25 - 8—48 ರಿಂದ ೩ ದಿನಗಳು ಮಾತ್ರ
DESERT FURY ಡೆಸರ್ಟ್ ಫ್ಯೂರಿ
(ವರ್ಣರಂಜಿತ ಚಿತ್ರ)

ತಾ|| 27 - 8—48 ರಿಂದ 1 ವಾರ ಮಾತ್ರ
Cecil B De Mills ರವರ ಅಮೋಘ ವರ್ಣರಂಜಿತ ಚಿತ್ರ
UNCONQUERED ಅನ್‌ಕಾನ್‌ಕರ್ಡ್

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ
ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ
ಕಣ್ಣನ್ ದೇವನ್ ಟೀ
ಸುವಾಸನೆಯಿಂದ ಕೂಡಿಯೂ ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.
—:ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—
ಸಿ. ಬಿ. ಜನರಲ್ ಸ್ಟೋರ್ಸ್,
ಯೆಲ್‌ವಾಲ್ ಗಲ್ಲಿ, ಮೈಸೂರು

Evening Shows
at
RAJKAMAL TALKIES
Mysore

Daily 3 Shows
From 22—8—48
For 3 days only
The Vigilante Return
(In Cinecolour)
—With—
JON HALL, MARGARET LINDSAY

ತಾ|| 25—8—48 ರಿಂದ
ಪ್ರತಿ ದಿನ 3 ಆಟಗಳು.
ಶ್ರೀ ವಳ್ಳಿ
(ತಮಿಳ್) (ಹೊಸ ...)

Morning Shows
From 20—8—48
For 4 Days only
Kid Millions
—:Featuring:—
EDDIE CANTOR

CHAMUNDESWARI TALKIES
From Saturday the 21st August 1948
Daily 3 Shows
COLUMBIA'S
The Return of Monte Cristo
-:Featuring:-
Louis Hayward,
Barbara Britton,
George Macready
and others
None of you can afford to miss this picture!

First Grade College Union
MYSORE
Kindly Elect
H. C. VISWANATH
(Ex-Member, Managing Committee)
AS
The President of your Union
for the year 1948-49

Edited printed and published by A. S. Nagarajan at the Sadhvi Press D. Subbaiah Road Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೨೩-೮-೪೮ [ಸಂಚಿಕೆ ೩೨

ಕಾಶ್ಮೀರದ ರಾಜರು ಸಿಂಹಾಸನ ಬಿಡುವರೇ

ಹರಿಕಥೆ

ಮೈಸೂರು ೨೨.

...ಡ ಸುಬ್ಬಯ್ಯನ ಛತ್ರಿಯಲ್ಲಿರುವ 'ಸಾ...' ಕಛೇರಿಯ ಮಹಡಿ ಮೇಲೆ ಈ ...ರಾ ... ಸಂಜೆ ೬ ಕ್ಕೆ ಶ್ರೀ|| ಉ|| ವೇ|| ... ಪ್ರಕಾಂ ರಂಗಸ್ವಾಮಿ ಅಯ್ಯಂಗಾರ್ಯರವ... ದರಾಸು ಮಂತ್ರಿಯ ಪ್ರದಾನ ಎಂಬ ...ರಕಥೆಯ ನಡೆಯುವುದು ಸರ್ವರಿಗೂ ...ಸ್ವಾಗತವುಂಟು

ಕನ್ನಡ ಸಣ್ಣ ಕಥೆಗಳ ಸ್ಪರ್ಧೆ

...ಶ್ರೀರಂಗಪಟ್ಟಣದ ವಿದ್ಯಾರ್ಥಿ ಸಂಘದ ...ಯಾದಲ್ಲಿ ಸಂಸ್ಥಾನದ ಪ್ರೌಢ ಶಾಲೆಗಳ ...ವಿದ್ಯಾರ್ಥಿನಿಗಳಿಗೆ ಕನ್ನಡ ಸಣ್ಣ ಕಥೆ ...ಸ್ಪರ್ಧೆಯನ್ನು ಏರ್ಪಡಿಸಲಾಗಿದೆಯೆಂ... ...ಲ ಅವೆ ಪ್ರವೇಶ ಫಾರದ ನಮೂನೆ ... ...ಗಳನ್ನು ಕಳ್ಳು ಶಾಲಾ ಮುಖ್ಯೋಪಾ... ...ಯರ ಮೂಲಕ ಮುಂದಿನ ತಿಂಗಳು ...ನೇ ತಾರೀ ನೊಳಗಾಗಿ ಕಳುಹಿಸಬೇಕೆಂ... ...ಅದರ ಕಾರ್ಯದರ್ಶಿಗಳು ತಿಳಿಸಿರುವರು ...ಲಿಂಗ್ ಹೀಲ್ಡ್, ಸಾಕು ಬೆಳ್ಳಿಯ ...ಗಳು ಮತ್ತು ಪುಸ್ತಕಗಳನ್ನು ವಾ... ...ವಿದ್ಯಾರ್ಥಿನಿಯರಿಗೆ ವಿಶೇಷ ಬಹು... ...ಮಾನಗಳನ್ನು ಕೊಡಲಾಗುವುದೆಂದು ತಿಳಿ...ಲಾಗಿದೆ.

...ಆಪರೇಟಿವ್ ಬ್ಯಾಂಕಿನ ನೈರೆಕ್ಟರುಗಳು

ಮೈಸೂರು ೨೨ ಕೋ-ಆಪರೇಟಿವ್ ...ಂಕಿನ ವಾರ್ಷಿಕ ಸಭೆಯು ನಿನ್ನೆ ನಡೆ... ...ರೆಗೆ ಕಂಡ ಮಹನೀಯರುಗಳನ್ನು ...ವರ್ಷದ ಡೈರೆಕ್ಟರುಗಳಾಗಿ ಚುನಾಯಿಸ... ...ಯಿತು:—ಶ್ರೀಯುತರಾದ ಸಿ. ವೆಂಕಟೇ... ...ಬಿ ವಿ ನಂಜುಂಡಯ್ಯ, ಟಿ ಗುಂಡ... ...ಕೆ ಪಂಚಾಕ್ಷರಪ್ಪ, ಡಿ ಬಿ ಕೃಷ್ಣಪ್ಪ, ಜನಾರ್ಧನನಾಯ್ಡು, ಡಾ|| ಎ ವಿ ರಂಗ...ಯರು, ನಂಜನಗೂಡು ಶ್ರೀಕಂಠಶಾಸ್ತ್ರಿ..., ಡಾ|| ಬಿ ಎಸ್ ಸೂರ್ಯನಾರಾಯಣ...ರು, ಹೆಚ್ ರಾಮಣ್ಣ, ಡಬ್ಲ್ಯು ಹೆಚ್ ...ರೋಬಾಲ್ಡ್, ಎ. ವಿ ಶ್ರೀಕಂಠಯ್ಯ, ಟಿ ...ಗೌಡ, ಚೌಡಯ್ಯ, ಮತ್ತು ಬಿ ಶ್ರೀನಿವಾಸ ಅಯ್ಯಂಗಾರ್ಯರು

ದೇಶೀಯ ಇಂಜನಿಯರಿಂಗ್ ಶಾಲಾ ...ಭಾವಿಯ ,ನ್ಯಾಷನಲ್ ಇನ್ಸ್ಟಿ...ಟ್ ಆಫ್ ಇಂಜನಿಯರಿಂಗ್ ಸಂಸ್ಥೆ ... ಸರ್ಕಾರದವರ ಮತ್ತು ಮಹಾಜನ ಸಹಕಾರದಿಂದ ಅಭಿವೃದ್ಧಿ ಹೊಂದು... ಈಗ ಸಿವಿಲ್ ಇಂಜನಿಯರಿಂಗ್ ಡಿ...ಮಾ ತರಗತಿಯಲ್ಲಿ ೫೫ ಜನ ವಿದ್ಯಾ...ರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ...ಲ್ಲಿ ಭಾರತದ ಎ ಎಂ ಐ. ಇ. ಪರೀ...ಕ್ಷೆಗೆ ೩೦ ೪೦ ಜನ ವಿದ್ಯಾರ್ಥಿಗಳನ್ನು ತ...ಯಾರು ಮಾಡಲು ಏರ್ಪಾಡು ಮಾಡಲಾ...ಗಿದೆಂದು ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಹೈದರಾಬಾದ್ ಸಚಿವರ ರಾಜೀನಾಮೆ ವಾಪಸು

...ದರಾಬಾದಿನ ಸಚಿವ ಪದವಿಗೆ ಕಳೆದ ...ರೆ ತಾನೆ ರಾಜೀನಾಮೆ ಇತ್ತ ಶ್ರೀ ಮ...ನೋಹರ್ಸನ್ನರು ಸಮಾಧಾನಕ್ಕ ಸಲಹೆಗ... ...ಸರ್ಕಾರದವರು ಅಂಗೀಕರಿಸಿರುವುದ...ರಿಂದ ರಾಜೀನಾಮೆಯನ್ನು ವಾಪ...ಸು ತೆಗೆದುಕೊಂಡಿರುವರೆಂದು ಹೇಳಲಾಗಿ... ...ದರಿಂದ ಮಂತ್ರಿ ಮಂಡಲವು ಪುನರ...ಚನೆಯಾಗಲಿ ರಾಜೀನಾಮೆ ಇತ್ತ ಇತರ ... ಹಿಂದೂ ಮಂತ್ರಿಗಳ ಸ್ಥಾನಕ್ಕೆ ಬೇ...ರೆಯವರನ್ನು ನೇಮಿಸಲಾಗುವುದೆಂದೂ ತಿ...ಳಿದಿದೆ

ರೈಲ್ವೆ ಪ್ರಯಾಣಿಕನ ಮರಣ

ಮೈಸೂರು ೨೨.

ಮೊನ್ನೆ ದಿನ ರಾತ್ರಿ ಬೆಂಗಳೂರಿಗೆ ಹೋಗುತ್ತಿದ್ದ ಒಬ್ಬನು ಬಸದಿ ಸ್ಟೇಷನ್ ಬಿಟ್ಟು ಒಂದು ಮೈಲಿ ದೂರ ರೈಲು ಹೋದಾಗ ಕೆಳಕ್ಕೆ ಬಿದ್ದು ರೈಲಿಗೆ ಸಿಕ್ಕಿ ಸತ್ತು ಹೋದನು ಆತನ ಹೆಸರು ಕೆ ಆರ್ ಮೂರ್ತಿ ಎಂದು ಗೊತ್ತಾಗಿದೆ ಆ ದಿವಸ ಸಂಜೆ ೬ ಗಂಟೆ ಸಮಯದಲ್ಲಿ ಆತನಿಗೆ ಸೇರಿದ್ದ ಟ್ರಂಕು ಮತ್ತು ಸಾಮಗ್ರಿಗಳನ್ನು ಮೈಸೂರು ಸ್ಟೇಷನ್ನಿನ ಪಾರ್ಸಲ್ ಆಫೀಸಿನಲ್ಲಿಟ್ಟಿದ್ದ ರಸೀತಿಯು ಆತನ ಜೇಬಿನಲ್ಲಿದೆ ಆತನಿಗೆ ಸಂಬಂಧಪಟ್ಟವರಿದ್ದಲ್ಲಿ ಮೈಸೂರು ರೈಲ್ವೆ ಪೋಲೀಸ್ ಸ್ಟೇಷನ್ನಿನಲ್ಲಿ ವಿವರಗಳನ್ನು ತಿಳಿಯಬಹುದೆಂದು ಈ ಮೂಲಕ ಸೂಚಿಸಲಾಗಿದೆ

ರಾಮಸ್ವಾಮಿ ನಾಯಕರ ದಸ್ತಗಿರಿ

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮದರಾಸಿಗೆ ಭೇಟಿ ಕೊಡುವುದನ್ನು ಪ್ರತಿಭಟಿಸಿ ಅವರು ಬಂದಾಗ ಕಪ್ಪು ಬಾವುಟ ಪ್ರದರ್ಶನ ಮಾಡಬೇಕೆಂದು ಸೂಚನೆ ಇತ್ತಿರುವ ಮತ್ತು ಮದರಾಸಿನಲ್ಲಿ ಹಿಂದೀ ವಿರುದ್ಧ ಚಳುವಳಿಯನ್ನು ಕೈಗೊಂಡಿರುವ ದಕ್ಷಿಣ ಭಾರತ ದ್ರಾವಿಡ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಇ ವಿ ರಾಮ ಸ್ವಾಮಿ ನಾಯಕರನ್ನು ಮತ್ತು ಇತರ ೮೯ ಜನರನ್ನು ದಸ್ತಗಿರಿ ಮಾಡಲಾಗಿದೆ.

ನಿಜಾಮರಿಗೆ ಪದಚ್ಯುತಿ ಮಾಡಬೇಕು

ನಿಜಾಮರನ್ನು ಸಿಂಹಾಸನ ಭ್ರಷ್ಟರನ್ನಾಗಿ ಮಾಡಿ, ಹೈದರಾಬಾದಿನಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದ ಮ...ಹರ ದಾಬಾದಿನ ಮಹಾರಾಜ ಕ...ಮಾರರಾದ ...ಆಲಿಖಾನರವರು ಭಾರತ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಮುಸ್ಲಿಂ ತರುಣಿಯನ್ನು ಮದುವೆಯಾದ ಪರಿಣಾಮ

ಷೋಲಾಪುರದ ಹಿಂದೂ ಉಪಾಧ್ಯಾಯರೊಬ್ಬರು ತಮ್ಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮುಸ್ಲಿಂ ಯುವತಿಯೊಬ್ಬಳನ್ನು ಪ್ರೀತಿಸಿ, ಆಕೆಯನ್ನು ಮದುವೆಯಾಗಲು ಮುಸ್ಲಿಂ ಮತಕ್ಕೆ ಸೇರಿದರೆಂದೂ, ಅವರ ವಿವಾಹವು ಹೈದರಾಬಾದಿನಲ್ಲಿ ನಡೆಯಿತೆಂದೂ ಹೇಳಲಾಗಿದೆ ಅವರು ನಿಜಾಮರ ಗೂಢಚಾರರಾಗಿ ಕೆಲಸ ಮಾಡುತ್ತಿದ್ದರೆಂದು ಈಗ ಅವರನ್ನು ಷೋಲಾಪುರದ ಪೋಲೀಸರು ದಸ್ತಗಿರಿ ಮಾಡಿದ್ದಾರೆ

ಸಂಸ್ಥಾನದಲ್ಲಿ ಅಕ್ಷರ ಪ್ರಚಾರ

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ೧೯೪೭ ೪೮ ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ ಕಳೆದ ವರ್ಷ ೪೫೫೭ ವಯಸ್ಕರ ಶಿಕ್ಷಣ ತರಗತಿಗಳು ಪ್ರಾರಂಭವಾದುವು ೯೩,೧೦೯ ಜನರು ಶಾಲೆಗೆ ಸೇರಿ ೩೪,೩೦೭ ಮಂದಿ ಶಿಕ್ಷಣ ಪಡೆದರು. ಹಿಂದಿನ ವರ್ಷಗಳೆಲ್ಲ ಸೇರಿಸಲೂ ಈ ವರ್ಷ ೧೩೯೧೧೭ ಜನರು ಹೆಚ್ಚಾಗಿ ಶಿಕ್ಷಣ ಪಡೆದಿದ್ದಾರೆ. ೧೯೭೭ ಪುಸ್ತಕ ಭಂಡಾರಗಳನ್ನು ಸ್ಥಾಪಿಸಲಾಯಿತು ಈ ವರ್ಷ ಶಿಕ್ಷಣ ಚಲನ ಚಿತ್ರ ಪ್ರದರ್ಶನಗಳನ್ನು ೬೦ ಕೇಂದ್ರಗಳಲ್ಲಿ ಏರ್ಪಡಿಸಲಾಗಿತ್ತು ... ಉತ್ತಮ ಚಲನ ಚಿತ್ರಗಳನ್ನು ... ಇದರಿಂದ ಗ್ರಾಮಾಭಿವೃದ್ಧಿ ... ಬಹು ಮಟ್ಟಿಗೆ ನೆರವಾಗಿದೆ.

ಆಗದು ಹೋಗುತ್ತಿರುವ ಜನತಾ ಶಾಲೆಗಳನ್ನು ಉಳಿಸಿ ವಿದ್ಯಾವಂತರಾಗಿರುವವರ ಜ್ಞಾನದ ಮಟ್ಟವನ್ನು ಹೆಚ್ಚಿಸಲು ನಾಲ್ಕು ಕಡೆಗಳಲ್ಲಿ ಶಿಕ್ಷಣ ತರಗತಿಗಳನ್ನು ಮುಂದಿನ ವರ್ಷ ನಡೆಸಬೇಕೆಂದೂ ನಿರ್ಧರಿಸಲಾಗಿದೆ ಮಂಡ್ಯದಲ್ಲಿ ಪ್ರಯೋಗಿಕವಾಗಿ ಓದುವ ತರಗತಿಗಳನ್ನು ಪ್ರಾರಂಭಿಸಿದೆ ನಂಜನಗೂಡಿನಲ್ಲಿ ವಿದ್ಯಾಪೀಠವನ್ನು ಏರ್ಪಡಿಸಲಾಗಿದೆ ಹಾಸನದಲ್ಲಿ ಇನ್ನೊಂದು ವಿದ್ಯಾಪೀಠವನ್ನು ಆರಂಭಿಸಲಾಗುವುದು ಕೇಂದ್ರ ಪುಸ್ತಕ ಭಂಡಾರ ಮತ್ತು ಗ್ರಾಮ ಪುಸ್ತಕಗಳನ್ನು ಒದಗಿಸಲು ಒಂದು ಕೇಂದ್ರ ಮಾರಾಟದ ಶಾಖೆಯನ್ನು ತೆರೆಯಲಾಗುವುದು

ಹಿಂದಿನ ವರ್ಷಗಳಿಗಿಂತಲೂ ಸಮಿತಿಯು ಹೆಚ್ಚಿನ ಮತ್ತು ಉತ್ತಮವಾದ ಕೆಲಸಗಳನ್ನು ಈ ಸಾಲ ಮಾಡಿರುತ್ತದೆ ಅದರ ಕೆಲಸ ಕಾರ್ಯಗಳು ಇನ್ನೂ ... ಯಾಗಿ ಮುಂದುವರಿಯಲೆಂದು ನಾವು ಹಾರೈಸುತ್ತೇವೆ

ಹೈದರಾಬಾದಿನಲ್ಲಿ ೧ ಗ್ಯಾಲನ್ ಪೆಟ್ರೋಲಿಗೆ ೪೦ ರೂ.

ಹೈದರಾಬಾದಿನ ಮೇಲೆ ಭಾರತ ಸರ್ಕಾರವು ಹಾಕಿರುವ ಆರ್ಥಿಕ ದಿಗ್ಬಂಧನದಿಂದ ಸಂಸ್ಥಾನದಲ್ಲಿ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರಿದೆಯೆಂದೂ, ಒಂದು ಗ್ಯಾಲನ್ ಪೆಟ್ರೋಲಿಗೆ ೪೦ ರೂ ಒಂದು ಸೇರು ಅಲೂಗೆಡ್ಡೆಗೆ ೬ ರೂ ಒಂದು ಮಣ ಬೇಳೆಗೆ ೯೦ ರೂ ಮತ್ತು ಒಂದು ಸಿ... ... ಸಿಗರೇಟಿಗೆ ... ರೂ ಗಳೆಂದೂ ... ವಾಗಿದೆ.

ವಿದ್ಯಾಭ್ಯಾಸದ ಮಾರ್ಪಾಡಿಗೆ ನಿಪುಣರ ಸಮಿತಿ

ಸರ್ಕಾರಕ್ಕೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಲಹೆ

ಸ್ವಂ ಸ. ವರದಿ] ಬೆಂಗಳೂರು ೨೨.

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ಮತ್ತು ಮೊನ್ನೆ ನಡೆದು, ಎ ಎಂ ಸಿ ಸಿ ಸಭೆಯಲ್ಲಿ ತೀರ್ಮಾನವಾದ ನಿರ್ಣಯಗಳ ಮೇಲೆ ದೀರ್ಘ ಪರಿಶೀಲನೆ ನಡೆಸಲಾಯಿತು, ಎಲ್ಲ ಮಂತ್ರಿಗಳೂ ಸಭೆಯಲ್ಲಿ ಹಾಜರಿದ್ದರು. ಸಂಸ್ಥಾನದ ಕೈಗಾರಿಕಾ ಪ್ರಗತಿಯ ದೃಷ್ಟಿಯಿಂದ ವಿದ್ಯಾಭ್ಯಾಸ ಕ್ರಮವನ್ನು ಮಾರ್ಪಡಿಸಲು ಮೈಸೂರು ಮತ್ತು ಹೊರಗಿನಿಂದ ಕೂಡಿದ ಸದಸ್ಯರುಗಳನ್ನೊಳಗೊಂಡ ಒಂದು ನಿಪುಣರ ಸಮಿತಿಯನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಸೂಚನೆ ಕೊಡುವ ನಿರ್ಣಯವನ್ನು ಅಂಗೀಕರಿಸಲಾಯಿತು

ವ್ಯವಸಾಯಾಧಿಕಾರಿಗಳ ಸಭೆ

ರೆವಿನ್ಯೂ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ವ್ಯವಸಾಯ ಇಲಾಖೆಯ ಅಧಿಕಾರಿಗಳ ಸಭೆಯು ನಡೆದು, ಸಂಸ್ಥಾನದಲ್ಲಿ ವ್ಯವಸಾಯ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳನ್ನು ಪರಿಶೀಲಿಸಲಾಯಿತು ... ಕಾಲೇಜಿನಲ್ಲಿ ಒಂದು ಕನ್ನಡ ಭಾಷೆಯ ವ್ಯವಸಾಯ ಶಾಲೆಯನ್ನು ... ಸುವ ವಿಚಾರವೂ ಪರಿಶೀಲನೆಗೆ ...ದಿತೆಂದು ಹೇಳಲಾಗಿದೆ

ಮುಸ್ಲಿಂ ಮೊಂಬಿಯನ್ನು ಅಡಗಿಸಲು ಸರ ಭಕ್ಷ್ಯಕರು

ಮಲಬಾರಾ ಸರ್ಕಾರದ ಮೇಲೆ ಕದನ ನಡೆಸುತ್ತಿರುವ ಆಕ್ಷನ ಗೊರಿಲ್ಲಾ ಪಡೆಗಳನ್ನು ಎದುರಿಸಲು ಬ್ರಿಟಿಷ್ ಸರ್ಕಾರವು ನರಭಕ್ಷಕರನ್ನು ಉಪಯೋಗಿಸುತ್ತಿದೆಯೆಂದು ರಷ್ಯದ ಪತ್ರಿಕೆಯೊಂದು ಆಪಾದನೆ ಮಾಡಿದೆ

● ಮುಂದಿನ ತಿಂಗಳು ಪ್ಯಾರಿಸ್ಸಿನಲ್ಲಿ ನಡೆಯುವ ವಿಶ್ವಭದ್ರತಾ ಸಮಿತಿಯ ಮುಂದೆ ಹೈದರಾಬಾದಿನ ಪ್ರಶ್ನೆಯನ್ನು ತಾತ್ಕಾಲಿಕವು ... ದೆಂದೂ, ಇದಕ್ಕೆ ದಕ್ಷಿಣ ಆಫ್ರಿಕವು ಬೆಂಬಲ ನೀಡುವುದೆಂದೂ ವರದಿಯಾಗಿದೆ ಅರ್ಜೆಂಟೈನಾ, ಈಜಿಪ್ಟ್, ಇರಾಕ್ ಮತ್ತು ಸಿರಿಯಾ ದೇಶಗಳು ಈ ಪ್ರಶ್ನೆಯನ್ನು ... ಸಿದವೆಂದೂ ಹೇಳಲಾಗಿದೆ

● ಸ್ಕಿಟ್ಜರ್ಲೆಂಡಿನ ಶಸ್ತ್ರಾಸ್ತ್ರಗಳಿಂದ ತುಂಬಿದ ವಿಮಾನವೊಂದು ಅಕ್ರಮವಾಗಿ ಕರಾಚಿಯಿಂದ ಹೈದರಾಬಾದಿಗೆ ಹೋಯಿತೆಂದೂ ಈ ವಿಚಾರದಲ್ಲಿ ಬ್ರಿಟಿಷ್ ಸರ್ಕಾರದವರು ತನಿಖೆ ನಡೆಸುತ್ತಿದ್ದಾರೆಂದೂ ಹೇಳಲಾಗಿದೆ

ಕಾಶ್ಮೀರದ ಅರಸರು ಪದಚ್ಯುತರಾಗುವರೇ ?

ಕಾಶ್ಮೀರ ಸಂಸ್ಥಾನದಲ್ಲಿ ನಡೆಯುತ್ತಿರುವ ಆಕ್ರಮಣಗಳನ್ನು ತಡೆಗಟ್ಟುವುದರಲ್ಲಿ ಭಾರತ ಮತ್ತು ಕಾಶ್ಮೀರದ ಸಂಯುಕ್ತ ಕಾರ್ಯಾಚರಣೆ ಮತ್ತು ಷೇಕ್ ಅಬ್ದುಲ್ಲಾ ರವರ ಸರ್ಕಾರದ ... ಕಾರ್ಯಕ್ರಮಗಳು ಅಲ್ಲಿನ ಅರಸರಾದ ಶ್ರೀ ಹರಿಸಿಂಗರಿಗೆ ಹಿಡಿಸಲಿಲ್ಲವೆಂದೂ ಇದರ ಪರಿಣಾಮವಾಗಿ ಪ್ರಧಾನಿಯವರಿಗೂ ಮತ್ತು ರಾಜರಿಗೂ ಘರ್ಷಣೆಯುಂಟಾಗಿದೆಯೆಂದೂ ... ಸರ್ಕಾರದ ನಡವಳಿಗಳು ಕಾಶ್ಮೀರದ ... ಅತೃಪ್ತಿಯುಂಟು ಮಾಡಿವೆ ... ಈ ಪರಿಸ್ಥಿತಿಯನ್ನು ಪರಿಹರಿಸಲು ... ರಾಜರು ಸಿಂಹಾಸನ ತ್ಯಾಗ ಮಾಡಿ ... ರಾಜಕುಮಾರರಿಗೆ ಪಟ್ಟವನ್ನು ... ರೀಜನ್ಸೀ ಕೌನ್ಸಿಲ್ಲಿನ ... ನಡೆಸುವುದೊಂದೇ ಉಳಿದಿರುವ ... ಹೇಳಲಾಗಿದೆ.

ಮಹಾತ್ಮರು ಉಪ್ಪಿನಂತೆ; ನಾವೆಲ್ಲರೂ ನೀರಿನಂತೆ

ಮಹಿಳೆಯರ ಸಭೆಯಲ್ಲಿ ರಾಜಾಜಿಯವರ ಭಾಷಣ

ಮೈಸೂರು ೨೩

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಜನ ಸೇವಾ ಸಂಸ್ಥೆಗಳಲ್ಲಿ ನಗರದ ಮಹಿಳೆಯರು ಕಳೆದ ಗುರುವಾರ ಸ್ವಾಗತವನ್ನು ನೀಡಿದಾಗ, ರಾಜಾಜಿಯವರು ಈ ರೀತಿ ಭಾಷಣ ಮಾಡಿದರು:—

ನಿಮ್ಮ ಬಿನ್ನವತ್ತಳೆಯಲ್ಲಿ ಮಹಾತ್ಮರು ಮಡಿದಿರುವರೆಂದೂ, ಮತ್ತು ಅವರ ನನ್ನಲ್ಲಿ ಮತ್ತು ತ್ರಿಭಾನಿಯವರಲ್ಲಿ ಜೀವಿಸುತ್ತಿರುವರೆಂದೂ ತಿಳಿಸಿದ್ದೀರಿ. ಇದು ತಪ್ಪು ಭಾವನೆ. ಅವರು ನಮ್ಮಲ್ಲಿ ಮಾತ್ರ ಅಲ್ಲದೆ, ಎಲ್ಲೆಲ್ಲೂ ಇದ್ದಾರೆ. ಒಂದು ಸಣ್ಣ ಉಪ್ಪಿನ ಕಲ್ಲನ್ನು ನೀರಿನಲ್ಲಿ ಹಾಕಿದರೆ, ನೀರೆಲ್ಲಾ ಉಪ್ಪಾಗುವಂತೆ. ಮಹಾತ್ಮರು ಉಪ್ಪು; ನೀವು ನೀರು. ಮರಣಕ್ಕೆ ಯಾರೂ ಹೆದರಬೇಕಾಗಿಲ್ಲ. ಮಹಾತ್ಮರ ಮರಣಕ್ಕಾಗಿ ಚಿಂತಿಸಬೇಕಾಗಿಲ್ಲ. ಅವರು ಉಪ್ಪಾಗಿದ್ದಾರೆ ಮತ್ತು ಅವರ ಉಪ್ಪನ್ನು ನಾವು ಎಲ್ಲೆಲ್ಲೂ ತೆಗೆದುಕೊಂಡು ಹೋಗೋಣ. ಅಂದರೆ ಎಲ್ಲರೂ ಪ್ರಾಮಾಣಿಕರಾಗಿರಬೇಕು. ಎಲ್ಲರನ್ನೂ ಪ್ರೀತಿಸಬೇಕು. ಮಹಾತ್ಮರ ಉಪದೇಶಗಳಿಗೆ ನಾವು ದ್ರೋಹ ಬಗೆಯಬಾರದು. ನಾವು ಅವರ ಉಪದೇಶಕ್ಕೆ ವಿರೋಧಿಗಳಾದರೆ, ಅವರನ್ನು ಕೊಲೆ ಮಾಡಿದಂತಾಗುವುದು. ಇದಕ್ಕೆ ನ್ಯಾಯಾಂಗ ಮುಖ್ಯವಾದುದಿಲ್ಲ. ನಾವೆಲ್ಲರೂ ಪ್ರಾಮಾಣಿಕರಾಗಿರಬೇಕು, ಮತ್ತು ಅವರ ಬೋಧನೆಯಂತೆ ನಡೆದು ಅನುಸರಿಸಬೇಕು. ಮುಂದಿನ ಸಾರಿ ನಾನು ಮೈಸೂರಿಗೆ ಬಂದಾಗ ನೀವುಗಳು ಮಹಾತ್ಮರ ಉಪ್ಪನ್ನು ವ್ಯರ್ಥ ಮಾಡಿಲ್ಲವೆಂದೂ, ಅದು ನೀರಿನ ಸಾರದಲ್ಲಿ ಇದೆಯೆಂದೂ ಭಾವಿಸಲು ಅನುಕೂಲವಾಗುವಂತೆ ಮಾಡಿ. ನಿಮ್ಮ ಮಹಾರಾಜರವರು ಮತ್ತು ಸರ್ಕಾರಕ್ಕೆ ಬೆಂಬಲ ಕೊಡಿ.

ಗೌರ್ನರ್ ಜನರಲ್ಲರಿಗೆ ಪುಷ್ಪಹಾರ

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮೈಸೂರಿಗೆ ಆಗಮಿಸಿದ್ದಾಗ, ಮೈಸೂರು ವಿದ್ಯಾರ್ಥಿ ವೃಂದದ ಪರವಾಗಿ ಫಸ್ಟ್ ಗ್ರೇಡ್ ಕಾಲೇಜಿನ ಯೂನಿಯನ್ ಸಂಘದ ಅಧ್ಯಕ್ಷರಾದ ಶ್ರೀ ಜಿ ಎಸ್ ರಾವ್ 'ವಾಯು ವಿಮಾನ ನಿಲ್ದಾಣದಲ್ಲಿ ಸ್ವಾಗತವನ್ನು ನೀಡಿದರು ಮತ್ತು ಓರಿಯಂಟಲ್ ಪುಸ್ತಕ ಭಂಡಾರದ ಬಳಿ ಅವರಿಗೆ ಹಾರವನ್ನು ಅರ್ಪಿಸಿದರು. ಜೈನ ಸಂಘದ ಪರವಾಗಿ ತ್ರಿಗಳಾದ ಕೆ ಬಿ ವಜ್ರನಾಥ್ ಮತ್ತು ಎಸ್ ವಿ ಶಾಂತರಾಜ್‌ರವರುಗಳು ಅಶೋಕ ರಸ್ತೆಯಲ್ಲಿ ಹಾರ ತುರಾಯಿಗಳನ್ನು ಅರ್ಪಿಸಿದರು. ಮಹಾರಾಜಾ ಕಾಲೇಜಿನ ಮುಸಲ್ಮಾನ ಸಂಘದ ಪರವಾಗಿ ಶ್ರೀ ಸಿ ಎ ಖ್ವಾಜಾ ಆರೀಫ್‌ರವರು ಹಾರವನ್ನು ಅರ್ಪಿಸಿದರು. ಮಹಿಳಾ ವಿದ್ಯಾರ್ಥಿನಿಯರ ಪರವಾಗಿಯೂ ಹಾರವನ್ನು ಅರ್ಪಿಸಲಾಯಿತು.

ಆಲೂರಿನಲ್ಲಿ ರೆವಿನ್ಯೂ ಮಂತ್ರಿಗಳಿಗೆ ಅದ್ಭುತ ಸ್ವಾಗತ

ಚಾಮರಾಜನಗರ ೨೦

ಕಳೆದ ಸೋಮವಾರ ಈ ತಾಲ್ಲೂಕಿಗೆ ಸೇರಿದ ಆಲೂರು ಗ್ರಾಮಕ್ಕೆ ರೆವಿನ್ಯೂ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರು ಭೇಟಿ ಇತ್ತಿದ್ದಾಗ ಅದ್ಭುತವಾದ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮಿಡಲ್ ಸ್ಕೂಲಿನ ಮುಂಭಾಗದಲ್ಲಿ ನಂದನವನದಂತಹ ಸುಂದರವಾದ ಮಂಟಪವನ್ನು ನಿರ್ಮಿಸಲಾಗಿತ್ತು. ಅದರ ಮುಂಭಾಗದಲ್ಲಿ ಮೈಸೂರು ಮತ್ತು ರಾಷ್ಟ್ರ ಧ್ವಜಗಳು ಸ್ತಂಭಗಳ ಮೇಲೆ ಮನೋಹರವಾಗಿ ಹಾರಾಡುತ್ತಿದ್ದುವು. ಗ್ರಾಮದ ಮತ್ತು ನೆರೆ ಹೊರೆಯಿಂದ ಸುಮಾರು ೫-೬ ಸಾವಿರ ಜನರು ಸೇರಿದ್ದರು. ಎಲ್ಲರಲ್ಲಿಯೂ ಅಪರಿಮಿತವಾದ ಉತ್ಸಾಹವು ಎದ್ದು ಕಾಣುತ್ತಿತ್ತು.

ಸಚಿವರು ಜಿಲ್ಲಾ ಬೋರ್ಡ್ ಅಧ್ಯಕ್ಷರೂ, ಜಿಲ್ಲಾಧಿಕಾರಿಗಳೂ, ಪತ್ರಿಕಾ ಪ್ರತಿನಿಧಿಗಳೂ, ಇತರ ನೌಕರ ಮಹನೀಯರುಗಳೂ ಸಂಜೆ ೭ ಗಂಟೆಗೆ ಗ್ರಾಮದಿಂದ ೨ ಮೈಲಿ ದೂರವಿರುವ ಸ್ಥಳಕ್ಕೆ ಬಂದು ಇಳಿದರು. ಅಲ್ಲಿಂದ ಮುಂದೆ ಪಟ್ಟಣದ ಚೆನ್ನಾಗಿಲ್ಲದ ಪ್ರದೇಶದಿಂದ ಕಾಲು ನಡಿಗೆಯಲ್ಲೇ ಮುಂದಕ್ಕೆ ಸಾಗಿದರು. ಊರಿನ ಮುಂಭಾಗದಲ್ಲಿರುವ ಹೊಳೆಯನ್ನು ಅವರುಗಳು ಎತ್ತಿನ ಗಾಡಿಗಳಲ್ಲಿ ಕುಳಿತು ದಾಟಿದರು. ಗ್ರಾಮದ ಸುತ್ತಲೂ ಹೆಗ್ಗಾಲದಲ್ಲಿ ಹೊಳೆಯು ಆವರಿಸಿಕೊಂಡು ಸಂಚಾರಕ್ಕೆ ಆಗುತ್ತಿರುವ ಅಡಚಣೆಯು ಎಲ್ಲರಿಗೂ ಮನವರಿಕೆಯಾಯಿತು.

ಮಂಟಪದಲ್ಲಿ ಸಭೆಯ ಕಾರ್ಯಕ್ರಮಗಳು ಪ್ರಾರ್ಥನೆಯೊಡನೆ ಆರಂಭವಾದುವು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಭಾಷಣ ಮಾಡಿ ಸಚಿವರನ್ನು ಸ್ವಾಗತಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಆಗರಂ ಸೂರ್ಯನಾರಾಯಣ ಪಂಡಿತರು ಭಾಷಣ ಮಾಡಿ ಇ ದಿನ ಪ್ರಜಾ ಸರ್ಕಾರದಿಂದ ತಮಗೆ ಬೇಕಾದ ಸೌಲಭ್ಯಗಳನ್ನು ಜನರು ಹೇಗೆ ಪಡೆಯಬಹುದೆಂಬುದನ್ನು ವಿವರಿಸಿದರು.

ಕಾಳಸಂತೆಯಲ್ಲಿ ಸೀಂದಿ ಮಾರಾಟ

ಅಗರ—ಮಾಂಬಳ್ಳಿ ೨೦

ಇಲ್ಲಿ ಸೀಂದಿ ಮಾರಾಟವನ್ನು ಸರ್ಕಾರದವರು ನಿಷೇಧಿಸಿದ್ದರೂ ಕೂಡ, ಯಳಂದೂರಿನಿಂದ ಸೀಂದಿಯನ್ನು ಕದ್ದು ಬೆಳಗೆ ತಂದು, ಇಲ್ಲಿ ಅಕ್ರಮವಾಗಿ ಕಾಳ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆಯೆಂದೂ, ಇದನ್ನು ಕೂಡಲೇ ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮವನ್ನು ಕೆಗೆದುಕೊಳ್ಳಬೇಕೆಂದೂ ಕೋರಲಾಗಿದೆ.

ಫ್ರೆಂಚ್‌ರಾಕ್ಸನ್ನು ಹಿರೋಡೆ ಎಂದು ಕರೆಯಬೇಕು

ಹಿರೋಡೆ "ಫ್ರೆಂಚ್‌ರಾಕ್ಸ್" ಎಂದು ಬ್ರಿಟಿಷರು ನಾಮಕರಣ ಮಾಡಿರುವುದನ್ನು ಈಗಲೂ ಮುಂದುವರಿಸುತ್ತಿರುವುದು ತುಂಬಾ ಶೋಚನೀಯವೆಂದೂ, ಕೂಡಲೇ ಅಧಿಕಾರಿಗಳು ಅದರ ಹೆಸರನ್ನು ಹಿರೋಡೆಯೆಂದು ಬದಲಾಯಿಸಬೇಕೆಂದೂ ಕನ್ನಡಿಗರೊಬ್ಬರು ಬರೆದಿರುತ್ತಾರೆ.

ಶ್ರೀ ಎ ಎಂ ಮಾದಪ್ಪನವರು ಸಚಿವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಗ್ರಾಮಕ್ಕೆ ಆಗಬೇಕಾದ ಸೌಲಭ್ಯಗಳ ವಿಚಾರಗಳನ್ನು ಅರಿಕೆ ಮಾಡಿಕೊಂಡರು.

ಸಚಿವರು ಭಾಷಣ ಮಾಡಿ ಈ ಗ್ರಾಮದ ನಿವಾಸಿಗಳ ಉತ್ಸಾಹ ಮತ್ತು ಶ್ರದ್ಧೆಗಳಿಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ಅಲ್ಲಿಗೆ ಅವಶ್ಯಕವಾಗಿರುವ ರಸ್ತೆಯ ಸೌಲಭ್ಯವನ್ನು ಅಗತ್ಯವಾಗಿ ಕಲ್ಪಿಸಿಕೊಡುವಂತೆ ಭರವಸೆ ಇತ್ತರು ಮತ್ತು ಗ್ರಾಮಾಂತರ ಪ್ರದೇಶಗಳ ರೈತರ ಹಿತಸಾಧನೆಗೆ ಬೇಕಾದ ಎಲ್ಲಾ ಕೆಲಸ ಕಾರ್ಯಗಳನ್ನೂ ಸರ್ಕಾರದಿಂದ ಮಾಡಿಸಿಕೊಡುವುದಾಗಿಯೂ ತಿಳಿಸಿದರು.

ವಂದೇಮಾತರಂ ಗೀತೆಯೊಡನೆ ಸಭಾ ರಂಭವು ಮುಕ್ತಾಯವಾಯಿತು. ಗ್ರಾಮಸ್ಥರು ಏರ್ಪಡಿಸಿದ್ದ ಉಪಾಹಾರ ಕೂಟದಲ್ಲಿ ಅತಿಥಿಗಳೆಲ್ಲರೂ ಭಾಗಿಗಳಾಗಿ ರಾತ್ರಿ ೧೦ ಗಂಟೆಗೆ ಮುಂದಕ್ಕೆ ತೆರಳಿದರು.

ದೇವಸ್ಥಾನಗಳಲ್ಲಿ ಮುಸ್ಲಿಂ ನಿರಾಶ್ರಿತರ ಕೇಂದ್ರ

ಸಿಂಧ್ ಪ್ರಾಂತ್ಯದ ಶಿಕಾರ್‌ಪುರ ಕೃಷ್ಣ ಮಂದಿರದ ಶ್ರೀ ಕೃಷ್ಣ ಮತ್ತು ರ ದೇವತೆಗಳನ್ನೂ, ರಾಮಚಂದ್ರ ದ ಸ್ಥಾನದ ಶ್ರೀರಾಮ ದೇವರನ್ನೂ ಅ ಮುಸ್ಲಿಮರು ಒಡೆದು ಚೂರು ಮಾಡಿ ವಸ್ಥಾನಗಳನ್ನು ನಿರಾಶ್ರಿತರ ಕೇಂದ್ರಗಳನ್ನಾಗಿ ಉಪಯೋಗಿಸುತ್ತಿದ್ದಾರೆಂದೂ ತ್ತು ಪಂಚವಟಿ ಬಾಲ ಹನುಮಾನ ದೇವಸ್ಥಾನವನ್ನು ಜನಜನ ಕಟ್ಟೆಯಾಗಿ ಮಾಡಲಾಗಿದೆಯೆಂದೂ ವರದಿಯಾ

ಬ್ರಿಟಿಷ್ ಯುವಕರು ಸೈನ್ಯಕ್ಕೆ ಸೇರುತ್ತಿಲ್ಲ

ಬ್ರಿಟನ್ನಿನ ಅನೇಕ ಯುವಕರು ಸೈನ್ಯಕ್ಕೆ ಸೇರುವುದನ್ನು ತಪ್ಪಿಸಿಕೊಳ್ಳಲು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರುವರೆಂದು ವರದಿಯಾಗಿದೆ. ಕಮ್ಯೂನಿಸ್ಟರು ನಂಬಿಕೆಗೆ ಅರ್ಹರಲ್ಲವೆಂದು ಭಾವಿಸಿ ಸರ್ಕಾರದವರು ಸೈನ್ಯಕ್ಕೆ ಅವರನ್ನು ಸೇರಿಸಿಕೊಳ್ಳದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ರಾಜಾಜಿ ಸ್ಟೋರ್ಸ್

ರಾಜಧಾನಿಯ ಪ್ರಭಾ ಟಾಕೀಸ್ ಭವನದಲ್ಲಿ ಶ್ರೀ ಕೆ ಎಸ್ ರಾಜಣ್ಣನವರು ನಿನ್ನೆ ರಾಜಾಜಿ ಸ್ಟೋರ್ಸ್ ಎಂಬ ಅಂಗಡಿಯನ್ನು ತೆರೆದ ಸಂದರ್ಭದಲ್ಲಿ ಅನೇಕ ಮಹನೀಯರನ್ನು ಆಹ್ವಾನಿಸಿ ಸತ್ಕರಿಸಿದರು.

First Grade College Union
MYSORE
Kindly Elect
H. C. VISWANATHAN
(Ex-Member, Managing Committee)
AS
The President of your Union
for the year 1948-49

ಎಸ್. ಎನ್. ಪಂಡಿತ್
ಅಂಡ್ ಸನ್ಸ್ ರವರ
ಯೂನಿವರ್ಸಲ್ ಪೇಯಿನ್ ಬಾಮ್
ತಲೆ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಕ್ರಯ ೦-೧೨-೦
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾ ಮಲಕ ತೈಲ:—)
—ತಲೆಗೆ ಹಾಕಲು ಉತ್ತಮ ಅಭ್ಯಂಗನ ತೈಲಗಳು.
ಪಂಚಾಮೃತ— ಮಲೇರಿಯಾ ಗಡೆಗಳಿಗೆ ಸಿದ್ಧ ಸಂಜೀವಿನಿ.
ಮಹಾಕೇಶಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಬ್ರೇನ್ ಟಾನಿಕ್ ಕ್ರಯ ೨-೦-೦
ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನೀವು ಅನೇಕ ಬೆಂಗಾಲೀ ಸಿಲ್ಕ್ ಸೀರೆಗಳನ್ನು ನೋಡಿದ್ದೀರಿ. ಬಾಬುರಾವ್ ಕಂಪೆನಿಯಲ್ಲಿರುವುದನ್ನೂ ನೋಡಿ. ಎಂಥೆಂಥಾ ಒಳ್ಳೊಳ್ಳೆ ನಮೂನೆಗಳು ಎಂಬುದು ನಿಮ್ಮ ಮನಸ್ಸಿಗೇನೇ ಖಾತ್ರಿಯಾಗುತ್ತದೆ. ಬೆಂಗಾಲೀ ಸಿಲ್ಕ್ ಸೀರೆಗಳಿಗೆ ಹೆಸರುವಾಸಿಯಾದ ಅಂಗಡಿ ಎಂದರೆ ಬಾಬುರಾವ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು.

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಆಟಗಳು
ತಾ|| 23-8-48 ರಿಂದ 2 ದಿನಗಳು ಮಾತ್ರ
GOLDEN EAR-RINGS
ಗೋಲ್ಡನ್ ಇಯರ್ ರಿಂಗ್ಸ್
ತಾ|| 25-8-48 ರಿಂದ ೩ ದಿನಗಳು ಮಾತ್ರ
DESERT FURY ಡೆಸರ್ಟ್ ಫ್ಯೂರಿ
(ವರ್ಣರಂಜಿತ ಚಿತ್ರ)
ತಾ|| 27-8-48 ರಿಂದ 1 ವಾರ ಮಾತ್ರ
Cecil B De Mills ರವರ ಅಮೋಘ ವರ್ಣರಂಜಿತ ಚಿತ್ರ
UNCONQUERED ಅನ್‌ಕಾನ್‌ಕರ್ಡ್

Edited printed and published by R. Nagarajan at the Sadhvi Press, Subbaiah Road Mysore.

ಫೋನ್ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೨೪-೮-೪೮ [ಸಂಚಿಕೆ ೩೩

ಕಾಶ್ಮೀರದಲ್ಲಿ ೫೦೦ ಬೌದ್ಧ ಭಿಕ್ಷುಗಳ ಕೊಲೆ

...ನ್ಯೂ ಸಚಿವರ ಪ್ರವಾಸ

...ತರ ಕುಂದುಕೊರತೆಗಳ ಪರಿಶೀಲನೆ

ಮೈಸೂರು ೨೩

...ದವಾರ ರೆವಿನ್ಯೂ ಸಚಿವರಾದ ಶ್ರೀ ... ಸಿದ್ದಯ್ಯನವರು ಈ ಜಿಲ್ಲೆಯ ಹಲ ...ಲ್ಲೂಕುಗಳಲ್ಲಿ ಪ್ರವಾಸ ಮಾಡಿ ಗ್ರಾ...ಕರಗಳ ರೈತರ ಕುಂದುಕೊರತೆಗಳ ಪರಿಶೀಲಿಸಿದರು. ಕಳೆದ ಸೋಮ ...ಅವರು ಸುಮಾರು ೧೫೦ ಮೈಲಿ ಸಂ... ೩೩ ಗ್ರಾಮಗಳಿಗೆ ಭೇಟಿಯಿತ್ತರು. ...ನೇಕ ಸ್ಥಳಗಳಲ್ಲಿ ಅವರು ಹರಿಜನ ...ಗೆ ಹೋಗಿ ಅವರಿಗೆ ಬೇಕಾದ ಮ... ...ಶಸ್ವತ್ವದಡಿಯದ ಜಮೀನು, ಮ...ರ ಶಾಲೆ ಇವೇ ಮುಂತಾದುವುಗಳ ಅವರ ಅರಿಕೆಗಳನ್ನು ಲಾಲಿಸಿದರು. ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರ ಸಹಾನುಭೂತಿಯನ್ನು ವ್ಯಕ್ತ ಪಡಿ...ಗಿ ೧೪ ಲಕ್ಷ ರೂ. ಗಳನ್ನು ಮೀಸ...ಡಲಾಗಿದೆಯೆಂದು ಸೂಚಿಸಿದರು.

...ಜನಗೂಡಿನ ಬಳಿ ಇರುವ ... ಗಾ... ...ಪಂಚಾಯತಿ ಛೇರ್‌ಮನ್ನರು ಸಚಿವ...ನ್ನ ಪತ್ರಿಕೆಯನ್ನು ಅರ್ಪಿಸಿದರು ಊ...ಳ ಇರುವ ಎಕ್ಕೆ ಹೊಳೆಗೆ ಸೇತುವೆ ...ದ ಅವಶ್ಯಕತೆಯನ್ನು ಒತ್ತಿ ಹೇಳಿದ ...ಚಿವರು ಸೇತುವೆಯ ಸ್ಥಳವನ್ನು ಪರಿ...ನೆ ಮಾಡಿ ಇನ್ನು ಒಂದು ವರ್ಷದೊ...ಳ ಸೇತುವೆಯನ್ನು ಕಟ್ಟಲಾಗುವುದೆಂ...ಳಿಸಿದರು

...ನಂತರ ನಂಜನಗೂಡು, ಟಿ ನರಸೀ...ಳ ಮಾರ್ಗವಾಗಿ ಮೂಗೂರಿಗೆ ಭೇಟಿ ...ಲಾಯಿತು. ದಾರಿಯಲ್ಲಿ ಕ.ರಿ.ಬೂ...ದ್ದ ಹಳ್ಳವನ್ನು ಅಜಮಾಯಿಷಿ ಮಾಡಿ ...ಈಗಿರುವ ಹೀನಸ್ಥಿತಿಯನ್ನು ಕಂಡ ...ಎತ್ತರವಾದ ಪುಟ್ಟದಲ್ಲಿ ಕಾಸ್‌ವೇ ...ಕಟ್ಟಬೇಕೆಂದು ಸೂಚಿಸಿದರು

...ಮೂಗೂರಿನಲ್ಲಿ ಪೌರಸಭೆಯವರು ಸ...ನ್ನು ಸ್ವಾಗತಿಸಿ ಆ ಊರಿಗೆ ಬೇಕಾದ ...ಬೃತ್ತಿ, ನೀರಿನ ಸೌಕರ್ಯ ಮತ್ತು ರ...ಸ್ತೆಗಳ ಬಗ್ಗೆ ಮನವಿ ಮಾಡಿ ...ತು ಅವುಗಳನ್ನು ಸಹಾನುಭೂತಿ...ನ ಪರಿಶೀಲಿಸುವುದಾಗಿ ಸಚಿವರು ...ಕೊಟ್ಟರು.

...ನಂತರ ಅಲ್ಲಿನ ತಿಬ್ಬದೇವಿಯ ವರ...ಸ್ಥಾನಕ್ಕೆ ಹೋಗಿ ದೇವರ ದರ್ಶನ ...ಮಾಡಿಕೊಂಡ. ಸಂತೇ ಮರಹಳ್ಳಿ... ...ಟಿ ಇತ್ತರು ವ ಕಳ್ಳಿ ವ್ಯಾಂಕ ದ ರೈ... ಅಪಘಾತಗಳನ್ನು ವಿಚಾರಿಸಿ ಸಂತೆ...ಯನ್ನು ಅಜಮಾಯಿಷಿ ಮಾಡಿ ಗ್ರಾ...ಸಭೆಗೆ ತೆರಳಿ ಪಂಚಾಯತಿ ಅಧ್ಯ...ಒಪ್ಪಿಸಿದ ಬಿನ್ನವತ್ತಳೆಯನ್ನು ಸ್ವೀಕ...ರಾಯಿತ ಮರಳ್ಳ ಸಂತೆಯಿಂದ ಕಳೆ...೫೦ ವರ್ಷಗಳಿಂದಲೂ ಸಹಸ್ರಾರು ...ವರಮಾನವಿದ್ದರೂ ಗ್ರಾಮದ ಅಭಿವೃ...ಗೆ ಯಾವ ಏರ್ಪಾಡನ್ನೂ ಮಾಡಿಲ್ಲ... ಅದರಲ್ಲಿ ತವ ...ವಿಸಲಾಗಿತ್ತು ಜಿ...ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ...ಚೆನ್ನಬಸಪ್ಪನವರು ಮಾಕನಾಡಿ ಗ್ರಾ...ಮಸ್ಥರು ಅಭಿವೃದ್ಧಿ ವಿಷಯಗಳನ್ನು ಸುಮ್ಮನಿರಾ...ಯ. ಸೌಕರ್ಯ ಒದಗಿಸುವುದಾಗಿ ತಿಳಿಸಿ ಗ್ರಾಮದ ಅಭಿವೃದ್ಧಿಗಾಗಿ 2 ಸಾವಿರ ...ನ ವಿಶೇಷ ಗ್ರಾಂಟನ್ನು ಕೊಡುವು...ಚಿವರು ತಿಳಿಸಿ ಗ್ರಾಮಸ್ಥರೆಲ್ಲರೂ ...ಒಂದೆ ಪರಸ್ಪರ ಅನ್ಯೋನ್ಯದಿಂದ ...ಬೇಕೆಂದು ಸೂಚಿಸಿದರು

ಪಾಕಿಸ್ತಾನದಲ್ಲಿ ಹೂರರ ಹಾವಳಿ

ಸಿಂಧ್ ಮತ್ತು ಇತರ ಪಾಕೀಸ್ತಾನದ ಪ್ರದೇಶಗಳಲ್ಲಿ ಹೂರ್ ಜನರಿಗೂ ಪಾಕಿಸ್ತಾನದ ಸೈನ್ಯಗಳಿಗೂ ಕದನ ನಡೆಯುತ್ತಿದೆಯೆಂದೂ ಇದರಿಂದ ಜಿನ್ನಾರವರಿಗೆ ತಲೆನೋವು ಉಂಟಾಗಿದೆಯೆಂದೂ ಹೇಳಲಾಗಿದೆ ಹೂರರ ಗಲಭೆಯನ್ನು ಅಡಗಿಸಲು ಸಿಂಧಿನ ಮಾಜಿ ಪ್ರಧಾನಿ ಖುರ್‍ರೋವ ರೊಬ್ಬರಿಂದಲೇ ಸಾಧ್ಯವೆಂದೂ, ಅದ್ದರಿಂದ ಅವರ ಮೇಲೆ ನಡೆಯುತ್ತಿರುವ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಬಹುದೆಂದೂ ಹೇಳಲಾಗಿದೆ ಸಿಂಧ್ ಗೌರ್ನರ್ ಷೇಕ್ ಗುಲಾಂ ಹುಸೇನ್ ಹಿದಯತುಲ್ಲಾರವರು ತಮ್ಮ ಸ್ಥಾನವನ್ನು ಬಿಟ್ಟು ಹೋದರು, ಖುರ್‍ರೋವರು ವಾಪಸ್ ಬರಲಾರರೆಂದೂ ಅಭಿಪ್ರಾಯಪಡಲಾಗಿದೆ

ದ್ವಿತೀಯ ರಣರಂಗದ ಪ್ರಾರಂಭ ಭಿಕ್ಷೆ ಜಿನ್ನಾರವರ ಸನ್ನಾಹ

ಭಾರತದ ಮೇಲೆ ದ್ವಿತೀಯ ರಣರಂಗವನ್ನು ತೆರೆಯಲು ಪಾಕಿಸ್ತಾನದ ಗೌರ್ನರ್ ಜನರಲ್ಲಾಗಿರುವ ಮಿ॥ ಜಿನ್ನಾರವರು ಕಾಶ್ಮೀರದ ರಣಕ್ಷೇತ್ರದ ಕೇಂದ್ರ ಕಛೇರಿಯಲ್ಲಿ ಸೈನ್ಯಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರೆಂದೂ ಮತ್ತು ಆ ಪ್ರದೇಶದಲ್ಲಿ ಪಾಕಿಸ್ತಾನ ಸೈನ್ಯಗಳ ಚಟುವಟಿಕೆಯನ್ನು ಪರಿಶೀಲಿಸಿದರೆಂದೂ ವರದಿಯಾಗಿದೆ ಪಾಕಿಸ್ತಾನದ ಪ್ರಗತಿಗೆ ಕಾಶ್ಮೀರವು ಅತ್ಯಗತ್ಯವೆಂದೂ, ಅಲ್ಲಿ ಬಿಟ್ಟು ಹೋಗಿರುವ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಬೇಕೆಂದು ಪಾಕಿಸ್ತಾನದ ಸೈನ್ಯಾಧಿಕಾರಿಗಳಿಗೆ ಜಿನ್ನಾರವರು ಸೂಚನೆ ಕೊಟ್ಟರು ಎಂದೂ ಹೇಳಲಾಗಿದೆ

ರಾತ್ರಿ ೧೧ ಗಂಟೆಗೆ ಜಾಮರಾಜನಗರವನ್ನು ತಲುಪಿದರು ಅಲ್ಲಿನ ಪೌರಸಭೆಯವರು ತಮಗೆ ಬೇಕಾದ ಸೌಲಭ್ಯಗಳನ್ನು ಕುರಿತು ಮನವಿ ಮಾಡಿಕೊಂಡರು ಅವುಗಳ ಬಗ್ಗೆ ಸಚಿವರು ಸಹಾನುಭೂತಿಯನ್ನು ವ್ಯಕ್ತಪಡಿಸಿ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಸೂಚಿಸಿದರು. ಅನಂತರ ಕಾಂಗ್ರೆಸ್ ಕಾರ್ಯಕರ್ತರುಗಳೊಡನೆ ಸ್ವಲ್ಪ ಕಾಲ ಮಾತುಕತೆ ನಡೆಸಿ, ಸುತ್ತೂರು ವೀರ ಸಿಂಹಾಸನಾಧೀಶ್ವರ ಸ್ವಾಮಿಗಳು ಏರ್ಪಡಿಸಿದ್ದ ಭೋಜನ ಕೂಟ ಮತ್ತು ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿ ರಾತ್ರಿ 2 ಗಂಟೆಗೆ ರಾಜಧಾನಿಗೆ ಹಿಂತಿರುಗಿದರು

ಬೆಂಕಿ ಅನಾಹುತ

ಮೈಸೂರು ೨೪

ಮೊನ್ನೆ ರಾತ್ರಿ ೮ ಗಂಟೆ ಸಮಯದಲ್ಲಿ ಮಂಡಿ ಮೊಹಲ್ಲಾ ಕುಂಬಾರಗೇರಿಯ ಶ್ರೀ ಚಲುವರಾಯ ಶೆಟ್ಟರ ಮನೆಯಲ್ಲಿ ಬೆಂಕಿ ಪ್ರಮಾದವುಂಟಾಗಿ ಸುಮಾರು ೧೫೦೦೦ ರೂ ನ ಸಾಮಾನುಗಳು ನಷ್ಟವಾದುವೆಂದು ತಿಳಿದುಬಂದಿದೆ ಆ ಮನೆಯಲ್ಲಿ ವಾಸವಾಗಿರುವ ಮಹಮ್ಮದ ಇಸಾಕ್ ಎಂಬುವರು ಅಲ್ಲಿ ಹರಳೆಣ್ಣೆ, ನೀಲಗಿರಿ ಎಣ್ಣೆ, ಕರ್ಪೂರದ ಎಣ್ಣೆ, ಫೆನಾಯಿಲ್ ಮುಂತಾದುವನ್ನು ದಾಸ್ತಾನು ಮಾಡಿದ್ದರೆಂದೂ, ಅವುಗಳು ಬೆಂಕಿಗೆ ಆಹುತಿಯಾದುವೆಂದೂ, ಹಾಲು ಕಾಯಿಸಲು ಒಲೆಯನ್ನು ಹತ್ತಿಸಿದಾಗ ಪಕ್ಕದಲ್ಲಿದ್ದ ಹುಲ್ಲಿನ ತಂತಿಗೆ ಬೆಂಕಿ ಹತ್ತಿ ನೋಡ್ಲಿಂದ ಅನಾಹುತವುಂಟಾಯಿತೆಂದೂ ವರದಿಯಾಗಿದೆ ಫೈರ್ ಬ್ರಿಗೇಡಿನವರು ಕೂಡಲೇ ಬಂದು ರಾತ್ರಿ ೧೧ ಗಂಟೆ ವರೆಗೆ ಪ್ರಯತ್ನದಿಂದ ಬೆಂಕಿಯನ್ನು ಆರಿಸಿ ಹತೋಟಿಗೆ ತಂದರು.

೨೨ ಅಂಗುಲದ ಮಹಿಳೆ: ೨ ಪೌಂಡು ತೂಕದ ಮಗು

ಬ್ರಿಟನ್ನಿನ ಎಡಿತ್ ಬರ್ಲೋ ಎಂಬಾಕೆಯು ಪ್ರಪಂಚದಲ್ಲೇ ಅತಿ ಕುಳ್ಳ ಹೆಂಗಸೆಂದೂ, ಆಕೆಗೆ ೨೧ ವರ್ಷ ವಯಸ್ಸಾಗಿ, ೨೨ ಇಂಚು ಎತ್ತರವಾಗಿರುವಳೆಂದೂ, ೨೫ ಪೌಂಡುಗಳು ತೂಕವಿರುವಳೆಂದೂ ವರದಿಯಾಗಿದೆ ಆಕೆಗೆ ೨ ಪೌಂಡುಗಳ ತೂಕವುಳ್ಳ ಮಗುವು ಹುಟ್ಟಿದೆಯೆಂದೂ, ಅದು ವಿಶ್ವದಲ್ಲಿ ಅತಿ ಪುಟ್ಟ ಮಗುವೆಂದೂ ಹೇಳಲಾಗಿದೆ

ಕಾಶ್ಮೀರ್ ಧಾಳಿಕಾರರಿಂದ ೫೦೦ ಮಂದಿ ಬೌದ್ಧರ ಕೊಲೆ

ಕಾಶ್ಮೀರದ ಕಣಿವೆಯಲ್ಲಿರುವ ಗಾನಸಾರ ಎಂಬ ಬೌದ್ಧ ವಿಹಾರದ ಲಾಮಾರವರನ್ನೂ ಮತ್ತು ೫೦೦ ಜನ ಬೌದ್ಧರುಗಳನ್ನೂ ಧಾಳೀಕಾರರೂ ಮತ್ತು ಪಾಕಿಸ್ತಾನದ ಸೈನಿಕರು ಕೊಲೆ ಮಾಡಿದರೆಂದು ವರದಿಯಾಗಿದೆ ಅನೇಕ ಬೌದ್ಧರು ಮತ್ತು ಸ್ತ್ರೀಯರನ್ನು ಬಲಾತ್ಕಾರವಾಗಿ ಮುಸ್ಲಿಂ ಮತಕ್ಕೆ ಸೇರಿಸಲಾಗಿದೆಯೆಂದೂ, ಆ ಪ್ರದೇಶದಲ್ಲಿ ಧಾಳಿಕಾರರ ಲೂಟಿ ಮತ್ತು ಅಮಾನುಷ ಕೃತ್ಯಗಳು ವಿಪರೀತವಾಗಿವೆಯೆಂದೂ ಹೇಳಲಾಗಿದೆ ಅನೇಕ ಬೌದ್ಧ ವಿಹಾರಗಳನ್ನು ನಾಶಪಡಿಸಲಾಗಿದೆ

ಓವರ್ ಲೋಡಿಗಾಗಿ ೧೦೦ ರೂ. ಜುಲ್ಮಾನೆ

ಮೈಸೂರು ೨೪

ಈ ದಿನ ಬೆಂಗಳೂರಿನಿಂದ ಕಡಲೇ ಕಾಯಿಯನ್ನು ತುಂಬಿದ್ದ ಎಂ. ವೈ. ಇಡ್. ೭೩೬೧ ನೇ ನಂಬರ್ ಲಾರಿಯನ್ನು ಓವರ್ ಲೋಡ್ ಮಾಡಿದ್ದನೆಂದು ಅದರ ಡ್ರೈವರಾದ ಮುನಿಸ್ವಾಮಿ ಎಂಬುವನ ಮೇಲೆ ನಗರ ಪೋಲೀಸರು ಮೊಕದ್ದಮೆ ಹೂಡಿದ್ದರು. ಪ್ರಥಮ ನ್ಯಾಯಾಧೀಶರಾದ ಶ್ರೀ ಗೋಪಾಲರಾಜೇ ಅರಸಿನವರು ಅವನಿಗೆ ೧೦೦ ರೂ ಜುಲ್ಮಾನೆ ಕಟ್ಟದಿದ್ದಲ್ಲಿ ೨೫ ದಿನಗಳ ಸಾದಾ ಸಜವನ್ನು ವಿಧಿಸಿದ್ದಾರೆ.

ಪಾಕಿಸ್ತಾನದ ೧೨೭ ಹಳ್ಳಿಗಳು ನೀರಿನಲ್ಲಿ ಮುಳುಗಿವೆ

ಸಿಂಧೂ ನದಿಯಲ್ಲಿ ವಿಪರೀತ ಪ್ರವಾಹವು ಬಂದು ಸಕ್ಕರ್-ಬೆಗಾರಿ ಅಣೆಕಟ್ಟು ಒಡೆದು ಹೋಗಿ, ೧೨೭ ಹಳ್ಳಿಗಳು ನೀರಿನಲ್ಲಿ ಮುಳುಗಿ ಹೋಗಿವೆಯೆಂದೂ, ಬಲೂಚಿಸ್ತಾನದ ರಾಜಧಾನಿಯಾದ ಕ್ವೆಟ್ಟಾ ನಗರವು ಪಾಕಿಸ್ತಾನದ ಇತರ ಭಾಗಗಳಿಂದ ಪ್ರತ್ಯೇಕಿಸಲ್ಪಟ್ಟು, ರೈಲು ಮತ್ತು ಇತರ ಸಂಚಾರ ಮಾರ್ಗಗಳಿಗೆ ಅಡಚಣೆಯುಂಟಾಗಿದೆಯೆಂದೂ ವರದಿಯಾಗಿದೆ

ಮದರಾಸಿನ ೯ ಜಿಲ್ಲೆಗಳಲ್ಲಿ ಪಾನನಿರೋಧ

ಮದರಾಸ್ ನಗರ, ತಿನ್ನವೆಲ್ಲಿ, ರಾಮನಾಡ, ದಕ್ಷಿಣ ಅರ್ಕಾಟ್, ಚಿಂಗಲ್‌ಪೇಟೆ, ಕೃಷ್ಣ, ಪಶ್ಚಿಮ ಮತ್ತು ಪೂರ್ವ ಗೋದಾವರಿ ವೈಜಾಗಪಟ್ಟಣ ಈ ೯ ಜಿಲ್ಲೆಗಳಲ್ಲಿ ಅರುವ ಅಕ್ಟೋಬರಿನಿಂದ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಮದರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ನಿರ್ಧಾರ ಮಾಡಿದ್ದಾರೆ.

ನಿಜಾಂ ವಿರುದ್ಧ ನಿವೃತ್ತ ನೌಕರರಿಗೆ ವೇತನವಿಲ್ಲ

ಇತ್ತೀಚೆಗೆ ಹೈದರಾಬಾದ್ ಸಂಸ್ಥಾನದ ಕೆಲವು ನೌಕರರು ಮತ್ತು ನಿಜಾಂ ಸರ್ಕಾರದ ಮೇಲೆ ವಿರುದ್ಧ ಪ್ರಚಾರ ಮಾಡಿದ ಎಲ್ಲಾ ಹಿಂದೂ ಮತ್ತು ಮುಸ್ಲಿಂ ನಿವೃತ್ತ ಸರ್ಕಾರಿ ನೌಕರರುಗಳ ವೇತನವನ್ನು ನಿಲ್ಲಿಸಬೇಕೆಂದು ನಿಜಾಂ ಸರ್ಕಾರದ ಮಂತ್ರಿ ಮಂಡಲವು ನಿರ್ಧರಿಸಿದೆಯೆಂದು ಹೇಳಲಾಗಿದೆ

ನಿಜಾಮರ ನಿವೃತ್ತ ಅಧಿಕಾರಿಗಳ ದಸ್ತಗಿರಿ

ಹೈದರಾಬಾದ, ಭಾರತಕ್ಕೆ ಸೇರಬೇಕೆಂದೂ ಮತ್ತು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದೂ ನಿಜಾಮರಿಗೆ ಸಲಹೆ ಇತ್ತ ನಿವೃತ್ತ ಸರ್ಕಾರಿ ಅಧಿಕಾರಿಗಳಾದ ನವಾಬ್ ಮನ್ಸೂರ್ ಜಂಗ್ ಮತ್ತು ಮಿರ್ಜಾ ಅಕ್ಬರ್ ಅಲಿರವರುಗಳನ್ನು ದಸ್ತಗಿರಿ ಮಾಡಲಾಗಿದೆ ಅವರುಗಳ ವೇತನವನ್ನೂ ವಜಾ ಮಾಡಲಾಗಿದೆ

ಹೈದರಾಬಾದ್ ಪತ್ರಿಕಾ ಸಂಪಾದಕರ ಕೊಲೆ

ಭಾರತದ ಪರವಾಗಿ ಲೇಖನಗಳನ್ನು ಬರೆಯುತ್ತಿದ್ದರೆಂದು ಹೈದರಾಬಾದಿನ ಮುಸ್ಲಿಂ ಪತ್ರಿಕೆಯ ಸಂಪಾದಕರಾದ ಜನಾಬ್ ಷೋಯಬುಲ್ಲಾ ಖಾನ್‌ರವರನ್ನು ರಜಾಕರು ಅವರ ಮನೆ ಮುಂದೆಯೇ ಕೊಲೆ ಮಾಡಿದರೆಂದು ವರದಿಯಾಗಿದೆ. ಅವರು ತಮ್ಮ ಕಛೇರಿಯಿಂದ ರಾತ್ರಿ ೧ ಗಂಟೆಯ ಸಮಯದಲ್ಲಿ ಹಿಂದಿರುಗುತ್ತಿದ್ದಾಗ, ಕೆಲವು ಸಶಸ್ತ್ರ ... ಅವರ ಮೇಲೆ ಗುಂಡು ಹಾರಿಸಿದ ... ಖಡ್ಗದಿಂದ ಅವರ ... ಕತ್ತರಿಸಿದರೆಂದೂ, ಅವರ ಸಹಾಯ... ಅವರ ಭಾವನನ್ನು ... ಗಾಯಪಡಿಸಿದರೆಂದೂ ಹೇಳ...

ದೇವಸ್ಥಾನಗಳಲ್ಲಿ ಹರಿಜನ ಧರ್ಮದರ್ಶಿಗಳು

ಅಖಿಲಕರ್ನಾಟಕ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು, ೨೪

ಮೈಸೂರು ಹೊಸ ಛತ್ರಗಳ ಮೈದಾನದಲ್ಲಿ ಮೊನ್ನೆ ದಿನ ಅಖಿಲ ಕರ್ನಾಟಕ ಸಮ್ಮೇಳನವು ನಡೆಯಿತು. ಸ್ವಾಗತಾಧ್ಯಕ್ಷರಿಂದ ಶ್ರೀ ಪಿ. ಸೀತಾರಾಮಯ್ಯನವರು ಆಗ್ರಾಸನವನ್ನು ವಹಿಸಿದ್ದರು. ಪ್ರಾರ್ಥನೆಯಾದ ನಂತರ ಶ್ರೀಗಳಾದ ಕೆ. ಸಿದ್ದಯ್ಯ, ಕೆ. ಶೇಷಾದ್ರಿ, ಚಿಕ್ಕಲಿಂಗಯ್ಯ, ಬುದ್ಧಯ್ಯ, ರಾಮಕೃಷ್ಣಯ್ಯ ಮತ್ತು ಕೆ. ಎಂ. ಸಿದ್ದಯ್ಯನವರು ಭಾಷಣ ಮಾಡಿ ಆದಿಕರ್ನಾಟಕರ ಕುಂದುಕೊರತೆಗಳನ್ನು ವಿವರಿಸಿದರು.

ಅಧ್ಯಕ್ಷರು, ಮಾತನಾಡಿ ಹರಿಜನರ ಅಭಿವೃದ್ಧಿಯಲ್ಲಿ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಮುಖ್ಯ ... ಹರಿಜನರ ... ಅವರ ... ದ ... ಹೇಳಿದರು.

ಅನಂತರ ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟವು.—

ಅಸ್ಪೃಶ್ಯತಾ ನಿವಾರಣೆ ಮತ್ತು ದೇವಾಲಯ ಪ್ರವೇಶದ ಶಾಸನವನ್ನಾಗಿ ... ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಬೇಕೆಂದು ಪ್ರಾರ್ಥಿಸುವುದು ... ದೇವಸ್ಥಾನಗಳಲ್ಲೂ ಹರಿಜನ ಧರ್ಮದರ್ಶಿಗಳನ್ನು ನೇಮಿಸುವಂತೆ ... ಹರಿಜನ ವಿದ್ಯಾರ್ಥಿಗಳಿಗೆ ... ಕೊಟ್ಟು ... ಸ್ಥಳ ಮತ್ತು ... ನಲ್ಲಿ ಇವುಗಳನ್ನು ... ಪ್ರಾರ್ಥಿಸುವುದು.

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ

... ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ... ಆರಾಧನಾ ಮಹೋತ್ಸವವು ವೈಭವದಿಂದ ಜರುಗಿತು. ಸಹಸ್ರಾರು ಜನಗಳಿಗೆ ಅನ್ನಸಂತರ್ಪಣೆ ನಡೆಯಿತು ... ಶ್ರೀ ... ರಥೋತ್ಸವವೂ ಜರುಗಿತು.

ಬೆಸ್ತರ ಕೇರಿಗೆ ನೀರಿನ ಕೊಳಾಯಿ

... ಬೆಸ್ತರ ಕೇರಿಯ ನಿವಾಸಿಗಳು ... ನೀರಿನ ... ಜನರಿಗೆ ... ನಲ್ಲಿಗಳನ್ನು ... ಪ್ರಾರ್ಥಿಸಿದ್ದಾರೆ.

ಬಿರುದಾಂಕಿತರಿಗೆ ಸನ್ಮಾನ

ಮೈಸೂರು, ೨೪

ಶ್ರೀಮನ್ಮಹಾರಾಜರವರಿಂದ ಧರ್ಮಪರಾಯಣ ಎಂಬ ಬಿರುದನ್ನು ಪಡೆದಿರುವ ಶ್ರೀಮತಿ ದೇವಿ ... ರವರಿಗೂ ಮತ್ತು ... ಪದಕವನ್ನು ಪಡೆದಿರುವ ... ಶ್ರೀ ... ಚೌಡಯ್ಯನವರಿಗೂ ಸನ್ಮಾನ ಮಾಡಲು ... ಭವನದಲ್ಲಿ ಸಮಾರಂಭವೊಂದನ್ನು ಮೊನ್ನೆ ಏರ್ಪಡಿಸಿದ್ದರು. ... ಶ್ರೀ ಪಿ. ಸೀತಾರಾಮಯ್ಯನವರು ಆಗ್ರಾಸನವನ್ನು ವಹಿಸಿದ್ದರು.

ಶ್ರೀ ಲಕ್ಷ್ಮೀದೇವಿಯವರಿಂದ ಪ್ರಾರ್ಥನೆ ... ಬಿ. ದೇವೇಂದ್ರಪ್ಪನವರಿಂದ ... ಸಂಗೀತವೂ ಆಯಿತು. ಅತಿಥಿಗಳಿಬ್ಬರಿಗೂ ಬಿನ್ನವತ್ತಳೆಯನ್ನು ಅರ್ಪಿಸಿ ಅವರು ಮಾಡಿದ ದಾನ ಧರ್ಮಾದಿ ... ಗಳನ್ನು ಪ್ರಶಂಸಿಸಲಾಯಿತು. ಈ ಸತ್ಕಾರಕ್ಕಾಗಿ ಅವರುಗಳು ತಮ್ಮ ಕೃತಜ್ಞತೆಯನ್ನು ಸೂಚಿಸಿ ಭಾಷಣ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಿರುದಾಂಕಿತರನ್ನು ಅಭಿನಂದಿಸಿ ಅವರ ... ಗಳನ್ನು ಕೊಂಡಾಡಿದರು ... ಯೊಡನೆ ಸಮಾರಂಭವು ... ವಾಯಿತು.

ಹೈದರಾಬಾದಿನ ಸಹಾಯಕ್ಕೆ ಗುಡ್ಡಗಾಡಿನ ಜನರು

... ಹೈದರಾಬಾದಿಗೆ ... ಗುಡ್ಡಗಾಡಿನ ... ಹೈದರಾಬಾದಿನ ... ಅಲ್ಲಿಗೆ ಹೋಗಲು ಸಿದ್ಧರಾಗಿ ... ಅಲ್ಲಿನ ... ತಿಳಿಸಿದ್ದಾರೆ.

Edited printed and published by A. R. Nagarajan at the Sadhvi Press D. Subhash Road Mysore

ಸ್ವಾಮಿ ರಮಾನಂದ ತೀರ್ಥರ ಕೊಲೆ ಪ್ರಯತ್ನ

ಹೈದರಾಬಾದಿನ ಸೆಂಟ್ರಲ್ ಜೈಲಿನಲ್ಲಿ ಬಂಧಿತರಾಗಿರುವ ಅಲ್ಲಿನ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ಮತ್ತು ಇತರ ರಾಜಕೀಯ ಬಂದಿಗಳನ್ನು ಕಳೆದ ೭ನೇ ತಾ॥ ಮುಸ್ಲಿಂ ಖೈದಿಗಳು ಕೊಲೆ ಮಾಡಲು ಪಿತೂರಿ ನಡೆಸಿದ್ದರೆಂದೂ, ಆದರೆ ... ಜೈಲು ಅಧಿಕಾರಿಗಳ ಎಚ್ಚರಿಕೆಯಿಂದ ಅದು ವಿಫಲವಾಯಿತೆಂದೂ ವರದಿಯಾಗಿದೆ. ಪಿತೂರಿಗಾರರ ... ಬಂಧನ ... ಭರ್ಜಿಗಳು ಇದ್ದುವೆಂದೂ ಹೇಳಲಾಗಿದೆ.

ಹರಿಜನ ವಿದ್ಯಾರ್ಥಿಗೆ ಪ್ರವೇಶವಿಲ್ಲ

ಕಾಶಿಯ ... ಕಾಲೇಜಿನ ... ಶ್ರೀ ... ಹರಿಜನ ವಿದ್ಯಾರ್ಥಿಯನ್ನು ಅಲ್ಲಿಗೆ ಸೇರಿಸಿಕೊಳ್ಳಲು ಕಾಲೇಜಿನ ಪ್ರೊಫೆಸರುಗಳು ... ದ್ದಾರೆ. ಆ ವಿದ್ಯಾರ್ಥಿಯು ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಿಗೆ ಈ ಬಗ್ಗೆ ಪ್ರಾ... ಮಾಡಿದ್ದಾನೆಂದು ತಿಳಿದುಬಂದಿದೆ.

ಹಿಂದೂ ವಿಶ್ವವಿದ್ಯಾಲಯದ ಹೆಸರನ್ನು ಬದಲಾಯಿಸ ಕೂಡದು

ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ಹಿಂದೂ ಎಂಬುದನ್ನು ತೆಗೆದು ಕಾಶಿ ವಿಶ್ವವಿದ್ಯಾನಿಲಯವೆಂದು ಮಾಡಬೇಕೆಂಬ ... ಈ ಬಗ್ಗೆ ಅಲ್ಲಿನ ಅಧ್ಯಾಪಕರೂ ವಿದ್ಯಾರ್ಥಿಗಳೂ ಸಭೆ ಸೇರಿ ತಮ್ಮ ... ಸೂಚಿಸಿದ್ದಾರೆ.

ದಂತದಲ್ಲಿ ರಾಜ್ಯಾಂಗ

ಚೀನಾದ ... ರಾಜ್ಯಾಂಗ ಶಾಸನ ಮತ್ತು ... ಭೂಪಟವನ್ನು ... ದಂತದಲ್ಲಿ ... ದಂತದ ... ಕೆತ್ತಿದ್ದಾರೆಂದು ಹೇಳಲಾಗಿದೆ.

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

ತಾ॥ 25-8-48 ರಿಂದ 1 ವಾರ ಮಾತ್ರ

★ ಅನ್‌ಕಾನ್‌ಕರ್ಡ್ ★

UNCONQUERED

(ವರ್ಣರಂಜಿತ ಚಿತ್ರ)

ಪಾತ್ರ—ಗ್ಯಾರಿ ಕೂಪರ್, ಪೌಲೆಟ್ ಗೊಡಾರ್ಡ್ ಮತ್ತು ಹಾವರ್ಡ್ ಡಾ ಸಿಲ್ವ

ಚಾಮುಂಡೇಶ್ವರಿ ಟಾಕೀಸ್

ಆಗಸ್ಟ್ 24 ರಿಂದ 4 ದಿನಗಳು ಮಾತ್ರ

24 ಭಾಗಗಳ ... ಸೀರಿಯಲ್

- ಜೂನಿಯರ್ ಜಿ-ಮೆನ್ -

ಪಾತ್ರ:—ಬಿಲ್ಲಿ ಹಾಲಪ್, ಗೊನ್ಜೆಲ್ ಜಿಟ್, ... ಮುಂತಾದವರು

... ಅನಾಗರಿಕ ...

ಪ್ರತಿ ದಿನ 3 ಆಟಗಳು : ... ಮತ್ತು ...

... — THRILL OF A ROMANCE

ಅಪೆರಾ ಟಾಕೀಸ್

ಮೈಸೂರು

25—8—48 ರಿಂ

ಪ್ರತಿದಿನ 3 ಆಟಗಳು

ಬಡಿ ಬಾತ್

(ಹಿಂದಿ)

* ಸ್ವರ್ಣಲತಾ, * ಮಜ್ರೂ

* ಉಲ್ಹಾಸ್ * ಯಾಕೂಬ್

UNIVERSITY OF MYSORE

Office of the Univer... of Mysore, Mysore ... ated 4th August 1...

NOTIFICATION

The following Univer... Examinations will comm... from Monday the ... October 1948. The ... tailed Time-tables will... published in the Gazette ... due course

i) Intermediate in Ar...
ii) Intermediate in Sci...
iii) Intermediate in Comm...
iv) B. A.,
v) B. Sc.,
vi) B. A. Hons. Prel...
vii) B. Sc. Hons. Prel...
viii) B. Com
ix) Engineering
x) L. M. P.

By Order
D. S. GORD...
Registr...

ರಾಜಕಮಲ್

ಮೈಸೂರು

ತಾ॥ 25—8—48 ರಿಂ

ಅನೋಖಾ ಪ್ರಾರಂಭ

ಪ್ರತಿ ದಿನ 3 ಆಟಗಳು

★ ಶ್ರೀ ವಳ್ಳಿ

(ತಮಿಳು)

... ಬಣ್ಣದಿಂದ ...

—: ಪಾತ್ರಗಳು :—

ಟಿ. ಆರ್. ಮಹಾಲಿಂಗಂ, ಕುಮಾರಿ ... ಎನ್. ಎಸ್. ಕೃಷ್ಣನ್, ಟಿ. ಎ. ಮಧು...

First Grade College Un...

MYSORE

Kindly Elect

H. C. VISWANATH...

(Ex-Member, Manage... Committee)

AS

The President of your U...

For the year 1948-...

ಸಂಪುಟ ೭] ಬುಧವಾರ ೨೫-೮-೪೮ [ಸಂಚಿಕೆ ೩೪

ಬ್ರಿಟಿಷ್ ರಾಜರಿಂದ ನಿಜಾಮರಿಗೆ ಸಲಹೆ

ಮೈಸೂರು ಸಚಿವರುಗಳಿಗೆ ಮದರಾಸಿನ ಆಹ್ವಾನ

ನಮ್ಮ ಸು ಫೋ] ಬೆಂಗಳೂರು ೨೫

ಮೇಕೆದಾಟು ಬಳಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಯೋಜನೆಯನ್ನು ಜಂಟಿಯಾಗಿ ಕಾರ್ಯಕ್ಕೆ ತರಲು ಮಾತುಕತೆ ನಡೆಸಲು ಮದರಾಸಿಗೆ ಬರುವಂತೆ ಅಲ್ಲಿನ ಸಚಿವರಾದ ಎಂ. ಭಕ್ತವತ್ಸಲಂರವರು ಮೈಸೂರು ಮಂತ್ರಿಗಳಾದ ಶ್ರೀಗಳು ಕೆ. ಟಿ. ಭಾಷ್ಯಂ ಮತ್ತು ಹೆಚ್ ಸಿದ್ದಯ್ಯನವರುಗಳನ್ನು ಆಹ್ವಾನಿಸಿದ್ದಾರೆ.

ವಿಶ್ವಾಮಿತ್ರರ ಉಪವಾಸ ಮುಕ್ತಾಯ

ಸ್ಕೂಲು ಮತ್ತು ಕಾಲೇಜುಗಳಲ್ಲಿ ಹಿಂದೀ ಪ್ರಚಾರಕರನ್ನು ಕಾಯಂ ಮಾಡಿ ಅವರ ಗ್ರೇಡನ್ನು ಹೆಚ್ಚಿಸುವ ಉದ್ದೇಶದಿಂದ ಕಳೆದ ೭ ದಿವಸಗಳಿಂದಲೂ ಉಪವಾಸ ಮಾಡುತ್ತಿದ್ದ ಶ್ರೀ ವಿಶ್ವಾಮಿತ್ರರಿಗೆ ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಕೊಟ್ಟ ಭರವಸೆಯಿಂದ ತೃಪ್ತಿಯಾದುದರಿಂದ ಅವರು ನಿನ್ನೆ ಮಧ್ಯಾಹ್ನ ಉಪವಾಸವನ್ನು ಮುಕ್ತಾಯಗೊಳಿಸಿದರು.

ವಿಮಾನ ಶಿಕ್ಷಣ ಶಾಲೆ

ಬೆಂಗಳೂರಿಗೆ ೭ ಮೈಲಿ ದೂರದಲ್ಲಿರುವ ಜಕ್ಕೂರ್ ವಿಮಾನ ನಿಲ್ದಾಣದಲ್ಲಿ ಬರುವ ತಾ॥ ರಿಂದ ವಿಮಾನ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ, ಸಧ್ಯಕ್ಕೆ ೧೨ ಜನರಿಗೆ ಶಿಕ್ಷಣ ಕೊಡಲಾಗುವುದು. ಸಂಸ್ಥಾನದ ಪ್ರಧಾನ ಪೈಲೆಟ್ ರಾದ ಕ್ಯಾ॥ ಸುಂದರರಂ ಪ್ರಿನ್ಸಿಪಾಲರಾಗಿರುವರು.

ಹೈದರಾಬಾದಿನಲ್ಲಿ ಯುದ್ಧ ಸಿದ್ಧತೆ

ಹೈದರಾಬಾದು, ಸಿಕಂದರಾಬಾದುಗಳಲ್ಲಿ ಯುದ್ಧ ಸಿದ್ಧತೆಗಳಾಗುತ್ತಿವೆಯೆಂದೂ ಬೇಗಂಪೇಟಿನಲ್ಲಿ ವಿಮಾನ ಧಾಳಿ ರಕ್ಷಣಾ ಕಂದಕಗಳನ್ನು ತೋಡಲಾಗಿದೆ ಎಂದೂ, ಪ್ರತಿ ದಿನವೂ ಸಿವಿಕ್ ಗಾರ್ಡು ಮತ್ತು ರಜಾಕರರು ಮಿಲಿಟರಿ ಕವಾಯತುಗಳನ್ನು ಮಾಡುತ್ತಿದ್ದಾರೆಂದೂ ವರದಿಯಾಗಿದೆ. ಬ್ರಿಟಿಷ್ ಪೋಲೀಸು ಮತ್ತು ಸೇನೆಗಳ ಮಾಜಿ ಸೈನ್ಯಾಧಿಕಾರಿಗಳು ನಿಜಾಮರ ಸೈನ್ಯದಲ್ಲಿರುವರೆಂದೂ, ಅರಬ್ಬ ಮತ್ತು ಪಠಾಣರೂ ಹೆಚ್ಚು ಸಂಖ್ಯೆಯಲ್ಲಿದ್ದಾರೆಂದೂ ತಿಳಿಸಲಾಗಿದೆ.

ರಾಜಾಜಿಗೆ ನಿಜಾಂ ಏಜಂಟರ ಗುಪ್ತ ಭೇಟಿ

ಬ್ರಿಟನ್ನಿನಲ್ಲಿ ನಿಜಾಮರ ಏಜೆಂಟ್ ಜನರಲ್ಲರಾಗಿರುವ ಮಿರ್ ನವಾಬ್ ಜಂಗ್ ಬಹದ್ದೂರ್‌ರವರು ಕಳೆದ ವಾರ ಗುಪ್ತವಾಗಿ ರಾಜಾಜಿಗೆ ಭೇಟಿ ಕೊಟ್ಟು ಲಂಡನ್ನಿಗೆ ಹಿಂದಿರುಗಿದರೆಂದು ಹೇಳಲಾಗಿದೆ.

ಮದುವೆಯಾಗಿ ಸಂಸಾರ ಮಾಡಿಕೊಂಡಿರಿ

ವಿದ್ಯಾರ್ಥಿನಿಯರಿಗೆ ರಾಜಾಜಿಯವರ ಉಪದೇಶ

ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮುಗಿಸಿದ ಮೇಲೆ ಮದುವೆ ಮಾಡಿಕೊಂಡು ತಾಯಂದಿರಾಗಿ ಸಂಸಾರ ಜೀವನ ಮಾಡಬೇಕೆಂದು ಗ. ಜ. ರಾಜಾಜಿಯವರು ಮದರಾಸಿನಲ್ಲಿ ಅವರಿಗೆ ಹಿತೋಪದೇಶ ಮಾಡಿದರು. ಬಡವರು ಬಲ್ಲಿದರು ಎಂಬ ಭೇದವು ಒಂದು ವೇಳೆ ಇದ್ದರೂ ಜಾತಿಮತಗಳ ಭೇದವು ಮಾತ್ರ ಅನಾವಶ್ಯಕವಾಗಿರುವುದೆಂದೂ ಸಹ ಅವರು ತಿಳಿಸಿದರು.

ನಿಜಾಮರಿಗೆ ಬ್ರಿಟಿಷ್ ದೊರೆಗಳ ಸೂಚನೆ

ಭಾರತ ಸರ್ಕಾರದೊಡನೆ ಒಪ್ಪಂದ ಮಾಡಿಕೊಳ್ಳಿರಿ

ಹೈದರಾಬಾದಿನ ನೈಜಾಮರು ಭಾರತದ ಸದಸ್ಯತ್ವ ವಿಷಯವಾಗಿ ಬ್ರಿಟಿಷ್ ದೊರೆಗಳಿಗೆ ಬರೆದಿದ್ದ ಪತ್ರಕ್ಕೆ ಭಾರತದ ಗೌರ್ನರ್ ಜನರಲ್ಲರ ಮೂಲಕ ಜಾರ್ಜ್ ಪ್ರಭುಗಳು ಉತ್ತರವನ್ನು ಕಳುಹಿಸಿರುತ್ತಾರೆ. ಶಾಂತಿ ಸೌಹಾರ್ದಯುತವಾದ ಸಂಧಾನದ ಮೂಲಕ ಭಾರತದೊಡನೆ ಒಂದು ತೀರ್ಮಾನಕ್ಕೆ ಬರುವಂತೆ ನೈಜಾಮರನ್ನು ಅವರು ಒತ್ತಾಯಪಡಿಸಿದ್ದಾರೆ. ಗೌರ್ನರ್ ಜನರಲ್ಲರೂ ಸಹ ಒಂದು ಪತ್ರವನ್ನು ಬರೆದು ಅದರೊಡನೆ ಬ್ರಿಟಿಷ್ ದೊರೆಗಳ ಉತ್ತರವನ್ನು ನೈಜಾಮರಿಗೆ ಕಳುಹಿಸಿದ್ದಾರೆ.

ತುರ್ಕಿಗೆ ನೆಹರೂರವರ ಭೇಟಿ

ಭಾರತಕ್ಕೂ ತುರ್ಕಿಗೂ ಹೆಚ್ಚಿನ ಸ್ನೇಹ ಸಂಬಂಧವನ್ನು ಉಂಟುಮಾಡುವುದಕ್ಕಾಗಿ ಪಂಡಿತ ನೆಹರೂರವರು ಸಧ್ಯದಲ್ಲೇ ಆ ದೇಶಕ್ಕೆ ಭೇಟಿ ಕೊಡುವ ಸಂಭವವಿದೆಯೆಂದು ತುರ್ಕಿಯಲ್ಲಿ ಭಾರತದ ರಾಯಭಾರಿಯಾಗಿರುವ ದಿವಾನ್ ಚಮನ್‌ಲಾಲ್‌ರವರು ತಿಳಿಸುತ್ತಾರೆ.

ಗಾಂಧೀ ಸ್ಮಾರಕಕ್ಕಾಗಿ ಮೈಸೂರಿನವರ ಸಲಹೆ

ದಿಲ್ಲಿಯ ರಾಜಘಾಟಿನಲ್ಲಿ ಸ್ಥಾಪಿಸಬೇಕೆಂದಿರುವ ಮಹಾತ್ಮ ಗಾಂಧೀಜಿಯವರ ಸ್ಮಾರಕಕ್ಕೆ ಒಂದು ಮಾದರಿಯನ್ನು ತಯಾರಿಸಿ ಕೊಡುವಂತೆ ಭಾರತ ಸರ್ಕಾರದವರು ಬೆಂಗಳೂರಿನ ಪ್ರಮುಖ ಶಿಲ್ಪಕೋವಿದರಾದ ಶ್ರೀ ಎಸ್. ಬಿ. ಚಕ್ರವರ್ತಿಯವರಿಗೆ ಸೂಚನೆ ಕೊಟ್ಟಿದ್ದಾರೆಂದೂ ಗೊತ್ತಾಗಿದೆ.

ಆರಾಧನೆ

ರಾಜಧಾನಿಯ ಚಿಕ್ಕಪೇಟೆ ಮೊಹಲ್ಲಾ ಶ್ರೀನಿವಾಸ ರಾಘವೇಂದ್ರ ಮತ್ತು ಲಕ್ಷ್ಮೀನಾರಾಯಣ ಲೋಕ ಕಲ್ಯಾಣ ಸೇವಾ ಮಂದಿರದಲ್ಲಿ ನಾಳೆಯಿಂದ ನಾಲ್ಕು ದಿವಸಗಳು ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆಯ ಅಂಗವಾಗಿ ಅಷ್ಟೋತ್ತರಾನುಗ್ರಹ ಮೂಲವೃತ್ತಿ ಮತ್ತು ಮೂರನೇ ವರ್ಷದ ದಿನಾಚರಣೆಯು ಮಹಾಭಿಷೇಕವೂ ಅನ್ನ ಸಂತರ್ಪಣೆಗಳೂ ನಡೆಯುವುವು. ಭಗವದ್ಭಕ್ತರುಗಳು ಇದಕ್ಕೆ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಸರ್ಕಾರದ ಅನುಮತಿ ಇಲ್ಲದೆ ಬಾಡಿಗೆ ಹೆಚ್ಚಿಸಕೂಡದು

ಬಾಡಿಗೆ ಹತೋಟಿ ಕಾನೂನು ತಿದ್ದುಪಡಿ

ನಮ್ಮ ಸು. ಫೋ] ಬೆಂಗಳೂರು ೨೫

ಮನೆಗಳ ಮಾಲೀಕರು ಇಷ್ಟ ಬಂದಂತೆ ಮನೆ ಬಾಡಿಗೆಯನ್ನು ಹೆಚ್ಚಿಸುತ್ತಿರುವುದರಿಂದ ಸರ್ಕಾರದವರು ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಿ ಇನ್ನು ಮುಂದೆ ಸಂಸ್ಥಾನದ ರೆಂಟ್ ಕಂಟ್ರೋಲರ್‌ರವರ ಅನುಮತಿ ಪಡೆಯದೆ ಯಾರೂ ಮನೆ ಬಾಡಿಗೆಯನ್ನು ಹೆಚ್ಚಿಸಕೂಡದೆಂದು ಆಜ್ಞೆ ಹೊರಡಿಸಿ ಮನೆ ಬಾಡಿಗೆ ಹತೋಟಿ ಕಾನೂನನ್ನು ತಿದ್ದುಪಡಿ ಮಾಡಿದ್ದಾರೆ.

ಆರೋಗ್ಯಾಧಿಕಾರಿಗಳು

ಆರೋಗ್ಯ ಶಾಖಾಧಿಕಾರಿಗಳಾದ ಡಾ॥ ಟಿ. ಪಾರ್ಥಸಾರಥಿಯವರಿಗೆ ಇದೇ ತಿಂಗಳ ೨೫ನೇ ತಾ॥ ನಿಂದ ಸೆಪ್ಟೆಂಬರ್ ೩೦ನೇ ತಾ॥ ವರೆಗೆ ನಿವೃತ್ತಿಯಾಗುವವರೆಗೆ ರಜಾ ಕೊಡಲಾಗಿದೆ. ಅವರ ಸ್ಥಾನದಲ್ಲಿ ಡಾ॥ ಟಿ. ಚಂದ್ರಶೇಖರ್‌ರವರನ್ನು ಹಂಗಾಮಿಯಾಗಿ ನೇಮಿಸಲಾಗಿದೆ.

ಅರ್ಜಿಗಳಲ್ಲಿ ಪ್ರಾರ್ಥನೆ ವಿಷಯವನ್ನೂ ಅರ್ಜಿದಾರರ ಹೆಸರು ವಿಳಾಸಗಳನ್ನೂ ಸ್ಪಷ್ಟವಾಗಿ ತಿಳಿಸಬೇಕೆಂದು ಸರ್ಕಾರದ ಪ್ರಕಟನೆಯೊಂದು ಸೂಚಿಸುತ್ತದೆ.

ಶಸ್ತ್ರಾಸ್ತ್ರಗಳಿಗಾಗಿ ನೈಜಾಮರಿಂದ ೫೫ ಕೋಟಿ ರೂ ವೆಚ್ಚ

ಆಧುನಿಕ ಯುದ್ಧ ಸಾಮಗ್ರಿಗಳನ್ನೂ, ಶಸ್ತ್ರಾಸ್ತ್ರಗಳನ್ನೂ ಸುಮಾರು ೫೫ ಕೋಟಿ ರೂ. ಬೆಲೆ ಬಾಳುವಷ್ಟು ನೈಜಾಮರು ಕೊಂಡಿಟ್ಟಿರುವರೆಂದು ವರದಿಯಾಗಿದೆ. ಹೈದರಾಬಾದಿಗೆ ಅಕ್ರಮವಾಗಿ ವಿಮಾನದಲ್ಲಿ ಹೊತ್ತು ತಂದ ಕಾಟನ್ನನು ಈ ವ್ಯಾಪಾರದಲ್ಲಿ ಪ್ರಧಾನ ಪಾತ್ರ ವಹಿಸಿರುವನೆಂದೂ ಹೇಳಲಾಗಿದೆ.

ಮಹಾ ಪ್ರಭುಗಳೊಡನೆ ಭೇಟಿ

ರೈಲ್ವೆ ಮತ್ತು ಮೈಸೂರು ಡಿವಿಜನಲ್ ಪೋಲೀಸ್ ಡಿ. ಐ. ಜಿ. ಶ್ರೀ ಆರ್. ಸು. ಬ್ರಹ್ಮಜಿರಾವ್ ಸಿಂಧ್ಯರವರಿಗೆ ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಭೇಟಿಯನ್ನು ದಯಪಾಲಿಸಿದ್ದರು.

ಮಿತ್ರಮೇಳ

ಮಹಾರಾಜ ಕಾಲೇಜಿನ ವಿಶ್ವಮಿತ್ರ ಸಂಘದವರ ನಾಳೆ ಸಂಜೆ ೬-೧೫ ಗಂಟೆಗೆ ಜೂನಿಯರ್ ಬಿ. ಎ. ಮಂದಿರದಲ್ಲಿ ಶ್ರೀ ನಾ. ಕಸ್ತೂರಿಯವರು ರಚಿಸಿರುವ "ಗಾಂಧಿ ಗಂಡ" ಎಂಬ ನಾಟಕವನ್ನು ಅಭಿನಯಿಸುತ್ತಾರೆ. ಶ್ರೀ ಸಿ. ವಿ. ರಾಮಸ್ವಾಮಿಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸುವರು. ಸರ್ವರಿಗೆ ಸ್ವಾಗತವುಂಟು.

೫ ಹೆಂಗಸರನ್ನು ಜೀವಸಹಿತ ಸುಡಲಾಯಿತು

ಹೈದರಾಬಾದಿನ ರಿಜ್ಜಿ ಎಂಬ ಹಳ್ಳಿಯಲ್ಲಿ ರಜಾಕರರು ೫೦ ಜನರನ್ನು ಕೊಲೆ ಮಾಡಿ, ೫ ಮಂದಿ ಹೆಂಗಸರನ್ನು ಜೀವಸಹಿತ ಸುಟ್ಟುಹಾಕಿದರೆಂದೂ, ಮತ್ತು ತಮಗಳನ್ನು ಮೆರವಣಿಗೆ ಮಾಡಿ ನೈಜಾಂ ಸರ್ಕಾರಕ್ಕೆ ವಿರುದ್ಧವಾಗಿ ನಡೆಯುವವರೆಲ್ಲರೂ ಇದೇ ರೀತಿ ಸಾಯುವರೆಂದು ಜನಗಳಿಗೆ ಎಚ್ಚರಿಕೆ ಕೊಡಲಾಯಿತೆಂದೂ ಹೇಳಲಾಗಿದೆ.

ಹೈದರಾಬಾದ್ ಏಜೆಂಟರಿಗೆ ಆತುರದ ಕರೆ

ದೆಹಲಿಯಲ್ಲಿ ನೈಜಾಮರ ಏಜೆಂಟ್ ಜನರಲ್ಲರಾಗಿರುವ ಎಸ್. ಎಂ. ಎ. ರಜ್ವಿಯವರೂ, ಮಾಜಿ ಏಜಂಟ್ ಜನರಲ್ ನವಾಬ್ ಯಾರ್ ಜಂಗ್ ಬಹದ್ದೂರ್‌ರವರೂ ಕೂಡಲೇ ಹೈದರಾಬಾದಿಗೆ ಬರಬೇಕೆಂದು ನೈಜಾಮರು ಕೋರಿದ್ದರಿಂದ ಅವರು ವಿಶೇಷ ವಿಮಾನದಲ್ಲಿ ಅಲ್ಲಿಗೆ ತೆರಳಿದ್ದಾರೆ.

ಯುವಕರ ಕರ್ತವ್ಯ

ಶ್ರೀ ಪಟ್ಟಾಭಿರಾಮರವರ ಭಾಷಣ

ದೇವನಹಳ್ಳಿ ೨೧

ಮೇಲ್ಕಂಡ ಸಂಘದ ಪ್ರಥಮ ವಾರ್ಷಿಕೋತ್ಸವವು ತಾ॥ 21-8-48ನೇ ಶನಿವಾರ ಕೋಲಾರದ ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಪಟ್ಟಾಭಿರಾಮರವರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು "ಯುವಕರ ಕರ್ತವ್ಯ" ಎಂಬುದರ ಮೇಲೆ ಭಾಷಣ ಮಾಡಿದರು. ಬೆಳಿಗ್ಗೆ ಶ್ರೀ ಹೆಗ್ಗನಲಿಂಗಣ್ಣನವರಿಂದ ಮೈಸೂರು ಧ್ವಜ ಮತ್ತು ಶ್ರೀ ಟಿ. ಎಸ್. ಸುಬ್ಬಣ್ಣನವರಿಂದ ಭಾರತ ಧ್ವಜಾರೋಹಣವಾದನಂತರ ಗಂಟೆಗೆ ಶ್ರೀ ಕೆ. ಪಟ್ಟಾಭಿರಾಮರವರ ಅಧ್ಯಕ್ಷತೆಯಲ್ಲಿ ಗಾಂಧಿ ಚೌಕದಲ್ಲಿ ಹಾಕಿದ್ದ ಹಸುರುವಾಣಿ ಚಪ್ಪರದಲ್ಲಿ ಸಭೆ ಸೇರಿತ್ತು.

ಸಂಘದ ಅಧ್ಯಕ್ಷರಾದ ಚೇರ್ಮನ್ ಮಹದೇವಪ್ಪನವರಿಂದ ಸ್ವಾಗತ ಭಾಷಣವಾದ ನಂತರ ಕಾರ್ಯದರ್ಶಿ ಶ್ರೀ ಡಿ. ಎಂ. ಗುರುಸಿದ್ಧಯ್ಯನವರು ವಾರ್ಷಿಕ ವರದಿ ಸಮರ್ಪಿಸಿದರು. ಅನಂತರ ಶ್ರೀಗಳಾದ ಹೆಗ್ಗನಲಿಂಗಣ್ಣ ಡಿ. ಎಂ. ಸಿದ್ದಯ್ಯ, ಸಮಾಜವಾದಿ ನಾಯಕರಾದ ಶ್ರೀ ಟಿ. ಎಸ್. ಸುಬ್ಬಣ್ಣನವರು ಸ್ವಾತಂತ್ರ್ಯದ ವಿಷಯವನ್ನು ವಿಶದವಾಗಿ ತಿಳಿಸಿದರು. ಅನಂತರ ಶ್ರೀ ಚೆನ್ನಬಸಪ್ಪನವರು ಭಾಷಣಮಾಡುತ್ತಾ, ಇಂದಿನ ಭಾರತದಲ್ಲಿ ಯುವಕರ ಕರ್ತವ್ಯವೇನೆಂಬುದನ್ನು ವಿವರಿಸಿದರು. ಮತ್ತು ಹಳ್ಳಿಯ ಅಭಿವೃದ್ಧಿಗೆ ಮಾಡಬೇಕಾದ ಕೆಲಸಗಳನ್ನು ತಿಳಿಸಿದರು. ಅನಂತರ ಸಂಘದ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು.

ಶ್ರೀ ಪಟ್ಟಾಭಿರಾಮರವರು ಮಾತನಾಡುತ್ತಾ ಇಂದಿನ ಭಾರತದ ಪರಿಸ್ಥಿತಿಯನ್ನು ವಿಮರ್ಶೆಮಾಡಿ ಭಾರತಕ್ಕೆ ಬಂದಿರುವ ಸ್ವಾತಂತ್ರ್ಯವನ್ನುಳಿಸುವ ಜವಾಬ್ದಾರಿ ಯುವಕರದ್ದೇ ಎಂದು ಹೇಳಿ ಜಾತಿಮತ ಭೇದವಿಲ್ಲದ, ಬಡವ, ಬಲ್ಲಿದನೆಂಬ ಭಾವನೆಯಿಲ್ಲದ ಗಾಂಧೀ ರಾಜ್ಯವನ್ನು ಕಟ್ಟುವುದು ಯುವಜನರಿಂದಲೇ ಸಾಧ್ಯವೆಂದು ತಿಳಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯಗೊಂಡಿತು.

ನಗ್ನರಾಗಿ ಮಹಿಳೆಯರ ಮೆರವಣಿಗೆ

ರಜಾಕರರ ಮಿತಿಮೀರಿದ ದಾಂಧಲೆ

ರಾಯಚೂರಿನಲ್ಲಿ ಕಳೆದ ೧೫ ನೇ ತಾ|| ಹೈದರಾಬಾದಿನ ದಿನಾಚರಣೆಯನ್ನು ರಜಾಕರರು ನಡೆಸಿದರೆಂದೂ, ಈ ಬಗ್ಗೆ ಕತ್ತಿ ಸಜ್ಜಿತರಾಗಿ ಕೈಗಳಲ್ಲಿ ಕಠಾರಿ ಧರಿಸಿ ಮೆರವಣಿಗೆ ಹೊರಟು ಸಿಕ್ಕಿದವರ ಮೇಲೆ ಗುಂಡು ಹಾರಿಸಿ, ಅನೇಕರನ್ನು ಕೊಂದು ಹಾಕಿದರೆಂದೂ, ಇದರ ಅವಾಂತರವನ್ನು ತಡೆಯಲಾರದೆ ರಾಯಚೂರು ಜಿಲ್ಲೆಯಿಂದ ೩ ಸಾವಿರ ಜನರು ಸಂಸ್ಥಾನವನ್ನು ಬಿಟ್ಟು ಭಾರತಕ್ಕೆ ಹೋದರೆಂದೂ ಹೇಳಲಾಗಿದೆ. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿಜಾಮರ ಸಚಿವರಾದ ಅಬ್ದುಲ್ ರಹೀಮ್‌ರವರು ಭಾರತಕ್ಕೆ ವಿರುದ್ಧವಾಗಿ ಭಾಷಣ ಮಾಡಿ ಸಧ್ಯದಲ್ಲೇ ದೆಹಲಿಯ ಕೆಂಪು ಕೋಟೆಯ ಮೇಲೆ ನಿಜಾಮರ ಧ್ವಜವನ್ನು ಹಾರಿಸಲಾಗುವುದೆಂದು ತಿಳಿಸಿದ್ದಾರೆ

ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ರಜಾಕರರ ಅವಾಂತರವು ವಿಪರೀತವಾಗಿದೆ ಬದರಿ ಜಿಲ್ಲೆಯ ಹಳ್ಳಿಯಲ್ಲಿ ರಜಾಕರರು ಮೆರವಣಿಗೆ ನಡೆಸಿ, ಗಂಡಸರು, ಹೆಂಗಸರು ಮತ್ತು ಮಕ್ಕಳ ಮೇಲೆ ಗುಂಡು ಹಾರಿಸಿ, ೫೦ ಜನಗಳನ್ನು ಕೊಂದರೆಂದೂ, ಮಾಕಲಾ ಎಂಬ ಹಳ್ಳಿಯಲ್ಲಿ ೨೦ ಸಾವಿರ ರೂ. ಗಳ ಸ್ವತ್ತನ್ನು ಲೂಟಿ ಮಾಡಿ ಅನೇಕ ಮಹಿಳೆಯರನ್ನು ಅಪಹರಿಸಿ, ಕೆಲವು ಮಹಿಳೆಯರನ್ನು ಬೆತ್ತಲೆಯಾಗಿ ರಸ್ತೆಯಲ್ಲಿ ಮೆರವಣಿಗೆ ಮಾಡಿದರೆಂದೂ ವರದಿಯಾಗಿದೆ ಈ ಪ್ರದೇಶಗಳಲ್ಲಿ ರಜಾಕರರು ಬಾವಿಗಳಿಗೆ ಮಾಂಸ ಮತ್ತು ಮೂಳೆಗಳನ್ನು ಹಾಕಿ, ಹಿಂದೂಗಳು ನೀರು ಕುಡಿಯದಂತೆ ಮಾಡುತ್ತಿರುವರೆಂದೂ ಹೇಳಲಾಗಿದೆ ಇತ್ತೀಚೆಗೆ ೧೭ ನೇ ತಾ|| ಬೀದರಿನ ಗಡಿ ಪ್ರದೇಶದ ೩ ಹಳ್ಳಿಗಳ ಮೇಲೆ ರಜಾಕರರು ಮುತ್ತಿಗೆ ಹಾಕಿ, ಅನೇಕ ಹಿಂದೂಗಳ ಮನೆಗಳನ್ನು ಸುಟ್ಟು, ಸ್ವತ್ತುಗಳನ್ನು ಲೂಟಿ ಮಾಡಿ, ೯ ಮಕ್ಕಳನ್ನು ಕೊಂದು, ಮಹಿಳೆಯರ ಮೇಲೆ ಅಮಾನುಷ ಕೃತ್ಯ ನಡೆಸಿದರೆಂದೂ ಹೇಳಲಾಗಿದೆ

ಕಾಳಸಂತೆಯವರಿಗೆ ಕತ್ತೆ ಮೇಲೆ ಮೆರವಣಿಗೆ

ಕಾಳಸಂತೆ ವ್ಯಾಪಾರಿಗಳಿಗೆ ಅಪಮಾನ ಮಾಡಿ, ಅವರು ಇಂತಹ ದುರ್ವರ್ತನೆಗೆ ಹೋಗದಂತೆ ಎಚ್ಚರಿಕೆ ಕೊಡಲು, ಅವರನ್ನು ಕತ್ತೆಯ ಮೇಲೆ ಕೂರಿಸಿ, ಊರಿನ ರಸ್ತೆಗಳಲ್ಲಿ ಮೆರವಣಿಗೆ ಮಾಡಬೇಕೆಂಬ ಸಲಹೆಯನ್ನು ಮಧ್ಯ ಪ್ರಾಂತ್ಯ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ

ಭನ್ಸಾಲಿಯವರು ಉಪವಾಸ ನಿಲ್ಲಿಸುವರೆ ?

ಕಳೆದ ೧೨ ದಿನಗಳಿಂದಲೂ ಆಮರಣಾಂತ ಉಪವಾಸವನ್ನು ಕೈಗೊಂಡಿರುವ ಪ್ರೊ|| ಭನ್ಸಾಲಿಯವರು ವಾರ್ಧಾಕ್ಕೆ ಇದೇ ೨೬ ನೇ ತಾ|| ಭೇಟಿ ಕೊಡಲಿರುವ ರಾಜಾಜಿಯವರನ್ನು ಕಂಡು ಮಾತುಕತೆ ನಡೆಸಿ, ೨೮ ನೇ ತಾ|| ಉಪವಾಸವನ್ನು ಮುಕ್ತಾಯಗೊಳಿಸಬಹುದೆಂದು ಹೇಳಲಾಗಿದೆ

ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ದಿನಕ್ಕೆ ಒಂದೇ ಪತ್ರಿಕೆ

ಬರುವ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಮೈಸೂರು ವಿಶ್ವ ವಿದ್ಯಾಲಯದ ಪರೀಕ್ಷೆಗಳಲ್ಲಿ ದಿನಕ್ಕೆ ಒಂದು ಪತ್ರಿಕೆಯು ಮಾತ್ರ ಇರಬೇಕೆಂಬ ವಿದ್ಯಾರ್ಥಿ ಕಾಂಗ್ರೆಸ್ಸಿನವರ ಪ್ರಾರ್ಥನೆಯನ್ನು ಮನ್ನಿಸಿ, ದಿನಕ್ಕೆ ಒಂದೇ ಪತ್ರಿಕೆ ಇರುವಂತೆ ಸ್ನಾತಕರಿಗಳು ಆಜ್ಞೆ ಮಾಡಿರುತ್ತಾರೆಂದು ತಿಳಿಯಬಂದಿದೆ.

ಬೀರಾರಿನ ಗಡಿಯಲ್ಲಿ ನಿಜಾಮರ ಸೈನ್ಯ

ಹೈದರಾಬಾದ್ ಮತ್ತು ಬೀರಾರಿನ ಗಡಿ ಪ್ರದೇಶದ ಹಿಂಗೋಲಿ ಎಂಬಲ್ಲಿ ಹೆಚ್ಚು ನಿಜಾಮರ ಸೈನ್ಯ, ಪೊಲೀಸರು ಮತ್ತು ಸಶಸ್ತ್ರ ರಜಾಕರರನ್ನು ಇಡಲಾಗಿದೆಯೆಂದು ಹೇಳಲಾಗಿದೆ

Edited printed and published by A. R. Nagarajan at the Sadhvi Press D. Subbaiah Road Mysore.

ಬರೋಡಾದ ಬಿಕ್ಕಟ್ಟು ಬಗೆಹರಿಯಿತು

ಸರ್ದಾರ್ ಪಟೇಲರೊಂದಿಗೆ ಬರೋಡಾ ಮಹಾರಾಜರವರ ಮಾತುಕತೆಗಳ ಫಲವಾಗಿ ರಾಜರು ದೆಹಲಿಯಿಂದ ಸಂಸ್ಥಾನಕ್ಕೆ ಹಿಂದಿರುಗಿದ ಕೂಡಲೇ ಅಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಘೋಷಣೆಯನ್ನು ಹೊರಡಿಸಿ ಈಗಿನ ಪ್ರಜಾ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವನ್ನು ಕೊಡುವರೆಂದು ಹೇಳಲಾಗಿದೆ. ಸಂಸ್ಥಾನದ ೩ ಕೋಟಿ ರೂ ಗಳನ್ನು ಮಹಾರಾಜರು ದುರುಪಯೋಗಪಡಿಸಿದ್ದಾರೆಂಬ ಅಪಾದನೆಯ ಬಗ್ಗೆ ಭಾರತ ಸರ್ಕಾರದವರು ತನಿಖೆ ನಡೆಸುವರೆಂದೂ, ಈ ವಿಚಾರದಲ್ಲಿ ಸರ್ದಾರ್ ಪಟೇಲರು ಬಂದ ತೀರ್ಮಾನಕ್ಕೆ ರಾಜರು ಒಪ್ಪುವರೆಂದೂ ಹೇಳಲಾಗಿದೆ.

ನಿಜಾಮರ ೨೫೦ ಹಳ್ಳಿಗಳು ಸ್ವತಂತ್ರವಾದುವು

ಹೈದರಾಬಾದಿನ ೨೫೦ ಹಳ್ಳಿಗಳು ಸ್ವತಂತ್ರವಾಗಿ, ತಮ್ಮದೇ ಸರ್ಕಾರವನ್ನು ರಚಿಸಿಕೊಂಡಿವೆಯೆಂದೂ ಮತ್ತು ಭಾರತದ ಯೂನಿಯನ್ನಿಗೆ ಸೇರಲು ನಿರ್ಧರಿಸಿವೆಯೆಂದೂ ಅಲ್ಲಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಡಿ ಜಿ ಬಿಂದೂರವರು ತಿಳಿಸಿರುತ್ತಾರೆ

ಗಂಡಸರಿಗೆ ರಿಕ್ಷಾ ಗಾಡಿಗಳ ನಿಷೇಧ

ಕರಾಚಿಯಲ್ಲಿ ಹೆಂಗಸರು ಮತ್ತು ಮಕ್ಕಳು ಮಾತ್ರ ರಿಕ್ಷಾ ಗಾಡಿಯಲ್ಲಿ ಸಂಚರಿಸಬಹುದೆಂದೂ, ೧೨ ವರ್ಷಕ್ಕೆ ಮೇಲ್ಪಟ್ಟ ಯಾವ ಗಂಡಸರನ್ನಾದರೂ ರಿಕ್ಷಾದಲ್ಲಿ ಕರೆದುಕೊಂಡು ಹೋದರೆ ಗಾಡಿಯವನಿಗೆ ಶಿಕ್ಷೆ ವಿಧಿಸಲಾಗುವುದೆಂದೂ ಅಲ್ಲಿನ ಪೊಲೀಸರು ಆಜ್ಞೆ ಮಾಡಿದ್ದಾರೆ ಕರಾಚಿಯಲ್ಲಿ ಮನುಷ್ಯರು ಎಳೆಯುವ ರಿಕ್ಷಾಗಳು ಇಲ್ಲದೆ ಸೈಕಲ್ ರಿಕ್ಷಾಗಳು ಮಾತ್ರ ಇವೆ.

ಭಾರತದಿಂದ ಕಾಶ್ಮೀರಕ್ಕೆ ೪ ಕೋಟಿ ರೂ ಸಾಲ

ಕಾಶ್ಮೀರದಲ್ಲಿ ವ್ಯಾಪಾರ ಮತ್ತು ಕೈಗಾರಿಕಾ ಅಭಿವೃದ್ಧಿ ಮತ್ತು ಪುನರ್ವಸತಿ ಕಾರ್ಯಕ್ಕಾಗಿ ೪ ಕೋಟಿ ರೂ ಸಾಲವನ್ನು ಕೊಡಬೇಕೆಂದು ಭಾರತ ಸರ್ಕಾರವನ್ನು ಪ್ರಾರ್ಥಿಸಲಾಗಿದೆಯೆಂದೂ, ಅದನ್ನು ಭಾರತವು ಮಂಜೂರು ಮಾಡಬಹುದೆಂದೂ ಹೇಳಲಾಗಿದೆ ಈಗಾಗಲೇ ಭಾರತವು ೨ ಕೋಟಿ ರೂ ಸಾಲವನ್ನು ಕಾಶ್ಮೀರಕ್ಕೆ ಕೊಟ್ಟಿದೆ

ಪೆಟ್ರೋಲಿಗೆ ಆಲ್ಕೊಹಾಲ್ ಮಿಶ್ರ ಮಾಡಬೇಕು

ಬೆಂಗಳೂರು ೨೫

ಬೆಂಗಳೂರು, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇದೇ ೨೫ನೇ ತಾ|| ನಿಂದ ಯಾರೂ ಪೆಟ್ರೋಲನ್ನು ಆಲ್ಕೋಹಾಲ್ ಬೆರಸದೆ ಉಪಯೋಗಿಸಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ ಶೇಕಡ ೧೦ ಭಾಗ ಆಲ್ಕೋಹಾಲನ್ನು ಮಿಶ್ರ ಮಾಡಬೇಕೆಂದು ತಿಳಿಸಲಾಗಿದೆ.

○ ಬೆಂಗಳೂರು ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಂ ಕೆ ಬಸಪ್ಪಸಪ್ಪನವರನ್ನು ಸಿವಿಲ್ ಸಪ್ಲೈಸ್ ಶಾಖೆಯ ಕಂಟ್ರೋಲರಾಗಿಯೂ ಶ್ರೀ ಶೇಷಗಿರಿ ರಾಯರನ್ನು ಬೆಂಗಳೂರು ಜಿಲ್ಲಾಧಿಕಾರಿಗಳಾಗಿಯೂ ನೇಮಿಸಲಾಗಿದೆ.

ಯಮುನಾ ನದಿ ಪ್ರವಾ... ದಿಂದ ೬ ಹಳ್ಳಿಗಳ ನ...

ಯಮುನಾ ನದಿಯಲ್ಲಿ ವಿಪರೀ... ಹವು ಬಂದು ದೆಹಲಿ ಮತ್ತು ಸಾ... ಮಧ್ಯೆ ಇರುವ ೬ ಹಳ್ಳಿಗಳು ನೀರಿ... ಆಗಿ ಹೋಗಿವೆಯೆಂದೂ ಇದರಿಂ... ಗೆ ವಿಶೇಷ ನಷ್ಟವಾಗಿವೆಯೆಂದೂ ... ಮನೆಗಳು ನಾಶವಾಗಿವೆಯೆಂದೂ ... ಯಾಗಿದೆ

ವಿದ್ಯಾರ್ಥಿನಿಯರಿಗೆ ಆತ್ಮ ರಕ್ಷಣಾ ಶಿಕ್ಷ...

ವಿದ್ಯಾರ್ಥಿನಿಯರಿಗೆ ಆತ್ಮ ರಕ್ಷ... ಣವನ್ನು ಕೊಡಬೇಕೆಂದು ನಾಗಪ... ವಿದ್ಯಾಲಯದವರು ನಿರ್ಧರಿಸಿ... ಪ್ರಾಂತ್ಯದ ವಿವಿಧ ಕಾಲೇಜುಗ... ಟ್ಟು ೧೫೦೦ ವಿದ್ಯಾರ್ಥಿನಿಯರು ... ಗ ಮಾಡುತ್ತಿದ್ದಾರೆ

ಸ್ಟಾಲಿನ್‌ರೊಡನೆ ತ್ರಿರಾ... ಪ್ರತಿನಿಧಿಗಳ ಭೇಟಿ

ಬರ್ಲಿನ್ ನಗರದ ಬಿಕ್ಕಟ್ಟನ್ನು ... ರಿಸುವ ಬಗ್ಗೆ ಬ್ರಿಟನ್, ಫ್ರಾನ್ಸ್ ಮ... ಮೆರಿಕಗಳ ರಾಯಭಾರಿಗಳ ಪ್ರತಿನಿ... ಮೊನ್ನೆ ರಾತ್ರಿ ಮಾಸ್ಕೋವಿನಲ್ಲಿ ... ನ್ನು ಭೇಟಿ ಮಾಡಿ ಮಾತುಕತೆ ... ರೆಂದು ಹೇಳಲಾಗಿದೆ

ಸಂಸ್ಕೃತ ಮಹಾವಿದ್ಯಾ...

ಪೂನಾದಲ್ಲಿ ಸಂಸ್ಕೃತ ಮಹಾ... ಲಯವೊಂದನ್ನು ಅಕ್ಷಿನ ತಿಲಕ್ ... ರಾಷ್ಟ್ರ ವಿದ್ಯಾ ಪೀಠದವರು ಸಧ್ಯದ... ಟಿಸಲಿರುವರೆಂದೂ, ಇದಕ್ಕಾಗಿ ... ೭೦ ಸಾವಿರ ರೂ ಮಂಜೂರು ... ವರೆಂದೂ ಹೇಳಲಾಗಿದೆ ಗ್ರಾಮಾ... ರಚನಾತ್ಮಕ ಕೆಲಸಗಾರರ ಶಿಕ್ಷಣ... ಯೊಂದನ್ನು ಸ್ಥಾಪಿಸಲು ಮೇಲ್ಕ... ಸ್ಥೆಗೆ ೧೦ ಲಕ್ಷ ರೂ ಧನವು ಬಂ...

ಆಪೆರಾ ಟಾಕೀ...

ಮೈಸೂರು

25—8—48 ...

ಪ್ರತಿದಿನ 3 ಆಟಗಳು

ಬಡಿ ಬಾತ...

(ಹಿಂದಿ)

* ಸ್ವರ್ಣಲತಾ, * ಮಜಾ...

* ಉಲ್ಲಾಸ್ * ಯಾಕೂ...

ತಿಳಿವಳಿಕೆ

ಮೈಸೂರು ಶಿವರಾಂ ಪೇಟೆ ... ರೋಡಿನಲ್ಲಿ ಲೇವಾದೇವಿ ವ್ಯಾಪಾ... ಮಾಡುತ್ತಿದ್ದ ನಮ್ಮ ಅಂಗಡಿಯನ್ನು ... ಅಶೋಕಾ ರೋಡಿನಲ್ಲಿ ... ಬ್ಯಾಂಕ್ ಪಕ್ಕದಲ್ಲಿರುವ ಮತ್ತು ... ಹಾಲ್ ಛತ್ರದ ಎದುರಿನಲ್ಲಿರುವ ... ಬದಲಾಯಿಸಿದ್ದೇನೆ. ಆದ್ದರಿಂದ ಗಿರಾಕಿಗಳು ದಯಮಾಡಿ ಹೊಸ ... ಬರಬೇಕಾಗಿ ಪ್ರಾರ್ಥನೆ. ಚಿನ್ನ, ... ಸಾಮಾನುಗಳನ್ನು ಸುಲಭ ಬೆಲೆ... ಸರಿಯಾದ ಧಾರಣೆಗೆ ಮಾರುತ್ತೇ... ತ್ತು ಕೊಂಡುಕೊಳ್ಳುತ್ತೇವೆ.

ಎಸ್ ಮಾಣಿಕ್‌ಚಂದ ಪ್ರೊ...

ಅಶೋಕಾ ರೋಡ್, ಮೈ...

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

ತಾ|| 25-8-48 ರಿಂದ 1 ವಾರ ಮಾತ್ರ

* ಅನ್‌ಕಾನ್‌ಕರ್ಡ್ *

UNCONQUERED

(ವರ್ಣರಂಜಿತ ಚಿತ್ರ)

ಪಾತ್ರ:-ಗ್ಯಾರಿ ಕೂಪರ್, ಪೋಲೆಟ್ ಗಾಡ್ಡರ್ಡ್ ಮತ್ತು ಬೋರಿಸ್ ಕಾರ್ಲೋಫ್

ಚಾಮುಂಡೇಶ್ವರೀ ಟಾಕೀಸ್

ಆಗಸ್ಟ್ 24 ರಿಂದ 4 ದಿನಗಳು ಮಾತ್ರ

24 ಭಾಗಗಳುಳ್ಳ ಪೂರ್ತಾ ಸೀರಿಯಲ್

- ಜೂನಿಯರ್ ಜಿ-ಮೆನ್ -

ಪಾತ್ರ:--ಬಿಲ್ಲಿ ಹಾಲಪ್, ಗೇಬ್ರಿಲ್ ಡೆಲ್, ಹಂಟ್ಸ್ ಹಾಲ್ ಮುಂತಾದವರು

ಯುವಕರ ಸಾಹಸ ಅವರ್ಣನೀಯವಾದುದು.

ಪ್ರತಿ ದಿನ 3 ಆಟಗಳು :: ೨ ೩೦, ೬ ಮತ್ತು ೧೦ ಗಂಟೆಗೆ

ಮುಂದಿನ ಬದಲಾವಣೆ. – THRILL OF A ROMANCE

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೨೬-೮-೪೮ [ಸಂಚಿಕೆ ೩೫

ರಷ್ಯಾ ರಾಯಭಾರಿಗಳು ಅಮೆರಿಕದಿಂದ ವಾಪಸ್ಸು

ದಸರಾ ವಸ್ತುಪ್ರದರ್ಶನ

ಮೈಸೂರು ೨೬

ಇದೇ ೧೯೪೮ ನೆಯ ಅಕ್ಟೋಬರ್ ಮಾಹೆ ೩ ನೆಯ ತಾರೀಖಿನಿಂದ ರಾಜಧಾನಿಯಲ್ಲಿ ನಡೆಯುತ್ತಿರುವ ದಸರಾ ವಸ್ತು ಪ್ರದರ್ಶನಾಲಯದಲ್ಲಿ ಈ ಗಿನ ಕಂಡ ಕಾರ್ಯಕ್ರಮಗಳು ನಡೆಯಲೇರ್ಪಡಿಸಿದೆ:—

ನಾಟಕಾಭಿನಯ, ಭರತ ನಾಟ್ಯ, ಕಾವ್ಯ ವಾಚನ, ಸಂಗೀತ, ಸುಗ್ಗಿಯ ಕುಣಿತ, ಕೋಲಾಟ, ಸೂತ್ರದ ಗೊಂಬೆ ಆಟ, ಪಾಂಡುರಂಗ ಭಜನೆ, ಲಂಬಾಣಿ ಡ್ಯಾನ್ಸ್, ವೀರಗಾಣಿಕ, ಕನಸಾಲೆ ಕಾಳ, ಕೀಲು ಕುದುರೆ, ಕರಡಿ ಪ್ರದರ್ಶನ, ಯಕ್ಷಗಾನ, ಬಯಲಾಟ, ಹರಿಕಥೆ ಮತ್ತು ಶಿವಕಥೆ, ನಾಗಸ್ವರ, ಸೋಬಾನೇ ಹಾಡು ರಾಗಿ ಬೀಸುವ ಹಾಡು ಬಂಡಿ ಹಾಡು, ಒಗಟು, ದೊಂಬರಾಟ, ವ್ಯಾಯಾಮ ಪ್ರದರ್ಶನ, ಕುಸ್ತಿ.

ಇದರ ಎಲ್ಲಾ ವಿಧವಾದ ಕಲೆಗೆ ಸಂಬಂಧಪಟ್ಟ ಪ್ರದರ್ಶನಗಳನ್ನೂ ಏರ್ಪಡಿಸಿ ಜನತೆಯಲ್ಲಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರಕಬೇಕೆಂಬ ಉದ್ದೇಶವಿರುವುದರಿಂದ ಮೇಲ್ಕಂಡ ಕಾರ್ಯಕ್ರಮದಲ್ಲಿ ಪರಿಶ್ರಮವುಳ್ಳ ಎಲ್ಲರೂ ಸಹಕರಿಸಿ ಪ್ರದರ್ಶನದಲ್ಲಿ ಭಾಗವಹಿಸಿ ಕಲೆಗೆ ಉತ್ತೇಜನ ಕೊಡಬೇಕಾಗಿ ಕೋರಲಾಗಿದೆ ಇದರಲ್ಲಿ ಆಸಕ್ತಿಯುಳ್ಳವರು ಸೆಪ್ಟೆಂಬರ್ ಮಾಹೆ ೧೫ ನೆಯ ತಾರೀಖಿನೊಳಗಾಗಿ ಪತ್ರ ಮುಖೇನ ಗೌರವ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕಾಗಿ ವಿನಂತಿ

ವಿವಾಹ ಮಹೋತ್ಸವ

ರಾಜಧಾನಿಯ ಸೀತಾವಿಲಾಸ ರಸ್ತೆಯ ಶ್ರೀ ಸೀತಾರಾಮ ಮಂದಿರದಲ್ಲಿರುವ ಶ್ರೀ ಕೆಚ್. ಎಸ್ ನಾರಾಯಣ ಶಾಸ್ತ್ರಿಗಳವರ ಸಹೋದರರಾದ ಶ್ರೀ ಎಸ್ ಸುಬ್ಬಯ್ಯಂಗಾರವರ ಪುತ್ರ ಶ್ರೀ ಎಂ. ಎಸ್ ಸೀತಾರಾಂರವರಿಗೆ ರಾಬರ್ಟ್‌ಸನ್ ಪೇಟೆಯ ಗೇ ಟಾಕೀಸ್ ಸರ್ಕ್ಯೂಟ್ ಮಾಲೀಕರಾದ ಶ್ರೀ ಬಿ ಎನ್ ಶ್ರೀನಿವಾಸಅಯ್ಯಂಗಾರವರ ಪುತ್ರಿ ಚಿ|| ಸೌ|| ಲಕ್ಷ್ಮಿಯನ್ನು ತಂದು ಕೊಂಡು ವಿವಾಹವನ್ನು ರಾಬರ್ಟ್‌ಸನ್ ಪೇಟೆಯಲ್ಲಿ ಮುಂದಿನ ತಿಂಗಳು ೧ ನೇ ತಾ|| ನೆರವೇರಿಸುವರು

ಆಯುರ್ವೇದ ಮತ್ತು ಯೂನಾನಿ ಕಾಲೇಜ್ ಸಂಘ

ಸರ್ಕಾರದ ಆಯುರ್ವೇದ ಮತ್ತು ಯೂನಾನಿ ಕಾಲೇಜ್ ಸಂಘದ ಕಾರ್ಯಕಾರಿ ಸಮಿತಿಗೆ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ: ಅಧ್ಯಕ್ಷರು-ಪ್ರಿನ್ಸಿಪಾಲರು, ಕಾರ್ಯದರ್ಶಿಗಳು- ಶ್ರೀಗಳು ಕೆ ಎ. ಚೆಟ್ಟಿಯಣ್ಣ ಮತ್ತು ಎಸ್. ದೇಶಿಕಾಚಾರ್ಯರು; ಸದಸ್ಯರುಗಳು- ಶ್ರೀಗಳು ಎಸ್ ವೆಂಕಟನಾರಾಯಣರಾಯರು, ಭಟ್ಟಾಚಾರ್ಯರು ಬಿ ನಾರಾಯಣರಾಯರು, ಕೆ ಜಿ. ಮಹಾಬಲ ಭಟ್ಟರು, ಪಿ ಆರ್ ಸೀತಾರಾಂ, ಮಹಮದ್ ಕಾಸ್ಸಿಂ ಮತ್ತು ಅನ್ವರು ಲ್ಲಾ ಷರೀಫ್

ಹೈಸ್ಕೂಲು ವಿದ್ಯಾರ್ಥಿಗಳಿಗೆ ಕಡ್ಡಾಯದ ಕವಾಯತು

ಸಂಸ್ಥಾನದ ಎಲ್ಲಾ ಹೈಸ್ಕೂಲ ವಿದ್ಯಾರ್ಥಿಗಳಿಗೂ ಕಡ್ಡಾಯದ ಸೈನ್ಯ ಶಿಕ್ಷಣವನ್ನು ಕೊಡುವ ಯೋಜನೆಯ ಪ್ರಥಮ ಹಂತವಾಗಿ ಹೈಸ್ಕೂಲಿನ ಎರಡನೇ ವರ್ಷ ಮೇಲ್ಪಟ್ಟ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೂ ಕಡ್ಡಾಯದ ಕವಾಯತು ಶಿಕ್ಷಣವನ್ನು ಕೊಡಲು ಮೈಸೂರು ಸರ್ಕಾರದವರು ನಿರ್ಧರಿಸಿದ್ದಾರೆ

ಅಮೆರಿಕದಿಂದ ರಷ್ಯದ ರಾಯಭಾರಿಗಳ ವಾಪಸು

ಅಮೆರಿಕದಲ್ಲಿರುವ ಎಲ್ಲ ರಷ್ಯದ ರಾಯಭಾರಿ ಕಛೇರಿಗಳನ್ನೂ ಮುಚ್ಚಲು ರಷ್ಯದ ಸರ್ಕಾರವು ನಿರ್ಧರಿಸಿದೆ ನ್ಯೂಯಾರ್ಕಿನಲ್ಲಿರುವ ರಷ್ಯದ ಕಾನ್ಸಲರ ವರ್ತನೆಯನ್ನು ಪ್ರತಿಭಟಿಸಿ, ಅವನನ್ನು ವಾಪಸು ಕರೆಸಿಕೊಳ್ಳಬೇಕೆಂದು ರಷ್ಯಕ್ಕೆ ಅಮೆರಿಕ ಸರ್ಕಾರವು ಸೂಚನೆ ಇತ್ತುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ.

ರಜಾಕರರು ಮಕ್ಕಳನ್ನು ಬೆಂಕಿಗೆ ಎಸೆದರು

ಬಿದರೆ ಜಿಲ್ಲೆಯ ಯಾದಗಿರ್ ಎಂಬ ಹಳ್ಳಿಯ ಮೇಲೆ ೧ ಸಾವಿರ ಜನ ಸಶಸ್ತ್ರ ರಜಾಕರು ಮುತ್ತಿಗೆ ಹಾಕಿ, ಅಲ್ಲಿನ ೬೦೦ ರೂ ಜನರೆಲ್ಲರನ್ನು ಕೊಲೆ ಮಾಡಲು ಮುತ್ತಿಸಿದರೆಂದೂ, ೨೦೦ ಜನರನ್ನು ಕೊಲೆ ಮಾಡಿ, ಅವರ ಶವಗಳನ್ನು ಕೊಳಕ್ಕೆ ಎಸೆದರೆಂದೂ ವರದಿಯಾಗಿದೆ ೧೧೦೦ ಮನೆಗಳನ್ನು ಸುಟ್ಟು ಹಾಕಿ, ಅನೇಕ ಮಕ್ಕಳನ್ನು ಉರಿಯುವ ಜ್ವಾಲೆಗೆ ಎಸೆದರೆಂದೂ ೫೦೦ ಜನರಿಗಿಂತ ಹೆಚ್ಚಿಗೆ ಹೆಂಗಸರನ್ನು ಬಲಾತ್ಕಾರವಾಗಿ ಮತಾಂತರಕ್ಕೆ ಸೇರಿಸಿದರೆಂದೂ ಹೇಳಲಾಗಿದೆ

ನೈಜಾಂ ಪೋಲೀಸರಿಗೂ ರಜಾಕಾರರಿಗೂ ಘರ್ಷಣೆ

ಹೈದ್ರಾಬಾದಿನ ಬಿದರೆ ಮತ್ತು ಉಸ್ಮಾನಾಬಾದ್ ಜಿಲ್ಲೆಗಳಲ್ಲಿ ರಜಾಕಾರರ ಸ್ವೇಚ್ಛಾ ಪ್ರವರ್ತನೆ ಮಿತಿಮೀರಿ, ಅವರುಗಳು ಸರ್ಕಾರಿ ಆಜ್ಞೆಗಳನ್ನು ಉಲ್ಲಂಘಿಸಿ ವಿನಾಶಕಾರಕ ಕೃತ್ಯಗಳಲ್ಲಿ ತೊಡಗಿರುವರು ಅವರ ಹಾವಳಿ ಯನ್ನು ತಡೆಗಟ್ಟಲು ಬಂದ ಪೋಲೀಸರಿಗೂ ರಜಾಕರಿಗೂ ಅನೇಕಬಾರಿ ತೀವ್ರ ಘರ್ಷಣೆಗಳು ನಡೆದ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನು ಸತ್ತನು. ರಜಾಕರಿಂದ ಪ್ರೇರಿತರಾದ ೩೦೦ ಮಂದಿ ಮುಸ್ಲಿಮರ ಗುಂಪೊಂದು ಉಸ್ಮಾನಾಬಾದಿನ ಅನೇಕ ಹಳ್ಳಿಗಳನ್ನು ಲೂಟಿ ಮಾಡಿ ಸುಮಾರು ಎರಡು ಲಕ್ಷ ರೂ ಬೆಲೆಬಾಳುವ ಆಸ್ತಿಪಾಸ್ತಿಗಳನ್ನು ಕೊಳ್ಳೆ ಹೊಡೆದಿರುವರೆಂದು ವರದಿಯಾಗಿದೆ

ಸೆಂಟ್ ಫಿಲೋಮಿನಾ ಕಾಲೇಜ್ ಸಂಘ

ರಾಜಧಾನಿಯ ಸೆಂಟ್ ಫಿಲೋಮಿನ ಕಾಲೇಜು ವಿದ್ಯಾರ್ಥಿ ಸಂಘಕ್ಕೆ ಶ್ರೀ ಪಿ ಆನಂದರಾವ್ ರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಚಂಬಕೆ ಶ್ರೀನಿವಾಸ ಮೂರ್ತಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ.

ಕಾಳ ಸಂತೆಯಲ್ಲಿ ೩೦ ಲಕ್ಷ ಸಿಗರೇಟುಗಳ ಪತ್ತೆ

ಜರ್ಮನಿಯ ಕಾಳಸಂತೆ ವ್ಯಾಪಾರಿಗಳ ಮನೆಯೊಂದರಲ್ಲಿ ೩೦ ಲಕ್ಷ ಸಿಗರೇಟುಗಳೂ ೨೦ ಲಕ್ಷ ಸಿಗಾರುಗಳೂ ಮತ್ತು ೧೫ ಲಕ್ಷ ರೇಜರ್ ಬ್ಲೇಡುಗಳೂ ಪತ್ತೆಯಾದುವೆಂದು ಹೇಳಲಾಗಿದೆ

ರಾಯಚೂರಿನ ಜನರು ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕು

ರಾಯಚೂರಿನ ೨. ೩೮. ತಮ್ಮ ಬಂದೂಕನ್ನು ದುರುಪಯೋಗಿಸುತ್ತಿದ್ದುದರಿಂದ, ಅವರ ತಮ್ಮ ಸ್ವಂತ ಶಸ್ತ್ರಾಸ್ತ್ರಗಳನ್ನೆಲ್ಲವನ್ನೂ ಸರ್ಕಾರಕ್ಕೆ ಒಪ್ಪಿಸಬೇಕೆಂದು ಮಧ್ಯಪ್ರಾಂತ್ಯ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ರಜಾಕರರಿಂದ ೩ ಲಕ್ಷ ರೂ. ದವಸ ಧಾನ್ಯಗಳ ಲೂಟಿ

ಗುಲ್ಬರ್ಗಾ ಜಿಲ್ಲೆಯ ಮೂರು ಹಳ್ಳಿಗಳ ಮೇಲೆ ರಜಾಕರರು ಮುತ್ತಿಗೆ ಹಾಕಿ, ೧೫೦ ಜನರನ್ನು ಕೊಲೆ ಮಾಡಿದರೆಂದೂ ಮತ್ತು ೩ ಲಕ್ಷ ರೂ ನ ಆಹಾರ ಪದಾರ್ಥಗಳನ್ನು ಲೂಟಿ ಮಾಡಿದರೆಂದೂ ಹೇಳಲಾಗಿದೆ.

ಹೈದ್ರಾಬಾದಿಗೆ ಮುಸ್ಲಿಮರನ್ನು ಕರೆಸಲು ೬೦ ಸಾವಿರ ರೂ. ಲಂಚ

ಬೊಂಬಾಯಿ, ಸಂಯುಕ್ತ ಪ್ರಾಂತ್ಯ ಮತ್ತು ಮಧ್ಯ ಭಾರತದಿಂದ ಮುಸ್ಲಿಮರು ಹೋರಾಟ ಸಮಯದಲ್ಲಿ ಅವರುಗಳನ್ನು ಹೈದರಾಬಾದಿಗೆ ಕರೆತರಲು ಇಂದೂರಿನ ಏಜೆಂಟರುಗಳಿಗೆ ನಿಜಾಮರು ೬೦ ಸಾವಿರ ರೂ.ಗಳನ್ನು ಕೊಟ್ಟರೆಂದು ಹೇಳಲಾಗಿದೆ

ಪಶ್ಚಿಮ ಪಂಜಾಬ್ ಸರ್ಕಾರ ರಾಜೀನಾಮೆ ಕೊಡಬೇಕು

ಲಾಹೋರಿನಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಪಶ್ಚಿಮ ಪಂಜಾಬಿನ ಸರ್ಕಾರವು ರಾಜೀನಾಮೆ ಕೊಡಬೇಕೆಂಬ ಒತ್ತಾಯಪಡಿಸಿ ನಿರ್ಣಯವನ್ನು ಮಾಡಲಾಗಿದೆ ನಿರಾಶ್ರಿತರ ಕುಂದುಕೊರತೆಗಳನ್ನು ನಿವಾರಿಸುವವರೆಗೂ ನಿರಾಶ್ರಿತ ಶಾಸನ ಸಭಾ ಸದಸ್ಯರುಗಳು ಸಭೆಯನ್ನು ಬಹಿಷ್ಕರಿಸಬೇಕೆಂದೂ ತತ್ಕ್ಷಣ ಪಾಕಿಸ್ತಾನ ಸರ್ಕಾರವು ಜನತೆಯ ಬೇಡಿಕೆಗಳನ್ನು ಪೂರೈಸಬೇಕೆಂದೂ ... ಜನರಿಗೆ ಸ್ವಸ್ಥಾನ ಕೊಡಿಸಬೇಕೆಂದೂ ನಿರ್ಣಯಿಸಲಾಗಿದೆ

ಅಮೆರಿಕದಲ್ಲಿ ಮೈಸೂರು ವಸ್ತುಗಳಿಗೆ ಗಿರಾಕಿ

ಕೆ. ಟಿ. ಭಾಷ್ಯಂರವರ ಭಾಷಣ

ಸ್ವಂ. ಸು. ವರದಿ] ಬೆಂಗಳೂರು ೨೬

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ಸೂರಿನೇ ವಾರ್ಡ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಭಾಷಣ ಮಾಡಿ ತಮ್ಮ ಅಮೆರಿಕಾ ಪ್ರವಾಸದ ಅನುಭವಗಳನ್ನು ತಿಳಿಸಿ ಹೀಗೆ ಹೇಳಿದರು:—

ಪಾಶ್ಚಿಮಾತ್ಯರು ನಮಗಿಂತಲೂ ಯಾವ ವಿಧದಲ್ಲಿಯೂ ಹೆಚ್ಚು ಬುದ್ಧಿವಂತರಲ್ಲ. ಆದರೆ ಅವರೆಲ್ಲರೂ ಯಾವುದಾದರೊಂದು ಕೆಲಸದಲ್ಲಿ ಸದಾ ತೊಡಗಿರುವರು ಯಾರೂ ಸೋಮಾರಿಗಳಾಗಿ ಕಾಲ ಕಳೆಯುವುದಿಲ್ಲ. ಪರಸ್ಪರ ಸಹಕಾರದಿಂದ ತಮ್ಮ ಉದ್ಯಮಗಳನ್ನು ಅಭಿವೃದ್ಧಿಪಡಿಸಿಕೊಂಡು ಸುಖವಾಗಿ ಬಾಳುತ್ತಿದ್ದಾರೆ. ಮೈಸೂರಿನ ಪದಾರ್ಥಗಳಿಗೆ ಅಲ್ಲಿ ವಿಶೇಷ ಮನ್ನಣೆ ಇದೆ ಇಲ್ಲಿನ ಗಂಧದ ಕಡ್ಡಿ, ಸಾಬೂನು ಮತ್ತು ಬಣ್ಣದ ಸಾಮಾನುಗಳೇ ಮುಂತಾದುವುಗಳಿಗೆ ವಿಶೇಷ ಗಿರಾಕಿ ಇದೆ. ಇವುಗಳ ಮಾರಾಟಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಂಡರೆ ಹೆಚ್ಚು ಪ್ರಯೋಜನ ಉಂಟಾಗುವುದು

ಕಾಂಗ್ರೆಸ್ ಅಧ್ಯಕ್ಷರು ದೆಹಲಿಗೆ

ಈ ದಿನ ಬೆಳಗ್ಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ಧಲಿಂಗಯ್ಯನವರೂ, ಕಾರ್ಯದರ್ಶಿಗಳಾದ ಶ್ರೀ ಎ ಜಿ. ರಾಮಚಂದ್ರರಾಯರೂ ದೆಹಲಿಗೆ ತೆರಳಿದರು. ಮೈಸೂರು ಕಾಂಗ್ರೆಸ್ಸನ್ನು ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಐಕ್ಯಗೊಳಿಸುವುದು ಮತ್ತು ಮೈಸೂರಿನ ರಾಜಕೀಯ ಪರಿಸ್ಥಿತಿಗೆ ಸಿದ್ಧತೆಯನ್ನು ಮಾಡುವುದು — ಇವೇ ಮುಂತಾದ ವಿಚಾರಗಳ ಬಗ್ಗೆ ಅಖಿಲ ಭಾರತದ ನಾಯಕರುಗಳೊಡನೆ ಮಾತುಕತೆ ನಡೆಸುವರು.

ಬಸ್ಸುಗಳ ರಾಷ್ಟ್ರೀಕರಣ

ಸೆಪ್ಟೆಂಬರ್ ೧ ರಿಂದ ಜಾರಿಗೆ ಬರಲಿರುವ ಬಸ್ಸುಗಳ ರಾಷ್ಟ್ರೀಕರಣದ ಮೊದಲ ಹಂತವಾಗಿ ೬೦ ಬಸ್ಸುಗಳನ್ನು ಸರ್ಕಾರದವರು ಕೊಂಡುಕೊಂಡಿರುವರು. ಗೃಹ ಸಚಿವರು ನಿನ್ನೆ ಅವುಗಳನ್ನು ಪರಿಶೀಲನೆ ಮಾಡಿದರು

ಆಹಾರ ಪರಿಸ್ಥಿತಿ

ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಹಾರ ಸಮಿತಿಯು ನಿನ್ನೆ ಸಭೆ ಸೇರಿ ಸಂಸ್ಥಾನದಲ್ಲಿ ಭತ್ತ, ರಾಗಿ, ಸಜ್ಜೆ ಮುಂತಾದ ಧಾನ್ಯಗಳಿಗೆ ವಿಶೇಷ ಅಭಾವವುಂಟಾಗಿರುವುದರಿಂದ ಕೇಂದ್ರ ಸರ್ಕಾರವು ನೆರವು ನೀಡಬೇಕೆಂದು ತಂತಿಯ ಮೂಲಕ ಪ್ರಾರ್ಥಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

ವಿಶ್ವ ಭದ್ರತಾ ಸಮಿತಿಗೆ ನೈಜಾಮರ ಪತ್ರ

ನೈಜಾಮರು ವಿಶ್ವ ಭದ್ರತಾ ಸಮಿತಿಯ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು, ಹೈದರಾಬಾದ ಭಾರತ ಡೊಮಿನಿಯನ್ನಿಗೆ ಸೇರಬೇಕೆಂದು ಅಲ್ಲಿನ ಸರ್ಕಾರವು ಒತ್ತಾಯ ಮಾಡುತ್ತಿರುವುದರಿಂದ ಬಿಕ್ಕಟ್ಟನ್ನು ಭದ್ರತಾ ಸಮಿತಿಯ ಗಮನಕ್ಕೆ ತರಬೇಕೆಂದೂ, ಮತ್ತು ಅದನ್ನು ಪ್ಯಾರಿಸ್ಸಿನಲ್ಲಿ ಮುಂದಿನ ತಿಂಗಳು ನಡೆಯುವ ಸಭೆಯಲ್ಲಿ ಮಂಡಿಸಬೇಕೆಂದೂ ಹೈದರಾಬಾದಿಗೆ ಅವಕಾಶ ಕೊಡಬೇಕೆಂದೂ ಕೋರಿದ್ದಾರೆ ... ಪ್ರಸ್ತಾಪಿಸುತ್ತಿರುವ ನೀತಿಯಿಂದ ... ರಾಷ್ಟ್ರದ ಐಕ್ಯತೆಗೆ ಧಕ್ಕೆ ... ಈ ಬಿಕ್ಕಟ್ಟು ... ಪ್ರಪಂಚದ ಶಾಂತಿಗೆ ಭಂಗ ... ಪತ್ರದಲ್ಲಿ ಸೂಚಿಸಲಾಗಿದೆ

ಜನಗಣಮನವೇ ಸದ್ಯಕ್ಕೆ ರಾಷ್ಟ್ರಗೀತೆ

ಭಾರತದ ರಾಷ್ಟ್ರಗೀತೆಯ ಬಗ್ಗೆ ಅಂತಿಮ ತೀರ್ಮಾನ ಮಾಡುವವರೆಗೂ, ಜನಗಣಮನವೇ ಭಾರತದ ರಾಷ್ಟ್ರಗೀತೆಯಾಗಿರುವುದೆಂದು ಯೂನಿಯನ್ ಪಾರ್ಲಿಮೆಂಟ್ ಸಭೆಯಲ್ಲಿ ಪಂಡಿತ ನೆಹರೂರವರು ತಿಳಿಸಿದ್ದಾರೆ.

ನಿರಾಶ್ರಿತರಿಗೆ ಬಟ್ಟೆ ಮತ್ತು ಧನ ಸಹಾಯ

ಸಂಸ್ಥಾನದಲ್ಲಿರುವ ನಿರಾಶ್ರಿತರಿಗೆ ಬಟ್ಟೆ ಮತ್ತು ಹಣವನ್ನು ಆಫೀಸು ದಿನಗಳಲ್ಲಿ ಬೆಂಗಳೂರು ಕೇಂದ್ರ ಕಛೇರಿಯಲ್ಲಿ ಹಂಚಲಾಗುವುದೆಂದೂ ಮತ್ತು ಮಧ್ಯಾಹ್ನ ೧ ರಿಂದ ೪ ಗಂಟೆಯ ವರೆಗೆ ನಿರಾಶ್ರಿತರಿಗೆ ಭೇಟಿ ಕೊಡಲಾಗುವುದೆಂದೂ, ತಿಳಿಸಲಾಗಿದೆ.

ಚೀನಾದ ೮ ಲಕ್ಷ ಡಾಲರುಗಳ ಬೆಲೆ ಕೇವಲ ೨೫ ಸೆಂಟುಗಳು

ಚೀನಾದಲ್ಲಿ ಹಣದ ಉಬ್ಬರವನ್ನು ತಡೆಗಟ್ಟಲು ಹೊಸ ನಾಣ್ಯ ಚಲಾವಣೆಯನ್ನು ಮೊನ್ನೆಯಿಂದ ಜಾರಿಗೆ ತರಲಾಗಿದೆ. ಇದರಿಂದ ೮ ಲಕ್ಷ ಡಾಲರುಗಳ ಬೆಲೆ ಬಾಳುವ ವೃತ್ತ ಪತ್ರಿಕೆಯನ್ನು ಕೇವಲ ೨೫ ಸೆಂಟುಗಳಿಗೆ ಮಾರಲಾಗುತ್ತಿದೆ.

ಅಪೆರಾ ಟಾಕೀಸ್
ಮೈಸೂರು
25—8—48 ರಿಂದ
ಪ್ರತಿದಿನ 3 ಆಟಗಳು
ಬಡಿ ಬಾತ್
(ಹಿಂದಿ)
ಸ್ವರ್ಣಲತಾ, * ಮಜಾರ್‌ಖಾನ್, ಉಲ್ಲಾಸ್ * ಯಾಕೂಬ್

Morning Shows
From 27—8—48
For 4 days only
Return of Frank James
—:With:—
HENRY FONDA,
GENE TIERNEY

ಡೆಟಿನ್ಯೂಗಳ ಸಂಬಂಧರವರು ಉಪವಾಸ ಮಾಡಬೇಕಾದೀತು

ಅವರ ಕುಟುಂಬದವರ ಹೇಳಿಕೆ

ಮೈಸೂರು ೨೬

ಮೈಸೂರು ಜೈಲಿನಲ್ಲಿ ಬಂಧಿಸಲಾಗಿರುವ ಕಮ್ಯೂನಿಸ್ಟರಾದ ಎಂ ಎಸ್ ರಾಮರಾವ್, ಎಂ ಎ ರಾಜಶೇಖರ್ ಮತ್ತು ಕೆ ಎಸ್ ರಾಮಸ್ವಾಮಿ ಯವರುಗಳ ಪತ್ನಿಯರಾದ ಶ್ರೀಮತಿ ಎ ಪಿ ಗೌರಮ್ಮ, ಸುವರ್ಣಮ್ಮ ಮತ್ತು ನಾಗರತ್ನಮ್ಮನವರುಗಳು ಈ ಕೆಳಗೆ ಕಂಡಂತೆ ಹೇಳಿಕೆಯನ್ನಿತ್ತಿದ್ದಾರೆ:—

ಡೆಟಿನ್ಯೂಗಳ ಕುಟುಂಬದವರಿಗೆ ವೇತನ, ಎಲ್ಲ ಬಂದಿಗಳನ್ನೂ ಸೆಂಟ್ರಲ್ ಜೈಲಿಗೆ ವರ್ಗಾಯಿಸುವುದು ಮತ್ತು ಜೈಲಿನಲ್ಲಿ ಹೆಚ್ಚಿನ ಸೌಕರ್ಯಗಳನ್ನು ಏರ್ಪಡಿಸುವುದು- ಇವುಗಳನ್ನು ಆಗಸ್ಟ್ ೧೦ ನೇ ತಾ॥ ನೊಳಗಾಗಿ ಈಡೇರಿಸುವುದಾಗಿ ಸರ್ಕಾರದವರು ಭರವಸೆ ಕೊಟ್ಟದ್ದರಿಂದ ಡೆಟಿನ್ಯೂಗಳು ಕೈಗೊಂಡಿದ್ದ ಉಪವಾಸವನ್ನು ಮುಕ್ತಾಯಗೊಳಿಸಿದರು. ಆದರೆ ಇಲ್ಲಿಯವರೆಗೂ ಸರ್ಕಾರದವರು ಅವುಗಳಲ್ಲಾವ ಕಾರ್ಯರೂಪಕ್ಕೆ ತಂದಿಲ್ಲ. ಅವರ ಬೇಡಿಕೆಗಳನ್ನು ಸರ್ಕಾರದವರು ಸಲ್ಲಿಸದಿದ್ದರೆ ಡೆಟಿನ್ಯೂಗಳ ಪುನಃ ಉಪವಾಸ ಮುಷ್ಕರ ಹೂಡಬೇಕಾಗುವುದು ಆ ರೀತಿ ಆದರೆ ಅವರ ಕುಟುಂಬದವರೂ ಸಹ ಉಪವಾಸ ಮಾಡಬೇಕಾಗುವುದು.

ಕಾಶ್ಮೀರದಲ್ಲಿ ೧೦॥ ಮೈಲಿ ಹಾರಿಸಬಲ್ಲ ಬಂದೂಕಗಳು

ಕಾಶ್ಮೀರದ ಊರಿ ಮತ್ತು ಟಿಕೋರೀ ರ ಕ್ಷೇತ್ರಗಳಲ್ಲಿ ಪಾಕೀಸ್ತಾನದ ಸೈನಿಕರು ೧೦॥ ಮೈಲಿಗಳ ದೂರದವರೆಗೆ ಹಾರಿಸಬಲ್ಲ ೫॥ ಅಂಗುಲದ ಫಿರಂಗಿಗಳನ್ನು ಉಪಯೋಗಿಸುತ್ತಿದ್ದಾರೆಂದು ವರದಿಯಾಗಿದೆ.

ಶ್ರೀ ಗಣೇಶಾ ಟಾಕೀಸ್
27—8—48 ರಿಂದ
ಪ್ರತಿ ದಿನ 3 ಆಟಗಳು
ರಂಭಾ ಪ್ರೇಮ
(ತಮಿಳು)
ಪಾತ್ರ:— ಸಾರಂಗಪಾಣಿ, ಕೆ. ಎಲ್ ವಿ ವಸಂತ, ಕೃಷ್ಣನ್, ಮಧುರಂ
—:ಮುಂದಿನ ಬದಲಾವಣೆ:—
* ವಸಂತಸೇನಾ *

ಪುನಃ ಬಟ್ಟೆ ರೇಷನಿಂಗ್

ಬಟ್ಟೆ ರೇಷನಿಂಗನ್ನು ಜಾರಿಗೆ ತರುವ ವಿಷಯವನ್ನು ಪ್ರಾಂತೀಯ ಸರ್ಕಾರಗಳ ಪರಿಶೀಲನೆಗೆ ಬಿಡಲಾಗಿದೆಯೆಂದೂ, ಅನೇಕ ಪ್ರದೇಶಗಳಲ್ಲಿ ರೇಷನಿಂಗ್ ಜಾರಿಗೆ ಬರುವುದೆಂದೂ ಭಾರತದ ಪಾರ್ಲಿಮೆಂಟ್ ಸಭೆಯಲ್ಲಿ ಕೈಗಾರಿಕಾ ಸಚಿವರಾದ ಡಾ॥ ಶ್ಯಾಮಪ್ರಸಾದ್ ಮುಖರ್ಜೀಯವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ. ಬಟ್ಟೆಗಳ ದರವನ್ನು ಟ್ಯಾರಿಫ್ ಬೋರ್ಡಿನ ಸಲಹೆ ಮೇರೆ ನಿಗದಿ ಮಾಡಲಾಗುವುದೆಂದೂ ತಿಳಿಸಲಾಗಿದೆ.

ನಿಮ್ಮ ಮೈ ಕೋಮಲ ಸ್ವಚ್ಛ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ? ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ದಕ್ಷಿಣ ಆಫ್ರಿಕದ ಜನರಿಗೆ ಸೈನ್ಯ ಶಿಕ್ಷಣವಿಲ್ಲ

ದಕ್ಷಿಣ ಆಫ್ರಿಕದಲ್ಲಿನ ಮೂಲ ನಿವಾಸಿಗಳಿಗೂ ಮತ್ತು ವರ್ಣದ ಜನರಿಗೂ ಸೈನ್ಯ ಶಿಕ್ಷಣವನ್ನು ಕೊಡುವುದಿಲ್ಲವೆಂದೂ, ಮತ್ತು ಅವರುಗಳ ಆತ್ಮ ರಕ್ಷಣೆಗಾಗಿ ಶಸ್ತ್ರಗಳನ್ನು ಇಟ್ಟುಕೊಳ್ಳಲೂ ಅನುಮತಿ ಕೊಡುವುದಿಲ್ಲವೆಂದೂ ಅಲ್ಲಿನ ರಕ್ಷಣಾ ಮಂತ್ರಿಗಳು ಅಪ್ಪಣೆ ಮಾಡಿದ್ದಾರೆ.

ರಾಜಕಮಲ್
ಮೈಸೂರು
ತಾ॥ 25—8—48 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
* ಶ್ರೀ ವಳ್ಳಿ
(ತಮಿಳ್) (ಹೊಸ ಪ್ರಿಂಟ್)
—:ತಾರಾಗಣ:—
ಟಿ. ಆರ್. ಮಹಾಲಿಂಗಂ, ಕುಮಾರಿ ರುಕ್ಮಿಣಿ, ಎನ್. ಎಸ್ ಕೃಷ್ಣನ್, ಟಿ. ಎ. ಮಧುರಂ

Morning Shows
From 27—8—48
H G. Wells'
Things to Come
—:With:—
Raymond Massey,
Ralph Richardson,
Sir Cedric Hardwicke

Edited printed and published by A. R. Nagarajan at the Sadhvi Press D. Subbaiah Road Mysore.

CHAMUNDESWARI TALKIES
Morning Shows at 10-30 a. m
4 Days From 27th August
GILDA
Featuring:— The Beautiful Star
Rita Hayworth as Gilda
Supported by **Glen Ford** & others
Never Forget to see this !

ಪ್ರಭುದೇವಾ ಟಾಕೀಸಿನಲ್ಲಿ
27-8-48ನೇ ಶುಕ್ರವಾರದಿಂದ :: ಅಮೋಘ 2ನೇ ವಾರ
ಪ್ರತಿ ದಿನ ಎರಡು ಆಟಗಳು
ರಾಯಲ್ ಟಾಕೀಸಿನವರ
* ಸಂತ್ ಸಕ್ಕೂಬಾಯಿ *
(ತಮಿಳು)
ಭೂಮಿಕೆ:—ಕೆ. ಅಶ್ವತ್ಥಮ್ಮ, ಕೆ. ಸಾರಂಗಪಾಣಿ, ಪಿ ಒಸ್ಸಿಬಾಯಿ ಮುಂತಾದವರು

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೭-೮-೪೮ [ಸಂಚಿಕೆ ೩೬

ನಿಜಾಮರಿಗೆ ರಾಜಾಜಿ

★ ಕಟ್ಟಕಡೇ ಸೂಚನೆ ★

ಸೂಚನೆ

ಶ್ರೀ ಕೃಷ್ಣಜಯಂತಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಸರ್ಕಾರಿ ಅಧಿಕಾರಿಗಳ ಪಕ್ಷಿಯರ ಕರ್ತವ್ಯ

ತಮ್ಮ ಗಂಡಂದಿರ ಸಂಬಳಗಳಲ್ಲಿ ಮಾತ್ರ ತಾವು ಪಾಲುದಾರರಿಂದೂ ಬೇರಿ ಯಾವ ಜವಾಬ್ದಾರಿಯೂ ಇಲ್ಲವೆ ದೂ ಸರ್ಕಾರಿ ಅಧಿಕಾರಿಗಳ ಮಡದಿಯರು ತಿಳಿಯಬಾರದು. ಅವರು ಜನತಾ ಸೇವೆಯಲ್ಲಿ ಸಂಪೂರ್ಣವಾದ ಆಸಕ್ತಿಯನ್ನ ವಹಿಸಬೇಕು ಎಂಬುದಾಗಿ ರಾಜಾಜಿಯವರು ಮದರಾಸಿನ ಭಾಷಣವೊಂದರಲ್ಲಿ ತಿಳಿಸಿದರು. ಉದಾಹರಣೆಗಾಗಿ ಗವರ್ನರ್ ಸರ್ ಆರ್ಚಿಬಾಲ್ಡ್ ನೈ ರವರ ಪತ್ನಿ ಯವರ ಅನರ್ಘವನ್ನು ಸೂಚಿಸಿದರು. ಅವರು ಸಂಬಳರಹಿತ ... ಗೆದುಕೊಳ್ಳದಿದ್ದರೂ ಅನೇಕ ಬಗೆಗಳಲ್ಲಿ ದೀನ ಜನ ಸೇವೆಯನ್ನು ಮಾಡುತ್ತಿರುವರೆಂದು ತಿಳಿಸಿದರು.

ಮಕ್ಕಳ ಧೂಮ ಪಾನಕ್ಕೆ ನಿಷೇಧ

ಮದರಾಸ್ ಪ್ರಾಂತ್ಯದಲ್ಲಿ ಮಕ್ಕಳು ಧೂಮ ಪಾನ ಮಾಡು ವುದನ್ನು ನಿಷೇಧಿಸಲು ಒಂದು ಮಸೂದೆಯನ್ನು ಸಧ್ಯದಲ್ಲೇ ಸರ್ಕಾರದವರು ತರುವರೆಂದು ಅಲ್ಲಿನ ಶಾಸನ ಸಭೆಯಲ್ಲಿ ವ್ಯವಸಾಯ ಸಚಿವರಾದ ಶ್ರೀ ಕೆ ಮಾಧವ ಮೆ ನನರವರು ತಿಳಿಸಿರುತ್ತಾರೆ. ವಿಕ್ರೀಡಲೆ ಮತ್ತು ನೆಶ್ಯ ಹಾಕಿಕೊಳ್ಳುವುದನ್ನು ನಿಷೇಧಿಸಲಾಗುವುದೇ ಎಂಬ ಪ್ರಶ್ನೆಗೆ ಇಲ್ಲವೆಂದು ಉತ್ತರ ಬಂದಿತು.

ಫಸ್ಟ್ ಗ್ರೇಡ್ ಕಾಲೇಜು ಸಂಘದ ಚುನಾವಣೆ

ಮೈಸೂರು. ಫಸ್ಟ್ ಗ್ರೇಡ್ ಕಾಲೇಜು ಸಂಘದ ವಾರ್ಷಿಕ ಚುನಾವಣೆಯು ಮೊನ್ನೆ ನಡೆದು, ಕೆಳಗೆ ಕಂಡ ವಿದ್ಯಾರ್ಥಿಗಳು ಚುನಾಯಿತರಾಗಿದ್ದಾರೆ:—ಅಧ್ಯಕ್ಷರು-ಶ್ರೀ ಹೆಚ್ ಸಿ ವಿಶ್ವನಾಥ್ ಕಾರ್ಯದರ್ಶಿ ಶ್ರೀ ಎಂ ಬಸವಾರಾಧ್ಯ. ಸದಸ್ಯರುಗಳು-ಶ್ರೀಗಳು ಕೆ ಹನುಮಂತರಾಯಪ್ಪ, ಎ ಬಿ ರಾಮಣ್ಣ, ಸಿ ಸಿದ್ದಪ್ಪ, ಎ ಎಂ ಲಿಂಗಣ್ಣ, ಕೆ ಚೌಡಯ್ಯ, ಎಂ ಪಿ ಲಕ್ಷ್ಮೀ ಕಾಂತಯ್ಯ, ಬಿ ಡಿ ಚೆನ್ನರಾಜೇ ಅರಸ್, ಎ ಟಿ ಸದಂದಾಸ್, ಹೆಚ್ ಎ ಶಿವಪ್ಪ, ವಿ. ಜಿ ಎಸ್ ರಾವ್, ಹೆಚ್ ಬಿ ನಂಜುಂಡಾರಾಧ್ಯ, ಕೆ ಎಸ್ ಮಾದಪ್ಪ ಮತ್ತು ಕೆ ಎ ಮತ್ತು ಕೆ ಎ ವಿಶ್ವೇಶ್ವರಯ್ಯ

ಬರೋಡಾ ಬಿಕ್ಕಟ್ಟು ಬಗೆಹರಿಯಿತು

ಬರೋಡಾ ಮಹಾರಾಜರಿಗೂ ಸರ್ದಾರ್ ಪಟೇಲರಿಗೂ ನಡುವೆ ನಡೆದ ಮಾತುಕತೆಗಳ ಫಲವಾಗಿ, ಕಠಿನ ಬಿಕ್ಕಟ್ಟು ಬಗೆಹರಿದು, ಒಂದು ತೀರ್ಮಾನಕ್ಕೆ ಬರಲಾಗಿದೆ. ಯಾವ ಗೌರವಕ್ಕೂ ಇಲ್ಲದ ಸಂಸ್ಥಾನದಲ್ಲಿ ಸಂಪೂರ್ಣ ಜನಾಬ್ದಾರಿ ಸರ್ಕಾರವ ಸ್ಥಾಪನೆ, ರಾಜರ ಗೈರ್ ಹಾಜರಿನಲ್ಲಿ ಮಹಾರಾಣಿ ಶಾಂತಿ ದೇವಿ, ದಿವಾನರು ಮತ್ತು ನ್ಯಾಯಾಂಗ ಸಚಿವರುಗಳನ್ನೊಳಗೊಂಡ ಸಮಿತಿಯು ಆಡಳಿತ ಅಧಿಕಾರವನ್ನು ಚಲಾಯಿಸುವುದು, ಮತ್ತು ಸಂಸ್ಥಾನದಿಂದ ತೆಗೆದುಕೊಂಡ ಸಾಲ ಮತ್ತು ಜವಾ ಮಾಡಿದ ಆಭರಣ ಗಳನ್ನು ಹಿಂದಿರುಗಿಸಿಕೊಡುವುದು-ಈ ಷರತ್ತುಗಳಿಗೆ ರಾಜರು ಒಪ್ಪಿರುವರು.—೨೫ ಲಕ್ಷದಿಂದ ೫೦ ಲಕ್ಷದವರೆಗೆ ಹೆಚ್ಚಿಸಿರುವ ರಾಜಧನದ ಬಗ್ಗೆ ಸರ್ದಾರ್ ಪಟೇಲರ ಇಚ್ಛೆಯಂತೆ ರಾಜರು ಒಪ್ಪಿಕೊಳ್ಳುವರೆಂದೂ ಹೇಳಲಾಗಿದೆ.

ಗೌರ್ನರ್ ಜನರಲ್ಲರ ಕೆಲಸವು ರಬ್ಬರು ಮುದ್ರೆಯನ್ನೊತ್ತುವುದು ಮಾತ್ರ!

ಗೌರ್ನರ್ ಜನರಲ್ ರಾಜಾಜಿಯವರು ಮದರಾಸಿನಲ್ಲಿ ಭಾಷಣಮಾಡುತ್ತ ತಮ್ಮ ಹುದ್ದೆಗೆ ಯಾವ ಹೆಚ್ಚಿನ ಪ್ರಾಮುಖ್ಯತೆಯೂ ಇಲ್ಲವೆಂದು ಹೇಳಿದರು. "ಗೌರ್ನರ್ ಜನರಲ್ಲರು ಸರ್ಕಾರವನ್ನು, ಮಂತ್ರಿ ಮಂಡಲದವರು ತೀರ್ಮಾನಿಸಿದ ನೀತಿಯು ಮತ್ತು ಕಟ್ಟ ನಿರ್ಧಾರಗಳಿಗೆಲ್ಲಾ ಅವರು ಸಹಿ ಹಾಕಿ ಮುದ್ರೆ ಹಾಕಬೇಕಾಗುವುದು. ಇದಕ್ಕೆ ಸಲಹೆ ಎಂದು ಹೆಸರು ಇದರ ಇದು ಬರಿಯ ಒಪ್ಪಿಗೆ ಎಂಬುದನ್ನು ನಾವೆಲ್ಲರೂ ಚೆನ್ನಾಗಿ ಬಲ್ಲೆವು-ಎಂದು ಅವರು ಹೇಳಿದರು.

———

ಹರಿಕಥೆ

ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜಯಂತಿ ಪ್ರಯುಕ್ತ ನಾಳೆಯಿಂದ ೧೦ ದಿನಗಳು ಪ್ರತಿ ದಿನ ರಾತ್ರಿ ೮ ಗಂಟೆಗೆ ಶ್ರೀ ಕೃಷ್ಣಲೀಲಾ ಹರಿಕಥೆಯು ವಿಶೇಷವಾಗಿ ನಡೆಯುತ್ತದೆ.

ಡಿ ... ಭಕ್ತ ಮಂಡಳಿಯ ... ಬ್ರಹ್ಮಾನಂದ ... ದಿನ ಸಂಜೆ ... ಗಂಟೆಗೆ ಮಿ ಎಂ ಎಲ್ ನಾರಾಯಣ ದಾಸರಿಂದ ಶ್ರೀ ಕೃಷ್ಣಲೀಲಾ ... ಹರಿಕಥೆ ನಡೆಯುತ್ತದೆ.

ಕಠರರಿಂದ ತಲೆ ಬುರುಡೆಗಳ ಮೆರವಣಿಗೆ

ಹೈದರಾಬಾದಿನ ಯುದ್ಗಿರ್ ಎಂಬ ಹಳ್ಳಿಯ ಮೇಲೆ ರಜಾಕರರು ಧಾಳಿ ಇಟ್ಟು, ಹಿಂದೂಗಳನ್ನು ಕೊಲೆ ಮಾಡಿದರು. ೫೦ ಜನರನ್ನು ಚಿತ್ರ ಹಿಂಸೆಗೆ ಗುರಿಪಡಿಸಿ, ಅವರನ್ನು ಕೊಲೆ ಮಾಡಿ, ಹೆಂಗಸರನ್ನು ಜೀವ ಸಹಿತ ಸುಟ್ಟು ಜನರಿಗೆ ಭೀತಿಯನ್ನುಂಟುಮಾಡಿ ರಜಾಕರರು ಮತ್ತು ಪೋಲೀಸರು ಕೊಂದವರ ತಲೆಬುರುಡೆಗಳನ್ನು ಬೀದಿಯಲ್ಲಿ ಪ್ರದರ್ಶನ ಮಾಡಿದರು. ೩೦೦ ಶಸ್ತ್ರಧಾರಿಗಳ ಗುಂಪು ಧಾಳಿಕಾರರಿಂದ ಆ ಹಳ್ಳಿಯನ್ನು ಪೋಲೀಸರು ಗುಂಡಿಕ್ಕಿ ಕೊಂದು ಕೊಲೆ ಮಾಡಿದರು.

ಆಫ್ಘನರು ಭಾರತ ಬಿಡಲು ಆಜ್ಞೆ

... ಯಲ್ಲಿ ಸಾಲ ಕೊಡುವ ಉದ್ಯೋಗದಲ್ಲಿ ತೊಡಗಿರುವ ೬೦ ಜನ ಆಫ್ಘನರು ದಿನ ೪೦ರೊಳಗಾಗಿ ಭಾರತವನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಲಾಗಿದೆ.

ಕಾಶ್ಮೀರಕ್ಕೆ ೨೦ ಜನ ಸೈನಿಕ ವೀಕ್ಷಕರು

ಕಾಶ್ಮೀರದಲ್ಲಿ ಉಭಯ ಪಕ್ಷದವರು ಕದನ ನಿಲ್ಲಿಸಬೇಕೆಂಬ ವಿಶ್ವ ಭದ್ರತಾ ಸಮಿತಿಯ ಕಮೀಷನ್ನಿನ ಆಜ್ಞೆಯ ಬಗ್ಗೆ ಮೇಲ್ವಿಚಾರಣೆ ನೋಡಿಕೊಳ್ಳಲು ೨೦ ಜನ ಸೈನಿಕ ವೀಕ್ಷಕರನ್ನು ಕೂಡಲೇ ನೇಮಿಸಬೇಕೆಂದು ಕಾಶ್ಮೀರದ ಸಮಿತಿಯ ನಿಯೋಗದವರು ವಿಶ್ವ ಭದ್ರತಾ ಸಮಿತಿಯ ಸೆಕ್ರೆಟರಿ ಜನರಲ್ಲರವರಿಗೆ ತಿಳಿಸಿರುತ್ತಾರೆ.

ಭಾರತದ ರಾಯಭಾರಿಗಳ ಸಂಬಳ

... ದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರವರಿಗೆ ೩,೫೦೦ ರೂ ಸಂಬಳ ಮತ್ತು ... ರೂ ವೇತನವನ್ನು ಕೊಡಲಾಗುವುದೆಂದೂ ವರದಿಯಾಗಿದೆ. ಇತರ ರಾಯಭಾರಿಗಳ ಸಂಬಳ ಈ ರೀತಿ ಇದೆ:—ಅಮೇರಿಕದ ರಾಯಭಾರಿ ಸರ್ ಬಿ ರಾಮರಾವ್—೩,೫೦೦ ರೂ ಸಂಬಳ ಮತ್ತು ...೦೦ ರೂ ವೇತನ. ಈಜಿಪ್ಟಿನಲ್ಲಿ ... ಸಯ್ಯದ್ ಹುಸೇನ್ ಮತ್ತು ಚೀನದಲ್ಲಿರುವ ಶ್ರೀ ಕೆ ಎಂ ಪಣಿಕ್ಕರ್‌ರವರಿಗೆ ಸಂಬಳ ೩,೫೦೦ ರೂ ಮತ್ತು ವೇತನ ...೦೦೦ ರೂ. ಟರ್ಕಿ, ಇರಾನ್ ಮತ್ತು ಆಫ್ಘಾನಿಸ್ಥಾನಗಳ ರಾಯಭಾರಿಗಳಿಗೆ ಸಂಬಳ ... ಸಾವಿರ ರೂ ಮತ್ತು ವೇತನ ... ರೂ ಬರ್ಮಾದ ರಾಯಭಾರಿ ಜನಾಬ್ ಎ ರಹೀಂರವರಿಗೆ ೨,೫೦೦ ರೂ ಸಂಬಳ ಮತ್ತು ಇತರ ವೇತನಗಳು. ನೇಪಾಳ ರಾಯಭಾರಿಗೆ ೨,೫೦೦ ರೂ ಸಂಬಳ ಮತ್ತು ... ರೂ ವೇತನ. ಸ್ವಿಟ್ಜರ್ಲೆಂಡಿನಲ್ಲಿರುವ ... ಎ ಆರ್ ಪಿಳ್ಳೆಯವರಿಗೆ ೩ ಸಾವಿರ ಸಂಬಳ ಮತ್ತು ೩,೫೦೦ ರೂ ವೇತನ. ಬ್ರೆಜಿಲ್ಲಿನ ಭಾರತದ ಪ್ರತಿನಿಧಿ ಶ್ರೀ ... ಮಣಿಸಿಯವರಿಗೆ ೩ ಸಾವಿರ ಸಂಬಳ ಮತ್ತು ೨,೫೦೦ ರೂ ವೇತನ. ... ದಿನದಲ್ಲಿರುವ ಶ್ರೀ ಬಿ ದೇಸಾಯಿ ... ೨,೫೦೦ ರೂ ಸಂಬಳ ಮತ್ತು ... ರೂ ವೇತನ ... ರವರಿಗೆ ೩ ಸಾವಿರ ರೂ ಸಂಬಳ ... ರೂ ವೇತನ

ನೈಜಾಮರಿಗೆ ರಾಜಾಜಿಯ ಕೊನೆಯ ಸಲಹೆ

ಭಾರತ ಮತ್ತು ಹೈದರಾಬಾದ್ ನಡುವೆ ಸಮಸ್ಯೆಯನ್ನು ಶಾಂತ ರೀತಿಯಲ್ಲಿ ಬಗೆಹರಿಸಲು ಭಾರತದ ಗೌರ್ನರ್ ಜನರಲ್ಲರು ಕೊನೆಯ ಪ್ರಯತ್ನವನ್ನು ಮಾಡಬೇಕೆಂದು ಬ್ರಿಟಿಷ್ ದೊರೆಗಳು ಅಪೇಕ್ಷಿಸಿದ ಮೇರೆ ರಾಜಾಜಿಯವರು ನೈಜಾಮರಿಗೆ ಅಂತ್ಯ ಪತ್ರವೊಂದನ್ನು ಬರೆದು, ಪರಿಸ್ಥಿತಿಯು ವಿಷಮವಾಗುವುದಕ್ಕೆ ಮುನ್ನ, ನೈಜಾಮರು ಯುಕ್ತ ಮತ್ತು ವಿಹಿತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೋರಿರುವುದಾಗಿ ವರದಿಯಾಗಿದೆ

ಕಾಶ್ಮೀರದ ಮೇಲೆ ಪಾಕಿಸ್ಥಾನದ ಭಾರಿ ಧಾಳಿಯೇ

ಪಾಕಿಸ್ಥಾನದ ಸ್ಥಿತಿಯು ಅಪಾಯಕಾರಿಯಾಗಿರುವುದರಿಂದ ಅದು ಕಾಶ್ಮೀರದ ಮೇಲೆ ಭಾರಿ ಧಾಳಿ ನಡೆಸಬಹುದೆಂದು ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರು ಬೊಂಬಾಯಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ. ತಮಗೂ ಮಹಾರಾಜರಿಗೂ ಭಿನ್ನಾಭಿಪ್ರಾಯ ಉಂಟಾಗಿದೆಯೆಂದೂ ಮತ್ತು ರಾಜರು ಸಿಂಹಾಸನ ಬಿಡಬೇಕೆಂದು ಒತ್ತಾಯ ಪಡಿಸಲಾಗಿದೆಯೆಂದೂ ಪ್ರಕಟವಾದ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದೂ ಅವರು ತಿಳಿಸಿರುತ್ತಾರೆ.

ಹೈದರಾಬಾದು ಮತ್ತು ಮಧ್ಯಪ್ರಾಂತ್ಯದ ಗಡಿ ಪ್ರದೇಶದಲ್ಲಿ ಮತ್ತು ತುಲಜಾಪುರ ನಗರದಲ್ಲಿ ಅನೇಕ ಅಂಗಡಿಗಳನ್ನು ಲೂಟಿ, ಹಿಂದೂ ಗುಡ್ಡಗಳ ಮೇಲೆ ಸೈನಿಕರನ್ನು ... ಕಾಗಿದೆಯೆಂದು ಹೇಳಲಾಗಿದೆ.

ಕಂಟೆಂಪ್ಟ್ ಮೊಕದ್ದಮೆ

ಮೈಸೂರು ಪೋಲ್] ಮೊಗಳತಾರು ಶ್ರೀ ... ಈ ದಿನ ಹೈಕೋರ್ಟಿನಲ್ಲಿ ಕಂಟೆಂಪ್ಟ್ ಮೊಕದ್ದಮೆ, ಸಂಬಂಧದಲ್ಲಿ ಶ್ರೀ ಎಂ ಬಿ ಸೋಮಶೇಖರಯ್ಯನವರು ಅಪಾದಿತರುಗಳ ಪರವಾಗಿ ವಾದ ಮಾಡಿದರು. ಗೋಪಾಲರಾವ್ ಸಮಿತಿಯ ಕೆಳಗಿನ ಅರ್ಥ ಶ್ರೀ ಹೈಕೋರ್ಟು ಇಲ್ಲವೆಂದೂ, ಯಾವ ಕೋರ್ಟಿನ ಗೌರವವನ್ನು ಅಪಾದಿತರು ಕಡಿಮೆ ಮಾಡಿಲ್ಲವೆಂದೂ, ಈ ಸುದರಿಂದ ಕಂಟೆಂಪ್ಟ್ ವಿಷಯವು ಸೇರುವುದೇ ಇಲ್ಲವೆಂದು ಅವರು ತಿಳಿಸಿದರು. ಮಧ್ಯಾಹ್ನ ೧-೩೦ ಗಂಟೆಯ ವೇಳೆ ಮದರಾಸಿನ ಅಡ್ವೊಕೇಟ್ ಜನರಲ್ಲರಾದ ಶ್ರೀ ಎಸ್ ರಾಜಾ ಅಯ್ಯರ್ ರವರು ಕೊನೆಯ ವಾದವನ್ನು ಮಾಡಿದರು.

ಮಹಾತ್ಮರ ಸ್ಮಾರಕ ನಿಧಿ

ಪ್ರತಿಯೊಬ್ಬ ಸರ್ಕಾರಿ ನೌಕರರೂ ಮಹಾತ್ಮರ ಸ್ಮಾರಕ ನಿಧಿಗೆ ತಮ್ಮ ಒಂದು ದಿನದ ಸಂಬಳವನ್ನು ಒಟ್ಟಿಗೆಯಾಗಲೀ ಅಥವ ೧೦ ಕಂತುಗಳಲ್ಲಾಗಲೀ ಕೊಡಬೇಕೆಂದು ಕೋರಿ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ ... ಸ್ಥಾನದ ಎಲ್ಲಾ ಖಜಾನೆ ಮತ್ತು ಮೈಸೂರು ಬ್ಯಾಂಕುಗಳಲ್ಲಿ ಇವನ್ನಾಗಿ ಪ್ರತ್ಯೇಕ ಖಾತೆಯನ್ನು ತೆರೆಯಬೇಕೆಂದೂ ಆಜ್ಞೆ ಮಾಡಲಾಗಿದೆ.

ರಾತ್ರಿಕಾಲದಲ್ಲಿ ಊರ ಹಿಡಿ ನಿಷೇಧ

ಬೆಂಗಳೂರು ನಗರದಿಂದ ರಾತ್ರಿ ಕಾಲದಲ್ಲಿ ಆಹಾರ ಪದಾರ್ಥಗಳು ಅಕ್ರಮವಾಗಿ ಸಾಗಿಸುವುದನ್ನು ತಡೆಗಟ್ಟಲು ರಾತ್ರಿ ೭ ಗಂಟೆಯಿಂದ ಬೆಳಗ್ಗೆ ೬ ಗಂಟೆಯವರೆಗೆ ಯಾವ ಲಾರಿ ಅಥವ ವ್ಯಾಗನ್ ಗಳೂ ತಿರುಗಾಡಕೂಡದೆ ದ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುತ್ತಾರೆ

ಅರಬ್ಬಿ ನಿರಾಶ್ರಿತರಿಗೆ ನಿಜಾಮರಿಂದ ೧೦ ಲಕ್ಷ ರೂ.

ಪ್ಯಾಲಸ್ಟೀನಿನ ಅರಬ್ಬರ ನಿರಾಶ್ರಿತರ ಸಹಾಯಕ್ಕಾಗಿ ನೈಜಾಮರು ೧೦ ಲಕ್ಷ ರೂಗಳನ್ನು ಕೊಟ್ಟಿದ್ದಾರೆ. ರಿಜರ್ವ್ ಬ್ಯಾಂಕಿನಲ್ಲಿ ಮುಡಿ ಹಾಕಿಡಿಸಿರುವ ಹೈದರಾಬಾದಿನ ಹಣದಿಂದ ಈ ದ್ರವ್ಯವನ್ನು ಕೊಡಬೇಕೆಂದು ಭಾರತ ಸರ್ಕಾರವನ್ನು ನೈಜಾಮರು ಕೋರಿದ್ದರೆಂದು ಹೇಳಲಾಗಿದೆ

ನೂಲುವುದರಲ್ಲಿ ಕುರುಡನ ಅದ್ಭುತದ ಶಕ್ತಿ

ತಿರುಚನ್‌ಗೋಡಿನ ಗಾಂಧೀ ಆಶ್ರಮದ ಸಿಡ್ನಿ ಯಾರ್ಕ ಎಂಬ ಕುರುಡನು ದಿವಸಕ್ಕೆ ೩ ಲಡಿ ದಾರವನ್ನು ತೆಗೆಯುತ್ತಿರುವನೆಂದು ಹೇಳಲಾಗಿದೆ. ೧೯೩೭ ರಲ್ಲಿ ಮಾನಸಿಕರೋಗವನ್ನು ವಾಸಿ ಮಾಡುವಾಗ ಆತನು ಅಧಿಕಾರಿಗಳಿಗೆ ಸಹಾಯ ಮಾಡುತ್ತಿದ್ದನು. ಸೇಲಂ ಜಿಲ್ಲೆಯ ಕಡುಕರು ಆತನನ್ನು ಹೊಡೆದು ಚಾಕುವಿನಿಂದ ಆತನ ಕಣ್ಣುಗಳಿಗೆ ಗಾಯ ಪಡಿಸಿದರೆಂದೂ ಅಂದಿನಿಂದ ಆತನು ಗಾಂಧೀ ಆಶ್ರಮದಲ್ಲಿ ನೂಲ ಪ್ರಥನ್ನು ಅಭ್ಯಾಸ ಮಾಡುತ್ತಿರುವನೆಂದೂ ಹೇಳಲಾಗಿದೆ.

ಸರಪಳಿ ಹಾಕಿಕೊಂಡು ಮದುವೆ

ಅಮೇರಿಕದ ೨೪ ವರ್ಷದ ಲಾರಿ ಫಾಟರ್ ಎಂಬ ವಿದ್ಯಾರ್ಥಿಯು ಲೂಸಿ ಎಂಬ ಯುವತಿಯನ್ನು ವಿವಾಹವಾಗಲು ಹೊರಟಾಗ ಆತನ ಸ್ನೇಹಿತರುಗಳು ತಮಾಷೆಗಾಗಿ ಆತನ ಕಾಲಿಗೆ ೨೪ ಪೌಂಡುಗಳ ತೂಕವುಳ್ಳ ಸರಪಳಿಯನ್ನು ಕಟ್ಟಿ ಅದರ ಬೀಗದ ಕೈಯನ್ನು ಅಂಚೆ ಮೂಲಕ ರವಾನಿಸಲಾಗಿದೆ ಎಂದೂ, ಆತನು ವಿಮಾನದಲ್ಲಿ ಚರ್ಚಿಗೆ ಆಗಮಿಸಿದಾಗ, ಬೀಗದಕೈ ಬಾರದೆ, ಸರಪಳಿ ಸಮೇತ ಮದುವೆಯಾಗಬೇಕಾಯಿತೆಂದೂ ವರದಿಯಾಗಿದೆ

ರಾಜರ ಅರಮನೆಗಳ ವಶ

ದೆಹಲಿಯಲ್ಲಿರುವ ರಾಜರುಗಳ ೨೭ ಅರಮನೆಗಳ ಪೈಕಿ, ೧೧ ಅರಮನೆಗಳನ್ನು ಈಗಾಗಲೇ ಭಾರತ ಸರ್ಕಾರವು ವಶಪಡಿಸಿಕೊಂಡು, ಅವುಗಳನ್ನು ಕಛೇರಿಗಳಾಗಿ ಉಪಯೋಗಿಸಲಾಗುತ್ತಿದೆಯೆಂದೂ, ಆವಶ್ಯಕ ಬಿದ್ದರೆ ಮಿಕ್ಕ ಅರಮನೆಗಳನ್ನೂ ಸ್ವಾಧೀನಪಡಿಸಿಕೊಳ್ಳಲಾಗುವುದೆಂದೂ ಭಾರತದ ಪಾರ್ಲಿಮೆಂಟ್ ಸಭೆಯಲ್ಲಿ [illegible] ಸಚಿವರು ತಿಳಿಸಿದ್ದಾರೆ

ರಜಾಕರರನ್ನು ಪ್ರತಿಭಟಿಸಲು ಮುಸ್ಲಿಮರ ಉಪವಾಸ

ಹೈದರಾಬಾದಿನಲ್ಲಿ ರಜಾಕರರು ನಡೆಸುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಲು, ಸಂಸ್ಥಾನದ ಕಾಂಗ್ರೆಸ್ಸಿನ [illegible] ಶಾಖೆಯ ಅಧ್ಯಕ್ಷರಾದ ಜನಾಬ್ ನವಾಬ್ ಖಾನರವರು ಕಳೆದ ಸೋಮವಾರದಿಂದ ಉಪವಾಸವನ್ನು ಕೈಗೊಂಡಿದ್ದಾರೆ

ಹಾಲನ್ನು ಹೆಚ್ಚಿಸಲು ಪೆನಿಸಿಲಿನ್ ಇಂಜಕ್ಷನ್

ಹಸುವಿನ ಹಾಲಿನ ಉತ್ಪತ್ತಿಯನ್ನು ಹೆಚ್ಚಿಸಲು ಪೆನ್‌ಸಿಲಿನ್ ಇಂಜೆಕ್ಷನ್ನು ಕೊಡಲು ಬ್ರಿಟನ್ನಿನಿಂದ ನ್ಯೂಜಿಲೆಂಡಿಗೆ ಪೆನಿಸಿಲಿನ್ನು ವಿಮಾನದಲ್ಲಿ ಕಳುಹಿಸಲಾಗಿದೆಯೆಂದು ವರದಿಯಾಗಿದೆ. ನ್ಯೂಜಿಲೆಂಡಿನ ಹಾಲಿನ ಕೇಂದ್ರ ಮತ್ತು ವ್ಯವಸಾಯ ಇಲಾಖೆಯವರು ದನಗಳಿಗೆ ಬರುವ ಖಾಯಿಲೆಯನ್ನು ಕಡಿಮೆ ಮಾಡಿ, ಹಾಲಿನ ಉತ್ಪತ್ತಿ ಹೆಚ್ಚಿಸಲು ಸಂಶೋಧನೆ ನಡೆಸುತ್ತಿದ್ದಾರೆ

ಯಕ್ಷಗಾನ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರೀ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀಮಾನ್ ಬ್ರಂ|| ಹಿರಣ್ಣಯ್ಯನವರ ಮತ್ತು ಶ್ರೀ ಕಲಕಾಡು ಮಾಯಿಗೌಡರವರುಗಳಿಂದ ಶನಿಮಹಾತ್ಮೆ ಎಂಬ ಕಥೆಯು ಯಕ್ಷಗಾನ ರೂಪದಲ್ಲಿ ನಡೆಯುವುದು.

ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ನಡೆಯುವ ಪ್ರವೇಶಿಕಾ ಮತ್ತು ವಿಶಾರದ ಪರೀಕ್ಷೆಗಳು ನಾಳೆ ಬೆಳಿಗ್ಗೆ ೧೦-೩೦ ಗಂಟೆಗೂ, ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಬನುಮಯ್ಯನವರ ಹೈಸ್ಕೂಲಿನಲ್ಲಿ ನಾಡಿದ್ದು ಬೆಳಿಗ್ಗೆ ೧೦-೩೦ ಗಂಟೆಗೂ ನಡೆಯುವುವು.

ಶಾರದಾ ಪೂಜೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿನ ಮ ನಗರ ಕಾಂಗ್ರೆಸ್ ಕಛೇರಿಯ ಹಿಂದೀ ಪ್ರಚಾರ ಕೇಂದ್ರದಲ್ಲಿ ಈ ದಿನ ಸಂಜೆ ೭ ಗಂಟೆಗೆ ಶಾರದಾ ಪೂಜೆಯು ನಡೆಯುವುದು. ಶ್ರೀ ನ ಭದ್ರಯ್ಯನವರ ಅಧ್ಯಕ್ಷತೆ ವಹಿಸುವರು. ಹಿಂದೀ ಪ್ರೇಮಿಗಳೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ವಿಜಯವಾಡದಲ್ಲಿ ರಕ್ಷಣಾ ಕಾರ್ಯಗಳು

ಹೈದರಾಬಾದಿಗೆ ಸಮೀಪದಲ್ಲಿರುವ ವಿಜಯವಾಡದಲ್ಲಿರುವ ಎಲ್ಲಾ ಬ್ಯಾಂಕುಗಳೂ ತಮ್ಮ ನಗನಾಣ್ಯಗಳೇ ಮೊದಲಾದವುಗಳನ್ನು ರಕ್ಷಣಾ ದೃಷ್ಟಿಯಿಂದ ಭದ್ರವಾದ ಒಳನಾಡಿನ ಪ್ರದೇಶಗಳಿಗೆ ರವಾನಿಸಬೇಕೆಂದು ಕೃಷ್ಣಾ ಜಿಲ್ಲಾ ಕಲೆಕ್ಟರು ಆಜ್ಞೆ ಮಾಡಿರುತ್ತಾರೆ. ವಿಜಯವಾಡ, ನಂದೀಗ್ರಾಮ, ತಿರುವೂರು ಮತ್ತು ನಡಮೀಡು ತಾಲ್ಲೂಕುಗಳ ಅಪಾಯ ಕ್ಷೇತ್ರಗಳೆಂದು ಘೋಷಿಸಿ, ಅಲ್ಲಿನ ಎಲ್ಲಾ ಮುಸ್ಲಿಂ ಅಧಿಕಾರಿಗಳನ್ನೂ ನೌಕರರನ್ನೂ ಬೇರೆ ಸ್ಥಳಗಳಿಗೆ ವರ್ಗಾಯಿಸಲಾಗಿದೆ

ಇನ್ನೂ ೪೨ ನಿಜಾಮರ ಹಳ್ಳಿಗಳು ಸ್ವತಂತ್ರವಾದುವು

ಹೈದರಾಬಾದಿನ ಮಧಿರಾ ತಾಲ್ಲೂಕಿಗೆ ಸೇರಿದ ೪೨ ಹಳ್ಳಿಗಳು ನಿಜಾಮರ ಆಡಳಿತದಿಂದ ಬೇರೆಯಾಗಿ, ಸಂಸ್ಥಾನದ ಕಾಂಗ್ರೆಸ್ ಸ್ವಯಂಸೇವಕರ ಅಧಿಕಾರಕ್ಕೆ ಒಳಪಟ್ಟಿವೆಯೆಂದು ಹೇಳಲಾಗಿದೆ

ಹೈದರಾಬಾದಿನಲ್ಲಿ ಆಹಾ[ರ] ಬೆಲೆಯು ವಿಪರೀತ ಸ[...]

ಹೈದರಾಬಾದಿನ ಮೇಲೆ ಭಾರತ[...] ಹಿರುವ ಆರ್ಥಿಕ ದಿಗ್ಬಂಧನದಿಂದ ಸಂ[...] ದಲ್ಲಿ ಆಹಾರ ಪದಾರ್ಥಗಳ ಬೆಲೆಯು ಏರಿಕೆಯಾಗಿ ಏರಿದೆಯೆಂದೂ, ಇ[...] ಬಡಜನರಿಗೆ ತುಂಬಾ ಕಷ್ಟವಾಗಿ[...] ದೂ ಹೇಳಲಾಗಿದೆ. ವಿಕೇಟ ಬೆಲೆ[...] ಗ್ಗೆ ಪ್ರತಿಭಟನೆ ಸೂಚಿಸಿ, ಓರಂಗಾ[...] ಗಿರಣಿಯ ೧೦೦೦ ಜನ ಕೆಲಸಗಾ[...] ಲ್ಲಿಂದ ಬಿಟ್ಟುಹೋಗಿರುವರೆಂದೂ [...] ಇನ್ನೂ ಅನೇಕ ಜನರು ಸಂಸ್ಥಾನ[...] ಬಿಡುತ್ತಿರುವರೆಂದೂ ಹೇಳಲಾಗಿದೆ.

ಶ್ರೀ ಗಣೇಶಾ ಟಾಕೀ[ಸ್]

27 8 48 ರಿಂದ
ಪ್ರತಿ ದಿನ 3 ಆಟಗಳು
ರಂಭಾ ಪ್ರೇ[ಮ]
(ತಮಿಳು)
ಪಾತ್ರ — ಸಾರಂಗಪಾಣಿ, ಕೆ. ಎಲ್ ವಿ[...] ಕೃಷ್ಣ, ಮಧುರಂ
— ಮುಂದಿನ ಬದಲಾವಣೆ: —
ವಸಂತಸೇನಾ

ರಾಜಕಮಲ[...]
ಮೈಸೂರು
ತಾ|| 25 8—48 ರಿಂ[ದ]
ಅನೋಖ ಪ್ಯಾರ್ ಆರಂಭ
ಪ್ರತಿ ದಿನ 3 ಆಟಗಳು
ಶ್ರೀ ವಳ್ಳಿ
(ತಮಿಳ) (ಹೊಸ [...])
—: ತಾರಾಗಣ. —
ಟಿ. ಆರ್. ಮಹಾಲಿಂಗಂ, ಕುಮಾರಿ [...]
ಎನ್ ಎಸ್ ಕೃಷ್ಣನ್, ಟಿ. ಎ. ಮ[...]

Mo ning Shows
From 27 - 8 - 48
H. G. W[ells]
Things to Co[me]
— With: —
Raymond Massey,
Ralph Richardson,
Sir Cedric Hardwic[ke]

ಬೆಳಗಿನ ಪ್ರದರ್ಶನ
ತಾ|| 27—8—48 ರಿಂದ
4 ದಿನಗಳು ಮಾತ್ರ
ನ್ಯೂ ಥಿಯೇಟರ್ಸ್‌ರವರ
ಡಾಕ್ಟರ್
ಪಾತ್ರ: — ಪಂಕಜಮಲ್ಲಿಕ್, ಭಾರತಿ
ಪ್ರಭಾ ಪಿಕ್ಚರ್ ಹೌಸ್

ಬೆಳಗಿನ ಆಟಗಳು
ತಾ|| 27 - 8—48 ರಿಂದ
4 ದಿನಗಳ ಮಾತ್ರ
ಲೈಲಾ ಮಜನು
ಪಾತ್ರ:
§ ಸ್ವರ್ಣಲತಾ § ನಜೀರ § ಗೋಪ್ §
ಒಲಿಂಪಿಯಾ ಟಾಕೀಸ್

Edited printed and published by A. R. Nagarajan at the Sadhvi Press, D. Subbaiah Road Mysore

CHAMUNDESWARI TALKIES
Morning Shows at 10-30 a. m
4 Days From 27th August
- GILDA -
Featuring:— The Beautiful Star
Rita Hayworth as Gilda
Supported by **Glen Ford** & others
Never Forget to see this!

CHAMUNDESWARI TALKIES
From Friday the 27th August
For 4 days
THE THRILL OF A ROMAN[CE]
(In Technicolor)
—: Starring. —
Van Johnson With Esther Williams
The most entertaining Film ever brought to the Screen
Daily 3 Shows
Next Change:- GENTLEMAN JIM

ಗೌರಿ ಹಬ್ಬದ ಸೀರೆಗಳೂ, ಖಣಗಳೂ
ಅಂದ ಚಂದವಾದ ಬಣ್ಣಗಳಲ್ಲಿ ಸಾವಿರಾರು ಬಂದಿವೆ. ಬಾಬುಸಾಬ್ ಕಂಪೆನಿ, ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

WEEKLY EDITION

ಸಂಪುಟ ೧೪] ಭಾನುವಾರ ೨೯-೮-೪೮ [ಸಂಚಿಕೆ ೫

ಸ್ಪೇನ್ ದೇಶದಲ್ಲಿ ರಾಜಪ್ರಭುತ್ವವೇ?

ಹುತಾತ್ಮರ ದಿನಾಚರಣೆ

ಮೈಸೂರು ೨೮

...ನ ಸಂಜೆ ಏಳು ಗಂಟೆಗೆ ಕಾಂಗ್ರೆಸ್ ...ಗಾರದಲ್ಲಿ ಸೇವಾದಳದ ಹು... ದಿನಾಚರಣೆ ನಡೆಯುವುದು. ಕಾಂ... ...ರ್ಯಕರ್ತರೆಲ್ಲರೂ ದಯಮಾಡಿ... ನಗರ ಕಾಂಗ್ರೆಸ್ ಸಮಿತಿಯ... ...ದರ್ಶಿಗಳು ಪ್ರಾರ್ಥಿಸಿರುತ್ತಾರೆ.

ಬಾಪೂಜಿ ಸ್ಮಾರಕ ದಿನ

...ಶೇಷಾದ್ರಿಪುರದ ಉಪ್ಪಾರ್ ವಿದ್ಯಾರ್ಥಿ... ...ದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಾ... ...ಸ್ಮಾರಕ ದಿನಾಚರಣೆಯು ಮಹಿ... ...ಂಡಲಿಯ ಆಶ್ರಯದಲ್ಲಿ ನಡೆಯು... ಶ್ರೀ ಸಿ. ಆರ್. ...ರವರಿಂದ ಶಾ... ...ಭಾಷಣಮಾಡುತ್ತಾರೆ.

ಮಲ್ಲ ವ್ಯಾಯಾಮ

...ದು ವಿಲಿಯಂ ಹೈಸ್ಕೂಲಿನ ಮಲ್ಲ... ...ದ ಶಿಕ್ಷಣದ ವಾರ್ಷಿಕೋತ್ಸವವು ...ಗುರುವಾರ ಸಂಜೆ ಶ್ರೀ ಶ್ರೀಕಂಠ... ಅಧ್ಯಕ್ಷತೆಯಲ್ಲಿ ನಡೆಯಿತು. ವಿ... ...ಗಳಿಂದ ವ್ಯಾಯಾಮ ಪ್ರದರ್ಶನ ...ಯಿತು. ಅಧ್ಯಕ್ಷರು ಆರ್ಯ ವ್ಯಾ... ...ದ ಬಗ್ಗೆ ಭಾಷಣ ಮಾಡಿದರು ...ಗೀತೆಯೊಡನೆ ಸಮಾರಂಭವು ಮು... ...ವಾಯಿತು.

ಮನಶ್ಶಾಸ್ತ್ರ ಸಂಘ

...ಕಾಲೇಜಿನ ಮನಶ್ಶಾಸ್ತ್ರ... ಶ್ರೀ ಮಲ್ಲಾರಾಜೇ ಅರಸಿನವರು... ...ಗಿಯೂ ಶ್ರೀಗಳು ಜಿ. ನೀಲಕಂ... ಎಂ. ಪಾಪಣ್ಣನವರು, ಕಾರ್ಯ... ...ಗಿಯೂ ... ನಾಯಿತರಾಗಿ...

...ತ್ಮಿಮಹಾತ್ಮರು ಯೋಗಾ...ಭ್ಯಾಸ ಮಾಡಬೇಕು

...ಮಹಾತ್ಮರು ಭಾರತದ ಯೋಗಾ... ...ಮತ್ತು ಇತರ ಪೂರ್ವ ದ... ...ವ್ಯಾಯಾಮ ರೀತಿಗಳನ್ನೂ ಆಚರ... ...ಬೇಕೆಂದು ಪ್ರಪಂಚ ಸಂಸ್ಥೆಯ... ...ಕ ಮತ್ತು ವಿದ್ಯಾಭ್ಯಾಸ ಸಂಸ್ಥೆ ...ಕ್ಟರ್ ಜನರಲ್ಲಾದ ಡಾ|| ಜೂಲಿ... ...ಕ್ಸಲಿಯವರು ತಿಳಿಸಿರುತ್ತಾರೆ.

ರಾಜಕಮಲ್

ಮೈಸೂರು

...25-8-48 ರಿಂದ

...ದಿನೋತ್ಸವ ಪ್ರಾರಂಭ

ಪ್ರತಿ ದಿನ 3 ಆಟಗಳು

ಶ್ರೀ ವಳ್ಳಿ

(ಹೊಸ ಪ್ರಿಂಟ್)

—: ತಾರಾಗಣ: —

...ಮಹಾಲಿಂಗಂ, ಕುಮಾರಿ ರುಕ್ಮಿಣಿ, ಎನ್. ಕೃಷ್ಣನ್, ಟಿ. ಎ. ಮಧುರಂ

Morning Shows

From 27—8—48

...Wells'

...hings to Come

—With:—

Raymond Massey,

Ralph Richardson,

Sir Cedric Hardwicke

ಜಿಲ್ಲಾ ಬೋರ್ಡ್ ಸಭೆ

ಮೈಸೂರು ೨೮

ಮೈಸೂರು ಜಿಲ್ಲಾ ಬೋರ್ಡ್ ಸಾಧಾರಣ ಸಭೆಯು ಕಳೆದ ೨೩ ನೇ ತಾ|| ಗುಂಡ್ಲುಪೇಟೆ ತಾಲ್ಲೂಕಿನ ಹುಂಡಿಪುರದಲ್ಲಿ ಶ್ರೀ ಜೆ. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಆರಂಭ ಭಾಷಣ ಮಾಡಿ ಕಳೆದ ಸಭೆಯಿಂದೀಚೆಗೆ ನಡೆದಿರುವ ಬೋರ್ಡಿನ ವಿವಿಧ ಕಾರ್ಯಕ್ರಮಗಳನ್ನೂ ಮತ್ತು ಈ ಸಾಲಿನಲ್ಲಿ ಮಳೆಗಾಲ ಕಳೆಯುವುದರೊಳಗಾಗಿ ಜಿಲ್ಲಾಬೋರ್ಡಿಗೆ ಸೇರಿದ ರಸ್ತೆಗಳೆಲ್ಲವನ್ನೂ ಉತ್ತಮಗೊಳಿಸಲು ತಕ್ಕ ವ್ಯವಸ್ಥೆ ಮಾಡುವುದಾಗಿ ಭರವಸೆಯಿತ್ತರು.

ಸಭೆಯಲ್ಲಿ ಈ ಕೆಳಗೆ ಕಂಡ ನಿರ್ಣಯಗಳ ಮಾಡಲ್ಪಟ್ಟವು—

೧ ಜಿಲ್ಲೆಯೊಳಗೆ ಇರುವ ಎಲ್ಲಾ ಸಂತೆಗಳನ್ನೂ ಉತ್ತಮಪಡಿಸಲು ಈಗ ಒದಗಿಸಿರುವ ೧೫,೦೦೦ ರೂ ಗಳ ಜೊತೆಗೆ ಇನ್ನೂ ೧೦೦೦೦ ರೂ ಗಳನ್ನು ಮಂಜೂರು ಮಾಡುವುದು. ೨ ಟಿ. ನರಸೀಪುರದ ತಾ|| ... ...ಬಳಿ ಕಟ್ಟಲಿರುವ ಸೇತುವೆಗೆ ಬೋರ್ಡಿನಿಂದ ಸಾಲ ಭಾಗ ವೆಚ್ಚವನ್ನು ಕೊಡುವುದು. ೩ ಪಿರಿಯಾಪಟ್ಟಣ ತಾ|| ಬೆಟ್ಟದಪುರ-... ...ರಸ್ತೆ ರಿಪೇರಿಯನ್ನು ೩೬,೦೦೦ ರೂ ನ ಅಂದಾಜಿನಲ್ಲಿ ಕೂಡಲೆ ಪ್ರಾರಂಭಿಸುವುದು. ೪ ಹಿಂದೆ ತಾಲ್ಲೂಕು ಬೋರ್ಡುಗಳ ಆಡಳಿತದಲ್ಲಿದ್ದ ಎಲ್ಲಾ ರಸ್ತೆಗಳನ್ನೂ ವಹಿಸಿಕೊಂಡು ಸಾಲದ ... ...ದು. ೫ ... ...ನ್ನು ವಹಿಸಿಕೊಳ್ಳುವ ವಿಚಾರವನ್ನು ವಿಮರ್ಶಿಸಿ ಅಧ್ಯಕ್ಷರು ವರದಿ ಮಾಡುವುದು. ೬ ಬೋರ್ಡಿನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಆದಾಯ ತೆರಿಗೆಯ ಮೇಲೆ ಲೋಕಲ್ ಸೆಸ್ ವಿಧಿಸುವುದು ಮತ್ತು ಮೋಟಾರು, ಟ್ಯಾಕ್ಸಿ, ಲಾರಿ ಮತ್ತು ಪೆಟ್ರೋಲುಗಳ ಮೇಲೆ ವಿಧಿಸುವ ಸುಂಕದಲ್ಲಿ ಒಂದು ಭಾಗವನ್ನು ಜಿಲ್ಲಾ ಬೋರ್ಡಿಗೆ ಜಮಾ ಮಾಡಿಸುವುದು. ೭ ಮೈಸೂರು ನಗರದಲ್ಲಿ ಹಳ್ಳಿಗರ ಉಪಯೋಗಕ್ಕಾಗಿ ಮುಸಾಫಿರ್ ಖಾನೆಯೊಂದನ್ನು ೧ ಲಕ್ಷ ರೂ ವೆಚ್ಚದಲ್ಲಿ ಕಟ್ಟಲಿರ್ಪಡಿಸುವುದು. ೮ ... ...ಲ್ಲಿನ ಹಾಸ್ಟೆಲುಗಳನ್ನು ... ...ಬೋರ್ಡಿನ ಆಡಳಿತಕ್ಕೆ ವಹಿಸಿಕೊಳ್ಳುವುದು. ೯. ಹಲಗೂರಿನಲ್ಲಿ ಕಟ್ಟಲಿರುವ ಸರ್ಕಾರಿ ವೈದ್ಯಶಾಲಾ ಕಟ್ಟಡದ ಅರ್ಧ ಖರ್ಚನ್ನು ಜಿಲ್ಲಾ ಬೋರ್ಡಿನಿಂದ ಒದಗಿಸುವುದು.

ಸ್ಪೇನಿನಲ್ಲಿ ರಾಜಪ್ರಭುತ್ವವೇ?

ಹೈದರಾಬಾದಿನಲ್ಲಿ ಭಾರತ ಸೈನ್ಯಗಳು ಒಂದೇ ಸಮನಾಗಿ ಮುನ್ನುಗ್ಗುತ್ತಿವೆಯೆಂದು ತಿಳಿದುಬಂದಿದೆ. ಅವರ ಆಗಮನವನ್ನು ಎದುರಿಸಲಾರದೆ ಅನೇಕ ಕಡೆಗಳಲ್ಲಿ ಹೈದರಾಬಾದಿನ ಸೈನ್ಯಗಳೂ, ರಜಾಕರರೂ ಶರಣಾಗತರಾಗುತ್ತಿರುವರೆಂದು ವರದಿಯಾಗಿದೆ. ಬೀದರ್, ಮುಸ್ತಾಬಾದ್, ರಾಜೂರ್ ಮುಂತಾದ ಊರುಗಳು ಆಕ್ರಮಿಸಲ್ಪಟ್ಟಿವೆ.

ಹೈದರಾಬಾದ್ ಸೈನ್ಯಗಳು ಎರಡು ಕಡೆಗಳಲ್ಲಿ ಪ್ರತಿಭಟನೆಯನ್ನು ತೋರಿದುವು. ಆದರೆ ಅವುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಯಿತು. ತುಂಗಭದ್ರಾ ನದಿಯ ಮೇಲಿರುವ ಮೂರು ಸೇತುವೆಗಳನ್ನು ಸಿಡಿಮದ್ದಿನಿಂದ ಒಡೆದು ಹಾಕಲು ಹೈದರಾಬಾದಿನ ಪಡೆಗಳು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಿ ಸೇತುವೆಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಯಿತು.

ಹೈದರಾಬಾದಿನವರಿಗೆ ಸಂದೇಶ

ಹೈದರಾಬಾದ್ ಸಂಸ್ಥಾನವನ್ನು ಆಕ್ರಮಣ ಮಾಡುವುದಾಗಲೀ ಅಥವಾ ಅಲ್ಲಿನ ಪ್ರಜೆಗಳು ಶರಣಾಗತರಾಗುವಂತೆ ಮಾಡುವುದಾಗಲೀ ಇಂದಿನ ಕಾರ್ಯಾಚರಣೆಯ ಉದ್ದೇಶವಲ್ಲ. ಅಲ್ಲಿ ಶಾಂತ ಪರಿಸ್ಥಿತಿಯನ್ನು ಸ್ಥಾಪಿಸಿ ಸಂಸ್ಥಾನದ ಪ್ರಜೆಗಳೇ ತಮ್ಮ ಮುಂದಿನ ರಾಜಕೀಯ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ಅವಕಾಶ ಕಲ್ಪಿಸುವುದೇ ಈ ಕಾರ್ಯಾಚರಣೆಯ ಮುಖ್ಯ ಉದ್ದೇಶವಾಗಿದೆ—ಎಂಬುದಾಗಿ ಭಾರತ ಸರ್ಕಾರವು ಮತ್ತು ಪತ್ರಿಕೆಗಳನ್ನು ಭಾರತ ವಿಮಾನಗಳು ಹೈದರಾಬಾದಿನ ಮೇಲೆ ಉದುರಿಸಿದುವು. ಈ ಕಾರ್ಯದಲ್ಲಿ ಸಕಲರ ಸಹಕಾರವನ್ನು ನೀಡಬೇಕೆಂದೂ ಅದಕ್ಕೆ ಅಡ್ಡಿಪಡಿಸದೆ—ಪ್ರತಿಭಟಿಸುವವರನ್ನು ನಿರ್ನಾಮ ಗೊಳಿಸಲಾಗುವುದೆಂದೂ ಸಹ ಎಚ್ಚರಿಕೆ ಕೊಡಲಾಗಿದೆ. ಸಜ್ಜನರಾದ ಜನರಿಗೆ ಯಾವ ತೊಂದರೆಯೂ ಆಗುವುದಿಲ್ಲವೆಂಬ ಭರವಸೆಯನ್ನು ನೀಡಲಾಗಿದೆ.

ಭಾರತ ಸೈನ್ಯಗಳು ಸಿಕಂದರಾಬಾದಿಗೆ ಈಗಾಗಲೇ ಅರ್ಧ ದಾರಿ ಮುಂದೆ ಸಾಗಿವೆ. ಔರಂಗಾಬಾದ್ ರೈಲ್ವೆ ನಿಲ್ದಾಣವನ್ನು ಹಿಡಿಯಲಾಗಿದೆ. ಜಾಲ್ನಾ ನಗರವನ್ನು ಆಕ್ರಮಿಸಲಾಗಿದೆ. ೨೫ ಪೌಂಡಿನ ಫಿರಂಗಿಗಳನ್ನು ಶತ್ರುಗಳಿಂದ ವಶಪಡಿಸಿಕೊಳ್ಳಲಾಗಿದೆ. ಬೀದರ್ ತಾಲ್ಲೂಕು ಕಛೇರಿಯ ಮೇಲೆ ಭಾರತದ ಬಾವುಟವನ್ನು ಏರಿಸಲಾಗಿದೆ. ಗಂಗಾಪುರ, ಹಮಾಪುರ ರಾಯಚೂರು ನಿಲ್ದಾಣಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಯಚೂರ್ ರೈಲ್ವೆ ಸ್ಟೇಷನ್ ಮಾಸ್ಟರನ್ನು ರಜಾಕರರು ಕತ್ತಿಯಿಂದ ತಿವಿದಿರುವರೆಂದು ವಾರ್ತೆ ಬಂದಿದೆ. ಇತರ ಕಡೆಗಳಲ್ಲಿ ಸ್ಟೇಷನ್ ಮಾಸ್ಟರುಗಳನ್ನೂ ಬಂಧಿಸಿಟ್ಟಿರುವರೆಂದೂ ವರದಿ ಬಂದಿದೆ.

ನೈಜಾಮರ ಶರಣಾಗತಿಯೇ?

ಭಾರತ ಸೇನೆಗಳ ಜಯಪ್ರದವಾದ ಮುನ್ನಡೆಯನ್ನು ಕಂಡು ದಿಗ್ಭ್ರಾಂತರಾಗಿ ನಿಜಾಮರು ಶರಣಾಗತರಾಗಲು ಅಭಿಪ್ರಾಯಪಟ್ಟಿದ್ದಾರೆಂದೂ, ಈ ಬಗ್ಗೆ ಪರಿಸ್ಥಿತಿಗಳನ್ನು ಸೂಚಿಸಿ ತಮ್ಮ ಕಡೆಯ ದೂತರುಗಳನ್ನು ಕಳುಹಿಸಿದ್ದಾರೆಂದೂ ಸಹ ಹೈದರಾಬಾದಿನಿಂದ ಬರುತ್ತಿರುವ ಇತ್ತೀಚಿನ ಸುದ್ದಿಗಳು ತಿಳಿಸುತ್ತವೆ. ರಜಾಕರರ ನಾಯಕನಾದ ಖಾಸಿಂ ರಜ್ವಿಯು ಪಲಾಯನ ಸೂತ್ರವನ್ನು ಹೇಳಿಕೊಡುವುದಾಗಿಯೂ ಸಹ ಬಲವಾದ ಸುದ್ದಿಯು ಹೊರಟಿದೆ. ಯಾವ ಘಳಿಗೆಯಲ್ಲಿ ... ಶರಣಾಗತರಾಗಬಹುದೆಂ ... ನಿರೀಕ್ಷಿಸಲಾಗಿದೆ.

ಡಾ|| ಹರ್ಡೀಕರರಿಂದ ಸೇವಾ ದಳಗಳ ಪರಿಶೀಲನೆ

ಅಖಿಲಭಾರತ ಸೇವಾ ದಳದ ಸ್ಥಾಪಕರಾದ ಡಾ|| ನಾ. ಸು. ಹರ್ಡೀಕರ್‌ರವರು ಮಹಾತ್ಮ ಗಾಂಧಿಯವರ ಜನ್ಮ ದಿನವಾದ ಅಕ್ಟೋಬರ್ ೨ ನೇ ತಾರೀಖಿನಿಂದ ೧೦ ದಿನಗಳು ಸಂಸ್ಥಾನದ ಹಲವು ಭಾಗಗಳಲ್ಲಿ ಪ್ರವಾಸ ಮಾಡಿ ಸೇವಾ ದಳಗಳ ಪರಿಶೀಲನೆಯನ್ನು ನಡೆಸುವರು. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಸರ್ ಜವರೊಡನೆ ಕೇಳ[illegible] ಈ ಬಗ್ಗೆ ಕಾರ್ಯಕ್ರಮವನ್ನು ಗೊತ್ತು ಮಾಡಲು ಎಲ್ಲ ಸೇವಾ ದಳಗಳ ಕಾರ್ಯಕರ್ತರುಗಳೂ ಈ ತಿಂಗಳು ೨೦ ನೇ ತಾರೀಖಿನೊಳಗಾಗಿ ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಕೇಂದ್ರ ಕಛೇರಿಗೆ ಬರೆಯಬೇಕಾಗಿ ಸೇವಾ ದಳ ವ್ಯವಸ್ಥಾಪಕರಾದ ಶ್ರೀ ಜಿ. ಮಾರಿ ಚೆನ್ನಬಸಪ್ಪನವರು ಕೋರುತ್ತಾರೆ

ಸೇವಾದಳ ಶಿಕ್ಷಣ ಶಿಬಿರ

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಕಡಬ ಗ್ರಾಮದಲ್ಲಿ ಇದೇ ೨೨ ನೇ ತಾ|| ನಿಂದ ೪೦ ದಿನಗಳ ಸೇವಾದಳ ಶಿಕ್ಷಣ ಶಿಬಿರವು ನಡೆಯುತ್ತಿದ್ದು ತಾಲ್ಲೂಕಿನ ಸಚಿವರಾದ ಶ್ರೀ ಕೆ[illegible] ರಂಗಸ್ವಾಮಿಯವರು ಅದರ ಪ್ರಾರಂಭೋತ್ಸವವನ್ನು ಆ ದಿನ ನೆರವೇರಿಸಿದರು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಅಧ್ಯಕ್ಷತೆ [illegible] ಶಿಕ್ಷಣ ಪಡೆಯುತ್ತಿರುವವರು ಇದೇ ೨೦ ನೇ ತಾ|| ರೊಳಗಾಗಿ ಒಟ್ಟಿಗೆ ೨೦ ರೂ. ನಂತೆ ಮುಂಗಡವಾಗಿ ಶ್ರೀ ಗಟ್ಟಿ ರೇವಣ್ಣನವರು, ಗುಬ್ಬಿರವರಿಗೆ ಕಳುಹಿಸಬೇಕೆಂದು ಸೇವಾ ದಳದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯ್ನ್ ಬಾಮ್

ತಲೆ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ.-)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.

ಪಂಚಾಮೃತ— ಮಲೇರಿಯಾ ಗಡ್ಡೆಗಳಿಗೆ ಸಿದ್ಧ ಸಂಜೀವನ.

ಮಹಾಕೇಶವರ್ಧಿನೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಸೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

[illegible], ಮೈಸೂರು

ಹೋಟಲಿನಲ್ಲಿ ಕ. ಎಂ. ಮುನ್ಷಿಯವರ ಬಂಧನ

ಹೈದರಾಬಾದಿನ ಮೇಲೆ ಭಾರತ ಸರ್ಕಾರದ ಪೋಲೀಸ್ ಕಾರ್ಯಾಚರಣೆಯು ಆರಂಭವಾದೊಡನೆಯೇ ಅಲ್ಲಿನ ಸೇನಾ ಪಡೆಯವರು ಭಾರತದ ಏಜೆಂಟ್ ಜನರಲ್ಲರಾದ ಶ್ರೀ ಕೆ. ಎಂ. ಮುನ್ಷಿಯವರ ಭವನಕ್ಕೆ ಮುತ್ತಿಗೆ ಹಾಕಿ ಅಲ್ಲಿ ಕಾವಲಿದ್ದ ಭಾರತ ಸೈನಿಕರ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡರು. ಶ್ರೀ ಮುನ್ಷಿಯವರ ಆಪ್ತ ಕಾರ್ಯದರ್ಶಿ ಮತ್ತು ಅಂಗರಕ್ಷಕನನ್ನು ಗ್ರೀನ್‌ಲ್ಯಾಂಡ್ ಗೆಸ್ಟ್ ಹೌಸ್ [illegible] ಹೋಟಲಿಗೆ ಕೊಂಡೊಯ್ದು ಅಲ್ಲಿ [illegible] ಜನರನ್ನು ಅಲ್ಲಿಯೇ ಬಂಧನದಲ್ಲಿಡಲಾಗಿದೆ ಮತ್ತು ಮನ್ಷಿಯವರ ಪರಿವಾರದವರನ್ನು ಸೇನಾಪಡೆಗಳನ್ನಾಗಿ [illegible] 'ಡೋಸ್ ಬ್ಯಾರಕ್ಸ್' ಎಂಬಲ್ಲಿ ಬಂಧಿಸಲಾಗಿದೆ

ಬಿದರೆ ವಿಮಾನ ನಿಲ್ದಾಣದ ವಶ

ಭಾರತ ವಿಮಾನ ಪಡೆಗಳು ಹೈದರಾಬಾದಿನ ಅನೇಕ ಕಡೆಗಳಲ್ಲಿ ಆಕ್ರಮಣ ನಡೆಸಿ ಬಾಂಬುಗಳನ್ನು ಸುರಿಸಿದವು. ಹೊರಗಿನಿಂದ ಹೈದರಾಬಾದಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಲು ಮುಖ್ಯ ಕೇಂದ್ರವಾಗಿದ್ದ ಬಿದರೆಯ ವಿಮಾನ ನಿಲ್ದಾಣದ ಮೇಲೆ ಧಾಳಿ ಮಾಡಿ ಅದನ್ನು ವಶಪಡಿಸಿಕೊಂಡವು. ಹೈದರಾಬಾದಿಗೆ ಬಳಿ ನೈಲಿ ದೂರದಲ್ಲಿರುವ [illegible] ನಿಲ್ದಾಣದ ಮೇಲೆಯೂ ಬಾಂಬು ಹಾಕಿದವು.

ಪ್ರಕಟಣೆ

ಪ್ಲಾಸ್ಟಿಕ್ ಸ್ಪೆಟರುಗಳು, [illegible]ಗಳು, ಶಾಲುಗಳು ನಾನಾ ತರಹದ ವಾಯಿಲ್, ಚೀಟಿ ಬಟ್ಟೆಗಳು, ಮಲ್ಲು ವಗೈರೆಗಳಿಗೆ

ವಿಜಯಲಕ್ಷ್ಮೀ ವಿಲಾಸ್,

ಇರ್ವಿನ್ ರೋಡ್, ಮೈಸೂರು

ಹುಡುಗ ತಪ್ಪಿಸಿಕೊಂಡಿದ್ದಾನೆ

ನನ್ನ ಮಗ ಸುಮಾರು ಹತ್ತು ವರ್ಷ ವಯಸ್ಸಿನ ಶ್ರೀನಿವಾಸ ಬಿನ್ ಪುಟ್ಟಣ್ಣ ಎಂಬ ಹುಡುಗನು ತಾರೀಖು ೧೨-೯-೧೯೪೮ ನೇ [illegible] ಮನೆಯಲ್ಲಿ ಹೊರಟವನು ಈ ವರೆವಿಗೂ ಹಿಂತಿರುಗಿ ಬಂದಿಲ್ಲ. ಹುಡುಗನು ಸುಮಾರು ಬಿಳಿಯ ಬಣ್ಣದ ಶರಟನ್ನೂ, ಮಾಸಲು ಬಣ್ಣದ ಚಡ್ಡಿಯನ್ನೂ ಹಾಕಿಕೊಂಡಿದ್ದು [illegible] ತಲೆ ಚನ್ನಾಗಿ [illegible] ಬಿಳುಪು [illegible] ಬಣ್ಣ [illegible]. ಈ ಹುಡುಗನನ್ನು ನೋಡಿದವರು ಹತ್ತಿರದ ಪೋಲೀಸ್ ಸ್ಟೇಷನ್ನಿಗಾಗಲಿ ಅಥವಾ ಈ ಕೆಳಗಿನ ವಿಳಾಸಕ್ಕಾಗಲೀ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ

ಜಿ. ಶೇಷಗಿರಿರಾವ್,

[illegible]

ಮೈಸೂರು

ಹೈದರಾಬಾದ್ ಪಲಾಯನಕ್ಕೆ ವಿಮಾನ ಸಿದ್ಧತೆ

ಹೈದರಾಬಾದಿಗೆ ಅಕ್ರಮವಾಗಿ ವಿಮಾನದ ಮೂಲಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದ ಸಿಡ್ನಿ ಕಾಟನ್ ಎಂಬಾತನು ಈಗ ಮತ್ತೆ ಐದು ಲ್ಯಾಂಕಾಸ್ಟರ್ ವಿಮಾನಗಳೊಡನೆ ಹೈದರಾಬಾದಿಗೆ ಬಂದಿರುವನೆಂದು ತಿಳಿದು ಬಂದಿದೆ. ಅವನೊಡನೆ ಇನ್ನೂ [illegible] ವೈಮಾನಿಕರು ಬಂದಿರುವರೆಂದೂ ಹೇಳಲಾಗಿದೆ. ಮೇಲ್ಕಂಡ ವಿಮಾನಗಳ ಪೈಕಿ ಒಂದಕ್ಕೆ ನೈಜಾಮರ ನಿಯೋಗವು ಪ್ಯಾರಿಸ್ಸಿಗೆ ತೆರಳಲೆಂದೂ ಸಹ ಬೇರೆ [illegible] ನೈಜಾಮರ ಅಪ್ಪಣೆಯಿಲ್ಲದೆ [illegible] ಕಳುಹಿಸಲು ಈ ವಿಮಾನಗಳು ಸಿದ್ಧವಾಗಿವೆ. ನೈಜಾಮರೂ ಸಹ [illegible] ಸಂಸ್ಥಾನದಿಂದ ಪಲಾಯನ [illegible] ಆಲೋಚಿಸಿದ್ದಾರೆಂದೂ, ಇದಕ್ಕಾಗಿ ವಿಮಾನಗಳು ಸಿದ್ಧವಾಗಿಡಲ್ಪಟ್ಟಿವೆಯೆಂದೂ ಸಮಾಚಾರ ಹರಡಿದೆ. ಈ ವಿಮಾನಗಳಿಗಾಗಿ ಇದುವರೆಗೆ ಸಿಡ್ನಿ ಕಾಟನ್ನನಿಗೆ ಮೂರು ಕೋಟಿ ರೂ ಕೊಡಲಾಗಿದೆಯೆಂದೂ ತಿಳಿದುಬಂದಿದೆ

ವರುಣ ದೇವನ ಶಮನಕ್ಕಾಗಿ ಕಾಶಿ ರಾಜರ ಉಪವಾಸ

ಗಂಗಾ ನದಿಯು ಅಪಾರವಾದ ಪ್ರವಾಹದಿಂದ ಉಂಟಾಗಿರುವ ಕಷ್ಟ ನಷ್ಟಗಳಿಂದ ಕಾಶಿ ವಿಪರೀತ ಮಳೆಯಿಂದ [illegible]ಗಿರುವ ಜನತೆಯನ್ನು ತಪ್ಪಿಸಲು ವರುಣ ದೇವನ ಪ್ರಸನ್ನತೆಯನ್ನು ಪಡೆಯಲು ಕಾಶಿ ಮಹಾರಾಜರು ಉಪವಾಸ ವ್ರತ[illegible] ಕೈಗೊಂಡಿರುವರು. [illegible] ನಲಪೆಯಂತೆ ವಿಶೇಷ ಪೂಜಾದಿಗಳನ್ನು [illegible] ಅನೇಕ ಕೊಡಗಳಲ್ಲಿ ಹಾಲನ್ನು [illegible] ಗಂಗಾ ಪ್ರವಾಹಕ್ಕೆ ಚೆಲ್ಲಲಾಯಿತು. [illegible] ರು ೭೨ ಬ್ರಾಹ್ಮಣರು ಶಂಖ ಧ್ವನಿಯು[illegible] ಮಾಡಿ ದೇವತೆಗಳ ಪ್ರಸನ್ನತೆಗಾಗಿ [illegible] ರ್ಥಿಸಿದರು

● ಚನ್ನಪಟ್ಟಣದಲ್ಲಿ ಕಳೆದ ೧೦ ದಿನ[illegible] ದಲೂ ಹಾಡಶಾಲೆಗಳು ಕೆಲಸಕ್ಕೆ [illegible] ದ ಮುಷ್ಕರ ಹೂಡಿರುವರೆಂದು [illegible] ಬಂದಿದೆ

UNIVERSITY OF MYSORE

NOTIFICATION

No [illegible] 1947-48 Dated 4th September 1948.

Applications are invited from duly qualified candidates for the post of professor of Inorganic and Physical Chemistry in the University of Mysore. The scale of salary attached to the post is Rs 400-25-700. The post is permanent. The selected candidate will be started on the minimum salary of Rs 400/- and will be on probation for two years. A higher starting salary according to qualifications will also be considered. The minimum academic qualification required is a good Master's (or corresponding) Degree in Inorganic and Physical Chemistry. Preference will be given to candidates who have had experience in teaching and organisation and have done original research work

2 The post is pensionable. It is subject to the Mysore Service Regulations as regards salary, leave, pension, etc., and subject also to the rules of the University as regards discipline. The person selected will be required to join duty immediately after the receipt of order of appointment

3 Applications should contain the following information:—

Age, caste or community, qualifications (including examinations passed and name of University, date of passing and class) present position and salary and previous service, if any, as well as works published and other particulars, if any

Copies of testimonials (which will not be returned) should accompany the application. SIX SETS of the application and testimonials are required. Applicants already in service must forward their applications through their official superiors. Reprints of published papers should be sent along with the applications.

[illegible] If required candidates should be prepared to be interviewed, at their own expense.

[illegible] Applications should be addressed to the Registrar, University of Mysore, Mysore, and sent so as to reach him ON OR BEFORE 15th October 1948

D. S. GORDON, Registrar

Edited printed and published by A. [illegible] Nagarajan at the Sadhvi Press D[illegible]ubbaiah Road Mysore

ಸಾಧ್ವಿ

ಸಂಪುಟ ೭] ಗುರುವಾರ ೧೬-೯-೪೮ [ಸಂಚಿಕೆ ೬೭

ನೈಜಾಮರ ಪರಾರಿಗೆ ಅವಕಾಶವಿಲ್ಲವಾಗಿದೆ

ಹೊಸಪೇಟೆ ಬಳಿ ೨೪ ಗಂಟೆ ಕಾಲ ಭೀಕರ ಕದನ

ಅನೇಕ ನೈಜಾಂ ನಗರಗಳ ವಶ

ಹೈದರಾಬಾದಿನಲ್ಲಿ ಭಾರತ ಸೈನ್ಯಗಳು ...ದೇ ಕ್ರಮವಾಗಿ ಮುನ್ನುಗ್ಗುತ್ತಿವೆ. ...ವಾಡದಿಂದ ಹೊರಟ ಸೇನೆಯು ...ಬಾದಿಗೆ ಕೇವಲ ೫೦ ಮೈಲಿ ದೂರದಲ್ಲಿದೆ. ...ರಂಗಾಬಾದ್ ನಗರದ ಕಲೆಕ್ಟರು ಬಿಳಿಯ ...ವುಟವನ್ನು ಹಿಡಿದುಕೊಂಡು ನಗರದ ಹೊ...ಭಾಗದಲ್ಲಿ ಭಾರತ ಸೈನ್ಯಕ್ಕೆ ಶರಣಾಗತರಾ... ನಗರವನ್ನು ವಶಪಡಿಸಿಕೊಟ್ಟರು. ಈ ನ...ಕ್ಕೆ ಉತ್ತರದಲ್ಲಿರುವ ದೌಲತಾಬಾದ್ ...ಗರವೂ ವಶವಾಗಿದೆ. ಸೋಲಾಪುರ ...ಯಿಂದ ನುಗ್ಗಿದ ಸೈನ್ಯಗಳು ರಾಜಕಾರ... ಹಿಡಿದು ತೊಲ್ಜಾಬಾದನ್ನು ಆಕ್ರಮಿಸಿ...ಕೊಂಡಿವೆ. ಆಗ್ನೇಯ ದಿಕ್ಕಿನಲ್ಲಿ ಭಾರತ ...ನಿಕರಿಗೂ ರಜಾಕರರಿಗೂ ಬೆಟ್ಟ ಘರ್ಷಣೆಯಾಗಿ, ಸೂರ್ಯಪೇಟೆ ಮತ್ತು ಕಮ್ಮಂ...ಪೇಟೆಯನ್ನು ಹಿಡಿಯಲಾಯಿತು.

...ಜನೂರಿನ ಮಾರ್ಗಮಧ್ಯದಲ್ಲಿ ... ಕಲ್ಯಾ...ದಲ್ಲಿ ರಜಾಕರರು ರಸ್ತೆ ಸಂಚಾರಗಳನ್ನು ...ತಡೆಯಲು ಯತ್ನಿಸಿ ಭಾರತ ಸೈನಿಕರಿಂ...ದ ಪಟಬಡಿಯಲ್ಪಟ್ಟರು. ಹೊಸಪೇಟೆ ಬಳಿ ...ಸೈನ್ಯಗಳು ವಿಶೇಷ ಪ್ರತಿಭಟನೆಯು ಎದುರಿಸಿ ಮುಂದೆ ನುಗ್ಗಿದವು.

...ಬರರೆ ವಿಮಾನ ನಿಲ್ದಾಣದ ಮೇಲೆ ...ರತದ ವಿಮಾನಗಳು ಧಾಳಿ ಮಾಡಿ ಮ...ಗನ್ನುಗಳನ್ನು ಪ್ರಯೋಗಿಸಿದವು. ಅ...ಶತ್ರುಗಳಿಂದ ವಿಮಾನ ವಿರೋಧ ಫಿರಂ...ಗಳು ಪ್ರಯೋಗಿಸಲ್ಪಟ್ಟರೂ ನಮ್ಮ ನೈಜಾ...ರಿಗೆ ಸೇರಿದ ಯಾವ ವಿಮಾನಗಳೂ ಕಂ...ಡಲಿಲ್ಲ.

ಭಾರತ ಸೈನ್ಯದವರಿಂದ ಆಕ್ರಮಿತವಾದ ...ಪುರದಲ್ಲಿ ನೈಜಾಮರ ನಾಣ್ಯದ ಲಂ...ವಿರ ರೂ ಗಳನ್ನು ವಶಪಡಿಸಿಕೊಳ್ಳಲಾ...ತು. ೪೦ ಜನ ರಜಾಕರರು ಸೈಸೆರೆ ...ದರು. ೧೧೯ ಜನ ಕೈಸೆರೆಯಾದ ನಿ...ಜಾಮ ಸೈನಿಕರನ್ನು ವಿಜಯವಾಡದಿಂದ ...ಪಂಪಿಸಿಗೆ ಕರೆದೊಯ್ಯಲಾಗಿದೆ. ಹೊ...ಪೇಟೆಯ ಕ್ಷೇತ್ರದಲ್ಲಿ ೨ ಬಾರಿ ನಿಜಾಂ ...ಸೈನ್ಯಗಳ ಪ್ರತಿಭಟನೆಯನ್ನು ತೋರಿ ಅ...ಧುನಿಕ ಶಸ್ತ್ರಗಳನ್ನು ಪ್ರಯೋಗಿಸದ ...೨೪ ಗಂಟೆಗಳ ಕಾಲ ಅವಿಚ್ಛಿನ್ನವಾ...ಗಿ ಕದನ ನಡೆಸಿ, ಶತ್ರುಗಳಿಗೆ ವಿಶೇಷ ನಾ...ಶನಷ್ಟವನ್ನುಂಟುಮಾಡಲಾಯಿತು. ಮೂ...ರಾಬಾದನ್ನು ಆಕ್ರಮಿಸಲಾಯಿತು. ಹೊ...ಪೇಟೆಯ ಜನರು ವಿಶೇಷ ಉತ್ಸಾಹದಿಂ...ದ ನಮ್ಮ ಸೇನೆಗಳನ್ನು ಸ್ವಾಗತಿಸಿ, ಅವರು...ಗೆ ೨೫ ಸಾವಿರ ರೂ ಗಳನ್ನು ಕೊಟ್ಟರು.

ವಿದ್ಯಾರ್ಥಿಗಳ ನವೀನ ಚುನಾವಣಾ ಪ್ರಚಾರ

ಬೆಂಗಳೂರು ಕಾಮರ್ಸ್ ಕಾಲೇಜು ಸಂ...ಘ ವಾರ್ಷಿಕ ಚುನಾವಣೆಯ ಪ್ರಚಾರವು ...ನಷ್ಟ ನವೀನವಾಗಿಯೂ ವ...ತ್ತು ಹೆ...ಚ್ಚೆಂದು ವೆಚ್ಚದಿಂದಲೂ ಕೂಡಿ...ತ್ತು. ಒಬ್ಬ ಸ್ಪರ್ಧಿಯು ಓಟರುಗಳಿಗೆ ...ಧಕವಾಗಿ ಕಲ ವಸ್ತ್ರಗಳನ್ನು ಹಂಚಿದನು. ...ಇತರರು ಮೋಟಾರು ಮತ್ತು ಟಾ...ಂಗಾಗಳನ್ನು ಉಪಯೋಗಿಸಿದರು. ಮ...ತ್ತೊಬ್ಬನು ಹಸ್ತ ಪತ್ರಿಕೆಯನ್ನು ವಿಮಾನ...ದಿಂದ ಎಸೆಯುವಂತೆ ಪ್ರಕಟಿಸಿದ್ದನು. ಇನ್ನೊ...ಬ್ಬ ೪೦೦ ರೂ ಗಳನ್ನು ಖರ್ಚು ಮಾಡಿ...ದನೆಂದು ಹೇಳಲಾಗಿದೆ. ಸಂಘದ ಒಟ್ಟು ...ಸದಸ್ಯರು ೬೦೦ ಜನರಿದ್ದರೂ ಚುನಾವ...ಣೆಗಾಗಿ ವಿದ್ಯಾರ್ಥಿಗಳು ಒಟ್ಟು ೧೫೦೦ ...ರೂ ಗಳನ್ನು ಖರ್ಚು ಮಾಡಿದರೆಂದು ಹೇ...ಳಲಾಗಿದೆ.

ಜಾಡಮಾಲಿಗಳ ಮುಷ್ಕರ

ಮೈಸೂರು ೧೬

ಮೊದಲೇ ಪ್ರಕಟವಾದಂತೆ, ನಗರದ ಸುಮಾರು ೫೦೦ ಜನ ಜಾಡಮಾಲಿಗಳು ಇಂದಿನಿಂದ ಮುಷ್ಕರ ಹೂಡಿದ್ದಾರೆ. ಪರಿಸ್ಥಿತಿಯು ಶಾಂತವಾಗಿದೆ. ಪೋಲೀಸರ ಉಸ್ತುವಾರಿಯೊಡನೆ ದೇವರಾಜ ಮಾರ್ಕೆಟ್ ಮತ್ತು ಇತರ ಭಾಗಗಳಲ್ಲಿ ೧೬ ಜನ ಜಾಡಮಾಲಿಗಳಿಂದ ಕಸ ಗುಡಿಸಲಾಯಿತು. ಇನ್ನೂ ಹೊಸಬರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆ.

ಕುರುಬನಿಗೂ ಹೆಬ್ಬಾವಿಗೂ ಜಗಳ

ಮೆಟ್ಟುಪಾಳ್ಯದಿಂದ ನೀಲಗಿರಿಗೆ ಕುರಿಯ ಮಂದೆಯನ್ನು ತರುತ್ತಿದ್ದ ಕುರುಬನೊಬ್ಬನು ಬರಲಿಯಾರ್ ಎಂಬಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಒಂದು ಹೆಬ್ಬಾವು ಒಂದು ಕುರಿಯನ್ನು ನುಂಗುತ್ತಿರುವುದನ್ನು ಕಂಡು, ಅದನ್ನು ರಕ್ಷಿಸಲು ಹೋದಾಗ ಹಾವು ಅವನನ್ನು ಸುತ್ತಿಗೊಂಡಿತು. ನುಂಗಲು ಯತ್ನಿಸಿತು. ಕುರುಬನೂ ಅದರಿಂದ ತಪ್ಪಿಸಿಕೊಳ್ಳಲು ಕೆಲವು ನಿಮಿಷ ಒದ್ದಾಡಿ, ಹಾವಿನ ಸಹಿತ ಕೆಳಕ್ಕೆ ಉರುಳಿದನು. ದಾರಿಯಲ್ಲಿ ಹೋಗುತ್ತಿದ್ದವರು ಇದನ್ನು ಕಂಡು ಕುರುಬನನ್ನು ರಕ್ಷಿಸಿ ಆಸ್ಪತ್ರೆಗೆ ಸಾಗಿಸಿದರು. ಆತನು ಅಲ್ಲಿ ಸತ್ತು ಹೋದನು. ಹೆಬ್ಬಾವು ಮಾತ್ರ ತಪ್ಪಿಸಿಕೊಂಡು ಕಾಡಿಗೆ ಪರಾರಿಯಾಯಿತು.

ಆರ್. ಎಸ್. ಎಸ್. ರವರ ಗುಪ್ತ ಕಾರ್ಯಾಚರಣೆ

ಬೆಳಗಾವಿನಲ್ಲಿ ಅಕ್ರಮವಾದ ಆರ್. ಎಸ್. ಎಸ್. ಸಂಸ್ಥೆಗೆ ಸೇರಿದ ಕೆಲವರು ರಹಸ್ಯವಾಗಿ ಶಸ್ತ್ರಾಸ್ತ್ರಗಳನ್ನು ಗೋವಾದಿಂದ ಸಂಗ್ರಹಿಸುತ್ತಿರುವರೆಂದು ಹೇಳಲಾಗಿದೆ. ಬೆಳಗಾಂ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇವರ ಗುಪ್ತಕಾರ್ಯಾಚರಣೆಗಳು ನಡೆಯುತ್ತಿವೆಯೆಂದೂ ವರದಿಯಾಗಿದೆ.

ಹಿಂದೀ ಪ್ರಚಾರ ಸಭೆ

ನಂಜನಗೂಡು ೧೫

ಇಲ್ಲಿನ ಹಿಂದೀ ಪ್ರಚಾರ ಸಭೆಯ ವಾರ್ಷಿಕ ಸಭೆಯು ನಿನ್ನೆ ಶ್ರೀ ಕೆ ವಾಸುದೇವ ಮೂರ್ತ್ಯಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ವರದಿಯನ್ನು ಓದಿದ ನಂತರ ಪ್ರಸಕ್ತ ಸಾಲಿಗೆ ಶ್ರೀ ಕೆ ವೆಂಕಟ ಸುಬ್ಬರಾವ್‌ರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎ ವಿ ಕೃಷ್ಣರವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು.

ದಂಡಿನ ಪೌರಸಭಾ ಸದಸ್ಯರ ದಸ್ತಗಿರಿ

ಸ್ವಂ. ಸು ಫೋ] [ಬೆಂಗಳೂರು ೧೬

ಸಾರ್ವಜನಿಕ ರಕ್ಷಣಾ ಕಾನೂನಿನ ರೀತ್ಯಾ ದಂಡಿನ ಪೌರಸಭಾ ಸದಸ್ಯರಾದ ಶ್ರೀ ಎಂ ಜಯಶೀಲನ್ ರವರನ್ನು ಮೊನ್ನೆ ರಾತ್ರಿ ದಸ್ತಗಿರಿ ಮಾಡಲಾಯಿತು.

ಜೀಪುಗಳ ವಶ

ಹೈದರಾಬಾದಿನ ಪರಿಸ್ಥಿತಿಯ ಬಗ್ಗೆ ನಗರದಲ್ಲಿ ಸಾರ್ವಜನಿಕ ಶಾಂತಿಗೆ ಯಾವ ಧಕ್ಕೆಯೂ ಒದಗದಂತೆ ಎಲ್ಲ ಮುಂಜಾಗ್ರತೆ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈಗಾಗಲೇ ನಾರ್ವಜನಿಕರಿಗೆ ಸೇರಿದ್ದ ೧೨ ಜೀಪುಗಳನ್ನೂ ಮತ್ತು ೩೦ ಲಾರಿಗಳನ್ನೂ ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆ.

○ ಮೈಸೂರು ಸಕ್ಕರೆ ಕಂಪೆನಿಯ ಜನರಲ್ ಮ್ಯಾನೇಜರಾಗಿದ್ದ ಶ್ರೀ ಸಿ ಎಂ ಅಣ್ಣಯ್ಯನವರನ್ನು ಎಕ್ಸ್ಟ್ರಾ ಡೆಪ್ಯುಟಿ ಕಮಿಷನರಾಗಿ ನೇಮಿಸಲಾಗಿದೆ.

ನಿಜಾಮರು ಪರಾರಿಯಾಗಲು ಆಸ್ಪದವಿಲ್ಲ

ಸಿಮ್ಲಾ ಕಾಟನ್‌ನಿಂದ ವಿಮಾನಗಳು ಸಂಚರಿಸುತ್ತಿದ್ದರೂ ಸಹ, ನೈಜಾಮರೂ ಮತ್ತು ಖಾಸಿಂ ರಜ್ವಿಯವರೂ ಹೈದರಾಬಾದಿನಿಂದ ಪರಾರಿಯಾಗಲು ಅವಕಾಶವಿಲ್ಲವೆಂದೂ, ಭಾರತ ವಿಮಾನಗಳು ಸಂಸ್ಥಾನದ ಅನೇಕ ವಿಮಾನ ನೆಲೆಗಳನ್ನು ನಾಶಪಡಿಸಿರುವುದು ಇದಕ್ಕೆ ಕಾರಣವೆಂದೂ ಹೇಳಲಾಗಿದೆ. ಅಲ್ಲದೆ ಅಂತರಿಕ್ಷದಲ್ಲಿ ವಿಶೇಷ ಉಸ್ತುವಾರಿಯನ್ನು ಇಡಲಾಗಿದೆ. ಹೈದರಾಬಾದಿನ ಮೇಲಿನ ಕಾರ್ಯಾಚರಣೆಯು ಕೇವಲ ಒಂದು ವಾರದಲ್ಲಿ ಮುಕ್ತಾಯವಾಗಬಹುದೆಂದು ಭಾವಿಸಲಾಗಿದೆ. ಸೋಲಾಪುರದಿಂದ ಹೊರಟ ಸೈನಿಕರು ಶತ್ರುಗಳ ಪ್ರತಿಭಟನೆಯನ್ನು ಸಂಪೂರ್ಣವಾಗಿ ಅಡಗಿಸಿದ್ದಾರೆ. ರಜಾಕರರು ಓಡುತ್ತಿದ್ದಾರೆ. ಮತ್ತು ನೈಜಾಂ ಸೈನ್ಯದಲ್ಲಿ ಅಶಾಂತಿ ತಲೆದೋರಿದೆ. ಆದರೂ ಸಿಕಂದರಾಬಾದಿನಲ್ಲಿ ಮುಂದೆ ವಿಶೇಷ ಪ್ರತಿಭಟನೆಯು ಬರಬಹುದೆಂದು ಹೇಳಲಾಗಿದೆ.

ಸೂಚನೆ

ಅನಂತಚತುರ್ದಶಿ ಹಬ್ಬದ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಬೆಂಗಳೂರಿನಲ್ಲಿ ದಸ್ತಗಿರಿಗಳು

ಸ್ವಂ. ಸು. ಫೋ] ಬೆಂಗಳೂರು ೧೬

ದಂಡಿನ ಮುಸ್ಲಿಮರ ನಾಯಕರಾದ ಜನಾಬ್ ಇಸ್ಮಾಯಿಲ್ ಎಂಬುವರನ್ನು ನಿನ್ನೆ ರಾತ್ರಿ ಪೋಲೀಸರು ದಸ್ತಗಿರಿ ಮಾಡಿದರು. ಜಿಲ್ಲಾಧಿಕಾರಿಗಳ ಕಛೇರಿಯ ಗುಮಾಸ್ತರಾದ ಜನಾಬ್ ಜಲೀಲ್ ಎಂಬುವರನ್ನೂ ದಸ್ತಗಿರಿ ಮಾಡಲಾಗಿದೆ.

ಮಂಡ್ಯದ ಡಿ. ಎಸ್. ಪಿ ಕಛೇರಿ ಮ್ಯಾನೇಜರ ಬಂಧನ

ಮಂಡ್ಯ ಜಿಲ್ಲಾ ಪೋಲೀಸ್ ಕಛೇರಿಯ ಮ್ಯಾನೇಜರಾದ ಜನಾಬ್ ಷೇಖ್ ಮೊಹಿದೀನರವರನ್ನೂ ಬಂಧಿಸಲಾಗಿದೆ. ಪಟ್ಟಣದ ಪೇಟೆಯಲ್ಲಿ ೬ ಮಂದಿ ಮುಸ್ಲಿಮರನ್ನೂ ಮತ್ತು ಮದ್ದೂರಿನಲ್ಲಿ ೮ ಮಂದಿಯನ್ನೂ ದಸ್ತಗಿರಿ ಮಾಡಲಾಗಿದೆ.

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನಿನ್ನೆ ಈ ದಿನ ಮುಸ್ಲಿಂ ಪ್ರಮುಖರ ಸಭೆಯೊಂದನ್ನು ಕರೆಸಿ, ಮುಸ್ಲಿಮರೆಲ್ಲರೂ ಸರ್ಕಾರಕ್ಕೆ ವಿಧೇಯರಾಗಿರಬೇಕೆಂದೂ, ಅನಿವಾರ್ಯವಾದ ಪ್ರಸಂಗಗಳಲ್ಲಿ ಹಲವರನ್ನು ದಸ್ತಗಿರಿ ಮಾಡಬೇಕಾದ ಪ್ರಸಂಗ ಬರಬಹುದೆಂದೂ ತಿಳಿಸಿದರು. ಮುಸ್ಲಿಮರೆಲ್ಲರೂ ವಿಧೇಯರಾಗಿರುವುದಾಗಿ ಭರವಸೆಯಿತ್ತರು. ಸಚಿವರಾದ ಜನಾಬ್ ಮಹಮದ್ ಹನೀಫರು ಸಭೆಯಲ್ಲಿ ಹಾಜರಿದ್ದರು.

* ಬೆಂಗಳೂರು ದಂಡಿನ ಪ್ರದೇಶಕ್ಕೆ ನಗರದಿಂದ ೩೦ ಮಂದಿ ಪೋಲೀಸರನ್ನು ಕಳುಹಿಸಲಾಗಿದೆ. ಇಲ್ಲಿನ ಪರಿಸ್ಥಿತಿ ಶಾಂತವಾಗಿದೆ. ಅಸಿಸ್ಟೆಂಟ್ ಕಮೀಷನರಾದ ಶ್ರೀ ಎಂ ಲಕ್ಷ್ಮಣರಾವ್‌ರವರನ್ನು ಪೋಲೀಸ್ ನ ಸ್ಪೆಷಲ್ ವಿಚಾರಣಾ ಸಮಿತಿಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

§ ಸೆಂಟ್ರಲ್ ಜೈಲಿನಲ್ಲಿ ಸ್ಥಳಾಭಾವ ಉಂಟಾಗಿರುವುದರಿಂದ ೧೦೦ ಮಂದಿ ಕೈದಿಗಳನ್ನು ಮೈಸೂರು ಸಬ್ ಜೈಲಿಗೆ ವರ್ಗಾಯಿಸಲಾಗಿದೆ.

§ ಕವಿ ಬಂಗಾಳದ ... ಬರೆದಿರುವ ... ಉದ್ರೇಕಕರವಾದ ಉರ್ದು ಪದ್ಯದಿಂದ ಕೂಡಿದ ... ಎಂಬ ಪತ್ರಿಕೆಯ ... ಸಂಚಿಕೆಯನ್ನು ವಶಪಡಿಸಿಕೊಳ್ಳುವಂತೆ ಆಜ್ಞೆಯಾಗಿದೆ.

† ... ಡಾ. ... ಎಂ ... ವಿಶ್ವೇಶ್ವರಯ್ಯನವರು ... ಗೌರವ ... ಕೊಡಲು ವಿಶ್ವವಿದ್ಯಾಲಯದವರು ... ಈ ವಿಷಯವಾಗಿ ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ... ಸಲಹೆ ಕೊಡುವರೆಂದೂ ಹೇಳಲಾಗಿದೆ.

ಕಳ್ಳ ಭಟ್ಟಿ ಪುಂಡರು ಪತ್ತೆ

ಮೈಸೂರು ೧೬

* ರಾಜಧಾನಿಯ ನರಸಿಂಹರಾಜ ಮೊಹಲ್ಲಾದ ... ನಾರಾಯಣ ... ಎಂ ... ಕಳ್ಳತನದಲ್ಲಿ ಭಟ್ಟಿಸಾರಾಯಿ ... ತಯಾರಿಸುತ್ತಿದ್ದುದನ್ನು ನಿನ್ನೆ ಎಕ್ಸೈಜ್ ... ಅಧಿಕಾರಿಗಳೂ ಮತ್ತು ಪೋಲೀಸರೂ ... ಅವನನ್ನು ದಸ್ತಗಿರಿ ಮಾಡಿ ... ಮತ್ತು ಕೆಲವು ... ವಶಪಡಿಸಿಕೊಂಡಿರುತ್ತಾರೆ.

... ಎಂಬ ವರ್ತಕರುಗಳ ... ನಿನ್ನೆ ... ಸಾರ್ವಜನಿಕ ... ಮಾಡಲಾಯಿತು.

ಆಲಂಪುರದಲ್ಲಿ ಮೈಸೂರಿನ ಅಶ್ವ ಸೇನೆ

ಹೈದರಾಬಾದಿನ ಕದನದಲ್ಲಿ ಮೈಸೂರಿನ ಅಶ್ವ ಸೈನ್ಯಗಳು ಆಲಂಪುರವನ್ನು ಪ್ರವೇಶಿಸಿವೆಯೆಂದು ವರದಿಯಾಗಿದೆ. ನೈಜಾಮರ ರೈಲ್ವೆಯನ್ನು ವಶಪಡಿಸಿಕೊಂಡು ಅದರಲ್ಲಿಯೇ ಭಾರತ ಸೈನ್ಯಗಳು ಮೇಲ್ಗಂಡ ನಗರಕ್ಕೆ ನುಗ್ಗಿದವೆಂದು ಹೇಳಲಾಗಿದೆ. ಅವರಿಗೆ ಯಾವ ಪ್ರತಿಭಟನೆಯೂ ಇರಲಿಲ್ಲ. ಸಿಕಂದರಾಬಾದಿನಿಂದ ೮ ಮೈಲಿಯಲ್ಲಿರುವ ದೌಲತಾಬಾದ್ ಮತ್ತು ೩೦ ಮೈಲಿಯಲ್ಲಿರುವ ದಾಲ್ಕಾ ರೈಲ್ವೆ ಜಂಕ್ಷನ್ನುಗಳು ನಿನ್ನೆ ಮಧ್ಯಾಹ್ನ ಭಾರತ ಸೈನ್ಯಗಳ ವಶವಾದುವು

ಮುನ್ಷಿಯವರ ಕೊಲೆ ಪ್ರಯತ್ನವೇ ?

ಹೈದರಾಬಾದಿನಲ್ಲಿ ಭಾರತದ ಏಜೆಂಟ್ ಜನರಲ್ಲರಾಗಿರುವ ಶ್ರೀ ಕೆ ಎಂ ಮುನ್ಷಿಯವರನ್ನು ಬಂಧಿಸಿ ಪ್ರತ್ಯೇಕವಾಗಿ ಇಟ್ಟಿರುವುದರ ಬಗ್ಗೆ ಅವರ ಪತ್ನಿ ಶ್ರೀಮತಿ ಲೀಲಾವತಿ ಮುನ್ಷಿಯವರಿಗೆ ಕಳವಳವುಂಟಾಗಿದೆ. ಅಲ್ಲಿನ ರಜಾಕರರು ಶ್ರೀ ಮುನ್ಷಿಯವರನ್ನು ಜೀವ ಸಹಿತ ಸುಡುವುದಾಗಿ ಬೆದರಿಸಿದ್ದರಿಂದಲೂ, ಇದರಿಂದ ಅವರ ಪತ್ನಿಯವರು ಮತ್ತು ತವಕಿಸುತ್ತಿರುವರೆಂದೂ ಹೇಳಲಾಗಿದೆ.

ಹೈದರಾಬಾದಿನ ಬಗ್ಗೆ ಅರಬ್ ರಾಷ್ಟ್ರಗಳ ಮಧ್ಯಸ್ಥಿಕೆ ಇಲ್ಲ

ಹೈದರಾಬಾದಿನ ಬಗ್ಗೆ ಅರಬ್ ರಾಷ್ಟ್ರಗಳು ಮಧ್ಯಸ್ಥಿಕೆ ವಹಿಸುವುದೆಂಬ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಅರಬ್ ಲೀಗಿನ ಸೆಕ್ರೆಟರಿ ಜನರಲ್ಲರಾದ ಅಜಂ ಪಾಷಾರವರು ತಿಳಿಸಿರುತ್ತಾರೆ

ಬೆಳಗಿನ ಆಟಗಳು
17—9—48 ನೇ ಶುಕ್ರವಾರದಿಂದ
4 ದಿನಗಳು ಮಾತ್ರ
ನ್ಯೂ ಥಿಯೇಟರ್ಸ್‌ರವರ
- ಪ್ರೆಸಿಡೆಂಟ್ -
ಪಾತ್ರ:- ಸೈಗಾಲ್, ಕಮಲೇಶ ಕುಮಾರಿ, ಲೀಲಾ ದೇಸಾಯ್ ಮುಂತಾದವರು
ಪ್ರಭಾ ಪಿಕ್ಚರ್ ಹೌಸ್

ನಂಜನಗೂಡು ಏಜೆಂಟರು

ನಂಜನಗೂಡು ನ್ಯೂಸ್ ಏಜೆನ್ಸಿಯವರನ್ನು ಈ ದಿನದಿಂದ ‘ಸಾಧ್ವಿ’ ಪತ್ರಿಕೆಯ ಏಜೆಂಟರಾಗಿ ನೇಮಿಸಲಾಗಿದೆ. ಮಹಾಜನಗಳು ಅವರೊಡನೆ ಸಹಕರಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿ.

— ವ್ಯವಸ್ಥಾಪಕ

ಗವರ್ನರ್ ಜನರಲ್ಲರಿಗೆ ನೈಜಾಮರ ಪತ್ರ

ತಮ್ಮ ಸಮ್ಮತಿಯಿಲ್ಲದಿದ್ದರೂ ಹೈದರಾಬಾದಿನೊಳಕ್ಕೆ ಭಾರತ ಸರ್ಕಾರದವರು ಸೈನ್ಯವನ್ನು ನುಗ್ಗಿಸಿರುವುದರಿಂದ ಅನೇಕ ಬಡ ಪ್ರಜೆಗಳಿಗೆ ಉಂಟಾಗುವ ಕಷ್ಟನಷ್ಟಗಳಿಗೆಲ್ಲಾ ಭಾರತ ಸರ್ಕಾರದವರೇ ಉತ್ತರವಾದಿಗಳಾಗಿರಬೇಕೆಂದು ಸೂಚಿಸಿ ನೈಜಾಮರು ಭಾರತದ ಗವರ್ನರ್ ಜನರಲ್ಲರಿಗೆ ಪತ್ರ ಬರೆದಿದ್ದಾರೆಂದು ತಿಳಿದುಬಂದಿದೆ

ಗಣಪತಿ ಮಂಗಳಾರತಿ

ರಾಜಧಾನಿಯ ಪರಕಾಲ ಮಠದ ಹತ್ತಿರವಿರುವ ಮಾದರಿ ಶಾಲೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಗಣಪತಿ ಮಂಗಳಾರತಿಯು ನಡೆಯುತ್ತದೆ. ಶ್ರೀ ಹೆಚ್ ಟಿ ಸಹೋದರರು ಮತ್ತು ಶ್ರೀ ಟಿ ಕೆ ರಂಗೈಯ್ಯಂಗಾರ್ ರವರುಗಳ ಗಾನ ವೈವಿಧ್ಯವು ಜರುಗುವುದು. ಸರ್ವರಿಗೂ ಆಹ್ವಾನವುಂಟು

ಜೂಜಾಟಕ್ಕೆ ಜುಲ್ಮಾನೆ

ಲಷ್ಕರ್ ಮೊಹಲ್ಲಾ ೪೪೯ ನೇ ನಂಬರಿನ ಸಂಜೀವಯ್ಯನ ಮನೆಯಲ್ಲಿ ಕಳೆದ ಭಾನುವಾರ ಜೂಜಾಡುತ್ತಿದ್ದಾಗ ಪೋಲೀಸಿನವರು ಅಲ್ಲಿಗೆ ಮುತ್ತಿಗೆ ಹಾಕಿ ಸಂಜೀವಯ್ಯ ಮತ್ತು ೯ ಜನ ಇತರರನ್ನು ಬಂಧಿಸಿ ಮೊಕದ್ದಮೆ ಹೂಡಿದ್ದರು. ಆಪಾದಿತರುಗಳಿಗೆ ತಲಾ ೨೫ ರೂ ಜುಲ್ಮಾನೆಯನ್ನೂ, ಮನೆ ಮಾಲೀಕನಾದ ಸಂಜೀವಯ್ಯನಿಗೆ ೩೫ ರೂ ಜುಲ್ಮಾನೆಯನ್ನೂ ವಿಧಿಸಿದರು. ಪೋಲೀಸಿನವರಿಗೆ ಜುಲ್ಮಾನೆ ಹಣದಿಂದ ೧೫ ರೂ ಬಹುಮಾನ ಕೊಡುವಂತೆಯೂ ಆಜ್ಞೆ ಮಾಡಿದರು

Edited printed and published by A. R. Nagarajan at the Sadhvi Press D. Subbaiah Road Mysore.

ಅಮೆರಿಕದಲ್ಲಿ ಪಾನನಿರೋಧಕ್ಕೆ ವಿರೋಧ

ಅಮೆರಿಕದಲ್ಲಿ ಪಾನ ನಿರೋಧವನ್ನು ಜಾರಿಗೆ ತರಬಹುದೆಂಬ ಭೀತಿಯಿಂದ ಅಲ್ಲಿನ ಮದ್ಯ ತಯಾರಿಕೆದಾರರು ದೇಶದಲ್ಲಿ ಈ ಯೋಜನೆಗೆ ವಿರೋಧ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆ

ದೀಪ ಮತ್ತು ಮಿಲ್ಲುಗಳ ತೊಂದರೆ

ಸ್ವಂ. ಸು] ಚಾಮರಾಜನಗರ ೧೩

ಇಲ್ಲಿ ವಿದ್ಯುಚ್ಛಕ್ತಿ ದೀಪದ ತೊಂದರೆ ಬಹಳವಾಗಿದೆ. ಅದು ಆಗಿಂದಾಗ್ಗೆ ನಿಂತುಹೋಗುತ್ತದೆ. ಇದರಿಂದ ಅಕ್ಕಿ ಮಿಲ್ಲುಗಳೂ ಸಹ ಕೆಲಸ ಮಾಡದೆ ನಿಂತು ಹೋಗುತ್ತವೆ. ವಿಚಾರಿಸಿದ್ದರಲ್ಲಿ ಟ್ರಾನ್ಸ್‌ಫಾರ್ಮರುಗಳಿಲ್ಲವೆಂದು ಹೇಳಲಾಗುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಗಮನ ಕೊಟ್ಟು ತೊಂದರೆಯನ್ನು ತಪ್ಪಿಸಬೇಕು.

ಮನೆ ಬಾಡಿಗೆ ಹತೋಟಿಯ ಆಜ್ಞೆಯನ್ನು ಈಗ ಇಲ್ಲಿ ರದ್ದು ಮಾಡಲಾಗಿದೆ. ಆದರೂ ಅಧಿಕಾರಿಗಳು ಅರ್ಜಿ ತೆಗೆದುಕೊಳ್ಳುವುದೂ, ಹುಕುಂ ಮಾಡುವುದೂ ನಿಂತಿಲ್ಲ. ಇದನ್ನು ತಪ್ಪಿಸಬೇಕು.

ಬೆಳಗಿನ ಆಟಗಳು
17—9—48 ನೇ ಶುಕ್ರವಾರದಿಂದ
4 ದಿನಗಳು ಮಾತ್ರ
ವಾಡಿಯ ಮೂವಿಟೋನ್ ರವರ ಸಾಹಸ ಚಿತ್ರ
ಜಂಗಲ್ ಕಿಂಗ್
ಪಾತ್ರ:- ಜಾನ್‌ಕಾವಾಸ್, ಪ್ರಮೀಳ, ಆಘಾ ಮುಂತಾದವರು
ಒಲಿಂಪಿಯಾ ಟಾಕೀಸ್

ಸರ್ ಆರ್ಕಾಟರ ನಿಯೋ

ದಿವಾನ್ ಸರ್ ಆರ್ಕಾಟ್ ರಾಮ... ಮೊದಲಿಯಾರ್‌ರವರು ಪ್ಯಾರಿಸ್ಸಿನಲ್ಲಿ... ಯುವ ವಿಶ್ವಸಂಸ್ಥೆಯ ಸಮ್ಮೇಳನಕ್ಕೆ... ದಾಗ ಭಾರತ ನಿಯೋಗದ ನಾಯಕಿ... ಯಾದ ಶ್ರೀಮತಿ ವಿಜಯಲಕ್ಷ್ಮಿ ಪಂ... ವರ ಸ್ಥಾನದಲ್ಲಿ ಅವಶ್ಯಕತೆಯೊದಗಿ... ನಾಯಕತ್ವವನ್ನು ವಹಿಸುವರೆಂ... ತಿಳಿದುಬಂದಿದೆ

ರಾಜಕಮಲ್
ಮೈಸೂರು
ತಾ|| 12-9-48 ರಿಂ...
ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಸುಭದ್ರಾ
[ಹಿಂದಿ]
—: ತಾರಾಗಣ: —
ಶಾಂತಾ ಆಪ್ಟೆ, ಈಶ್ವರ ಲಾ...
ಯಾಕೊಬ್

Morning Shows
From 17-9
For 4 days only
SUDAN
(In Technicolor)
Maria Montez, Jon Ha...
Turhan Bey

|| ಶ್ರೀ ||
ಗಣೇಶಾ ಟಾಕೀಸ್
17—9—48 ರಿಂದ
ಪ್ರತಿ ದಿನ 3 ಆಟಗಳು
ಶಿವಕವಿ
[ತಮಿಳು]
—: ಮುಖ್ಯ ಪಾತ್ರ: —
"ತ್ಯಾಗರಾಜ ಭಾಗವತರ್" ರಾಜ...
"ಕೃಷ್ಣನ್" "ಮಧುರಂ"

ಬೆಳಗಿನ ಆಟಗಳು
17—9—48 ರಿಂದ
3 ದಿನಗಳು ಮಾತ್ರ
Grand Double Attraction
The Stranger from Pecos
ದಿ ಸ್ಟ್ರೇಂಜರ್ ಫ್ರಂ ಪೆಕೊ...
Westward Bound
(ವೆಸ್ಟ್‌ವರ್ಡ್ ಬೌಂಡ್)

ಶ್ರೀ ಗಾಯತ್ರೀ ಟಾಕೀಸ್
17-9-48 ರಿಂದ ‡ ‡ ಪ್ರತಿ ದಿನ 3 ಆಟಗಳು
20th's ಸೆಂಚುರಿಯವರ ಅಮೋಘ ಚಿತ್ರ
ಅನಾ ಅಂಡ್ ದಿ ಕಿಂಗ್ ಆಫ್ ಸಯಾಂ
(Anna and the King of Siam)
Starring: —Rex Harrison and Linda Darnell

BANGALORE GYMKHANA RACES 1948
ಬೆಂಗಳೂರು ಜಿಮುಖಾನಾ ರೇಸಸ್ ೧೯೪೮
ಸೆಪ್ಟೆಂಬರ್ ೧೮, ೨೫, ೩೦ ಮತ್ತು ಅಕ್ಟೋಬರ್ ೧೬, ೨೩ ಮತ್ತು ೩೦ ರಲ್ಲಿ
ಟೋಟಲೈಜೇಟರ್ಸ್ ಮತ್ತು ರೂ. 2 ಸ್ವೀಪ್
ಪ್ರವೇಶ: ಮೊದಲನೇ ತರಗತಿ—ಪುರುಷರು ರೂ. 4 ದಿನಕ್ಕೆ
" " ಸ್ತ್ರೀಯರು " 2 "
ಎರಡನೇ " ಪುರುಷರು ಅಥವ ಸ್ತ್ರೀಯರು ರೂ. 1-8-0 ದಿನಕ್ಕೆ

...... ಪ್ರಭುದೇವಾ ಟಾಕೀಸಿನಲ್ಲಿ ......
17—9—48 ನೇ ಶುಕ್ರವಾರದಿಂದ :: ಜನಭರಿತವಾದ 3 ನೇ ವಾರ
★ ಭಕ್ತ ಜನಾ ★
ಪಾತ್ರ:- ನಾಗಯ್ಯ, ಶಾಂತ ಕುಮಾರಿ, ಹೊನ್ನಪ್ಪ ಭಾಗವತರ್ ಇದೂ ಅಲ್ಲದೆ ಪಂಡಿತ ನೆಹ್ರೂರವರು ಮೈಸೂರಿಗೆ ಭೇಟಿ ಇತ್ತಾಗ ತೆಗೆದ ಚಿತ್ರವನ್ನೂ ಪ್ರದರ್ಶಿಸಲಾಗುವ...

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೧೮-೯-೪೮ [ಸಂಚಿಕೆ ೭೮

ನೈಜಾಮರ ಶರಣಾಗತಿ

ಕದನ ನಿಲ್ಲಿಸಲು ಆಜ್ಞೆ

ರಜಾಕರರನ್ನು ವಿಸರ್ಜಿಸಲು ಸಮ್ಮತಿ

ಸಂಸ್ಥಾನದಲ್ಲಿ ಭಾರತ ಸೈನ್ಯ ಇಡಲು ಒಪ್ಪಿಗೆ

ಲಾಯಕ್ ಅಲಿಯವರ ಮಂತ್ರಿ ಮಂಡಲದ ರಾಜೀನಾಮೆ

ಕಾಂಗ್ರೆಸ್ ಅಧ್ಯಕ್ಷರ ಬಿಡುಗಡೆ

ಕೌಂಟ್ ಬರ್ನಡಾಟರ ಘೋರ ಕೊಲೆ

ಕಳೆದ ೧೩ ನೇ ತಾರೀಕ ಹೈದರಾಬಾದಿನಮೇಲೆ ಆರಂಭವಾದ ಭಾರತದ ಪೊಲೀಸ್ ಕಾರ್ಯಾಚರಣೆಯು ಒಂದು ಘಟ್ಟವನ್ನು ಮುಟ್ಟಿ ಹೈದರಾಬಾದಿನಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಸ್ಥಾಪಿಸಲು, ನೈಜಾಮರು ಶರಣಾಗತರಾಗಿ ಕದನ ನಿಲ್ಲಿಸಬೇಕೆಂದು ತಮ್ಮ ಸೈನಿಕರಿಗೆ ನಿನ್ನೆ ಸಂಜೆ ೫ ಗಂಟೆಗೆ ಆಜ್ಞೆ ಮಾಡಿರುತ್ತಾರೆ

ಹೈದರಾಬಾದಿನಲ್ಲಿರುವ ಭಾರತದ ಏಜಂಟ್ ಜನರಲ್ ಶ್ರೀ॥ ಕೆ. ಎಂ. ಮುನ್ಷಿಯವರನ್ನು ನೈಜಾಮರು ಮೊನ್ನೆ ದಿನ ಆಹ್ವಾನಿಸಿ ಭಾರತದೊಡನೆ ಸೌಹಾರ್ದಯುತವಾದ ಒಪ್ಪಂದಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿದರು. ಈ ಅಂಶವನ್ನು ಭಾರತದ ಗವರ್ನರ್ ಜನರಲ್ಲರಿಗೂ ತಿಳಿಸಿ ಹೈದರಾಬಾದಿನಲ್ಲಿ ಕದನ ನಿಲ್ಲಿಸುವಂತೆ ಅವರು ನಿನ್ನೆ ಆಜ್ಞೆ ಮಾಡಿದರು. ರಾಜಾಜಿಯವರಿಗೆ ನೈಜಾಮರು ಒಂದು ಪತ್ರವನ್ನು ಬರೆದು ತಾವು ಈ ಮೊದಲೇ ಹೈದರಾಬಾದಿನಲ್ಲಿ ನಡೆದ ದುರ್ಘಟನೆಗಳನ್ನು ತಡೆಗಟ್ಟದುದಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದಾರೆ.

ಸಿಕಂದರಾಬಾದ್, ಬೊಲಾರಂ ಮತ್ತು ಬಾಲ್ಗಾಗಳಲ್ಲಿ ಭಾರತ ಸೈನ್ಯಗಳನ್ನು ಇಡಲು ಅವರು ಸಮ್ಮತಿಸಿದ್ದಾರೆ. ಹೈದರಾಬಾದಿನ ರಂಜಕೀಯವನ್ನು ನೈಜಾಮರೇ ಸ್ವತಃ ತಮ್ಮ ಅಧೀನಕ್ಕೆ ತೆಗೆದುಕೊಂಡು ರಜಾಕಾರ್ ಸೈನ್ಯವನ್ನು ರದ್ದುಗೊಳಿಸಿ, ಮೀರ್ ಲಾಯಕಾಲಿ ಮಂತ್ರಿಮಂಡಲವನ್ನು ವಜಾಮಾಡಲು ಅವರು ಸಮ್ಮತಿಸಿದ್ದಾರೆ. ವಿಶ್ವಭದ್ರತಾ ಸಮಿತಿಯು ಮುಂದೆ ತರಲಾಗಿದ್ದ ಹೈದರಾಬಾದಿನ ಚರ್ಚೆಯನ್ನು ಸಹ ವಾಪಸು ತೆಗೆದುಕೊಳ್ಳಬೇಕೆಂದು ಸೂಚನೆ ಇತ್ತಿದ್ದಾರೆ.

ಹೈದರಾಬಾದ್ ಕಾಂಗ್ರೆಸ್ಸಿನ ಮೇಲೆ ಇದ್ದ ಎಲ್ಲ ಪ್ರತಿಬಂಧಕಾಜ್ಞೆಗಳನ್ನು ರದ್ದುಗೊಳಿಸಲಾಗುವುದೆಂದೂ, ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರವರನ್ನು ಬಿಡುಗಡೆಮಾಡ ವೈಜಾಗಿಯ ಆ ನೈಜಾಮರು ಸಮುತಿಸಿದ್ದಾರೆ. ಈ ಬಗ್ಗೆ ನೈಜಾಮರೂ ಮತ್ತು ಶ್ರೀ॥ ಕೆ ಎಂ. ಮುನ್ಷಿಯವರೂ ನಿನ್ನೆರಾತ್ರಿ ರೇಡಿಯೋ ಭಾಷಣವನ್ನು ಮಾಡಿದರು.

ತಾತ್ಕಾಲಿಕ ಆಡಳಿತ ಮಂಡಳಿಯ ಸ್ಥಾಪನೆ

ಮೀರ್ ಲಾಯಕಾಲಿ ಮಂತ್ರಿ ಮಂಡಳವು ರಾಜೀನಾಮೆ ಕೊಟ್ಟಿದೆ. ನೈಜಾಮರು ಅದನ್ನು ಅಂಗೀಕರಿಸಿದ್ದಾರೆ. ಸಂಸ್ಥಾನದ ಆಡಳಿತವನ್ನು ನಡೆಸಲು ಒಂದು ತಾತ್ಕಾಲಿಕ ಮಂತ್ರಿ ಮಂಡಳವನ್ನು ರಚಿಸಲು ನೈಜಾಮರು ಆಜ್ಞೆ ಮಾಡಿದ್ದಾರೆ. ಈ ತಾತ್ಕಾಲಿಕ ಮಂತ್ರಿ ಮಂಡಲಿಯಲ್ಲಿ ಶ್ರೀಗಳಾದ ಪನ್ನಾಲಾಲ್, ರಾಮಾಚಾರ್, ಜ॥ ಎಡ್ರೂಸ್, ಅಬ್ದುಲ್ ಹಕ್, ಮತ್ತು ಬೀರಾರಿನ ರಾಜಕುಮಾರರ — ಇವರುಗಳು ಸದಸ್ಯರಾಗಿರುವರು. ಮುಂದೆ ಸಂಸ್ಥಾನದ ಆಡಳಿತದ ಬಗ್ಗೆ ಸರ್ ಮಿರ್ಜಾ, ನವಾಬ್ ಜಾಯಿನ್ ಯಾರ್ ಜಂಗ್ ಮತ್ತು ಶ್ರೀ॥ ಅಲಾಮೆಲು ಅಯ್ಯಂಗಾರ್ ಇವರುಗಳ ಸಲಹೆಯನ್ನು ಪಡೆಯಲಾಗುವುದೆಂದು ನೈಜಾಮರು ತಿಳಿಸಿರುತ್ತಾರೆ

ಈ ದಿನ ಸಿಕಂದರಾಬಾದಿನಲ್ಲಿ ಶ್ರೀ ಕೆ. ಎಂ. ಮುನ್ಷಿ, ಜನರಲ್ ಎಡ್ರೂಸ್ ಮತ್ತು ಬೀರಾರಿನ ರಾಜಕುಮಾರರುಗಳು ಭಾರತ ಸೈನ್ಯಗಳಿಗೆ ಸ್ವಾಗತ ನೀಡುವರು.

ನಾಳೆಯ ದಿವಸ ಹೈದರಾಬಾದ್ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಸ್ಥಾನದ ಎಲ್ಲಾ ಕೈಸ್ತ್ರರೂ ಆಚರಿಸಬೇಕೆಂದು ಬಿಡುಗಡೆಯಾಗಿರುವ ಕೈಸ್ತ ಪಾದ್ರಿಗಳು ಮನವಿ ಮಾಡಿದ್ದಾರೆ.

ರಕ್ತ ಪಾತವಿಲ್ಲದೆ ಹೈದರಾಬಾದಿನಲ್ಲಿ ಶಾಂತಿ ನೆಲೆಸುವಂತೆ ಮಾಡಿದುದಕ್ಕಾಗಿ ದೇಶ ವಿದೇಶಗಳ ಅನೇಕ ನಾಯಕರುಗಳು ಭಾರತ ಸರ್ಕಾರವನ್ನೂ ಮತ್ತು ನೈಜಾಮರನ್ನೂ ಅಭಿನಂದಿಸಿದ್ದಾರೆ. ಸ॥ ಪಟೇಲರೂ ಮತ್ತು ಸ॥ ಬಲದೇವ ಸಿಂಗರೂ ಭಾರತ ಸೈನಿಕರ ಕಾರ್ಯಾಚರಣೆಯನ್ನು ಮೆಚ್ಚಿ ಜನರಲ್ ರಾಜೇಂದ್ರ ಸಿಂಗರನ್ನು ಅಭಿನಂದಿಸಿದ್ದಾರೆ

ಹೈದರಾಬಾದಿನೊಡನೆ ಅಂಚೆ, ತಂತಿ, ರೈಲು ಮತ್ತು ಟೆಲಿಫೋನ್ ಸಂಬಂಧಗಳು ಮತ್ತೆ ಆರಂಭವಾಗಿವೆ

ಈ ದಿನ ರಾತ್ರಿ ೮-೩೦ ಗಂಟೆಗೆ ಪಂಡಿತ ನೆಹರೂರವರು ದೆಹಲಿಯಿಂದ ರೇಡಿಯೋ ಭಾಷಣ ಮಾಡುವರು.

ಸಮಾಲಿಗಳ ಮುಷ್ಕರ ಮುಕ್ತಾಯ

ಮೈಸೂರು ೧೮ ... ಯಿಂದ ಪ್ರಾರಂಭವಾದ ಜಾತ... ಮುಷ್ಕರವು ಇಂದು ಮುಕ್ತಾಯ...

...ಸಭೆಯ ವಿಶೇಷ ಅಧಿವೇಶನವು ...ಸಂಜೆ ನಡೆದು ಜಾಡಮಾಲಿಗಳ ...೧೫ ರಿಂದ ೧೮ ರೂ.ಗೆ ಹೆಚ್ಚಿ...ದೂ, ಅದನ್ನು ಈ ವರ್ಷದ ಜನ...ದ ಜಾರಿಗೆ ತರಬೇಕೆಂದೂ ತೀ...ಲಾಯಿತು. ಕುಟ್ಟಿ ಭತ್ಯವನ್ನು ...ಸಾಧ್ಯವಿಲ್ಲ. ಪ್ರತಿ ಜಾಡಮಾ...ಗಳಿಗೆ ೨ ದಿನ ಕ್ಯಾಷುಯಲ್ ...ವರ್ಷ ಒಂದು ತಿಂಗಳ ಪಾಯಿಲೆ ...ಣಿಯರಿಗೆ ೮ ವಾರ ರಜಾ ಪ್ರ...ಗೆಂಟ್‌ನಿಧಿಯು ಶೇ॥ ೮೦ ರಷ್ಟು ...ಪೌರಸಭೆಯಾಲವಾಗಿ ಕೊಡುವು ...ಮೊದಲಾದ ಸಲಹೆಗಳನ್ನು ಅಂ...ಲಾಯಿತು.

...ಂಡ ಪರತ್ತುಗಳಿಗೆ ಒಪ್ಪಿ ಅವರು ...ದಿನ ಮಧ್ಯಾಹ್ನ ೧೨ ಗಂಟೆಗೆ ಕ...ಗಳಿಗೆ ಹಾಜರಾದರು.

ಉಪನ್ಯಾಸ

...ವಿಲಾಸ ಮೊಹಲ್ಲಾದಲ್ಲಿನ ... ಶ್ರೀ ...ಶ್ರಮದಲ್ಲಿ ನಾಳೆ ಸಂಜೆ ೬ಗಂ... ಸೋಮಸುಂದರಾನಂದಜೀಯವರ ...ನ ವಿಷಯವಾಗಿ ಭಾಷಣ ...

ಹರಿಕಥಾ ಕೀರ್ತನೆ

... ಕಬೀರ್ ರಸ್ತೆಯಲ್ಲಿರುವ ...ರಂಗಸ್ವಾಮಿ ದೇವಸ್ಥಾನದಲ್ಲಿ ...೬ ಘಂಟೆಗೆ ಶ್ರೀ ಚನ್ನಬಸವ...ಗಳವರಿಂದ 'ಮೃತ್ಯು ಪರೀಕ್ಷೆ' ...ರ್ತನೆ ನಡೆಯುವುದು.

ಮೊಪ್ಲೆಯ ಪ್ರದೇಶಗಳಲ್ಲಿ ಗಲಭೆ ಹೆಚ್ಚಾಗಿದೆ

...ಮೊಹಲ್ಲಾ ಮಾರ್ಕೆಟ್ ಹಿಂ...ನೇಕ ಪ್ರದೇಶಗಳಲ್ಲಿ ಬೀದಿ ಮ...ರಗಳ ಶೇಖರಣೆಯಾಗಿ ಅನಾ...ಕಾರಣವಾಗಿದೆ. ...ಎಂಜಲೆಲೆಗಳು ಬೀದಿಗಳಲ್ಲಿ ...ರಸ್ತೆಗಳಲ್ಲಿ ತಿರುಗಾಡಲು ...ಯಾಗಿದೆ. ಪೌರಸಭೆಯವರು ಇ...ನ ಕೊಟ್ಟು ತಕ್ಕ ಏರ್ಪಾಡು ...ಕೆಂದು ಅಲ್ಲಿನ ನಿವಾಸಿಗಳೊಬ್ಬ...ಸಿರುತ್ತಾರೆ.

...ತ್ಯೋದಯ ಪತ್ರಿಕೆಗೆ ನಿಷೇಧ

...ನಲ್ಲಿ ಶ್ರೀ ಟಿ ಕೇಶವಪ್ಪನವರ ...ತ್ವದಲ್ಲಿ ಪ್ರಕಟವಾಗುತ್ತಿದ್ದ ...ದಯ" ಎಂಬ ದ್ವಿವಾರ ಪ...ಕೆಯ ಮೇಲೆ ಸರ್ಕಾರದವರು ...ಯನ್ನು ಹಾಕಿರುತ್ತಾರೆ ...ನೇ ತಾ॥ ಸಂಚಿಕೆಯಲ್ಲಿ ಪ್ರಕ...ಪ್ರಜಾ ಪ್ರಭುತ್ವದ ದಹನಕ್ಕಾಗಿ ...ನಾಯಕರ ಒಳಸಂಚು" ಮ...ನ ಪೊಲೀಸರ ದಬ್ಬಾಳಿಕೆ ಬಗ್ಗೆ ...ಲೇಖನಗಳು ಆಕ್ಷೇಪಕರವಾ...ಸರ್ಕಾರದವರು ಭಾವಿಸಿ ಮೇ...ಕ್ರಮ ತೆಗೆದುಕೊಂಡಿದ್ದಾರೆ. ...ದಕರಾದ ಶ್ರೀ ಟಿ ಕೇಶವಪ್ಪ...ವನ್ನಗಿರಿ ಮೂಡಲಾಗಿದೆ.

ಕೌಂಟ್ ಬರ್ನಡಾಟರ ಕೊಲೆ

ಪ್ಯಾಲಸ್ಟೈನಿನ ಶಾಂತಿ ಸ್ಥಾಪನಾ ಮುಖ್ಯಸ್ಥರಾಗಿದ್ದ ಕೌಂಟ್ ಬರ್ನಡಾಟರವರನ್ನು ನಿನ್ನೆ ರಾತ್ರಿ ಗುಂಡು ಹೊಡೆದು ಕೊಲ್ಲಲಾಯಿತೆಂದು ಸುದ್ದಿ ಬಂದಿದೆ. ಜೆರೂಸಲೆಮ್ಮಿನ ಸ್ಟರ್ನ್ ಗ್ಯಾಂಗಿಗೆ ಸೇರಿದ ನಾಲ್ಕು ಮಂದಿ ಯೆಹೂದ್ಯರು ಒಂದು ಜೀಪ್ ಗಾಡಿಯಲ್ಲಿ ಕುಳಿತು ಬರ್ನಡಾಟ್ಟರು ಹೋಗುತ್ತಿದ್ದ ಮತ್ತೊಂದು ಕಾರನ್ನು ಹಿಂಬಾಲಿಸಿ ಅವರ ಕಾರಿನ ಬಳಿ ಬಂದ ಕೂಡಲೇ ಗುಂಡು ಹಾರಿಸಿದರು. ಇದರ ಪರಿಣಾಮವಾಗಿ ಕಾರಿನಲ್ಲಿ ಕುಳಿತಿದ್ದ ಬರ್ನಡಾಟರೂ ಮತ್ತು ಪ್ಯಾಲಸ್ಟೈನ್ ಮಧ್ಯಸ್ಥಿಕೆ ಸಮಿತಿಯ ಫ್ರಾನ್ಸಿನ ಸದಸ್ಯರಾದ ಮಿ॥ ಸೆರೋ ಎಂಬುವರೂ ಮೃತಪಟ್ಟರು. ಈ ಸಂಬಂಧದಲ್ಲಿ ವಿಶ್ವ ಸಂಸ್ಥೆಯ ಜನರಲ್ ಕಾರ್ಯದರ್ಶಿ ಟ್ರಿಗ್ವಿಲೀಯವರು ಪ್ಯಾಲಸ್ಟೈನಿಗೆ ಬೇರೆ ... ವರಿಂದೂ ಹೇಳಲಾಗಿದೆ

ಕೆ. ಸಿ. ರೆಡ್ಡಿಯವರ ವಿಮಾನಕ್ಕೆ ಯಂತ್ರ ತೊಂದರೆ

ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿ, ಮದರಾಸಿನ ಪ್ರಧಾನಿ ಶ್ರೀ ಪಿ ರಾಮಸ್ವಾಮಿ ರೆಡ್ಡಿ ... ಮತ್ತು ಅರಣ್ಯ ... ಎಸ್ ರಾಜನ್‌ರವರುಗಳು ಮ ... ದಿಂದ ದೆಹಲಿಗೆ ವಿಮಾನ ... ಪ್ರಯಾಣ ಮಾಡುತ್ತಿದ್ದಾಗ ... ಆಕಸ್ಮಿಕವಾಗಿ ಭರತಪುರದಲ್ಲಿ ... ಇಳಿಯಬೇಕಾಯಿತೆಂದು ... ರೈಲಿನಲ್ಲಿ ದೆಹಲಿಗೆ ಪ್ರಯಾಣ ... ರೆಂದೂ, ಎಲ್ಲರೂ ಕ್ಷೇಮವಾಗಿ ... ವರದಿಯಾಗಿದೆ.

ಮೈಸೂರು ಮುಖ್ಯ ಸೇನಾನಿಯ ಸಾಹಸ

ಹೈದರಾಬಾದಿನ ಕಾರ್ಯಾಚರಣೆ ಮುಖ್ಯಭಾಗವಹಿಸಿದ್ದ ಮೈಸೂರು ಸೈನಿಕರು ಕಳೆದ ೧೩ ನೇ ತಾ। ... ನಿಜಾಮಾಬಾದನ್ನು ಆಕ್ರಮಿಸಿಕೊಂಡರು. ಅವರ ಮಾರನೇ ದಿನ ... ಭಾರತ ಸೈನ್ಯದ ನಾಲ್ವರನ್ನು ನೈಜಾಮ ಸೈನಿಕರೂ ... ರಜಾಕರರೂ ಸೆರೆಹಿಡಿದ ... ಆಗ ಮೈಸೂರಿನ ... ಸೇನಾನಿ ಬ್ರಿಗೇಡಿಯರ್ ಕಾ... ಪ್ರದೇಶವನ್ನು ಹಿಡಿದು ಮುಂದೆ ... ಗಂಟೆಗಳ ಕಾಲ ಕದನ ನಡೆಸಿ ... ಓಡಿಸಿದರೆಂದು ವರದಿಯಾಗಿದೆ

ಪ್ರಭುದೇವಾ ಟಾಕೀಸ್

20—9—48 ನೇ

ಸೋಮವಾರದಿಂದ

ಪ್ರತಿ ದಿನ 3 ಆಟಗಳು

... ಟಾಕೀಸಿನವರ

ಶಕುಂತಲ

(ತಮಿಳು)

... ಸುಬ್ಬಲಕ್ಷ್ಮಿ, ಬಾಲ ...

... ಕೃಷ್ಣನ್, ಟಿ. ಎ ...

... ಮದುರೈರಾಜ್

ಬೆಂಗಳೂರಿನಲ್ಲಿ ಬ್ರಿಟಿಷ್ ಫುಟ್‌ಬಾಲ್ ಪೋಲಿಸ ಕಛೇರಿ

ಲಂಡನ್ನಿನ ಫುಟ್‌ಬಾಲ್ ಪೂಲಿನ ಭಾರತದ ಕಛೇರಿಯನ್ನು ಬೆಂಗಳೂರಿನಲ್ಲಿ ತೆರೆಯಲು ಅವರ ವ್ಯವಸ್ಥಾಪಕರಾದ ವಿ ॥ ಅರ್ಥರ್ ಓಕರ್ಲ್ಯಾಂಡರು ಕಳೆದ ತಾ ನೇ ತಾ॥ ಲಂಡನ್ನಿನಿಂದ ಪ್ರಯಾಣ ಬೆಳೆಸಿದರು. ಬ್ರಿಟನ್ನಿನಲ್ಲಿ ನಡೆಯುವ ಫುಟ್‌ಬಾಲ್ ಪಂದ್ಯಗಳ, ಅದ ಕೂಡಲೇ ಫಲಿತಾಂಶಗಳನ್ನು ಬೆಂಗಳೂರು ಕಛೇರಿಗೆ ತಿಳಿಸಲಾಗುವುದೆಂದೂ, ಮತ್ತು ಡಿವಿಡೆಂಡುಗಳನ್ನು ಭಾರತದ ನಾಣ್ಯದಲ್ಲೇ ಕೊಡಲಾಗುವುದೆಂದೂ ಅವರು ತಿಳಿಸುತ್ತಾರೆ. ಭಾರತ ಸರ್ಕಾರದವರು ಅದಕ್ಕೆ ಅನುಮತಿ ಕೊಟ್ಟಿರುವರೆಂದೂ, ಆದಾಯದಲ್ಲಿ ಶೇಕಡ ೨೦ ರಷ್ಟು ತೆರಿಗೆಯನ್ನು ಸರ್ಕಾರಕ್ಕೆ ಕೊಡಲಾಗುವುದೆಂದೂ ತಿಳಿಸಲಾಗಿದೆ.

ಮದರಾಸಿನಲ್ಲಿ ಮೈಸೂರು ಆಯುರ್ವೇದ ಮತ್ತು ಯುನಾನಿ ಪದವೀಧರರಿಗೆ ಮಾನ್ಯ

ಮದರಾಸ ಪ್ರಾಂತ್ಯದಲ್ಲಿ ಆಯುರ್ವೇದ ವೈದ್ಯರುಗಳನ್ನು ರಿಜಿಸ್ಟರ್ ಮಾಡುವ ಬಗ್ಗೆ ಮೈಸೂರಿನ ಆಯುರ್ವೇದ ಮತ್ತು ಯುನಾನಿ ಡಿಪ್ಲೋಮಾ ಪದವೀಧರರನ್ನು ಅಂಗೀಕರಿಸಬಹುದೆಂದು ಇಂಡಿಯನ್ ಮೆಡಿಸನ್ನಿನ ಕೇಂದ್ರ ಸಂಸ್ಥೆಯು ಸಲಹೆಯನ್ನು ಮದರಾಸು ಸರ್ಕಾರದವರು ಒಪ್ಪಿದ್ದಾರೆ.

ಗಾಂಧಿ ಸ್ಮಾರಕ ನಿಧಿಗೆ ಬ್ರಿ॥ ಬ್ಯಾಂಕುಗಳ ಕಾಣಿಕೆ

ಭಾರತದಲ್ಲಿರುವ ಬ್ರಿಟಿಷ್ ಬ್ಯಾಂಕುಗಳು ಮಹಾತ್ಮಾ ಗಾಂಧಿ ಸ್ಮಾರಕ ನಿಧಿಗೆ ೫ ಲಕ್ಷ ರೂ ಕಾಣಿಕೆ ಸಲ್ಲಿಸಿವೆ

ನಿಮ್ಮ ಮೈ ಬೊಕಮಲ್ಲಿನ ಕೆ
ಹೊಳೆಯುವೇಕೆ ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಅಕ್ಕಿ ಬೆಲೆ ಇಳಿಯಬೇಕು

ನೈಸೂರ ದೇಶದ ಆಡಳಿತದ ಅಧಿಕಾರಿಗಳ ಅಭಿವೃದ್ಧಿ ಸಭೆಯ ಕಾರ್ಯಕಾರಿ ಸಮಿತಿಯ ಸಭೆಯು ಕಳೆದ ಭಾನುವಾರ ಅಧಿಕಾರಿಗಳ ಪುರದಲ್ಲಿ ನಡೆಯಿತು. ರೇಷನ್ ಕಡಿತ ಮಾಡಿದ್ದರಿಂದ ಉದ್ಭವವಾದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಅಕ್ಕಿಯನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳಲಾಯಿತು. ... ಸುದ ನಿರ್ಣಯವನ್ನು ಮಾಡಲಾಯಿತು.

ಓ ಯ ... ಜನಾಬ್ ಅಬ್ದುಲ್ ... ಸ್ವಾಗತ ... ಸಾರ್ವಜನಿಕ ರಕ್ಷಣಾ ... ದಸ್ತಗಿರಿ ಮಾಡಲಾಯಿತು.

॥ ಶ್ರೀ ॥

ಗಣೇಶಾ ಟಾಕೀಸ್

17—9—48 ರಿಂದ
ಪ್ರತಿ ದಿನ 3 ಆಟಗಳು

ಶಿವಕವಿ

(ತಮಿಳು)
(ಹೊಸ ಪ್ರಿಂಟ್)
—ಮುಖ್ಯಪಾತ್ರ—
"ತ್ಯಾಗರಾಜ ಭಾಗವತರ್" ರಾಜಕುಮಾರಿ
"ಕೃಷ್ಣನ್" "ಮಧುರಂ"
ಬೆಳಗಿನ ಆಟಗಳು
17—9—48 ರಿಂದ
3 ದಿನಗಳು ಮಾತ್ರ
Grand Double Attraction

The Stranger from Pecos

ದಿ ಸ್ಟ್ರೇಂಜರ್ ಫ್ರಂ ಪೆಕೋಸ್

Westward Bound

(ವೆಸ್ಟ್‌ವರ್ಡ್ ಬೌಂಡ್)

Edited printed and published by A. R. Nagarajan at the Sadhvi Press D Subbaiah Road Mysore

ಸಮುದಾಯದ ... ಕೊಡಬೇಕು

ಚಿಕ್ಕಮಗಳೂರು ಜಿಲ್ಲೆಯ ಪೋಲೀಸರ ... ಸ್ಟೇಟ್ ಕಾಂಗ್ರೆಸ್ ಸೋಷಿಯಲಿಸ್ಟ್ ಕಾರ್ಯಕರ್ತರಿಂದ ಶ್ರೀನಿವಾಸ ಶರ್ಮ ಮತ್ತು ... ಜನ ನಡೆದ ... ಭಾರತ ಸರ್ಕಾರ ... ಸಂದರ್ಭದಲ್ಲಿ ... ನಡೆದ ... ಬಗ್ಗೆ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕೆಂದು ಮೈಸೂರು ... ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ... ಸರ್ಕಾರದವರನ್ನು ಕೋರಿರುತ್ತಾರೆ.

ಮೈಸೂರು ... ಬೊಹಲ್ಲಾ ... ಎಕ್ಸ್ಟೆನ್ಷನ್ ... ಗಳಿಗಾಗಿ ... ಮಾರ್ಕೆಟ್ ...

10 ದೊಡ್ಡ ಸೈಟುಗಳ
ಬಹಿರಂಗ ಹರಾಜು
ತಾ॥ 19-9-48ನೇ ಭಾನುವಾರ
ಬೆಳಗ್ಗೆ 10 ಕ್ಕೆ
ಹರಾಜು, ದ ... ವಿವರಗಳಿಗೆ ಬರೆಯಿರಿ
ಸಿಟಿ ಇಂಜಿನೀರಿಂಗ್ ಕೋ,
ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.

ANNOUNCEMENT

We are glad to inform the public that we have been appointed as Sole Agents for Mysore and Hyderabad States, Karnatak and Madras Presidency for the products of **Mysore Laboratories & Jeevandhar Depot, Mysore**

M/s BHARGAVA AGENCIES,
207-1 Hardinge Road, Basavangudi P. O. Bangalore City.

Sub Agents for Mysore, Mandya & Hassan Districts

M/s Maharashtra Agencies, 1425, Krishnamurthipuram, Mysore

Use "MYSORE NEEM"

ಅಪೆರಾ ಟಾಕೀ...

19—9—48 ರಿಂದ
ಪ್ರತಿ ದಿನ 3 ಆಟಗಳು

ಚಂಚು ಲ...

ಪಾತ್ರ:- ವಿ. ನಾಗಯ್ಯ, ಕಮಲಾ ... ನಾರಾಯಣರಾವ್

Morning Show
From 16—9—

JUAREZ

with: Paul Mun...

ಶ್ರೀ ಸರಸ್ವತೀ ಸಂ...
ಸಮಾಜ (ರಿ) ಮೈಸೂರು

19—9—48 ನೇ
ಭಾನುವಾರ ಸಂಜೆ 5-30
ಕೋ ಆಪರೇಟಿವ್ ಸೋ...
ಕಲ್ಲಿಕೋಟೆಯ ಶ್ರೀಮ...
ಶಾರದ ಅನಂತರಾವ...
ಮತ್ತು ಪಾರ್ಟಿಯವ...
ಸಂಗೀತ ಕಛೇರಿಯು ನಡೆಯ...
— ಮುಂಚಿತವಾಗಿ ಟಿಕೆಟ್...
(a) 1 ರೂ (b) 0—8—
...

ಪ್ರಕಟಣೆ

ವುಲ್ಲನ್ ಸ್ವೆಟರುಗಳು, ... ಳು, ಶಾಲುಗಳು ನಾನಾ ... ವಾಯಿಲ್, ಚೀಟಿ ಬ... ಮಲ್ಲು ವಗೈರೆಗಳಿಗೆ
ವಿಜಯಲಕ್ಷ್ಮೀ ವಿಲ...
ಕಲವಾಲ ರೋಡ್, ಮೈಸ...

RAJKAMAL TAL...
MYSORE
from 18-9-48 for 7 da...
Daily 3 Shows

Phantom Ri...

(ಫ್ಯಾಂಟಂ ರೈಡರ್)
[ಸೀರಿಯಲ್]
A Republican Thril...
Serial in 12 Chapt...
With—Robert Ke...
Peggy Stewart

Morning Shows
From 1...
For 4 days only

SUDA...

(In Technicol...
Maria Montez, Jon...
Turhan Bey

ಚಾಮುಂಡೇಶ್ವರೀ ಟಾಕೀಸ್

ಶೀಘ್ರದಲ್ಲಿಯೇ ಬರುತ್ತದೆ!

★ ರಾಜಮುಕ್ತಿ ★

[ತಮಿಳು]
ಮುಖ್ಯಪಾತ್ರ:- ಎಂ. ಕೆ. ತ್ಯಾಗರಾಜ ಭಾಗವತರ್, ಭಾನುಮತಿ
ಮತ್ತು ಇತರ ಪ್ರಮುಖ ನಟನಟಿಯರುಗಳೊಡಗೂಡಿದ ಮಧುರ
ಸಂಗೀತಮಯ ಚಿತ್ರ

ಶ್ರೀ ಗಾಯತ್ರೀ ಟಾಕೀಸ್

17-9-48 ರಿಂದ ಪ್ರತಿ ದಿನ 3 ಆಟಗಳು
20th's ಸೆಂಚುರಿಯವರ ಅಮೋಘ ಚಿತ್ರ

ಅನಾ ಅಂಡ್ ದಿ ಕಿಂಗ್ ಆಫ್ ಸಯಾಂ

(Anna and the King of Siam)

Starring: REX HARRISON and LINDA DARNELL

ಸಂಪುಟ ೭] ಸೋಮವಾರ ೨೦-೯-೪೮ [ಸಂಚಿಕೆ ೬೯

ರಜಾಕರರ ಹಾವಳಿ ★ ಇನ್ನೂ ನಿಂತಿಲ್ಲ ★

[illegible]ಪತಿ ಮಂಗಳಾರತಿಯಲ್ಲಿ ಅಪಘಾತ

ಥಾಣಿಯಲ್ಲಿ ೨೦ ಜನರ ಮರಣ

[illegible]ಬಾಯಿ.ನೆ ಸಂಟಾ ಕ್ರೂಜನಲ್ಲಿ [illegible] ನೇ ತಾ|| ರಾತ್ರಿ ಗಣಪತಿ ಮಂ[illegible] ಉತ್ಸವದ ಸಂಬಂಧದಲ್ಲಿ ಒಂ[illegible]ವಿಯ ಮೇಲೆ ವೇದಿಕೆಯನ್ನು ಹಾ[illegible] ಜನರು ನೃತ್ಯ ಮಾಡುತ್ತಿದ್ದಾಗ [illegible]ಕೆಯು ಮುರಿದು, ೬೦ ಜನರು ಬಾವಿ[illegible] ಬಿದ್ದರೆಂದೂ, ಅದರಿಂದ ನೀರು ಭಾ[illegible] ವೇಲ್ಲಿಟ್ಟಕ್ಕೆ ಬಂದು, ಹೊರಗೂ ಹ[illegible]ದೂ ಸರಿದಿಯಾಗಿದೆ ಈ ಘಟ[illegible]ಲ್ಲಿ ೨೦ ಮಂದಿ ಮಡಿದರೆಂದೂ, ಹಲ[illegible] ರಕ್ಷಿಸಲಾಯಿತೆಂದೂ ಗೊತ್ತಾಗಿದೆ

[illegible]೦೦ ಮಂದಿ ರಜಾಕರರು ಕೈಸೆರೆಯಾಗಿದ್ದಾರೆ

[illegible]ರತ ಸರ್ಕಾರದವರು ಹೈದರಾಬಾದಿ[illegible]ಳೆ ನಡೆಸಿದ ಕಾರ್ಯಾಚರಣೆಯ[illegible]ರ್ಭದಲ್ಲಿ ೧೧೦ ಮಂದಿ ಭಾರತೀಯ[illegible]ರೂ, ೬೦೦ ಜನ ಹೈದರಾಬಾದ್[illegible]ಧರೂ ಮತ್ತು ೧೫೦೦ ಜನ ರಜಾ[illegible] ವೃತಪಟ್ಟು, ೧೧೦೦೦ ಮಂದಿ ರಜಾ[illegible] ಕೈಸೆರೆಯಾಗಿದ್ದಾರೆಂದು ಭಾರತ ಸ[illegible]ರದ ಪ್ರಕಟಣೆಯೊಂದು ತಿಳಿಸಿದೆ

[illegible]ದರಾಬಾದಿನ ಆಡಳಿತ ವ್ಯವಸ್ಥೆ

[illegible]ದರಾಬಾದಿನ ಆಡಳಿತ ನಿರ್ವಹಣೆ [illegible] ಭಾರತ ಸರ್ಕಾರದವರು ತಾತ್ಕಾಲಿಕ [illegible] ಒಬ್ಬ ಮುಖ್ಯಾಧಿಕಾರಿಯನ್ನು ಮ[illegible] ಒಬ್ಬ ಸಹಾಯ ಅಧಿಕಾರಿಯನ್ನೂ ನೇ[illegible]ಸಿರುವರು ಅಲ್ಲಿನ ಇಂಜನಿಯರಿಂ[illegible]ವಿಗೆ ಭಾರತದ ಒಬ್ಬ ಚೀಫ್ ಇಂ[illegible]ಯರನ್ನೂ ಮತ್ತು ಪೋಲೀಸ್ ಇ[illegible]ಗೆ ಒಬ್ಬ ಭಾರತೀಯ ಮಿಲಿಟರಿ ಅಧಿ[illegible]ಯನ್ನ ನೇಮಿಸಲಾಗುವುದೆಂದು ಗೊ[illegible] ತಾತ್ಕಾಲಿಕವಾಗಿ ಸಂಸ್ಥಾನವ[illegible] ಜಿಲ್ಲೆಗಳಾಗಿ ವಿಂಗಡಿಸಿ ಪ್ರತಿ[illegible] ಒಬ್ಬೊಬ್ಬ ಕಲೆಕ್ಟರನ್ನೂ ನೇಮಿ[illegible]ವುದು

[illegible] ಸರ್ಕಾರದ ದುಂದು [illegible]ಚ್ಚದ ಬಗ್ಗೆ ಪರಿಶೀಲನೆ

[illegible]ಗಳಿಂದ ಆದಾಯಗಳನ್ನು [illegible] ವ ತ್ತ ಅಲ್ಲಿ ಪ್ರಚಾರ ಕಾರ್ಯ ನಡೆಸ[illegible] ಅಲಿ ಮಂತ್ರಿಮಂಡಲದವ[illegible]ಸ್ಥಾನದ ಹಣವನ್ನು [illegible] ವೆಚ್ಚ [illegible] ಅವುಗಳನ್ನು ಗುಪ್ತ ನಿಧಿ ಎಂಬ[illegible] ಲೆಕ್ಕ ಬರೆಯಲಾಗುತ್ತಿತ್ತೆಂದೂ, ಇ[illegible] ಭಾರತ ಸರ್ಕಾರದವ[illegible]ಶೀಲನೆ ಮಾಡುವರೆಂದೂ ಹೇಳಲಾಗಿದೆ

ಕಾಶ್ಮೀರ ಕಮಿಷನ್ನಿನ ನಿರ್ಗಮನ

[illegible]ಶ್ಮೀರ ಕಮಿಷನ್ನಿನ ಪೂರ್ವಭಾವಿ ಪ[illegible] ಇದು ಶ್ರೀ ನಗರದಿಂದ [illegible] ಬುಧವಾರ ಯೂ[illegible]ಗೆ ಹೊರಡುವರೆಂದು ಗೊತ್ತಾಗಿದೆ

[illegible] ಕೆಂಪು ವಲ್ಲಿಕುವ [illegible] ಈ ವಶ[illegible] ವೇಳೆ [illegible] ಕರೆಸಿಕೊಳ್ಳುವುದೆಂದು ತಿಳಿ[illegible]ದಿದೆ ಅಮೇರಿಕವು ತನ್ನ ಸೈನ್ಯವ[illegible]ಲ್ಲಿಂದ ವಾಪಸು ಕರೆಸಿಕೊಳ್ಳಲು [illegible] ಸಿರುವುದರಿಂದ ರಷ್ಯವು ಈ [illegible] ದೆ

ಅಕ್ಷರ ಪ್ರಚಾರ ಸಮಿತಿ ಸಭೆ

ಮೈಸೂರು ೨೦

ಅಕ್ಷರ ಪ್ರಚಾರ ಸಮಿತಿಯ ವಾರ್ಷಿಕಾಧಿವೇಶನವು ನಿನ್ನೆ ದಿವಸ ನಡೆದು ಕ್ಲೋಸ್‌ಪೇಟೆಯ ಶ್ರೀ ಟಿ ಮಾದೇಗೌಡರು ಅಧ್ಯಕ್ಷರಾಗಿಯೂ, ಮಿ|| ಈಗಲ್ ಟನ್‌ರವರು ಉಪಾಧ್ಯಕ್ಷರು ಮತ್ತು ಖಜಾಂಚಿಗಳಾಗಿ ಹೆಚ್. ವಿ. ಮತ್ತು ಶ್ರೀ ನ. ಭದ್ರಯ್ಯನವರು ಜನರಲ್ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

ಇಂಟರ್‌ಮೀಡಿಯೇಟ್ ಕಾಲೇಜು ಸಂಘ

ಇದೇ ೨೫ ನೇ ತಾರೀಖ ನಡೆಯಲಿರುವ ಮೈಸೂರು ಇಂಟರ್‌ಮೀಡಿಯೆಟ್ ಕಾಲೇಜ್ ಸಂಘದ ಆರಂಭೋತ್ಸವ ಸಂದರ್ಭದಲ್ಲಿ ರಾಜಸಭಾಭೂಷಣ ಸರ್ ಸಿ. ವಿ. ರಾಮನ್‌ರವರ ಭಾಷಣ ಮಾಡುವರು

ನಿಜಾಮರ ಫರ್ಮಾನ್

ನಿಜಾಮರು ನಿನ್ನೆ [illegible] ಒಂದು ಫರ್ಮಾನನ್ನು ಹೊರಡಿಸಿ ಹೈದರಾಬಾದಿನಲ್ಲಿ ಈಗ ಸ್ಥಾಪಿತವಾಗಿರುವ ಮಿಲಿಟರಿ ಸರ್ಕಾರಕ್ಕೆ ಅಲ್ಲಿನ ಸರ್ಕಾರಿ ನೌಕರರೂ ಮತ್ತು ಸಾರ್ವಜನಿಕರೂ ವಿಧೇಯರಾಗಿ ವರ್ತಿಸಿ ಸಹಕರಿಸಬೇಕೆಂದು ಸೂಚಿಸಿದ್ದಾರೆ

ನಿಜಾಮರ ಸಿಬ್ಬಂದಿಯನ್ನು ತೆಗೆದುಹಾಕಿಲ್ಲ

ನಿಜಾಮರ ಅರಮನೆ ಕಾವಲಿದ್ದವರ ಸ್ವಂತ ಸಿಬ್ಬಂದಿಯವರನ್ನೂ ಮತ್ತು ಅವರ ಅಂಗರಕ್ಷಕರನ್ನೂ ತೆಗೆದುಹಾಕಲಾಗಿದೆಯೆಂದು ವರದಿಯಾಗಿರುವ ಅಂಶವು ಸುಳ್ಳೆಂದು ಜನರಲ್ ರಾಜೇಂದ್ರಸಿಂಗ್‌ರವರು ತಿಳಿಸಿದ್ದಾರೆ. ಅಲ್ಲದೆ ಸಂಸ್ಥಾನಾಧೀಶರಾದ ನಿಜಾಮರ ಘನತೆ ಗೌರವಗಳಿಗೆ ಯಾವ ಚ್ಯುತಿಯೂ ಇರುವುದಿಲ್ಲವೆಂದೂ ಅವರು ತಿಳಿಸಿದರು.

ರಜಾಕರರು ಯುದ್ಧಕೈದಿಗಳಲ್ಲ

ಜನರಲ್ ರಾಜೇಂದ್ರಸಿಂಗ್‌ರವರು ಒಂದು ಪತ್ರಿಕಾ ಗೋಷ್ಠಿಯಲ್ಲಿ ಹೈದರಾಬಾದಿನಲ್ಲಿ ನಡೆದ [illegible] ಘಟನೆಗಳಲ್ಲಿ [illegible] ವಿಶೇಷ ಕಾರಣ, ತಾನು [illegible] ರನ್ನು ಕೈಗೊಳ್ಳಬೇಕೆ ಬಗ್ಗೆ ಪರಿಶೀಲಿಸಲಾಗುತ್ತಿದೆಯೆಂದೂ ಹೇಳಿದರು. ಅಲ್ಲದೆ ಕೈಸೆರೆಸಿಕ್ಕಿದ ರಜಾಕರರಿಗೆ ಮಿಲಿಟರಿ ಖೈದಿಗಳಿಗೆ ಕೊಡತಕ್ಕ ಯಾವ ಸೌಲಭ್ಯಗಳನ್ನೂ ಕೊಡಲಾಗುವುದಿಲ್ಲವೆಂದೂ ಹೇಳಿದರು

ಸಿದ್ದಿಕಾಟನ್ನನ ಅನುಯಾಯಿ ಮೇಲೆ ನಿರ್ಬಂಧಾಜ್ಞೆ

ಸಿದ್ದಿಕಾಟನ್ನನ ಅನುಯಾಯಿ ಮಿ|| ಇ ಜೆ ಸ್ಟಾಟರ್ ಎ [illegible] ಬೊಂಬಾಯಿ ನಗರವನ್ನು ಬಿಟ್ಟು ಹೋಗಕೂಡದೆಂದು ಪೋಲೀಸರು ನಿರ್ಬಂಧಿಸಿದ್ದಾರೆ ಆತನು ಕಾಟನ್ನನ ಕೈಗಾರಿಕಾ ಸಂಶೋಧನಾ [illegible] ಡೈರೆಕ್ಟರಾಗಿ ಬಂದಿದ್ದನೆಂದು ಪಾಕಿಸ್ಥಾನಕ್ಕೆ ಹಲವು [illegible] ವಿಮಾನದಲ್ಲಿ [illegible] ಮಾಡಿದ್ದ [illegible] ಕೆಲಸವನ್ನು ನಡೆಸಲು ಬೊಂಬಾಯಿಗೆ ಬಂದಿದ್ದನೆಂದೂ ಹೇಳಲಾಗಿದೆ ಕಾಟನ್ನನಿಗೆ ಸೇರಿದ್ದ [illegible] ಪೋಲೀಸರು ವಶಪಡಿಸಿಕೊಂಡಿರುತ್ತಾರೆ

ಕೋತಿಯನ್ನು ಕೊಂದುದಕ್ಕೆ ಚಿನ್ನದ ಕೋತಿಯ ಅರ್ಪಣೆ

ಹಸ್ಸನಪುರದ ಜೈನ ದೇವಸ್ಥಾನದ ಆವರಣದಲ್ಲಿದ್ದ ಕೋತಿಯೊಂದನ್ನ ಸರ್ಕಾರದ ಅಧಿಕಾರಿಯೊಬ್ಬರು ಗುಂಡಿನಿಂದ ಹೊಡೆದು ಸಾಯಿಸಿದ್ದಕ್ಕಾಗಿ ಪರಿತಾಪವನ್ನು ಸೂಚಿಸಿ [illegible] ಜನಗಳು ಚಿನ್ನದಲ್ಲಿ ಮಾಡಿದ ಕೋತಿಯೊಂದನ್ನ ದೇವಸ್ಥಾನಕ್ಕೆ ಕೊಡಲು ನಿರ್ಧರಿಸಿದ್ದಾರೆ.

ರಜಾಕರರ ಹಾವಳಿ ಇನ್ನೂ ತಪ್ಪಿಲ್ಲ

ಹೈದರಾಬಾದಿನಲ್ಲಿ ರಜಾಕರರು ಇನ್ನೂ ಗುಂಪು ಕಟ್ಟಿಕೊಂಡು ಗಡಿಗ್ರಾಮಗಳ ಮತ್ತು ಹಳ್ಳಿಗಳನ್ನು [illegible] ಹಾವಳಿ ಮಾಡುತ್ತಿದ್ದಾರೆಂದು ಮೇಜರ್ ಜನರಲ್ ಶ್ರೀ ರಾಜೇಂದ್ರ ಸಿಂಗ್‌ಜಿಯವರು ತಿಳಿಸುತ್ತಾರೆ ಸಂಸ್ಥಾನದಲ್ಲಿ ಶಾಂತಿ ಸ್ಥಾಪಿಸಲು ಇನ್ನೂ ಸ್ವಲ್ಪ ಕಾಲ ಬೇಕಾಗುವುದೆಂದೂ, ನಿಜಾಮರ ಸೈನ್ಯಗಳು ಸಂಪೂರ್ಣವಾಗಿ ಶರಣಾಗತವಾಗಿವೆಯೆಂದೂ ಅವರು ಹೇಳಿದ್ದಾರೆ

ಹರಿಕಥೆ

ದಿ [illegible] ಈ ರಾತ್ರಿ ೯-೩೦ ಗಂಟೆಗೆ [illegible] ಶ್ರೀರಾಮ [illegible] ಹರಿಕಥೆ [illegible]

ಡಿ. [illegible] ನಾಳೆ ರಾತ್ರಿ 7 ಘಂಟೆಗೆ [illegible] ಶ್ರೀ [illegible] ಸ್ವಾಮಿಗಳವರಿಂದ [illegible] ಎ [illegible] ನಡೆಯುತ್ತದೆ

ಸ್ವಾತಂತ್ರ್ಯೋದಯ ಪತ್ರಿಕೆಯನ್ನು ನಿಲ್ಲಿಸುದುದಕ್ಕೆ ಖಂಡನೆ

ಪತ್ರಿಕೆಗಳ ಸಂಘದವರ ನಿರ್ಧಾರ

ಸ್ವಂ.ಸು.ಪೋ] ಬೆಂಗಳೂರು ೨೦

ಸಂಸ್ಥಾನದ ವೃತ್ತ ಪತ್ರಿಕೆಗಳ ಮಾಲೀಕರ ಮತ್ತು ಸಂಪಾದಕರ ವಿಶೇಷ ಸಭೆಯು ನಿನ್ನೆ ಶ್ರೀ ಎಂ. ಎಲ್ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಸಭೆಯ ಉದ್ದೇಶವನ್ನು ತಿಳಿಸಿ, ಪತ್ರಿಕೋದ್ಯೋಗಿಗಳ ಘನತೆ ಗೌರವಗಳಿಗೆ ಧಕ್ಕೆ ಬರದಿದೆಯೆಂದೂ, ಎಲ್ಲರೂ ಏಕಮತದಿಂದ ಕೆಲಸಮಾಡಬೇಕೆಂದೂ ಹೇಳಿದರು ಅನಂತರ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು.---

ವೃತ್ತ ಪತ್ರಿಕೆಗಳ ಪ್ರಕಟಣೆಯನ್ನು ನಿಲ್ಲಿಸಲು ಸರ್ಕಾರಕ್ಕೆ ಅಧಿಕಾರವಿಲ್ಲದುದರಿಂದ 'ಸ್ವಾತಂತ್ರ್ಯೋದಯ' ಪತ್ರಿಕೆಯನ್ನು ಸರ್ಕಾರದವರು ನಿಲ್ಲಿಸಿರುವುದನ್ನು ಖಂಡಿಸುವುದಲ್ಲದೆ, ಆ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುತ್ತದೆ ಮತ್ತು ಸಂಪಾದಕರಾದ ಶ್ರೀ ಪಿ ಶೇಷಪ್ಪನವರನ್ನು ಬಿಡುಗಡೆ ಮಾಡಬೇಕೆಂದೂ ಒತ್ತಾಯಪಡಿಸುತ್ತದೆ

ನ್ಯಾಯಾಸ್ಥಾನಗಳಲ್ಲಿಯೂ ಮತ್ತು ಇತರ ರೀತಿಗಳಲ್ಲಿಯೂ ಪತ್ರಿಕೆಗಳ ಮೇಲೆ ಇತ್ತೀಚಿಗೆ ಸರ್ಕಾರದವರು ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವುದು ಆತಂಕವನ್ನುಂಟುಮಾಡಿದೆ ಸರ್ಕಾರದವರು ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು ಸಂಘದ ಸ್ಟಾಂಡಿಂಗ್ ಸಮಿತಿಯ ಸಲಹೆಯನ್ನು ಪಡೆಯಬೇಕೆಂದು ಸೂಚಿಸುತ್ತದೆ.

ವೃತ್ತ ಪತ್ರಿಕೆಗಳ ಸ್ವಾತಂತ್ರ್ಯ ಮತ್ತು ದಿನಚರಿ ಕೆಲಸ ಕಾರ್ಯಗಳಿಗೂ ಧಕ್ಕೆ ತರುವಂತಹ ಸಾರ್ವಜನಿಕ ಶಿಸ್ತುಪಾಲನೆ ಶಾಸನಾಸಿನಲ್ಲಿರುವ ೧೧, ೧೨ ಮತ್ತು ೧೩ ನೇ ಕಲಂಗಳನ್ನೂ ಮತ್ತು ವಿಶೇಷ ಪತ್ರಿಕಾ ಶಾಸನದ [illegible] ನೇ ವಿಧಿಯನ್ನು ತೆಗೆದುಹಾಕಬೇಕೆಂದೂ ಮತ್ತು ಮಸೂದೆ ತಿದ್ದುಪಡಿ ವೃತ್ತ ಪತ್ರಿಕೆಗಳಿಗೆ ಅನ್ವಯಿಸಕೂಡದೆಂದೂ ಸೂಚಿಸಲಾಯಿತು.

ವಿದ್ಯಾಪೀಠಕ್ಕೆ ಮುಖ್ಯ ಮಂತ್ರಿಗಳ ಭೇಟಿ

ನ[illegible]ನಗೂಡಿನ ಬಳಿ ಸಂಸ್ಥಾನದವರು ಸ್ಥಾಪಿಸಿರುವ [illegible] ವಿದ್ಯಾಪೀಠಕ್ಕೆ ಕಳೆದ ೧೩ ನೇ ತಾ|| ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಭೇಟಿ ಇತ್ತು, ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು ವಿದ್ಯಾಪೀಠದಲ್ಲಿ ಈಗ ೨೫ ಜನ ವಿದ್ಯಾರ್ಥಿಗಳಿದ್ದಾರೆ ಇನ್ನೂ [illegible] ಸೇರಿ [illegible] ಇನ್ನು ಬರಬೇಕಾಗಿರುವ ವಿದ್ಯಾರ್ಥಿಗಳು ಇದೇ ೨೦ ನೇ ತಾ|| ಒಳಗಾಗಿ [illegible] ಮುಂದಿನ [illegible] ಸೇರಿಸಲಾಗುವುದೆಂದು ತಿಳಿಸಲಾಗಿದೆ

ಪ್ರಿವೆಂಷ ಅಧಿಕಾರಿಯ ಬಂಧನ

[illegible] ಪೋಲೀಸರು [illegible] ತಪ್ಪಿಸಿಕೊಂಡು ಓಡುತ್ತಿದ್ದ ಹೈದರಾಬಾದಿನ ಬೀದರ್ ಅಧಿಕಾರಿಯೊಬ್ಬನನ್ನು ಬಂಧಿಸಲಾಗಿದೆ.

ಸತ್ಪಾತ್ರರ ಕೂಟ

ಮೈಸೂರು ೨೦

ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರು, ಆಕಾಶವಾಣಿ ಡೈರೆಕ್ಟರಾದ ಶ್ರೀ ಬಿ ನಾರಾಯಣಸ್ವಾಮಿಯವರುಗಳ ಗೌರವಾರ್ಥವಾಗಿ ಕಳೆದ ಗುರುವಾರ ರಾತ್ರಿ ಚಲುವಾಂಬಾ ಭವನದ ಆವರಣದಲ್ಲಿರುವ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಒಂದು ಸತ್ಕಾರ ಸಮಾರಂಭವು ಶ್ರೀ ಎಂ ಎಸ್ ಜೋಯಿಸರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಮತ್ತು ಸಂಗೀತಗಳಾದ ನಂತರ, ಸತ್ಕಾರ ಸಮಿತಿಯ ಪರವಾಗಿ ಶ್ರೀಗಳಾದ ಕೆ ಪಿ ಶ್ರೀನಿವಾಸಾಚಾರ್ಯರು ಮತ್ತು ಬಿ ಎಸ್ ಸುಬ್ಬರಾಯರೂ ಭಾಷಣ ಮಾಡಿ, ಅತಿಥಿಗಳನ್ನು ಅಭಿನಂದಿಸಿದರು ಶ್ರೀಗಳಾದ ಸೀತಾರಾಮಯ್ಯನವರು ನಾರಾಯಣಸ್ವಾಮಿಗಳು ಭಾಷಣ ಮಾಡಿ, ತಮ್ಮನ್ನು ಸತ್ಕರಿಸಿ, ಅಭಿನಂದಿಸಿದುದಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಚೊಕ್ಕ ಭೋಜನವಾದ ನಂತರ, ಸಮಾರಂಭವು ಮುಕ್ತಾಯವಾಯಿತು.

ಗಣಪತಿ ಮಂಗಳಾರತಿ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಸಂಘದ ಆಶ್ರಯದಲ್ಲಿ ವಿದ್ಯಾಗಣಪತಿಯ ಮಹಾಮಂಗಳಾರತಿಯು ಕಳೆದ ಗುರುವಾರ ನಡೆಯಿತು ಈ ಸಂದರ್ಭದಲ್ಲಿ ಪುರಸಭಾಧ್ಯಕ್ಷರಾದ ಶ್ರೀ|| ಪಾಲಹಳ್ಳಿ ಸೀತಾರಾಮಯ್ಯನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಕೆಲವು ಹಿತವಚನಗಳನ್ನು ನುಡಿದರು

ವಯಸ್ಕರ ಶಿಕ್ಷಣ ಶಿಬಿರ

ಕೃಷ್ಣರಾಜನಗರ ಮತ್ತು ಸಾಲಿಗ್ರಾಮಗಳಲ್ಲಿ ಇದೇ ೧೩ ಮತ್ತು ೧೪ ನೇ ತಾರೀಖುಗಳಲ್ಲಿ ವಯಸ್ಕರ ರಾತ್ರಿ ಶಾಲಾ ಉಪಾಧ್ಯಾಯರುಗಳ ಶಿಕ್ಷಣ ಶಿಬಿರವು ನಡೆದು, ೪೦ ಜನರಿಗೆ ತರಬೇತು ಕೊಡಲಾಯಿತು ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಪಂಚಳಯ್ಯನವರು ಉಪಾಧ್ಯಾಯರುಗಳಿಗೆ ಕೆಲವು ಹಿತೋಕ್ತಿಗಳನ್ನು ಹೇಳಿದರು

ಹೈದರಾಬಾದ್ ಪರಿಸ್ಥಿತಿ

ಹೈದರಾಬಾದ್ ಮತ್ತು ಸಿಕಂದರಾಬಾದ್ ಗಳಲ್ಲಿ ಈಗ ಪರಿಸ್ಥಿತಿಯು ಶಾಂತವಾಗಿರುವುದೆಂದೂ, ಕಲವು ದಿವಸಗಳಿಂದ ನಿಷ್ಕ್ರಿಯವಾಗಿದ್ದ ಟೆಲಿಫೋನ್, ಟೆಲಿಗ್ರಾಫ್ ಮತ್ತು ರೈಲ್ವೆ ಓಡಾಟಗಳ ವ್ಯವಸ್ಥೆಯನ್ನು ಮತ್ತೆ ಆರಂಭಿಸಲಾಗಿದೆಯೆಂದೂ ವರದಿಯಾಗಿದೆ

ಬೊಲಾರಂನಲ್ಲಿರುವ ಶ್ರೀ ಕೆ ಎಂ ಮುನ್ಷಿಯವರೊಡನೆ ಬೀದರಿನ ರಾಜಕ ಮಾರರು ನಿನ್ನೆ ವಿನೋದವಾಗಿ ಮಾತುಕತೆ ನಡೆಸಿದರೆಂದು ಹೇಳಲಾಗಿದೆ

ನಿಜಾಮರು ತಮ್ಮ ಅರಮನೆಯಲ್ಲಿ ನೆಮ್ಮದಿಯಿಂದಿರುವರು ಜನರಲ್ ರಾಜೇಂದ್ರ ಸಿಂಗ್‌ಜಿಯವರು ನಿನ್ನೆ ನಿಜಾಮರನ್ನು ಭೇಟಿ ಮಾಡಿ ಜನರಲ್ ಚೌಧರಿಯವರನ್ನೂ ಇತರ ಉನ್ನತ ಮಿಲಿಟರಿ ಅಧಿಕಾರಿಗಳನ್ನೂ ಅವರಿಗೆ ಪರಿಚಯ ಮಾಡಿಕೊಟ್ಟರು.

ಅಮೆರಿಕದಲ್ಲಿ ಗಂಡಂದಿರ ಅಭಾವ

ಅಮೆರಿಕದ ೬೦ ಲಕ್ಷ ಯುವತಿಯರಿಗೆ ಗಂಡಂದಿರುಗಳು ಲಭ್ಯವಿಲ್ಲವಾಗಿದೆಯೆಂದೂ ಗಂಡಸರುಗಳ ಅಭಾವ ಮತ್ತು ಅವರುಗಳ ಹೇಡಿತನಗಳೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ

ಬ್ರಿಟನ್ನಿನಲ್ಲಿ ಸಿಗರೇಟುಗಳ ಅಭಾವ

ಲಂಡನ್, ಗ್ಲಾಸ್‌ಗೋ ಮುಂತಾದ ನಗರಗಳಲ್ಲಿ ಸಿಗರೇಟುಗಳ ಅಭಾವವು ವಿಶೇಷವಾಗಿದೆಯೆಂದೂ, ರಸ್ತೆಗಳಲ್ಲಿ ಬಿದ್ದ ಸಿಗರೇಟು ತುಂಡುಗಳನ್ನು ಸೇರಿಸಿ, ಅವುಗಳನ್ನು ೩೦ ಕ್ಕೆ ೩ ಷಿಲಿಂಗುಗಳಂತೆ ಮಾರಲಾಗುತ್ತಿದೆಯೆಂದೂ ಹೇಳಲಾಗಿದೆ

Edited printed and published by
A. R. Nagarajan at the Sadhvi Press
D Subbaiah Road Mysore

ಹೋಂ ಗಾರ್ಡುಗಳ ಕರ್ತವ್ಯ

ಮೈಸೂರು ಸಂಸ್ಥಾನದಲ್ಲಿ ಹೋಂ ಗಾರ್ಡುಗಳ ಸಂಸ್ಥೆಯನ್ನು ಪ್ರಾರಂಭಿಸಿರುವುದು ಸಮಯೋಚಿತವಾದುದು ಅವರುಗಳಿಗೆ ತಕ್ಕ ತರಬೇತಿ ಕೊಡುತ್ತಿದ್ದರೂ ಉಡುಪುಗಳ ಸರಬರಾಜಾಗಲಿ, ಅನೇಕರಿಗೆ ಉತ್ಸಾಹ ಕಡಿಮೆಯಾಗಿದೆ ಈ ವಿಚಾರವಾಗಿ ಗೃಹಮಂತ್ರಿಗಳಲ್ಲಿ ಮನವಿ ಮಾಡಿಕೊಂಡ ಮೇಲೆ ಶೀಘ್ರದಲ್ಲಿಯೇ ಉಡುಪುಗಳನ್ನು ಒದಗಿಸುವುದಾಗಿ ಭರವಸೆ ಇತ್ತಿದ್ದಾರೆ ಈ ಪರ್ವ ಕಾಲದಲ್ಲಿ ಹೋಂ ಗಾರ್ಡುಗಳು ಸಮಸ್ತ ಪಟ್ಟಣಗಳಲ್ಲಿ ಹಗಲು ರಾತ್ರಿ ಸರಿಯಾದ ಕಾವಲು ಕೆಲಸವನ್ನು ಮಾಡಿ ಸಹಕರಿಸಬೇಕೆಂದು ಹೋಂ ಗಾರ್ಡುಗಳಲ್ಲಿ ಶ್ರೀವತ್ಸರಾಜರವರ ವಿಶೇಷ ಆಸಕ್ತಿ ಆರ್ಗನೈಸೇಷನ್ ಸೇವಾನಿರತ ಡಿ ಎಸ್ ಕೃಷ್ಣಯ್ಯಶೆಟ್ಟರವರು ತಿಳಿಸುತ್ತಾರೆ.

ವಿಜಯಲಕ್ಷ್ಮಿ ಪಂಡಿತರು ಲಂಡನ್ನಿನಲ್ಲಿ ಹೈಕಮೀಷನರು

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಲಂಡನ್ನಿನಲ್ಲಿ ಭಾರತದ ಹೈಕಮೀಷನರಾಗಿಯೂ ಶ್ರೀ ಕೃಷ್ಣಮೆನನ್‌ರವರನ್ನು ರಷ್ಯದ ರಾಯಭಾರಿಯಾಗಿಯೂ ನೇಮಿಸಲಾಗುವುದೆಂದು ತಿಳಿದುಬಂದಿದೆ

ಹೊಟೇಲು ಕೆಲಸಗಾರರ ಸಭೆ

ಈ ರಾತ್ರಿ ೮ ೩೦ ಗಂಟೆಗೆ ಮೈಲ್ಯಾಂಡ ಸಂಘದ ಸಭೆಯು ದೇವರಾಜ ಮಾರ್ಕೆಟ್ಟಿನ ಮಹಡಿಯ ಮೇಲೆ ಶ್ರೀ ಕೆ ಬಾಯರರ ಅಧ್ಯಕ್ಷತೆಯಲ್ಲಿ ನಡೆಯುವುದು. ಕೆಲಸಗಾರರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಗಣಪತಿ ಮಂಗಳಾರತಿ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನವರು ನಿನ್ನೆ ಸಂಜೆ ಶ್ರೀ ಗಣಪತಿ ಮಂಗಳಾರತಿಯನ್ನು ನಡೆಸಿದರು. ಈ ಸಂಬಂಧದಲ್ಲಿ ಶ್ರೀಮತಿ ಸರಸ್ವತಿ ಗಾಂಧಿಯವರ ಭಜನೆಯು ಜರುಗಿತು

ಪ್ರೌಢ ಶಾಲಾ ವಿದ್ಯಾ ಸಂಘ

ಯುಳಂದೂರು ಪ್ರೌಢ ಶಾಲಾ ಸಂಘದ ಆರಂಭ ಭಾಷಣವನ್ನು ಡಾ ಕಾಲೇಜು ಅಸಿಸ್ಟೆಂಟ್ ಶ್ರೀ|| ಎಂ ಯಾದವನಾಚಾರ್ಯ... ದಿನ ಮಾಡಿದರು

ಗಣೇಶಾ ಟಾಕಿ...

17—9—48 ರಿಂ...

ಪ್ರತಿ ದಿನ 3 ಆಟಗಳು

ಶಿವಕವಿ

ತಮಿಳು]

(ಹೊಸ ಪ್ರಿಂಟ)

ಮುಖ್ಯ ಪಾತ್ರ,--

"ತ್ಯಾಗರಾಜ ಭಾಗವತರ್" "ರಾ...

"ಕೃಷ್ಣನ್" "ಮಧುರ...

ಪ್ರಕಟಣೆ

ವ್ರಿಷ್ಟ್ ವ್ಯಾಚ್ ಸ್ಟ್ರಾಪ್ ಸ್ಟೆಟರುಗಳು, ...ಳು, ಶಾಲುಗಳು ನಾನಾ ... ವಾಯಿಲ್, ಚೀಟಿ ಬಟ್ಟೆ ಮತ್ತು ವಗೈರೆಗಳಿಗೆ

ವಿಜಯಲಕ್ಷ್ಮೀ ವಿಲಾ...

ಇರ್ವಿನ್ ರೋಡ್, ಮೈಸೂ...

ಆಪೆರಾ ಟಾಕಿ...

19-9-48 ರಿಂದ

ಪ್ರತಿ ದಿನ 3 ಆಟಗಳು

ಚೆಂಚು ಲಕ್ಷ್ಮಿ

ಪಾತ್ರ ವಿ ನಾಗಯ್ಯ, ಕಮಲಾಕ...

ನಾರಾಯಣರಾವ್

-: ಪ್ರಭುದೇವಾ ಟಾಕೀಸಿನಲ್ಲಿ :-

20-9-48ನೇ ಸೋಮವಾರದಿಂದ ಅಮೋಘ ಪ್ರಾರಂಭ

ರಾಯಲ್ ಟಾಕೀಸಿನವರ

ಶಕುಂತಲಾ

ದಿನವಹಿ 3 ಆಟಗಳು (ಹೊಸ ಕಾಪಿ) (ತಮಿಳು ಭಾಷೆ)

ಪಾತ್ರ:—ಎಂ. ಎಸ್. ಸುಬ್ಬಲಕ್ಷ್ಮಿ, ಜಿ. ಎನ್. ಬಾಲಸುಬ್ರಹ್ಮಣ್ಯಂ, ಕೃಷ್ಣನ್, ಮಧುರಂ, ಟಿ. ಎಸ್. ದೊರೆರಾಜ್

ಫೋನ್ ನಂ. ೭೪೨ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೨೧-೯-೪೮ [ಸಂಚಿಕೆ ೭೦

ಪೊ|| ಅಧಿಕಾರಿಯ ಮೇಲೆ ಕಂಟೆಂಪ್ಟ್

ರಜಾಕರರಿಂದ ೧೦ ಸಾವಿರ ಶಸ್ತ್ರಾಸ್ತ್ರಗಳ ವಶ

ರಜಾಕರರಿಂದ ಸುಮಾರು ೧೦ ಸಾವಿರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಹೈದರಾಬಾದಿನ ಮಿಲಿಟರಿ ಗವರ್ನರಾದ ಮೇ|| ಜ|| ಚೌಧುರಿಯವರು ತಿಳಿಸುತ್ತಾರೆ. ಸಂಸ್ಥಾನದಲ್ಲಿರುವ ರಜಾಕರ ಕೇಂದ್ರಗಳನ್ನು ಶೋಧಿಸಿದಾಗ ಅಲ್ಲಿ ... ಸಿಕ್ಕಿಲ್ಲವೆಂದೂ ಅವರು ತಿಳಿಸಿ... ಸಂಸ್ಥಾನದ ಹಿಂದೆ ... ನಡೆಯುತ್ತಿದೆ ... ಮತ್ತು ... ಶಸ್ತ್ರಾಸ್ತ್ರಗಳನ್ನು ... ಸೈನ್ಯವು ... ಮಾಡುತ್ತಿದೆಯೆಂದೂ ಅವರು ತಿಳಿಸಿದರು.

ರಜಾಕರರು ವೇಷ ಬದಲಾಯಿಸಿದ್ದಾರೆ

ಹೈದರಾಬಾದಿನಲ್ಲಿರುವ ಅನೇಕ ರಜಾಕರರು ತಮ್ಮ ಯೂನಿಫಾರಂ ಉಡುಪುಗಳನ್ನು ಮತ್ತು ಶಸ್ತ್ರಗಳನ್ನು ಬಿಟ್ಟು ಸಾದಾ ಉಡುಪುಗಳನ್ನು ಧರಿಸಿ ತಿರುಗುತ್ತಿದ್ದಾರೆಂದು ಹೇಳಲಾಗಿದೆ.

ವಿಶ್ವಸಂಸ್ಥೆಯಲ್ಲಿ ಹೈದರಾಬಾದ್ ಪ್ರಶ್ನೆ

ಪ್ಯಾರಿಸ್ಸಿನಲ್ಲಿ ನಡೆಯುತ್ತಿರುವ ವಿಶ್ವಭದ್ರತಾ ಸಮಿತಿಯ ಸಭೆಯಲ್ಲಿ ನಿನ್ನೆ ದಿನ ಹೈದರಾಬಾದು ಪ್ರಶ್ನೆಯು ... ಭಾರತದ ಪ್ರತಿನಿಧಿ ಸರ್ ರಾಮಸ್ವಾಮಿ ಮೊದಲಿಯಾರರು ಮಾತನಾಡಿ, ಹೈದರಾಬಾದಿನ ... ಪೂರ್ಣವಾಗಿ ಪರಿಹಾರವಾಗಿರುವುದರಿಂದ, ನಿಜಾಮರೇ ಆ ವಿಷಯವನ್ನು ವಾಪಸು ತೆಗೆದುಕೊಳ್ಳುವಂತೆ ತಮ್ಮ ಪ್ರತಿನಿಧಿಗೆ ಸೂಚಿಸುವುದರಿಂದ ಇದರ ಬಗ್ಗೆ ಪರ್ಯಾಲೋಚನೆಯು ಅನವಶ್ಯವೆಂದರು.

ಹೈದರಾಬಾದಿನ ಪ್ರತಿನಿಧಿ ... ಅವರು ತಮಗೆ ನಿಜಾಮರಿಂದ ಅಂತಹ ಸೂಚನೆಯೇನೂ ಬಂದಿಲ್ಲವಾದ್ದರಿಂದ ಈ ವಿಷಯವನ್ನು ಮುಂದುವರಿಸಬೇಕೆಂದು ಸೂಚಿಸಿದರು. ಹೈದರಾಬಾದು ಪ್ರಶ್ನೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

ಮುಸ್ಲಿಮರು ಶಸ್ತ್ರಾಸ್ತ್ರಗಳನ್ನು ಕೆರೆಗೆ ಹಾಕುತ್ತಿದ್ದಾರೆ

ಅಕ್ರಮವಾಗಿ ಇಟ್ಟುಕೊಂಡಿರುವ ಶಸ್ತ್ರಗಳ ಬಗ್ಗೆ ಭಾರತ ಸೈನಿಕರು ಶೋಧನೆ ನಡೆಸುವರೆಂಬ ಭೀತಿಯಿಂದ ಸಿಕಂದರಾಬಾದ್ ಮತ್ತು ಹೈದರಾಬಾದಿನ ಅನೇಕ ಮುಸ್ಲಿಮರು ಬಂದೂಕು, ಕತ್ತಿ ಮೊದಲಾದ ಶಸ್ತ್ರಾಸ್ತ್ರಗಳನ್ನು ಹುಸೇನ್ ಸಾಗರ ಕೆರೆಗೆ ಹಾಕುತ್ತಿದ್ದಾರೆಂದು ಹೇಳಲಾಗಿದೆ.

ವಂದನಾ ಸಮರ್ಪಣ ದಿನಾಚರಣೆ

ಹೈದರಾಬಾದಿನ ಕಾರ್ಯಾಚರಣೆಯು ಯಶಸ್ವಿಯಾಗಿ ಮುಕ್ತಾಯಗೊಂಡುದಕ್ಕಾಗಿ ಇದೇ ೨೩ನೇ ತಾರೀಖು ಗುರುವಾರ ಭಾರತದಲ್ಲೆಲ್ಲಾ ವಂದನಾ ಸಮರ್ಪಣ ದಿನಾಚರಣೆಯನ್ನು ನಡೆಸಬೇಕೆಂದೂ ಆ ದಿನ ದೇವರಿಗೆ ವಿಶೇಷ ಪೂಜೆ ಮತ್ತು ಪ್ರಾರ್ಥನೆಗಳನ್ನು ಸಲ್ಲಿಸಬೇಕೆಂದೂ ಗವರ್ನರ್ ಜನರಲ್ ರಾಜಾಜಿಯವರು ಅಪ್ಪಣೆ ಮಾಡಿದ್ದಾರೆ.

ಪೊ|| ಸೂಪರಿಂಟೆಂಡೆಂಟರ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಸ್ವಂ ಸು ಪ್ರೋ|] ಬೆಂಗಳೂರು ೨೧

ಈ ದಿನ ಹೈಕೋರ್ಟಿನಲ್ಲಿ ಶ್ರೀ ಪ್ರಧಾನ ನ್ಯಾಯಾಧೀಶರಾದ ಶ್ರೀ ... ಮತ್ತು ಜಸ್ಟೀಸ್ ಬಾಲಕೃಷ್ಣಯ್ಯನವರು ಬೆಂಗಳೂರು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಟಿ ಎ ... ರವರ ಮೇಲೆ ಬಂದಿರುವ ಕಂಟೆಂಪ್ಟ್ ಮೊಕದ್ದಮೆಯೊಂದನ್ನು ಅಂಗೀಕರಿಸಿದರು. ಬೆಂಗಳೂರು ಮುನಸೀಫ್ ಕೋರ್ಟಿನಿಂದ ಹೊರಟ ಒಂದು ವಾರೆಂಟನ್ನು ಜಾರಿಮಾಡಲು ಪೊಲೀಸರ ಸಹಾಯ ಬೇಕೆಂದು ಮುನಸೀಫರು ಪೊಲೀಸ್ ಸೂಪರಿಂಟೆಂಡೆಂಟರನ್ನು ಕೋರಿದ್ದರೆಂದೂ, ಅದಕ್ಕೆ ಅವರು ಕೊಟ್ಟ ಉತ್ತರವು ಕೋರ್ಟಿಗೆ ಅವಮಾನ ಮಾಡುವಂತಿತ್ತೆಂದೂ ಅಲ್ಲಿನ ಮುನಸೀಫರು ಹೈಕೋರ್ಟಿಗೆ ನಿವೇದಿಸಿದ್ದರು. ಅದರ ಮೇಲೆ ಶ್ರೀ ಪ್ರಧಾನ ನ್ಯಾಯಾಧೀಶರು ಮೊಕದ್ದಮೆಯನ್ನು ಅಂಗೀಕರಿಸಿದರು.

○ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ಸಂಜೆ ಬೆಂಗಳೂರಿಗೆ ಹಿಂತಿರುಗುವರು.

○ ಹೈದರಾಬಾದ್ ಪರಿಸ್ಥಿತಿಯ ಸಂಬಂಧದಲ್ಲಿ ದಸ್ತಗಿರಿಯಾಗಿದ್ದವರ ಪೈಕಿ ೧೫ ಜನ ಮುಸ್ಲಿಮರನ್ನು ಬಿಡುಗಡೆ ಮಾಡಲಾಗಿದೆ.

○ ಅಮಲ್ದಾರರುಗಳಾದ ಶ್ರೀಗಳು ಅಬ್ದುಲ್ ಬಶೀರ್ ... ಎಂ ... ರವರುಗಳನ್ನು ಸಿವಿಲ್ ಸಪ್ಲೈ ... ಅಧಿಕಾರಿಗಳಾಗಿ ನೇಮಿಸಲಾಗಿದೆ. ... ಆಫೀಸರ್ ಅಧಿಕಾರಿಗಳಾದ ಶ್ರೀ ... ರವರನ್ನು ಸಿವಿಲ್ ಸಪ್ಲೈ ... ಅವರಾಗಿ ವರ್ಗಾಯಿಸಲಾಗಿದೆ.

○ ಡಾ|| ಬಿ ಎಸ್ ... ರವರನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ, ಶ್ರೀ ಸಿ ಆರ್ ನಂಜಪ್ಪನವರನ್ನು ಮೈಸೂರಿನಿಂದ ... ಆಸ್ಪತ್ರೆಗೂ, ಡಿ ಎಸ್ ... ರವರನ್ನು ಮಿಂಟೋವಿನಿಂದ ಬೌರಿಂಗ್ ಆಸ್ಪತ್ರೆಗೂ, ಶ್ರೀಮತಿ ಕೆ ಎ ಅಕ್ಕಮ್ಮನವರನ್ನು ಚಾಮರಾಜ... ಆಸ್ಪತ್ರೆಯಿಂದ ಬೆಂಗಳೂರು ವಾಣೀವಿಲಾಸ ಆಸ್ಪತ್ರೆಗೂ, ಶ್ರೀಮತಿ ... ರವರನ್ನು ವಾಣೀವಿಲಾಸ ಆಸ್ಪತ್ರೆಯಿಂದ ಲೇಡಿ ಕರ್ಜನ್ ಆಸ್ಪತ್ರೆಗೂ ವರ್ಗಾಯಿಸಲಾಗಿದೆ.

ಮೈಸೂರು ಸೇನೆಯ ಸಾವು ನೋವು

ಸ್ವಂ ಸು ಪ್ರೋ|] ಬೆಂಗಳೂರು ೨೧

ಹೈದರಾಬಾದಿನ ಕಾರ್ಯಾಚರಣೆಯಲ್ಲಿ ಮೈಸೂರು ಸೈನ್ಯದಲ್ಲಿ ಒಂದು ಜನ ಸತ್ತಿದ್ದು, ೪೦ ಜನರಿಗೆ ಗಾಯಗಳಾಗಿವೆ. ಆ ಪೈಕಿ ೩೦ ಜನರನ್ನು ಇಲ್ಲಿಗೆ ಚಿಕಿತ್ಸೆಗಾಗಿ ಕರೆತರಲಾಗಿದೆ.

○ ಬೆಂಗಳೂರು ಪೌರಸಭೆಯ ಅಧಿವೇಶನವು ನಿನ್ನೆ ನಡೆದು ಹೈದರಾಬಾದ್ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ ದಕ್ಷ ಪಂಡಿತ ನೆಹರೂ, ಸ|| ಪಟೇಲ್ ಜೆ|| ಚೌಧುರಿ ಜರನರಲುಗಳಿಗೆ ಅಭಿನಂದಿಸುವ ಮತ್ತು ಮೈಸೂರು ಸೈನಿಕರ ಪಾತ್ರವನ್ನು ಪ್ರಶಂಸಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಹೈದರಾಬಾದ್ ಸಂಸ್ಥಾನದಲ್ಲಿ ರಜಾಕರರ ಹೆಚ್ಚಿನ ಪ್ರತಿಭಟನೆ

ರಜಾಕರರು ಮಾರ್ಟರುಗಳು, ಸ್ಟೆನ್ ಗನ್ನುಗಳು, ಮುಂತಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸಮೇತ ವಿಶೇಷ ಪ್ರತಿಭಟನೆ ತೋರಿಸಿದರು. ಉಕ್ಕಿನ ... ಅವರುಗಳು ... ವಿಜಯವಾಡದ ಪ್ರದೇಶಗಳಲ್ಲಿ ನಮ್ಮ ಸೈನಿಕರನ್ನು ಎದುರಿಸಿದರು. ನಲದುರ್ಗ, ಔರಂಗಾಬಾದ್, ಬಲ್ಹಾರ್ಷಾ, ಸೂರ್ಯಪೇಟೆ ಮತ್ತು ಜಹೀರಾಬಾದ್ ಪ್ರದೇಶಗಳಲ್ಲಿ ನಮ್ಮ ಸೇನೆಯು ರಜಾಕರರ ಮೇಲೆ ಉಗ್ರ ಕದನ ನಡೆಸಬೇಕಾಗಿ ಬಂತು. ... ಮತ್ತು ಗದಗ್ ... ಮತ್ತು ... ನಮ್ಮ ಸೈನ್ಯವನ್ನು ... ಯುದ್ಧಗಳು ನಡೆದುವು. ಈ ಕ್ಷೇತ್ರಗಳಲ್ಲಿ ೧೨೦೦ ಜನ ರಜಾಕರರು ಸತ್ತರು. ಹೈದರಾಬಾದ್ ಸೈನಿಕರು ಅನೇಕ ಪ್ರದೇಶಗಳಲ್ಲಿ ... ಹಿಮ್ಮೆಟ್ಟಿದರು ಎಂದು ಭಾರತ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

○ ಕೊಚ್ಚಿನ್ನಿನ ಮಹಾರಾಜರು ಅಲ್ಲಿನ ನೂತನ ಮಂತ್ರಿಮಂಡಲವನ್ನು ಸ್ಥಾಪಿಸುವ ಬಗ್ಗೆ ಸಲಹೆಯನ್ನು ಪಡೆಯಲು ಅಲ್ಲಿನ ಪ್ರಜಾಮಂಡಲದ ನಾಯಕರಾದ ಶ್ರೀ ಇಕ್ಕಂಡವಾರಿಯರವರನ್ನು ಆಹ್ವಾನಿಸಿದ್ದಾರೆ.

● ಇದುವರೆಗೂ ವಿಪರೀತವಾಗಿ ಇದ್ದ ಗಂಗಾ ನದಿಯ ಪ್ರವಾಹವು ಈಗ ಇಳಿಮುಖವಾಗುತ್ತ ಬಂದು ತಿಳಿದುಬಂದಿದೆ.

ನೈಜಾಮರ ಬೊಂಬಾಯಿನ ಅರಮನೆ ಸರ್ಕಾರಕ್ಕೆ

ಬೊಂಬಾಯಿನಲ್ಲಿರುವ ನೈಜಾಮರ ಅರಮನೆಯನ್ನು ತಮ್ಮ ಉಪಯೋಗಕ್ಕಾಗಿ ತೆಗೆದುಕೊಳ್ಳಲು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಭಾರತದ ನಾಣ್ಯ ಚಲಾವಣೆಗೆ ಅಡ್ಡಿ ಇಲ್ಲ

ಭಾರತದ ನಾಣ್ಯ ಚಲಾವಣೆಗೆ ಇದುವರೆಗೆ ಹೈದರಾಬಾದಿನಲ್ಲಿ ಇದ್ದ ಪ್ರತಿಬಂಧಕಾಜ್ಞೆಯನ್ನು ಅಲ್ಲಿನ ಸರ್ಕಾರವು ರದ್ದು ಮಾಡಿದೆ.

ದೆಹಲಿಗೆ ರಜ್ವಿಯ ರವಾನೆ

ಹೈದರಾಬಾದು ಮಿಲಿಟರಿ ಗೌರ್ನರ್ ಮೇ|| ಜ|| ಚೌಧುರಿಯವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಭಾರತ ಮತ್ತು ನಿಜಾಂ ಪಡೆಗಳು ಶಾಂತಿಯುತ್ತ ತಿಸುಪಾಲನೆಗಳ ಕಾರ್ಯದಲ್ಲಿ ನಿರತವಾಗಿವೆಯೆಂದೂ, ರಜಾಕರರ ನಾಯಕನಾದ ಖಾಸಿಂ ರಜ್ವಿಯನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸಲಾಗಿದೆಯೆಂದೂ ಮತ್ತು ಇಷ್ಟರಲ್ಲಿಯೇ ಅವನನ್ನು ದೆಹಲಿಗೆ ಕೊಂಡೊಯ್ಯಲಾಗುವುದೆಂದೂ ತಿಳಿಸಿದ್ದಾರೆ.

ಹೈದರಾಬಾದ್ ಕಾರ್ಯಾಚರಣೆ ಬಗ್ಗೆ ಅರ್ಜೆಂಟೈನಾದ ಟೀಕೆ

ವಿಶ್ವಭದ್ರತಾ ಸಂಸ್ಥೆಯ ಅರ್ಜೆಂಟೈನಾ ಪ್ರತಿನಿಧಿಗಳು ಭಾರತವು ಹೈದರಾಬಾದಿಗೆ ಸೈನ್ಯ ನುಗ್ಗಿಸಿರುವುದು ಅಬಿಸೀನಿಯಾಕ್ಕೆ ಇಟಲಿ ಸೈನ್ಯಗಳು ಅಕ್ರಮವಾಗಿ ನುಗ್ಗಿದಂತಿದೆ ಎಂದು ಮಾಡಿರುವ ಟೀಕೆಯನ್ನು ಖಂಡಿಸುತ್ತಾ ಸರ್ ಎ ರಾಮಸ್ವಾಮಿ ಮೊದಲಿಯಾರ್‌ರು ಭಾರತದ ವರ್ತನೆಯು ಸಂಪೂರ್ಣ ಕ್ರಮಬದ್ಧವಾಗಿದೆಯೆಂದೂ ಮತ್ತು ಅರ್ಜೆಂಟೈನಾದ ಟೀಕೆಯು ಅತ್ಯಂತ ಹೀನಾಯಕರವಾದದೆಂದೂ ತಿಳಿಸುತ್ತಾರೆ. ಹೈದರಾಬಾದಿನ ಬಗ್ಗೆ ಭಾರತವು ಸಾಮ್ರಾಜ್ಯಶಾಹಿ ಭಾವನೆಯನ್ನು ಹೊಂದಿಲ್ಲ, ಅಲ್ಲಿನ ಜನರು ತಮ್ಮ ಭವಿಷ್ಯವನ್ನು ಅವರೇ ರೂಪಿಸಿಕೊಳ್ಳಬಹುದೆಂದು ಭಾರತವು ಘೋಷಿಸಿರುವುದಕ್ಕೆ ಸಾಕ್ಷಿ ಎಂದು ಅವರು ನುಡಿದಿದ್ದಾರೆ.

ಕೈಮಗ್ಗದವರಿಗೆ ನೂಲಿನ ಅಭಾವ

ಮೈಸೂರು ೨೧

'ಪೌರಸಭಾ ಉಪಾಧ್ಯಕ್ಷರೂ ಮತ್ತು ವರ್ತಕರೂ ಆದ ಶ್ರೀ ... ನಂಜಪ್ಪನವರು ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರಿಗೆ ಈ ದಿನ ಒಂದು ತಂತಿಯನ್ನು ಕಳುಹಿಸಿ, ಸಂಸ್ಥಾನದ ಕೈಮಗ್ಗದವರಿಗೆ ಕಳೆದ ಎರಡು ತಿಂಗಳಿನಿಂದಲೂ ನೂಲನ್ನು ಸರಬರಾಜು ಮಾಡಿಲ್ಲವೆಂದೂ ಇದರಿಂದ ಅವರುಗಳು ತುಂಬಾ ಕಷ್ಟಪಡುತ್ತಿದ್ದಾರೆಂದೂ, ನೂತನ ಬಟ್ಟೆ ಮತ್ತು ನೂಲಿನ ಕಂಟ್ರೋಲ್ ಯೋಜನೆಯನ್ನು ಜಾರಿಗೆ ತರುವವರೆಗೂ, ತಾತ್ಕಾಲಿಕವಾಗಿ ನೂಲನ್ನು ಸರ್ಕಾರದವರು ಸರಬರಾಜು ಮಾಡಬೇಕೆಂದೂ ಪ್ರಾರ್ಥಿಸಿದ್ದಾರೆ.

ಹತೋಟಿಆಜ್ಞೆಗಳನ್ನು ಮತ್ತೆ ಹೊರಿಸಕೂಡದು

ಕೃಷಿಕರ ಸಮ್ಮೇಳನದಲ್ಲಿ ಠರಾಯು

ಸ್ವಂ. ವ. ಟಿ. ನರಸೀಪುರ

ಟಿ. ನರಸೀಪುರ ತಾಲ್ಲೂಕಿನ ಕೃಷಿಕರ ಸಮ್ಮೇಳನವು ಶ್ರೀ ಎಸ್. ಶಿವಾನಂದರವರ ಅಧ್ಯಕ್ಷತೆಯಲ್ಲಿ ಶನಿ ನಡೆಯಿತು. ಈ ಸಮ್ಮೇಳನಕ್ಕೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರೂ ಉಪಾಧ್ಯಕ್ಷ ಶ್ರೀ ಎ. ವಿ. ಕೋಠಿಯ್ಯನವರೂ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ. ಎಲ್. ಸಂಜಾರಾಜೇ ಅರಸಿನವರ ದಯಮಾಡಿಸಿದ್ದರು.

ಟಿ. ನರಸೀಪುರದ ತಾಲ್ಲೂಕಿನಿಂದಲೂ ೨೦೦ ಜನ ಪ್ರತಿನಿಧಿಗಳೂ ಬಂದಿದ್ದರು. ಮೊದಲು ಜನಾಬ್ ಜಿನ್ನಾರವರ ನಿಧನಕ್ಕೆ ಅನುತಾಪವನ್ನು ಸೂಚಿಸಲಾಯಿತು. ಭಾರತ ಸರ್ಕಾರವು ಹೈದರಾಬಾದಿನ ಬಗ್ಗೆ ಕೈಗೊಂಡ ಕಾರ್ಯವನ್ನು ಪ್ರಶಂಸಿಸುವ ನಿರ್ಣಯವನ್ನು ಮುಂಜೂರು ಮಾಡಲಾಯಿತು. ಶ್ರೀ ಪುಟ್ಟಹೊನ್ನಪ್ಪನವರು ಸಭೆಯ ಉದ್ದೇಶವನ್ನು ತಿಳಿಸಿ ಸ್ವಾಗತ ಬಯಸಿದರು.

ಶ್ರೀ ಎಂ. ಎಲ್. ಸಂಜಾರಾಜೇ ಅರಸಿನವರು ಭಾಷಣಮಾಡಿ ಕೃಷಿಕರೆಲ್ಲರೂ ಸುಸಂಘಟಿತರಾಗಿ ತಮ್ಮ ಹಳ್ಳಿಯ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸಬೇಕು. ದೇಶದಲ್ಲಿ ಇನ್ನು ಮುಂದಿನ ಆಗು ಹೋಗುಗಳಲ್ಲಿ ಕೃಷಿಕರ ಪಾತ್ರವು ಅತಿ ಪ್ರಾಮುಖ್ಯವಾದುದರಿಂದ ಕೃಷಿಕರು ಈಗ ಎಚ್ಚೆತ್ತುಕೊಳ್ಳಬೇಕು. ಸರ್ಕಾರವು ದೇಶದ ಬೆನ್ನೆಲುಬಾಗಿರುವ ಕೃಷಿಕನನ್ನು ಉಪೇಕ್ಷಿಸಬಾರದು. ಅವರಲ್ಲಿ ಸಾಕಷ್ಟು ತಿಳುವಳಿಕೆ ಮತ್ತು ಸಂಘಟನೆಗಳಿಲ್ಲದೆ ಈ ಸಮಯದಲ್ಲಿ ಭಾರತ ಸರ್ಕಾರವು ಮತ್ತೆ ಆಹಾರ ಧಾನ್ಯಗಳ ಮೇಲೆ ಹತೋಟಿ ಆಜ್ಞೆಯನ್ನು ಜಾರಿಮಾಡುವಾಗ ಕೃಷಿಕರ ಹಿತದೃಷ್ಟಿಗಳನ್ನು ತಿಳಿಸಲು ಮಾಡತಕ್ಕದ್ದು. ಅಗತ್ಯ ಸಭ್ಯರ ಪರಿಸ್ಥಿತಿಯಲ್ಲಿ ಈ ಆಜ್ಞೆಯಿಂದ ಕೃಷಿಕರಿಗೆ ಹೆಚ್ಚು ಕಿರುಕುಳ ಉಂಟಾಗಿ ಪ್ರಜಾರಂಗ ಖಂಡಿತವಾಗಿಯೂ ಈ ಆಜ್ಞೆಗಳನ್ನು ಜಾರಿಮಾಡಕೂಡದು ಎಂದು ತಿಳಿಸಿದರು.

ಜಿಲ್ಲಾಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಮಾತನಾಡಿ ದೇಶದ ಪ್ರತಿಯೊಬ್ಬ ಪ್ರಜೆಯು ಅಂಗಿಕವನ್ನು ಅರಿತು ಅವರ ಅಭಿಪ್ರಾಯಕ್ಕೆ ಮನ್ನಣೆಕೊಡುವುದು ಪ್ರಜಾ ಸರ್ಕಾರದ ಲಕ್ಷಣ. ಗಿರಣಿಗಳು, ವರ್ತಕರು, ಕೂಲಿಗಾರರು, ಕಾರ್ಮಿಕರು, ಮೊದಲಾದವರು ಇವರೇ ಮುಂತಾದವರು ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ತಮ್ಮ ಕಾರ್ಯಕ್ಕೆ ಹೋರಾಡುತ್ತಿರುವಾಗ ದೇಶದ ಪ್ರಮುಖ ಕಸುಬಾದ ವ್ಯವಸಾಯವನ್ನೇ ಅವಲಂಭಿಸಿರುವ ಕೃಷಿಕನು ತನ್ನದೇ ಆದ ಒಂದು ಸಂಘವನ್ನು ಏರ್ಪಡಿಸಿಕೊಳ್ಳದಿರುವುದಕ್ಕೆ ವಿಷಾದ. ಕೃಷಿಕನಿಗೆ ಬೇಕಾಗುವ ಕಬ್ಬಿಣ, ಸೀಮೆಎಣ್ಣೆ ಮತ್ತು ಬಟ್ಟೆ ಇವುಗಳ ಧಾರಣೆಗಳು ಏರಿರುವಾಗ ಅಕ್ಕಿ ದರ ೧೧ ಸೇರು ಎನ್ನುವುದು ಸಾಧ್ಯವಲ್ಲ. ಕೇವಲ ಹತ್ತು ಲಕ್ಷ ಜನರ ಸುಖಕ್ಕಾಗಿ ೬೦ ಲಕ್ಷ ಕೃಷಿಕರ ಮೇಲೆ ಸರ್ಕಾರವು ಮತ್ತೆ ಹತೋಟಿ ಆಜ್ಞೆಯನ್ನು ಜಾರಿಮಾಡುವುದು ವಿಷಾದಕರ ಪಟ್ಟಣವಾಸಿಗಳು ತಮ್ಮ ಸೌಲಭ್ಯವನ್ನು ಹೆಚ್ಚಿಸಿಕೊಳ್ಳಲು ಹೇಗೆ ಪ್ರಯತ್ನಪಟ್ಟು ಮಂತ್ರಿಗಳಬಳಿ ಹೋಗುವರೋ ಹಾಗೆಯೇ ಇನ್ನು ಮುಂದೆ ಕೃಷಿಕರು ತಮ್ಮ ಸೌಲಭ್ಯಗಳನ್ನು ಸಂಘಗಳನ್ನು ಮಾಡಿಕೊಂಡು ಅದರ ಮೂಲಕ ಪಡೆಯಬೇಕಾದುದು ಅವರ ಹಕ್ಕು. ಕೃಷಿಕರು ದೇಶದ ಪ್ರಮುಖ ಕಸುಬಿನವರು ಇವರ ಬೇಡಿಕೆಗಳಿಗೆ ಮನ್ನಣೆಕೊಡುವುದು ಸರ್ಕಾರದ ಮೊದಲನೇ ಕರ್ತವ್ಯ. ದೇಶದ ಇತರ ಕೂಲಿಗಾರರಂತೆ ಕೃಷಿಕನೂ ಸಹ ಮುಷ್ಕರ ಹೂಡಿದರೆ ದೇಶದಲ್ಲಿ ಕ್ರಾಂತಿ ಯಾಗ ವುದರಲ್ಲಿ ಸಂದೇಹವಿಲ್ಲ. ಮುಂದೆ ಸರ್ಕಾರದಲ್ಲಿ ಕೃಷಿಕನನ್ನು ಬಂಧಿಸಿ ಆಹಾರ ಧಾನ್ಯವನ್ನು ಕಿಗಿದ ಕೊಳ್ಳಲು ಸಾಧ್ಯವಲ್ಲ. ಕೃಷಿಕನು ತನ್ನ ಹಕ್ಕುಗಳನ್ನು ನೇರವಾಗಿ ಸರ್ಕಾರಕ್ಕೆ ತಿಳಿಸಲು ಅನುಕೂಲವಾಗಲು ಪ್ರಜಾಪ್ರತಿನಿಧಿಸಭೆ ಮತ್ತು ಶಾಸನ ಸಭೆಗಳಲ್ಲಿ ತಾನೇ ನೇರವಾಗಿ ಬರಲು ಯತ್ನಿಸಬೇಕು. ಸರ್ಕಾರವು ಹೆಚ್ಚು ಆಹಾರವನ್ನು ಬೆಳೆಸಲು ೩ ಕೋಟಿ ರೂಗಳನ್ನು ವೆಚ್ಚ ಮಾಡುವುದರಬದಲು ಪಾಳುಬಿದ್ದಿರುವ ಭೂಮಿಗಳ ವ್ಯವಸಾಯಕ್ಕೆ ಒಂದು ಕೋಟಿ ರೂ.ಗಳನ್ನಾದರೂ ಖರ್ಚು ಮಾಡಿದ್ದರೆ ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತಿತ್ತು ಎಂದು ಹೇಳಿದರು. ಶ್ರೀಗಳಾದ ಸುಂದರ ಶಾಸ್ತ್ರಾಚಾರ್ ಪುಟ್ಟಹೊನ್ನಪ್ಪ ಮತ್ತು ಕೊಡಗಳ್ಳಿ ರಾಮಸ್ವಾಮಿರವರುಗಳು ಭಾಷಣಮಾಡಿ ಮತ್ತೆ ಹತೋಟಿಗಳನ್ನು ಆಹಾರದಮೇಲೆ ಹೊರಿಸುವುದು ಸಾಧುವಲ್ಲವೆಂದು ತಿಳಿಸಿದರು.

ಶ್ರೀ ಕೆ. ನಂಜುಂಡಯ್ಯನವರು ಹತೋಟಿಗಳನ್ನು ಹಾಕುವುದು ಒಳ್ಳೆಯದೆಂದ ತಿಳಿಸಿ ಪಾಶ್ಚಿಮಾತ್ಯ ದೇಶಗಳ ಉದಾಹರಣೆಯನ್ನಿತ್ತಾಗ ಸಭೆಯಲ್ಲಿ ಗೊಂದಲವಾಯಿತು. ಅಧ್ಯಕ್ಷರು ಭಾಷಣಮಾಡಿ ದೇಶದ ಪ್ರಮುಖವೃತ್ತಿಯನ್ನು ಅವಲಂಭಿಸಿಕೊಂಡಿರುವವನಿಗೆ ಹೆಚ್ಚಿನ ಸಹಾಯ ಸೌಲಭ್ಯವನ್ನು ಒದಗಿಸುವುದು ಸರ್ಕಾರದ ಕರ್ತವ್ಯವೆಂದೂ ಕೃಷಿಕರ ಇಚ್ಛೆಗೆ ವಿರೋಧವಾಗಿ ಮತ್ತೆ ಹತೋಟಿ ಆಜ್ಞೆ ತರುವುದು ಸಾಧುವಲ್ಲವೆಂದೂ ತಿಳಿಸಿದರು.

ನಂತರ ಕೆಳಗೆಕಂಡ ನಿರ್ಣಯಗಳು ಅಂಗೀಕೃತವಾದವು: ಕಂಟ್ರೋಲುಗಳನ್ನು ಮತ್ತೆ ತರಕೂಡದು. ಬನ್ನೂರಿಗೆ ಹೈಸ್ಕೂಲು ಕೊಡಬೇಕು. ಹೆಚ್ಚಿಗೆ ಕಬ್ಬು ಬೆಳೆಯುವ ಬನ್ನೂರಿನಲ್ಲಿ ಒಂದು ಪುಟ್ಟ ಸಕ್ಕರೆ ಕಾರ್ಖಾನೆ, ವ್ಯವಸಾಯ ಶಿಕ್ಷಣಕೇಂದ್ರ ಮತ್ತು ಪ್ರಗತಿಶಾಯುದ ಸಂಶೋಧನಾ ಕೇಂದ್ರಗಳ ಸ್ಥಾಪನೆ, ವಿದ್ಯೋದಯ ಸಂಘದವರು ಸಾರ್ವಜನಿಕ ವಿದ್ಯಾರ್ಥಿನಿಲಯ ನಡೆಸಲು ಪೂರು ೫ಎಕರೆ ಜಮೀನು ಕೊಡಬೇಕು. ತಾಲ್ಲೂಕಿನ ಎಲ್ಲಾ ರಸ್ತೆ ರಿಪೇರಿ ಮತ್ತು ಸಾಧ್ಯವಾದಕಡೆ ಒಂದು ಗೃಹಕೈಗಾರಿಕೆಯ ಕಾರ್ಖಾನೆ ಏರ್ಪಾಡು. ೧೬ ಜನರನ್ನೊಳಗೊಂಡ ಒಂದು ಸಂಘವನ್ನು ಸ್ಥಾಪಿಸಲಾಯಿತು.

ಬಿರುಗಾಳಿಯಿಂದ ೩೦೦ ಜನರ ಮರಣ

ಜಪಾನಿನ ದಕ್ಷಿಣ ಹಾನ್ಷು ಪ್ರದೇಶದಲ್ಲಿ ಚಂಡ ಮಾರುತ ಮತ್ತು ಬಂದು ಆಣೆಕಟ್ಟುಗಳು ಒಡೆದು, ೩೦೦ ಮಂದಿ ಸತ್ತಿರಬಹುದಾದರು. ಒಂದು ಸಾವಿರ ಮನೆಗಳು ನಾಶವಾಗಿ ಇಪ್ಪತ್ತು ಸಾವಿರ ಜನರು ನಿರಾಶ್ರಿತರಾಗಿದ್ದಾರೆ.

ಕಾಲ್ನಡಿಗೆಯಲ್ಲಿ ಬ್ರಿಟನ್ನಿನಿಂದ ಭಾರತಕ್ಕೆ ಪ್ರವಾಸ

ಲಂಡನ್ನಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಎಸ್. ಎ. ಕೆ. ಸೇನಗುಪ್ತ ಮತ್ತು ವಿ. ಕೆ. ಸೇನಗುಪ್ತ ಎಂಬ ವಿದ್ಯಾರ್ಥಿಗಳು ಬ್ರಿಟನ್ನಿನಿಂದ ಭಾರತಕ್ಕೆ ಕಾಲುನಡಿಗೆಯಲ್ಲಿ ಹೊರಟಿರುವರು. ಅವರುಗಳು ಫ್ರಾನ್ಸ್, ಸ್ವಿಟ್ಜರ್ಲೆಂಡ್, ಇಟಲಿ, ಗ್ರೀಸ್, ಟರ್ಕಿ, ಇರಾಕ್ ದೇಶಗಳ ಮೂಲಕ ಭಾರತಕ್ಕೆ ಬರುವರು.

ಲಂಡನ್ನಿನ ೧೬ವರ್ಷದ ಮೇಧಾವಿ

ಬ್ರಿಟನ್ನಿನ ಸರ್ರೆ ನಗರದ ಕೇವಲ ೧೬ ವರ್ಷ ವಯಸ್ಸಿನ ಆರ್ಚಿಬಾಲ್ಡ್ ಎಂಬ ವಿದ್ಯಾರ್ಥಿಯು ಸ್ಪ್ಯಾನಿಷ್, ಜರ್ಮನ್, ಡಚ್, ಗ್ರೀಕ್, ಫ್ರೆಂಚ್ ಮತ್ತು ಇತರ ದೇಶ ಭಾಷೆಗಳಲ್ಲಿ ಮಾತನಾಡಬಲ್ಲನೆಂದೂ, ಅವನು ತನ್ನ ೭ ನೇ ವಯಸ್ಸಿನಲ್ಲೇ ಫ್ರೆಂಚ್, ಲ್ಯಾಟಿನ್ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿತಿದ್ದನೆಂದೂ ಹೇಳಲಾಗಿದೆ.

RAJKAMAL TALKIES
MYSORE

from 18-9-48 for 7 days only

Daily 3 Shows

Phantom Rider

(ಫ್ಯಾಂಟಂ ರೈಡರ್)

[ಸೀರಿಯಲ್]

A Republic in Thrilling Serial in 12 Chapters

With—Robert Kent, Peggy Stewart

ಹೆದರಬೇಡಿ !

ಧಳಗಾಲದಲ್ಲಿ ಕಮ್ಮಿ ಬೆಲೆಯಲ್ಲಿ ನಿಮಗೆ ಬೇಕಾಗುವ ಎಲ್ಲಾ ನಮೂನೆ ಉಲ್ಲನ್ ಬಟ್ಟೆಗಳಿಗಾಗಿ ಹುಡುಕಬೇಕಾಗಿಲ್ಲ ನಮ್ಮಲ್ಲಿ ಉತ್ತಮ ತರಹದ ಉಲ್ಲನ್ ಕೋಟಿಂಗ್, ಸೂಟಿಂಗ್ಸ್ ಸರ್ಜ್ ಪಟ್ಟಿಂಗ್, ಗೇಬರ್ಡಿನ್, ಶಾಲು, ರಗ್ಗು, ಶರ್ಟಿಂಗ್ ಮುಂತಾದ್ದುಗಳು, (Ex Mill) ಎಕ್ಸ್ ಮಿಲ್ ರೇಟಿಗೆ ಸಿಗುತ್ತೆ. ಸೊಸೈಟಿಯವರೂ, ಹೋಲ್ ಸೇಲ್ ಮತ್ತು ರಿಟೇಲ್ ವ್ಯಾಪಾರಿಗಳೂ ನೇರವಾಗಿ ನಮ್ಮ ಅಂಗಡಿಗೆ ಬಂದು ಬೇಕಾದ ಮಾಲುಗಳನ್ನು ಕೊಂಡುಕೊಳ್ಳತಕ್ಕದ್ದು.

ಎಂ. ರಿಕಬ್‌ಚಂದ್ ಮಿಟ್ಟಾಲಾಲ್ ಅಂಡ್ ಕಂಪನಿ,

ಉಲ್ಲನ್ ಮಿಲ್ ಏಜೆಂಟ್ಸ್, ಅಶೋಕ ರೋಡ್, ಮೈಸೂರು.

ಫೋನ್ ನಂ 668

ಶ್ರೀ ಗಾಯತ್ರಿ ಟಾಕೀಸ್

21-9-48 ರಿಂದ 3 ದಿನಗಳು ಮಾತ್ರ

ಪ್ರತಿ ದಿನ ಮೂರು ಆಟಗಳು

ಅಮೋಘ ಶಕ್ತಿಶಾಲಿ ಕಥೆ

ಬೂಮ್‌ರ್ಯಾಂಗ್

Next Change -
ANTHONY ADVERSE

ಭೂಮಿಯು ಬಿರಿತು ಬಿ... ೫೦೦ ಜನರ ಮರಣ

ಅಸ್ಸಾಮಿನ ಗರೋ ಪ ... ದಲ್ಲಿ ೧೬ ನೇ ತಾರೀಖು ಭೂಮಿಯು ಬಿಟ್ಟು, ಗಂಡಸರು, ಹೆಂಗಸರು ಮಕ್ಕಳು ಸೇರಿದಂತೆ ೫೦೦ ಜನರು ... ರಿಂದೂ, ಒಂದು ಮೈಲಿ ಉದ್ದ ... ಮೈಲಿ ಅಗಲದಷ್ಟು ಭೂಮಿಯು ... ರಾಗಿ ಬಿಟ್ಟು ಒಂದು ಹಳ್ಳಿಯು ... ವಾಗಿ ಕುಸಿದುಹೋಯಿತೆಂದೂ ... ದೆ. ಅಸಿಸ್ಟೆಂಟ್ ಪೊಲಿಟಿಕಲ್ ... ಗರೋ ಮತ್ತು ಗರೋ ಪ್ರದೇಶದ ... ದಾರಿಗಳು ಸತ್ತರು ... ಉಯುವುದಕ್ಕೆ ... ಭಾರಿ ಗುಡುಗು ... ವೃಷ್ಟಿಯಿಂದಲೂ ತಿಳಿದುಬಂದಿದೆ.

ಬೆಳಗಿನ ಪ್ರದರ್ಶನಗಳು

10 ಘಂಟೆಗೆ

ತಾ|| 24-9-48 ರಿಂದ

ನಾಲ್ಕು ದಿನಗಳು ಮಾತ್ರ

ಪ್ರಭಾತರವರ

ಗೋಪಾಲ ಕೃ...

(ಹಿಂದಿ)

ಪಾತ್ರ:- ಶಾಂತ ಆಪ್ಟೆ, ... ಮುತ್ತಿತರರು

ಒಲಂಪಿಯಾ ಟಾಕೀಸ್

ಅಪೆರಾ ಟಾಕೀಸ್

19—9—48 ರಿಂದ

ಪ್ರತಿ ದಿನ 3 ಆಟಗಳು

ಚಂಚಲ ಲಕ್ಷ್ಮಿ...

ಪಾತ್ರ:-ವಿ ನಾಗಯ್ಯ, ... ನಾರಾಯಣರಾವ್

ಎಸ್. ಎಗ್. ಸಂದೀಪ್ ಅಂಡ್ ಸನ್ಸ್ ರವ...

ಯೂನಿವರ್ಸಲ್ ಹೇರ್ ... ತಲೆ ನೋವು, ಕಾಲು ನೋವು ಮುಂ... ಸಕಲ ಬಾಧೆಗಳಿಗೂ ...

ಮಹಾ ಸುಗಂಧರಾಜ ತೈಲ:—)
ಚಂದನಾದಿ ತೈಲ:—)
ಭೃಂಗರಾಜ ತೈಲ:—)
—ತಲೆಗೆ ಹಾಕಲು ಉತ್ತಮ ... ತೈಲಗಳು

ಪಂಚಾಮೃತ— ಮಲೇರಿಯಾ ... ಗಳಿಗೆ ಸಿದ್ಧ ಸಂಜೀವಿನಿ.

ಮಹಾಕೇಶವ ತೈಲ —ತಲೆ ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ ... ಡ್ರೇನ್ ಟಾನಿಕ್ ...

ಮೈಸೂರು ಆಯುರ್ವೇದಿಕ್ ಫಾರ್ಮಸಿ ...

Edited printed and published by A. R. Nagarajan at the Sadhvi Press, D. Subbaiah Road Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೨೨-೯-೪೮ [ಸಂಚಿಕೆ ೭೧

ಸರ್ ಮಿರ್ಜಾರವರು ಹೈದ್ರಾಬಾದ್ ಪ್ರಧಾನಿ ?

ಸರ್ ಮಿರ್ಜಾರವರು ಹೈದ್ರಾಬಾದ್ ಪ್ರಧಾನಿಯೇ

ಹೈದರಾಬಾದಿನಲ್ಲಿ ತಾತ್ಕಾಲಿಕ ಮಂತ್ರಿ ಮಂಡಲದ ರಚನೆಯ ವಿಷಯವಾಗಿ ನಿಜಾಮರು ಸರ್ ಮಿರ್ಜಾ, ಶ್ರೀ ಕೆ. ಎಂ. ಮುನ್ಷಿ ಮತ್ತು ಮೇ|| ಜ|| ಚೌಧುರಿಯವರುಗಳೊಡನೆ ಸಮಾಲೋಚನೆ ನಡೆಸುತ್ತಿರುವುದು ತಿಳಿದುಬಂದಿದೆ.

[illegible] ಗಳು ವಿನಾಶಕ ಟೀಕೆಗಳನ್ನು [illegible] ಸರ್ಕಾರದವರಿಗೆ ಬೆಂಬಲ ನೀಡ [illegible] ಸ್ವಾತಂತ್ರ್ಯದ ಸಂಗಡ ಜವಾ [illegible] ಇರಬೇಕು

ರಾಜ್ಯಾಂಗ ವ್ಯವಸ್ಥೆಯು ನಿಧಾನವಾಗ [illegible] ಬಗ್ಗೆ ಅನೇಕ ಟೀಕೆಗಳು ಬರು [illegible] ಅವಶ್ಯ ಜಾಗ್ರತೆ ಮಾಡಬೇಕಾದ [illegible] ಆದರೆ ಕೇಂದ್ರದಲ್ಲಿ ರಾ [illegible] ರಚನೆಯಾಗುವವರೆಗೂ ನಾವು [illegible] ದಿಂದ ಅನೇಕ ಕಷ್ಟಗಳು ಉಂ [illegible]

ಕಾಶ್ಮೀರದ ಮಾಜಿ ಪ್ರಧಾನಿಗೆ ಕಠಿಣ ಶಿಕ್ಷೆ

ಕಾಶ್ಮೀರದ ಮಾಜಿ ಪ್ರಧಾನಿ ಪಂಡಿತ ರಾಮಚಂದ್ರ ಕಾಕರ ಮೇಲೆ ಅನೇಕ ಅ [illegible] ಗಳನ್ನು ಹೊರಿಸಿ ಮೊಕದ್ದಮೆ. ಹೂಡಲಾಗಿತ್ತಷ್ಟೆ ಅವರಿಗೆ ನೆನ್ನೆ ದಿವಸ ಎರಡು ವರ್ಷ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಲಾಯಿತು

ತೆಂಗಿನ ಮರದ ಉದ್ದದ ಹಬ್ಬಾವು

ದಕ್ಷಿಣ ಮಲಬಾರಿಗೆ ಸೇರಿದ ಮೇಲುವ [illegible] ಯಲ್ಲಿ ಭಾರಿ ತೆಂಗಿನ ಮರದ ಉದ್ದದ ಒಂದು ಹೆಬ್ಬಾವಿಗೂ ಮತ್ತು ಒಂದು ಕೋತಿಗೂ ಜಗಳ ನಡೆದ, ಕೋತಿ [illegible] ಹಾವು ನುಂಗಿತೆಂದು ವರದಿಯಾಗಿದೆ ಹೆಬ್ಬಾವನ್ನು ಸಾಯಿಸಲು ೮ ಬಾರಿ ಗುಂಡಿನಿಂದ ಹೊಡೆಯ ಬೇಕಾಯಿತೆಂದೂ ಹೇಳಲಾಗಿದೆ

ಜೈಲಿನಿಂದ ಪರಾರಿಯಾಗಿದ್ದ ಕಮ್ಯೂನಿಸ್ಟರ ದಸ್ತಗಿರಿ

ಮೈಸೂರು ೮

ಇಗ್ಗೆ ಸುಮಾರು ೩ ತಿಂಗಳ ಹಿಂದೆ ಶಿವಮೊಗ್ಗ ಜೈಲಿನಿಂದ ಕನ್ನ ಹಾಕಿ, ಪರಾರಿಯಾಗಿದ್ದ ಕಮ್ಯೂನಿಸ್ಟ್ ಮುಖಂಡರಾದ ಬಿ ದೇವರಾಜೇ ಅರಸ್ ಮತ್ತು ಎಂ. ಎಸ್ ಉಗ್ರಪ್ಪನವರನ್ನೂ ಸಹ ನಗರದ ಮ [illegible] ಸೆಂಟ್ರಲ್ ಸ್ಪೇಷಲ್ ಬ್ರಾಂಚ್ ಪೋಲೀಸ್ [illegible] ನೆನ್ನೆ ರಾತ್ರಿ ಮಂಡಿ ಮೊಹಲ್ಲಾ ಕಲಾಸಗೇರಿ [illegible] ಮಂದಿರದಲ್ಲಿ ಪತ್ತೆ ಹಚ್ಚಿ ದಸ್ತಗಿರಿ ಮಾಡಿದ್ದಾರೆ.

ಹೈದರಾಬಾದ್ ಮತ್ತು ಸಿಕಂದರಾಬಾದ್ ಗಳಲ್ಲಿ ಮೀನು ಹಿಡಿಯುವವರು ಕೆರೆಗೆ ಹೋದಾಗ ಅವರಿಗೆ ಮೀನುಗಳು ಸಿಕ್ಕದೆ ರಜಾಕರರ ಉಡುಪುಗಳು ಮತ್ತು ಶಸ್ತ್ರಾಸ್ತ್ರಗಳು ಸಿಕ್ಕುತ್ತಿವೆಯೆಂದು ಹೇಳಲಾಗಿದೆ.

ಕಾಂಗ್ರೆಸ್ಸಿನವರ ಮೇಲೆ ಎಲ್ಲೆಲ್ಲೂ ಪಿತೂರಿಗಳು ನಡೆಯುತ್ತಿವೆ. ಹಣವಂತರು ಕೆಲವು ಕಂಟ್ರಾಕ್ಟರುಗಳು, ಬಸ್ಸಿನವರು ಮತ್ತು ಇತರರೂ ಪಿತೂರಿ ನಡೆಸುತ್ತಿದ್ದಾರೆ ಕಾಂಗ್ರೆಸ್ಸನ್ನು [illegible] ಬಡಿಸಲು ಸನ್ನಾಹ ನಡೆಯುತ್ತಿದೆ ಆದ್ದರಿಂದ ಕಾಂಗ್ರೆಸ್ ಕರ್ತರುಗಳು ಇದನ್ನು ತಡೆಗಟ್ಟಿ, ಕಾಂಗ್ರೆಸ್ಸನ್ನು ಬಲಪಡಿಸಬೇಕು ಕಾಂಗ್ರೆಸ್ಸಿನ ದಳೇ ದೇಶದ ಕಲ್ಯಾಣ

ರಚನಾತ್ಮಕ ಕೆಲಸಗಳನ್ನು ನಡೆಸುವ ಬಗ್ಗೆ ಸಲಹೆಗಳನ್ನು ಕೊಡಲು ಒಂದು ಸ [illegible] ಮಿತಿಯನ್ನು ರಚಿಸಲಾಯಿತು

೧೪ ಲಕ್ಷ ರೂ. ಹೈದ್ರಾಬಾದ್ ಕರೆನ್ಸಿ ನಾಶ?

ಹೈದರಾಬಾದಿನ ಮೇಲೆ ನಡೆದ ಪೋಲೀಸ್ ಕಾರ್ಯಾಚರಣೆ ಸಂದರ್ಭದಲ್ಲಿ ೧೪ ಲಕ್ಷ ರೂ.ನ ನೈಜಾಂ ಕರೆನ್ಸಿ ನೋಟುಗಳನ್ನು ಸುಡಲಾಯಿತೆಂದು ವರದಿಯಾಗಿದೆ, ಈ ಬಗ್ಗೆ ತನಿಖೆ ನಡೆಸಬೇಕೆಂದು ಅಲ್ಲಿನ ಮಿಲಿಟರಿ ಸರ್ಕಾರವು ಆಜ್ಞೆ ಮಾಡಿದೆ.

ಪಶ್ಚಿಮ ಯೂರೋಪಿನ ರಕ್ಷಣಾ ಸಂಸ್ಥೆ

ಪಶ್ಚಿಮ ಯೂರೋಪಿನ ರಕ್ಷಣೆಗಾಗಿ ಫೀಲ್ಡ್ ಮಾರ್ಷಲ್ ಮಾಂಟಿಗೋಮರಿ ಯವರ ಅಧ್ಯಕ್ಷತೆಯಲ್ಲಿ ಒಂದು ರಕ್ಷಣಾ ಸಂಸ್ಥೆಯನ್ನು ಏರ್ಪಡಿಸಲಾಗಿದೆ. ಫ್ರಾನ್ಸ್, ನೆದರ್ ಲೆಂಡ್ ಬೆಲ್ಜಿಯಂ, ಲಕ್ಸೆಂಬರ್ಗ್ ರಾಷ್ಟ್ರಗಳ ಪ್ರತಿನಿಧಿಗಳೂ ಅದರಲ್ಲಿರುವರು.

ರಾಷ್ಟ್ರ ಧ್ವಜಕ್ಕೆ ಅಪಮಾನ ಮಾಡುವವರಿಗೆ ಶಿಕ್ಷೆ

ಭಾರತದ ರಾಷ್ಟ್ರ ಧ್ವಜವನ್ನು ಮಾರಾಟ ಹೋಗಗೊಡಿಸುವವರನ್ನೂ ಮತ್ತು ಅಪಮಾನ ಮಾಡುವವರನ್ನೂ ಶಿಕ್ಷೆಗೆ ಒಳಪಡಿಸಲಾಗುವುದೆಂದೂ ಮದರಾಸ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಮುಖ್ಯ ಪ್ರಕಟಣೆ

ಶಿವಮೊಗ್ಗ ರಾಷ್ಟ್ರೀಯ ಪ್ರೌಢಶಾಲಾ ಕಟ್ಟಡ ನಿಧಿ ಸಂಗ್ರಹ ಲಾಟರಿಯ ಟಿಕೇಟುಗಳನ್ನು ನಮ್ಮ ಕಡೆಯಾಗಿ ಮೈಸೂರು ಜಿಲ್ಲೆಯಲ್ಲಿ ಮಾರಾಟ ಮಾಡುತ್ತಿರುವ ಪ್ರತಿಯೊಬ್ಬ ಮಾರಾಟಗಾರನೂ ಮಾರಾಟ ಮಾಡಿದ ಟಿಕೇಟಿನ ಹಣವನ್ನೂ ಕೌಂಟರ್ ಫಾಯಿಲುಗಳನ್ನೂ ೧೫-೧೦-೪೮ ನೇ ಸಂಜೆಯೊಳಗೆ ನಮಗೆ ತಲುಪಿಸಬೇಕು, ಹಾಗೆ ನಮಗೆ ತಲುಪದಿದ್ದಲ್ಲಿ ಆ ಟಿಕೇಟುಗಳನ್ನು ಲಾಟರಿಯಲ್ಲಿ ಎತ್ತಲಾಗುವುದಿಲ್ಲ. ಟಿಕೇಟು ಕೊಂಡ ಪ್ರತಿಯೊಬ್ಬರೂ ಕೊಂಡವರಲ್ಲಿ ಹೋಗಿ ತಮ್ಮ ಟಿಕೇಟಿನ ಹಣ ಮತ್ತು ಕೌಂಟರ್ ಫಾಯಿಲುಗಳು ನಮಗೆ ಸೇರಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕು ೧೫-೧೦-೪೮ ನೇ ತಾರೀಖಿನ ನಂತರ ಯಾವ ವ್ಯವಹಾರಕ್ಕೂ ನಾವು ಜವಾಬ್ದಾರರಲ್ಲ

Address

Shanthi Agencies

Stall No E 13

Dasara Exhibition Buildings,

Mysore

ಗಾಂಧಿ ಜಯಂತಿ

ಮೈಸೂರು ೮

ಗಾಂಧಿ ಜಯಂತಿ ಸಂಬಂಧದಲ್ಲಿ ನಾಳೆ ಸಂಜೆ ೬-೩೦ ಘಂಟೆಗೆ ಟೌನ್ಹಾಲಿನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ. ಪ್ರಧಾನ ಮಂತ್ರಿ ಶ್ರೀ॥ ಕೆ ಸಿ ರೆಡ್ಡಿಯವರು ಸಭೆಯಲ್ಲಿ ಭಾಗವಹಿಸುವರು.

ಕಾಂಗ್ರೆಸ್ ಅಧಿವೇಶನಕ್ಕೆ ಸ್ವಾತಂತ್ರ್ಯ ಜ್ಯೋತಿ

ಕಳೆದ ವರ್ಷ ಕಾಂಗ್ರೆಸ್ ಮಹಾಧಿವೇಶನವು ನಡೆದ ಮೀರತ್ ನಗರದಿಂದ ಸ್ವಾತಂತ್ರ್ಯ ಜ್ಯೋತಿಯನ್ನು ಈ ಸಾರಿ ಜಯಪುರದಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನಕ್ಕೆ ತೆಗೆದುಕೊಂಡು ಹೋಗಲಾಗುವುದು ಈ ಜ್ಯೋತಿಯನ್ನು ಮೀರತ್ತಿನಲ್ಲಿ ಹತ್ತಿಸಿ, ಸರದಿ ಪ್ರಕಾರ ದಾರಿ ನಡಿಗೆಯಲ್ಲಿಯೇ ಅದನ್ನು ಕಾಂಗ್ರೆಸ್ ಸ್ವಯಂ ಸೇವಕರುಗಳ ಕೈಲಿ ಕಳುಹಿಸಲಾಗುವುದು.

ನೈಜಾಮರ ರೈಲ್ವೆ ಅಧಿಕಾರಿಗಳ ಸಸ್ಪೆಂಡ್

ಹೈದರಾಬಾದಿನ ರೈಲ್ವೆಯ ಜನರಲ್ ಮ್ಯಾನೇಜರ್ ಸಯ್ಯದ್ ಮಹಮದ್ ಮತ್ತು ರೈಲ್ವೆ ಸಲಹೆಗಾರರಾದ ಮೀರ್ ಬಹದ್ದೂರ್ ಘರ್ ಅಲಿಯವರನ್ನು ಅಲ್ಲಿನ ಮಿಲಿಟರಿ ಸರ್ಕಾರದವರು ಸಸ್ಪೆಂಡ್ ಮಾಡಿದ್ದಾರೆ ರೈಲ್ವೆ ಸಾಮಾನು ಮತ್ತು ಇತರ ಕೇಂದ್ರಗಳನ್ನು ನಾಶಪಡಿಸಲು ರಜಾಕರರಿಗೆ ಸಹಾಯ ಮಾಡಿದ್ದರೆಂದು ಅವರ ಮೇಲೆ ಆಪಾದನೆ ಹೊರಿಸಲಾಗಿದೆ.

ಭೋಪಾಲ್ ನವಾಬರ ಮೆಕ್ಕಾ ಯಾತ್ರೆ

ಭೋಪಾಲ್ ನವಾಬರು ಮೆಕ್ಕಾಕ್ಕೆ ಯಾತ್ರೆ ಹೋಗುವುದರಿಂದ ಅವರ ಗೈರು ಹಾಜರಿನಲ್ಲಿ ಸಂಸ್ಥಾನದ ಆಡಳಿತ ನಿರ್ವಹಿಸಲು ಒಂದು ಸಮಿತಿಯನ್ನು ಏರ್ಪಡಿಸಲಾಗಿದೆ ಯೆಂದೂ ಅದು ಸಂಸ್ಥಾನವು ಭಾರತಕ್ಕೆ ಸೇರುವ ಒಪ್ಪಂದದ ಪ್ರಕಾರ ಅಡಳಿತ ನಡೆಸುವುದೆಂದೂ ಹೇಳಲಾಗಿದೆ.

ಸ್ಟಾಲಿನ್ ರವರ ಪ್ರತಿಮೆಯನ್ನು ಗಲ್ಲಿಗೇರಿಸಲಾಯಿತು

ಅಮೆರಿಕದ ಕ್ಯಾಂಪಿನಲ್ಲಿ ನಡೆದ [illegible] ಕಾಸಿಮಿರ್ ಪುಲಾಸ್ಕಿಯವರ ೨೦೦ ನೇ ವಾರ್ಷಿಕ ದಿನಾಚರಣೆಯ ಸಂಬಂಧದಲ್ಲಿ [illegible] ಪೋಲೆಂಡಿನ ಜನ [illegible] ಸ್ಟಾಲಿನ್ನರ ಪ್ರತಿಮೆಯನ್ನು ಗಲ್ಲಿಗೇರಿಸಿ ಅವರ ಧ್ವಜವನ್ನು [illegible] ಸುಟ್ಟುಹಾಕಿ ಹಾರಿಸಿದರೆಂದೂ, ಈ ಕೂಡಲೇ ರಷ್ಯಾ ಮೇಲೆ ಯುದ್ಧ ಸಾರಬೇಕೆಂಬ ಘೋಷಣೆ [illegible] ಅವರುಗಳು ಮೆರವಣಿಗೆ ನಡೆಸಿದರೆಂದೂ ವರದಿಯಾಗಿದೆ.

ಸ್ವಿಟ್ಜರ್ಲೆಂಡಿಗೆ ಭಾರತದ ಸಚಿವರು

ಮೈಸೂರು ೮

[illegible] ರದ ರಂಚಾರ [illegible] ಸ [illegible] ರಫಿ ಅಹಮದ್ ಕಿ [illegible] ಗಿನನೇ ತಾ॥ ರಾಜ [illegible] ಶ್ರೀಮನ್ನಾರಾಯಣ [illegible] ಆಚ್ಛೆ ನಂತ [illegible] ೧೪ನೇ ತಾ॥ [illegible] ಪ್ರಯಾಣ ಬೆಳೆಸುವರು

CHAMUNDESWARI
Talkies

Morning Shows At 10-30
Warner Bro's
Kings Row
—:Featuring:—
ROBERT COMMINGS,
ANN SHERIDAN,
BETTY FIELD
and certhe
The Picture Cata loge, the Catastrophes & passions of a Small town

ಗಾಂಧಿ ಜಯಂತಿ
ಕುಟಿಲ ಆಶ್ರಮದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಗಾಂಧಿ ಜಯಂತಿಯು ಜರುಗುವುದು.

ಅಪೆರಾ ಟಾಕೀಸ್
ತಾ॥ 9—10—48 ರಿಂದ
ಪ್ರತಿ ದಿನ 3 ಆಟಗಳು
ಸುವರ್ಣಮಾಲಾ
(ತೆಲುಗು)
ಪಾತ್ರ—ಬಾಲ ಸರಸ್ವತಿ, ...

ಅಶೋಕ ಪೆಯಿನ್ ಬಾಮ್
ನೋವು ನಿವಾರಣೆಗೆ ಶ್ರೇಷ್ಠವಾದ ದಿವ್ಯೌಷಧ
ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ ಬಾಟಲ್ ಒಂದಕ್ಕೆ 0—15—0
—:Distributors:—
The Pharmaceutical Corporation,
Malleswaram P. O. Bangalore 3.
VISIT Our Stall No 42
Dasara Exhibition

8-10-48 ರಿಂದ
2 ನೇ ವಾರದ ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು, 1 ನೇ ಆಟ ಸಂಜೆ 6—30, 2 ನೇ ಆಟ ರಾತ್ರಿ 10
ಪ್ರಭಾ ಮತ್ತು ಗಣೇಶಾ ಟಾಕೀಸುಗಳಲ್ಲಿ
★ ವೇತಾಳಪುರ ★
(ವೇತಾಳಪುರ) (ತಮಿಳು)
—:ಭೂಮಿಕೆ:—
T.R.ಮಹಾಲಿಂಗಂ
ಯೋಗಮಂಗಳಂ
ಸಾರಂಗಪಾಣಿ
ಲಲಿತ ಪದ್ಮಿನಿ
ಬೇಬಿ ಕಮಲಾ



ಲಲಿತ ಪದ್ಮಿನಿಯವರ ಹೃದಯಂಗಮವಾದ ಹಾವಾಡಿಗ ನೃತ್ಯವನ್ನೂ, ಮನರಂಜಕವಾದ ನರ್ತನವನ್ನೂ ನೋಡಿ ನಲಿಯಲು ಸುಸಮಯ.
ಬೇಬಿ ಕಮಲಾ ರಾಧಾಕೃಷ್ಣ ನೃತ್ಯವನ್ನು ನೋಡಿ ಆನಂದಿಸಿ
—:It is a **TALLAM** Release:—

MORNING SHOW ಬೆಳಗಿನ ಆಟಗಳು
Two days Only Dasara Special Programme
ಪ್ರಭುದೇವಾ ಟಾಕೀಸ್
ನರೇಂದ್ರ ಪಿಕ್ಚರ್ಸ್‌ರವರ
★ ರಾಜಮುಕ್ತಿ ★
ತಾ॥ 10-10-48ನೇ ಭಾನುವಾರ ಮತ್ತು ಸೋಮವಾರ
ಎರಡು ದಿವಸಗಳು ಮಾತ್ರ : : ಬೆಳಿಗ್ಗೆ ೧೦ ಘಂಟೆಗೆ
ಪಾತ್ರ:—ತ್ಯಾಗರಾಜ ಭಾಗವತರ್, ಭಾನುಮತಿ, ಜಾನಕಿ ಮುಂತಾದವರು

9—10—48 ರಿಂದ ದಿನವಹಿ 3 ಆಟಗಳು
7 ಪ್ರಮುಖ ಚಿತ್ರಮಂದಿರಗಳಲ್ಲಿ ಏಕ ಕಾಲದಲ್ಲಿ ಪ್ರದರ್ಶನ
ಮೈಸೂರು ಚಾಮುಂಡೇಶ್ವರಿ ಮತ್ತು ಪ್ರಭುದೇವಾ
ಬೆಂಗಳೂರು—ಸೂಪರ್, ಸ್ಟೇಟ್ಸ್ ಮತ್ತು ಶ್ರೀ, ಕೆ. ಜಿ. ಎಫ್.- ಒಲಂಪಿಯಾ ಮತ್ತು ವಸಂತರ್
ನರೇಂದ್ರ ಪಿಕ್ಚರ್ಸ್‌ರವರ ತಮಿಳು ಚಿತ್ರ
★ ರಾಜಮುಕ್ತಿ RAJAMUKTI ★
[ತಮಿಳು]
ನಟವರ್ಗ—ಎಂ. ಕೆ. ತ್ಯಾಗರಾಜ ಭಾಗವತರ್, ಭಾನುಮತಿ, ಜಾನಕಿ, ಸಿರಸನ್ನಿರು ಬಾಲ, ಪಿ. ಜಿ. ವೆಂಕಟೇಶನ್, ಟಿ ಆರ್ ರಾಮಚಂದ್ರನ್, ಚಂದ್ರಾ, ...
ಈ ಚಿತ್ರಕ್ಕೆ ಎಲ್ಲಾ ವಿಭಾಗಗಳ ಶ್ರೇಷ್ಠತೆ ... 6 ವಾರ ಮುಕ್ತಾಯವಾಗಿದೆ
—:Distributors - THE KARNATAKA FILMS LTD, Bangalore —

ಜನಾರ್ದನ ಗೋಂದಕರ್ ಇವರ
ಪೂನಾ ಅಂಗಡಿ
ಬಿ. 24 ಎಕ್ಸಿಬಿಷನ್
ಅಸಲಿ ಪೂನಾ ಸೀರೆಗಳು ಚೋಳಿ ಖಣಗಳು ಜಿನ್ನಸ್‌ವಾರ್ ತಂದಿದ್ದೇವೆ. ಎಲ್ಲಾ ಮುಂದಲಿ ಬಂದು ನೋಡಿ ಲಾಯಕ್ ಮಾಲು ತೆಗೆದುಕೊಂಡು ನಮ್ಮ ಕೆಲಸಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

Edited printed and published by A. R. Nagarajan at the Sadhvi Press D. Subbaiah Road Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೯-೧೦-೪೮ [ಸಂಚಿಕೆ ೪೬

ಹೈದರಾಬಾದಿನ ಇನ್ನೂ ೭ ಕೋಟಿ ರೂ. ಸೂರೆ

ಗಿರುತ್ತದೆ. ಇರುವ ಕೈಗಾರಿಕೆಗಳನ್ನು ಉತ್ತಮ ಪಡಿಸುವುದಲ್ಲದೆ ಹೊಸ ಕೈಗಾರಿಕೆಗಳನ್ನು ಆರಂಭಿಸುವುದಕ್ಕೂ ಯೋಜನೆಗಳು ಸಿದ್ಧವಾಗಿವೆ.

ಸಂಸ್ಥಾನದ ಆರ್ಥಿಕ ಪರಿಸ್ಥಿತಿ

ಕಳೆದ ಸಾಲಿನ ಜಮಾ ಖರ್ಚಿನ ಪೂರ್ಣ ಭಾವಿ ಪಟ್ಟಿಯಿಂದ ಉತ್ಪತ್ತಿಯಲ್ಲಿ ೧೦.೬೮ ಲಕ್ಷ ರೂ., ವೆಚ್ಚದಲ್ಲಿ ೬೦.೬೮ ಲಕ್ಷ ರೂ ಕಡಿಮೆ ಯಾಗಿರುವುದಾಗಿ ತಿಳಿದು ಬರುತ್ತದೆ. ಇದ್ದರಿಂದ ೫೮ ೭೫ ಲಕ್ಷ ರೂ ನ ಉಳಿತಾಯವು ಆಗ ವುದು. ಹಾನ ನ ಕೋಥದ ಕಾಯ ಕ್ರಮದ ದ ಕಟ್ಟ ಕಡೆಗೆ ಹ ಟ್ಟಳಿಯಲ್ಲಿ ೩ ಕೋಟಿ ರೂನಷ್ಟು ಉಳಿತಾಯವಾಗ ವುದು. ಸೌಕರ ಸಂ ಬಳದ ಬಗ್ಗೆ ವಿಶೇಷ ವೆಚ್ಚವು ತಗಲುವುದು ಭೂಕಂದಾಯದ ಪುನರ್ವಿಮರ್ಶೆಯಾದ ಮೇಲೆ ಆ ಬಾಬಿನಲ್ಲಿಯೂ ಬೋಳಿ ಬೀಳುವುದು. ಆದ್ದರಿಂದ ಹೊಸ ಆದಾಯದ ಮಾರ್ಗಗಳನ್ನು ಹುಡುಕಬೇಕಾಗುತ್ತದೆ.

ರಾಜ್ಯಾಂಗ ರಚನಾ ಸಭೆ

ಈ ಸಭೆಯು ನೇಮಿಸಿದ್ದ ಉಪ ಸಮಿತಿಗಳ ವರದಿಗಳು ಮುಂದಿನ ತಿಂಗಳ ಮಧ್ಯ ಭಾಗದಲ್ಲಿ ಸಿದ್ಧವಾಗಿ ಅನಂತರ ಶ್ರೀ ಮನ್ಮಹಾರಾಜರವರಿಗೆ ಒಪ್ಪಿಸಲ್ಪಡುವುವು. ನಮ್ಮ ರಾಜ್ಯಾಂಗವು ಸಿದ್ಧವಾದೊಡನೆಯೇ ಬರುವ ವರ್ಷದ ಆದಿ ಭಾಗದಲ್ಲಿ ನಾವು ಮಹಾ ಚುನಾವಣೆಗಳನ್ನು ನಡೆಸಬಹುದಾಗಿ ನಿರೀಕ್ಷಿಸುತ್ತೇನೆ.

ಮುಂದಿನ ಕರ್ತವ್ಯ

ಮುಂದೆ ಪ್ರಬಲವಾದ ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ಸ್ವಾತಂತ್ರ್ಯ ಸಾಧನೆಯ ನಂತರ ನಮ್ಮ ಮೇಲೆ ಕರ್ತವ್ಯಗಳೂ, ಜವಾಬ್ದಾರಿಗಳೂ ಹೇರಳವಾಗಿ ಬಿದ್ದಿವೆ.

ಭರತ ಖಂಡಕ್ಕೆ ಮಹತ್ತರವಾದ ಸಂಸ್ಕೃತಿಯಿರುತ್ತದೆ. ಆ ತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಅನ ಮುಖ್ಯ ಪಾತ್ರ ವಹಿಸಬೇಕಾಗಿದೆ. ಈ ಕಾರ್ಯದಲ್ಲಿ ರಾಷ್ಟ್ರಪಿತಾಮಹರಾದ ಮಹಾತ್ಮಾಗಾಂಧಿಯವರ ಅಮೂಲ್ಯವಾದ ಮಾರ್ಗದರ್ಶನವು ನಮಗೆ ಪ್ರತ್ಯಕ್ಷವಾಗಿ ಲಭಿಸದಂತಾಗಿದೆ. ಆದರೆ ಅವರ ಉದಾತ್ತ ತತ್ವಗಳು ನಮಗೆ ದಿವ್ಯ ಜ್ಯೋತಿಗಳಂತೆ ಬೆಳಕನ್ನು ಬೀರುತ್ತಿವೆ. ಆತ್ಮತ್ಯಾಗ ಶ್ರೇಣಿಯ ನಾಯಕರೂ, ರಾಜಕಾರಣಪಟುಗಳೂ ಆದ ಪಂಡಿತ ನೆಹರೂರವರು ನಮ್ಮ ಮುಂದಾಳಾಗಿದ್ದಾರೆ. ಭರತ ಖಂಡದ ಮುಂದಿನ ಶ್ರೇಷ್ಠವಾದ ಕಾರ್ಯ ಸಾಧನೆಯಲ್ಲಿ ನಾವೆಲ್ಲರೂ ಸ್ವ

ಅನ್ನ ದಾನ

ಮೈಸೂರು ೯

ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಿಂದ ಮಂಜೂರಾಗಿರುವ ಉದಾರವಾದ ಗ್ರಾಂಟಿನಿಂದ ಈ ದಸರಾ ಮಹೋತ್ಸವದಲ್ಲಿ ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಈ ಮಾಹೆ ೯, ೧೦, ೧೧ ಮುತ್ತ ನೇ ತಾರೀಖುಗಳಲ್ಲಿ ಎಲ್ಲಾ ಕೋಮಿನವರಿಗೂ ಅನ್ನ ಕೊಡಿಸುವಂತೆ ಬ್ರಾಹ್ಮಣ ಮತ್ತು ಲಿಂಗಾಯಿತರಿಗೆ ಬೇರೆ ಬೇರೆ ಏರ್ಪಡಿಸಿ ಭೋಜನದ ವ್ಯವಸ್ಥೆ ಮಾಡಲಾಗಿರುತ್ತದೆ. ಈ ಸೌಕರ್ಯವನ್ನು ಸ್ಥಳ ವರ್ತಕರ (ಬ್ರಾಹ್ಮಣರ ವಿನಹಾ) ಎಲ್ಲಾ ಜಾತಿ, ಕೋಮಿನ ಬಡಜನಗಳು ಉಪಯೋಗಿಸಿ ಕೊಳ್ಳಬಹುದೆಂದು ಈ ಮೂಲಕ ತಿಳಿಯಪಡಿಸಿದೆ.

ಮಧ್ಯಾಹ್ನ ೧೨ ಘಂಟೆ ಒಳಗೆ ಭೋಜನ ಕಾಲ ತಯಾರಿಸಿದ ತಕ್ಷ ಆಹಾರ ಪೂರ್ತಿ ಸವ ವರೆಗೂ ಹಂಚಲಾಗುತ್ತದೆ.—

ಕೃಷ್ಣರಾಜ ಧರ್ಮಶಾಲಾ ಕರೂಟಿ. ಸೆಂಟ್ ಫಿಲೋಮಿನಾ ಸ್ಕೂಲ್ ಲಷ್ಕರ್ ಮೊಹಲ್ಲಾ, ಆದಿ ಕರ್ನಾಟಕರವರ ಮಹಿಳಾ ವಿ.ಲ್ಯ ಸೆಂಟರ್, ಕೃಷ್ಣಮೂರ್ತಿಪುರಂ ಜನಾನಾ ಉರ್ದು ಮಿಡಲ್ ಸ್ಕೂಲ್, ಶಾಡಪ್ಪನವರ ಛತ್ರ, ಜಲಪುರಂ ಪ್ರೈಮರಿ ಸ್ಕೂಲ್.

ಪಿ. ಸೀತಾರಾಮಯ್ಯ,

ಪ್ರೆಸಿಡೆಂಟ್ ಸಭಾಧ್ಯಕ್ಷ

ಬುದ್ಧಿಯ ಬಲ, ಪ್ರಮಾಣಿಕತೆಯಿಂದ ಲೂ ಪಾತ್ರವಹಿಸೋಣ. ಈ ಅಮೋಘವಾದ ಕಾರ್ಯದಲ್ಲಿ ಮೈಸೂರು ತನ್ನ ಕರ್ತವ್ಯವನ್ನು ಈಡೇರಿಸುವಂತೆ ಸಹಕರಿಸೋಣ.

ಸಂತಾಪ ಸೂಚನೆ

ಮಿ॥ ಮಹಮದ್ ಬಿನ್ನಿ, ಶ್ರೀ ಕೆ. ಎಫ್ ನರಿಮನ್ ಮತ್ತು ಪ್ರ॥ ಸಭಾ ಸದಸ್ಯರಾದ ಶ್ರೀ ಎಂ ತಿಮ್ಮೇಗೌಡರ ನಿಧನದ ಬಗ್ಗೆ ಶ್ರೀ ಕೆ ಹನುಮಂತಯ್ಯನವರು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ಪ್ರ॥ ಸ॥ ಸಭಾ ಸದಸ್ಯರು ಎದ್ದು ನಿಂತು ಮೌನವಾಗಿ ಎದ್ದು ನಿಂತ ಅಂಗೀಕರಿಸಿದರು.

ಹೈದರಾಬಾದಿನ ಬಗ್ಗೆ ಅಭಿನಂದನೆ

ಹೈದರಾಬಾದಿನಲ್ಲಿ ನಡೆದ ಪೊಲೀಸ್ ಕಾರ್ಯಾಚರಣೆಯಲ್ಲಿ ಮೈಸೂರು ಮತ್ತು ಹೈದರಾಬಾದಿನ ಸಿಪಾಯಿಗಳು ತೋರಿಸಿದ ಧೈರ್ಯ ಸಾಹಸ ಎತ್ತಿ ಅಕ್ಷಿನ ಕಾಂಗ್ರೆಸ್ಸಿನವರು ... ಕಪುಗಳು ... ಅಭಿನಂದನ ಸೂಚಕ ಶ್ರೀ ... ನಿರ್ಣಯವನ್ನು ... ಅಂಗೀಕರಿಸಲಾಯಿತು

...ಪ್ರತಿನಿಧಿ ಸಭೆ

...ಮಧ್ಯಾಹ್ನ ಆರಂಭ

ಮೈಸೂರು ೯

ಪ್ರಜಾಪ್ರತಿನಿಧಿ ಸಭೆಯು ನ ...ವೇಶನವು ಈ ದಿನ ಮಧ್ಯಾ ...ಗೆ ಜಗನ್ಮೋಹನ ಭವನದ ...ಯಿತ ... ಚಾರ್ಜ ದಿ ...ಧಾನ ಮಂತ್ರಿಗಳೂ ಆದ ಶ್ರೀ ...ವರು ಅಧ್ಯಕ್ಷತೆ ವಹಿಸಿದ್ದರು ...ಮಂತ್ರಿಗಳ ಹಿಂದೆ ರಾ ಸಭಾಧ್ಯಕ್ಷರೂ, ನ್ಯಾಯಾಧಿಪಾಧ್ಯಕ್ಷರೂ ಮತ್ತು ಸದಸ್ಯರು ...ಕಾಂಗ್ರೆಸ್ ಕಾರ್ಯಕಾರಿ ಸ ...ದಗಳೂ ಕುಳಿತಿದ್ದರು.

...ಕಾಂಗ್ರೆಸ್ಸಿಗೆ ಸೇರಿದ ಪ್ರಾಂತ ...ಸಭಾ ಸದಸ್ಯರಾದ ಶ್ರೀ ಟಿ ಚ ...ರು ಕಾಂಗ್ರೆಸ್ ಪಕ್ಷದವರೊಡನೆ

...ನಿಲುವಳಿ ಸೂಚನೆಗಳು ...ವ ರಾಜಧಾನಿಯ ಮಹಾರಾ ...ನ್ನು ಅದು ಈಗ ಇರುವ ಸ್ಥಳ ...ದಿಂದ ಕಟ್ಟಡಕ್ಕೆ ಬದಲಾ ...ಗೋಪಾಲರಾವ್ ವಿಚಾರಣಾ ...ಸಂಬಂಧಪಟ್ಟಂತೆ ಇತ್ತೀಚಿಗೆ ...ವಿಶೇಷ ಶಾಸನ ಮತ್ತು ಅ ...ಟಿಯನ್ನು ಮತ್ತೆ ಜಾರಿಗೆ ತ ...ಗಳನ್ನು ಕುರಿತು ಜಿ॥ ಮಾ ...ಸೇರುವರು ನಿಲುವಳಿ ಸೂ ...ಮಂಡಿಸಿದ್ದಾರೆ. ಶ್ರೀ ಭಂ ...ಉಪವಾಸದ ಹಕೋಟೆ ವಿಷ ...ಶ್ರೀ ಎಂ ಶಂಕರಲಿಂಗೇ ...ಬಚತ್ರ, ಕಹಳೆ ಪತ್ರಿಕೆಗಳಿಗೆ ...ಕೊಟ್ಟಿರುವುದು, ದೇಶದ ಅ ...ತಿ, ರಾಜಾಜಿಯವರು ಬೆಂಗ ...ಕೊಟ್ಟ ಸಂದರ್ಭದಲ್ಲಿ ಅಲ್ಲಿ ...ಪ್ರಯೋಗ, ದೊಂಬಿನ ಪೊಲೀ ...ದ ಸಂಬಂಧದಲ್ಲಿ ಗುಂಡು ...ದು ಪರಿಣಾಮವಾಗಿ ಇಬ್ಬರು ...ಮರಣವಾದ ವಿಷಯಗಳನ್ನೆತ್ತಿ ...ನಿಲುವಳಿ ನಿರ್ಣಯಗಳನ್ನ ...ರ

...ರೆಡ್ಡಿಯವರ ಭಾಷಣ

...ಲಿಂಗಾರೆಡ್ಡಿಯವರು ಸಮಾ ...ಹೈದರಾಬಾದು ಸಂಸ್ಥಾನದ ಸ್ಥಿತಿಗತಿ ...ವರು ಪಾಕಿಸ್ತಾನದ ಗವರ್ನರ್ ...ಜಿನ್ನಾ ಮತ್ತು ಬೊಂಬಾಯಿ ...ಮುಖಂಡರಾದ ಶ್ರೀ ಕೆ. ಎಫ್ ...ಗಾಗಿ ಸಂತಾಪವನ್ನು ಸೂಚ ...ವಾರ ತಿಂಗಳಿನಿಂದ ಇರುವ ...ವಿದ್ಯಮಾನಗಳನ್ನು ವಿವರಿಸಿ ...ಯನ್ನು ರದ್ದು ಮಾಡಿದನಂ ...ತ್ತೆ ಅದನ್ನು ವಿಧಿಸಬೇಕಾಗಿರುವ ...ತಿಳಿಸಿದರು. ಹೊಸ ವಿಚಾರ ...ಬೆಳೆಯುವವರಿಗೆ ಶೇಕಡ ...ಸಂದರ್ಭಗಳಲ್ಲಿ ಸಂ ರ ...ಬೆಯನ್ನು ಕೊಡಲಾಗುವುದೆಂ

...ಸ್ಥಾನವು ಆಹಾರದ ವಿಷಯ ...ಪೂರ್ಣವಾದ ದೇಶವಲ್ಲವಾದುದ ...ಸರ್ಕಾರದ ಸಹಾಯವನ್ನು ...ತ್ತದೆ. ಆದ್ದರಿಂದ ಆ ಸ ...ಸೀತಿಗಳನ್ನೇ ನಾವು ಅನುಸ ...ಅವರಂತೆಯೇ ನಾವೂ ...ಪತೋಟಿಯನ್ನು ಜಾರಿಗ

...ಕೆಯ ಅಭಿವೃದ್ಧಿ

...ಸ್ಥಾನವು ಕೈಗಾರಿಕೆಗಳ ಬೆಳ ... ಹೆಸರುವಾಸಿಯಾ

ಮತ್ತೆ ಹೈದ್ರಾಬಾದಿನ ೭ ಕೋಟಿ ರೂ. ದುರ್ವಿನಿಯೋಗ

ಲಂಡನ್ನಿನಲ್ಲಿರುವ ಹೈದ್ರಾಬಾದಿನ ಮಾಜಿ ಪ್ರತಿನಿಧಿ ನವಾಬ್ ಮೊಯಿನ್ ಜಂಗ್‌ರವರು ಪಾಕಿಸ್ತಾನದ ಹೈ ಕಮಿಷನರವರ ಲೆಖ್ಖಕ್ಕೆ ಹಿಂದೆ ಲಂಡನ್ ಬ್ಯಾಂಕಿನಲ್ಲಿದ್ದ ಹೈದರಾಬಾದ್ ಹಣದಿಂದ ಒಂದು ಕೋಟಿ ನಲವತ್ತು ಲಕ್ಷ ರೂ ಗಳನ್ನು ವರ್ಗಾಯಿಸಿದ್ದಲ್ಲದೆ ಮತ್ತೆ ತಮ್ಮ ಸ್ನೇಹಿತರುಗಳ ಲೆಖ್ಖಕ್ಕೆ ಆರು ಕೋಟಿ ರೂ ಗಳನ್ನು ವರ್ಗಾಯಿಸಿರುವುದಾಗಿಯೂ ತಿಳಿದು ಬಂದಿದೆ. ಅಲ್ಲದೆ ಅವರು ಸಂಸ್ಥಾನದ ಖಜಾನೆಯಿಂದ ಒಂದು ಕೋಟಿ ರೂ ಗಳನ್ನು ತೆಗೆದುಕೊಂಡು ಯೋಗಿ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ವೆಚ್ಚ ಮಾಡಿದ್ದಾರೆಂದು ತಿಳಿದುಬಂದಿದೆ.

ಮದರಾಸ್ ಗೌರ್ನರರ ಆಗಮನ

ಮೈಸೂರು ೯

ಮದರಾಸ್ ಗೌರ್ನರರಾದ ಭಾವನಗರದ ಮಹಾರಾಜರವರು ಪತ್ನೀ ಸಮೇತರಾಗಿ ಈ ದಿನ ಇಲ್ಲಿಗೆ ಆಗಮಿಸಿ ಲಲಿತ ಮಹಲ್ ಭವನದಲ್ಲಿ ಬಿಡಾರ ಮಾಡಿದ್ದಾರೆ. ಪೋರಬಂದರಿನ ರಾಜರೂ ಸಹ ಅವರೊಡನೆ ಬಂದಿದ್ದಾರೆ.

ಗುಡ್ಸ್ ರೈಲು ಕಂಬಿ ತಪ್ಪಿತು

ನಿನ್ನೆ ಬೆಳಗ್ಗೆ ೧೦ ಗಂಟೆಗೆ ಮೈಸೂರಿನಿಂದ ಹೊರಟ ಗೂಡ್ಸ್ ರೈಲಿನ ಒಂದು ವ್ಯಾಗನ್ನು ಲೋಕೋಮೋಟಿವ್ ಶೆಡ್ಡಿನ ಹೊಸದಾಗಿ ಹಾಕಿರುವ ದಾರಿಯಲ್ಲಿ ಕಂಬಿ ತಪ್ಪಿ ಕೆಳಕ್ಕೆ ಬಿದ್ದಿತು. ಒಡನೆಯೇ ಅದನ್ನು ಕ್ರಮಪಡಿಸಲಾಯಿತು, ಯಾವ ವಿಧವಾದ ನಷ್ಟವೂ ಉಂಟಾಗಿರುವುದಿಲ್ಲ.

CHAMUNDESWARI
Talkies

Morning Shows At 10-30
Warner Bro's

Kings Row

—:Featuring:—
ROBERT COMMINGS,
ANN SHERIDAN,
BETTY FIELD
and oerths

The Pictura Cata loge the
Catastrophas & patsions of a
Small town

ತಿಳಿವಳಿಕೆ

ಮೈಸೂರು ಇಲವಾಲರೋಡು ಶಿವರಾಂಪೇಟೆಯ ಫೈರ್ಲೆಸ್‌ರವ S. ಮಾಣಿಕ್‌ಚಂದ್ ಪುಖರಾಜ ರವ ಅಂಗಡಿಯಲ್ಲಿ ತಾ॥ 31 1 46 (ಒಂದು ಸಾವಿರ ಒಂಭೈನೂರ ನಲವತ್ತಾರನೆ ಇಸವಿ, ಡಿಸೆಂಬರ್ ಮಾಹೆ ಮೂವತ್ತೊಂದು) ರ ಮುಂಚೆ ಗಿರವಿ ಇಟ್ಟಿರುವ ಮಾಲುಗಳನ್ನು ಮುಯಿದೆಗಳಾಗಿದ್ದಾಗ್ಯೂ ಮತ್ತು ಅನೇಕ ನೋಟೀಸ್ ಕಳುಹಿಸಿದಾಗ್ಯೂ ಮಾಲೀಕರು ಮಾಲುಗಳನ್ನು ಬಿಡಿಸಿಕೊಂಡು ಹೋಗದೇ ಇರುವುದರಿಂದ ಈಗಲೂ ಈ ತಾರೀಖು ಇಂದಿನಿಂದ ಎಂಟು ದಿನಗಳೊಳಗಾಗಿ ಮಾಲುಗಳನ್ನು ಬಿಡಿಸಿಕೊಂಡು ಹೋಗಬಹುದು. ತಪ್ಪಿದಲ್ಲಿ ಸದರಿ ಮಾಲುಗಳನ್ನು ಖಂಡಿತವಾಗಿ ಬಿಕ್ರಿ ಮಾಡಲಾಗುತ್ತೆ. ತಿಳಿಯುವುದು

S. ಮಾಣಿಕ್ ಚಂದ್ ಪುಖರಾಜ್
ಅಂಡ್ ಸನ್ಸ್, ಸರಾಫ್ ವ್ಯಾಪಾರಿಗಳು,
ಇಲವಾಲ ರೋಡ, ಮೈಸೂರು.

VISIT—
For Your BULB Requirements
STALL NOS E 24 & 25
MYSORE DASARA EXHIBITION
BENGAL LAMPS

15 Watts	Rs 1—4—0 each
25 Watts	Rs. 1—4—0 each
40 Watts	Rs 1—5—0 each

BENGAL ELECTRICAL CO.
V P

ಕಣ್ಣನ್ ದೇವನ್ ಟೀ

ಸಿ. ಬಿ. ಜನರಲ್ ಸ್ಟೋರ್ಸ್,

SRI GAYATRI
Talkies
MORNING SHOWS
at 10-30 A.M
From 10—10—1948
For 3 days only
Frank Capra's
Lost Horizon
Starring—Ronald Colman

ರಾಜಕಮಲ್ ಟಾಕೀಸ್
9-10-48 ರಿಂದ :: ೨ನೇ ವಾರ
ಪ್ರತಿ ದಿನ ಮೂರು ಆಟಗಳು
ರಾಮಜೋಷಿ

MORNING SHOWS From 9 10—48
For 4 Days
FLYING DEUCES
- WITH: -
STAN LAUREL and OLIVER HARDY

JAI HIND
INSURANCE IN FREE INDIA
What His Excellency Sri C. Rajagopalachariar has said!

" If you want a symbol for Life Insurance, I would suggest the figure of Lord Siva conquering death and keeping Markandeya ever young. That is Insurance. It conquers death by taking away the anxieties of death and it also the deliverer of miseries. There is much philosophy and much beauty in it. It is a great thing that the griefs and trouble of a single family are automatically divided among all the families in the country. It creates a feeling of brotherhood among all. One wonders why this thing has not been started ages ago and such a simple device was invented only in recent times."

May we request every one of our Readers and Friends to take up this valuable advice of our esteemed Governer General and thereby serve themselves and our Indian Nation as a whole. In doing so let us offer you our READY SERVICES AT ALL TIMES

THE WARDEN INSURANCE COMPANY, LIMITED
(HEAD OFFICE - BOMBAY) (BRANCH OFFICE - BANGALORE)
Managing Director—S. H. THAKER, Esq. *Agency Manager*—M. SUNDERRAM SHETTY, Esq.
Branches and Organisation all over India, CEYLON & EAST AFRICA
For Particulars apply to — P. C. KARMBAYA, *Branch Secretary*

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ — ವಾರ್ಡನ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್,
ಪ್ರಧಾನ ಕಚೇರಿ —ಬೊಂಬಾಯಿ. ಗಾಂಧಿನಗರ, ಬೆಂಗಳೂರು ಸಿಟಿ

ಈ ದಿನದಿಂದ ದಿನವಹಿ 3 ಆಟಗಳು
ಮೈಸೂರು ಚಾಮುಂಡೇಶ್ವರಿ ಮತ್ತು ಪ್ರಭುದೇವಾ

ರಾಜಮುಕ್ತಿ RAJAMUKTI

Distributors: FILMS LTD., Bangalore

ಜನಾರ್ದನ ಗೋಂದಕರ್ ಇವರ
ಪೂನಾ ಅಂಗಡಿ
ಬಿ. 24 ಎಕ್ಸಿಬಿಷನ್

Edited, printed and published by R. Nagarajan at the Sadhvi Press D. Subbaiah Road Mysore

ಪೋ. ಕಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ತಾಯಿನಾಡು

ಸಂಪುಟ ೧೩] ಭಾನುವಾರ ೧೧-೧೦-೪೮ [ಸಂಚಿಕೆ ೧೧

ನೈಜಾಂ ಸರ್ಕಾರಕ್ಕೆ ೪೦ ಕೋಟಿ ರೂ. ವೆಚ್ಚ

...ರ ಬೂಜಿನ ಮೇಲೆ ಹೆಚ್ಚಿನ ತೆರಿಗೆ

...ಸಭೆಯಲ್ಲಿ ತೀರ್ಮಾನ

ಮೈಸೂರು ೧೦

...ಪ್ರತಿನಿಧಿ ಸಭೆಯಲ್ಲಿ ಜನ ...ಆರೋಗ್ಯ, ವಿದ್ಯಾಭ್ಯಾಸ ...ಕೋರುವಾಗ ಭಾವನೆ ...ಗಳನ್ನು ಉತ್ತೇಜಿಸುವ ...ಕಾರದವರು ಕೈಗೊಂಡಿರುವ ...ರ ಬಗ್ಗೆ ಶ್ರೀ ಎಂ. ವಿ. ರಾ...ಯ್ಯನವರು ಕೇಳಿದ ಪ್ರಶ್ನೆಗೆ ಜ...ನರಲ್ ಸೆಕ್ರೆಟರಿಯವರು ಉತ್ತ...ಬಗ್ಗೆ ಅಧಿಕ ಸಮೀಕ್ಷಣದ ...ಯವರು ಸಂಸ್ಥಾನದ ಅಧಿ...ಗೆ ಸಂಬಂಧಪಟ್ಟಂತೆ ಸಂಚು ವಾ...ಯೋಜನೆ ತಯಾರಿಸುವರೆಂದೂ ...ಇದುವರೆಗೆ ೧೧೧ ಯೋ...ವ ಮಂಜೂರು ಮಾಡಿರ ಪರಿಂ...೩೪ ಕೋಟಿ ರೂಪಾ...ಯ ತಗಲುವುದೆಂದೂ ತಿಳಿಸಿ

...ಜಿಲ್ಲೆಯ ಪಾಪ ನಿರೋಧ, ...ಸಾರಾಯಿ ಮಾಡುತ್ತಿದ್ದವರ ...ಇವರುಗಳಿಗೆ ವಿಧಿಸಲಾದ ...ಶ್ರೀ ಮುನಿಸ್ವಾಮಪ್ಪನವರು ...ಗೆ ಉತ್ತರವಾಗಿ ೧-೪-೪೮ರಿಂ...ಪೇಟೆ ತಾಲ್ಲೂಕಿನಲ್ಲೂ ೧-೭-...ಕೋಲಾರ ಜಿಲ್ಲೆಯಲ್ಲೂ ...ಧವು ಆಚರಣೆಗೆ ಬಂದಿತೆಂದ.

...ಬೌರಿಂಗ್‌ಪೇಟೆಯಲ್ಲಿ ಅರು...ಭಟ್ಟಿ ಸಾರಾಯಿ ಮಾಡುತ್ತಿ...ಪತ್ತೆ ಮಾಡಿ ಅವರುಗಳಿಗೆ ಶಿಕ್ಷೆ...ವಿಧಿಯಿಂದೂ ಸಹ ಹೇಳಿದರು. ...ಹೆಚ್ಚು ಸಿಬ್ಬಂದಿಯನ್ನು ಸಹ ನೇ...ಮಾಡಲಾಗುವುದೆಂದು ರೆವಿನ್ಯೂ ...ಕಮಿಷನರ್‌ಗಳು ಉತ್ತರವಿತ್ತರು. ...ಟ್ಟಿನ ಹಾಡ ಮೇಲೆ ಈಗ ...ಕೆಲವು ತೆರಿಗೆಯನ್ನು ...ಹೆಚ್ಚಿಸುವ ಮಸೂದೆ ...ಹಣಕಾಸಿನ ಸಚಿವರಾದ ಶ್ರೀ ...ದಾಸಪ್ಪನವರು ಸಭೆಯ ಮುಂದೆ ...ದರು.

...ಇದರಿಂದ ಎಂಟು ಲಕ್ಷ ...ಗಳನ್ನು ವರಮಾನವು ಬರುವ ...ದರು ಸರ್ಕಾರವು ಸಹ ...ವಿಷಯದ ಬಗ್ಗೆ ...ದಿದೆಯೆಂದೂ ಅದರ ಕೇಂ...ಸಿದ್ಧರಿರುವವರೆಗೂ ಇಲ್ಲ ...ವುದು ಅನಾನುಕೂಲವೆಂ...ದರು.

...ಗೆ ಪಕ್ಷದ ಪರವಾಗಿ ಶ್ರೀ ...ಅಯ್ಯಂಗಾರ್‌ರು ಮಾ...ಮಸೂದೆಗೆ ಬೆಂಬಲವನ್ನು ನೀಡಿದ ...ಸಂಸ್ಥಾನದಲ್ಲಿ ನಡೆಸೇ...ಯಾರಿಗೂ ಇಲ್ಲವೆಂದರು.

...ಭವಾನಿ ಚಂದ್ರಶೇಖರ ...ಗೌಡ, ...ಯ್ಯ, ...ಪ್ಪ, ...ಪ್ಪ, ಎಸ್. ...ಗಳು ಮಾತಾಡಿ ಮದ್ಯ...ಒಂದು ಲಕ್ಷ ...ರು ಸರ್ಕಾರವು ...ಕೇಂದ್ರ ಮತ್ತು ...ಗಳಿಗೆ ಮಾಡಿರಿಯಾಗಬೇ...ಮಾಡುವವರ ಮೇಲೆ ಹೆಚ್ಚಿನ ...ರಿಂದ ಜನರು ...

ಸೂಚನೆ

ಮಹಾನವಮಿ ಮತ್ತು ಆಯುಧ ಪೂಜೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ.

ಪೋಸ್ಟ್‌ಮಾಸ್ಟರಿಗೆ ಸಜಾ

ಮೈಸೂರು ೮

ಕೃಷ್ಣರಾಜಸಾಗರದ ಸಬ್ ಪೋಸ್ಟ್‌ಮಾಸ್ಟರ್ ಮಿ|| ಎಂ. ಬಾಲೋಜಿ ಎಂಬುವರು ಕಳೆದ ವರ್ಷ ಜೂನ್ ತಿಂಗಳಿನಲ್ಲಿ ಪೋಸ್ಟಾಫೀಸಿನ ೧೦೦೦ ರೂ. ಗಳನ್ನು ದುರುಪಯೋಗಪಡಿಸಿಕೊಂಡಿದ್ದರೆಂದು ಅವರ ಮೇಲೆ ಶ್ರೀರಂಗಪಟ್ಟಣದ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು. ಅವರ ಮೇಲಿನ ಆಪಾದನೆಯು ರುಜುವಾತಾಗಿ ಮ್ಯಾಜಿಸ್ಟ್ರೇಟರು ಅವರಿಗೆ ಒಂದು ಅಪಾದನೆ ಮೇಲೆ ೬ ತಿಂಗಳ ಕಠಿಣ ಸಜ, ೩೦೦ ರೂ ಜುಲ್ಮಾನೆ ತಪ್ಪಿದರೆ ಮತ್ತೆ ೩ ತಿಂಗಳ ಕಠಿಣ ಸಜವನ್ನೂ ಮತ್ತು ಇನ್ನೊಂದು ಅಪಾದನೆ ಮೇಲೆ ೩ ತಿಂಗಳು ಕಠಿಣ ಸಜವನ್ನೂ ವಿಧಿಸಿದ್ದರು. ಅಪಾದಿತರು ಸೆಷನ್ ಕೋರ್ಟಿಗೆ ಅಪೀಲು ಮಾಡಿದ್ದರು. ಅಲ್ಲಿ ಅಪೀಲು ರದ್ದಾಗಿ ಕೆಳಗಿನ ಕೋರ್ಟಿನ ಶಿಕ್ಷೆಯು ಖಾಯಂ ಮಾಡಲ್ಪಟ್ಟಿತು.

ಹೈದರಾಬಾದಿಗೆ ಒಟ್ಟು ೪೦ ಕೋಟಿ ರೂ. ವೆಚ್ಚ

ಭಾರತ ಸರ್ಕಾರವನ್ನು ಎದುರಿಸಿ ಸ್ವತಂತ್ರವಾಗಿರಲು ಬಯಸಿ ಹೈದರಾಬಾದ್ ಸಂಸ್ಥಾನವು ಲಾಯಕಾಲಿಯವರ ಮಂತ್ರಿ ಮಂಡಲದ ನೇತೃತ್ವದಲ್ಲಿ ಕೈಗೊಂಡ ಕಾರ್ಯಾಚರಣೆಯಿಂದ ಆ ಸಂಸ್ಥಾನಕ್ಕೆ ಸುಮಾರು ೪೦ ಕೋಟಿ ರೂ. ವೆಚ್ಚವಾಗಿರುವುದಾಗಿ ಅಂದಾಜಾಗಿದೆ. ಅತ್ಯಂತ ದುಬಾರಿ ಬೆಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ಕೊಳ್ಳುವುದರಲ್ಲಿಯೇ ಈ ಹಣದ ಬಹು ಭಾಗವು ವೆಚ್ಚವಾಗಿರುವುದೆಂದು ಹೇಳಲಾಗಿದೆ.

ಯಾಗುವುದಿಲ್ಲವೆಂದೂ ತಿಳಿಸಿ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದರು.

ಮಸೂದೆಯನ್ನು ಓಟಿಗೆ ಹಾಕಿದಾಗ ಬರುವ ಕಡೆಯಿಂದ ಪ್ರಜಾ ಸೋಷಲಿಸ್ಟ್ ಪಕ್ಷದವರು ಮತ್ತು ಹಲವು ಜನ ಸ್ವತಂತ್ರರು ಅದರ ಪರವಾಗಿ ಮತವಿತ್ತರು.

ಉದಾರ ದಾನ

ಕುದೇರಿನ ಶ್ರೀ ಸಂಗ ಶೆಟ್ಟಿ ಅಂಡ್ ಸನ್ಸ್‌ರವರು ರಾಜಧಾನಿಯ ಗೌಡ ಸಂಘದ ವಿದ್ಯಾರ್ಥಿ ನಿಲಯಕ್ಕೆ, ಅಲ್ಲಿ ವ್ಯಾಸಂಗ ಮಾಡುವ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಆಗತಕ್ಕ ಖರ್ಚು ೧೬೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ. ವೇಳ್ಯಂಡ ನಿಲಯದ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಇದರಿಂದ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತಾರೆ.

ವಾರ ಭವಿಷ್ಯ

೧೦-೧೦-೪೮ ರಿಂದ ೧೭-೧೦-೪೮ ರ ವರೆಗೆ

ಮೇಷ—ವೆಚ್ಚಕ್ಕೆ ತಕ್ಕ ಧನಾದಾಯ ವಿರುವುದು. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ, ಆರೋಗ್ಯ ಉತ್ತಮ ತಾ|| ೧೩, ೧೬, ಶತ್ರು ನಾಶ, ಮಿತ್ರ ದರ್ಶನ

ವೃಷಭ - ವಿದ್ಯಾರ್ಥಿ ವರ್ಗ, ಲೇಖಕ ವರ್ಗಕ್ಕೆ ಯಶಸ್ಸು. ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ಮನ್ನಣೆ ದೊರೆಯುವುದು ತಾ|| ೧೧, ೧೫ ಪ್ರವಾಸ, ಲಾಭ.

ಮಿಥುನ—ಆರೋಗ್ಯ ಧನಾದಾಯಗಳೆರಡೂ ಉತ್ತಮ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ತಾ|| ೧೨ ೧೩ ಪ್ರವಾಸ, ಲಾಭ.

ಕಟಕ - ಲಾಟರಿ ಪಟ್ಟಿಗಳಿಂದ ಲಾಭ. ನೌಕರಿ ದಂಧೆಗಳಲ್ಲಿ ಯಶಸ್ಸು ಆರೋಗ್ಯ ಉತ್ತಮಗೊಳ್ಳುವುದು ತಾ|| ೧೬, ೧೭ ಬಂಧು ದರ್ಶನ.

ಸಿಂಹ - ದಾನ ಧರ್ಮಗಳಿಗಾಗಿ ವೆಚ್ಚ ಮಾಡಗವುದು. ಸಂಸಾರದ ಸೌಖ್ಯಲಾಭ ವರ್ತಕರಿಗೆ ಹೆಚ್ಚು ಲಾಭ ತಾ|| ೧೩, ೧೭ ಸಾಧಾರಣ

ಕನ್ಯಾ—ಮಿತ್ರರಿಂದ ಮೋಸಹೋಗುವಿರಿ ಧರ್ಮ ಕಾರ್ಯಗಳಿಗಾಗಿ ವೆಚ್ಚ ಸಂಭವಿಸುವುದು, ಧನಾಭಾವವೇನೂ ಒದಗಲಾರದು. ತಾ|| ೧೩, ೧೪ ದೇಹಾಲಸ್ಯ

ತುಲಾ—ಕೈಗೊಂಡ ಕಾರ್ಯಗಳೆಲ್ಲ ಅಪೂರ್ಣವಾಗಿ ನಿಲ್ಲುವುವು ಮಕ್ಕಳು ಮರಿಗಳ ಆರೋಗ್ಯ ಕೆಡುವ ಸಂಭವವುಂಟು. ತಾ|| ೧೪, ೧೭ ಅನಿಷ್ಟ ವಾರ್ತೆ ಕೇಳಬಹುದು

ವೃಶ್ಚಿಕ— ವ್ಯಾಪಾರಗಾರರಿಗೆ ಲಾಭದಾಯಕವಾಗಿದೆ. ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು ಆರೋಗ್ಯ ಉತ್ತಮ ತಾ|| ೧೫,೧೭ ಶುಭ ವಾರ್ತೆ

ಧನುಸ್ಸು—ಅನೇಕ ಸಾಧು ಸಂತರ ದರ್ಶನಲಾಭ ವಾರಾಂತ್ಯದಲ್ಲಿ ಕೊಂಚ ಅನಾರೋಗ್ಯ ತಾ|| ೧೦, ೧೩ ಆತಂಕ

ಮಕರ—ಈ ವಾರ ನೀವು ಅನೇಕ ಮಹತ್ಕಾರ್ಯಗಳನ್ನೆಸಗುವಿರಿ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ತಾ|| ೧೪, ೧೭ ಸತ್ ದರ್ಶನ, ಸುಖ ಭೋಜನ

ಕುಂಭ - ಧನ ದಾಯ ಉತ್ತಮ ಆರೋಗ್ಯದ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ತಾ|| ೧೩, ೧೬ ಹಾನಿ ಸಂಭವ

ಮೀನ—ಕೈಗೊಂಡ ಕಾರ್ಯಗಳಿಗೆ ಮಿತ್ರರ ನೆರವು ದೊರೆಯುವುದು ನೌಕರಿಯಲ್ಲಿ ಯಶಸ್ಸು ವ್ಯಾಪಾರಗಾರರಿಗೆ ಅಧಿಕ ಲಾಭ ತಾ|| ೧೨, ೧೬ ಶುಭ ಸಮಾಚಾರ

ಮದರಾಸ್ ಗೌರ್ನರರು

ಮೈಸೂರು ೧೦

ಮದರಾಸ್ ಗವರ್ನರರಾದ ಭಾವನಗರದ ಮಹಾರಾಜರು ಈ ದಿನ ರಾಜಧಾನಿಯ ಪ್ರಾಣಿ ಸಂಗ್ರಹಾಲಯ, ಅರಮನೆ ಕುದುರೆ ಲಾಯ, ಚಾಮರಾಜೇಂದ್ರ ಕಲಾ ಶಾಲಾ ಮತ್ತು ದಸರಾ ವಸ್ತು ಪ್ರದರ್ಶನಗಳಿಗೆ ಭೇಟಿ ಕೊಟ್ಟಿದ್ದರು.

• ಕೆಲವು ದಿವಸಗಳಹಿಂದೆ ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ನಡೆದ ಗಲಾಟೆಯ ಬಗ್ಗೆ ಪ್ರಿನ್ಸಿಪಾಲರು ೧೪ ಜನರನ್ನು ಹೊರಡಿಸಿ ವಿವರಣೆ ಪಡೆದರೆಂದೂ, ಮತ್ತು ವೈಸ್ ಚಾನ್ಸೆಲರು ಸ್ಥಳದ ಪರಿಶೀಲನೆ ನಡೆಸಿದರೆಂದೂ ಗೊತ್ತಾಗಿದೆ.

ಸಚಿವರಿಗೆ ಸತ್ಕಾರ

ಪೌರಸಭಾ ಉಪಾಧ್ಯಕ್ಷರಾದ ಶ್ರೀ ಇ. ಪಿ. ನಂಜಪ್ಪನವರು ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರಿಗೆ ಸುಖ ಪ್ರವಾಸವನ್ನು ಕೋರಲು ನಿನ್ನೆ ಪೌರಸಭಾ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಚಿವರುಗಳೂ, ಇನ್ನೂ ಅನೇಕ ಅತಿಥಿಗಳೂ ದಯಮಾಡಿಸಿದ್ದರು. ಶ್ರೀ ದಾಸಪ್ಪನವರಿಗೆ ಸುಖ ಪ್ರಯಾಣವನ್ನು ಕೋರಿ ಅವರ ವಿದೇಶ ಯಾತ್ರೆಯಿಂದ ಸಂಸ್ಥಾನದ ಕೈಗಾರಿಕೆಗಳ ಅಭಿವೃದ್ಧಿಗೆ ವಿಶೇಷ ಸಹಾಯವಾಗಲೆಂದು ಶ್ರೀ ಇ. ಪಿ. ನಂಜಪ್ಪನವರು ಹಾರೈಸಿದರು. ಸತ್ಕಾರಕ್ಕಾಗಿ ಶ್ರೀ ದಾಸಪ್ಪನವರು ಧನ್ಯವಾದವನ್ನು ಸಲ್ಲಿಸಿ ಈಗ ಚಾಲ್ತಿಯಲ್ಲಿರುವ ಕಬ್ಬಿಣ ಸಿಮೆಂಟ್, ಕಾಗದ, ಮುಂತಾದ ಕೈಗಾರಿಕೆಗಳನ್ನು ಉತ್ತಮಪಡಿಸುವುದು ಮಾತ್ರವೇ ಅಲ್ಲದೆ ರಸಾಯನಿಕ ಗೊಬ್ಬರ, ರೇಯಾನ್ ಮುಂತಾದ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ತಾವು ಪ್ರಯತ್ನಪಡುವುದಾಗಿ ತಿಳಿಸಿದರು.

ಬೆಂಕಿ ಇಟ್ಟಿದ್ದಕ್ಕಾಗಿ ಜುಲ್ಮಾನೆ

ಸಿರಿಯಾಪಟ್ಟಣದ ತಾಲ್ಲೂಕು ಅಲನ ಹಳ್ಳಿಯ ಸಣ್ಣಬಿಲ್ಲಯ್ಯನ ಅಣ್ಣಯ್ಯ ಎಂಬುವನು ಕಳೆದ ಮಾರ್ಚಿ ತಿಂಗಳಿನಲ್ಲಿ ಮೇಲ್ಕಂಡ ಗ್ರಾಮದ ಒಂದು ದನದ ಕೊಟ್ಟಿಗೆಗೆ ಬೆಂಕಿ ಇಟ್ಟಿದ್ದರಿಂದ ಆ ಹಳ್ಳಿಯೇ ನಾಶವಾಯಿತೆಂದು ಪೋಲೀಸರು ಅವನ ಮೇಲೆ ಹುಣಸೂರಿನ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು. ಮೊಕದ್ದಮೆಯು ಸೆಷನ್ಸ್‌ಗೆ ಕಮಿಟ್ ಮಾಡಲ್ಪಟ್ಟು ಅಲ್ಲಿ ಅಪರಾಧಿಗೆ ೧೦೦ ರೂ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ಶಿಕ್ಷೆಯನು ವಿಧಿಸಲಾಯಿತು.

ಹರ್ಡೀಕರರ ಆಗಮನ

ಡಾ|| ಹರ್ಡೀಕರ್‌ರವರು ರಾಷ್ಟ್ರೀಯ ಸೇವಾ ದಳದ ಪರಿಶೀಲನೆ ಬಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರೊಡನೆ ಜಿಲ್ಲಾ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ರಾತ್ರಿ ರಾಜಧಾನಿಗೆ ಆಗಮಿಸಿದರು.

ರಥೋತ್ಸವ

ರಾಜಧಾನಿಯ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಶ್ರೀ ಸುಬ್ಬರಾಯದಾಸರವರ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಇದೇ ೧೨ ನೇ ತಾ|| ಮಂಗಳವಾರ ಶ್ರೀ ಸ್ವಾಮಿಯವರ ರಥೋತ್ಸವವು ಜರುಗುವುದು.

ಬಿಡಾರಂ ಕೃಷ್ಣಪ್ಪನವರ

ರಾಮ ಮಂದಿರ, ಮೈಸೂರು

11—10—48 ನೇ

ಸೋಮವಾರ ಸಾಯಂಕಾಲ 6 ಗಂಟೆಗೆ

ಶ್ರೀ ವೈಕುಂಠವಾಸಿಯಾದ ಬಂದಿರುವ

ವಿದ್ವಾನ್

ವಿ. ಎಸ್. ರಾಮಯ್ಯಂಗಾರ್

ರವರ ಹಾಡುಗಾರಿಕೆಯನ್ನು ಉಚಿತ ಪಕ್ಕವಾದ್ಯಗಳೊಡನೆ ಏರ್ಪಡಿಸಿರುತ್ತೆ.

ಮೆಂಬರ ಅಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ.

ಗಂಡಸರಿಗೆ 1-0-0, ಹೆಂಗಸರಿಗೆ 0-8-0

ಹುಡುಗರಿಗೆ 0-4-0

ದಸರಾ ಹಬ್ಬಕ್ಕಾಗಿ ಮೈಸೂರಿಗೆ ಬರುವ ಅನೇಕರ ಸಲುವಾಗಿಯೂ
ಹಾಗೂ ನಮ್ಮ ಶ್ಲಘ ಗಿರಾಕಿಗಳ ಅನುಕೂಲಕ್ಕಾಗಿಯೂ, ಒಂದು
ಸ್ಟಾಲನ್ನು ದಸರಾ ವಸ್ತು ಪ್ರದರ್ಶನಾಲಯದಲ್ಲಿ
ಬ್ಲಾಕ್ ಸಿ. ನಂ. ೨೯-೩೦ ರಲ್ಲಿ ತೆರೆದಿರುತ್ತೇವೆ
ಬೆಲೆ—ಬೆಂಗಳೂರಿನ ಅಂಗಡಿಯ ಬೆಲೆಯಲ್ಲಿಯೇ

ಚಂದೀರಾಮ್ ಸಿಲ್ಕ್ ಸೀರೆಗಳು

(ಸ್ವಂತ ಫ್ಯಾಕ್ಟರಿಯಲ್ಲಿ ಸ್ಪೆಷಲ್ಲಾಗಿ ತಯಾರಿಸಿದ್ದು) ಬೊಂಬಾಯಿ ಮತ್ತು ಬನಾರಸ್

ಸಿಲ್ಕುಗಳು ಮತ್ತು ಸೀರೆಗಳು

ಜರೀ ಸಿಲ್ಕು ಮತ್ತು ಸೀರೆಗಳೂ ಸಹ ದೊರೆಯುತ್ತವೆ

ಚಂದೀರಾಮ್ ಬ್ರದರ್ಸ್

Block C, No. 29-30
ಪ್ರಧಾನ ಶಾಖೆ-74 ಮಹಾತ್ಮಾ ಗಾಂಧಿ ರೋಡು, ಬೆಂಗಳೂರು.

ಮತ್ತೆ ೪೦ ಮಂದಿ ರಜಾಕರರ ದಸ್ತಗಿರಿ

ನಂದಾಂಗ್ ಜಿಲ್ಲೆಯ ಕಾಸ್‌ದಾರ್ ಹಳ್ಳಿಯ ಮೇಲೆ ೩೦ ಜನ ಸಶಸ್ತ್ರ ರಜಾಕರರು ಧಾಳಿ ನಡೆಸಿದರು. ಆದರೂ ಅವರನ್ನು ಹಿಡಿಯಲು ಸಿಕಂದರಾಬಾದಿನಿಂದ ಭಾರತ ಸೈನಿಕರು ಹೋಗಿ, ಹತ್ತು ಜನರನ್ನು ಕೊಲೆ ಮಾಡಿ ೪೦ ಮಂದಿಯನ್ನು ದಸ್ತಗಿರಿ ಮಾಡಿದರೆಂದು ವರದಿಯಾಗಿದೆ.

ಕ್ರಯಕ್ಕಿದೆ

ಮೈಸೂರು ಸಿಟಿ ವಾರ್ಡ್ ವಿಭಾಗ ಗೋಕುಲಂ ಬಳಿ, ನಲ್ಲಿ, ದೀಪ ... ಮತ್ತು ಗ್ಯಾರೇಜು ಸಹ ಉಳ್ಳ ಬಂಗ್ಲೆ ಕ್ರಯಕ್ಕಿದೆ ಮತ್ತು ... ಲ್ಲಾದಲ್ಲಿ ಬಂಗ್ಲೆ ಮತ್ತು ಕಾಂಟೇಜ್‌ಗಳು ಸಹ ಕ್ರಯಕ್ಕಿವೆ ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಹೆಚ್. ಸುಬ್ಬರಾವ್
..., ದಿವಾನ್ಸ್ ರಸ್ತೆ, ಮೈ...

Efficient Coaching IN SANSKRIT
For all public Examinations
(S.S.L.C., Inter, B.A. & B...)
Fees Moderate
Classes Commence on 1-11
Admissions Limited
Enquire between 3 & 5 p.m.
at 1160, Bojjanna's Line
Near Chamarajapuram
Stores: Mysore

SRI GAYATRI Talkies
MORNING SHOWS
10-30 A.M.
From 10-10-1948
For 3 days only
Frank Capra's
Lost Horizon
Starring—Ronald Colman

ರಾಜಕಮಲ್ ಟಾಕೀಸ್

9-10-48 ರಿಂದ : : ಅಮೋಘ ೨ನೇ ವಾರ
ಪ್ರತಿ ದಿನ ಮೂರು ಆಟಗಳು
ಮತ್ತಾಲಾಪ್ಪೆರ್ **ರಾಮಜೋಷಿ**
ರಾಜಕಮಲ್‌ರವರ ತಯಾರಿಕೆ
ಪಾತ್ರಗಳು — ಶಂಕರ, ಸುನವೋಹನ ಕೃಷ್ಣ

MORNING SHOWS From 8—10—48
For 4 Days
FLYING DEUCES
—:WITH:—
STAN LAUREL and OLIVER HARDY

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

ಕಣ್ಣನ್ ದೇವನ್ ಟೀ

ಸ್ವಾದವೆನಿಸಿದ ರುಚಿಯೂ, ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.
ಮೈಸೂರು ನಗರದ ಪ್ರತಿನಿಧಿಗಳು ಮತ್ತು ಡಿಸ್ಟ್ರಿಬ್ಯೂಟರುಗಳು:—
ಸಿ. ಬಿ. ಜನರಲ್ ಸ್ಟೋರ್ಸ್,
ಚಾಮರಾಜ ರಸ್ತೆ, ಮೈಸೂರು
ದಯವಿಟ್ಟು ದಸರಾ ವಸ್ತುಪ್ರದರ್ಶನದ ಎಲ್ ಬ್ಲಾಕಿನ ೧ನೇ ನಂ. ಸ್ಟಾಲಿಗೆ ಭೇಟಿ ಕೊಡಿ

DASARA SPECIAL PROGRAMME **MORNING SHOW**

ಪ್ರಭುದೇವಾ ಟಾಕೀಸ್

ತಾ॥ **11-10-48**ನೇ ಸೋಮವಾರ ಬೆಳಗ್ಗೆ ೧೦ ಘಂಟೆಗೆ
ನರೇಂದ್ರ ಪಿಕ್ಚರ್ಸ್‌ರವರ

ರಾಜಮುಕ್ತಿ

ಪಾತ್ರ:—ತ್ಯಾಗರಾಜ ಭಾಗವತರ್, ಭಾನುಮತಿ, ಜಾನಕಿ ಮುಂತಾದವರು

JAI HIND
INSURANCE IN FREE INDIA
What His Excellency Sri C. Rajagopalachariar has said!

"If you want a symbol for Life Insurance, I would suggest the figure of Lord Siva, conquering death and keeping Markandeya ever young. That is Insurance. It conquers death by taking away the anxieties of death and it is also the destroyer of miseries. There is much philosophy and much beauty in it. It is a great thing that the griefs and troubles of a single family are automatically divided among all the families in the country. It creates a feeling of brotherhood among all. One wonders why this thing has not been started ages ago and such a simple device was invented only in recent times."
May we request every one of our Readers and Friends to take up this valuable advice of our esteemed Governer-General and thereby serve themselves and our Indian Nation as a whole. In doing so let us offer you our READY SERVICES AT ALL TIMES.

THE WARDEN INSURANCE COMPANY, LIMITED
(HEAD OFFICE:—BOMBAY) (BRANCH OFFICE: BANGALORE)
Managing Director—S. H. THAKER, Esq. *Agency Manager*—M. SUNDERRAM SHETTY, Esq.
Branches and Organisation all over India, CEYLON & EAST AFRICA
For Particulars apply to:— P. C. KARMBAYA, *Branch Secretary*
ನಮ್ಮ ಗೌರ್ನರ್ ಜನರಲ್ ಶ್ರೀ ರಾಜಾಜಿಯವರ ಅಮೂಲ್ಯವಾದ ಅಭಿಪ್ರಾಯದಂತೆ " ... ಜೀವವಿಮೆ ಪಡೆದು ಸುರಕ್ಷಿತರಾಗಿ
ಹೆಚ್ಚು ವಿವರಗಳಿಗೆ ನಮಗೆ ಬರೆಯಿರಿ — ವಾರ್ಡನ್ ಇನ್ಶೂರೆನ್ಸು ಕಂಪನಿ, ಲಿಮಿಟೆಡ್,
ಪ್ರಧಾನ ಕಚೇರಿ —ಬೊಂಬಾಯಿ. ಬ್ರಾಂಚ್ — ಗಾಂಧಿನಗರ, ಬೆಂಗಳೂರು

Edited printed and published by A. R. Nagarajan at the Sadhvi Press D. Subbaiah Road Mysore

ಪುಟ ೨/೨ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೨-೧೦-೪೮ [ಸಂಚಿಕೆ ೮೭

ಪರ್ಷಿಯಾ ಗಡಿಯಲ್ಲಿ ಭೂಕಂಪದ ಅನಾಹುತ

ಭೂಕಂಪದಿಂದ ೪೦೦ ಜನರ ಮರಣ

ಪರ್ಷಿಯಾ ಮತ್ತು ರಷ್ಯಗಳ ಗಡಿ ಪ್ರದೇಶದಲ್ಲಿ ಮೊನ್ನೆ ದಿನ ಸಂಭವಿಸಿದ ಭೂಕಂಪದಲ್ಲಿ ೪೦೦ ಜನರು ಸತ್ತರೆಂದೂ, ಸಾವಿರಾರು ಜನರು ಗಾಯಗೊಂಡರೆಂದೂ ವರದಿಯಾಗಿದೆ. ಪರ್ಷಿಯಾದ ಈಶಾನ್ಯದಲ್ಲಿ ಇರುವ ಕೊರಸಾನ್ ಮತ್ತು ಮೆಷಾದ್ ನಗರಗಳಿಗೆ ತುಂಬಾ ನಷ್ಟವುಂಟಾಗಿದೆ. ರಷ್ಯಕ್ಕೆ ಸೇರಿದ ಅಷ್ಕಾಬಾಡಿನಲ್ಲಿ ೬ ಸಾವಿರ ಜನರಿಗೆ ಗಾಯಗಳಾಗಿವೆ. ಇಬ್ಬರು ಮಂತ್ರಿಗಳೂ ಮತ್ತು ೩ ಜನ ಅಧಿಕಾರಿಗಳೂ ಸತ್ತಿರುವರು.

ಹೊಟೇಲ್ ಕೆಲಸಗಾರರ ಕೋರಿಕೆಗಳು

ಮೈಸೂರು ೮

ನಗರದ ಹೋಟೆಲು ಕೆಲಸಗಾರರ ಸಂಘದ ಸಭೆಯು ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು. ಷಾಪ್ ಅಸಿಸ್ಟೆಂಟ್ ಕಾನೂನಿನ ಪ್ರಕಾರ ಲಗಟಿ ಕೆಲಸದ ನಿರ್ಧಾರವಿದ್ದರೂ ಕೆಲವು ಹೋಟೆಲುಗಳಲ್ಲಿ ೧೨ ಗಂಟೆಗಳ ಕೆಲಸವನ್ನು ಮಾಡಿಸುತ್ತಿರುವುದನ್ನು ಖಂಡಿಸಿ, ಈ ಬಗ್ಗೆ ಪರಿಹಾರ ಪಡೆಯಲು ಲೇಬರ್ ಕಮಿಷನರನ್ನು ಭೇಟಿ ಮಾಡಬೇಕೆಂದು ತೀರ್ಮಾನಿಸಲಾಯಿತು. ಷಾಪ್ ಅಸಿಸ್ಟೆಂಟ್ ಕಾನೂನಿನ ಪ್ರಕಾರ ಇನ್ಸ್‌ಪೆಕ್ಟರುಗಳನ್ನು ಕೂಡಲೇ ನೇಮಿಸಬೇಕೆಂದೂ ಮತ್ತು ದಸರಾ ಸಮಯದಲ್ಲಿ ಕೆಲಸಗಾರರಿಗೆ ಎರಡರಷ್ಟು ಸಂಬಳವನ್ನು ಕೊಡಬೇಕೆಂದೂ ಪ್ರಾರ್ಥಿಸಲಾಯಿತು.

ಗುಲ್ಬರ್ಗ ಪೋಲೀಸ್ ಅಧಿಕಾರಿಯ ದಸ್ತಗಿರಿ

ಗುಲ್ಬರ್ಗ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳು ರಜಾಕರರಿಗೆ ಸಹಾಯಕರಾಗಿದ್ದರೆಂದು ಅವರನ್ನು ದಸ್ತಗಿರಿ ಮಾಡಿ ಸಿಕಂದರಾಬಾದಿಗೆ ಕಳಿಸಲಾಗಿದೆ.

ಪ್ರಭುಗಳಿಂದ ವಸ್ತು ಪ್ರದರ್ಶನದ ಬಹುಮಾನ ವಿನಿಯೋಗ

ಮೈಸೂರು ೧೨

ದಸರಾ ವಸ್ತು ಪ್ರದರ್ಶನಾಲಯದ ಬಹುಮಾನ ವಿನಿಯೋಗ ಸಮಾರಂಭವು ಈ ದೇ ೧೯ನೇ ತಾ|| ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಉ ದಾ ರ ಸ ಹಾ ಯ

ಪೂನ ಭಂಡಾರ್ಕರ್ ಸಂಸ್ಥೆಯಲ್ಲಿ ಅಚ್ಚಾಗುತ್ತಿರುವ ಮಹಾಭಾರತ ಗ್ರಂಥದ ಸಹಾಯಕ್ಕಾಗಿ ರಾಜಧಾನಿಯ ಲೋಕ ಸೇವಾನಿರತ ವಿ. ನಾರಾಯಣಯ್ಯರ್ ೧೦೦ ರೂ.ನ್ನು ಕೊಟ್ಟಿರುತ್ತಾರೆ. ರಾಜಸೇವಾ ಪ್ರಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯರವರು ಸದರಿ ಸಂಸ್ಥೆಗೆ ಆಜೀವ ಸದಸ್ಯರಾಗಿದ್ದಾರೆ.

ದೇಶಿಕರವರ ತಿರುನಕ್ಷತ್ರ

ರಾಜಧಾನಿಯ ಶ್ರೀ ಪರಕಾಲಸ್ವಾಮಿ ಮಠದಲ್ಲಿ ಈ ದಿನ ಶ್ರೀ ವೇದಾಂತ ದೇಶಿಕರ ತಿರುನಕ್ಷತ್ರೋತ್ಸವವು ನಡೆಯಿತು. ಈ ಸಂಬಂಧದಲ್ಲಿ ಶ್ರೀಗಳವರು ವೇದಾಂತಾಚಾರ್ಯರು ಮತ್ತು ವೇದಾಂತಾಚಾರ್ಯರು ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ನಾಳೆಯಿಂದ ೧೭ನೇ ತಾ|| ವರೆಗೆ ಪ್ರತಿದಿನ ಸಂಜೆ ೬-೩೦ ಗಂಟೆಗೆ ಶ್ರೀಗಳವರು ಉಪನ್ಯಾಸ ಮಾಡುವರು.

೧೨೨೭ ಬಾರಿ ರಕ್ತ ದಾನ

ರೋಮ್ ನಗರದ ಒಂದು ಆಸ್ಪತ್ರೆಯ ಗಂಡಸ ದಾದಿಯೊಬ್ಬನು ೧೨೨೭ ಬಾರಿ ೫೬೭ ಪೈಂಟು ರಕ್ತವನ್ನು ರೋಗಿಗಳಿಗೆ ತನ್ನ ಶರೀರದಿಂದ ತೆಗೆದು ದಾನ ಮಾಡಿರುವನೆಂದೂ, ಇಷ್ಟು ಬಾರಿ ರಕ್ತ ದಾನ ಮಾಡಿರುವುದು ಪ್ರಪಂಚದಲ್ಲಿ ಇದೇ ಮೊದಲನೆಯದೆಂದೂ ಹೇಳಲಾಗಿದೆ.

ಜಿಲ್ಲಾ ಗಾಂಧಿ ನಿಧಿ ಸಮಿತಿ

ಮೈಸೂರು ೧೨

ಮೈಸೂರು ಜಿಲ್ಲೆಯಲ್ಲಿ ಗಾಂಧಿ ಸ್ಮಾರಕ ನಿಧಿಗೆ ಹಣವನ್ನು ಸಂಗ್ರಹಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲು ಮೊನ್ನೆ ದಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಮತ್ತು ನಾಗರೀಕ ಪ್ರತಿನಿಧಿಗಳ ಸಭೆಯು ... ಕಛೇರಿಯಲ್ಲಿ ನಡೆಯಿತು. ೩೪ ಜನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಶ್ರೀ ಎಂ. ಎಲ್. ನಂಜುಂಡೇಅರಸಿನವರನ್ನು ಸಮಿತಿಯ ಅಧ್ಯಕ್ಷರನ್ನಾಗಿಯೂ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಹೆಚ್. ಗಿ. ಲಿಂಗಣ್ಣ ಮತ್ತು ಎ. ಕೆ. ಎಸ್. ರಾಘವಾಚಾರರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಟಿ. ಟಿ. ಬೋರೆಯ್ಯನವರನ್ನು ಖಜಾಂಚಿಯನ್ನಾಗಿಯೂ ಆರಿಸಲಾಯಿತು. ಸಭೆಯಲ್ಲಿ ೧೦೫೩ ರೂ.ಗಳ ಸಂಗ್ರಹವಾಯಿತು. ೬,೫೦೦ ರೂ. ಕೊಡುವುದಾಗಿ ವಾಗ್ದಾನ ಬಂದಿತು. ಜಿಲ್ಲೆಯಿಂದ ಸಮಿತಿಯ ಕಛೇರಿಯು ೯೪೫, ಲಕ್ಷ್ಮೀಪುರದಲ್ಲಿ ಸ್ಥಾಪಿಸಲ್ಪಟ್ಟಿದೆ.

ಹ ರಿ ಕ ಥೆ

ರಾಜಧಾನಿಯ ಚಾಮರಾಜ ಪುರಂ ಪ್ಲೆಸೆಂಟ್ ವಕೀಲರಾದ ಶ್ರೀ ಕೆ. ಪುಟ್ಟಸ್ವಾಮಯ್ಯ ಮನೆಯಲ್ಲಿ ವಿಜಯದಶಮಿ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ಗಮಕಿ ಶ್ರೀ ಹೆಚ್. ರಾಮಕೃಷ್ಣ ಶಾಸ್ತ್ರಿಗಳಿಂದ ಪೂರಾತೀ ಭಕ್ತಿ ಎಂಬ ಹರಿಕಥೆ ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಕೋತಿಗಳ ಕಾಟ

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿ ೧೦-೧೫ ದಿನಗಳಿಂದ ಕೋತಿಗಳ ಕಾಟವು ಹೆಚ್ಚಾಗಿ ಮನೆಗಳಿಗೆ ನುಗ್ಗಿ ಮತ್ತು ಸಾಮಾನುಗಳನ್ನು ಎತ್ತಿಕೊಂಡು ಹೋಗುತ್ತಿವೆ. ಇದರಿಂದ ಹೆಂಗಸರು ಮತ್ತು ಮಕ್ಕಳಿಗೆ ತುಂಬಾ ತೊಂದರೆಯಾಗಿದೆ. ಪೌರ ... ಕೂಡಲೇ ತಕ್ಕ ಕಾರ್ಯಕ್ರಮ ... ಕೊಳ್ಳಬೇಕು—ಎಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ.

ಕೋಲಾರದ ಜಿಲ್ಲಾ ವೈದ್ಯಾಧಿಕಾರಿಗಳಾದ ಶ್ರೀ ಬಿ. ಆರ್. ರಾಮರಾವ್ ರವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ... ವರ್ಗಮಾಡಲಾಗಿದೆ.

ಹೈದರಾಬಾದಿನಲ್ಲಿ ಲೂಟಿ ಮಾಡುವವರಿಗೆ ಛಡಿ ಏಟು

ಹೈದರಾಬಾದ್ ಸಂಸ್ಥಾನದಲ್ಲಿ ಲೂಟಿ ನಡೆಸುವವರಿಗೆ ಛಡಿ ಏಟುಗಳನ್ನು ವಿಧಿಸಲು ಅಲ್ಲಿನ ಮಿಲಿಟರಿ ಸರ್ಕಾರವು ನಿರ್ಧರಿಸಿದೆ. ಸಿಕಂದರಾಬಾದಿನ ಮಾರ್ಕೆಟ್ಟು ಮತ್ತು ಇತರ ಭಾಗಗಳಲ್ಲಿ ಕಳೆದ ವಾರ ತಾ|| ಲೂಟಿ ನಡೆಸಿದ ೪೦ ಜನ ಪುಂಡರಿಗೆ ೩೪ ಛಡಿ ಏಟುಗಳನ್ನು ಬಹಿರಂಗವಾಗಿ ಹೊಡೆಯಲಾಯಿತು.

ಹೊಸ ಜವಳಿ ಅಂಗಡಿ :: ಕೆಮ್ಮಣ್ಣು ನಾಲೆ ಬೀದಿ

ಮೈಸೂರು ಸಿಲ್ಕು, ಬೆಂಗಳೂರ್ ಸಿಲ್ಕು, ಕೊಳ್ಳೇಗಾಲ ಸಿಲ್ಕು } ನಾನಾ ವಿಧವಾದ ಸೀರೆಗಳು ಈಗ ತಾನೆ ಬಂದಿವೆ

ವಿಜಯಲಕ್ಷ್ಮಿ ವಿಲಾಸ್

ಇಲವಾಲ ರೋಡ್, ಶಿವರಾಂಪೇಟೆ ಮೈಸೂರು.

ವಸ್ತು ಪ್ರದರ್ಶನಾಲಯಕ್ಕೆ ಗೌರ್ನರರ ಭೇಟಿ

ಮೈಸೂರು ೧೨

ಮದರಾಸ್ ಗೌರ್ನರಾದ ಭಾವನಗರದ ಮಹಾರಾಜರೂ ಮತ್ತು ಮಹಾರಾಣಿಯವರೂ ನೆನ್ನೆ ಮಧ್ಯಾಹ್ನ ವಸ್ತು ಪ್ರದರ್ಶನಾಲಯಕ್ಕೆ ಭೇಟಿ ಕೊಟ್ಟರು. ಮದರಾಸಿನ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರೂ ಮೊನ್ನೆ ದಿನ ವಸ್ತು ಪ್ರದರ್ಶನಾಲಯಕ್ಕೆ ಭೇಟಿ ಕೊಟ್ಟಿದ್ದರು.

ತಿರುವಾಂಕೂರು ಮಂತ್ರಿ ಮಂಡಲದ ರಾಜೀನಾಮೆ

ತಿರುವಾಂಕೂರು ಮಂತ್ರಿಮಂಡಲದ ಮೇಲೆ ಅಲ್ಲಿನ ಕಾಂಗ್ರೆಸ್ ಪಕ್ಷದ ೬೪ ಜನರು ಅವಿಶ್ವಾಸ ನಿರ್ಣಯವನ್ನು ಸೂಚಿಸಿದುದರಿಂದ ಪ್ರಧಾನಿ ಶ್ರೀ ಪಟ್ಟಂ ತಾಣುಪಿಳ್ಳೆಯವರೂ ಮತ್ತು ಇತರ ಮಂತ್ರಿಗಳೂ ರಾಜೀನಾಮೆ ಕೊಟ್ಟಿರುತ್ತಾರೆ.

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಶ್ರೀರಂಗಪಟ್ಟಣ ೧೦

ಇಲ್ಲಿನ ವಿದ್ಯಾರ್ಥಿ ಸಂಘದ ನಾಲ್ಕನೆಯ ವಾರ್ಷಿಕೋತ್ಸವವು ಕಳೆದ ಶನೀ ವಾರ ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಥೆಯ ಅಧ್ಯಕ್ಷರಿಂದ ಸ್ವಾಗತ ಭಾಷಣ ಮತ್ತು ವರದಿಗಳಾದನಂತರ, ಶ್ರೀ ಸುಬ್ರಹ್ಮಣ್ಯರವರು ಭಾಷಣ ಮಾಡಿ ವಿದ್ಯಾರ್ಥಿಗಳು ಒಂದು ಗುರಿಯನ್ನಿಟ್ಟುಕೊಂಡು ವಿದ್ಯಾಭ್ಯಾಸ ಮಾಡಬೇಕೆಂದು ತಿಳಿಸಿದರು. ಸಂಸ್ಥೆಯ ಆಶ್ರಯದಲ್ಲಿ ನಡೆದ ಪಠ್ಯೇತರ ಶಾಲಾಗಳ ಸಣ್ಣ ಕಥೆಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಪಾರಿತೋಷಕಗಳನ್ನು ಅಧ್ಯಕ್ಷರು ವಿನಿಯೋಗ ಮಾಡಿದರು.

ಕರ್ನಾಟಕ ಪ್ರಾಂತ್ಯದ ಬಗ್ಗೆ ಮೈಸೂರಿನ ನೀತಿ

ಏಕೀಕರಣ ಸಮಿತಿಯವರ ಖಂಡನೆ

ಕರ್ನಾಟಕ ಪ್ರಾಂತೀಯ ರಚನೆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಕರ್ನಾಟಕ ಮತ್ತು ಮೈಸೂರು ಸಂಸ್ಥಾನಗಳಲ್ಲಿ ಸಮಿತಿಗಳನ್ನು ನೇಮಿಸಬೇಕೆಂದು ಕಳೆದ ಸಭೆಗಳಲ್ಲಿ ನಿರ್ಧರಿಸಲಾಗಿದ್ದು, ಅಂತಹ ಸಮಿತಿಯು ಕರ್ನಾಟಕದಲ್ಲಿ ರಚನೆಯಾಗಿದ್ದರೂ, ಮೈಸೂರಿನಲ್ಲಿ ಆಗದೆ ಇರುವ ಬಗ್ಗೆ ತೀವ್ರ ಶೋಚನೀಯವಾದುದೆಂದು ಹುಬ್ಬಳ್ಳಿಯಲ್ಲಿ ಕಳೆದ ಶನೀ ತಾ|| ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಏಕೀಕರಣ ಮಹಾಸಭೆಯ ಕ್ರಿಯಾಸಮಿತಿಯು ನಿರ್ಣಯ ಮಾಡಿದೆ. ಮೈಸೂರು ಕಾಂಗ್ರೆಸ್ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ಸಿನಿಂದ ಪ್ರತ್ಯೇಕವಾಗಿ ಸ್ವತಂತ್ರ ಸಂಸ್ಥೆಯಾಗಬೇಕೆಂಬ ನಿರ್ಧಾರದ ಬಗ್ಗೆ ಸಮಿತಿಯು ವಿಷಾದವನ್ನು ವ್ಯಕ್ತಪಡಿಸಿದೆ.

ಭಾಷಾವಾರು ಪ್ರಾಂತೀಯ ಪರಿಶೀಲನಾ ಸಮಿತಿಯವರ ಸಲಹೆ ಮೇರೆಗೆ ಕರ್ನಾಟಕ ಪ್ರಾಂತ್ಯ ಸ್ಥಾಪನೆಯಾಗುವ ಸಮಯದಲ್ಲಿ ಕರ್ನಾಟಕದಲ್ಲಿ ಪ್ರತ್ಯೇಕ ಭಾವನೆ ಇರದೆ ಇದೇ ೨೪ ನೇ ತಾ|| ಬೆಂಗಳೂರಿಗೆ ಭೇಟಿ ಕೊಡುವ ಭಾಷಾವಾರು ಪ್ರಾಂತೀಯ ಪರಿಶೀಲನಾ ಸಮಿತಿಯ ಮುಂದೆ ತನ್ನ ಅಭಿಪ್ರಾಯವನ್ನು ಸೂಚಿಸಬೇಕೆಂದು ಸಮಿತಿಯು ಪ್ರಾರ್ಥಿಸಿಕೊಂಡಿದೆ.

SRI GAYATRI
Talkies

MORNING SHOWS
at 10-30 A.M.
From 13—10—1948
For 3 days only

M. G. M's
Week End at the Waldrof

HOUSES & LANDS

Buy or Sell,
Lend or Borrow
On houses in Mysore City or Bangalore City & other places
Safe and sound transaction assured

Consult for best terms to both:- R GUNDU RAO
Proprietor, The Mysore Business Bureau,
Below Hindu Bank Katur Ltd, Srirampet, Mysore

ಪ್ರಕಟಣೆ

[illegible]

ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ [illegible]

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯೂ, ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.

—:ಮೈಸೂರು ನಗರದ ಹ್ಯಾಕೆಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—

ಸಿ. ಬಿ. ಜನರಲ್ ಸ್ಟೋರ್ಸ್,

ದೊಡ್ಡಪೇಟೆ ರಸ್ತೆ, ಮೈಸೂರು.

[illegible]

ರಾಜಕಮಲ್ ಟಾಕೀಸ್

9-10-48 ರಿಂದ : : ಅಮೋಘ ೩ನೇ ವಾರ

ಪ್ರತಿ ದಿನ ಮೂರು ಆಟಗಳು

ಮತ್ತ್ವಾಲಾಪ್ಟೈರ್ ರಾಮಜೋಷಿ

[illegible]

ಚಂದೀರಾಮ್ ಸಿಲ್ಕು ಸೀರೆಗಳು

ಸಿಲ್ಕುಗಳು ಮತ್ತು ಸೀರೆಗಳು

ಚಂದೀರಾಮ್ ಬ್ರದರ್ಸ್

Block C. No. 29-30

ಪ್ರಧಾನ ಶಾಖೆ-4 ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು.

JAI HIND

INSURANCE IN FREE INDIA

What His Excellency Sri C. Rajagopalachariar has said!

"If you want a symbol for Life Insurance I would suggest the figure of Lord Siva, conquering death and keeping Markandeya ever young. That is Insurance. It conquers death by taking away the anxieties of death and it is also the destroyer of miseries. There is much philosophy and much beauty in it. It is a great thing that the griefs and troubles of a single family are automatically divided among all the families in the country. It creates a feeling of brotherhood among all. One wonders why this thing has not been started ages ago and such a simple device was invented only in recent times."

May we request every one of our Readers and Friends to take up this valuable advice of our esteemed Governor-General and thereby serve themselves and our Indian Nation as a whole particuirly at a time when our National Government has announced their economic policy to check Inflation in the country. In doing so, let us offer you our READY SERVICES, AT ALL TIMES.

THE WARDEN INSURANCE COMPANY, LIMITED

(HEAD OFFICE:—BOMBAY) (BRANCH OFFICE:—BANGALORE)

Managing Director—S. H. THAKER, Esq. *Agency Manager*—M. SUNDERRAM SHETTY, Esq.

Branches and Organisation all over India, CEYLON & EAST AFRICA.

For Particulars apply to :— P. C. KARMBAYA, *Branch Secretary.*

[illegible]

ಹೆಚ್ಚು ವಿವರಗಳಿಗೆ ನಮಗೆ ಬರೆಯಿರಿ:— ವಾರ್ಡನ್ ಇನ್ಶೂರೆನ್ಸು ಕಂಪನಿ, ಲಿಮಿಟೆಡ್,

ಪ್ರಧಾನ ಕಛೇರಿ:—ಬೊಂಬಾಯಿ. ಉಪಶಾಖಾ:—ಗಾಂಧಿನಗರ, ಬೆಂಗಳೂರು ಸಿಟಿ.

ಜನಾರ್ದನ ಗೋಂದಕರ ಇವರ

ಪೂನಾ ಅಂಗಡಿ

ಬಿ. 24 ಎಕ್ಸಿಬಿಷನ್

ಅಸಲಿ ಪೂನಾ ಸೀರೆಗಳು ಚೋಳಿ ಖಣಗಳು ಜಿನ್ನಸ್ ವಾರ್ ತಂದಿದ್ದೇವೆ. ಎಲ್ಲಾ ಮುಂದಲಿ ಬಂದು ನೋಡಿ [illegible] ಮಾಲು ತೆಗೆದುಕೊಂಡು ನಮ್ಮ ಕಲಕಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

10-10-48 ರಿಂದ ಅಮೋಘ ಪ್ರಾರಂಭ 7 [illegible] ಪ್ರದರ್ಶನ ದಿನವಹಿ 3 ಆಟಗಳು

ಮೈಸೂರು ಚಾಮುಂಡೇಶ್ವರಿ ಮತ್ತು ಪ್ರಭುದೇವಾ

ಬೆಂಗಳೂರು—ಸೂಪರ್, ಸ್ಟೇಟ್ಸ್ ಮತ್ತು ಶ್ರೀ, ಕೆ. ಜಿ. ಎಫ್.- ಒಲಂಪಿಯಾ ಮತ್ತು ಮೂಡರ್ನ

ನರೇಂದ್ರ ಪಿಕ್ಚರ್ಸ್‌ರವರ ತಮಿಳು ಚಿತ್ರ

ರಾಜಮುಕ್ತಿ RAJAMUKTI

(ತಮಿಳು)

ನಟವರ್ಗ—[illegible] ಭಾಗವತರ್, ಭಾನುಮತಿ, ಜಾನಕಿ, [illegible] ವೆಂಕಟೇಶ್, [illegible] ರಾಮಚಂದ್ರ, [illegible]

ಈ ಚಿತ್ರಕ್ಕೆ ಎಲ್ಲಾ ವಿಧವಾದ [illegible] 6 ವಾರ ಮುಖ್ಯವಾದದ್ದಾಗಿದೆ

:Distributors - THE KARNATAKA FILMS LTD., Bangalore —

Edited printed and published by A. R. [illegible] at the Sadhvi Press D. Subbaiah Road Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೧೩-೧೦-೪೮ [ಸಂಚಿಕೆ ೮೮

ಬೊಂಬಾಯಿ ಬಂದರು ಕೆಲಸಗಾರರ ಮುಷ್ಕರ

ಮೈಸೂರು ನಿಜವಾದ ಸಂಸ್ಥಾನವಾಗಲಿ

ದಿವಾನ್ ಪ್ರಧಾನಿಯವರ ಹಾರೈಕೆ

ಮೈಸೂರು ೧೩

ದಿವಾನ್ ಪ್ರಧಾನಿ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರ ಗೌರವಾರ್ಥ ನಿನ್ನೆ ಸಂಜೆ ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚೆನ್ನ... ಗೃಹದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಸಭೆಯಲ್ಲಿ ಕೇಂದ್ರ ಸರ್ಕಾರದ ಸಂಚಾರ ... ಪ್ರಧಾನಿ ಖುರ್ಷಿದ್ ... ಪತ್ನಿ ... ನ್ಯಾಯಾಧೀಶರಾದ ಶ್ರೀ ... ಶ್ರೀ ಎಂ. ಎ. ಶ್ರೀನಿವಾಸನ್, ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ... ಸಚಿವರುಗಳೂ ಮತ್ತು ... ಗಣ್ಯ ಮಹನೀಯರುಗಳೂ, ... ಅಧಿಕಾರಿಗಳೂ ದಯಮಾಡಿಸಿದ್ದರು.

... ನಂತರ, ಶ್ರೀ ಎಸ್. ಚೆನ್ನ... ಸ್ವಾಗತವನ್ನು ಬಯಸಿ, ... ದಿವಾನ್ ಪ್ರಧಾನಿಯವರ ದಕ್ಷ ಮತ್ತು ... ಕಾರ್ಯಗಳನ್ನು ಪ್ರಶಂಸಿಸಿದರು, ... ರಾಮಸ್ವಾಮಿರೆಡ್ಡಿ ... ಭಾಷಣ ಮಾಡಿ, ... ಇವರನ್ನು ಭೇಟಿ ಮಾಡಲು ... ಕೊಟ್ಟಿದ್ದಕ್ಕಾಗಿ ಶ್ರೀ ... ವಂದಿಸಿದರು.

... ಸ್ವಾತಂತ್ರ್ಯ ಸ್ಥಾಪನೆಯಾದ ... ನಾಯಕರ ಮೇಲೆ ... ಜವಾಬ್ದಾರಿ ಬಿದ್ದಿದೆಯೆಂದೂ, ... ಅವರು ತಾವು ಪ್ರಜಾಪ್ರತಿನಿಧಿ ... ಅವರ ಸೇವೆಗಾಗಿ ... ಕೂ ತಿಳಿಸಿದರು. ದೇಶದಲ್ಲಿ ... ಮತ್ತು ಇತರ ಭೇದ ಭಾವ... ಎಲ್ಲರೂ ಒಗ್ಗಟ್ಟಿನಿಂದ ... ಕೆಲಸ ಮಾಡಬೇಕೆಂದೂ ... ಉತ್ತರ ಭಾರತದಲ್ಲಿ ಕೋ... ಕಡಿಮೆಯಾಗುತ್ತಿದೆ ... ದಕ್ಷಿಣ ಭಾರತದಲ್ಲಿ ಇನ್ನೂ ಉಳಿದಿ... ಸ್ವಾತಂತ್ರ್ಯವ ... ಬೇಕಾದರೆ ... ಸಣ್ಣ ಪುಟ್ಟ ವ್ಯತ್ಯಾಸ ... ಜನರು ಸ್ವಾರ್ಥ ... ಕೇಂದ್ರ, ಪ್ರಾಂತ ... ಸಂಸ್ಥಾನಗಳ ... ಭೇದಗಳು ... ಒಂದೇ ಸಂಘಟನೆ... ಎಲ್ಲೆಲ್ಲೂ ಐಕ್ಯತೆ ... ಗಲಭೆ ... ಯೋಜನೆಗಳು ಮತ್ತು ಇನ್ನೂ ... ನೆರವೇರುವುದರಲ್ಲಿ ... ಇಲ್ಲ ... ರಾಮರಾಜ್ಯವು ಭಾರತ ... ಮೈಸೂರಿನ ... ಮಹಾತ್ಮ ಗಾಂಧಿ ... ಹೇಳಿದ್ದರು ... ಆದ್ದರಿಂದ ಮೈ... ಮತ್ತು ಮಂತ್ರಿಮಂಡಲದ ... ಜವಾಬ್ದಾರಿ ಬಿದ್ದಿದೆ ... ರಾಜ್ಯವನ್ನು ಸ್ಥಾಪಿಸಲು ... ಬೇಕೆಂದು ತಿಳಿಸಿ...

... ರಾಮಸ್ವಾಮಿ ರೆಡ್ಡಿ ... ಮೈಸೂರು ಪ್ರಜಾಪ್ರ...

ಪೆರೋಲ್ ಮೇಲೆ ಸತ್ಯಾಗ್ರಹಿಗಳ ಬಿಡುಗಡೆ

ಮೈಸೂರು ೧೩

ಈಗ್ಗೆ ಕೆಲವು ದಿವಸಗಳ ಹಿಂದೆ ರಾಜಧಾನಿಯಲ್ಲಿ ಬಂಧಿಸಲಾದ ೩೪ ಮಂದಿ ಸತ್ಯಾಗ್ರಹಿಗಳನ್ನು ೧೫ ದಿವಸಗಳ ಪೆರೋಲ್ ಮೇಲೆ ಈ ದಿನ ಸಂಜೆ ಬಿಡುಗಡೆ ಮಾಡಲಾಗುವುದೆಂದು ತಿಳಿದು ಬಂದಿದೆ.

ನ್ಯಾಯಾಧಿಕಾರಿಗಳ ವರ್ಗ

ದಾವಣಗೆರೆಯ ಅಡಿಷನಲ್ ಮುನಸೀಫರಾದ ಶ್ರೀ. ಆರ್. ನಾಗರಾಜ್‌ರವರನ್ನು ಅಕ್ಷನ ಮುನ್ಸೀಫರನ್ನಾಗಿಯೂ, ದಾವಣಗೆರೆಯ ಮುನಸೀಫರಾದ ಶ್ರೀ. ಎಂ. ಸಿ. ನಂಜರಾಜ ಅರಸ್‌ರನ್ನು ಶ್ರೀರಂಗಪಟ್ಟಣದ ಮುನ್ಸೀಫರನ್ನಾಗಿಯೂ, ಶ್ರೀರಂಗಪಟ್ಟಣದ ಮುನ್ಸೀಫರಾದ ಶ್ರೀ ಟಿ. ಡಿ. ರಾಮನಾಥರವರನ್ನು ಶಿವಮೊಗ್ಗದ ದ್ವಿತೀಯ ಮ್ಯಾಜಿಸ್ಟ್ರೇಟರನ್ನಾಗಿಯೂ, ಶ್ರೀ. ಬಿ. ಎಂ. ಮರುಳಯ್ಯನವರನ್ನು ಬೆಂಗಳೂರಿನ ಮುನ್ಸೀಫ್ ಕೋರ್ಟಿಗೂ ವರ್ಗಾಯಿಸಲಾಗಿದೆ.

ಸಿನಿಮಾ ಮಾಲೀಕರಿಂದ ಕಾನೂನು ಉಲ್ಲಂಘನೆ?

ಸಂಸ್ಥಾನದಲ್ಲಿ ಷಾಪ್ ಅಸಿಸ್ಟೆಂಟ್ ಕಾನೂನು ಜಾರಿಗೆ ಬಂದಿದ್ದರೂ ಅನೇಕ ಸಿನಿಮಾ ಮಾಲೀಕರುಗಳು ಇದಕ್ಕೆ ಮನ್ನಣೆ ಕೊಡುತ್ತಿಲ್ಲ. ಇದರಿಂದ ಸಿನಿಮಾ ಕೆಲಸಗಾರರಿಗೆ ಅಸಮಾಧಾನವುಂಟಾಗಿದೆ. ಈಗಲಾದರೂ ಮಾಲೀಕರುಗಳು ಈ ಬಗ್ಗೆ ಕೆಲಸಗಾರರಿಗೆ ಸೌಲಭ್ಯಗಳನ್ನು ಒದಗಿಸಿ ಕೊಡದೇ ಇದ್ದಿದ್ದರೆ ಕಾನೂನು ಉಲ್ಲಂಘಿಸುವವರ ಮೇಲೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಂಸ್ಥಾನದ ಸಿನಿಮಾ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಕೆ ಎಸ್ ಕುಮಾರ್‌ರವರು ಹಾರೈಸಿದ್ದಾರೆ.

... ಸಭೆಯ ... ಕಾಂಗ್ರೆಸ್ ಪಕ್ಷದ ಪರಸ್ಪರ ಸಭೆಯಲ್ಲಿ ಭಾಷಣ ಮಾಡಿ ಪ್ರಜಾ ಸರ್ಕಾರವು ಸ್ಥಾಪನೆಯಾಗಿರುವ ಈ ಕಾಲದಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ಕೆಲಸಗಾರನೂ, ಪ್ರಜಾಪ್ರತಿನಿಧಿ ಸಭೆ ಮತ್ತು ಶಾಸನ ಸಭೆಗಳ ಸದಸ್ಯರುಗಳೂ ಜವಾಬ್ದಾರಿಯುತರಾಗಿ ವರ್ತಿಸಿ ತಮ್ಮ ಪ್ರತಿನಿಧಿಗಳಾದ ಮಂತ್ರಿಗಳಿಗೆ ಬೆಂಬಲ ಕೊಡಬೇಕೆಂದು ತಿಳಿಸಿದರು. ರಚನಾತ್ಮಕ ದೃಷ್ಟಿಯಿಂದ ಎಲ್ಲರೂ ಸರ್ಕಾರದೊಡನೆ ಸಹಕರಿಸಿ ಜವಾಬ್ದಾರಿ ರಾಜ್ಯ ... ಬೇಕೆಂದಿದ್ದ ರಾಮರಾಜ್ಯದ ಸ್ಥಾಪನೆಗೆ ನೆರವಾಗಬೇಕೆಂದು ಕರೆಯಿತ್ತು, ಮೈಸೂರಿನ ಮೂರು ಜಿಲ್ಲೆಗಳಲ್ಲಿ ಜಾನ ... ನಿರೋಧವನ್ನು ಜಾರಿಗೆ ತಂದಿರುವುದಕ್ಕಾಗಿ ಪ್ರಶಂಸಿಸಿದರು.

ಅಣು ಬಾಂಬಿನಿಂದಲೇ ಯೂರೋಪಿನ ರಕ್ಷಣೆ

ಮೂರನೇ ಮಹಾ ಯುದ್ಧವು ಸಮೀಪಿಸುತ್ತಿದೆಯೆಂದೂ, ಅಣು ಬಾಂಬುಗಳನ್ನು ಅಮೆರಿಕ ನಾಶಪಡಿಸಕೂಡದೆಂದೂ ಪಶ್ಚಿಮ ಯೂರೋಪಿನಲ್ಲಿ ಕಮ್ಯೂನಿಸ್ಟರ ವ್ಯಾಪನೆಯನ್ನು ಅಣು ಬಾಂಬಿನಿಂದಲೇ ನಾಶಪಡಿಸಬೇಕಾದುದೆಂದೂ ಬ್ರಿಟನ್ನಿನ ಮಾಜಿ ಪ್ರಧಾನಿ ಮಿ|| ಚರ್ಚಿಲರು ತಿಳಿಸಿದ್ದಾರೆ. ರಷ್ಯಾವು ಯುದ್ಧಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆಯೆಂದೂ, ಅವರು ಹೇಳಿರುತ್ತಾರೆ.

ದಿನಕ್ಕೆ ೮೧,೨೫೦ ರೂ. ಗಳ ಸಿಗರೇಟು, ಬೀಡಿಗಳ ಖರ್ಚು

ಕಾನ್‌ಪುರ ನಗರದಲ್ಲಿ ದಿನಕ್ಕೆ ೨೬ ಲಕ್ಷ ಸಿಗರೇಟುಗಳು ಮತ್ತು ೧೦೪ ಲಕ್ಷ ಬೀಡಿಗಳನ್ನು ಜನರು ಸೇದುತ್ತಿರುವರೆಂದೂ ಇದರಿಂದ ಒಟ್ಟು ೮೧,೨೫೦ ರೂ. ಗಳು ವೆಚ್ಚವಾಗುತ್ತವೆಂದೂ ... ಹೇಳಲಾಗಿದೆ. ೪,೬೦೫ ರೂ ಬೆಲೆಯ ೨೬ ಲಕ್ಷ ವೀಳ್ಯದೆಲೆಯು ದಿನಕ್ಕೆ ಖರ್ಚಾಗುವುದೆಂದೂ ಲೆಕ್ಕಾಚಾರ ಮಾಡಲಾಗಿದೆ.

'ತಮಾಷ್'-ದಸರಾ ಸಂಚಿಕೆ

ರಾಜಧಾನಿಯಲ್ಲಿ ಶ್ರೀ ಎ. ಎನ್. ಸಾಧನರಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ತಮಾಷ್ ವಾರ ಪತ್ರಿಕೆಯ ದಸರಾ ವಿಶೇಷ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಸಿನಿಮಾ ಕ್ಷೇತ್ರಕ್ಕೆ ಸಂಬಂಧಪಟ್ಟ ಲೇಖನಗಳು ಮತ್ತು ನಟನಟಿಯರುಗಳ ಛಾಯಾಚಿತ್ರಗಳೂ ಪ್ರಕಟವಾಗಿವೆ. ಬೆಲೆ ೪ ಆಣೆ.

ವಿಕ್ರಮ

ಬೆಂಗಳೂರಿನಿಂದ ಪ್ರಕಟವಾಗುತ್ತಿರುವ "ವಿಕ್ರಮ" ವಾರಪತ್ರಿಕೆಯ ವಿಜಯ ದಶಮಿ ವಿಶೇಷ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ "ಹಿಂದೂ ಧರ್ಮ ಮತ್ತು ಹಿಂದೂ ದೇಶ" ಮುಂತಾದ ಅನೇಕ ಉಪಯುಕ್ತ ಲೇಖನಗಳು ಪ್ರಕಟವಾಗಿವೆ. ಖಾನ ರಾಜವೇಟಿಕೆ ಶ್ರೀ ಎಂ ವಿ ಎಸ್. ಶಾಸ್ತ್ರಿಯವರ ಸಂಪಾದಕತ್ವದಲ್ಲಿ ಹೊರಡುವ ಈ ಸಂಚಿಕೆಗೆ ೧ ಆಣೆ ಬೆಲೆ.

ಪ್ರದರ್ಶನಕಾರರ ಸಂಘ

ದಸರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವ ವ್ಯಾಪಾರಸ್ಥರ ಸಂಘದ ಸಭೆಯು ಕಳೆದ ಭಾನುವಾರ ನಡೆದ ಬಹುಮ ಪರ್ಷೆ ಶ್ರೀ|| ಡಾ ಎಲ್ ರಾಮಚಂದ್ರರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ|| ಎ. ನಾ... ಶ್ರೀನಿವಾಸ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಕೆ ಎ ರಾಮಚಂದ್ರರವರನ್ನು ಗೌ|| ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು.

ಆರ್. ಎಸ್. ಎಸ್. ನವರ ಬಿಡುಗಡೆಗೆ ನಿಲುವಳಿ ನಿರ್ಣಯ

ಮೈಸೂರು ೧೩

ಈ ದಿನ ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೋತ್ತರಗಳನಂತರ ಶ್ರೀ|| ಭೂಪಾಲಂ ಚಂದ್ರಶೇಖರಯ್ಯನವರ ನಿಲುವಳಿ - ನಿರ್ಣಯವನ್ನು ಸಂಜೆ ನಾಲ್ಕು ಗಂಟೆಗೆ ತೆಗೆದುಕೊಳ್ಳಲಾಗುವುದೆಂದು ಅಧ್ಯಕ್ಷರಾದ ಶ್ರೀ|| ಕೆ. ಸಿ. ರೆಡ್ಡಿಯವರು ತಿಳಿಸಿದರು. ಇದುವರೆಗೆ ದಸ್ತಗಿರಿಯಾಗಿರುವ ಆರ್ ಎಸ್ ಎಸ್ ನವರನ್ನು ಬಿಡುಗಡೆ ಮಾಡಬೇಕೆಂಬುದೇ ಈ ನಿರ್ಣಯದ ಉದ್ದೇಶ.

ಕ್ರಿಯಾಲೋಪದ ಪ್ರಶ್ನೆ

ಹೈಸ್ಕೂಲುಗಳ ಸಂಖ್ಯೆ ಬಗ್ಗೆ ಬಂದ ಒಂದು ಪ್ರಶ್ನೆಯು ಚರ್ಚೆಯಾಗುತ್ತಿದ್ದಾಗ ಶ್ರೀ ಮರುಳ ಸಿದ್ದಪ್ಪನವರು ಸರ್ಕಾರದವರು ಹಳ್ಳಿಗಳ ಹಣವನ್ನು ಪಟ್ಟಣಗಳ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುತ್ತಿಲ್ಲವೇ ಎಂದು ಟೀಕಿಸಿ ಉಪಪ್ರಶ್ನೆಯನ್ನು ಹಾಕಿದರು ಶ್ರೀ ಬಿ ಎನ್ ಗುಪ್ತರವರು ಒಂದು ಕ್ರಿಯಾಲೋಪವನ್ನು ಸೂಚಿಸಿ ಶ್ರೀ ಮರುಳ ಸಿದ್ದಪ್ಪನವರ ಟೀಕೆಯು ಅಕ್ರಮವೆಂದು ಹೇಳಿದರು. ಅಧ್ಯಕ್ಷರು ಇದನ್ನು ಒಪ್ಪಿ ಶ್ರೀ ಮರುಳ ಸಿದ್ದಪ್ಪನವರು ತಮ್ಮ ಟೀಕೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ತಿಳಿಸಿದರು. ಅದಕ್ಕೆ ಅವರು ವಾಪಸು ತೆಗೆದುಕೊಳ್ಳದಿದ್ದಲ್ಲಿ, ಅಧ್ಯಕ್ಷರು ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ತಮಗೆ ಅಧಿಕಾರವಿರುವುದಾಗಿ ... ಶ್ರೀ ಮರುಳ ಸಿದ್ದಪ್ಪನವರು ಈ ಟೀಕೆಯನ್ನು ವಾಪಸು ತೆಗೆದುಕೊಳ್ಳಲು ಇನ್ನೂ ಅವಕಾಶ ಕೊಡುವುದಾಗಿ ತಿಳಿಸಿದರು.

ಮೈಸೂರು ಸಂಸ್ಥಾನದಲ್ಲಿ ಅಧಿಕ ಲಾಭಗಳ ಮೇಲಿನ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಮಸೂದಾ ಕಾನೂನು ಸರ್ವಾನುಮತದಿಂದ ಮಂಜೂರಾಯಿತು.

ಮೈಸೂರು ಸಂಸ್ಥಾನದಲ್ಲಿ ಕೆಲಸಗಾರರ ವಿಚಾರಕ್ಕೆ ಸಂಬಂಧಪಟ್ಟ ಮಸೂದಾ ಕಾನೂನಿನ ಮೇಲೆ ಚರ್ಚೆ ... ಈ ಬಗ್ಗೆ ತೀವ್ರ ಪ್ರತಿಭಟನೆ ... ಬಂದರೂ ಅದು ಬಹುಮತದಿಂದ ಮಂಜೂರಾಯಿತು.

ಬೊಂಬಾಯಿ ಬಂದರು ಕೆಲಸಗಾರರ ಮುಷ್ಕರ

ಬೊಂಬಾಯಿ ಬಂದರು ಇಲಾಖೆಯ ರಿಗೂ ಮತ್ತು ಕೆಲಸಗಾರರಿಗೂ ಭಿನ್ನಾಭಿಪ್ರಾಯವುಂಟಾಗಿ ನಿನ್ನೆ ೫ ದಿವಸ ೧೨ ಸಾವಿರಕ್ಕೂ ಮೇಲ್ಪಟ್ಟು ಬಂದರ್ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರವನ್ನು ಆರಂಭಿಸಿದರು. ಇದರಿಂದ ಬಂದರಿನ ಕೆಲಸ ಕಾರ್ಯಗಳೆಲ್ಲವೂ ನಿಂತು ಹೋಗಿವೆ.

ರೈತರ ಸಮ್ಮೇಳನ

ಇದೇ ತಿಂಗಳು ೧೭ ನೇ ತಾರೀಖು ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಅಖಿಲ ಮೈಸೂರು ರೈತರ ಸಮ್ಮೇಳನವು ರಾಜಧಾನಿಯಲ್ಲಿ ನಡೆಯುವುದು. ಶ್ರೀಯುತ ಹ ಶಿರೋಳಂ ದಾಸಪ್ಪನವರು ಅಧ್ಯಕ್ಷತೆ ವಹಿಸುವರು.

ಮದರಾಸ್ ಗೌರ್ನರರ ನಿರ್ಗಮನ

ಮೈಸೂರು ೧೩

ನವರಾತ್ರಿ ಉತ್ಸವಕ್ಕೆ ವಿಶೇಷ ಆಹ್ವಾನಿತರಾಗಿ ದಯಮಾಡಿಸಿದ್ದ ಮದರಾಸ್ ಗವರ್ನರರೂ ಮತ್ತು ಅವರ ಪತ್ನಿಯವರೂ ಈ ದಿನ ಬೆಳಗ್ಗೆ ಕಾರಿನಲ್ಲಿ ಉದಕಮಂಡಲಕ್ಕೆ ಪ್ರಯಾಣ ಬೆಳೆಸಿದರು.

ಮದರಾಸ್ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರು ಈ ದಿನ ಬೆಳಗ್ಗೆ ವಿಮಾನದಲ್ಲಿ ಮದರಾಸಿಗೆ ಹಿಂತಿರುಗಿದರು.

ಎರಡು ತಲೆ ಎಮ್ಮೆ ಕರು

ಜೀವನರಾಯನ ಕಟ್ಟೆಯಲ್ಲಿರುವ ವಸ್ತು ಪ್ರದರ್ಶನದ ೧೧ನೇ ಮಳಿಗೆಯಲ್ಲಿ ಮೇಲುಕೋಟೆಯ ಜ್ಯೋತಿಷ್ಯ ವಿದ್ವಾನ್ ಟಿ ಗೋಪಾಲಯ್ಯಂಗಾರ್ಯರವರು ಎರಡು ತಲೆಯ ಎಮ್ಮೆ ಕರುವೊಂದನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ ಈ ಕರುವು ಹುಟ್ಟಿದ ಕೂಡಲೇ ಮೃತಪಟ್ಟಿತ್ತು

ಕಲ್ಲಿನಾರಿನ ಮನೆ

ಶಿವರಾಂಪೇಟೆ ಅರಸಿಂಗ್ ಬಜಾರಿನಲ್ಲಿರುವ ಯೂನಿಯನ್ ಸ್ಪಿನ್ನಿಂಗ್ ಮತ್ತು ಇಂಡಸ್ಟ್ರಿಯಲ್ ಕಾರ್ಪೋರೇಷನ್ನಿನವರು ಜೀವನರಾಯನ ಕಟ್ಟೆಯಲ್ಲಿ ಕಲ್ಲಿನಾರಿನ ಮನೆಯೊಂದನ್ನು ಕಟ್ಟಿ ಪ್ರದರ್ಶನಕ್ಕೆ ಇಟ್ಟಿದ್ದಾರೆ. ಇದು ಬಿದರಿನ ಚಾಪೆಯ ಮೇಲೆ ಕಲ್ಲಿನಾರಿನ ಗಾರೆಯಿಂದ ಕಟ್ಟಲ್ಪಟ್ಟಿದೆ ಒಂದು ಚಿಕ್ಕ ಸಂಸಾರದವರು ವಾಸ ಮಾಡಬಹುದಾದ ಮನೆಗೆ ಕೇವಲ ೧೨೦೦ ರೂ. ಮಾತ್ರ ವೆಚ್ಚವಾಗುತ್ತದೆ ಒಂದೇ ದಿನದಲ್ಲಿ ಈ ಮನೆಯನ್ನು ಕಟ್ಟಬಹುದೆಂದು ಹೇಳಲಾಗಿದೆ.

ಹಿಂದಿ ಪ್ರಚಾರ ತರಗತಿ ಪ್ರಾರಂಭ

ರಾಜಧಾನಿಯ ನಜರ್‌ಬಾದಿನಲ್ಲಿರುವ ಗರಡಿಯಲ್ಲಿ ನಿನ್ನೆ ದಿನ ಹಿಂದೀ ಪ್ರಚಾರ ಕೇಂದ್ರದ ಆರಂಭೋತ್ಸವವನ್ನು ಅಕ್ಕಿ ಗಿರಣಿ ಮಾಲೀಕರಾದ ಶ್ರೀ ಚೌಡಯ್ಯನವರು ನಡೆಸಿದರು ಈಗ ೨೫ ಮಂದಿ ಹಿಂದಿ ಅಭ್ಯಾಸ ಮಾಡುತ್ತಿದ್ದಾರೆ ಪ್ರತಿ ದಿನ ಬೆಳಗ್ಗೆ ೭ ರಿಂದ ೮ ಗಂಟೆವರೆಗೆ ತರಗತಿ ನಡೆಯುವುದು. ಮೊಹಲ್ಲಾ ನಿವಾಸಿಗಳು ಇದರ ಉಪಯೋಗವನ್ನು ಪಡೆಯಬೇಕೆಂದು ಅದರ ಸಂಚಾಲಕರು ಕೋರುತ್ತಾರೆ.

HOUSES & LANDS

Buy or Sell,

Lend or Borrow

On houses in Mysore City or Bangalore City & other places

Safe and sound transaction assured.

Consult for best terms to both:- **R GUNDU RAO**

Proprietor, The Mysore Business Bureau,

Below Hindu Bank Karur Ltd., Srirampet, Mysore.

'ವಿಶ್ವ ವಾಣಿ' ದಿನ ಪತ್ರಿಕೆ

ಮೈಸೂರು ೧೩

ಅಖಿಲ ಮೈಸೂರು ವೈಶ್ಯ ಯುವಜನ ಮಹಾಸಭೆಯ ಆಶ್ರಯದಲ್ಲಿ ಪ್ರಕಟವಾಗುತ್ತಿರುವ 'ವಿಶ್ವ ವಾಣಿ' ಎಂಬ ದಿನ ಪತ್ರಿಕೆಯ ಪ್ರಾರಂಭೋತ್ಸವವನ್ನು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ನಿನ್ನೆ ಮಧ್ಯಾಹ್ನ ಅಶೋಕಾ ರಸ್ತೆಯಲ್ಲಿರುವ ಶ್ರೀ ವಾಸವಾಂಬಾ ಭವನದಲ್ಲಿ ನೆರವೇರಿಸಿದರು ಪತ್ರಿಕೆಯ ಸಂಪಾದಕರಾದ ಶ್ರೀ ಟಿ ಗೋಪಾಲಕೃಷ್ಣ ಶೆಟ್ಟಿಯವರು ಸ್ವಾಗತ ಭಾಷಣ ಮಾಡಿ ಪತ್ರಿಕೆ ನೂತನ ಉದ್ಯಮದ ಉದ್ದೇಶವನ್ನು ವಿವರಿಸಿದರು ಶ್ರೀ ಮರಿಯಪ್ಪನವರು ಭಾಷಣ ಮಾಡಿ ಪತ್ರಿಕೆಗಳಿಗೆ ಹೆಚ್ಚು ಜವಾಬ್ದಾರಿ ಇದೆಯೆಂದೂ, ಕಲಹಗಳನ್ನುಂಟು ಮಾಡುವ ಮತ್ತು ಸತ್ಯಕ್ಕೆ ದೂರವಾದ ಸುದ್ದಿಗಳನ್ನು ಪ್ರಕಟಿಸಬಾರದೆಂದೂ ತಿಳಿಸಿದರು. ವ್ಯಾಪಾರದಲ್ಲಿ ವೈಶ್ಯರು ಬಹಳ ಪ್ರಸಿದ್ಧಿ ಪಡೆದಿರುವರೆಂದೂ, ಅವರು ದೇಶದ ವ್ಯಾಪಾರವನ್ನು ಅಭಿವೃದ್ಧಿ ಪಡಿಸಬೇಕೆಂದೂ ಹೇಳಿದರು. ಪತ್ರಿಕೆಯು ಚಿರಕಾಲ ಬಾಳಿ ಸೇವೆ ಸಲ್ಲಿಸಲೆಂದು ಹಾರೈಸಿದರು

ಹೈದರಾಬಾದ್ ಕಾಂಗ್ರೆಸ್ಸಿಗೆ ಮುಸ್ಲಿಮರು

ಹೈದರಾಬಾದ್ ಸಂಸ್ಥಾನದ ಅನೇಕ ಮುಸ್ಲಿಮರು ಅಲ್ಲಿನ ಕಾಂಗ್ರೆಸ್ಸಿನ ಸದಸ್ಯರಾಗಲು ಅರ್ಜಿ ಹಾಕಿಕೊಂಡಿರುವರು. ಇದೇ ೧೫ನೇ ತಾ|| ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ಇದನ್ನು ಪರಿಶೀಲಿಸುವರು ರಾಜ್ಯಾಂಗ ಸಭಾ ರಚನೆ ಬಗ್ಗೆ ಸಿದ್ಧತೆಗಳು ನಡೆಯುತ್ತಿವೆ

SRI GAYATRI

Talkies

From 13—10—48

For 2 days only

Daily 2 Shows

Warner's

The Two Mrs. Carrolls

—:Featuring:—

Humphrey Bogart

MORNING SHOWS

at 10-30 A.M.

From 13—10—1948

For 3 days only

M.G M's

Week End at the Waldrof

ಪ್ರಾಣಿ ಬಲಿ

ತುಮಕೂರು ಜಿಲ್ಲಾ ತುರುವೇಕೆರೆ ತಾಲ್ಲೂಕು ಸಿಂಧ ಗ್ರಾಮದಲ್ಲಿ ಕಳೆದ ತಿಂಗಳು ೨೮ ನೇ ತಾ|| ಮಾರಿ ಜಾತ್ರೆಯ ಸಂಬಂಧವಾಗಿ ಪ್ರಾಣಿಗಳ ವಧೆಯು ನಡೆಯಿತೆಂದೂ, ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಸಿ ಟಿ ಹನಮಂತಯ್ಯನವರು ಅವಲ್ದಾರರು ಮತ್ತು ಪೋಲೀಸ್ ಅಧಿಕಾರಿಗಳೊಡನೆ ಅಲ್ಲಿಗೆ ಹಿಂದಿನ ದಿನ ಹೋಗಿ ಸರ್ಕಾರದ ಕಾನೂನಿನ ಪ್ರಕಾರ ಪ್ರಾಣಿವಧೆ ಮಾಡಕೂಡದೆಂದು ತಿಳಿಸಿದ್ದರೂ, ಪೋಲೀಸ್ ಅಧಿಕಾರಿಗಳ ಈ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದು ಶೋಚನೀಯವೆಂದೂ, ಮುಂದೆ ಈ ರೀತಿ ನಡೆಯದಂತೆ ತಕ್ಕ ಬಂದೋಬಸ್ತು ಮಾಡಬೇಕೆಂದೂ ಕೋರಿ, ವಾಚಕರೊಬ್ಬರು ಪತ್ರ ಬರೆದಿದ್ದಾರೆ.

ದೇವೀ ಯಜ್ಞ — ರುದ್ರ ಸ್ವಾಹಾಕಾರ

ರಾಜಧಾನಿ ಚಾಮುಂಡಿ ಬಡಾವಣೆ ನಂ. ೧೦೭೩ ಇಂದಿನ ಮನೆಯಲ್ಲಿ ೩ನೇ ೧೭ ಮತ್ತು ೧೮ ತಾ|| ಗಳಲ್ಲಿ ದೇವಿ ಯಜ್ಞ—ರುದ್ರ ಸ್ವಾಹಾಕಾರಗಳ ದೇಶದ ಕಲ್ಯಾಣಕ್ಕಾಗಿ ನಡೆಯುವುದರಿಂದ ಭಕ್ತರುಗಳೆಲ್ಲರೂ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಪ್ರಕಟಣೆ

ದಿವಂಗತ ಗ್ಲೆಂಕೊ ಸ್ಮಿತ್‌ರವರಿಗೆ ಸಂಬಂಧಪಟ್ಟದ್ದು

೧೯೨೫ನೇ ಇಸವಿಯ ಟ್ರಸ್ಟೀಸ್ ಆಕ್ಟ್‌ನ ೨೭ನೇ ಸೆಕ್ಷನ್ ಪ್ರಕಾರ ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದರೆ:— ದಕ್ಷಿಣ ಭಾರತದ ಮೈಸೂರು ಸಂಸ್ಥಾನದಲ್ಲಿ ಕೋಲಾರದ ಚಿನ್ನದ ಗಣಿ ಚಾಂಪಿಯನ್ ರೀಫ್ಸಿನಲ್ಲಿದ್ದ ವಿಲ್‌ಫ್ರೆಡ್ ಗ್ಲೆಂಕೋ ಸ್ಮಿತ್‌ರವರು ಕಳೆದ ಫೆಬ್ರವರಿ ೨೬ನೇ ತಾರೀಖು ದಿವಂಗತರಾದರು, ದಿವಂಗತರಿಗೆ ಸೇರಿದ ಎಸ್ಟೇಟಿನ ಹಕ್ಕುದಾರರು ಯಾರಾದರೂ ಇದ್ದಲ್ಲಿ ತಮ್ಮ ಹಕ್ಕುಗಳ ಬಗ್ಗೆ — ಎಕ್ಸಿಕ್ಯೂಟರ್ ಗಳ, ದಿ ಚಾರ್ಟರ್ಡ್ ಬ್ಯಾಂಕ್ ಎಕ್ಸಿಕ್ಯೂಟರ್ ಅಂಡ್ ಟ್ರಸ್ಟೀ ಕಂಪನಿ ಲಿಮಿಟೆಡ್, ೩೮, ಬಿಷಪ್‌ಗೇಟ್, ಲಂಡನ್ ಇ. ಸಿ. ಇಂಗ್ಲೆಂಡ್— ಈ ವಿಳಾಸಕ್ಕೆ ಈ ಪ್ರಕಟಣೆಯು ಹೊರಬಿದ್ದ ಎರಡು ತಿಂಗಳುಗಳ ಅವಧಿಯೊಳಗೆ ಬರಹ ಮೂಲಕ ತಿಳಿಸಬೇಕು. ಮೇಲ್ಕಂಡ ಎರಡು ತಿಂಗಳ ಅವಧಿಯು ಕಳೆದನಂತರ ಅಗ್ಗ ಹಾಜರಾದ ಎಲ್ಲ ಹಕ್ಕುಗಳನ್ನು ಪರಿಗಣಿಸಿ ಎಸ್ಟೇಟಿನ ಅರ್ಹತಾ ವರ್ಗದವರಿಗೆ ಹಂಚಲಾಗುವುದು.

೧೯೪೮ನೇ ಅಕ್ಟೋಬರ್ ೧ನೇ ತಾ.

ಜೆ ಪರ್ ಗನ್ನರ್,

೩೮, ಬಿಷಪ್ಸ್‌ಗೇಟ್ ಲಂಡನ್

ಇಂಗ್ಲೆಂಡ್

ಅಧಿಕಾರಸ್ಥರ ಸಾಲಿಸಿಟರ್

ಆಹಾರದ ಮೇಲೆ ಸಕೋಟ ವಿಧಿಸಲೂ...

ಆಹಾರದ ಮೇಲೆ ಪುನಃ ಕಂಟ್ರೋಲನ್ನು ಸರ್ಕಾರದವರು ಜಾರಿಗೆ ತರುವುದನ್ನು ಪ್ರತಿಭಟಿಸಿ, ಹಳ್ಳಿಯವರಿಗೆ ಇದರಿಂದ ಬಹಳ ಕಷ್ಟ ನಷ್ಟಗಳು ಉಂಟಾಗುವುವೆಂದೂ ದೇಶದ ಹಿತ ದೃಷ್ಟಿಯಿಂದ ಕಂಟ್ರೋಲನ್ನು ಪುನಃ ಜಾರಿಗೆ ತರಕೂಡದೆಂದೂ ಮೈಸೂರು ಜಿಲ್ಲಾ ರೈತರ ಸಂಘದ ಉಪಾಧ್ಯಕ್ಷರಾದ ಶ್ರೀ ಕೊಡಗಹಳ್ಳಿ ರಾಮಸ್ವಾಮಿಯವರು ಸೂಚಿಸಿ ಒಂದು ಪತ್ರ ಬರೆದಿರುವರು.

ನಿಮ್ಮ ಮೈ ಕೋಮಲವಾಗಿರಬೇಕೆ ? ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ !

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಅಪೆರಾ ಟಾಕೀಸ್

ಬೆಳಗಿನ ಆಟಗಳು

14ನೇ ತಾ|| ಬಕ್ರೀದ್ ಹಬ್ಬದ ಪ್ರಯುಕ್ತ ಮಧ್ಯಾಹ್ನ 3—30ಕ್ಕೆ ವಿಶೇಷ ಮ್ಯಾಟಿನಿ

ಅನಂತರ ಪ್ರತಿದಿನ ಬೆಳಗ್ಗೆ 10-30

ತಕ್‌ದೀರ್

(ಹಿಂದಿ)

—:ತಾರಾ:—

* ಚಂದ್ರಮೋಹನ್
* ಮೋತಿಲಾಲ್
* ನರಜೀತ್
* ಚಾರ್ಲಿ

ಜನಾರ್ದನ ಗೋಂದಕರ್ ಇವರ

ಪೂನಾ ಅಂಗಡಿ

ಬಿ. 24 ಎಕ್ಸಿಬಿಷನ್

ಅಸಲಿ ಪೂನಾ ಸೀರೆಗಳು ಚೋಳ್ ಖಣಗಳು ಜಿನ್ನಸ್‌ವಾರ್ ತಂದಿದ್ದೇನೆ. ಎಲ್ಲಾ ಮುಂಡಲಿ ಬಂದು ನೋಡಿ ಆಯ್ದು ಮಾಲು ತೆಗೆದುಕೊಂಡು ನಮ್ಮ ಕೆಲಸಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

Edited printed and published by A. R. Nagarajan at the Sadhvi Press D. Subbaiah Road Mysore

ಪೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ 2] ಗುರುವಾರ, ೧೪-೧೦-೪೮ [ಸಂಚಿಕೆ ೮೯

ಇಟಲಿ ಪಾರ್ಲಿಮೆಂಟ್ ಸಭೆಯಲ್ಲಿ ಹೊಡೆದಾಟ

ಮೈಸೂರಿನಲ್ಲಿ ಆಹಾರ ಸಂಶೋಧನೆ ಕೇಂದ್ರ

ಮೈಸೂರು ೧೩

ಭಾರತದಲ್ಲಿ ಆಹಾರ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸಲು ಒಂದು ಆಹಾರ ಸಂಶೋಧನಾಲಯವನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದ ಆಹಾರ ಶಾಖೆಯವರು ನಿರ್ಧರಿಸಿದ್ದಾರೆ. ಆ ಸಂಸ್ಥೆಗೆ ಎಲ್ಲ ಸೌಕರ್ಯಗಳನ್ನೂ ಕೊಡಲು ಮೈಸೂರು ಸರ್ಕಾರದವರು ಒಪ್ಪಿದ್ದಾರೆ.

ಚುನಾವಣೆಗಳಿಗೆ ಕಾಂಗ್ರೆಸ್ ಉಮೇದವಾರರು

ತುಮಕೂರು ಜಿಲ್ಲೆಯಿಂದ ನಡೆಯಬೇಕಾಗಿರುವ ನ್ಯಾಯವಿಧಾಯಕ ಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಶ್ರೀ ಕೆ. ರಂಗಯ್ಯಂಗಾರ್ಯರೂ, ಸೆನೆಟ್ ಸಭೆಯಿಂದ ಯೂನಿವರ್ಸಿಟಿ ಕೌನ್ಸಿಲ್ಲಿಗೆ ಶ್ರೀ ಗಳಾದ ಕೊಂಡಜ್ಜಿ ಬಸಪ್ಪ ಮತ್ತು ಕೆ. ಪುಟ್ಟಸ್ವಾಮಿಯವರೂ ಸ್ಪರ್ಧಿಸುವರೆಂದು ತಿಳಿದು ಬಂದಿದೆ. ಮೈಸೂರು ಜಿಲ್ಲಾ ವಿದ್ಯಾಭ್ಯಾಸ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ. ಎಸ್. ಜೋಯಿಸರನ್ನು ನಿಲ್ಲಿಸಲಾಗುವುದೆಂದೂ ಗೊತ್ತಾಗಿದೆ.

ಕಸ್ತೂರ್ನೂರು ಕಲಾ ಪ್ರದರ್ಶನ

ದಸರಾ ವಸ್ತು ಪ್ರದರ್ಶನದ ಸಂಬಂಧದಲ್ಲಿ ಚಿಕ್ಕಣ್ಣಯ್ಯನ ಕಟ್ಟೆಯಲ್ಲಿ ಪ್ರದರ್ಶಿಸಲಾಗುತ್ತಿರುವ ಕಸ್ತೂರ್ನೂರಿನ ಮೇಣದ ಬೊಂಬೆಗಳ ಚಮತ್ಕಾರಯುತ ಪ್ರದರ್ಶನಗಳು ಎಲ್ಲರ ಕಣ್ಮನಗಳನ್ನು ಸೆಳೆಯುತ್ತವೆ. ಮೇಣದ ಬೊಂಬೆಗಳ ಶ್ರೀ ಕೃಷ್ಣಲೀಲಾವಿನೋದಗಳೂ, ಬೊಂಬೆಗಳು ಮನುಷ್ಯನಂತೆ ಸಿಗರೇಟನ್ನು ಸೇದಿ ಹೊಗೆ ಬಿಡುವುದೂ ಆಶ್ಚರ್ಯಕರವಾಗಿವೆ.

[illegible]

ಅಮೇರಿಕದ ಸಿನಿಮಾ ಕಂಪೆನಿಯಲ್ಲಿ ಪಾತ್ರವಹಿಸಲು ಒಬ್ಬ ಹುಡುಗನು ಬೇಕು

ಭಾರತದಲ್ಲೇ ತಯಾರಾಗಲಿರುವ ಆವೆರಿಕ ಮೋಷನ್ ಪಿಕ್ಚರಿನಲ್ಲಿ ಪಾತ್ರವಹಿಸಲು ವೃತ್ತಿಯನ್ನು, ಸ್ಫುರದ್ರೂಪಿಯೂ ಆದ 12 ರಿಂದ 16 ವರ್ಷ ವಯಸ್ಸಿನೊಳಗಿರುವ ಒಬ್ಬ ಭಾರತೀಯ ಬಾಲಕನು ಬೇಕಾಗಿದೆ. ಆಪೇಕ್ಷಿಸುವವರು 16-10-8ನೇ ತಾರೀಖು ಬೆಳಗ್ಗೆ 10 ಗಂಟೆಯಿಂದ ವ್ಯವಸ್ಥಾಪಕರವರನ್ನು ಕೆಳಗಿನ ವಿಳಾಸದಲ್ಲಿ ಸಂದರ್ಶಿಸಬಹುದು

ಮಿ. ಮೆಕ್ ಎಲ್‌ರಾಯ್,
ಹೋಟೆಲ್ ಮೆಟ್ರೋಪೋಲ್, ಮೈಸೂರು

ಕಾಲರಾ ನಿರೋಧಕ ಕಾರ್ಯಕ್ರಮ

ಮೈಸೂರು ೧೪

ನ. ದಂಡಾಶ್ ನಗರ ಮತ್ತು ಸುತ್ತಮುತ್ತಲಿನ ಭಾಗಗಳಲ್ಲಿ ಕಾಲರಾ ವ್ಯಾಧಿಯು ಕಾಣಿಸಿಕೊಂಡಿರುವುದರಿಂದ ಆ ಪ್ರದೇಶಗಳಿಂದ ರಾಜಧಾನಿಗೆ ಆಗಮಿಸುವ ಜನರ ಮೂಲಕ ಹರಡದಂತೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ವ್ಯಾಧಿಯು ನಗರದಲ್ಲಿ ಹರಡದಂತೆ ಸಾರ್ವಜನಿಕರು ತಪ್ಪದೇ [illegible] ಮಾಡಿಸಿಕೊಳ್ಳುವುದು, ಬಿಸಿ ನೀರನ್ನು ಕುಡಿಯುವುದು, ಬೀದಿ ತಿಂಡಿಗಳನ್ನು ತಿನ್ನದಿರುವುದು, ಇವೇ ಮುಂತಾದ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಮೈಸೂರು ಪುರಸಭೆಯ ಆರೋಗ್ಯಾಧಿಕಾರಿಗಳು ಸೂಚನೆ ಕೊಡುತ್ತಾರೆ.

ಮೈಸೂರಿನಲ್ಲಿ ಸೈಕಲ್ ಕಾರ್ಖಾನೆ

ಮೈಸೂರು ಸಂಸ್ಥಾನದಲ್ಲಿ ಸೈಕಲ್, ಅಲ್ಯುಮಿನಿಯಂ, ಕೆಂಗಿನ ನಾರಿನ ವಸ್ತುಗಳ ತಯಾರಿಕಾ ಕಾರ್ಖಾನೆಗಳನ್ನು ಸ್ಥಾಪಿಸಲಾಗುವುದೆಂದು ಅದಕ್ಕೆ ಪ್ರಯತ್ನ ಜರುಗಿಸುವ ಸರಕಾರದ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಬೊಂಬಾಯಿನಲ್ಲಿ ತಿಳಿಸಿರುತ್ತಾರೆ.

ಸಂಸ್ಥಾನದ ರೈತರ ಸಮ್ಮೇಳನ

ಮೈಸೂರು ೧೪

ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ತಾ॥ ೭-೧೦-೪೮ನೇ ಭಾನುವಾರ [illegible] ಕ್ಕೆ ಕಂಟ್ರಿ ಕ್ಲಬ್ ಹಾಲ್ ಮೊದಲ ಗೊತ್ತಾಗುತ್ತಿಗೆಗಳನ್ನು ವಿತರಿಸಲು ಮೈಸೂರು ಸಂಸ್ಥಾನದ ರೈತರ ಸಮ್ಮೇಳನವನ್ನು ಮೈಸೂರು ನಗರದ ಶ್ರೀ [illegible] ರವರ ಸ್ವಗೃಹದಲ್ಲಿ ಏರ್ಪಡಿಸಿರುತ್ತಾರೆ. ಶ್ರೀ [illegible] ಯವರ ಅಧ್ಯಕ್ಷತೆ ವಹಿಸುವರು. ಎಲ್ಲ ರೈತರೂ ಮತ್ತು ರೈತರ ಪ್ರತಿನಿಧಿಗಳೂ ಭಾಗವಹಿಸಬೇಕೆಂದು ಮೈಸೂರು ಜಿಲ್ಲಾ ರೈತರ ಸಂಘದ ಕಾರ್ಯದರ್ಶಿಗಳಾದ ಶ್ರೀ ಸಿ. ಜೆ. ದೇವನಾಥರವರು ಮನವಿ ಮಾಡಿದ್ದಾರೆ.

ಬೆಳಗಿನ ಆಟಗಳು

15—10 ಶುಕ್ರವಾರದಿಂದ
4 ದಿನಗಳು ಮಾತ್ರ

ಜಾಂದ್-ಇ-ಕಿಸ್ಮತ್
(ಸ್ಟಂಟ್ ಚಿತ್ರ)
[illegible]

ಒಲಂಪಿಯಾ ಟಾಕೀಸ್

ದಾಸಪ್ಪನವರ ಪೋರ್ಟ್ ಫೋಲಿಯೋಗಳ ಹಂಚಿಕೆ

ಮೈಸೂರು ೧೪

ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರು ವಿದೇಶಗಳಿಗೆ ತೆರಳುವುದರಿಂದ ಅವರಿಗೆ ವಹಿಸಲಾಗಿದ್ದ ಹಣಕಾಸಿನ ಖಾತೆಯನ್ನು ಶ್ರೀ ಕೆ. ಟಿ. ಭಾಷ್ಯಂರವರಿಗೂ, ಕೈಗಾರಿಕಾ ಖಾತೆಯನ್ನು ಶ್ರೀ ರೆಡ್ಡಿಯವರಿಗೂ ಮತ್ತು ಆಹಾರ ಖಾತೆಯನ್ನು ಶ್ರೀ ಚೆನ್ನಿಗರಾಮಯ್ಯನವರಿಗೂ ಹಂಚಲಾಗಿದೆಯೆಂದು ತಿಳಿದುಬಂದಿದೆ.

ಬೊಂಬಾಯಿ ಮುಷ್ಕರದ ಮುಕ್ತಾಯ

ಮೊನ್ನೆಯ ದಿವಸ ಆರಂಭವಾದ ಬೊಂಬಾಯಿ ಬಂದರಿನ ಕೆಲಸಗಾರರ ಮುಷ್ಕರವನ್ನು ನಾಳೆ ದಿವಸ ಮುಕ್ತಾಯಗೊಳಿಸಲಾಗುವುದೆಂದು ಬಂದರು ಕೆಲಸಗಾರರ ಸಂಘದ ಕಾರ್ಯದರ್ಶಿಯವರು ಪ್ರಕಟಿಸಿರುವರೆಂದು ವರದಿಯಾಗಿವೆ.

ರೈಲುಗಾಡಿಯಲ್ಲಿ ನಾಗರ ಹಾವು

ಬೆಂಗಳೂರು ೧೪

ನಿನ್ನೆ ರಾತ್ರಿ ಮೈಸೂರಿನಿಂದ ಇಲ್ಲಿಗೆ ಬಂದ ಸ್ಪೆಷಲ್ ರೈಲಿನ ಗಾಡಿಯೊಂದರಲ್ಲಿ ಯಾರಿಗೂ ತಿಳಿಯದಂತೆ ೬ ಅಡಿ ಉದ್ದದ ನಾಗರಹಾವು ಒಂದು ಸೇರಿಕೊಂಡು ಬೆಂಗಳೂರು ನಿಲ್ದಾಣದಲ್ಲಿ ರೈಲು ನಿಂತ ಒಡನೆ ಜನರು ಇಳಿಯುತ್ತಿದ್ದಾಗ ಅದೂ ಸಹ ಕಿಟಕಿಯ ಮೂಲಕ ಇಳಿಯಲು ಪ್ರಯತ್ನಿಸಿದುದನ್ನು ನೋಡಿದ ಪ್ರಯಾಣಿಕರು ಅದನ್ನು ಅಲ್ಲಿಯೇ ಕೊಂದುಹಾಕಿ ರೈಲ್ವೆ ಪೋಲೀಸ್ ಸ್ಟೇಷನ್ನಿಗೆ ತಲುಪಿಸಿದರೆಂದು ತಿಳಿದುಬಂದಿದೆ.

ಇಟಲಿಯ ಶಾಸನ ಸಭೆಯಲ್ಲಿ ಸದಸ್ಯರ ಕಾಳಗ

ರೋಂ ನಗರದಲ್ಲಿ ಮೊನ್ನೆ ಇಟಲಿಯ ಶಾಸನ ಸಭೆಯ ಅಧಿವೇಶನವು ನಡೆಯುತ್ತಿದ್ದಾಗ ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೂ ಮತ್ತು ನಿಯೋ ಫ್ಯಾಸಿಸ್ಟ್ ಪಕ್ಷದ ಸದಸ್ಯರಿಗೂ ಸಭಾಭವನದಲ್ಲೇ ಅರ್ಧ ಗಂಟೆ ಕಾಲ ಭಾರಿ ಘರ್ಷಣೆಯಾಗಿ ಸಭಾ ಕಾರ್ಯಕಲಾಪಗಳು ನಿಂತು ಹೋದವೆಂದು ವರದಿಯಾಗಿದೆ. ಯುದ್ಧಾನಂತರ ಉತ್ತರ ಇಟಲಿಯ ಎಮಿಲಿಯ ಪ್ರಾಂತ್ಯದಲ್ಲಿ ವಿಪರೀತ ಕೊಲೆ ನಡೆಯಿತೆಂದು ಕಮ್ಯೂನಿಸ್ಟ್ ಪಕ್ಷದ ನಾಯಕನು ಹೇಳಿ, ಪಂಚಕರೆಲ್ಲರೂ ಮಡಿಸಿದುದು ಇಟಲಿಗೆ ಕ್ಷೇಮವೆಂದು ಹೇಳಿದುದರ ಮೇಲೆ ಘರ್ಷಣೆಯು ಪ್ರಾರಂಭವಾಯಿತು. ಇದನ್ನು ಕೇಳಿ ಸಭೆಯ ಸೋಷಿಯಲಿಸ್ಟ್ ಪಕ್ಷದ ನಾಯಕರು ಕಮ್ಯೂನಿಸ್ಟರೇ ಕೊಲೆಗಡುಕರೆಂದು ಘರ್ಜಿಸಿದರು. ಅನಂತರ ಘರ್ಷಣೆಯುಂಟಾಗಿ ಒಬ್ಬರಿಗೊಬ್ಬರು ಒದೆಯುವುದು ಪರಸ್ಪರ ಕಾಯಿತುಗಳನ್ನು ಎಸೆಯುವುದು, ಬಯ್ಯುವುದೇ ಮುಂತಾಗಿ ನಡೆಸಿದುದರಿಂದ ಹಲವರಿಗೆ ಕಣ್ಣು, ಮೂಗುಗಳ ಮೇಲೆ ಗಾಯಗಳಾದುವು.

ಬೆಳಗಿನ ಆಟಗಳು

15—10 ಶುಕ್ರವಾರದಿಂದ
4 ದಿನಗಳು ಮಾತ್ರ

ರಂಜಿತ್ ಕಂಪೆನಿಯವರ

ಇಂಡಿಯಾ ಟುಡೇ
ಅಥವ ಆಜ್ ಕಾ ಹಿಂದೂಸ್ಥಾನ್

ಪಾತ್ರ: - ಪೃಥ್ವಿರಾಜ್, ರೋಸ್
ಅನ್ವರಲಾಲ್, ಮುಂತಾದವರು

ಪ್ರಭಾ ಪಿಕ್ಚರ್ ಹೌಸ್

[illegible] ನಿರ್ಣಯಗಳ ನಿರಾಕರಣೆ

ಶ್ರೀ ಸಭೆಯ ಕಾರ್ಯಕಲಾಪಗಳು

ಮೈಸೂರು ೧೪

[illegible] ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ [illegible] ನಿಮಿತ್ತ ಈ ದಿನ ಶ್ರೀ [illegible] ಶ್ರೀ ಕೆ. ಟಿ. ಭಾಷ್ಯಂರವರ [illegible] ಆರಂಭವಾಯಿತು.

[illegible] ಹಬ್ಬದ ಪ್ರಯುಕ್ತ ಮುಸ್ಲಿಂ [illegible] ಆದರೆ ಜನಾಬ್ [illegible] ಸೇರಿದವರೊಬ್ಬರು [illegible]

[illegible] ಸೂಚಿಸಲಾಗಿದ್ದ ನಿಲುವಳಿ [illegible] ತಿರಸ್ಕರಿಸಲಾಗಿದೆ [illegible] ತಿಳಿಸಿದರು. ಈ ದಿನ [illegible] ಹಲವು ನಿಲುವಳಿ ನಿರ್ಣಯ [illegible] ಸರ್ಕಾರದವರ ಭರವಸೆ ಮೇರೆ [illegible] ವಾಪಸು ತೆಗೆದುಕೊಂಡರು.

[illegible] ಗುರುವಾರ ಬೆಂಗಳೂರು ರೈಲ್ವೆ [illegible] ನಗ್ಗಲಿನಿಂದ ಒಬ್ಬ [illegible] ಒಂದು ಮಗುವು [illegible] ಬಗ್ಗೆ ಶ್ರೀ ಅರ್. [illegible] ನಿಲುವಳಿ [illegible] ಮಂಡಿಸಿದ್ದರು. ಮಗು [illegible] ಹೆಂಗಸಿಗೆ [illegible] ದ್ದೂ ಅದಕ್ಕೆ [illegible]

[illegible] ನೀತಿಯ ಬಗ್ಗೆ ಶ್ರೀ ಮಾ[illegible] ರೆಡ್ಡಿಯವರು [illegible] ಈ ಬಗ್ಗೆ ಒಂದು [illegible] ಅಧ್ಯಕ್ಷರು ತಿಳಿಸಿದರು.

[illegible] ಶ್ರೀ ಮಲ್ಲ [illegible] ನಿಲುವಳಿ [illegible] ಸೂಚಿಸಿದ್ದರು [illegible] ಈಗ [illegible] ಸಾಲಗಾರನು [illegible] ಬಿಡದಂತೆ [illegible] ಶ್ರೀ ಬಿ. ಎನ್. ಗುಪ್ತ [illegible] ರಂಗಯ್ಯಂಗಾರ್ಯರವರು ಹೇಳಿ [illegible]

[illegible] ವಾಪಸು ತೆಗೆದುಕೊ[illegible] ಚರ್ಚೆಯು [illegible]

[illegible] ವಾಹನಗಳ ಮತ್ತು [illegible]

[illegible] ರವರಿಗೆ ಮತ್ತೆ [illegible] ಗಳ ಬಂಧನ

ಬೆಂಗಳೂರು ೧೪

[illegible] ಬಂಧನದಲ್ಲಿ [illegible] ಶ್ರೀ [illegible] ಬಂಧನದ ಅವಧಿಯ [illegible]

ಆರ್.ಎಸ್.ಎಸ್ ನವರ ಬಂಧನ

ನಿಲುವಳಿ ತೀರ್ಮಾನದ ಸಂಬಂಧ

ಮೈಸೂರು ೧೪

ಸಂಸ್ಥಾನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದವರನ್ನು ದಸ್ತಗಿರಿ ಮಾಡಿರುವುದು ಸರಿಯಲ್ಲ ಎಂಬ ನಿಲುವಳಿ ಸೂಚನೆಯನ್ನು ಶ್ರೀ ಭಂಡಾರಿ ಚಂದ್ರಶೇಖರಯ್ಯನವರು ಪ್ರ॥ ಪ್ರ॥ ಸಭೆಯಲ್ಲಿ ನೆನ್ನೆ ದಿನ ಮಂಡಿಸಿದರು. ಚರ್ಚೆಯು ಸುಮಾರು ಎರಡು ಘಂಟೆಗಳ ಕಾಲ ನಡೆದು ಸೂಚನೆಯು ಅಧಿಕ ಸಂಖ್ಯೆಯ ಓಟುಗಳಿಂದ ತಿರಸ್ಕೃತವಾಯಿತು.

[illegible]

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎಸ್ಟೇಟುಗಳ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯೂ, ಬೆಲೆಯಲ್ಲಿ ಮಿತವಾಗಿಯೂ ಮತ್ತು ರುಚಿಕರವಾಗಿಯೂ ಇದೆ.

—: ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು: —

ಸಿ. ಬಿ. ಜನರಲ್ ಸ್ಟೋರ್ಸ್,

ಹೊಲ್‌ಸೇಲ್ ರಸ್ತೆ, ಮೈಸೂರು.

ರಾಜಕಮಲ್ ಟಾಕೀಸ್

16-10-48ರಿಂದ :: ಅಮೋಘ 4ನೇ ವಾರ

ಪ್ರತಿ ದಿನ ಮೂರು ಆಟಗಳು

ಮತ್ವಾಲಾಸ್ತೈರ್ ರಾಮಜೋಗಿ

MORNING SHOWS From 16—10—48

For 4 Days

STRIKE ME PINK

With:—EDDIE CANTOR

ಶ್ರೀ ಗಾಯತ್ರಿ ಟಾಕೀಸ

15—10—48ರಿಂದ :: 4 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

ಲೇ ಮಿ ಸ ರ ಬ ಲ್

(LES MISERABLES)

MORNING SHOWS :: at 10-30 A.M.

From 13—10—1948 For 3 days only

M.G M's

Week End at the Waldrof

ಜನಾರ್ದನ ಗೋಂದಕರ್ ಅವರ

ಪೂನಾ ಅಂಗಡಿ

ಬಿ. 24 ಎಕ್ಸಿಬಿಷನ್

ಅಸಲಿ ಪೂನಾ ಸೀರೆಗಳು ಚೋಳ್ ಖಣಗಳು ಜಿನ್ನಸ್‌ವಾರ್ ತಂದಿದ್ದೇವೆ. ಎಲ್ಲಾ ಮಂದಲಿ ಬಂದು ನೋಡಿ ಲಾಯಖ್ ಮಾಲು ತೆಗೆದುಕೊಂಡು ನಮ್ಮ ಕೆಲಸಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

Edited printed and published by A. R. Nagarajan at the Sadhvi Press D. Subbaiah Road Mysore

ರೋ॥ ಹಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೧೫-೧೦-೪೮ [ಸಂಚಿಕೆ ೬೦

ಅಕ್ಟೋಬರ್ ೨೯ ಕ್ಕೆ ನೆಹರೂ ಮೈಸೂರಿಗೆ

...ಲಿಗಾರರಿಗೆ ವಸತಿ ಸೌಲಭ್ಯ

...ಸಭೆಯಲ್ಲಿ ಮುಖಂಡರ ... ಸಂಬಂಧ

... ಮೈಸೂರು ೧೫
...ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ...ಸಂಬಂಧದ ಮಸೂದೆ ... ಮೇಲಿನ ...ರು ಮುಂದುವರೆಯಿತು. ಶ್ರೀ ಕಂ...ಗೌಡರು ರಾಷ್ಟ್ರೀಕರಣಸಭೆಯು ಈ ...ಇಲ್ಲದೆ ಸರ್ಕಾರವು ಬಸ್ಸುಗಳನ್ನು ...ರಣ ಮಾಡಿದ್ದು ಸಾಧುವಲ್ಲವೆಂ...ಿದರು.

...ಟಿ ಎಸ್ ಗುಪ್ತರು ಮಾತನಾಡಿ ... ದಲನಂತರವೂ ಬಸ್ಸು ಪಡೆಗಿಗಳ ...ರುವಲ್ಲಿ ಸರ್ಕಾರಕ್ಕೆ ನಷ್ಟ ... ಕಲ ನಷ್ಟವೇನೂ ಆಗುವುದಿಲ್ಲವೆಂ...ದರು. ದೇಶಾದ್ಯಂತವೂ ಮುಖ್ಯ ...ಸರ್ವಿಸ್ಸುಗಳ ರಾಷ್ಟ್ರೀಕರಣದ ...ಹಲ ದಿನಗಳಿಂದಲೂ ಇತ್ತೆಂದೂ ...ಂತ್ಯಗಳಾದ ಬೊಂಬಾಯಿ ಮದ...ಗಳಲ್ಲಿ ರಾಷ್ಟ್ರೀಕರಣದ ಯೋಜನೆ ...ಗ ನಪ್ಪಲ್ಲಿ ಎಳೆ ...ಬೇಕೆಂದೂ ...ಪ್ರದೇಶಗಳಿಗೆ ಅದನ್ನು ಸೌಕರ್ಯ ...ವದಗಿಸುವುದೇ ಪ್ರಜಾ ಸರ್ಕಾರದ ...ವಾಗಿರುವುದರಿಂದ ಸರ್ಕಾರವು ...ಂಬುವ ಕಾರ್ಯಕ್ಕೆ ಅಭಿನಂದಿಸಿ ...ಟ್ಟಗಳನ್ನು ಕೊಡುವಾಗ ಕಾಲ ...ರ್ಧರಿಸಿ ಕೊಡುವುದು ಒಳ್ಳೆಯದೆಂ...ಸಿದರು.

...ಗಳಾದ ಚೆನ್ನಬಸಿಂಹಯ್ಯ, ಶಿವ... ವೈ ಧರ್ಮಪ್ಪ, ಎಸ್ ...ಮ್ಯನವರು ಮುಖಂಡರುಗಳು ವಿ...ದರು.

...ಸಚಿವ ಶ್ರೀ ಟಿ ಮರಿಯಪ್ಪನವರು ...ಡಿ ಬಸ್ ರಾಷ್ಟ್ರೀಕರಣದವಿಷಯ. ...ಯು ವಿಧಾಯಕ ಮತ್ತು ಪ್ರಜಾಪ್ರ...ಸಭೆಗಳಲ್ಲಿ ೧೯೪೪ ರಿಂದಲೇ ಚ...ಟ್ಟಿರುವುದಾಗಿಯೂ ಅರ್ಥಿಕ ...ದ ಪಾಲಿಸಿ ಸಮಿತಿಯವರ ಸಲಹೆ ... ಸರ್ಕಾರವು ಈ ಕಾರ್ಯವನ್ನು ...ರಿಕೆಂದೂ ತಿಳಿಸಿದರು. ಸರ್ಕಾರವು ...ಬೆಂಗಳೂರು, ಮೈಸೂರು ಮತ್ತು ...ಗ್ಗ ಈ ಮೂರು ಕಡೆಗಳಲ್ಲಿ ಮಾ...ಜನ ಸೌಕರ್ಯದ ಏರ್ಪಾಡು ... ...ಗುವುದೆಂದೂ ಅಲ್ಲಿ ಬಸ್ಸ್ಯನು ... ...ಮಾಸಗೀಯವರಿಗೆ ಇದರಿಂದ ಅ...ನಷ್ಟದ ಒಸ್ಗೆ ಬೇರೆ ಕಡೆ ... ...ಾಗಿದೆಯೆಂದೂ ... ತಿಳಿಸಿದರು ...ದವರು ನಷ್ಟದಲ್ಲಿ ತಿಳ್ಳಾ ಒಪ್ಪುಗ ...ವಹಿಸಿಕೊಳ್ಳುವುದಿಲ್ಲವೆಂಬ ಭರವ...ತ್ತರು.

...ಮರಿಯಪ್ಪನವರು ಮಂಡಿಸಿದ ...ವಿ.ಹನುಮಂತರೆಡ್ಡಿ ಸಂಬಂಧದ ...ತಿದ್ದುಪಡಿ ಮಗ್ಗುಸಿ, ಸರ್ಕಾರ ...ಗೆ ಸಂಬಂಧಪಟ್ಟ ಮಸೂದೆಗ...ೇಂ ಚರ್ಚೆಯಿಲ್ಲದೆ ... ...

...ಸಂಸ್ಥಾನವನ್ನು ವಿದೇಶಿಯ ...ಂಧಪಟ್ಟ ಮಸೂದೆಯನ್ನು ಶ್ರೀ ...ಪ್ಪನವರು ಮಂಡಿಸಿದರು. ಶ್ರೀ ...ಾವ್ ಬಹದ್ದೂರ್ ರಾವ ಸ್ವಾ... ...ರ್ಟ, ಎ ಎಸ್ ರಾಮರಾವ್ ...ವಿರಾಷ್ಟ್ರೇ ಅರಸ್ ಮತ್ತು ಎಸ್ ...ನವರು ಮಾತನಾಡಿ ವಿ... ...ದರುಎಂ.ಬಿ.ವಿಠ್ಠಲ ಕೃಷ್ಣ ಪ...ದ ಹೇಳಿದರು

ಶ್ರೀಮನ್ಮಹಾರಾಜರವರ ಕಾರ್ಯಕ್ರಮ

ಮೈಸೂರು ೧೫

ಈ ತಿಂಗಳು ೨೪ ನೇ ತಾ॥ ಭಾನುವಾರ ಬೆಳಿಗ್ಗೆ ೯-೧೦ ಗಂಟೆಗೆ ಶ್ರೀಮನ್ಮಹಾರಾಜರವರು ನಂಜನಗೂಡು ತಾಲ್ಲೂಕು ಹುಳಿಮಾವು ಬಳಿ ಎಲ್ಲ ಹೊಳೆ ಸೇತುವೆ ಶಂಕುಸ್ಥಾಪನೆಯನ್ನು ನೆರವೇರಿಸುವರು. ಅದೇ ದಿನ ಬೆಳಿಗ್ಗೆ ೧೧ ಗಂಟೆಗೆ ಗುಂಡ್ಲುಪೇಟೆ ತಾಲ್ಲೂಕು ಮಾದಾಪಟ್ಟಣದ ಬಳಿ ಗುಂಡ್ಲು ಹೊಳೆಯ ಸೇತುವೆಯ ಶಂಕುಸ್ಥಾಪನೆಯನ್ನೂ ನೆರವೇರಿಸುವರು.

೨೬ ನೇ ತಾ॥ ಮಂಗಳವಾರ ಬೆಳಿಗ್ಗೆ ೯ ಗಂಟೆಗೆ ಕೃಷ್ಣರಾಜನಗರದ ಆರೋಗ್ಯ ಕೇಂದ್ರದ ಆರಂಭೋತ್ಸವವನ್ನೂ ಅದೇ ದಿನ ಬೆಳಿಗ್ಗೆ ೧೦.೪೫ ಗಂಟೆಗೆ ಸದರಿ ತಾಲ್ಲೂಕು ಹಾಡ್ಯ ಗ್ರಾಮದ ಹೆರಿಗೆಆಸ್ಪತ್ರೆಯ ಶಂಕುಸ್ಥಾಪನೆಯನ್ನೂ ಪ್ರಭುಗಳು ನೆರವೇರಿಸುವರೆಂದು ತಿಳಿದು ಬಂದಿದೆ.

ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಈ ಬಗ್ಗೆ ವಿವರಣೆ ಕೊಟ್ಟು ಹೈದ್ರಾಬಾದ ಪೊಲೀಸ್ ಕ್ರಮ ನಡೆಯುವ ಸಂದರ್ಭದಲ್ಲಿ ಕೆಲವು ಗಣ್ಯರು ಬೆಂಗಳೂರಿಗೆ ಬಂದು ಮೈಸೂರು ಸರ್ಕಾರದ ರಕ್ಷಣಾ ... ಹೊಂದಿದ್ದು, ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ... ಯಲ್ಲಿ ಪ್ರಯುಕ್ತರಿದ್ದು ಮತ್ತೆ ಕೆಲವರು ವೆಸ್ಟ್‌ಎಂಡ್ ಹೋಟೆಲಿನಲ್ಲಿ ಇದ್ದು ಬೆಂಗಳೂರಿನ ಮಾನ್ಯ ಗೃಹಸ್ಥರಿಗೂ ಅಧಿಕಾರಿಗಳಿಗೂ ಸತ್ಕಾರವನ್ನ ವಿಶೇಷಮಿಸಿ ಪತ್ರದ ಮೂಲಕ ಸರ್ಕಾರದ ಗುಟ್ಟನ್ನ ತಿಳಿದು ... ಇವುಗಳನ್ನು ಪ್ರಸ್ತಾಪಿಸಿ ಆ ಕಡೆ ವಿದೇಶೀಯರನ್ನು ಹಡೆಗಟ್ಟಲು ಈ ಮಸೂದೆ ತಂದಿರುವುದಾಗಿಯೂ ... ಆದ್ದರಿಂದ ಸಭೆಯು ಒಪ್ಪಿಗೆ ಇತ್ತಿತು

ಸಂಸ್ಥಾನದ ಕೂಲಿಗಾರರಿಗೆ ವಸತಿ ಸೌಕರ್ಯವನ್ನ ಏರ್ಪಡಿಸುವ ಮಸೂದೆಯನ್ನು ಟಿ ಮರಿಯಪ್ಪನವರು ಮಂಡಿಸಿ ಇದು ಸಂಸ್ಥಾನದ ಕೈಗಾರಿಕಾಭಿವೃದ್ಧಿ ಕೆಲಸವೆಂದೂ, ಪ್ರಜಾ ಸರ್ಕಾರದ ಧ್ಯೇಯಗಳಲ್ಲಿ ಇದೂ ಒಂದೆಂದೂ ತಿಳಿಸಿದರು. ಶ್ರೀಗಳಾದ ಧರ್ಮಸ್ಥಳ ಚಂದ್ರಶೇಖರಯ್ಯ, ಮದ್ದಾ ಗೋವಿಂದ ರೆಡ್ಡಿ, ಎಫ್ ಸಿ ದೇವರಾಜ ಅರಸ್, ಎ ಎಸ್ ರಾಮರಾವ್, ಟಿ. ಎಲ್ ಗಂಗೋಜಿರಾವ್, ಶಾಮರಾಜ ಅಯ್ಯಂಗಾರ್, ಶಾಸ್ತ್ರಿ ನಾಯಕ್, ಕೆ ಹನುಮಂತಯ್ಯ, ವೆಂಕಟರಾವ್ ಮ... ಮಸೂದೆಗೆ ಬೆಂಬಲವಿತ್ತರು.

ಮಸೂದೆಯು ಸರ್ವಾನುಮತದಿಂದ ಅಂಗೀಕೃತವಾಯಿತು

ದೇವರ ಹೆಸರನ್ನು ಎಳೆಯಬೇಡಿ

ವಿಶ್ವ ಸಂಸ್ಥೆಯಲ್ಲಿ ರಷ್ಯದ ಪ್ರತಿನಿಧಿಯ ಪ್ರತಿಭಟನೆ

ವಿಶ್ವ ಸಂಸ್ಥೆಯ ಮಾನವೀಯ ಹಕ್ಕುಗಳ ಘೋಷಣೆಯಲ್ಲಿ ಮನುಷ್ಯನು ಈಶ್ವರನ ಪ್ರತಿಬಿಂಬವಾಗಿ ಅವನಂತೆಯೇ ಸೃಷ್ಟಿಸಲ್ಪಟ್ಟಿರುವನೆಂಬುದನ್ನು ನವ ಎದಿಸಕೂಡದೆಂದು ಹೇಳಿ ರಷ್ಯದ ಪ್ರತಿನಿಧಿಯು ಭದ್ರತಾ ಸಮಿತಿಯ ಸಭೆಯಲ್ಲಿ ಪ್ರತಿಭಟಿಸಿದ್ದಾರೆ

ಸೂಚನೆ

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವದ ಪ್ರಯುಕ್ತ ನಾಳೆ "..." ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಪ್ರಜಾಪ್ರತಿನಿಧಿ ಸಭೆ

ಮೈಸೂರು ೧೫

ಈ ದಿನವೂ ಪ್ರ॥ ಪ್ರ॥ ಸಭೆಯು ಶ್ರೀ ಕೆ.ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶುಕ್ರವಾರವಾದ ಪ್ರಯುಕ್ತ ಮುಸ್ಲಿಂ ಸದಸ್ಯರ ಪ್ರಾರ್ಥನೆಗೆ ಅನುಕೂಲವಾಗಲು ... ಗಂಟೆಗೆ ಆರಂಭಿಸಲಾಯಿತು. ಪ್ರಶ್ನೋತ್ತರ ಕಾಲದಲ್ಲಿ ಯಳಂದೂರು, ನಂಜನಗೂಡು, ಚಾಮರಾಜನಗರ ತಾಲ್ಲೂಕುಗಳ ಕೆರೆಗಳನ್ನು ದುರಸ್ತು ಮಾಡಲು ಒಂದು ಪ್ರತ್ಯೇಕ ಡಿವಿಷನ್ನು ಸ್ಥಾಪಿಸಬೇಕೆಂದಿರುವುದಾಗಿ ಸರ್ಕಾರದವರು ತಿಳಿಸಿದರು

ಬಿಡುಗಡೆಗೆ ಆಜ್ಞೆ

ಪೊಲೀಸರ ಮುಷ್ಕರದ ಸಂದರ್ಭದಲ್ಲಿ ದಸ್ತಗಿರಿಯಾಗಿದ್ದ ಶ್ರೀ ಕಣ್ಣಾರವರನ್ನು ಬಿಡುಗಡೆ ಮಾಡಲು ಸರ್ಕಾರದವರು ... ಆಜ್ಞೆ ಮಾಡಿರುವರೆಂದು ... ವರದಿ ಮುಟ್ಟಿದೆ

ನಾರ್ಮ ಮೂಕರ ರಾಜೀನಾಮೆ

ಇಂಡೋನೇಷಿಯದ ನಾಯಕರುಗಳೊಡನೆ ನಡೆಸಿದ ಸಂಧಾನದಲ್ಲಿ ತಮ್ಮ ಹಾಲೆಂಡ್ ಸರ್ಕಾರದವರು ಅಂತರಂಗದಲ್ಲಿ ಸೇರಿ ... ಕಾರಣದಿಂದ ಅಲ್ಲಿನ ಲೆಫ್ಟಿನೆಂಟ್ ಗವರ್ನರ್ ಜನರಲ್ ಡಾ॥ ವಾನ್ ಮೂಕ ಅವರು ರಾಜೀನಾಮೆ ಇತ್ತಿರುವರೆಂದು ತಿಳಿದು ಬಂದಿದೆ

ಟೆಲಿಪ್ರಿಂಟರ್ ಸೌಕರ್ಯ

ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ಟೆಲಿಪ್ರಿಂಟರ್ ಸೌಕರ್ಯವನ್ನು ಒದಗಿಸಿಕೊಡಲು ಒಪ್ಪಿಗೆ ಇತ್ತಿರುವರೆಂದೂ ಶೀಘ್ರದಲ್ಲಿಯೇ ಬೆಂಗಳೂರಿನಲ್ಲಿ ಅದನ್ನು ಸ್ಥಾಪಿಸಲು ಏರ್ಪಾಡಾಗುತ್ತಿದೆಯೆಂದೂ ತಿಳಿದು ಬಂದಿದೆ

ಮೈಸೂರಿಗೆ ನೆಹರೂರವರು

ಪಂಡಿತ ಜವಹರಲಾಲ್ ನೆಹರೂರವರು ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವನ್ನು ಮುಗಿಸಿಕೊಂಡು ಹಿಂತಿರುಗಿದನಂತರ ಇದೇತಿಂಗಳ ೨೯ನೇ ತಾರೀಕು ಮೈಸೂರಿಗೆ ಭೇಟಿಕೊಡಬಹುದೆಂದು ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿದೆ

ಲಂಚದ ಅಪಾದನೆ ಮೇಲೆ ಅಧಿಕಾರಿಯ ದಸ್ತಗಿರಿ

ಸ್ವಂ.ಸು.ಪೋ॥] ಬೆಂಗಳೂರು ೧೫

ಬೆಂಗಳೂರು ಬಾಡಿಗೆ ಪಹೋಟಿ ಅಧಿಕಾರಿಗಳಾದ ಜನಾಬ್ ಬಷೀರ್ ಅಹಮದ್ ಖಾನರವರ ಮೇಲೆ ಬಹಳವಾಗಿ ಲಂಚದ ಅಪಾದನೆಗಳು ಬಂದ ಪ್ರಯುಕ್ತ ವಿಶೇಷ ಪೊಲೀಸ್ ಸಿಬ್ಬಂದಿಯವರು ಗುರುತು ಮಾಡಲ್ಪಟ್ಟ ನೋಟುಗಳನ್ನು ಅವರಿಗೆ ಮಾರ್ಕೆಟ್ಟು ವರ್ತಕರೊಬ್ಬರ ಮೂಲಕ ಕಳುಹಿಸಿ ಮೊನ್ನೆ ಸಂಜೆ ಅವರ ಮನೆಗೆ ಮುತ್ತಿಗೆ ಹಾಕಿ ಸದರಿ ನೋಟುಗಳ ಸಮೇತ ಅವರನ್ನು ದಸ್ತಗಿರಿ ಮಾಡಿದರು. ಅವರನ್ನು ೫೦೦ ರೂ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಎ. ಎಂ ಸಿ ಸಿ.

ಇದೇ ತಿಂಗಳು ೩೦ ಮತ್ತು ೩೧ ನೇ ತಾರೀಕುಗಳಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಬೀರೂರಿನಲ್ಲಿ ಸಮಾವೇಶಗೊಳ್ಳುವುದು.

ರೈಲಿನಲ್ಲಿ ಹೆಣ್ಣು ಮಕ್ಕಳನ್ನು ಎಳೆದ ಅಪಾದನೆ

ನಿನ್ನೆ ಬೆಳಿಗ್ಗೆ ಮೈಸೂರಿನಿಂದ ಅರಸೀಕೆರೆಗೆ ಹೊರಡುವ ರೈಲಿನಲ್ಲಿ ಪ್ರಯಾಣ ಮಾಡಲು ೪ ಹೆಣ್ಣು ಮಕ್ಕಳು ಗಾಡಿಯಲ್ಲಿ ಕುಳಿತಿದ್ದರು. ಯಾವ ಬಿಲ್ಲೆಯನ್ನೂ ಹಾಕಿಕೊಳ್ಳದೇ ಇದ್ದ ರೈಲ್ವೆ ನೌಕರರೊಬ್ಬರು ಒಳಗಡೆ ಕುಳಿತಿದ್ದ ಹೆಣ್ಣು ಮಕ್ಕಳ ರಟ್ಟೆ ಹಿಡಿದು ಹೊರಕ್ಕೆ ಎಳೆದು ಸಾಮಾನುಗಳನ್ನು ಕೆಳಕ್ಕೆ ದಿಸಾರಿ, ಪ್ರಯಾಣಕ್ಕೆ ಅಡ್ಡಿಪಡಿಸಿರುತ್ತಾರೆ. ಅಷ್ಟರಲ್ಲೇ ರೈಲ್ವೆ ಎ ಟಿ ಎಸ್, ಡಿ ಟಿ ಎಸ್ ಮತ್ತು ರೈಲ್ವೆ ಪೊಲೀಸರು ಬಂದು ಹೆಣ್ಣು ಮಕ್ಕಳ ಸಂಬಂಧಿಗಳನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು ಈ ವಿಚಾರವನ್ನೆಲ್ಲಾ ರೈಲ್ವೆ ಮತ್ತು ಪೊಲೀಸ್ ಉನ್ನತಾಧಿಕಾರಿಗಳಿಗೆ ವರದಿ ಮಾಡಲಾಗಿದೆ. ಪ್ರಜಾ ಸರ್ಕಾರವಿರುವ ಕಾಲದಲ್ಲಿಯೂ ಈ ತರಹ ದುರ್ಘಟನೆಗಳು ನಡೆದಿದ್ದು, ನ್ಯವದಕ್ಕೆ ತುಂಬಾ ವಿಷಾದಿಸಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ರೀತಿ ನಡೆಯದಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವರೆಂದು ನಂಬಿರುತ್ತೇನೆ. ನೊಂದವ.

ವಿಶ್ವಕರ್ಮ ವಿದ್ಯಾರ್ಥಿನಿಲಯ ಕಟ್ಟಡಕ್ಕೆ ಸಹಾಯ

ರಾಜಧಾನಿಯ ಶ್ರೀ ವಿಶ್ವಕರ್ಮ ವಿದ್ಯಾರ್ಥಿ ನಿಲಯದ ಸಭೆಯು ಮೊನ್ನೆ ದಿನ ಶ್ರೀ ಟಿ ಚೆಲುವಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ನಿಲಯದ ಕಟ್ಟಡದ ನಿಧಿಗೆ ಶ್ರೀ ಸಿಂಗಪ್ಪಾಚಾರ್ಯರು ೧೦೧ ರೂ ಶ್ರೀಗಳಾದ ಕರಿಯಪ್ಪಾಚಾರ್ಯ ಮತ್ತು ಎ ಎಸ್ ಸುಬ್ರಹ್ಮಣ್ಯಾಚಾರ್ಯರು ತಲಾ ೫೦ ರೂ ಮತ್ತು ಇತರರಿಂದ ಒಟ್ಟು ೨೫೦ ರೂಗಳು ವಸೂಲಾದವು ಶ್ರೀ ನೀಲಗಿರಿ ವರಸಿಂಹಾಚಾರ್ಯರು ನಿಲಯಕ್ಕೆ ಒಂದು ಉಚಿತ ನಿವೇಶನವನ್ನು ಕೊಡಲು ಒಪ್ಪಿದ್ದಾರೆ ಮನೆ ಮನೆಗೂ ಹೋಗಿ ಹಣ ವಸೂಲು ಮಾಡಲು ಒಂದು ಸಮಿತಿಯನ್ನು ನೇಮಿಸಲಾಗಿದೆ

ಹರಿಕಥೆ

ಪಾನಿಪಿಲಾಸ ಮೊಹಲ್ಲಾದಲ್ಲಿ ಆಂಜನೇಯ ಮಂದಿರದಲ್ಲಿ ಬ್ರಹ್ಮ ಶ್ರೀ ಪಾಲಘಾಟ್ ಕೀರ್ತನ ಪಟು ಕೆ. ಎಸ್ ಗಣಪತಿ ಭಾಗವತರವರು ನಾಳೆ ಸಾಯಂಕಾಲ ೬ ರಿಂದ ೮ ಘಂಟೆವರೆಗೆ ಭಕ್ತ ಮಯೂರಧ್ವಜ ಎಂಬ ಹರಿಕಥೆಯನ್ನು ತಕ್ಕ ಪಕ್ಕ ವಾದ್ಯಗಳೊಡನೆ ನಡೆಸುತ್ತಾರೆ ಸರ್ವರೂ ದಯಮಾಡಿಸಬೇಕಾಗಿ ಪ್ರಾರ್ಥನೆ

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

KANAN DEVAN TEA

ಕಣ್ಣನ್ ದೇವನ್ ಟೀ

ಸುವಾಸನೆಯುಳ್ಳದ್ದೂ, ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ

—: ಮೈಸೂರು ನಗರದ ಏಜೆಂಟರು ಮತ್ತು ಡಿಸ್ಟ್ರಿಬ್ಯೂಟರುಗಳು —

ಸಿ. ಬಿ. ಜನರಲ್ ಸ್ಟೋರ್ಸ್,

ಹೊಸ್ ವಾಲ್ ರಸ್ತೆ, ಮೈಸೂರು

ದಯವಿಟ್ಟು ದಸರಾ ವಸ್ತುಪ್ರದರ್ಶನದ ಎಲ್ ಬ್ಲಾಕಿನ ೧೧ನೇ ನಂ ಸ್ಟಾಲಿಗೆ ಭೇಟಿ ಕೊಡಿರಿ

ರಾಜಕಮಲ್ ಟಾಕೀಸ್

16-10-48ರಿಂದ :: ಅಮೋಘ ೩ನೇ ವಾರ

ಪ್ರತಿ ದಿನ ಮೂರು ಆಟಗಳು

ಮತ್ಸಾಲಾಷ್ಟೈರ್ ರಾಮಜೋಷಿ

ರಾಜಕಮಲ್ ಕಲಾಮಂದಿರ ತಯಾರಿಕೆ

ಪಾತ್ರಗಳು. — ಹಂಸ, ಮನಮೋಹನ ಕೃಷ್ಣ

MORNING SHOWS From 15-10-48

For 4 Days

STRIKE ME PINK

With:—EDDIE CANTOR

ಪ್ರಕಟಣೆ

ಮೈಸೂರು ನಗರಾಭಿವೃದ್ಧಿ ಸಮಿತಿ ಕಛೇರಿ

—

ಸರಸ್ವತಿಪುರಂ ಬಡಾವಣೆಯಲ್ಲಿ ಹೊಸದಾಗಿ ನಿರ್ಮಿಸಿರುವ ಕೆಲವು ಬಂಗ್ಲೋ ಮತ್ತು ಕಾಟೇಜ ಸೈಟುಗಳನ್ನು ಇದೇ ಮಾಹೆ ೨೩ ಮತ್ತು ೨೪ನೇ ತಾರೀಖು ಬೆಳಿಗ್ಗೆ ೯ ಗಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ಪೂರ್ಣ ವಿವರಗಳನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿದ ಕೊಳ್ಳಬಹುದು.

(ಸಹಿ) ಟಿ. ಸೀತಾರಾಮಯ್ಯ,
ಚೇರ್ಮನ್

ಹೊಸ ಜವಳಿ ಅಂಗಡಿ ಕಮ್ಮಿಯಾದ ಬೆಲೆ

ಮಧುರೆ, ಸೇಲಂ, ಕೊಯಮತ್ತೂರಿನ ನಾನಾ ನಮೂನೆಯ

ನೂಲು ಸೀರೆಗಳು,

ವಾಯಿಲ್ ಸೀರೆಗಳು

— - —

ವಿಜಯಲಕ್ಷ್ಮೀ ವಿಲಾಸ್

ಇರ್ವಿನ್ ರೋಡ್, ಶಿವರಾಂಪೇಟೆ

ಮೈಸೂರು

CHAMUNDESWARI TALKIES

Morning Shows at 10-30

From 15th October

For 4 days

RENEGADES

(In Beautiful Technicolour)

—:Starring:—

Evelyn Keyes Willard Parker

Edgar Buchanan.

[Lawless adventure defying bullet & noose for love & loot]

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

15-10-48 ರಿಂದ 4 ದಿನಗಳು ಮಾತ್ರ

20ನೇ ಸೆಂಚುರಿ ಫಾಕ್ಸರ

ಲೇ ಮಿಸರಬಲ್

(LES MISERABLES)

ಪಾತ್ರ:—ಫ್ರೆಡರಿಕ್ ಮಾರ್ಚ್

MORNING SHOWS

From 16-10-1948

For 3 days only

Warner's

Saratoga Trunk

ಜನಾರ್ದನ ಗೋಂದಕರ್ ಇವರ

ಪೂನಾ ಅಂಗಡಿ

ಬಿ. **24** ಎಕ್ಸಿಬಿಷನ್

ಅಸಲಿ ಪೂನಾ ಸೀರೆಗಳು ಚೋಳ್ ಖಣಗಳು ಜಿನ್ನಸ್‌ವಾರ್ ತಂದಿದ್ದೇವೆ. ಎಲ್ಲಾ ಮಂಡಲಿ ಬಂದು ನೋಡಿ ಲಾಯಕ್ ಮಾಲು ತೆಗೆದುಕೊಂಡು ನಮ್ಮ ಕೆಲಸಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

★ ಪ್ರಭುದೇವಾ ಟಾಕೀಸ್ ★

16-10-48 ನೇ ಶನಿವಾರದಿಂದ :: ಅಮೋಘ **2**ನೇ ವಾರ

ರಾಜಮುಕ್ತಿ

★ ಪಾತ್ರ.-**M.K.** ತ್ಯಾಗರಾಜ ಭಾಗವತರ್, ಜಾನಕಿ, ಭಾನುಮತಿ, ಶೆರಕಳತ್ತೂರು ಶಾಮ ಮುಂತಾದವರು ★

★ ಇದರೊಡನೆ ಲಂಡನ್ ಪಟ್ಟಣದ ವೈಭವಯುತ ವರ್ಣರಂಜಿತ ದೃಶ್ಯಗಳನ್ನೂ ತೋರಿಸಲಾಗುವುದು. ★

Edited printed and published by A. R. Nagarajan at the Sadhvi Press D. Subbaiah Road Mysore

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೪] ಭಾನುವಾರ ೧೭-೧೦-೪೮ [ಸಂಚಿಕೆ ೧೨

ರಂಗೂನ್ ನಗರದಲ್ಲಿ ಸಿಹಿ ನೀರಿನ ಮಾರಾಟ

...ನರುಗಳಿಂದ ಶಾಲಾ ಶಂಕುಸ್ಥಾಪನೆ

ಮೈಸೂರು ೧೫

...ಗಳ ೨೧ ನೇ ತಾ|| ಗುರುವಾರ ...ಜನಗೂಡು ತಾಲ್ಲೂಕು ನಾಚನಹಳ್ಳಿ ... ಶಾಲೆಯ ಕಟ್ಟಡದ ಶಂಕುಸ್ಥಾ... ...ಸಚಿವರಾದ ಶ್ರೀ ಆರ್ ಚೆನ್ನಿಗ... ...ನವರು, ೨೦ನೇ ತಾ|| ಶ್ರೀ ಕೆ. ...ನವರ ಕೃಷ್ಣರಾಜನಗರ ತಾ... ...ಕೊಪ್ಪಲಿನ ಮಾಧ್ಯಮಿ... ...ಕ ಸ್ಥಾಪನೆಯನ್ನೂ, ಅದೇ ...ವತ್ತೂರು ಮಾಧ್ಯಮಿಕ ಪ್ರೌ... ...ಶಂಕುಸ್ಥಾಪನೆಯನ್ನೂ, ೨೫ನೇ ...ಮಹಮದ್ ಷರೀಫರವ... ...ಪುರದ ತಾಲ್ಲೂಕು ಹುಣಸಗ... ...ಧ್ಯಮಿಕ ಶಾಲಾ ಶಂಕುಸ್ಥಾಪ... ...ನೆರವೇರಿಸುವರು

...ಹೋಟೇಲು ಕೆಲಸಗಾರರ ಭೇಟಿ ...ಹೋಟೇಲ್ ಕೆಲಸಗಾರರ ...ಪ್ರತಿನಿಧಿಗಳೂ ಮತ್ತು ಸಮಾಜ... ...ಪಕ್ಷದ ಕಾರ್ಯಕರ್ತರುಗಳೂ ಕಾರ್ಮಿ... ...ಸಚಿವ ಶ್ರೀ ಕೆ ಟಿ ಭಾಷ್ಯಂರವರ ...ಟಿ ಮಾಡಿ, ತಮ್ಮ ಕುಂದುಕೊರ... ...ವಿವರಿಸಿದರು. ದಸರಾ ಕಾಲ ...ರಾರ ಹೆಚ್ಚಿಗೆ ಕಾಲ ಕೆಲಸ ...ವುದರಿಂದ ಅವರಿಗೆ ಓವರ್ ಟೈಂ ಕೊಡಬೇಕಾದುದು ನ್ಯಾಯವಾದುದು ..., ಅದನ್ನು ಕೊಡಿಸಲು ಶಕ್ಯ ಪ್ರ... ...ಮಾಡಲಾಗುವುದೆಂದೂ ಸಚಿವರು ...ರಿಂದ ತಿಳಿದುಬಂದಿದೆ

...ಜಿಲ್ಲಾ ಬೋರ್ಡ್ ಸಭೆ

...ಭಾಗದವರು ನಂಜನಗೂಡು, ಗುಂ... ...ಟೆ ಮತ್ತು ಕೃಷ್ಣರಾಜನಗರ ತಾ... ...ಗಳಲ್ಲಿ ಕೈಗೊಳ್ಳಲಿರುವ ಪ್ರವಾಸದ ...ಯೋಜನೆ ನಡೆಸಲು ಇದೇ ತಿಂಗ... ...ನೇ ತಾರೀಕು ಶನಿವಾರ ಸಂಜೆ ...ಗಂಟೆಗೆ ಜಿಲ್ಲಾ ಬೋರ್ಡಿನ ವಿಶೇ... ...ಷ ಸಭೆ ಸೇರಲಿರುವುದು

...ವಾಣಿವಿಲಾಸ ಮೊಹಲ್ಲಾದಲ್ಲಿರುವ ...ಶ್ರೀ ಮಾಧವರಾಯರ ಮ... ...ನೆಯಲ್ಲಿ ...ಗುರುವಾರ ಕಳ್ಳರು ಕಿಟಕಿ ...ಸುಮಾರು ೫೦೦ ರೂ ಬೆಲೆ ...ಒಡವೆ ವಸ್ತುಗಳನ್ನೂ ಬಟ್ಟೆ ಬರೆ ...ಅಪಹರಿಸಿರುತ್ತಾರೆ

...ಮೈಸೂರಿನ ಇಂಟರ್‌ಮೀಡಿಯೆಟ್ ...ಲೆಕ್ಟರರಾದ ಶ್ರೀ ಎಂ ಎಸ್ ನಂ... ...ಯ್ಯನವರನ್ನು ಬೆಂಗಳೂರಾಯನಲ್ಲಿ ...ಸೈನ್ಸ್ ಕಾಲೇಜಿಗೆ ವರ್ಗ ಮಾಡಲಾ...

...ಗ್ರಾಮಾಭಿವೃದ್ಧಿ ಶಾಖಾ ಅಧಿಕಾರಿ ...ದ ಶ್ರೀ ಎಚ್ ಎಲ್ ನಾಗೇಗೌ... ...ರನ್ನು ... ಅಸಿಸ್ಟೆಂಟ್ ...ವರ್ಗಾಯಿಸಲಾಗಿದೆ

...ಡೆಪ್ಯುಟಿ ಅಧಿಕಾರಿಗಳು

...ದ ಅಭಿವೃದ್ಧಿ ಶಾಖಾ ಉಪ ...ರಾದ ಜನಾಬ್ ರಹಮತು... ...ನ್ನು ಬೆಂಗಳೂರು ಜಿಲ್ಲೆಗೆ ... ಅಧಿಕಾರಿಗಳನ್ನಾಗಿ ನೇಮಿಸಲಾ...

ರಾಮ ವಿಲಾಸ

ಪ್ರಮುಖ ಜವಳಿ ವರ್ತಕರಾ... ...ರಾಮಸ್ವಾಮಿ ಶೆಟ್ಟರವರು ... ರಾಮ ವಿಲಾಸ ಎಂಬ ನೂತನ ...ಪ್ರಾರಂಭಿಸಿದರು. ಈ ಸಂದರ್ಭದ... ...ಕ ಗಣ್ಯ ಮಹನೀಯರನ್ನು ...ಕರೆಯಲಾಯಿತು.

ಅಧ್ಯಕ್ಷರ ರೂಲಿಂಗಿನ ಮೇಲೆ ಹಕ್ಕುಬಾಧ್ಯತಾ ಪ್ರಶ್ನೆಯೇ ?

ಅವಸರದ ನಿರ್ಣಯದ ನಿರಾಕರಣೆ ಪ್ರಕರಣ

ಮೈಸೂರು ೧೭

ನಿಲುವಳಿ ನಿರ್ಣಯವೊಂದನ್ನು ನಿರಾಕರಿಸಿದ ದರಿಂದ ಸಭೆಯ ಹಕ್ಕು ಬಾಧ್ಯತೆಗೆ ಲೋಪ ಬಂದಿದೆಯೆಂದೂ ಈ ವಿಚಾರವನ್ನು ಪರಿಶೀಲಿಸಲು ಹಕ್ಕು ಬಾಧ್ಯತಾ ಸಮಿತಿಗೆ ದಾಖಲಿಸಬೇಕೆಂದೂ, ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ತಂದಿದ್ದ ಸೂಚನೆಯೊಂದನ್ನು ನಿನ್ನೆಯ ದಿನ ಪ್ರ|| ಸ|| ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂರವರು ತಿರಸ್ಕರಿಸಿದರು. ಅವಸರದ ಠರಾವಿನ ಮೇಲೆ ಅಧ್ಯಕ್ಷರ ತೀರ್ಮಾನವೇ ಅಂತಿಮವಾದುದೆಂದೂ ಅದನ್ನು ಮತ್ತೆ ಚರ್ಚಿಸಲು ಅವಕಾಶವಿಲ್ಲವೆಂದೂ ಅವರು ಹೇಳಿದರು.

ಗೋಪಾಲ ರಾವ್ ವಿಚಾರಣಾ ಸಮಿತಿಯ ಸಂಬಂಧವಾಗಿ ಸರ್ಕಾರದ ನಡವಳಿಕೆಗಳನ್ನು ಚರ್ಚಿಸಲು ಭೂಪಾಳಂರವರು ಮಂಡಿಸಿದ್ದ ನಿಲುವಳಿ ನಿರ್ಣಯವನ್ನು ಈ ಭಾಷ... ವಿವಾದವುಂಟು ಮಾಡಿದ್ದುದೇ ಈ ಪ್ರಕರಣದ ಹಿನ್ನೆಲೆ

ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅನಾರೋಗ್ಯದ ನಿಮಿತ್ತ ನಾಳೆ ನಡೆಯಬೇಕಾಗಿದ್ದ ಆಹಾರದ ಚರ್ಚೆಯನ್ನು ೨೨ನೇ ತಾರೀಕಿಗೆ ಮುಂದುವರಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು. ಬಟ್ಟೆ ಕಂಟ್ರೋಲಿನ ವಿಚಾರವನ್ನೂ ಅದೇ ದಿನ ತೆಗೆದುಕೊಳ್ಳಲಾಗುವುದು

ಮಸೂದೆಗಳ ಮಂಜೂರು

ಸಿಡಿ ಮದ್ದುಗಳಿಗೆ ಸಂಬಂಧಪಟ್ಟ ಮಸೂದೆ, ಜನರಲ್ ಕ್ಲಾಜಸ್ ತಿದ್ದುಪಡಿ ಮಸೂದೆ, ಆಕ್ಟುಗಳ ರದ್ದುಪಡಿಸುವಿಕೆ, ಛಡಿ ಏಟಿನ ಶಿಕ್ಷೆ ರದ್ದುಪಡಿಸುವ ಮಸೂದೆ, ಶಾಸನಗಳ ಶಿರೋನಾಮೆಗಳ ತಿದ್ದುಪಡಿ ಮಸೂದೆ, ಮಕ್ಕಳನ್ನು ಕೆಲಸಕ್ಕೆ ಸೇರಿಸದ ಹಾಗೆ ನಿರ್ಬಂಧಪಡಿಸುವ ಮಸೂದೆ, ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳುವ ಬಗ್ಗೆ ಮಸೂದೆ, ಗಣಿ ಮಾಲೀಕರುಗಳ ಜವಾಬ್ದಾರಿ ಮಸೂದೆ, ಟ್ರಸ್ಟುಗಳ ಮಸೂದೆ, ಕ್ರಿಮಿನಲ್ ಪ್ರೊಸೀಜರ್ ಮತ್ತು ... ಕೋಡಿನ ತಿದ್ದುಪಡಿ ಮಸೂದೆ ಇವುಗಳು ಸರ್ಕಾರದವರಿಂದ ಮಂಡಿಸಲ್ಪಟ್ಟು ಸಭೆಯ ಅಂಗೀಕಾರವನ್ನು ಪಡೆದುವು

ಮಹಿಳೆಯರ ಮೇಲೂ ಎಳೆಯ ಮಕ್ಕಳ ಮೇಲೂ ನಡೆಸಬಹುದಾದ ಅಮಾನುಷ ಕೃತ್ಯಗಳ ಸಂದರ್ಭಗಳಲ್ಲಿ ಛಡಿ ಏಟಿನ ಶಿಕ್ಷೆಯನ್ನು ಇಡಬೇಕೆಂದೂ ಶ್ರೀ ಭೂಪಾಳಂರವರು ಸದರಿ ಮಸೂದೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಸೂಚಿಸಿದರು

ಮಕ್ಕಳನ್ನು ಕೆಲಸಕ್ಕೆ ಸೇರಿಸುವುದನ್ನು ತಪ್ಪಿಸುವ ಮಸೂದೆಯನ್ನು ಶ್ರೀ ಶಂಕರ ಲಿಂಗೇಗೌಡರು ಭಾಷಣದಲ್ಲಿ ವಿರೋಧಿಸಿದರೂ ಸಹ ಅದಕ್ಕೆ ವಿರೋಧವಾಗಿ ಓಟು ಮಾಡಲಿಲ್ಲ. ಮಕ್ಕಳು ಬಾಲ್ಯದಿಂದಲೇ ಯಾವುದಾದರೊಂದು ಕಸುಬನ್ನು ಕಲಿತು ತಮ್ಮ ಮನೆಗೂ ಸ್ವಲ್ಪ ವರಮಾನವನ್ನು ತಂದು ಕೊಡಲು ಅವಕಾಶವಿರುವ ಸಂದರ್ಭಗಳಲ್ಲಿ ಅವುಗಳನ್ನು ತಪ್ಪಿಸಬಾರದೆಂದು ಅವರು ಹೇಳಿದರು,

ಕಾಂಗ್ರೆಸ್ ನಾಯಕರ ಅಸಮಾಧಾನ ಪ್ರದರ್ಶನೆಯೇ ?

ಬಂಡವಾಳಗಾರರ ಜವಾಬ್ದಾರಿಗೆ ಸಂಬಂಧಪಟ್ಟ ಮಸೂದೆಯು ಚರ್ಚೆಗೆ ಬಂದಾಗ ವ್ಯವಸಾಯದಲ್ಲಿ ತೊಡಗಿರುವ ಕೆಲಸಗಾರರಿಗೆ ಈ ಶಾಸನವು ಅನ್ವಯಿಸುವಂತೆ ಮಾಡಬೇಕೆಂದು ಕಾಂಗ್ರೆಸ್ ನಾಯಕರಾದ ಶ್ರೀ ಕೆ ಹನುಮಂತಯ್ಯನವರು ಸೂಚಿಸಿದರು. ಈ ಬಗ್ಗೆ ಇನ್ನೂ ಸರ್ಕಾರದವರು ನಿರ್ದಿಷ್ಟವಾದ ನಿರ್ಧಾರಕ್ಕೆ ಬಂದಿಲ್ಲವೆಂದೂ ಈ ವಿಷಯವನ್ನು ಪರ್ಯಾಲೋಚಿಸುವುದಾಗಿಯೂ ಅಧ್ಯಕ್ಷರಾದ ಶ್ರೀ ಕೆ.ಟಿ ಭಾಷ್ಯಂರವರು ಸೂಚಿಸಿದರು ಹಾಗಾದರೆ ತಾವೂ ತಮ್ಮ ಪಂಗಡದವರೂ ಮಸೂದೆಗೆ ಬೆಂಬಲ ಕೊಡಲಾಗುವುದಿಲ್ಲವೆಂದೂ, ಅದನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಶ್ರೀ ಹನುಮಂತಯ್ಯನವರು ನುಡಿದರು. ಹಿಂದೆ ಇದೇ ಬಗೆಯ ಮಸೂದೆಗಳ ಸಂದರ್ಭದಲ್ಲಿ ಸರ್ಕಾರದವರು ಕೊಟ್ಟ ಭರವಸೆಗಳು ಈಡೇರಿಲ್ಲವೆಂದೂ, ಆದ್ದರಿಂದ ಮಸೂದೆಯನ್ನು ಸ್ಪಷ್ಟಗೊಳಿಸದ ಹೊರತು ಅದಕ್ಕೆ ತಮ್ಮ ಬೆಂಬಲವು ದೊರೆಯುವುದಿಲ್ಲವೆಂದೂ, ಶ್ರೀ ಹನುಮಂತಯ್ಯನವರು ಹೇಳಿದರು

ಈ ಮಾತುಗಳು ಇತರ ಪಕ್ಷಗಳವರ ಟೀಕೆಗೆ ಅವಕಾಶ ಕೊಟ್ಟುವು. ಕಾಂಗ್ರೆಸ್ ಪಕ್ಷದವರು ಸರ್ಕಾರದಲ್ಲಿ ತಮಗಿರುವ ಅವಿಶ್ವಾಸವನ್ನು ತೋರಿಸುತ್ತಿರುವರೆಂಬ ಸೂಚನೆಯೂ ಸಹ ಸದಸ್ಯರಿಂದ ಮಾಡಲ್ಪಟ್ಟಿತು. ಸ್ವಲ್ಪ ಹೊತ್ತು ಸಭೆಯಲ್ಲಿ ಸಂದಿಗ್ಧತೆಯ ಪರಿಸ್ಥಿತಿಯು ಉಂಟಾಗಿತ್ತು. ಇರುವಾಗಲು ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಟಿ ಎಂ ... ಸಮಾಧಾನಪಡಿಸಿ ಶ್ರೀ ಹನುಮಂತಯ್ಯನವರ ಮಾತುಗಳಿಂದ ಉಂಟಾಗಿದ್ದ ವಿರೋಧ ಭಾವನೆಯ ಪರಿಣಾಮವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿದರು ಮಸೂದೆಯನ್ನು ಕಾಂಗ್ರೆಸ್ ಪಕ್ಷದವರು ವಿರೋಧಿಸುವುದಿಲ್ಲವೆಂದೂ ಅದರಲ್ಲಿ ಅಗತ್ಯವಾದ ತಿದ್ದುಪಡಿಯನ್ನು ಮಾತ್ರ ಸೂಚಿಸುವರೆಂದೂ ಅವರು ಹೇಳಿದರು.

ಅನಂತರ ಮಾತನಾಡಿದ ಇತರ ಸದಸ್ಯರೂ ಸಹ ಶ್ರೀ ಹನುಮಂತಯ್ಯನವರ ಮಾತುಗಳು ಸರ್ಕಾರದಲ್ಲಿ ... ಸೂಚಿಸುವುದೆಂದು ಹೇಳಿದರು ... ಮಂತಯ್ಯನವರು ಸದರಿ ಅಭಿಪ್ರಾಯವನ್ನು ನಿರಾಕರಿಸಿ ಮಸೂದೆಯನ್ನು ತಾವು ವಿರೋಧಿಸುವುದಿಲ್ಲವೆಂದು ಹೇಳಿದರು.

ರಂಗೂನಿನಲ್ಲಿ ಕುಡಿಯುವ ನೀರಿನ ಮಾರಾಟ

ಬರ್ಮಾದ ರಾಜಧಾನಿಯಾದ ರಂಗೂನ್ ನಗರಕ್ಕೆ ನೀರು ಸರಬರಾಜು ಮಾಡುತ್ತಿದ್ದ ಅಲ್ಲಿಂದ ೪೦ ಮೈಲಿ ದೂರದಲ್ಲಿರುವ ... ಕೊಳಾಯಿಗಳನ್ನು ... ಗೆ ಸೇರಿದ ಕೆಲವರು ... ಹಾಳುಮಾಡಿರುವುದರಿಂದ ನಗರದಲ್ಲಿ ನೀರಿಗೆ ಬಹಳ ಅಭಾವವಾಗಿದೆ. ಜನರಿಗೆ ತುಂಬಾ ತೊಂದರೆಯಾಗಿದೆ. ... ಅಲ್ಲಿನ ಬೆಳೆಯ ಪ್ರಮಾಣಕ್ಕೆ ... ರೂಪಾಯಿಯಂತೆ ಅಲ್ಲಿ ನೀರನ್ನು ಮಾರಾಟ ಮಾಡಲಾಗುತ್ತಿದೆಯೆಂದು ತಿಳಿದುಬಂದಿದೆ ಇತರ ಆಹಾರ ಸಾಮಗ್ರಿಗಳ ಬೆಲೆಯೂ ಸಹ ವಿಪರೀತ ಏರುತ್ತಿದೆ.

ಚೀನಾ ಅಂತರ್ಯುದ್ಧವು ಬಹಳ ಬಿರುಸಾಗಿದೆ

ಚೀನಾ ಪ್ರಧಾನಿ ಮಾರ್ಷಲ್ ಚಿಯಾಂಗ್ ತಮ್ಮ ಉತ್ತರ ಚೀನಾ ಪ್ರವಾಸವನ್ನು ಮುಗಿಸಿಕೊಂಡು ಮೊನ್ನೆ ದಿನ ಪೀಕಿಂಗಿಗೆ ಹಠಾತ್ತಾಗಿ ಹಿಂದಿರುಗಿದರು. ಮಂಚೂರಿಯಾದಲ್ಲಿ ಕಮ್ಯೂನಿಸ್ಟ್ ಪಕ್ಷದವರ ಧಾಳಿ ಕ್ರಮವು ತೀವ್ರತೆಯನ್ನು ಮುಟ್ಟಿರುವುದರಿಂದ ಚಿಯಾಂಗ್ ಕೈಷೇಕರು ಮುಕ್ಡೆನ್ ಪ್ರದೇಶದ ಸೈನ್ಯಾಧಿಕಾರವನ್ನು ತಾವೇ ಸ್ವತಃ ವಹಿಸಿ ಯುದ್ಧ ಕಾರ್ಯಾಚರಣೆಯನ್ನು ಮುಂದುವರಿಸುವರೆಂದು ಹೇಳಲಾಗಿದೆ.

ಸರ್ ಆರ್ಕಾಟರಿಗೆ ಅಂತರ ರಾಷ್ಟ್ರೀಯ ಹುದ್ದೆ

ಮೈಸೂರಿನ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ವಿಶ್ವಸಂಸ್ಥೆಯ ಜನರಲ್ ಸೆಕ್ರೆಟರಿಯವರು ಒಂದು ಆಹ್ವಾನವಿತ್ತು ಅಂತರ ರಾಷ್ಟ್ರೀಯ ಸಿವಿಲ್ ಸರ್ವಿಸ್ ಸಲಹಾ ಸಮಿತಿಯ ಸದಸ್ಯರಾಗಬೇಕೆಂದು ಪ್ರಾರ್ಥಿಸಿದ್ದಾರೆ ಸರ್ ಆರ್ಕಾಟರು ಆ ಆಹ್ವಾನವನ್ನು ಅಂಗೀಕರಿಸಿದ್ದಾರೆ.

ಅಕ್ಕಿ ಅಭಾವ

ಹೆಗ್ಗಡದೇವನಕೋಟೆ ತಾಲ್ಲೂಕಿನ ಸರಗೂರಿನ ... ಕಳೆದ ... ತಿಂಗಳು ೧ನೇ ತಾ|| ನಿಂದ ಅಕ್ಕಿ ಇಲ್ಲದೆ ಬಡಜನರಿಗೆ ತುಂಬಾ ಕಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಅಕ್ಕಿಯನ್ನು ಕಳುಹಿಸಿ, ಈ ತೊಂದರೆಯನ್ನು ನಿವಾರಿಸಬೇಕೆಂದು ಅಲ್ಲಿನ ನಿವಾಸಿಯೊಬ್ಬರು ಪ್ರಾರ್ಥಿಸಿದ್ದಾರೆ.

...ಅನಂತರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಚರ್ಚೆಗೆ ಉತ್ತರವಿತ್ತು ವ್ಯವಸಾಯದ ಕೆಲಸಗಾರರಿಗೆ ಈ ಮಸೂದೆಯು ಅನ್ವಯಿಸುವುದಿಲ್ಲವೆಂದು ಹೇಳಿದ ಮೇಲೆ ಎಲ್ಲರಿಗೂ ಸಮಾಧಾನವುಂಟಾಗಿ ಮಸೂದೆಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

"ಕಂತೆ ಪುರಾಣ" ಎಂಬುದು ಪಾರ್ಲಿಮೆಂಟರಿ ಪದವೇ ?

ಮೊನ್ನೆ ದಿನ ಸಭೆಯಲ್ಲಿ ಶ್ರೀ ಮರುಳಪ್ಪನವರು ಮಾತನಾಡುತ್ತಿದ್ದಾಗ ಶ್ರೀಮತಿ ಸುಶೀಲಾದೇವಿಯವರು ಎದ್ದು 'ಕಂತೆ ಪುರಾಣ' ಬೇಕಿಲ್ಲವೆಂದು ಹೇಳಿದುದನ್ನು ಪ್ರತಿಭಟಿಸಿ ಅದರ ಬಗ್ಗೆ ರೂಲಿಂಗ್ ಕೊಡಬೇಕೆಂದು ಅವರು ಕೇಳಿದ್ದರು. ಅಧ್ಯಕ್ಷರು ನಿನ್ನೆ ದಿನ ಈ ಬಗ್ಗೆ ರೂಲಿಂಗ್ ಇತ್ತು 'ಕಂತೆ ಪುರಾಣ' ಎಂಬುದು ಪಾರ್ಲಿಮೆಂಟರಿ ಪದಪ್ರಯೋಗವೇ ಆದರೂ ಅದು ಹಿತಕರವಲ್ಲದ ಶಬ್ದವಾದ್ದರಿಂದ ಸದಸ್ಯರು ಅದರ ಪ್ರಯೋಗವನ್ನು ಬಿಡುವುದು ಒಳ್ಳೆಯದೆಂದು ಸೂಚಿಸಿದರು.

ವಾರ ಭವಿಷ್ಯ

೧೭-೧೦-೪೮ ರಿಂದ ೨೩-೧೦-೪೮ ರ ವರೆಗೆ

ಮೇಷ—ಆರ್ಥಿಕ ಮುಗ್ಗಟ್ಟು ಸಂಪೂರ್ಣವಾಗಿ ಬಗೆಹರಿಯುವುದು, ಧರ್ಮ ಕಾರ್ಯಗಳಿಗಾಗಿ ವೆಚ್ಚ ಸಂಭವಿಸುವುದು, ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುವು ತಾ|| ೧೮, ೨೦ ಸ್ತ್ರೀ ದರ್ಶನ, ಸುಖ ಭೋಜನ.

ವೃಷಭ—ಆರೋಗ್ಯ ಚೆನ್ನಾಗಿದೆ, ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳ ಸನ್ಮಾನ ಪಡೆಯುವಿರಿ, ವ್ಯಾಪಾರಗಾರರಿಗೆ ಅತ್ಯಂತ ಲಾಭಕರ, ತಾ|| ೧೯, ೨೦ ಶತ್ರು ನಾಶ

ಮಿಥುನ—ಆಗಾಗ ಸ್ವರದರಷ್ಟು ಖ... ನೆರೆಹೊರೆಯವರ ಅಪವಾದಕ್ಕೊಳಗಾಗುವಿರಿ, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅವಮಾನಿತರಾಗುವಿರಿ, ತಾ|| ೨೦ ೨೧ ಋಣ ಬಾಧೆ, ಕ್ಲೇಶ.

ಕಟಕ—ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು, ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ, ತಾ|| ೨೦, ೨೧ ಧನ ಲಾಭ.

ಸಿಂಹ—ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ಅವಮಾನ ಪ್ರವಾಸದಿಂದ ಅನಾರೋಗ್ಯ ಸಂಭವ, ವಾರಾಂತ್ಯದಲ್ಲಿ ಮಿತ್ರರ ಸಹಾಯ ದೊರೆಯುವುದು ತಾ|| ೧೮, ೨೩ ಪ್ರಯಾಸವಾದ

ಕನ್ಯಾ—ನೀವು ಈ ವಾರದಲ್ಲಿ ಅನೇಕ ಕಷ್ಟಗಳನ್ನೆದುರಿಸಬೇಕಾವುದು, ಲಾಟರಿ ಪಟ್ಟುಗಳಿಂದ ಅಧಿಕ ಹಾನಿ, ಬಂಧು ಬಳಗದವರಲ್ಲಿ, ಮನಸ್ತಾಪ ತಾ|| ೧೯, ೨೨ ಸ್ವಲ್ಪ ಶಾಂತಿ.

ತುಲಾ—ಮಕ್ಕಳು ಮರಿಗಳಿಗೆ ಅನಾರೋಗ್ಯ, ಮಿತ್ರರಿಂದ ವಂಚಿತರಾಗುವಿರಿ, ಯುಕ್ತಿಸಿದ ಕಾರ್ಯಗಳು ವಿಫಲವಾಗುವುವು, ಆರೋಗ್ಯ ಸಾಧಾರಣ, ತಾ|| ೨೦, ೨೩ ಅಪೂರ್ವ ವಸ್ತ್ರಾಗಮನ

ವೃಶ್ಚಿಕ—ಆರೋಗ್ಯ ಮತ್ತು ಧನಾದಾಯಗಳು ಉತ್ತಮಗೊಳ್ಳುವುವು, ಕೈಗೊಂಡ ಕಾರ್ಯಗಳಲ್ಲಿ ಸಿದ್ಧಿ, ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು, ತಾ|| ೨೩, ೨೪ ಧನಾಗಮನ, ಶುಭ ವಾರ್ತೆ

ಧನುಸ್ಸು—ನಿಮ್ಮ ಆರೋಗ್ಯದ ವಿಚಾರದಲ್ಲಿ ಎಚ್ಚರವಾಗಿರಬೇಕು, ಯುಕ್ತಿಸಿದ ಕಾರ್ಯಗಳಿಗೆ ವಿಘ್ನ, ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಗೀಡಾಗುವಿರಿ, ತಾ|| ೧೮, ೧೯ ಅಶಾಂತಿ.

ಮಕರ—ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು, ಸಂಬಂಧಿಕರಿಂದ ಸನ್ಮಾನ, ಪ್ರವಾಸದಿಂದ ಲಾಭ, ವಾರಾಂತ್ಯದಲ್ಲಿ ಸ್ವಲ್ಪ ಅನಾರೋಗ್ಯ ತಾ|| ೧೯, ೨೨ ಲಾಭ

ಕುಂಭ—ಆರೋಗ್ಯ ಸಾಧಾರಣವಾಗಿರುವುದು, ಸಾಧು ಸಂತರ ದರ್ಶನ ಲಾಭ, ವೆಚ್ಚಕ್ಕೆ ತಕ್ಕ ಆದಾಯವಿರುವುದು, ತಾ|| ೨೨, ೨೩ ಮಂಗಳ ವಾರ್ತೆ.

ಮೀನ—ಮಾನಸಿಕ ಕ್ಲೇಶಗಳು ಉಂಟಾಗುವುವು, ನೌಕರಿ ದಂಧೆಗಳಲ್ಲಿ ಅವಮಾನದ ಸಂಭವವಿರುವುದು, ಶತ್ರುಗಳಿಂದ ತೊಂದರೆ, ಗೃಹ ಕಲಹದಿಂದ ಅಶಾಂತಿ ತಾ|| ೧೯, ೨೩ ಚಿಂತೆ.

ಲೇಬರ್ ಗೆಜೆಟ್

ಮೈಸೂರು ಸರ್ಕಾರದ ಕಾರ್ಮಿಕ ಶಾಖೆಯಿಂದ ಪ್ರಕಟವಾಗಿರುವ "ಲೇಬರ್ ಗೆಜೆಟ್" ಎಂಬ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಸಂಸ್ಥಾನದ ಕಾರ್ಮಿಕರ ಹಿತ ರಕ್ಷಣೆ ಮತ್ತು ಅವರ ಅಭಿವೃದ್ಧಿ, ಚಿನ್ನದ ಗಣಿಯಲ್ಲಿ ಕಾರ್ಮಿಕರ ಹಿತ ರಕ್ಷಣೆ, ಕಾರ್ಮಿಕರ ವಸತಿ ಸೌಕರ್ಯ ಇವೇ ಮುಂತಾದ ಉಪಯುಕ್ತ ಲೇಖನಗಳು ಇದರಲ್ಲಿ ಪ್ರಕಟವಾಗಿವೆ ಸರ್ ಎಂ ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಶ್ರೀ ಜಗಜೀವನರಾಂ, ಮದರಾಸಿನ ಪ್ರಧಾನಿ ಶ್ರೀ ಓ ಪಿ ರಾಮಸ್ವಾಮಿ ರೆಡ್ಡಿಯಾರ್, ಬೊಂಬಾಯಿನ ಪ್ರಧಾನಿ ಶ್ರೀ ಬಿ ಜಿ ಖೇರ್, ಮಧ್ಯಪ್ರಾಂತ್ಯದ ಪ್ರಧಾನಿ ಶ್ರೀ ರವಿಶಂಕರ ಶುಕ್ಲ, ಮೈಸೂರು ಸಚಿವರುಗಳೇ ಮುಂತಾದವರು ಇದಕ್ಕೆ ಸಂದೇಶವನ್ನು ಕಳುಹಿಸಿರುತ್ತಾರೆ ಈ ಪತ್ರಿಕೆಯ ಸಂಪಾದಕರು ಮೈಸೂರು ನಗರದ ಖ್ಯಾತ ವಕೀಲರಾದ ಶ್ರೀ ಸಿ ಶ್ರೀಕಂಠಯ್ಯನವರು. ಕಾರ್ಮಿಕರ ಉನ್ನತಿಯ ಮಾರ್ಗದರ್ಶನವನ್ನು ಮಾಡಲು ಹೊರಡಿರುವ ಈ ಪತ್ರಿಕೆಯನ್ನು ಆಂಗ್ಲ ಭಾಷೆಯ ಬದಲು ದೇಶ ಭಾಷೆಯಲ್ಲಿ ಪ್ರಕಟಿಸಿದರೆ ಹೆಚ್ಚು ಉಪಯೋಗವಾಗುವುದೆಂದು ನಾವು ಭಾವಿಸುತ್ತೇವೆ. ಈ ಪತ್ರಿಕೆ [illegible] ಹಸ್ತಿಯಾಗಿ ಸೇವೆ ಸಲ್ಲಿಸಲೆಂದು ನಾವು ಹಾರೈಸುತ್ತೇವೆ.

○ ರಾಜಧಾನಿಯ ಸೀತಾರಾಂ ಬೀದಿಯ ಶ್ರೀ ರವ ಫೋಟೋಗ್ರಾಫರ್ ಶ್ರೀ ಕೆ ವಾಗೀಶರವರು, ರಾಜಧಾನಿಗೆ ರಾಜಾಜಿಯವರು ಭೇಟಿ ಕೊಟ್ಟಾಗ ತೆಗೆದ ಫೋಟೋವನ್ನು ನಮಗೆ ಕಳುಹಿಸಿ ಕೊಟ್ಟಿರುವರು. ಅದನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ಸುಲಭ ರೀತಿಯಲ್ಲಿ ಮನೆಗಳನ್ನು ಕಟ್ಟುವು[ದು]

ಮೈಸೂರು ನಗರಾಭಿವೃದ್ಧಿ ಸ... ವರು ನವರಾತ್ರಿ ವಸ್ತು ಪ್ರದರ್ಶ... ಸುಲಭ ರೀತಿಯ ಕ್ಲಿಷ್ಟ ಮನೆಗಳನ್ನು ಕ... ವಿಧಾನವನ್ನು ಪ್ರದರ್ಶಿಸಲು ಏರ್ಪಾ... ಮಾಡಿರುತ್ತಾರೆ ಸಿಮೆಂಟು ಮತ್ತು ... ಟ್ಟಿಣಕ್ಕೆ ಅಭಾವವಾಗಿರುವ ಈ ಕಾ... ನಮ್ಮ ದೇಶದಲ್ಲಿಯೇ ದೊರಕುವ ಸಾ... ಮಗಳನ್ನು ಹಾಕಿ ಗೃಹ ವಸತಿಯ ಸ... ಯನ್ನು ಪರಿಹರಿಸಿಕೊಳ್ಳುವ ಮಾ... ನ್ನು ಸೂಚಿಸಿರುತ್ತಾರೆ ತಡಿಕೆ... ವಾಸದ ಮನೆಗಳನ್ನು ಸುಲಭವಾಗಿ... ಕಡಿಮೆ ಬೆಲೆಯಲ್ಲಿಯೂ ಕಟ್ಟುವ ವಿ... ವನ್ನು ತೋರಿಸಲಾಗುತ್ತಿದೆ ... ಲಸವನ್ನೂ ಸಹ ಸಿಮೆಂಟ್ ಇಲ್ಲದೆ... ಲ ಗಾರೆ ಮತ್ತು ಕಲ್ಲುಗಳಿಂದಲೇ ಮಾ... ವ ಕ್ರಮವು ಅತ್ಯಂತ ಉಪಯುಕ್ತವಾ... ತ್ತದೆ ಸಾರ್ವಜನಿಕರು ಈ ಮಾರ್ಗ... ನ್ನು ಅನುಸರಿಸಿ ಪ್ರಯೋಜನ ಹೊಂ... ದು ನಾವು ಹಾರೈಸುತ್ತೇವೆ

ತೆಪ್ಪೋತ್ಸವ

ತಾ|| ೧೮-೧೦-೪೮ ನೇ ಸೋಮ... ರಾತ್ರಿ ೮ ಘಂಟೆಗೆ ನಂಜನಗೂಡಿನ ಕ... ನದಿಯಲ್ಲಿ ಶ್ರೀ ಚಾಮುಂಡೇಶ್ವರಿ ಅ... ವರ ತೆಪ್ಪೋತ್ಸವವು ನಡೆಯುತ್ತದೆ ... ವಾಯ. ಊರಿನ ಸುತ್ತಲೂ ಉತ್ಸವ... ರಗುವುದು

ಹಾರ್ನಿಮನ್ನರ ನಿಧನ

ಬೊಂಬಾಯಿ ಕ್ರಾನಿಕಲ್ ಪತ್ರಿ... ಮಾಜಿ ಸಂಪಾದಕರಾದ ಶ್ರೀ ಬಿ ಜಿ ಹಾರ್ನಿಮನ್ನರು ನೆನ್ನೆ ದಿನ ಬೊಂಬಾಯಿಯಲ್ಲಿ ... ಧನರಾದರೆಂದು ತಿಳಿಸಲು ವಿಷಾದಿಸುತ್ತೇ... ವ್ಯಕ್ತಿ ಅನೇಕ ವರ್ಷಗಳ ಕಾಲ ಭಾ... ರಾಷ್ಟ್ರೀಯ ಚಳುವಳಿಗೆ ವಿಶೇಷ ಸಹಾ... ಮಾಡಿ ಅದಕ್ಕಾಗಿ ಕಷ್ಟ ನಷ್ಟಗಳನ್ನ... ನುಭವಿಸಿದ್ದರು. ಅವರಿಗೆ ೭೫ ವ... ವಯಸ್ಸಾಗಿತ್ತು.

ಹೋಟೇಲುಗಳು ಮತ್ತು ಕ್ಲಬ್ಬುಗಳ ಉಪಯೋಗಕ್ಕಾಗಿ, ಎತ್ತರವಾದ ಪ್ರದೇಶದಲ್ಲಿ ಬೆಳೆದ ಪ್ರಖ್ಯಾತವಾದ

KANAN DEVAN TEA

ಕಣ್ಣನ್ ದೇವನ್ ಟೀ

ಸುವಾಸನೆಯಿಂದ ಕೂಡಿಯೂ, ಚೈತನ್ಯದಾಯಕವಾಗಿಯೂ ಮತ್ತು ರುಚಿಕರವಾಗಿಯೂ ಇದೆ.

—:ಮೈಸೂರು ನಗರದ ಸ್ಟಾಕಿಸ್ಟರು ಮತ್ತು ಡಿಸ್ಟ್ರಿಬ್ಯೂಟರುಗಳು:—

ಸಿ. ಬಿ. ಜನರಲ್ ಸ್ಟೋರ್ಸ್,

ಯೆಲ್‌ವಾಲ್ ರಸ್ತೆ, ಮೈಸೂರು.

ದಯವಿಟ್ಟು ದಸರಾ ವಸ್ತು ಪ್ರದರ್ಶನದ ಎಲ್. ಬ್ಲಾಕಿನ ೧೧ನೇ ನಂ. ಸ್ಟಾಲಿಗೆ ಭೇಟಿ ಕೊಡಿರಿ

ರಾಜಕಮಲ್ ಟಾಕೀಸ್

16-10-48ರಿಂದ :: ಆನೋಫ ೩ನೇ ವಾರ

ಪ್ರತಿ ದಿನ ಮೂರು ಆಟಗಳು

ಮತ್ವಾಲಾಷೈರ್ ರಾಮಜೋಷಿ

ರಾಜಕಮಲ ಲಾಂಛನ ತಯಾರಿಕೆ

ತಾರಾಗಣ:— ಹಂಸ, ಮನಮೋಹನ ಕೃಷ್ಣ

MORNING SHOWS From 15-10-48
For 4 Days

STRIKE ME PINK

With:—EDDIE CANTOR

CHAMUNDWESARI TALKIES

Morning Shows at 10-30
From 15th October
For 4 days

RENEGADES

(In Beautiful Technicolour)

—:Starring:—
Evelyn Keyes Willard Parker
Edgar Buchanan.

[Lawless adventure defying bullet & noose for love & loot]

City Municipality, Mysore
Dated 12th October, 19[48]

NOTICE

Old articles of the Municipality such as Iron pa[…] rods etc, will be sold [in] public auction on 18-10-[48] in the Municipal offices a[nd] the Town Hall commenci[ng] from 9 A M. The artic[les] may be seen on 17-10-19[48] in the premises of the Mu[ni]cipal office and the Town Hall

M. SAFDAR HUSSAIN
Commissioner

ಜನಾರ್ದನ ಗೋಂದಕರ್ ಇವರ

ಪೂನಾ ಅಂಗಡಿ

ಬಿ. 24 ಎಕ್ಸಿಬಿಷನ್

ಅಸಲಿ ಪೂನಾ ಸೀರೆಗಳು ಚೋಳಿ ಖಣಗಳು ಜಿನ್ನಸ್‌ವಾರ್ ತಂದಿದ್ದೇವೆ. ಎಲ್ಲಾ ಮಂಡಲಿ ಬಂದು ನೋಡಿ ಲಾಯಕ್ ಮಾಲು ತೆಗೆದುಕೊಂಡು ನಮ್ಮ ಕೆಲಸಕ್ಕೆ ಆಭಾರ ಮಾಡಬೇಕಾಗಿ ವಿನಂತಿ.

Edited printed and published by A. R. Nagarajan at the Sadhvi Press D. Subbaiah Road Mysore

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೧೮-೧೦-೪೮ [ಸಂಚಿಕೆ ೪೩

ಗುಲ್ಬರ್ಗಾ ಜಿಲ್ಲೆಯಲ್ಲಿ ರಜಾಕರರೊಡನೆ ಕದನ

ಆಹಾರ ಧಾನ್ಯದ ಮೇಲೆ ಹತೋಟಿ ಬೇಡ

ಸಂಸ್ಥಾನದ ರೈತರ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೧೮

ಮೈಸೂರು ಸಂಸ್ಥಾನದ ರೈತರ ಸಮ್ಮೇಳನವು ನೆನ್ನೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಶ್ರೀ ಕುತಿಯಬೊಳ್ಳಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮ್ಮೇಳನಕ್ಕೆ ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸುಮಾರು ೮೦೦ ಮಂದಿ ರೈತರೂ, ರೈತ ಪ್ರತಿನಿಧಿಗಳೂ ಮತ್ತು ಜಮೀನ್ದಾರರೂ ಶಾಸನ ಸಭೆಗಳ ಸದಸ್ಯರುಗಳೂ ದಯಮಾಡಿಸಿದ್ದರು.

ಶ್ರೀಗಳಾದ ಡಿ ಎಚ್ ಚಂದ್ರಶೇಖರಯ್ಯ ಮತ್ತು ಕೆ ಟಿ ಭಾಷ್ಯಂರವರುಗಳು ಸಂದೇಶವನ್ನು ಕಳುಹಿಸಿದ್ದರು. ಶ್ರೀ ಸಿ ಜೆ ದೇವನಾಥ್ ರವರು ಸ್ವಾಗತವನ್ನು ನೀಡಿದರು.

ಮೈಸೂರು ಜಿಲ್ಲಾ ರೈತರ ಸಂಘದ ಅಧ್ಯಕ್ಷ ಶ್ರೀ ಎಂ ಎಲ್ ಸಂಜರಾಜೇ ಅರಸಿನವರು ಮಾತನಾಡಿ ದೇಶದ ಮುಂದಿರುವ ಆಹಾರಾಭಾವದ ದೃಷ್ಟಿಯಿಂದ ಹತೋಟಿ ಆಜ್ಞೆ ತರುವುದು ಸಾಧುವಲ್ಲ, ಕೇವಲ ಕೆಲವು ಜನಗಳಿಗೋಸ್ಕರ ೬೫ ಲಕ್ಷ ಪ್ರಜೆಗಳ ಮೇಲೆ ಕಂಟ್ರೋಲು ಹಾಕುವುದು ನ್ಯಾಯವಲ್ಲ, ರೈತನ ಏಳಿಗೆಗೆ ದುಡಿಯುತ್ತಿರುವ ಸರ್ಕಾರವು ಮತ್ತೆ ಹತೋಟಿ ತರುವುದು ನ್ಯಾಯವಲ್ಲ ಎಂದು ಹೇಳಿದರು.

ಜನ ಬೋ॥ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಕೆಳಗೆ ಕಂಡ ನಿರ್ಣಯಗಳನ್ನು ಸಭೆಯ ಮುಂದಿಟ್ಟರು. ಶ್ರೀ ಇ ಪಿ ನಂಜಪ್ಪನವರು ಮಾತ್ರ ನಿರ್ಣಯವನ್ನು ವಿರೋಧಿಸಿದರು.

ನಿರ್ಣಯಗಳು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕೃತವಾದುವು:—

ಲಂಚ, ರುಷವತ್ತು, ಅನೀತಿ, ಅಸತ್ಯ, ಸ್ವಾರ್ಥಪರತೆಗಳೇ ಮೊದಲಾದ ಸಮಾಜ ದ್ರೋಹಕಾರಕ ಶಕ್ತಿಗಳ ಸಂಪೂರ್ಣ ಬೆಳವಣಿಗೆಗೆ ಸಹಾಯಕವಾಗಿದ್ದ ಆಹಾರದ ಹತೋಟಿ ಆಜ್ಞೆಗಳು ಪೂಜ್ಯ ಬಾಪೂಜಿಯವರ ಸಲಹೆಯ ಮೇರೆ ವಾಪಸು ಹೋಗಿದ್ದು, ಸಂಸ್ಥಾನದಲ್ಲಿ ಪುನಃ ತಲೆದೋರುವ ಸೂಚನೆಗಳು ಕಂಡುಬರುತ್ತಿರುವುದು ದೇಶಕ್ಕೆ ಹಿತಕರವಲ್ಲ. ವ್ಯವಸಾಯವನ್ನೂ ವ್ಯವಸಾಯಗಾರರನ್ನೂ ಕೇವಲ ಅನಾದರದಿಂದ ಕಾಣುವ ನೀತಿಯನ್ನು ಅವಿಚ್ಛಿನ್ನವಾಗಿ ಅನುಸರಿಸಿಕೊಂಡು ಬಂದಿರುವುದೇ ಇಂದಿನ ಆಹಾರದ ಅಭಾವ ಪರಿಸ್ಥಿತಿಗೆ ಮೂಲ ಕಾರಣ. ಆಯವಿರತು ಕಾರ್ಖಾನೆಗಳಿಗೆ [illegible] ಬಿಟ್ಟು ಹತೋಟಿ ಆಜ್ಞೆಗಳ ಹಿಡಿತದಿಂದ ಈಗ ತಾನೆ ಪಾರಾಗಿದ್ದ ರೈತನನ್ನು ಪುನಃ ಚಿತ್ರಹಿಂಸೆಗೆ ಒಳಪಡಿಸುವುದರಿಂದ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟು, ವ್ಯವಸಾಯೋತ್ಪನ್ನ ಮವುಕ್ಕಿರುವುದಲ್ಲದೇ ಕ್ಷೀಣವಾಗುತ್ತದೆ [illegible] ದೇಶವೇ ಇಲ್ಲ.

ಹೊರ ಪ್ರಾಂತ್ಯಗಳ ಹಿತಕ್ಕೆ ಧಕ್ಕೆ [illegible] ಕ ಮೈಸೂರು ಸಂಸ್ಥಾನದಲ್ಲಿ ನಮ್ಮವೇ ಆದ ಆಹಾರ ನೀತಿಯನ್ನು ಅನುಸರಿಸಲು ಯಾವ [illegible] ಆತಂಕಗಳೂ [illegible]

ರಜಾಕರರಿಗೂ ಭಾರತ ಸೇನೆಗಳಿಗೂ ಮತ್ತೆ ಕಾಳಗ

ಅವಿತುಕೊಂಡಿದ್ದ ರಜಾಕರರನ್ನೂ ಶಸ್ತ್ರಾಸ್ತ್ರಗಳನ್ನೂ ಪತ್ತೆ ಹಚ್ಚಲು ಭಾರತ ಸೈನಿಕರಿಗೆ ಸಹಾಯ ಮಾಡಿದ ಅಪ್ಪಾರಾವ್ ಪಟೇಲ್ ಎಂಬುವರನ್ನು ರಜಾಕರರ ಗುಂಪಿನಿಂದ ಹೊಡೆದು ಸಾಯಿಸಿದ ಕಾರಣದ ಮೇಲೆ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಎಂಬಲ್ಲಿಗೆ ಭಾರತ ಸೇನಾ ದಳಗಳನ್ನು ಕಳುಹಿಸಲಾಯಿತು. ಸ್ವಲ್ಪ ಕಾಲ ಕದನ ನಡೆದ ಮೇಲೆ ಹಲವು ರಜಾಕರರು ಕೊಲ್ಲಲ್ಪಟ್ಟು ಉಳಿದವರು ಓಡಿಹೋದರು. ಈಗ ಪರಿಸ್ಥಿತಿಯು ಹತೋಟಿಯಲ್ಲಿರುತ್ತದೆ.

ಆಂತರಿಕ ವ್ಯವಹಾರಗಳಲ್ಲಿ ಸ್ವತಂತ್ರವಾಗಿ ವ್ಯವಹರಿಸಿದ ಮಾತ್ರಕ್ಕೆ ಕೇಂದ್ರ ಸರ್ಕಾರದವರು ನಮಗೆ ಸಹಾಯ ಸಹಾನುಭೂತಿಗಳನ್ನು ನಿರಾಕರಿಸುವರೆಂದು ಊಹಿಸುವುದು ಸರಿಯಲ್ಲ. ಆದರೆ ಇಂದಿನ ಪರಿಸ್ಥಿತಿಯನ್ನು ಎದುರಿಸಲು ವ್ಯವಸಾಯಗಾರರಿಗೆ ಕಿಂಚಿತ್ತೂ ತೊಂದರೆಯಿಲ್ಲದೆ ಒಂದು ಯೋಜನೆಯನ್ನು ರೂಪಿಸುವುದು ನ್ಯಾಯಸಮ್ಮತವಾಗಿದೆ.

ವ್ಯವಸಾಯದ ಸಂಪೂರ್ಣ ಬೆಳವಣಿಗೆಗೂ, ವ್ಯವಸಾಯಗಾರರ ಮತ್ತು ಅವರ ಆಶ್ರಿತರ ಆಹಾರ ವ್ಯವಹಾರಗಳ ಪೂರ್ಣ ಅವಶ್ಯಕತೆಗಳಿಗೂ ತಾನು ಬೆಳೆದ ದವಸವನ್ನು ನಿರಾತಂಕವಾಗಿ ಉಪಯೋಗಿಸುವುದು ಆತನ ಮೂಲಭೂತ ಹಕ್ಕೆಂಬುದನ್ನು ಈ ಸಮ್ಮೇಳನವು ಘೋಷಿಸುತ್ತದೆ.

ಈ ಮೂಲಭೂತ ಹಕ್ಕಿಗೆ ಕಿಂಚಿತ್ತೂ ಧಕ್ಕೆ ಬಾರದಂತೆ ಸರ್ಕಾರದವರು ಪಂಗಾಮಿಯಾಗಿ ಕೈಕೊಳ್ಳಬಹುದಾದ ಆಹಾರ ನೀತಿಗೆ ಬೆಂಬಲ ಕೊಡಲು ಅಭ್ಯಂತರವಿಲ್ಲ. ದೇಶದಲ್ಲಿ ಒದಗಿರುವ ಆಹಾರದ ಅಭಾವವನ್ನು ಶಾಶ್ವತವಾಗಿ ನೀಗಿಸಿ, ಸ್ವಯಂ ಪರಿಪೂರ್ಣತೆಯನ್ನು ಸಾಧಿಸಲು ಸರ್ಕಾರದವರು ರಚನಾತ್ಮಕ ರೀತಿಯಲ್ಲಿ ವ್ಯವಸಾಯದ ಶಾಂತ ನಾಗರಿಕ ಯೋಜನೆಯೊಂದನ್ನು ನಿಜವಾದ ಕೃಷಿಗಾರರ ಸಲಹೆ ಪಡೆದು ತಕ್ಷಣವೇ ಕಾರ್ಯರೂಪಕ್ಕೆ ತರಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ.

ರೈತರಿಗೆ ಇರುವ ಅಗಾಧವಾದ ಸಾಲದ ಹೊರೆಯ ಪ್ರಮಾಣವನ್ನು ಕಂಡು ಹಿಡಿದು ಅದರ ನಿವಾರಣೋಪಾಯವನ್ನು ಸೂಚಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ಶ್ರೀಮಾನ್ [illegible] ಅಂಗೀಕರಿಸಲಾಯಿತು.

ಪ್ರತಿ ಒಂದಕ್ಕೆ [illegible] ರೂ ನಂತೆ ಧಾನ್ಯದ ಧಾರಣೆಯನ್ನು [illegible] ಹಾಗೆ ಕೊಡುವುದಾಗಿ ರೈತರು [illegible] ಬೇಕೆಂದೂ ಮತ್ತು ವ್ಯವಸಾಯಕ್ಕೆ [illegible] ಸಹಾಯ [illegible] ಬೇಕೆಂದೂ ಸರ್ಕಾರದವರನ್ನು ಕೋರಲಾಯಿತು. ಶ್ರೀ [illegible] ಅಂಗೀಕರಿಸಲ್ಪಟ್ಟಿತು.

ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ನಿರುತ್ಸಾಹವೇ ?

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೋತ್ತರ

ಮೈಸೂರು ೧೮

ಈ ದಿನವೂ ಪ್ರ॥ ಪ್ರ॥ ಸಭೆಯು ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಮುಂದುವರಿಯಿತು. ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿ ಕಾರ್ಯವು ಆರಂಭವಾಗಿ ಐದು ವರ್ಷಗಳಾದರೂ ಈ ಕಾರ್ಯವು ನಿರೀಕ್ಷಿಸಿದ್ದಷ್ಟು ಮುಂದುವರಿದಿಲ್ಲವೆಂದು ಸರ್ಕಾರದವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು. ಯುದ್ಧದ ಪರಿಸ್ಥಿತಿಯಿಂದ ಸಾಮಾಗ್ರಿಗಳು ದೊರೆಯದೆ ಇದ್ದುದೂ, ಪಂಚಾಯಿತಿದಾರರಲ್ಲಿ ಉತ್ಸಾಹವಿಲ್ಲದಿರುವುದೂ ಇದಕ್ಕೆ ಕಾರಣವೆಂದು ತಿಳಿಸಲಾಯಿತು. ಗ್ರಾಮಸ್ಥರಲ್ಲಿ ಉತ್ಸಾಹವನ್ನುಂಟುಮಾಡುವುದಕ್ಕಾಗಿ ಗ್ರಾಮಾಭಿವೃದ್ಧಿ ಕಾರ್ಯವನ್ನು ಪುನರ್ವ್ಯವಸ್ಥೆಗೊಳಿಸಬೇಕೆಂದು ಸಹ ಉದ್ದೇಶಿಸಲಾಗಿದೆಯೆಂದು ತಿಳಿಸಲ್ಪಟ್ಟಿತು.

ಅನಂತರ ಆರೋಗ್ಯ ಸಚಿವರಾದ ಜ॥ ಮಹಮದ್ ಷರೀಫ್‌ರಿಂದ ಮಂಡಿಸಲ್ಪಟ್ಟ ಮೆಡಿಕಲ್ ರಿಜಿಸ್ಟ್ರೇಷನ್ ಮಸೂದೆ, ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರಿಂದ ಮಂಡಿಸಲ್ಪಟ್ಟ ಪಂಚಾಯಿತಿಗಳ ಮೂಲಕ ವಿವಾದಗಳನ್ನು ತೀರ್ಮಾನಿಸುವ ಮಸೂದೆ, ರಾಜ ಸೇವಾಸಕ್ತ ಶಾಮಣ್ಣ [illegible] ಮಂಡಿಸಲ್ಪಟ್ಟ [illegible] ಪ್ರವೇಶದ [illegible] ಸಭೆಯಿಂದ ಅಂಗೀಕರಿಸಲ್ಪಟ್ಟವು.

ಧಾನ್ಯ [illegible] ರಿಯಾಯಿತಿ [illegible] ಬಗ್ಗೆ [illegible] ಅಧ್ಯಕ್ಷರು ಅದನ್ನು ತಳ್ಳಿಹಾಕಿದರು.

ಸಿಬಿ ಪಿಳ್ಳೆ ನಿರ್ಣಯಗಳ ನಿರಾಕರಣೆ

ಬುಡಕಟ್ಟು [illegible] ಮತ್ತು [illegible] ಹೊರಗಿನಿಂದ [illegible] ಕೊಡುವ [illegible] ಬೀದರ್ [illegible] ಬಗ್ಗೆ ನಿಲುವು [illegible] ಮಾಡುವುದು, ಹೊಸ ಹೊಸ ಹುದ್ದೆಗಳನ್ನು ಕಲ್ಪಿಸುತ್ತಿರುವುದು [illegible] ಸ್ವೀಕರಣ [illegible] ನಿರಾಕರಿಸಲ್ಪಟ್ಟಿವೆ.

ಅಕ್ಷರ ಪ್ರಚಾರ [illegible]

ನೆನ್ನೆ [illegible] ಅಧ್ಯಕ್ಷತೆ ವಹಿಸಿದ್ದ [illegible] ಶ್ರೀ [illegible] ವಿಚಾರಗಳ ಬಗ್ಗೆ [illegible] ಪ್ರಶಂಸಿಸಿದರು.

[illegible]ದರ್ಶನದ ಮುಕ್ತಾಯ

ಮೈಸೂರು ೧೮

[illegible] ವಸ್ತುಪ್ರದರ್ಶನವು ನಾಳೆಗೆ ಮುಕ್ತಾಯವಾಗುವುದು. ನಾಳೆ ಸಂಜೆ [illegible] ಗಂಟೆಗೆ ಶ್ರೀಮನ್ಮಹಾರಾಜರವರು [illegible] ಬಹುಮಾನಗಳನ್ನು ವಿನಿಯೋಗ ಮಾಡುವುದರಿಂದ ನಾಳೆ ಮಧ್ಯಾಹ್ನ [illegible] ಗಂಟೆವರೆಗೆ ಆಹ್ವಾನಿತರಿಗೆ [illegible] ಪ್ರವೇಶವಿರುತ್ತದೆ. ಇತರರಿಗೆ [illegible] ರಿಂದ [illegible] ವರೆಗೂ [illegible] ರ ನಂತರವೂ ಪ್ರವೇಶ [illegible]

[illegible] ಕರ್ನಾಟಕರ ಸಮ್ಮೇಳನ

[illegible] ಮೊಹಲ್ಲಾ [illegible] ನೆನ್ನೆ ಬೆಳಗ್ಗೆ [illegible] ಸಂಸ್ಥಾನ [illegible]ಗಳಾದ ಶ್ರೀ ಆರ್ ಚೆನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಆದಿ ಕರ್ನಾಟಕ ಸಮ್ಮೇಳನವು ನಡೆಯಿತು. ಮಂತ್ರಿಗಳಾದ ಶ್ರೀ ಸಾಹುಕಾರ್ ಚೆನ್ನಯ್ಯ, [illegible] ಮಹಮದ್ ಷರೀಫ್‌ರೂ, [illegible] ಅಧ್ಯಕ್ಷರಾದ ಶ್ರೀ ಟಿ ಸೀತಾರಾಮಯ್ಯ [illegible] ಇತರ ಅನೇಕ ಪ್ರಮುಖರೂ ದಯಮಾಡಿಸಿದ್ದರು. ಅಧ್ಯಕ್ಷರು ಭಾಷಣದಲ್ಲಿ ಆದಿ ಕರ್ನಾಟಕರ ಮತ್ತು ಹಿಂದುಳಿದವರ ಅಭಿವೃದ್ಧಿಗಾಗಿ ಸರ್ಕಾರದವರು ವಿಶೇಷ ಆಸಕ್ತಿ ವಹಿಸಿ ಇದಕ್ಕಾಗಿ [illegible] ಮಂಜೂರು ಮಾಡಿರುವುದಾಗಿ [illegible]. ಆದಿಕರ್ನಾಟಕರು ಸರ್ಕಾರದ ಸಹಾಯವನ್ನೂ ಇತರ ಜನಾಂಗದ ಸಹಕಾರವನ್ನೂ ಸದುಪಯೋಗಪಡಿಸಿಕೊಂಡು ದೇಶದ ಏಳಿಗೆಯಲ್ಲಿ ಭಾಗಿಗಳಾಗಬೇಕೆಂದು ಸೂಚಿಸಿದರು.

ಕನ್ಯಕಾಪರಮೇಶ್ವರಿ ಸೊಸೈಟಿ

[illegible] ಶ್ರೀ ಕನ್ಯಕಾ ಪರಮೇಶ್ವರಿ ಕೋ ಆಪರೇಟಿವ್ ಸೊಸೈಟಿಯ [illegible] ವಾರ್ಷಿಕೋತ್ಸವವು ರಂಗಾಚಾರ್ಲು [illegible] ಭವನದಲ್ಲಿ ನೆನ್ನೆ ಜರುಗಿತು. [illegible] ಸಚಿವರಾದ ರಾಜಸೇವಾಸಕ್ತ ಶಾಮಣ್ಣ ಸುಬ್ಬರಾಮಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ, ಸ್ವಾಗತ ಭಾಷಣ [illegible] ಅಧ್ಯಕ್ಷರು [illegible] ಮಾಡಿ ಕಳೆದ [illegible] ವರ್ಷಗಳಿಂದ ಸೊಸೈಟಿಯು ಬಹಳ ಮಟ್ಟಿಗೆ ಅಭಿವೃದ್ಧಿಯಾಗಿರುವುದರ ಬಗ್ಗೆ ತಮ್ಮ ಸಂತೋಷ [illegible] ವ್ಯಕ್ತಪಡಿಸಿ ಅದಕ್ಕೆ [illegible] ಹೆಚ್ಚಿನ [illegible] ಕೋರಿದರು.

ಕಲ್ಕತ್ತ ಬಂದರು ಕೂಲಿಗಾರರ ಮೇಲೆ ಗುಂಡು

[illegible] ಕಲ್ಕತ್ತ ಬಂದರಿನಲ್ಲಿ [illegible] ಹಡಗೊಂದಕ್ಕೆ ಸಾಮಾನನ್ನು [illegible] ಕಂಟ್ರಾಕ್ಟರ [illegible] ಕೂಲಿಗಾರರಿಗೂ [illegible] ಘರ್ಷಣೆ [illegible] ಕೂಲಿಗಾರರು [illegible] ಸಾಮಾನನ್ನು [illegible] ಇದ್ದ [illegible] ಬಂದರು ಕೆಲ [illegible] ಹಡಗಿಗೆ ಕಲ್ಲು ಮತ್ತು [illegible] ಹೊಡೆಯಲು ಆರಂಭಿಸಿದ [illegible] ಪೋಲೀಸ್ ಅಧಿಕಾರಿಯು [illegible] ಯಾರೂ [illegible] ಗುಂಡಿನೇಟು [illegible] ಪೋಲೀಸ್ ಅಧಿಕಾರಿಯು [illegible] ಯಾರಿಗೂ ಗಾಯಗಳಾಗಿಲ್ಲ.

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಭೆ

ಮೈಸೂರು ೧೮

ನಿನ್ನೆ ದಿವಸ ಸಂಜೆ ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಮೋಲ್ಕಂಡ ಸಂಘದ ಕಛೇರಿಯಲ್ಲಿ ಕೆಲಸಗಾರರ ಸಭೆಯು ನೆರೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಭಾಷಣ ಮಾಡಿ ದೇಶದಲ್ಲಿ ಬಟ್ಟೆ ಅಭಾವವು ಹೆಚ್ಚಾಗಿರುವ ಈ ಕಾಲದಲ್ಲಿ ಕೆಲಸಗಾರರು ಬಟ್ಟೆಯನ್ನು ತಯಾರಿಸುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದೂ, ಯಾವ ಸಂದರ್ಭದಲ್ಲೂ ಮುಷ್ಕರ ಹೂಡಬಾರದೆಂದೂ ಸಿಹಿಯಾದ ಕ್ರಿಯನ್ನು ನುಡಿದರು

ಕಾರ್ಮಿಕ ಸಚಿವರಲ್ಲಿ ಮೋಟಾರು ಕೆಲಸಗಾರರ ನಿಯೋಗ

ರಾಜಧಾನಿಯ ಮೋಟಾರು ಕೆಲಸಗಾರರು ನಿನ್ನೆ ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರಲ್ಲಿ ನಿಯೋಗ ಹೋಗಿ ತಮ್ಮ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಂಡರು. ಸಚಿವರು ಎಲ್ಲವನ್ನೂ ಸಾವಧಾನವಾಗಿ ಕೇಳಿ ಆ ಬಗ್ಗೆ ಸರ್ಕಾರದವರು ಸೂಕ್ತ ಪರಿಹಾರ ಕಲ್ಪಿಸುವುದಾಗಿ ಭರವಸೆಯಿತ್ತರು

ಸರ್ಕಾರಿ ರೇಷ್ಮೆ ಕಾರ್ಖಾನೆ ಕೆಲಸಗಾರರ ಬೇಡಿಕೆ

ನಿನ್ನೆ ಬೇಗ್ಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಸರ್ಕಾರಿ ರೇಷ್ಮೆ ನೇಯ್ಗೆ ಕಾರ್ಖಾನೆ ಕೆಲಸಗಾರರ ಸಂಘದ ಸಭೆಯು ಶ್ರೀ ಕೆ ಆರ್ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಬಳಗಳ ಪುನರ್ವಿಮರ್ಶೆ, ಬೋನಸ್ಸು ಮುಂತಾದ ವುಗಳನ್ನು ಇದುವರೆಗೆ ಈ ಕೆಲಸಗಾರರಿಗೆ ಮಂಜೂರು ಮಾಡದೇ ಇರುವುದಕ್ಕಾಗಿ ವಿಷಾದವನ್ನು ಸೂಚಿಸಿ ಸಂಬಂಧಪಟ್ಟ ಅಧಿಕಾರಿಗಳ ಈ ಬಗ್ಗೆ ಬೇಗನೆ ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು ಮತ್ತು ಜನರಲ್ ಮ್ಯಾನೇಜರವರು ಕೆಲಸಗಾರರ ವಿಷಯದಲ್ಲಿ ದಯೆಯಿಂದ, ಪ್ರೀತಿ ವಿಶ್ವಾಸಗಳಿಂದಲೂ ವರ್ತಿಸುವರೆಂದು ಕೃತಜ್ಞತಾ ನಿರ್ಣಯವೂ ಅಂಗೀಕರಿಸಲ್ಪಟ್ಟಿತು

ಆದಿ ಕರ್ನಾಟಕ ಅಭಿವೃದ್ಧಿ ಸಂಘ

ಮೈಸೂರು ಸಂಸ್ಥಾನದ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ವಾರ್ಷಿಕ ಸಭೆಯು ಕಳೆದ ಗುರುವಾರ ರಾಜಧಾನಿಯ ಆದಿ ಕರ್ನಾಟಕ ವಸತಿ ಗೃಹದಲ್ಲಿ ನಡೆಯಿತು. [illegible] ಶ್ರೀ ಟಿ ಚನ್ನಯ್ಯ, [illegible] ವೆಂಕಟಪ್ಪನವರು ಉಪಾಧ್ಯಕ್ಷರ, [illegible] ಪ್ರಧಾನ ಕಾರ್ಯದರ್ಶಿ, [illegible] ಕಾರ್ಯದರ್ಶಿ [illegible] ಕೃಷ್ಣಯ್ಯ [illegible]

ಹರಿಕಥೆ

ಈ ದಿನ ರಾತ್ರಿ [illegible] ಹಣ್ಣುಮಂಡಿ [illegible] ವಾಸವಿ [illegible] ವಿದ್ವಾನ್ ದೇವನಹಳ್ಳಿ [illegible] ಹರಿಕಥೆ ನಡೆಯುವುದು. ಸರ್ವರಿಗೂ ಸ್ವಾಗತವುಂಟು.

ಅಗರ-ಮಾಂಬಳ್ಳಿ ರಸ್ತೆ

ಚಾಮರಾಜನಗರ ೧೮

ಅಗರ ಮಾಂಬಳ್ಳಿ ರಸ್ತೆ ರಿಪೇರಿ ಈ ಮಧ್ಯೆ ನಿಂತು ಹೋಗಿದ್ದು ಪುನಃ ಪ್ರಾರಂಭವಾಗಿದೆ. ಕೆಲವು ಕಂಟ್ರಾಕ್ಟದಾರರು ಅವರ ಭಾಗದ ಕೆಲಸವನ್ನು ಪೂರೈಸಿರುವರಾದರೂ ಮತ್ತೆ ಕೆಲವರು ಇನ್ನೂ ಪ್ರಾರಂಭ ಮಾಡಿಯೇ ಇಲ್ಲ. ಇವರಿಗೂ, ಸರ್ಕಾರದವರು ಕಾಂಟ್ರಾಕ್ಟ್ ಕೊಡಲಾರೆವೆಂದು ಹೇಳುತ್ತಿದ್ದವರು ಈಗ ತಾನೇ ಕಾಂಟ್ರಾಕ್ಟ್ ಮಾಡಿದ್ದಾರೆ. ಇವರ ಈ ಕಾಲವಿಳಂಬದಿಂದ ಜನರಿಗೆ ತೊಂದರೆಯೂ, ರಸ್ತೆಗೆ ನಷ್ಟವೂ ಸಂಭವಿಸುತ್ತಿದೆ.

ಬಸ್ಸುಗಳ ತೊಂದರೆ

ಇಲ್ಲಿಂದ ಕೊಳ್ಳೇಗಾಲಕ್ಕೆ ಹೋಗುವ ಬಸ್ಸುಗಳು ಕಾಲದ, ನೂರಾರು ಜನರ ಗಟ್ಟಲೆ ವೃಥಾ ಖರ್ಚು ಮಾಡಿಕೊಂಡು ಪ್ರಯಾಣಿಕರನ್ನು ಕೂಲವಿಲ್ಲದೆ ತೊಂದರೆ ಪಡುತ್ತಿದ್ದಾರೆ. ಸಂಬಂಧಪಟ್ಟವರು ಗಮನ ಕೊಡಬೇಕು.

ಕಡಲೇ ಮೇಲೆ ಹತೋಟಿ

ಮೈಸೂರು ೧೮

ಭಾರತ ಸರ್ಕಾರದವರ ನೀತಿಗೆ ಅನುಗುಣವಾಗಿ ಸರ್ಕಾರದವರು ಕಡಲೆ ಮತ್ತು ಅದರ ಹಿಟ್ಟಿನ ಸಂಗ್ರಹ ಮತ್ತು ರಫ್ತಿನ ಮೇಲೆ ಪ್ರತಿಬಂಧಕವನ್ನು ವಿಧಿಸಿದ್ದಾರೆ. ಸರ್ಕಾರದವರ ಅನುಮತಿಯಿಲ್ಲದೆ ಅದನ್ನು ಸಂಸ್ಥಾನದ ಹೊರಕ್ಕೆ ಸಾಗಿಸಲಾಗದೆಂದು ತಿಳಿಸಲಾಗಿದೆ

ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರ

ನೂರಡಿ ರಸ್ತೆಯಲ್ಲಿರುವ ಮೇಲ್ಕಂಡ ವಿದ್ಯಾ ಮಂದಿರದ ದ್ವಿತೀಯ ಮತ್ತು ತೃತೀಯ ವಾರ್ಷಿಕೋತ್ಸವವು ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಾಳಿದ್ದು ಬುಧವಾರ ಸಾಯಂಕಾಲ ೬ ಗಂಟೆಗೆ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆಯುವುದು



ಬೆಂಗಾಲ್ ಬಲ್ಬ್

ದಸರಾ ವಸ್ತು ಪ್ರದರ್ಶನಾಲಯದ ಸ್ಟಾಲ್ ನಂ "[illegible]" ಎಲ ಮತ್ತು [illegible] ಗಳಿಗೆ ಭೇಟಿ ಕೊಡಲು ಮರೆಯದಿರಿ

"ಭಾರತಾದ್ಯಂತ ಬೆಳಗುತ್ತಿದೆ"

ಬೆಂಗಾಲ್ ಎಲೆಕ್ಟ್ರಿಕಲ್ ಕಂಪೆನಿ.

15-10-48 ರಿಂದ ಅಮೋಘ 3ನೇ ವಾರ

ಲಲಿತಾ, ಪದ್ಮಿನಿ,

ತಾರಾ ಚೌದ್ರಿ

ಕುಮಾರಿ ಕಮಲಾ

ರವರ ದಿವ್ಯ ನರ್ತನ

ವಿನೋದ ಚಕ್ರರಾದ

ಸಾರಂಗಪಾಣಿಯವರ

ಹಾಸ್ಯ

ಡಿ. ಕೆ. ಪಟ್ಟಮ್ಮಾಳ್, ಪಿ. ಎ. ಪೆರಿಯನಾಯಕಿಯವರ ಗಾನ

ಇವುಗಳಿಂದ ಕೂಡಿದ

★ ಡೆಮರ್ಕಲ್ಯಾಂಡ್ ★

ಪ್ರಭಾ ಮತ್ತು ಗಣೇಶಾ ಚಿತ್ರಮಂದಿರಗಳಲ್ಲಿ

ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಗ್ರಂಥ

ಮೊನ್ನೆ ತಾನೆ ರಾಜಧಾನಿಯಲ್ಲಿ [illegible] ವೈಭವದಿಂದ ಜರುಗಿದ ಕನ್ನಡ [illegible] ಭೂಮಿಯ ಶತಮಾನೋತ್ಸವದ [illegible] ಯವರು ಪ್ರಕಟಿಸಿರುವ ಸ್ಮಾರಕ ಗ್ರಂಥ [illegible] ಒಂದು ಪ್ರತಿಯನ್ನು ನಾವು ಅತ್ಯಂತ [illegible] ಜ್ಞತೆಯಿಂದ ಸ್ವೀಕರಿಸಿರುತ್ತೇವೆ [illegible] ಲ್ಲಿ ಕರ್ನಾಟಕ ರಂಗಭೂಮಿ, ಭಾರತೀಯ ರಂಗಭೂಮಿ, ನಾಟಕ ಕಲೆ, ಯಕ್ಷಗಾನ, ಪಾಶ್ಚಿಮಾತ್ಯ ನಾಟಕಗಳ ಬೆಳವಣಿಗೆ, ಮೇಕಪ್, ಜವಾಬ್, ವಸ್ತ್ರ ಮುಂತಾದವುಗಳ ರಂಗ ಮಂಟಪದ ವೈಶಿಷ್ಟ್ಯ [illegible] ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಅಮೂಲ್ಯವಾದ ಲೇಖನಗಳು ಸುಪ್ರಸಿದ್ಧ ಬರಹಗಾರರಿಂದ ಪ್ರಕಟಿಸಲ್ಪಟ್ಟಿವೆ [illegible] ದ ಕನ್ನಡ ನಾಟಕ ಪಿತಾಮಹ [illegible] ಶಾಸ್ತ್ರಿಗಳು, ರಾಜ ಕವಿ ಭೂಷಣ [illegible] ಗರಾಜ ಅರಸ್, ಕವಿತಿಲಕ [illegible] ಯ್ಯಾಶಾಸ್ತ್ರಿಗಳು, ಉಭಯ ಕವಿ [illegible] ರದ ಅಳಿಯ ಲಿಂಗರಾಜೇ ಅರಸ್, [illegible] ಸಂ ಮುಂತಾದ ಮಹನೀಯರುಗಳ [illegible] ಯಗಳೂ ಕೊಡಲ್ಪಟ್ಟಿವೆ.

ಈ ಗ್ರಂಥದಿಂದ ಕನ್ನಡ ನಾಟ್ಯ [illegible] ಹಿರಿಮೆಯು ಬಹಳ ಹೃದಯಂಗಮ [illegible] ವಾಚಕರಿಗೆ ತಿಳಿದು ಬರುವುದಲ್ಲದೆ [illegible] ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ರಂಗಭೂಮಿಗಳ ತುಲನಾತ್ಮಕವಾದ ಅರಿವೂ ಉಂಟಾಗುತ್ತದೆ. ನಮ್ಮ ರಂಗಭೂಮಿಯಲ್ಲಿ ಇದುವರೆಗೆ ಸುಪ್ರಸಿದ್ಧರಾದ [illegible] ಈಗಲೂ ಖ್ಯಾತಿ ಪಡೆದಿರುವ ನಟ [illegible] ಯರ ಪರಿಚಯವೂ ಈ ಪುಸ್ತಕದಲ್ಲಿ [illegible] ಲ್ಪಟ್ಟಿದೆ. ರಾಜವ ನೇಕನ, ಜಡಳತ [illegible] ನಾಟ್ಯ ಮಂಡಲಿ, ಕಲಾ ಸೇವಕರು [illegible] ತಾದವರ ನೂರಾರು ಚಿತ್ರಗಳು ಈ [illegible] ದಲ್ಲಿ ಕಂಗೊಳಿಸುತ್ತಿವೆ. ಇಂತಹ [illegible] ಲ್ಯವಾದ ಪುಸ್ತಕವನ್ನು ಪ್ರಕಟಿಸಿ [illegible] ಗೂ, ಸಮಿತಿಯವರೂ ಕನ್ನಡಿಗರ [illegible] ತೆಗೆ ಪಾತ್ರರಾಗಿರುತ್ತಾರೆ. ಮುದ್ರಣ [illegible] ಸಹ ಮನೋಹರವಾಗಿರುತ್ತದೆ. [illegible] ರೂ. ೨-೮ ೦.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ [illegible]

ನೋವು, ಕೀಲು ನೋವು ಮುಂತಾದ [illegible] ಸಕಲ ಬಾಧೆಗಳಿಗೂ ರಾಮಬಾಣ

ಶೀಸೆ ೦-[illegible]

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾ ಮಲಕ ತೈಲ:—)

—ಬೇಸಿಗೆ ಕಾಲಕ್ಕೆ ಉತ್ತಮ. ಅಭ್ಯಂಗ ತೈಲಗಳು.

ಪಂಚಾಮೃತ— ಮಲೇರಿಯಾ [illegible] ಗಳಿಗೆ [illegible] ಸಂಜೀವನ.

ಮಹಾಕೇತಕೀ ತೈಲ —ತಲೆಗೆ [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮ

ಪ್ರೀ ಟಾನಿಕ್ ಶೀಸೆ [illegible]

ಮೈಸೂರು ಆಯುರ್ವೇದಿಕ್ ಫಾರ್ಮಸಿ

೨೮ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

Edited printed and published by A. R. Nagarajan at the Sadhvi Press, Mysore

ಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೧೯-೧೦-೪೮ [ಸಂಚಿಕೆ ೯೪

ಪ್ರಾ|| ಸಭೆಯಲ್ಲಿ ಖಾಸಗಿ ಮಸೂದೆಗೆ ನಿರಾಕರಣೆ

...ರತ್ನಾಕರ ಗೋಪಾಲ ...ಯರ ವ್ಯವಹಾರದ ವಿವರಣೆ

ಬೆಂಗಳೂರು, ೧೯

...ಣಾ ಸಮಿತಿಯ ಮುಂದೆ ಶ್ರೀ ...ಗೋಪಾಲಯ್ಯರವರು ಹೇಳಿಕೆಯ... ತಾವು ಹಣವನ್ನು ಹೇಗೆ ಗಳಿಸಿದ... ತಾವು ದಿವಾನರಾಗಲು ತ... ರಲ್ಲೇ ಹಣ ಪಡೆದ ಸ್ನೇಹಿತರ ಗಳೇ ...ರಿಂದ ತಿಳಿಸಿದರು.

...ಕ್ಕೆ ಮುಂಚೆ ಡಾ|| ಶಿವಾಸ್ವಾ... ...ನ್ ಮತ್ತು ಶ್ರೀ ಎಫ್ ಕಂ... ...ಯವರು ತಮ್ಮೊಡನೆ ವ್ಯವಹಾರ ...ದ್ದರಿಂದಲೂ ಶ್ರೀ ಡಾಮಿನಿಕ್‌ರವ ...೬೬ ಲಕ್ಷ ರೂ ಗಳಿಗೆ ಮೇಲ್ಪ... ...ವನ್ನು ತಮ್ಮಿಂದ ಪಡೆದಿರುವರೆಂ ...ದರು ಶ್ರೀ ತಿವಾರಿ ಎಂಬುವರ ...ಪೊಲೀಸ್ ಅಧಿಕಾರಿಗಳಾದ ಶ್ರೀ ...ಪ್ಪ ಮತ್ತು ಮುತ್ತೋಜಿರಾವ್ ಸಿಂ... ...ಶ್ರೀ ಶಿಂಗಾರವೇಲು ಮೊದಲಿ ...ಮತ್ತು ಹೆಚ್ ವಿ ನಾರಾಯಣರಾ... ...ವನ್ನೂ ಲೇವಾದೇವಿ ಮಾಡುತ್ತಿ... ...ಹೇಳಿದರು. ಶ್ರೀಮಾನ್ ಡಿ ಸಾ... ...ಡಾ|| ಅಲ್ಬುಕರ್ಕ್‌ರವರುಗ... ...ರಾಜಕುಮಾರಿ ದೇಶರಾಜೇ... ...ವರು ತಮ್ಮಲ್ಲಿ ಲೇವಾದೇವಿ ಇಟ್ಟು... ...ರೆಂದು ಹೇಳಿದರು.

...ವರಣೆಯಿಂದ ರದ್ದಾದ ನೋಟುಗ... ...ಭಾಗ ತಮಗೆ ಸೆಂಟ್ರಲ್ ಬ್ಯಾಂಕಿ... ...ಬಂದ ನಂತರವೂ, ತಾವು ಲಾಭ ...ದರಲ್ಲಿ ನೋಟಿನಲ್ಲಿ ಯಾವ ವಿ... ...ಸದ ವ್ಯಾಪಾರವನ್ನೂ ಮಾ... ...ದೆಂದೂ ತಿಳಿಸಿದರು. ಆ ನೋಟು ...ಕೊಟ್ಟು ಹಣ ಪಡೆಯುವಾಗ ಸ್ವ... ...ದರಿಯುಂಟಾಗಿತ್ತೆಂದೂ, ಅದಕ್ಕಾ... ...ಎಫ್ ಕಂಟ್ರಾಕ್ಟರ್‌ಯವರ ಸಹಾ... ...ದೆದು ಗಿರೂ ತಿಳಿಸಿದರು.

...ಗಳಾದ ಎಫ್ ಕಂಟ್ರಾಕ್ಟರ್, ಜ... ...ಸನ್, ಡಾ|| ಶಿವಾಸ್ವಾ, ಬಿ ಅಪ್ಪ... ...ಮೈಸೂರು ಇಂಜನಿಯರಿಂ... ...ಅಸೋಸಿಯೇಟೆಡ್ ಫೈನಾ... ...ಇನ್‌ವೆಸ್ಟ್‌ಮೆಂಟ್ ಕಾರ್ಪೋ... ...ಮಾಲ್‌ಚೆಟ್ಟಿ, ರಾಯಲ್ ...ಕಂಪೆನಿ, ಸರ್ವೋತ್ತಮರಾ... ...ಮೈಸೂರು ಕೈಗಾರಿಕಾ ಮತ್ತು ವ್ಯ... ...ಸೆಫಿ, ಜಿ ಎಲ್ ಬಿ ಸಿಲ್ಕ್, ...ಮತ್ತು ಶ್ರೀ ಶಿ ಸಾಹ... ...ತಮ್ಮಿಂದ ಹಣ ಪಡೆದು ...ರೆಂದು ತಿಳಿಸಿದರು.

...ವಿಶ್ವೇಶ್ವರಯ್ಯನವರನ್ನು ಸನ್ಮಾನಿಸಬೇಕು

...ನೇ ತಾ|| ಮೈಸೂರು ವಿಶ್ವ... ...ದ ಘಟಿಕೋತ್ಸವದಲ್ಲಿ ಸರ್ ...ಶ್ವರಯ್ಯನವರು ಭಾಷಣ ಮಾ... ...ವರ ಗೌರವಾರ್ಥವಾಗಿ ...ಮತ್ತು ಬೆಂಗಳೂರು ನಿವಾಸಿಗ... ...ಸನ್ಮಾನಿಸಿ ಮಾನ ಪತ್ರವ... ...ರೆಂದೂ, ಆ ರೀತಿ ಅವರ... ...ವುದರಿಂದ ದೇಶವನ್ನೇ ...ಗ ವುದೆಂದೂ ಇದರಿಂದ ...ವನ್ನು ಪಡೆಯಲು ಸಾಧ್ಯ... ...ಅವಕಾಶವಾಗುವುದೆಂದೂ ನ... ...ವರಾದ ಶ್ರೀ ಎಸ್ ನ... ...ಪತ್ರಿ...

ಖಾಸಗೀ ಮಸೂದೆ ಬಿದ್ದು ಹೋಯಿತು

ಪ್ರ|| ಪ್ರಾ|| ಸಭೆಯಲ್ಲಿ ಕೋರಂ ಇರಲಿಲ್ಲ

ಮೈಸೂರು ೧೯

ಈ ದಿನ ಮಧ್ಯಾಹ್ನ ೧೨ ಗಂಟೆಗೆ ಪ್ರಾ|| ಪ್ರಾ|| ಸಭೆಯು ಶ್ರೀ ಕೆ ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸೇರಿದಾಗ ಕೋರಂ ಇಲ್ಲದೆ ಹತ್ತು ನಿಮಿಷಗಳ ನಂತರ ಕಾರ್ಯಕಲಾಪಗಳು ಆರಂಭವಾದವು.

ಕಳೆದ ವರ್ಷ ಸಂಸ್ಥಾನದಲ್ಲಿ ಒಂದು ಲಕ್ಷ ಪೌಂಡ ಫಿಲೇಚರ್ ರೇಷ್ಮೆಯೂ, ೧೪ ಲಕ್ಷ ಪೌಂಡು ಚರಕಾ ರೇಷ್ಮೆಯೂ ತಯಾರಾದುವು; ಇವುಗಳ ಬೆಲೆ ೨೫೦ ಲಕ್ಷ ರೂ. ರೇಷ್ಮೆ ಹುಳುವನ್ನು ಸಾಕುವುದರಿಂದ ೫೦ ಸಾವಿರ ಸಂಸಾರಗಳಿಗೂ, ನೂಲು ತೆಗೆಯುವುದರಿಂದ ೨೦ ಸಾವಿರ ಸಂಸಾರದವರಿಗೂ ಜೀವನವು ನಡೆಯುತ್ತಿದೆ. ಇವರ ಜೊತೆಗೆ ವಾಗಿ ಒಂದು ಲಕ್ಷ ಸಂಸಾರಗಳಿಗೆ ಉಪಜೀವನವು ನಡೆಯುತ್ತಿದೆ-ಎಂಬುದಾಗಿ ಸರ್ಕಾರದವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು. ರೇಷ್ಮೆ ಗೂಡು ಸಿಕ್ಕದೆಯೂ, ಹೊರಗಿನ ರೇಷ್ಮೆಯು ಅಮದಾಗುತ್ತಲೂ ಇರುವುದರಿಂದ ರೇಷ್ಮೆ ವ್ಯಾಪಾರವು ಕಡಿಮೆಯಾಗಿ ಹಲವು ಖಾಸಗಿ ಗಿರಣಿಗಳು ನಿಂತುಹೋಗಿದ್ದುವೆಂದೂ, ಅವುಗಳಿಗೆ ಅವಶ್ಯಕವಾದ ಹಣವನ್ನು ಸಾಲವಾಗಿ ಸರ್ಕಾರದವರು ಕೊಟ್ಟಿರುವುದರಿಂದ ಕೆಲವು ಕಡೆಗಳಲ್ಲಿ ಕೆಲಸವು ಆರಂಭವಾಗಿದೆಯೆಂದೂ ಸಹ ತಿಳಿಸಲಾಯಿತು.

ಸಂಸ್ಥಾನದ ಪ್ರಜೆಗಳ ಉಪಯೋಗಕ್ಕೆ ಪ್ರತಿ ವರ್ಷವೂ ೧೧೧೧೦೦೦ ಪಲ್ಲ ಆಹಾರ ಧಾನ್ಯಗಳು ಬೇಕಾಗುತ್ತವೆ. ಕಳೆದ ಸಾಲಿನಲ್ಲಿ ಸಂಸ್ಥಾನಕ್ಕೆ ೧೭೫೦೦೦ ಪಲ್ಲ ಧಾನ್ಯದ ಕೊರತೆ ಉಂಟಾಗಿತ್ತು. ಭಾರತ ಸರ್ಕಾರದ ಸಹಾಯದಿಂದಲೂ, ಹೊರ ಪ್ರಾಂತಗಳಿಂದಲೂ ಆಹಾರ ಧಾನ್ಯಗಳನ್ನು ಡಿಪೋಗಳ ಮೂಲಕ ಹಂಚ... ...ವನ್ನು ... ...ಕೊಂಡು ಬರ... ...ತ್ತಿದೆ ಅಧಿಕ ಲಾಭ ಮತ್ತು ಸಂಗ್ರಹಗಳನ್ನು ತಡೆಗಟ್ಟಲು ಶಾಸನ ಮಾಡಲಾಗಿದೆ-ಎಂಬುದಾಗಿ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರ ಪ್ರಶ್ನೆಗೆ ಸರ್ಕಾರದವರ ಉತ್ತರವಿತ್ತು.

ಖಾಸಗೀ ಮಸೂದೆ

ಶಾಸನ ಸಭಾ ಸದಸ್ಯರಾದ ಶ್ರೀ ಎ ... ಗೋಪಾಲಯ್ಯನ ... ...ದ ... ...

ನಾಣ್ಯಗಳೂ ಸಹ ವಸ್ತು ಪ್ರದರ್ಶನವುಂಟು

ಮೈಸೂರು ೧೯

ನಾಣ್ಯಗಳೂ ಸಹ ದಸರಾ ವಸ್ತು ಪ್ರದರ್ಶನವನ್ನು ಸಾರ್ವಜನಿಕರಿಗೆ ತೆರೆದಿಡ ... ನಿರ್ಧರಿಸಲಾಗಿದೆ.

ನೆಹರೂರವರು ಪ್ರಿವಿ ಕೌನ್ಸಿಲರ್

ಪಂಡಿತ ನೆಹರು, ಲಿಯಾಕತ್ ಅಲಿಖಾನ್ ಮತ್ತು ಡಿ ಎಸ್ ಸೇನಾ ನಾಯಕರವರುಗಳನ್ನು ಪ್ರಿವಿ ಕೌನ್ಸಿಲರುಗಳನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

...ಕಿದ್ದ ಸಿಡಿ ಮಸೂದೆಯನ್ನು ನ್ಯಾಯಾಂಗ ...ರ್ವರ್ತಿ ಶ್ರೀ ... ...ರವರು ಮಂಡಿಸಿದರು. ಸದರಿ ಶಾಸನದ ೧೧ನೇ ಕಲಮನ್ನು ರದ್ದುಮಾಡಬೇಕೆಂಬುದೇ ಇದರ ಉದ್ದೇಶ.

ಇದರ ಮೇಲೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಾತನಾಡಿ ಸದರಿ ಕಲಮನ್ನು ರದ್ದುಮಾಡುವುದರಿಂದ ಕೋರ್ಟಿನ ... ...ಗಳಲ್ಲಿ ಅನೇಕ ತೊಡಕು ಗಳುಂಟಾಗುವುವೆಂದು ಹೇಳಿದರು. ಇತರ ಸದಸ್ಯರುಗಳು ಸಹ ಅದನ್ನು ವಿರೋಧಿಸಿದರು. ಮಸೂದೆಯು ಸರ್ವಾನುಮತದಿಂದ ಬಿದ್ದುಹೋಯಿತು.

ನಿಬಂಧನೆ ನಿರ್ಣಯದ ನಿರಾಕರಣೆ

ಶ್ರೀಗಳಾದ ಭೂಪಾಳಂ ಚಂದ್ರಶೇಖರಯ್ಯ, ಆರ ಬೈರೇಗೌಡ ಮತ್ತು ಸಿಂಗ್ರಿಗೌಡರು ಕಳುಹಿಸಿದ್ದ ಈ ಕೆಳಗೆ ಕಂಡ ನಿಬಂಧನೆ ನಿರ್ಣಯವನ್ನು ಅಧ್ಯಕ್ಷರು ನಿರಾಕರಿಸಿದರು: - "ಇನ್ನು ಮುಂದೆ ಶಾಸನ ಸಭೆ ಬಿಂದ ... ಕೇಂದ್ರ ಸರ್ಕಾರದ ಶ್ರೀ ಜವಹರಲಾಲ್ ನೆಹರೂ ಮಂತ್ರಿಮಂಡಲದ ದಕ್ಷತೆಯನ್ನು ಪ್ರಶಂಸಿಸಿ ರಾಷ್ಟ್ರದ ಮೈಸೂರು ಮಂತ್ರಿಗಳ ಅಧ್ಯಕ್ಷತೆಯಲ್ಲಿ ಭಾಷಣಗಳು ನಡೆದವು ಪ್ರಸಿದ್ಧವಾದವುಗಳೂ ಈ ವರೆಗೆ ಮೈಸೂರು ಕಾಂಗ್ರೆಸ್ ಸರ್ಕಾರದವರು ಮಂತ್ರಿಮಂಡಲದ ಅಭಿಪ್ರಾಯಗಳನ್ನು ಈ ವಿಚಾರದಲ್ಲಿ ಪ್ರಕಟಪಡಿಸದೆ ತಪ್ಪಿಸುವ ಸಂಕಲ್ಪವನ್ನು ಖಂಡಿಸಲಿಕ್ಕೆ ಪ್ರಸ್ತಾಪ"

ಫಸ್ಟ್ ಗ್ರೇಡ್ ಕಾಲೇಜಿನ ಪ್ರಕರಣ

ರಾಜ್ಯಮಟ್ಟದ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಕೆಲವು ದಿನಗಳ ಹಿಂದೆ ನಡೆದ ಪ್ರಕರಣದ ವಿಷಯವಾಗಿ ... ಎಚ್ ಕೆ ... ... ಅಧ್ಯಕ್ಷ... ... ...

ಹೈದರಾಬಾದಿಗೆ ತಾತ್ಕಾಲಿಕ ಮಂತ್ರಿಮಂಡಲ

ಪ್ರಜಾ ಸರ್ಕಾರ ರಚಿತವಾಗುವವರೆಗೆ ಹೈದರಾಬಾದಿನಲ್ಲಿ ಈಗಿನ ಮಿಲಿಟರಿ ಆಡಳಿತದ ಬದಲು ತಾತ್ಕಾಲಿಕ ಸರ್ಕಾರವೊಂದನ್ನು ಸ್ಥಾಪಿಸುವಂತೆ ನಿರ್ಧಾರವಾಗಿದೆ. ಇದರಲ್ಲಿ ಇಂದಿನ ಮಿಲಿಟರಿ ಗೌರ್ನರ್ ಚೌಧುರಿಯವರೂ ಹೈದರಾಬಾದಿನ ಮಾಜಿ ಉಪ ಪ್ರಧಾನಿ ನವಾಬ್ ಜೈನ್ ಯಾರ್ ಜಂಗ್ ಬಹದ್ದೂರ್, ರಾಜಾ ಧೂಂಡಿರಾಜ್, ಈಗಿನ ಆಡಳಿತಾಧಿಕಾರಿ ಶ್ರೀ ಡಿ ಎಸ್. ಬಕ್ಲೆ ಮತ್ತು ಶ್ರೀಗಳಾದ ಡಿ. ಆರ್, ಪ್ರಧಾನ್ ಮತ್ತು ಎ. ಎಲ್. ಶಾರವರು ಇರುವರು.

ಪಾಕಿಸ್ತಾನದಲ್ಲಿ ಹೈದ್ರಾಬಾದ್ ನಿರಾಶ್ರಿತ ಸರ್ಕಾರವೇ ?

ಹೈದರಾಬಾದಿನ ಮಾಜಿ ಪರರಾಷ್ಟ್ರ ಮಂತ್ರಿಗಳಾದ ಮೊಯಿನ್ ನವಾಜ್ ಜಂಗ್ ರವರು ಪಾಕಿಸ್ತಾನದಲ್ಲಿ ಹೈದರಾಬಾದಿನ ನಿರಾಶ್ರಿತ ಸರ್ಕಾರವೊಂದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವರೆಂದೂ, ಅವರಿಗೆ ಪಾಕಿಸ್ತಾನದ ಬೆಂಬಲ ದೊರೆತಿದೆಯೆಂದೂ ಹೇಳಲಾಗಿದೆ.

ಮಲೇರಿಯಾ ನಿವಾರಣೆ

ಕೃಷ್ಣರಾಜನಗರದ ನೀರಾವರಿ ಪ್ರದೇಶಗಳಲ್ಲಿ ಮಲೇರಿಯಾ ರೋಗ ನಿವಾರಣೆಗಾಗಿ ಕಳೆದ ಕೆಲ ವಾರದಿಂದ ಡಿ ಡಿ ಟಿ ಎಂಬ ದ್ರಾವಕದ ಪ್ರಯೋಗವನ್ನು ಜಾರಿಗೆ ತರಲಾಗಿದೆ. ಈ ವಾರಗಳ ಕಾಲ ಈ ಕಾರ್ಯಕ್ರಮವನ್ನು ಕೃಷ್ಣರಾಜನಗರ, ಚಿಬ್ಬಲು, ಹನಸೋಗೆ, ಹಂಪಾಪುರ, ಕಿಕ್ಕೇರಿ, ಮತ್ತು ಸಾಲಿಗ್ರಾಮಗಳಲ್ಲಿ ಕೈಗೊಳ್ಳಲಾಗುವುದು.

ವೆಂಕಟಗಿರಿಯಪ್ಪನವರಿಗೆ ಪುತ್ರ ವಿಯೋಗ

ಆಸ್ಥಾನ ವಿದ್ವಾನ್ ಸಂಗೀತ ವಿಶಾರದ ವೈಣಿಕ ಪ್ರವೀಣ ವಿ ವೆಂಕಟಗಿರಿಯಪ್ಪನವರ ಜೇಷ್ಠ ಪುತ್ರ ಶ್ರೀ ಪ್ರಸನ್ನ ಶ್ರೀನಿವಾಸರವರು ಕಳೆದ ಗುರುವಾರ ಏಕದಂ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೩೦ ವರ್ಷ ವಯಸ್ಸಾಗಿತ್ತು. ಅವರು ಈ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತದ ಅನೇಕ ಭಾಗಗಳಲ್ಲಿ ಪ್ರವೀಣರಾಗಿ, ತಮ್ಮ ಸಂಗೀತದ ಪ್ರತಿಭೆಯನ್ನು ಪ್ರದರ್ಶಿಸಿ ಮೆಚ್ಚುಗೆಯನ್ನು ಪಡೆದಿದ್ದರು.

ಸಿಹಿ ತಿಂಡಿ ಸ್ವೀಕಾರ

ರಾಜಕುಮಾರಿ ಶ್ರೀ ಗಾಯತ್ರೀ ದೇವಿಯವರ ವಿವಾಹ ಮಹೋತ್ಸವದ ಗೌರವಾರ್ಥವಾಗಿ, ರಾಜಧಾನಿಯ ವಾಣಿ ವಿಲಾಸ ಸ್ತ್ರೀಯರ ಶಾಲೆ ಶ್ರೀ ಗಾಯತ್ರಿ ... ... ಕಳುಹಿಸಿರುವ ಸಿಹಿ ತಿಂಡಿಯನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ವಿಶ್ವವಿದ್ಯಾಲಯದ ಚುನಾವಣೆ

ಸೆನೆಟ್ ಸಭೆಯಿಂದ ಯೂನಿವರ್ಸಿಟಿ ಕೌನ್ಸಿಲ್ಲಿಗೆ ಇರುವ ಮೂರು ಸ್ಥಾನಗಳಿಗೆ ಈ ಕೆಳಗೆ ಕಂಡವರು ಸ್ಪರ್ಧಿಸುವರೆಂದು ಗೊತ್ತಾಗಿದೆ. ಶ್ರೀಗಳಾದ ಎ ಸಿ ಎಲ್ ಶಾಸ್ತ್ರಿ ಕೆ ... ಹೆಚ್ ಗುರುವಾರಿ ... ಡಾ. ಎ ಎಸ್ ನಾರಾಯಣ ಶಾಸ್ತ್ರಿ, ವಿ ವೆಂಕಟರೆಡ್ಡಿ, ಕೆ ಪುಟ್ಟಸ್ವಾಮಿ, ಕೆ ... ... ಮತ್ತು ಧರ್ಮಪ್ರಕಾಶ ... ...

ಮಂತ್ರಿಮಂಡಲವು ಸಭೆ ನಡೆಸಲು ಹಕ್ಕು ಪಡೆದಿದೆಯೋ ?

ಪ್ರಾ॥ ಪ್ರ॥ ಸಭೆಯಲ್ಲಿ ಕ್ರಿಯಾಲೋಚನ
ಮೈಸೂರು, ಅ ೧೯

ಹರಿಜನರಿಗೆ ದೇವಾಲಯ ಪ್ರವೇಶದ ತಿದ್ದುಪಡಿ ಮಸೂದೆ, ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ತಿದ್ದುಪಡಿ ಮಸೂದೆ ಜನಾರೋಗ್ಯಕ್ಕೆ ಸಂಬಂಧಪಟ್ಟ ಮಸೂದೆ, ವಿಮೆಯ ಕಂಪನಿಗಳಿಗೆ ಸಂಬಂಧಪಟ್ಟ ಮಸೂದೆ, ಪ್ರಾಣಿ ರೋಗಗಳಿಗೆ ಸಂಬಂಧಪಟ್ಟ ಮಸೂದೆ, ವಾದವಿವಾದಗಳನ್ನು ಕಂಟ್ರಾಕ್ಟು ಮೂಲಕ ತೀರ್ಮಾನಿಸುವ ಮಸೂದೆಗಳು ಪ್ರಾ॥ ಪ್ರ॥ ಸಭೆಯಲ್ಲಿ ನಿನ್ನೆ ಮಂಜೂರಾದುವು.

ದೇವಾಲಯ ಪ್ರವೇಶಕ್ಕೆ ಸಂಬಂಧಪಟ್ಟ ಮಸೂದೆಯನ್ನು ಶ್ರೀ ಕೆ ವಿ ಅನಂತರಾಮ ಶೆಟ್ಟರು ಮಂಡಿಸಿದರು. ಶ್ರೀಗಳಾದ ವೆಂಕಟನಾರಣಪ್ಪ, ಸಿ ಬೈರಯ್ಯ, ಜೆ. ಆರ್ ಟಿ ಮೆಂಡಲಿಯಾರ್ ಮೊದಲಾದವರು ಮಸೂದೆಯನ್ನು ವಿರೋಧಿಸಿ, ಹರಿಜನ ದೇವಾಲಯ ಪ್ರವೇಶದ ಮಸೂದೆಯನ್ನು ತಂದಾಗಲೇ ಈ ತಿದ್ದುಪಡಿ ಮಸೂದೆಯ ಅಂಶವೂ ಅಡಕವಾಗಿ ದೇವಾಲಯ ಪ್ರವೇಶವನ್ನು ಪ್ರತಿಭಟಿಸುವವರಿಗೆ ಶಿಕ್ಷೆ ಕೊಡುವ ಅಧಿಕಾರವು ಸಹ ಅದರಲ್ಲಡಗಿರುವುದರಿಂದ ಈ ಮಸೂದೆಯು ಬೇಡವೆಂದು ಹೇಳಿದರು.

ಶ್ರೀ ವೆಂಕಟಸ್ವಾಮಿ ಗೌಡರು ಮಾತನಾಡಿ ಹರಿಜನರಲ್ಲೇ ಎರಡು ಪಕ್ಷವಾಗಿ ಸರ್ಕಾರದ ಉದ್ದೇಶವನ್ನು ಸಾರ್ಥಕಗೊಳಿಸಿಕೊಳ್ಳುತ್ತಿಲ್ಲವಾದುದರಿಂದ ಈ ಮಸೂದೆಯು ಬೇಡವೆಂದು ತಿಳಿಸಿದರು.

ಶ್ರೀ ಹೆಚ್ ಕೆ ಮಾದಯ್ಯನವರು ಮಾತನಾಡಿ ಮೇಲ್ವರ್ಗದವರು ಹರಿಜನರಿಗೆ ಒಂದು ಕೊಳದಲ್ಲಿ ನೀರು ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರೂ ಸಹ ಅದರ ಪ್ರಯೋಜನವನ್ನು ಪಡೆಯುತ್ತಿಲ್ಲವಾದುದರಿಂದ ಈ ಮಸೂದೆ ಬೇಡವೆಂದು ಹೇಳಿದರು.

ಶ್ರೀಗಳಾದ ಮಲ್ಲ ಗೋವಿಂದ ರೆಡ್ಡಿ, ಸಿ ಟಿ ಹನುಮಂತಯ್ಯ, ದೇವಯ್ಯ, ಗೋವಿಂದದಾಸ್, ಕಂಡೇರು ವೀರಣ್ಣನವರು ಮಸೂದೆಯನ್ನು ಸ್ವಾಗತಿಸಿದರು. ಶ್ರೀ ದೇವರ ಕೊಂಡಪ್ಪನವರು ಮಾತನಾಡಿ ಹೋಟೇಲು ಮತ್ತು ದೇವಾಲಯಗಳ ಪ್ರವೇಶಕ್ಕಾಗಿ ಮಸೂದೆ ತಂದುದಕ್ಕೆ ಸ್ವಾಗತಿಸಿದರು.

ಶ್ರೀ ಧನಪಾಲನವರು ಎದ್ದು ಸಭೆಯ ಮುಂದೆ ಇರುವುದು ದೇವಾಲಯ ಪ್ರವೇಶದ ವಿಷಯವೇ ಹೊರತು ಹೋಟೇಲಿನ ಪ್ರವೇಶವಲ್ಲವೆಂದು ತಿಳಿಸಿದರು.

ಹೋಟೇಲು, ದೇವಸ್ಥಾನ ಎಲ್ಲಾ ಒಂದೇ ಎಂದು ಶ್ರೀ ದೇವರ ಕೊಂಡಪ್ಪನವರು ಹೇಳಿದರು.

ಪ್ರಾಥಮಿಕ ವಿದ್ಯಾಭ್ಯಾಸದ ಮಸೂದೆ ಬಂದಾಗ ಜನಾಬ್ ಮೀರ್ ನೂರ್ ಹುಸೇನರವರು ಮಾತನಾಡಿ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನು ಸಿವಿಲ್ ಪ್ರದೇಶಕ್ಕೂ ಅನ್ವಯಿಸುವುದರಿಂದ ಅಲ್ಲಿನ ಉಪಾಧ್ಯಾಯ ವರ್ಗಕ್ಕೆ ಈಗ ಬರುತ್ತಿರುವ ಸಂಬಳ ಸಾರಿಗೆಗಳನ್ನು ಕಡಿಮೆ ಮಾಡಕೂಡದೆಂದೂ ಈಗ ಕೊಡುತ್ತಿರುವ ಸಂಬಳ ಸಾರಿಗೆಗಳನ್ನೇ ಮುಂದುವರಿಸಬೇಕೆಂದೂ ತಿಳಿಸಿದರು. ವಿದ್ಯಾ ಸಚಿವರು ಮಾತನಾಡಿ ಸಂಬಳ ಕಡಿಮೆ ಮಾಡುವುದಿಲ್ಲವೆಂದು ಭರವಸೆ ಇತ್ತರು.

ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಪಟ್ಟ ಮಸೂದೆಯನ್ನು ಜನಾಬ್ ಗುಲಾಮ್ ಅಹಮದ್ ಷರೀಫರು ಮಂಡಿಸಿ, ರಹದಾರಿ ಇಲ್ಲದೆ ಮತ್ತು ಶುಚಿಯಾದ ಆಹಾರಗಳನ್ನು ಒದಗಿಸದೇ ಇರುವ ಫಲಾಹಾರ ಗೃಹಗಳ ಮೇಲೆ ಕಾರ್ಯಕ್ರಮ ಕೈಗೊಳ್ಳಲು ಆರೋಗ್ಯಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಕೊಡುವುದೇ ಈ ಮಸೂದೆಯ ತತ್ವವೆಂದು ತಿಳಿಸಿದರು.

ಶ್ರೀ ಎ ಜಿ ರಾಮಚಂದ್ರರಾಯರು ಮಸೂದೆಗೆ ಸ್ವಾಗತ ನೀಡಿ ಬೆಂಗಳೂರು ಪಟ್ಟಣದಲ್ಲಿ ಸುಮಾರು ೩೨ ಹೋಟೇಲುಗಳು ರಹದಾರಿ ಇಲ್ಲದೆ ನಡೆಯುತ್ತಿವೆಯೆಂದೂ ಒಂದು ಸಾರಿ ಹೋಟೇಲುಗಳ ಮೇಲೆ ಮೊಕದ್ದಮೆಗಳನ್ನು ಹಾಕಿದರೆ ಯಾವ ದೃಷ್ಟಿಯಿಂದಲೂ ಅವುಗಳನ್ನು ವಾಪಸು ಪಡೆಯಕೂಡದೆಂದೂ ತಿಳಿಸಿದರು.

ಶ್ರೀ ಶ್ಯಾಮರಾಜ ಅಯ್ಯಂಗಾರ್ಯರು ಮಾತನಾಡಿ ಈ ಕಾನೂನು ಮಂಜೂರಾದರೆ ಪುರಸಭೆಯವರು ಹೋಟೇಲುಗಳ ಮೇಲೆ ಹತೋಟಿ ಹೊಂದಲು ಅನುಕೂಲವಾಗುವುದೆಂದು ಹೇಳಿದರು.

ಶ್ರೀ ಎಸ್ ಶ್ರೀನಿವಾಸಮೂರ್ತಿಯವರು ಮಾತನಾಡಿ ರಾಜಧಾನಿಯಲ್ಲೂ ಅನೇಕ ಹೋಟೇಲುಗಳು ರಹದಾರಿ ಇಲ್ಲದೆ ನಡೆಯುತ್ತಿವೆಯೆಂದು ತಿಳಿಸಿದ್ದು ಮೊದಲು ಹಾಲಿನ ಅಂಗಡಿ ಎಂದು ಬೋರ್ಡ್ ಹಾಕಿ ನಂತರ ತಿಂಡಿ, ಕಾಫಿಗಳನ್ನು ಮಾರುವ ಅಂಗಡಿಗಳ ವಿಷಯವನ್ನು ಪ್ರಸ್ತಾಪಿಸಿದರು.

ಜನಾಬ್ ಷರೀಫರು ಉತ್ತರ ಕೊಟ್ಟು ಅನೇಕ ಕಡೆ ರಹದಾರಿ ಇಲ್ಲದೆ ಹೋಟೇಲು ನಡೆಸುತ್ತಿರುವುದನ್ನು ತಾವೇ ನೋಡಿರುವುದಾಗಿಯೂ ತಿಳಿಸಿದರು.

ವಿಮೆಯ ಕಂಪನಿಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಶ್ರೀ ಚಾಮುಂಡಿ ಸುಬ್ರಹ್ಮಣ್ಯಶೆಟ್ಟರು ಮಂಡಿಸಿದರು.

ಶ್ರೀ ಎಂ ಲಿಂಗೇಗೌಡರು ಒಂದು ಕ್ರಿಯಾಲೋಚನವನ್ನೆತ್ತಿ ಈ ಮಂತ್ರಿಮಂಡಲದ ಅವಧಿಯು ಶ್ರೀಮನ್ ಮಹಾರಾಜರ ಘೋಷಣೆಯ ಕಲಮಿನಂತೆ ಜುಲೈ ತಿಂಗಳಿಗೆ ಮುಗಿಯಿತೆಂದೂ ಈಗ ಈ ಮಂತ್ರಿಮಂಡಲವು ಶಾಸನ ಸಭೆಗಳಿಂದ ಬೆಂಬಲ ಪಡೆದಿಲ್ಲವಾದ ಪ್ರಯುಕ್ತ ಶ್ರೀ ಚಾಮುಂಡಿಯವರು ಮಸೂದೆ ಮಂಡಿಸಲು ಅವಕಾಶವಿಲ್ಲವೆಂದೂ ತಿಳಿಸಿದರು. ಅಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂ ಉತ್ತರಕೊಟ್ಟು ಶ್ರೀಮನ್ ಮಹಾರಾಜರ ಘೋಷಣೆಯಂತೆಯೇ ಈ ಮಂತ್ರಿಮಂಡಲವಾಗಲಿ ಅಥವಾ ಅವರಿಂದ ಅಧಿಕಾರ ಪಡೆದವರಾಗಲೀ ಸಭೆಯನ್ನು ನಡೆಸಲು ಹಕ್ಕು ಪಡೆದಿರುವರೆಂದು ತಿಳಿಸಿ, ಕ್ರಿಯಾಲೋಚನವನ್ನು ತಳ್ಳಿಹಾಕಿದರು. ವಿಮೆಗೆ ಸಂಬಂಧಪಟ್ಟ ಮಸೂದೆ ಸರ್ವಾನುಮತದಿಂದ ಮಂಜೂರಾಯಿತು.

ಬೆಂಗಳೂರು ಕಾರ್ಪೋರೇಷನ್ ಮಸೂದೆಯನ್ನು ಶ್ರೀ ಚಾಮುಂಡಿಯವರ ಮಂಡಿಸಿ ಬೆಂಗಳೂರು ನಗರ ಮತ್ತು ದಂಡಿನ ಪ್ರದೇಶವೂ ಸೇರಿ ೩೦ ಚದುರ ಮೈಲಿ ವಿಸ್ತೀರ್ಣವಾಗುವುದೆಂದೂ ೧೦ ಲಕ್ಷ ಪ್ರಜಾ ಸಂಖ್ಯೆಯುಳ್ಳ ಈ ಪ್ರದೇಶಕ್ಕೆ ಒಂದು ಕಾರ್ಪೋರೇಷನನ್ನು ರಚಿಸಬೇಕಾಗುವುದೆಂದೂ ತಿಳಿಸಿದರು.

ಜನಾಬ್ ಮೀರ್ ನೂರ್ ಹುಸೇನರು ಮಾತನಾಡಿದರು. ಚರ್ಚೆಯನ್ನು ಈ ದಿನಕ್ಕೆ ಮುಂದುವರಿಸಲಾಯಿತು.

ಅಕ್ರಮವಾಗಿ ರೇಷನ್ ಕಾರ್ಡು ಪಡೆದಿದ್ದಕ್ಕೆ ಜುಲ್ಮಾನೆ

ಹಂಪನದ ನಿವಾಸಿಯೊಬ್ಬರು ಸುಳ್ಳು ಹೇಳಿಕೆಯನ್ನು ಕೊಟ್ಟು ೪ ರೇಷನ್ ಕಾರ್ಡುಗಳನ್ನು ಪಡೆದು, ೧೯೪೫ ನೇ ಜೂನ್‌ನಿಂದ ೧೯೪೭ ನೇ ಮೇ ತಿಂಗಳವರೆಗೆ ಸಾವಿರ ರೂ ಬೆಲೆ ಬಾಳುವ ಆಹಾರ ಪದಾರ್ಥಗಳನ್ನು ರೇಷನ್ ಡಿಪೋಗಳಿಂದ ಪಡೆದಿರುವುದರಿಂದ ಅಪಾದನೆಯ ಮೇಲೆ ಒಂದು ಕೋರ್ಟಿನಲ್ಲಿ ಅವರಿಗೆ ೩೦೦ ರೂ ಜುಲ್ಮಾನೆ ತಪ್ಪಿದಲ್ಲಿ ೩ ತಿಂಗಳು ಸಾದಾ ಸಜಾ ಮತ್ತು ಇನ್ನೊಂದು ಕೋರ್ಟಿನಲ್ಲಿ ೩೦೦ ರೂ ಜುಲ್ಮಾನೆ ಅಥವ ೩ ತಿಂಗಳು ಸಾದಾ ಸಜಾ ವಿಧಿಸಲಾಯಿತು.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ
ಯೂನಿವರ್ಸಲ್ ಹೆಯರ್ ಬಾಮ್
ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಕೀಮತ್ ೦-೧೨-
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ:—)
—ದೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು.
ಪಂಚಾಮೃತ— ಮಲೇರಿಯಾ ಗಿರಿಗಳಿಗೆ ಸಿದ್ಧ ಸಂಜೀವನ.
ಮಹಾಕೇತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಪ್ರೀ ಟಾನಿಕ್ ಕೀಮತ್ ೨-೦-
ಮೈಸೂರು ಆಯುರ್ವೇದಿಕ್ ಫಾರ್ಮಸಿ
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ಹೊಸ ಜವಳಿ ಅಂಗಡಿ! ಶಕ್ತಿಯೂಪ ಬೀದಿ
ಮಧುರೆ, ಸೇಲಂ, ಕೊಯಮುತ್ತೂರು
ನಾನಾ ನಮೂನೆಯ
ನೂಲು ಸೀರೆಗಳು,
ವಾಯಿಲ್ ಸೀರೆಗಳು
ವಿಜಯಲಕ್ಷ್ಮೀ ವಿಲಾಸ್
ಇರ್ವಿನ್ ರೋಡ್, ಶಿವರಾಂಪೇಟೆ
ಮೈಸೂರು.

ಬೆಳಗಿನ ಆಟಗಳು
20—10—48ನೇ ಬುಧವಾರದಿಂದ
ಮೂರು ದಿನಗಳು ಮಾತ್ರ
- ಕಲಿಯುಗ್ -
(ಹಿಂದಿ)
ಪಾತ್ರ ಲೀಲಾ, ದೇಸಾಯಿ, ಮೋತಿಲಾಲ್, ರಮೋಲಾ,
ಅಪೆರಾ ಟಾಕೀಸ್

Edited printed and published by A. R. Nagarajan at the Sadhvi Press D Subbaiah Road Mysore

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ 3 ಆಟಗಳು
ಕಡೇ ದಿನ:- ಲೇ ಮಿಸರಬಲ್ಸ್
ತಾ॥ 20 10 48 ರಿಂದ
೩ ದಿನಗಳು ಮಾತ್ರ
20th ಸೆಂಚುರಿಯವರ
ಬಾಬ್, ಸನ್ ಆಫ್ ಬ್ಯಾಟಲ್
BOB, SON OF BATTLE
ವರ್ಣರಂಜಿತ ಚಿತ್ರ

ರಾಜಕಮಲ್ ಟಾಕೀಸ್
16-10-48ರಿಂದ :: ಜಯಘೋಷ ೩ನೇ ವಾರ
ಪ್ರತಿ ದಿನ ಎರಡು ಆಟಗಳು
ಮುತ್ತಾಲಾಪ್ಪೈರ್ ರಾಮಜೋಷಿ
ರಾಜಕಮಲ್ ಅವರ ತಯಾರಿಕೆ
ತಾರಾಗಣ:— ಹಂಸ, ಮನ್ಮೋಹನ ಕೃಷ್ಣ
-: ಮುಂದಿನ ಆಕರ್ಷಣೆ :-
ಫಿಲ್ಮಿಸ್ತಾನ್ ಕಂಪೆನಿಯ ದೋ ಭಾಯಿ

QUESTIONS & ANSWERS
OF
Mysore S. S. L. C. Public
Examination
In Optional Algebra
(1910—1948)
For Books Apply to:--
N SUBHRAMANYA
203 Dewan's Road,
MYSORE
Price Re 1-0-0

ಸಂಪುಟ ೭] ಗುರುವಾರ ೨೧-೧೦-೪೮ [ಸಂಚಿಕೆ ೯೬

ಭೂಪಾಲಂರವರಿಗೆ ಸಭೆಯಿಂದ ಉಚ್ಚಾಟನೆ

ಭೂಪಾಲಂರವರನ್ನು ಹೊರಕ್ಕೆ ಕಳುಹಿಸಲಾಯಿತು

ಪ್ರ. ಪ್ರ. ಸಭೆಯಲ್ಲಿ ಕೋಲಾಹಲ

ಮೈಸೂರು ೨೧

...ಪ್ರಜಾಪ್ರತಿನಿಧಿ ಸಭೆಯು ಈ ದಿನ ಮ... ೧೨ ಗಂಟೆಗೆ ಶ್ರೀ ಕೆ ಟಿ ಭಾಷ್ಯಂ... ಅಧ್ಯಕ್ಷತೆಯಲ್ಲಿ ಆರಂಭವಾಯಿತು ...ಪ್ರಶ್ನೋತ್ತರ ಕಾಲದಲ್ಲಿ ಸಾಗರಪಟ್ಟೆಯ... ...ವೆಯನ್ನು ೪೫ ಸಾವಿರ ರೂ ...ಮಾಡಿ ಇತ್ತೀಚೆಗೆ ದುರಸ್ತು ಮಾಡ... ...ದೂ, ಸೇತುವೆಯು ಈಗ ಸರಿ... ...ಸ್ಥಿತಿಯಲ್ಲಿದೆಯೆಂದೂ, ಹೇರಿ... ...ವನ್ನು ಕಟ್ಟುವ ಅಥವಾ ಈಗಿನ ...ವನ್ನು ಬದಲಾಯಿಸುವ ಅಗತ್ಯ... ...ವಿಲ್ಲವೆಂದೂ ಜನಾಬ್ ಪಿ ಅಬ್ದು... ...ವರ ಪ್ರಶ್ನೆಗೆ ಉತ್ತರ ಕೊಡ... ...ತು.

...ಗಳ ಸಂಚಾರಕ್ಕೆ ಸಂಬಂಧಪಟ್ಟಂ... ...ಪ್ರಶ್ನೆಗೆ, ಪರ್ಮಿಟ್ಟುಗಳನ್ನು ಕೊ... ...ಜಿಲ್ಲಾ ಟ್ರಾಫಿಕ್ ಸಲಹಾ ಸಮಿ... ...ಪಟ್ಟಿಗಳನ್ನು ಗಣನೆಗೆ ತೆಗೆದುಕೊ... ...ಗುವುದೆಂದು ಉತ್ತರ ಬಂದಿತು. ಬ... ...ರಾಷ್ಟ್ರೀಕರಣ ಸಂಬಂಧದ ಪ್ರಶ್ನೆಗೆ ...ವರ್ಷದಲ್ಲಿ ಸಂಸ್ಥಾನದ ಬಸ್ಸು... ...ಗಳನ್ನೆಲ್ಲಾ ರಾಷ್ಟ್ರೀಕರಣ ಮಾ... ...ಯೋಚನೆಯಿದೆಯೆಂದೂ, ಚಾಸಿಸ... ...ಬಂದ ಕೂಡಲೇ ಮುಖ್ಯವಾದ ಲೈನು... ...ಸರ್ಕಾರಕ್ಕೆ ವಹಿಸಿಕೊಳ್ಳಲಾಗುವು... ...ಈಗ ೧೫ ಲೈನುಗಳಲ್ಲಿ ೩೨ ಬ... ...ಓಡಿಯಾಡುತ್ತಿವೆಯೆಂದೂ, ೫... ...೧೨೦ ಚಾಸಿಗಳನ್ನು ಬಾಡಿ ಕಟ್ಟಲು... ...ಲಾಗಿದೆಯೆಂದೂ, ಮೈಸೂರು ಪ... ...ಬೆಂಗಳೂರುಗಳಲ್ಲಿ ಸಿಟಿ ಬಸ್ಸುಗಳ ...ರಾಷ್ಟ್ರೀಕರಣ ಮಾಡುವ ಯೋಚನೆ ...ಯೆಂದೂ ತಿಳಿಸಲಾಯಿತು.

...ಶಂಕರ ಲಿಂಗೇಗೌಡರಿಗೆ ಎಚ್ಚರಿಕೆ

...ನೇ ತಾರೀಖು ಮಂಗಳವಾರವೂ ಸ... ...ಭೆಯ ನಡೆಯುವುದಾಗಿ ತಿಳಿಸಲಾಗಿ... ...೨೬ ನೇ ತಾರೀಖು ಆಹಾರ ಮತ್ತು... ...ಚರ್ಚೆಗೆ ಮೀಸಲಾಗಿರುವುದರಿಂ... ...ದಿನ ಸಂಜೆ ೫ ಗಂಟೆಗೇ ಸಭೆಯು ಮು... ...ಗೊಳಿಸದೆ ಚರ್ಚೆಯು ವ ೧೧ ...ವರೆಗೆ ಎಷ್ಟು ಹೊತ್ತಾದರೂ ನಡೆಸ... ...ದ ಶ್ರೀ ಬಿ ಎಸ್ ಗ ಪ್ಪನವರು ಸೂ... ...೫ ಗಂಟೆ ಮೇಲೆ ಸಭೆ ನಡೆಸಿ... ...ವಾಗಿಲ ದಿನಕ್ಕೆ ೧೫ ರೂ ಭತ್ಯ ಕೊ... ...ಕೆಂದ ಶ್ರೀ ಶಂಕರ ಲಿಂಗೇಗೌಡರು ...ದರ ಭತ್ಯಕ್ಕಾಗಿ ಸದಸ್ಯರಾರೂ ಬ... ...ವಿಲ್ಲೆಂದೂ, ಅವರು ಆ ರೀತಿ ಹೇಳು... ...ಸಭೆಯ ಘನತೆಗೆ ತಕ್ಕುದಲ್ಲವೆಂದೂ ...ತಿಳಿಸಿ ಮುಂದೆ ಹಾಗೆ ಮಾತ... ...ಬಾರದೆಂದು ಎಚ್ಚರಿಸಿದರು

...ದಳಿ ನಿರ್ಣಯಗಳ ನಿರಾಕರಣೆ

...ತ ರಾಜ್ಯಾಂಗದ ವಿಷಯ, ನಗರ... ...ನಿಂತುಹೋಗಿರುವ ವಿಚಾರ, ...ದಳಿಯನ್ನು ಹೆಚ್ಚಿಸಿ ರೂ.ಗೆ 2½ ...ಅಕ್ಕಿಯನ್ನು ಮಾರಾಟವುದು ಹೈದ... ...ಸ್ತರಣವು ಮುಕ್ತಾಯವಾಗಿದ್ದ... ...ಮುಸ್ಲಿಮರನ್ನು ದಸ್ತಗಿರಿ ಮಾ... ...ವುದು. ಇವುಗಳಬಗ್ಗೆ ೫॥ ಮೀರ್... ...ಸೇರಿದವರು ನಿಲುವಳಿ ನಿರ್ಣ... ...ಮುಂದಿಟ್ಟಿದ್ದರು. ಭಾರತ ರಾ... ...ವಿಚಾರವು ಈ ಸಭೆಗೆಸಂಬಂಧಿ... ...ಎಂದೂ ...ವಸ್ಲಿಮರ ದಸ್ತಗಿರಿ ...ಭಾರತ ಸರ್ಕಾರದ ನೀತಿಯ

ಹಕ್ಕು ಬಾಧ್ಯತಾ ನಿರ್ಣಯದ ನಿರಾಕರಣೆ

ಮೈಸೂರು ೨೧

ನೆಹರೂ ಮಂತ್ರಿಮಂಡಲದ ಮೇಲಿನ ಆರೋಪಣೆ ವಿಷಯದಲ್ಲಿ ತಾವು ತಂದ ನಿಲುವಳಿ ನಿರ್ಣಯವನ್ನು ಅಧ್ಯಕ್ಷರು ಯಾವ ಕಾರಣಗಳನ್ನೂ ತಿಳಿಸದೆ ತಳ್ಳಿಹಾಕಿರುವುದು ಸಭೆಯ ಹಕ್ಕುಬಾಧ್ಯತೆಗಳಿಗೆ ಚ್ಯುತಿಯುಂಟುಮಾಡಿರುವುದರಿಂದ ಅದನ್ನು ಹಕ್ಕು ಬಾಧ್ಯತಾ ಸಮಿತಿಗೆ ಕಳುಹಿಸಬೇಕೆಂಬ ಶ್ರೀ ಭೂಪಾಳಂರವರ ಸೂಚನೆಯನ್ನು ನಿನ್ನೆ ಪ್ರ॥ ಪ್ರ॥ ಸಭೆಯಲ್ಲಿ ಅಧ್ಯಕ್ಷರು ತಳ್ಳಿಹಾಕಿದರು. ಅದರಿಂದ ಸಭೆಯ ಹಕ್ಕು ಬಾಧ್ಯತೆಗೆ ಯಾವ ಚ್ಯುತಿಯೂ ಉಂಟಾಗಿಲ್ಲವೆಂದು ಅಧ್ಯಕ್ಷರು ತಿಳಿಸಿದರು. ಇದೇ ಬಗೆಯ ಹಕ್ಕು ಬಾಧ್ಯತಾ ನಿರ್ಣಯಗಳನ್ನು ಪದೇ ಪದೇ ತರುವುದು ಉಚಿತವಲ್ಲವೆಂದೂ ಅವರು ಹೇಳಿದರು.

ಖಾಸಿಂ ರಜ್ವಿಯ ಸಹೋದರನ ದಸ್ತಗಿರಿ

ಹೈದರಾಬಾದಿನ ರಜಾಕಾರ ನಾಯಕನಾದ ಖಾಸಿಂ ರಜ್ವಿಯ ಸಹೋದರ ಅಬ್ಬಾಸ್ ರಜ್ವಿ ಎಂಬವನನ್ನು ದಸ್ತಗಿರಿ ಮಾಡಲಾಗಿದೆ. ಅಬ್ಬಾಸ್ ರಜ್ವಿಯು ಹೈದರಾಬಾದ್ ಪೋಲೀಸ್ ಅಧಿಕಾರಿಯಾಗಿದ್ದನೆಂದು ಗೊತ್ತಾಗಿದೆ.

ಮಹಾತ್ಮರ ಫ್ರೆಂಚ್ ಶಿಷ್ಯನ ಉಪವಾಸ

ಮುಂದೆ ಯುದ್ಧ ಸಂಭವಿಸದಂತೆ ಮನುಕುಲವನ್ನು ಸಂರಕ್ಷಿಸುವುದಕ್ಕಾಗಿ ಉತ್ತರ ಆಫ್ರಿಕದಲ್ಲಿ ಒಂದು ವಿಶೇಷ ಪ್ರಾಂತ್ಯವನ್ನು ನಿರ್ಮಿಸುವಂತೆ ಶಾಸನವನ್ನು ಹೊರಡಿಸಲು ವಿಶ್ವಸಂಸ್ಥೆಯನ್ನು ಪ್ರೇರೇಪಿಸುವ ಉದ್ದೇಶದಿಂದ ಫ್ರಾನ್ಸಿನ ೩೨ ವರ್ಷ ವಯಸ್ಸಿನ ಎಂ. ಮಾರ್ಟಿನ್ ಎಂಬ ಮಹಾತ್ಮ ಗಾಂಧಿಯವರ ಶಿಷ್ಯನೊಬ್ಬನು ಕಳೆದ ಒಂದು ವಾರದಿಂದ ಉಪವಾಸವನ್ನು ಕೈಗೊಂಡಿರುವನೆಂದು ವರದಿಯಾಗಿದೆ.

...ನ್ನು ಅನುಸರಿಸಿ ನಡೆಯುತ್ತಿರುವುದರಿಂದ ಅವುಗಳ ಚರ್ಚೆಗೆ ಅವಕಾಶವಿಲ್ಲವೆಂದು ಅಧ್ಯಕ್ಷರು ತಳ್ಳಿಹಾಕಿದರು. ಸಿಟಿಬಸ್ಸಿನ ವಿಚಾರವು ಅಷ್ಟೇನೂ ಪ್ರಾಮುಖ್ಯವಲ್ಲವೆಂದೂ ಮತ್ತು ಆಹಾರದ ವಿಷಯವಾಗಿ ಪ್ರತ್ಯೇಕವಾಗಿ ೨೬ ನೇ ತಾರೀಖು ಚರ್ಚೆ ನಡೆಯಲಿರುವುದರಿಂದಲೂ ಅವಕ್ಕೆ ಸಂಬಂಧಪಟ್ಟ ಎರಡು ನಿಲುವಳಿ ಸೂಚನೆಗಳನ್ನು ವಾಪಸು ತೆಗೆದುಕೊಳ್ಳಲಾಯಿತು.

ಆಹಾರದ ಮೇಲೆ ಪ್ರಶ್ನೆಗಳ ಸುರಿಮಳೆ

ಪ್ರ. ಪ್ರ. ಸಭೆಯಲ್ಲಿ ಚರ್ಚೆ

ಮೈಸೂರು, ೨೧

"ನಿನ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರ ಕಾಲವೆಲ್ಲಾ ಆಹಾರದ ವಿಷಯದ ಮೇಲೆಯೇ ಕಳೆಯಿತು.

ಶ್ರೀ ಕೆ ರಾಮಕೃಷ್ಣಯ್ಯನವರ ಪ್ರಶ್ನೆಗೆ ಆಹಾರ ಡೈರೆಕ್ಟರ್‌ರವರ ಶ್ರೀ ಕೆ ಗುಂಡರಾಯರು ಉತ್ತರ ಕೊಟ್ಟು, ಸಂಸ್ಥಾನದ ನಾಲ್ಕು ನಗರಗಳಲ್ಲಿ ರೇಷನ್ ಜಾರಿಗೆ ತಂದಿರುವುದಕ್ಕೆ ಅಲ್ಲಿ ವ್ಯವಸಾಯಗಾರರಲ್ಲದ ಪ್ರಜಾ ಸಂಖ್ಯೆಯು ಹೆಚ್ಚಾಗಿರುವುದೇ ಕಾರಣವೆಂದೂ, ಸರ್ಕಾರಿ ಡಿಪೋಗಳಲ್ಲದ ಅಂಗಡಿಗಳಲ್ಲಿ ದಿನಸಿಗಳ ಮಾರಾಟದ ದರವು ನಿಗದಿಯಾದ ಬೆಲೆಗಿಂತಲೂ ಶೇಕಡ ೩೦ ರಿಂದ ೧೦೦ ರ ವರೆಗೆ ಏರಿದೆಯೆಂದೂ ತಿಳಿಸಿದರು. ಕೂಲಿ ಮಾಡತಕ್ಕವರು ಮತ್ತು ರಾಗಿ ಬೆಳೆಯತಕ್ಕವರು ಹೆಚ್ಚಾಗಿ ಇರುವ ಗ್ರಾಮಗಳಲ್ಲಿ ಆಹಾರದ ಅಭಾವದ ದೂರುಗಳು ಸರ್ಕಾರಕ್ಕೆ ಬಂದಿದೆಯೆಂದೂ, ಈ ತೊಂದರೆಯನ್ನು ಕಡಿಮೆ ಮಾಡಲು ಅದನ್ನು ಡಿಪೋಗಳನ್ನು ತೆರೆಯಲಾಗುವುದೆಂದೂ ತಿಳಿಸಲಾಯಿತು.

ಸಂಸ್ಥಾನದಲ್ಲಿ ಈಗ ೧೫ ಸಾವಿರ ಟನ್ ಅಭಾವವಿದೆ. ೬ ಸಾವಿರ ಟನ್ ಕೆಂಪು ಜೋಳ ಹೊರಗಿನಿಂದ ಬಂದಿದೆ. ಮದರಾಸಿನಿಂದ ೩ ಸಾವಿರ ಟನ್ ಅಕ್ಕಿ ಸಧ್ಯದಲ್ಲೇ ಬರುವುದು. ಹೊರಗಿನಿಂದ ಬರುವ ೨೨ ಸಾವಿರ ಟನ್ ಆಹಾರ ಸೇರಿ, ಒಟ್ಟು ೪೨ ಸಾವಿರ ಟನ್ ಆಹಾರವು ಇನ್ನು ೨ ೩ ತಿಂಗಳುಗಳಿಗೆ ಸಾಕಾಗುವುದು. ಜನರು ಹೆಚ್ಚು ಲಾಭ ದುರಾಶೆ ಮಾಡದಂತೆ ಸರ್ಕಾರವು ಕಾರ್ಯಕ್ರಮವನ್ನು ಕೈಗೊಂಡಿದೆ ಎಂದು ಅವರು ತಿಳಿಸಿದರು.

'ರಾಷ್ಟ್ರ ಪತಿ' ಬಿಲ್ಲೆ

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಿಗಾಗಿ ಹೊಸದಾಗಿ ಚಿನ್ನ ಮತ್ತು ಬೆಳ್ಳಿಯಿಂದ ಒಂದು ಬಿಲ್ಲೆಯನ್ನು ತಯಾರಿಸಲಾಗುವುದೆಂದು ಗೊತ್ತಾಗಿದೆ. ಈ ಬಿಲ್ಲೆಯ ...ಸುಂದರ ... ಭದ ... ಸ್ವರತಿ ಎಂಬ ಪದವೂ ... ಕಾಂಗ್ರೆಸ್ ... ಅಧ್ಯಕ್ಷರಿಗೆ ... ದನಾರು ... ಬಿಲ್ಲೆಯನ್ನು ತ ... .

ಭೂಪಾಲಂರವರ ಪ್ರಕರಣ

ಭೂಪಾಲಂ ಚಂದ್ರಶೇಖರಯ್ಯನವರೂ ಮತ್ತು ಇತರ ೬ ಮಂದಿ ಸದಸ್ಯರೂ ತಾವುಗಳು ಮಂಡಿಸಿದ ನಿಲುವಳಿ ನಿರ್ಣಯಗಳನ್ನು ಅಧ್ಯಕ್ಷರು ತಳ್ಳಿಹಾಕಿರುವುದರಿಂದ ತಮಗೆ ಅಸಮಾಧಾನವಾಗಿರುವುದಾಗಿಯೂ ಅದನ್ನು ಚರ್ಚಿಸಲು ಅವಕಾಶ ಕೊಡಬೇಕೆಂದೂ ಪ್ರಾರ್ಥಿಸಿದರು. ಪ್ರತಿನಿಧಿ ಸಭೆಯ ನಿಯಮವನ್ನನುಸರಿಸಿ ತಾವು ಅವುಗಳನ್ನು ತಳ್ಳಿಹಾಕಿರುವುದಾಗಿ ಅಧ್ಯಕ್ಷರು ತಿಳಿಸಿದರು.

ಶ್ರೀ ಭೂಪಾಲಂ–ನಮಗೆ ಇದನ್ನು ಕೇಳುವ ಹಕ್ಕು ಇದೆ, ಹಿಂದಿನ ಅಧ್ಯಕ್ಷರು ಇವುಗಳಿಗೆ ಅವಕಾಶ ಕೊಡುತ್ತಿದ್ದರು. ತಾವು ಈ ಬಗ್ಗೆ ವಿದಾಯ ಕೋರಬೇಕು.

ಅಧ್ಯಕ್ಷರು-ವಿದಾಯ ಕೋರುವುದು ನನಗೆ ಸೇರಿದ್ದು; ಈಗ ಅದಕ್ಕೆ ಅವಕಾಶವಿಲ್ಲ, ದಯವಿಟ್ಟು ಕುಳಿತುಕೊಳ್ಳಿರಿ.

ಶ್ರೀ ಭೂಪಾಲಂ — ನಮ್ಮ ಅಸಮಾಧಾನ ಸೂಚಿಸಬೇಕು. ಅವಕಾಶ ಕೊಡಿ.

ಅಧ್ಯಕ್ಷರು- ನೀವು ಅಸಮಾಧಾನವನ್ನು ಮಂತ್ರಿಮಂಡಲದ ಮೇಲೆ ವ್ಯಕ್ತಪಡಿಸಬಹುದು; ಇಲ್ಲಿ ಅವಕಾಶವಿಲ್ಲ, ಕುಳಿತುಕೊಳ್ಳಿರಿ.

ಶ್ರೀ ಭೂಪಾಳಂರವರು ಕುಳಿತುಕೊಳ್ಳದಿರಲು, ಈ ಸಂಜೆಯವರೆಗೆ ಅವರು ಸಭೆಯನ್ನು ಬಿಟ್ಟುಹೋಗಬೇಕೆಂದು ಅಧ್ಯಕ್ಷರು ಹೇಳಿದರು. ತಮ್ಮ ಹಕ್ಕುಬಾಧ್ಯತೆಗೆ ಅಧ್ಯಕ್ಷರು ಧಕ್ಕೆ ತಂದಿರುವುದರಿಂದ ಅದನ್ನು ಪ್ರತಿಭಟಿಸಿ ತಾವು ಹೊರಗೆ ಹೋಗುವರೇ ವಿನಹ ಅಧ್ಯಕ್ಷರ ಆಜ್ಞಾನುಸಾರವಲ್ಲವೆಂದು ಹೇಳಿ ಶ್ರೀ ಭೂಪಾಳಂರವರು ಸಭಾ ತ್ಯಾಗ ಮಾಡಿದರು.

ಮಾನ್ಯ ಸದಸ್ಯರನ್ನು ಹೊರಗೆ ಕಳುಹಿಸಿದ್ದರಿಂದ ತಮಗೆ ಉಂಟಾದ ಅಪಾರ ದುಃಖವನ್ನು ಸೂಚಿಸಲು ತಾವೂ ಸಭೆ ಹೊರಗೆ ಹೋಗುವುದಾಗಿ ಹೇಳಿ ಶ್ರೀ ಶಂಕರಲಿಂಗೇಗೌಡರೂ ಎದ್ದು ಹೊರಟುಹೋದರು.

ಪಿತೃ ಪಕ್ಷದಲ್ಲಿ ಸೇತುವೆ ಆರಂಭೋತ್ಸವವೇ?

ಲೋಕಪಾವನಿ ಸೇತುವೆಯ ಆರಂಭೋತ್ಸವವನ್ನು ಪಿತೃಪಕ್ಷದಲ್ಲಿ ನಡೆಸಲಾಯಿತೇ?—ಎಂಬುದಾಗಿ ಶ್ರೀ ಎಂ ಲಿಂಗೇಗೌಡರು ಕೇಳಿದ ಅಪ್ಪಣೆ ಪ್ರಶ್ನೆಯನ್ನು ಅಧ್ಯಕ್ಷರು ತಳ್ಳಿಹಾಕಿ ಈಗ ಅದು ಅಪ್ರಕೃತವೆಂದು ಹೇಳಿದರು.

ಶಂಕರಲಿಂಗೇಗೌಡರ ಪುನರಾಗಮನ

ಉಪಾಹಾರನಂತರ ಶ್ರೀ ಶಂಕರಲಿಂಗೇಗೌಡರು ಮತ್ತೆ ಸಭೆಗೆ ಬಂದು ಶ್ರೀ ಭೂಪಾಲಂರವರಿಗೆ ವಿಧಿಸಿರುವ ಶಿಕ್ಷೆಯನ್ನು ಪುನರ್ವಿಮರ್ಶಿಸಬೇಕೆಂದು ಅಧ್ಯಕ್ಷರನ್ನು ಕೋರಿದರು. ತಮ್ಮ ವರ್ತನೆಗೆ ಭೂಪಾಲಂರವರು ವಿಷಾದವನ್ನು ಸೂಚಿಸುವುದಾದರೆ ಅಥವಾ ಸಭೆಯು ಅನುಮತಿ ಕೊಡುವುದಾದರೆ ತಾವು ಹಾಗೆ ಮಾಡುವುದಾಗಿ ಅಧ್ಯಕ್ಷರು ಹೇಳಿದರು.

ಎ. ಎಂ. ಸಿ. ಸಿ. ಅಧಿವೇಶನ

ಮುಂದಿನ ತಿಂಗಳು ೬ ಮತ್ತು ೭ನೇ ತಾರೀಖುಗಳಲ್ಲಿ ಅಖಿಲ ಮೈಸೂರ ಕಾಂಗ್ರೆಸ್ ಸಮಿತಿಯ ಅಧಿವೇಶನವು ಬೆಂಗಳೂರಿನಲ್ಲಿ ನಡೆಯುವುದು.

○ ಮೈಸೂರು ಡಿಪುಟಿ ಅಸಿಸ್ಟೆಂಟ್ ಕಮಿಷನರಾದ ಶ್ರೀ ಎ ಕೇಶವಯ್ಯನವರನ್ನು ಗಸ್ತೆ ಪತ್ರ ಕಚೇರಿಗಳ ಚೀಫ್ ಕಂಟ್ರೋಲರ್ ಅಸಿಸ್ಟೆಂಟರನ್ನಾಗಿ ನೇಮಿಸಲಾಗಿದೆ.

ಕೇಸರಿ ಪತ್ರಿಕೆಯು ನಿಂತಿತು

ಬೆಂಗಳೂರಿನಲ್ಲಿ ಶ್ರೀ ಆರ್ ಎಸ್ ಶಾ... ...ರವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಕೇಸರಿ ದಿನ ಪತ್ರಿಕೆಯಿಂದ ...೨೫೦೦ ರೂ ಠೇವಣಿ ಕೇಳಿದ್ದಕ್ಕೆ ... ಪ್ರೆಸ್ ... ಠೇವಣಿಯನ್ನು ಕೊಡದೆ ಇರುವುದರಿಂದ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿ ಇರುವುದಾಗಿ ಸಂಪಾದಕರು ತಿಳಿಸುತ್ತಾರೆ.

ಹೆಚ್ಚು ಆಹಾರ ಬೆಳೆಯಲು ಸರ್ಕಾರದ ಪ್ರೋತ್ಸಾಹ

ಪ್ರ॥ ಪ್ರ॥ ಸಭೆಯಲ್ಲಿ ಅಂಕಿಗಳು

ಮೈಸೂರು ೨೧

ನಿನ್ನೆ ದಿನ ಪ್ರ॥ ಪ॥ ಸಭೆಯಲ್ಲಿ ೨೪ ಅಂಕಿಗಳನ್ನು ಚರ್ಚಿಸಲಾಯಿತು

ಹೊಳೆನರಸೀಪುರದ ಶ್ರೀ ಕೆ ರಾಮಣ್ಣನವರು ಸಂಸ್ಥಾನಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಬೆಳೆಯಲು ಒಂದು ಕೋಟಿ ರೂ ಖರ್ಚು ಮಾಡಬೇಕೆಂಬ ಅಂಕೆಯನ್ನು ಮಂಡಿಸಿದರು

ಸಚಿವ ಶ್ರೀ ಹೆಚ್ ಸಿದ್ದಯ್ಯನವರು ಉತ್ತರವಿತ್ತರು ಮೈಸೂರು ಸಂಸ್ಥಾನವು ಆಹಾರದ ವಿಷಯದಲ್ಲಿ ಕೊರತೆ ಪ್ರದೇಶವಾಗಿದೆ ಸ್ವಯಂ ಪೂರ್ಣತೆಯಿಂದ ಕೂಡಿಲ್ಲ ನಮ್ಮ ಸಂಸ್ಥಾನದಲ್ಲಿ ಒಂದು ಎಕರೆಯಲ್ಲಿ ಬೆಳೆಯಾಗುವ ಆಹಾರ ಪದಾರ್ಥಕ್ಕಿಂತ ಹೆಚ್ಚಿಗೆ ಸುಮಾರು ೩ ೪ ರಷ್ಟು ಭಾಗ ಹೊರ ದೇಶದ ಜಮೀನುಗಳಲ್ಲಿ ಬೆಳೆಯಾಗುತ್ತಿದೆ ಸಂಸ್ಥಾನದಲ್ಲಿ ಒಟ್ಟು ೫೦ ಕೋಟಿ ಎಕರೆ ವ್ಯವಸಾಯಕ್ಕೆ ಯೋಗ್ಯವಾದ ಜಮೀನಿದೆ ಇದರಲ್ಲಿ ಅರ್ಧದಷ್ಟು ಸಾಗುವಳಿಗೆ ಬಂದಿಲ್ಲ ಮೈಸೂರು ಸರ್ಕಾರವು ವ್ಯವಸಾಯಾಭಿವೃದ್ಧಿಗಾಗಿ ಹಲವು ವರ್ಷಗಳಿಂದ ೪೮॥ ಲಕ್ಷ ರೂ ಮಂಜೂರು ಮಾಡಿದೆ. ಈ ಒಂದು ಸಾಲಿನಲ್ಲೇ ೫೦ ಲಕ್ಷ ರೂ ಮಂಜೂರು ಮಾಡಲಾಗಿದೆ ಹೊರಗಿನಿಂದ ಆಹಾರ ತರುವ ನೀತಿ ಸಿಲ್ಲದೇ ಈ ಕ್ಷಾಮ ಸ್ಥಿತಿಯನ್ನು ಆದಷ್ಟು ಕಡಿಮೆ ದರದ ಏರ್ಪಾಡಿನಲ್ಲಿ ಕೊಡಲು ನಿರ್ಧರಿಸಲಾಗಿದೆ ಇರಿಗೇಷನ್ ಭಾವಿಗಳಿಗಾಗಿ ನೂರಲು ಕೊಡುತ್ತಿದ್ದ ೫೦೦ ರೂ ಗ್ರಾಂಟನ್ನು ೭೫೦ ರೂ ಗೂ ಈಗ ೧೦೦೦ ರೂ ವರೆವಿಗೂ ಹೆಚ್ಚಿಸಲಾಗಿದೆ. ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕಾಗಿ ೫ ಲಕ್ಷ ರೂ ನಿಂದ ೮ ಲಕ್ಷಕ್ಕೂ ಈಗ ೧೧ ಲಕ್ಷಕ್ಕೂ ಹೆಚ್ಚಿಸಲಾಗಿದೆ. ಎರಡು ವರ್ಷಗಳಲ್ಲಿ ಕ್ರಾಂತಿಕಾರಿಯಾದ ವ್ಯವಸಾಯ ಅಗಲು ಸಾಧ್ಯವಿಲ್ಲ ಆದರೆ ೭-೮ ವರ್ಷಗಳಲ್ಲಿ ೩-೩ ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಸಿದ್ಧವಾಗುವುದರಲ್ಲಿ ಸಂದೇಹವಿಲ್ಲ ನಮ್ಮಲ್ಲಿ ಈಗ ೬೦ ಟ್ರಾಕ್ಟರುಗಳಿವೆ ೩೫ ಟ್ರಾಕ್ಟರ್ ಗಳು ೭-೮ ದಿನದಲ್ಲಿ ಬರುವುದರಲ್ಲಿವೆ ಈ ಯೋಜನೆ ಎಷ್ಟು ಅಭಾವದಿಂದ ಸ್ವಲ್ಪ ನಿಧಾನವಾಗಿದೆ ಮುಂದಿನ ವರ್ಷಕ್ಕೆ ೧೫೦ ಟ್ರಾಕ್ಟರುಗಳು ನಮ್ಮ ಸಂಸ್ಥಾನದಲ್ಲಿರುತ್ತವೆ. ಬುಲ್ ಡೋಜರ್‌ಗಳಿಂದ ೬೦ ಲಕ್ಷ ಎಕರೆ ಕಾಡನ್ನು ಶಾಗ ಮಾಡುತ್ತೇವೆ ವ್ಯವಸಾಯಾಭಿವೃದ್ಧಿಗಾಗಿ ಸಕಲ ಯತ್ನ ಮಾಡುತ್ತಿದ್ದೇವೆ ಕೇಂದ್ರ ಸರ್ಕಾರದ ವ್ಯವಸಾಯದ ಡೈರೆಕ್ಟರ್ ರವರು ಒಂದು ಕೋಟಿ ರೂ ಗಳ ಯೋಜನೆಯನ್ನು ತಯಾರಿಸಿದ್ದಾರೆ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ ಮತ್ತು ಬೀಜ, ಗೊಬ್ಬರಗಳಿಗಾಗಿ ಇಟ್ಟಿರುವ ೬೩ ಲಕ್ಷ ರೂ ಪತ್ರೆ ಲಕ್ಷ ರೂ ಸಬ್ಸಿಡಿಯಾಗಿ ಕೊಡಲು ನಿಶ್ಚಯಿಸಿದ್ದೇವೆ-ಎಂದು ಅವರು ತಿಳಿಸಿದರು

ಎಲ್ಲ ಪ್ರದೇಶಗಳಲ್ಲಿಯೂ ಮೈಲಿಯೊದಕ್ಕೆ ಒಂದಕ್ಕೆ ಸಾಸಿವೆಂತೆ ಒನ್ ದರವನ್ನು ನಿರ್ಧರಿಸಬೇಕೆಂಬ ಅಂಕೆಗೆ ಉತ್ತರವಾಗಿ ಶ್ರೀ ಟಿ ಮರಿಯಪ್ಪನವರು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸರ್ಕಾರವು ಈ ಬಗ್ಗೆ ಆಜ್ಞೆ ಹೊರಡಿಸುವುದೆ ನಗರ ಬಸ್ ಮಾಲೀಕರುಗಳ ಹಿತವನ್ನೂ ಸಹ ಗಮನದಲ್ಲಿಡಲಾಗುವುದೆಂದೂ ಹೇಳಿದರು

ಒಡೆಯರಾದ ನಿಮ್ಮ ಶರಗತಿಯಂತೆ ಎತ್ತುಗಳನ್ನು ಕೊಳ್ಳಲು ೪೦೦ ರೂ ಗ್ರಾಂಟು ಕೊಡಬೇಕೆಂಬ ಅಂಕೆಗೆ ಉತ್ತರವಾಗಿ, ಈ ಯೋಜನೆ ಬಹಳ ಅಗಾಧವಾದುದು. ಕಾಲೋನಿ ಸಿಸ್ಟಮ್ ನಂತೆ ಹರಿಜನರು ಇದ್ದದ್ದು ಆಕ್ಷಿಂದ ಅನಾನುಕೂಲವಾಗಿ ಬೇರೆ ಕಡೆ ಹೋದಾಗ ಮಾತ್ರ ಸರ್ಕಾರ ಪರಿಶೀಲಿಸುತ್ತದೆಂದು ಶ್ರೀ ಚೆನ್ನಿಗರಾಮಯ್ಯನವರು ತಿಳಿಸಿದರು

ರೇಷ್ಮೆ ವ್ಯಾಪಾರದ ಸಹಕಾರ ಸಂಘವೊಂದನ್ನು ಏರ್ಪಾಡು ಮಾಡಿಕೊಡಬೇಕೆಂಬ ಅಂಕೆಗೆ ಉತ್ತರವಾಗಿ ಶ್ರೀ ಪ. ಮಡಿಯವರು ಈ ವಿಷಯವು ಸರ್ಕಾರದ ಗಮನದಲ್ಲಿದೆಯೆಂದೂ ರೇಷ್ಮೆ ಜವಳಿಯ ಸಲಹೆಯನ್ನು ಸಹ ಪರಿಶೀಲಿಸಲಾಗುವುದೆಂದೂ ಹೇಳಿದ

ಪ್ರತಿ ಪೌಲ್ಟ್ರಿಗೂ ಪ್ರತಿ ವರ್ಷವೂ ೫೦೦೦ ರೂ ಗ್ರಾಂಟ್ ಕೊಡಬೇಕೆಂಬ ಅಂಕೆಗೆ ಉತ್ತರವಾಗಿ ಪಟ್ಟಣಗಳ ಅಭಿವೃದ್ಧಿಗಾಗಿ ೧೫ ಲಕ್ಷ ರೂ ಖರ್ಚುಮಾಡಲಾಗಿದೆಯೆಂದೂ ಇನ್ನು ಮೇಲೆ ಕೊಡುವುದು ಬಹಳ ಸುಲಭವೆಂದೂ ಆದರೆ ಸರ್ಕಾರವು ಆಯಾಯಾ ಪೌರಸಭೆಯ ಹಣಕಾಸಿನ ಸ್ಥಿತಿಯನ್ನು ನೋಡಿ ಹೆಚ್ಚಿಗೆ ಸಹಾಯ ಮಾಡುವುದೆಂದೂ ಶ್ರೀ ಚೆನ್ನಿಗರಾಮಯ್ಯನವರು ತಿಳಿಸಿದರು.

ದೀಪಾವಳಿ ಉಡುಪುಗಳು

ತೀರಾ ಕಡಿಮೆ ಬೆಲೆಗೆ ಅಂದವಾದ ಉಡುಪುಗಳು ನಮ್ಮಲ್ಲಿ ಸಿಕ್ಕುತ್ತವೆ ಒಂದು ಬಾರಿ ದಯಮಾಡಿ ನೋಡಿರಿ

ಗೃಹಲಕ್ಷ್ಮೀ ಸ್ಟೋರ್ಸ್

ಅಂಗಡಿ ಬೀದಿ, ಕೊಳ್ಳೇಗಾಲ

ನಾಡ ಹಬ್ಬ

ಮೈಸೂರು ೨೧

ನಾಳೆ ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ನಾಡ ಹಬ್ಬವನ್ನು ಆಚರಿಸಲಾಗುವುದು. ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಜಿನರಾಜ ಹೆಗ್ಗಡೆ, ಮತ್ತು ಕೆ ವಿ ಪುಟ್ಟಪ್ಪನವರ ಭಾಷಣ ಮಾಡುವರು

ಸತ್ಕಾರ ಕೂಟ

ಮೈಸೂರು ದಸರಾ ವಸ್ತು ಪ್ರದರ್ಶನದ ಅಂಗವಾಗಿ ನಿನ್ನೆ ಬೆಳಿಗ್ಗೆ ಅಖಿಲ ಭಾರತ ಪ್ರದರ್ಶನಗಾರರ ಸಂಘದವರ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ವಿದ್ಯಾ ಸಚಿವರಾದ ಶ್ರೀ ಹೆಚ್ ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಫೋಟೋ ಮತ್ತು ಉಪಹಾರಗಳಾದ ನಂತರ, ಸಂಘದ ಅಧ್ಯಕ್ಷರಾದ ಶ್ರೀ ಪ . ಎಲ್ ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಚಂದ್ರಬಿಂಗ ದೇವಿ ಸಹೋದರಿಯರ ಸುಶ್ರಾವ್ಯವಾದ ಸಂಗೀತ ನಡೆಯಿತು.

ನೋಟುಗಳನ್ನೂ ಬೈಸಿಕಲ್ಲನ್ನೂ ಕದ್ದ

ನಿನ್ನೆ ಮಧ್ಯಾಹ್ನ ೧೨ ೩೦ ಗಂಟೆ ಸಮಯದಲ್ಲಿ ಚಾಮರಾಜಪೇಟೆ ಬೀಡಾ ಅಂಗಡಿಯ ಹೊರಗಡೆ ಒಂದು ನೋಟಿನ ಬಂಡಲೂ ಒಂದು ಸೈಕಲ್ಲನ್ನೂ ಕದ್ದು ಸೈಕಲ್ ನಲ್ಲಿ ಭುಜಗನ ಎಂಬುವರು, ಕೈಯಲ್ಲಿ ನೋಟುಗಳೂ ಇದ್ದ ವಿಷಯ ಪೋಲೀಸರಿಗೆ ಗೊತ್ತಾಯಿತು ಕೂಡಲೆ ಅವನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳಿಸಿ ಕೊಡಲಾಯಿತು

ಗೋವಧೆ ನಿಂತಿತು

ಕೊಳ್ಳೇಗಾಲ ೧೯

ಈ ಪ್ರದೇಶದಲ್ಲಿ ಅನೇಕ ವರ್ಷಗಳಿಂದಲೂ ನಡೆಯುತ್ತಿದ್ದ ಗೋವಧೆಯನ್ನು ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಪ್ರಭುವಪ್ಪನವರು, ಶ್ರೀ ಹರಿಜನ ನಾಯಕರ ಮತ್ತು ಪೋಲೀಸರ ಸಹಾಯದಿಂದ ನಿಲ್ಲಿಸಿದ್ದಾರೆ

Edited printed and published by A.N. Nagarajan at the Sadhvi Press D Subbaiah Road Mysore

ವಾಚನಾಲಯ

ನಂಜನಗೂಡು ೧೯

ಈ ಊರಿನ ವಾಚನಾಲಯವನ್ನು ಪತ್ರ ಸರ್ಕಾರದ ನಿಮಿತ್ತ ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕ್ ಕಟ್ಟಡಕ್ಕೆ ಬದಲಾಯಿಸಿದೆ, ಬ್ಯಾಂಕಿನ ಮ್ಯಾನೇಜರ್ ಕಟ್ಟಡಯವರು ವಾಚನಾಲಯದ ಮೇಲ್ವಿಚಾರಣೆಯನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದಾರೆ

ಮೇಲ್ಕಂಡ ಬ್ಯಾಂಕಿನ ೩೬ನೇ ವಾರ್ಷಿಕ ಸಭೆಯು ಈ ತಿಂಗಳು ೧೧ನೇ ತಾರೀಖು ಶ್ರೀ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮುಂದಿನ ಸಾಲಿಗೆ ನಿಂತಿದ್ದ ಗಣನ ಉಮೇದುವಾರರು ಸರ್ವಾನುಮತದಿಂದ ಸರ್ವಸಮ್ಮತವಾಗಿ ಆಯ್ಕೆಯಾದರು

ಕೆಲವು ದಿನಗಳಹಿಂದೆ ಭಾರಿಮಳೆ ಬಿದ್ದಾಗ ದೀಪದ ಕಂಬದಿಂದ ವಿದ್ಯುಚ್ಛಕ್ತಿಯ ಭೂಮಿಗೆ ಇಳಿದ ಸುಮಾರು ೪೦... ಬೆಲೆ ಬಾಳುವ ಹೋರಿಗೆ ತಗಲಿದು ಮೃತಪಟ್ಟಿತು ಮುಂದೆ ಈ ತೊಂದರೆಗಳು ಸಂಭವಿಸದಂತೆ ಇಲಾಖೆಯವರು ನೋಡಿಕೊಳ್ಳಬೇಕಾಗಿದೆ.

ಬೆಳಗಿನ ಆಟಗಳು

೨೧-೧೦-೪೮ ನೇ ಶುಕ್ರವಾರದಿಂದ

4 ದಿನಗಳು ಮಾತ್ರ

ಮಹೊಬತ್-ಕಿ-ಜೀತ್

ಪಾತ್ರ:-ನಾಡಿಯಾ, ನವೀನ ಚಂದ್ರ, ಅಗಾ ಪತ್ತಿರ

ಒಲಂಪಿಯಾ ಟಾಕೀಸ್

ಬೆಳಗಿನ ಆಟಗಳು

.2—10- 48ನೇ ಶುಕ್ರವಾರದಿಂ

4 ದಿನಗಳು ಮಾತ್ರ

ಕರ್ನಾಟಕ ರವರ

- ನಮಸ್ತೆ

ಪಾತ್ರ - ವಾಸ್ತಿ, ಪ್ರತಿಮಾ ದಾಸ ಗುಪ್ತ, ಜಗದೀಶ್, ಮುಕ್ರಿ ಶರಮ ಸಂಗೀತ ಸೌಷಾದ್

ಪ್ರಭಾ ಪಿಕ್ಚರ್ ಹೌಸ್

ಅನೋಘವಾದ ೩ ನೇ ವಾ

23—10-48ನೇ ಶುಕ್ರವಾರದಿಂ

ಪ್ರತಿ ದಿನ ಮೂರು ಆಟಗಳು

ಕರ್ನಾಟಕದ-ಸಂಗೀತ-ಸಾಗರ

ದರ್ದ್

ಪಾತ್ರ ಮುನವರ್ ಸುಲ್ತಾನ, ಸುರಯ್ಯ ಶ್ಯಾಮ ಬಾನು ಮುಂತಾದವರು

ಒಲಿಂಪಿಯಾ ಟಾಕೀಸ್

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ - ರಾಮಬಾಣ

ಮಹಾ ಸುಗಂಧರಾಜ ತೈಲ.—)

" ಚಂದನಾದಿ ತೈಲ:—)

" ಭೃಂಗಾಮಲಕ ತೈಲ.—)

— ತಲೆಗೆ ಹಾಕಲು ಉತ್ತಮ ಆಯುರ್ವೇದ ತೈಲಗಳು

ಪಂಚಾಮೃತ— ಮಲೇರಿಯಾ ರೋಗಗಳಿಗೆ ಸಿದ್ಧ ಸಂಜೀವಿನಿ.

ಮಹಾಕೇಶತೈಲ —ತಲೆ ಕೂದಲು ಬೆಳೆಸಿಕೊಳ್ಳುವುದಕ್ಕೂ ಆರೋಗ್ಯಕ್ಕೂ ಯೋಗ್ಯವಾದ ಉತ್ತಮ

ಫ್ರೀ ಟ್ರಿಪಿಲ್ ಶೀಷೆ

ಮೈಸೂರು ಆಯುರ್ವೇದಿಕ್ ಫಾರ್ಮಸಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ರಾಜಕಮಲ್ ಟಾಕೀಸ್

23-10-48ರಿಂದ :: ಅನೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಫಿಲ್ಮಿಸ್ತಾನ್ ಕಂಪೆನಿಯವರ ದೋ ಭಾಯ್

(ಹಿಂದಿ)

ತಾರಾಗಣ.— ಕಾಮಿನಿ ಕೌಶಲ್, ಉಲ್ಹಾಸ್

೨೬ ಮತ್ತು ೨೭ ರಾತ್ರಿ — ಎರಡು ದಿನಗಳು ಮಾತ್ರ

- ರಾಮ ಜೋಷಿ

MORNING SHOWS From 23 10 948

For 4 days only

DAVID COPPERFIELD

With:—W. C Fields, Lionel Barrymore Madge Evans

ಕ್ರೋ.ಸಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೬] ಶುಕ್ರವಾರ ೨೨-೧೦-೪೮ [ಸಂಚಿಕೆ ೯೭

ಜೈಹಿಂದ್ ಘೋಷಣೆಗೆ ಪಾಕಿಸ್ತಾನದ ನಿರ್ಬಂಧ

ಮೈಸೂರಿನಲ್ಲಿ [illegible] ಶಿಕ್ಷಣದ ಕಾಲೇಜು

[illegible] ಸಭೆಯಲ್ಲಿ ವಿದ್ಯಾಸಚಿವರ ಹೇಳಿಕೆ

ಮೈಸೂರು ೨೨

[illegible] ಪ್ರ|| ಸಭೆಯಲ್ಲಿ ಅಂಕೆಗಳ [illegible] ಚರ್ಚೆ ನಡೆಯಿತು.

[illegible] ಹೆಂಗಸರಿಗೆ ಗೃಹ ಕೈಗಾರಿಕಾ ಶಿಕ್ಷಣ [illegible] ಕೊಡಲು ಸಂಸ್ಥಾಪಕರಲ್ಲಿ ಮಹಿಳಾ [illegible] ಯೊಬ್ಬರನ್ನೂ ಮತ್ತು ಸ್ತ್ರೀ [illegible] ಮಹಿಳಾಧಿಕಾರಿಗಳನ್ನು ನೇಮಿಸ [illegible] ಅವರಿಗೆ ಸಚಿವ ಶ್ರೀ ಕೆ ಟಿ ಭಾ[ಷ್ಯಂ]ರವರ ಉತ್ತರ ಕೊಟ್ಟು, ಈ ಬಗ್ಗೆ ಕ್ಲೆ [illegible] ಕಾಲಾವಧಿಯವರು ಸೂಕ್ತ ಕಾರ್ಯ [illegible] ಗೊಳ್ಳುವರೆಂದು ತಿಳಿಸಿದರು ಮಹಿ[ಳಾ] [ಅ]ಧಿಕಾರಿಯನ್ನು ನೇಮಿಸಲು ಸಾ[ಧ್ಯವಿಲ್ಲ]ವೆಂದೂ, ಅವರಿಗಾಗಿ ಒಂದು ವೃತ್ತಿ [illegible] ವನ್ನೂ ಸ್ಥಾಪಿಸಲು ಮತ್ತು [illegible] ಕಾರ್ಮಿಕರ ಹಿತರಕ್ಷಣಾಧಿಕಾರಿ [illegible] ನೇಮಿಸಲು ಸರ್ಕಾರವು ಶಕ್ಯ [illegible] ದೆಯೆಂದು ಹೇಳಿದರು.

[illegible] ತಾಲ್ಲೂಕಿನಲ್ಲಿ ಸಕ್ಕರೆ ಕಾ[ರ್ಖಾನೆ]ಯನ್ನು ಸ್ಥಾಪಿಸಬೇಕೆಂಬ ಅಂಕೆಗೆ ಶ್ರೀ ಹೆಚ್ ಸಿದ್ದಯ್ಯನವರು ಉತ್ತ[ರ ಕೊ]ಟ್ಟು ಈಗಾಗಲೇ ಶಿವಮೊಗ್ಗದಲ್ಲಿ ಸ[ಕ್ಕರೆ ಕಾ]ರ್ಖಾನೆ ತೆರೆಯಲು ಸಿದ್ಧತೆ ನಡೆದಿ[ರುವು]ದೂ ಹೊಸದಾಗಿ ಕಾರ್ಖಾನೆ ತೆರೆಯ[ಲು ಅವಶ್ಯ]ವಿಲ್ಲವೆಂದೂ ತಿಳಿಸಿದರು

[illegible] ರಿಗೆ ರಿಟಿರ ಕಂಬಿಗಳು, ಹೆಂಚ್ ಹೀ[illegible] ಮತ್ತು ಸಿಮೆಂಟ್‌ಗಳನ್ನು ಸಹ[ಕಾರ] ಸಂಘಗಳ ಮೂಲಕ ಒದಗಿಸಬೇಕೆಂ[ಬುದ]ಕ್ಕೆ ಸಚಿವ ಶ್ರೀ ಕೆ ಟಿ ಭಾಷ್ಯಂರವ[ರು ಉ]ತ್ತರ ಕೊಟ್ಟು ಸೂಕ್ತವಾದ ಕಾರ್ಯ [ಕೈ]ಗೊಳ್ಳುವುದಾಗಿ ತಿಳಿಸಿದರು.

[illegible] ದೇವನ ಕೋಟೆಯಲ್ಲಿ ಕನ್ನಡ [illegible] ವಿದ್ಯಾಭ್ಯಾಸವನ್ನು ಜಾರಿಗೆ ತ[ರುವ] ಅಂಕೆಗೆ ವಿದ್ಯಾ ಸಚಿವರು ಉ[ತ್ತರ ಕೊಟ್ಟು] ಸ್ಥಾನದಲ್ಲಿ ಈಗಾಗಲೇ [illegible] ಕಡ್ಡಾಯದ ವಿದ್ಯಾಭ್ಯಾಸವ[ನ್ನು ಜಾರಿ]ಗೆ ತರಲಾಗುವುದೆಂದೂ ಇತರ [illegible] ಲಾಗುವುದೆಂದೂ ತಿಳಿಸಿದರು. [illegible] ಪ್ರದೇಶಗಳಲ್ಲಿ ಮಾದ[ರಿ] [illegible] ಸ್ಕೂಲ್‌ಗಳನ್ನು ಸ್ಥಾಪಿಸ[ುವ] ಅಂಕೆಗೆ ವಿದ್ಯಾ ಸಚಿವರು ಉತ್ತ[ರ ಕೊಟ್ಟು] ಸರ್ಕಾರವು ವಿದ್ಯಾಭ್ಯಾಸದ ಪುನ[ರ್ರಚನೆ] ವಿಷಯವನ್ನು ಪರಿಶೀಲಿಸುತ್ತಿ[ರುವು]ದು, ಸಾಧ್ಯವಾದ ಕಡೆಗಳಲ್ಲಿ [illegible] ಸ್ಕೂಲುಗಳನ್ನು ತೆರೆಯುತ್ತಿ[ರುವು]ದು, ಅನೇಕ ಹಳ್ಳಿಗಳಲ್ಲೂ ಜಿಲ್ಲಾ [ಬೋರ್ಡು]ಗಳು ಸ್ಕೂಲು ತೆರೆಯಲು [illegible] ಅನುಮತಿ ಕೊಟ್ಟಿರುವುದಾಗಿ [ತಿಳಿ]ಸಿದರು. ಮೂಲ ಶಿಕ್ಷಣವನ್ನು [illegible] ದಲ್ಲಿ ಜಾರಿಗೆ ತರಲು, ಕೆಲವು ಉ[ಪಾಧ್ಯಾ]ಯರುಗಳಿಗೆ ಶಿಕ್ಷಣ ಕೊಡಲಾಗಿದೆ [illegible] ಬೆಂಗಳೂರಿನ ಬಳಿ ಸುಮಾರು [illegible] ಉಪಾಧ್ಯಾಯರುಗಳಿಗೆ ವ [illegible] [ಕೊ]ಡಲು ಸರ್ಕಾರವು ಯೋಚಿಸಿದೆ [illegible] ಶೀಘ್ರದಲ್ಲೇ ಮೈಸೂರಿನಲ್ಲಿ ಮೂ[ಲ ಶಿಕ್ಷಣ] [illegible] ಕಾಲೇಜನ್ನು ತೆರೆಯಲು ಸ[ರ್ಕಾರ] ಯೋಚಿಸುತ್ತಿದೆಯೆಂದೂ ಹೇಳ[ಿದರು].

[ದೀಪಾ]ವಳಿ ಉಡುಪುಗಳು

[illegible] ಬೆಲೆಗೆ ಅಂದವಾದ [illegible] ನಮ್ಮಲ್ಲಿ ಸಿಕ್ಕುತ್ತವೆ [illegible] ದಯವಿಟ್ಟು ನೋಡಿರಿ.

[illegible] ಲಕ್ಷ್ಮೀ ಸ್ಟೋರ್ಸ್

[illegible] ರಸ್ತೆ, ಕೊಳ್ಳೇಗಾಲ

ವರಲಕ್ಷ್ಮೀ ಸಂಗೀತ ಮಂದಿರದ ವಾರ್ಷಿಕೋತ್ಸವ

ಮೈಸೂರು ೨೨

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ದ್ವಿತೀಯ ವ[ಾರ್ಷಿಕೋ]ತ್ಸವವು ಮೊನ್ನೆ [illegible] ಸಚಿವ ಶ್ರೀ ಕೆ ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಮೈಸೂರು ಸಹೋದರರಿಂದ ಸ್ವಾಗತ ಗೀತೆಯಾದನಂತರ, ಮಂದಿರದ ಅಧ್ಯಕ್ಷರಾದ ರಾಜಸೇವಾಸಕ್ತ ಆರ್. ಒಡೆಯರ್ [illegible] ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಭಾಷ್ಯಂರವರು ಭಾಷಣ ಮಾಡಿ ಶ್ರೀ ಮೈಸೂರು ಸಹೋದರರ ಕಲಾ ಸೇವೆಯನ್ನು ಶ್ಲಾಘಿಸಿ, ಮಂದಿರವು ಇನ್ನೂ ಹೆಚ್ಚಿನ ಪುರೋಭಿವೃದ್ಧಿ ಹೊಂದಲೆಂದು ಹಾರೈಸಿದರು. ಸಂಗೀತ ಮತ್ತು ಇತರ ಕಲೆಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡುವರೆಂದೂ ತಿಳಿಸಿದರು. ಸಚಿವ ಶ್ರೀ ವಿ. [illegible] ಸುಬ್ಬರಾವ್ ಶೆಟ್ಟಿ ಭಾಷಣ ಮಾಡಿ ಮೈಸೂರು ಸಹೋದರರನ್ನು ಅಭಿನಂದಿಸಿದರು.

ನೇತುವೆ ಆರಂಭೋತ್ಸವಕ್ಕೆ ಆಹ್ವಾನ

ಇದೇ ತಿಂಗಳು ೨೪ನೇ ತಾರೀಕು ಪ್ರಭುಗಳು ನೆರವೇರಿಸಲಿರುವ ಇವ [illegible] ಎಲ್ಲಾ ಹೊಳೆ ಸೇತುವೆಯ ಮತ್ತು ಗುಂಡ್ಲುಪೇಟೆ ತಾಲ್ಲೂಕು ಮಾಟಾಪುರ[illegible] ದಲ್ಲಿ ಗುಂಡ್ಲು ನದಿ ಸೇತುವೆಯ ಉದ್ಘಾಟನಾ ಮಹೋತ್ಸವಕ್ಕೆ ಮೈಸೂರು ಜಿಲ್ಲೆಯ ಎಲ್ಲ ಪ್ರಜೆಗಳೂ ದಯಮಾಡಿಸಬೇಕೆಂದು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಎಚ್ ಎಂ ಚನ್ನಬಸಪ್ಪನವರು ಈ ಮೂಲಕ ಪ್ರಾರ್ಥಿಸುತ್ತಾರೆ.

ಪ್ರಕಟಣೆ

ಮೈಸೂರು ನಗರಾಭಿವೃದ್ಧಿ ಸಮಿತಿ ಕಛೇರಿ

ಸರಸ್ವತಿಪುರಂ ಬಡಾವಣೆಯಲ್ಲಿ ಹೊಸದಾಗಿ ವಿಂಗಡಿಸಿರುವ ಕೆಲವು ಬಂಗ್ಲೋ ಮತ್ತು ಕಾಟೇಜು ಸೈಟುಗಳನ್ನು ಇದೇ ಮಾಹೆ ೨೩ ಮತ್ತು ೨೪ ನೇ ತಾರೀಕು ಬೆಳಿಗ್ಗೆ ೯ ಗಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ಪೂರ್ತಿ ವಿವರಗಳನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಪಿ ಸೀತಾರಾಮಯ್ಯ,

ಛೇರ್ಮನ್

ಆಹಾರದ ಹತೋಟಿಗೆ ಕಾಂಗ್ರೆಸ್ ಪಕ್ಷದ ಬೆಂಬಲ

ಮೈಸೂರು ೨೨

ಪ್ರ|| ಪ್ರ|| ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ನೆನ್ನೆ ದಿವಸ ಸೇರಿ ಮೈಸೂರು ಸರ್ಕಾರದವರು ಆಹಾರ ಹತೋಟಿಯನ್ನು ಮುಕ್ತಿಗೊಳಿಸುವ ನೀತಿಗೆ ತನ್ನ ಬೆಂಬಲ ಕೊಡಬೇಕೆಂದು ತೀರ್ಮಾನಿಸಿರುವುದಾಗಿ ತಿಳಿದುಬಂದಿದೆ. ಆಹಾರದ ಬಗ್ಗೆ ಸರ್ಕಾರದವರು ಇನ್ನು ಮುಂದೆ ಕೆಳಗೆ ಕಂಡ ನೀತಿಯನ್ನು ಅನುಸರಿಸುವರೆಂದೂ ಹೇಳಲಾಗಿದೆ. —

ನಗರ ಪ್ರದೇಶಗಳಲ್ಲಿ ಕಟ್ಟುನಿಟ್ಟಾಗಿ ಪಡಿತರವನ್ನು ಜಾರಿಗೆ ತರುವುದು, ಕದಾಯವನ್ನು ಧಾನ್ಯ ರೂಪದಲ್ಲಿ ವಸೂಲು ಮಾಡುವುದು, ಕಾಳಸಂತೆ ಮತ್ತು ಶೇಖರಣೆಯನ್ನು ತಡೆಗಟ್ಟಲು ಬೇರೆ ಪ್ರದೇಶವನ್ನು ನಿರ್ಮಿಸುವುದು ಧಾನ್ಯಗಳ ಮಾಂಟದ ಸ [illegible] ಬೆಳೆಯನ್ನು ವ್ಯವಸಾಯಗಾರರಿಂದ ಕೊಳ್ಳುವ ಬೆಲೆಯನ್ನು ನಿಗದಿ ಮಾಡುವುದು.

ರೈಲ್ವೆ ನಿಲ್ದಾಣಗಳಲ್ಲಿ ರೇಡಿಯೋ ವ್ಯವಸ್ಥೆ

ಪ್ರಯಾಣಿಕರ ಅನುಕೂಲಕ್ಕಾಗಿ ಮುಖ್ಯವಾದ ರೈಲ್ವೆ ನಿಲ್ದಾಣಗಳಲ್ಲಿ ರೇಡಿಯೋ ಪ್ರಸಾರದ ಮೂಲಕ ರೈಲುಗಳು ಹೋಗುವ ಮತ್ತು ಬರುವ ಕಾಲ, ತಪ್ಪು ನಿಲ್ಲುವ ಪ್ಲಾಟ್‌ಫಾರಂಗಳು ಮುಂತಾದುವನ್ನು ತಿಳಿಸುವ ವ್ಯವಸ್ಥೆಯನ್ನು ಮಾಡಲು ಎಸ್ ಐ ರೈಲ್ವೆಯವರು ಆಲೋಚಿಸುತ್ತಿರುವುದಾಗಿ ತಿಳಿದುಬಂದಿದೆ. ಪ್ರಯೋಗಾರ್ಥವಾಗಿ ಈ ಯೋಜನೆಯನ್ನು ಮೊದಲು ತಿರುಚನಾಪಳ್ಳಿ ಜಂಕ್ಷನ್ನಿನಲ್ಲಿ ಜಾರಿಗೆ ತರಲಾಗುವುದು. ಈಗಾಗಲೇ ಎಂ ಎಸ್ ಎಂ ರೈಲ್ವೆಯವರು ಕೆಲವು ಕಡೆ ಈ ವ್ಯವಸ್ಥೆಯನ್ನು ಕಲ್ಪಿಸಿರುವರೆಂದೂ ಗೊತ್ತಾಗಿದೆ.

" ಜೈ ಹಿಂದ್ " ಘೋಷಣೆಗೆ ಅಡ್ಡಿ

ಕರಾಚಿಯ ಒಬ್ಬ ಹಿಂದೂ ಹಿರಿಯರು [illegible] ಬೆಟಿಂಗ್ [illegible] ಸಮಾರಂಭದಲ್ಲಿ "ಜೈ ಹಿಂದ್" ಎಂದು ವಂದ್ರಿಸಿಕೊಂಡಿದ್ದಕ್ಕಾಗಿ ಪೋಲೀಸರು ಅವರನ್ನು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಿರುವರೆಂದು [illegible] ಅವುಗಳನ್ನು ಬಿಟ್ಟುಕೊಟ್ಟ [illegible] ರಾಂದರವನ್ನು ಕನಿಷ್ಠ ನಡೆಸಿ ಎಚ್ಚರಿಕೆ ಕೊಟ್ಟು ಬಿಟ್ಟು ಬಿಡಲಾಯಿತೆಂದು ಹೇಳಲಾಗಿದೆ.

ಗಾಂಧಿ ಜಯಂತಿ

ಮೈಸೂರು ೨೨

ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ನಿನ್ನೆ ಸಂಜೆ ಮಹಾತ್ಮಾ ಗಾಂಧಿ ಜಯಂತಿ ಮತ್ತು ಅವರ ಭಾವಚಿತ್ರ ಅನಾವರಣೋತ್ಸವವು ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಎಂ ವಿ ದೊರೆಸ್ವಾಮಿ ಅಯ್ಯಂಗಾರರು ಭಾಷಣ ಮಾಡಿ ವಿದ್ಯಾರ್ಥಿಗಳು ಸಾಮಾನ್ಯ ಜನರಲ್ಲಿ ಗಾಂಧೀಜಿಯವರ ತತ್ವಗಳ ಪ್ರಚಾರಕರಾಗಿ ನಿಲ್ಲಲು ಶ್ರಮಿಸಬೇಕೆಂದು ತಿಳಿಸಿದರು.

ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡಿ ಗಾಂಧೀಜಿಯವರ ಪ್ರಾರ್ಥನೆಯ ಅರ್ಥವನ್ನು ವಿವರಿಸಿ ವಿದ್ಯಾರ್ಥಿಗಳು ಅದನ್ನು ಅನುಷ್ಠಾನಕ್ಕೆ ತರಬೇಕೆಂದು ತಿಳಿಸಿದರು. ಮಹಾತ್ಮರು ದೈವಾಂಶಸಂಭೂತರೆಂದೂ, ದೇವ ಮಂದಿರಗಳಂತೆ ಇನ್ನು ಮುಂದೆ ಮಹಾತ್ಮ ಗಾಂಧಿಯವರ ಮಂದಿರಗಳು ಸ್ಥಾಪಿತವಾಗುವುದರಲ್ಲಿ ಸಂದೇಹವಿಲ್ಲವೆಂದೂ ಅವರು ಹೇಳಿದರು.

ಶ್ರೀ ಲಕ್ಷ್ಮಣ್ ಮತ್ತು ಪಾರ್ಟಿಯವರ ಸಂಗೀತ ಮತ್ತು ವಂದನಾರ್ಪಣೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ದಕ್ಷಿಣ ಕೊರಿಯಾದಲ್ಲಿ ದಂಗೆ

ದಕ್ಷಿಣ ಕೋರಿಯಾದ ಅನೇಕ ಆಗ್ನೇಯ ಪ್ರದೇಶದಲ್ಲಿ ಸುಮಾರು ೫೦೦೦ ಮಂದಿ ಕಮ್ಯೂನಿಸ್ಟರು ಅಲ್ಲಿ ಸ್ಥಾಪಿತವಾಗಿರುವ ರಿಪಬ್ಲಿಕ್ ಸರ್ಕಾರದ ವಿರುದ್ಧವಾಗಿ ದಂಗೆ ಎಬ್ಬಿಸಿರುವರೆಂದು ವರದಿಯಾಗಿದೆ. ಅವರು ಯೋಸು ಮತ್ತು ಸುಂಚೋನ್ ಎಂಬ ಎರಡು ಪಟ್ಟಣಗಳನ್ನು ವಶಪಡಿಸಿಕೊಂಡು ಅವರು ಉತ್ತರ ಕೊರಿಯಾದಿಂದ ದಕ್ಷಿಣ ಕೋರಿಯಕ್ಕೆ ಆಗಮಿಸಿದ ಕಮ್ಯೂನಿಸ್ಟ್ ಕೊಲೆ, ಲೂಟಿ ಮುಂತಾದ ವಿನಾಶ ಕೃತ್ಯಗಳಲ್ಲಿ ತೊಡಗಿರುವರೆಂದೂ ವರದಿಯಾಗಿದೆ. ಅಲ್ಲದೆ ದಕ್ಷಿಣ ಕೋರಿಯಾದ ಪ್ರಧಾನಿ ಡಾ|| ಸಿಂಗ್‌ಮನ್ ರೀ ಎಂಬುವರನ್ನು ಕೊಲೆ ಮಾಡಲೂ ಪ್ರಯತ್ನಗಳು ನಡೆಯುತ್ತಿರುವುದಾಗಿ ಗೊತ್ತಾಗಿದೆ.

ಫ್ರೆಂಚ್ ಭಾರತದ ಜನಮತ ಗಣನೆಯು ಇದೇ ತಿಂಗಳು ೨೪ನೇ ತಾರೀಕು ನಡೆಯುವ[ದೆಂದು] ನಿರ್ಧರಿಸಲಾಗಿದೆ ಜನಮತಗಣನೆಯನ್ನು ಮುಂದಕ್ಕೆ ಹಾಕಬೇಕೆಂಬ ಬಗ್ಗೆ ಅಲ್ಲಿನ ಮೇಯರು ಮಂತ್ರಿಗಳಿಗೂ ಮತ್ತು ಗವರ್ನರಿಗೂ ಭಿನ್ನಭಿಪ್ರಾಯವುಂಟಾಗಿ ಆರೋಗ್ಯ ಸಚಿವರು, ಕಾರ್ಮಿಕ ಸಚಿವರೂ ಮತ್ತು ನ್ಯಾಯ ಸಚಿವರು ತಮ್ಮ ಪದವಿಗೆ ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ.

ಕಂಟೆಂಪ್ಟ್ ಮೊಕದ್ದಮೆಯಲ್ಲಿ ಪೊಲೀಸ್ ಅಧಿಕಾರಿಗಳ ಕ್ಷಮಾಪಣೆ

ಬೆಂಗಳೂರು ೨೨

ನಿನ್ನೆ ಹೈಕೋರ್ಟಿನಲ್ಲಿ ಮಂಡ್ಯದ ಜಿಲ್ಲಾ ಪೊಲೀಸ್ ಅಧಿಕಾರಿಗಳಾದ ಶ್ರೀ [illegible] ಪಟ್ಟಾಭಿರಾಮಯ್ಯನವರ ಮೇಲೆ ಅಲ್ಲಿನ ನಿವಾಸಿ ಶ್ರೀ ಹೆಚ್ ಆರ್ [illegible] ಯ್ಯನವರು ಹೂಡಿದ್ದ ಕಂಟೆಂಪ್ಟ್ ಕೇಸಿನ ಮುಕ್ತಿ ಆಪಾದಿತರು ಲಿಖಿತ [illegible] ಕ್ಷಮಾಪಣೆಯನ್ನು ಅಂಗೀಕರಿಸಿ, ಶ್ರೀ ನ್ಯಾಯಾಧೀಶರು ಮುಂದಿನ ಕ್ರಮವನ್ನು ಜರುಗಿಸುವುದು ಅನಾವಶ್ಯಕವೆಂದು ಖುಲಾಸೆ ಮಾಡಿದರು.

ಹೈದರಾಬಾದಿನ ಮುಸ್ಲಿಮರು ಕಾಂಗ್ರೆಸ್ಸಿಗೆ

ಹೈದರಾಬಾದಿನ ಪ್ರಮುಖ ಮುಸ್ಲಿಮರು ನವಾಬ್ ಬಾಕರ್ ಅಲಿ ಮಿರ್ಜಾರವರ ಅಧ್ಯಕ್ಷತೆಯಲ್ಲಿ ಮೊನ್ನೆ ಸಭೆ ಸೇರಿ ಸಂಸ್ಥಾನದ ಮುಸ್ಲಿಮರು ಅಲ್ಲಿನ ಕಾಂಗ್ರೆಸ್ಸಿಗೆ ಸೇರಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಹೊಸ ಜವಳಿ ಅಂಗಡಿ .. ಶ್ರೇಷ್ಠವಾದ ಬೆರ

ಮೈಸೂರು ಸಿಲ್ಕು
ಬೆಂಗಾಲ್ ಸಿಲ್ಕು
ಫ್ರೆಂಚ್ ಸಿಲ್ಕು
ನಾನಾ ವಿಧವಾದ ಸೀರೆಗಳು ಈಗ ತಾನೆ ಬಂದಿವೆ

ವಿಜಯಲಕ್ಷ್ಮಿ ವಿಲಾಸ್
ಅರಮನೆ ರೋಡ್, ಶಿವರಾಂಪೇಟೆ ಮೈಸೂರು.

Office of the Secretary,
Dasara Exhibition Committee,
Mysore 21st October 1948

NOTICE

It is hereby notified for the information of the public that the temporary structures (excluding Zinc Sheets) put up by the Exhibition Authorities in the Jeevanarayanakatte and in the Exhibition Main buildings will be sold by PUBLIC AUCTION on Sunday the 24th October 1948, at 10 a m on the spot Sale is subject to confirmation by the Exhibition Authorities Intending bidders may inspect the materials on the spot.

V A. ANNOO MUDALIAR, Secretary.
Exhibition Committee,

SRI GAYATRI TALKIES
Evening Shows on 22—10—48 only.
Life of Emile Jola
With:—Paul Muni

ಶ್ರೀ ಗಾಯತ್ರೀ ಟಾಕೀಸ್
ತಾ|| ೨೩-೧೦-೪೮ ರಿಂದ :: ಪ್ರತಿ ದಿನ ೩ ಆಟಗಳು

M-G-M's BIGGEST, GAYEST TECHNICOLOR MUSICAL!

- ಫಿಯಸ್ಟಾ -
(ವರ್ಣರಂಜಿತ ಚಿತ್ರ)

Morning Shows at 10-30 From 22-10.48 For 3 days
The Life of Emile Jola
Starring:—Paul Muni

23-10-48 ರಿಂದ ಅಮೋಘ 3ನೇ ವಾರ ಪ್ರತಿ ದಿನ ಮೂರು ಆಟಗಳು
ಚಾಮುಂಡೇಶ್ವರೀ ಟಾಕೀಸಿನಲ್ಲಿ
—ನರೇಂದ್ರ ಪಿಕ್ಚರ್ಸ್‌ರವರ—
★ ರಾಜಮುಕ್ತಿ ★
ನಟವರ್ಗ:—ಎಂ. ಕೆ. ತ್ಯಾಗರಾಜ ಭಾಗವತರ್, ಭಾನುಮತಿ, ವಿ. ಎನ್. ಜಾನಕಿ ಮುಂತಾದವರು [ತಮಿಳು ಫಿಲಂ]

ದೀಪಾವಳಿ ಪ್ರಯುಕ್ತ
ಸ್ವಂತ ಮಗ್ಗದಿಂದ ತಯಾರಾದ
ಮೈಸೂರು ಸಿಲ್ಕು ಸೀರೆಗಳೂ
ಉತ್ತಮವಾದ ಡಿಸೈನುಗಳಲ್ಲಿ
ಬೆಂಗಾಲ್ ಸಿಲ್ಕ್ ಸೀರೆಗಳೂ
ಮತ್ತು
ಕುಂಭಕೋಣದ ಸೀರೆಗಳೂ
ಬಂದಿವೆ. ದಯವಿಟ್ಟು ಇಂದೇ ಭೇಟಿ ಕೊಡಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ,
ಶಿವರಾಂಪೇಟೆ, ಮೈಸೂರು.

Edited printed and published by A.K. Nagarajan at the Sadhvi Press D Subbaiah Road Mysore.

ತಾ|| 22—10—48 ರಿಂದ :: ಜನಭರಿತ 4 ನೇ ವಾರ

ಇದುವರೆಗೂ ನೋಡದ ಇನ್ನು ಮುಂದೆ ಕಾಣಲಾಗದ
ಕುಮಾರಿ ಕಮಲಳ ಮನೋಹರವಾದ
ರಾಧಾಕೃಷ್ಣ
ದ್ವಿಮುಖ ಪಾತ್ರ ನರ್ತನ,
ಲಲಿತ, ಪದ್ಮಿನಿಯರ
ನಾಗನರ್ತನದ ಸೊಬಗು

ಇದುವರೆಗೂ ಕೇಳದ ಇನ್ನು ಮುಂದೆ ಕೇಳಲಾಗದ
ಡಿ. ಕೆ. ಪಟ್ಟಮ್ಮಾಳ್ ಮತ್ತು
ಪಿ. ಎ. ಪೆರಿಯನಾಯಕಿ ಇವರುಗಳ
ಮಧುರ ಗಾನ
ಎಡೆಯಿಲ್ಲದ ನಕ್ಕು ನಗಿಸುವ
ಸಾರಂಗಪಾಣಿಯ
ಹಾಸ್ಯ

—: ಇವೆಲ್ಲವನ್ನೂ ಪ್ರಭಾ ಮತ್ತು ಗಣೇಶಾ ಟಾಕೀಸುಗಳಲ್ಲಿ:—
ಪ್ರದರ್ಶಿಸಲಾಗುತ್ತಿರುವ ತಮಿಳು ಚಿತ್ರದಲ್ಲಿ ನೋಡಿ ಕೇಳಿ ನಲಿಯಲು ಇಂದೇ ಸುಸಮಯ
★ ಡ್ರೀಮ್‌ಲ್ಯಾಂಡ್ ★
A Tollam Release

23-10-48 ರಿಂದ ಪ್ರಭುದೇವಾ ಟಾಕೀಸ್ ಅಮೋಘ 3ನೇ ವಾರ
★ ರಾಜಮುಕ್ತಿ RAJAMUKTI ★
(ತಮಿಳು)
ಪಾತ್ರ:—ಎಂ. ಕೆ. ತ್ಯಾಗರಾಜ ಭಾಗವತರ್, ಭಾನುಮತಿ, ಜಾನಕಿ

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೨೩-೧೦-೪೮ [ಸಂಚಿಕೆ ೯೮

ನೈಜಾಮರ ಪದಚ್ಯುತಿ ಬಗ್ಗೆ ನಿರ್ಣಯ

...ಕ್ಕಿ ಬೆಲೆಯನ್ನು ...ಚ್ಚಿಸಿರುವ ವಿಷಯ

...ಯಲ್ಲಿ ಅಲ್ಪಾವಧಿ ಪ್ರಶ್ನೆ

ಮೈಸೂರು ೨೩

...ನಿಧಿ ಸಭೆಯಲ್ಲಿ ನಿನ್ನೆ ಪ್ರ... ...ದಲ್ಲಿ ಇನ್ನೂ ಹೆಚ್ಚಿಗೆ ಹೈ... ...ಸ್ತಾಪಿಸುವ ಬಗ್ಗೆ ಅನೇಕ ...ಗಳನ್ನು ಹಾಕಿದರು ಅವುಗ... ...ನಡೆಸಿಕೊಂಡು ಬರುವಂತೆ ...ಗಳಿಗೂ ಮತ್ತು ಖಾಸಗೀ ...ವಾಗಿ ಸಹಾಯ ನೀಡ... ...ದ ನೀತಿಯೆಂದು ವಿದ್ಯಾ... ...ಟೆಕ್ನಿಕಲ್ ಹೈಸ್ಕೂಲು ...ಸಲು ಆಲೋಚನೆ ಇದೆ ...ಕ್ಕೆಗೆ ಇಲ್ಲವೆಂದು ಉತ್ತರ

...ದ ಅಭಾವದಿಂದ ಹೆಚ್ಚಿಗೆ ...ಟ್ಟಲು ಸಾಧ್ಯವಿಲ್ಲವಾದ ದ... ...ಮತ್ತು ದೇವಸ್ಥಾನಗಳ ...ಗಿ ಉಪಯೋಗಿಸಿಕೊಳ್ಳ... ...ಶ್ರೀ ಶಿವಸಂಜಪ್ಪನವ... ...ಮುಖ್ಯಸಚಿವರು ಉತ್ತರವಿತ್ತು ...ದ ಯೋಜನೆಯೂ ಇಲ್ಲವೇ... ...ಒಂದರೆ ಮುಂದೆ ಆಲೋಚಿ... ...ವುದಾಗಿ ತಿಳಿಸಿದರು

...ಲ್ಪಾವಧಿ ಪ್ರಶ್ನೆ

...ದವನ್ನು ಹೆಚ್ಚಿಸಿರುವ ಬಗ್ಗೆ ಶ್ರೀ ...ನಾರಾಯಣಪ್ಪನವರು ಕೇಳಿದ ...ಪ್ರಶ್ನೆಗೆ ಉತ್ತರವಾಗಿ ಹೊ... ...ನಮ್ಮ ಸಂಸ್ಥಾನದ ಬೆಲೆ ...ಗುಣಂತೆ ಮಾಡಲು ಅಕ್ಕಿ... ...ಕೊಟ್ಟಿಸಲಾಯಿತೆಂದೂ ಕಡಿ... ...ಇದ್ದಾಗ ರೈತರಿಂದ ಕೊಂಡು ...ಧಾರಣೆಗೆ ಆಹಾರ ಧಾನ್ಯಗ... ...ಕೃಷಿಕರೂ ರೈತರಿಗೆ ಹೆಚ್ಚಿನ ...ಸಾಧ್ಯವಿಲ್ಲವೆಂದೂ ಕೇಂ... ...ತಿಯ ಸಲಹೆಯನ್ನು ಈ... ...ಲಾಯಿತೆಂದೂ ಆಹಾರ ...ಶ್ರೀ ಗುರುದತ್ತರವರು ಉ...

ಬಹಿರಂಗ ಸಭೆ

...೬-೩೦ ಗಂಟೆಗೆ ಮೈಸೂರು ...ಮೈದಾನದಲ್ಲಿ ಬಹಿರಂಗ ಸಭೆ ... ಸಂಸ್ಥಾನದಲ್ಲಿ ಆಹಾರ ...ಕೊರತೆ ಸಂಬಂಧವಾಗಿ ಪ್ರ... ...ಯಿಸಲ್ಪಾದ ತೀರ್ಮಾನದ ಮೇ... ...ಜರುಗುತ್ತದೆ. ಪ್ರಜಾಪ್ರತಿನಿ... ...ಅನೇಕ ಸದಸ್ಯರು ಭಾಷಣ ಮಾಡು...

VISIT !
Chaya Studio
...ampet, Mysore,
... Convocation
...phs & Pictograph
R...s are reduced
C...s for one Rupee

...s and ANSWERS
of Mysore S. S. L. C.
Public Examination
in Optional Algebra
(...—1948)
apply to
...RAMANYA B.Sc.
...'s Road Mysore
Re 1-0-0

ಪತ್ರಿಕೆಗಳಿಗೆ ನೋಟೀಸು

ಪ್ರ ಪ್ರ॥ ಸಭೆಯಲ್ಲಿ ಪ್ರಶ್ನೆ

ಮೈಸೂರು ೨೩

ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಂದ ಅಲ್ಪಾವಧಿ ಪ್ರಶ್ನೆಗೆ ಉತ್ತರ ಕೊಡುತ್ತ ಕಾಲ ಚಕ್ರ ಪತ್ರಿಕೆಗೆ ನೋಟೀಸು ಕೊಡಲಾಗಿತ್ತೆಂದೂ, ಬೇರೆ ಯಾರಿಗೆ ಇಲ್ಲವೆಂದೂ ಸರ್ಕಾರದವರು ತಿಳಿಸಿದರು. ಕಹಳೆ ಪತ್ರಿಕೆಯವರಿಗೆ ನೋಟೀಸು ಕೊಟ್ಟಮೇಲೆ ಅವರು ಕ್ಷಮಾಪಣೆ ಕೇಳಿದರೆಂದು ತಿಳಿಸಲಾಯಿತು. ಶಾಂತಿ ಪತ್ರಿಕೆಯ ಶ್ರೀ ...ರವರ ಅಕ್ಷೇಪಣೆಯು ಅಂತಿಮ ... ತೆಗೆದುಕೊಳ್ಳಬೇಕಾದ ...ಯ ಕ್ರಮವನ್ನು ಪರಿಶೀಲಿಸಲಾಗುತ್ತಿದೆಯೆಂದೂ ಹೇಳಲಾಯಿತು. ಒಂದೊಂದು ಪತ್ರಿಕೆಯ ಮೇಲೆ ಒಬ್ಬೊಬ್ಬ ಮಂತ್ರಿಗೆ ದ್ವೇಷವಿದೆಯೇ?- ಎಂಬ ಪ್ರಶ್ನೆಗೆ ಅದು ನಿಜವಲ್ಲವೆಂದು ಉತ್ತರ ಬಂದಿತು.

ಸೆಪ್ಟೆಂಬರ್ ೨೭ ನೆಯ ತಾ॥ ಮೊದಲನೇ ಗ್ರೇಡು ಕಾಲೇಜಿನಲ್ಲಿ ಸ್ವಲ್ಪ ಗಲಿಬಿಲಿಯುಂಟಾಯಿತೆಂದೂ, ಎರಡು ಕಾಲೇಜುಗಳ ಪ್ರಿನ್ಸಿಪಾಲರುಗಳು ಇದನ್ನು ತನಿಖೆ ಮಾಡುತ್ತಿರುವರೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಬಸ್ಸುಗಳಲ್ಲಿ ಮಹಿಳಾ ಕಂಪಾರ್ಟ್‌ಮೆಂಟುಗಳನ್ನು ನೇಮಿಸುವ ಆಲೋಚನೆಯಿದೆಯೆಂದು ಇನ್ನೊಂದು ಪ್ರಶ್ನೆಗೆ ಉತ್ತರ ಬಂದಿತು

ಅನಂತರ ಸಚಿವರಾದ ಶ್ರೀ ಟಿ ಮರಿಯಪ್ಪನವರು ಬಟ್ಟೆ ಹಂಚಿಕೆಯ ಬಗ್ಗೆ ಸರ್ಕಾರದ ನೀತಿಯನ್ನು ವಿವರಿಸಿ ಹೇಳಿಕೆಯನ್ನಿತ್ತರು. ಸಂಸ್ಥಾನದ ಪ್ರಜೆಗಳೆಲ್ಲರಿಗೂ ಬಟ್ಟೆಯು ಸರಿಯಾದ ಬೆಲೆಗೆ ದೊರೆಯುವಂತೆ ಮಾಡುವುದೇ ಸರ್ಕಾರದ ಗುರಿಯೆಂದು ಹೇಳಿದರು. ಇತ್ತೀಚೆಗೆ ಈ ಬಗ್ಗೆ ಸರ್ಕಾರದವರು ಹೊರಡಿಸಿರುವ ಪ್ರಕಟಣೆಯನ್ನು ವಿವರಿಸಿದರು.

ಅನೇಕ ಸದಸ್ಯರು ಸೂಕ್ತವಾದ ಬಟ್ಟೆ ಹಂಚಿಕೆಗೆ ಸಲಹೆಗಳನ್ನಿತ್ತರು

ಶ್ರೀ ಟಿ ಮರಿಯಪ್ಪನವರು ಉತ್ತರ ಕೊಡುತ್ತ ಹಿಂದೆ ಬಟ್ಟೆ ವ್ಯಾಪಾರದಲ್ಲಿ ಮೋಸ ಮಾಡಿದವರನ್ನು ಬಿಟ್ಟು ಉಳಿದ ವ್ಯಾಪಾರಿಗಳ ವರ್ತಕರಿಗೂ ಸಹಕಾರ ಸಂಘಗಳಿಗೂ ಕೊಡಲಾಗುವುದೆಂದು ತಿಳಿಸಿದರು

ಮೈಸೂರು ಸಾಬು ಮದುವೆ

ಸಾಂಗ್ ಅಫ್ ಇಂಡಿಯಾ ಎಂಬ ಚಿತ್ರದಲ್ಲಿ ತನ್ನೊಡನೆ ನಟಿಸುವ ೨೧ ವರ್ಷ ವಯಸ್ಸಿನ ಮೊರಿಲಿನ್ ಕೊಪರ್ ಎಂಬಾಕೆಯನ್ನು ಮೈಸೂರಿನ ಸಾಬು ಕಳೆದ ಮಂಗಳವಾರ ಮದುವೆಯಾದನೆಂದು ತಿಳಿದುಬಂದಿದೆ

ನೈಜಾಮರು ಸಿಂಹಾಸನವನ್ನು ಬಿಡಬೇಕು

ಪ್ರಜೆಗಳ ಶತ್ರುವಾಗಿಯೂ, ಬೀದರಿಂದಾಗಿಯೂ ಭಾರತ ಯೂನಿಯನ್ನಿನ ಮೇಲೆ ಯುದ್ಧ ಹೂಡಿದ ಪಿತೂರಿಗಾರರಾಗಿಯೂ ಇದ್ದ ನೈಜಾಮರಿಗೆ ಭಾರತ ರಾಷ್ಟ್ರದ ಪ್ರಜಾಪ್ರಭುತ್ವದಲ್ಲಿ ಯಾವ ಸ್ಥಾನವೂ ಇಲ್ಲವಾಗಿದೆ, ಆದ್ದರಿಂದ ಅವರನ್ನು ಸಿಂಹಾಸನದಿಂದ ಇಳಿಸಿ ಸಂಸ್ಥಾನದಲ್ಲಿ ಸಂಪೂರ್ಣ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕು- ಎಂಬ ನಿರ್ಣಯವನ್ನು ಹೈದರಾಬಾದಿನ ಕಾರ್ಯಮಂಡಲಿಯವರು ಅಲ್ಲಿನ ಕಾಂಗ್ರೆಸ್ಸಿನ ಅಂಗೀಕಾರಕ್ಕಾಗಿ ಮಂಡಿಸಿದ್ದಾರೆ ಇದನ್ನು ಬಹುಮತದಿಂದ ಒಪ್ಪುವ ಸೂಚನೆಗಳಿವೆ

ಶ್ರೀ ದೇವಿ ಯಜ್ಞ

ಚಾಮುಂಡಿ ಬಡಾವಣೆ ೧೦೩೬-೪೦ ನೇ ನಂಬರ್ ಗೃಹದಲ್ಲಿ ಶ್ರೀ ದೇವಿಯಜ್ಞ ಮತ್ತು ಮಹಾ ಸ್ವಾರಾಧನೆ ರಾಜಧಾನಿಯ ... ಸಹಾಯದಿಂದ ಉದಾರವಾಗಿ ನಡೆಸುತ್ತಾರೆ. ನಾಳೆ ದಿನ ಶ್ರೀ ದೇವಿ ಯಜ್ಞೇಶ್ವರರ ಪ್ರಸಾದವನ್ನು ಸ್ವೀಕರಿಸಲು ಭಕ್ತರುಗಳೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ರಾಜಕುಮಾರಿಯವರ ವರ್ಧಂತಿ ಉತ್ಸವ

ರಾಜಧಾನಿಯ ಮಕ್ಕಳ ಕೂಟದವರು ಕಳೆದ ಭಾನುವಾರ ರಾಜಕುಮಾರಿ ಶ್ರೀ ಗಾಯತ್ರೀ ದೇವಿಯವರ ಎರಡನೇ ವರ್ಧಂತ್ಯುತ್ಸವವನ್ನು ಶ್ರೀಮತಿ ಸುಂದರಾಬಾಯಿಯವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಈ ಸಂದರ್ಭದಲ್ಲಿ ಕುಮಾರಿ ರಾಜಲಕ್ಷ್ಮಿಯವರ ಪಿಟೀಲು ವಾದನವು ನಡೆಯಿತು.

ಹರಿಕಥೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯು ದ್ವಿತೀಯ ವಾರ್ಷಿಕೋತ್ಸವದ ಸಂಬಂಧದಲ್ಲಿ ೨೪ರಿಂದ ೩೧ ದಿನಗಳು ಪ್ರತಿ ದಿನ ಪುರಾಣ, ಯುಕ್ತಿಗಾನ, ಲಾವಣಿ ಮತ್ತು ಸಂಗೀತಗಳು ನಡೆಯುವುವು. ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಸುಬ್ರಹ್ಮಣ್ಯ ದಾಸರಿಂದ ಧ್ರುವ ವಿಜಯ ಎಂಬ ಕೀರ್ತನೆ ಜರುಗುವುದು.

ಡ॥ ಶ್ರೀ॥ ಕೆ. ಎಸ್ ಗಣಪತಿ ಭಾಗವತರವರಿಂದ ... ರಾಜಮೊಹಲ್ಲಾ ... ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ೨೪-೧೦-೪೮ ನೇ ಭಾನುವಾರ, ರಾತ್ರಿ ೮ ಘಂಟೆಗೆ "ಸೀತಾ ಕಲ್ಯಾಣ" ಎಂಬ ಹರಿಕಥೆಯು ನಡೆಯುತ್ತದೆ

ರಾಜರುಗಳ ಅರಮನೆ ಮಾರಾಟಕ್ಕೆ ಅರ್ಜಿ

ಭಾರತ ಸರ್ಕಾರದವರಿಗೆ ಕೆಲವು ರಾಜರುಗಳು ತಮಗೆ ಹೆಚ್ಚಾದ ಅರಮನೆಗಳನ್ನು ಮಾರಾಟ ಮಾಡಲು ಅನುಮತಿ ಕೊಡಬೇಕೆಂದು ತಿಳಿಸಲಾಗಿದೆ. ಅರಮನೆಗಳು ಅವರ ಸ್ವಂತ ಸ್ವತ್ತಿನ ಬಗ್ಗೆ ತೀರ್ಮಾನವಾದಮೇಲೆ ಅವರು ಹಾಗೆ ಮಾಡಬಹುದು.

ಗಾಂಧಿ ನಿಧಿ ಒಂದುಕೋಟಿಗೆ ಮೀರಿತು

ಇದುವರೆಗೆ ಮಹಾತ್ಮ ಗಾಂಧಿಯವರ ಸ್ಮಾರಕ ನಿಧಿಗೆ ೧,೧೦,೩೫,೧೮೮ ರೂ ವಸೂಲಾಗಿರುತ್ತದೆ

ಕಾಂ॥ ಮಹಾಧಿವೇಶನಕ್ಕೆ ಸ್ವಯಂ ಸೇವಕರು

ಜಯಪುರದಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಕಾಂಗ್ರೆಸ್ ಮಹಾಧಿವೇಶನಕ್ಕೆ ವಿವಿಧ ಪ್ರಾಂತಗಳು ಸ್ವಯಂಸೇವಕರುಗಳನ್ನು ಕಳುಹಿಸಿ ಕೊಡಬೇಕೆಂದು ಕೋರಲಾಗಿದೆ. ಜಯಪುರದ ಮಹಾರಾಜರು ಇಂಗ್ಲೆಂಡಿನಿಂದ ಹಿಂದಿರುಗಿದೊಡನೆಯೇ ಕಾಂಗ್ರೆಸ್ ಅಧಿವೇಶನವು ನಡೆಯುವ ಗಾಂಧಿನಗರಕ್ಕೆ ಭೇಟಿ ಇತ್ತು ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ನೋಡಿ ಸಂತೋಷವನ್ನು ವ್ಯಕ್ತಗೊಳಿಸಿದರು.

ನವೆಂಬರ್ ೬ ಕ್ಕೆ ನೆಹರೂ ಹಿಂದಿರುಗುವರು

ಪಂಡಿತ್ ನೆಹರೂರವರು ನವೆಂಬರ್ ೬ ನೇ ತಾ॥ ಕೈರೋವಿಗೆ ಬಂದು ಅದನೇ ತಾ॥ ಬೊಂಬಾಯಿಯನ್ನು ತಲುಪುವರೆಂದು ತಿಳಿದುಬಂದಿದೆ

ಮಾಹಿಯಲ್ಲಿ ದೊಂಬಿ; ಅಧಿಕಾರಿಗಳ ಶರಣಾಗತಿ

ಪಶ್ಚಿಮ ಕರಾವಳಿಯಲ್ಲಿರುವ ಮಾಹಿಯಲ್ಲಿ ನಡೆಯಬೇಕಾಗಿರುವ ಚುನಾವಣೆಗಳ ಸಂಬಂಧದಲ್ಲಿ ಗಲಿಬಿಲಿಯುಂಟಾಗಿ ಜನರ ಗುಂಪು ಸರ್ಕಾರಿ ಭವನಗಳಿಗೆ ನುಗ್ಗಿ ಬೆಂಕಿ ಹಚ್ಚಿ ಹಾವಳಿ ಮಾಡಿತು. ಅದರನ್ನು ಎದುರಿಸಲು ಅಶಕ್ತರಾಗಿ ಅಲ್ಲಿನ ಅಧಿಕಾರಿಗಳೂ, ಪೋಲೀಸಿನವರೂ ಶಸ್ತ್ರಗಳನ್ನು ಕೆಳಗಿಟ್ಟು ಶರಣಾಗತರಾದರು.

ನಾಲ್ಕು ಮಕ್ಕಳ ಜನನ

ಮಿಸ್ಸೆಸ್ ಟೇಲರ್ ಎಂಬ ೨೭ ವರ್ಷದ ಹೆಂಗಸಿಗೆ ಒಂದೇ ಕಾಲದಲ್ಲಿ ನಿನ್ನೆ ನಾಲ್ಕು ಮಕ್ಕಳು ಜನಿಸಿವೆ. ಮೂರು ಗಂಡು ಒಂದು ಹೆಣ್ಣು, ಎಲ್ಲರೂ ಸುಖವಾಗಿದ್ದಾರೆ.

ಸದ್ಯಕ್ಕೆ ಯುದ್ಧವಿಲ್ಲವೆಂದು ನೆಹರೂ ಅಭಿಪ್ರಾಯ

ಯುದ್ಧ ಸಂಭವವು ಇನ್ನೂ ಬಹಳ ದೂರದಲ್ಲಿದೆಯೆಂದು ಪಂ॥ ನೆಹರೂರವರು ಲಂಡನ್ನಿನಲ್ಲಿ ಭಾಷಣ ಮಾಡುವಾಗ ಹೇಳಿರುವರು. ಆದರೆ ವಿಶ್ವ ಶಾಂತಿಗೆ ಅಹಿಂಸೆಯನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದೂ ಸಹ ಅವರು ತಿಳಿಸಿರುವರು

ತಿರುವಾಂಕೂರಿಗೆ ಹೊಸ ಮಂತ್ರಿಮಂಡಲ

ಶ್ರೀ ಟಿ ಕೆ ನಾರಾಯಣಪಿಳ್ಳೆಯವರು ತಿರುವಾಂಕೂರು ಪ್ರಧಾನಿಯಾಗಿ ನಿನ್ನೆ ಅಧಿಕಾರ ವಹಿಸಿದರು ಇವರು ಸದ್ಯದಲ್ಲಿಯೇ ತಮ್ಮ ಸಹೋದ್ಯೋಗಿಗಳನ್ನು ಆರಿಸುವರು

ಕೋಲಾರದಲ್ಲೊಂದು ಸಕ್ಕರೆ ಕಾರ್ಖಾನೆ

ಪ್ರ|| ಪ್ರ|| ಸಭೆಯಲ್ಲಿ ನಿರ್ಣಯಗಳು

ಮೈಸೂರು ೨೨

ಭಾರತ ಸರ್ಕಾರದವರು ಕೊಡುತ್ತಿರುವಂತೆ ಸಂಬಳ ಸಾರಿಗೆಗಳನ್ನು ಮೈಸೂರು ಸಂಸ್ಥಾನದ ಚಿಕ್ಕ ಕೆಲಸಗಾರರಿಗೂ ಕೊಡಬೇಕೆಂಬ ನಿರ್ಣಯವನ್ನು ಶ್ರೀ ಎಚ್. ಸಿ. ಬಸವದೇವಪ್ಪನವರು ನಿನ್ನೆಯ ದಿನ ಪ್ರ|| ಪ್ರ|| ಸಭೆಯಲ್ಲಿ ಮಂಡಿಸಿದರು. ಸಚಿವರು ಉತ್ತರವಿತ್ತು ಕೆಲವು ತಿಂಗಳ ಹಿಂದೆ ಈ ವಿಷಯವನ್ನು ಸರ್ಕಾರವು ಪರಿಶೀಲಿಸಿದೆಯೆಂದೂ, ಅದರ ವರದಿ ಬಂದ ನಂತರ ಈ ವಿಷಯವನ್ನು ವಿಮರ್ಶಿಸಲಾಗುವುದೆಂದೂ ತಿಳಿಸಿದರು. ಈ ಭರವಸೆಯಿಂದ ಸೂಚಕರು ನಿರ್ಣಯವನ್ನು ವಾಪಸು ಪಡೆದರು.

ಕೋಲಾರ ಜಿಲ್ಲೆಯಲ್ಲಿ ಚೆಲ್ಲು ಕಬ್ಬು ಬೆಳೆಯುವ ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ಶ್ರೀ ಆದಿನಾರಾಯಣಶೆಟ್ಟಿ ಮಂಡಿಸಿದರು. ಈ ವಿಷಯವಾಗಿ ವಿಪುಲ ಚರ್ಚೆ ನಡೆದು ಅಧ್ಯಕ್ಷರು ಕೋಲಾರದಲ್ಲಿ ಸಕ್ಕರೆ ಕಾರ್ಖಾನೆ ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ ಎಂದು ತಿಳಿಸಿದರು. ಅದರಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಮೈಸೂರು ಸಂಸ್ಥಾನದ ಎಲ್ಲಾ ಮುನಿಸಿಪಾಲಿಟಿಗಳಲ್ಲಿಯೂ ಒಂದೊಂದು ವೈದ್ಯಕೀಯ ಶಾಲೆಯನ್ನು ಸ್ಥಾಪಿಸಬೇಕೆಂಬ ನಿರ್ಣಯವನ್ನು ಶ್ರೀ ಕರಿಗೌಡರು ಮಂಡಿಸಿ, ಪ್ರಸ್ತುತ ವಿದ್ಯಾಭ್ಯಾಸದಿಂದ ಯಾರಿಗೂ ಪ್ರಯೋಜನವಿಲ್ಲವೆಂದೂ, ಅನೇಕ ಸ್ಥಳಗಳಲ್ಲಿ ಶಾಲೆಗಳು ಸಾಧ್ಯವಿಲ್ಲವೆಂದೂ ತಿಳಿಸಿದರು. ಉತ್ತರವಿತ್ತು ವೈದ್ಯಶಾಲೆ ಶಾಲೆಯನ್ನು ತೆರೆಯಬೇಕೆಂದು ಸರ್ಕಾರವು ಆಲೋಚಿಸುತ್ತಿದೆಯೆಂದೂ ಸಧ್ಯದಲ್ಲಿ ಕಾಲಹಳ್ಳಿಯಲ್ಲಿ ಒಂದು ವೈದ್ಯಶಾಲೆಯು ಶೀಘ್ರ ಕಾಲದಲ್ಲಿ ಸ್ಥಾಪಿತವಾಗುವುದೆಂದೂ ತಿಳಿಸಿದರು.

ಮಲೆನಾಡು ಅಭಿವೃದ್ಧಿ ಕಾರ್ಯಕ್ಕೆ ಇನ್ನೂ ಹೆಚ್ಚಾಗಿ ೫೦ ಲಕ್ಷ ರೂ ಮಂಜೂರು ಮಾಡಬೇಕೆಂಬ ನಿರ್ಣಯವನ್ನು ಶ್ರೀ ಕಡಿಹಳ್ಳಿ ಕೃಷ್ಣಪ್ಪನವರು ಮಂಡಿಸಿದರು.

ಮಲೆನಾಡಿನ ಅಭಿವೃದ್ಧಿ ಬಗ್ಗೆ ಸರ್ಕಾರವು ತೀವ್ರ ಆಸಕ್ತಿವಹಿಸಿದೆ. ಹೆಚ್ಚಿನ ಹಣ ಲಭ್ಯವನ್ನು ಮಲೆನಾಡಿಗೆ ಒದಗಿಸಿಕೊಡಬೇಕೆನ್ನುವುದೇ ಸರ್ಕಾರದ ಇಚ್ಛೆ ಆದಷ್ಟು ಬೇಗ ಈ ಕೆಲಸವನ್ನು ಕೈಕೊಳ್ಳಲಾಗುವುದು— ಎಂದು ಅಧ್ಯಕ್ಷರು ತಿಳಿಸಿದರು. ಈ ಭರವಸೆಯ ಮೇಲೆ ನಿರ್ಣಯವನ್ನು ಸೂಚಕರು ವಾಪಸು ತೆಗೆದುಕೊಂಡರು

ಶ್ರೀ ಭೂಪಾಳಂರವರ ಪ್ರಕರಣ

ಪ್ರ|| ಪ್ರ|| ಸಭೆಯಲ್ಲಿ ಚರ್ಚೆ

ಮೈಸೂರು ೨೨

ನಿನ್ನೆ ದಿವಸ ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೋತ್ತರವಾದನಂತರ ಶ್ರೀ ವೈ. ಧರ್ಮಪ್ಪ, ಎಸ್. ಸಿ. ಮಲ್ಲಯ್ಯ ಮತ್ತು ಕೆ. ಚಿಕ್ಕಲಿಂಗಯ್ಯ ಮುಂತಾದ ೧೨ ಜನ ಸದಸ್ಯರು ಅಧ್ಯಕ್ಷರಿಗೆ ಒಂದು ಪತ್ರವನ್ನು ಸಲ್ಲಿಸಿ ಮೊನ್ನೆ ದಿನ ಸಭೆಯಲ್ಲಿ ಶ್ರೀ ಭೂಪಾಳಂರವರು ಸಭೆಯ ನಿಯಮಾವಳಿ ಪ್ರಕಾರ ತಂದ ಅವಿಶ್ವಾಸ ಸೂಚನೆಗೆ ಸಭಾಪತಿಗಳು ಕೊಡುವ ಸಂದರ್ಭದಲ್ಲಿ ಸದಸ್ಯರುಗಳ ಪರ ನೆಯ ವಿಚಾರವಾಗಿ ಯಾವ ನಿರ್ಧಾರಕ್ಕೆ ಬರಬೇಕೆಂಬುದನ್ನು ಸಭೆಯ ಒಪ್ಪಿಗೆ ಪಡೆಯದೆ ಅಧ್ಯಕ್ಷರೇ ತೀರ್ಪುಕೊಟ್ಟ ವಿಚಾರದಲ್ಲಿ ತಾವು ಹೇಳಿಕೆಕೊಡಲು ಅವಕಾಶ ಕೊಡಬೇಕೆಂದು ಕೋರಿದರು.

ಅಧ್ಯಕ್ಷರು ತೀರ್ಮಾನದ ಬಗ್ಗೆ ಚರ್ಚಿಸಲು ಅವಕಾಶವಿಲ್ಲ. ಅದರೂ ಅನೇಕ ರೂಪ್ಯ ಸದಸ್ಯರು ಮಾತಾಡಬೇಕೆಂದು ಇಚ್ಛಿಸುವುದರಿಂದ ಒಬ್ಬ ಸದಸ್ಯರಿಗೆ ಅವಕಾಶಕೊಡಲಾಗುವುದು-ಎಂದು ಅಧ್ಯಕ್ಷರು ತಿಳಿಸಿದರು

ಶ್ರೀ ವೈ. ಧರ್ಮಪ್ಪನವರು ಸಭೆ, ಅಧ್ಯಕ್ಷರ ರೂಲಿಂಗನ್ನು ಪ್ರಶ್ನಿಸುವುದು ತಮ್ಮ ಅಭಿಪ್ರಾಯವಲ್ಲವೆಂದೂ, ಆದರೆ ಅವರ ತೀರ್ಮಾನದಿಂದ ಸದಸ್ಯರ ಹಕ್ಕು ಬಾಧ್ಯತೆಗೆ ಧಕ್ಕೆ ಬಗೆದಿದೆಯೆಂದು ತಿಳಿಸಿದರು

ಶ್ರೀ ಎಸ್. ಸಿ. ಮಲ್ಲಯ್ಯನವರು ಸಹ ಮಾತಾಡಲು ಹಿಂದಾಗ ಪುನಃ ಅಧ್ಯಕ್ಷರು ಹೇಳಿದರು.

ಅನ್ಯ ಯಾರಿಗೂ ಈ ಬಗ್ಗೆ ಅವಕಾಶ ಕೊಡುವುದಿಲ್ಲ. ವಾಪಸು ನ್ನು ಸುಗಮವಾಗಿ ಮಾಡುವುದೇ ನನ್ನ ಕರ್ತವ್ಯ—ಎಂದು ಅಧ್ಯಕ್ಷರು ತಿಳಿಸಿ ನಿಲುವಳಿ ನಿರ್ಣಯಗಳು ಚರ್ಚೆಗೆ ಬರಲಿ ಗ ಅನೇಕರಿಗೆ ಅತೃಪ್ತಿಯಾಗಿರಬಹುದು ಯಾರೂ ಈ ಬಗ್ಗೆ ಅಸಮಾಧಾನಪಡಬೇಕಿಲ್ಲ ಪ್ರತಿ ಒಂದೇ ಮನೆಯಲ್ಲಿ ಸೇರಿದವರ ಭಾವನೆಯಿಂದ ನಡೆಯಬೇಕೆಂದು ಹೇಳಿದರು.

ಶ್ರೀಕಾ ಕಾಲಿಗಳಾದ ಅಧ್ಯಕ್ಷರು ಸಭೆಯು ಕೆಲಸ ಕಾರ್ಯಗಳನ್ನು ನಡೆಸಬೇಕೆಂದಿತು. ವಾಗ ದೇಶದ ಅಷ್ಟ ನಿಸ್ವಾರ್ಥತೆಯನ್ನು ಅರ್ಚಿಸಲು ಅವಕಾಶಕೊಡಬೇಕು ದು ಕೋರಿದರು. ಹಿಂದೆ ಈ ಅವಕಾಶ ಕೊಟ್ಟು ಮಾನ್ಯ ಸದಸ್ಯರು ತಂದ ನಿಲುವಳಿ ಚರ್ಚಿಸಲು ಅವಕಾಶಕೊಡದಿದ್ದದ್ದು ಹಿಂದಿನಿಂದ ಬಂದಿರುವ ಒಂದು ಸಂಪ್ರದಾಯವನ್ನು ತಳ್ಳಿ ಹಾಕಿದಂತಾಗಿದೆ. ಈ ದಿನ ಹಾಗೆ ಅವಕಾಶ ಕೊಟ್ಟರೆ ನಾವು ಸಭಾ ಬಹಿಷ್ಕಾರ ಮಾಡಲಿಲ್ಲ. ಆದರೂ ಸಭೆಯು ಹಕ್ಕು ಬಾಧ್ಯತೆ, ಸದಸ್ಯರ ಗೌರವ ಪ್ರತಿಷ್ಠೆಗಳನ್ನು ಕಾಪಾಡುವಿರೆಂದು ನಂಬಿದ್ದೇನೆ ಎಂದು ಶ್ರೀ ವಲ್ಲಯ್ಯನವರು ತಿಳಿಸಿದರು.

ಪುನಃ ಶ್ರೀ ಎಸ್. ಸಿ. ಮಲ್ಲಯ್ಯನವರು ಮಾತಾಡಲು ಎದ್ದಾಗ ಸಭೆಯಲ್ಲಿ ಸ್ವಲ್ಪ ಗೊಂದಲವಾಯಿತು. ಅಷ್ಟರಲ್ಲಿ ಮಲ್ಲಯ್ಯನವರು ಮಾತಾಡಲು ಅಧ್ಯಕ್ಷರು ಅವಕಾಶಕೊಟ್ಟರು. ನಿಲುವಳಿ ಸೂಚನೆ ಡಿಸೆಂಬರ್ ಅಧಿವೇಶನದಲ್ಲಿ ದಿವಾನರು ಈ ರೂಲಿಂಗನ್ನು ಶ್ರೀ ಮಲ್ಲಯ್ಯನವರು ಬಿಡಿ, ಆಗ ಸಂಪ್ರದಾಯವನ್ನು ಪಾಲಿಸುತ್ತಿಲ್ಲವೆಂದು ಹೇಳಿದರು. ಮಾಜಿ ಮಂತ್ರಿಗಳು ಕೊಟ್ಟ ಸೌಲಭ್ಯವನ್ನು ಸಹ ಈಗಿನ ಮಂತ್ರಿಮಂಡಲವು ಕೊಟ್ಟಿಲ್ಲವೆಂದೂ ಎಲ್ಲ ಪಕ್ಷದ ಸದಸ್ಯರಿಗೂ ಅವಕಾಶ ಏರಬೇಕೆಂದೂ ತಿಳಿಸಿದರು.

ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮುಂದೆ ಪರಿಹರಿಸಿಕೊಳ್ಳೋಣ. ಒಟ್ಟಿನಲ್ಲಿ ಕಾರ್ಯವು ನೆರವೇರುವಂತೆ ಎಲ್ಲರೂ ಸಹಕರಿಸಿ—ಎಂದು ಅಧ್ಯಕ್ಷರು ಕೋರಿ ಚರ್ಚೆಯನ್ನು ಅಲ್ಲಿಗೆ ನಿಲ್ಲಿಸಿದರು

ದೀಪಾವಳಿ ಉಡುಪುಗಳು

ಹೊಸ ಹೊಸ ಬಗೆಯ ಅಂದವಾದ ಉಡುಪುಗಳು ನಮ್ಮಲ್ಲಿ ಸಿಕ್ಕುತ್ತವೆ.

ಒಂದು ಬಾರಿ ದಯಮಾಡಿ ನೋಡಿರಿ.

ಗೃಹಲಕ್ಷ್ಮೀ ಸ್ಟೋರ್ಸ್

ಅಂಗಡಿ ಬೀದಿ, ಕೊಳ್ಳೇಗಾಲ

ದೀಪಾವಳಿ ಪ್ರಯುಕ್ತ

ಸ್ವಂತ ಮಗ್ಗದಿಂದ ತಯಾರಾದ

ಮೈಸೂರು ಸಿಲ್ಕು ಸೀರೆಗಳೂ

ಉತ್ತಮವಾದ ಡಿಸೈನುಗಳಲ್ಲಿ

ಬೆಂಗಾಲ್ ಸಿಲ್ಕ್ ಸೀರೆಗಳೂ

ಮತ್ತು

ಕುಂಭಕೋಣದ ಸೀರೆಗಳೂ

ಬಂದಿವೆ. ದಯವಿಟ್ಟು ಇಂದೇ ಭೇಟಿ ಕೊಡಿರಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ, ಶಿವರಾಂಪೇಟೆ, ಮೈಸೂರು.

Edited printed and published by A.R. Nagarajan at the Sadhvi Press D. Subbaiah Road Mysore

+‡ ಪ್ರಭುದೇವಾ ಟಾಕೀಸಿನಲ್ಲಿ ‡+

ಜಮಿನಿಯವರ

— ಹರಿಶ್ಚಂದ್ರ —

24-10-48 ರಿಂದ : ದಿನವಹಿ 3 ಆಟಗಳು

ಪಿ.ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣ, ಮಧುರಂ ಪಾತ್ರ ವಹಿಸಿರುವ ತಮಿಳು ಚಿತ್ರ

ವುಡ್‌ಲ್ಯಾಂಡ್ಸ್ ಟಾಕೀಸ್

ಆಕರ್ಷಣೀಯ 4 ನೇ ವಾರ

ಮೈಸೂರು ಸಂಸ್ಥಾನಕ್ಕೇ ಪ್ರಥಮ ಪ್ರದರ್ಶನ

ಘರ್ - ಕಿ - ಇಜತ್

ಮುಬಾರಕ್ ಶಾಂತ, ಜ ನೋರಿಯ, ವಿಲಿಯರ್ ಕುಮಾರ್, ಜೀವನ್, ದೀಕ್ಷಿತ್ ಮುಂತಾದವರು ಅಭಿನಯಿಸಿರುವ ಅತ್ಯಮೋಘ ಹಿಂದೀ ಚಿತ್ರ

GHAR-KI IZZAT

ರಾಜಕಮಲ್ ಟಾಕೀಸ್

23-10-48 ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಫಿಲ್ಮಿಸ್ತಾನ್ ಕಂಪೆನಿಯವರ

ದೋ ಭಾಯಿ

(ಹಿಂದಿ)

ತಾರಾಗಣ.— ಕಮಲ ಕೌಶಲ್ಯ, ಉಲ್ಲಾಸ್

MONING SHOWS From 22-10-1948

For 4 days only

DAVID COPPERFIELD

WITH:—W. C. Fields, Lionel Barrymore, Madge Evans

Office of the Secretary,
Dasara Exhibition Committee
Mysore 21st October 1948

NOTICE

It is hereby notified for the information of the public that the temporary structures (excluding Zinc Sheets) put up by the Exhibition Authorities in the Jeevarayanakatte and in the Exhibition Main buildings will be sold by PUBLIC AUCTION on Sunday the 24th October 1948, at 10 a. m. on the spot. Sale is subject to confirmation by the Exhibition Authorities. Intending bidders may inspect the materials on the spot.

V. A. ANNOO MUDALIAR, Secretary.
Exhibition Committee.

ಪೋಸ್ಟ್ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೪] ಭಾನುವಾರ ೨೪-೧೦-೪೮ [ಸಂಚಿಕೆ ೧೪

ಭಾರತ ಆಹಾರ ನೀತಿಗೆ ಮೈಸೂರಿನ ಬೆಂಬಲ

ಭಾರತ ಸರ್ಕಾರದ ಆಹಾರ ನೀತಿಗೆ ಒಪ್ಪಿಗೆ

ಪ್ರ. ಪ್ರ॥ ಸಭೆಯ ಕಾರ್ಯಕಲಾಪ

ಮೈಸೂರು ೨೪

ಪ್ರ. ಪ್ರ॥ ಸಭೆಯ ಕಾರ್ಯಕಲಾಪಗಳು ನ್ನ ಒಹಳ ಲವಲವಿಕೆಯಿಂದ ಕೂಡಿ ಭಾರತ ಸರ್ಕಾರದ ನೀತಿಯಂತೆ ಮೈಸೂರು ಸರ್ಕಾರವು ಬಿಟ್ಟಿ ಮತ್ತು ಆಹಾರ ಧಾನ್ಯ ನೀತಿ ಹತೋಟಿ ಆಜ್ಞೆಯನ್ನು ಜಾರಿಗೆ ತಂದಿರುವ ವಿಷಯಕ್ಕೆ ಸಭೆಯು ಪೂರ್ಣ ಒಪ್ಪಿಗೆಯನ್ನು ಕೊಟ್ಟಿತು. ಸಭೆಯ ರಾತ್ರಿ ೭ ೩೦ ಘಂಟೆಯವರೆಗೂ ನಡೆಯಿತು. ಪ್ರೇಕ್ಷಕ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು.

ಸಿ. ವಿಠಲರಾಯರು ... ಸದಸ್ಯರು ಆಹಾರ ಹತೋಟಿಯ ಬಗ್ಗೆ ಭಾಷಣ ಮಾಡಿ ಜನರಿಗೆ ತೊಂದರೆ ಕಾಣದಂತೆ ಸರ್ಕಾರದವರು ಆಹಾರ ಧಾನ್ಯಗಳನ್ನು ವಶಪಡಿಸಿಕೊಳ್ಳಬೇಕೆಂದು ಹೇಳಿದರು.

ಆಹಾರದ ಹತೋಟಿಯು ನೀತಿಯ ಪರ ವಹಿಸಿದಂತೆ ಶ್ರೀ ಟಿ. ಮರಿಯಪ್ಪನವರು ... ಸಂಸ್ಥಾನಕ್ಕೆ ೧೮೫೦೦೦೦ ... ಧಾನ್ಯವು ಸಾಲದೆ ಬರುವುದೆಂದೂ, ಭಾರತ ಸರ್ಕಾರದ ನೀತಿಯಂತೆ ಸಂಸ್ಥಾನದಲ್ಲಿ ಹತೋಟಿ ಆಜ್ಞೆಯನ್ನು ಜಾರಿಗೆ ತರಬೇಕಾಯಿತೆಂದೂ ತಿಳಿಸಿ ಮಹಾತ್ಮರ ಮತ್ತು ... ಪ್ರಾರ್ಥನೆಯಂತೆ ಆಹಾರ ಹತೋಟಿಯನ್ನು ತೆಗೆದರೆ ಉಂಟಾದ ಪರಿಸ್ಥಿತಿಯನ್ನು ಭಾರತ ಮತ್ತು ... ಸರ್ಕಾರಗಳು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿವೆ ಎಂದು ಹೇಳಿದರು.

ಭಾರತ ಸರ್ಕಾರವು ಆಹಾರವನ್ನು ಹೊರಗಿನಿಂದ ತರಿಸಿಕೊಂಡಾಗ ಕೊಡುವ ಹೆಚ್ಚು ಬೆಲೆಯಲ್ಲಿ ½ ಭಾಗದಷ್ಟನ್ನು ಮೈಸೂರಿಗೆ ಕೊಡಲಿದೆಯೆಂದೂ ಇದರಿಂದ ಬಿತ್ತನೆ ಬೀಜಗಳನ್ನು ಮೈಸೂರಿಗೆ ಬರುತ್ತಿದೆಯೆಂದೂ ರೈತನು ಕೊಡುವ ಹೆಚ್ಚಿಗೆ ಅಕ್ಕಿಗೆ ಮಣಕ್ಕೆ ... ಆಣೆ ಇನಾಮು ಕೊಡಲಾಗುವುದೆಂದೂ ಸಹ ತಿಳಿಸಿದರು.

ಈ ಹೊಸ ಹತೋಟಿಯಿಂದ ಆದ ಲೋಪದೋಷಗಳನ್ನು ಸರಿಪಡಿಸಿ ರೈತನಿಗೆ ತೊಂದರೆ ಆಗದಂತೆ ... ಮಾಡಲಾಗುವುದೆಂದೂ ಸಹ ಹೇಳಿದರು.

ಭಾರತ ಸರ್ಕಾರದ ನೀತಿಯಂತೆ ಬೆಳೆಗಾರನಿಗೆ ಹೆಚ್ಚಿಗೆ ಕೊಡಲಾಗುವುದು ... ಎಲ್ಲಾ ಕಡೆಯಲ್ಲೂ ಒಂದೇ ಧಾರಣೆ ... ಕಳ್ಳ ಸಂತೆ ಕಡಿಮೆ ಯಾಗುವುದೆಂದೂ ಸಹ ನುಡಿದರು.

ಶ್ರೀ ಸಿ. ಬಂದೀಗೌಡರು ... ಕಳ್ಳಸಂತೆಯವರಿಗೆ ಉಗ್ರ ಶಾಸ್ತಿಯನ್ನು ಕೈಗೊಳ್ಳಬೇಕೆಂದು ಹೇಳಿದರು. ಶ್ರೀ ಶಂಕರಲಿಂಗೇಗೌಡರು ಈ ಆಜ್ಞೆಯನ್ನು ಜಾರಿಗೊಳಿಸುವುದರಲ್ಲಿ ... ವಿಳಂಬವಿಲ್ಲವೆಂದೂ ... ರೈತನಿಗೆ ಹೆಚ್ಚಿಗೆ ಕೊಡಬೇಕೆಂದೂ ತಿಳಿಸಿದರು.

ಶ್ರೀ ಎಚ್. ಸಿ. ದಾಸಪ್ಪ ... ಹೋಟೆಲ್ ... ಸರಬರಾಜು ... ಕಂಟ್ರೋಲ್ ನಡೆಸಬೇಕೆಂದೂ, ರೈತನಿಗೆ ... ವ್ಯವಸಾಯದ ಸಲಕರಣೆ ಕೊಡಬೇಕೆಂದರು. ಶ್ರೀ ನರಸಿಂಗರಾವ್ ಎ. ಎ. ಮತ್ತು ಬಿ ಕ್ಲಾಸ್ ಎನ್ನುವ ... ವರ್ಗ ಮಾಡಿ ಎಲ್ಲರಿಗೂ ಒಂದೇ ... ಆಹಾರ ಕೊಡಬೇಕೆಂದರು. ... ಎಚ್. ಸಿದ್ದಯ್ಯನವರು ... ಬೆಳೆ ಬೆಳೆಯಲು ಪ್ರೋತ್ಸಾಹ ... ಆಹಾರವು ಹೊರಗೆ ಹೋಗದಂತೆ ತಡೆಯಬೇಕೆಂದರು.

ಶ್ರೀ ಎಂ. ಎ. ಜೋಯಿಸರು ವಿಶ್ವಾಸದಿಂದ ರೈತನಿಂದ ಆಹಾರವನ್ನು ವಶಪಡಿಸಿಕೊಳ್ಳಬೇಕೆಂದೂ, ವಿತರಣೆಯಿಂದ ಹಂಚಬೇಕೆಂದೂ ಸಾರ್ವಜನಿಕರು ಕೊಟ್ಟ ಸಲಹೆಯನ್ನು ಉಪೇಕ್ಷೆ ಮಾಡಕೂಡದೆಂದೂ ಕಳ್ಳ ವ್ಯಾಪಾರದ ಶಕ್ತಿ ಮಾಡಿದವರಿಗೆ ಶಿಕ್ಷೆ ... ಹಿಡಿದ ಆಹಾರದ ½ ಭಾಗವನ್ನು ಬಹುಮಾನವಾಗಿ ... ರೈತನಿಗೆ ಬೇಕಾಗುವ ಗೊಬ್ಬರ, ಬೀಜ ಮುಂತಾದುವನ್ನು ಸುಲಭವಾಗಿ ಹಂಚಬೇಕು ಎಂದರು.

ಶ್ರೀ ದುಗ್ಗಪ್ಪನವರು ಈ ನೀತಿಯಿಂದ ಮಹಾತ್ಮರ ಆತ್ಮಕ್ಕೆ ಧಕ್ಕೆ ತಗಲಿದೆ ಎಂದರು.

ಶ್ರೀ ಶಿವಲಿಂಗಯ್ಯನವರು ಕಂಟ್ರೋಲಿನ ಭಯ ರೈತನಿಗೆ ಇಲ್ಲದಂತೆ ಮಾಡಿ ರೈತನಿಗೆ ಅನುಕೂಲ ಮಾಡಬೇಕೆಂದು ಹೇಳಿದರು.

ಶ್ರೀಮತಿ ರತ್ನಮ್ಮನವರ ... ಬೇಕಾದವನ್ನು ಸಂಗ್ರಹಿಸಿ ಜಮೀನು ಇಲ್ಲದವರಿಗೆ ಜಮೀನು ಕೊಟ್ಟು ಹೆಚ್ಚು ಆಹಾರ ಬೆಳೆಯಲು ಪ್ರೋತ್ಸಾಹಿಸಬೇಕೆಂದರು.

ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಆಹಾರ ಹಂಚಿಕೆ ಮತ್ತು ಹತೋಟಿಯಲ್ಲಿ ಯಾವ ರಾಜಕೀಯವೂ ಇರಬಾರದೆಂದು ತಿಳಿಸಿದರು. ಕಾಂಗ್ರೆಸ್ ಪಕ್ಷದ ಶ್ರೀ ಕಾಡಪ್ಪನವರು ಆಹಾರದ ಹತೋಟಿ ಆಜ್ಞೆಯನ್ನು ವಿರೋಧಿಸಿದ್ದು ಆಶ್ಚರ್ಯಕರವಾಗಿತ್ತು. ಶ್ರೀ ಎಲ್. ಸಿದ್ದಪ್ಪನವರು ಆಹಾರವನ್ನು ಜಮೀನಿನಲ್ಲಿ ಕೆಲಸ ಮಾಡುವ ಕೂಲಿಗಾರರಿಗೆ ಸರಿಯಾಗಿ ಹಂಚಬೇಕೆಂದು ತಿಳಿಸಿದರು.

ಶ್ರೀ ಕೆ. ಹನುಮಂತಯ್ಯನವರು ಕೇಂದ್ರ ಸರ್ಕಾರವು ಹತೋಟಿಯನ್ನು ಹಣದ ಉಬ್ಬರ ಕಡಿಮೆ ಮಾಡಲು ತಂದಿದೆಯೆಂದೂ ಆಹಾರಕ್ಕಾಗಿ ಭಾರತದಿಂದ ಹೊರಗೆ ಹೋಗುತ್ತಿರುವ ೧೨೦ ಕೋಟಿ ರೂಗಳು ಅದನ್ನು ಜಾಗ್ರತೆ ನಿಲ್ಲಬೇಕೆಂದೂ ಹೇಳಿದರು. ಶ್ರೀ ವೈ. ಫಕೀರಪ್ಪನವರು ರೈತನ ಕಷ್ಟ ನಿಷ್ಠುರಗಳು ಹತೋಟಿಯಿಂದ ಕಡಿಮೆಯಾಗಿ ಅವನಿಗೆ ಬೇಕಾಗುವ ಇತರೇ ಪದಾರ್ಥಗಳು ಸುಗಮವಾಗಿ ಸಿಕ್ಕಲೆಂದು ಹಾರೈಸಿದರು.

ಶ್ರೀ ಎ. ವೆಂಕಟಪ್ಪನವರು ಹತೋಟಿ ಆಜ್ಞೆ ಈಗ ಗಾಂಧೀಜಿ ಹೇಳಿದ ... ಸೂಕ್ತವಲ್ಲವೆಂದರು. ಹತೋಟಿಯ ನ್ನು ವಿಚಕ್ಷಣೆಯಿಂದ ನಡೆಸದೆ ಹೋದರೆ ತಾವೂ ಸಹ ವಿರೋಧಿಸುವುದಾಗಿ ಹೇಳಿದರು. ದೇಶದ ಹಿತದೃಷ್ಟಿಯಿಂದ ರೈತನಿಗೆ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಆಹಾರದ ಹತೋಟಿ ನಡೆಯಲೆಂದು ಹೇಳಿದರು. ಶ್ರೀಗಳಾದ ಎಚ್. ಸಿ. ಮಲ್ಲಯ್ಯ, ರಾವ್ ಬಹದ್ದೂರ್ ರಾಮಸ್ವಾಮಿ, ಎಚ್. ಸಿ. ದೇವರಾಜೇ ಅರಸ್, ಶಿವಪ್ಪ, ವಿ. ವೆಂಕಟ, ಚೆನ್ನನ ಸಿಂಹಯ್ಯ, ವಿ. ರಾ ನ ... ಮತ್ತು ಸಾಬ್ ... ಮಾತನಾಡಿದರು.

ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತು, ಸದಸ್ಯರ ಸಲಹೆಗಳನ್ನು ಸಂಪೂರ್ಣವಾಗಿ ಗಮನದಲ್ಲಿಡಲಾಗುವುದೆಂದೂ, ಸಣ್ಣ ಹಿಡುವಳಿದಾರರಿಗೆ ಧಾನ್ಯ ಮಾರಿದಾಗ ಆಹಾರ ಒದಗಿಸಲಾಗುವುದೆಂದೂ ರೈತನಿಗೆ ಸ್ವಲ್ಪವೂ ತೊಂದರೆ ಮಾಡುವುದಿಲ್ಲವೆಂದೂ ತಿಳಿಸಿದರು. ... ಕಳ್ಳವ್ಯಾಪಾರ ಮಾಡುವವರಿಗೆ ಉಗ್ರ ಶಿಕ್ಷೆ ವಿಧಿಸಲಾಗುವುದೆಂದೂ ಹೇಳಿದರು. ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂ ಅವರು ಮಾತನಾಡಿ ಸದಸ್ಯರು ಕೊಟ್ಟ ಸಲಹೆಗೆ ಸರ್ಕಾರವು ವಿಶೇಷ ಗಮನ ಕೊಡುವುದೆಂದು ಹೇಳಿದರು.

ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನ

ಮೈಸೂರು ೨೪

ಕಳೆದ ಬುಧವಾರ ಮೈಸೂರಿನ ... ರೋಡಿನಲ್ಲಿರುವ ಮಹಿಳಾ ಸಮಾಜದ ಕಟ್ಟಡದಲ್ಲಿ ಮೈಸೂರು ಮಹಿಳೆಯರ ವಾರ್ಷಿಕ ಸಮ್ಮೇಳನವು ದಿವಾನರ ಪತ್ನಿಯವರಾದ ಲೇಡಿ ರಾಮಸ್ವಾಮಿ ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ದೇವತಾ ಪ್ರಾರ್ಥನೆಯ ನಂತರ ಅಧ್ಯಕ್ಷಿಣಿಯರಿಗೆ ರಾಜಕುಮಾರಿ ಲೀಲಾವತಿ ದೇವಿಯವರು ಸ್ವಾಗತವನ್ನು ಕೋರಿದರು. ವಾರ್ಷಿಕ ವರದಿಯನ್ನು ಕಾರ್ಯದರ್ಶಿನಿಯವರಾದ ಶ್ರೀ ಎ. ಟಿ. ಲಕ್ಷಮ್ಮನವರು ಓದಿದರು.

ಲೇಡಿ ರಾಮಸ್ವಾಮಿ ಮೊದಲಿಯಾರ್ ಅವರು ಭಾಷಣ ಮಾಡುತ್ತಾ, ಯುದ್ಧಾನಂತರ ದೇಶದ ಪುನರ್ ರಚನಾ ಕಾರ್ಯ ರಂಗಗಳಲ್ಲಿ, ನಮ್ಮ ಅಕ್ಕ ತಂಗಿಯರು ಬಹು ಜವಾಬ್ದಾರಿಯುತವಾದ ಕೆಲಸಗಳು ನೀವು ... ಹೆಚ್ಚುವರಿಯಾಗಿ ವಹಿಸಿಕೊಂಡು ಪ್ರಗತಿ ಹೊಂದುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಸ್ತ್ರೀಯರು ... ಯಾದ ವಿದ್ಯಾ ಶಿಕ್ಷಣವನ್ನು ಹೊಂದಿ, ಎಲ್ಲಾ ಕಾರ್ಯ ಕ್ಷೇತ್ರಗಳಲ್ಲೂ ಪ್ರವೇಶಿಸಿ, ನಮಗೆ ಬೇಕಾದ ಸಾಮಾಜಿಕ ಸುಧಾರಣೆ, ವಿದ್ಯಾ ಪ್ರಚಾರ, ವಯಸ್ಕರ ಶಿಕ್ಷಣ ಅನಾಥ ರಕ್ಷಣೆ, ದೀನ ಜನೋದ್ಧಾರ-ಇವೇ ಮೊದಲಾದ ಮಹತ್ಕಾರ್ಯಗಳನ್ನು ಕೈಕೊಂಡು, ... ಯೋಗ್ಯತೆಯನ್ನು ಹೊಂದಿದ ಮೇಲೆ ರಾಜಕೀಯ ರಂಗಕ್ಕೂ ಇಳಿದು, ಅಲ್ಲಿ ಉನ್ನತ ಸ್ಥಾನಮಾನಗಳನ್ನು ಗಳಿಸಿ, ಆದರ್ಶ ಮಾತೆಯರಾಗಿಯೂ ಶಕ್ತಿಯುತರಾಗಿಯೂ, ... ದೇಶ ಕಲ್ಯಾಣಕ್ಕೆ ... ಬೇಕೆಂದು ತಿಳಿಸಿದರು.

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಮತ್ತು ಸ್ಥಾನಮಾನಗಳನ್ನು ಉತ್ತಮಗೊಳಿಸಲು ಉಪಯುಕ್ತವಾದ ಕೆಲವು ನಿರ್ಣಯಗಳನ್ನು ಶ್ರೀಮತಿಗಳಾದ ಕೆ. ಡಿ. ರುಕ್ಮಿಣಮ್ಮ, ಶಿವಮ್ಮ, ... ಎ. ಟಿ. ಲಕ್ಷಮ್ಮ, ಮತ್ತು ... ಮಂಡಿಸಿದರು. ಹೀಗೆ ಮಂಡಿಸಿದ ೧೬ ನಿರ್ಣಯಗಳೂ ಸರ್ವಾನುಮತದಿಂದ ಅಂಗೀಕಾರವಾದವು. ... ಸ್ತ್ರೀ ಸಮಾಜಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ... ಸಮಿತಿಯನ್ನು ... ರಚಿಸಬೇಕೆಂದು ... ನಿರ್ಣಯಕ್ಕೂ ಎಲ್ಲ ಒಪ್ಪಿಗೆಯೂ ದೊರಕಿತು. ... ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸರ್ಕಾರದ ಆಹಾರ ನೀತಿಯ ಮುಖ್ಯಾಂಶಗಳು

ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಶೇಖರಣೆ ಮತ್ತು ಹಂಚಿಕೆಯನ್ನು ಸರ್ಕಾರದವರ ಸಂಪೂರ್ಣ ಹತೋಟಿಯಲ್ಲಿಡಲಾಗುವುದು.

ರೈತರಿಂದ ವಸೂಲಾಗುವ ಎಲ್ಲ ಉಳಿತಾಯ ಧಾನ್ಯಗಳನ್ನೂ ಸರ್ಕಾರದವರೇ ಕೊಳ್ಳಲಾಗುವುದು.

ಹತೋಟಿ ಆಜ್ಞೆಯಲ್ಲಿ, ಸಣ್ಣ ಹಿಡುವಳಿದಾರರಿಗೆ ಎಂದರೆ ೫ ಎಕರೆಗಿಂತ ಕಡಿಮೆ ಖುಷ್ಕಿ ಜಮೀನುಳ್ಳ, ಮಳೆಯಿಂದ ಬೇಸಾಯವಾಗುವ ಕಡೆ ೩ ಎಕರೆಗಳಿಗಿಂತ ಕಡಿಮೆ ತರೀ ಭೂಮಿಯುಳ್ಳ, ಮತ್ತು ನದಿ ನಾಲಾ ನೀರಿನಿಂದ ಬೇಸಾಯ ಮಾಡುವ ಕಡೆ ೨ ಎಕರೆಗಿಂತ ಕಡಿಮೆ ತರೀ ಭೂಮಿಯುಳ್ಳವರಿಗೆ ವಿನಾಯಿತಿಗೆ ಅವಕಾಶ ಕಲ್ಪಿಸಲಾಗುವುದು. ಆದರೆ ಈ ಜಮೀನ್ದಾರರುಗಳು ತಮ್ಮ ಉಳಿತಾಯ ಧಾನ್ಯಗಳನ್ನು ಮಾರಾಟ ಮಾಡಬೇಕಾದರೆ ಸರ್ಕಾರದವರಿಗೇ ಮಾರಬೇಕು.

ಮೇಲೆ ನಮೂದಿಸಿರುವ ವಿನಾಯಿತಿದಾರರು ಹೊರತಾಗಿ ಇತರ ಹಿಡುವಳಿದಾರರಿಂದ ವಸೂಲು ಮಾಡಿಕೊಳ್ಳಬೇಕಾದ ಧಾನ್ಯದ ಪ್ರಮಾಣವನ್ನು ಹತೋಟಿ ಆಜ್ಞೆಯ ವಿಧಾನದ ಪ್ರಕಾರ ನಿರ್ಧರಿಸಲಾಗುವುದು.

ಸರ್ಕಾರವು ಕೊಂಡುಕೊಳ್ಳುವ ಧಾನ್ಯಗಳಿಗೆ ಕೇಂದ್ರ ಸರ್ಕಾರ ನಿರ್ಧರಿಸುವ ಬೆಲೆಯನ್ನು ಕೊಡಲಾಗುವುದು.

ಸಾರ್ವಜನಿಕರು ಆಹಾರ ಧಾನ್ಯಗಳನ್ನು ಸರ್ಕಾರದ ಡಿಪೋಗಳಲ್ಲದೆ ಇತರ ಕಡೆಗೆ ಮಾರಾಟಕ್ಕೆ ಸಾಗಿಸದಂತೆ ಪ್ರತಿಬಂಧಿಸಲಾಗುವುದು.

ಸಂಸ್ಥಾನದಿಂದ ಧಾನ್ಯ ಹೊರಗೆ ಹೋಗದಂತೆ ಗಡಿಯಲ್ಲಿ ಬಲವಾದ ಕಾವಲೇರ್ಪಡಿಸಲಾಗುವುದು.

ಭತ್ತವನ್ನು ಶೇಖರಣೆ ಮಾಡುವ ರೈಸ್ ಮಿಲ್ಲುಗಳೆಲ್ಲವನ್ನೂ ಸರ್ಕಾರದವರ ಸಂಪೂರ್ಣ ಹತೋಟಿಗೆ ವಶಪಡಿಸಿಕೊಳ್ಳಲಾಗುವುದು.

ವಾರ ಭವಿಷ್ಯ

ಶ್ರೀ

೨೪-೧೦-೪೮ ರಿಂದ ೩೧-೧೦-೪೮ ರ ವರೆಗೆ

ಮೇಷ— ಆರ್ಥಿಕ ಮುಗ್ಗಟ್ಟು ಸಂಪೂರ್ಣವಾಗಿ ಪರಿಹಾರವಾಗುವುದು, ಹತ್ತಿಸಿದ ಕಾರ್ಯಗಳಲ್ಲಿ ಮಿತ್ರರ ನೆರವು ದೊರೆಯುವುದು, ಸ್ತ್ರೀಯರಿಗಾರಿಗೆ ಲಾಭದಾಯಕ, ತಾ|| ೨೫, ೨೬ ಶುಭ ಪ್ರವಾಸ

ವೃಷಭ—ಆರೋಗ್ಯ ಸಾಧಾರಣವಾಗಿರುವುದು, ಶಾಟರ ಪಟ್ಟುಗಳಿಂದ ತೊಂದರೆ, ವಿರಸ್ಕಾರ ಜೀವನದಲ್ಲಿ ಅನಿರೀಕ್ಷಿತ ಘಟನೆಗಳು ನಡೆಯುವ ಸಂಭವವುಂಟು, ತಾ|| ೩೦, ೩೧ ದ್ರವ್ಯನಷ್ಟ

ಮಿಥುನ -ಕೈಕೊಂಡ [illegible] ಮುಗ್ಗಟ್ಟಾಗುವುದು, ಕುಟುಂಬದವರ ಆರೋಗ್ಯ ಕೆಡುವ ಸಂಭವವುಂಟು. ವಾಣಿಜ್ಯದಲ್ಲಿ ಕಿಂಚಿತ್ ಲಾಭ, ತಾ|| ೨೫, ೨೮ ಚೋರ ಭಯ.

ಕಟಕ—ಆರೋಗ್ಯ ಚೆನ್ನಾಗಿರುವುದು, ಮಾನಸಿಕ ಚಿಂತೆ ಹೆಚ್ಚುವುದು, ಪ್ರವಾಸದಿಂದ ನಷ್ಟ, ಮನೆಯಲ್ಲಿ ಸಂತಸದ ವಾತಾವರಣವುಂಟಾಗುವುದು, ತಾ|| ೨೬, ೨೮ ಪ್ರವಾಸ.

ಸಿಂಹ—ಹತ್ತಿಸಿದ ಕಾರ್ಯಗಳು ಸುಲಭವಾಗಿ ನೆರವೇರುವುವು, ಧರ್ಮ ಕಾರ್ಯಗಳಿಗಾಗಿ ವೆಚ್ಚವುಂಟಾಗುವುದು ಸಾಧು ಸಂತರ ದರ್ಶನ ಲಾಭ ತಾ|| ೨೭, ೨೯ ಅಧಿಕ ಲಾಭ, ಮಿತ್ರ ದರ್ಶನ

ಕನ್ಯಾ— ಧರ್ಮ ಕಾರ್ಯಗಳಿಗಾಗಿ ವೆಚ್ಚವುಂಟಾಗುವುದು, ಮುಕ್ಕಳು ಮರಿಗಳ ಆರೋಗ್ಯ ಕೆಡುವ ಸಂಭವ, ವೆಚ್ಚಕ್ಕೆ ತಕ್ಕ ಆದಾಯವಿರುವುದು, ತಾ|| ೨೬, ೨೭ ಸ್ತ್ರೀಲಾಭ, ಶುಭ ಭೋಜನ

ತುಲಾ— ಕೌಟುಂಬಿಕ ವ್ಯವಹಾರಗಳಲ್ಲಿ ವೆ (ಲಧಿಕಾರಿಗಳಿಂದ ತಿರಸ್ಕಾರ, ನೆರೆಹೊರೆ ಯವರೊಡನೆ ವೈಮನಸ್ಯ, ವಾಣಿಜ್ಯದಲ್ಲಿ ವಿಶೇಷ ನಷ್ಟವೊದಗುವುದು, ತಾ|| ೨೪, ೨೫ ಸ್ವಲ್ಪ ಚಿಂತೆ.

ವೃಶ್ಚಿಕ—ಆರೋಗ್ಯ ತೃಪ್ತಿಕರವಾಗಿರುವುದಿಲ್ಲ, ಹತ್ತಿಸಿದ ಕಾರ್ಯಗಳು ನಿಷ್ಫಲವಾಗುವುವು, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅಪಮಾನ, ಪ್ರವಾಸದಿಂದ ಹಾನಿ ತಾ|| ೩೦, ೩೧ ಚೋರ ಭಯ, ನಷ್ಟ.

ಧನುಸ್ಸು—ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವುದು, ಕೈಗೊಂಡ ಕಾರ್ಯಗಳು ಸಿದ್ಧಿಸುವುವು, ಪ್ರವಾಸದಿಂದ ಶುಭ ಕಾರ್ಯಗಳು ನಿಶ್ಚಿತವಾಗುವುವು, ತಾ|| ೨೯, ೩೦ ಶುಭ ಪ್ರವಾಸ

ಮಕರ—ಶಾಟರ ಪಟ್ಟುಗಳಿಂದ ಲಾಭ, ಲೇಖನ ವ್ಯವಹಾರಗಳು ಶುಭದಾಯಕವಾಗಿರುವುದು, ವಾಣಿಜ್ಯದಲ್ಲಿ ಅನಾರೋಗ್ಯ ಸಂಭವ, ತಾ|| ೨೪, ೨೫ ಶತ್ರು ನಾಶ.

ದೀಪಾವಳಿ ಉಡುಪುಗಳು

ತೀರಾ ಕಡಿಮೆ ಬೆಲೆಗೆ ಅಂದವಾದ ಉಡುಪುಗಳು ನಮ್ಮಲ್ಲಿ ಸಿದ್ಧವಿವೆ. ಒಂದು ಬಾರಿ ದಯಮಾಡಿ ನೋಡಿರಿ.

ಗೃಹಲಕ್ಷ್ಮೀ ಸ್ಟೋರ್ಸ್

ಅಂಗಡಿ ಬೀದಿ, ಕೊಳ್ಳೇಗಾಲ

Edited printed and published by A. K. Nagarajan at the Sadhvi Press D. Subbaiah Road Mysore.

ಎತ್ತನ್ನು ಕೊಂದುದಕ್ಕಾಗಿ ಜುಲ್ಮಾನೆ

ಮೈಸೂರು ೨೪

ಅಧಿಕರ್ನಾಟಕ ಪುರದಬೀ ಜಲಗಾರ ಕೇರಿಯ ರಂಗ ಮೊದಲಾದ ೯ ಜನರು ಅಕ್ರಮವಾಗಿ ಮೊನ್ನೆ ದಿನ ಜೀವದಿಂದಿದ್ದ ಎತ್ತನ್ನು ಕೊಂದುಹಾಕಿದರೆಂದು ಆಪಾದನೆಮೇಲೆ ಲಕ್ಷ್ಮೀಪುರಂ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪಾದಿತರುಗಳಿಗೆ ತಲಾ ೫ ರೂ ಜುಲ್ಮಾನೆಯನ್ನು ವಿಧಿಸಲಾಯಿತು

ಕುಂಭ—ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ನೌಕರಿಯಲ್ಲಿ ಮೇಲಧಿಕಾರಿಗಳ ಮನ್ನಣೆ ದೊರೆಯುವುದು, ಆರೋಗ್ಯ ಮತ್ತು ಧನಾದಾಯಗಳು ತೃಪ್ತಿದಾಯಕವಾಗಿರುವುವು, ತಾ|| ೨೫, ೨೬ ಮಿತ್ರ ದರ್ಶನ

ಮೀನ—ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ, ಮಿತ್ರರಿಂದ ಅಪೂರ್ವ ಮನ್ನಣೆ, ಹಳೆಯ ಬಾಕಿಯೆಲ್ಲವೂ ವಸೂಲಾಗುವುವು, ತಾ|| ೨೮, ೩೦ ಶುಭ ವಾರ್ತೆ, ಧನಾಗಮನ

ದೀಪಾವಳಿ ಪ್ರಯುಕ್ತ

ಸ್ವಂತ ಮಗ್ಗದಿಂದ ತಯಾರಾದ

ಮೈಸೂರು ಸಿಲ್ಕು ಸೀರೆಗಳೂ

ಉತ್ತಮವಾದ ಡಿಸೈನುಗಳಲ್ಲಿ

ಬೆಂಗಾಲ್ ಸಿಲ್ಕ್ ಸೀರೆಗಳೂ

ಮತ್ತು

ಕುಂಭಕೋಣದ ಸೀರೆಗಳೂ

ಬಂದಿವೆ. ದಯವಿಟ್ಟು ಇಂದೇ ಭೇಟಿ ಕೊಡಿರಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ,

ಚಿಕ್ಕಾಂಗಡಿ, ಮೈಸೂರು.

ಸರ್ ಎಂ. ವಿಶ್ವೇಶ್ವರಯ್ಯನವರ ಸರ್ ಮಿರ್ಜಾರವರ [illegible]

ಮೈಸೂರು

ನಾಳೆ ನಡೆಯಲಿರುವ ಘಟಿಕೋತ್ಸವಕ್ಕಾಗಿ ಡಾಕ್ಟರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್‌ರವರುಗಳು ನಿನ್ನೆ ಸಂಜೆ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿ [illegible] ಭವನದಲ್ಲಿ ಬಿಡಾರ ಮಾಡಿದ್ದಾರೆ.

ಗಾಂಧಿಜಿ ಚಿತ್ರಕ್ಕೆ ಅವಮಾನ ಮಾಡಿದುದಕ್ಕೆ ಶಿಕ್ಷೆ

ಮಧ್ಯ ಭಾರತದ ಅಗರ್ ಎಂಬಲ್ಲಿ ಆರ್ ಎಸ್ ಎಸ್ಸಿಗೆ ಸೇರಿದ [illegible] ಜನ ಅಧಿಕ ವಿದ್ಯಾರ್ಥಿಗಳನ್ನು ೪ ನೇ ತಾ|| ಭಾರತ ರಾಷ್ಟ್ರ ಧ್ವಜಗಳನ್ನು ಎಸೆಯುವಂತೆಯೂ ಮಹಾತ್ಮರ ಭಾವಚಿತ್ರಕ್ಕೆ [illegible] ಪ್ರೇರೇಪಿಸಿ ಅವಮಾನಪಡಿಸಿದುದಕ್ಕಾಗಿ ಆಯಾ ಜಿಲ್ಲಾ ಮ್ಯಾಜಿಸ್ಟ್ರೇಟರು [illegible] ಳಿಗೆ ತಲಾ ೩ ತಿಂಗಳು ಕಠಿಣ ಶಿಕ್ಷೆ ವಿಧಿಸಿದರು. ಇದೇ ಕೃತ್ಯದಲ್ಲಿ [illegible] ದ್ದ ಇನ್ನಿಬ್ಬರು ೪೮ ಗಂಟೆಯೊಳಗೆ [illegible] ಯನ್ನು ಬಿಟ್ಟು ಹೋಗ್ಬೇಕೆಂದು ಆಜ್ಞೆ ಮಾಡಲಾಯಿತು (ಪಿ ಟಿ ಐ)

ಹರಿಜನರಿಗೆ ಕ್ಷೌರ ಮಾಡಲು ನಿರಾಕರಣೆ

[illegible] ಹಾಸನದಲ್ಲಿ ಕ್ಷೌರಿಕರು ಹರಿಜನರಿಗೆ ಕ್ಷೌರ ಮಾಡಲು ನಿರಾಕರಿಸುತ್ತಿರುವರೆಂದು ವರದಿಯಾಗಿದೆ (ಪಿ [illegible]

ವುಡ್‌ಲ್ಯಾಂಡ್ಸ್ ಟಾಕೀಸ್

ಆಕರ್ಷಣೀಯ 4 ನೇ ವಾರ

ಮೈಸೂರು ಸಂಸ್ಥಾನದಲ್ಲೇ ಪ್ರಥಮ ಪ್ರದರ್ಶನ

ಘರ್ - ಕಿ - ಇಜತ್

ಮನೋರಮಾ ಶಾಂತಿ, ಜ ನೋರರು, ವಿಲಿಯಮ್ ಸುಲ್ತಾನ್, ಜೀವನ್, ದೀಕ್ಷಿತ್ ಮುಂತಾದವರು ಅಭಿನಯಿಸಿರುವ ಅತ್ಯಮೋಘ ಹಿಂದೀ ಚಿತ್ರ

GHAR-KI IZZAT

ಟಿ. ಆರ್. ಮಹಾಲಿಂಗಂ, ಯೋಗಮಂಗಳಂ, ಸಾರಂಗಪಾಣಿ, ಲಲಿತ ಪದ್ಮಿನಿ, ಬೇಬಿ ಕಮಲ ಡಿ. ಕೆ. ಪಟ್ಟಮ್ಮಾಳ್, ಪರಿಯನಾಯಕಿ

ಮೊದಲಾದ ಸುಪ್ರಸಿದ್ಧ ನಟ ನಟಿಯರ ಅಪೂರ್ವ ಸಮ್ಮಿಳನ

—:ಪ್ರಭಾ ಮತ್ತು ಗಣೇಶಾ ಟಾಕೀಸುಗಳಲ್ಲಿ:—

ಡೆಮನ್ ಲ್ಯಾಂಡ್

(ಜೆಮಿನಿ ಪ್ರೊ) (ತಮಿಳ್)

22—10—48 ರಿಂದ :: ಅಮೋಘ 4 ನೇ ವಾರ

ಮ್ಯಾಟಿನಿ ಮಧ್ಯಾಹ್ನ 3 ಕ್ಕೆ. 1 ನೇ ಆಟ ಸಂಜೆ 6-30 ಕ್ಕೆ, 2 ನೇ ಆಟ ರಾತ್ರಿ 10 ಕ್ಕೆ

ರಾಜಕಮಲ್ ಟಾಕೀಸ್

23-10-48 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಫಿಲ್ಮಿಸ್ತಾನ್ ಕಂಪೆನಿಯ ಪ

ದೋ ★ ★ ಭಾಯ

(ಹಿಂದಿ)

ತಾರಾಗಣ:— ಕಮಲ ಕೌಶಲ್ [illegible]

MORNING SHOWS From 22—10—1948

For 4 days only

DAVID COPPERFIELD

WITH:— W. C. Fields, Lionel Barrymore, Madge Evans

:: ಪ್ರಭುದೇವಾ ಟಾಕೀಸಿನಲ್ಲಿ

24-10-48 ರಿಂದ ದಿನವಹಿ 3 ಆಟಗಳು ಜಮುನಿ ಮುವಿಸ್

★ ಹರಿಶ್ಚಂದ್ರ ★

(ತಮಿಳು)

ಪಿ. ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣನ್, ಮಧುರಂ ಪಾತ್ರ ವಹಿಸಿರುವರು

ಸಂಪುಟ ೭] ಸೋಮವಾರ ೨೫-೧೦-೪೮ [ಸಂಚಿಕೆ ೯೮

ಗೋವಾ ಉತ್ಕಟ ಸ್ಥಿತಿ; ಮಿಲಿಟರಿ ಆಡಳಿತ

ಸರ್ ಎಂ. ವಿ. ಮತ್ತು ಸರ್ ಮಿರ್ಜಾರವರಿಗೆ ಗೌರವ ಪ್ರಶಸ್ತಿ

ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭ

ಮೈಸೂರು ೨೫

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭವು ಇಂದು ಬೆಳಗ್ಗೆ ಜಗನ್ಮೋಹನ ಬಂಗಲೆಯಲ್ಲಿ ನಡೆಯಿತು. ಮಾನ್ಯರಾದ ಶ್ರೀಮನ್ಮಹಾರಾಜರವರು ಅಧ್ಯಕ್ಷತೆ ವಹಿಸಿದ್ದರು.

ಪದವೀಧರರ ನಾಲ್ಕು ಕುದುರೆ ಸಾರೋಟಿನ ಮೆರವಣಿಗೆಯಿಂದ ಜಗನ್ಮೋಹನ ಬಂಗಲೆಗೆ ದಿ ರವರನ್ನು ಕರೆತರಲಾಯಿತು. ಪ್ರೊ ವೈಸ್ ಛಾನ್ಸಲರೂ ಸೆನೆಟ್ ಮತ್ತು ಅಕೆಡೆಮಿಕ್ ಕೌನ್ಸಿಲಿನ ಸದಸ್ಯರುಗಳೂ ಸ್ವಾಗತಿಸಿದರು.

ಸಮಾರಂಭವು ೯-೩೦ ಗಂಟೆಗೆ ಪ್ರಾರಂಭವಾಯಿತು. ಸರ್ ಎಂ ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರುಗಳಿಗೆ 'ಡಾಕ್ಟರ್ ಆಫ್ ಲಾಸ್' ಎಂಬ ಗೌರವ ಪದವಿಯನ್ನು ದಯಪಾಲಿಸಬೇಕೆಂದು ವೈಸ್ ಛಾನ್ಸಲರು ಪ್ರಭುಗಳನ್ನು ಕೋರಿದರು. ಮೈಸೂರಿಗೂ ಮತ್ತು ಭಾರತಕ್ಕೂ ಇವರುಗಳು ಸಲ್ಲಿಸಿರುವ ಸೇವೆಯನ್ನು ಕೊಂಡಾಡಿದರು. ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣಕರ್ತರಾದ ಸರ್ ಎಂ ವಿ ಯವರನ್ನೂ ಮತ್ತು ಅದರ ವಿದ್ಯಾರ್ಥಿಯಾಗಿದ್ದ ಮತ್ತು ಅದರ ಪ್ರಗತಿಗೆ ವಿಶೇಷ ಶ್ರಮ ವಹಿಸಿದ ಸರ್ ಮಿರ್ಜಾರವರನ್ನೂ ಸನ್ಮಾನಿಸುವುದು ವಿಶ್ವವಿದ್ಯಾಲಯದ ಕರ್ತವ್ಯವೆಂದು ತಿಳಿಸಿದರು. ಅನಂತರ ಪ್ರಭುಗಳು ಅವರುಗಳಿಗೆ ವಿಶೇಷ ಪದವಿಯನ್ನು ದಯಪಾಲಿಸಿದರು.

ಅನಂತರ ೧೪೦೭ ಮಹಿಳೆಯರೂ ಸೇರಿ, ಒಟ್ಟು ೧೩೧೯ ಜನರಿಗೆ ಪದವಿಯನ್ನೂ ಅವರಿಗೆ ಪದಕ ಮತ್ತು ನಗದು ಬಹುಮಾನವನ್ನೂ ಪ್ರಭುಗಳು ದಯಪಾಲಿಸಿದರು.

ಸರ್ ಎಂ ವಿ ಯವರ ಭಾಷಣ

ಅನಂತರ ಸರ್ ಎಂ ವಿಶ್ವೇಶ್ವರಯ್ಯನವರು ಪದವೀಧರರನ್ನು ಉದ್ದೇಶಿಸಿ ಈ ರೀತಿ ಭಾಷಣ ಮಾಡಿದರು:—

೩೦ ವರ್ಷಗಳ ಹಿಂದೆ ನಾನು ಈ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಸಮಯ ಭಾಷಣ ಮಾಡಿದೆನು. ಪ್ರಾಂತೀಯ ಸಂಸ್ಥಾನಗಳಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಿದ್ದು ಮೈಸೂರು ಮೊದಲನೆಯದು. ಆ ಕಾಲದಲ್ಲಿ ಭಾರತದಲ್ಲಿ ಕೇವಲ ೫ ವಿಶ್ವವಿದ್ಯಾಲಯಗಳಿದ್ದುವು. ಅದರಿಂದ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅನೇಕ ಅಡಚಣೆ ಮತ್ತು ಕಷ್ಟಗಳು ಬಂದುವು. ಈ ಎಲ್ಲರ ಸಹಕಾರಗಳನ್ನು ಪಡೆದುಕೊಂಡು, ಪ್ರತ್ಯೇಕ ವಿದ್ಯಾಲಯವನ್ನು ಸ್ಥಾಪಿಸಲಾಯಿತು.

ಕಳೆದ ೩೦ ವರ್ಷಗಳಲ್ಲಿ ಈ ವಿಶ್ವವಿದ್ಯಾಲಯವು ವಿಶೇಷ ಪ್ರಗತಿಯನ್ನು ಹೊಂದಿದೆ. ವಿದ್ಯಾಲಯವು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೧೫,೦೦೦ ಜನರು ಪದವೀಧರರಾಗಿದ್ದಾರೆ. ಮೈಸೂರಿನ ಪದವೀಧರರು ಮೈಸೂರು ಮತ್ತು ಭಾರತದ ಇತರ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ನನಗೆ ಬಹಳ ಸಂತೋಷದ ವಿಷಯವಾಗಿದೆ.

ಮೈಸೂರು ಸಂಸ್ಥಾನವು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಪ್ರಗತಿ ಪಥ...

ಸ್ವಾತಂತ್ರ್ಯವನ್ನು ಹೊಂದಿತು. ಈಗಿನ ಪ್ರಭುಗಳವರು ಪ್ರಜಾ ಸರ್ಕಾರವನ್ನು ದಯಪಾಲಿಸಿ ಜನಗಳಿಗೆ ಸಂತೃಪ್ತಿಯನ್ನುಂಟು ಮಾಡಿರುತ್ತಾರೆ.

ಭಾರತದ ಮತ್ತು ಮೈಸೂರಿನ ಭವಿಷ್ಯವು ಇನ್ನೂ ಅಷ್ಟೊಂದು ಸುಗಮವಾಗಿಲ್ಲ. ಎಷ್ಟೋ ಕಠಿಣ ಸಮಸ್ಯೆಗಳು ಇವೆ. ಅವುಗಳನ್ನು ಎಚ್ಚರದಿಂದಲೂ ಎದುರಿಸದಿದ್ದಲ್ಲಿ, ಭಾರತದ ಏಳಿಗೆಗೆ ಅನೇಕ ಕಷ್ಟಗಳು ಸಂಭವಿಸಬಹುದು.

ಆಹಾರ, ರಕ್ಷಣೆ, ಮತ್ತು ಕೈಗಾರಿಕೆಗಳಲ್ಲಿ ಸಂಸ್ಥಾನವು ಸ್ವಾವಲಂಬನೆಯನ್ನು ಹೊಂದಬೇಕು. ದೇಶದ ಪ್ರಗತಿ ಮತ್ತು ರಕ್ಷಣೆಯು ಜನರ ಶೀಲ ಮತ್ತು ದಕ್ಷತೆಗಳನ್ನೇ ಅವಲಂಬಿಸಿರುವುದು. ಭಾರತದಲ್ಲಿ ನೂತನ ರಾಜ್ಯವನ್ನು ಕಟ್ಟಬೇಕಾಗಿರುವುದರಿಂದ ದಕ್ಷತೆ ಕೌಶಲ್ಯ ಮತ್ತು ದೇಶದ ಸೇವೆಗಾಗಿ ದುಡಿಯಲು ಮಹತ್ವಾಕಾಂಕ್ಷೆಯ ಸ್ತ್ರೀ ಪುರುಷರನ್ನು ಸಿದ್ಧಗೊಳಿಸಬೇಕು. ಯುವಕರು ಕೈಗಾರಿಕೆಯಲ್ಲಿ ತರಬೇತಿ ಹೊಂದಿ ಕೌಶಲ್ಯವನ್ನು ಪಡೆಯಬೇಕು. ಎಲ್ಲ ಸೋಮಾರಿತನವು ಅಪರಾಧವೆಂದು ತಿಳಿಯಬೇಕು.

ಮೈ ಬಗ್ಗಿ ಕೆಲಸ ಮಾಡದೆ, ತನ್ನ ನ ಅವಲೋಕನಗಳಲ್ಲಿ ನಿಜವಾದ ಗುರಿಯನ್ನು ಹೊಂದದ ಭಾರತೀಯನು ಪ್ರಗತಿಯನ್ನು ಪಡೆಯಲಾರನು.

"ಯಾರು ದುಡಿಯುವುದಿಲ್ಲವೋ ಅವರು ಊಟ ಮಾಡಬಾರದು" ಎಂಬ ತತ್ವ ರಷ್ಯದ ಜನರ ನಾಣ್ಣುಡಿಯನ್ನು ಚಟುವಟಿಕೆ ಇಲ್ಲದ ವ್ಯಕ್ತಿಗೆ ಹೇಳಬಹುದು. ಯಾವ ಕೆಲಸ ಬಿಟ್ಟಿದ್ದರೂ ನಡತೆ, ಧೈರ್ಯ, ಸಂಕಲ್ಪ, ಶಿಸ್ತು, ಶ್ರದ್ಧೆ, ಆತ್ಮವಿಶ್ವಾಸ, ಸ್ವತಂತ್ರ ವ್ಯಕ್ತಿ ವೈಶಿಷ್ಟ್ಯ, ಕ್ರಮ ಸಹಿಷ್ಣುತೆ—ಇವೇ ಜಯವನ್ನು ಗಳಿಸಿಕೊಡುವ ವಿಶೇಷ ಗುಣಗಳೆಂದು ನನ್ನ ಅನುಭವದಿಂದ ಹೇಳಬಲ್ಲೆ. ನಾವು ಬುದ್ಧಿವಂತರೆನಿಸಬೇಕಾದರೆ—ನೀವು ನಿಮ್ಮ ಸ್ವಭಾವಕ್ಕನುಗುಣವಾದ ಉದ್ಯೋಗದಲ್ಲಿ ಕಷ್ಟಪಡಬೇಕು. ಅದೇ ನಿಮ್ಮನ್ನು ಉತ್ಕರ್ಷಕ್ಕೆ ಒಯ್ಯುವುದು. ಇದರಿಂದ ಪ್ರಗತಿಯು ಹೆಚ್ಚು ಉತ್ಸಾಹಪೂರಿತವಾಗುವುದು.

ಮೈಸೂರು ಸಂಸ್ಥಾನವು ಕೈಗಾರಿಕೆಗಳಲ್ಲಿ ಮುಂದುವರಿದ ಸಂಸ್ಥಾನವಾಗಿದ್ದರೂ ಉದ್ಯಮ ಪ್ರಗತಿ... ಭಾರತದ ಪ್ರದೇಶಗಳಲ್ಲೂ ಉಂಟಾಗಿಲ್ಲ. ಕೈಗಾರಿಕೆ ಬಗ್ಗೆ ಇನ್ನೂ ಹೆಚ್ಚು ಗಮನ ಕೊಡಬೇಕು...

ಪದವೀಧರರ ಸಂಖ್ಯೆ

ಈ ದಿನ ನಡೆದ ಘಟಿಕೋತ್ಸವದಲ್ಲಿ ಎಂ ಎ ಪರೀಕ್ಷೆಯಲ್ಲಿ ೨೩ ಜನರೂ, ಬಿ ಟಿ ಯಲ್ಲಿ ೪೭, ಬಿ ಎ ಆನರ್ಸ್‌ನಲ್ಲಿ ೫೩, ಬಿ ಎ ೨೫೧೦, ಬಿ ಕಾಂ. ೭೩, ಎಂ ಎಸ್ ಸಿ ೪೩ ಬಿ ಎಸ್ ಸಿ ಆನರ್ಸ್ ೭೩ ಬಿ ಎಸ್ ಸಿ ೫೧೧ ಬಿ ಇ ೧೧೯ ಮತ್ತು ಎಂ ಬಿ ಬಿ ಎಸ್ ೨೨ ಜನರು ಪದವಿಯನ್ನು ಪಡೆದರು.

ಡಾ|| ಪಟ್ಟಾಭಿಯವರಿಗೆ ಹೆಚ್ಚಿನ ಓಟುಗಳು

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಇದುವರೆಗೆ ಡಾ|| ಪಟ್ಟಾಭಿಯವರಿಗೆ ಬಾಬು ಪುರುಷೋತ್ತಮದಾಸ್ ಟಂಡನ್‌ರವರಿಗಿಂತ ಹೆಚ್ಚು ಓಟುಗಳು ಬಂದಿರುವುದಾಗಿ ಗೊತ್ತಾಗಿದೆ.

ಜೀವನದಲ್ಲಿ ಸ್ವಾತಂತ್ರ್ಯವುಂಟೇ? ಯಾತನೆ ಮತ್ತು ಬಂಧನಗಳಿಗೆ ಪ್ರತಿಫಲ ಏನು? ... ಆನಂದವು ಮಾನವ ಜೀವನದಲ್ಲಿ ದೊರಕುವುದೇ?—ಎಂಬ ಪ್ರಶ್ನೆಗಳು ಕೇಳಲ್ಪಟ್ಟಿವೆ. ನಾನು ೬೮ ವರ್ಷಗಳ ಹಿಂದೆ ಕೆಲಸಕ್ಕೆ ಸೇರಿದ ೩ ವರ್ಷಗಳಲ್ಲಿ ನಾನು ಕೆಲಸ ಮಾಡಿದ್ದೇನೆ. ಈಗ ನನಗೆ ೮೦ ವರ್ಷ ವಯಸ್ಸಾಗುತ್ತಿದೆ. ಈ ದೀರ್ಘ ಕಾಲಾವಧಿಯಲ್ಲಿ ನನಗೆ ಹಲವು ಅಪೂರ್ವ ಅನುಭವಗಳುಂಟಾಗಿವೆ. ಅನೇಕ ಬಾರಿ ಜೀವನವು ವಿಶೇಷ ಆಕರ್ಷಣೀಯವಾಗಿ ನನಗೆ ಆನಂದದ ಪ್ರಸಂಗಗಳೇ ಹೆಚ್ಚಾಗಿ ಉಂಟಾಗಿವೆ. ದುಃಖದ ಪ್ರಸಂಗಗಳು ಕಡಿಮೆಯಾಗಿ ಬದುಕಿದೆ. ನಾನು ಪುನಃ ಜನ್ಮವನ್ನೆತ್ತಬೇಕಾದರೆ ಮತ್ತೆ ಇಂಥ ಜೀವನವನ್ನೇ ಸಂತೋಷದಿಂದ ಸ್ವಾಗತಿಸುತ್ತೇನೆ.

ಅನಾಟೋಲ್ ಫ್ರಾನ್ಸ್ ಎಂಬ ಫ್ರೆಂಚ್ ತತ್ವಜ್ಞಾನಿಯು ಹೇಳುವಂತೆ ಈ ಸ್ವತಂತ್ರ... [illegible]

ಗೋವಾದಲ್ಲಿ ಮಿತಿಮೀರಿದ ದಬ್ಬಾಳಿಕೆ

ಕಾಂಗ್ರೆಸ್ ನಾಯಕರಿಗೆ ಗಡೀಪಾರು; ಮುದ್ರಣ ಯಂತ್ರ ಸರ್ಕಾರದ ವಶ

ಗೋವಾದ ನಾಲ್ಕು ಮಂದಿ ರಾಷ್ಟ್ರೀಯ ಕಾಂಗ್ರೆಸ್ ಮುಖಂಡರುಗಳು ಪ್ರಾಯಶಃ ಆ ಸಂಸ್ಥೆಯ ಸದಸ್ಯರಾಗಿದ್ದಾರೆಂಬ ಕಾರಣದಿಂದ, ಅವರು ಅಲ್ಲಿ ಸ್ಥಾಪಿಸಲ್ಪಟ್ಟಿರುವ ಸರ್ಕಾರದ ವಿರುದ್ಧವಾಗಿ ದಂಗೆಯೆದ್ದರೆಂದೂ ಆಪಾದಿಸಿ ಮಿಲಿಟರಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದರು. ವಿಚಾರಣೆ ನಡೆದ ನಂತರ ಅವರಿಗೆ ೧೫ ವರ್ಷ ಕಾಲ ಗಡೀಪಾರು ಶಿಕ್ಷೆ ವಿಧಿಸಲಾಯಿತು. ಆಪಾದಿತರು ಈಗಾಗಲೇ ೧೧ ತಿಂಗಳ ಕಾಲ ವಿಚಾರಣೆಯೇ ಇಲ್ಲದೆ ಜೈಲುವಾಸವನ್ನು ಅನುಭವಿಸಿದ್ದರು. ಗಡೀಪಾರು ಶಿಕ್ಷೆಗೆ ಗುರಿಯಾದವರನ್ನು ಆಫ್ರಿಕಾವಿಗೋ ಅಥವಾ ಪೋರ್ಚುಗಲ್ಲಿಗೋ ಕಳುಹಿಸುವ ಬಗ್ಗೆ ಗೋವಾದ ಗವರ್ನರ್ ಜನರಲ್ಲರು ನಿರ್ಧರಿಸಲಿರುವರು.

ಗೋವಾದ ಮುದ್ರಣಕಾರರೊಬ್ಬರಿಗೂ ಒಂದೂವರೆ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಅವರ ಪೌರ ಹಕ್ಕುಗಳನ್ನೂ ಐದು ವರ್ಷ ಕಾಲ ರದ್ದುಗೊಳಿಸಿದ್ದಲ್ಲದೆ ಮುದ್ರಣ ಯಂತ್ರವನ್ನು ಸರ್ಕಾರದ ವಶಪಡಿಸಿಕೊಳ್ಳಲಾಯಿತು. ಪರಿಸ್ಥಿತಿಯು ದಿನೇ ದಿನೇ ವಿಷಮಿಸುತ್ತಿರುವುದರಿಂದ ಇಸ್ಪೀಗ್ಲೇ ಅಲ್ಲಿ ದೊಡ್ಡ ದಂಗೆಯೇಳುವ ಸಂಭವವುಂಟೆಂದೂ ವರದಿಯಾಗಿದೆ. ಅಲ್ಲಿ ಉಂಟಾಗಬಹುದಾದ ಅಶಾಂತ ಪರಿಸ್ಥಿತಿಯನ್ನೆದುರಿಸಲು ಮಿಲಿಟರಿ ಗವರ್ನರ್ ರೊಬ್ಬರನ್ನು ನೇಮಿಸಲಾಗಿದೆ. ಮಿಲಿಟರಿ ಬಲವನ್ನು ಹೆಚ್ಚಿಸಲು ಇಸ್ಪೀಗ್ಲೇ ೩೦೦೦ ಮಂದಿ ಆಫ್ರಿಕದ ಸೈನಿಕರನ್ನು ಕಳಿಸಲಾಗುವುದೆಂದೂ ವರದಿಯಾಗಿದೆ. (ಪಿ ಟಿ. ಐ.)

ಹೈದರಾಬಾದ್ ಪ್ರಶ್ನೆಯನ್ನು ವಾಪಸು ತೆಗೆದುಕೊಳ್ಳುವುದಿಲ್ಲ

ವಿಶ್ವಭದ್ರತಾ ಸಮಿತಿಯು ಹೈದರಾಬಾದ್ ನಿಯೋಗದ ನಾಯಕರಾದ ಕಾರ್ಯದರ್ಶಿ ಮೊಯಿನ್ ನವಾಜ್ ಜಂಗ್‌ರವರು ಶುಕ್ರವಾರ ಈ ದಿನ ಪ್ಯಾರಿಸ್ಸಿಗೆ ತೆರಳುವರು. ಹೈದರಾಬಾದಿನ ಪರಿಸ್ಥಿತಿಗೆ ಅವರು ಇತ್ತೀಚಿನ ವರದಿಗಳನ್ನು ಸಂಗ್ರಹಿಸುವ ಉದ್ದೇಶದಿಂದ ಅಲ್ಲಿಗೆ ತೆರಳಿದ್ದರು. ವಿಶ್ವಸಮಿತಿಯು ಮುಂದೆ ಹೈದರಾಬಾದಿನ ಬಗ್ಗೆ ಚರ್ಚೆ ನಡೆಸಬೇಕೆಂದು ಒತ್ತಾಯಪಡಿಸುವರೆಂದೂ ಹೇಳಲಾಗಿದೆ. ಹೈದರಾಬಾದಿನ ಪರಿಸ್ಥಿತಿಯನ್ನು ಪರಿಶೀಲಿಸಲು ವಿಶ್ವಸಮಿತಿಯು ಒಂದು ಸಮಿತಿಯನ್ನು ಕಳುಹಿಸಬೇಕೆಂದು ಅವರು ಕೇಳಬಹುದಾಗಿಯೂ ತಿಳಿದುಬಂದಿದೆ.

ಹೈದರಾಬಾದಿನ ಪರವಾಗಿ ವಿಶ್ವಸಮಿತಿಯಲ್ಲಿ ಭಾಗವಹಿಸಲು ತಮಗೆ ಅಧಿಕಾರವು ಇನ್ನೂ ಇರುವುದಾಗಿಯೂ, ತಮ್ಮ ದೂರನ್ನು ವಾಪಸು ತೆಗೆದುಕೊಳ್ಳುವ ಪ್ರಶ್ನೆಯಿಲ್ಲವೆಂದೂ ನವಾಬ್ ಮೊಯಿನ್ ನವಾಜ್ ಜಂಗ್‌ರವರು ತಿಳಿಸಿದ್ದಾರೆ.

ಕೆ. ಸಿ. ರೆಡ್ಡಿಯವರು ದಿಲ್ಲಿಗೆ

ಮೈಸೂರು ೨೫

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ... ಸಮಿತಿಯ ಅಧ್ಯಕ್ಷರಾದ ಶ್ರೀ ... ಅವರು ಅಲ್ಲಿ ನಾಲ್ಕು ದಿ... [illegible]

ಎಣ್ಣೆ ಹೊಳೆ ಮತ್ತು ಗುಂಡ್ಲು ನದಿಗಳ ಸೇತುವೆ

ಶಂಕುಸ್ಥಾಪನೆ

ಪ್ರಭುಗಳಿಂದ ಸಮಾರಂಭ

ಮೈಸೂರು, ೨೫

ಜಿಲ್ಲಾ ಬೋರ್ಡಿನವರು ನಂಜನಗೂಡು ತಾಲ್ಲೂಕಿನ ಬಳಿ ಎಣ್ಣೆ ಹೊಳೆಗೆ ಕಟ್ಟಲಿರುವ ಸೇತುವೆಯ ಶಂಕುಸ್ಥಾಪನಾ ಮಹೋತ್ಸವವನ್ನೂ ಮತ್ತು ಗುಂಡ್ಲುಪೇಟೆ ತಾಲ್ಲೂಕು ಸಮೀಪದಲ್ಲಿ ಗುಂಡ್ಲು ನದಿಗೆ ಕಟ್ಟಲಿರುವ ಸೇತುವೆಯ ಶಂಕುಸ್ಥಾಪನಾ ಮಹೋತ್ಸವವನ್ನು ನೆನ್ನೆ ದಿನ ಪ್ರಭುಗಳವರು ನೆರವೇರಿಸಿದರು.

ಎರಡು ಕಡೆಗಳಿಗೂ ಹೋಗುವ ಮಾರ್ಗಗಳಲ್ಲಿ ಅನೇಕ ತಳಿರುತೋರಣಗಳನ್ನು ಕಟ್ಟಲಾಗಿತ್ತು. ಗ್ರಾಮಗಳ ಮತ್ತು ಸುತ್ತಲಿನ ಪ್ರದೇಶಗಳಿಂದ ಬಹು ಮಂದಿ ಪ್ರಜೆಗಳು ಪ್ರಭುಗಳ ದರ್ಶನ ಪಡೆದರು. ಸರ್ಕಾರಿ ಅಧಿಕಾರಿಗಳು ಸಮಾರಂಭಕ್ಕೆ ಹಾಜರಾಗಿದ್ದರು.

ಜಿಲ್ಲಾ ಬೋರ್ಡು ಅಧ್ಯಕ್ಷರೂ ಮತ್ತು ಸದಸ್ಯರುಗಳೂ ಪ್ರಭುಗಳಿಗೆ ಸ್ವಾಗತ ನೀಡಿದರು.

ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಕೆ. ಎಂ. ಚನ್ನಬಸಪ್ಪನವರು ಎರಡು ಗ್ರಾಮಗಳಲ್ಲೂ ಬಿನ್ನವತ್ತಳೆಯನ್ನು ಓದಿ ಪ್ರಭುಗಳವರಿಗೆ ಅರ್ಪಿಸಿದರು.

ಶ್ರೀಮನ್ಮಹಾರಾಜರವರೇ, ನಿನ್ನೆ ದಿನದ ಶಿವಮಾಸಿನ ಬಳಿ ಎಣ್ಣೆ ಹೊಳೆಯ ಸೇತುವೆಗೆ ಅಸ್ತಿಭಾರ ಶಿಲೆಯನ್ನು ಸ್ಥಾಪಿಸುವಾಗ ಹಾಜರಾಗಿದ್ದ ಬಾಹುಳ್ಯ ಸಾರಂಶ:

ನಿಮ್ಮ ಆಹ್ವಾನವನ್ನು ಮನ್ನಿಸಿ, ಈ ದಿನ ಇಲ್ಲಿಗೆ ಬಂದಿರುವುದು, ನಮಗೆ ವಿಶೇಷ ಸಂತೋಷವನ್ನುಂಟು ಮಾಡಿದೆ. ಆದರಪೂರ್ವಕವಾಗಿ ನೀವು ಸಮರ್ಪಿಸಿರುವ ಬಿನ್ನವತ್ತಳೆಯಿಂದ, ನಮ್ಮ ಸಂತೋಷವು ಮತ್ತಷ್ಟು ಅಧಿಕವಾಗಿದೆ.

ಇಲ್ಲಿ ಸೇತುವೆಯನ್ನು ಕಟ್ಟಬೇಕೆಂದು ನೀವು ಬುದ್ಧಿಶಾಲಿಗಳು. ಸ್ವಾಭಾವಿಕವಾಗಿದೆ. ಇಲ್ಲಿ ಸೇತುವೆಯ ಇಲ್ಲದಿರುವ ಕಾರಣದಿಂದ, ಮಳೆಗಾಲದಲ್ಲಿ ಇನ್ನಾಪೆ, ಬಸವಾಪುರ, ಹುಲ್ಲಹಳ್ಳಿ ಮುಂತಾದ ಗ್ರಾಮಗಳ ಜನರಿಗೆ ಸಂಚಾರಕ್ಕೆ ಬಹಳ ತೊಂದರೆಯಾಗಿತ್ತು ಮತ್ತು ವ್ಯಾಪಾರ ವ್ಯವಹಾರಗಳಿಗೆ ಅಡ್ಡಿಯಾಗಿದೆ. ನೀವು ಬಿನ್ನವತ್ತಳೆಯಲ್ಲಿ ಸೂಚಿಸಿರುವಂತೆ, ಈ ತೊಂದರೆಯು ಪರಿಹಾರವಾದರೆ, ಈ ಪ್ರದೇಶದ ಜನರ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಪ್ರದೇಶದ ಕೆರೆ ಕಾಲುವೆಗಳು ವಿಶೇಷವಾಗಿ ನದಿಯ ನೀರು ಬರುವುದರಿಂದ, ವ್ಯವಸಾಯಗಾರರು ತಾವು ಬೆಳೆದ ಧಾನ್ಯ ಮುಂತಾದವುಗಳನ್ನು ಸಾಗಿಸುವುದಕ್ಕೆ ಈ ಸೇತುವೆಯು ಬಹಳ ಸಹಕಾರಿಯಾಗುತ್ತದೆ. ನಿಮ್ಮ ಈ ಮುಖ್ಯವಾಗಿ, ಈ ಪ್ರದೇಶದ ಜನರಿಗೆ ಚಂದಾ ಹಣವನ್ನು ಕಲ್ಪಿಸಿ ಇದನ್ನು ಕೇಳಿ ನಮಗೆ ಬಹಳ ಹರ್ಷವುಂಟಾಗಿದೆ. ಜನರಲ್ಲಿ ಸ್ವಾವಲಂಬನ ಬುದ್ಧಿಯು ಬೆಳೆಯುತ್ತಿರುವುದಕ್ಕೆ ಇದೂ ಒಂದು ಉತ್ತಮ ನಿದರ್ಶನವಾಗಿದೆ. ಗ್ರಾಮಾಂತರ ಪ್ರದೇಶಗಳ ಪ್ರಗತಿಗೆ ಇದೊಂದು ಶುಭ ಸೂಚನೆಯೆನ್ನಲು ಸಂದೇಹವಿಲ್ಲ.

ಗ್ರಾಮಗಳ ಅಭಿವೃದ್ಧಿ ಸಾಧನೆಗೆ ಅದರ ಶ್ರೇಯಸ್ಸನ್ನು ನೀವು ಮನಗಂಡು, ಅದಕ್ಕಾಗಿ ಆಸಕ್ತಿಯಿಂದ ಶ್ರಮಿಸುತ್ತಿರುವುದು ನಿಮ್ಮ ಬಿನ್ನವತ್ತಳೆಯಿಂದ ವ್ಯಕ್ತವಾಗುತ್ತದೆ. ವಿದ್ಯಾಭಿವೃದ್ಧಿಗೆ ಅವಶ್ಯಕವಾದ ಕಟ್ಟಡಗಳ ಕೊರತೆಯನ್ನು ಒದಗಿಸಲು ನೀವು ಉದ್ದೇಶಿಸಿದ್ದೀರಿ, ಆಸ್ಪತ್ರೆಗಳಿಗೆ ಬೇಕಾದ ಕಟ್ಟಡಗಳನ್ನು ಕಟ್ಟಿಸುವ ಒಂದು ಕಾರ್ಯವನ್ನು ನೀವು ಆಗಲೇ ಪ್ರಾರಂಭಿಸಿದ್ದೀರಿ. ಇವೆರಡೂ ಅತ್ಯಗತ್ಯವಾಗಿ ಬೇಕಾಗಿರತಕ್ಕ ಕೆಲಸಗಳಾಗಿವೆ. ನೀವು ಕೈಕೊಂಡ ನಾನಾ ಪ್ರಯತ್ನಗಳೂ ಸಾಂಗವಾಗಿ ನೆರವೇರಿ ಜನರಿಗೆ ಸಹಾಯವಾಗಲೆಂದು ನಾವು ಹಾರೈಸುತ್ತೇವೆ.

ನಿಮ್ಮ ಬಿನ್ನವತ್ತಳೆಯಲ್ಲಿ ಕೆಲವು ಅರಿಕೆಗಳನ್ನು ಸೂಚಿಸಿದ್ದೀರಿ. ಮೊದಲನೆಯದಾಗಿ, ನಿಮ್ಮ ಬೋರ್ಡಿಗೆ ಪ್ರತ್ಯೇಕವಾದ ವರಮಾನವು ಸಿಕ್ಕುವಂತೆ ಮಾಡಬೇಕೆಂಬ ವಿಚಾರ. ಈ ವಿಚಾರವು ಸರ್ಕಾರದ ಕಾರ್ಯನೀತಿಗೆ ಸಂಬಂಧಪಟ್ಟಿದೆ. ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ಇತರ ಅರಿಕೆಗಳನ್ನು ಸರ್ಕಾರದವರು ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳುವರೆಂದು ನಂಬಿದ್ದೇವೆ. ಸೂಚಿಸಲಿಚ್ಛಿಸುತ್ತೇವೆ.

ಬಿನ್ನವತ್ತಳೆಯಲ್ಲಿ ನೀವು ನಮಗೂ ನಮ್ಮ ಕುಟುಂಬದವರಿಗೂ ಶುಭವನ್ನು ಕೋರಿರುವುದಕ್ಕಾಗಿ, ನಿಮ್ಮನ್ನು ವಂದಿಸುತ್ತೇವೆ.

ಇನ್ನು ಇಲ್ಲಿ ನಿರ್ಮಿಸಲಾಗುವ ಸೇತುವೆಯ ಅಸ್ತಿಭಾರ ಶಿಲೆಯನ್ನು ಅತ್ಯಂತ ಸಂತೋಷದಿಂದ ಸ್ಥಾಪಿಸುತ್ತೇವೆ.

ಅನಂತರ ಪ್ರಭುಗಳು ಗುಂಡ್ಲುಪೇಟೆ ತಾಲ್ಲೂಕು ಹಂಗಳ ಬಳಿ ಗುಂಡ್ಲು ನದಿ ಸೇತುವೆಗೆ ಅಸ್ತಿಭಾರ ಶಿಲೆಯನ್ನು ಸ್ಥಾಪಿಸುವಾಗ ಅರ್ಪಿತ ಬಿನ್ನವತ್ತಳೆಗೆ ಉತ್ತರವಾಗಿ ಭಾಷಣದ ಸಾರಾಂಶ:—

ಈ ದಿನ ಇಲ್ಲಿ ದೊರೆತಿರುವ ಆದರದ ಸ್ವಾಗತದಿಂದಲೂ ಮತ್ತು ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ರಾಜಭಕ್ತಿ ವಿಶ್ವಾಸಗಳಿಂದಲೂ ನಮ್ಮ ಮನಸ್ಸಿಗೆ ಅತ್ಯಂತ ಹರ್ಷವುಂಟಾಗಿದೆ.

ಸಂಸ್ಥಾನದ ವ್ಯಾಪಾರ ಮತ್ತು ವಾಣಿಜ್ಯದ ಪುರೋಭಿವೃದ್ಧಿಗೆ ಸಂಚಾರ ಸಾಧನಗಳ ಸೌಕರ್ಯವು ಅತ್ಯಾವಶ್ಯಕವಾಗಿದೆ. ಸಂಚಾರಸಾಧನಗಳಲ್ಲಿ, ಸೇತುವೆಗಳು ಪ್ರಾಮುಖ್ಯವಾದ ಅಂಗವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಯುದ್ಧಾನಂತರದ ಪುನರ್ರಚನೆಯ ಯೋಜನೆಗಳಲ್ಲಿ, ಹದಿನಾಲ್ಕು ಭಾರಿ ಸೇತುವೆಗಳನ್ನು ಕಟ್ಟುವ ಯೋಜನೆಯೂ ಸೇರಿರುತ್ತದೆ. ಈ ಹದಿನಾಲ್ಕು ದೊಡ್ಡ ಸೇತುವೆಗಳಲ್ಲಿ ಮೂರು ಸೇತುವೆಗಳು, ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಿರ್ಮಿತವಾಗುತ್ತವೆ. ಈ ವಿಚಾರದಲ್ಲಿ ಆಗಲೇ ಕಾರ್ಯಾರಂಭವಾಗಿದೆ. ತುಂಬೆಸೋಗೆಯ ಬಳಿಯಲ್ಲಿ ಸೇತುವೆಯ ಕೆಲಸವು ಮುಂದುವರಿಯುತ್ತಿರುವುದನ್ನೂ, ಮತ್ತು ಬನ್ನೂರ ಬಳಿಯಲ್ಲಿಯೂ ಚುಂಚನಕಟ್ಟೆಯ ಬಳಿಯಲ್ಲಿಯೂ ಕಾವೇರೀ ನದಿಗೆ ಸೇತುವೆಗಳನ್ನು ಕಟ್ಟುವ ಕೆಲಸವು ಪ್ರಾರಂಭವಾಗುವಂತಿರುವುದನ್ನೂ ನೀವು ಬಿನ್ನವತ್ತಳೆಯಲ್ಲಿ ಸೂಚಿಸಿಯೇ ಇದ್ದೀರಿ. ಈ ದೊಡ್ಡ ಸೇತುವೆಗಳ ಜೊತೆಗೆ, ಒಳನಾಡಿನಲ್ಲಿ ನಾನಾ ಹೊಳೆಗಳಿಗೂ ಸೇತುವೆಗಳು ನಿರ್ಮಾಣವಾಗುತ್ತಿರುವುದು, ಸಂತೋಷದ ಸಂಗತಿಯೇ ಸರಿ.

ಇಲ್ಲಿ ಸೇತುವೆಯು ಇಲ್ಲದಿರುವ ಕಾರಣ, ಈ ಪ್ರದೇಶದ ಜನರಿಗೆ ಬಹಳ ತೊಂದರೆಯಾಗಿದೆಯೆಂದು ಸೂಚಿಸಿದ್ದೀರಿ. ಸೇತುವೆಯನ್ನು ಕಟ್ಟಿದ ತರುವಾಯ ಮೈಸೂರ ನೀಲಗಿರಿ ರಸ್ತೆಗೂ ಮತ್ತು ಗುಂಡ್ಲುಪೇಟೆ—ಚಾಮರಾಜನಗರ ರಸ್ತೆಗೂ ಸಂಬಂಧ ಕಲ್ಪಿತವಾಗಿ, ವ್ಯಾಪಾರ ವಾಣಿಜ್ಯಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ.

ಮುಂದೆ ಏರ್ಪಡುವ ರಾಜ್ಯಾಂಗ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳ ಕಾರ್ಯಕ್ಷೇತ್ರವು ವಿಸ್ತರಗೊಳ್ಳುವ ವಿಚಾರವನ್ನೂ ಮತ್ತು ಅವುಗಳ ಜವಾಬ್ದಾರಿಗಳು ಹೆಚ್ಚಾಗುವ ವಿಚಾರವನ್ನೂ ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿಸಿದ್ದೀರಿ. ಈ ಸಂಬಂಧವಾಗಿ ಮಾಗ್ರ ವಿಷಯಗಳೂ, ನಮ್ಮ ಸಂಸ್ಥಾನದ ರಾಜ್ಯಾಂಗ ರಚನಾ ಸಭೆಯು ಪರ್ಯಾಲೋಚನೆಯಲ್ಲಿವೆ.

ಗುಂಡ್ಲುಪೇಟೆಯಿಂದ ತಿರುಗಾಟದ ರಸ್ತೆಯನ್ನು ಮಾಡಿಸಿ: ವಿಷಯ, ಕೃಷ್ಣಹಳ್ಳಿಯಲ್ಲಿ "ಕೋಸರ" ಹೈಸ್ಕೂಲನ್ನು ಏರ್ಪಡಿಸುವ ವಿಚಾರ, ಪಿರಿಯಾಪಟ್ಟಣದ ತಾಲ್ಲೂಕು ಕೊಪ್ಪದ ಬಳಿಯಲ್ಲಿ ಪ್ರಾರಂಭಿಸಬೇಕೆಂದು ಸೂಚಿಸಲಾಗಿರುವ "ಫ್ಲೈಸ್" ಸ್ಥಾವರದ ಯೋಜನೆಯ ವಿಚಾರಗಳು ಸರ್ಕಾರದವರ ತೀವ್ರಾಲೋಚನೆಯಲ್ಲಿವೆ. ನಿಮ್ಮ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ಇತರ ಅರಿಕೆಗಳ ವಿಚಾರವನ್ನು ಸರ್ಕಾರದವರು ಪರಿಶೀಲಿಸಿ ಸೂಕ್ತ ರೀತಿ ತೀರ್ಮಾನಿಸುವರೆಂದು ನಾವು ನಂಬಿದ್ದೇವೆ.

ಇನ್ನು, ಇಲ್ಲಿ ನಿರ್ಮಿತವಾಗುವ ಸೇತುವೆಯ ಅಸ್ತಿಭಾರ ಶಿಲೆಯನ್ನು ನಾವು ಅತ್ಯಂತ ಸಂತೋಷದಿಂದ ಸ್ಥಾಪಿಸುತ್ತೇನೆ. ಸೇತುವೆಯ ಕೆಲಸವು ಶೀಘ್ರವಾಗಿ ಪೂರ್ತಿಯಾಗಿ, ಜನಗಳಿಗೆ ಅನುಕೂಲವಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ವಿವಾಹ ಮಹೋತ್ಸವ

ನಂಜನಗೂಡಿನ ಲೇಟ್ ಶ್ರೀ ಆರ್. [illegible] ರಾಯರ ಪುತ್ರರೂ, ಮಂಡ್ಯ ಜಿಲ್ಲಾ [illegible] ಕ್ಸೈಜು ಅಧಿಕಾರಿಗಳೂ ಆದ ಶ್ರೀ ಆರ್. [illegible] ಶ್ರೀನಿವಾಸಯ್ಯನವರ ವಿವಾಹವು ಬೆಂಗಳೂರಿನ ವಕೀಲರಾದ ಶ್ರೀ ಕೆ. ಆರ್. ಸೀತಾರಾಮಯ್ಯನವರ ಪುತ್ರಿ ಚಿ|| ಸೌ|| ವಿಜಯಲಕ್ಷ್ಮಿ ಯವರೊಡನೆ ನೆನ್ನೆ ದಿನ ಬೆಂಗಳೂರಿನಲ್ಲಿ ನೆರವೇರಿತು.

ದೀಪಾವಳಿ ಪ್ರಯುಕ್ತ

ಸ್ವಂತ ಮಗ್ಗದಿಂದ ತಯಾರಾದ

ಮೈಸೂರು ಸಿಲ್ಕು ಸೀರೆಗಳೂ

ಉತ್ತಮವಾದ ಡಿಸೈನುಗಳಲ್ಲಿ

ಬೆಂಗಾಲ್ ಸಿಲ್ಕ್ ಸೀರೆಗಳೂ

ಮತ್ತು

ಕುಂಭಕೋಣದ ಸೀರೆಗಳೂ

ಬಂದಿವೆ. ದಯವಿಟ್ಟು ಇಂದೇ ಭೇಟಿ ಕೊಡಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ,

ಶಿವರಾಂಪೇಟೆ, ಮೈಸೂರು.

+‡ ಶ್ರೀ ಶ್ರೀನಿವಾಸ ಖಾರಿ ಪ್ರಿಂಟಿಂಗ್ ವರ್ಕ್ಸ್ ‡+

೪೮೪, ದಿವಾನ್ಸ್ ಅಗ್ರಹಾರ, ಮೈಸೂರು

ದೀಪಾವಳಿ ಹಬ್ಬಕ್ಕೆ ಬೇಕಾಗುವ ಗಟ್ಟಿ ಬಣ್ಣದಲ್ಲಿ ಪ್ರಿಂಟ್ ಮಾಡಿದ

ಸೀರೆಗಳು, ಚೀಟಿ ಬಟ್ಟೆಗಳು

ಸುಲಭ ದರಕ್ಕೆ ಸಿಕ್ಕುತ್ತವೆ

ಸ್ವದೇಶೀ ಶೈಲಿಯಲ್ಲಿ ಹೊಲಿಗೆ ಕೆಲಸ ಮಾಡಲು ಚೆನ್ನಾಗಿ ದರ್ಜಿ ಕೆಲಸ ಮಾಡುವುದು. ಒಟ್ಟು ನಂಗಸು ಬೇಕಾಗಿದ್ದಾರೆ. ಮೇಲ್ಕಂಡ ಅಡ್ರೆಸ್ಸಿನ ಸ್ಥಳದಲ್ಲಿ ಬಂದು ವಿಚಾರಿಸಬಹುದು

ಕೆ. ಭಾಗೀರಥಮ್ಮ, ಯಜಮಾನಿ

ದೀಪಾವಳಿ ಉಡುಪುಗಳು

ಹೊಸ ಶರಿದು ಬೆಲೆಗೆ ಅಂದವಾದ ಉಡುಪುಗಳು ನಮ್ಮಲ್ಲಿ ಸಿಕ್ಕುತ್ತವೆ. ಒಂದು ಬಾರಿ ದಯಮಾಡಿ ನೋಡಿರಿ.

ಗೃಹಲಕ್ಷ್ಮೀ ಸ್ಟೋರ್ಸ್

ಅಂಗಡಿ ಬೀದಿ, ಕೊಳ್ಳೇಗಾಲ

ಪ್ರಭುದೇವಾ ಟಾಕೀಸಿನಲ್ಲಿ

24-10-48 ರಿಂದ ದಿನವಹಿ 3 ಆಟಗಳು ಜಯಸಿಂಹ ಯವರ

ಹರಿಶ್ಚಂದ್ರ

(ತಮಿಳು)

ಪಿ. ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣ, ಮಧುರಂ ಪಾತ್ರ ವಹಿಸಿರುವರು

ಸಂಪುಟ ೭] ಮಂಗಳವಾರ ೩೧-೧೦-೩೯ [ಸಂಚಿಕೆ ೯೯

ಡಾ॥ ಪಟ್ಟಾಭಿಯವರೇ ಕಾಂಗ್ರೆಸ್ ಅಧ್ಯಕ್ಷರು

ಇಂಜನಿಯರಿಂಗ್ ಸ್ಕೂಲಿಗೆ ಸರ್ ವಿಶ್ವೇಶ್ವರಯ್ಯನವರ ಭೇಟಿ

ಮೈಸೂರು ೩೦

ರಾಜಧಾನಿಯ ಟ್ಯಾಕನಿಕಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಗೆ ಈ ದಿನ ಸರ್ ಎಂ. ವಿಶ್ವೇಶ್ವರಯ್ಯನವರು ಸರ್ ಎ. ಆರ್ ಇನ್ಸ್ಪೆಕ್ಟರವರೂ ... ಅಲ್ಲಿ ನಡೆಯುವ ಕೆಲಸ ಕಾರ್ಯಗಳನ್ನು ನೋಡಿ ತಮ್ಮ ಹೃತ್ಪೂರ್ವಕ ಸಂತೋಷವನ್ನು ವ್ಯಕ್ತಪಡಿಸಿದರು ... ಶಾಲೆಯು ತೃಪ್ತಿಕರವಾಗಿ ನಡೆಯುತ್ತಿದೆಯೆಂದು ಹಾರೈಸಿದರು. ಅವರ ... ಈ ದಿನ ಶಾಲೆಗೆ ... ರಜಾ ದಯಪಾಲಿಸಲ್ಪಟ್ಟಿತು.

ಘಟಿಕೋತ್ಸವದಲ್ಲಿ ಬಹುಮಾನ

ಈ ವರ್ಷದ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ರಾಜಧಾನಿಯ ಎಸ್. ವಿ. ... ರಾವ್ ಶೇಷಣ್ಣನವರ ಉಚಿತ ವಿದ್ಯಾಲಯದಿಂದ ೧೮ ಜನ ವಿದ್ಯಾರ್ಥಿಗಳು ... ಪದವಿಗಳನ್ನು ಪಡೆದಿರುತ್ತಾರೆ. ಅವರುಗಳಲ್ಲಿ ಸಂಸ್ಕೃತ ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಶ್ರೀ ಟಿ. ಎಸ್. ... ಸ್ನಾತಕರಿಗೆ ... ಭಂಗಾರದ ಪದಕ ... ಪ್ರೊ॥ ಸಿ. ಆರ್. ನರಸಿಂಹ ಶಾಸ್ತ್ರಿ ಬಹುಮಾನವೂ; ಬಿ. ಎ. ಆನರ್ಸ್ ... ಶಾಸ್ತ್ರ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ... ಡಿ. ಕೆ. ರಂಗನಾಥ ರಾವ್ ರವರಿಗೆ ... ಭಂಗಾರದ ಪದಕ, ಎಂ. ... ಭಂಗಾರದ ಪದಕ ... ಎಸ್. ಸುಬ್ಬರಾವ್ ಬಹುಮಾನ ... ಬಿ. ಎ. ಆನರ್ಸ್ ... ಪರೀಕ್ಷೆಗೆ ... ಶ್ರೀ ಕೆ. ವಿ. ಸುಬ್ಬರಾಯರಿಗೆ ... ರಾವ್ ಸುವರ್ಣ ಪದಕ ... ಭಂಗಾರದ ಪದಕಗಳೂ; ಪತ್ರ ಬಿ. ಎ. ಪರೀಕ್ಷೆಯಲ್ಲಿ ಶ್ರೀ ಸಿ. ಎಚ್. ... ರವರಿಗೆ ... ವೀರ್ ಭಂಗಾರದ ಪದಕ, ... ಸಿದ್ದೇಗೌಡ ... ಮತ್ತು ... ಎಚ್. ... ಬಹುಮಾನಗಳೂ ಬಂದಿರುತ್ತವೆ.

ಪ್ರಭುಗಳ ಭೇಟಿ

ಮೈಸೂರು ೩೦

ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ... ಶ್ರೀ ಕೆ. ಹನುಮಂತಯ್ಯನವರು ... ಪ್ರತಿನಿಧಿಗಳಾದ ... ಪಟೇಲರವರೂ ಈ ದಿನ ಶ್ರೀಮನ್ಮಹಾರಾಜರವರ ಭೇಟಿ ಪಡೆದರು.

ಸೀರೆಗಳು

... ಬಜಾರ :: ... ಬೆಲೆ

... ಸಿಲ್ಕು | ನಾನಾ ವಿಧ
... ಸಿಲ್ಕು | ಸಾದಾ ಸೀರೆಗಳು
... ಸಿಲ್ಕು | ಈಗ ತಾನೆ ಬಂದಿವೆ

ವಿಜಯಲಕ್ಷ್ಮೀ ವಿಲಾಸ್

... ರೋಡ್, ... ಪೇಟೆ ಮೈಸೂರು.

Editor, printed and published by ... Nagarajan at the Sadhvi Press ... Road Mysore

ಡಾ॥ ಪಟ್ಟಾಭಿಯವರೇ ಕಾಂಗ್ರೆಸ್ ಅಧ್ಯಕ್ಷರು

ಬಾಬು ಪುರುಷೋತ್ತಮದಾಸ್ ಟಂಡನ್ ರವರಿಗಿಂತ ಹೆಚ್ಚಿನ ಓಟುಗಳನ್ನು ಗಳಿಸಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಪಟೇಲರ ಕಂಚಿನ ವಿಗ್ರಹ

೭೫,೦೦೦ ರೂ. ಬೆಲೆ ಬಾಳುವ ಸರ್ದಾರ್ ಪಟೇಲರ ಕಂಚಿನ ವಿಗ್ರಹವೊಂದನ್ನು ಗುಜರಾತಿನ ... ಜಿಲ್ಲಾ ಬೋರ್ಡಿನವರು ತಯಾರು ಮಾಡಿಸಿದ್ದಾರೆ. ಅದರ ಸ್ಥಾಪನಾ ಮಹೋತ್ಸವವನ್ನು ... ಡಾ॥ ನೆಹರೂ ... ನೆರವೇರಿಸುವರು.

ಮದರಾಸ್ ಬಳಿ ಮೋಟಾರು ಕಾರ್ಖಾನೆ

... ಗಳಿಂದ ಮದರಾಸ್ ಬಳಿ ... ಮೋಟಾರು ಕಾರ್ಖಾನೆಯೊಂದನ್ನು ಸ್ಥಾಪಿಸಲು ... ಪ್ರಸಿದ್ಧ ... ಪ್ರಯತ್ನ ಮಾಡುತ್ತಿದ್ದಾರೆ.

ಹೈದರಾಬಾದ್ ನೌಕರರಿಗೆ ಎಚ್ಚರಿಕೆ

ಕೆಲ ದಿನಗಳಿಂದ ... ಹೈದರಾಬಾದ್ ನೌಕರರಲ್ಲಿ ... ಅಂತ್ಯದೊಳಗೆ ... ಕ್ರಮ ತೆಗೆದುಕೊಳ್ಳಲಾಗುವುದೆಂದು ಘೋಷಿಸಲಾಗಿದೆ.

ಗ್ರಾಮದ ಶಾಲಾ ಆರಂಭ

ಕೃಷ್ಣರಾಜನಗರ ತಾಲ್ಲೂಕು ... ಹಳ್ಳಿಯ ... ಶಾಲಾ ಆರಂಭೋತ್ಸವವನ್ನು ... ಶ್ರೀ ... ಅಣ್ಣೇಗೌಡ ... ನೆರವೇರಿಸಿದರು. ಅಲ್ಲಿನ ಗ್ರಾಮ ... ಒಂದು ... ಶಾಲೆಯ ... ಗ್ರಾಮದ ... ಸ್ಕೂಲು, ... ಗ್ರಾಮ ... ಮತ್ತು ... ನಿರ್ಮಾಣ ... ಮುಂತಾದ ... ಮುಂದಿಟ್ಟರು.

... ಶ್ರೀ ... ಗೌಡರವರು ... ಗ್ರಾಮದ ಅಭಿವೃದ್ಧಿಗೆ ಎಲ್ಲ ಸಹಾಯ ... ಭರವಸೆ ಕೊಟ್ಟರು.

ಸಂತೋಷ ಕೂಟದ ಬಗ್ಗೆ ಅವಸರದ ನಿರ್ಣಯ

ಪ್ರ॥ ಪ್ರ॥ ಸಭೆಯಲ್ಲಿ ಕಿರಾಕರಣೆ

ಮೈಸೂರು ೩೦

ಪ್ರ॥ ಪ್ರ॥ ಸಭೆಯ ಕಡೆಯ ದಿನದ ಕಾರ್ಯಕಲಾಪಗಳು ಈ ಮಧ್ಯಾಹ್ನ ಆರಂಭವಾದುವು. ಪ್ರಶ್ನೋತ್ತರಗಳನಂತರ ಎರಡು ಸಿಲವು ನಿರ್ಣಯಗಳು ... ಈ ಸಭೆಗೆ ... ಅಧ್ಯಕ್ಷರೇ ... ಬಗ್ಗೆ ... ಒಂದು ನಿಲುವಳಿಯನ್ನು ಅಧ್ಯಕ್ಷರೇ ...

... ಅಧ್ಯಕ್ಷರು ಈ ದಿನ ... ಸಂತೋಷ ಕೂಟವನ್ನು ... ಶ್ರೀ ಚನ್ನಯ್ಯನವರೇ ... ತಂದ ... ಪ್ರತಿನಿಧಿ ... ಸಭೆಯ ... ಶ್ರೀ ... ಚನ್ನಬಸವೇಗೌಡರು ... ವಿರೋಧಿಸಿದರು. ... ಇದನ್ನು ತೆಗೆದುಕೊಳ್ಳಲಿಲ್ಲ.

ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರ ಸ್ವಾಮಿ ವಿಗ್ರಹದ ... ಗಳು ದಿನೇ ದಿನೇ ದೊಡ್ಡವಾಗುತ್ತಿರುವುದನ್ನು ಸಂಬಂಧಿಸುವ ಬಗ್ಗೆ ಶ್ರೀ ಕೆ. ಪಿ. ... ಸಭೆಯವರು ... ನಿರ್ಣಯವನ್ನು ...

... ಶ್ರೀ ... ಸುಬ್ರಹ್ಮಣ್ಯರವರು ... ಈ ಕೆಲ ... ಒಂದು ಸಮಿತಿಯನ್ನು ... ವಿಗ್ರಹದ ... ಬಗ್ಗೆ ... ತಿಳಿಸಿದರು. ಈ ... ನಿರ್ಣಯವನ್ನು ... ತೆಗೆದುಕೊಳ್ಳಲಾಯಿತು.

ಸಾರ್ವಜನಿಕ ... ಶಾಸನದ ... ಪತ್ರಿಕೆಗಳ ... ಕಾರ್ಯಕ್ರಮಗಳನ್ನು ... ಶ್ರೀ ... ಶ್ರೀ ... ಮತ್ತು ... ಗೋವಿಂದರೆಡ್ಡಿ ... ನಿರ್ಣಯವನ್ನು ... ತೆಗೆದುಕೊಳ್ಳಲಾಯಿತು. ...

ವಿಶ್ವ ವಿದ್ಯಾಲಯದ ಕೌನ್ಸಿಲ್ಲುಗಳಿಗೆ ಚುನಾವಣೆ

ಮೈಸೂರು ೩೦

ಶ್ರೀಗಳಾದ ಕೆ. ಪುಟ್ಟಸ್ವಾಮಿ ಶೆಟ್ಟಿ ... ಸ್ವಾಮಿಯವರುಗಳು ವಿಶ್ವ ವಿದ್ಯಾಲಯದ ಸೆನೆಟ್ಟಿನಿಂದ ಯೂನಿವರ್ಸಿಟಿ ಕೌನ್ಸಿಲ್ಲಿಗೆ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವರು. ಶ್ರೀಗಳಾದ ಎ. ಶ್ರೀನಿವಾಸಮೂರ್ತಿ ... ರಾಜಗೋಪಾಲಯ್ಯಂಗಾರ್, ... ಗೋವಿಂದ ರೆಡ್ಡಿ, ... ನಾರಾಯಣಗೌಡರು ... ಕೌನ್ಸಿಲ್ ಸದಸ್ಯರಾಗಿ ಆರಿಸಲ್ಪಟ್ಟಿರುವರು.

ಉಷಾ

ಬೆಂಗಳೂರಿನಿಂದ ಶ್ರೀ ಎಸ್. ನಂಜಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ಉಷಾ" ಮಾಸ ಪತ್ರಿಕೆಯ ನವರಾತ್ರಿ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ಸುಪ್ರಸಿದ್ಧ ಲೇಖಕರ ಕಥೆ, ಪ್ರಬಂಧ, ಕವನ ನಾಟಕವೇ ಮುಂತಾದ ಲೇಖನಗಳು ಇವೆ. ... ವರ್ಷ ಭವಿಷ್ಯವೇ ಮುಂತಾದ ... ಲೇಖನಗಳೂ ... ಅನೇಕ ... ಚಿತ್ರಗಳೂ ... ಬೆಲೆ ಒಂದು ರೂ.

ಕಹಳೆ ಪತ್ರಿಕೆ

ಸರ್ಕಾರದವರು ಕೊಟ್ಟಿದ್ದ ನೋಟೀಸಿಗೆ ಉತ್ತರವಾಗಿ "ಕಹಳೆ" ಪತ್ರಿಕೆಯ ಪ್ರಕಾಶಕರು ... ಪ್ರ॥ ಪ್ರ॥ ಸಭೆಯಲ್ಲಿ ... ನಮ್ಮ ಪತ್ರಿಕೆಯಲ್ಲಿ ... ಇನ್ನು ಮುಂದೆ ... ಪ್ರಕಟಿಸುವುದಿಲ್ಲವೆಂದು ... ಸರ್ಕಾರಕ್ಕೆ ತಿಳಿಸಿಬಿಟ್ಟರೆಂದೂ, ಆದ್ದರಿಂದ ಸರ್ಕಾರದವರು ... ಕೇಳಿಕೊಳ್ಳಲಿಲ್ಲವೆಂದೂ ... ಹೇಳಿದರೆಂದು ತಿಳಿಯಲಾಗಿದೆ.

... ಕಾಗದದ ಕಾರ್ಖಾನೆಗಳಲ್ಲಿ ಕಾಗದವನ್ನು ತಯಾರುಮಾಡುವ ... ದೊರೆಯದೆ ಕೆಲಸ ... ಹೋಗಿರಲು ಅಲ್ಲಿ ... ನೋಟು ... ಕಾಗದದ ... ಸ್ಥಾನ ...

... ದೇಶ ಪತ್ಯಾಚ್ಛಿಕೆಗೆ ... ಎಂದೂ ತಿಳಿಸಿದರು.

ಶ್ರೀ ... ಸಾರ್ವಜನಿಕ ... ಕೇವಲ ... ಉಪಯೋಗಿಸಲ್ಪಡುತ್ತಿದೆಯೆಂದು ... ದರು. ... ಲೇಖನಗಳು, ಪತ್ರಿಕೆಗಳಲ್ಲಿ ಬಂದಿರುವುದಾಗಿ ... ಎಂದು ಹೇಳಿದರು.

ಸರ್ಕಾರದವರ ... ವರ್ತನೆಯಿಂದು ... ಶ್ರೀ ... ಚನ್ನಪ್ಪಗೌಡರು ... ಶ್ರೀ ... ಎಂ. ವಿ. ... ನಿರ್ಣಯದ ವಿರುದ್ಧವಾಗಿ ... ಶ್ರೀಗಳಾದ ... ಚನ್ನಬಸಪ್ಪ ... ಚನ್ನಬೈರಯ್ಯ ಮುಂತಾದವರು ... ಮಾತನಾಡಿದರು. ... ಹೀಗೆ ... ಜನ ... ಮಂತ್ರಿ ... ಬೆಂಬಲ ...

ನೂತನ ಬಟ್ಟೆ ಹಂಚಿಕೆ ನೀತಿಗೆ ಬೆಂಬಲ

ಪ್ರ ಪ್ರ ಸಭೆಯಲ್ಲಿ ಚರ್ಚೆ

ಮೈಸೂರು ೨೬

ಭಾರತ ಸರ್ಕಾರದ ತೀರ್ಮಾನಕ್ಕೆ ಸಂಸ್ಥಾನವನ್ನೂ ಸಹ ಬಟ್ಟೆ ಹತೋಟಿ ಆಜ್ಞೆಗೆ ಸಂಬಂಧಪಟ್ಟ ನೂತನ ವ್ಯವಸ್ಥೆಗೆ ಇಲ್ಲಿ ದ ಕಳೆದವಾರ ಪ್ರ|| ಪ್ರ|| ಸಭೆಯಲ್ಲಿ ಸ್ವಾಗತ ದೊರೆಯಿತು.

ಗೃಹ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರು ಬಟ್ಟೆ ಹಂಚಿಕೆಯ ವ್ಯವಸ್ಥೆಯನ್ನು ವಿವರಿಸಿದರು ಬಟ್ಟೆ ಮೇಲಿನ ಹತೋಟಿಯನ್ನು ತೆಗೆದನಂತರ ಬಟ್ಟೆ ಬೆಲೆ ಏರಿ [illegible] ದುರ್ಲಭವಾಗಿ ಬೆಲೆಗಳು ಅತಿ ಹೆಚ್ಚಿನ ದರದಲ್ಲಿ ಬಟ್ಟೆಯನ್ನು ಕೊಳ್ಳಲು ಅಸಾಧ್ಯವಾಯಿತೆಂದು ತಿಳಿಸಿದರು ಭಾರತ ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಪುನಃ ಹತೋಟಿ ಆಜ್ಞೆಯನ್ನು ಜಾರಿ ಮಾಡಲು ನಿಶ್ಚಯಿಸಿದೆಯೆಂದೂ ಹೇಳಿದರು ಬಟ್ಟೆ ಹಂಚಿಕೆಯ ವಿಧಾನವನ್ನು ಪ್ರಾಂತ ಸರ್ಕಾರ ಮತ್ತು ಸಂಸ್ಥಾನದ ಸರ್ಕಾರಗಳಿಗೆ ಬಿಡಲಾಗಿದೆಯೆಂದೂ ಈ ನಿಟ್ಟಿನಿಂದ [illegible] ಬಟ್ಟೆಯು [illegible] ದೊರೆಯುವ [illegible] ವ್ಯವಸ್ಥೆ ಮಾಡಲಾಗುವುದೆಂದೂ ಯಾವ ಬಟ್ಟೆ ವ್ಯಾಪಾರಸ್ಥನ ಬಳಿ ಬೇಕಾದರೂ ಬಟ್ಟೆಯನ್ನು ಕೊಳ್ಳಲು ಅವಕಾಶ ಇದೆಯೆಂದೂ ತಿಳಿಸಿದರು

ಈಗಾಗಲೇ [illegible] ನೂತನ ಬಟ್ಟೆಯು ಸಿದ್ಧವಾಗಿದೆಯೆಂದೂ [illegible] ಹೇಳಿದರು. ಈ ಆಜ್ಞೆಯು [illegible] ಬಟ್ಟೆಗಳಿಗೆ ಮಾತ್ರ ಅನ್ವಯಿಸುವುದೆಂದೂ, ರೇಷ್ಮೆ ಬಟ್ಟೆಗಳಿಗಿಲ್ಲವೆಂದೂ ಸಭೆ ಹೇಳಿ ಎಲ್ಲರ ಬೆಂಬಲವನ್ನೂ ಕೋರಿದರು

ಜ|| ಮಹಮದ್ ಖಾನ್‌ರವರು ಮಾತನಾಡಿ ಬಟ್ಟೆ ವ್ಯಾಪಾರ ಮಾಡಲು ವಿವಿಧ ಸಂಘ ಸಂಸ್ಥೆಗಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದೂ, ಚಿಲ್ಲರೆ ವ್ಯಾಪಾರಿಯೂ ನಿಶ್ಚಿತ ಲೆಕ್ಕ ಇಡುವಂತೆ [illegible] ಬೇಕೆಂದೂ ಬಟ್ಟೆ [illegible] ಹಂಚಬೇಕೆಂದೂ ತಿಳಿಸಿದರು

ಶ್ರೀ ಕೆ. ವಿ. ಕೊಂಡಪ್ಪನವರು ಮಾತನಾಡಿ ಈ ಆಜ್ಞೆಯಿಂದ ಹಳ್ಳಿಯವರಿಗೆ ಸರಿಯಾಗಿ ಬಟ್ಟೆ ದೊರೆಯುವಂತಾಗಲೆಂದೂ ನೂಲಿನ ಹಂಚಿಕೆ ವ್ಯವಸ್ಥಿತವಾಗಿರಬೇಕೆಂದೂ ಹೇಳಿದರು

ಶ್ರೀ ವೆಂಕಟ ಲಿಂಗೇಗೌಡರು ಮಾತನಾಡಿ ಮೈಸೂರಿನಲ್ಲಿ ತಯಾರಾಗುವ ಬಟ್ಟೆಗಳಿಗೆ ಸರಿಯಾದ ವ್ಯವಸ್ಥೆಯಾಗಿ ಬೊಂಬಾಯಿಗೆ ಬಟ್ಟೆ ತರಲು ಹೋಗುವುದು ತಪ್ಪಬೇಕೆಂದು ಹೇಳಿದರು

ಶ್ರೀ ವಲ್ಲಭ ಗೋವಿಂದರೆಡ್ಡಿಯವರು ನೂತನ ಆಜ್ಞೆಯು ಬಹಳ ಸ್ಪಷ್ಟವಾಗಿದ್ದರೂ ಕೆಲವು ಕೊರತೆಗಳಿಂದ ಕೂಡಿದೆಯೆಂದೂ ಸರ್ಕಾರವೇ ಹಂಚಿಕೆ ವ್ಯವಸ್ಥೆಯನ್ನು ಕೈಕೊಂಡಿದ್ದರೆ ವರ್ತಕರಲ್ಲಿ ಕೆಲವು ಲೋಪದೋಷಗಳು [illegible] ಇಲ್ಲವೆಂದೂ ಈ ಯೋಜನೆಯ ಧಂಡವಾಳಗಾರರಿಗೆ ಹೆಚ್ಚಿನ ಸಹಾಯವನ್ನು ದೊರಕಿಸುತ್ತಿದೆಯೆಂದೂ [illegible]

ಜ|| ಎ ಜೆ ಖಲೀಲ್ ಉಲ್ಲಾ [illegible] ಯವನ್ನು ಟೀಕಿಸಿ, ಬಟ್ಟೆ ವ್ಯಾಪಾರ ಮಾಡುವವರಿಗೆ ಹೊಸ ಲೈಸೆನ್ಸ್ ಕೊಡಕೂಡದೆಂದೂ ತಿಳಿಸಿದರು.

ಶ್ರೀ ಎ ಎಸ್ ರಾಮರಾಯರು ಬಟ್ಟೆ ಹಂಚಿಕೆಯನ್ನು ಸಹಕಾರ ಸಂಸ್ಥೆಗಳ ಮೂಲಕವೇ ನಡೆಸಬೇಕೆಂದು ಹೇಳಿದರು

ರಿಜಿಸ್ಟ್ರಾರ್‌ರವರ ಸಲಹೆಯಂತೆ [illegible] ಸಹಕಾರ ಸಂಘಗಳಿಗೆ ಬಟ್ಟೆ ಮಾರಾಟ ಮಾಡುವ ಹಕ್ಕು ಕೊಡಲಾಗಿದೆಯೆಂದು ಗೃಹ ಸಚಿವರು ತಿಳಿಸಿದರು

ಶ್ರೀ ಹೆಚ್ ಕೆ. ಮಾದಯ್ಯನವರು ಕೋರಿದವರು ಸಹಕಾರ ಸಂಘಕ್ಕೆ ವ್ಯಾಪಾರಿ ಕೊಡಕೂಡದೆಂದೂ ಹಿಂದಿನ ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರುಗಳನ್ನು ನೇಮಿಸಕೂಡದೆಂದೂ ಹೇಳಿದರು

ಶ್ರೀ ಬಿ ಎಸ್ ಗುಪ್ತರು ಬಟ್ಟೆಯಮೇಲೆ ಸಂಕ ಮತ್ತು ಮಾರಾಟದ ಬೆಲೆಗಳೆರಡೂ ಬೀಳುವಂತೆ ವ್ಯವಸ್ಥೆ ಮಾಡಬೇಕೆಂದರು ಈ ಆಜ್ಞೆಯಿಂದ ಸರ್ಕಾರ ಅಧಿಕಾರಿಗಳ ಪ್ರಭಾವ ಮತ್ತು ಹೆಚ್ಚಾಗುವ [illegible] ಯಾಗುವುದೆಂದೂ ತಿಳಿಸಿದರು

ಶ್ರೀ ಎಸ್ ಸಿ ಮಲ್ಲಯ್ಯನವರು [illegible] ಗೆ ತೊಂದರೆಯಿಲ್ಲದಂತೆ ಬಟ್ಟೆ [illegible] ಕೈ ಮಾಡಿದ ಆಜ್ಞೆಗೆ ಅಭಿನಂದಿಸಿ [illegible] ರಿ ಬೆಲೆ ಇರಬೇಕೆಂದು ಹೇಳಿದರು

ಶ್ರೀ ಲಿಂಗೇಗೌಡರು ಬೆಲೆ [illegible] ಮಾಡಿದ್ದರೆ ಸಾಗಿಸುತ್ತಿಂದೂ ಹತೋಟಿ ತರುವುದು ನ್ಯಾಯವಲ್ಲವೆಂದು ಹೇಳಿದರು

ಶ್ರೀ ಚಿಕ್ಕಲಿಂಗಯ್ಯನವರು ಬಟ್ಟೆ [illegible] ಚಿಕೆ ವ್ಯವಸ್ಥೆಯನ್ನು ಕೇವಲ ದಕ್ಷ [illegible] ವರ್ತಕರಿಗೆ ಮಾತ್ರ ಕೊಡಬೇಕೆಂದು ತಿಳಿಸಿದರು.

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು ಬಟ್ಟೆ ವ್ಯಾಪಾರ ಮಾಡಲು ಊರ ಜನ ಹಳಬರಿಗೂ ಹೊಸಬರಿಗೂ ಅವಕಾಶ ಮಾಡಿದೆ. [illegible] ನ್ನೂ ವರ್ತಕರ ಬಟ್ಟೆ ತಯಾರಾಗಿಲ್ಲ [illegible] ಹೊಸ ವ್ಯವಸ್ಥೆಯಿಂದ ಎಲ್ಲರಿಗೂ [illegible] ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ [illegible] ಯವಾಗಿ ವಿಶ್ವಾಸವನ್ನು ಗಳಿಸಿದ ವರ್ತಕರು ಕೊನೆಯ ವರೆವಿಗೆ ಉಳಿದುಕೊಳ್ಳ [illegible] ಮರ್ಚೆಂಟರ ನವಾಗಿ ೬೦೦ ದೇಲು [illegible] ಟ್ಟೆಯಂಗಡಿಗಳಿವೆ [illegible] ಉಗ ಶಿಕ್ಷೆ ಮಾಡಲಾಗುವುದು ಇದನ್ನು ಸರ್ಕಾರ ನೇ ಕೈಗೊಂಡಿದ್ದರೆ ನಿರುದ್ಯೋಗದ [illegible] ಎಲ್ಲವುದರಲ್ಲಿ [illegible] ಎಂದು ಅವರು ತಿಳಿಸಿದರು.

ರಾಜಕಮಲ್ ಟಾಕೀಸ್

23-10-48 ರಿಂದ

ಆನೋಷ್ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಫಿಲ್ಮಿಸ್ತಾನ್ ಕಂಪೆನಿಯವರ

ದೋ ಭಾಯ್

(ಹಿಂದಿ)

ತಾರಾಗಣ:- ಕಾಮಿನಿ ಕೌಶಲ್ಯ, ಉಲ್ಲಾಸ್

ಸಾರಂಗಪಾಣಿಯ ಭೇತಾಳ ಪರಿವಾರದ

ಅದ್ಭುತ ಯಕ್ಷಿಣೀ ಪ್ರದರ್ಶನ

ಪ್ರಭಾ ಮತ್ತು ಗಣೇಶ

ಟಾಕೀಸುಗಳಲ್ಲಿ ೪ ನೇ ವಾರದಲ್ಲಿ ನಡೆಯುತ್ತಿರುವ

- ಡೆಮ್ಕ್ ಲ್ಯಾಂಡ್ -

ತಮಿಳು ಚಿತ್ರದಲ್ಲಿ ಇಂದೇ ನೋಡಿ ಆನಂದಿಸಿರಿ

[It is a Tamil Release]

ಎಸ್. ಎಸ್. ಪಂಡಿತ್

ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೆಯಿರ್ ಬಾಮ

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಬೆಲೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾಮಲಕ ತೈಲ:—)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಪಂಚಾಮೃತ— ಮುಲೇರಿಯಾ ಗಿ[illegible]ಗಳಿಗೆ ಸಿದ್ಧ ಸಂಜೀವಿನಿ

ಮಹಾಲಕ್ಷ್ಮೀ ತೈಲ —ತಲೆ ಬಾ[illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉ[illegible] ಯೋಗಿಸಬಹುದಾದ ಉತ್ತಮ

ಫ್ರೀ ಟಾನಿಕ್ ಬೆಲೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ದೀಪಾವಳಿ ಪ್ರಯುಕ್ತ

ಸ್ವಂತ ಮಗ್ಗದಿಂದ ತಯಾರಾದ

ಮೈಸೂರು ಸಿಲ್ಕ್ ಸೀರೆಗಳೂ

ಉತ್ತಮವಾದ ಡಿಸೈನ್‌ಗಳಲ್ಲಿ

ಬೆಂಗಾಲ್ ಸಿಲ್ಕ್ ಸೀರೆಗಳೂ

ಮತ್ತು

ಕುಂಭಕೋಣದ ಸೀರೆಗಳೂ

[illegible]

ಗುರುದೇವಾ ಹಾಲ್

[illegible]

ದೀಪಾವಳಿ ಉಡುಪುಗಳು

[illegible]

ಗೃಹಲಕ್ಷ್ಮೀ ಸ್ಟೋರ್ಸ್

[illegible] ಬೀದಿ, ಕೋಲಾರ



ಆಲ್ ಇಂಡಿಯಾ ನಾದಸ್ವರ ಚಕ್ರವರ್ತಿ ತಿರುವಾಡುತುರೈ ಶ್ರೀ

ರಾಜರತ್ನಂ ಪಿಳ್ಳೆಯವರ ಘನವಾದ

ನಾದಸ್ವರ ಕಛೇರಿ

ಗಾನ ಕಲಾ ಚತುರ ತ್ಯಾಗರಾಜ ಭಾಗವತರ

ವಿನೋದ ಸಂಗೀತ ಕಛೇರಿ

[illegible] ವಿ ಎಸ್ [illegible] ಗಾನವನ್ನೂ

[illegible] ಹಾಸ್ಯವನ್ನೂ

+ ಚಾಮುಂಡೇಶ್ವರೀ ಟಾಕೀಸಿನಲ್ಲಿ +

- ರಾಜಮುಕ್ತಿ -

(ತಮಿಳು)

ಚಿತ್ರದಲ್ಲಿ ನೋಡಿ ಆನಂದಿಸಿ

ಕರ್ನಾಟಕ ಫಿಲಂ [illegible]

ಫೋ: ೬೦ 792 || ವಂದೇಮಾತರಂ || ಇಂದಿನ ಪತ್ರಿಕೆ ೮ ಕಾಸು

ಸಂಪುಟ ೭] ಬುಧವಾರ ೨೭-೧೦-೪೮ [ಸಂಚಿಕೆ ೧೦೦

– ಕಾಶ್ಮೀರದ ಸಮಸ್ಯೆ –
★ ಬೇಗನೆ ತೀರ್ಮಾನ ★

ಗಾಂಧಿ ನಿಧಿಗೆ ಆದಾಯ ತೆರಿಗೆ ವಿನಾಯಿತಿ

ಪ್ರಾ ಪ್ರಾ ಸಭೆಯ ಮುಂಜೂರಾತಿ
ಮೈಸೂರು ೨೭

...ನ್ನೆ ದಿನ ಪ್ರಾ|| ಪ್ರಾ|| ಸಭೆಯು ಶ್ರೀ ... ಟಿ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಸ... ...ಗಿತು.

ಗಾಂಧಿ ಸ್ಮಾರಕ ನಿಧಿಗೆ ಹಲವು ಸಂಘ ...ಸ್ಥೆಗಳವರು ಕೊಡುವ ಮೊಬಲಗಿಗೆ ಆ... ...ಯ ತೆರಿಗೆಯನ್ನು ವಿನಾಯಿತಿ ಕೊಡು... ...ವ ಸೂಚನೆಯನ್ನು ಶ್ರೀ ಹೆಚ್ ಸಿದ್ದಯ್ಯ... ...ರು ಮಂಡಿಸಿ ಈ ಪವಿತ್ರ ಕಾರ್ಯಕ್ಕಾಗಿ ...ದೇವ ಮೊಬಲಗಿಗೆ ತೆರಿಗೆ ವಿನಾಯಿತಿ ...ನ್ನು ಕೋರಿದರು. ಆದರಿಂದ ೫... ...ಂಟ್ ಸ್ಟಾಕ್ ಕಂಪೆನಿಯವರು ಕೊಡು... ...ಹಣ ಮತ್ತು ಅನ್ನದ ಗಳಿಯವರು ...ಡಬೇಕೆಂದಿರುವ ಚಿನ್ನ ಇವುಗಳಮೇ... ...ರ ತೆರಿಗೆಯನ್ನು ವಿನಾಯಿತಿಮಾಡದಂತೆ ...ದಲ ಮತ್ತು ಮೈಸೂರು ಸರ್ಕಾರ ... ...ನೆಯ ವರು ಕೊಡಬೇಕೆಂದಿರುವ ಒಂ... ಲಕ್ಷ ರೂಗಳನ್ನು ಕೊಡಲು ಅನುಕೂ... ...ಗುವುದೆಂದು ಅವರು ಹೇಳಿದರು.

ಶ್ರೀ ಎ ಎಸ್ ರಾಮರಾಯರು, ಈ ಕಾ... ...ನನ್ನು ಸಹಕಾರ ಸಂಸ್ಥೆಗಳಿಗೂ ಅನ್ವ... ...ಸಿ ಅವುಗಳಲ್ಲಿರುವ ರಿಜರ್ವ್ ಫಂಡಿನಿಂ... ...ಹಣ ತೆಗೆದುಕೊಳ್ಳಬೇಕೆಂದರು.

ರಾವ್ ಬಹದ್ದೂರ್ ರಾಮಸ್ವಾಮಿಯ... ...ರು, ಈ ಕಾನೂನನ್ನು ಮಹಾತ್ಮರ... ...ದ ನಿಧಿಗೂ ಅನ್ವಯಿಸುವಂತೆ ಮಾ... ...ಬೇಕೆಂದು ಕೇಳಿದರು. ಶ್ರೀ ಭೂಪಾ... ...ಲರು ಹೂಗೆಸೊಪ್ಪು ಮತ್ತು ... ...ನಿಗಳವರಿಗೂ ಇದು ಅನ್ವಯಿಸುವಂ... ಮಾಡಬೇಕೆಂದರು. ಶ್ರೀ ಚೆನ್ನಬ... ...ಇತರ ದೇಶದ ಆದಾಯದಲ್ಲಿ ಹೆಚ್ಚು... ...ದ ಮೊಬಲಗನ್ನು ಸರ್ಕಾರದವರು ಈ... ...ಕ್ಕೆ ಕೊಡಲು ಮಾರ್ಗದರ್ಶಿಸಬೇ... ...ಕೋರಿದರು.

...ರ್ಥಸಚಿವರು ಸದಸ್ಯರ ಸಲ... ...ನ್ನು ಪರಿಶೀಲಿಸುತ್ತೇವೆಂದು ತಿಳಿಸಿ... ...ಧಿಸಿ... ಈ ನಿರ್ಣಯುಕ್ಕೆ ಸನ್ನ... ...ಗೆಯ ಸಿಕ್ಕಿತು.

...ಶಿ ವಿನಿಮಯ... ...ವ ವನ್ನು ... ...ಸುವ ಮಸೂದೆಯ ಸ್ವಗೃಹ ಸಚಿ... ...ಶ್ರೀ ಟಿ ಮರಿಯಪ್ಪನವರು ಮಂ... ...ದೇಶಗಳಿಂದ ಯುದ್ಧವಾದನಂ... ...ಯಕ್ಕಾಗಿ ಬಂದ ಹಣ, ...ಗಳು ಮುಂತಾದುವುಗಳ ಬಗ್ಗೆ ಸ್ಥ... ...ದ ಕಾನೂನು ಮಾಡಲು ಈ... ...ನ್ನು ತರಲಾಗಿದೆಯೆಂದರು ಸ... ಹಲವು ಪ್ರಶ್ನೆಗಳನ್ನು ಕೇಳಿ ಉ... ...ನ್ನು ಪಡೆದರು ... ಮಸೂದೆಗೆ ...ಸಭೆ ಒಪ್ಪಿಗೆಯ ಸಿಕ್ಕಿತು.

...ಗಳೂರು ನಗರ ಮತ್ತು ಸಿವಿಲ್ ...ವ ಮುನಿಸಿಪಾಲಿಟಿಗಳನ್ನು ಒಟ್ಟು... ...ಕಾರ್ಪೊರೇಷನ್ ಮಾಡಬೇಕೆಂದ ...ಮಸೂದೆಯು ಈ ದಿನ ಸರ್ವಾನ... ...ದ ಅಂಗೀಕಾರವಾಯಿತು.

...ರ ಪ್ರಶ್ನೆಯ ತೀರ್ಮಾನ

...ಬಾರಿನ ಕಾರ್ಯಾಚರಣೆಯಲ್ಲಿ ...ವನ್ನು ಗಳಿಸಿದ ಸೇನಾಪತಿ ಲೆಫ್ಟಿ... ...ನೆಂಟ್ ಜನರಲ್ ರಾಜೇಂದ್ರ ಸಿಂಹ್ಜಿಯವರು ...ರಿಕೆಯಿತ್ತು ಕಾಶ್ಮೀರದ ಸಮ... ...ನ್ನು ಬಗೆಹರಿಸಲು ಬಹು ಕಾಲ ಹಿಡಿ... ...ವುದಿಲ್ಲವೆಂದು ಹೇಳಿದ್ದಾರೆ.

ಪೌರಸಭೆ ಮತ್ತು ಟ್ರಸ್ಟ್ ಬೋರ್ಡ್ ಜಂಟಿ ಅಧಿವೇಶನ

ಮೈಸೂರು ೨೬

ರಾಜಧಾನಿಯ ಟ್ರಸ್ಟ್ ಬೋರ್ಡ್ ಮತ್ತು ಪೌರಸಭೆಗಳ ಜಂಟಿ ಅಧಿವೇಶನಗಳನ್ನು ಆಗಿಂದಾಗ್ಗೆ ನಡೆಸಿ ಎರಡು ಸಂಸ್ಥೆಗಳಿಗೂ ಸಮಾನವಾಗಿರುವ ವಿಷಯಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯವನ್ನು ಮಾಡಿಕೊಳ್ಳಬೇಕೆಂಬ ಅಭಿಲಾಷೆಯು ಸ್ವಾಭಾವಿಕವಾದ ಶ್ರೀ ಟಿ ಮರಿಯಪ್ಪನವರ ಆಸಕ್ತಿಯಿಂದ ಇಂದು ಈಡೇರಿತು. ಎರಡು ಸಂಸ್ಥೆಗಳ ಸಭೆಯು ಸ್ಥಳನಿಧಿ ಕಾರ್ಯಾಲಯದಲ್ಲಿ ಈ ಬೆಳಗ್ಗೆ ಸೇರಿತು. ಸಚಿವರುಗಳಾದ ಶ್ರೀಗಳು ಟಿ ಮರಿಯಪ್ಪ, ಹೆಚ್ ಸಿ ದಾಸಪ್ಪ ಮತ್ತು ಕೆ ಸಿ ರೆಡ್ಡಿಯವರು ದಯಮಾಡಿಸಿದ್ದರು.

ನಗರದ ಗೃಹಸಮಸ್ಯೆ, ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಗಳ ಬಗ್ಗೆ ಕೈಗೊಳ್ಳಬೇಕಾದ ಕಾರ್ಯದ ಬಗ್ಗೆ ಸದಸ್ಯರು ಸಲಹೆಗಳನ್ನಿತ್ತರು. ನಾಗರಿಕರ ಅಭಾವವನ್ನು ತಪ್ಪಿಸಲು ಒಂದು ಕಾರ್ಪೋರೇಷನ್ನನ್ನು ಸ್ಥಾಪಿಸಿ, ಸರ್ಕಾರ, ಟ್ರಸ್ಟ್ ಬೋರ್ಡ್ ಮತ್ತು ಪೌರಸಭೆಗಳ ಬಂಡವಾಳದಿಂದ ಸಣ್ಣ ಸಣ್ಣ ಮನೆಗಳನ್ನು ಕಟ್ಟಬೇಕೆಂದು ಸದಸ್ಯರು ಹೇಳಿದರು. ಈಗ ನೀರು ಸರಬರಾಜಿನಲ್ಲಿರುವ ಕುಂದುಕೊರತೆಗಳನ್ನು ವಿವರಿಸಿ ಅವುಗಳನ್ನು ಪ್ರಮುಖ ... ಪ್ರತಿಯೊಂದು ... ಕ್ಷಿಪ್ರವಾಗಿ ನೀರು ಬರುವಂತೆ ಏರ್ಪಡಿಸಬೇಕೆಂದು ... ಒತ್ತಾಯಪಡಿಸಲಾಯಿತು.

ನಗರದ ಅನೇಕ ಭಾಗಗಳಲ್ಲಿ ಒಳಚರಂಡಿ ಇಲ್ಲದೆ ಬಚ್ಚಲ ನೀರು ಸರಿಯಾಗಿ ಹೋಗದೆ ಕಶ್ಮಲವು ಹೆಚ್ಚುತ್ತಿದೆಯೆಂದು ... ಇಡೀ ನಗರದಲ್ಲೆಲ್ಲ ಒಳಚರಂಡಿಗಳನ್ನು ಹಾಕಿಸಬೇಕೆಂದು ಒತ್ತಾಯಪಡಿಸಲಾಯಿತು.

ಈ ವಿಚಾರಗಳಲ್ಲಿ ಸೂಕ್ತವಾದ ಏರ್ಪಾಡುಗಳನ್ನು ಮಾಡುವುದಾಗಿ ಸಚಿವರು ಭರವಸೆ ಇತ್ತರು.

ಹಾಸ್ಯದಲ್ಲಿ ಹೆರಿಗೆ ಆಸ್ಪತ್ರೆ

ಶ್ರೀಮನ್ಮಹಾರಾಜರಿಂದ ಶಂಕುಸ್ಥಾಪನೆ
ಮೈಸೂರು ೨೭

ಕೃಷ್ಣರಾಜನಗರದ ... ಹಾಸ್ಯ ಗ್ರಾಮದಲ್ಲಿ ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರು ... ಹೆರಿಗೆ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಪ್ರಾರ್ಥನೆಯಾದನಂತರ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್ ಎಂ ಚನ್ನಬಸಪ್ಪನ...

ಪ್ರಜಾಪ್ರತಿನಿಧಿ ಸಭೆ

ಅಧಿವೇಶನದ ಮುಕ್ತಾಯ ಭಾಷಣ

ಅಧ್ಯಕ್ಷ ಶ್ರೀಮಾನ್ ಕೆ. ಟಿ ಭಾಷ್ಯಂರವರು ಕೆಳಗೆ ಕಂಡಂತೆ ಭಾಷಣ ಮಾಡಿ ಅಧಿವೇಶನವನ್ನು ಮುಕ್ತಾಯಗೊಳಿಸಿದರು.

ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನವನ್ನು ಮುಕ್ತಾಯಗೊಳಿಸಲು ನಾನು ಹರ್ಷಿಸುತ್ತೇನೆ. ಅಧಿವೇಶನವು ಸ್ವಲ್ಪ ಮಟ್ಟಿಗೆ ದೀರ್ಘಕಾಲವೇ ನಡೆದು, ನಾವೆಲ್ಲರೂ ಶ್ರಮಿಸಿದ್ದೇವೆ. ಈ ಅಧಿವೇಶನವು ನಡೆದಿರುವುದು ಈ ತಿಂಗಳು 9 ನೇ ತಾ|| ನಿಂದ 26 ನೆಯ ತಾರೀಖಿನವರೆಗೆ ಹದಿನೆಂಟು ದಿನಗಳ ಕಾಲ. ಇಷ್ಟು ಕಾಲ ಮತ್ತಾವ ಅಧಿವೇಶನಕ್ಕೂ ಹಿಡಿದಿರಲಿಲ್ಲವೆಂದು ಹೇಳಿದರೂ ಹೇಳಬಹುದು. ಈ ಅವಧಿಯಲ್ಲಿ ಹನ್ನೆರಡು ದಿನಗಳು ಸಭೆ ನಡೆದು, ನಾವೆಲ್ಲರೂ ಕೆಲಸಮಾಡಿದ್ದೇವೆ. ಕೆಲಸವು ಚೆನ್ನಾಗಿಯೂ ನಡೆದಿದೆ; ತಕ್ಕಷ್ಟೂ ನಡೆದಿದೆ.

ಈ ಅಧಿವೇಶನದಲ್ಲಿ, ಸುಮಾರು ಮೂವತ್ತು ಮಸೂದಾ ಕಾನೂನುಗಳು ಸಭೆಯ ಅನುಮತಿಯನ್ನು ಪಡೆದಿವೆ. ನಲವತ್ತಕ್ಕಿಂತಲೂ ಹೆಚ್ಚು ಸಂಖ್ಯೆಯ ಠರಾವುಗಳ ಚರ್ಚೆ ನಡೆದಿವೆ. ಸುಮಾರು ಆರು ನಿರ್ಣಯಗಳು ಸೂಚಿತವಾಗಿ, ಅವುಗಳ ಮೇಲೆ ಸದಸ್ಯರು ಮಾತನಾಡಿದ್ದಾರೆ. ಸಭೆಯಲ್ಲಿ ಅರವತ್ತು ಪ್ರಶ್ನೆಗಳಿಗೆ ಉತ್ತರ ಹೇಳಲಾಗಿದೆ. ಸರ್ಕಾರದವರು ಮುಂದಿಟ್ಟಿದ ಬಟ್ಟೆಯ ನೀತಿಯನ್ನೂ ಮತ್ತು ಆಹಾರ ನೀತಿಯನ್ನೂ ಕುರಿತು ಚರ್ಚೆಗಾಗಿ ಒಂದು ಪ್ರತ್ಯೇಕ ದಿನವೇ ಗೊತ್ತಾಗಿದ್ದು, ವಿಶದವಾಗಿ ಚರ್ಚೆ ನಡೆದಿದೆ. ಒಟ್ಟಿನಲ್ಲಿ ಸರ್ಕಾರದ ಕಾರ್ಯನೀತಿಗಳಿಗೆ ಸಭೆಯ ಅನುಮೋದನೆ ದೊರೆತಿದೆ. ಅದಕ್ಕಾಗಿ, ನಾನು ಸಂತೋಷಿಸುತ್ತೇನೆ.

ಅನೇಕ ಸಲಹೆಗಳು ಸೂಚಿತವಾಗಿವೆ. ಅವುಗಳನ್ನು ಸರ್ಕಾರದವರು ಶೀಘ್ರ ಯೋಜನೆ ಮಾಡುತ್ತಾರೆಂದು ನಮಗೆ ಭರವಸೆ ಕೊಡುತ್ತೇನೆ.

ಈ ದೇಶದ ... ಬಿನ್ನಗತ್ತಲೆಯ ... ಜನರೇ ... ... ಈ ... ... ಬಿನ್ನ ... ... ಬೇಗನೆ ... ...

ಸಭಾಕಾರ್ಯಗಳು ಗಾಂಭೀರ್ಯದಿಂದ ನಡೆದಿವೆ; ಸದಸ್ಯರು ವಿಚಾರಪೂರ್ಣವಾಗಿ ಚರ್ಚೆ ನಡೆಯಿಸಿದ್ದಾರೆ; ಕೂಡಿದ ಮಟ್ಟಿಗೂ ಶ್ರೇಷ್ಠ ರೀತಿಯಲ್ಲೇ ಅಧಿವೇಶನದ ಕಾರ್ಯಕಲಾಪಗಳು ನಡೆದಿವೆ. ಅಧ್ಯಕ್ಷಸ್ಥಾನಕ್ಕೆ ತಾವೆಲ್ಲರೂ ಘನತೆ ಗೌರವಗಳನ್ನಿತ್ತು ಆದರವಿಶ್ವಾಸಗಳಿಂದ ವರ್ತಿಸಿದ್ದೀರಿ. ಅಧ್ಯಕ್ಷತೆ ವಹಿಸಿದ್ದ ನಾನು, ಇದಕ್ಕಾಗಿ ತಮ್ಮ ವಿಷಯದಲ್ಲಿ ಕೃತಜ್ಞತೆಯನ್ನು ಸೂಚಿಸಬಯಸುತ್ತೇನೆ. ಮೈಸೂರು ಸಂಸ್ಥಾನವು ಅನೇಕ ವಿಷಯಗಳಲ್ಲಿ ವೈಶಿಷ್ಟ್ಯವನ್ನು ಪಡೆದಿದೆ. ಉತ್ತಮವಿಧದ "ಪಾರ್ಲಿಮೆಂಟರಿ" ಸಂಪ್ರದಾಯಗಳನ್ನು ಕಲ್ಪಿಸಿಕೊಂಡಿರುವುದೂ, ಅವುಗಳ ಪೈಕಿ ಮುಖ್ಯವಾದವುಗಳಲ್ಲೊಂದಾಗಿದೆ. ಉತ್ತಮವಾದ ಈ ಸಂಪ್ರದಾಯಗಳಿಗೆ ಭಂಗವುಂಟಾಗದಂತೆ ಶ್ರೇಷ್ಠ ರೀತಿಯಲ್ಲಿ ವರ್ತಿಸಿರುವುದಕ್ಕಾಗಿ, ತಮ್ಮೆಲ್ಲರನ್ನೂ ನಾನು ಅಭಿನಂದಿಸಲಿಚ್ಛಿಸುತ್ತೇನೆ. ದಿನದಿನವೂ ಇನ್ನೂ ಹೆಚ್ಚು ಹೆಚ್ಚು ಉತ್ತಮವಾದ ಸಂಪ್ರದಾಯಗಳನ್ನು ತಾವು ಕಲ್ಪಿಸುತ್ತಾ ಬರಬೇಕೆಂದು ನನ್ನ ಅಭಿಲಾಷೆ. ಅತ್ಯಂತ ಶ್ರೇಷ್ಠವಾದ "ಪಾರ್ಲಿಮೆಂಟರಿ" ಶಿಸ್ತಿನ ಔಚಿತ್ಯಗಳನ್ನು ಅಭ್ಯಾಸಮಾಡಿ ಅನುಸರಿಸಬೇಕೆಂದು ಬಯಸುವವರಿಗೆ, ತಾವು ಮಾದರಿಯ ಮೇಲ್ಪಂಕ್ತಿ ಹಾಕಬೇಕೆಂಬುದು ನನ್ನ ಹಾರೈಕೆ.

ದೇಶದ ಹಿತಸಾಧನೆಗಾಗಿ ದೀರ್ಘ ಕಾಲ ಈ ಅಧಿವೇಶನವನ್ನು ನಡೆಯಿಸಿ, ತಾವೆಲ್ಲರೂ ಶ್ರಮಿಸಿದ್ದೀರಿ. ಆದರೂ, ತಾವು ತಮ್ಮತಮ್ಮ ಸ್ಥಳಗಳಿಗೆ ಹಿಂತಿರುಗಿದಮೇಲೆ ಕೂಡ, ವಿಶ್ರಾಂತಿ ಹೊಂದುವುದಕ್ಕೆ ಅವಕಾಶವಿರುವಂತೆ ತೋರುವುದಿಲ್ಲ. ಏಕೆಂದರೆ, ಇನ್ನೂ ಹೆಚ್ಚು ಶ್ರಮದಾಯಕವಾದ ಮತ್ತು ಈಗ ನಡೆಯಿಸಿರುವ ಕಾರ್ಯಕಲಾಪಗಳಷ್ಟೇ ಜವಾಬ್ದಾರಿಯುಳ್ಳ ಕೆಲಸವು ಸಿದ್ಧವಾಗಿ ಕಾದಿದೆ. ಅದು, ಸರ್ಕಾರದ ನೀತಿಗಳು ಸಫಲವಾಗಿ ಆಚರಣೆಗೆ ಬಂದು, ಪ್ರಜೆಗಳಲ್ಲಿ ಪ್ರತಿಯೊಬ್ಬರಿಗೂ ಸಲ್ಲಬೇಕಾದಷ್ಟು ಭಾಗದ ಆಹಾರವೂ ಬಟ್ಟೆಯೂ ಅವರಿಗೆ ದೊರೆಯುವಂತೆ ನೋಡಿಕೊಳ್ಳುವ ಕೆಲಸ. ಆಹಾರ ಧಾನ್ಯಗಳ ಶೇಖರಣೆ ಕೆಲಸವೂ, ಅವುಗಳ ಹಂಚಿಕೆ ಕೆಲಸವೂ ಸಮರ್ಪಕವಾಗಿ ನಡೆಯುವಂತೆಯೂ, ಯಾರೊಬ್ಬರಿಗೂ ಅನ್ಯಾಯವಾಗಲಿ ಅಥವಾ ಕಷ್ಟವಾಗಲಿ ಆಗದಂತೆಯೂ ಮಾಡಬೇಕೆಂಬುದು ನಮ್ಮ ಆಶಯ. ಆದಕ್ಕೆ ಸ್ವಲ್ಪವೂ ಬಾಧೆಯುಂಟಾಗದಂತೆ ಜಾಗರೂಕತೆಯಿಂದ ಪರಿಶೀಲಿಸಿ ನೋಡಿಕೊಳ್ಳುವ ವಿಶೇಷ ವಿಧದ ಕರ್ತವ್ಯವೂ ತಮ್ಮಲ್ಲಿ ಪ್ರತಿಯೊಬ್ಬರಿಂದಲೂ ನೆರವೇರಬೇಕಾಗಿದೆ. ಇದಕ್ಕಾಗಿ ಬಹಳ ಶ್ರಮ ವಹಿಸಿ ಕೆಲಸಮಾಡಬೇಕೆಂಬುದು ಸ್ಪಷ್ಟವಾಗಿಯೇ ಇದೆ. ಶ್ರಮಸಾಧ್ಯವಾದ ಆ ಕೆಲಸವು ತಮ್ಮ ಮುಂದಿದೆ. ಪ್ರಜೆಗಳ ಸುಖಸಂತೋಷಗಳನ್ನು ಸಾಧಿಸುವ ತಮ್ಮ ಸಮಸ್ತ ಪ್ರಯತ್ನಗಳೂ ಯಶಸ್ವಿಯಾಗಿ ನೆರವೇರಲೆಂದು ನಾನು ಹಾರೈಸುತ್ತೇನೆ.

ತಮ್ಮಿಂದ ದೊರೆತ ಸಹಾಯ ಸಹಕಾರಗಳಿಗಾಗಿ ಮತ್ತೊಮ್ಮೆ ತಮ್ಮೆಲ್ಲರನ್ನೂ ವಂದಿಸುತ್ತೇನೆ. ತಾವೆಲ್ಲರೂ ಸುಖವಾಗಿ ಪ್ರಯಾಣ ಬೆಳೆಯಿಸಿ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗುವಂತೆ ...ತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ವಿಶೇಷ ರೀತಿಯ ಖಾಸಗಿ ನಿರ್ಣಯದ ಮೇಲೆ ಚರ್ಚೆ

ಶ್ರೀ ಭೂಪಾಲಂರವರ ನಿರ್ಣಯದ ಪರಾಜಯ

ಮೈಸೂರು ೨೭

ನಿನ್ನೆ ದಿನ ಪ್ರ॥ ಪ್ರ॥ ಸಭೆಯಲ್ಲಿ ಶ್ರೀ ಭೂಪಾಲಂ ಚಂದಶೇಖರಯ್ಯನವರು, ಜನಗಳನ್ನು ವಿನಾಕಾರಣ ದಸ್ತಗಿರಿ ಮಾಡಿ ನಿರ್ಬಂಧದಲ್ಲಿಡುವುದು. ಭಾರಿ ಮೊತ್ತದ ಜಾಮೀನು ಕೇಳುವುದರ ಮೂಲಕ ಪತ್ರಿಕಾ ಸಂಪಾದಕರನ್ನು ನಿರ್ಬಂಧದಲ್ಲಿಟ್ಟು ಪೆರೋಲ್ ಕೊಡದೆ ಇರುವುದು ಮತ್ತು ಇವುಗಳಿಗಾಗಿ ಸಾರ್ವಜನಿಕ ರಕ್ಷಣಾ ಶಾಸನವನ್ನು ಧಾರಾಳವಾಗಿ ಉಪಯೋಗಿಸುತ್ತಿರುವ ಬಗ್ಗೆ ಈ ಸಭೆಯು ತನ್ನ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುವುದಲ್ಲದೆ ಇದರಿಂದ ಪ್ರಜೆಗಳ ಮೂಲಭೂತ ಹಕ್ಕಿಗೆ ಧಕ್ಕೆ ತಗಲಿದೆ-ಎಂಬ ವಿಶೇಷ ರೀತಿಯ ನಿರ್ಣಯವನ್ನು ಮಂಡಿಸಿದರು. ಜನಗಳನ್ನು ದಸ್ತಗಿರಿ ಮಾಡುತ್ತಿರುವ ವಿಷಯವನ್ನು ಪ್ರಸ್ತಾಪಿಸಿ ಕೆ. ಜಿ. ಎಫ್. ಪ್ರದೇಶದಲ್ಲಿನ ಕಾರ್ಮಿಕ ಸಂಘದ ಸದಸ್ಯರನ್ನು ದಸ್ತಗಿರಿ ಮಾಡಿ ನಿರ್ಬಂಧದಲ್ಲಿಟ್ಟಿರುವುದು, ಆರ್. ಎಸ್. ಎಸ್. ನವರನ್ನು ದಸ್ತಗಿರಿ ಮಾಡುತ್ತಿರುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು.

ನಂತರ ಪತ್ರಿಕೆಗಳ ವಿಷಯವನ್ನು ಪ್ರಸ್ತಾಪಿಸಿ ಕೇಸರಿ ಪತ್ರಿಕೆಯಿಂದ ೨೫೦೦ ರೂ. ಜಾಮೀನು ಕೇಳುವುದು ನ್ಯಾಯವಲ್ಲವೆಂದು ಹೇಳುತ್ತಾ, ಇತರ ಪತ್ರಿಕೆಗಳನ್ನು ಸರ್ಕಾರವು ಹಿಂಸೆಪಡಿಸುತ್ತಿರುವುದನ್ನು ಖಂಡಿಸಿ, ಜಾಮೀನಿಗೆ ಹಣ ಕೊಡಲು ಅಸಮರ್ಥರಾದ ಸಂಪಾದಕರನ್ನು ... ಹಾಗೂ ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂದು ಹೇಳಿದರು. ಶ್ರೀ॥ ಭೂಪಾಲಂರವರು ಹೇಳಿದಂತೆ ಪತ್ರಿಕಾ ಸಂಪಾದಕರನ್ನು ನಿರ್ಬಂಧದಲ್ಲಿಟ್ಟಿರುವ ಅಂಶವನ್ನು ಪ್ರಸ್ತಾಪಿಸಿ ಸ್ವತಃ ಕೇಸರಿ ಪತ್ರಿಕೆಯ ಸಂಪಾದಕರನ್ನು ಬಂಧನದಲ್ಲಿಟ್ಟು ಅವರಿಗೆ ಪೆರೋಲ್ ಕೊಡದ ಬಗ್ಗೆ ನಿರ್ಬಂಧ ಹಾಕಿದ್ದನ್ನು ಖಂಡಿಸಿ ಸರ್ಕಾರದ ಕೆಲಸಗಳು ನ್ಯಾಯಯುತವಾಗಿ ನಡೆಯಲಿ ಎಂದು ಒರಟ ಮಾತ್ರಕ್ಕೆ ಇಂತಹ ಶಿಕ್ಷೆಯನ್ನು ವಿಧಿಸುವುದು ರಮ್ಯವಲ್ಲವೆಂದು ಅವರು ಹೇಳಿದರು.

ಶ್ರೀ ಎಂ. ಶಂಕರಲಿಂಗೇಗೌಡರು, ... ಹೆಚ್ಚು ಹೆಚ್ಚಾಗಿ ಸರ್ಕಾರ ಕ್ಷೇತ್ರಕ್ಕೆ ಬಂದ ಮಾತ್ರಕ್ಕೆ ಸಹಾಯಕವಾಗಿದೆಯೇ ಹೊರತು ಸಾರ್ವಜನಿಕ ಹಿತರಕ್ಷಣೆಗಲ್ಲವೆಂದು ಪತ್ರಿಕೆಯವರನ್ನು ಸಾರ್ವಜನಿಕರನ್ನು ದಸ್ತಗಿರಿ ಮಾಡುವುದು ನ್ಯಾಯವಲ್ಲವೆಂದೂ ಅವರು ಹೇಳಿದ ಶ್ರೀಗಳಾದ ಎಸ್. ಸಿ. ಮಲ್ಲಯ್ಯನವರು ಚರ್ಚೆಯಲ್ಲಿ ಭಾಗವಹಿಸಿದರು. ನ್ಯಾಯ ದೊರೆಯಬೇಕು.

ಶ್ರೀ ಎಂ. ಎ. ಕೃಷ್ಣಪ್ಪನವರು ಹಾಸನ ನಾಡಿ ದೇಶದಲ್ಲಿ ಜನಗಳನ್ನು ದಸ್ತಗಿರಿ ಮಾಡಿದಾಗ ಅವುಗಳ ಕಾರಣಗಳನ್ನು ಸರ್ಕಾರ ಪ್ರಕಟಿಸಲಿ ಎಂದು. ಪತ್ರಿಕೆ ನಡೆಸುತ್ತಿರುವ ಮಧ್ಯ ಪಾನ ನಿರೋಧ ಕೈಗೊಂಡಾಗ ಕಂಟ್ರಾಕ್ಟರುಗಳನ್ನು ಸೇರಿಸಿ ಪತ್ರಿಕೆಯನ್ನು ಹೊರಡಿಸಿ ಸರ್ಕಾರವನ್ನು ಹೆದರಿಸುವುದು-ಇಂತಹ ಕಾರ್ಯಗಳನ್ನು ನಿರ್ಣಯವನ್ನು ಬೆಂಬಲಿಸುವುದು ನ್ಯಾಯವೆಂದರು.

ಪತ್ರಿಕೆಗಳಿಗೆ ಸ್ವಾತಂತ್ರ್ಯ ಬೇಕು. ಪ್ರಜಾಪ್ರಭುತ್ವ ಹೊಂದಿರುವ ಈ ಕಾಲದಲ್ಲಿ ಕೇವಲ ಪತ್ರಿಕಾ ಸ್ವಾತಂತ್ರ್ಯವನ್ನು ಹೊಡೆದು ಹಾಕಲು ಇಚ್ಛಿಸಿಲ್ಲವಾದರೂ ಪತ್ರಿಕೆಗಳು ತಮ್ಮ ಜವಾಬ್ದಾರಿಯನ್ನು ಮರೆತು ಬರೆಯುವುದರಲ್ಲಿ ನ್ಯಾಯವಿಲ್ಲವೆಂದು ಶ್ರೀ ಬಿ. ಎಸ್. ಗಣಪತಿ ಹೇಳಿದರು. ಪ್ರಜಾಪ್ರಭುತ್ವ ಬಂದನಂತರ ಪತ್ರಿಕೆಗಳ ಬೆಳವಣಿಗೆಗೆ ಸ್ವಾತಂತ್ರ್ಯವಾದರೆ ಅವರು ಕೇವಲ ವಿಶ್ವಕರ್ನಾಟಕ ಪತ್ರಿಕೆಯ ಒಂದು ಅಗ್ರ ಲೇಖನದಲ್ಲಿ "ಸ್ವಾತಂತ್ರ್ಯ ಸಂಗರಕ್ಕೆ ಪತ್ರಿಕೆಗಳು ಬರೆಯುವ ಲೇಖನಗಳಿಗೆ ಮಿತಿ ಇರಬೇಕು, ಎಲ್ಲೆ ಮೀರಬಾರದು" ಎಂದು ಬರೆದಿರುವ ವಿಷಯವನ್ನು ಶ್ರೀ ಗುಪ್ತರು ಸದಸ್ಯರ ಗಮನಕ್ಕೆ ತಂದರು.

ಸಚಿವರ ಉತ್ತರ

ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಉತ್ತರ ಕೊಟ್ಟು, ಕೋಲಾರದ ಕೆಲಸಗಾರರ ಸಂಘದ ಸದಸ್ಯರು ಮತ್ತು ಇತರ ಕೆಲವು ಸದಸ್ಯರನ್ನು ಪ್ರೇರೇಪಿಸುತ್ತಿದ್ದರಿಂದಲೂ, ರೈಲ್ವೆ ನೌಕರರಲ್ಲಿ ಶ್ರೀಗಳಾದ ರಾಘವರಾಯ, ಕೆ. ಎಸ್. ಎಸ್. ಮೂರ್ತಿ ಮತ್ತಿತರರು ಹೋಗಿ ಟಿಕೇಟಿಲ್ಲದೆ ಪ್ರಯಾಣ ಮಾಡುವುದು, ಇಂಜನ್ನುಗಳಿಗೆ ಮರಳು ಹಾಕುವುದು-ಮುಂತಾಗಿ ದೊಂಬಿ ಚಳುವಳಿ ಉಂಟುಮಾಡುತ್ತಿದ್ದುದರಿಂದ ಅವರುಗಳನ್ನು ದಸ್ತಗಿರಿ ಮಾಡಲಾಯಿತೆಂದೂ, ಅವರ ದಸ್ತಗಿರಿ ನಂತರ ಕೆಲಸಗಾರರು ತಿಂಗಳಿಗೆ ಏಳು ಇಂಜನ್ನು ಗಳಂತೆ ರಿಪೇರಿ ಮಾಡುತ್ತಿರುವರೆಂದೂ, ಟಿಕೆಟ್ ಇಲ್ಲದ ಪ್ರಯಾಣವು ಕಡಿಮೆಯಾಗಿದೆಯೆಂದೂ ಹೇಳಿ ಈಗ ಮೇಲ್ಕಂಡವರು ತಮ್ಮ ಹೃದಯ ಪರಿವರ್ತನೆಯಾಗಿರುವುದೆಂದು ತಿಳಿಸಿದ್ದರಿಂದ ಅವರನ್ನು ಬಿಡುಗಡೆ ಮಾಡಲಾಯಿತೆಂದೂ ಹೇಳಿದರು. ಆರ್. ಎಸ್. ಎಸ್ಸಿನವರು ಗುಪ್ತವಾಗಿ ತಮ್ಮ ಚಟುವಟಿಕೆಯನ್ನು ಪ್ರಾರಂಭಿಸಿರುವುದಾಗಿ ಸರ್ಕಾರಕ್ಕೆ ಬಂದ ವರದಿಯ ಮೇಲೆ ಕೇವಲ ೨೦ ಮಂದಿಯನ್ನು ದಸ್ತಗಿರಿ ಮಾಡಲಾಯಿತೆಂದೂ, ಅವರಲ್ಲೂ ಸಹ ಕೆಲವು ನಿರ್ದೋಷಿಗಳನ್ನು ಬಿಡುಗಡೆ ಮಾಡಲಾಯಿತೆಂದೂ ಹೇಳಿದರು. ಮುಸ್ಲಿಮರನ್ನು ಹೈದರಾಬಾದ್ ಪೋಲೀಸ್ ಕಾರ್ಯಾಚರಣೆಯ ಸಂದರ್ಭದಲ್ಲಿ ಪ್ರಚೋದಿತವಾದ ವಿಷಯದಲ್ಲಿ ಬೆಂಗಳೂರಿನ ಪ್ರಮುಖ ಮುಸ್ಲಿಮರನ್ನು ಬಾವಾಡಿಕೆಯ ಅನಿವಾರ್ಯವಾಗಿ ಕೆಲವರನ್ನು ದಸ್ತಗಿರಿ ಮಾಡಬೇಕಾಗಿ ಬಂದ ಅಂಶವನ್ನು ಅವರಿಗೆ ತಿಳಿಸಿ ದಸ್ತಗಿರಿ ಮಾಡಲಾಯಿತೆಂದು ಗೃಹ ಸಚಿವರು ತಿಳಿಸಿದರು.

ಪತ್ರಿಕೆಗಳ ವಿಷಯವನ್ನು ಪ್ರಸ್ತಾಪಿಸಿ ಸಿವಿಲ್ ಪ್ರದೇಶದ ಪೋಲೀಸರು ಮುಷ್ಕರ ಹೂಡಿದ ಸಂದರ್ಭದಲ್ಲಿ ಸ್ವಾತಂತ್ರ್ಯವೆಂಬ ಪತ್ರಿಕೆಯು ಬೆಂಗಳೂರು ನಗರದ ಪೋಲೀಸರನ್ನೂ ಮುಷ್ಕರ ಹೂಡುವಂತೆ ಪ್ರೇರೇಪಿಸಿ ಬರೆದುದು ಯಾವ ದೇಶಾಭಿಮಾನಿಯೂ ಒಪ್ಪತಕ್ಕದ್ದಲ್ಲವೆಂದೂ, ಕೇಸರಿ ಪತ್ರಿಕೆಯವರು ಶ್ರೀಮನ್ಮಹಾರಾಜರಿಗೆ ಎಚ್ಚರಿಕೆ ಕೊಟ್ಟು ಬರೆಯಲು ಕಾರಣವಿಲ್ಲವೆಂದೂ, ಪತ್ರಿಕೆಗಳವರು ಜವಾಬ್ದಾರಿಯ ತವಾದ ಲೇಖನಗಳನ್ನು ಬರೆದು ರಚನಾತ್ಮಕವಾದ ಟೀಕೆ ಮಾಡುವುದು ಉಚಿತವೆಂದೂ, ಹಿಬಿಯಸ್ ಕಾರ್ಪಸಿನ ಪ್ರಕಾರ ಪತ್ರಿಕೆಗಳವರು ಹೈಕೋರ್ಟಿಗೆ ಹೋಗಿ ಪರಿಹಾರ ಹೊಂದಲು ಅವಕಾಶವಿರುವುದಾಗಿಯೂ ತಿಳಿಸಲಾಯಿತು.

ನಿರ್ಣಯವು ಬಹುಮತದಿಂದ ಬಿದ್ದು ಹೋಯಿತು.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಕೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾಮಲಕ ತೈಲ:—)

—ಮೇಹಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಶಂಖಾಮೃತ— ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವಿನಿ.

ಮಹಾಶೇಷ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಕ್ರೀಂ ಟಾನಿಕ್ ಕೀಸೆ ೩-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

೪೦ ಕ್ರಿಸೆಂಟ್ ಬಿಲ್ಡಿಂಗ್, ಮೈಸೂರು

ಗುರುದೇವಾ ಹಾಲ್

ಬಿ. ವೀರಪ್ಪ ಬೆಂಗಳೂರು ಶಾಖೆ ಅಂಗಡಿ

ಶಿವರಾಂಪೇಟೆ, ಮೈಸೂರು.

ನವೀನ ತರಹ ಬೆಂಗಾಲ್ ಸಿಲ್ಕು ಸೀರೆಗಳೂ ಮತ್ತು ನೂಲಿನ ಸೀರೆಗಳೂ ಬಂದಿವೆ

ದಯವಿಟ್ಟು ಒಂದೇ ಭೇಟಿಕೊಡಿ

ಧನ್ನಾಲಿಯವರ ಉಪವಾ[ಸ]

ಹಿಂದು ಪತ್ರಿಯ ಶೇರುಮಾರ್ [..] ಲ್ಲಿಯ ನಿವಾಸಿಗಳು ಅಲ್ಲಿ ತಲೆದ ಒಂದು [..] ಸಂಗದ ಬಗ್ಗೆ ತಮಗೆ ತಪ್ಪು ವರದಿಗಳ[ನ್ನು] ಕೊಟ್ಟಿದ್ದರೆಂಬ ಕಾರಣದ ಮೇಲೆ ಶ್ರೀ [ಧ]ನ್ನಾಲಿಯವರು ಐದು ದಿನಗಳ ಕಾಲ [ಉಪ]ವಾಸ ಮಾಡಿ, ಅನೇಕ ಹಿಕ ಮಿತ್ರರ [..]ರಿಕೆ ಮೇರೆ ಉಪವಾಸವನ್ನು ಮುಕ್ತಾ[ಯ]ಗೊಳಿಸಿದರೆಂದು ತಿಳಿದುಬಂದಿದೆ.

ಹರಿಕಥೆ

ವಿಜಯದಶಮಿ ಪ್ರಯುಕ್ತ ಶ್ರೀ ಅಶ್ವತ್ಥ[..] ಟಪ್ಪ ರಾಯರ ಮನೆಯಲ್ಲಿ ನಾಳೆ ರಾತ್ರಿ [..] ಘಂಟೆಗೆ ಸರಿಯಾಗಿ ಕೀರ್ತನ ವಿದ್ವಾಂ[ಸ] ಲಕ್ಷ್ಮೀಪತಿ ಬ್ರದರ್ಸ್ ರವರಿಂದ ಹರಿಕ[ಥೆ] ನಡೆಯುತ್ತದೆ. ಸರ್ವರಿಗೂ ಆಹ್ವಾನವುಂ[ಟು]

ನಿಮ್ಮ ಮೈ ಕೋಮಲವಾಗಿರ ಬೇಕೆ ? ನಿಮ್ಮ ಕಾಂತಿಯು ಮಾಸದಂತಿರಬೇಕೆ

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ದೀಪಾವಳಿ ಉಡುಪುಗಳು

ತೀರಾ ಕಡಿಮೆ ಬೆಲೆಗೆ ಅಂದವಾದ ಉಡುಪುಗಳು ನಮ್ಮಲ್ಲಿ ಸಿಕ್ಕುತ್ತವೆ.

ಒಂದು ಬಾರಿ ದಯಮಾಡಿ ನೋಡಿ.

ಗೃಹಲಕ್ಷ್ಮೀ ಸ್ಟೋರ್ಸ್

ಅಂಗಡಿ ಬೀದಿ, ಕೊಳ್ಳೇಗಾಲ

Edited printed and published by A. R. Nagarajan at the Sadhvi Press D. Subbaiah Road Mysore

ಪ್ರಭುದೇವಾ ಟಾಕೀಸಿನಲ್ಲಿ

24-10-48 ರಿಂದ ದಿನವಹಿ 3 ಆಟಗಳು. ಜಮಿನಿಯ ಪತ್ರ

★ ಹರಿಶ್ಚಂದ್ರ ★

(ತಮಿಳು)

ಪಿ. ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣನ್, ಮಧುರಂ ಪಾತ್ರ ವಹಿಸಿರುವರು

ಪುಟ 792 ॥ ವಂದೇಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಗುರುವಾರ ೨೮-೧೦-೪೮ [ಸಂಚಿಕೆ ೧೧೧

ನೆಹರೂರವರ ಕೊಲೆ ಪಿತೂರಿಯ ಪತ್ರೆ

ಮೈಸೂರಿಗೆ ಸೂರ್ಯ ಗ್ರಹಣವಿಲ್ಲ

ಪ್ರಸಿದ್ಧ ಜ್ಯೋತಿಷ್ಯ ವಿದ್ವಾಂಸರುಗಳ ಅಭಿಪ್ರಾಯ

...ಲ್ಲೆಗಾಲದ ಜ್ಯೋತಿಷ್ಯ ಸಿದ್ಧಾಂತ ...ರೀ ಅ॥ ವಿ॥ ವೆಂಕಟಸುಬ್ಬ ಶಾಸ್ತ್ರಿಗ...ರೀತಿ ತಿಳಿಸಿರುತ್ತಾರೆ:—

...ಸರ್ವಧಾರಿ ಸಂವತ್ಸರದ ಆಶ್ವಯುಜ ...ೀ ಅಮಾವಾಸ್ಯೆ ಸೋಮವಾರ (೧-೧೧-೪೮) ಇಲ್ಲು ಸೂರ್ಯ ಗ್ರಹಣ ವಿಮ ...ಗಿ ಮದ್ರಾಸ್ ಸರ್ಕಾರದವರು ರಜಾ ...ಕ ಪ್ರಾರಂಭಕ್ಕಾಗಿರುವುದರಿಂ ...ಹಣವುಂಟೇ? ಇಲ್ಲವೇ? ಎಂದು ಪ್ರಶ್ನ ...ಅನೇಕರು ಪ್ರಶ್ನೆ ಮಾಡಿರುತ್ತಾರೆ.

...ಸೂರ್ಯ ಗ್ರಹಣವು ೧೧ ನೇ ಅಕ್ಷಾಂ ...ದ ದಕ್ಷಿಣ ಭಾಗದಲ್ಲಿರುವ ಪ್ರದೇಶಗ ...ವು ಉಂಟು, ಅಂದರೆ ಕೊಯಮತ್ತೂ ...ಗೆ ದಕ್ಷಿಣ ಭಾಗದ ಕೆಲವು ಪ್ರದೇ ...ಗೂ ತಿರುಚನಾಪಳ್ಳಿಯಿಂದ ದಕ್ಷಿಣ ...ದಲ್ಲಿರುವ ಎಲ್ಲಾ ಊರುಗಳಿಗೂ ಅಂ ...ಮಧುರೆ, ರಾಮೇಶ್ವರ, ಕೊಡೈಕೆನಾ ...ಪಳ್ಳಿಕೋಟೆ, ತಿರುವಾಂಕೂರು, ಕೊ ...ಕನ್ಯಾಕುಮಾರಿ, ತಿರುನೆಲ್ವೇಲಿ, ರಾ ...ಪುರ, ಇತ್ಯಾದಿ ಪ್ರಾಂತ್ಯಗಳಿಗೆ ೭. ವಿ ...ಮೊದಲು ೩೦ ವಿಮಿಷಗಳ ವರೆಗೆ ...ಾರು ಬೆಳಗ್ಗೆ ೧೦॥ ಘಂಟೆಯಲ್ಲಿ ದೇ ...ಶಿವರ್ಯಾನು ಸಾರವಾಗಿ ಆಕ್ಷಗೆ ಕಾಣ ...ದೆ ಅಲ್ಲಿರುವವರು ಮಾತ್ರ ಗ್ರಹಣ ...ಕ ಸ್ನಾನ ಮಾಡಬೇಕು ...ಗ್ರಹಣವು ನಮ್ಮ ಮೈಸೂರು ದೇಶ ...ಇದಕ್ಕೆ ಉತ್ತರದಲ್ಲಿರುವ ದೇಶಗಳ ...ಇಲ್ಲ, ನಮ್ಮ ದೇಶವು ೧೨-೧೮ ಅ ...ಪವೃದ್ಧಾಗಿದೆ ೧೨ ನೇ ಅಕ್ಷಾಂಶ ...ಗ್ರಹಣವಿಲ್ಲವಾದುದರಿಂದ ಖಂಡಿತವಾ ...ನಮ್ಮ ದೇಶಕ್ಕೆ ಗ್ರಹಣವಿಲ್ಲ ...ಯೂ ಕೂಡ ಗ್ರಹಣ ನಿಮಿತ್ತ ಸ್ನಾ ...ನ ಮಾಡಬೇಕಾಗಿಲ್ಲ

...ರಾಜಧಾನಿಯ ಅ॥ ವಿ॥ ಸಂಪತ್ ಕೃ ...ಯ್ಯಂಗಾರರು ಈ ರೀತಿ ತಿಳಿಸಿರು...ದೆ —

...॥ ೧-೧೧-೧೯೪೮ ನೇ ಅಮಾ ...ದ ವಾರ ಸಂಭವಿಸುವ ಸೂರ್ಯಗ್ರ ...ನಮ್ಮ ಮೈಸೂರು ದೇಶಕ್ಕೆ ಕಾಣ ...ಗ್ರಹಣಸ್ಪರ್ಶ ಗ್ರಹಣಾಚರಣೆಯನ್ನು ಮಾ ...ಬೇಕಾಗಿಲ್ಲ

...ಸೂರ್ಯ ಗ್ರಹಣವು ಉತ್ತರ ಅಕ್ಷಾಂ ...ಗಿಂತ ದಕ್ಷಿಣದಲ್ಲಿರುವ ತಿರು ...ಪಳ್ಳಿ, ಕುಂಭಕೋಣಗಳಲ್ಲಿ ಕೃಷ್ಣಾ ...ದ, ಮಧುರಾ, ತಿನ್ನವೆಲ್ಲಿ, ಅನಂತ ...ರಾಮೇಶ್ವರ ಮೊದಲಾದ ಪಟ್ಟಣಗ ...ಸ್ಪಷ್ಟವಾಗಿಯೂ ಕಾಣುವುದರಿಂದ ...ನರು ಮಾತ್ರ ಗ್ರಹಣ...ವಾಸ ...ಸ್ನಾನಾದಿಯನ್ನು ಮಾಡಬೇಕು

...ಲಕ್ಷ ರೂ. ಬೆಲೆ ಬಾಳುವ ಚಿನ್ನದ ಕಳುವು

...ಸ್ತಾನ್ ಸಂಸ್ಥಾನದ ಮಾಜಿ ...ದ ಮಹಂತರ ಬಳಿ ... ...ವರಿಗೆ ಸೇರಿದ್ದ ೧೭ ಲಕ್ಷ ...ಬೆಲೆ ಬಾಳುವ ೧೭ ಸಾವಿರ ತೊಲ ...ವು ಮಾಯ ವಾಗಿದೆಯೆಂದೂ, ರಾಜ ...ನ ನಿಯುಕ್ತಿಲ್ಲವಿದ್ದಾಗ ಈ ಕಳವು ...ದು ವರದಿಯಾಗಿದೆ. ವಿ ಧ್ವ ...ಸರ್ಕಾರದವರು ಈ ಬಗ್ಗೆ ತನಿಖೆ ...ತ್ತಾರೆ

ಉತ್ತರ ಸಿಂಧ್‌ನಲ್ಲಿ ಹಿಂದೂ ಮನೆಗಳ ಲೂಟಿ

ಉತ್ತರ ಸಿಂಧ್ ಪ್ರಾಂತ್ಯದಲ್ಲಿ ಗಲಭೆ ಪ್ರಾರಂಭವಾಗಿದೆಯೆಂದೂ, ಜಕೋಬಬಾದ್ ಜಿಲ್ಲೆಯ ಅನೇಕ ಹಳ್ಳಿಗಳನ್ನು ಮುಸ್ಲಿಮರು ಲೂಟಿ ಮಾಡುತ್ತಿರುವರೆಂದೂ, ಇದರಿಂದ ಅಲ್ಲಿನ ಹಿಂದೂಗಳು ಗಾಭರಿಗೊಂಡು, ಕರಾಚಿಗೆ ದಿನಕ್ಕೆ ೮೦೦ ಜನರಂತೆ ಬರುತ್ತಿರುವರೆಂದೂ ೧೮ ಸಾವಿರ ಜನ ನಿರಾಶ್ರಿತರಿಗೆ ತಾತ್ಕಾಲಿಕ ಸ್ಥಳ ಪಡೆಯುವ... ಹೈದರಾಬಾದ್ ಸರ ಅಧೀನರುವರು ಅಲ್ಲಿ ... ಅವರನ್ನು ಬೊಂಬಾಯಿಗೆ ಕಳುಹಿಸಲು ಏರ್ಪಾಡು ಮಾಡುತ್ತಿರುವರೆಂದೂ ವರದಿಯಾಗಿದೆ

ಚೀಣಾದ ಅಧ್ಯಕ್ಷರಿಗೆ ಪ್ರತಿಭಟನೆ

ಚೀಣಾದ ನ್ಯಾಯವಿಧಾಯಕ ಸಭೆಯಲ್ಲಿ ಅಧ್ಯಕ್ಷ ಚಿಯಾಂಗ್ ಕೈ-ಶೇಕ್ ಮತ್ತು ಪ್ರಧಾನಿ ಮಾಂಗ್ ವೇ ಹೋ ರವರುಗಳ ಮೇಲೆ ವಿರೋಧ ಪ್ರದರ್ಶನವು ಕಂಡುಬಂದಿರುವುದು ಹೇಳಲಾಗಿದೆ. ಅಲ್ಲಿನ ಹಣಕಾಸಿನ ಸ್ಥಿತಿಯು ವಿಶೇಷ ಹದಗೆಟ್ಟಿರುವುದರಿಂದ ಸರ್ಕಾರಕ್ಕೆ ಬಿಕ್ಕಟ್ಟು ಉಂಟಾಗಿದೆಯೆಂದೂ, ಮತ್ತು ಶಮಯೋಜನೆಯು ಪರಿಶೀಲಿಸಲಾಗುತ್ತಿದ್ದಾರೆಂದು ವರದಿಯಾಗಿದೆ.

ಮೋಟಾರು ಕೆಲಸಗಾರರ ಅಗ್ರಿಕೆಗಳು

ಮೈಸೂರು ೨೮

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರೀ ಮಂಡಲಿಯ ಸಭೆಯು ಶ್ರೀ ಕೆ ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ನಡೆಯಿತು. ನಗರದ ಬಸ್ ಸರ್ವೀಸನ್ನು ಸರ್ಕಾರದವರೇ ನಡೆಸುವ ಸಮಯದಲ್ಲಿ ಅಲ್ಲಿರುವ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

ಸಂಘದ ಸದಸ್ಯರಾದ ಕಂಡಕ್ಟರ್ ರಾಮಕೃಷ್ಣ ನಾಯ್ಡುರವರನ್ನು ಪೋಲೀಸ್ ಕಾನ್‌ಸ್ಟೇಬಲ್ಲರೊಬ್ಬರು ತೋರಿದ ವರ್ತನೆಯನ್ನು ಖಂಡಿಸಿ ಕೂಡಲೆ ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಲಾಯಿತು.

ಬೆಳಗೊಳದ ಕಾರ್ಖಾನೆ ಕೆಲಸಗಾರರ ಮುಷ್ಕರ

ಬೆಳಗೊಳದ ಕೆಮಿಕಲ್ ಕಾರ್ಖಾನೆಯ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸಲಿಲ್ಲವೆಂದು ಕಳೆದ ... ೧೯ ನೇ ತಾ॥ ಮುಷ್ಕರ ಹೂಡಿ, ... ತಿಂಗಳುಗಳ ... ಅಧಿಕಾರ ವರ್ಗದವರೂ ಮತ್ತು ... ದವರೂ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದು ... ವಿಷಾದಕರವೆಂದು ನೋಟಿಸ್ ... ಬರೆದಿದ್ದಾರೆ.

ಮೈಸೂರು ಸಿಟಿ ರೇಷನಿಂಗ್

ನಂ, R 6-81/48

೧೯೪೮ ನೇ ಇಸವಿ ಅಕ್ಟೋಬರು ಮಾಹೆ ೩೧ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಟ್ಟಿರುತ್ತವೆ (ಸಹಿ)

ಯಂ ಶ್ರೀನಿವಾಸಲು ನಾಯ್ಡು,

ಮೈಸೂರು ರೇಷನಿಂಗ್ ಆಫೀಸರ್

೨೭-೧೦-೪೮ ಮೈಸೂರು ಸಿಟಿ.

ಗುರುದೇವಾ ಹಾಲ್

ದಿ ವೀರಪ್ಪ ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ,, ಮೈಸೂರು

ನವೀನ ತರಹ ಬೆಂಗಾಲ್ ಸಿಲ್ಕ್ ಸೀರೆಗಳು ಮತ್ತು ನೂಲಿನ ಸೀರೆಗಳೂ ಬಂದಿವೆ.

ದಯವಿಟ್ಟು ಇಂದೇ ಭೇಟಿಕೊಡಿ

ಶ್ರೀ ಗಾಯತ್ರೀ ಟಾಕೀಸ್

ಪ್ರತಿದಿನ 3 ಆಟಗಳು

ತಾ॥ 29—10—48 ರಿಂದ

ಎರಡು ದಿವಸಗಳು ಮಾತ್ರ

Paramountರವರ ಅದ್ಭುತ ವರ್ಣರಂಜಿತ ಚಿತ್ರ

ಆಲ್‌ಬುಕರ್ಕ್

(ALBUQUERQUE)

Morning Shows at 10-30 a.m.

From 29 10-48

For 2 days only

Warner's most

TERRIFIC DETECTIVE Drama

THE BEAST WITH FIVE FINGERS

Starring. PETER LORRE

ನೆಹರೂರವರ ಕೊಲೆಗೆ ಪಿತೂರಿ

ಕಳೆದ ಆಗಸ್ಟ್ ೧೫ ನೇ ತಾ॥ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂಬಂಧದಲ್ಲಿ ದೆಹಲಿ ಕೆಂಪು ಕೋಟೆಯ ಮೇಲೆ ಪಂಡಿತ ನೆಹರೂರವರು ಧ್ವಜಾರೋಹಣ ಮಾಡಿದರಷ್ಟೆ. ಆ ಸಮಯದಲ್ಲಿ ಅವರನ್ನು ಬಂದೂಕದಿಂದ ಹೊಡೆದು ಕೊಲೆ ಮಾಡಲು ಅನ್ಯಕಡೆಯ ೧೨ ಜನರು ಪಿತೂರಿ ನಡೆಸಿದ್ದರೆಂದು ಹೇಳಲಾಗಿದೆ. ಈಗ ಅವರನ್ನು ಪೋಲೀಸರು ದಸ್ತಗಿರಿ ಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ

ಪೋಸ್ಟಾಫೀಸುಗಳಲ್ಲಿ ಗಾಂಧಿ ನಿಧಿ ಕೂಪನ್ನುಗಳ ಮಾರಾಟ

ಮುಂದಿನ ತಿಂಗಳು ೧೫ ನೇ ತಾ॥ ನಿಂದ ಭಾರತದ ೨೯ ಸಾವಿರ ಅಂಚೆ ಕಛೇರಿಗಳಲ್ಲಿ ಮಹಾತ್ಮರ ಸ್ಮಾರಕ ನಿಧಿಯ ಕೂಪನ್ನುಗಳನ್ನು ಮಾರಲು ವ್ಯವಸ್ಥೆ ಮಾಡಲಾಗಿದೆ. ೧, ೨, ೫ ಮತ್ತು ೧೦ ರೂಗಳ ಕೂಪನ್ನುಗಳನ್ನು ಮಾರಲಾಗುವುದು.

ಸರ್ ಆರ್ಕಾಟರಿಗೆ ಹೊಸ ಹುದ್ದೆ

ವಿಶ್ವ ಸಂಸ್ಥೆಯ ಯುನೆಸ್ಕೊ ಎಂಬ ಸಮಿತಿಯ ಮುಂದಿನ ಡೈರೆಕ್ಟರ್ ಜನರಲ್ಲಾಗಿ ನಮ್ಮ ದಿವಾನ್ ಸರ್ ಆರ್ಕಾಟರು ಆರಿಸಲ್ಪಟ್ಟಿರುವರೆಂದು ತಿಳಿದುಬಂದಿದೆ.

ಕೋಟುಗಳು ಗುಲಾಮಗಿರಿಯ ಕುರುಹು

ಕೋಟುಗಳನ್ನು ಧರಿಸುವುದು ಗುಲಾಮಗಿರಿಯ ಚಿಹ್ನೆಯೆಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಚುನಾಯಿತರಾಗಿರುವ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಪ ದಂತಿಸ ...ರ ಸಮಾರಂಭದ ಸಭೆಯೊಂದರಲ್ಲಿ ತಿಳಿಸಿರುತ್ತಾರೆ. ಈಗ ನ... ವಿದ್ಯಾವಂತರುಗಳು ಧರಿಸುತ್ತಿರುವ ವಿಚಿತ್ರವಾದ ಉಡುಪುಗಳ ಹಿಂದಿನ ಪ್ರವಾಹದ ... ಸೌಂದರ್ಯ ಅವುಗಳನ್ನು ಈಗ ಜನರು ಧರಿಸುವುದನ್ನು ಬಿಡಬೇಕು ಎಂದು ಅವರು ಹೇಳಿದ್ದಾರೆ

ವಿವಾಹ ಮಹೋತ್ಸವ

ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರಾದ ಜನಾಬ್ ಎಮ್. ಹಸನ್‌ರವರು ತಮ್ಮ ಪುತ್ರಿ ಅಸ್‌ಗರಿ ಬೇಗಂರವರನ್ನು ಮದ್ರಾಸಿನ ಇಂಕಂ ಟ್ಯಾಕ್ಸ್ ಅಧಿಕಾರಿಗಳಾದ ಜನಾಬ್ ... ಗ ಲಾ ಬಲಾವಿಯವರಿಗೆ ಕೊಟ್ಟು ವಿವಾಹವನ್ನು ಬೆಂಗಳೂರಿನಲ್ಲಿ ಕಳೆದ ಭಾನುವಾರ ನೆರವೇರಿಸಿದರು

ಬೆಂಗಳೂರಿನ ತಾಯಿನಾಡು ಪತ್ರಿಕೆಯ ಸಂಪಾದಕರಾದ ಜನಾಬ್ ಸೈಯದ್ ಗೌಸ್ ಮೊಹಿಯುದ್ದೀನ್, ತಮ್ಮ ಸೋದರಿಯು ಜನಾಬ್ ಅಬ್ದುಲ್ ಅಜೀಂ ಟಾಹಿರ್‌ರವರಿಗೆ ಜನಾಬ ರಾಜಾ ಅಬ್ದುಲ್ ಕರೀಂ ಸಾಹೇಬ ಪುತ್ರಿಯನ್ನು ತಂದು ಕೆಸಂಧು ವಿವಾಹವನ್ನು ನಡೆಸಿದರು

ಪ್ರಭುಗಳೊಡನೆ ಭೇಟಿ

ಮೈಸೂರು ೨೮

ಸಭಾ ಪ್ರತಿನಿಧಿ ಸಭೆಯ ಸದಸ್ಯರುಗಳಾದ ಶ್ರೀಗಳು ಭಗವಾನ್ ಚಂದ್ರಶೇಖರಯ್ಯ, ಪುಟ್ಟೇಗೌಡ, ಚನ್ನಪ್ಪರೇ ಗೌಡ ... ಗೇಗೌಡರುಗಳಿಗೆ ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರ ಭೇಟಿ ದೊರಕಿತ್ತು

ಮೈಸೂರು ಸರ್ವೇ ಆಫೀಸರು

ಮೈಸೂರು ಜಿಲ್ಲಾ ಸರ್ವೇ ಆಫೀಸರಾದ ಶ್ರೀ ವರದರಾಜ ಅಯ್ಯಂಗಾರ್‌ರವರಿಗೆ ... ಕೂಡಲಾಗಿದೆ ... ಸ್ಥಾನದಲ್ಲಿ ಆಕ್ಟಿಂಗ್ ಅಸಿಸ್ಟೆಂಟ್ ... ಶ್ರೀ ಟಿ ಜಿ ನಾರಾಯಣ ... ರವರನ್ನು ನೇಮಿಸಲಾಗಿದೆ.

ಸಂಸ್ಥಾನದಲ್ಲಿ ವೈದ್ಯ ಸಂಸ್ಥೆಗಳು ಹೆಚ್ಚಬೇಕು

ಪ್ರಭುಗಳಿಂದ ಹೊಸ ಆಸ್ಪತ್ರೆಯ ಶಂಕುಸ್ಥಾಪನ

ಮೈಸೂರು ೨೮

ಕೃಷ್ಣರಾಜನಗರದ ತಾಲ್ಲೂಕು ಸಾಲಿಗ್ರಾಮದ ಹೊಸ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನಿನ್ನೆ ದಿವಸ ನೆರವೇರಿಸುತ್ತಾ ಶ್ರೀಜಯಚಾಮರಾಜೇಂದ್ರರವರು ಈ ರೀತಿ ಅಪ್ಪಣೆ ಕೊಡಿಸಿದರು:

ಗ್ರಾಮಗಳ ಆರೋಗ್ಯ ಸ್ಥಿತಿಯನ್ನು ಉತ್ತಮಗೊಳಿಸುವ ನಾನಾ ಕಾರ್ಯಕ್ರಮಗಳನ್ನು ನೆರವೇರಿಸುವುದಕ್ಕಾಗಿ ಅನೇಕ ಕಡೆಗಳಲ್ಲಿ ಆರೋಗ್ಯ ಕೇಂದ್ರಗಳು ಏರ್ಪಟ್ಟಿವೆ. ಆ... ದ್ವಾರ ...ಪ್ರಜಾ ಯೋಜನೆಗಳಲ್ಲಿ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶಗಳ ಆರೋಗ್ಯವನ್ನು ಉತ್ತಮಗೊಳಿಸುವ ಯೋಜನೆಯೂ ಸೇರಿದೆ.

ನಮ್ಮ ಸಂಸ್ಥಾನದಲ್ಲಿ ವೈದ್ಯ ಸಹಾಯವೂ ಜನಾರೋಗ್ಯ ರಕ್ಷಣೆಯ ಕಾರ್ಯಗಳೂ ಇನ್ನೂ ಹೆಚ್ಚಾಗಿ ಬೆಳೆಯಬೇಕಾಗಿವೆ. ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ವೈದ್ಯ ಸಂಸ್ಥೆಗಳ ಸಂಖ್ಯೆಯು ದ್ವಿಗುಣವಾಗಿ ಹೆಚ್ಚಿರುವುದೇನೋ ಸಂತೋಷಕರವಾದ ವಿಷಯವೇ ಆಗಿದೆ. ಆದಾಗ್ಯೂ, ಇನ್ನೂ ಅನೇಕ ವೈದ್ಯಸಂಸ್ಥೆಗಳು ಅವಶ್ಯವಾಗಿವೆ. ಮುಖ್ಯವಾಗಿ ಹೆರಿಗೆ ಆಸ್ಪತ್ರೆಗಳಂತೂ ಇನ್ನೂ ಬಹಳವಾಗಿ ಹೆಚ್ಚಬೇಕಾಗಿದೆ. ಏಕೆಂದರೆ, ಇಂದಿನ ಮಕ್ಕಳೇ ಮುಂದಿನ ಜನಾಂಗವೆಂದು ಧಾರಾಳವಾಗಿ ಹೇಳಬಹುದು.

ನಮ್ಮ ದೇಶದಲ್ಲಾದರೋ ಸಾವಿರಕ್ಕೆ ನಲವತ್ತರಂತೆ ಜನನ ಪ್ರಮಾಣವಿದೆ ... ನಮ್ಮ ದೇಶದಲ್ಲಿ ಗರ್ಭಿಣಿಯರಿಗೂ, ಬಾಣಂತಿಯರಿಗೂ ಮತ್ತು ಮಕ್ಕಳಿಗೂ ಅವಶ್ಯ ವೈದ್ಯಸಹಾಯವು ದೊರೆಯದಿರುವ ಕೊರತೆಯೋ, ಬಾಣಂತಿಯರ ಮತ್ತು ಮಕ್ಕಳ ಮರಣ ಸಂಖ್ಯೆಗಳು ಇಷ್ಟು ಅಧಿಕವಾಗಿರುವುದಕ್ಕೆ ಮುಖ್ಯ ಕಾರಣವೆಂದು ಹೇಳಬಹುದು.

ಈ ದೃಷ್ಟಿಯಿಂದ ನೋಡಿದರೆ, ಒಂದೊಂದು ಹೆರಿಗೆ ಆಸ್ಪತ್ರೆಯೂ ಮಹಿಳೆಯರ ಮತ್ತು ಮಕ್ಕಳ ಯೋಗಕ್ಷೇಮ ಸಾಧನೆಗೆ ಬಹಳ ಸಹಾಯಕವಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿಯೂ, ತಾಲ್ಲೂಕು ಕಚೇರಿಗಳಲ್ಲಿಯೂ ಇನ್ನೂ ಹೆಚ್ಚಾಗಿ ಹೆರಿಗೆ ಆಸ್ಪತ್ರೆಗಳು ನಿರ್ಮಾಣವಾಗುವುದು ಅತ್ಯವಶ್ಯವಾಗಿದೆ. ನಮ್ಮ ಸರ್ಕಾರದವರೇನೋ, ಇದಕ್ಕಾಗಿ ತಮ್ಮಿಂದ ಸಾಧ್ಯವಾದಷ್ಟುಮಟ್ಟಿಗೂ ಗಮನ ಕೊಡುತ್ತ ಬಂದಿದ್ದಾರೆ. ಆದರೆ ಇತರ ನಾನಾ ಬಾಬುಗಳಂತೆಯೇ ಈ ಕಾರ್ಯದಲ್ಲಿಯೂ ಸರ್ಕಾರದವರೊಡನೆ ಸ್ಥಳೀಯ ಸಂಸ್ಥೆಗಳೂ ಪರೋಪಕಾರ ಬುದ್ಧಿಯುಳ್ಳ ಮಹನೀಯರೂ ಸಹಕರಿಸಬೇಕಾದ ಅವಶ್ಯಕತೆಯು ಬಹಳವಾಗಿದೆ.

ಮೈಸೂರು ಸಿಟಿ ಮುನಿಸಿ[ಪಾಲಿಟಿ]

ತಾರೀಖು ೧-೧೦-೧೯[೪೮]

ಪ್ರಸಿದ್ಧ ಪತ್ರಿಕೆ

ಮೈಸೂರು ಪೌರಸಭೆಯು ... ಸೌದೆ ಅಭಾವವನ್ನು ತಪ್ಪಿಸಲು ... ತಿರುವ ಕಾರ್ಯಕ್ರಮದ ಪ್ರಕಟನೆ

ಮೈಸೂರು ನಗರದಲ್ಲಿ ಸೌದೆ ... ಸ್ಥಿತಿಯು ಈ ಸಲ ... ಕ್ಕು ಅದನ್ನು ಪರಿಹರಿಸಲೋಸ್ಕರ ... ಗಿ ಪರಿಶೀಲಿಸಿ, ಪ್ರತಿ ಮೊಹಲ್ಲಾದಲ್ಲಿ ... ರಿಯಾಗಿ ಕಡೆಗೆ ಇರಲ್ಲ ಸೌದೆ ... ಪ್ರೈವೇಟು ಡಿಪೋಗಳನ್ನು ... ವಲು ಮಾಡಿ ಈ ಕೆಳಗೆ ಕಂಡಿ ... ಯಲ್ಲಿ ಹಲವನ್ನು ಸೌದೆ ಡಿಪೋ ... ಕಾರಿಗಳನ್ನು ಏರ್ಪಡಿಸಿ ಈ ಡಿಪೋ ... ಯಾವಾಗಲೂ ಹಸಿ ಸೌದೆ ಒಂದು ... ಪಾಯಿಗೆ ನಾಲ್ಕು ಮಣಗಳಂತೆಯೂ ... ಣಗಿದ ಸೌದೆ ಒಂದು ರೂಪಾಯಿಗೆ ... ಕೂಗರೆ ಮೂರು ಮಣಗಳಂತೆಯೂ ... ರರು ಪಬ್ಲಿಕ್ ಗೌರ್ನಮೆಂಟ್ ... ಕೂಲ ಮಾಡಿ ಬಿಸಿ ಮಾಡುವಂ[ತೆ] ... ಪ್ರತಿ ತಿಂಗಳಲ್ಲಿಯೂ ಗೌರ್ನಮೆಂ[ಟ್] ... ಬಂತಕ್ಕ ಪೆಟ್ರೋಲಿನಲ್ಲಿ ಪ್ರತಿ ... ಗೆ ಸರಾಸರಿ ಒಂಭತ್ತು ಲಾರಿಗೆ ... ದಂತೆ ಪ್ರತಿ ತಿಂಗಳೂ ಸೌದೆ ... ಮಟಿಯೂ ಏರ್ಪಡಿಸಿರುತ್ತೆ ... ಗಳಲ್ಲಿ ಯಾವ ತರಹ ತಪ್ಪನ್ನಾ... ಪುರಜನರಿಗೆ ಯಾರಿಗೆ ಕಂಡು ... ಅದನ್ನು ತಿಂಯಾದ ರಾಜುವಾ... ಲ್ಯ ಲಿಖಿತ ಮೂಲ್ಯ ಪುರಸಭಾ ಆ... ತೆಳಿಸಿದಲ್ಲಿ ಕೂಡಲೆ ಅವುಗಳನ್ನು ... ಯೋಗ್ಯರುದೊಡನೆ ಸಂಪದಿಸಲು ... ದು ಮಾಡಿರುತ್ತೆ. ಡಿಪೋಗಳ ... ನ್ನು ಮುನಿಸಿಪಲ್ ಆಫೀಸಿನಲ್ಲಿ ... ತಿಳಿದುಕೊಳ್ಳಬಹುದು

೧. ಕೃಷ್ಣರಾಜಮೊಹಲ್ಲಾ ...
೨. ಚಾಮುಂಡಿ ಮೊಹಲ್ಲಾ ...
೩. ಫೋರ್ಟ್ ಮೊಹಲ್ಲಾ ...
೪. ದೇವರಾಜ ಮೊಹಲ್ಲಾ ...
೫. ಲಷ್ಕರ್ ಮೊಹಲ್ಲಾ ...
೬. ದೇವರಾಜ ಮೊಹಲ್ಲಾ ...
೭. ಮಂಡಿ ಮೊಹಲ್ಲಾ ...

ಮಿಲ್ಟರ್ ಸಫ್ದರ್ ಹುಸೇ[ನ್]

ಪ್ರೆಸಿಡೆಂಟ್ ಕವಿಶನ[ರ್]

28—10—48 ರಿಂದ :: ಅನೋಖ ಪ್ರಾರಂಭ

ನ್ಯೂ ಅಪೇರಾ ಟಾಕೀಸಿನಲ್ಲಿ

ಜುಪಿಟರ್ ರವರ

ರಾ ಜ ಕು ಮಾ ರಿ

[ತಮಿಳು]

ಮಾಯಾಜಾಲಗಳಿಂದ ಕೂಡಿದ ಮನರಂಜನೆಯ ಚಿತ್ರ

Distributors SHREE VIJAYA PICTURES, Gandhinagar Bangalore 2

ಕಥ]

BANGALORE GYMKHANA RACES 1948

ಬೆಂಗಳೂರು ಜಿಮಖಾನ ರೇಸಸ್ 1948

ಅಕ್ಟೋಬರ್ ೩೦ ರಲ್ಲಿ (ಕಡೆಯ ದಿನ)

ಟೋಟಲೈಜೆಟಿಂಗ್ ಮತ್ತು ರೂ 2 ಸ್ವೀಪ್

ಪ್ರವೇಶ
ಮೊದಲನೇ ತರಗತಿ— ಪುರುಷರು ರೂ 4 ದಿನಕ್ಕೆ
— ಸ್ತ್ರೀಯರು ರೂ 2 „
ಎರಡನೇ „ — ಪುರುಷರು ಅಥವಾ ಸ್ತ್ರೀಯರು ರೂ. 1-8 0 „

ಶುಭ]

ರಾಜಕಮಲ್ ಟಾಕೀಸ್

30-10-48 ರಿಂದ ಅನೋಖ 2ನೇ ವಾರ

ಫಿಲ್ಮಿಸ್ತಾನರವರ

★ ದೋ ಭಾಯ್ ★

(ಹಿಂದಿ)

ತಾರಾಗಣ:— ಕಮಿನಿ ಕೌಶಲ್ಯ, ಉಲ್ಲಾಸ್

MORNING SHOWS From 29-10-1948

For 4 days only

BREWSTER'S MILLIONS

WITH:— Dennis O' Keefe, Helen Walker, June Havoc

ಬೆಳಗಿನ ಆಟಗಳು

29—10—48 ನೇ ಶುಕ್ರವಾರದಿಂದ

4 ದಿನಗಳು ಮಾತ್ರ

ಎಂ. ಪಿ ಪ್ರೊಡಕ್ಷನ್ಸ್ ರವರ

ಜ ವಾ ಬ್

ಪಾತ್ರ—ಕಣ್ಣನ್, ಓರಿಕ, ಜಮುನ ವಹಿಸಿರುವರು

ಪ್ರಭಾ ಪಿಕ್ಚರ್ ಹೌಸ್

Edited printed and published by A.N. Nagarajan at the Sadhvi Press D Subbaiah Road Mysore.

ಪ್ರ ಭು ದೇ ವಾ ಟಾ ಕೀ ಸಿ ನ ಲ್ಲಿ

24-10-48 ರಿಂದ ದಿನವೂ 3 ಆಟಗಳು ಜೆಮಿನಿಯವರ

★ ಹರಿಶ್ಚಂದ್ರ ★

(ತಮಿಳು)

ಪಿ.ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣ, ಮಧುರಂ ಪಾತ್ರ ವಹಿಸಿರುವರು

ಉದಯ ಶಂಕರ್ ರವರ

ಮುಂದಿನ ಬದಲಾವಣೆ

ಕಲ್ಪನಾ ಕಲ್ಪನಾ

[ಹಿಂದಿ]

ಜೆಮಿನಿ ರಿಲೀಸ್

ಸಂಪುಟ ೭] ಶುಕ್ರವಾರ ೨೯-೧೦-೪೮ [ಸಂಚಿಕೆ ೧೦೨

ಸರ್ದಾರ್ ಪಟೇಲರಿಗೆ ಚಿನ್ನದ ರಾಜದಂಡ

...ವರಾಳ್ ಚೆಟ್ಟಿಯವರ ಕೊಲೆ ಮೊಕದ್ದಮೆ

ಮೈಸೂರು ೨೮

...ನಂಜನಗೂಡು ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಯುತ್ತಿರುವ ಧರ್ಮ ರಕ್ಷಾಳ... ...ವರಾಳ್ ಚೆಟ್ಟಿಯವರ ಕೊಲೆ ...ದ್ದಮೆ ಯ ತೀರ್ಪು ಮುಂದಿನ ತಿಂಗಳ ...ನೇ ತಾ॥ ಕೊಡಲ್ಪಡುವುದು.

ಧನ್ವಂತರಿ ಜಯಂತಿ

...ಜಧಾನಿಯ ಕೃಷ್ಣರಾಜ ಮೊಹಲ್ಲಾ... ...ವ ಆಯುರ್ವೇದ ಸಂಘದ ಆಶ್ರಯ... ...ಇಂದಿನ ಸಂಜೆ ೬ ಗಂಟೆಗೆ ಸಂಸ್ಕೃತ ...ಪಾಠಶಾಲೆಯಲ್ಲಿ ಶ್ರೀ ಧನ್ವಂತರಿ ...ಮಹೋತ್ಸವವು ಡಾ॥ ಎ ವೆಂಕಟರಾ... ...ಪಂಡಿತರ ಅಧ್ಯಕ್ಷತೆಯಲ್ಲಿ ನಡೆಯು... ...ಆ॥ ವಿ॥ ಟಿ. ಶ್ರೀನಿವಾಸ ಅಯ್ಯಂ... ...ರ ಸಂಗೀತವೂ ಜರುಗುವುದು.

ದಿನಾಚರಣೆ

...ಸರ್ಕಾರಿ ಆಯುರ್ವೇದ ಮತ್ತು ಯು... ...ಕಾಲೇಜು ಪದವೀಧರರ ಸಂಘದ ...ಯದಲ್ಲಿ ನಿನ್ನೆ ಸಂಜೆ ಶ್ರೀ ಧನ್ವಂತರಿ ...ಮತ್ತು ಸೇಠ್ ಅಬುಅಲ್ಲಿ ಇಬ್ರಾ... ...ದಿನಾಚರಣೆಗಳು ಆರೋಗ್ಯ ಸಚಿವ ...ದ್ ಮಹಮೂದ್ ಷರೀಫ್ ರವರ ಅ... ...ಯಲ್ಲಿ ಜರುಗಿದವು. ಈ ಸಂಬಂಧ ...ಡಾ ವೈ ಲಕ್ಷ್ಮೀನರಸಿಂಹ ಶಾಸ್ತ್ರಿಗ... ...ರೀಯ ವೈದ್ಯದ ವಿಷಯವಾಗಿ ಭಾ... ...ಮಾಡಿದರು ಡಾ॥ ಎಂ ಎ ಮೋಕ್ರಿಯ... ...ಸೇಠ್ ಅಬು ಅಲಿ ಸೇನಾದರ ಜೀ... ...ಚರಿತ್ರೆಯನ್ನು ವಿವರಿಸಿದರು.

...ಖಿಲ ಭಾರತ ರಾಷ್ಟ್ರೀಯ ವೈದ್ಯ ಸಮ್ಮೇಳನ

...ಭಾರತದ ಆಯುರ್ವೇದ ಮತ್ತು ಯು... ...ಪದವೀಧರರ ಸಂಸ್ಥೆಗಳನ್ನೊಳಗೊಂ... ...ದ ಅಖಿಲ ಭಾರತ ರಾಷ್ಟ್ರೀಯ ವೈ... ...ಸಂಘವನ್ನು ಸ್ಥಾಪಿಸಲು, ಕಳೆದ ೨೪... ...ದೆಹಲಿಯಲ್ಲಿ ರಾಷ್ಟ್ರೀಯ ವೈದ್ಯ ...ಮ್ಮೇಳನವು ವಿಜಯವಾಡದ ಡಾ॥ ...ನಾರಾಯಣರಾಯರ ಅಧ್ಯಕ್ಷತೆ... ...ನಡೆಯಿತು. ಶ್ರೀ ಎಲ್ ದೇಶಬಂ... ...ಗುಪ್ತರವರು ಸಮ್ಮೇಳನದ ಆರಂಭೋ... ...ವನ್ನು ನೆರವೇರಿಸಿದರು. ಮೈಸೂರು ...ರಿ ಆಯುರ್ವೇದ ಕಾಲೇಜಿನ ಅಧ್ಯಾ... ...ಮತ್ತು ಮುನಿಸಿಪಲ್ ಆಸ್ಪತ್ರೆಯ... ...ದ ಡಾ॥ ಎಚ್ ಲಕ್ಷ್ಮೀ ಶಾಂ... ...ರವರೂ ಮತ್ತು ಆಯುರ್ವೇದ ಪ... ...ಯುನಾನಿ ಪದವೀಧರರ ಸಂಘದ ಅ... ...ದ ಡಾ॥ ಎಂ ಮಹದೇವ ಶಾಸ್ತ್ರಿ... ...ರೂ ಮೈಸೂರಿನ ಪರವಾಗಿ ಸಮ್ಮೇಳ... ...ಭಾಗವಹಿಸಿದ್ದರು.

...ಕಾಲದಲ್ಲಿ ೫ ಮಕ್ಕಳ ಜನನ

...ಚೆಟ್ಟಿನ ಗುಡ್ಡಗಾಡಿನ ಹೆಂಗಸೊಬ್ಬ... ...ಶಿಶುಗಳು ಏಕ ಕಾಲದಲ್ಲಿ ಜನಿಸಿದ ...ಮಕ್ಕಳು ಈಗ ಬದುಕಿರಲಾರ... ...ವೇಳಲಾಗಿದೆ.

...ನು ನಿವಾರಣಾ ಸಮಿತಿಯ ಜಮಾ ಖರ್ಚು

ನಂಜನಗೂಡು ೨೬

...ದ ಗ... ನಿವಾರಣಾ ಸಮಿ... ...೬೬ ನೇ ವರ್ಷದ ಲೆಕ್ಕಾಚಾರದ ...ವರಗಳನ್ನು ತಾಲ್ಲೂಕು ಆಫೀ... ...ನಲ್ಲಿ ಸಾರ್ವಜನಿಕರ ಪರಿ... ...ಇಡಲಾಗಿದೆಯೆಂದೂ, ಬೇಕಾದ ...ವನ್ನು ನೋಡಬಹುದೆಂದೂ, ಶಾ... ...ತಿಳಿಸಿರುತ್ತಾರೆ.

ಮಾಹೆ ನಗರದಲ್ಲಿ ಪುನಃ ಫ್ರೆಂಚರ ಆಡಳಿತ

ಮಾಹೆ ನಗರದ ಆಡಳಿತವನ್ನು ಫ್ರೆಂಚರು ನಿನ್ನೆ ಪುನಃ ವಶಪಡಿಸಿಕೊಂಡರು. ಫ್ರೆಂಚ್ ಸರ್ಕಾರದ ಅಧಿಕಾರಿಗಳಿಗೂ ಮತ್ತು ಪ್ರಜಾ ಸಮಿತಿಯ ಪ್ರತಿನಿಧಿಗಳಿಗೂ ನಡೆದ ಸಂಧಾನದ ಮಾತುಕತೆಗಳು ಮುರಿದು ಬಿದ್ದುದರಿಂದ ಯುದ್ಧ ಹಡಗಿನಿಂದ ಬಂದ ಫ್ರೆಂಚ್ ಸೈನಿಕರು ನಗರವನ್ನು ಆಕ್ರಮಿಸಿ, ಅಧಿಕಾರ ಭವನದ ಮೇಲಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಧ್ವಜವನ್ನು ತೆಗೆದು ಹಾಕಿ, ಫ್ರಾನ್ಸಿನ ಧ್ವಜವನ್ನು ಏರಿಸಿದರು. ನಗರವನ್ನು ಫ್ರೆಂಚ್ ಸೈನಿಕರ ತಾಯುಕ್ತಿ ದ್ವಾರ ಸೈನಿಕರು ನಗರವನ್ನು ಪ್ರವೇಶಿಸಿದ ವೇಳೆ ಅಲ್ಲಿನ ಶೇಕಡ ೭೫ ರಷ್ಟು ಜನರು ಸ್ಥಳವನ್ನು ಬಿಟ್ಟು ಹೋಗಿದ್ದರು. ಈಗ ನಗರವು ನಿರ್ಜನ ಪ್ರದೇಶದಂತೆ ಕಾಣುತ್ತಿದೆ.

ಮಾಹೆ ನಗರದ ಸಮಸ್ಯೆ ಬಗ್ಗೆ ಭಾರತ ಸರ್ಕಾರದವರು ಸ್ಪಷ್ಟಪಡಿಸಿದ್ದ ಪಕ್ಷದಲ್ಲಿ ಮತ್ತು ಫ್ರೆಂಚ್ ಸೈನಿಕರು ಬಲವನ್ನು ಪ್ರಯೋಗಿಸುವ ಸಂದರ್ಭದಲ್ಲಿ ನಗರವನ್ನು ಪೂರ್ತಿ ಹೋರಿ ಮಾಡಬೇಕೆಂದು ಅಖಿಲ ಭಾರತ ಸಮತಾವಾದಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣರವರ ಸಲಹೆಯನ್ನು ಅಲ್ಲಿನ ಮಹಾಜನ ಸಭೆಯವರು ಮತ್ತು ಪ್ರಜಾ ರಕ್ಷಣಾ ಸಮಿತಿಯವರು ಅಂಗೀಕರಿಸಿದ್ದರೆಂದು ಹೇಳಲಾಗಿದೆ.

ಮಾಹೆ ನಗರದ ಫ್ರೆಂಚ್ ಆಡಳಿತಗಾರರೂ, ಪೊಲೀಸ್ ಕಮೀಷನರೂ, ಮತ್ತು ಪೌರಸಭಾ ಸದಸ್ಯರುಗಳೂ ಈಗ ಹಿಂತಿರುಗಿದ್ದಾರೆ. ಅವರುಗಳನ್ನು ಕೆಲವು ಜನರು ಅಪಹರಿಸಿ ಗುಪ್ತವಾದ ಸ್ಥಳದಲ್ಲಿಟ್ಟಿದ್ದರು.

ಶಂಕು ಸ್ಥಾಪನೆ

ಕೃಷ್ಣರಾಜನಗರ ೨೮

ಕೃಷ್ಣರಾಜನಗರದ ತಾ॥ ಮಾವತ್ತೂರಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಕಟ್ಟಡದ ಮತ್ತು ಕೆಸ್ತೂರು ಕೊಪ್ಪಲಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡದ ಶಂಕು ಸ್ಥಾಪನಾ ಮಹೋತ್ಸವಗಳನ್ನೂ ನಿನ್ನೆ ಸಂಸ್ಥಾನದ ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂ ರವರು ನೆರವೇರಿಸಿದರು. ಸಚಿವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು.

ಶ್ರೀ ಕೆ ಟಿ. ಭಾಷ್ಯಂ ರವರ ನಿನ್ನೆ ದಿನ ರಾಜಧಾನಿಯಿಂದ ನೀಲಗಿರಿಗೆ ಪ್ರಯಾಣ ಬೆಳೆಸಿದರು.

ಸರ್ದಾರ್ ಪಟೇಲರಿಗೆ ಚಿನ್ನದ ಅಶೋಕ ಸ್ತಂಭದ ಅರ್ಪಣೆ

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರ ೭೪ ನೇ ವರ್ಧಂತ್ಯುತ್ಸವದ ಜ್ಞಾಪಕಾರ್ಥವಾಗಿ ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ೭೪೧ ತೊಲ ತೂಕವುಳ್ಳ ಚಿನ್ನದ ಅಶೋಕ ಸ್ತಂಭದ ಮಾದರಿಯ ಪ್ರತಿಮೆಯನ್ನು ಸ॥ ಪಟೇಲರಿಗೆ ಈ ವಾರದಲ್ಲಿ ಅರ್ಪಿಸುವರು. ಬೊಂಬಾಯಿನಲ್ಲಿ ಪಟೇಲ್ ಸ್ಮಾರಕ ಭವನವೊಂದನ್ನು ೭ ಲಕ್ಷ ರೂ ವೆಚ್ಚದಲ್ಲಿ ಕಟ್ಟಲು ವ್ಯವಸ್ಥೆ ಮಾಡಲಾಗಿದೆ.

ಸಿಂಧಿನಿಂದ ಭಾರತಕ್ಕೆ ಅಕ್ಕಿಯ ಕಳ್ಳ ರವಾನೆಯೇ ?

ಪಶ್ಚಿಮ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಪ್ರಧಾನಿ ಪೀರ್ ಇಲಾಹಿ ಬಕ್ಸ್ ರವರು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಟ್ಟು ಸಿಂಧ್ ಪ್ರಾಂತ್ಯದ ತರ್ ಪಾರ್ ಕರ್ ಎಂಬ ಜಿಲ್ಲೆಯಲ್ಲಿ ಕ್ಷಾಮ ತಲೆದೋರುವ ಸಂಭವವಿದೆಯೆಂದೂ ಆ ಪ್ರಾಂತ್ಯದ ಗಡಿಯಲ್ಲಿರುವ ಕಚ್ ಸಂಸ್ಥಾನದ ಮೂಲಕ ಭಾರತಕ್ಕೆ ಅಕ್ಕಿಯು ಕಳ್ಳತನದಲ್ಲಿ ರವಾನೆಯಾಗುತ್ತಿರುವುದರಿಂದಲೇ ಈ ಪರಿಸ್ಥಿತಿಯು ತಲೆದೋರಿರುವುದೆಂದೂ ತಿಳಿಸಿರುವರು.

ಖೇರರು ಬ್ರಿಟನ್ನಿನಲ್ಲಿ ಭಾರತದ ರಾಯಭಾರಿ

ಬೊಂಬಾಯಿನ ಪ್ರಧಾನಿ ಶ್ರೀ ಬಿ ಜಿ ಖೇರರನ್ನು ಇಂಗ್ಲೆಂಡಿನಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗುವುದೆಂದು ವದಂತಿ ಹಬ್ಬಿದೆ.

ಸಿಕಂದರಾಬಾದ್ ಪೌರಸಭೆಯ ಅಧಿಕಾರಿಯ ದಸ್ತಗಿರಿ

ರಜಾಕರಲ್ಲಿ ಸಂಬಂಧವಿಟ್ಟಿದ್ದರೆಂಬ ಆಪಾದನೆಯ ಮೇಲೆ ಸಿಕಂದರಾಬಾದಿನ ಪೌರಸಭೆಯ ಹಣಕಾಸಿನ ಅಧಿಕಾರಿಗಳಾದ ಎ ಎಂ ಎಚ್ ಕುರೇಶಿಯವರನ್ನು ದಸ್ತಗಿರಿ ಮಾಡಲಾಗಿದೆ.

ನೈರ್ಮಲ್ಯಕ್ಕೆ ಗಮನ ಕೊಡಬೇಕು

ಶ್ರೀರಂಗಪಟ್ಟಣ ೨೬

ಇಲ್ಲಿನ ರಸ್ತೆಗಳಲ್ಲಿ ನಗರಸಭೆಯ ಮುನ್ಸಿಪಲ್ ನೈರ್ಮಲ್ಯ... ...ಚರಂಡಿಗಳನ್ನು ಸ್ವಚ್ಛಪಡಿಸುತ್ತಿಲ್ಲ. ಜನರ ವಸತಿಗಳ ರಸ್ತೆಗಳನ್ನು ಗುಡಿಸುತ್ತಿಲ್ಲ. ಇದರಿಂದ ಕಲುಷಿತ ವಾತಾವರಣ ವಿಶೇಷವಾಗಿ ಖಾಯಿಲೆ ಬರುವ ಭಯ ಉತ್ಪನ್ನವಾಗಿದೆ. ಪೌರರು ಸೊಳ್ಳೆಗಳಿಂದ ತೊಂದರೆ ಪಡುತ್ತಿರುವರು. ನೈರ್ಮಲ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂದು ಅಪೇಕ್ಷೆ.

ಸ॥ ಪಟೇಲರಿಗೆ ರಾಜದಂಡ

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರ ೭೪ ನೇ ವರ್ಧಂತಿಯ ಜ್ಞಾಪಕಾರ್ಥವಾಗಿ ಬೊಂಬಾಯಿನ ಪುರಜನರು ಅವರಿಗೆ ೭೪ ವಜ್ರಗಳುಳ್ಳ ಒಂದು ಚಿನ್ನದ ರಾಜದಂಡವನ್ನು ಅರ್ಪಿಸುವರು.

ಎಂಜನಿಯರಿಂಗ್ ಕಾಲೇಜಿಗೆ ೧ ಲಕ್ಷ ರೂ. ದಾನ

ದಾವಣಗೆರೆಯಲ್ಲಿ ಎಂಜನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಅಲ್ಲಿನ ಸುಪ್ರಸಿದ್ಧ ವರ್ತಕರಾದ ಬ್ರಹ್ಮಪ್ಪ ಶಿವನಪ್ಪನವರ ಶ್ರೀ ಚಂದ್ರಣ್ಣನವರು ೧ ಲಕ್ಷ ರೂ. ಉದಾರ ದಾನ ಮಾಡಿದ್ದಾರೆ.

ಭಾರತ ಸರ್ಕಾರಕ್ಕೆ ನಾಟು ಕೋಟೆಯವರ ನಿಯೋಗ

ಬರ್ಮಾದಲ್ಲಿರುವ ಭತ್ತ ಬೆಳೆಯುವ ಒಟ್ಟು ಜಮೀನುಗಳ ಪೈಕಿ ಸುಮಾರು ಅರ್ಧಭಾಗದಷ್ಟು ದಕ್ಷಿಣ ಭಾರತದ ನಾಟುಕೋಟೆ ಚೆಟ್ಟಿಯಾರರುಗಳಿಗೆ ಸೇರಿದವು ಎಂದು ವರದಿಯಾಗಿದೆ. ಬರ್ಮಾದ ಸರ್ಕಾರ ಜಮೀನುಗಳ ರಾಷ್ಟ್ರೀಕರಣದ ಕಾನೂನಿನ ಪ್ರಕಾರ ಹಿಡುವಳಿದಾರರಿಗೆ ಅಲ್ಲಿನ ಸರ್ಕಾರದವರು ಅಂದಾಜು ಕಟ್ಟಿರುವ ಪ್ರಕಾರ ಜಮೀನಿನ ಒಂದು ವರ್ಷದ ಕಂದಾಯದ ಅರ್ಧ ಭಾಗವನ್ನು ಪರಿಹಾರವನ್ನು ಮಾತ್ರ ಕೊಟ್ಟು ಜಮೀನುಗಳನ್ನು ಸರ್ಕಾರದ ವಶಪಡಿಸಿಕೊಳ್ಳಲಾಗುವುದೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಭಾರತ ಸರ್ಕಾರವು ಮಧ್ಯೆ ಪ್ರವೇಶಿಸಿ ತಮಗೆ ನ್ಯಾಯವಾದ ರಕ್ಷಣೆ ಕೊಡಬೇಕೆಂದು ಪ್ರಾರ್ಥಿಸಲು ಇಷ್ಟರಲ್ಲೇ - ಭಾರತ - ಸರ್ಕಾರಕ್ಕೆ ನಾಟುಕೋಟೆ ಚೆಟ್ಟಿಯಾರರ ನಿಯೋಗವೊಂದು ಹೋಗಲಿದೆ.

ನೆಹರೂರವರಿಗೆ ನಿಜಾಮರ ಆಹ್ವಾನ

ಪ್ರಧಾನಿ ಪಂಡಿತ ನೆಹರೂರವರು ಇಂಗ್ಲೆಂಡಿನಿಂದ ಹಿಂತಿರುಗಿದ ನಂತರ ಹೈದರಾಬಾದಿಗೆ ಭೇಟಿ ಕೊಡಬೇಕೆಂದು, ನಿಜಾಮರು ಅವರಿಗೆ ಆಹ್ವಾನ ಕೊಟ್ಟಿರುವರೆಂದು ಹೇಳಲಾಗಿದೆ. ಸರ್ದಾರ್ ಪಟೇಲರವರೂ ನಿಜಾಮರವರ ಸನ್ನಿಧಿಯಲ್ಲೇ ಸಂಸ್ಥಾನಕ್ಕೆ ಭೇಟಿ ಕೊಡುವರು.

ಜಡ್ಜಿಗಳ ವರ್ಗಾವರ್ಗಿ

ಬೆಂಗಳೂರು ೨೮

ಸ್ಪೆಷಲ್ ಸೆಷನ್ಸ್ ರಿಜಿಸ್ಟ್ರಾರ್ ರಾದ ಶ್ರೀ ಕೆ ಸಿ ಲಿಂಗೇಗೌಡರವರನ್ನು ಬೆಂಗಳೂರಿನ ಡಿಸ್ಟ್ರಿಕ್ಟ್ ಸೆಷನ್ಸ್ ನ್ಯಾಯಾಧೀಶರಾಗಿಯೂ, ಶಿವಮೊಗ್ಗ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಬಿ ಭದ್ರಪ್ಪನವರನ್ನು ಸ್ಪೆಷಲ್ ರಿಜಿಸ್ಟ್ರಾರ್ ರಾಗಿಯೂ, ಬೆಂಗಳೂರಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಬಿ. ಆರ್ ನಾಗಲಿಂಗಯ್ಯನವರನ್ನು ಶಿವಮೊಗ್ಗ ಸೆಷನ್ಸ್ ನ್ಯಾಯಾಧೀಶರಾಗಿಯೂ ನೇಮಿಸಲಾಗಿದೆ.

ನಾಡಿಗ ಕೃಷ್ಣಮೂರ್ತಿಯವರು

ಅನೇಕ ದಿವಸಗಳ ಪ್ರಯಾಣ ನಂತರ ಮಾಡಿಕೊಂಡು ಈಗ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಶಿವಮೊಗ್ಗಕ್ಕೆ ಹಿಂತಿರುಗಿದ್ದಾರೆ. ಅವರು ಮುಂದಿನ ತಿಂಗಳ ೧೨ನೇ ತಾ॥ ರಾಜಧಾನಿಗೆ ಆಗಮಿಸುವ ಸಂಭವವಿದೆ.

ಗೋಣೀ ಚೀಲದಲ್ಲಿ ಕಟ್ಟಿದ್ದ ಹಣದ ಪತ್ತೆ

ಮೈಸೂರು ೨೯

ಮೈಸೂರ ತಾಲ್ಲೂಕು ಬಿಲ್ಲಹಳ್ಳಿಗೆ ಸೇರಿದ ತಿರಿಟಪ್ಪನ ಕೆರೆಯಲ್ಲಿ ಸುಮಾರು ೪೦ ವರ್ಷದ ಗಂಡಸೊಬ್ಬನ ಹೆಣವು ತೇಲುತ್ತಿದ್ದುದನ್ನು ತಾಲ್ಲೂಕು ಪೋಲೀಸರಿಗೆ ವರದಿ ಮಾಡಲಾಗಿ, ಅವರು ತನಿಖೆ ಶುರು ನಡೆಸುತ್ತಿದ್ದಾರೆ. ಗೋಣೀ ಚೀಲದಲ್ಲಿ ಆತನನ್ನು ಕಲ್ಲುಗಳ ಸಮೇತ ಕಟ್ಟಿ ನೀರಿನಲ್ಲಿ ಮುಳುಗಿಸಲಾಗಿತ್ತೆಂದು ಹೇಳಲಾಗಿದೆ. ಮೃತಪಟ್ಟವರು ಯಾರೆಂಬುದು ಇನ್ನೂ ಗೊತ್ತಾಗಿಲ್ಲ

ಸಂಗೀತ ಉಪಾಧ್ಯಾಯರುಗಳ ಬೇಡಿಕೆ

ಪ್ರೈಮರಿ ಶಾಲಾ ಸಂಗೀತ ಉಪಾಧ್ಯಾಯರುಗಳಿಗೆ ಸರಿಯಾದ ಉತ್ತೇಜನವು ದೊರೆಯುವ ತನಕ ಕಷ್ಟ ಪಡುತ್ತಿರುವರೆಂದೂ, ಅವರಿಗೂ ಮೊದಲ್ ಸಕ್ಕಲು ಸಂಬಳ ಸಾರಿಗೆಯನ್ನು ಕೊಡಬೇಕೆಂದೂ ಕೋರಿ ನೊಂದ ಉಪಾಧ್ಯಾಯರೊಬ್ಬರು ಪತ್ರ ಬರೆದಿರುತ್ತಾರೆ

ವೀರಶೈವ ಮಹಾಸಭೆ

ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಮೈಸೂರು ಸಂಸ್ಥಾನದ ವೀರಶೈವ ಮಹಾಸಭೆಗಳನ್ನು ನಡೆಸುವ ಸಂಬಂಧದಲ್ಲಿ ಕಳೆದ ಕಾರ್ಯಕ್ರಮ ಕೈಗೊಳ್ಳಲು ಇದೇ ೩೦ನೇ ತಾ॥ ಬೆಂಗಳೂರಿನಲ್ಲಿ ವೀರಶೈವ ಸಭೆಯು ನಡೆಸ ಲಾಗುವುದು, ಸಮಿತಿಯ ಸದಸ್ಯರೆಲ್ಲರೂ ದಯಮಾಡಿ ಬರಬೇಕೆಂದು ಕೋರಲಾಗಿದೆ

ಎಂಟಕ್ಕೆ ಎರಡೇ ದಿನ ರೇಷನ್

ಹಂಪಾಪುರ ೨೮

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಸರ್ಕಾರಿ ಡಿಪೋವಿನಲ್ಲಿ ವಾರಕ್ಕೆ ಎಂಟು ದಿನಗಳಿಗೆ ಮಾತ್ರ ರೇಷನ್ ಕೊಡುತ್ತಿದ್ದಾರೆ ಮತ್ತು ಪೂರ್ತಾ ರೇಷನನ್ನೂ ಸಹ ದೊರೆಯುತ್ತಿಲ್ಲ. ಇದರಿಂದ ಬಡ ಜನರಿಗೆ ಬಹಳ ಕಷ್ಟವಾಗುತ್ತಿದೆ ಸಂಬಂಧಪಟ್ಟ ಅಧಿಕಾರಿಗಳು ಈ ಕಷ್ಟವನ್ನು ಕೂಡಲೇ ನಿವಾರಿಸಬೇಕು

ಮಂಡ್ಯದ ಹೈಸ್ಕೂಲು ನಿಧಿಗೆ ಸಹಾಯ

ದೀಪಾವಳಿಯ ಸಂತೋಷದ ಸಮಯದಲ್ಲಿ ಮಂಡ್ಯದ ಶಾಲೆಗೆ ಶಾಶ್ವತ ನಿಧಿಯನ್ನು ಸಂಗ್ರಹಿಸಲು ಎಂದಿನಂತೆ ವಿದ್ಯಾರ್ಥಿಗಳೂ ಮತ್ತು ಅಧ್ಯಾಪಕರೂ ಬರುವರು. ದ್ವಾರೆ ಸಾರ್ವಜನಿಕರು ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಹೈಸ್ಕೂಲಿನ ಸಮಿತಿಯ ಅಧ್ಯಕ್ಷರಾದ ರಾಜಸೇವಾಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯಂಗಾರರವರು ಪ್ರಾರ್ಥಿಸಿರುತ್ತಾರೆ

ಕಾಲಕ್ಷೇಪ

ಚಾಮರಾಜನಗರ ೨೮

ಇಲ್ಲಿನ ದೇವಾಂಗ ಮೊಹಲ್ಲಾದ ಶ್ರೀ ಬಿ ಕೆ ರಾಮಲಿಂಗಯ್ಯನವರ ಮನೆಯಲ್ಲಿ ಶ್ರೀಗಳಾದ ಶ್ರೀನಿವಾಸಯ್ಯ ಮತ್ತು ಕೃಷ್ಣಪ್ಪನವರುಗಳಿಂದ ಕಳೆದ ೨೦ನೇ ತಾ॥ ನಿಂದ ಶ್ರೀ ಮಹಾಭಾರತ ಪಠಣವು ನಡೆಯುತ್ತಿದೆ. ಸುಮಾರು ೮ ತಿಂಗಳವರೆಗೆ ಈ ಕಾಲಕ್ಷೇಪವು ನಡೆಯುವುದು

—

ಬಾಪೂ ಸ್ಮರಣಾ ದಿನ

ರಾಜಧಾನಿಯ ಮಹಿಳಾ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಾಪೂ ಸ್ಮರಣಾ ದಿನವು ಗೀತಾ ರಸ್ತೆಯಲ್ಲಿರುವ ಭಗಿನೀ ಸೇವಾ ಸಮಾಜದಲ್ಲಿ ನಡೆಯುವುದು ಶ್ರೀ ಎಚ್ ಜಿ ಸೂರ್ಯನಾರಾಯಣರವರು ಭಾಷಣ ಮಾಡುವರು ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ

Edited printed and published by A.R. Nagarajan at the Sadhvi Press D Subbaiah Road Mysore.

ಸಂಗೀತ ಕಛೇರಿ

ಕೊಳ್ಳೇಗಾಲ

ಇಲ್ಲಿನ ಶ್ರೀ ದೇವಾಂಗ ಶ್ರೀ ರಾಮ ಮಂದಿರದಲ್ಲಿ ಆರ್ ಚಕ್ರವರ್ತಿ ಅಯ್ಯಂಗಾರ್ಯರ ಶ್ರೀಮತಿ ಕೆ ಆರ್ ಕಲ್ಲಮ್ಮನವರ ಕಛೇರಿಯು ಕಳೆದ ೧೩ನೇ ತಾ॥ ಯಿತು. ನೆರೆದಿದ್ದ ಅನೇಕ ವಿದ್ವಾಂಸರುಗಳು ಶ್ರೀ ಕಲ್ಲಮ್ಮನವರ ಸಾಂ... ಕೊಂಡಾಡಿದರು

ಬಸ್ಸುಗಳ ಅವ್ಯವಸ್ಥೆ

ಗುಂಡ್ಲುಪೇಟೆ

ಇಲ್ಲಿಂದ ಮೈಸೂರಿಗೆ ಹೊರಡುವ ಸರ್ವೀಸಿನವರು ಸರ್ಕಾರದವರು ಮಾಡಿರುವ ಪ್ರಯಾಣಿಕರಿಗೆ ದರಕ್ಕಿಂತ ಹೆಚ್ಚಿಗೆ ದರ ವಸೂಲು ಮಾಡುತ್ತಿರುವರು. ... ಯಾದ ಕಾಲಕ್ಕೆ ಬಸ್ಸುಗಳನ್ನು ಬಿ... ಈ ವಿಚಾರಗಳ ಬಗ್ಗೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ... ಲಾಗಿದೆ

|| ಶ್ರೀ ||

ಚಾಮುಂಡೇಶ್ವರಿ ಟಾಕೀಸ್‌ನ

30—10—48 ರಿಂದ

ಪ್ರತಿ ದಿನ ಮೂರು ಪ್ರದರ್ಶನ

ದೀಪಾವಳಿ ಪ್ರಯುಕ್ತ

ಪ್ರೇಕ್ಷಕರು ಬಹು ದಿನದಿಂದಲೂ ಕಾತುರದಿಂದ ಎದುರು ನೋಡುತ್ತಿರುವ

ಮೆಹಬೂಬ್ ಪ್ರೊಡಕ್ಷನ್ಸ್‌ರವರ

ಎಲಾನ್ [ಹಿಂದಿ]

ಭೂಮಿಕೆ:- ಸುರೇಂದ್ರ, ಮುನವರ್ ಸುಲ್ತಾನ, ಷಾ ನವಾಜ್

30—10—48 ರಿಂದ :: ಅನೋಖ ಪ್ರಾರಂಭ

ನ್ಯೂ ಅಪೇರಾ ಟಾಕೀಸಿನಲ್ಲಿ

ಜುಪಿಟರ್‌ರವರ

ರಾಜಕುಮಾರಿ [ತಮಿಳು]

ಮಾಯಾಜಾಲಗಳಿಂದ ಕೂಡಿದ ಮನರಂಜನೆಯ ಚಿತ್ರ

Distributors SHREE VIJAYA PICTURES, Gandhinagar Bangalore 2

ಗುರುದೇವಾ ಹಾಲ್

ಬಿ ವೀರಪ್ಪ ಬೆಂಗಳೂರು ಜವಳಿ ಅಂಗಡಿ ಶಿವರಾಂಪೇಟೆ, ಮೈಸೂರು

ನವೀನ ತರಹ ಬೆಂಗಾಲ್ ಸಿಲ್ಕು ಸೀರೆಗಳೂ ಮತ್ತು ನೂಲಿನ ಸೀರೆಗಳೂ ಬಂದಿವೆ, ದಯವಿಟ್ಟು ಇದೇ ಭೇಟಿಕೊಡಿ

ಶ್ರೀ ಗಾಯತ್ರೀ ಟಾಕೀಸ್

ಪ್ರತಿದಿನ 3 ಆಟಗಳು

ತಾ॥ 28—10—48 ರಿಂದ

ಎರಡು ದಿನಗಳು ಮಾತ್ರ

Paramountರವರ ಅಡ್ವೆಂಚರ್ ಮನೋರಂಜಕ ಚಿತ್ರ

ಆಲ್‌ಬುಕರ್ಕ್ (ALBUQUERQUE)

Morning Shows at 10-30 a.m.

From 29—10—48

For 2 days only

Warner's most TERRIFIC DETECTIVE Drama

THE BEAST WITH FIVE FINGERS

Starring:—PETER LORRE

ಪ್ರಕಟಣೆ

ಮೈಸೂರು ಅರಮನೆ ರಾಯ... ಡ್ಯೈರಿ ಫಾರಂಗೆ ಸೇರಿದ ಹಳೆಗರುವ... ನು ಜಾಗೆ ಸೇರಿದ ಹೋರಿ ಕರು... ಸ 1948 ನೇ ಇಸವಿ ಅಕ್ಟೋಬರ್ ... ೩ 51 ನೇ ತಾರೀಖು ಭಾನುವಾರ 9-30 ಘಂಟೆ ಲಾಗಾಯ್ತು ಮೈಸೂರು ಅರಮನೆ ಕೃಷ್ಣರಾಜ ಧರ್ಮಶಾಲೆ ಹರಾಜು ಮಾಡಲಾಗುತ್ತದೆ ... ಕೈವರು ಹರಾಜು ಕಾಲದಲ್ಲಿ ಹಾ... ಭರಸವಾಲ್ ಮಾಡಿ ರಾಸುಗಳನ್ನು ಪಡೆಯಬಹುದು.

ಆಫೀಸ್ ಬಿಡ್ಡುದಾರರ ಸವಾಲನ್ನು ಗೀಕರಿಸುವುದು ಅಥವಾ ತಿರಸ್ಕರಿಸುವುದು ಹರಾಜು ಮಾಡುವ ಅಧಿಕಾರಿಗಳ ಮರ್ಜಿಗೆ ಒಳಪಟ್ಟಿರುತ್ತೆ

ಮುನಿರಾಜುಲು,

ಮ್ಯಾನೇಜರ್, ... ರಾಯಲ್ ಡ್ಯೈರಿ ಫಾ...

ಹೊಸ ಜವಳಿ ಅಂಗಡಿ! ಚಿಕ್ಕ ಯಾದ... ಮಧುರೆ, ಸೇಲಂ, ಕೊಯಮುತ್ತೂರು ...

ನಾನಾ ನಮೂನೆಯ

ನೂಲು ಸೀರೆಗಳು, ವಾಯಿಲ್ ಸೀರೆಗಳು

ವಿಜಯಲಕ್ಷ್ಮೀ ವಿಲಾಸ್

ಅಶೋಕ ರೋಡ್, ಶಿವರಾಂಪೇಟೆ ಮೈಸೂರು.

ಪ್ರಭುದೇವಾ ಟಾಕೀಸಿನಲ್ಲಿ

24-10-48 ರಿಂದ ದಿನವೂ 3 ಆಟಗಳು

ಜೆಮಿನಿಯವರ

ಹರಿಶ್ಚಂದ್ರ (ತಮಿಳು) ಚಿ

ಪಾತ್ರ:- ಪಿ. ಯು. ಚಿನ್ನಪ್ಪ, ಕನ್ನಾಂಬ, ಕೃಷ್ಣನ್, ಮಧುರಂ

ಮುಂದಿನ ಬದಲಾವಣೆ

ಉದಯ ಶಂಕರ್‌ರವರ

ಕಲ್ಪನಾ [ಹಿಂದಿ]

ಜೆಮಿನಿ ರಿಲೀಸ್

ಫೋನ್ 792 ॥ ವಂದೇಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೩೦-೧೦-೪೮ [ಸಂಚಿಕೆ ೧೦೩

ಪಶ್ಚಿಮ ರಾಷ್ಟ್ರಗಳ ಮೇಲೆ ಸ್ಟಾಲಿನ್ನರ ಆಪಾದನೆ

ತಿರುಮಲಾಚಾರ್ಯರ ಮೇಲೆ ಕಾರ್ಯಕ್ರಮವೇ?

ಗೋಪಾಲರಾವ್ ವಿಚಾರಣಾ ಸಮಿತಿಯ ಸೂಚನೆ

ಸ್ವಂ ಸು ಪ್ರ ಸೇ] ಬೆಂಗಳೂರು ೩೦

ಧರ್ಮದರ್ಶಿಗಳ ಗೋಪಾಲರಾಯರ ವಿಚಾರಣಾ ಸಮಿತಿಯ ಮುಂದೆ ಈ ದಿನ ಡಾ॥ ತಿರುಮಲಾಚಾರ್ಯರು ಸಾಕ್ಷ್ಯವನ್ನು ಕೊಟ್ಟರು ಅವರು ಹಿಂದೆ ಹೇಳಿರುವುದಕ್ಕೂ ಈಗ ಹೇಳುತ್ತಿರುವ ವಿಷಯಗಳಿಗೂ ವ್ಯತ್ಯಾಸವಿರುವುದರಿಂದ ಅವರ ಮೇಲೆ ಏಕೆ ಕಾರ್ಯಕ್ರಮ ಕೈಗೊಳ್ಳಬಾರದೆಂದು ಸಮಿತಿಯ ಸದಸ್ಯರುಗಳು ಕೇಳಿದರೆಂದು ಹೇಳಲಾಗಿದೆ

○ ಈ ದಿನ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯು ನಡೆಯಿತು.

○ ಈ ಮಧ್ಯಾಹ್ನ ಮಂತ್ರಿಮಂಡಲದ ಸಭೆಯು ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು

○ ಭಾರತ ಸರ್ಕಾರದ ಕೋರಿಕೆಯ ಮೇರೆ ಮುಂದಿನ ತಿಂಗಳು ೨೫ ನೇ ತಾ॥ ಮಕ್ಕಳ ಸಹಾಯಾರ್ಥವಾಗಿ ಹೂವಿನ ಪ್ರದರ್ಶನ ದಿನವನ್ನು ನಡೆಸಲಾಗುವುದು.

ಇಂಟರ್ ವಿದ್ಯಾರ್ಥಿಗಳ ಕೊರತೆ

ಶಿವಮೊಗ್ಗ ಇಂಟರ್ ಕಾಲೇಜಿನ ೭ ಜನ ವಿದ್ಯಾರ್ಥಿಗಳು ೧೯೪೭ ನೇ ಮಾರ್ಚಿ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದರಿಂದ ಈ ವರ್ಷದ ಅಕ್ಟೋಬರ್ ತಿಂಗಳಿನ ಪರೀಕ್ಷೆಗೆ ಕುಳಿತಿದ್ದರು ೧೯೪೭ ನೇ ಮಾರ್ಚಿ ಪರೀಕ್ಷೆಗೆ ಇಟ್ಟ ಪಠ್ಯ ಪುಸ್ತಕಗಳನ್ನೇ ವಿದ್ಯಾರ್ಥಿಗಳು ಓದಬೇಕೆಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದರೂ, ಆ ಪುಸ್ತಕಗಳಿಂದ ಒಂದು ಪ್ರಶ್ನೆಯೂ ಬಾರದೆ ವಿದ್ಯಾರ್ಥಿಗಳಿಗೆ ತುಂಬಾ ನಿರಾಸೆಯುಂಟಾಯಿತೆಂದು ನೊಂದ ವಿದ್ಯಾರ್ಥಿಗಳೊಬ್ಬರು ಬರೆದಿರುತ್ತಾರೆ

ಹೈದರಾಬಾದ್ ಮೇಲಿನ ಆರ್ಥಿಕ ನಿರ್ಬಂಧ ಹೋಯಿತು

ಹೈದರಾಬಾದಿನ ಮೇಲೆ ಹಾಕಿದ್ದ ಹಣಕಾಸಿನ ನಿರ್ಬಂಧಗಳನ್ನೆಲ್ಲಾ ಈಗ ಭಾರತ ಸರ್ಕಾರವು ತೆಗೆದುಹಾಕಿದೆ ಸಂಸ್ಥಾನಕ್ಕೆ ಭಂಗಾರ, ಒಡವೆ ಮತ್ತು ಭಾರತ ನಾಣ್ಯಗಳನ್ನು ತೆಗೆದುಕೊಂಡುಹೋಗಲು ಯಾವ ಅಡಚಣೆಯೂ ಇಲ್ಲ ಎಂದು ರಿಜರ್ವ್ ಬ್ಯಾಂಕಿನವರು ತಿಳಿಸುತ್ತಾರೆ.

ಜನವರಿ ೩೦ ಕ್ಕೆ ಗಾಂಧಿ ನಿಧಿ ಮುಚ್ಚಲಾಗುವುದು

ಗಾಂಧಿ ಸ್ಮಾರಕ ನಿಧಿಯ ಸಂಗ್ರಹವನ್ನು ಮುಂದಿನ ಜನವರಿ ೩೦ ನೇ ತಾ॥ ಗೆ ಮುಕ್ತಾಯಗೊಳಿಸಲಾಗುವುದೆಂದು ಕಾಂಗ್ರೆಸ್ ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ತಿಳಿಸಿರುತ್ತಾರೆ

ಕೆಲಸಗಾರರಿಗಿಂತಲೂ ಹೆಚ್ಚಿಗೆ ಕೆಲಸಗಳು

ಇಂಗ್ಲೆಂಡಿನಲ್ಲಿ ಕಾರ್ಮಿಕರಿಗಿಂತಲೂ ಹೆಚ್ಚು ಹುದ್ದೆಗಳು ಖಾಲಿಯೆಂದೂ ದೇಶದ ತಿಯೊಬ್ಬ ನಿರುದ್ಯೋಗಿ ಗಂಡಸು ಮತ್ತು ಹೆಂಗಸು ಕೆಲಸಕ್ಕೆ ಸೇರಿದರೂ ಇನ್ನೂ ೬೩,೦೦೦ ಜನರಿಗೆ ಕೆಲಸ ಸಿಗುವುದೆಂದು ಹೇಳಲಾಗಿದೆ

ಮತ್ತೊಂದು ಯುದ್ಧವನ್ನು ತಪ್ಪಿಸಲಾಗುವುದೆಂದು ಸ್ಟಾಲಿನ್ನರು

ಶಾಂತಿ ಸ್ಥಾಪನೆಗಾಗಿ ಒದ್ದಾಡುತ್ತಿರುವ ದೇಶಗಳು ಮತ್ತೊಂದು ಯುದ್ಧವನ್ನು ತಪ್ಪಿಸುವುವೆಂದೂ, ಹಿಂದಿನ ಯುದ್ಧದ ಘೋರ ಕೃತ್ಯಗಳು ಜನರ ಮನಸ್ಸಿನಲ್ಲಿ ಬೇರೂರಿರುವುದರಿಂದ ಮತ್ತೊಂದು ಯುದ್ಧಕ್ಕೆ ಯಾರೂ ಸಿದ್ಧರಿಲ್ಲವೆಂದೂ ರಷ್ಯದ ನಾಯಕರಾದ ಸ್ಟಾಲಿನ್ನರು ಅಭಿಪ್ರಾಯಪಟ್ಟಿರುತ್ತಾರೆ ಚರ್ಚಿಲರೇ ಯುದ್ಧದ ಭೀತಿಗೆ ಮುಖ್ಯ ಪ್ರಚೋದಕರೆಂದೂ ಅವರು ಹೇಳಿರುತ್ತಾರೆ.

ಪಶ್ಚಿಮ ರಾಷ್ಟ್ರಗಳ ನಾಯಕರುಗಳು ಕಲಹಪ್ರಿಯರೆಂದೂ ಮತ್ತು ಯುದ್ಧದ ಭೀತಿ ಹುಟ್ಟಿಸುವವರೆಂದೂ, ಸ್ಟಾಲಿನ್ನರು ಮೊಟ್ಟಮೊದಲನೇ ಬಾರಿ ಟೀಕೆ ಮಾಡಿರುತ್ತಾರೆ ಬರ್ಲಿನ್ನಿನ ಬಿಕ್ಕಟ್ಟಿಗೆ ಅಮೆರಿಕ ಮತ್ತು ಬ್ರಿಟನ್ನುಗಳೇ ಕಾರಣವೆಂದೂ ತಿಳಿಸಿರುತ್ತಾರೆ ರಷ್ಯದೊಂದಿಗೆ ಸಹಕರಿಸಲು ಬ್ರಿಟನ್ ಮತ್ತು ಅಮೆರಿಕಗಳ ಕಲಹಪ್ರಿಯ ನಾಯಕರುಗಳು ಒಪ್ಪುವುದಿಲ್ಲವೆಂದೂ, ಇದರಿಂದ ಸಂಧಾನದಲ್ಲಿ ಉಂಟಾದ ಒಪ್ಪಂದಗಳಿಗೆ ಅವರು ಅಡಚಣೆ ತಂದು ಹಾಕಿರುವರೆಂದೂ ಸ್ಟಾಲಿನ್ನರು ತಿಳಿಸಿದ್ದಾರೆ

ಸರ್ದಾರ್ ಪಟೇಲರನ್ನು ಎಬ್ಬಿಸಲು ಸತ್ಯಾಗ್ರಹ

ಭಾರತ ಉಪ ಪ್ರಧಾನಿ ಸರ್ದಾರ್ ಪಟೇಲರು ದೆಹಲಿಯಿಂದ ಬೊಂಬಾಯಿಗೆ ಪ್ರಯಾಣ ಮಾಡುತ್ತಿದ್ದಾಗ, ಮೊನ್ನೆ ರಾತ್ರಿ ಅವರ ದರ್ಶನ ಪಡೆಯಲು ರತ್ಲಾಂ ರೈಲ್ವೆ ನಿಲ್ದಾಣದಲ್ಲಿ ಸಾವಿರಾರು ಜನರು ಕಾದಿದ್ದರು ರೈಲು ೧೧-೩೦ ಗಂಟೆಗೆ ಸ್ಟೇಷನ್ನಿಗೆ ಬಂದಾಗ ಸರ್ದಾರರು ಮಲಗಿದ್ದರು. ಅವರ ದರ್ಶನ ಪಡೆಯಲು ಅವಕಾಶವಿಲ್ಲವೆಂದು ತಿಳಿಸಲಾಗಿ, ಜನರು ರೈಲು ಕಂಬಿಯ ಮೇಲೆ ಮಲಗಿ, ರೈಲನ್ನು ಬಿಡದೆ ಸತ್ಯಾಗ್ರಹ ಹೂಡಿದರು ಅನಂತರ ಪಟೇಲರಿಗೆ ಈ ವಿಚಾರ ತಿಳಿಸಿದಾಗ, ಅವರು ಎದ್ದು ಜನರಿಗೆ ದರ್ಶನವಿತ್ತರು

ಬರೋಡಾದಲ್ಲಿ ಕ್ಷಾಮ

ಬರೋಡಾ ಸಂಸ್ಥಾನದ ೫೦ ಹಳ್ಳಿಗಳಲ್ಲಿ ಆಹಾರವಿಲ್ಲದೆ ಕ್ಷಾಮ ತಲೆದೋರಿದೆಯೆಂದೂ, ಮೆಹಸಾನಾ ಜಿಲ್ಲೆಯ ಅನೇಕ ಹಳ್ಳಿಗಳನ್ನು ಜನ ಬಿಟ್ಟು ಹೋಗುತ್ತಿರುವರೆಂದೂ ಹೇಳಲಾಗಿದೆ

ಸ॥ ಪಟೇಲರೊಂದಿಗೆ ನೈಜಾಂ ಕುಮಾರರ ಮಾತುಕತೆ

ನೈಜಾಂರವರ ಪುತ್ರರಾದ ಬಿರಾರಿನ ರಾಜಕುಮಾರರು ಸರ್ದಾರ್ ಪಟೇಲರನ್ನು ಬೊಂಬಾಯಿನಲ್ಲಿ ನಾಳೆ ಭೇಟಿ ಮಾಡಿ ಸಂಸ್ಥಾನದ ವಿಚಾರದಲ್ಲಿ ಮಾತುಕತೆ ನಡೆಸುವರೆಂದು ತಿಳಿದುಬಂದಿದೆ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಾಮಾನಂದ ತೀರ್ಥರವರೂ ಸ॥ ಪಟೇಲರನ್ನು ನಾಳೆ ಭೇಟಿ ಮಾಡುವರು

ನ್ಯಾಷನಲ್ ಇಂಜನಿಯರಿಂಗ್ ಶಾಲೆಯ ಬಗ್ಗೆ ಪ್ರಶಂಸೆ

ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಶಾಲೆಗೆ ಸರ್ ಎಂ ವಿಶ್ವೇಶ್ವರಯ್ಯನವರು ಕಳೆದ ೨೭ ನೇ ತಾ॥ ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಇಂಜನಿಯರಿಂಗ್ ಶಿಕ್ಷಣ ಕೊಡುವ ಯಾವ ಸಂಸ್ಥೆಯೂ ಇಲ್ಲದುದರಿಂದ ನಿತ್ಯವೂ ಇಂಜನಿಯರುಗಳೂ ಮತ್ತು ಇತರರೂ ಸೇವಾ ಕಾಂಕ್ಷೆಯಿಂದ ಈ ಸಂಸ್ಥೆಯನ್ನು ಸ್ಥಾಪಿಸಿ ನಡೆಸುತ್ತಿರುವುದು ಗವರ್ನಾರ್ಹವಾದುದು ಮತ್ತು ಈ ಸಂಸ್ಥೆಗೆ ಸಾರ್ವಜನಿಕರಿಂದಲೂ ಮತ್ತು ಸರ್ಕಾರದವರಿಂದಲೂ ಎಲ್ಲ ಸಹಾಯ ದೊರೆಯಬೇಕು ಎಂದು ಅವರು ಹೇಳಿದ್ದಾರೆ.

ಆ ಶಾಲೆಗೆ ಭೇಟಿ ಇತ್ತ ಸರ್ ಮಿರ್ಜಾ ಇಸ್ಮಾಯಿಲರು ಸಹ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಎಲ್ಲರೂ ಇದಕ್ಕೆ ಸಹಾಯ ಮಾಡಬೇಕೆಂದು, ಕೋರಿ ಶಾಲಾ ಕಟ್ಟಡಕ್ಕಾಗಿ ಒಂದು ಉತ್ತಮ ನಿವೇಶನವನ್ನು ಕೊಡಿಸಲೆಂದು ಸೂಚಿಸಿದ್ದಾರೆ

ಮೈಸೂರಿಗೆ ನೆಹರೂರವರ ಭೇಟಿ

ಬೆಂಗಳೂರು ೩೦

ಭಾರತ ರಾಷ್ಟ್ರೀಯ ವೈಮಾನಿಕ ಸಪ್ತಾಹವು ಡಿಸೆಂಬರ್ ೫ ನೇ ತಾ॥ ನಡೆಯುವುದೆಂದೂ, ಪ್ರಧಾನಿ ಪಂಡಿತ ನೆಹರೂರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದೂ ತಿಳಿದುಬಂದಿದೆ

ವೈಮಾನಿಕ ಸಪ್ತಾಹದಲ್ಲಿ ಪ್ರತಿ ದಿನ ಹಲವಾರು ಕಾರ್ಯಕ್ರಮಗಳು ನಡೆಯಲಿವೆ ... ಹದಲ್ಲಿ ವಿಶ್ವವಿದ್ಯಾಲಯದ ವಿವಿಧ ಭಾಗಗಳನ್ನು ಸಂದರ್ಶಿಸಿ, ಆ ಸಂಸ್ಥೆಗಳ ... ನ್ನು ನೋಡುವರೆಂದೂ ತಿಳಿದುಬಂದಿದೆ

ಚರ್ಚಿಲರಿಗೆ ಸ॥ ಪಟೇಲರ ಉತ್ತರ

ಬ್ರಿಟನ್ನು ತನ್ನ ಸ್ವಂತ ಶಕ್ತಿಯಿಂದ ಭಾರತವನ್ನು ಇಟ್ಟುಕೊಂಡಿರಲು ಸಾಧ್ಯವಿಲ್ಲ ಈಗ ಕಾಲ ಬದಲಾಯಿಸಿದೆ ಚರ್ಚಿಲರು ಏನೇ ಹೇಳಲಿ, ಭಾರತವು ವಿಶೇಷ ತ್ಯಾಗ ಮಾಡಿ ಸ್ವಾತಂತ್ರ್ಯವನ್ನು ಗಳಿಸಿದೆ ಚರ್ಚಿಲರ ವಿಚಾರದಲ್ಲಿ ಕೋಪಿಸಿಕೊಂಡರೆ ಪ್ರಯೋಜನವಿಲ್ಲ ದಯೆ ಮತ್ತು ಸಹಾನುಭೂತಿಯನ್ನು ತೋರಬೇಕು ಪಿತೂರಿ ಮತ್ತು ದ್ವೇಷ ಭಾವನೆಗಳನ್ನು ಬಿಟ್ಟು, ವಿಶ್ವದ ಶಾಂತಿಗಾಗಿ ಎಲ್ಲರೂ ದುಡಿಯಬೇಕು—ಎಂದು ಸರ್ದಾರ್ ಪಟೇಲರು ಬೊಂಬಾಯಿನ ಪತ್ರಿಕೋದ್ಯೋಗಿಗಳು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ತಿಳಿಸಿದ್ದಾರೆ

ಬ್ರಿಟನ್ನಿನ ಮಾಜಿ ಪ್ರಧಾನಿ ಚರ್ಚಿಲರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ, ಭಾರತದ ಬಗ್ಗೆ ಕಟುಕವಾದ ಟೀಕೆಯನ್ನು ಮಾಡಿದ್ದರು

ನೆಹರೂರವರ ವರ್ಧಂತಿ ಬಗ್ಗೆ ಉಪಾಧ್ಯಾಯರುಗಳ ಕಾರ್ಯಕ್ರಮ

ಭಾರತ ಪ್ರಧಾನಿ ಪಂಡಿತ ನೆಹರೂರವರ ೬೦ ನೇ ವರ್ಧಂತ್ಯುತ್ಸವವು ಮುಂದಿನ ತಿಂಗಳ ೧೩ ನೇ ತಾ॥ ನಡೆಯಲಿರುವ ಸಂದರ್ಭದಲ್ಲಿ ಬೊಂಬಾಯಿ ಮುನಿಸಿಪಲ್ ಶಾಲೆಯ ಉಪಾಧ್ಯಾಯರುಗಳು ದಿನಕ್ಕೆ ಒಂದು ಗಂಟೆ ಕಾಲ ನೆಹರೂರವರು ದೇಶಕ್ಕೆ ಸಲ್ಲಿಸಿರುವ ಸೇವೆಯ ವಿವರವನ್ನು ಶಾಲಾ ಮಕ್ಕಳಿಗೆ ತಿಳಿಸಬೇಕೆಂದು ಅಲ್ಲಿನ ಶಾಲಾ ಸಮಿತಿಯವರು ನಿರ್ಧರಿಸಿದ್ದಾರೆ

ದೀಕ್ಷಿತರ ದಿನಾಚರಣೆ

ರಾಜಧಾನಿಯ, ಸಂಗೀತ ವಿದ್ಯಾಸಂಸ್ಥೆಗಳ ವೈಸ್‌ರಾಯ್ ರಸ್ತೆಯ ಶ್ರೀ ಪದ್ಮ ಸಂಗೀತ ವಿದ್ಯಾಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಮುತ್ತುಸ್ವಾಮಿ ದೀಕ್ಷಿತರ ಪುಣ್ಯ ದಿನಾಚರಣೆಯು ನಡೆಯುವುದು ಸರ್ವರಿಗೂ ಆಹ್ವಾನವುಂಟು.

ಶುಭಾಶಯಗಳು

ದೇವನಹಳ್ಳಿ ಮಾರ್ಕೆಟ್ ಸೌಭಾಗ್ಯ ಸ್ಟೋರ್ಸ್ ಮತ್ತು ಸಯ್ಯಾಜಿರಾವ್ ರಸ್ತೆಯ ಜನಪ್ರಿಯ ಶ್ರೀ ಎಂ ಎಸ್. ಶ್ರೀನಿವಾಸಮೂರ್ತಿ ಅವರು ಈ ಪತ್ರಿಕೆಯ ... ನಿಂದ ಸ್ವಾಗತಿಸುತ್ತೇವೆ.

ಹರಿಕಥಾ ಕಾಲಕ್ಷೇಪ

... ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ... ಶ್ರೀ ಕೃಷ್ಣ ... ಹರಿಕಥಾ ಕಾಲಕ್ಷೇಪವು ... ನಡೆಯುತ್ತದೆ.

ಮೈಸೂರಿನ ಟಾಕೀಸ್

ಒಲಿಂಪಿಯಾ ಟಾಕೀಸ್

ಸಮಾಜದ ಪ್ರತಿಗಾಮಿ ಕಟ್ಟಳೆಗಳನ್ನು ವಿರೋಧಿಸುವ ಸಾಮಾಜಿಕ ಚಿತ್ರ

ಶಿಕಾರ್ ಪುರಿ

ಪಾತ್ರ:- ಪ್ರವೀಣ್ ಕುಮಾರ್ ...

ಜನಕ್‌ವರ್, ಎ ಪ.

ಕೋಲ್ ...

ಮೈಸೂರು

ಧನ್ವಂತರೀ ಜಯಂತಿ

ಮೈಸೂರು, ೩೦

ರಾಜಧಾನಿಯ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಸಂಘದ ಆಶ್ರಯದಲ್ಲಿ ನಿನ್ನೆ ಧನ್ವಂತರಿ ಜಯಂತಿಯು ಲೋಕ ಸೇವಾ ನಿರತ ವಿ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ರಾಮರಾವ್ ದ್ರಾವಿಡ್, ಟಿ. ಕೃಷ್ಣಶಾಸ್ತ್ರಿ, ಸ ಹಾವಳ ಭಟ್ಟ, ಮತ್ತು ವೈ ಲಕ್ಷ್ಮೀನರಸಿಂಹಶಾಸ್ತ್ರಿಗಳವರು ಭಾಷಣ ಮಾಡಿದರು. ಅಧ್ಯಕ್ಷರು ಭಾಷಣ ಮಾಡಿ ಸ್ವಾತಂತ್ರ್ಯ ಭಾರತದಲ್ಲಿ ಆಯುರ್ವೇದಕ್ಕೆ ವಿಶೇಷ ಭವಿಷ್ಯವಿದೆಯೆಂದೂ, ಸಾರ್ವಜನಿಕರು ಅದರ ಅಭಿವೃದ್ಧಿಗಾಗಿ ಸಹಾಯ ಮಾಡಬೇಕೆಂದೂ ತಿಳಿಸಿದರು. ಕಾರ್ಯದರ್ಶಿ ಶ್ರೀ ದೇಶಿಕಾಚಾರ್ಯರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಕೊನೆಗೊಂಡಿತು.

ಹರಿಕಥೆ

ನಾಂಡಿ ಮೊಹಲ್ಲಾ ಶಾಲೆಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರೀ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಗಣಪತಿ ರಾಮಕೃಷ್ಣ ಶಾಸ್ತ್ರಿಗಳಿಂದ ಭೀಷ್ಮ ಭಕ್ತಿ ಎಂಬ ಹರಿಕಥೆಯು ನಡೆಯುವುದು

ಮೊಹಲ್ಲಿನ ಕುಂದು ಕೊರತೆಗಳು

ರಾಜಧಾನಿಯ ಲಷ್ಕರ್ ಮೊಹಲ್ಲಾ ನಿವಾಸಿಗಳು ಸಾರ್ವಜನಿಕರಿಗೆ ಸಂಬಂಧಪಟ್ಟ ಕುಂದು ಕೊರತೆಗಳನ್ನು ಮೊಹಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸಬೇಕೆಂದೂ, ಅವುಗಳ ನಿವಾರಣೆಗಾಗಿ ಶಾಸನಸಭಾ ಸದಸ್ಯರುಗಳ ಮೂಲಕ ಪೌರಸಭೆಯಲ್ಲಿ ಒತ್ತಾಯಪಡಿಸಲಾಗುವುದೆಂದೂ ಕಾರ್ಯದರ್ಶಿಗಳಾದ ಶ್ರೀ ಟಿ ಗಂಗಣ್ಣನವರು ಕೋರುತ್ತಾರೆ

ಉಪನ್ಯಾಸ

ವಾಣಿವಿಲಾಸ ಮೊಹಲ್ಲೆಯ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ 7 ಗಂಟೆಗೆ ಸ್ವಾಮಿ ಸಿದ್ಧೇಶ್ವರಾನಂದರು ಉಪನಿಷತ್ತಿನ ವಿಷಯವಾಗಿ ಭಾಷಣ ಮಾಡುವರು

ಎಸ್. ಎ. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಕೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ —)

ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.

ಪಂಚಾಮೃತ - ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ

ಮಹಾಕೇಶರೀ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಕೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ಐಶ್ವರ್ಯವಂತ ಯುವಕನಿಂದ ಗಾಡಿ ಹೊಡೆಯುವ ಕೆಲಸ

ಬೊಂಬಾಯಿನ ೩೫ ವರ್ಷದ ಆಶೋಕ ಮಾಥೂರ್‌ಕರ್ ಎಂಬ ಯುವಕನು ಐಶ್ವರ್ಯವಂತನೂ ಮತ್ತು ವಿದ್ಯಾವಂತನೂ ಆಗಿದ್ದರೂ ಕೋಚ್ ಗಾಡಿ ಹೊಡೆಯುವ ಕೆಲಸದಲ್ಲಿ ನಿರತನಾಗಿದ್ದಾನೆ ಪ್ರತಿ ದಿನವೂ ಗಾಡಿ ಹೊಡೆವ ವರನ ಉಡುಪನ್ನು ಧರಿಸಿ, ತನ್ನ ಗಾಡಿಯನ್ನು ಬಾಡಿಗೆಗೆ ಹೊಡೆಯುತ್ತಾನೆ ಈ ವೇಷದಿಂದ ಆತನು ಐಶ್ವರ್ಯವಂತನೆಂದು ಯಾರೂ ಗುರ್ತಿಸಲು ಅಸಾಧ್ಯವಾಗಿದೆ

ಧಾರ್ಮಿಕ ಹಿಂದೂ

ಮದರಾಸಿನಲ್ಲಿ ಪ್ರಕಟವಾಗುತ್ತಿರುವ 'ಧಾರ್ಮಿಕ ಹಿಂದೂ' ಎಂಬ ಆಂಗ್ಲ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಸನಾತನ ಧರ್ಮಕ್ಕೆ ಸಂಬಂಧಪಟ್ಟ ಅನೇಕ ಉಪಯುಕ್ತವಾದ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ವಾರ್ಷಿಕ ಚಂದಾ ೫ ರೂ ಶ್ರೀ ಟಿ ಕೆ ಜಗನ್ನಾಥಾಚಾರ್ಯರ ಸಂಪಾದಕತ್ವದಲ್ಲಿ ಹೊರಬರುವ ಈ ಪತ್ರಿಕೆಗೆ ನಮ್ಮ ಪ್ರೋತ್ಸಾಹಕರವಾದ ಸ್ವಾಗತವನ್ನು ನೀಡಿ, ಅದು ಹಿಂದೂ ಸಮಾಜ ಮತ್ತು ಧಾರ್ಮಿಕ ಸೇವೆಗಾಗಿ ಚಿರಕಾಲ ಬಾಳಲೆಂದು ಹಾರೈಸುತ್ತೇವೆ

Edited printed and published by A.R. Nagarajan at the Sadhvi Press D Subbaiah Road Mysore

ಕಾಂ॥ ಅಧಿವೇಶನದಲ್ಲಿ ೭ ಲಕ್ಷ ಜನರಿಗೆ ಆಹಾರದ ವ್ಯವಸ್ಥೆ

ಜಯಪುರದಲ್ಲಿ ಮುಂದಿನ ಡಿಸೆಂಬರ್ ತಿಂಗಳು ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಬರುವವರಿಗೆ ಆಹಾರವನ್ನು ಒದಗಿಸುವ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ ದಿನಕ್ಕೆ ೭ ಲಕ್ಷ ಜನರಿಗೆ ಆಹಾರ ಒದಗಿಸಲಾಗುವುದು ಕೇಂದ್ರ ಸರ್ಕಾರದವರು ಇದಕ್ಕಾಗಿ ೫೬೦ ಟನ್ ಗೋಧಿ ಮತ್ತು ಅಕ್ಕಿಯನ್ನು ಕೊಟ್ಟಿದ್ದಾರೆ ಹೋಟೇಲಿನವರು ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಮಹಿಳಾ ಸಮಾಜದ ಮನವಿ

ಮೈಸೂರು ಮಹಿಳಾ ಸಮಾಜವು ಅಖಿಲ ಭಾರತ ಮಹಿಳಾ ಸಮ್ಮೇಳನದ ಪರವಾಗಿ ಕಳೆದ ೨೦ ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿದೆ, ಗ್ರಾಮ ಮಹಿಳೆಯರಿಗಾಗಿ ಸುಧಾರಣಾ ಕೆಲಸಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು, ಇತ್ತೀಚಿಗೆ ವಾಹನದ ಅಸೌಕರ್ಯದಿಂದ ಈ ಕಾರ್ಯಕ್ಕೆ ಅಡಚಣೆ ಉಂಟಾಗಿದೆ. ಇದರಿಂದ ನಗರದಲ್ಲೇ ಮಹಿಳೆಯರಿಗೆ ಉಪಯುಕ್ತವಾದ ಕೆಲಸಗಳಲ್ಲಿ ತೊಡಗಬೇಕೆಂದು ನಿರ್ಧರಿಸಲಾಗಿದೆ ಈ ಕೆಲಸದಲ್ಲಿ ಮಹಿಳೆಯರೆಲ್ಲರೂ ಸಹಕರಿಸಬೇಕೆಂದು ಸಂಘದ ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ

30—10—48 ರಿಂದ :: ಅಪೋಷ ಪ್ರಾರಂಭ

ನ್ಯೂ ಅಪೇರಾ ಟಾಕೀಸಿನಲ್ಲಿ

ಜುಪಿಟರ್‌ರವರ

ರಾಜಕುಮಾರಿ

[ತಮಿಳು]

ಮಾಯಾಜಾಲಗಳಿಂದ ಕೂಡಿದ ಮನರಂಜನೆಯ ಚಿತ್ರ

ರಾಜಕಮಲ್ ಟಾಕೀಸ್

30-10-48 ರಿಂದ ಅಪೋಷ 2ನೇ ವಾರ

ಫಿಲ್ಮಿಸ್ತಾನರವರ

★ ದೋ ಭಾಯ್ ★

(ಹಿಂದಿ)

ತಾರಾಗಣ:— ಕಮಿನಿ ಕೌಶಲ್ಯ, ಉಲ್ಲಾಸ್

MORNING SHOWS From 29—10—1948

For 4 days only

BREWSTER'S MILLIONS

WITH:—Dennis O' Keefe, Helen Walker, June Havoc

SRI KRISHNARAJENDRA MILLS, LTD.

M Y S O R E

FOR SALE

One 1943 Model Chevrolet Lorry in good working condition and serving is available for sale. Intending purchasers may please inspect the lorry and send their highest offer to Sri Krishnarajendra Mills, Ltd., Mysore.

॥ ಶ್ರೀ ॥

ಚಾಮುಂಡೇಶ್ವರಿ

ಟಾಕೀಸ್‌ನ

30—10—48 ರಿಂದ

ಪ್ರತಿ ದಿನ ಮೂರು ಪ್ರದರ್ಶನ

ದೀಪಾವಳಿ ಪ್ರಯುಕ್ತ

ಪ್ರೇಕ್ಷಕರು ಬಹು ದಿನದಿಂದಲೂ ಕಾತುರದಿಂ ಎದುರು ನೋಡುತ್ತಿರುವ

ಮೆಹಬೂಬ್ ಪ್ರೊಡಕ್ಷನ್ ರವರ

ಎಲಾನ್

ಸುರೇಂದ್ರ, ಮುನವರ್ ಸುಲ್ತಾನ್, ... ನವಾಬ್ ಪಾತ್ರ ವಹಿಸಿರುವ ಹಿಂದಿ ಚಿತ್ರ

ಗುರುದೇವಾ ಹಾಲ್

ಬಿ. ವೀರಪ್ಪ ಬೆಂಗಳೂರು ಜವಳಿ ಅಂಗಡಿ ಶಿವರಾಂಪೇಟೆ, ಮೈಸೂರು

ನವೀನ ತರಹ ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ನೂಲಿನ ಸೀರೆಗಳೂ ಬಂದಿವೆ

ದಯವಿಟ್ಟು ಇಂದೇ ಭೇಟಿ ಕೊಡಿ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಆಧುನಿಕ ಶಿಶುವಿದ್ಯಾಭ್ಯಾಸ, ಮನಶ್ಶಾಸ್ತ್ರ ಪದ್ಧತಿಗಳ ಮತ್ತು ಅದಕ್ಕೆ ಅನುಗುಣವಾದ ಉಪಕರಣಗಳ ಸಹಾಯದಿಂದ ಹತ್ತಾರು ವರ್ಷಗಳಿಂದಲೂ ಶಿಶುಸೇವೆಯನ್ನು ಮಾಡುತ್ತಾ ಪ್ರಸಿದ್ಧಿ ಶಿಶುವಿಹಾರವೆನಿಸಿಕೊಂಡ ಶ್ರೀ ಜಗದಂಬಾ ಶಿಶು ವಿಹಾರವು ನವರಾತ್ರಿ ರಜವನ್ನು ಮುಗಿಸಿಕೊಂಡು ಈಗ ನವಚೈತನ್ಯದಿಂದ ಕೆಲಸ ಮಾಡಲಾರಂಭಿಸಿದೆ.

ಶಿಶು ವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಾತಾ ಪಿತೃಗಳು ಕಾಲ ವಿಳಂಬ ಮಾಡದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯ ಕಾರ್ಯಕಲಾಪಗಳಿಗೆ ಉತ್ತೇಜನ ನೀಡಬೇಕಾಗಿ ವಿನಂತಿ ಮಕ್ಕಳ ಸಮಯಗಳಿಗೆ ಮೊದಲೇ ... ಮಾಡಬಹುದು

ಡಿ. ಕೃಷ್ಣಮೂರ್ತಿ, ವ್ಯವಸ್ಥಾಪಕ.

ಪ್ರಭಾ ಮತ್ತು ಗಣೇಶ

ಟಾಕೀಸುಗಳಲ್ಲಿ

ತಾ॥ 29—10—48 ರಿಂದ

ಪ್ರತಿ ದಿನ ಮೂರು ಆಟಗಳು

ಜನಪ್ರಿಯವಾದ 5 ನೇ ವಾರ

ಡೆರ್ಮ್ಯ ಲ್ಯಾಂಡ್

ಅದ್ಭುತ ಮಾಯಾಜಾಲ, ಸಂಗೀತ ನಾಟ್ಯ ಮತ್ತು ಹಾಸ್ಯಗಳಿಂದ ಕೂಡಿದ ತಮಿಳು ಚಿತ್ರ

(Tellaru Release)

?ಆಟಂ ಬಾಂಬ್ !

ಸುಲಭ ಬೆಲೆ ! ಹೊಸ ಮಾ...

ಆಶ್ಚರ್ಯಕರವಾದ ಪಟಾಕಿ ಬಾಣ, ಬಿರುಸುಗಳು

ಭಾರತ್ ಟ್ರೇಡಿಂಗ್ ಕೋ,

1357 ಶಿವರಾಂಪೇಟೆ

ಇವರಲ್ಲೇ ದೊರೆಯುತ್ತವೆ

ಪುಟ ೪ 192 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೩] ಭಾನುವಾರ ೩೧-೧೦-೪೮ [ಸಂಚಿಕೆ ೧೫

ಹೈದರಾಬಾದಿನಲ್ಲಿ ತಾತ್ಕಾಲಿಕ ಸರ್ಕಾರ

ಸರ್ದಾರ್ ಪಟೇಲರಿಗೆ ಶುಭಾಶಯ

ಈ ದಿನ ೭೪ ನೇ ವರ್ಧಂತಿ ಸಂಭ್ರಮ

ಭಾರತದ ಉಪ ಪ್ರಧಾನಿ ಸರದಾರ್ ವಲ್ಲಭಭಾಯಿ ಪಟೇಲರ ೭೪ ನೇ ವರ್ಧಂತಿ ಮಹೋತ್ಸವವು ಈ ದಿನ ಇಡೀ ದೇಶದಲ್ಲೆಲ್ಲಾ ಅತ್ಯಂತ ವೈಭವದಿಂದ ಆಚರಿಸಲ್ಪಡುತ್ತಿದೆ. ಬೊಂಬಾಯಿನಲ್ಲಿ ಇದಕ್ಕಾಗಿ ವಿಶೇಷ ಸಮಾರಂಭವನ್ನು ಏರ್ಪಡಿಸಲಾಗಿದೆ. ಸರದಾರರ ಗೌರವಾರ್ಥವಾಗಿ ಈ ದಿನ ಬೊಂಬಾಯಿನಲ್ಲಿ ಭಾರಿ ಸಾರ್ವಜನಿಕ ಸಭೆ ನಡೆಯುವುದು. ೭೪೦ ತೊಲ ಭಂಗಾರದ ಅಶೋಕ ಸ್ತಂಭವನ್ನೂ, ೭೪೦ ತೊಲ ಬೆಳ್ಳಿಯ [illegible] ದನವನ್ನೂ ವಪಾ [illegible] ಅವರಿಗೆ ಅರ್ಪಿಸುವರು. ಸರದಾರರ ಹೆಸರಿನಲ್ಲಿ ಏಳು ಲಕ್ಷ ರೂ ಬೆಲೆ ಬಾಳುವ ಭವನವೊಂದನ್ನೂ ಸಹ ಕಟ್ಟಲು ಏರ್ಪಾಡು ಗಳಾಗುತ್ತಿವೆ. ಪಟೇಲರು ತಮ್ಮ ಜೀವಮಾನವನ್ನೆಲ್ಲಾ ದೇಶದ ಸೇವೆಗಾಗಿ ವಿನಿಯೋಗಿಸಿ, ಮಹಾತ್ಮ ಗಾಂಧಿಯವರ ಅಚ್ಚು ಮೆಚ್ಚಿನ ಅನುಯಾಯಿಗಳಾಗಿ, ಬಾರ್ಡೋಲಿ ಮುಂತಾದ ಕಡೆ ಚಳವಳಿಗಳನ್ನು ಸಂಘಟಿಸಿದ್ದಲ್ಲದೆ [illegible] ಅದ್ಭುತವಾದ ರೀತಿಯಲ್ಲಿ ಕಂದಾಯ ನಿರಾಕರಣೆಯೇ ಮುಂತಾದ ಆಂದೋಳನಗಳನ್ನು ನಡೆಸಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಬುಡಕ್ಕೆ ಕೊಡಲಿ ಪೆಟ್ಟನ್ನು ಕೊಟ್ಟರು. ತಮ್ಮ ಮತ್ತು ಸಹೋದ್ಯೋಗಿಗಳ ಸಾಹಸದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ಇಂದು ಸಹ ರಾಜ್ಯದ ಸೂತ್ರಗಳನ್ನು ನಡೆಸುತ್ತಿರುವರು. ಇಂತಹ ಮಹನೀಯರಿಗೆ ಭಗವಂತನು ಚಿರಾಯುಸ್ಸನ್ನು ಕೊಟ್ಟು ಅವರ ಸೇವೆಯು ಇತೋಪ್ಯ ಹೆಚ್ಚಾಗಿ ಫಲಿಸುವಂತೆ ಅನುಗ್ರಹಿಸಲೆಂದು ಬೇಡೋಣ.

ನೀರು ಸರಬರಾಜು ವ್ಯವಸ್ಥೆ

ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಯಾವ ಯಾವ ಭಾಗಗಳ ನಲ್ಲಿಗಳಲ್ಲಿ ಸರಿಯಾಗಿ ನೀರು ಒದಗುತ್ತಿದ್ದಿಲ್ಲವೋ ಆ ಪ್ರದೇಶಗಳ ನಿವಾಸಿಗಳು ಅಪೇಕ್ಷೆ ಪಟ್ಟರೆ ಲಾರಿಗಳ ಮೂಲಕ ನೀರನ್ನು ಒದಗಿಸಲು ಏರ್ಪಾಡು ಮಾಡಲಾಗಿದೆಯೆಂದೂ, ಬೇಕಾದವರು ವಾಣೀ ವಿಲಾಸ ನೀರು ಸರಬರಾಜು ಇಲಾಖೆಯವರಿಗೆ [ಫೋ ೭೬೦] ತಿಳಿಸಬೇಕೆಂದೂ ಪಬ್ಲಿಕ್ ಹೆಲ್ತ್ ಅಧಿಕಾರಿ ಶ್ರೀ [illegible] ಅವರು ಕೋರಿದ್ದಾರೆ.

ಸಚಿವರ ಮೇಲೆಯೇ ಟಿಯರ್ ಗ್ಯಾಸ್ ಪ್ರಯೋಗ

ನಾಗರಿಕ ಗೊಂದಲವನ್ನಡಗಿಸುವುದರಲ್ಲಿ ಟಿಯರ್ ಗ್ಯಾಸನ್ನು ಪ್ರಯೋಗಿಸಿದರೆ ಎಷ್ಟು ಮಟ್ಟಿಗೆ ಫಲಪ್ರದವಾಗುವುದೆಂಬುದನ್ನು ಪರೀಕ್ಷಿಸಲು, ಸಂಯುಕ್ತ ಪ್ರಾಂತ್ಯದ ಪೋಲೀಸರು ಮೊನ್ನೆ ದಿವಸ ಲಕ್ನೋದಲ್ಲಿ ಒಂದು ಪರೀಕ್ಷೆಯನ್ನು ನಡೆಸಿ, ಅಲ್ಲಿನ ಗೃಹ ಸಚಿವರೂ, ಹಲವು ಶಾಸನ ಸಭಾ ಸದಸ್ಯರೂ, ಇತರ ಜನರೂ ಇದ್ದ ಒಂದು ಗುಂಪಿನ ಮೇಲೆ ಗ್ಯಾಸನ್ನು ಪ್ರಯೋಗಿಸಿದರು. ಇದರ ಪರಿಣಾಮವಾಗಿ ಕೆಲವರ ಕಣ್ಣಿನಲ್ಲಿ ನೀರು ಸುರಿಯುವುದಕ್ಕೆ ಪ್ರಾರಂಭವಾಗಿ [illegible] ನಿಂತರು. ಇನ್ನು ಕೆಲವರು ಆ ಸ್ಥಳದಿಂದ ಓಡಿ ಹೋದರು.

ಮುಕ್ಡೆನ್ ಬಳಿ ಚೀಣೀ ಸರ್ಕಾರದ ಸೋಲು

ವಿ ಸು.] ಪಟ್ಟಾಭಿನಗರ ೬

ನಿನ್ನೆ ಮಧ್ಯಾಹ್ನ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನವು ಪಟ್ಟಾಭಿನಗರದ ಭವ್ಯವಾದ ಮಂಟಪದಲ್ಲಿ ಆರಂಭವಾಯಿತು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರ ಅಗ್ರಾಸನವನ್ನು ವಹಿಸಿದ್ದರು. ವೇದಿಕೆಯ ಮೇಲೆ ಮಂತ್ರಿಗಳಾದ ಕೆ ಸಿ ರೆಡ್ಡಿ, ಕೆ ಟಿ ಭಾಷ್ಯಂ, ಟಿ ಮರಿಯಪ್ಪ, ಡಿ ಹೆಚ್ ಚಂದ್ರಶೇಖರಯ್ಯ ಮತ್ತು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸದಸ್ಯರು ಮಂಡಿಸಿದ್ದರು. ಸಭೆಗೆ ೫೦೦೦ ಕ್ಕೆ ಮೇಲ್ಪಟ್ಟು ಹೆಚ್ಚಾಗಿ ಪ್ರೇಕ್ಷಕರು ಬಂದಿದ್ದರು.

ಪ್ರಾರ್ಥನೆಯ ನಂತರ ಬೀರೂರಿನ ಪ್ರಮುಖ ಕಾರ್ಯಕರ್ತರಾದ ಶ್ರೀ ಕೆ ಬಿ ಮಲ್ಲಪ್ಪನವರು ಸ್ವಾಗತ ಸಮಿತಿಯ ಪರವಾಗಿ ಭಾಷಣ ಮಾಡಿ ಅಧ್ಯಕ್ಷರಿಗೂ ಆಗಂತುಕರಿಗೂ ಸುಸ್ವಾಗತವನ್ನು ಕೋರಿದರು.

ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ತಮ್ಮ ಭಾಷಣದಲ್ಲಿ ಕಳೆದ ಅಧಿವೇಶನದಿಂದ ಇದುವರೆಗೆ ಆಗಿರುವ ಕಾರ್ಯಕಲಾಪಗಳನ್ನು ವಿವರಿಸಿದರು.

ದಿವಂಗತರಾದ ಜನಾಬ್ ಜಿನ್ನಾ ಮತ್ತು ಶ್ರೀ ಕೆ ಎಚ್ ನರಸಿಂಹಯ್ಯನವರುಗಳ ಬಗ್ಗೆ ಸಂತಾಪವನ್ನು ಸೂಚಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಅಖಿಲ ಭಾರತ ಕಾಂಗ್ರೆಸ್ ಮಹಾ ಸಭೆಯ ಅಧ್ಯಕ್ಷರಾಗಿ ಚುನಾಯಿತರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರಿಗೆ ಅಭಿನಂದನೆಯನ್ನು ಸೂಚಿಸುವ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ದಿವಾನಗಿರಿಯನ್ನು ಮುಂದುವರಿಸುವ ಬಗ್ಗೆ ಪ್ರಶ್ನೆ

ಶ್ರೀಗಳಾದ ಡಿ ವೆಂಕಟಾಚಲಪತಿ ಶೆಟ್ಟಿ ಮತ್ತು ಎಂ ಎನ್ ಜೋಯಿಸರು ಪ್ರಶ್ನೆ ಹಾಕಿ ದಿವಾನಗಿರಿಯನ್ನು ಮುಂದುವರಿಸುವ ವಿಷಯದಲ್ಲಿ ಸರ್ದಾರ್ ಪಟೇಲರೊಡನೆ ಸಂಧಾನ ಮಾಡುವುದೇಕೆ?— ಎಂದು ಕೇಳಿದರು. ಸಂಸ್ಥಾನದ ಪಾರ್ಲಿಮೆಂಟರಿ ಕಾರ್ಯಕ್ರಮಗಳ ಮೇಲೂ ಅಖಿಲ ಭಾರತ ಕಾಂಗ್ರೆಸ್ಸಿನ ಈಗಿನ ಪಾಲಿಸಿಯನ್ನು ಹೊಂದಿರುವುದರಿಂದ ಮಂತ್ರಿಮಂಡಲದ ಬದಲಾವಣೆಯ ಬಗ್ಗೆ ಅವರನ್ನು ಕೇಳಬೇಕೆಂದು ಶ್ರೀಗಳಾದ ಎ ಜಿ ರಾಮಚಂದ್ರರಾವ್ ಮತ್ತು ಕೆ ಸಿ ರೆಡ್ಡಿಯವರು ಹೇಳಿದರು. ಈ ಉತ್ತರವು ಸದಸ್ಯರಿಗೆ ಅಷ್ಟಾಗಿ ಸಮಾಧಾನವುಂ

ಸುಗ್ಗಿ ಅಜ್ಞಾತ ಜಾರಿ

ವಿ ಸು.] ಬೆಂಗಳೂರು ೬

ರಾಗಿ ಮತ್ತು ಜೋಳಗಳ ಸಂಗ್ರಹಕ್ಕಾಗಿ ಜಾರಿ ಮಾಡಿದ್ದ ಆಜ್ಞೆಗಳ ಬಗ್ಗೆ ಗ್ರಾಮ ಕಲ್ಲಿ ಪಿಟಿ ಆಜ್ಞೆಯು ಎಲ್ಲಾ ತಾಲ್ಲೂಕುಗಳಿಗೂ ಸಾರ್ವತ್ರಿಕವಾಗಿ ಅನ್ವಯಿಸುವುದೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಹಳೇ ವಿದ್ಯಾರ್ಥಿಗಳ ಸಂಘ

ಮಹಾರಾಜಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ನೆರವೇರುವುದೆಂದು ತಿಳಿಸಲಾಗಿದೆ.

ಟು ಮಾಡಿದಂತೆ ಕಾಣಲಿಲ್ಲ. ಅಷ್ಟು ಹೊತ್ತಿಗೆ ಮಳೆ ಬಂದುದರಿಂದ ವಿಷಯವು ಅಲ್ಲಿಗೇ ನಿಂತಿತು.

ನಿರ್ಣಯಗಳು

ಮಳೆ ಬಂದ ಪ್ರಯುಕ್ತ ಅಧಿವೇಶನವು ನಿನ್ನೆ ರಾತ್ರಿ ಇಲ್ಲಿನ ಟೌನ್‌ಹಾಲಿನಲ್ಲಿ ಮುಂದುವರಿಯಿತು. ಜೈಪುರ ಕಾಂಗ್ರೆಸ್ಸಿನ ನಿರ್ಣಯಗಳು ಅಖಿಲ ಭಾರತ ಕಾಂಗ್ರೆಸ್ಸಿಗೆ ಸೇರಿದ ಅಧಿವೇಶನಗಳಲ್ಲಿ ಅದಕ್ಕೆ ಒಂದು ಪ್ರತ್ಯೇಕ ಪ್ರಾಂತೀಯ ಸ್ಥಾನವು ದೊರೆಯಬೇಕೆಂಬ ನಿರ್ಣಯವನ್ನು ಕಾಂಗ್ರೆಸ್ ಕಾರ್ಯಕಾರಿಯ ಮೂಲಕ ಸರ್ವಾನುಮತದಿಂದ ಶ್ರೀ ಎಂ ಎಸ್ ರಾಮಚಂದ್ರರಾವ್ ಮತ್ತು ಶ್ರೀ ಎಂ ಎನ್ ನಂಜಪ್ಪನವರು ಅನುಮೋದಿಸಿದರು. ಇದಕ್ಕೆ ಪ್ರತಿನಿಧಿಗಳು ಬಂದಿದ್ದವು. ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರ ಪತ್ರವನ್ನು ಓದಿ ಶ್ರೀ ಟಿ ಸುಬ್ರಹ್ಮಣ್ಯಂರವರು ಈ ನಿರ್ಣಯವನ್ನು ಮಂಡಿಸಿದರು. ತಿದ್ದುಪಡಿಗಳೆಲ್ಲವೂ ಬಿದ್ದುಹೋಗಿ ಬಹುಮತದಿಂದ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಹೈದರಾಬಾದ್ ಪೊಲೀಸ್ ಕಾರ್ಯಾಚರಣೆಯಲ್ಲಿ ವಿಜಯವನ್ನು ಗಳಿಸಿದುದಕ್ಕಾಗಿ ಕೇಂದ್ರ ಸರ್ಕಾರಕ್ಕೂ ಮತ್ತು ಮೈಸೂರು ಸೈನ್ಯವನ್ನೂ ಅಭಿನಂದಿಸುವ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಮತ್ತೊಂದು ಚರ್ಚೆ

ಮೊನ್ನೆ ರಾತ್ರಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯು ಇಲ್ಲಿನ ಪೇಟೆಯ ಬೀದಿಗಳಲ್ಲಿ ಸಾಗಿತು. ಅಧ್ಯಕ್ಷರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ, ಮೈಸೂರು ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಕಾರ್ಯಕರ್ತರ ಸಹಕಾರ ನೀಡುವುದಾಗಿ ತಿಳಿಸಿದರು. ಮತ್ತು ಮಹಿಳೆಯರು ಅಧ್ಯಕ್ಷರಿಗೆ ಸ್ವರ್ಣ ನಿಧಿ ಧನ ಸಹಾಯ ಮಾಡಬೇಕೆಂದು ಕೋರಿದರು.

ಹೊಸ ಪತ್ರಿಕೆಯಿಂದಲೂ ಜಾಮೀನು ಕೇಳಲಾಯಿತು

ಸ್ವಂ ಸು ವರದಿ] ಬೆಂಗಳೂರು ೬

ಸ್ವಾತಂತ್ರ್ಯೋದಯ ಪತ್ರಿಕೆಯ ಸಂಪಾದಕರಾದ ಶ್ರೀ ಬಿ ಕೇಶವಯ್ಯನವರು ನಿನ್ನೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ "ಶಿಕ್ಷಕ" ಎಂಬ ದ್ವೈವಾರ ಪತ್ರಿಕೆಯ ಸಂಪಾದಕರಾಗಿಯೂ, ಅಚ್ಚುಕೂಟದ ಮಾಲೀಕರಾದ ಶ್ರೀ ಬಿಂದುಮಾಧವರು ಸದರಿ ಪತ್ರಿಕೆಯ ಮುದ್ರಕರಾಗಿಯೂ ಡಿಕ್ಲರೇಷನ್ ಕೊಟ್ಟರು. ಮೊತ್ತ ಇಪ್ಪತ್ತು ದಿನಗಳೊಳಗಾಗಿ ತಲಾ ೫೦೦ ರೂ ಜಾಮೀನು ಕೊಡಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ.

○ ಗೋಧಿ ಮತ್ತು ಬಾರ್ಲಿ ಬೆಳೆಗೆ ಒಂದು ವಿಧವಾದ ರೋಗ ತಗಲುತ್ತಿರುವುದರಿಂದ ಗಣಿಗಳ ಮತ್ತು ಸೆಕ್ರೆಟರಿಯೇಟಿಗೆ ಸಂಸ್ಥಾನದಲ್ಲಿ ಅವುಗಳನ್ನು ಬೆಳೆಯಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

೯ ಸೆಂಟ್ರಲ್ ಜೈಲಿನಲ್ಲಿ ಬಂಧನದಲ್ಲಿದ್ದ ರಾಜಕೀಯ ನಾಯಕರಾದ ಶ್ರೀಗಳು ನಾಗಭೂಷಣ್, ಎಂ ಅನಂತ ಮತ್ತು ಟಿ ಎ. ಮುಡಿಯಪ್ಪನವರುಗಳನ್ನು ನಿನ್ನೆ ಬಿಡುಗಡೆ ಮಾಡಲಾಯಿತು.

ದಿವಾನರ ಆಗಮನ

ದಿವಾನರಾದ ಸರ್ ಆರ್ಕಾಟರು ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಈ ದಿನ ಮಧ್ಯಾಹ್ನ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು.

ಮೈಸೂರು ಸರ್ಕಾರದ ಕರ್ತವ್ಯದ ವಿವರಣೆ

ಶ್ರೀ ಕೆ ಸಿ ರೆಡ್ಡಿಯವರ ಭಾಷಣ

ಸ್ವಂ ಸು] ಪಟ್ಟಾಭಿನಗರ ೬

ಈ ದಿನ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ಸಾವಿರಾರು ಜನರು ಕುತೂಹಲದಿಂದ ಭಾಷಣ ಕೇಳಲು ಮಳೆಯಿದ್ದರೂ ಬಂದಿದ್ದರು. ಶ್ರೀ ಟಿ. ಸುಬ್ರಹ್ಮಣ್ಯಂರವರು ಭಾಷಣ ಮಾಡಿ ಮೈಸೂರು ಸರ್ಕಾರವು ಇತರ ಸಂಸ್ಥಾನ ಸರ್ಕಾರಕ್ಕೆ ಮಾದರಿಯಾಗಿದೆ ಎಂದರು.

ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಮಾತನಾಡಿ ಕಾಂಗ್ರೆಸ್ ಸರ್ಕಾರವು ಒಂದು ವರ್ಷದಿಂದ ಈಚೆಗೆ ಮಾಡಿರುವ ಕೆಲಸ ಕಾರ್ಯಗಳನ್ನು ವಿವರಿಸಿ ಪ್ರಜೆಗಳ ಬೆಂಬಲದಿಂದಲೇ ಇದು ಸಾಧ್ಯವೆಂದರು. ಮಹಾತ್ಮ ಗಾಂಧೀಜಿಯವರ ಆದರ್ಶದ ಸೂತ್ರವನ್ನಿಟ್ಟುಕೊಂಡು ಪ್ರಜಾ ಬೆಂಬಲವಿದ್ದಲ್ಲಿ ನಿರ್ವಹಿಸಲು ಸಾಧ್ಯವಾಗುತ್ತದೆಂದು ಅವರು ಹೇಳಿದರು.

ವಿದ್ಯಾ ಸುದ್ದಿ

ರಾಜಧಾನಿಯ ಕಿಲ್ಲೆ ವೆಂಕಟರಮಣ ಸ್ವಾಮಿ ದೇವಸ್ಥಾನದ ಬೀದಿ ಸುಬ್ಬರಾಯನ ಶ್ರೀನಿವಾಸ ರಾಘವೇಂದ್ರ ಮತ್ತು ಸತ್ಯನಾರಾಯಣ ಸೇವಾ ಮಂದಿರದಲ್ಲಿ ನವರಾತ್ರಿಯ ಕಾರ್ಯಕ್ರಮಗಳು ಪ್ರತಿದಿನವೂ ಬಲಮುರಿ ಶ್ರೀಕಂಠ ಗಣಪತಿ, ತಿರುಮಕೂಡಲು ಬ್ರಹ್ಮಾನಂದ, ನಾಗೇಂದ್ರ ಮತ್ತು ಪರಸಿದ್ಧ ಶಿವಗಣಪತಿಗಳ ಮಹಾಭಿಷೇಕವೂ ವಿಶೇಷ ಪೂಜಾದಿಗಳೂ ನಡೆಯುವುವು. ಭಕ್ತರು ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ.

ಹಿಂದೀ ತರಗತಿಗಳು

ಮೈಸೂರು ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಬನ್ನಿಮಂಟಪ ಮೊಹಲ್ಲಾ ವೈಶ್ಯ ವಿದ್ಯಾರ್ಥಿ ನಿಲಯದಲ್ಲಿ ಇದೇ ತಾರೀಖು ದಸರಾ ರಜೆ ದಿನ ಬೆಳಗ್ಗೆ ೮ ರಿಂದ ೯ ರವರೆಗೆ ಪ್ರಾಥಮಿಕ ಹಿಂದೀ ತರಗತಿಗಳು ನಡೆಯುವುವು. ಭಾಷೆ ಕಲಿಯಲಿಚ್ಛಿಸುವವರು ಕೂಡಲೇ ನೋಂದಣಿ ಮಾಡಿಕೊಳ್ಳಬೇಕೆಂದು ಶಾಲೆಯ ಉಪಾಧ್ಯಾಯರು ತಿಳಿಸಿರುವರು.

ವಾರ ಭವಿಷ್ಯ

ಶ್ರೀ

೭-೧೧-೪೮ ರಿಂದ ೧೪-೧೧-೪೮ ರ ವರೆಗೆ

ಮೇಷ— ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿರಲಾರದು, ಶ್ರಮಾಧಿಕ್ಯದಿಂದ ಅಧಿಕ ಆಯಾಸವುಂಟಾಗಬಹುದು, ಆರ್ಥಿಕ ಪರಿಸ್ಥಿತಿ ಹೆಚ್ಚುವುದು, ತಾ॥ ೧೦, ೧೨ ಚಿಂತೆ, ನಿರಾಶೆ.

ವೃಷಭ— ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅಪಜಯ, ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತಿರಸ್ಕಾರ ಭಾವನೆ, ತಾ॥ ೧೧, ೧೩ ಚೋರ ಭಯ, ಸ್ವಲ್ಪ ಶಾಂತಿ

ಮಿಥುನ— ಆರ್ಥಿಕ ಪರಿಸ್ಥಿತಿಯು ಸಂಪೂರ್ಣವಾಗಿ ಸುಧಾರಿಸುವುದು, ಅನೇಕ ಸಾಧು ಸಜ್ಜನರ ಸಂದರ್ಶನವಾಗುವುದು, ತಾ॥ ೧೦, ೧೨ ಧನ ಲಾಭ, ಮಿತ್ರ ದರ್ಶನ.

ಕಟಕ— ಆಟದ ಬಟ್ಟೆಗಳ ದ ಅಪೂರ್ವ ಲಾಭವುಂಟಾಗುವುದು, ಶ್ರಮಾಧಿಕ್ಯದಿಂದ ದೇಹಾಲಸ್ಯ ನಿಶ್ಚಿತವಾಗುವುದು, ಆರೋಗ್ಯ ಚೆನ್ನಾಗಿದೆ. ತಾ॥ ೯, ೧೧ ಶುಭ ವಾರ್ತೆ, ಧನ ಲಾಭ

ಸಿಂಹ— ಧನಾದಾಯ ಸಾಧಾರಣವಾಗಿದೆ, ಮಾನಸಿಕ ಕ್ಲೇಶಗಳು ಅಧಿಕವಾಗುವುವು, ಪ್ರಾರಂಭಿಸಿದ ಕಾರ್ಯಗಳಲ್ಲಿ ವಿಘ್ನ ದಿಂದಲೇ ವಿಳಂಬವುಂಟಾಗುವುದು, ತಾ॥ ೧೧, ೧೩ ಆಶುಭ ವಾರ್ತೆ, ನಷ್ಟ

ಕನ್ಯಾ— ಈ ವಾರ ನಿಮಗೆ ಧನಾದಾಯ ಉತ್ತಮವಾಗಿದೆ, ಪರದೇಶದ ಬಾಕಿ ಹಣವು ವಸೂಲಾಗುವುದು, ಆರೋಗ್ಯ ಚೆನ್ನಾಗಿದೆ ತಾ॥ ೧೨, ೧೩ ಶುಭ ಸಮಾಚಾರ, ಸುಖ ಭೋಜನ.

ತುಲಾ— ಆರೋಗ್ಯ ಧನಾದಾಯಗಳೆರಡೂ ಉತ್ತಮವಾಗಿವೆ, ಕೈಗೊಂಡ ಕಾರ್ಯಗಳು ಅಧಿಕ ಯಶಸ್ವಿಯಾಗಿ ಸಿದ್ಧಿಸುವುವು, ವಾಹನ ಸುಖದಲ್ಲಿ ಸ್ವಲ್ಪ ನಷ್ಟ ತಾ॥ ೮, ೧೦ ಸಖ ದರ್ಶನ, ಸುಖ ಭೋಜನ

ವೃಶ್ಚಿಕ— ಆರ್ಥಿಕ ಪರಿಸ್ಥಿತಿಯು ಬಗೆಹರಿಯಲಾರದ ಸಮಸ್ಯೆಯಾಗುವುದು, ಬಂಧು ಬಳಗದವರ ನಿಂದೆಗೊಳಗಾಗುವಿರಿ, ತಾ॥ ೧೦, ೧೩ ವ್ಯಥಾ ಪವಾದ, ಜನನಿಂದೆ

ಧನು— ಆರಂಭಿಸಿದ ಕಾರ್ಯಗಳು ಅರ್ಧದಲ್ಲಿಯೇ ನಿಲ್ಲುವುವು, ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ತೊಂದರೆಗಳು ಅಧಿಕವಾಗುವುವು, ತಾ॥ ೯, ೧೨, ಚೋರ ಭಯ, ಸ್ವಲ್ಪ ಶಾಂತಿ

ಮಕರ— ವ್ಯಾಪಾರಗಾರರಿಗೆ ಈ ವಾರ ಅತ್ಯಂತ ಲಾಭದಾಯಕವಾಗಿದೆ, ನೌಕರಿಯ ದಲ್ಲಿರುವವರ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾಗುವಿರಿ, ತಾ॥ ೮, ೧೧ ಶತ್ರು ನಾಶ, ಮಂಗಳ ವಾರ್ತೆ

ಕುಂಭ— ಅನೇಕ ಸಾಧುಸಂತರ ದರ್ಶನವಾಗುವುದು, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಲಭಿಸುವುದು, ಆರೋಗ್ಯ ಉತ್ತಮವಾಗಿದೆ, ತಾ॥ ೧೦, ೧೨ ಇಷ್ಟ ಸಿದ್ಧಿ, ಮನೋರಂಜನೆ

ಮೀನ— ವಿದ್ಯಾರ್ಥಿ ಮತ್ತು ಲೇಖಕ ವರ್ಗಕ್ಕೆ ಈ ವಾರ ಅತ್ಯಂತ ಲಾಭದಾಯಕವಾಗಿದೆ, ದಾನ ಧರ್ಮಗಳಿಗಾಗಿ ವೆಚ್ಚವಾಗುವುದು, ಧನಾದಾಯ ಚೆನ್ನಾಗಿದೆ, ತಾ॥ ೮, ೧೨ ಶುಭ ಸಮಾಚಾರ, ಧನ ಲಾಭ

ಕಳೆದು ಹೋಗಿದೆ.

ಸಿಂದೆ ಓಡಿಸ್ ಎಂಬ ಕ್ಯಾಯಲ್ಸ್ ಲೇಡೀಸ್ ವಾಚ್, ಬ್ಲಾಕ್ ಲೆದರ್ ಸ್ಟ್ರಾಪ್ ಮಾದರಿಯ ಚಿನ್ನದ ಚೈನ್‌ಸಹಿತ ಕಳೆದು ಹೋಗಿದೆ. ಇದು ಕಾಳಿದಾಸ ಸ್ಟ್ರೀಟ್ ಪಕ್ಕದ ಬಳಿ ಬಿದ್ದು ಹೋಯಿತು. ಇದು ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಈ ಕೆಳಗೆ ಕಂಡ ವಿಳಾಸಕ್ಕೆ ತಲುಪಿಸಿದವರಿಗೆ ಉಚಿತ ಬಹುಮಾನ ಕೊಡಲಾಗುತ್ತೆ.

ಡಿ. ಎ. ರಾವ್,

ಮೆಟ್ರೋ ಸ್ಕೂಲ್ ಷಾಪ್, ೧೨೭೨ ಕೃಷ್ಣಮೂರ್ತಿಪುರಂ, ಮೈಸೂರು

ರೈಲ್ವೆ ಅಪಘಾತದಿಂದ ೨೬ ಜನರಿಗೆ ಗಾಯ

ಕಲ್ಕತ್ತೆಗೆ ೪೯ ಮೈಲಿ ದೂರವಿರುವ ಭಾಗಲಪುರ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ವ್ಯಾಗನ್ನುಗಳ ಮೇಲೆ ಪ್ರಯಾಣಿಕರ ರೈಲು ತಿಕ್ಕಿ ಹೊಡೆದುದರಿಂದ ಒಬ್ಬನು ಸತ್ತು, ೨೬ ಜನರಿಗೆ ಗಾಯಗಳಾದವೆಂದು ಹೇಳಲಾಗಿದೆ.

ಗುರುದೇವಾ ಹಾಲ್

ದಿ ವೀರಪ್ಪ ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ, ಮೈಸೂರು.

ನವೀನ ತರದ ಬೆಂಗಾಲ್ ಸಿಲ್ಕು ಸೀರೆಗಳೂ ಮತ್ತು ನೂಲಿನ ಸೀರೆಗಳೂ ಬಂದಿವೆ ದಯವಿಟ್ಟು ಇಂದೇ ಭೇಟಿ ಕೊಡಿ

Edited printed and published by A.K. Nagarajan at the Sadhvi Press D. Subbaiah Road Mysore.

ಪ್ರಭುದೇವಾ ಟಾಕೀಸಿನಲ್ಲಿ

೫—೧೧—೪೮ ರಿಂದ ಅಮೋಘ ಪ್ರಾರಂಭ

ಉದಯಶಂಕರ್‌ರವರ

★ ಕಲ್ಪನಾ ★

[ಹಿಂದಿ]

ದಿನವೂ 3 ಆಟಗಳು.— ಮಧ್ಯಾಹ್ನ 3, ಸಂಜೆ 6, ರಾತ್ರಿ 9-30

ಜೆಮಿನಿ ರಿಲೀಸ್

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾಮ್ ಸೋಪು. ಕೀಲು ನೋವು ವಾತ ಸಕಲ ಬಾಧೆಗಳಿಗೂ ರಾಮಬಾಣ

[illegible]

ಮಹಾ ಸುಗಂಧರಾಜ ತೈಲ—)
" ಚಂದನಾದಿ ತೈಲ—)
" ಭೃಂಗಾಮಲಕ ತೈಲ. —)

-- ದೇಹಕ್ಕೆ ತಂಪು ಉತ್ತಮ. ಅಭ್ಯಂಗನ ತೈಲಗಳು

ಪಂಚಾಮೃತ— ಮಕ್ಕಳಿಗೂ ಗಡ್ಡೆಗಳಿಗೆ ಸಿದ್ಧ ಸಂಜೀವಿನ

ಮಹಾಕೇಶರ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಫ್ರೀ ಟಾನಿಕ್ ಶೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ ೪೦ ಬ್ಯಾನ್ಸಿಪಾರ್ ಬಿಲ್ಡಿಂಗ್, ಮೈಸೂರು.

ರಾಜಕಮಲ್ ಟಾಕೀಸ್, ಮೈಸೂರು

6—11—48 ರಿಂದ ಪ್ರತಿ ದಿನ 3 ಆಟಗಳು

ಮಾನವ ಸೇವೆಯೇ ಶ್ರೇಷ್ಠ ಧರ್ಮವೆಂದು ತಿಳಿದು ಆಚರಿಸಿದ ಮಹಾ ಪುರುಷ ಡಾ॥ ಕೋಟ್ನಿಸ್‌ರವರ ಅಸಮಾನ ಚರಿತ್ರೆಯನ್ನು ವಿವರಿಸುವ ಶ್ರೀ ಶಾಂತಾರಾಮರವರ ಅದ್ಭುತ ಕಲಾಸೃಷ್ಟಿ

ಚೀನಾ ದೇಶದ ಮೈತ್ರಿಯನ್ನೂ, ಹಿಂದೂಸ್ಥಾನದ ಔನ್ನತ್ಯವನ್ನೂ ಆ ದೇಶಕ್ಕೆ ಅನುಗಣವಾಗಿ ನೀಡಿದ ಸಹಾಯವನ್ನೂ, ಚೀನೀಯ ನೃತ್ಯ, ಮಧುರ ಸಂಗೀತಗಳ ವೈವಿಧ್ಯವನ್ನೂ ಪ್ರತ್ಯಕ್ಷೀಕರಿಸುವ

Dr. KOTNIS Ki AMAR KAHANI
V. SHANTARAM

ಡಾ॥ ಕೋಟ್ನಿಸ್-ಕಿ-ಅಮರ್ ಕಹಾನಿ

(ಹೊಸ ಪ್ರಿಂಟು. ಹಿಂದಿ)

ಪಾತ್ರ:- ಶಾಂತಾರಾಂ, ಜಯಶ್ರೀ

ಲಕ್ಷಾಂತರ ಜನರು ನೋಡಿ ಮೆಚ್ಚಿದ ಚಿತ್ರ ಇಂದು ನಿಮ್ಮ ಆಗಮನವನ್ನು ಪುನಃ ನಿರೀಕ್ಷಿಸುತ್ತಿರುವುದು.

MORNING SHOWS For 4 Days From 5-11-48

SECOND CHORUS

With:-Paulette Goddard, Fred Astair

ವಿಶ್ವಕರ್ಮ [illegible]

ರಾಜಧಾನಿಯಲ್ಲಿ ಶ್ರೀ ಎಂ. ರ ಮೂರ್ತಿಯವರ ಸಂಪಾದಕತ್ವದಲ್ಲಿ ಹೊರಡುತ್ತಿರುವ " ವಿಶ್ವಕರ್ಮ " ಕನ್ನಡ ಮಾಸ ಪತ್ರಿಕೆಯು ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಕಲೆ, ಶಿಲ್ಪ, ಕೈಗಾರಿಕೆ ಮುಂತಾದ ವಿಷಯಗಳನ್ನು ಅಭಿವೃದ್ಧಿಪಡಿಸುವ ಪತ್ರಿಕೆಯು ಅನ್ವರ್ಥವಾಗುವುದು. ವಿಶ್ವಕರ್ಮ ಜನಾಂಗದವರ ಏಳಿಗೆಗಾಗಿ ಪ್ರಕಟವಾಗುತ್ತಿರುವ ಈ ಪತ್ರಿಕೆಯು ಚಿರಕಾಲ ನಿಲ್ಲಲೆಂದು ಹಾರೈಸುತ್ತೇವೆ. [illegible]

ಶ್ರೀ ಜಗದಂಬಾ [illegible]

ದಿವಾನ್ಸ್ ರೋಡ್, ಮೈಸೂರು

ಅಧಿಪತಿ ಶಿಶುವಿದ್ಯಾಭ್ಯಾಸ, ಶಿ.ನ.ಶಾಸ್ತ್ರಿ ಅಧ್ಯಕ್ಷತೆಯಲ್ಲಿ ಮತ್ತು ಅನೇಗ ರಾವ್ ಉಪಕರಣಗಳ ಸಹಾಯದಿಂದ ಹತ್ತಾರು ವರ್ಷಗಳಿಂದ ಶಿಶುಸೇವೆಯನ್ನು ಮಾಡುತ್ತಾ ಶಿಶುವಿಹಾರವೆನಿಸಿಕೊಂಡ ಶ್ರೀ ಜಗದಂಬಾ ಶಿಶು ವಿಹಾರವು ನವರಾತ್ರಿ ರಜದ ನಂತರ ಆರಂಭಗೊಂಡು ಈಗ ನವಚೈತನ್ಯದಿಂದ ಮತ್ತೆ ಪ್ರಾರಂಭಿಸಿದೆ.

ಶಿಶು ವಿದ್ಯಾಭ್ಯಾಸದಲ್ಲಿ ಅಭಿಮಾನ ಹೆತ್ತವರು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಿ ಯೋಜನೆಯನ್ನು ಪಡೆಯುವುದು ಈ ಶಾಲೆಯ ಕಾರ್ಯಕಲಾಪಗಳಿಗೆ ಜನ ಪ್ರೋತ್ಸಾಹವಾಗಿ ವಿನಂತಿ ಮಯಗಳಿಗೆ ಬೊಂಬೆ ತೋರಿಸಬಹುದು

ಬಿ. ಕೃಷ್ಣಮೂರ್ತಿ ವ್ಯವಸ್ಥಾಪಕ

ಶ್ರೀ ಸರಸ್ವತಿ ಸಂಗೀತ ಸಮಾಜ

ಮೈಸೂರು

19—11—1948 ನೇ ಶುಕ್ರವಾರ ಸಂಜೆ 5-30 ಘಂಟೆಗೆ

ಟೌನ್ ಹಾಲಿನಲ್ಲಿ

ರಾಜ್ಯಸೇವಾಸಕ್ತ ಸಂಗೀತ ಕಲಾನಿಧಿ ಶ್ರೀ ಚೆಮ್ಮಂಗುಡಿ

ಶ್ರೀನಿವಾಸ ಅಯ್ಯರ್

ಹಾಡುಗಾರಿಕೆ

ಮಾಸ್ಟರ್ ಕೃಷ್ಣಮೂರ್ತಿ ಪಿಟೀಲ್

ಮಾಸ್ಟರ್ ರಘು ಮೃದಂಗ

ಟಿಕೆಟ್ ದರಗಳು:— ರೂ 5, 3, 2, ಮತ್ತು 1-1-2

ಸದಸ್ಯರಿಗೆ [illegible]

ಶ್ರೀ ಗಾಯತ್ರೀ ಟಾಕೀಸ್

6-11-48 ರಿಂದ 4 ದಿನಗಳು ಮಾತ್ರ

M G M. ರವರ ವರ್ಣರಂಜಿತ

ದಿ ಇಯರ್ಲಿಂಗ್

(THE YEARLING)

ಪಾತ್ರ:— ಗ್ರೆಗರಿ ಪೆಕ್, ಜೇನ್ ವೈಮನ್

Next Change:—

BODY & SOUL

ಪೋನ್ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೮-೧೧-೪೮ [ಸಂಚಿಕೆ ೧೦೯

ಯು. ಪಿ. ಸರ್ಕಾರದ ಮೇಲೆ ವೇಶ್ಯೆಯರ ದಾವಾ

ಸಂಸ್ಥಾನದ ಪ್ರಗತಿ ಸರ್ವರ ಚಿಂತೆಯಾಗಲಿ

ಎ.ಎಂ.ಸಿ.ಸಿ. ಯಲ್ಲಿ ಶ್ರೀ ಅಧ್ಯಕ್ಷರ ಭಾಷಣ

ಸ್ವಂ.ಸು.] ಪಟ್ಟಾಭಿನಗರ ೭

ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಈ ದಿನ ಮಧ್ಯಾಹ್ನ ಬೀರೂರಿನ ಪಟ್ಟಾಭಿನಗರದಲ್ಲಿ ಆರಂಭವಾಯಿತು.

ಮಂತ್ರಿವರ್ಯರಾದ ಶ್ರೀಗಳು ಕೆ ಸಿ ರೆಡ್ಡಿ, ಕೆ ಟಿ ಭಾಷ್ಯಂ, ಹೆಚ್ ಸಿದ್ದಯ್ಯ ಮತ್ತು ಟಿ ಮರಿಯಪ್ಪನವರೂ, ಡಿ. ಎಚ್. ಚಂದ್ರಶೇಖರಯ್ಯ, ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರೂ ಮತ್ತು ಎಸ್ ವೆಂಕಟಪತಯ್ಯನವರೂ ವೇದಿಕೆಯ ಮೇಲೆ ಮಂಡಿಸಿದ್ದರು ಪತ್ರಿಕೋದ್ಯಮ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಿದ್ದ ಶ್ರೀ ನಾಡಿಗ ಕೃಷ್ಣಮೂರ್ತಿಯವರೂ ಸಹ ದಯಮಾಡಿಸಿದ್ದರು

ಸುಮಾರು ೧೨೫ ಜನ ಎ. ಎಂ. ಸಿ ಸಿ ಸದಸ್ಯರು ದಯಮಾಡಿಸಿದ್ದರು ಧ್ವಜ ನಮನ ನಂತರ ವಂದೇಮಾತರಂ ಗೀತೆ ಆದ ಮೇಲೆ ಕಾರ್ಯಕ್ರಮವು ಆರಂಭವಾಯಿತು ಶ್ರೀ ಶಂಕರಭಟ್ಟರು ಸ್ವಾಗತಪದ್ಯವನ್ನು ಹಾಡಿದರು ಜನಾಬ್ ಕರೀಂ ಖಾನ್ ಸಾಹೇಬರು ವಿಶ್ವೇಶ್ವರನಮೇಲೆ ಪದ್ಯವನ್ನು ಹಾಡಿದರು

ಜಗದ್ಗುರು ತರಳಬಾಳು ಸ್ವಾಮಿಯವರು, ತಿರುವಾಂಕೂರು ಪ್ರಧಾನಿ ಶ್ರೀ ಪಿ. ಕೆ. ನಾರಾಯಣ ಪಿಳ್ಳೆ, ಜನಾಬ್ ಜೆ ಮಹಮದ್ ಇಮಾಂ, ಶ್ರೀಗಳು ಮಾರುತಿಕುಬೇರಶೆಟ್ಟಿ, ಪ್ರಭುಗಳ ಆಪ್ತ ಕಾರ್ಯದರ್ಶಿ ಜಿ ಎನ್ ನಾಗರಾಜರಾವ್, ವಿ ವೆಂಕಟಪ್ಪ, ಬಾಲಪಳ್ಳಿ ಸೀತಾರಾಮಯ್ಯ, ಪತ್ರಿಕೆಯ ಪ್ರಸಾದ, ಆದರ್ಶ, ವಿಶ್ವವಾಣಿ, ಕಾಲಚಕ್ರ ಮುಂತಾದವರು ಕಳುಹಿಸಿದ್ದ ಸಂದೇಶಗಳನ್ನು ಶ್ರೀ ಕೆ ಟಿ ಸತ್ಯನಾರಾಯಣ ಶೆಟ್ಟರು ಓದಿದರು

ಅಧ್ಯಕ್ಷರ ಭಾಷಣ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರು ತಮ್ಮನ್ನು ರಾಜಕೀಯಕ್ಕೆ ಧುಮುಕಿಸಿದ ಶ್ರೀ ಎಸ್ ವೆಂಕಟಪತಯ್ಯನವರನ್ನು ಸ್ವಾಗತಿಸಿದರು ಕಾಂಗ್ರೆಸ್ಸು ಹನ್ನೊಂದು ವರ್ಷವಲ್ಲಿ ನಡೆಸಿದ ಕಾರ್ಯವನ್ನು ಪ್ರಶಂಸಿಸಿ ದೇಶ ಸೇವೆ ಮಾಡಲು ಬಂದವರನ್ನು ಹೊಗಳಿ ಎಲ್ಲರೂ ಜವಾಬ್ದಾರಿ ಸರ್ಕಾರವನ್ನು ಉಳಿಸಿಕೊಳ್ಳಲು ಶ್ರಮಿಸಬೇಕೆಂದು ಹೇಳಿದರು

ಕಾಂಗ್ರೆಸ್ಸು ಮಹಾತ್ಮರ ಆಶೀರ್ವಾದವು ಅನೇಕರ ಬಲಿದಾನಗಳಿಂದ ಸ್ಥಾಪಿತವಾದ ಸಂಸ್ಥೆಯೆಂದೂ ರಾಜ್ಯವನ್ನು ಸುವ್ಯವಸ್ಥಿತವಾಗಿ ಆಳಲು ಇದಕ್ಕಿಂತ ಬೇರೆ ಸಂಸ್ಥೆ ಯಾವುದೂ ಇಲ್ಲವೆಂದೂ ಹೇಳಿದರು. [illegible] ಪದ್ಧತಿ ವಜಾ ಮಾಡುವ ವಿಷಯವನ್ನು ಪ್ರಸ್ತಾಪಿಸಿ ತಾವು ಆ ಬಗ್ಗೆ ಸರ್ದಾರ್ ಪಟೇಲರೊಡನೆ ಮಾತು ಕತೆ ನಡೆಸಿದರೆಂದೂ ಆ ಪತ್ರ ವ್ಯವಹಾರ ನಡೆಯುತ್ತಿದೆಯೆಂದೂ ಸಹ ಹೇಳಿದರು.

ಮೈಸೂರು ಕಾಂಗ್ರೆಸ್ಸು ಈಗ ಯಾವ ಪ್ರಾಂತ್ಯದ ಕಾಂಗ್ರೆಸ್ಸಿಗೂ ಹಿಂದಿಲ್ಲದೆ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿರುವುದರಿಂದ ನಾವು ಅಖಿಲ ಭಾರತ ಕಾಂಗ್ರೆಸ್ಸಿನ ಪ್ರತ್ಯೇಕ ಅಂಗವಾಗಿ ಉಳಿಯಲು ನಿರ್ಧರಿಸಿದ್ದೇವೆಂದೂ ಸಹ ಹೇಳಿದರು.

ಕಾಂಗ್ರೆಸ್ ಮಂತ್ರಿಮಂಡಲದ ಖಂಡನೆ

ಎ.ಎಂ.ಸಿ.ಸಿ.ಯಲ್ಲಿ ನಿರ್ಣಯ ವಾಪಸು

ಸ್ವಂ ಸು.] ಪಟ್ಟಾಭಿನಗರ ೭

ಈ ದಿನ ಮಧ್ಯಾಹ್ನ ಖಾಸಗೀ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಶ್ರೀಗಳಾದ ದೇವರ ಕೊಂಡಪ್ಪನವರು ಮತ್ತು ಭಾರದ್ವಾಜರು ಕಳುಹಿಸಿದ್ದ ರಚನಾತ್ಮಕ ಕಾರ್ಯದ ನಿರ್ಣಯದ ಮೇಲೆ ಶ್ರೀ ರೆಡ್ಡಿಯವರು ಮಾತನಾಡಿ ಸಂಕುಚಿತ ಭಾವನೆ ಬಿಟ್ಟು ಎಲ್ಲರೂ ಈಗ ರಚನಾತ್ಮಕವಾಗಿ ಸರ್ಕಾರಕ್ಕೆ ಬೆಂಬಲ ಕೊಡಬೇಕೆಂದರು ವಂದೇಮಾತರಂ ಗೀತೆಯನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿಯೂ ಹಾಡಬೇಕೆಂಬ ನಿರ್ಣಯವು ಅಧ್ಯಕ್ಷರ ಭರವಸೆ ಮೇಲೆ ವಾಪಸಾಯಿತು. ಮಂತ್ರಿಮಂಡಲವು ಜನತೆಯ ವಿಶ್ವಾಸ ಕಳೆದುಕೊಂಡು, ಅವರ ಆಶೋತ್ತರಗಳನ್ನು ಈಡೇರಿಸಲು ಅಸಮರ್ಥತೆ ಹೊಂದಿದೆ ಆದ್ದರಿಂದ ಬೇರೊಂದು ಮಂತ್ರಿ ಮಂಡಲವನ್ನು ಸ್ಥಾಪಿಸಬೇಕು-ಎಂಬ ನಿರ್ಣಯಕ್ಕೆ ಅನುಮೋದಕರಿಲ್ಲದೆ ಬಿದ್ದು ಹೋಯಿತು

ಬಿಸಿ ಬಿಸಿ ಚರ್ಚೆ

ಮೈಸೂರು ಕಾಂಗ್ರೆಸ್ಸು ಅಧಿಕಾರ ವಹಿಸಿ ಒಂದು ವರ್ಷವಾದರೂ ಪ್ರಜೆಗಳ ಇಂಗಿತದಂತೆ ಕಾರ್ಯ ಮಾಡಿಲ್ಲ ಈ ಸಂಸ್ಥೆಗೆ ಕಾರಣಗಳನ್ನು ಅರಿತು ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಲು ಎ ಎಂ ಸಿ ಸಿ ಯಿಂದ ಐವರನ್ನು ಒಳಗೊಂಡ ತಜ್ಞರ ಸಮಿತಿಯನ್ನು ರಚಿಸಬೇಕೆಂಬ ನಿರ್ಣಯವನ್ನು ಶ್ರೀ ಹೆಚ್ ಎಸ್ ದೊರೆಸ್ವಾಮಿಯವರು ಮಂಡಿಸಿದರು ಆಹಾರ ಮತ್ತು ಬಟ್ಟೆ ಹಂಚಿಕೆ ಸಮರ್ಪಕವಾಗಿಲ್ಲ. ಬಟ್ಟೆ ವ್ಯಾಪಾರ ಮಾಡದವರಿಗೆ ಲೈಸೆನ್ಸ್ ಕೊಟ್ಟಿರುವುದು ಶೋಚನೀಯ ಎಂದರು ಕೆಲ ಕಾರ್ಯಗಳ ತೃಪ್ತಿಯಾಗಿಲ್ಲದೆ ಕಾಂಗ್ರೆಸ್ಸಿಗರು ಮಾಡುವ ಸಭೆಗೆ ಕಲ್ಲು ಬೀಳುವ ನಿದರ್ಶನವನ್ನು ತಿಳಿಸಿದರು. ದೇಶ ಸೇವೆದೃಷ್ಟಿಯಿಂದ ಕೆಲಸಮಾಡುವವರಿಗೆ ಕೆಲಸ ಕೊಡುವುದರಲ್ಲಿ ಅಭ್ಯಂತರವಿಲ್ಲ. ಆದರೆ ಮಧ್ಯಸ್ಥಗಾರರ ಹಿಡಿತ ತಪ್ಪಬೇಕೆಂದರು.

ಶ್ರೀ ಮಳವಳ್ಳಿ ವೀರಪ್ಪನವರು ನಿರ್ಣಯಕ್ಕೆ ಬೆಂಬಲ ಕೊಟ್ಟು ಕೆಲವು ಸರ್ಕಾರಿ ಅಧಿಕಾರಿಗಳು ಮಂತ್ರಿಗಳಿಗೆ ಹೆದರುವುದಿಲ್ಲವೆಂದು ಹೇಳುತ್ತಾ ಕೆಲವು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹೆದರಿ ಅವರ ಮನೆ ಬಾಗಿಲಿಗೆ ಅಲೆಯುತ್ತಿರುವರೆಂದರು ಬ್ರಾಹ್ಮಣ ಬ್ರಾಹ್ಮಣೇತರ [illegible] ಹೆಚ್ಚಾಗ ಬ

ಅನೇಕರು ಮೈಸೂರು ಸರ್ಕಾರವನ್ನು ದೂಷಿಸುವುದನ್ನು ತಿಳಿಸಿದರು. ಮಂತ್ರಿಗಳು ಕೆಲವರ ಪ್ರಭಾವಕ್ಕೆ ಒಳಗಾಗಿ ಕೆಲಸ ಮಾಡುತ್ತಿರುವರೆಂದರು

ಈ ವಿಷಯದ ಮೇಲೆ ಶ್ರೀಗಳಾದ ಎಂ ಎನ್ ಜೋಯಿಸ್, ಕೆ ರಂಗಪ್ಪ ಸಿ ವಿ ಧ್ರುವ ಮತ್ತು ಹೆಚ್ ಕೆ ಕುಮಾರಸ್ವಾಮಿಯವರುಗಳು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿ ಈ ಟೀಕೆಗೆ ಆಧಾರವಿಲ್ಲವೆಂದರು

ನಂತರ ಶ್ರೀಗಳಾದ ಕೆ ಚೆಂಗಲರಾಯ ರೆಡ್ಡಿ ಹೆಚ್ ಸಿದ್ದಯ್ಯ ಮತ್ತು ಟಿ. ಮರಿಯಪ್ಪನವರುಗಳು ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಬಂದಿದ್ದ ಟೀಕೆಗೆ ಉತ್ತರವಿತ್ತು ಕಾಂಗ್ರೆಸ್ ಮಂತ್ರಿಮಂಡಲವು ಒಂದು ವರ್ಷದಿಂದ ಈಚೆಗೆ ನಡೆಸಿರುವ ಕಾರ್ಯಕ್ರಮವನ್ನು ಬಹಳ ಕೂಲಂಕಷವಾಗಿ ತಿಳಿಸಿದರು. ಕೊನೆಯಲ್ಲಿ ಶ್ರೀ ಹೆಚ್ ಎಸ್. ದೊರೆಸ್ವಾಮಿಯವರು ಮಾತನಾಡಿ ಆಹಾರ ಮತ್ತು ಬಟ್ಟೆ ಹಂಚಿಕೆಗೆ ತೀವ್ರ ಗಮನ ಕೊಟ್ಟು ೧½ ಸೇರು ಸಿಗುವ ಅಕ್ಕಿ ೨ ಸೇರು ಸಿಗುವಂತೆ ಮಾಡಿದರೆ ಜನರಿಗೆ ತೃಪ್ತಿಯಾಗುವುದೆಂದು ಹೇಳಿ ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಹನುಮಂತಯ್ಯನವರ ಮೇಲೆ ಶಿಸ್ತಿನ ಕ್ರಮದ ಪ್ರಶ್ನೆ

ಕೇಂದ್ರ ಮಂತ್ರಿಮಂಡಲವನ್ನು ಟೀಕಿಸಿದ ಬಗ್ಗೆ ಶ್ರೀ ಹನುಮಂತಯ್ಯನವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಮುಂದೆ ಇಂತಹ ಘಟನೆ ನಡೆಯದಂತೆ ಮಾಡಬೇಕೆಂದೂ ಹಲವರು ಪ್ರಶ್ನೆಗಳನ್ನು ಹಾಕಿದರು ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಭಾಷಣಮಾಡಿದವರು ತಮ್ಮ ತಪ್ಪನ್ನು ಅರ್ಥ ಮಾಡಿಕೊಂಡಿರುವುದರಿಂದ ಇದರ ಮೇಲೆ ಹೆಚ್ಚಿನ ಚರ್ಚೆ ಮತ್ತು ಕಾರ್ಯಕ್ರಮಗಳ ಅವಶ್ಯಕತೆ ಇಲ್ಲವೆಂದು ಹೇಳಿದರು.

ಮತ್ತೊಂದು ಶಿಸ್ತಿನ ಕಾರ್ಯಕ್ರಮದ ಪ್ರಶ್ನೆ

ಮೈಸೂರು ಜಿಲ್ಲೆಯಲ್ಲಿ ನಡೆದ ನ್ಯಾಯವಿಧಾಯಕ ಸಭೆಯ ಉಪ ಚುನಾವಣೆಗೆ ನಿಂತಿದ್ದವರಮೇಲೆ ಕಾರ್ಯಕಾರೀ ಸಮಿತಿ ಕೈಕೊಂಡ ಕ್ರಮದ ಬಗ್ಗೆ ಪ್ರಶ್ನೆ ಕೇಳಲಾಯಿತು. ಅಧ್ಯಕ್ಷರು ಉತ್ತರವಿತ್ತು ಈ ಪ್ರಶ್ನೆಯನ್ನು ಪರಸ್ಪರ ಸೌಹಾರ್ದ ಮತ್ತು ಪರಿಸ್ಥಿತಿಯನ್ನು ಗಮನಿಸಿ ತೀರ್ಮಾನಕ್ಕೆ ಬರಲಾಯಿತೆಂದೂ, ಕಾರ್ಯಕಾರಿ ಸಮಿತಿಯು ಶಿಸ್ತಿನ ಕಾರ್ಯಕ್ರಮ ಕೈಕೊಳ್ಳುವ ವಿಷಯವನ್ನು ಅಲ್ಲಿಗೇ ನಿಲ್ಲಿಸಲು ಪ್ರಾರ್ಥಿಸಿತೆಂದೂ ಅದಕ್ಕೆ ಶ್ರೀ ಎಂ ಎಲ್ ಸಂಜರಾಜೇಅರಸರು ತಮ್ಮ ಆಕ್ಷೇಪಣೆಯೇನೂ ಇಲ್ಲವೆಂದು ತಿಳಿಸಿದರೆಂದೂ ಹೇಳಿದರು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಕೆಲವು ಪತ್ರಿಕೆಗಳಲ್ಲಿ [illegible] ಅಧ್ಯಕ್ಷರ [illegible] ಅಧ್ಯಕ್ಷ[illegible]

ಇನ್ನು ಮುಂದೆ ಪ್ರತಿ ವಯಸ್ಕರಿಗೂ ೧೦ ಗಜ ಬಟ್ಟೆ

ಸ್ವಂ.ಸು.ಫೋನ್] ಬೆಂಗಳೂರು ೭

ಹೊಸದಾಗಿ ಬಟ್ಟೆ ವಿತರಣ ವ್ಯವಸ್ಥೆಯನ್ನು ಮಾಡಿರುವ ಪ್ರಕಾರ ಇನ್ನು ಮುಂದೆ ಪ್ರತಿಯೊಬ್ಬ ವಯಸ್ಕರಿಗೆ ೧೦ ಗಜ ಬಟ್ಟೆಯನ್ನು ಕೊಡಲಾಗುವುದು ಈ ತಿಂಗಳ ಅಂತ್ಯದೊಳಗೆ ಬಟ್ಟೆ ಕೂಪನ್ನುಗಳನ್ನು ಹಂಚುವ ವ್ಯವಸ್ಥೆ ನಡೆಯುತ್ತಿದೆ.

* ಸರ್ಕಾರದಲ್ಲಿ ಡೈರೆಕ್ಟರ್ ಆಫ್ ಇನ್ಫರ್ಮೇಷನ್ ಎಂಬ ಹೊಸ ಹುದ್ದೆಯನ್ನು ನಿರ್ಮಿಸಲು ತೀವ್ರಾಲೋಚನೆಯಾಗುತ್ತಿದೆಯೆಂದು ವರದಿಯಾಗಿದೆ.

ಸರ್ಕಾರದ ಮೇಲೆ ಕಾನ್ಪುರದ ಸೂಳೆಯರ ದಾವಾ

ಜೀವನಕ್ಕೆ ಅಟಂಕಪಡಿಸಿದ ಆಪಾದನೆ

ಪಿ ಟಿ ಐ] ಕಾನ್ಪುರ ೪

ಸಂಯುಕ್ತ ಪ್ರಾಂತ್ಯದ ಸರ್ಕಾರಕ್ಕೂ ಕಾನ್ಪುರದ ವೇಶ್ಯೆಯರ ಸಮುದಾಯಕ್ಕೂ ಸಧ್ಯದಲ್ಲಿಯೇ ಕಾನೂನಿನ ಕದನವೊಂದು ನಡೆಯಲಿದೆ. ಆಳ್ವಿಕ ಸರ್ಕಾರದ ಆಜ್ಞೆಯಂತೆ ಪೋಲೀಸಿನವರು ೩೦೦ ಜನ ವೇಶ್ಯೆಯರನ್ನು ದಸ್ತಗಿರಿ ಮಾಡಿ ಪೋಲೀಸು ಠಾಣೆಗೆ ಕರೆದುಕೊಂಡು ಹೋಗಿ ಅವರನ್ನು ಕೆಲವು ಷರತ್ತುಗಳ ಮೇಲೆ ಬಿಡುಗಡೆ ಮಾಡಿದರು. ಅನಂತರ ಸದರಿ ವೇಶ್ಯೆಯರು ಫ್ಲೋರ್ ರುಕ್ಸಾರ್ ಎಂಬಾಕೆಯ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ನಡೆಸಿ ಸರ್ಕಾರದವರು ಉದ್ದಿಷ್ಟ ಪೂರ್ವಕವಾಗಿ ತಮ್ಮ ಜೀವನಕ್ಕೆ ಕಲ್ಲು ಹಾಕುತ್ತಿರುವುದರಿಂದ ಅವರ ಮೇಲೆ ದಾವಾ ಹೂಡಬೇಕೆಂದು ನಿರ್ಧರಿಸಿದರು. ಕೋರ್ಟು ಖರ್ಚಿಗಾಗಿ ೬೦೦೦ ರೂ ನ ನಿಧಿಯನ್ನೂ ಸಹ ಕೂಡಿಸಿದರು. ಪ್ರತಿಯೊಬ್ಬಳೂ ಇದಕ್ಕಾಗಿ ೨೦ ರೂ ಚಂದಾ ಹಾಕಿರುವರು

ಈ ಮೊಕದ್ದಮೆಯಲ್ಲಿ ಸುಪ್ರಸಿದ್ಧ ವಕೀಲರು ಹಾಜರಾಗಲಿರುವುದರಿಂದ ಇದು ವಿಶೇಷ ಕುತೂಹಲವನ್ನುಂಟುಮಾಡಿರುತ್ತದೆ ಈ ಮಧ್ಯೆ ನಿರುದ್ಯೋಗಿಗಳಾಗಿರುವ ಈ ಅಬಲೆಯರಿಗಾಗಿ ಒಂದು ಪ್ರತ್ಯೇಕ ಮೊಹಲ್ಲೆಯನ್ನು ಕಲ್ಪಿಸುವಂತೆ ಅಲ್ಲಿನ ಪ್ರಾಂತ ಸಭೆಗೆ ಸರ್ಕಾರದವರ ಸೂಚನೆಯು ಬರುವುದೆಂದೂ ಸಹ ಹೇಳಲಾಗಿದೆ

ದೀಪಾವಳಿ ಜೂಜಿನ ರದ್ದು

ಸಂಯುಕ್ತ ಪ್ರಾಂತ ಸರ್ಕಾರದವರು ದೀಪಾವಳಿ ಹಬ್ಬದ ದಿನ ಇದುವರೆಗೆ ಇದ್ದ ಜೂಜಾಟದ ಪದ್ಧತಿಯನ್ನು ರದ್ದು ಮಾಡಿ ಈ ಸಾರಿ ಜೂಜಾಡಿದ ೩೦೦ ಜನರನ್ನು ಕಾನ್ಪುರದಲ್ಲಿ ದಸ್ತಗಿರಿ ಮಾಡಿರುವರು

○ ಚೀಣಾದ ಪ್ರಮುಖ ನಗರವಾದ ಷಾಂಗ್ಹಾಯ್ ಪಟ್ಟಣವನ್ನು ಸಂರಕ್ಷಿಸಲು ಅಮೇರಿಕದವರು ಸಹಾಯ ಮಾಡುವುದಾದರೆ ಆ ನಗರದಲ್ಲಿ ಅಮೇರಿಕದವರಿಗೆ ವಿಶೇಷ ಸೌಲಭ್ಯಗಳನ್ನು ಕೊಡುವುದಾಗಿ ಚೀಣಾದ ಅಧ್ಯಕ್ಷ ಚಿಯಾಂಗ್ ಕೈಷೇಕ್‌ರವರು ತಿಳಿಸಿರುತ್ತಾರೆ

ಉತ್ತರಕೊಟ್ಟು ಪತ್ರಿಕೆಗಳಲ್ಲಿ ಬಂದಿರುವುದು ತಮಗೆ ತಿಳಿಯದೆಂದೂ ಕಾರ್ಯಕಾರೀ ಸಮಿತಿಯ ಪ್ರಾರ್ಥನೆಯಂತೆ ಅರಸಿನವರು ವಿಷಯವನ್ನು ಅಲ್ಲಿಗೇ ಬಿಟ್ಟು ಬಿಡಬೇಕೆಂದು ತಿಳಿಸಿದರೆಂದೂ ಹೇಳಿದರು ಇಲ್ಲಿಗೆ ಪ್ರಶ್ನೆಗಳು ಮುಕ್ತಾಯವಾಯಿತು.

ಅಧ್ಯಕ್ಷರ ಮುಕ್ತಾಯ ಭಾಷಣಾನಂತರ [illegible]

ಸಹಕಾರಿ ಬ್ಯಾಂಕ್ ಮುದ್ರಣಾಲಯದ ಕೆಲಸಗಾರರ ಬೇಡಿಕೆಗಳು

ಮೈಸೂರು. ೮

ಸರ್ಕಾರಿ ಮುದ್ರಣಾಲಯದ ಮೈ ... ದು ಜಾಪಿನ ಕೆಲಸಗಾರರ ಸಂಘದ ಸಭೆಯು ಕಳೆದ ತಿಂಗಳು ೩೯ ನೇ ತಾ॥ ಶ್ರೀ ಕೆ ವಿ ಲೋಗನಾಥನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಲಸಗಾರರಿಗೆ ರಾತ್ರಿ ವೇಳೆಯ ಷಿಫ್ಟ್ ಮುಂತಾದ ವಿಚಾರದಲ್ಲಿ ವಿನಾಯಿತಿಯನ್ನು ಕೊಡಿಸುವುದು, ಬಾಕಿ ಉಳಿದಿರುವ ಬಾಕಿಗಳನ್ನು ಪಾವತಿ ಮಾಡಿಸುವುದು, ಟೈಂ ಟೇಬಲ್ ವ್ಯವಸ್ಥೆ, ಮೂರು ತಿಂಗಳ ಸಂಬಳದ ಬೋನಸ್ಸು, ಮನೆ ಬಾಡಿಗೆಯ ಭತ್ಯ, ವಾಹನ ಭತ್ಯವೇ ಮುಂತಾದವುಗಳ ವಿಚಾರದಲ್ಲಿ ಸಂಘದವರ ಬೇಡಿಕೆಗಳನ್ನು ಸರ್ಕಾರದವರು ಬೇಗನೆ ಈಡೇರಿಸಬೇಕೆಂದು ... ದ ವುದು—ಇವೇ ಮುಂತಾದ ನಿರ್ಣಯಗಳು ಅಂಗೀಕರಿಸಲ್ಪಟ್ಟುವು

ವಿದ್ಯಾರ್ಥಿಗಳ ವೇತನ

ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಸರ್ಕಾರದವರು ಏರ್ಪಡಿಸಿದ ವಿದ್ಯಾರ್ಥಿ ವೇತನದ ವಿಷಯವನ್ನು ಇದುವರೆಗೂ ಕೆಲವು ಕಾಲೇಜುಗಳಲ್ಲಿ ಪ್ರಕಟಿಸಿದೆ ಇದ್ದುದರಿಂದ ಕಾಲೇಜು ಫೀಸು ಮುಂತಾದವುಗಳನ್ನು ಕೊಡಲು ಇದನ್ನೇ ನಂಬಿರುವವರಿಗೆ ಬಹಳ ತೊಂದರೆಯಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇವುಗಳನ್ನು ಪ್ರಕಟಿಸಿ ವಿದ್ಯಾರ್ಥಿಗಳ ತೊಂದರೆಗಳನ್ನು ನಿವಾರಿಸಬೇಕೆಂದು ನೊಂದ ವಿದ್ಯಾರ್ಥಿಗಳೊಬ್ಬರು ಕೋರಿರುತ್ತಾರೆ

ಕೀರ್ತನ ಕಾಲಕ್ಷೇಪ

ಕೀರ್ತನಕಾರ ಮಂಡಲಿ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ಚಾಮುಂಡೇಶ್ವರೀ ಯ ಜ್ಞಾನ ಮಂಡಲಿ ಮುಂದುಗಡೆ ಕಥಾ ಪ್ರ... , ನಾಳೆ ಸಂಜೆ ವರಗೇನಹಳ್ಳಿ ಶ್ರೀ ರಾಮ ... ಶಾಸ್ತ್ರಿಗಳವರಿಂದ ... ಎಂಬ ಕೀರ್ತನೆ ಮತ್ತು ನಾಡಿದ್ದು ಸಂಜೆ ಶ್ರೀಗಳು ... ಕೃಷ್ಣರಾಜ ... ಗಳಿಂದ ... ಪುರಾಣ ... ಶ್ರೀ ... ದಲ್ಲಿ ಜರುಗುವುವು

ಉಪನ್ಯಾಸದ ಘಾಷಣ

ಸುಪ್ರಸಿದ್ಧ ಕವಿಗಳು ಮತ್ತು ... ಜ್ಞರೂ ಆದ ಎಂ ಜೆ ಹೆಚ್ ಉಪನ್ಯಾಸದ ಸ್ವಾತಂತ್ರ್ಯ ... ನಾಳೆ ಮತ್ತು ನಾಡಿದ್ದು ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜು ಹಾಲಿನಲ್ಲಿ ... ಸಭಾಂಗಣದಲ್ಲಿ ... ಮಾಡುವರು

ಮೈಸೂರು ... ದಿಂದ ... ತಯಾರಾದ ... ಸೀರೆಗಳು ... ರೂಪಾಯಿ ... ದೊರೆಯುತ್ತವೆ.

ದಯವಿಟ್ಟು ಒಂದೇ ಬೇಟಿ ಕೊಡಿ

ಗುರುದೇವಾ ಹಾಲ್,

ಬಿ. ... ಅಂಗಡಿ,

ಶಿವರಾಂಪೇಟೆ, ಮೈಸೂರು.

ಪೌರಸಭೆಯ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ

ಮೈಸೂರು ೮

ರಾಜಧಾನಿಯ ಪೌರಸಭೆಗೆ ಬರುವ ವರ್ಷದ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲು ಕಾರ್ಯಕ್ರಮದ ಪಟ್ಟಿಯನ್ನು ಗೊತ್ತುಮಾಡಲಾಗಿದೆ. ಅಧ್ಯಕ್ಷಸ್ಥಾನಕ್ಕೆ ಉಮೇದುವಾರಿ ಅರ್ಜಿಗಳನ್ನು ಡಿಸೆಂಬರ್ ೮ ನೇ ತಾ॥ ವರೆಗೆ ತೆಗೆದುಕೊಳ್ಳಲಾಗುವುದು. ಚುನಾವಣೆಯು ೧೬ ನೆಯ ತಾ॥ ನಡೆಯುವುದು.

ಉಪಾಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಅರ್ಜಿಗಳನ್ನು ಡಿಸೆಂಬರ್ ೧ ನೇ ತಾ॥ ವರೆಗೆ ತೆಗೆದುಕೊಳ್ಳಲಾಗುವುದು ಚುನಾವಣೆಯು ೯ ನೇ ತಾ॥ ನಡೆಯುವುದು.

ನೀರಿನ ಹಂಚಿಕೆಯ ವ್ಯವಸ್ಥೆ

ರಾಜಧಾನಿಯ ಕೃಷ್ಣರಾಜ ಮತ್ತು ... ವಿಲ್ಲೆ ಮೊಹಲ್ಲಾಗಳ ಕೆಲವು ಭಾಗಗಳಲ್ಲಿ ನೀರಿನ ತೊಂದರೆ ಬಗ್ಗೆ ಪದೇ ಪದೇ ದೂರು ಬರುತ್ತಿತ್ತು. ಇದನ್ನು ಸರಿಪಡಿಸಲು ಇಲಾಖೆಯವರು ಹೊಸ ವ್ಯವಸ್ಥೆಯೊಂದನ್ನು ಮಾಡಿದ್ದಾರೆ. ಈ ಹೊಸ ಉದ್ದವಾದ ಸಾರ್ವಜನಿಕ ... ಯನ್ನು ಪರೀಕ್ಷಿಸಿ ... ಇಲಾಖೆಯು ... ಟ್ಯಾಂಕ್ ... ಮತ್ತು ... ಕೃಷ್ಣಮೂರ್ತಿಪುರಂ ... ಕೊಂಡರೆ ಇರುವ ಭಾಗಗಳನ್ನು ಪರಿಶೀಲಿಸಿದರು ಹೊಸ ವಿಧಾನದಿಂದ ನೀರಿನ ಅಭಾವವು ... ಪಡುವ ನಿರೀಕ್ಷೆಯಿದೆ

ಆಕಾಶದ ಮೇಲೆ ಅಧಿಕಾರ

ಅಮೇರಿಕದ ... ನಗರದಲ್ಲಿ ... ಹೋಗಿ ... ಮುಂತಾದವುಗಳಿಂದ ... ಪ್ರಕಟವಾಗುವುದರಿಂದ ನಗರದ ಸ್ವಾಭಾವಿಕ ಸೌಂದರ್ಯವು ಕೆಡುವುದೆಂದೂ ಅದ್ದರಿಂದ ಆ ಪ್ರದೇಶದ ಆಕಾಶದ ಮೇಲೆ ತಾವು ಅಧಿಕಾರವಿಟ್ಟುಕೊಳ್ಳಬೇಕೆಂದೂ ಆ ನಗರ ಸಭೆಯವರು ನಿರ್ಧರಿಸುವುದಾಗಿ ತಿಳಿದುಬಂದಿದೆ

ಅಮೇರಿಕದಲ್ಲಿ ಮದುವೆಗಳ ಸುಗ್ಗಿ

ಅಮೇರಿಕದ ಸೇನೆಗೆ ಅವಿವಾಹಿತರು ... ನ್ನು ... ಶಾಸನವನ್ನು ಮಾಡಿರುವುದರಿಂದ ... ಕಳೆದ ... ವರ್ಷ ... ಹೆಚ್ಚುತ್ತಿದೆಯೆಂದು ತಿಳಿದುಬಂದಿದೆ ಮೊದಲಿಗಿಂತ ಈ ವರ್ಷ ವಿವಾಹವಾದವರ ಸಂಖ್ಯೆ ಶೇಕಡ ೪೦೦ ರಷ್ಟು ಹೆಚ್ಚಿದೆಯೆಂದು ವರದಿಯಾಗಿದೆ

ಅಖಿಲ ಮೈಸೂರು ಮೆಡಿಕಲ್ ಸಮ್ಮೇಳನ

ಪ್ರಭುಗಳಿಂದ ೧೬ನೇ ತಾ॥ ಆರಂಭ

ಮೈಸೂರು ೭

ಈ ತಿಂಗಳು ೧೬ನೇ ತಾರೀಖಿನಿಂದ ೩ ದಿನಗಳು ರಾಜಧಾನಿಯ ದಸರಾ ವಸ್ತುಪ್ರದರ್ಶನಾಲಯದಲ್ಲಿ ಅಖಿಲ ಮೈಸೂರು ಮೆಡಿಕಲ್ ಸಮ್ಮೇಳನವು ನಡೆಯುವುದು. ಶ್ರೀಮನ್ಮಹಾರಾಜರವರು ೧೬ ನೇ ತಾ॥ ಬೆಳಗ್ಗೆ ೯ ಗಂಟೆಗೆ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು. ಆರೋಗ್ಯ ಮಂತ್ರಿಗಳಾದ ಜನಾಬ್ ಮಹಮದ್ ಶರೀಫ್ ರವರು ಭಾಷಣಮಾಡುವರು

ಕಾಂಗ್ರೆಸ್ ಧ್ಯೇಯ ಸಾಧನೆ

ಕೆಲಸಗಾರರ ಸಭೆಯಲ್ಲಿ ಸಮಿತಿಯ ಸ್ಥಾಪನೆ.

ವಿ.ಸಿ] ಪಟ್ಟಾಭಿನಗರ ೭

ಸಂಸ್ಥಾನದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ಶ್ರೀ ಹೆಚ್ ಎಸ್ ದೊರೆಸ್ವಾಮಿಯವರು ಇಂದು ಇಲ್ಲಿ ಕಾಂಗ್ರೆಸ್ ಕೆಲಸಗಾರರ ಒಂದು ಅನೌಪಚಾರಿಕ ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಕಾಂಗ್ರೆಸ್ಸಿನ ಸಂಘಟನಾ ಕಾರ್ಯ, ಕಾಂಗ್ರೆಸ್ಸು ಮತ್ತು ಮಂತ್ರಿ ಮಂಡಳಿಗಳ ನಡುವೆ ಈಗಿರುವ ಸಂಬಂಧ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟುವು ಜವಾಬ್ದಾರಿ ಸರ್ಕಾರದ ಸಂಪಾದನೆಯು ಸಂಕಲ್ಪ ಕಾಂಗ್ರೆಸ್ ಕೆಲಸಗಾರರಲ್ಲಿ ಅಲಕ್ಷ್ಯ ತೋರ ಹತ್ತಿದೆ. ಈ ಅಲಕ್ಷ್ಯವನ್ನು ಹೀಗೆಯೇ ಬೆಳೆಯಗೊಟ್ಟಲ್ಲಿ ಕಾಂಗ್ರೆಸ್ಸು ತನ್ನ ಧ್ಯೇಯವನ್ನು ಬಿಟ್ಟು ದೂರ ದೂರ ಸರಿಯುವುದರಲ್ಲಿ ಸಂಶಯ ವಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಕಾಂಗ್ರೆಸ್ ಕೆಲಸಗಾರರು ಅಭಿಪ್ರಾಯಪಟ್ಟರು. ಕಾಂಗ್ರೆಸ್ ಕೆಲಸಗಾರರನ್ನು ಧ್ಯೇಯ ಸಾಧನೆಗಾಗಿ ಸಂಘಟಿಸಿ ಕಾಂಗ್ರೆಸ್ಸಿನ ಕೆಲಸದಲ್ಲಿ ಉತ್ಸಾಹ ತುಂಬುವುದು ಅವಶ್ಯವೆಂದು ನಿರ್ಣಯಿಸಿ, ಆ ಕಾರ್ಯಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಲು ಶ್ರೀ ದೊರೆಸ್ವಾಮಿಯವರಿಗೆ ಅಧಿಕಾರ ಕೊಡಲಾಯಿತು

ಕಳೆದು ಹೋಗಿದೆ.

ಒಂದು ಓಸ್ ಎಂಬ ... ವಾಚ್, ಪ್ಲಾಸ್ಟಿಕ್ ಮಾದರಿಯ ಚಿನ್ನದ ಬೈನಿನೊಡನೆ ಕಳೆದು ಹೋಗಿದೆ. ಇದು ... ಸ್ಪ್ರಿಂಗ್ ... ಬಳಿ ಬಿದ್ದು ಹೋಯಿತು ಇದು ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಈ ಕೆಳಗೆ ಕಂಡ ವಿಳಾಸಕ್ಕೆ ತಲುಪಿಸಿದರೆ ಉಚಿತ ಬಹುಮಾನ ಕೊಡಲಾಗುತ್ತೆ.

ಡಿ. ಎ ರಾಮರ್,

ಮಿಟ್ರಿ ಸ್ಕೆಚ್ ಪಾರ್ಕ್, ೧೩೨೨

ಕೃಷ್ಣಮೂರ್ತಿಪುರಂ, ಮೈಸೂರು.

Edited printed and published by A. R. Nagarajan at the Sadhvi Press D Subbaiah Road Mysore

ಶಾಸನ ಸಭಾ ಸದಸ್ಯ ... ಭತ್ಯಕ್ಕೆ ಭಂಗ

ಕೊಡಲಿನೇ ಕರಗತಿಯ ... ಮೋಟಾರು ಭತ್ಯಗಳನ್ನು ... ದು ಇಂಟರ ಮತ್ತು ಮೋಟಾರ ... ಗಳಲ್ಲಿ ಪ್ರಯಾಣ ಮಾಡಿ ... ಸಭೆಯ ಸದಸ್ಯರಾಗಿರುವರೋ ... ರವಕ್ಕೆ ಭತ್ಯೆ ಕರುತ್ತಿರುವವರ ... ಸಂಯುಕ್ತ ಪ್ರಾಂತ್ಯ ಸರ್ಕಾರದ ... ಯುಕ್ತವಾದವನ್ನು ಕೈಗೊಂಡು ... ರ ಭತ್ಯಗಳನ್ನು ರದ್ದು ಮಾಡುವ ... ವನ್ನು ಪರಿಶೀಲಿಸುತ್ತಿರುವರೆಂದು ... ಯಾಗಿದೆ.

ಶ್ರೀ. ಜಗದಂಬಾ ಶಿಶುವಿ...

ದಿವಾನ್ಸ್ ರೋಡ್, ಮೈಸೂರು

ಅಧುನಿಕ ಶಿಶು ವಿದ್ಯಾಭ್ಯಾಸ, ... ಶಿಶು ಮನಶ್ಶಾಸ್ತ್ರ ಪದ್ಧತಿಗಳ ಮತ್ತು ... ಗೆ ಅನುಗುಣವಾದ ಉಪಕರಣ... ಹಾಯದಿಂದ ಹತ್ತಾರು ವರ್ಷಗಳಿ... ಶಿಶು ಸೇವೆಯನ್ನು ಮಾಡುತ್ತ ... ಶಿಶುವಿಹಾರವೆನಿಸಿಕೊಂಡ ಶ್ರೀ ಜಗ... ಶಿಶು ವಿಹಾರವು ನವರಾತ್ರಿ ರಜವನ್ನು ಗಿಸಿಕೊಂಡು ಈಗ ಪುನಃ ... ಸ್ವದಿಂದ ... ಸ ಮಾಡಲಾರಂಭಿಸಿದೆ.

ಶಿಶು ವಿದ್ಯಾಭ್ಯಾಸದಲ್ಲಿ ... ಮಾತಾ ಪಿತೃಗಳು ಕಾಲ ವಿಳಂಬ... ತಮ್ಮ ಮಕ್ಕಳನ್ನು ಶಾಲೆಗೆ ಸೇರಿ... ಯೋಜನವನ್ನು ಪಡೆಯುವುದ... ಈ ಶಾಲೆಯ ಕಾರ್ಯಕಲಾಪಗಳಿಗೆ ... ಜನ ಶಿಕ್ಷಕಿಯರಾಗಿ ವಿಷಯ ... ಮ ಯು ಗ ಳಿ ಗೆ ... ಕೊಡಲಾಗುವುದು

ಕೆ. ಕೃಷ್ಣಮೂರ್ತಿ

ವ್ಯವಸ್ಥಾಪಕ

ಎಸ್. ಎಗ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ... ನೋವು, ಕೀಲು ನೋವು ಮುಂ... ಸಕಲ ಬಾಧೆಗಳಿಗೂ ರಾಮಬಾಣ

ಶೀಸೆ ೦-...

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾ ಮಲಕ ತೈಲ:—)

—ದೇಹಕ್ಕೆ ತಂಪು ಉತ್ತಮ ಅಭ್ಯಂಜನ ತೈಲಗಳು.

ಪಂಚಾಮೃತ— ಮಲೇರಿಯಾ ... ಗಳಿಗೆ ಸಿದ್ಧ ಸಂಜೀವನ.

ಮಹಾಕೇಶವರ್ಧಿನಿ ತೈಲ —ಕಲೆ ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ

ಹ್ರಿಗ ಟಾನಿಕ್ ಶೀಸೆ ೨-...

ಮೈಸೂರು ಆಯುರ್ವೇದಿಕ್ ಫಾ...

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂ...

ಮುಂದಿನ ಬದಲಾವಣೆ ಒಲಂಪಿಯಾ ಟಾಕೀಸಿನಲ್ಲಿ

ಇದುವರೆಗೂ ಪ್ರಕಾಶಿಸದೇ ಇದ್ದ ಅತ್ಯುತ್ತಮ ರಾಮಾಯಣ ಕಥೆಯಿಂದ ಆರಿಸಿದ

M K PRODUCTIONS ಹಿಂದೀ ಚಿತ್ರ

SATHI VIJAYA : ಸತೀ ವಿಜಯ

ಪಾತ್ರ:-ರತ್ನಮಾಲಾ, ಕಿಶೋರ್ ಕುಮಾರ್, ಸೂರ್ಯಕಾಂತ, ಎಸ್. ಚಟರ್ಜಿ, ಶಾಂತಾ ಕುಮಾರಿ

ನೃತ್ಯ, ಮಧುರ ಸಂಗೀತ, ಮನೋಹರ ದೃಶ್ಯಗಳಿಂದ ಕೂಡಿದ ಚಿತ್ರ ನೋಡಿ—ಇಂದ್ರಜಿತ್ತುವಿನ ನಾಗಲೋಕದ ವಿಜಯವನ್ನು

ಸಂಪುಟ ೭]. ಮಂಗಳವಾರ ೯-೧೧-೪೮ [ಸಂಚಿಕೆ ೧೨೦

ಗಾಂಧಿ ಕೊಲೆಪಾತಕ ಗೋಡ್ಸೆಯ ಹೇಳಿಕೆ

ಗಾಂಧಿಜೀಯವರನ್ನು ನಾನೇ ಗುಂಡು ಹಾರಿಸಿ ಕೊಂದೆನು

ನ್ಯಾಯಸ್ಥಾನದಲ್ಲಿ ನಾಥೂರಾಂ ಗೋಡ್ಸೆಯ ಹೇಳಿಕೆ

...ಮಹಾತ್ಮಾ ಗಾಂಧಿ ಕೊಲೆ ವಿಚಾರಣಾ ...ಕೋರ್ಟಿನ ಮುಂದೆ ನಿನ್ನೆ ಅಪರಾಧಿ ನಾ...ರಾಂ ಗೋಡ್ಸೆಯು ದೀರ್ಘ ಹೇಳಿಕೆ...ನ್ನು ಕೊಟ್ಟು, ತಾನು ಕಳೆದ ಜನವರಿ ...ನೇ ತಾ|| ಮಹಾತ್ಮರನ್ನು ಗುಂಡಿನಿಂ...ಹೊಡೆದು ಕೊಲೆ ಮಾಡಿದುದುಂಟೆಂ... ಆದರೆ ತನಗೆ ಯಾವ ಕ್ಷಮೆಯನ್ನೂ ...ಬೇಕಾಗಿಲ್ಲವೆಂದೂ, ಮತ್ತು ತನ್ನ ...ಗಾಗಿ ಯಾರೂ ದಯಾಭಿಕ್ಷೆಯನ್ನು ಬೇ...ಡಬೇಕಾಗಿಲ್ಲವೆಂದೂ ಹೇಳಿರುತ್ತಾನೆ. ಆತ...ನ ಹೇಳಿಕೆಯು ೯೨ ಪುಟ ಇರುತ್ತದೆ. ...ಗೋಡ್ಸೆಯು ಈ ರೀತಿ ಹೇಳಿರುತ್ತಾನೆ:—

...ಗಾಂಧೀಜೀಯವರ ಸಲಹೆ ಮೇರೆ ಕಾಂ...ಗ್ರೆಸ್ ನಾಯಕರುಗಳು ಭಾರತದ ವಿಭಜ...ನೆ ಒಪ್ಪಿದುದರಿಂದ ಹಿಂದೂಗಳ ಮೇಲೆ ...ಅತ್ಯಾಚಾರಗಳೂ ಮತ್ತು ಲಕ್ಷಾಂತರ ಹಿಂ...ದೂಗಳ ಸಾವು ನೋವುಗಳೂ ಉಂಟಾದುವು. ...ಮುಸಲ್ಮಾನರ ಇಂತಹ ಕೃತ್ಯಗಳಿಂದ ಹಿಂ...ದೂಗಳು ಪಾರಾಗಬೇಕಾದರೆ, ಗಾಂಧಿಜೀ...ಯವರ ಮೇಲೆ ಕೊನೆಯ ಕಾರ್ಯಕ್ರಮ ಕೈ...ಗೊಳ್ಳಬೇಕೆಂದು ನಿರ್ಧರಿಸಿದೆನು. ಇದನ್ನು ...ಯಾರಿಗೂ ತಿಳಿಸಲಿಲ್ಲ. ಗಾಂಧೀಜಿಯವ...ರ ಉಪವಾಸದಿಂದ ಪಾಕೀಸ್ತಾನಕ್ಕೆ ೫೫ ...ಕೋಟಿ ರೂ ಕೊಟ್ಟಿದುದನ್ನೂ ಮತ್ತು ...ಮುಸಲ್ಮಾನರ ಪರವಾಗಿ ೩೨ ವರ್ಷಗಳಿಂದ ...ಅವರು ನಡೆಸಿದ ಕಾರ್ಯಗಳನ್ನೂ ಸಹಿ...ಸದೆ ಅವರ ದೇಹವನ್ನು ಕೊನೆಗೊಳಿ...ಸಲು ನಿರ್ಧರಿಸಿದೆನು.

...ಈ ಕೃತ್ಯ ನಡೆಸಿದ ಪೂರ್ಣ ಜವಾಬ್ದಾರಿ ...ನನ್ನದೇ. ನಾನು ಇತರ ಸಂಬಂಧದ ...ಯಾರೊಡನೆಯೂ ಸೇರಿ ಪಿತೂರಿ ...ನಡೆಸಲಿಲ್ಲ. ವೀರ ಸಾವರ್ಕರ್ ಅಥ...ವಾ ಬೇರೆ ನಾಯಕರುಗಳು ನನಗೆ ಇದರ ...ಸಹಾಯ ಮಾಡಲಿಲ್ಲ.

...ಪಾಕೀಸ್ತಾನವೆಂದು ಕರೆಯಲ್ಪಡುತ್ತಿ...ರುವ ಪ್ರದೇಶದಲ್ಲಿ ಮತ್ತೆ ಐಕಮತ್ಯ ನೆಲೆಸಿ, ...ಒಂದಾಗಿ ಅಖಂಡ ಭಾರತ... ...ಆಗುವ ಕಾಲ ಬೇಗ ಬರಲೆಂದು ಮನೋ...ಭಾವನೆ ಜನತೆಯಲ್ಲಿ ಉಂಟಾಗಬೇಕೆಂಬು...ದೇ ನನ್ನ ಕಟ್ಟಕಡೆಯ ಇಚ್ಛೆ ಮತ್ತು ದೇ...ವರಲ್ಲಿ ನನ್ನ ಅಂತ್ಯ ಪ್ರಾರ್ಥನೆ.

...೩೦ ರಂದು ಜನರ ಎದುರಿಗೆ ಗಾಂಧೀ...ಜಿಯವರ ಮೇಲೆ ಗುಂಡು ಹಾರಿಸಿದವನು ...ನಾನು. ಆ ಸ್ಥಳದಿಂದ ಓಡಿ ಹೋಗಬೇ...ಕೆಂಬ ಇಚ್ಛೆಯೇ ನನಗೆ ಇರಲಿಲ್ಲ. ನಾನೇ ...ಗುಂಡು ಹಾರಿಸಿಕೊಂಡು ಆತ್ಮಹತ್ಯ ಮಾ...ಡಿಕೊಳ್ಳಬೇಕೆಂಬ ಮನೋಭಾವನೆಯೂ ...ನನಗೆ ಇಲ್ಲ. ನನ್ನ ಮನಸ್ಸಿನ ಅ...ಭಿಪ್ರಾಯಗಳನ್ನು ಬಹಿರಂಗ ನ್ಯಾಯಸ್ಥಾ...ನದಲ್ಲಿ ವಿವರಿಸಬೇಕೆಂಬುದೇ ನನ್ನ ...ಉದ್ದೇಶವಾಗಿತ್ತು. ಈ ಕೃತ್ಯ ನಡೆಸುವುದ...ರಿಂದ ನನ್ನ ಸರ್ವನಾಶವಾಗುವುದೆಂಬುದ...ನ್ನು ತಿಳಿದಿದ್ದೆನು. ಗುಂಡು ಹಾರಿಸುವ ಪೂರ್ವವೇ ಅರಿ...ತಿದ್ದೆನು. ...ಇಲ್ಲದೆ ಗಾಂಧೀಜಿಯವರನ್ನು ಕೊಂ...ದರೆ ಎಲ್ಲರೂ ನನ್ನನ್ನು ದ್ವೇಷಿಸುವರೆಂ...ದು ಗೊತ್ತಿತ್ತು. ಪ್ರಾಣಕ್ಕಿಂತಲೂ ...ಹೆಚ್ಚಿನ ಗೌರವವನ್ನು ನಾನು ಕಳೆದು...ಕೊಳ್ಳುವೆನೆಂಬುದರ ಅರಿವೂ ನನಗಿತ್ತು. ...ಗಾಂಧೀಜಿಯವರು ಇಲ್ಲದಿದ್ದರೂ ...ಹಿಂದೂಸ್ಥಾನವು ಪ್ರಗತಿಯಲ್ಲಿ ಮುಂ... ತನ್ನ ಸೈನ್ಯ ಬಲವನ್ನು ಹೆಚ್ಚಿಸಿ ಕೊಂಡು ಯಾರನ್ನು ಬೇಕಾದರೂ ಎದುರಿಸಬಲ್ಲದೆಂದು ನನಗೆ ಪೂರ್ಣ ನಂಬಿಕೆ ಇತ್ತು. ಪಾಕಿಸ್ತಾನದ ಕ್ರೂರ ದವಡೆಗೆ ಭಾರತವು ಸಿಲುಕಬಾರದೆಂಬುದೇ ನನ್ನ ಆಶೆಯಾಗಿತ್ತು. ಅದ್ದರಿಂದಲೇ ಯಾರಿಗೂ ತಿಳಿಸದೆ ಕಟ್ಟ ಕಡೆಯ ನಿರ್ಧಾರಕ್ಕೆ ಬಂದೆ.

ಗಾಂಧೀಜಿಯವರ ಮೇಲೆ ನನಗೆ ವೈಯಕ್ತಿಕವಾದ ದ್ವೇಷವೇನೂ ಇಲ್ಲ. ನಾನು ಈ ಕೃತ್ಯ ಮಾಡದೆ ಇದ್ದಿದ್ದರೆ ನನಗೇ ಒಳ್ಳೆಯದಾಗುತ್ತಿತ್ತು. ಆದರೆ ಆಗಿನ ಪರಿಸ್ಥಿತಿ ನನ್ನ ಸಹಿಷ್ಣುತೆಗೂ ಮೀರಿದ್ದಾಗಿತ್ತು. ಮುಸ್ಲಿಮರ ಪ್ರೋತ್ಸಾಹಿಸುವ ಪ್ರಯತ್ನ, ಪಾಕಿಸ್ತಾನದ ಸ್ಥಾಪನೆ, ಕಲಕತ್ತೆಯ ದಂಗೆ ಇವುಗಳನ್ನು ಬಿಟ್ಟು, ಪಾಕಿಸ್ತಾನದ ಹಿಂದೂಗಳ ಹಿತರಕ್ಷಣೆ ಗಾಂಧೀಜಿಯವರು ಮಾಡಿದ್ದರೆ, ನನ್ನ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು.

ರಾಷ್ಟ್ರಕ್ಕಾಗಿ ಗಾಂಧೀಜೀಯವರು ಅನೇಕ ಕಷ್ಟಗಳನ್ನು ಅನುಭವಿಸಿದರು. ಅದಕ್ಕಾಗಿ ಅವರಿಗೆ ನಾನು ತಲೆ ಬಾಗಿಸುವೆನು. ನಾನು ಗುಂಡು ಹಾರಿಸುವ ಮೊದಲೂ ಅವರಿಗೆ ಪ್ರಣಾಮ ಮಾಡಿ, ತಲೆ ಬಾಗಿ ನಮಸ್ಕರಿಸಿದೆನು. ಆದರೂ ಗಾಂಧೀಜೀಯವರಿಗೂ ದೇಶವನ್ನು ವಿಭಾಗಿಸಲು ಅಧಿಕಾರವಿರಲಿಲ್ಲ.

ರಾಷ್ಟ್ರ ಪ್ರೇಮವೇ ಪಾಪವಾದರೆ ನಾನು ಪಾಪಿ. ಮಾನವ ಹಿತದೃಷ್ಟಿಯಿಂದ ನಾನು ಈ ಕೃತ್ಯ ನಡೆಸಿದೆ. ಅದು ಶ್ಲಾಘ್ಯ ಕಾರ್ಯವಾದಲ್ಲಿ ಆ ಶ್ಲಾಘ್ಯತೆ ನನಗಿರಲಿ. ಮಾನವಾತೀತವಾದ ಕೋರ್ಟೊಂದಿದ್ದಲ್ಲಿ ನನ್ನ ಈ ಕೃತ್ಯವನ್ನು ಅದು ಅನ್ಯಾಯವಾಗಿ ಪರಿಗಣಿಸುವುದಿಲ್ಲ. ಲಕ್ಷಾಂತರ ಹಿಂದೂಗಳ ಸರ್ವನಾಶಕ್ಕೆ ಕಾರಣವಾದ ನೀತಿಗೆ ಕರ್ತರಾದ ವ್ಯಕ್ತಿಯ ಮೇಲೆ ನಾನು ಗುಂಡು ಹಾರಿಸಿದ ಕಾಲಕ್ಕೇ ನಾನು ಅವರೊಡನೆಯೇ ಸತ್ತೆನೆಂದು ಭಾವಿಸಿದೆನು. ಅಂದಿನಿಂದ ನನ್ನ ದಿನಗಳನ್ನು ಧ್ಯಾನ ಮಾಡುತ್ತಾ ಸಮಾಧಿ ಸ್ಥಿತಿಯಲ್ಲಿ ಕಳೆಯುತ್ತಿದ್ದೇನೆ.

[ನಾಥೂರಾಂ ಗೋಡ್ಸೆಯು ತನ್ನ ಹೇಳಿಕೆಯನ್ನು ಓದುತ್ತಿದ್ದಾಗ, ಕೆಳಕ್ಕೆ ಬಿದ್ದನು. ತನ್ನ ಕಾಲು ಜಾರಿತೆಂದು ಪಕೀಲರಿಗೆ ತಿಳಿಸಿದನು. ಸ್ವಲ್ಪ ವಿಶ್ರಮಿಸಿಕೊಳ್ಳಬಹುದೆಂದು ನ್ಯಾಯಾಧೀಶರು ಆತನಿಗೆ ಹೇಳಿದರು. ಪುನಃ ಆತನು ತನ್ನ ಹೇಳಿಕೆಯನ್ನು ಪ್ರಾರಂಭಿಸಿದ ೧೫ ನಿಮಿಷಗಳ ನಂತರ, ಕಾಲು ನೋಯುತ್ತಿರುವುದೆಂದು ತಿಳಿಸಿದನು. ಆದ ಮೇಲೆ ಕುಳಿತುಕೊಂಡು ಓದ ಮಾತೆ ನ್ಯಾಯಾಧೀಶರ ...]

ಕಾರ್ಮಿಕರ ವಸತಿ ಗೃಹಕ್ಕಾಗಿ ೧೦ ಲಕ್ಷ ರೂ.

ಸ್ವಂ ಸು ಫೋ|] ಬೆಂಗಳೂರು ೯

ಬೆಂಗಳೂರು ನಗರದಲ್ಲಿ ಕಾರ್ಮಿಕರಿಗಾಗಿ ಮನೆಗಳನ್ನು ಕಟ್ಟಲು ಸರ್ಕಾರದವರು ೧೦ ಲಕ್ಷ ರೂ. ಮಂಜೂರು ಮಾಡಿರುತ್ತಾರೆ. ಒಟ್ಟು ೮೦೦ ಯೂನಿಟ್ಟುಗಳ ಮನೆಗಳನ್ನು ಕಟ್ಟಲು ಕಾರ್ಮಿಕರ ಮನೆಗಳ ಕಾರ್ಪೋರೇಷನ್ನಿಗೆ ಕಂಟ್ರಾಕ್ಟನ್ನು ಕೊಡಲಾಗಿದೆ.

ಅಖಿಲ ಭಾರತ ವಿದ್ಯಾ ಸಮ್ಮೇಳನ

ಮೈಸೂರಿನಲ್ಲಿ ಮುಂದಿನ ತಿಂಗಳು ೨೮ ೨೯ ಮತ್ತು ೩೦ನೇ ತಾ|| ಗಳಲ್ಲಿ ಅಖಿಲ ಭಾರತ ವಿದ್ಯಾ ಸಮ್ಮೇಳನವು ನಡೆಯುವುದು.

○ ನಾಗಮಂಗಲದ ತಾಲ್ಲೂಕು ... ಹಳ್ಳಿ ಬಳಿ ... ವೀರವೈಷ್ಣವಿ ನದಿಗೆ ಅಣೆ ಕಟ್ಟನ್ನು ನಿರ್ಮಿಸಲು ಸರ್ಕಾರದವರು ೧,೩೩,೭೦೦ ರೂ. ಮಂಜೂರು ಮಾಡಿರುತ್ತಾರೆ.

○ ಕೋಲಾರದಲ್ಲಿ ೩ ಕಿಲೋವಾಟ್ ವಿದ್ಯುಚ್ಛಕ್ತಿ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ೩,೬೩,೦೦೦ ರೂ ಮಂಜೂರಾಗಿದೆ.

○ ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ನಾಳೆ ಬೆಳಗ್ಗೆ ರಾಜಧಾನಿಗೆ ಆಗಮಿಸುವರು.

ಬಸವಾರಾಧ್ಯ ಸ್ವಾಮಿಗಳ ನಿಧನ

ಚಾಮರಾಜನಗರ ತಾಲ್ಲೂಕು ಹರವೇ ಹೋಬಳಿ ಮಲಿಯೂರು ಗ್ರಾಮದ ಗದ್ದುಗೆಯ ಶ್ರೀ ನಂದಿಕೇಶ್ವರ ಗವೀಮಠದ ಶ್ರೀ ಬಸವಾರಾಧ್ಯ ಸ್ವಾಮಿಗಳು ಇದೇ ೪ ನೇ ತಾ|| ರಾತ್ರಿ ತಮ್ಮ ೭೩ ವರ್ಷ ವಯಸ್ಸಿನಲ್ಲಿ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ವಿದ್ಯಾರ್ಥಿ ಪರಿಷತ್ತಿನ ಶಾಖೆ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಮೈಸೂರು ಸಂಸ್ಥಾನದ ಕಾರ್ಯದರ್ಶಿಗಳಾದ ಶ್ರೀ ಸೂರ್ಯನಾರಾಯಣ ರಾಯರು ರಾಜಧಾನಿಗೆ ಇತ್ತೀಚೆಗೆ ಭೇಟಿ ಇತ್ತಾಗ, ನಗರದಲ್ಲಿ ಒಂದು ಶಾಖೆಯನ್ನು ಸ್ಥಾಪಿಸಲಾಯಿತು. ಫಸ್ಟ್ ಗ್ರೇಡ್ ಕಾಲೇಜಿನ ಶ್ರೀ ಎಂ ಆನಂದರಾಯರನ್ನು ದರ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ. ಸಂಸ್ಥೆಗೆ ವಿದ್ಯಾರ್ಥಿಗಳೆಲ್ಲರೂ ಸಹ... ...ಕೋರಲಾಗಿದೆ.

ಪಟೇಲ್ ಮತ್ತು ಕೆ. ಸಿ. ರೆಡ್ಡಿ ಭೇಟಿ

ಸ್ವಂ ಸು.] ಪಟ್ಟಾಭಿನಗರ ೭

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರನ್ನು ನಮ್ಮ ವಿಶೇಷ ಪ್ರತಿನಿಧಿಗಳು ಸಂದರ್ಶಿಸಿ, ಸರ್ದಾರ್ ಪಟೇಲರನ್ನು ನಾಗಪುರದಲ್ಲಿ ಅವರು ಭೇಟಿ ಮಾಡಿದ್ದರ ಉದ್ದೇಶವನ್ನು ಪ್ರಸ್ತಾಪಿಸಲಾಗಿ ಶ್ರೀ ರೆಡ್ಡಿಯವರು ಸರ್ದಾರ್ ಪಟೇಲರಿಗೆ ಜನಪ್ರತಿನಿಧಿಯ ಶಾಸನ ಸಭೆ, ಸಂಸ್ಥಾನದ ರಾಜಕೀಯ ಪರಿಸ್ಥಿತಿ, ಕರ್ನಾಟಕ ಏಕೀಕರಣ ಪ್ರಶ್ನೆ, ಬೆಂಗಳೂರಿನಲ್ಲಿ ಶೀಘ್ರದಲ್ಲಿಯೇ ಸ್ಥಾಪಿಸಲಿರುವ ವೈಮಾನಿಕ ಶಿಕ್ಷಣ ಶಾಲೆ, ಟೆಲಿಪ್ರಿಂಟರ್ ಮತ್ತು ಆಹಾರ ಸರಬರಾಜು ಇವೇ ಮುಂತಾದ ಸೌಕರ್ಯಗಳ ಬಗ್ಗೆ ಮಾತುಕತೆ ನಡೆಸಿದುದಾಗಿ ತಿಳಿಸಿದರು.

ಖಾಸಗೀ ಹೈಸ್ಕೂಲುಗಳಿಗೆ ಹೆಚ್ಚಿನ ಗ್ರಾಂಟು

ಸ್ವಂ.ಸು.ಫೋ|] ಬೆಂಗಳೂರು ೯

ಸಂಸ್ಥಾನದ ಖಾಸಗೀ ಹೈಸ್ಕೂಲುಗಳಿಗೆ ಗ್ರಾಂಟನ್ನು ಸರ್ಕಾರದವರು ಮಂಜೂರು ಮಾಡುವಾಗ, ಸ್ಥಳೀಯ ಸಂಸ್ಥೆಗಳು ಕೊಡುವ ಸಹಾಯ ಹಣವನ್ನು ಪರಿಗಣಿಸ ಬೇಕಾಗಿಲ್ಲವೆಂದೂ ಸರ್ಕಾರದಿಂದ ಅಂಗೀಕೃತವಾದ ಹೈಸ್ಕೂಲುಗಳಿಗೆ ಈಗ ಕೊಡುತ್ತಿರುವಂತೆಯೇ ಒಟ್ಟು ಖರ್ಚಿನ ಮುಕ್ಕಾಲರಷ್ಟು ... ಸಂಗಾಮಿ ಹೈಸ್ಕೂಲುಗಳಿಗೂ ಈ ವರ್ಷದಿಂದ ಕೊಡಬೇಕೆಂದೂ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಭಾರತದ ನೂತನ ನೋಟುಗಳು

ಭಾರತದ ನೂತನ ನೋಟುಗಳಲ್ಲಿ ಇನ್ನು ಮುಂದೆ ಬ್ರಿಟಿಷ್ ದೊರೆಗಳ ತಲೆಯ ಬದಲು ಅಶೋಕ ಸ್ತಂಭವಿರುವುದೆಂದು ಹೇಳಲಾಗಿದೆ. ಪ್ರಾರಂಭದಲ್ಲಿ ಒಂದು ರೂ ನ ನೋಟಿನ ಮೇಲೆ ಜಾರ್ಜ್ ದೊರೆಗಳ ತಲೆಯು ವಾಟರ್ ಮಾರ್ಕ್ ಇರುವುದೆಂದೂ, ಅದನ್ನೂ ಈಗ ತೆಗೆದು ಹಾಕಲಾಗುವುದೆಂದೂ, ಹೇಳಲಾಗಿದೆ. ಈ ಹೊಸ ನೋಟುಗಳು ಮುಂದಿನ ವರ್ಷದಲ್ಲಿ ಜಾರಿಗೆ ಬರುವುವು.

ನಂಜನಗೂಡು ಚಿಕ್ಕ ಜಾತ್ರೆ

ಇದೇ ೧೮ ರಿಂದ ... ಬೆಳಿಗ್ಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕ ಜಾತ್ರೆಯು ನಡೆಯುವುದು. ಈ ಸಂಬಂಧದಲ್ಲಿ ೧೧ ನೇ ತಾ|| ಅಂಕುರಾರ್ಪಣವೂ, ೧೩ ನೇ ತಾ|| ಧ್ವಜಾರೋಹಣವೂ, ೧೫ ನೇ ತಾ|| ಶ್ರೀ ಕಂಠಮುಡಿ ಉತ್ಸವವೂ, ೨೦ ನೇ ತಾ|| ತೆಪ್ಪೋತ್ಸವವೂ ನಡೆಯುವುವು.

ಶ್ರೀ ಶ್ರೀಕಂಠೇಶ್ವರ ಸ್ವಾಮಿ ಉತ್ಸವ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವವು ಇದೇ ಕಾರ್ತಿಕ ಶುದ್ಧ ದಶಮಿ ಭಾನುವಾರ (೧೪-೧೧-೪೮) ಸಾಯಂಕಾಲ ... ಶ್ರೀಕಂಠಪುರಿ ... ಬಿಜಯ. ಮಾ... ... ...

ಕರ್ನಾಟಕ ಪ್ರಾಂತ್ಯದ ಬಗ್ಗೆ ಉಪ ಸಮಿತಿ

ಎ ಐ ಸಿ ಸಿ ಗೆ ನಿರ್ಣಯಕ್ಕೆ ಬೆಂಬಲ

[illegible]] ಪಟ್ಟಾಭಿನಗರ ೭

ಮೈಸೂರು ಶ್ರೀಮನ್ಮಹಾರಾಜರ [illegible] ಕರ್ನಾಟಕ ಪ್ರಾಂತ್ಯ ರಚನೆಯ ತತ್ವವನ್ನು ಒಪ್ಪಿ ಅದರ ಸಾಧ್ಯತೆಯ ಬಗ್ಗೆ [illegible] ಉಪ ಸಮಿತಿಯನ್ನು [illegible] ಕಾಂಗ್ರೆಸ್ ಕಾರ್ಯಕಾರಿ [illegible] ನಿರ್ಣಯವು ಎ. ಐ. ಸಿ. ಸಿ. ಸಭೆಯಲ್ಲಿ [illegible] ಚರ್ಚೆ [illegible] ಸರ್ವಾನುಮತದಿಂದ ಮಂಜೂರಾಯಿತು.

ಶ್ರೀ ಟಿ ಸುಬ್ರಹ್ಮಣ್ಯಂರವರ ನಿರ್ಣಯವನ್ನು ಮಂಡಿಸಿ ಭಾಷಾವಾರು ಪ್ರಾಂತ ರಚನೆಗೆ ಯಾರ ಭಿನ್ನಾಭಿಪ್ರಾಯವಿಲ್ಲವೆಂದೂ, ಅಖಿಲ ಭಾರತ ಕಾಂಗ್ರೆಸ್ಸು ಸಹ ಭಾಷಾವಾರು ಪ್ರಾಂತ ರಚನೆಗೆ ಒಪ್ಪಿದೆಯೆಂದೂ ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ದೊರಕುವುದರಲ್ಲಿ ಸಂಶಯವಿಲ್ಲವೆಂದೂ ಹೇಳಿದರು. ಕರ್ನಾಟಕ ಪ್ರಾಂತ ರಚನೆಯಿಂದ [illegible] ಸುಲಭವಾಗುವುದೆಂದು ತಿಳಿಸಿದರು. ಮೈಸೂರಿನವರು ಮೊದಲು ಕರ್ನಾಟಕದ [illegible] ಪ್ರಾರಂಭಿಸಿದವರೆಂದೂ, ಸಾಹಿತ್ಯ ಪರಿಷತ್ತು [illegible] ಹೊರನಾಡಿನ ಕರ್ನಾಟಕದವರು ನಮ್ಮ ಮಹಾರಾಜರನ್ನು [illegible] ಇಟ್ಟುಕೊಳ್ಳಲು ಒಪ್ಪಿದ್ದಾರೆಂದೂ ಆದರೆ ಕರ್ನಾಟಕದ ಜನರಿಂದ ಈ ಬಗ್ಗೆ [illegible] ಇಂತಹ ಕಾಲದಲ್ಲಿ ಮೈಸೂರು ಸುಮ್ಮನೆ ಕೂತರೆ ನ್ಯಾಯವಲ್ಲವೆಂದೂ ಹೇಳಿದರು.

ನಾವು ಉದಾಸೀನ ಮಾಡುವುದರಿಂದ [illegible] ಆಂಧ್ರ [illegible] ಬೇರೆಯಾಗುವುದರಿಂದ [illegible] ಕನ್ನಡ ನಾಡಿನ [illegible] ಈಗ [illegible] ಕರ್ನಾಟಕ ಪ್ರಾಂತ ರಚನೆ ಆಗ [illegible] ಕರ್ನಾಟಕ ಪ್ರಾಂತ ರಚನೆ ಆಗಬೇಕು ಎಂದು ಹೇಳಿದರು.

ಶ್ರೀ ಎ ಜಿ ಬಂಡೀಗೌಡರು ನಿರ್ಣಯವನ್ನು ಸಮರ್ಥಿಸಿದರು. ಶ್ರೀಗಳಾದ ಕೆ. ಪುಟ್ಟಸ್ವಾಮಿ ಮತ್ತು ಎಂ ಎಸ್ ಬೋರಯ್ಯನವರು ಕ್ರಿಯಾಲೋಪವನ್ನು ಎತ್ತಿ, ಮೈಸೂರು ಕಾಂಗ್ರೆಸ್ಸಿನ ಮೂಲ ಉದ್ದೇಶ ಬೇರೆಯಾಗಿರುವುದರಿಂದ ಈ ನಿರ್ಣಯ ಅಕ್ರಮವೆಂದು ತಿಳಿಸಿದರು. ಶ್ರೀ ಕೆ ಚೆಂಗಲರಾಯ ರೆಡ್ಡಿಯವರು ಉತ್ತರ ಕೊಟ್ಟು ಇದು ಕಾಂಗ್ರೆಸ್ ಧ್ಯೇಯದಲ್ಲಿ ಇಲ್ಲದಿದ್ದರೂ ಸಂಕುಚಿತ ದೃಷ್ಟಿ ಬಿಡಬೇಕೆಂದರು. ಅನೇಕವೇಳೆ ಅಖಿಲ ಭಾರತಕ್ಕೆ ಮೈಸೂರು ಬೆಂಬಲ ಕೊಟ್ಟು ಕೆಲಸ ಮಾಡಿದೆ. ಹೊರಗಿನ ಪರಿಸ್ಥಿತಿಯನ್ನು ಗಮನಿಸಿ ಎಲ್ಲರೊಡನೆಯೂ ಸೌಹಾರ್ದದಿಂದ ವಿಚಾರ ನಡೆಸಿ ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಡಬೇಕೆಂದು ಹೇಳಿದರು.

ಅಧ್ಯಕ್ಷರು ಮಾತನಾಡಿ, ಈಚೆಗೆ ಕಾಂಗ್ರೆಸ್ಸು ಜೈಪುರ್ ನಗರದಲ್ಲಿ ಕರ್ನಾಟಕ ಪ್ರಾಂತದ ಬಗ್ಗೆ ನಿರ್ಣಯ ಮಾಡಿರುವುದರಿಂದ ಚರ್ಚೆ ನಡೆಯಬಹುದೆಂದು ತಿಳಿಸಿದರು.

ಸುಮಾರು ೧೫ ಜನರು ತಿದ್ದುಪಡಿಗಳನ್ನು ಸೂಚಿಸಿದರು.

ಶ್ರೀ ಕೆ ಸಿ ರೆಡ್ಡಿಯವರು ಮಾತನಾಡಿ, ಆರ್ಥಿಕ ದೃಷ್ಟಿಯಿಂದ ಭಾಷಾವಾರು ಪ್ರಾಂತವಾಗುವುದು ಒಳ್ಳೆಯದು. ಭಾರತದಾದ್ಯಂತ ಕಾಂಗ್ರೆಸ್ ಕಮಿಟಿಗಳು ಇದನ್ನು ಬಹಳ ತೀವ್ರವಾಗಿ ಪರಿಶೀಲಿಸುತ್ತಿವೆ. ಭಾಷಾವಾರು ಪ್ರಾಂತ ರಚನೆಗೆ ಇರುವ ಸಮಸ್ಯೆಗಳನ್ನು [illegible] ಪರಿಶೀಲಿಸುವುದರಲ್ಲಿ ಸಂದೇಹವಿಲ್ಲ ಎಂದು ತಿಳಿಸಿದರು.

ಕರ್ನಾಟಕ ಪ್ರಾಂತ ರಚನೆಯಾಗುವುದರಿಂದ [illegible] ಆರ್ಥಿಕ ದೃಷ್ಟಿಯಿಂದ ಅನೇಕ ಸೌಲಭ್ಯಗಳು ಒದಗುವುವು. ಅಲ್ಪಸಂಖ್ಯಾತರಿಗೆ ರಕ್ಷಣೆ ದೊರೆಯುವುದು, ಹಿಂದುಸ್ಥಾನದ ಹಿತಕ್ಕೆ ಧಕ್ಕೆ ತಗಲುವುದಿಲ್ಲ— ಎಂದು ಶ್ರೀ ಎಸ್ ನಿಜಲಿಂಗಪ್ಪನವರು ಹೇಳಿದರು.

ಶ್ರೀ ಟಿ [illegible]ರವರು ಮಾತನಾಡಿ ಈ ವಿಷಯವನ್ನು ಕೇಂದ್ರ ಸರ್ಕಾರದೊಡನೆ ಪರಿಶೀಲಿಸಿ ನಿರ್ಧಾರ ಮಾಡಲಾಗುವುದೆಂದು ತಿಳಿಸಿದರು.

ಮೂಲ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಮೈಸೂರಿಗೆ ಪ್ರತ್ಯೇಕ ಕಾಂಗ್ರೆಸ್ ಪ್ರಾಂತ್ಯ

ಮೈಸೂರು ಸಂಸ್ಥಾನವು ಪ್ರತ್ಯೇಕ ಕಾಂಗ್ರೆಸ್ ಪ್ರಾಂತವಾಗಬೇಕೆಂಬುದು ವ್ಯಾವಹಾರಿಕ ಕಾರಣಗಳಿಗೋಸ್ಕರವೇ ಹೊರತು ಪ್ರತ್ಯೇಕತೆಯ ಮನೋಭಾವದಿಂದಲ್ಲ. ಆದಳಿತ ವಿಷಯದಲ್ಲಿ ಮೈಸೂರು ಪ್ರತ್ಯೇಕವಾಗಿರುವವರೆಗೆ ಸಂಸ್ಥಾನದ ಪಾರ್ಲಿಮೆಂಟರಿ ಕಾರ್ಯಕಲಾಪಗಳ ಮೇಲೆ ಕರ್ನಾಟಕ ಕಾಂಗ್ರೆಸ್ ಸಮಿತಿಯು ಹತೋಟಿ ಇರಕೂಡದು -ಎಂಬ ನಿರ್ಣಯವನ್ನು ಶ್ರೀ ಕೆ ಎಸ್ ಕುಮಾರನ್‌ರವರು ಮಂಡಿಸಿದರು. ಶ್ರೀ ಎಂ ಎಲ್ ಸಂಜೀವಾಚಾರ್ ಅರಸುಪವರು ಅದನ್ನು ಸಮರ್ಥಿಸಿದರು.

ಮೈಸೂರು ಕಾಂಗ್ರೆಸ್ಸು ಕೆ ಪಿ ಸಿ ಸಿ ಯಲ್ಲಿ ಐಕ್ಯವಾಗಬೇಕೆಂದು, ಶ್ರೀ ವಾಸುದೇವರಾಯರು ತಂದ ತಿದ್ದುಪಡಿಯು ಬಿದ್ದು ಹೋಯಿತು.

ಶ್ರೀ ಟಿ ಸುಬ್ರಹ್ಮಣ್ಯಂರವರು ಮಾತನಾಡಿ, ಈ ಬಗ್ಗೆ ಶಂಕರರಾವ್ ದೇವ್‌ರಿಂದ ಬಂದ ಪತ್ರವನ್ನು ಓದಿದರು. ಶ್ರೀಗಳಾದ ಎಂ ಶಂಕರಯ್ಯ, ಹೆಚ್ ಎಸ್ ಸೀತಾರಾಂ ಬಿ ಪಿ ಹಾಲಪ್ಪನವರು ನಿರ್ಣಯವನ್ನು ವಿರೋಧಿಸಿದರು.

ಮೂಲ ನಿರ್ಣಯವನ್ನು ಓಟಿಗೆ ಹಾಕಿದಾಗ ಸುಮಾರು ಮೂವತ್ತು ಸದಸ್ಯರು ವಿರೋಧಿಸಿದರು. ನಿರ್ಣಯವು ಮಂಜೂರಾಯಿತು.

ಅಧ್ಯಕ್ಷರ ಪರಿಸಮಾಪ್ತಿ ಭಾಷಣ

ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಪರಿಸಮಾಪ್ತಿ ಭಾಷಣ ಮಾಡಿ, ಹಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಈ ಸೂರಿನಲ್ಲಿ ನೊಂದವರಿಗೆ ಪರಿಹಾರ ಕೊಡುವ ವಿಷಯವನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳ ವರದಿ ಬಂದ ನಂತರ ಪರಿಶೀಲಿಸಲಾಗುವುದೆಂದೂ, ಅನ್ನಕಟ್ಟಿ [illegible] ಚಾರವು ಸರ್ಕಾರದ ಗಮನದಲ್ಲಿದೆಯೆಂದೂ ತಿಳಿಸಿದರು. ಮೈಸೂರು ಕಾಂಗ್ರೆಸ್ಸು [illegible] ತೀಯ ಸ್ಥಾನ ಹೊಂದಿದಾಗ [illegible] ಕ್ಕೆ ಕಾನೂನು ಬದಲಾವಣೆ ಆಗಬೇಕಾಗುವುದೆಂದೂ ಹೇಳಿದರು.

ಗಾಂಧೀಜೀ ಸ್ಮಾರಕ ನಿಧಿಗೆ ಉದಾರ ಸಹಾಯ ಮಾಡಬೇಕೆಂದು ಕೋರಿದರು. ಕಾಂಗ್ರೆಸ್ಸಿನ ಚುನಾವಣೆಯು ಶಾಂತವಾಗಿ ನಿಂತಿದೆಯೆಂದೂ, ಇದಕ್ಕೆ ಏಕೀ[illegible] ಐ ಪ್ರಶ್ನೆ ಮತ್ತು ಮೈಸೂರು ಕಾಂಗ್ರೆಸ್ ಪ್ರಾಂತೀಯ ಸ್ಥಾನಗಳಿಸುವ ವಿಷಯ[illegible] ಕಾರಣವೆಂದೂ ತಿಳಿಸಿದರು.

ರಾಜಕಮಲ್
ಮೈಸೂರು
6—11—48 ರಿಂದ
ಶಾಂತಾರಾಂರವರ
ಡಾ॥ಕೋಟ್ನಿಸ್-ಕಿ-ಅಮರ್ ಕಹಾನಿ
—:ಮುಖ್ಯಪಾತ್ರ:—
● ಶಾಂತಾರಾಂ.
● ಜಯಶ್ರೀ.

ಮನೆ ಕ್ರಯಕ್ಕಿದೆ
ನಲ್ಲಿ, ದೀಪ, ಫ್ಲಷ್ ಅನುಕೂಲವಿರುವ ಮಹಡಿ ಮನೆ. ಉತ್ತಮ ಸ್ಥಳದಲ್ಲಿದೆ. ಬಾಕಿ ವಿಷಯಗಳಿಗೆ ಮೊಖ್ತಾ ತಿಳಿಯಬಹುದು.
ಮಿ॥. ಎಲ್ ಕೇಶವಯ್ಯಂಗಾರ್,
404 ಕೃಷ್ಣವಿಲಾಸ ಅಗ್ರಹಾರ, ಮೈಸೂರು

ಪ್ರತಿದಿನ ಮೂರು ಆಟಗಳು
10-11-48 ನೇ ಬುಧವಾರದಿಂದ
[illegible] ಪ್ರೊಡಕ್ಷನ್ಸ್ ರವರ ಅತ್ಯುತ್ತಮ ಪೌರಾಣಿಕ ಹಿಂದೀ ಚಿತ್ರ
ಸತೀ ವಿಜಯ
[illegible]
[illegible]
ಒಲಂಪಿಯಾ ಟಾಕೀಸ್

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಜಾರ್ಜರುಗಳ ಸೀರೆಗಳು ೬—೭—೯ ಗಜಗಳಲ್ಲಿ ಗ್ಯಾರಂಟಿಯಾಗಿ ರಿಯಾಯಿತಿ ಬೆಲೆಗೆ ದೊರೆಯುತ್ತವೆ.
ದಯವಿಟ್ಟು ಇಂದೇ ಭೇಟಿ ಕೊಡಿ.
ಗುರುದೇವ ಹಾಲ್,
ಬೆಂಗಳೂರು ಜವಳಿ ಅಂಗಡಿ,
ಶಿವರಾಂಪೇಟೆ, ಮೈಸೂರು.

ಹೊಸ ಜವಳಿ ಅಂಗಡಿ ಕಮ್ಮಿಯಾದ ಬೆಲೆ!
ಮಧುರೆ ಸೇಲಂ, ಕೊಯಮತ್ತೂರಿನ
ನಾನಾ ನಮೂನೆಯ
ನೂಲಿನ ಸೀರೆಗಳು,
[illegible] ಸೀರೆಗಳು
ವಿಜಯಲಕ್ಷ್ಮೀ ವಿಲಾಸ್
ಇರ್ವಿನ್ ರೋಡ್, ಶಿವರಾಂಪೇಟೆ
ಮೈಸೂರು

ಶ್ರೀ ಜಗದಂಬಾ ಶಿಶುವಿಹಾ[ರ]
ದಿವಾನ್ಸ್ ರೋಡ್, ಮೈಸೂರು
ಆಧುನಿಕ ಶಿಶು ವಿದ್ಯಾಭ್ಯಾಸ, ಮ[illegible] ಶಿಶು ಮನಶ್ಶಾಸ್ತ್ರ ಪದ್ಧತಿಗಳ ಮತ್ತು [illegible] ಳಿಗೆ ಅನುಗುಣವಾದ ಉಪಕರಣಗಳ [illegible] ಹಾಯದಿಂದ ಹತ್ತಾರು ವರ್ಷಗಳಿಂದ [illegible] ಶಿಶು ಸೇವೆಯನ್ನು ಮಾಡುತ್ತಾ ನಾ[illegible] ಶಿಶುವಿಹಾರವೆನಿಸಿಕೊಂಡ ಶ್ರೀ ಜಗದಂ[ಬಾ] ಶಿಶುವಿಹಾರವು ನವರಾತ್ರಿ ರಜವನ್ನು ಮು[illegible] ಗಿಸಿಕೊಂಡು ಈಗ ನವಚೈತನ್ಯದಿಂದ [illegible] ಸ ಮಾಡಲಾರಂಭಿಸಿದೆ
ಶಿಶು ವಿದ್ಯಾಭ್ಯಾಸದಲ್ಲಿ ಆಸಕ್ತರಾ[illegible] ಮಾತಾ ಪಿತೃಗಳು ಕಾಲ ವಿಳಂಬಮಾಡ[illegible] ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ [illegible] ಯೋಜನವನ್ನು ಪಡೆಯುವುದರ ಮೂ[illegible] ಶಾಲೆಯ ಕಾರ್ಯಕಲಾಪಗಳಿಗೆ ಉತ್ತೇ[illegible] ಜನ ನೀಡಬೇಕಾಗಿ ವಿನಂತಿ. ವಿಶ್ವ[illegible] ಷಯಗಳಿಗೆ ಮೊಖ್ತಾ ವಿಚಾ[illegible] ಬಹುದು
ಡಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

ಎಸ್. ಎನ್. ಪಂಡಿತ್
ಅಂಡ್ ಸನ್ಸ್ ರವರ
ಯೂನಿವರ್ಸಲ್ ಪೇಯಿನ್ ಬಾಮ[್]
ನೋವು, ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮಬಾಣ
ಕ್ರಯ ೦-[illegible]
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ:—)
—ದೇಹಿಗೆ ತಂಪುಕೊಡುವ ಉತ್ತಮ ಅಭ್ಯಂಜನ ತೈಲಗಳು.
ಪಂಚಾಮೃತ— ಮಲೇರಿಯಾ [illegible] ಗಳಿಗೆ ಸಿದ್ಧ ಸಂಜೀವನ.
ಮಹಾಕೇಶಕೀ ತೈಲ —ತಲೆ [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮ
ಫ್ರೀ ಟಾನಿಕ್ ಕ್ರಯ ೨-[illegible]
ಮೈಸೂರು ಆಯುರ್ವೇದಿಕ್ ಫಾರ್ಮ[ಸಿ]
90 ಬ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂ[ರು]

Edited printed and published by A.R. Nagarajan at the Sadhvi Press D Subbaiah Road Mysore.

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಬುಧವಾರ ೧೦-೧೧-೪೮ [ಸಂಚಿಕೆ ೧೨೧

ಮೈ॥ ವಿಶ್ವವಿದ್ಯಾಲಯಕ್ಕೆ ಹೊರಗಿನ ಸ್ಥಾನಪತಿ ?

ರಚನಾತ್ಮಕ ಕಾರ್ಯಕ್ರಮಕ್ಕೆ ಹೆಚ್ಚಿನ ಗಮನ

ಎ. ಎಂ. ಸಿ. ಸಿ. ಯಲ್ಲಿ ಹಲವಾರು ನಿರ್ಣಯಗಳು

ವಿ. ಸಿ.] ಚಿಟ್ಟ್ಯಾಳನಗರ ೭

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಇಂದು ಹಲವಾರು ನಿರ್ಣಯಗಳ ಮೇಲೆ ಚರ್ಚೆ ನಡೆಯಿತು.

ಸರ್ವಮಾನ್ಯ ಇನಾಂ, ಜಾಯಿಂಟು ಮತ್ತು ಜೋಡಿ ಗ್ರಾಮಗಳ ಎಲ್ಲಾ ಸಾಗುವಳಿ ಜಮೀನುಗಳನ್ನೂ ಸರ್ಕಾರದವರು ವಶಪಡಿಸಿಕೊಂಡು ಅವುಗಳನ್ನು ಸ್ವಂತ ಸಾಗುವಳಿದಾರರಾದ ರೈತರಿಗೆ ರೈತವಾರೀ ಪದ್ಧತಿ ಮೇಲೆ ಸಾಗುವಳಿಗೆ ಕೊಡಬೇಕೆಂದು ಶ್ರೀ ವಿ. ನರಸಿಂಹರೆಡ್ಡಿಯವರು ನಿರ್ಣಯವನ್ನು ಮಂಡಿಸಿದರು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತು, ಜಮೀನು ಕಂದಾಯ ಪದ್ಧತಿ ನೀತಿ ಬಗ್ಗೆ ನೇಮಕವಾಗಿರುವ ಸಮಿತಿಯು ಇನಾಂ ಗ್ರಾಮ ಮತ್ತು ಇತರ ಪದ್ಧತಿಗಳನ್ನು ಪರಾಮರ್ಶಿಸಿ ಪ್ರಶ್ನೆಯನ್ನು ಪರಿಶೀಲಿಸುವುದೆಂದೂ ಆ ವರದಿ ಬಂದನಂತರ ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ತಿಳಿಸಿದರು. ಆದರ ಮೇಲೆ ನಿರ್ಣಯವನ್ನು ಒತ್ತಾಯ ಪಡಿಸಲಿಲ್ಲ.

ಇನ್ನು ಮುಂದೆ ಮೈಸೂರು ಕಾಂಗ್ರೆಸ್ಸು ರಚನಾತ್ಮಕ ಕಾರ್ಯಕ್ರಮವನ್ನು ಮುಖ್ಯ ಗುರಿಯೆಂದು ಘೋಷಿಸಬೇಕಲ್ಲದೆ, ಮಂತ್ರಿ ಮಂಡಲ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿರುವ ಕಾಂಗ್ರೆಸ್ಸಿಗರು ಆಯಾ ಸಂಸ್ಥೆಗಳ ಕೃತ್ಯ ಅವಧಿ ಮುಗಿದ ಕೂಡಲೇ ಪಾರ್ಲಿಮೆಂಟರಿ ಕಾರ್ಯಕ್ರಮದಿಂದ ರಚನಾತ್ಮಕ ಕಾರ್ಯಕ್ಕೆ ಇಳಿಯಬೇಕು.—ಎಂದು ಶ್ರೀ ದೇವರ ಕೊಂಡಪ್ಪನವರು ತಂದ ನಿರ್ಣಯಕ್ಕೆ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತು, ಪಾರ್ಲಿಮೆಂಟರಿ ಕಾರ್ಯಕ್ರಮದ ಜತೆಗೆ ರಚನಾತ್ಮಕ ಕಾರ್ಯಕ್ರಮಗಳನ್ನು ಮುಂದುವರಿಸುವುದಾಗಿ ಭರವಸೆ ಇತ್ತರು. ಆದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಕೆ ಟ್ರೇಲು ಉದ್ಧತಿಯ ಆ ದೇಶದ ಅರ್ಥ ಅಭಿವೃದ್ಧಿಗೆ ಗಂಡಾಂತರ ಪ್ರಾಯವಾಗಿರುವುದರಿಂದ ಅದನ್ನು ಹಾರಿಗೆ ತರಕೂಡದು ಶ್ರೀ ಕೆ. ಟಿ ಬಂಡಣ್ಣನವರು ನಿರ್ಣಯವನ್ನು ಮಂಡಿಸಿದರು.

ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತು, ಸಂಸ್ಥಾನದ ಮತ್ತು ಇತರ ಕಡೆಗಳಲ್ಲಿ ಸರ್ಕಾರದ ಮುಸ್ತಿತಿಯಿಂದ ಚಕೋಟ ರಿಗೆ ತಂಬಾಕಾಗಿದೆಯೆಂದೂ, ಇದರಿಂದ ಸಂಸ್ಥಾನದ ಪ್ರಜಾ ಸಂಖ್ಯೆಯಲ್ಲಿ ಶೇಕಡ ೧೦ ರಷ್ಟಿರುವ ರೈತರಿಗೆ ಯಾವ ತೊಂದರೆ ಉಂಟಾಗುವುದಿಲ್ಲವೆಂದೂ, ಹಿಂದೆ ಅನೇಕ ಲೋಪದೋಷಗಳನ್ನು ತಿದ್ದಲಾಗಿದೆಯೆಂದೂ ತಿಳಿಸಿದರು. ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ವಂದೇ ಮಾತರಂ ಹಾಡನ್ನು ರಾಷ್ಟ್ರಗೀತೆಯನ್ನಾಗಿ ಸ್ವೀಕರಿಸಿ ಎಲ್ಲಾ ಕಡೆಗಳಲ್ಲಿ ಅದನ್ನು ಹಾಡುವಂತೆ ಮಾಡಬೇಕೆಂದು ಸರ್ಕಾರವನ್ನು ಕೋರುವ ಶ್ರೀ ... ಯವರ ನಿರ್ಣಯವು ಅಂಗೀಕಾರವಾಯಿತು.

ಗಿರಣಿ ಡೈರೆಕ್ಟರ ಮನೆಮುಂದೆ ಕೆಲಸಗಾರರ ಸತ್ಯಾಗ್ರಹವೇ.?

ಮೈಸೂರು ೧೦

ರಾಜಧಾನಿಯ ಕೊಗ್ರ ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆ ಮಾಲೀಕರುಗಳು ಕೆಲಸಗಾರರಿಗೆ ನ್ಯಾಯವಾಗಿ ಸಲ್ಲಬೇಕಾದ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಕಳೆದ ಒಂದು ವರ್ಷದಿಂದಲೂ ಹೇಳುತ್ತಿದ್ದು ಕೊನೆಯಲ್ಲಿ ಕೆಲಸಗಾರರುಗಳನ್ನೇ ತೆಗೆದುಹಾಕಿ, ಆಗ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಗಿರಣಿಯವರು ನಿರಾಕರಿಸುವುದೆಂದು ಹೇಳುತ್ತಿರುವಾಗ ಕೆಲಸಗಾರರು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾದುದರಿಂದ ಕಾರ್ಖಾನೆಯ ಮುಂದೆಯೂ, ಮತ್ತು ಅದರ ಡೈರೆಕ್ಟರಾದ ಶ್ರೀ ಎಂ. ಎಸ್. ವಿ. ... ರವರ ಮನೆ ಮುಂದೆಯೂ ಸತ್ಯಾಗ್ರಹ ಹೂಡಬೇಕೆಂದು ಅವರುಗಳು ನಿರ್ಧರಿಸಿದ್ದಾರೆಂದ, ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಹರಿಕಥೆ

ರಾಜಧಾನಿಯ ಕೃಷ್ಣಮೂರ್ತಿ ಪುರದಲ್ಲಿರುವ ರಾಘವೇಂದ್ರ ಗುರು ಬೃಂದಾವನಾಶ್ರಮದಲ್ಲಿ ಇದೇ ೧೧ ನೇ ತಾರೀಖು ಗುರುವಾರ ರಾತ್ರಿ ೮ ಗಂಟೆಗೆ ಹರಿಕಥಾ ವಿದ್ವಾನ್ ಶ್ರೀ ಸೋಸಲೆ ಕೃಷ್ಣದಾಸರಿಂದ ಪ್ರಹ್ಲಾದ ಚರಿತ್ರೆ ಎಂಬ ಹರಿಕಥೆಯು ನಡೆಯುವುದು.

ನಾರ್‌ಕಿಂಗ್ ಬಳಿ ಕಮ್ಯೂನಿಸ್ಟರ ಜಯ

ಚೀಣದಲ್ಲಿ ನಾರ್‌ಕಿಂಗ್ ಬಳಿ ಪೂರ್ವ ನಗರದ ಬಳಿ ಸರ್ಕಾರಿ ಸೈನ್ಯಗಳನ್ನು ಕಮ್ಯೂನಿಸ್ಟರು ಭೇದಿಸಿಕೊಂಡು ಆ ನಗರವನ್ನು ತಮ್ಮ ವಶ ಪಡಿಸಿಕೊಂಡಿರುವರೆಂದು ವರದಿಯಾಗಿದೆ.

ಮಹಿಳಾ ಶಾಖೆ ಮತ್ತು ಶಿಶುವಿಹಾರ

ಕೃಷ್ಣರಾಜನಗರ ೭

ಅಖಿಲ ಮೈಸೂರು ದರಿದ್ರ ನಾರಾಯಣ ಸೇವಾ ಮಂಡಲಿಯ ಆಶ್ರಯದಲ್ಲಿ ಇಲ್ಲಿ ಒಂದು ಮಹಿಳಾ ಶಾಖೆಯನ್ನೂ ಮತ್ತು ಶಿಶುವಿಹಾರವನ್ನೂ ಕಳೆದ ಒನೇ ತಾ॥ ಸ್ಥಾಪಿಸಲಾಯಿತು. ಶ್ರೀಮತಿ ಜಯಲಕ್ಷ್ಮಮ್ಮನವರು ಸಭಾ ಅಧ್ಯಕ್ಷತೆ ವಹಿಸಿದ್ದರು. ಮಹಿಳೆಯರು ಸಂಸ್ಥೆಗೆ ಉದಾರವಾಗಿ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಮೈಸೂರಿನವರಿಗೆ ಭಾರತ ಸರ್ಕಾರದ ಹುದ್ದೆ

ಸ್ವಂ. ಸು. ಫೋ.] ಬೆಂಗಳೂರು ೧೦

"ಸರ್ಕಾರದ ಭೂಗರ್ಭ ಇಲಾಖೆಯ ಡೈರೆಕ್ಟರಾಗಿದ್ದು ನಿವೃತ್ತರಾಗುವ ಮುನ್ನ ರಜದ ಮೇಲಿರುವ ಶ್ರೀ ಬಿ. ರಾಮರಾಯರನ್ನು ಭಾರತ ಸರ್ಕಾರದ ಭೂಗರ್ಭ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಜನರಲ್ಲಾಗಿ ನೇಮಿಸಲಾಗಿದೆ.

ಎಲ್. ಎಂ. ಪಿ. ಶಿಕ್ಷಣ ರದ್ದು

ಬೆಂಗಳೂರಿನ ಮೆಡಿಕಲ್ ಸ್ಕೂಲಿನಲ್ಲಿ ಕೊಡಲಾಗುತ್ತಿದ್ದ ಎಲ್. ಎಂ. ಪಿ. ಶಿಕ್ಷಣ ಕ್ರಮವನ್ನು ರದ್ದುಗೊಳಿಸಿ ಅದಕ್ಕೆ ಪ್ರತಿಯಾಗಿ ಅಲ್ಲಿಯೂ ಎಂ. ಬಿ. ಬಿ. ಎಸ್. ಶಿಕ್ಷಣವನ್ನು ಮುಂದಿನ ವರ್ಷದಿಂದ ಕೊಡಲು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ವರದಿಯಾಗಿದೆ.

ಇನ್ನೊಂದು ವಾರದಲ್ಲಿ ಮೈಸೂರು ರಾಜ್ಯಾಂಗವು ಸಿದ್ಧ

ಮೈಸೂರು ರಾಜ್ಯಾಂಗದ ಕರಡು ಪ್ರತಿಯು ಇನ್ನೊಂದು ವಾರದಲ್ಲಿ ಸಿದ್ಧವಾಗುವುದೆಂದೂ, ಇದೇ ತಿಂಗಳಿನ ಕೊನೆಯ ಭಾಗದಲ್ಲಿ ರಾಜ್ಯಾಂಗ ಸಭೆಯು ಸೇರಿ, ಅದನ್ನು ಪರಿಶೀಲಿಸುವುದೆಂದೂ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ.

ಪ್ರತಿ ಜಿಲ್ಲೆಯಲ್ಲೂ ಮಹಿಳಾ ಸಹಕಾರ ಸಂಘ

ಮಹಿಳೆಯರಿಗಾಗಿಯೇ ಒಂಭತ್ತು ಜಿಲ್ಲೆಗಳಲ್ಲೂ ಒಂದೊಂದು ಸಹಕಾರ ಸಂಘವನ್ನು ಕೂಡಲೇ ಸ್ಥಾಪಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಇದಕ್ಕಾಗಿ ಸರ್ಕಾರದವರು ೫ ಸಾವಿರ ರೂ. ಗ್ರಾಂಟನ್ನು ಮಂಜೂರು ಮಾಡಿದ್ದಾರೆ. ಈ ಪೈಕಿ ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಿಗೆ ಕಲಾ ೭೫೦ ರೂ. ಗಳನ್ನೂ ಮತ್ತು ಇತರ ಜಿಲ್ಲೆಗಳಿಗೆ ತಲಾ ೫೦೦ ರೂ. ಗಳನ್ನೂ ಕೊಡಲಾಗಿದೆ.

ಕಮ್ಯೂನಿಸ್ಟರ ಬಿಡುಗಡೆ

ಬಂಧನದಲ್ಲಿದ್ದ ಕಮ್ಯೂನಿಸ್ಟರಾದ ಶ್ರೀಗಳು ಸಿ. ಬಿ. ರಾಚ ರಾವ್, ಕೆ. ಜಿ. ವೆಂಕಟ್ ಮತ್ತು ಎಸ್. ಕೃಷ್ಣಪ್ಪ ರವರುಗಳನ್ನು ನಿನ್ನೆ ದಿನ ಬಿಡುಗಡೆ ಮಾಡಲಾಯಿತು.

"ಪೆನ್ನಾರ್, ಕಾವೇರಿ, ಕೃಷ್ಣ, ತುಂಗಭದ್ರಾ, ಗೋದಾವರಿ ನದಿಗಳ ನೀರನ್ನು ವ್ಯವಸಾಯಕ್ಕಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಮದರಾಸ್ ಮತ್ತು ಮೈಸೂರು ... ಪ್ರಸಿದ್ಧಿ ... ವತ್ತ ...

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗಿನಿಂದ ವೈಸ್ ಛಾನ್ಸಲರು

ಮೈಸೂರು ೧೦

ಭಾರತೀಯ ವಿದ್ಯಾ ಪ್ರವೀಣರೊಬ್ಬರನ್ನು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾಗಿ ನೇಮಿಸಲು ಸರ್ಕಾರದವರು ನಿರ್ಧರಿಸಿರುವುದಾಗಿ ಅರೆ ಅಧಿಕಾರಿಗಳಿಂದ ತಿಳಿದುಬಂದಿದೆ.

ಭೋಗ್ಯ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ

ಪರದೇಶಗಳಿಂದ ಆಮದಾಗುವ ಶೋಕಿ ವಸ್ತುಗಳು, ಹೊಗೆಸೊಪ್ಪು, ಸಿಗರೇಟುಗಳು, ಚಿನ್ನದ ಮತ್ತು ಬೆಳ್ಳಿಯ ಕುಶಲ ವಸ್ತುಗಳು, ಇವೇ ಮುಂತಾದ ಪದಾರ್ಥಗಳ ಮೇಲಿರುವ ತೆರಿಗೆಯನ್ನು ಶೇಕಡ ೭೫ ರಷ್ಟು ಹೆಚ್ಚಿಸಲಾಗಿದೆಯೆಂದೂ, ರೇಷ್ಮೆ ಮಿಶ್ರಿತ ಬಟ್ಟೆಗಳ ಮೇಲೆ ಶೇಕಡ ೫೦ ರಷ್ಟು ತೆರಿಗೆ ವಿಧಿಸಲಾಗಿದೆಯೆಂದೂ ಭಾರತ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಖಾಸಿಂ ರಜ್ವಿಯ ಮೇಲೆ ಕೊಲೆ ಆಪಾದನೆ

ಹೈದರಾಬಾದಿನ ಇಮ್ರೋಜ್ ಎಂಬ ದಿನಪತ್ರಿಕೆಯ ಸಂಪಾದಕರಾದ ಶೋಯೆಬುಲ್ಲಾ ಖಾನರವರ ಕೊಲೆಗೆ ಕಾರಣಕರ್ತನೆಂದು ರಜಾಕಾರ ನಾಯಕನಾದ ಖಾಸಿಂ ರಜ್ವಿಯ ಮೇಲೆ ಮೊಕದ್ದಮೆ ಹೂಡಲು ಇಲ್ಲಿನ ಮಿಲಿಟರಿ ಸರ್ಕಾರವು ನಿರ್ಧರಿಸಿದೆಯೆಂದು ತಿಳಿದುಬಂದಿದೆ.

ಇನ್ನೂ ೧೫ ವರ್ಷ ಇಂಗ್ಲೀಷ್ ಭಾಷೆಗೆ ಅವಕಾಶ

ಭಾರತ ರಾಜ್ಯಾಂಗ ಸಭೆಯ ಮೈಸೂರು ಕರ್ನಾಟಕ ಸಂಸ್ಥಾನಗಳು ಮತ್ತು ಇತರ ಪ್ರಾಂತ್ಯಗಳ ಪ್ರತಿನಿಧಿಗಳ ಸಭೆಯು ದೆಹಲಿಯಲ್ಲಿ ಮೊನ್ನೆ ಸೇರಿ ಕೇಂದ್ರ ಮತ್ತು ಅಂತರ ಪ್ರಾಂತೀಯ ವ್ಯವಹಾರದ ಭಾಷೆಯು ಹಿಂದೀ ಆಗಿರಬೇಕೆಂದೂ, ಆದರೆ ಇನ್ನೂ ೧೫ ವರ್ಷಗಳು ಹಿಂದೀಯ ಜೊತೆಗೆ ಇಂಗ್ಲೀಷು ಅಧಿಕಾರ ಭಾಷೆಯಾಗಿರಬೇಕೆಂದೂ ನಿರ್ಣಯ ಮಾಡಿರುತ್ತಾರೆ.

ನಾಡಿಗ ಕೃಷ್ಣಮೂರ್ತಿಯವರು

ಮೈಸೂರು ೧೦

ಪತ್ರಿಕೋದ್ಯಮದಲ್ಲಿ ಉಚ್ಚ ಶಿಕ್ಷಣ ಪಡೆಯಲು ಅಮೇರಿಕ ದೇಶಕ್ಕೆ ತೆರಳಿದ್ದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಹಿಂತಿರುಗಿ ರಾಜಧಾನಿಗೆ ಆಗಮಿಸಿದರು. ಅವರು ಇದೇ ೧೫ ನೇ ತಾರೀಖು ಬೆಂಗಳೂರಿಗೆ ತೆರಳುವರು.

ಒಪ್ಪಂದವಾಗಿದೆ. ಇದಕ್ಕೆ ಇಂದು ಅಧಿಕೃತ ರೀತಿ ಸರ್ಕಾರದ ಮುದ್ರೆ ಬೀಳಲಿದೆ.

ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಇದೇ ೧೩ ನೇ ತಾರೀಖಿನಿಂದ ಎರಡು ದಿನಗಳು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

ಸಿನಿಮಾಗೆ ಹೋಗುವಾಗ ಬೇಕಾದ ಬೇಕಾದಲ್ಲಿ
ಶೇಷಾಚಲ ಸ್ಟೋರ್ಸ್
ಸಾಯಾಜಿ ರಾವ್ ರೋಡ್, ಮೈಸೂರು,
... ಕೊಳ್ಳಿ

ಜನರ ನೈತಿಕ ಮಟ್ಟವು ಕೆಳಗೆ ಇಳಿಯುತ್ತಾ ಇದೆ

ಎ.ಐ.ಸಿ.ಸಿ ಸ್ವಾಗತ ಸಮಿತಿ ಅಧ್ಯಕ್ಷರ ಭಾಷಣ

ವಿ ಸ.] ಪಟ್ಟಾಭಿಪುರ 2

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ ವಿ ಪಂಟ್ಯನವರ ಅಧ್ಯಕ್ಷರು ಮತ್ತು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಈ ರೀತಿ ಭಾಷಣ ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಜನ್ಮತಾಳುವುದಕ್ಕೆ ಮುಂಚೆಯೇ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಂಗವಾಗಿ ಬೇರೂರಿನಲ್ಲಿ ಕಾಂಗ್ರೆಸ್ ಸ್ಥಾಪಿತವಾಗಿ [illegible] ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ, ಸರ್ಕಾರದ ಆಗ್ರಹಕ್ಕೆ ಒಳಗಾಗಿತ್ತು.

ಮಹಾತ್ಮರ [illegible] ವರ್ಷಗಳಲ್ಲಿ ನಾವು ಸ್ವರಾಜ್ಯವನ್ನು ಪಡೆದೆವು ಆದರೆ [illegible] ದೊರೆತ [illegible] ನೇತೃತ್ವದಲ್ಲಿ [illegible] ನಮ್ಮ ನೈತಿಕ ಮಟ್ಟವು ಇಂದು ಕೆಳಗೆ ಇಳಿಯುತ್ತಾ ಇರುವುದು

ಇದಕ್ಕೆ ಅನೇಕ ಕಾರಣಗಳುಂಟು ನಾವು ಸ್ವಾರ್ಥಿಗಳಾದುದು, ಸಿಕ್ಕ ಸ್ವಾತಂತ್ರ್ಯದ ಲಾಭವನ್ನು ವೈಯಕ್ತಿಕವಾಗಿ ಪಡೆಯಬೇಕೆಂದು ಹಾತೊರೆಯುವುದು, ನಮ್ಮನಮ್ಮಲ್ಲಿಯೇ ಸ್ಪರ್ಧೆಗಳಿಗೆ ಅವಕಾಶವುಂಟಾಗಿರುವುದು, ಕಾಂಗ್ರೆಸ್ ಮತ್ತು ಸರ್ಕಾರದಲ್ಲಿಯ ಅಧಿಕಾರ ಸ್ಥಾನಗಳನ್ನು ಪಡೆಯಲು ಮೇಲಾಟ ನಡೆಸುವುದು, ಮಂತ್ರಿ ಸ್ಥಾನದ ಸ್ಥಿರತೆ [illegible] ಅಧಿಕಾರಗಳನ್ನು ಬೆದರಿಸಿ [illegible] ಸಾಧಿಸಿಕೊಳ್ಳಲು [illegible] ಕೊಳಚೆಯಲ್ಲಿ [illegible] ಹೀಗಾಗಿ ನಮ್ಮ ನೈತಿಕ ಶೀಲದ ಮಟ್ಟ ಹಾಳಾಗಿ ಈ ಅಧೋಗತಿಯ ಮಾರ್ಗ ಹಿಡಿದಿದ್ದೇವೆ.

ಎರಡನೆಯದಾಗಿ ನಾವು ನಮ್ಮ ಕರ್ತವ್ಯವನ್ನು ಮರೆತು [illegible] ದೂಷಿಸಲು ಹೊರಟಿದ್ದೇವೆ. ಪ್ರಪಂಚದ ಹಿರಿಯ ರಾಷ್ಟ್ರಗಳಿಗೆ ಸಮ [illegible] ಪಂಡಿತ ಜವಹರಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲರ ಕೃತಿಗಳನ್ನು ವಿಮರ್ಶೆ ಮಾಡುವ ಸಾಹಸವನ್ನು ನಮ್ಮಲ್ಲಿ ಕೆಲವರು ಮಾಡುತ್ತಿರುವುದು, ಹೀಗಾಗಿ ನಮ್ಮ ಸ್ವಾತಂತ್ರ್ಯ ನಮ್ಮ [illegible] ಬಾಳುವೆ [illegible] ನಮಗೆ ಇ[illegible]

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಮಾದರಿಯ ಸೀರೆಗಳು 6—9 ಗಜಗಳಲ್ಲಿ [illegible] ಮಾರಾಟಕ್ಕಿವೆ.

ದಯವಿಟ್ಟು ಇದೇ ಭೇಟಿ ಕೊಡಿ

ಗುರುದೇವಾ ಹಾಲ್,

ಜೀಗಿಕಾರಾ ಅವರ ಅಂಗಡಿ,

ಶಿವರಾಂಪೇಟೆ, ಮೈಸೂರು.

ಲ್ಲದೆ ಈಗ ಸ್ವಾತಂತ್ರ್ಯ ನಮ್ಮ ದೇಶದ ಅವನತಿಗೆ ಕಾರಣವಾಗಿದೆ ದೊರೆತ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ಕಾರ್ಯಕ್ಕೆ ಇವೆಲ್ಲ ಕಾರಣಗಳೂ ನಮ್ಮ ಪ್ರಗತಿಗೆ ಅಡಚಣೆಗಳಾಗಿವೆ. ನಮ್ಮಲ್ಲಿ ಐಕ್ಯಬೇಕು, ಸಂಘಟನೆ ಬೇಕು, ಶೀಲ ಬೇಕು, ತ್ಯಾಗ ಬೇಕು, ತಾಳ್ಮೆ ಬೇಕು, ಶಿಸ್ತು, ರಚನಾತ್ಮಕ ಬುದ್ಧಿ ಮತ್ತು ಕರ್ತವ್ಯ ಇವೆಲ್ಲವೂ ಬೇಕು

ಈ ದಿಶೆಯಲ್ಲಿ ಯುವ ಜನರ ಧ್ಯೇಯ ಮತ್ತು ಹೊಣೆ [illegible] ಇವೆಲ್ಲವೂ ಕೊನೆಗೊಳ್ಳಲಿ [illegible] ಬೇರೆ ಗಿದ

ಸ್ವಾತಂತ್ರ್ಯಕ್ಕಾಗಿ ದುಡಿದು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿರುವ ಮಹಾ ಸಂಸ್ಥೆಯು ಮೈಸೂರು ಕಾಂಗ್ರೆಸ್ಸು ಈಗ ನಿರ್ವಹಿಸಬೇಕಾದ ಕೆಲಸ ಕಾರ್ಯಗಳು ಅನೇಕವಾಗಿವೆ ದೇಶದ ಮುಂದೆ ಮಹತ್ವದ ಸಮಸ್ಯೆಗಳಿವೆ ಅವುಗಳಲ್ಲಿ ಅತಿ ಮುಖ್ಯವಾಗಿ ಮುಂದಿನ ಚುನಾವಣೆಗಳು, ಕರ್ನಾಟಕ ಏಕೀಕರಣ ಪ್ರಶ್ನೆ, ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯೊಂದಿಗೆ ದೇಶೀ ಸಂಸ್ಥಾನಗಳಲ್ಲಿರುವ ಕಾಂಗ್ರೆಸ್ ಸಂಸ್ಥೆಗಳ ವಿಲೀನವಾಗುವುದು ಮುಂತಾದ ಮಹತ್ವದ ವಿಚಾರಗಳಲ್ಲದೆ ದೇಶದ ಆರ್ಥಿಕ, ಆಹಾರ ಮತ್ತು ಬಟ್ಟೆಯ ಸಮಸ್ಯೆಗಳು ಉಗ್ರ ಸ್ವರೂಪ ತಾಳಿ ಶ್ರೀಸಾಮಾನ್ಯರ ಜೀವನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವ ಆಹಾರ ಪದಾರ್ಥಗಳ ಬೆಲೆ ವಿಪರೀತ ಹೆಚ್ಚಿರುವ ಪ್ರಯುಕ್ತ ಅತ್ಯಂತ ಬಡಜನರು ಜೀವಿಸುವುದೇ ಕಷ್ಟವಾಗಿದೆ ಈ ಮಹತ್ವದ ಸಮಸ್ಯೆಗಳನ್ನೆಲ್ಲಾ ಎದುರಿಸಬೇಕಾಗಿದೆ ಜನ ಸಾಮಾನ್ಯರ, ರೈತರ, ಕೂಲಿಕಾರರ ಹಿತಕ್ಕಾಗಿ ಮಾಡಬೇಕಾಗಿರುವ ಕೆಲಸಗಳು ಅನಂತವಾಗಿವೆ ಪ್ರಜಾ ಹಿತಕ್ಕಾಗಿ ಮಾಡಬೇಕಾಗಿರುವ ಕಾರ್ಯಗಳನ್ನು ಮನದಲ್ಲಿಟ್ಟುಕೊಂಡು [illegible] ದೇಶಕ್ಕೆ ಕೊಟ್ಟಿದೆ

ದೇಶ ಕಲ್ಯಾಣಕ್ಕಾಗಿ ಆಗಬೇಕಾದ ಮಹಾ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಇಲ್ಲಿ ಈ ಅಧಿವೇಶನದ ಸಮಿತಿ ಸದಸ್ಯರನ್ನು ತಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ತನು, ಮನ, ಧನದಿಂದ ನಾವೆಲ್ಲರೂ ನೆರವು ನೀಡಿ ದೇಶದ ಕಲ್ಯಾಣಕ್ಕಾಗಿ ಮಹಾ ಕಾಂಗ್ರೆಸ್ಸಿನ ಕೀರ್ತಿಯನ್ನು ಬೆಳೆಸೋಣ

ಪ್ರತಿ ದಿನ ಮೂರು ಆಟಗಳು

10—11—48 ರಿಂದ ಬುಧವಾರದಿಂದ

ಎಂ ಕೆ. ಪ್ರೊಡಕ್ಷನ್ಸ್ ರವರ ಅತ್ಯುತ್ತಮ ಪೌರಾಣಿಕ ಹಿಂದೀ ಚಿತ್ರ

ಸತೀ ವಿಜಯ

ಅಥವಾ ಸತೀ ಸುಲೋಚನ

ಪಾತ್ರ— ಪದ್ಮ ಮಾಲಾ, ಸುಲೋಚನ, ಅಚ್ಯುತ ಮತ್ತಿತರರು

ಒಲಂಪಿಯಾ ಟಾಕೀಸ್

Edited printed and published by A.R. Nagarajan at the Sadhvi Press D. Subbaiah Road, Mysore

---

ದಕ್ಷರಾದ ಉಪಾಧ್ಯಾಯರು ಬೇಕೆಂದು ವಿದ್ಯಾರ್ಥಿಗಳ ಮುಷ್ಕರ

ಉದಯಪುರದ ಮಹಾರಾಣಿ ಭಾಕೀ ಶಾಲೆಗೆ ದಕ್ಷರಾದ ಉಪಾಧ್ಯಾಯರುಗಳನ್ನು ನೇಮಿಸಬೇಕೆಂದೂ ಮತ್ತು ಸೀಮೆ ಎಣ್ಣೆ ಮತ್ತು ಕಾಗದಗಳನ್ನು ಒದಗಿಸಬೇಕೆಂದೂ ಅಲ್ಲಿನ ವಿದ್ಯಾರ್ಥಿಗಳು ಕಳೆದ ನಾಲ್ಕು ದಿನಗಳಿಂದಲೂ ಮುಷ್ಕರ ಹೂಡಿದ್ದಾರೆ

ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದುದಕ್ಕೆ ದಂಡ

ಬೆಳಗಾಂ ಜಿಲ್ಲೆಯಲ್ಲಿ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನ ಜಾರಿಯಲ್ಲಿರುವುದರಿಂದ, ಆ ಜಿಲ್ಲೆಯ ಅಥಣಿ ತಾಲ್ಲೂಕಿನ ಮೂರ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲಿಲ್ಲವೆಂದು ಅವರುಗಳಿಗೆ ತಲಾ ೪ ಆಣೆ ದಂಡವನ್ನು ವಿಧಿಸಲಾಗಿದೆ.

ಮಿಂಚಿನ ಬಳ್ಳಿಯ ಹೊಸ ಯೋಜನೆ

ಧಾರವಾಡದಲ್ಲಿರುವ ಸುಪ್ರಸಿದ್ಧ ದೇಶಭಕ್ತರೂ, ಸಾಹಿತಿಗಳೂ ಆದ ಶ್ರೀ ಬುಲಿ ಬಿಂದು ಮಾಧವರಾವರು ಮಿಂಚಿನ ಬಳ್ಳಿ ಕಾರ್ಯಾಲಯದಲ್ಲಿ ಕಳೆದ ೧೦ ವರ್ಷಗಳಿಂದ ಅನೇಕ ಕನ್ನಡ ಗ್ರಂಥಗಳನ್ನು ಪ್ರಕಟಿಸುತ್ತಿದ್ದಾರೆ ಸ್ವತಂತ್ರ ಭಾರತದಲ್ಲಿ ಕನ್ನಡ ಜನಾಂಗವು ಮುಂದುವರೆಯಲೂ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಅವಶ್ಯಕವಾದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಷಯಗಳು ಪ್ರಧಾನವಾಗಿರುವ ೧೦೦ ಗ್ರಂಥಗಳನ್ನು ಪ್ರಕಟಿಸಲು ಅವರು ಈಗ ನಿರ್ಧರಿಸಿದ್ದಾರೆ ಈ ಕಾರ್ಯಕ್ಕೆ ೧೫-೨೦ ಸಾವಿರ ರೂ. ಬೇಕಾಗುವುದರಿಂದ ಕನ್ನಡಿಗರೆಲ್ಲರೂ ಉದಾರವಾಗಿ ಸಹಾಯ ಮಾಡಬೇಕೆಂದು ಅವರು ಪ್ರಾರ್ಥಿಸಿದ್ದಾರೆ

ಎಸ್. ಎಗ್. ಪಂಡಿತ್

ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಶೀಸೆ ೦-೧೨-೦

ಮಹಾ ಸುಗಂಧರಾಜ ತೈಲ—)

" ಚಂದನಾದಿ ತೈಲ—)

" ಭೃಂಗಾಮಲಕ ತೈಲ—)

—ದೇಹಿಗೆ ತಾಲೆಗೆ ಉತ್ತಮ ಅಭ್ಯಂಗನ ತೈಲಗಳು.

ಪಂಚಾಮೃತ— ಮಲೇರಿಯಾ ಗೆ ಗಳಿಗೆ ಸಿದ್ಧ ಸಂಜೀವನ.

ಮಹಾಕೇಶವರ್ಧಿನೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಗನಕ್ಕೂ ಉಪಯೋಗಿಸಬಹುದಾದ ಉತ್ತಮ

ಪ್ರೀ ಟಾನಿಕ್ ಶೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ಸಿಂಹಳ ದ್ವೀಪದ ಮೇಲೆ ಬ್ರಿಟನ್ನಿನ ಸಂಪೂರ್ಣ ಹಿಡಿತ

ಸಿಂಹಳ ದ್ವೀಪವು ಡೊಮಿನಿಯನ್ ಪದವಿಯನ್ನು ಹೊಂದಿರುವುದಾಗಿ ಹೇಳಲ್ಪಟ್ಟರೂ ಆದರ ಸ್ಥಾನಮಾನಗಳಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಅಲ್ಲಿನ ಪ್ರಧಾನ ಮಂತ್ರಿ ಶ್ರೀ ಡಿ. ಎಸ್. ಸೇನಾನಾಯಕೆಯವರು ಬ್ರಿಟಿಷರೊಡನೆ ಮಾಡಿಕೊಂಡಿರುವ ರಹಸ್ಯ ಒಪ್ಪಂದದ ಪ್ರಕಾರ ಸಿಂಹಳ ದ್ವೀಪವು ಸಂಪೂರ್ಣವಾಗಿ ಬ್ರಿಟಿಷರ ಹಿಡಿತಕ್ಕೆ ಒಪ್ಪಿಸಲ್ಪಟ್ಟಿದೆಯೆಂದು ಹೇಳಲಾಗಿದೆ- ಕೊಲಂಬೋ ಮತ್ತು ಟ್ರಿಂಕಾಮಲಿ ನಗರಗಳನ್ನು ಬ್ರಿಟನ್ ಮತ್ತು ಅಮೇರಿಕಗಳಿಗೆ ಯುದ್ಧ ನೆಲೆಗಳಾಗಿ ಕೊಡಲೂ ಸಹ ಒಪ್ಪಂದವಾಗಿರುವುದಲ್ಲದೆ ಸಿಂಹಳದಲ್ಲಿ ಬ್ರಿಟಿಷರಿಗೆ ಶಾಶ್ವತವಾದ ಮಿಲಿಟರಿ ಮತ್ತು ನೌಕಾ ನೆಲೆಗಳನ್ನೂ ಮತ್ತು ಬ್ರಿಟಿಷ್ ವರ್ತಕರಿಗೆ ವಿಶೇಷ ಸೌಲಭ್ಯಗಳನ್ನೂ ಕಲ್ಪಿಸಿಕೊಡುವುದಾಗಿ ಒಪ್ಪಂದವಾಗಿದೆಯೆಂದೂ ಸಹ ತಿಳಿದುಬಂದಿದೆ

ಬ್ರಿಟಿಷ್ ರಾಜರ ದ್ವಿತೀಯ ಪುತ್ರಿಯ ವಿವಾಹ

ಬ್ರಿಟಿಷ್ ರಾಜರ ದ್ವಿತೀಯ ಪುತ್ರಿ ರಾಜಕುಮಾರಿ ಮಾರ್ಗರೆಟ್ ರವರು ಮಾರ್ಕ್ವಿಸ್ ಆಫ್ ಬ್ಲಾಂಡ್ ಫರ್ಡ್ ರವರನ್ನು ತಮ್ಮ ಪತಿಯನ್ನಾಗಿ ವರಿಸಬಹುದೆಂದೂ ಇನ್ನೆರಡು ದಿನಗಳಲ್ಲಿ ಅವರ ವಿವಾಹದ ಬಗ್ಗೆ ಘೋಷಣೆ ಹೊರಬೀಳಬಹುದೆಂದೂ ಹೇಳಲಾಗಿದೆ

ಶ್ರೀ ಗಾಯತ್ರೀ ಟಾಕೀಸ್

10-11-48 ರಿಂದ 2 ದಿನಗಳು ಮಾತ್ರ

M. G. M ರವರ

ಬಾಡಿ & ಸೋಲ್

(BODY AND SOUL)

FROM 12—11—48

Under Two Flags

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಆಧುನಿಕ ಶಿಶು ವಿದ್ಯಾಭ್ಯಾಸ, ಮತ್ತು ಶಿಶು ಮನಶ್ಶಾಸ್ತ್ರ ಪದ್ಧತಿಗಳ ಮತ್ತು ಅವರ ಳಿಗೆ ಅನುಗುಣವಾದ ಉಪಕರಣಗಳ ಸಹಾಯದಿಂದ ಹತ್ತಾರು ವರ್ಷಗಳಿಂದಲೂ ಶಿಶು ಸೇವೆಯನ್ನು ಮಾಡುತ್ತಾ ಮನ್ನಣೆ ಶಿಶುವಿಹಾರವೆನಿಸಿಕೊಂಡ ಶ್ರೀ ಜಗದಂಬಾ ಶಿಶು ವಿಹಾರವು ನವರಾತ್ರಿ ರಜವನ್ನು ಮುಗಿಸಿಕೊಂಡು ಈಗ ನವಚೈತನ್ಯದಿಂದ ಕೆಲಸ ಮಾಡಲಾರಂಭಿಸಿದೆ

ಶಿಶು ವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಾತಾ ಪಿತೃಗಳು ಈಗ ವಿಳಂಬಮಾಡದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಸಹ ಯೋಜನವನ್ನು ಪಡೆಯುವುದರ ಮೂಲಕ ಶಾಲೆಯ ಕಾರ್ಯಕಲಾಪಗಳಿಗೆ ಉತ್ತೇಜನ ನೀಡಬೇಕಾಗಿ ವಿನಂತಿ ಮಿಕ್ಕ ವಿಷಯಗಳಿಗೆ ನೇರವಾಗಿ ವಿಚಾರಿಸಬಹುದು

ಡಿ. ಕೃಷ್ಣಮೂರ್ತಿ,

ವ್ಯವಸ್ಥಾಪಕ

ಫೋನಂ 782 ‖ ವಂದೇ ಮಾತರಂ ‖ ಬಿಡಿಪ್ರತಿ ೩ ಕಾಸು

ಸಂಪುಟ ೭] ಗುರುವಾರ ೧೧-೧೧-೪೮ [ಸಂಚಿಕೆ ೧೩೨

ನಿಜಾಮರ ಕೃಪಾಶ್ರಯ ಹೈ॥ ಕಾಂಗ್ರೆಸ್ಸಿಗೆ ಬೇಕಿಲ್ಲ

ಕಮ್ಯೂನಿಸ್ಟರುಗಳ ಮೇಲೆ ಪ್ರತಿಬಂಧಕಾಜ್ಞೆ

ಬೆಂಗಳೂರು ೧೧

ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾದ ಕಮ್ಯೂನಿಸ್ಟರ ಪೈಕಿ, ಶ್ರೀಗಳಾದ ಕೆ. ಎಸ್. ರಾಮಸ್ವಾಮಿ, ಕಪ್ಪೂರ್ ವೆಂಕಟರಾವ್, ಎ. ಪಿ. ಶಂಕರನಾರಾಯಣ್, ಎಂ. ಎಸ್. ರಾಜಶೇಖರ್‌ರವರುಗಳು ಮೈಸೂರು ನಗರಕ್ಕೆ ೬ ತಿಂಗಳು ಕಾಲ ಬರಕೂಡದೆಂದೂ, ಶ್ರೀಗಳಾದ ಜಿ. ನಾಗರಾಜ್, ಹೆಚ್. ಕೃಷ್ಣಾ ಜೆಂರಾವ್, ಜಿ. ಮಲ್ಲಿಕಾರ್ಜುನಪ್ಪರವರುಗಳು ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳಿಗೆ ಪ್ರವೇಶಿಸಕೂಡದೆಂದೂ ಸರ್ಕಾರದವರು ಪ್ರತಿಬಂಧಕಾಜ್ಞೆಯನ್ನು ಹಾಕಿರುತ್ತಾರೆ.

ವಿಶ್ವ ವಿದ್ಯಾನಿಲಯಗಳ ಪುನರ್ವ್ಯವಸ್ಥೆಯ ಸಮಿತಿ

ಭಾರತ ವಿಶ್ವವಿದ್ಯಾನಿಲಯಗಳ ಪುನರ್ವ್ಯವಸ್ಥೆ ಬಗ್ಗೆ ಡಾ॥ ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕೇಂದ್ರ ಸರ್ಕಾರದವರು ನೇಮಿಸಿದ್ದಾರೆ.

ಜಿನ್ನಾರವರ ಮರಣದ ಭವಿಷ್ಯ ನುಡಿದ ಜ್ಯೋತಿಷ್ಯರು

ಕೊಯಮತ್ತೂರು ಜಿಲ್ಲೆಯ ಭಾಗದ ಮಾಡಿ ತಪಸಿ ಆಶ್ರಮದ ಸ್ವಾಮಿ ನಿತ್ಯಾನಂದ ಕವೀಶ್ವರರವರು ಜಿನ್ನಾರವರ ಮರಣ ಮತ್ತು ಹೈದರಾಬಾದಿನ ೮ ನಾಗರಿಕ ದಿನಗಳ ಭವಿಷ್ಯವನ್ನು ಮೊದಲೇ ನುಡಿದಿದ್ದರೆಂದು ಹೇಳಲಾಗಿದೆ.

೧೯೪೯ನೇ ಏಪ್ರಿಲ್ ಮತ್ತು ಜೂನ್ ತಿಂಗಳುಗಳಲ್ಲಿ ಭಾರತದ ಐಕ್ಯಮತ್ಯ ಯೋಜನೆಯ ಕಾರ್ಯಗಳಿಕ್ಕೆ ಬಲ ಬರುವುದೆಂದೂ ಪಾಕಿಸ್ತಾನದ ಮನೋಭಾವ ಬದಲಾಯಿಸಿ ಎರಡು ರಾಷ್ಟ್ರಗಳಿಗೂ ಸೌಹಾರ್ದ ಉಂಟಾಗುವುದೆಂದೂ, ೧೯೫೧ರ ವರೆಗೂ ಪ್ಯಾಲಸ್ಟೈನಿನಲ್ಲಿ ಗಲಭೆ ಮುಂದುವರಿಯುವುದೆಂದೂ, ಈ ವರ್ಷದೊಳಗಾಗಿ ದೊಡ್ಡ ರಾಷ್ಟ್ರಗಳಲ್ಲಿ ತಾತ್ಕಾಲಿಕ ಒಪ್ಪಂದ ಉಂಟಾಗುವುದೆಂದೂ ಅವರು ಭವಿಷ್ಯ ಹೇಳುತ್ತಾರೆ.

ಮಹಾತ್ಮಾಯಣ

ರಾಮಾಯಣದ ಮಹಾ ಕಾವ್ಯದಂತೆ ಮಹಾತ್ಮಗಾಂಧಿಯವರ ಜೀವನ ಚರಿತ್ರೆಯನ್ನು ಕಾವ್ಯ ರೂಪದಲ್ಲಿ ರಚಿಸಲು ಸುಪ್ರಸಿದ್ಧ ಮರಾಠಿ ಕವಿಗಳಾದ ಶ್ರೀ ಬಿ. ಬಿ. ಬೋರ್‌ಕರ್‌ರವರನ್ನು ಶ್ರೀ ಕನೈಲಾಲ್ ಬಜಾಜ್‌ರವರು ಪ್ರಾರ್ಥಿಸಿರುವರೆಂದು ಹೇಳಲಾಗಿದೆ.

೧೯೪೨ರ ಹೋರಾಟದಲ್ಲಿ ನೊಂದವರಿಗೆ ಪರಿಹಾರ

೧೯೪೨ರಲ್ಲಿ ನಡೆದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಮೈಸೂರಿನ ಅನೇಕ ಕಾಂಗ್ರೆಸ್ಸಿನವರು ಭಾಗವಹಿಸಿ ಕಷ್ಟ ನಷ್ಟಗಳನ್ನು ಅನುಭವಿಸಿ ದೇಶಕ್ಕೆ ಅಪಾರ ಸೇವೆ ಸಲ್ಲಿಸಿದರು. ಈಗ ಸ್ವರಾಜ್ಯವು ಏರ್ಪಟ್ಟಿದ್ದರೂ ನೊಂದವರಿಗೆ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಮದರಾಸ್ ಪ್ರಾಂತ್ಯದವರು ಒಬ್ಬರಿಗೆ ೫ ಎಕರೆ ಜಮೀನನ್ನು ಕೊಟ್ಟಿರುತ್ತಾರೆ. ಮೈಸೂರಿನ ಪ್ರಜಾ ಸರ್ಕಾರದವರು ಈ ಬಗ್ಗೆ ಗಮನ ಕೊಟ್ಟು ನೊಂದವರಿಗೆ ಸೂಕ್ತ ಪರಿಹಾರವನ್ನು ಕೂಡಲೆ ಕೊಡಬೇಕೆಂದು ನೊಂದವರೊಬ್ಬರು ಕೋರಿ, ಪತ್ರ ಬರೆದಿರುತ್ತಾರೆ.

ಜವಾಬ್ದಾರಿ ಸರ್ಕಾರಕ್ಕೆ ನಿಜಾಮರ ಕೃಪಾಶ್ರಯ ಬೇಡ

ನೈಜಾಮರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಈಗಿರುವ ಗುರಿಯನ್ನು ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ ಅಂಗರಚನೆಯಿಂದ ತೆಗೆದು ಹಾಕಬೇಕೆಂದು ಇದೇ ೧೩ನೇ ತಾ॥ ನಡೆಯುವ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯಲ್ಲಿ ನಿರ್ಧರಿಸಲಾಗುವುದೆಂದು ಹೇಳಲಾಗಿದೆ. ಸಂಸ್ಥಾನ ಕಾಂಗ್ರೆಸ್ಸಿಗೆ ಪ್ರಾಥಮಿಕ ಸದಸ್ಯರುಗಳನ್ನು ಸೇರಿಸಿಕೊಳ್ಳುವ ಅರ್ಜಿ ನಮೂನೆಯಲ್ಲಿ ಈ ಮೇಲ್ಕಂಡ ವಿಷಯವನ್ನು ಈಗಾಗಲೇ ತೆಗೆದುಹಾಕಲಾಗಿದೆಯೆಂದೂ, ನೈಜಾಮರನ್ನು ಸಿಂಹಾಸನದಿಂದ ಪದಚ್ಯುತರನ್ನಾಗಿ ಮಾಡಬೇಕೆಂದು ಜನರು ಒತ್ತಾಯಿಸುತ್ತಿರುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ.

ನ್ಯಾಯವಿಧಾಯಕ ಸಭಾ ಸದಸ್ಯರ ಕಪ್ಪು ಪಟ್ಟಿ

ಮಧ್ಯ ಪ್ರಾಂತ್ಯದ ನ್ಯಾಯ ವಿಧಾಯಕ ಸಭೆಯ ಸದಸ್ಯರುಗಳ ಪೈಕಿ ಲಂಚ, ಸ್ವಾರ್ಥತೆ ಸ್ಥಾನದ ದುರುಪಯೋಗ — ಇವೇ ಮುಂತಾದುವುಗಳ ದೂಷಣೆ ಗಳಿಸಿರುವವರ ಹೆಸರುಗಳ ಕಪ್ಪು ಪಟ್ಟಿಯೊಂದನ್ನು ಅಲ್ಲಿನ ಸರ್ಕಾರದವರು ತಯಾರಿಸುತ್ತಿದ್ದಾರೆಂದೂ ಮತ್ತು ಅಂಥವರ ಮೇಲೆ ಕಣ್ಣಿಡಬೇಕೆಂದು ಪೊಲೀಸರಿಗೆ ಸೂಚನೆ ಕೊಡಲಾಗಿದೆಯೆಂದೂ ವರದಿಯಾಗಿದೆ.

ಸ್ಟಾಲಿನ್ ಮತ್ತು ಟ್ರೂಮನ್ ಭೇಟಿಯೇ?

ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸಲು ಅಮೆರಿಕದ ಅಧ್ಯಕ್ಷ ಟ್ರೂಮನ್‌ರವರು ಪ್ರಪಂಚದ ನಾಯಕರುಗಳನ್ನು ಭೇಟಿ ಮಾಡುವರೆಂದೂ, ಸದ್ಯದಲ್ಲೇ ಸ್ಟಾಲಿನರನ್ನು ಕಾಣಲು ಅವರು ರಷ್ಯಕ್ಕೆ ಹೋಗುವರೆಂದೂ ಅಮೆರಿಕದ ಪತ್ರಿಕೆಯೊಂದು ವರದಿ ಮಾಡಿದೆ.

ಕೋಟ್ಯಾಧೀಶರ ಹಣ ಸರ್ಕಾರದ ವಶ

ಇಟಲಿಯ ಕೋಟ್ಯಾಧೀಶರಾದ ಬ್ರಾಸಲಿ ಎಂಬುವರು ಸರ್ಕಾರಕ್ಕೆ ೨೦ ವರ್ಷ ಸಲ್ಲಬೇಕಾದ ತೆರಿಗೆಯ ಬಗ್ಗೆ ಸುಳ್ಳು ಲೆಕ್ಕ ಕೊಟ್ಟು ಕೇವಲ ೧ ಸಾವಿರ ಪೌಂಡುಗಳನ್ನು ಮಾತ್ರ ಕೊಡುತ್ತಿದ್ದರೆಂಬ ಅಪಾದನೆಯ ಮೇಲೆ ಅವರ ೨೫೦ ಲಕ್ಷ ಪೌಂಡು ಹಣವನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆಯೆಂದು ಹೇಳಲಾಗಿದೆ.

ಭಾರತದಲ್ಲಿ ಐಕ್ಯವಾಗಲು ಚಂದ್ರನಗರದ ನಿರ್ಧಾರ

ಫ್ರಾನ್ಸಿಗೆ ಸೇರಿದ ಚಂದ್ರನಗರವು ಭಾರತ ಯೂನಿಯನ್ನಿನಲ್ಲಿ ಐಕ್ಯವಾಗಬೇಕೆಂದು ಅಲ್ಲಿನ ಶಾಸನಸಭೆಯು ನಿರ್ಣಯ ಮಾಡಿದೆ.

ನಾಡಿಗ ಕೃಷ್ಣಮೂರ್ತಿಯವರ ಭಾಷಣ

ರಾಜಧಾನಿಯ ವೈಸ್‌ರಾಯ್ ರಸ್ತೆಯ ಶ್ರೀರಾಮ ಮಹಿಳಾ ಸಮಾಜದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಮೆರಿಕದಲ್ಲಿ ಮಹಿಳೆಯರ ಸಮಾಜ ಸೇವೆ ಎಂಬ ವಿಷಯದ ಮೇಲೆ ಭಾಷಣ ಮಾಡುವರು.

ನಾಳೆ ಮಧ್ಯಾಹ್ನ ೪ ಗಂಟೆಗೆ ಅವರು ಶ್ರೀ ಸುಬ್ರಾಯ ವಿದ್ಯಾರ್ಥಿ ನಿಲಯ ಸಂಘದಲ್ಲಿಯೂ ಭಾಷಣ ಮಾಡುವರು.

ಕಾಶ್ಮೀರಕ್ಕೆ ಪಾಕಿಸ್ತಾನದ ವಿಮಾನ ಪಡೆ

ಕಳೆದ ಕೆಲವು ವಾರಗಳಿಂದ ಕಾಶ್ಮೀರದ ರಣರಂಗಕ್ಕೆ ಪಾಕಿಸ್ತಾನವು ತನ್ನ ವಿಮಾನ ಪಡೆಗಳನ್ನು ಕಳುಹಿಸುತ್ತಿದೆಯೆಂದೂ, ಇತ್ತೀಚೆಗೆ ಭಾರತ ವೈಮಾನಿಕ ಪಡೆಯು ಪಾಕಿಸ್ತಾನದ ವಿಮಾನವೊಂದನ್ನು ಕೆಡವಿತೆಂದೂ ವರದಿಯಾಗಿದೆ.

ಭತ್ತ ಮತ್ತು ಅಕ್ಕಿಯ ದಾಸ್ತಾನು ತಿಳಿಸಬೇಕು

ಜಿಲ್ಲಾಧಿಕಾರಿಗಳ ಆಜ್ಞೆ

ಮೈಸೂರು ೧೧

ಮೈಸೂರು ಜಿಲ್ಲೆಯಲ್ಲಿನ ಎಲ್ಲ ಅಕ್ಕಿ ಗಿರಣಿ ಮಾಲೀಕರು, ವರ್ತಕರು, ರೇಷನ್ ಡಿಪೋದವರು ಭತ್ತದ ಕಾರ್ಖಾನೆಗಳ ಮಾಲೀಕರುಗಳು ಮತ್ತು ಇತರರೂ ಕಮಿಷನ್ ಅಥವ ಇತರರಿಗಾಗಿ ತಮ್ಮಲ್ಲಿ ಇದೇ ೬ನೇ ತಾ॥ ವರೆಗೆ ಇರುವ ಭತ್ತ ಮತ್ತು ಅಕ್ಕಿಯ ದಾಸ್ತಾನನ್ನು ಇದೇ ೨೦ನೇ ತಾ॥ ದೊಳಗಾಗಿ ಆಯಾ ತಾಲ್ಲೂಕು ಅಮಲ್ದಾರರುಗಳಿಗೂ ಮತ್ತು ಮೈಸೂರಿನಲ್ಲಿ ರೇಷನಿಂಗ್ ಅಧಿಕಾರಿಗಳಿಗೂ ತಿಳಿಸಬೇಕೆಂದು ಜಿಲ್ಲಾಧಿಕಾರಿಗಳು ನೆನ್ನೆ ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ.

ರೇಷನ್ ಪ್ರಮಾಣದಲ್ಲಿ ಅವಶ್ಯಕವಾದುದಕ್ಕಿಂತ ಹೆಚ್ಚಿಗೆ ಪ್ರಮಾಣದಲ್ಲಿರುವ ದಾಸ್ತಾನನ್ನು ಅಧಿಕಾರಿಗಳ ಅಪ್ಪಣೆ ಇಲ್ಲದೆ ವಿಲೇವಾರಿ ಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಡಬೇಕೆಂದೂ ಆಜ್ಞೆ ಮಾಡಲಾಗಿದೆ.

ಹೆಚ್. ಕೆ. ವೀರಣ್ಣಗೌಡ ವಾರ್ತಾ ಇಲಾಖಾ ಡೈರೆಕ್ಟರೇ?

[illegible] ಬೆಂಗಳೂರು

ಕೊನೆಗಾಗಿ ಸ್ಥಾಪಿಸಲಾಗಲಿರುವ ವಾರ್ತಾ ಇಲಾಖೆಯ ಡೈರೆಕ್ಟರ ಸ್ಥಾನಕ್ಕೆ ಗ್ರಿಸ್ [illegible] ಶ್ರೀ ಎಚ್. ಕೆ. ವೀರಣ್ಣಗೌಡರನ್ನು ನೇಮಿಸಲಾಗುವುದೆಂದು ಹೇಳಲಾಗುತ್ತಿದೆ.

○ ಪ್ರವಾಸ ಇಲಾಖೆಯ ಡೈರೆಕ್ಟರ್ ಶ್ರೀ ಕೆ. ಎಚ್. ಶ್ರೀನಿವಾಸರವರನ್ನು ಮಾರ್ಕೆಟಿಂಗ್ ಅಧಿಕಾರಿಗಳನ್ನಾಗಿಯೂ [illegible] ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ರಾಮಲಿಂಗರೆಡ್ಡಿಯವರನ್ನು [illegible] ಡೈರೆಕ್ಟರಾಗಿಯೂ ನೇಮಿಸಲಾಗುವುದೆಂದು ಹೇಳಲಾಗಿದೆ.

• [illegible] ಸಭೆಯ ಅ॥ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ವೆಂಕಟೇಶಯ್ಯಂಗಾರ್‌ರವರನ್ನು ಹೈದರಾಬಾದಿನ [illegible] ಅಧಿಕಾರಿಗಳಾದ ಶ್ರೀ ಎಂ. ಶೇಷಾದ್ರಿಯವರ ಅ॥ ಕಾರ್ಯದರ್ಶಿಗಳಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

• ಕೇಂದ್ರ ಪೊಲೀಸ್ ಕಛೇರಿಯಲ್ಲಿನ ಅ॥ ಪೊ॥ ಸೂ॥ ರಾದ ಶ್ರೀ ಬಿ. ವಿ. ಕೃಷ್ಣಮೂರ್ತಿಯವರನ್ನು ಮೈಸೂರು [illegible] ಸೂಪರಿಂಟೆಂಡೆಂಟರಾಗಿಯೂ, ಅಲ್ಲಿದ್ದ ಶ್ರೀ ಎಸ್. ಬಿ. ಬಸಪ್ಪನವರನ್ನು ಕೇಂದ್ರ ಕಛೇರಿಗೆ ವರ್ಗಾಯಿಸಲಾಗಿದೆ.

○ [illegible] ಕಾಲೇಜಿನ ಶ್ರೀಗಳು ಎಂ. [illegible] ರಾಘವೇಂದ್ರಾಚಾರ್ಯರನ್ನು ಅ॥ [illegible] ಗಳಾಗಿ ಖಾಯಂ ಮಾಡಲಾಗಿದೆ.

○ ಶಿವಮೊಗ್ಗದ ಶ್ರೀ ಹೆಚ್. ರಾಮಕೃಷ್ಣರಾಯರು ಪ್ರಕಟಿಸಿರುವ 'ಸ್ವಸ್ಥ ಮಂತ್ರಿಗಳು' ಎಂಬ ಪುಸ್ತಕವನ್ನು ಸರ್ಕಾರದವರು ಮುಟ್ಟುಗೋಲು ಹಾಕಿದ್ದಾರೆ.

ಹೈದ್ರಾಬಾದಿನಲ್ಲಿ ೩೩೦ ಕೋಟಿ ರೂ. ಅಭಿವೃದ್ಧಿ ಯೋಜನೆ

ನೈಜಾಮರ ಹೊಸ ಸರ್ಕಾರದವರು ತಯಾರಿಸಿದ್ದ ೩೩೦ ಕೋಟಿ ರೂ. ಅಭಿವೃದ್ಧಿ ಯೋಜನೆಯನ್ನು ಈಗಿನ ಮಿಲಿಟರಿ ಸರ್ಕಾರದವರು ಜಾರಿಗೆ ತರಲು ನಿರ್ಧರಿಸಿದ್ದಾರೆ. ಈಗ ೧,೩೪,೦೦೦ ಎಕರೆ ಜಮೀನನ್ನು ಸಾಗುವಳಿ ಮಾಡುವ [illegible] ನೀರಾವರಿ ಯೋಜನೆ, ಹೆಚ್ಚು ಸ್ಥಾವರ, ಗೋದಾವರಿ ವಿದ್ಯುತ್ ಕೇಂದ್ರವನ್ನು ಅಭಿವೃದ್ಧಿ ಪಡಿಸುವುದು, ಕೋಟಿ ರೂ. ವೆಚ್ಚದಿಂದ ಗ್ರಾಮ ಮುನಿಸಿಪಾಲಿಟಿಗಳು, ರಸ್ತೆಗಳ ಮುಂತಾದವು, ೩೨ ಕೋಟಿ ರೂ. ವೆಚ್ಚದ ಮೋಟಾರು ರಸ್ತೆಗಳ ನಿರ್ಮಾಣ, ವಿದ್ಯುಚ್ಛಕ್ತಿ ಸಾಮಗ್ರಿಗಳ ತಯಾರಿಕೆ, ಮೀನು ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ — ಇವೇ ಮುಂತಾದುವುಗಳು ಈ ಯೋಜನೆಯಲ್ಲಿ ಅಡಕವಾಗಿವೆ.

ಹರಿಕಥೆ

ರಾಜಧಾನಿಯ ಚಾಮರಾಜಪುರದಲ್ಲಿರುವ ವಕೀಲರಾದ ಶ್ರೀ ಕೆ. ಪುಟ್ಟಸ್ವಾಮಯ್ಯನವರ ಮನೆಯಲ್ಲಿ ನಾಳೆ ರಾತ್ರಿ ೮ ಗಂಟೆಗೆ ಶ್ರೀ [illegible] ಹರಿಕಥೆ ನಡೆಯುವುದು. ೧೩ನೇ ತಾ॥ ರಾತ್ರಿ ಶ್ರೀ ಎಚ್. ಆರ್. [illegible] ಅವರಿಂದ [illegible] ತಾ॥ ರಾತ್ರಿ ಶ್ರೀನಿವಾಸ ಕಲ್ಯಾಣದ ಹರಿಕಥೆಗಳು ನಡೆಯುವುವು.

ಹೈದ್ರಾಬಾದಿಗೆ ಸ|| ಪಟೇಲರು ಗುಪ್ತ ಭೇಟಿ ಇತ್ತಿದ್ದರು

ಪೋಲೀಸ್ ಕಾರ್ಯಾಚರಣೆಗೆ ಮುನ್ನ ಸೈನಿಕರಿಗೆ ಸಂದೇಶ

ಕಳೆದ ಸೆಪ್ಟೆಂಬರ್ ೧೨ನೇ ತಾರೀಕು ಮಧ್ಯಾಹ್ನ ಸೋಲಾಪುರ ವಿಮಾನ ನಿಲ್ದಾಣದಲ್ಲಿ ಒಬ್ಬ ವೃದ್ಧ ವ್ಯಕ್ತಿಯು ಬಿಳಿ ಉಣ್ಣೆ ಶಾಲನ್ನು ಹೊದ್ದು ವಿಮಾನದಿಂದ ಕೆಳಗಿಳಿದರು. ಆ ವ್ಯಕ್ತಿಯು ಆಗ ತಾನೇ ಮಾಯಿಲೆಯಿಂದ ಗುಣಹೊಂದಿ, ಕುಂಟಿದ ದವಡೆ ಮತ್ತು ಹೊಳೆಯುವ ಕಣ್ಣುಗಳಿಂದ ಕೂಡಿದವರಾಗಿದ್ದರು. ಆಗ ತಾನೆ ಹೈದರಾಬಾದ್ ಮೇಲೆ ಪೋಲೀಸ್ ಕಾರ್ಯಾಚರಣೆಯನ್ನು ಆರಂಭಿಸಲು ಎಲ್ಲ ಸಿದ್ಧತೆಗಳೂ ನಡೆದು ಸೋಲಾಪುರದಲ್ಲಿ ಭಾರತ ಸೈನ್ಯಗಳ ನೆರೆಯನ್ನು ಏರ್ಪಡಿಸಿ ಕೊಳ್ಳಲಾಗಿತ್ತು. ವಿಮಾನದಿಂದಿಳಿದ ವ್ಯಕ್ತಿಯನ್ನು ಲೆ|| ಜ|| ರಾಜೇಂದ್ರಸಿಂಹಜಿಯವರು ಸ್ವಾಗತಿಸಿ ಅವರಿಗೆ ಅಲ್ಲಿದ್ದ ಭಾರತ ಸೈನ್ಯದ ಅಧಿಕಾರಿಗಳನ್ನು ಪರಿಚಯ ಮಾಡಿಸಿದರು. ಆ ವ್ಯಕ್ತಿಯೇ ಭಾರತದ ಉಪಪ್ರಧಾನಿ ಸ|| ಪಟೇಲ್‌ರವರು. ಅವರ ಈ ಅನಿರೀಕ್ಷಿತ ಭೇಟಿಯು ವಿಷಯವು ಕಳೆದ ವಾರದವರೆಗೂ ಎಲ್ಲರಿಂದಲೂ ಗುಪ್ತವಾಗಿಯೇ ಇಡಲ್ಪಟ್ಟಿತು.

ಹೈದರಾಬಾದ್ ಕಾರ್ಯಾಚರಣೆಯಲ್ಲಿ ತೊಡಗಲಿದ್ದ ಭಾರತೀಯ ಸೈನ್ಯದವರನ್ನು ಕಂಡು ಅವರಿಗೆ ಶುಭಾಶಯಗಳನ್ನು ಕೋರಬೇಕೆಂಬ ಕಾತುರತೆಯಿಂದ ಸ|| ಪಟೇಲರು ಸೈನ್ಯದ ಕಲಹಗಳನ್ನೂ ತಿರಸ್ಕರಿಸಿ ಸೋಲಾಪುರಕ್ಕೆ ಬಂದು ಅಲ್ಲಿ ಸಿದ್ಧವಾಗಿದ್ದ ಭಾರತೀಯ ಸೈನ್ಯ ಮತ್ತು ವಿಮಾನ ಪಡೆಗಳವರಿಗೆ ಕೆಳಗೆ ಕಂಡಂತೆ ಸಂದೇಶವನ್ನಿತ್ತರು:—

"ಭಾರತದ ಭವಿಷ್ಯ ಗೌರವಗಳೂ, ರಕ್ಷಣೆಯೂ ನಿಮ್ಮನ್ನೇ ಅವಲಂಬಿಸಿವೆ. ನಾವೂ ಮತ್ತು ಭಾರತ ದೇಶವೂ ನಿಮ್ಮಲ್ಲಿ ಪೂರ್ಣ ಭರವಸೆಯುಳ್ಳವರಾಗಿದ್ದೇವೆ. ನ್ಯಾಯ ಸಮ್ಮತವಾದ ಕಾರ್ಯಕ್ಕೆ ಹೊರಡಲಿರುವ ನೀವು ಎದೆಯನ್ನು ಮುಂದೆ ಮಾಡಿ ಹೈದರಾಬಾದನ್ನು ರಜಾಕಾರ್ ಪ್ರಾಬಲ್ಯದಿಂದ ಮುಕ್ತಗೊಳಿಸುವ ಮನೋಧೈರ್ಯದಿಂದ ನೀವು ಮುನ್ನುಗ್ಗಿರಿ. ರಜಾಕಾರ್ ನಾಯಕನು ಸೈದಾರಾಬಾದನ್ನು ಕೆಂಪುಕೋಟೆಯ ಮೇಲೆ ಹಾರಿಸಲು ಹಂಬಲಿಸುತ್ತಿದ್ದನು. ಆದರೆ ಆ ಮಾತನ್ನು ಅವನಿಗೇ ಹಿಂತಿರುಗಿಸಿ ಹೈದರಾಬಾದಿನ ಕೇಂದ್ರಸ್ಥಾನದಲ್ಲಿ ನೀವು ಭಾರತದ ಧ್ವಜವನ್ನು ಹಾರಿಸಿ ನಿಮಗೆ ದಿಗ್ವಿಜಯ ಫಲಪ್ರದವಾಗಲೆಂದು ನಾನಾಶಿಸುತ್ತೇನೆ."

Edited printed and published by A.K. Nagarajan at the Sadhvi Press D Subbaiah Road Mysore

ಪಡುವಾರಹಳ್ಳಿ ನಿವಾಸಿಗಳ ಕುಂದು ಕೊರತೆಗಳು

ಮೈಸೂರು ೧೧

ವಾಣೀವಿಲಾಸ ಮೊಹಲ್ಲಾದಲ್ಲಿರುವ ಪಡುವಾರಹಳ್ಳಿಯ ನಿವಾಸಿಗಳ ಸಭೆಯೊಂದು ಕಳೆದ ೮ನೇ ತಾ|| ರಾಮ ಮಂದಿರದಲ್ಲಿ ಶ್ರೀ ಎಂ ಸಿ ರಾಜಮನ್ನಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಳೆದ ೪೦ ವರ್ಷಗಳಿಂದಲೂ ಹಳ್ಳಿಯು ಪೌರಸಭಾ ಸೀಮೆಯಲ್ಲಿದ್ದರೂ, ನೀರು, ದೀಪ, ರಸ್ತೆ, ಚಚ್ಚಲು, ಮಾರ್ಕೆಟ್ಟು ಮುಂತಾದ ಸೌಕರ್ಯಗಳಿಲ್ಲದಿರುವುದು ಮತ್ತು ನಿವೇಶನಕ್ಕಾಗಿ ಭೂಮಿಗಳನ್ನು ತೆಗೆದುಕೊಂಡು ಅಂತಹವರಿಗೆ ಸೂಕ್ತ ಪರಿಹಾರ ಕೊಡದಿರುವುದು ಮುಂತಾದ ವಿಷಯಗಳನ್ನು ಪರಿಶೀಲಿಸಲಾಯಿತು. ಇವುಗಳನ್ನು ಈಡೇರಿಸಲು ಗ್ರಾಮ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದಕ್ಕೆ ಶ್ರೀ ಎಂ ಸಿ ರಾಜಮನ್ನಾರ್‌ರವರು ಅಧ್ಯಕ್ಷರಾಗಿಯೂ ಶ್ರೀ ಸಿ ಜಿ ದೇವನಾಥ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ವೆಂಕಟರಂಗಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಮೇಲ್ಕಂಡ ಸೌಕರ್ಯಗಳನ್ನು ಪಡೆಯಲು ಸಂಸ್ಥೆಯು ಅಧಿಕಾರ ವರ್ಗದವರು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಮಾತುಕತೆ ನಡೆಸಬೇಕೆಂದು ನಿರ್ಧರಿಸಲಾಯಿತು.

ಹೈದರಾಬಾದ್ ಪೋಲೀಸ್ ಮತ್ತು ಸೈನ್ಯ ಸಿಬ್ಬಂದಿ ಖರ್ಚು

ಹೈದರಾಬಾದಿನ ಪೋಲೀಸ್ ಸಿಬ್ಬಂದಿಯನ್ನು ೨೫ ಸಾವಿರದಿಂದ ೧೫ ಸಾವಿರಕ್ಕೂ ಮತ್ತು ಸೈನ್ಯ ಸಿಬ್ಬಂದಿಯನ್ನು ೧೦ ಸಾವಿರಕ್ಕೂ ಇಳಿಸಲಾಗುವುದೆಂದು ಮೇ|| ಜ|| ಚೌಧರಿಯವರು ತಿಳಿಸಿದ್ದಾರೆ. ಇದರಿಂದ ಸಂಸ್ಥಾನಕ್ಕೆ ಸುಮಾರು ಮೂರು ಕೋಟಿ ರೂ ಉಳಿತಾಯವಾಗುವುದೆಂದು ಹೇಳಲಾಗಿದೆ.

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಬಾರ್ಡರುಗಳ ಸೀರೆಗಳು ೬—೮—೨ ಗಜಗಳಲ್ಲಿ ಗ್ಯಾರಂಟಿಯಾಗಿ ನ್ಯಾಯುತ ಬೆಲೆಗೆ ದೊರೆಯುತ್ತವೆ.

ದಯವಿಟ್ಟು ಇಂದೇ ಭೇಟಿ ಕೊಡಿ

ಗುರುದೇವಾ ಹಾಲ್,

ಬೆಂಗಳೂರು ಜವಳಿ ಅಂಗಡಿ,

ಶಿವರಾಂಪೇಟೆ, ಮೈಸೂರು.

ಪ್ರಭುದೇವಾ ಟಾಕೀಸಿನಲ್ಲಿ

ನಾಗರಿಕತೆಯ ವಾಸ್ತವ್ಯ ದೃಶ್ಯಾವಳಿಯಲ್ಲಿ ಸಿಕ್ಕಿ ಬಳಲಿ, ಬೆಂದು ನೊಂದಿರುವ ಜನತೆಯ ಹೃದಯಾಂತರಾಳದಲ್ಲಿ ಅಡಗಿರುವ ಸುಖ ದುಃಖಗಳನ್ನು ಕಲ್ಪನಾ ಸಾಮ್ರಾಜ್ಯ ನೃತ್ಯವೇಳೆಯ ಅಭಿನಯದ ಮೂಲಕ ಎಚ್ಚರಿಸಿರುವ ಕಲ್ಪನಾ ಕಥೆ.

ಉದಯ ಶಂಕರ್‌ರವರ ಅಮಿತ ಸಾಹಸ ಚಿತ್ರ

★ ಕಲ್ಪನಾ ★ [ಹಿಂದಿ]

ಉದಯ ಶಂಕರ್ ಮತ್ತು ಪಾರ್ಟಿಯವರ ಅಭಿನಯ

೧೨—೧೧—೪೮ ನೇ ಶುಕ್ರವಾರದಿಂದ

ಜನಭರಿತವಾದ ೨ ನೇ ವಾರ

ರಾಜಕಮಲ್

ಮೈಸೂರು

13—11—48 ರಿಂದ

ಶಾಂತಾರಾಂರವರ

ಡಾ|| ಕೊಟ್ನಿಸ್‌-ಕಿ-ಅಮರ್ ಕಹಾನಿ

—: ಪಾತ್ರವರ್ಗ: —

● ಶಾಂತಾರಾಂ,

● ಜಯಶ್ರೀ.

Morning Shows From 12-11-48 for 4 days only

The Rebel Son

-:With:-

Halry Baur,

Roger Livesey,

Patrica Roc

UNIVERSITY OF MYSORE

Office of the University of Mysore,
Mysore, Dated the 6th November '48

NOTIFICATION

No. Ex-4-528/48-49

It is hereby notified that the Diplomas of candidates successful at the Final L. M P Examination held in January 1948, and May 1948 as well as the Diplomas of candidates who have been successful in the Final Examination for the Diploma in Commerce and who have completed their practical training will be awarded at a special meeting of the Senate to be held in the Central Hall of the Mathematics Block, Central College, Bangalore on Monday the 29th November 1948 at 11-30 A M

Applications for the grant of Diplomas must be made in prescribed form on or before 22nd November 1948. Forms of application can be had from the Principal, Medical School, Bangalore in respect of L M. P. and from the Principal, College of Commerce, "Purnaprasad", High Grounds, Bangalore in respect of L Com.

By Order, D S GORDON,
Registrar.

—‡ ಶ್ರೀ ಗಾಯತ್ರೀ ಟಾಕೀಸ್ ‡—

ತಾ|| 12-11-48 ರಿಂದ : 4 ದಿನಗಳು ಮಾತ್ರ

20th ಸೆಂಚುರಿಯವರ

ಅಂಡರ್ ಟೂ ಫ್ಲಾಗ್ಸ್

UNDER TWO FLAGS

Starring:- onald Colman

Morning Shows at 10-30 a m from 12-11-48 for 3 days

Columbia's Mightiest War Picture

SAHARA

-: Starring :-
Humphrey Bogart

೧೦—೧೧—೪೮ ರಿಂದ : ದಿನವಹಿ ೩ ಪ್ರದರ್ಶನಗಳು

ಮೈಸೂರು ಒಲಿಂಪಿಯಾ ಟಾಕೀಸಿನಲ್ಲಿ

ರಾಮಾಯಣ ಗ್ರಂಥದಿಂದ ಆರಿಸಿದ ಇಂದ್ರಜಿತು ಪುನ್ನಾಗ ಕನ್ಯೆಯನ್ನು ಮದುವೆಯಾಗುದು ಲಕ್ಷ್ಮಣನೊಡನೆ ಘೋರ ಯುದ್ಧ - ಸುಲೋಚನ ತನ್ನ ಪತಿಯ ಮುಂಡವನ್ನು ತಂದು ಸತಿಯಾದುದು – ಇವುಗಳಿಂದ ಕೂಡಿದ

ಎಂ. ಕೆ. ಪ್ರೊಡಕ್ಷನ್ಸ್‌ರವರ ಹಿಂದೀ ಚಿತ್ರ

SATI VIJAYA : ಸತೀ ವಿಜಯ

ಭೂಮಿಕೆ:- ರತ್ನಮಾಲಾ, ಕಿಶೋರ್ ಕುಮಾರ್ ಸಾರ್ಕೋಲಾಂಕರ್ ಮುಂತಾದವರು.

ಇಂಪಾದ ಗಾನ : ಸುಂದರ ನೃತ್ಯ

Distributors:- RAYAL PICTURES CIRCUIT,
31, Gandhinagar - Bangalore 2.

ಶುಭ]

ಸಂಪುಟ ೭] ಶುಕ್ರವಾರ ೧೨-೧೧-೪೮ [ಸಂಚಿಕೆ ೧೨೩

ಆಹಾರ ಶೇಖರಣೆ ಆಜ್ಞೆ – ಇಂದಿನಿಂದ ಜಾರಿ –

ನೂರಾರು ವಿದ ತೆರಿಗೆಯ ವಿನಾಯಿತಿ

ಬೆಂಗಳೂರು ೧೨

...ಆನೆಗೆ ಕಟ್ಟು ಬಿಲಿಕಾಳುವ ಸೌಕ, ...ಲು, ಬೀಡಿ ಕಟ್ಟುವ ಎಲೆ, ಹತ್ತಿಬಸ್ತ್ರ... ಸ್ಲೇಟು, ಸೀಸಕಡ್ಡಿ, ಪ್ರಾಯಂ ಮತ್ತು ಎಕ್ಸರ್ ಸೈಜ್ ಪುಸ್ತಕಗಳು, ಮಸುಕ್ಕು, ರಿಬ್ಬನ್, ಮತ್ತು ಆರಣಾರಿ ...ರ್ಥಗಳಿಗೆ ವ್ಯಾಪಾರ ತೆರಿಗೆಯನ್ನು ...ವಿಧಿಸಲಾಗಿಲ್ಲವೆಂದು ಸರ್ಕಾರದ ಪ್ರಕಟಣೆ ...ತಿಳಿಸಿರುತ್ತವೆ ಮೈಸೂರು ಅರಸುವ ...ಮಾರುವ ಪೆಟ್ರೋಲಿಗೆ ವ್ಯಾಪಾರ ತೆರಿಗೆ ...ವ ಬಗ್ಗೆ ಸರ್ಕಾರದ ಆಜ್ಞೆಯಾಗಿದೆ.

ಮಹಾತ್ಮರ ಕೊಲೆಯ ಬಗ್ಗೆ ಆಪ್ಟೆಯ ನಿರಾಕರಣೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ...ದನೇ ಆಪಾದಿತನಾದ ನಾರಾಯಣ ಆಪ್ಟೆಯು ಅಪ್ಪೆಯು ತಾನು ತಪ್ಪಿತಸ್ಥನಲ್ಲವೆಂದು ನ್ಯಾಯಾಧೀಶರ ಮುಂದೆ ಹೇಳಿಕೊಟ್ಟಿರುತ್ತಾನೆ. ತನ್ನ ಮೇಲೆ ಹೊರಿಸಲ್ಪಟ್ಟಿರುವ ಆಪಾದನೆಗಳೆಲ್ಲವೂ ನಿಜವಲ್ಲವೆಂದೂ, ತಾನು ಯಾರೊಡನೆಯೂ ಸೇರಿ ...ಒಳಸಂಚು ನಡೆಸಲಿಲ್ಲವೆಂದೂ, ಇತರ ಆಪಾದಿತರು ನಡೆಸಿದ ಯಾವ ಕೃತ್ಯಗಳಲ್ಲೂ ತಾನು ಭಾಗವಹಿಸಲಿಲ್ಲವೆಂದೂ, ಮಹಾತ್ಮರ ಕೊಲೆಗಾಗಿ ಆಪಾದಿತರಲ್ಲಿ ಯಾವ ...ಒಪ್ಪಂದವಾಗಲೀ ಅಥವ ಪಿತೂರಿಯಾಗಲಿ ...ಯಾಗಿಲ್ಲವೆಂದೂ ಅತನು ತಿಳಿಸಿರುತ್ತಾನೆ

ಭಾಷಾವಾರು ರೀತಿ ಹೈದ್ರಾಬಾದಿನ ವಿಭಜನೆಯೆ?

ಹೈದರಾಬಾದ್ ಸಂಸ್ಥಾನವನ್ನು ಭಾಷಾವಾರು ರೀತಿಯಮೇಲೆ ವಿಭಾಗಮಾಡಬೇಕೆಂದು ಅಲ್ಲಿನ ನಿಜಾಮ ವಿರೋಧವಾದಿಗಳೂ, ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರೂ, ...ಸ್ವಾಮಿ ಪಕ್ಷದವರೂ ಒತ್ತಾಯಪಡಿಸುತ್ತಿದ್ದಾರೆಂದು ಹೇಳಲಾಗಿದೆ

ಸಿಂಧ್ ಶಾಸನ ಸಭೆಯ ೨೦ ಹಿಂದುಗಳ ಸ್ಥಾನಗಳು ಖಾಲಿ

ಪಾಕಿಸ್ತಾನದ ಸಿಂಧ್ ಪ್ರಾಂತ್ಯದಿಂದ ...ಮಂದಿ ಹಿಂದುಗಳು ನಿರಾಶ್ರಿತರಾಗಿ ಹೊರಟುಹೋಗಿರುವುದರಿಂದ ಅಲ್ಲಿನ ಶಾಸನ ಸಭೆಯಲ್ಲಿ ೨೦ ಹಿಂದುಗಳ ಸ್ಥಾನಗಳು ಖಾಲಿ ಬಿದ್ದಿರುವುವೆಂದು ವರದಿಯಾಗಿದೆ ಈಗ ಅಲ್ಲಿ ಕೇವಲ ೬ ಮಂದಿ ಹಿಂದೂ ಸದಸ್ಯರಿರುವರೆಂದು ಹೇಳಲಾಗಿದೆ

ಆಡಳಿತ ಬದಲಾವಣೆ

ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಡಳಿತಕ್ಕೆ ಒಳಪಟ್ಟಿದ್ದ ನಂಜನಗೂಡು ತಾಲ್ಲೂಕಿನ ವಯಸ್ಕರ ಶಿಕ್ಷಣದ ...ಗಳನ್ನು ನಂಜನಗೂಡು ವಿದ್ಯಾಧಿಕಾರಿಗಳ ಮೈಸೂರು ತಾಲ್ಲೂಕು ವಯಸ್ಕರ ಶಿಕ್ಷಣ ...ವನ್ನು ಮೈಸೂರು ನಗರ ವಯಸ್ಕರ ಶಿಕ್ಷಣ ಸಮಿತಿಯ ಆಡಳಿತಕ್ಕೂ ವರ್ಗಾಯಿಸಲಾಗಿದೆಯೆಂದು ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯ ವ್ಯವಸ್ಥಾಪಕರು ತಿಳಿಸಿದ್ದಾರೆ.

ಪಿತೃವಿಯೋಗ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಕಾರ್ಯದರ್ಶಿಗಳಾದ ಶ್ರೀ ಟಿ ಆರ್ ಅನ್ನಿಗರಾಯ ಪುರಾಣೀಕರ ತಂದೆ ಶ್ರೀ ರಂಗಯ್ಯ ಪುರಾಣಿಕರು ಕಳೆದ ಸೋಮವಾರ ರಾತ್ರಿ ತಮ್ಮ ೬೯ ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ನೆಹರೂ ಜಯಂತಿ

ಮೈಸೂರು ೧೨

ಇದೇ ೧೪ನೇ ತಾ|| ಭಾನುವಾರ ಭಾರತದ ಪ್ರಧಾನಿ ಪಂಡಿತ ನೆಹರೂರವರ ೬೦ ನೇ ಜನ್ಮೋತ್ಸವದ ಪ್ರಯುಕ್ತ, ಆ ದಿನ ಬೆಳಗ್ಗೆ ೯ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಧ್ವಜಾ ರೋಹಣವನ್ನೂ ಮತ್ತು ಸಂಜೆ ೬-೩೦ ಗಂಟೆಗೆ ಬಹಿರಂಗ ಸಭೆಯನ್ನೂ ಏರ್ಪಡಿಸಿರುತ್ತದೆ. ಮಹಾಜನರು ಇದರಲ್ಲಿ ಭಾಗವಹಿಸುವುದಲ್ಲದೆ, ತಮ್ಮ ಮನೆಗಳನ್ನು ತಳಿರು ತೋರಣಗಳಿಂದಲೂ ಬಾವುಟಗಳಿಂದಲೂ ಅಲಂಕರಿಸಿ ಪಂಡಿತ ಜೀಯವರ ಹುಟ್ಟಿದ ಹಬ್ಬವನ್ನು ಆಚರಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚೆನ್ನಯ್ಯನವರು ಪ್ರಾರ್ಥಿಸಿರುತ್ತಾರೆ.

ಹಸುವಿನ ಮೇಲೆ ಮೋಟಾರು ಹರಿಯಿತು

ನೆನ್ನೆ ರಾತ್ರಿ ರಾಜಧಾನಿಯ ನೂರಡಿ ರಸ್ತೆಯಲ್ಲಿ ಸರಕಾರ ಭವನದ ಮುಂದೆ ಎಂ. ವೈ ಜಡ್. ೪೦೫೦ ನೇ ನಂಬರಿನ ಮೋಟಾರು ಕಾರು ಒಂದು ಹಸುವಿನ ಮೇಲೆ ಹರಿದು ಅದರ ಒಂದು ಕೊಂಬು ಮುರಿದುಹೋಯಿತು. ಹಸುವಿಗೆ ಬಲವಾದ ಪೆಟ್ಟು ತಗುಲಿ ಅದನ್ನು ಚಿಕಿತ್ಸೆಗಾಗಿ ಪಶು ವೈದ್ಯ ಶಾಲೆಗೆ ಕಳುಹಿಸಲಾಗಿತ್ತು. ಅದು ಈಗ ಉತ್ತಮಗೊಳ್ಳುತ್ತಿದೆಯೆಂದು ಹೇಳಲಾಗಿದೆ.

ನಾರ್ಕಿಂಗಿನಲ್ಲಿ ಆಹಾರದ ದೊಂಬಿ

ನಾರ್ಕಿಂಗಿನಲ್ಲಿ ಆಹಾರದ ದೊಂಬಿಯು ನಡೆದು, ಜನರು ಅನೇಕ ಅಕ್ಕಿ ಅಂಗಡಿಗಳನ್ನು ಲೂಟಿ ಮಾಡಿದರೆಂದೂ, ಈ ಗಲಭೆಯಲ್ಲಿ ಅನೇಕರು ಸತ್ತು, ಹಲವರಿಗೆ ಗಾಯಗಳಾದ ವರದಿ ಬಂದಿರುವುದಾಗಿ ತಿಳಿದುಬಂದಿದೆ

ಕಲ್ಲಿದ್ದಲಿನ ಕೇಂದ್ರವಾದ ಟಾಂಗ್‌ಶಾನ್ ನಗರದ ಕಡೆ ೪೦ ಸಾವಿರ ಕಮ್ಯೂನಿಸ್ಟ್ ಸೈನಿಕರು ನುಗ್ಗುತ್ತಿದ್ದಾರೆ

ಹಾಪ್ಸಿ ರಾಜಧಾನಿಯಾದ ಟೈಯೂನ್ ಮೇಲೆ ಫಿರಂಗಿಗಳನ್ನು ಹಾರಿಸಲಾಗುತ್ತಿದೆ

೧೬ ಪೌಂಡುಗಳಿಗಿಂತ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಶೇಖರಿಸುವವರಿಗೆ ಮರಣ ದಂಡನೆ ವಿಧಿಸಲಾಗುವುದೆಂದು ಚಿಯಾಂಗ್ ಕೈಷೇಕ್ ರವರು ಎಚ್ಚರಿಸಿದ್ದಾರೆ

ಹೈದರಾಬಾದ್ ಮುಸ್ಲಿಮರು ಕಾಂಗ್ರೆಸ್ಸಿಗೆ

ಹೈದರಾಬಾದ್ ಮುಸ್ಲಿಮರು ಅಲ್ಲಿನ ಕಾಂಗ್ರೆಸ್ಸಿಗೆ ಸೇರುವ ವಿಷಯವನ್ನು ಪರ್ಯಾಲೋಚಿಸಲು ಎಲ್ಲ ಪಕ್ಷದ ಮುಸ್ಲಿಂ ಪ್ರಮುಖರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಿದ್ದಾರೆ.

ನಾರ್ಕಿಂಗ್ ನಗರಕ್ಕೆ ಗಂಡಾಂತರ

ಚೀಣಾದ ರಾಜಧಾನಿಯಾದ ನಾರ್ಕಿಂಗಿಗೆ ೨೦೦ ಮೈಲಿ ದೂರದಲ್ಲಿರುವ ಪೂವ್ ಎಂಬಲ್ಲಿ ಕಮ್ಯೂನಿಸ್ಟರಿಗೂ ಸರ್ಕಾರದ ಸೈನಿಕರಿಗೂ ಭಾರಿ ಯುದ್ಧ ನಡೆಯುತ್ತಿದೆ. ನಾರ್ಕಿಂಗಿಗೆ ಗಂಡಾಂತರ ಒದಗಿರುವುದರಿಂದ ಅಲ್ಲಿ ಮಾರ್ಷಿಯಲ್ ಲಾ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಈ ವರ್ಷದೊಳಗಾಗಿ ಅದು ಕಮ್ಯೂನಿಸ್ಟರ ಕೈಗೆ ಬೀಳಬಹುದೆಂದು ಹೇಳಲಾಗಿದೆ. ನಾರ್ಕಿಂಗ್, ಷಾಂಘೈ ಮತ್ತು ಇತರ ಪ್ರದೇಶಗಳಲ್ಲಿರುವ ವಿದೇಶೀಯರನ್ನ ಬೇರೆ ಕಡೆಗೆ ಸಾಗಿಸಲಾಗುತ್ತಿದೆ. ನಾರ್ಕಿಂಗಿನ ಕಡೆ ೬ ಕಮ್ಯೂನಿಸ್ಟ್ ಸೈನ್ಯಗಳು ಮುನ್ನುಗ್ಗುತ್ತಿವೆ. ಎರಡು ಸರ್ಕಾರದ ಸೈನ್ಯಗಳು ಶತ್ರುಗಳ ಕಡೆ ಸೇರಿವೆ

ಮೈಸೂರು-ಮಹಾರಾಷ್ಟ್ರ ಕ್ರಿಕೆಟ್ ಪಂದ್ಯ

ಸ್ವಂ ಸು. ಫೋ] ಬೆಂಗಳೂರು ೧೨

ರಾಂಜಿ ಟ್ರೋಫಿಯ ಕೌಲ್ ಜೋನಿನ ಕ್ರಿಕೆಟ್ ಪಂದ್ಯದಲ್ಲಿ ಈ ದಿನ ಮಹಾರಾಷ್ಟ್ರದ ಟೀಮಿಗೂ ಮೈಸೂರಿಗೂ ಪಂದ್ಯವು ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ೧೧ ಗಂಟೆಗೆ ಪ್ರಾರಂಭವಾಯಿತು

ಮಹಾರಾಷ್ಟ್ರದವರು ಆಟವನ್ನು ಮೊದಲು ಪ್ರಾರಂಭಿಸಿ, ಭೋಜನದ ಹೊತ್ತಿಗೆ ೧ ವಿಕೆಟ್ಟಿಗೆ ೭೭ ರನ್ನುಗಳನ್ನು ಮಾಡಿದ್ದರು—ರಾಗೆ ೧೮, ಭಂಡಾರ್‌ಕರ್ ೩೮ ನಾಟ್, ಜೋಷಿ ೧೫ (ಆಟವಾಡುತ್ತಿದ್ದಾರೆ),

ರಾಜ್ಯಾಂಗ ಸಭೆಯ ನಿರ್ಮಾಣಕ್ಕೆ ನೈಜಾಮರ ಘೋಷಣೆ

ಹೈದರಾಬಾದಿನ ಭವಿಷ್ಯವನ್ನು ನಿರ್ಧರಿಸುವುದಕ್ಕಾಗಿ ವಯಸ್ಕರ ಮತದಾನ ಪದ್ಧತಿಯ ಮೇಲೆ ರಾಜ್ಯಾಂಗಸಭೆಯೊಂದನ್ನು ನಿರ್ಮಿಸಲು ನೈಜಾಮರು ಸಧ್ಯದಲ್ಲೆ ಒಂದು ಘೋಷಣೆಯನ್ನು ಹೊರಡಿಸಲಿರುವರೆಂದು ಹೇಳಲಾಗಿದೆ. ಈಗ್ಗಾಗಲೇ ಚುನಾವಣೆ ಮತದಾರರ ಪಟ್ಟಿಯನ್ನು ತಯಾರಿಸಲಾಗಿದೆ ಚುನಾವಣೆಗೆ '೩೩ ಲಕ್ಷ ರೂ. ಖರ್ಚಾಗುವುದು ಈ ಚುನಾವಣೆಯಲ್ಲಿ ಭಾಷಾವಾರು ರೀತಿಯ ಮೇಲೆ ಸಂಸ್ಥಾನವನ್ನು ವಿಭಜನೆ ಮಾಡಬೇಕೆಂಬುದೇ ... ಪ್ರಧಾನ ... ಘೋಷವಾಗುವುದು.

ಹೈದರಾಬಾದ್ ಮುಸ್ಲಿಮರಲ್ಲಿ ಪಾಕಿಸ್ತಾನದ ಸಹಾನುಭೂತಿ

ಹೈದರಾಬಾದಿನ ಮೇಲೆ ಭಾರತ ಸರ್ಕಾರವು ಕೈಗೊಂಡ ಪೋಲೀಸ್ ಕಾರ್ಯಾಚರಣೆಯಲ್ಲಿ ಅಲ್ಲಿನ ಮುಸ್ಲಿಮರು ಪಟ್ಟ ಕಷ್ಟ ನಷ್ಟಗಳ ಬಗ್ಗೆ ವಿವರಣೆಗಳನ್ನು ಶೇಖರಿಸಬೇಕೆಂದು ಪಾಕಿಸ್ತಾನ ಸರ್ಕಾರವು ಆಜ್ಞೆ ಮಾಡಿದೆ. ಪಾಕಿಸ್ತಾನಕ್ಕೆ ಬಂದಿರುವ ಹೈದರಾಬಾದ್ ಮುಸ್ಲಿಂ ನಿರಾಶ್ರಿತರುಗಳಿಂದ ಈ ವಿವರಣೆಗಳನ್ನು ತೆಗೆದುಕೊಳ್ಳಲಾಗುತ್ತದೆ.

ಚೀಣಾ ಸೇನೆ ಶರಣಾಗತವಾಗಲು ಕಮ್ಯೂನಿಸ್ಟರ ಕರೆ

ಚೀಣಾದಲ್ಲಿ ವ್ಯರ್ಥವಾಗಿ ಸಾವು ನೋವು ಉಂಟಾಗದಿರಲು ಸರ್ಕಾರಿ ಸೈನ್ಯಗಳು ಶರಣಾಗತವಾಗಬೇಕೆಂದು ಕಮ್ಯೂನಿಸ್ಟರು ಒಂದು ಮನವಿಯನ್ನು ಹೊರಡಿಸಿದ್ದಾರೆ ದೇಶವನ್ನು ಪಾರುಮಾಡುವುದೇ ಕಮ್ಯೂನಿಸ್ಟರ ಧ್ಯೇಯವೆಂದೂ, ಎಷ್ಟೇ ಕಷ್ಟ ಬಂದರೂ ತಾವು ಇಡೀ ಚೀಣಾ ದೇಶವನ್ನೇ ಗೆಲ್ಲುವುದಾಗಿಯೂ ಅವರು ತಿಳಿಸಿರುತ್ತಾರೆ.

ಈ ದಿನದಿಂದ ಆಹಾರ ಶೇಖರಣೆ ಆಜ್ಞೆ ಜಾರಿ

ಸ್ವಂ ಸು ಫೋ] ಬೆಂಗಳೂರು ೧೨

ಸರ್ಕಾರದವರು ಹೊರಡಿಸಿರುವ ಆಹಾರ ಶೇಖರಣೆಯ ಆಜ್ಞೆಯು ಈ ದಿನದಿಂದ ಜಾರಿಗೆ ಬರುವುದೆಂದು ಪ್ರಕಟಿಸಲಾಗಿದೆ.

ಮೋಟಾರು ಪರ್ಮಿಟ್ ಆಜ್ಞೆ

ಸಂಸ್ಥಾನದಿಂದ ಹೊರಕ್ಕೆ ಸರ್ಕಾರದ ಅಪ್ಪಣೆ ಇಲ್ಲದೆ ಯಾರೂ ಮೋಟಾರು ವಾಹನಗಳನ್ನು ಕಳುಹಿಸಕೂಡದೆಂದೂ, ಸರ್ಕಾರದವರು ನಿಗದಿ ಮಾಡಿದ ಬೆಲೆಗೇ ಅವುಗಳನ್ನು ಮಾರಬೇಕೆಂದೂ ತಿಳಿಸಿ, ಆಜ್ಞೆಯೊಂದನ್ನು ಸರ್ಕಾರದವರು ಹೊರಡಿಸಿರುತ್ತಾರೆ.

ಪತ್ರಿಕೆಗಳ ಮೇಲೆ ಟೀಕೆ

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು, ಈ ದಿನ ಕೆಂಪೇಗೌಡ ರಸ್ತೆಯಲ್ಲಿ ಒಂದು ಸಿನಿಮಾ ಮಂದಿರದ ಆರಂಭೋತ್ಸವವನ್ನು ನೆರವೇರಿಸುತ್ತಾ, ಪತ್ರಿಗಳಲ್ಲಿ, ಬರಹ, ಉಪಾಪೋಹಗಳು ಹಲವು ಸಂದರ್ಭದಲ್ಲಿ ... ಆಗುವ ಬಗ್ಗೆ ಟೀಕೆ ಮಾಡಿ, ಸಿನಿಮಾ ಮತ್ತು ಚಲನ ಚಿತ್ರಗಳಿಗೆ, ಇನ್ನು ಮುಂತಾದವುಗಳಿಗೆ ಪ್ರೋತ್ಸಾಹನ ಕೊಡಬೇಕೆಂದು ತಿಳಿಸಿದರು.

○ ಮೈಸೂರು ರೈಲ್ವೆ ಆ|| ಆಫೀಸರಾದ ಶ್ರೀ ಬಿ. ಎಂ. ಕೃಷ್ಣರವರನ್ನು ರೈಲ್ವೆಯ ಡೆಪ್ಯುಟಿ ಚೀಫ್ ಆಫೀಸರಾಗಿ ನೇಮಿಸಲಾಗಿದೆ

○ ಚನ್ನಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಮಂಜೂರು ಮಾಡಲಾಗಿದೆ

○ ದುಡಿವ ಆ|| ಕಂಟ್ರೋಲರಾದ ಶ್ರೀ ಹೆಚ್. ಕೆ. ಚಿಕ್ಕಣ್ಣನವರನ್ನು ಸಕ್ಕರೆ ಕಂಪೆನಿಯ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ

ಪ್ಯಾಲಸ್ಟೀನಿನಲ್ಲಿ ವಿಶ್ವಸಂಸ್ಥೆಯ ಪ್ರೇಕ್ಷಕರ ದಸ್ತಗಿರಿ,

ಪ್ಯಾಲಸ್ಟೀನಿನಲ್ಲಿ ವಿಶ್ವಸಂಸ್ಥೆಯ ಇಬ್ಬರು ಪ್ರೇಕ್ಷಕ ಪ್ರತಿನಿಧಿಗಳನ್ನು ಯಹೂದಿ ಮಿಲಿಟರಿ ಪೋಲೀಸರು ದಸ್ತಗಿರಿ ಮಾಡಿರುವರೆಂದೂ, ಅವರು ಈಜಿಪ್ಟಿಗೆ ಸೇರಿದ ಇರಾಕ್ ಸೈನ್ಯದವರಿಗೂ ಯಹೂದ್ಯರಿಗೂ ಅರಬ್ಬರಿಗೂ ನಡೆಯುತ್ತಿದ್ದ ಕದನವನ್ನು ವೀಕ್ಷಿಸುತ್ತಿದ್ದರೆಂದೂ ... ... ಅವರುಗಳನ್ನು ... ... ಬಿಡುಗಡೆ ಮಾಡಲಾಗಿದೆ

ಧೂಮಕೇತುವಿನ ಫಲಾಫಲ

ಮೈಸೂರು ೧೧

ಈಗ್ಗೆ ಕಾಣುತ್ತಿರುವ ಧೂಮಕೇತುವಿನ ಫಲಾಫಲದ ಬಗ್ಗೆ ಜ್ಯೋತಿಷ್ಯಸಿದ್ಧಾಂತ ಶೇಖರ ವೆಂಕಟಸುಬ್ಬ ಶಾಸ್ತ್ರಿಯವರು ಈ ರೀತಿ ತಿಳಿಸಿದ್ದಾರೆ.

ಇದೇ ರವಿವಾರದಿಂದ ಸೋಮವಾರದ ಬೆಳಗಿನ ಝಾವ ಸುಮಾರು ೪-೪೫ ಘಂಟೆ ಮೊದಲ್ಗೊಂಡು ೫-೩೦ ಘಂಟೆ ವರೆಗೆ ಧೂಮಕೇತುವು (ಬಾಲ ಚುಕ್ಕಿ) ಕಾಣಿಸುತ್ತಿದೆ. ಇದು ಶುಕ್ರ ಗ್ರಹಕ್ಕೆ ಆಗ್ನೇಯ ದಿಕ್ಕಿನಲ್ಲಿ ಚಿತ್ರಾ ಮತ್ತು ಸ್ವಾತಿ ನಕ್ಷತ್ರಗಳ ಮಧ್ಯದಲ್ಲಿದ್ದು, ಆ ನಕ್ಷತ್ರಗಳಿಗೆ ದಕ್ಷಿಣ ದಿಕ್ಕಿನಲ್ಲಿದ್ದು ಅದರ [illegible] ಟಾರ್ಚ್ ಲೈಟನ್ನು ಫೋಕಸ್ ಮಾಡಿ ಬಿಟ್ಟಂತೆ ಪಶ್ಚಿಮಾಭಿಮುಖವಾಗಿ ಬರುತ್ತಿದೆ.

ಹೀಗಿರುವುದರಿಂದ ಸಾಮಾನ್ಯವಾಗಿ ದೇಶದಲ್ಲಿ ಕ್ಷಾಮ, ಯುದ್ಧಭೀತಿ, ಕಲಹ, ಜನಮರಣ ಮೊದಲಾದ ದುಷ್ಟ ಫಲಗಳುಂಟು. ಮತ್ತು ಬೃಹತ್ಸಂಹಿತೆಯಲ್ಲಿ ಹೇಳಿರುವಂತೆ ಆರ್ಯ ಕ್ಷೇತ್ರಾಧಿಪತಿ ಮತ್ತು ಕಾಶ್ಮೀರ, ಕಾಂಭೋಜ ದೇಶಗಳ ರಾಜರಿಗೆ ಪೀಡೆಯುಂಟು. ಆದ್ದರಿಂದ ಆಯಾ ಗಳಲ್ಲಿ ಈ ದೋಷ ಪರಿಹಾರಕ್ಕಾಗಿ ತಕ್ಕ ಶಾಂತಿಗಳನ್ನು ಮಾಡಿಕೊಂಡು ಎಚ್ಚರಿಕೆಯಿಂದಿರಬೇಕು.

ಮಳೆ ಹುಯ್ದರೆ ದೋಷವು ಕಡಿಮೆಯಾಗುತ್ತದೆಂದು ಹೇಳಿರುವಂತೆ ಈಗ ಮಳೆಯು ಹುಯ್ಯುತ್ತಿರುವುದರಿಂದ ದೋಷವು ಕಡಿಮೆಯಾಗುತ್ತದೆ.

ದೇವರು ನಮ್ಮ ದೇಶ ನಾಯಕರಿಗೂ ಮತ್ತು ಪ್ರಜೆಗಳಿಗೂ ಕ್ಷೇಮವನ್ನುಂಟು ಮಾಡಲೆಂದು ನಾನು ಮನಃಪೂರ್ವಕವಾಗಿ ಸರ್ವದಾ ಪ್ರಾರ್ಥನೆ ಮಾಡುತ್ತೇನೆ.

ಹರಿಕೀರ್ತನೆ

ರಾಜಧಾನಿಯ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿದ್ವಾನ್ ಲಕ್ಷ್ಮೀಪತಿ ಶಾಸ್ತ್ರಿಗಳಿಂದ ಹರಿಕೀರ್ತನೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ವಯಸ್ಕರ ಶಿಕ್ಷಣ ಶಿಬಿರ

ಗುಂಡ್ಲುಪೇಟೆ ತಾಲ್ಲೂಕಿನ [illegible] ಉಪಾಧ್ಯಾಯರುಗಳ ಶಿಕ್ಷಣ ಶಿಬಿರದ ಆರಂಭೋತ್ಸವವನ್ನು ಕಳೆದ ೫ನೇ ತಾ|| ಮೈಸೂರು ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದಜೀಯವರು ನೆರವೇರಿಸಿದರು. ಪ್ರಾರ್ಥನೆಯಾದ ನಂತರ ತಾಲ್ಲೂಕು ವಿದ್ಯಾಧಿಕಾರಿಗಳಾದ ಶ್ರೀ ಬಸಪ್ಪನವರು ಸ್ವಾಗತ ಭಾಷಣ ಮಾಡಿದರು. ಮಾರನೇ ದಿನ ವೃತ್ತ ಕಾರ್ಯದರ್ಶಿಗಳು ೩೦ ಜನ ಉಪಾಧ್ಯಾಯರುಗಳಿಗೆ ಶಿಕ್ಷಣವನ್ನು ಕೊಟ್ಟರು.

ಧೂಮಕೇತು ಕಾಣುವ ಕಾಲ

ಮೈಸೂರು ೧೧

ಪ್ರಪಂಚದ ನಾನಾ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಧೂಮಕೇತುವು ನಿನ್ನೆಯಿಂದ ರಾಜಧಾನಿಯಲ್ಲಿಯೂ ಕಣ್ಣಿಗೆ ಗೋಚರವಾಗುತ್ತಿದೆ. ಪೂರ್ವ ದಿಕ್ಕಿನಲ್ಲಿರುವ ಶುಕ್ರ ನಕ್ಷತ್ರದ [illegible] ಭಾಗದಲ್ಲಿ ಸ್ವಲ್ಪ ಕೆಳಗಡೆ ಬೆಳಗಿನ ಜಾವ ೪-೪೦ ರಿಂದ ೫-೩೦ ವರೆಗೆ ಬರಿಯ ಕಣ್ಣಿಗೆ ಗೋಚರವಾಗುವುದು. ಬಿಳಿ ಮುಗಿಲ್ ಆಕಾರದಲ್ಲಿ ಮೇಲಿನಿಂದ ಬರುತ್ತಿದ್ದು, ಮಧ್ಯ ಭಾಗದಲ್ಲಿ ರುವ ಆಕಾರದಲ್ಲಿ ಇದನ್ನು ಕಾಣಬಹುದು.

ಜಿಲ್ಲಾ ಬೋರ್ಡ್ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಇದೇ ೨೦ನೇ ತಾ|| ಮಧ್ಯಾಹ್ನ ೧ ಗಂಟೆಗೆ ನಡೆಯುವುದು.

ಆರಾಧನೆ

ರಾಜಧಾನಿಯ ಕಿಲ್ಲೆ ಮೊಹಲ್ಲಾ ಬೀದಿ ಬಾವಿ [illegible] ಬೀದಿಯಲ್ಲಿರುವ ಶ್ರೀ ಶ್ರೀನಿವಾಸ ರಾಘವೇಂದ್ರ ಮತ್ತು ಸತ್ಯನಾರಾಯಣ ಸೇವಾ ಮಂದಿರದಲ್ಲಿ ಇದೇ ೧೬ನೇ ತಾ|| ಸತ್ಯನಾರಾಯಣ ಪೂಜೆ, ಶ್ರೀಗಳವರ ಆರಾಧನೆ ಮತ್ತು ಭಗವದ್ಭಕ್ತರುಗಳ ಜನ್ಮ ನಕ್ಷತ್ರ ವಿಜಯ ಶ್ರೀಯ ಪ್ರಾರ್ಥನೆ ನಡೆಯುತ್ತವೆ. ಎಲ್ಲರೂ ಇದರಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಉಚಿತ ನೇತ್ರ ಚಿಕಿತ್ಸೆ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಶ್ರೀ ಮೋದಿಯವರ ಇದೇ ತಿಂಗಳ ನ ಕೊನೆಯ ವಾರದಲ್ಲಿ ರಾಜಧಾನಿಯ [illegible] ಕೈಸ್ತರಪೇಟೆಯಲ್ಲಿರುವ ಶ್ರೀಮನ್ನಾರಾಯಣ [illegible] ಕಾರ್ಯದರ್ಶಿಗಳಾದ ಸರ್ದಾರ್ ಶ್ರೀ ಜೆಚ್ ನಿರಂಜನರಾವ್ ಅರಸಿನವರ ಬಂಗಲೆಯಲ್ಲಿ ಉಚಿತ ಚಿಕಿತ್ಸೆಯನ್ನು ನಡೆಸುತ್ತಾರೆ. ಕಣ್ಣಿನ ವ್ಯಾಧಿಗಳನ್ನು ಕೇವಲ ನಾಲ್ಕು ದಿನಗಳಲ್ಲಿ ಉಚಿತವಾಗಿ ಗುಣ ಪಡಿಸುವರು. ಯಾರಾದರೂ ಚಿಕಿತ್ಸೆ ಪಡೆಯಬಹುದೆಂದು ಶ್ರೀಗಳಾದ ಎಂ. ಆರ್ ಸಿ ಬಸಪ್ಪ ಮತ್ತು ಎಂ ಸಿ ವಿ ಹದೇವಸ್ವಾಮಿಯವರು ತಿಳಿಸಿರುತ್ತಾರೆ.

[illegible]

ಮೈಸೂರು ಸಿಟಿಯಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಬಾರ್ಡರುಗಳ ಸೀರೆಗಳು ೮—೧—೯ ಗಜಗಳಲ್ಲಿ ಸ್ಟಾಕಿರಂಟಿಯಾಗಿ ರಿಯಾಯತಿ ಬೆಲೆಗೆ ದೊರೆಯುತ್ತವೆ.

ದಯವಿಟ್ಟು ಒಂದೇ ಭೇಟಿ ಕೊಡಿ

ಗುರುದೇವಾ ಹಾಲ್,

ಬೆಂಗಳೂರು ಜವಳಿ ಅಂಗಡಿ,

ಶಿವರಾಂಪೇಟೆ, ಮೈಸೂರು.

Edited printed and published by A.R. Nagarajan at the Sadhvi Press D Subbaiah Road Mysore

ಗೋವಾವನ್ನು ಪಾಕಿಸ್ಥಾನಕ್ಕೆ ಕೊಳ್ಳಲು ಮಾಂಕ್ಟನ್ನರ ಪ್ರಯತ್ನ

ಹೈದರಾಬಾದ್ ರಾಜಕೀಯ ಸಲಹೆಗಾರರಾಗಿದ್ದ ಸರ್ ವಾಲ್ಟರ್ ಮಾಂಕ್ಟನ್ನರು ಪಾಕಿಸ್ತಾನದ ರಾಯಭಾರಿಯಾಗಿ ಯೂರೋಪ್ ಮತ್ತು ಅಮೇರಿಕದಲ್ಲೆಲ್ಲಾ ಕೆಲಸ ಮಾಡುತ್ತಿರುವರು. ಪಾಕಿಸ್ತಾನಕ್ಕೆ ಕೈಗಾರಿಕಾ ಯಂತ್ರಗಳು, ಶಸ್ತ್ರಾಸ್ತ್ರಗಳು, ವಿಮಾನಗಳನ್ನು ಕೊಳ್ಳಲು ಯೂರೋಪಿನ ನಾನಾ ರಾಷ್ಟ್ರಗಳಲ್ಲಿ ಮಾಂಕ್ಟನ್ನರು ಪ್ರಯತ್ನಪಡುತ್ತಿದ್ದಾರೆ. ಎಲ್ಲ ರಾಷ್ಟ್ರಗಳಲ್ಲಿರುವ ಪಾಕಿಸ್ತಾನ ರಾಯಭಾರಿಗಳೂ ಇವರಿಗೆ ಸಹಾಯ ನೀಡಬೇಕೆಂದು ಆಜ್ಞಮಾಡಲಾಗಿದೆ.

ಗೋವಾ ಬಂದರನ್ನು ಪಾಕಿಸ್ತಾನಕ್ಕೆ ಮಾರುವ ಸಂಬಂಧವಾಗಿ ಮಾಂಕ್ಟನ್ನರು ಪೋರ್ಚುಗಲ್ಲಿಗೆ ಹೋಗಿ ಮಾತುಕತೆ ನಡೆಸುವರೆಂದೂ, ಇದಕ್ಕಾಗಿ ಅವರಿಗೆ ೧೦ ಸಾವಿರ ಪೌಂಡುಗಳ ಸಂಭಾವನೆಯನ್ನು ಪಾಕಿಸ್ತಾನವು ಕೊಟ್ಟಿದೆಯೆಂದೂ ವರದಿಯಾಗಿದೆ.

ಬೆಳಗೊಳದ ಕಾರ್ಮಿಕರಿಗೆ ಬೆಂಬಲ ನೀಡಿ

ಬೆಳಗೊಳದ ಕಾರ್ಖಾನೆಯ ಸುಮಾರು ೩೦ ಜನ ಕೆಲಸಗಾರರು ಹೆಚ್ಚಿಗೆ ಕೂಲಿ, ತುಟ್ಟಿ ಭತ್ಯ ಮತ್ತು ಬೋನಸ್ಸು ಬೇಕೆಂದು ಕಾನೂನು ಬದ್ಧ ಮುಷ್ಕರ ಹೂಡಿ ಎರಡು ತಿಂಗಳಾದರೂ ಇಲ್ಲಿಯವರೆಗೂ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದು ಶೋಚನೀಯ. ಮುಷ್ಕರಗಾರರಿಗೆ ಎಲ್ಲ ಕಾರ್ಮಿಕ ಸಂಘದವರೂ ಮತ್ತು ಸಾರ್ವಜನಿಕರೂ ಸಹಾಯ ನೀಡಬೇಕೆಂದು ಕರ್ನಾಟಕ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಸ್ ನಾಗಭೂಷಣರವರು ಕೋರಿರುತ್ತಾರೆ.

ಶ್ರೀ ಸರಸ್ವತಿ ಸಂಗೀತ ಸಮಾಜ (ರಿ)

ಮೈಸೂರು

19—11—1948ನೇ ಶುಕ್ರವಾರ

ಸಂಜೆ 5-30 ಘಂಟೆಗೆ

ಟೌನ್ ಹಾಲಿನಲ್ಲಿ

ರಾಜ್ಯ ಸೇವಾ ನಿರತ ಸಂಗೀತ ಕಳಾನಿಧಿ

ಶ್ರೀ ಶೆಮ್ಮನ್ ಗುಡಿ

ಶ್ರೀನಿವಾಸ ಅಯ್ಯರ್

ಹಾಡುಗಾರಿಕೆ

ಮಾಸ್ಟರ್ ಕೃಷ್ಣ ಪಿಟೀಲ್

ಮಾಸ್ಟರ್ ರಘು ಮೃದಂಗ

ಟಿಕೆಟ್ ದರಗಳು:—

ರೂ 5, 3, 2, ಮತ್ತು 1. 2ನೇ ತರಗತಿಗಳಲ್ಲಿ ರಿಜರ್ವೇಷನ್ ಫೀ 0-8-0

ಮಹಾತ್ಮರ ಕೊಲೆ. ಬ[illegible] ಗೋಡ್ಸೆಯ ವಿವರಣೆ

ಮಹಾತ್ಮರ ಕೊಲೆ ವಿಚಾರಣಾ [illegible] ಟ್ ನ ಮುಂದೆ ಅಪರಾಧಿ ನಾಥೂರಾಮ ಗೋಡ್ಸೆಯು ತನ್ನ ಹೇಳಿಕೆಯನ್ನು ಕೊಡುತ್ತ [illegible] ವನ್ನು ನ್ಯಾಯಾಧೀಶರು ೫ ಗಂಟೆಗಳ [illegible] ಲ ಆಲಿಸಲು ಬಿಟ್ಟರು. ಮ[illegible] ರನ್ನು ತಾನು ಯಾವ ರೀತಿ ಕೊಲೆ [illegible] ದನೆಂಬುದನ್ನು ಅವನು ಹೀಗೆ ವಿ[illegible] ದ್ದಾನೆ:-

ಕಳೆದ ಜನವರಿ ೩೦ ನೇ ತಾರೀ[illegible] ಜೆ ಗಾಂಧೀಜಿಯವರು ಪ್ರಾರ್ಥನಾ [illegible] ಬಂದು ನಾಲ್ಕೈದು ಹೆಜ್ಜೆ ಹೋದ[illegible] ನಾನು ಮಹಾತ್ಮರ ಮುಂದೆ ಹಾರಿ [illegible] ಪಿಸ್ತೂಲನ್ನು ಹಿಡಿದು ಪ್ರಣಾಮ ಮಾ[illegible] ನು ಪಿಸ್ತೂಲನ್ನು ನನ್ನ ಕೋಟಿನ [illegible] ಗೆದಾಗ ಅದರ ಕ್ಯಾಚನ್ನು ತೆಗೆ[illegible] ನಾನು ಎರಡು ಬಾರಿ ಗುಂಡು ಹಾರಿ[illegible] ದು ಭಾವಿಸಿದ್ದೆನು. ಆದರೆ ಮೂರು [illegible] ಹಾರಿಸಿದೆನೆಂದು ಅನಂತರ ಗೊತ್ತಾಯಿ[illegible] ಗುಂಡು ಹಾರಿಸಿದ ಅರ್ಧ ನಿಮಿಷ [illegible] ಯುಂಟಾಗಿತ್ತು. ಜನ ಹತ್ತಿರ ಬರ[illegible] ಟಾಗಿತ್ತು. 'ಪೋಲೀಸ್, ಪೋಲೀಸ್, [illegible] ರ' ಎಂದು ಕೂಗಿಕೊಂಡೆನು. ಅವ[illegible] ಮರ ನಾಥ್ ಎಂಬುವರು ತನ್ನನ್ನು [illegible] ಮಾಡಿದರು ನನ್ನನ್ನು ಗುಂಡಿನಿಂ[illegible] ಡೆಯುವುದಾಗಿ ಅವರು ತಿಳಿಸಿದರು [illegible] ನ್ನು ಹೊಡೆದರೂ ಪರವಾಗಿಲ್ಲ; [illegible] ನ್ನು ರಕ್ಷಣೆಗಾಗಿಯೇ ಪಿಸ್ತೂಲನ್ನು [illegible] ಯಾಗಿ ಹಿಡಿದುಕೊಳ್ಳಿ ಎಂದು [illegible] ನು ನನ್ನ ಕಕ್ಷದಲ್ಲಿದ್ದ ಒಬ್ಬರು ನನ್ನ [illegible] ಯ ಮೇಲೆ ಎರಡು ಮೂರು ಏಟುಗ[illegible] ಹೊಡೆದರು. ನನ್ನ ತಲೆ ಬುರುಡೆ[illegible] ಒಡೆದುಹೋಗಿದೆ [illegible] ಮಾಡಿದರು [illegible] ಎಂದು ತಿಳಿಸಿದೆನು [illegible] ಎರಡು ಗಂಟೆಗಳ ಕಾಲದ ನಂತರ [illegible] ೩ ಮತ್ತು ದೇಹವು [illegible] ದನ್ನು ಪರೀಕ್ಷಿಸಬೇಕೆಂದು [illegible] ಳಿದೆನು. ವೈದ್ಯರು ಪರೀಕ್ಷಿಸಿ [illegible] ಯೆಂದು ತಿಳಿಸಿದರು.

ಜಿಲ್ಲಾ ಇಂಜನಿಯರಿಂಗ್ ಕಂಟ್ರಾಕ್ಟ[illegible] ಸಮ್ಮೇಳನ

ಇದೇ ೧೪ನೇ ತಾ|| ರಾಜಧಾನಿ[illegible] ನಡೆಯಬೇಕಾಗಿದ್ದ ಮೈಸೂರು [illegible] ಇಂಜನಿಯರಿಂಗ್ ಕಂಟ್ರಾಕ್ಟರುಗಳ [illegible] ಸಮ್ಮೇಳನವನ್ನು ಕಾರಣಾಂತರದಿಂದ [illegible] ನೇ ತಾ|| ಗೆ ಮುಂದುವರಿಸಲಾಗಿದೆ[illegible] ಅವರ ಕಾರ್ಯದರ್ಶಿಗಳು ತಿಳಿಸಿರುತ್ತಾ[illegible]

ಶ್ರೀ ಗಾಯತ್ರೀ ಟಾಕೀಸ್

ತಾ|| 12-11-48 ರಿಂದ : 4 ದಿನಗಳು ಮಾತ್ರ

20th ಸೆಂಚುರಿ ಫಾಕ್ಸ್

ಅಂಡರ್ ಟೂ ಫ್ಲಾಗ್ಸ್

UNDER TWO FLAGS

Starring-- onald Colman

Morning Shows at 10-30 a m from 12-11-48 for 3 days

Columbia's Mightiest War Picture

SAHARA

: Starring - Humphrey Bogart

೧೦—೧೧—೪೮ ರಿಂದ : ದಿನವಹಿ ೪ ಪ್ರದರ್ಶನಗ[illegible]

ಮೈಸೂರು ಒಲಿಂಪಿಯಾ ಟಾಕೀಸಿನಲ್ಲಿ

ರಾಮಾಯಣ ಗ್ರಂಥದಿಂದ ಆರಿಸಿದ ಇಂದ್ರಜಿತು ಪುನ್ನಾಗ ಶಕ್ತಿ ಹುಟ್ಟುಹಾಕುವ[illegible] ದುದು ಲಕ್ಷ್ಮಣನೊಡನೆ ಘೋರ ಯುದ್ಧ - ಸುಲೋಚನ ತನ್ನ ಪತಿ[illegible] ಮುಂಡವನ್ನು ಕಂಡು ಶಪಿಸುವುದು - ಇವುಗಳಿಂದ ಕೂಡಿದ

ಎಂ. ಕೆ. ತ್ಯಾಗರಾಜ ಭಾಗವತರ ಹಿಂದೀ ಚಿತ್ರ

SATI VIJAYA : ಸತೀ ವಿಜಯ

ಭೂಮಿಕೆ:- ರಕ್ತಮಾಲಾ, ಕಿಶೋರ್ ಕುಮಾರ್ [illegible]

ಇಂಪಾದ ಗಾನ : ಸುಂದರ [illegible]

Distributors:- RAYAL PICTURES CIRCUIT, 31, Gandhinagar - Bangalore 2.

ಕ.ಫ]

ಸಂಪುಟ ೭] ಶನಿವಾರ ೧೩-೧೧-೪೮ [ಸಂಚಿಕೆ ೧೨೪

ಹೈದರಾಬಾದ್ ವಿಭಜನೆಗೆ - ನೆಹರೂರವರ ವಿರೋಧ -

ನೆಹರೂ ಜಯಂತಿ

ಮೈಸೂರು ೧೩

[illegible] ಶ್ರೀ ಬ್ರಹ್ಮಾನಂದಸ್ವಾಮಿಗಳ [illegible] ನಾಳೆ ಸಂಜೆ [illegible] ಗಂಟೆಗೆ ಪಂಡಿತ ನೆಹರೂರವರ ಜನ್ಮೋತ್ಸವ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ನಡೆಯುವುದು.

[illegible] ನೆಹರೂ ಜಯಂತಿ [illegible] ನಾಳೆ ಬೆಳಿಗ್ಗೆ [illegible] ಗಂಟೆಗೆ ಪ್ರಭಾತ [illegible] ಧ್ವಜ ವಂದನೆ ಮತ್ತು ಸಂಜೆ [illegible] ಏರ್ಪಡಿಸಿರುತ್ತಾರೆ.

[illegible] ಲಕ್ಷ್ಮೀಪುರಂ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ಬೆಳಿಗ್ಗೆ [illegible] ಗಂಟೆಗೆ ಉತ್ಸವವನ್ನು ನಡೆಸುವರು. [illegible] ಗಂಟೆಗೆ ಪ್ರಭಾ [illegible]

[illegible]ಚಕ್ರ ಪತ್ರಿಕೆ ೨೫೦೦ ರೂ ಠೇವಣಿ ಕೊಡಬೇಕು

ಬೆಂಗಳೂರಿನಿಂದ ಪ್ರಕಟವಾಗುತ್ತಿರುವ [illegible]ಚಕ್ರ ಎಂಬ ವಾರ ಪತ್ರಿಕೆಯ [illegible] ಶ್ರೀ [illegible] ೨೫೦೦ [illegible] ಠೇವಣಿಯನ್ನು ಕೊಡಬೇಕೆಂದು ಸರ್ಕಾರದವರು ಕೇಳಿರುತ್ತಾರೆ. [illegible]

ಹಳೇ ವಿದ್ಯಾರ್ಥಿ ಸಂಘ

ನಂಜನಗೂಡು ೧೩

ಇಲ್ಲಿನ ಹೈಸ್ಕೂಲಿನ ಹಳೇ ವಿದ್ಯಾರ್ಥಿ [illegible] ಸಂಜೆ [illegible] ಗಂಟೆಗೆ ಹೈಸ್ಕೂಲು [illegible] ನಡೆಯುವುದು. ಹಳೇ ವಿದ್ಯಾರ್ಥಿಗಳೆಲ್ಲರೂ ಸಭೆಗೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ರಾಜಮಹಲ್

ಮೈಸೂರು

13-11-48ರಿಂದ

[illegible]

ದಾ|| ಕೊಟ್ನಿಸ್-ಕಿ-ಅಮರ್ ಕಹಾನಿ

— ಪಾತ್ರಗಳು: —

● ಶಾಂತಾರಾಂ

● [illegible]

Morning Shows From 12-11-48 for 4 days only

The Rebel Son

-: With :-

Halro Baur,

Roger Livesey,

Patrica Roc

ಇನ್ನು ೫ ವರ್ಷ ಭಾಷಾವಾರು ಪ್ರಾಂತ್ಯಗಳಿಲ್ಲ

[illegible] ಭಾಷಾವಾರು ಪ್ರಾಂತ್ಯ ರಚನೆಯ [illegible] ತಿಳಿದುಬಂದಿದೆ.

ಟ್ರಾಫಿಕ್ ನಿಯಮ ಉಲ್ಲಂಘಿಸದಂತೆ ಪೋಲೀಸರ ಕಾರ್ಯಕ್ರಮ

ಮೈಸೂರು ೧೩

ಮೈಸೂರು ನಗರದ ಟ್ರಾಫಿಕ್ ಪೋಲೀಸರು [illegible] ಸೆಪ್ಟೆಂಬರ್ [illegible] ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ [illegible] ಮೊಕದ್ದಮೆಗಳನ್ನು ಹೂಡಿದ್ದರು. [illegible] ಟ್ರಾಫಿಕ್ ಪೋಲೀಸ್ ಸ್ಟೇಷನ್ನಿಗೆ ಜನರು [illegible] ಕೋರಲಾಗಿದೆ.

19-11-48ನೇ ಶುಕ್ರವಾರ

ಸಂಜೆ 5-30 ಗಂಟೆಗೆ ಮೈಸೂರು

ಟೌನ್ ಹಾಲಿನಲ್ಲಿ ನಡೆಯುವ

[illegible] ಶ್ರೀನಿವಾಸಯ್ಯಂಗಾರ್ಯರವರ

ಸಂಗೀತ ಕಛೇರಿಗೆ ಟಿಕೆಟು ದೊರೆಯುವ

-: ಸ್ಥಳಗಳು :-

1, 2, ನೇ ತರಗತಿಗಳಿಗೆ [illegible] ರಿಜರ್ವ್ ಮಾಡಿಕೊಳ್ಳುವ

1) [illegible]

2) ಶ್ರೀ ರಾಮಚಂದ್ರ [illegible]

[illegible]

3) [illegible]

[illegible]

4) ಎ. ಎಸ್. ರಾಮಚಂದ್ರ ರಾವ್, 'ಶಂಕರ ವಿಹಾರ', [illegible]

[illegible]

5) ಎಚ್. [illegible]

ಟೌನ್ ಹಾಲ್ [illegible] ೧ ನೇ ತರಗತಿಗೆ [illegible] ಟಿಕೆಟ್‌ಗಳನ್ನು [illegible]

ನೆಹರೂರವರ ಗೌರವಾರ್ಥವಾಗಿ ಕ್ರೀಡಾ ವ್ಯವಸ್ಥೆ

ಮೈಸೂರು ೧೩

ಭಾರತದ ಪ್ರಧಾನಿ ಪಂಡಿತ ನೆಹರೂರವರು ಮುಂದಿನ [illegible] ರಾಜಧಾನಿಗೆ ಭೇಟಿ ಕೊಡುವ ಸಂಬಂಧದಲ್ಲಿ [illegible] ಕ್ರೀಡಾ ವ್ಯವಸ್ಥೆಯನ್ನು [illegible] ಏರ್ಪಡಿಸಲು ಸರ್ಕಾರದವರು [illegible] ಈಗಾಗಲೇ ಈ ಬಗ್ಗೆ ಕೆಲಸ ಪ್ರಾರಂಭವಾಗಿದೆಯೆಂದು ಹೇಳಲಾಗಿದೆ.

ಟೋಜೋರವರಿಗೆ ಮರಣ ದಂಡನೆ

ಜಪಾನಿನ [illegible] ಅಲ್ಲಿನ ಮಾಜಿ ಪ್ರಧಾನಿ ಟೋಜೋ ಮತ್ತು ಅವರ ಅನುಯಾಯಿಗಳಾದ [illegible] ಮರಣ ದಂಡನೆಯನ್ನು ವಿಧಿಸಿರುತ್ತಾರೆ.

[illegible] ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ.

ಅಣ್ಣಾಮಲೆ ವಿದ್ಯಾರ್ಥಿಗಳ ಮುಷ್ಕರ

ಅಣ್ಣಾಮಲೆ ವಿಶ್ವವಿದ್ಯಾಲಯದ [illegible] ವಿದ್ಯಾರ್ಥಿಗಳು ನೊನ್ನೆಯಿಂದ ಮುಷ್ಕರ ಹೂಡಿರುತ್ತಾರೆ. [illegible] ಮುಷ್ಕರಕ್ಕೆ ಕಾರಣವೆಂದು ಹೇಳಲಾಗಿದೆ.

ನಾರ್ಕಿಂಗಿನ ಕಡೆ ಕಮ್ಯೂನಿಸ್ಟ್ ಸೈನ್ಯ

[illegible] ಕಮ್ಯೂನಿಸ್ಟ್ ಸೈನಿಕರು [illegible] ರಾಜಧಾನಿಯಾದ ನಾರ್ಕಿಂಗಿಗೆ [illegible] ಮೈಲಿ [illegible] ಪ್ರತಿಭಟನೆ [illegible]

ಕಾರ್ಮಿಕ ಗೊಂದಲವನ್ನೆಬ್ಬಿಸಲು ಸಮಾಜವಾದಿಗಳ ಪಿತೂರಿ

ಪಿ ಟಿ ಐ ನವ ದೆಹಲಿ [illegible]

ಭಾರತ ಸಮಾಜವಾದಿ ಪಕ್ಷದವರು ದೇಶದಲ್ಲೆಲ್ಲಾ ಕಾರ್ಮಿಕ ಮುಷ್ಕರವನ್ನೆಬ್ಬಿಸಿ, [illegible] ಉಪಯೋಗಿಸಿಕೊಳ್ಳಲು ಪಿತೂರಿ ನಡೆಸುತ್ತಿರುವರೆಂದೂ, [illegible] ಸಮಾಜವಾದಿ ಪಕ್ಷದ [illegible] ಮೇಲೆ [illegible] ಕೇಂದ್ರ ಸರ್ಕಾರದವರು [illegible] ತಿಳಿದುಬಂದಿದೆ.

ಹೈದರಾಬಾದಿನ ಭಾಷಾವಾರು ವಿಭಜನೆ ಯುಕ್ತವಲ್ಲ

ಪಂಡಿತ ಜವಹರಲಾಲ್ ನೆಹರೂರವರು ನೆನ್ನೆ ನವ ದೆಹಲಿಯಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ತಮ್ಮ [illegible] ಯೂರೋಪ್ ಪ್ರವಾಸದ ಅನುಭವಗಳನ್ನು ವಿವರಿಸಿದರು. ಆ ಸಂದರ್ಭದಲ್ಲಿ ಅವರು ಹೈದರಾಬಾದಿನ ವಿಷಯವಾಗಿ [illegible] ಭಾಷಾನುಗುಣವಾಗಿ [illegible] ದಕ್ಷಿಣ ಭಾರತದಲ್ಲೂ ಮತ್ತು [illegible] ಅನೇಕ [illegible] ತಿಳಿಸಿದರು.

ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾಪ್ರಭುತ್ವವಾಗಿರುವುದೆಂದೂ ಮತ್ತು [illegible] ಪಂಡಿತ ನೆಹರೂರವರು ತಿಳಿಸಿರುತ್ತಾರೆ.

ಅಬ್ಕಾರಿ ಇಲಾಖೆಯ ಅಧಿಕಾರಿಗಳ ದಸ್ತಗಿರಿ

ಬೆಂಗಳೂರು ೧೩

[illegible] ಅಬ್ಕಾರಿ ಇಲಾಖೆಯ [illegible] ಎಂಬುವರು [illegible] ೧೦೦ ರೂ [illegible] ಎಂಬ [illegible]

ಹೈದರಾಬಾದಿನಲ್ಲಿ ಮೊಹರಂ ಮೆರವಣಿಗೆ ಗಲಭೆ

ಮೊಹರಂ ಹಬ್ಬದ ಮೆರವಣಿಗೆ ಸಂಬಂಧವಾಗಿ [illegible] ಹೈದರಾಬಾದಿನಲ್ಲಿ [illegible] ಗಲಭೆ ನಡೆದು [illegible] ಪೋಲೀಸರು [illegible] ರಾತ್ರಿ ೧೦ ರಿಂದ ಬೆಳಿಗ್ಗೆ [illegible] ವರೆಗೆ ಕರ್ಫ್ಯೂ ಆಜ್ಞೆಯನ್ನು [illegible]

[illegible] ಭಾರತದ ನ್ಯಾಯಾಧೀಶರಾದ ಶ್ರೀ [illegible]

ಪ್ರಪಂಚವು ಅಪಾಯವನ್ನು ಸಮೀಪಿಸುತ್ತಿದೆ

ಚರಿತ್ರೆಯ ಇತಿಹಾಸದಲ್ಲೇ ಸಂಭವಿಸದಂತಹ ಅಪಾಯವನ್ನು ಪ್ರಪಂಚವು ಸಮೀಪಿಸುತ್ತಿದೆ. ಲೀಗ್ ಆಫ್ ನೇಷನ್ಸ್ ಸಂಸ್ಥೆಯು ವಿಫಲವಾಯಿತು, ಮತ್ತು ವಿಶ್ವ ಸಂಸ್ಥೆಯೂ ಸಹ ಫಲಕಾರಿಯಾಗುತ್ತಿಲ್ಲ. ಪ್ರಪಂಚದ ಚರಿತ್ರೆಯಲ್ಲೇ ಇಲ್ಲದಂತಹ ಗೊಂದಲವು ಅನೇಕ ರಾಷ್ಟ್ರಗಳಲ್ಲಿ ಎದ್ದಿದೆ-ಎಂದು ದಕ್ಷಿಣ ಆಫ್ರಿಕದ ಮಾಜಿ ಪ್ರಧಾನಿ ಮಾರ್ಷಲ್ ಸ್ಮಟ್ಸ್‌ರವರು ಹೇಳಿದ್ದಾರೆ.

ಗಾನ ವಿಶಾರದ ಧಾರಾಂ ಕೃಷ್ಣಪ್ಪನವರ ಶ್ರೀ

ಪ್ರಸನ್ನ ಸೀತಾರಾಮ

ಮಂದಿರ, ಮೈಸೂರು.

14-11-1948 ನೇ ಭಾನುವಾರ ಸಂಜೆ 6 ಘಂಟೆಗೆ

ತಿರುಚನಾಪಳ್ಳಿಯ ವಿದ್ವಾನ್ ಶ್ರೀ

ಶಿವಚಿದಂಬರ ಅಯ್ಯರ್

ರವರ ಕೊಳಲು ವಾದನ ಮತ್ತು ಅವರ ಶಿಷ್ಯಂದಿರು ಸಂಗೀತ ವಿದುಷಿ

ಶ್ರೀಮತಿ ಸಾವಿತ್ರಮ್ಮಾಳ್

ರವರ ಹಾಡುಗಾರಿಕೆ.

ಪಿಟೀಲು ಎ. ವಿ. ಕೃಷ್ಣಮಾಚಾರ್ಯರು
ವಿ ವಿ. ರಂಗನಾಥರವರ ಮೃದಂಗ

ಮೆಂಬರಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ
ಗಂಡಸರಿಗೆ ರೂ 1 ಹೆಂಗಸರಿಗೆ 8 ಆಣೆ
ಮಕ್ಕಳಿಗೆ 4 ಆಣೆ

ತಿ ಶಿವಶಂಕರ ರಾವ್,
ಬಿ ಚೌಡಪ್ಪ.
ಗೌ॥ ಕಾರ್ಯದರ್ಶಿಗಳು.

ಚಾಮುಂಡೇಶ್ವರೀ ಟಾಕೀಸ್

ಬೆಳಗಿನ ಆಟ 10-30 ಕ್ಕೆ

ನವಂಬರ್ 12 ರಿಂದ 4 ದಿನಗಳು ಮಾತ್ರ

ದಿ ವೆಲ್‌ಗ್ರೂವ್ಡ್ ಬ್ರೈಡ್

ಪ್ರಸಿದ್ಧರಾದ ಒಲಿವಿಯ ಡಿಹವಿಲ್ಯಾಂಡ್
ರೇ ಮಿಲ್ಯಾಂಡ್ ಮುಂತಾದವರ ಪಾತ್ರ

ಮುಂದಿನ ಬೆಳಗಿನ ಆಟ

ಸ್ಟೋಲನ್ ಲೈಫ್

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಬಾರ್ಡರುಗಳ ಸೀರೆಗಳು 6—8—9 ಗಜಗಳಲ್ಲಿ ಗ್ಯಾರಂಟಿಯಾಗಿ ನ್ಯಾಯ ಬೆಲೆಗೆ ದೊರೆಯುತ್ತವೆ.

ದಯವಿಟ್ಟು ಇಂದೇ ಭೇಟಿ ಕೊಡಿ.

ಗುರುದೇವಾ ಹಾಲ್,

ಬೆಂಗಳೂರು ಜವಳಿ ಅಂಗಡಿ,
ಶಿವರಾಂಪೇಟೆ, ಮೈಸೂರು.

ಟಿಕೇಟು ಇಲ್ಲದ ಪ್ರಯಾಣಿಕರ ಮೇಲೆ ಕಾರ್ಯಕ್ರಮ

ಮೈಸೂರು ೧೨

ಮೈಸೂರು ರೈಲಿನಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ೧೮ ಸಾವಿರ ಜನರು ಟಿಕೆಟ್ಟಿಲ್ಲದೆ ಪ್ರಯಾಣ ಮಾಡುತ್ತಿದ್ದುದನ್ನು ಪತ್ತೆ ಮಾಡಲಾಯಿತೆಂದೂ, ಅವರಿಂದ ಹತ್ತು ಸಾವಿರ ರೂ.ಗಳನ್ನು ದಂಡ ರೂಪದಲ್ಲಿ ವಸೂಲು ಮಾಡಲಾಯಿತೆಂದೂ ಹೇಳಲಾಗಿದೆ

ಗಾಂಧೀ ಸ್ಮಾರಕ ಸ್ಟಾಂಪುಗಳು

ಭಾರತ ಸರಕಾರದವರು ಮಹಾತ್ಮಾಜಿ ಸ್ಮಾರಕ ಸ್ಟಾಂಪುಗಳನ್ನು ಮಾರುವ ಕೆಲಸ ಜಾರಿಯನ್ನು ಡಿಸೆಂಬರ್ ೩೧ನೇ ತಾರೀಖಿನ ವರೆಗೆ ಮುಂದುವರಿಸಲಾಗುವುದು.

ನಿಮ್ಮ ಮೈ ಮೊಳಪಾಗಿರಬೇಕೆ ?

ಕೋಮಲವಾಗಿರಬೇಕೆ ? ನೀವು

ಯಾವಾಗಲೂ ಯೌವನಸ್ಥರಾಗಿರಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಸಾರ್ವತ್ರಿಕ ವಿದ್ಯಾರ್ಥಿನಿಲಯ

ಜಿಲ್ಲಾ ಬೋರ್ಡ್ ಅಧ್ಯಕ್ಷರಿಂದ ಆರಂಭ

ಹುಣಸೂರು ೧೨

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರೂ ರಾಜ್ಯಾಂಗ ಸಭಾ ಸದಸ್ಯರೂ ಆದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಈ ದಿನ ಪಟೇಲ್ ಕಾಳೇಗೌಡರ ಹೆಸರಿನಲ್ಲಿ ಅವರ ಮಕ್ಕಳು ಶ್ರೀ ದೇವರಸೇಗೌಡರು ಕಟ್ಟಿಸಿಕೊಟ್ಟಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆರಂಭೋತ್ಸವವನ್ನು ನೆರವೇರಿಸಿದರು ಶಾಲಾ ಬಾಲಕಿಯರಿಂದ ಮಂಗಳಗೀತೆ ಶ್ರೀ ಕೆಂಪೇಗೌಡರಿಂದ ಸ್ವಾಗತ ಪದ್ಯಗಳಾದನಂತರ ವಿದ್ಯಾರ್ಥಿನಿಲಯದ ಕಾರ್ಯದರ್ಶಿ ಶ್ರೀ ಅಪ್ಪಾಜಪ್ಪನವರು ಮಾತನಾಡಿ ಈ ಕಾರ್ಯಕ್ಕೆ ಉಚಿತವಾಗಿ ಕಟ್ಟಡವನ್ನು ಒದಗಿಸಿಕೊಟ್ಟ ಶ್ರೀ ದೇವರಸೇಗೌಡರನ್ನೂ ಕಲಾ ಒಂದು ಎಕರೆ ತರೀ ಜಮೀನನ್ನು ಕೊಟ್ಟ ಶ್ರೀಗಳು ಪಟೇಲ್ ಪರಶುರಾಮೇಗೌಡ ಮತ್ತು ಪಟೇಲ್ ಲಕ್ಷ್ಮೀಗೌಡರುಗಳನ್ನೂ ಮತ್ತು ಪ್ರತಿ ವರ್ಷವೂ ಭತ್ತವನ್ನು ಕೊಟ್ಟು ಸಹಾಯ ಮಾಡುತ್ತಿರುವ ಇತರ ದಾನಿಗಳನ್ನೂ ಅಭಿನಂದಿಸಿ ಸಮಿತಿಯ ಕಾರ್ಯಕಲಾಪಗಳನ್ನು ವಿವರಿಸಿದರು

ಅನಂತರ ಇಲ್ಲಿನ ಪುರಸಭಾ ಉಪಾಧ್ಯಕ್ಷರಾದ ಶ್ರೀ ಎಸ್ ಹೆಚ್ ತಮ್ಮಯ್ಯನವರು ಸಾರ್ವಜನಿಕರ ಪರವಾಗಿಯೂ ಮತ್ತು ಶ್ರೀ ದೇವರಸೇಗೌಡರ ಪರವಾಗಿಯೂ ಬಿನ್ನವತ್ತಳೆಗಳನ್ನ ಅರ್ಪಿಸಿದರು

ಅನಂತರ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಸ್ವಾರಸ್ಯವಾದ ಭಾಷಣವನ್ನು ಮಾಡಿದರು ದೇಶದ ಪುನರ್ರಚನೆಯಾಗಬೇಕಾದರೆ ಪ್ರತಿಯೊಬ್ಬನೂ ವಿದ್ಯಾವಂತನಾಗಬೇಕಾದುದು ಅತ್ಯಗತ್ಯ. ಜ್ಞಾನಾರ್ಜನೆಗಾಗಿ ಬಡ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯಗಳನ್ನು ಒದಗಿಸಿ ಕೊಡಬೇಕಾದುದು ಎಲ್ಲರ ಕರ್ತವ್ಯ. ಭಾವಿ ಪ್ರಜೆಗಳಾಗತಕ್ಕ ಇಂದಿನ ವಿದ್ಯಾರ್ಥಿಗಳು ಈ ರೀತಿಯ ಸಾರ್ವತ್ರಿಕ ವಿದ್ಯಾರ್ಥಿ ನಿಲಯಗಳಲ್ಲಿ ಬಾಲ್ಯದಿಂದ ಕಲೆತು ಜ್ಞಾನಾರ್ಜನೆ ಮಾಡುವುದರಿಂದ ಈಗ ನಮ್ಮಲ್ಲಿ ರಕ್ತಗತವಾಗಿ ಕಾಣುವಂತಹ ವೈಷಮ್ಯ ಭಾವನೆ ಸಂಪೂರ್ಣವಾಗಿ ತೊಡೆದುಹೋಗಿ ಭವಿಷ್ಯದ ಜನಾಂಗದಲ್ಲಿಯಾದರೂ ಪರಸ್ಪರ ಸೌಹಾರ್ದ ಮನೋಭಾವ ಮತ್ತು ವಿಶ್ವಾಸಗಳುಂಟಾಗುವುವು. ಗ್ರಾಮ ಪುನರ್ರಚನೆಗಾಗಿ ಪ್ರತಿಯೊಬ್ಬ ಪ್ರಜೆಯು ಸರ್ಕಾರದೊಂದಿಗೆ ಸಹಕರಿಸಿ ನಿಸ್ವಾರ್ಥದಿಂದ ದೇಶದ ಪ್ರಗತಿಗಾಗಿ ದುಡಿಯಲು ಬದ್ಧ ಕಂಕಣರಾಗಬೇಕು. ಶ್ರೀ ದೇವರಸೇಗೌಡರು ಸಾರ್ವತ್ರಿಕ ವಿದ್ಯಾರ್ಥಿನಿಲಯಕ್ಕಾಗಿ ಈ ಕಟ್ಟಡವನ್ನು ಕೊಟ್ಟು ದಾನ ಮಾಡಿರುವ ಶ್ಲಾಘನೀಯವಾದ ಕಾರ್ಯವನ್ನು ಎಲ್ಲರೂ ಅನುಸರಿಸಿ ತಮ್ಮ ಶಕ್ತ್ಯಾನುಸಾರ ಇಂತಹ ಧರ್ಮಕಾರ್ಯಗಳನ್ನು ಮಾಡಿ ದೇಶದ ಪುನರ್ರಚನೆಗೆ ದುಡಿಯಬೇಕು—ಎಂದು ಹೇಳಿ ಅದರ ಸಹ ಈ ವಿದ್ಯಾರ್ಥಿನಿಲಯದ ಉಪಯೋಗಕ್ಕಾಗಿ ಪ್ರತಿ ವರ್ಷವೂ ೧ ಖಂಡುಗ ಭತ್ತವನ್ನು ಕೊಡುವುದಾಗಿ ತಿಳಿಸಿ ನಿಲಯದ ಆರಂಭೋತ್ಸವವನ್ನು ನೆರವೇರಿಸಿದರು ... ಮರಿಗೌಡರು ವಂದನೆಗಳನ್ನು ಅರ್ಪಿಸಿದ ... ರಿಕರ ರಾಷ್ಟ್ರಗೀತೆ ಮತ್ತು ಜಯಕಾರಗಳೊಂದಿಗೆ ... ಸಮಾರಂಭವು ಮುಕ್ತಾಯವಾಯಿತು

ವಿವಿಧ ವಿನೋದಾವಳಿ

ರಾಜಧಾನಿಯ ಸೀಡರ್ ಇಲೆವೆನ್ ... ನ ಸಹಾಯಾರ್ಥವಾಗಿ ಇದೇ ೧೫ ನೇ ... ರೀಖು ಸೋಮವಾರ ಸಂಜೆ ೬ ... ಟೌನ್ ಹಾಲಿನಲ್ಲಿ ವಿವಿಧ ವಿನೋದಾವಳಿಯು ಪೌರ ಸಭಾಧ್ಯಕ್ಷರಾದ ಶ್ರೀ ಟಿ. ... ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

○ ಬ್ರಿಟಿಷ್ ಮತ್ತು ಅಮೇರಿಕ ಆಕ್ರಮಿತ ಜರ್ಮನಿಯ ೧ ಕೋಟಿ ಜನ ... ಕರು ಮೊನ್ನೆಯಿಂದ ಸಾರ್ವತ್ರಿಕ ... ರವನ್ನು ಪ್ರಾರಂಭಿಸಿರುತ್ತಾರೆ.

Edited printed and published by A.R. Nagarajan at the Sadhvi Press D Subbaiah Road Mysore.

ಅಮೋಘವಾದ 3 ನೆಯ ವಾರ

ಜೂಪಿಟರ್‌ರವರ ಅತ್ಯುತ್ತಮ ಸಂಗೀತ, ನೃತ್ಯಗಳಿಂದ ಕೂಡಿದ ತಮಿಳು ಚಿತ್ರ

★ ರಾಜಕುಮಾರಿ ★

ಮೈಸೂರು ನ್ಯೂ ಅಪೆರಾ ಟಾಕೀಸ್

ಮತ್ತು ಇತರ ಕೇಂದ್ರಗಳಲ್ಲಿ

SHREE VIJAYA PICTURES (B'lore) Release.

ಕಬ್ಬಿಣದ ಪೆಟ್ಟಿಗೆ

ಸ್ಟೀಲ್ ಕ್ಯಾಷ್ ಬಾಕ್ಸ್
ತ್ರಿಜೋರಿವಾಲಾ ಬೀರು

ಮುಟ್ಟಿದರೆ ಬೆಲೆ ಹೊಡೆಯುವ ಪೆಟ್ಟಿಗೆ

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್,

2767, ... ಹಳ್ಳದ ಕೇರಿ, ... ಮೈಸೂರು

ಅಮೋಘವಾದ ಕಬ್ಬಿಣದ ಪೆಟ್ಟಿಗೆಗಳು ಬಿಕರಿಗೆ ಸಿದ್ಧವಾಗಿವೆ

ಹಾಲಿವುಡ್ ಸಿಟಿ, ಜೀವಣ್ಣರಾಯನ ಕಟ್ಟೆ, ಮೈಸೂರು

ಭಾನುವಾರ:- ತಾರೀಖು 14-11 1948

ಪ್ರವೇಶದ ಟಿಕೆಟ್ಟಿನ ಮೇಲೆ ಒಟ್ಟು ಬಹುಮಾನ

150 ರೂಪಾಯಿಗಳು

1 ನೇ ಬಹುಮಾನ 75 ರೂ., 2 ನೇ ಬಹುಮಾನ 20 ರೂ., 3 ನೇ ಬಹುಮಾನ 15 ರೂ., 4 ನೇ ಬಹುಮಾನ 10 ರೂ., 5 ನೇ ಬಹುಮಾನ 10 ರೂ., 6 ನೇ ಬಹುಮಾನ 10 ರೂ. ಮತ್ತು 7 ನೇ ಬಹುಮಾನ 10 ರೂ.

ಒಟ್ಟು ಬಹುಮಾನ 150 ರೂಪಾಯಿಗಳು.

ಪ್ರವೇಶ ದರ 0 - 3 - 0

ಬಹುಮಾನಗಳನ್ನು ಸೋಮವಾರ 12 ಘಂಟೆಯವರೆವಿಗೆ ಪಡೆಯಬಹುದು.

—: ಪ್ರದರ್ಶನಗಳ ವಿವರ :

ಪ್ರಾಣಿಗಳಿಲ್ಲದ ಸರ್ಕಸ್, ಸುಪ್ರಸಿದ್ಧ ಹಾಡುವವರು ಮತ್ತು ನೃತ್ಯಗಾರರು, ಸವಾರಿ. ಮರಣಕಾರಕದ ವಿಮಾನ. ಪ್ರೊ॥ ಭೂಷಣರಾಜ್‌ರವರ ಅದ್ವಿತೀಯ ಮ್ಯಾಜಿಕ್

ಚಳಿಗಾಲಕ್ಕೆ ಉತ್ತಮವಾದ ರಗ್ಗುಗಳೂ ಶಾಲುಗಳು

ಅಪ್ಪಟ ಉಣ್ಣೆಯ ರಗ್ಗುಗಳೂ, ಎರಡು ಕಡೆ ಬೇರೆ ಬೇರೆ ಕಲರಿನ ಇಟಾಲಿಯನ್ ರಗ್ಗುಗಳೂ, ಕಾಶ್ಮೀರ ಶಾಲುಗಳೂ ಅನೇಕವಾಗಿ ಬಂದಿವೆ

ಬಾಹುಸಾಹೇಬ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು.

ಸೋಂಚಿಕೆ 792 WEEKLY EDITION ಬಿಡಿ ಪ್ರತಿ 6 ಕಾಸು

ಸಂಪುಟ ೧೩] ಭಾನುವಾರ ೧೪-೧೧-೪೯ [ಸಂಚಿಕೆ ೧೭

ಚಿಯಾಂಗ್ ಕೈಷೇಕರಿಗೆ ಭಾರತದಲ್ಲಿ ಆಶ್ರಯ ?

...ಧ್ವಜಾರೋಹಣ

ಮೈಸೂರು ೧೪.

...ಜಯಂತಿ ಪ್ರಯುಕ್ತ ಈ ದಿನ ...ಗ್ರೌಂಡ್ ಮೈದಾನದಲ್ಲಿ ಧ್ವಜಾರೋಹಣ ಸಮಾರಂಭವನ್ನೇರ್ಪಡಿಸಲಾಗಿತ್ತು. ಅನೇಕ ನಗರದ ಪ್ರಮುಖರೂ ಸದಸ್ಯರೂ, ಸ್ವಯಂಸೇವಕರೂ ...ರು. ಪೌರಸಭಾಧ್ಯಕ್ಷರಾದ ಶ್ರೀ ...ರಾಮಯ್ಯನವರು ರಾಷ್ಟ್ರಧ್ವಜ ...ಉಪಾಧ್ಯಕ್ಷರಾದ ಶ್ರೀ ... ಪಿ ...ನವರು ಮೈಸೂರುಸ್ಥಿತ್ಯಂತರವನ್ನು ...ಣ ಮಾಡಿದರು.

...ರ್ಯಂದವರಿಬ್ಬರೂ ಭಾಷಣ ಮಾಡಿ ...ಹುಟ್ಟುಹಬ್ಬವಾಗಿದ್ದ ಶುಭಾವ...ದಿನವನ್ನು ಆಚರಿಸಿಕೊಂಡ ನೇ...ರ ನಿತ್ಯ ಶಿಷ್ಯರಾಗಿರುವ ಪಂಡಿತ ನೆ...ವರು ನಮ್ಮ ದೇಶದ ರಾಜ್ಯ ಸೂತ್ರ ...ವಹಿಸಿರುವುದು ನಮ್ಮ ಸುಯೋಗ ...ಹೇಳಿದರು. ಅಪ್ರತಿಮ ದೇಶ ಭ...ಮತ್ತು ಉಚ್ಚ ಕಾರಣ ಪುರುಷರೂ ...ಪಂಡಿತ ನೆಹರೂರವರು ಈ ರೀತಿಯ ...ಯೋಗ್ಯಗಳನ್ನು ಹೊಂದಿ ನಮ್ಮ ...ಅವರ ನೇತೃತ್ವದಲ್ಲಿ ಇನ್ನೂ ...ದ ಖ್ಯಾತಿಯನ್ನು ಗಳಿಸುವಂತೆ ಭ...ನ ಅನುಗ್ರಹಿಸಲೆಂದು ಪ್ರಾರ್ಥಿಸಿ...

...ದಿನ ಸಂಜೆ ೬-೩೦ ಗಂಟೆಗೆ ಟೌನ್ ...ಮೈದಾನದಲ್ಲಿ ಬಹಿರಂಗ ಸಭೆ ನಡೆ...ದು.

...ಭಾರತ ಕಾಂಗ್ರೆಸ್ ಅಧಿವೇಶನ

...ಪುರದಲ್ಲಿ ಮುಂದಿನ ತಿಂಗಳ ೧೮ ...ನೇ ತಾ|| ಗಳಲ್ಲಿ ನಡೆಯುವ ...ಭಾರತ ಕಾಂಗ್ರೆಸ್ ಮಹಾಧಿವೇಶನ ...ಗಳೇ ಸಿದ್ಧತೆಗಳು ನಡೆಯುತ್ತಿವೆ. ...ಅಧಿವೇಶನಕ್ಕೆ ಬರುವ ಪ್ರೇಕ್ಷಕರಿಂ...೧೦೦೦ರಿಂದ ೧,೦೦೦ ರೂ. ಮತ್ತು ...ಸ್ವಾಗತ ಸಮಿತಿಗೆ ೧೫ ರಿಂದ ...ಗಳ ಟಿಕೇಟುಗಳನ್ನು ಮಾರ...ರು. ಪ್ರತಿನಿಧಿಗಳ ಬಿಡಾರಗಳಲ್ಲಿ ...ಇಳಿದುಕೊಳ್ಳಲು ವಸತಿ ವ್ಯವ...ಮಾಡಲಾಗಿದೆ, ...ಬ್ಬರಿಗೆ ೫ ರೂ. ...ಸಂಸಾರದವರಿಗೆ ೨೦೦ ಮತ್ತು ...ಸಂಸಾರದವರಿಗೆ ೧೨೫ ರೂ. ...ರೂ. ಕೊಡಬೇಕು. ...ಸಾವಿರ ಸ್ವಯಂಸೇವಕರು ...ನೇ ತಾ|| ದಿನಗಳಿಗಾಗಿ ...

...ಧಿವೇಶನದ ಅಂಗವಾಗಿ ೧೧ನೇ ...ಂದ ಗಾಂಧಿನಗರದಲ್ಲಿ ಅಖಿಲ ಭಾ...ಪ್ರದರ್ಶನವು ನಡೆಯುವುದು.

...ಡಿಗ ಕೃಷ್ಣಮೂರ್ತಿಯವರ ಭಾಷಣ

ಚಿಂತಾಮಣಿ... ೧೩.

...ಮೈಸ್ಕೂಲು ಹಾಲಿನ ಆಶ್ರಯದಲ್ಲಿ ...ಡಿಗ ಕೃಷ್ಣಮೂರ್ತಿಯವರು ಅಮೆ...ಯ ಅನುಭವ ಎಂಬ ವಿಷಯ ...ನ್ನೆ ಭಾಷಣ ಮಾಡಿದರು.

...ಗಾಗಿನೇ ತಾ|| ಸೋಮವಾರ ಸಂಜೆ ...ಸಂ ಜಯಂತಿಯನ್ನು ವೈಭವದಿ ...ಚರಿಸಲಾಗುವುದು.

ಮಾಧ್ಯಮಿಕ ಶಾಲಾ ಶಂಕುಸ್ಥಾಪನೆ

ವಿ.ಸು.] ಹೆಬ್ಬನಹಳ್ಳಿ ೧೩

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಈ ಊರಿನ ಮಾಧ್ಯಮಿಕ ಶಾಲಾ ಕಟ್ಟಡದ ಶಂಕುಸ್ಥಾಪನಾ ಮಹೋತ್ಸವವನ್ನು ಈ ದಿನ ಮಧ್ಯಾಹ್ನ ನೆರವೇರಿಸಿದರು. ದಿವ್ಯವಾದ ಹಸುರುವಾಣಿ ಚಪ್ಪರದಲ್ಲಿ ಈ ಸಮಾರಂಭವನ್ನು ಏರ್ಪಡಿಸಲಾಗಿದ್ದಿತು. ಶ್ರೀ ಧನಕೀರ್ತಿಯವರಿಂದ ಸ್ವಾಗತ ಪದ್ಯ ಮತ್ತು ಕಲ್ಲಾಪುರದ ಶ್ರೀ ಸುಬ್ಬಣ್ಣಯ್ಯರಿಂದ ಭಾರತ ಪದಗಳಾದ ನಂತರ ಇಲ್ಲಿನ ಗ್ರಾಮ ಪಂಚಾಯಿತಿಯವರು ಅಧ್ಯಕ್ಷರಿಗೆ ಭಿನ್ನವತ್ತಳೆಯೊಂದನ್ನರ್ಪಿಸಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು.

ಸಾಲಿಗ್ರಾಮದ ಪ್ರಮುಖ ನಿವಾಸಿಗಳಾದ ಶ್ರೀ ಜಿ ನ ರಾಜಮ್ಮನವರು ಭಾಷಣಕಾರ್ತಿ ಅಧ್ಯಕ್ಷರನ್ನು ಪರಿಚಯ ಮಾಡಿಕೊಟ್ಟರು.

ಶಂಕುಸ್ಥಾಪನಾ ಮಹೋತ್ಸವವನ್ನು ಜರುಗಿಸಿದನಂತರ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಭಾಷಣಮಾಡಿ ವಿದ್ಯಾಭ್ಯಾಸ ಶಿಕ್ಷಣವು ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ಪ್ರತಿ ಗ್ರಾಮದಲ್ಲಿಯೂ ಏರ್ಪಡಬೇಕೆಂದೂ, ಇದಕ್ಕಾಗಿ ಎಲ್ಲ ಗ್ರಾಮಸ್ಥರೂ ಮುಂದೆ ಬಂದು ಸರ್ಕಾರಕ್ಕೆ ನೆರವಾಗಿ ಪ್ರತಿ ಗ್ರಾಮದಲ್ಲಿಯೂ ವಿದ್ಯಾಶಾಲೆಗಳೇರ್ಪಡುವಂತೆ ಯತ್ನಿಸಬೇಕೆಂದೂ ಕೋರಿದರು. ಪ್ರತಿ ಗ್ರಾಮದಲ್ಲಿಯೂ ಕೂಡಲೆ ವಿದ್ಯಾಶಾಲೆಗಳೇರ್ಪಡಲು ಸರ್ಕಾರ ಯತ್ನಿಸಿ ನಮ್ಮ ನಾಡನ್ನು ಅಲ್ಪ ಕಾಲದಲ್ಲಿಯೇ ವಿದ್ಯೆಯ ಬೀಡನ್ನಾಗಿ ಪರಿವರ್ತಿಸಬೇಕೆಂದೂ ಅವರು ತಿಳಿಸಿದರು. ಶಾಲೆಗಳಿಗಾಗಿ ಕಟ್ಟಡಗಳ ಕೊರತೆ ಇರುವ ಪಕ್ಷದಲ್ಲಿ ಹಂಗಾಮಿ ಷೆಡ್ಡುಗಳಲ್ಲಿ ಅವುಗಳನ್ನು ನಡೆಸಬೇಕೆಂದು ಅವರು ಸೂಚಿಸಿದರು.

ಬಿನ್ನವತ್ತಳೆಯಲ್ಲಿ ಸೂಚಿಸಲಾಗಿದ್ದ ಕುಂದುಕೊರತೆಗಳನ್ನು ಪರಿಹರಿಸಲು ಕೂಡಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷರು ಆಶ್ವಾಸನವಿತ್ತರು.

ಶ್ರೀ ಕೃಷ್ಣಪ್ಪನವರಿಂದ ವಂದನಾರ್ಪಣೆ ಜರುಗಿದನಂತರ ರಾಷ್ಟ್ರಗೀತೆ ಮತ್ತು ಜಯಕಾರಗಳೊಡನೆ ಸಮಾರಂಭವು ಮುಕ್ತಾಯಗೊಂಡಿತು.

ಖದ್ದರ್ ಸಹಕಾರ ಸಂಘ

ಮೈಸೂರು ೧೪

ಖದ್ದರ್ ಪರಸ್ಪರ ಸಹಾಯ ಸಂಘದ ವಾರ್ಷಿಕ ಸಭೆಯು ಈ ದಿನ ಬೆಳಿಗ್ಗೆ ನಡೆಯಿತು. ಪಂಡಿತ ನೆಹರೂರವರ ಜನ್ಮದಿನೋತ್ಸವದ ಪ್ರಯುಕ್ತ ಅವರಿಗೆ ಶುಭಾಶಯಗಳನ್ನು ಕೋರಲಾಯಿತು. ಮಹಾತ್ಮಗಾಂಧಿ ನಿಧಿಗೆ ೧೨೦ ರೂ. ಗಳನ್ನು ಮಂಜೂರು ಮಾಡಲಾಯಿತು.

ಬರುವ ಸಾಲಿಗೆ ಶ್ರೀಗಳು ಲಕ್ಷ್ಮೀನಾರಾಯಣರಾಯರನ್ನು ಅಧ್ಯಕ್ಷರನ್ನಾಗಿಯೂ, ಕೆ. ಗೋಪಾಲಕೃಷ್ಣ ಶೆಟ್ಟರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಎಸ್. ಶ್ರೀರಂಗಾಚಾರ್ಯರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. ಶ್ರೀಗಳು ಎಂ ಎಸ್ ಕೃಷ್ಣಮೂರ್ತಿ, ಎಂ. ವಿ. ದೊರೆಸ್ವಾಮಿ ಅಯ್ಯಂಗಾರ್, ಸೂರ್ಯನಾರಾಯಣ ಪಂಡಿತ್, ಕೆ. ವಿ ಶ್ರೀನಿವಾಸ ಮೂರ್ತಿ, ಡಾ|| ಸೂರ್ಯನಾರಾಯಣರಾವ್, ಪಿ ಪದ್ಮನಾಭಾಚಾರ್, ಸದಾಶಿವಯ್ಯ, ಎಚ್ ಕೆ ಕೃಷ್ಣಮಾಚಾರ್ಯ, ಆರ್ ಶ್ರೀನಿವಾಸಾಚಾರ್, ಕೆ ಶೇಷಾದ್ರಿ, ಬಿ ಎಸ್ ಸುಬ್ಬರಾವ್ ಮತ್ತು ಟಿ ಎಸ್ ಕೃಷ್ಣನವರುಗಳನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಲಾಯಿತು.

ನಾಲ್ಕು ಮಹಾರಾಷ್ಟ್ರಗಳ ಸಮ್ಮೇಳನ

ಏ ಪಿ ಎ] ನ್ಯೂಯಾರ್ಕ್ ೧೩

ಯೂರೋಪಿನ ರಾಜಕೀಯ ಬಿಕ್ಕಟ್ಟು ಬಗೆಹರಿಸಲು ಅಮೆರಿಕದ ಅಧ್ಯಕ್ಷ ಟ್ರೂಮನ್‌ರವರು ತಮ್ಮ ವಿಶೇಷ ಪ್ರತಿನಿಧಿಯೊಬ್ಬರನ್ನು ರಷ್ಯಕ್ಕೆ ಕಳುಹಿಸುವರೆಂದೂ, ಅದು ಫಲಕಾರಿಯಾದರೆ ಅಮೆರಿಕ, ಬ್ರಿಟನ್, ರಷ್ಯ ಮತ್ತು ಫ್ರಾನ್ಸ್ ರಾಷ್ಟ್ರಗಳ ನಾಯಕರುಗಳ ಸಮ್ಮೇಳನವನ್ನು ಏರ್ಪಡಿಸುವರೆಂದೂ ತಿಳಿದು ಬಂದಿದೆ.

ಕ್ರೈಸ್ತರಿಗಾಗಿಯೇ ಪ್ರತ್ಯೇಕ ವಿಶ್ವವಿದ್ಯಾಲಯ

ಕೇರಳ ಪ್ರದೇಶದಲ್ಲಿರುವ ರೋಮನ್ ಕ್ಯಾಥೊಲಿಕ್ಕರಿಗಾಗಿಯೇ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅಲ್ಲಿನ ಪಾದ್ರಿಗಳು ಪ್ರಯತ್ನಿಸುತ್ತಿರುವರೆಂದು ಹೇಳಲಾಗಿದೆ. ಚಂಗನಾಶೇರಿಯ ಅಸಂಪ್ಷನ್ ಕಾಲೇಜು ... ಕಾಲೇಜು ...

ಪಂಡಿತ ನೆಹರೂರವರಿಗೆ ಪೌರಸಭೆಯ ಅಭಿನಂದನೆ

ಮೈಸೂರು ೧೪

ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರ ೬೦ ನೇ ವರ್ಷದ ವರ್ಧಂತಿ ಸಂದರ್ಭದಲ್ಲಿ ಅವರಿಗೆ ಹೃತ್ಪೂರ್ವಕವಾದ ಅಭಿನಂದನೆಯನ್ನೂ, ಶುಭಾಶಯವನ್ನೂ ನೀಡುವ ನಿರ್ಣಯವು ನಿನ್ನೆ ದಿನ ಪೌರ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಶ್ರೀ ಬಿ ನಾರಾಯಣ ಸ್ವಾಮಿಯವರು ನಿರ್ಣಯವನ್ನು ಮಂಡಿಸಿ ನೆಹರೂರವರ ದೇಶಾಭಿಮಾನ ಮತ್ತು ಸ್ವಾರ್ಥ ತ್ಯಾಗಗಳನ್ನು ಪ್ರಶಂಸಿಸಿ ವಿಶ್ವ ಸಂಸ್ಥೆಯಲ್ಲಿ ಭಾಷಣಮಾಡಲು ಅವರಿಗೆ ದೊರೆತ ಅವಕಾಶಕ್ಕಾಗಿ ಭಾರತೀಯರೆಲ್ಲರೂ ಹೆಮ್ಮೆ ಪಡಬೇಕೆಂದು ಹೇಳಿದರು.

ಶ್ರೀಗಳಾದ ಟಿ ಗೋಪಾಲಕೃಷ್ಣ ಶೆಟ್ಟಿ, ಆಗರಂ ರಂಗಯ್ಯ ಮತ್ತು ಖಾ|| ಬಹದ್ದೂರ್ ಸೇಟರೂ ಮತ್ತು ಅಧ್ಯಕ್ಷರಾದ ಶ್ರೀ ಟಿ ಸೀತಾರಾಮಯ್ಯನವರೂ ಭಾಷಣ ಮಾಡಿ ನೆಹರೂರವರ ಗುಣಕಥನ ಮಾಡಿದರು.

ಕ್ರಿಕೆಟ್ ಪಂದ್ಯ

ಸ್ವಂ ಸು ಪ್ರೋ] ಬೆಂಗಳೂರು ೧೪

ಅಂತರ ಪ್ರಾಂತೀಯ ರಾಂಜಿ ಕ್ರಿಕೆಟ್ ಪಂದ್ಯದಲ್ಲಿ ಈ ದಿನ ಮಹಾರಾಷ್ಟ್ರದವರು ಆಟ ಮುಗಿದ ಹೊತ್ತಿಗೆ ೫ ವಿಕೆಟ್ಟಿಗೆ ೧೧೦ ರನ್ನುಗಳನ್ನು ಮಾಡಿದರು.

ನಿನ್ನೆ ಅವರು ಮೊದಲನೇ ಆಟದಲ್ಲಿ ೩೩೭ ರನ್ನಿಗೆ ಎಲ್ಲರೂ ಔಟಾಗಿದ್ದರು. ಮೈಸೂರಿನವರು ೧೮೬ಕ್ಕೆ ಎಲ್ಲರೂ ಔಟಾಗಿದ್ದರು.

ದೆಹಲಿಗೆ ಪ್ರಯಾಣ

ಶ್ರೀ ಕೆ ಸಿ ರೆಡ್ಡಿಯವರು ೩೦ ನೇ ತಾ|| ದೆಹಲಿಗೆ ತೆರಳುವರು. ರಾಜ್ಯಾಂಗ ಸಭೆಯು ಮುಕ್ತಾಯಗೊಂಡ ಆ ದಿನವೇ ಹಿಂತಿರುಗುವರು.

ಪಂಡಿತ ನೆಹರೂರವರಿಗೆ ಚೀಣಾ ಅಧ್ಯಕ್ಷರ ಮೊರೆ

ಕಮ್ಯೂನಿಸ್ಟ್ ಪಡೆಗಳಿಗೆ ಸಿಲುಕಿ ತತ್ತರಿಸುತ್ತಿರುವ ಚೀಣಾ ದೇಶದ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ಭಾರತ ಪ್ರಧಾನಿ ಪಂಡಿತ ನೆಹರೂರವರೊಡನೆ ಪತ್ರ ವ್ಯವಹಾರ ಬೆಳೆಸಿ ತಮ್ಮ ದೇಶಕ್ಕೆ ತುರ್ತಿನ ಸಹಾಯ ಬೇಕೆಂದು ಕೇಳಿರುವುದಾಗಿ ವರದಿಯಾಗಿದೆ. ತಾವು ಚೀಣಾ ದೇಶವನ್ನು ಬಿಡಬೇಕಾಗಿ ಬಂದರೆ ಭಾರತದಲ್ಲಿ ಇರಲು ಅವಕಾಶ ದೊರೆಯುವುದೇ ಎಂದು ಅವರು ಕೇಳಿರುವುದಾಗಿಯೂ ತಿಳಿದು ಬಂದಿದೆ.

ಜಪಾನ್ ಚಕ್ರವರ್ತಿಯ ಪದಚ್ಯುತಿಯೇ ?

ಜಪಾನಿನ ಮಾಜಿ ಮಂತ್ರಿಗಳಿಗೆ ಮರಣ ದಂಡನೆಯನ್ನು ವಿಧಿಸಿದ ಕಾಲದಲ್ಲಿ ನ್ಯಾಯಾಧೀಶರು ಅಲ್ಲಿನ ಚಕ್ರವರ್ತಿಗಳ ಮೇಲೂ ಆಪಾದನೆಗಳನ್ನು ಹೊರಿಸಿ, ಅವರ ನಮ್ಮತಿ ಇಲ್ಲದಿದ್ದರೆ ಯುದ್ಧವೇ ನಡೆಯುತ್ತಿರಲಿಲ್ಲವೆಂದು ಹೇಳಿ ಅವರನ್ನೂ ನ್ಯಾಯ ವಿಚಾರಣೆಗೆ ಗುರಿಪಡಿಸಬೇಕಾಗಿತ್ತೆಂದು ಸೂಚಿಸಿದ ವರದಿ ಇಲ್ಲದೆ ಹಲವು ಪತ್ರಿಕೆಗಳಲ್ಲಿಯೂ ಚಕ್ರವರ್ತಿಗಳ ಮೇಲೆ ಕಟು ಟೀಕೆಗಳು ಬರುತ್ತಿವೆ. ಈ ಕಾರಣಗಳಿಂದ ಜಪಾನ್ ಚಕ್ರವರ್ತಿ ಹಿರೋಹಿಟೋರವರು ತಮ್ಮ ಸಿಂಹಾಸನವನ್ನು ... ಪ್ರಾರಂಭಗವಿದೆಯೆಂದು ಹೇಳಲಾಗಿದೆ

ವಾರ ಭವಿಷ್ಯ

[illegible] ರವರೆಗೆ

ಮೇಷ.- ಆರೋಗ್ಯ, ಉತ್ಸವ [illegible] ಮಾನಸಿಕ ಚಿಂತೆಗಳು ಅಧಿಕವಾಗುವುವು. ಹುಟ್ಟಿಸಿದ ಎಲ್ಲ ಕಾರ್ಯಗಳೂ ನಿಷ್ಫಲವಾಗುವುವು. ಧನಾದಾಯ ಸಾಧಾರಣವಾಗಿದೆ. ತಾ॥ ೧೫, ೧೬ ಅಶಾಂತಿ [illegible] ಸಮಾಧಾನ

ವೃಷಭ.- ಪ್ರವಾಸದಿಂದ [illegible] ಆರೋಗ್ಯಕ್ಕೆ ಧಕ್ಕೆ ಉಂಟಾಗಬಹುದು. [illegible] ದ ಕಾರ್ಯಗಳು ಮಧ್ಯದಲ್ಲಿಯೇ ನಿಲ್ಲುವುವು [illegible] ದಂಧೆಗಳಲ್ಲಿ [illegible] ದ [illegible] ತಾ॥ ೧೭, ೧೯ [illegible] ವಾರ್ತೆ, ಚಿಂತೆ

ಮಿಥುನ.- ಧನಾದಾಯ ಸಾಧಾರಣವಾಗಿದೆ. ಕೈಗೊಂಡ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು. ಕೋರ್ಟು, ಕಛೇರಿ ವ್ಯವಹಾರಗಳಲ್ಲಿ ಅನುಕೂಲವಾಗುವುದು ತಾ॥ ೧೮, ೨೦ ರಿಂದ ವೆಚ್ಚ, ಮನಸ್ತಾಪ.

ಕಟಕ.- ಆರೋಗ್ಯ ಧನಾದಾಯಗಳೆರಡೂ ತೃಪ್ತಿಕರವಾಗಿವೆ ಅನೇಕ ಸಾಧು ಸಂತ ದರ್ಶನವಾಗುವುದು. ಮನೆಯಲ್ಲಿ [illegible] ಗಳ ಕಾರ್ಯಗಳು ಜರುಗುವುವು [illegible] ದಲ್ಲಿ ನಷ್ಟ ತಾ॥ ೧೫, ೧೯ ಶುಭವಾರ್ತೆ, ಅಶಾಂತಿ.

ಸಿಂಹ.- ಆರ್ಥಿಕ ಪರಿಸ್ಥಿತಿಯ ಬಗೆಯ [illegible] ಸ್ಥೈರ್ಯವಾಗುವುದು. ಬರಬೇಕಾದ ಹಣವೂ ಬಾರದೆ ಕಷ್ಟದಂತಾಗುವುದು. ವ್ಯಾಪಾರ [illegible] ಮಿತ್ರರಿಂದ ಸಹಾಯ [illegible] ತಾ॥ ೧೬, ೧೮ ನಷ್ಟ ಭಯ.

ಕನ್ಯಾ.- ಈ ವಾರ [illegible] ಗಳಿಂದ ವಿಪರೀತ ನಷ್ಟವುಂಟಾಗುವುದು. ನೆರೆ ಹೊರೆಯವರೊಡನೆ ವೃಥಾ [illegible] ಕಟ್ಟಿಕೊಳ್ಳುವಿರಿ ಆರೋಗ್ಯ ಸಾಧಾರಣವಾಗಿದೆ ತಾ॥ ೧೫, ೧೮ ವೃಥಾ ಕಲಹ, ಧನನಷ್ಟ

ತುಲಾ.— ಮಾನಸಿಕ ಚಿಂತೆಗಳು ದೂರವಾಗುವುವು. ಬರಬೇಕಾದ ಬಾಕಿ ಎಲ್ಲವೂ ವಸೂಲಾಗುವುವು. ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು ಆರೋಗ್ಯ ಚೆನ್ನಾಗಿದೆ ತಾ॥ ೧೭, ೨೦ ಸುಖ ಪ್ರವಾಸ, ಲಾಭ.

ವೃಶ್ಚಿಕ.— ಹಣಕಾಸಿನ ಅಭಾವವು ಅಧಿಕವಾಗುವುದು ಬಂಧು ಬಳಗದವರಲ್ಲಿ ವೃಥಾ ಮನಸ್ತಾಪ ಕಟ್ಟಿಕೊಳ್ಳುವಿರಿ [illegible] ದ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು ತಾ॥ ೧೮, ೨೦, ಚಿಂತೆ, ಧನನಷ್ಟ.

ಧನು.-ವ [illegible] ಮಕ್ಕಳು ವರಿಗಳ ಆರೋಗ್ಯವು ಕೆಟ್ಟು ವೈದ್ಯರಿಗೆ ವೃಥಾ ಹಣ ತೆರಬೇಕಾಗುವುದು ಅದಾಯಕ್ಕಿಂತ ಖರ್ಚು ಹೆಚ್ಚು [illegible] ತಾ॥ ೧೬, ೧೯, [illegible] ವೆಚ್ಚ ಭಯ.

ಮಕರ.-ಮನೆಯಲ್ಲಿನ ಕಲಹ [illegible] ವಾವು ಹೆಚ್ಚಿ ನಿಮ್ಮನ್ನು [illegible] ಆಗುವ ಪ್ರವಾಸದಿಂದ ಆರೋಗ್ಯ ಕೆಡುವ ಸಂಭವವಿದೆ ಧನಾದಾಯ ಸಾಧಾರಣ ತಾ॥ ೧೫, ೧೭ ಅಶುಭ ವಾರ್ತೆ, ಕಲಹ

ಕುಂಭ.-ವಿದ್ಯಾರ್ಥಿ ಮತ್ತು ಲೇಖಕರಿಗೆ ಈ ವಾರ ಅತ್ಯಂತ ಯಶಸ್ವಿಯವಾದೆ. ಕೋರ್ಟು ಕಛೇರಿ ವ್ಯವಹಾರಗಳ

ನಾಡ ಹಬ್ಬ

ರಾಜಧಾನಿಯ ಫಸ್ಟ್‌ಗ್ರೇಡ್ ಕಾಲೇಜು ಸಂಘದ ಆಶ್ರಯದಲ್ಲಿ ನಾಳೆಯಿಂದ [illegible] ದಿನಗಳ ನಾಡಹಬ್ಬವನ್ನು ಕಾಲೇಜಿನ [illegible] ಂಗಣದಲ್ಲಿ ಆಚರಿಸಲಾಗುವುದು

ನಾಳೆ ದಿನ ಸಂಜೆ ೫ ಗಂಟೆಗೆ ಮುಂ [illegible] ರ್ಕಾರದ ಪಾರ್ಲಿಮೆಂಟರಿ [illegible] ಶ್ರೀ ಕೆ ಎಸ್ ಪಾಟೀಲರವರ [illegible] ದ ಆರಂಭೋತ್ಸವವನ್ನು ನಡೆಸುವರು ಶ್ರೀ ಕೆ ಆರ್ ಕಾರಂತ್ ಮು [illegible] ಪ್ರೊ॥ ದ ರಾ ಬೇಂದ್ರೆಯವರು [illegible] ಪ್ರೊ॥ ಕೆ ವಿ ಪು [illegible] ಅಧ್ಯಕ್ಷತೆಯನ್ನು ವಹಿಸುತ್ತಾರೆ. [illegible] ಶ್ರೀಮನ್ಮಹಾರಾಜರ [illegible] ಶ್ರೀ ಜಿ ಎಸ್ [illegible] ಅಧ್ಯಕ್ಷತೆಯಲ್ಲಿ [illegible] ಸಿದ್ಧ [illegible] ಶ್ರೀ [illegible] ಭಾಷಣ ಮಾಡುವರು [illegible] ಸಂಜೆ ೫ ಗಂಟೆಗೆ [illegible] ಸಿದ್ಧ [illegible] ಪ್ರೊ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ [illegible]

[illegible] ಆರೋಗ್ಯ [illegible] ತಾ॥ ೧೬, ೧೮ [illegible] ದರ್ಶನ [illegible]

[illegible] ಕಾರ್ಯಗಳು ಅಧಿಕ [illegible] ಸಿದ್ಧಿ [illegible] ಅನೇಕ ವಿದ್ವಜ್ಜನರ ಪರಿಚಯವಾಗುವುದು. [illegible] ತಾ॥ ೧೬, ೨೦, ಶುಭ ಸಮಾಚಾರ, ಸುಖ ಭೋಜನ

ರಾಜಕಮಲ್
ಮೈಸೂರು

13-11-48ರಿಂದ
ಶಾಂತಾರಾಂರವರ
ಡಾ॥ಕೋಟ್ನಿಸ್-ಕಿ-
ಅಮರ್ ಕಹಾನಿ
—[illegible]: -
● [illegible]
● [illegible]

Morning Shows From
12-11-48 for 4 days only
The Rebel Son
:-With:-
Halro Baur,
Roger Livesey,
Patrica Roc

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಮಾದರಿಗಳ ಸೀರೆಗಳು
8-9 ಗಜಗಳಲ್ಲಿ ಗ್ಯಾರಂಟಿಯಾಗಿ [illegible] ಯೋಗ್ಯ ಬೆಲೆಗೆ ದೊರೆಯುತ್ತವೆ.
ದಯವಿಟ್ಟು ಇಂದೇ ಭೇಟಿ ಕೊಡಿ.
ಗುರುದೇವಾ ಹಾಲ್,
ಬೇಗಳೂರು ಜವಳಿ ಅಂಗಡಿ,
ಶಿವರಾಂಪೇಟೆ, ಮೈಸೂರು.

ತಗಡೂರು ಸತ್ಯಾಗ್ರಹಾಶ್ರಮದಲ್ಲಿ ಕಳುವು

ತಗಡೂರು ೧೨

ಶ್ರೀ ತಗಡೂರ ರಾಮಚಂದ್ರರಾಯರ ಸತ್ಯಾಗ್ರಹಾಶ್ರಮದಲ್ಲಿ ಕಳೆದ ೬ನೇ ತಾ॥ ಯಾರೋ ಕನ್ನ ಹಾಕಿ ಕೆಲವು ಸಾಮಾನುಗಳನ್ನು ಕಳವು ಮಾಡಿದುದನ್ನು ಪೋಲೀಸರು ಪತ್ತೆ ಹಚ್ಚಿ, ೪ ಜನರನ್ನು ದಸ್ತಗೀ ಮಾಡಿರುತ್ತಾರೆ.

ದೇವಸ್ಥಾನ, ಮಂಟಪ, ತೋಟ ಮುಂತಾದ ಸಾರ್ವಜನಿಕ ಪ್ರದೇಶಗಳಲ್ಲಿ ಅನೇಕರು ಜೂಜಾಡುತ್ತಿದ್ದಾರೆ ಹೊರಗಿನವರೂ ಇದರಲ್ಲಿ ಭಾಗವಹಿಸುವರು. ಇದರಿಂದ ರೈತಾಪಿಜನಗಳಿಗೆ ತುಂಬಾ ತೊಂದರೆಯಾಗಿದೆ ಇದನ್ನು ತಡೆಯಲು ಅಧಿಕಾರಿಗಳು ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ

—

ಲಂಡನ್ನಿಗೆ ನೆಹರೂ ಭೇಟಿಯ ಚಲನ ಚಿತ್ರ

ಭಾರತ ಪ್ರಧಾನಿ ನೆಹರೂರವರು ಲಂಡನ್ನಿಗೆ ಇತ್ತೀಚೆಗೆ ಭೇಟಿ ಕೊಟ್ಟಾಗ ಅಲ್ಲಿನ ಸಿಟಿಜನ್ಸ್ ಫಿಲಂ ಸಂಸ್ಥೆಯವರು ತಯಾರಿಸಿದ ೬೦-೭೦ ಅಡಿ ಚಲನ ಚಿತ್ರವನ್ನು ಶೀಘ್ರದಲ್ಲೇ ಭಾರತಕ್ಕೆ ರವಾನಿಸಲಾಗುವುದೆಂದು ಹೇಳಲಾಗಿದೆ.

Edited printed and published by A. R. Nagarajan at the Sadhvi Press D Subbaiah Road Mysore

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ
ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಬೆಲೆ ೦-೧೨-೦
ಪಂಚಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ:—)
-ದೇಹಿಗೆ ತಂಪನ್ನು ಉತ್ತಮ ಅಭ್ಯಂಗನ ತೈಲಗಳು
ಪಂಚಾಮೃತ ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ
ಮಹಾಕೇಶವರ್ಧಕ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ ಹೇರ್ ಟಾನಿಕ್
ಬೆಲೆ ೨-೦-೦
ಮೈಸೂರು ಆಯುರ್ವೇದಿಕ್ ಫಾರ್ಮಸಿ
೧೦ ಬ್ಯಾನ್ಸ್‌ಡೌನ್ ಬಿಲ್ಡಿಂಗ್ ಮೈಸೂರು.

ಮನೆ ಕ್ರಯಕ್ಕಿದೆ
ನಲ್ಲಿ, ದೀಪ ಪ್ಲಷ್ ಮತ್ತು ಬಾವಿ ಅನುಕೂಲವಿರುವ ಮಹಡಿ ಮನೆ ಉತ್ತಮ ಸ್ಥಳದಲ್ಲಿದೆ. ಬಾಕಿ ವಿಷಯಗಳಿಗೆ ಮೊಖ್ತಾ ತಿಳಿಯಬಹುದು.
ಯು. ಎಲ್. ಕೇಶವಯ್ಯಂಗಾರ್,
404 ಕೃಷ್ಣವಿಲಾಸ ಅಗ್ರಹಾರ ಮೈಸೂರು.

ಧೂಮಕೇತು ದರ್ಶನ

ರಾಜರಿಗೆ ಪೀಡೆ, ಯುದ್ಧ ಭೀತಿ ರೋಗ [illegible]

(ಖಾಸ್ಗಿದ ಜೋಯಿಸರು ಶ್ರೀ ಜಿ. ಎಸ್. ರಾಜಗೋಪಾಲ್ ಮೈಸೂರು, ಇವರಿಂದ)

ಕಳೆದ ೪ ದಿವಸಗಳಿಂದ ಬೆಳಗಿನ ಝಾವ ೪-೪॥ ಗಂಟೆಗೆ ಪೂರ್ವಾಕಾಶದಲ್ಲಿ ಸ್ಥೂಲಾಕೃತಿ, ಧೂಮಕೇತುವು ಉದಯವಾಗುವುದನ್ನು ನಾನಾ ದೇಶಗಳಲ್ಲಿ ನೋಡಿ ವರದಿಸಿರುತ್ತಾರೆ.

ಪ್ರಕೃತ ಈ ತಿಂಗಳಿನಲ್ಲಿ ಬೆಳಗಿನ ಜಾವ ನಾಲ್ಕೂವರೆ ಗಂಟೆಗೆದ್ದು ಖಗೋಳವನ್ನು ನೋಡಲಾಗಿ, ಪೂರ್ವ ದಿಕ್ಕಿನಲ್ಲಿ ಶುಕ್ರಹ ಸೌಮ್ಯವಂತನಾಗಿ ಅತಿಶಯವಾಗಿ ಪ್ರಕಾಶಮಾನಗಿ ಹೊಳೆಯುವುದನ್ನು [illegible] ನಿಂದ ಮೇಲೆ ಪೂರ್ವ ಫಲ್ಗುಣಿ ನಕ್ಷತ್ರ ಸಮೀಪದಲ್ಲಿ ಶನಿಗ್ರಹವನ್ನೂ ಚೆನ್ನಾಗಿ [illegible] ರುಚಿಸಬಹುದು ದಕ್ಷಿಣಾಕಾಶದಲ್ಲಿ [illegible] ಧ್ವರೇಖೆಯನ್ನು ದಾಟಿಕೋಣ [illegible] ತೀಣೋವಂತನಾಗಿ ಅಗ್ನಿಯಂತೆ ಹೊಳೆಯುತ್ತಿರುವ ಅಗಸ್ತ್ಯರನ್ನೂ ನೋಡಬಹುದು ಪಶ್ಚಿಮದಲ್ಲಿ ಇಳಿಯುತ್ತಿರುವ ಮೃಗಶಿರ ಮಂಡಲವನ್ನು ಕ್ಷಿತಿಜಾವ [illegible] ಬಹುದು. ಮಧ್ಯನೆತ್ತಿಯ ಮೇಲೆ ಪುಷ್ಯ ಆಶ್ಲೇಷಾ ನಕ್ಷತ್ರ [illegible] ಇದ್ದರೂ ಇಂತಹ ದಿವ್ಯ [illegible] ರುತ್ತಿರುವುದು

ಪೂರ್ವ ಫಲ್ಗುಣಿ ಚಿತ್ತ, ಸ್ವಾತಿ [illegible] ಮೂರು ನಕ್ಷತ್ರಗಳು ಈಗ [illegible] ದಯಕ್ಕೆ ಪೂರ್ವ ದಕ್ಷಿಣದಲ್ಲಿ [illegible] ಹಿರಿಯ ನಕ್ಷತ್ರಗಳು ಮತ್ತು ಈ ಮೂರು ಸಮ ಕೋಣ ತ್ರಿಕೋಣದಲ್ಲಿರುವುದರಿಂದ ಸುಲಭವಾಗಿ ಗೊತ್ತಾಗುವುದು ಶುಕ್ರಗ್ರಹದಿಂದ ಸ್ವಲ್ಪ ಕೆಳಕ್ಕೆ ಇಳಿದು ಆಗ್ನೇಯವಾಗಿ ನೋಡಿದರೆ ನಾಲ್ಕೈದು ನಕ್ಷತ್ರ [illegible] ಸೇರಿ ಹಸ್ತ ನಕ್ಷತ್ರವೆಂದು ಕರೆಯುವ [illegible] ರುವ ಬೆರಳುಗಳಂತೆ [illegible] ಹವು ಕಾಣಿಸುವುದು. ಈ ಹಸ್ತ ನಕ್ಷತ್ರದ ಮೂಲದಲ್ಲಿ ಈಗ ಕೇತುವು ಉದಯವಾಗುತ್ತಿದೆ. ಇದರ ಫಲವನ್ನು ಜ್ಯೋತಿಷ್ಯರು ನಿರ್ಣಯಿಸುತ್ತಾ ದಂಡನಾಧಿಪ [illegible] ರಾಜರಿಗೆ ಪೀಡೆಯುಂಟು ಹೇಳಿರುತ್ತಾರೆ. ಯಾವಯಾವ ನಕ್ಷತ್ರಗಳಲ್ಲಿ ಕೇತು ಉದಯಿಸುವುದೊ ಆಯಾ ನಕ್ಷತ್ರವರಿಗೆ [illegible] ದೇಶಕ್ಕೆ ರಾಜರಿಗೆ ಪೀಡೆಯುಂಟೂ, ದೇಶದಲ್ಲಿ ಯುದ್ಧ ಭಯ ದುರ್ಭಿಕ್ಷಭಯ ರೋಗಭಯ ಪ್ರಾಪ್ತಿಯಾಗುವುದೆಂದೂ ಹೇಳಿರುತ್ತಾರೆ

ಈ ಕೇತು ಪುಚ್ಛವನ್ನು ನೋಡಲಾಗಿ ಇದರ ಲಕ್ಷಣವನ್ನು ಶಾಸ್ತ್ರಜ್ಞರು ತಿಳಿಸಿರುವಂತೆ ಶುಭ ಲಕ್ಷಣದಿಂದ ಕೂಡಿದುದಾಗಿಲ್ಲ ಈ ಕೇತುವು ಬಹಳವಲ್ಲ [illegible] ರುತ್ತಕ್ಕೆ ಬಾಲವು ಸುಮಾರು ಆಕಾಶದ ಮೂರನೇ ಒಂದು ಭಾಗವನ್ನು ಪೂರ್ವಕ್ಕೆ ಆಕ್ರಮಿಸುತ್ತಿದೆ ಪ್ರಾಯಶಃ ಶುಭ ಫಲವನ್ನು ಕೊಡತಕ್ಕ ಕೇತು ವಾದರೆ ಇನ್ನು ಆರುತಿಂಗಳ [illegible] ದೇಶದಲ್ಲಿ ಸುಭಿಕ್ಷ ವಾತಾವರಣವು ಬರಬೇಕಾಗುವುದು. ಕೇತು ಉದಯವು ಆರಂಭವಂತೆ ಹೇಳಿ [illegible] ದಿಂದ ರಾಜರುಗಳೂ, ಪ್ರಜೆಗಳೂ, ಸೇರಿ ವಿಷ್ಣು ದೇವತಾ ಪ್ರೀತಿಯಾಗಿ ಶಾಂತಿ ಕಾರ್ಯಗಳನ್ನು ಮಾಡುವುದು ಶ್ರೇಯಸ್ಕರವಾದುದು.

ಚಿತ್ತ ನಕ್ಷತ್ರದಲ್ಲಿ ಕೇತು ಉದಿಸಿರುವಂತೆ ಕೊಳ್ಳೆಗಾಲದ ಶ್ರೀ॥ ವೇಂಕಟಸುಬ್ಬ ಶಾಸ್ತ್ರಿಗಳು ಬರೆದಿರುತ್ತಾರೆ. ಹಸ್ತ ನಕ್ಷತ್ರಕ್ಕೇ ಸೇರಬೇಕೆಂದು ನನ್ನ ಅಭಿಪ್ರಾಯವಾಗಿದೆ

ಫೋನ್ 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಸೋಮವಾರ ೧೫-೧೧-೪೮ [ಸಂಚಿಕೆ ೧೨೫

ಟೋಜೋರವರು ಡಿ॥ ೮ನೇ ತಾ॥ ಗಲ್ಲಿಗೆ

ನಾಡಿಗ ಕೃಷ್ಣಮೂರ್ತಿಯವರಿಗೆ ಸತ್ಕಾರ

ಮೈಸೂರು ೧೫

ವೃತ್ತ ಪತ್ರಿಕೋದ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯಲು ಪಾಶ್ಚಾತ್ಯ ದೇಶಗಳಿಗೆ ಹೋಗಲಿರುವ ಶ್ರೀ ನಾಡಿಗ ಕೃಷ್ಣಮೂರ್ತಿಯವರನ್ನು ಸತ್ಕರಿಸಲು ಶ್ರೀ ಚಾಮುಂಡೇಶ್ವರಿ-ಭವನದ ಮಾಲೀಕರುಗಳಾದ ಶ್ರೀಗಳು ವಿ. ಅಪ್ಪಾಲಾಲ್ ಮತ್ತು ಕೆ. ವಿ. ರಾಮಯ್ಯಂಗಾರ್ ರವರುಗಳು ನೆನ್ನೆ ದಿನ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ನಗರದ ಅನೇಕ ಮಹನೀಯರು ಬಂದಿದ್ದರು. ಆ ಸಭೆಯ ಅಧ್ಯಕ್ಷ ಸ್ಥಾನದ ಶ್ರೀ ಇ. ಓ. ನಂಜಪ್ಪನವರ್ ಅಗ್ರಾಸನವನ್ನು ವಹಿಸಿದ್ದರು.

ರುಚಿಕರವಾದ ಉಪಹಾರವಾದನಂತರ ಶ್ರೀ ಬಿ. ನಾರಾಯಣಸ್ವಾಮಿಯವರು ಮಾತನಾಡಿ ಶ್ರೀ ನಾಡಿಗ ಕೃಷ್ಣಮೂರ್ತಿಯವರಿಗೆ ಶುಭಾಗಮನವನ್ನು ಕೋರಿದರು. ಪಾಶ್ಚಾತ್ಯ ಪ್ರವಾಸದಿಂದ ಅವರು ಪಡೆದಿರುವ ಅನುಭವಗಳನ್ನು ದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಲೆಂದು ಹಾರೈಸಿದರು.

ಅನಂತರ ಶ್ರೀ ಅಗರಂ ರಂಗಯ್ಯನವರು ಮಾತನಾಡಿ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಮೆರಿಕ ಮತ್ತು ಇಂಗ್ಲೆಂಡುಗಳಲ್ಲಿ ಭಾರತದ ಸಂಸ್ಕೃತಿ ಮತ್ತು ಕಲೆಗೆ ಪರವಾಗಿ ಮಾಡಿರುವ ಸೇವೆಗಾಗಿ ಮೆಚ್ಚುಗೆಯನ್ನು ಸೂಚಿಸಿ ಮಹಾಜನರ ಸಹಾಯದಿಂದ ಅವರು ಪಡೆದಿರುವ ಹೆಚ್ಚಿನ ಅನುಭವವನ್ನು ದೇಶದ ಸೇವೆಗಾಗಿ ವಿನಿಯೋಗಿಸಿ ಯಶಸ್ವಿಗಳಾಗಲೆಂದು ಹಾರೈಸಿದರು.

ಡಾ॥ ಅಣ್ಣಾಜಪ್ಪನವರು ಸಹ ಶ್ರೀ ನಾಡಿಗರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸುದರಲ್ಲದೆ ಶ್ರೀ ಚಾಮುಂಡೇಶ್ವರಿ ಭವನದ ಮಾಲೀಕರುಗಳ ಪರವಾಗಿ ಶುಭಾಶಯಗಳನ್ನು ಕೋರಿದರು.

ಅಧ್ಯಕ್ಷರ ಭಾಷಣವಾದನಂತರ ಶ್ರೀ ನಾಡಿಗರವರು ತಮಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ಅಮೇರಿಕಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ತಮ್ಮ ಅನುಭವಗಳನ್ನು ತಿಳಿಸಿ ಪತ್ರಿಕೋದ್ಯಮದಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆಯಲು ಮಹಾಜನರು ತಮಗೆ ನೀಡಿದ ಸಹಾಯಕ್ಕಾಗಿ ಧನ್ಯವಾದವನ್ನು ಸೂಚಿಸಿ, ಈ ಸಹಾಯವನ್ನು ತಾವು ತಮ್ಮ ಸೇವೆಯಿಂದ ಸಾರ್ಥಕಪಡಿಸುವುದಾಗಿ ಭರವಸೆ ಇತ್ತರು.

ಹರಿಕಥೆ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಚೌಕದ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಗವಾಡಿ ರಾಮಕೃಷ್ಣ ಶಾಸ್ತ್ರಿಯವರಿಂದ ಐರಾವತ ಎಂಬ ಹರಿಕಥೆ ನಡೆಯುವುದು.

ಪ್ರಾಥಮಿಕ ಶಾಲಾ ಶಂಕು ಸ್ಥಾಪನೆ

ಟಿ. ನರಸೀಪುರ ತಾಲ್ಲೂಕು ವಾರಾಡಿಗ ಹಳ್ಳಿ ಮತ್ತು ಗೋದನ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ಶಂಕು ಸ್ಥಾಪನೆಯನ್ನು ನೆನ್ನೆ ದಿನ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ನೆರವೇರಿಸಿದರು.

ಟೋಜೋ ಶಿಕ್ಷೆಯ ಬಗ್ಗೆ ಅವರ ಪತ್ನಿಯ ಉದ್ಗಾರ

ಜಪಾನು ಶರಣಾದಾಗಲೇ ನನ್ನ ಪತಿಯು ಆತ್ಮವೂ ಮರಣ ಹೊಂದಿತೆಂದೂ, ಈಗ ಶರೀರದ ಸಾವು ಮಾತ್ರ ಉಳಿದಿದೆಯೆಂದೂ ಟೋಜೋರವರ ಪತ್ನಿ ಕಟ್ಸುಕೋ ಟೋಜೋರವರು ತಿಳಿಸಿರುತ್ತಾರೆ. ಟೋಜೋರವರು ಮರಣ ದಂಡನೆಯನ್ನೇ ಬಯಸಿದ್ದರು. ಅವರ ಅಪೇಕ್ಷೆಯೇ ಅವರ ಕುಟುಂಬದವರ ಅಪೇಕ್ಷೆಯೂ ಆಗಿತ್ತು. ಮನುಷ್ಯನು ಸಾಯುವುದು ಒಂದೇ ಬಾರಿ. ಯುದ್ಧದ ಪರಿಣಾಮವಾಗಿ ಅನೇಕ ಕುಟುಂಬದವರಿಗೆ ವಿಯೋಗವುಂಟಾಗಿರುವುದು. ನನ್ನ ಪತಿಗೆ ಮರಣ ದಂಡನೆ ವಿಧಿಸಿರುವುದರಿಂದ ನನ್ನ ಮನಸ್ಸಿನ ಮೇಲೆ ಯಾವ ಪರಿಣಾಮವೂ ಉಂಟಾಗಿರುವುದಿಲ್ಲ ಎಂದು ಅವರು ತಿಳಿಸಿರುತ್ತಾರೆ.

ಚೀಣಾ ಕಮ್ಯೂನಿಸ್ಟರಿಗೆ ಅಪಾರ ನಷ್ಟ

ಚೀಣಾದ ರಾಜಧಾನಿಯಾದ ನಾನ್‌ಕಿಂಗ್‌ಗೆ ಹತ್ತಿರವಿರುವ ಸೂಚೋ ಬಳಿ ಸರ್ಕಾರಿ ಸೈನ್ಯಕ್ಕೆ ಭಾರಿ ವಿಜಯ ಲಭಿಸಿದೆಯೆಂದು ಹೇಳಲಾಗಿದೆ. ಈ ಪ್ರದೇಶದಲ್ಲಿ ಅನೇಕ ಕಮ್ಯೂನಿಸ್ಟ್ ಸೈನಿಕರು ಮಡಿದು, ೩೦ ಸಾವಿರ ಸೈನಿಕರು ಸೆರೆಯಾದರೆಂದು ಹೇಳಲಾಗಿದೆ. ಸೂಚೋ ನಗರಕ್ಕೆ ಪೂರ್ವದಲ್ಲಿರುವ ದಾಸ್ ಯು ಪ್ರದೇಶದಲ್ಲಿ ೫೦ ಸಾವಿರ ಕಮ್ಯೂನಿಸ್ಟ್ ಸೈನಿಕರು ಸೆರೆ ಸಿಕ್ಕಿರುವುದು ವರದಿಯಾಗಿದೆ.

ಜಪಾನ್ ಯುದ್ಧಪಾತಕಿಗಳಿಗೆ ಡಿಸೆಂಬರ್ ೮ಕ್ಕೆ ಗಲ್ಲು

ಮರಣ ದಂಡನೆಗೆ ಗುರಿಯಾಗಿರುವ ಜಪಾನಿನ ಯುದ್ಧ ಪಾತಕಿಗಳನ್ನು ಮುಂದಿನ ತಿಂಗಳು ೮ನೇ ತಾ॥ ಗಲ್ಲಿಗೇರಿಸಲಾಗುವುದೆಂದು ಹೇಳಲಾಗಿದೆ. ಟೋಜೋರವರು ತಮ್ಮ ಶಿಕ್ಷೆಯ ಬಗ್ಗೆ ಅಪೀಲು ಮಾಡುವುದಿಲ್ಲವೆಂದೂ, ಇತರ ೨೫ ಜನರು ತಮಗೆ ಕ್ಷಮೆ ದೊರೆಯಬೇಕೆಂದು ಅಪೀಲು ಮಾಡಿದ್ದಾರೆಂದೂ ವರದಿಯಾಗಿದೆ.

○ ಎಂ. ಎಸ್. ಎಂ. ರೈಲ್ವೆಯಲ್ಲಿ ಪ್ರಯಾಣ ಮಾಡುವ ಉತ್ತರ ಭಾರತದ ಪ್ರಯಾಣಿಕರ ಸಲುವಾಗಿ ಈ ದಿನದಿಂದ ಪೂರಿ ಪೊಟ್ಟಣಗಳನ್ನು ಮಾರಲು ವ್ಯವಸ್ಥೆ ಮಾಡಲಾಗಿದೆ. ಮೂರು ಪೂರಿಗಳ ಒಂದು ಪೊಟ್ಟಣಕ್ಕೆ ೫ ಆಣೆ ಬೆಲೆ.

ಸಚಿವರುಗಳಿಂದ ಕೆಡ್ಡಾ ವ್ಯವಸ್ಥೆ ಪರಿಶೀಲನೆ

ಮೈಸೂರು ೧೫

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ಮತ್ತು ಸ್ಥಳೀಯ ಸಂಸ್ಥೆ ಸಚಿವ ಶ್ರೀ ಚನ್ನಿಗರಾಮಯ್ಯನವರು ನಿನ್ನೆ ದಿನ ಕಾಕನಕೋಟೆ ಕಾಡಿಗೆ ಭೇಟಿ ಇತ್ತು ಅಲ್ಲಿ ಪಂಡಿತ ನೆಹರೂರವರ ಭೇಟಿಗಾಗಿ ನಡೆಯುತ್ತಿರುವ ಕೆಡ್ಡಾ ವ್ಯವಸ್ಥೆ ಸಿದ್ಧತೆಗಳನ್ನು ಪರಿಶೀಲಿಸಿದರು.

ನೆಹರೂರವರ ಹೆಸರಿನಲ್ಲಿ ಕ್ರಿಕೆಟ್ ಸ್ಟೇಡಿಯಂ

ಭಾರತ ಪ್ರಧಾನಿ ಪಂಡಿತ ನೆಹರೂರವರ ಹೆಸರಿನಲ್ಲಿ ನವದೆಹಲಿಯಲ್ಲಿ ಒಂದು ಕ್ರಿಕೆಟ್ ಸ್ಟೇಡಿಯಂ ಅನ್ನು ನಿರ್ಮಿಸುವುದಾಗಿ ಭಾರತ ಕ್ರಿಕೆಟ್ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಡಿಮೆಲ್ಲೋರವರು ತಿಳಿಸಿರುತ್ತಾರೆ.

ಆರ್. ಎಸ್. ಎಸ್. ಮೇಲಿನ ನಿಷೇಧ ಹೋಗುವುದಿಲ್ಲ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ಹಾಕಿರುವ ಪ್ರತಿಬಂಧಕಾಜ್ಞೆಯನ್ನು ಸಧ್ಯಕ್ಕೆ ಭಾರತ ಸರ್ಕಾರವು ತೆಗೆದು ಹಾಕುವುದಿಲ್ಲವೆಂದು ಹೇಳಲಾಗಿದೆ. ಅದರ ಸಂಚಾಲಕರಾದ ಶ್ರೀ ಗೋಲ್ವಾಲ್ಕರ್ ರವರು ದೆಹಲಿಯನ್ನು ಕೂಡಲೇ ಬಿಟ್ಟು ಹೋಗಬೇಕೆಂಬ ಆಜ್ಞೆ ಮೀರಿ, ಅವರನ್ನು ಪುನಃ ನಾಗಪುರಕ್ಕೆ ಪೊಲೀಸರು ಕರೆದೊಯ್ದರು. ಅಲ್ಲಿನ ಸೆಂಟ್ರಲ್ ಜೈಲಿನಲ್ಲಿ ಅವರನ್ನು ಇಡಲಾಗಿದೆ.

ಮೊಹರಂ ಮೆರವಣಿಗೆ ಗಲಭೆಯಲ್ಲಿ ಐವರ ಮರಣ

ಉತ್ತರ ಕಲ್ಕತ್ತಾದಲ್ಲಿ ನೆನ್ನೆ ನಡೆದ ಮೊಹರಂ ಮೆರವಣಿಗೆಯು ಹೋಗುತ್ತಿದ್ದಾಗ ಕೆಲವರು ಗಲಭೆ ನಡೆಸಿದುದರಿಂದ ಭಾರಿ ಗಲಾಟೆಯಾಗಿ ೫ ಜನರು ಸತ್ತರೆಂದೂ, ೮೩ ಜನರಿಗೆ ಗಾಯಗಳಾದುವೆಂದೂ ಹೇಳಲಾಗಿದೆ. ದೊಂಬಿಕಾರರು ಬಾಂಬುಗಳು ಮತ್ತು ಮದ್ದುಗುಂಡುಗಳನ್ನು ಉಪಯೋಗಿಸಿದರೆಂದೂ, ಪೊಲೀಸರು ಮೊದಲು ಟಿಯರ್ ಗ್ಯಾಸನ್ನು ಪ್ರಯೋಗಿಸಿ, ನಂತರ ಗುಂಡು ಹಾರಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಯಿತೆಂದೂ ವರದಿಯಾಗಿದೆ. ಗಲಭೆ ನಡೆದ ಪ್ರದೇಶದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ.

ನೆಹರೂರವರ ಕಾರ್ಯಕ್ರಮದಲ್ಲಿ ಬದಲಾವಣೆ

ಸ್ವಂ. ವಾ. ಫೋ.] ಬೆಂಗಳೂರು ೧೫

ಸಂಸ್ಥಾನಕ್ಕೆ ಮುಂದಿನ ತಿಂಗಳು ಭೇಟಿ ಕೊಡಲಿರುವ ಭಾರತದ ಪ್ರಧಾನಿ ಪಂಡಿತ ನೆಹರೂರವರ ಕಾರ್ಯಕ್ರಮವು ಈ ರೀತಿ ಇರುವುದೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ:-

ಡಿಸೆಂಬರ್ ೨೭ನೇ ತಾ॥ ಸಂಜೆ ಬೆಂಗಳೂರಿಗೆ ಆಗಮನ. ೨೮ನೇ ತಾ॥ ಬೆಂಗಳೂರಿನಲ್ಲಿ ಮೊಕ್ಕಾಂ. ೨೯ನೇ ತಾ॥ ಮೈಸೂರಿಗೆ ಪ್ರಯಾಣ, ವಿಶ್ವ ವಿದ್ಯಾನಿಲಯದ ವಿಶೇಷ ಘಟಿಕೋತ್ಸವ. ೩೦ನೇ ತಾ॥ ಕೆಡ್ಡಾ ಪರಿಶೀಲನೆ. ೩೧ನೇ ತಾ॥ ದೆಹಲಿಗೆ ಪ್ರಯಾಣ.

ಫ್ಲಾಸ್ಕ್ ಕೈಗಾರಿಕೆ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಫ್ಲಾಸ್ಕ್ ಕಾರ್ಖಾನೆಯನ್ನು ಸ್ಥಾಪಿಸಲು ಕಲ್ಕತ್ತದ ಜಯಶ್ರೀ ಕಂಪೆನಿಗೆ ಸರ್ಕಾರದವರು ಅನುಮತಿ ಕೊಟ್ಟಿರುತ್ತಾರೆ. ಆ ಕಂಪೆನಿಗೆ ೧೮೨೫೦ ಎಕರೆ ಜಮೀನನ್ನು ೫ ವರ್ಷಗಳ ಕಾಲ ಕಂದಾಯವಿಲ್ಲದೆ ಕೊಡಲು ಸರ್ಕಾರದವರು ಒಪ್ಪಿದ್ದಾರೆ.

○ ಹರಿಹರ ಮುಂತಾದ ಪ್ರದೇಶಗಳಲ್ಲಿರುವ ಮಿಲಿಟರಿ ಕೇಂದ್ರಗಳನ್ನು ಭದ್ರಾವತಿಗೆ ವರ್ಗಾಯಿಸಲು ಸರ್ಕಾರದವರು ನಿರ್ಧರಿಸಿದ್ದಾರೆ.

ಮಕ್ಕಳನ್ನು ಭಾವಿಗೆ ಹಾಕಿದ ತಂದೆ

ಹರಿಹರದ ವಿ... ತಾಲ್ಲೂಕಿನ ... ಪಳ್ಳಿ ಎಂಬುವನು ತನ್ನ ಹೆಂಡತಿ ಹಡೆದ ಎರಡು ಮಕ್ಕಳು ತನ್ನವಲ್ಲವೆಂದು ಅವುಗಳನ್ನು ಭಾವಿಗೆ ಎಸೆದನೆಂದೂ, ಆ ಪೈಕಿ ಒಂದು ಮೃತಪಟ್ಟಿತೆಂದೂ, ಇನ್ನೊಂದನ್ನು ರಕ್ಷಿಸಲಾಯಿತೆಂದೂ ವರದಿಯಾಗಿದೆ. ಪೊಲೀಸರು ಅವನನ್ನು ದಸ್ತಗಿರಿ ಮಾಡಿದ್ದಾರೆ.

ಕೆ. ಸಿ. ರೆಡ್ಡಿಯವರ ಪ್ರವಾಸ

ಮೈಸೂರು ೧೫

ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ಜಿಲ್ಲೆಯಲ್ಲಿ ಈ ಕೆಳಗೆ ಕಂಡಂತೆ ಪ್ರವಾಸ ಮಾಡುವರು:—

ಇದೇ ೧೮ನೇ ತಾ॥ ಗುರುವಾರ ಮಧ್ಯಾಹ್ನ ೧ ಗಂಟೆಗೆ ಮೈಸೂರಿನಿಂದ ಹೊರಟು ೨॥ ಗಂಟೆಗೆ ಯಳಂದೂರು, ಅಲ್ಲಿನ ಹೆಂಗಸರ ಆಸ್ಪತ್ರೆ ಆರಂಭೋತ್ಸವ, ೪ ಗಂಟೆಗೆ ಕಿನಕಹಳ್ಳಿ ಪ್ರಾಥಮಿಕ ಶಾಲಾ ಆರಂಭೋತ್ಸವ, ೫-೧೫ ಗಂಟೆಯಿಂದ ೬-೩೦ ಗಂಟೆವರೆಗೆ ಆಗರ ಮಾಂಬಳ್ಳಿಗಳಿಗೆ ಭೇಟಿ.

೧೯ನೇ ತಾ॥ ಶುಕ್ರವಾರ ಬೆಳಿಗ್ಗೆ ೮ ಗಂಟೆಗೆ ಮೈಸೂರಿನಿಂದ ಹೊರಟು ೧೦-೩೦ ಗಂಟೆಗೆ ಚಾಮರಾಜನಗರ, ಅಲ್ಲಿ ಹರವೆ ಪ್ರಾಥಮಿಕ ಶಾಲಾ ಶಂಕುಸ್ಥಾಪನೆ, ೧೨ ಗಂಟೆಗೆ ಚಾಮರಾಜನಗರ, ೧ ಗಂಟೆಗೆ ಸಂತೆಮರಹಳ್ಳಿ, ೨ ಗಂಟೆಗೆ ಮೈಸೂರಿಗೆ ವಾಪಸು.

ಕ್ರಿಕೆಟ್ ಪಂದ್ಯದಲ್ಲಿ ಮೈಸೂರಿಗೆ ಸೋಲು

ಸ್ವಂ. ವಾ. ಫೋ.] ಬೆಂಗಳೂರು ೧೫

ಅಂತರ ಪ್ರಾಂತೀಯ ರಾಂಜಿ ಕ್ರಿಕೆಟ್ ಪಂದ್ಯದಲ್ಲಿ ಈ ದಿನ ಮೈಸೂರಿನವರು ಆಟವಾಡಲು ಮೊದಲೇ ಎಲ್ಲರೂ ೧೩೩ ರನ್ನುಗಳಿಗೆ ಬಿದ್ದು ಹೋದರು. ಆದ್ದರಿಂದ [illegible]

ನೆಹರೂರವರ ಜಯಂತಿ ದಿನಾಚರಣೆ

ಮೈಸೂರು, ೧೫

ಭಾರತ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರ ೬೦ನೇ ವರ್ಷದ ವರ್ಧಂತಿ ಮಹೋತ್ಸವವು ನಿನ್ನೆ ದಿನ ರಾಜಧಾನಿಯ ಅನೇಕ ಕಡೆಗಳಲ್ಲಿ ವೈಭವದಿಂದ ಆಚರಿಸಲ್ಪಟ್ಟಿತು.

ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಧಾರಿಣಿ ಬಿಲ್ಡಿಂಗ್ ಸಭೆಯ … ಸಭಾ ಸದಸ್ಯರಾದ ಶ್ರೀ ಕೆ ಪುಟ್ಟಸ್ವಾಮಿಯವರು ಅಗ್ರಾಸನವನ್ನು ವಹಿಸಿದ್ದರು. ಸ್ವಾಗತ ಗೀತೆಗಳ ಮಂಗಳವಾದನಂತರ, ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರವರು ಭಾಷಣ ಮಾಡಿ, ಪಂಡಿತ ನೆಹರೂರವರ ಕಾರ್ಯ ಸಾಧನೆಗಳನ್ನು ವಿವರಿಸಿದರು. ನೆಹರೂರವರು ಮೈಸೂರಿಗೆ ಬಂದಿದ್ದಾಗ ನಡೆದ ಹಲವು ವಿದ್ಯಮಾನಗಳನ್ನು ಶ್ರೀ ಆಗರಂ ರಂಗಯ್ಯನವರು ವಿವರಿಸಿ ವ್ಯಕ್ತಿಗಳಿಗಿಂತಲೂ ತತ್ವಗಳಿಗೂ ಸಂಸ್ಥೆಗೂ ನೆಹರೂರವರು ಹೇಗೆ ಹೆಚ್ಚು ಪ್ರಾಮುಖ್ಯತೆ ಕೊಡುವರೆಂಬುದನ್ನು ತಿಳಿಸಿದರು.

ಪಾಶ್ಚಿಮಾತ್ಯ ಪ್ರವಾಸದಿಂದ ಈಗ ತಾನೇ ಹಿಂತಿರುಗಿರುವ ಶ್ರೀ … ಕೃಷ್ಣಮೂರ್ತಿಯವರು ಅನಂತರ ಮಾತನಾಡಿ ನೆಹರೂರವರನ್ನು ದೇಶ ವಿದೇಶಗಳ ಜನರು ಎಷ್ಟು ಗೌರವದಿಂದ ಕಾಣುತ್ತಿರುವರೆಂಬುದನ್ನು ವಿವರಿಸಿದರು.

ಅಧ್ಯಕ್ಷರ ಭಾಷಣವಾದನಂತರ, ಪಂಡಿತ ನೆಹರೂರವರಿಗೆ ದೀರ್ಘಾಯುರಾರೋಗ್ಯವನ್ನು ಕೋರಿ, ಅವರ ಸರ್ಕಾರಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿ ನಿರ್ಣಯವನ್ನು ಮಾಡಲಾಯಿತು.

ಶ್ರೀ ಕೆ ಎಸ್ ಸೂರ್ಯನಾರಾಯಣರಾಯರಿಂದ ಧನ್ಯವಾದಗಳಾದನಂತರ, ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕನ್ನೇಗೌಡನ ಕೊಪ್ಪಲಿನಲ್ಲಿ

ಕನ್ನೇಗೌಡನ ಕೊಪ್ಪಲಿನ ರೈತ ಯುವಕರ ಸಂಘದ ಆಶ್ರಯದಲ್ಲಿ ನಿನ್ನೆ ನೆಹರೂ ಜಯಂತಿಯು ಸಿದ್ಧಪ್ಪಾಜೇಶ್ವರ ಸ್ವಾಮಿ ಮೈದಾನದಲ್ಲಿ ಜರುಗಿತು. ಸಂಘದ ಅಧ್ಯಕ್ಷರಾದ ಶ್ರೀ ಎಸ್ ಎಸ್ ನಾರಾಯಣಸ್ವಾಮಿಯವರು ಭಾರತ ಧ್ವಜವನ್ನೂ, ಶ್ರೀ ಬಸವಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು. ಅನಂತರ ಶ್ರೀ ಕೆ ಎಸ್ ಬೋರಯ್ಯನವರು ಬಾಲಕ ಬಾಲಕಿಯರಿಗೆ ಸಿಹಿ ತಿಂಡಿಯನ್ನು ಹಂಚಿದರು.

ಬ್ರಹ್ಮಾನಂದ ಬೋಧನಾಲಯದಲ್ಲಿ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಬೋಧನಾಲಯದ … ನೆಹರೂ ಜಯಂತಿಯು ನಿನ್ನೆ … ಶ್ರೀ ಬಿ ಎನ್ ನಾಗರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. … ಎಂ. ಎನ್. … ಕೇಶವಯ್ಯನವರ ಪ್ರಸಿದ್ಧವಾದ ಸಂಗೀತವೂ ಮತ್ತು ಶ್ರೀ ಎಂ. ಎ ದೊರೆಸ್ವಾಮಿ ಅಯ್ಯಂಗಾರ್‌ರವರಿಂದ ಭಾಷಣವೂ ಜರುಗಿದುವು.

ಚಾಮರಾಜನಗರ-ಸತ್ಯಮಂಗಲಂ ರೈಲ್ವೆ

ಚಾಮರಾಜನಗರ ೧೪

ಇಲ್ಲಿಂದ ಸತ್ಯಮಂಗಲಕ್ಕೆ ರೈಲು ನಿರ್ಮಾಣದ ಬಗ್ಗೆ ಸರ್ವೇ ಕೆಲಸ ನಡೆಯುತ್ತಿದೆ. ಈಗ ನಿರ್ಧರಿಸಿರುವ ಮಾರ್ಗದಲ್ಲಿ ರೈಲನ್ನು ಹಾಕುವುದರಿಂದ ಅನೇಕ ಹಳ್ಳಿಗಳ ಪ್ರಯಾಣಿಕರಿಗೆ ಅನುಕೂಲವಾಗುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಆದ್ದರಿಂದ … ಅನೇಕ … ವೆಚ್ಚ … ದ ಬಾರಿಯಾಗುವುದೆಂದು … ರೈಲ್ವೆ ಇಲಾಖೆಯವರು … ತ್ತಾರೆ.

ಸೌದೆ ಕಲ. ತೊಂದರೆ

ಇಲ್ಲಿನ ಸರ್ಕಾರಿ … ದ ಸೌದೆ … ಅನೇಕ ಜನರಿಗೆ … ತುಂಬಾ ಕಷ್ಟವಾಗಿರುತ್ತದೆ … ಕಷ್ಟಪಡ … ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಟ್ಟಿರುತ್ತಾರೆ.

ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ

ರಾಜಧಾನಿಯ ಸಂಗೀತ ವಿದ್ವಾಂಸರುಗಳಾದ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ನಿನ್ನೆ ನೆಹರೂ ಜಯಂತಿಯು … ಶ್ರೀ ಬಿ … ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಸಹೋದರರಿಂದ ವೀಣಾ ವಾದನವೂ ಜರುಗಿತು.

Edited printed and published by A. R. Nagarajan at the Sadhvi Press D. Subbaiah Road Mysore

ಶ್ರೀ ಗಾಯತ್ರೀ ಟಾಕೀಸ್

16 11 48ರಿಂದ 2 ದಿನಗಳು ಮಾತ್ರ

The famous Author ELIZABETH JANE WAY'S

DAISY - - KENYON

(ಡೈಸಿ ಕೆನೆಯಾನ್)

An Historical Picture special to our STUDENT PATRONS

From 18-11-48

SAN ANTONIO

(Technicolour)

ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ನವೀನ ಡಿಜೈನುಗಳ ಸೀರೆಗಳು — … ಗಜಗಳಲ್ಲಿ ಗ್ಯಾರಂಟಿಯಾಗಿ … ಯಾಯಿತಿ ಬೆಲೆಗೆ ದೊರೆಯುತ್ತವೆ.

ದಯವಿಟ್ಟು ಇಂದೇ ಭೇಟಿ ಕೊಡಿ

ಗುರುದೇವಾ ಹಾಲ್,

… ಅಂಗಡಿ, ಶಿವರಾಂಪೇಟೆ, ಮೈಸೂರು.

ಚೀಣಾ ಸರ್ಕಾರದ ಪತನವೇ?

ಎ ಪಿ ಎ] ವಾಷಿಂಗ್‌ಟನ್ ೧೦

ಚೀಣಾದ ಚಿಯಾಂಗ್-ಕೈ-ಷೇಕ್‌ರವರ ಸರ್ಕಾರವು ಇಷ್ಟರಲ್ಲೇ ಪತನವಾಗುವುದರಿಂದ ಅತ್ತ ವಿಶೇಷ ಅವ್ಯವಸ್ಥೆ ಸಂಭವಿಸುವುದೆಂದೂ, ಇದರಿಂದ ಬ್ರಿಟಿಷ್ ಮತ್ತು ಅಮೇರಿಕಗಳ ಏಷ್ಯಾ ಖಂಡದ ಪುನರಚನೆ ಯೋಜನೆಗೆ ಅಡಚಣೆಯುಂಟಾಗುವುದೆಂದೂ ಹೇಳಲಾಗಿದೆ. ಚೀಣಾ ಸರ್ಕಾರವು ಪತನವಾಗುವುದೋ ಇಲ್ಲವೋ ಎಂಬ ಪ್ರಶ್ನೆಯೇ ಇಲ್ಲ, ಅದು ಹೇಗೆ ಮತ್ತು ಎಂದು … ವಾಗುವುದು ಎಂಬುದೇ ಈಗಿನ ಪ್ರಶ್ನೆ. ಚೀಣಾದಲ್ಲಿ ಕಮ್ಯೂನಿಸ್ಟ್ ಸರ್ಕಾರವು ಸ್ಥಾಪಿತವಾದರೆ ಅಮೇರಿಕವು ಯಾವ ಮಾರ್ಗವನ್ನು ಅನುಸರಿಸಬೇಕೆಂದು ಅಲ್ಲಿನ ಸರ್ಕಾರವು ಆಲೋಚಿಸುತ್ತಿದೆ. ಈ ಬಗ್ಗೆ ಲಂಡನ್ನಿಗೂ ಮತ್ತು ವಾಷಿಂಗ್‌ಟನ್ನಿಗೂ ವ್ಯವಹಾರ ನಡೆಯುತ್ತಿದೆ. ಚೀಣಾದ ಸರ್ಕಾರವು ಸಂಪೂರ್ಣವಾಗಿ ಮುರಿದು ಬಿದ್ದರೆ ಈ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ಅಗಾಧ ಮಿಲಿಟರಿ ಮತ್ತು ಹಣದ ಸಹಾಯವನ್ನು ಕೊಡಬೇಕಾಗುವುದು. ಇದರಿಂದ ಪಶ್ಚಿಮ ರಾಷ್ಟ್ರಗಳು ಕೈಗೊಂಡಿರುವ ಯೂರೋಪಿನ ರಕ್ಷಣಾ ಯೋಜನೆಗೆ ಧಕ್ಕೆ ತಗಲುವುದೆಂದು ಸರ್ಕಾರದ ವಲಯಗಳಲ್ಲಿ ಅಭಿಪ್ರಾಯಪಡಲಾಗುತ್ತಿದೆ.

ಭಾರತದಲ್ಲಿ ವಿದೇಶೀ ಗೂಢಚಾರರು

ಸ್ವಾತಂತ್ರ್ಯ ಘೋಷಣೆಯಾದನಂತರ ನಮ್ಮ ದೇಶಕ್ಕೆ … ವಿದೇಶೀ ಗೂಢಚಾರರ ಸಂಖ್ಯೆಯು ಹೆಚ್ಚುತ್ತಿದೆಯೆಂದೂ, … ದಿದೆ. ನಾನಾ ವೇಷಗಳನ್ನು ಧರಿಸಿದ ಈ ವಿದೇಶೀ ಗೂಢಚಾರರು ದೆಹಲಿಯ … ಹೆಚ್ಚು ವಾಸಿಸುತ್ತಾ ಭಾರತದ ರಾಜಕೀಯ ಮತ್ತು ಆರ್ಥಿಕ ಕಾರ್ಯ ಚಟುವಟಿಕೆಗಳನ್ನು ತಮ್ಮ ದೇಶಗಳಿಗೆ ರಹಸ್ಯ ಭಾಷೆಗಳಲ್ಲಿ ತಂತಿ ಮೂಲಕ ವರದಿ ಮಾಡುತ್ತಿದ್ದಾರೆಂದು ಹೇಳಲಾಗಿದೆ.

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾಮ್ ಸೋಪು, ಕೇಶ ಸೋಪು ಮುಂತಾದ ಸಕಲ ಬಾದೆಗಳಿಗೂ ರಾಮಬಾಣ ಕ್ರಯ ೦ ೧೨ ೦

ಮಲ ಸುಗಂಧರಾಜ ತೈಲ:--)

" … ನಾದ ತೈಲ --)

" ಭೃಂಗಾ ಮಲಕ ತೈಲ)

ಕೇಶಗಳ ಬೆಳವಣಿಗೆಗೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ ಮುಲಾಮು ಗಾಯ ಗಳಿಗೆ ಸಿದ್ಧ ಸಂಜೀವಿನಿ

ಮಹಾಕೇತಕೀ ತೈಲ — ತಲೆ ಬಾಚಿ ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ.

ಫ್ರೀ ಟಾನಿಕ್ ಕ್ರಯ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ 90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ದೇವಸ್ಥಾನದಲ್ಲಿ ಜೂಜು…

ಅಗರ-ಮಾಂಬಳ್ಳಿ

ಇಲ್ಲಿನ ಶ್ರೀ ರಾಮೇಶ್ವರ ದೇ… ದ ಆವರಣದಲ್ಲೇ ಅನೇಕ ಜನ … ಜೂಜಾಡುತ್ತಿದ್ದುದನ್ನು ನಿಲ್ಲಿಸಲು … ಪ್ರಯತ್ನ ಪಟ್ಟರೂ ಉಪಯೋಗ… ಅನೇಕ ವರ್ಷಗಳಿಂದಲೂ ಈ … ಯುತ್ತಿರುವುದನ್ನು ಪೋಲೀಸರಿಗೂ … ಇತರ ಅಧಿಕಾರಿಗಳಿಗೂ ತಿಳಿಸಿದರೂ ಈ ಬಗ್ಗೆ ಯಾವ ಕ್ರಮವನ್ನೂ … ಳ್ಳದಿರುವುದು ತುಂಬಾ ಶೋಚನೀಯ. ದೇವಾಲಯದ ಎದುರಿನ ರಾಜ ಬೀ… ಚೌಕದಲ್ಲಿ ದೀಪವಿಲ್ಲದಿರುವುದೇ … ಕಾರಣವೆಂದು ಹೇಳಬಹುದು … ದೀಪವನ್ನು ಹಾಕಿ ಜೂಜಾಟವನ್ನು … ಸಬೇಕೆಂದು ಕೋರಲಾಗಿದೆ.

ರೈಲ್ವೆ ನಿಲ್ದಾಣಗಳಲ್ಲಿ ಸ್ಟ್ಯಾಂ… ಗಳ ಮಾರಾಟ

ಸಾರ್ವಜನಿಕರ ಉಪಯೋಗಕ್ಕಾ… ಸಂಸ್ಥಾನದ ರೈಲ್ವೆಯ … ಳೂರು, ಮೈಸೂರು, ಬೀರೂರು, … ಪೇಟೆ ಮುಂತಾದ ಮುಖ್ಯ ನಿಲ್ದಾ… ಆರ್ ಎಂ ಎಸ್ ಕಛೇರಿಗಳಲ್ಲಿ … ಸ್ಟ್ಯಾಂಪುಗಳನ್ನು ಮಾರಾಟ ಮಾಡಲು … ಮಾಡಿಸಿದ್ದಾರೆ

ಟೋಜೋ ಹಣೇಬರಹ… ೨೨ನೇ ತಾರೀಖು ಇತ್ಯರ್ಥ…

ಈ ತಿಂಗಳು ೨೨ ನೇ ತಾರೀಖು … ಗಳ ಪ್ರಧಾನ ಸೇನಾಪತಿ ಜನರಲ್ … ರ್ ರವರು ಇತರ ನಾಯಕರುಗಳು … ಸೇರಿ ಜನರಲ್ ಟೋಜೋ ಮತ್ತು … ವಿಧಿಸಲಾಗಿರುವ ಶಿಕ್ಷೆಯನ್ನು … ವರು. ಶಿಕ್ಷೆಗಳನ್ನು ಸ್ವಲ್ಪ ಮಟ್ಟಿಗಾ… ಕಡಿಮೆ ಮಾಡುವುದಕ್ಕೆ ಅವರು … ಮಾಡಬಹುದೆಂದು ಹೇಳಲಾಗಿದೆ.

ಬಂಡಾಪೆಗೆ ವಿಮಾನ ಯಾ…

ಚೀಣಾದ ಹಣ ಕಾಸಿನ ಪರಿಸ್ಥಿತಿ … ಅಲ್ಲೋಲಕಲ್ಲೋಲವಾಗಿದೆಯೆಂದು … ದುಬಂದಿದೆ. ಇದರ ಪರಿಣಾಮವಾಗಿ … ಷಾಂಘೈ ಮತ್ತು ಪೀಪಿಂಗ್ ನಗರಗಳ … ವಿಮಾನ ಪ್ರಯಾಣಕ್ಕೆ ಕೇವಲ … ಯಾಗುವುದರಿಂದ ಅಲ್ಲಿನ ವಿಮಾನ … ಚಾರವನ್ನು ನಿಲ್ಲಿಸಲಾಗಿದೆ. … ನ್ನು ಕೊಟ್ಟರೆ ೫ ವರ್ಷದ ಟಿಕೆಟ್ … ನ್ನು ಪಾವತಿ ಮಾಡಿದಂತಾಗುತ್ತದೆ… ನೀರಿನ ಕಂದಾಯ ಕಟ್ಟಬಹುದಾದಷ್ಟು … ಡಿಮೆ ಬೆಲೆಯ ನಾಣ್ಯವೇ ಇಲ್ಲದೆ … ಯಾರೂ ಪಾವತಿ ಮಾಡುತ್ತಿಲ್ಲವೆಂ… ಹೇಳಲಾಗಿದೆ.

ಬ್ರಿಟನ್ನಿಗೆ ಬರಲು ಅಮೇರಿ… ದವರಿಗೆ ರಹದಾರಿ ಬೇಕಿಲ್ಲ

ಬ್ರಿಟನ್ನಿಗೆ ಅಮೇರಿಕದಿಂದ ಬರುವ ಪ್ರೇ… ಕ್ಷಕರು ಇನ್ನು ಮುಂದೆ ರಹದಾರಿ ಪಡೆ… ಬೇಕಾಗಿಲ್ಲವೆಂದೂ, ಆದರೆ ಬ್ರಿಟಿಷ್ … ರು ಅಮೇರಿಕಕ್ಕೆ ಹೋಗಲು ರಹದಾರಿ … ಪಡೆಯಬೇಕೆಂಬ ನಿರ್ಬಂಧವು ಇದ್ದೇ ಇ… ಯೆಂದೂ ಹೇಳಲಾಗಿದೆ

○ ಹಿಂದೂಸ್ಥಾನ ವಿಮಾನ ಕಾರ್ಖಾನೆ… ನ ಜನರಲ್ ಮ್ಯಾನೇಜರ್ ಶ್ರೀ ಪಾಂಡ್ಯ… ನ್ನು ಬೇರೆ ಕಡೆಗೆ ವರ್ಗಾಯಿಸಿ ಶ್ರೀ … ಗುಪ್ತರನ್ನು ನೇಮಿಸಲಾಗುವುದು.

ಸಂಪುಟ ೭] ಮಂಗಳವಾರ ೧೬-೧೧-೪೮ [ಸಂಚಿಕೆ ೧೨೬

-ಹೂಪೆ ರಾಜಧಾನಿ- ಚೀಣರು ತ್ಯಜಿಸಿದರು

ತ್ರಿವಿಕ್ರಮರೆಡ್ಡಿಯವರು ಟ್ರೇಡ್ ಕಮಿಷನರೇ ?

ಸ್ವಂ ಸು ಪೋ॥] ಬೆಂಗಳೂರು ೧೬

ಮೈಸೂರು ಕಾಂಗ್ರೆಸ್ ನಾಯಕರಾಗಿದ್ದು ಈಗ ಮದರಾಸಿನಲ್ಲಿ ಕೃಷಿ ಮತ್ತು ವ್ಯಾಪಾರದ ಕ್ಷೇತ್ರದಲ್ಲಿ ತೊಡಗಿರುವ ಶ್ರೀ ಎಸ್ ಸಿ. ತಿಮ್ಮಾರೆಡ್ಡಿಯವರನ್ನು ಲಂಡನ್ನಿನಲ್ಲಿ ಟ್ರೇಡ್ ಕಮಿಷನರಾಗಿ ನೇಮಿಸಲಾಗುವುದೆಂದು ಅಧಿಕಾರಿ ವಲಯಗಳಲ್ಲಿ ಹೇಳಲಾಗುತ್ತಿದೆ

ಚಾಮರಾಜನಗರದಿಂದ ಕೊಯಮತ್ತೂರಿಗೆ ರೈಲು

ಚಾಮರಾಜನಗರದಿಂದ ಸತ್ಯಮಂಗಲಕ್ಕೆ ಹಾಕಲಿರುವ ರೈಲನ್ನು ಕೊಯಮತ್ತೂರಿಗೆ ಸೇರಿಸಲಾಗುವುದೆಂದು ಎಸ್ ಐ ಆರ್ ರೈಲ್ವೆಯ ಪ್ರಕಟನೆ ತಿಳಿಸುತ್ತದೆ ಚಾಮರಾಜನಗರದಿಂದ ಪುಂಜನೂರಿಯಂ ಸತ್ಯಮಂಗಲಂ, ಮಾರ್ಗವಾಗಿ ಮೆಟ್ಟುಪಾಳ್ಯಕ್ಕೆ ರೈಲನ್ನು ಹಾಕಬೇಕೆಂದು ಮೊದಲು ನಿರ್ಧರಿಸಲಾಗಿತ್ತೆಂದೂ, ಆ ಪ್ರದೇಶಗಳಲ್ಲಿ ಹೆಚ್ಚು ಪ್ರಯಾಣಿಕರಿಲ್ಲದಿರುವುದರಿಂದ ಈಗ ಪುಂಜನೂರಿಯಂಪೆಟ್ಟೆಯಿಂದ ಕೊಯಮತ್ತೂರಿಗೆ ರೈಲನ್ನು ಹಾಕಲಾಗುವುದೆಂದೂ ತಿಳಿಸಲಾಗಿದೆ ಇದರಿಂದ ೧೨ ಮೈಲಿಗಳ ದೂರವು ಹೆಚ್ಚಾಗುವುದು.

ಪತ್ನಿಗೆ ಟೋಜೋರವರ ಬಹುಮಾನ

ಜಪಾನಿನ ಮಾಜಿ ಪ್ರಧಾನಿ ಟೋಜೋರವರು ತಮ್ಮ ಪತ್ನಿಗೆ ತಲೆ ಕೂದಲಿನ ಒಂದು ಚೂರು ಮತ್ತು ಉಗುರಿನ ಚೂರುಗಳನ್ನು ಕೊಟ್ಟಿರುವರೆಂದೂ, ಇದು ದೂರದಲ್ಲಿ ಸಾಯುವ ಜಪಾನಿನ ಜನರ ಸಂಪ್ರದಾಯವೆಂದೂ ಹೇಳಲಾಗಿದೆ

ನೆಹರೂರವರಿಗೆ ಸ್ಟಾಲಿನ್‌ರವರಿಂದ ಶುಭಾಶಯ

ಭಾರತ ಪ್ರಧಾನಿ ಪಂಡಿತ ನೆಹರೂರವರ ೬೦ನೇ ವರ್ಷ ವರ್ಧಂತಿ ಸಂದರ್ಭದಲ್ಲಿ ರಷ್ಯದ ಸ್ಟಾಲಿನ್ ಮತ್ತು ಇತರ ಅನೇಕ ದೇಶದ ನಾಯಕರುಗಳು ಅವರಿಗೆ ಶುಭಾಶಯಗಳನ್ನು ಕಳುಹಿಸಿರುತ್ತಾರೆ

ದೆಹಲಿಯ ಬಾಲಕಿಯರು ನೆಹರೂರವರಿಗೆ ಒಂದು ಚಿನ್ನದ ಆಟದ ಚೆಂಡನ್ನು ನೀಡಿ ... ವರ್ಷದ ಒಬ್ಬ ವೃದ್ಧನು ೫೦ ರೂಪಾಯಿಗಳನ್ನು ಅರ್ಪಿಸಿರುತ್ತಾರೆ ತಾವು ನನ್ನ ರಾಜ್ಯದಲ್ಲಿದುದರಿಂದ ನಿಮಗೆ ಕೊಡಬೇಕಾದ ಸರಿಯಾದ ಬದಲಾವಣೆಯನ್ನು ಕೊಡುತ್ತಿದ್ದೇನೆಂದು ಅತನು ಬಂದಿದ್ದನ್ನು ಕೊಟ್ಟನು ತಾವು ಕಳೆದ ೩೦ ವರ್ಷಗಳಿಂದ ಇದನ್ನು ಉಪಯೋಗಿಸಿಲ್ಲವೆಂದು ನೆಹರೂರವರು ಹೇಳಿದುದನ್ನು ಸ್ವೀಕರಿಸಿದರು.

ಕಷ್ಟ ನಿವಾರಿಸಲು ಕೊಂದು ಹಾಕಿ ಬಿಡಿ

ಬರ್ಮಾದೇಶದ ಸರ್ಕಾರಕ್ಕೆ ೧೫೦೦ ಜನ ನಿರುದ್ಯೋಗಿಗಳ ಮನವಿ

ತಾವು ಪಡುತ್ತಿರುವ ಕಷ್ಟಗಳನ್ನು ಕೊನೆಗಾಣಿಸಲು ತಮ್ಮನ್ನು ಯುದ್ಧ ಕಾಲದ ನಿವಾಸಿಗಳ ಶಿಬಿರಗಳಲ್ಲಿ ಹಾಕಿ ಕೊಂದು ಹಾಕಿಬಿಡುವಂತೆ ಮಾಜಿ ಸೇನಾ ಚಿತ್ರ ಹಿಂದಿನ ನೀಂದ್ರವಲ್ಲಿ ವಾಸಿಸುತ್ತಿರುವ ೧೫೦೦ ಜನ ನಿರುದ್ಯೋಗಿಗಳು ಬರ್ಮಾ ಸರ್ಕಾರಕ್ಕೆ ಮನವಿ ಮಾಡಿದ್ದಾರೆ

ಇಬ್ಬರು ವೈದ್ಯಾಧಿಕಾರಿಗಳ ರಾಜೀನಾಮೆ

ಸ್ವಂ ಸು ಪೋ॥] ಬೆಂಗಳೂರು ೧೬

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿದ್ದು ರಜದ ಮೇಲಿದ್ದ ಡಾ॥ ಕೆ॥ ನಾಗೇಂದ್ರ ಮತ್ತು ಅದೇ ಆಸ್ಪತ್ರೆಗೆ ಮೆಡಿಕಲ್ ಆಫೀಸರಾಗಿ ವರ್ಗಾಯಿಸಲ್ಪಟ್ಟಿದ್ದ ಡಾ॥ ಬಿ ಎಸ್ ಬಾಲಕೃಷ್ಣರಾವ್‌ರವರುಗಳು ತಮ್ಮ ಹುದ್ದೆಗಳಿಗೆ ರಾಜೀನಾಮೆ ಇತ್ತಿದ್ದಾರೆಂದು ತಿಳಿದುಬಂದಿದೆ. ಡಾ॥ ಬಾಲಕೃಷ್ಣ ರಾಯರಿಗೆ ಗ್ವಾಲಿಯರ್ ಸಂಸ್ಥಾನದಲ್ಲಿ ಸರ್ಜನ್ ಹುದ್ದೆಯು ದೊರಕಿದೆಯೆಂದೂ ಹೇಳಲಾಗಿದೆ

ಅಮೆರಿಕದಲ್ಲಿ ಅಣು ಬಾಂಬು ರಕ್ಷಣಾ ವ್ಯವಸ್ಥೆ

ಒಂದು ಅಣು ಬಾಂಬಿನಿಂದ ೪೦ ಸಾವಿರ ಜನರು ಸಾಯುವರೆಂದೂ, ೬೦ ಸಾವಿರ ಜನರಿಗೆ ಗಾಯಗಳಾಗುವುವೆಂದೂ, ಇದನ್ನು ತಡೆಗಟ್ಟಲು ಅಮೇರಿಕದಲ್ಲಿ ರಕ್ಷಣಾ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆಯೆಂದೂ ಹೇಳಲಾಗಿದೆ ಅದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿ, ಪ್ರತಿಯೊಂದು ಆಸ್ಪತ್ರೆಯಲ್ಲೂ ರಕ್ಷಣಾ ಕೇಂದ್ರಗಳನ್ನು ನಿರ್ಮಿಸಲಾಗುವುದು

ಅತಿ ಪುಟ್ಟ ಕ್ಯಾಮರಾ

ಕೈಗೆ ಕಟ್ಟುವ ಗಡಿಯಾರದಂತಹ ಅತಿ ಪುಟ್ಟ ಕ್ಯಾಮರಾವನ್ನು ಜರ್ಮನಿಯ ವೈಜ್ಞಾನಿಕರಾದ ಡಾ॥ ರುಡಾಲ್ಫ್ ಸ್ಟೀಬರ್ ರವರು ತಯಾರಿಸಿದ್ದಾರೆ ೪೫ ಮಿಲಿಮೀಟರಿನ ೪೦೦ ಚಿತ್ರಗಳನ್ನು ಅದರಿಂದ ತೆಗೆಯಬಹುದು

ವಿವಾಹ ಮಹೋತ್ಸವ

ಶ್ರೀರಂಗಪಟ್ಟಣದ ಅಮಲ್ದಾರರಾದ ಶ್ರೀ ಎಸ್ ಕೃಷ್ಣಮೂರ್ತಿಯವರು ತಮ್ಮ ಕುಮಾರಿ ಚಿ॥ ಸೌ॥ ಆಂಡಾಳಮ್ಮನನ್ನು ಶ್ರೀ ಜಿ. ಶೇಷಾದ್ರಿವಾಸರವರಿಗೆ ಕೊಟ್ಟು ಮೊನ್ನೆ ದಿನ ವಿವಾಹವನ್ನು ನೆರವೇರಿಸಿದರು

ಆಯುರ್ವೇದ ವೈದ್ಯರ ಸಮ್ಮೇಳನ

ಮೈಸೂರು ಆಯುರ್ವೇದ ವೈದ್ಯ ಸಂಘದ ಆಶ್ರಯದಲ್ಲಿ ಈ ತಿಂಗಳು ಕೊನೆಯಲ್ಲಿ ನಡೆಯಲಿರುವ ಮೈಸೂರು ಆಯುರ್ವೇದ ವೈದ್ಯರ ೪ ನೇ ಸಮ್ಮೇಳನದ ಅಧ್ಯಕ್ಷರಾಗಿ ಡಾ॥ ಎ. ವೆಂಕಟರಾಮ ಪಂಡಿತರನ್ನು ಚುನಾಯಿಸಲಾಗಿದೆ

ಜಪಾನ್ ಚಕ್ರವರ್ತಿಗಳು ಆತ್ಮಹತ್ಯೆ ಮಾಡಿಕೊಳ್ಳುವರೇ

ಯುದ್ಧ ಪಾತಕಿಗಳೊಡನೆ ತಮ್ಮನ್ನೂ ವಿಚಾರಣೆಗೆ ಗುರಿಪಡಿಸಬೇಕಾಗಿತ್ತೆಂದು ಅಂತರ ರಾಷ್ಟ್ರೀಯ ನ್ಯಾಯಾಸ್ಥಾನದ ಹಲವು ನ್ಯಾಯಾಧೀಶರುಗಳು ಹೇಳಿರುವುದರಿಂದ ವಿಷಾದಪಟ್ಟು ಜಪಾನ್ ಚಕ್ರವರ್ತಿ ಹಿರೋಹಿಟೋರವರು ತನ್ನ ದೇಶದ ಪದ್ಧತಿಯಂತೆ ಹರಾಕಿರಿ (ಆತ್ಮಹತ್ಯೆ) ಮಾಡಿಕೊಳ್ಳುವ ಯೋಚನೆ ಮಾಡಿದ್ದಾರೆಂದು ವರದಿಯಾಗಿದೆ

ಖೈದಿಗಳಿಗೆ ಬಿಸಿ ನೀರು

ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂ ರವರು ಕಳೆದ ಶುಕ್ರವಾರ ಮೈಸೂರಿಗೆ ಭೇಟಿ ಇತ್ತಾಗ ಅಲ್ಲಿನ ಜಿಲ್ಲಾ ಜೈಲನ್ನು ಪರಿಶೀಲಿಸಿ, ಅಲ್ಲಿರುವ ಖೈದಿಗಳಿಗೆ ಬಿಸಿ ನೀರನ್ನು ಕೊಡುವ ವ್ಯವಸ್ಥೆಯನ್ನು ತಕ್ಷಣವೇ ಮಾಡಬೇಕೆಂದು ಆಜ್ಞೆ ಮಾಡಿದರೆಂದು ತಿಳಿದುಬಂದಿದೆ.

ಅರವಿಂದ ಘೋಷರಿಗೆ ಬಹುಮಾನ

ಪುದುಚೇರಿಯಲ್ಲಿರುವ ಯೋಗಿ ಶ್ರೀ ಅರವಿಂದ ಘೋಷರಿಗೆ ಮಾನವೀಯ ವಿಜ್ಞಾನಕ್ಕಾಗಿ ಆಂಧ್ರ ವಿಶ್ವವಿದ್ಯಾಲಯದ ಸರ್ ಸಿ ಆರ್ ರೆಡ್ಡಿಯವರ ರಜತದ ಬಹುಮಾನವನ್ನು ಕೊಡಲಾಗಿದೆ ಅದನ್ನು ಅವರು ಅಂಗೀಕರಿಸಿರುವರು

ಮೈಸೂರಿನವರಿಗೆ ಭಾರಿ ಹುದ್ದೆ

ಸ್ವಂ ಸು ಪೋ॥] ಬೆಂಗಳೂರು ೧೬

ವ್ಯವಸಾಯ ಕಾಲೇಜಿನ ಅಗ್ರಿ ಪ್ರೊಫೆಸರಾದ ಶ್ರೀ ವೆಂಕಟಸುಬ್ಬಯ್ಯನವರನ್ನು ಭಾರತ ಸರ್ಕಾರದ ಟ್ರಾಕ್ಟರ್ ಇಂಜನಿಯರಾಗಿ ಮೂರು ವರ್ಷಕಾಲ ನೇಮಿಸಲಾಗಿದೆ

§ ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರ ಪರ್ಸನಲ್ ಅಸಿಸ್ಟೆಂಟರಾಗಿ ಶ್ರೀ ಟಿ ರಾಮಯ್ಯನವರನ್ನು ನೇಮಿಸಲಾಗಿದೆ

§ ೧೯೪೯ನೇ ಜನವರಿಯಿಂದ ಕೋಲಾರ ಸ್ಯಾನಿಟರಿ ಬೋರ್ಡನ್ನು ಟೌನ್ ಮುನಿಸಿಪಲ್ ಕೌನ್ಸಿಲಾಗಿ ಪರಿವರ್ತಿಸಲಾಗಿದೆ

§ ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ಇದೇ ೧೭ ರಿಂದ ೨೮ ನೇ ತಾ॥ ವರೆಗೆ ಚಿಕ್ಕಮಗಳೂರು, ಹಾಸನ, ... ಜಿಲ್ಲೆಗಳಲ್ಲಿ ಪ್ರವಾಸ ...

ರಾಜಕುಮಾರಿ ಎಲಿಜಬತ್ ರವರಿಗೆ ಪುತ್ರೋತ್ಸವ

ಬ್ರಿಟನ್ನಿನ ರಾಜಕುಮಾರಿ ಎಲಿಜಬತ್ ರವರಿಗೆ ಮೊನ್ನೆ ರಾತ್ರಿ ಲಂಡನ್ನಿನಲ್ಲಿ ಪುತ್ರ ಜನನವಾಯಿತು. ಎಲಿಜಬತ್‌ರವರು ಮುಂದೆ ಬ್ರಿಟನ್ನಿನ ರಾಣಿಯಾದಾಗ, ಈ ಮಗುವು ಡ್ಯೂಕ್ ಆಫ್ ಕಾರ್ನ್‌ವಾಲ್ ಆಗುವುದೆಂದೂ, ಮಗುವಿಗೆ ಪ್ರಿನ್ಸ್ ಆಫ್ ಪ್ರಿನ್ಸ್ ಎಂಬ ಬಿರುದಿದ್ದು ರಾಯಲ್ ಹೈನೆಸ್ ಎಂದು ಕರೆಯಲಾಗುವುದೆಂದೂ ಹೇಳಲಾಗಿದೆ ಪುತ್ರೋತ್ಸವದ ಸಮಾಚಾರವನ್ನು ಎಡಿನ್‌ಬರೋ ಡ್ಯೂಕರಿಗೆ ತಿಳಿಸಿದನಂತರ ಅವರು ತಮ್ಮ ಪುತ್ರನನ್ನು ಪ್ರಸೂತಿಯಲ್ಲಿ ನೋಡಿ ಮಗುವನ್ನು ರಾಣಿ ಎಲಿಜಬೆತ್ ಮತ್ತು ಇತರರಿಗೆ ಪರಿಚಯ ಮಾಡಿಕೊಟ್ಟರು. ಈ ಸಂತೋಷ ಸುದ್ದಿಯನ್ನು ಕೇಳಲು ಅರಮನೆ ಹೊರಗಡೆ ವಿಶೇಷ ಜನಸಂದಣಿ ಸೇರಿತ್ತು. ಭಾರತ ಮತ್ತು ಇತರ ಅನೇಕ ರಾಷ್ಟ್ರಗಳಿಂದ ಶುಭಾಶಯಗಳನ್ನು ಕಳುಹಿಸಲಾಗಿದೆ ಭಾರತದ ಎಲ್ಲ ಕಡೆಗಳಲ್ಲೂ ಯೂನಿಯನ್ ಜಾಕ್ ಮತ್ತು ಭಾರತ ಧ್ವಜಗಳನ್ನು ಹಾರಿಸಲಾಗಿದೆ ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು ಮೈಸೂರಿನಲ್ಲೂ ಯೂನಿಯನ್ ಜಾಕ್, ಭಾರತ ಮತ್ತು ಮೈಸೂರು ಧ್ವಜಗಳನ್ನು ಈ ದಿನ ಎಲ್ಲ ಕಡೆಗಳಲ್ಲೂ ಹಾರಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಮಗುವು ೭॥ ಪೌಂಡು ತೂಕವಿರುವುದೆಂದು ಹೇಳಲಾಗಿದೆ ಮಗುವು ಹುಟ್ಟಿದ ಕೂಡಲೇ ಸೆಂಟ್ ಪಾಲ್ ಚರ್ಚಿನಿಂದ ಗಂಟೆಯನ್ನು ಬಾರಿಸಲಾಯಿತು. ಹಿಂದೆ ೧೮೯೪ ರಲ್ಲಿ ವಿಂಡ್ಸರ್ ಡ್ಯೂಕರು, ಹುಟ್ಟಿದಾಗ ಈ ಗಂಟೆಯನ್ನು ಬಾರಿಸಲಾಗಿತ್ತೆಂದೂ ಬ್ರಿಟನ್ನಿನ ಸಿಂಹಾಸನಕ್ಕೆ ಬರುವವರಿಗೆ ಮಾತ್ರ ಈ ರೀತಿ ಮಾಡಲಾಗುವುದೆಂದೂ ಹೇಳಲಾಗಿದೆ ಎಲಿಜಬತ್ತರ ನಂತರ ಈ ಮಗುವೇ ಪಟ್ಟಕ್ಕೆ ಬರುವುದರಿಂದ ೪೦ ಕುಶಾಲ ತೋಪುಗಳನ್ನು ಹಾರಿಸಲಾಯಿತು

ಮಗುವಿನ ನಾಮಕರಣ ಸ್ನಾನಾರಂಭದಲ್ಲಿ ರಾಜಕುಮಾರಿ, ಅಳಿಯ ರಾಜ ಮತ್ತು ವಿಂಡ್ಸರ್ ಡ್ಯೂಕರು, ಭಾರತ ಮತ್ತು ಇತರ ಕಡೆ ರಾಜ ಮತ್ತು ಲೇಖಕಗಳನ್ನು ಮಗುವಿಗೆ ಹಾಕಲಾಗುವುದೆಂದೂ ೧೮೪೦ ರಲ್ಲಿ ತಯಾರಿಸಿದ ಚಿನ್ನದ ಬಟ್ಟಲಿನಿಂದ ನೀರನ್ನು ಪ್ರೋಕ್ಷಿಸಲಾಗುವುದೆಂದೂ ಹೇಳಲಾಗಿದೆ

ರ್‌ಪೆ ರಾಜಧಾನಿಯ ಖಾಲಿ

ಉತ್ತರ ಚೀಣದಲ್ಲಿರುವ ರಕ್ಷಣಾ ಕೇಂದ್ರಗಳನ್ನು ಕಡಿಮೆ ಮಾಡಲು, ಹೂಪೆಯ ಪ್ರಾಂತ್ಯದ ರಾಜಧಾನಿಯಾದ ಪೋಟಿಂಗ್, ಮತ್ತು ಜೋಲ್ ಪ್ರಾಂತ್ಯದ ಚನಾನ್ ನಗರಗಳನ್ನು ಸರ್ಕಾರಿ ಸೈನ್ಯಗಳು ಖಾಲಿ ಮಾಡಿವೆ ಈ ಪ್ರದೇಶದಲ್ಲಿ ಕಮ್ಯೂನಿಸ್ಟರು ಮುನ್ನುಗ್ಗುತ್ತಿದ್ದಾರೆ ಹೊನನ್ ಮತ್ತು ಟಿನ್ ಪ್ರಾಂತ್ಯಗಳ ರಾಜಧಾನಿಗಳು. ಈಗಾಗಲೇ ಕಮ್ಯೂನಿಸ್ಟರ ಕೈಸೇರಿವೆ

ಹುಲ್ಲಿಗೂ ರೇಷ್ಮೆ ಬಂತು

ಅಹಮದಾಬಾದಿನಲ್ಲಿ ಮಳೆಯಿಲ್ಲದೆ ಹುಲ್ಲಿನ ಅಭಾವವು ವಿಶೇಷವಾಗಿರುವುದರಿಂದ ಹುಲ್ಲನ್ನು ರೇಷ್ಮೆ ಬಟ್ಟೆಯಂತೆ ... ಮಾರುತ್ತಿರುವರು ... ರೇಷ್ಮೆ ... ಮಾಡಲಾಗಿದೆ

ಕರ್ನಾಟಕ ಪ್ರಾಂತ್ಯ ರಚನೆಯ ಅಗತ್ಯ

ನಾಡಹಬ್ಬದಲ್ಲಿ ನಾಯಕರುಗಳ ಅಭಿಪ್ರಾಯ

ಮೈಸೂರು ೧೬

ಫಸ್ಟ್ ಗ್ರೇಡ್ ಕಾಲೇಜಿನ ಸಭಾಂಗಣದಲ್ಲಿ ನಿನ್ನೆ ದಿನ ನಾಡ ಹಬ್ಬವು ವೈಭವದಿಂದ ನಡೆಯಿತು. ಕನ್ನಡ ಪ್ರಧ್ಯಾಪಕರಾದ ಶ್ರೀ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ವಿಶ್ವನಾಥ್‌ರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ಆರ್ ಲಿಂಗಪ್ಪನವರು ಇಂಪಾಗಿ ಕವಿತೆಗಳನ್ನು ಹಾಡಿದರು ಶ್ರೀ ಗ ಸ ಹಾಲಪ್ಪನವರು ಬೊಂಬಾಯಿ ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಎಸ್ ಕೆ ಪಾಟೀಲರು ಮತ್ತು ಮದರಾಸಿನ ಮಾಜಿ ಸಚಿವರಾದ ಶ್ರೀ ಕೋಟ ರಾಮಕೃಷ್ಣ ಕಾರಂತರುಗಳನ್ನು ಪರಿಚಯ ಮಾಡಿಕೊಟ್ಟರು

ಅನಂತರ ಶ್ರೀ ಕೆ ಥ್ ಪಾಟೀಲರು ಉದ್ಬೋಧಕ ಭಾಷಣವನ್ನು ಮಾಡುತ್ತಾ ಈ ರೀತಿ ತಿಳಿಸಿದರು: —

ಅಖಂಡ ಕರ್ನಾಟಕ ಪ್ರಾಂತ್ಯವು ಕೂಡಲೇ ಆಗಬೇಕಾದದ್ದು. ಅತ್ಯವಶ್ಯಕ ಇದರಿಂದ ಕೇಂದ್ರ ಸರ್ಕಾರದ ಬಗೆ ಕಡಿಮೆಯಾಗುವುದು ಎಂಬ ವಾದ ಸರಿಯಲ್ಲ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಹಾವು ಮಾಡಿದ ಭಾಷಾವಾರು ಪ್ರಾಂತ ರಚನೆಯ ತೀರ್ಮಾನದ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದು ಈಗ ಸರ್ವಥಾ ಸಾಧುವಾಗಿದೆ ಕರ್ನಾಟಕ ಪ್ರಾಂತ ರಚನೆ ವಿಷಯದಲ್ಲಿ ಇಲ್ಲದ ಸಂಶಯಕ್ಕೆ ಎಡೆ ಕೊಡುವುದು ಯುಕ್ತವಲ್ಲ. ಹರಿದು ಹಂಚಿಹೋಗಿರುವ ಕನ್ನಡ ನಾಡನ್ನು ಒಟ್ಟುಗೂಡಿಸಿ ವ್ಯವಸ್ಥಿತವಾದ ಆಡಳಿತ ಪಡೆಯುವ ರೀತಿಯನ್ನು ಹೊಂದಲು ಕನ್ನಡಿಗರು ಯಾವ ವಿಧದಲ್ಲಿಯೂ ಕಡಿಮೆ ಇಲ್ಲ ಮೈಸೂರಿನವರು ಅಗ್ರಸರರಾಗಿ ಕರ್ನಾಟಕ ಪ್ರಾಂತ ರಚನೆಗೆ ದುಡಿಯ ಬೇಕು ಸುಮ್ಮನೆ ಈ ವಿಷಯವನ್ನು ಉಪೇಕ್ಷೆ ಮಾಡುವುದು ತರವಲ್ಲ ಮೈಸೂರಿನವರ ಕೋರಿಕೆಯಂತೆ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿ ಮೈಸೂರಿನ ಅರಸರು ಕರ್ನಾಟಕ ಸಿಂಹಾಸನಾಧೀಶರಾಗಲು ಯಾವ ಅಡಚಣೆಯೂ ಇಲ್ಲ ಒಂದೇ ಮಾತಾಡುವ ಜನರು ಇರುವ ಪ್ರದೇಶಗಳು ಒಟ್ಟುಗೂಡಿ ಪ್ರಾಂತದ ಅಂತಸ್ತು ಹೊಂದುವುದರಿಂದ ಕೈಗಾರಿಕೆ, ಆರ್ಥಿಕ ಸಂಪತ್ತು ಹೆಚ್ಚಿ ವ್ಯವಸಾಯ, ಬಂದರಿನ ನಿರ್ಮಾಣ ಮುಂತಾದವುಗಳು ಆಗಿ ದೇಶದ ಅಭಿವೃದ್ಧಿ ಮತ್ತು ಜನರ ಜೀವನದ ಮಟ್ಟ ಏರುವುದಕ್ಕೆ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲ ಮೈಸೂರಿನವರು ಶೀಘ್ರ ಆಸಕ್ತಿ ವಹಿಸಿದರೆ ಕರ್ನಾಟಕದ ಕರುಣದ ಒಂದು ತಂಡವು ಪ್ರಾಂತ್ಯವನ್ನು ಗಳಿಸಲು ಸಿದ್ಧವಿದೆ

ಶ್ರೀ ಕಾರಂತರವರು ನಂತರ ಭಾಷಣ ಮಾಡಿ ಭಾಷಾವಾರು ಪ್ರಾಂತ ರಚನೆಯ ಕೆಲಸವು ಕೇವಲ ಸ್ಥಾನಮಾನ ಗಳಿಸಿಕೊಳ್ಳುವ ಪ್ರಯತ್ನವೆಂದು ಕೆಲವು ಮುಖಂಡರು ಹೇಳುತ್ತಿರುವುದು ಸರಿಯಲ್ಲವೆಂದು ತಿಳಿಸಿದರು. ಕೇಂದ್ರ ಸರ್ಕಾರದವರು ಈ ಪ್ರಶ್ನೆಯನ್ನು ಮುಂದಕ್ಕೆ ತಳ್ಳುವುದು ಯುಕ್ತವಲ್ಲ ಒಂದೇ ನಾಡಿನ ಜನರಿಗೆ ಆದರಲ್ಲೂ ಹೊಟ್ಟೆಗಿಲ್ಲದ ಹಳ್ಳಿಯ ಜನರಿಗೆ ಭಾಷಾವಾರು ಪ್ರಾಂತ ನಿರ್ಮಾಣವಾಗುವುದರಿಂದ ಎರಡು ಹೊತ್ತು ಊಟ, ಸಿಕ್ಕಿ, ಕೈಗಾರಿಕೆ ಮುಂತಾದುವುಗಳು ಅಭಿವೃದ್ಧಿಯಾಗುವುದು ಕೇಂದ್ರದ ಆಡಳಿತಕ್ಕೆ ತೊಂದರೆಯಾಗದಂತೆ ಪ್ರಾಂತ ನಿರ್ಮಾಣವಾಗಿ ಎಲ್ಲರೂ ಪರಸ್ಪರ ಮೈತ್ರಿಯಿಂದಲೂ ಶಾಂತಿ ಸೌಹಾರ್ದದಿಂದಲೂ ದುಡಿಯುವುದು ಯುಕ್ತ. ಭಾಷಾವಾರು ಪ್ರಾಂತ ನಿರ್ಮಾಣವು ಯಾರ ಅಧಿಕಾರವನ್ನೂ ಮೊಟಕ ಮಾಡುವುದಿಲ್ಲ. ಭಾರತಕ್ಕೆಲ್ಲಾ ಒಂದೇ ಭಾಷೆಯಾದನಂತರ ಪ್ರಾಂತೀಯ ಭಾಷಾವಾರು ರಾಜ್ಯಾಡಳಿತ ಆರಂಭವಾಗುವುದು ಯುಕ್ತ ಎಂಬ ಶ್ರೀ ಕೆ ಎಂ ಮುನಷಿಯವರ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ ಕೇಂದ್ರ ಮಂತ್ರಿ ಮಂಡಲದವರು ಈ ಪ್ರಶ್ನೆಯನ್ನು ಮುಂದೆ ಹಾಕುವುದು ಒಳ್ಳೆಯದಲ್ಲ ಬೊಂಬಾಯಿ, ಮದರಾಸು ಪ್ರಾಂತ್ಯಗಳಲ್ಲಿನ ಶಾಸನ ಸಭೆಗಳು ಮೈಗಾಲಯದಂತೆ ಅನೇಕ ಭಾಷೆಗಳಾಡುವ ಜನರಿಂದ ಕೂಡಿವೆ ಆದರೆ ಮೈಸೂರು ಸಭೆಯಲ್ಲಿನ ವ್ಯವಹಾರಗಳು ಕನ್ನಡದಲ್ಲೇ ನಡೆಯುತ್ತಿರುವುದು ಒಂದು ಹೆಮ್ಮೆ.

ಕೇಂದ್ರ ಸರ್ಕಾರ ಸುಗಮವಾಗಿ ನಡೆಯ ಬೇಕಾದರೆ ಭಾಷಾವಾರು ಪ್ರಾಂತ ರಚನೆಯು ಆಗಲೇ ಬೇಕು. ನಿತ್ಯದ ವ್ಯವಹಾರಗಳು ದೆಹಲಿಯಿಂದ ನಡೆಯಲು ಸಾಧ್ಯವಿಲ್ಲ ಬೊಂಬಾಯಿನ ಹಲವು ಪ್ರದೇಶ ಮತ್ತು ಮದರಾಸಿನ ಹಲವು ಪ್ರದೇಶಗಳನ್ನು ಕನ್ನಡ ನಾಡಿಗೆ ಸೇರಿಸುವುದರಿಂದ ಯಾವ ತೊಂದರೆಯೂ ಆಗುವುದಿಲ್ಲ ವಿದ್ಯಾರ್ಥಿಗಳೂ ಸಹ ಇದಕ್ಕಾಗಿ ವಿಶೇಷವಾಗಿ ದುಡಿಯಬೇಕು. ಬೇಲೂರಿನಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯವರು ಕರ್ನಾಟಕ ಏಕೀಕರಣದ ಬಗ್ಗೆ ಬೆಂಬಲ ನೀಡಿರುವುದು ಸಂತೋಷವಾದ ಸಂಗತಿ—ಎಂದು ತಿಳಿಸಿದರು

ಅಧ್ಯಕ್ಷರಾ ಶ್ರೀ ಕೆ ವಿ ಪುಟ್ಟಪ್ಪನವರು ಭಾಷಣಮಾಡಿ ಕರ್ನಾಟಕದ ಎಲ್ಲಾ ಭಾಗದ ಜನರೂ ಸ್ನೇಹ ಸೌಹಾರ್ದದಿಂದ ಅಖಂಡ ಕರ್ನಾಟಕದ ರಚನೆಗೆ ದುಡಿಯಬೇಕೆಂದೂ ತಮ್ಮ ದೃಷ್ಟಿಯಲ್ಲಿ ಕರ್ನಾಟಕ ರಾಜ್ಯವನ್ನು ರನ್ನ, ಪಂಪ, ಬಸವೇಶ್ವರ ನೃಪತುಂಗ ಮುಂತಾದವರು ಬಹಳ ಹಿಂದೆಯೇ ನಿರ್ಧಾರ ಮಾಡಿದ್ದಾರೆಂದೂ ಅನೇಕರು ಈ ಪ್ರಶ್ನೆಯನ್ನು ಪ್ರಚಾರಕ್ಕಾಗಿ ರಾಜಕೀಯ ರೂಪಕೊಟ್ಟು ಇಲ್ಲದ ಸಂಶಯಕ್ಕೆ ಎಡೆ ಕೊಟ್ಟಿರುವುದು ನ್ಯಾಯವಲ್ಲವೆಂದೂ ಕರ್ನಾಟಕ ಏಕೀಕರಣವು ನೆಹರೂ ಪಟೇಲರ ಇದುರಿನಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಚ್ಯುತಿ ಬರದಂತೆ ಆಗಬೇಕೆಂದೂ ತಿಳಿಸಿದರು. ಕೆ ವಿ ಪುಟ್ಟಪ್ಪನವರ "ಯಮನ ಸೋಲು," ಎಂಬ ನಾಟಕದ ಪ್ರದರ್ಶನವಾದನಂತರ, ಸಮಾರಂಭವು ಮುಕ್ತಾಯವಾಯಿತು.

ಎಸ್. ಎಗ್. ಪಂಡಿತ್
ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಕೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾ ಮಲಕ ತೈಲ:—)
ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ- ಮುಲೇರಿಯಾ ಗೆಡೆಗಳಿಗೆ ಸಿದ್ಧ ಸಂಜೀವನ.

ಮಹಾಕೇಶಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ.

ಬ್ರೇನ್ ಟಾನಿಕ್ ಕೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

ರಾಜಕಮಲ್ ಟಾಕೀಸ್,
ಮೈಸೂರು

19-11-48ನೇ ಶುಕ್ರವಾರದಿಂದ
ಪ್ರತಿ ದಿನ ಮೂರು ಆಟಗಳು
ಶ್ರೀ ಮಹಾವೀರ್ ಫಿಲಂ ಎಕ್ಸ್‌ಚೇಂಜು ಮತ್ತು ಶ್ರೀ ರಾಘವೇಂದ್ರ ಪಿಕ್ಚರ್ಸ್‌ರವರ ಸಂಯುಕ್ತ ತಯಾರಿಕೆ

ಭಾರತಿ [ಕನ್ನಡ] ಭಾರತಿ

ಭೂಮಿಕೆ:- ಸೂರ್ಯ ಕುಮಾರಿ; ರಾಜಕುಮಾರಿ ಸಂಪತ್ತು
ಕೃಷ್ಣಸ್ವಾಮಿ (ಮೈಸೂರು ವಿಶ್ವವಿದ್ಯಾಲಯದ ಕೃಪೆಯಿಂದ)
ನರ್ತನ:- ಲಲಿತಾ ಮತ್ತು ಪದ್ಮಿನಿ

೧೨-೧೧-೪೮ರಿಂದ ಬೆಂಗಳೂರು ಸೂಪರ್ ಮತ್ತು ಸ್ವಸ್ತಿಕ್ ಟಾಕೀಸುಗಳಲ್ಲಿ ಕಿಕ್ಕಿರಿದ ಪ್ರೇಕ್ಷಕ ವೃಂದಕ್ಕೆ ಪ್ರದರ್ಶಿಸಲ್ಪಡುತ್ತಿದೆ.

Entire Rights with SRI MAHAVEER Film Exchange,
Ashoka Road, Mysore.

ರಾಜಕಮಲ್
ಮೈಸೂರು

13—11—48ರಿಂದ
ಶಾಂತಾರಾಂರವರ
ಡಾ|| ಕೊಟ್ನಿಸ್‌ಕಿ
ಅಮರ್ ಕಹಾ
—: ಮುಖ್ಯಪಾತ್ರ: —
● ಶಾಂತಾರಾಂ
● ಜಯಶ್ರೀ

ಶ್ರೀ ಗಾಯತ್ರೀ ಟಾಕೀ
16-11-48ರಿಂದ 2 ದಿನಗಳು
The famous Author
ELIZABETH JANE WAY
DAISY - - KENYO
(ಡೈಸಿ ಕೆನೆಯಾನ್)
An Historical Pictu
specially to our
STUDENT PATRO
From 18-11-48
Daily 3 Shows
SAN ANTONIO
(Technicolour)

|| ಶ್ರೀ ||
ಚಾಮುಂಡೇಶ್ವರೀ ಟಾ
17-11-48 ರಿಂದ
ಪ್ರತಿ ದಿನ 3 ಪ್ರದರ್ಶನಗಳು
ಭಾಯಿ ಜಾ
(ಹಿಂದಿ)
ಭೂಮಿಕೆ:- ನೂರ್ ಜಹಾನ್,
ಕರನ್ ದಿವಾನ್ ಮತ್ತು ಶಾ ನವಾ

ಶ್ರೀ ಸರಸ್ವತಿ ಸಂಗೀತ ಸಮಾಜ
ಮೈಸೂರು
19—11—1948ನೇ ಶುಕ್ರವಾ
ಸಂಜೆ 5-30 ಘಂಟೆಗೆ
ಟೌನ್ ಹಾಲಿನಲ್ಲಿ
ರಾಜ್ಯ ಸೇವಾ ನಿರತ ಸಂಗೀತ ಕಲಾ
ಶ್ರೀ ಶೆಮ್ಮಂಗುಡಿ
ಶ್ರೀನಿವಾಸ ಅಯ್ಯರ್
ಹಾಡುಗಾರಿಕೆ
ಮಾಸ್ಟರ್ ಕೃಷ್ಣ: ಫಿಡಲ್
ಮಾಸ್ಟರ್ ರಘು ಮೃದಂಗ
ಟಿಕೆಟ್ ಬೆಲೆಗಳು:—
ರೂ 5, 3, 2, ಮತ್ತು 1.
ಒಂದು ಮತ್ತು ಎರಡನೇ ತರಗತಿಗಳಲ್ಲಿ
ಪ್ರವೇಶ ಫೀ 0-8-

Edited printed and published A.R. Nagarajan at the Sadhvi P... D Subbaiah Road Mysore.

ಫೋನ್ ನಂ. 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೧೭-೧೧-೪೮ [ಸಂಚಿಕೆ ೧೨೭

ವಿಷವಾಯು ಯುದ್ಧಕ್ಕೆ ಭಾರತದ ಕೋತಿಗಳೇ?

ಅಮೆರಿಕದ ಸಹಾಯದಿಂದ ಚೀಣವು ಪಾರಾಗುವುದಿಲ್ಲ

ಎ.ಪಿ.ಎ] ನ್ಯೂಯಾರ್ಕ್ ೧೬

ಚೀಣಕ್ಕೆ ಅಮೆರಿಕದಿಂದ ವಿಶೇಷ ಯುದ್ಧ ಸಾಮಗ್ರಿಗಳ ಸಹಾಯವನ್ನು ಒದಗಿಸಿದರೂ ಅದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ಇಲ್ಲಿ ಅಭಿಪ್ರಾಯ ಪಡಲಾಗಿದೆ. ಚೀಣದಲ್ಲಿ ನೂತನ ನಾಯಕರುಗಳು ಬಂದ ಹೊರತು ಮತ್ತು ಅಮೆರಿಕದ ಸಂಪೂರ್ಣ ಹತೋಟಿ ಇಲ್ಲದ ಹೊರತು ಆ ದೇಶದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲವೆಂದೂ ಹೇಳಲಾಗಿದೆ. ಅನೇಕ ವರ್ಷಗಳಿಂದಲೂ ಯುದ್ಧದಿಂದ ನೊಂದ ಅವರು ಕಮ್ಯೂನಿಸ್ಟರ ಆಡಳಿತದಿಂದಾದರೂ ಶಾಂತಿಗಾಗಿ ಆಶಿಸುತ್ತಿದ್ದಾರೆಂದೂ ಹೇಳಲಾಗಿದೆ. ಮೂರನೇ ಮಹಾ ಯುದ್ಧಕ್ಕೆ ಇದು ಪ್ರಥಮ ಮೆಟ್ಟಲೆಂದೂ ಚೀಣದ [illegible] ಚಿಯಾಂಗ್‌ರವರು ಅಭಿಪ್ರಾಯಪಟ್ಟಿರುವರು.

ಚೀಣದ ಸೂಚೌ ನಗರ ಪತನ

ಚೀಣದ ರಾಜಧಾನಿಯಾದ ನಾನ್‌ಕಿಂಗಿಗೆ ಅತಿ ಸಮೀಪದಲ್ಲಿರುವ ಸೂಚೌ ನಗರವನ್ನು ಕಮ್ಯೂನಿಸ್ಟ್ ಸೈನಿಕರು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ. ಮಧ್ಯ ಚೀಣದ ಪ್ರಾಂತ್ಯದಲ್ಲಿ ಅಮೆರಿಕದ ಜನರೆಲ್ಲರೂ ಆ ಪ್ರದೇಶವನ್ನು ಬಿಟ್ಟು ಬರಬೇಕೆಂದು ಆಜ್ಞೆ ಮಾಡಲಾಗಿದೆ. ಆ ಪ್ರದೇಶದಿಂದ ಚೀಣದ ಸರ್ಕಾರವನ್ನು ದಕ್ಷಿಣಕ್ಕೆ ವರ್ಗಾಯಿಸಲಾಗುವುದೆಂದೂ ಹೇಳಲಾಗಿದೆ.

ಹಿಟ್ಲರನು ಇನ್ನೂ ಬದುಕಿದ್ದಾನಂತೆ

ಹಿಟ್ಲರನು ಇನ್ನೂ ಬದುಕಿದ್ದಾನೆಂದು ಬ್ರಿಟನ್ನಿನ ಪ್ರಮುಖ ಪತ್ರಿಕೋದ್ಯೋಗಿಗಳು ಮತ್ತು ಹಿಟ್ಲರನ ಅತ್ಯಂತ ಮೆಚ್ಚಿನ ಸ್ನೇಹಿತರೂ [illegible] ಪ್ರಿನ್ಸರವರು ತಿಳಿಸಿರುತ್ತಾರೆ.

ಜರ್ಮನಿಯಿಂದ ರಷ್ಯದ ಸೈನ್ಯ ವಾಪಸು

ಜರ್ಮನಿಯಲ್ಲಿರುವ ೩ ಲಕ್ಷ ರಷ್ಯದ ಸೈನಿಕರನ್ನು ತಾತ್ಕಾಲಿಕವಾಗಿ ವಾಪಸು ಕರೆಸಲು ರಷ್ಯವು ನಿರ್ಧರಿಸಿದೆಯೆಂದೂ, ಇದು ಅಮೆರಿಕದ ಸೈನ್ಯಾಧಿಕಾರಿಗಳಿಗೆ ವಿಶೇಷ ಆಶ್ಚರ್ಯವನ್ನುಂಟುಮಾಡಿದೆಯೆಂದೂ ಹೇಳಲಾಗಿದೆ. ಈಗಿನ ಬರ್ಲಿನ್ ನಗರದ ಬಿಕ್ಕಟ್ಟಿಗೆ ಇಷ್ಟು ಸೈನ್ಯವನ್ನು ಅಲ್ಲಿಟ್ಟಿದ್ದುದೇ ಕಾರಣವೆಂದು ತಿಳಿಸಲಾಗಿದೆ.

ಕೃಪಲಾನಿಯವರು ಕಾಶಿವಿಶ್ವವಿದ್ಯಾಲಯದ ಸ್ಥಾನಪತಿ

ಅಖಿಲ ಭಾರತ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಆಚಾರ್ಯ ಜೆ. ಬಿ. ಕೃಪಲಾನಿಯವರನ್ನು ಕಾಶಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ.

ಚೀಣದ ಸರ್ಕಾರದ ಮೂರು ಡಿವಿಜನ್ ಸೈನ್ಯಗಳ ನಾಶ

ಮಧ್ಯ ಚೀಣದ ಪ್ರದೇಶದಲ್ಲಿ ಸರ್ಕಾರದ ಮೂರು ಡಿವಿಜನ್ ಸೈನ್ಯಗಳು ನಾಶವಾಗಿವೆಯೆಂದೂ, ಅನೇಕರು ಸತ್ತಿರುವರೆಂದೂ ಹೇಳಲಾಗಿದೆ.

ಸೈಕಲ್ ಕಲಿಯುವವರಿಗೆ ಷಾರವರ ಸಲಹೆಗಳು

ಎ.ಪಿ.ಎ] ಲಂಡನ್ ೧೬

ಬ್ರಿಟನ್ನಿನ ಸುಪ್ರಸಿದ್ಧ ಸಾಹಿತಿ ಬರ್ನಾರ್ಡ್ ಷಾರವರು ಸೈಕಲ್ ಸವಾರಿ ಮಾಡುವವರಿಗೆ ಕೆಳಗೆ ಕಂಡಂತೆ ಸಲಹೆಯನ್ನು ಕೊಟ್ಟಿರುತ್ತಾರೆ:—

೫೦ ಮೈಲಿಗಳಿಗಿಂತ ಹೆಚ್ಚಾಗಿ ಬೆಟ್ಟ ಪ್ರದೇಶಗಳನ್ನು ಹತ್ತುವಾಗ ಮೊದಲನೆಯ ಗಂಟೆಯಲ್ಲಿ ಬಹಳ ನಿಧಾನವಾಗಿ ಹತ್ತಬೇಕು. ತನ್ನ ಸ್ಥಳವನ್ನು ಮುಟ್ಟುವವರೆಗೂ ಹೆಚ್ಚಿಗೆ ಆಹಾರವನ್ನು ತೆಗೆದುಕೊಳ್ಳಬಾರದು. ಸೈಕಲ್ ಬ್ಯಾಲೆನ್ಸನ್ನು ಕಲಿಯುವಾಗ ಒಂದು ಗುಂಡಾದ ನಾಣ್ಯವನ್ನು ಹಿಡಿಯುವುದನ್ನು ಗಮನಿಸಬೇಕು. ಅದರಂತೆ ಸೈಕಲನ್ನು ತಳ್ಳಿ ಅದರ ಮೇಲೆ ಕುಳಿತುಕೊಳ್ಳಬೇಕು.

ವಿಷವಾಯು ಸಂಶೋಧನೆಗೆ ಭಾರತದ ಕಪಿಗಳು

ಕಲ್ಕತ್ತಾದಿಂದ ಲಂಡನ್ನಿಗೆ ರವಾನಿಸಲ್ಪಟ್ಟ ೫೫೦ ಕೋತಿಗಳನ್ನು ವಿಷ ಕ್ರಿಮಿ ಯುದ್ಧದ ಸಂಶೋಧನೆಗೆ ಉಪಯೋಗಿಸಲು ತರಲಾಗಿದೆಯೋ ಎಂಬ ಪ್ರಶ್ನೆಗೆ ಅವುಗಳನ್ನು ವಿಶೇಷವಾಗಿ ತರಲಾಗಿದೆ ಎಂಬುದನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ತಿಳಿಸಲಾಗುವುದಿಲ್ಲವೆಂದು ಬ್ರಿಟನ್ನಿನ ಸರಬರಾಜು ಸಚಿವರು ಕಾಮನ್ಸ್ ಸಭೆಯಲ್ಲಿ ತಿಳಿಸುತ್ತಾರೆ.

ಮಹಾತ್ಮರನ್ನು ಕೊಲ್ಲುವ ಉದ್ದೇಶವಿರಲಿಲ್ಲ

ಕೋರ್ಟಿನಲ್ಲಿ ಮದನಲಾಲನ ಹೇಳಿಕೆ

ರಾಷ್ಟ್ರಪಿತ ಗಾಂಧೀಜಿಯವರನ್ನು ಕೊಲ್ಲಬೇಕೆಂಬ ಭಾವನೆ ನನಗಿರಲಿಲ್ಲ. ಜನವರಿ ೨೦ನೇ ತಾ|| ಬಿರ್ಲಾ ಭವನದಲ್ಲಿ ಬಾಂಬು ಆಸ್ಫೋಟನೆಯನ್ನು ನಾನು ಮಾಡಿದ್ದು ನಿಜ. ಲಕ್ಷಾಂತರ ಹಿಂದೂ ನಿರಾಶ್ರಿತರ ಕಷ್ಟಗಳನ್ನು ತಿಳಿಸಿ ಮುಸ್ಲಿಮರಿಗೆ ಸಹಾಯಕರಾಗಿರುವ ಮಹಾತ್ಮರ ಮನೋಭಾವವನ್ನು ಬದಲಾಯಿಸುವುದೇ ನನ್ನ ಉದ್ದೇಶವಾಗಿತ್ತು. ಗಾಂಧೀಜಿಯವರನ್ನು ಕೊಲೆ ಮಾಡಬೇಕೆಂದಿದ್ದರೆ ಬಾಂಬನ್ನು ಅವರ ಮುಂದೆಯೇ ಹಾಕುತ್ತಿದ್ದೆ—ಎಂದು ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ನಾಲ್ಕನೆ ಆಪಾದಿತನಾದ ಮದನಲಾಲನು ತನ್ನ ಹೇಳಿಕೆಯಲ್ಲಿ ತಿಳಿಸುತ್ತಾನೆ.

ಗಾಯತ್ರಿ ಜಪಿಸುವ ಪಾಕಿಸ್ತಾನ ಗೂಢಚಾರ

ಎ.ಪಿ.ಎ. ಅಮೃತಸರ ೧೫

ಅಮೃತಸರದ ಬಾಬ ಜಮಾಲ್‌ಸಿಂಗ್ ಹಳ್ಳಿಯಲ್ಲಿ ಸಿಖ್ ಸಾಧುವಿನ ವೇಷವನ್ನು ಧರಿಸಿ ಗಡ್ಡವನ್ನು ಬೆಳಸಿಕೊಂಡ ಸರ್ದಾರ್ ಸಿಂಗ್ ಎಂಬ ಹೆಸರಿನಿಂದ ತಿರುಗುತ್ತಿದ್ದ ಪಾಕಿಸ್ತಾನದ ಮುಸ್ಲಿಂ ಗೂಢಚಾರನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ವಿನಾಶ ಕೃತ್ಯಗಳನ್ನು ನಡೆಸಲು ತನ್ನನ್ನು ಅಲ್ಲಿ ಕಳುಹಿಸಲಾಗಿತ್ತೆಂದೂ, ತನ್ನ ಕೆಲಸವು ಸಫಲವಾದಲ್ಲಿ ತನಗೆ ಜಮೀನ್ದಾರರ ಪದವನ್ನು ಕೊಡಲಾಗುತ್ತಿತ್ತೆಂದೂ ಆತನು ಹೇಳಿರುತ್ತಾನೆ. ಗಾಯತ್ರಿ ಮಂತ್ರ ಸಿಖ್ಖರ ಜಪ ಮಂತ್ರಗಳನ್ನು ಹೇಳಲು ಆತನಿಗೆ ಶಿಕ್ಷಣ ಕೊಡಲಾಗಿತ್ತೆಂದೂ ವರದಿಯಾಗಿದೆ.

ನಾನ್‌ಕಿಂಗಿಗೆ ಗಂಡಾಂತರ

ಚೀಣದ ರಾಜಧಾನಿಯಾದ ನಾನ್‌ಕಿಂಗಿನ ಕಡೆಗೆ ಕಮ್ಯೂನಿಸ್ಟ್ ಸೈನಿಕರು ನುಗ್ಗುತ್ತಿದ್ದಾರೆಂದೂ, ಇದರಿಂದ ಆಪತ್ತು ಉಂಟಾಗಿದೆಯೆಂದೂ ಹೇಳಲಾಗಿದೆ. ಈಗಾಗಲೇ ನಗರವನ್ನು ಬಿಟ್ಟು ಅನೇಕರು ತೆರಳಿದ್ದಾರೆ. ಜನಸಂದಣಿ ಹೆಚ್ಚಾಗಿ ಅಲ್ಲಿನ ಸ್ಟೇಷನ್ ಕುಸಿದು ಬಿದ್ದು ಅನೇಕರು ಮರಣ ಹೊಂದಿದರು.

ಭಾರತದಲ್ಲಿ ಪಾಕಿಸ್ತಾನದ ಪಂಚಮ ದಳದ ಚಟುವಟಿಕೆ

ಎ.ಪಿ.ಎ ನವ ದೆಹಲಿ ೧೫

ಪಾಕಿಸ್ತಾನದ ಪ್ರೇರೇಪಣೆಯಿಂದ ಭಾರಿಯಾಗಿರುವ ರಜಾಕರರು ಮತ್ತು [illegible] ಜನರು ಭಾರತದ ಹಲವು ಪ್ರದೇಶಗಳಲ್ಲಿ ಗೂಢಚಾರರಾಗಿ ಕೆಲಸ ಮಾಡುತ್ತಿರುವರೆಂದು ಹೇಳಲಾಗಿದೆ. ಪ್ರಮುಖ ಸೈನ್ಯ ಕೇಂದ್ರಗಳು, ವಿದ್ಯುಚ್ಛಕ್ತಿ, ರೈಲ್ವೆ ಮತ್ತು ಇತರ ಮುಖ್ಯ ಪ್ರದೇಶಗಳನ್ನು ತಮ್ಮ ನಾಯಕರುಗಳ ಆಜ್ಞೆ ಬಂದೊಡನೆಯೇ ನಾಶಪಡಿಸಲು ಅವರು ಸಿದ್ಧರಾಗಿರುತ್ತಾರೆ. ಜುನಾಘಡದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ಕೇಂದ್ರದಲ್ಲಿ ನಡೆದ [illegible]

ದಿನಕ್ಕೆ ೨ ಲಕ್ಷ ಜನರಂತೆ ಷಾಂಗೈ ನಗರ ಬಿಡುತ್ತಿದ್ದಾರೆ

ಎ.ಪಿ.ಎ] ಷಾಂಗೈ ೧೬

ಚೀಣದಲ್ಲಿ ಆಹಾರ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರಿದೆ. ಷಾಂಗೈ ನಗರದಲ್ಲಿ ಅಕ್ಕಿಗೆ ಅಭಾವ ಉಂಟಾಗಿದೆ. ಇಲ್ಲಿನ ಜನಗಳು ಕಾಲ ಕಳೆಯುವವರಿಗೆ ಕೇವಲ ೫೦೦ ರಷ್ಟು [illegible] ಪಾವತಿಸುತ್ತಿದ್ದಾರೆ. ದಿನಕ್ಕೆ ೨ ಲಕ್ಷ ಜನರಂತೆ ನಗರವನ್ನು ಬಿಡುತ್ತಿದ್ದಾರೆ. ರೈಲಿನಲ್ಲೂ ಮತ್ತು ಇತರ ವಾಹನಗಳಲ್ಲೂ ಜನ ಸಂದಣಿ ಹೆಚ್ಚಾಗಿ ನೂಕು ನುಗ್ಗಲಿನಲ್ಲಿ ಅನೇಕರು ಸತ್ತು ಹೋಗುತ್ತಿರುವರೆಂದೂ ವರದಿಯಾಗಿದೆ.

ನೂಲುವ ಸ್ಪರ್ಧೆ

ರಾಜಧಾನಿಯ ಗಾಂಧೀ ಸೇವಾಸಂಘದ ಆಶ್ರಯದಲ್ಲಿ ಪ್ರತಿ ತಿಂಗಳೂ ನಗರದ ಒಂದೊಂದು ಮೊಹಲ್ಲಾದಲ್ಲಿ ನೂಲುವ ಸ್ಪರ್ಧೆಯನ್ನು ನಡೆಯಿಸಲಾಗುವುದು. ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಕೊಡಲಾಗುತ್ತದೆ. ಈ ತಿಂಗಳು ೨೧ನೇ ತಾ|| ಸಂಜೆ ೪ ಗಂಟೆಗೆ ಹಳೇ ಅಗ್ರಹಾರದ [illegible] ಬಿಸ್ಕತ್ ಫ್ಯಾಕ್ಟರಿಯಲ್ಲಿರುವ ಗಾಂಧಿ ಸೇವಾಸಂಘದ ಕಛೇರಿಯಲ್ಲಿ ಈ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ನೂಲುವ ಅಭ್ಯಾಸಿಗಳೆಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಭಾರತ ರಾಜ್ಯಾಂಗ ಸಭೆಗೆ ದಿವಾನರ ರಾಜೀನಾಮೆಯೇ

ಬೆಂಗಳೂರು ೧೬

ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಭಾರತ ರಾಜ್ಯಾಂಗ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವರೆಂದೂ ಅವರ ಸ್ಥಾನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ನೆಹರೂ ಪಾದ ರಕ್ಷೆಯು ಕಳವು

ದೆಹಲಿಯ ಸಿಕ್ಖರ ಉತ್ಸವದಲ್ಲಿ ಭಾಗವಹಿಸಲು ಹೋಗಿದ್ದ ಪಂಡಿತ ನೆಹರೂರವರ ಹೊಸ ಪಾದರಕ್ಷೆಯನ್ನು ಕಳವು ಮಾಡಲಾಗಿದೆಯೆಂದು ಹೇಳಲಾಗಿದೆ. ಅವರು ತಮ್ಮ ಭಾಷಣವನ್ನು ಮುಗಿಸಿಕೊಂಡು ಹೊರಕ್ಕೆ ಬಂದು ನೋಡುವಲ್ಲಿ ತಮ್ಮ ನೂತನ ಪಾದರಕ್ಷೆಯಿದ್ದಲ್ಲಿ ಹಳೆಯದು ಇತ್ತೆಂದೂ [illegible] ಹೊರಟುಹೋದರೆಂದೂ ವರದಿಯಾಗಿದೆ.

ಪಾಕಿಸ್ತಾನದಲ್ಲಿ ಕ್ಷಯದಿಂದ ೩ ನಿಮಿಷಕ್ಕೊಂದು ಮರಣ

ಎ.ಪಿ.ಎಸ್. ಕರಾಚಿ ೧೫

ಪಾಕಿಸ್ತಾನದಲ್ಲಿ ಕ್ಷಯ ರೋಗವು ಹೆಚ್ಚಾಗಿ, ೩ ನಿಮಿಷಕ್ಕೊಬ್ಬರಂತೆ ಸಾಯುತ್ತಿದ್ದಾರೆಂದು ಹೇಳಲಾಗಿದೆ. ಈ ರೋಗವನ್ನು ತಡೆಯಲು ಸರ್ಕಾರದವರು ತಕ್ಷಣವೇ ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ ಅದು ಸಾಂಕ್ರಾಮಿಕವಾಗಿ ಹರಡಬಹುದೆಂದು ಆರೋಗ್ಯ [illegible] ಎಚ್ಚರಿಕೆ ಕೊಟ್ಟಿರುವರು. [illegible]

ಗೋಹತ್ಯೆಗಾಗಿ ದಂಡ

ಮೈಸೂರು ೧೭

ರಾಜಧಾನಿಯ ನರಸಿಂಹರಾಜ ಮೊಹಲ್ಲಾ ಗುಡಿಸಲುಗಳ ಕಾಲೋನಿಯ ನಂಜರಾವ್, ಪಳನಿ, ರಂಗ ಎಂಬವರು ಕಳೆದ ೧೩ನೇ ತಾ|| ಹಸುವನ್ನು ಕೊಲೆ ಮಾಡಿದ್ದರಿಂದ ಲಕ್ಷ್ಮೀಪುರಂ ಪೋಲೀಸರು ಮೊಕದ್ದಮೆ ಹೂಡಿದ್ದರು. ನಗರ ನ್ಯಾಯಾಧೀಶರು ಅವರುಗಳಿಗೆ ತಲಾ ೫೦ ರೂ ದಂಡ ತಪ್ಪಿದಲ್ಲಿ ೩೦ ದಿನ ಸಾದಾ ಸಜಾ ಶಿಕ್ಷೆಯನ್ನು ವಿಧಿಸಿರುವರು

ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾ ಸಂಘ

ಮೇಲ್ಕಂಡ ಸಂಘದ ಅಷ್ಟಮ ವಾರ್ಷಿಕೋತ್ಸವದ ಸಂಬಂಧದಲ್ಲಿ ಮೊನ್ನೆ ದಿನ ಶ್ರೀ ತ್ರಿನಯನೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಕಾರ್ತೀಕ ಸೋಮವಾರ ಸೇವೆ ಮತ್ತು ರುದ್ರಾಕ್ಷಿ ಮಂಟಪೋತ್ಸವವನ್ನು ನಡೆಸಲಾಯಿತು. ಕೋ ಆಪರೇಟಿವ್ ಬ್ಯಾಂಕ್ ಕೆಳಭಾಗದಲ್ಲಿರುವ ಬಾಬಾ ಸಾಹೇಬರ ಮಸೀದಿಯಲ್ಲಿಯೂ ವಿಶೇಷ ಪ್ರಾರ್ಥನೆಯನ್ನು ನಡೆಸಲಾಯಿತು. ದರ್ಬಾರು ಭಕ್ಷಿಯವರಾದ ಸರ್ದಾರ್ ಎಚ್. ಎಂ. ದೇವರಾಜೆ ಅರಸಿನವರು ಹಿಂದೂ-ಮುಸ್ಲಿಂ ಐಕಮತ್ಯದ ವಿಷಯದಲ್ಲಿ ಭಾಷಣ ಮಾಡಿದರು

ಕಾಣಿಕೆ

ಹೆಗ್ಗಡದೇವನಕೋಟೆ ತಾಲ್ಲೂಕು ತುಂಬಸೋಗೆಯಲ್ಲಿ ಶ್ರೀ ಆರ್. ವಿ. ಪುಟ್ಟಬಸಪ್ಪನವರು ತಮ್ಮ ಗೃಹಪ್ರವೇಶದ ಸಂದರ್ಭದಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ೫೦ ರೂ ಕಾಣಿಕೆ ಕೊಟ್ಟಿರುತ್ತಾರೆ

Edited printed and published by A. R. Nagarajan at the Sadhvi Press, D. Subbaiah Road Mysore.

ಹೈದರಾಬಾದ್ ಪ್ರೊಫೆಸರರ ಸಸ್ಪೆಂಡ್

ಹೈದ್ರಾಬಾದು ಉಸ್ಮಾನಿಯ ವಿಶ್ವವಿದ್ಯಾಲಯದ ಪ್ರೊ|| ಯೂಸಫ್ ಹುಸೇನ್ ರವರು ವಿಶ್ವಸಂಸ್ಥೆಯಲ್ಲಿ ಹೈದರಾಬಾದು ಪರವಾಗಿ ಭಾಗವಹಿಸಲು ನವಾಬ್ ಮೋಯಿನ್ ನವಾಬ್ ಜಂಗ್ ಬಹದ್ದೂರವರೊಡನೆ ಪ್ಯಾರಿಸ್ಸಿಗೆ ತೆರಳಿದ್ದರು. ಹೈದರಾಬಾದಿಗೆ ಅಲ್ಲಿಂದ ಹಿಂದಿರುಗಿದೊಡನೆಯೇ ಅವರನ್ನು ಸಸ್ಪೆಂಡ್ ಮಾಡಲಾಗಿದೆ.

ವಾರ್ಷಿಕ ಮಹಾಸಭೆ

ಮೈಸೂರು ದೇವಾಂಗ ಸಂಘದ ವಾರ್ಷಿಕ ಮಹಾಸಭೆಯು ಕಳೆದ ಸೋಮವಾರ ನಡೆದು ಮುಂದಿನ ಸಾಲಿನ ಅಧಿಕಾರ ವರ್ಗಕ್ಕೆ ಶ್ರೀ ಎಲ್. ಸಿ. ಆದಿಶೇಷಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಟಿ. ತಿಮ್ಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಕೆ. ಲಕ್ಷ್ಮೀನರಸಿಂಹಯ್ಯನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಅಲ್ಲದೆ ಶ್ರೀ ಎಂ. ಶಂಕರಯ್ಯನವರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು

ಗಾಂಧಿನಿಧಿಗೆ ಕಾಣಿಕೆ

ರಾಜಧಾನಿಯ ಸೀಜನ್ ಇಲೆವೆನ್ ಕ್ಲಬ್ಬಿನವರು ಮೊನ್ನೆದಿನ ಟೌನ್ ಹಾಲಿನಲ್ಲಿ ವಿವಿಧ ವಿನೋದಾವಳಿಯನ್ನು ಬಹಳ ಉತ್ತಮ ರೀತಿಯಲ್ಲಿ ಪ್ರದರ್ಶಿಸಿದರು. ಪುರಸಭಾಧ್ಯಕ್ಷರಾದ ಶ್ರೀ|| ಮುಲಕಳ್ಳಿ ಸೀತಾರಾಮಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಈ ಪ್ರದರ್ಶನಕ್ಕೆ ಉತ್ಪತ್ತಿಯಾದ ಹಣದಲ್ಲಿ ೫೦ ರೂ ಗಳನ್ನು ಗಾಂಧಿನಿಧಿಗೆ ಕಾಣಿಕೆಯನ್ನಾಗಿ ಅರ್ಪಿಸಲಾಯಿತು

ಮದುವೆಯಾದ ಹುಡುಗಿಗೆ ಪುನಃ ಮದುವೆ ಮಾಡಿದ ಆಪಾದನೆ

ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ

ಮೈಸೂರು ೧೭

ನಂಜನಗೂಡು ತಾಲ್ಲೂಕು ಬೆಳತೂರಿನ ದಳ್ವಾಳ ನಂಜಪ್ಪರಾಯರು, ಲಕ್ಷ್ಮೀಬಾಯಿ, ಪರಂಗಿ ದೇವೋಜಿರಾವ್, ಕೆ. ಆರ್. ನರಹರಿರಾವ್, ಅಪ್ಪಾಜಿರಾವ್ ಮತ್ತು ಗೌರಮ್ಮ ಎಂಬುವರು ಕಳೆದ ಡಿಸೆಂಬರ್ ೫ನೇ ತಾ|| ಮದುವೆಯಾದ ಹುಡುಗಿಗೆ ಪುನಃ ಮದುವೆ ಮಾಡಿಸಿದರೆಂಬ ಆಪಾದನೆಯ ಮೇಲೆ ನಂಜನಗೂಡು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯು ನಡೆದು, ಅವರುಗಳನ್ನು ಸೆಷನ್ಸ್‌ಗೆ ಗುರಿಪಡಿಸಲಾಗಿತ್ತು. ಸದರಿ ಮೊಕದ್ದಮೆಯು ನಿನ್ನೆ ದಿನ ಅಸಿಸ್ಟೆಂಟ್ ಸೆಷನ್ಸ್ ಕೋರ್ಟಿನಲ್ಲಿ ಪ್ರಾರಂಭವಾಯಿತು

ಮೊಕದ್ದಮೆಯ ವಿವರಗಳು ಈ ರೀತಿ ಇವೆ:—

ದಳ್ವಾಳ ನಂಜಪ್ಪರಾಯರ ಮಗಳು ಗೌರಮ್ಮನು ನಂಜುಂಡರಾಯರನ್ನು ೨೬-೫-೪೪ರಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾದಳು. ಫಿರ್ಯಾದಿ ನಂಜುಂಡರಾಯನು ಮದುವೆಯಾದನಂತರ ಹೊಲಿಗೆ ಕೆಲಸ ಕಲಿಯಲು ಬೊಂಬಾಯಿಗೆ ಹೋಗಿದ್ದನು. ಈ ಮಧ್ಯೆ ಗೌರಮ್ಮನು ಋತುಮತಿಯಾದ ದ.ದ.ತಳದ ಆತನು ನಿಷೇಕಕ್ಕಾಗಿ ವಾಪಸು ಬಂದ. ಆತನು ಮೈಸೂರಿಗೆ ತೆರಳಿದ ನು ಕೆಲವು ದಿನಗಳ ನಂತರ ೧ನೇ ಆಪಾದಿ ನಂಜಪ್ಪರಾಯನು ಗೌರಮ್ಮನನ್ನು ಬೆಳತೂರಿಗೆ ಯಾರಿಗೂ ಹೇಳದೆ ಕರೆದುಕೊಂಡು ಹೋದನು. ೧೯೪೭ನೇ ಡಿಸೆಂಬರ್ ೫ನೇ ತಾ|| ಅಪ್ಪಾಜಿರಾಯರೊಡನೆ ಗೌರಮ್ಮನ ಲಗ್ನವು ಹುಲ್ಲಹಳ್ಳಿಯಲ್ಲಿ ನಡು ರಾತ್ರಿಯಲ್ಲಿ ಇತರ ಆಪಾದಿಗಳ ಸಹಾಯದಿಂದ ನಡೆಯಿತು. ಫಿರ್ಯಾದಿಯು ಬೊಂಬಾಯಿಗೆ ಹೋಗಿ ಸೈನ್ಯಕ್ಕೆ ಸೇರಿದನೆಂದೂ, ಆತನು ಬದುಕಿರುವನೋ ಇಲ್ಲವೋ ಎಂಬುದು ಗೊತ್ತಿಲ್ಲದೆ, ಈ ಮದುವೆಯನ್ನು ಹುಡುಗಿಯ ತಂದೆ ತಾಯಿಗಳು ನೆರವೇರಿಸಿರುತ್ತಾರೆಂದೂ ಫಿರ್ಯಾದಿನಲ್ಲಿ ನಮೂದಿಸಲಾಗಿದೆ

ಪ್ರತಿ ದಿನ ಮೂರು ಆಟಗಳು
18-11-48ನೇ ಗುರುವಾರದಿಂದ
ಅಜಿತ್ ಪಿಕ್ಚರ್ಸ್ ರವರ
ಗುಣ ಸುಂದರಿ
(ಹಿಂದಿ)
ಪಾತ್ರ:- ನಿರೂಪ ರಾಯ್, ಮನ್ಹರ್ ದೇಸಾಯ್ ಮತ್ತಿತರರು
ಒಲಂಪಿಯಾ ಟಾಕೀಸ್

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ 3 ಆಟಗಳು
ತಾ|| 18-11-48 ರಿಂದ
4 ದಿನಗಳು ಮಾತ್ರ
ಸಾನ್ - ಆಂಟೋನಿಯೋ
SAN ANTONIO
ವಾರ್ನರ್ಸ್ ರವರ ಸಾಹಸ ಮಯ
ವರ್ಣ ರಂಜಿತ ಚಿತ್ರ

ಎಸ್. ಎನ್. ಪಂಡಿತ್
ಅಂಡ್ ಸನ್ಸ್ ರವರ
ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಬೆಲೆ ೦-೧೨-೦
ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ:—)
—ದೇಹಿಗೆ ತಲೆಗೆ ಉತ್ತಮ ಅಭ್ಯಂಗ ತೈಲಗಳು
ಪಂಚಾಮೃತ— ಮಲೇರಿಯಾ ಗಳಿಗೆ ಸಿದ್ಧ ಔಷಧ.
ಮಹಾಲಕ್ಷ್ಮೀ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ
ಬ್ರೇನ್ ಟಾನಿಕ್ ಬೆಲೆ ೨-೮-೦
ಮೈಸೂರು ಆಯುರ್ವೇದಿಕ್ ಫಾರ್ಮಸಿ
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

ಭಾರತಿ
(ಸುಂದರ ಕನ್ನಡ ಚಿತ್ರ)
19-11-48 ರಿಂದ
ರಾಜಕಮಲ್ ಟಾಕೀಸಿನಲ್ಲಿ
ಪ್ರತಿ ದಿನ ಮೂರು ಆಟಗಳು
—:ಪತ್ರಿಕಾ ಪ್ರಶಂಸೆ:—
"ಭಾರತದ ಪ್ರಣ್ಯ. ನಮ್ಮ ಮಹಿಳೆಯರು ಪರದೇಶಿ ನಡೆ ನುಡಿಗೆ ಮಾರು ಹೋಗಲು ಪ್ರಾರಂಭಿಸಿದಾಗಲೇ ಎಚ್ಚರಿಕೆಯ ನುಡಿಯನ್ನು ನುಡಿಯುವವರು ಹುಟ್ಟಿದರು. ಕನ್ನಡ ಚಿತ್ರಗಳು ಫಲಕಾರಿಯಾಗಲಾರವೆಂದು ನಿರಾಶೆ ಗೊಂಡಿದ್ದ ಕನ್ನಡಿಗರಿಗೆ 'ಭಾರತಿ' ಚಿತ್ರ ಭರವಸೆಯನ್ನು ನೀಡಿದೆ"
....ವಿಶ್ವಕರ್ನಾಟಕ
"ಸಂಗೀತ ಮತ್ತು ನೃತ್ಯ ಚೆನ್ನಾಗಿದೆ. ಕಥಾ ಸಂವಿಧಾನವೂ ಪಾತ್ರ ಪೋಷಣೆಯೂ ಉತ್ತಮವಾಗಿದ್ದು ಕನ್ನಡ ಚಲನ ಚಿತ್ರ ಪ್ರಪಂಚಕ್ಕೆ ಭೂಷಣ ಪ್ರಾಯವಾಗಿದೆ"
....ತಾಯಿನಾಡು
"ವೀರಭದ್ರಯ್ಯನವರು ಚಿತ್ರದ ಕೆಲವೆಡೆಗಳಲ್ಲಿ ತೋರಿರುವ ಕಲಾ ಸ್ಪರ್ಶವು (Artistic touch) ನಮಗೆ ಕೋಲ್ಮನ್, ರೊನಾಲ್ಡ್ ಕೋಲ್ಮನ್..."
....ಪ್ರಜಾವಾಣಿ
BHARATHI
(Kannada)
Now running to capacity houses at
SUPER and SWASTIC, Bangalore
Entire Rights with SRI MAHAVEER Film Exchange, Ashoka Road, Mysore

|| ಶ್ರೀ ||
ಚಾಮುಂಡೇಶ್ವರೀ
ಟಾಕೀಸ್
17-11-48 ರಿಂದ
ಪ್ರತಿದಿನ 3 ಪ್ರದರ್ಶನಗಳು.
ಭಾಯಿ
ಜಾನ್
(ಹಿಂದಿ)
-:ಭೂಮಿಕೆ:-
ನೂರ್ ಜಹಾನ್, ಮೀನಾ, ಕರ್ಣ ದಿವಾನ್ ಮತ್ತು ಶಾ ನವಾಜ್

ಫೋ:ನಂ. 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೬] ಗುರುವಾರ ೧೮-೧೧-೪೮ [ಸಂಚಿಕೆ ೧೨೮

ಕುದೇರು ಕೊಲೆಯ ಅಪರಾಧಿಗೆ ಆಜೀವ ಶಿಕ್ಷೆ

ಕುದೇರು ಕೊಲೆ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆ

ಮೈಸೂರು ೧೮

ಚಾಮರಾಜನಗರದ ತಾಲ್ಲೂಕು ಕುದೇರು ಗ್ರಾಮದಲ್ಲಿ ೩-೭-೪೭ರಲ್ಲಿ ನಂಜನಗೂಡು ತಾಲ್ಲೂಕು ಬಿಳಿಗೆರೆ ಗ್ರಾಮದ ಪುಟ್ಟಚಿಕ್ಕಶೆಟ್ಟಿ ಎಂಬಾತನು ಕುದೇರಿನ ಪೋಸ್ಟ್, ಪುಟ್ಟನಂಜಮ್ಮ, ರೇವಮ್ಮ ಮತ್ತು ... ಇವರುಗಳನ್ನು ಕೊಲೆಮಾಡಿ ಮನೆಯಲ್ಲಿದ್ದ ಒಡವೆ ವಸ್ತುಗಳನ್ನು ದರೋಡೆ ಮಾಡಿ ತೆಗೆದುಕೊಂಡು ಹೋದರು. ಚಾಮರಾಜನಗರದ ಪೋಲೀಸಿನವರು ನಂಜನಗೂಡು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದು ವಿಚಾರಣೆಯಾಗಿ ಅಪರಾಧಿಯನ್ನು ಸೆಷನ್ಸಿಗೆ ಗುರಿಪಡಿಸಲಾಗಿತ್ತು.

ಸೆಷನ್ಸ್ ಕೋರ್ಟಿನಲ್ಲಿ ಸದರಿ ಮೊಕದ್ದಮೆಯು ವಿಚಾರಣೆಯಾಗಿ ಸೆಷನ್ಸ್ ಜಡ್ಜ್ ಆದ ... ಎಸ್ ಆರ್ ಜಯರಾಯರು ಅಪರಾಧಿ ತಪ್ಪಿತಸ್ಥನೆಂದು ತೀರ್ಮಾನಿಸಿ ಅವನಿಗೆ ಜೀವಾವಧಿ ಶಿಕ್ಷೆಯನ್ನು ನಿನ್ನೆ ದಿನ ವಿಧಿಸಿರುತ್ತಾರೆ. ಅಪರಾಧಿ ಪರ ಸ್ಟ್ಯಾಂಡಿಂಗ್ ಕೌನ್ಸಿಲ್ ಶ್ರೀ ಎಸ್ ಚನ್ನಸ್ವಾಮಿಶೆಟ್ಟರು ಸರ್ಕಾರಿ ಪರ ಶ್ರೀ ಜಿ ಶಂಕರಶೆಟ್ಟರೂ ವಕಾಲತ್ತು ವಹಿಸಿದ್ದರು.

ನೆಹರೂ ಜಯಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ನಿನ್ನೆ ದಿನ ಬೆಳಿಗ್ಗೆ ನೆಹರೂರವರ ಜಯಂತಿಯು ಪೌರಸಭಾಧ್ಯಕ್ಷರಾದ ಶ್ರೀ ಪಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಡಿ ಎಂ ಸಿ ... ಯ್ಯನವರು ಭಾಷಣಮಾಡಿದರು

ಸೆಷನ್ಸಿಗೆ ಕಮಿಟ್ ಮಾಡಲಾಯಿತು

ಮೈಸೂರು ೧೮

ರಾಮಾನುಜ ಅಗ್ರಹಾರದ ನಿವಾಸಿ ಸಿ ... ಎಂಬುವನು, ಅಲ್ಲೇ ಅಗ್ರಹಾರದಲ್ಲಿದ್ದ ನಾರಾಯಣ ಸ್ವಾಮಿ ಎಂಬುವರನ್ನು ಕೊಲೆ ಮಾಡಿದನೆಂದು ಮೈಸೂರು ಸಿಟಿ ಪೋಲೀಸರು ಎರಡನೇ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದರು. ಮ್ಯಾಜಿಸ್ಟ್ರೇಟರಾದ ಶ್ರೀ ಗೋಪಾಲಾಚಾರಿ ಅರಸಿನವರು ಅಪರಾಧಿಯನ್ನು ಐ ಪಿ ಸಿ ಇ... ಕಲಂನ ಪ್ರಕಾರ ಸೆಷನ್ಸ್ ವಿಚಾರಣೆಗೆ ನಿನ್ನೆ ಗುರಿಪಡಿಸಿರುತ್ತಾರೆ

॥ಶ್ರೀ॥

ಗಣೇಶಾ ಟಾಕೀಸ್

19-11-48 ರಿಂದ

ಪ್ರತಿ ದಿನ ಮೂರು ಪ್ರದರ್ಶನಗಳು

ಹರಿದಾಸ್

(ತಮಿಳು)

ಹೊಸ ಪ್ರಿಂಟು, ಪೂರ್ಣ ವರ್ಣರಂಜಿತ ಚಿತ್ರ

ಪಾತ್ರ:- ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ.

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿ ಮುನಿಸಿಪಲ್ ನಂಬರಿ ಮನೆ ನಂಬರ್ 65 ಬಾಡಿಗೆಗಿದೆ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿರಿ.

ಸಾಧ್ವಿ ಕಛೇರಿ, ಮೈಸೂರು

ಭಾರತ ವಾಚನ

ಮೈಸೂರು ೧೮

ನಾಳೆ ರಾತ್ರಿ ೯ ಗಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿ ಮಹಡಿಯಮೇಲೆ ಗಮಕ ವಿದ್ವಾನ್ ಶ್ರೀ ಎಂ ಎಸ್ ಸಾಂಬ ಮೂರ್ತಿಯವರಿಂದ ಭೀಮ ಪ್ರತಿಜ್ಞೆ ಎಂಬ ವಿಷಯದಲ್ಲಿ ಭಾರತ ವಾಚನವು ನಡೆಯುವುದು ಸರ್ವರಿಗೂ ಆಹ್ವಾನವುಂಟು

ನೆಹರೂ ಜಯಂತಿ

ರಾಜಧಾನಿಯ ವಾಣಿ ವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಕೆ ಹೆಚ್ ರಾಮಯ್ಯನವರ ಅನಾಥಾಲಯದಲ್ಲಿ ನೆಹರೂ ಜಯಂತಿಯನ್ನು ಆಚರಿಸಲಾಯಿತು ಶ್ರೀ ಕೆ ಜಿ ದೇವನಾಥ್‌ರವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಯಶೋಧರಾ ದಾಸಪ್ಪನವರು ಪಂ॥ ನೆಹರೂರವರ ಗುಣಗಾನ ಮಾಡಿ ಎಲ್ಲರೂ ಅವರಂತೆ ದೇಶ ಪ್ರೇಮಿಗಳಾಗಬೇಕೆಂದು ಉಪದೇಶಿಸಿದರು

ನಜರಬಾದು ಒಕ್ಕಲಿಗರ ವಿದ್ಯಾರ್ಥಿ ನಿಲಯ ಸಂಘದ ಆಶ್ರಯದಲ್ಲಿ ನೆಹರೂ ಜಯಂತಿಯನ್ನು ಶ್ರೀ ಕೆ ಜಿ ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀ ಯಾ ಮುನಿಚಾರ್ಯರು ಪ್ರಧಾನಿಯವರ ಭಾವಚಿತ್ರದ ಅನಾವರಣವನ್ನು ಮಾಡಿದರು

ಪೋಲೀಸ್ ಇನ್ಸ್‌ಪೆಕ್ಟರು ಕೋರ್ಟಿನಲ್ಲೇ ಕಾಗದಗಳನ್ನು ಅಪಹರಣ ಮಾಡಿದ ಪ್ರಯತ್ನ

ಸರ್ಕಾರದ ಹಣವನ್ನು ದುರುಪಯೋಗಪಡಿಸಿದರೆಂಬ ಅಪವಾದನೆಗೆ ಗುರಿಯಾಗಿರುವ ಹೊನ್ನಾಳಿ ತಾ॥ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಬಾಲಾಜಿ ಸಿಂಗ್ ರವರ ವಿಚಾರಣೆಯು ನಿನ್ನೆ ಶಿವಮೊಗ್ಗ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಯುತ್ತಿದ್ದಾಗ ಅವರು ತಮ್ಮ ಮೊಕದ್ದಮೆ ಸಂಬಂಧವಾಗಿ ಕೋರ್ಟಿನ ಮುಂದೆ ಹಾಜರುಪಡಿಸಲ್ಪಟ್ಟಿದ್ದ ಮಹಜರು ಪತ್ರವನ್ನು ತೆಗೆದುಕೊಂಡು ಓಡಿಹೋಗಲು ಯತ್ನಿಸಿದರೆಂದೂ, ಪೋಲೀಸರು ಅವರನ್ನು ಸ್ಥಳದಲ್ಲೇ ಬಂಧಿಸಿ ಮುಂದಿನ ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ

Edited printed and published by A.H. Nagarajan at the Sadhvi Press D. Subbaiah Road Mysore

ವೈದ್ಯ ವೃತ್ತಿಯ ರಾಷ್ಟ್ರೀಕರಣ

ವೈಶ್ಯರ ಸಮ್ಮೇಳನದಲ್ಲಿ ಶ್ರೀಮನ್ನಹಾರಾಜರವರ ಸೂಚನೆ

ಮೈಸೂರು ೧೮

ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ವಸ್ತು ಪ್ರದರ್ಶನಾಲಯದಲ್ಲಿ ಸಂಸ್ಕೃತದ ೧೬ನೇ ವೈದ್ಯ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು ಶ್ರೀ ಎಂ. ಸಿ ಮಹಾದೇವಸ್ವಾಮಿಯವರಿಂದ ಸ್ವಾಗತ ಪದ್ಯ ಪಠಣವಾದನಂತರ ವೈದ್ಯರ ಸಂಘದ ಅಧ್ಯಕ್ಷರಾದ ಡಾ॥ ಪಾಂಟೀರೋ ರವರು ಸ್ವಾಗತ ಭಾಷಣಮಾಡಿ ಸಮ್ಮೇಳನದ ಉದ್ದೇಶವನ್ನೂ, ಸರ್ಕಾರದಿಂದ ಆಗಬೇಕಾದ ಸಹಾಯವನ್ನೂ ಅರಿಕೆ ಮಾಡಿಕೊಂಡರು.

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಸಮ್ಮೇಳನದ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ದೇಶದ ಅಭ್ಯುದಯಕ್ಕೆ ನಿಕಟ ಸಂಪರ್ಕವನ್ನು ಹೊಂದಿರುವ ಪತ್ರಿ ಸೇವಾ ಮಾರ್ಗವಲ್ಲಿ ನೀರಿಯೇ ಇಲ್ಲವ ಉನ್ನತವಾದ ವೈದ್ಯ ವೃತ್ತಿಗೆ ಸೇರಿದ ಮಹನೀಯರುಗಳು. ಮಾನವ ಸಮಾಜದ ಪುನರ್ರಚನೆ ಮತ್ತು ಪೋಷಣೆಗೆ ಮಾಡಬೇಕಾದ ಕಾರ್ಯಗಳು ಅಪಾರವಾಗಿವೆಯೆಂದು ಅಪ್ಪಣೆ ಕೊಡಿಸಿದರು.

ನಮ್ಮ ದೇಶದ ಸಾಮಾನ್ಯ ಜನರ ಜೀವನಕ್ಕೆ ಸಾಕಾಗುವ ಒ ದು ನೂತನ ಆಹಾರದ ಸಂಯೋಜನೆಯನ್ನು ಕಂಡುಹಿಡಿಯುವುದರಲ್ಲಿ ವೈದ್ಯರು ತಮ್ಮ ಶಕ್ತಿಯನ್ನು ಪ್ರಯೋಗಿಸಬೇಕೆಂದು ತಿಳಿಸಿದರು. ಸಂಸ್ಥಾನದಲ್ಲಿಯೇ ಹಲವು ಉಪಯುಕ್ತವಾದ ಔಷಧಗಳನ್ನು ತಯಾರಿಸುವುದರಲ್ಲಿ ಸರ್ಕಾರದವರು ತೊಡಗಿರುವರೆಂದು ಸೂಚಿಸಿದರು.

ಇತರ ದೇಶಗಳಲ್ಲಿರ ವಂತೆ ವೈದ್ಯವೃತ್ತಿಯ ರಾಷ್ಟ್ರೀಕರಣದ ವಿಚಾರದಲ್ಲಿ ನಮ್ಮ ದೇಶದ ವೈದ್ಯರುಗಳೂ ಸಹ ಒಮ್ಮತವಾದ ಸಹಕಾರವನ್ನು ಕೊಟ್ಟಿರುವುದಕ್ಕಾಗಿ ಪ್ರಭುಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು

ಈ ಸಮ್ಮೇಳನವು ಯಶಸ್ವಿಯಾಗಿ ಜನರ ಆರೋಗ್ಯ ಸಮಾಜದ ಹಿತ ಸಾಧನೆಗೆ ಸಹಕಾರಿಯಾಗಲೆಂದು ಹಾರೈಸಿದರು

ಆರೋಗ್ಯ ಮಂತ್ರಿಗಳಾದ ಜಾ॥ ಮಹಮದ್ ಷರೀಫರವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಇನ್ನು ೩ ದಿನಗಳ ಕಾಲ ನಡೆಯುವುದು

ಕೇಡ್ಗಾವ್ಯವಸ್ಥೆಗೆ ೧॥ ಲಕ್ಷ ರೂ

ಸ್ವಂ.ಸು.ಪೋ॥] ಬೆಂಗಳೂರು ೧೮

ಭಾರತದ ಪ್ರಧಾನಿ ಪಂಡಿತ ನೆಹರೂರವರ ಗೌರವಾರ್ಥವಾಗಿ ಏರ್ಪಡಿಸಲಿರುವ ಕೇಡ್ಗಾಕ್ಕೆ ೧॥ ಲಕ್ಷ ರೂ ಗಳನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ.

ಗೋಪಾಲರಾವ್ ಸಮಿತಿ ಮುಂದೆ ಸರ್ ಶಂಬು ಚೆಟ್ಟಿ ರಣಜೋಧ್‌ಸಿಂಗರ ಗುಪ್ತ ವಿಚಾರಣೆ

ಗೋಪಾಲರಾವ್ ವಿಚಾರಣಾ ಸಮಿತಿಯ ಮುಂದೆ ಸರ್ ಟಿ. ಶಂಬೂಚೆಟ್ಟರ ಪ್ರಾಣ ಮ ಜಿ. ಪಿ ಶ್ರೀ ರಣಜೋಧ್ ಸಿಂಗರ ವಿಚಾರಣೆಯು ಗುಪ್ತವಾಗಿ ನಡೆಯಿತೆಂದು ತಿಳಿದುಬಂದಿದೆ.

○ ಹೈಸ್ಕೂಲಿನಲ್ಲಿ ಕಡ್ಡಾಯವಾಗಿ ಹಿಂದೀ ಭಾಷಾ ಶಿಕ್ಷಣ ಕೊಡುವ ತತ್ವವನ್ನು ಸರ್ಕಾರದವರು ಒಪ್ಪಿ ಆ ಬಗ್ಗೆ ಒಂದು ಯೋಜನೆಯನ್ನು ತಯಾರಿಸುತ್ತಿರುವರೆಂದು ತಿಳಿದುಬಂದಿದೆ.

○ ಫಾರೆಸ್ಟ್ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಬಿ ಎಲ್ ಸಾಕಿಯವರು ಬರುವ ಮಾರ್ಚ್ ತಿಂಗಳಿನಿಂದ ನಿವೃತ್ತರಾಗುವ ಮುನ್ನ ರಜಾ ಪಡೆಯುವರೆಂದು ತಿಳಿದುಬಂದಿದೆ

○ ಶ್ರೀ ಹೆಚ್ ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಭೂಸುಧಾರಣಾ ಸಮಿತಿಯ ಪ್ರಥಮ ಸಭೆಯು ಈ ದಿನ ನಡೆಯಿತು

ಕಾಂಗ್ರೆಸ್ ನಾಯಕರು ಕಂಟ್ರೋಲ್ ಸಾಮಾನು ಮಾರಕೂಡದು

ಅಧಿಕಾರ ಸ್ಥಾನದಲ್ಲಿರುವ ಕಾಂಗ್ರೆಸ್ಸಿನವರು ಮತ್ತು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದವರೂ ಹತೋಟಿ ಇರುವ ಪದಾರ್ಥಗಳನ್ನು ಮಾರುವ ಬಗ್ಗೆ ಲಾಭದಾರಿ ಪಡೆಯಲು ನಿಷೇಧ ಹಾಕಬೇಕೆಂದು ಮದರಾಸ್ ಪ್ರಾಂತ್ಯದ ಶಮಿಳು ನಾಡು ಕಾಂಗ್ರೆಸ್ ಸಮಿತಿಯ ಸಭೆಯವರು ಮೊನ್ನೆ ದಿನ ತೀರ್ಮಾನಿಸುತ್ತಾರೆ. ಅಂತಹ ವ್ಯಾಪಾರದಲ್ಲಿ ತೊಡಗಿರಬೇಕೆನ್ನುವವರು ಕೂಡಲೇ ತಮ್ಮ ಅಧಿಕಾರ ಸ್ಥಾನಕ್ಕೆ ರಾಜೀನಾಮೆ ಕೊಡತಕ್ಕದ್ದು.

ಕಾಂಗ್ರೆಸ್ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನದಲ್ಲಿರುವ ವಕೀಲರುಗಳು ಆಹಾರ ಧಾನ್ಯಗಳ ಹತೋಟಿ, ರಹದಾರಿ ಇವೇ ಮುಂತಾದ ವ್ಯವಹಾರಗಳಲ್ಲಿ ಜಾರಿ ನಿರೋಧ ಮತ್ತು ಕಾಳಸಂತೆಗೆ ಸಂಬಂಧಪಟ್ಟ ಅಪರಾಧಗಳ ವಾದಿಸಲು ಯಾವ ಬಗೆಯ ... ಸಲೂ ಕೊಡಬಾರದೆಂದೂ ಸೂಚನೆ ಕೊಡಲಾಗಿದೆ

ಟ್ರಸ್ಟ್ ಬೋರ್ಡ್ ಇಂಜನಿಯರ ವರ್ಗ

ಮೈಸೂರು ೧೮

ಮೈಸೂರು ಟ್ರಸ್ಟ್ ಬೋರ್ಡ್ ಇಂಜನಿಯರಾದ ಶ್ರೀ ಕೆ. ಜಿ. ಶಾಸ್ತ್ರಿಯವರನ್ನು ಮೈಸೂರು ಇರಿಗೇಷನ್ ಶಾಖಾ ಸೂಪರಿಂಟೆಂಡಿಂಗ್ ಇಂಜನಿಯರ ಪರ್ಸನಲ್ ಅಸಿಸ್ಟೆಂಟಾಗಿಯೂ, ಬೆಂಗಳೂರು ಪಟ್ಟಣ ಶಾಖಾ ಎ॥ ಇಂಜನಿಯರಾದ ಶ್ರೀ ಬಿ. ಎಸ್ ನಾರಾಯಣಸ್ವಾಮಿಯವರನ್ನು ಮೈಸೂರು ಟ್ರಸ್ಟ್ ಬೋರ್ಡ್ ಇಂಜನಿಯರನ್ನಾಗಿಯೂ ವರ್ಗಾಯಿಸಲಾಗಿದೆ

● ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ರಾಮಪುರದ ಒಬ್ಬ ಆಗಸರವನ ಹಸುವನ್ನು ... ಕತ್ತಿಯಿಂದ ಕಡಿದು ... ಸೇ ಹಿಂದೆ ನಿನ್ನೆ ... ನನ್ನು ... ಆತ

ನೇಪಾಳದಲ್ಲಿ ಸತ್ಯಾಗ್ರಹ

ನೇಪಾಳದ ನೂತನ ರಾಜ್ಯಾಂಗದ ಪ್ರಕಾರ ಜನರಿಗೆ ಕೊಟ್ಟಿರುವ ಹಕ್ಕುಗಳನ್ನು ನೋಟಕವು ಮಾಡಿರುವುದನ್ನು ಪ್ರತಿಭಟಿಸಲು ಅಲ್ಲಿನ ಪ್ರಜಾ ಕಾಂಗ್ರೆಸ್ ಸಂಸ್ಥೆಯುವರು ಸತ್ಯಾಗ್ರಹವನ್ನು ಹೂಡಿರುವರೆಂದೂ, ಈ ಸಂಬಂಧದಲ್ಲಿ ೧೫೦ ಜನರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ. ಒಬ್ಬ ಸತ್ಯಾಗ್ರಹಿಯನ್ನು ಹೊಡೆದು ಪೋಲೀಸರು ಸಾಯಿಸಿದರೆಂದೂ ವರದಿಯಾಗಿದೆ

ಅಮೆರಿಕ ಸ್ಪೇನ್ ಸಹಕಾರ

ಎ ಪಿ ಎ] ವಾಷಿಂಗ್‌ಟನ್ ೧೫

ಅಮೆರಿಕದ ಅಧ್ಯಕ್ಷ ಟ್ರೂಮನ್‌ರವರಿಗೂ ಸ್ಪೇನಿನ ಫ್ರಾಂಕೋರವರಿಗೂ ಸ್ನೇಹ ಮತ್ತು ಸಹಕಾರದ ಬಗ್ಗೆ ಒಂದು ಗುಪ್ತ ಒಪ್ಪಂದವಾಗಿರುವುದು ಈಗ ಬಹಿರಂಗವಾಗಿದೆ. ಹಿಂದಿನ ಯುದ್ಧದಲ್ಲಿ ಇದ್ದಂತೆ ಈಗ ಸ್ಪೇನು ತಟಸ್ಥವಾಗಿರದೆ, ಅಮೆರಿಕಕ್ಕೆ ಸಹಾಯಕವಾಗಿರುವುದೆಂದೂ, ಇದಕ್ಕಾಗಿ ಅಮೆರಿಕವು ಸ್ಪೇನಿಗೆ ಆರ್ಥಿಕ ನೆರವು ನೀಡುವುದೆಂದೂ ಹೇಳಲಾಗಿದೆ

ಜನಾನುರಾಗಿಯಾಗಿದ್ದ ಅಧಿಕಾರಿಗಳು

ಮೈಸೂರು ಸಿಟಿ ರೇಷನಿಂಗ್ ಅಧಿಕಾರಿಗಳಾಗಿದ್ದ ಶ್ರೀಮಾನ್ ಶ್ರೀನಿವಾಸಲು ನಾಯ್ಡುರವರಿಗೆ ಬೇರೆ ಕೆಲಸಕ್ಕೆ ವರ್ಗವಾಗಿ ಹೋಗುತ್ತಾರೆಂಬ ಸಂಗತಿ ಕೇಳಿ ಎಲ್ಲರೂ ವ್ಯಸನ ಪಡುತ್ತಾರೆ. ಇವರು ಬಹಳ ಜನೋಪಕಾರಿಗಳೂ, ಧರ್ಮಿಷ್ಠರೂ ಆಗಿದ್ದು ಬಡವರ ವಿಷಯದಲ್ಲಿ ಇವರು ಹೆಚ್ಚು ಕರುಣೆ ತೋರಿ ಸಹಾಯಮಾಡುತ್ತಿದ್ದರು. ಯಾರು ಹೋದರೂ ಅವರ ಕಷ್ಟಸುಖಗಳನ್ನು ಅತ್ಯಂತ ವಿಶ್ವಾಸದಿಂದ ವಿಚಾರಿಸಿ ಕೂಡಲೇ ನ್ಯಾಯವಾದ ಸಹಾಯ ಮಾಡುತ್ತಿದ್ದರು. ಇವರಿಗೆ ದೇವರು ಎಲ್ಲ ವಿಧದಲ್ಲಿಯೂ ಅಭಿವೃದ್ಧಿ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಟಿ ವೆಂಕಟಸುಬ್ಬಯ್ಯ

ಪಠಾಣ ರಜಾಕರನ ದಾಂಧಲೆ

ಎ ಪಿ ಎ] ಔರಂಗಾಬಾದ್ ೧೫

ಖಾನಲಾಂ ಖಾನ್ ಎಂಬ ಪಠಾಣ್ ರಜಾಕರನು ಇನ್ನೂ ವಿಲಿಟರಿಯವರ ಕೈಗೆ ಸಿಕ್ಕದೆ ಅನೇಕ ಹಳ್ಳಿಗಳಲ್ಲಿ ಲೂಟಿ ನಡೆಸುತ್ತಿದ್ದಾನೆಂದೂ ಅವನು ಹಲವು ಹಿಂದೂಗಳನ್ನು ಕೊಲೆ ಮಾಡಿ, ಕಳೆದ ೧೫ ದಿವಸಗಳಲ್ಲಿ ೨೧ ಹಿಂದೂ ಹೆಂಗಸರನ್ನು ಅಪಹರಿಸಿದ್ದಾನೆಂದೂ ವರದಿಯಾಗಿದೆ. ಪರಭಾಣಿ ಜಿಲ್ಲೆಯಲ್ಲಿ ಈತನು ಮತ್ತು ಅವನ ಅನುಯಾಯಿಗಳ ದಾಂಧಲೆಯು ನಡೆಯುತ್ತಲೇ ಇದೆಯೆಂದೂ ಬೆಂಕಪುರ ಗುಡ್ಡವೇ ಅವನ ಕೇಂದ್ರವೆಂದೂ ಹೇಳಲಾಗಿದೆ.

ಶ್ರೀ ಸರಸ್ವತಿ ಸಂಗೀತ ಸಮಾಜ (ರಿ)

ಮೈ ಸೂ ರು

ನಾಳೆ ನಡೆಯುವ ಶ್ರೀ ಶೆಮ್ಮಂಗುಡಿ

ಶ್ರೀನಿವಾಸ ಅಯ್ಯರ್

ರವರ ಸಂಗೀತ ಕಛೇರಿಯನ್ನು

ಸಾರ್ವಜನಿಕರ ಸೌಕರ್ಯಕ್ಕಾಗಿ ಸಂಜೆ 5-30 ಗಂಟೆಯಿಂದ 6 ಗಂಟೆಗೆ ಬದಲಾಯಿಸಿದೆ

(2) ಕಲಾಭಿಮಾನಿಗಳ ಅನುಕೂಲಕ್ಕಾಗಿ ಎಂಟಾಣೆ ತರಗತಿಯ ಟಿಕೆಟ್ಟುಗಳನ್ನೂ ಮಾರಲಾಗುವುದು

(3) ಟಿಕೆಟ್ಟುಗಳು ಟೌನ್‌ಹಾಲ್ ಬಳಿ ನಾಳೆ ಬೆಳಗ್ಗೆ 9 ರಿಂದ 12 ರವರೆವಿಗೂ ಮಧ್ಯಾಹ್ನ 3 ಗಂಟೆಯಿಂದಲೂ ದೊರೆಯುವುವು

(4) ಕೆಲವು ಮೆಂಬರುಗಳ ಸಂಪೂರ್ಣ ಅಡ್ರೆಸ್ಸು ದೊರೆಯದುದರ ಕಾರಣ ಸೆಂಬರ್ ಪಾಸನ್ನು ಅವರುಗಳು ಕಾರ್ಯದರ್ಶಿಯವರಲ್ಲಿ ಪಡೆಯಬಹುದು.

ಉಪವಾಸದ ಮೆರವಣಿಗೆ ಪ್ರದರ್ಶನ

ಎ ಪಿ ಎ] ಕಲ್ಕತ್ತಾ ೧೫

ಆಹಾರ ಧಾನ್ಯಗಳ ಬೆಲೆಯು ವಿಪರೀತವಾಗಿ ಏರಿ ಜನಗಳಿಗೆ ಆಹಾರ ಸಿಕ್ಕದೆ ಕಷ್ಟ ಪಡುತ್ತಿರುವುದನ್ನು ನಿವಾರಿಸಲು ಸರ್ಕಾರದವರು ಸುಲಭ ಬೆಲೆಗೆ ಸಿಕ್ಕುವ ಧಾನ್ಯಗಳ ಅಂಗಡಿಗಳನ್ನು ತೆರೆಯಬೇಕೆಂದು ಕೋರಲು ಇಲ್ಲಿನ ಜನರು ಉಪವಾಸದ ಮೆರವಣಿಗೆ ಪ್ರದರ್ಶನ ನಡೆಸಿದರೆಂದೂ ಈ ಬಗ್ಗೆ ನಗರದಲ್ಲಿ ಹರತಾಳವನ್ನು ಆಚರಿಸಲಾಯಿತೆಂದೂ ವರದಿಯಾಗಿದೆ.

Mysore City Municipality

NOTICE

Sealed tenders will be received up to 1 p m on 25 11 48 by the Municipal Engineer for providing a Public urinal in Jalapuri for the use of Adijambavas. Each tender must be accompanied with a challan for having remitted Rs. 65 to the Municipal Treasury as earnest money. For full particulars please see the notification on the Office Notice Board

V K MUKUNDAN,
Municipal Engineer.

ಪ್ರತಿ ದಿನ ಮೂರು ಆಟಗಳು

18-11-48ನೇ ಗುರುವಾರದಿಂದ

ಅಜಿತ್ ಪಿಕ್ಚರ್ಸ್‌ರವರ

ಗುಣ ಸುಂದರಿ

(ಹಿಂದಿ)

ಪಾತ್ರ:- ನಿರೂಪ ರಾಯ್, ಮನಹರ ದೇಸಾಯ್ ಮತ್ತಿತರರು

ಒಲಿಂಪಿಯಾ ಟಾಕೀಸ್

|| ಶ್ರೀ ||

ಚಾಮುಂಡೇಶ್ವರೀ ಟಾಕೀಸ್

17-11-48 ರಿಂದ

ಪ್ರತಿದಿನ 3 ಪ್ರದರ್ಶನಗಳು

ಭಾಯಿ ಜಾನ್

(ಹಿಂದಿ)

-:ಭೂಮಿಕೆ:-

ನೂರ್ ಜಹಾನ್, ಮೀನಾ, ಕರನ್ ದಿವಾನ್ ಮತ್ತು ಷಾ ನವಾಜ್

RAJKAMAL, MYSORE

Morning Shows from 19-11-48 for 4 days only

The Bachelor's Daughters

. With .

Gail Russel, Claire Trevor, Adolphe Menjou

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

ತಾ|| 18-11 48 ರಿಂದ

4 ದಿನಗಳು ಮಾತ್ರ

ಸಾನ್ - ಡಿ ಅಂಟೋನಿಯೋ

SAN ANTONIO

ವಾರ್ನರ್ಸ್‌ರವರ ಸಾಹಸಮಯ ವರ್ಣ ರಂಜಿತ ಚಿತ್ರ

Morning Shows at 10-30 From 19-11-48 for 3 days

How Green Was My Valley

ಹಾಲಿವುಡ್ ಸಿಟಿ, ಜೀವಣ್ಣರಾಯನ ಕಟ್ಟೆ, ಮೈಸೂರು

ಪ್ರತಿ ದಿನ ಸಾಯಂಕಾಲ 6 ಘಂಟೆಗೆ :-

ಪ್ರವೇಶ ದರ - ಭಾನುವಾರ 0—3—6, ಇತರ ದಿನಗಳು 0—2—0

ಪ್ರದರ್ಶನಗಳು.- ಪ್ರಾಣಿಗಳಿಲ್ಲದ ಸರ್ಕಸ್, ಸುತ್ತಿಸುತ್ತ ಹಾಡುವವರು ಮತ್ತು ನೃತ್ಯಗಾರರು, ಸವಾರಿ ಮೋಸಿನಾಟದ ವಿಮಾನ, ಪ್ರೊ|| ಭೂಪಾಲರಾವ್‌ರವರ ಅದ್ವಿತೀಯ ಮ್ಯಾಜಿಕ್ ಶೋ ಮತ್ತು ಪ್ರದರ್ಶನಗಳು ಬದಲಾವಣೆಯಾಗಬಹುದು

ತಾ|| 14-11-48 ನೇ ದಿವಸ ಪ್ರಥಮ ಬಹುಮಾನವನ್ನು ಕೆ ಶೇಷಮೂರ್ತಿ, 2009, ೩, ಸುಬ್ಬಯ್ಯನ ಬೀದಿ, ಮೈಸೂರು, ಇವರು ಪಡೆದರು

ಧಾನ ವಿಂಡ ತಾ|| 21-11 1948.-

ಪ್ರವೇಶದ ಟಿಕೆಟ್ಟಿನ ಮೇಲೆ ಒಟ್ಟು ಬಹುಮಾನ 175 ರೂಪಾಯಿಗಳು

1ನೇ ಬಹುಮಾನ 100 ರೂ.ಗಳು 2ನೇ ಬಹುಮಾನ 20 ರೂ, 3ನೇ ಬಹುಮಾನ 15ರೂ, 4ನೇ ಬಹುಮಾನ 10 ರೂ, 5ನೇ ಬಹುಮಾನ 10 ರೂ, 6ನೇ ಬಹುಮಾನ 10 ರೂ 7 ನೇ ಬಹುಮಾನ 10 ರೂ. ಒಟ್ಟು ಬಹುಮಾನ 175 ರೂ.ಗಳು

ಪ್ರವೇಶ ದರ 0—3—6

ಬಹುಮಾನಗಳನ್ನು ಸೋಮವಾರ ಸಂಜೆ 6 ಘಂಟೆಯವರೆವಿಗೆ ಪಡೆಯಬಹುದು.

ಎಲ್ ಹರಿ ಶರನ್, ಮ್ಯಾನೇಜಿಂಗ್ ಡೈರೆಕ್ಟರ್

ಪ್ರತಿ ದಿನ ಮೂರು ಆಟಗಳು

19-11-48ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ರಾಜಕಮಲ್ ಟಾಕೀಸಿನಲ್ಲಿ

ಭಾ ಭಾರತಿ

ಭೂಮಿಕೆ:- ಸೂರ್ಯ ಕುಮಾರಿ ರಾಜ ಕುಮಾರಿ, ಸಂಪತ್ ಕೃಷ್ಣಸ್ವಾಮಿ (Courtesy, Mysore University)

ನೃತ್ಯ:- ಲಲಿತ ಮತ್ತು ಪದ್ಮಿನಿ

"ಹೊಸ ಯೌವನ ಬಂದಿತೆ ಕಣ್ಣು ತೋರಿ ನಾನೇನೆ ಹಾಡಿದರೂ ಬೇಡ ಪ್ರಿಯ" ಇದಕ್ಕೆ ಉತ್ತರ

ಕನ್ನಡ ಸಾಮಾಜಿಕ ಚಿತ್ರ

ಭಾ ರ ತಿ

ಚಿತ್ರದಲ್ಲಿ ನೋಡಿರಿ

೧೯-೧೧-೪೮ರಿಂದ ಬೆಂಗಳೂರು ಸೂಪರ್ ಮತ್ತು ಸ್ವಸ್ತಿಕ್ ಟಾಕೀಸುಗಳಲ್ಲಿ ಎರಡನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ

A MAHAVEER Release

ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶುಕ್ರವಾರ ೧೯-೧೧-೪೮ [ಸಂಚಿಕೆ ೧೨೫

ಅಮೆರಿಕದ ಸಹಾಯಕ್ಕೆ ಚೀಣಾ ಅಧ್ಯಕ್ಷರ ಮೊರೆ

ಭಾಷಾವಾರು ಪ್ರಾಂತ್ಯದಿಂದ ಐಕ್ಯಕ್ಕೆ ಧಕ್ಕೆ ತಗಲದು

ಶ್ರೀ ಜಹಗೀರ್ದಾರರ ಭಾಷಣ

ಮೈಸೂರು ೧೮

...ಗ್ರೀಡ್ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ...ವು ನೆನ್ನೆಗೆ ಮುಕ್ತಾಯವಾಯಿತು. ಶ್ರೀ ಗ. ಸ. ಹಾಲಪ್ಪನವರು ಅಧ್ಯಕ್ಷರು.

...ಟಕದ ಪ್ರಸಿದ್ಧ ಸಾಹಿತಿಗಳಾದ ...ಎ. ಜಹಗೀರ್ದಾರರು ಭಾಷಣ ಮಾಡುತ್ತ ಭಾರತ ಭೂಮಿಯಲ್ಲಿ ಅನೇಕಗಳಿಂದ ಯಾವುದಾದರೊಂದು ನೆ... ಜನರು ಹೋರಾಟ ನಡೆಸುತ್ತಿರು..., ಈಗ ಭಾಷಾವಾರು ಸಮಸ್ಯೆ ಅ...ಗಿರುವುದು ನ್ಯಾಯವಲ್ಲವೆಂದೂ, ...ಪ್ರಾಂತ್ಯದ ರಚನೆಯಾಗುವುದರಿಂದ ಐಕ್ಯ ಯಾವ ಚ್ಯುತಿಯೂ ಬರುವುದಿಲ್ಲ ಎಂದೂ ಅವರು ತಿಳಿಸಿದರು.

...ದಲ್ಲಿ ಪ್ರಗತಿಯು ಚಿಕ್ಕದಾಯಿತು, ಒಂ...ಯ ಜನರು ತಮ್ಮದೇ ಆದ ಪ್ರಾಂ...ರ್ಮಾಣ ಮಾಡಿಕೊಂಡು ಗಾಢವಾ...ಸುವುದರಿಂದ ಕಂಡು ಬರುವುದೆಂ... ಅವರು ಹೇಳಿದರು.

...ದ ನಾಡು ಮಹಾತ್ಮ ಗಾಂಧೀಜಿಯ ನಾಯಕತ್ವವನ್ನು ನಂಬಿ ಭಾರತದ ...ತ್ರ್ಯ ಹೋರಾಟದಲ್ಲಿ ಭಾಗವಹಿಸಿದು...ದೇ ನುಡಿಯ ಆಧಾರದ ಮೇಲೆ ...ಸ್ಸು ಭಾಷಾವಾರು ಪ್ರಾಂತ ನಿರ್ಮಾ...ಟ್ಟಿದ್ದರಿಂದ ಪರಾಕ್ರಮ ಸಾಧ್ಯವಾಯಿತು.

ಭಾಷಾವಾರು ಪ್ರಾಂತದಲ್ಲಿ ಜಾತೀಯ...ಗೆ ಎಡೆಯುಲ್ಲವೆಂದೂ, ಭಾಷಾವಾ...ಪ್ರಾಂತ ನಿರ್ಮಾಣವಾಗುವುದರಿಂದ ಅ... ಭಾರತದ ಸ್ವಾತಂತ್ರ್ಯಕ್ಕೆ ಸ್ವಲ್ಪವೂ ...ಗುಲುವುದಿಲ್ಲವೆಂದೂ; ದೇಶದ ಅ...ಯಾಗಿ, ಸಂಪತ್ತು ಹೆಚ್ಚಲು ಒಂ...ಡಿಯಾದ ವ ಜನರು ಪರಸ್ಪರ ವ್ಯ...ದ ಇರಬೇಕೆಂದೂ, ಶ್ರೀ ಜಹಗೀರ್ದಾರ ನುಡಿದರು. ಅಧ್ಯಕ್ಷರಾದ ...ಹಾಲಪ್ಪನವರು ಶಾಸನಾತ್ಮಕ ಅಥವಾ ...ತ್ಮಕ ಮತ್ತು ರಾಜಕೀಯ ದೃಷ್ಟಿ... ಕನ್ನಡನಾಡಿನ ರಚನೆ ಅಗತ್ಯವೆಂ...ಈ ದೇಶದ ಇಂದಿನ ನಾಯಕರುಗಳ... ...ನಲ್ಲಿ ಇದು ನಡೆಯುವುದು ಯುಕ್ತ...

...ದಕ್ಕೆ ಅಮೆರಿಕದ ಸಹಾಯವೇ ?

...ದಕ್ಕೆ ಒದಗಿರುವ ಗಂಡಾಂತರದ ...ನೆ ಮಾಡಬೇಕೆಂದು ಅದರ ಅಧ್ಯಕ್ಷ ...ಯಾಂಗ್ ಕೈ-ಶೇಕ್‌ರವರು ಅಮೆರಿ...ಮನವಿ ಮಾಡಿರುವರೆಂದೂ, ಈ ... ಅಧ್ಯಕ್ಷ ಟ್ರೂಮನ್‌ರವರು ಚಿಯಾಂ...ಜೊತೆ ನೇರ ವ್ಯವಹಾರ ನಡೆಸು...ವೆಂದೂ ಹೇಳಲಾಗಿದೆ.

...ದ ರಾಜಧಾನಿಯಾದ ನಾನ್‌ಕಿಂಗಿ...೦ ಮೈಲಿ ದೂರದ ಪ್ರಮುಖ ಕೇಂ...ದ ಸೂಚೌ ನಗರದಮೇಲೆ ಕ...ನಿಸ್ಟರು ಪುನಃ ಭಾರಿ ದಾಳಿಯನ್ನು ...ಭಿಸಿದ್ದಾರೆ. ಈ ಪ್ರದೇಶದಲ್ಲಿ ಕ...ನಿಸ್ಟರಿಗೆ ವಿಶೇಷ ನಷ್ಟವುಂಟಾಗಿದೆ... ಹೇಳಲಾಗಿದೆ.

ಪಡುವಾರಹಳ್ಳಿ ಗ್ರಾಮ ಸೇವಾ ಸಂಘ

ಮೈಸೂರು ೧೮

ಮೇಲ್ಕಂಡ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ಭಾನುವಾರ ಶ್ರೀ|| ಸಿ. ಜೆ. ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಲಾಯಿತು

ಪಡುವಾರ ಹಳ್ಳಿಯ ನಿವಾಸಿಗಳ ಸೌಕರ್ಯಕ್ಕಾಗಿ ಇರ್ವಿನ್ ರಸ್ತೆಯ ಪಕ್ಕದಲ್ಲಿ ಈಗ ಏರ್ಪಡಿಸಲಾಗುತ್ತಿರುವ ಬಡಾವಣೆಯಲ್ಲಿ ನಿವೇಶನಗಳನ್ನು ರಿಯಾಯಿತಿ ದರದ ಮೇಲೆ ಕೊಡಿಸಿ ಕೊಡಬೇಕೆಂದು ಟ್ರಸ್ಟ್ ಬೋರ್ಡಿನವರನ್ನು ಪ್ರಾರ್ಥಿಸುವುದು. ಭೂದೇವಿ ಥಿಯೇಟರ್ ಹಿಂಭಾಗದ ಸ್ಥಳವನ್ನು ಅಲ್ಲಿನ ನಿವಾಸಿಗಳ ಹಿತ್ತಲುಗಳಿಗಾಗಿ ಕೊಡಿಸಬೇಕೆಂದು ಪ್ರಾರ್ಥಿಸುವುದು; ಕುಕ್ಕರಹಳ್ಳಿ ಹೊರ ಅಂಗಳವನ್ನು ಗೋಮಾಳಕ್ಕಾಗಿ ಕೊಡಿಸಿ ಕೊಡಬೇಕೆಂದು ಕೋರುವುದು; ಬಸವೇಶ್ವರ ಮತ್ತು ಗ್ರಾಮ ದೇವತೆಯ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿ ಕೊಡಬೇಕೆಂದು ಬೇಡುವುದು; ಗ್ರಾಮದ ಪ್ರಾಥಮಿಕ ಶಾಲೆಗೆ ಸ್ವಂತ ಕಟ್ಟಡ ಕಟ್ಟಿಸಿಕೊಡುವುದಲ್ಲದೆ ಮಾಧ್ಯಮಿಕ ಶಾಲೆಗೆ ಅನುಮತಿ ಕೊಡಬೇಕೆಂದೂ ಮತ್ತು ನೀರು ಸರಬರಾಜು ಒಳ ಚರಂಡಿ ಮತ್ತು ರಸ್ತೆಗಳ ಸೌಕರ್ಯವನ್ನು ಶೀಘ್ರದಲ್ಲಿ ಉತ್ತಮ ಪಡಿಸಬೇಕೆಂದು ಪ್ರಾರ್ಥಿಸುವುದು

ಪತಿಯ ಖಾಯಿಲೆಗೆ ಹೆದರಿ ಪತ್ನಿಯ ಆತ್ಮಹತ್ಯೆ

ಮಂಡ್ಯ ೧೮

ಇಲ್ಲಿನ ಜಿಲ್ಲಾ ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಹೆಚ್. ಸಿ. ನರಸಿಂಹಯ್ಯಂಗಾರ್ಯರವರು ನ್ಯೂಮೋನಿಯಾ ಖಾಯಿಲೆಯಿಂದ ನರಳುತ್ತಿದ್ದುದರಿಂದ ಅವರ ಖಾಯಿಲೆಯು ಗುಣವಾಗುವ ಸಂಭವವಿಲ್ಲವೆಂದು ಹೆದರಿ, ಅವರ ಪತ್ನಿ ಶ್ರೀಮತಿ ನಾಗಮಣಿಯವರು ಕಳೆದ ೧೬ನೇ ತಾ|| ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ. ಅವರಿಗೆ ನಾಲ್ಕು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ. ಶ್ರೀ ನರಸಿಂಹಯ್ಯಂಗಾರ್ಯರು ಈಗ ಮಂಡ್ಯದ ಆಸ್ಪತ್ರೆಯಲ್ಲಿ ಗುಣಮುಖರಾಗುತ್ತಿದ್ದಾರೆ

ನೆಹರೂರವರು ಮೈಸೂರಿಗೆ ಬರುವುದಿಲ್ಲವೇ ?

ಮೈಸೂರು ೧೮

ಇತ್ತೀಚೆಗೆ ಬಂದಿರುವ ಸುದ್ದಿಯ ಪ್ರಕಾರ ಪಂಡಿತ ಜವಹರಲಾಲ್ ನೆಹರೂರವರು ಮೈಸೂರಿಗೆ ಭೇಟಿ ಕೊಡುತ್ತಿಲ್ಲವೆಂದೂ, ಬೆಂಗಳೂರಿಗೆ ಡಿಸೆಂಬರ್ ೨೭ ನೇ ತಾ|| ಸಂಜೆ ಆಗಮಿಸಿ ಮಾರನೇ ದಿನ ಮಧ್ಯಾಹ್ನ ದೆಹಲಿಗೆ ವಾಪಸು ತೆರಳುವರೆಂದೂ ತಿಳಿದು ಬಂದಿದೆ. ಅದೇ ದಿನ ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವವನ್ನು ಬೆಂಗಳೂರಿನಲ್ಲೇ ನಡೆಸಬೇಕೆಂದೂ ಅವರು ಸೂಚಿಸಿರುವರೆಂದು ಹೇಳಲಾಗಿದೆ. ನೆಹರೂರವರು ಮೈಸೂರು ನಗರಕ್ಕೆ ಭೇಟಿ ಕೊಟ್ಟು, ಕೆ... ...ವನ್ನು ವೀಕ್ಷಿಸಬೇಕೆಂದು, ದೆಹಲಿಗೆ ಈ ತಿಂಗಳಿನ ಕೊನೆಯ ವಾರದಲ್ಲಿ ಭೇಟಿ ಕೊಡಲಿರುವ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಕೆ.ಟಿ. ಭಾಷ್ಯಂರವರುಗಳು ಅವರನ್ನು ಒತ್ತಾಯಪಡಿಸುವರೆಂದೂ ತಿಳಿದುಬಂದಿದೆ

೨೫೦ ರೂ.ಗೆ ಮೇಲ್ಪಟ್ಟ ಸಂಬಳದವರಿಗೆ ತುಟ್ಟಿಭತ್ಯ ಇಲ್ಲ

ಸ್ವಂತ ಪ್ರತಿನಿಧಿ] ಬೆಂಗಳೂರು, ೧೮

೨೫೦ ರೂ ಗಿಂತ ಹೆಚ್ಚಿಗೆ ಸಂಬಳ ಪಡೆಯುವ ಅಧಿಕಾರಿಗಳಿಗೆ ತುಟ್ಟಿ ಭತ್ಯ ಕೊಡುವುದಿಲ್ಲವೆಂದೂ, ಇದು ರೈಲ್ವೆ ಇಲಾಖೆಗೂ ಅನ್ವಯಿಸುವುದೆಂದೂ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಗೋಪಾಲರಾಯರ ಬಿರುದಿನ ಪದಕ ಸರ್ಕಾರ ಕೊಳ್ಳುವುದು

ಶ್ರೀ ಗೋಪಾಲರಾಯರ ಧರ್ಮರಕ್ಷಕ ಎಂಬ ಬಿರುದಿನ ಪದಕವನ್ನು ಅವರ ಆಸ್ತಿಗಳ ಸಂಗಡ ಹರಾಜು ಮಾಡಬಾರದೆಂದು ಅರಮನೆಯವರು ಅಭಿಪ್ರಾಯ ಪಟ್ಟಿರುವರೆಂದೂ, ಆದುದರಿಂದ ಅದನ್ನು ಸರ್ಕಾರದವರೇ ಕೊಂಡು ಕೊಳ್ಳುವರೆಂದೂ ಹೇಳಲಾಗಿದೆ. ಬಿರುದನ್ನು ಈಗ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳಿಗೆ ಕೋರ್ಟಿನವರು ಕಳುಹಿಸಿರುತ್ತಾರೆ

ಕಮ್ಯೂನಿಸ್ಟರವರ ಗಡೀಪಾರು ಆಜ್ಞೆ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಂಧಿತರಾಗಿದ್ದು ಇತ್ತೀಚೆಗೆ ಬಿಡುಗಡೆಯಾದ ಕಮ್ಯೂನಿಸ್ಟರಾದ ಶ್ರೀ ಕೆ. ಜಿ ಮೊಂಡ... ...ರವರನ್ನು ಸಂಸ್ಥಾನದಿಂದ ಗಡೀಪಾರು ಮಾಡಲಾಗಿದೆಯೆಂದೂ ಅವರು ... ...

ಹೆರಿಗೆ ಆಸ್ಪತ್ರೆಯ ಆರಂಭೋತ್ಸವ

ದುಗ್ಗಟ್ಟಿ ಪುಟ್ಟಲಿಂಗಪ್ಪನವರ ಔದಾರ್ಯ

ಯಳಂದೂರು ೧೮

ಶ್ರೀ ದುಗ್ಗಟ್ಟಿ ಪುಟ್ಟಲಿಂಗಪ್ಪನವರು ತಮ್ಮ ತಾಯಿ ಪಾರ್ವತಮ್ಮನವರ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಹೆರಿಗೆ ಆಸ್ಪತ್ರೆಯ ಆರಂಭೋತ್ಸವವನ್ನು ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ದಿನ ನೆರವೇರಿಸಿದರು. ಇದಕ್ಕಾಗಿ ದೊಡ್ಡ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮೈಸೂರಿನಿಂದ ಅನೇಕ ಕಾಂಗ್ರೆಸ್ ನಾಯಕರುಗಳೂ ಅಧಿಕಾರಿ ವರ್ಗದವರೂ ಇತರ ಅನೇಕ ಮಹನೀಯರುಗಳೂ ದಯಮಾಡಿಸಿದ್ದರು.

ಸ್ವಾಗತ ಗೀತೆಯನಂತರ, ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮುಖ್ಯ ಮಂತ್ರಿಗಳಿಗೆ ಸ್ವಾಗತವನ್ನು ನೀಡಿ ಪ್ರಜಾ ಸರ್ಕಾರದಿಂದ ಆಗುತ್ತಿರುವ ಕಾರ್ಯಗಳನ್ನು ವಿವರಿಸಿದರು. ಶ್ರೀ ಪುಟ್ಟಲಿಂಗಪ್ಪನವರು ತಮ್ಮ ಪರವಾಗಿಯೂ, ಶ್ರೀ ನಂಜುಂಡಸ್ವಾಮಿಯವರು ಪೌರಸಭೆಯ ಪರವಾಗಿಯೂ, ಶ್ರೀ ಎ. ಶ್ರೀನಿವಾಸಾಚಾರ್ಯರು ತಾಲ್ಲೂಕು ನಿವಾಸಿಗಳ ಪರವಾಗಿಯೂ ಪ್ರಧಾನಿಗಳಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು.

ಶ್ರೀ ಚೆಂಗಲರಾಯರೆಡ್ಡಿಯವರು ಭಾಷಣ ಮಾಡಿ, ಪ್ರಜಾ ಸರ್ಕಾರವು ಸುಭದ್ರವಾಗಲು ಸಮಸ್ತ ಜನತೆಯ ಸಹಕಾರವು ಸಂಪೂರ್ಣವಾಗಿ ಬೇಕೆಂದು ಹೇಳಿದರು. ಯಳಂದೂರು ತಾಲ್ಲೂಕಿನ ... ಕೆರೆಗಳ ದುರಸ್ತಿ ... ... ಕೆರೆಗಳ ... ... ಕೂಡಲೇ ಕೈಗೊಳ್ಳುವುದಾಗಿ ತಿಳಿಸಿದರು. ಮತ್ತು ಯಳಂದೂರಿಗೆ ಬೇಗನೆ ವಿದ್ಯುಚ್ಛಕ್ತಿಯ ಸೌಲಭ್ಯ ದೊರಕಿಸಲಾಗುವುದೆಂದೂ ಹೇಳಿದರು.

ಮುಂದಿನ ತಿಂಗಳಿನಿಂದ ಎಲ್ಲರಿಗೂ ನಿಯಮಿತವಾದ ಬೆಲೆಗೆ ಬಟ್ಟೆಯು ಒದಗುವಂತೆ ಮಾಡಲಾಗುವುದೆಂದು ಸೂಚಿಸಿದರು. ಹೊಸ ಆಹಾರದ ಪತ್ರಿಕೆ ... ಪ್ರಕಾರ ... ಎಕರೆಯುಳ್ಳ, ... ಎಕರೆ ಕೆರೆ ಕೆಳಗಿನ ... ಎಕರೆ ... ಇರುವವರಿಂದ ಆಹಾರದ ಉತ್ಪತ್ತಿಯ ಲೆಕ್ಕವನ್ನೂ ಸಹ ಕೇಳದೆ ಅದಕ್ಕೆ ಮೇಲ್ಪಟ್ಟ ಪ್ರಮಾಣವಿರುವವರಿಂದ ಮಾತ್ರ ... ಗಳನ್ನು ತೆಗೆದುಕೊಳ್ಳಲಾಗುವುದೆಂತಲೂ ಮತ್ತು ಮೇಲ್ಕಂಡ ಪ್ರಮಾಣಕ್ಕಿಂತ ಹೆಚ್ಚಾಗಿ ಬೆಳೆಯುವವರಿಂದಲೂ ಸಹ ಅವರ ಸ್ವಂತ ಉಪಯೋಗಕ್ಕೂ, ... ಕ್ಕೂ, ಆಳುಕಾಳುಗಳ ಕೂಲಿಗೂ ಬೇಕಾದಷ್ಟನ್ನು ಬಿಟ್ಟು ಉಳಿದ ಭತ್ತವನ್ನು ಮಾತ್ರ ಸರ್ಕಾರದವರು ತೆಗೆದುಕೊಳ್ಳುವರೆಂದೂ, ಅದಕ್ಕೆ ಪಲ್ಲ ಒಂದಕ್ಕೆ ... ರೂ. ನಂತೆ ಕೊಡುವುದಾಗಿಯೂ ಶ್ರೀ ರೆಡ್ಡಿಯವರು ತಿಳಿಸಿದರು.

ದುಗ್ಗಹಟ್ಟಿಯಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಕಟ್ಟಿಸುವುದಕ್ಕೂ ಮತ್ತು ಉಪಾಧ್ಯಾಯರುಗಳ ಬಡಾವಣೆಯನ್ನು ಕಟ್ಟಿಸಿಕೊಡುವುದಕ್ಕೂ ಸಹ ... ಸಾವಿರ ರೂ.ಗಳನ್ನು ದಾನ ಮಾಡುವುದಾಗಿ ಶ್ರೀ ಪುಟ್ಟಲಿಂಗಪ್ಪನವರು ವಾಗ್ದಾನ ಮಾಡಿದರು. ಅಲ್ಲದೆ ಮೇಲ್ಕಂಡ ಆಸ್ಪತ್ರೆಯಲ್ಲಿ ಜನಿಸುವ ಮೊದಲನೆಯ ಮಗುವಿಗೆ ೧೦೦ ರೂ. ಬಹುಮಾನ ಕೊಡುವುದಾಗಿಯೂ ಸಹ ತಿಳಿಸಿದರು

ವಂದೇ ಮಾತರಂ ಗೀತೆಯ ನಂತರ ಸಭೆ ... ...

ಜಪಾನು ಚಕ್ರವರ್ತಿಗಳ ಪದಚ್ಯುತಿ ಇಲ್ಲ

೭ ಕೋಟಿ ಜಪಾನಿನ ಜನರಿಗೆ ದೇವರೆಂತಿರುವ ಚಕ್ರವರ್ತಿಗಳು ಪದಚ್ಯುತರಾಗುವುದಿಲ್ಲವೆಂದು ಅಲ್ಲಿನ ಅಧಿಕಾರಿಗಳೊಬ್ಬರು ತಿಳಿಸುತ್ತಾರೆ. ಅವರು ಪದಚ್ಯುತರಾಗಬೇಕೆಂದು ಜಪಾನಿನ ಅತ್ರವೀಕ್ಷ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ.

ಐರ್ಲೆಂಡು ಬ್ರಿಟನ್ನಿನಿಂದ ಪ್ರತ್ಯೇಕವಾಯಿತು

ಬ್ರಿಟಿಷ್ ಸಾಮ್ರಾಜ್ಯದಿಂದ ಐರ್ಲೆಂಡು ಪ್ರತ್ಯೇಕವಾಗುವ ಮಸೂದೆಯು ಅಲ್ಲಿನ ಪಾರ್ಲಿಮೆಂಟ್ ಸಭೆಯಲ್ಲಿ ಕೇವಲ ೧೦ ನಿಮಿಷಗಳಲ್ಲಿ ಅಂಗೀಕರಿಸಲ್ಪಟ್ಟಿತು. ಇದರಿಂದ ಐರ್ಲೆಂಡು ಸಂಪೂರ್ಣ ರಿಪಬ್ಲಿಕ್ ಆಗುವುದು.

OPERA TALKIES

From 19—11—48

For 4 days only

Daily 3 Shows

A Night in - - Casablanca

With:- Mark Brothers

—: Morning Shows :—

From 19-11-48 for 4 days

Call of Tarzon

ಹಡಗು ಮುಳುಗಿ ೫೦೦ ಜನರು ಗಂಗೆ ಪಾಲು

ಪಾಟ್ನಾ ಪತ್ರಿಕೆಯ ಗಮ್ಯ ಸ್ಥಳದಲ್ಲಿ ಸೋನೆಪುರ ಜಾತ್ರೆಯ ಜನರನ್ನು ಸಾಗಿಸುತ್ತಿದ್ದ ಒಂದು ಹಡಗು ನಿನ್ನೆ ಗಂಗಾನದಿಯಲ್ಲಿ ಆಕಸ್ಮಿಕ ಮುಳುಗಿ ಸುಮಾರು ೫೦೦ ಜನರು ಜಲಸಮಾಧಿ ಹೊಂದಿದರೆಂದೂ ವರದಿಯಾಗಿದೆ. ೧೦೦ ಹಸು, ಎಮ್ಮೆ, ಎತ್ತು ಮತ್ತು ಕುದುರೆಗಳೂ ಮುಳುಗಿ ಹೋದವೆಂದೂ, ಹಡಗಿನಲ್ಲಿದ್ದ ಕೇವಲ ೩ ಜನರು ಮಾತ್ರ ಬದುಕಿದ್ದಾರೆಂದೂ ಹೇಳಲಾಗಿದೆ.

॥ಶ್ರೀ॥

ಗಣೇಶ ಟಾಕೀಸ್

19-11-48 ರಿಂದ

ಪ್ರತಿ ದಿನ ಮೂರು ಪ್ರದರ್ಶನಗಳು.

ಹರಿದಾಸ್

(ತಮಿಳು)

ಹೊಸ ಪ್ರಿಂಟು, ಪೂರ್ಣ ಪ್ರದರ್ಶಿತ ಚಿತ್ರ

ಪಾತ್ರ: ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿ ಮುನಿಸಿಪಲ್ ಹಾದಿ ಮನೆ ನಂಬರ್ ೬೫ ಬಾಡಿಗೆಗಿದೆ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ.

ಸಾಧ್ವಿ ಕಛೇರಿ, ಮೈಸೂರು

ಗ್ರಾಮಾಂತರ ರಸ್ತೆ ನಿರ್ಮಾಣಕ್ಕೆ ಹಣದ ಸಹಾಯ

ಬೆಂಗಳೂರು ೧೯

ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರದವರು ಈ ವರ್ಷ ಮಂಜೂರು ಮಾಡಿರುವ ೬ ಲಕ್ಷ ರೂ ವನ್ನು ಕೆಳಗೆ ಕಂಡಂತೆ ಹಂಚಲಾಗಿದೆ;—

ಬೆಂಗಳೂರು ನಗರ ೧೦ ಸಾವಿರ ರೂ. ಬೆಂಗಳೂರು ಜಿಲ್ಲೆ ೩೦ ಸಾವಿರ ರೂ, ಮೈಸೂರು, ಮಂಡ್ಯ, ಚಿಕ್ಕಮಗಳೂರು ತಲಾ ೨೦ ಸಾವಿರ ರೂ, ಹಾಸನ ೧೫ ಸಾವಿರ ರೂ ಚಿತ್ರದುರ್ಗ ಕೋಲಾರ ಮತ್ತು ತುಮಕೂರು ತಲಾ ೩೦ ಸಾವಿರ

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

ತಾ॥ 18-11-48 ರಿಂದ

4 ದಿನಗಳು ಮಾತ್ರ

ಸ್ಯಾನ್ - ಆಂಟೋನಿಯೋ

SAN ANTONIO

ವಾರ್ನರ್ಸ್‌ರವರ ಸಾಹಸಮಯ ವರ್ಣ ರಂಜಿತ ಚಿತ್ರ

Morning Shows at 10-30

From 19-11-48 for 3 days

How Green Was My Valley

Edited printed and published by A. R. Nagarajan of the Sadhvi Press D Subbaiah Road Mysore.

ಗ್ರಾಮಾಭಿವೃದ್ಧಿ ಕೇಂದ್ರ... ಕ್ಲೋಸ್‌ಪೇಟೆ, ದೊಡ್ಡಬಳ್ಳಾಪುರ ... ಆನಂದಪುರಂ ತಲಾ ೧೦ ಸಾವಿರ ... ಅಂಜನಾಪುರ ೨೦,೨೦೦ ರೂ

ವ್ಯವಸಾಯಾಭಿವೃದ್ಧಿಗೆ ಸಹಾಯ ... ಚನ್ನಗಿರಿ ತಾಲ್ಲೂಕು ಮಾವಿನ ... ಹಳ್ಳದ ಬಳಿ ಕೆರೆಯನ್ನು ಕಟ್ಟಲು ... ದವರು ೪,೬೦,೦೦೦ ರೂಗಳನ್ನು ... ರು ಮಾಡಿರುತ್ತಾರೆ. ಇದರಿಂದ ... ಎಕರೆ ಜಮೀನು ಸಾಗುವಳಿಗೆ ಬರುತ್ತದೆ.

ಸಂಗೀತ ಸ್ಪರ್ಧೆ ಬಹುಮಾನ ವಿನಿಯೋಗ

ಮೈಸೂರು ಸಂಸ್ಕೃತದ ಸಂಗೀತ ... ಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ... ಟೆಗೆ ಸಹಕಾರ ಭವನದಲ್ಲಿ ಮೈಸೂ... ಕೇಂದ್ರದ ಸಂಗೀತ ಸ್ಪರ್ಧೆಗಳಲ್ಲಿ ಜಯ... ಲರಾದವರಿಗೆ ಬಹುಮಾನ ವಿನಿಯೋಗ ... ಸಮಾರಂಭವು ಶ್ರೀ ಟಿ. ಎಸ್. ರಾ... ಪಾಲಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ... ಡೆಯುವುದು ಅದೇ ಸಂಜೆ ೫-೩೦ ... ಟೆಗೆ ಸಂಗೀತ ವಿದ್ವಾನ್ ವಿ ರಾಮ... ವರ ಸಂಗೀತವೂ ಜರುಗುವುದು.

ಮುಸ್ಲಿಂ ಪೋಲೀಸ್ ಅಧಿಕಾರಿಗಳ ದಸ್ತಗಿರಿ

ಕರಾಚಿಯ, ಡೆಪ್ಯೂಟಿ ಪೋಲೀಸ್ ... ರಿಂಟೆಂಡೆಂಟರಾದ ಇಸ್ಲಾರ್ ಹುಸೇ... ರವರು ಕೆಲವು ತಿಂಗಳುಗಳ ಹಿಂದೆ ... ಒಬ್ಬ ಹಿಂದೂವನ್ನು ಬಂದೂಕವನ್ನು ... ರಿಸಿ ಹೆದರಿಸಿ ಅವನಿಂದ ೩೫೦೦೦ ರೂ... ಹಣವನ್ನು ಪಿಕೂರಿ ನಡೆಸಿದರೆಂಬ ಆ... ದನೆಯ ಮೇಲೆ ಈಗ ಅವರನ್ನು ದಸ್ತಗಿರಿ ಮಾಡಲಾಗಿದೆ

-: ರಾಜಕಮಲ್ ಟಾಕೀಸ್, ಮೈಸೂರು :-

ಭಾರತಿ



ಭಾರತಿ

19-11-48 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

Entire Rights with SRI MAHAVEER FILM EXCHANGE, Mysore

ಕೋ.ಕಂ. 792 ॥ ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಶನಿವಾರ ೨೦-೧೧-೪೮ [ಸಂಚಿಕೆ ೧೪೦

ಈಜಿಪ್ಟ್ ದೊರೆ ಮತ್ತು -ರಾಣಿಯ ವಿಚ್ಛೇದನ-

ಡೈರೆಕ್ಟರ ಮನೆ ಮುಂದೆ ಕೆಲಸಗಾರರ ಸತ್ಯಾಗ್ರಹ

ಮೈಸೂರು ೨೦.

ರಾಜಧಾನಿಯ ಕೋರ್ಗ್ ಟಿಂಬರ್ ಮತ್ತು ಪ್ಲೈವುಡ್ ಕಾರ್ಖಾನೆಯ ಕೆಲಸಗಾರರುಗಳ ಬೇಡಿಕೆಗಳನ್ನು ಅದರ ಮಾಲೀಕರು ಕಳೆದ ಒಂದು ವರ್ಷದಿಂದಲೂ ಈಡೇರಿಸಿಲ್ಲವಾದ್ದರಿಂದ, ನಾಳೆ ಬೆಳಗ್ಗೆ ೮ ಗಂಟೆಗೆ ಡೈರೆಕ್ಟರಾದ ಎಂ. ಎಸ್. ಎ ರಾಘವೇಂದ್ರರವರ ಮನೆಮುಂದೆ ಕೆಲಸಗಾರರು ಸತ್ಯಾಗ್ರಹ ಹೂಡಬೇಕೆಂದು ನಿರ್ಧರಿಸಿರುವುದಾಗಿ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಕೀರ್ತನಕಾರಮಂಡಲಿಯ ಮಹಾ ಮಂಗಳಾರತಿ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಕೀರ್ತನಕಾರ ಮಂಡಲಿಯ ದ್ವಿತೀಯ ವಾರ್ಷಿಕೋತ್ಸವದ ಸಮಾರಂಭಗಳ ಸಂಬಂಧವಾಗಿ ಶ್ರೀ ಎ. ಸುಬ್ರಹ್ಮಣ್ಯಯವರ ಸಂಗೀತವೂ, ರಾ. ಶ್ರೀ ಆರ್. ಎಸ್. ಕೇಶಗಿರಿದಾಸರವರಿಂದ ಕೀರ್ತನೆಯೂ ನಡೆಯುವುದು.

ನಿಧನ

ಅರಮನೆ ಖಜಾನಾ ಖಜಾನೆಯ ಅಧಿಕಾರಿಗಳಾಗಿ ನಿವೃತ್ತರಾಗಿದ್ದ ನೆಲಮಾವಿ ಶ್ರೀ ಅನಂತನಾರಾಯಣರಾಯರುವೊನ್ನೆ ಏನಬೆಳಗ್ಗೆ ತಮ್ಮ ೭೫ನೆಯ ವಯಸ್ಸಿನಲ್ಲಿ ಸ್ವರ್ಗವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಾಶ್ಮೀರಕ್ಕೆ ಹೈದರಾಬಾದ್ ಸೈನ್ಯ

ಕಾಶ್ಮೀರದ ಧಾಳಿಕಾರರ ಮೇಲೆ ಕದನ ನಡೆಸಲು ಹೈದರಾಬಾದಿನ ಸೈನಿಕರನ್ನು ಅಲ್ಲಿಗೆ ಕಳುಹಿಸುವ ವಿಷಯವನ್ನು ಹೈದರಾಬಾದ್ ಮಿಲಿಟರಿ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆಂದು ಹೇಳಲಾಗಿದೆ. ಅನೇಕ ಅಧಿಕಾರಿಗಳ ಮತ್ತು ಸೈನಿಕರೂ ಅಲ್ಲಿಗೆ ಹೋಗಲು ಈಗಾಗಲೇ ಸಿದ್ಧರಾಗಿದ್ದಾರೆ.

ಗೋಡೆ ಕುಸಿದು ಬಿದ್ದು ೨೧ ಜನರ ಮರಣ

ಈಜಿಪ್ಟಿನ ಮುಗೆಜ ಎಂಬ ಹಳ್ಳಿಯಲ್ಲಿ ಜನರು ಮೊಹರಂ ಹಬ್ಬವನ್ನು ಆಚರಿಸುತ್ತಿದ್ದಾಗ ೩ ಅಡಿ ಎತ್ತರದ ಗೋಡೆಯು ಕುಸಿದು ಬಿದ್ದು, ೨೧ ಜನರು ಸತ್ತುಹೋದರೆಂದೂ, ಅನೇಕರಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಚೀಣಾಕ್ಕೆ ೧ ಸಾವಿರ ಅಮೆರಿಕದ ನೌಕೆಗಳು

ಚೀಣದಲ್ಲಿರುವ ಅಮೆರಿಕದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸಾಗಿಸಲು ಅಲ್ಲಿಗೆ ೧ ಸಾವಿರ ಅಮೆರಿಕದ ನೌಕೆಗಳನ್ನು ಕಳುಹಿಸಲಾಗಿದೆ.

RAJKAMAL, MYSORE

Morning Shows from 19-11-48 for 4 days only

The Bachelor's Daughters

-: With :-

Gail Russel, Claire Trevor, Adolphe Menjou

ರೇಷ್ಮೆ ಡಿಪೋವಿನಲ್ಲಿ ಕುದುಪಲಕ್ಕಿ ಸರಬರಾಜು

ರಾಜಧಾನಿಯ ರೇಷ್ಮೆ ಡಿಪೋಗಳಲ್ಲಿ ಕುದುಪಲಕ್ಕಿಯನ್ನು ಮಾತ್ರ ಕೊಡಲಾಗುತ್ತಿದೆ. ಇದರಿಂದ ಅನೇಕ ಜನರಿಗೆ ತುಂಬಾ ತೊಂದರೆಯಾಗಿರುತ್ತದೆ. ಇನ್ನು ಮುಂದೆಯಾದರೂ ರೇಷನ್ ಕಾರ್ಡಿನವರಿಗೆ ಅರಿಯಾದ ಪ್ರಮಾಣದಲ್ಲಿ ಬೆಣತಕ್ಕಿ ಮತ್ತು ಕುದುಪಲಕ್ಕಿಗಳನ್ನು ಕೊಡಲು ಸಂಬಂಧಪಟ್ಟ ಅಧಿಕಾರಿಗಳು ವ್ಯವಸ್ಥೆ ಮಾಡಬೇಕು ಎಂದು ಪೌರಸಭಾಸದಸ್ಯರಾದ ಶ್ರೀ ಚೌಡಯ್ಯನವರು ಕೋರಿ ಪತ್ರ ಬರೆದಿದ್ದಾರೆ.

ಗಾಡಿಹೊಡೆಯುವವರ ಮುಷ್ಕರದಿಂದ ಶಾಲೆಗೆ ಹೋಗಲು ತೊಂದರೆ

ಅಲಹಾಬಾದಿನ ಎಕ್ಕಾಗಾಡಿ ಹೊಡೆಯುವವರು ತಮಗೆ ಹೆಚ್ಚು ಬಾಡಿಗೆ ಬೇಕೆಂದು ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ. ಇದರಿಂದ ೧ ಸಾವಿರ ಬಾಲಕಿಯರು ವಾಹನ ಸೌಕರ್ಯವಿಲ್ಲದೆ ಶಾಲೆಗೆ ಹೋಗುತ್ತಿಲ್ಲ. ಶಾಲೆಗಳನ್ನು ಎರಡು ದಿನಗಳ ಕಾಲ ಮುಚ್ಚಲಾಗಿದೆ.

ಭರತನಾಟ್ಯದಲ್ಲಿ ಅಧ್ಯಕ್ಷತೆ ವಹಿಸಿದುದಕ್ಕೆ ಮೊಕದ್ದಮೆ

ಕುಂಭಕೋಣದ ಶ್ರೀ ಸಾರಂಗಪಾಣಿ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಶ್ರೀಮತಿ ರಾಮತಿಲಕಂರವರ ಭರತನಾಟ್ಯ ಪ್ರದರ್ಶನದ ಅಧ್ಯಕ್ಷತೆ ವಹಿಸಿದ್ದರೆಂಬ ಅಪಾದನೆಯ ಮೇಲೆ ದೇವದಾಸಿ ಶಾಸನದ ಪ್ರಕಾರ ಮದರಾಸ್ ಶಾಸನಸಭಾ ಸದಸ್ಯರಾದ ಶ್ರೀ ಟಿ ವೆಂಕಟರಾಮಯ್ಯರವರ ಮೇಲೆ ಮೊಕದ್ದಮೆ ಹೂಡಲಾಗಿದೆ.

॥ ಶ್ರೀ ॥

ಗಣೇಶಾ ಟಾಕೀಸ್

19-11-48 ರಿಂದ

ಪ್ರತಿ ದಿನ ಮೂರು ಪ್ರದರ್ಶನಗಳು

ಹರಿದಾಸ್

(ತಮಿಳು)

ಹೊಸ ಪ್ರಿಂಟು, ಪೂರ್ಣ ವರ್ಣರಂಜಿತ ಚಿತ್ರ

ಪಾತ್ರ:- ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ ಮತ್ತು

ಎನ್. ಸಿ. ವಸಂತಕೋಕಿಲಂ

ಸರ್ದಾರ್ ಪಟೇಲರಿಗೆ ಆಶ್ರೇಯಸ್ಸನ್ನು ಕೋರಿದರೇ?

ಶ್ರೀ ಕೆ.ಸಿ ಹಾಲಪ್ಪನವರು ಫರ್ಗ್ಯುಸನ್ ಕಾಲೇಜಿನ ನಾಡುಹಬ್ಬದ ಸಮಾರೋಪ ಭಾಷಣವದಲ್ಲಿ ಕರ್ನಾಟಕ ಏಕೀಕರಣ ವಿಷಯವನ್ನು ೫-೧೦ ವರ್ಷ ಮುಂದೆ ಹಾಕುವುದು ಸಾಧುವಲ್ಲವೆಂದೂ ಸರ್ದಾರ್ ಪಟೇಲರಿಗೆ ಈಗಾಗಲೇ ಎಪ್ಪತ್ತು ವರ್ಷ ಆಗಿ ಅವರು ದಿನಗಳನ್ನು ಎಣಿಸುತ್ತಿರುವರೆಂದೂ ಅವರು ಹತ್ತು ವರ್ಷಗಳು ಬದುಕುವ ಭರವಸೆ ಇಲ್ಲದಿರುವುದರಿಂದ ಅವರ ಈ ಪ್ರಶ್ನೆಯನ್ನು ಮುಂದೆ ಹಾಕುವುದು ತರವಲ್ಲವೆಂದೂ ಹೇಳಿದರು. ಕರ್ನಾಟಕ ಏಕೀಕರಣವು ಕೂಡಲೇ ಆಗಬೇಕಾದದು ಅಗತ್ಯವೆಂದೂ ಅಖಂಡ ಭಾರತದ ಹಿತದೃಷ್ಟಿಯಿಂದ ಸರ್ದಾರ್ ಪಟೇಲರು ನೂರು ವರ್ಷ ಬದುಕಬೇಕೆಂದೂ ಹಾರೈಸಿದರು.

ಸಂಗೀತ ಕಛೇರಿ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಶ್ರದ್ಧಾನಂದ ಔಷಧಾಲಯದಲ್ಲಿ ಈರಾತ್ರಿ ೮ ಗಂಟೆಗೆ ಆಸ್ಥಾನ ವಿದ್ವಾನ್ ಮರಿಯಪ್ಪನವರು, ಪಿಟೀಲು ವಿದ್ವಾನ್ ಬಿ. ಕೇಶವ ಮೂರ್ತಿಗಳು ಮೃದಂಗ ವಿದ್ವಾನ್ ಎಂ. ಎಸ್. ಶೇಷಪ್ಪನವರು ಇವರುಗಳ ಸಂಗೀತ ಕಛೇರಿ ಏರ್ಪಡಿಸಿದೆ.

ಭಾರತೀಯ ನೃತ್ಯಕಲಾ ಕೇಂದ್ರ

ನೃತ್ಯ, ಸಂಗೀತ, ನಾಟ್ಯ ಕಲೆಗಳ ಪುನರುದ್ಧಾರಕ್ಕಾಗಿ ಭಾರತೀಯ ನೃತ್ಯಕಲಾ ಕೇಂದ್ರವನ್ನು ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರದ ಆಶ್ರಯದಲ್ಲಿ ನೃತ್ಯ ಸಂಗೀತ ಮತ್ತು ನಾಟ್ಯಕಲೆಗಳ ಸಂಶೋಧನೆ, ಅಭ್ಯಾಸ ಮತ್ತು ಪ್ರಚಾರ ಮಾಡುವುದಕ್ಕಾಗಿ ವಿದ್ಯಾಪೀಠವನ್ನು ತೆರೆಯಲಾಗುವುದು. ಕಲಾವಿಷಯವಾಗಿ ಮಾಸಪತ್ರಿಕೆಯ ಪ್ರಕಟಣೆ, ನಾಟ್ಯಮಂದಿರ, ಪುಸ್ತಕ ಭಂಡಾರ ಮತ್ತು ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲಾಗುವುದು. ಸುಪ್ರಸಿದ್ಧ ನಾಟ್ಯಾಚಾರ್ಯ ಶ್ರೀ ಕುಲಕರ್ಣಿ ಶ್ರೀನಿವಾಸರವರು ಪ್ರಮುಖ ಶಿಕ್ಷಕರಾಗಿರುವರು. ಈ ಯೋಜನೆಯು ಸಫಲವಾಗಲು ಕಲಾಭಿಮಾನಿಗಳು ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

× ಮೈಸೂರು ಸರ್ಕಾರದ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವಿಗಳಿಗೆ ಮದರಾಸ್ ಸರ್ಕಾರದಲ್ಲಿ ಮಾನ್ಯತೆ ದೊರೆತಿದೆ.

ಜಿಲ್ಲಾಬೋರ್ಡ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ಮನೆ ಭತ್ಯ

ಸ್ವ. ವ. ವರದಿ] ಬೆಂಗಳೂರು. ೨೦

ಮನೆಗಳು ಇಲ್ಲದಿರುವ ಜಿಲ್ಲಾಬೋರ್ಡ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ಬೆಂಗಳೂರು ಮತ್ತು ಮೈಸೂರುಗಳಲ್ಲಿ ೭೫ ಮತ್ತು ೫೦ರೂ. ಇತರ ಜಿಲ್ಲೆಗಳಲ್ಲಿ ೫೦ ಮತ್ತು ೪೦ರೂ ಗಳನ್ನು ಆಯಾ ಬೋರ್ಡಿನವರು ಒಪ್ಪುವುದಾದರೆ ಕೊಡಬಹುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ದಿವಾನರ ಭಾಷಣ

ಸೆಂಟ್ರಲ್ ಕಾಲೇಜು ಸಂಘದ ಪ್ರಾರಂಭ ಭಾಷಣವನ್ನು ದಿವಾನರಾದ ಸರ್ ಆ. ರಾಮಸ್ವಾಮಿ ಮೊದಲಿಯಾರ್‌ರವರು ನಿನ್ನೆ ರಾತ್ರಿ ಟೌನ್ ಹಾಲಿನಲ್ಲಿ ಮಾಡಿದರು. ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ವಿಶ್ವಸಂಸ್ಥೆಯು ದುಡಿಯುತ್ತಿದೆಯೆಂದೂ, ವಿ. ಸಂಸ್ಥೆಗೆ ಭಾರತದಿಂದ ಹೋಗುವ ನಿಯೋಗಗಳು ವ್ಯರ್ಥವೆಂದು ಹೇಳುವುದು ಸರಿಯಲ್ಲವೆಂದೂ, ಅಂತರರಾಷ್ಟ್ರೀಯ ರಾಜಕೀಯ ವ್ಯಾಸಂಗಕ್ಕಾಗಿ ಒಂದು ವ್ಯಾಸಂಗ ಗೋಷ್ಠಿಯನ್ನು ಬೆಂಗಳೂರಿನಲ್ಲಿ ತೆರೆಯಬೇಕೆಂದೂ ತಿಳಿಸಿದರು.

○ ರಾಜ್ಯಾಂಗ ಸಭೆಗೆ ರಾಜೀನಾಮೆ ಇತ್ತಿರುವ ಶ್ರೀ ಕೆ ಹೆಂಚಾರಪ್ಪನವರ ಸ್ಥಾನದಲ್ಲಿ ಬೇರೊಬ್ಬರನ್ನು ಚುನಾಯಿಸಲು ಮುಂದಿನ ತಿಂಗಳ ೧೯ನೇ ತಾ|| ಚುನಾವಣೆ ನಡೆಸುವುದೆಂದು ಸರ್ಕಾರದ ಆಜ್ಞೆಯಾಗಿದೆ.

○ ಮಂತ್ರಿಮಂಡಲದ ಸಭೆಯು ಈ ಮಧ್ಯಾಹ್ನ ನಂದಿ ಬೆಟ್ಟದಲ್ಲಿ ಸೇರಿತ್ತು.

ನೆಹರೂರವರಿಗೆ ಮೈಸೂರು ಪೌರಸಭೆಯ ಬಿನ್ನವತ್ತಳೆ

ಮೈಸೂರು ೨೦

ಪಂಡಿತ ನೆಹರೂರವರು ಮೈಸೂರಿಗೆ ಬಂದಾಗ ಬಿನ್ನವತ್ತಳೆಯನ್ನು ಅರ್ಪಿಸಿ ಸೂಕ್ತವಾದ ರೀತಿಯಲ್ಲಿ ಸನ್ಮಾನ ಮಾಡಬೇಕೆಂದು ನಿನ್ನೆ ದಿನ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ನಿರ್ಣಯಮಾಡಲಾಯಿತು. ಇದಕ್ಕಾಗಿ ೫ ಸಾವಿರ ರೂ ನ್ನು ಸಹ ಮಂಜೂರು ಮಾಡಲಾಯಿತು. ಎಲ್ಲಾ ಏರ್ಪಾಡುಗಳನ್ನು ಮಾಡಲು ಒಂದು ಉಪಸಮಿತಿಯನ್ನೂ ಸಹ ರಚಿಸಲಾಯಿತು. ಅಲ್ಲದೆ ನಗರದ ಅಲಂಕಾರ ಮತ್ತು ಬಹಿರಂಗ ಸಭೆ ಮುಂತಾದ ಏರ್ಪಾಡುಗಳಿಗಾಗಿ ಸರ್ಕಾರದವರು ೨೫ ಸಾವಿರ ರೂ.ನ್ನು ಮಂಜೂರು ಮಾಡಬೇಕೆಂದು ಕೋರುವ ನಿರ್ಣಯವೂ ಅಂಗೀಕರಿಸಲ್ಪಟ್ಟಿತು.

ಈಜಿಪ್ಟ್ ಮತ್ತು ಪರ್ಷಿಯಾ ದೊರೆಗಳ ವಿವಾಹ ವಿಚ್ಛೇದನ

ಈಜಿಪ್ಟಿನ ದೊರೆಗಳಾದ ಫರೂಕ್‌ರವರ ಮತ್ತು ರಾಣಿ ಫರೀದಾರವರ ವಿವಾಹ ವಿಚ್ಛೇದನವಾಗಿದೆಯೆಂದು ಅಧಿಕೃತವಾಗಿ ತಿಳಿಸಲಾಗಿದೆ. ಈಜಿಪ್ಟ್ ದೊರೆಗಳ ತಂಗಿಯಾದ ರಾಜಕುಮಾರಿ ಫೌಜಿಯಾ ಮತ್ತು ಪರ್ಷಿಯಾ ದೊರೆಗಳಾದ ಷಾರವರ ವಿವಾಹ ವಿಚ್ಛೇದನವೂ ಸಹ ಆಗಿದೆಯೆಂದೂ ತಿಳಿದುಬಂದಿದೆ.

○ ಮಾರ್ವಾಡಿ ಜನಾಂಗದವರ ಹೆಂಗಸರು ಮದುವೆ ಕಾಲದಲ್ಲಿ ಮುಸುಕು ಹಾಕಿಕೊಳ್ಳುವ ಪದ್ಧತಿಯನ್ನು ರದ್ದು ಮಾಡಲು ಕಲ್ಕತ್ತದ ಮಾರ್ವಾಡಿ ಯುವಕ, ಯುವತಿಯರು ಅಂತಹ ಮದುವೆ ಕಾಲದಲ್ಲಿ ಸತ್ಯಾಗ್ರಹ ನಡೆಸಬೇಕೆಂದು ನಿರ್ಧರಿಸಿದ್ದಾರೆ.

ಸರ್ಕಾರದೊಡನೆ ಜನರು ಸಹಕರಿಸಬೇಕು

ಪ್ರಧಾನ ಮಂತ್ರಿಗಳ ಮನವಿ

ಚಾಮರಾಜನಗರ ೨೦

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಪುರಸಭೆಯವರಲ್ಲಿಗೆ ನಿನ್ನೆ ಮಧ್ಯಾಹ್ನ ದಯಮಾಡಿಸಿದರು. ತಾಲ್ಲೂಕಿನ ಪರವಾಗಿ ಶ್ರೀ ಬಿ. ವೆಂಕಟಸ್ವಾಮಪ್ಪ, ಸಿ ಶ್ರೀ ನಾಗರಾಜರಾವ್, ಸಿ ಎ. ರಾಮ ಗ, ರೇವಣ್ಣ ಮುಂತಾದವರು ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳನ್ನು ಅರಿಕೆ ಮಾಡಿಕೊಂಡರು

ಅದಿನ [illegible] ಪರವಾಗಿ ಶ್ರೀ ಬಿ [illegible] ಕಾಂಗ್ರೆಸ್ [illegible] ಸಂಬಂಧಪಟ್ಟ [illegible] ಶ್ರೀ ಚಂಗಲರಾಯ ರೆಡ್ಡಿಯವರಲ್ಲಿ ನಿವೇದಿಸಿದರು.

ಶ್ರೀ ರೆಡ್ಡಿಯವರು ಭಾಷಣ ಮಾಡಿ ಪ್ರಜಾಪ್ರಭುತ್ವ, ಜನತೆಯ ನಲ್ಮೆ ಸಂಬಂಧಪಟ್ಟ ಕಾರ್ಯಗಳು ಮುಂತಾದುವನ್ನು ಸಹಕಾರ ಸಂಸ್ಥೆಗಳು ಇಲಾಖೆಗಳ ಮೂಲಕ ಜಾರಿಯಾಗುವುದೆಂದೂ, ಜನರೂ ಸಹ ತಮ್ಮ ಮೇಲೆ ಇರುವ ಹೆಚ್ಚಿನ ಜವಾಬ್ದಾರಿಯನ್ನರಿತು ಸರ್ಕಾರದೊಡನೆ ಸಹಕರಿಸಬೇಕೆಂದೂ, ಪ್ರತಿಯೊಬ್ಬರೂ ಅವರವರ ಕ್ಷೇತ್ರಗಳಲ್ಲಿ ಶ್ರಮಪಟ್ಟು ದೇಶದ ಸಂಪತ್ತಿನ ಅಭಿವೃದ್ಧಿಗೆ ನೆರವಾಗಬೇಕೆಂದೂ ಹೇಳಿದರು

ಸಂತೇಮರಹಳ್ಳಿಗೆ ಭೇಟಿ

ಮುಖ್ಯಮಂತ್ರಿಗಳು ಮಧ್ಯಾಹ್ನ ಮೂರು ಗಂಟೆಗೆ ಸಂತೆಮರಹಳ್ಳಿಗೆ ಭೇಟಿ ಇತ್ತರು. ಶ್ರೀ ವಿಲಕ್ಷ್ಯರು ಶಿವಯ್ಯನವರು ಏರ್ಪಡಿಸಿದ್ದ ಭೋಜನಕೂಟದಲ್ಲಿ ಭಾಗವಹಿಸಿ, ಅನಂತರ ಬಹಿರಂಗ ಸಭೆಗೆ ದಯಮಾಡಿಸಿದರು. ಶ್ರೀ ನಾಗಲಮಾಡಿ ಪುಟ್ಟಣ್ಣನವರು ಸ್ವಾಗತ ಬಯಸಿದರು ಸಂತೇಮರಹಳ್ಳಿಯ ಗ್ರಾಮಸ್ಥರ ಪರವಾಗಿಯೂ, ವಿಲಕ್ಷ್ಯರು ಗ್ರಾಮಪಂಚಾಯಿತಿ ಪರವಾಗಿಯೂ, ಬಿನ್ನವತ್ತಳೆಗಳು ಅರ್ಪಿಸಲಾಯಿತು

ಶ್ರೀ ಜಿ. ಎಂ. ಚನ್ನಬಸಪ್ಪನವರು ಭಾಷಣಮಾಡಿ, ದೇಶದ ಪ್ರಗತಿಯು ಹಳ್ಳಿಗಳ ಪ್ರಗತಿಯನ್ನು [illegible] ಬೇಕೆಂದು ಹೇಳಿದರು.

ಸರ್ವರಿಗೂ ಸಮಾನಾವಕಾಶ ಕಲ್ಪಿಸುವುದೇ ಜವಾಬ್ದಾರಿ ಸರ್ಕಾರದ ಗುರಿ

ಶ್ರೀ ಕೆ. ಸಿ. ರೆಡ್ಡಿಯವರ ಭಾಷಣ

ಮೈಸೂರು ೨೦

ಪ್ರಧಾನ ಮಂತ್ರಿ ಶ್ರೀ ಕೆ ಚಂಗಲರಾಯ ರೆಡ್ಡಿಯವರು ನಿನ್ನೆ ದಿನ ಚಾಮರಾಜನಗರದ ತಾಲ್ಲೂಕು ಹರವೆ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಹೆಗ್ಗವಾಡಿ, ಬದನಗುಪ್ಪೆ, ಪಂಚೇದೇವನಪುರ, ಮುತ್ತು ಇತರ ಗ್ರಾಮಗಳಲ್ಲಿ ಮುಖಂಡರು ಅವರನ್ನು [illegible] ಬೋರ್ಡ್ ಅಧ್ಯಕ್ಷರಿಗೂ ಹಾರ ತುರಾಯಿ ಅರ್ಪಿಸಲಾಯಿತು ಪ್ರಧಾನ ಮಂತ್ರಿಯವರು ದೊಡ್ಡ ಕವಲಂದೆ ಗ್ರಾಮದಲ್ಲಿ [illegible] ಮಾದರಿಯನ್ನು ವಿಚಾರಿಸಿದರು [illegible] ತಿಳಿಸಿದರು

ಪ್ರಧಾನ ಮಂತ್ರಿಗಳು ಚಾಮರಾಜನಗರದ ಗಡಿಗೆ ಬಂದಾಗ ಅಮಲ್ದಾರ್ ಶ್ರೀ

ಮುಖ್ಯಮಂತ್ರಿಯವರು ಭಾಷಣಮಾಡಿ ಹಳ್ಳಿಗಾಡಿನ ಜನರಿಗೆ ವ್ಯವಸಾಯಕ್ಕೆ ಬೇಕಾದ ವಸ್ತುಗಳನ್ನು ಡಿಪೋ ಮೂಲಕ ಮಾರಾಟವಾಗುವ ವ್ಯವಸ್ಥೆ ಮಾಡಲಾಗುತ್ತದೆಂದೂ, ಪ್ರಜಾಸರ್ಕಾರವು ಇಂದ ಮೇಲೆ ನಡೆಯಬೇಕಾಗಿರುವ ಕೆಲಸಗಳು ಅಗಾಧವಾಗಿರೆಯೆಂದೂ ಉತ್ಸಾಹದಿಂದ ಕೂಡಿ, ಜನರು ಮುಂದೆ ಬರಬೇಕೆಂದೂ, ತಿಳಿಸಿದರು.. ಅಲ್ಲಿರುವ ಪಕ್ಷಗಳು ಹೋಗಿ ಎಲ್ಲರೂ ಒಗ್ಗಟ್ಟಾಗಿ ಸೇರಿರುವುದಕ್ಕೆ ಮಂತ್ರಿ ವರ್ಯರು ಅಭಿನಂದನೆಯನ್ನು ಸಲ್ಲಿಸಿದರು ಮಹಾತ್ಮ ಗಾಂಧೀಜಿಯವರ ರಾಮರಾಜ್ಯವನ್ನು ಸ್ಥಾಪಿಸಲು ಸರ್ವರೂ ಶ್ರಮಿಸಬೇಕೆಂದು ಹೇಳಿದರು ಜಿಲ್ಲಾ ನಿಲ್ದಾಣವನ್ನು ಕಟ್ಟಿಸಲು ಮುಂದೆ ಬಂದ ಶ್ರೀ ತಿಪ್ಪರಾಂತಪ್ಪನವರನ್ನು ಅಭಿನಂದಿಸಿ ವಿಲಕ್ಷ್ಯರು ಆಸ್ಪತ್ರೆಯ ಕೆಲಸವನ್ನು ಕೈಕೊಳ್ಳಲಾಗುವುದೆಂದು ಹೇಳಿದರು. ಹರಿಜನ ಕೇರಿಗೆ ಭೇಟಿ ಇತ್ತು ಒಗ್ಗಟ್ಟಾಗಿರಬೇಕೆಂದೂ ಪ್ರತ್ಯೇಕ ಮನೋಭಾವನೆ ಬಿಡಬೇಕೆಂದೂ ತಿಳಿಸಿದರು

[illegible]

ಮೈಸೂರು ಸಂಸ್ಥಾನದಲ್ಲಿ ಬಾಲ್ ಮತ್ತು ವಾಷಿಂಗ್ ಸಾಬೂನುಗಳನ್ನು ಮಾರಾಟ ಮಾಡುವವರು ಮುದ್ರಾಂಕಿತ ಛಾಪಾ ಸಾಬೂನು ಕಾರ್ಖಾನೆಯೊಂದಕ್ಕೆ ಬೇಕಾಗಿದ್ದಾರೆ. ಸ್ತ್ರೀ ಪುರುಷರ ಪೈಕಿ ಯಾರಾದರೂ ಸ್ವತಃ ಅಪೇಕ್ಷೆಪಟ್ಟವರು ಕಾರ್ಖಾನೆಯ ಪ್ರತಿನಿಧಿಗಳನ್ನು 23-11-48 ನೇ ತಾರೀಖಿನವರೆಗೆ ಮಧ್ಯಾಹ್ನ 2 ರಿಂದ 5 ಘಂಟೆವರೆಗೆ ಶಿವರಾಂ ಪೇಟೆ ಶ್ರೀ ಚಾಮುಂಡೇಶ್ವರೀ ಭವನದ 5 ನೇ ನಂಬರಿನ ಕೊಠಡಿಯಲ್ಲಿ ಭೇಟಿ ಮಾಡಿ ಮಾತನಾಡಬಹುದು.

ನ [illegible] ಫೇರಿಂದ ಸ್ವಾಮಿಯವರು ಹಾರ ತುರಾಯಿ ಅರ್ಪಿಸಿದರು

ಹರವೇ ಗ್ರಾಮಕ್ಕೆ ಪ್ರಧಾನ ಮಂತ್ರಿಗಳು ಆಗಮಿಸಿದಾಗ ಓಲಗ, ತಮಟೆ, ಕೊಂಬು ವಾದ್ಯಗಳೊಡನೆ ಸ್ವಾಗತ ನೀಡಲಾಯಿತು ಸಮಾರಂಭಕ್ಕೆ ಕಾಂಗ್ರೆಸ್ ಮುಖಂಡರು ಅಧಿಕಾರಿಗಳು ದಯಮಾಡಿಸಿದ್ದರು ಶ್ರೀ ಪಟೇಲ್ ಚನ್ನಬಸಪ್ಪನವರು ಸ್ವಾಗತ ಕೋರಿದರು ಪಂಚಾಯಿತಿ ಅಧ್ಯಕ್ಷರಾದ ಶ್ರೀ ಶಿವನಂಜಪ್ಪನವರು ಬಿನ್ನವತ್ತಳೆಯನ್ನು ಅರ್ಪಿಸಿದರು

ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಚೆನ್ನಬಸಪ್ಪನವರು ಭಾಷಣಮಾಡಿ ಪ್ರತಿಯೊಂದು ಹಳ್ಳಿಯವರೂ ತಮ್ಮ ತಮ್ಮ ಗ್ರಾಮದ ಪುನರುದ್ಧಾರಕ್ಕೆ ಶ್ರಮಿಸಬೇಕೆಂದೂ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಸಹಾಯ ಕಳೆಗೆ ನೋಡಬಾರದೆಂದೂ ಮದ್ಯಪಾನ ನಿರೋಧ ಮತ್ತು ಹರಿಜನ ದೇವಾಲಯ ಪ್ರವೇಶ ಮುಂತಾದುವುಗಳಿಗೆ ಎಲ್ಲರೂ ಬೆಂಬಲ ಕೊಡಬೇಕೆಂದೂ ತಿಳಿಸಿದರು,

ಶ್ರೀ ಕೆ ಚಂಗಲರಾಯರೆಡ್ಡಿಯವರು ಭಾಷಣಮಾಡಿ ಜವಾಬ್ದಾರೀ ಸರ್ಕಾರದಲ್ಲಿ ಪ್ರತಿಯೊಬ್ಬರಿಗೂ ಸಮಾನಾವಕಾಶ ಕೊಡುವುದೇ ತಮ್ಮ ಗುರಿಯೆಂದೂ, ಜನರು ಸರ್ಕಾರದೊಡನೆ ಸಹಕರಿಸಿ ದೇಶದ ಅಭಿವೃದ್ಧಿಗೂ ಮತ್ತು ಏಳಿಗೆಗೂ ಸಹಾಯಕರಾಗಬೇಕೆಂದೂ ತಿಳಿಸಿದರು ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯವನ್ನು ಸತ್ಯ ನ್ಯಾಯ ಮತ್ತು ಧರ್ಮಗಳಿಂದ ನಡೆಸಬೇಕೆಂದೂ ಕೂಲಿಗಾರರು, ವರ್ತಕರು, ಸಾರ್ವಜನಿಕರು ಸರ್ಕಾರಿ ಅಧಿಕಾರಿಗಳು ಪ್ರಾಮಾಣಿಕತನದಿಂದಲೂ ನಡೆದು ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸಬೇಕೆಂದೂ ಹೇಳಿದರು.

ಹಳ್ಳಿಗಳಿಂದ ಪಟ್ಟಣವಾಸಕ್ಕೆ ಓದುವುದಕ್ಕೆ ಹೋದವರು ಪದವೀಧರರಾದಮೇಲೆ ತಮ್ಮ ಹಳ್ಳಿಗಳಿಗೆ ಹಿಂತಿರುಗಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕೆಂದು ತಿಳಿಸಿದರು ರಸ್ತೆ, ಭಾವಿ, ಆಸ್ಪತ್ರೆ ಮತ್ತು ಒಳಚರಂಡಿ ವ್ಯವಸ್ಥೆ ಮುಂತಾದುವುಗಳ ಬಗ್ಗೆ ಈಗಾಗಲೇ ಒಂದು ಯೋಜನೆ ತಯಾರಿಸಲಾಗಿದೆಯೆಂದೂ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಹಣ ಕೊಡುವ ವಿಷಯವು ಸರ್ಕಾರದ ಗಮನದಲ್ಲಿದೆಯೆಂದೂ ಅವರು ಹೇಳಿದರು

ಹರವೇ ಗ್ರಾಮದ ಮ. ಹಾ ಜ ನ ರು ೧೧೦೧. ರೂಪಾಯಿ. ಗಾಂಧಿ ನಿಧಿಗೆ ಕೊಡಲು ವಾಗ್ದಾನ ಮಾಡಿದರು. ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಗುರು ಮಲ್ಲಪ್ಪನವರು ೫೦೧ ರೂ ಕೊಡಲು ವಾಗ್ದಾನ ಮಾಡಿದರು

ಬೆಂಗಾಲ್ ಸಿಲ್ಕ್ ಸೀರೆಗಳಿಗೆ

ಪ್ರಾಮುಖ್ಯವಾದ ಅಂಗಡಿ

ಬಾಹುಸಾರ್ ಕಂಪೆನಿ

ಮೈಸೂರು

Edited printed and published by A.R. Nagarajan at the Sadhvi Press D. Subbaiah Road Mysore.

OPERA TALKIES

From 19—11—48

For 4 days only

Daily 3 Shows

A Night in Casablanca

With:- Mark Brothers

—: Morning Shows :—

From 19-11-48 for 3 days

Call of Tarzon

Propagandist cum can[vassers] of either sex [for] House-to-house propaga[nda] for soaps required by [a] Soap Factory. Apply in per[son]:- Sales Manager Room No. 5, Chamunde[shwari] Bhavan, Shivaramp[et] Mysore between 5 and [..] p. m. up to 23-11-48.

ರಾಜಕಮಲ್

ಟಾಕೀಸ್

೧೯-೧೧-೪೮ನೇ ಶುಕ್ರವಾ[ರ]

ದಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗ[ಳು]

ಭಾರತಿ

ಸೂರ್ಯಕುಮಾರಿ, ರಾಜಕುಮಾರಿ, ಸ[..]

ಕೃಷ್ಣಸ್ವಾಮಿ ಪಾತ್ರವಹಿಸಿರುವ

ದಿವ್ಯವಾದ ಕನ್ನಡ ಚಿತ್ರ

ನೃತ್ಯ:- ಲಲಿತ, ಪದ್ಮಿನಿ

ತಾII 21—11—48 ನೇ

ಭಾನುವಾರ ಬೆಳಿಗ್ಗೆ

—:ಹರಾಜು:—

ಹಳೇ ಗಡಿಯಾರಗಳು ಅದರ ಸಾಮಾನು

ಫ್ಯಾನ್ಸಿ ಆರ್ಟಿಕಲ್ಸ್ ಅರಾಮ ಕುರ್ಚಿ,

ಕೊಟ್ಟಿ ಗುಡಾರ ಇನ್ನೂ ವಿನೇಕಾ[..]

ಸಿಟಿ ಆಕ್ಷನೀರಿಂಗ್ ಕೊ[..]

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂ[ರು]

ನಿಮ್ಮ ಮೈ ನೊಳಪುಳ್ಳದಾಗಿ

ಹೊಳೆಯಬೇಕೆ ? ನಿಮ್ಮ

ಬಾವಣ್ಯ ಮಾಸಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಚಳಿಗಾಲಕ್ಕೆ ಉತ್ತಮವಾದ ರಗ್ಗುಗಳೂ ಶಾಲುಗಳೂ

ಅಪ್ಪಟ ಉಣ್ಣೆಯ ರಗ್ಗುಗಳೂ, ಎರಡುಕಡೆ ಬೇರೆ ಬೇರೆ ಕರನೆಯುಳ್ಳ ಇಟಾಲಿಯನ್ ರಗ್ಗುಗಳೂ, ಕಾಶ್ಮೀರ ಶಾಲುಗಳೂ ಅನೇಕವಾಗಿ ಬಂದಿವೆ

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು.

ಸಂಪುಟ ೭] ಸೋಮವಾರ ೨೨-೧೧-೪೮ [ಸಂಚಿಕೆ ೧೨೧

ಹಿಟ್ಲರನು ವೇಷ ಮರೆಸಿ ಜರ್ಮನಿಯಲ್ಲೇ ಇದ್ದಾನೆ

ಶ್ರೇಷ್ಠ ನ್ಯಾಯಾಧೀಶರಿಗೆ ನಿವೃತ್ತರಾಗುವುದಕ್ಕೆ ಮುನ್ನ ರಜಾ.

ಮೇದಪ್ಪನವರು ಪ್ರಧಾನ ಶ್ರೇಷ್ಠ ನ್ಯಾಯಾಧೀಶರು.

[... ಫೋನ್] ಬೆಂಗಳೂರು ೨೩

... ಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಜಿ. ಪರಮಶಿವಯ್ಯನವರಿಗೆ ... ರಾಗುವುದಕ್ಕೆ ಮುನ್ನ ಇಂದಿನಿಂದ ... ನೇ ತಾ॥ ವರೆಗೆ ರಜಾ ಕೊಡಲಾ... ಶ್ರೀ ಮೇದಪ್ಪನವರನ್ನು ಶ್ರೇಷ್ಠ ... ಧೀಶರನ್ನಾಗಿ ನೇಮಿಸಲಾಗಿದೆ ಬೆಂ... ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ ... ಸ್ವಾಮಿ ಪಿಳ್ಳೆ ಮತ್ತು ಅಡಿಷನಲ್ ಜ... ನ್ಯಾಯಾಧೀಶರಾದ ಶ್ರೀ ಟಿ ಎ. ಮ... ನವರುಗಳನ್ನು ... ಕೋರ್ಟಿನ ನ್ಯಾಯಾ... ಧೀಶರನ್ನಾಗಿ ನೇಮಿಸಲಾಗುವುದೆಂದೂ ... ಬಂದಿದೆ

...ವೆಂಕಟಶಿವರೆಡ್ಡಿಯವರು ಲಂಡನ್ನಿನ ಟ್ರೇಡ್ ಕಮೀಷನರೇ?

...ನದ ಆಪ್ತ ಕಾರ್ಯದರ್ಶಿಗಳಾದ ಶ್ರೀ ...ವೆಂಕಟಶಿವರೆಡ್ಡಿಯವರನ್ನು ಲಂಡನ್ನಿ... ನ ಟ್ರೇಡ್ ಕಮೀಷನರನ್ನಾಗಿ ... ಮಾಡಲಾಗುವುದೆಂದು ಅಧಿಕಾರ ವೃಂದ ... ಹೇಳಲಾಗುತ್ತಿದೆ.

...ಟ್ಲರನು ಬದುಕಿದ್ದಾನಂತೆ

...ಎಸ್ ಬರ್ಲಿನ್ ೨೦

...ಯ ಬ್ರೆಸಲ್ ಎಂಬ ನಗರದಲ್ಲಿ ... ನ ಚಿನ್ನ ವೇಷವನ್ನು ಮರೆಸಿಕೊಂ... ವಾಸಿಸುತ್ತಿದ್ದಾನೆಂದು ಸುದ್ದಿ ಹರ... ಜರ್ಮನಿಯು ಪತನವಾಗುವುದಕ್ಕೆ ... ದಿನಗಳ ಹಿಂದೆ ಹಿಟ್ಲರನು ಪ್ಲಾಸ್ಟಿ... ಕ್ ಚಿಕಿತ್ಸೆಯಿಂದ ತನ್ನ ಮುಖದ ... ವವನ್ನು ಬದಲಾಯಿಸಿಕೊಂಡು ಜ... ಯಲ್ಲೇ ತಿರುಗುತ್ತಿರುವನೆಂದೂ, ಆ... ಅಧಿಕಾರಿಗಳಾಗಲೀ, ಅಥವಾ ಜ... ನ ಜನರಾಗಲೀ ಆತನನ್ನು ಗು... ಸಾಧ್ಯವಿಲ್ಲವಾಗಿದೆಯೆಂದೂ ಹೇ... ದೆ ಹಿಟ್ಲರನ ಶಸ್ತ್ರ ಚಿಕಿತ್ಸೆಯು ... ಕೆಲವು ಆಪ್ತ ಅನುಯಾಯಿಗಳಿಗೆ ... ಗೊತ್ತಿತ್ತೆಂದೂ, ಈಗ ಅವರೆಲ್ಲರೂ ... ಕಾಗುತ್ತಿದ್ದಾರೆಂದೂ ಹೇಳಲಾಗಿದೆ ... ರಾಷ್ಟ್ರಗಳ ಅಧಿಕಾರಿಗಳು ಎಷ್ಟು ... ಪಟ್ಟರೂ ಹಿಟ್ಲರನ ಶವವು ಸಿಕ್ಕಿ... ದಿರುವುದು. ಆತನು ಬದುಕಿದ್ದಾನೆಂ... ... ಕಾರಣವಾಗಿದೆ

ವಿವಾಹಮಹೋತ್ಸವ

...ನಿವೃತ್ತ ಡಾ॥ ಬಿ ಎಸ್ ... ಮೊದಲಿಯಾರ್‌ರವರು ... ತಾ॥ ಇಂದಿರಾ ಮಾಲಿನಿ ... ಮದರಾಸ್ ಹೈಕೋರ್ಟಿನ ... ಕಂಜೀವರದ ಶ್ರೀ ಎಂ ಕಣ್ಣ... ಸ್ವಾಮಿ ಮೊದಲಿಯಾರ್‌ರವರ ಪುತ್ರರೂ ಆದ ... ಗೀತ ಮೊದಲಿಯಾರ್ ... ಕೊಟ್ಟು ವಿವಾಹವನ್ನು ನಿನ್ನೆ ... ಯವರ ಹೈಸ್ಕೂಲಿನಲ್ಲಿ ನೆರ...

...ಧಾರ್ಥ ನಾಟಕ

...ಗುಬ್ಬಿ ಚನ್ನಬಸವೇಶ್ವರ ಕೃಪಾ... ನಾಟಕ ಮಂಡಲಿಯವರು ಇರು... ಶ್ರೀ ಕೃಷ್ಣಲೀಲಾ ನಾಟಕ ... ಪ್ರದರ್ಶಿಸಿ ಬಂದ ಉತ್ಪತ್ತಿಯನ್ನು ... ತಾ॥ ಕಳೆದ ಲಕ್ಷ್ಮೀಕಾಂತ ... ಶ್ರೀ ಶಾಂತಮುನಿ ನಿಧಿಗೆ ... ಭಕ್ತಾದಿಗಳು ಉದಾರವಾ... ಮಾಡಬೇಕೆಂದು ಕೋರಲಾ...

ಪ್ರಧಾನ ಸಚಿವರ ಭೇಟಿ

ಗಾಂಧೀ ನಿಧಿಗೆ ೫೮೭ ರೂ. ಸಂಗ್ರಹ

ಆಗರ ೨೦

ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೊನ್ನೆ ದಿನ ಇಲ್ಲಿಗೆ ಭೇಟಿ ಇತ್ತರು. ಗ್ರಾಮ ನಿವಾಸಿಗಳು ಬಸವೇಶ್ವರನ ದೇವಸ್ಥಾನದ ಬಳಿ ಹಸರು ವಾಣಿ ಚಪ್ಪರದಲ್ಲಿ ಅವರಿಗೆ ಸ್ವಾಗತ ನೀಡಿದರು. ಪ್ರಧಾನ ಮಂತ್ರಿಗಳು ನೊಣಲು ಮಾಂಬಳ್ಳಿಗೆ ಭೇಟಿ ಇತ್ತರು. ಅಲ್ಲಿ ಹರಿಜನರೂ ಮತ್ತು ಇತರರೂ ಅವರಿಗೆ ಪುಷ್ಪಹಾರವನ್ನು ಅರ್ಪಿಸಿ ಸ್ವಾಗತವನ್ನು ಇತ್ತರು. ಅನಂತರ ಶ್ರೀ ಎಂ ಎಸ್ ಬಸವಣ್ಣದೇವರುರವರ ಮನೆಯ ಬಳಿ ಸತ್ಕಾರವನ್ನು ನೀಡಲಾಯಿತು. ತರುವಾಯ ಆಗರದ ಗಣಪತಿ ದೇವಸ್ಥಾನದಲ್ಲಿ ಸಭೆಯು ಸೇರಿತ್ತು.

ಶ್ರೀ ಆಗರಂ ರಂಗಯ್ಯನವರು ಪ್ರಧಾನಿಗಳಿಗೂ ಮತ್ತು ಇತರ ಮಹನೀಯರುಗಳಿಗೂ ಸ್ವಾಗತವನ್ನು ನೀಡಿ, ಅವರ ಆಗಮನದಿಂದ ಗ್ರಾಮದ ಕುಂದುಕೊರತೆಗಳು ನಿವಾರಣೆಯಾಗಲೆಂದು ಆಶಿಸಿದ್ದಾರೆ.

ಆಗರ-ಮಾಂಬಳ್ಳಿ ಪೌರಸಭೆಯ ಪರವಾಗಿ ಶ್ರೀ ಶ್ರೀನಿವಾಸಲು ಉಪಾಧ್ಯರು ಬಿನ್ನವತ್ತಳೆಯನ್ನು ಓದಿ ಸಚಿವರಿಗೆ ಒಪ್ಪಿಸಿದರು. ಅಲ್ಲಿದ್ದ ಸ್ಥಳದ ಹಲವು ವಿದ್ಯಮಾನಗಳ ವಿಚಾರವಾಗಿ ಅಹವಾಲುಗಳನ್ನು ಸಹ ಮಾಡಿ ಕೊಳ್ಳಲಾಯಿತು. ಮುಖ್ಯವಾಗಿ ಮಧ್ಯದ ಅಂಗಡಿಗಳನ್ನು ತೆಗೆದು ಹಾಕಿದ್ದರೂ ಕ್ರಿಸ್ಪ ಯಳಂದೂರಿನಿಂದ ನೂರಾರು ಜನರು ಪ್ರತಿದಿನವೂ ಬೈಸಿಕಲ್ಲುಗಳ ಮೇಲೆಯೂ ಇತರ ವಿಧದಲ್ಲಿಯೂ ಅದನ್ನು ತಂದು ಕಾಳಸಂತೆಯಲ್ಲಿ ಮಾರುತ್ತಿರುವುದನ್ನು ತಪ್ಪಿಸಬೇಕೆಂದು ಕೋರಲಾಯಿತು. ಆಗರ ಮತ್ತು ಮಾಂಬಳ್ಳಿಗಳು ಒಂದೇ ಪೌರಸಭೆಯ ಎಲ್ಲೆ ಕಟ್ಟಿನಲ್ಲಿದ್ದರೂ ಮಾಂಬಳ್ಳಿಯ ಆಕ್ಕಿ ಗಿರಣಿಗಳಿಗೆ ಹೋಗಿ ಬರುವ ಅಲ್ಪ ಸ್ವಲ್ಪ ಭತ್ತದ ಮೂಟೆಗಳಿಗೂ ಪೋಲೀಸಿನವರು ಅಡ್ಡಿಯನ್ನು ಒಡ್ಡಿ ಕಿರುಕುಳವನ್ನು ಕೊಡುತ್ತಿರುವ ಅಂಶವನ್ನೂ ತಿಳಿಸಲಾಯಿತು. ಮುಖ್ಯವಾಗಿ ವ್ಯವಸಾಯಕ್ಕೆ ಆಧಾರವಾಗಿರುವ ಕೆರೆಯನ್ನು ದುರಸ್ತುಮಾಡುವ ಅಂಶವನ್ನೂ ಒತ್ತಾಯ ಪಡಿಸಲಾಯಿತು.

ಪ್ರಧಾನ ಮಂತ್ರಿಗಳು ಉತ್ತರವಿತ್ತು ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರದವರು ಸರ್ವ ಪ್ರಯತ್ನಗಳನ್ನೂ ಮಾಡುವುದಾಗಿ ಭರವಸೆ ಇತ್ತರು ಮತ್ತು ಸರ್ಕಾರದ ಕಾರ್ಯಕ್ರಮಗಳಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಧಾನ್ಯ ಸಂಗ್ರಹದ ನೀತಿಯನ್ನು ವಿವರಿಸಿ ರೈತರಿಗೂ ಬೆಳೆಯುವವರಿಗೂ ಯಾವ ತೊಂದರೆಯೂ ಇಲ್ಲದಂತೆ ಮಾಡಿ ಅಭಾವವಿರುವ ಪ್ರದೇಶಗಳಿಗೆ ಆಹಾರವನ್ನು ಒದಗಿಸುವುದೇ ಸರ್ಕಾರದ ಮುಖ್ಯ ಉದ್ದೇಶವೆಂದು ಹೇಳಿದರು. ಸರ್ಕಾರದವರು ಒದಗಿಸುವ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಗ್ರಾಮಸ್ಥರು ದೇಶದ ಸಂಪದಭಿವೃದ್ಧಿಯಲ್ಲಿ ಹೆಚ್ಚು ಭಾಗಿಗಳಾಗಬೇಕೆಂದು ಹಾರೈಸಿದರು.

ನೆಹರೂರವರು ಮೈಸೂರಿಗೆ ಬರುವರು.

ಸ್ವಂ. ಸು ಫೋನ್] ಬೆಂಗಳೂರು ೨೨

ಇತ್ತೀಚೆಗೆ ಬಂದಿರುವ ಅಧಿಕೃತ ಸುದ್ದಿ ಪ್ರಕಾರ ಭಾರತ ಪ್ರಧಾನಿ ಪಂಡಿತ ನೆಹರೂರವರು ಇಲ್ಲಿಗೆ ಡಿಸೆಂಬರ್ ೨೬ನೇ ತಾ॥ ಸಂಜೆ ಆಗಮಿಸುವರು. ೨೭ನೇ ತಾ॥ ಪ್ರಾಂತಿಯ ಸಭೆಯ ಮಾನಪತ್ರವನ್ನು ಸ್ವೀಕರಿಸಿ, ರೇಸ್ ಕೋರ್ಸಿನಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು. ಅವರು ಮೈಸೂರಿಗೆ ಆಗಮಿಸಿ ೨೮ ನೇ ತಾ॥ ಬೆಳಗ್ಗೆ ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವದಲ್ಲಿ ಭಾಗವಹಿಸಿ, ಪದವಿಯನ್ನು ಸ್ವೀಕರಿಸಿ ... ಪ್ರಯಾಣ ಬೆಳಸುವರು ೨೯ನೇ ತಾ॥ ಬೆಳಗ್ಗೆ ಮೈಸೂರಿನಿಂದ ದೆಹಲಿಗೆ ವಿಮಾನದಲ್ಲಿ ಪ್ರಯಾಣಮಾಡುವರು.

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಭೆ

ಮೈಸೂರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸಂಘದ ... ಕಾರ್ಯಕಾರಿ ಸಭೆಯು ಕಳೆದ ೧೮ನೇ ತಾ॥ ನಡೆದು, ಮುಂದಿನ ತಿಂಗಳು ದೆಹಲಿಯಲ್ಲಿ ನಡೆಯುವ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ನಿರ್ಧರಿಸಲಾಯಿತು. ವಿದ್ಯಾರ್ಥಿಗಳ ಸಂಘಟನೆಗಾಗಿ ಎಲ್ಲರೂ ದುಡಿಯಬೇಕೆಂದು ಕೋರುವ ನಿರ್ಣಯ ಮಾಡಲಾಯಿತು. ಸಂಘಗಳ ತಾತ್ಕಾಲಿಕ ಕಾರ್ಯಕಾರಿ ಸಮಿತಿಗಳನ್ನು ಆರಿಸಲಾಯಿತು

ಎಲ್ ಸಂಜೀವಾಚೇ ಅರಸಿನವರು ಗಾಂಧಿಜಿನಿಧಿಗೆ ಸಹಾಯವನ್ನು ಕೋರಿ ಭಾಷಣಮಾಡಿದರು. ಶ್ರೀ ಆಗರಂ ರಂಗಯ್ಯನವರು ಗಾಂಧಿ ಸ್ಮಾರಕ ನಿಧಿಗಾಗಿ ೧೦೧ ರೂ ಸಲ್ಲಿಸಿದರು ಶ್ರೀ ನಾಗರಾಜಪ್ಪನವರಿಂದ ಧನ್ಯವಾದ ಸಮರ್ಪಣೆಯಾದನಂತರ ಜಯಕಾರದೊಡನೆ ಸಭೆಯು ಮುಗಿಯಿತು.

ಅನಂತರ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಪ್ರಧಾನ ಸಚಿವರೂ ಮತ್ತು ಇತರರೂ ಭಾಗವಹಿಸಿದ್ದರು. ಪ್ರಧಾನಿಗಳಿಗೆ ಅರ್ಪಿಸಲಾದ ಪುಷ್ಪಹಾರಗಳನ್ನೂ: ನೋಟಿನ ಹಾರಗಳನ್ನೂ ಗಾಂಧೀ ಸ್ಮಾರಕ ನಿಧಿಗಾಗಿ ಹರಾಜು ಮಾಡಲಾಗಿ ಈ ಕೆಳಗೆ ಕಂಡವರು ಅವುಗಳನ್ನು ಕೊಂಡುಕೊಂಡರು:—

ಶ್ರೀ ಎಂ.ವಿ ವೆಂಕಟಪ್ಪನವರು ೧೦೧ ರೂ, ಶ್ರೀನಿವಾಸ ಶ್ರೀ ನಾಗರಾಜಪ್ಪನವರು, ಆಗರಂ ರಂಗಯ್ಯನವರು, ಕೆ. ಕೆಂಪೇಗೌಡರು, ತಲಾ ೫೧ ರೂ. ಶ್ರೀ ಎಂ ಮಾದಯ್ಯನವರು ೧೧...

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ... ರೂ ಕಾಂಗ್ರೆಸ್ ... ಯವರು ೧೫೦ ರೂ ... ಸಲ್ಲಿಸಿದರು.

ಅಮೇರಿಕಕ್ಕೆ ಸತಿ ಚಿಯಾಂಗ್‌ರವರ ಮನವಿ

ಚೀಣಾದ ಪರಿಸ್ಥಿತಿಯು ವಿಷಮಿಸುತ್ತಾ ಬರುತ್ತಿದೆಯೆಂದೂ, ಅಮೇರಿಕವು ಕೂಡಲೇ ತನ್ನ ಸಹಾಯಗಳನ್ನು ನೀಡಬೇಕೆಂದೂ ಚೀಣಾದ ಅಧ್ಯಕ್ಷ ಚಿಯಾಂಗ್ ಕೈ ಷೇಕರ ಪತ್ನಿ ಮೇಡಂ ಕೈಷೇಕ್‌ರವರು ಅಮೇರಿಕದ ಅಧ್ಯಕ್ಷ ಟ್ರೂಮನ್‌ರಿಗೆ ಮನವಿಮಾಡಿಕೊಂಡಿದ್ದಾರೆ. ಚೀಣಾವು ಪತನವಾದರೆ ಇಡೀ ಏಷ್ಯಾ ಖಂಡವೇ ಕಮ್ಯೂನಿಸ್ಟರ ವಶವಾಗುವುದೆಂದು ತಿಳಿಸಿದ್ದಾರೆ.

ಚೀಣಕ್ಕೆ ಕೂಡಲೇ ಅಗಾಧ ಸೈನ್ಯ ಸಹಾಯ ಮತ್ತು ಹಣವನ್ನು ಅಮೇರಿಕವು ಕೊಡದಿದ್ದಲ್ಲಿ ದೇಶವು ಕಮ್ಯೂನಿಸ್ಟರ ಕೈ ಬೀಳುವುದೆಂದು ಅಧ್ಯಕ್ಷ ಚಿಯಾಂಗ್ ಕೈ-ಷೇಕ್‌ರವರು ಅಮೇರಿಕಕ್ಕೆ ಕಳೆಯುತ್ತಾ ರೆ ಮನವಿ ಮಾಡಿಕೊಂಡಿದ್ದಾರೆ.

ನಿರಪರಾಧಿಯೆಂದು ಸಾವರ್‌ಕರರ ಹೇಳಿಕೆ.

ಮಹಾತ್ಮಾ ಗಾಂಧಿ ಕೊಲೆ ಮೊಕದ್ದಮೆಯಲ್ಲಿ ೭ನೇ ಆಪಾದಿತರಾದ ಸಾವರ್‌ಕರರು ತಾವು ನಿರಪರಾಧಿಗಳೆಂದೂ, ಮಹಾತ್ಮರನ್ನು ಕೊಲೆ ಮಾಡಲು ತಾವು ಯಾವ ಪಿತೂರಿದಲ್ಲೂ ಭಾಗ ವಹಿಸಲಿಲ್ಲವೆಂದೂ ತಿಳಿಸಿರುತ್ತಾರೆ. ಇತರ ನಾಯಕರುಗಳು ದೇಶದ ಸ್ವಾತಂತ್ರ್ಯಕ್ಕಾಗಿ ಎಷ್ಟು ಸೇವೆ ಸಲ್ಲಿಸಿದ್ದಾರೋ ಅಷ್ಟೇ ಸೇವೆಯನ್ನು ತಾವೂ ಸಹ ೫೦ ವರ್ಷಗಳ ಕಾಲ ಸಲ್ಲಿಸಿರುವುದಾಗಿ ಅವರು ಹೇಳಿದ್ದಾರೆ

ಭಾವಿಗೆ ಬಿಳಲು ಪ್ರಯತ್ನ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿ ೦.ವ ಹೊಂಬಾಳಮ್ಮ ಎಂಬ ಮುದುಕಿಯು ಈ ದಿನ ಬೆಳಗಿನ ಜಾವದಲ್ಲಿ ಆಸ್ಪತ್ರೆಯ ಪಕ್ಕದ ತೋಟದಲ್ಲಿರುವ ಭಾವಿಯಾಳಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳೆಂದೂ, ಅನಂತರ ಅವರು ಅಳೆಯುತ್ತಾ ಮೇಲಕ್ಕೆ ಎತ್ತಿ ರಕ್ಷಿಸಿದರೆಂದೂ ವರದಿಯಾಗಿದೆ ಭಾವಿಯಲ್ಲಿ ಹೆಚ್ಚಿಗೆ ನೀರಿರಲಿಲ್ಲವಾದುದರಿಂದ ಆಕೆಗೆ ಅಪಾಯ ಸಂಭವಿಸಲಿಲ್ಲವೆಂದೂ ಹೇಳಲಾಗಿದೆ

ಹ ರಿ ಕ ಥೆ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯ ಬಳಿ ಈ ರಾತ್ರಿ ೮॥ ಗಂಟೆಗೆ ಶ್ರೀ ಸೋಸಲೆ ಕೃಷ್ಣದಾಸರವರಿಂದ "ಪ್ರಹ್ಲಾದ" ಎಂಬ ಹರಿಕಥೆ ನಡೆಯುವುದು

ನೆಹರೂ ಜನ್ಮ ದಿನೋತ್ಸವ

ಕಳೆದ ಸೋಮವಾರ ಮಹಿಳಾ ಸಮಾಜದಲ್ಲಿ ಪಂಡಿತ ಜವಹರಲಾಲ್ ನೆಹರೂರವರ ಜನ್ಮ ದಿನೋತ್ಸವವನ್ನು ಶ್ರೀ ಕಾಂತಿಲಾಲ್ ಗಾಂಧಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರಾರ್ಥನಾನಂತರ ಶ್ರೀ ನಾಡಿಗ ಕೃಷ್ಣರ ... ಯವರೂ, ವಯಸ್ಕರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ... ನ ಭದ್ರಯ್ಯನವರೂ ನೆಹರೂರವರ ಜೀವನ ಪರಿಚಯವನ್ನೂ, ಅವರು ಪೂಜ್ಯ ಬಾಪೂಜಿಯವರ ಪಟ್ಟ ಶಿಷ್ಯರಾಗಿ ಭಾರತಕ್ಕೆ ಅಂತರ ರಾಷ್ಟ್ರೀಯ ಮನ್ನಣೆಯನ್ನು ಗಳಿಸುವುದನ್ನೂ ಕುರಿತು ಭಾಷಣಗಳನ್ನು ಮಾಡಿದ ತರುವಾಯ, ಅಧ್ಯಕ್ಷರು ಇಂತಹ ಸಮಾರಂಭಗಳಲ್ಲಿ ಭಾರತ ಪ್ರಜೆಗಳಾದ ನಾವು ಯಾವ ರೀತಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ದೇಶದ ಕಲ್ಯಾಣವನ್ನು ಸಾಧಿಸಬಹುದು - ಎಂಬ ಅಂಶಗಳನ್ನು ತಿಳಿಸಿದರು ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸಂಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚುತ್ತಿದೆ

ಅಕ್ಷರ ಪ್ರಚಾರ ಸಮಿತಿಯ ಸ್ತುತ್ಯ ಕಾರ್ಯ

ಮೈಸೂರು ೨೨

ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯವರು ಮೊನ್ನೆ ದಿನ ಪತ್ರಿಕಾ ಗೋಷ್ಠಿಯನ್ನು ಕರೆದು ಅಕ್ಷರ ಪ್ರಚಾರ ಸಮಿತಿಯು ಕಳೆದ ಒಂಭತ್ತು ವರ್ಷಗಳಿಂದ ನಡೆಸುವ ಕಾರ್ಯಕ್ರಮಗಳನ್ನು ವಿವರಿಸಿದರು ಅಕ್ಷರ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ಮರಿಯಪ್ಪ ಗೌಡರೂ, ಕಾರ್ಯದರ್ಶಿ ಶ್ರೀ ನ ಭದ್ರಯ್ಯನವರೂ, ಚೀಫ್ ಎಗ್ಸಿಕ್ಯುಟಿವ್ ಅಧಿಕಾರಿಗಳಾದ ಶ್ರೀ ಎ ಸಿ ದೇವೇಗೌಡರೂ ಮತ್ತು ಇತರ ಅಧಿಕಾರಿಗಳೂ ಹಾಜರಿದ್ದರು.

ಶ್ರೀಗಳಾದ ಎ. ಸಿ. ದೇವೇಗೌಡರು ಮತ್ತು ನ ಭದ್ರಯ್ಯನವರು ಪತ್ರಿಕಾ ಪ್ರತಿನಿಧಿಗಳು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರವಿತ್ತು ಈ ರೀತಿ ತಿಳಿಸಿದರು:-

ಅಕ್ಷರ ಪ್ರಚಾರ ಕಾರ್ಯವು ಆರಂಭವಾದಾಗಿನಿಂದ ವರ್ಷವರ್ಷವೂ ಅನಕ್ಷರಸ್ಥರು ಕಡಿಮೆಯಾಗುತ್ತಿದ್ದಾರೆ. ಕಲಿತ ಪಾಠವನ್ನು ಮರೆಯದಂತೆ ಮಾಡಲು ಹಳ್ಳಿಗಳಲ್ಲಿ ಪುಸ್ತಕ ಭಂಡಾರಗಳನ್ನು ತೆರೆದು ವಯಸ್ಕರಿಗೆ ಉಪಯುಕ್ತವಾಗುವ ಮತ್ತು ಜ್ಞಾನಾರ್ಜನೆಗೆ ಸಹಕಾರಿಯಾಗುವಂತಹ ಪುಸ್ತಕಗಳನ್ನು ಇಡಲಾಗುತ್ತಿದೆ ಇನ್ನು ಮುಂದೆ ಸಂಚರಿಸುವ ಪುಸ್ತಕ ಭಂಡಾರವನ್ನು ಏರ್ಪಡಿಸುವ ಯೋಚನೆ ಸಹ ಇದೆ ಅಕ್ಷರ ಪ್ರಚಾರ ಸಮಿತಿಯವರು ವಯಸ್ಕರಿಗೆ ಉಪಯುಕ್ತವಾಗುವಂತಹ ರೀತಿಯಲ್ಲಿ ಇದುವರೆಗೆ ನಾನಾ ವಿಷಯಗಳ ಮೇಲೆ ಸುಮಾರು ೧೮೦ ಪುಸ್ತಕಗಳನ್ನು ಪ್ರಕಟಿಸಿರುವರು. ಇವುಗಳನ್ನು ಸಹ ಪುಸ್ತಕ ಭಂಡಾರಗಳಿಗೆ ಒದಗಿಸಲಾಗುತ್ತಿದೆ. ಅಕ್ಷರಸ್ಥರಿಗೆ ಪತ್ರಿಕೆಯನ್ನು ಓದುವ ಅಭ್ಯಾಸ ಉಂಟುಮಾಡಲು ಸಮಿತಿಯು ಪ್ರಚಾರಕ್ಕಾಗಿ "ಬೆಳಕು" ವಾರ ಪತ್ರಿಕೆಯನ್ನು ಹೊರಡಿಸುತ್ತಿದೆ. ಇದರಲ್ಲಿ ಪ್ರಚಾರ ಕಾರ್ಯದ ಅಂಕಿಅಂಶಗಳನ್ನೂ ಸಂಸ್ಥಾನದ ಬಹು ಮುಖ್ಯ ಸುದ್ದಿಗಳನ್ನೂ ಪ್ರಕಟಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಯವರು, ಕ್ಷೇತ್ರದ ಮಹಾಜನರು ಮತ್ತು ಸರ್ಕಾರದವರು ಕೊಡುವ ಸಹಾಯ ಸಹಕಾರವನ್ನು ಸ್ವೀಕರಿಸಿ ಅಕ್ಷರಸ್ಥರಿಗೆ ಶಕ್ತಿ ಮಾಡಲಾಗಿದೆ, ಪುಸ್ತಕ ಭಂಡಾರ ಮುಂತಾದವುಗಳನ್ನು ತೆರೆದು ಅವರೇ ಅವುಗಳನ್ನು ನಡೆಸಲು ಏರ್ಪಾಟು ಮಾಡಲಾಗಿದೆ. ಮಹಿಳೆಯರಿಗಾಗಿ ಅನೇಕ ತರಗತಿಗಳನ್ನು ತೆರೆಯಲಾಗಿದೆ. ಇದರ ಮೇಲ್ವಿಚಾರಣೆಗೆ ಮಹಿಳೆಯರನ್ನೇ ನೇಮಿಸಲಾಗಿದೆ.

ಪ್ರಚಾರ ಕಾರ್ಯವು ಆರಂಭವಾದಾಗ ಉರ್ದು, ತಮಿಳು, ಕನ್ನಡ ಈ ಮೂರು ಭಾಷೆಗಳಲ್ಲಿಯೂ ಅಕ್ಷರ ಪ್ರಚಾರ ನಡೆಯುತ್ತಿತ್ತು. ಆದರೆ ಇನ್ನು ಮುಂದೆ ಕನ್ನಡ ತರಗತಿಗಳನ್ನು ಮಾತ್ರ ತೆರೆಯಲಾಗುವುದು, ಹಳ್ಳಿಗಳನ್ನು ಜಾಗೃತಗೊಳಿಸಿ, ಕೊಂಡು ಹೊಸ ಕಲೆಗಳನ್ನು ಮನಗಾಣಿಸಿ ಹೊಂದಿಸಿ, ಭಾರತದ ಮತ್ತು ಇತರ ಭಾಗಗಳಲ್ಲಿನ ಜನರ ಕೈಗಾರಿಕೆಗಳನ್ನು ತಿಳಿಸಲು ಚಿತ್ರಪ್ರದರ್ಶನದ ಮೂಲಕ ಪ್ರಚಾರ ಮಾಡಲಾಗುತ್ತಿದೆ ಈ ಚಿತ್ರಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ಪ್ರದರ್ಶಿಸಲು ಒಂ-

ಆಂಧ್ರ ವಿಶ್ವವಿದ್ಯಾಲಯದಲ್ಲಿ ಠಾಕೂರರ ವಿಗ್ರಹ

ಭಾರತದ ಪ್ರಸಿದ್ಧ ಕವಿ ರವೀಂದ್ರನಾಥ ಠಾಕೂರರ ಕಂಚಿನ ವಿಗ್ರಹವನ್ನು ವಾಲ್ಟೇರಿನಲ್ಲಿರುವ ಆಂಧ್ರ ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜಿನಲ್ಲಿ ಸ್ಥಾಪಿಸಲಾಗುವುದು. ಮದರಾಸಿನ ಅರ್ಥಕ ಸಚಿವ ಶ್ರೀ ಗೋಪಾಲ ರೆಡ್ಡಿಯವರು ಈ ಸಮಾರಂಭವನ್ನು ಬರುವ ತಿಂಗಳು ೧೧ ನೇ ತಾ॥ ನೆರವೇರಿಸುವರು

ಹ ರಿ ಕ ಥೆ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಚೌಕದ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಗಮಕಿ ಹೆಚ್ ರಾಮಕೃಷ್ಣ ಶಾಸ್ತ್ರಿಯವರಿಂದ ಹರಿಶ್ಚಂದ್ರ ಎಂಬ ಹರಿಕಥೆ ನಡೆಯುವುದು

ದೊಂದು ವ್ಯಾನುಗಳನ್ನು ಇಡಲು ಏರ್ಪಾಡು ಮಾಡಲಾಗುವುದು.

ವಾರ್ಧಾ, ಶಾಂತಿನಿಕೇತನ ಮುಂತಾದ ಕಡೆಗಳಲ್ಲಿರುವ ಗುರುಕುಲಗಳಂತೆ ವಿದ್ಯಾಭ್ಯಾಸದ ಜೊತೆಗೆ ವ್ಯವಸಾಯ, ಕೈಗಾರಿಕೆ ಮುಂತಾದುವನ್ನು ಕಲಿಸಲು ಸಂಘಸಂಸ್ಥೆಗಳು ವಿದ್ಯಾಪೀಠವನ್ನು ತೆರೆದು ಸಮಾರು ನೆಲವನ್ನು ಮುಂದಿಗೆ ಶಿಕ್ಷಣ ಕೊಡಲಾಗುತ್ತಿದೆ ಹಾಸನದ ಬಳಿ ಮತ್ತು ಚಿತ್ರದುರ್ಗದ ಜಿಲ್ಲೆಯಲ್ಲಿಯೂ ವಿದ್ಯಾಪೀಠವನ್ನು ಆರಂಭಿಸುವ ಯೋಚನೆ ಇದೆ

ವಿದ್ಯಾಪೀಠದಲ್ಲಿ ಅಕ್ಷರ ಪ್ರಚಾರದ ಜೊತೆಗೆ ವಯಸ್ಕರಿಗೆ ಪ್ರತಿನಿತ್ಯವೂ ವಿವಿಧ ವಿಷಯಗಳನ್ನು ತಿಳಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ ಕೈಲು,ಗರಡಿ,ಕಥೆಗಳು ಮುಂತಾದವುಗಳಲ್ಲಿ ತರಗತಿಗಳನ್ನು ತೆರೆಯಲಾಗಿದೆ

ಅಧ್ಯಕ್ಷರಾದ ಶ್ರೀ ಟಿ ಮರಿಯಪ್ಪಗೌಡರು ಎಲ್ಲರಿಗೂ ವಂದನೆ ಅರ್ಪಿಸಿದನಂತರ ವಿದ್ಯಾ ಪ್ರಚಾರದ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿ ಮುನಿಸಿಪಲ್ ನಂಬರಿ ಮನೆ ನಂಬರ್ 65 ಬಾಡಿಗೆಗಿದೆ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿರಿ.

ಸಾಧ್ವಿ ಕಛೇರಿ, ಮೈಸೂರು.

Edited printed and published by A.R. Nagarajan at the Sadhvi Press D Subbaiah Road Mysore.

ನೂಲುವ ಸ್ಪರ್ಧೆ

ಮೈಸೂರು ೨೨

ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಪ್ರತಿ ತಿಂಗಳಿನಲ್ಲಿಯೂ ನೂಲುವ ಸ್ಪರ್ಧೆಯನ್ನು ಏರ್ಪಡಿಸಬೇಕೆಂದಿರುವ ಕಾರ್ಯಕ್ರಮದ ಪ್ರಕಾರ ಮೊದಲನೆಯ ಸ್ಪರ್ಧೆಯು ನಿನ್ನೆ ಸಂಜೆ ರೆಲ್ಲಿ ಮೊಹಲ್ಲಾ ಮಹಾತ್ಮಾ ಬಸ್ಕಲ್ ಫ್ಯಾಕ್ಟರಿ ಕಟ್ಟಡದಲ್ಲಿ ನಡೆಯಿತು ಅನೇಕ ಜನ ತರುಣ ತರುಣಿಯರು ಭಾಗವಹಿಸಿದ್ದರು ೫ ಬಾರಿ ಒಂದೇ ಸಮನೆ ಸ್ಪರ್ಧೆಯಲ್ಲಿ ಜಯಿಸುವವರಿಗಾಗಿ ಶ್ರೀ ಟಿ ಎ ಗೋವಿಂದರಾಯರು ಇಟ್ಟಿರುವ ರೋಲಿಂಗ್ ಷೀಲ್ಡ್ ಬಹುಮಾನವು ಮಹಿಳಾ ಸದನಕ್ಕೆ ಕೊಡಲ್ಪಟ್ಟಿತು. ಶ್ರೀ ಅಗರಂ ವೆಂಕಟರಾಮಾ ಪಂಡಿತರವರು ಕೊಟ್ಟಿದ್ದ ಮೊದಲನೇ ಬೆಳ್ಳಿಯ ಬಟ್ಟಲು ಬಹುಮಾನವು ಶ್ರೀಮತಿ ಬಿ ಲಲಿತಾರವರಿಗೂ ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಮಿತಿಯವರಿಂದ ಕೊಡಲಾಗಿದ್ದ ಎರಡನೇ ಬಹುಮಾನವು ಶ್ರೀಮತಿ ಅಂಡಾಳ್‌ರವರಿಗೂ, ಶ್ರೀ ಎಂ ಕೃಷ್ಣಯ್ಯಂಗಾರ್‌ರವರಿಂದ ಕೊಡಲಾಗಿದ್ದ ೩ನೇ ಬಹುಮಾನವು ಶ್ರೀಮತಿ ೩ ದಿ ರಾಜರವರಿಗೂ ಕೊಡಲ್ಪಟ್ಟವು ಚೇತನಾ ಪುಸ್ತಕಾಲಯದ ಶ್ರೀ ನಾರಾಯಣಸ್ವಾಮಿಯವರಿಂದ ಕೊಡಲ್ಪಟ್ಟ ಬಾಪೂಜಿ ಜೀವನ ಚರಿತ್ರೆಯ ಪುಸ್ತಕವು ಶ್ರೀಮತಿ ಜ-

ಎಸ್. ವಿ. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಕೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾ ಮಲಕ ತೈಲ:—)
—ಕೇಶಗೆ ಕಾಂತಿ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ— ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ.

ಮಹಾಕೇಶಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಕೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ಯಲಕ್ಷ್ಮಮ್ಮನವರಿಗೆ ಕೊಡಲ್ಪಟ್ಟಿತು

ಶ್ರೀ ಅಗರಂ ರಂಗಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ವಿನಿಯೋಗ ಮಾಡಿದರು ಶ್ರೀ [illegible] ರಂ ಸೂರ್ಯನಾರಾಯಣ ಪಂಡಿತರು [illegible] ಧ ಕನ್ನಡ ಮೇಲೆ ಭಾಷಣ ಮಾಡಿ[illegible]

ಸಹಾಯಾರ್ಥ ನಾಟಕ

ರಾಜಧಾನಿಯ ನಜರಬಾದಿನಲ್ಲಿ[illegible] ದುರ್ಗಾದೇವಿ ಗುಡಿಯ ನಿಧಿಯ [illegible]ಯಾರ್ಥವಾಗಿ ಶ್ರೀ ಗುಬ್ಬಿ ಚನ್ನಬಸವ[illegible] ಕೃಪಾ ಪೋಷಿತ ನಾಟಕ ಮಂಡಲಿಯವರು ನಾಳೆ ಕುರುಕ್ಷೇತ್ರ ಎಂಬ ನಾಟಕವನ್ನು ಅಭಿನಯಿಸುವರು. ಶ್ರೀ ಎಸ್ [illegible]ಯ್ಯನವರು ಅಧ್ಯಕ್ಷತೆ ವಹಿಸುವರು.

Mysore State Railw[ay]

—:o:—

Tenders for running Western Style Refreshment Rooms

Tenders are called for catering service in Western Style at the following Stations on the Mysore State Railway for a period of three years commencing from 7th January 1949:—

1) Bangalore City
2) Mysore
3) Arsikere
4) Kadur
5) Harihar
6) Shimoga Town

The tenders will be received up to 3 P.M on 15th December 1948.

Particulars and tender form can be had from the Traffic Manager, Mysore State Railway, Mysore.

Mir Inayeth Hussain,
Traffic Manager,

Dated 19th November 1948.
Traffic Manager's Office
MYSORE

ಗೃಹಕೃತ್ಯದ ನೋಟೀಸು

ಮೈಸೂರು ಅರಮನೆ ಮೊಹಲ್ಲಾ ದಿವಾನ್ ರೋಡಿನಲ್ಲಿರುವ ದೊಡ್ಡ[illegible] ಉರುಫ್ ಮಹದೇವಪ್ಪನವರ ಪತ್ನಿ ಹಾಲಿ ಮೊಹಲಿಗೆ ಒಂದಿರುವ ಮಾ[illegible] ಜ್ಞಾನ ಈ ಮೂಲಕ ಸಮಸ್ತ ಜನರಿ[illegible] ತಿಳಿಯಪಡಿಸುವುದೇನೆಂದರೆ:-

ಮೈಸೂರು ಕೃಷ್ಣರಾಜ ಮೊಹಲ್ಲಾ [illegible]ಕೇರಿ ಒಂದಿಕೇರಿಯಲ್ಲಿರುವ ೬೬೪ ನೇ ನಂ[illegible] ಒರು ಮನೆಯನ್ನು ಹಾಲಿ ಸ. ಘಡೀನಲ್ಲಿ[illegible] ವ ನಮ್ಮಣ್ಣನು ಪರಭಾರೆ ಮಾಡದ[illegible] ದೂರ. ಮಾಡುತ್ತಿರುವುದಾಗಿ ವರ್ತಮಾ[illegible] ನವಿರುತ್ತೆ ಇದೋ ಮನೆಯು ನನ್ನ ಹಕ್ಕಿ[illegible]ಗೆ ಸೇರಿದ್ದಾಗಿರುತ್ತೆ ಆದ್ದರಿಂದ ಯಾರಾ[illegible] ದೂ ಮಾರಾಟ ಕ್ರಯ, ಭೋಗ್ಯ, ಆಧಾ[illegible] ವಗೈರ ಪರಭಾರೆ ಮಾಡಿಕೊಂಡಲ್ಲಿ ಅದ[illegible] ಬ ಮಂದೆ ಉಂಟಾಗಬಹುದಾದ ನಷ್ಟ[illegible] ಲಾಸ್ಸಿಗೆಲ್ಲಾ ಜುಂಬಾಯಾಗಬೇಕಾಗುತ್ತೆ[illegible] ಈ ಅಂಶವನ್ನು ಈ ಮೂಲಕ ತಿಳಿಸಿ ಇಕ್ಕ[illegible] ರಿಸಿದೆ.

ಶ್ರೀ ಗಾಯತ್ರೀ ಟಾಕೀಸ್

ತಾ॥ 24—11—48 ರಿಂದ 3 ದಿನಗಳು ಮಾತ್ರ

ಪ್ಯಾರಮೌಂಟ್‌ರವರ ಅದ್ಭುತ ಚಿತ್ರ

ದಿ ಜಂಗಲ್ ಪ್ರಿನ್ಸೆಸ್

ದಿನವಹಿ ಮೂರು ಆಟಗಳು

ಪಾತ್ರ:— ಡೊರತಿ ಲಾಮರ್ ಮತ್ತು ರಾಮಿಲಂಡ್

ಪ್ರಭುದೇವಾ ಟಾಕೀಸಿನಲ್ಲಿ

ಜೆಮಿನಿಯವರ ತಮಿಳು ಚಿತ್ರ

ಭಕ್ತನಂದನಾರ್

೨೪—೧೧—೪೮ರಿಂದ ದಿನವಹಿ ೩ ಆಟಗಳು

ಪಾತ್ರ: ದಂಡಪಾಣಿ ದೇಶಿಗರ್, ಸರಸ್ವತಿ ಶಾಸ್ತ್ರಿ ರಾಮು, ನಾರಾಯಣರಾವ್ ಮುಂತಾದವರು

ಸಂಪುಟ ೭] ಮಂಗಳವಾರ ೨೩-೧೧-೪೮ [ಸಂಚಿಕೆ ೧೨೨

ಸಂಧಿ ಮಾಡಿಕೊಳ್ಳಲು ಚೀಣಾ ಸೇನಾನಿ ಮನವಿ

ಬೊಂಬಾಯಿಲ್ಲಿ ಸಮುದ್ರ ಮಾರುತದ ಅನಾಹುತ

ಬೊಂಬಾಯಿಯಲ್ಲಿ ನೆನ್ನೆ ದಿವಸ ಸಮುದ್ರ ಪ್ರಚಂಡ ಬಿರುಗಾಳಿಯೆದ್ದು ಅದರ ಪರಿಣಾಮವಾಗಿ ವಿಪರೀತ ನಷ್ಟ ಸಂಭವಿಸಿದೆ. ಅದರ ವೇಗವು ಸುಮಾರು ಗಂಟೆಗೆ ... ಮೈಲಿಯಷ್ಟಿತ್ತೆಂದು ಹೇಳಲಾಗಿದೆ. ... ದಿಂದ ಸಮುದ್ರ ದಡದಲ್ಲಿದ್ದ ಅನೇಕ ... ಗಳಿಗೆ ಹಾನಿ ಆಗಿದೆ. ಗಾಳಿಯೊ... ಬಾಯಿನ ಉತ್ತರ ಭಾಗದಲ್ಲಿ ... ಮಳೆಯಾಗಿ ರಸ್ತೆಯು ... ದ ತುಂಬಿದೆ. ಅಂಚೆ ಮತ್ತು ಟೆಲಿಫೋನ್ ತಂತಿಗಳೆಲ್ಲಾ ಕತ್ತರಿಸಲ್ಪಟ್ಟಿವೆ. ಬೊಂಬಾಯಿ ನಿಂದ ಹೊರಕ್ಕೆ ಹೋಗುವ ... ಹೊರಗಿನಿಂದ ಅಲ್ಲಿಗೆ ಬರುವ ... ಮತ್ತು ವಿಮಾನಗಳೂ ... ವಾಗಿ ನಿಲ್ಲಿಸಲ್ಪಟ್ಟಿವೆ. ಟ್ರಾಂ ಮತ್ತು ಬಸ್ಸು ಓಡಿಯಾಟವೂ ಸಹ ನಿಂತಿದೆ. ... ರಾತ್ರಿಯೆಲ್ಲಾ ಬೊಂಬಾಯಿನಲ್ಲಿ ವಿದ್ಯುಚ್ಛಕ್ತಿ ನಿಂತುಹೋಗಿ ಕಾರ್ಗತ್ತಲು ಕವಿ... ರಸ್ತೆಗೆ ಅಡ್ಡಲಾಗಿ ಬಿದ್ದಿರುವ ಮರಗಳನ್ನು ತೆಗೆಯುವುದರಲ್ಲೂ, ಪಾಕೀಸ್ತಾನದ ಉತ್ತರ ಬೊಂಬಾಯಿನಲ್ಲಿ ನೆಲೆಸಿರು... ನಿರಾಶ್ರಿತರಿಗೆ ಸೌಲಭ್ಯಗಳನ್ನು ಕಲ್ಪಿಸುವುದರಲ್ಲೂ ಮಿಲಿಟರಿಯವರು ಉದ್ಯುಕ್ತರಾಗಿದ್ದಾರೆ.

ಈ ಅನಾಹುತದಲ್ಲಿ ೫ ಜನರು ಸತ್ತರೆಂದೂ, ೫೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ.

ಈಜಿಪ್ಟ ದೊರೆಯ ಮಕ್ಕಳ ಹಂಚಿಕೆ

ಈಜಿಪ್ಟಿನ ದೊರೆ ಫರೂಕ್ ಮತ್ತು ... ಫೌಜಿಯಾರವರ ವಿವಾಹ ವಿಚ್ಛೇದನದ ಸಂದರ್ಭದಲ್ಲಿ ಅವರ ೩ ಹೆಣ್ಣು ಮಕ್ಕಳ... ಇಬ್ಬರು ದೊರೆಯ ಹಸ್ತದಲ್ಲೂ ... ಮಗುವು ರಾಣಿಯ ಹಸ್ತದಲ್ಲೂ ... ನಿರ್ಧಾರವಾಗಿದೆ.

ಟೋಜೋರವರನ್ನು ಗಲ್ಲಿಗೇರಿಸುವುದಿಲ್ಲ.

ಪಿ ಎ.] ವಾಷಿಂಗ್ಟನ್ ೨೦

... ಮರಣದಂಡನೆಗೆ ಗುರಿಯಾಗಿರುವ ಜಪಾನಿನ ಮಾಜಿ ಪ್ರಧಾನಿ ಟೋಜೋರವರನ್ನು ಗಲ್ಲಿಗೇರಿಸುವುದನ್ನು ಮುಂದೆ ... ಜೀವಾವಧಿ ಶಿಕ್ಷೆಗೆ ಗುರಿಪಡಿಸಬಹುದೆಂದು ಹೇಳಲಾಗಿದೆ. ಟೋಜೋರವರನ್ನು ಗಲ್ಲಿಗೇರಿಸುವುದರಿಂದ ಅಮೇರಿಕಕ್ಕೆ ... ಲಾಭವೂ ಇಲ್ಲವೆಂತಲೇ ಅಮೇರಿಕದ ... ಅಲ್ಲಿನ ನ್ಯಾಯಾಧೀಶರುಗಳ ... ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುವುದರಿಂದಲೂ, ಅವರನ್ನು ಗಲ್ಲಿಗೇರಿಸುವ ... ಪರಿಣಾಮವನ್ನುಂಟು ಮಾಡುವುದಿಲ್ಲವೆಂದು ಇಲ್ಲಿ ಅಭಿಪ್ರಾಯಪಡಲಾಗಿದೆ.

ಕಳ್ಳ ಸಾಗಿಸಿದುದಕ್ಕೆ ದಂಡ

... ನರಸೀಪುರ ತಾಲ್ಲೂಕು ... ಮಾದಪ್ಪ ಮತ್ತು ಹೊಮ್ಮೆಗೌಡರು ... ತಿಂಗಳು ೧೮ನೇ ತಾ|| ರಾತ್ರಿ ... ಬೆಲ್ಲ ೨೦ ಸೇರು ... ಯನ್ನು ... ಬಿಡಿಗೆ ಸಾಗಿಸುತ್ತಿದ್ದರೆಂಬ ಅಪಾದನೆ ... ಮೇಲೆ ನಗರದ ಎರಡನೇ ಮುನಸೀಫ್ ... ಮಾದಪ್ಪನಿಗೆ ೨೫೦ ರೂ ಹೊಮ್ಮೆ... ನಿಗೆ ೨೦ ರೂ. ದಂಡವನ್ನು ವಿಧಿಸಿದ್ದಾರೆ.

ಎಲ್. ಎಂ. ಪಿ. ಪರೀಕ್ಷೆ ಫಲಿತಾಂಶ

ಇದೇ ಅಕ್ಟೋಬರ್ ತಿಂಗಳಿನಲ್ಲಿ ನಡೆದ ವಿಶ್ವ ವಿದ್ಯಾಲಯದ ಎಲ್ ಎಂ ಪಿ ಪರೀಕ್ಷೆಯಲ್ಲಿ ತೇರ್ಗಡೆಯಾದವರ ನಂಬರುಗಳು ಈ ರೀತಿ ಇವೆ: —

ಪ್ರಥಮ ಎಲ್ ಎಂ ಪಿ:-ಎರಡನೇ ದರ್ಜೆ- ೧, ೨ ೩ ೪ ೬ ೭ ೮ ೯ ೧೦ ೧೧ ೧೨ ೧೩ ೧೫ ೧೬ ೧೭,

ಎರಡನೇ ಎಲ್ ಎಂ ಪಿ:- ಎರಡನೇ ದರ್ಜೆ—೧೮ ೧೯ ೨೨ ೨೫ ೨೭ ೨೮ ೨೯ ೩೦ ೩೨ ೩೩ ೩೪ ೩೫ ೩೬ ೩೭ ೪೪ ೪೬ ೪೭ ೫೧ ೫೨ ೫೫ ೫೬ ೬೩ ೬೬ ೬೭ ೩ನೇ ಎಲ್ ಎಂ ಪಿ:- ಎರಡನೇ ದರ್ಜೆ—೭೦ ೭೧ ೭೨ ೭೩ ೭೪ ೭೫ ೭೬ ೭೮ ೭೯ ೮೧ ೮೩ ೮೪ ೮೮ ೮೯ ೯೨ ೯೪ ೯೫ ೯೬ ೮೭ ೯೮ ೯೯ ೧೦೦ ಕೊನೆಯ ಎಲ್ ಎಂ ಪಿ:- ಎರಡನೇ ದರ್ಜೆ—೧೦೩ ೧೦೪ ೧೦೫ ೧೦೬ ೧೧೧ ೧೧೨ ೧೧೫ ೧೧೬ ೧೧೮ ೧೧೯ ೧೨೦ ೧೨೧ ೧೨೨ ಪಾಸ್—೧೨೩, ೧೨೪ ೧೨೫, ೧೨೬

○ ಸರ್ಕಾರದ ಗುಪ್ತ ಇಲಾಖೆ ಸೂ|| ರಾದ ಶ್ರೀ ಮಲ್ಲೇಶಯ್ಯನವರನ್ನು ಅಸಿಸ್ಟೆಂಟ್ ಕಾರ್ಯದರ್ಶಿಗಳಾಗಿ ನೇಮಿಸಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೂ, ಶ್ರೀ ಕೆ ಎಂ ರಾಮಕೃಷ್ಣಯ್ಯನವರನ್ನು ಗುಪ್ತ ಇಲಾಖಾ ಅ|| ಕಾರ್ಯದರ್ಶಿಗಳಾಗಿಯೂ, ಶ್ರೀ ನಂಜುಂಡಯ್ಯನವರನ್ನು ಸ್ಥಳೀಯ ಸಂಸ್ಥೆಯ ಅ|| ಕಾರ್ಯದರ್ಶಿಯಾಗಿಯೂ ... ವರ್ಗಾಯಿಸಲಾಗಿದೆ.

ಜಯಪುರ ಕಾಂಗ್ರೆಸ್ಸಿಗೆ ಸ್ವಾತಂತ್ರ್ಯ ಜ್ಯೋತಿ

ಕಳೆದ ಬಾರಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ನಡೆದ ಮೀರತ್ತಿನಿಂದ ಸ್ವಾತಂತ್ರ್ಯ ಜ್ಯೋತಿಯನ್ನು ಹತ್ತಿಸಿ ಅದನ್ನು ಜಯಪುರಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸಲಾಗಿತ್ತಷ್ಟೆ ಆ ಜ್ಯೋತಿಯನ್ನು ನೆನ್ನೆ ಶ್ರೀ ಬಾಬು ಪುರುಷೋತ್ತಮದಾಸ್ ಟಾಂಡನ್ ರವರು ಹತ್ತಿಸಿದರು. ಈ ದಿನ ಅದನ್ನು ಜಯಪುರದ ಅಭಿಮುಖವಾಗಿ ಕೊಂಡೊಯ್ಯಲಾಯಿತು.

ಕಮ್ಯೂನಿಸ್ಟರನ್ನು ಹಿಮ್ಮೆಟ್ಟಿಸಲಾಯಿತು

ಉತ್ತರ ಚೀಣಾದಲ್ಲಿ ಸರ್ಕಾರಿ ಪಡೆಗಳು ಕಮ್ಯೂನಿಸ್ಟರನ್ನು ಹಿಮ್ಮೆಟ್ಟಿಸಿವೆಯೆಂದು ಮತ್ತು ಮಧ್ಯ ಚೀಣಾದಲ್ಲಿ ಕಮ್ಯೂನಿಸ್ಟರಿಗೂ ಸರ್ಕಾರಿ ಪಡೆಗಳಿಗೂ ಬಲವಾದ ಕದನ ನಡೆಯುತ್ತಿದೆಯೆಂದೂ ವರದಿಯಾಗಿದೆ.

ರಾಮಚಂದ್ರ ಕಾಕ್‌ರವರ ಬಿಡುಗಡೆ

ಕಾಶ್ಮೀರದ ಮಾಜೀ ಪ್ರಧಾನಿ ರಾಮಚಂದ್ರಕಾಕ್ ರವರಿಗೆ ೨ ವರ್ಷ ಕಠಿಣ ಸಜಾ ಮತ್ತು ೧೦ ಸಾವಿರ ರೂ. ಜುಲ್ಮಾನೆ ವಿಧಿಸಲಾಗಿತ್ತಷ್ಟೆ. ಅವರಿಗೆ ವಿಧಿಸಿರುವ ಶಿಕ್ಷೆಯನ್ನು ಅಲ್ಲಿನ ಸರ್ಕಾರದವರು ಪುನರ್ವಿಮರ್ಶೆಮಾಡಿ ನೆನ್ನೆ ಅವರನ್ನು ಬಿಡುಗಡೆ ಮಾಡಿದರು.

ಶ್ರೇಷ್ಠ ವೈದ್ಯಾಧಿಕಾರಿಗಳಿಗೆ ಜುಲ್ಮಾನೆ

ಸ್ವ. ಸಂ. ಪ್ರೋ] ಬೆಂಗಳೂರು ೨೩

... ಸ್ಥಾನದ ಸೀನಿಯರ್ ಸರ್ಜನ್‌ರಾದ ಶ್ರೀ ... ವಿ ಮಾಂಟೇರೋರವರು ಕಳೆದ ... ತಿಂಗಳಿನಲ್ಲಿ ಶೇಷಾದ್ರಿಪುರಂ ಕ್ರಿಕೆಟ್ ಕ್ಲಬ್ ... ರವರ ... ಮಧ್ಯ ಕಣ್ಣು ಮೋಟಾರನ್ನು ನಿಲ್ಲಿಸಿದ್ದಲು ಹೋಗಲು ಅಡಚಣೆ ಉಂಟುಮಾಡಿದರೆಂಬ ಅಪಾದನೆಯ ಮೇಲೆ ಅವರಿಗೆ ಈ ದಿನ ನಗರ ನ್ಯಾಯಾಧೀಶರು ೬೦ ರೂ. ಜುಲ್ಮಾನೆಯನ್ನು ವಿಧಿಸಿದರು,

ನೂತನ ಪ್ರಧಾನ ನ್ಯಾಯಾಧೀಶರು

ಶ್ರೀ ಮೇದಪ್ಪನವರು ಈ ದಿನ ಬೆಳಗ್ಗೆ ದಿವಾನ್ ಸಮಕ್ಷಮದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿ ೧೧-೧೫ ಗಂಟೆಗೆ ಶ್ರೇಷ್ಠ ನ್ಯಾಯಾಧೀಶರಾಗಿ ಅಧಿಕಾರವನ್ನು ವಹಿಸಿಕೊಂಡರು, ಅಡ್ವೊಕೇಟ್ ಜನರಲ್ಲರೂ ಮತ್ತು ಇತರ ವಕೀಲರೂ ಅವರನ್ನು ಅಭಿನಂದಿಸಿದರು,

ನೂತನ ಹೈಕೋರ್ಟ್ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿರುವ ಶ್ರೀಗಳಾದ ಶಂಕರಸ್ವಾಮಿ ಪಿಳ್ಳೆ ಮತ್ತು ಟಿ ಎ ವಲ್ಲಭನವರ ನಾಳೆ ದಿವಸ ಅಧಿಕಾರವನ್ನು ಸ್ವೀಕರಿಸುವರು

○ ರೆವಿನ್ಯೂ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಸಾಥೆಯವರಿಗೆ ನಿವೃತ್ತರಾಗುವುದಕ್ಕೆ ಮುನ್ನ ನಾಳೆಯಿಂದ ಎಪ್ರಿಲ್ ೪ನೇ ತಾ|| ವರೆವಿಗೆ ರಜಾ ಕೊಡಲಾಗಿದೆ. ಟೆಕ್ನಿಕಲ್ ಅಸಿಸ್ಟೆಂಟರಾದ ಶ್ರೀ ರಾಮಸ್ವಾಮಿಯವರು ತಮ್ಮ ಕೆಲಸದ ಜೊತೆಗೆ ಮೇಲ್ಕಂಡ ಕೆಲಸವನ್ನು ನೋಡಿಕೊಳ್ಳುವರು

○ ಇಷ್ಟರಲ್ಲೇ ಸರ್ಕಾರದವರು ಕೈಗಾರಿಕಾ ಕೋರ್ಟನ್ನು ಸ್ಥಾಪಿಸಿ, ಅದಕ್ಕೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರೊಬ್ಬರನ್ನು ಅಧ್ಯಕ್ಷರನ್ನಾಗಿ ... ನೇಮಿಸುವರೆಂದು ... ತಿಳಿದು ... ಬಂದಿದೆ

ಚೀಣಾವು ಕಮ್ಯೂನಿಸ್ಟರೊಡನೆ ಒಪ್ಪಂದ ಮಾಡಿಕೊಳ್ಳಬೇಕು.

ಚೀಣದ ರಾಜಧಾನಿ ನಾನ್‌ಕಿಂಗಿನ ರಕ್ಷಣಾ ಕೇಂದ್ರವಾದ ಸೂಚಾವ್ ನಗರಕ್ಕಾಗಿ ನಡೆಯುತ್ತಿರುವ ಯುದ್ಧದಲ್ಲಿ ಕಮ್ಯೂನಿಸ್ಟರ ಕೈ ಮೇಲಾಗಿರುವುದರಿಂದ, ಸರ್ಕಾರದವರು ಕೂಡಲೇ ಕಮ್ಯೂನಿಸ್ಟರ ಸಂಗಡ ಶಾಂತಿ ಒಪ್ಪಂದಕ್ಕಾಗಿ ಮಾತುಕತೆ ಪ್ರಾರಂಭಿಸಬೇಕೆಂದು ನಾಲ್ಕು ಮಂದಿ ಶ್ರೇಷ್ಠ ಸೈನ್ಯಾಧಿಕಾರಿಗಳಾದ ಜ|| ಪಾಂಗ್ ಚಿ ಚಂಗ್ ರವರೂ ಮತ್ತು ಮತ್ತಿಬ್ಬರು ನಾಯಕರೂ ಮನವಿ ಮಾಡಿರುತ್ತಾರೆ.

ಆತ್ಮಹತ್ಯೆ

ರಾಜಧಾನಿಯ ಹೊರವಾಗಿರ ... ನ್ಯಾಯ್ಯನಹಳ್ಳಿ ೧೮ ವರ್ಷದ ಸಿದ್ದಮ್ಮ ಎಂಬಾಕೆಯು ಹೊಟ್ಟೆ ನೋವನ್ನು ತಾಳಲಾರದೆ ಮೊನ್ನೆ ದಿವಸ ತಮ್ಮ ಮನೆಯ ಕೊಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ.

ರಸ್ತೆಯಲ್ಲಿ ಕಿರುಗಾಡಿದುದಕ್ಕೆ ಜುಲ್ಮಾನೆ

ಫುಟ್ ಪಾತುಗಳನ್ನು ಬಿಟ್ಟು ರಸ್ತೆಯ ಮಧ್ಯದಲ್ಲಿ ತಿರುಗಾಡುತ್ತಿದ್ದರೆಂಬ ಅಪಾದನೆಯ ಮೇಲೆ ಈ ದಿನ ದ್ವಿತೀಯ ನ್ಯಾಯಾಧೀಶರು ೨೬ ಜನರಿಗೆ ತಲಾ ೨ ರೂ ದಂಡವನ್ನು ವಿಧಿಸಿರುತ್ತಾರೆ

ಗಂಟೆಗೆ ೨೫ ಸಾವಿರ ಮೈಲಿ ಸಂಚರಿಸುವ ರಾಕೆಟ್

ಎ ಪಿ ಎ] ಲಂಡನ್ ೨೦

ಬ್ರಿಟನ್ನಿನಲ್ಲಿ ರಾಕೆಟ್ಟುಗಳ ತಯಾರಿಕೆ ಬಗ್ಗೆ ವಿಶೇಷ ಸಂಶೋಧನಾ ಕಾರ್ಯ ನಡೆದಿದೆಯೆಂದೂ, ಇವುಗಳನ್ನು ಯುದ್ಧಕ್ಕಾಗಿ ಉಪಯೋಗಿಸದೆ ಶಾಂತಿ ಪ್ರಗತಿಗಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ. ಗಂಟೆಗೆ ೨೫ ಸಾವಿರ ಮೈಲಿ ಸಂಚರಿಸಬಲ್ಲ ರಾಕೆಟ್ಟುಗಳನ್ನು ತಯಾರಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂದೂ ಇದು ಫಲಕಾರಿಯಾದಲ್ಲಿ ಪ್ರಪಂಚದಲ್ಲೇ ಅತಿ ವೇಗವಾದ ಸಾಧನವು ಏರ್ಪಡಲಿದೆ ಕೇವಲ ಒಂದು ಗಂಟೆಯಲ್ಲಿ ಪ್ರಪಂಚದ ಒಂದು ಕಡೆಯಿಂದ ಮತ್ತೊಂದು ಭಾಗಕ್ಕೆ ಹೋಗಲು ಅನುಕೂಲವಾಗುವುದೆಂದು ರಾಕೆಟ್ಟುಗಳ ತಯಾರಿಕೆಯ ಇಲಾಖಾ ಡೈರೆಕ್ಟರವರು ತಿಳಿಸಿರುತ್ತಾರೆ.

ಭಾರತವು ಕಾಮನ್‌ವೆಲ್ತ್‌ನಲ್ಲಿರಲು ನಿರ್ಧಾರ?

ಭಾರತವು ಕಾಮನ್‌ವೆಲ್ತಿನ ಸಂಬಂಧವನ್ನಿಟ್ಟುಕೊಂಡಿರುವ ತತ್ವವನ್ನು ಭಾರತ ಸರ್ಕಾರವು ಒಪ್ಪಿದೆಯೆಂದೂ, ಈ ಬಗ್ಗೆ ಅಧಿಕೃತ ಪ್ರಕಟಣೆಯು ಇಷ್ಟರಲ್ಲಿಯೇ ಹೊರಬೀಳುವುದೆಂದೂ ತಿಳಿದುಬಂದಿದೆ. ಅ|| ಭಾ|| ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ಈ ತತ್ವಕ್ಕೆ ಅಂಗೀಕಾರ ಕೊಟ್ಟಿತೆಯೆಂದು ಹೇಳಲಾಗಿದೆ

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿ ಮುನಿಸಿಪಲ್ ಮಾದರಿ ಮನೆ ನಂಬರ್ 65 ಬಾಡಿಗೆಗಿದೆ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿರಿ.

... ಮೈಸೂರು.

ಮೈಸೂರಿನ ಕಲಾವಿದರು

[ಲೇಖಕರು:—ಸಂಗೀತ ಪ್ರೇಮಿ]

ನಮ್ಮ ಕನ್ನಡ ನಾಡು, ಅದರಲ್ಲೂ ನಮ್ಮ ಮೈಸೂರು ದೇಶವು ಅದಿಯಿಂದಲೂ ಅನೇಕ ಕವಿಗಳಿಗೂ ಕಲಾವಿದರು, ಮತ್ತು ಅನೇಕ ವಿದ್ವಾಂಸರುಗಳಿಗೆ ಜನ್ಮವಿತ್ತಿದೆ ಎಂಬುದನ್ನು ಸ್ಮರಿಸಿದರೆ ನಮ್ಮ ದೇಶವು ಇತರ ದೇಶಗಳಿಗಿಂತ ಯಾವ ವಿಧದಲ್ಲಿಯೂ ಹಿಂದುಳಿದಿಲ್ಲವೆಂಬುದು ಗಮನಕ್ಕೆ ಬಾರದೇ ಇರದು, ಆದಿಯಿಂದಲೂ ನಮ್ಮ ದೇಶವು ಅನೇಕ ಮತಸ್ಥಾಪನಾಚಾರ್ಯರಿಗೆ ಕಾರ್ಯಕ್ಷೇತ್ರವಾಗಿಯೂ ಸಂಗೀತ ಕಲೆ ಮತ್ತು ಶಿಲ್ಪಕಲೆಗಳಿಗೆ ಮಾತೃಸ್ಥಾನವಾಗಿ ಆಗಿರುತ್ತೆಂಬುದನ್ನು ಅತಿ ಹೆಮ್ಮೆಯಿಂದ ಹೇಳಬಹುದಾಗಿದೆ. ನಿರಂತರವೂ ನಮ್ಮ ನಾಡಿನ ಹಿರಿಮೆಯನ್ನು ಜಗತ್ತಿಗೇ ಎತ್ತಿ ತೋರುತ್ತಿರುವ ಬೇಲೂರು ಹಳೇ ಬೀಡು, ಸೋಮನಾಥಪುರ, ಶ್ರವಣ ಬೆಳಗೊಳ ಇವೇ ಮುಂತಾದ ಸ್ಥಳಗಳಲ್ಲಿ ಇಂದಿಗೂ ಅಚ್ಚಳಿಯದೇ ಕಂಗೊಳಿಸುತ್ತಿರುವ ಶಿಲ್ಪ ಕಲಾ ಚಾತುರ್ಯವು ನಮ್ಮ ನಾಡಿನ ಸುಪುತ್ರರಾದ ಜಕಣಾಚಾರ್ಯರು ಮತ್ತು ಡಂಕಣಾಚಾರ್ಯರದೆಂದು ತಿಳಿಯಲು ಅತಿ ಆನಂದವಾಗುತ್ತದೆ. ಅದರಂತೆ ಈಗ ನಮ್ಮ ಪುಣ್ಯದಿಂದ ನಮ್ಮ ಸಮಕಾಲೀನರಾದ "ಜೀವ ಶಿಲ್ಪಿ ಡಾ॥ ಸರ್ ಎಂ ವಿಶ್ವೇಶ್ವರಯ್ಯನವರು, ಡಾ॥ ಸರ್ ಮಿರ್ಜಾ, ಎಂ ಇಸ್ಮಾಯಿಲ್‌ರವರೂ ಶಿಲ್ಪಿ ಸಿದ್ಧಾಂತಿಗಳಾದ, ಶ್ರೀ ಶ್ರೀ ಸಿದ್ಧಲಿಂಗ ಸ್ವಾಮಿಗಳವರು, ಈಗಲೂ ನಮ್ಮ ನಾಡಿನ ಹಿರಿಮೆಯನ್ನು ದೇಶ ವಿದೇಶಗಳಲ್ಲಿ ಮೊಳಗಿಸುತ್ತಿರುವುದು ತಿಳಿದೇ ಇರುವ ವಿಷಯವಾಗಿದೆ.

ಸಂಗೀತದಲ್ಲಿಯೂ ನಮ್ಮ ನಾಡು ಮಿಕ್ಕಿದ ದೇಶಗಳಿಗಿಂತಲೂ ತನ್ನದೇ ಆದ ವೈವಿಧ್ಯತೆಯನ್ನು ಗಳಿಸಿದೆ ಮೊದಲಿನಿಂದಲೂ ನಮ್ಮ ದೇಶದಲ್ಲಿಯೂ, ಹಿಂದೂಸ್ಥಾನದ ಅನೇಕ ಪ್ರಾಂತ್ಯಗಳು ಮತ್ತು ಸಂಸ್ಥಾನಗಳಲ್ಲಿಯೂ ಸಂಗೀತದಿಂದ ಕೀರ್ತಿ ಮತ್ತು ಯಶಸ್ಸು ಗಳಿಸಿದ ಮಹನೀಯರನೇಕರು ನಮ್ಮ ಮೈಸೂರಿನವರು. ಅನೇಕ ಕೃತಿಗಳ ನಿರ್ಮಾಪಕರೂ, ತಂಜಾವೂರು, ತಿರುವಾಂಕೂರು ಮುಂತಾದ ಸಂಸ್ಥಾನಗಳಲ್ಲಿ ಕನಕಾಭಿಷೇಕ ಮಾಡಿಸಿಕೊಂಡವರೂ ಆದ ಸಂಗೀತ ವಿದ್ವಾಂಸರಾದ, ಶ್ರೀ ಸದಾಶಿವ ರಾವ್ ವೈಣಿಕ ಶಿಖಾಮಣಿಗಳಾದ, ಶ್ರೀಮಾನ್ ಶೇಷಣ್ಣನವರು, ಶ್ರೀಮಾನ್ ಸುಬ್ಬಣ್ಣನವರು, ಈಗ ನಮ್ಮ ಸುಯೋಗದಿಂದ ನಮ್ಮ ದೇಶದ ಕೀರ್ತಿಯನ್ನು ಈಗಲೂ ಬೆಳಗಿಸುತ್ತಿರುವ ಸಂಗೀತ ಶಾಸ್ತ್ರ ರತ್ನ, ಶ್ರೀಮಾನ್ ವಾಸುದೇವಾಚಾರ್ಯರು, ಸಂಗೀತ ವಿಶಾರದ ವೆಂಕಟಗಿರಿಯಪ್ಪನವರು, ಸಂಗೀತರತ್ನ ಚೌಡಯ್ಯನವರೇ ಮೊದಲಾದವರನ್ನು ಪಡೆದ ನಾವೇ ಧನ್ಯರು.

ಇವೆಲ್ಲವೂ ಇದ್ದರೂ, ನಮ್ಮ ಮೈಸೂರಿನಲ್ಲಿ ತಾಳ ವಾದ್ಯಗಳಲ್ಲಿ ಅಪರೂಪವಾದ ಮೋರ್ಚಿಂಗ್ ವಾದ್ಯವು ತಮಿಳುನಾಡಿನ ವಿನಾ ನಮ್ಮಲ್ಲಿ ಪ್ರಚಾರಕ್ಕೆ ಬಂದಿರಲಿಲ್ಲ ಈಚೆಗೆ ಆ ಕೊರತೆಯನ್ನೂ ನಮ್ಮ ನಾಡು ನಿವಾರಿಸಿಕೊಂಡಿತೆಂಬುದು ಗಮನಾರ್ಹವಾಗಿದೆ, ನಮ್ಮ ದೇಶದವರಾದ, ನಂಜನಗೂಡು ಶ್ರೀ ಸೀತಾರಾಮಶಾಸ್ತ್ರಿಗಳು ಆ ವಾದ್ಯವನ್ನು, ಮೃದಂಗ ಘಟಂ, ಮೊದಲಾದ ತಾಳ ವಾದ್ಯಗಳನ್ನೂ ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದ ದಿವಂಗತ ಮುತ್ತುಸ್ವಾಮಿ ದೇವರಲ್ಲಿಯೂ, ಅವರ ಮಕ್ಕಳು, ಈಗ ಆಸ್ಥಾನ ವಿದ್ವಾಂಸರಾಗಿರುವ ಶ್ರೀಮಾನ್ ವೆಂಕಟೇಶ ದೇವರಲ್ಲಿಯೂ, ಅನೇಕ ಕಾಲ ಶಾಸ್ತ್ರೋಕ್ತವಾಗಿ ಅಭ್ಯಾಸಮಾಡಿ ನಮ್ಮ ದೇಶದ, ಮತ್ತು ದಕ್ಷಿಣ ದೇಶದ ಅನೇಕ ಪ್ರಖ್ಯಾತ ವಿದ್ವಾಂಸರುಗಳ ಜೊತೆಯಲ್ಲಿಯೂ, ನುಡಿಸಿ ಕೀರ್ತಿ ಗಳಿಸಿರುತ್ತಾರೆ, ಶ್ರೀ ನಂಜನಗೂಡು ಸೀತಾರಾಮಶಾಸ್ತ್ರಿಗಳು ಮೋರ್ಚಿಂಗ್ ವಾದ್ಯದಲ್ಲಿ ತೋರ್ಪಡಿಸುವ ಅನೇಕ ವಿಧವಾದ ನಾದ ವಿಶೇಷಗಳೂ ಗತಿ ಪ್ರಭೇದ, ಮತ್ತು ಲಬ್ದ ವಿನ್ಯಾಸ, ಅನುಲೋಮ ವಿಲೋಮ ಕ್ರಿಯೆಗಳೂ ಸಭಿಕರನ್ನೂ, ಆನಂದಪಡಿಸುವಂತಹವುಗಳಾಗಿವೆ.

ಆರು ಬಾರಿ ಆತ್ಮಹತ್ಯದ ಪ್ರಯತ್ನ.

ಅಮೇರಿಕದ ಲಾಸ್ ಏಂಜಲೀಸಿನ ೩೮ ವರ್ಷದ ಉಡಾಲ್ಫ ಎಂಬುವನು ೬ ಬಾರಿ ಆತ್ಮಹತ್ಯ ಮಾಡಿಕೊಳ್ಳಲು ಯತ್ನಿಸಿ ಅದು ವಿಫಲವಾಗಿ ಈಗ ಬದುಕಿದ್ದಾನೆಂದು ವರದಿಯಾಗಿದೆ. ಮೊದಲನೆ ಬಾರಿ ಆತನು ದೊಡ್ಡ ಕತ್ತಿಯಿಂದ ತನ್ನ ಗಂಟಲನ್ನು ೬ ಸಾರಿ ಕೊಯ್ದುಕೊಂಡನೆಂದೂ, ನಂತರ ಚಾಕುವಿನ ಹಿಡಿಯನ್ನು ಗೋಡೆಗೆ ಹಿಡಿದು ಅದರ ತುದಿಯಿಂದ ಹೊಟ್ಟೆಗೆ ೩ ಬಾರಿ ಚುಚ್ಚಿಕೊಂಡನೆಂದೂ, ಅನಂತರ ವಿಷವನ್ನು ಕುಡಿದು, ತನ್ನ ಕೊಠಡಿಗೆ ಹೋಗಿ ಬಾಗಿಲುಗಳನ್ನು ಮುಚ್ಚಿಕೊಂಡು, ಗ್ಯಾಸನ್ನು ತಿರುಗಿಸಿದನೆಂದೂ ಆದರೂ ಸಾಯಲಿಲ್ಲವೆಂದೂ ಹೇಳಲಾಗಿದೆ.

ಶ್ರೀಯುತರು ಆಳಿದ ಮಹಾ ಪ್ರಭುಗಳಾದ ಕೀರ್ತಿ ಶೇಷರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಪ್ರಭುಗಳವರ ಸಮ್ಮುಖದಲ್ಲಿಯೂ ಆಳುವ ಮಹಾಸ್ವಾಮಿಗಳಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಮಹಾಸ್ವಾಮಿಗಳವರ ಸಮ್ಮುಖದಲ್ಲಿಯೂ ಅನೇಕವೇಳೆ ನುಡಿಸಿ ಕೀರ್ತಿ ಗಳಿಸಿರುವರು

ಶ್ರೀಯುತರಲ್ಲಿರುವ ಮತ್ತೊಂದು ವೈವಿಧ್ಯತೆಯೆಂದರೆ "ಶಿಲ್ಪಕಲಾ ಚಾತುರ್ಯ" ಹಸ್ತಿದಂತ, ಮತ್ತು ಶ್ರೀಗಂಧದ ಮರದಲ್ಲಿ ಅನೇಕ ವಿಧವಾದ ವಿಗ್ರಹ, ಮತ್ತು ಚಿತ್ರಕಲಾ ಕೌಶಲ್ಯವೂ ಇವರಿಗೆ ಕರಗತವಾಗಿರುವುದು ತುಂಬಾ ವಿಶೇಷ ಇವರು ತಯಾರಿಸಿದ ಅನೇಕ ವಿಗ್ರಹಗಳು ಮತ್ತು ಇತರ ಪದಾರ್ಥಗಳು ಇಂಗ್ಲೆಂಡ್, ಅಮೆರಿಕ, ಮೊದಲಾದ ಪರದೇಶಗಳಿಗೂ ಹೋಗಿವೆ ಎಂದರೆ ತುಂಬಾ ಹೆಮ್ಮೆಪಡಬೇಕಾದ ಸಂಗತಿಯಾಗಿದೆ.

ಕರುಣರೂ, ಉತ್ಸಾಹ ಶಾಲಿಗಳೂ, ಆದ ಶ್ರೀ ನಂಜನಗೂಡು ಸೀತಾರಾಮಶಾಸ್ತ್ರಿಗಳಿಗೆ ಭಗವಂತನು, ಅನೇಕ ಕಾಲ ನಮ್ಮ ನಾಡಿನ ಸೇವೆಯನ್ನೂ ಕಲಾ ಸೇವೆಯನ್ನೂ ಮಾಡುವಂತೆಯೂ, ರಾಜ ಸನ್ಮಾನವೂ, ಸುಖ ಸಂತೋಷಗಳೂ ಲಭಿಸುವಂತೆಯೂ ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

ರಾಜಕಮಲ್ ಟಾಕೀಸ್

೧೯-೧೧-೪೮ನೇ ಶುಕ್ರವಾರ ದಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಭಾರತಿ

ಹಂಸ್ಯಕುಮಾರಿ, ರಾಜಕುಮಾರಿ, ಸಂಪತ್ ಕೃಷ್ಣ ಸ್ವಾಮಿ ಪಾತ್ರವಹಿಸಿರುವ ದಿವ್ಯವಾದ ಕನ್ನಡ ಚಿತ್ರ,

ನೃತ್ಯ:- ಲಲಿತ, ಪದ್ಮಿನಿ

ಭಾಷಾವಾರು ಪ್ರಾಂತ್ಯದ ಬಗ್ಗೆ ನೆಹರೂರವರ ವಿರೋಧ

ಪಿ ಟಿ.ಐ] ನವದೆಹಲಿ ೧೮

ಕಳೆದವಾರ ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆಯಲ್ಲಿ, ಪಂಡಿತ ನೆಹರೂರವರಿಗೂ ಡಾ ಪಟ್ಟಾಭಿ ಸೀತಾರಾಮಯ್ಯನವರಿಗೆ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ, ಬಿಸಿ ಬಿಸಿ ಚರ್ಚೆ ನಡೆಯಿತೆಂದು ತಿಳಿದುಬಂದಿದೆ ಭಾಷಾವಾರು ಪ್ರಾಂತ್ಯ ರಚನೆ ಮತ್ತು ಇಂಡಿಯ ಎಂಬ ಹೆಸರನ್ನು ಭಾರತವರ್ಷವೆಂದು ಬದಲಾಯಿಸುವ ವಿಚಾರಗಳಲ್ಲಿ ಇಬ್ಬರು ನಾಯಕರುಗಳಿಗೂ ವಾಗ್ ಯುದ್ಧವೇ ನಡೆಯಿತೆಂದೂ ಹೇಳಲಾಗಿದೆ

ಭಾಷಾವಾರು ಪ್ರಾಂತ್ಯಗಳ ರಚನೆಯು ಕೂಡಲೇ ಆಗಬೇಕೆಂದು ಡಾ॥ ಪಟ್ಟಾಭಿಯವರು ಒತ್ತಾಯಪಡಿಸುತ್ತಾ, ಪ್ರತ್ಯೇಕ ಪ್ರಾಂತ್ಯಗಳು ಆಗಬೇಕೆಂದು ಕೇಳುವುದು ಪ್ರಾಂತೀಯ ಭಾವನೆಯಿಂದಲ್ಲವೆಂದೂ, ಭಾರತವು ದೊಡ್ಡ ರಾಷ್ಟ್ರವಾಗಿರುವುದರಿಂದ, ವಿವಿಧ ಭಾಷೆಗಳನ್ನಾಡುವ ಜನರನ್ನು ಒಟ್ಟಿಗೇ ಕೂಡಿಸುವುದರಿಂದ ಪ್ರಯೋಜನವಿಲ್ಲವೆಂದೂ, ಭಾಷಾವಾರು ಪ್ರಾಂತ್ಯಗಳ ರಚನೆಯಿಲ್ಲದಿದ್ದರೆ ಪ್ರಾಂತ್ಯಗಳಿಗೆ ಸ್ವತಂತ್ರವಿಲ್ಲವೆಂದೂ ತಿಳಿಸಿದರು

ಪಂಡಿತ ನೆಹರೂರವರು ಮೇಲ್ಕಂಡ ವಾದಕ್ಕೆ ಉತ್ತರ ಕೊಟ್ಟು, ದೇಶದಲ್ಲಿ ಪ್ರಾಂತೀಯ ಭಾವನೆ ಇದೆ ಕೇಂದ್ರದಲ್ಲಿ ಬಲವಾದ ಸರ್ಕಾರವಿರಬೇಕೆಂದೂ, ಭಾಷಾವಾರು ಪ್ರಾಂತ್ಯಗಳ ರಚನೆಯು ಈಗ ಅಷ್ಟು ಮು

ಹೊಸ ರೇಡಿಯೋ ತೆಗೆದುಕೊಳ್ಳಲು ಮತ್ತು ಮೈಕ್ರೋಫೋನ್ ವ್ಯವಸ್ಥೆಗಳಿಗೆ ಓಲ್ಡ್ ಮೈಸೂರು ಬ್ಯಾಂಕ್ ಪಕ್ಕದಲ್ಲಿರುವ ಇಂಟರ್‌ನ್ಯಾಷನಲ್ ಎಲೆಕ್ಟ್ರಿಕಲ್ಸ್‌ನಲ್ಲಿ ವಿಚಾರಿಸಿರಿ

CRICKET BALLS

Crown Balls (Alberoi) are available

MURTHY TRADING Co
D Subbaiah Road,
MYSORE

Edited printed and published by A.R. Nagarajan at the Sadhvi Press D Subbaiah Road Mysore

ಕಾಶ್ಮೀರದಬಗ್ಗೆ ಪಾಕಿಸ್ಥಾನ[...] ಎಚ್ಚರಿಕೆ.

ಕಾಶ್ಮೀರದ ಪರಿಸ್ಥಿತಿಯನ್ನು ಸರಿ[...] ಪಾಕಿಸ್ತಾನವು ಏಂಗ್ಲೋ ಕಾರ್ಯಕ್ರಮ[...] ಕೂಡಲೇ ಕೈಗೊಳ್ಳಬೇಕಾಗುವುದೆಂದು[...] ಪರ ಅಧಿಕಾರಿಗಳೊಬ್ಬರು ಎಚ್ಚರಿ[...] ಟ್ಟಿರುತ್ತಾರೆ ಜಮ್ಮು ಮತ್ತು ಸ್ವಾ[...] ಕಾಶ್ಮೀರದಲ್ಲಿ ಒಪ್ಪಂದಕ್ಕೆ ವಿರುದ್ಧವಾಗಿ[...] ರತವು ಕದನ ಪ್ರಾರಂಭಿಸಿದೆಯೆಂದು[...]ರು ಆಪಾದನೆ ಮಾಡಿರುತ್ತಾರೆ.

ಕೆಂಪು ಕೋಟೆಯಲ್ಲಿ ಸುಭಾಷರ ಪ್ರತಿಮೆ.

ನೇತಾಜಿ ಸುಭಾಷ್ ಬೋಸರ ಪ್ರತಿ[...]ಯನ್ನ ದೆಹಲಿ ಕೆಂಪುಕೋಟೆಯ ಮ[...] ದ್ವಾರದ ಎದುರಿನಲ್ಲಿ ಸ್ಥಾಪಿಸಬೇಕೆ[...] ಐ. ಎನ್ ಏ ಸಲಹಾ ಸಮಿತಿಯು[...] ನಿರ್ಧರಿಸಿದ್ದಾರೆ.

ರಂಭಾಪುರಿ ಸ್ವಾಮಿಗಳ ಆಗಮನ.

ಬಾಳೆಹೊನ್ನೂರಿನ ಶ್ರೀ ರಂಭಾಪುರಿ [...] ಮಿಗಳವರು ಮೊನ್ನೆ ದಿನ ವಿಮಾನದ[...] ಕಾಶಿಯಿಂದ ಬೆಂಗಳೂರಿಗೆ ಆಗಮಿಸಿದ[...]

ಖ್ಯ ವಿಷಯವಲ್ಲವೆಂದೂ, ಮುಖ್ಯ ಸ[...] ಸ್ಯೆಗಳಿಗೆ ಈಗ ಹೆಚ್ಚು ಗಮನ ಕೊಡಬೇ[...]ಕೆಂದೂ, ಈ ವಿಷಯದಲ್ಲಿ ದೇಶದಲ್ಲಿ ಉ[...]ಟಾಗಿರುವ ಕ್ರೋಧದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ, ಜನರಲ್ಲಿ ಶಾಂತಿ ಇರಬೇಕೆಂ[...]ದೂ ತಿಳಿಸಿದರು ದೇಶದ ಮುಂದೆ ಇ[...] ಅನೇಕ ಕಷ್ಟ ಸಮಸ್ಯೆಗಳನ್ನು ಅವರು [...]ರಿಸಿ, ಭಾಷಾವಾರು ಪ್ರಾಂತ್ಯಗಳ ರಚನೆ[...]ಯಿಂದ ಕಷ್ಟಗಳು ಇನ್ನೂ ಹೆಚ್ಚಾಗಿ, ಅ[...]ವೃದ್ಧಿ ಕಾರ್ಯಗಳಿಗೆ ಅಡಚಣೆ ಉಂಟಾಗು[...]ದೆಂದೂ, ಆದುದರಿಂದ ಈ ಪ್ರಶ್ನೆಯನ್ನು ಮುಂದೆ ಹಾಕಬೇಕೆಂದೂ ಹೇಳಿದರು

ಭಾರತದ ಹೆಸರನ್ನು ಬದಲಾಯಿಸು[...]ದರಿಂದ ಯಾವ ಪ್ರಯೋಜನವೂ ಇಲ್ಲ[...]ದೂ, ಅಂತರ ರಾಷ್ಟ್ರೀಯ ಅವರಣ[...] ಭಾರತದ ಹೆಸರು ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ, ಈಗ ಬದಲಾಯಿ[...]ವುದು ಸರಿಯಲ್ಲವೆಂದೂ, ನೆಹರೂರ[...] ತಿಳಿಸಿದರು

FOR SALE

1935 Model, 30 H P. Fo[...] Car, Saloon Body with ne[...] Tyres and Batteries. Th[...] Car is in good running co[...]dition and is open fo[...] Inspection at the Company[...] Office Premises at 11[...] Vanivilas Road, [...]ysor[...] between 11 A.M. and 5 P[...] on all working days Offe[...] will be received till the 30[...] November 1948 by th[...] undersigned

C Krishnamurthy
Secretary,
Mysore Chemicals and Fertilisers Ltd, Myso[...]

ಪ್ರಭುದೇವಾ ಟಾಕೀಸಿನಲ್ಲಿ

ಜೆಮಿನಿಯವರ ತಮಿಳು ಚಿತ್ರ

ಭಕ್ತನಂದನಾರ್

೨೪—೧೧—೪೮ರಿಂದ ದಿನವಹಿ ೩ ಆಟಗಳು

ಪಾತ್ರ:- ದಂಡಪಾಣಿ ದೇಶಿಗರ್, ಸರಸ್ವತಿ. ರಾಮು, ನಾರಾಯಣರಾವ್ ಮುಂತಾದವರು

ಕ್ರಮಾಂಕ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 8 ಕಾಸು

ಸಂಪುಟ ೭] ಗುರುವಾರ ೨೫-೧೧-೪೮ [ಸಂಚಿಕೆ ೧೨೪

ಟ್ರಾಫಿಕ್ ನಿಯಮದ ಉಲ್ಲಂಘನೆಗೆ ಶಿಕ್ಷೆ

ಮೈಸೂರು ೨೪

ಶ್ರೀನಿವಾಸ ಬಸ್ ಸರ್ವಿಸ್ಸಿನ ಡ್ರೈವರ್ ...ಟರಾಂ ಎಂಬಾತನು ಗಾಂಧಿ ಚೌಕದ ...ಬಸ್ಸನ್ನು ಓಡಾಡಿಸಿ ಸಂಚಾರಕ್ಕೆ ... ನಿಯಮವನ್ನು ಉಲ್ಲಂಘಿಸಿದ ಅಪರಾಧಕ್ಕೆ ... ನಗರದ ನ್ಯಾಯಾಧೀಶರು ಅವನಿಗೆ ... ಜುಲ್ಮಾನೆಯನ್ನು ವಿಧಿಸಿದರು ... ಲೈಸೆನ್ಸಿಲ್ಲದೆ ... ಜನರಿಗೂ ... ದಾರಿಯು ಹೊರಗೂ ಹೋದುದ ... ಜನರಿಗೂ ಕೆಲಾ ... ರೂ. ಜು ... ನೆಯು ವಿಧಿಸಲ್ಪಟ್ಟಿದೆ.

ಸಹಾಯಾರ್ಥ ನಾಟಕ

... ಶ್ರೀ ಲಕ್ಷ್ಮೀಕಾಂತ ಮೂರ್ತಿಯು ... ಸಹಾಯಾರ್ಥವಾಗಿ ಗುಬ್ಬಿ ಕಂಪೆನಿಯವರ ... ದಿನ ಆಡಬೇಕೆಂದಿದ್ದ ಕೃಷ್ಣ ... ಎಂಬ ನಾಟಕವನ್ನು ೬-೧೨-೪೮ನೇ ... ದಿವಾಸಕ್ಕೆ ಬದಲಾಯಿಸಿದೆ. ಸುಹಾ ... ಪ್ರೋತ್ಸಾಹವನ್ನು ಕೋರಲಾಗಿದೆ.

ಭಜನೆ ಮತ್ತು ಹರಿಕಥೆ

ರಾಜಧಾನಿಯ ಕಿಲ್ಲೆ ಮೊಹಲ್ಲಾ ... ಬ್ಬಣ್ಣನವರ ಬೀದಿಯಲ್ಲಿರುವ ಶ್ರೀ ... ರಾಘವೇಂದ್ರ ಸೇವಾ ಮಂದಿರದಲ್ಲಿ ... ಇಲ್ಲಿಗೆ ಬಂದಿರುವ ಶ್ರೀ ... ದಾಸರವರಿಂದ ಒಂದು ವಾರ ಶ್ರೀ ... ರಾಘವೇಂದ್ರ ಮತ್ತು ಘಟಿಕಾಚಲ ... ಪ್ರಸಾದ ಆಂಜನೇಯ ದೇವರುಗಳ ... ಭಿಷೇಕ ಪೂಜಾ ದಿನಗಳು ದಾಸ ಭಜ ... ಮತ್ತು ಹರಿಕಥೆಗಳು ನಡೆಯುವುವು.

ಲಾರಿ ಡ್ರೈವರಿಗೆ ದಂಡ

... ಕೋಟೆಯ ಮೋಟಾರ್ ಡ್ರೈವ ... ನಾಯರ್ ಎಂಬಾತನು ಎಂ. ... ನೇ ನಂಬರಿನ ಲಾರಿಯ... ಇಲ್ಲದೆ ನಡೆಸುತ್ತಿದ್ದನೆಂದು ... ಪೊಲೀಸರು ಮೊಕದ್ದಮೆ ... ನಗರ ನ್ಯಾಯಾಧೀಶರು ... ರೂ. ದಂಡವನ್ನು ವಿಧಿಸಿ ... ತೆರಿಗೆ ಕಟ್ಟಬೇಕೆಂ ... ಆಜ್ಞೆ ಮಾಡಿರುತ್ತಾರೆ.

ತೋಜೋ ಮತ್ತಿತರರಿಗೆ ಇನ್ನೊಂದು ವಾರದೊಳಗೆ ಗಲ್ಲು

... ದಂಡನೆ ಶಿಕ್ಷೆಗೆ ಗುರಿಯಾಗಿರು ... ಯುದ್ಧಪಾತಕಿಗಳಾದ ಟೋ ... ಇತರ ೬ ಜನಗಳನ್ನು ಇನ್ನು ... ಅಥವಾ ೧೦ ದಿನಗಳೊಳಗೆ ... ಗಲ್ಲಿಗೇರಿಸಲಾಗುವುದೆಂದು ವ ... ಗಿದೆ.

... ಮಿತ್ರ ರಾಷ್ಟ್ರಗಳ ಪ್ರಧಾ ... ಪತಿಯಾಗಿರುವ ಜನರಲ್ ಮೆಕಾರ್ಥ ... ಶಿಕ್ಷೆಗಳನ್ನು ಖಾಯಂ ಮಾ ... ದ್ದಾರೆ.

|| ಶ್ರೀ ||
ಚಾಮುಂಡೇಶ್ವರಿ ಟಾಕೀಸ್
26—11—48 ರಿಂದ
ಪ್ರತಿ ದಿನ 3 ಆಟಗಳು
ಶೋ ರ್ —
(ಹಿಂದಿ)
... ಜಮುನಾ, ನೋಲಿನಾ, ... ಮತ್ತು ಯಾಕೂಬ್

ಬೊಂಬಾಯಿ ಪರಿಸ್ಥಿತಿ ಶಾಂತವಾಗಿದೆ

ನಿನ್ನೆಯಿಂದ ಬೊಂಬಾಯಿ ನಗರದ ಪರಿಸ್ಥಿತಿಯು ಶಾಂತವಾಗುತ್ತಿದೆ. ದಿನ ಪತ್ರಿಕೆಗಳು ... ಯಥಾಸ್ಥಿತಿಯಲ್ಲಿ ... ಸೇರಿಯಾಗಿ ಪ್ರಕಟವಾಗಿವೆ. ರೈಲು ಮತ್ತು ವಿಮಾನಗಳ ಸಂಚಾರ ಆರಂಭವಾಗಿದೆ. ಆದರೂ ಟೆಲಿಫೋನ್ ಮತ್ತು ಟೆಲಿಗ್ರಾಫ್ ಕಂಬಗಳನ್ನು ಸರಿಪಡಿಸಿಲ್ಲ. ವಿದೇಶಗಳಿಂದ ಬರುವ ಸಮಾಚಾರಗಳನ್ನು ದೆಹಲಿಯ ಮಾರ್ಗವಾಗಿ ರವಾನಿಸಲಾಗುತ್ತಿದೆ.

ಗಿರಣಿಗಳ ಕೆಲಸವು ನಿಂತುಹೋದುದರಿಂದ ಬಟ್ಟೆ ಉತ್ಪನ್ನವು ಒಂದು ಕೋಟಿ ಗಜದಷ್ಟು ಕಡಿಮೆ ಬಿದ್ದಿದೆಯೆಂದು ಅಂದಾಜಾಗಿದೆ. ವಿಮಾನ ನಿಲ್ದಾಣಗಳನ್ನು ಸರಿಪಡಿಸಲಾಗುತ್ತಿದೆ. ಇನ್ನು ಒಂದೆರಡು ದಿನಗಳಲ್ಲಿ ಸಂಚಾರ ಮಾರ್ಗಗಳೆಲ್ಲವೂ ಸರಿಪಡಿಸಲ್ಪಡುವ ನಿರೀಕ್ಷಣೆ ಇದೆ.

ಈ ಬಿರುಗಾಳಿ ಅನಾಹುತದಿಂದ ಇದುವರೆಗೆ ೬೦ ಜನರು ಮರಣ ಹೊಂದಿದ್ದಾರೆಂದೂ ೨೫ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ. ದೀಪಾವಳಿ ಎಂಬ ಹಡಗನ್ನು ನಡೆಯಿಸುತ್ತಿದ್ದ ೪೭ ಮಂದಿ ನಾವಿಕರು ಪತ್ತೆ ಇಲ್ಲವಾಗಿದ್ದಾರೆ. ರೇವಿನಲ್ಲಿದ್ದ ಅನೇಕ ಸಣ್ಣ ಸ್ಟೀಮರು ಮತ್ತು ದೋಣಿಗಳು ನೀರಿನ ಪಾಲಾದುವೆಂದು ಹೇಳಲಾಗಿದೆ.

ತಂದೆಯನ್ನೇ ಕೊಂದ ಮಗ

ಪಿ ಟಿ ಐ] ನ್ಯೂಯಾರ್ಕ್ ೨೩

ಅಮೆರಿಕದ ಟೆಕ್ಸಾಸ್ ನಗರದ ೧೮ ವರ್ಷದ ಡೇವಿಡ್ ಹೆರಾಲ್ಡ್ ಎಂಬ ಯುವಕನು ತನ್ನ ತಂದೆಯನ್ನೇ ಬಂದೂಕಿನಿಂದ ಹೊಡೆದು ಸಾಯಿಸಿದನೆಂದು ವರದಿಯಾಗಿದೆ. ನರಳುತ್ತಿರುವ ತಾಯಿಗೆ ಆತನ ತಂದೆಯು ದ್ರೋಹವೆಸಗಿದನೆಂದು ಹೇಳಲಾಗಿದೆ.

ಹಿಮಾಲಯದಲ್ಲಿ ವಿಮಾನ ಸಂಚಾರ

ಹಿಮಾಲಯ ಪ್ರದೇಶದ ಲಡಾಕ್ ಜಿಲ್ಲೆಯ ಮಾರ್ಗದಲ್ಲಿ ಸುರಕ್ಷಿತವಾದ ವಿಮಾನ ಸಂಚಾರದ ಏರ್ಪಾಡನ್ನು ಮಾಡಲು ಪರಿಶೀಲನೆಗಳನ್ನು ನಡೆಸುವುದಕ್ಕಾಗಿ ಏರ್. ಎ. ಎಫ್ ಅಧಿಕಾರಿಗಳ ನೇತೃತ್ವದಲ್ಲಿ ಹವಮಾನ ಶಾಸ್ತ್ರ ಪ್ರವೀಣರ ಗುಂಪೊಂದು ದೆಹಲಿಯಿಂದ ಹೊರಟಿದೆ.

● ಪ್ರಯಾಣಿಕರ ಬಸ್ಸುಗಳಲ್ಲಿ ಹೆಚ್ಚಿಗೆ ಜನರನ್ನು ಕೂಡಿಸಿ ಓವರ್ ಲೋಡ್ ಮಾಡುವುದನ್ನು ಪರ್ಮಿಟ್ ನಿಬಂಧನೆಗಳಿಗೆ ವಿರುದ್ಧವಲ್ಲವೆಂದು ಮದರಾಸ್ ಹೈಕೋರ್ಟಿನ ತೀರ್ಪೊಂದರಲ್ಲಿ ತಿಳಿಸಲಾಗಿದೆ.

ವಿಶ್ವ ಭದ್ರತಾ ಸಮಿತಿಯ ಮುಂದೆ ಪುನಃ ಹೈದ್ರಾಬಾದ್ ಸಮಸ್ಯೆ

ಹೈದರಾಬಾದು ಪ್ರಶ್ನೆಯು ಪ್ಯಾರಿಸ್ಸಿನಲ್ಲಿ ನಡೆಯುತ್ತಿರುವ ವಿಶ್ವ ಭದ್ರತಾ ಸಮಿತಿಯ ಮುಂದೆ ಇಂದು ಪುನಃ ಚರ್ಚಿಸಲ್ಪಡುವುದೆಂದು ಹೇಳಲಾಗಿದೆ. ಹೈದರಾಬಾದಿನ ಪರಿಸ್ಥಿತಿಯು ದಿನೇ ದಿನೇ ಹದಗೆಡುತ್ತಿದೆಯೆಂದು ಪಾಕಿಸ್ತಾನ ಪ್ರತಿನಿಧಿ ಸರ್ ಜಫರುಲ್ಲಾಖಾನರವರು ಭದ್ರತಾ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದ... ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ. ಕಾಶ್ಮೀರದ ಪ್ರಶ್ನೆಯೂ ಸಹ ಇಂದೇ ಚರ್ಚೆಗೆ ಬರಲಿದೆ.

ಬಿ. ಪಿ. ಹಾಲಪ್ಪನವರ ನಿಧನ

[ಬೆಂಗಳೂರು ೨೪

ಭದ್ರಾವತಿ ಪೌರಸಭೆಯ ಅಧ್ಯಕ್ಷರೂ ಕಾಂಗ್ರೆಸ್ ನಾಯಕರೂ ಆದ ಶ್ರೀ ಬಿ ಪಿ. ಹಾಲಪ್ಪನವರು ಇಲ್ಲಿ ನಿನ್ನೆ ಹೃದಯ ಸ್ತಂಭನದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

○ ಬೆಂಗಳೂರು ನಗರದಲ್ಲಿ ಒಂದು ಹೈರಿಘ ರ... ತೆರೆಯಲು ಪೌರಸಭೆಯವರು ಎರಡು ಲಕ್ಷ ರೂ. ಮಂಜೂರು ಮಾಡಿರುತ್ತಾರೆ.

ಕೈಲಾಸಂ ದಿನಾಚರಣೆ

ಮಹಾರಾಜಾ ಕಾಲೇಜಿನ ಮಿತ್ರಮೇಳದವರು ನಾಳೆಯಿಂದ ಮೂರು ದಿನ ಕೈಲಾಸಂ ದಿನಾಚರಣೆಯನ್ನು ನೆರವೇರಿಸುವರು. ಶ್ರೀ ಜಿ. ಪಿ. ರಾಜರತ್ನಂ ... ದರ ... ಕಣವನ್ನು ಏರ್ಪಡಿಸಲಾಗಿದೆ.

ಎರಡು ಬಾರಿ ಮದುವೆ ಮಾಡಿದುದಕ್ಕೆ ರಾಜಿಯಾಗಲಿಲ್ಲ

ಅಪರಾಧಿಗಳ ಬಿಡುಗಡೆ

ಮೈಸೂರು ೨೪

... ನ ಜನಗಾಮದ ... ನಂಜಪ್ಪನವರ ... ಎಂಬುವರು ತಮ್ಮ ... ಮಗಳು ಗೌರಮ್ಮಳನ್ನು ಮೊದಲು ... ಮಾಡಿಕೊಟ್ಟು ಅನಂತರ ಕೆಲವು ದಿನಗಳ ಮೇಲೆ ಮತ್ತೊಬ್ಬನಿಗೆ ಮದುವೆಮಾಡಿಕೊಟ್ಟ ಅಪರಾಧಕ್ಕೆ ... ಮೊಕದ್ದಮೆಯಲ್ಲಿ ... ರವರು ಈ ದಿನ ತೀರ್ಪಿತ್ತು ಮೇಲ್ಕಂಡ ಅಪರಾಧಕ್ಕೆ ರಾಜಿಯಾಗಲಿಲ್ಲವೆಂದು ಹೇಳಿ ಅಪರಾಧಿಗಳಾದ ... ಜಿರಾವ್, ... ನಂಜಪ್ಪ, ... ನಂಜಪ್ಪನವರ ಮತ್ತು ಗೌರಮ್ಮ ಇವರುಗಳನ್ನು ಬಿಡುಗಡೆ ಮಾಡಿರುತ್ತಾರೆ.

... ತಮ್ಮ ... ಗೌರಮ್ಮನನ್ನು ... ಕರೆದುಕೊಂಡು ಹೋಗ ...

ಆಡಿನ ಹೊಟ್ಟೆಯಲ್ಲಿ ಗಂಡು ಮಗು

ಮದನಪಲ್ಲಿಯ ಹತ್ತಿರವಿರುವ ... ಪಲ್ಲಿ ಎಂಬಲ್ಲಿ ಒಂದು ಆಡಿನ ಹೊಟ್ಟೆಯಲ್ಲಿ ಗಂಡು ಮಗುವು ಇದ್ದ ಸಂಗತಿಯು ಅತ್ಯಂತ ಸೋಜಿಗವನ್ನುಂಟುಮಾಡಿರುತ್ತದೆ. ಗರ್ಭವನ್ನು ಧರಿಸಿದ್ದ ಆಡು ಈಯುವಾಗ ಬಹಳ ಯಾತನೆಯನ್ನು ಅನುಭವಿಸಿ ಸತ್ತಿತು. ಅದರ ಹೊಟ್ಟೆಯನ್ನು ಕುಯ್ದು ನೋಡಲಾಗಿ ತಲೆ, ಕಾಲು, ಕೈ, ಕಣ್ಣು ಮತ್ತು ಕಿವಿಗಳನ್ನುಳ್ಳ ಗಂಡು ಮಗುವೊಂದು ಕಂಡುಬಂದಿತು. ಅದೂ ಸಹ ಸತ್ತಿತ್ತು. ಅನೇಕ ಜನರು ಬಂದು ಅದನ್ನು ನೋಡಿಕೊಂಡು ಹೋದರು. ಇದೊಂದು ಅಶುಭ ಸೂಚಕವೆಂದು ಭಾವಿಸಿ ಆಡಿನ ಮಾಲೀಕನು ಮಗುವನ್ನು ಸುಟ್ಟುಹಾಕಿದನು.

ಇಂಜನಿಯರಿಂಗ್ ಕಂಟ್ರಾಕ್ಟರುಗಳ ಸಮ್ಮೇಳನ

ಮೈಸೂರು ೨೪

ಮೈಸೂರು ಜಿಲ್ಲಾ ಇಂಜನಿಯರಿಂಗ್ ಕಂಟ್ರಾಕ್ಟರುಗಳ ಸಮ್ಮೇಳನವು ಕಳೆದ ಭಾನುವಾರ ಚಲುವಾಂಬಾ ಭವನದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಸಭಾಂಗಣದಲ್ಲಿ ಸಮಾವೇಶಗೊಂಡಿತ್ತು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು.

ಶ್ರೀ ಕಣ್ಣಪ್ಪನವರಿಂದ ಪ್ರಾರ್ಥನೆಯಾದ ನಂತರ ಸಂಘದ ಕಾರ್ಯದರ್ಶಿ ಶ್ರೀ ಎಂ. ಜಿ ಶ್ರೀನಿವಾಸರವರು ಸ್ವಾಗತ ಮತ್ತು ಪರಿಚಯ ಭಾಷಣಗಳನ್ನು ಮಾಡಿದರು. ● ನಂತರ ಶ್ರೀ ಎಚ್. ಎಂ. ಚನ್ನಬಸಪ್ಪನವರು ಕಂಟ್ರಾಕ್ಟರುಗಳ ವೃತ್ತಿಯ ಪವಿತ್ರತೆ, ಅವರಿಗೂ ಸರ್ಕಾರದವರಿಗೂ ಹೆಚ್ಚಿನ ಮಧುರ ಬಾಂಧವ್ಯ ಬೆಳೆಯಬೇಕಾದ ಅವಶ್ಯಕತೆ, ಈಗ ಇರುವ ನಾನಾ ವಿಧದ ಅನಾನುಕೂಲದ ನಿವಾರಣೋಪಾಯಗಳು, ಎಲ್ಲರೂ ಶ್ರದ್ಧೆಯಿಂದ ದೇಶ ಸೇವೆಯನ್ನೆಸಗಬೇಕಾದ ಅವಶ್ಯಕತೆ — ಮುಂತಾಗಿ ಅನೇಕ ವಿಷಯಗಳನ್ನೊಳಗೊಂಡ ಅಮೋಘವಾದ ಭಾಷಣವನ್ನು ಮಾಡಿ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಕೆ. ಕೇಶವಾಚಾರ್ಯರು ಕಾರ್ಯಕಲಾಪ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದರು.

ಮಹಾತ್ಮ ಗಾಂಧಿಜಿಯವರ ನಿಧನದ ಬಗ್ಗೆ ಶೋಕ ಸೂಚನೆ, ಹಾಸನದಲ್ಲಿ ಏರ್ಪಟ್ಟ ಸಿವಿಲ್ ಮೈಸೂರು ಕಂಟ್ರಾಕ್ಟರ್ಸ್ ಗ... ರವರ ಪ್ರಾಂತ ಸಂಘದ ಮತ್ತು ಹೊಸದಾಗಿ ಮೈಸೂರಿನಲ್ಲಿ ಮೈಸೂರು ಜಿಲ್ಲಾ ಕಂಟ್ರಾಕ್ಟರುಗಳ ಸಂಘದ ಸ್ಥಾಪನೆ, ಈ ಸಂಘಕ್ಕೆ ಪದಾಧಿಕಾರಿಗಳ ಚುನಾವಣೆ ಮುಂತಾದ ಕಾರ್ಯಕ್ರಮಗಳು ಜರುಗಿದುವು. ಸಂಘದ ಅಧ್ಯಕ್ಷರಾಗಿ ಶಿಲ್ಪ ಕಲಾ ಸೇವಾ ರತ್ನ ಶ್ರೀ ಟಿ. ಚಲುವಾಚಾರ್ಯರೂ, ಉಪಾಧ್ಯಕ್ಷರಾಗಿ ನಂಜನಗೂಡಿನ ಶ್ರೀ ... ಎಚ್ ... ಯ್ಯರವರೂ, ಕಾರ್ಯದರ್ಶಿಗಳಾಗಿ ಶ್ರೀ ಎಂ ಜಿ ಶ್ರೀನಿವಾಸ ಮತ್ತು ಶ್ರೀ ಎಸ್. ಕೆ ಗೋವಿಂದರಾಜರವರೂ ಮತ್ತು ಖಜಾಂಚಿಗಳಾಗಿ ಶ್ರೀ ಬಿ. ಎಚ್. ... ಚುನಾಯಿಸ...

ಟಿಕೆಟ್ ಇಲ್ಲದ ಪ್ರಯಾಣಿಕರ ಪತ್ತೆ

ಬಸ್ಸಿನ ರಹದಾರಿ ರದ್ದು

ಮೈಸೂರು ೨೪

ಮೈಸೂರು ಪೋಲೀಸ್ ಸಿ ಐ ಡಿ ವಿಭಾಗದ ಶ್ರೀ ಆರ್ ಮ ಕೃಷ್ಣರಾವ್ ಇಂಧ್ರರವರು ಮತ್ತು ಮೈಸೂರು ಜಿಲ್ಲಾ ರೈಲ್ವೆ ಅಧಿಕಾರಿಗಳಾದ ಶ್ರೀ ಶಂಕರಪ್ಪನವರು ನಿನ್ನೆ ಮೈಸೂರಿನಿಂದ ಹೋಗುವ ಮತ್ತು ಚಾಮರಾಜನಗರದಿಂದ ಬರುವ ರೈಲುಗಳನ್ನು ನರಸಾಂಬುಧಿ ಕ್ರಾಸಿಂಗ್ ಬಳಿ ಚೆಕ್ ಮಾಡಿ, ೧೩ ಜನರು ಟಿಕೆಟ್ ಇಲ್ಲದೆ ಪ್ರಯಾಣ ಮಾಡುತ್ತಿರುವುದನ್ನು ಪತ್ತೆ ಮಾಡಿ ಅವರುಗಳಿಂದ ದಂಡವಾಗಿ ಹಣವನ್ನು ವಸೂಲು ಮಾಡಲಾಯಿತು ಈ ಸಂಬಂಧದಲ್ಲಿ ಒಂದು ಸಣ್ಣ ಹುಡುಗಿಯು ತನ್ನ ತಾಯಿಯ ಪ್ರೇರೇಪಣೆಯಿಂದ ರೈಲ್ವೆಯಲ್ಲಿ ಮಾರಲು ಒಂದು ಸೀಜನ್ ಟಿಕೆಟ್ಟನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ಪತ್ತೆ ಮಾಡಿ ಅದನ್ನು ವಶಪಡಿಸಿಕೊಳ್ಳಲಾಯಿತು.

ಮೈಸೂರಿಗೆ ಬರುವ ೪ ಬಸ್ಸುಗಳನ್ನು ವಿಧಾನ ನಿಲ್ದಾಣದ ಬಳಿ ಡಿ ಒ ಜಿ ಗಳು ಪರೀಕ್ಷಿಸಿ, ಒಂದು ಬಸ್ಸು ಓವರ್ ಲೋಡು ಮಾಡಿರುವುದನ್ನು ಪತ್ತೆಮಾಡಿ ಅದರ ರಹದಾರಿಯನ್ನು ರದ್ದು ಮಾಡಿರುತ್ತಾರೆ

ಪಂಡಿತ ನೆಹರೂರವರಿಗೆ ಜಿಲ್ಲಾ ಬೋರ್ಡಿನ ಬಿನ್ನವತ್ತಳೆ

ಜಿಲ್ಲಾ ಬೋರ್ಡಿಗೆ ಇಂಜನಿಯರಿಂಗ್ ಶಾಖೆ

ಮೈಸೂರು ೨೫

ನಿನ್ನೆ ದಿನ ಜಿಲ್ಲಾ ಬೋರ್ಡ್ ಸಭೆಯು ಶ್ರೀ ಹೆಚ್. ಎಂ ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಭಾರತದ ಪ್ರಧಾನಿ ಪಂಡಿತ ನೆಹರೂರವರು ಮೈಸೂರು ಜಿಲ್ಲೆಯಲ್ಲಿ [illegible] ನೋಡಲು ಬಂದಾಗ ಸಮಾರಂಭದಲ್ಲಿ ಬಿನ್ನವತ್ತಳೆಯನ್ನು ಜಿಲ್ಲಾ ಬೋರ್ಡಿನ ಪರವಾಗಿ ಅರ್ಪಿಸಬೇಕೆಂದು ತೀರ್ಮಾನವಾಯಿತು. ಸಭೆಯು ಆರಂಭವಾದಾಗ ಅಧ್ಯಕ್ಷ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳನ್ನು ಶ್ರೀ ಮನ್ಮಹಾರಾಜರು ಮೆಚ್ಚಿ ಪ್ರಶಂಸೆ ಮಾಡಿದ ವಿಷಯವನ್ನು ತಿಳಿಸಿದರು. ಜಿಲ್ಲಾ ಬೋರ್ಡಿನ ನಿರ್ಣಯದಂತೆ ಮೈಸೂರು ಸರ್ಕಾರದವರು ಹಿರಿಯೂರಿನ ಬಳಿ ಫ್ಲಾಕ್ಸ್ ಕಾರ್ಖಾನೆ ತೆರೆಯಬೇಕೆಂದಿರುವ ವಿಷಯವನ್ನು ನಂಜನಗೂಡು, ಚಾಮರಾಜನಗರ ಕ್ಷೇತ್ರವನ್ನು ಸರ್ಕಾರದವರು ಕೆಂಪು ಪಟ್ಟಿಯಲ್ಲಿರುವುದನ್ನೂ ತಿಳಿಸಿದರು. ಮೈಸೂರು ಜಿಲ್ಲಾ ಬೋರ್ಡಿಗೆ ಅವಶ್ಯಕವಾದ ಇಂಜನಿಯರಿಂಗ್ ಸಿಬ್ಬಂದಿಯ ಖರ್ಚು ವೆಚ್ಚಗಳ, ಅಂದಾಜು ಮುಂತಾದವುಗಳ ಬಗ್ಗೆ ಅಧ್ಯಕ್ಷರು ತಯಾರಿಸಿದ್ದ ಸಲಹೆಗಳನ್ನು ಸಭೆಯು ವಿಮರ್ಶಿಸಿ ತನ್ನ ಒಪ್ಪಿಗೆಯನ್ನಿತ್ತಿತು

ಗುಂಡ್ಲುಪೇಟೆಯಲ್ಲಿ ಹೈಸ್ಕೂಲನ್ನು ನಡೆಸಲು ಈಗ ಕೊಟ್ಟಿರುವ ಮುಸಾಫರ್ ಖಾನೆಯ ಕಟ್ಟಡವನ್ನು ಇನ್ನೂ ಆರು ತಿಂಗಳು ಕೊಡಬೇಕೆಂದೂ, ಜಿಲ್ಲೆಯಲ್ಲಿ ಎಲ್ಲಾ ಭಾಗದಲ್ಲೂ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳನ್ನು ಕಟ್ಟಲು ಬೇಕಾಗುವ ಕಟ್ಟಡಗಳ ಯೋಜನೆ ತಯಾರಿಸಿ ಅರ್ಧ ಭಾಗವನ್ನು ಸರ್ಕಾರವು ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವೂ ಸಹ ಪಾಸಾಯಿತು.

ಇದಲ್ಲದೆ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟ ಹಲವು ವಿಷಯಗಳ ಬಗ್ಗೆ ಸಭೆಯು ತೀರ್ಮಾನ ಮಾಡಿತು

ಟಿ. ನರಸೀಪುರದ ಬಳಿ ಕುಷ್ಠ ರೋಗಿಗಳ ವಸತಿ

ಕುಷ್ಠ ರೋಗಿಗಳಿಗಾಗಿ ಟಿ ನರಸೀಪುರದ ಬಳಿ ಒಂದು ವಸತಿಯನ್ನು ನಿರ್ಮಿಸಲು ಸರ್ಕಾರದವರು ೬೦ ಸಹಸ್ರ ರೂ. ಮಂಜೂರು ಮಾಡಿದ್ದಾರೆ

॥ ಶ್ರೀ ॥

ಗಣೇಶಾ ಟಾಕೀಸ್

26-11-48 ರಿಂದ 2ನೇ ವಾರ

ಹರಿದಾಸ್

(ತಮಿಳು)

ಹೊಸ ಪ್ರಿಂಟು, ಪೂರ್ಣ ವರ್ಣರಂಜಿತ ಚಿತ್ರ

ಪಾತ್ರ:- ತ್ಯಾಗರಾಜ ಭಾಗವತರ್, ರಾಜಕುಮಾರಿ, ಕೃಷ್ಣನ್, ಮಧುರಂ ಮತ್ತು

ಎನ್. ಸಿ ವಸಂತಕೋಕಿಲಂ

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಶೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ.—)

-- ಶೀಸೆಗೆ ತಲೆಕ್ಕೆ ಉತ್ತಮ ಅಭ್ಯಂಗನ ತೈಲಗಳು

ಸಂಜೀವಾಮೃತ - ಮಲೇರಿಯಾ ಗೆಡ್ಡೆಗಳಿಗೆ ಸಿದ್ಧ ಸಂಜೀವನ

ಮಹಾಲಕ್ಷ್ಮೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಬ್ರೇನ್ ಟಾನಿಕ್ ಶೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ 90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

Edited printed and published by A.R. Nagarajan at the Sadhvi Press D Subbaiah Road Mysore

FOR SALE

193 Model, 30 H P Ford Car, Saloon Body, with new Tyres and Batteries The Car is in good running condition and is open for Inspection at the Company's Office Premises at 1129, Vanivilas Road Mysore, between 11 A M and 5 P.M. on all working days Offers will be received till the 30th November 1948 by the undersigned

C Krishnamurthy,
Secretary,
Mysore Chemicals and Fertilisers Ltd, Mysore.

ಬೆಳಗಿನ ಆಟಗಳು

26-11-48ನೆಯ ಶುಕ್ರವಾರದಿಂದ ನಾಲ್ಕು ದಿನಗಳು ಮಾತ್ರ

ಪ್ಯಾರಾಮೌಂಟ್‌ರವರ

ಫ್ಯಾಂಟಂ ಎಂಪೈರ್

ಹದಿನೈದು ಭಾಗಗಳ ಪೂರ್ತಿ ಸೀರಿಯಲ್

ಒಲಂಪಿಯಾ ಟಾಕೀಸ್

ಪ್ರತಿ ದಿನ 3 ಆಟಗಳು

26-11-48ನೆಯ ಶುಕ್ರವಾರದಿಂದ

ರಣಜಿತ್‌ರವರ

ಬೇಲಾ

ಪಾತ್ರ:— (ಹಿಂದಿ)

§ ಜಯರಾಜ್ § ಸಿಗರ್ ಸುಲ್ತಾನಾ §

ಮುಂತಾದವರು.

ಒಲಂಪಿಯಾ ಟಾಕೀಸ್

ರಾಜಕಮಲ್ ಟಾಕೀಸ್

೨೬-೧೧-೪೮ನೇ ಶುಕ್ರವಾರದಿಂದ ಅಮೋಘ 2ನೇ ವಾರ

ಪ್ರತಿ ದಿನ ಮೂರು ಆಟಗಳು

ಭಾರತಿ

ನಾಗಯ್ಯ, ಕುಮಾರಿ, ರಾಜಕುಮಾರಿ, ಕೃಷ್ಣಸ್ವಾಮಿ ಮುಂತಾದವರು

ದಿವ್ಯವಾದ ತಮಿಳು ಚಿತ್ರ

ನೃತ್ಯ:- ಲಲಿತ, ಪದ್ಮಿನಿ

—: Morning Shows :—

From 26-11-48

for 3 days

Wonder Man

(In Technicolor)

:- With :-

DANNY KAYE, VIRGINIA MAYO, VERA ELLEN

+ ಶ್ರೀ ಗಾಯತ್ರೀ ಟಾಕೀಸ್ +

—25—11—48 ರಿಂದ 4 ದಿನಗಳು—

ವಾರ್ನರ್ಸ್‌ರವರ ಸಾಹಸಮಯ ಚಿತ್ರ ದಿನವಹಿ ಮೂರು ಆಟಗಳು

ಕ್ಯಾಪ್ಟನ್ ಬ್ಲಡ್

ಪಾತ್ರ:—ಯೆರಾಲ್ ಪ್ಲಿನ್ ಮತ್ತು ಒಲಿವಿಯಾ ಡಿಹ್ಯಾವಿಲೆಂಡ್

Morning Shows from 26-11-48 for 3 days only

RANDOM HARVEST

M G M's Golden Hit

ಪ್ರಭುದೇವಾ ಟಾಕೀಸಿನಲ್ಲಿ

ಜೆಮಿನಿಯವರ ತಮಿಳು ಚಿತ್ರ

ಭಕ್ತ ನಂದನಾರ್

೨೬—೧೧—೪೮ರಿಂದ ದಿನವಹಿ ೩ ಆಟಗಳು

ಪಾತ್ರ:- ದಂಡಪಾಣಿ ದೇಶಿಗರ್, ಶರಶಿಕನ್ನಿ, ರಾಮು, ನಾರಾಯಣರಾವ್ ಮುಂತಾದವರು

Mysore City Municipality

NOTICE

Sealed tenders will be received up to 4 p. m. 2-12-1948 by the Municipal Engineer for the following works.-

1) Constructing a Veterinary dispensary near Chamarajapuram Railway Station, Chamaraja Mohalla Mysore

2) Constructing a cattle ward to the Veterinary dispensary near Chamarajapuram Railway Station.

3) Constructing a dressing shed to the Veterinary dispensary near Chamarajapuram Railway Station.

The tender must be accompanied with a chalan for having remitted Rs. Rs. 195 and Rs. 130 in Municipal Treasury as earnest money for item No 2 and 3 respectively

For full particulars please see the detailed notification in the office notice board

V. K. Mukundan
Municipal Engineer

ಸಂಪುಟ ೭] ಶುಕ್ರವಾರ ೨೬-೧೧-೪೮ [ಸಂಚಿಕೆ ೧೨೫

ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿ ಟ್ರಾಲಿಗಳು

ಬೆಂಗಳೂರು ೨೬

ಬೆಂಗಳೂರಿನ ನಗರ ಸುತ್ತು ಮುತ್ತಿನ ಪ್ರದೇಶಗಳಲ್ಲಿ ಎಲೆಕ್ಟ್ರಿಕ್ ಟ್ರಾಲಿ ಬಸ್ಸುಗಳನ್ನು ನಿರ್ಮಿಸುವ ವಿಷಯದಲ್ಲಿ ಸರ್ಕಾರದ ಅನುಮತಿ ದೊರೆತಿದೆ. ಸದ್ಯಕ್ಕೆ ಈ ಯೋಜನೆಯು ೩೦ ಬಸ್ಸುಗಳ ಸಂಚಾರವನ್ನು ನಿರ್ಧರಿಸಲಾಗಿದೆ

ಇದಕ್ಕಾಗಿ ಸರ್ಕಾರದವರು ೩೮,೫೪೦೦ ರೂ ಗಳನ್ನು ಮಂಜೂರು ಮಾಡಿದ್ದಾರೆ. ಪ್ರತಿ ವರ್ಷ ಇದರ ವೆಚ್ಚಕ್ಕಾಗಿ ೪ ಲಕ್ಷ ರೂ ತಗಲುವುದೆಂದೂ, ೫ ಲಕ್ಷ ರೂ ಆದಾಯ ಬರುವುದೆಂದೂ ಅಂದಾಜು ಮಾಡಲಾಗಿದೆ.

ಜಮೀನ್ದಾರಿ ಶಾಸನ ಮಂಜೂರಾಯಿತು.

ಮದರಾಸಿನ ನ್ಯಾಯ ವಿಧಾಯಕ ಸಭೆಯಲ್ಲಿ ಜಮೀನುದಾರಿ ಮಸೂದೆಯು ಅಂಗೀಕರಿಸಲ್ಪಟ್ಟಿದೆ ಈ ಶಾಸನದ ಪ್ರಕಾರ ಮದರಾಸು ಸರ್ಕಾರವು ೩೮೧೦ ಜಮೀನ್ದಾರಿ ಎಸ್ಟೇಟುಗಳನ್ನೂ ೩೫೦೦ ನಕ್ಕ ಇನಾಮ ಗಳನ್ನೂ ವಶಪಡಿಸಿಕೊಳ್ಳುವುದು.

ಒಂದುಸಲ ಫೋನ್ ಮಾಡಲು ಒಂದೂವರಆಣೆ

ಬೊಂಬಾಯಿ ನಗರದಲ್ಲಿ ಟೆಲಿಫೋನ್ ಗಳಿಗೆ ಸಂಬಂಧಪಟ್ಟ ನೂತನವಾದ ಕಾನೂನೊಂದು ಬರುವ ಫೆಬ್ರವರಿಯಿಂದ ಜಾರಿಗೆ ಬರಲಿದೆ ಇದರ ಪ್ರಕಾರ ಒಂದು ಸಲ ಫೋನ್ ಮಾಡಿದರೆ ಒಂದೂವರೆ ಆಣೆ ಕೊಡಬೇಕಾಗುವುದು ಇದಲ್ಲದೆ ವಾರ್ಷಿಕ ತೆರಿಗೆ ೪೮ ರೂ. ಸಹ ಕೊಡಬೇಕು.

ರಥದ ನಿರ್ಮಾಣಕ್ಕೆ ಸಹಾಯ

ಹಿರೀಸಾವೆ ೨೩

ಹಿರೀಸಾವೆ ಹೋಬಳಿ ಬೂಕನ ಬೆಟ್ಟದ ರಂಗನಾಥಸ್ವಾಮಿಯವರ ರಥೋತ್ಸವಕ್ಕಾಗಿ ನೂತನವಾದ ರಥವೊಂದನ್ನು ತಯಾರಿಸಲು ... ಗ್ರಾಮದ ಶ್ರೀ ಲಕ್ಷ್ಮಣ್ಣ ಗೌಡರ ಮಗ ಶ್ರೀ ಎಲ್. ರಂಗೇಗೌಡರು ೧೫೦೦ ರೂ.ಗಳನ್ನು ಸಹಾಯ ಮಾಡಲು ಒಟ್ಟು ೧೦೦೦ ರೂ ಗಳನ್ನು ದೇವಾಲಯಕ್ಕೆ ಕೊಟ್ಟಿದ್ದಾರೆ.

ಅಕ್ಕಿ ಅಭಾವದಿಂದ ಸರ್ಕಾರದವರ ಅಂಗಡಿಗಳಲ್ಲಿ ಅಕ್ಕಿ ದೊರೆಯದ ಕಾರಣ ನಿರ್ಬಂಧಿಸಿ ಡಿಪೋಗಳನ್ನು ತೆರೆಯದೆ ಇರುವುದರಿಂದ ಇಲ್ಲಿನ ಜನರಿಗೆ ಅತ್ಯಂತ ಕಷ್ಟವಾಗಿದೆ ಆದ್ದರಿಂದ ಸರ್ಕಾರದವರು ಡಿಪೋಗಳನ್ನು ತೆರೆದು ಅಕ್ಕಿ ದೊರೆಯುವಂತೆ ಮಾಡುತ್ತಾರೆಂದು ನಂಬಲಾಗಿದೆ.

ಸೀಮೆಎಣ್ಣೆ ಅಭಾವವೂ ಸಹ ಹೆಚ್ಚಿ ಜನರಿಗೆ ಸೀಮೆ ದೊರೆಯುವುದೂ ಕಷ್ಟವಾಗಿದೆ

|| ಶ್ರೀ ||

ಚಾಮುಂಡೇಶ್ವರಿ ಟಾಕೀಸ್

26—11—48 ರಿಂದ

ಪ್ರತಿ ದಿನ 3 ಆಟಗಳು

ಘರ್ —

(ಹಿಂದಿ)

ಪಾತ್ರ — ಜಮುನಾ, ಮೋಲಿನಾ, ನವಾಬ್ ಮತ್ತು ಯಾಕುಬ್

ನಾಡಿಗ ಕೃಷ್ಣಮೂರ್ತಿಯವರಿಗೆ ಸತ್ಕಾರ

ಮೈಸೂರು ೨೬

ಅಮೇರಿಕದ ಪತ್ರಿಕೋದ್ಯಮದಲ್ಲಿ ವಿಶೇಷ ಶಿಕ್ಷಣ ಪಡೆದು ಹಿಂತಿರುಗಿ ಬಂದಿರುವ ಶ್ರೀ ನಾಡಿಗ ಕೃಷ್ಣಮೂರ್ತಿಯವರಿಗೆ ಪತ್ರಿಕೋದ್ಯೋಗಿಗಳ ಸಂಘದವರು ನಿನ್ನೆ ದಿನ ಬೆಳಗ್ಗೆ ಸತ್ಕಾರವನ್ನು ಏರ್ಪಡಿಸಿದ್ದರು ಅಧ್ಯಕ್ಷರಾದ ಶ್ರೀ ಗೋಪಾಲ ಕೃಷ್ಣರಾಯರು ಅಮೇರಿಕದಲ್ಲಿ ವೃತ್ತ ಪತ್ರಿಕೆಗಳ ಬೆಳವಣಿಗೆ ವಿಚಾರವನ್ನು ವಿವರಿಸಿದರು. ಶ್ರೀ ಆಗರಂ ರಂಗಯ್ಯನವರು ವಂದನೆ ಅರ್ಪಿಸಿ ನಾಡಿಗರಿಗೆ ಮುಂದೆ ಅವರ ವೃತ್ತಿಯಲ್ಲಿ ಯಶಸ್ಸು ದೊರಕಲೆಂದು ಹಾರೈಸಿದರು.

ಶ್ರೀ ನಾಡಿಗರು ಈ ದಿನ ರಾತ್ರಿ ದೆಹಲಿಗೆ ಪ್ರಯಾಣ ಬೆಳೆಸುವರು

ಸರ್ಕಾರಿ ನೆಯ್ಗೆ ಕಾರ್ಖಾನೆ

ಮೈಸೂರಿನ ಕಾರ್ಖಾನೆಯು ... ವರಿಗೆ ಹಲವು ಲೋಪದೋಷಕ್ಕಾಗಿ ... ರೂ ... ದಿನ ಕೆಲಸದಿಂದ ಸಸ್ಪೆಂಡ್ ಮಾಡಿದರೆಂಬ ಕಾರಣದ ಮೇಲೆ ಕಾರ್ಖಾನೆಯ ೪೦ ಜನ ಕೆಲಸಗಾರರು ನಿನ್ನೆ ಸ್ಟ್ರೈಕ್ ವನ್ನು ಹೂಡಿದ್ದರು. ... ಶ್ರೀ ... ಬಂದು ವಿಚಾರಿಸಿ ಕೆಲಸಗಾರರಿಗೆ ಬುದ್ಧಿವಾದ ಹೇಳಿದ ಮೇಲೆ ಗೋಪಾಲಯ್ಯನವರನ್ನು ಸಸ್ಪೆಂಡ್ ಮಾಡಿದ ವುದನ್ನು ರದ್ದು ಮಾಡಲಾಯಿತು ಈಗ ಕೆಲಸಗಾರರು ತಮ್ಮ ಕೆಲಸವನ್ನು ಮಾಡುತ್ತಿರುವರು

ನಿಧನ

ಬೆಂಗಳೂರಿನ ಪಸ್ಟ್ ಜಿಗಳೆಂದು ... ಯಾಗಿ ಅನೇಕ ಬಹುಮಾನಗಳನ್ನು ಪಡೆದಿದ್ದ ಪೈಲ್ವಾನ್ ... ನೇ ವಯಸ್ಸಿನಲ್ಲಿ ಕಳೆದ ಸೋಮವಾರ ... ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ನೆಹರೂರವರಿಗೆ ರಾಜಧಾನಿಯ ವಿದ್ಯಾರ್ಥಿಗಳ ಸ್ವಾಗತ

ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರನ್ನು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡುವಂತೆ ಮೈಸೂರು ನಗರದ ವಿದ್ಯಾರ್ಥಿಗಳ ಪರವಾಗಿ ಆಹ್ವಾನಿಸುವುದರಿಂದ ಆ ಸ್ವಾಗತ ಸಮಾರಂಭದ ಏರ್ಪಾಡುಗಳನ್ನು ಗೊತ್ತುಪಡಿಸಲು ಎಲ್ಲಾ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಮತ್ತು ಕಾರ್ಯಕರ್ತರುಗಳ ಸಭೆಯನ್ನು ... ಟಿಗೆ ... ಕಾಂಗ್ರೆಸ್ ಕಾರ್ಯಾಲಯದಲ್ಲಿ ಕರೆಯಲಾಗಿದೆ ಎಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ... ರಾಜ್‌ರವರ ...

ಭತ್ತ ಮತ್ತು ಅಕ್ಕಿಯನ್ನು ಸಾಗಿಸಲು ಅನುಮತಿ

ಸುಗ್ಗಿ ಆಜ್ಞೆಯಲ್ಲಿ ಬದಲಾವಣೆ

ಬೆಂಗಳೂರು ೨೬

ದಿನದಿನವೂ ಹೆಚ್ಚುತ್ತಿರುವ ಧಾನ್ಯದ ಬೆಲೆಯನ್ನು ನಿಯಂತ್ರಿಸಲು ಸರ್ಕಾರದವರು ಮೊನ್ನೆ ತಾನೆ ಹೊರಡಿಸಿದ ಸುಗ್ಗಿ ಆಜ್ಞೆಯ ಪರಿಣಾಮವಾಗಿ ... ಧಾನ್ಯಗಳು ... ಲ್ಪಟ್ಟಿರುವುದರಿಂದ ... ಇಲ್ಲದಿರುವ ಪ್ರದೇಶಗಳ ಜನರು ... ವಾಗಿ ಧಾನ್ಯವನ್ನು ಕೊಳ್ಳಲು ... ಯುಂಟಾಗುವುದು ... ವಾಗಿ ... ಆಜ್ಞೆಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆಯನ್ನು ಮಾಡಿದ್ದಾರೆ

... ನಗರಿಗೆ ... ಪ್ರದೇಶಗಳಲ್ಲಿ ... ಅಧಿಕ ... ಅಕ್ಕಿಯನ್ನು ... ಕಲ್ಪಿಸಲಾಗಿದೆ

... ಕುಟುಂಬ ... ಅಕ್ಕಿ ... ಸೇರು ... ಭತ್ತ ... ಸೇರು ... ಜಿಲ್ಲೆಯ ... ಮಾಡಿಕೊಳ್ಳುತ್ತಾರೆ ... ಮಂದಿ ... ೪೦ ಸೇರು ಭತ್ತ ... ಅಕ್ಕಿಗೆ ... ಪರ್ಮಿಟ್ ... ಇದುವರೆಗೆ ತಮ್ಮಲ್ಲಿರುವ ... ಸರ್ಕಾರಕ್ಕೆ ... ಈ ಸಹಾಯ ... ಧಾನ್ಯ ... ಪಡೆದುಕೊಳ್ಳಲು ... ತಿಳಿಸಿದ್ದಾರೆ

ತೇವಣಿ ಕೊಡದೆ ಪತ್ರಿಕೆ ನಿಂತಿತು

ಬೆಂಗಳೂರಿನಿಂದ ಹೊರಡುತ್ತಿದ್ದ ... ಪತ್ರಿಕೆಯು ತೇವಣಿಯನ್ನು ಕೊಡಬೇಕೆಂದು ಸರ್ಕಾರ ... ಹಣವನ್ನು ...

ಪದವಿಗಳನ್ನು ಪಡೆಯುವ ಮುನ್ನ ಸಮಾಜ ಸೇವೆ ಮಾಡಬೇಕು

ಪ್ರಧಾನ ಸಚಿವ ಶ್ರೀ ಕೆ ಸಿ ರೆಡ್ಡಿಯವರು ನಿನ್ನೆ ಸಂಜೆ ಕೋಲಾರದ ... ಮೀಡಿಯೆಟ್ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ವಿಶ್ವ ವಿದ್ಯಾನಿಲಯದ ಪದವೀಧರರು ತಮ್ಮ ಪದವಿಗಳನ್ನು ಪಡೆಯುವುದಕ್ಕೆ ಮುಂಚೆ ಸಾಮಾಜಿಕ ಸೇವೆಯನ್ನು ಮಾಡಬೇಕೆಂಬ ನಿಯಮವನ್ನು ... ವಿಷಯವನ್ನು ಸರ್ಕಾರವು ಶೀಘ್ರವಾಗಿ ಪರ್ಯಾಲೋಚಿಸುತ್ತಿದೆಯೆಂದೂ ತಿಳಿಸಿದರು.

ವಿಶ್ರಾಂತಿ ಹೊಂದಿದ ಅಧಿಕಾರಿಗಳಿಗೆ ಪುನಃ ಕೆಲಸವಿಲ್ಲ

ಮದರಾಸು ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ ವಿಶ್ರಾಂತಿ ಹೊಂದಿದ ಸರ್ಕಾರಿ ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಕೂಡದೆಂದು ತಿಳಿಸಿದ್ದಾರೆ ಅನಿವಾರ್ಯ ಸಂದರ್ಭಗಳಲ್ಲಿ ಆ ರೀತಿ ಸೇರಿಸಿಕೊಳ್ಳಬೇಕಾಗಿ ಬಂದಲ್ಲಿ ಅಂತಹವರ ... ವಯಸ್ಸು ೬೦ ವರ್ಷಕ್ಕೆ ... ರಬಾರದೆಂದೂ ಸಹ ತಿಳಿಸಲಾಗಿದೆ.

ಮದರಾಸಿನಲ್ಲಿ ಅಕ್ಕಿ ಬೆಲೆ ಹೆಚ್ಚಿತು

ಮದರಾಸು ಸರ್ಕಾರದವರು ಅಕ್ಕಿಯ ... ಅಕ್ಕಿಯ ಬೆಲೆಯನ್ನು ಅಳತೆಗೆ ... ಒಂದಾಣೆ ... ಹೆಚ್ಚಿಸುತ್ತಾರೆ

ಹೈದರಾಬಾದಿನ ಮಂತ್ರಿ ಮಂಡಲದವರ ಆಸ್ತಿ ಮುಟ್ಟುಗೋಲು

ಹೈದರಾಬಾದಿನಲ್ಲಿದ್ದ ಹಿಂದಿನ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಮೀರ್ ಲಾಯಿಕ್ ಅಲಿ ಮತ್ತು ಅವರ ಅನುಯಾಯಿಗಳು, ಅಲ್ಲಿನ ಮಂತ್ರಿಮಂಡಲದ ಸದಸ್ಯರುಗಳು, ಎಲ್ಲಾ ಸ್ಥಾಯಿ, ಹೈದರಾಬಾದ್ ನಿಜಾಮರ ... ನವಾಬ್ ... ಮತ್ತು ... ಯಲ್ಲಿದ್ದ ... ಜನರ ... ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಹೈದರಾಬಾದಿನ ಮಿಲಿಟರಿ ಸರ್ಕಾರವು ಆಜ್ಞೆ ಮಾಡಿದೆ.

... ಆಗಸ್ಟ್ ೧೫ನೇ ತಾರೀಖಿನಿಂದೀಚೆಗೆ ... ಗಳು ಮಾಡಿದ ... ಆಸ್ತಿ ಪಾಸ್ತಿಗಳ ವರ್ಗಾವಣೆ ... ರದ್ದೆಂದು ಸಾರಲಾಗಿದೆ.

ವಿದ್ಯಾಭ್ಯಾಸದಲ್ಲಿ ಕೋಮುವಾರು ಭೇದವಿಲ್ಲ

ವಿದ್ಯಾ ಕ್ಷೇತ್ರಗಳಲ್ಲಿ ಕೋಮುವಾರು ... ಎಲ್ಲರಿಗೂ ವಿದ್ಯಾಭ್ಯಾಸದ ... ಕೊಡಬೇಕೆಂದು ... ಮದರಾಸು ಸರ್ಕಾರವು ಆಜ್ಞೆ ...

ಕಾಲೇಜು ಪ್ರಿನ್ಸಿಪಾಲ್

... ಕಾಲೇಜು ಪ್ರಿನ್ಸಿಪಾಲ್ ... ಸ್ವಾಮಿಯವರಿಗೆ ... ಶ್ರೀ ವಿ. ಎಲ್. ...

ವಿದ್ಯಾರ್ಥಿ ಕಾಂಗ್ರೆಸ್ ಚುನಾವಣೆ

ಮೈಸೂರು ೨೫

ವಿದ್ಯಾರ್ಥಿ ಕಾಂಗ್ರೆಸ್ಸಿನ ಹೊಸ ಚುನಾವಣೆಯು ಬರುವ ತಿಂಗಳು ೧೦ ನೇ ತಾ|| ನಡೆಯುವುದು. ಉಮೇದುವಾರಿಕೆ ಅರ್ಜಿಗಳನ್ನು ೩ ನೇ ತಾ|| ಒಳಗಾಗಿ ಕಳ್ಳಿಸಬೇಕೆಂದೂ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳಲು ೬ನೇ ತಾ|| ಕಡೆಯೆಂದೂ, ಅಧ್ಯಕ್ಷರಾದ ಶ್ರೀ [illegible] ತಿಳಿಸುತ್ತಾರೆ

ಹರಿಕಥೆ

[illegible] ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಾಲಯದಲ್ಲಿ ಈ ದಿನ [illegible] ಶ್ರೀ [illegible] ಶ್ರೀ [illegible] ರಿಂದ ಶ್ರೀ [illegible] ಹರಿಕಥೆಯು ನಡೆಯುವುದು

ಆರ್ ಎಸ್ ಎಸ್. ನವರ ದಸ್ತಗಿರಿ

ಕುರುಹಿನಶೆಟ್ಟಿ [illegible] ಸ್ವಯಂ ಸೇವಕ ಸಂಘದ ಕೆಲಸಗಾರರಾದ ಶ್ರೀಗಳು ಕೆ. ಅಶ್ವತ್ಥ ನಾರಾಯಣ ಶೆಟ್ಟಿ ಮತ್ತು ಎಂ. ಸತ್ಯನಾರಾಯಣ ಶೆಟ್ಟಿಯವರ ಗಳನ್ನು ಬಂಧಿಸಲಾಗಿದೆ.

ಮಾರಾಟಕ್ಕಿದೆ

1] [illegible] 100×80 ಅಡಿ ಸೈಟಿನಲ್ಲಿ 30×40 ಅಡಿ [illegible] ಮನೆ ಬೆಲೆ 9500 ರೂ

2] [illegible] 60×40 ಅಡಿ ಸೈಟಿನಲ್ಲಿ 30×37 ಅಡಿ [illegible] ಮನೆ ರೂ 45 ಬಾಡಿಗೆ ಬೆಲೆ 7500 ರೂ

3] ಶ್ರೀರಂಗಪಟ್ಟಣದಲ್ಲಿ [illegible] ಹೆಂಚಿನ ಮನೆ ಬೆಲೆ 2500 ರೂ

ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ

ಜಯ & ಕಂಪೆನಿ

ಹ್ಯಾಂಡ್ ಅಂಡ್ ಸೇಲ್ ಬ್ರೋಕರ್ಸ್ ಮತ್ತು ಎಸ್ಟೇಟ್ ಏಜೆಂಟ್ಸ್ ಮೈಸೂರು ಬ್ಯಾಂಕ್ ಕಟ್ಟಡ ಸಯ್ಯಾಜಿರಾವ್ ರಸ್ತೆ, ಮೈಸೂರು.

Edited printed and published by A. R. Nagarajan at the Sadhvi Press D Subbaiah Road Mysore

ಗುರುಗಳ ಆಗಮನ

ಶ್ರೀ ಮಂಗೇಶ್ ರಾಮಚಂದ್ರ ಟಾಕಿ ಮಹರಾಜ್, ಬೊಂಬಾಯಿ ಇವರು ಕ ನ್ಯಾಕುಮಾರಿ ಯಾತ್ರೆಯಿಂದ ಬೆಂಗಳೂರು, ಶ್ರೀ ಅನಂತಸ್ವಾಮಿ ಅವರ ಮನೆಯಿಂದ ಮೈಸೂರು ಚಾಮರಾಜಪುರಂ, ಜಯಲಕ್ಷ್ಮೀ ಪುರಂನಲ್ಲಿರುವ ಶ್ರೀ ಅನಂತಸ್ವಾಮಿ [illegible] ಅವರಲ್ಲಿ ಈ ದಿನ ಬರುತ್ತಾರೆಂದು ತಿಳಿದು ಬಂದಿದೆ. ಮೂರು ದಿನಗಳಿರುತ್ತಾರೆ ಸದ್ಭಕ್ತರೆಲ್ಲರೂ ಬಂದು ದರ್ಶನ ಲಾಭವನ್ನು ಪಡೆಯಬಹುದು. ಶನಿವಾರ ರಾತ್ರಿ ಇಲ್ಲಿಂದ [illegible] ಪ್ರಯಾಣ ಬೆಳೆಸುತ್ತಾರೆ

ಚಾಮುಂಡೇಶ್ವರಿ ಟಾಕೀಸ್

ಬೆಳಗ್ಗೆ ೧೦-೩೦ಕ್ಕೆ
ನವಂಬರ್ 26 ರಿಂದ 3 ದಿನಗಳು

ದಿ ಹಾರ್ವೆ ಗರ್ಲ್ಸ್

(Technicolor ವರ್ಣರಂಜಿತ ಚಿತ್ರ)

ಪಾತ್ರ —ಪ್ರಸಿದ್ಧ ಜೂಡಿ ಗಾರ್ಲೆಂಡ್, ಜಾನ್ ಹಾಡಿಕ್, ರೇಬೋಲ್ಗರ್ ಮುಂತಾದವರು ಸುಂದರ ತರುಣಿಯರ ಕೊರಳಿನ ಹಾಡಿನಿಂದ ಕೂಡಿದ ಈ ಚಿತ್ರವನ್ನು ಸಕಲರೂ ನೋಡಿ
ಡಿಸೆಂಬರ್ 3 ರಿಂದ ಬೆಳಗಿನ ಆಟ

ಟೇಲ್ ಆಫ್ ಟೂ ಸಿಟೀಸ್

ಪ್ರತಿ ದಿನ 3 ಆಟಗಳು
26—11—48ನೆಯ ಶುಕ್ರವಾರದಿಂದ ರಜಾಕಾರರವರ

ಬೇಲಾ

ಪಾತ್ರ: — (ಹಿಂದಿ)
§ ಜಯರಾಜ್ § ಶಿರೀನ್ ಸುಲ್ತಾನಾ § ಮುಂತಾದವರು

ಒಲಂಪಿಯಾ ಟಾಕೀಸ್

Mysore City Municipality

NOTICE

Sealed tenders will be received up to 4 p m on 3-12-1948 by the Municipal Engineer for the following works:-

1) Constructing a Veterinary dispensary near Chamarajapuram Railway Station, Chamaraja Mohalla, Mysore

2) Constructing a cattle ward to the Veterinary dispensary near Chamarajapuram Railway Station

3) Constructing a dressing shed to the Veterinary dispensary near Chamarajapuram Railway Station

The tender must be accompanied with a chellan for having remitted Rs 360, Rs. 195 and Rs. 130 in the Municipal Treasury as earnest money for item No.s 1, 2 and 3 respectively

For full particulars please see the detailed notification in the office notice board

V. K. Mukundan,
Municipal Engineer.

ಪ್ರತಿ ದಿನ ಮೂರು ಆಟಗಳು

26—11—48ನೇ ಶುಕ್ರವಾರದಿಂದ 2ನೇ ವಾರ

ರಾಜಕಮಲ್ ಟಾಕೀಸಿನಲ್ಲಿ

ಭಾರತಿ

ಕನ್ನಡ ಸಾಮಾಜಿಕ ಚಿತ್ರ
ಭೂಮಿಕೆ:- ಸೂರ್ಯಕುಮಾರಿ, ರಾಜಕುಮಾರಿ, ಸಂಪತ್, ಕೃಷ್ಣಸ್ವಾಮಿ (Courtesy, Mysore University)
ನೃತ್ಯ:- ಲಲಿತ ಮತ್ತು ಪದ್ಮಿನಿ
A MAHAVEER Release.

ಹಾಲಿವುಡ್ ಸಿಟಿ, ಜೀವಣ್ಣರಾಯನ ಕಟ್ಟೆ, ಮೈಸೂರು

—: ಪ್ರತಿ ದಿನ ಸಾಯಂಕಾಲ 6 ಘಂಟೆಗೆ :—

ಪ್ರವೇಶ ದರ:— ಭಾನುವಾರ 0—3—6, ಇತರ ದಿನಗಳು 0—2—0

ಪ್ರದರ್ಶನಗಳು... ಪ್ರಾಣಿಗಳಿಲ್ಲದ ಸರ್ಕಸ್, ಸುಪ್ರಸಿದ್ಧ ಹಾಡುಗಾರರು ಮತ್ತು ನೃತ್ಯಗಾರರು, ಕವಾಲಿ [illegible] ವಿಮಾನ, ಪ್ರೊ|| ಭೂಪತಿ [illegible] ಅದ್ವಿತೀಯ ಮ್ಯಾಜಿಕ್. ಬಾಲ ಮತ್ತು ಪ್ರದರ್ಶನಗಳು ಬದಲಾವಣೆ ಆಗಬಹುದು.

ತಾ|| 14-11-48ನೇ ದಿವಸ ಪ್ರಥಮ ಬಹುಮಾನವನ್ನು ಶ್ರೀ ಕೆ. [illegible], 2009, ಕೆ. ಸುಬ್ಬಯ್ಯನ ಬೀದಿ, ಮೈಸೂರು- ಇವರು ಪಡೆದರು.

—: ಭಾನುವಾರ.- ತಾ|| 21 11-1948 :—

ಪ್ರವೇಶದ ಟಿಕೆಟ್ಟಿನ ಮೇಲೆ ಒಟ್ಟು ಬಹುಮಾನ 175 ರೂಪಾಯಿಗಳು.
1ನೇ ಬಹುಮಾನ 100 ರೂ ಗಳು, 2ನೇ ಬಹುಮಾನ 20 ರೂ , 3ನೇ ಬಹುಮಾನ 15ರೂ.
4ನೇ ಬಹುಮಾನ 10 ರೂ , 5 ನೇ ಬಹುಮಾನ 10 ರೂ , 6ನೇ ಬಹುಮಾನ 10ರೂ ,
7ನೇ ಬಹುಮಾನ 10 ರೂ , ಒಟ್ಟು ಬಹುಮಾನ 175ರೂ.ಗಳು
ಪ್ರವೇಶ ದರ 0—3—6 ಬಹುಮಾನಗಳನ್ನು ಸೋಮವಾರ ಸಂಜೆ 6 ಘಂಟೆಯವರೆಗೆ ಪಡೆಯಬಹುದು

ಎಲ್. ಪರಿಸರನ್, ಮ್ಯಾನೇಜಿಂಗ್ ಡೈರೆಕ್ಟರ್.

Mysore City Municipality

TENDER NOTICE

Sealed tenders will be received up to 4 p. m on 4-12-1948 by the Municipal Engineer for construction of a compound wall in the Town Hall towards the Western side Each tender must be accompanied with a chellan for having remitted Rs. 135 to the Municipal Treasury as earnest moeny. For full particulars please see the notification on the office notice board

V. K Mukundan,
MUNICIPAL ENGINEER

Mysore State Railway

—:o:—

Tenders for running Western Style Refreshment Rooms

Tenders are called for catering service in Western Style at the following Stations on the Mysore State Railway for a period of three years commencing from 7th January 1949

1) Bangalore City
2) Mysore
3) Arsikere
4) Kadur
5) Harihar
6) Shimoga Town

The tenders will be received up to 3 P M on [illegible] December 1948

Particulars and tender form can be had from the Traffic Manager, Mysore State Railway, Mysore

Mir Inayeth Hussain
Traffic Manager.
Dated 19th November 1948
Traffic Manager's Office
MYSORE

ಎಸ್. ಎಗ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ [illegible]
ನೋವು, ಕೀಲು ನೋವು [illegible]
ಸಕಲ ಬಾಧೆಗಳಿಗೂ [illegible]

ಮಹಾ ಸುಗಂಧರಾಜ ತೈಲ:—
" ಚಂದನಾದಿ ತೈಲ.—
" ಭೃಂಗಾಮಲಕ ತೈಲ —
—ಬೇಸಿಗೆ ಕಾಲಕ್ಕೆ ಉತ್ತಮ [illegible] ತೈಲಗಳು
ಮೈಸೂರು ಆಯುರ್ವೇದಿಕ್ [illegible]
90 ಚ್ಯಾನ್ಸರಿ ಬಿಲ್ಡಿಂಗ್, ಮೈ[illegible]

ಕ್ರೋ.ಸಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಆಣೆ

ಪ್ರಜಾವಾಣಿ

ಸಂಪುಟ ೭] ಶನಿವಾರ ೨೭-೧೧-೪೮ [ಸಂಚಿಕೆ ೧೨೬

ಹೈದರಾಬಾದಿನ ಇಬ್ಬರು ಮಂತ್ರಿಗಳ ಬಿಡುಗಡೆ

ಆಹಾರಕ್ಕಾಗಿ ರೆಡ್ಡಿಯವರ ಮುಂದೆ ಪ್ರದರ್ಶನ

ಪ್ರಧಾನ ಸಚಿವ ಶ್ರೀ ಕೆ. ಸಿ. ರೆಡ್ಡಿಯವ ರು ಮಾಲೂರಿನ ಕಸ್ತೂರಿ ಬಾಯಿ ಶಿಶು ವಿಹಾರ ಮತ್ತು ಮಹಿಳಾ ಸದನದ ಶಂಕುಸ್ಥಾಪನೆಯನ್ನು ನಿನ್ನೆ ದಿನ ನೆರವೇರಿಸಿದರು. ಈ ಸಮಾರಂಭದನಂತರ ಸುಮಾರು ೫೦೦ ಜನರ ಗುಂಪೊಂದು ಶ್ರೀ ರೆಡ್ಡಿಯವರನ್ನು ಕಂಡು ಆಹಾರ ಹಂಚಿಕೆ ಸರಿಯಾಗಿಲ್ಲವೆಂದೂ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದೂ ಕೂಗಿಕೊಳ್ಳಲಾರಂಭಿಸಿದರು.

ಪ್ರಧಾನ ಸಚಿವರು ಈ ಗುಂಪಿನವರನ್ನು ಶಾಂತವಾಗಿ ವರ್ತಿಸುವಂತೆ ಪ್ರಾರ್ಥಿಸಿ ಆಹಾರ ಹಂಚಿಕೆ ಅವ್ಯವಸ್ಥೆಗಳನ್ನು ಕೂಡಲೇ ಪರಿಹರಿಸುವುದಾಗಿಯೂ, ಅನ್ಯಾಯವಾಗಿ ವರ್ತಿಸುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವುದಾಗಿಯೂ, ತಿಳಿಸಿದರು. ಆನಂತರ ಜನರ ಕೋಪೋದ್ರೇಕ ಗುಂಪು ಚದರಿತು.

ಪಾನ ನಿರೋಧದಿಂದ ೩೯೦೦೦ ಜನರಿಗೆ ನಿರುದ್ಯೋಗ

ಮದರಾಸಿನ ೧೭ ಜಿಲ್ಲೆಗಳಲ್ಲಿ ಸಂಪೂರ್ಣ ಮದ್ಯ ಪಾನ ನಿರೋಧ ಶಾಸನವನ್ನು ಜಾರಿಗೆ ತಂದಿರುವುದರಿಂದ ಅಲ್ಲಿನ ೩೯ ಸಾವಿರ ಮಂದಿ ಭಟ್ಟಿ ಇಳಿಸುವವರು ನಿರುದ್ಯೋಗಿಗಳಾಗಿರುವರೆಂದು ಹೇಳಲಾಗಿದೆ.

ವಿಶ್ವ ಸಂಸ್ಥೆಯಲ್ಲಿ ಸಭಾತ್ಯಾಗ

ವಿಶ್ವ ಭದ್ರತಾ ಸಮಿತಿಯು ಪಾಲೆಸ್ತೀನ್ ದಂಗೆಯ ಪ್ರಶ್ನೆಯು ಮೊನ್ನೆ ದಿನ ಪುನಃ ಚರ್ಚೆಗೆ ಬಂದಿತು. ಭಾರತ ನಿಯೋಗದ ಮುಖಂಡರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮತ್ತು ಭಾರತದ ಪ್ರತಿನಿಧಿ ಸರ್ ಗಿರಿಜಾ ಶಂಕರ್ ಬಾಜ್‌ಪೈರವರು ಭಾರತವು ಈ ಚರ್ಚೆಯಲ್ಲಿ ಭಾಗ ವಹಿಸುವುದಿಲ್ಲವೆಂದು ತಿಳಿಸಿ ಸಭಾ ಪರಿತ್ಯಾಗ ಮಾಡಿದರು. ಆನಂತರ ಕೊಲಂಬಿಯಾ ಪ್ರತಿನಿಧಿಯ ಸಲಹೆಯಂತೆ ಚರ್ಚೆಯನ್ನು ಮುಂದೆ ಹಾಕಲಾಯಿತು.

ನ್ಯೂಯಾರ್ಕಿನಲ್ಲಿ ಭಾರತದ ಕಟ್ಟಡ

ಅಮೇರಿಕದಲ್ಲಿ ಭಾರತ ಸರ್ಕಾರದ ಸರ್ವ ಚಟುವಟಿಕೆಗಳ ಕೇಂದ್ರ ಕಛೇರಿಯನ್ನು ನಡೆಸಲು ನ್ಯೂಯಾರ್ಕಿನಲ್ಲಿ ಏಳಂತಸ್ತಿನ ಕಟ್ಟಡವೊಂದನ್ನು ಭಾರತ ಸರ್ಕಾರವು ಕೊಂಡುಕೊಂಡಿದೆ. ಈ ಕಟ್ಟಡದ ಬೆಲೆ ನೂರಅವತ್ತು ಲಕ್ಷ ರೂಪಾಯಿಗಳು.

ಮರಣ ದಂಡನೆ ಕಾಲದಲ್ಲಿ ಜಪಾನೀಯರಿರಕೂಡದು

ಜಪಾನಿನ ಟೋಜೋ ಮತ್ತು ಇತರ ೭ ಜನರ ಮರಣ ದಂಡನೆಯು ಕಾಲದಲ್ಲಿ ಒಬ್ಬ ಜಪಾನೀಯನೂ ಆ ಸ್ಥಳದಲ್ಲಿರಲು ಅವಕಾಶವಿಲ್ಲವೆಂದೂ, ೬ ಜನ ಅಮೇರಿಕದ ಅಧಿಕಾರಿಗಳು ಮಾತ್ರ ಹಾಜರಿರುವರೆಂದೂ ತಿಳಿಸಲಾಗಿದೆ.

ಪಟೇಲರಿಗೆ ಗೌರವ ಪ್ರಶಸ್ತಿ

ಸರ್ದಾರ್ ವಲ್ಲಭಭಾಯಿಪಟೇಲ್, ಶ್ರೀ ಸಂಪೂರ್ಣಾನಂದ್ ಮತ್ತು ಆಚಾರ್ಯ ನರೇಂದ್ರ ದೇವ್‌ರವರುಗಳಿಗೆ ಗೌರವ ಪ್ರಶಸ್ತಿಗಳನ್ನು ಕೊಡಲು ಅಲಹಾಬಾದ್ ವಿಶ್ವವಿದ್ಯಾನಿಲಯದವರು ನಿರ್ಧಾರ ಮಾಡಿದ್ದಾರೆ.

ಕೈಲಾಸಂ ದಿನಾಚರಣೆ

ಮೈಸೂರು ೨೬

ಮಹಾರಾಜಾ ಕಾಲೇಜು ಮಿತ್ರ ಮೇಳದ ಆಶ್ರಯದಲ್ಲಿ ಕೈಲಾಸಂ ದಿನಾಚರಣೆ ಪ್ರಯುಕ್ತ ಈ ದಿನ ಸಂಜೆ ೫-೩೦ ಗಂಟೆಗೆ ಕಾಲೇಜು ಅಂಗಳದಲ್ಲಿ ಶ್ರೀಗಳಾದ ಸಿ. ಡಿ. ಗೋವಿಂದರಾವ್, ಎಚ್. ಸುಬ್ಬರಾವ್, ಸಿ. ಆರ್. ರಾಮಸ್ವಾಮಿ ಶಾಸ್ತ್ರಿ, ಕೆ. ಕೃಷ್ಣ ಅಯ್ಯಂಗಾರ್ ಮುಂತಾದವರು ಭಾಷಣ ಮಾಡುವರು.

ನಾಳೆ ಸಂಜೆ ಜೂನಿಯರ್ ಬಿ. ಎ. ತರಗತಿಯಲ್ಲಿ ಕೈಲಾಸಂರವರ "ಬಂಡವಾಳವಿಲ್ಲದ ಬಡಾಯಿ" ಎಂಬ ನಾಟಕವು ಅಭಿನಯಿಸಲ್ಪಡುವುದು. ಸರ್ವರಿಗೂ ಸ್ವಾಗತವಿದೆ.

ಜುಲ್ಮಾನೆಗಳು

ನಗರದ ಟ್ರಾಫಿಕ್ ಪೋಲೀಸಿನವರು ಫುಟ್‌ಪಾತಿನಲ್ಲಿ ನಡೆಯದೆ ಇರುವುದು, ದೀಪವಿಲ್ಲದೆ ಸೈಕಲ್ ಸವಾರಿ ಮಾಡುವುದು, ಟಾಂಗಾ ಗಾಡಿಗಳನ್ನು ಚೌಕದಲ್ಲಿ ನಿಲ್ಲಿಸದೇ ಇರುವುದು ಮತ್ತೆ ಕೆಲವರು ಟ್ರಾಫಿಕ್ ನಿಯಮಗಳನ್ನು ಉಲ್ಲಂಘನೆ ಮಾಡಿದುದು ಇವೇ ಮುಂತಾದ ಕಾರಣಗಳಿಗಾಗಿ ಎರಡನೆ ಸಿಟಿ ಮ್ಯಾಜಿಸ್ಟ್ರೇಟರ ಮುಂದೆ ಸುಮಾರು ೩೩ ಮೊಕದ್ದಮೆಗಳನ್ನು ನಿನ್ನೆ ದಿನ ದಾಖಲ್ಮಾಡಿದ್ದರು. ನ್ಯಾಯಾಧಿಕಾರಿ ವಿಚಾರಣೆ ನಡೆಸಿ ಪ್ರತಿಯೊಬ್ಬ ಅಪರಾಧಿಗೂ ಎರಡು ರೂಪಾಯಿ ಜುಲ್ಮಾನೆ ವಿಧಿಸಿದರು.

ಹರಿಕಥೆಗಳು

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಚಿನ್ಮಯಾನಂದ ಔಷಧಾಲಯದ ಬಳಿ ಈ ದಿನ ರಾತ್ರಿ ೮-೩೦ ಗಂಟೆಗೆ ಶ್ರೀ ಗುಂಡೂರಾಯರಿಂದ ದ್ರೌಪದೀ ವಸ್ತ್ರಾಪಹರಣ ಎಂಬ ಹರಿಕಥೆಯು ನಡೆಯುವುದು.

ಅಬ್ಬೇಗೌಡ ರಸ್ತೆಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೬-೩೦ ಕ್ಕೆ ವೇ॥ ಬ್ರ॥ ಸೀತಾರಾಮಾಚಾರ್ಯರಿಂದ ಧ್ರುವ ಕುಮಾರ ಎಂಬ ಕೀರ್ತನೆ ನಡೆಯುತ್ತದೆ.

ಜೂಜಾಟವನ್ನು ನಿಲ್ಲಿಸಬೇಕು

ಜೇಮ್ಸ್ ಕ್ಲಬ್ಬಿನ ಕಟ್ಟಡದಲ್ಲಿ ನಡೆಯುತ್ತಿರುವ ಜೂಜಾಟಕ್ಕೆ ಲೈಸೆನ್ಸ್ ಕೊಟ್ಟಿರುವುದ ಸರಿಯಲ್ಲವೆಂದೂ ಅದನ್ನು ಕೂಡಲೆ ನಿಲ್ಲಿಸಬೇಕೆಂದೂ ಸೂಚಿಸಿ ಜಿಲ್ಲೆ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಎ. ಎಸ್. ಕೃಷ್ಣಮೂರ್ತಿ ಮತ್ತು ಇತರ ನಿವಾಸಿಗಳು ಸರ್ಕಾರವಿಗೆ ಕಳುಹಿಸಿದ್ದಾರೆ.

ತಿರುವಾಂಕೂರಿನಲ್ಲಿ ಪತ್ರಿಕಾ ಶಾಸನ ರದ್ದು

ತಿರುವಾಂಕೂರು ಸರ್ಕಾರವು ಪತ್ರಿಕಾ ಶಾಸನವನ್ನು ರದ್ದುಗೊಳಿಸುವ ವಿಷಯವನ್ನು ತೀವ್ರವಾಗಿ ಪರ್ಯಾಲೋಚಿಸುತ್ತಿದೆಯೆಂದೂ ತಿಳಿದುಬಂದಿದೆ.

ಮಾನವ ಕೃತ ಭೂಕಂಪ

ಹೆಲ್‌ಗೋಲ್ಯಾಂಡ್ ಸಮೀಪ ಎಂಬಲ್ಲಿ ಒಂದು ಕಟ್ಟಿಕೊಂಡಿದ್ದ ಸಮುದ್ರ ತೀರವನ್ನು ಮೊನ್ನೆ ದಿನ ಬ್ರಿಟಿಷ್ ನೌಕಾ ದಳದ ಇಂಜನಿಯರುಗಳು ಸ್ಫೋಟಕ ವಸ್ತುಗಳಿಂದ ಧ್ವಂಸದ ಪರಿಣಾಮವಾಗಿ ಅದಕ್ಕೆ ೧೫೦ ಮೈಲಿ ದೂರವಿರುವ ನಗರವೊಂದರಲ್ಲಿ ನೆಲವು ನಡುಗಿ ಭೂಕಂಪವಾದ ಹಾಗೆ ಭಾಸವಾಯಿತೆಂದೂ, ನೀರು ಸಮುದ್ರ ಮಟ್ಟಕ್ಕಿಂತ ೩೦೦೦ ಅಡಿ ಮೇಲಕ್ಕೆ ಚಿಮ್ಮಿತೆಂದು ವರದಿಯಾಗಿದೆ.

ಸರ್ವೇಶ್ವರನ ಪ್ರಾರ್ಥನಾ ಪದ್ಯ ಮಾಲಿಕೆ

ರಾಜಧಾನಿಯ ಆತ್ಮ ವಿಚಾರ ಮಂದಿರದ ಅಧ್ಯಕ್ಷ ಶ್ರೀ ಎಂ. ಎಲ್. ನರಸಿಂಹನವರಿಂದ ವಿರಚಿಸಲ್ಪಟ್ಟಿರುವ "ಸರ್ವೇಶ್ವರನ ಪ್ರಾರ್ಥನಾ ಪದ್ಯ ಮಾಲಿಕೆ" ಪುಸ್ತಕವು ನಮ್ಮ ಹಸ್ತಗತವಾಗಿದೆ. ಈ ಪುಸ್ತಕದಲ್ಲಿ ಅಡಕವಾಗಿರುವ ಪದ್ಯಗಳು ಎಲ್ಲರಿಗೂ ಬೋಧಕವಾಗಿಯೂ, ಭಕ್ತಿ ಪುರಸ್ಸರವಾಗಿಯೂ ಮತ್ತು ಸರಳವಾಗಿಯೂ ಇದ್ದು, ೩೦ ಪುಟ ದಷ್ಟು ಸಂಗ್ರಹವಾಗಿದೆ. ಇದರ ಬೆಲೆ ಕೇವಲ ಮೂರಾಣೆ.

ಸತ್ಕಾರ ಕೂಟ

ಅರಮನೆ ಇಲಾಖೆಯ ಪ್ಲಾನ್ ಶೇಕ ಎಸ್ಟಾಬ್ಲಿಷ್‌ಮೆಂಟ್ ಅಕೌಂಟೆಂಟಾಗಿದ್ದ ಶ್ರೀ ... ಹೊಂದಲಿರುವ ಶ್ರೀ ವೈ. ನರಸಿಂಹಯ್ಯನವರಿಗೆ ... ಮೊನ್ನೆ ದಿನ ಅರಮನೆ ಕಛೇರಿಯ ನೌಕರು ... ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ... ಜಗನ್ಮೋಹನ ಬಂಗಲೆಯಲ್ಲಿ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ನರಸಿಂಹಯ್ಯನವರ ... ಸ್ನೇಹಿತರು ... ಭಾಷಣ ಮಾಡಿದರು. ಶ್ರೀ ... ಎಸ್. ಕೇಶವ ಮೂರ್ತಿಯವರು ... ವಂದನಾರ್ಪಣೆ ಮಾಡಿದರು.

ಬಸವನಗುಡಿ ... ವಾಸಿ ಶ್ರೀ ವೆಂಕಟರಾಮಯ್ಯನವರ ಮನೆಯಲ್ಲಿ ... ನಡೆದ ... ಶ್ರೀ ಎಂ. ಎಲ್. ನಾರಾಯಣಾಚಾರ್ಯರಿಂದ ... ಸಪ್ತಾಹ ... ನಡೆಯುವುದು.

ಇಬ್ಬರು ಹೈದರಾಬಾದ್ ಸಚಿವರ ಖುಲಾಸೆ

ತಮ್ಮ ಮನೆಗಳಲ್ಲಿಯೇ ಬಂಧಿಸಲ್ಪಟ್ಟಿದ್ದ ಹೈದರಾಬಾದಿನ ಹನ್ನೊಂದು ಜನ ಮಂತ್ರಿಗಳ ಪೈಕಿ ಇಬ್ಬರನ್ನು ಬಿಡುಗಡೆ ಮಾಡುವಂತೆ ಅಲ್ಲಿನ ಮಿಲಿಟರಿ ಪ್ರಭುತ್ವ ಆಜ್ಞೆ ಮಾಡಿದೆ. ಸ್ಥಳೀಯ ಸಂಸ್ಥೆಗಳ ಮಂತ್ರಿ ಗೋವಿಂದರಾವ್ ಜುಕ್ಕೇಕರ್ ಮತ್ತು ಕೈಗಾರಿಕಾ ಮಂತ್ರಿ ಶಂಕರರಾವ್ ಹಾಲ್ನೇಕರ್ ಎಂಬುವರೇ ಅವರು. ಲಾಯಕ್ ಅಲಿ ಮಂತ್ರಿಮಂಡಲದವರನ್ನು ವಿಚಾರಣೆಗೆ ಗುರಿಪಡಿಸಲು ಕೈಗೊಂಡಿದ್ದ ತನಿಖೆ ಕ್ರಮಗಳೆಲ್ಲವೂ ಮುಗಿದಿರುವುದರಿಂದ ಇವರನ್ನು ಬಿಡಲಾಗಿದೆ.

ಚೀಣಾ ದೇಶಕ್ಕೆ ಹೊಸ ಪ್ರಧಾನಿ

ರಾಜೀನಾಮೆ ಇತ್ತಿರುವ ವಾಂಗ್ ವೆಂಹಾವ್ ಎಂಬುವರ ಸ್ಥಾನದಲ್ಲಿ ಶಾಸನ ಸಭಾಧ್ಯಕ್ಷರಾದ ಸನ್ ಫೋರವರನ್ನು ಚೀಣಾ ದೇಶದ ಪ್ರಧಾನಿಯಾಗಿ ಜ॥ ಚಿಯಾಂಗ್ ಕೈಷೇಕರು ನೇಮಿಸಿದ್ದಾರೆ.

ಲಾ ಕಾಲೇಜು ಪ್ರಿನ್ಸಿಪಾಲ್

ಸ್ವಂ ಸು ಪ್ರೋ] ಬೆಂಗಳೂರು ೨೬

ಲಾ ಕಾಲೇಜು ಪ್ರಿನ್ಸಿಪಾಲ್ ಶ್ರೀ ಎ. ನಾರಾಯಣರಾಯರು ನಿವೃತ್ತರಾಗುವುದರಿಂದ ಪ್ರಿನ್ಸಿಪಾಲರನ್ನಾಗಿ ಶ್ರೀ ಪಿ. ಶಿವಶಂಕರ್ ರವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ.

× ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ದೆಹಲಿಗೆ ಹೋಗುವುದಿಲ್ಲ. ೩೦ನೇ ತಾರೀಖು ಹೊರಡುವರು. ಶ್ರೀ ಟಿ. ಸಿದ್ದಲಿಂಗಯ್ಯನವರೂ ಅದೇ ದಿನವೇ ತೆರಳುವರು. ಜ॥ ನೆಹರೂರವರು ಮೈಸೂರಿಗೆ ಬರುವ ವಿಷಯದಲ್ಲಿ ಅವರ ಭೇಟಿ ಮಾಡಿ ತೀರ್ಮಾನವಾಗುವುದು.

ಹಿಂದೂ ದೇವಾಲಯಗಳಿಗೆ ಮದ್ಯವಿಲ್ಲ

ಮದರಾಸ್ ಸರ್ಕಾರದವರು ಪಾನ ನಿರೋಧ ಶಾಸನದಲ್ಲಿ ತಿದ್ದುಪಡಿಯೊಂದನ್ನು ಮಾಡಿ, ಇದುವರೆಗೆ ಹಿಂದೂ ದೇವಸ್ಥಾನಗಳು ಧಾರ್ಮಿಕ ಕಾರ್ಯಗಳ ಸಂಬಂಧದಲ್ಲಿ ಮದ್ಯವನ್ನು ಉಪಯೋಗಿಸಲು ಕೊಟ್ಟಿದ್ದ ರಿಯಾಯಿತಿಯನ್ನು ರದ್ದು ಮಾಡಿದ್ದಾರೆ.

ಚೀಣದಲ್ಲಿ ಕಮ್ಯುನಿಸ್ಟರ ಮುನ್ನಡೆ

ಉತ್ತರ ಚೀಣಾದ ಸ್ಯೂಚೌ ನಗರದ ಆಗ್ನೇಯಕ್ಕೆ ೩೦ ಮೈಲಿ ದೂರದಲ್ಲಿ ಕಮ್ಯೂನಿಸ್ಟ್ ಸೇನೆಗಳು ಹೋರಾಡುತ್ತಿವೆ. ಈ ಎರಡು ಸೇನೆಗಳು ಈಗ ಭದ್ರ ಸ್ಥಾನಗಳಲ್ಲಿ ... ಕಡೆಯಿಂದ ನಾನ್‌ಕಿಂಗ್ ... ನಗರವನ್ನು ಸಂಪೂರ್ಣವಾಗಿ ಮುತ್ತಿಗೆ ಹಾಕುವುದಾಗಿ ... ಹೇಳುತ್ತಿದ್ದಾರೆ.

ಜನವರಿ ೨೬ಕ್ಕೆ ಭಾರತದ ಹೊಸ ರಾಜ್ಯಾಂಗ

ಹೊಸ ರಾಜ್ಯಾಂಗ ರಚನೆಯನ್ನು ನಡೆಸುತ್ತಿರುವ ... ಜನವರಿ ೨೬ನೇ ತಾ॥ ಭಾರತದ ಹೊಸ ರಾಜ್ಯಾಂಗವನ್ನು ಅಂಗೀಕರಿಸಬೇಕೆಂದು ಭಾರತ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷವು ನಿರ್ಧರಿಸುತ್ತದೆ.

ಪೊಲೀಸು ಅಧಿಕಾರಿಗಳ ಸಭೆ

ಮೈಸೂರು ೨೭

ಕಳೆದ ೨೫ನೇ ತಾ॥ ನಗರದ ಎಲ್ಲಾ ಪೊಲೀಸು ಅಧಿಕಾರಿಗಳ ಸಭೆಯು ಡಿ. ಐ. ಜಿ. ಶ್ರೀ ಮುತ್ತೋಜಿರಾವ್ ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸಿಂಧ್ಯರವರು ಭಾಷಣಮಾಡಿ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ಪುನರ್ರಚನಾ ಸಮಿತಿಯುವರು ಪೊಲೀಸ್ ಇಲಾಖೆಯಲ್ಲಿ ಆಗಬೇಕಾಗಿರುವ ಸುಧಾರಣೆಗಳ ಬಗ್ಗೆ ಪರಿಶೀಲಿಸ ಬೇಕೆಂದೂ, ಸಾರ್ವಜನಿಕರೊಂದಿಗೆ ಅಧಿಕಾರಿಗಳು ಸಹಕಾರ ಮನೋಭಾವದಿಂದ ವರ್ತಿಸಬೇಕೆಂದೂ ತಿಳಿಸಿದರು. ರಸ್ತೆ ಸಂಚಾರ ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕಾಗಿ ರೇಡಿಯೋ ಲೌಡ್ ಸ್ಪೀಕರ್, ಹಸ್ತ ಪತ್ರಿಕೆಗಳು, ಭಾಷಣಗಳು ಮತ್ತು ಸಿನಿಮಾಗಳಲ್ಲಿ ಸ್ಲೈಡ್ ಪ್ರದರ್ಶನ—ಇವುಗಳ ಮೂಲಕ ಪ್ರಚಾರ ನಡೆಸಬೇಕೆಂದೂ, ಈನೂನಿಗೆ ವಿರುದ್ಧವಾಗಿ ವರ್ತಿಸುವವರನ್ನು ಹಿಡಿದು ಕೋರ್ಟಿಗೆ ಕಳುಹಿಸಬೇಕೆಂದೂ ಅಧ್ಯಕ್ಷರು ಅಧಿಕಾರಿಗಳಿಗೆ ಸೂಚಿಸಿದರು. ಎಲ್ಲ ಪೊಲೀಸ್ ಅಧಿಕಾರಿಗಳೂ ಶಿಸ್ತು ಕಾರ್ಯ ದಕ್ಷತೆ ಮತ್ತು ಇಲಾಖೆಯ ಕಾರ್ಯ ತತ್ಪರತೆಗಳ ಕಡೆ ಗಮನ ಕೊಡಬೇಕೆಂದು ಅವರು ತಿಳಿಸಿದರು.

ನಿಮ್ಮ ಮೈ ಬೊಕದಲ್ಲಿನಂತೆ

ಹೊಳೆಯಬೇಕೆ ? ನೀವು

ಲಾವಣ್ಯ ಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ !

ಮೈ ಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

Edited printed and published by A.K. Nagarajan at the Sadhvi Press D. Subbaiah Road Mysore

ಅಕ್ಕಿ ಮಾರಾಟದಲ್ಲಿ ಪಕ್ಷಪಾತವೇ?

(ಓ ಬಾ) ಗುಂಡ್ಲುಪೇಟೆ ೨೫

ಈ ತಾಲ್ಲೂಕಿನ ರೇಷನ್ ಡಿಪೋಗಳಲ್ಲಿ ರೇಷನ್ ಕಾರ್ಡುಗಳುಳ್ಳ ಅಧಿಕಾರಿ ವರ್ಗದವರಿಗೆ ಮಾತ್ರ ಒಳ್ಳೆಯ ಅಕ್ಕಿಯನ್ನು ಕೊಟ್ಟು, ಸಾರ್ವಜನಿಕರಿಗೆ ಮುಗ್ಗಲು ಅಕ್ಕಿಯನ್ನು ಕಡ ಕಾರ್ಡಿನಲ್ಲಿರ ವಷ್ಟು ಪೂರ್ತಿ ಕೊಡದೆ ಹತಾಯಿಸುತ್ತಿದ್ದಾರೆ. ಈ ವಿಷಯದಲ್ಲಿ ಕೂಡಲೇ ಸರ್ಕಾರದವರು ನಿಗಾ ಕೊಟ್ಟು ಎಲ್ಲರಿಗೂ ಒಂದೇ ರೀತಿಯ ಅಕ್ಕಿಯ ಸರಬರಾಯಿ ಮಾಡಬೇಕೆಂದು ಕೋರಲಾಗಿದೆ.

ಈ ಊರಿನ ಪುರಸಭೆಯ ಕಛೇರಿಯ ಮುಂದೆ ನಿನ್ನೆ ಕಳೆದ ೧೮ನೇ ತಾ॥ ನೆಹರೂ ಜಯಂತಿಯನ್ನು ಶ್ರೀ ಜಿ ಎಸ್ ನಾರಾಯಣರಾವ್ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಗಳು ಅನಂತ ಸಿಂಗ್ ಮತ್ತು ಎಂ ಕೆಂಚಣ್ಣನವರುಗಳು ಪಂ॥ ನೆಹರೂ ಮತ್ತು ಸರ್ದಾರ್ ಪಟೇಲರ ಭಾವಚಿತ್ರಗಳನ್ನು ಕಾಂಗ್ರೆಸ್ ಕಛೇರಿಗೆ ದಾನ ಮಾಡಿದರು.

ದತ್ತೋತ್ಸವ

ಸಾಲಿಗ್ರಾಮದ ಶ್ರೀ ನೇವಿ ರಸ್ತೆ ಸ್ವಾಮಿ ಮಠದ ಚೆನ್ನಾಲಯದಲ್ಲಿ ಶ್ರೀ ಪುಷ್ಪದಂತ ತೀರ್ಥಂಕರರ ವಾರ್ಷಿಕ ಜನ್ಮ ಕಲ್ಯಾಣ ರಥೋತ್ಸವವೂ ಮತ್ತು ಲಕ್ಷದೀಪೋತ್ಸವವೂ ಬರುವ ತಿಂಗಳು ೧ ಮತ್ತು ೨ನೇ ತಾ॥ ಗಳಲ್ಲಿ ನಡೆಯುವುವು.

ಉಪನ್ಯಾಸ

ವಾಣೀ ವಿಲಾಸ ಮೊಹಲ್ಲಾ ಶ್ರೀ ರಾಮಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಸ್ವಾಮಿ ಸೋಮನಾಥಾ ನಂದಜಯಂತಿ ಉಪನ್ಯಾಸ ಮಾಡುವರು.

Mysore City Municipality

NOTICE

Sealed tenders will be received up to 4 p m on 30-11-1948 by the Municipal Engineer for constructing five shops to the North-west of Devaraja Market.

Each tender must be accompanied with a chellan for having remitted Rs 140, in the Municipal Treasury as earnest money

For full particulars please see the detailed notification in the office notice board

V. K Mukundan,
Municipal Engineer.

ಕಾಂಗ್ರೆಸ್ ಅಧಿವೇಶನದ ವೆಚ್ಚ ೨೦ ಲಕ್ಷ ರೂ.

ಜಯಪುರದಲ್ಲಿ ಈ ಸಾರಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನದ ಖರ್ಚು ೫೦-೬೦ ಲಕ್ಷ ರೂಗಳಾಗುವುವೆಂದು ಜನರಲ್ಲಿ ಮೂಡಿರುವ ಭಾವನೆಯು ತಪ್ಪೆಂದೂ, ೩೦ ಲಕ್ಷ ರೂ ನ ಖರ್ಚು ಖಾಯಮ್ಮಾಗಿ ಉಳಿಯುವ ಕೆಲಸಕ್ಕೇ ವೆಚ್ಚವಾಗುವುದೆಂದೂ, ಅಧಿವೇಶನದ ಖರ್ಚು ೨೦ ಲಕ್ಷ ರೂಗೆ ಮೀರುವುದಿಲ್ಲವೆಂದೂ, ಕಾಂಗ್ರೆಸ್ ಕಾರ್ಯದರ್ಶಿ ಆಚಾರ್ಯ ಜುಗುಲ್ ಕಿಶೋರ್‌ರವರು ತಿಳಿಸಿರುತ್ತಾರೆ.

ದೆಹಲಿಯಲ್ಲಿ ಸ್ವಾತಂತ್ರ್ಯ ಜ್ಯೋತಿ

ಮೀರತ್ತಿನಿಂದ ಜಯಪುರಕ್ಕೆ ಕೊಂಡೊಯ್ಯಲಾಗುತ್ತಿರುವ ಸ್ವಾತಂತ್ರ್ಯ ಜ್ಯೋತಿಯು ಮೊನ್ನೆ ದಿನ ದೆಹಲಿಯನ್ನು ತಲುಪಿತು. ದೆಹಲಿಯ ಮುಖ್ಯ ಬೀದಿಗಳಲ್ಲೆಲ್ಲಾ ಅದನ್ನು ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಮೆರವಣಿಗೆ ಮಾಡಿದರು. ನಿನ್ನೆ ದಿನ ಅದನ್ನು ಗುರುಗಾಂವಿಗೆ ತೆಗೆದುಕೊಂಡು ಹೋಗಲಾಯಿತು.

ಬಸ್ ಪ್ರಯಾಣಿಕರ ತೊಂದರೆ

ಕೊಳ್ಳೇಗಾಲದಿಂದ ಮದ್ದೂರಿಗೂ ಮತ್ತು ಕೊಳ್ಳೇಗಾಲದಿಂದ ಮೈಸೂರಿಗೂ ಬಸ್ಸು ಪ್ರಯಾಣಗಳು ತುಂಬಾ ಕಷ್ಟವಾಗಿವೆ. ಜನಗಳ ಪ್ರಯಾಣವು ಜಾಸ್ತಿಯಾಗಿರುವುದರಿಂದ ತುಂಬಾ ಓವರ್ ಲೋಡ್ ಆಗಿ ಕಷ್ಟವಾಗಿದೆ. ಇದಕ್ಕೆ ನಿಗಾ ಕೊಟ್ಟು ಸಂಬಂಧಪಟ್ಟ ಅಧಿಕಾರಿಗಳು ಮೇಲ್ಕಂಡ ಲೈನುಗಳಲ್ಲಿ ಜಾಸ್ತಿ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟು ಜನಗಳ ತೊಂದರೆ ನಿವಾರಣೆ ಮಾಡಬೇಕಾಗಿ ಕೋರಿ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ಎಸ್. ಎಚ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ ಕ್ರಿಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ:—)

" ಭೃಂಗಾ ಮಲಕ ತೈಲ:—)

—ದೇಹಕ್ಕೆ ತಾಲೆಕ್ಕೆ ಉತ್ತಮ ಅಭ್ಯಂಗನ ತೈಲಗಳು

ಸಂಜೀವಾಮೃತ— ಮಲೇರಿಯಾ ಗಡೆಗಳಿಗೆ ಸಿದ್ಧ ಸಂಜೀವನ

ಮಹಾಶೀತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಪ್ರೀಟ ಟಾನಿಕ್ ಕ್ರಿಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ 90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು.

ರಾಜಕಮಲ್ ಟಾಕೀಸ್

೨೬-೧೧-೪೮ನೇ ಶುಕ್ರವಾರದಿಂದ ಅನೇಕ ವಾರ ಪ್ರತಿದಿನ ಮೂರು ಆಟಗಳು

ಭಾರತಿ

ಕನ್ನಿಕುಮಾರಿ, ರಾಜಕುಮಾರಿ, ಕೃಷ್ಣ ಸ್ವಾಮಿ ಪಾತ್ರವಹಿಸಿರುವ ದಿವ್ಯವಾದ ಕನ್ನಡ ಚಿತ್ರ

ನೃತ್ಯ:- ಲಲಿತ, ಪದ್ಮಿನಿ

—: Morning Shows :—

From 20-11-48

for 3 days

Wonder Man

(In Technicolor)

:- With :-

DANNY KAYE, VIRGINIA MAYO, VERA ELLEN

ಚಾಮುಂಡೇಶ್ವರಿ ಟಾಕೀಸ್

ಬೆಳಿಗ್ಗೆ ೧೦-೩೦ಕ್ಕೆ

ನವಂಬರ್ 26 ರಿಂದ 3 ದಿನಗಳು

ದಿ ಹಾರ್ವೆ ಗರ್ಲ್ಸ್

(Technicolor ವರ್ಣರಂಜಿತ ಚಿತ್ರ)

ಪಾತ್ರ:—ಪ್ರಸಿದ್ಧ ಜುಡಿ ಗಾರ್ಲೆಂಡ್, ಜಾನ್ ಹಾಡಿಕ್, ರೇಬೋಲ್ಗರ್ ಮುಂತಾದವರು

ಸುಂದರ ತರುಣಿಯರ ಸೊಬಗಿನ ಸೂರೆಯು ಕೂಡಿದ ಈ ಚಿತ್ರವನ್ನು ಸಕಲರೂ ನೋಡಿ

ಡಿಸೆಂಬರ್ 3 ರಿಂದ ಬೆಳಗಿನ ಆಟ

ಟೇಲ್ ಆಫ್ ಟೂ ಸಿಟೀಸ್

Mysore City Municipality

TENDER NOTICE

Sealed tenders will be received up to 4 p. m on 30-11-1948 by the Municipal Engineer for constructing six shops to the North-west gate of Devaraja Market. Each tender must be accompanied with a chellan for having remitted Rs. 200 in the Municipal Treasury as earnest money. For full particulars please see the notification on the office notice board

V. K Mukundan,
MUNICIPAL ENGINEER

ಚಳಿಗಾಲಕ್ಕೆ ಉತ್ತಮವಾದ ರಗ್ಗುಗಳೂ ಶಾಲುಗಳೂ

ಅಚ್ಚಟ ಉಣ್ಣೆಯ ರಗ್ಗುಗಳೂ, ವಿವಿಧ ಕಡೆ ಬೇರೆ ಬೇರೆ ತಯಾರಿಸಲ್ಪಟ್ಟ ಇಟಾಲಿಯ ರಗ್ಗುಗಳೂ, ಕಾಶ್ಮೀರ ಶಾಲುಗಳೂ ಅನೇಕವಾಗಿ ಬಂದಿವೆ

ಬಾಹುಬಲಿ ಕಂಪನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು.

ಶ್ರೀ. ೪೦. 792 **WEEKLY EDITION** ಇಂದಿನ ಪತ್ರಿಕೆ 6 ಆಣೆ

ಸಂಪುಟ ೧೩] ಭಾನುವಾರ ೨೮-೧೧-೪೮ [ಸಂಚಿಕೆ ೧೯

— ಅಮೆರಿಕಕ್ಕೆ ಸತೀ — ಚಿಯಾಂಗರ ಪ್ರಯಾಣ

ಜೂಜು, ಕಳ್ಳತನ ಮುಂತಾದುವನ್ನು ತಪ್ಪಿಸಲು ಕಾರ್ಯಕ್ರಮ

[illegible]ಗಡೂರು ರಾಮಚಂದ್ರ ರಾಯರ ಸಲಹೆ

ಮೈಸೂರು ಜಿಲ್ಲಾಧಿಕಾರಿಗಳಿಗೆ ಶ್ರೀ [illegible]ಗಡೂರು ರಾಮಚಂದ್ರರಾಯರು ಒಂದು [illegible] ಬರೆದು ಈ ಕೆಳಗೆ ಕಂಡಂತೆ ಸೂಚಿ[illegible]ದ್ದಾರೆ.

[illegible]ಗಡೂರು ಗ್ರಾಮದಲ್ಲಿ ಸರ್ವೇ ಸಾ[illegible]ನ್ಯವಾಗಿ ನಡೆಯುತ್ತಲಿರುವಂತೆ [illegible] ಗ್ರಾಮದಲ್ಲೂ ಸುಮಾರು [illegible] ವರ್ಷದ ಕೆಳಗೆ ಗುಳ ಕಿತ್ತು ಹೋ[illegible] ಬೇಗ ಒಡೆದು [illegible] [illegible] ನಾ[illegible] ನಡೆಸಲಾಗಿ [illegible] [illegible]ಗಳನ್ನು [illegible] ಜೂಜಾಡುವುದನ್ನೂ ಬಿಟ್ಟುಬಿಡುವು[illegible] ಭರವಸೆ ಇತ್ತರು.

[illegible] ೬-೧೧-೪೮ ನೇ ಶನಿವಾರ [illegible] [illegible] ನನ್ನ ವಾಸದ ಮನೆಗೆ [illegible] [illegible] ಸಾಮಾನುಗಳನ್ನು ಕದ್ದುಕೊ[illegible] [illegible] ಗ್ರಾಮಾಧಿಕಾರಿ [illegible] ರಿಪೋರ್ಟ್ ಮಾಡಿದ್ದಾರೆ [illegible] ಪೋಲೀಸರು ಬಂದು ಅವರ ಕ್ರಮವನ್ನು [illegible]ದ್ದಾರೆ. ಇದರಿಂದ ನನ್ನ [illegible] [illegible] ಪೋಲೀಸರಿಂದ [illegible] ಆಗಲಿಲ್ಲ; ಅಷ್ಟೇ ಅಲ್ಲದೆ [illegible] ದೂರಿಯುತು.

[illegible]ಡೂರಲ್ಲಿ (ಮತ್ತು ಗ್ರಾಮಾಂತರಗ[illegible]) ಸರ್ವೇ ಸಾಮಾನ್ಯವಾಗಿ ಜೂಜಾಡು[illegible] [illegible] ಹಾಕುವುದು, ಕಳ್ಳತನ- ಇ[illegible] ದಿನೇ ದಿನೇ ಅಧಿಕವಾಗಿ ಪ್ರಜಾ[illegible] ಉಂಟಾಗುತ್ತಿದೆ. ಅಧಿಕಾರ[illegible] ತಪ್ಪಿರುವುದರಿಂದಲೇ ಹೀಗಾಗು[illegible] ಸ್ಪಷ್ಟವಾಗಿ ಎದ್ದು ಕಾಣುತ್ತಿದೆ [illegible]

ಅಮಲ್ದಾರರುಗಳಿಗೆ ರೇಷನ್ ಕಾರ್ಡುಗಳನ್ನು ಒಪ್ಪಿಸಬೇಕು

ಹಿಡುವಳಿದಾರರಿಗೆ ಜಿಲ್ಲಾಧಿಕಾರಿಗಳ ಸೂಚನೆ

ಮೈಸೂರು ೨೮

ತಮ್ಮ ಜಮೀನು ಇರುವ ತಾಲ್ಲೂಕಿನಲ್ಲಿ ವಾಸವಾಗಿಲ್ಲದೆ ರೇಷನ್ ವ್ಯವಸ್ಥೆ ಇರುವ ಪ್ರದೇಶಗಳಲ್ಲಿರುವ ಮೈಸೂರು ಜಮೀನ್ದಾರರುಗಳು ಬರುವ ತಿಂಗಳು ೧೫ನೇ ತಾರೀಖಿನೊಳಗಾಗಿ ತಮ್ಮ ಅಧಿಕೃತ ರೇಷನ್ ಕಾರ್ಡುಗಳನ್ನು [illegible] ಅಥವಾ ಅವರಿಂದ [illegible] ಅಧಿಕಾರಿಗಳಿಂದ ಅಂಗೀಕರಿಸಲ್ಪಟ್ಟ ತಮ್ಮ ಸಂಸಾರದಲ್ಲಿರುವ ಜನಸಂಖ್ಯೆಯ ಸ್ಟ್ರಾಂಗಿ[illegible] ಧಪಟ್ಟ ತಾಲ್ಲೂಕು ಅಮಲ್ದಾರರುಗಳಿಗೆ [illegible] ಕಳುಹಿಸಬೇಕು. ಹಾಗೂ [illegible] ಯುಳ್ಳವರ [illegible] ಪ್ರದೇಶದ ಮ್ಯಾಜಿಸ್ಟ್ರೇಟ್ ಅಥವ [illegible] ರಿಜಿಸ್ಟ್ರಾರವರ ಮುಂದೆ ಮೇಲ್ಕಂಡ ವಿಷಯಗಳ ಬಗ್ಗೆ ಹೇಳಿಕೆ ಕೊಟ್ಟು ಅದರ ಪ್ರತಿಯನ್ನು ಅಮಲ್ದಾರರುಗಳಿಗೆ ಕಳುಹಿಸಿ ಕೊಡಬೇಕು.- ಹೀಗೆಂದು ಮೈಸೂರು ಜಿಲ್ಲಾಧಿಕಾರಿಗಳು ಪತ್ರಿಕೆಯೊಂದನ್ನು ಹೊರಡಿಸಿದ್ದಾರೆ.

ಜಮೀನ್ದಾರರುಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ಎಷ್ಟು ಧಾನ್ಯವನ್ನು ತಮ್ಮಲ್ಲಿ ಉಳಿಸಿಕೊಳ್ಳಬಹುದೆಂಬುದನ್ನು ಗೊತ್ತುಮಾಡುವುದು ಇದರ ಉದ್ದೇಶವೆಂದು ತಿಳಿಸಲಾಗಿದೆ.

ಇದಕ್ಕೆ ತಪ್ಪಿದವರಿಂದ ಸರ್ಕಾರಕ್ಕೆ ಸಲ್ಲಬೇಕಾದ ಧಾನ್ಯದ ಪ್ರಮಾಣವನ್ನು ಅಂತವರ ಅವಶ್ಯಕತೆಗಳನ್ನು ಗಮನಿಸದೆಯೇ ನಿರ್ಧರಿಸಲಾಗುವುದೆಂದೂ ಸಹ ತಿಳಿಸಲಾಗಿದೆ.

ಸಣ್ಣ ಹಿಡುವಳಿದಾರರಿಗೆ ಇದು ಅನ್ವಯಿಸುವುದಿಲ್ಲ.

[illegible]ಟ್ಟಿಯನ್ನು ತರಿಸಿಕೊಂಡು ಯೋಗ್ಯ ವ್ಯವಸ್ಥೆ ಮಾಡದಿದ್ದರೆ ಪ್ರಜಾ ಪೀಡೆಗೆ ಬೆಂಬಲ ಕೊಟ್ಟಂತಾಗುವುದು.

ಗ್ರಾಮಾಧಿಕಾರಿಗಳ, ಕೋಮುವಾ[illegible] [illegible]ಜಮಾನರುಗಳಿಂದ ಈ ಪಟ್ಟಿಯನ್ನು [illegible] ಮಾಡಿಸಿ [illegible] ಒಬ್ಬರ [illegible], ಆ ಪಟ್ಟಿಯಲ್ಲಿ [illegible] ವ್ಯಕ್ತಿಗಳನ್ನು ಉದ್ಯೋಗದ ಕಡೆ [illegible] ತಾವು ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ, ಪ್ರಜಾ ಪೀಡೆಯನ್ನು ತಪ್ಪಿಸಬೇಕಾಗಿ ಕೋರುತ್ತೇನೆ. ತಾವು ಅದಷ್ಟು ಜಾಗ್ರತೆಯಾಗಿ ಈ ಕಾರ್ಯಕ್ರಮ ಕೈಗೊಳ್ಳುವಿರೆಂದು ನಂಬಿದ್ದೇನೆ.

ವಾಷಿಂಗ್‌ಟನ್ನಿಗೆ ಮೇಡಂ ಚಿಯಾಂಗರು

—

ಚೀಣಾದ ಅಧ್ಯಕ್ಷ ಜನರಲ್ ಚಿಯಾಂಗ್ ಕೈಶೇಕರ ಪತ್ನಿ ಮೇಡಂ ಚಿಯಾಂಗ್‌ರು ಕೂಡಲೇ ಅಮೆರಿಕಕ್ಕೆ ತೆರಳುವರೆಂದು ತಿಳಿದು ಬಂದಿದೆ. ಚೀಣಾದ ಸ್ಥಿತಿಯು ಗಂಭೀರ[illegible]ವಾಗುತ್ತಿರುವುದರಿಂದ ಅವರು [illegible] ಸರ್ಕಾರದ ಸಹಾಯ ಗಳಿಸಲು ನಿರ್ಧರಿಸಿದರೆಂದು ಅಧ್ಯಕ್ಷ ಟ್ರೂಮನ್ನರನ್ನು ಅವರು ಕೇಳಿಕೊಳ್ಳುವರು. ಚೀಣಾ ಸ್ತ್ರೀ [illegible] ಗಳೂ ಅಮೆರಿಕಕ್ಕೆ ಇದೇ ರೀತಿ ಪ್ರಾರ್ಥನೆ ಮಾಡಿವೆ.

ಜಿಲ್ಲಾ ಸಹಕಾರ ಸಮ್ಮೇಳನ

ಟಿ. ನರಸೀಪುರ ೨೫

ಜಿಲ್ಲಾ ಸಹಕಾರ ಸಮ್ಮೇಳನವು ನಿನ್ನೆ ಶ್ರೀ ಟಿ ಎಸ್ ರಾಜಗೋಪಾಲರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಟಿ ರಂಗಸ್ವಾಮಿಯವರು ಅವರ ಆರಂಭೋತ್ಸವವನ್ನು ನೆರವೇರಿಸಿದರು.

ಇಲ್ಲಿನ ಶ್ರೀ ಕೃಷ್ಣರಾಜ ಪರೇಡ್ ಸಹಕಾರ ಸಂಘದ ರಜತೋತ್ಸವವು ರಾಜಸೇವಾಸಕ್ತ ಶ್ರೀ ಸಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಸ್ಥಾನಗಳಿಗೆಲ್ಲಾ ಮಾದರಿ ರಾಜ್ಯಾಂಗ

ಮೈಸೂರು ರಾಜ್ಯಾಂಗ ಭಿಪ್ರಾಯ [illegible] ವಾಗಿರಲು ಸಲಹೆ

ಬೆಂಗಳೂರು ೨೮

ಸಂಸ್ಥಾನಗಳಿಗೆಲ್ಲಾ ಮಾದರಿ ರಾಜ್ಯಾಂಗವನ್ನು ಸಿದ್ಧಗೊಳಿಸಲು ಭಾರತ ರಾಜ್ಯಾಂಗ ಸಭೆಯ ನಿಪುಣರ ಸಮಿತಿಯನ್ನು ನೇಮಿಸಲಾಗುವುದೆಂದೂ, ಅವರ ವರದಿಯೂ ಡಿಸೆಂಬರ್ ಅಂತ್ಯದೊಳಗೆ ಹೊರಬೀಳುವುದೆಂದೂ, ಅವರ ಕೆಲಸವು ಮುಗಿಯುವವರೆಗೆ ಮೈಸೂರು ರಾಜ್ಯಾಂಗ ಸಭೆಯು ತನ್ನ ಕಾರ್ಯಕಲಾಪಗಳನ್ನು ನಿಲ್ಲಿಸಬೇಕೆಂದೂ ದೆಹಲಿಯಿಂದ ಮೈಸೂರು ಸರ್ಕಾರದವರಿಗೆ ಪತ್ರ ಬಂದಿರುವುದಾಗಿ ವರದಿಯಾಗಿದೆ.

ಗಾಂಧಿ ಸ್ಮಾರಕ ನಿಧಿಗೆ ಪ್ರಭುಗಳಿಂದ ೧ ಲಕ್ಷ ರೂ.

ಮೈಸೂರು [illegible]

ಶ್ರೀಮನ್ಮಹಾರಾಜರವರು ಗಾಂಧಿ ಸ್ಮಾರಕ ನಿಧಿಗೆ ಒಂದು ಲಕ್ಷ ರೂ. [illegible] ತಿಳಿದು ಬಂದಿದೆ.

ಜಯಂತಿ

ಚಾಮರಾಜಪುರಂನಲ್ಲಿರುವ [illegible] ಟ್ ಕೆ ಪುಟ್ಟಣ್ಣರಾಯರ [illegible] ಸೋಮವಾರ ೨೯-೧೧-೪೮ನೇ ಸಂಜೆ ೬-೩೦ಕ್ಕೆ ಸರಿಯಾಗಿ ತಿರುಪತಿಯಿಂದ [illegible] ಸೋಸಲೆ ಕೃಷ್ಣದಾಸರವರಿಂದ [illegible] ಸಂಕೀರ್ತನವು ನಡೆಯುತ್ತದೆ. [illegible] ಗೂ ಆಹ್ವಾನ ಉಂಟು

ರಾಜಧಾನಿಯಲ್ಲಿ ಗೃಹ ಸಚಿವರು

ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಮಂಡ್ಯದಲ್ಲಿ ಶಿಶು ಸಾಹಿತ್ಯ [illegible] [illegible]ದ ಆರಂಭೋತ್ಸವವನ್ನು ನಿನ್ನೆ ನೆರವೇರಿಸಿ ಮೈಸೂರಿಗೆ ಬಂದರು. [illegible] ಸಂಜೆ ರೈಲ್ವೆ ಅಧಿಕಾರಿಗಳ [illegible] ಭಾಗವಹಿಸಿ [illegible] [illegible] ದಿನ ಬೆಳಿಗ್ಗೆ ಮಂಡ್ಯದ ಮಾರ್ಗವಾಗಿ [illegible] ಗಳೂರಿಗೆ ತೆರಳಿದರು

ಕರ್ನಾಟಕ ಸಂಘ

ರಾಜಧಾನಿಯ ಮಹಾರಾಜಾ [illegible] ಶಾಲೆಯ ಕರ್ನಾಟಕ ಸಂಘದ [illegible] [illegible]ವನ್ನು ನಿನ್ನೆ ದಿನ [illegible] [illegible] ಶ್ರೀ॥ ಕೆ. [illegible] ಮಾಡಿದರು. ಶ್ರೀ॥ ಎಂ. [illegible] ಚಾರ್ಯರು ಅಧ್ಯಕ್ಷತೆಯನ್ನು ವಹಿಸಿದ್ದರು.

ಷಾಕ್ ಹೊಡೆದು ವಿದ್ಯುಚ್ಛಕ್ತಿ ಕೆಲಸಗಾರನ ಮರಣ

[illegible] ದಿನ ಮಧ್ಯಾಹ್ನ ರಾಜಧಾನಿಯ [illegible] ದೇವಿ [illegible] ವಿದ್ಯುಚ್ಛಕ್ತಿ ಕೆಲ[illegible] [illegible] ವಿದ್ಯುಚ್ಛಕ್ತಿ [illegible] [illegible] ರಿಪೇರಿ ಕೆಲಸ ಮಾಡುತ್ತಿದ್ದಾಗ ಆಕಸ್ಮಾತ್ ವಿದ್ಯುಚ್ಛಕ್ತಿ [illegible] ಮರಣ ಹೊಂದಿದನು. ಶವವನ್ನು [illegible] [illegible] ಪರೀಕ್ಷೆಗಾಗಿ [illegible] ಆಸ್ಪತ್ರೆಗೆ ತೆಗೆದುಕೊಂಡುಹೋಗಲಾಯಿತು

ನ್ಯಾನ್‌ಕಿಂಗ್ ಬಳಿ ಅಂತಿಮ ಹೋರಾಟ

ಚೀಣಾದ ಎಲ್ಲಾ ಕ್ಷೇತ್ರಗಳಲ್ಲಿಯೂ [illegible] ವು ಬಿರುಸಾಗಿದೆ. ಸೂಚೌ ನಗರವನ್ನು [illegible] ಮ್ಯೂನಿಸ್ಟರು ಸುತ್ತುಗಟ್ಟಿದ್ದಾರೆ. ಇಲ್ಲಿ [illegible] ಯುಲಿರುವ ಅಂತಿಮ ಹೋರಾಟವೇ ಚಿಯಾಂಗ್ ಕೈಶೇಕರ ಸರ್ಕಾರದ ಭವಿಷ್ಯವನ್ನು ನಿರ್ಧಾರ ಮಾಡುವುದೆಂದು ಭಾವಿಸಲಾಗಿದೆ. ನ್ಯಾನ್‌ಕಿಂಗ್ ಸುತ್ತಲೂ ಕಂದಕಗಳನ್ನು [illegible] [illegible] ಇಲ್ಲಿ ನಡೆಯುವ ಹೋರಾಟದಲ್ಲಿ ಜಯಶೀಲರಾಗುವುದಾಗಿ ಸರ್ಕಾರಿ ಸೇನಾನಿಗಳು ನಂಬಿದ್ದಾರೆ.

○ [illegible]ದಲ್ಲಿ ನಡೆಯುವ [illegible] ಕಾಂಗ್ರೆಸ್ ಮಹಾಧಿವೇಶನಕ್ಕೆ ಪೂರ್ವ [illegible] ಭಾರತ ಕಾಂಗ್ರೆಸ್ ಪ್ರತಿನಿಧಿಗಳೂ, [illegible] ಲೇನು, ಮಲಯಾ ಮತ್ತು ಸಿಂಗಪುರದ ಪ್ರತಿನಿಧಿಗಳೂ [illegible] ಬರುವರೆಂದು ತಿಳಿದು ಬಂದಿದೆ

-+ ಶ್ರೀ ಗಾಯತ್ರೀ ಟಾಕೀಸ್ +-

From 29 11-48 (ಪ್ರತಿ ದಿನ ಮೂರು ಆಟಗಳು) For 2 days only

Paramount's Technicolour Musical Comedy Drama **BLUE SKIES**

(ಬ್ಲೂ ಸ್ಕೈಸ್) With Bing Crosby and Fred Astaire

— : From 1-12-48 for 2 days only :—

Paramount's Adventure Drama **SAIGON**

(ಸೈಗಾನ್) With Alan Ladd and Veronica Lake

ವಾರ ಭವಿಷ್ಯ

೨೮-೧೧-೪೮ ರಿಂದ ೪-೧೨-೪೮ರ ವರೆಗೆ

ಮೇಷ:- ವಿದ್ಯಾರ್ಥಿ ಮತ್ತು ಲೇಖಕ ವರ್ಗಕ್ಕೆ ಈ ವಾರ ಅತ್ಯಂತ ಸಂತಸಕರವಾಗಿದೆ. ಕೈಗೊಂಡ ಕಾರ್ಯಗಳ ನಿರ್ವಿಘ್ನವಾಗಿ ಜರುಗುವುದು ಪ್ರಯಾಣದಿಂದ ಅನೇಕ ಕಾರ್ಯಗಳು ಜರುಗುವುವು ತಾ|| ೩, ೪ ಶುಭ ವಾರ್ತೆ, ಕೊಂಚ ಆಲಸ್ಯ.

ವೃಷಭ:- ಮಾನಸಿಕ ಕ್ಲೇಶಗಳು ಹೆಚ್ಚುವುವು ರಾಜ್ಯಕೀಯ ಕಾರ್ಯಗಳಲ್ಲಿ ಮಿತ್ರರಿಂದಲೇ ವಂಚಕರಾಗಲಿರಿ. ಶ್ರವಾಸದಿಂದ ಸಿವ್ಯ ಆರೋಗ್ಯ ಕೆಡುವ ಸಂಭವವಿದೆ ಧನಾದಾಯ ಸಾಧಾರಣ ತಾ|| ೩, ೩ ಮಂದು ವೆಚ್ಚ, ಚಿಂತೆ

ಮಿಥುನ:- ವ್ಯಾಪಾರೋದ್ಯೋಗಗಳಲ್ಲಿ ನಷ್ಟವೊದಗುವುದು. ಕೈಗೊಂಡ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು ವಾಂಛಿತ್ಯದಲ್ಲಿ ಮಿತ್ರರಿಂದ ಸಹಾಯವೊದಗುವುದು. ತಾ|| ೨೯, ೧ ಮಿತ್ರ ದರ್ಶನ ಸ್ವಲ್ಪ ಶಾಂತಿ

ಕಟಕ:- ಕೋರ್ಟು, ಕಛೇರಿ ವ್ಯವಹಾರಗಳಲ್ಲಿ ಜಯ, ಧೈರ್ಯ ಹೊಡೆಯಲಾರಿ ಬೋಧ ಬಳಗದವರಿಂದ ಹರ್ಷ ಪುರಸ್ಕಾರ ಹೊಂದುವಿರಿ ಆರೋಗ್ಯ ಸಾಧಾರಣ ತಾ|| ೨೯, ೩ ಶುಭ ವಾರ್ತೆ, ಕಷ್ಟ ನಾಶ

ಸಿಂಹ:- ನೆರೆಹೊರೆಯವರೊಡನೆ ವ್ಯರ್ಥ ಮನಸ್ತಾಪ ಕಟ್ಟಿಕೊಳ್ಳುವಿರಿ. ನೌಕರಿ, ವ್ಯವಹಾರಗಳಲ್ಲಿ ಅವಮಾನಕರ ಘಟನೆಗಳುಂಟಾಗುವುವು ಆರೋಗ್ಯ ಸಾಧಾರಣ ತಾ|| ೩೦, ೩ ಋಣ ಬಾಧೆ, ಜ್ವರ ಭಯ

ಕನ್ಯಾ:- ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ಮಾನಸಿಕ ತೊಂದರೆಗಳು ನಿವಾರಣೆಯಾಗುವುವು. ವಾಹನಾದಿಗಳಲ್ಲಿ ಕೊಂಚ ನಷ್ಟ ಸಂಭವ. ತಾ|| ೨೯, ೨ ಆಲಸ್ಯ, ಧನ ಲಾಭ

ತುಲಾ:- ಲಾಟರಿ, ಸಟ್ಟಾಗಳಿಂದ ನಿಮಗೆ ಈ ವಾರ ಅಪೂರ್ವ ಲಾಭವುಂಟಾಗುವುದು, ಅನೇಕ ವಿದ್ವಜ್ಜನರ ಪರಿಚಯವಾಗುವುದು. ಆರೋಗ್ಯ ಚೆನ್ನಾಗಿದೆ. ತಾ|| ೩೦, ೩ ಸಾಧು ದರ್ಶನ, ಸುಖ ಭೋಜನ.

ವೃಶ್ಚಿಕ:- ವ್ಯಾಪಾರಿಗಾರರಿಗೆ ಈ ವಾರ ಸಂಪೂರ್ಣ ಲಾಭದಾಯಕವಾಗಿದೆ ನೌಕರಿ, ದಂಧೆಗಳಲ್ಲಿ ಮೇಲಧಿಕಾರಿಗಳ ಕಟಾಕ್ಷವುಂಟಾಗುವುದು. ತಾ|| ೨೯, ೪ ಅಕಸ್ಮಿಕ ವೆಚ್ಚ, ಆನಂದ.

ಧನುಸ್ಸು:- ಮಾನಸಿಕ ಚಿಂತೆಗಳು ಹೆಚ್ಚು ಏನು ಮಾಡಲೂ ತೋಚದಾಗುವುದು ಪ್ರವಾಸದಿಂದ ನಷ್ಟವುಂಟಾಗಬಹುದು. ಆರೋಗ್ಯ ಸಾಧಾರಣವಾಗಿದೆ ತಾ|| ೧, ೩ ನಿರಾಶೆ, ಜನ ನಿಂದೆ

ಮಕರ:- ಹಣ ಕಾಸಿನ ಅಭಾವವು ಹೆಚ್ಚುವುದು ಅದಾಯಕ್ಕಿಂತಲೂ ಖರ್ಚು ಒದಗುವುದು. ನಿರಾಶೆಯಾಗದೆ ಯತ್ನಿಸಿದಲ್ಲಿ ಕಾರ್ಯ ಸಿದ್ಧಿ ಖಂಡಿತ ತಾ|| ೩, ೪ ಇಷ್ಟ ಸಿದ್ಧಿ, ಕೊಂಚ ಅಶಾಂತಿ

ಕುಂಭ:- ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುವು. ಆರ್ಥಿಕ ಸ್ಥಿತಿಯು ಸಂಪೂರ್ಣವಾಗಿ ಸುಧಾರಿಸುವುದು. ಆರೋಗ್ಯ ಚೆನ್ನಾಗಿದೆ. ತಾ|| ೩, ೪ ಐ ಕ್ಯ ಶ್ರೇಷ್ಠ, ಲಾಭ

ಮೀನ:- ಈ ವಾರವು ನಿಮಗೆ ಅತ್ಯಂತ ಲಾಭದಾಯಕವಾಗಿದೆ ಯತ್ನಿಸಿದ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು. ಆರೋಗ್ಯ ಚೆನ್ನಾಗಿದೆ ತಾ|| ೩, ೩ ಕಷ್ಟ ನಾಶ, ಸುಖ ಭೋಜನ

ಸಹಕಾರ ನೌಕರರ ಸಂಘದ ಅವಶ್ಯಕತೆ

ಈ ನಗರದಲ್ಲಿರುವ ಸುಮಾರು ೫೦ಕ್ಕೆ ಮೇಲ್ಪಟ್ಟಿರುವ ಸಹಕಾರ ಸಂಘಗಳ ಪೈಕಿ ಒಂದೆರಡು ಕೆಲವು ಸಂಸ್ಥೆಗಳ ಅಡಳಿತವರ್ಗದವರು, ತಮ್ಮ ಸಂಸ್ಥೆಯ ನೌಕರವರ್ಗದ ವಿಚಾರದಲ್ಲಿ ಬಹಳ ಕಠಿಣ ಹೃದಯರಾಗಿ ಕನಿಷ್ಠವಾದ ದಬ್ಬಾಳಿಕೆ ನಡೆಸುತ್ತಾ ಇರುವುದು ಬಹಳ ಶೋಚನೀಯ ಇದ ಬಹಳ ತಪ್ಪಾಗಲು, ಪ್ರತಿಯೊಬ್ಬರೂ ಮತ್ತೊಬ್ಬರಿಗೆ ಸಾಧ್ಯವಾದಷ್ಟು ನೆರವಾಗಿ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕಾದುದು ಮನುಷ್ಯ ಕರ್ತವ್ಯ. ಈ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಗರದಲ್ಲಿರುವ ಸಹಕಾರ ಸಂಘಗಳ ನೌಕರರೆಲ್ಲರೂ ಒಟ್ಟುಗೂಡಿ ತಮ್ಮದೇ ಒಂದು ಸಂಘವನ್ನು ಸ್ಥಾಪಿಸಿಕೊಂಡು ಸುಸಂಘಟಿತರಾಗಿ ತಮ್ಮ ಕ್ಷೇಮ ಸಾಧನೆಗೆ ಯೋಗ್ಯವಾದ ಅವಕಾಶ ಕಲ್ಪಿಸಿಕೊಳ್ಳಲು ಈಗ ಸುಸಮಯವಾಗಿದೆ ಈ ವಿಚಾರದಲ್ಲಿ ಆಸಕ್ತಿಯುಳ್ಳ ರುಹನೀಯರೆಲ್ಲರೂ ತಮ್ಮ ಪ್ರತಿ ಹಿರಿಯರೊಬ್ಬರ ನೇತೃತ್ವದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತಂದುಕೊಂಡು ತಮ್ಮ ಸಂಘವನ್ನು ಸ್ಥಾಪಿಸಿಕೊಳ್ಳಬೇಕೆಂದು ಈ ಮೂಲಕ ವಿನಂತಿಮಾಡಲಾಗಿದೆ ಅಭಿಮಾನಿ

ನಿಮಗೆ ಎಷ್ಟು ಸಾಗಿಸಿದ್ದಕ್ಕೆ ಜುಲ್ಮಾನೆ

ರಾವ ಪಕ್ಷ ಸಿದಿ ಎಂಬುವರು ಮೊನ್ನೆ ದಿನ ಪ್ರಾಕೃತೀಯ ವೈ ಸರ್ ಸಿಟಿ ರೈಲ್ವೆ ಸ್ಟೇಷನ್ ನಿಂದ ಬಾವ ರಾಜನಗರಕ್ಕೆ ಒಟ್ಟು ಕಿಮೊಎಣ್ಣೆಯನ್ನು ಸರಿಯಾದ ಪರವಾನಿಗೆ ಇಲ್ಲದೆ ಸಾಗಿಸ ತ್ತಿದ್ದರೆಂದು ರೈಲ್ವೆ ಪೋಲೀಸಿನವರು ಮೊದ್ದಮೆ ಹೂಡಿದ್ದು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದು ವಿಚಾರಣೆಯನಂತರ ಅಪರಾಧಿಗಳಿಗೆ ೫೦ ರೂ ದಂಡ, ಜುಲ್ಮಾನೆ ತಪ್ಪಿದರೆ ೮ ದಿನ ಸಾದಾ ಸಜಾವನ್ನು ವಿಧಿಸಲಾಯಿತು

ದಾವಣಗೆರೆ ಕಂಬಳಿಗಳು

ಫ್ಯಾಕ್ಟರಿ ಡ್ಯಾಮೇಜ್

ಬನಿಯನ್ನುಗಳು

ಉತ್ತರಕರ್, ರಾಜಲಕ್ಷ್ಮೀ ಹಾಲ್, ಇರ್ವಿನ್ ರೋಡ್, ಮೈಸೂರು

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ ಶೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)

" ಚಂದನಾದಿ ತೈಲ.—)

" ಭೃಂಗಾಮಲಕ ತೈಲ.—)

—ಶೀಸೆಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಹಂಸಾಮೃತ ಮಲೇರಿಯಾ ಗೆಡೆಗಳಿಗೆ ಸಿದ್ಧ ಸಂಜೀವನ

ಮಹಾಶೀತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಪ್ರೇಸ್ ಬಾದಿಸ್ ಶೀಸೆ ೨ ೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ

೨೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ನಗರದಲ್ಲಿ ಅನೀತಿ ತಪ್ಪಿಸಲು ಕಾರ್ಯಕ್ರಮ

ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೨೮

ನಿನ್ನೆಯ ದಿನ ಪೌರಸಭೆಯು ಸಾಮಾನ್ಯ ಅಧಿವೇಶನವು ಶ್ರೀ ವಾಲಹಳ್ಳಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಆಡಳಿತ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಿದನಂತರ ಖಾಸಗಿ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು

ಶ್ರೀ ಎಸ್ ಸಿ ಬೇಲೂರಯ್ಯನವರ ನಗರದ ಮಧ್ಯೆ ಇರುವ ಹೆಂಡದಂಗಡಿಗಳನ್ನು ತೆಗೆಯುವುದು, ವೇಶ್ಯಾಗೃಹಗಳನ್ನು ಮುಚ್ಚಿಸುವುದು ಮತ್ತು ಭಿಕ್ಷುಕರ ಕಾಟವನ್ನು ತಪ್ಪಿಸುವುದರ ಬಗ್ಗೆ ಹಲವು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದರು.

ಶ್ರೀಗಳಾದ ಬಿ ನಾರಾಯಣಸ್ವಾಮಿ, ಕೆ ಸಿದ್ದಯ್ಯ, ಎಸ್ ಸಿ ಬೇಲೂರಯ್ಯ ಮತ್ತು ಜ|| ಮಹಮದ್ ಸೇಟ್‌ರವರುಗಳು ನೇಲ್ಕಂಡ ವಿಷಯದ ಬಗ್ಗೆ ಸಭಾಡಿ ಜನರಲ್ಲಿರುವ ಕೆಟ್ಟ ಚಾಳಿಗಳನ್ನು ನಿರ್ಮೂಲ ಮಾಡಿ ನಗರದ ಆರೋಗ್ಯ ಭಾಗ್ಯವನ್ನು ಹೆಚ್ಚಿಸಲು ಪೌರಸಭೆಯವರು ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದರು ಭಿಕ್ಷುಕರ ಸಮಸ್ಯೆಯು ದಿನೇ ದಿನೇ ಬಹಳ ಹೆಚ್ಚಾಗಿ ಕಳ್ಳತನಗಳು, ಸುಲಿಗೆ ಅಪಹರಿಸುವುದು, ಅಂಟು ರೋಗಗಳ ಹಬ್ಬುವಿಕೆ ಇವೇ ಮುಂತಾದುವುಗಳಿಗೆ ಅವರು ಕಾರಣರಾದುದರಿಂದ ಇವರ ಬಗ್ಗೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದರು ಟೌನ್‌ಹಾಲ್ ಮಾರ್ಕೆಟ್ ಮತ್ತು ಲ್ಯಾನ್ಸ್‌ಡೌನ್ ಬಜಾರ್‌ಗಳಲ್ಲಿ ಮಲಗುವ ಜನರೂ ಸಹ ಇದಕ್ಕೆ ಕಾರಣರೆಂದೂ ಇವರ ಜೊತೆಗೆ ಹೊರಗಿನಿಂದ ಬಂದ ಅನೇಕ ದೃಢ ಕಾಯರಾದವರೂ ಸಹ ಇರುವುದರಿಂದ ಸರ್ಕಾರವು ಇದನ್ನು ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ಸೂಚಿಸಿದರು.

Edited printed and published by A. R. Nagarajan at the Sadhvi Press D Subbaiah Road Mysore

Mysore City Municipality

NOTICE

Sealed tenders will be received up to 4 p m on 30-11-1948 by the Municipal Engineer for constructing five shops to the North-west of Devaraja Market

Each tender must be accompanied with a chellan for having remitted Rs 100, in the Municipal Treasury as earnest money

For full particulars please see the detailed notification in the office notice board

V. K Mukundan,
Municipal Engineer.

ಸೇವಾದಳದ ರಜತೋತ್ಸವ

ಶೋಲಾಪುರ ನಗರದಲ್ಲಿ ೨೫ ವರ್ಷದ ಹಿಂದೆ ಹಂದಿ ನೆಹರೂರವರ ನೇತೃತ್ವದಲ್ಲಿ ಸ್ಥಾಪಿತವಾದ ಕಾಂಗ್ರೆಸ್ ಸೇವಾದಳದ ರಜತ ಮಹೋತ್ಸವವನ್ನು ಬಬವ ಡಿಸೆಂಬರ್ ಏನೇ ತಾ|| ನ ಡೆ ಸ ಲು ಏರ್ಪಾಡಾಗಿದೆ .

ಅಧ್ಯಕ್ಷರು ಉತ್ತರವಿತ್ತು ಕೆಟ್ಟ ಸ್ಥಳದಲ್ಲಿ ಹೋಗುವವರಿಗೆ ಅದಷ್ಟು ಕಷ್ಟಲು ಪೌರಸಭೆಯವರು ಅನೇಕ ಕ್ರಮಗಳನ್ನು ಜಾರಿಗೆತರುವರೆಂದೂ ಅನಿರೀಕ್ಷಿತ ಕಷ್ಟಗಳು ಗೃಹದ ವ್ಯವಸ್ಥೆಯು ಅದರ ಮುಂದಲ್ಲೇ ಸ್ಥಾಪಿತವಾಗುವುದೆಂದೂ ಹೆಂಡದ ಅಂಗಡಿಗಳನ್ನು ಸಾಧ್ಯವಾದ ಕಡೆ ದೂರಕ್ಕೆ ಹಾಕಲಾಗಿದೆಯೆಂದೂ ಭಿಕ್ಷುಕರ ಹಾವಳಿ ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲು ಪರಿಶೀಲಿಸುವುದಾಗಿ ತಿಳಿಸಿದರು.

ರಾಜಕಮಲ್ ಟಾಕೀಸ್

೨೬-೧೧-೪೮ನೇ ಶುಕ್ರವಾರ ದಿಂದ ಅನೋಖ 2 ಶೋವಾರ ಪ್ರತಿದಿನ ಮೂರು ಆಟಗಳು

ಭಾರತಿ

ಸೂರ್ಯಕುಮಾರಿ, ರಾಜಕುಮಾರಿ, ಹಂಸ ಕೃಷ್ಣಸ್ವಾಮಿ ಪಾತ್ರವಹಿಸಿರುವ ದಿವ್ಯವಾದ ಕನ್ನಡ ಚಿತ್ರ

ನೃತ್ಯ:- ಲಲಿತ, ಪದ್ಮಿನಿ

—: Morning Shows :—

From 20-11-48 for 3 days

Wonder Man

(In Technicolor)

:- With :-

DANNY KAYE, VIRGINIA MAYO, VERA ELLEN

Mysore City Municipality

TENDER NOTICE

Sealed tenders will be received up to 4 p. m on 30-11-1948 by the Municipal Engineer for constructing six shops to the North-west gate of Devaraja Market Each tender must be accompanied with a chellan for having remitted Rs. 200 in the Municipal Treasury as earnest money. For full particulars please see the notification on the office notice board

V. K Mukundan,
MUNICIPAL ENGINEER

ಸಂಪುಟ ೭] ಸೋಮವಾರ ೨೯-೧೧-೪೮ [ಸಂಚಿಕೆ ೧೫೭

– ಚೀಣಾ ಸರ್ಕಾರದ – ಪತನ ಸನ್ನಿಹಿತವೇ ?

ಪಾಕೀಸ್ಥಾನದ ಪತ್ರಿಕೆಗಳಿಗೆ ಪಾಕೀಸ್ಥಾನದಲ್ಲೇ ನಿರ್ಬಂಧ

ಕರಾಚಿಯಿಂದ ಹೊರಡುತ್ತಿರುವ ಡಾನ್ ಸಿಂಧ್ ಅಬ್ಸರ್ವರ್ ಮುಂತಾದ ಐದು ಪ್ರಮುಖ ಪತ್ರಿಕೆಗಳು ಇನ್ನು ೬ ತಿಂಗಳುಗಳ ಕಾಲ ಪಾಕೀಸ್ಥಾನದಲ್ಲಿಯೇ ಒಂದು ಭಾಗವಾದ ಪ. ಫ್ರ. ಪ್ರಾಂತ್ಯಕ್ಕೆ ಬರಕೂಡದೆಂದು ಪ್ರಾಂತ ಸರ್ಕಾರವು ಪ್ರತಿಬಂಧಕಾಜ್ಞೆಯನ್ನು ಹಾಕಿದೆ.

ಸಿಂಧಿನಲ್ಲಿ ಬಟ್ಟೆ ಅಭಾವ

ಎ. ಪಿ. ಐ.] ಕರಾಚಿ ೨೫

ಸಿಂಧ್ ಪ್ರಾಂತ್ಯದಲ್ಲಿ ಬಟ್ಟೆಯ ಅಭಾವ ಪ್ರಬಲವಾಗಿ ಶವಗಳಿಗೆ ಸುತ್ತಬೇಕಾದ ಶ್ವೇತವಸ್ತ್ರವೂ ಸಹ ಸಿಗುತ್ತಿಲ್ಲ. ಇದರಿಂದ ಅನೇಕ ಶವಗಳನ್ನು ಹಳೆ ಅಂಗಿಗಳಿಂದಲೂ, ಮತ್ತು ಚಾಪೆ ಅಥವಾ ಗೋಣೀ ಚೀಲಗಳಿಂದಲೂ ಸುತ್ತಿ ಸಾಗಿಸಲಾಗುತ್ತಿದೆಯೆಂದೂ ವರದಿಯಾಗಿದೆ.

ಕಾಂಗ್ರೆಸ್ ಅಧಿವೇಶನಕ್ಕಾಗಿ ೪ ದಿನಗಳ ರಜಾ

ಜಯಪುರದಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಅಲ್ಲಿನ ಸಾರ್ವಜನಿಕರು ಭಾಗವಹಿಸಲನುಕೂಲಿಸುವ ಡಿಸೆಂಬರ್ ತಿಂಗಳು ೧೬ನೇ ತಾ॥ ನಿಂದ ೪ ದಿನಗಳು ಆ ಸಂಸ್ಥಾನದಾದ್ಯಂತವೂ ಸಾರ್ವಜನಿಕ ರಜಾ ದಿನವೆಂದೂ, ಮತ್ತು ೧೮ನೇ ತಾ॥ ಅಧ್ಯಕ್ಷರ ಮೆರವಣಿಗೆ ಪ್ರಯುಕ್ತ ಅರ್ಧ ದಿನ ರಜವೆಂದೂ ಅಲ್ಲಿನ ಸರ್ಕಾರವು ಘೋಷಿಸಿದೆ.

ಪಾಕಿಸ್ತಾನಕ್ಕೆ ಬ್ರಿಟಿಷರ ಶಸ್ತ್ರಾಸ್ತ್ರ

ಎ. ಪಿ. ಐ.] ಲಂಡನ್ ೨೫

ಬ್ರಿಟಿಷ್ ಸರ್ಕಾರವು ಪಾಕಿಸ್ತಾನಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನೂ ವಿಮಾನಗಳನ್ನೂ ಮತ್ತು ಆಧುನಿಕವಾದ ಯುದ್ಧ ಸಾಮಗ್ರಿಗಳನ್ನೂ ತಯಾರಾದಂತೆಲ್ಲಾ ಸರಬರಾಜು ಮಾಡುವುದಾಗಿ ಭರವಸೆ ನೀಡಿರುವುದಾಗಿ ತಿಳಿದುಬಂದಿದೆ. ಇದು ಶೀಘ್ರ ಸಧ್ಯದಲ್ಲೇ ಪಾಕಿಸ್ತಾನದ ರಾಜಧಾನಿ ಕರಾಚಿಗೆ ಕೆಲವು ಜೆಟ್ ವಿಮಾನಗಳು ಬರುವ ನಿರೀಕ್ಷಣೆ ಇದೆ.

ಉಪಾಧ್ಯಾಯರ ಶಿಕ್ಷಣ ಶಿಬಿರ

ಪಿರಿಯಾ ಪಟ್ಟಣದ ತಾಲೂಕು ರಾತ್ರಿ ಶಾಲಾ ಉಪಾಧ್ಯಾಯರುಗಳ ಶಿಕ್ಷಣ ಶಿಬಿರವು ಕಳೆದ ೨೦ ರಿಂದ ೨೬ ನೇ ತಾ॥ ರ ವರೆಗಲ್ಲಿ ಅಲ್ಲಿನ ಮಾಧ್ಯಮಿಕ ಶಾಲೆಯ ಕಟ್ಟಡದಲ್ಲಿ ನಡೆಯಿತು. ೩೦ ಜನ ಉಪಾಧ್ಯಾಯರು ಹಾಜರಿದ್ದರು. ೨೦-೧೧-೪೮ ರಲ್ಲಿ ಪಿರಿಯಾಪಟ್ಟಣದ ಟೌನಿನ ಮುನಿಸಿಪಲ್ ಕೌನ್ಸಿಲರವರ ಅಧ್ಯಕ್ಷತೆಯಲ್ಲಿ ಶಿಬಿರದ ಆರಂಭೋತ್ಸವವನ್ನು ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ... ನೆರವೇರಿಸಿದರು. ... ಪ್ರೌಢ ವಿದ್ಯೆಯ ಸ್ಥಾನವು ... ಸಮಾರಂಭದಿಂದ ನನ್ನ ... ಬಾಂಧವರನ್ನು ಅಕ್ಷರಸ್ಥರನ್ನಾಗಿ ಮಾಡುವ ಸಾರ್ವಕ ... ಕೆಲಸವು ಯಶಸ್ವಿಯಾಗಿ ನಡೆಯಲಿದೆ. ... ನಂತರ ವ್ಯವಸ್ಥಾಪಕ ... ಶಿಬಿರಗಳು ೨೦ ಮತ್ತು ೨೬ ರ ... ದಿನಗಳಲ್ಲೂ ಅಲ್ಲಿ ನೆರೆದಿದ್ದ ಉಪಾಧ್ಯಾಯರಿಗೆ ಶಿಕ್ಷಣ ತರಬೇತನ್ನು ಕೊಟ್ಟ...

ಗ್ರಾಜುಯೇಟ್ಸ್ ಸಹಕಾರ ಸಂಘದ ರಜತೋತ್ಸವ

ಮೈಸೂರು ೨೮

ರಾಜಧಾನಿಯ ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವವು ನಿನ್ನೆ ಸಂಜೆ ಡಿ. ಬನುಮಯ್ಯನವರ ಶಾಲೆಯಲ್ಲಿ ನಡೆಯಿತು.

ಕಾರ್ಯದರ್ಶಿಗಳು ಸಂಸ್ಥೆಯ ವರದಿಯನ್ನು ಒಪ್ಪಿಸಿದನಂತರ ಶ್ರೀ ಎಂ. ಲಕ್ಷ್ಮೀನಾರಾಯಣರಾಯರು ಮಹಾತ್ಮಾಗಾಂಧಿಜಿಯವರ ಭಾವಚಿತ್ರವನ್ನೂ ರಾಜಸೇವಾಸಕ್ತ ಎ. ಸುಬ್ರಹ್ಮಣ್ಯಯ್ಯನವರು ಸೊಸೈಟಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣರಾಯರ ಭಾವಚಿತ್ರವನ್ನೂ ಅನಾವರಣ ಮಾಡಿದರು.

ಸಂಗೀತ, ನಾಟಕ, ಪುಷ್ಪ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು.

ಕೆಲಸಗಾರರಿಗೆ ಸಹಾನುಭೂತಿ

ಬೆಂಗಳೂರಿನ ಕಾರ್ಖಾನೆಯ ಕೆಲಸಗಾರರು ಮುಷ್ಕರ ಹೂಡಿ ಎರಡೂವರೆ ತಿಂಗಳಾದರೂ ಸರ್ಕಾರದವರ ಯಾವ ಕಾಯಕಕ್ರಮವನ್ನೂ ಕೈಗೊಳ್ಳದಿರುವುದಕ್ಕೆ ವಿಷಾದವನ್ನು ಸೂಚಿಸಿಯೂ, ಎಲ್ಲ ಕಾರ್ಮಿಕ ಸಂಘದವರೂ, ಸಾರ್ವಜನಿಕರೂ ಅವರಿಗೆ ಹಣ ಸಹಾಯವನ್ನು ಕೊಡಬೇಕೆಂದು ... ಮೈಸೂರು ನಗರದ ಸಮಾಜವಾದೀ ಪಕ್ಷದ ಕಾರ್ಯಕರ್ತರ ಸಭೆಯು ನಿನ್ನೆ ದಿನ ನಿರ್ಣಯವನ್ನು ಅಂಗೀಕರಿಸಿತು.

ಕಳೆದ ಸತ್ಯಾಗ್ರಹದಲ್ಲಿ ಬಂಧನಕ್ಕೊಳಗಾದ ಚಿನ್ನಿ ಕಟ್ಟೆಯ ವೀರರನ್ನೂ ಸರ್ಕಾರದವರು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯ ಪಡಿಸುವ ನಿರ್ಣಯವನ್ನೂ ಮಾಡಲಾಯಿತು.

ಸರ್ಕಾರದವರು ಅಕ್ಕಿ ಕೊಳ್ಳುವ ಬೆಲೆ

ಸ್ವಂ. ವ. ವರದಿ] ಬೆಂಗಳೂರು ೨೮

ಅಧಿಕ ಲಾಭ ಮತ್ತು ಸಂಗ್ರಹಣೆ ನಿರೋಧ ಶಾಸನದ ಪ್ರಕಾರ ಸರ್ಕಾರದವರು ಅಕ್ಕಿಯನ್ನು ಕೊಳ್ಳುವ ಕ್ರಮಾವಧಿ ಬೆಲೆಯನ್ನು ಈ ರೀತಿ ನಿಗದಿ ಮಾಡಿದ್ದಾರೆ.

ಸಣ್ಣಕ್ಕಿ ಪಲ್ಲಕ್ಕೆ ೨೬ ರೂ. ನಡ್ಡಕ್ಕಿ ... ೨೪ ... ದಪ್ಪಕ್ಕಿ ... ೨೦

ರೈಲ್ವೆ ಅಪಘಾತ

ಮೈಸೂರು ೨೮

ಬೆಂಗಳೂರಿನಿಂದ ನಿನ್ನೆ ರಾತ್ರಿ ಹೊರಟ ಗೂಡ್ಸ್ ರೈಲಿನ ಬ್ರೇಕ್ ವ್ಯಾನ್ ಗಾಡಿಯು ಹಳಿ ತಪ್ಪಿ ... ಮುಂದಿನ ಇಂಜನ್ನಿಗೆ ಸ್ವಲ್ಪ ಜಖಂ ಆಯಿತೆಂದೂ ಬೇರೆ ಇಂಜನ್ನನ್ನು ಕಳುಹಿಸಿ ಗಾಡಿಯನ್ನು ಮೈಸೂರಿಗೆ ... ತಿಳಿದು ಬಂದಿದೆ. ಈ ... ರೈಲುಗಾಡಿ ... ಯಾವ ನಷ್ಟವೂ ಸಂಭವಿಸಿಲ್ಲ.

ಮಹಿಳಾ ಮಂಡಲಿ

ನಾಳೆ ಸಂಜೆ ೬ ಗಂಟೆಗೆ "ಬಾಪೂ ಸ್ಮರಣೆ" ದಿನವನ್ನು ಇಟ್ಟಿಗೆ ಗೂಡಿನಲ್ಲಿರುವ ಕನ್ನಡ ... ನಡೆಸಲಾಗುವುದು. ಸರಸ್ವತಿ ಶ್ರೀಮತಿ ಎಂ. ಎನ್. ಸೀತಮ್ಮ ಎಂ. ಎ. ಅವರು ಭಾಷಣ ಮಾಡಲಿದ್ದಾರೆ. ಬಟ್ಟೆ ... ಶ್ರೀ ಸರಸ್ವತಿ ಗಾಂಧಿಯವರಿಂದ ಭಜನೆ ಇದೆ. ಬಾಪೂ ಭಕ್ತರೆಲ್ಲರೂ ... ಸರ್ವರಿಗೂ ಆಹ್ವಾನವುಂಟು.

ಎರಡು ಬಾರಿ ಮದುವೆ ಮಾಡಿದ ಆಪಾದನೆ ನಿರಾಕರಣೆ

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯ ನಂಜಪ್ಪನವರ ... ಮಗಳು ... ಬಾಯಿಗೆ ಎರಡು ಬಾರಿ ಮದುವೆ ಮಾಡಿಸಿದ ... ಅಪರಾಧಿಗಳನ್ನು ಬಂಧಿಸಿ ... ಆಕೆಯು ಗಂಡನೊಂದಿಗೆ ಬಾಳಲು ... ಹೋಗಲೊಪ್ಪದೆ ... ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದೆ. ... ಆಪಾದಿತರು ... ಮದುವೆ ... ಮಾಡಿಸುವುದಿಲ್ಲವೆಂದು ತಿಳಿಸುತ್ತಾರೆ.

ಸ್ಟೂಡೆಂಟ್ಸ್ ಸಂಘ

ಮೈಸೂರು ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಮೈಸೂರು ಜಿಲ್ಲಾ ... ನಾಳೆ ... ಸರ್ಕಾರಿ ... ಕಾಲೇಜು ... ವಿದ್ಯಾರ್ಥಿ ... ಶ್ರೀ ... ಅಧ್ಯಕ್ಷತೆ ವಹಿಸ... ... ಸರ್ವರಿಗೂ ಆಹ್ವಾನ ಉಂಟು.

ವೈದ್ಯ ಮತ್ತು ಕಾಮರ್ಸ್ ಡಿಪ್ಲೊಮಾಗಳು

ಸ್ವಂ. ವ. ವರದಿ] ಬೆಂಗಳೂರು ೨೮

ಎಲ್. ಎಂ. ಪಿ. ಮತ್ತು ಎಲ್. ಕಾಂ. ಪರೀಕ್ಷೆಗಳಲ್ಲಿ ತೇರ್ಗಡೆಯಾದ ೧೨೫ ಮಂದಿಗೆ ಇಂದು ವಿಶೇಷ ಸೆನೆಟ್ ಸಮಾರಂಭದಲ್ಲಿ ಡಿಪ್ಲೊಮಾಗಳನ್ನು ಕೊಡಲಾಯಿತು. ಇವರ ಪೈಕಿ ಏಳು ಜನ ಸ್ತ್ರೀಯರೂ ಇರುವರು. ಶ್ರೀಮತಿ ... ಪ್ರಥಮ ... ಬಂದವರಿಗೆ ಬಹುಮಾನಗಳು ... ಬಂದುವು.

ಆರೋಗ್ಯಾಧಿಕಾರಿಗಳಾದ ಡಾ॥ ಸಿ. ಚಂದ್ರಶೇಖರಯ್ಯನವರು ಪದವೀಧರರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ... ಪರಿಸ್ಥಿತಿಗೆ ಹೊಂದಿಕೊಂಡು ರೋಗ ಚಿಕಿತ್ಸೆಗಿಂತಲೂ ಅದರ ನಿವಾರಣೆಗೆ ಹೆಚ್ಚು ಗಮನ ಕೊಡಬೇಕೆಂದೂ, ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಪ್ರಯತ್ನ ಪಡಬೇಕೆಂದೂ ಬೋಧಿಸಿದರು. ವ್ಯಾಪಾರೋದ್ಯಮಗಳಲ್ಲಿ ಪಾಶ್ಚಿಮಾತ್ಯ ದೇಶಗಳಂತೆ ನಮ್ಮ ದೇಶವೂ ಮುಂದೆ ಬರಲು ಕಾಮರ್ಸ್ ಪದವೀಧರರು ಪ್ರಯತ್ನಿಸಬೇಕೆಂದೂ ಹೇಳಿದರು.

ತರುವಾಯ ಶ್ರೀ ಕಸ್ತೂರಿ ರಾಜಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೆನೆಟ್ ಸಭೆ ಸೇರಿತ್ತು. ಮಾಜಿ ವೈಸ್ ಛಾನ್ಸಲರ್ ಶ್ರೀ ಜ॥ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರ ಸೇವೆಯನ್ನು ಪ್ರಶಂಸಿಸಿ ನಿರ್ಣಯ ಮಾಡಲಾಯಿತು.

ನಾಲ್ಕು ವಿಶೇಷ ಶಾಸನಗಳು

ಗೋಪಾಲರಾವ್ ಏಕಬೋಟೆ ಮತ್ತು ... ರವರ ... ಯೋಜನೆಗಳನ್ನು ... ನಡೆಸಲು ಅವಕಾಶ ಕಲ್ಪಿಸುವುದು; ಕಂಪೆನಿಗಳಲ್ಲಿ ಕೆಲಸ ಮಾಡುವ ... ಪ್ರಮಾಣವನ್ನು ... ಸರ್ವಿಸ್ ನಿಗದಿಗೊಳಿಸುವುದು; ಕಂಪೆನಿಗಳು ಮತ್ತು ಸಹಕಾರ ಸಂಘಗಳು ಗಾಂಧಿ ಸ್ಮಾರಕ ನಿಧಿಗೆ ಕಾಣಿಕೆ ಸಲ್ಲಿಸಲು ವಿಶೇಷ ಅವಕಾಶ ಕಲ್ಪಿಸುವುದು, ಮತ್ತು ... ಶಾಸನದ ಅವಧಿಯನ್ನು ಇನ್ನೂ ... ತಿಂಗಳು ಹೆಚ್ಚಿಸುವುದು — ಇವುಗಳ ಬಗ್ಗೆ ಸರ್ಕಾರದವರು ನಾಲ್ಕು ವಿಶೇಷ ಶಾಸನಗಳನ್ನು ಜಾರಿ ಮಾಡಿದ್ದಾರೆ.

ನಾಂಕಿಂಗ್ ನಗರದ ಪತನ ಸಿದ್ಧ

ಚಿಯಾಂಗ್ ಕೈಷೇಕರ ಪಲಾಯನದ ನಿರೀಕ್ಷಣೆ

ಎ. ಪಿ. ಐ.] ಲಂಡನ್ ೨೫

ಇಂಗ್ಲೆಂಡಿನ ಪತ್ರಿಕೆ ... ಚೀಣಾದ ... ಬ್ರಿಟಿಷ್ ವ್ಯಾಪಾರಿ ಸಂಸ್ಥೆಗೆ ಬಂದಿರುವ ಸುದ್ದಿಯ ಪ್ರಕಾರ ಚೀಣಾದ ರಾಷ್ಟ್ರೀಯ ಸೇನೆಗಳು ಇಂದಿನ ಯುದ್ಧದಲ್ಲಿ ಜಯಶಾಲಿಯಾಗುವುದು ... ಸಂಭವವೇ ಇಲ್ಲವೆಂದು ಭಾವಿಸಲಾಗಿದೆ. ಚೀಣಾಕ್ಕೆ ... ಸಾಮಗ್ರಿಗಳನ್ನು ಕಳುಹಿಸುವುದು ಅರ್ಥಹೀನ ... ನಾಂಕಿಂಗ್ ... ನಗರವು ... ಗಳಿಗೆಯ ... ಶರಣಾಗ ... ಚಿಯಾಂಗ್ ಕೈಷೇಕ ರವರು ಅವರ ಸರ್ಕಾರದವರೂ ಕೇವಲ ಸ್ವಲ್ಪ ಕಾಲದಲ್ಲೇ ಪಲಾಯನ ಮಾಡುವುದು ಖಂಡಿತ. ಎಂದು ಅದೇ ವರದಿಯು ಹೇಳುತ್ತದೆ.

ಶೀಘ್ರಲಿಪಿಗಾರರ ಕುಂದುಕೊರತೆಗಳು

ಘನ ಸರ್ಕಾರದವರ ಸ ಖ್ಯಾನದ ನಾನಾ ಇಲಾಖೆಗಳಲ್ಲಿ ನ ಶೀಘ್ರಲಿಪಿಗಾರರಿಗೆ ೧೦೧೯೭ರಿಂದ ವ ೦ಜೂರಾಗಿರ ದ ಪ್ರಥಮ ದರ್ಜೆ ... ವರ್ಷ ಸೇವೆ ಮಾಡಿ... ಯರ್ ದರ್ಜೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವವರಿಗೆ ಕೊಡ ಅನುಭವಿಸುವುದಕ್ಕೆ ಎಷ್ಟು ವಿಷಯದಿಂದ ... ನರಿಗೆ ಅನ್ಯಾಯವನ್ನು ಕಲ್ಪಿಸಿದಂತಾಗಿ ... ತುಂಬಾ ಶೋಚನೀಯ ವಾಗಿದೆ.

ಸೆಕ್ರೆಟರಿಯೆಟ್ ಇಲಾಖೆಗಳಲ್ಲಿ ಈಗ ... ಲಸ ಮಾಡ ತ್ತಿರುವ ಶೀಘ್ರಲಿಪಿಗಾರರನ್ನು ಮಾತ್ರ ಸೀನಿಯರ್ ದರ್ಜೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆ ... ನ್ನು ವಿಧಿಸದೆ ಸೂಪರ್ ನ್ಯೂಮರರಿ ಎಂದ ಭಾವಿಸಿ ಪ್ರಥಮ ದರ್ಜೆಯ ... ಕೊಟ್ಟಿರುವುದು ... ಈ ಸೌಲಭ್ಯವನ್ನು ನಮ್ಮ ಪ್ರಜಾ ಸರ್ಕಾರದ ... ಇತರ ಇಲಾಖೆಗಳಲ್ಲಿ ... ಮಾಡುತ್ತಿರುವ ಮತ್ತು ... ವರ್ಷ ಸೇವೆ ಮಾಡಿ ಸೀನಿಯರ್ ದರ್ಜೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ... ಲಿಪಿಗಾರರಿಗೆ ಕೂಡ ಕೊಡದೆ ಇರುವ ... ನ್ಯಾಯ ... ಉತ್ಸಾಹ ... ಭಂಗ ಮಾಡಿರುವುದು ... ಗೇಳ ಗಮನಕ್ಕೆ ... ವಿಷಯವಾಗಿದೆ.

ಕೇವಲ ಅಕ್ಕಪಕ್ಕ ... ವರ್ಷಗಳ ಅನುಭವ ... ಅಕೌಂಟ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ... ಪ್ರಥಮ ದರ್ಜೆಯನ್ನು ಮಂಜೂರು ಮಾಡಿ ... ನಾಲ್ಕಾರು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಮತ್ತು ಈಗ ಶೀಘ್ರಲಿಪಿಗಾರರಿಗೆ ಸೇವೆ ಸಲ್ಲಿಸುತ್ತಿರುವ ಅನುಭವಸ್ಥರಿಗೆ ... ಕೇವಲ ... ತಪ್ಪಲ್ಲ. ಇಂತಹ ಅನುಭವಸ್ಥರಲ್ಲಿ ಅನೇಕರು ಪ್ರಥಮ ದರ್ಜೆಯ ... ಬೇಕಾದ ಮತ್ತು ಇತರ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ... ದರ್ಜೆಯಲ್ಲಿ ಪೂರ್ಣ ಸೇವೆ ... ಇಂತಹವರು ... ವೆಗಳಲ್ಲಿ ... ಘನ ಸರ್ಕಾರದವರು ... ದರ್ಜೆಯನ್ನು ... ದು. ಇಂತಹ ಶೀಘ್ರಲಿಪಿಗಾರರನ್ನು ... ದರ್ಜೆಗೆ ... ವರ್ಷಗಳ ಸೇವೆ ಮಾಡಿ ... ದರ್ಜೆಯಲ್ಲಿ ಪೂರ್ಣ ... ವರ್ಷ ಸೇವೆ ಮಾಡಿರುವ ಮತ್ತು ಸೀನಿಯರ್ ದರ್ಜೆ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವವರಿಗಾದರೂ ನಮ್ಮ ಪ್ರಜಾ ಸರ್ಕಾರದವರು ಪ್ರಥಮ ದರ್ಜೆಯನ್ನು ... ದಿಂದ ಮಂಜೂರು ಮಾಡುವುದು ಅವಶ್ಯಕ.

ರಾಜಧಾನಿಗೆ ಗೃಹ ನಿರ್ಮಾಣ ಯೋಜನೆ

ನಗರಾಭಿವೃದ್ಧಿ ಸಮಿತಿಯ ಇಂಜನಿಯರ್ ಶ್ರೀ ಕೆ ಜಿ ಕಾಟ್ಟೆಯ ವರು ಬರೆದಿರುವ 'ಮೈಸೂರು ನಗರಕ್ಕೊಂದು ಗೃಹ ನಿರ್ಮಾಣ ಯೋಜನೆ' ಎಂಬ ಇಂಗ್ಲಿಷ್ ಭಾಷೆಯ ಪುಸ್ತಕವು ನನ್ನ ಹಸ್ತಗತವಾಗಿದೆ ... ಶ್ರೀ ಕಾಟ್ಟೆಯವರು ... ಈ ಪುಸ್ತಕದಲ್ಲಿ ವಿವರಿಸಿರುತ್ತಾರೆ ... ಈ ಪ್ರಸ್ತಾವ ಪ್ರಯೋಜನವನ್ನು ಹೊಂದಲೆಂದು ಹಾರೈಸುತ್ತೇನೆ.

ಈ ಪುಸ್ತಕ ... ದರ್ಜೆ ... ಇಲಾಖೆಗಳಲ್ಲಿ ಈಗ ಶೀಘ್ರಲಿಪಿಗಾರರಾಗಿ ಸೇವೆ ಮಾಡುತ್ತಿರುವವರಲ್ಲಿ ... ಪ್ರಥಮ ದರ್ಜೆಯು ... ಸರ್ಕಾರಕ್ಕೆ ಅಧಿಕ ವೆಚ್ಚವಾಗಿ ... ಸರ್ಕಾರದವರು ... ಶೀಘ್ರಲಿಪಿಗಾರರನ್ನು ಸೂಪರ್ ನ್ಯೂಮರರಿ ಎಂದು ಭಾವಿಸಿ ಪ್ರಥಮ ದರ್ಜೆಯಲ್ಲಿ ... ಕರ್ತವ್ಯವಾಗಿದೆ. ಹಿತೈಷಿ

ಗೃಹಕೃತ್ಯದ ನೋಟೀಸು

ಮೈಸೂರು ಚಾಮರಾಜ ಮೊಹಲ್ಲಾ ... ಕೊಪ್ಪಲಿನಲ್ಲಿರುವ ... ಒಕ್ಕಲಿಗರ ... T ... ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:— ... ಮೊಹಲ್ಲಾದಲ್ಲಿರುವ 2460 ನೇ ನಂಬರ್ ಮನೆಯೂ ಮತ್ತು ಮೈಸೂರು ... ಹೋಬಳಿ ... ನಂಬರ್

ಸರ್ವೆ ನಂ	ಎಕರೆ	ಗುಂಟೆ
53	5	17
54	4	36
55	2	2
164	1	1

ಮೇಲ್ಕಂಡ ಸ್ವತ್ತುಗಳನ್ನು ನನ್ನ ಖಲ ... ಎಂಬುವರು ... ಭೋಗ್ಯ ... ಈ ಸ್ವತ್ತುಗಳನ್ನು ... ನನಗೆ ಗೊತ್ತಿಲ್ಲದೆ ... ಯಾರೂ ... ಜವಾಬ್ದಾರರಲ್ಲ ... ನಗಳಿಗೂ ತಿಳಿಸ ಬಡಿಸಿರುತ್ತೇ. (ರು) T ... ರಿರುವ್ಪ

Edited printed and published by A.R. Nagarajan at the Sadhvi Press D. Subbaiah Road Mysore

ಸತ್ಕಾರ ಕೂಟ

ಮೈಸೂರು. ೨೮

ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪೆನಿಯ ಮಾಜಿ ಜನರಲ್ ಮ್ಯಾನೇಜರ್ ಶ್ರೀ ಕೆ. ಎಲ್ ರಾಮಸ್ವಾಮಿಯವರು ಭಾರತ ಸರ್ಕಾರದಲ್ಲಿ ಉನ್ನತ ಹುದ್ದೆಗೆ ತೆರಳಲಿರುವ ಸಂದರ್ಭದಲ್ಲಿ ಅವರನ್ನು ಬೀಳ್ಕೊಡಲು ಓರಿಯಂಟಲ್ ಇನ್ಸ್ಟಿಟ್ಯೂಟಿನ ಶ್ರೀ ಬಿ ಎಸ್ ಸುಬ್ಬರಾಯರು ನೆನ್ನೆ ದೂರ್ತ ಹೋಟೆಲಿನಲ್ಲಿ ಒಂದು ಔತಣ ಕೂಟವನ್ನೇರ್ಪಡಿಸಿದ್ದರು ಬಿ ವೈ ಎಲ್ ಶ್ರೀನಿವಾಸಮೂರ್ತಿಯವರ ಸ್ವಾಗತವಾದ ಗಾನವು ... ದೃಶ್ಯಗಳೊಡನೆ ನಡೆಯಿತು ಪ್ರಾರ್ಥನೆಯಾದ ... ಶ್ರೀ ರಾಮಸ್ವಾಮಿಯವರಿಗೆ ... ಕೋರಿ ಅವರು ... ಭಾರತ ಸರ್ಕಾರದ ಸೇವೆಯಲ್ಲಿ ... ಯುಕ್ತವಾಗಲೆಂದು ಹಾರೈಸಿದರು ಶ್ರೀ ರಾಮಸ್ವಾಮಿಯವರು ... ಧನ್ಯವಾದವನ್ನರ್ಪಿಸಿ ದೇಶ ಸೇವೆಗಾಗಿ ಸರ್ವ ಪ್ರಯತ್ನಗಳನ್ನೂ ಮಾಡುವುದಾಗಿ ಹೇಳಿದರು.

ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ದಿನ ರಾತ್ರಿ ... ಗಂಟೆಗೆ ವೇ|| ಬ್ರಂ|| ಗ ಮತಿ ರಾಮಕೃಷ್ಣಶಾಸ್ತ್ರಿಗಳಿಂದ ಭೂಕೈಲಾಸ ಎಂಬ ಹರಿಕಥೆಯು ನಡೆಯುತ್ತದೆ

॥ ಶ್ರೀ ॥

ಚಾಮುಂಡೇಶ್ವರೀ ಟಾಕೀಸು

30-11-48 ರಿಂದ 4 ದಿನಗಳು ಮಾತ್ರ ಪ್ರತಿ ದಿನ 3 ಆಟಗಳು

ರೋಮಿಯೊ & ಜೂಲಿಯೆಟ್

ಪಾತ್ರ - ನಾರ್ಮಾ ಷೀರರ್ ಮತ್ತು ಲೆಸ್ಲಿ ಹವಾರ್ಡ್.

ಬ್ರಾಹ್ಮಣರಿಗೆ ಗ ದ್ದ ಹೊಂದಿ ಸಣ್ಣ ಸಂಸಾರಕ್ಕೆ ಮಹಡಿ ಮನೆ ಎರಡು ರೂಮು ಬಾಡಿಗೆಗೆ ಕೊಡಲ್ಪಡುತ್ತ್ತೆ ಶ್ರೀನಿವಾಸ ಸ್ವಾರಿ ಪ್ರಿಂಟಿಂಗ್ ವರ್ಕ್ಸ್ ಡೋರ್ ನಂ 342 ದಿವಾನ್ಸ್ ಅಗ್ರಹಾರ, ಮೈಸೂರು

ಮೈಸೂರು ಸಿಟಿ ರೇಷನಿಂಗ್

ಗಳಲನೇ ... ನವೆಂಬರ್ ಮಾಹೆ ... ದಿವಸ ಮೈಸೂರು ಸಿಟಿ ... ಎಲ್ಲಾ ಸರಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ಪರ್ಮಿಟ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ

ಎಂ. ವೆಂಕಟೇಶ್ವರಲು, ರೇಷನಿಂಗ್ ಆಫೀಸರ್ ಇನ್ ಚಾರ್ಜ್ ಮೈಸೂರು ಸಿಟಿ

ಮೈಸೂರು, } ... {

ಬಹುಪತ್ನಿತ್ವ ನಿಷೇಧ ಕಾನೂನು

ಮದರಾಸಿನ ಶಾಸನ ಸಭೆಯಲ್ಲಿ ಬಹುಪತ್ನಿತ್ವ ನಿಷೇಧಕ ಮಸೂದೆಯು ನೆನ್ನೆ ಅಂಗೀಕೃತವಾಯಿತು. ಈ ಮಸೂದೆಯು ದ ಸರಿಯಾದ ಕಾರಣಗಳಿದ್ದಲ್ಲಿ ಸ್ತ್ರೀ ದಾಂಪತ್ಯ ವಿಚ್ಛೇದನಕ್ಕೆ ಅವಕಾಶವಾಗುವುದು

ವಿಮಾನ ಅನಾಹುತದಿಂದ ೨೧ ಜನರ ಮರಣ

ಕರಾಚಿಯಿಂದ ಲಾಹೋರಿಗೆ ಹೊರಟ ಪಾಕೀಸ್ತಾನದ ವಿಮಾನವೊಂದು ಲಾಹೋರಿಗೆ ... ಮೈಲಿ ದೂರವಿರುವ ... ಎಂಬಲ್ಲಿ ಅಕಸ್ಮಾತ್ತಾಗಿ ಉರುಳಿತೆಂದೂ ಅದರೊಳಗಿದ್ದ ೧೬ ಮಂದಿ ಪ್ರಯಾಣಿಕರು ಮತ್ತು ೫ ಮಂದಿ ವೈಮಾನಿಕರೂ ಮಡಿದರೆಂದೂ ತಿಳಿದು ಬಂದಿದೆ.

ಮೂರು ಮಕ್ಕಳ ಜನನ

ಚನ್ನರಾಯಪಟ್ಟಣದ ತಾ|| ದಿಂಡಗೂರು ಹಳ್ಳಿ ಹೋಬಳಿ ಉಪ್ಪಿನ ಹಳ್ಳಿ ಗ್ರಾಮದಲ್ಲಿ ರಾಮೇಗೌಡ ಎಂಬುವರ ಹೆಂಡತಿ ನೆನ್ನೆ ಯನ್ನು ಕಳೆದ ಸೋಮವಾರ ಏಕಕಾಲದಲ್ಲಿ ಎರಡು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳೆಂದು ತಿಳಿದು ಬಂದಿದೆ ಮಕ್ಕಳು ಮತ್ತು ತಾಯಿ ಆರೋಗ್ಯವಾಗಿದ್ದಾರೆ

ಬಿರುಗಾಳಿಯಿಂದ ೫ ಕೋಟಿ ರೂ. ನಷ್ಟ

ಕಳೆದ ಸೋಮವಾರ ಬೊಂಬಾಯಿಯ ಬ್ಲೋಟ ಅನಾಹುತದಿಂದ ಒಟ್ಟು ೫ ಕೋಟಿ ರೂ. ಗಳ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ.

ಶ್ರೀ ರಾಘವೇಂದ್ರ ಸ್ಟೋರ್ಸ್,

ಬಿಡಾರಂ ಕೃಷ್ಣಪ್ಪ ಬೀದಿ, ಮೈಸೂರು.

ಪರಮಾಯಿಷಿ ಜೀಳ ಸೇರು ಒಕ್ಕೆ	11	ಅಣೆ
,, ಹೆಸರು ,,	10	ಅಣೆ
,, ಉದ್ದು ,,	10	ಅಣೆ
,, ಹಸಿ ಕಡಲೆ ,,	10½	ಅಣೆ
ಸೀಲಿ ಬಾರ್ ಸೋಪು ಒಕ್ಕೆ	13½	ಅಣೆ

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೀಲಿಂಗ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ ಕೀಮತ್ ೦-೧೨-೦

ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾ ಮಲಕ ತೈಲ:—)
—ದೇಹಕ್ಕೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ— ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ.

ಮಹಾಕೇತಕೀ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಫ್ರೀ ಟಾನಿಕ್ ಕೀಮತ್ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ 90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

ರೋ. ೭೨೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೭] ಮಂಗಳವಾರ ೩೦-೧೧-೪೮ [ಸಂಚಿಕೆ ೧೩೧

ಕಾಶ್ಮೀರದ ವಿಭಜನೆಗೆ ಪಾಕಿಸ್ತಾನದ ಸಂಧಾನ

...ನ್ನೂರು ರು ಹೋಬಳಿ ರೈತರ ಸಮ್ಮೇಳನ

[illegible]

ಸೆಂಟ್ರಲ್ ಜೈಲಿನಿಂದ ಖೈದಿಗಳ ಪರಾರಿ

ಬೆಂಗಳೂರು ೩೦.

ಸೆಂಟ್ರಲ್ ಜೈಲಿನಿಂದ ನಾಲ್ಕು ಜನ [illegible] ಖೈದಿಗಳು ಪರಾರಿಯಾದರೆಂದೂ, ಅವರ ಪೈಕಿ ಇಬ್ಬರು ಸಿಕ್ಕಿರುವರೆಂದೂ ಹೇಳಲಾಗಿದೆ. ಮುಂದಿನ [illegible] ನಡೆಯುತ್ತಿದೆ.

ರಾಜಾಜಿಗೆ ಎರಡು ಸಾವಿರ ರೂ. ಸಂಬಳ ಸಾಕಂತೆ

ಭಾರತದ ಗೌರ್ನರ್ ಜನರಲ್ ರಾಜಾಜಿಯವರು ಮಂತ್ರಿ ಮಂಡಲಕ್ಕೆ ಪತ್ರವೊಂದನ್ನು ಬರೆದು ತಮ್ಮ ಸಂಬಳ ಮತ್ತು [illegible] ವೆಚ್ಚಗಳಿಗೆ ಸಂಕಾರವು ತಿಂಗಳಿಗೆ ೨೦೦೦ ರೂ. ಗಳಿಗಿಂತ ಹೆಚ್ಚು [illegible] ನೀಡುವುದನ್ನು ತಾವು ಒಪ್ಪುವುದಿಲ್ಲವೆಂದು ತಿಳಿಸಿದ್ದಾರೆಂದೂ [illegible]

ಬೊಂಬಾಯಿಯಲ್ಲಿ ನೊಂದವರಿಗೆ ನೆಹರೂರವರ ನೆರವು

[illegible]

ಸೂಚ್ ನಗರ ತ್ಯಾಗ

[illegible]

ಕೊಡಗು ಮೈಸೂರಿಗೆ ಸೇರುವುದೇ ?

[illegible]

ಶ್ರೇಷ್ಠ ನ್ಯಾಯಾಧೀಶರ ಬಲಾತ್ಕಾರದ ನಿವೃತ್ತಿ

ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ

[illegible]

ಜಾಗ್ರತೆ ತಪ್ಪಿಸಿ ರೈಲುಗಳಲ್ಲಿ ದರೋಡೆ

[illegible]

ಜಮ್ಮುವನ್ನು ಕಾಶ್ಮೀರದಿಂದ ಪ್ರತ್ಯೇಕಿಸಲು ಪಾಕಿಸ್ತಾನದ ಪ್ರಯತ್ನ

[illegible]

ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕೆಲಸಗಾರರ ಮುಷ್ಕರ

[illegible]

ಕಾಲೇಜು ಮುಂದೆ ಅಶೋಕ ಸ್ತಂಭ

ಮೈಸೂರು ೩೦

[illegible]

ಭೂಪಾಲ್ ರಾಜರಿಗೆ ನಿರ್ಬಂಧ

[illegible]

ಆಯುರ್ವೇದಕ್ಕೆ ಪ್ರಧಾನ ಸ್ಥಾನವಿರಬೇಕು

ಧನ್ವಂತರೀ ಜಯಂತಿಯಲ್ಲಿ ಮೈಸೂರು ಪೌರಸಭಾಧ್ಯಕ್ಷರ ಭಾಷಣ

ನಂಜನಗೂಡು ೨೯

ಬಿಸಗ್ರತ್ನ ಬಿ ಎ ಪಂಡಿತರು ನಿನ್ನೆ ದಿನ ಧನ್ವಂತರಿ ಜಯಂತಿಯನ್ನು ಬಹಳ ವೈಭವದಿಂದ ನೆರವೇರಿಸಿದರು

ಮಧ್ಯಾಹ್ನ ಧನ್ವಂತರಿ ಪೂಜೆ ಮತ್ತು ನೂರಾರು ಬ್ರಾಹ್ಮಣ ಸುವಾಸಿನಿಯರುಗಳಿಗೆ ಭೋಜನವು ನಡೆಯಿತು ಸಂಜೆ ಐದು ಗಂಟೆಗೆ ರಾಜಧಾನಿಯ ಪುರಸಭಾಧ್ಯಕ್ಷರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಆರಂಭವಾಯಿತು.

ಕುಮಾರಿ ಲೀಲಾವತಿ ಧನ್ವಂತರಿಯ ಮೇಲೆ ಶ್ಲೋಕಗಳನ್ನು ಓದಿದರು ಚಿಕ್ಕಟ್ಟಿ ಮತ್ತು ನಾಗರಾಜ್‌ರವರು ಧನ್ವಂತರಿಯ ವಿಷಯವನ್ನು ಪ್ರಹಸನದ ಮೂಲಕ ತಿಳಿಸಿದರು

ಶ್ರೀ ಬಿ ಎ ಪಂಡಿತರು ಸ್ವಾಗತ ಭಾಷಣ ಮಾಡಿ ಮಹಾತ್ಮ ಗಾಂಧಿಜಿಯವರ ನಿಧನಕ್ಕಾಗಿ ವ್ಯಥೆಯನ್ನು ಸೂಚಿಸಿದರು, ಮತ್ತು ಡಾ॥ ಶ್ರೀಯುತರ ನಿಧನಕ್ಕಾಗಿಯೂ ಕಣ್ಣೀರಿಟ್ಟರು

ಅಧ್ಯಕ್ಷರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಾತನಾಡಿ ಪ್ರಜಾ ಸರ್ಕಾರದಲ್ಲಿ ಪುರಾತನ ಕಲೆಗಳಾದ ಆಯುರ್ವೇದ ಮುಂತಾದುವುಗಳಿಗೆ ಪ್ರೋತ್ಸಾಹ ದೊರೆತು ಈಗ ಇರುವ ಇಂಗ್ಲಿಷ್ ಔಷಧಗಳ ಪ್ರಥಮ ಸ್ಥಾನವು ಆಯುರ್ವೇದಕ್ಕೆ ದೊರೆಯಲೆಂದು ಹಾರೈಸಿದರು. ಸರ್ಕಾರವು ಆಯುರ್ವೇದದ ಅಭಿವೃದ್ಧಿಗೆ ಪ್ರಯತ್ನಪಟ್ಟು ವಿಶ್ವ ವಿದ್ಯಾನಿಲಯದಲ್ಲಿ ಆಯುರ್ವೇದ ಮತ್ತು ಯುನಾನಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಡಿಗ್ರಿಗಳನ್ನು ದೊರಕಿಸಿ ಕೊಡುವಂತಾಗಬೇಕೆಂದೂ, ಪಾಠ ಪ್ರವಚನಗಳನ್ನು ಹೇಳಲು ಒಳ್ಳೆಯ ಪಂಡಿತರುಗಳನ್ನು ನೇಮಿಸಬೇಕೆಂದೂ ತಿಳಿಸಿದರು ಇಂಗ್ಲಿಷ್ ಔಷಧಗಳು ಹೇಗೆ ಒಂದು ಸಂಸ್ಥೆಯ ಮೂಲಕ ಪೇಟೆಂಟ್ ಆಗುತ್ತವೋ ಹಾಗೆಯೇ ಆಯುರ್ವೇದ ಮತ್ತು ಯುನಾನಿ ಪಂಡಿತರುಗಳು ಸಹ ಒಂದು ಸಂಘವನ್ನು ಸ್ಥಾಪಿಸಿಕೊಂಡು, ಔಷಧಗಳನ್ನು ಈ ಸಂಸ್ಥೆಗಳ ಮೂಲಕ ರಿಜಿಸ್ಟರ್ ಮಾಡಿಸಿ ಅವು ಎಲ್ಲರಿಗೂ ದೊರಕು ಹಾಗಾಗಬೇಕೆಂದು ಹೇಳಿದರು. ವೈದ್ಯರುಗಳೂ ಪಂಡಿತರುಗಳೂ ಸ್ವಾರ್ಥವನ್ನು ಮರೆತು ತಮಗೆ ತಿಳಿದಿರುವ ವಿಷಯಗಳನ್ನು ಗುಟ್ಟಾಗಿಡದೆ ಎಲ್ಲರಿಗೂ ತಿಳಿಸಿ ಸರ್ವರೂ ಅದರಿಂದ ಪ್ರಯೋಜನ ಪಡೆಯುವಂತಾಗಲೆಂದು ಸೂಚಿಸಿದರು. ಆಯುರ್ವೇದ ಮತ್ತು ಯುನಾನಿ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳು ಪೂರ್ಣವಾಗಿ ತಮ್ಮ ಅಪೇಕ್ಷೆಯಾದ ಮತ್ತು ಜನಪ್ರಿಯವಾದ ಆಯುರ್ವೇದಕ್ಕೆ ಹೆಚ್ಚು ಗಮನ ಕೊಡಬೇಕಲ್ಲದೆ ಮೆಡಿಕಲ್ ಕಾಲೇಜು ಮುಂತಾದ ಕಡೆಗಳಲ್ಲಿ ಹೇಳುವಂತೆ ಪಾಠ ಪ್ರವಚನಗಳನ್ನು ಹೇಳಬೇಕೆಂದು ಒತ್ತಾಯ ಮಾಡಬಾರದು ಆಯುರ್ವೇದಕ್ಕೆ ಸಾರ್ವಜನರ ಸಂಪೂರ್ಣ ಸಹಕಾರ ವಿರಬೇಕೆಂದೂ ಕೋರಿದರು

ಶ್ರೀಮತಿ ನೀಲಮ್ಮ ಕಡಾಂಬಿಯವರಿಂದ ಸುಶ್ರಾವ್ಯವಾದ ಸಂಗೀತವು ನಡೆಯಿತು.

ಶ್ರೀ ಬಿ ಎ ಪಂಡಿತರು ವಂದನೆಯನ್ನರ್ಪಿಸಿದನಂತರ ಸಮಾರಂಭವು ಮುಕ್ತಾಯವಾಯಿತು

ಪೌರ ಸಭೆಗೆ ಭೇಟಿ

ನಿನ್ನೆ ದಿನ ಮೈಸೂರು ಪುರಸಭಾಧ್ಯಕ್ಷರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಇಲ್ಲಿನ ಪೌರ ಸಭೆಗೆ ಭೇಟಿ ಇತ್ತರು ಅಧ್ಯಕ್ಷರಾದ ಶ್ರೀ ಬಿ. ಎ. ಎಸ್ ಅರಾಧ್ಯರು ಅವರನ್ನು ಸ್ವಾಗತಿಸಿ ಇಲ್ಲಿನ ಪೌರ ಸಭಾ ಸದಸ್ಯರ ಪರಿಚಯವನ್ನು ಮಾಡಿಕೊಟ್ಟರು.

ಶ್ರೀ ಪಾಲಹಳ್ಳಿಯವರು ಮಾತನಾಡಿ, ಪೌರ ಸಭಾ ಸದಸ್ಯರುಗಳ ಸಮ್ಮೇಳನವು ನಡೆದು ಅದರಲ್ಲಿ ಎಲ್ಲ ಪೌರ ಸಭೆಗಳಲ್ಲೂ ಕಡ್ಡಾಯವಾಗಿ ನಡೆಯಬೇಕಾದ ಕೆಲಸಗಳಾದ ಒಳ ಚರಂಡಿ ವ್ಯವಸ್ಥೆ, ಬಡವರಿಗೆ ಮತ್ತು ನೌಕರವರ್ಗಗಳಿಗೆ ಮನೆ ಸೌಕರ್ಯ ಮತ್ತು ನೀರಿನ ವ್ಯವಸ್ಥೆ ಮುಂತಾದುವುಗಳಿಗೆ ಒಂದು ಸಮಿತಿ ಏರ್ಪಟ್ಟು ಅದರ ಮೂಲಕ ಕೆಲಸ ನಡೆಯುವುದು ಒಳ್ಳೆಯದೆಂದು ಹೇಳಿದರು ಮುನಿಸಿಪಲ್ ಇಲಾಖೆಯಲ್ಲಿರುವವರ ಗಣನೆ ಮತ್ತೊಂದು ಮುನಿಸಿಪಾಲಿಟಿಗೆ ವರ್ಗಾಯಿಸಬೇಕೆ ವಿನಃ ರೆವಿನ್ಯೂ ಮುಂತಾದ ಕಡೆ ಕೆಲಸ ಮಾಡುವವರನ್ನು ಇಲ್ಲಿಗೆ ವರ್ಗಾಯಿಸುವುದರಿಂದ ಅವರುಗಳಿಗೆ ಪುರಸಭೆಯ ಕಾನೂನು ಕಟ್ಟಳೆ ತಿಳಿಯದೆ ಕೆಲಸ ಕಾರ್ಯಗಳು ನಡೆಯಲು ಅಡ್ಡಿಯಾಗುವುದೆಂದು ಹೇಳಿದರು ಸರ್ಕಾರದವರೂ ಸಹ ಈ ವಿಷಯಗಳಿಗೆ ಗಮನ ಕೊಟ್ಟು ಆದಷ್ಟು ಜಾಗ್ರತೆ ಒಂದು ಪುರಸಭೆಗಳ ಸದಸ್ಯರ ಸಮ್ಮೇಳನವನ್ನು ಕರೆಯುವುದು ಸೂಕ್ತವೆಂದು ಸೂಚಿಸಿದರು

ರಾಜಕಮಲ್ ಟಾಕೀಸ್

೨೬-೧೧-೪೮ನೇ ಶುಕ್ರವಾರ ದಿಂದ ಅಮೋಘ 2ನೇವಾರ ಪ್ರತಿದಿನ ಮೂರು ಆಟಗಳು

ಭಾರತಿ

ಹೊನ್ನಪ್ಪ ಭಾಗವತರ್, ರಾಜಕುಮಾರಿ, ಸಂಪತ್ ಕೃಷ್ಣ ಸ್ವಾಮಿ ಪಾತ್ರವಹಿಸಿರುವ ದಿವ್ಯವಾದ ಕನ್ನಡ ಚಿತ್ರ

ನೃತ್ಯ:- ಲಲಿತ, ಪದ್ಮಿನಿ

॥ ಶ್ರೀ ॥

ಚಾಮುಂಡೇಶ್ವರೀ ಟಾಕೀಸ್

30-11-48 ರಿಂದ 4 ದಿನಗಳು ಮಾತ್ರ ಪ್ರತಿ ದಿನ 3 ಆಟಗಳು

ರೋಮಿಯೊ & ಜೂಲಿಯೆಟ್

ಪಾತ್ರ ನಾರ್ಮಾ ಷೀರರ್ ಮತ್ತು ಲೆಸ್ಲಿ ಹವಾರ್ಡ್

ಗಾಂಧಿ ನಿಧಿಗೆ ಕಾಣಿಕೆ

ಮಹಾತ್ಮ ಗಾಂಧೀಜೀ ಸ್ಮಾರಕ ನಿಧಿಗೆ ಮೈಸೂರು ದಿವಾನರಾದ ರಾಜಮಂತ್ರಿ ಚೂಡಾಮಣಿ ಸರ್ ಎ ರಾಮಸ್ವಾಮಿ ಮೊದಲಿಯಾರರು ೨೦೦೦ ರೂ ಗಳನ್ನು ಕೊಟ್ಟಿದ್ದಾರೆ

Mysore City Municipality
Works Department

NOTICE

Sealed tenders will be received up to 4 p m on Monday the 6th December, 1948, by the Municipal Engineer for constructing five platforms for selling vegetables at Manantody Road near Sri Sadhashiva Mills

Each tender must be accompanied with a chellan for having remitted Rs 30, in the Municipal Treasury as earnest money

For full particulars please see the detailed notification in the office notice board

V. K Mukundan,
Municipal Engineer.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೆಯಿನ್ ಬಾಮ್ ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ ಬೀಸೆ ೦ ೧೨-೦

ಮಹಾ ಸುಗಂಧರಾಜ ತೈಲ:—)
" ಚಂದನಾದಿ ತೈಲ:—)
" ಭೃಂಗಾಮಲಕ ತೈಲ —)
—ದೇಹಕ್ಕೆ ತಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಪಂಚಾಮೃತ— ಮಲೇರಿಯಾ ಗಿಡೆಗಳಿಗೆ ಸಿದ್ಧ ಸಂಜೀವಿನಿ

ಮಹಾಕೇತಕೀ ತೈಲ —ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ

ಹೇರ್ ಟಾನಿಕ್ ಬೀಸೆ ೨-೦-೦

ಮೈಸೂರು ಆಯುರ್ವೇದಿಕ್ ಫಾರ್ಮಸಿ 90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈಸೂರು

Edited printed and published by A.R. Nagaraj[illegible] at the Sadhvi Press D Subbaiah Road Mysore

ವಿದ್ಯಾರ್ಥಿಗಳ ಮೇಲೆ ಲಾಠೀ ಪ್ರಹಾರ

ತಿರುಚನಾಪಳ್ಳಿಯ ವಿದ್ಯಾರ್ಥಿಗಳು ... ಸೆಂಬರ್‌ನಲ್ಲಿ ನಡೆಯಬೇಕಾದ ಪರೀಕ್ಷೆಗಳನ್ನು ರದ್ದು ಮಾಡಬೇಕೆಂದು ... ಪ್ರಾರಂಭ ಮಾಡಿದ್ದಾರೆ ಮುಖ್ಯರಾಗಿ ... ಲ್ಲಿನ ನ್ಯಾಷನಲ್ ಕಾಲೇಜು ಟ್ರಿಚಿ ... ಕಛೇರಿ ಮುಂದೆ ಪ್ರದರ್ಶನ ನಡೆಸಿ ... ಬೇಡಿಕೆಯನ್ನು ಈಡೇರಿಸಬೇಕೆಂದು ... ಮಾಡಿದಾಗ ಪೋಲೀಸಿನವರು ... ನ್ನು ಚದುರಿಸಲು ಲಾಠೀಪ್ರಹಾರ ಮಾಡಿದರು ಅದರೂ ಸಹ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ... ಯವರಿಗೆ ಕೊಡಲು ವುದಿಲ್ಲವೆಂದು ... ಸ್ತಿಗೆ ಅಡ್ಡವಾಗಿ ಮಲಗಿದರೆಂದೂ, ... ಗಳನ್ನು ಲಾರಿಯಲ್ಲಿ ಪೋಲೀಸ್ ಸ್ಟೇಷನ್ನಿಗೆ ಸಾಗಿಸಲಾಯಿತೆಂದೂ ತಿಳಿದು ... ಇದರ ಪರಿಣಾಮವಾಗಿ ಅನೇಕರಿಗೆ ... ಗಳಾಗಿವೆ

ಡಾ॥ ಕೆ. ಎಲ್. ರಾಮಸ್ವಾಮಿ

ಶ್ರೀಯುತರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಪ್ರಥಮ ದರ್ಜೆಯಲ್ಲಿ ಬಿ. ಎಸ್‌ಸಿ ಪದವಿಯನ್ನು ಪಡೆದು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿಗೆ ಸೇರಿದರು ಅಲ್ಪಕಾಲದಲ್ಲಿ ಅವರು ಎಂ. ಎಸ್‌ಸಿ. ಪದವಿಯನ್ನು ಹೊಂದಿದ ನಂತರ ಸುಪ್ರಸಿದ್ಧ ವಿಜ್ಞಾನಿಯಾದ ಸರ್ ಸಿ. ವಿ. ರಾಮನ್‌ರವರ ನೇತೃತ್ವದಲ್ಲಿ ಸಂಶೋಧನೆಗಳನ್ನು ಮಾಡಿ ಮದ್ರಾಸು ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಪ್ರಶಸ್ತಿಯನ್ನು ಪಡೆದರು, ... ಗೊಳಿಸಿದ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಂಪೆನಿಯ ಪರವಾಗಿ ... ರಿಕದಲ್ಲೂ ಪ್ರವಾಸಮಾಡಿ ... ರ ಕಂಪೆನಿಯ ಜನರಲ್ ಮ್ಯಾನೇಜರ ಅಧಿಕಾರವನ್ನು ವಹಿಸಿದರು ಶ್ರೀಯುತರ ... ಭಾರತ ಸರ್ಕಾರದಲ್ಲಿ ಭಾರಿ ಉದ್ದೆಯನ್ನು ಅಂಗೀಕರಿಸಿ ಸರ್ಕಾರದ ಪರವಾಗಿ ... ಪರ್ಣಗಳ ಕಾಲ ಉನ್ನತ ಶಿಕ್ಷಣ ... ಯುನೈಟೆಡ್ ಸ್ಟೇಟ್ಸ್ ಮಧ್ಯಭಾಗದಲ್ಲಿ ... ಡಿಗೆ ತೆರಳಲಿದ್ದಾರೆ ಶ್ರೀ॥ ರಾಮಸ್ವಾಮಿಯವರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ...

ಚಿತ್ರ ಪ್ರದರ್ಶನ

ಮೈಸೂರು ಜಿಲ್ಲಾ ಹರಿಜನ ಸೇವಾ ... ಘದ ಆಶ್ರಯದಲ್ಲಿ ಮತ ಪ್ರಚಾರ ... ಚಾರ ಸಮಿತಿಯವರು ಡಿಸೆಂಬರ್ ೧ ... ಮತ್ತು ೩ನೇ ತಾರೀಖು ಪ್ರತಿ ದಿನ ... ೭ ಗಂಟೆಗೆ ಕ್ರಮವಾಗಿ ಚಾಮುಂಡಿಪುರ ... ಹಲ್ಲಾದ ಅದಿ ಕರ್ನಾಟಕಪುರ ... ರಹಳ್ಳಿ ಹರಿಜನಕಾಲೋನಿ ಮತ್ತು ... ರಿಯ ಅದಿಕರ್ನಾಟಕ ಪುರಗಳಲ್ಲಿ ... ಚಿತ್ರಗಳನ್ನು ಪ್ರದರ್ಶಿಸುವರು

ಮೋಟಾರು ಭಾಗಗಳ ಪತ್ತೆ

ಮಂಡಿ ಮೊಹಲ್ಲೆಯ ಸಾಬ್‌ಜಾನ್ ... ವನು ಮೋಟಾರ್ ಭಾಗಗಳನ್ನು ... ಮಾರುತ್ತಿದ್ದನೆಂಬ ಅಪಾದನೆ ಮೇಲೆ ... ಪ್ಪರ್ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ... ಅವನನ್ನು ದಸ್ತಗಿರಿಮಾಡಿ ಸುಮಾರು ... ನ್ನೂರು ರೂ ಬೆಲೆ ಬಾಳುವ ಸಾಮಾನು ... ಗಳನ್ನು ವಶಪಡಿಸಿಕೊಂಡು ಮುಂದಿನ ... ಚಿ ಕ್ರಮ ಜರುಗಿಸುತ್ತಿದ್ದಾರೆ.

✢ ಶ್ರೀ ಗಾಯತ್ರೀ ಟಾಕೀಸ್ ✢

1—12—48ರಿಂದ (ಪ್ರತಿ ದಿನ ಮೂರು ಆಟಗಳು) 2 ದಿನಗಳು ಮಾತ್ರ

ವ್ಯಾರ್ಸೌಂಟ್‌ರವರ ಅಡ್ವೆಂಚರ್ ಚಿತ್ರ

ಸೈಗಾನ್

ಪಾತ್ರ:—ಅಲನ್ ಲ್ಯಾಡ್

Next Change:- TARZAN'S SECRET TREASURE

ಸಂಪುಟ ೭] ಬುಧವಾರ ೧-೧೨-೪೮ [ಸಂಚಿಕೆ ೧೪೩

ಚೀಣದಿಂದ ನಾಳೆ — ಅಮೆರಿಕನರ ರವಾನೆ

ಭಾರತ ಮತ್ತು ಹೈದ್ರಾಬಾದಿನ ಹೊಸ ಒಪ್ಪಂದ

ಭಾರತಕ್ಕೂ ಹೈದರಾಬಾದಿಗೂ ಆಗಿದ್ದ ಸ್ಥಾಯೀ ಒಪ್ಪಂದವು ಮೊನ್ನೆ ದಿವಸ ಮುಕ್ತಾಯವಾಯಿತಷ್ಟೆ. ಭಾರತಕ್ಕೂ ಸಂಸ್ಥಾನಕ್ಕೂ ಇರಬೇಕಾದ ಸಂಬಂಧವನ್ನು ಖಾಯಮ್ಮಾಗಿ ರಾಜ್ಯಾಂಗ ಸಭೆಯು ತೀರ್ಮಾನಿಸುವವರೆಗೂ ತಾತ್ಕಾಲಿಕ ಸ್ಥಾಯೀ ಒಪ್ಪಂದವನ್ನು ಕೆಲವು ಬದಲಾವಣೆಗಳೊಡನೆ ಮುಂದುವರಿಸಲಾಗಿದೆ. ಸಿಕಂದರಾಬಾದಿನಲ್ಲಿ ಭಾರತ ಸೈನ್ಯವನ್ನು ಇಡುವುದು, ಹೈದರಾಬಾದಿನಲ್ಲಿ ಭಾರತದ ಏಜೆಂಟ್ ಜನರಲ್ಲರ ಕಛೇರಿಯನ್ನು ರದ್ದು ಮಾಡುವುದು, ಲಂಡನ್ನಿನಲ್ಲಿರುವ ನಿಜಾಮರ ಏಜೆಂಟ್ ಜನರಲ್ಲರ ಕಛೇರಿಯನ್ನು ಭಾರತದ ಹೈಕಮಿಷನರ ಸ್ವಾಧೀನದಲ್ಲಿಡುವುದು ಮತ್ತು, ರಕ್ಷಣೆ, ಸಂಚಾರ ಮತ್ತು ವಿದೇಶಾಂಗ ವಿಭಾಗಗಳು ಭಾರತದ ಹತೋಟಿಯಲ್ಲಿ ಇರುವುದು- ಇವೇ ಮುಂತಾದ ವಿಷಯಗಳನ್ನು ಈ ತಾತ್ಕಾಲಿಕ ಒಪ್ಪಂದದಲ್ಲಿ ಸೇರಿಸಲಾಗಿದೆ

ರೈಲು ಉತ್ತಮ ಪಡಿಸಲು ಸತ್ಯಾಗ್ರಹ

ಬೊಂಬಾಯಿನ ಬಿ.ಬಿ ಸಿ ಐ ರೈಲ್ವೆಯು ಕೋರ ವಲಯದ ರೈಲುಗಳ ಓಡಾಟದ ವ್ಯವಸ್ಥೆಯು ಸಮರ್ಪಕವಾಗಿಲ್ಲವೆಂದು ಬೊಂಬಾಯಿಗೆ ೩೦ ಮೈಲಿ ದೂರವಿರುವ ಬೇಗ ಒಳ ಸ್ಟೇಷನಿನ ಜನರು ರೈಲು ಕಂಬಿಗಳ ಮೇಲೆ ಕುಳಿತು ಮೊನ್ನೆ ದಿನ ಸತ್ಯಾಗ್ರಹ ನಡೆಸಿದರೆಂದು ವರದಿಯಾಗಿದೆ.

ನೂತನ ಎ. ಎಂ. ಸಿ. ಸಿ. ಸದಸ್ಯರ ಸಮ್ಮೇಳನ

ಮೈಸೂರು ಕಾಂಗ್ರೆಸ್ಸಿನ ನೂತನ ಎ. ಐ. ಸಿ. ಸಿ. ಸದಸ್ಯರುಗಳ ಸಮ್ಮೇಳನವನ್ನು ಕಡೂರಿನಲ್ಲಿ ಸಧ್ಯದಲ್ಲೇ ನಡೆಸಲು ಏರ್ಪಾಡು ನಡೆಯುತ್ತಿದೆಯೆಂದು ತಿಳಿದುಬಂದಿದೆ. ಮಂತ್ರಿಮಂಡಲಕ್ಕೂ ಕಾಂಗ್ರೆಸ್ಸಿಗೂ ಇರುವ ಸಂಬಂಧ, ರಾಜ್ಯಾಂಗರಚನೆ, ಆಹಾರದ ಪರಿಸ್ಥಿತಿ, ಸಾಮಾನ್ಯ ಜನರ ಕಷ್ಟಗಳು ಇವೇ ಮುಂತಾದ ವಿಷಯಗಳನ್ನು ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು

ವಿಶ್ವ ವಿದ್ಯಾಲಯದ ಕೌನ್ಸಿಲ್ಲಿಗೆ ನಾಮಕರಣ

ಮೈಸೂರು ವಿಶ್ವ ವಿದ್ಯಾಲಯದ ಕೌನ್ಸಿಲ್ಲಿಗೆ ಶ್ರೀಗಳಾದ ಬಿ. ಎಸ್ ಗುಪ್ತ, ಎಸ್ ಶಿವಪ್ಪ, ಜೆ ಎಂ ಇಮಾಂ ಮತ್ತು ಫಾದರ್ ಬ್ರೋರವರುಗಳನ್ನು ಸರ್ಕಾರದವರು ನಾಮಕರಣ ಮಾಡಿದ್ದಾರೆ

ನೆಹರೂರವರಿಗೆ ವಿದ್ಯಾರ್ಥಿಗಳ ಸ್ವಾಗತ

ರಾಜಧಾನಿಗೆ ಈ ತಿಂಗಳ ಕೊನೆಯ ವಾರದಲ್ಲಿ ಭೇಟಿ ಕೊಡಲಿರುವ ಪ್ರಧಾನಿ ಪಂಡಿತ ನೆಹರೂರವರಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳೆಲ್ಲಾ ಒಟ್ಟಾಗಿ ಸ್ವಾಗತ ನೀಡಬೇಕೆಂದೂ ಮತ್ತು ವಿದ್ಯಾರ್ಥಿ ಕಾಂಗ್ರೆಸ್ಸು ಆ ದಿನದಲ್ಲಿ ಸಮಾರಂಭ ನಡೆಸಬೇಕೆಂದೂ ಕೆಲವು ಭಿನ್ನಾಭಿಪ್ರಾಯಗಳು ಉಂಟಾಗಿವೆ ಗಲಭೆ ವಿದ್ಯಾರ್ಥಿ ಕಾಂಗ್ರೆಸ್ ಚಳುವಳಿಯ ಕಾಲದಲ್ಲಿ ನಿಷೇಧಿಸಲ್ಪಟ್ಟಿರುವುದರಿಂದ ಹಿಂದೆ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಈಗಿನ ವಿದ್ಯಾರ್ಥಿಗಳ ಪ್ರತಿನಿಧಿಗಳಾಗುವುದಿಲ್ಲ ಆದುದರಿಂದ ಶಾಲಾ ಕಾಲೇಜು ಸಂಘಗಳೆಲ್ಲಾ ಒಟ್ಟಾಗಿ ಸಮಾರಂಭವನ್ನು ನಡೆಸಬೇಕೆಂದು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ಕೆ ಎಸ್ ಸುಬ್ಬರಾಯರವರು ಸೂಚನೆ ಇತ್ತಿದ್ದಾರೆ

ರಾಜ್ಯಾಂಗ ಸಭೆಗೆ ದಿವಾನರ ರಾಜೀನಾಮೆ

ಬೆಂಗಳೂರು ೧

ಭಾರತ ರಾಜ್ಯಾಂಗ ರಚನಾ ಸಭೆಗೆ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ರಾಜೀನಾಮೆ ಕೊಟ್ಟಿರುವುದನ್ನು ಅಂಗೀಕರಿಸಿ, ಅವರ ಸ್ಥಾನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರನ್ನು ಶ್ರೀ ಮನ್ಮಹಾರಾಜರವರು ನೇಮಿಸಿದ್ದಾರೆ

ಸ್ಪಿನ್ನಿಂಗ್ ಮತ್ತು ವೀವಿಂಗ್ ಕಾಲೇಜು

ಕೋಲಾರ ಚಿನ್ನದಗಣಿ ಪ್ರದೇಶದಲ್ಲಿ ಸ್ಪಿನ್ನಿಂಗ್ ಮತ್ತು ವೀವಿಂಗ್ ಕಾಲೇಜನ್ನು ಸ್ಥಾಪಿಸಬೇಕೆಂಬ ಶ್ರೀ ಹೆಚ್. ಸಿ ಲಿಂಗಾರೆಡ್ಡಿಯವರ ನಿರ್ಣಯವು, ನಿನ್ನೆ ನಡೆದ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ಅಂಗೀಕೃತವಾಯಿತು.

ಸಮಾಜಸೇವೆ ಮತ್ತು ಗ್ರಾಮಾಭ್ಯುದಯ ಕಾರ್ಯಗಳನ್ನು ಒಂದು ಶಿಕ್ಷಣವಾಗಿ ಪಡೆದಿರುವ ವಿದ್ಯಾರ್ಥಿಗಳಿಗೆ ಮಾತ್ರ ಪದವಿಯನ್ನು ಕೊಡಬೇಕೆಂಬ ನಿರ್ಣಯವೂ ಅಂಗೀಕೃತವಾಯಿತು.

ಕಾಲೇಜುಗಳ ಅಧ್ಯಾಪಕರ ಸಂಬಳವನ್ನೆ ೨೦೦ ರೂ ಗೆ ಹೆಚ್ಚಿಸಬೇಕೆಂಬ ಶ್ರೀ ಎಂ. ಎನ್ ಗೋವಿಂದರೆಡ್ಡಿಯವರ ನಿರ್ಣಯವೂ ಅಂಗೀಕೃತವಾಯಿತು.

ಉದ್ಯೋಗ ದೊರಕಿಸುವ ಸಂಸ್ಥೆಯ ಅವಶ್ಯಕತೆ

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿವೆ. ಕೆಲಸಗಾರರ ಕೊರತೆಯನ್ನು ನಿವಾರಿಸಲು ನಗರದಲ್ಲಿ ಉದ್ಯೋಗ ದೊರಕಿಸುವ ಸಂಸ್ಥೆಯೊಂದು ಇಲ್ಲದಿರುವುದರಿಂದ ಜನ ಕೆಲಸಕ್ಕಾಗಿ ಬೆಂಗಳೂರಿಗೆ ಹೋಗಬೇಕಾಗುವುದು. ಆದುದರಿಂದ ನಗರದಲ್ಲಿ ಈ ತರಹ ಸಂಸ್ಥೆ ಮತ್ತು ಸರ್ಕಾರದವರು ಸ್ಥಾಪಿಸಬೇಕು-ಎಂದು ಕಾರ್ಮಿಕ ಶಿಕ್ಷಣ ನಿಲಯದ ಕಾರ್ಯದರ್ಶಿ ಕಲಕಣಾ ಸಂಘದ ಅಧ್ಯಕ್ಷರಾದ ಶ್ರೀ ಕೆ. ಆರ್. ಕೆ. ಸಾದಾಶಿವ ಪ್ರಾರ್ಥಿಸಿದ್ದಾರೆ

ಆಕಾಶವಾಣಿಯಲ್ಲಿ ಭಾಷಣ

ಮೈಸೂರು ಜಿಲ್ಲಾ ಕ್ಲಬ್ ವ್ಯವಸ್ಥಾಪಕರಾದ ಶ್ರೀ ಜಿ. ತಿಲಕಚಂದರರವರು ನಾಳೆ ರಾತ್ರಿ ೮-೩೦ ಗಂಟೆಗೆ ಆಕಾಶವಾಣಿಯಲ್ಲಿ 'ಶಾಂತಿ ರಹಿತ ಪ್ರಗತಿ' ಎಂಬ ವಿಷಯವಾಗಿ ಭಾಷಣಮಾಡುವರು

ಬಾಬು ರೆಡ್ಡಿಯವರ ಮೇಲೆ ಕಂಟೆಂಪ್ಟ್ ಆಪಾದನೆ

ಬೆಂಗಳೂರು ೧

ಗೋಪಾಲರಾವ್ ರೇವಾದೇವಿ ಕಾಫಿ ಕಮಿಟಿಯ ಸಾರ್ವಜನಿಕಗಳಾದ ಶ್ರೀ ಎಸ್. ವಿ ಬಾಬು ರೆಡ್ಡಿಯವರು ಕಂಟೆಂಪ್ಟ್ ಮೊಕದ್ದಮೆ ಸಂಬಂಧದಲ್ಲಿ ಹೈಕೋರ್ಟಿನವರು ಇತ್ತ ನೋಟೀಸನ್ನು ಅಂಗೀಕರಿಸದೆ ನೋಟೀಸು ಕಳುಹಿಸಿರುವುದು, ಹೈಕೋರ್ಟಿನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಂತಾಗಿದೆಯೆಂದು ಆಕ್ಷೇಪಿಸಿ ಪತ್ರ ಬರೆದು ಹಿಂದಕ್ಕೆ ಕಳುಹಿಸಿದ್ದರಿಂದ ಅವರು ಕೋರ್ಟಿಗೆ ಅವಮಾನ ಮಾಡಿದಂತಾಗಿದೆಯೆಂದೂ, ಆದುದರಿಂದ ಅವರನ್ನು ಕಂಟೆಂಪ್ಟ್ ವಿಚಾರಣೆಗೆ ಗುರಿಪಡಿಸಬೇಕೆಂದೂ ಕೋರಿ ಸುಪ್ರಸಿದ್ಧ ವಕೀಲರಾದ ಶ್ರೀ ಎಲ್. ಎಸ್ ರಾಜುರವರು ಹೈಕೋರ್ಟಿಗೆ ಒಂದು ಅರ್ಜಿಯನ್ನು ಸಲ್ಲಿಸಿದ್ದಾರೆ.

ಬೆಂಗಳೂರಿನ ಆರು ನಗರದ ಬಡವರಿಗಾಗಿ ಸರ್ಕಾರದವರ ಲಕ್ಷ ರೂ.ಗಳ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ೪,೫೦೦ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಆಜ್ಞೆ ಮಾಡಿದ್ದಾರೆ ಮತ್ತು ಅಲ್ಲಿ ನಿರ್ಮಿಸುವ ಮನೆಗಳು ಕಡಿಮೆ ಬಾಡಿಗೆಗೆ ಕೊಡುವ ವ್ಯವಸ್ಥೆ ಮಾಡಿದ್ದಾರೆ

ವಿಶ್ವಸಂಸ್ಥೆಯನ್ನೇ ತ್ಯಜಿಸಲು ಡಾ॥ ಮಲಾನರವರ ಬೆದರಿಕೆ?

ನೈರುತ್ಯ ಆಫ್ರಿಕವನ್ನು ವಿಶ್ವಸಂಸ್ಥೆಯು ಆಡಳಿತಕ್ಕೆ ವಹಿಸಬೇಕೆಂದು ವಿಶ್ವಸಂಸ್ಥೆಯವರು ನಿರ್ಧರಿಸಿರುವುದನ್ನು ಪ್ರತಿಭಟಿಸಿ, ಅದು ದಕ್ಷಿಣ ಆಫ್ರಿಕ ಯೂನಿಯನ್ನಿನ ಭಾಗವಾಗಬೇಕೆಂದೂ, ಅಂತರಾಷ್ಟ್ರೀಯ ಪೋಲೀಸ್ ಸಭೆಗೆ ವಹಿಸಬೇಕೆಂದು ಒತ್ತಾಯಿಸುವುದಾದರೆ ಅಥವಾ ವಿಶ್ವಸಂಸ್ಥೆಯನ್ನೇ ಬಿಡುವುದೆಂದೂ ದಕ್ಷಿಣ ಆಫ್ರಿಕದ ಪ್ರಧಾನಿ ಡಾ॥ ಮಲಾನರವರು ಬೆದರಿಸಿದ್ದಾರೆ

ಮರಣ ದಂಡನೆ ರದ್ದಿಗೆ ರಾಜ್ಯಾಂಗ ಸಭೆಯ ಒಪ್ಪಿಗೆ ಇಲ್ಲ

ಮರಣ ದಂಡನೆಯನ್ನು ರದ್ದು ಮಾಡುವ ವಿಷಯವನ್ನು ಭಾರತದ ಭವಿಷ್ಯ ರಾಜ್ಯಾಂಗದಲ್ಲಿ ಸೇರಿಸಬೇಕೆಂಬ ಶ್ರೀ ಲಹರಿಯವರ ಸೂಚನೆಯು ರಾಜ್ಯಾಂಗ ಸಭೆಯಲ್ಲಿ ಬಿದ್ದು ಹೋಯಿತು

ಉಪಾಧ್ಯಕ್ಷರ ಉಮೇದುವಾರಿ

ಮೈಸೂರು ೧

ರಾಜಧಾನಿಯ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷತೆಗೆ ಕಾಂಗ್ರೆಸ್ ಪಕ್ಷದ ಶ್ರೀ ಹೆಚ್ ಕೆ ವೀರಣ್ಣಗೌಡರವರು ಈ ದಿನ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿದರು

ವಿದ್ಯಾರ್ಥಿಗಳ ಪ್ರತಿಭಟನಾ ಸಭೆ

ಈ ತಿಂಗಳ ಕೊನೆಯ ವಾರದಲ್ಲಿ ಡಿಲ್ಲಿಯಲ್ಲಿ ನಡೆಯಬೇಕಾಗಿದ್ದ ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ನಿನ ೧೧ನೇ ಸಮ್ಮೇಳನಕ್ಕೆ ಪ್ರತಿಬಂಧಕವನ್ನು ಅಧಿಕಾರಿಗಳು ಹಾಕಿರುವುದನ್ನು ಮೈಸೂರು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಆರ್. ಕೆ. ರಾಮಚಂದ್ರರವರು ಖಂಡಿಸಿ, ಅದೇ ಸಮ್ಮೇಳನವನ್ನು ಕಲ್ಕತ್ತಾದಲ್ಲಿ ನಡೆಸಲು ನಿರ್ಧರಿಸಲು ಪ್ರಕಟಿಸುತ್ತಿರುವರೆಂದು ತಿಳಿಸಿದ್ದಾರೆ

ಆದಕಾರಣ ಆ ಪಾರ್ಟಿಯ ಆಜ್ಞೆಗಳನ್ನು ಪ್ರತಿಭಟಿಸಲು ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ಪುರಭವನದ ಬಳಿ ವಿದ್ಯಾರ್ಥಿಗಳ ಸಭೆಯು ನಡೆಯುವುದೆಂದು ತಿಳಿಸಲಾಗಿದೆ

ಡಿಸೆಂಬರ್ ೪ನೇ ತಾರೀಖು ರಜಾ ದಿನ

ಇದೇ ೩೧ ನೇ ತಾ॥ ಶುಕ್ರವಾರ, ಬಕ್ರೀದ್ ಹಬ್ಬ ಬ್ಯಾಂಕುಗಳಿಗೆ ಸಾರ್ವಜನಿಕ ರಜಾ ದಿನವೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ

ನಾಂಕಿಂಗಿನಿಂದ ಅಮೆರಿಕದವರ ರವಾನೆ

ಚೀಣದಲ್ಲಿ ಕಮ್ಯೂನಿಸ್ಟರ ಮುನ್ನಡೆಯು ಹೆಚ್ಚುತ್ತಿರುವುದರಿಂದ ನಾಂಕಿಂಗಿನಲ್ಲಿರುವ ಅಮೆರಿಕದ ರಾಯಭಾರಿ ಕಛೇರಿಯ ಮಹಿಳೆಯರು ಮತ್ತು ಮಕ್ಕಳು ಅಮೆರಿಕನ್ನರೆಲ್ಲಾ ಬೇರೆ ಕಡೆಗೆ ಸಾಗಿಸುವುದಕ್ಕೆ ವಿಮಾನಗಳನ್ನು ಕಳುಹಿಸಲಾಗುವುದೆಂದು ತಿಳಿಸಲಾಗಿದೆ. ಅಲ್ಲಿರುವ ಭಾರತೀಯ ರಾಯಭಾರಿಯು ಮಕ್ಕಳು, ಹೆಂಗಸರು ಮತ್ತು ಇತರರು ನಗರವನ್ನು ಬಿಡಲು ನಿರಾಕರಿಸಿದ್ದಾರೆ. ಅವರು ಸುರಕ್ಷಿತರಾಗಿರುವುದಾಗಿಯೂ ಹೇಳಿದ್ದಾರೆ

ಜೆರೂಸಲೆಮಿನಲ್ಲಿ ಕದನ ನಿಂತಿತು

ಜೆರೂಸಲೆಮ್ಮಿನಲ್ಲಿ ಕದನ ನಿಲ್ಲಿಸಲು ಯಹೂದ್ಯರೂ ಮತ್ತು ಅರಬ್ಬರೂ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ದೇವಸ್ಥಾನದಲ್ಲಿ ಕೋಳಿಯ ಪ್ರದಕ್ಷಿಣೆ

ಮದರಾಸಿನ ಶ್ರೀ ಕಪಾಲೀಶ್ವರ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯದೇವರ ಪೂಜೆಯು ನಡೆಯುವುದಕ್ಕೆ ಪ್ರತಿ ದಿನವೂ, ಒಂದು ಕೋಳಿಯು ಬಂದು, ದೇವಾಲಯದ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿರುವುದು ಪವಾಡವಾಗಿದೆ ಇದನ್ನು ನೋಡಲು ಸಾವಿರಾರು ಜನರು ಬರುತ್ತಿದ್ದಾರೆ

ಟೋಜೋರವರ ಮರಣ ದಂಡನೆ ಮುಂದೆಹೋಯಿತು

ಜನರಲ್ ಟೋಜೋ ಮತ್ತು ಇತರರ ಮರಣ ದಂಡನೆಯನ್ನು ಅಮೆರಿಕದ ಸುಪ್ರೀಂ ಕೋರ್ಟಿನ ತೀರ್ಮಾನವಾಗುವವರೆಗೆ ಜ॥ ಮೆಕಾರ್ಥರವರು ಮುಂದೂಡಿದ್ದಾರೆ. ಟೋಜೋ ಮತ್ತು ಇತರರು ಕೊಟ್ಟಿರುವ ಅರ್ಜಿಯ ಬಗ್ಗೆ ಅಮೆರಿಕದ ಶ್ರೇಷ್ಠ ನ್ಯಾಯಸ್ಥಾನಕ್ಕೆ ಅಪೀಲು ಮಾಡಿದ್ದಾರೆ

ಜುಲ್ಮಾನೆ ಹಾಕ ಕೂಡದು

ರೇಷ್ಮೆ ಕೆಲಸಗಾರರ ಮನವಿ

ಮೈಸೂರು ೧

ಮೈಸೂರು ಸರ್ಕಾರೀ ರೇಷ್ಮೆ ನೂಲುವ ಕಾರ್ಖಾನೆ ಕೆಲಸಗಾರರ ಸಂಘದ ವಾರ್ಷಿಕ ಸಭೆಯು ಕಳೆದ ೨೮ನೇ ತಾ॥ ಶ್ರೀ ಕೆ ಆರ್ ಪ್ರಸಾದರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಂಗಳೂರಿನ ಕಾರ್ಖಾನೆ ಕೆಲಸಗಾರರ ಮುಷ್ಕರದ ಬಗ್ಗೆ ಸಹಾನುಭೂತಿ ತೋರಿಸುವ ಮತ್ತು ಭಾರತ ಪ್ರಧಾನಿ ಪಂಡಿತ ನೆಹರೂರವರಿಗೆ ಕೃತಜ್ಞತೆಯನ್ನು ಸೂಚಿಸುವ ನಿರ್ಣಯಗಳು ಅಂಗೀಕೃತವಾದವು. ಬೆಂಗಳೂರು ನಗರದಲ್ಲಿ ಕಾರ್ಮಿಕರಿಗೆ ಗೃಹ ವಸತಿ ಏರ್ಪಾಡು ಮಾಡಿರುವಂತೆ, ಮೈಸೂರಿನಲ್ಲೂ ಕಲ್ಪಿಸಬೇಕೆಂದೂ, ಕಾರ್ಖಾನೆಯಲ್ಲಿ ಹಾಕುತ್ತಿರುವ ಜುಲ್ಮಾನೆಯನ್ನು ನಿಲ್ಲಿಸಿ, ಇದುವರೆಗೆ ವಸೂಲು ಮಾಡಿರುವ ಜುಲ್ಮಾನೆ ಹಣವನ್ನು ಸಂಘಕ್ಕೆ ಕೊಡಬೇಕೆಂದೂ ಪ್ರಾರ್ಥಿಸುವ ನಿರ್ಣಯವೂ ಅಂಗೀಕೃತವಾಯಿತು. ಶ್ರೀ ಕೆ ಆರ್ ಪ್ರಸಾದರವರನ್ನು ಪುನಃ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ರಾಜಾಜಿಯವರಿಗೆ ವರ್ಧಂತ್ಯುತ್ಸವ ಬೇಕಿಲ್ಲ

ತಮ್ಮ ವರ್ಧಂತ್ಯುತ್ಸವ ಸಮಾರಂಭವನ್ನು ನಿಲ್ಲಿಸಬೇಕೆಂದು ಭಾರತ ಗವರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮದರಾಸಿನ ರಾಜಾಜಿ ವರ್ಧಂತ್ಯುತ್ಸವದ ಸಮಿತಿಯ ಅಧ್ಯಕ್ಷರಾದ ಶ್ರೀ ಕಾಮರಾಜ ನಾದರ್ ರವರಿಗೆ ತಂತಿ ಕಳುಹಿಸಿರುತ್ತಾರೆ.

ಟೋಜೋರವರ ಅಸ್ಥಿ ಶೇಷಕ್ಕಾಗಿ ಪ್ರಾರ್ಥನೆ

ಜಪಾನಿನ ಮಾಜಿ ಪ್ರಧಾನಿ ಟೋಜೋ ಮತ್ತು ಇತರ ಆರು ಜನರ ಅಸ್ಥಿ ಶೇಷಗಳನ್ನು ಅವರ ಸಂಸಾರದವರಿಗೆ ಕೊಡಬೇಕೆಂದು ಟೋಕಿಯೋ ನಗರದ ಸಾವಿರಾರು ಜನರು ಜ॥ ಮೆ॥ ಆರ್ಥರ್‌ರವರಿಗೆ ಮನವಿ ಮಾಡಿರುತ್ತಾರೆ. ಗಲ್ಲಿಗೇರಿಸಿದ ಕೂಡಲೇ ಶಿಕ್ಷೆಯು ಮುಗಿಯುವುದೆಂದೂ ಅಸ್ಥಿಯನ್ನು ಕೊಡದೆ ಅವರ ಸಂಸಾರದವರನ್ನು ಶಿಕ್ಷಿಸುವುದು ಸರಿಯಲ್ಲವೆಂದೂ ಮನವಿಯಲ್ಲಿ ಜನರು ತಿಳಿಸಿದ್ದಾರೆ. ಟೋಜೋರವರ ಪತ್ನಿಯೂ ತನ್ನ ಪತಿಯ ಅಸ್ಥಿಯನ್ನು ಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ.

ಗಾಂಧಿ ನಿಧಿಯ ಪುಸ್ತಕ ಮತ್ತು ಕೂಪನ್ನುಗಳು

ಮೈಸೂರು ನಗರದಲ್ಲಿ ಮಹಾತ್ಮ ಸ್ಮಾರಕ ನಿಧಿ ಶೇಖರಿಸುವವರು ಅದರ ರಶೀತಿ ಪುಸ್ತಕಗಳು ಮತ್ತು ಕೂಪನ್ನುಗಳನ್ನು ಸಯ್ಯಾಜಿರಾವ್ ರಸ್ತೆಯಲ್ಲಿರುವ ಗಾಂಧಿ ಸ್ಮಾರಕ ನಿಧಿಯ ಖಜಾಂಚಿಯವರಾದ ಶ್ರೀ ಬಿ ಗೋಪಾಲಕೃಷ್ಣಶೆಟ್ಟಿಯವರ ಆಫೀಸಿನಲ್ಲಿ ಪಡೆಯಬಹುದೆಂದು ತಿಳಿಸಲಾಗಿದೆ.

ಬೆಂಗಾಲ್ ಸಿಲ್ಕ್ ಸೀರೆಗಳಿಗೆ
ಪ್ರಮುಖವಾದ ಅಂಗಡಿ
ಬಾಹುಸಾರ್ ಕಂಪೆನಿ
ಮೈಸೂರು

ಘನವಾದ ಹರಿಕಥಾ ವಿದ್ವಾಂಸರು

ಪಾಲಘಾಟಿನ ಪ್ರಸಿದ್ಧ ಶ್ರೀ ಕೆ ಎಸ್ ಗಣಪತಿ ಭಾಗವತರು ರಾಜಧಾನಿಯಲ್ಲಿ ಕೆಲವು ದಿನಗಳಿಂದಲೂ ಶ್ರೀಮದ್ರಾಮಾಯಣ ಕಥಾ ಕಾಲಕ್ಷೇಪವನ್ನು ತಮಿಳು ಭಾಷೆಯಲ್ಲಿ ನಡೆಸುತ್ತಿದ್ದಾರೆ. ಅವರು ತಮ್ಮ ಹೃದಯಂಗಮವಾದ ಸಂಗೀತ ಜ್ಞಾನದಿಂದಲೂ ಸಾಹಿತ್ಯ ಕೌಶಲ್ಯದಿಂದಲೂ ಹರಿಕಥೆಯನ್ನು ನಡೆಸಿ ಪ್ರಶಂಸೆ ಪಡೆದಿದ್ದಾರೆ. ಕೀರ್ತನವನ್ನು ಕೇಳುತ್ತಿರುವ ಅಬಾಲವೃದ್ಧರು, ಸ್ತ್ರೀಪುರುಷರು ಮತ್ತು ಪಂಡಿತ ಪಾಮರರ ಮುಖಗಳು ಆನಂದದಿಂದಲೂ, ಧರ್ಮ ವಿಶ್ವಾಸದಿಂದಲೂ ಶೋಭಿಸುತ್ತಿರುವುದು ಗಮನಾರ್ಹವಾಗಿದೆ. ಅವರ ಅಮೋಘವಾದ ಪಾಂಡಿತ್ಯವನ್ನು ಮೆಚ್ಚಿ ಈಗಾಗಲೇ ಪುರವಾಸಿಗಳು ಅವರಿಗೆ ಸೂಕ್ತ ಮನ್ನಣೆಯನ್ನು ಮಾಡಿರುತ್ತಾರೆ. ಅವರು ಇನ್ನೂ ಹೆಚ್ಚಿನ ಪುರಸ್ಕಾರವನ್ನು ಪಡೆದು ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಲೆಂದು ಹಾರೈಸುತ್ತೇವೆ.

Edited printed and published by A R. Nagarajan at the Sadhvi Press D Subbaiah Road Mysore

ಬ್ರಿಟನ್ನಿನಲ್ಲಿ ಕೋಳಿಗಳ್ಳರು ಹೆಚ್ಚುತ್ತಿದ್ದಾರೆ

ಬ್ರಿಟನ್ನಿನಲ್ಲಿ ವಿಶೇಷ [illegible] ರಾತ್ರಿಯಿಂದ ಕಳ್ಳರು ಕತ್ತಲೆಯಲ್ಲಿ ಕೋಳಿ ಮುಂತಾದ ಪ್ರಾಣಿಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಿದ್ದಾರೆಂದು ವರದಿಯಾಗಿದೆ. ಕೋಳಿ ಮತ್ತು ಇತರ ಪ್ರಾಣಿಗಳ ರಕ್ಷಣೆ ವಿಶೇಷವಾಗಿರುವುದೇ [illegible] ತೋರುವ ದು [illegible]ಲಾಗಿದೆ

ಕುಬೆಂಗ್ ನಗರ ಕಮ್ಯೂನಿಸ್ಟರ ವಶ

ಚೀನಾದ ರಾಜಧಾನಿಯಾದ ನಾನ್‌ಕಿಂಗಿಗೆ ೧೮೦ ಮೈಲಿ ಉತ್ತರದಲ್ಲಿರುವ ಕುಬೆಂಗ್ ನಗರವನ್ನು ಕಮ್ಯೂನಿಸ್ಟರು ಸ್ವಾಧೀನ ಹಿಡಿದಿದ್ದಾರೆ. ಟಿಂಗ್ಪುವಿಗೆ ಉತ್ತರದಲ್ಲಿ ಸಂಬಿಯಾದಲ್ಲಿ ಭೀಕರ ಕದನ ನಡೆಯುತ್ತಿದೆ.

ದಾವಣಗೆರೆ ಕಂಬಳಿಗಳು
ಫ್ಯಾಕ್ಟರಿ ಡ್ಯಾಮೇಜ್
ಬನಿಯನ್ನುಗಳು
ಉತ್ತರಕರ್, ರಾಮಲಕ್ಷ್ಮೀ ಹಾಲ್, ಇರ್ವಿನ್ ರೋಡ್, ಮೈಸೂರು

ಶ್ರೀ ಗಾಯತ್ರೀ ಟಾಕೀಸ್
1—12—48ರಿಂದ (ಪ್ರತಿ ದಿನ ಮೂರು ಆಟಗಳು) 2 ದಿನಗಳು ಮಾತ್ರ
ಪ್ಯಾರಮೌಂಟ್‌ರವರ ಅಡ್ವೆಂಚರ್ ಚಿತ್ರ
ಸೈಗಾನ್
ಪಾತ್ರ:—ಅಲನ್ ಲ್ಯಾಡ್
Next Change - TARZAN'S SECRET TREASURE

ಪ್ರಭುದೇವ ಟಾಕೀಸ್
3-12-48ನೇ ಶುಕ್ರವಾರದ ಲಾಗಾಯ್ತು ಪ್ರತಿ ದಿನ 3 ಆಟಗಳು
ಜೆಮಿನಿಯವರ
ಚಕ್ರಧಾರಿ
(ತಮಿಳು) ಅಥವ ಭಕ್ತ ಗೋರ ಕುಂಬಾರ
ಪಾತ್ರ:- ವಿ. ನಾಗಯ್ಯ, ಪುಷ್ಪವಲ್ಲಿ, ನಾರಾಯಣ ರಾವ್, ಮಹಾದೇವನ್ ಮುಂತಾದವರು

ಪುಟ ೧೮೫ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಗುರುವಾರ ೨-೧೨-೪೮ [ಸಂಚಿಕೆ ೧೬೩

ನಾರ್ಕಿಂಗ್ ಆಕ್ರಮಣಕ್ಕೆ -ಕಮ್ಯೂನಿಸ್ಟರ ಸಿದ್ಧತೆ-

ನೈಜಾಂ ವೇತನದವರ ಉಪವಾಸ

ಹೈದರಾಬಾದ್ ಸೈನ್ಯದವರ ವಂಶಕ್ಕೆ ಸೇರಿದ ೫೦ ವರ್ಷದ ಸಾಹೇಬ ಜಾದಿ ಫ್ರೂ ಉನ್ನಿಸಾ ಬೇಗಂರವರು ತಮ್ಮ ವೇತನವನ್ನು ಕೊಡಿಸಬೇಕೆಂದು ಕೋಲ್ಕತ್ತಿನ ಪ್ರವಾಸಿ ಮುಖ್ಯಕಛೇರಿಯನ್ನು ಪ್ರಾರಂಭಿಸಿದ್ದಾರೆ. ತಾವು ಜೀವಿಸಲು ಹಣವಿಲ್ಲದೆ ಇದ್ದುದರಿಂದ, ತಮ್ಮ ಕಷ್ಟವನ್ನು ನಿವಾರಿಸುವರೆಗೂ ಆಹಾರ ತೆಗೆದುಕೊಳ್ಳುವುದಿಲ್ಲವೆಂದು ಅವರು ಪಿ ಲಟೀಂ ಗೌರ್ನರಿಗೆ ಪತ್ರ ಬರೆದಿದ್ದಾರೆ.

ನೈಜಾಮರ ಸೈನ್ಯದಲ್ಲಿದ್ದ ಇತರ ಜನರೂ ತಮ್ಮ ಸಂಬಳವನ್ನು ಯಾವ ಕಾರಣವೂ ಇಲ್ಲದೆ ನಿಲ್ಲಿಸಲಾಗಿದೆಯೆಂದೂ, ತಮಗೆ ೧೨ ತಿಂಗಳಿನ ಸಂಬಳ ಬರಬೇಕೆಂದೂ ಉಪವಾಸ ಹೂಡಿದ್ದಾರೆ.

ಚಂದ್ರಮಂಡಲಕ್ಕೆ ಪ್ರಯಾಣದ ಪ್ರಯತ್ನ

ಬ್ರಿಟನ್ನಿನ ೧೦೦ ಇಂಜನಿಯರುಗಳು ವಿದ್ಯಾರ್ಥಿಗಳು ಮತ್ತು ಇತರರು ಯುವಕರು ಚಂದ್ರ ಮಂಡಲಕ್ಕೆ ಹೋಗಲು ಪ್ರವಾಸ ಸಿದ್ಧತೆ ನಡೆಸುತ್ತಿದ್ದಾರೆ. ಇದಕ್ಕಾಗಿ ರೇಡಿಯೋ ಇಂಜನಿಯರಾದ ಮಿ॥ [illegible] ರವರು ಒಂದು ವಿಶೇಷ ತರವಾದ ವಿಮಾನವನ್ನು ಭೂಮಿಗೆ ೨೨ ಸಾವಿರ ಮೈಲಿ ಎತ್ತರದಲ್ಲಿ ತಯಾರಿಸಲಿದ್ದಾರೆ. [illegible] ಮೂಲಕ ಇತರರು ವಿಮಾನದ ಉಪಕರಣಗಳನ್ನು ತೆಗೆದುಕೊಂಡು ಹೋಗುವರು.

ನಾರ್ಕಿಂಗಿಗೆ ಗಂಡಾಂತರ

ಚೀಣಾದ ರಾಜಧಾನಿಯಾದ ನಾರ್ಕಿಂಗಿ ಮೇಲೆ ಕಮ್ಯೂನಿಸ್ಟರು ಅನೇಕ ಕಡೆಗಳಿಂದ ಧಾಳಿ ಪ್ರಾರಂಭಿಸಿದ್ದಾರೆ. ಹೀಗೆ ನಡೆಯುವ ವೆಂಗ್ಪು ನಗರದ ಹತ್ತಿರ ಭೀಕರ ಕದನ ನಡೆಯುತ್ತಿದೆ. ನಾರ್ಕಿಂಗಿಗೆ ೧೦೦ ಮೈಲಿ ದಕ್ಷಿಣದಲ್ಲಿರುವ ಕ್ಯಾಂಟನ್ನಿಗೆ ಸರ್ಕಾರವನ್ನು ವರ್ಗಾಯಿಸಬೇಕೆಂದೂ ಇರಲು ನಿರ್ಧರಿಸಿದ್ದನ್ನು ಈಗ ರದ್ದು ಮಾಡಲಾಗಿದೆ. ಸರ್ಕಾರ [illegible] ಅಲ್ಲಿಂದ ದೇಶಿಕನಿಗೆ ಸಾಗಿಸಲಾಗುವುದೆಂದು ತಿಳಿಸಲಾಗಿದೆ. ಷಾಂಗೈ ನಗರ ಸಹಜ ಸ್ಥಿತಿಯಲ್ಲಿ ಇರುವುದಾಗಿದೆ. ಶತ್ರುಗಳ ನಗರವನ್ನು ಸರ್ಕಾರ ಕೃಷ್ಯವ ಪಡಿಸಿದೆ.

ಕಟಾವಿಗೆ ಕೂಲಿ ಆಳುಗಳ ಅಭಾವ

ಭತ್ತದ ಕಟಾವಿನ ಸಮಯದಲ್ಲಿ ಹೊರ ಜಿಲ್ಲೆಯಿಂದ ವಿಶೇಷವಾಗಿ ಕೂಲಿ ಆಳುಗಳು ಇಲ್ಲಿಗೆ ಬರುತ್ತಿದ್ದರು. ಈ ವರ್ಷ ಕೂಲಿ ಭತ್ಯವನ್ನು ತಮ್ಮ ಹಕ್ಕೆಂದು ತೆಗೆದುಕೊಂಡು ಹೋಗಲು ರಹದಾರಿ ಸಿಕ್ಕದಿರುವ ಕಾರಣ ಕೂಲಿಯವರು ಬಾರದೆ ಇರುವುದರಿಂದ ಹೈನುಗಾರಿಕೆ, ವ್ಯವಸಾಯ ನಡೆಯದೆ ರೈತರಿಗೂ ನಷ್ಟವಾಗುತ್ತಿದೆ. ಇದುದರಿಂದ ಅಧಿಕಾರಿಗಳು ಪಟೇಲರು ಮತ್ತು ಶಾನುಭೋಗರು ಕೂಲಿ ಆಳುಗಳಿಗೆ ರಹದಾರಿ ಕೊಡಲು ಅಧಿಕಾರ ಕೊಡಲೇ ಬೇಕು. ಮಾಡಬೇಕೆಂದು ಕೋರಿ ಜಿಲ್ಲಾ ರೈತರ ಸಂಘದ ಅಧ್ಯಕ್ಷರಾದ ಶ್ರೀ ಕೊಣಗಹಳ್ಳಿ ರಾಮಸ್ವಾಮಿಯವರ ಪ್ರಾರ್ಥಿಸಿರುತ್ತಾರೆ.

ಕೆ. ಸಿ. ರೆಡ್ಡಿಯವರು ದೆಹಲಿಗೆ

ಸ್ವಂ.ವ ವರದಿ] ಬೆಂಗಳೂರು ೨

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ವಾರ್ಷಿಕೋತ್ಸವವು ನಿನ್ನೆ ದಿನ ವಿಜೃಂಭಣೆಯಿಂದ ಜರುಗಿತು ಇದಕ್ಕಾಗಿ ಅನೇಕ ಬಸ್ಸುಗಳ ಮಾಲೀಕರು ಕೆಲಸಗಾರರಿಗೆ ರಜಾ ಕೊಟ್ಟಿದ್ದರು. ಆದ್ದರಿಂದ ನಿನ್ನೆ ದಿನ ಬಸ್ಸುಗಳ ಸಂಚಾರವು ಇರಲಿಲ್ಲ.

ಸಿಟಿ ಕೋ ಆಪರೇಟಿವ್ ಸೊಸೈಟಿ ಆವರಣದಲ್ಲಿ ಸಮಾರಂಭವು ಜರುಗಿತು. ಪ್ರಾರ್ಥನೆಯ ನಂತರ ಕಾರ್ಯದರ್ಶಿ ಶ್ರೀ ಟಿ.ಎಸ್. ಸುಬ್ಬಣ್ಣನವರು ವರದಿಯನ್ನೂ ಲೆಖ್ಖ ಪತ್ರಗಳನ್ನೂ ಒಪ್ಪಿಸಿದರು. ಇವು ಅಂಗೀಕೃತವಾದುವು.

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ಆರಂಭೋತ್ಸವವನ್ನು ಜರುಗಿಸಿ ಕೆಲಸಗಾರರಿಗೆ ಹಿತವಚನಗಳನ್ನು ನುಡಿದರು. ಪ್ರಜಾ ಸರ್ಕಾರವು ಬಂದ ಮೇಲೆ ಕಾರ್ಮಿಕರಿಗಾಗಿ ಮಾಡಿರುವ ಅನುಕೂಲಗಳನ್ನು ವಿವರಿಸಿ ಮುಂದೆ ನಿರುದ್ಯೋಗ ವಿಮೆ ಮುಂತಾದ ಸೌಕರ್ಯಗಳನ್ನು ಮಾಡಬೇಕೆಂದಿರುವುದಾಗಿ ತಿಳಿಸಿದರು. ಕೆಲಸಗಾರರು ಎಂದಿಗೂ ಕೋಮುವಾರು ಭಿನ್ನಭಾವಕ್ಕೆ ಎಡೆ ಕೊಡಬಾರದು. ರಾಜಕೀಯ ಪಂಗಡಗಳ ಪ್ರಾಬಲ್ಯಕ್ಕೆ ಒಳಗಾಬಾರದು ಎಂದು ಹೇಳಿದರು. ತಮ್ಮ ಉದ್ಯೋಗದಲ್ಲಿ ತಾವೂ ಸಹ ಪಾಲುಗಾರರೆಂಬುದನ್ನು ಅರಿತು ಬಂಡವಾಳಗಾರರ ಹಿತವನ್ನು ನಿರ್ಲಕ್ಷಿಸದೆ ತಮ್ಮ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಎಸ್. ಕುಮಾರ್ರವರು ಮಾತನಾಡಿ ಪ್ರಜೆಗಳಿಗೆ ಸ್ವಾತಂತ್ರ್ಯವು ಬಂದಿರುವ ಈ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಾರ್ಥ ಸಾಧನೆಗೇ ಮುಖ್ಯ ಗಮನಕೊಡದೆ ಇಡೀ ದೇಶದ ಅಭ್ಯುದಯದ ಮೇಲೆ ದೃಷ್ಟಿ ಇಡಬೇಕೆಂದೂ ತನ್ಮೂಲಕ ತಮ್ಮ ಯೋಗಕ್ಷೇಮವನ್ನು ಸಾಧಿಸಬೇಕೆಂದೂ ಹೇಳಿದರು.

ತರುವಾಯ ಈ ಕೆಳಗ ಕಂಡ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ನಮ್ಮ ಸಂಘದ ಸದಸ್ಯರುಗಳಾದ ಶ್ರೀವರ್ ಶ್ರೀ|| ಭಗವಾನ್ ಮತ್ತು ದಾಸಪ್ಪರವರು ಅಕಾಲ ಮರಣಕ್ಕೆ ತುತ್ತಾದ್ದಕ್ಕೆ ಈ ಸಭೆಯು ತನ್ನ ವ್ಯಸನವನ್ನು ಸೂಚಿಸುತ್ತದೆ. ಮತ್ತು ಅವರ ಆತ್ಮಕ್ಕೆ ಶಾಂತಿಯನ್ನೂ ಬಂಧುಗಳಿಗೆ ದುಃಖವನ್ನೂ ಸಹಿಸುವ ಶಕ್ತಿಯನ್ನೂ ಭಗವಂತನು ಕೊಡಲಿ ಎಂದು ಪ್ರಾರ್ಥಿಸುತ್ತದೆ.

ಸ್ಟ್ಯಾಂಡಿಂಗ್ ಆರ್ಡರನ್ನು ಜಾರಿಗೆ ತರಬೇಕೆಂದು ಈ ಸಭೆಯು ಮಾಡಿದ ಅನೇಕ ನಿರ್ಣಯಗಳಿಗೆ ಮೋಟಾರು ಮಾಲೀಕರುಗಳು ಇದುವರೆಗೂ ತನ್ನ ಗಮನಕ್ಕೆ ಕೊಡದೆ ಇರುವುದಕ್ಕಾಗಿ ಈ ಸಭೆಯು ತನ್ನ ವಿಷಾದವನ್ನು ವ್ಯಕ್ತಪಡಿಸುತ್ತಾ ಕೂಡಲೇ ಜಾರಿಗೆ ತರಬೇಕೆಂದು ವ್ಯಕ್ತಪಡಿಸುತ್ತದೆ. ಒಂದು ವೇಳೆ ಅವರೇನಾದರೂ ತರದೇ ಹೋದರೆ ಸರ್ಕಾರದವರೇ ಸ್ಟ್ಯಾಂಡಿಂಗ್ ಆರ್ಡರನ್ನು ಜಾರಿಗೆ ತರಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

೧೯೪೮ ನೇ ಸಾಲಿನಲ್ಲಿ ಮೋಟಾರು ಮಾಲೀಕರೆಲ್ಲರಿಗೂ ಹೆಚ್ಚಿನ ಲಾಭ ಬಂದಿರುವುದರಿಂದ ಹಾಗೆ ಲಾಭ ಬರಲು ಕೆಲಸಗಾರರು ಕಷ್ಟಪಟ್ಟು ದುಡಿದಿರುವುದರಿಂದ ಕೆಲಸಗಾರರೆಲ್ಲರಿಗೂ ನಾಲ್ಕು ತಿಂಗಳ ಬೋನಸ್ಸು ಕೊಡಬೇಕೆಂದು ಮೋಟಾರು ಮಾಲೀಕರನ್ನು ಈ ಸಭೆಯು ಪ್ರಾರ್ಥಿಸುತ್ತದೆ

ಮೈಸೂರು ನಗರದಲ್ಲಿ ಮನೆಗಳಿಗೆ ತುಂಬಾ ಅಭಾವವಾಗಿರುವುದರಿಂದ ಕೆಲಸಗಾರರಿಗೂ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಈ ಸಭೆಯು ಮಾಲೀಕರಿಗೆ ಒತ್ತಾಯಪಡಿಸುತ್ತದೆ

ಮಾಲೀಕರು ಕೆಲಸಗಾರರಿಗೆ ತುಟ್ಟಿ ಭತ್ಯವನ್ನು ಕೊಡಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

ಸಂಘಕ್ಕೆ ತನ್ನದೇ ಆದ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಈ ಸಭೆಯು ತೀರ್ಮಾನಿಸಿ, ಅದಕ್ಕಾಗಿ ಒಂದು ಸೈಟನ್ನು ಕೊಡುವಂತೆ ನಗರಾಭಿವೃದ್ಧಿ ಸಮಿತಿಯನ್ನು ಕೇಳಿಕೊಳ್ಳಬೇಕೆಂದು ಈ ಸಭೆಯು ತೀರ್ಮಾನಿಸುತ್ತದೆ.

ಬೆಳಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಂಪನಿಯ ಕೆಲಸಗಾರರು ನಡೆಸುತ್ತಿರುವ ಮುಷ್ಕರದಲ್ಲಿ ಈ ಸಭೆಯು ಸಂಪೂರ್ಣ ಸಹಾನುಭೂತಿಯನ್ನು ಸೂಚಿಸುತ್ತದೆ

ಧನ್ಯವಾದಗಳೊಂದನೆ-ಕ- ಸ - ದ ಮಾತರಂ ಗೀತೆಯೊಡನೆ ಸಭೆ ಮುಕ್ತಾಯವಾಯಿತು

ಇಂಡೋನೇಷ್ಯದ ಮೇಲೆ ಡಚ್ಚರ ಕದನ

ಡಚ್ ಸೈನಿಕರು ಒಪ್ಪಂದಕ್ಕೆ ವಿರುದ್ಧವಾಗಿ ನಿನ್ನೆ ಇಂಡೋನೇಷಿಯದ ಮೇಲೆ ಕದನವನ್ನು ಪ್ರಾರಂಭಿಸಿ, ಅದರ ರಾಜಧಾನಿಯಾದ ಜೋಗ್ಜಕರ್ತಾವನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ. ಇಂಡೋನೇಷಿಯಾ ಸರ್ಕಾರವನ್ನು ಬೇರೊಂದು ಕಡೆಗೆ ವರ್ಗಾಯಿಸಲಾಗಿದೆಯೆಂದೂ, ಡಾ|| ಸೋಕರ್ನೋ ಮತ್ತು ಅವರ ಆರು ಮಂತ್ರಿಗಳು ವಿಮಾನದಲ್ಲಿ ನಗರವನ್ನು ಬಿಟ್ಟು ಹೋದರೆಂದೂ ಹೇಳಲಾಗಿದೆ. ಜೋಗ್ಜಕರ್ತ ವಿಮಾನ ನಿಲ್ದಾಣವನ್ನೂ ಡಚ್ಚರು ಆಕ್ರಮಿಸಿದ್ದಾರೆ. ಸೂರಬಾಯ ಮತ್ತು ಸಮರಾಂಗ್‌ನಲ್ಲಿ ನೌಕಾ ಪಡೆ ಬಂದಿಳಿದಿದೆ. ಡಾ|| ಸೋಕರ್ನೋರವರು ಇಂದು ಅಥವಾ ನಾಳೆ ಭಾರತಕ್ಕೆ ಬರುವರೆಂದು ತಿಳಿದು ಬಂದಿದೆ

ಪರೀಕ್ಷಾ ಫಲಿತಾಂಶಗಳ ಪ್ರಕಟಣೆ

ಮೈಸೂರು ೨೦

ಕಳೆದ ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿನಡೆದ ವಿಶ್ವ ವಿದ್ಯಾಲಯದ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳ ಫಲಿತಾಂಶಗಳು ನಾಳೆ ಬೆಳಗ್ಗೆ ೯ ಗಂಟೆಗೆ ಪ್ರಕಟಿಸಲ್ಪಡುವುವು.

ಪ್ರವಾಹದಿಂದ ಎರಡು ಊರುಗಳು ನಾಶ

ಬ್ರೆಜಿಲ್ಲಿನಲ್ಲಿ ಅತ್ಯಂತವುಳೆಯಾದುದರಿಂದ ಅಲ್ಲಿನ ನದಿಗಳ ಪ್ರವಾಹವುಹೆಚ್ಚಿ ರಿಯೋಪಾಲ್ಟಿನಾ ಮತ್ತು ಪೆರಾಪಟಿಂಗಾ ಎಂಬ ಎರಡು ಊರುಗಳು ಸಂಪೂರ್ಣವಾಗಿ ನೀರಿನಲ್ಲಿ ಕೊಚ್ಚಿಹೋಯಿತೆಂದು ಹೇಳಲಾಗಿದೆ. ೭೦೦ ಕ್ಕಿಂತಲೂ ಹೆಚ್ಚುಮಂದಿ ಸತ್ತಿರುವರೆಂದೂ ಮತ್ತು ಸಹಸ್ರಾರು ಜನರು ಪತ್ತೆಯಿಲ್ಲವೆಂದೂ ತಿಳಿದುಬಂದಿದೆ

ಆಮರಣಾಂತ ಉಪವಾಸ

ಮೈಸೂರು ೨೦

ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಅನೀತಿ ಮತ್ತು ಘೋರಣೆಯನ್ನು ತೊಡೆದುಹಾಕಲು ರಾಜಧಾನಿಯ ಕಾಂಗ್ರೆಸ್ ಕರ್ತರಾದ ಶ್ರೀ ಟಿ. ಎಸ್. ರಾಜರವರು ಈ ದಿನದಿಂದ ಟೌನ್ ಹಾಲ್ ಮೈದಾನದಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆಂದು ತಿಳಿದುಬಂದಿದೆ.

ಸಂಸ್ಥಾನದ ಮೋಟಾರು ಕೆಲಸಗಾರರ ಸಭೆ

ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಶ್ರೀ|| ಸಿ. ಜೆ. ದೇವನಾಥರವರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಸಮ್ಮೇಳನದಲ್ಲಿ ಕೆಳಗಕಂಡ ನಿರ್ಣಯಗಳು ಅಂಗೀಕೃತವಾದುವು. ಕಳೆದ ನವೆಂಬರ್ ೩೦ ನೇ ತಾ|| ಬೆಂಗಳೂರಿನಲ್ಲಿ ನಡೆದ ಮೇಲ್ಕಂಡ ಸಂಘದ ಕೆಲಸಗಾರರು ಮತ್ತು ಪ್ರತಿನಿಧಿಗಳು ಅಂಗೀಕರಿಸಿದ ನಿರ್ಣಯಗಳನ್ನು ಒಪ್ಪುವುದು. ಸಂಸ್ಥಾನದ ಟ್ರಾಫಿಕ್ ಬೋರ್ಡಿನಲ್ಲಿ ಈ ಸಂಘದ ಸದಸ್ಯರಿಗೆ ಎರಡು ಸ್ಥಾನಗಳನ್ನಾದರೂ ಕೊಡಬೇಕು. ಈ ಸಂಘಕ್ಕೆ ಸರ್ಕಾರಿ ಮೋಟಾರು ಸರ್ವಿಸ್ ಕೆಲಸಗಾರರೂ ಸದಸ್ಯರಾಗಲು ಅವಕಾಶವಿರಬೇಕು ಮತ್ತು ಮೋಟಾರು ಲೈಸೆನ್ಸುಗಳನ್ನು ಸರ್ಕಾರದವರು ವಹಿಸಿ... ...ಾಗ ಮೊದಲು ಆ ಖಾ ಲೈಸೆನ್ಸುಗ... ...ನ ಮಾಡುತ್ತಿರುವ ... ... ಕೊಡಬೇಕ

ಹೋರಾಟದ ಕಾಲ ಮುಗಿಯಿತು; ರಾಷ್ಟ್ರದ ಪುನರ್ರಚನೆಯಾಗಬೇಕು

[illegible] ಅಧ್ಯಕ್ಷರ ಭಾಷಣ

ಜಯಪುರದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದ ಡಾ|| ಪಟ್ಟಾಭಿಸೀತಾರಾಮಯ್ಯನವರು ಮೊನ್ನೆ ದಿನ ಅಧಿವೇಶನದ ಆರಂಭದಲ್ಲಿ ಹೃದಯಂಗಮವಾದ ಭಾಷಣ ಮಾಡಿದರು. ಪರಕೀಯರ ಆಕ್ರಮಣವನ್ನು ಎದುರಿಸಲು ಹೋರಾಡುವುದೇ ಇದುವರೆಗೆ ಕಾಂಗ್ರೆಸ್ ಮಹಾಸಭೆಯ ಗುರಿಯಾಗಿತ್ತೆಂದೂ, ಈಗ ಸ್ವಾತಂತ್ರ್ಯವು ಲಭಿಸಿರುವುದರಿಂದ ರಾಷ್ಟ್ರದ ಪುನರ್ರಚನೆಗೆ ಗಮನ ಕೊಡಬೇಕೆಂದೂ ಅವರು ಸೂಚಿಸಿದರು. ಸತ್ಯ ಮತ್ತು ಅಹಿಂಸಾ ಮಾರ್ಗದಿಂದಲೇ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ರಾಷ್ಟ್ರಪಿತ ಗಾಂಧೀಜಿಯವರಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿ ಇನ್ನು ಮುಂದೆ [illegible] ಅವರ ಹಾದಿಯಲ್ಲಿಯೇ ದೇಶವು ಮುನ್ನಡೆಯಬೇಕೆಂದು ತಿಳಿಸಿದರು.

[illegible] ನೂತನ ಭಾರತದ ಸಂಬಂಧದ ವಿಚಾರದಲ್ಲಿ ನಮ್ಮ ದೇಶವು ತನ್ನ ಸಂಪೂರ್ಣವಾದ ಸ್ವಾತಂತ್ರ್ಯದ ಸ್ಥಾನವನ್ನು ಉಳಿಸಿಕೊಂಡು ಇತರ ಎಲ್ಲಾ ರಾಷ್ಟ್ರಗಳೊಡನೆ [illegible] ಸೌಹಾರ್ದದ ಸಂಬಂಧವನ್ನು ಇಟ್ಟುಕೊಂಡಿರುವುದೆಂದು ತಿಳಿಸಿದರು. ನಮ್ಮ ದೇಶದ ಮುಂದಿನ ರಾಜ್ಯಾಂಗವು ಸಹಕಾರ ಪದ್ಧತಿಯ ಪ್ರಜಾಪ್ರಭುತ್ವ ರಾಜ್ಯವಾಗಬೇಕು. ಎಲ್ಲಾ ಪ್ರಜೆಗಳಿಗೂ ಸಮಾನವಾದ ಸ್ವಾತಂತ್ರ್ಯ. ಭಾರತವು ವಿಶ್ವಶಾಂತಿಗೂ ಮಾನವ ಸೋದರತೆಗೂ ಶ್ರಮಿಸಬೇಕು- ಎಂಬುದಾಗಿ ಅವರು ಸೂಚಿಸಿದರು.

ಆಡಳಿತ ಸೌಕರ್ಯ ಮತ್ತು ಜನ ಸಂಸ್ಕೃತಿಯ ಅಭಿವೃದ್ಧಿಗಾಗಿ ಭಾಷಾವಾರು ಪ್ರಾಂತ್ಯಗಳ ರಚನೆಯು ಅತ್ಯಗತ್ಯವೆಂದು ತಿಳಿಸಿದರು. ಭರತಖಂಡದ ಬಹು ಜನಾಂಗಗಳು ಸ್ವಾಭಾವಿಕವಾದ ಕ್ರಮದಲ್ಲಿ ರೂಪುಗೊಂಡು ನೂತನ ಭಾರತ ಜನಾಂಗದ ಸ್ಥಾಪನೆಗೆ ಶಕ್ತಿಯನ್ನು ಕೊಡಬೇಕು. ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಸಾಧಿಸುವುದೇ ಭಾರತದ ಹಿರಿಮೆ—ಎಂದು ಹೇಳಿದರು.

ಗ್ರಾಮಗಳ ಪುನರುಜ್ಜೀವನಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕೆಂದು ಕೋರಿದರು. ಬಂಜರು ಬಿದ್ದಿರುವ ಭೂಮಿಯನ್ನು ಆಬಾದಿಗೆ ತಂದು ಹೆಚ್ಚು ಆಹಾರವನ್ನು ಬೆಳೆಯಬೇಕೆಂದು ಸೂಚಿಸಿದರು.

ಸರ್ಕಾರವು ಸರಿಯಾದ ರೀತಿಯಲ್ಲಿ ನಡೆಯುವಂತೆ ಕಾಂಗ್ರೆಸು ನೋಡಿಕೊಳ್ಳಬೇಕು. ದೇಶದ ಐಕಮತ್ಯ ಮತ್ತು ಉನ್ನತಿಗಾಗಿ [illegible] ಸಂಘಟನೆಗಳಿಂದ ತರುಣರು ದುಡಿಯಬೇಕು. ಪ್ರಜಾಪ್ರಭುತ್ವದ ಅಪೇಕ್ಷೆಯಂತೆ ರಾಮರಾಜ್ಯ ಮತ್ತು ಧರ್ಮರಾಜ್ಯಗಳನ್ನು ಸ್ಥಾಪಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದು ಹೇಳಿದರು.

ಗಾಂಧಿ ಮಹಾತ್ಮರ ಜೀವನ ವಿಚಾರವನು [illegible]

ಉತ್ತಮಗೊಂಡಿದ್ದರೂ ಬೇಸಾಯಗಾರರ ಸ್ಥಿತಿಯು ಅಭಿವೃದ್ಧಿ ಹೊಂದದಿರುವುದಕ್ಕೆ ಅವರು ವಿಷಾದವನ್ನು ವ್ಯಕ್ತಪಡಿಸಿದರು. ಚದುರಿ ಹೋಗುವ ೭ ಲಕ್ಷಗ್ರಾಮಗಳನ್ನು ಒಟ್ಟಾಗಿ ಕೂಡಿಸಿ, ಅವುಗಳಿಗೆ ಬೇಕಾಗುವ ಆಹಾರ, ವಿದ್ಯಾಭ್ಯಾಸ, ಆರೋಗ್ಯ ಮತ್ತು ಕೈಗಾರಿಕೆಗಳನ್ನು ಒದಗಿಸಿ ಕೊಡಬೇಕಾದುದು ಅತ್ಯಗತ್ಯವೆಂದು ಹೇಳಿದರು.

ಸ್ವತಂತ್ರ ಭಾರತದಲ್ಲಿ ಈಗತಾನೇ ಬೇರೂರುತ್ತಿರುವ ರಾಷ್ಟ್ರೀಯತೆಯ ಗಿಡವು ದೊಡ್ಡ ಮರವಾಗುವುದಕ್ಕೆ ಬೇಕಾದ ಫಲವತ್ತಾದ ಭೂಮಿ ಇದ್ದು ಅದರ ಪ್ರಯೋಜನವನ್ನು ಪಡೆಯುವುದಕ್ಕೆ ಪ್ರತಿಯೊಬ್ಬ ಪ್ರಜೆಯೂ ದುಡಿಯಬೇಕು—ಎಂದು ಅಧ್ಯಕ್ಷರು ಹೇಳಿದರು.

ಅಧಿವೇಶನದಲ್ಲಿ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು

ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆ ಪರಿಶೀಲನೆ ನಡೆಸಿ, ೩ ತಿಂಗಳೊಳಗಾಗಿ ವರದಿಯನ್ನು ಒಪ್ಪಿಸಲು, ಅಧ್ಯಕ್ಷರು, ಪಂಡಿತ ನಹರೂ ಮತ್ತು ಸರ್ದಾರ್ ಪಟೇಲರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸತಕ್ಕದ್ದು.

ಕಾಂಗ್ರೆಸ್ಸಿನವರು ಅಧಿಕಾರ ಲಾಲಸೆ ಮತ್ತು ಸ್ಥಾನಮಾನದ ಆಸೆಗಳನ್ನು ತೊರೆದು ಕೋಮುವಾರು ಸೌಹಾರ್ದ, ಅಸ್ಪೃಶ್ಯತೆಯ ನಿರ್ಮೂಲ, ಅಕ್ಷರ ಪ್ರಸಾರ, ಗ್ರಾಮಾಂತರ ಪುನರ್ರಚನೆ ಕಾರ್ಯಗಳಿಗಾಗಿ ದುಡಿಯಬೇಕು. ಸರ್ಕಾರದ ಆಡಳಿತದಲ್ಲಿ ಅನವಶ್ಯಕವಾಗಿ ಕೈ ಹಾಕಬಾರದು.

ಭಾರತದ ವಿಭಜನೆಯಿಂದ ಸಾವಿಗೆ ತುತ್ತಾದವರಿಗೆ ಸಂತಾಪ ಸೂಚಿಸುವುದು. ಇತರ ಕಷ್ಟನಷ್ಟಗಳಿಗೆ ತುತ್ತಾಗಿ ನಿರಾಶ್ರಿತರಾದವರಿಗೆ ಸಹಾನುಭೂತಿಯನ್ನು ತೋರಿಸುವುದಲ್ಲದ, ನಿರಾಶ್ರಿತರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡತಕ್ಕದ್ದು.

ಕಾರ್ಮಿಕರಿಗೂ ಮಾಲೀಕರಿಗೂ ಸೌಹಾರ್ದವುಂಟಾಗಿ, ವರಮಾನವು ಹೆಚ್ಚಾಗಿ, ಲಾಭದಲ್ಲಿ ಕಾರ್ಮಿಕರಿಗೂ ಪಾಲು ದೊರೆಯಬೇಕು. ಸಂಸ್ಥಾನಗಳಲ್ಲಿ ಪಾಳೆಗಾರ ಪದ್ಧತಿಯು ಮಾಯವಾಗಿ, ಪ್ರಜಾಸರ್ಕಾರ ಸ್ಥಾಪಿತವಾಗಬೇಕು.

ರಾಜಕಮಲ್

ಇದುವರೆಗೆ ಪ್ರದರ್ಶಿಸಲ್ಪಟ್ಟಿರುವ ಚಿತ್ರಗಳಲ್ಲೆಲ್ಲಾ

ಅತಿ ಪ್ರಖ್ಯಾತವಾದುದೆಂದು

ನಗರದಲ್ಲೆಲ್ಲಾ ಪ್ರಶಂಸಿಸಲ್ಪಡುತ್ತಿರುವ

ಕನ್ನಡ ಚಿತ್ರ

ಭಕ್ತ ಕುಂಬಾರ

17-12-48ರಿಂದ : ದಿನವಹಿ ೩ ಆಟಗಳು

24th All India Educational Conference Mysore, 1948

EXHIBITION

An Educational Exhibition will be held in connection with the above Conference in the Dasara Exhibition Buildings from 29th December 1948 to 1st Jan 1949 inclusive. Eminent Educationists from all over India are expected to attend the Conference Stalls measuring 11'×11 for a nominal rent of Rs. 20 for the entire season, are made available for Publishers, Book sellers, Dealers in and manufacturers of Educational appliances and Sports materials. Apply immediately to the undersigned and book your stalls in advance Exhibits should be ready for display by the 27th instant

H Subba Jois,
Secretary

JUST UNPACKED

GLAXO BISCUITS

Available in wholesale and retail

Fancy Goods Fresh Butter pure Coffee Powder available at reasonable rates

SRI KRISHNA BHAVAN STORES,

Devaraja Market Mysore

ರಸ್ತೆಯ ಅನಾನುಕೂಲ

ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಹೆಭಾಲೆಗ್ರಾಮಕ್ಕೆ ಹೋಗುವ ರಸ್ತೆಯು ಬಹಳ ಶಿಥಿಲವಾಗಿರುವುದರಿಂದ ಗಾಡಿ ಮತ್ತು ಸೈಕಲ್ಲುಗಳು ತಿರುಗಲು ಸಹ ತೊಂದರೆಯಾಗಿದೆ. ಗ್ರಾಮದಲ್ಲಿ ಯಾರಿಗಾದರೂ ಖಾಯಿಲೆಯಾದರೆ ಅವರನ್ನು ೫ ಮೈಲಿ ದೂರದಲ್ಲಿರುವ ಅರಕಲಗೂಡಿಗೆ ಕರೆದುಕೊಂಡು ಹೋಗಬೇಕಾಗುವುದರಿಂದ ರಸ್ತೆ ಸರಿಯಾಗಿಲ್ಲದೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಈ ರಸ್ತೆಯನ್ನು ರಿಪೇರಿ ಮಾಡಿಸಿ ಸಹಾಯ ಮಾಡಬೇಕೆಂದು ಗ್ರಾಮಸ್ಥರೊಬ್ಬರು ಪ್ರಾರ್ಥಿಸಿರುತ್ತಾರೆ.

ನೀರಿನ ತೊಂದರೆ

ಮೈಸೂರು

ಸುಮಾರು ೪೦೦ ಮಂದಿ ವಾಸಿಸುತ್ತಿರುವ ಲಷ್ಕರ್ ಮೊಹಲ್ಲಾದಲ್ಲಿ [illegible] ೨ ಅಥವ ೩ ಮನೆಗಳಲ್ಲಿ ಮಾತ್ರ [illegible] ಇವೆ. ಉಳಿದವರು ಈ ಮೊಹಲ್ಲಾದಲ್ಲಿ [illegible] ಸಾರ್ವಜನಿಕ ನಲ್ಲಿಗಳನ್ನೇ [illegible] ಕೊಂಡಿದ್ದಾರೆ. ಈ ನಲ್ಲಿಗಳಲ್ಲೂ ಬೆಳಗ್ಗೆ ೧೧ ಗಂಟೆಯಿಂದ ಸಂಜೆ ವರೆಗೆ ನೀರನ್ನು ನಿಲ್ಲಿಸಿಬಿಡುವುದರಿಂದ ಜನರಲ್ಲಿ ಜಗಳಗಳಿಗೂ, ಪಾತ್ರೆಗಳ ಲಾವಣಿಗೂ ಮತ್ತು ಕಳ್ಳತನಗಳಿಗೂ ಅವಕಾಶವಾಗಿದೆ. ಆದ್ದರಿಂದ ಈ ಮೊಹಲ್ಲಾಕ್ಕೆ ಸರಿಯಾದ ನೀರು ಸರಬರಾಜು [illegible] ಯಾಗುವ ವರೆಗೂ ಸದಾ ಕಾಲದಲ್ಲೂ ಈಗಿರುವ ನಲ್ಲಿಗಳಲ್ಲಿ ನೀರಿರುವಂತೆ ಮತ್ತು ಪ್ರತಿ ದಿನ ಬೆಳಗ್ಗೆ ಮತ್ತು [illegible] ಈ ಮೊಹಲ್ಲಾಕ್ಕೆ ೨ ಲಾರಿ ನೀರನ್ನು [illegible] ಗಸುವಂತೆಯೂ ಏರ್ಪಡಿಸಬೇಕೆಂದು [illegible] ಪುರಿಯ ಆದಿಕರ್ನಾಟಕ ಸಂಘದ [illegible] ದರ್ಶಿಗಳಾದ ಶ್ರೀ|| ಮಂಡೀವಯ್ಯ [illegible] ಪ್ರಾರ್ಥಿಸುತ್ತಾರೆ.

ವಿದೇಶಾಂಗ ನೀತಿಬಗ್ಗೆ ಅಖಿಲ [illegible] ಕಾಂಗ್ರೆಸ್ಸು ಕಳೆದ ಕೆಲವುವರ್ಷಗಳಿಂದ [illegible] ನುಸರಿಸಿಕೊಂಡು ಬರುತ್ತಿರುವ [illegible] ನ್ನೇ ಸ್ವತಂತ್ರ ಭಾರತವು ಅನುಸರಿಸಬೇಕು ಮತ್ತು ವಿಶ್ವಸಂಸ್ಥೆಯ ಧ್ಯೇಯಗಳಿಗೆ ಸಂಪೂರ್ಣ ಬೆಂಬಲ ನೀಡಬೇಕು

ಛಳಿಗಾಲಕ್ಕೆ ಅವಶ್ಯಕವಾದ

ಕಾಶ್ಮೀರ ಶಾಲುಗಳು ರಗ್ಗುಗಳು ಮತ್ತು [illegible] ಸ್ವೆಟರುಗಳು

ಈಗತಾನೆ ಬಂದಿವೆ

ವಿಜಯಲಕ್ಷ್ಮೀ ವಿಲಾಸ್

ಶಿವರಾಂಪೇಟೆ, [illegible] ಬಿಲ್ಡಿಂಗ್, ಮೈಸೂರು.

[illegible]

ಸ್ಕೌಟು ಮಾರಾಟಕ್ಕೆ

ನಂಜನಗೂಡು ಶ್ರೀಕಂಠಪುರಂ ಎಕ್ಸ್ [illegible] ನಲ್ಲಿ ಸೈಟ್ ನಂಬರ್ [illegible]; ಆಳತೆ [illegible] ಇಷ್ಟವುಳ್ಳವರು ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ಬಂದು ವಿಚಾರಿಸತಕ್ಕದ್ದು.

ಎಸ್ ನಾರಾಯಣ

ಸ್ಕೂಲ್ ಮಾಸ್ಟರ್

[illegible], ಅರಮನೆ ಬೀದಿ, [illegible]

Edited, printed and published by A T Nagaraj at the Sadhvi Press, D S Road, Mysore

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೨೨-೧೨-೪೮ [ಸಂಚಿಕೆ ೧೪೯

ಇಂಡೋನೇಷ್ಯದಲ್ಲಿ ಡಚ್ಚರಮೇಲೆ ಪ್ರತಿಭಟನೆ

ಮಹಾರಾಣಿ ಕಾಲೇಜಿನ ವಿಚಾರಣಾ ಸಮಿತಿ

ಸ್ವ ಸು ಫೋ॥] ಬೆಂಗಳೂರು ೨೨

ಮಹಾರಾಣಿ ಕಾಲೇಜಿನ ಆಶ್ರಯದಲ್ಲಿ ಕಳೆದ ವಾರ ನಡೆದ ವಸ್ತುಪ್ರದರ್ಶನದ ಸಂಬಂಧದಲ್ಲಿ ಸಂಭವಿಸಿದ ಗಲಭೆಯ ಬಗ್ಗೆ ಶ್ರೀಗಳಾದ ಎಲ್. ರಾಮರಾವ್ ಮತ್ತು ಬಿ ಎಸ್. ಮಾಧವರಾಯರನ್ನೊಳಗೊಂಡ ಒಂದು ವಿಚಾರಣಾ ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ.

ಸಂಚರಿಸುವ ಆಸ್ಪತ್ರೆಗಳು

ಬೆಂಗಳೂರು ನಗರದ ಬಡ ಜನರಿಗೆ ವೈದ್ಯ ಸೌಲಭ್ಯಗಳನ್ನು ಏರ್ಪಡಿಸಲು, ಸಂಚರಿಸುವ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ ಇದಕ್ಕಾಗಿ ಮೋಟಾರು ವ್ಯಾನುಗಳನ್ನು ತರಿಸಲಾಗಿದೆ

೨೪ ಗಂಟೆಗಳಲ್ಲಿ ಟೋಜೋರವರನ್ನು ಗಲ್ಲಿಗೇರಿಸಲಾಗುವುದು

ಜಪಾನಿನ ಮಾಜಿ ಪ್ರಧಾನಿ ಜ॥ ಟೋಜೋ ಮತ್ತು ಇತರ ಆರುಮಂದಿಯನ್ನು ಇನ್ನು ೨೪ ಗಂಟೆಗಳೊಳಗೆ ಗಲ್ಲಿಗೇರಿಸಲಾಗುವುದೆಂದು ವರದಿಯಾಗಿದೆ ಮರಣದಂಡನೆಗೆ ಗುರಿಯಾದವರ ಪೈಕಿ ಇಬ್ಬರು ಹಾಕಿದ್ದ ಅಪೀಲನ್ನು ಅಮೇರಿಕದ ಶ್ರೇಷ್ಠ ಕೋರ್ಟಿನವರು ತಿರಸ್ಕರಿಸಿದ್ದಾರೆ.

ಕ॥ ಗೋಪಾಲರಾಯರ ನಿಧನ

[ಮೈಸೂರು ೨೨.

ಶ್ರೀಮನ್ಮಹಾರಾಜರವರ ನಿವೃತ್ತ ಮಿಲಿಟರಿ ಸೆಕ್ರೆಟರಿಯವರಾದ ರಾಜಸೇನಾತಿಲಕ ಕ॥ ಗೋಪಾಲರಾಯರು ತಮ್ಮ ೬೫ ನೇ ವಯಸ್ಸಿನಲ್ಲಿ ನಿನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

○ ರಾಜಧಾನಿಯ ವಕೀಲರಾದ ಶ್ರೀ. ಎಂ ಆರ್. ಶಂಕರಪ್ಪನವರು ನಿನ್ನೆ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈ ದಿನ ವಕೀಲ ಸಂಘದವರು ಇವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿದ್ದಾರೆ.

ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವು ಇದೇ ೨೯, ೩೦ ಮತ್ತು ೩೧ ತಾ॥ ಬೆಂಗಳೂರಿನಲ್ಲಿ ನಡೆಯುವುದು. ೩೦ ನೇ ತಾ॥ ಪಂಡಿತ ನೆಹರೂರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದಲೂ ೫೦ ಜನ ವಿದ್ಯಾರ್ಥಿ ಪ್ರತಿನಿಧಿಗಳು ಭಾಗ ವಹಿಸಲು ಅವಕಾಶವಿದೆ ಕರ್ನಾಟಕ ಕಾಂಗ್ರೆಸ್ಸಿನ [illegible] ಸಂಸ್ಥೆಗಳೆಲ್ಲವೂ ಪ್ರತಿನಿಧಿಗಳ [illegible] ಕೂಡಲೇ ೧೫, ಗಾಂಧಿ ಬಜಾರ್ ಬೆಂಗಳೂರು ವಿಳಾಸಕ್ಕೆ ಕಳುಹಿಸ[illegible]. ಸಂಸ್ಥೆಯ ಸಹ ಕಾರ್ಯದರ್ಶಿಗಳಾದ ಶ್ರೀ [illegible]ರಾಜರಾವರವರು ತಿಳಿಸಿರುತ್ತಾರೆ,

[illegible] ಹೊಸ ವರ್ಷಾರಂಭ, ಉತ್ತರಾಯಣ ಪುಣ್ಯಕಾಲ, ಮಹಾಶಿವರಾತ್ರಿ, ಯುಗಾದಿ ಗುಡ್‍ಫ್ರೈಡೆ, ಶ್ರೀಮನ್ಮಹಾರಾಜರವರ ವರ್ಧಂತಿ, ಉಪಾಕರ್ಮ, ಗಣೇಶ, ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ, ಮೊಹರಂ ಕೊನೆಯದಿನ, ಕ್ರಿಸ್ಮಸ್ ಇವುಗಳು ಸಾರ್ವಜನಿಕ ರಜಾದಿನಗಳೆಂದು ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ

ರವೆ ತಯಾರಿಸಲು ನಿರ್ಬಂಧ

ಸ್ವ ಸು ಫೋ॥] ಬೆಂಗಳೂರು ೨೨

ಅನುಮತಿ ಇಲ್ಲದೆ ಗೋಧಿಯಿಂದ ರವೆಯನ್ನು ತಯಾರಿಸಕೂಡದೆಂದು ಸರ್ಕಾರದ ಆಜ್ಞೆಯಾಗಿದೆ

○ ಭದ್ರಾವತಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ಮಂಜೂರು ಮಾಡಲಾಗಿದೆ ಬೆಂಗಳೂರು ದ್ವಿತೀಯ ನ್ಯಾಯಾಧೀಶರಾದ ಶ್ರೀ ಹೆಚ್. ವೆಂಕಟಕೃಷ್ಣಶೆಟ್ಟರನ್ನು ಅಲ್ಲಿಗೆ ವರ್ಗಾಯಿಸಲಾಗಿದೆ

ಶ್ರೀ ಡಿ ಕೆಂಪಯ್ಯನವರನ್ನು ತುಮಕೂರಿನ ಸಬಾರ್ಡಿನೇಟ್ ಜಡ್ಜರನ್ನಾಗಿ ನೇಮಕ ಮಾಡಲಾಗಿದೆ

ವಿಶ್ವವಿದ್ಯಾಲಯ ಮತ್ತು ವಿದ್ಯಾ ಇಲಾಖೆಯ ಕಾರ್ಯಕ್ರಮಗಳನ್ನು ಪರಿಶೀಲಿಸಿ ಸಲಹೆ ಕೊಡಲು ನೇಮಿತರಾಗಿರುವ ಆಂಧ್ರ ವಿಶ್ವವಿದ್ಯಾಲಯದ ಉಪಸ್ವಾನಪತಿ ಡಾ॥ ಸಿ. ಆರ್. ರೆಡ್ಡಿಯವರಿಗೆ ೧೫ ಸಾವಿರ ರೂ, ಸಂಭಾವನೆಯನ್ನು ಸರ್ಕಾರದವರು ನಿಗದಿ ಮಾಡಿರುತ್ತಾರೆ.

ರಾಜೇಂದ್ರ ಪ್ರಸಾದರವರ ಹೆಸರಿನಲ್ಲಿ ವಿಶ್ವವಿದ್ಯಾಲಯ

ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದ್‍ರವರ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಗಾಂಧೀ ನಗರದಲ್ಲಿ ಸೇರಿದ್ದ ಪ್ರಮುಖ ಕಾಂಗ್ರೆಸ್ ನಾಯಕರು ಆಲೋಚನೆ ನಡೆಸಿದರೆಂದೂ, ಈ ಬಗ್ಗೆ ಸದ್ಯದಲ್ಲಿಯೇ ಅಧ್ಯಕ್ಷ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಒಂದು ಮನವಿಯನ್ನು ಹೊರಡಿಸಲಿರುವರೆಂದೂ ಹೇಳಲಾಗಿದೆ

ವೆಂಕಟಕೃಷ್ಣಯ್ಯನವರ ದಿನಾಚರಣೆ

ರಾಜಧಾನಿಯ ಎನಾನಾಲಯದ ಸಾಹಿತ್ಯ ಸಂಘದ ಆಶ್ರಯದಲ್ಲಿ ಇದೇ ೨೫ ನೇ ತಾ॥ ಶನಿವಾರ ಸಂಜೆ ೫ ಗಂಟೆಗೆ ಶ್ರೀ ಎಂ. ವೆಂಕಟಕೃಷ್ಣಯ್ಯನವರ ದಿನಾಚರಣೆಯು ಶ್ರೀ ಎಂ. ಯಾಮುನಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯುವುದು

ಪೌರಸಭೆ ಅಧಿವೇಶನ

ನಿನ್ನೆ ಸಂಜೆ ನಡೆದ ಪೌರಸಭೆಯ ಅಧಿವೇಶನದಲ್ಲಿ [illegible] ಚ ನಾವ ಣೆಯು ಆಯಿತು. [illegible] ಚ್ರ್ರಿಲ್ ಪಲೆ [illegible] ಜರುಗಿತು.

ಪರೀಕ್ಷೆಗೆ ಕಟ್ಟಲು ಹೆಚ್ಚು ಅವಧಿ

ಮೈಸೂರು ೨೨

ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳಿಗೆ ಹಣ ಕಟ್ಟಲು ನಾಳೆಯೇ ಕೊನೆಯ ದಿನವಾಗಿತ್ತು, ಈಗ ಅದನ್ನು ಮುಂದಿನ ತಿಂಗಳು ೬ ನೇ ತಾ॥ ವರೆವಿಗೆ ಹೆಚ್ಚಿಸಲಾಗಿದೆ

ಸಹಾಯಾರ್ಥ ನಾಟಕ

ಲೇಪಾಕನೂರ ಕಲಾಮಂಡಳಿಯವರು ತಮ್ಮ ಕಂಪೆನಿಯ ಅಪ್ಪಣ್ಣ [illegible]ರ ತಂಗಿಯ ಮದುವೆಯ ಸಹಾಯಾರ್ಥವಾಗಿ ಈ ದಿನ ರಾತ್ರಿ ೧೦ ಗಂಟೆಗೆ ಟೌನ್ ಹಾಲಿನಲ್ಲಿ ಭಕ್ತ ಪ್ರಹ್ಲಾದ ಎಂಬ ನಾಟಕವನ್ನು ಅಭಿನಯಿಸುವರು.

ಕೀರ್ತನ ಕಾಲಕ್ಷೇಪ

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಈ ದಿನ ಸಂಜೆ ೬-೩೦ ಗಂಟೆಗೆ ಉತ್ತರ ಕರ್ನಾಟಕದ ಶ್ರೀ ದೇವದಾಸ ಹೊಂಬಳ ರವರಿಂದ ನಾಟಕೀಯ ಶೈಲಿಯ ನವ ಕೀರ್ತನರೂಪದಲ್ಲಿ ನಡೆಯುವುದು

ಸಜ್ಜನ್‍ಬಾಪಿನ ಮಹಾರಾಷ್ಟ್ರ [illegible] ಮಿಸ ಶ್ರೀ [illegible] ದೇವಸ್ಥಾನದಲ್ಲಿ ಈ ದಿನ ಸಂಜೆ ೬ ಗಂಟೆಗೆ ಶ್ರೀ ಗವಾಯಿ ಎಂ, [illegible] ಬಾಲಕೃಷ್ಣ ಭಟ್ ಮತ್ತು ಎಂ ಎಲ್. ನಾರಾಯಣ ದಾಸ್ ರವರುಗಳಿಂದ ಕೋಟೀ ಕಟ್ಟು ಎಂಬ ಹರಿಕಥೆಯು ನಡೆಯುವುದು

ವಿದ್ಯಾರ್ಥಿ ಕಾಂಗ್ರೆಸ್ಸಿಗೆ ರಾಜೀನಾಮೆ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಐದಾರು ವರ್ಷಗಳಿಂದಲೂ ಸದಸ್ಯರಾಗಿದ್ದ ಶ್ರೀ ಎನ್. ಸುಬ್ರಹ್ಮಣ್ಯರವರನ್ನು ಸಂಸ್ಥೆಯಿಂದ ಹೊರದೂಡಿರುವುದನ್ನೂ ಮತ್ತು ಕೋರಂ ಇಲ್ಲದೇ ವಾರ್ಷಿಕ ಸಭೆಯನ್ನು ನಡೆಸಿದುದನ್ನೂ ಪ್ರತಿಭಟಿಸಲು ಶ್ರೀ [illegible] ಪಿ ಸ್ವಾಮಿಯವರು ಸಂಸ್ಥೆಯ ಸದಸ್ಯತನಕ್ಕೆ ರಾಜೀನಾಮೆ ಇತ್ತಿರುತ್ತಾರೆ.

ಸಂಸ್ಥಾನದ ಬಸ್ ಪ್ರಯಾಣದ ದರವನ್ನು ಮೊದಲನೆ ೨೦ ಮೈಲಿ ವರೆಗೆ ಮೈಲಿ ಒಂದಕ್ಕೆ ೮ ಕಾಸಿನಂತೆಯೂ, ಉಳಿದ ಮೈಲಿಗಳಿಗೆ ಮೈಲಿ ಒಂದಕ್ಕೆ ೬ ಕಾಸಿನಂತೆಯೂ ಸರ್ಕಾರದವರು [illegible] ಮಾಡಿರುತ್ತಾರೆ

ಮಹಾರಾಣಾ ಕಾಲೇಜಿನ [illegible]

[illegible]

ಗಿದೆ

ಉಪ್ಪು ತಯಾರಿಕೆಗೆ ರಹದಾರಿಯ ವಿನಾಯಿತಿ

ಸ್ವಂ.ಸು ಫೋ॥] ಬೆಂಗಳೂರು ೨೨

ದೇಶದಲ್ಲಿ ಯಾರು ಬೇಕಾದರೂ ಉಪ್ಪನ್ನು ಎಲ್ಲಿಯಾದರೂ ತಯಾರಿಸಬಹುದೆಂದೂ, ಆದರೆ ಒಟ್ಟು ಪ್ರದೇಶವು ೧೯ ಎಕರೆಗಿಂತ ಹೆಚ್ಚಾಗಿರಕೂಡದೆಂದೂ ತಿಳಿಸಲಾಗಿದೆ ಇದಕ್ಕೆ ಯಾವ ರಹದಾರಿಯನ್ನು ಪಡೆಯಬೇಕಾಗಿಲ್ಲ ಮನುಷ್ಯನ ಉಪಯೋಗಕ್ಕೆ ಅರ್ಹವಲ್ಲದ ಉಪ್ಪು ತಯಾರಿಕೆಯನ್ನು ಮಾತ್ರ ನಿಷೇಧಿಸಲಾಗುವುದೆಂದೂ, ದಾಸ್ತಾನು, ರವಾನೆ ಮತ್ತು ಮಾರಾಟದ ಬಗ್ಗೆ ಯಾವ ಅಡಚಣೆಯೂ ಇರುವುದಿಲ್ಲವೆಂದೂ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

† ನ್ಯಾಯವಿಧಾಯಕ ಸಭೆಯ ಅಧಿವೇಶನವು ಮುಂದಿನ ತಿಂಗಳು ೬ ನೇ ತಾ॥ ನಿಂದ ೧೯ ನೇ ತಾ॥ ವರೆಗೆ ನಡೆಯುವುದು.

ಸಕ್ಕರೆ ಬೆಲೆ ಇಳಿಯಿತು

ಸಕ್ಕರೆ ಧಾರಣೆಯನ್ನು ಮೂಟೆ ೧ ಕ್ಕೆ ೪೮-೬-೩ ನಂತೆಯೂ, ವೀಸೆ ಒಂದಕ್ಕೆ ೧-೫-೬ ನಂತೆಯೂ, ಮಂಡ್ಯದ ಸಕ್ಕರೆ ಕಂಪೆನಿಯವರು ನಿಗದಿ ಮಾಡಿರುತ್ತಾರೆ.

ಜೋಗ್ಜಕಾರ್ತಾದಲ್ಲಿ ಇಂಡೋನೇಷ್ಯದ ಪ್ರತಿಭಟನೆ

ಡಚ್ಚರು ಆಕ್ರಮಿಸಿದ ಇಂಡೋನೇಷ್ಯದ ರಾಜಧಾನಿಯಾದ ಜೋಗ್ಜಕಾರ್ತಾದಲ್ಲಿ ಕದನ ಪ್ರಾರಂಭವಾಗಿದೆಯೆಂದೂ, ಇಂಡೋನೇಷಿಯನ್ನರ ಪ್ರತಿಭಟನೆ ವಿಶೇಷವಾಗಿದೆಯೆಂದೂ ವರದಿಯಾಗಿದೆ. ೫೨ ಜನ ಡಚ್ ವಿಮಾನ ಪಡೆಯವರನ್ನು ಕೊಲೆ ಮಾಡಲಾಯಿತೆಂದೂ, ಡಚ್ ಸೈನಿಕರನ್ನು ನಗರದಿಂದ ೯ ಮೈಲಿಗಳಾಚೆಗೆ ಓಡಿಸಲಾಗಿದೆಯೆಂದೂ ಹೇಳಲಾಗಿದೆ.

ಶಿಸ್ತಿನಿಂದ ವರ್ತಿಸಬೇಕೆಂದ. ವಿದ್ಯಾರ್ಥಿಗಳಿಗೆ ಮನವಿ

ಭಾರತ ಪ್ರಧಾನಿ ಪಂಡಿತ ನೆಹರೂರವರು ಬೆಂಗಳೂರು ಮತ್ತು ಮೈಸೂರಿಗೆ ಭೇಟಿ ಇತ್ತಾಗ, ವಿದ್ಯಾರ್ಥಿಗಳೆಲ್ಲರೂ ಶಿಸ್ತಿನಿಂದ ವರ್ತಿಸಿ, ಅಧಿಕಾರಿಗಳೊಡನೆ ಸಹಕರಿಸಬೇಕೆಂದು ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಹ ಕಾರ್ಯದರ್ಶಿ ಶ್ರೀ ಶಾಂತರಾಜಾರವರು ಕೋರಿರುತ್ತಾರೆ

[illegible]

ಟೌನ್‍ಹಾಲ್ ಮೈದಾನದಲ್ಲಿ ಕಳೆದ ಎರಡು ದಿನಗಳಿಂದಲೂ ಆಮರಣಾಂತ ಉಪವಾಸವನ್ನು ಕೈಗೊಂಡಿರುವ ಶ್ರೀ ಪಿ. ರಾಮಚಂದ್ರರವರನ್ನು ೩ ಜನ ಪೋಲೀಸರು ಈ ದಿನ ಬೆಳಗ್ಗೆ ದಸ್ತಗಿರಿ ಮಾಡಿ, ಅವರು ನಿಸ್ತ್ರಾಣರಾಗಿದ್ದಾರೆಂದು ತಿಳಿಸಿದ್ದಾರೆ.

ಚೀಣಾಂಗರ ನೂತನ ರಕ್ಷಣಾ ವ್ಯವಸ್ಥೆ

ಚೀಣಾದ ಹಳೇ ರಾಜಧಾನಿಯಾದ ಪೀಕಿಂಗ್ ಮತ್ತು ಟೀನ್ಸಿನ್ ನಗರಗಳನ್ನು ಆಕ್ರಮಿಸಿ, ಮುನುಗ್ಗುತ್ತಿರುವ ಕಮ್ಯೂನಿಸ್ಟರನ್ನು ತಡೆಗಟ್ಟಲು, ಯಾಂಗ್ಟ್ಸಿ ನದಿಯ ಹತ್ತಿರ ನೂತನ ರಕ್ಷಣಾ ವ್ಯವಸ್ಥೆಯನ್ನು ಚೀಣಾಂಗರು ಕೈಗೊಂಡಿದ್ದಾರೆಂದು ವರದಿಯಾಗಿದೆ

[illegible] ಪಕ್ಷ [illegible] ಕದನ [illegible] ಚೀಣಾದಲ್ಲಿ [illegible] ನೂತನ [illegible]

[illegible]

ಮನೆ ಬಾಡಿಗೆಯನ್ನು ಅರ್ಧಕ್ಕೆ ಇಳಿಸಬೇಕು

ಮನೆ ಮಾಲೀಕರು ವಿಪರೀತವಾಗಿ ಬಾಡಿಗೆಯನ್ನು ವಸೂಲು ಮಾಡುತ್ತಾ ಬಾಡಿಗೆ ದಾರರಿಗೆ ಸುನಾ ಪೀಡೆಯಾದ ತೊಂದರೆಗಳನ್ನು ಕೊಡುತ್ತಿದ್ದಾರೆ. ಈ ತೊಂದರೆಯನ್ನು ತಪ್ಪಿಸಲು ಈಗಿರುವ ಮನೆ ಬಾಡಿಗೆಗಳನ್ನು ಅರ್ಧಕ್ಕೆ ಇಳಿಸಬೇಕು. ಈ ಬಗ್ಗೆ ಸರ್ಕಾರದವರು ಕೂಡಲೇ ಶಾಸನ ಮಾಡಬೇಕೆಂದು ರಾಜಧಾನಿಯ ಬಾಡಿಗೆ ದಾರರ ಸಂಘದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಶಾಲಾ ಕಟ್ಟಡದ ಅವಶ್ಯಕತೆ

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಹಲಿಯಾಲು ಗ್ರಾಮದ ಸರ್ಕಾರಿ ಪ್ರೈಮರಿ ಶಾಲೆಗೆ ಸರಿಯಾದ ಕಟ್ಟಡವಿಲ್ಲದೇ ಶಿಥಿಲವಾದ ಒಂದು ಮನೆಯಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಹಲವು ಬಾರಿ ಇಲಾಖೆಗೆ ಅರ್ಜಿ ಹಾಕಿಕೊಂಡಿದ್ದರೂ ಪ್ರಯೋಜನವಾಗಿಲ್ಲ. ಸರ್ಕಾರದವರು ಈ ಬಗ್ಗೆ ಗಮನ ಕೊಡಬೇಕು ಎಂದು ಅಲ್ಲಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ... ಅವರು ಪ್ರಾರ್ಥಿಸಿದ್ದಾರೆ.

ಉಪನ್ಯಾಸ...

ಭಾರತದ ಸುಪ್ರಸಿದ್ಧ ಕಲಾವಿದರಾದ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರವರು ಈ ದಿನ ರಾತ್ರಿ ... ಗಂಟೆಗೆ ಆಕಾಶವಾಣಿಯಲ್ಲಿ ಕವಿತೆಗಳ ಪಠಣ ಮಾಡುವರು. ಈ ಸಂಜೆ ... ಗಂಟೆಗೆ ಮಹಾರಾಜಾ ಕಾಲೇಜಿನ ಆವರಣದಲ್ಲಿ ಅವರು ತಮ್ಮ ಪ್ರದರ್ಶನ ನಡೆಸುವರು. ಪ್ರವೇಶ ಟಿಕೆಟ್ ಮೂಲಕ.

ಮಹಾ ಮಂಗಳಾರತಿ

ರಾಜಧಾನಿಯ ಸದ್ಗುರು ಸೇವಾ ಮಂಡಲದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯ ಆವರಣದಲ್ಲಿ ಮಹಾ ಮಂಗಳಾರತಿಯು, ರಾಜಾಶೀರ್ವಾದ, ವೇದಘೋಷ ಇತ್ಯಾದಿಗಳೊಡನೆ ಶ್ರೀ ಶ್ರೀಗಳವರ ಸನ್ನಿಧಾನದಲ್ಲಿ ನಡೆಯುವುದು. ಭಕ್ತಾದಿಗಳೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ನೀಗ್ರೋಗಳು ಬೆಳ್ಳಗಾಗಿದ್ದಾರೆ.

ಕಳೆದ ಯುದ್ಧದ ನಂತರ ನೂರಾರು ಮಂದಿ ನೀಗ್ರೊ ಜನಗಳು ಬೆಳ್ಳಗಾಗಿದ್ದಾರೆಂದು ತಿಳಿದುಬಂದಿದೆ. ಅವರೆಲ್ಲರೂ ರಬ್ಬರ್ ಪ್ಲಾಂಟೇಷನ್ನುಗಳಲ್ಲಿ ಕೆಲಸ ಮಾಡುತ್ತಿದ್ದುದೇ ಇದಕ್ಕೆ ಕಾರಣ.

ವಿಶ್ವ ಸಂಸ್ಥೆಯಲ್ಲಿ ಇಂಡೋನೇಷಿಯಾದ ಪ್ರಶ್ನೆ

ಡಚ್ಚರು ಇಂಡೋನೇಷ್ಯದ ಮೇಲೆ ಮಿಲಿಟರಿ ಕಾರ್ಯಾಚರಣೆಯನ್ನು ಕೈಗೊಂಡಿರುವುದರಿಂದ, ಹಿಂದೆ ಎರಡು ರಾಷ್ಟ್ರಗಳಿಗೂ ಆಗಿದ್ದ ಒಪ್ಪಂದವನ್ನು ಅವರು ಮುರಿದಿರುವರೆಂದು ಸಂಯುಕ್ತ ರಾಷ್ಟ್ರ ಸಭಾಪತಿ ಸೌಹಾರ್ದ ಸಮಿತಿಯು ವಿಶ್ವ ಸಂಸ್ಥೆಗೆ ದೂರು ಕೊಟ್ಟಿರುವ ವಿಷಯವನ್ನು ಪರಿಶೀಲಿಸಲು ಸಂರಕ್ಷಣಾ ಸಮಿತಿಯು ... ವಿಷಯಗಳಲ್ಲಿಯೇ ಮುಂದುವರೆಯಿತು.

ರಷ್ಯದಲ್ಲಿ ಅತ್ಯಂತ ಭಾರಿ ಸಬ್ ಮೆರಿನ್ನುಗಳು

ರಷ್ಯದ ಸೈನ್ಯದಲ್ಲಿ ಈಗ ೪೦ ಲಕ್ಷ ಜನರಿರುವರೆಂದೂ ಇವರ ಜೊತೆಗೆ ನೌಕಾ ಪಡೆಯಲ್ಲಿ ೫ ಲಕ್ಷ ಜನರು ಇರುವರೆಂದೂ ವರದಿಯಾಗಿದೆ. ೧೮,೫೦೦ ಆಧುನಿಕ ವಿಮಾನಗಳೂ ಮತ್ತು ವಿಶ್ವದಲ್ಲೇ ಅತ್ಯಂತ ಭಾರಿ ಸಬ್ ಮೆರಿನ್ನುಗಳೂ ಇವೆಯೆಂದೂ ಹೇಳಲಾಗಿದೆ.

೩ ವರ್ಷಗಳಲ್ಲಿ ಭಾರತದ ಮೋಟಾರುಗಳು

ಇನ್ನು ಮೂರು ವರ್ಷಗಳಲ್ಲಿ ಭಾರತದಲ್ಲೇ ತಯಾರಾದ ಮೋಟಾರು ಮತ್ತು ಲಾರಿಗಳು ಜನರ ಉಪಯೋಗಕ್ಕಾಗಿ ದೊರೆಯುವುವೆಂದು ಹೇಳಲಾಗಿದೆ.

ಆಲೂಗೆಡ್ಡೆ ರಫ್ತಿಗೆ ಪ್ರತಿಬಂಧಕ

ಆಲೂಗೆಡ್ಡೆಯನ್ನು ವಿಶೇಷವಾಗಿ ಹೊರಕ್ಕೆ ಸಾಗಿಸಲಾಗುತ್ತಿರುವುದರಿಂದ, ಅದರ ಬೆಲೆಯು ವಿಪರೀತವಾಗಿ ಏರಿದೆಯೆಂದೂ, ಈಗಿನ ಆಹಾರ ಪರಿಸ್ಥಿತಿಯ ದೃಷ್ಟಿಯಿಂದ ಅದನ್ನು ತಡೆಗಟ್ಟಬೇಕಾಗಿರುವುದರಿಂದಲೂ ಯಾರೂ ಅದನ್ನು ರಫ್ತು ಮಾಡಕೂಡದೆಂದೂ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ಬಾಲಕರ ಧೂಮಪಾನಕ್ಕೆ ನಿಷೇಧ

೧೬ ವರ್ಷಕ್ಕಿಂತ ಕಡಿಮೆ ಇರುವ ಯುವಕರು ಧೂಮಪಾನ ಮಾಡುವುದನ್ನು ನಿಷೇಧಿಸಲು ಮದರಾಸ್ ಸರ್ಕಾರದವರು ಸಧ್ಯದಲ್ಲಿಯೇ ಒಂದು ಶಾಸನವನ್ನು ಜಾರಿಗೆ ತರಲಿರುವರೆಂದು ಹೇಳಲಾಗಿದೆ. ಧೂಮಪಾನ ಮಾಡುವವರನ್ನು ಶಿಕ್ಷೆಮಾಡದೆ ಅವರ ತಂದೆತಾಯಿಗಳಿಗೂ ಅಥವ ಪೋಷಕರಿಗೂ ಶಿಕ್ಷೆ ವಿಧಿಸುವ ವಿಶೇಷ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳಲಿರುವರೆಂದು ಹೇಳಲಾಗಿದೆ.

ಟ್ರಾಕ್ಟರುಗಳಲ್ಲಿ ರೇಡಿಯೋ

ಅಮೇರಿಕಾದಲ್ಲಿ ಭೂಮಿಯನ್ನು ಉಳುವ ಟ್ರಾಕ್ಟರುಗಳಿಗೂ ರೇಡಿಯೋ ಸೆಟ್ಟುಗಳನ್ನು ಇಡಲಾಗಿದೆಯೆಂದೂ, ಅದರಿಂದ ಕೆಲಸಗಾರರು ತಮ್ಮ ಕೆಲಸದ ಜೊತೆಗೆ ಸಂಗೀತವನ್ನು ಕೇಳಲು ಸಾಧ್ಯವಾಗುವುದೆಂದೂ ಹೇಳಲಾಗಿದೆ.

ಛಳಿಗಾಲಕ್ಕೆ ಅವಶ್ಯಕವಾದ

ಕಾಶ್ಮೀರ ಶಾಲುಗಳು, ರಗ್ಗುಗಳು ಮತ್ತು ವುಲ್ಲನ್ ಸ್ವೆಟರುಗಳು

ಈಗತಾನೆ ಬಂದಿವೆ.

ವಿಜಯಲಕ್ಷ್ಮೀ ವಿಲಾಸ

ಶಿವರಾಂಪೇಟೆ, ಈವನಿಂಗ್ ಬಜಾರ್ ಬಿಲ್ಡಿಂಗ್, ಮೈಸೂರು.

ಕೋತಿಗಳನ್ನು ಕೊಲ್ಲುವ ಯೋಜನೆ

ಪ್ರತಿಯೊಂದು ತಿಂಗಳಿನ ಮೊದಲ ವಾರವನ್ನು ಕೋತಿಗಳನ್ನು ಕೊಲ್ಲುವ ವಾರವನ್ನಾಗಿ ಆಚರಿಸಬೇಕೆಂದು, ... ಯ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯ ಅಂಗವಾಗಿ ಇದನ್ನು ಆಚರಿಸಲಾಗುವುದೆಂದೂ, ಕಳೆದ ತಿಂಗಳಿನಲ್ಲಿ ಹೆಚ್ಚು ಕೋತಿಗಳನ್ನು ಕೊಂದವರಿಗೆ ಬಹುಮಾನವನ್ನು ಕೊಡಲಾಗುವುದೆಂದೂ, ಇವರಲ್ಲಿ ಎಲ್ಲರೂ ಸಹಕರಿಸಬೇಕೆಂದೂ, ಅವರು ಪ್ರಾರ್ಥಿಸಿರುತ್ತಾರೆ.

ಕರ್ನಾಟಕ ಏಕೀಕರಣದ ಅವಶ್ಯಕತೆ

ಮೈಸೂರು ವಿದ್ಯಾರ್ಥಿ ಸಂಘದ ... ಯದಲ್ಲಿ ಕಳೆದ ಭಾನುವಾರ ಬನುಮಯ್ಯನವರ ಹೈಸ್ಕೂಲಿನಲ್ಲಿ ಕರ್ನಾಟಕ ಏಕೀಕರಣದ ಸಭೆಯು 'ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಸುಬ್ರಹ್ಮಣ್ಯರಾಜೇ ಅರಸ್, ಗೋಪಾಲಕೃಷ್ಣ ಅಡಿಗ, ಕೆ. ಎಸ್. ... ಶೀ. ಬಿ. ಕೆ. ಎಸ್ ಮೂರ್ತಿ, ರಾಮು ಮುಂತಾದವರು ಭಾಷಣ ಮಾಡಿ ಏಕೀಕರಣದ ಅವಶ್ಯಕತೆಯನ್ನು ವಿವರಿಸಿದರು.

ಅಧ್ಯಕ್ಷರು ಭಾಷಣ ಮಾಡಿ, ಭಾಷಾವಾರು ಪ್ರಾಂತ್ಯಗಳ ರಚನೆ ಬಗ್ಗೆ ... ಸಮಿತಿಯವರು ಸಲಹೆಯನ್ನು ... ಕರ್ನಾಟಕ ಪ್ರಾಂತ್ಯ ರಚನೆ ಬಗ್ಗೆ ... ಜನಿಕರೆಲ್ಲರೂ ದುಡಿಯಬೇಕೆಂದು ... ದರು.

ಪ್ರಭಾ ೩ 24-12-48 ರಿಂದ ಅಪೂರ್ವ ಆರಂಭ

ದಿನವಹಿ ಮೂರು ಪ್ರದರ್ಶನಗಳು

ಆಜ್-ಕಿ-ರಾತ್

• ಮೋತೀಲಾಲ್, • ಸುರೈಯ್ಯ, • ಷಾ ನವಾಜ್ ಮತ್ತು • ಯಾಕೂಬ್ ನಟಿಸಿರುವ ಹಿಂದಿ ಚಿತ್ರ

—: ಇದರೊಂದಿಗೆ :—

ಬೊಂಬಾಯಿನಲ್ಲಿ ಕಡೇ ಬ್ರಿಟಿಷ್ ಸೈನಿಕರ ಬೀಳ್ಕೊಡುಗೆ, ಮುಲುಂಡದಲ್ಲಿ ಭಾರತೀಯ ವಾಣಿಜ್ಯ ಪ್ರದರ್ಶನ, ದೆಹಲಿಯಲ್ಲಿ ಸೈನಿಕರ ಪ್ರದರ್ಶನ ಮತ್ತು ರಾಜಕೋಟೆಯಲ್ಲಿ ಸೌರಾಷ್ಟ್ರ ದಿನಾಚರಣೆಯ ನ್ಯೂಸ್ ರೀಲನ್ನು ಪ್ರದರ್ಶಿಸಲ್ಪಡುತ್ತಿದೆ.

ಶ್ರೀ ಚಾಮುಂಡೇಶ್ವರಿ ಟಾಕೀಸ್

24-12-48 ರಿಂದ :: ದಿನವಹಿ ೩ ಆಟಗಳು

೨೦ ಲಕ್ಷ ರೂ.ಗಳ ತಯಾರಿಕೆ ಚಿತ್ರ!

ಮೋಹಕ ನೃತ್ಯಗಳು ಇಂಪಾದ ಗಾನ!!

ಸಾಮ್ರಾಟ್ ಅಶೋಕ್ (ಹಿಂದಿ)

ಭೂಮಿಕೆ:-ಕ್ರಿವೀಣಾ, § ಸಪ್ರು, § ಉಲ್ಹಾಸ್, § ಶಾಮ್ಲಾಲ್, § ಮುಸಾರಬಾನು...

॥ ಜೈ ಹಿಂದ್ ॥

ಬಂದು ನೋಡಿ ... ಮರೆಯ ಬೇಡಿ

—: ಜಯಲಕ್ಷ್ಮೀ ನಾಟಕ ಸಭಾ, ಸೇಲಂ :—

ಕ್ಯಾಂಪ್.— ಕೊಳ್ಳೆಗಾಲ

ಅನೇಕ ಚಲನ ಚಿತ್ರ ನಟನಟಿಯರಿಂದ ಕೊಳ್ಳೆಗಾಲದ ಶ್ರೀ ರಾಜರಾಜೇಶ್ವರೀ ಥಿಯೇಟರಿನಲ್ಲಿ

ತೆಪ್ಪೋತ್ಸವ ಛಾಪೆಯಲ್ಲಿ ತಾ॥ 27 12-1ನೇ ಸೋಮವಾರ ರಾತ್ರಿ 9-30 ಗಂಟೆಗೆ ಅಭಿನಯಿಸಲ್ಪಡುವ

ಲಲಿತಾ ಮನೋಹರಿ

ಎಂಬ ನಾಟಕವನ್ನು ತಪ್ಪದೇ ಬಂದು ನೋಡಿರಿ. ಅಂತೆಯೇ ಮುಂದಿನ ವಿವರಗಳನ್ನು ನೋಟೀಸಿನಲ್ಲಿ ಕಾಣಿರಿ.

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

22-12-48 ರಿಂದ 4 ದಿನಗಳು

Warner's most Adventure Drama of the East in Gorgeous Technicolor

THE DESERT SON

(ದಿ ಡೆಸರ್ಟ್ ಸಾಂಗ್)

(ವರ್ಣರಂಜಿತ ಚಿತ್ರ)

Coming shortly

Marie Antoinette

CAPTAIN FROM CASTILE

(Technicolor)

QUESTIONS & ANSWERS

Mysore S.S.L.C Public Examination

OPTIONAL ALGEBRA

1940-1948

(Including Supplementary)

For books apply to:

N. Subhramanya, B.Sc.

.03 "Nirmala" Dewan Road, MYSORE

Price Re 1—0—0

... "..."

ಬೆಂಗಾಲ್ ಸಿಲ್ಕ್ ಸೀರೆಗಳು

...

ಬಹದೂರ್ ಕಂಪೆನಿ

...

ಫೋ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭ | ಗುರು ವಾರ ೩೧-೧-೪೮ | ಸಂಚಿಕೆ ೧೩೦

ಅಖಿಲ ಭಾರತ ವಿದ್ಯಾ ಸಮ್ಮೇಳನ

ಮೈಸೂರು ೩೧

ಇದೇ ೬ನೇ ತಾ|| ನಡೆಯಲಿರುವ ಅಖಿಲ ಭಾರತ ವಿದ್ಯಾ ಸಮ್ಮೇಳನಕ್ಕೆ ಬರಲಿರುವ ಪ್ರತಿನಿಧಿಗಳ ಸೌಕರ್ಯಕ್ಕಾಗಿ ಬೆಂಗಳೂರಿನಿಂದ ಮೈಸೂರಿಗೆ ೫ನೇ ತಾ|| ಮಧ್ಯಾಹ್ನ ೩-೩೦ ಗಂಟೆಗೆ ಸ್ಪೆಷಲ್ ರೈಲನ್ನು ಏರ್ಪಡಿಸಲಾಗಿದೆ. ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಇದೇ ೩೧ ರಿಂದ ಜನವರಿ ೩ ತಾ|| ವರೆವಿಗೆ ಪ್ರತಿನಿಧಿಗಳ ಸೌಲಭ್ಯಕ್ಕಾಗಿ ವಿಶ್ವವಿದ್ಯಾಲಯದ ರೋವರುಗಳ ಸಲಹಾ ಕಛೇರಿಯೊಂದನ್ನು ತೆರೆಯಲಾಗುವುದು. ಸಮ್ಮೇಳನದ ಅಂಗವಾಗಿ ಟೆನಿಸ್ ಪಂದ್ಯವನ್ನು ಏರ್ಪಡಿಸಲಾಗುವುದು. ಭಾಗವಹಿಸಲಿಚ್ಛಿಸುವವರು ಇದೇ ೩೧ ನೇ ತಾ|| ನೊಳಗಾಗಿ ೫ ರೂ ಪ್ರವೇಶ ಧನದೊಡನೆ ಹೆಸರುಗಳನ್ನು ಕಳುಹಿಸಬೇಕು ಎಂದು ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ತಿಪಟೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್

ಸ್ವಂ ಸು ಪ್ರೋ] ಬೆಂಗಳೂರು ೩೧

೨,೫೦,೦೦೦ ರೂ. ಖರ್ಚಿನಿಂದ ತಿಪಟೂರಿನಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿ ವ್ಯಾಪಾರಕ್ಕಾಗಿ ರೆಗ್ಯುಲೇಟೆಡ್ ಮಾರ್ಕೆಟನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ.

ಅರವಿಂದಘೋಷರಿಗೆ ಬಹುಮಾನ

ಆಂಧ್ರ ವಿಶ್ವ ವಿದ್ಯಾಲಯದ ರಾಷ್ಟ್ರೀಯ ಬಹುಮಾನವನ್ನು ಪುದುಚೇರಿಯಲ್ಲಿರುವ ಶ್ರೀ ಅರವಿಂದಘೋಷರಿಗೆ ವಿಶ್ವವಿದ್ಯಾಲಯದ ಉಪ ಸಭಾಪತಿಗಳಾದ ಡಾ|| ಸಿ ಆರ್ ರೆಡ್ಡಿಯವರು ಕಳೆದ ೨೦ ನೇ ತಾ|| ಖುದ್ದಾಗಿ ಹೋಗಿ, ಅರ್ಪಿಸಿದರು. ಶ್ರೀ ಅರವಿಂದರವರು ಡಾ|| ರೆಡ್ಡಿಯವರಿಗೆ ದರ್ಶನವಿತ್ತು, ಅರ್ಧ ಗಂಟೆ ಕಾಲ ಸಂಭಾಷಣೆ ನಡೆಸಿದರು. ಆಂಧ್ರ ದೇಶದವರಿಗೂ ಮತ್ತು ವಿಶ್ವ ವಿದ್ಯಾಲಯಕ್ಕೂ ಶುಭವು ಲಭಿಸಲೆಂದು, ಅವರು ಹಾರೈಸಿ, ಪ್ರತ್ಯೇಕ ಆಂಧ್ರ ಪ್ರಾಂತ ರಚನೆಯು ಶೀಘ್ರದಲ್ಲಿಯೇ ಸ್ಥಾಪಿತವಾಗುವುದೆಂದು ತಿಳಿಸಿದರು. ೧೯೫೦ ರಲ್ಲಿ ಶ್ರೀ ಅರವಿಂದರು ಮೌನವನ್ನು ತಾಳಿದ ಮೇಲೆ, ಸಾರ್ವಜನಿಕರೊಡನೆ ಮಾತನಾಡಿದುದು ಇದು ಮೂರನೇ ಬಾರಿ. ಪ್ರಥಮ ಬಾರಿ ೧೯೫೦ ರಲ್ಲಿ ಡಾ|| ರವೀಂದ್ರನಾಥ ಠಾಗೂರರವರಿಗೂ, ಎರಡನೇ ಬಾರಿ ೧೯೪೭ ರ ಕ್ರಿಪ್ಸ್‌ನ ಸಚಿವರಾದ ಸೂರ್ಮರವರಿಗೂ ದರ್ಶನ ಕೊಟ್ಟಿದ್ದರೆಂದೂ ಹೇಳಲಾಗಿದೆ. ಈಗ ಕೊಟ್ಟಿರುವುದು ಬಹುಮಾನವಲ್ಲವೆಂದೂ, ಇದೊಂದು ಮಹಾ ಗುರುವಿನ ಕಾಲಡಿಯಲ್ಲಿ ಸಮರ್ಪಣೆಯೆಂದೂ ಶ್ರೀ ರೆಡ್ಡಿಯವರು ತಿಳಿಸಿರುತ್ತಾರೆ.

ಶ್ರೀ ಗಣೇಶಾ ಟಾಕೀಸ್

31-1-48 ರಿಂದ

ಪ್ರತಿದಿನ 3 ಆಟಗಳು

ಆರ್ಯಮಾಲಾ

(ತಮಿಳು)

ಮುಖ್ಯಪಾತ್ರ — ● ಪಿ ಯು ಚಿನ್ನಪ್ಪ, ● ಎಂ ಎಸ್ ಸರೋಜಿನಿ ● ಕೃಷ್ಣನ್, ● ಮಧುರಂ

ನ್ಯಾಯಾಂಗ ಸಚಿವರ ಪ್ರವಾಸ

ಕೃಷ್ಣರಾಜನಗರ, ಪಿರಿಯಾಪಟ್ಟಣ ಹುಣಸೂರುಗಳಲ್ಲಿ

ಮೈಸೂರು ೩೧

ನಿನ್ನೆ ದಿನ ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಮೈಸೂರು ಜಿಲ್ಲೆಯ ಪ್ರವಾಸ ಕೈಕೊಂಡು ಕೃಷ್ಣರಾಜನಗರ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಿಗೆ ಭೇಟಿ ಕೊಟ್ಟರು. ಸಚಿವರ ಜೊತೆಯಲ್ಲಿ ಜಿಲ್ಲಾಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್. ಎಂ ಚೆನ್ನಬಸಪ್ಪನವರೂ ಸಹ ದಯಮಾಡಿಸಿದ್ದರು.

ಕೃಷ್ಣರಾಜನಗರದಲ್ಲಿ ಶ್ರೀಗಳಾದ ಬಸವರಾಜಪ್ಪ ಆರ್ ಬಿ ಪುಟ್ಟಬಸಪ್ಪ ಮತ್ತು ಚಿನ್ನಮಲ್ಲಶೆಟ್ಟರವರುಗಳು ಕೃಷ್ಣರಾಜನಗರಕ್ಕೆ ಹೊಳೆಯಿಂದ ನೀರು ಸರಬರಾಜು ಮಾಡುವುದು, ಪ್ಲೇಗನ್ನು ತಡೆಗಟ್ಟುವುದು, ಮಿಡ್ಲ್ ಸ್ಕೂಲ್ ಮತ್ತು ಹಂಪಾಪುರಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು, ಇವೇ ಮುಂತಾದವುಗಳ ಬಗ್ಗೆ ಅರಿಕೆಗಳನ್ನು ಮಾಡಿಕೊಂಡರು. ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಸಂಸ್ಥಾನದ ಎಲ್ಲಾ ಕಡೆಗೂ ಒದಗಿಸಲಾಗುವುದೆಂದೂ ಪ್ಲೇಗ್ ತಡೆಗಟ್ಟಲು ಡಿ ಡಿ ಟಿ ಉಪಯೋಗಿಸಲಾಗುವುದೆಂದೂ ಸಚಿವರು ಭರವಸೆ ಇತ್ತರು.

ಸಚಿವರು ಚುಂಚನಕಟ್ಟೆಗೆ ಭೇಟಿ ಇತ್ತು ಶ್ರೀ ರಾಮದೇವಸ್ಥಾನಕ್ಕೆ ದಯಮಾಡಿಸಿ ಸ್ಥಳ ಮಹಾತ್ಮೆಯನ್ನು ಅತ್ಯಂತ ಕುತೂಹಲದಿಂದ ಕೇಳಿ ತಿಳಿದುಕೊಂಡರು. ಜಿಲ್ಲಾ ಬೋರ್ಡಿನವರು ಕಟ್ಟಿಸಲಿರುವ ಸೇತುವೆಯ ಜಾಗವನ್ನೂ, ಆಸ್ಪತ್ರೆಯ ಕಟ್ಟಡವನ್ನೂ ಪರಿಶೀಲಿಸಿದರು. ಚುಂಚನಕಟ್ಟೆಗೆ ವಿದ್ಯುಚ್ಛಕ್ತಿ ಮತ್ತು ಹೈಸ್ಕೂಲನ್ನು ಕೊಡಿಸಲು ಆದಷ್ಟು ಜಾಗ್ರತೆ ಪ್ರಯತ್ನಿಸುವುದಾಗಿ ತಿಳಿಸಿದರು. ಕೆಡ್ತೂರಿಗೂ ಸಹ ಮಿಡ್ಲ್‌ಸ್ಕೂಲ್ ಮತ್ತು ವಿದ್ಯುಚ್ಛಕ್ತಿ ಬೇಗ ಕೊಡುವುದಾಗಿ ತಿಳಿಸಿದರು.

ಅನಂತರ ಸಚಿವರು ರಾಮನಾಥಪುರಕ್ಕೆ ಭೇಟಿ ಕೊಟ್ಟರು. ಪಂಚಾಯ್ತಿ ಮೆಂಬರುಗಳು ಬಿನ್ನವತ್ತಳೆಯನ್ನು ಅರ್ಪಿಸಿ, ಆಸ್ಪತ್ರೆ, ಹೈಸ್ಕೂಲ್, ವಿದ್ಯುಚ್ಛಕ್ತಿ, ಕೆರೆಕಾಮಗಾರಿ ಮತ್ತು ಬಸ್ ಲೈನ್‌ಗಳನ್ನು ಕೊಡಿಸಬೇಕೆಂದೂ ಪ್ರಾರ್ಥಿಸಿದರು. ಶ್ರೀ ಭಾಷ್ಯಂರವರು ಉತ್ತರವಿತ್ತು ಬಸ್ ಲೈನನ್ನು ಕೂಡಲೆ ಕೊಡಿಸಲಾಗುವುದೆಂದೂ, ಹೈಸ್ಕೂಲಿಗೆ ಗ್ರಾಮಸ್ಥರು ೩ ಭಾಗ ಹಣ ಕೊಟ್ಟರೆ ಮಿಕ್ಕರ್ಧವನ್ನು ಸರ್ಕಾರದವರು ಕೊಡುವುದಾಗಿಯೂ, ಮತ್ತು ವಿದ್ಯುಚ್ಛಕ್ತಿಯನ್ನು ಆದಷ್ಟು ಬೇಗನೆ ಒದಗಿಸಲಾಗುವುದೆಂದೂ ತಿಳಿಸಿದರು.

ಅತ್ತಿಗೋಡು, ಬೆಟ್ಟದಪುರದ ಗ್ರಾಮ ಪಂಚಾಯಿತಿಯವರಿತ್ತ ಬಿನ್ನವತ್ತಳೆಯನ್ನು ಸಚಿವರು ಸ್ವೀಕರಿಸಿ ಸೂಕ್ತ ಭರವಸೆಯನ್ನಿತ್ತು ಪಿರಿಯಾಪಟ್ಟಣಕ್ಕೆ ದಯಮಾಡಿಸಿದರು.

ಪಿರಿಯಾಪಟ್ಟಣದ ಪೌರಸಭೆಯ ಅಧ್ಯಕ್ಷರೂ ಮತ್ತು ಶ್ರೀ ವೆಂಕಟಸುಬ್ಬಯ್ಯನವರೂ ಸಚಿವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ, ಮಲೇರಿಯ ತಡೆಗಟ್ಟಲು, ಸಹಾಯ ಹೈಸ್ಕೂಲು ಮತ್ತು ವಿದ್ಯುತ್ ಸರಬರಾಜು ಇವೇ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿದರು. ಪಿರಿಯಾಪಟ್ಟಣಕ್ಕೆ ವಿದ್ಯುಚ್ಛಕ್ತಿಯನ್ನು ೧೯೪೯ ರ ಒಳಗಾಗಿ ಒದಗಿಸಲಾಗುವುದೆಂದು ಸಚಿವರು ತಿಳಿಸಿದರು.

ಹುಣಸೂರಿನಲ್ಲಿ ಸಚಿವರು ಪ್ಲೈವುಡ್ ಕಾರ್ಖಾನೆಗೆ ಭೇಟಿ ಇತ್ತು ಕೆಲಸಗಾರರ ಕುಂದುಕೊರತೆಗಳನ್ನು ವಿಚಾರಿಸಿದರು. ಬಾಕಸ್ಸಿಗ ಭೇಟಿ ಇತ್ತು ಅದರ ಬಗ್ಗೆ ಸೂಕ್ತ ಸಲಹೆಯನ್ನಿತ್ತು, ಬಹಿರಂಗ ಸಭೆಯಲ್ಲಿ ಭಾಗವಹಿಸಿದರು. ಪುರಸಭಾಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾಸ ಅಯ್ಯಂಗಾರ್ಯರು ಸಚಿವರಿಗೆ ಸ್ವಾಗತಕೋರಿ ಕಾಫಿ ಕ್ಯೂರಿಂಗ್ ವರ್ಕ್ಸ್, ಪ್ಲೈವುಡ್ ಕಾರ್ಖಾನೆ ಮತ್ತು ಹುಣಸೂರು ವರ್ಕ್‌ಷಾಪ್‌ಗಳಲ್ಲಿರ ಕೂಲಿಗಾರರ ಕಷ್ಟ ನಿಷ್ಠುರಗಳನ್ನು ತಿಳಿಸಿದರು. ರೇಷನ್ ವ್ಯವಸ್ಥೆ, ನೀರು ಎಣ್ಣೆ ಹೆಚ್ಚಿಕೆ ಮುಂತಾದವುಗಳ ಅವ್ಯವಸ್ಥೆಗಳನ್ನೂ ಸಚಿವರಿಗೆ ತಿಳಿಸಲಾಯಿತು.

ಶ್ರೀ ಭಾಷ್ಯಂರವರು ಉತ್ತರವಿತ್ತು ದೇಶದಲ್ಲಿ ಉಂಟಾಗಿರುವ ಆಹಾರ ಅಭಾವವನ್ನು ವಿವರಿಸಿ, ಎಲ್ಲರೂ ಸರ್ಕಾರದೊಡನೆ ಸಹಕರಿಸಿ ಹೆಚ್ಚು ಬೆಳೆ ಬೆಳೆಯಲು ಪ್ರಯತ್ನಿಸಬೇಕೆಂದೂ, ತಿಳಿಸಿದರು. ಕಳ್ಳಸಂತೆ ಮಾರಾಟಗಾರರನ್ನು ಹಿಡಿಯಲು ಮಹಾಜನರು ಸಹಕರಿಸಬೇಕೆಂದು ಹೇಳಿದರು. ಕೂಲಿಗಾರರು ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ನ್ಯಾಯವಾದ ಸೌಲಭ್ಯಗಳಿಗಾಗಿ ಶ್ರಮಿಸಬೇಕೆಂದೂ ತಿಳಿಸಿದರು. ಸರ್ಕಾರವೂ ಸಹ ಕೂಲಿಗಾರರ ಬೇಡಿಕೆಗಳನ್ನು ಸಾವಧಾನದಿಂದ ಪರಿಶೀಲಿಸಿ, ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದೆಂದು ತಿಳಿಸಿದರು.

ಇಂಡೋನೇಷ್ಯಕ್ಕೆ ಸಹಾಯ

ಡಚ್ಚರ ಆಕ್ರಮಣದಿಂದ ಕಷ್ಟಪಡುತ್ತಿರುವ ಇಂಡೋನೇಷ್ಯನರಿಗೆ ಕೂಡಲೇ ಸಹಾಯ ನೀಡುವ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸಮ್ಮೇಳನವೊಂದನ್ನು ಕರೆಯಬೇಕೆಂದು ಬರ್ಮಾ ಪ್ರಧಾನಿಯವರು ಪಂಡಿತ ನೆಹರೂರವರಿಗೆ ಮನವಿ ಮಾಡಿರುತ್ತಾರೆ. ಇಂಡೋನೇಷ್ಯದ ಪರಿಸ್ಥಿತಿಯ ಬಗ್ಗೆ ಭಾರತ ಸರ್ಕಾರವು ಬರ್ಮಾ ಮತ್ತು ಇತರ ಏಷ್ಯಾ ದೇಶಗಳೊಡನೆ ಮಾತುಕತೆ ನಡೆಸುತ್ತಿದ್ದಾರ

ರಾಜಗೋಪಾಲರವರ ಆಮರಣಾಂತ ಉಪವಾಸ

ಮೈಸೂರು ೩೧

ಟೌನ್‌ಹಾಲ್ ಮೈದಾನದಲ್ಲಿ ಕಳೆದ ೪ ದಿನಗಳಿಂದಲೂ ಆಮರಣಾಂತ ಉಪವಾಸವನ್ನು ಕೈಗೊಂಡಿರುವ ಶ್ರೀ ಟಿ. ರಾಜಗೋಪಾಲರವರನ್ನು ನಿನ್ನೆ ರಾತ್ರಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚೆನ್ನಯ್ಯನವರೂ ಮತ್ತು ಶ್ರೀಗಳಾದ ವೆಂಕಟರಮಣಯ್ಯ, ಕೆ ಪುಟ್ಟಸ್ವಾಮಿ, ಮುಂತಾದವರೂ ಭೇಟಿ ಮಾಡಿ, ಅವರ ಕುಂದುಕೊರತೆಗಳನ್ನು ವಿಚಾರಿಸಿ, ಉಪವಾಸವನ್ನು ಮುಕ್ತಾಯಗೊಳಿಸಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀ ರಾಜಗೋಪಾಲರವರು ತಾವು ಏತಕ್ಕಾಗಿ ಉಪವಾಸವನ್ನು ಕೈಗೊಂಡಿರುವುದನ್ನು ವಿವರಿಸಿ, ಕೂಡಲೇ ಕಾಂಗ್ರೆಸ್ ಕಾರ್ಯಕರ್ತರುಗಳ ಸಭೆಯನ್ನು ಕರೆಯಬೇಕೆಂದೂ, ಅಲ್ಲಿ ತಾವು ವಿವರಗಳನ್ನು ಕೊಡುವುದಾಗಿಯೂ ತಿಳಿಸಿದರೆಂದು ಗೊತ್ತಾಗಿದೆ. ಈ ದಿನ ಬೆಳಗ್ಗೆ ಶ್ರೀ ಎಂ. ಎನ್ ಜೋಯಿಸರು ಅವರನ್ನು ಕಂಡು ಮಾತು ಕತೆ ನಡೆಸಿದರು. ಶ್ರೀ ರಾಜಗೋಪಾಲರವರು ಈ ದಿನವೂ ತಮ್ಮ ಉಪವಾಸವನ್ನು ಮುಂದುವರಿಸುತ್ತಿದ್ದಾರೆ.

ಮೈಸೂರು ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಈ ದಿನ ಬೆಳಿಗ್ಗೆ ಸೇರಿ, ಕೆಳಗೆ ಕಂಡ ನಿರ್ಣಯವನ್ನು ಮಾಡಿತು.

ಮೊಹಲ್ಲಾ ಕಾಂಗ್ರೆಸ್ ಕೆಲಸಗಾರರ ಬ್ಲಾಕ್ಬರಾದ ಶ್ರೀ ಟಿ. ರಾಜಗೋಪಾಲರವರು ಈ ನಿರ್ಧಾರಕ್ಕೆ ನಿರ್ದಿಷ್ಟವೂ, ಕಾಲಾವಕಾಶವೂ ಕೊಡದ ಕಾಂಗ್ರೆಸ್ಸಿನ ನಿಯಮಕ್ಕೂ, ಸತ್ಯಾಗ್ರಹದ ಮೂಲ ತತ್ವಕ್ಕೂ ವಿರೋಧವಾಗಿ ದುಡುಕಿನಿಂದ ಈ ನಿರ್ಧಾರಕ್ಕೆ ಬಂದಿರುವುದು ಕ್ರಮಬದ್ಧವಲ್ಲವೆಂದೂ, ಶ್ರೀಯುತರು ತಮ್ಮ ನಿರ್ಧಾರವನ್ನು ಕೂಡಲೆ ಕೊನೆಗಾಣಿಸಿ ಕಾಂಗ್ರೆಸ್ಸಿನ ಶಿಸ್ತಿಗೆ ಮನ್ನಣೆ ಕೊಡಬೇಕೆಂದು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ.

ಜ|| ಟೋಜೋರವರನ್ನು ಗಲ್ಲಿಗೇರಿಸಲಾಯಿತು

ಮರಣ ದಂಡನೆಗೆ ಗುರಿಯಾಗಿದ್ದ ಜಪಾನಿನ ಮಾಜಿ ಪ್ರಧಾನಿ ಜ|| ಟೋಜೋ ಮತ್ತು ೬ ಮಂದಿಯನ್ನು ಸುಗಾಮೊ ಜೈಲಿನಲ್ಲಿ ನಿನ್ನೆ ಗಲ್ಲಿಗೇರಿಸಲಾಯಿತು.

ರಾಜಕಮಲ್

ಟಾಕೀಸ್

೨೯-೧೨-೪೮ ರಿಂದ

ಯಶಸ್ವಿ 2ನೇ ವಾರ

ಪ್ರತಿ ದಿನ ೩ ಆಟಗಳು

ಭಕ್ತ

ಕುಂಬಾರ

ಕನ್ನಡ

—Morning shows:—

From 29—12—48

For 3 days

Murder in the Music Hall

with Vera Ralston, William Marshall & Kelly

ಸ್ಕೌಟ್ ಸಂಸ್ಥೆಗಳ ಐಕ್ಯತೆ

ಭಾರತದಲ್ಲಿರುವ ಹಿಂದೂಸ್ಥಾನ್ ಸ್ಕೌಟ್ ಮತ್ತು ಗರ್ಲ್ ಗೈಡ್ಸ್ ಸಂಸ್ಥೆಗಳನ್ನು ಒಂದುಗೂಡಿಸಿ, ಹಿಂದ್ ಸ್ಕೌಟ್ ಮತ್ತು ಗೈಡ್ಸ್ ಎಂಬ ನೂತನ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ

23—12—48 ರಿಂದ
ಪ್ರತಿದಿನ 2 ಆಟಗಳು
ಪ್ರಕಾಶ್ ಪಿಕ್ಚರ್ಸ್‌ರವರ
ನವಾಬ್ ಕೋ-ಬದಲ್ ದಾಲೋ
ಪಾತ್ರ — ಅರುಣ್ ಯಾಕೂಬ್, ಶಾಂತಾರಿ, ವ್ಯಮಳ
ಒಲಂಪಿಯಾ ಟಾಕೀಸ್

ಸತ್ತವನು ಬದುಕಿದನು

ಇಟಲಿಯ ಸಿಲೋಟಿಯೊ ಎಂಬುವನು ಮೃತಪಟ್ಟಿರುವನೆಂದು ಆತನ ಬಂಧುಗಳು ತಿಳಿದು ಆತನನ್ನು ಸ್ಮಶಾನಕ್ಕೆ ಕರೆದೊಯ್ದು ಸಮಾಧಿ ಮಾಡಬೇಕೆಂದಿರುವ ಸಮಯದಲ್ಲಿ ಆತನು ಎದ್ದು ಕುಳಿತನೆಂದೂ, ಅದನ್ನು ಕಂಡು ಅಲ್ಲಿದ್ದವರು ಓಡಿಹೋದರೆಂದೂ ಹೇಳಲಾಗಿದೆ ಅಲ್ಲಿದ್ದ ಶವದ ಪೆಟ್ಟಿಗೆ ಮತ್ತು ಉರಿಯುತ್ತಿದ್ದ ಮೇಣದ ಬತ್ತಿಯನ್ನು ಕಂಡು ಆತನು ಮೂರ್ಛೆಹೋದನು ಅನಂತರ ವೈದ್ಯರು ಆತನನ್ನು ಸಂತೈಸಿದ ಮೇಲೆ ಎಲ್ಲರೊಡನೆಯೂ ಆತನು ತನ್ನ ತಿಥಿ ಊಟದಲ್ಲಿ ಭಾಗವಹಿಸಿದನೆಂದು ವರದಿಯಾಗಿದೆ

ಗಾಯತ್ರೀ ಟಾಕೀಸ್
ಪ್ರತಿ ದಿನ 3 ಆಟಗಳು
23-12-48ರಿಂದ 4 ದಿನಗಳು
Warner's most Adventure Drama of the East in Gorgeous Technicolor
THE DESERT SONG
(ದಿ ಡೆಸರ್ಟ್ ಸಾಂಗ್)
(ವರ್ಣರಂಜಿತ ಚಿತ್ರ)
Next Change :-
M.G M's Special Road Show Feature
ZIEG FIELD FOLLIES
(Technicolor)

ಗೃಹಕೃತ್ಯದ ನೋಟೀ

ಕೃಷ್ಣರಾಜನಗರದ ತಾಲ್ಲೂಕು ಸ… ಮದ ಹೋಬಳಿ ಚಿಟ್ಟಹಳ್ಳಿ ಗ್ರಾ… ರುವ ಗಂಗಡಿಕಾರ ಒಕ್ಕಲಿಗರ ಜಾ… ಜವರೇಗೌಡನ ಮಗ ಚಿಠಾಯ್ಯ… ಸುಮಾರು ೩೦ ವರ್ಷದ ಹುಟ್ಟಯ್ಯ… ಮೂಲಕ ಸಮಸ್ತ ಜನಗಳಿಗೂ ತಿ… ಡಿಸುವುದೇನಂದರೆ :-

ಈ ಕೆಳಗೆ ಷೆಡ್ಯೂಲಿನಲ್ಲಿ ನಮೂ… ವ ಸ್ವತ್ತುಗಳು ನನಗೂ ಮತ್ತು … ಕ್ಕಪ್ಪ ಬೋರೇಗೌಡರಿಗೂ ಸಹ … ತವಾದ ಸ್ವತ್ತುಗಳಾಗಿರುತ್ತವೆ … ಮತ್ತು ನನ್ನ ಚಿಕ್ಕಪ್ಪನೂ ಸಹ … ಏಕ ಕುಟುಂಬದಲ್ಲಿ ವಾಸಮಾಡುತ್ತ… ತ್ತೇವೆ. ನಮ್ಮಗಳ ಮಧ್ಯೆ, ಸ್ವಲ್ಪ… ಸ್ತಾಪ ಬಂದು, ನಾನು ಷೆಡ್ಯೂಲು ಸ್ವ… ಳಲ್ಲಿ ನನಗಿರತಕ್ಕ ಅರ್ಧ ಹಿಸ್ಸೆ … ನನ್ನ ಚಿಕ್ಕಪ್ಪನಿಂದ ಪಾಲು ಮಾ… ಡು, ಸ್ನೇಹದಿಂದಲೇ ಬೇರೆ ವಾಸ… ಬೇಕೆಂಬ ನನ್ನ ಇರಾದೆಯನ್ನು ನ… ಕ್ಕಪ್ಪನಿಗೆ ತಿಳಿಸಿದಮೇಲೆ, ಕುಟು… ಯಜಮಾನನಾದ ನನ್ನ ಚಿಕ್ಕಪ್ಪನು, … ಮೋಸ ಮಾಡಬೇಕೆಂಬ ಬದ್ಧ … ಯಿಂದ, ನಮ್ಮಗಳ ಒಟ್ಟು ಕುಟು… ಯಾವ ದರದೂ ಮತ್ತು ಫಾಯಿದೆ… ಸಹ ಇಲ್ಲದ ಇದ್ದಾಗ್ಯೂ, ಷೆ… ಸ್ವತ್ತುಗಳನ್ನು ಪರಭಾರೆ ಮಾಡುವ … ದೂದಿನಲ್ಲಿರುತಾನೆ ಷೆಡ್ಯೂಲು … ಗಳಲ್ಲಿ ನನಗಿರತಕ್ಕ ಅರ್ಧ ಹಿಸ್ಸೆ … ವ್ಯತಿರಿಕ್ತವಾಗಿ ಯಾರೇ ಆಗಲಿ, … ಳನ್ನು ಕ್ರಯ, ಭೋಗ್ಯ, ಆಧಾರ … ಮಾಡಿಕೊಂಡಲ್ಲಿ, ಅವುಗಳು ನನ್ನ… ಬದ್ಧಪಡಿಸುವುದಿಲ್ಲ

ಷೆಡ್ಯೂಲು

(೧) ಕೃಷ್ಣರಾಜನಗರದ ತಾಲ್ಲೂ… ಸಾಲಿಗ್ರಾಮದ ಹೋಬಳಿ ಚಿಟ್ಟಹಳ್ಳಿ… ಮದಲ್ಲಿರತಕ್ಕದ್ದು ಸರ್ವೆ ನಂಬರುಗಳ… ೨೬, ೩೬, ೨೭-೩, ೫೨-೧, ೧… ೧೬೮-೧, ೨೭-೨. ೨೭-೪.

(೨) ಡಿಟೋ ಸ್ಥಳದಲ್ಲಿರುವ … ಗಳು, ಡೋರ್ ನಂಬರು ೧೧೧, … ಮತ್ತು ೧೧೩, ಖಾಲಿ ನಿವೇಶನ, … ರು ೧೧೪.

(೩) ಕೃಷ್ಣರಾಜಪೇಟೆ ತಾಲ್ಲೂಕು … ಹೆಬ್ಬಾಳು ಹೋಬಳಿ ಸರ್ವಮಾನ್ಯ … ಹೊಳಲು ಗ್ರಾಮದಲ್ಲಿರುವುದು ಸರ್ವೆ… ಬರುಗಳ ೫೨ ರಲ್ಲಿ ೧ ಎಕರೆ, ೬೧-೩… ೧ಎಕರೆ ೧೮ ಗುಂಟೆ.

(೪) ೬ ಎಮ್ಮೆ, ೧೫ ಹಸುಗಳು, … ಕುರಿ,

(೫) ನಗದಾಗಿರುವ ಸುಮಾರು ೫… ರೂಪಾಯಿಗಳು ಮತ್ತು ಸುಮಾರು … ರೂಪಾಯಿಗಳ ಕಂಚು ಮುಟ್ಟು

* ಈ ಎಡಗೈ ಹೆಬ್ಬೆಟ್ಟಿನ ಗುರ್ತ… ಜು ಜವರೇ ಗೌಡನ ಮಗ ಸುಬ್ಬೇ… ಹಾಕಿದ್ದು

ಪ್ರಭಾ
24-12-48
ರಿಂದ ಅನೋಖೆ ಪ್ರಾರಂಭ
ಆಜ್ -ಕಿ- ರಾತ್
ದಿನವಹಿ 1 ಆಟಗಳು

• ಮೋತೀಲಾಲ್, • ಸುರೈಯ್ಯಾ, • ಷಾ ನವಾಜ್ ಮತ್ತು • ಯಾಕೂಬ್
ನಟಿಸಿರುವ ಹಿಂದಿ ಚಿತ್ರ
ಇದರೊಂದಿಗೆ — ಬೊಂಬಾಯಿನಲ್ಲಿ ಕಡೇ ಬ್ರಿಟಿಷ್ ಸೈನಿಕರ ಬೀಳ್ಕೊಡುವಿಕೆ, ಮಲಯದಲ್ಲಿ ಭಾರತೀಯ ವಾಣಿಜ್ಯ ಪ್ರದರ್ಶನ, ದೆಹಲಿಯಲ್ಲಿ ಸೈನಿಕರ ಪ್ರದರ್ಶನ ಮತ್ತು ರಾಜಕೋಟೆಯಲ್ಲಿ ಸೌರಾಷ್ಟ್ರ ದಿನಾಚರಣೆಯ ನ್ಯೂಸ್ ರೀಲನ್ನೂ ಪ್ರದರ್ಶಿಸಲ್ಪಡುತ್ತದೆ



ಪ್ರಭುದೇವಾ ಟಾಕೀಸ್
24-12-48
ನೇ ಶುಕ್ರವಾರದಿಂದ
ಅನೋಖೆವಾದ
4ನೇ ವಾರ
ಪ್ರತಿ ದಿನ 4 ಆಟಗಳು
(ತಮಿಳು ಚಿತ್ರ)
— ಮುಖ್ಯ ಪಾತ್ರ : —
§ ವಿ ನಾಗಯ್ಯ,
§ ಪುಷ್ಪವಲ್ಲಿ,
§ ನಾರಾಯಣರಾವ್,
§ ಸುಜಾತಾ,
ಮು-ಚಾದವರು.

Edited, printed and published by A R Nagarajan the Sadhvi Press, D. Subb… Road, Mysore

ಇನ್ನೂರು ಹೊಸಾಹೊಸ ನಮೂನೆಯಲ್ಲಿ 300 ಬೆಂಗಾಲ್ ಸಿಲ್ಕ್ ಸೀರೆಗಳಿಗೆ
ಬೆಂಗಾಲ್ ಸಿಲ್ಕ್ ಸೀರೆಗಳ ವೈಖರಿಯನ್ನೂ ಅವುಗಳ ಅಂದ ಚಂದವಾದ ಬಣ್ಣಗಳನ್ನೂ ನೋಡಬೇಕಾದರೆ ಬಾಬುಸಾರ್ ಕಂಪೆನಿಗೆ ಹೋಗಿ. 6—7—8—9 ಗಜದ ಸೀರೆಗಳು ಬಹಳ ಸುಲಭ ಬೆಲೆಯಲ್ಲಿ ಸಿಗುತ್ತವೆ. ನೀವು ಇವರಲ್ಲಿರುವ ಹೊಸಾತರಹ ನಮೂನೆಗಳನ್ನು ನೋಡಿದರೆ ಸಂತೋಷಪಡುವಿರಿ

ಫೋ॥ ನಂ. 793 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಶುಕ್ರವಾರ ೨೪-೧೨-೪೮ [ಸಂಚಿಕೆ ೧೫೧

ರಾಜ್‌ರವರ ದಸ್ತಗಿರಿ ಜೈಲಿನಲ್ಲೂ ಉಪವಾಸ

ನ್ಯಾಯಾಂಗ ಸಚಿವರ ಪ್ರವಾಸ

ಮೈಸೂರು ೨೩

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ನೆನ್ನೆ ದಿನ ನಂಜನಗೂಡು, ಟಿ. ನರಸೀಪುರ, ಯಳಂದೂರು, ಚಾಮರಾಜನಗರಗಳಲ್ಲಿ ಪ್ರವಾಸ ಮಾಡಿದರು

ನಂಜನಗೂಡಿನಲ್ಲಿ ಸಚಿವರಿಗೆ ಪುರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸಿದರು. ಟಿ. ನರಸೀಪುರದಲ್ಲಿ ಕಾಂಗ್ರೆಸ್ ನಾಯಕರು ಸ್ವಾಗತ ಬಯಸಿದರು. ಅಲ್ಲಿಂದ ಸಚಿವರು ಮೂಗೂರು, ಸಂತೇಮರಳ್ಳಿ ಮಾರ್ಗವಾಗಿ ಯಳಂದೂರಿಗೆ ತೆರಳಿದರು. ಯಳಂದೂರಿನ ಪ್ರಜೆಗಳು ಶ್ರೀ॥ ಭಾಷ್ಯಂರವರಿಗೆ ಅಭೂತಪೂರ್ವ ಸ್ವಾಗತವನ್ನು ನೀಡಿದರು. ಅಲ್ಲಿನ ಮುನಿಸಿಪಲ್ ಹೈಸ್ಕೂಲ್ ವಿದ್ಯಾರ್ಥಿ ಸಂಘದಲ್ಲಿ ಸಚಿವರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನೂ ಅನಾವರಣ ಮಾಡಿದರು.

ತರುವಾಯ ಸಚಿವರು ಚಾಮರಾಜನಗರಕ್ಕೆ ಭೇಟಿಯಿತ್ತು ಅಲ್ಲಿನ ಮುಖಂಡರೊಡನೆ ನೀರಾವರಿ ಕೆಲಸ ಕಾರ್ಯಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದು ಮತ್ತು ಅಲ್ಲಿ ಒಂದು ಇಂಟರ್ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಮಾತುಕತೆ ನಡೆಸಿದರು.

ಡಚ್ಚರ ಮೇಲೆ ಭಾರತ ಸರ್ಕಾರದ ಪ್ರತಿಕ್ರಿಯೆ

ಇಂಡೊನೇಷಿಯಾದಲ್ಲಿ ಡಚ್ಚರು ರಿಪಬ್ಲಿಕನ್ನರ ಮೇಲೆ ಕೈಕೊಂಡಿರುವ ದುರಾಕ್ರಮಣ ನೀತಿಯನ್ನು ಖಂಡಿಸಿ ಭಾರತ ಮತ್ತು ಪಾಕಿಸ್ತಾನ್ ಸರ್ಕಾರಗಳು ಡಚ್ ರ ನೌಕೆಗಳು ತಮ್ಮ ಬಂದರುಗಳಿಗೆ ಬರಕೂಡದೆಂದೂ ಮತ್ತು ಡಚ್ ವಿಮಾನಗಳು ತಮ್ಮ ದೇಶಗಳ ಮೇಲೆ ಹಾರಾಡಕೂಡದೆಂದೂ ಪ್ರತಿಬಂಧಿಸಿವೆ.

ನೈಜಾಮರಿಗೆ ೧ ಕೋಟಿ ರೂ. ರಾಜಧನ

ಹೈದರಾಬಾದ್ ನೈಜಾಮರ ಪ್ರೀವಿ ಪರ್ಸನ್ನು ಒಂದು ಕೋಟಿ ರೂಪಾಯಿಗಳಿಗೆ ನಿಗದಿ ಮಾಡಲಾಗುವುದೆಂದೂ, ನಿಜಾಮರು ತಮ್ಮ ಜಹಗೀರು ಮತ್ತು ಇತರ ಬಾಬುಗಳಿಂದ ಬರುವ ೨॥ ಕೋಟಿ ರೂ.ವನ್ನು ಸರ್ಕಾರಕ್ಕೆ ಕೊಡಲು ಒಪ್ಪಿರುವರೆಂದೂ, ಈ ಬಗ್ಗೆ ಪ್ರಭುತ್ವ ಘೋಷಣೆಯು ಸಧ್ಯದಲ್ಲಿಯೇ ಹೊರಬೀಳುವುದೆಂದೂ ತಿಳಿದುಬಂದಿದೆ

ಈ ದಿನ ಹೈದರಾಬಾದಿಗೆ ಭೇಟಿ ಕೊಡಲಿರುವ ಪ್ರಧಾನಿ ಪಂಡಿತ ನೆಹರೂರವರು ಸಂಸ್ಥಾನದ ಪಠಾಣವ[illegible] ಉತ್ತಮಗೊಳಿಸುವ ಬಗ್ಗೆ ನಿಜಾಮರೊಡನೆ ಮಾತುಕತೆ ನಡೆಸುವರೆಂದೂ [illegible]ಗಿದ

ಯುದ್ಧ ನಿಲ್ಲಿಸಲು ಡಚ್ಚರ ನಿರಾಕರಣೆ

ಇಂಡೊನೇಷ್ಯದ ಮೇಲಿನ ಬಾಧಿಸಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಸೂಚಿಸುವ ನಿರ್ಣಯವನ್ನು ವಿಶ್ವಭದ್ರತಾ ಸಮಿತಿಯು ಚರ್ಚೆ ಮಾಡುವುದಕ್ಕಿಂತ ಮುಂಚೆಯೇ ಡಚ್ ಪ್ರತಿನಿಧಿಯು ಅದನ್ನು ತಿರಸ್ಕರಿಸಿ ಈ ವರ್ಷದೊಳಗಾಗಿ ಇಂಡೋನೇಷ್ಯದಲ್ಲಿ ತಮ್ಮದೇ ತಾತ್ಕಾಲಿಕ ಸರ್ಕಾರವೊಂದನ್ನು ಸ್ಥಾಪಿಸಲಾಗುವುದೆಂದು ಅವರು ಸಮಿತಿಗೆ ತಿಳಿಸಿರುತ್ತಾರೆ.

ಇಂಡೊನೇಷ್ಯದ ಮೇಲೆ ಡಚ್ಚರ ಪ್ರಾರಂಭಿಸಿರುವ ಆಕ್ರಮಣವನ್ನು ಪ್ರತಿಭಟಿಸಿ, ಸಿಲೋನ್ ಸರ್ಕಾರವು ತನ್ನ ಬಂದರು ಮತ್ತು ವಿಮಾನ ನಿಲ್ದಾಣಗಳನ್ನು ಎಂದು ಮಾಡಿ, ಡಚ್ಚರ ನೌಕೆ ಮತ್ತು ವಿಮಾನ ಸಂಚಾರಗಳಿಗೆ ಪ್ರತಿ[illegible] [illegible]

ಅಕಡೆಮಿಕ್ ಕೌನ್ಸಿಲಿನಲ್ಲಿ ನಾಮಕರಣ ಸದಸ್ಯರು

ಬೆಂಗಳೂರು, [illegible]

ಮೈಸೂರು ವಿಶ್ವವಿದ್ಯಾನಿಲಯದ ಅಕಡೆಮಿಕ್ ಕೌನ್ಸಿಲ್ಲಿಗೆ ಶ್ರೀಗಳಾದ ಕೆ. [illegible] ಮಾದನರಾವ್, [illegible] ವೀರಬಸಪ್ಪ, [illegible] ಎಂ. ಎಫ್ ಬ್ಯು, ಮತ್ತು ನೆರೀಕಲ ಸ್ಕೂಲಿನ ಪ್ರಿನ್ಸಿಪಾಲರೂ ಮತ್ತು ಚಾಮರಾಜೇಂದ್ರ ಔದ್ಯೋಗಿಕ ಶಾಲಾ ಸೂಪರಿಂಟೆಂಡೆಂಟರವರುಗಳನ್ನು ಸರ್ಕಾರದವರು ನಾಮಕರಣ ಮಾಡಿದ್ದಾರೆ

○ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರಾದ ಶ್ರೀ ಡಿ. ಎಲ್. ಗೋ[illegible]ರವರಿಗೆ ನಿವೃತ್ತರಾಗುವುದಕ್ಕೆ [illegible] ಬದಲು ೩ ನೇ ತಾ॥ನಿಂದ [illegible] [illegible]ಗಿದೆ

○ [illegible]

ರಾಜ್‌ರವರ ದಸ್ತಗಿರಿ

ಮೈಸೂರು ೨೩

[illegible]ಕಳೆದ ನಾಲ್ಕು ದಿನಗಳಿಂದಲೂ ಟೌ[illegible] ಹಾಲ್ ಆವರಣದಲ್ಲಿ ಉಪವಾಸವನ್ನು ಕೈಕೊಂಡಿದ್ದ ಶ್ರೀ॥ ಟಿ. ರಾಜನ್ ರವರನ್ನು ನೆನ್ನೆ ರಾತ್ರಿ ಒಂದು ಗಂಟೆ ಸಮಯದಲ್ಲಿ ಪೊಲೀಸರು ಸಾರ್ವಜನಿಕ ರಕ್ಷಣ ಶಾಸನದ [illegible] ವಿಧಿಯ ಪ್ರಕಾರ ದಸ್ತಗಿರಿ ಮಾಡಿ ದೇವರಾಜ ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದರು. ಈ ದಿನ ಅವರನ್ನು ಜೈಲಿಗೆ ಕಳುಹಿಸಲಾಯಿತು. ಜೈಲಿನಲ್ಲಿ ತಮ್ಮ ಉಪವಾಸವನ್ನು ಮುಂದುವರಿಸುವುದಾಗಿ ಶ್ರೀ॥ ಟಿ. ರಾಜ್ ರವರು [illegible]ರುತ್ತಾರೆ.

ವಿದ್ಯಾರ್ಥಿ ಕಾಂಗ್ರೆಸ್ಸಿಗೆ ರಾಜೀನಾಮೆ

ವಿದ್ಯಾರ್ಥಿ ಕಾಂಗ್ರೆಸ್ಸಿನ ಆಡಳಿತ ವರ್ಗದ ಬಗ್ಗೆ ಅತೃಪ್ತಿಗೊಂಡು ರಾಜಧಾನಿಯ [illegible] ಮಂದಿ ವಿದ್ಯಾರ್ಥಿಗಳು ಸದರಿ [illegible] ರಾಜೀನಾಮೆ ಕೊಟ್ಟಿರುವರೆಂದು [illegible]ದು ಬಂದಿದೆ

ಕಾರ್ಮಿಕರಿಗೆ ರಜಾ

ಭಾರತ ಪ್ರಧಾನಿ ಪಂಡಿತ ನೆಹರೂರವರ [illegible]ರ್ಥವಾಗಿ, ೨೭ನೇ ತಾ॥ ಬೆಂಗಳೂರಿನಲ್ಲಿ, ೩೦ನೇ ತಾ॥ ಮೈಸೂರಿನಲ್ಲಿ ಕೈಗಾರಿಕಾ ಕೇಂದ್ರಗಳಿಗೂ ರಜಾ ಕೊಡಬೇಕೆಂದೂ, ಮತ್ತಾವುದಾದರೂ [illegible] ದಿನವನ್ನು ಕೆಲಸದ ದಿನವನ್ನಾಗಿ [illegible]ಸಬಹುದೆಂದೂ ಸರ್ಕಾರದವರು [illegible] ಮಾಡಿರುತ್ತಾರೆ.

ಆರ್. ಎಸ್. ಎಸ್. ನವರಿಗೆ ಶಿಕ್ಷೆ

ಆರ್. ಎಸ್. ಎಸ್. ಚಟುವಟಿಕೆಯಲ್ಲಿ [illegible]ವಹಿಸಿದ್ದರೆಂದು ೩೫ ಜನರಿಗೆ ನಗರ [illegible]ಯಾಧೀಶರು ನಿನ್ನೆ ೧॥ ಯಿಂದ ೩ ತಿಂಗಳವರೆಗೆ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ

[illegible]ನದ ವೀರಶೈವ ಸಂಘದ ಜರೂರು ಸಭೆ

ಮೈಸೂರು ಸಂಸ್ಥಾನದ ವೀರಶೈವ ಸಂಘದ ವಿಶೇಷ ಸಭೆಯು ನಾಳೆ ಸಂಜೆ ೪ ಗಂಟೆಗೆ ಬೆಂಗಳೂರು ಅರಳೇ ಪೇಟೆ ೧೧೯ [illegible] ಭವನದಲ್ಲಿರುವ ಸಂಘದ ಕಾರ್ಯಾಲಯದಲ್ಲಿ ಜರುಗುವುದು. ಶ್ರೇಷ್ಠ [illegible]ನಾಧೀಶ ಶ್ರೀ॥ ಸರಮ ಶಿವಯ್ಯನವರ [illegible] ಮತ್ತು ಬರುವ ಏಪ್ರಿಲ್ ತಿಂಗಳಿನಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ರಾಜಧಾನಿಯಲ್ಲಿ ನಡೆಸುವ ಬಗ್ಗೆ [illegible] ನಡೆಸಲಿರುವುದರಿಂದ ಸದಸ್ಯರು [illegible] ಆಹ್ವಾನವೆಂದು ಭಾವಿಸಿ [illegible] ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಅಣು ಬಾಂಬಿನ ನಗರಗಳು

[illegible] ನೂರು ಅಣು ಬಾಂಬಿನ [illegible] ನಿರ್ಮಿಸಲಾಗುತ್ತಿದೆಯೆಂದು [illegible] ವಿಜ್ಞಾನಿಕರಾದ ಆಲ್ಬರ್ಟ್ [illegible] ತಿಳಿಸಿರುತ್ತಾರೆ. ಅಣು [illegible] ತಯಾರಿಕೆ ಮತ್ತು ಸಂಶೋ[illegible] ಉಪನಗರಗಳನ್ನು ಕಟ್ಟಲಾಗುತ್ತಿದೆ [illegible] ಹೇಳಲಾಗಿದೆ.

ಗಂಟೆಗೆ ೫೦೦ ಮೈಲಿ ಸಂಚರಿಸುವ ವಿಮಾನ

[illegible] ಬಿ-೪೭ ಎಂಬ ಮಾದರಿಯ [illegible] ಬಾಂಬರ್ ವಿಮಾನವೊಂದು [illegible]ಸಿಂದ ೧ ಸಾವಿರ ಮೈಲಿ [illegible] ಅಲ್ಬುಕರ್ಕಿಗೆ ೨ ಗಂಟೆ [illegible] ಸೇರಿತೆಂದೂ, ಇಷ್ಟು ವೇಗ [illegible] ಚರಿಸುವ ವಿಮಾನವು ಇದೇ [illegible]ವೆಂದೂ ಹೇಳಲಾಗಿದೆ

ಧರ್ಮ ರತ್ನಾಕರ ನಂದೀ ಬಸಪ್ಪನವರ ಮೇಲೆ ಮೊಕದ್ದಮೆ

ಮೈಸೂರು ೨೪.

ರಾಜಧಾನಿಯ ಸಂತೇಪೇಟೆಯ ಸುಪ್ರಸಿದ್ಧ ವರ್ತಕರಾದ ಧರ್ಮ ರತ್ನಾಕರ ನಂದೀ ಬಸಪ್ಪನವರು ಮತ್ತು ಅವರ ಇಬ್ಬರು ಪುತ್ರರ ಮೇಲೆ ಹೆಚ್ಚಿಗೆ ಧಾನ್ಯ ಸಂಗ್ರಹಿಸಿಟ್ಟಿದ್ದರೆಂಬ ಆಪಾದನೆಯ ಮೇಲೆ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಪೋಲೀಸರು ಮೊಕದ್ದಮೆಯನ್ನು ಹೂಡಿದ್ದಾರೆ. ಇದೇ ೭ ನೇ ತಾ॥ ಶ್ರೀ ಶಂಕರಾನಂದ ಪ್ರೆಸ್ ಬಿಲ್ಡಿಂಗ್ಸಿನಲ್ಲಿ ಶ್ರೀ ನಂದೀ ಬಸಪ್ಪನವರು ೨೦೦ ಪಲ್ಲ ಭತ್ತವನ್ನು ಸಂಗ್ರಹಿಸಿಟ್ಟಿದ್ದುದನ್ನು ಲಂಚ ನಿರೋಧ ಶಾಖೆಯವರು ಪತ್ತೆ ಹಚ್ಚಿದರೆಂದೂ, ಆಗ ಅವರು ಕೇವಲ [illegible] ಪಲ್ಲ ಭತ್ತವನ್ನು ಮಾತ್ರ ಡಿಕ್ಲೇರ್ ಮಾಡಿಕೊಂಡಿದ್ದರೆಂದೂ, ಅವರ ಮೇಲೆ ಆಪಾದನೆ ಹೊರಿಸಲಾಗಿದೆ.

ಟೋಜೋ ಮತ್ತು ಇತರರ ಅಂತ್ಯಕಾಲದ ದೃಶ್ಯ

ಜಪಾನಿನ ಮಾಜಿ ಪ್ರಧಾನಿ ಜ॥ ಟೋಜೋ ಮತ್ತು ಇತರ ೬ ಮಂದಿಗಳು ಸುಗಾಮೊ ಜೈಲಿನಲ್ಲಿ ಕೇವಲ ೩೦ ಸೆಕೆಂಡುಗಳಲ್ಲಿ ಗಲ್ಲಿಗೇರಿಸಲ್ಪಟ್ಟರು. ಸಾಯುವಾಗ ಅವರ ಚಿತ್ತಸ್ಥೈರ್ಯದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಎಲ್ಲರೂ ಗಂಭೀರವಾಗಿ ಗಲ್ಲಿನ ಕಡೆಗೆ ಬಂದರು. ಕೆಲವರು ಬೌದ್ಧ ಪ್ರಾರ್ಥನೆಯನ್ನು ಜಪಿಸುತ್ತಿದ್ದರು. ಎಲ್ಲರೂ ಅಂತ್ಯಕಾಲದಲ್ಲಿ ಬೌದ್ಧ ಭಿಕ್ಷುವು ಇರಬೇಕೆಂದು ಅಪೇಕ್ಷಿಸಿದ್ದರು.

ಜ॥ ಟೋಜೋರವರು ಸಾಯುವುದಕ್ಕೆ ಒಂದು ಗಂಟೆ ಮುಂಚೆ ತಮ್ಮ ಪತ್ನಿ ಮತ್ತು ಇತರರಿಗೆ ಕಾಗದಗಳನ್ನು ಬರೆದರು. ಪ್ರತ್ಯೇಕವಾಗಿ ಪ್ರಾರ್ಥನೆಯನ್ನು ನಡೆಸಿದರು. ತನಗೆ ಜಪಾನಿನ ಊಟ ಬೇಕೆಂದು ತಿಳಿಸಿ ಅದನ್ನು ಉಂಡರು.

ಟೋಜೋ ರವರ ಅಂತ್ಯ ಸಂದೇಶ

ವಿಶ್ವದ ಜನರ ಬಗ್ಗೆ ಹೆಚ್ಚು ಸಹಾನುಭೂತಿಯನ್ನು ವಿಶ್ವದ ನಾಯಕರುಗಳು ತೋರಬೇಕೆಂದೂ ಮತ್ತು ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದೂ, ಗಲ್ಲಿಗೇರಿಸಲ್ಪಟ್ಟ ಜಪಾನಿನ ಮಾಜಿ ಪ್ರಧಾನಿ ಜ॥ ಟೋಜೋರವರು ತಮ್ಮ ಅಂತ್ಯ ಸಂದೇಶದಲ್ಲಿ ತಿಳಿಸಿರುತ್ತಾರೆ. ಜಪಾನಿನ ಸೈನ್ಯ ಮತ್ತು ನೌಕಾಪಡೆಯ ಕೇವಲ ಕೆಲವೇ ಜನರು ಮಾತ್ರ ಚಿತ್ರಹಿಂಸೆ ನಡೆಸಿದರೆಂದೂ, ಜಪಾನಿನ ಜನರು ಕ್ರೂರಿಗಳಲ್ಲವೆಂದೂ, ಯುದ್ಧದಲ್ಲಿ ಮಡಿದ ಜಪಾನಿನ ಸೈನಿಕರ ಕುಟುಂಬದವರಿಗೆ ಜಗತ್ತಿನ ಜನರು ಅನುತಾಪ ತೋರಿಸಬೇಕೆಂದೂ ಅವರು ಹೇಳಿರುತ್ತಾರೆ.

ಚೀಣಾವು ಪತನವಾದರೆ ವಿಶ್ವಕ್ಕೆ ಅಪಾಯವು

[illegible] ಕಮ್ಯೂನಿಸ್ಟರ ಪಾಲಾದರೆ [illegible] ವಿಶ್ವಕ್ಕೆ ಅಪಾಯ [illegible]ವೆಂದೂ, ಕೋರಿಯಾವು [illegible] ವಿಶ್ವ [illegible] ಪ್ರತಿನಿಧಿ [illegible]

ಬ್ಯಾಂಕಿನ ಗೊಂದಲದಿಂದ ೬ ಜನರ ಮರಣ.

ಷಾಂಘೈ ಸೆಂಟ್ರಲ್ ಬ್ಯಾಂಕಿನಲ್ಲಿ ಚಿನ್ನದ ಗಟ್ಟಿ ಮತ್ತು ಬೆಳ್ಳಿಯ ಡಾಲರುಗಳನ್ನು ಕೊಂಡುಕೊಳ್ಳಲು ಸಾವಿರಾರು ಜನರು ನುಗ್ಗಿದರೆಂದೂ, ಈ ಗೊಂದಲದಲ್ಲಿ ೬ ಜನ ಸತ್ತರೆಂದೂ ಹೇಳಲಾಗಿದೆ. ಈಗ ಮಿಲಿಟರಿಯವರು ಬ್ಯಾಂಕನ್ನು ಕಾಯುತ್ತಿದ್ದಾರೆ.

ಕಮ್ಯೂನಿಸ್ಟರೊಡನೆ ಚೀಣಾದ ಸಂಧಾನವೇ ?

ಚೀಣಾದಲ್ಲಿ ನೂತನವಾಗಿ ರಚಿತವಾಗಿರುವ ಡಾ॥ ಸೂನರವರ ಸರ್ಕಾರವು ಕಮ್ಯೂನಿಸ್ಟರೊಡನೆ ಶಾಂತಿ ಸಂಧಾನ ಮಾಡಿಕೊಳ್ಳಲು ಪ್ರಯತ್ನಿಸುವುದೆಂದೂ, ಮಂತ್ರಿ ಮಂಡಲಕ್ಕೆ ಅಧ್ಯಕ್ಷ ಚಿಯಾಂಗರು ಸಂಪೂರ್ಣ ಅಧಿಕಾರವನ್ನು ಕೊಟ್ಟಿರುವರೆಂದೂ ಹೇಳಲಾಗಿದೆ. ಚಿಯಾಂಗರು ತಮ್ಮ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಲು ಸಿದ್ಧರಿರುವರೆಂದೂ ವರದಿಯಾಗಿದೆ.

ಬ್ರಿಟನ್ನಿನಲ್ಲಿ ಮಹಿಳಾ ಮಂತ್ರಿ

ಬ್ರಿಟನ್ನಿನ ಪಾರ್ಲಿಮೆಂಟ್ ಸಭಾ ಸದಸ್ಯರಾದ ಡಾ॥ ಎಡಿತ್ ಸಮರ್ ಸ್ಕಿಲ್ [illegible] ಸಚಿವರನ್ನಾಗಿ ನೇಮಿಸಬಹುದೆಂದು ಲಂಡನ್ನಿನ ರಾಜಕೀಯ ಆವರಣದಲ್ಲಿ ಹೇಳಲಾಗುತ್ತಿದೆ.

ಚೀಣಕ್ಕೆ ಅಮೆರಿಕದ ಸಹಾಯ ನಿಂತಿತು

ಚೀಣದ ಒಳಪರಿಸ್ಥಿತಿಯು ಉತ್ತಮಗೊಳ್ಳುವವರೆಗೂ ಅಲ್ಲಿನ ಪುನರಚನಾಕಾರ್ಯಕ್ರಮಕ್ಕಾಗಿ ಕೊಡುತ್ತಿದ್ದ ಹಣದ ಸಹಾಯವನ್ನು ನಿಲ್ಲಿಸಲಾಗಿದೆಯೆಂದು ಅಮೆರಿಕ ಸರ್ಕಾರವು ತಿಳಿಸಿರುತ್ತದೆ.

ವಿದ್ಯಾರ್ಥಿ-ಪಾಕ್ಷಿಕ ಪತ್ರಿಕೆ

ಬೆಂಗಳೂರಿನಲ್ಲಿ ಶ್ರೀ ಹೆಚ್. ಎಸ್. ಆರ್ ಪ್ರಸಾದ್‌ರವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ವಿದ್ಯಾರ್ಥಿ' ಎಂಬ ಪಾಕ್ಷಿಕ ಪತ್ರಿಕೆಯು ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ವಿದ್ಯಾರ್ಥಿಗಳ ಪ್ರಗತಿಗಾಗಿ ಹೊರಟಿರುವ ಈ ಪತ್ರಿಕೆಯು ಚಿರಕಾಲ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ.

[illegible]

[illegible]

ಡಚ್ಚರಿಗೆ ಪಂಡಿತ ನೆಹರೂರವರ ಎಚ್ಚರಿಕೆ.

ಇಂಡೋನೇಷ್ಯದ ಮೇಲೆ ಡಚ್ಚರು ಕೈಗೊಂಡಿರುವ ಮಿಲಿಟರಿ ಕಾರ್ಯಾಚರಣೆಯನ್ನು ಭಾರತದ ಪ್ರಧಾನಿ ಪಂಡಿತ ನೆಹರೂರವರು ಖಂಡಿಸಿ, ಇದರಿಂದ ಭಾರತ ಮತ್ತು ಏಷ್ಯಾ ದೇಶಗಳಲ್ಲಿ ವಿಶೇಷ ಪ್ರತಿಕ್ರಿಯೆ ಉಂಟಾಗುವುದೆಂದು ತಿಳಿಸಿರುತ್ತಾರೆ. ಡಚ್ಚರು ಯುದ್ಧ ಹೂಡಿರುವುದು ವಿಶ್ವಸಂಸ್ಥೆಯ ತತ್ವಕ್ಕೆ ವಿರುದ್ಧವಾಗಿದೆಯೆಂದೂ, ಇದರಿಂದ ಪ್ರಪಂಚದಲ್ಲೇ ಭೀಕರ ಪರಿಣಾಮ ಉಂಟಾಗುವುದೆಂದೂ ಅವರು ಡಚ್ಚರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ. ಭಾರತವು ಈ ಸಮಯದಲ್ಲಿ ಇಂಡೋನೇಷಿಯಾದ ಜನರಿಗೆ ಸಹಾನುಭೂತಿ ನೀಡುವುದಲ್ಲದೆ, ಭಾರತೀಯರು ಈ ಬಗ್ಗೆ ಸುಮ್ಮನೆ ಕುಳಿತುಕೊಳ್ಳುವುದಿಲ್ಲವೆಂದೂ ತಿಳಿಸಿರುತ್ತಾರೆ.

ಡಚ್ಚರಿಗೆ ಅಮೆರಿಕದ ಸಹಾಯ ತಪ್ಪಿತು.

ಇಂಡೋನೇಷ್ಯದ ಮೇಲೆ ಡಚ್ಚರ ಆಕ್ರಮಣ ಕಾರ್ಯವನ್ನು ಖಂಡಿಸಿ, ಅವರಿಗೆ ಕೊಡುತ್ತಿದ್ದ ಮಾರ್ಷಲ್ ಸಹಾಯವನ್ನು ಅಮೆರಿಕವು ನಿಲ್ಲಿಸಿದೆಯೆಂದು ವರದಿಯಾಗಿದೆ.

ಸತ್ಯನಾರಾಯಣ ಪೂಜೆ

ರಾಜಧಾನಿಯ ಮೋಟಾರು ಕಂಪೆನಿಯ ಮಾಲೀಕರಾದ ಶ್ರೀ ಇ. ಪಿ. ಪಾಲಂಜಿಯವರು ಹೊಸ ಕರ್ಜನ್ ರಸ್ತೆಯಲ್ಲಿ ಕಟ್ಟಿರುವ ತಮ್ಮ ನೂತನ ಭವನದ ಗೃಹಪ್ರವೇಶ ಸಮಾರಂಭದ ಸಂಬಂಧದಲ್ಲಿ ಕಳೆದ ೨೦ ನೇ ತಾ॥ ಸತ್ಯನಾರಾಯಣ ಪೂಜೆಯನ್ನು ಮಾಡಿ, ನಗರದ ಅನೇಕ ಮಾನ್ಯ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ನಾನ್‌ಕಿಂಗಿನ ಹತ್ತಿರ ಕಮ್ಯೂನಿಸ್ಟರು

ಚೀಣದ ರಾಜಧಾನಿಯಾದ ನಾನ್‌ಕಿಂಗಿಗೆ ಕೇವಲ ೧೦ ಮೈಲಿಯಲ್ಲಿರುವ ಪಟ್ಟಣವೊಂದರ ಮೇಲೆ ಕಮ್ಯೂನಿಸ್ಟರು ಧಾಳಿ ಪ್ರಾರಂಭಿಸಿದ್ದಾರೆ. ನಗರವನ್ನು ಸಂರಕ್ಷಿಸಲು ಯಾಂಗ್ಸಿ ನದಿಯ ಉತ್ತರ ಭಾಗದಲ್ಲಿ ೧೦ ಡಿವಿಜನ್ ಸರ್ಕಾರಿ ಸೈನ್ಯಗಳನ್ನು ಇಡಲಾಗಿದೆ.

ಶ್ರೀ ಸೋಪಾನ ದೇವ ದಿಂಡೀ ಮಹೋತ್ಸವ

ರಾಜಧಾನಿಯ ಚಮಲ್ ಮರದ ಬೀದಿಯಲ್ಲಿರುವ ಶ್ರೀ ಪಾಂಡುರಂಗ ಸ್ವಾಮಿ ದೇವಾಲಯದಲ್ಲಿ ನಾಳೆಯಿಂದ ೨೮ನೇ ತಾ. ವರವಿಗೆ ಶ್ರೀ ಸಂತ್ ಸೋಪಾನ ದೇವ ದಿಂಡೀ ಮಹೋತ್ಸವವು ನಡೆಯುವುದು. ಪ್ರತಿ ದಿನ ಸಂಜೆ ೬ ಗಂಟೆಗೆ ಉಪನ್ಯಾಸ ಮತ್ತು ಸಂಗೀತಗಳು ಜರಗುವುವು.

TUTORIAL SECTION

D Banumiah's High School Mysore

From 2nd January 1949 classes will be started for the benefit of the failed S.S.L.C. and E.P.S students. For particulars please apply to the under-signed between 9 & 11 A. M.

B. Seshagiri Rao. Organiser

ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮತ್ತು ಎ.ಎಂ.ಸಿ.ಸಿ. ಸಭೆ [illegible] ಸದಸ್ಯರುಗಳ, ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ [illegible]ಯು ಇದೇ ೨೬ನೇ ತಾ॥ ಭಾನುವಾರ [illegible] ಧ್ಯಾಹ್ನ ೩ ಗಂಟೆಗೆ ಬೆಂಗಳೂರು [illegible] ಭವನದಲ್ಲಿ ನಡೆಯುವುದು. ಪಂಡಿತ [illegible] ಹರೂರವರು ಅವರುಗಳನ್ನುದ್ದೇಶಿಸಿ [illegible]ಷಣಮಾಡುವರು. ಸಭೆಯ ಪ್ರವೇಶ ಪತ್ರವನ್ನು ಕೇಂದ್ರ ಕಾಂಗ್ರೆಸ್ ಕಛೇರಿಯಲ್ಲಿ ಇದೇ ೨೪ ಮತ್ತು ೨೬ನೇ ತಾ॥ [illegible]ಡಲಾಗುವುದು—ಎಂದು ಕಾಂಗ್ರೆಸ್ [illegible]ರ್ಶಿಗಳಾದ ಶ್ರೀ ?. ಆರ್. ಮಾಧವ[illegible]ಯರು ತಿಳಿಸಿರುತ್ತಾರೆ.

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

22-12-48ರಿಂದ 4 ದಿನಗಳು

ದಿ ಡೆಸರ್ಟ್ ಸಾಂಗ್

(ವರ್ಣರಂಜಿತ ಚಿತ್ರ)

Morning Shows at 10-30

From -5-12-48 for 2 days

Warner's

All This and Heaven Too

with:-Bettie Doris and charles Boyer

ಶ್ರೀ ಗಣೇಶಾ ಟಾಕೀಸ್

31-12-48ರಿಂದ

ಪ್ರತಿದಿನ 3 ಆಟಗಳು

ಆರ್ಯಮಾಲಾ

(ತಮಿಳು)

ಮುಖ್ಯಪಾತ್ರ:— ● ಪಿ.ಯು. ಚಿನ್ನಪ್ಪ ● ಎಂ.ಎಸ್. ಸರೋಜಿನಿ ● ಕೃಷ್ಣ[illegible] ● ಮಧುರಂ

ಪ್ರಭಾ ★ 24-12-48ರಿಂದ ಅಮೋಘ ಆರಂಭ

ದಿನವಹಿ ಮೂರು ಪ್ರದರ್ಶನಗಳು

ಆಜ್-ಕಿ-ರಾತ್

• ಮೋತೀಲಾಲ್, • ಸುರೈಯ್ಯ • ಷಾ ನವಾಜ್ ಮತ್ತು • ಯಾಕೂಬ್

ನಟಿಸಿರುವ ಹಿಂದಿ ಚಿತ್ರ

[illegible]

ಶ್ರೀ ಚಾಮುಂಡೇಶ್ವರಿ ಟಾಕೀಸ್

24-12-48ರಿಂದ :: ದಿನವಹಿ ೩ ಆಟಗಳು

೨೦ ಲಕ್ಷ ರೂ.ಗಳ ವೆಚ್ಚದಿಂದ ತಯಾರಿಸಲ್ಪಟ್ಟಿರುವ ಸರ್ವೋನ್ನತ ಹಿಂದಿ ಚಿತ್ರ! ಭಾರತದ ಗೌರ್ನರ್ ಜನರಲ್‌ರೇ ಮುಂತಾದ ಗಣ್ಯ ವ್ಯಕ್ತಿಗಳಿಂದ ಮುಕ್ತ ಕಂಠದಲ್ಲಿ ಹೊಗಳಲ್ಪಟ್ಟಿರುವ ಚಲನ ಚಿತ್ರ!!

ಸಾಮ್ರಾಟ್ ಅಶೋಕ್

(ಹಿಂದಿ)

[illegible]

UNIVERSITY OF MYSORE

No. Ex. 2,526 48 49

Office of the University of Mysore

Mysore

Dated 21st December 1948

NOTIFICATION

In continuation of [illegible] office Notification No. E. 1,526 48 49 dated 2-1[illegible] it is hereby informed [illegible] the last date for receipt [illegible] applications in respect [illegible] Intermediate and Deg[illegible] Examinations of March [illegible] by the Heads of Colleges [illegible] extended to Monday the [illegible] January 1949 (inclusive).

By Order,

D. S. GORDON

REGISTRAR

University of Mysore

Mysore

Edited, printed and published by A. R. Nagarajan the Sadhvi Press, D. Sub[illegible] Road, Mysore.

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨೫-೧೨-೪೮ [ಸಂಚಿಕೆ ೧೫೭

-ಡಚ್ಚರಮೇಲೆ ಭಾರತ- ಸರ್ಕಾರದ ಉಗ್ರ ಕ್ರಮ

ನ್ಯಾಯಾಂಗ ಸಚಿವರ ಪ್ರವಾಸ

ಚಾಮರಾಜನಗರ ೨೪

ನಿನ್ನೆ ಬೆಳಿಗ್ಗೆ ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ಶ್ವಾಶ್ವೇದೇವರ ಗುಡಿ ಮೂಲಕ ಬಿಳಿಗಿರಿ ರಂಗನ ಬೆಟ್ಟಕ್ಕೆ ಭೇಟಿ ಇತ್ತಿದ್ದರು. ದಾರಿ ಉದ್ದಕ್ಕೂ ಗ್ರಾಮಸ್ಥರು ತಳಿರು ತೋರಣಗಳಿಂದ ಅವರನ್ನು ಸ್ವಾಗತಿಸಿ, ಬಿನ್ನವತ್ತಳೆಗಳನ್ನು ಅರ್ಪಿಸಿದರು. ಬಿಳಿಗಿರಿ ರಂಗನ ಬೆಟ್ಟದ ಮೇಲೆ ಸಚಿವರು ವಾಚನಾಲಯವೊಂದರ ಆರಂಭೋತ್ಸವವನ್ನು ನೆರವೇರಿಸಿದರು. ರೇಷ್ಮೆ ಮೊಟ್ಟೆ ಪರಿಶೀಲನಾ ಕೇಂದ್ರವನ್ನು ತನಿಖೆ ಮಾಡಿದರು. ದೇವಸ್ಥಾನದ ನೌಕರರುಗಳು ಒಪ್ಪಿಸಿದ ಬಿನ್ನವತ್ತಳೆಯನ್ನು ಸ್ವೀಕರಿಸಿ, ಸೂಕ್ತ ಪರಿಹಾರವನ್ನು ಕೊಡುವುದಾಗಿ ಭರವಸೆ ಇತ್ತರು.

ಶ್ವಾಶ್ವೇದೇವರ ಗುಡಿ ಬಂಗಲೆಗೆ ವಿದ್ಯುಚ್ಛಕ್ತಿಯನ್ನು ಹಾಕುವ ಯೋಜನೆಯನ್ನು ಪರಿಶೀಲಿಸಿದರು.

ದಾರಿಯುದ್ದಕ್ಕೂ ಗ್ರಾಮಸ್ಥರು ಹೇಳಿಕೊಂಡ ಅಹವಾಲನ್ನು ಸಾವಧಾನದಿಂದ ವಿಚಾರಿಸಿದರು. ಮುಖ್ಯವಾಗಿ ಸಣ್ಣ ಪುಟ್ಟ ಜಮೀನುದಾರರು ಫಸಲನ್ನು ಕುಯ್ಯದಂತೆ ಸ್ಥಳೀಯ ನೌಕರರು ಅಡ್ಡಿಪಡಿಸುತ್ತಿರುವುದನ್ನು ಕೂಡಲೇ ತಪ್ಪಿಸಬೇಕೆಂದು ಅಧಿಕಾರಿಗಳಿಗೆ ಸಚಿವರು ತಿಳುವಳಿಕೆ ಕೊಟ್ಟರು. ವಿದ್ಯುಚ್ಛಕ್ತಿಗಾಗಿ ಅನೇಕ ಕಡೆ ಬಂದ ಅಹವಾಲುಗಳನ್ನು ಸಾಧ್ಯವಾದಂತೆಲ್ಲಾ ಈಡೇರಿಸಿಕೊಡುವುದಾಗಿ ತಿಳಿಸಿದರು.

ಸಂಜೆ ೭ ಗಂಟೆಗೆ ಪವನಗುಪ್ಪೆ, ಕೌಲಂದೆಗಳ ಮಾರ್ಗವಾಗಿ ಮೈಸೂರಿಗೆ ತೆರಳಿದರು.

ಚಾಮುಂಡಿ ಬೆಟ್ಟಕ್ಕೆ ಸಚಿವರ ಭೇಟಿ

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂ ರವರು ನಿನ್ನೆ ರಾತ್ರಿ ಚಾಮುಂಡಿ ಬೆಟ್ಟಕ್ಕೆ ಭೇಟಿ ಇತ್ತು ಶ್ರೀ ದೇವಿಯವರ ದರ್ಶನ ಮಾಡಿ ಹಿಂತಿರುಗಿದರು.

ಹೈದರಾಬಾದಿನಲ್ಲಿ ಪಂಡಿತ ನೆಹರೂ

ಭಾರತ ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ಮಧ್ಯಾಹ್ನ ಹೈದರಾಬಾದಿಗೆ ವಿಮಾನದಲ್ಲಿ ಆಗಮಿಸಿದರು. ಅವರ ಸಂಗಡ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ, ಜನರಲ್ ಕಾರಿಯಪ್ಪ, ಕೇಂದ್ರ ಸರ್ಕಾರದ ವಾರ್ತಾ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಎ. ಎಸ್. ಅಯ್ಯಂಗಾರ್ಯರೂ ಬಂದಿದ್ದರು. ಅವರನ್ನು ಹಕೀಂ ಪೇಟೆ ವಿಮಾನ ನಿಲ್ದಾಣದಲ್ಲಿ ಮಿಲಿಟರಿ ಗವರ್ನರ್ ಮತ್ತು ಇತರ ಅಧಿಕಾರಿಗಳೂ ಸ್ವಾಗತಿಸಿದರು ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರೊಡನೆ ಕೆಲವು ನಿಮಿಷ ಸಂಭಾಷಣೆ ನಡೆಸಿ, ಪಂಡಿತ ನೆಹರೂರವರು ಬೋಲಾರಂ ರೆಸಿಡೆನ್ಸಿ ಭವನಕ್ಕೆ ತೆರಳಿದರು. ದಾರಿಯುದ್ದಕ್ಕೂ ಲಕ್ಷಾಂತರ ಜನರು ಕಿಕ್ಕಿರಿದು ಅವರಿಗೆ ಅಭೂತಪೂರ್ವ ಸ್ವಾಗತವನ್ನಿತ್ತರು. ಅನಂತರ ಅವರು ಹೈದರಾಬಾದ್ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಹೊಸದಾಗಿ ಸ್ಥಾಪಿತವಾಗಿರುವ ಸಚಿವ ಸಂಪುಟದ ನಾಯಕರಾದ ಶ್ರೀ ಜನಾರ್ಧನರಾವ್ ದೇಸಾಯಿ ಮತ್ತು ಅವರ ಅನುಯಾಯಿಗಳೊಡನೆ ಮಾತುಕತೆ ನಡೆಸಿದರು.

ಜೈಲಿನಲ್ಲಿ ಉಪವಾಸ

ಮೈಸೂರು ೨೪

ಶ್ರೀ ಟಿ. ರಾಜ್‌ರವರು ಇಲ್ಲಿನ ಸಬ್ ಜೈಲಿನಲ್ಲಿ ತಮ್ಮ ಉಪವಾಸವನ್ನು ಮುಂದುವರಿಸುತ್ತಿದ್ದಾರೆ. ಜೈಲಿನ ಅಧಿಕಾರಿಗಳು ಅವರಿಗೆ ನಿಂಬೆ ಹಣ್ಣು ಕೊಟ್ಟಿರುವರೆಂದೂ, ಆದರೆ ಅವರು ಅದನ್ನೂ ಸಹ ಉಪಯೋಗಿಸಿಲ್ಲವೆಂದೂ ತಿಳಿದುಬಂದಿದೆ.

ಸೌದೆ ಡಿಪೋಗಳಿಗೆ ಎಚ್ಚರಿಕೆ

ರಾಜಧಾನಿಯ ಪೌರ ಸಭೆಯು ಏರ್ಪಡಿಸಿರುವ ಸೌದೆ ಡಿಪೋಗಳಲ್ಲಿ ಸೌದೆ ಕೊಳ್ಳುವುದಕ್ಕಾಗಿ ರೂ. ೧೧ ಅಣೆ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದ್ದರೂ, ಅದನ್ನು ವಿಧಿಸಲಾಗುತ್ತಿದೆಯೆಂದು ದೂರು ಬರುತ್ತಿವೆಯೆಂದೂ ಆ ರೀತಿ ಡಿಪೋದವರು ಮಾಡಿದಲ್ಲಿ ಅವರ ರಹದಾರಿಯನ್ನು ತೆಗೆದುಹಾಕಿ, ಪೆಟ್ರೋಲು ಸರಬರಾಜನ್ನು ನಿಲ್ಲಿಸಲಾಗುವುದೆಂದೂ ಪೌರಸಭಾ ಕಮಿಷನರು ಎಚ್ಚರಿಕೆ ಇತ್ತಿದ್ದಾರೆ. ಕೀಲುಗಳು ೩ ಅಡಿಗೆ ಮೀರದಂತೆ ಉದ್ದವಿರಬೇಕೆಂದೂ ತಿಳಿಸಲಾಗಿದೆ.

ವಿವಾಹ ಮಹೋತ್ಸವ

ಹೊಳೇನರಸೀಪುರದ ದೊಡ್ಡಮನೆ ನಿವೃತ್ತ ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ವೆಂಕಟರಮಣಯ್ಯನವರು ತಮ್ಮ ತಮ್ಮಂದಿರಾದ ಶ್ರೀ ಹೆಚ್. ಎಲ್. ಸೀತಾರಾಮಯ್ಯನ ಮಕ್ಕಳು ಡಾ|| ಎಸ್. ವಿ. ರಾಜ್‌ರವರ ಪುತ್ರಿ ಚಿ|| ಸೌ|| ಸರೋಜಮ್ಮನನ್ನು ಮಳವಳ್ಳಿಯ ಶ್ರೀ ನರಸಿಂಹಯ್ಯನವರ ತಮ್ಮಂದಿರಾದ ಶ್ರೀ ರಾಮಯ್ಯನವರ ಪುತ್ರ ಶ್ರೀ ವೆಂಕಟರಾಮಪ್ಪನವರಿಗೆ ಕೊಟ್ಟು ವಿವಾಹವನ್ನು ಬೆಂಗಳೂರಿನಲ್ಲಿ ನಿನ್ನೆ ನೆರವೇರಿಸಿದರು.

ಹರಿಕಥೆ

ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ|| ಆಂಡಾಳ್ ಮಂದಿರದಲ್ಲಿ ಹಿಂ. ಶ್ರೀ|| ಪಾಲ್‌ಘಾಟ್ ಗಣಪತಿ ಭಾಗವತರಿಂದ ಇದೇ ತಿಂಗಳು ತಾ|| ೨೬, ೨೭ ರಲ್ಲು ಸಾಯಂಕಾಲ ೬ ಗಂಟೆಗೆ "ರಾಮದಾಸ ಚರಿತ್ರೆ" ಎಂಬ ಹರಿಕಥೆಯು ನಡೆಸಲ್ಪಡುತ್ತದೆ.

ತಿಲಕ್ ಸಂಘ

ನಾಳೆ ಸಂಜೆ ೬ ಗಂಟೆಗೆ ಸಂಘದ ಆವರಣದಲ್ಲಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿ ಶ್ರೀ|| ಜಿ. ಪಿ. ರಾಜರತ್ನಂರವರು ಕಾವ್ಯ ವಾಚನ ನಡೆಸುವರು. ಸರ್ವರಿಗೂ ಆದರದ ಸ್ವಾಗತವಿದೆ.

ವಿಜಯಲಕ್ಷ್ಮಿ ಪಂಡಿತರು ಮೈಸೂರಿಗೆ ಬರುವರು

ಬೆಂಗಳೂರು ೨೪

ಭಾರತದ ಪ್ರಧಾನಿ ಪಂಡಿತ ನೆಹರೂರವರೊಡನೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಇಲ್ಲಿಗೆ ಬರುವರೆಂದು ತಿಳಿದುಬಂದಿದೆ.

ಸೇವಾ ದಳದವರಿಗೆ ರೈಲ್ವೆ ರಿಯಾಯಿತಿ

ಭಾರತ ಪ್ರಧಾನಿ ಪಂಡಿತ ನೆಹರೂರವರ ಆಗಮನದ ಗೌರವಾರ್ಥವಾಗಿ ನಡೆಯುವ ಸೇವಾದಳದ ಕವಾಯತಿನಲ್ಲಿ ಭಾಗವಹಿಸಲು ಬರುವ ಸೇವಾದಳದ ಸ್ವಯಂಸೇವಕರುಗಳಿಗೆ ರೈಲ್ವೆ ರಿಯಾಯಿತಿಯನ್ನು ಕೊಡಲಾಗುವುದೆಂದು ತಿಳಿಸಲಾಗಿದೆ. ಸ್ಥಳೀಯ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಿಂದ ಅಧಿಕೃತ ಪತ್ರವನ್ನು ಅವರು ಪಡೆಯಬೇಕೆಂದೂ ಸೂಚನೆ ಕೊಡಲಾಗಿದೆ.

ಡಚ್ಚರ ಮೇಲೆ ಭಾರತವು ಉಗ್ರಕ್ರಮ ಕೈಗೊಳ್ಳುವುದು

ಇಂಡೋನೇಷ್ಯದ ಮೇಲೆ ಡಚ್ಚರು ಕೈಗೊಂಡಿರುವ ದೌರ್ಜನ್ಯವನ್ನು ನಿಲ್ಲಿಸಲು ವಿಶ್ವ ಭದ್ರತಾ ಸಮಿತಿಯವರು ವಿಫಲರಾದ ಪಕ್ಷದಲ್ಲಿ ಭಾರತ ಸರ್ಕಾರವು ಉಗ್ರ ಕಾರ್ಯ ಕ್ರಮಕೈಗೊಳ್ಳುವುದಾಗಿ ದಿಲ್ಲಿಯಲ್ಲಿರುವ ಇಂಡೋನೇಷ್ಯದ ಪ್ರತಿನಿಧಿಗಳಿಗೆ ಕೇಂದ್ರ ಸರ್ಕಾರವು ಭರವಸೆ ಇತ್ತಿದೆಯೆಂದು ಹೇಳಲಾಗಿದೆ.

ಕಾಶ್ಮೀರ ಪ್ಲೆಬಿಸೈಟಿಗೆ ಭಾರತದ ಒಪ್ಪಿಗೆ

ಕಾಶ್ಮೀರ ಪ್ರಶ್ನೆ ಸಮಸ್ಯೆಗಳಲ್ಲಿ ಜನಾಭಿಪ್ರಾಯವನ್ನು ತೆಗೆದುಕೊಳ್ಳಲು ಭಾರತ ಸರ್ಕಾರವು ಅಂಗೀಕಾರ ಕೊಡುವುದೆಂದು ವಿಶ್ವ ಭದ್ರತಾ ಸಮಿತಿಯ ಪ್ರತಿನಿಧಿಗಳು ಕೇಂದ್ರ ಸರ್ಕಾರದೊಡನೆ ನಡೆಸಿದ ಮಾತುಕತೆಗಳಿಂದ ಹೊರಬಿದ್ದಿದೆ. ಪಾಕಿಸ್ತಾನವು ಸಹ ಯುದ್ಧ ನಿಲ್ಲಿಸಲು ಒಪ್ಪುವುದೆಂದೂ ಹೇಳಲಾಗಿದೆ.

ಸುಮಾತ್ರಾದಲ್ಲಿ ಇಂಡೋನೇಷ್ಯದ ಸರ್ಕಾರ

ಸುಮಾತ್ರಾದ ಒಂದು ಪ್ರದೇಶದಲ್ಲಿ ಇಂಡೋನೇಷ್ಯದ ತಾತ್ಕಾಲಿಕ ಸರ್ಕಾರವನ್ನು ಅಲ್ಲಿನ ಅರ್ಥಿಕ ಸಚಿವರ [illegible] ನ್ನು ಸ್ಥಾಪಿಸಲಾಗಿದೆಯೆಂದು [illegible] ಗಿದೆ

ರಾಜಧಾನಿಯಲ್ಲಿ ನೆಹರೂರವರ ಕಾರ್ಯಕ್ರಮದ ವಿವರ

ಅಧಿಕೃತ ಪ್ರಕಟಣೆ

ಮೈಸೂರು ೨೪

೨೮ ನೇ ತಾ|| ಮಂಗಳವಾರ

—ಬೆಳಿಗ್ಗೆ ೮-೧೫ ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಆಗಮನ. ಶ್ರೀಮನ್ಮಹಾರಾಜರವರಿಂದ ಸ್ವಾಗತ. ನೀಲಗಿರಿ ರಸ್ತೆ, ದೊಡ್ಡಕೆರೆ ಏರಿ, ಹಾರ್ಡಿಂಜ್ ಸರ್ಕಲ್, ಮಿರ್ಜಾರಸ್ತೆ, ಕಾರಂಜಿಕೆರೆ ಏರಿ, ನರಸಿಂಹರಾಜಾ ಬೂಲಿವಾರ್ಡ ಮೂಲಕ ಲಲಿತಮಹಲ್.

೮-೫೫ ಲಲಿತ ಮಹಲಿನಿಂದ ಅರಮನೆಗೆ-ನರಸಿಂಹರಾಜ ಬೂಲಿವಾರ್ಡ್, ಕಾರಂಜಿ ಕೆರೆ, ಪಾರ್ಕ್, ಮಿರ್ಜಾ ರಸ್ತೆಗಳ ಮೂಲಕ ಹಾರ್ಡಿಂಜ್ ಸರ್ಕಲ್ ದಾಟಿ ಕೋಟೆಯ ಪೂರ್ವ ದ್ವಾರದ ಮೂಲಕ ಪ್ರವೇಶ.

ಅರಮನೆಯಿಂದ ಕ್ರಾಫರ್ಡ್ ಹಾಲಿಗೆ, ಪ್ರಭುಗಳೊಡನೆ- ದೊಡ್ಡ ಕೆರೆ, ಚಾಮರಾಜ, ಕೃಷ್ಣರಾಜ ರಸ್ತೆಗಳ ಮೂಲಕ ಆರಸು ಬೋರ್ಡಿಂಗ್ ಸ್ಕೂಲ್ ಮಾರ್ಗವಾಗಿ ೯-೪೦ ಕ್ಕೆ ಘಟಿಕೋತ್ಸವ ಸಮಾರಂಭಕ್ಕೆ.

ಟೌನ್ ಹಾಲಿಗೆ- ಎಲಿಫೆಂಟ್ ರಸ್ತೆ, ಮೈಸೂರು ರಸ್ತೆ, ಇರ್ವಿನ್ ರಸ್ತೆ, ಸಯ್ಯಾಜಿರಾವ್ ರಸ್ತೆ ಗಾಂಧಿ ಚೌಕಗಳ ಮೂಲಕ ೧೧-೩೦ ಕ್ಕೆ ಟೌನ್ ಹಾಲ್ ಪ್ರವೇಶ.

೧೧-೫೫ ಕ್ಕೆ ಟೌನ್‌ಹಾಲಿನಿಂದ ಅರಮನೆಗೆ —ಫಿಲೋಮಿನ್ಸ್ ಚರ್ಚ್, ತಂಬೂಚೆಟ್ಟಿ ರಸ್ತೆ, ಹಾರ್ಡಿಂಜ್ ಸರ್ಕಲ್ ಮಾರ್ಗವಾಗಿ.

೧೧-೫೫ ಕ್ಕೆ ಪ್ರಭುಗಳೊಡನೆ ಕಾರಾಪುರಕ್ಕೆ ಪ್ರಯಾಣ— ದೊಡ್ಡ ಕೆರೆ, ಚಾಮರಾಜಾ, ನೈಸ್ರಾಯ್, ಮಾನಂದವಾಡಿ ರಸ್ತೆಗಳ ಮಾರ್ಗವಾಗಿ.

ಸಂಜೆ ೬ ಗಂಟೆಗೆ ಕೆದ್ದಾದಿಂದ ಹೊರಟು ೭-೧೫ ಕ್ಕೆ ಮೈಸೂರಿಗೆ ಆಗಮನ. ಸಂಜೆ ೭-೩೦ ಕ್ಕೆ ಕೃಷ್ಣರಾಜಸಾಗರಕ್ಕೆ ಭೇಟಿ-ನರಸಿಂಹರಾಜ ಬೂಲಿವಾರ್ಡ್, ಕಾರಂಜಿಕೆರೆ, ಹಾರ್ಡಿಂಜ್ ಸರ್ಕಲ್, ಸಯ್ಯಾಜರಾವ್, ಇರ್ವಿನ್, ವಾಣಿವಿಲಾಸ ರಸ್ತೆಗಳ ಮಾರ್ಗವಾಗಿ. ರಾತ್ರಿ ೧೦-೩೦ ಕ್ಕೆ ಅದೇ ಮಾರ್ಗವಾಗಿ ವಾಪಸು.

೨೯ ನೇ ತಾ|| ಬುಧವಾರ

೭-೩೦ ಚಲುವಾಂಬಾ ಭವನಕ್ಕೆ ತೆರಳಿ, ಅಲ್ಲಿಂದ ೮ ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ದಯಮಾಡಿಸುವರು. ಇರ್ವಿನ್ ರಸ್ತೆ, ನ್ಯಾಜರ್ಬ ರಸ್ತೆ, ಹಾರ್ಡಿಂಜ್ ಸರ್ಕಲ್, ದೊಡ್ಡ ಕೆರೆ ಮಾರ್ಗವಾಗಿ

ಯುದ್ಧ ನಿಲ್ಲಿಸಲು ಡಚ್ಚರಿಗೆ ಭದ್ರತಾ ಸಮಿತಿಯ ಸೂಚನೆ

ಇಂಡೋನೇಷ್ಯದಲ್ಲಿ ಡಚ್ಚರು ಮತ್ತು ರಿಪಬ್ಲಿಕನ್ನರು ಕೂಡಲೇ ಯುದ್ಧವನ್ನು ನಿಲ್ಲಿಸಬೇಕೆಂದು ವಿಶ್ವಭದ್ರತಾ ಸಮಿತಿಯು ನಿನ್ನೆ ದಿನ ನಿರ್ಣಯ ಮಾಡಿದೆ. ಅಲ್ಲಿ ಮಿಲಿಟರಿ ಕಾರ್ಯಾಚರಣೆ ಆರಂಭವಾಗುವುದಕ್ಕೆ ಮುಂಚೆ ಇದ್ದ ಸ್ಥಳಕ್ಕೆ ಡಚ್ಚರು ಹಿಂದಿರುಗಬೇಕೆಂದೂ, ಡಾ|| ಸೋಕಾರ್ನೊ ಮತ್ತು ಇತರರನ್ನು ಬಿಡುಗಡೆ ಮಾಡಬೇಕೆಂದೂ ಸೂಚಿಸಲಾಗಿದೆ.

ಡಚ್ ಸರ್ಕಾರದವರು ಇದನ್ನು ತಿರ

ಶ್ರೀ ಜಿ ಕರಿಯಪ್ಪನವರ ಆಗಮನ

ಮೈಸೂರು ೨೫

ಭಾರತದ ಶ್ರೇಷ್ಠ ದಂಡನಾಯಕರಾಗಿ ನಿಯುಕ್ತರಾಗಿರುವ ಶ್ರೀ ಜಿ ಕೆ ಎಂ ಕರಿಯಪ್ಪನವರು ನಿನ್ನೆ ಸಂಜೆ ೫ ಗಂಟೆಗೆ ದೆಹಲಿಯಿಂದ ವಿಮಾನದಲ್ಲಿ ಆಗಮಿಸಿದರು. ಅವರನ್ನು ಸ್ವಾಗತಿಸಲು ವಿಮಾನ ದಲ್ಲಿ ... ದಿವಾನ್ ಶ್ರೀ ... ಸಿ ... ವರು ... ಕಾರ್ಯದರ್ಶಿ ... ಶ್ರೀ ಜಿ ಎನ್ ನಾಗರಾಜರಾಯರು ಸ್ವಾಗತಿಸಿದರು. ಅವರು ಅನಂತರ ಪ್ರಭುತ್ವ ಭವನಕ್ಕೆ ತೆರಳಿ ... ಕೊಂಡು, ಕೊಡಗಿಗೆ ಪ್ರಯಾಣ ಬೆಳೆಸಿದರು. ಇದೇ ೨೮ ನೇ ತಾ ಅವರು ರಾಜಧಾನಿಗೆ ಹಾವಸು ಒಂದು ... ದಿನ ವಹಿಸಿಗೆ ಪ್ರಯಾಣ ಬೆಳೆಸುವರು

ರೇಷನ್ ಕಾರ್ಡ್ ಹೋಲ್ಡರುಗಳ ಸಭೆ

ನಗರದ ರೇಷನ್ ಕಾರ್ಡ್ ಹೋಲ್ಡರುಗಳ ... ಸಭೆಯು ನಾಳೆ ... ಗಂಟೆಗೆ ... ನವರ ... ಅಧ್ಯಕ್ಷತೆಯಲ್ಲಿ ... ನಡೆಯುವುದು ... ಸದಸ್ಯರೆಲ್ಲರೂ ... ಬೇಕೆಂದು ಕೋರಲಾಗಿದೆ

ನೈಜಾಮರು ಪದಚ್ಯುತರಾಗಬೇಕು

ನೈಜಾಮರನ್ನು ... ತರನ್ನಾಗಿ ಮಾಡಬೇಕು ... ಅವರ ... ಕೃತ್ಯಗಳನ್ನು ... ಕಾರಣವನ್ನು ... ಹೈದರಾಬಾದಿನ ... ಸಾವಿರ ಜನರು ... ಪತ್ರವನ್ನು ಪಂಡಿತ ನೆಹರೂರವರಿಗೆ ನಿನ್ನೆ ಹೈದರಾಬಾದಿನಲ್ಲಿ ಅರ್ಪಿಸಿದರೆಂದು ಹೇಳಲಾಗಿದೆ

ಸಿಡ್ನಿಕಾಟನ್ನಿಗೆ ಕೋರ್ಟಿನ ಕರೆ

ಅಂತರ ರಾಷ್ಟ್ರೀಯ ವೈಮಾನಿಕ ಕಾನೂನಿಗೆ ವಿರುದ್ಧವಾಗಿ ಯುದ್ಧ ಶಸ್ತ್ರ ಮತ್ತು ಸಾಮಗ್ರಿಗಳನ್ನು ಸಾಗಿಸುತ್ತಿದ್ದರೆಂಬ ಆಪಾದನೆಯ ಮೇಲೆ ಲಂಡನ್ನಿನ ವೈಮಾನಿಕ ಮತ್ತು ಕೈಗಾರಿಕೆ-ಸಂಶೋಧನಾ ಸಂಸ್ಥೆ ಮತ್ತು ಡೈರೆಕ್ಟರಾದ ಸಿಡ್ನಿ ಕಾಟನ್ನರ ಮೇಲೆ ಕೋರ್ಟಿನವರು ಸಮನ್ಸ್ ಜಾರಿ ಮಾಡಿರುತ್ತಾರೆ. ಇವರು ಹೈದರಾಬಾದಿಗೆ ಹಿಂದೆ ಅಕ್ರಮವಾಗಿ ಶಸ್ತ್ರಗಳನ್ನು ವಿಮಾನಗಳ ಮೂಲಕ ಸರಬರಾಜು ಮಾಡಿದ್ದರು

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ

ಮದರಾಸಿನ ರೆವಿನ್ಯೂ ಸಚಿವರಾದ ಶ್ರೀ ಕಾಳಾ ವೆಂಕಟರಾಯರನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಿಸಲಾಗುವುದೆಂದು ವರದಿಯಾಗಿದೆ

ನೆಹರೂರವರ ಪ್ರವಾಸದ ರೇಡಿಯೋ ಪ್ರಸಾರ

ಭಾರತ ಪ್ರಧಾನಿ ಪಂಡಿತ ನೆಹರೂರವರ ಹೈದರಾಬಾದ್ ಮತ್ತು ಮೈಸೂರು ಸಂಸ್ಥಾನಗಳ ಪ್ರವಾಸದ ಕಾರ್ಯಕ್ರಮಗಳನ್ನು ಅಖಿಲ ಭಾರತ ರೇಡಿಯೋವಿನ ಮದರಾಸಿನ ಕೇಂದ್ರದಿಂದ ಪ್ರಸಾರ ಮಾಡಲಾಗುವುದು. ಹೈದರಾಬಾದಿನ ಡೆಕ್ಕನ್ ರೇಡಿಯೋ ನಿಲಯದಲ್ಲಿ ಈ ರಾತ್ರಿ ೮ ಗಂಟೆಗೆ ಅವರು ಮಾಡಲಿರುವ ಭಾಷಣವನ್ನು ರಿಲೆ ಮಾಡಲಾಗುವುದು

ಮೈಸೂರು ಸಂಸ್ಥಾನದಲ್ಲಿ ೨೬ ರಿಂದ ೨೮ ನೇ ತಾ ಗಳಲ್ಲಿ ಪ್ರಧಾನಿಯವರು ಮಾಡುವ ಭಾಷಣಗಳ ಎಲೆಕ್ಟ್ರಿಕಲ್ ರಿಕಾರ್ಡುಗಳನ್ನು ಆಯಾ ದಿನಗಳಲ್ಲಿ ರಾತ್ರಿ ... ಗಂಟೆಗೆ ಮದರಾಸ್, ತಿರುಚನಾಪಳ್ಳಿ ಮತ್ತು ಬೆಜವಾಡ ರೇಡಿಯೋ ಕೇಂದ್ರಗಳಲ್ಲಿ ಪ್ರಸಾರ ಮಾಡಲಾಗುವುದು

ಪೂರ್ವ ಜಾವಾದ ಮೇಲೆ ಡಚ್ಚರ ಬಾಂಬುಗಳು

ಪಶ್ಚಿಮ ಜಾವಾದ ಮೇಲೆ ಡಚ್ಚರು ಕಾರ್ಯಾಚರಣೆಯನ್ನು ಪ್ರಾರಂಭಿಸಿ, ಬಾಂಡುಂಗ್ ನಗರವನ್ನು ಹಿಡಿದಿದ್ದಾರೆ. ಪೂರ್ವ ಜಾವಾದಲ್ಲಿರುವ ಮೇಡಿಯೂನ್ ಮೇಲೆ ಡಚ್ ವಿಮಾನಗಳು ಬಾಂಬುಗಳನ್ನು ಸುರಿಸಿದವು. ಇದರಿಂದ ಇಂಡೋನೇಷ್ಯದ ಅನೇಕ ಜನರಿಗೆ ನಾವು ನೋವು ಉಂಟಾಗಿದೆ. ಸುಮಾತ್ರಾವನ್ನು ಇಂಡೋನೇಷಿಯನ್ನರು ವಿಶೇಷ ಪ್ರತಿಭಟನೆ ತೋರಿಸುತ್ತಿದ್ದಾರೆ

ಶ್ರೀ ಗಾಯತ್ರಿ ಟಾಕೀಸ್

ಪ್ರತಿ ದಿನ 3 ಆಟಗಳು

26-12-48 ರಿಂದ 3 ದಿನಗಳು ಮಾತ್ರ

M G M's Greatest production

Since the Birth of Motion Pictures

ZIEGFELD FOLLIES

(in Technicolor)

ಜಿಗ್‌ಫೆಲ್ಡ್ ಫಾಲೀಸ್

(ವರ್ಣರಂಜಿತ ಚಿತ್ರ)

With: Esther Williams, Red Skelton, Fred Astaire and World's most gorgeous girls

Morning Shows at 10 30 From 25 12-48 for 2 days

Warner's

All This and Heaven Too

With Bette Davis and Charles Boyer

Edited, printed and published by ... R Nagarajan at the Sadhvi Press, D Subbiah Road, Mysore

ಮಾಂಸದ ಅಂಗಡಿಯನ್ನು ಬದಲಾಯಿಸಬೇಕು

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಸೀನಿರುಕಟ್ಟೆ ಬೀದಿಯಲ್ಲಿ ಮಾಂಸದ ಅಂಗಡಿಯನ್ನು ತೆರೆಯಲು ಪುರಸಭೆಯವರು ಅನುಮತಿ ಕೊಟ್ಟಿದ್ದಾರೆ. ಈ ಬೀದಿಯಲ್ಲಿ ಮಾಂಸಾಹಾರಿಗಳಲ್ಲದ ಹಿಂದೂಗಳೇ ಬಹುಸಂಖ್ಯಾತರು ವಾಸಿಸುತ್ತಿದ್ದಾರೆ. ಅಲ್ಲಿನ ನಿವಾಸಿಗಳಿಗೆ ಇದರಿಂದ ಅಸಹ್ಯವೂ ಅನಾರೋಗ್ಯವೂ ಉಂಟಾಗುತ್ತಿದೆ. ಇದನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಬೇಕೆಂದು ಜನರು ಅರ್ಜಿ ಹಾಕಿಕೊಂಡ ಮೇಲೆ, ಆರೋಗ್ಯಾಧಿಕಾರಿಗಳು ಪರಿಶೀಲನೆ ನಡೆಸಿ ವರ್ಗಾಯಿಸಬೇಕೆಂದು ಸಲಹೆ ಇತ್ತಿದ್ದರೂ ಅದು ಇಲ್ಲಿಯವರೆಗೂ ಆ ರೀತಿ ನಡೆಯದಿರುವುದು ತುಂಬಾ ಶೋಚನೀಯ. ಪೌರಸಭೆಯವರು ಕೂಡಲೇ ಅದನ್ನು ಬೇರೆ ಕಡೆಗೆ ವರ್ಗಾಯಿಸಬೇಕು-ಎಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿ ಪತ್ರ ಬರೆದಿರುತ್ತಾರೆ

ಹರಿಕಥೆ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ದಿನ ರಾತ್ರಿ ೮ ಗಂಟೆಗೆ ಶ್ರೀ ಲಕ್ಷ್ಮೀಪತಿ ಸಹೋದರರಿಂದ ಸಂತ ತುಳಸೀದಾಸ ಎಂಬ ಹರಿಕಥೆ ನಡೆಯುವುದು

ಮಾದರಿ ಶಾಲೆಗೆ ಸಹಾಯ

ರಾಜಧಾನಿಯ ಮಾದರಿ ಶಾಲೆಯ ನಿಧಿಯ ಸಂಗ್ರಹಣೆಗಾಗಿ ಈ ಕ್ರಿಸ್‌ಮಸ್ ರಜಾದಲ್ಲಿ ಶಾಲಾ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಬರುವರೆಂದೂ, ಮಹಾಜನರು ಉದಾರ ಸಹಾಯ ಮಾಡಬೇಕೆಂದೂ ಕೋರಲಾಗಿದೆ

ರಾಜಕಮಲ್ ಟಾಕೀಸ್

೨೪-೧೨-೪೮ರಿಂದ

ಅಮೋಘ 2ನೇ ವಾರ

ಪ್ರತಿ ದಿನ 3 ಆಟಗಳು

ಭಕ್ತ

ಕುಂಬಾರ

(ಕನ್ನಡ)

— Morning Shows —

From 24—12—48

For 4 days

Murder in the Music Hall

with.- Vera Ralston, William Marshall Nancy Kelly

MYSORE CITY IMPROVEMENT TRUST BOARD

Date: 17-12-1948

NOTIFICATION

The following Two lorries of the City Improvement Trust Board, Mysore, will be sold by public auction **on Thursday the 30th December 1948 at 10 a.m.** in the City Improvement Trust Board Stores opening opposite to Palignayakan Motor Garage, Thumbu Chetty Road, Mysore.

Please see the detailed notification in the Office Notice Board for further particulars

1) Chevrolet Model 19.. M Y Z 6053

2) Chevrolet Model 19.. M Y Z 3649

P SITHARAMAIAH
Chairman,
City Improvement Trust Board, Mysore

ನಿಮ್ಮ ಮೈ ಬೆವರು ... ಬೇಕೆ? ...

ಮೈಸೂರು ಸ್ಯಾಂಡಲ್ ಸೋಪ್

... ಬೆಂಗಳೂರು

ಇನ್ನೂರು ಹೊಸಾಹೊಸ ನಮೂನೆಯಲ್ಲಿ

೨೦೦ ಬೆಂಗಾಲ್ ಸಿಲ್ಕ್ ಸೀರೆಗಳು

... ಸೀರೆಗಳ ... ಕಂಪೆನಿಗೆ ಹೋಗಿ, ... 6—7—8—9 ಗಜದ ಸೀರೆಗಳು ... ಹೊಸಾಹೊಸ ನಮೂನೆಗಳನ್ನು ನೋಡಿದರೆ ...

ಪೋ॥ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೭-೧೨-೪೮ [ಸಂಚಿಕೆ ೨೨

– ಇಂಡೋನೇಷಿಯದ – ನಾಯಕರ ಬಿಡುಗಡೆ

ರಾಜಂರವರ ಉಪವಾಸ ಮುಕ್ತಾಯ

ಮೈಸೂರು ೨೬.

ನಿನ್ನೆ ಸಂಜೆ ಶ್ರೀ ಟಿ ರಾಜಂರವರು ...ನಲ್ಲಿ ಉಪವಾಸವನ್ನು ಮುಕ್ತಾಯ ...ಡಿದರು ಶ್ರೀಗಳಾದ ಎಸ್ ಚನ್ನ... ಟಿ ವೆಂಕಟರಮಣಯ್ಯ, ಬಿ ನಾ...ಯಣಸ್ವಾಮಿ ಮತ್ತು ಕೆ. ಎಸ್. ಸತ್ಯ...ನಾರಾಯಣರಾಯರು ಇದಕ್ಕೆ ಮುಂಚೆ ...ವರನ್ನು ಜೈಲಿನಲ್ಲಿ ಭೇಟಿ ಮಾಡಿ ಮಾ...ತು ನಡೆಸಿದರು. ಶ್ರೀಯುತರು ಈಗ ...ರೋಗ್ಯವಾಗಿದ್ದಾರೆ ಇಂದು ಅಥವ ...ಅವರ ಬಿಡುಗಡೆಯಾಗುವ ನಿರೀಕ್ಷೆ ಇದೆ

ಕಲಾ ಪ್ರದರ್ಶನ

ರಾಜಧಾನಿಯಲ್ಲಿ ಇದೇ ೨೮ನೇ ತಾ॥ ...ಯುಲಿರುವ ಅಖಿಲ ಭಾರತ ವಿದ್ಯಾಭ್ಯಾಸ ಸಮ್ಮೇಳನದ ಅಂಗವಾಗಿ ಏರ್ಪಡಿಸಿರು...ವಸ್ತು ಪ್ರದರ್ಶನಾಲಯದಲ್ಲಿ ಕಲಾ ಪ್ರ...ದರ್ಶನವನ್ನೂ ಏರ್ಪಡಿಸಲಾಗಿದೆ ಈ ...ಸಂಭದಲ್ಲಿ ಉತ್ತಮ ಚಿತ್ರಗಳಿಗೆ ಬಹು...ಮಾನವನ್ನು ವಿನಿಯೋಗಿಸಬೇಕೆಂದು ರಾ...ಜಧಾನಿಯ ಕಲಾವಿದರೊಬ್ಬರು ಸೂಚಿ...ಸಿದ್ದಾರೆ

ಆಕಾಶವಾಣಿ ಬೆಂಗಳೂರಿಗೆ

ಮೈಸೂರಿನಲ್ಲಿರುವ ಆಕಾಶವಾಣಿಯ ರೇಡಿಯೋ ಪ್ರಸಾರ ಕೇಂದ್ರವು ಕರ್ನಾ...ಟಕದ ಮಧ್ಯ ಪ್ರದೇಶದಲ್ಲಿರುವ ಬೆಂಗಳೂ...ರಿನಕ್ಕೆ ಇಷ್ಟರಲ್ಲಿಯೇ ವರ್ಗಾಂತರ ...ವಾಗಿ ಕೇಂದ್ರ ಸರ್ಕಾರದ ಆಡಳಿತಾಧೀ...ನದಲ್ಲಿ ಕಾರ್ಯಕ್ರಮ ನಡೆಸುವುದೆಂದು ...ಕೇಂದ್ರದ ವಾರ್ತಾ ಸಚಿವರಾದ ಶ್ರೀ ಆರ್ ...ದಿವಾಕರ್‌ರವರು ಮದರಾಸಿನಲ್ಲಿ ತಿ...ಳಿಸಿದ್ದಾರೆ

'ಚಿತ್ರಗುಪ್ತ' ದಿನ ಪತ್ರಿಕೆ

ಶ್ರೀಯುತ ಹೆಚ್. ಕೆ ವೀರಣ್ಣಗೌಡರ ...ಧ್ಯಕ್ಷತ್ವದಲ್ಲಿ ಮೇಲ್ಕಂಡ ಶಿರೋನಾ...ಮೆಯ ಬೆಂಗಳೂರಿನಲ್ಲಿ ನಿನ್ನೆಯಿಂದ ...ಹೊಸದಾದ ಕನ್ನಡ ದಿನ ಪತ್ರಿಕೆಯನ್ನ... ಸರ್ಕಾರದಿಂದ ಸ್ವೀಕರಿಸಿದ್ದೇವೆ ಇ...ದರಿಂದ ಬೆಂಗಳೂರಿನಿಂದ ಹೊರಡುತ್ತಿ...ರುವ ವಾರ್ತಾ ಪತ್ರಿಕೆಯು ಇದರಲ್ಲಿ ಏಂತ...ಕವಾಗಿದೆ

ಈ ಪತ್ರಿಕೆಯ ಪ್ರಕಟಣೆಗಾಗಿ ಸಂಸ್ಥೆ...ಯನ್ನು ಸ್ಥಾಪಿಸಲಾಗಿದೆ ಶ್ರೀ ಎಸ್. ...ಯ್ಯನವರು ಅದರ ಅಧ್ಯಕ್ಷರು ಮತ್ತು ...ಪಿ ಕೃಷ್ಣಪ್ಪನವರು ಕಾರ್ಯದರ್ಶಿ ...ಚಿತ್ರಗುಪ್ತವು ಚಿರಕಾಲ ಮಾನವ ಸೇ...ವೆಯನ್ನು ಸಲ್ಲಿಸಲೆಂದು ಹಾರೈಸುತ್ತೇವೆ

ಡಚ್ಚರಿಂದ ಅಮೆರಿಕೆಯ ಶಸ್ತ್ರಗಳ ಉಪಯೋಗ

ಇಂಡೋನೇಷ್ಯದ ಮೇಲೆ ಆಕ್ರಮಣ...ವನ್ನು ಕೈಗೊಂಡಿರುವ ಡಚ್ಚರು ...ರಿಕದಲ್ಲಿ ತಯಾರಾದ ಯುದ್ಧ ಶಸ್ತ್ರ ಮತ್ತು ಮೋಟಾರು ಜೀಪುಗಳನ್ನು ...ಪಯೋಗಿಸುತ್ತಿರುವರೆಂದು ...ವರದಿ...ಯಾಗಿದೆ

೬ ದಿನಗಳ ಸಮಾಧಿ

...ನಗಡಿಯಲ್ಲಿ ಸ್ವಾಮಿ ಗೋವಿಂದಗಿರಿ ...ಯವರು ೫ ಅಡಿ ಹಳ್ಳದಲ್ಲಿ ಕು...ಳಿತು ಮುಚ್ಚಿಕೊಂಡು ಕಳೆದ ೨೨ ...ಕುಳಿತು ಸಮಾಧಿ ಪ್ರಾರಂಭಿಸಿ...ದರು ಬರುವ ಸೋಮವಾರ ...ವರೆಂದು ಹೇಳಲಾಗಿದೆ ಇ...ಹಲು ನೂರಾರು ಜನರು ಬರು...

ಹೊಂಗಲವಾಡಿ ನಾಲೆ ಕಾಮಗಾರಿ ವ್ಯವಸ್ಥೆ

ನ್ಯಾಯಾಂಗ ಸಚಿವರಿಂದ ಪರಿಶೀಲನೆ

ಚಾಮರಾಜನಗರ ೨೬

ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ ಭಾಷ್ಯಂರವರು ನಿನ್ನೆ ಸಂಜೆ ಇಲ್ಲಿಗೆ ದಯ ಮಾಡಿಸಿದರು ಪೌರಸಭೆಯ ಪರವಾಗಿ ಶ್ರೀ ದೇಶ ಸೆಟ್ಟರು ಅವರಿಗೆ ಬಿನ್ನವತ್ತಳೆಯನ್ನು ನೀಡಿ ಊರಿನ ಅಭಿವೃದ್ಧಿಗೆ ಬೇಕಾದ ಕಾರ್ಯಕ್ರಮಗಳನ್ನು ಅರಿಕೆ ಮಾಡಿಕೊಂಡರು ತಾಲ್ಲೂಕಿನ ಹಲವು ನಿವಾಸಿಗಳು ತಮ್ಮ ಕುಂದು ಕೊರತೆಗಳ ಬಗ್ಗೆ ಅಹವಾಲುಗಳನ್ನು ಸಲ್ಲಿಸಿದರು

ಮುಖ್ಯವಾಗಿ ಹೊಂಗಲವಾಡಿ ಕೆರೆಗೆ ನೀರು ಸರಬರಾಜು ಮಾಡತಕ್ಕ ೮ ಮೈಲಿ ಉದ್ದದ ನಾಲೆಯನ್ನು ದುರಸ್ತು ಮಾಡುವ ವಿಚಾರವು ಅನೇಕ ವರ್ಷಗಳಿಂದ ನೆನೆಗುದಿಯಲ್ಲಿದೆಯೆಂದೂ ಇದಕ್ಕಾಗಿ ೨೬,೦೦೦ ರೂ ಗಳ ಅಂದಾಜನ್ನು ಮಂಜೂರು ಮಾಡಿದ್ದರೂ, ಇನ್ನೂ ಅದನ್ನು ಮಾಡಿಸಿಲ್ಲವೆಂದೂ ತಿಳಿಸಲಾಯಿತು ಬರುವ ಮೂರು ತಿಂಗಳೊಳಗೆ ಈ ಕೆಲಸವನ್ನು ಪೂರೈಸಬೇಕೆಂದು ಸಚಿವರು ಅಧಿಕಾರಿಗಳಿಗೆ ತಿಳಿವಳಿಕೆಯಿತ್ತರು ಈ ಕೆಲಸವು ಆದ ಮೇಲೆ ೨೦೦೦ ಎಕರೆ ಜಮೀನು ಸಾಗುವಳಿಗೆ ಅನುಕೂಲವಾಗುವುದೆಂದು ತಿಳಿದುಬಂದಿದೆ

ಹೈ ಸ್ಕೂಲು ಕಟ್ಟಡಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಪ್ರತಿಫಲವನ್ನು ಇನ್ನೂ ಪಡೆಯದಿರುವ ರೈತನೊಬ್ಬನ ಮೊರೆಯು ಸಚಿವರ ಹೃದಯವನ್ನು ಕರಗಿಸಿತು. "ನನಗೆ ೨೦ ಜನ ಮಕ್ಕಳು, ಅವರನ್ನು ಹೇಗೆ ಪೋಷಿಸಲಿ ನನ್ನನ್ನು ಇಲ್ಲೇ ಸಾಯಿಸಿ ಬಿಡಿ"— ಎಂದು ಆತನು ಹೇಳಿ ಕುಳಿತುಬಿಟ್ಟಾಗ ೧ ತಿಂಗಳೊಳಗೆ ಅವನ ಹಕ್ಕುದಾರಿಯನ್ನು ಇತ್ಯರ್ಥ ಮಾಡಬೇಕೆಂದು ಸಚಿವರು ತಿಳಿಸಿದರು.

ಮತ್ತೊಬ್ಬ ರೈತನಿಗೆ ದರಖಾಸ್ತಿನಲ್ಲಿ ಮಂಜೂರಾಗಿದ್ದ ೩ ಎಕರೆ ಜಮೀನಿನ ಬದಲಿಗೆ ೩ ಎಕರೆಯನ್ನು ಅನುಕೂಲವಾಗುವ ಸ್ಥಳದಲ್ಲಿ ಕೊಡಲು ನಡೆಯುತ್ತಿರುವ ಪ್ರಯತ್ನದ ವಿಚಾರವು ಒಂದಾಗ ಇದನ್ನು ಕ್ರಮ ಪಡಿಸಬೇಕೆಂದು ತಿಳಿಸಿದರು

ಚಂದಕವಾಡಿ ಬಳಿ ಎರಡು ಎಕರೆ ಜಮೀನಿನಲ್ಲಿ ಬಿತ್ತಿ ಬೆಳೆಸಿದ್ದ ... ಪೈರನ್ನು ... ಕೊಂಡು ... ... ಪೈರನ್ನು ಕೊಡುವಂತೆ

ನೆಹರೂ—ನೈಜಾಂ ಭೇಟಿ

ಭಾರತದ ಪ್ರಧಾನಿ ಪಂಡಿತ್ ನೆಹರೂರವರು ನಿನ್ನೆ ಬೆಳಿಗ್ಗೆ ೯ ಗಂಟೆಗೆ ಹೈದರಾಬಾದ್ ನಿಜಾಮರನ್ನು ಅವರ ಅರಮನೆಯಲ್ಲಿ ಭೇಟಿ ಮಾಡಿ ಒಂದು ಗಂಟೆಯ ಕಾಲ ಮಾತುಕತೆ ನಡೆಸಿದರು. ನಿಜಾಮರು ನೆಹರೂರವರನ್ನು ಭೇಟಿ ಮಾಡಿದ್ದು ಇದೇ ಮೊದಲನೆಯ ಬಾರಿ

ನೈಜಾಮರಿಗೆ ಪ್ರಧಾನಿಯವರು ಗೌರವ ಸೂಚಿಸುವುದಕ್ಕಾಗಿ ಈ ಭೇಟಿ ಏರ್ಪಟ್ಟಿತೆಂದು ಹೇಳಲಾಗಿದ್ದರೂ, ರಾಜಕೀಯ ವೃತ್ತಗಳಲ್ಲಿ ಇದು ಮಹತ್ವದ ಭೇಟಿಯೆಂದು ಪರಿಗಣಿಸಲ್ಪಟ್ಟಿದೆ

ಈ ಭೇಟಿಯಿಂದ ಇಷ್ಟರಲ್ಲಿಯೇ ಹೈದರಾಬಾದಿನ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಗಳಾಗಬಹುದೆಂದು ವರದಿಯಾಗಿದೆ

ಕೋರ್ಟಿನಲ್ಲಿ ಅಪರಾಧಿಗಳು ಕುಳಿತುಕೊಳ್ಳಲು ಅವಕಾಶ

ಅಪರಾಧಿಗಳು ಕೋರ್ಟಿನಲ್ಲಿ ಕುಳಿತುಕೊಳ್ಳಲು ಅವಕಾಶ ಕೊಡುವಂತೆ ಮದರಾಸ್ ಹೈ ಕೋರ್ಟಿನವರು ಅಲ್ಲಿನ ಕ್ರಿಮಿನಲ್ ಕೋರ್ಟುಗಳಿಗೆ ಸೂಚನೆ ಕೊಟ್ಟಿದ್ದಾರೆ ಅವರ ತನಿಖೆ ನಡೆಯುವಾಗ ಮಾತ್ರ ಎದ್ದು ನಿಂತುಕೊಳ್ಳಬೇಕೆಂದು ತಿಳಿಸಲಾಗಿದೆ

ಕಮ್ಯೂನಿಸ್ಟರ ಮೇಲಿನ ಪ್ರತಿಬಂಧಕ ಹೋಗಬೇಕು

ಸಂಸ್ಥಾನದ ಕೆಲವು ಕಮ್ಯೂನಿಸ್ಟರ ಮೇಲೆ ಸರ್ಕಾರದವರು ಗಡಿ ಪಾರ ಆಜ್ಞೆಯನ್ನು ವಿಧಿಸಿರುವುದರಿಂದ ಅವರುಗಳು ಜೀವನೋಪಾಯಕ್ಕೆ ಅವಕಾಶವಿಲ್ಲದೆ, ಅವರ ಕುಟುಂಬದವರು ತುಂಬಾ ಕಷ್ಟಪಡುತ್ತಿದ್ದಾರೆ ಗಡೀಪಾರು ಆಜ್ಞೆಗೆ ಒಳಗಾದ ಅನೇಕರು ಹೊಟ್ಟೆಗಿಲ್ಲದೆ ಅಲೆಯುತ್ತಿದ್ದಾರೆ ಆದುದರಿಂದ ಅವರುಗಳ ಮೇಲಿನ ಪ್ರತಿಬಂಧಕಾಜ್ಞೆಯನ್ನು ಸರ್ಕಾರದವರು ಕೂಡಲೇ ತೆಗೆದುಹಾಕಿ ಅವರ ಗಳು ತಮ್ಮ ಸ್ಥಳಗಳಿಗೆ ಹಿಂತಿರುಗಲು ಅವಕಾಶ ಕೊಡಬೇಕು ಎಂದು ಶ್ರೀಮತಿ ಗೌರಮ್ಮನವರು ಸ್ಟೇಟ್ ... ಎಂದು ಪತ್ರ ಬರೆದಿದ್ದಾರೆ

... ಒತ್ತಾಯಪಡಿಸುತ್ತಿರುವ ... ... ಅಧಿಕಾರಿಗಳು ...

ನೆಹರೂರವರಿಗೆ ಬಿನ್ನವತ್ತಳೆ

ಟೌನ್‌ಹಾಲ್ ಆವರಣದಲ್ಲಿ ವ್ಯವಸ್ಥೆ

ಮೈಸೂರು ೨೬.

ಇದೇ ೨೮ ನೇ ತಾ॥ ಬೆಳಿಗ್ಗೆ ೧೧-೩೦ ಗಂಟೆಗೆ ರಂಗಾಚಾರ್ಲು ಪುರಭವನದ ದಕ್ಷಿಣ ಪಾರ್ಶ್ವದಲ್ಲಿ ಭಾರತದ ಪ್ರಧಾನಿ ಪಂಡಿತ್ ನೆಹರೂರವರಿಗೆ ಪೌರ ಸಭೆ ಮತ್ತು ಜಿಲ್ಲಾ ಬೋರ್ಡುಗಳ ಪರವಾಗಿ ಬಿನ್ನವತ್ತಳೆಗಳನ್ನು ನೀಡಸಲಾಗುವುದಷ್ಟೆ ಈ ಸಮಾರಂಭವನ್ನು ವೀಕ್ಷಿಸಲು ಸರ್ವರಿಗೂ ಅನುಕೂಲವಾಗುವಂತೆ ಪುರ ಭವನದ ದಕ್ಷಿಣ ಪಾರ್ಶ್ವದ ಮೈದಾನದ ಪೂರ್ವ ಭಾಗದಲ್ಲಿ ಗಂಡಸರಿಗೂ ಮತ್ತು ಪಶ್ಚಿಮ ಭಾಗದಲ್ಲಿ ಮಹಿಳೆಯರಿಗೂ ಸ್ಥಳವನ್ನು ಏರ್ಪಡಿಸಲಾಗಿದೆ ಗಂಡಸರು ಪೂರ್ವ ಭಾಗದ ಗೇಟಿನಿಂದಲೂ ಹೆಂಗಸರು ಮತ್ತು ಮಕ್ಕಳು ಪಶ್ಚಿಮ ಭಾಗದ ಗೇಟಿನಿಂದಲೂ ಮೈದಾನವನ್ನು ಪ್ರವೇಶಿಸಬೇಕು. ೧೦ ಗಂಟೆಯ ನಂತರ ಮೈದಾನದೊಳಕ್ಕೆ ಪ್ರವೇಶವಿಲ್ಲದಿರುವುದರಿಂದ ಅಷ್ಟರಲ್ಲಿಯೇ ಮಹಾಜನಗಳು ಬಂದು ತಮ್ಮ ಸ್ಥಳಗಳಲ್ಲಿರಬೇಕೆಂದು ಅಧ್ಯಕ್ಷರಾದ ಶ್ರೀ ... ಸೀತಾರಾಮಯ್ಯನವರು ಕೋರಿರುತ್ತಾರೆ

ಆಕಾಶವಾಣಿಯ ವಿಶೇಷ ಕಾರ್ಯಕ್ರಮ

ಬೆಂಗಳೂರಿನಲ್ಲಿ ನಾಳೆ ಪಂಡಿತ ನೆಹರೂರವರಿಗೆ ಪೌರ ಬಿನ್ನವತ್ತಳೆಯನ್ನು ನೀಡುವ ಸಮಾರಂಭವನ್ನು ಬೆಳಿಗ್ಗೆ ೯ ಗಂಟೆಗೂ, ಮತ್ತು ವಿದ್ಯಾರ್ಥಿಗಳು ವಿದ್ಯಾರ್ಥಿಗಳನ್ನು ಕುರಿತು ಮಾಡುವ ಭಾಷಣವನ್ನು ಸಂಜೆ ೪ ಗಂಟೆಗೂ ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುವುದು

ನಾಳಿದ್ದು ಮೈಸೂರಿನಲ್ಲಿ ನಡೆಯಲಿರುವ ಘಟಿಕೋತ್ಸವ ಘನಾರಂಭವನ್ನು ಬೆಳಿಗ್ಗೆ ೧೧ ಗಂಟೆಗೂ, ಪೌರ ಬಿನ್ನವತ್ತಳೆಯನ್ನು ನೀಡುವ ಸಮಾರಂಭವನ್ನು ೧೧-೩೦ ಗಂಟೆಗೂ ಪ್ರಸಾರ ಮಾಡಲಾಗುವುದು.

ಶ್ರೀಮನ್ಮಹಾರಾಜರವರಿಂದ ೨೮ನೇ ತಾ॥ ಆರಂಭಿಸಲ್ಪಡುವ ಅಖಿಲ ಭಾರತ ವಿದ್ಯಾ ಸಮ್ಮೇಳನದ ಆರಂಭೋತ್ಸವ ಸಮಾರಂಭವನ್ನು ಅಂದು ಮಧ್ಯಾಹ್ನ ೩-೩೦ ಗಂಟೆಗೆ ವ್ಯಾಖ್ಯಾನದೊಡನೆ ಪ್ರಸಾರ ಮಾಡಲಾಗುವುದು

ವಿಜಯಲಕ್ಷ್ಮಿಯವರ ಆಗಮನವಿಲ್ಲ

ಪಂಡಿತ್ ನೆಹರೂರವರೊಡನೆ ಹೈದರಾಬಾದಿಗೆ ಬಂದಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಲ್ಲಿಂದ ದಿಲ್ಲಿಗೆ ತೆರಳುವರೆಂದೂ ಅವರು ನಮ್ಮ ಸಂಸ್ಥಾನಕ್ಕೆ ಬರುವುದಿಲ್ಲವೆಂದೂ ತಿಳಿದು ಬಂದಿದೆ

೦ ಶ್ರೀ ರಾಮಸ್ವಾಮಿ ... ... ಕೃಷ್ಣ ... ... ಕೃಷ್ಣ ... ...

ಇಂಡೋನೇಷ್ಯಾ ನಾಯಕರ ಖುಲಾಸೆ

ಪರ್ಯಾಲೋಚನೆ ನಡೆಸುತ್ತಿದ್ದ ಇಂಡೋನೇಷಿಯ ನಿಯೋಗದ ಸದಸ್ಯರನ್ನೂ ಮತ್ತು ... ಕದನವಾರಂಭವಾಗುವುದಕ್ಕೆ ... ... ಇತರ ನಾಯಕರನ್ನೂ ಡಚ್ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ

... ...

ವಾರ ಭವಿಷ್ಯ

೨೬-೧೨-೪೮ ರಿಂದ ೧ರ ವರೆಗೆ

ಮೇಷ - ನೌಕರಿವಂಥಗಳಲ್ಲಿ ಮೇಲಧಿಕಾರಿಗಳಿಂದ ಪ್ರಶಸ್ತಿ ದೊರೆಯುವುದು ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ಲಭಿಸುವುದು ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು ತಾ|| [illegible] ಶುಭ ವಾರ್ತೆ, ದ್ರವ್ಯಲಾಭ.

ವೃಷಭ ಕೈಗೊಂಡ ಕಾರ್ಯಗಳು ವಿಫಲವಾಗುವುವು ನೆರೆಹೊರೆಯವರೊಡನೆ ವೃಥಾ ಮನಸ್ತಾಪ ಕಟ್ಟಿಕೊಳ್ಳುವಿರಿ ಲಾಟರಿ ಪಟ್ಟಾಗಳಿಂದ ವಿಪರೀತ ನಷ್ಟವುಂಟಾಗುವುದು. ತಾ|| [illegible] ದುಂದುವೆಚ್ಚ, ವಾಹನ ಭಯ

ಮಿಥುನ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು ಯತ್ನಿಸಿದ ಕಾರ್ಯಗಳಲ್ಲಿ ಮಿತ್ರರ ನೆರವು ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರುವುವು ವಾರಾಂತ್ಯದಲ್ಲಿ ಕೊಂಚ ನಷ್ಟ ಸಂಭವ ತಾ|| [illegible] ಧನಲಾಭ, ಮಿತ್ರದರ್ಶನ

ಕಟಕ- ವ್ಯಾಪಾರಗಾರರಿಗೆ ಈ ವಾರ ಅಧಿಕ ಲಾಭವುಂಟಾಗುವುದು. ಬಂಧು ಬಳಗದವರಿಂದ ಅಪೂರ್ವ ವಸ್ತುಗಳು ದೊರೆಯುವುವು. ಆರೋಗ್ಯ ಉತ್ತಮವಾಗಿದೆ. ತಾ|| [illegible] ಮಿತ್ರ ದರ್ಶನ, ಸುಭೋಜನ

ಸಿಂಹ ಮನೆಯಲ್ಲಿ ಮಕ್ಕಳು ಮರಿಗಳಿಗೆ ಅನಾರೋಗ್ಯವುಂಟಾಗಿ ವೈದ್ಯರಿಗೆ ವೃಥಾ ಹಣ ತೆರಬೇಕಾಗುವುದು. ಯತ್ನಿಸಿದ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು. ತಾ|| [illegible] ಅನಾರೋಗ್ಯ, ದುಂದು ವೆಚ್ಚ

ಕನ್ಯಾ ಆರ್ಥಿಕ ಮುಗ್ಗಟ್ಟು ಸಂಪೂರ್ಣವಾಗಿ ಬಗೆಹರಿಯುವುದು ಮಾನಸಿಕ ಚಿಂತೆಗಳು ದೂರವಾಗುವುವು ಆರೋಗ್ಯ ಚೆನ್ನಾಗಿದೆ ಪ್ರವಾಸದಿಂದ ಧನಲಾಭ ತಾ|| [illegible] ಸುಖಪ್ರವಾಸ, ಪ್ರಿಯವಾರ್ತೆ

ತುಲಾ- ಆರೋಗ್ಯ ದಸಾದಾಯಗಳೆರಡೂ ಉತ್ತಮವಾಗಿವೆ. ಕೈಗೊಂಡ ಕಾರ್ಯಗಳು ಅಧಿಕ ಯತ್ನವಿಲ್ಲದೆ ಸಿದ್ಧಿಸುವು ಅನೇಕ ಸಾಧುಸಂತರ ದರ್ಶನಲಾಭವಾಗುವುದು. ತಾ|| [illegible] ರತ್ನನಾಭ, ಸಂತೋಷ

ವೃಶ್ಚಿಕ— ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವುದು. ಅನೇಕ ವಿದ್ವಜ್ಜನರ ಪರಿಚಯವಾಗುವುದು. ಅಪ್ತೇಷ್ಟರಿಂದ ಸುಸ್ನೆಗೆ ದೊರೆಯುವುದು. ಆರೋಗ್ಯ ಚೆನ್ನಾಗಿದೆ. ತಾ|| ೩೦, ೧ ಧನಲಾಭ, ಮಿತ್ರಭೇಟಿ.

ಧನು- ವಿದ್ಯಾರ್ಥಿ ಮತ್ತು ಲೇಖಕವರ್ಗಕ್ಕೆ ಈ ವಾರ ಸಂಪೂರ್ಣ ಯಶಸ್ಸು ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ವಾರಾಂತ್ಯದಲ್ಲಿ ಕೊಂಚ ನಷ್ಟ ಸಂಭವ ತಾ|| ೨೭, ೩೧ ವಾಹನಯೋಗ, ಉಲ್ಲಾಸ.

ಮಕರ ಪ್ರವಾಸದಿಂದ ಅಧಿಕ ನಷ್ಟ ಸಂಭವಿಸಬಹುದು ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅವಮಾನವಾಗುವುದು. ಯತ್ನಿಸಿದ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು ತಾ|| ೩೦, ೧ ಅರ್ಥಹಾನಿ, ಅಗ್ನಿಭಯ

ಕುಂಭ-ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಕ್ಲೇಶಗಳು ಹೆಚ್ಚುವುವು. ಮನೆಯಲ್ಲಿ ಸಂಶಯ ವಾತಾವರಣವುಂಟಾಗುವುದು. ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯ ದೊರೆಯುವುದು ತಾ|| ೨೮, ೩೧ ದುಂದು ವೆಚ್ಚ, ಸ್ವಲ್ಪ ಶಾಂತಿ.

ಮೀನ-- ಪ್ರವಾಸದಿಂದ ಅಧಿಕ ಲಾಭವುಂಟಾಗುವುದು. ಯತ್ನಿಸಿದ ಕಾರ್ಯಗಳೆಲ್ಲ ಸಿದ್ಧಿಸುವುವು. ಧರ್ಮ ಕಾರ್ಯಗಳಿಗಾಗಿ ವೆಚ್ಚವೊದಗುವುದು. ಆರೋಗ್ಯ ಚೆನ್ನಾಗಿದೆ. ತಾ|| ೨೯, ೧ ದ್ರವ್ಯಲಾಭ, ಶುಭವಾರ್ತೆ.

ಟೋಜೋರವರ ಅಂತ್ಯ ಸಂದೇಶ

ಗಲ್ಲಿಗೇರಿಸಲ್ಪಟ್ಟ ಜಪಾನಿನ ಪ್ರಧಾನಿ ಜ|| ಟೋಜೋ ಮತ್ತು ಇತರ ಆರುಮಂದಿಯ ಅವಶೇಷವನ್ನು ಗುಪ್ತವಾದ ಸ್ಥಳದಲ್ಲಿ ಚೆಲ್ಲಲಾಯಿತೆಂದು ಹೇಳಲಾಗಿದೆ. ಆ ಸ್ಥಳವನ್ನು ರಹಸ್ಯವಾಗಿಡಲಾಗಿದೆ.

ಟೋಕಿಯೋ ನಗರದಲ್ಲಿ ಟೋಜೋರವರ ಮನೆಯವರು ಅವರ ಉಗುರು ಮತ್ತು ಕೂದಲನ್ನು ಇಟ್ಟಿದ್ದ ಶವದ ಪೆಟ್ಟಿಗೆಯ ಮುಂದೆ ಅಂತ್ಯ ಕರ್ಮಗಳನ್ನು ನಡೆಸಿದರು.

ಗಲ್ಲಿಗೇರಿಸಲ್ಪಡುವುದಕ್ಕೆ ಮುಂಚೆ ಜ|| ಟೋಜೋರವರು ತಮ್ಮ ಅಂತ್ಯ ಸಂದೇಶವನ್ನು ಪದ್ಯರೂಪದಲ್ಲಿ ಈ ರೀತಿ ಬರೆದಿರುತ್ತಾರೆ -

ಬುದ್ಧ ದೇವನು ವಾಸಿಸುವ ಗುಪ್ತ ಪರ್ವತವನ್ನು ಏರುವ ಮೊದಲು ನಿಮಗೆಲ್ಲ ವಂದನೆಯನ್ನು ಅರ್ಪಿಸುತ್ತೇನೆ. ನಾಳೆ ನಾನು ಬುದ್ಧನ ಕೈಯಲ್ಲಿನ ಮಗು ಅನಂತರ ನನ್ನ ಶಾಂತಿಭಂಗ ಮಾಡಲು ಯಾರಿಗೂ ಸಾಧ್ಯವಿಲ್ಲ

ಪ್ರೆಸ್ ಕೆಲಸಗಾರರ ಸಂಘ

ಪ್ರಿಂಟಿಂಗ್ ಪ್ರೆಸ್ ಕೆಲಸಗಾರರ ಸಂಘದ ಸಭೆಯು ನಿನ್ನೆ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಗಳಾದ ಎಸ್ ಚನ್ನಯ್ಯ ಮತ್ತು ಬಿ. ನಾರಾಯಣಸ್ವಾಮಿಯವರು ಭಾಷಣಮಾಡಿ ಕೆಲಸಗಾರರಲ್ಲಿ ಶಿಸ್ತು ಮತ್ತು ಐಕಮತ್ಯಗಳಿರಬೇಕೆಂದು ಹೇಳಿದರು. ಸಂಘಕ್ಕೆ ಇನ್ನೂ ಹೆಚ್ಚು ಸದಸ್ಯರನ್ನು ಸೇರಿಸಿ ಅದನ್ನು ರಿಜಿಸ್ಟರು ಮಾಡಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು

ತಾತಯ್ಯನವರ ದಿನಾಚರಣೆ

ಮೈಸೂರು ೨೩

ಅನಾಥಾಲಯದ ಸಾಹಿತ್ಯ ಸಂಘದವರು ನಿನ್ನೆ ರಾತ್ರಿ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರ ದಿನಾಚರಣೆಯನ್ನು ಪ್ರಾಭಕ್ತಿಗಳಿಂದ ನೆರವೇರಿಸಿದರು ವಿಪ್ರ ವಿದ್ಯಾಲಯದ ಅಧ್ಯಾಪಕರಾದ ಶ್ರೀ ಎಂ. ಯಾಮುನಾಚಾರ್ಯರವರು ಅಗ್ರಾಸನವನ್ನು ವಹಿಸಿದ್ದರು.

ಪ್ರಾರ್ಥನೆ ಮತ್ತು ಸ್ವಾಗತಗಳ ನಂತರ ಶ್ರೀಗಳಾದ ಅಂಬಳೆ ಸುಬ್ರಹ್ಮಣ್ಯ ಅಯ್ಯರ್, ಹೆಚ್.ಕೆ. ಕುಮಾರಸ್ವಾಮಿ, ಅಗರಂ ರಂಗಯ್ಯ, ಸುಬ್ರಹ್ಮಣ್ಯಂ ವೆಂಕಟಸುಬ್ಬಯ್ಯ ಮತ್ತು ಇನ್ನೂ ಅನೇಕ ಮಹನೀಯರುಗಳು ತಾತಯ್ಯನವರ ಜೀವನದ ವೈಶಿಷ್ಟ್ಯವನ್ನೂ ಮತ್ತು ಅವರು ಸಲ್ಲಿಸಿರುವ ಸೇವೆಯನ್ನೂ ಕುರಿತು ಮಾತನಾಡಿದರು.

ಶ್ರೀ ರಾಮಕೃಷ್ಣ ಭಟ್ಟರವರು ರಾಷ್ಟ್ರಧ್ವಜದ ವಿಚಾರವಾಗಿ ಸಂಸ್ಕೃತ ಶ್ಲೋಕಗಳನ್ನು ಪಠಿಸಿದರು.

ವಿ|| ಎಂ ಸಿ ಚಿಕ್ಕಸ್ವಾಮಿ ಮತ್ತು ಮಂಡಲಿಯವರಿಂದ ಸುಶ್ರಾವ್ಯವಾದ ಸಂಗೀತವು ಜರುಗಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಾತಯ್ಯನವರ ಉಪಾಧ್ಯಾಯ ವೃತ್ತಿಯ ವಿಶೇಷಗಳನ್ನು ವಿವರಿಸಿ ಅವರ ಆದರ್ಶವು ನಾಡಿನ ತರುಣರಮೇಲೆ ಒಳ್ಳೆಯ ಪ್ರಭಾವವನ್ನು ಬೀರಲೆಂದು ಪ್ರಾರ್ಥಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳನಂತರ ಜಯಕಾರದೊಡನೆ ಸಮಾರಂಭವು ಮುಕ್ತಾಯವಾಯಿತು.

ಚಿತ್ರ ಧಾರಿ

ರಾಜಧಾನಿಯ ಪ್ರಭುದೇವ ಟಾ[illegible] ನಲ್ಲಿ ಕಳೆದ ನಾಲ್ಕು ವಾರಗಳಿಂದಲೂ [illegible] ತೆರೆ ಕಾಣುತ್ತಿರುವ ಜೆಮಿನಿಯವರ [illegible] ಕ್ರಧಾರಿ ತಮಿಳು ಚಿತ್ರವು ಎಲ್ಲರ [illegible] ರ್ಷಕವಾಗಿದೆ. ಭಕ್ತಿರಸ ಪ್ರದರ್ಶನದಲ್ಲಿ [illegible] ಸರಾಂತ ಶ್ರೀ. ನಾಗಯ್ಯ ನವರು ಇದ[illegible] ಪಾತ್ರ ವಹಿಸಿರುವರು. ಭಾರತೀಯ[illegible] ಯರಿಗೆ ಅಮೌಲ್ಯ ಭೂಷಣವಾದ ಪ[illegible] ಕ್ತಿಯನ್ನು ಈ ಚಿತ್ರವು ಸುಂದರ [illegible] ನೃತ್ಯ ಮತ್ತು ಗಾಯನಗಳಿಂದ ಬಹು[illegible] ಪಳ ಪ್ರಶಂಸನೀಯವಾಗಿದೆ.

WANT
CEMENT?
Ask For.
DALMIA
Superior Quality,
Easy Availability
At Govt. Controlled pri[ce]
-: Enquire at :-
C. B. S. Kuma[r]
Asoka Road, Mysore
Agents for
DALMIA CEMENT

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ
ಯೂನಿವರ್ಸಲ್ ಹೇರ್ [illegible]
ಸೋತ್ತು, ಕೀಲು ನೋವು [illegible]
ಸಕಲ ಬಾಧೆಗಳಿಗೂ [illegible]
[illegible]
ಮಹಾ ಸುಗಂಧರಾಜ ತೈಲ—)
" ಚಂದನಾದಿ ತೈಲ—)
" ಭೃಂಗಾಮಲಕ ತೈಲ—)
—ಬೇಸಿಗೆ ಕಾಲಕ್ಕೆ ಉತ್ತಮ ಅಕ್ಕ[illegible] ತೈಲಗಳು
ಮಹಾಶೀತಲ ತೈಲ —[illegible]
ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಯೋಗ್ಯವಾದ ಉತ್ತಮ
ಬೀಗ [illegible]
ಪಂಚಾಮೃತ—ಸುಶೀಲ [illegible] ಗಳಿಗೆ ಸಿದ್ಧ ಔಷಧ.
ಮೈಸೂರು ಆಯುರ್ವೇದಿಕ್ ಫಾ[ರ್ಮಸಿ]
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಮೈ[ಸೂರು]

Edited, printed and pu[bli]shed by A.R Nagarajan [at] the Sadhvi Press, Dr. Sub[barayappa] Road, Mysore.

ಶ್ರೀ ಗಾಯತ್ರಿ ಟಾಕೀಸ್
ಪ್ರತಿ ದಿನ ೩ ಆಟಗಳು
26-12-48ರಿಂದ 3 ದಿನಗಳು ಮಾತ್ರ
M.G.M's Greatest production
Since the Birth of Motion Picture.
ZIEGFELD FOLLIES
(in Technicolor)
ಜಿಗ್‌ಫೆಲ್ಡ್ ಫಾಲೀಸ್
(ವರ್ಣರಂಜಿತ ಚಿತ್ರ)
With- Esther Williams, Red Skelton, Fred Astaire and World's most gorgeous girls

ರಾಜಕಮಲ್ ಟಾಕೀಸ್
೨೪-೧೨-೪೮ರಿಂದ
ಅಮೋಘ 2ನೇ ವಾರ
ಪ್ರತಿ ದಿನ ೩ ಆಟಗಳು
ಭಕ್ತ ಕುಂಬಾರ
(ಕನ್ನಡ)
—:Morning Shows:—
From 24—12-48
For 4 days
Murder in the Music Hall
With- Vera Ralston, William Marshall, Nancy Kelly

ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ
ಬೆಳಗಿನ ಆಟಗಳು
೨೭-೧೨-೪೮ರಿಂದ :: ೪ ದಿನಗಳು ಮಾ[ತ್ರ]
ಹರಿಕೇನ್ ಸ್ಪೆಷಲ್
(ಹಿಂದಿ)
ಪಾತ್ರ - ಮಾಸ್ಟರ್ ನಿಸ್ಸಾರ್, ವತ್ಸಲಾ ಕುಂಟೇಕರ್, ವಸಂತ ಪೆಹಲ್ವಾನ್
ಒಲಿಂಪಿಯಾ ಟಾಕೀಸ್

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೭-೧೨-೪೮ [ಸಂಚಿಕೆ ೧೧೫

ಭಾರತದ ಮಹಾ ಪ್ರಧಾನಿಗೆ ಸುಸ್ವಾಗತ

ನೆಹರೂರವರ ಆಗಮನ

ಸಹಸ್ರಾರು ಜನರ ಅದ್ಭುತ ಸ್ವಾಗತ

[ಸ್ವಂ. ಸು. ಪ್ರೋ॥] ಬೆಂಗಳೂರು ೨೭

ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ಮಧ್ಯಾಹ್ನ ೩ ಗಂಟೆಗೆ ಹೈದರಾಬಾದಿನಿಂದ ಇಲ್ಲಿಗೆ ವಿಮಾನದಲ್ಲಿ ದಯಮಾಡಿಸಿದರು. ಹೈದರಾಬಾದಿನ ಮಿಲಿಟರಿ ಗೌರ್ನರ್ ಮೇ॥ಜ॥ ಚೌಧ್ರಿಯವರ ಪತ್ನಿ ಶ್ರೀಮತಿ ಅರುಣಾರವರೂ, ಪ್ರಧಾನ ರಾಯಭಾರಿಗಳ ಪುತ್ರಿ ಡಿಲೆಗ್ನಿಯವರೂ, ಭಾರತ ಸರ್ಕಾರದ ವಾರ್ತಾ ಪ್ರಚಾರಾಧಿಕಾರಿಗಳಾದ ಶ್ರೀ ಎ. ಎಸ್. ಅಯ್ಯಂಗಾರ್ಯರೂ ಅವರೊಡನೆ ಆಗಮಿಸಿದರು.

ನಿನ್ನೆ ಬೆಳಗ್ಗೆ ಮದರಾಸಿನಿಂದ ಇಲ್ಲಿಗೆ ಆಗಮಿಸಿದ್ದ ಭಾರತ ಸರ್ಕಾರದ ಸಚಿವರಾದ ಶ್ರೀ ಆರ್. ಆರ್. ದಿವಾಕರರೂ, ದಿವಾನರೂ, ಮಂತ್ರಿಗಳೂ, ಶ್ರೀಯುತರಾದ ಟಿ. ಸಿದ್ದಲಿಂಗಯ್ಯ, ಟಿ. ಸುಬ್ರಹ್ಮಣ್ಯಂ, ಕೆ. ಶಾಮರಾಜ ಅಯ್ಯಂಗಾರ್, ಕೆ. ಚೆನ್ನಯ್ಯ, ಕೆ. ಹನುಮಂತಯ್ಯ ಮುಂತಾದ ಕಾಂಗ್ರೆಸ್ ನಾಯಕರುಗಳೂ ಪಂಡಿತ ನೆಹರೂರವರಿಗೆ ಹಿಂದೂಸ್ಥಾನ್ ವಿಮಾನ ನಿಲ್ದಾಣದಲ್ಲಿ ಸ್ವಾಗತವನ್ನು ಬಯಸಿದರು.

ನೆಹರೂರವರು ಇಳಿದೊಡನೆಯೇ ಮಿಲಿಟರಿ ಸೇನಾಧಿಕಾರಿಗಳಾದ ಶ್ರೀ ಎ. ಹೆಚ್. ...ನ್ ಮತ್ತು ಸೇನಾಧಿಕಾರಿಗಳಾದ ಬ್ರಿ॥ ...ಶ್ರೀ ಬಸವರಾಜೇ ಅರಸ್ ಮತ್ತು ಪೋಲೀಸ್ ಅಧಿಕಾರಿಗಳಾದ ಶ್ರೀ ಸಿ. ಹೆಚ್. ರಣಜೋಧ್‌ಸಿಂಗ್ ಮತ್ತು ...ಮುಂತಾದವರು ತಮ್ಮ ಅನುಯಾಯಿಗಳೊಡನೆ ಗೌರವವನ್ನು ಸಲ್ಲಿಸಿದರು.

ದಿವಾನರು ನೆಹರೂರವರಿಗೆ ಪುಷ್ಪಹಾರವನ್ನು ಸಮರ್ಪಿಸಿದರು. ಸಂಸ್ಥಾನದ ಮಂತ್ರಿಗಳನ್ನೂ, ಉನ್ನತಾಧಿಕಾರಿಗಳನ್ನೂ, ಪ್ರಮುಖ ಮಹನೀಯರುಗಳನ್ನೂ ಅವರಿಗೆ ಪರಿಚಯ ಮಾಡಿಕೊಡಲಾಯಿತು.

ವಿಮಾನ ನಿಲ್ದಾಣದ ದ್ವಾರದ ಬಳಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಪುಷ್ಪಹಾರವನ್ನು ಸಲ್ಲಿಸಿದರು. ಅದನ್ನು ಮುಗುಳ ನಗೆಯಿಂದ ಸ್ವೀಕರಿಸಿ ನೆಹರೂರವರು ಈ ರೀತಿ ಹೇಳಿದರು: "...ಬಂದಿಳಿದೊಡನೆಯೇ ಜನರನ್ನು ...ತನ್ನಾಗಿ ಮಾಡುವ ವಿಚಿತ್ರ ಶಕ್ತಿ ಮೈಸೂರಿನವರಿಗಿರುತ್ತದೆ.

...ನಾಯ ಪುರಸಭಾಧ್ಯಕ್ಷರಾದ ಶ್ರೀ ...ರಾಜ ಅಯ್ಯಂಗಾರ್ಯರೂ ಮತ್ತು ನಿ...ಕಾರ್ಪೊರೇಷನ್ ಅಧಿಕಾರಿಗಳೂ ...ವನ್ನು ಅರ್ಪಿಸಿದರು.

...ಲ್ಲಿಂದ ರೆಸಿಡೆನ್ಸಿ ಭವನಕ್ಕೆ ಮಹಾ ಪ್ರಧಾನಿಯವರು ತೆರೆದ ಮೋಟಾರಿನಲ್ಲಿ ...ದರು. ಅವರೊಡನೆ ದಿವಾನರೂ, ದಿವಾಕರರೂ, ಶ್ರೀ ಕೆ. ಸಿ. ರೆಡ್ಡಿಯವರೂ ಕುಳಿತಿದ್ದರು. ೯ ಮೈಲಿ ಉದ್ದವಿರುವ ರಸ್ತೆಯಲ್ಲಿ ಎರಡು ಕಡೆಯೂ ಸಾವಿರಾರು ಜನರು ಸೇರಿ ನೆಹರೂರವರಿಗೆ ಸ್ವಾಗತ ...ಹರ್ಷ ಧ್ವನಿಗಯ್ಯುತ್ತಿದ್ದರು. ರೆಸಿಡೆನ್ಸಿ ಭವನಕ್ಕೆ ಬಂದು ಸೇರಲು ಮುಕ್ಕಾಲು ಗಂಟೆ ಕಾಲ ಹಿಡಿಯಿತು.

...ಸೇರಿದ್ದ ಕಾಂಗ್ರೆಸ್ ಕಾರ್ಯಾಕಾರಿಗಳನ್ನು ಕುರಿತು ಪ್ರಧಾನಿಗಳು ಭಾಷಣ ಮಾಡಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ವಿವರಿಸಿದರು.

ಸಂಜೆ ೫ ಗಂಟೆಗೆ ಅರಮನೆಯ ಆವರಣದಲ್ಲಿ ಪಂಡಿತ ನೆಹರೂರವರ ಗೌರವಾರ್ಥವಾಗಿ ದಿವಾನರ ಸಂತೋಷ ಕೂಟವು ಜರುಗಿತು. ಸುಮಾರು ೧೫೦೦ ಜನ ಅತಿಥಿಗಳು ಬಂದಿದ್ದರು. ನೃತ್ಯ ಮತ್ತು ಗಾಯನಗಳು ನಡೆದವು.

ರಾತ್ರಿ ೭ ಗಂಟೆಗೆ ದಿವಾನರು ಮತ್ತು ಪ್ರಧಾನ ಮಂತ್ರಿಗಳೊಡಗೂಡಿ ಜಾಲಹಳ್ಳಿ, ಶಿವರಕ್ಕೆ ಮಹಾ ಪ್ರಧಾನಿಗಳು ಭೇಟಿ ಇತ್ತರು. ಅನಂತರ ಕೆಡೆಟ್ಟುಗಳ ದಳವನ್ನು ಪರಿಶೀಲಿಸಿದರು. ರಾಷ್ಟ್ರದ ರಕ್ಷಣೆಗೆ ಅವರು ಮುಡಿಯಬೇಕೆಂದು ಬೋಧಿಸಿದರು.

ಸೂಚನೆ

ಭಾರತದ ಮಹಾ ಪ್ರಧಾನಿ ಪಂಡಿತ ಜವಾಹರಲಾಲ ನೆಹರೂರವರ ಆಗಮನದ ಗೌರವಾರ್ಥವಾಗಿ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ

ರಸ್ತೆಗಳ ಬಂದು

ಪಂಡಿತ ನೆಹರೂರವರು ಆಗಮಿಸುವ ನಂ ೦ ... ದಲ್ಲಿ ಈ ದಿನ ಮತ್ತು ... ಳೆ ... ರಿಂ ... ದ ಕಾರಣಕ್ಕೋಸ್ಕರ ... ರಸ್ತೆಯನ್ನು ಬೆಳಗಿ ... ಸಂಜೆ ... ರಾತ್ರಿ ... ಗಂಟೆ ವರೆಗೆ ... ಸಾರ್ವಜನಿಕ ಸಂಚಾರಕ್ಕೆ ಬಂದು ಮಾಡಲಾಗಿದೆ.

ಡಚ್ ಸರ್ಕಾರಕ್ಕೆ ವಿಶ್ವ ಸಂಸ್ಥೆಯವರ ಧಿಕ್ಕಾರ

ಇಂಡೋನೇಷ್ಯದ ಯುದ್ಧದ ... ಗಳನ್ನು ... ವರದಿ ಮಾಡಲು ... ಸಂಸ್ಥೆಯವರು ... ರಾಷ್ಟ್ರ ... ಪ್ರತಿನಿಧಿ ... [illegible]

ನೆಹರೂರವರಿಗೆ ಪುರಸಭೆಗಳ ಮಾನ ಪತ್ರ

೫ ಲಕ್ಷ ಜನರ ಅಭೂತಪೂರ್ವ ಸ್ವಾಗತ

[ಸ್ವಂ. ಸು. ಪ್ರೋ॥] ಬೆಂಗಳೂರು ೨೭

ಈ ದಿನ ಬೆಳಗ್ಗೆ ೯ ಗಂಟೆಗೆ ಬೆಂಗಳೂರು ನಗರ ಮತ್ತು ದಂಡಿನ ಪೌರ ಸಭೆಯವರು ಭಾರತ ಪ್ರಧಾನಿ ಪಂಡಿತ ನೆಹರೂರವರಿಗೆ ಮಾನಪತ್ರವನ್ನು ಕೇಸ್ ಕೋರ್ಸಿನಲ್ಲಿ ಅರ್ಪಿಸಿದರು. ಈ ಸಮಾರಂಭಕ್ಕೆ ೫ ಲಕ್ಷಕ್ಕಿಂತ ಹೆಚ್ಚು ಜನರು ಅಲ್ಲಿ ಕಿಕ್ಕಿರಿದು ತುಂಬಿದ್ದರು.

ಪಂಡಿತ ನೆಹರೂರವರು ೮-೫೫ ಗಂಟೆಗೆ ತೆರೆದ ಮೋಟಾರು ಕಾರಿನಲ್ಲಿ ದಿವಾನರು ಮತ್ತು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೊಡನೆ ದಯಮಾಡಿಸಿದರು. ಅಲ್ಲಿ ನೆರೆದಿದ್ದ ಅಸಂಖ್ಯಾತ ಜನ ಸಮೂಹವು ಅವರಿಗೆ ಅದ್ಭುತ ಸ್ವಾಗತವನ್ನು ನೀಡಿತು. ಪ್ರಧಾನಿಯವರು ವೇದಿಕೆಯ ಮೇಲೆ ಒಬ್ಬರೇ ಎರಡು ಕೈಗಳನ್ನೂ ಜೋಡಿಸಿ ನಿಂತುಕೊಂಡು ಹತ್ತು ನಿಮಿಷಗಳ ಕಾಲ ಜನ ಸಮೂಹವನ್ನು ಎಲ್ಲ ಕಡೆಗೂ ತಿರುಗಿ ನೋಡಿದರು.

ಅನಂತರ ಪೌರ ಸಭಾಧ್ಯಕ್ಷರಾದ ಶ್ರೀ ಶ್ಯಾಮರಾಜ ಅಯ್ಯಂಗಾರ್ಯರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಅರ್ಪಿಸಿದರು. ಅನಂತರ ದಂಡಿನ ಪುರಸಭೆಯ ಉಪಾಧ್ಯಕ್ಷರಾದ ಜ॥ ಇನಾಯತುಲ್ಲ ಮೇತ್ರಿಯವರು ಬಿನ್ನವತ್ತಳೆಯನ್ನು ಗಂಧದ ಕರಂಡದಲ್ಲಿ ಅರ್ಪಿಸಿದರು. ಅದರ ಮೇಲೆ ಮಹಾತ್ಮರ ಪ್ರತಿಮೆಯನ್ನು ಕೆತ್ತಲಾಗಿತ್ತು. ಅಖಿಲ ಭಾರತ ಮಹಿಳಾ ಸಮ್ಮೇಳನದ ಪರವಾಗಿ ಶ್ರೀಮತಿ ಕಮಲಮ್ಮ ದಾಸಪ್ಪನವರು ಬಿನ್ನವತ್ತಳೆಯನ್ನು ಅರ್ಪಿಸಿದರು. ಮೈಸೂರು ಕಾರ್ಮಿಕ ಸಂಸ್ಥೆಯ ಪರವಾಗಿ ಶ್ರೀ ಕೆ. ಎಸ್. ಕುಮಾರರವರು ಹಾರವನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಒಬ್ಬರೇ ಕುಳಿತು ಪಕ್ಕದಲ್ಲಿ ಇಟ್ಟಿದ್ದ ಮಹಾತ್ಮರ ಭಾವ ಚಿತ್ರವನ್ನು ಪಂಡಿತ ನೆಹರೂರವರು ನೋಡಿದಾಗ ಅವರ ಕಣ್ಣಿನಲ್ಲಿ ನೀರು ಬಂದಿತು.

ಪಂಡಿತ ನೆಹರೂರವರು ಒಂದು ಗಂಟೆ ಕಾಲ ಭಾಷಣಮಾಡಿ, ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಮೇಲೆ ಸಂಭವಿಸಿದ ಘಟನೆಗಳನ್ನು ವಿವರಿಸಿದರು. ದೇಶದ ವಿನಾಶಕಾರಕ ಚಟುವಟಿಕೆಗಳ ಬಗ್ಗೆ ಅವರು ಎಚ್ಚರಿಕೆ ಕೊಟ್ಟು ಕಮ್ಯೂನಿಸ್ಟರು, ಆರ್. ಎಸ್. ಎಸ್. ಮತ್ತು ಹಿಂದೂ ಮಹಾಸಭೆಗಳ ಕಾರ್ಯ ಚರಣೆಯನ್ನು ತೀವ್ರವಾಗಿ ಖಂಡಿಸಿದರು. ಇವರುಗಳು ದೇಶದ ಹಿತವನ್ನು ಮರೆತು ಸ್ವಾರ್ಥ ದೃಷ್ಟಿಯುಳ್ಳವರಾಗಿದ್ದಾರೆಂದು ತಿಳಿಸಿದರು. ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆ ಜನರು ದುಡುಕಬಾರದೆಂದೂ, ಈ ವಿಚಾರವನ್ನು ಕಾಂಗ್ರೆಸ್ ...ಪರಿಶೀಲಿಸಿ ವರದಿ ಒಪ್ಪಿಸುವವರೆಗೂ ತಾಳ್ಮೆಯಿಂದಿರಬೇಕೆಂದೂ ...ರು. ಜನರು ಪ್ರಾಂತೀಯ ಭಾವನೆ ...ತೊರೆದು, ಭಾರತವು ಒಂದೇ ...ಸಬೇಕೆಂದು ಪಂಡಿತ ನೆಹರೂರವರು ...ಯಲ್ಲಿ ಪ್ರಾರ್ಥಿಸಿದರು.

...ಂದ ...೨ ಗಂಟೆಗೆ ಟೌನ್‌ಹಾಲಿನ ...ಸಂಘದ ...ಉತ್ಸವವನ್ನು ...ನೆರವೇರಿಸಿದರು. ತಾತ್ಕಾಲಿಕ ...ಅವರು ಭೇಟಿ ಕೊ...

ನೀರಿನ ತೊಂದರೆ

ರಾಜಧಾನಿಯ ರಮಾ ವಿಲಾಸ ಅಗ್ರಹಾರದಲ್ಲಿ ಬೆಳಿಗ್ಗೆ ೬ ರಿಂದ ೧೧ ಗಂಟೆಯ ವರೆವಿಗೆ ನೀರು ಸರಬರಾಜು ಮಾಡಲಾಗುವುದಾಗಿ ಪೌರಸಭಾ ಕಮೀಷನರು ಪ್ರಕಟಣೆ ಹೊರಡಿಸಿದ್ದರೂ, ಆ ಕಾಲಕ್ಕೆ ನೀರು ಸರಬರಾಜಾಗುತ್ತಿಲ್ಲ. ಈ ಮೊಹಲ್ಲಕ್ಕೆ ನೀರು ಬಿಡುವವನು ತನ್ನ ಮನಸ್ಸು ಬಂದಂತೆ ನೀರನ್ನು ನಿಲ್ಲಿಸುವುದು ಅಥವ ಬಿಡುವುದು ವಾಡಿಕೆಯಾಗಿದೆ. ಅನೇಕ ಜನರಿಗೆ ಇದರಿಂದ ತುಂಬಾ ಕಷ್ಟವಾಗಿರುತ್ತದೆ. ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ

ಆದಿಕರ್ನಾಟಕರಿಗೆ ಕ್ಷೌರ ಮಾಡಲು ನಿರಾಕರಣೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕೆಲವು ಕ್ಷೌರದ ಅಂಗಡಿಯವರು ಆದಿ ಕರ್ನಾಟಕರಿಗೆ ಕ್ಷೌರ ಮಾಡಲು ನಿರಾಕರಿಸಿದರೆಂದು ದೂರು ಬಂದಿದೆ. ಅಲ್ಲಿನ ಪುರಸಭೆಯ ಆದಿ ಕರ್ನಾಟಕ ಜಾತಿಯ ನೌಕರನೊಬ್ಬನಿಗೆ ಕ್ಷೌರ ಮಾಡಲು ಒಬ್ಬ ಅಂಗಡಿಯವನು ನಿರಾಕರಿಸಿದ್ದರಿಂದ ಅಲ್ಲಿನ ಕ್ಷೌರದ ಅಂಗಡಿಗಳು ಮುಚ್ಚಲ್ಪಟ್ಟವು ಕೂಡಲೇ ಪೌರಸಭೆಯವರು ಅವರನ್ನು ಕರೆಸಿ ಆ ರೀತಿ ಮಾಡಬಾರದೆಂದು ಸಲಹೆ ಇತ್ತಮೇಲೆ, ಈಗ ಅಂಗಡಿಯವರು ಯಾವ ಭೇದವೂ ಇಲ್ಲದೆ ಕೆಲಸ ನಡೆಸುತ್ತಿದ್ದಾರೆಂದೂ, ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವರು ಮಾತ್ರ ಆ ಸ್ಥಳದಿಂದ ಹೊರಟು ಹೋದರೆಂದೂ ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ

ವಿಂಡಸರ್ ಡ್ಯೂಕರಿಗೆ ಉದ್ಯೋಗವಿಲ್ಲ

ಬ್ರಿಟನ್ನಿನ ಮಾಜಿ ದೊರೆಗಳಾದ ವಿಂಡ್ಸರ್ ಡ್ಯೂಕರು ಈಗ ನಿರುದ್ಯೋಗಿಯಾಗಿದ್ದಾರೆ. ಬ್ರಿಟಿಷ್ ಸರ್ಕಾರದವರು ಅವರಿಗೆ ಯೋಗ್ಯವಾದ ಕೆಲಸವನ್ನು ಒದಗಿಸಿಕೊಟ್ಟಿಲ್ಲ ಅವರ ಸೇವೆಯನ್ನು ಬ್ರಿಟಿಷ್ ಸರ್ಕಾರದವರು ಉಪಯೋಗಿಸಿಕೊಳ್ಳಲು ಈಗ ಸಾಧ್ಯವಿಲ್ಲವಾಗಿದೆಯೆಂದು ಅಲ್ಲಿನ ಪ್ರಧಾನಿಯವರು ತಿಳಿಸಿರುತ್ತಾರೆ.

Edited, printed and published by A.R Nagarajan at the Sadhvi Press, D. Subbiah Road, Mysore.

೧೬ ಔನ್ಸ್ ಪಡಿತರ ಕೊಡಬೇಕು

ರೇಷನ್ ಕಾರ್ಡು ಹೋಲ್ಡರುಗಳ ಸಭೆಯಲ್ಲಿ ತೀರ್ಮಾನ

ಮೈಸೂರು ೨೭

ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಭೆಯು ನಿನ್ನೆ ಸಂಜೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನಡೆದು, ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು -

ಸಂಸ್ಥಾನಕ್ಕೆ ಭೇಟಿಯುತ್ತಿರುವ ಭಾರತ ಪ್ರಧಾನಿ ಪಂಡಿತ ನೆಹರೂರವರಿಗೆ ಸುಸ್ವಾಗತವನ್ನು ಬಯಸುವುದು, ಹಾಲಿ ಇರುವ 'ಎ' ಮತ್ತು 'ಬಿ' ತರಗತಿಗಳನ್ನು ರದ್ದು ಮಾಡಿ, ಎಲ್ಲರಿಗೂ ಒಟ್ಟು ೧೬ ಔನ್ಸು ಪಡಿತರವನ್ನು ಕೊಡುವುದಲ್ಲದೆ, ಯಾರು ಯಾವ ಆಹಾರ ಪದಾರ್ಥವನ್ನು ಬೇಕಾದರೂ ತೆಗೆದುಕೊಳ್ಳಲು ಅವಕಾಶವಿರಬೇಕು ಹೊಸ ಅಕ್ಕಿಯನ್ನು ರೂ.ಗೆ ೪ ಸೇರಿನಂತೆಯೂ, ಹಳೇ ಅಕ್ಕಿಯನ್ನು ೩॥ ಸೇರಿನಂತೆಯೂ ಮಾರಬೇಕು. ಶೇಕಡ ೩೦ಕ್ಕೆ ಕಡಿಮೆಯಿಲ್ಲದಂತೆ ಅಕ್ಕಿಗೆ ಪಾಲಿಷ್ ಕೊಡಿಸಬೇಕು ಕಸ, ಕಲ್ಲು, ತೌಡು, ಜಳ್ಳು ಇಲ್ಲದಿರುವ ಶುದ್ಧವಾದ ಅಕ್ಕಿಯನ್ನು ಸರಬರಾಜು ಮಾಡಬೇಕು. ಹೋಟೇಲುಗಳನ್ನು ಸಂಪೂರ್ಣವಾಗಿ ಮುಚ್ಚಬೇಕು.

ಮೇಲ್ಕಂಡ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರಲು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.

ಬಂಗ್ಲೆ ಕ್ರಯಕ್ಕಿದೆ

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾ ಒಂಟಿಕೊಪ್ಪಲು ಬಡಾವಣೆ ಗೋಕುಲಂ ಬಳಿ ಇರುವ ನಲ್ಲಿ, ದೀಪ, ಗ್ಯಾರೇಜು, ಕಾಂಪೌಂಡು ಸಹ ಉಳ್ಳ ಪೂರ್ತಾರಸಿ ಬಂಗ್ಲೆ ಕ್ರಯಕ್ಕಿದೆ. ಖಾಲಿ ಇರುತ್ತದೆ. ಕೂಡಲೇ ಸ್ವಾಧೀನಕ್ಕೆ ಕೊಡಲಾಗುವುದು. ಬಾಡಿಗೆಗೂ ದೊರೆಯುತ್ತದೆ. ಹೆಚ್ಚಿನ ವಿವರಗಳನ್ನು ಕೆಳಗಿನ ವಿಳಾಸದಲ್ಲಿ ತಿಳಿಯಬಹುದು.

ಎಚ್. ಸುಬ್ಬರಾವ್,
569, ದಿವಾನರ ರಸ್ತೆ, ಮೈಸೂರು.

ನಿರಾಶ್ರಿತರಿಗೆ ನೆಹರೂರವರ ಸಹಾಯ

ಹೈದರಾಬಾದ್ ನಿರಾಶ್ರಿತರ ಸಹಾಯಕ್ಕಾಗಿ ಪಂಡಿತ ನೆಹರೂರವರು ೫೦ ಸಾವಿರ ರೂ. ಗಳನ್ನು ಕೊಟ್ಟಿರುತ್ತಾರೆ.

ವಿವಾಹ ಮಹೋತ್ಸವ

ರಾಜಧಾನಿಯ ಪೋಸ್ಟ್ ಮಾಸ್ಟರ್ ಶ್ರೀ ವಿ. ರಾಜೇಶ್ವರ ಶಾಸ್ತ್ರಿಯವರು ತಮ್ಮ ಪುತ್ರ ಶ್ರೀ ವಿ. ರಾಜಾರಾಯರಿಗೆ ಹಾಸನದ ವಕೀಲರಾದ ಶ್ರೀ॥ ಎಚ್. ವೈ. ನರಸಿಂಹಯ್ಯನವರ ಪುತ್ರಿ ಚಿ॥ ಸೌ॥ ಜಯಲಕ್ಷ್ಮಿಯವರನ್ನು ತಂದುಕೊಂಡು ವಿವಾಹವನ್ನು ನಿನ್ನೆ ದಿನ ಹಾಸನದಲ್ಲಿ ನೆರವೇರಿಸಿದರು.

MYSORE CITY IMPROVEMENT TRUST BOARD

Date: 17-12-1948

NOTIFICATION

The following Two Lorries of the City Improvement Trust Board, Mysore, will be sold by public auction **on Thursday the 30th December 1948 at 10 a.m.** in the City Improvement Trust Board Stores open yard opposite to Pallonjee's **Motor** Garage, Thambu Chetty **Road, Mysore.**

Please see the detailed notification in the Office Notice Board for further particulars.

1). Chevrolet Model 1943 M.Y.Z. 6053
2). Chevrolet Model 1935 M.Y.Z. 3642

P. SITHARAMAIAH,
Chairman,
City Improvement Trust Board, Mysore

Mysore City Municipal[ity]

NOTIFICATIO[N]

Sealed tenders will be received up to 4 P.M. on 3.1[.49] by the Municipal Engi[neer] for constructing Sri Ma[h]tmaji Sthoopa at Ga[ndhi] Square, Mysore. Each [tend]er must be accomp[anied] with a chellan for hav[ing] remitted Rs. 500/- in [the] Municipal Treasury as e[ar]nest money. For full par[ti]culars please see the [de]tailed notification on [the] office notice board.

Sd. V.K. MUKUNDA[N]
Municipal Engineer

UNIVERSITY OF MYSO[RE]

No Ex. 2.526 48 49
Office of the University of My[sore]
Mysore
Dated 21st December 194[8]

NOTIFICATION

In continuation of [this] office Notification No. E[x.] 2,526 48-49 dated 25-11-[48] it is hereby informed [that] the last date for receip[t of] applications in respect [of] Intermediate and Deg[ree] Examinations of March 1[949] by the Heads of Colleg[es] [is] extended to Monday the [3rd] January 1949 (inclusive).

By Order,
D. S. GORDON
REGISTRAR.
University of Mys[ore]
Myso[re]

ಎಸ್. ಎಲ್. ಪಂಡಿತ್ ಅಂಡ್ ಸನ್ಸ್ ರವರ

[illegible]

ರಾಜಕಮಲ್ ಟಾಕೀಸ್

24-12-48 ರಿಂದ :: ಅಮೋಘ **2**ನೇ ವಾರ

ಪ್ರತಿ ದಿನ ೩ ಆಟಗಳು ೩-೧೫, ೬-೩೦ ಮತ್ತು ೯-೪೫

ಇದುವರೆಗೂ ಪ್ರದರ್ಶಿಸಲ್ಪಟ್ಟ ಕನ್ನಡ ಚಿತ್ರಗಳಲ್ಲೆಲ್ಲಾ ಅತಿ ಪ್ರಖ್ಯಾತಿಯಾದುದೆಂದು
ನಗರವೆಲ್ಲೆಲ್ಲಾ ಹೊಗಳಿಸಿ ಕೊಳ್ಳುತ್ತಿರುವ

ಕನ್ನಡ ಚಿತ್ರ

ಭಕ್ತ ಕುಂಬಾರ

ಪ್ರಧಾನ ಭೂಮಿಕೆಯಲ್ಲಿ:- ಕನ್ನಡ ನಟಿ ರತ್ನ ಲಕ್ಷ್ಮೀಬಾಯಿ.
ಕನ್ನಡ, ತಮಿಳು ಚಿತ್ರಗಳಲ್ಲಿ ಪಾತ್ರವಹಿಸಿ ಅತಿ ಪ್ರಖ್ಯಾತರಾದ ಹೊನ್ನಪ್ಪ ಭಾಗವತರ್.

For Particulars:-**SWARNA FILMS** C/o Yeshodhara Film Corporation, Gandinagar, Bangalore, 2

ಕೋ। ನಂ. 792 ।।ವಂದೇ ಮಾತರಂ।। ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೬-೧೨-೪೮ [ಸಂಚಿಕೆ ೧೫೪

ನೆಹರೂರವರಿಗೆ ಡಾಕ್ಟರ್ ಆಫ್ ಸೈನ್ಸ್ ಪ್ರಶಸ್ತಿ

ಘಟಿಕೋತ್ಸವದಲ್ಲಿ ಪ್ರಭುಗಳವರ ಭಾಷಣ

ಮೈಸೂರು ೬.

ಭಾರತದ ಪ್ರಧಾನ ಮಂತ್ರಿ ಪಂಡಿತ್ ...ಹರೂರವರಿಗೆ ನಿನ್ನೆ ದಿನ ಬೆಳಗ್ಗೆ ಮೈ...ರು ವಿಶ್ವವಿದ್ಯಾಲಯದವರು ಡಾಕ್ಟರ್ ...ಫ್ ಸೈನ್ಸ್ ಎಂಬ ಪ್ರಶಸ್ತಿಯನ್ನು ವಿಶೇಷ ...ಟಿಕೋತ್ಸವದಲ್ಲಿ ಕೊಟ್ಟು ಗೌರವಿಸಿ... ಸಮಾರಂಭವು ಕ್ರಾಫರ್ಡ್ ಭವನ...ಲ್ಲಿ ಜರುಗಿತು.

ಪಂಡಿತ್ ನೆಹ್ರೂರವರು ಶ್ರೀಮನ್ಮಹಾ...ಜರೊಡನೆ ಸುಂದರವಾದ ಕುದುರೆ ಸಾ...ರಟಿನಲ್ಲಿ ೧೦ ಗಂಟೆಗೆ ಕ್ರಾಫರ್ಡ್ ಭವ...ಕ್ಕೆ ದಯಮಾಡಿಸಿದರು. ವೈಸ್ ಛಾನ್ಸಿ...ರವರು ಅವರನ್ನು ಸ್ವಾಗತಿಸಿದರು. ಅನಂ...ರ ಘಟಿಕೋತ್ಸವ ಸಮಾರಂಭವನ್ನು ...ಡೆಸಿಕೊಡಬೇಕೆಂದು ಶ್ರೀಮನ್ಮಹಾರಾಜ...ರನ್ನು ಪ್ರಾರ್ಥಿಸಲಾಯಿತು.

ಪ್ರಭುಗಳು ಭಾಷಣ ಮಾಡಿ ಪಂಡಿತ್ ...ಹ್ರೂರವರು ದೇಶಕ್ಕಾಗಿ ಮಾಡಿರುವ ಅ...ಪೂರ್ವ ತ್ಯಾಗ ಮತ್ತು ಸೇವೆಗಳನ್ನು ಪ್ರ...ಶಂಸಿಸಿದರು. ಕೇವಲ ರಾಜಕೀಯ ಕ್ಷೇ...ತ್ರದಲ್ಲಿ ಮಾತ್ರವಲ್ಲದೆ ವಿಜ್ಞಾನಸಾಹಿತ್ಯ ...ಸಂಶೋಧನೆಗಳಲ್ಲಿ ಅವರಿಗಿರುವ ಆಸ...ಕ್ತಿಯನ್ನು ಶ್ರೀಮನ್ಮಹಾರಾಜರವರು ...ಸಿ ಅವರಿಗೆ ಪ್ರಶಸ್ತಿಯನ್ನು ವಿನಿ...ಯೋಗಿಸಿದರು.

ಮೈಸೂರು ವಿಶ್ವ ವಿದ್ಯಾಲಯದವರು ...ಮಾಡಿದ ಗೌರವಕ್ಕಾಗಿ ವಂದನೆಯನ್ನು ...ಹರೂರವರು ಸೂಚಿಸಿದರು. ಭಾರತ ...ಬಹು ದೊಡ್ಡ ದೇಶ. ಅದನ್ನು ಪ್ರ...ಗೊಳಿಸುವುದೂ ಸಮೃದ್ಧವಾಗಿ ಮಾಡು...ದೂ ನಮ್ಮೆಲ್ಲರ ಕರ್ತವ್ಯವಾಗಿದೆ. ಇಂದಿ... ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿ ದೆ...ಸೆಯಲ್ಲಿರುವವರೇ ಧನ್ಯರು. ಸ್ವಾತಂತ್ರ್ಯದ ...ವ್ಯವಸ್ಥೆಯಲ್ಲಿರುವ ಭಾರತವನ್ನು ...ಪ್ರಕಟಿಸಿ ಉನ್ನತ ಮಟ್ಟಕ್ಕೇರಿಸುವ ...ಜವಾಬ್ದಾರಿಯನ್ನು ಅವರು ವಹಿಸಬೇ...ಕು ಎಂದು ಅವರು ತನ್ನ ಭಾಷಣದಲ್ಲಿ ...ತಿಳಿಸಿದರು.

ನೆಹರೂರವರಿಗೆ ಹಸ್ತಲಾಘವ ಕೊಡಲು ವೃದ್ಧೆಯ ಕಾತುರತೆ

ಕಳೆದ ಭಾನುವಾರ ಬಂಗಳೂರಿನಲ್ಲಿ ಪಂಡಿತ ನೆಹರೂರವರ ಗೌರವಾರ್ಥವಾಗಿ ...ವರು ಏರ್ಪಡಿಸಿದ್ದ ಸತ್ಕಾರ ಕೂಟ...ಕ್ಕೆ ಅತಿಥಿಯಾಗಿ ಆಗಮಿಸಿದ್ದ ೭೦ ವರ್ಷ ...ವಯಸ್ಸಿನ ಬ್ರಿಟಿಷ್ ಮಹಿಳೆಯು ನೆಹರೂ...ರವರಿಗೆ ಹಸ್ತಲಾಘವ ಕೊಡಲು ಬಹಳ ...ಕಾತುರಳಾಗಿ "ಪಂಡಿತ ನೆಹರೂರವರಿಗೆ ಹಸ್ತಲಾಘವ ಕೊಡದೆ ನಾನು ಇಂಗ್ಲೆಂಡಿಗೆ ...ಹೋಗಿ ಮುಖ ತೋರಿಸಲಿ" ಎಂ...ದು ಹೇಳುತ್ತಿದ್ದಳು. ಅಲ್ಲೇ ಇದ್ದ ಪತ್ರಿ...ಕರ್ತರು ಆಕೆಯನ್ನು ನೆಹರೂರವರ ...ಬಳಿಗೆ ಕೊಂಡೊಯ್ಯಲು ಆಕೆಯು ನೆಹರೂ...ರವರ ಅನುಮತಿ ಪಡೆದು ಅವರಿಗೆ ಹಸ್ತ...ಲಾಘವ ಕೊಟ್ಟಳು. ಪಂಡಿತ ನೆಹರೂರವ...ರೊಡನೆ ಆಕೆಯು ಹಾಸ್ಯ ವಿಚಾರವಾಗಿ ...ಕೆಲವು ಮಾತುಗಳನ್ನಾಡಿದಳು. ತರುವಾ... ಆಕೆಯು ತನ್ನ ಮಗನೊಡನೆ "ಸಂ...ತ ನೆಹರೂರವರು ಸುಂದರವದನರು" ...ಎಂದು ಹೇಳಿದಳು.

ನವದೆಹಲಿಗೆ ನೆಹರೂರವರ ಪ್ರಯಾಣ

ಶ್ರೀಮನ್ಮಹಾರಾಜರವರಿಂದ ಬೀಳ್ಕೊಡುವಿಕೆ

ಮೈಸೂರು ೬

ಪಂಡಿತ ನೆಹರೂರವರು ಈ ದಿನ ಮಂಡಕಳ್ಳಿ ನಿಲ್ದಾಣದಿಂದ ವಿಮಾನದಲ್ಲಿ ನವದೆಹಲಿಗೆ ತೆರಳಿದರು. ಶ್ರೀಮನ್ಮಹಾರಾಜರವರು ಅವರನ್ನು ಬೀಳ್ಕೊಟ್ಟರು. ಇದಕ್ಕೆ ಮುಂಚೆ ನೆಹರೂರವರಿಗೆ ಸೈನಿಕರು ಗೌರವವನ್ನೂ ಸಲ್ಲಿಸಿದರು. ಮಂತ್ರಿಗಳೂ, ಉನ್ನತಾಧಿಕಾರಿಗಳೂ, ಇತರ ಪ್ರಮುಖರೂ ಹಾಜರಿದ್ದರು.

ಹೊಸ ಬಗೆಯ ಆಹಾರಗಳ ಸಂಶೋಧನೆ ನಡೆಯಬೇಕು

ಚಲುವಾಂಬಾ ಭವನದಲ್ಲಿ ನೆಹರೂರವರ ಭಾಷಣ

ಮೈಸೂರು ೬

ಅಖಿಲ ಭಾರತ ಆಹಾರ ಸಂಶೋಧನಾ ಕೇಂದ್ರಕ್ಕಾಗಿ ರಾಜಧಾನಿಯ ಚಲುವಾಂಬಾ ಭವನದ ಕಟ್ಟಡವನ್ನು ಭಾರತ ಸರ್ಕಾರಕ್ಕೆ ವಹಿಸಿಕೊಡುವ ಸಮಾರಂಭದ ಈ ದಿನ ಬೆಳಗ್ಗೆ ನೆರವೇರಿತು. ಈ ಸಮಾರಂಭಕ್ಕಾಗಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ದಯಮಾಡಿಸಿದ್ದರು. ಮುಖ್ಯ ಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ನೆಹರೂರವರಿಗೆ ಸ್ವಾಗತವನ್ನಿತ್ತರು. ಶ್ರೀ ರೆಡ್ಡಿಯವರು ಆಹಾರ ಸಂಶೋಧನಾ ಕಾರ್ಯದ ವಿಷಯದಂತಹ ಪ್ರಾಮುಖ್ಯ ಕಾರ್ಯಕ್ಕಾಗಿ ಭಾರತ ಸರ್ಕಾರಕ್ಕೆ ಈ ಕಟ್ಟಡವನ್ನು ವಹಿಸಿಕೊಡುವುದಾಗಿಯೂ ಮತ್ತು ನಾವೂ ಭಾರತಕ್ಕೇ ಸೇರಿದ ಪ್ರಜೆಗಳಾದುದರಿಂದ ನಮಗೆ ನಾವೇ ಈ ಕಟ್ಟಡವನ್ನು ಕೊಟ್ಟಂತಾಗಿದೆಯೆಂದೂ ತಿಳಿಸಿ ಚಲುವಾಂಬಾ ಭವನವನ್ನು ಅಧಿಕೃತವಾಗಿ ವಹಿಸಿಕೊಟ್ಟರು.

ವಿದ್ಯಾರ್ಥಿನಿ ಮತ್ತು ಮಹಿಳಾ ಉಪಾಧ್ಯಾಯರುಗಳ ಪರವಾಗಿ ಬೆಳ್ಳಿ ಪೆಟ್ಟಿಗೆಯಲ್ಲಿ ೬೦೦ ರೂಗಳನ್ನಿಟ್ಟು ಗಾಂಧೀ ನಿಧಿಗಾಗಿ ಸಮರ್ಪಿಸಲಾಯಿತು.

ಕಂಟ್ರಾಕ್ಟರ್ ಅಂಜನಪ್ಪನವರ ಆಶಾ ಎಂಬ ಮಗುವು ನೆಹರೂರವರಿಗೆ ಹೂವಿನ ಹಾರವನ್ನು ಹಾಕಿದಾಗ ಪ್ರಧಾನಿಯವರು ಆ ಮಗುವನ್ನು ಎತ್ತಿಕೊಂಡು ಸ್ವಲ್ಪ

ನೆಹರೂರವರಿಗೆ ಸಮರ್ಪಣೆ

ಮೈಸೂರು ೬

ನಿನ್ನೆ ಟೌನ್‌ಹಾಲಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪಂಡಿತ ನೆಹರೂರವರಿಗೆ ಶ್ರೀ ಎಸ್ ಚನ್ನಯ್ಯನವರು ನಗರ ಕಾಂಗ್ರೆಸ್ ಸಮಿತಿಯ ಪರವಾಗಿಯೂ, ಶ್ರೀ ಶಾಂತರಾಜ್‌ರವರು ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿಯೂ ಪುಷ್ಪಹಾರಗಳನ್ನು ಹಾಕಿದರು.

ಅಗರ-ಮಾಂಬಳ್ಳಿ ಕಾಂಗ್ರೆಸ್ ಸಮಿತಿಯವರು ಕಳುಹಿಸಿದ್ದ ತ್ರಿವರ್ಣದ ರೇಷ್ಮೆ ಹಾರವನ್ನು ಹಾಕಿದಾಗ "ಮೈಸೂರು ಸಂಸ್ಥಾನವು ರೇಷ್ಮೆಗೆ ಪ್ರಸಿದ್ಧವಾದುದು" ಎಂದು ಪಂಡಿತ್ ನೆಹರೂರವರು ನುಡಿದರು.

ಮಹಾತ್ಮಾ ಗಾಂಧಿ ಸ್ಮಾರಕ ಸ್ತೂಪವನ್ನು ಕಟ್ಟಿಸಲು ೧೫,೦೦೦ ರೂ. ದಾನ ಮಾಡಿರುವ ಶ್ರೀ ವೆಂಕಟಸುಬ್ಬ ಶೆಟ್ಟರು ವಂತದ ಕೆತ್ತನೆ ಕೆಲಸದಿಂದ ಕೂಡಿದ ಒಂದು ಚಿತ್ರವನ್ನು ಒಪ್ಪಿಸಿದರು.

ಅರಮನೆ ಚಿನ್ನ ಬೆಳ್ಳಿ ಕೆಲಸಗಾರರಾದ ಶ್ರೀ ಶಾಮಾಚಾರ್ಯರವರು ಬೆಳ್ಳಿಯಲ್ಲಿ ಕೆತ್ತಿದ ಮಹಾತ್ಮರ ಚಿತ್ರಪಟವನ್ನು ಗಂಧದ ಸಾಕೆಟ್ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿದುದನ್ನು ನೆಹರೂರವರು ಭಕ್ತಿ ವಿಶ್ವಾಸದಿಂದ ಸ್ವೀಕರಿಸಿದರು. ಈ ದಿನ ಬೆಳಗ್ಗೆ ಚಲುವಾಂಬ ಭವನದ ಸಮಾರಂಭದಲ್ಲಿ ಯುವತಿಯೊಬ್ಬಳು ಮರದ ಆನೆಯೊಂದನ್ನು ನೆಹರೂರವರಿಗೆ ಕೊಟ್ಟಾಗ ಮುಗುಳ್ನಗೆಯಿಂದ ಅವರು ಅದನ್ನು ಸ್ವೀಕರಿಸಿದರು.

ಮಹಾತ್ಮಾ ಗಾಂಧಿ ಮತ್ತು ನೆಹರೂರವರಿರುವ ಚಿತ್ರವೊಂದನ್ನು ಮೈಸೂರು ಆರ್ಟ್ ಸ್ಟುಡಿಯೋವಿನ ಶ್ರೀ ಎಂ.ಎಚ್ ರಾಮುರವರು ಒಪ್ಪಿಸಿದರು. ಇದನ್ನೂ ಪಂಡಿತರು ಸಂತೋಷದಿಂದ ಅಂಗೀಕರಿಸಿದರು.

ಹೊತ್ತು ತನ್ನ ಬಳಿ ಕೂಡಿಸಿಕೊಂಡಿದ್ದರು. ಇನ್ನೊಂದು ಮಗುವು ನೆಹರೂರವರ ...ಬು ಬೇಕೆಂದು ಅವರನ್ನು ಕೇಳಿದಾಗ ಪ್ರಧಾನಿಯವರು ಮಗುವಿಗೆ ಮುದ್ದಿಟ್ಟರು.

ಕಟ್ಟಡವನ್ನು ಸ್ವೀಕರಿಸಿದ ನಂತರ ನೆಹರೂರವರು ಮಾತನಾಡಿ ಆಹಾರದ ವಿಷಯವು ಬಹು ಪ್ರಾಮುಖ್ಯವಾದ ಸಮಸ್ಯೆಯೆಂದೂ, ನಾವು ಒಂದೇ ತರಹದ ಆಹಾರವನ್ನು ಮಾತ್ರ ನಂಬಿದರೆ ಅದು ...ಕ್ಕದಿದ್ದಾಗ ಉಪವಾಸ ಬೀಳಬೇಕಾಗಿ ಬರುವುದೆಂದೂ ...ದ್ದರಿಂದ ಅದನ್ನು ತಪ್ಪಿಸಲು ಹೊಸ ಹೊಸ ಆಹಾರಗಳ ಸಂಶೋಧನೆ ಅತ್ಯಗತ್ಯವೆಂದೂ ನುಡಿದರು. ಅಂತಹ ನೂತನ ಸಂಶೋಧನೆಗಳು ಈ ಕಟ್ಟಡದಲ್ಲಿ ನಡೆದು ಆಹಾರ ಸಮಸ್ಯೆಯು ಬೇಗ ಬಗೆಹರಿಯಲೆಂದು ಅವರು ...ಶಿಸಿದರು. ಮುಂದುವರಿಯುತ್ತಾ ಈ ...ವಲ ತಾವು ಸಂಸ್ಥಾನಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಹಳೇಬೀಡು, ಬೇಲೂರು ಮುಂತಾದ ಚರಿತ್ರಾರ್ಹವಾದ ಸ್ಥಳಗಳನ್ನು ನೋಡಲಾಗಲಿಲ್ಲವೆಂದೂ ಅದಕ್ಕಾಗಿ ಪಶ್ಚಾತ್ತಾಪ ಮಾಡಿಕೊಂಡು ಆದಷ್ಟು ಬೇಗ ಮತ್ತೊಮ್ಮೆ ತಾವು ಬರುವುದಾಗಿಯೂ ತಿಳಿಸಿದರು. ಮೈಸೂರು ಪ್ರಜೆಗಳು ತಮಗಿತ್ತ ಅದ್ಭುತ ಸ್ವಾಗತ ಮತ್ತು ಗೌರವಗಳ ಬಗ್ಗೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು.

ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯಕ್ಕೆ ಭೇಟಿ ಕೊಟ್ಟ ನಂತರ ಮಂಡಕಳ್ಳಿ ವಿಮಾನ ...ಕ್ಕೆ ದಯಮಾಡಿಸಿ ... ವಿಮಾನದಲ್ಲಿ ದೆಹಲಿಗೆ ತೆರಳಿದರು.

ಮೈಸೂರು ಪ್ರಭುಗಳ ಆಳ್ವಿಕೆಯಲ್ಲಿ ಅಖಂಡ ಕರ್ನಾಟಕ

ವಿದ್ಯಾರ್ಥಿ ಸಭೆಯಲ್ಲಿ ದಿವಾಕರರ ಭಾಷಣ

ಮೈಸೂರು ೬

ಸಾಂಕುಚಿತ ರಾಜ್ಯಾಂಗ ಪದ್ಧತಿಗೆ ಒಳಪಟ್ಟ ಮೈಸೂರು ಶ್ರೀಮನ್ಮಹಾರಾಜರವರ ಆಳ್ವಿಕೆಯಲ್ಲಿ ಅಖಂಡ ಕರ್ನಾಟಕ ರಾಜ್ಯವನ್ನು ಒಂದುಗೂಡಿಸಿ ಕರ್ನಾಟಕ ಸಿಂಹಾಸನದ ಹೆಸರನ್ನು ಅನ್ವರ್ಥಗೊಳಿಸುವುದು ಸಾಧ್ಯ—ಎಂಬ ಅಭಿಪ್ರಾಯವನ್ನು ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್.ಆರ್. ದಿವಾಕರ್‌ರವರು ಈ ದಿನ ಬೆಳಗ್ಗೆ ಟೌನ್‌ಹಾಲಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಆರಂಭ ಭಾಷಣ ಮಾಡುತ್ತಾ ತಿಳಿಸಿದರು. ಶ್ರೀ ಎಸ್. ನಿಜಲಿಂಗಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ಸ್ವಾಗತ ಗೀತೆಯ ನಂತರ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಶಾಂತರಾಜ್‌ರವರು ಅತಿಥಿಗಳಿಗೆ ಸ್ವಾಗತವನ್ನು ಬಯಸಿದರು.

ಭಾಷಾವಾರು ಪ್ರಾಂತ್ಯ ರಚನೆಗೆ ವಿ... ಭಾರತದ ದೊಡ್ಡ ದೊಡ್ಡವರೂ ಸಹ ...

ಈಜಿಪ್ಟ್ ಪ್ರಧಾನಿಯ ಕೊಲೆ

ಆರು ಬಾರಿ ಗುಂಡಿನೇಟು ಬಿದ್ದು ಈಜಿಪ್ಟಿನ ಪ್ರಧಾನಿ ನೊಕ್ರಾಸಿ ಪಾಷಾರವರು ನಿನ್ನೆ ಕೊಲೆ ಮಾಡಲ್ಪಟ್ಟರೆಂದು ತಿಳಿದುಬಂದಿದೆ. ಒಬ್ಬ ವಿದ್ಯಾರ್ಥಿಯನ್ನು ವಶಕ್ಕೆ ಮಾಡಲಾಗಿದೆ.

ದೇವರುಗಳ ಪಾತ್ರ ಧರಿಸಲು ನಿಷೇಧ

ಚಲನ ಚಿತ್ರ ನಟ ನಟಿಯರು ಹಿಂದೂ ದೇವರುಗಳ ಪಾತ್ರ ಧರಿಸುವುದನ್ನು ನಿಷೇಧಿಸುವ ವಿಚಾರವನ್ನು ಮದರಾಸ್ ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸುತ್ತಿದ್ದಾರೆ

ಮೈ ತಳೆಯನ್ನು ಕೆಡಿಸಿಕೊಳ್ಳುತ್ತಿರುವ ಈ ಸಮಯದಲ್ಲಿ ವಿದ್ಯಾರ್ಥಿಗಳು ತಾಳ್ಮೆಯಿಂದಲೂ ಶಾಂತಿಯಿಂದಲೂ ಈ ಸಮಸ್ಯೆಯನ್ನು ಪರಿಶೀಲಿಸಿ ಅಖಂಡ ಕರ್ನಾಟಕದ ರಚನೆಯ ಬಗ್ಗೆ ಸರ್ವ ವಿಧದಲ್ಲಿಯೂ ಪ್ರಯತ್ನ ವಹಿಸಬೇಕೆಂದು ಸೂಚಿಸಿದರು.

ಹೋರಾಟದ ಕಾಲವು ಮುಗಿದಿದ್ದು ... ರಾಷ್ಟ್ರ ರಚನೆಯಲ್ಲಿ ... ಗಬೇಕೆಂದು ತಿಳಿಸಿದರು

ಪಂಡಿತ ನೆಹ್ರೂರವರಿಗೆ ಅಭೂತ ಪೂರ್ವ ಸ್ವಾಗತ

ಮೈಸೂರು ೨೯

ನಿನ್ನೆಯ ದಿನ ಭಾರತದ ಪ್ರಧಾನಿ ಪಂಡಿತ ನೆಹ್ರೂರವರು ಮೈಸೂರಿನ ಚಕೋರ ವಿಮಾನದಲ್ಲಿ ಬೆಳಗ್ಗೆ ೮-೧೫ ಗಂಟೆಗೆ ಬೆಂಗಳೂರಿನಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರು ಅವರ ಜೊತೆಯಲ್ಲಿ ಶ್ರೀಗಳಾದ ಕೆ. ಸಿ ರೆಡ್ಡಿ, ಸಿ ಎಚ್ ಭಾಭಾ ಮತ್ತು ಬೆಲ್ಲಿಯಮ್ಮನ ರಾಯಭಾರಿಯ ಪುತ್ರಿ ಶ್ರೀಮತಿ ಅರುಣಾ ಚೌಧರಿ ಮತ್ತು ವೈದ್ಯ ಲಾಸಾರಾಬೆರ್ಗ ರವರುಗಳು ದಯಮಾಡಿಸಿದ್ದರು

ಶ್ರೀಮನ್ ಮಹಾರಾಜರಿಗೆ ಪ್ರಧಾನಿ ಪಂಡಿತ ನೆಹರೂರವರನ್ನು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರು ಪರಿಚಯ ಮಾಡಿಸಿದರು ಶ್ರೀಮನ್ ಮಹಾರಾಜರವರು ಸಂಸ್ಥಾನ ಮಂತ್ರಿಗಳು ನ್ಯಾಯ ವಿಧಾಯಕ ಸಭೆ ರಾಜ್ಯಾಂಗ ಸಭೆಯ ಅಧ್ಯಕ್ಷ ಉಪಾಧ್ಯಕ್ಷರುಗಳು ಪೌರಸಭೆ ಮತ್ತು ಜಿಲ್ಲಾಬೋರ್ಡುಗಳ ಅಧ್ಯಕ್ಷರುಗಳು ಸರ್ಕಾರದ ಚೀಫ್ ಸೆಕ್ರೆಟರಿ ಪೂಲೀಸು ಐ ಜಿ ಪಿ ಮತ್ತು ಬ್ರಿ॥ ಬಾಲಾರವರುಗಳನ್ನೂ ಪರಿಚಯಮಾಡಿ ಕೊಟ್ಟರು ಪಂಡಿತ ನೆಹರೂರವರು ಮೈಸೂರು ಸೈನ್ಯದವರ ಗಾರ್ಡ್ ಆಫ್ ಆನರ್ ಸ್ವೀಕರಿಸಿದನಂತರ ಶ್ರೀಮನ್ ಮಹಾರಾಜರೊಡನೆ ಲಲಿತ ಮಹಲ್ಲಿಗೆ ತೆರಳಿದರು.

ದಾರಿಯುದ್ದಕ್ಕೂ ಲಕ್ಷಾಂತರ ಜನರು ನಿಂತಿದ್ದು ನೆಹರೂರವರ ದರ್ಶನ ಪಡೆದು ಜಯಕಾರಗಳೊಂದಿಗೆ ಅಭೂತ ಪೂರ್ವ ಸ್ವಾಗತವನ್ನು ನೀಡಿದರು

ಪಾಕಿಸ್ತಾನದ ನೂತನ ನೋಟುಗಳು

ಪಾಕಿಸ್ತಾನದಲ್ಲಿ ಮುಂದಿನ ತಿಂಗಳಿನಿಂದ ಒಂದು ಮತ್ತು ಎರಡು ರೂ ಗಳ ನೂತನ ಕರೆನ್ಸಿ ನೋಟುಗಳನ್ನು ಅಲ್ಲಿನ ಸ್ಟೇಟ್ ಬ್ಯಾಂಕಿನವರು ಚಲಾವಣೆಗೆ ತರಲಿದ್ದಾರೆ. ನೋಟಿನ ಮುಂಭಾಗದಲ್ಲಿ ಪಾಕಿಸ್ತಾನ್ ಸರ್ಕಾರದ ಚಿಹ್ನೆಯಿದ್ದು ಅದು ಹಸುರು ಬಣ್ಣದಿಂದ ಕೂಡಿರುವುದು ಹಿಂಭಾಗದಲ್ಲಿ ಲಾಹೋರ್ ಕೋಟೆಯ ಮೊಗಲ್ ಸಾಮ್ರಾಟರ ಮಂಟಪವು ಇರುವುದು.

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

29-12-48ರಿಂದ 3 ದಿನಗಳು ಮಾತ್ರ

Warner's Technicolor Comedy Drama,

The Time, The Place and The Girl

(ದಿ ಟೈಮ್, ದಿ ಪ್ಲೇಸ್ ಅಂಡ್ ದಿ ಗರ್ಲ್)

(ವರ್ಣರಂಜಿತ ಚಿತ್ರ)

EXT CHANGE:

CAPTAIN FROM CASTILE

(Technicolor)

with:-Tyrone Power

ಭಾರತ ವಿಜ್ಞಾನ ಸಂಸ್ಥೆಯ ವಾರ್ಷಿಕೋತ್ಸವ

ಬೆಂಗಳೂರು ೨೭.

ನಿನ್ನೆ ಬೆಳಗ್ಗೆ ಭಾರತ ವಿಜ್ಞಾನ ಸಂಸ್ಥೆಯ ೧೮ ನೇ ವಾರ್ಷಿಕೋತ್ಸವದ ಆರಂಭೋತ್ಸವವನ್ನು ದಿವಾನರು ನೆರವೇರಿಸಿ, ಸಂಸ್ಥೆಯ ಸ್ಥಾಪಕರಾದ ಸರ್ ಸಿ. ವಿ ರಾಮನ್‌ರವರಿಗೆ ೬೦ ವರ್ಷ ತುಂಬಿರುವುದರ ಬಗ್ಗೆ ಅಭಿನಂದನೆಯನ್ನು ಸೂಚಿಸಿದರು ಶ್ರೀಮನ್ಮಹಾರಾಜರವರು ಸಂದೇಶವೊಂದನ್ನು ಕಳುಹಿಸಿ, ಸರ್ ರಾಮನ್‌ರವರ ಸೇವೆಯನ್ನು ಶ್ಲಾಘಿಸಿದ್ದರು ಸರ್ ರಾಮನ್‌ರವರಿಗೆ ರಜತಕರಂಡವೊಂದನ್ನು ಅರ್ಪಿಸಲಾಯಿತು. ಸರ್ ರಾಮನ್‌ರವರು ಸತ್ಯಾನ್ವೇಷಣೆ ಮತ್ತು ವಿಜ್ಞಾನದ ಐಕ್ಯತೆಯ ವಿಷಯವನ್ನು ಕುರಿತು ಭಾಷಣ ಮಾಡಿದರು

ಬೆಕ್ಕುಗಳ ಹೊಟೇಲು

ಬ್ರಿಟನ್ನಿನ ಕೆಂಟಿನಲ್ಲಿರುವ ಜೆಲ್ ಬಾಡಿ ಎಂಬಾಕೆಯು ತನ್ನ ಭವನದಲ್ಲಿ ಬೆಕ್ಕುಗಳಿಗಾಗಿ ಒಂದು ಹೊಟೇಲನ್ನು ತೆರೆದಿದ್ದಾಳೆ ಬೆಕ್ಕುಗಳನ್ನು ಸಾಕುವ ಜನರು ತನ್ನ ಗೈರು ಹಾಜರಿನಲ್ಲಿ ಅವುಗಳನ್ನು ಅಲ್ಲಿ ಬಿಟ್ಟು ಹೋಗಬಹುದೆಂದೂ ಇದಕ್ಕಾಗಿ ಶ್ರೀಮಂತರಿಂದ ಮಾತ್ರ ಹಣ ವಸೂಲು ಮಾಡಲಾಗುವುದೆಂದೂ ಆಕೆಯು ತಿಳಿಸಿರುತ್ತಾಳೆ

ಸಿಮೆಂಟ್ ಬೇಕೋ?

ಇಗೋ, ಡಾಲ್ಮಿಯಾ

ಶ್ರೇಷ್ಠವಾದದ್ದು—ಸರ್ಕಾರದವರು ನಿಗದಿ ಮಾಡಿರುವ ಬೆಲೆಗೆ ಸುಲಭರೀತಿಯಲ್ಲಿ ಸಿಕ್ಕುವಂತಾದ್ದು—

—: ವಿತರಕರು :—

ಸಿ. ಬಿ. ಎಸ್. ಕುಮಾರ್

ಅಶೋಕ ರೋಡು, ಮೈಸೂರು

ಮೈಸೂರು ಸಿಟಿ ರೇಷನಿಂಗ್

ನಂ. ಆರ್ ೬-೮೮ ೪೮

೧೯೪೮ನೆ ಇಸವಿ ಡಿಸೆಂಬರ್ ಮಾಹೆ ೩೧ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್‌ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳ ಮುಚ್ಚಲ್ಪಡುತ್ತವೆ

(ಸಹಿ) ಡಿ. ಜೆ. ಬಾಲರಾಜ್,

ರೇಷನಿಂಗ್ ಆಫೀಸರ್,

ಮೈಸೂರು ಸಿಟಿ

ಮೈಸೂರು,

೨೭-೧೨-೪೮

ಜನತಾ ಸೇವೆಯೇ ಮುಖ್ಯ ಗುರಿಯಾಗಿರಲಿ

ಸಾರ್ವಜನಿಕ ಸಭೆಯಲ್ಲಿ ನೆಹರೂರವರ ಭಾಷಣ

ಮೈಸೂರು ೨೯

ಪಂಡಿತ ನೆಹ್ರೂರವರಿಗೆ ನಿನ್ನೆ ಬೆಳಗ್ಗೆ ೧೧-೪೫ ಗಂಟೆಗೆ ರಂಗಾಚಾರ್ಲು ಪುರಭವನದಲ್ಲಿ ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳ ಪರವಾಗಿ ಶ್ರೀಗಳಾದ ಪಿ ಸೀತಾರಾಮಯ್ಯ ಮತ್ತು ಎಚ್.ಎಂ. ಚೆನ್ನಬಸಪ್ಪನವರುಗಳು ಬಿನ್ನವತ್ತಳೆಗಳನ್ನು ರಜತ ಕರಂಡಗಳಲ್ಲಿ ಅರ್ಪಿಸಿದರು ಈ ಸಮಾರಂಭಕ್ಕೆ ಲಕ್ಷಾಂತರ ಜನ ಮಹಿಳೆಯರೂ ಪುರುಷರೂ ಆಗಮಿಸಿದ್ದರು.

ಪಂಡಿತ ನೆಹ್ರೂರವರು ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ಪ್ರಜಾ ಸರ್ಕಾರ ಬರುವುದಕ್ಕೆ ಬಹಳವಾಗಿ ನಾವೆಲ್ಲ ಶ್ರಮಿಸಿದ್ದೇವೆ ಎಲ್ಲವನ್ನೂ ಸರ್ಕಾರವೇ ಮಾಡಿಕೊಡಬೇಕೆಂಬ ಭಾವನೆಯು ದುರದೃಷ್ಟವಶಾತ್ ನಮ್ಮ ಜನರಲ್ಲಿ ಮೂಡಿದೆ ಜನತಾ ಸೇವೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಪ್ರತಿಯೊಬ್ಬನೂ ದೇಶದ ಪ್ರಗತಿಗಾಗಿ ದುಡಿಯಬೇಕು. ಭಾರತದ ಸಂಪತ್ತನ್ನು ಹೆಚ್ಚಿಸುವುದೂ ದೇಶದ ಬಡತನ ನಿವಾರಣೆಯೂ ಪ್ರತಿಯೊಬ್ಬ ಪ್ರಜೆಯ ಗುರಿಯಾಗಿರಬೇಕು ನಾನು ಭಾರತದ ಪ್ರಧಾನಿಯಾದರೂ ಪ್ರಜೆಗಳ ಸೇವಕನೆಂದು ತಿಳಿದು ನನ್ನ ಶಕ್ತಿ ಸಾಮರ್ಥ್ಯಗಳಿರುವವರೆಗೂ ಜನತಾ ಸೇವೆಗಾಗಿ ದುಡಿಯುತ್ತೇನೆ ನಾನು ಹೋದೆಡೆಯಲ್ಲೆಲ್ಲಾ ಅಸಂಖ್ಯಾತ ಜನ ಸ್ತೋಮವನ್ನು ಕಂಡು ನಮ್ಮ ಸರ್ಕಾರಕ್ಕಿರುವ ಪ್ರಜಾ ಬೆಂ[ಬಲವನ್ನು] ...

ಬೆಂಗಾಲ್ ಸಿಲ್ಕ್ ಸೀರೆಗಳಿಗೆ

ಪ್ರಖ್ಯಾತವಾದ ಅಂಗಡಿ

ಬಾಹುಸಾರ್ ಕಂಪೆನಿ

ಮೈಸೂರು

ಟೆಂಡರ್ ನೋಟೀಸು

ಮೈಸೂರು ಅರಮನೆಗೆ ಬೇಕಾದ ಸುಮಾರು ಎರಡು ಸಾವಿರದ ಐನೂರು ಪಲ್ಲ ಹುರುಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜು ಮಾಡಿರುವವರಲ್ಲಿ ೨೯-೧-೧೯೪೯ನೇ ಬುಧವಾರ ಕೊಡಬಹುದು.

ಎಚ್. ನಿರಂಜನ್‌ರಾಜೆ ಅರಸ್

ಹುಜೂರು ಸೆಕ್ರೆಟರಿಯವರು

ಬೆಲೆಯನ್ನು ನೋಡಿ ಹೋಟೆ... ಎಂದು ಹೇಳಿದರು

ಪ್ರಧಾನಿಯವರು ಮುಂದುವರಿಸುತ್ತಾ ತಮ್ಮ ಭಾಷಣದಲ್ಲಿ ಎಲ್ಲರೂ ನಮ್ಮ ನಮ್ಮ ಅಖಂಡ ಭಾರತದ ದೃಷ್ಟಿಯಿಂದ ನೋಡಬೇಕೆಂದೂ ಪ್ರಾಂತೀಯ... ಯನ್ನು ಬಿಟ್ಟು ಪ್ರತಿಯೊಬ್ಬನೂ ... ಯನೆಂದು ತಿಳಿಯಬೇಕೆಂದೂ ...

ಪ್ರಕೃತಿ ಸೌಂದರ್ಯದ ವಿ... ಪ್ರಸ್ತಾಪಿಸುತ್ತಾ ಮೈಸೂರು ಭಾರತದಲ್ಲೆಲ್ಲಾ ಅತ್ಯಂತ ಸುಂದ... ಪಟ್ಟಣವೆಂದೂ ಅದರ ಸೌಂದರ್ಯ... ಹೆಚ್ಚಿಸುವುದರ ಜೊತೆಗೆ ... ರ್ಯವು ಹಾಳಾಗದಂತೆ ನೋಡ... ಕೆಂದೂ ತಿಳಿಸಿದರು

ಆಂಗ್ಲ ಭಾಷೆಯು ಆರ್ಥ... ಗೋಸ್ಕರವಾಗಿ ಕೆಲಂ... ಕಾಲ ... ಭಾಷೆಯಲ್ಲಿ ಮಾತನಾಡದ ... ಮನೆಗೆ ತೆರಳಿದರು ಅಲ್ಲಿ ಸ್ವಲ್ಪ ... ವಿಶ್ರಮಿಸಿಕೊಂಡು ಶ್ರೀಮನ್ಮಹಾ... ರೊಡಗೂಡಿ ಕೆಆರ್ಎಸ್ ... ವೀಕ್ಷಿಸಲು ಕಾರಳ... ಪ್ರಯಾ... ಸಿದರು

ಅಲಹಾಬಾದಿನಲ್ಲಿ ಭಾರ[ತದ] ಶ್ರೇಷ್ಠ ನ್ಯಾಯಾಸ್ಥಾ[ನ]

ಹೊಸ ರಾಜ್ಯಾಂಗದ ಪ್ರಕಾರ ... ವಾಗಲಿರುವ ಭಾರತದ ಶ್ರೇಷ್ಠ ನ್ಯಾ... ಸ್ಥಾನವನ್ನು ಅಲಹಾಬಾದಿನಲ್ಲಿ ಸ್ಥಾ... ಕೇಂದ್ರ ಸರ್ಕಾರದವರು ಆಲೋಚ... ದಾಗಿ ತಿಳಿದುಬಂದಿದೆ

MYSORE CITY IMPROVE[MENT]
TRUST BOARD

Date: 17-12...

NOTIFICATIO[N]

The following Two L[orr]ies of the City Improve[ment] Trust Board, Mysore, [will] be sold by public au[ction] **on Thursday the 30th D[ecem]ber 1948, at 10 a.m.** in City Improvement T[rust] Board Stores open[...] opposite to Pallon[ji] Motor Garage, Tha[ta]chetty Road, Mysore.

Please see the det[ailed] notification in the 'O[fficial] Notice Board' for fur[ther] particulars.

1) Chevrolet Model ...
M.Y.Z. 80...

2) Chevrolet Model ...
M.Y.Z. 86...

P. SITHARAM...
Chairman,
City Improve[ment]
Trust Board, My[sore]

ಸಿಮೆಂಟ್ ಕೂಡಲೇ ದೊರಕುತ್ತದೆ

-: ವಿವರಗಳಿಗೆ: -

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

೧೯೭೮, ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು

ಇವರಲ್ಲಿ ವಿಚಾರಿಸಿ.

Edited, printed and p[ubli]shed by A. R. Nagaraj... the Sadhvi Press, D. Su... Road, Mysore.

ಫೋ ನಂ 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಗುರುವಾರ ೬-೧-೪೯ [ಸಂಚಿಕೆ ೧೫೫

-ಚೀಣದಲ್ಲಿ ಸಂಧಾನ- ನಡೆಸಲು ಸಿದ್ಧತೆ

ವಿದ್ಯಾಭ್ಯಾಸ ಸಮ್ಮೇಳನದ ವಸ್ತುಪ್ರದರ್ಶನ

ಡಾ॥ ಅಮರನಾಥ ಝಾರವರಿಂದ ಆರಂಭ

ಮೈಸೂರು ೩೦

ಅಖಿಲ ಭಾರತ ವಿದ್ಯಾಭ್ಯಾಸ ಸಮ್ಮೇಳನದ ಅಂಗವಾಗಿ ವಸ್ತುಪ್ರದರ್ಶನ, ಭವನದಲ್ಲಿ ಏರ್ಪಡಿಸಲಾಗಿರುವ ಪ್ರದರ್ಶನದ ಆರಂಭೋತ್ಸವವನ್ನು ನಿನ್ನೆ ಸಂಜೆ ಅಲಹಾಬಾದಿನ ಡಾ॥ ಅಮರನಾಥ ಝಾರವರು ನೆರವೇರಿಸಿದರು ಶ್ರೀಮತಿ ರಾಜಮ್ಮ ಕಲ್ಲೋಳಿಮಠರವರಿಂದ ಸ್ವಾಗತ ಗೀತೆ ಹಾಡಿದ ನಂತರ ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ಸ್ವಾಗತ ಭಾಷಣ ಮಾಡಿ ಪ್ರದರ್ಶನದ ವಿವರಗಳನ್ನು ತಿಳಿಸಿದರು ಡಾ॥ ಅಮರನಾಥ ಝಾರವರು ತಮ್ಮ ಭಾಷಣದಲ್ಲಿ ಈಗ ಕೊಡುತ್ತಿರುವ ವಿದ್ಯಾಭ್ಯಾಸದಲ್ಲಿ ಬಹಳ ನ್ಯೂನತೆ ಇರುವುದರಿಂದ ಪುನರ್ರಚನೆ ಅತ್ಯಾವಶ್ಯಕ ಎಂದು ಹೇಳಿದರು

ನೂರು ವರ್ಷಗಳಿಂದೀಚೆಗೆ ವಿದ್ಯಾಭ್ಯಾಸಕ್ರಮದಲ್ಲಿ ರಚನಾತ್ಮಕವಾದ ಒದಗಾವಣೆ ನಡೆದಿಲ್ಲವೆಂದೂ ಭಾರತದಲ್ಲಿ ಜನರ ಸಂಸ್ಕೃತಿಗನುಗುಣವಾಗಿ ವಿದ್ಯೆಯ ಪ್ರಚಾರ ನಡೆದು ತರಗತಿಗಳ ಕಾಲ ರಜಾ ಕೊಡುವ ವ್ಯವಸ್ಥೆಗಳನ್ನು ಸಹಾ ಪುನರ್ವಿಮರ್ಶಿಸಬೇಕೆಂದು ಹೇಳಿ ವಿದ್ಯೆಯ ಪ್ರಚಾರಕ್ಕೆ ಖರ್ಚು ಮಾಡಿದ ಹಣವು ನ್ಯಾಯವಾದ ವಿನಿಯೋಗವೆನ್ನುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿ, ಮೈಸೂರು ಸರ್ಕಾರವು ವಿದ್ಯಾಪ್ರಚಾರಕ್ಕೆ ಉದಾರವಾಗಿ ಖರ್ಚು ಮಾಡಿರುವ ವಿಷಯವನ್ನು ಪ್ರಶಂಸಿಸಿದರು ವಸ್ತುಪ್ರದರ್ಶನದಲ್ಲಿ ವಿದ್ಯಾ ಇಲಾಖೆಯ ವಿವಿಧ ಶಾಖೆಗಳವರು ಏರ್ಪಡಿಸಿರುವ ಪ್ರಯೋಗಗಳೂ, ನಕ್ಷೆಗಳೂ, ಶಿಕ್ಷಣ ವಸ್ತುಗಳೂ ಜನರ ಮನಸ್ಸನ್ನು ಆಕರ್ಷಿಸುತ್ತಿವೆ ಸಾವಿರಾರು ಜನರು ನೋಡಿ ಅದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ

ಸತ್ಕಾರ ಕೂಟ

ವಸ್ತು ಪ್ರದರ್ಶನಾಲಯದಲ್ಲಿ ಅಖಿಲ ಭಾರತ ವಿದ್ಯಾ ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳ ಗೌರವಾರ್ಥ ವಾಗಿ ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದ ರು ಅಕ್ಷರ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಮಾದಯ್ಯ ಗೌಡ, ನಾ ಭದ್ರಯ್ಯ ಸೆಟ್ಟಿ ಮಿಸ್ ಈಗಲ್‌ಟನ್ ರವರುಗಳು ಅತಿಥಿಗಳನ್ನು ಸ್ವಾಗತಿಸಿದರು.

ಕಸ್ತೂರಿ ಬಾ ಸಂಸ್ಥೆಗೆ ೨೦೦ ಎಕರೆ ಜಮೀನು

ಬೆಂಗಳೂರು ಸಮೀಪದಲ್ಲಿ ಅಮೃತಹಳ್ಳಿಗೆ ಸೇರಿದ ೨೦೦ ಎಕರೆ ಜಮೀನನ್ನು ಸರ್ಕಾರದವರು ಕಸ್ತೂರಿ ಬಾ ಸಂಸ್ಥೆಗೆ ಉಚಿತವಾಗಿ ಕೊಟ್ಟಿರುವರೆಂದು ತಿಳಿದು ಬಂದಿದೆ.

ಚಾಮುಂಡೇಶ್ವರಿ ಟಾಕೀಸ್

31-12-48 ರಿಂದ ಎರಡನೇ ವಾರ

ಇಂಪ್ರಾಟ್

ಅಶೋಕ್

ನಿಮಿಕೆ - ವೀಣಾ, ನಸ್ರೂ, ಉಲ್ಹಾಸ್, ಹಾಮೀಮ್, ಹುಸ್ನ ಬಾನು

ವಿಮಾನಯಾನದ ಪ್ರತಿಷ್ಠೆ

ಪಂಡಿತ ನೆಹ್ರೂರವರಿಂದ ವಿಮಾನ ಸಂಸ್ಥೆಯ ಆರಂಭೋತ್ಸವ

ಬೆಂಗಳೂರು ೩೧

ಪಂಡಿತ ಜವಹರಲಾಲ್ ನೆಹರೂರವರು ಭಾರತದ ಏರೋ ನಾಟಿಕಲ್ ಕ್ಲಬ್ಬಿನ ಆರಂಭೋತ್ಸವದನ್ನು ನೆರವೇರಿಸುತ್ತಾ ಈ ರೀತಿ ಹೇಳಿದರು --

ಇದು ವಿಮಾನ ಯುಗ, ಆದ್ದರಿಂದ ಇಂತಹ ಸಂಘ ಸಂಸ್ಥೆಗಳು ಇರಬೇಕಾದುದು ಅಗತ್ಯ ಈ ಸಂಘವನ್ನು ಪ್ರಾರಂಭಿಸುವ ಉದ್ದೇಶದಿಂದಲೇ ನಾನು ಬೆಂಗಳೂರಿಗೆ ಬಂದಿದ್ದೇನೆ ಈಗ ರಾಷ್ಟ್ರ ರಾಷ್ಟ್ರದ ಗಡಿ ನಿರ್ಬಂಧ ಹೋಗಿ ನಮ್ಮ ದೃಷ್ಟಿ ವಿಶಾಲವಾಗುವ ಕಾಲ ಬಂದಿದೆ ಆದರೂ ಪ್ರಾಂತೀಯ ಮನೋಧರ್ಮ ಇನ್ನೂ ಸಂಪೂರ್ಣವಾಗಿ ಹೋಗಿಲ್ಲ ಇದು ಪರಿಣತರು ಬೇಕಾಗುವ ಕಾಲ, ಆದರಿಂದ ಅಜ್ಞಾನವು ದೂರ ಹೋಗುವುದು ಪಂಡಿತ ವಿಜ್ಞಾನಿಗಳು ಸಮರ ಪ್ರಚೋದನೋಪಕರಣಗಳಿಗೆ ನೆರವು ನೀಡಬಾರದು ಎಂದು ಹೇಳಿ ತಮ್ಮನ್ನು ಸಂಘದ ಪ್ರಧಾನ ಪೋಷಕರನ್ನಾಗಿ ಚುನಾಯಿಸಿದುದಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು

ಮೈಸೂರಿನ ಪ್ರಧಾನ ಮಂತ್ರಿಗಳಾದ ಶ್ರೀ ಕೆ. ಸಿ ರೆಡ್ಡಿಯವರು ಸ್ವಾಗತ ಭಾಷಣ ಮಾಡಿದರು

ಎಲೆಕ್ಟ್ರಿಕಲ್ ಕಮ್ಯೂನಿಕೇಷನ್ ಶಾಖೆಯ ಆಸ್ತಿಭಾರ ಸಮಾರಂಭ

ಟಾಟಾ ವಿಜ್ಞಾನ ಮಂದಿರದಲ್ಲಿ ಪಂಡಿತ ನೆಹ್ರೂರವರು ಎಲೆಕ್ಟ್ರಿಕಲ್ ಕಮ್ಯೂನಿಕೇಷನ್ ಶಾಖೆಯ ಆಸ್ತಿಭಾರವನ್ನೂ ಮತ್ತು ಟಾಟಾ ವಿಜ್ಞಾನ ಮಂದಿರದ ವಸ್ತು ಪ್ರದರ್ಶನದ ಆರಂಭೋತ್ಸವವನ್ನೂ ನೆರವೇರಿಸಿದರು ಸರ್ ಜೆಂಹಾ ಪರ್ಕರ್ರವರು ಸ್ವಾಗತ ಭಾಷಣ ಮಾಡಿ ವಿಜ್ಞಾನ ಸಂಶೋಧನೆಗೆ ನೆರವು ನೀಡಿದ ಜೆ ಆರ್ ಡಿ ಟಾಟಾರವರ ಔದಾರ್ಯವನ್ನು ಕೊಂಡಾಡಿದರು

ಶ್ರೀ ಗಣೇಶಾ ಟಾಕೀಸ್

31-1—18ರಿಂದ 2ನೇ ವಾರ

ಆಯಾಮಾಲಾ

(ತಮಿಳು)

ಮುಖ್ಯಪಾತ್ರ — ● ಪಿ ಯು ಚಿನ್ನಪ್ಪ, ● ಎಂ ಎಸ್ ಸರೋಜಿನಿ ● ಕೃಷ್ಣ ● ಮಧುರಂ

ಮೈಸೂರು ಮತ್ತು ಕರ್ನಾಟಕ ಎರಡೂ ಒಂದೇ

ಶ್ರೀ ದಿವಾಕರರ ಸಂದೇಶ

ಮೈಸೂರು ಸೀಮೆಗೆ ನಾನು ಈಗ ಬಂದ ಸಂದರ್ಭವನ್ನು ನೆನೆಸಿದರೆ ಕನಕದಾಸನ ಉಕ್ತಿ ನನ್ನ ನನಸಿಗೆ ಬರುವುದು

"ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ" ಎಂದು ಅವನು ಒತ್ತಿ ಚಮತ್ಕಾರವಾಗಿ ಪರಮಾತ್ಮ ಸ್ವರೂಪವನ್ನು ಒಪ್ಪಿಸಿದ್ದಾನಲ್ಲವೇ! ನಾನು ಮೈಸೂರಿನವನೋ, ಮೈಸೂರೇ ನನ್ನದೋ ಅಥವಾ ಮೈಸೂರು ನಾನು ಕರ್ನಾಟಕದವನೋ ಎಂಬ ಪ್ರಶ್ನೆ ಒಂದು ಕ್ಷಣ ಎದುರಾಯಿತು. ಸರಿ ಆದರೆ ಕರ್ನಾಟಕ ಸಿಂಹಾಸನಾಧೀಶ್ವರರೆಂಬಿರ ವಾಂಛಿತರಾದ ಶ್ರೀಮನ್ಮಹಾರಾಜರು ಮೈಸೂರೊಡೆಯರಾಗಿರುವಾಗ ನಾವು ಮೈಸೂರು, ಮೈಸೂರವರೆಲ್ಲರೂ ಕರ್ನಾಟಕದವರು ಎಂಬ ಮಾತೇ ಎಂಬುದು ತಟಕ್ಕನೆ ಹೊಳೆಯಿತು ಮೈಸೂರು ಕರ್ನಾಟಕ ಬೇರೆಯಾಗಬಲ್ಲವೇ, ಬೇರೆ ಇರಬಲ್ಲವೇ? ಅವುಗಳನ್ನು ಯಾರಾದರೂ ಬೇರೆ ಮಾಡಬಲ್ಲರೆ? ನವರು ಒಂದಾಗಿಸಿದ್ದನ್ನು ಇನ್ನಾದರೂ ಎರಡು ಮಾಡಬಲ್ಲರೆ? ಸರ್ವಥಾ ಇಲ್ಲ ಶ್ರೀಕಾಲದಲ್ಲಿಯೂ ಇಲ್ಲ ಇದೇ ಕನ್ನಡಿಗರ ಆತ್ಮಜ್ಞಾನ, ಕರ್ನಾಟಕಜ್ಞಾನ, ಕನಕನು ರಾಜಕೀಯವನ್ನು ಕುರಿತು ಹಾಡಿದ್ದರೆ ಅವನು ಇದನ್ನೇ ಹೇಳುತ್ತಿದ್ದನು ಇರಲಿ

ಶ್ರೀ ಐ ವಿ ಗಣಪತಿ ಅಯ್ಯರ್‌ರವರು ವಿಜ್ಞಾನ ಮಂದಿರದ ನಲವತ್ತು ವರ್ಷದ ವರದಿಯನ್ನೂ, ಅದು ಸಾಧಿಸಿರುವ ಕೆಲಸ ಕಾರ್ಯಗಳನ್ನೂ ವಿವರಿಸಿದರು.

ಪಂಡಿತ ನೆಹರೂರವರು ಮಾತನಾಡಿ, ವೈಜ್ಞಾನಿಕ ಸಂಶೋಧನೆಯ ಆವಶ್ಯಕತೆಯು ಈಗ ಹುಟ್ಟಿದೆಯೆಂದೂ, ಅದನ್ನು ಈಗ ಬೆಳೆಯಿಸಬೇಕು ಘಾತಕ ತನಕ್ಕೂ ಒಳಸಬಾರದೆಂದು ತಿಳಿಸಿದರು ವಿಜ್ಞಾನ ಸಂಶೋಧನೆಗಳಲ್ಲಿ ನಿಷ್ಣಾತರಾಗಿರುವವರು, ಕಲೆಕ್ಟರ ಹುದ್ದೆಗೆ ಹೋಗ ಬಾರದು ಅನರ್ಥಕಾರಿ, ವಿಜ್ಞಾನದಲ್ಲಿ ಪರಿಣತರಾದವರನ್ನು ಆದೇಶ ಇಲಾಖೆಯಿಂದ ಬೇರ್ಪಡಿಸಬೇಕು ಎಂದು ತಿಳಿಸಿದರು ವಿಜ್ಞಾನ ಸಂಶೋಧನೆಗೆ ಎಲ್ಲ ಹಣ ನೀಡಿ ಸರ್ಕಾರದ ಕರ್ತವ್ಯ ಎಂದು ಹೇಳಿದರು.

ವಯಸ್ಕರ ವಿದ್ಯಾಭ್ಯಾಸದಲ್ಲಿ ಸಾರ್ವಜನಿಕರ ಪಾತ್ರ

ಅಖಿಲ ಭಾರತ ವಯಸ್ಕರ ವಿದ್ಯಾ ಸಮ್ಮೇಳನ

ಮೈಸೂರು ೩೦

ಅಖಿಲ ಭಾರತದ ವಯಸ್ಕರ ವಿದ್ಯಾಭ್ಯಾಸದ ಆರನೇ ಸಮ್ಮೇಳನವು ಈ ದಿನ ಕ್ರಾಫರ್ಡ್ ಹಾಲಿನಲ್ಲಿ ನಡೆಯಿತು. ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ ಮಾದೇಗೌಡರು ಸ್ವಾಗತ ಭಾಷಣ ಮಾಡಿ ಸರ್ ಸಿ ವಿ ರಾಮನ್ ಮತ್ತು ಪ್ರೊ॥ ರಂಗನಾಥರವರ ವಿದ್ಯಾ ಪ್ರೌಢಿಮೆಯನ್ನು ಪ್ರಶಂಸಿಸಿದರು ಸರ್ ಸಿ ವಿ ರಾಮನ್‌ರವರು ಮಾತನಾಡಿ ವಿದ್ಯೆ ಮತ್ತು ಅಕ್ಷರತೆಯ ಮುಖ್ಯ ವ್ಯತ್ಯಾಸಗಳನ್ನು ತಿಳಿಸಿದರು

ವಯಸ್ಕರಿಗೆ ವಿದ್ಯೆಯನ್ನು ಒತ್ತಾಯ ಮಾಡುವುದಕ್ಕಿಂತ ಅವರೇ ವಿದ್ಯಾರ್ಜನೆಗೆ ಆಸಕ್ತಿ ವಹಿಸುವುದರಿಂದ ಹೆಚ್ಚಿನ ಫಲವುಂಟಾಗುವುದರಲ್ಲಿ ಸಂದೇಹವಿಲ್ಲವೆಂದೂ, ಜನಗಳ ಸ್ಥಿತಿ ಉತ್ತಮವಾದರೆ ಖಂಡಿತವಾಗಿಯೂ ಅವರಿಗೆ ವಿದ್ಯೆಯಲ್ಲಿ ಆಸಕ್ತಿ ಬರುವುದೆಂದು ನುಡಿದರು

ಪ್ರೊ॥ ರಂಗನಾಥರವರು, ಯಾಕೆ ಅವಶ್ಯಕವಾಗಿ ಅಕ್ಷರ ಪ್ರಚಾರವಾಗಬೇಕು ಎಂಬುದನ್ನು ವಿವರಿಸಿದರು

ಅಕ್ಷರ ಪ್ರಚಾರಕ್ಕೆ ನೂರಾರು ವರ್ಷಗಳಿಂದಲೂ ಬಂದಿರುವ ಪ್ರೈಮರ್ ಮೊದಲಿನವನ್ನು ಪ್ರಯೋಗಿಸುವುದು ತಪ್ಪೆಂದರು ಸರ್ಕಾರವು ವಯಸ್ಕರ ವಿದ್ಯಾಭ್ಯಾಸಕ್ಕೆ ನೇಮಿಸುವ ಶಿಕ್ಷಕರಿಗೆ ಪ್ರತ್ಯೇಕವಾದ ವಿದ್ಯಾ ಸಂಸ್ಥೆಗಳನ್ನು ತೆರೆಯಬೇಕೆಂದೂ ಮುಖ್ಯವಾಗಿ ಸಾರ್ವಜನಿಕರು ಸರ್ಕಾರದೊಡನೆ ಸಹಕರಿಸಿ ವಯಸ್ಕರ ವಿದ್ಯಾಭ್ಯಾಸಕ್ಕೆ ನೆರವು ನೀಡಬೇಕೆಂದು ತಿಳಿಸಿದರು

ಚೀಣದಲ್ಲಿ ಸಂಧಾನ ಪ್ರಯತ್ನ

ನಿನ್ನೆ ದಿನ ಚೀಣ ದೇಶದ ವಿವಿಧ ಪ್ರಾಂತಗಳ ಗೌರ್ನರರುಗಳ ಸಮ್ಮೇಳನ ಒಂದನ್ನು ಜ॥ ಚಿಯಾಂಗ್ ಕೈಷೇಕರು ಕರೆದಿದ್ದರೆಂದೂ, ಕಮ್ಯೂನಿಸ್ಟರೊಡನೆ ಸಂಧಾನ ನಡೆಸುವ ವಿಚಾರವಾಗಿ ಅವರು ಮಾತನಾಡಿದರೆಂದೂ ತಿಳಿದು ಬಂದಿದೆ

ಪಂಡಿತ ನೆಹ್ರೂರವರೊಡನೆ ಭೇಟಿ.

ಮೈಸೂರು ೩೦

ಪೌರಸಭೆಯ ಸದಸ್ಯರಾದ ಜ॥ ಪೀರ್ ಸಾಬ್ ಹುಸೇನ್‌ರವರ ನಾಯಕತ್ವದಲ್ಲಿ ಪ್ಯಾಪನಲಿಸ್ಟ್ ಮುಸ್ಲಿಮರು ಪಂಡಿತ ನೆಹ್ರೂರವರನ್ನು ಭೇಟಿ ಮಾಡಿ, ಎನ್ನ ರಕ್ಷಣೆ ಯನ್ನು ಕೇಳಿದರು, ಪ್ಯಾಪನಲಿಸ್ಟ್ ಮುಸ್ಲಿಮರ ಕಾರ್ಯ ಚಟುವಟಿಕೆಯನ್ನು ತಿಳಿಸಿದರು

ನೆಹರೂರವರು ಉತ್ತರವಿತ್ತು ಭಾರತೀಯ ಮುಸ್ಲಿಮರಿಗೂ ಸಹ ಎಲ್ಲ ಸೌಲಭ್ಯಗಳನ್ನೂ ಕೊಡಲಾಗುವುದೆಂದೂ, ಅವರು ಗೌರವ ಸಮಾಧಾನದಿಂದ ದೇಶದ ಅಭಿವೃದ್ಧಿಗೆ ಗಮನ ಕೊಡಬೇಕೆಂದೂ ತಿಳಿಸಿದರು

ಮೈಸೂರ ಮತ್ತು ಹಿಂದೂಸ್ಥಾನ ಪ್ರವಾಸವನ್ನು ಕೈಕೊಂಡಿದ್ದ ಪಂಡಿತ ನೆಹ್ರೂರವರು ದೆಹಲಿಗೆ ತೆರಳಿದರು [illegible]

ಸ್ವತಂತ್ರ ವಿಚಾರ ಶಕ್ತಿಯು ವಿದ್ಯೆಯ ಮೂಲ ಧ್ಯೇಯ

ಮಹಾಪ್ರಭುಗಳವರಿಂದ ಅಖಿಲ ಭಾರತ ವಿದ್ಯಾ ಸಮ್ಮೇಳನದ ಆರಂಭೋತ್ಸವ

ಮೈಸೂರು ೩೦

ಮಹಾಪ್ರಭುಗಳವರು ನಿನ್ನೆಯ ದಿನ ಅಖಿಲ ಭಾರತದ ೨೪ ನೇ ವಿದ್ಯಾ ಸಮ್ಮೇಳನವನ್ನು ಆರಂಭಿಸಿ ವಿದ್ಯಾ ಪರಿಣತರು ಸಂಸ್ಥಾನದಲ್ಲಿ ಸಭೆ ಸೇರಿ ತಮ್ಮ ಅನುಭವವನ್ನು ತಿಳಿಸುವುದರಿಂದ ಸಂಸ್ಥಾನಕ್ಕೆ ಮಹದುಪಕಾರವಾಗುವುದೆಂದೂ ... ಕೊಡಿಸಿದರ ವಿದ್ಯಾಭ್ಯಾಸ ಕ್ರಮ ... ದಲಿನಷ್ಟು ಫಲಕಾರಿಯಾಗಿಲ್ಲ ... ಮಕ್ಕಳ ಮನಸ್ಸನ್ನು ... ಕಾಲದಲ್ಲಿ ... ಪ್ರಾರಂಭದಲ್ಲಿ ಮಕ್ಕಳ ಕಲಿವುದನ್ನು ವಿಕಾಸಗೊಳಿಸುವ ... ಶಿಕ್ಷಣ ... ವಿಜ್ಞಾನದ ... ಅದರ ಉಪಯೋಗವನ್ನು ... ತಿಳಿಸಿದರು.

... ವಂತನಾದವನು ... ತನ್ನ ... ಉಪಯೋಗಿಸುವುದೇ ವಿದ್ಯೆಯ ನಿಜವಾದ ಉಪಯೋಗ. ವಿದ್ಯಾಭ್ಯಾಸದ ಮೂಲ ತತ್ವಗಳು ... ಸ್ತ್ರೀ ಪುರುಷರಿಗೆ ... ವಿಕಾಸ ... ಜ್ಞಾನಾರ್ಜನೆಯ ಸತ್ಫಲವನ್ನು ತಂದುಕೊಟ್ಟು ಸ್ವತಂತ್ರ ವಿಚಾರ ಶಕ್ತಿಯನ್ನು ಕಲ್ಪಿಸುವುದೇ ಎಲ್ಲ ವಿದ್ಯಾಭ್ಯಾಸದ ಗುರಿ, ನಮ್ಮ ದೇಶದಲ್ಲಿ ಕೊಡಬೇಕಾದ ವಿದ್ಯೆಯ ವಿಧಾನ ಮತ್ತು ಅದರ ಉದ್ದೇಶದ ಬಗ್ಗೆ ಇರುವ ಸಮಸ್ಯೆಗಳನ್ನು ಬಗೆಹರಿಸಲು ಈ ಸಮ್ಮೇಳನದ ನಿಪುಣರಿಗೆ ಸಾಧ್ಯವಾಗುವುದೆಂದು ನಾನು ಭಾವಿಸುತ್ತೇನೆ ಸರ್ವ ಸಮಾನತೆಯ ಭಾವನೆ ಸಹನಶೀಲತ, ವಿಚಾರ ಸಂಗ್ರಹ ಮತ್ತು ಅಜ್ಞಾನದಿಂದ ಉತ್ಪನ್ನವಾದ ಪಕ್ಷಪಾತದಿಂದ ದೂರವಾಗಿರುವಿಕೆ ಇವೇ ನಿಜವಾದ ವಿದ್ಯಾವಂತನ ಲಕ್ಷಣವೆಂಬುವನ್ನು ಮರೆಯದಿರೋಣ-ಎಂದು ಹೇಳಿ ಸಮ್ಮೇಳನದ ಆರಂಭೋತ್ಸವವನ್ನು ಪ್ರಭುಗಳು ನೆರವೇರಿಸಿದರು ಮತ್ತು ಉದಾರ ವಿದ್ಯಾಭ್ಯಾಸ ಕ್ರಮದಿಂದ ಪರಿಷ್ಕರಿಸಲ್ಪಟ್ಟ ಭಾರತ ರಾಷ್ಟ್ರದ ನಿರ್ಮಾಣಕ್ಕೆ ಈ ಸಮ್ಮೇಳನವು ಸಹಾಯಕವಾಗಲೆಂದು ಹಾರೈಸಿದರು

ಸಮ್ಮೇಳನಕ್ಕೆ ಸುಮಾರು ೧೫೦೦ ಪ್ರತಿನಿಧಿಗಳು ಭಾರತದ ಎಲ್ಲಾ ಭಾಗಗಳಿಂದಲೂ ದಯಮಾಡಿಸಿದ್ದರು

ಶ್ರೀ ಎಂ ಸಿ ಮಹದೇವಸ್ವಾಮಿಯವರು ಶ್ರೀ ಧರ್ಮ ಗೌಡರಿಂದ ರಚಿತವಾದ ಮಂಗಳ ಪದ್ಯವನ್ನು ಓದಿದರು

ವಿದ್ಯಾ ಸಚಿವರಾದ ಶ್ರೀ ಡಿ ಎಚ್ ಚಂದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿ ಈ ಸಮ್ಮೇಳನವು ಯಶಸ್ವಿಯಾಗಿ ... ತನ್ನ ಉದ್ದೇಶವನ್ನು ಸಾಧಿಸಲೆಂದ ... ಸಿದರು. ಡಾ॥ ಅಮರನಾಥ ... ರವರು ಶ್ರೀಮನ್ಮಹಾರಾಜರಿಗೆ ಧನ್ಯವಾದವನ್ನು ಸಮರ್ಪಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಅಮೋಘವಾದ ಭಾಷಣ ಮಾಡಿ ಈ ರೀತಿ ತಿಳಿಸಿದರು –

ಹಿಟ್ಲರ್ ಮುಸೋಲನಿಗಳ ಕಾಲದಲ್ಲಿ ಸರ್ಕಾರದವರೇ ವಿದ್ಯಾಭ್ಯಾಸದ ಚೌಕಟ್ಟನ್ನು ನಿರ್ಧರಿಸಿ ದೇಶದ ಮಕ್ಕಳನ್ನು ಕಾರ್ಖಾನೆಯ ಸಾಮಗ್ರಿಗಳಂತೆ ತಯಾರು ಮಾಡುತ್ತಿದ್ದರು ಅದರ ದುಷ್ಪರಿಣಾಮವು ಜಗತ್ತಿಗೆ ವೇದ್ಯವಾಗಿದೆ. ಜ್ಞಾನದ ಎಲ್ಲೆ ಕಟ್ಟುಗಳನ್ನು ಪ್ರಭುತ್ವದವರು ನಿರ್ದರಿಸುವ ಪದ್ಧತಿಯು ಸರಿಯಲ್ಲ ಪ್ರಜಾ ಪ್ರಭುತ್ವದಲ್ಲಿ ನಿಪುಣರ ಅಭಿಪ್ರಾಯಗಳನ್ನು ಮೂಲೆಗೆ ತಳ್ಳಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಲು ವಿದ್ಯಾ ಮಂತ್ರಿಗಳು ತೊಡಗುವುದು ಸರಿಯಲ್ಲ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಅಸಹನೆಯ ಮನೋಭಾವವು ಶ್ರೇಯಸ್ಕರವಲ್ಲ ಎಲ್ಲರೂ ಒಂದೇ ಅಭಿಪ್ರಾಯವನ್ನು ಹೊಂದಿರಬೇಕೆಂದು ಬಯಸುವುದು ತಪ್ಪು ಹಾಗೆಯೇ ತಮ್ಮ ಸಂಸ್ಕೃತಿಯು ಇತರ ಎಲ್ಲರ ಸಂಸ್ಕೃತಿಗಿಂತಲೂ ಉತ್ತಮವೆಂದು ತಿಳಿಯುವುದೂ ಸರಿಯಲ್ಲ ಎಲ್ಲ ರಾಷ್ಟ್ರಗಳ ಧರ್ಮ, ಸಂಸ್ಕೃತಿ ಮತ್ತು ಕಲೆಕೆಳಿಗೂ ಸಮಾನವಾದ ಮನ್ನಣೆಯನ್ನು ಕೊಡಬೇಕು ಇತರರ ಅಭಿಪ್ರಾಯವನ್ನು ಸಂಪೂರ್ಣವಾಗಿ ಗೌರವಿಸಬೇಕು ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕು ಆಂಗ್ಲ ಭಾಷೆಯು ಕೇವಲ ಬ್ರಿಟಿಷರಿಗೆ ಮೀಸಲಾಗಿರದೆ ಅಂತರ ರಾಷ್ಟ್ರೀಯ ವ್ಯವಹಾರಗಳ ಭಾಷೆಯಾಗಿದೆ ಆದ್ದರಿಂದ ಅದನ್ನು ತಿರಸ್ಕರಿಸಲಾಗದು ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ಲೋಪದೋಷಗಳಿರುವುದು ನಿಜ ಆದರೆ ಈ ಕ್ರಮದಿಂದಲೇ ಭಾರತದ ದೊಡ್ಡ ನಾಯಕರುಗಳು ದೇಶದ ಉನ್ನತಿಗಾಗಿ ಸೇವೆ ಮಾಡಿ ಸ್ವಾತಂತ್ರವನ್ನೂ ಗಳಿಸಿದ್ದಾರೆ, ಆದುದರಿಂದ ಕೇವಲ ಖಂಡನೆಯಲ್ಲಿಯೇ ತೊಡಗದೆ ಸ್ವತಂತ್ರವಾದ ವಿಚಾರ ವಿವರ್ಕೆಯಿಂದ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಪರಿಷ್ಕರಿಸಲು ನಾವೆಲ್ಲರೂ ತೊಡಗೋಣ

ಅನಂತರ ಅಧ್ಯಕ್ಷರು ಮಹಾತ್ಮಾ ಗಾಂಧಿಜಿಯವರ ನಿಧನದ ಬಗ್ಗೆ ಸಂತಾಪ ಸೂಚನೆಯ ನಿರ್ಣಯವನ್ನು ಸಭೆಯ ಮುಂದಿಟ್ಟರು ಎಲ್ಲರೂ ಎದ್ದು ನಿಂತು ಅದನ್ನು ಅಂಗೀಕರಿಸಿದರು

ಸಮ್ಮೇಳನಕ್ಕೆ ಶುಭವನ್ನು ಕೋರಿ ಬಂದಿದ್ದ ಸಂದೇಶಗಳನ್ನು ಶ್ರೀ॥ ಕೋಟೀಶ್ವರ್ ರವರು ಓದಿದರು

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

30-12-48 ರಿಂದ 5 ದಿನಗಳು ಮಾತ್ರ

Warner's Technicolor Comedy Drama,

The Time, The Place and The Girl

(ದಿ ಟೈಮ್, ದಿ ಪ್ಲೇಸ್ ಅಂಡ್ ದಿ ಗರ್ಲ್)

(ವರ್ಣರಂಜಿತ ಚಿತ್ರ)

NEXT CHANGE:-

CAPTAIN FROM CASTILE

(Technicolor)

with Tyrone Power

ಅಸ್ಸಾಂ ಗೌರ್ನರ ನಿಧನ

ಅಸ್ಸಾಂ ಪ್ರಾಂತ್ಯದ ಗೌರ್ನರರಾದ ಅಕ್ಬರ್ ಹೈದರಿಯವರು ಮಣಿಪುರ ಸಂಸ್ಥಾನದಬಳಿ ಪ್ರವಾಸ ... ತ್ತಿದ್ದಾಗ ಹೃದಯ ಸ್ತಂಭನವಿಂದ ... ರಾದರೆಂದು ತಿಳಿಸಲು ವಿಷಾದಿಸ್ತ...

ರಾಜಕಮಲ್ ಟಾಕೀಸ್

೨೮-೧೨-೪೮ರಿಂದ

ಅಮೋಘ 3 ನೇ ವಾರ

ಪ್ರತಿ ದಿನ 3 ಆಟಗಳು

ಭಕ್ತ ಕುಂಬಾರ (ಕನ್ನಡ)

— MORNING SHOWS —

From 31-12-48 for 4 days

THE KILLER

- With :-

Burt Lancaster,

Ava Gardner,

Edmond O'Brien

ಪ್ರತಿ ದಿನ ಎರಡು ಆಟಗಳು

30-12-48 ನೇ ಗುರುವಾರದಿಂದ

ಫ್ಲೋರಾ ಫಿಲಂಸ್‌ರವರ

ಮೈ ಕಾ ಕರ... ಲ ... ಶ್ರೀ (ಹಿಂದಿ)

ಪಾತ್ರ:- ಸುರೈಯ್ಯ, ಷಾ ನವಾಜ್ ಪನ್ನಾ ವಾಡ್ಕರ್ ಮುಂತಾದವರು

ಒಲಂಪಿಯಾ ಟಾಕೀಸ್

ಕೈಗಡಿಯಾರ ಸಿಕ್ಕಿದೆ

೨೮-೧೨-೪೮ ರಲ್ಲಿ ಶಿವರಾಂಪೇಟೆಯಲ್ಲಿ ಒಂದು ಕೈ ಗಡಿಯಾರ ಸಿಕ್ಕಿದೆ ... ಸು ದಾರರು ಅದರ ಗುರುತು ಮತ್ತು ... ಬರು ಕೊಟ್ಟು, ಸದರಿ ಗಡಿಯಾರವನ್ನು ... ಡೆಯಬಹುದು ಇದರೆ ಕಾಲ ಒಂದು ... ಗಳು ನಂತರ ಇವನ್ನು ಹರಾಜಿಗೆ ... ಂದ ಹಣವನ್ನು ಸಾರ್ವಜನಿಕ ವಿದ್ಯಾ ... ನಿಲಯಕ್ಕೆ ಕೊಡಲಾಗುವುದು. ... ಎಮ್. ಬಸಪ್ಪ, ಕೇರ್ ಆಫ್ ಎ ... ಣ್ಣಯ್ಯ, ಸುತ್ತೂರು ಹಾಸ್ಟಲ್, ವಾ... ಲಾಸ ರೋಡು ಮೈಸೂರು

ಬೆಳಗಿನ ಆಟಗಳು

31-12-48 ನೇ ಶುಕ್ರವಾರದಿಂದ

ನಾಲ್ಕು ದಿನಗಳು ಮಾತ್ರ

ಜಯಂತ್ ಪ್ರೊಡಕ್ಷನ್ಸ್ ರವರ

ಮನೋರಮಾ

ಈಶ್ವರ ಲಾಲ್, ಲೀಲಾ ಚಿಟ್ನಿಸ್, ... ಮುಂತಾದವರು ನಟಿಸಿರುವ ಹಿಂದಿ ಚಿತ್ರ

ಒಲಂಪಿಯಾ ಟಾಕೀಸ್

ಪ್ರಭುದೇವಾ ಟಾಕೀಸ್

31-12-48

ನೇ ಶುಕ್ರವಾರದಿಂದ

ಅಮೋಘವಾದ

5ನೇ ವಾರ

ಪ್ರತಿ ದಿನ 4 ಆಟಗಳು

(ವರ್ಣರಂಜಿತ ಚಿತ್ರ)

ಮುಖ್ಯ ಪಾತ್ರ.

§ ವಿ ನಾಗಯ್ಯ,

§ ಪುಷ್ಪವಲ್ಲಿ,

§ ನಾರಾಯಣರಾವ್,

§ ಸುಬ್ಬಾಲಕ್ಷ್ಮಿ,

ಮುಂತಾದವರ.

ಜೆಮಿನಿಯವರ **ಚಕ್ರಧಾರಿ** (ಭಕ್ತ ಗೋರಕುಂಬಾರ)

Edited, printed and published by A.R. Nagarajan the Sadhvi Press, D. Subbaiah Road, Mysore.